YEAR
1929

ಮೈಸೂರ್ ಸ್ಟಾರ್

ಶನಿವಾರ ಪ್ರಕಟಿಸಲ್ಪಡುವದು.

[illegible] ॥
[illegible] ॥
[illegible] ॥

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೩-೮-೦] [ಬಿಡಿಪ್ರತಿಗೆ ೦-೧-೦]

ಸಂಪುಟ ೪೨] ಮೈಸೂರು ಸ್ಟಾರ್ ಸನ್ ೧೯೨೯ ನೆಯ ಇಸವಿ ಜನವರಿ ತಾರೀಖು ೫ ನೆಯ ಶನಿವಾರ [ಸಂಚಿಕೆ ೧

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿ	೦—೧೨—೦	೧—೩—೦
[illegible] ವೀರಶೈವ ವಿವಾಹವಿಧಿ	೦—೨—೦	೦—೧೪—೦
[illegible]	೦—೪—೦	೦—೯—೦
[illegible]	೦—೫—೦	೦—೧೦—೦
[illegible]	೦—೪—೦	೦—೯—೦
[illegible]	೦—೪—೦	೦—೯—೦
[illegible]	೦—೧—೦	೦—೬—೦
[illegible]	೦—೮—೦	೦—೧೪—೦
[illegible]	೦—೮—೦	೦—೧೪—೦
[illegible]	೧—೦—೦	೧—೭—೦

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೩-೮-೦; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮನೆಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಿನ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಒಂದ ಕಾಗದ ಕಾರ್ಡು ಮನಿಯಾರ್ಡರುಗಳಿಗೆ ಸಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

"ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತರ" ಆಯುರ್ವೇದೀಯ ಸಿದ್ಧೌಷಧಗಳು.



ಬಂದ ಬಳಿಕ ಪಟಾಡುವುದಕ್ಕಿಂತ ರೋಗವು ಬಾರದಂತೆ ನೋಡಿಕೊಳ್ಳುವ ಸರ್ವೋತ್ತಮವಾದ ಉಪಾಯವು ಲೋಕಾಮೃತರ ಕಸ್ತೂರಿಮಾತ್ರೆಗಳೆಂಬುದು ನಿಮ್ಮ ನೆನಪಿನಲ್ಲಿರಲಿ.

ಪ್ರತಿ ದಿನ ತಾಂಬೂಲದೊಡನಾಗಲಿ, ಹಾಗೇ ಆಗಲಿ ೧-೨ ನ್ನು ಸೇವಿಸುತ್ತರೆ ಜಾಠರಾಗ್ನಿಯನ್ನು ಹೆಚ್ಚಿಸಿ, ವಾತ ಮತ್ತು ಸೀತಾಗಳ ಕಡತವನ್ನು ಅಂಟುಗೊಡದೆ ಕಾಪಾಡುತ್ತದೆ.

ಮಕ್ಕಳ ಎಳವು, ಸೆಗಣಿ, ಕೆಮ್ಮಲು, [illegible], ಜ್ವರ, ಚಳಿಜ್ವರ, ಅಜೀರ್ಣದ ಭೇದಿ, ಅಗ್ನಿಮಾಂದ್ಯ, ಹೊಟ್ಟೆಯುಬ್ಬರ, ಮಲಬದ್ಧ, ಪ್ಲೇಗು ಜ್ವರ, [illegible], [illegible], ರಕ್ತಹೀನತೆ, [illegible] ಗಳನ್ನೂ, ದೊಡ್ಡವರ ಜ್ವರ, ಚಳಿಜ್ವರ, ಕೆಮ್ಮಲು, ಗಂಟಲು, ನೆಗಡಿ, ಅಜೀರ್ಣದ ಹೊಟ್ಟೆನೋವು, ಶೀತವಾತಗಳಿಂದ ಸಂದಿಗಳು ಹಿಡಿತ ಮಲಬದ್ಧ, ಹಸಿವಿಲ್ಲದಿರುವಿಕೆ, ಬಲಹೀನತೆ ಇನ್ನೂ ಅನೇಕ ರೋಗಗಳನ್ನೂ ಗುಣಪಡಿಸುತ್ತವೆ.

ಬಾಣಂತಿಯರಿಗೆ ಕಸ್ತೂರಿಗೆ ಬದಲಾಗಿ ಈ ಮಾತ್ರೆಗಳು ಸಂಜೀವಿನಿ.

ವ್ಯಾಯಾಮವನ್ನು ಮಾಡಲವಕಾಶವಿಲ್ಲದವರಿಗೂ ಗೋಷ್ಠಿ [illegible] ರಿಗೂ ಆರೋಗ್ಯವರ್ಧನಕಾರಿ.

250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1 ಕ್ಕೆ 0—4—0 ಮೇರೆ ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತವೆ. ಟಪಾಲು ಖರ್ಚು ಸೀಸೆ 1 ಕ್ಕೆ 8 ಆಣೆ, 4 ಕ್ಕೆ 1—8—0 ರೂಪಾಯಿ, 12 ಕ್ಕೆ 3—12—0 ರೂಪಾಯಿ 25 ಕ್ಕೆ 5—8—0.

ಶ್ರೀ ಸೀತಾರಾಘವವೈದ್ಯಶಾಲಾ,	ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತರ,
ಬ್ರಾಂಚಾಫೀಸು	ಶ್ರೀ ಸೀತಾರಾಘವವೈದ್ಯಶಾಲಾ,
ಚಿಕ್ಕಪೇಟೆ, ಬೆಂಗಳೂರು ಸಿಟಿ.	ಹೆಡ್ಡಾಫೀಸು ಮೈಸೂರು.

ಮತ್ತನೆಯ ವೀರಶೈವ ಮಹಾಸಭಾಕಾಲದಲ್ಲಿ ಪ್ರಸಿದ್ಧಿಸಲ್ಪಟ್ಟ

ವೀರಶೈವ ಕರದರ್ಪಣ.

¼ ಸೈಜಿನ 200 ದೊಡ್ಡ ಗ್ಲೇಜು ಪುಟಗಳು.) ಬೆಲೆ ಒಂದೇ ಒಂದು ರೂಪಾಯಿ. (30 ಭಾವಚಿತ್ರಗಳೊಡನೆ.)

ವೀರಶೈವರ ಸಂಬಂಧವಾದ ಎಲ್ಲ ವಿಷಯಗಳನ್ನೂ ಒಳಗೊಂಡಿರುವ ವಿಚಿತ್ರವಾದ ಪುಸ್ತಕ.

ವೀರಶೈವಮತಸಂಬಂಧವಾದ ಮಹತ್ವವಿಷಯಗಳಲ್ಲವೆ ಎಂದರೆ, ವೀರಶೈವಮತತತ್ವ, [illegible], ಪ್ರಾಚೀನ [illegible], ಜಗದ್ಗುರುಗಳು, ಶ್ರೀ ಬಸವೇಶ್ವರ ಮೊದಲಾದ ವಿಷಯಗಳ ಮೇಲೆ ಸುಪ್ರಸಿದ್ಧ ಲೇಖಕರ ಲೇಖನಗಳು; ಜಗದ್ಗುರುಪೀಠಗಳ ಮತ್ತು ಜಗದ್ಗುರು ಮಹಾಪುರುಷರ ಸಚಿತ್ರ ಚರಿತ್ರೆಗಳು, [illegible] ವೀರಶೈವ ಸಂಸ್ಥೆಗಳ ಮತ್ತು ಅವುಗಳ ಸಮಗ್ರ ಇತಿಹಾಸಗಳು; [illegible] ವೀರಶೈವ ಮಹನೀಯರುಗಳ ಸಚಿತ್ರ ಜೀವಿತಚರಿತ್ರೆಗಳು; ಅ. ಭಾ. ವೀರಶೈವ ಮಹಾಸಭೆಯು ಮೊದಲು ಹೇಗೆ ಪ್ರಾರಂಭವಾಯಿತೆಂಬ ವಿಷಯ; [illegible] ವಿಷಯ ಮತ್ತು ಅದಕ್ಕೆ ಸಹಾಯಮಾಡಿದವರ ಭಾವಚಿತ್ರಗಳು; ಮೊನ್ನೆ ನಡೆದ 10 ನೇ ವೀರಶೈವ ಮಹಾಸಭೆಗೆ ಮೈಸೂರು [illegible] ಕಳಿಸಲ್ಪಟ್ಟ ಸಂದೇಶ—ಈ ಎಲ್ಲ ವಿಷಯಗಳಿಂದೊಡಗೂಡಿದ ಉತ್ತಮ ಗ್ರಂಥ.

ಇದೀ ಪುಸ್ತಕವು ಭಾವಚಿತ್ರಗಳಿಂದ ತುಂಬಿಕೊಂಡಿರುತ್ತದೆ. ಶ್ರೀ [illegible] ಭಾವಚಿತ್ರ, ಶ್ರೀ ಮುಮ್ಮಡಿ ಕೃಷ್ಣರಾಜಒಡೆಯರವರು [illegible], ಶ್ರೀಜಗದ್ಗುರು ಮಹಾಸ್ವಾಮಿಗಳ ಅಧ್ಯಕ್ಷತೆಯಲ್ಲಿ, 10 ನೇ ಅ. ಭಾ. ವೀರಶೈವ ಮಹಾಸಭೆಯ ಅಧ್ಯಕ್ಷ ಮತ್ತು [illegible] ಭಾವಚಿತ್ರಗಳು, ಪಂಚಪೀಠಗಳ ದೃಶ್ಯಗಳು ಮತ್ತು ಪಂಚಜಗದ್ಗುರುಗಳ ಭಾವಚಿತ್ರಗಳು, ಶ್ರೀ ಜಗದ್ಗುರು ಮುರುಘರಾಜೇಂದ್ರ ಸ್ವಾಮಿಗಳ ದೊಡ್ಡ ಭಾವಚಿತ್ರ ಮತ್ತು [illegible] ಒಡೆಯರವರು ಹುಬ್ಬಳ್ಳಿ ಮತ್ತು ಗದಗಿನ ಜಗದ್ಗುರು ಮಹಾಸ್ವಾಮಿಗಳ ಭಾವಚಿತ್ರ, ಇನ್ನುಳಿದ ಎಲ್ಲ ಪ್ರಸಿದ್ಧ ಮಹಾಸ್ವಾಮಿಗಳವರ ಮತ್ತು ವೈದಿಕವರ್ಗದ ಭಾವಚಿತ್ರಗಳು ಇದರಲ್ಲಡಗಿವೆ. ಇದಲ್ಲದೆ [illegible] ರವರು, ಮೈಸೂರು ವೀರಸಂಗಪ್ಪನವರಾದಿಯಾಗಿ ಗತಿಸಿದ ಎಲ್ಲ ವೀರಶೈವರ ಗಳನ್ನೂ, ಈಗಿನ ವೀರಶೈವ ಲೌಕಿಕ [illegible], [illegible] ಮಹಿಳೆಯರನ್ನೂ, ದೊಡ್ಡ ಉದ್ಯೋಗಸ್ಥರು, ವರ್ತಕರು, ಗಾಯಕರು, ಕವಿಗಳು ತಂದೆಯವರನ್ನು ಇದರಲ್ಲಿ [illegible].

ಈವರೆಗೆ ಈ ಮಾದರಿಯ ಪುಸ್ತಕವು ಇದೊಂದೇ. [illegible] ಗ್ರಂಥವು [illegible] ಮಹಾಸಭಾ [illegible] ಯಲ್ಲಿ ಮಾರಿ ಮಿಕ್ಕ ಕೆಲವು ಪ್ರತಿಗಳು ಮಾತ್ರ ಉಳಿದಿವೆ.

ಬೇಕಾದವರು ಒಡನೆ ಬರೆಯಿರಿ. ಬೆಲೆ 1 ರೂಪಾಯಿ. [illegible] ಪ್ರತ್ಯೇಕ.

ವಿಳಾಸ ಟಿ. ಎಚ್. ಚೆನ್ನಪ್ಪ,

13 ಮಾಡರ್ನ್ ಮುದ್ರಾಕ್ಷರಶಾಲಾ, ಬೆಂಗಳೂರು ಸಿಟಿ.

ಡಾಕ್ಟರ್ ಜೀ. ಬೀ. ಯವರ
ಸುಗಂಧ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು [illegible] ಲಕ್ಷ, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾಧಾರಣ ಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ನೆಗಡಿ, ಒಂಟಿತಲೆನೋವು, ತಲೆಯೊಳಗಿನ ರೋಗಗಳು, ಕಣ್ಣುಗಳಿಗೆ ಉಂಟಾ[illegible] ಸರ್ವ ವ್ಯಾಧಿಗಳು, [illegible] ದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ [illegible] ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನು ಹೆಚ್ಚು ಮಾಡುತ್ತದೆ. ಮೂರು ಬಿಟ್ಟು

(Registered Trade Mark)

ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯನ್ನು ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲರೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ [illegible] ವಾಗಿ ಉಪಯೋಗಿಸುತ್ತಾರೆ. ಮಾದರಿಯ ಪೊಟ್ಟಣ ಕಳುಹಿಸಲಾಗುವುದು.

ಚಿಕ್ಕ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೮—೦.
ಡಜನ್ ಒಂದಕ್ಕೆ ಕ್ರಯ ರೂ. ೨—೮—೦. ವಿ. ಪಿ. ಖರ್ಚು ಆಣೆ [illegible]
ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,

[60 11] ಪ್ರೋ. ಬಾ. [illegible] ನಡಿಯರು.

ಬೆಲೆ ಸುಲಭ ! ಶ್ರೀ [illegible] ಗ್ಯಾರಂಟಿ !!

ಪ್ರಸಿದ್ಧವಾದ ಮೊಳಕಾಲ್ಮುರು ರೇಶ್ಮೆ ಜವಳಿ.

ರೇಶ್ಮೆವಸ್ತ್ರ—1 ನೇ ನಂ.	ತೊಲ 1 ಕ್ಕೆ	0—8—0
ರೇಶ್ಮೆನೆಗಟು—1 ನೇ ನಂ.	ತೊಲ 1 ಕ್ಕೆ	0—8—0
ರೇಶ್ಮೆ ಕೈವಸ್ತ್ರ—1 ಕ್ಕೆ 0—11—0	ಡಜನ್ 1 ಕ್ಕೆ	7—11—0

ಒಂದಾನು [illegible] ನೋಡಿ, ಮನಸ್ಸಿಗೆ ಬಾರದಿದ್ದರೆ [illegible] ವಾಪಸು ಮಾಡಿ, [illegible] ಹಣ ವಾಪಸು ಕೊಡುವೆವು.

ನಮ್ಮ ಅಡ್ರೆಸ್—

ಎಂ. ಎಸ್. ಗಂಗಣ್ಣ ಮತ್ತು [illegible]

ರೇಶ್ಮೆ ಜವಳಿ ವ್ಯಾಪಾರಿಗಳು,

[illegible]

೧೯೨೯ ನೇ ಇಸವಿಯ ಶಿದ್ದಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು ಮತ್ತು ಕ್ಯಾಲೆಂಡರುಗಳು.

1929 ನೇ ಇಸವಿಯ ಶಿದ್ದಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು.

[illegible] ನೇ ನಂ. ದೊಡ್ಡಸೈಜು ಪಾಕೆಟ್‌ಡೈರಿ ಪೆನ್ಸಲ್ ಇಟ್ಟು ಮುಚ್ಚುವ [illegible] × [illegible] 1 ಕ್ಕೆ 0.12.0 ಪರಸ್ಥಳಕ್ಕೆ ಪೋಸ್ಟೇಜು 0.3.0.

[illegible] ನೇ ನಂ. ದೊಡ್ಡಸೈಜು ಮುಚ್ಚಳವಿಲ್ಲದ ಸಾದಾ ಪಾಕೆಟ್‌ಡೈರಿ [illegible] 1 ಕ್ಕೆ 0.10.0 ಪರಸ್ಥಳಕ್ಕೆ ಪೋಸ್ಟೇಜು 0.3.0.

[illegible] ನೇ ನಂ. ಚಿಕ್ಕಸೈಜು ಪಾಕೆಟ್‌ಡೈರಿ ಪೆನ್ಸಲ್ ಇಟ್ಟು ಮುಚ್ಚುವ [illegible] × [illegible] 1 ಕ್ಕೆ 0.7.0 ಪರಸ್ಥಳಕ್ಕೆ ಪೋಸ್ಟೇಜು 0.2.0.

[illegible] ನೇ ನಂ. ಚಿಕ್ಕಸೈಜು ಪಾಕೆಟ್‌ಡೈರಿ ಮುಚ್ಚಳವಿಲ್ಲದ ಸಾದಾ [illegible] 1 ಕ್ಕೆ 0.6.0 ಪರಸ್ಥಳಕ್ಕೆ ಪೋಸ್ಟೇಜು 0.2.0.

[illegible] ಬರದಂತೆ ನಿಮಗೆ ಬೇಕಾದಷ್ಟು ಡೈರಿಗಳ ಪುಸ್ತಕ [illegible] ರವಾನಿಸಿದಲ್ಲಿ ಪೋಸ್ಟ್ [illegible] ಪಾರ್ಸೆಲ್ ಮೂಲಕ ರವಾನಿಸ [illegible] ಮೇಲ್ಕಂಡ ಡೈರಿಗಳನ್ನು ಒಟ್ಟಿಗೆ 12 ತರಿಸಿಕೊಳ್ಳುವವರಿಗೆ [illegible] ಕೊಡಲಾಗುತ್ತೆ. ವಿ. ಪಿ. ಮೂಲಕ ಕಳುಹಿಸಿಕೊಡಲು [illegible] ವವರು ಡಜನ್ 1 ಕ್ಕೆ 2 ರೂಪಾಯಿ ಮೇರೆ ಅಡ್ವಾನ್ಸ್ ರವಾನಿ[illegible]

1929 ನೇ ಇಸವಿಯ ಸಚಿತ್ರಕ್ಯಾಲೆಂಡರ್.

ಶೀಟ್ ಕ್ಯಾಲೆಂಡರ್ 50 ಕ್ಕೆ 1-2-0. 100 ಕ್ಕೆ 2-0-0, 3" × 4½" ಪಾಕೆಟ್ ಕ್ಯಾಲೆಂಡರ್ 12 ಕ್ಕೆ 0-9-0, 50 ಕ್ಕೆ 2-4-0, 100 ಕ್ಕೆ 4-6-0.

ಅನೇಕ ಬಣ್ಣಗಳಿಂದ ರವಿವರ್ಮ ಪ್ರೆಸ್ಸಿನಲ್ಲಿ ತಯಾರಾದ 10" × 14" ಸೈಜಿನ ಶ್ರೀ ಮಹಾವಿಷ್ಣುವಿಗೆ ಸುದರ್ಶನಪ್ರದಾನ ಮಾಡುವ [illegible] ಪಿಕ್ಚರ್ ಕ್ಯಾಲೆಂಡರ 3 ಕ್ಕೆ 0-5-0, 6 ಕ್ಕೆ 0-11-0, 12 ಕ್ಕೆ 1-6-0.

ನಿಮಗೆ ಬೇಕಾದಷ್ಟು ಕ್ಯಾಲೆಂಡರುಗಳ [illegible] ಮೌಲ್ಯವನ್ನು ಮನಿಯಾರ್ಡರ್ ಮಾಡಿದಲ್ಲಿ ಪ್ಯಾಕಿಂಗ್ ಪೋಸ್ಟೇಜು ಇಲ್ಲದೆ ಫ್ರೀಯಾಗಿ ರವಾನಿಸಲಾಗುತ್ತೆ. ವಿ. ಪಿ. ಮೂಲಕ ಕಳುಹಿಸಲಾಗಿ ರವಾನಿಸುವದಿಲ್ಲ.

ಕ್ಯಾಲೆಂಡರುಗಳು ಮುಗಿದನಂತರ ಬರತಕ್ಕ ಮನಿಯಾರ್ಡರನ್ನು ಹೋದವರುಷದಂತೆ ವಾಪಸ್ ಮಾಡುತ್ತೆ.

ಮಾದರಿ ಕ್ಯಾಲೆಂಡರ್ ಅಪೇಕ್ಷಿಸುವವರು 0-3-0 ರವಾನಿಸಿದಲ್ಲಿ ಪೆನ್ಸಿಲ್‌ನಿಂದ 3 ನಮೂನೆ ಕ್ಯಾಲೆಂಡರುಗಳನ್ನು ಪೋಸ್ಟ್ ಮೂಲಕ ಫ್ರೀಯಾಗಿ ರವಾನಿಸಲಾಗುತ್ತೆ.

ಮನಿಯಾರ್ಡರ್ ರವಾನಿಸುವ ವಿಳಾಸ— [60—8]

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಹಾರ್ಮೋನಿಯಂ [illegible] ಮೈಸೂರು.

[illegible]

[illegible]

[illegible]

[illegible] ಉದಾರ [illegible] ಏಕಾಂತ ವಿಷಯವಾದ [illegible] ಇರುತ್ತಿದ್ದರಾದ ದರಿಂದ ಅವರಿಗೆ [illegible] ಈಗಿನಕಾ ಲದ [illegible] ಪ್ರಖ್ಯವರಾಗಿರುತ್ತಿದ್ದ ರು. ಅವರು [illegible] ದಿನಕ್ಕೆ [illegible] ದಿನಕ್ಕೆ ಎರಡುಬಾರಿ [illegible] ಮಾಡುತ್ತಿದ್ದರು ಮುಂ [illegible] ತೆಗೆದುಕೊಂಡು [illegible] ಮನೆಗೆ ಬರುತ್ತಿದ್ದರು [illegible] ಮಾಡುತ್ತಿ ದ್ದರ [illegible] ಮನೆಗಳನ್ನು ಸೇರಿ [illegible] ಮಾಡುತ್ತಿದ್ದರು [illegible] ರಾತ್ರಿಯ ವೇಳೆ [illegible]

[illegible]

ಗನ್ನು [illegible] ಅವಶ್ಯಕವಾದ [illegible] ಯೋಕ್ತಿಯಾಗಲಾರದು

ಮಹಾತ್ಮ ಗಾಂಧಿಯವರ ಭಾಷಣ.

ಡಿಲ್ಲಿ [illegible] ಪರಸ್ಪರ ವಿರುದ್ಧ ವಿಷಯಗಳಿವೆ ಯೆಂಬುದು ಮುಖ್ಯವಾಗಿ ತಿಳಿಯುತ್ತದೆ. ಈಗ ನಾನು ಸೂಚಿ ಸಿರುವ ಠರಾವು ಎಲ್ಲ ಪಂಗಡಗಳವರಿಗೂ ಸಮಾಧಾನಕರವಾಗಿದೆ. ಈಗ ಕಾಂಗ್ರೆಸ್ಸಿನಲ್ಲಿ ಭಿನ್ನಾಭಿಪ್ರಾಯವುಳ್ಳ ಎರಡು ಪಂಗಡಗ ಳಿರುವುದೇನೂ ವಿಷಾದಕರವಾದುದಲ್ಲ. ಆದರೆ, ಎರಡು ಪಂಗ ಡಗಳವರ ಕಿತ್ತಾಟದಲ್ಲಿ, ಕಾಂಗ್ರೆಸ್ಸು ಅದರಿಂದ ತಲೆಯಾರದಂತಹ ತೊಂದರೆಗೆ ಬರುವುದಾದರೆ ಅದು ವಿಷಾದಕರವಾಗುವುದು. [illegible] ವರದಿಯು ಪ್ರಕಟಿಸಲ್ಪಟ್ಟಾಗ ನಮ್ಮ ವಿರೋಧಿಗಳು ಕೂಡ ಅದನ್ನು ಹೊಗಳಿದರು. ಈ ವರದಿಯು [illegible] ಬುದ್ಧಿ [illegible] ಭಾರತಮಾತೆಯ ಸೇವೆಗಾಗಿ ತಮ್ಮ ಸರ್ವಸ್ವವನ್ನೂ ಧಾರೆಯೆರೆದಿರುವವರೆಂದೂ ಪ್ರಖ್ಯಾತರಾಗಿ ರುವವರು ಸೇರಿ ರಚಿಸಿದ ವರದಿಯು.

ಈ ವರದಿಯ ಹೃದಯವು ವಸಾಹತಿಕ ಸ್ವರಾಜ್ಯದೊಳಗಿನ ಸ್ವಾ ತಂತ್ರ್ಯ. ಹೃದಯವನ್ನು ತಿವಿದರೆ, ಶರೀರವು ನಾಶವಾಗುವು ದೆಂಬುದನ್ನು [illegible] ಮರೆಯಬೇಡಿ.

ಸ್ವಾತಂತ್ರ್ಯವೆಂಬುದಕ್ಕೆ ಅನೇಕ ಅರ್ಥಗಳನ್ನು ಕಲ್ಪಿಸಿ [illegible]. ನಮ್ಮ ಸ್ವಾತಂತ್ರ್ಯವು ದೇಶದಲ್ಲಿ ನಮಗೆ ಎಷ್ಟು [illegible] ಮೇಲೆ ನಿರ್ಧರವಾಗಬೇಕು. [illegible] ಸ್ವಾತಂತ್ರ್ಯವು [illegible] ಸ್ವಾತಂತ್ರ್ಯವೂ ಒಂದೇ ಅಲ್ಲ. [illegible] ಸ್ವಾತಂತ್ರ್ಯವು ಬೇರೆಬೇರೆ ದೇಶಗಳಲ್ಲಿ ಬೇರೆಬೇರೆ ಅರ್ಥವಾಗಿದೆ. [illegible] ಸ್ವಾತಂತ್ರ್ಯವೆಂಬ ಪದದಿಂದ [illegible] ಭ್ರಮೆಯುಂಟಾಗುವಂತೆ ಮಾಡ [illegible] ಜನಸಾಮಾನ್ಯರ ಮನಸ್ಸು ಸ್ವಲ್ಪಗೊತ್ತಿದೆ. ಅವರನ್ನು [illegible] ಪ್ರಯತ್ನಿಸಬೇಡಿ.

ಮದರಾಸು ಕಾಂಗ್ರೆಸ್ಸಿನಲ್ಲಿ ಸಂಪೂರ್ಣ ಸ್ವಾತಂತ್ರ್ಯವು ನಮ್ಮ ಧ್ಯೇಯವಾಗಿರಬೇಕೆಂದು ತೀರ್ಮಾನವಾಗಿತ್ತು. ಕಾಂಗ್ರೆ ಸ್ಸಿನ ಧ್ಯೇಯವು ಯಾವಾಗಲೂ ಸಂಪೂರ್ಣ ಸ್ವಾತಂತ್ರ್ಯವೇ. ಈಗ ನಾನು ಸೂಚಿಸಿರುವ ಠರಾವಿನಿಂದ ಆ ಧ್ಯೇಯವನ್ನು ಸಾಧಿಸಲು ಅಡಚಣೆಯೇನೂ ಇಲ್ಲ. ಈಗ ನಾವು ಕೇಳುವ ವಸಾಹತಿಕ ಸ್ವರಾಜ್ಯದೊಳಗಿನ ಸ್ವಾತಂತ್ರ್ಯವು ಇನ್ನೆರಡು ವರ್ಷಗಳಲ್ಲಿ ನಮಗೆ ಲಭಿಸದಿದ್ದರೆ ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ನಾವು ಹೋರಾಡಬಹುದು [illegible].

[illegible] ಸಂಪೂರ್ಣ ಸ್ವಾತಂತ್ರ್ಯವೇ ನನ್ನ ಧ್ಯೇಯ [illegible], ಆದರೆ ಈಗ [illegible] ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ [illegible]

[illegible]

[illegible] ಸ್ವಾತಂತ್ರ್ಯ [illegible]

ರಾಷ್ಟ್ರೀಯ ಸಭೆಯು [illegible] ನಿರ್ಧಾರಗಳು.

[illegible] ಸ್ವಾತಂತ್ರ್ಯವನ್ನು [illegible] ಭಾರ ತೀಯರು [illegible] ಸಂಪೂರ್ಣ ಸ್ವಾತಂತ್ರ್ಯವನ್ನು [illegible]

[illegible] ರಾಷ್ಟ್ರೀಯ ಸಭೆಯಲ್ಲಿ [illegible] ಅಂಗೀಕರಿಸಿದರು. ಈ [illegible]

[illegible] ರಾಷ್ಟ್ರೀಯ ಪ್ರಭುತ್ವವನ್ನು ಸ್ಥಾಪಿಸಿಕೊಂಡು [illegible] ಸ್ವಾತಂತ್ರ್ಯವನ್ನು ಪಡೆದುದಕ್ಕಾಗಿ ಭಾರತ ರಾಷ್ಟ್ರೀಯ ಸಭೆಯ ವರು ಅಭಿನಂದನವನ್ನು ಕಳುಹಿಸಬೇಕೆಂದೂ, ಚೀಣದಂತೆಯೇ ಈಜಿಪ್ಟ್, ಸಿರಿಯ, ಪೆಲೆಸ್ಟೈನ್, ಇರಾಕ್ ಮೊದಲಾದ ದೇಶೀ ಯರು ಸಹ [illegible] ಸ್ವತಂತ್ರರಾಗ ಬೇಕು [illegible], [illegible] ಸಾಮ್ರಾಜ್ಯತ್ವವನ್ನು [illegible] ಮುಂದಿನ ಅಧಿವೇಶನವನ್ನು ಹಿಂದುಸ್ಥಾನದಲ್ಲಿ ನಡೆಸಬೇಕೆಂ ದೂ ಸಭೆಯವರು ನಿರ್ಧರಿಸಿದರು.

[illegible] ರೈತರಮೇಲೆ [illegible] ಕಂದಾಯವನ್ನು ವಿಧಿಸಿದ್ದರಿಂದ ಅಲ್ಲಿನ ರೈತರು ಶ್ರೀಯುತ ವಲ್ಲಭಭಾಯ್ ಪಟೇಲ ರವರನ್ನು ಮುಂದಾ ಳುಗಳನ್ನಾಗಿಟ್ಟುಕೊಂಡು ನ್ಯಾಯವನ್ನು ಸಾಧಿಸಿ ಸರ್ಕಾರದವ ರು ತಮ್ಮ ತಪ್ಪನ್ನು ತಿಳಿದುಕೊಳ್ಳುವಂತೆ ಸತ್ಯಾಗ್ರಹವನ್ನು ಆಚರಿಸಿ ಅಂತ್ಯದಲ್ಲಿ ವಿಜಯವನ್ನು ಹೊಂದಿದರು. ಇದಕ್ಕಾಗಿ ಶ್ರೀ ವಲ್ಲಭಭಾಯಿಯವರನ್ನು ರಾಷ್ಟ್ರೀಯ ಸಭೆಯವರು ಅಭಿ ನಂದಿಸಿದರು.

ಪಂಡಿತ ಜವಾಹಿರ್‌ಲಾಲ್ ನೆಹರು ರವರು ಹಿಂದೀಯರ ರಾಜಕೀಯ [illegible] ವಿದೇಶೀಯರಿಗೆ ಪ್ರಚಾರವನ್ನು ಮಾಡುವುದಕ್ಕಾಗಿ ನಾನಾ ದೇಶಗಳಲ್ಲಿ ರಾಷ್ಟ್ರೀಯ ಸಭೆಯ ಶಾಖೆಗಳನ್ನು ಸ್ಥಾಪಿಸಬೇಕೆಂಬ ನಿರ್ಣಯವನ್ನು ತಂದರು. ಇದನ್ನು [illegible] ಗಿರಿಧರ್‌ಲಾಲ್ ರವರು [illegible] ಅನುಮೋದಿಸಿದರು. ಸಭೆಯು ಲಂಡನ್ ನ್ಯೂಯಾರ್ಕ್ ನಗರಗಳಲ್ಲಿರುವ ಹಿಂದುಸ್ಥಾ ನದ ಸಂಘಗಳನ್ನು ಶಾಖೆಗಳನ್ನಾಗಿ ಮಾಡಿಕೊಳ್ಳುವುದಾಗಿ ಒಪ್ಪಿಕೊಂಡರು. ಇದರಂತೆಯೇ ಇತರ ದೇಶಗಳಲ್ಲಿಯೂ ಶಾಖೆ ಗಳನ್ನು ಸ್ಥಾಪಿಸುವ ಸಲಹೆಯನ್ನು ಸ್ವೀಕರಿಸಿದರು. ಇದಕ್ಕಾಗಿ ಕಾರ್ಯಕಾರಿ ಸಮಿತಿಯವರಿಗೆ ಅವಶ್ಯಕವಾದ ಅಧಿಕಾರವು ಕೊಡ ಲ್ಪಟ್ಟಿತು.

ಭಾರತೀಯರ ಸ್ವಾತಂತ್ರ್ಯಸಾಧನೆಯಲ್ಲಿ ಒಡ್ಡನರು ತಮ್ಮ ಸಮಾನ ಜಾತಿಯನ್ನು ಸೂಚಿಸಿರುವರು. ಕಳೆದವರ್ಷ [illegible] ದಲ್ಲಿ ನಡೆದ ಯುವಕರ ಸಮ್ಮೇಳನದಲ್ಲಿ ನಮ್ಮ ಸ್ವಾತಂತ್ರ್ಯ ಸಾಧನದಲ್ಲಿ ತಮ್ಮ ಸಹಾನುಭೂತಿಯನ್ನು ತೋರಿಸುವ ನಿರ್ಣಯ ಗಳನ್ನು ಏಕಮತದಿಂದ ಅನುಮೋದಿಸಿದರು. ಹಿಂದುಸ್ಥಾನದ ಯುವಕರ ಸಂಘಗಳಿಗೆಲ್ಲ ಜರ್ಮನ್ ಯುವಕ ಸಂಘದವರು ಉತ್ತೇಜಕವಾದ ಹಿತೋಕ್ತಿಯನ್ನು ಸೂಚಿಸಿರುವರು. ಲೋಕ ದಲ್ಲಿ ಸೋದರ ಸೌಹಾರ್ದವು ನೆಲೆಗೊಳ್ಳಬೇಕಾದರೆ ಎಲ್ಲ ದೇಶ ಗಳ ಯುವಕರೂ ವರ್ಣವೈಷಮ್ಯವನ್ನೂ, ಜಾತಿಭೇದವನ್ನೂ ಮರೆತು [illegible]. ಪ್ರಪಂಚದಲ್ಲಿ [illegible] ಸ್ವಾತಂ ತ್ರ್ಯವು ಸ್ಥಾಪನೆಯಾಗಬೇಕಾದರೆ ಮೊದಲು ಆರ್ಥಿಕ ಸ್ವಾತಂ ತ್ರ್ಯವು ನೆಲೆಗೊಳ್ಳಬೇಕು. ಸಾಮ್ರಾಜ್ಯತ್ವವು ನಿರ್ಮೂಲವಾಗಿ [illegible] ಜನಸ್ಥಾಪಿಯಾಗಬೇಕು.

ಬ್ರಿಟಿಷರು ಹಿಂದುಸ್ಥಾನದಲ್ಲಿ ತಮಗಿರುವ ಆರ್ಥಿಕ ಸಂಪತ್ತಿನ ಲಾಭಕ್ಕಾಗಿ ಈ ರಾಜ್ಯವನ್ನು ಬಿಟ್ಟುಕೊಡಲು [illegible] ಬ್ರಿಟನ್ನಿನಲ್ಲಿ ತಯಾರಾದ ಸಾಮಾನುಗ ಳನ್ನು ಈ ದೇಶಕ್ಕೆ ತಂದು ವಿಶೇಷ ಲಾಭವನ್ನು ಸಂಪಾದಿಸುತ್ತಿ [illegible] ತೆಗೆದುಕೊಂಡು ಹೋದ ಹತ್ತಿ [illegible] ಮೊದಲಾದ ಕಚ್ಚಾ ಪದಾರ್ಥಗಳನ್ನು ಸಾಮಾನುಗಳಿಗೆ ಪರಿವರ್ತ ನೆಮಾಡಿ ಒಂದಕ್ಕೆ ಹತ್ತರಷ್ಟು ಲಾಭವನ್ನು ನಮ್ಮಿಂದಲೇ ಸಂ ಪಾದಿಸುವರು. ಇದೊಂದನ್ನು ತಪ್ಪಿಸಿದರೆ ಹಿಂದುಸ್ಥಾನದ ಆರ್ಥಿಕಸಂಪತ್ತು ಬಹುಮಟ್ಟಿಗೆ ಉತ್ಕೃಷ್ಟವಾಗುವುದಲ್ಲದೆ ಬ್ರಿಟಿಷರಿಗೆ ಸ್ವಾಭಾವಿಕವಾಗಿ ಅಧೀನರಾಜ್ಯಗಳಿಂದ ತಮಗಿ ರುವ ಲಾಭಕ್ಕಾಗಿಯಾದರೂ ಅವರನ್ನು [illegible] ಗತಿ ಸುವ [illegible] ಅವಸಿಗುಂಟಾಗುವಂತೆ ಮಾಡಬಹುದು. ಇದ ಕ್ಕಾಗಿ ಬ್ರಿಟಿಷರಿಂದ ತಯಾರಾದ ಸಾಮಾನುಗಳಿಗೆ ಭಾರತೀ ಯರು ಬಹಿಷ್ಕಾರ ಹಾಕಬೇಕೆಂದು ಆಂಧ್ರದೇಶದ ಪ್ರತಿನಿಧಿಗ ಳಾದ ಶ್ರೀ ವಿಶ್ವನಾಥರವರು ಒಂದು ನಿರ್ಣಯವನ್ನು ತಂದರು. ಇದು ಸಭೆಯವರಿಂದ ಅಂಗೀಕೃತವಾಯಿತು.

ಪ್ರಪಂಚದ ಈಗಿನ ಪರಿಸ್ಥಿತಿಯನ್ನು ಪರಿಶೀಲಿಸಿದರೆ ಎಲ್ಲಿ ನೋಡಿದರೂ ಯುದ್ಧಭಯವು ಪ್ರಸರಿಸುತ್ತಿರುವುದು. ಹಿಂದು ಸ್ಥಾನವು ಬ್ರಿಟಿಷರ ಅಧೀನದಲ್ಲಿರುವುದರಿಂದ ಇದುವರೆಗೂ ನಡೆ ದ ಯುದ್ಧಗಳಲ್ಲೆಲ್ಲ ಬ್ರಿಟಿಷರು ಹಿಂದುಸ್ಥಾನದ ಜನಧನಗಳನ್ನು ತಮ್ಮ ಸ್ವಕಾರ್ಯಸಾಧನೆಗಾಗಿ ಉಪಯೋಗಿಸಿಕೊಂಡಿರುವರು. ಹಿಂದುಗಳಮೇಲೆ ಯಾವ ವೈರವೂ ಇಲ್ಲದಿರುವ [illegible] ಜನಾಂಗಗಳ ಮೇಲೆ ತಂದೆ ಬ್ರಿಟಿಷರ ಸಲುವಾಗಿ ಯುದ್ಧಮಾಡಿ ನಿರಪರಾಧಿ ಗಳಾದ ಜನಾಂಗಗಳ ಸ್ವಾತಂತ್ರ್ಯವನ್ನು ಸೆಳೆಯಬೇಕಾಯಿತು. ಇನ್ನುಮುಂದೆ ಯುದ್ಧವಾಗುವುದಾದರೆ ಬ್ರಿಟಿಷರು ನಮ್ಮ ದೇಶದ ಸಹಾಯವನ್ನು ಪಡೆಯಲಪೇಕ್ಷಿಸಿದರೆ ಅದಕ್ಕೆ [illegible] ಪ್ರತಿಭಟಿಸಬೇಕು. ನಮ್ಮ ದೇಶದಲ್ಲಿ ಬ್ರಿಟಿಷರು ಸಾಕಿಕೊಂಡಿ ರುವ ಸೈನ್ಯವು ದೇಶರಕ್ಷಣೆಗೆಂದು ಹೇಳುತ್ತಿರುವುದು ನಿಶ್ಚಯ ವಾದುದಲ್ಲ, ಬ್ರಿಟಿಷ್ ಸಾಮ್ರಾಜ್ಯರಕ್ಷಣೆಗೆಂದು ಹೇಳಿದರೆ ಅದು ಸತ್ಯವಾಕ್ಯವೆಂದು ನಂಬಬಹುದು. ಆದುದರಿಂದ ಬ್ರಿಟಿಷರು ಇನ್ನುಮುಂದೆ ಹೂಡಬಹುದಾದ ಯುದ್ಧಗಳಲ್ಲಿ ಭಾರತೀಯರ

[illegible]

ಕುದುರೆಮರಿಯು ಮಗುವನ್ನು ರಕ್ಷಿಸಿತು.

ಅಮೇರಿಕೆಯ ಒಂದು ಗ್ರಾಮದಲ್ಲಿ ಒಂದು ಕುದುರೆ ಮರಿಯು ಎರಡುವರ್ಷದ ಒಂದು ಮಗುವಿನೊಡನೆ ಅಸಾಧಾರಣವಾದ ಪ್ರೀತಿಯಿಂದ ಸ್ನೇಹವಾಗಿದ್ದಿತ್ತು. ಮಗುವು ಹೊರಗೆ ಹೋದಾಗ ಆ ಪ್ರಾಣಿಯು ಸಾಧುವಾಗಿ ನಮ್ರತೆಯಿಂದ ಮಗುವನ್ನು [illegible]. ಆ ಕುದುರೆಯು [illegible] ಪ್ರಾಣಿಯಾದದ್ದರಿಂದ ದೊಡ್ಡವರು ಅದರ ಸಮೀಪಕ್ಕೆ ಹೋಗಲು ಅಂಜಿಕೊಳ್ಳುತ್ತಿದ್ದರು. ಮಗುವಿನೊಡನೆ ಮಾತ್ರ ಕುದುರೆಯು ಕುರಿಮರಿಯಂತೆ ಸಾಧುವಾಗಿರುತ್ತಿತ್ತು. ಮಗುವು ಕುದುರೆಯ ಮೂಗನ್ನು ಹಿಡಿದು [illegible] ಸಂತೋಷದಿಂದ ಚಪ್ಪಾಳೆ ಹೊಡೆದಾಗ್ಗೂ ಮರಿಯು ಆನಂದಪಡುತ್ತಿತ್ತೇ ವಿನಾ ರೇಗುತ್ತಿರಲಿಲ್ಲ. [illegible]. ಒಂದುದಿನ ಮಗುವು ಮನೆಯಲ್ಲಿರಲಿಲ್ಲ. ತಾಯಿಯು ಇದನ್ನು ಕಂಡು ಭೀತಿಗೊಂಡು ನೆರೆಮನೆಯ ಹೆಂಗಸರೊಡನೆ ಊರೆಲ್ಲ ಹುಡುಕತೊಡಗಿದಳು. ಆ ಊರಿನಲ್ಲಿದ್ದ ಕೆರೆಯ ಸಮೀಪದಲ್ಲಿ ಒಂದು ಆಶ್ಚರ್ಯಕರವಾದ ನೋಟವು ಕಾಣಿಸಿತು. ಕುದುರೆಮರಿಯು ನೀರಲ್ಲಿ ಬಿದ್ದಿದ್ದ ಮಗುವಿನ ಬಟ್ಟೆಗೆ ಬಾಯಿಹಾಕಿ ಹಲ್ಲಿನಿಂದ ಭದ್ರವಾಗಿ ಹಿಡಿದು ನೀರಿನಿಂದ ಹೊರಗೆ ತೆಗೆಯುತ್ತಿತ್ತು. ಮಗುವು [illegible] ಮೈಯೆಲ್ಲ [illegible]. ಮಗುವು ಮುಳುಗದಂತೆ ಕುದುರೆಯು ಅದನ್ನು ಎಷ್ಟು ಹೊತ್ತಿನಿಂದ [illegible] ತಿಳಿಯಲಿಲ್ಲ. ಉಪಚಾರಾನಂತರ ಮಗುವು ಎದ್ದು ಕುಳಿತಿತು.

ಒಳದೇಶದ ವೃತ್ತಾಂತಗಳು.

[illegible] ಶ್ರೀಮನ್ಮಹಾರಾಜರವರ [illegible] 16 ರಲ್ಲಿ ಬೆಂಗಳೂರಿಗೆ [illegible].

[illegible] ಅಮಲ್ದಾರ್ ಮ|| ರಾ|| [illegible] ಅಸಿಸ್ಟೆಂಟ್ [illegible] ಮಧುಗಿರಿ ಸಬ್ ಡಿವಿಜನ್ [illegible].

ದೇಶದಲ್ಲಿ ಶಾಂತಿಯನ್ನು [illegible] ಬೆಂಗಳೂರು [illegible] ಹಿಂದುಗಳ ಮೇಲೆ [illegible] ಮುಸಲ್ಮಾನರ [illegible].

ಶಿವಸಮುದ್ರದ ವಿದ್ಯುಚ್ಛಕ್ತಿಯ ಕಾರ್ಖಾನೆಯಲ್ಲಿ ಉದ್ಯೋಗಸ್ಥರಾಗಿರುವ ಮ|| [illegible].

ಕಳೆದ 1 ನೇ ತಾರೀಖು [illegible] ಶ್ರೀಮನ್ಮಹಾರಾಜರವರ [illegible] ಮೈಸೂರು [illegible].

[illegible]

ಭರತಖಂಡದ ವೃತ್ತಾಂತಗಳು.

[illegible] ಹಿಂದುಸ್ಥಾನದ [illegible] ಭಾರತೀಯರಿಗೆ [illegible].

ಹಿಂದುಸ್ಥಾನದ ರಾಜಧಾನಿಯಾದ ಡೆಲ್ಲಿ [illegible] ಸಂಸ್ಥಾನ [illegible] ಜನಸಂಖ್ಯೆಯು 1,81,00,000 [illegible].

[illegible]

ವಿದೇಶದ ವೃತ್ತಾಂತಗಳು.

[illegible]

[illegible] 7000 [illegible] 10000 [illegible].

[illegible] 140 [illegible].

[illegible]

ಅಮೇರಿಕದಲ್ಲಿ ಸ್ತ್ರೀಯರು ಅಂಗಸಾಧನೆಯಲ್ಲಿ ೩೩ ಅಡಿ ಎತ್ತರ ವಿಶೇಷಗಳನ್ನೂ ಗೋಡೆಗಳನ್ನೂ ಹಾರುತ್ತಿದ್ದಾರೆ. ಓಡುವ ಸ್ಪರ್ಧೆಯಲ್ಲಿ ಎಷ್ಟು ಗಂಡಸರಿಗೆ ಸ್ವಲ್ಪವೂ ಕಡಿಮೆ ಇಲ್ಲದೆ ಹೆಂಗಸರು ಸೈಕಲ್ ಸವಾರಿಯಲ್ಲಿ ವೇಗದಲ್ಲಿಯೂ ಹೆಚ್ಚು ಕಡಿಮೆ ಇಲ್ಲದವರಾಗಿರುವರು. ಪ್ರತ್ಯೇಕ ವಿವರಗಳನ್ನು ಮುಂದೆ ತಿಳಿಸುವೆವು. ವಿಶೇಷವಾಗಿ ತಿಳಿದಂತೆ ತೋರುತ್ತದೆ ನಮ್ಮ ಬರುವುದರಿಂದ ನೀತಿಗೆ ಕುಂದಕವಿರುವುದೇನೋ ?

ನಾಟಕವಾಡುವುದರಲ್ಲಿ ಒಂದು ಅಂಕವಾದ ಮತ್ತೊಂದು ಅಂಕವು ಬರುವುದಕ್ಕೆ ಮಧ್ಯೆ ಕಾಲವಿಳಂಬವಾಗುವುದು ಇದನ್ನು ತಪ್ಪಿಸುವುದಕ್ಕಾಗಿ ಪ್ಯಾರಿಸ್‌ನಗರದಲ್ಲಿ ಒಂದು ಹೊಸ ನಮೂನೆಯ ನಾಟಕಶಾಲೆಯು ನಿರ್ಮಿಸಲ್ಪಡುತ್ತಿರುವುದು. ಇದರಲ್ಲಿ ೨-೩ ಅಂತಸ್ತಿನ ವೇದಿಕೆಗಳಿರುವುವು. ಮೊದಲನೇ ವೇದಿಕೆಯಲ್ಲಿ ೧ ಅಂಕವು ಪೂರೈಯಾದೊಡನೆಯೇ ೨ ನೇ ವೇದಿಕೆಯು ಯಂತ್ರಗಳ ಸಹಾಯದಿಂದ ಕೆಳಕ್ಕೆ ಇಳಿಸಲ್ಪಡುವುದು. ಈ ಏರ್ಪಾಡಿನಿಂದ ನಾಟಕದ ಕಾಲಾವಧಿಯು ಬಹುಮಟ್ಟಿಗೆ ಕಡಮೆಯಾಗಿ ನೋಟಕರಿಗೆ ಅನುಕೂಲವಾಗುವುದು.

ಕಾಬೂಲಿನಲ್ಲಿದ್ದ ವಿದೇಶೀಯ ರಾಯಭಾರಿಗಳೂ ಅವರ ಸಂಸಾರಗಳೂ ಸುರಕ್ಷಿತವಾಗಿ ಪೆಶಾವರಿಗೆ ಆಕಾಶಯಾನಗಳಲ್ಲಿ ತಲುಪಿದುವು. ದಂಗೆಕೋರರೊಡನೆ ಶಾಂತಿಸಂಧಾನಗಳನ್ನು ನಡೆಸಲು ಏರ್ಪಾಡುಗಳಾಗುತ್ತಿರುವುವು. ಮೊನ್ನೆ ದಂಗೆಕೋರರು ಕಾಬೂಲನ್ನು ಸಮೀಪಿಸಿದಾಗ ಬ್ರಿಟಿಷ್ ರಾಯಭಾರಿಗಳ ವಾಸಸ್ಥಳಗಳ ಮೇಲೆ ಸಿಡಿಮದ್ದಿನ ಗುಂಡುಗಳ ಮಳೆಯು ಸುರಿಯಿತಂತೆ. ಅಮಾನುಲ್ಲಾ ದೊರೆಯವರು ಕಾಬೂಲಿನಲ್ಲಿಯೇ ಇದ್ದುಕೊಂಡು ದಂಗೆಯನ್ನು ಅಡಗಿಸುವ ತರದೂದಿನಲ್ಲಿರುವರು. ರಾಣಿವಾಸದವರು ಕಾಂದಹಾರಿನಲ್ಲಿ ಸುರಕ್ಷಿತವಾಗಿರುವರು. ರಾಜಿಯಾಗಿ ಇಷ್ಟರಲ್ಲೇ ಶಾಂತಿಯಾಗುವ ಸಂಭವವು ತೋರುತ್ತಿರುವುದು.

ದಂಗೆಕೋರರು ಕಾಬೂಲಿನಿಂದ ಸ್ವಲ್ಪದೂರದವರೆಗೂ ಸರ್ಕಾರದ ಸೈನಿಕರಿಂದ ಓಡಿಸಲ್ಪಟ್ಟಿರುವರು. ಚಳಿಗಾಲವು ಪ್ರಬಲವಾಗಿರುವುದರಿಂದ ಹೊಡೆದಾಟವು ಕಡಮೆಯಾಗಿರುವುದು. ಅಮಾನುಲ್ಲಾರವರಿಗೆ ದೇಶದ ನಾನಾ ದಿಕ್ಕುಗಳಿಂದ ಜನಧನಸಹಾಯವು ಬಂದೊದಗುತ್ತಿರುವುದು. ಜಲಾಲಾಬಾದ್ ನಗರವು ಸರ್ಕಾರದವರ ವಶವಾಗಿರುವುದು. ದಂಗೆಕೋರರೊಡನೆ ಶಾಂತಿಸಂಧಾನವು ನಡೆಸುವ ಯೋಚನೆ ಇರುವುದು. ಕಾಬೂಲಿನಲ್ಲಿದ್ದ ವಿದೇಶ ಸ್ತ್ರೀಪುರುಷರು ಸುರಕ್ಷಿತವಾಗಿ ಕಾಬೂಲಿನಿಂದ ಹಿಂದುಸ್ಥಾನಕ್ಕೆ ಆಕಾಶಯಾನಗಳಲ್ಲಿ ಸಾಗಿಸಲ್ಪಟ್ಟಿರುವರು. ಯೂರೋಪಿಯನರ ಹೆಂಗಸರೂ ಮಕ್ಕಳೂ ಅವರವರ ದೇಶಕ್ಕೆ ಕಳುಹಿಸಲ್ಪಟ್ಟಿರು.

ಜಪಾನ್ ಸಾಮ್ರಾಜ್ಯದಲ್ಲಿ ಗ್ರಾಮಾಂತರಗಳ ಆಡಳಿತವು ಗ್ರಾಮನಿವಾಸಿಗಳಿಂದಲೇ ನಡೆಸಲ್ಪಡುವುದು. ಕಂದಾಯವನ್ನು ವಸೂಲುಮಾಡುವುದು, ಗ್ರಾಮಪಂಚಾಯತರನ್ನು ಚುನಾಯಿಸುವುದು, ಯಜಮಾನನನ್ನು ಗೊತ್ತುಮಾಡಿಕೊಳ್ಳುವುದು, ಗ್ರಾಮದ ಉತ್ಪನ್ನದ ಹಣವನ್ನು ಗ್ರಾಮಾಭ್ಯುದಯಕ್ಕಾಗಿಯೇ ವಿನಿಯೋಗಿಸುವುದು ಇವೆಲ್ಲವೂ ಗ್ರಾಮನಿವಾಸಿಗಳಿಂದಲೇ ನಡೆಯುವುವು. ಈ ಕಾರಣದಿಂದ ಗ್ರಾಮವಾಸಿಗಳು ರಾಜ್ಯಾಡಳಿತದಲ್ಲಿ ಭಾಗಿಗಳಾಗಿ ರಾಜಕೀಯ ವಿಚಾರದಲ್ಲಿ ಸಾಕಷ್ಟು ಅನುಭವವನ್ನು ಸಂಪಾದಿಸುವರು. ಈ ರೀತಿಯಲ್ಲಿ ಆಡಳಿತದ ಕೆಲಸದಲ್ಲಿ ನುರುಗಿದವರಿಗೆ ಉತ್ತರವಾದಿತ್ವದ ಸರ್ಕಾರವೆಂದರೇನೆಂಬುದು ಚೆನ್ನಾಗಿ ಅರ್ಥವಾಗುವುದು.

ಜನಗಳಿಗೆ ನೆಗಡಿಯು ಪ್ರಾಪ್ತವಾಗಿ ಕೆಲ ಕಾಲಾನಂತರ ಶ್ವಾಸಕೋಶಗಳು ವ್ಯಾಧಿಗ್ರಸ್ತವಾಗುವುದರಿಂದ ಅನೇಕರು ಪ್ರಾಣವನ್ನೊಪ್ಪಿಸಿರುವರು. ಜಾರ್ಜ್ ಸಾರ್ವಭೌಮರವರಿಗೂ ಸಹ ಇದೇ ರೀತಿಯಲ್ಲಿ ನೆಗಡಿಯಾಗಿ ಕ್ರಮೇಣ ಶ್ವಾಸಕೋಶಗಳು ಕೆಡುತ್ತಾ ಬಂದುವು. ಈ ಜಾಡ್ಯದ ಮೂಲಕಾರಣವನ್ನು ಪರಿಶೋಧಿಸುವುದಕ್ಕಾಗಿ ಅಮೇರಿಕೆಯ ಧರ್ಮಿಷ್ಠರಾದ ಶ್ರೀಮಂತರೊಬ್ಬರು ವಿಶ್ವವಿದ್ಯಾಲಯದಲ್ಲಿ ಒಂದು ನಿಧಿಯನ್ನೇರ್ಪಡಿಸಿ ಅದರ ಸಹಾಯದಿಂದ ವೈದ್ಯಶಾಸ್ತ್ರ ವಿಶಾರದರು ಪರಿಶೋಧನೆಯನ್ನು ನಡೆಸುವಂತೆ ಗೊತ್ತುಮಾಡಿರುತ್ತಾರೆ. ಅಮೇರಿಕೆಯಲ್ಲಿ ಜನೋಪಕಾರ ಸಂಸ್ಥೆಗಳು ಅನೇಕವಾಗಿರುವುವು. ಇದರಿಂದ ಅಮೇರಿಕೆಯು ಧರ್ಮರಾಜ್ಯವಲ್ಲವೇ ?

ಅಮೇರಿಕೆಯು ವೃದ್ಧಿಯಲ್ಲೆಲ್ಲ ಐಶ್ವರ್ಯದಲ್ಲಿಯೂ, ಔದ್ಯೋಗಿಕದಲ್ಲಿಯೂ, ನವನಾಗರಿಕತೆಯಲ್ಲಿಯೂ ಶಾಸ್ತ್ರಶೋಧನೆಯಲ್ಲಿಯೂ, ಇತರೆ ಅಧಿಕ ವಿಚಾರಗಳಲ್ಲಿಯೂ ಅಗ್ರಸ್ಥಾನವನ್ನು ಪಡೆದಿರುವುದು. ರಾಜ್ಯ ಸಂರಕ್ಷಣೆಗೂ ಯುದ್ಧಸನ್ನಾಹಕ್ಕೂ ಅವಶ್ಯಕವಾದ ಭೂಸೈನ್ಯ, ನೌಕಾಸೈನ್ಯ, ಆಕಾಶನಾವೆ ಮೊದಲಾದ ಯುದ್ಧಸಾಮಗ್ರಿಗಳನ್ನು ವಿಶೇಷವಾಗಿ ತಯಾರಿಸಿಕೊಂಡಿದ್ದುದರಿಂದ ಇದುವರೆಗೂ ಬ್ರಿಟಿಷರು ಮಾತ್ರ ಮುಂದಾಳುಗಳಾಗಿದ್ದರು. ಈಗ ಅಮೇರಿಕೆಯು ದೊಡ್ಡ ಯುದ್ಧದ ಆಕಾಶನಾವೆಯನ್ನು ಲಕ್ಷಾಂತರ ಪೌನುಗಳ ಖರ್ಚಿನಿಂದ ಕಟ್ಟಿಸಲು ಪ್ರಯತ್ನಮಾಡುತ್ತಿರುವರು. ಇವು ತಯಾರಾದ ಕೂಡಲೆ ಅಮೇರಿಕೆಯು ಸೈನ್ಯಬಲದಲ್ಲಿ ಇಂಗ್ಲೆಂಡಿಗಿಂತ ಪ್ರಬಲವಾಗುವುದು.

ಯುದ್ಧದಲ್ಲಿ ಸೋತುಹೋದ ಜರ್ಮನಿ ಮತ್ತು ಟರ್ಕಿ ದೇಶಗಳ ಸಾಮ್ರಾಜ್ಯವು ಮಿತ್ರಮಂಡಲಿಗೆ ಸೇರಿದ ಬ್ರಿಟನ್ ಫ್ರಾನ್ಸ್ ಮೊದಲಾದ ಆಯಾದೇಶಗಳ ಜನರನ್ನು ಸಂರಕ್ಷಿಸಿ ಅವರೇಳ್ಗೆಗೆ ಸಾಧಕವಾದ ಅಭಿವೃದ್ಧಿಯ ಕಾರ್ಯಗಳನ್ನು ಮಾಡುವುದಾಗಿ ರಾಷ್ಟ್ರಗಳ ಕೂಟದವರಿಗೆ ಮಾತುಕೊಟ್ಟರು.

ಆದರೆ ಸಿರಿಯಾದಲ್ಲಿ ಫ್ರೆಂಚರು ಕೊಟ್ಟಮಾತಿನಂತೆ ನಡೆಯದೆ ಆ ದೇಶದವರ ಸ್ವಾತಂತ್ರ್ಯವನ್ನು ಕಿತ್ತುಕೊಂಡು ಸಿರಿಯಾದಲ್ಲಿ ತಮ್ಮ ಪ್ರಭುತ್ವ ಸ್ಥಾಪನೆಮಾಡಿ ಗಡಿಯೋ ಮೊದಲಾದ ದಾಕ್ಷಿಣ್ಯ ಇಲ್ಲದೆ ಕ್ರಿಶ್ಚನ ಪ್ರದೇಶಗಳನ್ನು ಸೇರಿಸಿಕೊಳ್ಳುತ್ತಿದ್ದುದು ಈಗ ವಿದೇಶದಿಂದ ಆಕ್ರಮಿಸಿಕೊಳ್ಳುವ ಸ್ಥಿತಿಗೆ ಬಂದಿರುವುದು. ಸಿರಿಯನರು ಸ್ವಾತಂತ್ರ್ಯಕ್ಕಾಗಿ ಹೋರಾಡಲು ಪ್ರಾಚೀನಕಾಲದಿಂದಲೂ ಸುಪ್ರಸಿದ್ಧವಾಗಿದ್ದ ಡಮಾಸ್ಕಸ್ ನಗರವನ್ನು ಅದರ ರಕ್ಷಕರೆಂದು ಹೇಳಿಕೊಳ್ಳುವ ಫ್ರೆಂಚರು ಸಿಡಿಮದ್ದಿನಿಂದ ನಾಶಮಾಡಿದರು. ನಿರಾಪರಾಧಿಗಳಾದ ಪುರನಿವಾಸಿಗಳನ್ನು ಒಟ್ಟೊಟ್ಟಿಗೆ ಕೊಲೆಮಾಡಿದರು. ಜೀವನಕ್ಕೆ ಮಾರ್ಗವಿಲ್ಲದೆ ಪ್ರತಿವರ್ಷವೂ ೨೦ ಸಾವಿರಮಂದಿ ಗಟ್ಟಿಮುಟ್ಟಾದ ಜನಗಳು ದೇಶವನ್ನು ಬಿಟ್ಟು ಹೊರಟು ಹೋಗುತ್ತಿರುವರು. ಏರಲಾಗದಿರುವ ಕಂದಾಯವನ್ನು ಹಾಕಿದುದೇ ಇದಕ್ಕೆ ಕಾರಣವೆಂದು ತಿಳಿಯಬರುತ್ತದೆ. ಸಾಮ್ರಾಜ್ಯದ ಆಸೆಯಿಲ್ಲದಿರುವ ಸ್ವಾತಂತ್ರ್ಯಪ್ರಿಯರಾದ ಫ್ರೆಂಚರ ಆಳಿಕೆಯು ಇಷ್ಟರಮಟ್ಟಿಗಿದೆ !

ಅಗ್ಗವಾದ ಮೋಟಾರ್ ಬಂಡಿಗಳನ್ನು ತಯಾರುಮಾಡುವ ಹೆನ್ರಿಫೋರ್ಡ್ ಎಂಬ ಅಮೇರಿಕಾ ದೇಶೀಯನು ಪ್ರಪಂಚದಲ್ಲೆಲ್ಲ ಶ್ರೀಮಂತಶ್ರೇಷ್ಠನಾಗಿರುವನು. ಈಗ ಈತನು ಹೊಸದಾಗಿ ಇಂಗ್ಲೆಂಡಿನಲ್ಲಿಯೂ, ಟರ್ಕಿಯಲ್ಲಿಯೂ ಮೋಟಾರ್ ಬಂಡಿಗಳ ಕಾರ್ಖಾನೆಯನ್ನು ಕಟ್ಟಿಸಿರುವನು. ಇಂಗ್ಲೆಂಡಿನ ಕಾರ್ಖಾನೆಯಲ್ಲಿ ವರ್ಷಕ್ಕೆ ಎರಡುಲಕ್ಷ ಗಾಡಿಗಳು ತಯಾರಾಗುವುವು. ಇದರಿಂದ ದೇಶದಲ್ಲಿರುವ ಇತರ ಕಾರ್ಖಾನೆಗಳಿಗೆ ವಿಶೇಷ ನಷ್ಟವಾಗುವುದು. ಆದರೆ, ದೇಶಕ್ಕೆ ಒಟ್ಟಿನಲ್ಲಿ ನಷ್ಟವಾಗುವಂತಿಲ್ಲ. ಏಕೆಂದರೆ ಅಲ್ಲಿನ ಕಾರ್ಖಾನೆಯಕ್ಕೆ ಬೇಕಾದ ಬಂಡವಾಳದಲ್ಲಿ ಶೇಕಡ ೬೦ ರಷ್ಟು ಆ ದೇಶೀಯರಿಂದಲೇ ಶೇಖರಿಸಲ್ಪಟ್ಟಿರುವುದು. ಹಿಂದುಸ್ಥಾನದಲ್ಲಿ ವ್ಯಾಪಾರಕ್ಕಾಗಿ ಬರುವ ವಿದೇಶೀಯರೊಡನೆ ಇದೇರೀತಿಯಾದ ಒಪ್ಪಂದವನ್ನು ಮಾಡಿಕೊಳ್ಳುವುದಾದರೆ ಈ ದೇಶದಿಂದ ಹೊರಗೆ ಹರಿದುಹೋಗುವ ಹಣದ ಪ್ರವಾಹವು ಬಹುಮಟ್ಟಿಗೆ ಕಡಿಮೆಯಾಗಬಹುದು. ಈ ಮೋಟಾರ್ ದೊರೆಯು ಹಿಂದುಸ್ಥಾನದಲ್ಲಿ ಕಾರ್ಖಾನೆಯಿಡುವ ಯೋಚನೆಯನ್ನು ಇನ್ನೂ ಮಾಡಿಲ್ಲ. ಅದೇಕೆಂದರೆ, ಚೀನಾದೇಶದಲ್ಲಿ ರಾಷ್ಟ್ರೀಯ ಪ್ರಭುತ್ವದವರು ಮೋಟಾರ್ ಕಾರ್ಖಾನೆಯನ್ನು ಸ್ಥಾಪಿಸುವುದಕ್ಕೆ ಅನುಕೂಲಗಳನ್ನು ಕಲ್ಪಿಸಿಕೊಟ್ಟಿರುವರು. ಕಾಲಕ್ರಮದಲ್ಲಿ ಪ್ರಪಂಚದ ದೊಡ್ಡ ದೊಡ್ಡ ದೇಶಗಳಲ್ಲೆಲ್ಲ ಫೋರ್ಡ್ ಕಾರ್ಖಾನೆಗಳು ಹರಡಿಕೊಂಡು ಈ ಮೋಟಾರ್ ದೊರೆಗೆ ನಿಮಿಷಕ್ಕೆ ಲಕ್ಷಾಂತರ ರೂಪಾಯಿ ಆದಾಯ ಬರಲು ಅವಕಾಶವಾಗುವುದರಲ್ಲಿ ಸಂಶಯವಿರುವುದಿಲ್ಲ.

ವೇ|| ಪಿ ಆರ್ ಕರಿಬಸವಶಾಸ್ತ್ರಿಗಳು

ಕರ್ನಾಟಕ ದೇಶಭಾಷಾಭಿಮಾನಿಗಳಲ್ಲಿ ವಿಜ್ಞಾಪನೆ

ಮೈಸೂರು ಶ್ರೀಮನ್ಮಹಾರಾಜರವರ ಕಾಲೇಜಿನಲ್ಲಿ ಸುಮಾರು ಇಪ್ಪತ್ತೇಳು ವರ್ಷಗಳ ದೀರ್ಘಕಾಲ ಕನ್ನಡಪಂಡಿತರಾಗಿ ವಿದ್ಯಾದಾನವನ್ನೂ ಭಾಷಾಸೇವೆಯನ್ನೂ ಮಾಡಿ ನಿವೃತ್ತರಾಗಿರುವ ಮತ್ತು ತಮ್ಮ ಅಸಾಧಾರಣವಾದ ಪಾಂಡಿತ್ಯದಿಂದಲೂ ಕನ್ನಡನುಡಿಯ ಸೇವೆಯಿಂದಲೂ ವಿದ್ಯಾಪಕ್ಷಪಾತಿಗಳಾದ ಶ್ರೀಮನ್ಮಹಾರಾಜರವರ ದಿವ್ಯಕೃಪೆಗೆ ಪಾತ್ರರಾಗಿ **"ಕರ್ನಾಟಕ ಭಾಷಾರತ್ನ"** ವೆಂಬ ಬಿರುದನ್ನೂ ಆಸ್ಥಾನದಲ್ಲಿ **"ಮಹಾವಿದ್ವಾಂಸ"** ಪದವಿಯನ್ನೂ ಪಡೆದು ಪ್ರಖ್ಯಾತರಾಗಿರುವ ವೇ|| ಪಿ ಆರ್ ಕರಿಬಸವಶಾಸ್ತ್ರಿಗಳವರ ಪರಿಚಯವನ್ನು ಶಾಸ್ತ್ರಾನ್ನಿಗಳಾಗಲಿ ಅವರ ಗ್ರಂಥಗಳ ಮೂಲಕವಾಗಲಿ, ಪಡೆಯದೆ ಇರತಕ್ಕ ವ್ಯಕ್ತಿಯು ಕನ್ನಡನಾಡಿನಲ್ಲಿ ಇಲ್ಲವೇ ಇಲ್ಲವೆಂದು ಹೇಳಬಹುದು. ಶಾಸ್ತ್ರಿಗಳವರ ಕನ್ನಡನುಡಿಯ ಸೇವೆಯೂ ಅನ್ಯಾದೃಶವಾದ ಪಾಂಡಿತ್ಯವೂ ಕರ್ನಾಟಕ ಜನಾಂಗಕ್ಕೆ ಶಾಶ್ವತವಾದ ಉತ್ತೇಜಕವಾಗಿರುವಂತೆ ಇವರ ಭಾವಚಿತ್ರವೊಂದನ್ನು ನಮ್ಮ ಕಾಲೇಜಿನಲ್ಲಿ ಸ್ಥಾಪಿಸಿ ಅವರಿಗೆ ನಮ್ಮ ಸಂಘದ ಪರವಾಗಿ ಬಿನ್ನವತ್ತಳೆಯೊಂದನ್ನು ಒಪ್ಪಿಸಬೇಕೆಂದು ಸಂಕಲ್ಪಿಸಿರುವುದರಿಂದ, ಶಾಸ್ತ್ರಿಗಳವರ ಶಿಷ್ಯರೂ ಸ್ನೇಹಿತರೂ ಮತ್ತು ಅಭಿಮಾನಿಗಳೂ ಆದ ಮಹನೀಯರೆಲ್ಲರೂ ಉದಾರಮನಸ್ಸಿನಿಂದ ದ್ರವ್ಯಸಹಾಯ ಮಾಡಿ ಈ ಸತ್ಸಂಕಲ್ಪವು ಈಡೇರುವಂತೆ ಮಾಡುವರೆಂದು ನಂಬುತ್ತೇನೆ. ಈ ಮಹೋತ್ಸವವನ್ನು ಬರುವ ಜನವರಿತಿಂಗಳ ಕೊನೆಯಲ್ಲಿ ನಡೆಯಿಸಬೇಕೆಂದಿರುವುದರಿಂದ ಸಹಾಯದ್ರವ್ಯವನ್ನು ಈ ಕಾಲದೊಳಗಾಗಿಯೇ ಮಹಾರಾಜರವರ ಕನ್ನಡ ಅಧ್ಯಾಪಕರ ಸಂಘದ ಉಪಾಧ್ಯಕ್ಷರಾದ ಶ್ರೀಮಾನ್ ಎಂ ಎಸ್ ಬಸವಲಿಂಗಯ್ಯ, ಎಂ ಎ, ಬಿ ಎಲ್, ಇವರಿಗೆ ಕಳುಹಿಸಿಕೊಡಬೇಕಾಗಿ ಪ್ರಾರ್ಥನೆ.

ಮೈಸೂರು ಮಹಾರಾಜರವರ ಕಾಲೇಜಿನ
ಕರ್ನಾಟಕಸಂಘ.

ಬೆಂಗಳೂರು ಗಲಭೆ ವಿಚಾರದಲ್ಲಿ ವಿಶ್ವೇಶ್ವರಯ್ಯ ವಿಚಾರಣಾಸಮಿತಿಯ ವರದಿ.

ಪೊಲೀಸಿನವರ ಮತ್ತು ಮ್ಯಾಜಿಸ್ಟ್ರೇಟರ ಜವಾಬ್ದಾರಿ

"ಗುಂಡು ಹಾರಿಸಲ್ಪಟ್ಟಿತು ಎಂದು ನಾವು ದೃಢವಾಗಿ ಹೇಳುತ್ತೇವೆ"

ಇಲಾಖಾಧಿಕಾರಿಗಳ ಅನುಮತಿ ಇಲ್ಲದೆ ಕಂಟ್ರಾಕ್ಟರ್ ಸಂಘದವರು ಸೆಂಟ್ರಲ್ ಕಾಲೇಜ್ ಬಳಿ ಸುಲ್ತಾನ್‌ಪೇಟೆ ಸ್ಕೂಲಿನಲ್ಲಿ ಗಣಪತಿಗೆ ಒಂದು ಆಲಯವನ್ನು ಕಟ್ಟುವುದಕ್ಕೆ ಅವಕಾಶಕೊಟ್ಟದ್ದೇ ಈ ಗಲಭೆಗೆ ಮೂಲಕಾರಣ. ಗಣಪತಿ ವಿಗ್ರಹವನ್ನು ಅಲ್ಲಿಂದ ಸ್ಥಳಾಂತರ ಮಾಡಿ ತೆಗೆದುಕೊಂಡು ಹೋದದ್ದು ಸರ್ಕಾರದ ತಪ್ಪು. ಈ ಆರೋಪವನ್ನು ಮಾಡಿದ ಸ್ಥಳದ ಪಕ್ಕದಲ್ಲಿಯೇ ಹರಿಜನ ಪ್ರಾಯ ಹಿಂದೂ ಜನರ ವರ್ತನೆಗೆ ಅವಕಾಶ ಕೊಟ್ಟದ್ದರಿಂದ ಮತ್ತು ಮುಸಲ್ಮಾನರ ಪ್ರತಿಭಟನೆಯು ನಡೆದದ್ದರಿಂದ ಈ ಗಲಭೆ ಉಂಟಾಯಿತು. ಸರ್ಕಾರದವರು ಮಂದಿರವನ್ನು ಕಟ್ಟಲು ಅಪ್ಪಣೆ ಕೊಟ್ಟಿದ್ದರೂ ಸಹ ಆ ಕಟ್ಟಡವನ್ನು ಇರುವಂತೆ ಬಿಡಲೇ ಇಲ್ಲ. ಈ ಗಲಭೆಯನ್ನು ಪೃಥಕ್ಕರಿಸುವ ಸ್ಥಿತಿಯಲ್ಲಿಯೇ ಪೊಲೀಸಿಗೆ ತಿಳಿಸುವಂತಿದ್ದಿತು. ವಿದ್ಯಾ ಇಲಾಖೆಯವರು ಗಣಪತಿಯನ್ನು ಪುನಃ ಪ್ರತಿಷ್ಠೆ ಮಾಡುವುದರಲ್ಲಿ ತಡಮಾಡಿದರು. ಹೀಗೆಯೇ ಸರ್ಕಾರದವರು ಹೆಚ್ಚು ಹೆಚ್ಚಾಗಿ ಮಾಡಿದ ತಪ್ಪಿನಿಂದ ಕಡೆಗೆ ಪರಿಣಾಮವು ಇಷ್ಟು ಪ್ರಗಾಢವಾಗಿ ಪರಿಣಮಿಸಿತು. ಮೌ|| ಅಬ್ಬಾಸ್‌ಖಾನರು ಹೇಳುವಂತೆ, ಹಿಂದುಗಳ ರಾಜದ್ರೋಹದ ಗುಪ್ತ ಸಂಸ್ಥೆಗಳಿವೆ ಎಂಬುದು ನಂಬತಕ್ಕದ್ದಲ್ಲ. ಈ ಆಪಾದನೆಯನ್ನು ಮೌ|| ಖಾನರವರು ದೊಂಬಿಯಲ್ಲಿ ನೆರೆದ ಜನಗಳ ಮೇಲೆ ಆರೋಪಿಸಿದರು. ಆದರೆ ಅಲ್ಲಲ್ಲೇ ಕೆಲವು ವ್ಯಕ್ತಿಗಳು ಮಾತ್ರ ಇಂತಹ ಚಳವಳಿಯನ್ನು ನಡೆಸಿರಬಹುದು. ಜನಸಾಮಾನ್ಯದಿಂದ ಅವರಿಗೆ ಸಹಾಯ ಒದಗಿತೆಂಬುದು ನಂಬತಕ್ಕದ್ದಲ್ಲ. ಸಮಿತಿಯವರಿಗೆ ತಿಳಿದಮಟ್ಟಿಗೆ ದಿವಾನರವರು ಮುಸಲ್ಮಾನರಾದುದರಿಂದಲೇ ಅವರಿಗೆ ಪ್ರತಿಬಂಧಕವು ಬಂದೊದಗಿತೆಂದು ಹೇಳಲಾಗುವುದಿಲ್ಲ. ಗಣೇಶನನ್ನು ಅವರಿಗೆ ವಾಪಸು ಕೊಡದೆ ಇದ್ದುದರಿಂದ ಹುಡುಗರಿಗೆ ಅಸಮಾಧಾನವಾಗಿರಬಹುದು. ಆದರೆ ಪ್ರಜಾಪ್ರತಿನಿಧಿ ಸಭೆಯ ದುಶ್ಚೋದನೆಗೆ ಒಳಗಾಗಿ ಶಾಲೆಗಳಿಗೂ ಜೈಲನ್ನು ಕಾಂಗ್ರೆಸ್ ಬಂಗಲೆಯ ಸುತ್ತಮುತ್ತ ಕಲ್ಲುಗಳನ್ನು ಎಸೆಯುತ್ತ ಅನಾಹುತ ನಡಸಿದುದಕ್ಕಾಗಿ ಮುಖಂಡರೇ ಜವಾಬ್ದಾರರು ಮತ್ತು ಶಿಕ್ಷಾರ್ಹರು.

ಗುಂಡುಹಾರಿಸಿದುದು ನಿಜ

ಹುಡುಗರು ನಡೆಸಿದ ಅನೇಕ ಕೃತ್ಯಗಳು ಯುವಕರ ಸಹಜವಾದ ಗುಣದಿಂದಲೂ ಮತ್ತು ಮಂದಮತಿಯಿಂದಲೂ ನಡೆದುದಾದುದರಿಂದ ಈ ಅಲ್ಪವಿಷಯವನ್ನು ಇಷ್ಟು ಅಗಾಧವಾಗಿ ಎಣಿಸಬಾರದಾಗಿದ್ದಿತು. ಪತ್ರಿಕೆಗಳ ವಿಷಯದಲ್ಲಿ ಸ್ವಲ್ಪ ಮೇಲ್ವಿಚಾರಣೆ ಇರುವುದು ಅತ್ಯಾವಶ್ಯಕ. ಇದಕ್ಕಾಗಿ ಖಾಸಗೀ ಮೆಂಬರುಗಳನ್ನೊಳಗೊಂಡ ಒಂದು ಸಮಿತಿಯನ್ನು ಏರ್ಪಡಿಸಬೇಕು. ಸಂಸ್ಥಾನದ ಪ್ರಸ್ತುತಸ್ಥಿತಿಯಲ್ಲಿ ಕೆಲವು ಪತ್ರಿಕೆಗಳು ಕಟ್ಟುವಿರಾದ ಹೇಳಿ ಜನರ ಮನಸ್ಸನ್ನು ಉದ್ರೇಕ ಕಲ್ಲೋಲ ಮಾಡಲು ಕಾರಣವಿರುವುದು. ನಮ್ಮೆಲ್ಲರಿಗೂ ಅದಿಸ ಗುಂಡು ಹಾರಿಸಲ್ಪಟ್ಟಿತೆಂಬುದು ನಿರ್ಧಾರವಾಗಿರುವುದು. ನಮ್ಮಲ್ಲಿ ಬಹು ಮಂದಿ ಮೂರು ಗುಂಡುಗಳು ಇಕ್ಕೆಲಗಳಿಂದಲೂ ಹಾರಿಸಲ್ಪಟ್ಟುವೆಂದು ಅಭಿಪ್ರಾಯ ಪಡುವರು. ಅಬ್ಬಾಸ್‌ಖಾನರ ಮನೆಯಿಂದ ಅನೇಕ ಜನ ಮಹಮ್ಮದೀಯರು ಲಾಠಿಗಳನ್ನು ಹಿಡಿದುಕೊಂಡು ಹೊರ ಬಿದ್ದು ನಿರಾಯುಧರಾದ ಹಿಂದುಗಳನ್ನು ಪ್ರಹರಿಸಿದರೆಂಬುದೂ ನಮಗೆ ನಿಜವಾದುದೆಂದು ತೋರಿ ಬಂದಿರುವುದು. ಈ ಮಹಮ್ಮದೀಯರೇ ಗಣಪತಿ ವಿಗ್ರಹವನ್ನು ತರಿಕೆಳಕು ಮಾಡಿದರು. ಇದರ ಜತೆಯಲ್ಲಿ ಅಕ್ಕಪಕ್ಕ ಗಲ್ಲಿಗಳಿಂದಲೂ ಮುಸಲ್ಮಾನರು ಬಂದು ನೆರೆದರು. ಆದರೆ ಅಬ್ಬಾಸ್‌ಖಾನರ ಮನೆಗೆ ಕೆಲವು ಹುಡುಗರು ಎಳೆಯಲ್ಪಟ್ಟು ಅಲ್ಲಿ ಅವರನ್ನು ಥಳಿಸಿದರೆಂಬುದು ನಿರಾಧಾರವಾದುದು. ನನ್ನ ಅಭಿಪ್ರಾಯವೇನೆಂದರೆ — ಯಾರೂ ಕೊಲೆ ಮಾಡಲ್ಪಡಲಿಲ್ಲ ಮತ್ತು ಯಾರೂ ತಪ್ಪಿಸಿಕೊಂಡಿರುವುದೂ ಇಲ್ಲ. ಆ ದಿನ ನಡೆದಿರಬಹುದಾದ ಕೃತ್ಯದ ಚಿನ್ಹೆಗಳು ವಿಚಾರಣೆಯ ಸಾವಕಾಶದಿಂದ ಮಾಯವಾಗಿರಬಹುದಾದುದರಿಂದ ಈ ವಿಷಯವನ್ನು ಕೂಲಂಕಷವಾಗಿ ವಿಚಾರಮಾಡಿ ಜನಗಳಲ್ಲಿರುವ ಅಪನಂಬಿಕೆಯನ್ನು ಹೋಗಲಾಡಿಸಲು ಒಂದು ಸಮಿತಿಯನ್ನು ಏರ್ಪಡಿಸಬೇಕು.

ಸರಿಯಾಗಿ ವಹಿತೋಟಿಯಲ್ಲಿ ಇಟ್ಟುಕೊಳ್ಳಲಿಲ್ಲ

ನಗರದ ಶಾಂತಿರಕ್ಷಕರಾದ ಪೊಲೀಸಿನವರು ಜುಲೈ ೩೦ ನೆಯ ತಾರೀಖಿನಲ್ಲಿ ಸಂಭವಿಸಿದ ಸನ್ನಿವೇಶವನ್ನು ತಮ್ಮ ಕರ್ತವ್ಯಕ್ಕನುಸಾರವಾಗಿ ತಕ್ಕ ಹತೋಟಿಯಲ್ಲಿಟ್ಟುಕೊಳ್ಳಲಿಲ್ಲ. ಗುಂಡುಗಳು ಹಾರಿಸಲ್ಪಟ್ಟು ಸುಮಾರು ೬೦ ಹಿಂದುಗಳೂ ಹಿಂದು ಅಧಿಕಾರಿಗಳೂ ಮಹಮ್ಮದೀಯರಿಂದ ದೊಣ್ಣೆಗಳಿಂದ ಘಾಯಪಡಿಸಲ್ಪಟ್ಟರೂ ಸರಿಯಾದ ವಿಚಾರಣೆಯು ನಡೆಯಲಿಲ್ಲ. ಯಾರನ್ನೂ ದಸ್ತಗಿರಿ ಮಾಡಲಿಲ್ಲ ಮತ್ತು ಯಾರ ಮನೆಯನ್ನೂ ಹುಡುಕಲಿಲ್ಲ. ಮಾರನೆ ದಿನ ಬೆಳಗ್ಗೆ ಸರ್ಕಾರದವರು ವಿಚಾರಣೆಯನ್ನು ಪೊಲೀಸಿನವರ ಕೈಯಿಂದ ತಪ್ಪಿಸಿ ತಾವೇ ವಹಿಸಿಕೊಂಡು ನ್ಯಾಯಸ್ಥಾನವನ್ನೇರ್ಪಡಿಸಿದರು. ಇದರಿಂದ ಪೊಲೀಸಿನವರಿಗೆ ಈ ವಿಚಾರಣೆಯ ಬಗ್ಗೆ ಕುತೂಹಲವು ಕಡಿಮೆಯಾಗಲು ಅವಕಾಶವಾಯಿತು. ಈ ವಿಚಾರಣಾಧಿಕಾರಿಗೆ ಆತನಿಗಿದ್ದ ಸಾಮಾನ್ಯ ಕೆಲಸಗಳನ್ನು ತಪ್ಪಿಸಿ ಈ ಗಲಭೆಯ ವಿಚಾರಣೆಯನ್ನು ಮಾಡುವಂತೆ ಏರ್ಪಡಿಸಲಿಲ್ಲ ಮತ್ತು ಈತನ ಬದಲು ಮೌ|| ಅಬ್ಬಾಸ್‌ಖಾನರಿಗೆ ಅವರ ಬೌರಿಂಗ್ ವಿಚಾರಣೆಯಲ್ಲಿ ಸಹಾಯಕರಾದ ಒಬ್ಬ ಅಧಿಕಾರಿಯನ್ನು ಸರ್ಕಾರದವರು ನೇಮಿಸಿದರು. ಈ ಬದಲಾವಣೆಗಳಿಂದ ಆಕ್ಷೇಪಯುಕ್ತವಾದ ಸಿದ್ಧಾಂತಗಳು ಹೊರಬೀಳದೆ ಅಲ್ಲಿಯೇ ಅಡಗಲು ಅವಕಾಶವಾಯಿತು. ಸರ್ಕಾರದ ಪ್ರಕಟನೆಗಳು ಸಹ ಕೆಲವು ವಿಷಯಗಳಲ್ಲಿ ಅನ್ಯಥಾವಾಗಿದ್ದವು. ಡೆಪ್ಯುಟಿ ಪೊಲೀಸ್ ಇನ್‌ಸ್ಪೆಕ್ಟರವರು ಸಂತಪಾಲೆಯನ್ನು ಅವಮಾನಪಡಿಸಿದರೆಂಬುದೂ ಗುಂಡು ಹಾರಿಸಲ್ಪಡಲಿಲ್ಲವೆಂಬುದೂ ಶುದ್ಧ ಸುಳ್ಳು. ವಿದ್ಯಾ ಇಲಾಖೆಯವರು ಈ ವಿಷಯಕ್ಕೆ ಹೆಚ್ಚು ಗಮನವನ್ನು ಕೊಟ್ಟು ಸಕಾಲದಲ್ಲಿ ಗಣಪತಿಯನ್ನು ಒಪ್ಪಿಸಬಹುದಾಗಿದ್ದಿತು. ದೊಂಬಿಯು ನಡೆಯಲು ಅವಕಾಶವಾದ ಸೇನೆಯು ಹೆಚ್ಚು ಮಾಹಿತಿ ಇಲ್ಲದ ಅಧಿಕಾರಿಗಳ ಅಧೀನದಲ್ಲಿದ್ದಿತು. ಇವರಿಗೆ ನ್ಯಾಯನಿಬಂಧನೆಗಳೊಂದೂ ತಿಳಿದಿರಲಿಲ್ಲ. ಸವಾರರು ಹುಡುಗರನ್ನು ಬಹಳ ಕ್ರೂರವಾಗಿ ಹಿಂಸಿಸಿದರು. ಹುಡುಗರು ಕೂಡ ಇದಕ್ಕೆ ತಕ್ಕ ರೌದ್ರಾವೇಶವನ್ನು ತಾಳಿದರು. ದೊಂಬಿಯನ್ನು ಚದರಿಸುವುದಕ್ಕಾಗಿ ಕರೆಯಲ್ಪಟ್ಟ ಸೇನೆಯು ಪೌರಾಧಿಕಾರಿಗಳ ಅಧೀನವಾಗಿರಲಿಲ್ಲ. ಆದರೆ ಸವಾರರು ಬಹು ಸಮಾಧಾನವನ್ನು ತಾಳಿ ಹೆಚ್ಚು ಗಲಭೆಗೆ ಅವಕಾಶವಿಲ್ಲದಂತೆ ಸಹಾಯವನ್ನು ಮಾಡಿರುತ್ತಾರೆ.

ಅಸಮರ್ಪಕವಾದ ಏರ್ಪಾಡುಗಳು

ಜುಲೈ ೩೦ನೇ ತಾರೀಖಿನಲ್ಲಿ ನಡೆದ ಗಲಭೆಗೆ ಪೊಲೀಸಿನವರು ಮತ್ತು ಮ್ಯಾಜಿಸ್ಟ್ರೇಟರೇ ಮುಖ್ಯವಾಗಿ ಜವಾಬ್ದಾರರು. ಈ ಸನ್ನಿವೇಶವನ್ನು ಹತೋಟಿಗೆ ತರಲು ಇವರು ಮಾಡಿಕೊಂಡಿದ್ದ ಏರ್ಪಾಡುಗಳು ಅಸಮರ್ಪಕವಾದುವು. ಈ ಗಲಭೆಯಲ್ಲಿ ಹೀಗೆಯೇ ಕಾರ್ಯಭಾರ ನಡೆಸಬೇಕೆಂಬ ಯಾವ ಕಾರ್ಯಕ್ರಮವನ್ನು ಮೊದಲೇ ನಿರ್ಧರಿಸಿಕೊಂಡಿರಲಿಲ್ಲ. ಇವರುಗಳು ಸ್ಥಳ ವಿದ್ಯಮಾನದ ವಿಚಾರದಲ್ಲಿ ಜಾಗ್ರತೆಯಾಗಿ ಸಮಾಚಾರಗಳನ್ನು ಹೊಂದಲು ಯಾವ ಏರ್ಪಾಡನ್ನೂ ಮಾಡಿಕೊಂಡಿರಲಿಲ್ಲ. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಸೇನೆಯ ಸಹಾಯ ಮತ್ತು ದೊಂಬಿಯನ್ನು ಅಡಗಿಸುವ ವಿಷಯದಲ್ಲಿ ತಕ್ಕ ಅಧಿಕಾರವನ್ನು ವಹಿಸಲಿಲ್ಲ. ಅವರು ವಿಚಾರಣೆಯಲ್ಲಾಗಲೀ, ದಸ್ತಗಿರಿ ಮಾಡುವುದರಲ್ಲಾಗಲೀ ಜನಗಳನ್ನು ಪತ್ತೆ ಮಾಡುವುದರಲ್ಲಾಗಲೀ ತಕ್ಕ ಯಾವ ಪ್ರಯತ್ನಗಳನ್ನೂ ಮಾಡಲಿಲ್ಲ. ದೊಂಬಿ ನಡೆದನಂತರ ಆಸ್ಪತ್ರೆಗೆ ಸುಮಾರು ೬೦ ಮಂದಿ ಜನರು ಚಿಕಿತ್ಸೆಗೆ ಹೋದರೂ ಇವರೆಲ್ಲರನ್ನೂ ಗುರುತಿಸಲಾರದೆ ಹೋದರು. ಮೌ|| ಅಬ್ಬಾಸ್‌ಖಾನರ ದೊಡ್ಡಸ್ತಿಕೆಗೆ ಕುಂದುಕವುಂಟಾಗಬಾರದೆಂಬ ಅಭಿಮಾನದಿಂದ

[illegible]

ಪೊಲೀಸಿನವರು ಕರ್ತವ್ಯ ಪರಾಙ್ಮುಖರಾದರು

[illegible]

ಮುಖ್ಯ ತಪ್ಪಿತಸ್ಥರು

[illegible]

[illegible]

[illegible]

ಈ ವಿಚಾರದಲ್ಲಿ ಟೈಂಸ್ ಆಫ್ ಇಂಡಿಯಾ ಪತ್ರಿಕೆಯ ಅಭಿಪ್ರಾಯ

ಮೆ॥ ಪಾನರ ಖಂಡನೆ

[illegible]

ಮೆ॥ ಪಾನರ ಜವಾಬ್ದಾರಿ

[illegible]

ಕೋಮುವಾರು ದ್ವೇಷವುಂಟೆ?

[illegible]

ಪತ್ರವ್ಯವಹಾರ

[illegible]

[illegible] ಗ್ರಾಮದಲ್ಲಿ ನಡೆದ ಶಿವದೀಕ್ಷಾ ಸಮಾರಂಭವು

[illegible]

ಬಸವಯ್ಯ ಪುರಾಣಿಕ ಶಿವಗಿರಿ

ಚಿಕ್ಕಮಗಳೂರು ಉಪಾಧ್ಯಾಯರ ಸಂಘ

[illegible]

[illegible] ಸೆಕ್ರೆಟರಿ

ವೀರಶೈವರು ಹಿಂದುಗಳಲ್ಲವೆ?

(ಲೇಖಕ—ವೀರಭದ್ರಪ್ಪ ಬಸಪ್ಪ [illegible], ಜಿ॥ ಬೆಳಗಾಂವ)

ತಾ॥ 15-12-1928 ನೇ ಮೈಸೂರು ಸ್ಟಾರ್ ಪತ್ರಿಕೆಯ [illegible] 1930ನೇ ವರ್ಷದ [illegible]

ಗಳೂ ಹುಟ್ಟಿಕೊಂಡಿರುವುದು. ಉದಾಹರಣೆಗೆ ಕ್ರಿಸ್ತ ಧರ್ಮದಲ್ಲಿ ಕ್ಯಾಥೊಲಿಕ್, ಪ್ರೊಟೆಸ್ಟಂಟ್ ಎಂಬ ಪಂಗಡಗಳೂ, ಮಹಮ್ಮದೀಯರಲ್ಲಿ ಸುನ್ನಿ, ಶಿಯಾ ಎಂಬ ಭೇದಗಳೂ ಇರುವವು. ನಮ್ಮ ಹಿಂದೂ ಧರ್ಮದಲ್ಲಿಯೂ (1) ಅದ್ವೈತ, (2) ವಿಶಿಷ್ಟಾದ್ವೈತ, (3) ದ್ವೈತ ಎಂಬ ಪಂಥಗಳು ಇರುವವು (ಕೆಲವು ಗ್ರಂಥಗಳಲ್ಲಿ ಇನ್ನೂ ಹೆಚ್ಚಾಗಿ) ಹುಟ್ಟಿರುವುದನ್ನು ನಮ್ಮ ಗ್ರಂಥಗಳೇ ಒಪ್ಪಿಕೊಳ್ಳುವವು. ಇಂಥ ಬಳಿಕ ನಾವು ಹಿಂದೂಗಳಲ್ಲ ಬೇರೆ ಧರ್ಮದವರು ಎಂಬುದನ್ನು ವಾಚಕರೇ ಊಹಿಸಬೇಕು. ಉಪಾಸನೆ ಹಾಗು ಆಚಾರಾದಿ ಭೇದಗಳಿಂದ ಹಿಂದು ಧರ್ಮದ ಪಂಥಗಳಲ್ಲಿ ಮತಭೇದಗಳಾದಂತೆ ಪಾರಮಾರ್ಥಿಕ ಜ್ಞಾನ ವಿಷಯದಲ್ಲಿಯೂ ಮತಭೇದವಾಗಿರುವದು. ಅದು ಹೇಗೆಂದರೆ— ವೇದಗಳಲ್ಲಿ ಹೇಳಲ್ಪಟ್ಟ ಜ್ಞಾನಭಾಗವು ಅದ್ವೈತಪರವಾಗಿರುವದೆಂದು ಸ್ಮಾರ್ತರೂ, ದ್ವೈತಪರವಾಗಿರುವದೆಂದು ಮಾಧ್ವರೂ, ವಿಶಿಷ್ಟಾದ್ವೈತಪರವಾಗಿರುವದೆಂದು ಶ್ರೀವೈಷ್ಣವರೂ, ಶಕ್ತಿವಿಶಿಷ್ಟಾದ್ವೈತಪರವಾಗಿರುವದೆಂದು ವೀರಶೈವರೂ ಪ್ರತಿಪಾದಿಸುತ್ತಿರುವರಾದರೂ ಎಲ್ಲರೂ ವೇದಗಳೇ ತಮ್ಮ ಮುಖ್ಯಾಧಾರ ಗ್ರಂಥಗಳೆಂದು ನಂಬಿರುವರು. ಶಂಕರಾಚಾರ್ಯರ ಅದ್ವೈತಪರ ವಿಚಾರಕ್ಕೂ ಮಧ್ವಾಚಾರ್ಯರ ದ್ವೈತಪರ ವಿಚಾರಕ್ಕೂ ಮಹದಂತರವಿದ್ದರೂ ಈ ಉಭಯತರಲ್ಲಿ ಒಬ್ಬರಾದರೂ ತಾವು ಹಿಂದು ಧರ್ಮದಿಂದ ಭಿನ್ನರಾದವರೆಂದು ಹೇಳುವರೇ? ಅವರಂತೆ ನಮ್ಮ ಷಟ್‌ಸ್ಥಲಾಚಾರ್ಯರ ವಿಚಾರಕ್ಕೂ ಉಳಿದವರ ವಿಚಾರಕ್ಕೂ ಅಂತರವಿದ್ದರೇನಾಯಿತು? ಇಷ್ಟು ಮಾತ್ರಕ್ಕೇನೇ ನಾವು ಸಿಟ್ಟಿಗೆದ್ದು ಹಿಂದು ಧರ್ಮದೊಳಗಿನವರಲ್ಲವೆಂದು ಹೇಳಬಹುದೇ ಹ್ಯಾಗೆ? ಹಿಂದು ಧರ್ಮದಲ್ಲಿ ಹುಟ್ಟಿ ಹಿಂದು ಧರ್ಮದಲ್ಲಿ ಬೆಳೆದು ಹಿಂದು ಧರ್ಮದ ಆಚಾರಗಳಲ್ಲಿ ನಿರತರಾಗಿ ಹಿಂದು ಧರ್ಮಿಗಳೆಂದು ಇವರೆಗೂ ಹೇಳಿಕೊಳ್ಳುತ್ತ ಬಂದಿರುವ ನಾವು ಇನ್ನು ಮೇಲೆ ಹಿಂದು ಧರ್ಮದೊಳಗಿನವರಲ್ಲವೆಂದು ಹೇಳುವದೆಂದರೆ ಸಂಪೂರ್ಣ ತಪ್ಪೇ ಸರಿ. ಆದುದರಿಂದ ಈ ಹೊಸ ಜಂಕು ಚೀಟಿಯಲ್ಲಿ ಯಾರೂ ಗದ್ದಲ ಕೊಡದೆ ನಮ್ಮ ಮತವು ಹಿಂದು ಧರ್ಮದೊಳಗಿನ ಒಂದು ಒಳಪಂಗಡವೆಂದು ಬರೆಸಬೇಕೆಂಬುದೇ ನಮ್ಮ ಸೂಚನೆಯು. ಇನ್ನು ಸದರಿ ಲೇಖಕರ ಇನ್ನೊಂದು ಸೂಚನೆಯೇನೆಂದರೆ, ವೀರಶೈವರೊಳಗಿನ ಒಳಪಂಗಡಗಳನ್ನು ಬೇರೆ ಬೇರೆಯಾಗಿ ಬರೆಸದೆ ಭಕ್ತ ಮಾಹೇಶ್ವರ ಎಂಬ ಎರಡೇ ಭೇದಗಳನ್ನು ಬರೆಸಬೇಕೆಂದೂ ನಮ್ಮಂತೆ ಒಳಪಂಗಡಗಳಿಂದ ಕೂಡಿರುವ ಜೈನರು ಅವುಗಳನ್ನು ಬೇರೆ ಬೇರೆಯಾಗಿ ಬರೆಸದೆ ಮುಖ್ಯವಾಗಿ ದಿಗಂಬರ, ಶ್ವೇತಾಂಬರ ಎಂಬ ಎರಡೇ ಭೇದಗಳನ್ನು ಬರೆಸುವರೆಂದೂ ತಿಳಿಸಿರುತ್ತಾರೆ. ಜೈನರಲ್ಲಿಯ ದಿಗಂಬರ, ಶ್ವೇತಾಂಬರ ಭೇದಗಳಂತೆ ನಮ್ಮ ಭಕ್ತ ಮಾಹೇಶ್ವರ ಭೇದಗಳಲ್ಲ. ದಿಗಂಬರರಿಗೂ ಶ್ವೇತಾಂಬರರಿಗೂ ಅನ್ಯೋನ್ಯ ವ್ಯವಹಾರವಿಲ್ಲ. ಆಚಾರಗಳಲ್ಲಿ ಸಹ ಪರಸ್ಪರ ಅಂತರವಿರುವದು. ನಮ್ಮಲ್ಲಿಯ ಭಕ್ತ ಮಾಹೇಶ್ವರ ಎಂಬ ಭೇದಗಳು ಬ್ರಾಹ್ಮಣರಲ್ಲಿಯ ಲೌಕಿಕ ವೈದಿಕರೆಂಬ ಭೇದಗಳಿದ್ದಂತೆ. ಅವೆ ಬ್ರಾಹ್ಮಣರಲ್ಲಿ ವೈದಿಕವೃತ್ತಿಯಲ್ಲಿದ್ದವರಿಗೆ ಆಚಾರ್ಯ ಅಥವಾ ಉಪಾಧ್ಯಾಯರೆನ್ನುವಂತೆ ನಮ್ಮಲ್ಲಿಯ ವೈದಿಕರಿಗೆ ಮಹೇಶ್ವರ ಅಥವಾ ಜಂಗಮರೆನ್ನುವರು. ಈ ಭೇದಗಳು ಹೇಳಿಕೊಳ್ಳುವಷ್ಟು ಪ್ರಾಮುಖ್ಯಗಳಲ್ಲ. ಇದರಿಂದ ನಾವು ಭಕ್ತ ಮಾಹೇಶ್ವರ ಎಂದು ಎರಡು ಭೇದಗಳನ್ನು ತೋರಿಸುವದಕ್ಕಿಂತಲೂ ಎಲ್ಲರೂ ವೀರಶೈವರೆಂದು ಬರೆಸಿದರೆ ಸಾಕೆಂಬುವದೇ ನಮ್ಮ ಅಭಿಪ್ರಾಯವು.

ಕರ್ನಾಟಕ ಕುರುಬರ ಕೌನ್ಸಿಲ್ ೪ನೇ ಅಧಿವೇಶನ, ಧಾರವಾಡ

ಮೊದಲು ಪ್ರಸಿದ್ಧಪಡಿಸಿದಪ್ರಕಾರ ತಾ|| 29 10 1928 ರಲ್ಲಿ ಕರ್ನಾಟಕ ಕುರುಬರ ಕೌನ್ಸಿಲ್ 4 ನೇ ಅಧಿವೇಶನವು ಧಾರವಾಡ ರಡ್ಡಿ ಬ್ಯಾಂಕಿನ ಸಭಾಮಂದಿರದಲ್ಲಿ ಡಾ|| ಆರ್ ನಾಗನಗೌಡ ಎಂ ಎಲ್ ಸಿ ಬಳ್ಳಾರಿ ಇವರ ಅಧ್ಯಕ್ಷತೆಯಕೆಳಗೆ ಬಹುವಿಜೃಂಭಣೆಯಿಂದ ನೆರವೇರಿತು. ಈ ಅಧಿವೇಶನಕ್ಕೆ ಕರ್ನಾಟಕದ (ದೇಶೀಸಂಸ್ಥಾನಸಹಿತ) ಯಾವತ್ತು ಭಾಗಗಳ ಕುರುಬರ ಪ್ರಮುಖಜನರು ಆಗಮಿಸಿದ್ದರು. ಸದರಿ ಸಂಘದ 50 ಜನ ಮೆಂಬರರು ಹಾಜರಿದ್ದರು. ಈ ಅಧಿವೇಶನದ ಅಧ್ಯಕ್ಷರಾದ ಡಾ|| ನಾಗನಗೌಡರು ಪರಿಷತ್ತಿನ ದಿವಸ ಮುಂಜಾನೆಯ ಗಾಡಿಯಲ್ಲಿ ಬಳ್ಳಾರಿಯಿಂದ ಬಂದಬಳಿಕ ಸ್ಟೇಷನ್ನಿನಲ್ಲಿ ಸಮಾಜದ ಪ್ರಮುಖರು ಇವರಿಗೆ ಹೂವಿನಹಾರ ಹಾಕಿ ಸ್ವಾಗತಿಸಿ ಮೋಟಾರುಬಂಡಿಯಲ್ಲಿ ಉತ್ಸವದಿಂದ ಸಭಾಮಂದಿರಕ್ಕೆ ಕರೆದುಕೊಂಡುಬಂದರು. ಮಧ್ಯಾಹ್ನ 3 ಗಂಟೆಗೆ ಈ ಅಧಿವೇಶನವು ಪ್ರಾರಂಭವಾಯಿತು. ಇದಕ್ಕೆ ರಡ್ಡಿ, ಲಿಂಗಾಯತ, ಬ್ರಾಹ್ಮಣ, ಅಸ್ಪೃಶ್ಯ ಮೊದಲಾದ ಸಮಾಜಗಳ ಪ್ರಮುಖಜನರು ಆಗಮಿಸಿದ್ದರು. ಪ್ರಾರಂಭದಲ್ಲಿ ಸಂಘದ ಜನರಲ್ ಸೆಕ್ರೆಟರಿ ಮ|| ಬಿ ಎಚ್ ಕಲ್ಲಣ್ಣನವರ ಇವರು ಯಾವತ್ತರ ಸ್ವಾಗತವಮಾಡಿ ಸಂಘದ ವರದಿಯನ್ನು ಓದಿಹೇಳಿದ ಬಳಿಕ ಅಧ್ಯಕ್ಷರು ವಿರಾಜಮಾನರಾದಮೇಲೆ ಮ|| ಎಸ್ ಎಸ್ ಪಾಟೀಲ ಬ್ಯಾಕೋಡ, ಶ್ರೀ ದೇವನಗೌಡ ಪಾಟೀಲ ವಕೀಲ, ಶ್ರೀ ಎಚ್ ಟಿ ಕಾಳಪ್ಪನವರ ಬಿ ಎ, ಶ್ರೀ ಎಂ ಬಿ ಖನ್ನೂರ ಬಿ ಎ, ಶ್ರೀ ಬಸವಪ್ಪ ದೇಸಾಯಿ ಇವರೇ ಮೊದಲಾದವರು ಸಮಾಜಾಭಿವೃದ್ಧಿಯಬಗ್ಗೆ ಭಾಷಣಮಾಡಿದ ಬಳಿಕ ಕೆಳಗಿನ ಠರಾವುಗಳು ಸರ್ವಾನುಮತದಿಂದ ಪಾಸಾದವು—

1 ಸಬ್‌ಕಮಿಟಿಯವರಿಂದ ತಯಾರಾದ ಠರಾವುಗಳನ್ನು ಓದಿ ಸಂಪೂರ್ಣ ಸಮ್ಮತದಿಂದ ಪಾಸುಮಾಡಲಾಯಿತು.

2 ಸಂಘದ ಕಾರ್ಯಕಾರಿ ಕಮಿಟಿಗೆ ಮುಂದಿನ ಜನರ ಆರಿಸಲ್ಪಟ್ಟರು (1) ಪಾವಾಡಿಗೌಡ ಪಾಟೀಲ ಹಿರೇಕೆರೂರ (2) ಭೀಮಪ್ಪ ಚಂದ್ರಣ್ಣನವರ ನಾಗನೂರ (3) ಎಸ್ ಎಸ್ ಪಾಟೀಲ ಬ್ಯಾಕೋಡ (ಕೊಲ್ಹಾಪುರಸ್ಟೇಟ್) (4) ಲಕ್ಷ್ಮಪ್ಪ ಭಂಡಿಗಾರ ಗೋಕಾಕ. (5) ಹುಚ್ಚಪ್ಪ ವಿಗ್ಗಣ್ಣನವರ ಹುಲಿಕಟ್ಟಿ (6) ಭೀಮಪ್ಪ ಮುಖ್ಯರ ಅಗಡಿ (7) ಚೋಪಣ್ಣಾ ಬೆಂಚಿ ನರಗಾ (ವಿಜಾಪುರ) (8) ಬಸನಗೌಡ ಚಿಕ್ಕಪ್ಪ ಗದಗ (9) ಎಂ ಬಿ ಖನ್ನೂರ ಬಿ ಎ (10) ದೇವನಗೌಡ ಪಾಟೀಲ ಬಿ ಎ, ಎಲ್‌ಎಲ್ ಬಿ, ಧಾರವಾಡ 11) ಬಸಪ್ಪ ಕಲ್ಲಣ್ಣನವರ

3 ಮ|| ಕಲ್ಲಣ್ಣನವರ ಇವರು ಸಂಘದ ಜನರಲ್ ಸೆಕ್ರೆಟರಿಯಾಗ ತಕ್ಕದ್ದು ಮತ್ತು ಇವರಿಗೆ ಪ್ರವಾಸದ ಖರ್ಚ ಮತ್ತು ಆನರರೀಯಮ್ ಕೊಡತಕ್ಕದ್ದು

4 ಸಂಘವನ್ನು ಶೀಘ್ರ ರಿಜಿಸ್ಟರ ಮಾಡಿಸತಕ್ಕದ್ದು

5. ಕುರುಬರ ಮಹಾಕವಿಯ ಸ್ಮಾರಕ ಕೊಲ್ಹಾಪುರ ಸಂಸ್ಥಾನ ಮತ್ತು ಬೆಳಗಾವ ಜಿಲ್ಲೆಯ ಮಧ್ಯದಲ್ಲಿ ಬ್ರಿಟಿಷರ ಸರಹದ್ದಿನಲ್ಲಿ ಕಟ್ಟಿಸತಕ್ಕದ್ದು

6 ಸಂಘದ ವಿದ್ಯಾವರ್ಧಕಫಂಡ ಕೂಡಿಸುವದು.

7. ಸರಕಾರದವರು ನಮ್ಮ ಸಮಾಜದ ವಿದ್ಯಾವಂತರಾದ ಯೋಗ್ಯ ಜನರಿಗೆ ಎಲ್ಲ ಖಾತೆಗಳಲ್ಲಿ ನೌಕರಿಗೆ ಸೇರಿಸಿಕೊಳ್ಳಬೇಕೆಂದು ಈ ಕೌನ್ಸಿಲ್ ಆಗ್ರಹದಿಂದ ಸರಕಾರಕ್ಕೆ ವಿನಂತಿಮಾಡಿಕೊಳ್ಳುತ್ತದೆ

8 ಕಾಯಿದೇ ಕೌನ್ಸಿಲು ಲೋಕಲ್ ಬೋರ್ಡ್ ಮ್ಯುನಿಸಿಪಾಲಿಟಿ ಸ್ಕೂಲ ಬೋರ್ಡ ಮೊದಲಾದ ಸಾರ್ವಜನಿಕ ಸಂಸ್ಥೆಗಳಲ್ಲಿ ಸರಕಾರದವರು ನಮ್ಮ ಸಮಾಜದವರನ್ನು ನಾಮನಿರ್ದೇಶನ ಮಾಡಬೇಕೆಂದು ಈ ಕೌನ್ಸಿಲು ವಿನಂತಿ ಮಾಡಿಕೊಳ್ಳುತ್ತದೆ.

9 ಎ ಎ ಬಿ ಖನ್ನೂರ ಇವರಿಗೆ ಇದ್ದ ಕಾಲೇಜಿನ ಸ್ಕಾಲರ್‌ಶಿಪ್ಪನ್ನು ತೆಗೆದುಕೊಂಡಿದ್ದು ಅವರು ಬಿ ಎ ಪರೀಕ್ಷೆಯಲ್ಲಿ ಪಾಸಾಗಿದ್ದರೂ ಮುಂದಿನ ಅಭ್ಯಾಸಕ್ಕೆ ಸರಕಾರದವರು ಸ್ಕಾಲರ್‌ಶಿಪ್ಪನ್ನು ಕೊಡಬೇಕೆಂದು ಈ ಕೌನ್ಸಿಲು ವಿನಂತಿಸುತ್ತದೆ

10 ಮ|| ಎಂ ಬಿ ಖನ್ನೂರ ಬಿ ಎ, ಇವರು ಪ್ರೊಫೆಸರರಾದ ಡಾಕ್ಟರ ಜಾನ್‌ಸನ್ ಮಾಡಿದ ಆಕ್ಷೇಪಣೆಗಳನ್ನು ಉತ್ತರಿಸಿ ಸರಕಾರಕ್ಕೆ ಅರ್ಜಿ ಕೊಟ್ಟಿದ್ದು ಇದಕ್ಕಾಗಿ ಇವರಿಗೆ ಸ್ಕಾಲರ್‌ಶಿಪ್ಪನ್ನು ಅವಶ್ಯವಾಗಿ ಕೊಡಬೇಕೆಂದು ಈ ಕೌನ್ಸಿಲು ಮುಂಬಯಿ ಸರಕಾರಕ್ಕೆ ಆಗ್ರಹದ ವಿನಂತಿ ಮಾಡಿಕೊಳ್ಳುತ್ತದೆ

11 ಮ|| ಬಿ ಎಚ್ ಕಲ್ಲಣ್ಣನವರ ಇವರು ಹುಬ್ಬಳ್ಳಿ ಬಂಕಾಪುರ ತಾಲೂಕುಗಳ ಕೊ ಆಪರೇಟಿವ್ ಸೊಸೈಟಿ ಆರ್ಗನಾಯಜರ ಕೆಲಸವನ್ನು ಒಳ್ಳೇ ಕಳಕಳಿ ಹಾಗು ನಿಸ್ಪೃಹತೆಯಿಂದ ಧಿಡೀರನೆ ವಿಕಗಾಗದೆ ಮಾಡುತ್ತಿದ್ದು ಹೆಚ್ಚಿನ ಆಪಾದನೆಗಳಿಲ್ಲದಾಗ ಈ ಜಾಗೆ ರದ್ದುಮಾಡಿರುವದು ಎಂದು ತಿಳಿಸಿ ಆಮೇಲೆ ಈ ಜಾಗೆಗೆ ಮತ್ತೊಬ್ಬ ಗೃಹಸ್ಥರನ್ನು ಕೋ ಆ ಡಿಪಾರ್ಟಮೆಂಟನವರು ನೇಮಣೂಕಮಾಡಿದಕ್ಕೆ ಈ ಕೌನ್ಸಿಲು ವಿಷಾದಪಡುತ್ತದೆ

12 ಈ ಕೌನ್ಸಿಲಿನ ಅಧ್ಯಕ್ಷರವರು ಚಿಕ್ಕವಯಸ್ಸಿನಲ್ಲಿಯೇ ಅಮೇರಿಕೆಗೆ ಹೋಗಿ ಅಲ್ಲಿ ಎಂ ಎಸ ಸಿ ಪಿ ಎಚ್ ಡಿ ಪದವಿಗಳನ್ನು ಪಡೆದುಕೊಂಡು ಮದ್ರಾಸ ಕೌನ್ಸಿಲಿಗೆ ಮೆಂಬರು ಆದದ್ದು ನಮ್ಮ ಸಮಾಜಕ್ಕೆ ಭೂಷಣವೇಸರಿ. ಇವರನ್ನು ಈ ಕೌನ್ಸಿಲು ಅಭಿನಂದಿಸುವದು

13 ಸದರಿ ಠರಾವುಗಳನ್ನು ಸರಕಾರದ ಎಲ್ಲ ಖಾತೆಗಳ ಅಧಿಕಾರಿಗಳ ಕಡೆಗೂ, ಕೌನ್ಸಿಲ್ ಮೆಂಬರ ಹಾಗು ಪ್ರೆಸಿಡೆಂಟರಿಗೂ ಕಳಿಸಲಿಕ್ಕೆ ಅಧ್ಯಕ್ಷರಿಗೆ ಅಧಿಕಾರಕೊಟ್ಟಿದೆ

ಬಳಿಕ ಅಧ್ಯಕ್ಷರವರು ಸಂಘದ ಅಭಿವೃದ್ಧಿಯಬಗ್ಗೆ ಒಳ್ಳೇ ಕಳಕಳಿಯುಕ್ತವಾದ ಭಾಷಣಮಾಡಿದ ಬಳಿಕ ಶ್ರೀ ಹುಚ್ಚಪ್ಪ ವಿಗ್ಗಣ್ಣನವರ ಇವರು ಅಧ್ಯಕ್ಷರ ಹಾಗು ಸಭಿಕರ ಆಭಾರಮನ್ನಿಸಿದ ಬಳಿಕ ಹಾಲುಮತದ ಜಯಘೋಷದೊಡನೆ ಈ ಅಧಿವೇಶನವು ಸಮಾಪ್ತಿಯಾಯಿತು

ತಮ್ಮ
ಭೀಮಪ್ಪಾ ಫಕೀರಪ್ಪಾ ಚಂದ್ರಣ್ಣನವರ ಮೆಂಬರ

ಶ್ರೀ ಶಿವಾನುಭವ ಷಟ್‌ಸ್ಥಲ ಪಟ್ಟಾಧಿಕಾರಮಹೋತ್ಸವ, ಬಾಣಾವರ

ಅರಸೀಕೆರೆ ತಾಲ್ಲೂಕು ಬಾಣಾವರದಲ್ಲಿ ಶ್ರೀ ಕೋಡಿಮಠಕ್ಕೆ ಉತ್ತರಾಧಿಕಾರವಾಗಲು ಈ ಗ್ರಾಮದ ಪೇಟೆ ಸ್ಥಳದ ಮುಖಸ್ಥರು ಶೆಟ್ಟರು ಯಜಮಾನರು ಗೌಡರು ಬುದ್ಧಿವಂತರು ಇನ್ನೂ ಮುಂತಾದ ಸಮಸ್ತ ದೈವದವರು ಈ ಮೊದಲೇ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರು ಚಿತ್ರದುರ್ಗದ ಬೃಹನ್ಮಠ ಮಹಾಸಂಸ್ಥಾನ ಇವರ ದಿವ್ಯಸನ್ನಿಧಿಗೆ ಮೊಲ್ಕಂಡ ಸರ್ವರೂ ವಿನಯಪೂರ್ವಕವಾಗಿ ರೂಪು ರೂಪು ಹಾಜರಾಗಿ ಸಾಷ್ಟಾಂಗಪ್ರಣಾಮಪೂರ್ವಕ ಪ್ರಾರ್ಥಿಸಿಕೊಂಡಮೇರೆಗೆ ಶ್ರೀ ಸನ್ನಿಧಿಯವರು ಕೃಪಾವಲಂಬನವನ್ನಿತ್ತು ಸದಾಶಿವಸ್ವಾಮಿಗಳೆಂಬವರನ್ನು ಸಂಸ್ಥಾನದ ಏಜಂಟರ ಮೂಲಕ ಕಳುಹಿಸುವದಕೋಸ್ಕರವಾಗಿ ಊರಿನ ಸದ್ಭಕ್ತದೈವದ ಮಹಾಜನಗಳು ಇದೇ ವಿಭವನಾಮಸಂವತ್ಸರದ ಕಾರ್ತಿಕ ಬ|| ೧೦ (ತಾ|| 6 12.28) ನೇ ಗುರುವಾರ ಶುಭಸಮಯದಲ್ಲಿ ಈ ಗ್ರಾಮದ ವಿರಕ್ತಮಠಕ್ಕೆ ಅಂದರೆ ಕೋಡೀಮಠಕ್ಕೆ ಅಧಿಕಾರಮಾಡಲು ಆಹ್ವಾನಪತ್ರಿಕೆಯನ್ನು ಸುತ್ತಮುತ್ತಲಿನ ಅನೇಕ ಗ್ರಾಮಗಳಿಗೆ ಕಳುಹಿಸಿದ್ದರಿಂದ ಕಾಲಕ್ಕೆ ಸರಿಯಾಗಿ 3 4 ಸಾವಿರ ಜನಗಳು ದಯಮಾಡಿಸಿದ್ದರು. ದೈವದ್ದರಿಂದ ನಿಶ್ಚಯಿಸಲ್ಪಟ್ಟ ಮೇರೆಗೆ ಸರಿಯಾಗಿ ಶ್ರೀ ಜಗದ್ಗುರುಗಳವರ ಆಜ್ಞಾನುಸಾರ ಸದಾಶಿವಸ್ವಾಮಿಗಳೆಂಬ ವಟುವಿಗೆ ಶ್ರೀ ಷಟ್‌ಸ್ಥಲ ಶಿವಾನುಭವಪಟ್ಟಾಧಿಕಾರವು ವಿಧ್ಯುಕ್ತವಾಗಿ ಪೂಜ್ಯರಿಂದ ಅನುಗ್ರಹಿಸಿ ಮಹೇಶ್ವರಾರಾಧನೆ ಮತ್ತು 3 4 ಸಾವಿರ ಜನಗಳಿಗೆ ಅನ್ನಸಂತರ್ಪಣೆ ನಡೆಯಿಸಿ ಅನಂತರ ಕೋಡೀಮಠದ ಶ್ರೀ ಸ್ವಾಮಿಗಳವರನ್ನು ಆಭರಣಾದಿಗಳಿಂದ ಅಲಂಕರಿಸಲ್ಪಟ್ಟ ಪಲ್ಲಕ್ಕಿಯಲ್ಲಿ ಮೆರವಣಿಗೆಯಿಂದ ಅಲಂಕರಿಸಲ್ಪಟ್ಟ ಪಟ್ಟಣದ ಬೀದಿಗಳಲ್ಲೆಲ್ಲಾ ಮಂಗಳವಾದ್ಯ ಶಿವಭಜನಾಸಮೇತ ಅತ್ಯಂತ ವಿಜೃಂಭಣೆಯಿಂದ ಉತ್ಸವವನ್ನು ನೆರವೇರಿಸಿ ಯಥಾಸ್ಥಾನಕ್ಕೆ ಬಿಜಮಾಡಲು ಸರ್ವರೂ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರಮಹಾಸ್ವಾಮಿ ಮಹಾರಾಜ್ಕೀ ಜೈ ಎಂಬ ಸ್ಮರಣಪೂರ್ವಕ ಉತ್ಸವ ಕಾರ್ಯವನ್ನು ಸಾಂಗಗೊಳಿಸಿ ವೇಳೆಯಾದ್ದರಿಂದ ಶ್ರೀಗಳವರು ಆನುಷ್ಠಾನಕ್ಕೆ ದಯಮಾಡಿಸಿದರು. ಬಂದ ಮಹಾಜನಗಳಿಗೆ ಯಥಾವಕಾಶ ಸತ್ಕಾರ ನಡೆದು ಆ ದಿನದ ಕಾರ್ಯ ಸಮಾಪ್ತಿಗೊಳಿಸಲ್ಪಟ್ಟಿತು. ಮರುದಿನ ಸಭೆಯನ್ನೇರ್ಪಡಿಸಲು ಒಂದ ಜನಗಳ ಸ್ವಕೀಯ ಕೆಲಸಕಾರ್ಯಗಳು ತುರ್ತು ಇದ್ದದ್ದರಿಂದ ಮುಂದೆ ಒಂದುವಾರ ಕಳೆದು ಶ್ರೀ ಸನ್ನಿಧಿಯ ಅಧ್ಯಕ್ಷತೆಯಲ್ಲಿ ಸಭೆಯು ನಡೆಯುವುದಾಗಿ ಸರ್ವರೂ ಪ್ರಾರ್ಥಿಸಿದಪ್ರಕಾರ ತಾ|| 24 12-28 ನೇ ಸೋಮವಾರ ಶ್ರೀ ವಿರಕ್ತಮಠದಲ್ಲಿ ಶ್ರೀಮನ್ನಿರಂಜನ ಸದಾಶಿವಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸಭೆ ಏರ್ಪಟ್ಟಾಗ ಸುತ್ತಮುತ್ತಲಿನ ಅನೇಕ ಜನಗಳು ದಯಮಾಡಿಸಿದ್ದರು. ಈ ಕೆಳಗೆ ಕಾಣಿಸಲ್ಪಟ್ಟ ಪ್ರಕಾರ ಸಭಾಕಾರ್ಯಗಳು ನಡೆದವು. ಶ್ರೀಮಠದ ಕಾರ್ಯಭಾರಗಳು ಶ್ರೀಜಗದ್ಗುರುಗಳವರ ಸನ್ನಿಧಿಯಿಂದ ದಯಪಾಲಿಸಲ್ಪಟ್ಟ ನಿರೂಪವನ್ನು ಓದಿ ಸಭೆಯ ಉದ್ದೇಶಗಳನ್ನು ತಿಳಿಸಿದರು. ಬೀರೂರಿನಿಂದ ದಯಮಾಡಿಸಿದ್ದ ವೇ|| ಪಂ|| ಹೆಚ್ ಹೆಚ್ ಸಿ ನಂಜುಂಡಾರಾಧ್ಯರವರು ತಮ್ಮ ಸರಸವಾಣಿಯಿಂದ ಯಾವತ್ತು ಜನಗಳಲ್ಲಿ ಗುರು ಲಿಂಗ, ಜಂಗಮ ಮೊದಲಾದ ಅಷ್ಟಾವರಣಗಳ ವಿಷಯದಲ್ಲಿ ಶ್ರದ್ಧೆ ಹುಟ್ಟುವಂತೆ ಶಿವಕೀರ್ತನಮಾಡಿದರು. ಕರುವಾಯ್ಯ ಮ|| ಸಾಹುಕಾರ್ ವೈ ರುದ್ರಪ್ಪನವರು ಶ್ರೀಜಗದ್ಗುರುಗಳವರ ಮಹತ್ವವನ್ನೂ ಅವರು ಸಮಾಜಕ್ಕೆ ಮಾಡಿರುವ ಚಿರಸ್ಮರಣೀಯವಾದ ಉಪಕಾರಗಳನ್ನೂ ವರ್ಣಿಸಿದ್ದಲ್ಲದೆ ಈ ಗ್ರಾಮದ ದೈವದವರ ಪ್ರಾರ್ಥನೆಮೇರೆಗೆ ಶ್ರೀ ವಿರಕ್ತಮಠಕ್ಕೆ ಉತ್ತರಾಧಿಕಾರವಹಿಸಲು ಯೋಗ್ಯರಾದ ವಟುವನ್ನು ಜಗದ್ಗುರುಗಳವರು ಮಹಾಸಂಸ್ಥಾನದಿಂದ ಕಳುಹಿಸಿ ಈ ಮಹಾಕಾರ್ಯವು ನಿರ್ವಿಘ್ನವಾಗಿ ನಡೆಯುವಂತೆ ಅನುಗ್ರಹಿಸಿದ್ದರಿಂದ ಈ ಸಭಾವೇದಿಕೆಯಿಂದ ವಂದನೆಗಳನ್ನು ಸಮರ್ಪಿಸುವುದಲ್ಲದೆ ಈ ವಿಷಯದಲ್ಲಿ ಮುಂದಿನ ಎಲ್ಲ ಕಾರ್ಯಕ್ರಮಗಳನ್ನು ಬಿನ್ನಹಪತ್ರಿಕಾಮುಖೇನ ಮಠದ ಏರ್ಪಾಡಿನ ಬಗ್ಗೆ ಬಿನ್ನೈಸಿಕೊಳ್ಳತಕ್ಕದ್ದೆಂದು ತಮ್ಮ ಭಾಷಣದಲ್ಲಿ ತಿಳಿಸಿದರು. ಅನಂತರ ಇದೇ ಬಾಣಾವರದ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರ್ ಮ|| ಚನ್ನಪ್ಪಶೆಟ್ಟರು ಅಧ್ಯಕ್ಷರಾದ ಶ್ರೀ ಸ್ವಾಮಿಗಳವರ ಗುಣಕಥನಮಾಡಿ ಬಾಣಾವರದ ಕೋಡೀಮಠಕ್ಕೆ ಅಧಿಕಾರಿಗಳು ಇಲ್ಲದಿರುವ ಚಿಂತೆಯು ಈ ಪ್ರಾಂತದ ಅನೇಕ ವೀರಶೈವರಿಗಿತ್ತು. ಅಂಥಾದ್ದು ಶ್ರೀಜಗದ್ಗುರುಗಳವರ ಕೃಪೆಯಿಂದ ಪರಿಹಾರವಾಯಿತೆಂಬ ಹೇಳಲು ಯಾವ ಅಡ್ಡಿಯೂ ಇರುವದಿಲ್ಲ. ಈ ಸಮಯದಲ್ಲಿ ಬಾಣಾವರದ ವೈ. ರುದ್ರಪ್ಪಶೆಟ್ಟರು, ಬಿ ಪುಟ್ಟಸ್ವಾಮಿಶೆಟ್ಟರು, ಪೇಟೆ ರಾಚಪ್ಪಶೆಟ್ಟರು, ನಂಜಪ್ಪಶೆಟ್ಟರು ಸಮಸ್ತ ದೈವದವರೊಡನೆ ಮುಂದಿನಂತೆ ಮೇಲಿಂದಮೇಲೆ ಬರುತ್ತಿದ್ದ ಕಷ್ಟನಷ್ಟಗಳನ್ನು ಸಹಿಸಿಕೊಂಡು ಈ ಮಹತ್ಕಾರ್ಯವನ್ನು ನಿರ್ವಹಿಸಿ ಕೀರ್ತಿಯನ್ನು ಸಂಪಾದಿಸಿಕೊಂಡ ಈ ಗ್ರಾಮದ ಸರ್ವ ಮಹಾಜನಗಳು ಗುರುಭಕ್ತಿಯಿಂದ ಉತ್ಸಾಹಪೂರ್ವಕವಾಗಿ ಭಾಗವಹಿಸಿದ ಈ ಉತ್ಸವವನ್ನು ಅಗಾಧವಾಗಿ ನಡೆಸಿಕೊಟ್ಟಿದ್ದರಿಂದ ಬಾಣಾವರದ ಸಮಸ್ತ ದೈವದವರು ಶ್ರೀ ಜಗದ್ಗುರುಗಳವರನ್ನು ಪ್ರಾರ್ಥಿಸಿ ನಮ್ಮನ್ನು ಬಂದನಾಡಿಕೊಂಡು ಸರ್ವಜನಸ್ತುತಿಪೂರ್ವಕ ಈ ಮಠದ ಉತ್ತರಾಧಿಕಾರವನ್ನು ನಮಗೆ ವಹಿಸಿದ್ದು ನೋಡಿದರೆ ಈ ನಮ್ಮ ಜಂಗಮಭಕ್ತಿಯು ಅಸಾಧಾರಣವಾದುದಾಗಿ ಕಂಡುಬರುತ್ತದಲ್ಲದೆ ಕೊಂದರೆಗಳನ್ನು ಗಣನೆಗೆತಾರದೆ ಸಭೆಯನ್ನೇರ್ಪಡಿಸಿ ಈ ರೀತಿಯ ಕಾರ್ಯವು ಅಶೇಷ ವೀರಶೈವಮಹಾಸಭೆಯ ಅವಗಾಹನೆಗೆ ಬರುವಂತೆ ಮಾಡಿದ ನಮ್ಮ ಯಥಾರ್ಥ ಭಕ್ತಿಗೌರವಗಳು ಅನುಕರಣೀಯವಾಗಿರುತ್ತವೆ. ಈ ಸಮಯದಲ್ಲಿ ವೇ|| ಆರಾಧ್ಯರವರು ಸುಶ್ರಾವ್ಯವಾಗಿ ಆಶುಲೀಲಾವಾಣಿಯಿಂದ ಶಿವಕೀರ್ತನ ಮಾಡಿದ್ದು ಸಭೆಗೆ ಮತ್ತಷ್ಟು ಭೂಷಣವಾಗಿರುತ್ತದೆ. ಇವರಿಗೂ ಗ್ರಾಮದವರಿಗೂ ಬಂದವ ಮಹಾಜನಗಳಿಗೂ ಜಗದೀಶನು ಆಯುರಾರೋಗ್ಯಭಾಗ್ಯಗಳನ್ನನುಗ್ರಹಿಸಲೆಂದು ಹೇಳಿ ಮಹಾಜನಗಳಲ್ಲಿ ಜ್ಞಾನೋದಯವಾಗುವಂತೆ ಭಾಷಣಮಾಡಿದರು. ಅನಂತರ ಸರ್ವರೂ ಸಂತೋಷಪೂರ್ವಕ ಶ್ರೀಗಳವರ ವಿದ್ವತ್ತನ್ನು ಕೊಂಡಾಡಿ ನಮ್ಮನ್ನಾಳುವ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನು ಕೋರಿ ಶ್ರೀ ಜಗದ್ಗುರುಗಳವರ ಪಾದಸ್ಮರಣೆಯಿಂದ ಗಂಧಪುಷ್ಪ ಫಲತಾಂಬೂಲಗಳನ್ನು ಹಂಚಿ ಸಭೆಯು ಜಯಘೋಷದೊಡನೆ ವಿಸರ್ಜಿಸಲ್ಪಟ್ಟಿತು.

ಶ್ರೀಗುರು ಪಾದಸೇವಕ,
ಮುದ್ದುಶೆಟ್ಟಿ, ಬಾಣಾವರ



6

ಪ್ರಕಟನೆ

"ಜ್ಯೋತಿಶ್ಶಾಸ್ತ್ರಪಯೋನಿಧಿಃ"

ಫಲಕಾಂಡ, ಶ್ಲೋಕತಾತ್ಪರ್ಯಗಳೊಂದಲೂ ಶ್ರೀಮುಮ್ಮಡಿ ಮಹಾರಾಜರವರ ಜಾತಕೋದಾಹರಣೆಯಿಂದಲೂ ಕೂಡಿರುತ್ತದೆ. ಬೆಲೆ 4 0 0 ಟಿ ಖ 0 8 0

"ಮುಹೂರ್ತರಾಜಚಂದ್ರಿಕೆ"

ಮುಹೂರ್ತಭಾಗ, ಶ್ಲೋಕ ತಾತ್ಪರ್ಯಗಳಿಂದ ಕೂಡಿರುತ್ತದೆ. ಬೆಲೆ 0-10 0 ಟಿ ಖ 0 4 0

ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುತ್ತವೆ. ಮೇಲ್ಕಂಡ ಎರಡು ಪ್ರತಿಗಳನ್ನು ಒಟ್ಟಿಗೆ ತರಿಸತಕ್ಕವರಿಗೆ ಮಾತ್ರ ಟಪಾಲು ಖರ್ಚು ಮಾಫಿ. ಇಂದ 0-8-0 ಬೆಲೆಯುಳ್ಳ ಧ್ಯಾನಶ್ಲೋಕಗಳಿಂದ ಕೂಡಿದ ಸುಂದರವಾದ 32 ಗ್ರಹಚಿತ್ರಗಳ ಚಿತ್ರಪುಸ್ತಕ ಒಂದು ಉಚಿತವಾಗಿ ಕೊಡಲ್ಪಡುತ್ತದೆ. ವಿಳಾಸವನ್ನು ಸ್ಪಷ್ಟ ಬರೆಯಬೇಕಾಗಿ ವಿನಂತಿ

ನಮ್ಮ ವಿಳಾಸ— 10
ಎ ಸಚ್ಚಿದಾನಂದ ಜೋಯಿಸರು ಸಿದ್ಧಾಂತಿ, ಮೈಸೂರು

೧೯೨೯ ನೆಯ ಇಸವಿ ಜನವರಿ ತಾ|| ೫ ರಿಂದ ೧೯೨೯ ನೆಯ ಇಸವಿ ಜನವರಿ ತಾ|| ೧೧ ರ ವರೆಗೆ ಸಲ್ಲುವ ಶಾಲಿವಾಹನಶಕೆ ೧೮೫೦ ನೆಯ ವಿಭವನಾಮಸಂವತ್ಸರದ ಮಾರ್ಗಶಿರ ಬಹುಳ ದಶಮಿಯಿಂದ ಪುಷ್ಯ ಶುದ್ಧ ದ್ವಾದಶಿ ವರೆಗಿನ ಪಂಚಾಂಗ

ತಾ|	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಧನುರ್ಮಾಸ
5	ಶನಿ	ದಶ	20 32	ಸ್ವಾತಿ	31 3	22
6	ಭಾನು	ಏಕಾ	34 6	ವಿಶಾ	30 34	23
7	(1) ಸೋಮ	ದ್ವಾದ	30 3	ಅನೂ	33 40	24
8	ಮಂಗಳ	ತ್ರಯೋ	14 44	ಜ್ಯೇಷ್ಠ	30 14	25
9	ಬುಧ	ಚತು	50 11	ಮೂಲ	45 48	26
10	(2) ಗುರು	ಅಮಾ	55 7	ಪೂಷಾ	51 55	27
11	(3) ಶುಕ್ರ	ಪಾಡ್ಯ	60	ಉಷಾ	57 14	28

(1) ಮಳೆನಕ್ಷತ್ರ ಪೂರ್ವಾಷಾಢ ೪ ನೆಯ ಪಾದ (2) ಮಳೆನಕ್ಷತ್ರ ಉತ್ತರಾಷಾಢ ೧ ನೆಯ ಪಾದ, ಸರ್ವಾಮಾವಾಸ್ಯೆ ಮಾರ್ಗಶಿರ ಶುಕ್ಲ ಪಕ್ಷಾಂತ್ಯಂ, ಎಳ್ಳಮಾವಾಸ್ಯೆ ಪ್ರಯುಕ್ತ ತೀರ್ಥಹಳ್ಳಿಯಲ್ಲಿ ತುಂಗಾನದೀ ಸ್ನಾನ (3) ತೀರ್ಥಹಳ್ಳಿಯಲ್ಲಿ ರಾಮೇಶ್ವರಸ್ವಾಮಿ ರಥ

ಮೈಸೂರು ವೈ ವಿರೂಪಾಕ್ಷಯ್ಯನವರಿಂದ ಕೈಲಾಸ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 141

ಮೈಸೂರ್ ಸ್ಟಾರ್

ಪ್ರತಿ ಶನಿವಾರ ಪ್ರಕಟಿಸಲ್ಪಡುವುದು.

[illegible] ||
ಶ್ರೀಮತ್ಕೃಷ್ಣನೃಪಾಲನುತ್ತಮಕರಾಬ್ಧೀಯಂ ಸುಧೀಪುಂಗವ | [illegible] ||
[illegible] | [illegible] ||

[ಸ್ಥಳದವರಿಗೆ ವಾರ್ಷಿಕ ಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರರಿಗೆ ೩-೮-೦]

ಸಂಪುಟ ೪೨] ಮೈಸೂರು ಸ್ಟಾರ್ ಸನ್ ೧೯೨೯ ನೆಯ ಇಸವಿ ಜನವರಿ ತಾರೀಖು ೧೨ ನೆಯ ಶನಿವಾರ [ಸಂಚಿಕೆ ೨

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ ಪಿ ಸೇರಿ)
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಚಿತ್ರ ವೀರಶೈವ ವಿವಾಹವಿಧಿ	೦—೮—೦	೦—೧೪—೦
ಷಟ್ಸ್ಥಲ ಬ್ರಹ್ಮ	೦—೪—೦	೦—೯—೦
ಬಸವೇಶ್ವರ ಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರದೇಶ್ವರಶತಕ	೦—೧—೦	೦—೬—೦
ಬಸವೇಶ್ವರ ವಚನ	೦—೮—೦	೦—೧೪—೦
ಸಚಿತ್ರ ಅಲ್ಲಮಪ್ರಭು ಮಂಜರಿ	೦—೮—೦	೦—೧೪—೦
ಸಚಿತ್ರ ಶತಕತ್ರಯ	೧—೦—೦	೧—೬—೦

ಮೈಸೂರು ಸ್ಟಾರ್ ಚಂದಾದಾರರಿಗೆ

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ ೨-೮-೦, ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ ೩-೮-೦ ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮನಿಯಾರ್ಡರ್ ಮಾಡುವಾಗ್ಯೆ ಕೂಪನ್ ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮನಿಯಾರ್ಡರುಗಳಿಗೆ ಸಿಗಾಣಿಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್

ಹತ್ತನೆಯ ವೀರಶೈವ ಮಹಾಸಭಾಕಾಲದಲ್ಲಿ ಪ್ರಸಿದ್ಧಿಸಲ್ಪಟ್ಟ

ವೀರಶೈವ ಕರದರ್ಪಣ.

ಡೆಮ್ಮಿ 1/4 ಸೈಜಿನ 200 ದೊಡ್ಡ ಗ್ರಂಥಪುಟಗಳು) ಬೆಲೆ ಒಂದೇ ಒಂದು ರೂಪಾಯಿ (300 ಭಾವಚಿತ್ರಗಳುಳ್ಳದ್ದು

ವೀರಶೈವರ ಸಂಬಂಧವಾದ ಎಲ್ಲ ವಿಷಯಗಳನ್ನೂ ಒಳಗೊಂಡಿರುವ ಏಕಮಾತ್ರ ಪುಸ್ತಕ

ವೀರಶೈವಮತಸಂಬಂಧವಾದ ಮಹತ್ವವಿಷಯಗಳ ಮೇಲೆ ಎಂದರೆ, ವೀರಶೈವ ತತ್ವ ನಿರೂಪಣೆ, ವಿಶಾಲತೆ, ಬ್ರಾಹ್ಮಣಸಿದ್ಧಾಂತ, ಜಗದ್ಗುರು ಪೀಠಗಳು, ಶ್ರೀ ಬಸವೇಶ್ವರ ಮೊದಲಾದ ವಿಷಯಗಳ ಮೇಲೆ ಸುಪ್ರಸಿದ್ಧ ಲೇಖಕರ ಲೇಖನಗಳು. ಜಗದ್ಗುರು ಪೀಠಗಳ ಮತ್ತು ಜಗದ್ಗುರು ಮಹಾಸ್ವಾಮಿಗಳವರ ಸಚಿತ್ರ ಚರಿತ್ರೆಗಳು, ಇಡೀ ಭರತಖಂಡದೊಳಗಿನ ವೀರಶೈವ ಸಂಸ್ಥೆಗಳ ಮತ್ತು ಅವುಗಳ ಸಮಗ್ರ ಇತಿಹಾಸಗಳು. ಅಖಿಲಭರತಖಂಡದಲ್ಲಿ ಗತಿಸಿದ ವೀರಶೈವ ಮಹನೀಯರುಗಳ ಸಚಿತ್ರ ಜೀವಿತಚರಿತ್ರೆಗಳು, ಅ. ಭಾ. ವೀರಶೈವ ಮಹಾಸಭೆಯು ಮೊದಲು ಹೇಗೆ ಪ್ರಾರಂಭವಾಯಿತೆಂಬ ವಿಷಯ, ಚಿರಸ್ಥಾಯಿಫಂಡಿನ ವಿಷಯ ಮತ್ತು ಅದಕ್ಕೆ ಸಹಾಯಮಾಡಿದವರ ಭಾವಚಿತ್ರಗಳು, ಮೊನ್ನೆ ನಡೆದ 10 ನೇ ವೀರಶೈವ ಮಹಾಸಭೆಗೆ ಮೈಸೂರು ಶ್ರೀಮನ್ಮಹಾರಾಜರವರಿಂದ ಕಳಿಸಲ್ಪಟ್ಟ ಸಂದೇಶ—ಈ ಎಲ್ಲ ವಿಷಯಗಳಿಂದೊಡಗೂಡಿದ ಉತ್ತಮ ಗ್ರಂಥ

ಇದೀ ಪುಸ್ತಕವು ಭಾವಚಿತ್ರಗಳಿಂದ ತುಂಬಿತುಳುಕುತ್ತಿದೆ. ಶ್ರೀಮನ್ಮಹಾರಾಜರವರ ಭಾವಚಿತ್ರ, ಶ್ರೀ ಮುಮ್ಮಡಿ ಕೃಷ್ಣರಾಜಒಡೆಯರವರು ಶಿವಪೂಜೆಮಾಡುತ್ತಿರುವುದು, ಶ್ರೀಜಗದ್ಗುರು ಮಹಾಸ್ವಾಮಿಗಳ ಅಡ್ಡಪಲ್ಲಕ್ಕಿಉತ್ಸವ, 10 ನೇ ಅ. ಭಾ. ವೀರಶೈವ ಮಹಾಸಭೆಯ ಅಧ್ಯಕ್ಷ ಮತ್ತು ಸ್ವಾಗತಸಂಘಾಧ್ಯಕ್ಷರ ಭಾವಚಿತ್ರಗಳು, ಪಂಚಪೀಠಗಳ ದೃಶ್ಯಗಳು ಮತ್ತು ಪಂಚಜಗದ್ಗುರುಗಳ ಭಾವಚಿತ್ರಗಳು, ಶ್ರೀ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳ ದೊಡ್ಡ ಭಾವಚಿತ್ರ ಮತ್ತು ಸಿದ್ಧಾರೂಢ [illegible] ಹುಬ್ಬಳ್ಳಿ ಮತ್ತು ಗದಗಿನ ಜಗದ್ಗುರು ಮಹಾಸ್ವಾಮಿಗಳವರ ಭಾವಚಿತ್ರ, ಇನ್ನುಳಿದ ಎಲ್ಲ ಪ್ರಸಿದ್ಧ ಮಹಾಸ್ವಾಮಿಗಳವರ ಮತ್ತು ವೈದಿಕವರ್ಗದ ಭಾವಚಿತ್ರಗಳು, [illegible] ದೇಸಾಯರು, ಮೈಸೂರು ವೀರಸಂಗಪ್ಪನವರಾದಿಯಾಗಿ ಗತಿಸಿದ ಎಲ್ಲ ವೀರಶೈವರನ್ನೂ ಈಗಿನ ವೀರಶೈವ ಲೌಕಿಕ ವೈದಿಕ ಧುರಂಧರರನ್ನೂ, ಪ್ರಸಿದ್ಧ ಸ್ತ್ರೀಪುರುಷರನ್ನೂ ದೊಡ್ಡ ಹುದ್ದೇದಾರರು, ವರ್ತಕರು, ಗಾಯಕರು, ನಟರು ಮೊದಲಾದವರನ್ನೂ ಇದರಲ್ಲಿ ಕಾಣಬಹುದು

ಇದುವರೆಗೆ ಈ ಮಾದರಿಯ ಪುಸ್ತಕವು ಇದೊಂದೇ ಪ್ರತಿಯೊಬ್ಬ ವೀರಶೈವನೂ ಸಂಗ್ರಹ ಮಾಡತಕ್ಕ ಗ್ರಂಥವು. ಬೆಂಗಳೂರಿನ ಮಹಾಸಭಾ ಕಾಲದಲ್ಲಿ ಮಾರಿ ಮಿಕ್ಕ ಕೆಲವೇ ಪ್ರತಿಗಳು ಮಾತ್ರ ಉಳಿದಿವೆ

ಬೇಕಾದವರು ಒಡನೆ ಬರೆಯಿರಿ. ಬೆಲೆ 1 ರೂಪಾಯಿ. ಟಪಾಲ್ ಖರ್ಚು ಪ್ರತ್ಯೇಕ

ವಿಳಾಸ ಟಿ. ಎನ್. ಚೆನ್ನಪ್ಪ,

14 ಮಾಡಲ್ ಮುದ್ರಾಕ್ಷರಶಾಲಾ, ಬೆಂಗಳೂರು ಸಿಟಿ.

೧೯೨೯ ನೇ ಇಸವಿಯ ಶಿದ್ದಪ್ಪಾಸ್ ಮಾಡಲ್ ಪಾಕೆಟ್

ಡೈರಿಗಳು ಮತ್ತು ಕ್ಯಾಲೆಂಡರುಗಳು.

1929 ನೇ ಇಸವಿಯ ಶಿದ್ದಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು

1ನೇ ನಂ. ದೊಡ್ಡಸೈಜು ಪಾಕೆಟ್‌ಡೈರಿ ಪೆನ್ಸಿಲ್ ಇಟ್ಟು ಮುಚ್ಚುವ ಪಾಕೆಟ್ಟು $6\frac{1}{2}" \times 4"$ 1ಕ್ಕೆ 0-12-0 ಪರಸ್ಥಳಕ್ಕೆ ಪೋಸ್ಟೇಜು 0-3-0

2ನೇ ನಂ. ದೊಡ್ಡಸೈಜು ಮುಚ್ಚಳವಿಲ್ಲದ ಸಾದಾ ಪಾಕೆಟ್‌ಡೈರಿ $6\frac{1}{2}" \times 4"$ 1ಕ್ಕೆ 0-10-0 ಪರಸ್ಥಳಕ್ಕೆ ಪೋಸ್ಟೇಜು 0-3-0

3ನೇ ನಂ. ಚಿಕ್ಕಸೈಜು ಪಾಕೆಟ್‌ಡೈರಿ ಪೆನ್ಸಿಲ್ ಇಟ್ಟು ಮುಚ್ಚುವ ಪಾಕೆಟ್ಟು $6" \times 2\frac{1}{2}"$ 1ಕ್ಕೆ 0-7-0 ಪರಸ್ಥಳಕ್ಕೆ ಪೋಸ್ಟೇಜು 0-2-0

4ನೇ ನಂ. ಚಿಕ್ಕಸೈಜು ಪಾಕೆಟ್‌ಡೈರಿ ಮುಚ್ಚಳವಿಲ್ಲದ ಸಾದಾ $6" \times 2\frac{1}{2}"$ 1ಕ್ಕೆ 0-5-0 ಪರಸ್ಥಳಕ್ಕೆ ಪೋಸ್ಟೇಜು 0-2-0

ಮೇಲ್ಕಂಡ ದರದಂತೆ ನಿಮಗೆ ಬೇಕಾದಷ್ಟು ಡೈರಿಗಳ ಕ್ರಯವನ್ನು ಮೊದಲೇ ರವಾನಿಸಿದಲ್ಲಿ ಪೋಸ್ಟಲ್ ಪಾರ್ಸೆಲ್ ಮೂಲಕ ರವಾನಿಸಲಾಗುತ್ತೆ. ಮೇಲ್ಕಂಡ ಡೈರಿಗಳನ್ನು ಒಟ್ಟಿಗೆ 12 ತರಿಸಿಕೊಳ್ಳುವವರಿಗೆ 1 ಡೈರಿ ಹೆಚ್ಚಿಗೆ ಕೊಡಲಾಗುತ್ತೆ. ವಿ. ಪಿ. ಮೂಲಕ ಡಜನ್‌ಗಳನ್ನು ತರಿಸಿಕೊಳ್ಳುವವರು ಡಜನ್ 1 ಕ್ಕೆ 3 ರೂಪಾಯಿ ಮೇರೆ ಅಡ್ವಾನ್ಸ್ ರವಾನಿಸಬೇಕು.

1929 ನೇ ಇಸವಿಯ ಸಚಿತ್ರ ಕ್ಯಾಲೆಂಡರ್

ಷೀಟ್ ಕ್ಯಾಲೆಂಡರ್ 50 ಕ್ಕೆ 1-8-0 100 ಕ್ಕೆ [illegible] $4" \times 4\frac{1}{2}"$ ಪಾಕೆಟ್ ಕ್ಯಾಲೆಂಡರ್ 1 ಕ್ಕೆ [illegible] 50 ಕ್ಕೆ 2-4-0 100 ಕ್ಕೆ 4-0-0

ಅನೇಕ ಬಣ್ಣಗಳಿಂದ ರಚಿತವಾಗಿ ಪ್ರಿಂಟಾಗಿ ತಯಾರಾದ $10" \times 14"$ ಸೈಜಿನ ಶ್ರೀ ಮಹಾವಿಷ್ಣುವಿಗೆ [illegible] ಪರಮೇಶ್ವರನ ಪಿಕ್ಚರ್ ಕ್ಯಾಲೆಂಡರ್ 3 ಕ್ಕೆ 0-6-0 6 ಕ್ಕೆ 0-14-0 12 ಕ್ಕೆ 1-6-0.

ನಿಮಗೆ ಬೇಕಾದಷ್ಟು ಕ್ಯಾಲೆಂಡರುಗಳ ಕ್ರಯವನ್ನು ಮೊದಲೇ ಮನಿಯಾರ್ಡರ್ ಮಾಡಿದಲ್ಲಿ ಪ್ಯಾಕಿಂಗ್ ಪೋಸ್ಟೇಜು [illegible] ಫ್ರೀಯಾಗಿ ರವಾನಿಸಲಾಗುತ್ತೆ. ವಿ. ಪಿ. ಮೂಲಕ ಮಾರಿಕೆಯಾಗಿ ರವಾನಿಸುವುದಿಲ್ಲ

ಕ್ಯಾಲೆಂಡರುಗಳು ಮುಗಿಯುವುದರ ಒಳಕ್ಕೆ ಮನಿಯಾರ್ಡರನ್ನು ಕಳುಹಿಸದಿದ್ದರೆ ವಾಪಸ್ ಮಾಡುತ್ತೆ

ಮಾದರಿ ಕ್ಯಾಲೆಂಡರ್ ಅಪೇಕ್ಷಿಸುವವರು 0-5-0 ರವಾನಿಸಿದಲ್ಲಿ ಮೇಲ್ಕಂಡ 3 ನಮೂನೆ ಕ್ಯಾಲೆಂಡರುಗಳನ್ನು ಪೋಸ್ಟು ಮೂಲಕ ಫ್ರೀಯಾಗಿ ರವಾನಿಸಲಾಗುತ್ತೆ

ಮನಿಯಾರ್ಡರ್ ರವಾನಿಸುವ ವಿಳಾಸ—

[illegible]

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, [illegible] ವ್ಯಾಪಾರಿಗಳು, ಮೈಸೂರು

"ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತರ" ಆಯುರ್ವೇದೀಯ ಸಿದ್ಧೌಷಧಗಳು.



ಒಂದು ಬಗೆಯ ಔಷಧಕ್ಕಿಂತ ರೋಗವು ಬಾಧಿಸದಂತೆ ಮಾಡಿಕೊಳ್ಳುವ [illegible] ಔಷಧಗಳೆಂಬುದು ನಿಮ್ಮ ನೆನಪಿನಲ್ಲಿರಲಿ.

ಪ್ರತಿ ದಿನ ಊಟವಾದ ಮೇಲೆ [illegible] ಜೀರ್ಣಶಕ್ತಿಯನ್ನು ಹೆಚ್ಚಿಸಿ ಗಾಳಿ ಮತ್ತು ನೀರುಗಳ ದೋಷವನ್ನು [illegible] ಮಾಡುತ್ತವೆ

ಮಕ್ಕಳ ಎಳಪು, ಬೆಸಡಿ, ಕೆಮ್ಮು, ಶೀತವಾತ, ಜ್ವರ, [illegible] ಜ್ವರ, ಅಜೀರ್ಣದ ಭೇದಿ, ಅಗ್ನಿಮಾಂದ್ಯ, ಹೊಟ್ಟೆಯುಬ್ಬರ, ಮಲಬದ್ಧ, [illegible] ರಕ್ತಹೀನತೆ, ದುರ್ಬಲ [illegible], ದೊಡ್ಡವರ ಜ್ವರ, ಚಳಿಜ್ವರ ಕೆಮ್ಮು, ಗೂರಲು, ನೆಗಡಿ, ಅಜೀರ್ಣದ ಹೊಟ್ಟೆನೋವು ಶೀತವಾತಗಳಿಂದ ಸಂದುಗಳು [illegible], ಹಸಿವಿಲ್ಲದಿರುವಿಕೆ, ಬಲಹೀನತೆ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ ಬಾಣಂತಿಯರಿಗೆ ಕಸೂರಿಗೆ ಬದಲಾಗಿ ಈ ಮಾತ್ರೆಗಳು ಸಂಜೀವನ. ವ್ಯಾಯಾಮವನ್ನು ಮಾಡಲಶಕ್ತರಾದವರಿಗೂ [illegible] ರಿಗೂ ಆರೋಗ್ಯವರ್ಧನಕಾರಿ

250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1 ಕ್ಕೆ 0-4-0 ಮೇರೆ ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತವೆ [illegible] ಸೇರಿ 1 ಸೀಸೆಗೆ 8 ಆಣೆ, 6 ಕ್ಕೆ 1-8-0 ರೂಪಾಯಿ. 12 ಕ್ಕೆ 2-13-0 ರೂಪಾಯಿ. 25 ಕ್ಕೆ 5-3-0.

ಶ್ರೀ ಸೀತಾರಾಘವವೈದ್ಯಶಾಲಾ, ಬ್ರಾಂಚಾಫೀಸು ಚಿಕ್ಕಪೇಟೆ, ಬೆಂಗಳೂರು ಸಿಟಿ

"ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತರ", ಶ್ರೀ ಸೀತಾರಾಘವವೈದ್ಯಶಾಲಾ, ಹೆಡ್ ಆಫೀಸು ಮೈಸೂರು.

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರು ಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ನಷ್ಟವಾಗುವ ವ್ಯಾಧಿಗಳು ಯಾವುವೆಂದರೆ—ಪಿನಸಿ, [illegible], ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸಕಲ ವ್ಯಾಧಿಗಳು, ಬಹು ದೋಷ ಮೊಂಡಾದ ವ್ಯಾಧಿಗಳು ಪರಿಹಾರವಾಗುವುದಲ್ಲದೆ ಕಂಠಕ್ಕೆ ಮೇಲ್ಪಟ್ಟ ಸಕಲ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಚಿಟಿಕೆ ಸಾಧಾರಣ ನಶ್ಯದ ಜೊತೆಯಲ್ಲಿ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಸುಗಂಧವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗಾಗಿ ಫ್ರೀ ಸಣ್ಣ ಡಬ್ಬಿಗಳು ಕಳುಹಿಸಲ್ಪಡುವುದಿಲ್ಲ.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ ೦-೪-೦. ವಿ. ಪಿ. ೦-೭-೦. ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ಚಾರ್ಜು ೮ ಆಣೆ. ದಯಮಾಡಿ ನಿಮ್ಮ ಹೆಸರನ್ನು, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,

[50 12] ಪೋ. ಬಾ. ೨೧೧೦, ಮದರಾಸು.

ಬೆಲೆ ಸುಲಭ! ಶ್ರೀ ಬಣ್ಣ ಗ್ಯಾರಂಟಿ!!

ಪ್ರಸಿದ್ಧವಾದ ಮೊಳಕಾಲ್ಮೂರು ರೇಷ್ಮೆ ಜವಳಿ.

ರೇಷ್ಮೆ ವಸ್ತ್ರ—1 ನೇ ನಂ		ತೊಲ 1ಕ್ಕೆ	0—8—0
ರೇಷ್ಮೆ ಮೊಗಟ—1 ನೇ ನಂ		ತೊಲ 1ಕ್ಕೆ	0—9—6
ರೇಷ್ಮೆ ಕೈವಸ್ತ್ರ—1 ಕ್ಕೆ	0—11—0	ಡಜನ್ 1ಕ್ಕೆ	7—14—0

ಒಂದು ಸಲ ತರಿಸಿ ನೋಡಿರಿ. ಮಾದರಿಯಲ್ಲಿ ಮಿಸ್ತ್ರಿ ಕಂಡುಬಂದಲ್ಲಿ ವಾಪಸು ಮಾಡಿರಿ. ಪೋಸ್ಟೇಜ್ ಚಾರ್ಜು ನಾವು ಕೊಡುವೆವು

ನಮ್ಮ ಅಡ್ರೆಸ್—

ಎಂ. ಎಸ್. ಗಂಗಪ್ಪ ಮತ್ತು ಲೋಕಪ್ಪ, ರೇಷ್ಮೆ ವಸ್ತ್ರ ವ್ಯಾಪಾರಿಗಳು, ಮೊಳಕಾಲ್ಮೂರು, ಚಿತ್ರದುರ್ಗ

AUCTION SALE.

Under Power of Attorney executed by Mr. T. P. Kumaraswamy (the mortgagor) appointing the Bank of Mysore Ltd., Mysore (Mortgagee) as his Attorney to sell the under mentioned properties on his behalf the Bank of Mysore Ltd., Mysore will sell the said *properties* by Public Auction on Sunday the 27th Jan. 1929 from 8 A. M. to 11 A. M. and 3 P. M. to 5 P. M. on the spot subject to the following conditions —

1. The sale is subject to confirmation by Head Office of the Bank at Bangalore
2. One tenth of the final bid amount to be paid by the person whose bid is accepted immediately and the balance within a fortnight of the date of sale
3. The conveyance and registration charges to be borne by the purchaser
4. The Bank reserves to itself the right to accept or reject any offers without assigning any reasons therefor
5. The Bank takes no responsibility in regard to defects if any in the description of the properties or in the good title of Mr. T. P. Kumaraswamy to the properties sold by the Bank on his behalf

V. L. Naranaiya
Manager, Bank of Mysore Ltd
Mysore

Description of the Properties

1. Bungalow Situated in Chamaraja Mohalla, Prince of Wales Road Mysore, measuring East to West 120 feet and South to North 80 feet including backyard and bounded on the East by conservancy lane, West by High Road South by No 6 Cottage Site, and North by No 4 Cottage Site

2. Site: Situated in Prince of Wales Road, Chamaraja Mohalla Mysore measuring East to West 120 feet and North to South 84 feet and bounded on the East by conservancy lane West by Prince of Wales Road South by No 3 Cottage site and North by No 1 Cottage site

3. Pieces and Parcel of land with compound wall and other hereditaments thereon known as and bearing Municipal No 1 Vanivilas Road, Mysore or as No 1 in the No V drainage area block No 87 Mysore City, bounded on the North by conservancy lane, on the South by Vanivilas Road, on the East by Banjamanicalet's land and trust property and on the West by Mission Bungalow measuring from the North to South 245 plus 233/2 plus 245 plus 262½ East to West 64 plus 82/2

(2) 64 plus 64½ feet and being 4045 1/3 sq yds in extent of which 1000 sq yds has been sold by the purchaser.

ಮೈಸೂರು ಸ್ಟಾರ್.

೧೯೨೯ ನೆಯ ಇಸವಿ ಜನವರಿ ತಾ|| ೧೨ ನೆಯ ಶನಿವಾರ

ಮೈಸೂರು ಸರ್ಕಾರವೂ ವೃತ್ತ ಪತ್ರಿಕೆಗಳೂ

ಲೇಖನ ಸ್ವಾತಂತ್ರ್ಯವು ಸ್ವಾತಂತ್ರ್ಯಪ್ರಿಯರಾದ ಜನರಿಗೆ ಅತಿಪ್ರಿಯವಾದ ಹಕ್ಕಾಗಿರುವುದು ಲೇಖನ ಪ್ರಯೋಗವು ಖಡ್ಗ ಪ್ರಯೋಗಕ್ಕಿಂತಲೂ ಅತಿಶಯವಾದುದು ಪೃಥ್ವಿಯಲ್ಲಿ ಹುಟ್ಟುವ ಕಲಹಗಳೂ, ಘೋರವಾದ ಯುದ್ಧಗಳೂ, ಶಾಂತಿ ಸಂಧಾನಗಳೂ, ರಾಜ್ಯಸ್ಥಾಪನೆಯೂ, ಸಾಮ್ರಾಜ್ಯಪತನವೂ ಎಲ್ಲವೂ ಲೇಖನದ ಮಹಾತ್ಮೆಯಿಂದ ಜನಿಸುವುವು ಆದರೆ ಲೇಖಕರು ಮಾತ್ರ ತಮ್ಮ ಪರಮ ಪವಿತ್ರವಾದ ಕರ್ತವ್ಯವನ್ನರಿತು ದೇಶದ ಹಿತಕ್ಕಾಗಿಯೂ ಪ್ರಜಾನೆಮ್ಮದಿಗಾಗಿಯೂ, ಕೃಷಿಮಾಡುವುದಾದರೆ ದೇಶೋನ್ನತಿಯ ಕಾರ್ಯಗಳು ಸುಲಲಿತವಾಗಿ ನಡೆಯುವುವು. ಹಾಗಲ್ಲದೆ ಲೇಖಣಿಯು ತಮ್ಮ ಹಸ್ತಗತವಾಗಿರುವುದರಿಂದ ಲೇಖಕರು ಸ್ವೇಚ್ಛಾನುಸಾರ ಪ್ರಲಪಿಸುವರಾದರೆ ದೇಶಕ್ಕೆ ಎಂದಿಗೂ ಹಿತವಾಗಲಾರದು ಇಂತಹ ಲೇಖಕರನ್ನು ಹದ್ದುಬಸ್ತಿನಲ್ಲಿ ಇಡುವುದು ಪ್ರಜಾಹಿತೈಷಿಗಳಾದ ಸರ್ಕಾರದವರ ಬದ್ಧ ಕರ್ತವ್ಯವಾಗಿರುವುದು

ನವೀನ ಕಾಲದ ನಾಗರಿಕ ದೇಶಗಳಲ್ಲಿ ಪ್ರಜಾಸಮ್ಮತಿಯ ಸರ್ಕಾರಗಳಿರುವುವು ಪ್ರಭುತ್ವದ ಆಡಳಿತವು ಪ್ರಜಾಪ್ರತಿನಿಧಿಗಳಿಂದ ನಡೆಯುವುದು ಆ ಪ್ರತಿನಿಧಿವರ್ಗದಲ್ಲಿ ಅನೇಕ ಕಕ್ಷಿಗಳಿರುವುವು ಯಾವ ಕಕ್ಷಿಯವರು ಅಧಿಕಾರಕ್ಕೆ ಬಂದರೂ ಅವರು ತಮ್ಮ ಪಕ್ಷದ ಪತ್ರಿಕೆಗಳನ್ನು ಸ್ಥಾಪಿಸಿಕೊಂಡು ತಮ್ಮೊಳಗೆ ತಮ್ಮ ಬಳ್ಳಕೆಯ ಧ್ಯೇಯವನ್ನು ವ್ಯಕ್ತೀಕರಿಸಿ ಪ್ರತಿ ಕಕ್ಷಿ [illegible] ವಿಲ್ಲದವರ ತತ್ವಗಳನ್ನೂ ಪದ್ಧತಿ ಮೇಲೆ ಸಲ್ಲ ತಕ್ಕ ನಿಂದನೆ ಪ್ರಭುತ್ವದ ಕಾರ್ಯಗಳ ಕ್ಷಣಿಕತೆಯನ್ನೂ ಎತ್ತಿ ತೋರಿಸುವರು ಈ ಮಾರ್ಗವನ್ನು ಅರಿಯದ ಅಶಿಕ್ಷಿತ ವರ್ಗದವರು ಸ್ತ್ರೀಯರೂ ಅಂತಃಕರಣದ ಪ್ರಜಾ ವರ್ಗದ ಸ್ವಾಭಿಮಾನಿಗಳ ಸೂಚನೆಯಾಗಿ ತಿಳಿಯುತ್ತಿರುವರು

ಹಿಂದೂಸ್ಥಾನದಲ್ಲಿ ರಾಜ್ಯಭಾರವು ಬಹುತರವಾಗಿ ವಿದೇಶೀಯರ ಹಸ್ತಗತವಾಗಿರುವುದು ದೇಶದ ಉತ್ಪತ್ತಿಯೂ ಭೂಮ್ಯುತ್ಪನ್ನಗಳೂ, ಪ್ರಜಾಸಂಪತ್ತೂ, ಜನಗಳ ಆರ್ಥಿಕ ಸೌಖ್ಯವೂ ಪ್ರಭುತ್ವದವರ ಅಧೀನವಾಗಿರುವುವು. ಜನಗಳು ತಾವು ದುಡಿದು ಸರ್ಕಾರಕ್ಕೆ ಒಪ್ಪಿಸಿದ ಕಂದಾಯ, ಕೊಡಿಗೆಗಳಿಗೆ ಪ್ರತಿಫಲವಾಗಿ ದೇಶದಲ್ಲಿ ಶಾಂತಿಯನ್ನೂ, ಪ್ರಜಾಸೌಕರ್ಯಕ್ಕೆ ಸಾಧಕವಾದ ಸೌಲಭ್ಯಗಳನ್ನೂ ಅಪೇಕ್ಷಿಸುವರು ಸರ್ಕಾರದವರು ತಮ್ಮ ಕರ್ತವ್ಯದಲ್ಲಿ ವಿಮುಖರಾದರೆ ಅವರನ್ನು ಎಚ್ಚರಿಸಿ ಜ್ಞಾನೋದಯವಾಗುವಂತೆ ಮಾಡುವುದು ಪ್ರಜೆಗಳ ಕರ್ತವ್ಯವು ಇದಕ್ಕಾಗಿ ಪ್ರಜೆಗಳು ಪತ್ರಿಕೆಗಳನ್ನು ನಡೆಸುವರು ಈ ಕಾರಣದಿಂದ ಪ್ರಜೆಗಳಿಗೆ ಲೇಖನ ಸ್ವಾತಂತ್ರ್ಯವು ಅತ್ಯಾವಶ್ಯಕವಾಗಿರುವುದು ಈ ಸ್ವಾತಂತ್ರ್ಯವನ್ನು ಪ್ರಭುತ್ವದವರು ಕಿತ್ತುಕೊಳ್ಳುವುದಾದರೆ ಅಧಿಕಾರ ವರ್ಗದವರು ಲಂಗು ಲಗಾಮು ಇಲ್ಲದೆ ಸ್ವೇಚ್ಛಾಪ್ರವರ್ತಕರಾದರೂ ಅವರನ್ನು ದಂಡಿಸುವವರೊಬ್ಬರಿರುವುದಿಲ್ಲ ಪ್ರಜಾಪರಿಪಾಲನೆಯು ಸಮರ್ಪಕವಾಗಿ ನಡೆಯಲು ಅವಕಾಶವಿರುವುದಿಲ್ಲ ಜನಗಳಲ್ಲಿ ಅಸಂತುಷ್ಟಿಯೂ ಅಸಮಾಧಾನವೂ ಜನಿಸಿ ಪ್ರಜಾ ವರ್ಗದವರು ಗುಣಗುಟ್ಟುವ ಶೋಚನೀಯ ಸ್ಥಿತಿಯು ಪ್ರಾಪ್ತವಾಗುವುದು ಒಟ್ಟಿನಲ್ಲಿ ಜನಾಂಗಾಭ್ಯುದಯವೂ, ದೇಶದ ಏಳ್ಗೆಯೂ ಮೂಲೆಗೊತ್ತರಿಸಲ್ಪಟ್ಟು ಐಕ್ಯಮತ್ಯದಿಂದಲೂ ಸೌಹಾರ್ದದಿಂದಲೂ ಮುಂಬರಿದ ಜನಾಂಗಗಳಿಗೆ ಅಡಿಯಾಳುಗಳಾಗಿ ಪರದಾಸ್ಯದ ಕಿರುಕುಳವನ್ನು ಅನುಭವಿಸುವ ದುಃಸ್ಥಿತಿಯು ಪ್ರಾಪ್ತವಾಗುವುದು ಅಂದಬಳಿಕ ಲೇಖನ ಸ್ವಾತಂತ್ರ್ಯವು ಪ್ರಜೆಗಳಿಗೆ ಪ್ರಾಣಕ್ಕಿಂತಲೂ ಅತಿಶಯವಾದ ಪ್ರಿಯವಸ್ತುವೆಂದು ಹೇಳಲವಶ್ಯವಿರುವುದಿಲ್ಲ

ಹಿಂದೂಸ್ಥಾನದ ಸಾಮ್ರಾಜ್ಯ ಸರ್ಕಾರದವರು ವಿದೇಶೀಯರಾದುದರಿಂದ ಭಾರತೀಯರ ಸ್ವಾತಂತ್ರ್ಯದ ಮೇಲೆ ನಾನಾ ವಿಧವಾದ ನಿರ್ಬಂಧಗಳನ್ನೂ, ನಿಬಂಧನೆಗಳನ್ನೂ ವಿಧಿಸಿರುವರು ಇವುಗಳಲ್ಲಿ ವಾಕ್‌ಸ್ವಾತಂತ್ರ್ಯವೂ ಲೇಖನ ಸ್ವಾತಂತ್ರ್ಯವೂ ಬಹುಮಟ್ಟಿಗೆ ಪೆಟ್ಟು ತಿಂದಿರುವುವು ಆದರೆ ದೇಶೀಯ ಸಂಸ್ಥಾನಗಳಲ್ಲಿ ಪ್ರಭುತ್ವವು ದೇಶೀಯ ರಾಜರುಗಳಿಂದ ದೇಶೀಯರ ಹಿತಕ್ಕಾಗಿಯೇ ನಡೆಯಬೇಕಾದುದು ಸಹಜವಾಗಿರುವುದರಿಂದ ಪ್ರಭುತ್ವದವರು ಪ್ರಜಾಹಿತೈಷಿಗಳಾಗಿ ಪ್ರಜಾಸಮ್ಮತಿಯಿಂದ ಪ್ರಭುತ್ವವನ್ನು ನಡೆಸಿದರೆ ಪ್ರಭುತ್ವದವರಲ್ಲಿಯೂ, ಪ್ರಜೆಗಳಲ್ಲಿಯೂ ಪರಸ್ಪರ ಪ್ರೀತಿ ಅನುರಾಗವೂ, ಸೌಹಾರ್ದವೂ ನೆಲೆಗೊಳ್ಳುವುವು ಹಾಗಿಲ್ಲದಿದ್ದರೆ ಪ್ರಜೆಗಳಲ್ಲಿ ವೈಮನಸ್ಯವುಂಟಾಗಿ ನಾನಾ ವಿಧವಾದ ಕ್ಲೇಶಗಳು ಪ್ರಾಪ್ತವಾಗುವುವು

ಮೈಸೂರು ಸರ್ಕಾರದವರು ಕಳೆದ ಅರ್ಧ ಶತಮಾನದಿಂದ ನವೀನ ಕಾಲದ ನಾಗರಿಕ ಪ್ರಭುತ್ವ ಪದ್ಧತಿಗಳನ್ನನುಸರಿಸಿ ರಾಜ್ಯಭಾರವನ್ನು ನಿರ್ವಹಿಸುತ್ತಿರುವರು ಪ್ರಜೆಗಳ ಹಿತವನ್ನೇ ಸದಾ ಧ್ಯಾನದಲ್ಲಿಟ್ಟು ಪ್ರಜಾಸಮ್ಮತಿಯಿಂದ ಕಾಯಿದೆ ಕಟ್ಟಲೆಗಳನ್ನು ವಿಧಾಯಕ ಮಾಡುವರು ಪ್ರಜೆಗಳ ಅಹವಾಲುಗಳನ್ನು ಕಿವಿಗೊಟ್ಟು ಕೇಳಿ ನಿವಾರಣೋಪಾಯಗಳನ್ನು ತ್ವರಿತದಿಂದ ನಡೆಸುವರು ಈ ಕಾರಣದಿಂದ ಮೈಸೂರು ಮಾದರಿ ಸಂಸ್ಥಾನವೆಂಬದಾಗಿಯೂ ಇಲ್ಲಿನ ಪ್ರಭುತ್ವವು ಮಾದರಿ ಪ್ರಭುತ್ವವೆಂಬದಾಗಿಯೂ ಪ್ರಖ್ಯಾತಿಗೊಂಡಿರುವುದು ಸಂಸ್ಥಾನದಲ್ಲಿರುವ ವೃತ್ತಪತ್ರಿಕೆಗಳು ಆದಿಯಿಂದಲೂ ದೇಶದ ಹಿತವನ್ನೇ ಮುಖ್ಯ ಧ್ಯೇಯವನ್ನಾಗಿಟ್ಟುಕೊಳ್ಳದೆ ಆಯಾ ಕೋಮುಗಳ ಪುರೋಭಿವೃದ್ಧಿಯನ್ನೇ ಬಯಸಿ ತದನುಸಾರವಾಗಿ ಲೇಖನಗಳನ್ನು ಬರೆಯುತ್ತಿರುವುದು ಶೋಚನೀಯವೇ ಸರಿ ಹೀಗಿರುವಲ್ಲಿ ಇಂತಹ ಪತ್ರಿಕೆಗಳ ಮೇಲೆ ಸರ್ಕಾರದವರು ಕೆಲವು ನಿಬಂಧನೆಗಳನ್ನು ವಿಧಿಸುವುದು ಆವಶ್ಯಕವಾಯಿತು ತಮ್ಮ ಉತ್ತರವಾದಿತ್ವವನ್ನೂ ಪವಿತ್ರ ಧ್ಯೇಯವನ್ನೂ ಅರಿತ ಲೇಖಕರಿಗೆ ಸ್ವಾತಂತ್ರ್ಯವೆಂಬುದು ಅಮೂಲ್ಯವಾದುದು ಮಹತ್ವವುಳ್ಳ ಈ ಸ್ವಾತಂತ್ರ್ಯವನ್ನು ಅವರು ದೇಶೋನ್ನತಿಗಾಗಿಯೂ, ಜನಾಂಗಾಭ್ಯುದಯಕ್ಕಾಗಿಯೂ ವಿನಿಯೋಗಿಸುವರು ಹಾಗಲ್ಲದೆ ಲೇಖಕರು ತಮ್ಮ ಕೋಮಿನವರು ಮಾತ್ರ ಮುಂದರಿಯಬೇಕೆಂದೂ ಸಕಲ ಸಂಪತ್ತೂ, ಸೌಲಭ್ಯಗಳೂ ತಮಗೇ ಲಭಿಸಬೇಕೆಂಬದಾಗಿಯೂ ಇತರ ಕೋಮಿನವರು ಚಿರಕಾಲವೂ ದಾಸ್ಯದಲ್ಲಿರಬೇಕೆಂಬದಾಗಿಯೂ ಅವಿಮರ್ಶಿತವುಳ್ಳವರಾಗಿ ತದನುಸಾರ ಲೇಖನಗಳನ್ನು ಬರೆಯುವುದಾದರೆ ಸರ್ಕಾರದವರು ಲೇಖನ ಸ್ವಾತಂತ್ರ್ಯವನ್ನು ಕಸುಕೊಳ್ಳುವುದು ಅವಶ್ಯವಾಗುವುದು ಅದರಲ್ಲಿಯೂ ಪತ್ರಿಕಾ ಸಂಪಾದಕರು ಸರ್ಕಾರದವರ ಮೇಲೆಯೂ, ಪ್ರಭುಗಳ ಮೇಲೆಯೂ ಇಲ್ಲದ ಸಲ್ಲದ ದೋಷಗಳನ್ನು ಆರೋಪಿಸಿ ಅಜ್ಞಾನಿಗಳೂ ಜನಗಳಲ್ಲಿ ಪ್ರಭುತ್ವದವರ ಮೇಲೆ ದ್ವೇಷಾಸೂಯೆಗಳು ಹುಟ್ಟುವಂತೆ ಮಾಡುವುದಾದರೆ ರಾಜ್ಯಕ್ಕೆ ಹಾನಿಯುಂಟಾಗುವುದು ಇಂತಹ ಸಂದರ್ಭಗಳಲ್ಲಿ ಪ್ರಭುತ್ವದವರು ಇಂತಹ ಸಂಪಾದಕರನ್ನು ಹದ್ದುಬಸ್ತಿನಲ್ಲಿಡಬೇಕಾಗುವುದು

ಕಳೆದವಾರ ಮೈಸೂರು ಸರ್ಕಾರದವರು ಕೆಲವು ವೃತ್ತಪತ್ರಿಕೆಗಳನ್ನು ನಡೆಸಕೂಡದೆಂದು ಅಪ್ಪಣೆಮಾಡಿ ನಿಲ್ಲಿಸಿಬಿಟ್ಟರು ಈ ಪತ್ರಿಕೆಗಳಲ್ಲಿ ಬಹುಕಾಲದಿಂದಲೂ ಸರ್ಕಾರದಮೇಲೆ ಜನಗಳಲ್ಲಿ ವೈಮನಸ್ಯ ಹುಟ್ಟುವಂತಹ ಲೇಖನಗಳು ಬರೆಯಲ್ಪ [illegible] ವರು ರಾಜಪಿಂಡಬಿಟ್ಟ [illegible] ಅದನ್ನು [illegible] ನಾನಾವಿಧವಾಗಿ [illegible] ಜನರ ಮನಸ್ಸಿನಲ್ಲಿ [illegible] ಪವಿತ್ರತೆಯೂ [illegible] ಹುಟ್ಟಿಸಿದ್ದರು ಆ ತಪ್ಪಿತಕ್ಕಾಗಿ ಈ ಪತ್ರಿಕಾಕರ್ತರು ತಮ್ಮನ್ನಾಳುವ ಮಹಾಸ್ವಾಮಿಗಳು ರಾಜಋಷಿಗಳಲ್ಲದೆ ಕಠೋರವಿಷ್ಟರಾಗಿದ್ದ ಪಕ್ಷದಲ್ಲಿ ಶಿರಚ್ಛೇದನೆಯನ್ನು ಮಾಡಿಸದಿದ್ದರೂ ಗಡೀಪಾರಿನ ಶಿಕ್ಷೆಯನ್ನಾದರೂ ಮಾಡುತ್ತಿದ್ದರು ಆದರೆ ಮಹಾಸ್ವಾಮಿಗಳು ದಯಾಳುಗಳಾದುದರಿಂದ ಇದುವರೆಗೂ ಈ ಪತ್ರಿಕೆಗಳಮೇಲೆ ದಂಡಪ್ರಯೋಗಮಾಡದೆ ತಟಸ್ಥರಾಗಿದ್ದರು ಈ ವಿಧವಾದ ಕೃಪೆಯನ್ನು ಸರ್ಕಾರದ ದೌರ್ಬಲ್ಯವೆಂದು ತಿಳಿದುಕೊಂಡು ಪತ್ರಿಕಾಸಂಪಾದಕರು ಸ್ವೇಚ್ಛಾನುಸಾರ ಲೇಖನಗಳನ್ನು ಬರೆಯಲಾರಂಭಿಸಿದರು ಇದನ್ನು ನೋಡಿ ಸರ್ಕಾರದವರು ಈ ಪತ್ರಿಕೆಗಳಿಗೆ ಎಷ್ಟೋಸಾರಿ ಇವರಿಗೆ ಎಚ್ಚರಿಕೆಯನ್ನು ಕೊಟ್ಟಾಗ್ಯೂ ಜ್ಞಾನೋದಯವಾಗದಿರಲು ಸರ್ಕಾರದವರು ಕಾಯಿದೆಗೆ ಹಾಕುವುದೊಂದೇ ನಿವಾರಣೋಪಾಯವೆಂದು ಕಂಡುಬಂದುದರಿಂದ ಈ ಪತ್ರಿಕೆಗಳನ್ನು ಇನ್ನುಮುಂದೆ ನಡೆಸಲಾಗದೆಂದು ಅಪ್ಪಣೆಮಾಡಿರುವರು ಇದರಿಂದ ದೇಶಕ್ಕೆ ಹಿತವಾಗುವುದೆಂಬ ಕಾಂಕ್ಷೆಯಿಂದ ಸರ್ಕಾರದವರು ಈರೀತಿ ಅಪ್ಪಣೆಕೊಟ್ಟಿರುವರಾದುದರಿಂದ ಪ್ರಭುತ್ವದವರ ವರ್ತನೆಯು ಶ್ಲಾಘನೀಯವಾಗಿರುವುದು ಇಂತಹ ಅಪರಾಧವು ನಮ್ಮಲ್ಲಿ ತೋರಿಬರುವುದಾದರೆ ನಮಗೂ ಇದೇವಿಧವಾದ ನಿಬಂಧನೆಯು ಅನ್ವಯಿಸುವುದರಿಂದ ನಮ್ಮ ಸಹೋದ್ಯೋಗಿಗಳಿಗಾದ ಶಿಕ್ಷೆಗಾಗಿ ನಾವು ಸಂತೃಪ್ತರಾದೆವೆಂದು ತಿಳಿಯಲಾಗದು

ಇದು ಶಾಂತಿಸಂಧಾನವೋ ?

ಕೆಲ ವಿಘ್ನಸಂತೋಷಿಗಳಿಂದ ಹುಡುಗಾಟಿಕೆಯು ಮಹಾ ಅನರ್ಥಕರವಾಗಿ ಮಾಡಲ್ಪಟ್ಟುದರಿಂದ ದೇಶದಲ್ಲುಂಟಾಗಿರುವ ಅಶಾಂತಿಯನ್ನು ಹೋಗಲಾಡಿಸಿ ಜನರಲ್ಲಿ ಪರಸ್ಪರ ಸೌಹಾರ್ದವನ್ನುಂಟುಮಾಡಬೇಕೆಂಬ ಸಂಕಲ್ಪದಿಂದ ನಮ್ಮ ಪ್ರಭುತ್ವದವರು ಗೊಂದಲದಲ್ಲಿ ಭಾಗಿಗಳಾಗಿದ್ದ ಅಪರಾಧಕ್ಕಾಗಿ ಹಿಂದುಗಳಮೇಲೆ ಹೂಡಿದ್ದ ವಿವಾದಗಳನ್ನು ಹಿಂದಕ್ಕೆ ತಗೆದುಕೊಂಡುಬಿಟ್ಟರು ಆದರೆ ಮುಸಲ್ಮಾನರ ಮೇಲಿನ ಮೊಕದ್ದಮೆಗಳು ಮಾತ್ರ ಎಂದಿನಂತೆಯೇ ನಡೆಯುತ್ತಿರುವುವು ಖಾಸಗಿ ಜನಗಳು ಹೂಡಿದ ಮೊಕದ್ದಮೆಗಳು ಸಹ ನಡೆಯುತ್ತಲಿರುವುವು ಇದರಿಂದ ಸರ್ಕಾರದವರು ಯೋಚಿಸಿದಂತೆ ಶಾಂತಿಸ್ಥಾಪನೆಯಾಗುವ ಸಂಭವತೋರುವುದಿಲ್ಲ

ವಿಶ್ವೇಶ್ವರಯ್ಯ ವಿಚಾರಣಾ ಸಮಿತಿಯು ಬೆಂಗಳೂರು ಗಲಭೆಗೆ ಮೂಲಕಾರಣವನ್ನು ಕಂಡುಹಿಡಿಯುವುದಕ್ಕಾಗಿ ವಿಚಾರಣೆಯನ್ನು ಪ್ರಾರಂಭಿಸಿದಾಗ ದೇಶ ಹಿತೈಷಿಗಳಾದವರು ತಮಗೆ ತಿಳಿದ ವಿಚಾರವನ್ನು ಸಮಿತಿಯವರಿಗೆ ಬಹಿರಂಗವಾಗಿ ತಿಳಿಸುವುದರಿಂದ ಜನಗಳಲ್ಲಿ ವೈಮನಸ್ಯವೂ, ದ್ವೇಷಾಸೂಯೆಗಳೂ ಹುಟ್ಟಬಹುದಾದುದರಿಂದ ತಮ್ಮ ಸಾಕ್ಷ್ಯವನ್ನು ಗೋಪ್ಯದಲ್ಲಿ ಮಾತ್ರ ಹೇಳುವುದಾಗಿ ತಿಳಿಸಿದರು ನಿಜಾಂಶವನ್ನು ತಿಳಿಯಬೇಕೆಂಬ ಕಾಂಕ್ಷೆಯಿಂದ ಸಮಿತಿಯವರು ಇದಕೊಪ್ಪಿ ಕೆಲ ಸಾಕ್ಷಿಗಳ ಹೇಳಿಕೆಯನ್ನು ಗೋಪ್ಯದಲ್ಲಿ ತೆಗೆದುಕೊಂಡರು ಈರೀತಿ ಹೇಳಿದ ವಿಚಾರಗಳು ಬಹಿರಂಗವಾಗದಂತೆ ಗೋಪ್ಯದಲ್ಲಿಡಬೇಕಾದುದು ಸರ್ಕಾರದವರ ಮತ್ತು ಸಮಿತಿಯವರ ಬದ್ಧ ಕರ್ತವ್ಯವಾಗಿದ್ದಿತು ಆದಾಗ್ಯೂ ಸಾಕ್ಷಿ ಹೇಳಿದ ಕೊಂಚಕಾಲದಲ್ಲಿಯೇ ಈ ಗೋಪ್ಯ ವಿಚಾರಗಳು ಹೊರಬಿದ್ದು ಅದಕ್ಕೆ ಸಂಬಂಧಪಟ್ಟ ಜನಗಳು ಗೋಪ್ಯದಲ್ಲಿ ಸಾಕ್ಷಿ ಹೇಳಿದವರಮೇಲೆ ಮಾನನಷ್ಟದ ಮೊಕದ್ದಮೆಗಳನ್ನು ಹೂಡಿದರು, ಮತ್ತು ನಾನಾವಿಧವಾದ ತೊಂದರೆಗಳನ್ನು ಕೊಡಲುಪಕ್ರಮಿಸಿರುವರು ಯಾವ ಪ್ರತಿಫಲಾಪೇಕ್ಷೆಯೂ ಇಲ್ಲದೆ ದೇಶಹಿತಕ್ಕಾಗಿ ಸರ್ಕಾರದವರಿಗೆ ಸಹಾಯಮಾಡಲು ಮುಂದೆಬಂದ ಸಾಕ್ಷಿಗಳಿಗೆ ಸರ್ಕಾರದವರು ಯಾವ ರಕ್ಷಣೆಯನ್ನೂ ಕೊಡದೆ ಪ್ರತಿಕಕ್ಷಿಗಳಕೈಗೆ ಅವರನ್ನು ಹಿಡಿದುಕೊಟ್ಟಂತೆ ಮಾಡಿಬಿಟ್ಟರು

ಈಗ ಮಹತ್ತರವಾದ ಒಂದು ಅಚಾತುರ್ಯ ನಡೆದಿರುತ್ತದೆ ವಿಶ್ವೇಶ್ವರಯ್ಯ ಸಮಿತಿಯವರು ಮಾಡಿರುವ ವರದಿಯನ್ನು ಸರ್ಕಾರದವರು ಪರಿಶೀಲಿಸಿ ಅದರಮೇಲೆ ತಮ್ಮ ಅಪ್ಪಣೆಯನ್ನು ಕೊಡುವುದರೊಳಗಾಗಿ ವರದಿಯು ಕೆಲ ಪತ್ರಿಕೆಗಳಿಗೆ ತಿಳಿದು ಅವುಗಳಲ್ಲಿ ವಿಶದವಾಗಿ ಪ್ರಕಟವಾಗುತ್ತಿರುವುದು ನ್ಯಾಯವಿಧಾಯಕಸಭೆಯಲ್ಲಿ ಪ್ರಜಾಪ್ರತಿನಿಧಿಗಳು ಸದರಿ ವರದಿಯನ್ನು ಮಹಾಜನಗಳ ಅವಗಾಹನೆಗಾಗಿ ದೊರಕುವಂತೆ ಮಾಡಬೇಕೆಂಬುದಾಗಿಯೂ, ಹಾಗಿಲ್ಲದಪಕ್ಷದಲ್ಲಿ ಪ್ರಜಾಪ್ರತಿನಿಧಿಸಭೆಯ ಸದಸ್ಯರಿಗೂ ನ್ಯಾಯವಿಧಾಯಕಸಭೆಯ ಸದಸ್ಯರಿಗೂ ವರದಿಯ ಪ್ರತಿಗಳು ಕೊಡಲ್ಪಡುವಂತೆಯಾದರೂ ಮಾಡಬೇಕೆಂಬುದಾಗಿಯೂ ಕೇಳಿಕೊಂಡಾಗ ವರದಿಯು ಸರ್ಕಾರದವರ ಉಪಯೋಗಕ್ಕಾಗಿಮಾತ್ರ ಬರೆಯಲ್ಪಟ್ಟಿರುವುದೆಂಬದಾಗಿಯೂ ಅದರಲ್ಲಿರುವ ವಿಚಾರಗಳು ಪ್ರಕಟಿಸಲ್ಪಡಲು ಯೋಗ್ಯವೇ ಅಲ್ಲವೇ ಎಂಬುದನ್ನು ಪರಿಶೀಲಿಸುವವರೆಗೂ ಯಾವ ಅಪ್ಪಣೆಯನ್ನೂ ಮಾಡಲಾಗುವುದಿಲ್ಲವೆಂಬದಾಗಿಯೂ ಅಪ್ಪಣೆ ಕೊಡಿಸಿದರು. ಈಗ ನಡೆದಿರುವ ಅಚಾತುರ್ಯದಿಂದ ಗುಟ್ಟು ರಟ್ಟಾಗಿ ನಿಜಾಂಶವು ಹೇಗಿರುವುದೆಂಬುದನ್ನು ಅರಿಯದ ಮಹಾಜನಗಳು ಪತ್ರಿಕೆಗಳಲ್ಲಿ ಬರುವ ವರದಿಯ ಸುದ್ದಿಯನ್ನು ಆತುರದಿಂದ ಅವಲೋಕಿಸುತ್ತಿರುವರು.

ಪ್ರಭುತ್ವದವರು ಗೋಸ್ವ ದಲ್ಲಿ ಬೇಕೆಂದು ... ಹೊರ ಪಟ್ಟಣದಿಂದ ಪ್ರಭುತ್ವಕ್ಕಾಗುವ ... ಶಾಂತಿ ಸಮಾಧಾನಕ್ಕೆ ಭಂಗ ... ಇಂತಹ ವಿಚಾರಗಳಲ್ಲಿ ಅಧಿಕಾರಿಗಳು ಶ್ರದ್ಧೆಯನ್ನು ವಹಿಸಿ ... ಹಾಗೆಯೇ ... ಕಾರಣಕರ್ತರಾದವರನ್ನು ... ಹಿಡಿದು ಅವರಲ್ಲಿಟ್ಟಿದ್ದ ನಂಬಿಕೆಗೆ ದ್ರೋಹವೆಸಗಿದುದರಿಂದ ಅವರನ್ನು ತಕ್ಕರೀತಿಯಲ್ಲಿ ಶಿಕ್ಷಿಸುವುದು ಅತ್ಯಾವಶ್ಯಕವಾಗಿ ತೋರುತ್ತಿದ್ದ ಪಕ್ಷದಲ್ಲಿ ಸರ್ಕಾರದ ದರ್ಪಕ್ಕೂ ಗೌರವಕ್ಕೂ ಕುಂದಕಬರುವುದು, ಜನಗಳಲ್ಲಿ ಅಸಮಾಧಾನವುಂಟಾಗಿ ಹೆಚ್ಚು ಅನರ್ಥಕ್ಕೆ ಕಾರಣವಾಗುವುದು ಇಷ್ಟಕ್ಕೆ ಪ್ರಭುತ್ವದವರು ಅವಕಾಶಕೊಡದೆ ಈ ... ಕಾರಣವನ್ನು ಆಮೂಲಾಗ್ರವಾಗಿ ಕಂಡುಹಿಡಿದು ತಕ್ಕಬಂದೋಬಸ್ತನ್ನು ಮಾಡುವರೆಂದು ಮಹಾ ಜನಗಳು ನಿರೀಕ್ಷಿಸುತ್ತಿರುವರು

ದೇಶದಲ್ಲಿ ಶಾಂತಿಯು ಚಿರಸ್ಥಾಯಿಯಾಗಬೇಕಾದರೆ ಜನಗಳಲ್ಲಿ ಉಂಟಾಗಿರುವ ವೈಮನಸ್ಯವು ನಿವಾರಣೆಯಾಗಬೇಕು, ವರ್ಗವೈಷಮ್ಯಗಳು ನಿರ್ಮೂಲವಾಗಬೇಕು, ತಪ್ಪಿತಸ್ಥರಾದವರನ್ನು ನ್ಯಾಯಸ್ಥಾನಗಳಲ್ಲಿ ವಿಚಾರಣೆಗೆ ಗುರಿಮಾಡಿ ಅವರಿಗೆ ತಕ್ಕ ಶಿಕ್ಷೆಯನ್ನು ವಿಧಿಸಬೇಕು ದೇಶಹಿತಕ್ಕಾಗಿ ಸಾಕ್ಷ್ಯವನ್ನು ಕೊಟ್ಟ ದೊಡ್ಡಮನುಷ್ಯರುಗಳನ್ನು ನ್ಯಾಯಸ್ಥಾನಕ್ಕೆ ... ಯಲು ಅವಕಾಶವಿಲ್ಲದಂತೆ ಮಾಡಬೇಕು ಹಾಗಿಲ್ಲದಿದ್ದರೆ ಜನಗಳಲ್ಲಿ ಸೌಹಾರ್ದವು ಎಂದಿಗೂ ಉಂಟಾಗಲಾರದು ಸರ್ಕಾರದವರು ಇದುವರೆಗೂ ಮಾಡುತ್ತಲಿರುವ ಕಾರ್ಯಕಲಾಪಗಳು ಶಾಂತಿಸ್ಥಾಪನೆಗಾಗಿಯೇ ಎಂದು ಹೇಳಲ್ಪಡುತ್ತಿರುವುದಾದರೂ ವಸ್ತುತಃ ಪರಿಶೀಲಿಸಿದರೆ ದೇಶದಲ್ಲಿ ದ್ವೇಷಾಸೂಯೆಗಳು ವೃದ್ಧಿಯಾಗುತ್ತಿರುವುವು ಶೋಚನೀಯವಾದ ಈ ಸ್ಥಿತಿಗೆ ಕಾರಣವೇನೆಂಬುದನ್ನು ಪ್ರಭುತ್ವದವರೇ ಕಂಡುಹಿಡಿದು ಅವಶ್ಯಕವಾದ ಪ್ರಯತ್ನವನ್ನು ಮಾಡಿ ಜನಗಳಿಗೆ ಪ್ರಾಪ್ತವಾಗಬಹುದಾದ ಕಷ್ಟನಷ್ಟಗಳನ್ನು ತಪ್ಪಿಸುವುದು ಅತ್ಯಾವಶ್ಯಕವು ಮುಖ್ಯವಾಗಿ ಗೋಷ್ಠದಲ್ಲಿ ಸಾಕ್ಷ್ಯವನ್ನು ಕೊಟ್ಟವರು ಸರ್ಕಾರಕ್ಕೆ ಸಹಾಯಮಾಡುವ ಅಭಿಲಾಷೆಯಿಂದ ಸಾಕ್ಷಿ ಹೇಳಲು ಒಪ್ಪಿದರೇ ವಿನಾ ಮತ್ತಾವ ಲಾಭಕ್ಕಾಗಲಿ ಪರರಮೇಲಿನ ಹಗೆಯಿಂದಾಗಲಿ ಹೇಳಿದವರಲ್ಲವಾದುದರಿಂದ, ಅಂತಹ ಸಾಕ್ಷಿಗಳಿಗೆ ಯಾವ ವಿಧವಾದ ಪ್ರತಿಫಲವನ್ನು ಕೊಡದಿದ್ದಾಗ್ಯೂ ಅವರ ಮಾನ ಮರ್ಯಾದೆಗಳಿಗೆ ಕುಂದುಂಟಾಗದಂತೆಯೂ, ನಿಷ್ಕಾರಣವಾಗಿ ಅವರಿಗೆ ಕಷ್ಟನಷ್ಟಗಳು ಸಂಭವಿಸದಂತೆಯೂ ಅವರನ್ನು ಸಂರಕ್ಷಿಸುವುದು ಸರ್ಕಾರದವರ ಬದ್ಧ ಕರ್ತವ್ಯವಾಗಿರುವುದು ಹಿಂದುಗಳ ಮೇಲಿನ ಮೊಕದ್ದಮೆಗಳನ್ನು ಹಿಂದಕ್ಕೆ ತೆಗೆದುಕೊಳ್ಳುವುದರ ಮೊದಲು ಪ್ರಭುತ್ವದವರು ಖಾಸಗಿ ಜನಗಳು ಮಾಡಿರುವ ಮೊಕದ್ದಮೆಗಳನ್ನೂ, ಮುಸಲ್ಮಾನರ ಮೇಲಿನ ಮೊಕದ್ದಮೆಗಳನ್ನೂ ಹಿಂದಕ್ಕೆ ತೆಗೆದುಕೊಳ್ಳುವ ಏರ್ಪಾಡನ್ನು ಮಾಡಿದ್ದಪಕ್ಷದಲ್ಲಿ ಜನರೊಳಗೆ ಬೆಂಗಳೂರು ಗಲಭೆಯಿಂದ ಉಂಟಾದ ವೈಮನಸ್ಯವು ಸಂಪೂರ್ಣವಾಗಿ ನಿರ್ಮೂಲವಾಗುತ್ತಿದ್ದಿತು ಹೀಗೆ ಮಾಡದೆ ಇರುವುದರಿಂದ ಸರ್ಕಾರದವರ ಸ್ತುತ್ಯವಾದ ಶಾಂತಿಸಮಾಧಾನಪ್ರಯತ್ನವು ಹೇಗೆ ಫಲಕಾರಿಯಾಗುವುದೂ ನಮಗಂತು ತಿಳಿಯದುದಾಗಿದೆ

ಮೊಗಲಾಯರ ಕಾಲದಲ್ಲಿ ಗೋರಕ್ಷಣೆ

ಮೊಗಲರ ಮೊದಲನೇ ದೊರೆಯಾದ ಬಾಬರನು ಸಾಯುವಾಗ್ಗೆ ಮರಣ ಶಾಸನವನ್ನು ಬರೆದು ಮಗನಾದ ಹುಮಾಯುನನಿಗೆ ಕೊಟ್ಟನು ಈ ಶಾಸನದ ಎರಡು ಪ್ರತಿಗಳು ಈಗ ಭೂಪಾಲ್ ಸಂಸ್ಥಾನದ ಪುಸ್ತಕಭಂಡಾರದಲ್ಲಿ ಒಂದೂ, ಕೊಲ್ಲಾಪುರದ ರಾಜಾರಾಂ ಕಾಲೇಜಿನ ಅಧ್ಯಕ್ಷರಾದ ಬಾಲಕೃಷ್ಣರವರಲ್ಲೊಂದೂ ಇರುವುವು ಇದರಿಂದ ತಿಳಿಯಬರುವುದೇನೆಂದರೆ—ಎಲೈ ಪುತ್ರನೇ ಭರತಖಂಡವು ಅನೇಕ ಮತಾವಲಂಬಿಗಳಿಂದ ತುಂಬಿರುವುದು ದೇವರು, ಇಂತಹ ರಾಜ್ಯವನ್ನಾಳುವುದಕ್ಕೆ ನಿನಗೆ ಅನುಗ್ರಹಿಸಿದುದು ನಿನ್ನ ಪುಣ್ಯ ಪರಿಪಾಕವು ಜಾತಿಮತ್ಸರವನ್ನು ನಿನ್ನ ಹೃದಯದಿಂದ ದೂರಮಾಡುವುದು ನಿನ್ನ ಪರಮಧ್ಯೇಯವಾಗಿರಬೇಕು ನ್ಯಾಯ ವಿಮರ್ಶೆಯಲ್ಲಿ ಪ್ರತಿಯೊಬ್ಬನ ಮತಧರ್ಮಾನುಸಾರವಾಗಿಯೇ ತೀರ್ಮಾನವನ್ನು ಕೊಡಬೇಕು ಗೋವಧೆಯನ್ನು ನಿಷೇಧಿಸುವುದರಿಂದ ಭಾರತೀಯರ ಹೃದಯವನ್ನು ಆಕರ್ಷಿಸಲು ಅತಿ ಸುಲಭೋಪಾಯವು ಈ ವಿಧವಾದ ಮನೋಭಾವ ಪ್ರದರ್ಶನದಿಂದ ನಿನ್ನ ಪ್ರಜೆಗಳು ರಾಜಭಕ್ತಿವಿಶ್ವಾಸಗಳಿಂದ ನಿನ್ನನ್ನು ಮನಃಪೂರ್ವಕವಾಗಿ ಪ್ರೀತಿಸುವರು ದೇವಾಲಯಗಳನ್ನೂ ಮಠಗಳನ್ನೂ ಆಶ್ರಮಗಳನ್ನೂ ನಾಶಮಾಡಬೇಡ ನ್ಯಾಯ ವಿಮರ್ಶೆಯಲ್ಲಿ ಪ್ರಜೆಗಳಿಗೆ ಸಮ್ಮತಿಯಾಗುವ ರೀತಿಯಲ್ಲಿ ತೀರ್ಪನ್ನು ಕೊಡುವುದಾವಶ್ಯಕವು ಇಸ್ಲಾಂ ಮತದ ಮಹತ್ವವು ಪ್ರಜೆಗಳ ಅನುರಾಗದಿಂದ ವೃದ್ಧಿಯಾಗುವಂತೆ ಖಡ್ಗಪ್ರಯೋಗದಿಂದ ಎಂದಿಗೂ ಆಗಲಾರದು ಮುಸಲ್ಮಾನ ಮತಾವಲಂಬಿಗಳಲ್ಲಿರುವ ಷಿಯಾ ಮತ್ತು ಸುನ್ನಿ ಎಂಬ ಅಂತರ್ಭೇದವನ್ನು ಉಪೇಕ್ಷಿಸಬೇಡ ಹಾಗಿಲ್ಲದಿದ್ದರೆ ಇಸ್ಲಾಂ ಮತವು ಬಲಗುಂದುವುದು ಶರೀರದಲ್ಲಿರುವ ಚತುರ್ಧಾತುಗಳಿಗನುಗುಣವಾಗಿ ನಿನ್ನ ಪ್ರಜೆಗಳನ್ನು ಚತುರ್ವರ್ಗಗಳನ್ನಾಗಿ ವಿಭಾಗಿಸು. ರಾಜತಂತ್ರದಲ್ಲಿ ಅನುಭವ ಮಾಡಿಕೊಂಡು ಪ್ರಜಾಸಮ್ಮತಿಯಿಂದ ಪ್ರಭುತ್ವವನ್ನು ನಡೆಸಿದರೆ ನಿನ್ನ ಆಳ್ವಿಕೆಯು ನಿರಾತಂಕವಾಗಿ ನಡೆಯುವುದು.

ಬಳಿದಾರರು ವೃತ್ತಾಂತಗಳು.

... ನ್ಯಾಯ ... ವನ್ನು ... ಹೊಸದಾದ ಅಪರಾಧಕ್ಕಾಗಿ ... ಒಂದು ವರ್ಷದಿಂದ ಕಠಿಣವಾಗ್ಯ ವಾಸ ಶಿಕ್ಷೆಗೆ ಗುರಿಮಾಡಲ್ಪಟ್ಟ ... ಮೂವರಲ್ಲಿ ದುಸ್ವಾರು ಲಕ್ಷ್ಮೀನಾರಾಯಣಶೆಟ್ಟರು ... ಕೋರ್ಟಿಗೆ ಅಪೀಲು ಮಾಡಿಕೊಂಡಿರುವಲ್ಲಿ ಅವರ ಶಿಕ್ಷೆಯು ಸ್ಥಿರಗೊಳಿಸಲ್ಪಟ್ಟಿತು

ಪ್ರಸಿದ್ಧ ವರ್ತಕರೂ ... ಏಜೆಂಟರೂ ಆದ ಮ|| ಕೃಷ್ಣಪ್ಪ ಶಿವನಪ್ಪನವರ ಇವರು ಪ್ರಕಟಿಸಿರುವ ಬಹು ಸುಂದರವಾದ ಷೀಟ್ ಕ್ಯಾಲೆಂಡರನ್ನೂ, ರಾಜಧಾನಿಯ ಟಕ್ಕಿ ವ್ಯಾಪಾರಿಗಳಾದ ಮ|| ಎಂ ಲಿಂಗಪ್ಪ ಆಂಡ್ ಸನ್ಸ್ ರವರು ಮತ್ತು ರಾಜಧಾನಿಯ ಮಾಡರ್ನ್ ಕೆಮಿಕಲ್ ವರ್ಕ್ಸ್ ಯವರು ಪ್ರಕಟಿಸಿರುವ ಷೀಟ್ ಕ್ಯಾಲೆಂಡರುಗಳನ್ನು ಸಂತೋಷದಿಂದ ಸ್ವೀಕರಿಸಿರುತ್ತೇವೆ

ಬೆಂಗಳೂರು ಅಡ್ವೊಕೇಟ್ ಮ|| ಎಲ್ ಎಸ್ ರಾಜುಯವರು ಬ್ಯಾರಿಸ್ಟರ್ ಮ|| ಬಿ ನಾಗಪ್ಪನವರ ಮೇಲೆ ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮಾನನಷ್ಟಕ್ಕಾಗಿ ಹೂಡಿರುವ ವಿವಾದದ ವಿಚಾರಣೆಯು ಕಳೆದ ಸೋಮವಾರ ನಡೆಯಿತು ಮ|| ನಾಗಪ್ಪನವರು ಕೋರ್ಟಿಗೆ ಬಂದಿದ್ದರು ಫಿರ್ಯಾದಿಯ ಸಾಕ್ಷಿಗಾರರಾದ ವಿಶ್ವೇಶ್ವರಯ್ಯ ಕಮಿಟಿಯ ಸೆಕ್ರೆಟರಿ ಮ|| ಸರ್ವೋತ್ತಮರಾಯರವರು ಕಮಿಟಿಯ ಸಂಬಂಧವಾದ ವಿಚಾರವನ್ನು ಎವಿಡೆನ್ಸ್ ಆಕ್ಟ್ 123 ಮತ್ತು 124 ನೇ ಸೆಕ್ಷನ್ನುಗಳ ಪ್ರಕಾರ ಬಹಿರಂಗಪಡಿಸುವುದಿಲ್ಲವೆಂದು ಹೇಳಿದರು

ಪ್ರಸಿದ್ಧ ಹಾರ್ಮೋನಿಯಂ ವ್ಯಾಪಾರಿಗಳಾದ ರಾಜಧಾನಿಯ ಮ|| ಎಂ ಎಸ್ ಸಿದ್ದಪ್ಪ ಬ್ರದರ್ಸ್‌ರವರು ಪದ್ಧತಿ ಪ್ರಕಾರ ಪ್ರಕಟಿಸಿರುವ ೧೯೨೯ ರ ಷೀಟ್ ಕ್ಯಾಲೆಂಡರು ಈ ಪತ್ರಿಕೆಯ ಚಂದಾದಾರರಿಗೆಲ್ಲ ಉಚಿತವಾಗಿ ಹಂಚಿರುವುದಕ್ಕಾಗಿ ನಾವು ಅವರನ್ನು ವಂದಿಸುತ್ತೇವೆ ಅಲ್ಲದೆ ಈ ಪತ್ರಿಕೆಯ ಬೇರೊಂದೆಡೆಯಲ್ಲಿ ಮುದ್ರಿತವಾಗಿರುವ ಪ್ರಕಟನೆಯಲ್ಲಿ ಕನ್ನಡ ಡೈರಿ ಬೆಲೆಯಲ್ಲಿ 1 ಆಣೆ ಕಡಿಮೆ ಮಾಡಿ, ಈ ಪತ್ರಿಕಾ ಚಂದಾದಾರರಿಗೆ ವಿಕ್ರಯಿಸುವುದಾಗಿ ಏರ್ಪಡಿಸಿರುವುದರಿಂದ ನಮ್ಮ ಚಂದಾದಾರರು ಈ ಸೌಲಭ್ಯವನ್ನು ಹೊಂದುವರಾಗಿ ನಿರೀಕ್ಷಿಸುತ್ತೇವೆ

ಬೆಂಗಳೂರಿನಲ್ಲಿ ಕಳೆದ ಮಂಗಳವಾರ ಪ್ರಾತಃಕಾಲ ಚೌಡೇಶ್ವರಿಗುಡಿ ಬೀದಿಯಲ್ಲಿ ಒಂದು ವಿದ್ಯುಚ್ಛಕ್ತಿಯ ದೀಪದ ಕಂಬದ ಸಮೀಪದಲ್ಲಿ ಒಂದು ಕಾಗೆಯು ವಿದ್ಯುಲ್ಲತೆಯು ಹರಿಯುತ್ತಿದ್ದ ತಂತಿಯಮೇಲೆ ಕುಳಿತುಕೊಂಡಿತು ಕೂಡಲೆ ಅದು ಜ್ಞಾನತಪ್ಪಿ ರೆಕ್ಕೆಯು ಬಿಚ್ಚಿಕೊಂಡಿತು. ಇದರಿಂದ ಕಂಬಕ್ಕೆ ಆದರ ರೆಕ್ಕೆಯು ಸಂಪರ್ಕವಾಗಲು ವಿದ್ಯುಲ್ಲತೆಯು ಕಂಬದ ಮೂಲಕ ಭೂಮಿಗೆ ವ್ಯಾಪಿಸಿತು. ಸಮೀಪದಲ್ಲಿ ನಿಂತಿದ್ದ ಒಂದು ಜಟ್ಕಾಗಾಡಿಯ ಕುದುರೆಯೂ, ದಾರಿಯಲ್ಲಿ ಹೋಗುತ್ತಿದ್ದ ಒಬ್ಬ ಗ್ರಾಮವಾಸಿಯೂ ಕೂಡಲೆ ಮೃತಪಟ್ಟರು ಗಾಡಿಯಲ್ಲಿದ್ದವರಿಗೂ, ಗಾಡಿಯವನಿಗೂ ಯಾವ ಅಪಾಯವೂ ಸಂಭವಿಸಲಿಲ್ಲ ಇಷ್ಟರಲ್ಲಿಯೇ ಕಾಗೆಯು ಸತ್ತು ಭೂಮಿಗೆ ಬೀಳಲು ತಂತಿಯಿಂದ ಕಂಬಕ್ಕೆ ಕಾಗೆಯ ಸಂಪರ್ಕದಿಂದ ಹರಿಯುತ್ತಿದ್ದ ವಿದ್ಯುಲ್ಲತೆಯು ನಿಂತುಹೋಗಲು ಸಂಭವಿಸಿದ್ದ ಅಪಾಯವು ಪರಿಹಾರವಾಯಿತು

ಮೈಸೂರಿನಿಂದ ಈರೋಡಿಗೂ ಮಡಕೇರಿಗೂ ರೈಲ್ವೆ ಮಾರ್ಗವನ್ನು ನಿರ್ಮಿಸುವ ಆಲೋಚನೆಯು ಬಹುಕಾಲದಿಂದಲೂ ಸರ್ಕಾರದವರ ಗಮನದಲ್ಲಿರುವುದು ಈಗ ಈ ಕೆಲಸವು ಶೀಘ್ರದಲ್ಲಿಯೇ ಕೈಕೊಳ್ಳಲ್ಪಡುವುದಕ್ಕೆ ಸಮಯ ಒದಗಿರುವಂತೆ ತೋರುತ್ತದೆ ಸಾರ್ವಭೌಮ ಸರ್ಕಾರದ ರೈಲ್ವೆ ಇಲಾಖೆಯ ಮುಖ್ಯಾಧಿಕಾರಿಗಳೂ ಮದರಾಸ್ ಮತ್ತು ದಕ್ಷಿಣಮಹಾರಾಷ್ಟ್ರ ರೈಲ್ವೆಯ ಅಧಿಕಾರಿಗಳೂ ಮೊನ್ನೆ ತಾನೆ ಮೈಸೂರಿಗೆ ಬಂದಿದ್ದರು ಮೈಸೂರು ರೈಲ್ವೆಯ ಅಧಿಕಾರಿಗಳೊಡನೆ ಈ ಸಂಬಂಧದಲ್ಲಿ ಮಾತುಕತೆಗಳು ನಡೆದುವು. ಇದರ ಫಲಿತಾಂಶವು ಮೈಸೂರಿನವರಿಗೆ ಅನುಕೂಲವಾಗುವ ಪಕ್ಷದಲ್ಲಿ ಇದುವರೆಗೆ ನಷ್ಟಹೊಂದುತ್ತಿರುವ ಮೈಸೂರು-ಅರಸೀಕೆರೆ ರೈಲ್ವೆಯ ವರಮಾನವು ಹೆಚ್ಚುವುದು ಬೊಂಬಾಯಿಂದ ದಕ್ಷಿಣ ಹಿಂದುಸ್ಥಾನಕ್ಕೆ ಹೋಗಿಬರುವ ಪ್ರಯಾಣಿಕರ ಸಂಖ್ಯೆಯೂ ಸಾಮಾನುಗಳು ಸಾಗುವಿಕೆಯೂ ಮೈಸೂರು ರೈಲ್ವೆಯ ಮೂಲಕ ವಿಶೇಷವಾಗಿ ನಡೆಯುವುದರಿಂದ ಮೈಸೂರಿನ ವ್ಯಾಪಾರವೂ, ಆರ್ಥಿಕಸ್ಥಿತಿಯೂ ಉತ್ತಮವಾಗುವುವು

(ಚಿತ್ರಗುಪ್ತದಿಂದ)

ಬೆಂಗಳೂರು ಗಲಭೆಯ ವಿಚಾರಣಾ ಸಮಿತಿಯ ವರದಿ.

ಬೆಂಗಳೂರು ಗಲಭೆಯ ವಿಚಾರಣಾಸಮಿತಿಯ ವರದಿಯ ಸಂಬಂಧವಾಗಿ ಕೆಲವು ದಿನಗಳಿಂದ ಮತ್ತು ಸ್ಥಳದ ಪತ್ರಿಕೆಗಳಲ್ಲಿ ಅನೇಕವಿಧವಾದ ಸುಳ್ಳು ಮತ್ತು ಅತ್ಯುಕ್ತಿಕವಾದ ವಿಷಯಗಳು ಪ್ರಕಟಿಸಲ್ಪಟ್ಟಿವೆ ಜನರಲ್ಲಿ ಬಗೆಬಗೆಯ ದುರಭಿಪ್ರಾಯಗಳನ್ನು ಹುಟ್ಟಿಸುತ್ತಿರುವುದರಿಂದ ಈ ಕೆಳಗಿನ ಭಾಗವು ಪತ್ರಿಕೆ[redacted]ಟಿಸಲ್ಪಟ್ಟ ಕನ್ನಡದಲ್ಲಿ ಸಮಾ... ಜನರ ತಿಳುವಳಿಕೆಗಾಗಿ ಪ್ರಕಟಿಸಲ್ಪಟ್ಟಿದೆ ಇದರಿಂದ ನಮ್ಮ ವಾಚಕರು ಯಥಾರ್ಥಸ್ಥಿತಿಯನ್ನು ತಿಳಿದುಕೊಳ್ಳುವರೆಂದು ನಂಬುತ್ತೇವೆ

1928ನೇ ಇಸವಿ ಆಗಸ್ಟ್ 30ನೇ ತಾರೀಖಿನವರೆಗೆ ಬೆಂಗಳೂರು ನಗರದಲ್ಲಿ ಕೆಲವು ಗಲಭೆಗಳು ನಡೆದುವು ಇತ್ತ ಗಣಪತಿ ಉತ್ಸವಗಳಲ್ಲಿ ಸರ್ಕಾರಿ ವಿದ್ಯಾರ್ಥಿಗಳು ವಿಗ್ರಹವನ್ನು ಸ್ಥಾಪಿಸಿದರು ಅದು ಸುಲ್ತಾನ್ ಪೇಟೆ, ಸೆಂಟ್ರಲ್ ಸ್ಕೂಲು, ನಗರದ ಮಹಾದ್ವಾರ ಮುಂತಾದ ಅನೇಕ ಕಡೆಗಳಲ್ಲಿ ಗಲಭೆಯನ್ನುಂಟುಮಾಡಿತು ಆವರ ಸ್ಥಳ ... ದೇವರಿಗೆ ನೈವೇದ್ಯ ಸಹ ವಿದ್ಯಾರ್ಥಿಗಳ ಗುಂಪನ್ನು ಸೇರಿಕೊಂಡು, ಗಲಭೆಯು ದೊಡ್ಡದಾಗಿ ಬೆಳೆದು ರಾತ್ರಿವೇಳೆಗೆ ಹಿಂದು ಮುಸಲ್ಮಾನರ ದೊಡ್ಡ ಘರ್ಷಣೆಯಲ್ಲಿ ಪರಿಣಮಿಸಿತು ... ಸ್ವಲ್ಪ ಕಾಲವೇ ನಡೆಯಿತು. ಮಧ್ಯರಾತ್ರಿಯೊಳಗಾಗಿ ಮಿಲಿಟರಿಯವರ ಸಹಾಯದಿಂದ ಗಲಭೆಯು ಅಡಗಿಸಲ್ಪಟ್ಟಿತು; ಆದರೂ ಆ ರಾತ್ರಿಯೂ ಅದರ ಮಾರನೆಯ ದಿವಸವೂ ಪಟ್ಟಣದ ಜನರಲ್ಲೆಲ್ಲ ಒಂದುವಿಧವಾದ ಭೀತಿಯುಂಟಾಗಿತ್ತು. ಗಲಭೆ ಸಮಾಚಾರವು ಹೊರಕ್ಕೆಲ್ಲ ಹರಡಿ, ಗಲಭೆಗೆ ಸಂಬಂಧಪಟ್ಟಂತೆ ಅನೇಕ ಅಸತ್ಯವಾದ ವದಂತಿಗಳೂ ಅತ್ಯುಕ್ತಿಗಳೂ ಸಂಸ್ಥಾನದಲ್ಲೆಲ್ಲ ಹರಡಿದುವು ... ಇದಾದನಂತರ ಸಂಸ್ಥಾನದ ಹೊರಗೆ ಹಿಂದುಮುಸಲ್ಮಾನರ ಜಗಳಗಳು ನಡೆದು ಬ್ರಿಟಿಷ್ ಹಿಂದುಸ್ಥಾನದಲ್ಲಿ ಹಿಂದುಮುಸಲ್ಮಾನರ ಜಗಳವು ಅತ್ಯುತ್ಕಟಾವಸ್ಥೆಯಲ್ಲಿದ್ದಾಗಲೂ ಕೂಡ, ಅದರ ವಾಸನೆಯೇ ಇಲ್ಲದಿದ್ದಂತಹ ಮೈಸೂರು ಸಂಸ್ಥಾನದಲ್ಲಿ ಹಿಂದುಮುಸಲ್ಮಾನರ ವೈಷಮ್ಯವು ಪ್ರಾರಂಭವಾಗಿದೆಯೆಂಬ ಚಿಹ್ನೆ ತೋರಲ್ಪಟ್ಟಿತು.

2 ಸರ್ಕಾರದವರು ಜನರಲ್ಲುಂಟಾಗಿದ್ದ ಅಸಮಾಧಾನವನ್ನು ಹೋಗಲಾಡಿಸಿ ಎರಡು ಜಾತಿಯವರಲ್ಲೂ ಪರಸ್ಪರ ಸಹನೆಯುಂಟಾಗುವಂತೆ ಮಾಡುವುದಕ್ಕಾಗಿ, ಆಗಸ್ಟ್ 3 ನೇ ತಾರೀಖಿನಲ್ಲೂ 20 ನೇ ತಾರೀಖಿನಲ್ಲೂ ಸರ್ಕಾರಿ ಅಧಿಕಾರಿಗಳು ಮತ್ತು ಮುಖಂಡಪ್ರಜೆಗಳನ್ನು ಎರಡು ಸಭೆಗಳನ್ನು ಸೇರಿಸಿ ನಡೆಸಿದರು ಅದೇ ಉದ್ದೇಶದಿಂದ ಸರ್ಕಾರದವರು ತಮ್ಮ ... ತಮಗೆ ಬಂದ ವರ್ತಮಾನಗಳ ಆಧಾರದಮೇಲೆ ಗಲಭೆಗೆ ಸಂಬಂಧಪಟ್ಟ ಸಮಾಚಾರಗಳನ್ನು ಆಗಿಂದಾಗ್ಗೆ ಪ್ರಸಿದ್ಧ ಪತ್ರಿಕೆಗಳ ಮೂಲಕ ಪ್ರಕಟಿಸುತ್ತ ಬಂದರು ಜುಲೈ 31 ನೇ ತಾರೀಖಿನ ದಿನ ಸರ್ಕಾರದವರು ಒಂದು ಪ್ರಸಿದ್ಧ ಪತ್ರಿಕೆಯಲ್ಲಿ, ಹಿಂದಿನ ದಿನದ ಗಲಭೆಯ ವಿಚಾರದಲ್ಲಿ ತನಿಖೆ ... ಒಬ್ಬರು ಮ್ಯಾಜಿಸ್ಟ್ರೇಟರನ್ನು ನೇಮಿಸಿರುವುದಾಗಿ ತಿಳಿಸಿದರು ಪುನಃ ಆಗಸ್ಟ್ 3 ನೇ ತಾರೀಖಿನ ದಿನ ಸರ್ಕಾರದವರು ಇನ್ನೊಂದು ಪ್ರಸಿದ್ಧ ಪತ್ರಿಕೆಯನ್ನು ಹೊರಡಿಸಿ ಅದರಲ್ಲಿ, ಮಹಾಜನರು ಗಲಭೆಯ ವಿಚಾರವಾಗಿ ತಮಗೆ ಗೊತ್ತಿರುವ ಸಂಗತಿಯನ್ನು ಮ್ಯಾಜಿಸ್ಟ್ರೇಟರಲ್ಲಿ ತಿಳಿಸಬಹುದೆಂದು ತಿಳಿಸಿದರು

ಆದರೂ ಈ ಪ್ರಯತ್ನಗಳ ಉದ್ದೇಶವು ಸಾಫಲ್ಯವಾಗಲಿಲ್ಲ ಮೊದಲನೆ ಸಭೆಯಲ್ಲಿ ಮಾಡಿದ ಭಾಷಣಗಳಿಂದಲೂ ನಡೆದ ಚರ್ಚೆಯಿಂದಲೂ ಶಾಂತಿಯೂ, ಪರಸ್ಪರ ಸಹನೆಯೂ ಉಂಟಾಗುವುದಕ್ಕೆ ಪ್ರತಿಯಾಗಿ, ಅಪನಂಬಿಕೆಯೂ ಅನುಮಾನವೂ ಹೆಚ್ಚಿದುವು ಪತ್ರಿಕೆಗಳಲ್ಲಿ ಬಹಳ ಬಿರುಸಾದ ಆಕ್ಷೇಪಣೆಗಳು ಬರಲು ಪ್ರಾರಂಭವಾದುವು ಈ ಎಲ್ಲ ಕಾರಣಗಳಿಂದ ಜನರ ಮನಸ್ಸಿನಲ್ಲಿ ಕಳವಳವು ಕಡಿಮೆಯಾಗುವುದಕ್ಕೆ ಬದಲಾಗಿ ಹೆಚ್ಚಾಗಿ, ಸರ್ಕಾರದವರಿಂದ ನೇಮಿಸಲ್ಪಟ್ಟ ಒಂದು ಸಮಿತಿಯವರು ಬಹಿರಂಗವಾಗಿ ವಿಚಾರಣೆ ನಡೆಸಬೇಕೆಂಬ ಅಭಿಪ್ರಾಯವು ಜನರ ಮನಸ್ಸಿನಲ್ಲಿ ಗಟ್ಟಿಯಾಯಿತು

1928 ನೇ ಇಸವಿ ಆಗಸ್ಟ್ 6 ನೇ ತಾರೀಖಿನಲ್ಲಿ ಸರ್ಕಾರದವರು ತಾವು ಹೊರಡಿಸಿದ್ದ ಪ್ರಸಿದ್ಧ ಪತ್ರಿಕೆಯಲ್ಲಿ ತಿಳಿಸಿದ ಪ್ರಕಾರ, 1928 ನೇ ಇಸವಿ ಆಗಸ್ಟ್ 28 ನೇ ತಾರೀಖಿನ 1042-1192 C B 38-28-114 ನೇ ಆರ್ಡರಿನಲ್ಲಿ ಈ ಕೆಳಗೆ ಕಂಡವರನ್ನೊಳಗೊಂಡ ಒಂದು ಸಮಿತಿಯನ್ನು ನೇಮಿಸಿದರು—

ಅಧ್ಯಕ್ಷರು

ಸರ್ ಎಂ ವಿಶ್ವೇಶ್ವರಯ್ಯ ಕೆ.ಸಿ ಐ ಎಸ್

ಸದಸ್ಯರು.

ಮಿ॥ ಜಸ್ಟಿಸ್ ಡಿ ಕೆ. ರಾಮರಾವ್ ಬಿ.ಎ., ಬಿ ಎಲ್, ಹೈ... ಕೋರ್ಟ್ ಜಡ್ಜ್, ಮ್ಯಾ ... ಮೆಂಬರ್, ಲೆಜಿಸ್ಲೇಟಿವ್ ಕೌನ್ಸಿಲ್, ಮಿ॥ ಗುಲಾಮ್ ಅಹಮದ್ ಕಲಾಮಿ, ಮಿ॥ ವಿ ನಾರಾಯಣರಾವ್ ... ಮಿ॥ ಬಿ. ನಾಗಪ್ಪ, ಬಾರ್ ಅಟ್ ಲಾ ಲೀಗಲ್ ರಿಮೆಂಬ್ರನ್ಸರ್ ಮತ್ತು ಸೆಕ್ರೆಟರಿ, ಲಾ ಡಿಪಾರ್ಟ್‌ಮೆಂಟ್, ಮಿ॥ ... ಮೆಂಬರ್, ಲೆಜಿಸ್ಲೇಟಿವ್ ಕೌನ್ಸಿಲ್ ಸಮಿತಿಯವರು ಆಲೋಚಿಸಬೇಕಾಗಿದ್ದ ವಿಷಯಗಳು —

1. ಗಲಭೆ ನಡೆಯಲು ಹೇತುವಾದ ಮೂಲಕಾರಣಗಳು ಮತ್ತು ಆಗ ಸಂಭವಿಸಿದ ಕಾರ್ಯಗಳನ್ನು ಗೊತ್ತುಮಾಡುವುದು.

2 ಇಂತಹ ಅಸಾಧಾರಣವಾದ ಗಲಭೆ ನಡೆಯುವುದಕ್ಕೆ ವಿಶೇಷ ಕಾರಣಗಳಾಗಲೀ ಪ್ರಚೋದನೆಗಳಾಗಲೀ ಇದ್ದರೆ ಅವುಗಳನ್ನು ಕಂಡುಹಿಡಿಯುವುದು

3 ಆ ಸಮಯದಲ್ಲಿ ಸ್ಥಳೀಯ ಅಧಿಕಾರಿಗಳು ತಕ್ಕ ಕಾರ್ಯಗಳನ್ನು ಕೈಗೊಂಡರೋ ಇಲ್ಲವೋ ಎಂಬುದನ್ನು ನಿರ್ಧರಿಸುವುದು ಮತ್ತು

4 ಸಂಬಂಧಪಟ್ಟ ಪಂಗಡಗಳವರಲ್ಲಿ ಉಂಟಾಗಿರುವ ಅಸಮಾಧಾನಗಳನ್ನು ಹೋಗಲಾಡಿಸಿ, ಪರಸ್ಪರ ಸಹನೆಯುಂಟಾಗಲು ತಕ್ಕ ಸಲಹೆಗಳನ್ನು ಸೂಚಿಸುವುದು.

ವಿಚಾರಣೆಯ ಕಾಲದಲ್ಲಿ ಯಾವ ಕ್ರಮವನ್ನನುಸರಿಸಬೇಕೆಂಬುದನ್ನೂ ಅವಶ್ಯವಾದ ಇತರ ವಿಚಾರಗಳನ್ನು ಆಲೋಚಿಸುವುದಕ್ಕೂ ಸಮಿತಿಯವರು 1928 ನೇ ಇಸವಿ ಸೆಪ್ಟೆಂಬರ್ 4 ನೇ ತಾರೀಖಿನ ದಿನ ತಮ್ಮ ಮೊದಲನೆಯ ಸಭೆಯನ್ನು ನಡೆಸಿದರು. 1928 ನೇ ಇಸವಿ ಸೆಪ್ಟೆಂಬರ್ 12 ನೇ ತಾರೀಖಿನಿಂದ ವಿಚಾರಣಾ ಕಾರ್ಯವು ಡಾಲಿ ಮೆಮೋರಿಯಲ್ ಹಾಲ್‌ನಲ್ಲಿ ಪ್ರಾರಂಭವಾಯಿತು. ಈ ಹಾಲ್‌ನಲ್ಲಿ ಮಹಾಜನ ಸಮಸ್ತರೂ ಅಧಿಕಾರಿಗಳೂ ಹಾಜರಾಗಿ ಸಮಿತಿಯವರು ವಿಚಾರಣೆ ನಡೆಸಲು ಅವಕಾಶಕೊಟ್ಟರು. ವಿಚಾರಣೆಗೆ ಉಪಕ್ರಮವಾದ ತಾರೀಖು ಆಗಾಯಿತು ದಸರಾ ಕಾಲದಲ್ಲಿ ಹನ್ನೊಂದು ದಿನಗಳು ವಿನಹ, ನವೆಂಬರ್ 13 ನೇ ತಾರೀಖಿನ ವರೆಗೂ ಸಮಿತಿಯವರು ಕ್ರಮವಾಗಿ ವಿಚಾರಣಾಕಾರ್ಯವನ್ನು ನಡೆಸಿ, ನವೆಂಬರ್ 12 ನೇ ತಾರೀಖಿನ ದಿನ ತಮ್ಮ ಕೆಲಸವನ್ನು ಮುಕ್ತಾಯಗೊಳಿಸಿದರು

ಒಟ್ಟು 30 ದಿನಗಳು ವಿಚಾರಣೆ ನಡೆಸಲಾಯಿತು. 167 ಸಾಕ್ಷಿಗಳ ಹೇಳಿಕೆ ತೆಗೆದುಕೊಳ್ಳಲ್ಪಟ್ಟಿತು. ಈ ಪೈಕಿ 125 ಸಾಕ್ಷಿಗಳ ಹೇಳಿಕೆಯನ್ನು ಬಹಿರಂಗವಾಗಿಯೂ 8 ಮಂದಿ ಸಾಕ್ಷಿಗಳ ಹೇಳಿಕೆಯನ್ನು ಗೋಪ್ಯವಾಗಿಯೂ 28 ಮಂದಿ ಸಾಕ್ಷಿಗಳ ಹೇಳಿಕೆಯನ್ನು ಅರ್ಧ ಬಹಿರಂಗ ಮತ್ತು ಅರ್ಧ ಗುಪ್ತವಾಗಿಯೂ, ತೆಗೆದುಕೊಳ್ಳಲಾಯಿತು,

ಸಾಕ್ಷಿಗಳ ಸಾಕ್ಷ್ಯದ ಸ್ವಭಾವವನ್ನು ಚೆನ್ನಾಗಿ ಅರಿತುಕೊಳ್ಳುವುದಕ್ಕಾಗಿ ಅವರು ಸಮಿತಿಯ ಮುಂದೆ ಹಾಜರಾಗುವುದಕ್ಕೆ ಮೊದಲು ತಮ್ಮ ಹೇಳಿಕೆಯನ್ನು ಬರವಣಿಗೆ ಮೂಲಕ ಕೊಡಬೇಕೆಂದು ಕೇಳಿಕೊಳ್ಳಲಾಯಿತು. ಈ ವಿಷಯವಾಗಿ ... ಗಳನ್ನು ... ಭಾಷೆಗಳಿಂದ ಭಾಷಾಂತರಿಸಿ ... [redacted] ... ತಮ್ಮ ಬುದ್ಧಿಯನ್ನು ಉಪ...

ಪಡಿಸಿ, ಈ ಹೇಳಿಕೆಗಳ ಕೆಲವು ಭಾಗಗಳನ್ನು ಸಂದರ್ಭಾನುಸಾರ ಕೆಳಗೆ ಸರಿಯಾದ ಸಮಯದಲ್ಲಿ ಉದಾಹರಣೆಗಳಂತೆ ಉಲ್ಲೇಖಿಸಿರುವೆವು.

ಕೆಲಬಗೆಯವಕ್ಕೆ ಎಲ್ಲಾ ಜಾತಿಗಳ ಅರ್ಥವ ಪಂಗಡಗಳವರು ತಮ್ಮ ಸಮಾಚಾರಕ್ಕೆ ಅರ್ಹವಾದ ತಮ್ಮ ಅಭಿಪ್ರಾಯಗಳನ್ನು ತಿಳಿಸಲು, ಅನುಕೂಲ ವಾಗುವಂತೆ ಈ ಕೆಳಗೆ ಕಂಡ ಪಂಗಡಗಳ ಪ್ರತಿನಿಧಿಗಳಿಗೆ, ಸಾಕ್ಷಿಗಳ ವಿಚಾರಣೆ ಕಾಲದಲ್ಲಿ, ತಮ್ಮ ಅಭಿಪ್ರಾಯಗಳನ್ನು ಹೇಳಲು ಅವಕಾಶ ಕೊಡಲ್ಪಟ್ಟಿತು —

(1) ಹಿಂದುಗಳ ಪರ
(2) ಮುಹಮ್ಮದೀಯರ ಪರ
(3) ವಿದ್ಯಾರ್ಥಿಗಳ ಪರ
(4) ಪತ್ರಿಕೆಗಳ ಪರ

ಈ ಪಂಗಡಗಳ ಪ್ರತಿನಿಧಿಗಳಿಗಾಗಿ ಸಹಾಯ ಮಾಡಿದ ದೊಡ್ಡ ಮನುಷ್ಯರುಗಳು ಶ್ರೀಗಳಾದ, ಎಸ್ ವೆಂಕಟಪತಯ್ಯನವರು, ಮಿರ್ಜಾ ಎಮ್. ಲಕ್ಷ್ಮೀನಾರಣಪ್ಪನವರು, ಎ. ಜಿ. ಕಲೀಲ್‌ರವರು, ಕೆ. ತಿಮ್ಮಣ್ಣನವರು ಮತ್ತು ಬಿ. ಎಸ್. ಸಂಜೀವರಾಯರು. ಸರ್ಕಾರಿ ಇಲಾಖೆಗಳ ಪ್ರತಿನಿಧಿಗಳೂ ಕೆಲವು ದಿನಗಳ ವಿಚಾರಣೆ ಕಾಲದಲ್ಲಿ ಹಾಜರಿದ್ದರು.

ಅಗತ್ಯವಾದ ಎಲ್ಲಾ ಸಂಗತಿಗಳನ್ನೂ ಹೊರಪಡಿಸುವ ಉದ್ದೇಶದಿಂದ, ಬೇರೆ ಬೇರೆ ಪಂಗಡಗಳ ಈ ಪ್ರತಿನಿಧಿಗಳಿ, ಸಾಕ್ಷಿಯು ಹೇಳಿಕೆಯು ಮುಗಿದ ಮೇಲೆ ತಾವು ಕೇಳಬೇಕೆಂದಿದ್ದ ಪ್ರಶ್ನೆಗಳನ್ನೊಳಗೊಂಡ ಪಟ್ಟಿಯನ್ನು ಸಮಿತಿಯವರ ವಶಕ್ಕೆ ಕೊಟ್ಟು, ಆ ಪೈಕಿ ಅಧ್ಯಕ್ಷರಿಗೆ ಉಚಿತ ತೋರಿದ ಪ್ರಶ್ನೆಗಳನ್ನು ಸಾಕ್ಷಿ॥ ಹಾಕಲು ಅವಕಾಶಕೊಡಲ್ಪಟ್ಟಿತು. ಅಲ್ಲದೆ, ಬಹಿರಂಗ ವಿಚಾರಣೆಯು ಮುಗಿದಮೇಲೆ ಈ ಪ್ರತಿನಿಧಿಗಳು, ಸಮಿತಿಯವರ ಗಮನಕ್ಕೆ ತರಬೇಕೆಂದು ಅಪೇಕ್ಷಿಸಿದ್ದ ವಾದಗಳ ಸಾರಾಂಶವನ್ನು ಬಾಯಿಮಾತಿನಲ್ಲಿ ಗೋಪ್ಯವಾಗಿ ಸಮಿತಿಯವರಿಗೆ ತಿಳಿಸಬೇಕೆಂದೂ ಕೇಳಿಕೊಳ್ಳಲಾಗಿತ್ತು.

5. ಸರ್ಕಾರಿ ಅಧಿಕಾರಿಗಳು, ಗಲಭೆ ವಿಚಾರದಲ್ಲಿ ತಮಗೆ ಗೊತ್ತಿರುವ ಎಲ್ಲಾ ಸಂಗತಿಗಳನ್ನೂ ಮರೆಮಾಚದೆ ಸಮಿತಿಯ ಮುಂದೆ ಹೇಳಬೇಕೆಂದು ಸರ್ಕಾರದವರು ಹುಕ್ಕುಂ ಮಾಡಿದ್ದರಲ್ಲದೆ, ಆರೀತಿ ಸಾಕ್ಷಿ ಕೊಟ್ಟುದಕ್ಕಾಗಿ ಸಾಕ್ಷಿಗಳು ಸರ್ಕಾರದವರ ಕೋಪಕ್ಕೆ ಪಾತ್ರರಾಗುವುದಿಲ್ಲವೆಂದೂ, ಗೋಪ್ಯವಾಗಿ ತಮಗೇ ವ್ಯತಿರಕ್ತವಾದಂತಹ ಹೇಳಿಕೆಯನ್ನು ಕೊಡುವ ಸಾಕ್ಷಿಗಳನ್ನು ಅವರ ಹೇಳಿಕೆಯ ಆಧಾರದಿಂದ ಶಿಕ್ಷೆಗೆ ಗುರಿ ಮಾಡುವುದಿಲ್ಲವೆಂದೂ ಸರ್ಕಾರದವರು ಭರವಸೆ ಕೊಟ್ಟಿದ್ದರು.

ಅಡಿಷನಲ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ರಿಕಾರ್ಡುಗಳನ್ನು ಸಮಿತಿಯವರ ವಶಪಡಿಸಿದ್ದರು. ಅವುಗಳನ್ನೆಲ್ಲಾ ಸಾಕ್ಷಿಗಳ ದುನಾವಣೆ ಮತ್ತು ವಿಚಾರಣೆ ಕಾಲದಲ್ಲಿ ಉಪಯೋಗಿಸಿಕೊಳ್ಳಲಾಯಿತು.

ವರದಿಯ ರಚನಾಕ್ರಮ.

6 ಗಲಭೆಯ ಸಂಬಂಧವಾದ ಅನೇಕ ವಿಷಯಗಳನ್ನು ಪರಿಷ್ಕಾರವಾಗಿ ತಿಳಿದುಕೊಳ್ಳಲು ಅನುಕೂಲವಾಗುವಂತೆ ವರದಿಯ ರಚನಾಕ್ರಮವನ್ನು ಮಾಡಲಾಗಿದೆ. ಒಂದನೆ ಅಧ್ಯಾಯವು ಪೀಠಿಕೆ. ಎರಡು ಮತ್ತು ಮೂರನೆ ಅಧ್ಯಾಯಗಳಲ್ಲಿ ಪರಸ್ಪರ ವಿರುದ್ಧವಾದ ಸಂಗತಿಗಳನ್ನೆಲ್ಲಾ ಬಿಟ್ಟು ಬಿಟ್ಟು ನಡೆದ ಸಂಗತಿಗಳನ್ನು ಹಾಗೆಯೇ ವಿವರಿಸಿದೆ. ನಾಲ್ಕು ಮತ್ತು ಐದನೆ ಅಧ್ಯಾಯಗಳಲ್ಲಿ ಹಿಂದು ಮತ್ತು ಮುಸಲ್ಮಾನ್ ಪಂಗಡಗಳವರ ಅಭಿಪ್ರಾಯಗಳನ್ನು ವಿವರಿಸಿದೆ. ಆದರೆ ಈ ಅಧ್ಯಾಯಗಳಲ್ಲಿ ನಮೂದಾಗಿರುವ ಅಭಿಪ್ರಾಯಗಳು ಸಮಿತಿಯವರ ಅಭಿಪ್ರಾಯಗಳಲ್ಲ. ಉಳಿದ ಏಳು ಅಧ್ಯಾಯಗಳಲ್ಲಿ, ವಿಚಾರಣೆಯ ಕಾಲದಲ್ಲಿ ಸಮಿತಿಯವರ ಅವಗಾಹನೆಗೆ ಬಂದ ನಾನಾ ವಿಧವಾದ ಅಭಿಪ್ರಾಯಗಳ ಮೇಲೆ ಸಮಿತಿಯವರು ಪಟ್ಟಿರುವ ಅಭಿಪ್ರಾಯಗಳು ವಿವರಿಸಲ್ಪಟ್ಟಿವೆ.

ಕೃತಜ್ಞತೆ.

7 ವಿಚಾರಣಾ ಕಾರ್ಯವನ್ನು ಪೂರ್ತಿಮಾಡಲು ಅಗತ್ಯವಾದ ಎಲ್ಲಾ ಸೌಕರ್ಯಗಳನ್ನೂ ಒದಗಿಸಿಕೊಟ್ಟುದಕ್ಕಾಗಿ ಸರ್ಕಾರದವರಿಗೆ ನಾವು ಋಣಿಗಳಾಗಿದ್ದೇವೆ. ಸಾಕ್ಷ್ಯ ಕೊಡುವುದಕ್ಕಾಗಿ ಮುಂದೆ ಬಂದ ಅಧಿಕಾರಿಗಳಿಗೂ ಖಾಸಗಿ ದೊಡ್ಡಮನುಷ್ಯರಿಗೂ, ತಮಗೆ ಸ್ವಲ್ಪ ತೊಂದರೆಯಾದರೂ ಲೆಕ್ಕಿಸದೆ ವಿಚಾರಣಾಕಾರ್ಯದಲ್ಲಿ ಸಹಾಯ ಮಾಡಿದ ಮೇಲೆ ನಮೂದಿಸಿರುವ ಬೇರೆ ಬೇರೆ ಪಂಗಡಗಳ ಪ್ರತಿನಿಧಿಗಳಿಗೂ, ನಮ್ಮ ವಂದನೆಗಳನ್ನು ಸಲ್ಲಿಸುತ್ತೇವೆ.

ಸಮಿತಿಯ ಕಾರ್ಯದರ್ಶಿಯವರಾದ ಮಿ॥ ಡಿ. ಇ. ನರೋನ್ಹಯವರ ಮತ್ತು ಸ್ಪೆಷಲ್ ಡ್ಯೂಟಿ ಆಫೀಸರುಗಳಾದ ಮಿ॥ ಟಿ. ಅಬ್ದುಲ್ ಖಾದರ್ ಮತ್ತು ಮಿ. ಸಿ. ಕೆ. ವೆಂಕಟರಮಣಯ್ಯನವರ ಸಹಾಯಕ್ಕಾಗಿ ನಮ್ಮ ಮೆಚ್ಚಿಗೆಯನ್ನು ಇಲ್ಲಿ ನಮೂದಿಸುತ್ತೇವೆ. ನಮ್ಮ ಆಫೀಸಿನ ಸಿಬ್ಬಂದಿಯೂ ಕೂಡ ನಮಗೆ ಸಮಾಧಾನವಾಗುವಂತೆ ಕೆಲಸಮಾಡಿದೆ.

ಎರಡನೆ ಅಧ್ಯಾಯ.

ಜುಲೈ ೩೦ನೆ ತಾ॥ ನಲ್ಲಿ ನಡೆದ ಕಾರ್ಯಗಳು.

1928 ನೆ ಇಸವಿ ಜುಲೈ 30 ಮತ್ತು 31 ನೆ ತಾರೀಖುಗಳಲ್ಲಿ ನಡೆದ ಕಾರ್ಯಗಳನ್ನೂ, ಅವುಗಳು ನಡೆಯಲು ಸಹಾಯಕವಾದ ಆಚಾತುರ್ಯಗಳನ್ನೂ ವಿಮರ್ಶಿಸಬೇಕೆಂದು ಈ ಸಮಿತಿಯನ್ನು ನೇಮಿಸಿದ ಸರ್ಕಾರಿ ಹುಕ್ಕುಂನಲ್ಲಿ ಒತ್ತಿ ಹೇಳಿದೆ. ವಾಸ್ತವವಾಗಿ ಗಲಭೆಯ ಪರಿಣಾಮಗಳು 1928 ನೇ ಇಸವಿ ಆಗಸ್ಟ್ ಅಂತ್ಯದವರೆಗೂ ಕಾಣುತ್ತಿದ್ದುವು. ಆದುದರಿಂದ ಜುಲೈ 30 ನೇ ತಾರೀಖಿಗೆ ಮೊದಲೂ, ಜುಲೈ 31 ನೇ ತಾರೀಖಿನ ಮೇಲೂ ನಡೆದ ಕಾರ್ಯಗಳನ್ನು ಕುರಿತು ಪ್ರಸ್ತಾಪಿಸುವುದು ಅಗತ್ಯವಾಗಿದೆ. ಆದುದರಿಂದ ಜುಲೈ 29 ನೇ ತಾರೀಖಿನವರೆಗೆ ನಡೆದ ನಿರ್ವಿವಾದಾಸ್ಪದವಾದ ಸಂಗತಿಗಳನ್ನು ಈ ಅಧ್ಯಾಯದಲ್ಲಿ ಪ್ರಾರಂಭಿಸುವೆವು. ಗಲಭೆಯ ಸಂಬಂಧವಾಗಿ ಜುಲೈ 30 ನೇ ತಾರೀಖು ಬಹಳ ಪ್ರಾಮುಖ್ಯವಾಗಿದೆ. ಆ ದಿನದ ಕಾರ್ಯಗಳನ್ನೂ, ಆನಂತರದ ಕಾರ್ಯಗಳನ್ನೂ ಮುಂದಿನ ಅಧ್ಯಾಯದಲ್ಲಿ ವಿವರಿಸುವೆವು.

ಗಣಪತಿವಿಗ್ರಹವು ಪ್ರಾಮುಖ್ಯತೆಗೆ ಬಂದುದು ಹೇಗೆ.

8. ಮೊದಲು ಸಿಟಿ ಮ್ಯುನಿಸಿಪಲ್ ಸ್ಕೂಲ್ ಎಂಬುದಾಗಿ ಕರೆಯಲ್ಪಡುತ್ತಿದ್ದ, ಈಗ ಸ್ಕೂಲು ನಡೆಯುತ್ತಿರುವ ಕಟ್ಟಡದ ಮಧ್ಯಭಾಗದ ಹಾಲ್‌ನಲ್ಲಿ ಸುಮಾರು 30 ವರ್ಷಗಳಿಂದಲೂ, ಗಣಪತಿ ವಿಗ್ರಹವೊಂದಿದ್ದಿತೆಂದು ತಿಳಿಯಬರುತ್ತದೆ. ಕೆಲವು ಕಾಲದಮೇಲೆ ಈ ಕಟ್ಟಡವನ್ನು ಬದಲಾಗಿ ಕಟ್ಟಿದಮೇಲೆ ಇದು ಎಸ್. ಆರ್. ನಂಜುಂಡಯ್ಯನವರ ಹಿಂದು ಎ. ವಿ. ಸ್ಕೂಲ್ " ಎಂದು ಕರೆಯಲ್ಪಡುತ್ತಿತ್ತು. ಕೆಲವು ಕಾಲದವರೆಗೆ — ಎಷ್ಟು ಕಾಲವೆಂಬುದು ಗೊತ್ತಿಲ್ಲ — ಈ ಕಟ್ಟಡವು ಆರ್ಯ ಜಿಮ್ನಾಸಿಯಂ ಆಗಿ ಉಪಯೋಗಿಸಲ್ಪಡುತ್ತಿತ್ತು. 1921 ನೆ ಇಸವಿಯಲ್ಲಿ ಆಗ ಸ್ಕೂಲಿನ ಹೆಡ್ಮಾಸ್ಟರಾಗಿದ್ದ ಶ್ರೀ॥ ಎಚ್. ಸಿ. ಕೃಷ್ಣರಾಯರು, ವಿದ್ಯಾರ್ಥಿಗಳಿಗೆ ತೋಟದ ಕೆಲಸದಲ್ಲಿ ಪಿಕ್ಷಣಕೊಟ್ಟು ಅವರಲ್ಲಿ ಸೌಂದರ್ಯ ಪ್ರೀತಿಯ ಗುಣವನ್ನು ಬೆಳ್ಳಿಸಬೇಕೆಂದು ಆಲೋಚಿಸಿದರು. ಆದುದರಿಂದ ಸ್ಕೂಲು ಕಾಂಪೌಂಡಿನಲ್ಲಿ ಒಂಟಿಗ ಬಯಲಾಗಿದ್ದ ಸ್ಥಳವನ್ನು ಒಂದು ಸೊಗಸಾದ ತೋಟವನ್ನಾಗಿ ಮಾರ್ಪಡಿಸಿದರು. ಅಲ್ಲಿ ಅನೇಕ ಕುಂಡಗಳನ್ನಿಟ್ಟು ಅವುಗಳಲ್ಲಿ ಹಸಿರುಗಿಡಗಳನ್ನೂ, ಅಲಂಕಾರದ ಗಿಡಗಳನ್ನೂ ಬೆಳೆಸುತ್ತಿದ್ದರು. ಅಲ್ಲದೆ ಈ ಸ್ಥಳದಲ್ಲಿ ಬಿದ್ದಿದ್ದ ಹಿಂದೂ ದೇವತೆಗಳ ವಿಗ್ರಹಗಳನ್ನು ಪ್ರತಿಷ್ಠಾಪಿಸಿದ. ಉಂಡಿದ್ದವು. ಕಲ್ಲಿನ ದೇವತೆಯೊಂದ ಇಟ್ಟಿದ್ದರು. ಕಾಂಪೌಂಡಿನ ಮಧ್ಯಸ್ಥಳದಲ್ಲಿ ಒಂದು ಗಣೇಶನ ವಿಗ್ರಹ — ಬಹಳ ಹಳೆಯದಾದ ವಿಗ್ರಹ — ವನ್ನು ಒಂದು ದಿಣ್ಣೆಯಮೇಲಿಟ್ಟು ಅದರ ಹಿಂಭಾಗದಲ್ಲಿ ಒಂದು ಬಾಗಿಲು ಮರವನ್ನು ನೆಟ್ಟಿದ್ದರು. ಆಗಲೇ ಈ ವಿಗ್ರಹಕ್ಕೆ ಒಂದು ಗೂಡನ್ನು ಕಟ್ಟಬೇಕೆಂದು ಆಲೋಚಿಸಿತ್ತೆಂದೂ, ಆದರೆ ಆರೀತಿ ಮಾಡಲಿಲ್ಲವೆಂದೂ ಶ್ರೀ ಕೃಷ್ಣರಾಯರು ಹೇಳುತ್ತಾರೆ.

ಸ್ಕೂಲಿನ ವಿದ್ಯಾರ್ಥಿಗಳು ಈ ವಿಗ್ರಹದ ವಿಚಾರದಲ್ಲಿ ವಿಶೇಷ ಶ್ರದ್ಧಾಭಕ್ತಿಗಳನ್ನು ತೋರಿಸುತ್ತಿದ್ದಂತೆ ಕಾಣುತ್ತದೆ. ತೋಟದಲ್ಲಿಟ್ಟಿದ್ದ ಕುಂಡಗಳು ಹಾಳಾದ ಮೇಲೆ ಅವುಗಳಲ್ಲಿದ್ದ ಸಣ್ಣ ವಿಗ್ರಹಗಳನ್ನೂ ಉದಾಸೀನ ಮಾಡಿದರು, ಆದರೆ ಗಣೇಶನ ವಿಗ್ರಹಕ್ಕೆ ಮಾತ್ರ ಮರ್ಯಾದೆ ನಡೆಯುತ್ತಿತ್ತು. ಪರೀಕ್ಷೆಯ ಕಾಲದಲ್ಲಿ ಜಯವನ್ನುಂಟುಮಾಡುವಂತೆ ಹುಡುಗರು ಹರಕೆಕೊಳ್ಳುತ್ತಿದ್ದರು. ಪರೀಕ್ಷೆ ಮುಗಿದಮೇಲೆ ವಿದ್ಯಾರ್ಥಿಗಳು ಗಣೇಶನನ್ನು ತೃಪ್ತಿಗೊಳಿಸುವುದಕ್ಕಾಗಿ ತಮ್ಮ ಮಸಿ ಬುಡ್ಡಿಗಳಲ್ಲಿದ್ದ ಮಸಿಯನ್ನೆಲ್ಲಾ ಗಣೇಶನ ತಲೆಯಮೇಲೆ ಸುರಿಯುತ್ತಿದ್ದರಂತೆ.

ವಿಗ್ರಹಕ್ಕೆ ಗೂಡು ಕಟ್ಟಿದುದು

10 ಮೇಲೆ ನಮೂದಿಸಿರುವ ದಿಣ್ಣೆಯು ಈಚೆಗೆ ಬಿದ್ದು ಹೋಗಲು ವಿಗ್ರಹವು ಅರ್ಧವಾಗಿ ಹೂತುಹೋಯಿತು. ಸ್ಕೂಲು ಕಟ್ಟಡದ ರಿಪೇರಿ ಕೆಲಸ ನಡೆಯುತ್ತಿದ್ದಾಗ, ಹುಡುಗರು, ಕಂಟ್ರಾಕ್ಟರ್ ಶ್ರೀ॥ ನಂಜುಂಡಯ್ಯನವರನ್ನು, ದಿಣ್ಣೆಯನ್ನು ಸರಿಪಡಿಸಿ ವಿಗ್ರಹಕ್ಕೆ ಒಂದು ಗೂಡನ್ನು ಕಟ್ಟಿಕೊಡುವಂತೆ ಕೇಳಿಕೊಂಡರು. ಹುಡುಗರ ಇಷ್ಟಪ್ರಕಾರ ಕಂಟ್ರಾಕ್ಟರು 1928 ನೇ ಇಸವಿ ಜೂನ್ 3 ನೆ ತಾರೀಖಿನಿಂದ 6 ನೇ ತಾರೀಖಿನೊಳಗಾಗಿ, ಗೂಡನ್ನು ಕಟ್ಟಿ ಪೂರೈಸಿದಂತೆ ಕಾಣುತ್ತದೆ. ಇದರ ವೆಚ್ಚ ಸುಮಾರು 6-7 ರೂಪಾಯಿಗಳನ್ನು ಕಂಟ್ರಾಕ್ಟರು ದೇವರಲ್ಲಿನ ಭಕ್ತಿಯಿಂದಲೋ ಹುಡುಗರನ್ನು ಮೆಚ್ಚಿಸುವುದಕ್ಕಾಗಿಯೋ ತಾವೇ ವಹಿಸಿಕೊಂಡರು. ಸ್ಕೂಲು ರಿಪೇರಿ ಮಾಡಿದ ಬಿಲ್‌ನಲ್ಲಿ ಇದಕ್ಕಾಗಿ ಬೇರೆ ಚಾರ್ಜುಮಾಡಲಿಲ್ಲ.

ಈ ಗೂಡನ್ನು ಕಟ್ಟುವುದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಅಪ್ಪಣೆ ಪಡೆಯಲಿಲ್ಲ. ಮೊದಲೇ ಅಲ್ಲಿ ಒಂದು ದಿಣ್ಣೆಯಿದ್ದುದರಿಂದ ಅದನ್ನು ರಿಪೇರಿಮಾಡಿದರೆ ಆಕ್ಷೇಪಣೆಯಿರಲಾರದೆಂದು ಕಂಟ್ರಾಕ್ಟರು ಭಾವಿಸಿದಂತೆ ಕಾಣುವುದು. ಈ ಕಟ್ಟಡವು ಹೆಡ್ಮಾಸ್ಟರು ರಜದಮೇಲಿದ್ದ ಕಾಲದಲ್ಲಿ ಕಟ್ಟಲ್ಪಟ್ಟಿತು. ಅವರು ಜೂನ್ 6 ನೇ ತಾರೀಖಿನ ದಿನ ರಜದಿಂದ ವಾಪಸು ಬಂದಾಗ ಗೂಡುಕಟ್ಟಿ ಪೂರೈಸಿದ್ದುದು ಅವರಿಗೆ ಗೊತ್ತಾಯಿತು. ಆದಕ್ಕೆ ಮೊದಲು ಕೆಲವು ದಿನಗಳಲ್ಲಿ ಅಂದರೆ ಮೇ 29 ನೇ ತಾರೀಖಿನ ಸುಮಾರಿನಲ್ಲಿ ಹೆಡ್ಮಾಸ್ಟರ ಅಪ್ಪಣೆಪಡೆದು ಹುಡುಗರು ವಿಗ್ರಹವನ್ನು ಸ್ಕೂಲಿನಲ್ಲಿದ್ದ ಸ್ಕೌಟ್ ಕ್ಲಬ್ ರೂಮಿನೊಳಕ್ಕೆ ಸಾಗಿಸಿದ್ದರು.

ಪಬ್ಲಿಕ್ ಇನ್‌ಸ್ಟ್ರಕ್ಷನ್ ಡೈರೆಕ್ಟರ ಕಾರ್ಯ.

11 1928 ನೇ ಇಸವಿ ಜೂನ್ 12 ನೇ ತಾರೀಖಿನ ದಿನ ದಿವಾನ್‌ರ ಪ್ರೈವೇಟ್ ಸೆಕ್ರೆಟರಿಯವರು, ಪಬ್ಲಿಕ್ ಇನ್‌ಸ್ಟ್ರಕ್ಷನ್ ಡೈರೆಕ್ಟರಾದ ಶ್ರೀ॥ ಎನ್. ಎಸ್. ಸುಬ್ಬರಾಯರಿಗೆ ಒಂದು ಡಿ. ಓ. ಬರೆದು, ಅದರಲ್ಲಿ ಮುಂದೆ ದೊಡ್ಡದಾಗಬಹುದಾದ ಒಂದು ಸಣ್ಣ ದೇವಸ್ಥಾನವನ್ನು ಸ್ಕೂಲಿನ ಅಂಗಳದಲ್ಲಿ ಕಟ್ಟುತ್ತಿರುವುದು ದಿವಾನ್‌ರ ಗಮನಕ್ಕೆ ಬಂದಿರೆಯೆಂದೂ, ಈ ವಿಚಾರಕ್ಕೆ ಡೈರೆಕ್ಟರ ಗಮನಕೊಟ್ಟು, ಆದರ ಕಟ್ಟಡವನ್ನು ನಿಲ್ಲಿಸಬೇಕೆಂದೂ, ಅದರ ಹತ್ತಿರದಲ್ಲೇ ಮಸೀದಿಯಿರುವುದರಿಂದ, ಇಂತಹ ಕಟ್ಟಡವನ್ನು ಕಟ್ಟುವುದು ಅನುಚಿತವೆಂದೂ, ಇದರಿಂದ ಮತವೈರಕ್ಕೆ ವಕಾಶವಾಗಬಹುದೆಂದೂ ತಿಳಿಸಿದರು. ಆದೇಶಪ್ರಕಾರ ಡೈರೆಕ್ಟರು ಜೂನ್ 15 ನೇ ತಾರೀಖಿನ ದಿನ ಬೆಳಿಗ್ಗೆ 10½ ಗಂಟೆ ಸುಮಾರಿನಲ್ಲಿ ಸ್ಕೂಲಿಗೆ ಅನಿರೀಕ್ಷಿತವಾಗಿ ಭೇಟಿಕೊಟ್ಟು, ಸ್ಕೂಲಿನ ಆವರಣವನ್ನೆಲ್ಲಾ ಪರೀಕ್ಷಿಸಿ, ಗೂಡನ್ನು ನೋಡಿ, ಅದರ ವಿಚಾರವಾಗಿ ಪ್ರಸ್ತಾಪಿಸಿದರು. ಹೆಡ್ಮಾಸ್ಟರು ಅವರಿಗೆ ಎಲ್ಲಾ ಸಮಾಚಾರಗಳನ್ನೂ ತಿಳಿಸಿದರಲ್ಲದೆ, ಹುಡುಗರು ಆ ಗೂಡಿಗೆ ಒಂದು ಮೆಟ್ಟಿಲನ್ನೂ, ಒಂದು ಕಬ್ಬಿಣದ ಕವಾಟವನ್ನೂ ಇಡಿಸಿ, ಪೂಜೆ ಸಮಯದಲ್ಲಿ ಕಾಯಿ ಒಡೆಯುವುದಕ್ಕೆ ಗೂಡಿನ ಮುಂಭಾಗದಲ್ಲಿ ಒಂದು ಕಲ್ಲುಚಪ್ಪಡಿಯನ್ನು ಹಾಕಿಸಲು ಆಲೋಚಿಸಿರುವರೆಂದೂ ಹೇಳಿದರು. ವಿಗ್ರಹವನ್ನು ಗೂಡಿನಲ್ಲಿ ಸ್ಥಾಪಿಸುವುದಾದರೆ ಮುಂದೆ ಅದನ್ನು ಅಲ್ಲಿಂದ ತೆಗೆಸುವುದು ಅಸಾಧ್ಯವಾಗಬಹುದೆಂದು ಯೋಚಿಸಿ, ಈ ವಿಚಾರದಲ್ಲಿ ಮುಂದೆ ತೊಂದರೆಯಾಗಿ ಪರಿಣಮಿಸಬಹುದಾದ ಯಾವ ಕಾರ್ಯವನ್ನೂ ಮಾಡಕೂಡದೆಂದು ಹುಕ್ಕುಂ ಮಾಡಿದರು. ಅಲ್ಲದೆ, ಅನೇಕ ಜಾತಿಗಳ ವಿದ್ಯಾರ್ಥಿಗಳು ವ್ಯಾಸಂಗಮಾಡುತ್ತಿರುವ ಪಬ್ಲಿಕ್ ಸ್ಕೂಲ್ ಇರುವ ಸರ್ಕಾರಿ ಕಟ್ಟಡದಲ್ಲಿ ಒಂದು ಜಾತಿಯವರಿಗೆ ಸೇರಿದ ದೇವರ ವಿಗ್ರಹವನ್ನು ಒಂದುಕಡೆ ಖಾಯಂ ಆಗಿ ಇಡುವುದರ ಉಚಿತಾನುಚಿತಗಳ ವಿಚಾರವಾಗಿ ವಿಷಯಗಳನ್ನು ಸಂಗ್ರಹಿಸಿ, ಸರ್ಕಾರದವರೊಡನೆ ಆಲೋಚಿಸುವುದು ಅವಶ್ಯಕವೆಂದು ಡೈರೆಕ್ಟರಿಗೆ ಕಂಡುಬಂದಿತು. ಕಾಂಪೌಂಡಿನಲ್ಲಿ ಪ್ರತಿಷ್ಠಿತವಾಗದೆ ಬಿದ್ದಿದ್ದ ವಿಗ್ರಹದ ಚರಿತ್ರೆಯನ್ನು ತಿಳಿಸಿ ರಿಪೋರ್ಟು ಮಾಡಬೇಕೆಂದು ಅವರು ಹೆಡ್ಮಾಸ್ಟರನ್ನು ಕೇಳಿದರಲ್ಲದೆ, ತಮ್ಮಿಂದ ಹುಕ್ಕುಂ ಆದ ನಂತರ ವಿಗ್ರಹವನ್ನು ಮೊದಲಿನ ಸ್ಥಳದಲ್ಲಿ ಇಡುವುದಕ್ಕಾಗಲಿ, ಇನ್ನಾವ ವಿಶೇಷಗಳು ನಡೆಯುವುದಕ್ಕಾಗಲೀ ಅವಕಾಶ ಕೊಡಕೂಡದೆಂದು ತಿಳಿಸಿದರು. ಅದೇ ಪ್ರಕಾರ, ಆ ದಿನವೇ ಹೆಡ್ಮಾಸ್ಟರು ಒಂದು ನೋಟೀಸನ್ನು ಬರೆದು ತಮ್ಮ ಅಸಿಸ್ಟೆಂಟ್ ಮಾಸ್ಟರುಗಳಿಗೆಲ್ಲಾ ಕಳುಹಿಸಿ, ಅವರು ವಿಚಾರಗಳನ್ನು ಹುಡುಗರಿಗೆ ವಿವರಿಸಿ, ಮುಂದಿನ ಏರ್ಪಾಡುಗಳನ್ನು ತಡಕ್ಕೆ ನಿಲ್ಲಿಸುವಂತೆ ಮಾಡಬೇಕೆಂದು ಕೇಳಿದರು.

ಆ ದಿನವೇ ಡೈರೆಕ್ಟರು ದಿವಾನರ ಪ್ರೈವೇಟ್ ಸೆಕ್ರೆಟರಿಗೆ ಉತ್ತರ ಬರೆದು, ಅದರಲ್ಲಿ ಮೇಲೆ ನಮೂದಿಸಿರುವ ಅಂಶಗಳನ್ನೆಲ್ಲಾ ವಿವರಿಸಿ ಎ. ವಿ ಸ್ಕೂಲಿನ ಹಿಂಭಾಗದಲ್ಲಿರುವ ಉರ್ದು ಸ್ಕೂಲಿಗೆ ಆ ಸ್ಕೂಲಿನ ಬಾಲಕರು, ಎ. ವಿ ಸ್ಕೂಲು ಕಾಂಪೌಂಡಿನಲ್ಲೇ ಹೋಗಬೇಕಾಗಿರುವುದರಿಂದ, ಸ್ಕೂಲು ಕಾಂಪೌಂಡಿನಲ್ಲಿರುವ ಗೂಡಿನಲ್ಲಿ ವಿಗ್ರಹವನ್ನಿಡುವುದು ಅನುಚಿತವೆಂದು ತಾವು ಭಾವಿಸುವುದಾಗಿ ತಿಳಿಸಿದರು. ಮತ್ತು ಮುಂದೆ ಗಣೇಶನ ಸಂಬಂಧವಾಗಿ ಯಾವ ವಿಶೇಷಗಳನ್ನೂ ನಡೆಸಕೂಡದೆಂದು ತಾವು ಹುಕುಂ ಮಾಡಿರುವುದು ಮಾತ್ರವೇ ಅಲ್ಲದೆ, ಕಾಂಪೌಂಡಿನಲ್ಲಿ ಬಿದ್ದಿದ್ದ ಇತರ ವಿಗ್ರಹಗಳನ್ನೂ ಸ್ಕೂಲು ಕಟ್ಟಡದೊಳಗಿಡುವಂತೆ ಹುಕುಂ ಮಾಡಿರುವುದಾಗಿಯೂ ಆ ಕಾಗದದಲ್ಲಿ ಬರೆದು ತಿಳಿಸಿದರು. ಅಲ್ಲದೆ, ಈ ವಿಚಾರವಾಗಿ ಇನ್ನೂ ಕ್ರಮವಾದ ತನಿಖೆ ನಡೆಸಿ, ಪಾಠಶಾಲೆಯ ಆವರಣದಲ್ಲಿ ಪೂಜೆ ನಡೆಸುವುದಕ್ಕೆ ಯಾವ ಪ್ರಯತ್ನವನ್ನೂ ಮಾಡದಂತೆಯೂ ಈ ವಿಗ್ರಹಕ್ಕೆ ಪೂಜೆಮಾಡುವ ವಿಚಾರದಲ್ಲಿ ಬಹಳ ಉತ್ಸಾಹಶಾಲಿಗಳಾಗಿರುವ ಹುಡುಗರ ಮನಸ್ಸಿಗೆ ವ್ಯಥೆಯುಂಟಾಗದಂತೆಯೂ ತಾವು ತಕ್ಕ ಎಚ್ಚರದಿಂದ ನೋಡಿಕೊಳ್ಳುವುದಾಗಿಯೂ ಭರವಸೆಕೊಟ್ಟಿದ್ದರು.

ಜೂನ್ 21 ನೇ ತಾರೀಖಿನ ದಿನ ಡೈರೆಕ್ಟರು, ಆಗ ಬೆಂಗಳೂರು ಪೌರಸಭಾಧ್ಯಕ್ಷರಾಗಿದ್ದ ಮಿ॥ ಅಬ್ಬಾಸ್‌ಖಾನರು ಮತ್ತು ಇತರ ಮ್ಯುನಿಸಿಪಲ್ ಅಧಿಕಾರಿಗಳೊಡನೆ ಆ ಸ್ಥಳಕ್ಕೆ ಹೋಗಬೇಕಾಯಿತು, ಆಗ ವಿದ್ಯಾರ್ಥಿಗಳು ಗಣಪತಿಗೆ ಸೇರಿದ ಓವರ್‌ಗಳನ್ನು ಹೆಚ್ಚು ಅಸ್ತಿತ್ವದಲ್ಲಿದ್ದ ದಿಣ್ಣೆ ಗಣಪತಿಗೆ ಇಟ್ಟಿದ್ದರಿಂದ ಅವಕಾಶಕೊಟ್ಟಿದ್ದಕ್ಕಾಗಿ ಮಿ॥ ಅಬ್ಬಾಸ್‌ಖಾನರು ತಮಗೆ ಹೇಳಿದರೆಂದು, ಡೈರೆಕ್ಟರ ಹೇಳಿಕೆಯಿಂದ ತಿಳಿಯುತ್ತದೆ.

ಅಸಮಾಧಾನ ಸೂಚನೆಗಳು.

12 ಪಬ್ಲಿಕ್ ಇನ್‌ಸ್ಟ್ರಕ್ಷನ್ ಡೈರೆಕ್ಟರು ಹುಕ್ಕುಂ ಮಾಡಿದಮೇಲೆ ಸುಮಾರು ಎರಡುವಾರಗಳ ವರೆಗೆ ಹುಡುಗರಾಗಲಿ, ಅವರ ಸಹಾನುಭೂತಿಗಳಾಗಲಿ ಸ್ಕೂಲು ಅಧಿಕಾರಿಗಳಿಗೆ ಯಾವ ದೂರನ್ನೂ ಹೇಳಲಿಲ್ಲ, ಅಲ್ಲದೆ ತಮ್ಮ ಅಸಮಾಧಾನವನ್ನು ಯಾವ ವಿಧದಲ್ಲೂ ತೋರ್ಪಡಿಸಲಿಲ್ಲ. ಈತನ್ಮಧ್ಯೆ, ಮಿ॥ ಅಬ್ಬಾಸ್‌ಖಾನರ ಪ್ರೇರಣೆಯಿಂದ ಗಣೇಶನ ವಿಗ್ರಹಕ್ಕೆ ಸ್ಥಳ ಪಲ್ಲಟವುಂಟಾಗಿದೆಯೆಂಬ ಸಮಾಚಾರವು ನಗರದಲ್ಲೆಲ್ಲಾ ಹಬ್ಬಿತು. ಮಿ॥ ಅಬ್ಬಾಸ್‌ಖಾನರ ಮನೆಯು ಸ್ಕೂಲಿಗೆ ಎದುರಾಗಿರುವುದರಿಂದಲೂ, ಅದರ ಹಿಂದೆ ಒಂದು ಮಸೀದಿಯಿರುವುದರಿಂದಲೂ ಅವರ ಮತಸಂಬಂಧವಾದ ಅಭಿಪ್ರಾಯದಿಂದ ಈ ರೀತಿ ಅಡಚಣೆಪಡಿಸಿರಬಹುದೆಂದು ಜನರು ಭಾವಿಸಿದರು. ಮೊದಲು ಈ ಅಭಿಪ್ರಾಯವು "ವೀರಕೇಸರಿ" ಎಂಬ ಕನ್ನಡ ದಿನಪತ್ರಿಕೆಯಲ್ಲಿ 1928 ನೇ ಇಸವಿ ಜೂನ್ 27 ನೇ ತಾರೀಖಿನ ದಿನ ಪ್ರಕಟಿಸಲ್ಪಟ್ಟಿತು. ಆದರೆ ಆ ಮಾರನೆದಿನ ಮಿ॥ ಅಬ್ಬಾಸ್‌ಖಾನರು ಆ ಪತ್ರಿಕೆಯ ಸಂಪಾದಕರ ಭೇಟಿಮಾಡಿ, ವಿಗ್ರಹವು ಅಲ್ಲಿರುವುದಕ್ಕೆ ತಮ್ಮ ಅಭ್ಯಂತರವೇನೂ ಇಲ್ಲವೆಂದು ಹೇಳಿದಮೇಲೆ ಅದನ್ನೂ ಸಹ ಆದಿನದ ಪತ್ರಿಕೆಯಲ್ಲಿ ಪ್ರಕಟಿಸಿದರು. ಈ ಗಣೇಶನ ವಿಷಯದಲ್ಲಿ "ಪ್ರಜಾಮಿತ್ರ," "ನವಜೀವನ," "ಮೈಸೂರು ಸ್ಟಾರ್" ಈ ಪತ್ರಿಕೆಗಳೂ ಲೇಖನಗಳನ್ನು ಪ್ರಕಟಿಸಿದುವು, ಬಳೇಪೇಟೆ ಬೋರ್ಡಿನಲ್ಲೂ ಟೀಕೆಮಾಡಲ್ಪಟ್ಟಿತು.

ಅನಂತರ, ವಿಗ್ರಹವನ್ನು ಸ್ವಸ್ಥಾನದಲ್ಲಿರಿಸಲು ಕೆಲವರು ಸ್ವತಃ ಪ್ರಯತ್ನಿಸಿದರು. ಜೂನ್ 29 ನೇ ತಾರೀಖಿನಲ್ಲಿ "ವಿಶ್ವಕರ್ನಾಟಕ"ದ ಸಂಪಾದಕರಾದ ಶ್ರೀ॥ ಟಿ. ಟಿ. ಶರ್ಮರವರು ಈ ವಿಚಾರದಲ್ಲಿ ಪಬ್ಲಿಕ್ ಇನ್‌ಸ್ಟ್ರಕ್ಷನ್ ಇಲಾಖೆಯ ಡೈರೆಕ್ಟರವರಿಗೆ ಒಂದು ಕಾಗದ ಬರೆದರು. ಅವರು ಸರ್ಕಾರದ ಪಬ್ಲಿಸಿಟಿ ಆಫೀಸರಿಗೆ ಆ ಕಾಗದವನ್ನು ರವಾನಿಸಿರುವುದಾಗಿ ಮಿ॥ ಶರ್ಮರವರಿಗೆ ಉತ್ತರಕೊಟ್ಟರು, ಪಬ್ಲಿಸಿಟಿ ಆಫೀಸರಿಂದ ಯಾವ ಉತ್ತರವೂ ಇವರಿಗೆ ದೊರೆಯಲಿಲ್ಲ. ಜೂನ್ 27 ನೇ ತಾರೀಖಿನ ದಿನ "ವೀರಕೇಸರಿ"ಯ ಪ್ರತಿನಿಧಿಯು ಡೈರೆಕ್ಟರನ್ನು ಭೇಟಿಮಾಡಿ ಈ ವಿಚಾರವಾಗಿ ಪ್ರಶ್ನಿಸಿದರು. ಆದರೆ ಅವರಿಂದ ಸಮರ್ಪಕವಾದ ಉತ್ತರ ಬಾರದಿದ್ದ ಕಾರಣ, 28 ನೇ ತಾರೀಖಿನ ಆ ಪತ್ರಿಕೆಯಲ್ಲಿ ಭೇಟಿ ಸಮಾಚಾರವನ್ನು ಟೀಕಿಸಿ ಒಂದು ಲೇಖನವನ್ನು ಬರೆದು ಪ್ರಕಟಿಸಿದರು. ಈ ವಿಚಾರವು ಜೂನ್ 27 ನೇ ತಾರೀಖಿನ "ಪ್ರಜಾಮಿತ್ರ" ಪತ್ರಿಕೆಯಲ್ಲೂ ಪ್ರಸ್ತಾಪಿಸಲ್ಪಟ್ಟಿತ್ತು. ಪಬ್ಲಿಕ್ ಇನ್‌ಸ್ಟ್ರಕ್ಷನ್ ಡೈರೆಕ್ಟರು ಜುಲೈ 24 ನೇ ತಾರೀಖಿನಲ್ಲಿ ಶಾವಗಡದಲ್ಲಿದ್ದಾಗ, ಸರ್ಕಾರದ ಅಭಿವೃದ್ಧಿ ಇಲಾಖೆಯ ಸೆಕ್ರೆಟರಿಯವರು ಅವರಿಗೊಂದು ಕಾಗದವನ್ನು ಬರೆದು ಅದರ ಜತೆಯಲ್ಲಿ, "ವಿಶ್ವಕರ್ನಾಟಕ" ಪತ್ರಿಕೆಯ ಸಂಪಾದಕರು ಈ ವಿಚಾರದಲ್ಲಿ ವಿಚಾರಾಂಶಗಳನ್ನು ತಿಳಿಸಬೇಕೆಂದು ಕೇಳಿದ್ದ ಕಾಗದವನ್ನು ಕಳುಹಿಸಿಕೊಟ್ಟರು, ಜುಲೈ 27 ನೇ ತಾರೀಖಿನ ದಿನ ಡೈರೆಕ್ಟರು ಶಿರಾದಿಂದ ಕಾಗದ ಬರೆದು ಎಲ್ಲಾ ಸಮಾಚಾರವನ್ನೂ ತಿಳಿಸಿದರು.

ವಿದ್ಯಾರ್ಥಿಗಳ ಮತ್ತು ಇತರ ಮುಂದಾಳುಗಳ ಚಳುವಳಿ.

13 ಜುಲೈ 23 ನೇ ತಾ॥ ಪಬ್ಲಿಕ್ ಇನ್‌ಸ್ಟ್ರಕ್ಷನ್ ಇಲಾಖೆಯ ಡೈರೆಕ್ಟರು ಹುಕ್ಕುಂ ಮಾಡಿದ ಐದು ವಾರಗಳು ಕಳೆದಮೇಲೆ, ಜುಲೈ 23 ನೇ ತಾ॥ ನಲ್ಲಿ ಕ್ರಮವಾದ ಚಳುವಳಿಯು ಕಣ್ಣಿಗೆ ಬಿತ್ತು. ಇದಿನ ಸಾಯಂಕಾಲ ಮಲ್ಲೇಶ್ವರದ ಶ್ರೀ ಎಚ್. ವಿ. ಸುಬ್ರಹ್ಮಣ್ಯಂ ಎಂಬುವರು ಚಳವಳಿಯಲ್ಲಿ ಸೇರಿ ಹುಡುಗರ ಮುಂದಾಳಾಗಲು ಬಂದರು. ಆಮೇಲೆ ಹುಡುಗರು, ಹೊಸದಾಗಿ ಕಟ್ಟಿರುವ ಗೂಡಿನಲ್ಲಿ ಗಣೇಶನ ವಿಗ್ರಹವನ್ನು ಇಟ್ಟೇ ತೀರಬೇಕೆಂದು ಹೆಡ್ಮಾಸ್ಟರನ್ನು ಬಲಾತ್ಕರಿಸಿದರು.

14 ಜುಲೈ 24ನೇ ತಾ — ಈ ದಿನ ಬೆಳಿಗ್ಗೆ ಸುಮಾರು 10 ಗಂಟೆ 50 ನಿಮಿಷದ ಹೊತ್ತಿನಲ್ಲಿ ಹೆಡ್ಮಾಸ್ಟರು ಎಂದಿನಂತೆ ಸ್ಕೂಲಿಗೆ ಬರುತ್ತಿರುವಾಗ, ತಮ್ಮ ಮತ್ತು ಇತರ ಸ್ಕೂಲುಗಳ ಹುಡುಗರು, ಶ್ರೀ॥ ಸುಬ್ರಹ್ಮಣ್ಯಂರವರ ಮುಂದಾಳುತನದಲ್ಲಿ ಗುಂಪುಕಟ್ಟಿಕೊಂಡು, ಸ್ಕೂಲು ಎದುರುಗಡೆ ರಸ್ತೆಯಲ್ಲಿ ಗಲಾಟೆಮಾಡುತ್ತಲೂ, ಇತರ ಹುಡುಗರನ್ನೂ ತಮ್ಮೊಡನೆ ಸೇರಬೇಕೆಂದು ಕರೆಯುತ್ತಲೂ ಇದ್ದುದನ್ನು ನೋಡಿದರು. ಕಾರಣವೇನೆಂದು ಹೆಡ್ಮಾಸ್ಟರು ಕೇಳಲಾಗಿ, ಗಣೇಶನನ್ನು ಸ್ವಸ್ಥಾನದಲ್ಲಿಡುವವರೆಗೆ ತಾವು ತಂತಮ್ಮ ತರಗತಿಗಳಿಗೆ ಹೋಗುವುದಿಲ್ಲವೆಂದು ಹುಡುಗರು ತಿಳಿಸಿದರು. ತಾವು ಹೇಳಿದ ಬುದ್ಧಿವಾದವನ್ನು ಹುಡುಗರು ಲಕ್ಷ್ಯಿಸದಿರಲು, ಮುಂದೆ ಶಾಂತಿಭಂಗವಾಗಬಹುದೆಂದು ಹೆದರಿ, ಹೆಡ್ಮಾಸ್ಟರು ಹೊಸಮಾರ್ಕೆಟ್ ಪೋಲೀಸ್ ಸ್ಟೇಷನ್‌ಗೆ ಹೋಗಿ ನಡೆದ ಸಮಾಚಾರವನ್ನು ಪೋಲೀಸ್ ಇನ್‌ಸ್ಪೆಕ್ಟರಿಗೆ ತಿಳಿಸಿದರು. ಇನ್‌ಸ್ಪೆಕ್ಟರು ಕೂಡಲೆ ಸ್ಕೂಲುಹತ್ತಿರ ಹೋಗಿ ಅಲ್ಲಿ ಮುಂದೆ ಹೆಚ್ಚು ಗಲಾಟೆ ನಡೆಯದಂತೆ ನೋಡಿಕೊಳ್ಳಲು ಕೆಲವು ಕಾನ್‌ಸ್ಟೇಬಲರನ್ನು ನೇಮಿಸಿ, ಅಷ್ಟರೊಳಗೆ ಶ್ರೀ॥ ಸುಬ್ರಹ್ಮಣ್ಯಂರವರೊಡನೆ ಚಿಕ್ಕಪೇಟೆ ಮಾರ್ಗವಾಗಿ ಮೆರವಣಿಗೆ ಹೊರಟಿದ್ದ ಹುಡುಗರನ್ನು ಹಿಂಬಾಲಿಸಲು ಹೊರಟರು. ಬಳೇಪೇಟೆ ಚೌಕದ ಹತ್ತಿರ ಸುಮಾರು ನೂರು ಹುಡುಗರ ಗುಂಪನ್ನು ಅವರು ಕಂಡರು. ಆದಿನ ಮಧ್ಯಾಹ್ನ ಒಂದೂವರೆ ಗಂಟೆ ಸಮಯದಲ್ಲಿ ಮೈಸೂರು ಬ್ಯಾಂಕಿನ ಹತ್ತಿರ ಸುಬ್ರಹ್ಮಣ್ಯಂರವರ ಮುಂದಾಳುತನದಲ್ಲಿ ಕೆಲವು ಹುಡುಗರು ಗುಂಪು ಕಟ್ಟಿಕೊಂಡು ಡಿಸ್ಟ್ರಿಕ್ಟ್ ಆಫೀಸಿನ ಕಡೆಗೆ ಹೋಗುತ್ತಿದ್ದುದನ್ನು ನೋಡಿದರು.

ಈ ಸಮಾಚಾರವನ್ನು ನಗರದ ಪೋಲೀಸ್ ಮುಖ್ಯಾಧಿಕಾರಿಯಾದ ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟರಿಗೆ ತಿಳಿಸಲು, ಅವರು ಆದಿನ ಸಾಯಂಕಾಲ 6 ಗಂಟೆ ಸಮಯದಲ್ಲಿ ಒಬ್ಬರು ಸಬ್ ಇನ್‌ಸ್ಪೆಕ್ಟರಿಗೆ, 25ನೇ ತಾರೀಖಿನ ಆಗಾಗಾಯು ಮುಖ್ಯರುಗಳ ನಡವಳಿಕೆಗಳನ್ನು ನೋಡುತ್ತಿರಬೇಕೆಂದು ಹುಕ್ಕುಂ ಮಾಡಿದರು. 24ನೇ ತಾರೀಖಿನ ದಿನವೇ ಸುಲ್ತಾನ್‌ಪೇಟೆ ಸ್ಕೂಲಿನ 341 ವಿದ್ಯಾರ್ಥಿಗಳ ಪೈಕಿ 47 ಮಂದಿ ಮಾತ್ರ ಹಾಜರಾಗಿದ್ದರು.

15. ಜುಲೈ 25ನೇ ತಾ॥ — ಈ ದಿನ ಬೆಳಿಗ್ಗೆ ಸುಮಾರು 10½ ಗಂಟೆ ಸಮಯದಲ್ಲಿ ಕೆಲವು ಹುಡುಗರು ಗುಂಪುಕಟ್ಟಿಕೊಂಡು ಸ್ಕೂಲಿನ ಹೊರಗಡೆ ನಿಂತಿದ್ದರು; ತರಗತಿಗಳಲ್ಲಿ ಹಾಜರಿದ್ದವರು 67 ಮಂದಿ ಮಾತ್ರ. ಸುಮಾರು 11 ರಿಂದ 14 ವರ್ಷ ವಯಸ್ಸಿನ ಹುಡುಗರೇ ಈ ಮುಷ್ಕರದಲ್ಲಿ ಸೇರಿದ್ದರು. ಇವರು ಶ್ರೀಗಳಾದ ಸುಬ್ರಹ್ಮಣ್ಯಂ ಮತ್ತು ರಾಮಲಾಲ್ ತಿವಾರಿ ಇವರ ಮುಂದಾಳುತನದಲ್ಲಿ ಸ್ಕೂಲಿನ ಮುಂದೆ ಗಲಾಟೆಮಾಡುತ್ತಿದ್ದರು. ಅವರು ರಸ್ತೆಯನ್ನು ಅಡ್ಡಗಟ್ಟಿ, ಇತರ ಹುಡುಗರೂ ತಮ್ಮೊಡನೆ ಸೇರುವಂತೆ ಕರೆಯುತ್ತಿದ್ದರು. ಪೋಲೀಸಿನವರು ಶ್ರೀ॥ ಸುಬ್ರಹ್ಮಣ್ಯಂರವರಿಗೆ ಎಚ್ಚರಿಕೆ ಕೊಡಲು ಅವರದನ್ನು ಲಕ್ಷ್ಯಿಸಲಿಲ್ಲ. ಅಲ್ಲದೆ, ಸ್ವಲ್ಪ ಹೊತ್ತಿನ ಮೇಲೆ ಇಬ್ಬರು ಮುಂದಾಳುಗಳೂ, ಗಲಾಟೆಮಾಡುತ್ತಿದ್ದ ಹುಡುಗರ ಗುಂಪನ್ನು ಕರೆದುಕೊಂಡು, ಮಾಮೂಲುಪೇಟೆಸ್ಕೂಲು, ಸುಲ್ತಾನ್‌ಪೇಟೆ ಸ್ಕೂಲಿನ ಶಾಖೆ, ಈ ಸ್ಥಳಗಳಿಗೆ ಹೋಗಿ ಅಲ್ಲೆಲ್ಲಾ ಗಲಾಟೆಮಾಡಿ, ಕಲ್ಲು

ಸಾಕ್ಷಿಯು ಆ ಪಾಠಶಾಲೆಗಳ ಕೆಲವು ಹುಡುಗರು ತಮ್ಮ ಗುಂಪನ್ನು ಸೇರುವಂತೆ ಮಾಡಿದರು. ಅಲ್ಲಿಂದ ಅವರು ಚಿಕ್ಕಪೇಟೆ ಪೊಲೀಸ್ ಠಾಣೆಯ ಮೂಲಕ ಅಕ್ಕಿಪೇಟೆ ಮೂಲಕ ಗಲ್ಲಿಯಲ್ಲಿರುವ ಆರ್ಯವಿದ್ಯಾ ಪಾಠಶಾಲೆ ಯ ಹತ್ತಿರ ಹೋಗಿ ಅಲ್ಲಿಯೂ ಗಲಾಟೆ ಮಾಡಿದರು. ಆದರೆ ಆ ಸ್ಕೂಲಿನ ಹೆಡ್ಮಾಸ್ಟರು ಅವರ ಬಾಗಿಲುಗಳನ್ನು ಮುಚ್ಚಿಸಿ ಹುಡುಗರು ಒಳ ಪ್ರವೇಶಿಸದಂತೆ ಮಾಡಿದರು. ಅಲ್ಲಿ ಸ್ವಲ್ಪ ಹೊತ್ತು ನಡೆಯಿತು. ಆ ತರುವಾಯ ಸುಬ್ರಹ್ಮಣ್ಯಂರವರು ತಮ್ಮ ಗುಂಪನ್ನು ಕರೆದುಕೊಂಡು ಧರ್ಮಾಂಬುಧಿ ಕೆರೆ ಹತ್ತಿರವಿರುವ ಮ್ಯುನಿಸಿಪಲ್ ಕೋಟೆಗೆ ಹೋದರು. ಅಲ್ಲಿ ಅವರೂ ಮ॥ ತಿರ್ಮಲಯಂಗಾರ್‌ರವರು ಅರ್ಧಗಂಟೆ ಹೊತ್ತು ಭಾಷಣಗಳನ್ನು ಮಾಡಿ ಗಣೇಶನ ವಿಗ್ರಹವನ್ನು ಸ್ವಸ್ಥಾನದಲ್ಲಿಡುವವರೆಗೆ ವಿದ್ಯಾರ್ಥಿಗಳು ಏನೇ ಆದರೂ ಪಾಠಶಾಲೆಗಳಿಗೆ ಹೋಗಕೂಡದೆಂದು ಬೋಧಿಸಿದರು.

ಭಾಷಣಗಳಾದಮೇಲೆ, ಅವರು ಹುಡುಗರನ್ನು ಕರೆದುಕೊಂಡು ಚಿಕ್ಕಪೇಟೆ ಮತ್ತು ಅರಳೇಪೇಟೆಯ ಮಾರ್ಗವಾಗಿ ಚಾಮರಾಜಪೇಟೆ ಮಿಡ್ಲ್ ಸ್ಕೂಲಿನ ಹತ್ತಿರಕ್ಕೆ ಮಧ್ಯಾಹ್ನ 12½ ಗಂಟೆ ಸುಮಾರಿಗೆ ಹೋದರು. ಅಲ್ಲಿ ಕಾಲುಗಂಟೆ ಹೊತ್ತು ಗಲಾಟೆಮಾಡಿ, ಮಧ್ಯಾಹ್ನ ಒಂದು ಗಂಟೆ ಸುಮಾರಿಗೆ ಕೋಟೆ ಎ. ವಿ. ಸ್ಕೂಲಿನ ಹತ್ತಿರಕ್ಕೆ ಹೋದರು. ಅಲ್ಲಿ ಅವರು ಆ ಸ್ಕೂಲಿನ ಹೆಡ್ಮಾಸ್ಟರೊಡನೆ, ಗಣೇಶನ ವಿಗ್ರಹವನ್ನು ಸ್ವಸ್ಥಾನದಲ್ಲಿಡುವ ಕಾರ್ಯದಲ್ಲಿ ಆ ಸ್ಕೂಲು ಹುಡುಗರ ಸಹಾನುಭೂತಿಯನ್ನು ಪಡೆಯುವುದಕ್ಕಾಗಿ ತಾವಲ್ಲಿಗೆ ಬಂದಿರುವುದಾಗಿ ಹೇಳಿದರು. ತನ್ನ ಪಾಠಶಾಲೆಯ ಹುಡುಗರಿಗೂ ಅದಕ್ಕೂ ಯಾವ ಸಂಬಂಧವೂ ಇಲ್ಲವೆಂದು ಆ ಹೆಡ್ಮಾಸ್ಟರು ತಿಳಿಸಲು, ದೊಂಬಿಯವರು, ಜೋರಾಗಿ ಗಲಾಟೆ ಮಾಡಿ ಕೊಠಡಿಗಳೊಳಕ್ಕೆ ಕಲ್ಲುಗಳನ್ನೆಸೆಯತೊಡಗಿದರು. ಆ ಸ್ಥಿತಿಯಲ್ಲಿ ಸ್ಕೂಲನ್ನು ಮುಚ್ಚಿ ಬಿಡುವುದು ಸೂಕ್ತವೆಂದು ಹೆಡ್ಮಾಸ್ಟರು ಭಾವಿಸಿ, ಹುಡುಗರೆಲ್ಲರೂ ಮನೆಗೆ ಹೋಗಬಹುದೆಂದು ಹೇಳಿ, ನಡೆದ ಸಮಾಚಾರವನ್ನು ಅ॥ ಪೊಲೀಸ್ ಸೂಪರಿಂಟೆಂಡೆಂಟರಿಗೆ ರಿಪೋರ್ಟ್ ಮಾಡಿದರು.

ಅನಂತರ ಮ॥ ಸುಬ್ರಹ್ಮಣ್ಯಂರವರು ಹುಡುಗರನ್ನೆಲ್ಲಾ ಕೋಟೆ ಎ. ವಿ. ಸ್ಕೂಲು ಎದುರುಗಡೆ ಇರುವ ಮರದ ಕೆಳಗೆ ಸೇರಿಸಿಕೊಂಡು, ಗಣೇಶನ ವಿಗ್ರಹದ ವಿಚಾರವನ್ನೆಲ್ಲಾ ವಿವರಿಸಿ, ವಿಗ್ರಹವನ್ನು ಅದರ ಸ್ಥಾನದಿಂದ ಬೇರ್ಪಡಿಸಿರುವುದು ಹಿಂದೂ ಮತಕ್ಕೆ ಎಷ್ಟು ಅವಮಾನಕರವಾದುದೆಂದು ಹೇಳಿ ವಿಗ್ರಹವನ್ನು ಸ್ವಸ್ಥಾನದಲ್ಲಿಡುವವರೆಗೆ ಏನೇ ಆದರೂ ವಿದ್ಯಾರ್ಥಿಗಳು ಸ್ಕೂಲುಗಳಿಗೆ ಹೋಗಕೂಡದೆಂದು ತಿಳಿಸಿದರು. ಆ ಮೇಲೆ ಹುಡುಗರೆಲ್ಲರೂ ಊಟಕ್ಕೆ ಮನೆಗಳಿಗೆ ಹೋಗಿ ಸಾಯಂಕಾಲ ಮ್ಯುನಿಸಿಪಲ್ ಕೋಟೆಯಲ್ಲಿ ಪುನಃ ಸೇರಬೇಕೆಂದು ತಿಳಿಸಿ ಕಳುಹಿಸಿಬಿಟ್ಟರು. ಆ ದಿನ ಸಾಯಂಕಾಲ ಸುಮಾರು ಆರುವರೆ ಗಂಟೆ ಸಮಯದಲ್ಲಿ ಶ್ರೀ॥ ಗಳಾದ ಸುಬ್ರಹ್ಮಣ್ಯಂ, ರಾಮಲಾಲ್ ತಿವಾರಿ, ಜಿ. ಭೀಮರಾವ್ ಈ ಮೂರು ಮಂದಿ ಮುಂದಾಳುಗಳೂ ಹೊಸ ಮಾರ್ಕೆಟ್ ಮುಂಭಾಗದಲ್ಲಿ ಮೀಟಿಂಗ್ ನಡೆಸಿ ಭಾಷಣಗಳನ್ನು ಮಾಡಿದರು. ಅಲ್ಲಿ ಸುಮಾರು 200-300 ಮಂದಿ ವಿದ್ಯಾರ್ಥಿಗಳು ಸೇರಿದ್ದರು.

16. ಜುಲೈ 26 ನೇ ತಾ॥—ಮುಷ್ಕರವು 26 ನೇ ತಾರೀಖಿನ ದಿನವೂ ಮುಂದುವರಿಯಿತು. ಸುಲ್ತಾನ್‌ಪೇಟೆ ಸ್ಕೂಲಿನಲ್ಲಿ ಆ ದಿನ 68 ಮಂದಿ ವಿದ್ಯಾರ್ಥಿಗಳು ಮಾತ್ರ ಹಾಜರಾಗಿದ್ದರು. ಹಿಂದಿನ ದಿನಗಳಂತೆಯೇ ಶ್ರೀ॥ ಸುಬ್ರಹ್ಮಣ್ಯಂರವರ ಮುಂದಾಳುತನಕ್ಕೊಳಪಟ್ಟಿದ್ದ ಹುಡುಗರು, ಸ್ಕೂಲು ಪ್ರಾರಂಭವಾಗುವ ಸಮಯದಲ್ಲಿ ಸ್ಕೂಲಿನ ಮುಂಭಾಗದಲ್ಲಿ ಸೇರಿ, ಬಾಯಿಮಾತಿನಿಂದಲೂ ಬಲಾತ್ಕಾರದಿಂದಲೂ ಇತರ ಹುಡುಗರು ತಮ್ಮೊಡನೆ ಸೇರುವಂತೆ ಪ್ರಯತ್ನಿಸಿದರು. ಆಮೇಲೆ ಎಂದಿನಂತೆ, ಮಾಮೂಲುಪೇಟೆ ಸ್ಕೂಲು, ಆರ್ಯ ವಿದ್ಯಾಶಾಲೆ ಇವುಗಳ ಹತ್ತಿರ ಹೋಗಿ ಆ ಪಾಠಶಾಲೆಗಳ ಹುಡುಗರನ್ನು ಸೇರಿಸಿಕೊಂಡು, ಮ್ಯುನಿಸಿಪಲ್ ಕೋಟೆಯಲ್ಲಿ ಮೀಟಿಂಗ್ ನಡೆಸಿದರು. ಶ್ರೀ॥ ಸುಬ್ರಹ್ಮಣ್ಯಂರವರು ಅಲ್ಲಿ ಪುನಃ ಭಾಷಣಮಾಡಿದರು. ಅವರು ಅಲ್ಲಿಂದ ಮಲ್ಲೇಶ್ವರಕ್ಕೆ ಹೋದರು. ಅಲ್ಲಿ ಮ॥ ಸುಬ್ರಹ್ಮಣ್ಯಂರವರು, ರೀಡಿಂಗ್ ರೂಮಿನ ಹತ್ತಿರದ ಮೈದಾನದಲ್ಲಿ ಇನ್ನೊಂದು ಭಾಷಣಮಾಡಿದರು. ರಸ್ತೆಗೆ ಅಡ್ಡ ಕಟ್ಟಬೇಡಿರೆಂದು ಹೇಳಿದ ಪೊಲೀಸ್ ಇನ್ಸ್‌ಪೆಕ್ಟರು ಮ॥ ಸುಬ್ರಹ್ಮಣ್ಯಂರಿಂದ ತಿರಸ್ಕರಿಸಲ್ಪಟ್ಟು ಅಲ್ಲಿಂದ ಹೊಡೆಯಲ್ಪಟ್ಟರು. ಆಮೇಲೆ ಮಧ್ಯಾಹ್ನ ಒಂದೂಕಾಲುಗಂಟೆ ಸಮಯದಲ್ಲಿ ದೊಂಬಿ ಹುಡುಗರು, ಶ್ರೀ॥ ಗಳಾದ ಸುಬ್ರಹ್ಮಣ್ಯಂ ಮತ್ತು ತಿವಾರಿ ಇವರ ಮುಂದಾಳುತನದಲ್ಲಿ, ಕೈಯಲ್ಲಿ ಕೋಲುಗಳನ್ನೂ ಕಲ್ಲುಗಳನ್ನೂ ಹಿಡಿದುಕೊಂಡು, ಗಟ್ಟಿಯಾಗಿ ಕೂಗಿಕೊಳ್ಳುತ್ತ ಮಲ್ಲೇಶ್ವರಂ ಮಿಡ್ಲ್ ಸ್ಕೂಲು ಕಾಂಪೌಂಡಿನೊಳಕ್ಕೆ ನುಗ್ಗಿದರು. ಅಲ್ಲಿ ಕೆಲವು ಕಿಟಕಿಗಳನ್ನು ಒಡೆದು ಹಾಕಿ ಆ ಪಾಠಶಾಲೆಯ ಹುಡುಗರು ತಮ್ಮೊಡನೆ ಸೇರಲು ಅವಕಾಶವಾಗುವಂತೆ ಸ್ಕೂಲು ಮುಚ್ಚಬೇಕೆಂದು ಹೆಡ್ಮಾಸ್ಟರನ್ನು ಒತ್ತಾಯಪಡಿಸಿದರು. ಹೆಡ್ಮಾಸ್ಟರು ಅವರನ್ನು ಸಮಾಧಾನಪಡಿಸುತ್ತಿರುವಾಗ ದೊಂಬಿಯವರು ಕಲ್ಲಿನಿಂದ ಅವರ ಕಾಲಿನ ಮೇಲೆ ಹೊಡೆದರು. ಒಂದೂವರೆಗಂಟೆಗೆ ವಿರಾಮ ಕಾಲದಲ್ಲಿ, ಆ ಸ್ಕೂಲು ಹುಡುಗರೆಲ್ಲರೂ ಹೊರಗಡೆ ಬರಲು ದೊಂಬಿಯವರು ಅಲ್ಲಿಂದ ಹೊರಟು, ಅಲ್ಲಿದ್ದ ಹೈಸ್ಕೂಲು ಮತ್ತು ಪ್ರೈಮರಿ ಸ್ಕೂಲುಗಳಿಗೆ ಹೋಗಿ ಅಲ್ಲಿಯೂ ಕೂಡ ಗಲಾಟೆ ಮಾಡಿದರು. ಅನಂತರ ಮ್ಯುನಿಸಿಪಲ್ ಕೋಟೆಗೆ ಹೋಗಿ ಪುನಃ ಮತ್ತೊಂದು ಮೀಟಿಂಗ್ ನಡೆಸಿದರು. ಸಾಯಂಕಾಲ ಸುಮಾರು 6 ಗಂಟೆಗೆ ಸುಲ್ತಾನ್‌ಪೇಟೆ ಸ್ಕೂಲಿಗೆ ಬಂದು ಒಂದು ಗಣಪತಿ ಚಿತ್ರಪಟವನ್ನು ಗೂಡಿನಲ್ಲಿಟ್ಟು ಪೂಜಿಸಿ, ಆ ಮೇಲೆ ಹೊರಟು ಹೋದರು.

17. ಜುಲೈ ತಾ॥ 27 ನೇ ಸತ್ಯಾಗ್ರಹ ಪ್ರಾರಂಭ

ಜುಲೈ 27 ನೇ ತಾರೀಖಿನ ದಿನ 41 ಹುಡುಗರು ಮಾತ್ರ ಸುಲ್ತಾನ್‌ಪೇಟೆ ಸ್ಕೂಲಿನಲ್ಲಿ ಹಾಜರಾಗಿದ್ದರು. ಮ॥ ಸುಬ್ರಹ್ಮಣ್ಯಂರವರ ಮುಂದಾಳುತನಕ್ಕೊಳಪಟ್ಟಿದ್ದ ಮುಷ್ಕರಿಗಳು, ಗಣೇಶನ ಚಿತ್ರಪಟವನ್ನು ಒಂದು ಗೋಡೆಗೆ ಕಟ್ಟಿಕೊಂಡು, ಮಧ್ಯಾಹ್ನದವರೆಗೂ ಬೀದಿಗಳಲ್ಲೆಲ್ಲಾ ಮೆರವಣಿಗೆ ಮಾಡಿದರು. ಸಾಯಂಕಾಲ 4½ ಗಂಟೆ ಮೇಲೆ ಈ ಚಳವಳಿಯು 'ಸತ್ಯಾಗ್ರಹ' ವೆಂಬ ಬೇರೆ ರೂಪವನ್ನು ತಾಳಿತು. ಆಮೇಲೆ ಬೀದಿಗಳಲ್ಲಿ ಮೆರವಣಿಗೆ ಹೋಗುವುದನ್ನು ನಿಲ್ಲಿಸಿಬಿಟ್ಟು, ಆರಾರು ಮಂದಿಯ ಪ್ರಕಾರ ಸುಲ್ತಾನ್‌ಪೇಟೆ ಸ್ಕೂಲು ಮುಂಭಾಗದ ರಸ್ತೆಯಲ್ಲಿ ಕುಳಿತುಕೊಂಡು ಭಜನೆ ಮಾಡುವುದಕ್ಕೆ ಪ್ರಾರಂಭಿಸಿದರು. ಅವರ ಸುತ್ತಲೂ ಅನೇಕ ಜನರು ಸೇರಿ ಗುಂಪು ದೊಡ್ಡದಾಗಿ ಆ ರಸ್ತೆಯಲ್ಲಾ ಕಟ್ಟಿಹೋಯಿತು. ಮ॥ ಸುಬ್ರಹ್ಮಣ್ಯಂರವರಿಗೆ ಪೊಲೀಸಿನವರು ಎಚ್ಚರಿಕೆ ಕೊಟ್ಟರೂ ಲೆಕ್ಕಿಸದೆ ಮುಸಲ್ಮಾನರಿಗೆ ಕೋಪವನ್ನುಂಟುಮಾಡಬಹುದಾದಂತಹ ಭಾಷಣಗಳನ್ನು ಮಾಡಿದರು. ಆ ದಿನ ಸಾಯಂಕಾಲ, ಶಾಂತಿಯನ್ನು ರಕ್ಷಿಸುವುದಕ್ಕೋಸ್ಕರ, ಮೂರು ಮಂದಿ ಮುಂದಾಳುಗಳನ್ನು ಜಾಮೀನ್ ಕೊಡಬೇಕೆಂದು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಹುಕುಂ ಮಾಡಿದರು. ಆ ರಾತ್ರಿಯೆಲ್ಲಾ ಸತ್ಯಾಗ್ರಹವು ಮುಂದುವರಿಯಿತು. ಸತ್ಯಾಗ್ರಹವನ್ನಾಚರಿಸುತ್ತಿದ್ದ ಹುಡುಗರು ಕೆಲವು ಮಂದಿಗಳು ಮಾತ್ರವೇ ಇದ್ದುದರಿಂದ ಅವರ ಹಿತೈಷಿಗಳು ಅವರಿಗೆ ಅಲ್ಲಿ ಊಟ ತಿಂಡಿಗಳನ್ನು ತಂದು ಕೊಟ್ಟರು.

18. ಜುಲೈ 28 ನೇ ತಾ॥ ಸತ್ಯಾಗ್ರಹವು ಮುಂದುವರಿದುದು.

ಜುಲೈ 28 ನೇ ತಾರೀಖಿನ ದಿನ 68 ಮಂದಿ ವಿದ್ಯಾರ್ಥಿಗಳು ಮಾತ್ರ ಸುಲ್ತಾನ್‌ಪೇಟೆ ಸ್ಕೂಲಿನಲ್ಲಿ ಹಾಜರಿದ್ದರು. ಸತ್ಯಾಗ್ರಹವು ಮುಂದುವರಿದು ಎಲ್ಲಿ ತನಕ ಸಂಭವಿಸಿತೋ ಅದನ್ನು ಆ ಕಡೆ ನೋಡುವ ತನಕ ಮತ್ತೊಂದು ಹೊಸ ದೊಡ್ಡ ಗುಂಪು ಸೇರಿತು. ಅವಿನಯ ವರ್ತನೆ ತೀವ್ರವಾಗಿ ಕಾಣಿಸಿತು. ಆ ಸ್ಥಳಕ್ಕೆ ಬಂದು ಪ್ರಯತ್ನಪಟ್ಟ ಪೊಲೀಸಿನವರ ಮೇಲೆ ಅವರು ಕಲ್ಲು ಬೀರಿ ಹೊಡೆದರು. ಅವರ ಮನೆಗಳ ಕಡೆ ತೋಟದ ಸುತ್ತಲೂ ಜನರು ನಿಂತಿದ್ದರು. ಮ॥ ಅಬ್ಬಾಸ್‌ಖಾನರ ಮನೆಯ ಉತ್ತರ ಗೇಟಿನ ಕಡೆ ಹುಡುಗರ ಗುಂಪು ಸೇರಿ ಗೋಡೆಯ ಮೇಲೆ ಗುರುತುಗಳನ್ನು ಬರೆಯುತ್ತಿದ್ದರು. ಇದು ಅಲ್ಲಿದ್ದ ಮುಸಲ್ಮಾನರಿಗೆ ಕೋಪವನ್ನುಂಟುಮಾಡಿದರೂ, ಸಕಾಲದಲ್ಲಿ ಪೊಲೀಸರು ಬಂದುದರಿಂದ ಯಾವ ಅಪಾಯವೂ ನಡೆಯಲಿಲ್ಲ. ಅ॥ ಪೊಲೀಸ್ ಸೂಪರಿಂಟೆಂಡೆಂಟರಲ್ಲಿ ಫಿರ್ಯಾದು ಮಾಡಲ್ಪಟ್ಟಿತು. ಆ ದಿನ ಪಟ್ಟಣದ ಕೆಲವು ಪ್ರಮುಖರು ಕೂಡಲೇ ವಿಗ್ರಹವನ್ನು ಸ್ವಸ್ಥಾನದಲ್ಲಿಡುವಂತೆ ಏರ್ಪಡಿಸುವುದಾಗಿ ಭರವಸೆಕೊಟ್ಟು ಸತ್ಯಾಗ್ರಹವನ್ನು ನಿಲ್ಲಿಸುವಂತೆ ಮುಂದಾಳುಗಳನ್ನು ಕೇಳಿಕೊಂಡರು. ತಮ್ಮ ಭರವಸೆಯಲ್ಲಿ ನಂಬಿಕೆ ಹುಟ್ಟಿಸುವುದಕ್ಕಾಗಿ, ಅವರು ಎಲ್ಲಾ ಮ್ಯುನಿಸಿಪಲ್ ಕೌನ್ಸಿಲರುಗಳಿಂದಲೂ, ಮ್ಯುನಿಸಿಪಲ್ ಪ್ರೆಸಿಡೆಂಟರಾದ ಮ॥ ಮಹಮದ್ ಅಬ್ಬಾಸ್ ಖಾನರಿಂದಲೂ ಇನ್ನು ಹತ್ತು ದಿನಗಳೊಳಗಾಗಿ ವಿಗ್ರಹವನ್ನು ಸ್ವಸ್ಥಾನದಲ್ಲಿಡುವುದಾಗಿ ಅವರ ರುಜುವನ್ನೊಳಗೊಂಡ ಕಾಗದವನ್ನು ಬರಸಿಕೊಂಡು ಬಂದರು. ಆದರೆ, ಆ ಮುಂದಾಳುಗಳ ಪೈಕಿ ಇಬ್ಬರು ಅಂದರೆ ಮ॥ ಗಳಾದ ರಾಮಲಾಲ್ ತಿವಾರಿ ಮತ್ತು ಭೀಮರಾವ್ ಇವರು ಇದಕ್ಕೆ ಒಪ್ಪಿದರು. ಮ॥ ಸುಬ್ರಹ್ಮಣ್ಯಂರವರು ಒಪ್ಪಲಿಲ್ಲ. ಅವರು ಹುಡುಗರನ್ನು ಕುರಿತು, ನನ್ನನ್ನು ದಸ್ತಗಿರಿ ಮಾಡುತ್ತಾರೆ, ಆದರೂ ವಿಗ್ರಹವನ್ನು ಸ್ವಸ್ಥಾನದಲ್ಲಿಡುವವರೆಗೆ ಸತ್ಯಾಗ್ರಹವನ್ನು ನಿಲ್ಲಿಸಕೂಡದು ಎಂದು ಹೇಳಿದರು. ಆ ದಿನ ಸಾಯಂಕಾಲ ದೊಡ್ಡ ಮಳೆ ಸುರಿಯುತ್ತಿದ್ದರೂ ಸತ್ಯಾಗ್ರಹಿಗಳು, ಸ್ಕೂಲು ಹೊರಗಡೆ ಕುಳಿತೇ ಇದ್ದರು. ಸಾಯಂಕಾಲ 6 ಗಂಟೆ ಸುಮಾರಿನಲ್ಲಿ ವಿಗ್ರಹವನ್ನಿಟ್ಟಿದ್ದ ಕೊಠಡಿಯ ಹತ್ತಿರ ಕುಳಿತುಕೊಂಡರು.

ಪಬ್ಲಿಕ್ ಸ್ಕೂಲಿನಲ್ಲಿ ಒಂದು ದೊಡ್ಡ ದೇವಸ್ಥಾನವನ್ನು ಕಟ್ಟಿದಂತೆ ಮಾಡಬೇಕೆಂದು ಮಿ॥ ಅಬ್ಬಾಸ್‌ಖಾನರು ಸರ್ಕಾರದವರಿಗೆ ತಿಳಿಸಿದುದೂ, ಆ ವಿಚಾರಕ್ಕೆ ತಕ್ಕ ಗಮನಕೊಡಬೇಕೆಂದು ಸರ್ಕಾರದವರು ಡೈರೆಕ್ಟರಿಗೆ ತಿಳಿಸಿದುದೂ, ವಿಗ್ರಹವನ್ನು ಗೂಡಿನಲ್ಲಿಡಕೂಡದೆಂದು ಡೈರೆಕ್ಟರು ಹುಕುಂ ಮಾಡಿದುದೂ ಎಲ್ಲವೂ ಸರಿ. ಆದರೆ, ವಿಗ್ರಹದ ಸ್ಥಳಪಲ್ಲಟಕ್ಕೆ ಸಹಜ ಕಾರಣವಾದ ಈ ಸಮಾಚಾರವು ಜನರಿಗೆ ಹೇಗೂ ಚೆನ್ನಾಗಿ ಗೊತ್ತಾಗಿದ್ದರೂ, ಡೈರೆಕ್ಟರೂ, ಮಿ॥ ಅಬ್ಬಾಸ್‌ಖಾನರೂ ಅದನ್ನು ಮುಚ್ಚಿಕೊಂಡುದರಿಂದ ಇಷ್ಟು ಗಲಭೆಗೆ ಕಾರಣವಾಯಿತು.

ಸರ್ಕಾರರು ಹುಡುಗರ ಮೇಲೆ ಬಿದ್ದರೂ ಮನಃಪೂರ್ವಕವಾಗಿ ಅವರನ್ನು ಹಿಂಸಿಸಲಿಲ್ಲ. ಹಾಗೆ ಮಾಡಿದ್ದರೆ ಬಹಳ ಅನಾಹುತಗಳು ನಡೆದು ಹೋಗುತ್ತಿದ್ದುವು.

ಕಾರಣ ಸಿಕ್ಕಲಿ ಸಿಕ್ಕದಿರಲಿ ಜಗಳ ಮಾಡಬೇಕೆಂದು ಮುಸಲ್ಮಾನರು ಸಿದ್ಧರಾಗಿಯೇ ಬಂದಿದ್ದರು. ಹಾಗೂ ಅವರೇ ಮೊದಲು ಹಿಂದುಗಳ ಮೇಲೆ ಬಿದ್ದರು. ಹುಡುಗರ ಕಿರಿಚು ಕೈಗೂಡಿದುದರಿಂದ, ಅವರು ಮಿ॥ ಅಬ್ಬಾಸ್‌ಖಾನರ ಮನೆ ಮೇಲೆ ಕಲ್ಲೆಸೆಯುವುದಕ್ಕೆ ಕಾರಣವಿಲ್ಲ. ಆದಿನ ದಿವಾನ್‌ರನ್ನು ಹೊಡೆದರೆಂದೂ, ಮಿ॥ ಅಬ್ಬಾಸ್‌ಖಾನರ ಮನೆ ಮತ್ತು ಅದರ ಹಿಂದಿರುವ ಮಸೀದಿಯನ್ನು ಹಿಂದುಗಳು ಮುತ್ತುವರೆಂದೂ ಹೇಗೋ ಮುಸಲ್ಮಾನರಿಗೆ ವರ್ತಮಾನ ಹೋಯಿತು. ದಂಗೆಕಾರರು ನಡೆಯುವರೆಂಬುದು ಎಲ್ಲರಿಗೂ ತಿಳಿದಿತ್ತು. ಅವರು ಸಿದ್ಧರಾಗಿ ಬಂದಿದ್ದರು. ಬಿಡುಗಡೆ ಹೊಂದಿದ ಮುಖಂಡರ ಮೆರವಣಿಗೆ, ವಿಗ್ರಹವನ್ನು ಸ್ವಸ್ಥಾನದಲ್ಲಿಡಿಸುವುದು ಇವೆಲ್ಲಾ ಮುಸಲ್ಮಾನರಿಗೆ ಸಹಿಸಲಸದಳವಾದವಾಯಿತು.

ಸ್ಕೂಲು ಗೇಟಿಗೂ ಮಿ॥ ಅಬ್ಬಾಸ್‌ಖಾನ್‌ರವರ ಮನೆಗೂ ಮಧ್ಯೆಯಿರುವ ಬೀದಿಯಲ್ಲಿ ಹುಡುಗರೂ ಜನರೂ ಆಗಿಂದಾಗ್ಗೆ ತುಂಬಿಕೊಂಡು, ರಸ್ತೆಯನ್ನು ಅಡ್ಡಕಟ್ಟುತ್ತಿದ್ದರು. ಭಜನೆ ಮಾಡುವಾಗ ಹುಡುಗರು ದೇವರ ನಾಮಗಳನ್ನು ಹಾಡುತ್ತಿದ್ದುದು, ಮಸೀದಿಗೆ ಹೋಗುತ್ತಿದ್ದ ಮುಸಲ್ಮಾನರಿಗೆ ಸಹಿಸಲಿಲ್ಲ. ಹುಡುಗರಿಂದ ಗೋಷ್ಠಾಗಾರಿಯು ನಿಲ್ಲಿಸಲ್ಪಟ್ಟುದು ಮುಸಲ್ಮಾನರಿಗೆ ಕೋಪವನ್ನುಂಟು ಮಾಡಿತು. ಪ ದಿನಗಳಿಗೆ ಕಾಲದಲ್ಲಿ ಹುಡುಗರು ಬೀದಿಗಳಲ್ಲಿ ಮಿ॥ ಖಾನರು ಸತ್ತರೆಂದು ಕೂಗಿಕೊಂಡರು ಎಂದು ನಾವು ನಂಬುತ್ತೇವೆ. ಮ್ಯುನಿಸಿಪಲ್ ಕೋಟೆಯಲ್ಲೂ, ಮಾರ್ಕೆಟ್ ಚೌಕದ ಹತ್ತಿರವೂ ಮಿ॥ ಸುಬ್ರಹ್ಮಣ್ಯಂರವರು ಮಾಡಿದ ಭಾಷಣಗಳು ಕೋಪವನ್ನುಂಟುಮಾಡತಕ್ಕವಾಗಿದ್ದುವು. ಜುಲೈ 28 ನೆ ತಾರೀಖಿನ ದಿನ ಹುಡುಗರು ಮಲ್ಲೇಶ್ವರದ ಸ್ಕೂಲುಗಳಿಗೆ ಹೋಗಿ ಗಲಾಟೆ ಮಾಡಿದಾಗ, ಪ್ರೈಮರಿ ಸ್ಕೂಲು ಹೆಡ್ಮಾಸ್ಟರನ್ನು ಅವರು ಹೊಡೆದರು.

ಜುಲೈ 29 ನೆ ತಾರೀಖಿನವರೆಗೆ ನಡೆದ ಅಂಶಗಳನ್ನೆಲ್ಲಾ ಆಲೋಚಿಸಿ ನೋಡಿದರೆ ತಮ್ಮ ಮನೆ ಎದುರುಗಡೆ, ಮತ್ತು ತಮ್ಮ ಮನೆ ಹಿಂಭಾಗದಲ್ಲಿರುವ ಮಸೀದಿಯ ಗೋಡೆಗಳಿಗೆ ಎದುರಾಗಿ ಸ್ಕೂಲು ಕಾಂಪೌಂಡಿನಲ್ಲಿ ಒಂದು ದೇವಸ್ಥಾನವು ಬೆಳೆಯುವಂತೆ ಮಾಡಬೇಕೆಂದು ಮಿ॥ ಅಬ್ಬಾಸ್‌ಖಾನರು ಸರ್ಕಾರದಲ್ಲಿ ಅರಿಕೆ ಮಾಡಿಕೊಂಡುದು ನ್ಯಾಯವಾಗಿದೆ. ಈ ವಿಚಾರಕ್ಕೆ ಗಮನಕೊಟ್ಟು ಅಲ್ಲೊಂದು ದೇವಸ್ಥಾನವನ್ನು ಕಟ್ಟದಂತೆ ನೋಡಿಕೊಳ್ಳಬೇಕೆಂದು ಡೈರೆಕ್ಟರಿಗೆ ಸರ್ಕಾರದವರು ತಿಳಿಸಿದುದೂ ಸರಿಯಾಗಿದೆ. ಆಗ ಆ ಗೂಡೇ ದೇವಸ್ಥಾನವೆಂದು ಭಾವಿಸಲ್ಪಟ್ಟಿತೆಂಬುದರಲ್ಲಿ ಸಂದೇಹವಿಲ್ಲ. ಅಲ್ಲೊಂದು ದೊಡ್ಡ ಕಟ್ಟಡವನ್ನು ಕಟ್ಟಬೇಕೆಂಬ ಆಲೋಚನೆ ಇದ್ದಿತೆಂಬುದಕ್ಕೆ ಯಾವ ರುಜುವಾತು ಇಲ್ಲ. ಇಲ್ಲದೆ ಅಂತಹ ಅಭಿಪ್ರಾಯವು ಉಂಟಾಗಬಹುದಾದ ಸಂಭವವೂ ಇರಲಿಲ್ಲ. ಎಲ್ಲ ವಿಚಾರವೂ ಸರಿಯಾಗಿ ನಿರ್ಧರಿಸಲ್ಪಡುವವರೆಗೆ ವಿಗ್ರಹವನ್ನು ಗೂಡಿನಲ್ಲಿಡಕೂಡದೆಂದು ಡೈರೆಕ್ಟರು ತಮ್ಮ ಆಲೋಚನಾ ಶಕ್ತಿಯನ್ನು ಉಪಯೋಗಿಸಿ, ಹುಕುಂ ಮಾಡಿದುದರಲ್ಲಿ ತಪ್ಪೇನೂ ಇಲ್ಲ.

ಇಷ್ಟರವರೆಗೆ ಯಾರನ್ನು ಆಕ್ಷೇಪಿಸುವುದಕ್ಕೂ ಯಾವ ಕಾರಣವೂ ಇಲ್ಲ. ನಾವು ಈ ಅಭಿಪ್ರಾಯಪಡುವಾಗ, ಡೈರೆಕ್ಟರೂ ಮ್ಯುನಿಸಿಪಲ್ ಪ್ರೆಸಿಡೆಂಟರೂ ಒಂದೇ ಮತಕ್ಕೆ ಸೇರಿದವರೆಂಬ ಭಾವನೆಯು ನಮ್ಮ ಮನಸ್ಸಿನ ಮೇಲೆ ಯಾವ ಪರಿಣಾಮವನ್ನೂ ಉಂಟುಮಾಡಲಿಲ್ಲ.

ಈ ವಿಚಾರದಲ್ಲಿ ತಪ್ಪು ಎಲ್ಲಿ ನಡೆಯಿತೆಂದರೆ, ಪ್ರತಿಯೊಬ್ಬರೂ (ಸರ್ಕಾರದವರು, ಮಿ॥ ಅಬ್ಬಾಸ್‌ಖಾನರು, ಡೈರೆಕ್ಟರು) ಗಣಪತಿ ಸ್ಥಾನಪಲ್ಲಟದ ನಿಜಕಾರಣವನ್ನು ಕಂತೆಯಲ್ಲಿ ಮುಚ್ಚಿಟ್ಟುಕೊಂಡು ತಮ್ಮ ನಡತೆಯಿಂದ ಜನರಲ್ಲಿ ಸಂದೇಹವುಂಟಾಗುವಂತೆ ಮಾಡಿದರು. ಆದರೆ ಜನರಿಗೆ ಮಾತ್ರ ನಿಜಾಂಶವು ಹೇಗೋ ಗೊತ್ತಾಗಿಹೋಯಿತು. ಉದಾಹರಣೆಗೆ, ಮಿ॥ ಅಬ್ಬಾಸ್‌ಖಾನರು ಈ ವಿಚಾರದಲ್ಲಿ ತಾವು ಕೈಹಾಕಲೇ ಇಲ್ಲವೆಂದು ಹಿಂದೂ ಪಂಚಾಯಿತಿಯ ಸಂಪಾದಕರಿಗೆ ತಿಳಿಸಿದ್ದಾರೆ ಮತ್ತು ವಿಗ್ರಹವನ್ನು ಸ್ವಸ್ಥಾನದಲ್ಲಿಡಿಸುವುದಕ್ಕಾಗಿ ಮ್ಯುನಿಸಿಪಲ್ ಕೌನ್ಸಿಲರುಗಳೆಲ್ಲರೂ ಸಹಿ ಒರೆದ ಕಾಗದಕ್ಕೆ ಮಿ॥ ಅಬ್ಬಾಸ್‌ಖಾನರೂ ತಮ್ಮ ಸಮ್ಮತಿಯನ್ನು ಸೂಚಿಸಿ ರುಜುಹಾಕಿದ್ದಾರೆ, ಡೈರೆಕ್ಟರ ನಡತೆ, ಸರ್ಕಾರದ ಮೊದಲನೆ ಪ್ರೆಸ್ ಕಮ್ಯುನಿಕೆ, ಆಗಸ್ಟ್ 3 ನೇ ತಾರೀಖಿನಲ್ಲಿ ನಡೆದ ಕಾಂಫರೆನ್ಸಿನಲ್ಲಿ ನಡೆದ ಚರ್ಚೆ ಇವುಗಳೆಲ್ಲದರಿಂದಲೂ, ಡೈರೆಕ್ಟರೇ ಖಾಸಾ ಆಗಿ ಹೇಳಿದ್ದಲ್ಲದೆ, ವಿಗ್ರಹವನ್ನು ಸ್ವಸ್ಥಾನದಲ್ಲಿಟ್ಟಿದ್ದರೆ ಯಾವ ತೊಂದರೆಯೂ ಆಗುತ್ತಿರಲಿಲ್ಲವೆಂದೂ ಅವರು ಹುಕುಂ ಮಾಡುವುದಕ್ಕೆ ಮೊದಲು ಕಾರಣದ ಬಗ್ಗೆ ಯೋಚಿಸಬೇಕಾಗಿತ್ತೆಂದೂ ಗೊತ್ತಾಗುತ್ತದೆ. ಆಗಲೂ ಪ್ರಕರಣವನ್ನು ಮುಚ್ಚಿಡಲು ಯತ್ನಿಸುತ್ತಿದ್ದರು. ಹುಡುಗರ ವಿಗ್ರಹವು ಎಂದಿನಂತೆ ಅದರ ಸ್ಥಳದಲ್ಲಿ ಇಡಬಹುದೆಂದಾಗಲೇ ಹುಕುಂ ಮಾಡಬಹುದಾಗಿತ್ತು. ಈ ರೀತಿ ಮಾಡಿದ್ದರೆ ಯಾವ ದೊಂಬಿಗೂ ಅವಕಾಶವಿರಲಿಲ್ಲ.

ಜುಲೈ 30 ನೇ ತಾರೀಖಿನ ದಿನ ಏನು ನಡೆಯಿತು

ಸೆಂಟ್ರಲ್ ಜೈಲಿನ ಹತ್ತಿರ ಸವಾರರ ಮೇಲೆ ಕಲ್ಲುಗಳ ಸುರಿ ಮಳೆ ಬಿದ್ದಿತು, ಸವಾರರು, ಹುಡುಗರನ್ನು ಮತ್ತು ಅವರಿಗೆ ಸಹಾಯಕರಾಗಿದ್ದ ದೊಡ್ಡವರನ್ನು ಮಾತ್ರವೇ ಅಲ್ಲದೆ, ದಾರಿಯಲ್ಲಿ ಹೋಗುತ್ತಿದ್ದ ಇತರರನ್ನು ಅವರೂ ಕೂಡ ಭಾಗಿಗಳಾಯಿರುತ್ತಾರೆಂದು ತಿಳಿದು, ಓಡಿಸಿಕೊಂಡು ಹೋದರೆಂಬುದು ನಮಗೆ ನಿರ್ಧರಿಸಲ್ಪಟ್ಟಿದೆ. ಅಲ್ಲದೆ ಕೆಲವು ಸಂದರ್ಭಗಳಲ್ಲಿ ಸವಾರರು ಹುಡುಗರನ್ನು ಮತ್ತು ಇತರರನ್ನು ಹೆದರಿಸುವುದಕ್ಕಾಗಿ ಅವರ ಕಡೆಗೆ ತಮ್ಮ ಭರ್ಜಿಗಳನ್ನು ತೋರಿಸಿದುದೂ ನಿಜ; ಆದರೆ ಯಾರೊಬ್ಬರಿಗೇ ಆದರೂ ನೋವನ್ನುಂಟುಮಾಡಬೇಕೆಂದು ಅವರು ಆ ರೀತಿ ಮಾಡಲಿಲ್ಲ. ಹಾಗೆ ಮನಃಪೂರ್ವಕವಾಗಿ ಆಯುಧಗಳನ್ನು ಉಪಯೋಗಿಸಿದ್ದರೆ ಅನೇಕ ಅಪಾಯಗಳು ನಡೆದು ಹೋಗುತ್ತಿದ್ದುವು. ಬೊಕ್ಕಣ್ಣನೆಂಬ ಹುಡುಗನಿಗೆ ಏಟುಬಿದ್ದಿದೆಯೆಂಬುದು ನಮ್ಮ ಗಮನಕ್ಕೆ ತರಲ್ಪಟ್ಟಿದೆ. ಇದು, ಬಹುಶಃ ಅಕಸ್ಮಾತ್ ತಗುಲಿದ ಭರ್ಜಿ ಏಟಾಗಿರಬೇಕು. ಕಾರ್ಪೊರೇಷನ್ ಹತ್ತಿರ ಹುಡುಗರನ್ನು ಚದರಿಸುವುದು ಅಸಾಧ್ಯವಾಗಿತ್ತು, ಪಬ್ಲಿಕ್ ಆಫೀಸುಗಳ ಹತ್ತಿರ ಅವರ ನಡತೆಯು ಕೋಪವನ್ನುಂಟುಮಾಡತಕ್ಕದ್ದಾಗಿತ್ತು. ಜುಲೈ 29 ನೇ ತಾರೀಖಿನ ರಾತ್ರಿ ಅವರು ಸೆಂಟ್ರಲ್ ಜೈಲಿನೊಳಕ್ಕೆ ತಮ್ಮನ್ನು ಬಿಡಬೇಕೆಂದು ಗಲಾಟೆಮಾಡಿದರು. ಅದರ ಮಾರನೆ ದಿನ ಎಂದಾದರೂ ಅವರು ಅಲ್ಲಿಗೆ ದೊಡ್ಡ ದೊಡ್ಡ ಗುಂಪಾಗಿ ಹೋಗಿದ್ದರು. ಹುಡುಗರು ತೋರಿಸಿದ ಈ ವಿಧವಾದ ಅತಿಯಾದ ನಡತೆಯು ಸರಿಯಾದುದಲ್ಲ. ಗುಂಪಿನಲ್ಲಿ ಅನೇಕ ದೊಡ್ಡವರೂ ಸೇರಿದ್ದುದರಿಂದ ಗುಂಪನ್ನು ಚದುರಿಸುವುದಾವಶ್ಯಕವಾಗಿತ್ತು, ಇಲ್ಲದಿದ್ದರೆ ಅದು ಅನಾಹುತಕ್ಕೆ ಎಡೆಗೊಡುತ್ತಿತ್ತು. ಇದ್ದ ಪೊಲೀಸಿನವರನ್ನೆಲ್ಲಾ ಪಟ್ಟಣದ ಬೇರೆ ಬೇರೆ ಭಾಗಗಳಿಗೆ ಕಳುಹಿಸಿದ್ದುದರಿಂದಲೂ ಪೊಲೀಸ್ ಸಿಬ್ಬಂದಿಯು ಜಾಸ್ತಿ ಇಲ್ಲದಿದ್ದುದರಿಂದಲೂ, ಶಾಂತಿಯನ್ನು ಸ್ಥಾಪಿಸುವುದಕ್ಕಾಗಿ ಮಿಲಿಟರಿಯವರ ಸಹಾಯವನ್ನಪೇಕ್ಷಿಸಿದುದು ಅವಶ್ಯವಾಗಿತ್ತೆಂದು ನಾವು ಅಭಿಪ್ರಾಯಪಡುತ್ತೇವೆ, ಸರ್ಕಾರಿ ಅಧಿಕಾರಿಗಳು ಮಿಲಿಟರಿಯವರನ್ನು ಕರೆಸಿದುದು ಬುದ್ಧಿವಂತಿಕೆಯ ಕೆಲಸವಾಡಿದಂತೆಯೇ ಆಯಿತು.

ಗಲಭೆ.

ಹುಡುಗರನ್ನು ಮಿ॥ ಅಬ್ಬಾಸ್‌ಖಾನರ ಮನೆಯೊಳಕ್ಕೆ ಎಳೆದುಕೊಂಡರೆಂದು ಕೆಲವು ಸಾಕ್ಷಿಗಳು ಹೇಳಿದ್ದಾರೆ. ನಾಲ್ಕು ಹುಡುಗರು ಮಿ॥ ಅಬ್ಬಾಸ್‌ಖಾನರ ಮನೆಯ ಮಹಡಿಮೇಲೆ, ಮಂಚದ ಕೆಳಗೆ ಮಲಗಿಕೊಂಡು, ಬಿದ್ದಿದ್ದರೆಂದು ಒಬ್ಬ ಸಾಕ್ಷಿಯು ಹೇಳಿದ್ದಾರೆ. ಮಿ॥ ಅಬ್ಬಾಸ್‌ಖಾನರ ಮನೆಯಲ್ಲಿ ಒಂದು ಕೊಠಡಿಯನ್ನು ತೊಳೆಯುತ್ತಿದ್ದರೆಂದೂ ಆ ಕೆಲಸವನ್ನು ರಕ್ತಕಲೆಯು ಕಾಣದಂತೆ ಮಾಡುವುದಕ್ಕಾಗಿ ಮಾಡಿರಬಹುದೆಂದೂ, ಒಬ್ಬರು ಸಾಕ್ಷಿಯು ಹೇಳಿದ್ದಾರೆ. ಅಲ್ಲದೆ, ಒಂದು ಮೋಟಾರುಗಾಡಿಯಲ್ಲಿ ಎರಡಾವರ್ತಿ ಜನರನ್ನು ಮಿ॥ ಅಬ್ಬಾಸ್‌ಖಾನರ ಮನೆಯಿಂದ ಸಾಗಿಸಿದರೆಂದೂ, ಗೋಷಾ ಹಾಕಿದ್ದ ಒಂದು ಎತ್ತಿನ ಗಾಡಿಯಲ್ಲಿ ಇನ್ನೊಮ್ಮೆ ಸಾಗಿಸಿದರೆಂದೂ, ಇವುಗಳಲ್ಲಿ ಹೆಣಗಳನ್ನು ಸಾಗಿಸಿರಬಹುದೆಂದೂ ಅನೇಕ ಸಾಕ್ಷಿಗಳು ಸೂಕ್ಷ್ಮವಾಗಿ ಸಾಕ್ಷಿ ಕೊಟ್ಟಿದ್ದಾರೆ. ಆ ಮನೆ ಹತ್ತಿರ ಪೊಲೀಸಿನವರು ಇದ್ದರೂ ಆ ಗಾಡಿಗಳಲ್ಲಿ ಏನಿತ್ತೆಂಬುದನ್ನು ಗೊತ್ತುಮಾಡಲಿಲ್ಲ.

ನಮಗೆ ದೊರಕಿರುವ ರುಜುವಾತುಗಳನ್ನು ಪರಿಶೀಲಿಸುವುದರಲ್ಲಿ, ಎತ್ತಿನ ಗಾಡಿಯು ಹೋಯಿತೆಂಬುದು ನಿರ್ಧರಿಸಲ್ಪಡುವುದಿಲ್ಲ. ಹುಡುಗರಾಗಲೀ ದೊಡ್ಡವರಾಗಲಿ ಕೊಲ್ಲಲ್ಪಟ್ಟರೆಂಬುದನ್ನು ನಾವು ನಂಬಲಾರೆವು. ಯಾರಾದರೂ ಕೊಲ್ಲಲ್ಪಟ್ಟಿದ್ದರೆ ಹುಡುಗರು ಪತ್ತೆಯಾಗಲಿಲ್ಲವೆಂದು ರುಜುವಾತು ಸಿಕ್ಕುತ್ತಿತ್ತು. ತಂದೆತಾಯಿಗಳೂ ಅಕ್ಕಪಕ್ಕದ ಮನೆಗಳವರೂ ಸುಮ್ಮನಿರುತ್ತಿರಲಿಲ್ಲ. ನಾವು ಬಹಳ ಎಚ್ಚರಿಕೆಯಿಂದ ತನಿಖೆ ನಡೆಸಿದೆವು. ಈ ವಿಚಾರದಲ್ಲಿ ಸಿಕ್ಕಬಹುದಾದ ರುಜುವಾತುಗಳು ನಮಗೆ ಸಿಕ್ಕುವಂತೆ ಅವಕಾಶ ಕಲ್ಪಿಸಿದ್ದೆವು. ಆದರೂ, ಕೊನೆ ದಿವಸ ವಿಚಾರಣೆವರೆಗೂ, ಯಾರು ತಪ್ಪಿಸಿಕೊಂಡಿರುವುದಕ್ಕೂ ಯಾವ ರುಜುವಾತೂ ಬರಲಿಲ್ಲ. ಹುಡುಗರನ್ನು ಒಳಕ್ಕೆ ಎಳೆದುಕೊಂಡರೆಂಬ ಕಥೆಗಳನ್ನು ಕೇಳಿ ಸಾಕ್ಷಿಗಳು ಈ ರೀತಿ ಅಭಿಪ್ರಾಯಪಟ್ಟು ಹೇಳಿಕೆ ಕೊಟ್ಟಿರಬಹುದು, ಅಲ್ಲದೆ ಗಲಭೆಯಾದ ರಾತ್ರಿ ಜನರು ಮ॥ ಅಬ್ಬಾಸ್‌ಖಾನರ ಮನೆಗೆ ಹೋಗಿ ಬರುತ್ತಲೇ ಇದ್ದರೆಂದು ವ್ಯಕ್ತಪಟ್ಟಿದೆ. ಒಳಗಡೆ ಏನಾದರೂ ಅಪಾಯವೇ ನಡೆದಿದ್ದರೆ, ಒಳಗಿನವರು ಜನರು ಆ ರೀತಿ ಒಳಕ್ಕೆ ಬರುವುದಕ್ಕೆ ಅವಕಾಶ ಕೊಡುತ್ತಿರಲಿಲ್ಲ. ಮೋಟಾರ್ ಡ್ರೈವರ್ ಚೆನ್ನಸ್ವಾಮಿಯ ಹೇಳಿಕೆಯು ಸಂಭವನೀಯವಾದುದಲ್ಲ.

ಪ್ಯಾಸಿಕಲ್ ಸ್ಕೂಲಿನಿಂದ ಗುಂಡು ಹಾರಿಸಿದರೆಂಬುದಕ್ಕೆ ಬೇಕಾದಷ್ಟು ರುಜುವಾತು ಬಂದಿದೆ. ಆ ಗುಂಡುಗಳನ್ನು ಆಕಾಶಕ್ಕೆ ಹಾರಿಸಿರಬಹುದು. ಎರಡು ಮೂರು ಗುಂಡುಗಳು ಸ್ಕೂಲಿನ ಎದುರುಗಡೆಯಿಂದಲೂ ಹಾರಿಸಲ್ಪಟ್ಟವು. ದೊಡ್ಡವರು, ಚಿಕ್ಕವರು, ಯುವಕರು, ಮುದುಕರು, ಮೊದಲಾದ ಅನೇಕ ಸಾಕ್ಷಿಗಳ ಹೇಳಿಕೆಯಿಂದಲೂ, ಆಸ್ಪತ್ರೆಯಲ್ಲಿ ದೊರಕಿರುವ ರುಜುವಾತಿನಿಂದಲೂ ನಾವು ಈರೀತಿ ನಿರ್ಧರಿಸಬಹುದಿದೆ. ಸ್ಕೂಲಿನ ಎದುರುಗಡೆಯಿಂದ ಗುಂಡುಗಳು ಬಂದುದನ್ನು ತಾವು ನೋಡಲಿಲ್ಲವೆಂದು ಗೌರವಸ್ಥರಾದ ಅನೇಕ ಸಾಕ್ಷಿಗಳು ಹೇಳಿರುವುದು ನಮಗೆ ಗೊತ್ತಿದೆ, ಪ್ಯಾಸಿಕಲ್ ಸ್ಕೂಲಿನಿಂದ ಹಾರಿಸಿದ ಗುಂಡು ಹಾರಿದ ಶಬ್ದವನ್ನು ಕೇಳುತ್ತಲೆ ಉಂಟಾದ ಗಲಭೆಯಿಂದಲೂ, ಪ್ರತಿಯೊಬ್ಬರೂ ತಮ್ಮ ಪ್ರಾಣರಕ್ಷಣೆಗಾಗಿ ಓಡುತ್ತಿದ್ದ ಆತುರದಲ್ಲಿಯೂ, ಈ ಸಾಕ್ಷಿಗಳು ಸ್ಕೂಲಿನ ಎದುರುಗಡೆಯಿಂದ ಗುಂಡುಗಳು ಬಂದುದನ್ನು ನೋಡದಿರಬಹುದು. ಬಹುಶಃ ಇಬ್ಬರಿಗೆ ಏಟು ಬಿದ್ದಿರಬಹುದು. ಒಬ್ಬನಿಗಂತೂ ಏಟುಬಿದ್ದಿದೆ. ಸ್ಕೂಲು ಎದುರುಗಡೆಯಿಂದ ಗುಂಡಿನ ಏಟು ತಗುಲಿದವರ ಪೈಕಿ ದರ್ಜಿ ಸುಬ್ಬ ಮತ್ತು ಚಂದ್ರರಾಜರು ಒಬ್ಬರು. ನಾಗಿದ್ದಾನೆ. ಪ್ಯಾಸಿಕಲ್ ಸ್ಕೂಲಿನಿಂದ ಆಕಾಶಕ್ಕೆ ಗುಂಡು ಹೊಡೆದುದನ್ನು ಸಂಚಿಯಾಗಿ ತಗೆದುಕೊಂಡು, ಸ್ಕೂಲು ಎದುರುಗಡೆಯಿಂದ ಗುಂಡು ಹಾರಿಸಿದವರು ಗುರಿಯಿಟ್ಟು ಹಾರಿಸಿರಬಹುದೆಂದು ತೋರುತ್ತದೆ.

ಪ್ಯಾಸಿಕಲ್ ಸ್ಕೂಲಿನಿಂದಲೂ, ಸ್ಕೂಲು ಎದುರುಗಡೆಯಿಂದಲೂ ಗುಂಡುಗಳು ಹಾರಿಸಲ್ಪಟ್ಟದು ನಿಜವೆಂದು ಸಾಕ್ಷಿಯು ಹೆಚ್ಚುಕಡಿಮೆ ಸರ್ವಸಮ್ಮತ ಅಭಿಪ್ರಾಯ ಪಡೆಸಿದ್ದಾರೆ. ಸ್ಕೂಲಿನ ಎದುರುಗಡೆಯಿಂದ ಬಂದ ಗುಂಡುಗಳು, ಮಿ॥ ಅಬ್ಬಾಸ್‌ಖಾನರ ಮನೆಯಿಂದಲೋ, ಅವರ ಪಕ್ಕದ ಅಂಗಳದಿಂದಲೋ, ಅಥವ ಸ್ಕೂಲು ಕಾಂಪೌಂಡ್ ಗೋಡೆಯ ಮುಂದಿನ ರಸ್ತೆಯಿಂದಲೋ ಹಾರಿಸಲ್ಪಟ್ಟವು.

ನಮ್ಮ ಸಹೋದ್ಯೋಗಿಯಾದ ಮಿ॥ ಜಿ. ಎ. ಕರಾಮತ್‌ಹುಸೇನರು ಗುಂಡು ಹಾರಿಸಲ್ಪಟ್ಟಿತೆಂಬುದನ್ನು

ಈ ಲಘಾಷ್ಟ್ರಯದಲ್ಲಿ ಸಮಯಾನುಗಿರುವ ಅಭಿಪ್ರಾಯಗಳ ವಿಷಯವಾಗಿ ನಾವು ಯಾಗೆ ಅಭಿಪ್ರಾಯವನ್ನು ಕೊಡುತ್ತಿಲ್ಲವೆಂಬು ಶ್ರೀ ಬಿ ನಾಯಿಡು ಹೇಳಿದ್ದಾರೆ ಏಕೆಂದರೆ ಇಲ್ಲಿ ೨೧ ನೇ ಕಾಲಿಂದಿನ ದಳಿತ ನಾವು ಸಹಾಯಕರಾಗಬೇಕು ಅವುಗಳಿಗೆ ಅಭಿಪ್ರಾಯ ಕೊಡುವುದಕ್ಕಾಗಿ ಸಾಧ್ಯ ಸಂಗತಿಗಳನ್ನು ನೇರಾ ಜನರು ಬಯಸುತ್ತಾರೆ

ಜನ ಹಿಡಿದಿದ್ದವರು ಖಾನಾಟಿ ಮಿ|| ಅಬ್ಬಾಸ್‌ಖಾನರ ಪತ್ನಿಯಾಗಿ ಅವರ ಮನೆಯ ಅಂಗಳದಲ್ಲಿ ಸೇರಿರಬಹುದು, ಆದುದರಿಂದ ಅವರು ಅಲ್ಲಿ ಸೇರಿದ್ದರೆಂಬುದು ಮಿ|| ಅಬ್ಬಾಸ್‌ಖಾನರಿಗೆ ಗೊತ್ತಿದ್ದಿರಬೇಕು. ಮುಸಲ್ಮಾನರು ವಿಗ್ರಹದ ಕಡೆಗೆ ಕಲ್ಲುಗಳನ್ನೂ ಜೋಡುಗಳನ್ನೂ ಎಸೆದುದರಿಂದ ಗಲಭೆಯು ಪ್ರಾರಂಭವಾಯಿತು. ಗುಂಪಿನವರ ಉತ್ಸಾಹವು ಮುಸಲ್ಮಾನರನ್ನು ರೇಗಿಗೆ ಹಚ್ಚಿರಬಹುದು, ಆದರೆ ಅಷ್ಟು ಮಾತ್ರಕ್ಕೆ ಅವರು, ಜನರ ಮೇಲೆ ಬಿದ್ದು ಹೊಡೆದು ಅನಾಹುತಗಳನ್ನು ನಡೆಸಿದದು ಸರಿಯಾದುದಲ್ಲ. ಮಿ|| ಅಬ್ಬಾಸ್‌ಖಾನರ ಮನೆಯಲ್ಲಿ ಸೇರಿದ್ದ ಮತ್ತು ಸುತ್ತಮುತ್ತ ಗಲ್ಲಿಗಳಿಂದ ಬಂದ ಮುಸಲ್ಮಾನರು, ಕಾರಣವಿರಲಿ, ಇಲ್ಲದಿರಲಿ, ಜಗಳ ನಡೆಸಬೇಕೆಂದು ನಿರ್ಧರಿಸಿಕೊಂಡು ಅದಕ್ಕಾಗಿ ಬಂದಿದ್ದರೆಂದೇ ನಾವು ಅಭಿಪ್ರಾಯಪಡುತ್ತೇವೆ. ಆದಿನದ ಮತ್ತು ಅದರ ಹಿಂದಿನ ದಿನಗಳ ಕಾರ್ಯಕಲಾಪಗಳಿಂದ ಅನೇಕ ಮುಸಲ್ಮಾನರು ರೇಗಿದವರಾಗಿದ್ದರು.

ಗಲಭೆ ಪ್ರಾರಂಭಿಸುವುದಕ್ಕೆ ಹುಡುಗರಿಗೆ ಯಾವ ಉದ್ದೇಶವೂ ಇರಲಿಲ್ಲ. ಆದರೆ ಅವರು ಮಿ|| ಅಬ್ಬಾಸ್‌ಖಾನರ ಫ್ಯಾಕ್ಟರಿಯ ಕಲ್ಲು ಹಾಕುತ್ತಿದ್ದುದು ನಿಜ, ಆದರೆ, ಅವರ ಮನೆಯಿಂದ ಮುಸಲ್ಮಾನರು ವಿಗ್ರಹದ ಮೇಲೆ ಕಲ್ಲೆಸೆದರು. ಸ್ಕೂಲಿನ ಹತ್ತಿರ ದೊಂಬಿ ಮಾಡಬೇಕೆಂಬು ಮುಸಲ್ಮಾನರು ಬಹಳ ದಿನಗಳಿಂದಲೂ ಸಿದ್ಧಪಡಿಸಿಕೊಂಡಿದ್ದರೆಂಬುದಕ್ಕೆ ನಮಗೆ ರುಜುವಾತು ಬಂದಿಲ್ಲ. ಆದರೆ, ಸ್ಕೂಲಿನಹತ್ತಿರ ಮೆರವಣಿಗೆ ಬರುತ್ತದೆಂಬುದು ತಮಗೆ ಗೊತ್ತಿರಲಿಲ್ಲವೆಂದು ಮುಸಲ್ಮಾನರು ಹೇಳುವುದನ್ನು ನಾವು ಒಪ್ಪುವುದಿಲ್ಲ. ಆದಿನ ದಿವಾನ್‌ರಿಗೆ ಏಟು ಬಿದ್ದುದರಿಂದಲೂ, ಮಿ|| ಅಬ್ಬಾಸ್‌ಖಾನರ ಮನೆ ಮತ್ತು ಅದರ ಹಿಂದುಗಡೆಯಿರುವ ಮಸೀದಿಯನ್ನು ಮುತ್ತುವ ಸಂಭವವಿದೆಯೆಂದೂ ಆದಿನ ನಗರದಲ್ಲೂ ದಂಡಿನಲ್ಲೂ ಸಮಾಚಾರವು ಹರಡಿಹೋಗಿತ್ತು. ಮುಖಂಡರನ್ನು ಬಿಡುಗಡೆ ಮಾಡಿದಮೇಲೆ ಮಂಗಳರಾತಿ ನಡೆಯುವುದೆಂದು ಎಲ್ಲರಿಗೂ ತಿಳಿದಿತ್ತು. ಸೆಂಟ್ರಲ್ ಜೈಲಿನಿಂದ ಮೆರವಣಿಗೆ ಹೊರಟಮೇಲೆ, ಅದರ ಸಮಾಚಾರವು ಮುಸಲ್ಮಾನರಲ್ಲಿ ಹರಡುವುದಕ್ಕೆ ಬೇಕಾದಷ್ಟು ಕಾಲವ ವಕಾಸವಿತ್ತು. ಮುಸಲ್ಮಾನರು ಆಗಲೇ ರೇಗಿದ್ದರು, ವಿಗ್ರಹ ಸ್ಥಾನದಲ್ಲಿಟ್ಟುದೂ, ಮುಖಂಡರನ್ನು ಬಿಟ್ಟುದೂ, ಅವರನ್ನು ಮತ್ತಷ್ಟು ರೇಗಿಸಿ, ದೊಂಬಿನಡೆಸುವಷ್ಟರ ಮಟ್ಟಿಗೆ ಮಾಡಿದುವು. ಜಯಶಾಲಿಗಳಾಗಿ ಬಂದೆವೆಂಬ ಗುಂಪಿನ ಜನರ ಉತ್ಸಾಹವು ಮುಸಲ್ಮಾನರನ್ನು ಇನ್ನೂ ರೇಗಿಸಿತು. (ಸಶೇಷ)

ಸ್ವೀಕಾರ.

ಶ್ರೀ|| ವೀರಸಂಗಪ್ಪನವರ ಅಗ್ರತಾಂಬೂಲಸಂಭಾವನೆಯ ಬಗೆಗೆ ಈ ಕೆಳಗೆ ಕಂಡ ವಿವಾಹ ಮೊದಲಾದ ಶುಭಕಾರ್ಯಗಳಲ್ಲೂ ಇತರ ಸಂದರ್ಭಗಳಲ್ಲೂ ತೆಗೆದು ಕಳುಹಲ್ಪಟ್ಟ ಮೊಬಲಗನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿರುತ್ತೇವೆ—ಸಂ.

ಚಿತ್ರದುರ್ಗ ಡಿ|| ಬಳಬೋಡಲ್ಲಿರುವ ಮ|| ಗುಂಡಾಭಕ್ತ ಭೀಮಪ್ಪನವರಿಗೂ ಕಮಟಗಲ್ಲು ಮ|| ಗುಂ. ಏಕಾಂತಪ್ಪನವರ ಪುತ್ರಿ ಸೌ|| ಲಿಂಗಮ್ಮನಿಗೂ ನಡೆದ ವಿವಾಹಮಹೋತ್ಸವದಲ್ಲಿ ೧ ರೂ. ಬಳಬೋಡು ಮ|| ಗುಂಡಾಭಕ್ತ ಚಿಕ್ಕಪ್ಪನವರಿಗೂ ಆನುಬೊಂಡದ ಸೌ|| ಗುಂ. ಶಾಂತಮ್ಮನಿಗೂ ನಡೆದ ವಿವಾಹಮಹೋತ್ಸವದಲ್ಲಿ ೧ ರೂ. ಬಳಬೋಡು ಮ|| ಗುಂ. ಬಸವಲಿಂಗಪ್ಪನಿಗೂ ಕಮಟಗಲ್ಲು ಸೌ|| ಗುಂ ಸಣ್ಣಗೌರಮ್ಮನಿಗೂ ನಡೆದ ವಿವಾಹದಲ್ಲಿ ೧ ರೂ. ಮೇಲ್ಕಂಡ ೩ ರೂಪಾಯಿಗಳು ಬಳಬೋಡು ಚರಂತಿಮಠದ ಶ್ರೀ|| ರುದ್ರಾರಾಧ್ಯರ ಮೂಲಕ ಬಂದಿದೆ.

ಪತ್ರವ್ಯವಹಾರ.

ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು—ಸಂಪಾದಕ.

ಜಾತ್ರೆಯ ಜಾಹೀರಾತ್.

ಧಾರವಾಡ ಜಿಲ್ಲಾ ಲಿಜಗಿ ತಾಲ್ಲೂಕು ಹೊಸರಿತ್ತಿಯಲ್ಲಿ ಶ್ರೀ ಗುದ್ದಿಸ್ವಾಮಿಗಳವರ ಜಾತ್ರೆಯು ದಿನವರ್ಷದಂತೆ ಇದೇ ಪುಷ್ಯ ಶು ೧೫ ಶುಕ್ರವಾರ ತಾರೀಖು 25 1 29 ದಿವಸ ರಥೋತ್ಸವವೂ, ಬಹುಳ ೧ ತಾ 26-1-29 ದಿವಸ ಕಡುಬಿನ ಕಾಳಗವೂ, ಬಹುಳ ೨ ಯಿಂದ ಬಹುಳ ೬ ರ ವರೆಗೆ ಅಂದರೆ ತಾ|| 27 1 29 ರಿಂದ 2 2 29 ರ ವರೆಗೆ ಕುಸ್ತಿ ಸಂಗೀತ ಮುಂತಾದ ನೇತ್ರಾನಂದ ಕರ್ಣಾನಂದ ಉತ್ಸವಗಳೂ ವೀರಶೈವ ಸಮಾಜೋತ್ಕರ್ಷ ಸಭೆಗಳೂ ಒತ್ತಟ್ಟಕರವ ಪ್ರದರ್ಶನಗಳೂ ನಡೆಯುತ್ತವೆ. ಈ ಜಾತ್ರೆಯಲ್ಲಿ ಹತ್ತು ಸಾವಿರಗಳವರೆಗೆ ಜೋಡಿಗಳು ಮಾರಾಟಕ್ಕೆ ಬರುತ್ತವೆ. ಈ ಊರಿನಲ್ಲಿ ಇದರ ನೆರೆಯಲ್ಲೂ ಮನುಷ್ಯರ ಮತ್ತು ದನಕರುಗಳ ಯಾವ ತರದ ರೋಗಾದಿಗಳಿಲ್ಲ. ಈ ಊರಿನಿಂದ ಹಾವೇರಿ ಸ್ಟೇಷನ್ನಿಗೆ ಮೋಟಾರ್‌ಸರ್ವಿಸ್ ಇದೆ. ಕಾರಣ ಜಾತ್ರೆಗೆ ಬರತಕ್ಕವರು ಮತ್ತು ದನಗಳನ್ನು ಮಾರುವವರೂ ಕೊಳ್ಳುವವರೂ ಬಂದು ಲಾಭಪಡೆಯಬೇಕು.

ವಿ. ನ. ಕಲ್ಕೋಟಿ, ವ್ಯವಸ್ಥಾಪಕ

ಸಮಾರಾಧನೆ ಮಹೋತ್ಸವ

ಚಾಮರಾಜನಗರದ ತಾಲ್ಲೂಕು ಮರಿಯಾಲಮಠದ ಶ್ರೀಮದ್ರಂಭಾಪುರಿ ವೀರಸಿಂಹಾಸನ ಸೂತ್ರಾನುವರ್ತಿಗಳಾದ ಬ್ರಹ್ಮ ಶ್ರೀ|| ಮಹಂತಸ್ವಾಮಿಯವರು ತಮ್ಮ ಶ್ರೀಗುರುವರ ಪುಣ್ಯರಾಧನೆಯರುವ ಆರಾಧನೆಯನ್ನು ತಾ|| 3-1-29 ಗುರುವಾರ ಸುಮಾರು ಮೂರುಸಾವಿರ ಸಾವಿರ ಭಕ್ತಮಾಹೇಶ್ವರರೊಡನೆ ಬಹಳ ವಿಜೃಂಭಣೆಯಿಂದ ಶಾಂತವಾಗಿ ನೆರವೇರಿಸಿದರು. ಈ ಸಂದರ್ಭದಲ್ಲಿ ಉಗ್ರಲಿಗೆ ಚಿಟ್ಟಮಠದ ಬ್ರ|| ಶ್ರೀ|| ಪಿ|| ಏರಕೈಸ್ವಾಮಿಯವರ ಪಾದಪೂಜೆಯು ವೇದಘೋಷದೊಡನೆ ನೆರವೇರಿದಮೇಲೆ ಸದರಿ ಸ್ವಾಮಿಯವರ ಹುವನಸಾಲೀಯಿತ್ತವವು ಪುರಾಣಾದಿಗಳಲ್ಲಿ ವಾದ್ಯವೃಂದದಿಂದ ಸಾಂಗವಾಗಿ ನೆರವೇರಿತು. ತಾ|| 4-1-29 ನೇ ಶುಕ್ರವಾರ ಬೆಳಿಗ್ಗೆ ಮೇಲ್ಕಂಡ ಮಹಾಂತಸ್ವಾಮಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಮರಕಡು ವೇ|| ಎಂ. ಮಹದೇವಶಾಸ್ತ್ರಿಗಳವರು ಗುರುಪೂಜೆಯ ವಿಷಯದಲ್ಲಿ ಬಹಳ ಸ್ವಾರಸ್ಯವಾಗಿ ಉಪನ್ಯಾಸಮಾಡಿದರು. ಅನಂತರ ಕೊಳ್ಳೇಗಾಲದ ವೇ|| ಶಿವಬಸವಶಾಸ್ತ್ರಿಗಳವರು ಗುರುಭಕ್ತಿವಿಷಯದಲ್ಲಿ ಶಿವಕಥೆಯನ್ನು ಮಾಡಿದಮೇಲೆ ಶ್ರೀ ಮಹಾಂತಸ್ವಾಮಿಯವರಿಂದ ಮಹಾಜನಗಳಿಗೆ ಆಶೀರ್ವಾದ ನಡೆದು ನಮ್ಮಸ್ವಾಮಿಗಳ ಶ್ರೀಮನ್ಮಹಾರಾಜರವರಿಗೂ ಇವರ ಕುಟುಂಬವರ್ಗಕ್ಕೂ ಶ್ರೇಯಸ್ಸಾಗಬೇಕೆಂದು ಸಭೆಯು ಮುಕ್ತಾಯವಾಯಿತು.

ಗುರುಭಕ್ತ ಬಿ. ಬಿದ್ದಪ್ಪ,
ಮಲ್ಲಿಕಾರ್ಜುನ, ಮೈಸೂರು.

ಬೆಳಗಾಮ್ ಜಿಲ್ಲಾ ಯಾದವಾಡ ವೀರಶೈವ ಸಾಹಿತ್ಯ ಸಭೆಯವರು ಮಿ|| ಎ. ಎಸ್. ನಂಜುಂಡಯ್ಯ, ಎ. ಎಲ್. ಡಿ. ಅವರಿಗೆ ಅರ್ಪಿಸಿದ ಸನ್ಮಾನಪತ್ರಿಕೆ.

ಈ ಸಭೆಯು ತಾ|| 31-12-28 ನೇ ಸೋಮವಾರ ಬೆಳ್ಳಿಕಟ್ಟಿ ತಾ|| ಶಿರಸ್ತೇದಾರ್, ರಾವ್‌ಸಾಹೇಬ್ ಬಸಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಭೆಗೆ ಕೆಲವು ಬಡವಟ್ಟ ಮಹಾಸ್ವಾಮಿಗಳೂ, ಆಗಲೇ ಜನ ವೀರಶೈವರು ನೀರಕಾರುತೆರರು ಸೇರಿದ್ದರು. ಈ ಸಭೆಯಲ್ಲಿ ವೀರಶೈವ ಧರ್ಮಸಂಬಂಧಿ ಅನೇಕ ಉಪನ್ಯಾಸಗಳೂ, ರಥಾವಗಳೂ ನಡೆದನಂತರ ಈ ಮೇಲ್ಕಂಡ ಎ. ಎಲ್. ಡಾಕ್ಟರ್‌ರವರ ಅನುಮತಿಯಿಂದ ಉಪನ್ಯಾಸವು ನಡೆಯಿತು. ಇವರ ಉಪನ್ಯಾಸವನ್ನೂ, ಇವರ ದೇಶಕಲ್ಯಾಣವ್ಯಾಪ್ತಿಯನ್ನು ನೋಡಿ, ಇವರು ಈ ಬೆಳ್ಳಿಕಟ್ಟಿಯಲ್ಲಿಯೇ ತಮ್ಮ ಬುದ್ಧಿ ಬಲದಿಂದ ಅನೇಕ ಜನ ಸಂಸಾರಿಗಳನ್ನು, ವಿದ್ಯಾರ್ಥಿಗಳನ್ನು ಸ್ವೀಕರಿಸಿ, ಇವರು ನಮ್ಮ ದೇಶಕ್ಕೆ ನಿಜ ದಯೆಮಾಡಿ, ಮಾಡುತ್ತಿರುವ ಅಸಾಧಾರಣವಾದ ಡಾಕ್ಟರ್ ಉದ್ಯೋಗವೂ, ದೇಶಸೇವೆ, ಸಮಾಜಸೇವೆ, ರಾಷ್ಟ್ರಸೇವೆ ಇತ್ಯಾದಿ ಕಾರ್ಯಗಳನ್ನು ಈ ಸಭೆಯವರು ನೋಡಿ, ಬಹಳವಾಗಿ ಸಂತೋಷಿಸಿ, ಸಮಸ್ತ ಸಭೆಯವರ ಇಷ್ಟಾನುಸಾರವಾಗಿ ಈ ಸನ್ಮಾನಪತ್ರಿಕೆಯನ್ನು ಇವರಿಗೆ ಅರ್ಪಿಸಿ ಭಗವಂತನು ಇವರಿಗೆ ಆಯ. ರಾರೋಗ್ಯ ಐಶ್ವರ್ಯಾಭಿವೃದ್ಧಿಯನ್ನು ದಯಪಾಲಿಸಿ ನಮ್ಮ ಇವರ ಕಾರ್ಯಗಳಿಗೆ ನಿರ್ವಿಘ್ನಪಡಿಸಲೆಂದು ಪ್ರಾರ್ಥಿಸಿದರು.

ಅಧ್ಯಕ್ಷರು

ಶ್ರೀ ಚಿರಮೂರ್ತಿಮಹಾಸ್ವಾಮಿಗಳು ಮುಳಿಮಠ ಯಾದವಾಡ. ರಾವ್‌ಸಾಹೇಬ್ ಬಸಪ್ಪನವರು ಶಿರಸ್ತೇದಾರ್ ಬೆಳ್ಳಿಕಟ್ಟಿ.

ಶ್ರೀ ಶಿವದೀಕ್ಷಾ ಸಂಸ್ಕಾರಸಮಾರಂಭ, ಯಾದವಾಡ.

ಈ ಮೇಲ್ಕಂಡ ದೀಕ್ಷಾ ಸಮಾರಂಭವು ಶ್ರೀ ಚಿರಮೂರ್ತಿಸ್ವಾಮಿಗಳವರ ಆದಿನ ಇವರ ವಿದ್ಯಮಠದಲ್ಲಿ ತಾ|| 31-12 28 ರಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು. ಈ ದೀಕ್ಷಾಸಂಸ್ಕಾರದಲ್ಲಿ ಶ್ರೀ ಚಿರಮೂರ್ತಿ ಮಹಾಸ್ವಾಮಿಗಳು ತಮ್ಮ ಬೊಮ್ಮಗನಾದ ಚಿ|| ಮುರಿಘೇಂದ್ರನ ಜತೆಯಲ್ಲಿ ಅನೇಕ ಜನ ವೀರಶೈವಬಡವಟಿಗಳಿಗೆ ಸಹ ದೀಕ್ಷಾಸಂಸ್ಕಾರವನ್ನು ಧರ್ಮಶಾಸ್ತ್ರವಾಗಿ ನೆರವೇರಿಸಿ, ನೂರಾರುದಿನಗಳು ಯಥೇಷ್ಟವಾಗಿ ಅನ್ನಸಂತರ್ಪಣೆಯನ್ನು ಮಾಡಿದರು ಈ ಸಮಾರಂಭಕ್ಕೆ ಕೆಲವು ಪಟ್ಟದಸ್ವಾಮಿಗಳು, ಅನೇಕಜನ ವೀರಶೈವರು ಮತ್ತು ಅವರ ಸಮಸ್ತ ಶಿಷ್ಯಮಂಡಳಿಯವರು ದೂರ ದೂರ ಪ್ರಾಂತ್ಯಗಳಿಂದ ಬಂದಿದ್ದರು. ಶ್ರೀ ಸ್ವಾಮಿಗಳು ಈ ದೀಕ್ಷಾಸಂಸ್ಕಾರಸಮಾರಂಭದ ಜ್ಞಾಪಕಾರ್ಥವಾಗಿ ಶ್ರೀ ಪಂಚಾಚಾರ್ಯಪ್ರಭಾಪತ್ರಿಕೆಗೂ, ಶ್ರೀ|| ವೀರಸಂಗಪ್ಪನವರ ಅಗ್ರತಾಂಬೂಲಕ್ಕಾಗಿ ಸ್ಟಾರ್ ಪತ್ರಿಕೆಗೂ ಎರಡೆರಡು ರೂಪಾಯಿಗಳನ್ನು ಪ್ರೋತ್ಸಾಹ ದ್ರವ್ಯವಾಗಿ ಸಹಾಯ ಮಾಡಿದರು. ಈ ಸಮಾರಂಭದ ದಿವಸ ಶ್ರೀ ಚಿರಮೂರ್ತಿಸ್ವಾಮಿಗಳ ಅಧ್ಯಕ್ಷತೆಯಲ್ಲಿ, ಬೆಳ್ಳಿಕಟ್ಟಿ ತಾಲ್ಲೂಕು ಶಿರಸ್ತೇದಾರ್ ರಾವ್‌ಸಾಹೇಬ್ ಬಸಪ್ಪನವರ ಮೊದಲಾದ ಪ್ರಮುಖರಿಂದ ಕೂಡಿದ ಪ್ರಚಂಡಸಭೆಯು ನಡೆಯಿತು. ಈ ಸಭೆಯಲ್ಲಿ ಶ್ರೀಮದಮೂರ್ತಿಸ್ವಾಮಿಗಳು ಮದರೂರು ಹಿರೇಮಠದವರು "ವೀರಶೈವ ಅನಾದಿಪ್ರಾಚ್ಯತ್ವ ಮತ್ತು ಅಸ್ಪಾವರ್ಣ" ವಿಚಾರದಲ್ಲಿ ಬಹಳ ಸ್ವಾರಸ್ಯವಾಗಿ ಉಪನ್ಯಾಸಮಾಡಿದರು. ಅನಂತರ ಮಿ. ಎ. ನಂಜುಂಡಯ್ಯ ಎ. ಎಲ್. ಡಾಕ್ಟರವರು "ವಿದ್ಯೆಯು ಶ್ರೇಷ್ಠತ್ವವೀರಶೈವಸಮಾಜದ ವಿದ್ಯಾಭಿವೃದ್ಧಿ, ಸ್ತ್ರೀವಿದ್ಯಾಭ್ಯಾಸ ಮತ್ತು ವೀರಶೈವಸಮಾಜದ ಮೂಲಗುರುಗಳ ಮತಸ್ಥಾಪನಕ್ರಮ" ಇವೇ ಮೊದಲಾದವುಗಳ ಮೇಲೆ ಬಹಳ ಗಂಭೀರವಾಗಿ ಅನೇಕ ದೃಷ್ಟಾಂತರಗಳಿಂದ ಉಪನ್ಯಾಸ ಮಾಡಿದರು, ಆಮೇಲೆ ಮಿ|| ಬಸವಲಿಂಗಪ್ಪ ಪಟ್ಟಣಶೆಟ್ಟರ ಇವರು "ಅಸ್ಪಾವರ್ಣವು ಆರೋಗ್ಯಕ್ಕೂ, ವೀರಶೈವಧರ್ಮಕ್ಕೂ ಮುಖ್ಯ ಸಹಕಾರಿಯಾಗಿದೆ" ಎಂಬುದನ್ನು ಅನೇಕ ಲೌಕಿಕ ಉದಾಹರಣೆಗಳಿಂದ ಉಪನ್ಯಾಸ ಮಾಡಿದರು ಮತ್ತು ರಾವ್‌ಸಾಹೇಬ್‌ಚೆಟ್ಟಿ ಶಿರಸ್ತೇದಾರ್‌ರವರು "ಅಷ್ಟಾವರ್ಣದಲ್ಲಿ ಭಸ್ಮ, ಲಿಂಗ" ಇವುಗಳ ವಿಚಾರವನ್ನು ಮತ್ತು ವೀರಶೈವರು ಧರ್ಮಾವಲಂಬಿಗಳಾಗಿ ಮುಂದಕ್ಕೆ ಬರಬೇಕಾದರೆ ಮಾಡಬೇಕಾದ ಉಪಾಯಗಳನ್ನು ಕುರಿತು ಬಹಳ ಚೆನ್ನಾಗಿ ಉಪನ್ಯಾಸ ಮಾಡಿದರು. ಹೀಗಲ್ಲಾ ಇನ್ನೂ ಅನೇಕ ಉಪನ್ಯಾಸಗಳು ನಡೆದನಂತರ ಸಭೆಯು ಶ್ರೀ ಸಂಚಾರ್ಯರ ಜಯಘೋಷದೊಡನೆ ಮುಕ್ತಾಯವಾಯಿತು. ಸಮಾಜ ಹಿತೈಷಿ

ವೀರಶೈವ ಮಹೋದ್ಧಾರಕರಮೇಲೆ ಆಕ್ಷೇಪಣೆ

1929 ನೆಯ ಜನವರಿ 7ನೇ ತಾರೀಖಿನ "ಪಂಚಾಚಾರ್ಯ" ಪತ್ರಿಕೆಯಲ್ಲಿ ಗುರುಭಕ್ತಕೇಸರಿ ಎಂಬ ನಾಮಧೇಯದ ಒಬ್ಬ ಲೇಖಕರು "ಮೈಸೂರು ಸ್ಟಾರ್" ಪತ್ರಿಕೆಯು ಬಹುಕಾಲದಿಂದ ಮತದ ಮೂಲಗುರುಗಳನ್ನು ಬ್ರಾಹ್ಮಣರನ್ನು ನಿಂದಿಸುತ್ತಾ ಬಂದಿರುವರೆಂದು ಬರೆದಿರುವನ್ನು ನೋಡಿ ನನಗೆ ಬಹಳ ವ್ಯಸನವೂ ಆಶ್ಚರ್ಯವೂ ಆಯಿತು. ಮೈಸೂರ್ ಸ್ಟಾರ್ ಪತ್ರಿಕೆಯು 1881 ನೇ ವರ್ಷದ ಲಾಗಾಯಿತು ಅವರೆಗೂ ಅಂದರೆ ಸುಮಾರು ಐವತ್ತು ವರ್ಷಗಳಿಂದ ವೀರಶೈವಮತ ಹಿತಕ್ಕಾಗಿಯೇ ಕೆಲಸಮಾಡುತ್ತಿದೆ. ಶ್ರೀ|| ವೀರಸಂಗಪ್ಪನವರು, ವೀರಶೈವಧರ್ಮ ರಕ್ಷಣೆಗಾಗಿ ಇಪ್ಪತ್ತು ವರ್ಷಗಳ ಕಾಲ ಹೋರಾಡಿದರು. ಅವರಿಂದಲೇ ಮಿ|| ವಿರೂಪಾಕ್ಷಯ್ಯನವರು ರಾಜಕೀಯ ವಿಷಯದಲ್ಲಿ ವೀರಶೈವಮತಕ್ಕೂ ಹಿಂದುಳಿದವರಿಗೂ ಹೋರಾಡಿದರು. ಮನುಷ್ಯ ಜನ್ಮವನ್ನು ಎತ್ತಿದಮೇಲೆ ಮತಕ್ಕಾಗಿಯೂ ದೇಶಕ್ಕಾಗಿಯೂ ಹೋರಾಡಬೇಕಾದದ್ದು ಪ್ರತಿಯೊಬ್ಬ ಸತ್ಪುರುಷನ ಕರ್ತವ್ಯವಾಗಿರುತ್ತದೆ. "ಮೈಸೂರು ಸ್ಟಾರ್" ಪತ್ರಿಕೆಯು ವೀರಶೈವ ಮತಕ್ಕಾಗಿ ದೇಹವನ್ನು ಅರಿಯುತ್ತ ಬಂದಿದ್ದಾಗ್ಗ ಗುರುಭಕ್ತಕೇಸರಿ ಎಂಬ ಹೆಸರಿನವರು ಗುರು ನಿಂದೆಯನ್ನೂ ಬ್ರಾಹ್ಮಣ ನಿಂದೆಯನ್ನೂ ಮಾಡಿದರೆಂದು ಬರೆದಿರುವುದು ನಿಷ್ಕಳಂಕವಾದ ಶಿವಶರಣರಲ್ಲಿ ದೋಷವನ್ನಾರೋಪಿಸಿದಂತಿರುತ್ತದೆ. ಏತಕ್ಕೆಂದರೆ—ಶಿವಾನುಭವ ಪತ್ರಿಕೆಯನ್ನು ಬರೆಯುವ ಮ|| ಹಳಕಟ್ಟಿ ಬಿ ಎ, ಎಲ್ ಎಲ್ ಬಿ, ಯವರೂ ಬಸವರಾಜಪತ್ರಿಕೆಯನ್ನು ಬರೆಯುವ ಮ|| ಚನ್ನಬಸಪ್ಪ ಮಲ್ಲಾಪುರ ಪೊಲೀಸ್ ಸೂಪರಿಂಟೆಂಡೆಂಟ್ ಮಿ|| ಹಾಲಪ್ಪನವರೂ, ಮೈಸೂರು ಸ್ಟಾರ್ ಪತ್ರಿಕೆಯನ್ನು ಬರೆಯುವ ಮ|| ವಿರೂಪಾಕ್ಷಯ್ಯನವರೂ ವೀರಶೈವಮತೋದ್ಧಾರಕ್ಕಾಗಿ ತಮ್ಮ ಕಾರ್ಯಗಳನ್ನು ಸವೆಸುತ್ತಿರುವರಾಗಿ ಇವರನ್ನು ನಾನು ಶರಣರೆಂದು ಭಾವಿಸುತ್ತೇನೆ. ಇಂತಹವರ ವಿಷಯದಲ್ಲಿ ನಿಷ್ಕಾರಣವಾಗಿ ಲಕ್ಷ್ಯವಿಟ್ಟು ಎಂಬಂತೆ ದೋಷಾರೋಪಣೆ ಮಾಡುವುದು ಒಳ್ಳೆಯ ಕೆಲಸವಲ್ಲ, ಸ್ಟಾರ್ ಪತ್ರಿಕೆಯು ಯಾವಾಗಲೂ ಗುರುನಿಂದೆಯನ್ನೂ ಬ್ರಾಹ್ಮಣನಿಂದೆಯನ್ನೂ ಮಾಡುವುದಿಲ್ಲ. ಶ್ರೀ|| ವೀರಸಂಗಪ್ಪನವರು ವೀರಶೈವರ ಗೌರವ ರಕ್ಷಣೆಗಾಗಿ ಪ್ರಮುಖರೂ ಬ್ರಾಹ್ಮಣರಲ್ಲಿ ಹೋರಾಡಿದರು. ಅದು ಬ್ರಾಹ್ಮಣದ್ವೇಷವೇನು? ನಮ್ಮ ಮನೆಯನ್ನು ನಾವು ಚೊಕ್ಕಟ ಮಾಡಿಕೊಂಡರೆ ಪರರ ಮನೆಗೆ ಕಲ್ಲೆಸೆದಂತಾಯಿತೇ? ಗುರುನಿಂದೆ-ಗುರುಭಕ್ತಕೇಸರಿ-ಗುರುವರ್ಗವರು ಎಂದು ಬರೆಯುತ್ತೇ ಇರುತ್ತಾರೆ. ನಮ್ಮ ಹಿಂದಿನ ಕಾಲದಲ್ಲಿ ಗುರು, ಲಿಂಗ, ಜಂಗಮ ಎಂಬ ವಾಡಿಕೆಗಳಿದ್ದವೇ ಹೊರತು, ಗುರುವರ್ಗವೆಂಬ ಸಂಕೇತವನ್ನು ನಾನು ಕೇಳಿದ್ದಿಲ್ಲ. ಆದು ಹಾಗಿರಲಿ, ಗುರುಶೈವರಿಗೆ ಅಷ್ಟಾವರಣಗಳು ನಿಜ ಶ್ರೇಷ್ಠವಾಗಿ ನಿಜವಾದ ಸಾಧನಗಳ ಎಂಬುದನ್ನು ಸಾಧಿಸುವುದರಿಂದ ಗುರು ನಿಂದೆಯನ್ನು ಮಾಡಿದಂತಾಗಲ್ಲ. ವೀರಶೈವರಿಗೆ ಕಿಕ್ಕಾಗಿ ಶೀಲವಾದ ಕಾರ್ಯಗಳನ್ನು ಹೊಂದಿಸುವವರು ಶಿವಭಕ್ತ ಬ್ರಾಹ್ಮಣರಾಗಲೇಕೆ ಎಂದು ಹೇಳಿದವರಿಂದಲೇ ಶಿವಗಣಂಗಳಲ್ಲಿ ಶಿವಭಕ್ತರು ವೈತನ್ಯಗಳಾಗಿ ಶಿವನಲ್ಲಿ ಐಕ್ಯವಾಗಿ ಸೇರುವವರು. ಅಲ್ಲದೆ ಶಿವರನ್ನು ಸೋಮಯಾಜಿಗಳನ್ನಾಗಿರುವುದು. ಗುರುಭಕ್ತಕೇಸರಿ ಎಂಬ ಹೆಸರಿನವರು ಬಸವನು ಯಾವ ಸಿದ್ಧಾಂತವನ್ನೂ ಸ್ಥಾಪಿಸಿಲ್ಲ, ಮತಕ್ಕೆ ಗುರುವಾಗಿಲ್ಲ ಎಂದು ಬರೆಯುತ್ತಾರೆ. ಬಸವನು ದೊಡ್ಡವನಲ್ಲದಿದ್ದರೆ ಈಗ ಸುಮಾರು ಒಂಬೈನೂರುವರ್ಷಗಳ ಕಾಲದಿಂದಲೂ ಸಕಲ ವಿದ್ವಾಂಸರೂ ಶರಣರೂ ಬಸವೇಶ್ವರನ ಸ್ತುತಿರೂಪವಾದ ಗ್ರಂಥಗಳನ್ನು ಬರೆಯುತ್ತಿದ್ದರೆ? ಅವರುಗಳ ಹೆಸರುಗಳನ್ನೆಲ್ಲಾ ಬರೆಯಬೇಕಾದರೆ ಪತ್ರಿಕೆಯ ಜಾಗವೆಲ್ಲಾ ಸಾಲದೆ ಅಷ್ಟುಮಟ್ಟಿಗಿರುವುದು. ಅಂದಿನಿಂದಲೂ ಇಂದಿನವರೆಗೂ ಸಮಸ್ತ ವೀರಶೈವರು ಮತ್ತು ವಿಶ್ವದ ಎಲ್ಲ ಜನರು ಬಸವೇಶ್ವರನನ್ನು ಸ್ತುತಿಸುವರೆಂದು ಒಂದುಸಾವಿರವರ್ಷ ಹೇಳಿದರೆ ಸಾಕಾಗಿರುತ್ತದೆ. ಗುರುವೆಂದರೆ ಗುರುಭಕ್ತಕೇಸರಿಯು ಏನೆಂದು ತಿಳಿದುಕೊಂಡಿದ್ದಾರೆಯೋ ಕಾಣೆ. ಯಾವನು ತನ್ನ ಮುಖಕ್ಕೆ ಕೈಯಿಂದ ಸರ್ವರಿಂದಲೂ ಸ್ತುತ್ಯನಾಗಿರುತ್ತಾನೋ ಅವನೇ ಗುರುವು ದ್ವಿತೀಯಶಂಭುವಾದ ಬಸವೇಶನು ಅಂತಹವನಾಗಿರುತ್ತಾನಾದ್ದರಿಂದ ಅವನೇ ಜಗದ್ಗುರುವು. ಸುಮ್ಮನೆ "ನಾನು ಗುರು ನಾನು ಗುರು" ಎಂದು ಕೂಗಿದ ಮಾತ್ರಕ್ಕೆ ಗುರುತ್ವ ಒದಗುತ್ತದೆಯೆ? ಸಿದ್ದರಾಮ ಕವಿಯವರು ಈ ರೀತಿ ಹೀಗೆ ಬರೆದಿರುತ್ತಾರೆ.—

ಕೆಲವರ್ಗುರುಗಳು ಗುರುಪಾಂಗುಲಿಮನ್ನುಳಿ
ನೆಲದೊಳಲೆವ ಗುರುಗಳು ತ್ತತಿವರ್ಗರು ||೧||
ಹೆಗ್ಗಡಿಗಳ್ಗಳ ಕಾಲವ ಕಂಡೊಡೆ ;
ನುಗ್ಗುಕ ಗುರುಗುರು ಎಂಬುದು ಗುರುವೇಂ ||೨||
ಜೋಡಿಗಳ ಬಧ್ದರಿಸವ ಕಂಡೊಡೆ |
ಜಂಡದಿಗುರುಗುರು ಎಂಬುವ ಗುರುವೇಂ ||೩||
ಉರುರಂಧ್ರದ ಘಟಕಲವಂ ಕೀಳದೆ
ಸುರಿಸುತೆ ಗುರುಗುರು ಎಂಬುದು ಗುರುವೇಂ ||೪||
ಗುರುವಿನೊಳಕ್ಕ ಇಮಿದೋದ ತಾಂ ಗುರು
ಉರುದುಗುರ್ಗಳಗಣಮಿರೆ ಪೂರುವದೆಗುರು ||೫||

ಗುರುಭಕ್ತಕೇಸರಿಯು ಪ್ರಮುಖಸ್ಥಾ ಚಾರ್ಯರನ್ನು ಹೊಗಳಿ ಬಸವೇಶನನ್ನು ಆಕ್ಷೇಪಣೆ ಮಾಡಿ ಪಂಚಾಚಾರ್ಯರ ಹೆಸರನ್ನು ಎತ್ತಿರುವರು. ಆಶ್ಚರ್ಯವಾಗಿದೆ. ಪಂಚಾಚಾರ್ಯರ ಚರಿತ್ರೆಯನ್ನು ಗುರುಭಕ್ತಕೇಸರಿಯು ಓದಿದ್ದಾರೊ? ಆ ಚರಿತ್ರೆಗಳನ್ನು ಯಾರು ಯಾರು ಬರೆದರಿದ್ದಾರೊ ಗೊತ್ತುಂಟೊ? ಅವರುಗಳು ಮಾಡಿರುವ ಕಾರ್ಯಗಳೇನು? ಗೊತ್ತುಂಟೊ? ಗುರುಭಕ್ತಕೇಸರಿಯು ಇವುಗಳನ್ನೆಲ್ಲಾ ತಿಳಿದುಕೊಂಡು ಮುಂದಕ್ಕೆ ಗುರು ವಿಚಾರವನ್ನು ಎತ್ತಬೇಕು.

ತಾ|| 9—1—1929 ಜೀರಗೆ ಬಸವಲಿಂಗಪ್ಪ.



೧೯೨೯ ನೆಯ ಇಸವಿ ಜನವರಿ ತಾ|| ೧೨ ರಿಂದ ೧೯೨೯ ನೆಯ ಇಸವಿ ಜನವರಿ ತಾ ೧೮ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೦ ನೆಯ ವಿಭವನಾಮಸಂವತ್ಸರದ ಪುಷ್ಯ ಶುದ್ಧ ಬಿದಿಗೆಯಿಂದ ಪುಷ್ಯ ಶುದ್ಧ ಅಷ್ಟಮಿ ವರೆಗಿನ ಪಂಚಾಂಗ

ತಾ||	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಧನು ಮಾಸ
12	ಶನಿ	ಬಿದಿ	60	ಶ್ರವ	60	29
13	[1] ಭಾನು	ಬಿದಿ	1 37	ಶ್ರವ	0-57	30
14	[2] ಸೋಮ	ತದಿ	3 10	ಧನಿ	3 50	1
15	[3] ಮಂಗಳ	ಚೌತಿ	3 27	ಶತ	5.31	2
16	[4] ಬುಧ	ಪಂಚ	2-27	ಪೂಭಾ	5 53	3
17	[5] ಗುರು	ಸಪ್ತ	0-13-57-20	ಉಭಾ	5-12	4
18	ಶುಕ್ರ	ಅಷ್ಟ	53-5	ರೇವ	3-25	5

(1) ಮಳೆನಕ್ಷತ್ರ-ಉತ್ತರಾಷಾಢ ೨ ನೆಯಪಾದ, ಮಾತ್ಸರ್ಯಾಹ್ರ, ಉತ್ತರಾಯಣ ಪುಣ್ಯಕಾಲ, ಶಿವಗಂಗಾಗಂಗೋತ್ಸವ. (2) ಉತ್ತರಾಯಣಪುಣ್ಯಕಾಲ, ದೂರ್ವಾಗಣಪತಿವ್ರತಂ. (3) ಚುಂಚನಕಟ್ಟೆ ರಾಮಸ್ವಾಮಿ ರಥ. (4) ಮಳೆನಕ್ಷತ್ರ-ಉತ್ತರಾಷಾಢ ೩ ನೆಯಪಾದ. (5) ಮಾರ್ಗಶಿರ ಲಕ್ಷ್ಮೀವ್ರತಂ, ತುಳಸಷಷ್ಠಿ.

ಮೈಸೂರು: ಮ|| ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO M 14

ಮೈಸೂರ್ ಸ್ಟಾರ್

ಪ್ರತಿ ಶನಿವಾರ ಪ್ರಕಟಿಸಲ್ಪಡುವುದು

ಮಹೀಶೂರಪುರೀಶರಾ ಪರಮಾಧಿಕರಾಜಮಂಡಲೇಶ್ವರಾ ಧನಸಧಕ್ಷ ಶಾವತಾಂ ಲಕ್ಷಣ ನಕ್ಷತ್ರ ವೋಜರಾಜೀಯಾಃ ॥
ಶ್ರೀಮತ್ಕೃಷ್ಣನೃಪಾಲಸುಕ್ತುರಲಾರೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ಪಾಶಲಿತ ಸಾದ್ಗುಣ್ಯಾಲವಾಲಂಪಲಂ ॥
ಸ್ವಮಾತೀತಯಶಃಪ್ರತಾಪನಿಪ್ತಲಂ ಕಪ್ಪನ್ನಪ್ರಾರಾಕ್ ಲಂ । ಪ್ರೇಮಂಪೆತ್ತಿಲಯಿಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ॥

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರರಿಗೆ ೩-೮-೦]

ಸಂಪುಟ ೪೨] ಮೈಸೂರು ಸ್ಟಾರ್ ಸಣ ೧೯೨೯ ನೆಯ ಇಸವಿ ಜನವರಿ ತಾರೀಖು ೧೯ ನೆಯ ಶನಿವಾರ [ಸಂಚಿಕೆ ೩

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ	(ವಿ ಪಿ ಸೇರಿ)
ವೀರಶೈವ ಶಿವಪೂಜಾವಿಧಿಃ	೦—೧೨—೦	೧— ೨—೦
ಸಟೀಕ ವೀರಶೈವ ವಿವಾಹವಿಧಿಃ	೦— ೮—೦	೦—೧೪—೦
ಷಟ್ಸ್ಥಲವಿದ್ಯಾ	೦— ೪—೦	೦— ೬—೦
ಬಾರುಶೀಲಚರಿತ್ರೆ	೦— ೫—೦	೦—೧೦—೦
ಶಿವಿವಾಸಿ	೦— ೪—೦	೦— ೯—೦
ವೃಷಭಪಂಚಕ	೦— ೪—೦	೦— ೯—೦
ಗುರುಶಂಕರೇಶ್ವರಶತಕ	೦— ೧—೦	೦— ೬—೦
ಬಸವೇಶ್ವರವಚನ	೦— ೮—೦	೦—೧೪—೦
ಸಟೀಕ ಕಲಾ ಟಿಕಬ್ಬ ಮಂಜರಿ	೦— ೮—೦	೦—೧೪—೦
ಸಟೀಕ ಶತಕತ್ರಯ	೧— ೦—೦	೧— ೭—೦

ಮೈಸೂರು ಸ್ಟಾರ್ ಚಂದಾನಿರ್ಣಯ

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ ೨-೮-೦, ಲೈಬ್ರರಿ, ವಾಚನಾಲಯ, ಸೊಸೈಟಿ ವೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ ೩-೮-೦, ವಿ ಪಿ ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ ಹಣ ಚಂದಾದಾರರುಗಳು ಮನಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮನಿಯಾರ್ಡರುಗಳಿಗೆ ಸಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ ಮ್ಯಾನೇಜರ್

"ಭಿಷಗ್‌ರತ್ನ ಪಾಳ್ಯದ ವೆಂಕಟಾಚಲಪಂಡಿತರ" ಆಯುರ್ವೇದೀಯ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರೀ ಮಾತ್ರೆಗಳು



ಈ ಮಾತ್ರೆಗಳನ್ನು ಪ್ರತಿದಿನವೂ ತಾಂಬೂಲದೊಡನೆಯಾಗಲಿ, ಹಾಗೇಯಾಗಲೀ ಉಪಯೋಗಿಸುತ್ತಿದ್ದರೆ ಆಹಾರ, ನೀರು ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ

ಮಕ್ಕಳ ವೊದಲು ಮುದುಕರ ವಯಸ್ಸಿನವರಿಗೂ, ಕೆಮ್ಮು, ನೆಗಡಿ, ಕೆಮ್ಮುಲು, ಬೇಧಿ ಶೀತವಾತಜ್ವರ, ಚಳಿಜ್ವರ ವೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ

೩೦೦ ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣೆ

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ ನಮ್ಮ ನಿಶಾನೆಯನ್ನು ಲೋಕಾಮಯಹರ ಕಸ್ತೂರೀ ಮಾತ್ರೆ ಎಂಬ ಹೆಸರನ್ನೂ ನೋಡಿ ಕೊಂಡುಕೊಳ್ಳಿರಿ

ವೈಶ್ವಾನರಾಸವ

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ)

ಮೂತ್ರಪಿತ್ತ ಕಟ್ಟುವುದಾಗಲಿ ಜೊಟ್ಟೆಯುಬ್ಬರಿಸುವುದಾಗಲಿ ಪ್ರಾರಂಭವಾಗದೆ ಕೊಟ್ಟ ವೊದಲನೇವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ ಸೀಸೆ 1ಕ್ಕೆ ರೂ 1—0—0

ಶ್ರೀನಿವಾಸತೈಲ

ಪ್ಲೇಗು ರೋಗಿಯ ಪ್ರತಿ ಸಂದುಗಳಿಗೂ, ಗೆಡ್ಡೆಗೂ ತಿಕ್ಕುವ ಔಷಧ ಸೀಸೆ 1ಕ್ಕೆ ರೂ 0—8—0

ಶ್ರೀ ಸೀತಾರಾಘವವೈದ್ಯಶಾಲಾ, ಬ್ರಾಂಚಾಫೀಸು ಚಿಕ್ಕಪೇಟೆ, ಬೆಂಗಳೂರು ಸಿಟಿ

"ಭಿಷಗ್‌ರತ್ನ ಪಾಳ್ಯದ ವೆಂಕಟಾಚಲಪಂಡಿತರ" ಶ್ರೀ ಸೀತಾರಾಘವವೈದ್ಯಶಾಲಾ, ಹೆಡ್ ಆಫೀಸು ಮೈಸೂರು

ಹತ್ತನೆಯ ವೀರಶೈವ ಮಹಾಸಭಾಕಾಲದಲ್ಲಿ ಪ್ರಸಿದ್ಧಿಸಲ್ಪಟ್ಟ

ವೀರಶೈವ ಕರದರ್ಪಣ.

ಡೆಮ್ಮಿ 1/8 ಸೈಜಿನ 200 ದೊಡ್ಡ ಸ್ಟೇಜುಪುಟಗಳು] ಬೆಲೆ ಒಂದೇ ಒಂದು ರೂಪಾಯಿ [300 ಭಾವಚಿತ್ರಗಳಿರುವುದು

ವೀರಶೈವರ ಸಂಬಂಧವಾದ ಎಲ್ಲ ವಿಷಯಗಳನ್ನೂ ಒಳಗೊಂಡಿರುವ ಏಕಮಾತ್ರ ಪುಸ್ತಕ

ವೀರಶೈವಮತಸಂಬಂಧವಾದ ಮಹತ್ವವಿಷಯಗಳನ್ನಲ್ಲದೆ ಎಂದರೆ ವೀರಶೈವಮತತತ್ವನಿರೂಪಣೆ, ಶಿವಾಲಕ್ಷೆ ಬ್ರಾಹ್ಮಣಸಿದ್ಧಾಂತ ಜಗದ್ಗುರು ಪೀಠಗಳು, ಶ್ರೀ ಬಸವೇಶ್ವರ ವೊದಲಾದ ವಿಷಯಗಳ ಮೇಲೆ ಸುಪ್ರಸಿದ್ಧ ಲೇಖಕರ ಲೇಖನಗಳು ಜಗದ್ಗುರುಪೀಠಗಳ ಮತ್ತು ಜಗದ್ಗುರು ಮಹಾಸ್ವಾಮಿಗಳವರ ಸಚಿತ್ರ ಚರಿತ್ರೆಗಳು, ಇಡೀ ಭರತಖಂಡದೊಳಗಿನ ವೀರಶೈವ ಸಂಸ್ಥೆಗಳ ಮತ್ತು ಅವುಗಳ ಸಮಗ್ರ ಇತಿಹಾಸಗಳು, ಅಖಿಲಭರತಖಂಡದಲ್ಲಿ ಗತಿಸಿದ ವೀರಶೈವ ಮಹನೀಯರುಗಳ ಸಚಿತ್ರ ಜೀವಿತಚರಿತ್ರೆಗಳು ಅ ಭಾ ವೀರಶೈವ ಮಹಾಸಭೆಯು ವೊದಲು ಹೇಗೆ ಪ್ರಾರಂಭವಾಯಿತೆಂಬ ವಿಷಯ ಬಿರಸ್ಕಾಯಿಪಂಡಿನ ವಿಷಯ ಮತ್ತು ಅದಕ್ಕೆ ಸಹಾಯಮಾಡಿದವರ ಭಾವಚಿತ್ರಗಳು, ಮೊನ್ನೆ ನಡೆದ 10 ನೇ ವೀರಶೈವ ಮಹಾಸಭೆಗೆ ಮೈಸೂರು ಶ್ರೀಮನ್ಮಹಾರಾಜರವರಿಂದ ಕಳಿಸಲ್ಪಟ್ಟ ಸಂದೇಶ—ಈ ಎಲ್ಲ ವಿಷಯಗಳಿಂದೊಡಗೂಡಿದ ಉತ್ತಮ ಗ್ರಂಥ.

ಇದೇ ಪುಸ್ತಕವು ಭಾವಚಿತ್ರಗಳಿಂದ ತುಂಬಿಕೊಳ್ಳುತ್ತಿದೆ ಶ್ರೀಮನ್ಮಹಾರಾಜರವರ ಭಾವಚಿತ್ರ, ಶ್ರೀ ಮುಮ್ಮಡಿ ಕೃಷ್ಣರಾಜಒಡೆಯರವರು ಶಿವಪೂಜೆಮಾಡುತ್ತಿರುವುದು, ಶ್ರೀಜಗದ್ಗುರು ಮಹಾಸ್ವಾಮಿಗಳ ಅಡ್ಡಪಾಲಕೀಉತ್ಸವ 10 ನೇ ಅ ಭಾ ವೀರಶೈವ ಮಹಾಸಭೆಯ ಅಧ್ಯಕ್ಷ ಮತ್ತು ಸ್ವಾಗತಸಂಘಾಧ್ಯಕ್ಷರ ಭಾವಚಿತ್ರಗಳು, ಪಂಚಪೀಠಗಳ ದೃಶ್ಯಗಳು ಮತ್ತು ಪಂಚಜಗದ್ಗುರುಗಳ ಭಾವಚಿತ್ರಗಳು, ಶ್ರೀ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳ ದೊಡ್ಡ ಭಾವಚಿತ್ರ ಮತ್ತು ಜಗದಾಚಾರ್ಯ ವಿರೂಪಾಕ್ಷ ಒಡೆಯರವರು ಹುಬ್ಬಳ್ಳಿ ಮತ್ತು ಗದಗಿನ ಜಗದ್ಗುರು ವ ಪಟ್ಟಸ್ವಾಮಿಗಳವರ ಭಾವಚಿತ್ರ ಇನ್ನುಳಿದ ಎಲ್ಲ ಪ್ರಸಿದ್ಧ ಮಹಾಸ್ವಾಮಿಗಳವರ ಮತ್ತು ವೈದಿಕವರ್ಗದ ಭಾವಚಿತ್ರಗಳು ಇದರಲ್ಲಡಗಿವೆ ಇದಲ್ಲದೆ ಕೈ ಸಿರಸಿಗಿ ದೇಸಾಯರು, ಮೈಸೂರು ವೀರಸಂಗಪ್ಪನವರಾದಿಯಾಗಿ ಗತಿಸಿದ ಎಲ್ಲ ವೀರಶೈವರುಗಳನ್ನೂ ಈಗಿನ ವೀರಶೈವ ಲೌಕಿಕ ವೈದಿಕ ಧರ್ಮಾತ್ಮರನ್ನು ಪ್ರಸಿದ್ಧ ಸ್ತ್ರೀಪುರುಷರನ್ನು, ದೊಡ್ಡ ಹುದ್ದೆದಾರರು, ವರ್ತಕರು, ಗಾಯಕರ, ನಟರು ವೊದಲಾದವರನ್ನೂ ಇದರಲ್ಲಿ ಕಾಣಬಹುದು

ಈವರೆಗೆ ಈ ಮಾದರಿಯ ಪುಸ್ತಕವು ಇದೊಂದೇ ಪ್ರತಿಯೊಬ್ಬ ವೀರಶೈವನೂ ಸಂಗ್ರಹ ಮಾಡತಕ್ಕ ಗ್ರಂಥವು ಬೆಂಗಳೂರಿನ ಮಹಾಸಭಾಕಾಲದಲ್ಲಿ ಮಾರಿ ಉಳಿದಿರುವ ಪ್ರತಿಗಳು ಮಾತ್ರ ಉಳಿದಿವೆ

ಬೇಕಾದವರು ಒಡನೆ ಬರೆಯಿರಿ ಬೆಲೆ 1 ರೂಪಾಯಿ ಟಪಾಲ್‌ಹಾಸಲು ಪ್ರತ್ಯೇಕ

ವಿಳಾಸ— ಟಿ. ಎಸ್. ಚೆನ್ನಪ್ಪ,

1) ಮಾಡರ್ ಮುದ್ರಾಕ್ಷರಶಾಲಾ, ಬೆಂಗಳೂರು ಸಿಟಿ

೧೯೨೯ ನೇ ಇಸವಿಯ ಶಿದ್ದಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು ಮತ್ತು ಕ್ಯಾಲೆಂಡರುಗಳು.

1929 ನೇ ಇಸವಿಯ ಶಿದ್ದಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು

1ನೇ ನಂ. ದೊಡ್ಡಸೈಜು ಪಾಕೆಟ್‌ಡೈರಿ ಪೆನ್ಸಿಲ್ ಇಟ್ಟು ಮುಚ್ಚುವ ಶಾಕಿದ್ದು $6\frac{3}{4}$" × 4" 1ಕ್ಕೆ 0 12 0 ಪರಸ್ಥಳಕ್ಕೆ ಪೋಸ್ಟೇಜು 0-3-0

2ನೇ ನಂ ದೊಡ್ಡಸೈಜು ಮುಚ್ಚಳವಿಲ್ಲದ ಸಾದಾ ಪಾಕೆಟ್‌ಡೈರಿ $6\frac{3}{4}$" × 4" 1ಕ್ಕೆ 0-10-0 ಪರಸ್ಥಳಕ್ಕೆ ಪೋಸ್ಟೇಜು 0-3 0

1ನೇ ನಂ ಚಿಕ್ಕಸೈಜು ಪಾಕೆಟ್‌ಡೈರಿ ಪೆನ್ಸಲ್ ಇಟ್ಟು ಮುಚ್ಚುವ ಶಾಕಿದ್ದು 5" × $2\frac{1}{4}$" 1ಕ್ಕೆ 0 7 0 ಪರಸ್ಥಳಕ್ಕೆ ಪೋಸ್ಟೇಜು 0 2-0

2ನೇ ನಂ ಚಿಕ್ಕಸೈಜು ಪಾಕೆಟ್‌ಡೈರಿ ಮುಚ್ಚಳವಿಲ್ಲದ ಸಾದಾ × $3\frac{1}{4}$" 1ಕ್ಕೆ 0-5-0 ಪರಸ್ಥಳಕ್ಕೆ ಪೋಸ್ಟೇಜು 0-2-0

ಮೇಲ್ಕಂಡ ದರದಂತೆ ನಿಮಗೆ ಬೇಕಾದಷ್ಟು ಡೈರಿಗಳ ಪೂರ್ತಿ ಬೆಲೆಯನ್ನು ರವಾನಿಸಿದಲ್ಲಿ ಪೋಸ್ಟಲ್ ಪಾರ್ಸಲ್ ಮೂಲಕ ರವಾನಿಸಲಾಗುತ್ತೆ ಮೇಲ್ಕಂಡ ಡೈರಿಗಳನ್ನು ಒಟ್ಟಿಗೆ 12 ತರಿಸಿಕೊಳ್ಳುವವರಿಗೆ ಡೈರಿ ಲೆಕ್ಕಕ್ಕೆ ಕೊಡಲಾಗುತ್ತೆ ವಿ ಪಿ ಮೂಲಕ ಬೇಕಾಗಿದ್ದ ತರಿಸಿಕೊಳ್ಳುವವರು ಡಜನ್ 1 ಕ್ಕೆ 2 ರೂಪಾಯಿ ಮೇರೆ ಅಡ್ವಾನ್ಸ್ ರವಾನಿಸಬೇಕು.

1929 ನೇ ಇಸವಿಯ ಸಚಿತ್ರಕ್ಯಾಲೆಂಡರ್

ಶೀಟ್ ಕ್ಯಾಲೆಂಡರ್ 50 ಕ್ಕೆ 1 2 0 100 ಕ್ಕೆ 2 0 0 3" × $4\frac{1}{2}$" ಪಾಕೆಟ್ ಕ್ಯಾಲೆಂಡರ್ 12 ಕ್ಕೆ 0 9 0 50 ಕ್ಕೆ 2 4 0 100 ಕ್ಕೆ 4 6 0

ಅನೇಕ ಬಣ್ಣಗಳಿಂದ ರವಿವರ್ಮ ಪ್ರೆಸ್ಸಿನಲ್ಲಿ ತಯಾರಾದ 10" + 14" ಸೈಜು ಶ್ರೀ ಮಹಾವಿಷ್ಣುವಿಗೆ ಸ ಪರ್ವತಪ್ರದಾನ ಮಾಡುವ ಪರಮೇಶ್ವರನ ಪಿಕ್ಚರ್ ಕ್ಯಾಲೆಂಡರ್ 3 ಕ್ಕೆ 0-5 0 6 ಕ್ಕೆ 0-14 0 12 ಕ್ಕೆ 1 0 0

ನಿಮಗೆ ಬೇಕಾದಷ್ಟು ಕ್ಯಾಲೆಂಡರುಗಳ ಪೂರ್ತಿ ಬೆಲೆಯನ್ನು ಮನಿಯಾರ್ಡರ್ ಮಾಡಿದಲ್ಲಿ ಪ್ಯಾಕಿಂಗ್ ಪೋಸ್ಟೇಜು ಇಲ್ಲದೆ ಫ್ರೀಯಾಗಿ ರವಾನಿಸಲಾಗುತ್ತೆ ವಿ ಪಿ ಮೂಲಕ ಖಂಡಿತವಾಗಿ ರವಾನಿಸುವದಿಲ್ಲ

ಕ್ಯಾಲೆಂಡರುಗಳು ಮುಗಿದನಂತರ ಬರತಕ್ಕ ಮನಿಯಾರ್ಡರನ್ನು ಕಳುಹಿದವರ ಹೆಸರಿಗೆ ವಾಪಸ್ ಮಾಡುತ್ತೆ

ಮಾದರಿ ಕ್ಯಾಲೆಂಡರ್ ಅಪೇಕ್ಷಿಸುವವರು 0 6 0 ರವಾನಿಸಿದಲ್ಲಿ ಮೇಲ್ಕಂಡ 3 ನಮೂನೆ ಕ್ಯಾಲೆಂಡರುಗಳನ್ನು ಪೋಸ್ಟು ಮೂಲಕ ಫ್ರೀಯಾಗಿ ರವಾನಿಸಲಾಗುತ್ತೆ

ಮನಿಯಾರ್ಡರ್ ರವಾನಿಸುವ ವಿಳಾಸ— [50—10]

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕೆಂಡುಸೆಡಿಯ ಸ್ಟು ಸಾವಿರಾರು ಪಂಡಿತರು ಇದನ್ನು ಉಪಯೋಗಿಸಿ ಸಾವಿರಾರು

ನರ್ಯಾನ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ —ಪಿನಿ ಸಿ ಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ಎಲ್ಲಾ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನು ಹೆಚ್ಚು ಮಾಡುತ್ತದೆ ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾಗುವುದು

ಬುಡ್ಡಿ ಒಂದಕ್ಕೆ ಕ್ರಯ ರೂ ೦—೪—೦. ವಿ. ಪಿ ೦—೪—೦. ಡಜನ್ ಗಳಿಕ್ಕೆ ಕ್ರಯ ರೂ. ೨—೮—೦ ವಿ ಪಿ ಚಾರ್ಜು ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ

ವಿಳಾಸ—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,

(೮೧ 13] ಪೋ. ಬಾ ೩೧೧, ಮದರಾಸು.

ಬೆಲೆ ಸುಲಭ! ಶ್ರೀ ಒಳ್ಳಾ ಗ್ಯಾರಂಟಿ!!

ಪ್ರಸಿದ್ಧವಾದ ಮೊಳಕಾಲ್ಮೂರು ರೇಷ್ಮೆ ಜವಳಿ.

ರೇಷ್ಮೆವಸ್ತ್ರ —1 ನೇ ನಂ	ತೊಲ 1ಕ್ಕೆ	0— 8—0
ರೇಷ್ಮೆ ಸೆರಗುಟು—1 ನೇ ನಂ	ತೊಲ 1ಕ್ಕೆ	0— 9—0
ರೇಷ್ಮೆ ಕೈವಸ್ತ್ರ—1 ಕ್ಕೆ 0—11—0	ಪರ್ಜ 1ಕ್ಕೆ	7—14—0

ಒಂದುಸಲ ತರಿಸಿ ನೋಡಿರಿ ನಮ್ಮಲ್ಲಿ ಮಿಸ್ಸಿಲ್ ಕೆಂಡುಟಂಗಳ್ಲಿ ವಾಪಸು ಮಾಡಿರಿ ಪೋಸ್ಟೇಜ್ ಬೇಕಾ ಹಣ ವಾಪಸು ಕೊಡ ವೆವು,

ನಮ್ಮ ಅಡ್ರಸ್—

ಎಂ. ಎಸ್. ಗಂಗಣ್ಣ ಮತ್ತು ಲೋಕಣ್ಣ,

ರೇಷ್ಮೆ ಜವಳಿ, ವ್ಯಾಪಾರಿಗಳು,

[೨೬—೨೬] ಮೊಳಕಾಲ್ಮೂರು

AUCTION SALE

Under Power of Attorney executed by Mr. T. P. Kumaraswamy the mortgagor in favour of the Bank of Mysore Ltd. Mysore, the mortgagee, and his Attorney to sell the under mentioned property, the Bank of Mysore Ltd., Mysore will sell the said properties by Public Auction on Sunday the 27th Jan. 1929 from 8 A.M. to 11 A.M. and 3 P.M. to 5 P.M. on the spot subject to the following conditions:—

1. The sale is subject to confirmation by Head Office of the Bank at Bangalore.
2. One tenth of the final bid amount to be paid by the person whose bid is accepted immediately and the balance within a fortnight of the date of sale.
3. The conveyance and registration charges to be borne by the purchaser.
4. The Bank reserves to itself the right to accept or reject any offers without assigning any reasons therefor.
5. The Bank takes no responsibility in regard to defects if any in the description of the properties or in the good title of Mr. T. P. Kumaraswamy to the properties sold by the Bank on his behalf.

V. L. Naranaiya

Manager, Bank of Mysore Ltd.
Mysore.

Description of the Properties

1. Bungalow Situated in Chamaraja Mohalla, Prince of Wales Road Mysore, measuring East to West 120 feet and South to North 80 feet including backyard and bounded on the East by conservancy lane, West by High Road, South by No. 6 Cottage Site, and North by No. 4 Cottage Site.

2. Site: Situated in Prince of Wales Road, Chamaraja Mohalla Mysore measuring East to West 120 feet and North to South 84 feet and bounded on the East by conservancy lane, West by Prince of Wales Road, South by No. 3 Cottage site and North by No. 1 Cottage site.

3. Pieces and Parcel of land with compound wall and other hereditaments thereon known as and bearing Municipal No. 1 Vanivilas Road Mysore or as No. 1 in the No. V drainage area block No. 87 Mysore City bounded on the North by conservancy lane on the South by Vanivilas Road on the East by Banjamanicalai's land and trust property and on the West by Mission Bungalow measuring from the North to South 245 plus 233/2 plus 245 plus 262½ East to West 64 plus 82/2

(2) 64 plus 61½ feet and being 4015 1/3 sq. yds. in extent of which 1000 sq. yds. has been sold by the purchaser. [2—2]

ಮೈಸೂರು ಸ್ಟಾರ್

೧೯೨೯ ನೆಯ ಇಸವಿ ಜನವರಿ ತಾ|| ೧೯ ನೆಯ ಶನಿವಾರ

ಗುಲ್ಲು, ಟೊಳ್ಳು ಮತ್ತು ಕ್ರೋಧ

ಮ|| ವೆಂಕಟಕೃಷ್ಣಯ್ಯನವರಿಗೆ ನಾಲ್ಕು ಪತ್ರಿಕೆಗಳನ್ನು ಪ್ರಕಟಿಸಲು ಕೊಡಲ್ಪಟ್ಟಿದ್ದ ಅಪ್ಪಣೆಯನ್ನು ಕಾಲಾತೀತವಾಗಿಯಾದರೂ ಪ್ರಭುತ್ವದವರು ಧೈರ್ಯಮಾಡಿ ಹಿಂದಕ್ಕೆ ತೆಗೆದುಕೊಂಡುಬಿಟ್ಟುದರಿಂದ, ತಸಬುದಾರರಾದ ಬ್ರಾಹ್ಮಣ ಜಳಿನಳಿ ಕೋರರ ಬುದ್ಧಿ ಪಲ್ಲಟವಾಗಿದೆ ಈ ಗುಲ್ಲುಗಾರರು ಕ್ರೋಧಾನ್ವಿತರಾಗಿ ಬಹಳ ಸಟಾಟೋಪದಿಂದ ತಮ್ಮ ರೌದ್ರವನ್ನು ತೋರಿಸುತ್ತಿರುವುದು ನೋಡಲಿಕ್ಕೆ ಬಹಳ ವಿನೋದಕರವಾಗಿದೆ ಪ್ರಭುತ್ವದವರ ಈ ಅಪ್ಪಣೆಯನ್ನು ನಿರೋಧಿಸುವುದಕ್ಕಾಗಿ ಬೆಂಗಳೂರಿನಲ್ಲಿ ನೆರೆಯಿಸಿದ ಸಭಾಧ್ಯಕ್ಷತೆಗೆ ಮಾವಳ್ಳಿಯ ಮ|| ಎಸ್ ಬಯ್ಯಣ್ಣನವರನ್ನು ನಿಯೋಜಿಸಿದುದೂ, ಮೈಸೂರಿನಲ್ಲಿ ತಮ್ಮ ನಿರೋಧ ಕ ಲೃಕ್ಕೆ ಮ|| ಗಳಾದ ತಗಡೂರು ರಾಮಚಂದ್ರರಾಯರ ಮತ್ತು ತಿಮ್ಮರಾಯಪ್ಪನವರ ಸಹಾಯವನ್ನು ಹೊಂದಿದುದೂ ಅವರಿಗೆ ಭೂಷಣಪ್ರದವಾಗಿವೆ ವಂಗಳೂರಲ್ಲಿ ನಡೆದ ಗೊಂದಲದಿಂದೀಚೆಗೆ ಹಣಬಯಂತೆ ಬಹಿರಂಗದಲ್ಲಿ ತಲೆಹಾಕಿರುವ ಹುಡುಗ ರಾಜಕೀಯ ಚಳವಳಿಗಾರರಾದ ಮ|| ಮಿರ್ಲೆ ಲಕ್ಷ್ಮೀನಾರಾಯಣಪ್ಪನವರು ಮತ್ತು ಮ|| ಎಸ್ ವೆಂಕಟಪತಯ್ಯನವರು ಎಲ್ಲ ಆಧುನಿಕ ಸುಧಾರಣೆಗೆ ಕುಠಾರಪ್ರಾಯವಾದ ಧಾರ್ಮಿಕ ಆಡಚಣೆಗಳನ್ನು ತಂದೊಡ್ಡುವ ಆ ಮುದಕಯ್ಯನವರ ಪಕ್ಷವನ್ನು ಹಿಡಿದು ಹೋರಾಡುತ್ತಿರುವರು ಈಗ ನಿಲ್ಲಿಸಲ್ಪಟ್ಟಿರುವ ಪತ್ರಿಕೆಗಳಲ್ಲಿ ಅಸಭ್ಯಕರವಾಗಿಯೂ ಉತ್ತರವಾದಿತ್ವವಿಲ್ಲವಾಗಿಯೂ ಪ್ರಕಟವಾಗುತ್ತಿದ್ದ ಲೇಖನಗಳನ್ನು ನೋಡಿ ಯೋಗ್ಯರಾದ ಅನೇಕ ಬ್ರಾಹ್ಮಣರು ಬೇಸರಿಸಿಕೊಂಡು ಹಿಂದಿ ಸುತ್ತಿದ್ದ ಗನ್ನ ಹಾಡು ಕನ್ನಾಗಿ ಒಲ್ಲವು. ಆದರೆ ಜಗಳಗಂಟರಿಗ ಮಾತ್ರ ಪ್ರೋತ್ಸಾಹವು ಹೆಚ್ಚಿನದಾಗಿ ಕಾಣುವುದು ಪಟ್ಟಭದ್ರಾಸಕ್ತಿ ಪ್ರಜಾ ಗೋಚರವಾಗಿ ನಿಂದಿಸುವುದು ಸ್ಪಷ್ಟವಾಗಿದೆ ಮುದಕಯ್ಯನವರ ಲೇಖನಗಳೂ ಬ್ರಾಹ್ಮಣ ಅವರ ಪ್ರಾ ದಕ್ಷಯ್ಯನವರು ಮಹಿಮೆಯನ್ನು ಸುತ್ತಿಕ್ಕುವರು ಅವರ ಪಕ್ಷಾನುಭಕ್ತರನ್ನು ಪ್ರಶಂಸಿಸುತ್ತಿರುವರು ಹಿಂದೇ ವರ್ಗದವರು ಗುತ್ತಿಗೆ ಹಿಡಿದು ಅನುಭವಿಸುತ್ತಿದ್ದ ಸರ್ಕಾರಿ ಉದ್ಯೋಗಗಳಲ್ಲಿ ಎಲ್ಲ ವರ್ಗದವರ ಪ್ರಾತಿನಿಧ್ಯವಿರುವುದಕ್ಕಾಗೇರ್ಪಟ್ಟಿರುವ ಮಿಲ್ಲರ್ ಕಮಿಟಿಯ ವರದಿಯಮೇಲೆ ಹುಟ್ಟಿರುವ ಸರ್ಕಾರದಪ್ಪಣೆಯನ್ನೂ, ಸರ್ಕಾರಿ ಮತ್ತು ಸ್ವಂತ ಪಾಠಶಾಲೆಗಳಿಗೆ ಅಧಿಕಸಂಖ್ಯಾತರ ಪ್ರವೇಶಕ್ಕಿದ್ದ ನಿರ್ಬಂಧವು ತಪ್ಪಿ ಸಮಸ್ತ ವರ್ಗದವರೂ ವಿದ್ಯಾವಂತರಾಗಲೇರ್ಪಟ್ಟಿರುವ ವಿದ್ಯಾಭ್ಯಾಸದ ಮೆಮೊರಾಂಡಮ್ಮನ್ನೂ ನಾಶಪಡಿಸಲು ಅನವು ಸಾಹಸಮಾಡಿದ ಮನುಷ್ಯರಲ್ಲಿ ಎಂತಹ ಮಹತ್ವವಿರುವುದೋ ದೇವರೊಬ್ಬನಿಗೇ ವೇದ್ಯವು! ಮ|| ವೆಂಕಟಕೃಷ್ಣಯ್ಯನವರು "ವೃದ್ಧಪಿತಾಮಹ" ರೆಂದು ಕರೆಯಲ್ಪಡಬೇಕಾಗಿ ಮಹಾತ್ಮ ಗಾಂಧಿಯವರು ಸೂಚಿಸಿರುವುದರಿಂದ, ಈ ವೃದ್ಧ ಸಂಪಾದಕರ ಯೋಗ್ಯತೆಯು ಎಂತಹದೆಂಬುದು ವ್ಯಕ್ತವಾಗುತ್ತದೆಂದು ಮ|| ವೆಂಕಟಪತಯ್ಯನವರು ಹೇಳಿರುವರು ಇಂತಹ ಹೊಗಳಿಕೆಗೂ ಉತ್ಪ್ರೇಕ್ಷೆಗೂ ಮಹಾತ್ಮರ ವಿಘಂಟಿನಲ್ಲಿ ಇಂಬಿಲ್ಲವು. ಮ|| ವೆಂಕಟಕೃಷ್ಣಯ್ಯನವರು "ಗ್ರಾಂಡ್ ಓಲ್ಡ್ ಮ್ಯಾನ್" ಎಂದು ಸಂಬೋಧಿಸಲ್ಪಟ್ಟಾಗ ಇದು ಅನ್ಯಭಾಷೆಯಾದುದರಿಂದ ಸರಿಯಲ್ಲವೆಂದೂ, ಇದರ ಬದಲು ವೃದ್ಧಪಿತಾಮಹನೆಂದು ಕರೆಯುವುದುತ್ತಮವೆಂದೂ ಮಹಾತ್ಮರು ಹೇಳಿದುದು ಸ್ಮೃತಿಪಥದಲ್ಲಿದೆ ಮಹಾತ್ಮರು ರಾಜಧಾನಿಗೆ ಬಂದ ಒಂದೆರಡು ಗಂಟೆಗಳ ಕಾಲದಲ್ಲಿಯೇ ಈರೀತಿ ಮುದಕಯ್ಯನವರನ್ನು ಸಂಬೋಧಿಸುವುದುತ್ತಮವೆಂದು ಸೂಚಿಸಿದುದರಿಂದ, ಮಹಾತ್ಮರು ಮುದಕಯ್ಯನವರ ಯೋಗ್ಯತೆಯನ್ನು ಅರಿತು ಆರೀತಿ ಹೇಳಿದರೆಂಬುದು ಆಶ್ಚರ್ಯವೇ ಸರಿ ಮುದಕಯ್ಯನವರು ಈಚೆಗೆ ಬುದ್ಧಿಭ್ರಾಂತರಾಗಿರುವುದೂ, ಯೂರೋಪಿಯನ್ ದಿವಾನರನ್ನು ಕೋರಿರುವುದೂ, ಸಾಮ್ರಾಜ್ಯಪ್ರಭುತ್ವದವರಲ್ಲಿ ಮೊರೆಯಿಟ್ಟುಕೊಂಡಿರುವುದೂ ಮಹಾತ್ಮರಿಗೆ ಗೊತ್ತಾದರೆ ಹಿಮವತ್ಪರ್ವತದಷ್ಟು ಅಗಾಧವಾದ ಮತ್ತೊಂದು ಅಪರಾಧವನ್ನು ಮಾಡಿದೆನೆಂದು ಭಾವಿಸದೆ ಇರಲಾರರು ಬಡಪಾಯಿ ಮ|| ವೆಂಕಟಕೃಷ್ಣಯ್ಯನವರು ತಮ್ಮ ಲೋಪದೋಷಗಳನ್ನು ಚನ್ನಾಗಿ ಅರಿತಿರುವರು ಆದರೆ ಮಹಾತ್ಮರು ನಿಜಸ್ಥಿತಿಯನ್ನು ಅರಿಯದೆ ಔಪಚಾರಿಕವಾಗಿ ಹೇಳಿದ ವಿಷಯವನ್ನು ಮುದಕಯ್ಯನವರ ಹೊಗಳಭಟ್ಟರಾದ ಮ|| ವೆಂಕಟಪತಯ್ಯನವರು ಮಹತ್ವವನ್ನಾಗಿ ಮಾಡಿರುವುದಕ್ಕೋಸ್ಕರ ಅವರನ್ನು ಶ್ಲಾಘಿಸಬೇಕಾಗಿದೆ ಮೈಸೂರಿನಲ್ಲಿ ನಡೆದಿರತಕ್ಕ ಒಳ್ಳೆಯ ಕೆಲಸವೆಲ್ಲವೂ ಈ ಮುದಕಯ್ಯನವರ ಸಾಹಸದಿಂದಲೇ ಆಗಿರುವುದೆಂದೂ, ಔದ್ಯೋಗಿಕ ಸಾಂಸ್ಥಿಕ ಸಂಸ್ಥೆಗಳೆಲ್ಲ ಇವರಿಂದ ಉಪಕೃತಿಯನ್ನು ಯಾವ ರೀತಿಯಿಂದಲಾದರೂ ಹೊಂದಿರುತ್ತವೆಂದೂ ಹೇಳಲ್ಪಟ್ಟಿದೆ ಹಾಗೆ ಉಪಕೃತಿಯನ್ನು ಹೊಂದಿದ ಸಂಸ್ಥೆಗಳಾವುವೆಂದು ಎಷ್ಟು ಯೋಚಿಸಿದರೂ ಒಂದೂ ಗೋಚರವಾಗುವುದಿಲ್ಲ ಕಳೆದ ೩೦ ವರ್ಷಗಳಿಂದಲೂ ಈ ಮುದಕಯ್ಯನವರು ಪ್ರಜಾಪ್ರತಿನಿಧಿ ಸಭೆಯ ಮೆಂಬರರಾಗಿರುವರೆಂದೂ ಅದನ್ನು ರೂಪುಗೊಳಿಸಿ ಅದರ ಹಕ್ಕುಬಾಧ್ಯತೆಗಳನ್ನು ಹೊಂದುವುದರಲ್ಲಿ ಬಹುಮಟ್ಟಿಗೆ ಇವರೇ ಕಾರಣಭೂತರೆಂದೂ ಈ ಕಾರಣದಿಂದ ಭಾರತ ರಾಜಕೀಯ ಸುಧಾರಣಾ ವಿಚಾರದಲ್ಲಿ ಕೂಡ ನಾಯಕಾಗ್ರಣಿಗಳೆನಿಸಿರುವರೆಂದೂ ಪ್ರಶಂಸಿಸಲ್ಪಟ್ಟಿದೆ ಎಂತಹ ಲೋಕೋತ್ತರರಾದ ಸಹಾಯ! ಪ್ರಜಾಪ್ರತಿನಿಧಿಸಭೆಯನ್ನು ರೂಪುಗೊಳಿಸುವಷ್ಟು ಸಾಮರ್ಥ್ಯವು ಈ ಮುದಕಯ್ಯನವರಿಗಿದ್ದುದನ್ನು ನಾವೆಂದೂ ಕಾಣೆವು. ಆದರೆ ಇವರು ಈಗ ಅಲ್ಲಿ ಅಲಂಕಾರಪ್ರಾಯವಾಗಿದ್ದು ಏನಾದರೊಂದು ಮಾತನಾಡಿದರೆ ಸಭಿಕರು ನಗಾಡುವರೆಂಬುದನ್ನು ಮಾತ್ರ ನಾವು ಒಲ್ಲೆವು. "ಇವರ ಸ್ವಾರ್ಥತ್ಯಾಗ, ಧೈರ್ಯ, ಉದಾತ್ತಧ್ಯೇಯ ಕಾರ್ಯಸಾಧನ ಪ್ರಯತ್ನ ಈ ಗುಣವಿಶೇಷಗಳಿಂದ ಭಾರತ ಮಹಾಪುರುಷರ ಶ್ರೇಣಿಯಲ್ಲಿ ಅನುರೂಪವಾದ ಸ್ಥಾನವು ಪ್ರಾಪ್ತವಾಗಿರುವುದು" ಎಂದು ಹೊಗಳಲ್ಪಟ್ಟಿದ ಮ|| ವೆಂಕಟಕೃಷ್ಣಯ್ಯನವರಿಗೆ ಅಂತಹ ಉದಾತ್ತ ಧ್ಯೇಯವೂ ಕಾರ್ಯಸಾಧನ ಶಕ್ತಿಯೂ ಇರುವುವೆ? ಇವರು ಪ್ರಪಂಚವನ್ನು ವಂಚಿಸಲೆಷ್ಟು ಪ್ರಯತ್ನಪಟ್ಟಾಗ್ಯೂ ಇವರಿಗೆ ಅಂತಹ ಉದಾತ್ತಧ್ಯೇಯವಿಲ್ಲವೆಂದೂ, ಪ್ರತಿಕೋಪಯುಕ್ತ ಕಾರ್ಯ ವಿಘಾತಕರ ಗುಂಪನ್ನು ಸೇರಿಸಿಕೊಂಡು ಪ್ರಭುತ್ವದವರನ್ನು ಪ್ರತಿಘಟಿಸುವುದೇ ಅವರ ಮುಖ್ಯಧ್ಯೇಯವೆಂದೂ, ಕ್ಷುಲ್ಲಕಚಮತ್ಕಾರ ಸುಳ್ಳುಪ್ರಕಟನೆ, ದುರ್ಭಾಷೆ ಇವುಗಳೇ ಅವರ ಪರಮ ಕಾರ್ಯಕಲಾಪಗಳೆಂದೂ ಮೈಸೂರಿನವರು ಚನ್ನಾಗಿ ಬಲ್ಲರು ಪತ್ರಿಕಾಸಂಪಾದನವು ಮುದುಕಯ್ಯನವರ ವ್ರತ ಪಾರ್ವಣವೆಂದೂ, ಅದೇ ಅವರ ಪ್ರಾಣಾಧಾರವೆಂದೂ ವಾದಿಸಲ್ಪಡುತ್ತಿದೆ ಈ ಮುದಕರ ಪ್ರಾಣವು ಇದರಿಂದಲೇ ಸಮಾಪ್ತಿಯಾಗುವುದೆಂದು ಹೇಳಿರುವುದೂ ಒಂದು ಚಮತ್ಕಾರವೇ ಸರಿ ಮ|| ವೆಂಕಟಕೃಷ್ಣಯ್ಯನವರು ಕೆಲಕಾಲದವರೆಗೆ ಇಂಗ್ಲಿಷ್ ಪತ್ರಿಕೆ ಸಮೇತವಾಗಿ ಎಲ್ಲ ಪತ್ರಿಕೆಗಳ ಸಂಪಾದಕತ್ವವನ್ನು ಇಂಗ್ಲಿಷ್ ಅರಿಯದ ತಮ್ಮಾಪ್ತ ಆಶ್ರಿತನಿಗೆ ವಹಿಸಿದ್ದರು ಆತನ ದುರದೃಷ್ಟದಿಂದ ಒಂದು ಮಾನನಷ್ಟದ ವಿವಾದದಲ್ಲಿ ಆತನಿಗೆ ಅರ್ಥದಂಡ ಸಹ ವಿಧಿಸಲ್ಪಟ್ಟಿತು ಮ|| ವೆಂಕಟಪತಯ್ಯನವರು ಕೋರುವುದಕ್ಕಿಂತಲೂ ಹೆಚ್ಚಾಗಿ ನಾವು ಮ|| ವೆಂಕಟಕೃಷ್ಣಯ್ಯನವರ ಶ್ರೇಯಸ್ಸನ್ನು ಕೋರುವವರಾಗಿರುತ್ತೇವೆ ವಿರಾಮವಿಲ್ಲದೆ ದುಡಿಯುವ ಮುದಕಯ್ಯನವರು ತಮ್ಮ ವೃದ್ಧಾಪ್ಯದ ವಿಶ್ರಾಂತಿಯನ್ನು ಬಯಸಿ ಕೆಲವು ಕಾಲ ಪ್ರಶಾಂತ ಜೀವನವನ್ನು ಮಾಡಲಿ ಎಂದು ಕೋರುತ್ತೇವೆ. ಕೆಲವು ಕಾಲದಿಂದ ಈಚೆಗೆ ಇವರು ನಡೆಸುತ್ತಿರುವ ಪತ್ರಿಕೆಗಳ ಸ್ವಾತಂತ್ರ್ಯ ಹಾಗೂ ಇತರ ಸ್ವಾತಂತ್ರ್ಯಗಳು ಇರಬೇಕೆಂಬುದೇ ನಮ್ಮ ಪ್ರಭುತ್ವದವರ ಮುಖ್ಯ ಧ್ಯೇಯವಾಗಿರುತ್ತದೆಂದು ಶ್ರೀಮನ್ಮಹಾರಾಜರವರ ಅಪ್ಪಣೆಕೊಡಿಸಿರುವರು ಅದು ಅವರ ಸ್ವಂತ ಅಭಿಪ್ರಾಯವಾಗಿರುವುದಾದರೂ ಅದಕ್ಕೆ ವಿರುದ್ಧವಾಗಿ ನಡೆಸಲ್ಪಟ್ಟಾಗಲು ಕೂಡ ಕೆಲ್ಲ ಆಶೀರ್ವಾದ ಪ್ರಸಂದರ್ಭವಿನಾ ದೂರು ಹೇಳಿಕೊಳ್ಳಲಿಕ್ಕಿಲ್ಲವೆಂದು ಮ|| ಲಕ್ಷ್ಮೀನಾರಣಪ್ಪನವರು ಹೇಳುತ್ತಾರೆ. ಈ ರಾಜಕೀಯ ವಿಚಾರದಲ್ಲಿ ನಾವು ಹೆಚ್ಚಾಗಿ ತರ್ಕಿಸುವುದಿಲ್ಲ ಆದರೂ ಇಲ್ಲಿಯಷ್ಟು ವಾಕ್‌ಸ್ವಾತಂತ್ರ್ಯವು ಮತ್ತಾವಲ್ಲಾದರೂ ಉಂಟೆ ಮತ್ತು ನ್ಯಾಯವಾದ ಪತ್ರಲೇಖನವು ಅಭ್ಯಂತರಪಡಿಸಲ್ಪಟ್ಟಿರುವುದೆ ಎಂದು ಕೇಳಬೇಕಾಗಿದೆ ಈಗ ನಿಲ್ಲಿಸಲ್ಪಟ್ಟಿರುವ ಪತ್ರಿಕೆಗಳು ಅನೇಕವೇಳೆ ಪ್ರಭುತ್ವದವರಿಂದ ಎಚ್ಚರಿಸಲ್ಪಟ್ಟಾಗ್ಯೂ ರಾಜದ್ರೋಹಕರ ಲೇಖನಗಳನ್ನು ಬರೆದು ವಿಜ್ಞಪ್ತಿಯಿಲ್ಲದೆ ಬೈದು ನಿಂದಿಸುತ್ತಿದ್ದುದು ಮತ್ತಾವ ದೇಶದಲ್ಲೂ ಸಹಿಸಲ್ಪಡುತ್ತಿದ್ದಿತೆಂಬುದನ್ನು ನಾವು ಬೇರೆ ಅರಿಯೆವು. ಮ|| ವೆಂಕಟಕೃಷ್ಣಯ್ಯನವರ ದೇಶಾಭಿಮಾನವು ಶುದ್ಧ ಬೂಟಾಟಿಕೆಯು ನಾಸಿಕವೆಯನ್ನು ಸ್ವದೇಶಾಭಿಮಾನವನ್ನೂ, ಪ್ರಪಂಚದಲ್ಲೆಲ್ಲ ಅತ್ಯಂತ ಪ್ರಜಾನುರಾಗಿ ಪ್ರಭುಗಳೆಂದು ಹೆಸರ್ಪಡೆದವರಲ್ಲೊಬ್ಬರಾದ ಪ್ರಭುವಿನಲ್ಲಿ ನಿಜವಾದ ಭಕ್ತಿಯನ್ನೂ ಉಳ್ಳ ಯಾವ ರಾಜಕಾರ್ಯ ನಿರತನೂ ಈಗ ನಿಲಿಸಲ್ಪಟ್ಟಿರುವ ಪತ್ರಿಕೆಗಳ ಸಂಪಾದಕರಂತೆ ವರ್ತಿಸುತ್ತಿರಲಿಲ್ಲ ಪ್ರಭುತ್ವದ ಪ್ರತಿಯೊಂದು ಕಾರ್ಯವನ್ನು ವ್ಯಂಗ್ಯವಾಗಿ ಭಾವಿಸುವುದನ್ನೂ, ಭರತಖಂಡದಲ್ಲೆಲ್ಲ ನ್ಯಾಯಬದ್ಧರಾಗಿ ರಾಜ್ಯಭಾರಮಾಡುವವರೆಂದು ಪ್ರಖ್ಯಾತರಾಗಿರುವ ಪ್ರಭುಗಳಿಗೆ ಅನಾದರಣೆ ಅವಮರ್ಯಾದೆ ಮಾಡುವುದನ್ನೂ ನಿಮಿಷಮಾತ್ರ ಸಹಿಸತಕ್ಕದಾಗಿಲ್ಲವು ಅಂತಹ ಲೇಖಕನು ರಾಜದ್ರೋಹಿಯಾಗಿ ಪರಿಗಣಿಸಲ್ಪಡಬೇಕು ಇಂತಹ ಲೇಖಕರನ್ನು ನಿಜವಾದ ದೇಶಸೇವಕರು ದೂರೀಕರಿಸದಿದ್ದಲ್ಲಿ ನಮ್ಮ ಮೈಸೂರುಸಂಸ್ಥಾನಕ್ಕೆ ದ್ರೋಹ ಮಾಡಿದಂತಾಗುವುದು ಇಲ್ಲಿಯ ಪತ್ರಿಕಾಸಂಪಾದಕರು ತಮ್ಮ ಕರ್ತವ್ಯವನ್ನೂ ರಾಜಭಕ್ತಿಯನ್ನೂ ದೇಶಾಭಿಮಾನವನ್ನೂ ಅರಿಯದಿರುವಾಗ್ಗೆ ನಮ್ಮ ಸಂಸ್ಥೆಗಳ ಮತ್ತು ಸಂಸ್ಥಾನದ ಕ್ಷೇಮ ಗೌರವ, ದೊಡ್ಡಸ್ತಿಕೆಗಳನ್ನು ಮುಂಬರಿದ ಕೆಲ ಪಾಶ್ಚಾತ್ಯ ದೇಶಗಳ ಕಲ್ಪನಾನುಸಾರವಾಗಿ ಮಾಡಲೆತ್ನಿಸಿ ಗಂಡಾಂತರಕ್ಕೆ ಗುರಿಪಡಿಸಲಾಗದು ಎಷ್ಟೋ ಎಚ್ಚರಿಕೆಗಳನ್ನು ಕೊಟ್ಟಾಗ್ಯೂ ಪತ್ರಿಕೆಗಳ ಪ್ರಕಟನೆಗೆ ಕೊಟ್ಟಿರುವ ಅಪ್ಪಣೆಯನ್ನು ಹಿಂದಕ್ಕೆ ತೆಗೆದುಕೊಂಡಿದ್ದಾಗ್ಯೂ ಈ ದೇಶಾಭಿಮಾನಿ ವಿಜೃಂಭಿತರು ಮಾಡಿರುವುದಾದರೂ ಏನು? ಈ ಮುದಕಯ್ಯನವರು ಅತ್ಯಂತ ಹೇಯವೂ ಜಘನ್ಯವೂ ಆದ ಕಾಗದವನ್ನು ಬ್ರಿಟಿಷ್ ರೆಸಿಡೆಂಟರಿಗೆ ಬರೆದಿರುವುದು ಸಾಲದೆ, ಈಗ ನಿಲ್ಲಿಸಲ್ಪಟ್ಟಿರುವ ಪತ್ರಿಕೆಗಳ ಬದಲಾಗಿ ಇವರ ಆಶೀರ್ವಾದಾನುಗ್ರಹದಿಂದಲೇ ನಡಿಸಲ್ಪಡುತ್ತಿರುವ ಮೈಸೂರಿಯನ್ ಎಂಬ ಪತ್ರಿಕೆಯಲ್ಲಿಸಹ ಪ್ರಕಟಿಸಿರುವರು. ಈ ಪತ್ರದಲ್ಲಿ ಕಂಡ ನಿರಾಧಾರವಾದ ವಿಷಯಗಳನ್ನು ಕುರಿತು ಮತ್ತೊಂದು ವೇಳೆ ಪ್ರಸ್ತಾಪಿಸುವೆವು. ಆದರೆ ಈ ಮಾರ್ಗವು ಸಾಧುವೇ ಅಸಾಧುವೇ ಎಂಬುದನ್ನು ಮಾತ್ರ ಈಗ ಪರ್ಯಾಲೋಚಿಸತಕ್ಕದಾಗಿದೆ ಹಿಂದೆ ಪೂರ್ಣಯ್ಯನವರು ಅನುಸರಿಸಿದ್ದ ಮಾರ್ಗವನ್ನು ಇವರೂ ಅನುಸರಿಸಿರುವರಲ್ಲವೇ? ನಮ್ಮ ಸಂಸ್ಥಾನದ ನ್ಯಾಯವು ದೊರಕುವುದಿಲ್ಲವೆಂದು ಬ್ರಿಟಿಷರಲ್ಲಿ ಹೇಳಿಕೊಳ್ಳುವುದು ಶುದ್ಧ ಹೇಡಿತನವಲ್ಲವೆ? ಮ|| ಎಚ್ಚಾರಿಯವರು ಹಿಂದುದ್ವೇಷಿಗಳೆಂದು ಹೇಳುವುದು ದ್ವೇಷಾಸೂಯೆ ಯಿಂದಲ್ಲವೆ? ಇವರೇ ಪ್ರಮುಖ್ಯ ಹೇಡಿತನವೆಂದು ಹೇಳುತ್ತೇವೆ ಏಕೆಂದರೆ, ಇವರ ಪ್ರಾರ್ಥನೆಯು ನ್ಯಾಯವಾಗಿದ್ದಲ್ಲಿ ನ್ಯಾಯವಿಧಾಯಕ ಸಭೆಯು ಅಥವಾ ಪ್ರಜೆಗಳಿಂದಲೇ ಆರಿಸಲ್ಪಟ್ಟ ಪ್ರತಿನಿಧಿಗಳಿಂದ ಕೂಡಿದ ಪ್ರಜಾಪ್ರತಿನಿಧಿ ಸಭೆಯು ತನ್ನ ಪಕ್ಷವನ್ನು ವಹಿಸಿ ತೀರ್ಮಾನಿಸುವಂತೆ ಮಾಡಿದಲ್ಲಿ ಈ ತೀರ್ಮಾನದಂತೆ ಪ್ರಭುತ್ವದವರು ನಡೆದುಕೊಳ್ಳುವರೆಂದು ನಾವು ದೃಢವಾಗಿ ಹೇಳುತ್ತೇವೆ ಆದರೆ ಈ ಪ್ರಜಾಪ್ರತಿನಿಧಿಗಳ ಅಭಿಪ್ರಾಯವು ತಮಗೆಂದಿಗೂ ಅನುಕೂಲವಾಗಿರುವುದಿಲ್ಲವೆಂಬುದನ್ನು ಮುದಕಯ್ಯನವರು ಒನ್ನಾಗಿ ಬಲ್ಲವರಾಗಿರುವುದರಿಂದಲೇ ಆರೀತಿ ಪ್ರಯತ್ನಿಸಲೆತ್ನಿಸುವುದಿಲ್ಲ ಇವರು ಸ್ವತಃ ವಿಜೃಂಭಿಸಿಕೊಳ್ಳುತ್ತಿರುವಂತೆ ದೊಡ್ಡವರಾಗಿಯೇ ಆಗಲಿ ಜನಾನುರಾಗಿಗಳಾಗಿಯೇ ಆಗಲಿ ಇರುವುದಿಲ್ಲವಾದುದರಿಂದಲೇ ತಮ್ಮ ಪ್ರಯತ್ನವಿಶೇಷದಿಂದ ನಡೆಯುವ ಸಭೆಗಳ ಮತ್ತು ವರ್ತಮಾನಪತ್ರಿಕೆಗಳ ಮೂಲಕ ಚಳವಳಿಯನ್ನು ನಡೆಸುತ್ತಿರುವರು ಸಂಸ್ಥಾನದ ಜನಾಭಿಪ್ರಾಯವನ್ನು ನಿಜವಾಗಿ ತಿಳಿಯುವುದಾದರೆ ಈ ವೃದ್ಧಪಿತಾಮಹರು ಯಾರಿಗೂ ಬೇಡವಾದ ವ್ಯಕ್ತಿಯೆಂಬುದು ಗೋಚರವಾಗುತ್ತದೆ ನಾವು ಯಾರನ್ನೂ ವಿನಾಕಾರಣವಾಗಿ ದೂಷಿಸತಕ್ಕವರಲ್ಲ ಈ ಮುದಕಯ್ಯನವರು ಇಷ್ಟಪಟ್ಟಿದ್ದಲ್ಲಿ ಸುಲಭ ಜೀವನೋಪಾಯವನ್ನು ಕಲ್ಪಿಸಿಕೊಳ್ಳಬಹುದಾಗಿದ್ದಿತು ಇವರು ಬಹುಕಾಲದಿಂದ ದೇಶಸೇವಾಕಾರ್ಯ ನಿರತರಾಗಿರುವರಾದರೂ ತಮ್ಮ ಆಯುಃಪರಮಾವಧಿಯಲ್ಲಿ ಮಾಡುವ ಕೆಲಸವು ಹೀನತಮವಾಗಿ ಪರಿಣಮಿಸಿರುವುದು ಇವರ ವಕ್ರಸ್ವಭಾವ, ಹಿಂದುಳಿದ ವರ್ಗದವರ ಏಳ್ಗೆಯ ವಿಚಾರದಲ್ಲಿ ಇವರಿಗಿರುವ ಗಾಢವಾದ ಅಸೂಯೆ, ಆಜನ್ಮಸಿದ್ಧವಾದ ಸ್ವಜನ ಪಕ್ಷಪಾತ ಈ ಗುಣಗಳೆಲ್ಲವೂ ನಿಜಸ್ವರೂಪದಿಂದ ಸಂದರ್ಭಾನುಸಾರ ಕಾಣಿಸಿಕೊಳ್ಳುತ್ತಿದ್ದು ಈಗ ವೃದ್ಧಾಪ್ಯದ ಅರುಳುಮರುಳತನದಿಂದ ಪದೇ ಪದೇ ಪ್ರದರ್ಶನವಾಗುತ್ತಿವೆ. ಬೆಂಗಳೂರು ಗಲಭೆಯಾದಂದಿನಿಂದೀಚೆಗಂತೂ ವೈಮನಸ್ಯವನ್ನೂ ಅನೈಕ್ಯವನ್ನೂ ಹುಟ್ಟು

ಮಾ... ಪ್ರತಿ ... ಸಂಭಾವಣೆ ನೋಡುತ್ತಿದ್ದ ಕೇಳಿಕೊಳ್ಳುತ್ತೇವೆ ... ಇವರು ಪ್ರಜಾಪ್ರತಿನಿಧಿ ಸಭೆಯ ಮೆಂಬರರಾಗಿ ... ವ್ಯಕ್ತಿಗಳಿಗೆ ಶಕ್ತಿ ... ಪ್ರಜೆಗಳು ಈ ಶ್ರಮವನ್ನು ತೃಪ್ತಿಪಡಿಸಿ ಈಗ ಪಾಡಿದ ಈಗಿನ ಮಾಡಿದ್ದು ಸತ್ಯ ... ವ್ಯಕ್ತಿಗಳ ತಮ್ಮ ಕಾರ್ಯಗಳ ದುರ್ಭಾಗ್ಯಕ್ಕೂ ಪರಿಸ್ಥಿತಿಯ ... ಮರೆಯಬಾರದು.

ಒಳದೇಶದ ವೃತ್ತಾಂತಗಳು.

ಮಹಾಮಾತ್ಯಶ್ರೀಯವರು ಪರಿವಾರದೊಡನೆ ಮೊನ್ನೆಯ ಮಧ್ಯಾಹ್ನ ಬೊಂಬಾಯಿಗೆ ಪ್ರಯಾಣ ಬೆಳಸಿದರು.

ಸರ್ ವಿಶ್ವೇಶ್ವರಯ್ಯ ವಿಚಾರಣಾಸಮಿತಿಯ ವರದಿಯ ಮೇಲೆ ಪ್ರಭುತ್ವದವರ ಅಪ್ಪಣೆಯು ಮುಂದಿನವಾರ ಪ್ರಕಟವಾಗುವುದೆಂದು ಕೇಳುತ್ತೇವೆ.

ನಮ್ಮ ಪೋಲೀಸ್ ಖಾತೆಯನ್ನು ನವೀನಕಾಲದ ಪರಿಸ್ಥಿತಿಗನುಸಾರವಾಗಿ ಸಂಸ್ಕರಿಸಲು ಮದರಾಸಿನ ಪೋಲೀಸ್ ಕಮೀಷನರಾದ ಮ|| ಕನ್ನಿಂಗ್ಹಾಂ ರವರು ತಿಂಗಳಿಗೆ 1000 ರೂ ಸಂಬಳದಮೇಲೆ ನಿಯಮಿಸಲ್ಪಡುವರೆಂದು ತಿಳಿದುಬಂದಿದೆ.

ಕಳೆದ ತಾ|| 11 ನೇ ಶುಕ್ರವಾರ ಕೈ|| ಚಾಮರಾಜೇಂದ್ರ ಒಡೆಯರ್ ಒಹದ್ದೂರ್‌ರವರ ಪುಣ್ಯತಿಥಿಯು ಶ್ರೀಮನ್ಮಹಾರಾಜ ಸಹೋದರರಿಂದ ಎಥ್ಯುಕ್ತವಾಗಿ ಆಚರಿಸಲ್ಪಟ್ಟು ಅರಮನೆ ಮುಜರಾಯಿ ಶಾಖಾ ದೇವಾಲಯಗಳಲ್ಲಿ ದೇವತಾರ್ಚನೆಯೂ ಬಡಬಗ್ಗರಿಗೆ ಅನ್ನದಾನವೂ ಮಾಡಲ್ಪಟ್ಟಿವು.

ವಿಶ್ವೇಶ್ವರಯ್ಯ ಸಮಿತಿಯ ವರದಿಯ ಮೇಲೆ ಸರ್ಕಾರದವರ ಅಪ್ಪಣೆಯು ಇನ್ನೂ ಮಾಡಲ್ಪಡಲಿಲ್ಲವೆಂದು ಜನಗಳು ಕುತೂಹಲವುಳ್ಳವರಾಗಿರುವರು ಮಿ|| ನವಾಬ್ ಅಲಿಯವರು ತಮ್ಮ ಅಸಮ್ಮತ ಟಿಪ್ಪಣಿಯನ್ನು ಸರ್ಕಾರಕ್ಕೆ ಕಳಿಸುವುದು ತಾವಕಾಶವಾದುದರಿಂದ ಸರ್ಕಾರದವರು ತಮ್ಮ ಅಭಿಮತವನ್ನು ಪ್ರಕಟಿಸಲು ತಡವಾಗಿರುವುದೆಂದು ತಿಳಿಯುತ್ತೇವೆ.

ವಿಚಾರಣಾ ಸಮಿತಿಯ ವರದಿಯನ್ನು ಬರೆಯುವಾಗ ಮ|| ನೀಲಗಿರಿ ಸಂಜೀವಯ್ಯನವರನ್ನು ಕುರಿತು ಸರ್ ವಿಶ್ವೇಶ್ವರಯ್ಯನವರು ಅಪಮಾನಕರವಾದ ಮಾತುಗಳಾಡಿದರೆಂಬ ಆಪಾದನೆಯಮೇಲೆ ಮ|| ಸಂಜೀವಯ್ಯನವರು ಸರ್ ವಿಶ್ವೇಶ್ವರಯ್ಯನವರಮೇಲೆ ಮಾನನಷ್ಟದ ಮೊಕದ್ದಮೆಯನ್ನು ನಡೆಸುವರೆಂದೂ ಇದಕ್ಕಾಗಿ ಒಬ್ಬ ಐರೋಪ್ಯ ವಕೀಲರನ್ನು ನಿಯಮಿಸಿರುವರೆಂದೂ ವರ್ತಮಾನವಿದೆ.

ಕಳೆದ ಭಾನುವಾರ ಬೆಂಗಳೂರು ತಾರಾಮಂಡಲ ಮಾರ್ಕೆಟ್ಟಿನ ಬಳಿ ವಾಸಿಸುತ್ತಿದ್ದ ಒಬ್ಬ ಯಜಮಾನಿಯು ನಾಗರ ಪೂಜೆಗಾಗಿ ಹುತ್ತವಿರುವೆಡೆಗೆ ಹೋಗಿದ್ದು ಬರುವಷ್ಟರೊಳಗೆ ಅಡಿಗೆ ಮಾಡಿಟ್ಟು ಹೋಗುವಾಗ್ಗೆ ಬೆಂಕಿಯಾರಿಸುವುದು ಮರೆತಿದ್ದುದರಿಂದ ಹೇಗೋ ಸಮೀಪದಲ್ಲಿದ್ದ ಚಟ್ಟಿಗೆಗೆ ಬೆಂಕಿ ಬಿದ್ದು ಮನೆಯ ಒಂದು ಭಾಗ ಉರಿದುಹೋಯಿತು ಪ್ರಾಣಾಪಾಯವೇನೂ ಸಂಭವಿಸಲಿಲ್ಲ.

ಮೈಸೂರು ವಿದ್ಯಾಭ್ಯಾಸದ ಡೈರೆಕ್ಟರವರಾದ ಮ|| ಎಚ್ ಎಸ್ ಸುಬ್ಬರಾಯರು ದೀರ್ಘಕಾಲ ರಜದಮೇಲೆ ಹೋಗುವುದರಿಂದಲೋ ಮತ್ತಾವ ಕಾರಣದಿಂದಲೋ ಮಹಾರಾಜರ ಕಾಲೇಜಿನ ಪ್ರೊಫೆಸರಾದ ಮಿ|| ವಾಡಿಯರವರು ಡೈರೆಕ್ಟರಾಗಿ ನಿಯಮಿಸಲ್ಪಡುವ ವದಂತಿಯಿದೆ ಎಂದೂ, ಇದು ನಿಜವಾಗಿದ್ದಲ್ಲಿ ಅನುಚಿತ ಏರ್ಪಾಟೆಂದೂ ಬೆಂಗಳೂರು ಲೋಕಹಿತೈಷಿಯು ಉಲ್ಲೇಖಿಸಿರುತ್ತದೆ.

ಸರ್ ವಿಶ್ವೇಶ್ವರಯ್ಯ ವಿಚಾರಣಾಸಮಿತಿಯ ವರದಿಯು ಸರ್ಕಾರದವರಿಂದ ಬಹಿರಂಗಪಡಿಸಲ್ಪಡುವುದಕ್ಕೆ ಪೂರ್ವಭಾವಿಯಾಗಿ ಕೆಲ ವೃತ್ತಪತ್ರಿಕೆಗಳಲ್ಲಿ ಪ್ರಕಟಿಸಲ್ಪಟ್ಟದರಮೇಲೆ ಖಂಡನೆಗಳು ನಡೆಯುತ್ತಿರುವುವಷ್ಟೆ. ಈ ವರದಿಯ ಒಂದೊಂದು ಪ್ರತಿಯು ಬೊಂಬಾಯಿ ಟೈಂಸ್ ಪತ್ರಿಕೆಯ, ಬೆಂಗಳೂರಿನ ಚಿತ್ರಗುಪ್ತ ಪತ್ರಿಕೆಯ ಮತ್ತೆ ಕೆಲ ಪತ್ರಿಕೆಗಳ ಪ್ರತಿನಿಧಿಗಳಿಗೆ ಸಮಿತಿಯ ಅಧ್ಯಕ್ಷರಾದ ಸರ್ ಎಂ. ವಿಶ್ವೇಶ್ವರಯ್ಯನವರಿಂದಲೇ ಕೊಡಲ್ಪಟ್ಟುದಾಗಿ ಹಾಲಿಪಕ್ಷಿಯು ನುಡಿಯುದಂತೆ.

ಮೈಸೂರು ಪ್ರಜಾಪ್ರತಿನಿಧಿಸಭೆಗೆ ಜನರಿಂದಾರಿಸಲ್ಪಟ್ಟಾಗಲಿ ಪ್ರಭುತ್ವದವರಿಂದ ನಿಯಮಿಸಲ್ಪಟ್ಟಾಗಲಿ ಮೆಂಬರಾಗತಕ್ಕವರು ಶ್ರೀಮನ್ಮಹಾರಾಜರವರಲ್ಲಿ ಪೂರ್ಣ ರಾಜಭಕ್ತಿಯಿಟ್ಟು ನಡೆದುಕೊಳ್ಳುತ್ತೇನೆಂದು ವಿಧಾಯಕವಾದ ರೀತಿಯಲ್ಲಿ ಪ್ರಮಾಣ ಮಾಡಬೇಕೆಂದೂ, ಹಾಗೆ ಮಾಡಲು ತಪ್ಪಿದಲ್ಲಿ ಅವರು ಮೆಂಬರುತನದಿಂದ ತಪ್ಪಿಸಲ್ಪಟ್ಟು ಅವರ ಬದಲು ಬೇರೊಬ್ಬರು ನಿಯಮಿಸಲ್ಪಡುವರು ಅಥವಾ ಪ್ರಜೆಗಳಿಂದ ಆರಿಸಲ್ಪಡುವರೆಂದೂ. ನ್ಯಾಯವಿಧಾಯಕಸಭೆಯ ಮೆಂಬರುಗಳೂ ಇದೇ ರೀತಿಯಲ್ಲಿ ಪ್ರಮಾಣ ಮಾಡಬೇಕಾಗಿರುತ್ತದೆಂದೂ ಸರ್ಕಾರ ದಪ್ಪಣೆಯಾಗಿರುತ್ತದೆ.

ಬೆಂಗಳೂರು ಸಿಟಿ ರೈಲ್ವೆಸ್ಟೇಷನ್ ಬಳಿಯಿರುವ ಧರ್ಮಾಂಬುಧಿ ಕೆರೆಯಲ್ಲಿ ಕಳೆದ 12-13 ವರ್ಷಗಳಿಂದಲೂ ನೀರು ಇಲ್ಲದಿದ್ದುದರಿಂದ ಪ್ರತಿ ವರ್ಷವೂ ನಡೆಯುತ್ತಿದ್ದ ದೇವರುಗಳ ತೆಪ್ಪೋತ್ಸವವು ನಿಲ್ಲಿಸಲ್ಪಟ್ಟಿದ್ದುದು ಈ ವರ್ಷ ಕೆರೆಯಲ್ಲಿ ಸಾಕಾದಷ್ಟು ನೀರಿರುವುದರಿಂದ ಕಳೆದ 15-20 ದಿವಸಗಳಿಂದಲೂ ವಿಶಾಲವಾಗಿಯೂ ಸುಂದರವಾಗಿಯೂ ಕಟ್ಟಲ್ಪಡುತ್ತಿದ್ದ ತೆಪ್ಪದ ಮೇಲೆ ಕಳೆದ ಸೋಮವಾರ ರಾತ್ರಿ ಶ್ರೀ ಕಾಶೀವಿಶ್ವೇಶ್ವರಸ್ವಾಮಿಯ ವಿಗ್ರಹವು ಕುಳ್ಳಿರಿಸಲ್ಪಟ್ಟು ಮಹಾ ವೈಭವದಿಂದಲೂ ... ಉತ್ಸವವು ... ಸ್ವಾಮಿಯಿಂದ ... ಕೆರೆಯೊಳಗೆ ... ಶ್ರೀ ... ದೇವಸ್ಥಾನದ ... ಕಿರಿದಾಗಿ ... ಬಹಳ ... ತಿರುಗಾಡಿ ಸಾಯಂಕಾಲದ ವರೆಗೆ ... ಪ್ರತಿ ದಿನ ರಾತ್ರಿ ... ದೇವರುಗಳ ಉತ್ಸವವು ನಡೆಯಬೇಕಾಗಿರುತ್ತದೆ.

ಮೈಸೂರು ಸರ್ಕಾರದವರು ಇದುವರೆಗೂ ಅಧಿಕಾರಾಟಕ ಬಾಲಕರಿಗೆ ವಿದ್ಯಾಭ್ಯಾಸದ ವಸತಿಗಳನ್ನು ಕಲ್ಪಿಸಿಕೊಟ್ಟು ಅವರ ಪುರೋಭಿವೃದ್ಧಿಗೆ ಸಾಧಕವಾದ ಏರ್ಪಾಟುಗಳನ್ನು ಮಾಡಿರುವರಷ್ಟೆ. ಈಗ ಅಧಿಕಾರಾಟಕ ಬಾಲಿಕೆಯರಿಗು ಸಹ ಇದೇ ವಿಧವಾದ ಸೌಲಭ್ಯಗಳನ್ನು ಕಲ್ಪಿಸಲು ಸರ್ಕಾರದವರು ಅಪ್ಪಣೆ ಮಾಡಿರುತ್ತಾರೆ. ಸದ್ಯಕ್ಕೆ ಬೆಂಗಳೂರಿನಲ್ಲಿ ಮುಂದಿನ ಮೇ ತಿಂಗಳು ೨೭ ನೇ ತಾರೀಖಿನಿಂದ ೨೦ ಹುಡುಗಿಯರ ಅಶನವಸನಗಳಿಗೆ ಅವಕಾಶವುಳ್ಳ ಒಂದು ಶಾಲೆಯನ್ನು ಸ್ಥಾಪಿಸಲು ಏರ್ಪಾಟಾಗಿರುವುದು. ಈ ಶಾಲೆಯಲ್ಲಿ ವಿದ್ಯಾಭ್ಯಾಸದೊಡನೆ ಕಸೂತಿ, ಶೃಂಗಾರಣೆಯು ಕೂಡ ಕಲಿಸಲ್ಪಡುವುವು. ಶಾಲೆಗೆ ಸೇರಿಸಲಿಚ್ಛೆಯುಳ್ಳವರು ತಂದೆ ತಾಯಿಗಳು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಿದ ಮೇಲೆ ಅವರು ವಿದ್ಯಾಭ್ಯಾಸವನ್ನು ಪೂರೈಸುವವರೆಗೂ ಮಧ್ಯ ಬಿಡಿಸಿಕೊಂಡು ಹೋಗುವುದಿಲ್ಲವೆಂದು ಬರೆದುಕೊಡಬೇಕು. ಎಲ್ಲಾ ಖರ್ಚು ಸರ್ಕಾರದವರಿಂದ ವಹಿಸಲ್ಪಡುವುದು.

ವಿಶ್ವೇಶ್ವರಯ್ಯ ಸಮಿತಿಯ ಆರುಜನ ಸದಸ್ಯರಲ್ಲಿ ಒಬ್ಬರಾದ ಮಿ|| ಕಲಾಮಿಯವರು ವರದಿಗೆ ರುಜುಹಾಕುವಾಗ, ವರದಿಯಲ್ಲಿ ಕಂಡ ವಿಷಯಗಳೆಲ್ಲವನ್ನೂ ತಾವು ಒಪ್ಪುವುದಿಲ್ಲವೆಂದೂ, ತಾವು ಯಾವ ಯಾವ ವಿಚಾರವಾಗಿ ಬಿನ್ನಾಭಿಪ್ರಾಯಪಡುತ್ತೇನೆಂಬುದನ್ನು ಒಂದು ಟಿಪ್ಪಣಿಯ ಮೂಲಕ ತಿಳಿಸುತ್ತೇನೆಂದೂ ಹೇಳಿದ್ದಪ್ರಕಾರ, ಕಳೆದ ಶನಿವಾರ ಮಿ|| ಕಲಾಮಿಯವರು ತಮ್ಮ ಬಿನ್ನಾಭಿಪ್ರಾಯದ ಟಿಪ್ಪಣಿಯನ್ನು ಸಮಿತಿಯ ಅಧ್ಯಕ್ಷರಾದ ಸರ್ ಎಂ ವಿಶ್ವೇಶ್ವರಯ್ಯನವರಿಗೆ ಕಳುಹಿಸಿದರೆಂದೂ, ಇವರು ತಮ್ಮ ಪರವಾಗಿ, ಸರ್ಕಾರಕ್ಕೆ ಕಳುಹಿಸಿರುವರೆಂದೂ ತಿಳಿಯಬರುತ್ತದೆ. ಮಿ|| ಕಲಾಮಿಯವರು ತಮ್ಮ ಟಿಪ್ಪಣಿಯಲ್ಲಿ ಆ ರಾತ್ರಿ ಗುಂಡುಹಾರಿಸಲ್ಪಡಲಿಲ್ಲವೆಂದು ಗುಂಡು ಹಾರಿಸಿದಂತೆ ಶಬ್ದ ಕೇಳಿದ ದು ಪಟಾಕಿ ಹಾರಿಸಿದ ಶಬ್ದವೆಂದು, ಮೈಸೂರುಸಂಸ್ಥಾನದಲ್ಲಿ ಗುಪ್ತಸಂಸ್ಥೆಯು ಇದ್ದೇ ಇರುವುದೆಂದು, ವಿಗ್ರಹದ ಸ್ಥಾನಪಲ್ಲಟದಲ್ಲಿ ಮಿ|| ಅಬ್ಬಾಸ್ ಖಾನರ ಪ್ರಯತ್ನವೇನೂ ಇಲ್ಲವೆಂದು, ದೊಂಬಿನಡಿಸಲು ಮಹಮ್ಮದೀಯರು ಸಿದ್ಧರಾಗಿ ಬಂದಿದ್ದರೆಂಬುದನ್ನು ನಂಬುವುದಕ್ಕೆ ಸಾಕಾದಷ್ಟು ನಿದರ್ಶನಗಳು ತಮಗೆ ತೋರಲಿಲ್ಲವೆಂದು, ಗಲಭೆಯ ಮೂಲವು ಪತ್ರಿಕೆಗಳ ಚಳವಳಿಯಿಂದ ಪ್ರಾರಂಭವಾಯಿತೆಂದು ಮುಂತಾಗಿ ಅಭಿಪ್ರಾಯಪಟ್ಟಿರುವರೆಂದು ವದಂತಿ.

ಮೊನ್ನೆ ಬೆಂಗಳೂರಿನ ಉತ್ತರಭಾಗದಲ್ಲಿ ಒಂದು ವಿಚಿತ್ರ ವಿವಾಹದ ಕತೆ ನಡೆಯಿತು. ವರನು ಬಿ. ಎ., ೩೦ ವರ್ಷ ಮೊದಲನೆಯ ಹೆಂಡತಿಯ ವಯಸ್ಸು ಈಗತಾನೆ 12 ತುಂಬಿದೆ. ಆ ಹುಡುಗಿಯು ಇನ್ನೂ ಮೈನೆರೆಯದಿರುವುದರಿಂದ ವರನ ಎರಡನೆಯ ಲಗ್ನಕ್ಕೆ ತಯಾರಾಗಿದೆ. ಕಡಿಮೆ ವರದಕ್ಷಿಣೆಗೆ ಒಪ್ಪಿ, ವಿವಾಹಕ್ಕೆ ಎಲ್ಲವೂ ಸಿದ್ಧವಾಯಿತು. ದೇವರ ಸಮಾರಾಧನೆಯಾಯಿತು. ಅಷ್ಟರಲ್ಲಿ ಈ ಸಮಾಚಾರವು ಕನ್ಯಾಪಿತನ ಒಂಭುಗಳೊಬ್ಬರಿಗೆ ತಿಳಿಯಿತು. ಅವರು ಹಾರಾಡಿ ಈಗಿನ ಸಂಪ್ರದಾಯದವರು! ಕೂಡಲೆ ಮಾಡುತ್ತಿದ್ದ ಕೆಲಸವನ್ನು ಬಿಟ್ಟು ಹೋಗಿ ಕನ್ಯಾಪಿತನನ್ನು ಚೆನ್ನಾಗಿ ಬೈದು "ನಿನ್ನ ಮಗಳೆಂದರೆ ವೇಶ್ಯೆಯೆಂದು ತಿಳಿದುಕೊಂಡೆಯೋ? ಅವನಿಗೆ ಮದುವೆಯಾದ ಮೊದಲನೆಯ ಹೆಂಡತಿಯು, ಪಾಪ ಮೈನೆರೆಯದಿದ್ದರೆ ಆದು ಅವಳ ದೋಷವೇ? ನಾಳೆ ನಿನ್ನ ಮಗಳು ಮೈನೆರೆಯದಿದ್ದರೆ, ಅವನು ಮತ್ತೊಂದು ಮದುವೆಯಾದರೆ ನಿನ್ನ ಮಗಳ ಗತಿಯೇನಾಗಬೇಕು" ಎಂದು ಬುದ್ಧಿಹೇಳಿದರು. ಕನ್ಯಾಪಿತನು ಲಗ್ನವನ್ನು ನಿಲ್ಲಿಸಿದ್ದೇನೆಂದು ಹೇಳಿಬಿಟ್ಟನು! ಆದರೆ ವರನಿಗೆ ಬಿಡುವಾಗಿ ಮುಂಗಡ ಕೊಟ್ಟಿದ್ದ ೫೦ ರೂಪಾಯಿ ವಾಪಸ್ಸು ... ಸಿಗುವುದೋ? ಇದರ ಮೇಲೆ ನೆರೆಯಿನ ವರನ ಸ್ನೇಹಿತರೊಬ್ಬರು, ಎಂದು ವರನಪಿತನನ್ನು ಕುರಿತು 'ನಿನ್ನ ಮೇಲೆ ಕೇಸು ಹಾಕುತ್ತೇನೆ' 'ನಮ್ಮ ಸಹೋದರನು ಗ್ರಾಜುಯೇಟ್' 'ಇಬ್ಬರು ಹೆಂಡತಿ ರನ್ನು ಸಾಕಬಲ್ಲನು' ಎಂದು ಜಗಳ ... ಪದವಿಯನ್ನು ಪಡೆಯುವಾಗ ಇಬ್ಬರು ಹೆಂಡತಿಯನ್ನು ಸಾಕುವ ಶಕ್ತಿಯನ್ನೂ ಅವರಿಗೆ ಕೊಡುವರೆ? ಈ ಬಗೆಯ ವಿವಾಹವನ್ನು ನಿಶ್ಚಯಿಸಿದ ಪುರೋಹಿತ ಕನ್ಯಾಪಿತ, ವರ, ವರನ ಮಾತಾಪಿತೃಗಳನ್ನು ಶಿಕ್ಷಿಸಲು ಯಾವದಾದರೂ ಕಾನೂನು ಇಲ್ಲವೆ ಎಂದೂ ಇದು ಬ್ರಾಹ್ಮಣಸಮಾಜದ ವಿವಾಹವಾದ್ದರಿಂದ ಯಾವುದಾದರೂ ಸ್ಮೃತಿ ಗ್ರಂಥದಲ್ಲಿ ಈ ವೈಶಾಚಿಕ ವರ್ತನೆಕ್ಕೆ ಒಪ್ಪಿಗೆ ಸಿಕ್ಕುವುದೇ ಹುಡುಕಿನೋಡಿ ಹೇಳುವರೆ ಎಂದೂ ಒಬ್ಬರು ಬಾತ್ಮಿದಾರರು ಬರೆಯುತ್ತಾರೆ.— ಜಿ ಗು

ಭರತಖಂಡದ ವೃತ್ತಾಂತಗಳು

ವೈಸ್ರಾಯ್ ಲಾರ್ಡ್ ಅರ್ವಿನ್ನವರು ಮುಂದಿನ ಏಪ್ರಿಲ್ ತಿಂಗಳಲ್ಲಿ ವಿಲಾಯಿತಿಗೆ ರಜದಮೇಲೆ ಹೋಗುವರೆಂದೂ ಅವರ ಸ್ಥಾನದಲ್ಲಿ ಮದರಾಸ್ ಗೌರ್ನರಾದ ಲಾರ್ಡ್ ಗೋಷೆನ್‌ರವರು ವೈಸ್‌ರಾಯರಾಗಿ ಬದಲಿ ನೋಡುವರೆಂದೂ ವರ್ತಮಾನವಿದೆ.

ಅಲ್ವಾರ್ ಸಂಸ್ಥಾನದ ಮಹಾರಾಜರ ಚಲಚಿತ್ರೋತ್ಸವವು ಬಹಳ ವೈಭವದಿಂದ ಪ್ರಾರಂಭವಾಗಿ ... ಸಂಸ್ಥಾನದಲ್ಲಿ ನಡೆಯುತ್ತಿವೆ. ಈ ಉತ್ಸವಕ್ಕೆ ಗೋವರ್ಧನ ಮಠದ ಶ್ರೀ|| ಶಂಕರಾಚಾರ್ಯರವರು ದಯಮಾಡಿಸಿದ್ದಾರೆ.

ಭಾರತ ಸಂಸ್ಥಾನ ವಿಚಾರಣಾ ಸಂಘ ಕಾರ್ಯದರ್ಶಿ ಕರ್ನಲ್ ಆಗಿಲ್ಬಿಯವರು ಕಾಶ್ಮೀರ ಸಂಸ್ಥಾನದ ರೆಸಿಡೆಂಟರಾಗಿ ನಿಯಮಿಸಲ್ಪಟ್ಟಿರುತ್ತಾರೆ. ಇವರು ಇಂಡ್ಯಾಕ್ಕೆ ಫೆಬ್ರವರಿ ತಿಂಗಳಿನಲ್ಲಿ ಬರುವರು. ವಿಚಾರಣ ಸಂಘ ನಿವೇದಿಕೆಯು ಫೆಬ್ರವರಿಯಲ್ಲೇ ಸಿದ್ಧವಾಗುವುದಂತೆ.

ಕಲ್ಕತ್ತಾಕ್ಕೆ ಸೇರಿದ ಹೌರಾದಲ್ಲಿ ಒಡ್ಡವ್ಯಾಪಾರ ಮಾಡುತ್ತಿದ್ದ ಓರ್ವ ಹಿಂದುಸ್ತ್ರೀ ಶವವು ಒಂದು ಟ್ರಂಕುಪೆಟ್ಟಿಗೆ ಯೊಳಗಿದ್ದುದು ಪೊಲೀಸಿನವರಿಗೆ ಸಿಕ್ಕಿದ ಹಂತಕರು ಆಕೆಯ ವಶದಲ್ಲಿದ್ದ ಆಭರಣಗಳನ್ನು ಅಪಹರಿಸಲು ಆಕೆಯ ಶರೀರವನ್ನು ಕತ್ತಿಯಿಂದ ಕತ್ತರಿಸಿ ಪೆಟ್ಟಿಗೆಯಲ್ಲಿ ಹಾಕಿ ಕೆರೆಯಲ್ಲಿ ಬಿಸಾಡಿದುದಾಗಿ ಭಾವಿಸಿ ಪೊಲೀಸರು ೩ ಜನರನ್ನು ಆ ಸಂಬಂಧದ ಮೇಲೆ ಹಿಡಿದಿರುವರು.

ಹೈದರಾಬಾದು ನೈಜಾಂ ರವರು ಕಲಕತ್ತಾಕ್ಕೆ ಹೋಗಿದ್ದು ಸ್ವಸ್ಥಳಕ್ಕೆ ಹಿಂದಿರುಗುವಾಗ್ಗೆ ತಮ್ಮ ಆಗಮನದ ಜ್ಞಾಪಕಾರ್ಥವಾಗಿ 1 ಲಕ್ಷ ರೂಪಾಯಿಗಳ ದಾನಮಾಡಿ ಅದನ್ನು ಬಂಗಾಳಾದ ಧರ್ಮಸಂಸ್ಥೆಗಳಿಗೆ ಯಾವಜಾತಿ ಮತಭೇದವಿಲ್ಲದೆ ಅವುಗಳ ಯೋಗ್ಯತಾನುಸಾರ ಹಂಚಬೇಕೆಂದು ಬಂಗಾಳ ಗೌರ್ನರನ್ನು ಪ್ರಾರ್ಥಿಸಿ ಆ ಮೊತ್ತವನ್ನು ಅವರ ವಶಕ್ಕೆ ಕೊಟ್ಟಿರುವರು.

ಮಧುರೆಯಲ್ಲಿ ಕಳಂಕಾಬಾಯಿ ಎಂಬ ಓರ್ವ ಬ್ರಾಹ್ಮಣ ವಿಧವೆಯು ಸಿಡುಬಿನಿಂದ ತನ್ನ ಮಗನ ಒಂದು ಕಣ್ಣು ಹೋಗಲು, ಆತನಿಗೆ ಪುನಃ ದೃಷ್ಟಿಯನ್ನು ಕೊಡುವಂತೆ ತನ್ನ ಮನೆ ದೇವರನ್ನು ಪ್ರತಿನಿತ್ಯವೂ ಪ್ರಾರ್ಥಿಸಿಕೊಳ್ಳುತ್ತಿದ್ದಳು. ಎಷ್ಟು ದಿನವಾದರೂ ದೇವರು ಪ್ರಸನ್ನನಾಗದೆ ತನ್ನ ಇಷ್ಟವು ನೆರವೇರಲಿಲ್ಲವೆಂದು ಆಕೆಯು ಒಂದು ಕಾಗದ ಬರೆದಿಟ್ಟು ಮೊನ್ನೆ ದಿನ ಆತ್ಮಹತ್ಯೆ ಮಾಡಿಕೊಂಡಳು.

ವಿದೇಶದ ವೃತ್ತಾಂತಗಳು

ಅಫ್ಘಾನಿಸ್ಥಾನದ ಮಾಜಿ ರಾಜರಾದ ಅಮಾನುಲ್ಲಾ ಖಾನರವರು ಎಲ್ಲಿರುವರೋ ತಿಳಿಯದಾಗಿರುವುದು. ದೇಶೀಯರ ಹಿತಚಿಂತನೆಯಿಂದ ಸುಧಾರಣೆಗಳನ್ನು ನಡೆಸಬೇಕೆಂದಿದ್ದ ರಾಜರು ಈ ಸುಧಾರಣೆಗಳು ಬೇಕಿಲ್ಲವೆಂದು ಜನರು ಪ್ರತಿಭಟಿಸಿದುದರಿಂದ ತಾವು ಸಿಂಹಾಸನವನ್ನು ಪರಿತ್ಯಾಗಮಾಡಿರುವುದಾಗಿ ಪ್ರಕಟನೆಮಾಡಿರುವರು. ಈಗಿನ ರಾಜರಾದ ಇನಾಯತುಲ್ಲಾಖಾನರು ಬ್ರಿಟಿಷರೊಡನೆ ಸ್ನೇಹಭಾವದಿಂದಿರುವರೆಂದು ತಿಳಿದು ಬಂದಿದೆ.

ಅಮಾನುಲ್ಲಾಖಾನರು ಸಿಂಹಾಸನ ಪರಿತ್ಯಾಗ ಮಾಡಿ ಸುಧಾರಣೆಗಳನ್ನು ನಿಲ್ಲಿಸಿರುವರಾದರೂ ದಂಗೆಯು ಮಾತ್ರ ಶಮನವಾಗಿರುವುದಿಲ್ಲ. ಹೊಸ ರಾಜರಾದ ಇನಾಯತುಲ್ಲಾಖಾನರು ಶಾಂತಿಸ್ಥಾಪನೆ ಮಾಡುವ ಶಕ್ತಿಯುಳ್ಳವರಲ್ಲವೆಂದೂ ... ದಂಗೆಕೋರರು ಪ್ರಬಲಿಸುತ್ತಿರುವರು. ದಂಗೆಯು ಕೇವಲ ರಾಜಕೀಯ ಸಂಬಂಧವಾದುದಲ್ಲವೆಂಬುದಾಗಿಯೂ ದರೋಡೆಕಾರರು ದಂಗೆಕೋರರೊಡನೆ ಸೇರಿ ಪಟ್ಟಣಗಳನ್ನು ಲೂಟಿ ಮಾಡುತ್ತಿರುವರೆಂದೂ ತಿಳಿದುಬಂದಿದೆ.

ಜಾರ್ಜ್ ಸಾರ್ವಭೌಮರವರ ವೆಚ್ಚಕ್ಕಾಗಿ ವರ್ಷಂಪ್ರತಿ 11,30,000 ರೂಪಾಯಿಗಳು ಸಲ್ಲುತ್ತವೆ. ಬ್ರಿಟಿಷ್ ರಾಜ್ಯದ ಉತ್ಪತ್ತಿಯಲ್ಲಿ ಇದು ಶೇಕಡ 0 ರಷ್ಟಾಗುವುದು. ಹಿಂದೂಸ್ಥಾನದಲ್ಲಿ ಯಾವದೇ ದೇಶೀಯ ರಾಜರಲ್ಲನೇಕರು ರಾಜ್ಯದ ಉತ್ಪತ್ತಿಯಲ್ಲಿ ಶೇಕಡ 30 ರಷ್ಟು ಪಾಲನ್ನು ತಮ್ಮ ಸ್ವಂತ ಖರ್ಚಿಗಾಗಿ ವಿನಿಯೋಗಿಸಿಕೊಳ್ಳುವರು. ಈ ಹಣವನ್ನು ಸಾಧಾರಣವಾಗಿ ಈ ರಾಜರುಗಳು ವಿದೇಶದಲ್ಲಿ ಖರ್ಚುಮಾಡುವರು. ಬರೋಡಾ ಮಹಾರಾಜರವರು ಯಾವಾಗಲೂ ವಿದೇಶವಾಸಿಗಳಾಗಿಯೇ ಇರುವುದರಿಂದ, ತಮ್ಮ ಅರಮನೆಯ ಖರ್ಚಿಗೆ ಸ್ವಂತ ಖರ್ಚಿಗಾಗಿಯೂ ೫೦ ಲಕ್ಷ ರೂಪಾಯಿ ವರ್ಷಾಶನ ಕೇಳಿಕೊಳ್ಳುವರು. ಇದರಿಂದ ಆ ದೇಶಗಳ ಪ್ರಜೆಗಳಲ್ಲಿ ಅತೃಪ್ತಿಯುಂಟಾಗುವುದೇನಾಶ್ಚರ್ಯವೇನು?

ಬರ್ಲಿನ್ನಿನಲ್ಲಿ ಸಂಗೀತಗಾರನೊಬ್ಬನು ತನ್ನ ಹೆಂಡತಿಗೆ ಬಹಳ ಹಣ ದೊರಕಬೇಕೆಂಬ ಉದ್ದೇಶದಿಂದ, ಸುಂದರಾಂಗಿಯಾದ ಓರ್ವ ವಿಧವೆಯನ್ನು ಯುವತಿಗೆ ದಯಾರ್ದ್ರಹೃದಯನಾದ ಪತಿಯು ಬೇಕಾಗಿರುವನೆಂದು, ಈ ದಿವಸ ನಡೆಯುವ ಸಂಗೀತಕೂಟದಲ್ಲಿ ಆಕೆಯು ಒಂದು ಬಿಳಿ ಗುಲಾಬಿ ಹೂಗುಚ್ಛವನ್ನು ಹಿಡಿದುಕೊಂಡು ವರಾನ್ವೇಷಣಕ್ಕೆ ಸಿದ್ಧಳಾಗಿರುವಳೆಂದೂ ಪ್ರಕಟಿಸಿದನು. ಆ ಪ್ರಕಟನೆಯ ಪ್ರಕಾರ ಸಾವಿರಾರು ಯುವಕರು ಸಂಗೀತಕೂಟಕ್ಕೆ ಬಂದುಸೇರಿದರು. ಆದರೆ ಆ ಸುಂದರಿಯು ಕೂಟದಲ್ಲಿ ಕಾಣಿಸಲಿಲ್ಲವಾಗಿ ಆಶಾಭಂಗರಾದ ಯುವಕರು ಕೋಪಗೊಂಡು ಗೊಂದಲವೆಬ್ಬಿಸಿದರು. ಇದರಿಂದ ಸಂಗೀತಗಾರನಿಗೆ ಪೆಟ್ಟುಬಿದ್ದಿತು. ಪೊಲೀಸಿನವರು ಬಂದು ಗೊಂದಲಕಾರರಲ್ಲಿ ಅನೇಕರನ್ನು ಹಿಡಿದರು. ಕಡೆಯಲ್ಲಿ ಸಂಗೀತಗಾರನು ಆ ಪ್ರಕಟನೆಗೆ ತಾನು ಉತ್ತರವಾದಿಯೆಂದೂ, ಆ ದಿನದುತ್ಪನ್ನವನ್ನು ವಾಪಸ್ಸು ಕೊಡುತ್ತೇನೆಂದೂ ಹೇಳಿದನು.

(ಚಿತ್ರಗುಪ್ತ ದಿಂದ)

ಬೆಂಗಳೂರು ಗಲಭೆಯ ವಿಚಾರಣಾ ಸಮಿತಿಯ ವರದಿ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ದೊಂಬಿ ನಡೆಯ ಗುಂಡು ಹಾರಿಸಲ್ಪಟ್ಟರೂ ಪೋಲೀಸಿನವರು ಯಾರನ್ನೂ ದಸ್ತಗಿರಿ ಮಾಡಲಿಲ್ಲ.

ಗುಂಡುಗಳು ಬಂದ ಮನೆಗಳ ಸುತ್ತ ಕೂಡಲೆ ಕಾವಲಿಡಬೇಕಾಗಿತ್ತು.

ಲಾಠಿ ಹಿಡಿದ ಮುಸಲ್ಮಾನರು ನಿಃಶಸ್ತ್ರರಾಗಿದ್ದ ಹಿಂದುಗಳ ಮೇಲೆ ಬಿದ್ದರೂ, ಗುಂಡುಗಳು ಹಾರಿಸಲ್ಪಟ್ಟರೂ ನಾಲ್ಕು ದಿನಗಳವರೆಗೆ ರುಜು ವಾತು ಪತ್ತೆ ಮಾಡಲಿಲ್ಲ. ತಪ್ಪಿತಸ್ಥರನ್ನು ಕಂಡುಹಿಡಿಯಲಿಲ್ಲ. ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟರು ಸಿಟಿ ಪೋಲೀಸ್ ಆಡಳಿತವು ತಮಗೆ ಸೇರಿದ್ದಲ್ಲವೆಂಬುದನ್ನು ನಾವು ಒಪ್ಪುವುದಿಲ್ಲ. ಗುಂಡುಗಳು ಹಾರಿಸಲ್ಪಟ್ಟ ಮನೆಗಳ ಸುತ್ತಲೂ, ಪಹರೆ ಇಟ್ಟು, ಒಬ್ಬಿಬ್ಬರನ್ನಾದರೂ ದಸ್ತಗಿರಿ ಮಾಡಿದ್ದರೆ, ಅವರಿಂದ ಉಳಿದುದೆಲ್ಲವೂ ಪತ್ತೆಯಾಗುತ್ತಿತ್ತು. 31 ನೇ ತಾರೀಖಿನ ದಿನ ಸಾಕಾದಷ್ಟು ಸಿಬ್ಬಂದಿಯಿತ್ತಾದುದರಿಂದ ಮನೆ ಹುಡುಕುವ ಕೆಲಸವನ್ನು ಆ ದಿನವೇ ಮಾಡಬೇಕಾಗಿತ್ತು.

ಪತ್ರಿಕೆಗಳನ್ನು ನಿಲ್ಲಿಸುವುದು ಸರಿಯಾಗಿದ್ದರೂ ಉದ್ದೇಶ ಮಾತ್ರ ನೆರವೇರಲಿಲ್ಲ. ಏಕೆಂದರೆ, ಹೊರಗಿನ ಪತ್ರಿಕೆಗಳಲ್ಲಿ ಲೇಖನಗಳು ಬರಲಾರಂಭಿಸಿದುವು.

ಮುಖಂಡರನ್ನು ಬಿಡುಗಡೆ ಮಾಡಿದಾಗ ಪೋಲೀಸಿನವರು ಎಚ್ಚೆತ್ತುಕೊಂಡು ತಕ್ಕ ಸಿಬ್ಬಂದಿಯೊಡನೆ ಸ್ಕೂಲು ಹತ್ತಿರ ಇರಬೇಕಾಗಿತ್ತು.

ಪಿತೂರಿ ನಡೆಸುತ್ತಿದೆಯೆಂಬ ಗುಪ್ತಸಂಸ್ಥೆಯ ಸಂಬಂಧವಾಗಿ ಕೆಲವು ಸಾಕ್ಷಿಗಳು ತಮ್ಮಲ್ಲಿ ಆಧಾರಗಳುಂಟೆಂದು ಹೇಳಿದರು; ಅವುಗಳನ್ನು ತರುವಂತೆ ಸಾಕಾದಷ್ಟು ಕಾಲ ಅವಧಿಕೊಟ್ಟರೂ ಯಾರೂ ಯಾವ ಆಧಾರವನ್ನೂ ತಂದು ತೋರಿಸಲಿಲ್ಲ.

ದೊಂಬಿಯನ್ನು ನಿಲ್ಲಿಸಿದ್ದು.

ಹಿಂದೆ ವಿವರಿಸಲ್ಪಟ್ಟ ದೊಂಬಿಯು ಜುಲೈ 30 ನೇ ತಾರೀಖಿನ ದಿನ ಸಾಯಂಕಾಲ ೭| ಗಂಟೆಯಿಂದ ೭||| ಗಂಟೆಯೊಳಗಾಗಿ ನಡೆಯಿತು. ದೊಂಬಿಯಲ್ಲಿ ಮುಸಲ್ಮಾನರು ಲಾಠಿಗಳು ಮತ್ತು ಚೂರಿಗಳನ್ನು ಹಿಡಿದು ಹಿಂದುಗಳಮೇಲೆ ಬಿದ್ದು ಹೊಡೆದರು; ಗುಂಡುಗಳೂ ಹಾರಿಸಲ್ಪಟ್ಟುವು. ಆದರೂ, ಗುಂಡುಗಳು ಹಾರಿಸಲ್ಪಟ್ಟ ಅಥವ ಆಯುಧಗಳನ್ನು ಹಿಡಿದುಕೊಂಡು ನುಗ್ಗಿದವರು ಬಂದ ಮನೆಗಳ ಸುತ್ತಲೂ ಕಾವಲಿಡುವುದಕ್ಕಾಗಲಿ, ತಪ್ಪಿತಸ್ಥರನ್ನು ಪತ್ತೆಮಾಡುವುದಕ್ಕಾಗಲಿ ಯಾವ ಪ್ರಯತ್ನವನ್ನೂ ಮಾಡಲಿಲ್ಲ.

ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರಿಗೆ ಏಟುಬಿದ್ದುದರಿಂದ ಅವರು ಸ್ವಲ್ಪ ಅಶಕ್ತರಾಗಿ ಹೋದರು. ಇಂತಹ ವಿಷಮಾವಸ್ಥೆಯಲ್ಲಿ ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟರು ಆಡಳಿತವನ್ನು ತಮ್ಮ ಕೈಗೆ ತೆಗೆದುಕೊಳ್ಳುವುದು ಅವಶ್ಯಕವಾಗಿದ್ದರೂ, ಅವರು ಆರೀತಿ ಮಾಡಲಿಲ್ಲ. ಬೆಂಗಳೂರು ಸಿಟಿ ಪೋಲೀಸ್ ಆಡಳಿತವು ತಮಗೆ ಸೇರಿದ್ದಲ್ಲವೆಂಬುದನ್ನು ಇವರು ಅತಿಯಾಗಿ ಮಾಡಿದರು. ಸಿಟಿಯ ಪೋಲೀಸ್ ಆಡಳಿತವು ಅ|| ಸೂಪರಿಂಟೆಂಡೆಂಟರಿಗೆ ಸೇರಿದ್ದಾಗಿತ್ತು; ಆದರೂ ಅವರು ತಮ್ಮಿಂದ ಯಾವ ಕಾರ್ಯವೂ ನಿರೀಕ್ಷಿಸಲ್ಪಡದಿದ್ದಂತೆ ನಡೆದುಕೊಂಡರು. ದೊಂಬಿಯಾದ ಅರ್ಧ ಗಂಟೆಯೊಳಗಾಗಿ ಈ ಇಬ್ಬರು ಅಧಿಕಾರಿಗಳೂ ದೊಂಬಿ ನಡೆದ ಸ್ಥಳಕ್ಕೆ ಬಂದರು. ಅಷ್ಟರೊಳಗಾಗಿ ಸ್ಕೂಲಿನ ಹತ್ತಿರ ಸೇರಿದ್ದ ಗುಂಪು ಚದುರಿಹೋಗಿತ್ತು; ಏಕೆಂದರೆ, ಗುಂಡಿನ ಶಬ್ದವನ್ನು ಕೇಳುತ್ತಲೇ ಎಲ್ಲರೂ ಭಯಪಟ್ಟು ಓಡಿಹೋಗಿದ್ದರು. ಆದರೂ ಕೆಲವು ಕಂಟಕೋರರು ಅಲ್ಲಲ್ಲೇ ಅಲೆದಾಡುತ್ತಿದ್ದರು. ಸ್ಕೂಲಿನ ಎದುರುಗಡೆ ರಸ್ತೆಯಲ್ಲಿ ಹಿಂದು ಮುಸಲ್ಮಾನರು ಎರಡು ಭಾಗಗಳಾಗಿ ಒಂದುಕಡೆ ಒಂದು ಜಾತಿಯವರೂ ಇನ್ನೊಂದು ಕಡೆ ಇನ್ನೊಂದು ಜಾತಿಯವರೂ ಜಗಳಕ್ಕೆ ಸಿದ್ಧರಾಗಿ ನಿಂತಿದ್ದರು. ಡಿ|| ಸೂಪರಿಂಟೆಂಡೆಂಟರು ಗಲಾಟೆ ನಡೆಯದಂತೆ ನೋಡಿಕೊಳ್ಳುವ ಉದ್ದೇಶದಿಂದ ಮುಸಲ್ಮಾನರ ಗುಂಪಿನಕಡೆ ನಿಂತುಕೊಂಡರು; ಅ|| ಸೂಪರಿಂಟೆಂಡೆಂಟರು ಅದೇ ಉದ್ದೇಶದಿಂದ ಹಿಂದುಗಳ ಗುಂಪಿನಕಡೆ ನಿಂತುಕೊಂಡರು.

ಗುಂಡುಗಳು ಬಂದ ಮನೆಗಳ ಸುತ್ತಲೂ ಪೋಲೀಸ್‌ನವರನ್ನು ಕಾವಲಿಡಬೇಕಾಗಿದ್ದುದು ಅತ್ಯವಶ್ಯಕವಾಗಿತ್ತು. ಗುಂಡು ಹಾರಿಸಲ್ಪಟ್ಟುದು ಡಿ|| ಮ್ಯಾಜಿಸ್ಟ್ರೇಟರಿಗೂ ಪೋಲೀಸಿನವರಿಗೂ ತಿಳಿದರೂ ಎಲ್ಲರೂ ಆ ವಿಚಾರವನ್ನು ಗಮನಕ್ಕೇ ತಂದುಕೊಳ್ಳಲಿಲ್ಲ. ಆರೀತಿ ಕಾವಲಿಡುವುದಕ್ಕೆ ಆದಿನ ತಮ್ಮಲ್ಲಿ ಸಾಕಾದಷ್ಟು ಸಿಬ್ಬಂದಿಯಿರಲಿಲ್ಲವೆಂದೂ, ಮಾರನೆ ದಿನವೂ ಸಹ ಜನರೆಲ್ಲರೂ ಕ್ರೋಧಾವೇಶದಿಂದ್ದುದರಿಂದ ಶಾಂತಿ ಸಮಾಧಾನಗಳು ನೆಲೆಸುವಂತೆ ಏರ್ಪಾಡು ಮಾಡುವುದರಲ್ಲಿ ತಾವು ನಿಯುಕ್ತರಾಗಿದ್ದುದರಿಂದ, ಮನೆ ಹುಡುಕುವ ಅಥವ ದಸ್ತಗಿರಿ ಮಾಡುವ ವಿಚಾರವನ್ನು ಯೋಚಿಸುವುದಕ್ಕೂ ತಮಗೆ ಅವಕಾಶವಾಗಲಿಲ್ಲವೆಂದೂ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರೂ, ಇನ್ಸ್‌ಪೆಕ್ಟರ್ ಜನರಲ್‌ರವರೂ ಹೇಳಿದ್ದಾರೆ. ಆದರೂ ಕುದುರೆ ಸವಾರರೂ, ರಿಸರ್ವ್ ಪೋಲೀಸ್‌ನವರೂ ಬಂದ ಒಡನೆ ಮನೆಗಳ ಸುತ್ತ ಪಹರೆಯಿಡಬಹುದಾಗಿತ್ತೆಂದು ನಾವು ಅಭಿಪ್ರಾಯಪಡುತ್ತೇವೆ. ಅಲ್ಲದೆ ಯಾರಾದರೂ ಕೆಲವರು ಕಂಟರನ್ನು ದಸ್ತಗಿರಿ ಮಾಡಿದ್ದರೆ ಅವರಿಂದ ಉಳಿದ ವಿಚಾರಗಳನ್ನು ಪತ್ತೆಮಾಡಿಕೊಳ್ಳಬಹುದಾಗಿತ್ತು.

ಜುಲೈ 31ನೇ ತಾರೀಖಿನ ದಿನ ಪಟ್ಟಣದ ಜನರು ವಿಶೇಷ ಗಾಬರಿಯಾಗಿದ್ದರು. ಶಾಂತಿಸಮಾಧಾನಗಳು ನೆಲೆಸುವಂತೆ ಸರ್ಕಾರದವರು ತಕ್ಕ ಏರ್ಪಾಡನ್ನೂ ಮಾಡಿದ್ದರು. ಮಿಲಿಟರಿ ಕುದುರೆ ಸವಾರರನ್ನು ಕರೆಸಿದುದು ಮಾತ್ರವೇ ಅಲ್ಲದೆ ಕಂಟೋನ್ಮೆಂಟಿನಿಂದ ಫಿರಂಗಿ ಮೋಟಾರುಗಳನ್ನು ತರಿಸಿದರು. ಮಾಡದೆ ಹೋದ ಒಂದು ಕಾರ್ಯವ್ಯಾವುದೆಂದರೆ, ಹಿಂದಿನ ರಾತ್ರಿ ನಡೆದ ಅಟಾತುರ್ಯದ ವಿಚಾರವಾಗಿ 31ನೇ ತಾರೀಖಿನ ದಿನವಾದರೂ ತನಿಖೆ ಕ್ರಮ ಜರುಗಿಸುವುದರ ಅವಶ್ಯಕತೆಯು ಒಬ್ಬರಿಗೂ ಹೊಳೆಯದೆ ಹೋದುದು. 31ನೇ ತಾರೀಖಿನ ದಿನ ಎಲ್ಲಾ ಕೆಲಸಕ್ಕೂ ಸಾಕಾದಷ್ಟು ಸಿಬ್ಬಂದಿಯಿತ್ತು. ಆ ದಿನ ಕೆಲವು ಮಂದಿ ಪೋಲೀಸ್‌ನವರನ್ನು ಒಬ್ಬರು ಮ್ಯಾಜಿಸ್ಟ್ರೇಟರ ವಶಕ್ಕೆ ಕೊಟ್ಟು ಅವರು ತನಿಖೆ ಕ್ರಮ ನಡೆಸುವಂತೆ ಏರ್ಪಡಿಸುವುದು ಸುಲಭವಾಗಿತ್ತು.

ಪೋಲೀಸ್‌ನವರು ಮೊದಲುಗೊಂಡು ಏಟುತಿಂದಿರುವ ಇಂತಹ ದೊಂಬಿಗಳು ನಡೆದಾಗ, ಎಲ್ಲವೂ ಶಾಂತಸ್ಥಿತಿಗೆ ಬರುವವರೆಗೆ ತನಿಖೆ ನಡೆಸುವುದಕ್ಕಾಗಲೀ, ದಸ್ತಗಿರಿ ಮಾಡುವುದಕ್ಕಾಗಲಿ, ಪ್ರಯತ್ನಿಸುವುದು ಸರಿಯಲ್ಲವೆಂಬುದನ್ನು ನಾವು ಒಪ್ಪುವುದಿಲ್ಲ.

ಪತ್ರಿಕೆಗಳನ್ನು ನಿಲ್ಲಿಸಿದುದು.

ಪತ್ರಿಕೆಗಳನ್ನು ನಿಲ್ಲಿಸುವುದರ ಉದ್ದೇಶವು ಸಂಪೂರ್ಣವಾಗಿ ನೆರವೇರಲಿಲ್ಲ. ಏಕೆಂದರೆ ಅವುಗಳು ನಿಲ್ಲಿಸಲ್ಪಡದೆ ಇದ್ದರೆ ಅವುಗಳಲ್ಲಿ ಪ್ರಕಟವಾಗಬಹುದಾಗಿದ್ದ ಕೆಲವು ಲೇಖನಗಳು ಹೊರಗಿನ ಪತ್ರಿಕೆಗಳಲ್ಲಿ ಪ್ರಕಟಿಸಲ್ಪಟ್ಟುವು. ಪತ್ರಿಕೆಗಳನ್ನು ನಿಲ್ಲಿಸತಕ್ಕದ್ದು ವಿಶೇಷ ಸ್ವಭಾವದ ಶಾಸನವು; ಈ ಶಾಸನವನ್ನು ಅತ್ಯಂತ ವಿಷಮಾವಸ್ಥೆಯಲ್ಲಿ ಮಾತ್ರ ಜಾರಿಗೆ ತರಬೇಕು.

ಗಲಭೆಗೆ ಪ್ರೋತ್ಸಾಹಕರಾದವರು.

ವಿವಾಗಡಿ ಹೊಂದಿದ ಮುಖಂಡರನ್ನು ಸುಮ್ಮನೆ ಅವರ ಮನೆಗಳಿಗೆ ಕಳುಹಿಸಿಬಿಡದೆ ಮೆರವಣಿಗೆ ಮಾಡಿದ್ದರೆ, ಅದರ ಪೋಲೀಸಿನವರು (ಇನ್ಸ್‌ಪೆಕ್ಟರ್ ಜನರಲ್‌ರವರು) ಮೆರವಣಿಗೆಯನ್ನು ನಿಲ್ಲಿಸಬಹುದಿತ್ತು; ಅಥವ ಸೆಂಟ್ರಲ್ ಸ್ಕೂಲಿನಿಂದ ಮುಖಂಡರ ಬಿಡುಗಡೆಯ ಸಮಾಚಾರವನ್ನು ಕಳುಹಿಸಿದ್ದರೆ ಪೋಲೀಸಿನವರಿಗೆ ತಿಳಿಸಿ ಅವರು ಸಾಯಂಕಾಲದ ವೇಳೆ ಸೆಂಟ್ರಲ್ ಸ್ಕೂಲಿನಲ್ಲಿ ಸಾಕಾದಷ್ಟು ಸಿಬ್ಬಂದಿಯೊಡನೆ ಸುಪರಿಂಟೆಂಡೆಂಟ್ ಸ್ವಂತ ಹಾಜರಾಗಿದ್ದರೆ, ದೊಂಬಿ ನಡೆಯುತ್ತಿರಲಿಲ್ಲ. ಆದರೆ ಈ ಎಚ್ಚರಿಕೆಯಿಂದ ತೆಗೆದುಕೊಳ್ಳಲ್ಪಡಲಿಲ್ಲ.

ಪಿತೂರಿ ವಿಚಾರ.

ದಿವಾನ್‌ರವರು, ಸರ್ಕಾರ ಮತ್ತು ಮಿ|| ಅಬ್ಬಾಸ್‌ಖಾನರ ಮೇಲೆ ಒಂದು ಗುಪ್ತಸಂಸ್ಥೆಯು ಪಿತೂರಿ ನಡೆಸುತ್ತಿದೆಯೆಂದೂ ಆ ಸಂಸ್ಥೆಯವರು ಈಗಿರುವ ದಿವಾನರನ್ನು ತೆಗೆಸಿಹಾಕಿ ಸಾಧ್ಯವಾದರೆ ಈಗಿರುವ ರಾಜ್ಯಾಡಳಿತ ಕ್ರಮವನ್ನು ಬದಲಾಯಿಸಬೇಕೆಂದು ಸನ್ನಾಹ ನಡೆಸುತ್ತಿದ್ದಾರೆಂದೂ ಹೇಳಲ್ಪಟ್ಟಿದೆ. ಈ ಹೇಳಿಕೆಗಳನ್ನು ಗುಪ್ತವಾಗಿ ತೆಗೆದುಕೊಳ್ಳಲಾಯಿತು. ಈ ವಿಚಾರವಾಗಿ ಸಾಕ್ಷಿ ಹೇಳಿದವರಲ್ಲಿ ಅನೇಕರು ರುಜುವಾತು ಕೊಡುವುದಾಗಿ ಹೇಳಿದರು. ಅವರಿಗೆ ಆರೀತಿ ರುಜುವಾತು ಕೊಡಲು ಸಾಕಾದಷ್ಟು ಕಾಲ ವ್ಯವಧಾನವನ್ನು ಕೊಟ್ಟರೂ ಯಾರೂ ಯಾವ ಆಧಾರವನ್ನೂ ತಂದು ತೋರಿಸಲಿಲ್ಲ. ಈಗಿರುವ ದಿವಾನ್‌ರನ್ನು ತೆಗೆಸುವುದಕ್ಕಾಗಿ ಅಗಾಧ ಪ್ರಯತ್ನವು ನಡೆಯಿತೆಂದು ನಾವು ನಂಬಲಾರೆವು. ಹಾಗೂ ಸರ್ಕಾರವನ್ನು ಕಲಕಲಗೊ ಮಾಡುವುದಕ್ಕಾಗಿ ಯಾವ ಪ್ರಯತ್ನವೂ ನಡೆಯಲಿಲ್ಲ. ಮೈಸೂರು ಸಂಸ್ಥಾನದಲ್ಲಿ ಇಂತಹ ಸಾಹಸವು ಸಾಧ್ಯವಾದುದೆಂದು ಯಾವ ಪಂಗಡದವರೂ ಭಾವಿಸಲಾರರು.

ಸಂಬಂಧಪಟ್ಟ ಅಧಿಕಾರಿಗಳ ವರ್ತನೆ.

ವಿಗ್ರಹದ ಸ್ಥಾನಪಲ್ಲಟದ ವಿಷಯವಾಗಿ ಪತ್ರಿಕೆಗಳಲ್ಲಿ ಅಷ್ಟೊಂದು ಗಲಾಟೆ ನಡೆದಿದ್ದರೂ ವಿದ್ಯಾಭ್ಯಾಸದ ಡೈರೆಕ್ಟರು ಉದಾಸೀನಮಾಡಿದರು.

ಮಿಲಿಟರಿಯವರನ್ನು ಕರೆಸಿದುದು ಸರಿ. ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರು ಇದ್ದಾಗ ತಾವು ಏನನ್ನೂ ಮಾಡಲಾಗುವುದಿಲ್ಲವೆಂದು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಹೇಳುವುದನ್ನು ನಾವು ಒಪ್ಪುವುದಿಲ್ಲ. ಆ ದಿನ ನಡೆದ ಕೃತ್ಯಗಳ ವಿಚಾರವಾಗಿ ತಮಗೆ ಬಂದ ವರ್ತಮಾನಗಳ ಸತ್ಯಾಸತ್ಯಗಳನ್ನು ಆಗಲೇ ಗೊತ್ತುಮಾಡುವುದಕ್ಕಾಗಿ ಮನೆಗಳನ್ನು ಹುಡುಕಬೇಕಾಗಿತ್ತು.

ಸಿಟಿ ಮ್ಯಾಜಿಸ್ಟ್ರೇಟರು ಮುಖಂಡರ ಬಿಡುಗಡೆಗೆ ಸರ್ಕಾರ ಹುಕ್ಕುಂ ಆಗಿದೆಯೆಂದು ಖಾಸಗಿ ದೊಡ್ಡ ಮನುಷ್ಯರೊಬ್ಬರ ಮಾತನ್ನು ನಂಬಿ, ಮುಖಂಡರನ್ನು ಬಿಡುಗಡೆ ಮಾಡಿದುದು ತಪ್ಪು.

ಜೈಲು ಸೂಪರಿಂಟೆಂಡೆಂಟರು ಏನು ತಪ್ಪನ್ನೂ ಮಾಡಲಿಲ್ಲ.

ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರು.

ಗಣೇಶನ ಸ್ಥಾನಪಲ್ಲಟದ ವಿಚಾರವಾಗಿ ಪತ್ರಿಕೆಗಳಲ್ಲಿ ಅಷ್ಟೊಂದು ಗಲಾಟೆ ನಡೆಯುತ್ತಿದ್ದಾಗ, ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರು ಕೂಡಲೆ ಯಾವುದಾದರೊಂದು ನಿರ್ಧಾರಕ್ಕೆ ಬರದೆ, ಆಲಸ್ಯಮಾಡಿದರು. ಈ ವಿಚಾರದಲ್ಲಿ ದಿನ ದಿನಕ್ಕೆ ಹೆಚ್ಚಾಗಿ ನಡೆಯುತ್ತಿದ್ದ ಚಳುವಳಿಯ ವಿಷಯವನ್ನು ಇವರು ಆಯಾ ದಿನ ಸರಿಯಾಗಿ ತಿಳಿದುಕೊಳ್ಳಲು ಏರ್ಪಡಿಸದಿದ್ದುದು ಅಥವಾ ಈ ವಿಚಾರವನ್ನು ಉದಾಸೀನ ಮಾಡಿ ಇದರಿಂದ ಮುಂದೆ ಅನಾಹುತಗಳು ನಡೆಯುತ್ತವೆಂದು ಭಾವಿಸದಿದ್ದುದು, ಇವರ ಆಲಸ್ಯಕ್ಕೆ ಕಾರಣವಾಗಿರಬಹುದು.

ಮಿಲಿಟರಿ ಇಲಾಖೆ.

ಮಿಲಿಟರಿಯವರನ್ನು ಕರೆಸುವುದಕ್ಕೆ ಏನು ಆಗತ್ಯವಿತ್ತೆಂಬ ಪ್ರಶ್ನೆ ಹುಟ್ಟಿದೆ. ಪೋಲೀಸ್ ಸಿಬ್ಬಂದಿಯು ಕಡಿಮೆಯಾಗಿದ್ದುದರಿಂದಲೂ ಒಂದು ಸಾರಿ 6 ಸಾವಿರದಿಂದ 10 ಸಾವಿರದವರೆಗೆ ಜನರು ಗುಂಪು ಸೇರಿದ್ದರೆಂದು ತಿಳಿಯಬರುವುದರಿಂದಲೂ, ಮಿಲಿಟರಿಯವರನ್ನು ಕರೆಸಿದುದು ಆಗತ್ಯವಾಗಿತ್ತೆಂದು ನಾವು ಅಭಿಪ್ರಾಯ ಪಡುತ್ತೇವೆ.

ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು.

ಇಂತಹ ವಿಷಮಾವಸ್ಥೆಗಳಲ್ಲಿ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರ ಹಾಜರಿದ್ದಾಗ ತಾವು ಏನನ್ನೂ ಮಾಡಲಾಗುವುದಿಲ್ಲವೆಂದು ಡಿ|| ಮ್ಯಾಜಿಸ್ಟ್ರೇಟರು ಹೇಳುವುದು ಅಷ್ಟು ತೃಪ್ತಿಕರವಾಗಿಲ್ಲ.

30 ನೇ ತಾರೀಖಿನ ರಾತ್ರಿ, ಮನೆಗಳನ್ನು ಹುಡುಕಬೇಕೆಂದು ಜನರೆಲ್ಲರೂ ಕೂಗಿಕೊಂಡರೂ, ಕೆಲವು ಮುಖ್ಯಸ್ಥರು ಆ ರೀತಿ ಮಾಡಬೇಕೆಂದು ಬೇಡಿಕೊಂಡರೂ, ಮನೆಗಳನ್ನು ಹುಡುಕುವುದಾಗಲಿ, ದಸ್ತಗಿರಿ ಮಾಡುವುದಾಗಲಿ, ಉಚಿತವೆಂದು ಡಿ|| ಮ್ಯಾಜಿಸ್ಟ್ರೇಟರು ಭಾವಿಸಲಿಲ್ಲ. ಆ ರೀತಿ ತಪಾಸಣೆ ಮಾಡಲಿಲ್ಲವೆಂಬುದಕ್ಕೆ, ಆಗ ನಾನಾ ವಿಧವಾದ ಸಮಾಚಾರಗಳು ಹಬ್ಬಿದ್ದುದರಿಂದ ಅವುಗಳಲ್ಲಿ ಯಾವುದು ನಿಜವೆಂದು ನಂಬಿ ಕಾರ್ಯಮಾಡಲು ಮನಸ್ಸು ಮಾಡುವುದು ತಮಗೆ ಅಸಾಧ್ಯವಾಯಿತೆಂದು ಇವರು ಹೇಳುತ್ತಾರೆ. ಮನೆ ಹುಡುಕುವಾಗ ಅಥವ ದಸ್ತಗಿರಿ ಮಾಡುವಾಗ ಏನಾದರೂ ತೊಂದರೆಗಳು ಸಂಭವಿಸಬಹುದೆಂದು ಇವರು ತಿಳಿದಿದ್ದರೆ, ಸವಾರರು ಬಂದಮೇಲಾದರೂ, ಅವರ ಸಹಾಯದಿಂದ ಏನು ಮಾಡುವುದಕ್ಕೂ ಸಾಧ್ಯವಿತ್ತು; ಆದುದರಿಂದ ಇವರಿಗೆ ಮನಸ್ಸಿರಲಿಲ್ಲವೆಂದೇ ಕಾಣುತ್ತದೆ. ಆಗ ನಡೆದ ಕೃತ್ಯಗಳ ಸಂಬಂಧವಾಗಿ ಇವರಿಗೆ ತಿಳಿದು ಬಂದ ಸಮಾಚಾರಗಳನ್ನೆಲ್ಲಾ ಇವರು ನಂಬಲಿ, ನಂಬದಿರಲಿ, ಆ ಸಮಾಚಾರಗಳ ಸತ್ಯಾಸತ್ಯಗಳನ್ನು ಪರಿಶೀಲಿಸುವುದಕ್ಕಾಗಿ ಆ ಕೂಡಲೆ ಪ್ರಯತ್ನಿಸಬೇಕಾಗಿತ್ತು.

ಸಿಟಿ ಮ್ಯಾಜಿಸ್ಟ್ರೇಟರು.

ದೊಂಬಿ ನಡೆದ ಸರಹದ್ದು ನ್ಯಾಯವಾಗಿ ಸಿಟಿ ಮ್ಯಾಜಿಸ್ಟ್ರೇಟರಿಗೆ ಸೇರಿದ್ದರೂ ಅವರು ಯಾವ ಪ್ರಾಮುಖ್ಯತೆಯನ್ನೂ ವಹಿಸಲಿಲ್ಲ. ಅನೇಕ ಕಡೆಗಳಲ್ಲಿ ಗಲಭೆ ನಡೆದು ಜನರು ಗಾಬರಿಗೊಂಡಿದ್ದಾರೆಂದು ತಿಳಿದ ಒಡನೆ ಇವರು ಸ್ವಲ್ಪ ಚುರುಕಾಗಿ ಓಡಾಡುತ್ತ ಗಲಭೆ ನಡೆದ ಸ್ಥಳಗಳಿಗೆಲ್ಲಾ ಹೋಗಿ ನೋಡಬೇಕಾಗಿತ್ತು. ಮುಖಂಡರನ್ನು ಬಿಡುಗಡೆಮಾಡಬಹುದೆಂದು ಸರ್ಕಾರದವರ ಆರ್ಡರು ಮಾಡಿದ್ದಾರೆಂದು ಖಾಸಗಿ ದೊಡ್ಡ ಮನುಷ್ಯರೊಬ್ಬರು ಹೇಳಿದುದನ್ನು ನಂಬಿ ಮುಖಂಡರನ್ನು ಬಿಡುಗಡೆ ಮಾಡಿಬಿಟ್ಟರು. ಈ ಆರ್ಡರು ತಮ್ಮ ಸ್ವಂತ ಆರ್ಡರಲ್ಲವಾದುದರಿಂದ, ಆ ಸಮಾಚಾರವನ್ನು ಹೇಳಿದವರು ಎಷ್ಟೇ ದೊಡ್ಡ ಮನುಷ್ಯರಾಗಿದ್ದರೂ ಅವರ ಬಾಯಿಮಾತಿನ ಆಧಾರದಮೇಲೆ ಇವರು ಕಾರ್ಯಮಾಡಬಾರದಾಗಿತ್ತು. ಅಂತು ಜನರ ಗುಂಪನ್ನು ಚದುರಿಸಿ ಆಮೇಲೆ ಮುಖಂಡರನ್ನು ಬಿಡುಗಡೆ ಮಾಡಬೇಕಾಗಿತ್ತು. ಅಥವ ಇವರ ಬಿಡುಗಡೆಯ ವಿಚಾರವಾಗಿ ಟೆಲಿಫೋನಿನಲ್ಲಾಗಲೀ ಮತ್ತಾವ ವಿಧದಿಂದಾಗಲಿ, ಮೊದಲು ಪೋಲೀಸ್‌ನವರಿಗೆ ತಿಳಿಸಿ, ಅವರು ಮೆರವಣಿಗೆಯವರನ್ನು ಹಿಂಬಾಲಿಸಲು ಅನುಕೂಲ ಪಡಿಸಬೇಕಾಗಿತ್ತು.

ಜೈಲು ಸೂಪರಿಂಟೆಂಡೆಂಟರು.

ಸೆಂಟ್ರಲ್ ಜೈಲು ಸೂಪರಿಂಟೆಂಡೆಂಟರ ವಿಚಾರದಲ್ಲಿ ಯಾವ ದೋಷವನ್ನೂ ಆರೋಪಿಸಲಾರೆವು. ಅವರ ಕಾರ್ಯವೂ ವರ್ತನೆಯೂ ಸ್ವಾಭಾವಿಕವಾಗಿದ್ದುವು; ಗುಂಪನ್ನು ಅವರ ಸರಿಯಾದ ಹದ್ದುಬಸ್ತಿನಲ್ಲಿಟ್ಟುಕೊಂಡಿದ್ದರು.

"ಆ ರಾತ್ರಿ ದಸ್ತಗಿರಿ ಮಾಡಿದ್ದರೆ ತತ್ಕ್ಷಣ ಗೊತ್ತಾಗಿ ಹೋಗುತ್ತಿತ್ತು."

ಬಾಹ್ಮಣೇತರರನ್ನು ಬಿಟ್ಟು ರಾಜಕೀಯ ಪಂಗಡಗಳನ್ನು ಮಾಡಿ.

ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟರಿಗೂ ಅ|| ಪೋಲೀಸ್ ಸೂಪರಿಂಟೆಂಡೆಂಟರಿಗೂ ಮನಸ್ತಾಪವಿದ್ದುದರಿಂದ ಒಬ್ಬರಿಗೊಬ್ಬರು ಸಹಕರಿಸಿ ಕೆಲಸಮಾಡಲಿಲ್ಲ.

ಆದಿನ ಯಾರನ್ನಾದರೂ ದಸ್ತಗಿರಿಮಾಡಿದ್ದರೆ ಹೆಚ್ಚು ಅನಾಹುತಗಳು ನಡೆದುಹೋಗುತ್ತಿದ್ದುವೆಂದು ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರು ಹೇಳುವುದನ್ನು ಒಪ್ಪುವುದಕ್ಕಾಗುವುದಿಲ್ಲ.

ಅಂದಿನ ಸ್ಥಿತಿಯು ವಿಷಮಾವಸ್ಥೆಯಲ್ಲಿದ್ದುದೇನೋ ನಿಜ. ಆದರೆ, ಸಂಬಂಧಪಟ್ಟ ಅಧಿಕಾರಿಯು ತನ್ನ ಕರ್ತವ್ಯವನ್ನು ನೆರವೇರಿಸಲು ಹಿಂಜರಿದಿರುವರು. ಈ ವಿಚಾರದಲ್ಲಿ ಸರ್ಕಾರದವರು ತಕ್ಕ ಗಮನಕೊಡಬೇಕಾಗಿದೆ.

ಬ್ರಾಹ್ಮಣರು, ಬ್ರಾಹ್ಮಣೇತರರು ಎಂದು ಕರೆಯುವುದಕ್ಕೆ ಬದಲಾಗಿ ಇನ್ನುಮುಂದೆ ರಾಜಕೀಯ ವ್ಯವಹಾರದಾರರನ್ನು ಎರಡು ಭಾಗವಾಗಿ ಪ್ರಾಚೀನವಾದಿಗಳು (ಕನ್ಸರ್ವೇಟಿವ್ಸ್) ಧಾರಾಳವಾದಿಗಳು (ಪ್ರೋಗ್ರೆಸಿವ್ಸ್) ಎಂದು ಕರೆಯಬೇಕು.

ಜನರಿಗೆ ಜವಾಬ್ದಾರಿ ಸರ್ಕಾರವನ್ನು ಕೊಡಬೇಕು. ದಿವಾನರನ್ನು ಮುಖ್ಯಮಂತ್ರಿ (ಚೀಫ್‌ಮಿನಿಸ್ಟರ್) ಯನ್ನಾಗಿಟ್ಟುಕೊಂಡು, ಖಾಸಗಿ ಮಂತ್ರಿಗಳಿಗೆ ಸರ್ಕಾರದ ಆಡಳಿತದಲ್ಲಿ ಕೆಲವು ಭಾಗಗಳನ್ನು ವಹಿಸಬೇಕು.

ಪೋಲೀಸ್ ಇಲಾಖೆ.

ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟರೂ ಅ|| ಪೋಲೀಸ್ ಸೂಪರಿಂಟೆಂಡೆಂಟರೂ ಒಬ್ಬರೊಡನೊಬ್ಬರು ಸಹಕರಿಸಿ ಕೆಲಸಮಾಡಲಿಲ್ಲ. ಅವರಲ್ಲಿ ಒಬ್ಬರಲ್ಲೊಬ್ಬರಿಗೆ ಮನಸ್ತಾಪವಿದ್ದಿತು. ಸಿಟಿಯಲ್ಲಿ ಶಾಂತಿ ಸಮಾಧಾನಗಳು ನೆಲೆಸುವಂತೆ ಏರ್ಪಡಿಸುವುದು ತಮ್ಮ ಕರ್ತವ್ಯವಲ್ಲವೆಂದೂ ಸಿಟಿಯು ಅ|| ಸೂಪರಿಂಟೆಂಡೆಂಟರಿಗೆ ಸೇರಿದ್ದರಿಂದ ಅದು ಅವರ ಕರ್ತವ್ಯವೆಂದೂ ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟರು ಭಾವಿಸಿದರು. ಮೇಲಿನ ಅಧಿಕಾರಿಗಳಿಂದ ಆರ್ಡರು ಬರುವವರೆಗೂ ತಾವು ಏನು ಮಾಡುವುದಕ್ಕೂ ಇವರಿಬ್ಬರು ಅಧಿಕಾರಿಗಳಿಗೂ ಮನಸ್ಸಿರಲಿಲ್ಲ.

ಆದಿನ ರಾತ್ರಿ ಶಾಂತಿಯು ನೆಲೆಸುವಂತೆ ಮಾಡುವುದಕ್ಕಾಗಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರೂ, ಪೋಲೀಸ್ ಅಧಿಕಾರಿಗಳೂ ಸಾಹಸಪಡಬೇಕಾಗಿದ್ದುದರಿಂದಲೂ, ಯಾರನ್ನಾದರೂ ದಸ್ತಗಿರಿ ಮಾಡಿದ್ದರೆ, ಅದರಿಂದ ರಕ್ತದ ಕೋಡಿ ಹರಿಯುವ ಸಂಭವವಿದ್ದುದರಿಂದಲೂ, ತಾವು ಆರೀತಿ ಕಾರ್ಯಮಾಡಿದ್ದರೆ ಬುದ್ಧಿಹೀನವಾಗುತ್ತಿತ್ತೆಂದು ಇನ್ಸ್‌ಪೆಕ್ಟರ್ ಜನರಲ್‌ರವರು ಹೇಳುತ್ತಾರೆ. ಇವರಿಗೆ ಏಟುಬಿದ್ದು ಇವರು ಕೃತ್ಯನಡೆದ ಸ್ಥಳದಲ್ಲಿ ಹಾಜರಿರಲಿಲ್ಲವಾದುದರಿಂದ ಆರಾತ್ರಿ ಸಂಬಂಧಪಟ್ಟ ಅಧಿಕಾರಿಗಳು ತಮ್ಮ ಕರ್ತವ್ಯವನ್ನು ಮಾಡದಿದ್ದುದಕ್ಕೆ ಇವರು ಹೇಳುವ ಸಮಾಧಾನವು ಸಕಾರಣವಾದುದಾಗಿಲ್ಲ. ಗಲಭೆನಡೆದ ಬಹಳ ಹೊತ್ತಿನವರೆಗೂ ಸ್ಥಳದಲ್ಲಿ ಹಾಜರಿದ್ದ, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರೂ, ಡಿ|| ಸೂಪರಿಂಟೆಂಡೆಂಟರೂ, ಅ|| ಸೂಪರಿಂಟೆಂಡೆಂಟರೂ ಅಂತಹ ಭಯಕ್ಕೆ ಕಾರಣವಿತ್ತೆಂದು ಹೇಳುವುದಿಲ್ಲ.

ಜುಲೈ 30 ನೇ ತಾರೀಖಿನ ರಾತ್ರಿ ಡಿ|| ಸೂಪರಿಂಟೆಂಡೆಂಟರೂ ಅ|| ಸೂಪರಿಂಟೆಂಡೆಂಟರೂ ಜವಾಬ್ದಾರಿ ವಹಿಸಿ ಕೆಲಸಮಾಡಲು ಮನಸ್ಸುಳ್ಳವರಾಗಿರಲಿಲ್ಲವೆಂದು ನಾವು ಭಾವಿಸುತ್ತೇವೆ, ಪೋಲೀಸ್ ಇಲಾಖೆಯಲ್ಲಿ ಬಹಳ ಮಂದಿ ಮುಸಲ್ಮಾನರಿದ್ದರೆಂಬುದೂ ಇವರ ಈ ಬಗೆಯ ಆಲಸ್ಯಕ್ಕೆ ಕಾರಣವಾಗಿರಬಹುದು. ಇನ್ಸ್‌ಪೆಕ್ಟರ್ ಜನರಲ್‌ರವರೂ, ಡಿ|| ಕಮಿಷನರೂ ಜತೆಯಲ್ಲೇ ಇದ್ದರೂ, ಇವರಿಬ್ಬರೂ ಸರ್ಕಾರದ ಮೆಂಬರುಗಳಲ್ಲಿಗೆ ಹೋಗಬಹುದಾಗಿದ್ದರೂ, ಅಂದಿನ ಸ್ಥಿತಿಯ ಮೇಲ್ವಿಚಾರಣೆಯನ್ನು ತಮ್ಮ ಅಧೀನಕ್ಕೆ ತೆಗೆದುಕೊಳ್ಳಲಿಲ್ಲ. ತಮ್ಮ ಕೆಳಗಿನ ಅಧಿಕಾರಿಗಳು ಯಾವ ಕಾರ್ಯವನ್ನು ಕೈಗೊಂಡು, ಮನೆಗಳನ್ನು ಹುಡುಕಿ, ತಪ್ಪಿತಸ್ಥರನ್ನು ದಸ್ತಗಿರಿ ಮಾಡಬೇಕೆಂಬ ಬಗ್ಗೆ ಸರಿಯಾದ ತಿಳುವಳಿಕೆಯನ್ನು ಅವರಿಗೆ ಕೊಡಲಿಲ್ಲ, ಇಂತಹ ವಿಷಮಸ್ಥಿತಿಯಲ್ಲಿ ಇನ್ಸ್‌ಪೆಕ್ಟರ್ ಜನರಲ್‌ರವರು ಅಂದಿನ ವ್ಯಾಪಾರವನ್ನು ತಮ್ಮ ಹತೋಟಿಗೆ ತೆಗೆದುಕೊಂಡು ಕೇವಲ ಎಚ್ಚರಿಕೆಯಿಂದ ಕಾರ್ಯಮಾಡಬೇಕಾಗಿತ್ತು. ಆಗತ್ಯವಾದರೆ, ಯಾವ ದಾರಿಯನ್ನು ಅನುಸರಿಸಬೇಕೆಂಬ ಬಗ್ಗೆ ಸರ್ಕಾರದಿಂದ ತಕ್ಕ ತಿಳುವಳಿಕೆ ಪಡೆಯಬೇಕಾಗಿದ್ದಿತು.

ಇಂತಹ ವಿಷಮಾವಸ್ಥೆಯಲ್ಲಿ ತಕ್ಕ ಕಾರ್ಯಮಾಡಬೇಕಾಗಿದ್ದ ಎಲ್ಲಾ ಅಧಿಕಾರಿಗಳು ತಟಸ್ಥರಾಗಿದ್ದರೆಂದು ಧಾರಾಳವಾಗಿ ಹೇಳಬಹುದು. ಬೆಂಗಳೂರು ಹಿಂದಿನ ದೊಂಬಿಯಲ್ಲಿ ಧೈರ್ಯದಿಂದ ಗುಂಡುಹಾರಿಸಿದ ಅಧಿಕಾರಿಯು, ದುಡುಕಿ ಕೆಲಸ ಮಾಡಿದನೆಂಬ ಆಕ್ಷೇಪಣೆಗೆ ಗುರಿಯಾದುದರಿಂದ ಅಧಿಕಾರಿಗಳು ಈ ಗಲಭೆಯಲ್ಲಿ ಧೈರ್ಯವಾಗಿ ಯಾವ ಕೆಲಸವನ್ನು ಮಾಡುವುದಕ್ಕೂ ಹಿಂಜರಿದಿರಬಹುದೆಂದು ಇನ್ಸ್‌ಪೆಕ್ಟರ್ ಜನರಲ್‌ರವರೂ, ಡಿ|| ಮ್ಯಾಜಿಸ್ಟ್ರೇಟರೂ ಹೇಳುತ್ತಾರೆ. ಒಟ್ಟಿನಲ್ಲಿ ಆ ದಿನರಾತ್ರಿ ಡ್ಯೂಟಿ ಮೇಲಿದ್ದ ಪೋಲೀಸ್‌ನವರೂ ಮ್ಯಾಜಿಸ್ಟ್ರೇಟರೂ ತಮ್ಮ ಕರ್ತವ್ಯವನ್ನು ಸಮರ್ಪಕವಾಗಿ ನೆರವೇರಿಸಿದರೆಂದು ನಾವು ಒಪ್ಪಲಾರೆವು. ಅಂದಿನ ಸ್ಥಿತಿಯು ಅತ್ಯಂತ ಕಠಿಣತರವಾದುದೆಂಬುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೂ ನಿಜಾಂಶವನ್ನು ಆಕೂಡಲೆ ಆ ಸ್ಥಳದಲ್ಲೇ ಕಂಡುಹಿಡಿಯುವುದಕ್ಕೆ ಅವರು ಅಗತ್ಯವಾದ ಎಲ್ಲಾ ಪ್ರಯತ್ನಗಳನ್ನೂ ಮಾಡಬೇಕಾಗಿತ್ತು; ಹಾಗೂ ಮಿಲಿಟರಿಯವರು ಬಂದಮೇಲೆ ದೊಂಬಿಯು ಪುನಃ ನಡೆಯುತ್ತದೆಂಬ ಭಯವೇನೂ ಇರಲಿಲ್ಲವಾದುದರಿಂದ, ಆಮೇಲಾದರೂ ಅವರು ಈ ಕಾರ್ಯಮಾಡಬೇಕಾಗಿತ್ತು. ತಪ್ಪಿತಸ್ಥರಮೇಲೆ ಆ ದಿನವಲ್ಲದಿದ್ದರೆ ಸಾಧ್ಯವಾದ ಕೂಡಲೆ ಕ್ರಮಜರಗಿಸಲು ಸಹಾಯವಾಗಬಹುದಾಗಿದ್ದ ಎಲ್ಲಾ ಸಂಗತಿಗಳನ್ನೂ ಅವರು ತಿಳಿದುಕೊಳ್ಳುವುದು ಅವರ ಕರ್ತವ್ಯವಾಗಿತ್ತು. ಆದರೆ ಯಾವ ಅಧಿಕಾರಿಯೂ ಕಾರ್ಯ ಮಾಡುವುದಕ್ಕೆ ಆತುರರಾಗಿದ್ದಂತೆ ತೋರಿಬರುವುದಿಲ್ಲ. ಸಿಬ್ಬಂದಿಯಲ್ಲಾ ದಿಗ್ಭ್ರಾಂತರಾಗಿ ತಪ್ಪಿಗಿದ್ದರು. ಇವರ ಈ ನಡತೆಯ ವಿಚಾರವಾಗಿ ಸರ್ಕಾರದವರು ತಕ್ಕ ಗಮನ ಕೊಡಬೇಕಾಗಿದೆ. ಹಾಗೂ ಈ ಅಧಿಕಾರಿಗಳು ಆಗಿಂದಾಗ್ಗೆ ಗೌರ್ನಮೆಂಟ್ ಮೆಂಬರುಗಳನ್ನು ನೋಡುತ್ತಿದ್ದರು. ಆ ರಾತ್ರಿಯಾಗಲಿ, ಅದರ ಮಾರನೆ ದಿನವಾಗಲಿ, ಇವರ ನಡತೆ ವಿಚಾರವಾಗಿ ಸರ್ಕಾರದವರು ಯಾವ ಆಕ್ಷೇಪವನ್ನೂ ಮಾಡಲಿಲ್ಲ; ಅಥವ ಅದಕ್ಕಾಗಿ ಅವರ ಸಮಜಾಯಿಷಿಯನ್ನೂ ಕೇಳಲಿಲ್ಲ.

ರಾಜಕೀಯ ಅಸಮಾಧಾನಗಳನ್ನು ತಪ್ಪಿಸುವುದು ಹೇಗೆ?

ಈಗಿರುವ ಬ್ರಾಹ್ಮಣರು, ಬ್ರಾಹ್ಮಣೇತರರು ಎಂಬ ಪಂಗಡಗಳಿಗೆ ಬದಲಾಗಿ, ಪ್ರಾಚೀನವಾದಿಗಳು (ಕನ್ಸರ್ವೇಟಿವ್ಸ್) ಮತ್ತು ಧಾರಾಳವಾದಿಗಳು (ಪ್ರೋಗ್ರೆಸಿವ್ಸ್) ಎಂದು ಎರಡು ರಾಜಕೀಯ ಪಂಗಡಗಳನ್ನು ಮಾಡಿ, ಜವಾಬ್ದಾರಿ ಸರ್ಕಾರವನ್ನು ಅವರಿಗೆ ಕೊಡುವುದು ಯುಕ್ತವಾಗಿದೆ. ಈ ಎರಡು ಪಂಗಡಗಳಲ್ಲೂ, ಸಮರ್ಥರಾದವರೂ, ಅನುಭವಶಾಲಿಗಳೂ ಜ್ಞಾನವುಳ್ಳವರೂ ಇರುವಂತೆ ನೋಡಿಕೊಳ್ಳಬೇಕು. ಆರೀತಿ ಜವಾಬ್ದಾರಿ ಸರ್ಕಾರವು ಜಾರಿಗೆ ಬಂದಮೇಲೆ ಆಗತ್ಯವಾದರೆ ಕೆಲವು ವರ್ಷಗಳವರೆಗೆ ದಿವಾನರನ್ನು ಮುಖ್ಯಮಂತ್ರಿಗಳನ್ನಾಗಿ ಇಟ್ಟುಕೊಳ್ಳಬಹುದು. ಈರೀತಿ ಮಾಡಿದರೆ ಹೊಸದ ಕ್ರಮಗಳು ಒಂದೇಸಾರಿಗೆ ಜಾರಿಗೆಹೋಗುವುದಿಲ್ಲ.

ಸ್ವಾತಂತ್ರ್ಯ ಹೋರಾಟ ... ವಿದ್ಯಾರ್ಥಿ

ವಿಗ್ರಹವನ್ನು ಸ್ವಸ್ಥಾನದಲ್ಲಿಟ್ಟರು

ದಸ್ತಗಿರಿ ಮಾಡಿದವರನ್ನು ಬಿಡುಗಡೆ ಮಾಡುವ ಪ್ರಯತ್ನ

ಬೇರೆ ಬೇರೆ ಸ್ಕೂಲುಗಳ ಹತ್ತಿರ ಮುಷ್ಕರದ ಗಲಾಟೆ

ಜುಲೈ 29 ನೇ ತಾರೀಖಿನ ದಿನ ಸತ್ಯಾಗ್ರಹಿಗಳ ... ರವರ

ದಸ್ತಗಿರಿ ಮಾಡಲ್ಪಟ್ಟರು

ಶ್ರೀ ಶಂಕರನಾರಾಯಣರಾಯರು ದಿವಾನರನ್ನು ನೋಡಿ ವಿಗ್ರಹವನ್ನು ಸ್ವಸ್ಥಾನದಲ್ಲಿಡಿಸುವಂತೆ ಕೇಳಿಕೊಂಡರು. ದಿವಾನರವರು ಮಿ|| ಮಾಕ್ಷ್ವಾರಿಗೆ ತಿಳಿಸಲು, ಅದೇ ಪ್ರಕಾರ ಮಿ|| ಮಾಕ್ಷ್ವಾರವರು ಸ್ಕೂಲನ್ನು ಭೇಟಿ ಮಾಡಿ, ಅನಂತರ ವಿಗ್ರಹವನ್ನು ಸ್ವಸ್ಥಾನದಲ್ಲಿಡಿಸಿದರು.

ಮುಖಂಡರನ್ನು ದಸ್ತಗಿರಿ ಮಾಡಿದ್ದರಿಂದ ಹುಡುಗರಿಗೆ ಸಮಾಧಾನವಾಗಲಿಲ್ಲ. ತಮ್ಮ ಮುಖಂಡರನ್ನು ಬಿಡಿಸಿಕೊಳ್ಳುವುದಕ್ಕಾಗಿ ಏಳು ವರುಷದ ಮಕ್ಕಳು ಮೊದಲುಗೊಂಡು ಸೆಂಟ್ರಲ್ ಜೈಲಿನ ಬಳಿ ರಾತ್ರಿಯಲ್ಲಿ ಮೆರವಣಿಗೆ ಹೊರಟರು.

ಮುಷ್ಕರಿಗರು ಬೇರೆ ಬೇರೆ ಸ್ಕೂಲು ಮತ್ತು ಕಾಲೇಜುಗಳ ಹತ್ತಿರ ಹೋಗಿ ಗಲಾಟೆ ಮಾಡಿ, ಆ ಹುಡುಗರೆಲ್ಲರೂ ತಮ್ಮೊಡನೆ ಸೇರುವಂತೆ ಮಾಡುವುದರಲ್ಲಿ ಜಯಶೀಲರಾದರು.

ಜುಲೈ 29 ನೇ ತಾರೀಖಿನ ದಿನ 107 ನೇ ಸೆಕ್ಷನ್ ಪ್ರಕಾರ ಶ್ರೀಗಳಾದ ಸುಬ್ರಹ್ಮಣ್ಯಂ, ಭೀಮರಾವ್ ಇವರನ್ನು ದಸ್ತಗಿರಿ ಮಾಡಿದರು. ಸತ್ಯಾಗ್ರಹವು ಮುಂದುವರಿಯಿತು. ಸುಲ್ತಾನ್‌ಪೇಟೆ ಸ್ಕೂಲು ಕಾಂಪೌಂಡಿನಲ್ಲಿ ಒಂದು ದೊಡ್ಡ ಗುಂಪು ಸೇರಿತ್ತು. ವಿಶ್ವಕರ್ನಾಟಕದ ಸಂಪಾದಕರಾದ ಶ್ರೀ|| ಟಿ. ಟಿ. ಶರ್ಮರವರು ಗಣೇಶನ ವಿಷಯವಾಗಿ ಏನೇನು ನಡೆಯಿತು ಎಂಬುದನ್ನೂ ಸ್ಥಿತಿಯು ಅಷ್ಟು ವಿಷಮವಾಗದಂತೆ ನೋಡಿಕೊಳ್ಳುವುದಕ್ಕಾಗಿ ತಾವು ಮಾಡಿದ ಪ್ರಯತ್ನಗಳನ್ನೂ ವಿವರಿಸಿದರು. ವಿಗ್ರಹವನ್ನು ಸ್ವಸ್ಥಾನದಲ್ಲಿಡಿಸುವುದಕ್ಕಾಗಿ ಶ್ರೀ|| ಶಂಕರನಾರಾಯಣರಾಯರು ದಿವಾನರಲ್ಲಿ ಹೋದರು. ಜುಲೈ 18 ನೇ ತಾರೀಖಿನಿಂದ 26 ನೇ ತಾರೀಖಿನವರೆಗೆ ದಿವಾನರವರು ಬೆಂಗಳೂರಿನಲ್ಲಿಲ್ಲವಾದ್ದರಿಂದ ತಾವೇ ಸ್ಥಳಕ್ಕೆ ಹೋಗಿ ವಿಚಾರಿಸುವುದಾಗಿ ಹೇಳಿದರು. ಅಷ್ಟರಲ್ಲಿ ವಿದ್ಯಾಭ್ಯಾಸದ ಇಲಾಖೆಯ ಆಡಳಿತವು ಸೇರಿದ್ದ ಮೂರನೇ ಕೌನ್ಸಿಲರ್ ಮಿ|| ಮಾಕ್ಷ್ವಾರವರು ಅಲ್ಲಿಗೆ ಬರಲು, ಇವರನ್ನು ಕುರಿತು, ಸ್ಕೂಲಿಗೆ ಹೋಗಿ ಏನು ಮಾಡಬೇಕೋ ಅದನ್ನು ಮಾಡುವಂತೆ ದಿವಾನರು ಅವರಿಗೆ ತಿಳಿಸಿದರು. ಅದೇ ಪ್ರಕಾರ ಮಿ|| ಮಾಕ್ಷ್ವಾರವರು ಆ ದಿನ ಮಧ್ಯಾಹ್ನ ಸ್ಕೂಲಿಗೆ ಹೋದರು. ಆಗ್ಗೆ ಮಿ|| ಶರ್ಮರವರು ಭಾಷಣ ಮಾಡುತ್ತಿದ್ದರು. ಅಲ್ಲಿ ಸೇರಿದ್ದ ಜನರ ಕೋರಿಕೆಯ ಪ್ರಕಾರ ವಿಗ್ರಹವನ್ನು ಕೂಡಲೆ ಸ್ವಸ್ಥಾನದಲ್ಲಿಡಿಸುವುದಾಗಿ ಮಿ|| ಮಾಕ್ಷ್ವಾರವರು ಭರವಸೆ ಕೊಟ್ಟರು.

ವಿಗ್ರಹವನ್ನು ಸ್ವಸ್ಥಾನದಲ್ಲಿಡಿಸಿದುದು

ಜುಲೈ 29 ನೇ ತಾರೀಖು ಮಧ್ಯಾಹ್ನದ ಮೇಲೆ ಆನೇಕಲ್ ತಾಲ್ಲೂಕಿಗೆ ಸೇರಿದ, ಸತ್ಯಾಗ್ರಹದ ಶಕ್ತಿಯಲ್ಲಿ ನಂಬಿಕೆಯುಳ್ಳ ಶ್ರೀ|| ಸರ್ವಾಭಟ್ಟರೆಂಬುವರು, ದಸ್ತಗಿರಿ ಮಾಡಲ್ಪಟ್ಟ ಮುಖಂಡರ ಸ್ಥಾನವನ್ನು ತಾವು ವಹಿಸಿ, ಹುಡುಗರು ಸತ್ಯಾಗ್ರಹವನ್ನು ಮುಂದುವರಿಸುವಂತೆ ಪ್ರೋತ್ಸಾಹಿಸಿದರು. ದಸ್ತಗಿರಿ ಮಾಡಲ್ಪಟ್ಟಿರುವ ಮುಖಂಡರು ಆ|| ಪೊಲೀಸ್ ಸೂಪರಿಂಟೆಂಡೆಂಟರ ಆಫೀಸಿನಲ್ಲಿದ್ದಾರೆಂದು ತಿಳಿದು ಹುಡುಗರ ದೊಡ್ಡ ಗುಂಪೊಂದು ಆ ಆಫೀಸಿನೊಳಗೆ ನುಗ್ಗಲು ಪ್ರಯತ್ನಿಸಿತು. ಆದರೆ ಮುಖಂಡರು ಅಲ್ಲಿಲ್ಲವೆಂದೂ ಸೆಂಟ್ರಲ್ ಜೈಲಿನಲ್ಲಿರುವರೆಂದೂ ತಿಳಿದು, ಹೊರಟುಹೋದರು. ಸಾಯಂಕಾಲ 3 ಘಂಟೆ ಸುಮಾರಿಗೆ ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರವರ ಪರ್ಸನಲ್ ಅಸಿಸ್ಟೆಂಟರಾದ ಶ್ರೀ|| ಸುದರ್ಶನಯ್ಯಂಗಾರ್ಯರು ಸುಲ್ತಾನ್‌ಪೇಟೆ ಸ್ಕೂಲಿಗೆ ಬಂದು ಗಣೇಶನ ವಿಗ್ರಹವನ್ನು ಅದರ ಸ್ವಸ್ಥಾನದಲ್ಲಿಡಿಸಿದರು. ಆದರೆ, ತಮ್ಮ ಮುಖಂಡರನ್ನು ದಸ್ತಗಿರಿ ಮಾಡಿದ್ದುದರಿಂದ ಹುಡುಗರಿಗೇನೂ ಸಮಾಧಾನವಾಗದೆ, ಸತ್ಯಾಗ್ರಹವನ್ನು ... ವಂತೆ ಮಾಡಿದರು. ಈ ಸತ್ಯಾಗ್ರಹವನ್ನಾರಂಭಿಸಿ ತಮ್ಮ ಏನೇನಿಗೆ ಯೋಗದ ಇದ್ದ ಹುಡುಗರಿಗೆ ಹಿಂದಿನ ದಿನಗಳಂತೆ ಅವರ ಬೆಂಬಲಿಗರು ಊಟ ತಿಂಡಿಗಳನ್ನು ತಂದುಕೊಟ್ಟರು.

ಮುಖಂಡರು ಜೈಲಿನಲ್ಲಿರುವುದು

ಮಧ್ಯಾಹ್ನ 3 ಘಂಟೆ ಸುಮಾರಿನಲ್ಲಿ ಶ್ರೀಗಳಾದ ಸುಬ್ರಹ್ಮಣ್ಯಂ ಮತ್ತು ಭೀಮರಾಯರನ್ನು ಸೆಂಟ್ರಲ್ ಜೈಲಿಗೆ ಕರೆದುಕೊಂಡು ಹೋದರು. ಆ ಮೇಲೆ ದಸ್ತಗಿರಿ ಮಾಡಲ್ಪಟ್ಟ ಶ್ರೀ ರಾಮರಾವ್ ಅವರನ್ನು ಸಾಯಂಕಾಲ 6 ಘಂಟೆಗೆ ಸೆಂಟ್ರಲ್ ಜೈಲಿಗೆ ಕರೆದುಕೊಂಡು ಹೋದರು. ಜನರಲ್ಲುಂಟಾಗಿರುವ ಅಸಮಾಧಾನವು ಹೆಚ್ಚಿ, ಮುಂದೆ ದೊಡ್ಡ ಅನಾಹುತವು ನಡೆಯದಂತೆ ನೋಡಿಕೊಳ್ಳುವುದಕ್ಕಾಗಿ ಅನೇಕ ಪುರಪ್ರಮುಖರು ದಸ್ತಗಿರಿ ಮಾಡಲ್ಪಟ್ಟಿದ್ದ ಮುಖಂಡರನ್ನು ಕುರಿತು ತಾವೀಗ ಕೊಡುವುದರಿಂದ ಮಾತ್ರ ಅವರ ಸರ್ಕಾರದವರು ಕೇಳುವಂತೆ ಕ್ಷಮಾಪಣೆ ಬರೆದು ಕೊಡುವುದರ ಮೂಲಕ ಬಿಡುಗಡೆ ಹೊಂದಬೇಕೆಂದು ಬಹಳವಾಗಿ ಕೇಳಿಕೊಂಡರು. ಬಹಳ ಹೊತ್ತು ಪ್ರಯತ್ನಿಸಿದ ಮೇಲೆ ದಸ್ತಗಿರಿಯಾಗಿದ್ದ ಮುಖಂಡರು ಒಂದು ಕ್ಷಮಾಪಣಾ ಪತ್ರಕ್ಕೆ ರುಜು ಹಾಕಿದರು. ಆದರೆ ಆದು ಸರ್ಕಾರಿ ಅಧಿಕಾರಿಗಳು ಸರಿಯಾದ ಕ್ಷಮಾಪಣೆಯಲ್ಲವೆಂದು ಹೇಳಿ, ಅದನ್ನು ಒಪ್ಪಲಿಲ್ಲ.

ಆ ದಿನ ಸಾಯಂಕಾಲ ಸುಮಾರು 8½ ಘಂಟೆಗೆ ಸುಮಾರು 250 ಮಂದಿ ಹುಡುಗರು—ಅವರಲ್ಲಿ 7 ವರ್ಷದ ಮಕ್ಕಳೂ ಸೇರಿದ್ದರು—ಕೈಗಳಲ್ಲಿ ಲಾಂದ್ರಗಳನ್ನು ಹಿಡಿದುಕೊಂಡು, ಒಂದು ಗಣೇಶನ ಪಟವನ್ನು ಮೆರವಣಿಗೆ ಮಾಡಿಕೊಂಡು ಸೆಂಟ್ರಲ್ ಜೈಲಿನ ಹತ್ತಿರ ಹೋದರು. ಅವರ ಹಿಂದುಗಡೆಯಲ್ಲಿ ಕೆಲವು ಮಂದಿ ದೊಡ್ಡವರೂ ಇದ್ದರು. ಅವರೆಲ್ಲರೂ ದಸ್ತಗಿರಿ ಮಾಡಲ್ಪಟ್ಟಿರುವ ಮುಖಂಡರನ್ನು ತಾವು ನೋಡಬೇಕೆಂದೂ, ಅವರ ಬಿಡುಗಡೆ ಮಾಡಬೇಕೆಂದೂ ಆಗ್ರಹಪಡಿಸಿದರು. ಜೈಲು ಸೂಪರಿಂಟೆಂಡೆಂಟರವರಾದ ಶ್ರೀ|| ಕೆ. ಸಿದ್ಧರಾಮಪ್ಪನವರು ತಮ್ಮ ಸಹಾಯಕ್ಕೆ ಪೊಲೀಸು ಬಲವನ್ನು ಕಳುಹಿಸಬೇಕೆಂದು ಟೆಲಿಫೋನ್ ಮಾಡಿ, ಈ ತನ್ಮಧ್ಯೆ ಗುಂಪಿನವರೊಡನೆ ಸಮಾಧಾನವಾಗಿ ಮಾತಾಡುತ್ತ ಹಾಗಿದ್ದೂ ಅವರು ಮೆರವಣಿಗೆಯ ಕಾರ್ಯಕ್ರಮವನ್ನು ಬದಲಿಸುತ್ತ ಸಮಯ ಕಳೆಯುತ್ತಿದ್ದರು. ಹುಡುಗ

... ಪೊಲೀಸ್ ಸೂಪರಿಂಟೆಂಡೆಂಟರು ಬಂದು ... ಮುಖಂಡರನ್ನು ಬಿಡುಗಡೆ ಮಾಡುವ ವಿಚಾರದಲ್ಲಿ ಯಾವ ಸಾಧನವೂ ತಿಳಿಯದೆ ಹೋಯಿತು. ಬಾಲಕರ ಈ ಪ್ರದರ್ಶನವನ್ನು ಕಂಡು ಅವರ ... ಹುಡುಗರ ಮನ ... ಬಿಡುಗಡೆ ಮಾಡುವಂತೆ ಹೇಳಿದರು.

ಜುಲೈ 31 ನೇ ತಾರೀಖಿನ ದಿನ ಸೆಂಟ್ರಲ್ ಜೈಲಿನ ...

ಬೆಂಗಳೂರು

ಸತ್ಯಾಗ್ರಹವು ಮುಂದುವರಿದುದು

ಜುಲೈ 30 ನೇ ತಾರೀಖಿನ ದಿನ ನಡೆದ ... ಸತ್ಯಾಗ್ರಹ ... ದರಿಂದ ಸಿದ್ಧಾರೂಢವಾಗಿ ಸತ್ಯಾಗ್ರಹಿಗಳು ಮಧ್ಯಾಹ್ನ 11 ಘಂಟೆ ... ದಂಪೇಟೆ ... ಸ್ಕೂಲಿನ ... ಹಿಂದಿನ ದಿನಗಳಂತೆ ಶ್ರೀ ಸರ್ವಾಭಟ್ಟರ ಮುಂದಾಳತನದಲ್ಲಿ ಒಂದು ಸಾವಿರ ಹುಡುಗರು ಸ್ಕೂಲು ಕಾಂಪೌಂಡಿನಲ್ಲಿ ವಿಗ್ರಹದ ಗುಡಿಯ ಬಳಿ ಕುಳಿತುಕೊಂಡು ಸತ್ಯಾಗ್ರಹವನ್ನು ಮುಂದುವರಿಸುತ್ತಿದ್ದರು. ಸ್ಕೂಲಿನ ಮುಂದಾಳುತನವನ್ನು ಕೈಗೊಂಡ ಶ್ರೀ ಸರ್ವಾಭಟ್ಟರ ಕಾರ್ಯದಲ್ಲಿ ವಿಶ್ವಕರ್ನಾಟಕದ ಸಂಪಾದಕರಾದ ಶ್ರೀ ಟಿ. ಟಿ. ಶರ್ಮರವರು ಸ್ವಲ್ಪಮಟ್ಟಿಗೆ ಸಹಾಯಕರಾಗಿದ್ದರು. ಸ್ಕೂಲು ಕಾಂಪೌಂಡಿನೊಳಗೆ ಸತ್ಯಾಗ್ರಹವು ಮುಂದೆ ನಡೆಯಲು ಅವಕಾಶ ಕೊಟ್ಟರೆ ಅಲ್ಲಿ ಅನೇಕ್ಕಾಗಿ ಕೆಲವು ಹುಡುಗರನ್ನು ಬಿಟ್ಟು ವಿಗ್ರಹದ ವಿಷಯದ ಸಂಬಂಧವಾಗಿ ಉಳಿದ ವಿಷಯಗಳನ್ನು ಕುರಿತು ಚರ್ಚಿಸುವುದಕ್ಕಾಗಿ ಕಾಂಪೌಂಡಿನೊಳಗಡೆ ಎಲ್ಲಿಯಾದರೂ ಸೇರುವುದು ಅನುಕೂಲವೆಂದು ಶ್ರೀ ಸರ್ವಾಭಟ್ಟರು ಹೇಳಿದರು.

ವಿದ್ಯಾರ್ಥಿಗಳ ಮುಷ್ಕರ

ಆದಿನ ಬೆಳಿಗ್ಗೆ ಕ್ಲಾಸುಗಳು ನಡೆಯುವುದು ದುಸ್ತರವಾಗಿತ್ತು. ಮುಂತಾದ ಕಾರ್ಯಗಳೇನೂ ನಡೆಯದಿದ್ದರೂ ಆದಿನ ಸ್ಥಿತಿಯು ಅತ್ಯಂತ ವಿಷಮವಾಗಿ ಬರುವುದೆಂದು ಸೂಚನೆಯು ಕಂಡುಬಂತು. ಎಲ್ಲಾ ಸ್ಕೂಲುಗಳ ವಿದ್ಯಾರ್ಥಿಗಳೂ ಮುಷ್ಕರ ಹೂಡಿಯಿದ್ದರೆಂದು ಪತ್ರಿಕೆಗಳು ಧಾರಾಳವಾಗಿ ಹಂಚಲ್ಪಟ್ಟವು. ನ್ಯಾಷನಲ್ ಹೈಸ್ಕೂಲಿನ ಮೇಲೆ ಒಂದು ಆದಿನ ಸಾಯಂಕಾಲದೊಳಗಾಗಿ ಇನ್ನೂ ಅನೇಕ ವಿದ್ಯಾರ್ಥಿಗಳು ಬರುವರೆಂದು ತಿಳಿಸಿದರೆಂದು ಶ್ರೀ|| ವಾಸುದೇವ ವೆಂಕಟೇಶಯ್ಯನವರ ಹೇಳಿಕೆಯಿಂದ ಗೊತ್ತಾಗುತ್ತದೆ. ಗಾಂಧೀನಗರದಲ್ಲಿ ಆ ದಿನ ಸಾಯಂಕಾಲ ಒಂದು ಸಭೆ ನಡೆಯುವುದಾಗಿ ಗೋಡೆಗಳ ಮೇಲೆ ನೋಟೀಸುಗಳನ್ನು ಅಂಟಿಸಿದ್ದರು. ಈ ಸಭೆಯಲ್ಲಿ ಎಲ್ಲರಿಗೂ ಸಮಾಧಾನವಾಗುವ ರೀತಿಯಲ್ಲಿ ಈ ಗೊಂದಲವನ್ನು ಪೂರ್ಣಮಾಡಬೇಕೆಂಬ ಪ್ರಯತ್ನವು ನಡೆಯುತ್ತಿತ್ತು. ಇದಕ್ಕಾಗಿ ಹಿಂದಿನ ದಿನದಂತೆಯೇ ಆ ದಿನವೂ ಶ್ರೀ ಶಂಕರನಾರಾಯಣರಾಯರು ತಮ್ಮ ಪ್ರಯತ್ನ ಮುಂದುವರಿಸಿದರು. ದಿವ್ಯಾನುಕೂಲವಾಗಿ ಕೈಗಾರಿಕೆ, ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರನ್ನೂ ಕಂಡು ಈ ವಿಚಾರವನ್ನು ಪ್ರಸ್ತಾಪಿಸಿ ತಾವು ತಯಾರಿಸಿದ್ದ ಕ್ಷಮಾಪಣಾಪತ್ರದ ನಕಲೊಂದನ್ನು ಅವರಿಗೆ ತೋರಿಸಿದರು. ಅದರಲ್ಲಿ ಮುಖಂಡರು ತಾವು ಹಿಂದೆ ಮಾಡಿದ ಕಾರ್ಯಗಳಿಗಾಗಿ ತಮ್ಮ ವಿಷಾದವನ್ನು ಸೂಚಿಸಿದ್ದುದರಿಂದ ಈ ಅಧಿಕಾರಿಗಳು ಅದನ್ನು ಅಂಗೀಕರಿಸಲಿಲ್ಲ.

ಸುಲ್ತಾನ್‌ಪೇಟೆ ಸ್ಕೂಲಿನ ಮುಷ್ಕರಿಗರು ಮಧ್ಯಾಹ್ನ 11 ಘಂಟೆಗೆ ಕೋಟೆ ಹೈಸ್ಕೂಲಿನ ಹತ್ತಿರ ಹೋಗಿ ಆ ಸ್ಕೂಲಿನ ಹುಡುಗರು ಮುಷ್ಕರ ಮಾಡಬೇಕೆಂದು ಗಲಾಟೆ ಮಾಡಿದ ಸಮಾಚಾರವು ಜನರಿಗೆ ತಿಳಿದ ಕೂಡಲೆ ಎಲ್ಲರಿಗೂ ಗಾಬರಿಯುಂಟಾಯಿತು. ಕೋಟೆ ಹೈಸ್ಕೂಲು ಹುಡುಗರು ಮುಷ್ಕರಹೂಡಿ ಹೊರಗೆ ಬಂದು, ಮುಷ್ಕರಿಗಳ ಗುಂಪನ್ನು ಸೇರಿದರು. ಕೋಟೆ ಹೈಸ್ಕೂಲಿನ ಹೆಡ್ಮಾಸ್ಟರ ಕೋರಿಕೆ ಪ್ರಕಾರ ಅಸಿಸ್ಟೆಂಟ್ ಪೊಲೀಸ್ ಸೂಪರಿಂಟೆಂಡೆಂಟರು ಅಲ್ಲಿಗೆ ಹೋಗಿ, ಹುಡುಗರು ಹೊರಟುಹೋಗುವಂತೆ ಮಾಡಿದರು. ಸ್ವಲ್ಪ ಹೊತ್ತಿನೊಳಗಾಗಿ ಒಂದನೇ ಮಿಡ್ಲ್ ಸ್ಕೂಲಿನ ಹತ್ತಿರವೂ ವೆಸ್ಲಿಯನ್ ಮಿಷನ್ ಸ್ಕೂಲಿನ ಹತ್ತಿರವೂ ಇಂತಹ ಗಲಾಟೆಗಳು ನಡೆದುವೆಂದೂ ಆ ಸ್ಕೂಲುಗಳ ಹೆಡ್ಮಾಸ್ಟರುಗಳು ಮುಂದೆ ಬೇಟೆ ... ಅನಾಹುತಗಳು ನಡೆಯ ಬಹುದೆಂದು ಸ್ಕೂಲುಗಳನ್ನು ಮುಚ್ಚಿಬಿಟ್ಟರೆಂದು ವರ್ತಮಾನ ಬಂತು. ಮುಷ್ಕರಿಗರ ಕೆಲವು ಗುಂಪು ಹುಡುಗರಿಂದ ಆ ದಿನ ಮಧ್ಯಾಹ್ನ ಸೆಂಟ್ರಲ್ ಕಾಲೇಜಿನ ಬಳಿ ಹೋಗಿ ಗಲಾಟೆ ಮಾಡಿದರು. ಕಾಲೇಜಿನ ಪ್ರಿನ್ಸಿಪಾಲರು ಪ್ರೊಫೆಸರುಗಳ ಎಲ್ಲ ಹೇಳಿದರೂ ವಿದ್ಯಾರ್ಥಿಗಳು ಕೇಳದೆ ಹೋದದರಿಂದ ಕಾಲೇಜಿನಲ್ಲಿ ಪಾಠಗಳ ನಡೆಯದೆ ಹೋದವು. ಹುಡುಗರ ಗುಂಪು ವಿದ್ಯಾರ್ಥಿ 11 ಘಂಟೆವರೆಗೆ ಕಾಲೇಜಿನ ಹತ್ತಿರವೇ ಇದ್ದಿತು. ಸ್ಥಿತಿಯು ಗಂಟೆ ಗಂಟೆಗೆ ವಿಷಮವಾಗಿ ಬರುತ್ತಿದ್ದುದರಿಂದ ಯಾವ ಯಾವ ಕಡೆ ಏನೇನು ನಡೆಯುತ್ತಿರುವದನ್ನು ತಿಳಿಯುವುದಕ್ಕಾಗಿಯೂ ರಿಸರ್ವ್ ಪೊಲೀಸ್ ಸಿಬ್ಬಂದಿಯನ್ನು ಒಟ್ಟುಗೂಡಿಸುವುದಕ್ಕಾಗಿಯೂ ಆ|| ಸೂಪರಿಂಟೆಂಡೆಂಟರು ಕೇಂದ್ರದಲ್ಲಿರುವ ತಮ್ಮ ಆಫೀಸಿಗೆ ಹೋದರು. ಮುಷ್ಕರಿಗಳು ತಮ್ಮ ಪ್ರಯತ್ನದಿಂದ ಸಭೆ ಸೇರಲು ಕಾಲೇಜುಗಳನ್ನೂ ಮುಚ್ಚಿಸಿ, ಅಲ್ಲಿಂದ ತಮ್ಮ ಮುಖಂಡರನ್ನು ಇಟ್ಟಿದ್ದ ಸೆಂಟ್ರಲ್ ಜೈಲಿನ ಕಡೆ ಹೊರಟರು.

ನೆಂಟ್ರಲ್ ಜೈಲಿಗೆ ಮೊದಲ ಎರಡನೇ ನಡೆಯಿತು

ಹುಡುಗರು ಬಿಡುಗಡೆಗೆ ಆಗ್ರಹಪಡಿಸಿದರು

ಹುಡುಗರಿಗೆ ಬುದ್ಧಿ ಹೇಳಲು ಜೈಲಿನಲ್ಲಿದ್ದ ಮುಖಂಡರು ಒಪ್ಪಲಿಲ್ಲ.

ಜುಲೈ 30 ನೇ ತಾರೀಖಿನ ದಿನ ಹುಡುಗರು ಜೈಲಿನ ಹತ್ತಿರ ಹೋಗಿ ಒಳಗೆ ನುಗ್ಗುವುದಕ್ಕೆ ಪ್ರಯತ್ನಿಸಲು ಬಂದೂಕಗಳನ್ನು ಹಿಡಿದ ಸಿಪಾಯಿಗಳನ್ನು ಕರೆಸಿಕೊಂಡು ಗುಂಪಿನ ಮೇಲೆ ಗುಂಡು ಹಾರಿಸಲು ಸಿದ್ಧರಾಗಿ ಅಧಿಕಾರವಿದೆಯೆಂದು ಜೈಲು ಸೂಪರಿಂಟೆಂಡೆಂಟರು ಹೇಳಿದರು.

ಹುಡುಗರು ದಿವಾನರ ಬಂಗ್ಲೆಗೆ ಹೋಗಿ ಅವರನ್ನು ಕಾಣಬೇಕೆಂದು ನಿಶ್ಚಯಿಸಿ ಹೊರಟಾಗ ಪೊಲೀಸಿನವರು ತಡೆದ ಕಾರಣ ಅವರು ಆ ಪ್ರಯತ್ನ ಬಿಟ್ಟು ... ಹುಡುಗರನ್ನು ಬಿಡುಗಡೆ ಮಾಡಬೇಕೆಂದು ಸತ್ಯಾಗ್ರಹಿಗಳು ಆಗ್ರಹಪಡಿಸಿದರು ಎಂದು ಸೆಂಟ್ರಲ್ ಜೈಲಿನ ... ತಿಳಿಸಿದರು.

ದಿವಾನರೂ ಅಧಿಕಾರಿಗಳೂ ಎಷ್ಟೇ ಸಮಾಧಾನ ಹೇಳಿದರೂ ಹುಡುಗರು ಕೇಳದೆ, ದಿವಾನರ ಬಂಗ್ಲೆಯ ಹತ್ತಿರವೇ ಕುಳಿತುಕೊಂಡು, ಅವರ ಮೇಲೆ ಕಲ್ಲು ಹೊಡೆದು ಅನೇಕ ಗಲಾಟೆ ಮಾಡಿ ಗಲಭೆಯನ್ನು ಎಬ್ಬಿಸಿದರು. ಸವಾರರು ಬಂದು ಅವರನ್ನು ಚದುರಿಸಬೇಕಾಯಿತು.

ಪ್ರಸಕ್ತ ಹುಡುಗರು ಸೆಂಟ್ರಲ್ ಜೈಲಿನ ಬಳಿ ಹೋಗಿ ಕಲ್ಲೆಸೆದು ಸೂಪರಿಂಟೆಂಡೆಂಟರ ಮೇಲೆ ದಾಳಿಮಾಡಿ ಬೆಂಕಿಹಚ್ಚಲು ಪ್ರಯತ್ನಿಸಿದರು. ಹುಡುಗರ ಗಲಾಟೆ ಮಾಡಬಾರದೆಂದು ಬುದ್ಧಿ ಹೇಳಿ ಒಂದು ಕಾಗದ ಬರೆಯಬೇಕೆಂದು ಜೈಲಿನಲ್ಲಿದ್ದ ಮುಖಂಡರನ್ನು ಕೇಳಿಕೊಳ್ಳಲು ಅವರು ಅದಕ್ಕೆ ಒಪ್ಪಲಿಲ್ಲ.

ಸಾಯಂಕಾಲದೊಳಗಾಗಿ 4-5 ಸಾವಿರ ಹುಡುಗರೂ

ದೊಡ್ಡವರೂ ಗುಂಪುಸೇರಿದರು

ಸೆಂಟ್ರಲ್ ಜೈಲಿನ ಹತ್ತಿರ.

ಜುಲೈ 30 ನೇ ತಾರೀಖಿನ ದಿನ ಮುಷ್ಕರಿಗಳು ಮಧ್ಯಾಹ್ನ 12½ ಗಂಟೆಗೆ ಸೆಂಟ್ರಲ್ ಜೈಲಿನ ಹತ್ತಿರ ಹೋದರು. ಇವರು ಸುಮಾರು 500

ಜನ ಇದ್ದರು. ಇವರನ್ನು ಕಂಡರೆ 14... ವರ್ಷದ ಬಾಲಕರಾಗಿದ್ದರು. ಇದ್ದವರಲ್ಲಿ ಕೆಲವರು ತಮ್ಮ ಕೈಯಲ್ಲಿ ಗಣೇಶನ ಪಟವನ್ನು ಹಿಡಿದುಕೊಂಡಿದ್ದರು. ... ಜೈಲಿನ ಹತ್ತಿರ ನುಗ್ಗಲು ಪ್ರಯತ್ನಿಸಿದರು. ಈ ಕೆಲಸ ... ಜೈಲು ... ಕೋಟೆಯ ... ಕಾರ್ಯ ... ಹೊರಗೆ ಬಂದ ... ಜೈಲಿನ ಹತ್ತಿರ ಕೆಲವರು ... ಕಳುಹಿಸಿದರು. ಅವರು ದೊಡ್ಡ ಗುಂಪಾಗಿ ಬಂದು ಜೈಲಿನ ಮುಖ್ಯದ್ವಾರದ ಬಳಿ ನಿಂತರು. ಈ ಹಿಂದೆ ... ಗಲಾಟೆ ... ಜೈಲಿನ ಒಳಕ್ಕೆ ಬೇರೆ ಬೇರೆ ಕಡೆಗಳಿಂದ ನುಗ್ಗುವುದಕ್ಕೆ ಹೊರಟರು. ಆನೇಕಲ್ಲುಗಳಿಂದ ಪ್ರಯತ್ನಿಸಿದರು. ಬಂದೂಕಗಳನ್ನು ಹಿಡಿದ ಸಿಪಾಯಿಗಳು ಒಂದು, ಗುಂಪಿನ ಮೇಲೆ ಗುಂಡು ಹಾರಿಸಲು ತಮಗೆ ಅಧಿಕಾರವಿದೆಯೆಂದು ಚೆನ್ನಾಗಿ ತಿಳಿಯಬೇಕೆಂದು ಜೈಲು ಸೂಪರಿಂಟೆಂಡೆಂಟರು ಹುಡುಗರಿಗೆ ಹೇಳುತ್ತಿದ್ದರೂ, ಹುಡುಗರ ಪುಂಡಾಟವನ್ನು ತಡೆಯುವುದಕ್ಕಾಗಲಿ ಬೇರೆ ಯಾವ ಸಹಾಯವೂ ಇರಲಿಲ್ಲ. ಜೈಲಿನಲ್ಲಿದ್ದ ಗಾರ್ಡ್, 6 ಜನ ವಾರ್ಡರುಗಳಿಗೆ ಏಟು ತಗಲಿತು. ಡಿ|| ಮ್ಯಾಜಿಸ್ಟ್ರೇಟರಿಂದಾಗಲಿ ಜಿಲ್ಲಾ ಮ್ಯಾಜಿಸ್ಟ್ರೇಟರಿಂದಾಗಲೀ ಹುಕ್ಕುಂಬರುವವರೆಗೂ ಮುಖಂಡರನ್ನು ಬಿಡುಗಡೆ ಮಾಡುವ ಅಧಿಕಾರವು ತಮಗಿಲ್ಲವೆಂದು ಜೈಲು ಸೂಪರಿಂಟೆಂಡೆಂಟರು ಹುಡುಗರಿಗೆ ಹೇಳಿದರು. ಇದರಿಂದ ಜೈಲಿನ ಹತ್ತಿರ ಸ್ವಲ್ಪ ಸಮಾಧಾನವಾಗಿ, ಹುಡುಗರಲ್ಲಿ ಕೆಲವರು ಹೊರಟುಹೋದರು. ಅವರಲ್ಲಿ ಹೆಚ್ಚು ಮಂದಿ ದಿವಾನರವರ ಅವಾಸವಾದ ಬಾಲಬ್ರೂಯಿ ಕಡೆಗೆ ಮಧ್ಯಾಹ್ನ ಸುಮಾರು 12½ ಗಂಟೆಯಲ್ಲಿ ಹೋದರು.

ದಿವಾನರ ಬಂಗಲೆಯ ಹತ್ತಿರ ಮಿಲಿಟೆರಿಯನ್ನು ಕರೆಸಿದುದು.

ಹುಡುಗರು ಆ ಕಡೆ ಹೋಗುತ್ತಿರುವುದನ್ನು ಜೈಲು ಸೂಪರಿಂಟೆಂಡೆಂಟರು ನೋಡಿ, ದಿವಾನರ ಬಂಗ್ಲೆಗೆ ಐದಾರು ಮಂದಿ ವಾರ್ಡರುಗಳನ್ನು ಮುಂದಾಗಿ ಕಳುಹಿಸಿ ತಾವೂ ಸಹ ತಮ್ಮ ಬೈಸಿಕಲ್ ಮೇಲೆ ಹೊರಟರು. ಹುಡುಗರು ದಿವಾನರ ಮನೆ ಮುಂದೆ ದಿವಾನರು, ಅವರ ಮನೆ ಮತ್ತು ಛಾವಣಿಯ ... ಇವರ ಗಳನ್ನು ಸುತ್ತಿಕೊಂಡಿದ್ದರು. ಇವರ ಸ್ವಲ್ಪ ಹೆಚ್ಚು ಮಂದಿ 12 ವರ್ಷದಿಂದ 14 ವರ್ಷದ ವಯಸ್ಸಿನವರು. 18 ಮತ್ತು ಅದಕ್ಕೆ ಮೇಲ್ಪಟ್ಟವರು ಕೆಲವರಿದ್ದರು. ಹುಡುಗರು ಪುಂಡಾಟ ಮಾಡುತ್ತಿದ್ದುದರಿಂದ ಕೆಲವರು ಸುಮ್ಮನೆ ಹೊರಟು ಹೋದರು. ಉಳಿದವರು ಬೀದಿ ಹೋಗುವುದಕ್ಕೆ ಪ್ರಯತ್ನಿಸುವುದರಿಂದಲೂ ದಿವಾನರವರು, ಪೊಲೀಸ್ ಸಹಾಯ ಬೇಕೆಂದು ಟೆಲಿಫೋನ್ ಮಾಡಿದರು. ಹುಡುಗರು ಪೈಕಿ ಕೆಲವರು ಗಿಡಗಳನ್ನು ಕಿತ್ತು ಹಾಕಿದರು. ಕೆಲವರು ಕಿಟಕಿಗಳನ್ನು ಒಡೆದರು. ಮೆಟ್ಟಿಲುಗಳನ್ನು ಹತ್ತಿದ ಕೆಲವರು ಕೂಗಿಕೊಳ್ಳುತ್ತಿದ್ದರು. ಒಬ್ಬ ಹುಡುಗನು "ನಿರಪರಾಧಿ ಸತ್ಯಾಗ್ರಹಿ" ಎಂದು ಬರೆದಿದ್ದ ಒಂದು ಬಟ್ಟೆಯನ್ನು ಹಿಡಿದುಕೊಂಡು ದುಡ್ಡು ಹಾಕಿ ಎಂದು ಕೇಳುತ್ತಿದ್ದನು. ಬುದ್ಧಿವಾದ ಹೇಳಿದರೂ ಅಲ್ಲಾಡದೆ ನಿಂತಿದ್ದನು. ಆಗ ಎಕ್ಸಿಕ್ಯೂಟಿವ್ ಕೌನ್ಸಿಲ್ ಮೂರನೆ ಮೆಂಬರು, ಚೀಫ್ ಸೆಕ್ರೆಟರಿ, ಡೆಪ್ಯುಟಿ ಕಮಿಷನರ್, ಆ|| ಪೊಲೀಸ್ ಸೂಪರಿಂಟೆಂಡೆಂಟರು, ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ ಇವರೆಲ್ಲರೂ ಬಂದರು. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಆಗಿನ ವಿದ್ಯಮಾನಗಳನ್ನೆಲ್ಲಾ ನೋಡಿ ಸಹಾಯಕ್ಕೆ ಮಿಲಿಟೆರಿಯವರನ್ನು ಕಳುಹಿಸಬೇಕೆಂದು ಚೀಫ್ ಕಮ್ಯಾಂಡೆಂಟರಿಗೆ ಟೆಲಿಫೋನ್ ಮಾಡಿದರು. ಡಿಸ್ಟ್ರಿಕ್ಟ್ ಪೊಲೀಸ್ ಸೂಪರಿಂಟೆಂಡೆಂಟರು ಸ್ವಲ್ಪ ಹೊತ್ತಾಗಿ ಅಂದರೆ ಮಧ್ಯಾಹ್ನ 2 ಘಂಟೆಗೆ ಬಂದರು. ದಿವಾನರು ಎಷ್ಟು ಸಮಾಧಾನ ಹೇಳಿದರೂ ಹುಡುಗರು ಕೂಡಲೆ ತಮ್ಮ ಮುಖಂಡರನ್ನು ಬಿಡುಗಡೆ ಮಾಡಬೇಕೆಂದು ಹಟ ಮಾಡತೊಡಗಿದರು. ಬೆಳ್ಳಿಕೆ ಆಫೀಸರು ಮತ್ತು ಇತರ ಅಧಿಕಾರಿಗಳು ಎಷ್ಟೇ ಕೇಳಿಕೊಂಡರೂ ಹುಡುಗರು ಶಾಂತಿಯುತರಾಗಲಿಲ್ಲ. ತಮ್ಮ ಮನೆ ಹತ್ತಿರ ಯಾವನನ್ನೂ ದಸ್ತಗಿರಿ ಮಾಡಲು ಅವಕಾಶ ಕೊಡಕೂಡದೆಂದು ದಿವಾನರವರು ಬಹಳ ಕುತೂಹಲ ಪೂರ್ವಕವಾಗಿದ್ದರು. ಕಡೆಗೆ ಅವರು ಕಾರ್ಲ್‌ಟನ್ ಭವನವನ್ನು ಬಿಟ್ಟು ಬಿಬಿ ಆಫೀಸಿಗೆ ಹೊರಡಲು ಹುಡುಗರು ಅವರ ಮೋಟಾರ ಗಾಡಿಯನ್ನು ಮುತ್ತಿಕೊಂಡರು. ಅಂತಹವರನ್ನು ದಾರಿಯಿಂದ ಬೇರೆ ಕಡೆಗೆ ಅಟ್ಟಿ ಸಾಗಿಸಬೇಕಾಯಿತು. ಗುಂಪಿನಲ್ಲಿದ್ದ ಕೆಲವರು ಕಲ್ಲುಗಳನ್ನೆಸೆಯಲು ಮೋಟಾರಿನ ಕಿಟಕಿಯ ಗಾಜು ಒಡೆದುಹೋಯಿತು. ಆ ಸಮಯದಲ್ಲಿ ಹುಡುಗರು ಮುಚ್ಚಿಬಿಟ್ಟಿದ್ದ ಬೆಪ್ಪಾಗಿಲನ್ನು ತೆರೆಯುತ್ತಿದ್ದುದರಿಂದ ಮೋಟಾರು ಒಂದನೆಯ ಕೈಪಕ್ಕೆ ಸಾಗಬೇಕಾಯಿತು. ಆ ಗುಂಪಿನಲ್ಲಿ ಸುಮಾರು 500 ಮಂದಿಯಿರುವರೆಂದೂ ದಿವಾನರ ಮೋಟಾರನ್ನು ಮುತ್ತಿಕೊಂಡು ಹುಡುಗರು ಹೊರಟುಹೋಗಲು ಮುನ್ನಸ್ನೇಹದಾಗಿಲಿಲ್ಲವೆಂದೂ ಜೆಟ್ಟಿ ಕಮಿಷನರ್ ಹೇಳುತ್ತಾರೆ. ತಮ್ಮ ಮುಖಂಡರನ್ನು ಬಿಡುಗಡೆ ಮಾಡಬೇಕೆಂದು ಹುಕ್ಕುಂ ಆಗುವವರೆಗೂ ತಾವು ಹೋಗುವುದಿಲ್ಲವೆಂದು ಅವರ ಹಟ ಮಾಡಿದರು. ಡೆಪ್ಯುಟಿ ಕಮಿಷನರ್, ಪೊಲೀಸಿನವರು ಬಂದ ಮೇಲೂ ಜನಕಪಟಿಯಿಂದ ಈ ದೂರದ ಗುಂಪನ್ನು ಚದರಿಸಲು ಅಸಾಧ್ಯವಾಯಿತೆಂದೂ, ಆದುದರಿಂದ ಆ ಕೆಲಸಕ್ಕೆ ಮಿಲಿಟೆರಿಯವರನ್ನು ಕರೆಸಬೇಕಾಯಿತೆಂದೂ ಇನ್ಸ್‌ಪೆಕ್ಟರ್ ಜನರಲ್‌ರವರು ಹೇಳುತ್ತಾರೆ. ತಮ್ಮ ಕುದುರೆಗಳನ್ನು ಆ ಕಡೆಯಿಂದ ಈ ಕಡೆಗೂ ಈ ಕಡೆಯಿಂದ ಆ ಕಡೆಗೂ ತಿರುಗಾಡಿಸುತ್ತ ಸವಾರರು ಹುಡುಗರನ್ನು ಕಾಂಪೌಂಡಿನಿಂದ ಹೊರಗಡೆ ಕಳುಹಿಸಲು ಶಕ್ತರಾದರು. ಗಲಾಟೆಯಲ್ಲಿ ಕೆಳಕ್ಕೆ ಬಿದ್ದ ಅಕಸ್ಮಾತ್ ಏಟು ತಗಲಿದ ಒಬ್ಬ ಹುಡುಗನ ವಿನಾ ಉಳಿದವರೊಬ್ಬರಿಗೂ ಪೆಟ್ಟು ತಗುಲಲಿಲ್ಲವೆಂದು ಹೇಳಲ್ಪಟ್ಟಿದೆ.

ಜೈಲಿಗೆ ಎರಡನೆ ಸಾರಿ ಹೋದುದು.

ದಿವಾನರ ಬಂಗ್ಲೆಯಿಂದ ಹೊರಟ ಕೆಲವು ಹುಡುಗರು ಮಧ್ಯಾಹ್ನ 2½ ಘಂಟೆಗೆ ಎರಡನೆ ಸಾರಿ ಜೈಲಿನ ಕಡೆಗೆ ಹೊರಟರು. ಅಲ್ಲಿನ ಸ್ಥಿತಿಯು ವಿಷಮವಾಗುತ್ತಲಿದ್ದಿತೆಂದು ತಮಗೆ ವರ್ತಮಾನ ಬಂದುದರಿಂದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು, ಕುದುರೆ ದಳದ ಮುಖ್ಯಸ್ಥರಾಗಿ ಬಂದಿದ್ದ ಲೆಫ್ಟಿನೆಂಟ್ ನಾರ್ ಮಹಮದ್ ಅಲಿ ಯವರನ್ನು ಕುರಿತು ಜೈಲಿನ ಹೊರಗಿನ ಗುಂಪುಗಳನ್ನು ಚದುರಿಸುವುದಕ್ಕೂ ಜೈಲಿನ ಹತ್ತಿರ ಹುಡುಗರ ಗುಂಪು ಸೇರದಂತೆಯೂ ನೋಡಿಕೊಳ್ಳುವುದಕ್ಕಾಗಿ ಸವಾರರನ್ನು ಕಳುಹಿಸಬೇಕೆಂದು ಹೇಳಿದರು. ಅದೇ ಪ್ರಕಾರ ಯಲಹಂಕ ಗೇಟಿನ ಬಳಿ ಸ ಹತ್ತಿರ ಒಂದು ದಳವೂ, ಕಾಂತಿರಾಜ ಅರಸ್ ಸರ್ಕಲ್ ಹತ್ತಿರ ಒಂದು ದಳವೂ, ಕೈಕೋರ್ಟಿನ ... ಪಟ್ಟಿಯಲ್ಲಿರುವ ಹಿಂದು ಹಾಸ್ಟಲ್ ಹತ್ತಿರ ಒಂದು ದಳವೂ ಕಾವಲಾಗಿ ನಿಯಮಿಸಲ್ಪಟ್ಟರು. ಎರಡನೆ ಸಾರಿಯೂ ಹುಡುಗರು ಕಲ್ಲುಗಳನ್ನೆಸೆಯುವುದೇ ಮುಂತಾದ ಪುಂಡಾಟಗಳನ್ನು ಮಾಡಿದರು. ಬಂದೀಖಾನೆಗಳ ಇನ್ಸ್‌ಪೆಕ್ಟರ್ ಜನರಲ್‌ರವರು, ಜೈಲು ಸೂಪರಿಂಟೆಂಡೆಂಟರು ಮತ್ತು ಅವರ ಸ್ನೇಹಿತರ ಪೈಕಿ ಒಬ್ಬರು ಇವರೆಲ್ಲರಿಗೂ ಪೆಟ್ಟುಗಳು ತಗಲಿದವು. ಬಂದೀಖಾನೆಗಳ ಇನ್ಸ್‌ಪೆಕ್ಟರ್ ಜನರಲ್‌ರವರು ಜೈಲಿನಲ್ಲಿದ್ದ ಮುಖಂಡರನ್ನು ಕಂಡು, ಹುಡುಗರು ಪುಂಡಾಟ ಮಾಡಕೂಡದೆಂದು ಅವರಿಗೆ ಕಾಗದ ಬರೆದು ಕಳುಹಿಸಿ ಎಂದು ಕೇಳಿಕೊಂಡರು. ಮುಖಂಡರು ಅದಕ್ಕೆ ಒಪ್ಪಲಿಲ್ಲ.

ಒಟ್ಟಿನಲ್ಲಿ ಜೈಲಿನ ಸಿಬ್ಬಂದಿಯ ಪೈಕಿ 11 ಜನರಿಗೆ ಪೆಟ್ಟು ಬಿದ್ದಿತು. ಈ ಪೈಕಿ ಇಬ್ಬರು ಮೇಲ್ದರ್ಜೆಯ ಅಧಿಕಾರಿಗಳು. ಸಾಯಂಕಾಲ 5 ಘಂಟೆ ಹೊತ್ತಿಗೆ ಜೈಲಿನ ಹತ್ತಿರ ಸುಮಾರು ನಾಲ್ಕೈದು ಸಾವಿರ ಮಂದಿ ಹುಡುಗರೂ ಗುಂಪು ಸೇರಿದ್ದರು. ಇವರಲ್ಲಿ ದೊಡ್ಡವರೂ ಕೆಲವರಿದ್ದರು.

ಪತ್ರವ್ಯವಹಾರ

ಪ್ರತ್ಯೇಕ ಪತ್ರವ್ಯವಹಾರಕರ ಅಭಿಪ್ರಾಯಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯಬೇಕಾಗಿದೆ.—ಸಂಪಾದಕ

ರಜತಮಹೋತ್ಸವ.

ಚಿತ್ರದುರ್ಗದ ಶ್ರೀಮನ್ ಮಹಾಮುರುಘರಾಜೇಂದ್ರ ಬೃಹನ್ಮಠದ ಜಗದ್ಗುರು ಶ್ರೀ ಮಲ್ಲಿಕಾರ್ಜುನೇಂದ್ರ ಮಹಾಸ್ವಾಮಿಗಳವರಿಗೆ ಪಟ್ಟಾಭಿಷೇಕವಾಗಿ 25 ವರ್ಷ ತುಂಬಿತು. ಈ ಕಾಲುಶತಮಾನೋತ್ಸವವನ್ನಾಚರಿಸಲು ರಜತಮಹೋತ್ಸವವೆಂಬ ನಾಮಾಂಕಿತದಿಂದ ಭಕ್ತಾದಿಗಳೆಲ್ಲರೂ ಬೃಹನ್ಮಠದಲ್ಲಿ ಸೇರಿ ಮಹಾಸ್ವಾಮಿಗಳನ್ನು ಶೃತಿಸ್ಮೃತಿ ಪೂರ್ವಕ ಶ್ರದ್ಧೆಯಿಂದ ಪೂಜಿಸತಕ್ಕದ್ದೆಂಬ ಸಾಂಪ್ರದಾಯವಾಗಿದ್ದರೂ, ಕೆಲವು ದಿನಗಳಿಂದ ನಡೆದ ಉತ್ಸವದ ಕಾರ್ಯಾಲೋಚನಾ ಸಭೆಗಳಲ್ಲಿ ಈ ನಮ್ಮ ಗುರುವರ್ಯರ ರಜತ ಮಹೋತ್ಸವವು, ಬೃಹನ್ಮಠವಿರುವ ಚಿತ್ರದುರ್ಗದಲ್ಲಿ ನಡೆಸತಕ್ಕದ್ದೇ? ಭಕ್ತಾದಿಗಳು ಹೆಚ್ಚಾಗಿರುವ ದಾವಣಗೆರೆಯಲ್ಲಿ ನಡೆಸತಕ್ಕದ್ದೇ? ಎಂಬ ಪ್ರಶ್ನೆ ಹುಟ್ಟಿತು. ನಿರ್ದಿಷ್ಟವಾಗಿ ಈ ಮಹೋತ್ಸವವು ಎಲ್ಲಿ? ಯಾವಾಗ? ಎಂಬುದು ನಿರ್ಧಾರವಾದಂತೆ ಇದುವರೆಗೂ ಪ್ರಚುರಪಡಿಸದೇ ಇರುವುದರಿಂದ ಶಿಷ್ಯಕೋಟಿಯ ಉತ್ಸಾಹಭಂಗಕ್ಕೆ ಕಾರಣವಾಗಿದೆ. ಮಹಾಸ್ವಾಮಿಗಳವರಿಗೆ ಬೃಹನ್ಮಠದಲ್ಲಿ, ಪಟ್ಟಾಭಿಷೇಕ ಮಹೋತ್ಸವವಾಗಿರುವುದರಿಂದ ಇವರ ರಜತಮಹೋತ್ಸವವೂ, ಬೃಹನ್ಮಠದಲ್ಲಿಯೇ ಬೆಳಸತಕ್ಕದ್ದು ಶಾಸ್ತ್ರಸಮ್ಮತವೂ, ಸಾಂಪ್ರದಾಯವೂ ಆಗಿರುವುದಲ್ಲದೆ ಶಿಷ್ಯಕೋಟಿಯ ಸದಭಿಪ್ರಾಯವಾಗಿರುವುದರಿಂದ ಮಹಾಸ್ವಾಮಿಯವರ ಘನತೆಗಾದ ಈ ಮಹೋತ್ಸವವು ಚಿತ್ರದುರ್ಗದಲ್ಲಿ (ಬೃಹನ್ಮಠದಲ್ಲಿ) ಇಂತಹ ದಿವಸ ಬೆಳಸುತ್ತೇವೆಂಬುದಾಗಿ ಕೂಡಲೆ ಮಹಾಸಂಸ್ಥಾನದ ಕಡೆಯಿಂದ ಪ್ರಚುರಪತ್ರಿಕೆಯನ್ನು ಪ್ರಕಟ ಗೊಳಿಸುವಂತೆ ಮಾಡಿ ಶಿಷ್ಯಕೋಟಿಯ ಉತ್ಸಾಹಕ್ಕೆ ಪ್ರೋತ್ಸಾಹವನ್ನು ಕಲ್ಪಿಸಬೇಕಾಗಿ ಪ್ರಾರ್ಥಿಸುವ,

ಒಬ್ಬ ಭಕ್ತ

ಬ್ಯಾಡಗಿ

ಕಳೆದ ಗುರುವಾರ ತಾ|| 10-1-29 ನೇ ದಿವಸ ಪ್ರತಿವರ್ಷದ ಪದ್ಧತಿಯಂತೆ ಶ್ರೀ ಶ್ರೀಮಂತ ಲಿಂಗಪ್ಪ ಜಾಯಪ್ಪ ಸರದೇಸಾಯಿ ಶಿರಸಂಗಿ ಈ ಮಹಾತ್ಮರ ಜನ್ಮದಿವಸ ಮಹೋತ್ಸವವು ನಮ್ಮ ಲೈಬ್ರರಿಯ ವತಿಯಿಂದ ಅತಿ ವಿಜೃಂಭಣೆಯಿಂದ ನೆರವೇರಿತು. ಅಂದು ಸಾಯಂಕಾಲ 5 ಘಂಟೆಗೆ ಶ್ರೀ ಮಹತ್ತ ದೇಸಾಯಿಯವರ ಭಾವಚಿತ್ರದ ಮೆರವಣಿಗೆಯು ಭಜನಾ ಬ್ಯಾಂಡ್‌ವಾದ್ಯಗಳೊಡನೆ ಹೊರಟು ಪುರಪ್ರದಕ್ಷಿಣೆ ಮಾಡಿಕೊಂಡು 7 ಘಂಟೆಗೆ ಶ್ರೀ ಗಳಗನಾಥರ ಮಠವನ್ನು ಸೇರಿತು. ಸ್ಕೌಟ್ಸ್ ನವರಿಂದ ವ್ಯವಸ್ಥೆಯಿಂದ ಸಾಗಿದ್ದ ಇಂಗ್ಲಿಷ್ ಹಾಗೂ ಕನ್ನಡ ವಿದ್ಯಾರ್ಥಿಗಳಿಂದ ಉತ್ಸವಕ್ಕೆ ಹೆಚ್ಚಿನ ಕಳೆಯೇರಿತು. ಮೆರವಣಿಗೆಯು ಮುಗಿದೊಡನೆಯೇ ಸಭೆಯ ಕೆಲಸವು ಪ್ರಾರಂಭವಾಯಿತು. ಶಿರಾಲಿಕೊಪ್ಪದ ವಿರಕ್ತಮಠದ ಶ್ರೀಮನ್ನಿರಂಜನ ಪ್ರಣವಸ್ವರೂಪಿಗಳಾದ ಸದಾಶಿವಸ್ವಾಮಿಗಳವರು ಅಧ್ಯಕ್ಷಸ್ಥಾನಾಲಂಕೃತರಾಗಿದ್ದರು. ವೇ|| ಇಂಡೀಮಠ ಮಿ|| ಕೊಟ್ಟೂರ ಮಿ|| ಶ್ಯಾಡಾದಿ ಇವರ ಸ್ಫೂರ್ತಿದಾಯಕ ಭಾಷಣಗಳಾದವು. ತರುವಾಯ ಅಧ್ಯಕ್ಷ ಪೂಜ್ಯಪಾದರವರು ಮನುಷ್ಯ ಜನ್ಮದ ಶ್ರೇಷ್ಠತೆ ಹಾಗೂ ಸಾರ್ಥಕತೆಯ ಬಗ್ಗೆಯೂ ಮಹತ್ತ ದೇಸಾಯಿಯವರ ದಯಾದಾಕ್ಷಿಣ್ಯ ಮೊದಲಾದ ಸದ್ಗುಣಗಳಬಗ್ಗೆಯೂ ಅನೇಕ ಉದಾಹರಣೆಗಳನ್ನು ಕೊಟ್ಟು ಭಾಷಣಮಾಡಿ ಸಭೆಯ ಜನಗಳನ್ನು ಆನಂದ ಗೊಳಿಸಿದರು. ಬಳಿಕ ವಂದನಾರ್ಪಣೆ ಯಾದಾರ ತಾಂಬೂಲ ಮಂಗಲಗಳೊಡನೆ ಸಭಾ ವಿಸರ್ಜನೆಯಾಯಿತು.

ಬ್ಯಾಡಗಿ
ತಾ|| 14-1-29

M H Kalkatti
ಸೆಕ್ರೆಟರಿ,
ಶ್ರೀ ಲಿಂಗರಾಜ ಲೈಬ್ರರಿ

ಹಾಲುಮತಸ್ಥರ ಲಿಂಗಧಾರಣಮಹೋತ್ಸವ

ಕಳೆದ ಅಕ್ಟೋಬ ರ್ ಚಂದ್ರವಾರ ನೈಜಾಮ ಇಲಾಖಾ ಕೊಪ್ಪಳ ಜಿಲ್ಲಾ ದ್ಯಾಂಪುರದಲ್ಲಿ ಕೊಪ್ಪಳದ ಶ್ರೀಮನ್ನಿರಂಜನ ರಾಚೋಟಿಮಹಾಸ್ವಾಮಿಗಳ ನೇತೃತ್ವದಲ್ಲಿ ಹಾಲಕೆರೆಯ ಹತ್ತರ ಹಿರೇಮಠದ ಪಟ್ಟದಸ್ವಾಮಿಗಳಿಂದಲೂ ಕೊಪ್ಪಳದ ಆಳಂದ ಹಿರೇಮಠದ ಪಟ್ಟದಸ್ವಾಮಿಗಳಿಂದಲೂ 181 ಜನ ಹಾಲುಮತಸ್ಥರಿಗೆ (ಕುರುಬರಿಗೆ) ಲಿಂಗಧಾರಣವು ಮಾಡಲ್ಪಟ್ಟಿತು. ಜಗದ್ಗುರುಗಳು ಕೂಡಿದ ಜನಸ್ತೋಮಕ್ಕೆ 'ಲಿಂಗಧಾರಣೆಯ ಮಹತ್ವ' 'ವೀರಶೈವಧರ್ಮದ ಶ್ರೇಷ್ಠತ್ವ' 'ಹಾಲುಮತದ ಪೂರ್ವೇತಿಹಾಸ' 'ಹಾಲುಮತಕ್ಕೂ ವೀರಶೈವಧರ್ಮಕ್ಕೂ ಇರತಕ್ಕ ಸಂಬಂಧ' ಇವುಗಳ ವಿಷಯವಾಗಿ ತಮ್ಮ ಪವಿತ್ರವಾಣಿಯಿಂದ ಬಹುಸರಸವಾಗಿ ಬೋಧಿಸಿದರು. ಈ ಮಹಕಾರ್ಯದಲ್ಲಿ ಇಲ್ಲಿಯ ಹಾಲುಮತದ ಮುಂದಾಳುಗಳಾದ ಶ್ರೀ ಬೊಮ್ಮಣ್ಣವರು ಮರಿಬ ಮತ್ತು ಶ್ರೀ ಸಣ್ಣಬಸವಪ್ಪನವರು ನೋಟಗಾರ ಇವರು ಬಹು ಶ್ರಮವಹಿಸಿ ಕೆಲಸಮಾಡಿದರು. ಇತರ ಗ್ರಾಮಗಳ ಹಾಲುಮತಸ್ಥರೂ ಮೇಲ್ಕಂಡ ಮಹಾಶಯರ ಮೇಲ್ಪಂಕ್ತಿಯನ್ನೇ ಅನುಸರಿಸಲೆಂದು ಕೋರುತ್ತೇವೆ.

ಅದೇ ಸಮಯಕ್ಕೆ ಅಂದರೆ ಅಕ್ಟೋಬರ್ 10 ಗುರುವಾರ ನಮ್ಮೂರಲ್ಲಿ "ಶ್ರೀಮನ್ನಿರಂಜನ ಜಗದ್ಗುರು ಗವಿಸಿದ್ಧೇಶ್ವರ ನಾಟಕಶಾಲೆಯ"ವು ಕೊಪ್ಪಳದ ಮಹಾಸ್ವಾಮಿಗಳ ಅಧ್ಯಕ್ಷತೆಯಲ್ಲಿ ಸ್ಥಾಪಿಸಲ್ಪಟ್ಟಿತು. ಶ್ರೀ ಹಾಸ್ವಾಮಿಗಳ ನಾಟಕಶಾಲೆಯಲ್ಲಿ "ನವನಾಟಕ" ಎಂಬ "ಶಿವಾನುಭವ" ಪತ್ರಿಕೆಗಳನ್ನು ತರಿಸಲಿಕ್ಕೆ 8 ರೂ ಗಳನ್ನೂ "ವಚನಶಾಸ್ತ್ರಸಾರ" ಎಂಬ ಉದ್ಗ್ರಂಥವನ್ನೂ ಅರ್ಪಿಸಿದರು. 97 ರೂ ಗಳು ವರ್ಗಣಿಯಿಂದ ಕೂಡಿದವು. ಮೇಲ್ಕಂಡ ಎರಡು ಮಹತ್ಕಾರ್ಯಗಳು ನಮ್ಮೂರ ಪ್ರಥಮಗವಿಮಹೋತ್ಸವದಲ್ಲಿ ಜರುಗಿದವು. ಆ ಸಮಯದಲ್ಲಿ ಅನೇಕ ಮಾಹೇಶ್ವರ ಪಟ್ಟಗಳಿಗೂ ಶ್ರೀಯವರಿಗೂ ಪುರುಷರಿಗೂ ಶಿವದೀಕ್ಷೆಯು ಮಾಡಲ್ಪಟ್ಟಿತು.

ಮುಕ್ಕಂಪಿ ಗದಗ,
ತಾ|| 11—1—929

ತಮ್ಮ ವಿಧೇಯ,
ಚನ್ನಬಸವ ವಿರೂಪಾಕ್ಷಸ್ವಾಮಿ ಹಿರೇಮಠ,
ದ್ಯಾಂಪುರ

ಶ್ರೀ ಮದ್ದ್ಯೈಲತಾಪುರೀ (ಹುಬ್ಬಳ್ಳಿ) ಬೃಹನ್ಮಠ ಶ್ರೀ ಸಹಸ್ರಪರಾಧ್ಯಕ್ಷ ಶ್ರೀಮನ್ನಿರುಪಾಧಿ ನಿರಂಜನ ಜಗದ್ಗುರು ಗುರುಸಿದ್ಧ ರಾಜಯೋಗೀಂದ್ರ ಮಹಾಸ್ವಾಮಿಗಳು ಇವರ ಅದ್ದಾಲಕಿ ಮಹೋತ್ಸವ ಗದಹಿಂಗ್ಲಜ.

ಈ ವೊದಲು ಗಡಹಿಂಗ್ಲಜ ಮತ್ತು ಬೀದಾದ ಮಠವತ್ತಿ ಪ್ರಮುಖ ಜನರು ಹುಬ್ಬಳ್ಳಿಗೆ ಬಂದು ಬಿನ್ನಹಪೂರ್ವಕ ಪ್ರಾರ್ಥಿಸಿಕೊಂಡನಂತರ ಶ್ರೀ ಮಹಾ ಸನ್ನಿಧಿಯು ಸಕಲ ಪರಿವಾರಸಹಿತ ದಯಮಾಡಿಸುವದು ನಿಶ್ಚಿತವಾಯಿತು. ಅದರಂತೆ ಸಜ್ಜನರೂ ಮಠಪತಿಯವರನ್ನೆಸಗಿ, ಶ್ರೀ ಸನ್ನಿಧಾನದ ಆಗಮನಸೇವಾಸತ್ಕಾರಕ್ಕೆ ಅನುಮನಸ್ಕರಿಂದ ಕಾರ್ಯವನ್ನು ಕೈಕೊಂಡು ಪರಿಪಾಲ ಕರಿಂದಲೂ ಉತ್ಸವ ವ್ಯವಸ್ಥೆಯನ್ನು ಕಟ್ಟಿದ್ದರು, ಮೊದಲೇ ಹಸ್ತಪತ್ರಿಕೆಗಳ ದ್ವಾರಪ್ರಸಿದ್ಧಪಡಿಸಿದಂತೆ ಜನವರಿ ತಾ|| 7 ನೇ ಸೋಮವಾರ ಮಧ್ಯಾಹ್ನಕ್ಕೆ ಶ್ರೀ ಮಹಾಸನ್ನಿಧಾನವು ಮೊದಲು ಘಟಪ್ರಭಾದಿಂದ ಗಡಹಿಂಗ್ಲಜದ ಮುಕ್ಕಾಂ ಸಂಕೇಶ್ವರ ನಿಪ್ಪಾಣಿ ಕೊಲ್ಹಾಪುರ ಮುಂತಾದ ಸ್ಥಳಗಳ ಬೆಳ್ಳಿಯ ಪಲ್ಲಕ್ಕಿ ಆನೆಯಿಂದಲೂ ಹುಲ್ಲೋಳ ಶೇಠರ, ಸಂಕೇಶ್ವರ, ಮಹಾಜನರ ಪರಿವಾರ ಮುಂತಾದ ಶ್ರೀ ಜನರ ಭಕ್ತ ಸಮೂಹಕ್ಕೆ ಶ್ರೀಪಾದದಿಂದ ಮಾಡಿದ ಸ್ವಾಗತವನ್ನು ಸ್ವೀಕರಿಸುತ್ತ ಹೊರಟು ಗಡಹಿಂಗ್ಲಜ ಗ್ರಾಮಕ್ಕೆ ದಯಮಾಡಿಸಿದ್ದಾಯಿತು. ಅಲ್ಲಿಯ ಭಕ್ತ ಸ್ವಾಧೀನದ ಮೇಲೆ 3 ಗಂಟೆಗಳ ಕಾಲ ವಿಶ್ರಾಂತಿಯನ್ನಿತ್ತು ಬಳಿಕ ಗಡಹಿಂಗ್ಲಜದ ಪುರಪ್ರವೇಶಕ್ಕೆ ಎದುರು ಸ್ವಾಗತಕ್ಕೆ ನಿಂತಿದ್ದ ಜನರ ಬಳಿಗೆ ಸಾಯಂಕಾಲ 8-10 ಗಂಟೆಗೆ ಮೆರವಣಿಗೆಯಿಂದ ಸಾಗಿದ ಬಳಿಕ ಶ್ರೀ ಸನ್ನಿಧಿಯು ಸ್ವಾಗತವಾಯಿತು. ಅನಂತರ ಸರಸ್ವತಿಯ ಬೆನ್ನಿನ ಮೇಲಿನ ಅಂಬಾರಿಯಲ್ಲಿ ಶ್ರೀ ಮಹಾಸನ್ನಿಧಿಯು ಮಂಡಿಸಿದ ಬಳಿಕ ನಗಾರಿ ವಾದ್ಯ ಬೆಂಡು ವಾದ್ಯ ಮುಂತಾದ ಸಕಲ ಬಿರುದಾವಳಿ ಸಹಿತ ಉತ್ಸವಕ್ಕೆ ಪ್ರಾರಂಭವಾಯಿತು. ಪಲ್ಲಕ್ಕಿಯ ಮುಂಭಾಗದಲ್ಲಿ ಸಾಗಿದ ವಿದ್ಯಾರ್ಥಿಗಳು ರಾಜರ್ಷಿ ಶ್ರೀ ಛತ್ರಪತಿ ಶಾಹು ಮಹಾರಾಜರವರ ಭಾವಚಿತ್ರಗಳು ವಿರಾಜಮಾನವಾಗಿದ್ದವು. ಸಂಸ್ಥಾನದ ಖಾಸಗಿ ಸರಂಜಾಮು ಅಲ್ಲದೆ ಮರ್ಯಾದೆಯಾಗಿ ಒಂಟೆ ಸಂಸ್ಥಾನದಿಂದಲೂ ಕಳಿಸಿದ ಶ್ರೀಗಳು ಮತ್ತು ಕರವೀರ ಶ್ರೀ ಶಂಕರಾಚಾರ್ಯಸ್ವಾಮಿಗಳಿಂದಲೂ ಬಂದ ಸವಾರಿ ಮುಂತಾದ ಎಲ್ಲವೂ ಕೆಲಸಲ್ಪಟ್ಟಿತು. ಇಲ್ಲಿಯ ಪ್ರಾಂತದ ಪೊಲೀಸ ಸ್ಕೌಟ್ ಸಂಘದವರೂ ಪೊಲೀಸ ಅಧಿಕಾರಿಗಳೂ ಜನಸಮುದಾಯದಲ್ಲಿ ಗದ್ದಲವಾಗದಂತೆ ವ್ಯವಸ್ಥೆಯನ್ನಿಟ್ಟರು. ನಾಲ್ಕೆಯ ಸುತ್ತಮುತ್ತಲೂ ವೈದಿಕ ವರ್ಗವೂ, ಪ್ರಾಂತಾಧಿಕಾರಿಗಳೂ ಮಾಮಲೇದಾರ ಸಾಹೇಬರ ವಕೀಲರು, ಮ್ಯುನಿಸಿಪಲ್ ಮತ್ತು ಲೋಕಲ್ ಬೋರ್ಡಿನ ಸಭಾಸದರು ಮುಂತಾದವರು ಭಕ್ತಿಭಾವದಿಂದ ಸಾಗುತ್ತಿದ್ದರು. ಈ ಸ್ಥಳದ ಪ್ರೇಕ್ಷಕರಿಗೆ ಪಟ್ಟಿಯನ್ನು ಆನಂದವನ್ನೂ ಉಂಟುಮಾಡುತ್ತಿದ್ದ ಈ ಉತ್ಸವವು ಕೆಳಗು ಕೋರಿದಾಗ ಗಂಧಲಂಕೃತವಾದ ಮುಖ್ಯಬೀದಿಗಳಲ್ಲಿ ಹಾಯ್ದು ಭಕ್ತಜನರ ಭಕ್ತಿಭಾವದಿಂದ ಶ್ರೀಗಳ ಬಾಗಾರಾದಿಂದ ಗೆಳಗಿ ಹೊರಾಡಿದ ಕನ್ನಡಿಸುತ್ತಲು ಸಾಯಂಕಾಲ 7 ಘಂಟೆಗೆ ಇಲ್ಲಿಯ ಹಿರೇಮಠಕ್ಕೆ ತಲ್ಪಿತು. ಅಲ್ಲಿ ರಚಿಸಲ್ಪಟ್ಟ ಶ್ರೀ ಶೂನ್ಯಪೀಠದಲ್ಲಿ ಶ್ರೀ ಸನ್ನಿಧಿಯು ಮಂಡಿಸಿದ ಬಳಿಕ ವರಬಾರಕೊಳಿಯಲ್ಲಿ ರಾ|| ಸಾ|| ಡಿ ಬಿ ಮಾಳಿ, ಡಿ ಡಿ ಕಲಿಕ್ಟರ್ ಇವರು ಸುಸ್ವಾಗತವನ್ನು ಬಯಸಿ ಮರಾಠಿಯಲ್ಲಿ ನಾಂತ ನಾಡಿದರು. ಅದನ್ನೇ ಮಿ|| ಜಿ ಡಿ ಮಜಕಿ ಇವರು ಕನ್ನಡದಲ್ಲಿ ಅನುವಾದಮಾಡಿದ ಬಳಿಕ ಶ್ರೀ ನವಲಗುಂದಸ್ವಾಮಿಗಳು "ಶಿಷ್ಯನ ಸಂಸ್ಕಾರ ಆದರ್ಶ" ಎಂಬ ವಿಷಯದಮೇಲೆ ಒಳ್ಳೇ ಪರಿಣಾಮಕಾರಕ ಭಾಷಣ ಮಾಡಿದರು. ಆದ್ದರಿಂದ ಶ್ರೀ ಮಹಾ ಸನ್ನಿಧಿಯು ಭಕ್ತರ ಬಿನ್ನಹದ ಮೇರೆಗೆ ದಯಮಾಡಿಸಿರುವ ಮಹಾಸನ್ನಿಧಾನದ ಮನೋಗತವನ್ನು ಸಭಿಕರಿಗೆ ತಿಳಿಸಿದರು. ಅನಂತರ ಮಹಾಸನ್ನಿಧಿಯಿಂದ ಸರ್ವವಿಷಯಗಳನ್ನೊಳಗೊಂಡ ಸಮಯೋಚಿತ ಆಶೀರ್ವಾದಾತ್ಮಕ ಭಾಷಣವು ಒಳ್ಳೇ ಪರಿಣಾಮಕಾರಕವಾಗಿ ಜರುಗಿತು. ಬಳಿಕ ವರಸಭೆಯಿಂದ ಬಂದಿದ್ದ ಮಹಾಜನರ ಆಭಾರವನ್ನು ಹೇಳಿ ಮಂಗಲಪೂರ್ವಕ ಸಭಾವಿಸರ್ಜನೆಯಾಯಿತು.

ಗಡಹಿಂಗ್ಲಜ
8-1-1929

ಓರ್ವ ಉತ್ಸವಭಾಗಿ

ಬಳ್ಳೆನೂಲಿಂಗೆ ಶಾಂತಿ

ಶ್ರೀಮತ್ತರುಹರ ಸಭೆಯಲ್ಲಿ ಶ್ರೀಮನ್ಮಹಿಸೂರು ಮಹಾರಾಜರವರು ದಯ ಪಾಲಿಸಿದ ಭಾಷಣದಲ್ಲಿ ತಮ್ಮ ಸಂಸ್ಥಾನದ ಪ್ರಮುಖ ಧರ್ಮಗಳಲ್ಲೊಂದಾದ ವೀರಶೈವಮತೋದ್ಧಾರಕನಾದ ಶ್ರೀ ಬಸವೇಶನ ಹೆಸರುತೆಗೆದುಕೊಳ್ಳದಿದ್ದನ್ನು ಚರ್ಚಿಸಿ ಬಸವರಾಜಪತ್ರಿಕೆಯು ಬರೆದ ಲೇಖನವನ್ನು ಸ್ಟಾರ್ ಪತ್ರಿಕೆಯು ಅನುವದಿಸಿ ಪ್ರಕಟಿಸಿತು. ಶ್ರೀಮನ್ಮಹಾರಾಜರವರ ದಿವ್ಯಚಿತ್ತಕ್ಕೆ ತಮ್ಮ ಭಾಷಣದಿಂದ ವೀರಶೈವಸಮಾಜಕ್ಕಾದ ಮನದಳಲು ಅರಿಕೆಯಾಗಬೇಕೆಂದು ತಾವದನ್ನು ಎತ್ತಿಕೊಂಡುದು ಯೋಗ್ಯವೇ. ವೀರಶೈವಸಮಾಜದ ಮುಂದಾಳ್ಗಳಿಂದ ಇತ್ತಕಡೆಗೆ ಕೆಲವರಿಂದ ಹೊರಟ ಬಸವನಿಂದಾ ಸಂಪ್ರದಾಯದ ನಾಲಿಗೆ ಎನಿಸಿ "ಪಂಚಾಚಾರ್ಯಪ್ರಭೆಗೆ" ಎಂದಿನಿಂದಲೂ ನಡೆದುಬಂದ ದ್ವಿತೀಯ ಶಂಕ್ಯು ಬಸವನ ಗೌರವವು ಸಹನವಾಗದೆ, ಗುರುಭಕ್ತರೆನಿಸಿ ಎಂಬ ವಿಶೇಷ ಒಂದು ಅವಿವೇಕವಾದ ನಡಿಯ ಕೆಲಗು ಹೊರಟಿತು. ವೀರಶೈವರಲ್ಲಿಯ ಒಳಪಕ್ಕೆ ಒಗ್ಗು ಒಗ್ಗಡಿರುವ ಧಾರವಾಡದ ವಿಜಯವೆಂಬ ಒಂದು ಬ್ರಾಹ್ಮಣಿಕೆಯ ಪತ್ರದಲ್ಲಿ ಅದೇ ಕೆಲಗು ಪ್ರಭೆಯನ್ನು ಅನುವಾದಿಸಿ ತಾ 12-1-1929 ಕ್ಕೆ ಎತ್ತಿತು. ಆ ಕೆಲಗು ನನ್ನ ಕಿವಿಗೆಬಿದ್ದು ಅಲಕುತ್ತಿರಲು ಈ ಬೆಳವಣಿಗೆಯ ವೈಶಿಷ್ಟ್ಯ ಬೃಥಯಿಂದ ಮೊಟಕಿದುದೇ ತಿಳಿಯಿತು.

ನಂಗಳು ಒಂದು ಊರನ್ನು ಮತ್ತೊಂದು ಕೂಡಿಕೆಂಬ ದು ನಾನಿವು ಇರುವಲ್ಲಿ ಬಳ್ಳಗಳು ಊಳಿದರೆ ಅದಕ್ಕಾರೂ ಅನುಗಲನೇ ವ್ಯ ಆದರೆ ಬಳ್ಳಿಯವರು ಹಗಲು ನರಿಯ ಊರು ಅರುಹಿಸುಂಪವೆನ್ನುವರು. ಇದನೇರಗಿನ ಜಾತಿಪಕ್ಷಪಾತ ಧರ್ಮಪಕ್ಷಪಾತಗಳಿಗೂ ಅಯ ವ ಹಾಫುರುಷರನ್ನು ಅನರಣ ಕೈತಗಳಿಂದಲೂ, ಅಕ್ಷಿಣಿಯಿಂದ ಒಡೆದು ಮೂಡಿದ ಸನಾತನ ತತ್ತ್ವಗಳಿಂದಲೂ ಕಂಡ ಹಿಡಿದು ಬರೆಗೆ ತಪ್ಪಿನ ಇಷ್ಟತ್ವನಯ ಕಕರಣೆಂದ ವಿನೋದಿಯದ ಎರಡು ಚಾವಗಳು ಚಾರಿದ ಬಳಿಕ ಕೇಳಿದ ಈ ಜಂಬುತಾವಾಡಿಸ್ಸ ಖಂಡಿತವಾಗಿಯೂ ಬಸವನ ಕೀರ್ತಿಗಲ್ಲವಿದ್ದರೂ ವೀರಶೈವಸಮಾಜಕ್ಕೆ ಅದ ಘನತೆಬೆರವನೆಂದರಿತು ಅದರ ಶಾಂತಿಯನ್ನು ಮಾಡುವುದು ನನ್ನ ಕರ್ತವ್ಯವು.

ಬಸವನು ಶಂಕರ ಮಧ್ವ ರಾಮಾನುಜರಂತೆ ಅವ ಸಿದ್ಧಾಂತವನ್ನು ಸ್ಥಾಪಿಸಲಿಲ್ಲ. ಆವ ಮತಕ್ಕೂ ಗುರುವಲ್ಲವೆಂದು ಪ್ರಭೆಯು ಅನ್ನುವುದು ಪ್ರಭೆಯ ಧ್ವನಿಗೆ ಕಿಕ್ಕಿರಿಯುಂತಿರುವ ವಿಜಯವು ಅದನ್ನೇ ಅರಿಸಿ ಬಸವನ ವಚನಗಳನ್ನು ವೈಷ್ಣವಸಂಪ್ರದಾಯದ ಭಜನಪದದ ಹಾಡಗಳಿಗೆ ಹೋಲಿಸಿ ಹಾಗೂ ಸಿದ್ಧಾಂತಸ್ಥಾಪಕನೆಂದರೆ ಯರಸ್ಸು ಶ್ರೀ ರೇಣುಕಾಚಾರ್ಯರಿಗೆ ಒಪ್ಪಿಸುವುದರಲ್ಲಿ ಸೂಚನಿಪದಂತೆ ಮಾಡಿ ಬಸವನ ನಿಂದೆಯೊಂದು ಕೋರುವ ಒಂದು ಮಾತಿನಿಂದ ಅದನ್ನು ಅಳಿಸಿಬಿಟ್ಟಿದೆ.

ವೈಷ್ಣವ ಸಂಪ್ರದಾಯದ ಆಚಾರ್ಯರು ದಾಸಕೂಟದವರಿಗೆ ತಮ್ಮ ಧರ್ಮಶಿಕ್ಷಣದಲ್ಲಿ ಆದ ಮೆಟ್ಟನ್ನು ಕೊಡುವರೇಬೂದನು ನಾನರಿಯೆನು. ಆದರೆ ವೀರಶೈವಧರ್ಮದ ಆಚಾರ್ಯರೂ, ಯೋಗಿಗಳೂ, ಗ್ರಂಥಕಾರರೂ ಬಸವನು ವೀರಶೈವಸಿದ್ಧಾಂತ ಸ್ಥಾಪನಾಚಾರ್ಯನೆಂದು ನುಡಿಸಿರುವರು. ವೀರಶೈವಸನಾಜವು ಎಂದಿನಿಂದಲೂ ಬಸವನಲ್ಲಿ ಅಸಾಧಾರಣ ಭಕ್ತಿಯನ್ನಿಟ್ಟುಕೊಂಡಿದೆ. ಅವನು ವೀರಶೈವ ಕ್ರಿಯಾಸ್ಥೂರ್ತಿಯಾದ ಗುರು ಲಿಂಗ ಜಂಗಮಸ್ವರೂಪನೆಂದು ಭಾವಿಸುತ್ತದೆ. ಇದಕ್ಕೆ ಆತನಿಗೆ ಗುರುಬಸವ, ಬಸವಲಿಂಗ, ಬಸವಪ್ರಭು ಎನ್ನುವ ನಾಮಗಳು ರೂಢಿಯಾಗಿ ಬಂದಿರುವುದು ತಮ್ಮ ಸಮ್ಮತಿಗಳಿರುವ ವಾರ್ತೆಯ ಹೇಳತಬೇಕಾಗಿರುವುದು ಸಾಕ್ಷಿಯು.

ಇನ್ನು ವೀರಶೈವ ಸಂಸ್ಕೃತ ಇತಿಹಾಸ ವಾಙ್ಮಯದಲ್ಲಿ ಬಸವನ ನೆನೆನ್ನುವರೆಂಬುದನ್ನು ನೋಡುವ.

ವೈಸಿಸುವಂಸ್ಥಾನದ ಕೆಲವು ಭಾಗಗಳನ್ನಾಳಿಕೊಂಡ ಕರ್ನಾಟಕದ ರಾಜಕಂತಾಸನದಲ್ಲಿ ವಿರಾಜಮಾನನಾದ ಕೆಳದಿಯ ರಾಜವಂಶದಲ್ಲಿ ಪ್ರಸಿದ್ಧನಾದ ಬಸವರಾಜ್ಯೇ ಶಿವತತ್ವರತ್ನಾಕರವೆಂಬ ಕೋಶದ ಪ್ರಕಟವಾದ ಆ ಗ್ರಂಥದ ೬ನೇ ಕಲ್ಲೋಲದ ೧೦ನೇ ತರಂಗದಲ್ಲಿ ವೀರಶೈವಮತಸ್ಥಾಪನಾಚಾರ್ಯ ಬಸವಣ್ಣನವರ ಚರಿತ್ರೆಯು ಇರುತ್ತದೆ. ಅಲ್ಲದೆ ಇವನ ಪ್ರಾಚೀನ ಕವಿಗಳು ಎಲ್ಲರೂ ಬಸವನನ್ನು ಸ್ತುತಿಸಿರುವರು. ಆ ಗ್ರಂಥದ 1, 15 ನೆಯ ಶ್ಲೋಕಗಳು ಮತ್ತು ಇತರ ಗ್ರಂಥಗಳಲ್ಲಿ ಸಹ ಬಸವನ ಕೀರ್ತಿಯನ್ನು ಹೇಳಿರುತ್ತಾರೆ. "ಬಸವ ಪುರಾಣ" "ಪ್ರಭುಲಿಂಗಲೀಲೆ" ಮುಂತಾದ ವೀರಶೈವಗ್ರಂಥಗಳಲ್ಲಿ "ಶಿವತತ್ವ ಚಿಂತಾಮಣಿ" ಎಂಬ ಗ್ರಂಥದಲ್ಲಿ ಬಸವನನ್ನು ಶಿವಸ್ವರೂಪನೆಂದೂ ವೀರಶೈವಸ್ಥಾಪಕಾಚಾರ್ಯನೆಂದೂ ಹೇಳಿರುವುದು. ಧರ್ಮಪ್ರವರ್ತಕನೂ ಕರ್ನಾಟಕ ಸಿಂಹಾಸನಾಧೀಶ್ವರನಾದ ಬಿಜ್ಜಳನ ಪ್ರಧಾನಿಯೂ ಭಕ್ತೈಶ್ವರ್ಯಸಂಪನ್ನನಾದ ಬಸವೇಶ್ವರನು ಸರ್ವೈಶ್ವರ್ಯಗಳನ್ನು ನೀಡಿದನೆಂದು ತಿಳಿಸಿದ್ದು ಧರ್ಮಪ್ರವರ್ತಕನಾದ ತಾನಾದ ಬೀಜ್ಜಳನ ವಿಶ್ವಾಸವನ್ನು ನಿರಾಕರಿಸಿ ಪ್ರಕಟಿಸಿದ್ದನೆಂದು ಹೇಳುವುದು.

ಆದೇ ಬಸವರಾಜ ಕಾಲದ ಸಭಾಸ್ಥಾನದ ಪಡಕ್ಷರಿ ಮಂತ್ರಿಯು ವೀರಶೈವಧರ್ಮ ಶಿರೋಮಣಿಯೆಂಬ ಗ್ರಂಥವನ್ನು ಬರೆದಿರುವನು. ಅದರ "ಪೂರ್ವಂ ಶಿವಾಜ್ಞಯಾ ಶಿವಶಂಕರ ಶ್ರೀ ಬಸವೇಶ ಮಂತ್ರಿವರ" ಎಂಬ ಶ್ರೀ ಬಸವೇಶನ ವಿಶಾಲ್ಯದ ಹಾರಲೀಲೆಯನ್ನು ಕೊಂಡಾಡಿರುವನು.

ಉಭಯ ಕವಿತಾವಿಶಾರದನಾದ ಶ್ರೀ ಷಡಕ್ಷರರು ವೃಷಭೇಂದ್ರ ವಿಜಯವೆಂಬ ಗ್ರಂಥದಲ್ಲಿ ಸಾಕ್ಷಾತ್ ಶಿವಸ್ವರೂಪನೆಂದೂ ಧರ್ಮಸ್ಥಾಪಕನೆಂದೂ ಕೊಂಡಾಡಿ ಅಲ್ಲಲ್ಲಿ ವಿಸ್ತರಿಸಿರುವರು. ಜಗದ್ಗುರುವೆಂದು ಹೊಗಳಿರುವನು.

ವೃಷಭ ದಾಸ್ಯರ ಭಕ್ತಿಯಿಂದೆ ಬಿಂದು ವಿಲಸನ್ನಾದಂ ರಜತಾದ್ರಿಯಂ ಎಂಬ ಪ್ರದ್ಯುಮ್ನಸಾರದಿಂ ಕಳೆ ಚಲನ್ನೇತ್ರತ್ರಯಾಸಂಗಳಂ | ಮಿಸುವಾನಾಕೆ ಗುಣತ್ರಯಂ ಬಸವನಿಂದದಿಂದಾದವೆಂದೈದಲೇ | ದವರಾರ್ಯರ್ವರವಾಕೋವನೋಕಾನೆ ಪರಬೊತ್ತಂದಲ್ಯಮಾಡಿಲ್ಲೊಕಾಂ || ನೀನೆ ಗುರು ನೀನೆ ಲಿಂಗಂ | ನೀನೆ ಚರಂ || ೯೭-೮೧ ೧೩ "ಜಗ ಬೆದ್ದ ಮುಖವಾದ ೫೧ ೬೦ "ಬಸವ ಗಮನಾಕಾಶನಮಃ" ಇತ್ಯಾದಿ ವೀರಶೈವಾಬ್ಧಿಚಂದ್ರ ೩೫ ೬೮ ನಿಗಮಾಗಮಗನವನಕಾಯಸರಸೋಕ ಸ್ವಾಯಂಭವನಾದ ೪೦ ೧೧೩ ಶಿವಾಸ ರಾಮಚರ ಧೀರಸಂರಜತ್ತತ್ವೈಥವ || ೪೦ ೧೧೫ ಪರವಾದಿಗಳ ನೋಲಿ ಸಿದಂ ಹರನವುಯನುನಂಕಾಗಲಿಸಿಹಾಲಿಸಿದಂ ಪುದ್ಧರಬಸವನೆಂದು ಕರಣರ್ ಪಿರಿದುಂ ಸಂಪ್ರಮದ ಕೀರ್ತಿಸುತ್ತ ಸಿದಿದರ್ || ೪೦ ೧೧೬ ಸಜ್ಜನರ ಮಹಾಸರವಾಮಾನಿರ | ೧೧೦ ಕಲಂಕವನದವಾಹಾರ ೬ ೩೯ ಜಗಭೂಪಾಲ ೩ ೬೮ ಎಂದು ಮೊದಲಾಗಿ ಕೊಂಡಾಡಿರುವರು.

ಆಂಧ್ರ ಕವಿಪುಂಗವನೂ ವೀರಶೈವ ಗುರುವರ್ಯನೂ ಆದ ಸೋಮನು ವೀರಶೈವಸಿದ್ಧಾಂತ ಪ್ರತಿಪಾದಕವಾದ ಬಸವರಾಜೀಯ ವೆಂಬ ಸಂಸ್ಕೃತ ಪ್ರಬಂಧದಲ್ಲಿ "ಕೇವಲ ಬಸವ ಇತಿ ಇದಾನೀಂ ಕಲಿಯುಗೇ ಶಿವಭಕ್ತಿ ಮುದ್ಧರ್ತುಂ ಬಸವಾಭಿಧಾನೇನ ವೃಷಭಶಿವಾಚಾರ್ಯ" ಎಂದು ಹೇಳಿರುವನು. ಅಸ್ಸಗೆ ಮಾಯಿದೇವನು "ಅನುಭವಸೂತ್ರ" "ವೀರಶೈವಸರ್ವಸ್ವದರ್ಪಣ" "ಜಗದಾದಿವೀಶ" ಎಂದಂದಿರುವನು. ಇಂತು ಬಸವನವತಾರದಿಂದ ಇಂದಿನ ತನಕ ಆದ ಕವಿಗಳ ಒಂದೊಂದು ನುಡಿಯನ್ನಾದರಿಸುವುದರಿಂದ ಈ ಪತ್ರಿಕೆಯಂತಹ ನೂರಾರು ಪತ್ರಿಕೆಗಳು ತುಂಬುವುವು.

(ಸಶೇಷ.)



7

೧೯೨೯ ನೆಯ ಇಸವಿ ಜನವರಿ ತಾ|| ೧೯ ರಿಂದ ೧೯೨೯ ನೆಯ ಇಸವಿ ಜನವರಿ ತಾ|| ೨೫ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೦ ನೆಯ ವಿಭವನಾಮಸಂವತ್ಸರದ ಪುಷ್ಯ ಶುದ್ಧ ನವಮಿಯಿಂದ ಪುಷ್ಯ ಶುದ್ಧ ಪೌರ್ಣಮಿ ವರೆಗಿನ ಪಂಚಾಂಗ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಕರ ಮಾಸ
19	ಶನಿ	ನವ	48 19	ಅಶ್ವಿ	0-50	6
20	[1] ಭಾನು	ದಶ	43 37	ಕೃತ್ತಿ	63-55	7
21	ಸೋಮ	ಏಕಾ	36 52	ರೋಹಿ	49 49	8
22	ಮಂಗಳ	ದ್ವಾದ	30 53	ಮೃಗ	45-31	9
23	[2] ಬುಧ	ತ್ರಯೋ	25 0	ಆರ್ದ್ರಾ	41 20	10
24	[3] ಗುರು	ಚತು	19 27	ಪುನ	37 39	11
25	ಶುಕ್ರ	ಪೌರ್ಣ	14 22	ಪುಷ್ಯ	34-24	12

(1) ಮಳೆನಕ್ಷತ್ರ ಉತ್ತರಾಷಾಢ ೧ ನೆಯಪಾದ (2) ಮಳೆನಕ್ಷತ್ರ ಶ್ರವಣ ೧ ನೆಯಪಾದ, ರಾಶಿಂಬರೀವ್ರತ. (3) ಬನಶಂಕರೀವ್ರತ, ಮೈಲಾರದ ಬಂಡಿ ಉತ್ಸವ

ಮೈಸೂರು ವೈ ' ವಿರೂಪಾಕ್ಷಯ್ಯನವರಿಂದ ಕ್ಯಾಸ್ಟ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M

ಮೈಸೂರ್ ಸ್ಟಾರ್

ಪ   ಸಿ ವಾ ರ ಪ ತ್ರಿ ಕೆ

ಮಹೀಶರಭರೀಣಾರಾ ಎರವ ರಿಗತರಾಜ ವಂಡಲಿಸಿನ್ನೈತಾ ಭಸಗಿಕ್ಷಕ್ಷಣ ವಕ್ಷ ಪ್ರಕ್ಷ ವೀಣೆರಾಜಯೀತ್ ||
ಶ್ರೀಮತ್ಕೃಷ್ಣನೃಪಾಲನೃ ಎಲಾಲ ಏಸ ದೀಪಂಗವ ಕೃಷ್ಣಮಧೀಸ್ವ ದಶಿ ನಾಲಿಕ ಸಾದ ಗ್ಯಾಟಪಾಲಾವಲಂ |
ಸೀಮಾತೀತಯಶಃಪ್ರಕಾಶವಿಭವಂ ಸದ್ವೃತ್ತ ಮಾರಾತಲಂ ಶ್ರೀಮಂಟಿ ಕಿಯಂಸದಾಭೂರಿ ಗೌರೀಶಾನುಕಂಪೋಜ್ಜ್ವಲಂ ||

[ಸ್ಥಳದವರಿಗೆ ವಾರ್ಷಿಕ ಚಂದಾ ೧-೧೦-೦] [ಪರಸ್ಥಳದವರಿಗೆ ೩-೦-೦] [ಲೈಬ್ರರಿಗೆ ೬-೦-೦]

ಸಂಪುಟ ೪೨] ಮೈಸೂರು ಸ್ಟಾರ್ ಸನ್ ೧೯೨೯ ನೇಯ ಇಸವಿ ಜನವರಿ ತಾರೀಖು ೨೬ ನೇಯ ಶನಿವಾರ [ಸಂಚಿಕೆ ೪

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ	(ವಿ ಪಿ ಸಹ)
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೪—೦
ಷಟ್‌ಸ್ಥಲದ್ಯಾ	೦—೪—೦	೦—೮—೦
ಚಾರುಶೀಲೆಚರಿತ್ರೆ	೦—೫—೦	೦—೯—೦
ಜಂಗಮಾಸಿ	೦—೪—೦	೦—೬—೦
ವ್ರತಪಂಚಕ	೦—೪—೦	೦—೯—೦
ಗುರುಕಂಠರಕ್ಷಕ	೦—೧—೦	[illegible]
ಬಸವೇಶ್ವರಜನನ	೦—೮—೦	೦—೧೩—೦
ಸಟೀಕ ಕರ್ಣಾಟಕಶಬ್ದ ಮಂಜರಿ	೦—೮—೦	೦—೧೩—೦
ಸಟೀಕ ಶತಕತ್ರಯ	೧—೦—೦	೧—೬—೦

ಮೈಸೂರು ಸ್ಟಾರ್ ಚಂದಾದಾರರಿಗೆ

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ ೩-೦-೦, ಲೈಬ್ರರಿ ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ ೬-೦-೦ ವಿ ಪಿ ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ ನಲ್ಲಿಯೂ ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಒಂದು ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ಸಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್

ಹತ್ತನೆಯ ವೀರಶೈವ ಮಹಾಸಭಾಕಾಲದಲ್ಲಿ ಪ್ರಸಿದ್ಧಿಸಲ್ಪಟ್ಟ

ವೀರಶೈವ ಕರದರ್ಪಣ.

ಡೆಮ್ಮಿ ೩ ಸೈಜಿನ 200 ದೊಡ್ಡ ಗ್ಲೇಜುಪುಟಗಳು) ಬೆಲೆ ಒಂದೇ ಒಂದು ರೂಪಾಯಿ (30 ಭಾವಚಿತ್ರಗಳಿರ ಪುಸ್ತ

ವೀರಶೈವರ ಸಂಬಂಧವಾದ ಎಲ್ಲ ವಿಷಯಗಳನ್ನೂ ಒಳಗೊಂಡಿರುವ ಏಕಮಾತ್ರ ಪುಸ್ತಕ

ವೀರಶೈವಮತಸಂಬಂಧವಾದ ಮಹತ್ವವಿಷಯಗಳಮೇಲೆ ಎಂದರೆ ವೀರಶೈವಮತತತ್ವನಿರೂಪಣೆ ವಿಚಾರಕ್ಕೆ, ಬ್ರಾಹ್ಮಣಸ್ಥಾಪಿತ ಜಗದ್ಗುರು ಪೀಠಗಳು, ಶ್ರೀ ಬಸವೇಶ್ವರ ಮೊದಲಾದ ವಿಷಯಗಳ ಮೇಲೆ ಸುಪ್ರಸಿದ್ಧ ಲೇಖಕರ ಲೇಖನಗಳ, ಜಗದ್ಗುರುಪೀಠಗಳ ಮತ್ತು ಜಗದ್ಗುರು ಮಹಾಸ್ವಾಮಿಗಳವರ ಸಚಿತ್ರ ಚರಿತ್ರಗಳು, ಇಡೀ ಭರತಖಂಡದೊಳಗಿನ ವೀರಶೈವ ಸಂಸ್ಥೆಗಳ ಮತ್ತು ಅವುಗಳ ಸಮಗ್ರ ಇತಿಹಾಸಗಳ, ಅಖಿಲಭಾರತಖಂಡದಲ್ಲಿ ಗತಿಸಿದ ವೀರಶೈವ ಮಹನೀಯರುಗಳ ಸಚಿತ್ರ ಜೀವಿತಚರಿತ್ರೆಗಳು, ಅ ಭಾ ವೀರಶೈವ ಮಹಾಸಭೆಯು ಮೊದಲು ಹೇಗೆ ಪ್ರಾರಂಭವಾಯಿತೆಂಬ ವಿವರ, ಆರಂಭದಿಂದಿನ ವಿಷಯ ಮತ್ತು ಅದಕ್ಕೆ ಸಹಾಯಮಾಡಿದವರ ಭಾವಚಿತ್ರಗಳು, ಮೊನ್ನೆ ನಡೆದ 10 ನೇ ವೀರಶೈವ ಮಹಾಸಭೆಗೆ ಮೈಸೂರು ಶ್ರೀಮನ್ಮಹಾರಾಜರವರಿಂದ ಕಳಿಸಲ್ಪಟ್ಟ ಸಂದೇಶ—ಈ ಎಲ್ಲ ವಿಷಯಗಳಿಂದೊಡಗೂಡಿದ ಉತ್ತಮ ಗ್ರಂಥ

ಇಡೀ ಪುಸ್ತಕವು ಭಾವಚಿತ್ರಗಳಿಂದ ತುಂಬಿತುಳುಕುತ್ತಿದೆ. ಶ್ರೀಮನ್ಮಹಾರಾಜರವರ ಭಾವಚಿತ್ರ, ಶ್ರೀ ಮುಮ್ಮಡಿ ಕೃಷ್ಣರಾಜಒಡೆಯರವರು ಶಿವಪೂಜೆಮಾಡುತ್ತಿರುವುದು, ಶ್ರೀಜಗದ್ಗುರು ಮಹಾಸ್ವಾಮಿಗಳ ಅಡ್ಡಪಲ್ಲಕ್ಕಿಉತ್ಸವ, 10 ನೇ ಅ ಭಾ ವೀರಶೈವ ಮಹಾಸಭೆಯ ಅಧ್ಯಕ್ಷ ಮತ್ತು ಸ್ವಾಗತಸಂಘಾಧ್ಯಕ್ಷರ ಭಾವಚಿತ್ರಗಳು, ಪಂಚಪೀಠಗಳ ದೃಶ್ಯಗಳು ಮತ್ತು ಪಂಚಜಗದ್ಗುರುಗಳ ಭಾವಚಿತ್ರಗಳು, ಶ್ರೀ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳ ದೊಡ್ಡ ಭಾವಚಿತ್ರ ಮತ್ತು ಜಗದಾಚಾರ್ಯ ವಿರೂಪಾಕ್ಷಒಡೆಯರವರು ಹುಬ್ಬಳ್ಳಿ ಮತ್ತು ಗದಗಿನ ಜಗದ್ಗುರು ಮಹಾಸ್ವಾಮಿಗಳವರ ಭಾವಚಿತ್ರ, ಇನ್ನುಳಿದ ಎಲ್ಲ ಪ್ರಸಿದ್ಧ ಮಹಾಸ್ವಾಮಿಗಳವರ ಮತ್ತು ಸ್ವದೇಶವಸ್ತ್ರದ ಭಾವಚಿತ್ರಗಳು ಇದರಲ್ಲಡಗಿವೆ. ಇದಲ್ಲದೆ ಕೈಲಾಸವಾಸಿ ಅರಸಿಂಗಿ ದೇಸಾಯರು, ಮೈಸೂರು ವೀರಗಂಗಪ್ಪನವರಾದಿಯಾಗಿ ಗತಿಸಿದ ಎಲ್ಲ ವೀರಶೈವರುಗಳನ್ನೂ ಈಗಿನ ವೀರಶೈವ ಲೌಕಿಕ ವೈದಿಕ ಧರ್ಮಾತ್ಮರನ್ನೂ ಪ್ರಸಿದ್ಧ ಶ್ರೀಮಂತರನ್ನೂ, ದೊಡ್ಡ ಹುದ್ದೆದಾರರು, ವರ್ತಕರು, ಗಾಯಕರು ಇತರರು ಮೊದಲಾದವರನ್ನೂ ಇದರಲ್ಲಿ ಕಾಣಬಹುದು.

ಈವರೆಗೆ ಈ ಮಾದರಿಯ ಪುಸ್ತಕವು ಇದೊಂದೇ ಪ್ರಯತ್ನಪಟ್ಟು ವೀರಶೈವನು ಸಂಗ್ರಹ ಮಾಡಿರುವ ಗ್ರಂಥವು. ಬೆಂಗಳೂರಿನ ಮಹಾಸಭಾ ಕಾಲದಲ್ಲಿ ಮಾರಿ ಮಿಕ್ಕ ಕೆಲವು ಪ್ರತಿಗಳು ಮಾತ್ರ ಉಳಿದಿವೆ

ಬೇಕಾದವರು ಒಡನೆ ಬರೆಯಿರಿ. ಬೆಲೆ 1 ರೂಪಾಯಿ. ಅಂಚೆ ವಾಸೂಲು ಪ್ರತ್ಯೇಕ.

ವಿಳಾಸ— ಟಿ ಎಚ್. ಚನ್ನಪ್ಪ,

16 ಮಾಡರ್ನ್ ಮುದ್ರಾಕ್ಷರಶಾಲಾ ಬೆಂಗಳೂರು ಸಿಟಿ

೧೯೨೯ ನೇ ಇಸವಿಯ ತಿಪ್ಪಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು ಮತ್ತು ಕ್ಯಾಲೆಂಡರುಗಳು.

1929 ನೇ ಇಸವಿಯ ತಿಪ್ಪಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು

1ನೇ ನಂ ದೊಡ್ಡಸೈಜು ಪಾಕೆಟುಡೈರಿ ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿದ್ದು 6½"×4" 1ಕ್ಕೆ 0 12 0 ಪರಸ್ಥಳಕ್ಕೆ ಪೋಸ್ಟೇಜು 0 3 0

2ನೇ ನಂ ದೊಡ್ಡಸೈಜು ಮುಚ್ಚಳವಿಲ್ಲದ ಸಾದಾ ಪಾಕೆಟುಡೈರಿ 6½"×4" 1ಕ್ಕೆ 0-10-0 ಪರಸ್ಥಳಕ್ಕೆ ಪೋಸ್ಟೇಜು 0-3-0

1ನೇ ನಂ ಚಿಕ್ಕಸೈಜು ಪಾಕೆಟುಡೈರಿ ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿದ್ದು 5"×2½" 1ಕ್ಕೆ 0-7-0 ಪರಸ್ಥಳಕ್ಕೆ ಪೋಸ್ಟೇಜು 0 2-0

2ನೇ ನಂ ಚಿಕ್ಕಸೈಜು ಪಾಕೆಟುಡೈರಿ ಮುಚ್ಚಳವಿಲ್ಲದ ಸಾದಾ "×2½" 1ಕ್ಕೆ 0 5-0 ಪರಸ್ಥಳಕ್ಕೆ ಪೋಸ್ಟೇಜು 0-2 0

ಮೇಲ್ಕಂಡ ದರದಂತೆ ನಮಗೆ ಬೇಕಾಗಿದ್ದ ಡೈರಿಗಳ ಪೂರಾ ಮೊಬಲಗು ರವಾನಿಸಿದಲ್ಲಿ ಪೋಸ್ಟಲ್ ಪಾರ್ಸಲ್ ಮೂಲಕ ರವಾನಿಸಲಾಗುತ್ತೆ. ಮೇಲ್ಕಂಡ ಡೈರಿಗಳನ್ನು ಒಟ್ಟಿಗೆ 12 ತರಿಸಿಕೊಳ್ಳುವವರಿಗೆ 1 ಡೈರಿ ಹೆಚ್ಚಿಗೆ ಕೊಡಲಾಗುತ್ತೆ. ವಿ ಪಿ ಮೂಲಕ ತರಿಸಿಕೊಳ್ಳುವವರು ದರ 1 ಕ್ಕೆ 2 ರೂಪಾಯಿ ಮೇರೆ ಅಡ್ವಾನ್ಸ್ ರವಾನಿಸಬೇಕು.

1929 ನೇ ಇಸವಿಯ ಸಚಿತ್ರಕ್ಯಾಲೆಂಡರ್.

ಶೀಟ್ ಕ್ಯಾಲೆಂಡರ್ 10 ಕ್ಕೆ 1 ... 100 ಕ್ಕೆ 4-0-0, 3"×4½" ಪಾಕೆಟ್ ಕ್ಯಾಲೆಂಡರ್ 12 ಕ್ಕೆ 0 ... 50 ಕ್ಕೆ 2-4-0, 100 ಕ್ಕೆ 4-0-0

ಅನೇಕ ಬಣ್ಣಗಳಿಂದ ರವಿವರ್ಮ ಪ್ರೆಸ್ಸಿನಲ್ಲಿ ತಯಾರಾದ 10"×14" ಸೈಜಿನ ಶ್ರೀ ವರಾವಿಷ್ಣುವಿಗೆ ಸುದರ್ಶನಪ್ರದಾನ ಮಾಡುವ ಪರಮೇಶ್ವರನ ಚಿತ್ರದ ಕ್ಯಾಲೆಂಡರ್ 3 ಕ್ಕೆ 0-8-0 6 ಕ್ಕೆ 0-14-0 12 ಕ್ಕೆ 1 6 0

ನಮಗೆ ಬೇಕಾದಷ್ಟು ಕ್ಯಾಲೆಂಡರುಗಳ ಪೂರಾ ಮೊಬಲಗನ್ನು ಮನಿಯಾರ್ಡರ್ ಮಾಡಿದಲ್ಲಿ ಪ್ಯಾಕಿಂಗ್ ಫ್ರೀ ಇಲ್ಲದೆ ಫ್ರೀಯಾಗಿ ರವಾನಿಸಲಾಗುತ್ತೆ. ವಿ ಪಿ ಮೂಲಕ ಖಂಡಿತವಾಗಿ ರವಾನಿಸುವದಿಲ್ಲ.

ಕ್ಯಾಲೆಂಡರುಗಳು ಮುಗಿದನಂತರ ಬಂದತಕ್ಕ ಮನಿಯಾರ್ಡರನ್ನು ಯೋಚನೆಯಿಲ್ಲದೆ ವಾಪಸ್ ಮಾಡತ್ತೆ.

ಮಾದರಿ ಕ್ಯಾಲೆಂಡರ್ ಅಪೇಕ್ಷಿಸುವವರು 0-4-0 ರವಾನಿಸಿದಲ್ಲಿ ಮೇಲ್ಕಂಡ 3 ನಮೂನೆ ಕ್ಯಾಲೆಂಡರುಗಳನ್ನು ಪೋಸ್ಟ್ ಮೂಲಕ ಫ್ರೀಯಾಗಿ ರವಾನಿಸಲಾಗುತ್ತೆ.

ಮನಿಯಾರ್ಡರ್ ರವಾನಿಸುವ ವಿಳಾಸ— [10—11]

ಎಂ ಎಸ್. ತಿಪ್ಪಪ್ಪ ಅಂಡ್ ಬ್ರದರ್ಸ್, ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು

"ಭಿಷಗ್‌ರತ್ನ ಪಾಳ್ಯದ ವೆಂಕಟಾಚಲಪಂಡಿತರ" ಆಯುರ್ವೇದೀಯ ಸಿದ್ಧೌಷಧಗಳು

ಲೋಕಾಮೃತರ ಕಸ್ತೂರಿ ಮಾತ್ರೆಗಳು

ಈ ಮಾತ್ರೆಗಳನ್ನು ಪ್ರತಿದಿನವೂ ಕಾಲಬೇಧದೂ ದಿನೇಯಾಗಲಿ ಹಾಗೇಯಾಗಲೀ ಉಪಯೋಗಿಸುತ್ತ ಬರೆ ಆಹಾರ, ನೀರು ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ

ಮಕ್ಕಳ ನೆಗಡಿ ಮೊದಲು ಎಲ್ಲಾ ವಯಸ್ಸಿನವರಿಗೂ, ಶೀತ ನೆಗಡಿ, ಕೆಮ್ಮು, ಜ್ವರ, ಶೀತವಾತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ

300 ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣೆ

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ ನಮ್ಮ ವಿಳಾಸವನ್ನು, ಲೋಕಾಮೃತರ ಕಸ್ತೂರಿ ಮಾತ್ರೆ ಎಂಬ ಹೆಸರನ್ನು ನೋಡಿ ಕೊಂಡುಕೊಳ್ಳಿರಿ

ವೈಶ್ವಾನರಾಸವ

(ಕಾಲರಾ ವಾಂತಿಭೇದಿಗೆ ಸಿದ್ಧೌಷಧ)

ಮನುಷ್ಯರಿಗೆ ಹೊಟ್ಟೆಯುಬ್ಬರವಾಗಲಿ ಹೊಟ್ಟೆಯುಬ್ಬರಿಸುವುದಾಗಲಿ ವಾಂತಿ ಭೇದಿ ಕಂಡ ಕೂಡಲೆ ಕೊಡಬೇಕು. ಒಂದು ಸೇವನೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ ಸೀಸೆ 1ಕ್ಕೆ ರೂ 1—0—0

ಶ್ರೀನಿವಾಸತೈಲ

ಸ್ತ್ರೀಯರು ರೋಗಿಯು ಪ್ರತಿ ಸಂದುಗಳಿಗೂ, ಗಡ್ಡೆಗೂ ಚಿಕಿತ್ಸೆಯ ಔಷಧ ಸೀಸೆ 1ಕ್ಕೆ ರೂ 0—8—0

"ಭಿಷಗ್‌ರತ್ನ

ಶ್ರೀ ಸೀತಾರಾಮಾನವೈದ್ಯಶಾಲಾ ಬ್ರಾಂಚಾಫೀಸು ಚಿಕ್ಕಪೇಟೆ ಬೆಂಗಳೂರು ಸಿಟಿ | ಪಾಳ್ಯದ ವೆಂಕಟಾಚಲಪಂಡಿತರ", ಶ್ರೀ ಸೀತಾರಾಮಾನವೈದ್ಯಶಾಲಾ, ಹೆಡ್ ಫೀಸು ಮೈಸೂರು

ಡಾಕ್ಟರ್ ಜೀ. ಬೀ. ಯವರ

ಸುಗಂಧ ನಶ್ಯದ ಪುಡಿ

ಬಹು ಕಪ್ಪಸಿದ್ಧವಾದ ಈ ಸುಗಂಧ ನಶ್ಯಪುಡಿಯನ್ನು ಕಂಡುಹಿಡಿದು ಕೊಟ್ಟು ಸಾವಿರಾರು ಜನಗಳು ಇದನ್ನು ಉಪಯೋಗಿಸಿ ಸಾವಿರಾರು

ಗಳು ಯೋಗ್ಯ ಪತ್ರಗಳನ್ನು ಕಳುಹಿಸಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವುವೆಂದರೆ—ತಲೆ ನೋವು, ಅರೆತಲೆನೋವು, ತಲೆಯಲ್ಲಿನ ರೋಗಗಳು, ಮೂಗಿನಲ್ಲಿ ಕಾಣುವ ಗಡ್ಡೆ, ಸವೆ ವ್ಯಾಧಿಗಳು, ಪಲ ದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೆಟ್ಟಿದ ಈ ವ್ಯಾಧಿಗಳನ್ನು ನಾಶಪಡಿಸಿ ಆರೋಗ್ಯವನ್ನು ಜೀವ ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೆ ಪುಸ್ತಕ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ ೦—೯—೦
ಡಜನ್ ಗಳ್ಳೆ ಕ್ರಯ ರೂ ೨—೮—೦. ವಿ ಪಿ ಖರ್ಚು ೮ ಆಣೆ

ದಯವಿಟ್ಟು ನಿಮ್ಮ ಹೆಸರನ್ನು, ಅಡ್ರೆಸ್ಸನ್ನು ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,

[.. 11] ಪೋ. ಬಾ ನಂ ೧, ಹೊಸಪೇಟೆ.

ಪ್ರಕಟನೆ.

ನಮ್ಮಲ್ಲಿ ಸಿನೋಮಕ್ಕೆ ಸಂಬಂಧಪಟ್ಟ ಪ್ಯಾಕ ಕಾಪಿಯು ಪ್ರೊಜೆಕ್ಟರ್ ಮಿಶನ್, ಆರ್ಕುಲ್ಯಾಂಪು ಡೈನಮೋ, ಎಲೆಕ್ಟ್ರಿಕಲ್ ವೈರಿಂಗು ವಗೈರೆ ಎಲ್ಲ ಸಾಮಾನುಗಳೂ, ಕಟ್ ಫಿಲ್ಮ್ ಸ್ಟೋರುಗಳೂ ಕಡಿಮೆ ಬೆಲೆಗೆ ದೊರೆಯುತ್ತವೆ ಎಲ್ಲಾ ಸಾಮಾನುಗಳ ನೆಟ್ಟಿ ಕಯೂಲು ಇರುವುದರಿಂದ ಈ ವಿಷಯವೇ ಸಿನೋಮಾ ನಡೆಸುವವರು ಈ ಸಾಮಾನುಗಳನ್ನು ನೋಡಿ ಕಿಮ್ಮತ್ತಿನಲ್ಲಿ ಸಹ ತೃಪ್ತಿಯಾಗುವುದರಿಂದ ಈ ಸಮಯವನ್ನು ಕಳೆಯದೆ ಕೊಳ್ಳಬಹುದಾಗಿ ಕೋರಿಕೆ.

Siddaradhya
Tirukappmavara mutt
Davangere

ಮೈಸೂರು ಸ್ಟಾರ್

೧೯೨೭ ನೆಯ ಇಸವಿ ಜನವರಿ ತಾ|| ೨೯ ನೆಯ ಶನಿವಾರ

ಮೈಸೂರು ಪತ್ರಿಕೆಗಳೂ ಸರಕಾರವೂ.

ಲೇಖ ಸ್ವಾತಂತ್ರ್ಯವು ದೇಶಸೇವೆಯಲ್ಲಿ ಉಪಯೋಗಿಸಲ್ಪಡುವುದಾದರೆ ದೇಶಕ್ಕೂ ಹಿತವಾಗುವುದು, ಪ್ರಜೆಗಳ ಹಕ್ಕು ಬಾಧ್ಯತೆಗಳೂ ರಕ್ಷಿಸಲ್ಪಡುವುವು ಹಾಗಲ್ಲದೆ ಈ ಅಮೂಲ್ಯವಾದ ಸ್ವಾತಂತ್ರ್ಯವನ್ನು ದುರುಪಯೋಗಪಡಿಸಿಕೊಂಡು ಜಾತಿ ದ್ವೇಷ ವರ್ಣವೈಷಮ್ಯಗಳನ್ನು ವೃದ್ಧಿಗೊಳಿಸುವ ಹೀನವೃತ್ತಿಯಲ್ಲಿ ತೊಡಗುವುದಾದರೆ, ಪ್ರಜಾವರ್ಗಕ್ಕೆ ಎಂದಿಗೂ ಹಿತವಾಗಲಾರದಲ್ಲದೆ ಸರ್ಕಾರಕ್ಕೂ ಗೌರವ ಬರಲಾರದು. ಇಂತಹ ದುಷ್ಕಾರ್ಯ ಪ್ರವರ್ತಕರಾದ ಪತ್ರಿಕಾಕರ್ತರನ್ನು ಹತೋಟಿಯಲ್ಲಿಡುವುದು ಪ್ರಭುತ್ವದವರಿಗೆ ಆವಶ್ಯಕವಾಗಿರುವುದು. ಮೈಸೂರಿನಲ್ಲಿ ಈ ರೀತಿಯಾದ ಸ್ವೇಚ್ಛಾಪ್ರವರ್ತಕರು ಪತ್ರಿಕಾಪ್ರಸಾರಕರಾಗಿ ದೇಶದಲ್ಲಿ ಹಾವಳಿಮಾಡುತ್ತಿರುವರು. ಅಂಥವರಮೇಲೆ ಸರ್ಕಾರದವರು ಕಾರ್ಯಭಾಗ ನಡೆಸಿ ಅವರಿಗೆ ಜ್ಞಾನೋದಯವಾಗುವಂತೆ ಮಾಡುವುದು ಅತ್ಯಾವಶ್ಯಕವು ಎಷ್ಟೋವೇಳೆ ಎಚ್ಚರಿಸಿದಾಗ್ಯೂ ಜಾಗ್ರತರಾಗದೆ ಎಂದಿನಂತೆಯೇ ಸ್ವೇಚ್ಛಾನುಸಾರ ಪ್ರಜಾನೆಮ್ಮದಿಗೆ ಭಂಗಕರವಾದ ಲೇಖನಗಳನ್ನು ಬರೆಯುತ್ತಿದ್ದ ಕೆಲ ಪತ್ರಿಕೆಗಳನ್ನು ಮುಂದೆ ನಡೆಸಲಾಗದೆಂದು ಸರ್ಕಾರದವರು ಅಪ್ಪಣೆಮಾಡಿರುವರು. ಪ್ರಜಾಶಾಂತಿಗೆ ಆವಶ್ಯಕವಾದ ಈ ಅಪ್ಪಣೆಯನ್ನು ಒಂದುವರ್ಗದ ಕೆಲಜನರು ಖಂಡಿಸಿ ಪತ್ರಿಕೆಗಳಲ್ಲಿ ಅಸಾಧಾರಣವಾದ ಬೊಬ್ಬೆ ಎಬ್ಬಿಸಿರುವರು. ಇದೇ ಸಮಯದಲ್ಲಿ ಕೆಲಕಾಲದ ಹಿಂದೆ ನಮ್ಮ ದೇಶದಲ್ಲಿ ಪ್ರಾದುರ್ಭವಿಸಿದ ಅಸಾಧಾರಣವಾದ ಅರಾಜಕ ಚಳವಳಿಯು ಪ್ರಬಲಿಸುತ್ತಿರಲು ಅಂತಹ ಚಳವಳಿಗೆ ಕಾರಣರಾದವರನ್ನು ಬಹಿರಂಗಪಡಿಸುವುದಕ್ಕಾಗಿ ನಾವು ಈ ಸ್ಟಾರ್‌ಪತ್ರಿಕೆಯಲ್ಲಿ ಬರೆಯುತ್ತಿದ್ದ ಕೆಲ ಲೇಖನಗಳು ಮತದ್ವೇಷಜನಕವಾದುವುಗಳೆಂದೂ, ಅಂತಹ ಬರವಣಿಗೆಯನ್ನು ಪ್ರಕಟಿಸುವ ನಮ್ಮ ಪತ್ರಿಕೆಯನ್ನು ನಿಲ್ಲಿಸಿ ನಮಗೆ ಶಿಕ್ಷೆಯನ್ನು ವಿಧಿಸಬೇಕೆಂದೂ ಬ್ರಾಹ್ಮಣ ಮಹಾಸಭೆಯ ಪರವಾಗಿ ರಾವ್‌ಬಹದ್ದೂರ್ ಶಾಮರಾಯರವರು ಪ್ರಭುತ್ವದವರಲ್ಲಿ ಅರಿಕೆ ಮಾಡಿಕೊಂಡಿದ್ದರು. ಅದಕ್ಕೆ ಉತ್ತರವಾಗಿ ಸರ್ಕಾರದವರು ಮೊನ್ನೆತಾನೆ ನಮಗೆ ಎಚ್ಚರಿಕೆಯನ್ನು ಕೊಟ್ಟಿರುವುದಾಗಿಯೂ, ಅಂದಿನಿಂದೀಚೆಗೆ ನಾವು ಅಂತಹ ಲೇಖನಗಳನ್ನು ಬರೆಯುತ್ತಿಲ್ಲವೆಂಬುದಾಗಿಯೂ, ಇನ್ನುಮುಂದೆ ಅಂತಹ ಬರವಣಿಗೆಯು ಕಂಡುಬಂದಲ್ಲಿ ತಕ್ಕ ಕಾರ್ಯಭಾಗ ನಡೆಸಲು ಅಪ್ಪಣೆಕೊಡುವ ಯೋಚನೆ ಮಾಡುವುದಾಗಿಯೂ ಪ್ರಭುತ್ವದವರು ಪ್ರತಿಪಾದಿಸಿ ಬರೆದಿರುವರಂತೆ! ನಾವು ಸರ್ವದಾ ದೇಶಹಿತಕ್ಕಾಗಿ ದುಡಿಯುತ್ತ ದೇಶಕಂಟಕರೂ ರಾಜದ್ರೋಹಿಗಳೂ ಆದವರ ದುಷ್ಟಪ್ರಯತ್ನವನ್ನು ಖಂಡಿಸಿ ಅವರಿಗೆ ಜ್ಞಾನೋದಯವಾಗುವಂತೆಯೂ ಅಂತಹವರ ದುಷ್ಟ ಪ್ರವರ್ತನೆಯು ಪ್ರಭುತ್ವದವರಿಗೆ ತಿಳಿಯುವಂತೆಯೂ ಮಾಡುವ ಸದುದ್ದೇಶದಿಂದ ಸಂದರ್ಭಾನುಸಾರ ಲೇಖನಗಳನ್ನು ಬರೆದಿರುವುವೇ ವಿನಾ ಕೇವಲ ಕೆಲ ವ್ಯಕ್ತಿಗಳನ್ನಾಗಲಿ, ಯಾವುದಾದರೊಂದು ಮತವನ್ನಾಗಲಿ, ಆ ಮತದವರನ್ನಾಗಲಿ ದ್ವೇಷಿಸುವುದಕ್ಕೋಸ್ಕರ ಅಥವ ಅವರಮೇಲೆ ಇತರರಲ್ಲಿ ದುರಭಿಪ್ರಾಯವು ಹುಟ್ಟಿಸುವುದಕ್ಕೋಸ್ಕರ ನಮ್ಮ ಲೇಖನಿಯನ್ನು ಎಂದಿಗೂ ಪ್ರಯೋಗಿಸಿದವರಲ್ಲ ಮತ್ತು ಪ್ರಯೋಗಿಸುವವರಲ್ಲ

ಸರ್ಕಾರದವರಾದರೂ ನಮ್ಮ ಪತ್ರಿಕೆಯಲ್ಲಿ ಅಂತಹ ಬರವಣಿಗೆಯನ್ನು ಕಂಡುಹಿಡಿದು ಅವನ್ನು ನಮಗೆ ತೋರಿಸಿಕೊಟ್ಟು, ಅಂತಹ ಲೇಖನಗಳು ಆಕ್ಷೇಪಣೀಯವಾದುವೆಂಬದಾಗಿಯೂ, ಅಂತಹ ಬರವಣಿಗೆಯನ್ನು ಬರೆಯುವುದು ದೇಶದ ಹಿತಕ್ಕೆ ಕುಂದಕವಾದುದರಿಂದ ಇನ್ನುಮುಂದೆ ಆರೀತಿಯಲ್ಲಿ ಬರೆಯಲಾಗದೆಂದೂ, ಹಾಗೆ ಉಲ್ಲಂಘಿಸಿದರೆ ನಮ್ಮ ಮೇಲೆ ಕಾರ್ಯಭಾಗ ನಡೆಸುವುದಾಗಿ ನಮ್ಮನ್ನು ಈವರೆಗೆ ಎಚ್ಚರಿಸಿರುವುದಿಲ್ಲ. ಸ್ಪಷ್ಟವಾಗಿ ತಮ್ಮ ಅಭಿಮತವನ್ನು ಸರ್ಕಾರದವರು ನಮಗೂ ತಿಳಿಸಿರುವುದಿಲ್ಲ, ಮಹಾಜನಗಳಿಗೂ ತಿಳಿಯಪಡಿಸಿರುವುದಿಲ್ಲ ಸುಮ್ಮನೆ 'ಆಕ್ಷೇಪಣೀಯವಾದ ಬರವಣಿಗೆ'' ಎಂದು ಸರ್ಕಾರದವರು ಬರೆದ ಮಾತ್ರದಿಂದಲೇ ಅದು ಯಾವ ಲೇಖನದಲ್ಲಿ ಯಾವ ಮಾತುಗಳು ಆಕ್ಷೇಪಣೀಯವಾದುವೆಂಬುದನ್ನೂ, ಆ ಮಾತುಗಳು ಯಾರಿಗೆ ಅನ್ವಯಿಸಿ ಯಾವ ವಿಧವಾದ ಅನರ್ಥಕ್ಕೆ ಕಾರಣವಾಗಿರುವುದೆಂಬುದನ್ನೂ ತಿಳಿಸಿರುವುದಿಲ್ಲ ಇದರಿಂದ ಜನಗಳಲ್ಲಿ ನಮ್ಮ ಮೇಲೆ ದುರಭಿಪ್ರಾಯವು ಹುಟ್ಟುವಂತೆ ಮಾಡಬಯಸುವ ಕೆಲ ಪತ್ರಿಕೆಗಳು, ಸರ್ಕಾರದವರು ಮ|| ಶಾಮರಾಯರಿಗೆ ಕೊಟ್ಟಿರುವ ಉತ್ತರವನ್ನು ಮಹಾಮೇರುಪರ್ವತವನ್ನಾಗಿ ಮಾಡಿ ನಮಗೆ ಸರ್ಕಾರದಿಂದ ಬೆದರಿಕೆಯು ಬಂದಿರುವುದೆಂದೂ, ಅದಕ್ಕಾಗಿಯೇ ನಮ್ಮ ಪತ್ರಿಕೆಯಲ್ಲಿ ಉಗ್ರಲೇಖನವು ಪ್ರಕಟವಾಗುತ್ತಿಲ್ಲವೆಂದೂ ಮನಬಂದಂತೆ ಬರೆಯುತ್ತಿರುವುವು

ದುರ್ಜನರಂತೆ ಸಜ್ಜನರೂ ಎಲ್ಲಾ ಕೋಮಿನಲ್ಲಿಯೂ ಎಲ್ಲಾ ದೇಶಗಳಲ್ಲಿಯೂ ಎಲ್ಲಾ ವರ್ಗಗಳಲ್ಲಿಯೂ ಇದ್ದೇ ಇರುವರು. ಸಜ್ಜನರು ಸದಾಚಾರಿಗಳಾಗಿ ಸದ್ವರ್ತನೆಯನ್ನು ತೋರಿಸುವುದಾದರೆ ಅವರು ಯಾರೇ ಆಗಿರಲಿ ಅವರನ್ನು ನಾವು ನಿಷ್ಪಕ್ಷಪಾತದಿಂದ ಸನ್ಮಾನಿಸುವೆವು ಹಾಗಲ್ಲದೆ ದುರ್ಜನರು ದುರ್ವರ್ತನೆಯನ್ನು ತೋರ್ಪಡಿಸಿ ದೇಶಕಂಟಕರಾದರೆ, ಅವರನ್ನು ನಿರ್ದಾಕ್ಷಿಣ್ಯದಿಂದಲೂ, ನಿಷ್ಠುರತೆಯಿಂದಲೂ, ನಿಷ್ಪಕ್ಷಪಾತದಿಂದಲೂ ಖಂಡಿಸಿ ಅವರ ದುರ್ವ್ಯವಸ್ಥೆಯಿಂದ ದೇಶಕ್ಕೆ ಹಾನಿಯುಂಟಾಗದಂತೆ ಮಾಡಲು ನಮ್ಮ ಶಕ್ತಿಸಾಮರ್ಥ್ಯವನ್ನುಪಯೋಗಿಸಿ ಶ್ರಮಪಡುವೆವು.

ಕೆಲ ಕಾಲದ ಹಿಂದೆ ಬ್ರಾಹ್ಮಣ ವರ್ಗದ ಕೆಲ ಜನರು ದೇಶದಲ್ಲಿ ಗುಲ್ಲೆಬ್ಬಿಸಿ ಪುಂಡು ಜನರನ್ನು ಕಟ್ಟಿಕೊಂಡು ಸ್ವೇಚ್ಛಾನುಸಾರ ಹಾರಾಡಿದರು, ಸುಳ್ಳುಸುದ್ದಿಗಳನ್ನು ಪ್ರಕಟಿಸಿ, ನಮ್ಮ ದೇಶಕ್ಕೂ ನಮ್ಮ ಪ್ರಭುಗಳಿಗೂ ಅಪಯಶಸ್ಸು ಪ್ರಾಪ್ತವಾಗುವಂತೆ ಮಾಡಿದರು ಆ ಕಾಲದಲ್ಲಿ ಕೆಲ ದುಷ್ಟ ಬ್ರಾಹ್ಮಣರು ಮಾಡುತ್ತಿದ್ದ ದುಷ್ಟ ಚಳವಳಿಯನ್ನು ಖಂಡಿಸಿ ನಾವು ಲೇಖನಗಳನ್ನು ಬರೆದಿರುತ್ತೇವೆಯಲ್ಲದೆ ಬ್ರಾಹ್ಮಣ ಮತದವರೆಲ್ಲರೂ ದುಷ್ಟರೆಂದೂ, ಆ ಕಾರಣದಿಂದ ಆ ಮತದವರನ್ನು ಸಕಲರೂ ದ್ವೇಷಿಸಬೇಕೆಂದೂ ನಾವು ಬರೆದಿರುವುದಿಲ್ಲ. ರಾವ್‌ಬಹದ್ದೂರ್ ಎನ್. ಎಸ್. ಸುಬ್ಬರಾಯರು ಸಜ್ಜನಶೀಲರೂ, ರಾಜಭಕ್ತರೂ ಆದ ಬ್ರಾಹ್ಮಣರನೇಕರಿರುವರು. ಅಂತಹ ಬ್ರಾಹ್ಮಣರನ್ನು ನಾವು ಯಾವಾಗಲೂ ಸನ್ಮಾನಿಸುವೆವು ಅಂತಹ ಸತ್ಪ್ರವರ್ತಕರಾದ ಬ್ರಾಹ್ಮಣರನ್ನು ದೂಷಿಸುವುದಕ್ಕಿಂತಲೂ ಹೇಯವಾದ ಕಾರ್ಯವು ಬೇರೊಂದಿರುವುದಿಲ್ಲ ಹೀಗಿದ್ದರೂ ದೇಶಸೇವಾ ರಾಜಸೇವಾತತ್ಪರವಾದ ನಮ್ಮ ಧ್ಯೇಯದ ವಿಚಾರವಾಗಿ ಮಹಾಜನಗಳಲ್ಲಿ ತಪ್ಪುತಿಳುವಳಿಕೆಯುಂಟಾಗುವಂತೆ ಕೆಲ ಪತ್ರಿಕೆಗಳು ನಮ್ಮ ಮೇಲೆ ಕತ್ತಿಕಟ್ಟಿ ನಿಷ್ಕಾರಣವಾಗಿಯೂ ನಿರಾಧಾರವಾಗಿಯೂ ನಮ್ಮನ್ನು ಅಲ್ಲಗಳೆಯಲು ಪ್ರಾರಂಭಿಸಿರುವುದು ಪವಿತ್ರವಾದ ಪತ್ರಿಕಾ ಸಂಪಾದಕರ ಲೇಖನಿಗೆ ಗೌರವವಲ್ಲವೆಂದೂ ಇಂತಹ ನೀಚತಮವಾದ ಗೊಡ್ಡು ಬೆದರಿಕೆಗಳಿಗೆ ನಾವು ಅಂಜಿ ನಮ್ಮ ಪವಿತ್ರತಮವಾದ ರಾಜಸೇವಾ ದೇಶಸೇವಾ ಕಾರ್ಯಗಳನ್ನು ನಮ್ಮ ಶಕ್ತಿಸಾಮರ್ಥ್ಯವಿರುವವರೆಗೂ ಮಾಡದೆ ಬಿಡುವವರಲ್ಲವೆಂದೂ ಒತ್ತಿಹೇಳುತ್ತೇವೆ

ಶ್ರೀಮನ್ಮಹಾರಾಜರವರ ಸಂಚಾರ.

ಶ್ರೀಮನ್ಮಹಾರಾಜರವರು ಶ್ರೀಮದ್ಯುವರಾಜರವರ ಮತ್ತು ದಿವಾನರ ಸಮೇತ ಕಡೂರು ಮತ್ತು ಹಾಸನ ಡಿಸ್ಟ್ರಿಕ್ಟುಗಳ ಕೆಲ ಭಾಗಗಳಲ್ಲಿ ಸಂಚರಿಸಿಕೊಂಡು ಬರಲು ನೆನ್ನೆಯ ರಾತ್ರಿ ೯ ಗಂಟೆಗೆ ಹೆಚ್ಚು ಕಟ್ಟಲೆಯ ರೈಲುಬಂಡಿಯಲ್ಲಿ ಪ್ರಯಾಣ ಬೆಳಸಿದರು ಮತ್ತು ಈ ದಿನ ಬೆಳಗಿನಜಾವದಲ್ಲಿ ಕಡೂರನ್ನು ತಲುಪಿ ಅಲ್ಲಿಂದ ಮೋಟಾರು ಬಂಡಿಯಲ್ಲಿ ಹೊರಟು 10 ಗಂಟೆಗೆ ಚಿಕ್ಕಮಗಳೂರನ್ನು ಸೇರುವರು. ಅಲ್ಲಿ ಮಹಾಸ್ವಾಮಿಯವರು ಮ್ಯುನಿಸಿಪಲ್ ಕೌನ್ಸಿಲಿನವರಿಂದೊಪ್ಪಿಸಲ್ಪಡುವ ವಿಜ್ಞಾಪನಾಪತ್ರಿಕೆಯನ್ನು ಸ್ವೀಕರಿಸಿ ತಕ್ಕುತ್ತರವನ್ನು ದಯೆಪಾಲಿಸಿ, ಧರ್ಮಪ್ರಕಾಶ ಅರಳಗುಪ್ಪೆ ಚಂದ್ರೇಗೌಡರು ಧರ್ಮಮಾಡಿರುವ 1 ಲಕ್ಷ ರೂ ಗಳಿಂದ ಕಟ್ಟಿಸಲ್ಪಡುವ ಆಸ್ಪತ್ರೆ ಕಟ್ಟಡದ ಶಂಕುಸ್ಥಾಪನ ಮಹೋತ್ಸವವನ್ನು ನೆರವೇರಿಸಿ ಧರ್ಮಪ್ರಕಾಶರು ಸುಂದರವಾದ ಬೆಳ್ಳಿಯ ಪೆಟ್ಟಿಗೆಯಲ್ಲಿಟ್ಟೊಪ್ಪಿಸುವ ವಿಜ್ಞಾಪನಾಪತ್ರಿಕೆಯನ್ನು ಸ್ವೀಕರಿಸಿ ಸಮಯೋಚಿತವಾದ ಮತ್ತು ಧರ್ಮಕರ್ತರ ಪ್ರಶಂಸಾತ್ಮಕವಾದ ಉತ್ತರವನ್ನು ದಯೆಪಾಲಿಸಿ ಬಿಡಾರಕ್ಕೆ ತೆರಳಿ ಮಾರನೆಯ ದಿನವೆಲ್ಲ ಅಲ್ಲಿದ್ದು ಸೋಮವಾರ ಚಿಕ್ಕಮಗಳೂರನ್ನು ಬಿಟ್ಟು ಮೋಟಾರುಬಂಡಿಯಲ್ಲಿ 38 ಮೈಲು ದೂರದಲ್ಲಿರುವ ಹಾಸನವನ್ನು ಬೆಳಗಿನ 11 ಗಂಟೆಗೆ ತಲುಪುವರು ಆದಿವಸ ಸಾಯಂಕಾಲ ೩ ಗಂಟೆಯಲ್ಲಿ ಹಾಸನದ ಟವರ್ನ್ ಮ್ಯುನಿಸಿಪಾಲಿಟಿಯವರೂ ಡಿಸ್ಟ್ರಿಕ್ಟ್ ಬೋರ್ಡಿನವರೂ ಒಪ್ಪಿಸುವ ವಿಜ್ಞಾಪನಾಪತ್ರಿಕೆಗಳನ್ನು ಸ್ವೀಕರಿಸಿ ತಕ್ಕುತ್ತರವನ್ನಿತ್ತು ಅನಂತರ ಡಿಸ್ಟ್ರಿಕ್ಟ್ ಬೋರ್ಡಿನವರು, ಶ್ರೀ ಚಾಮರಾಜೇಂದ್ರ ಒಡೆಯರ ಹೆಸರಿನ ಮೇಲೆ ಕಟ್ಟಿಸುವ ಆಸ್ಪತ್ರೆಯ ಶಂಕುಸ್ಥಾಪನೆಯನ್ನು ಮಾಡಿ ಆ ರಾತ್ರಿ ಹಾಸನದಲ್ಲೇ ಇದ್ದು ಮಾರನೆಯ ದಿನ ಮಧ್ಯಾಹ್ನ ಮೋಟಾರು ಬಂಡಿಯಲ್ಲಿ ಪ್ರಯಾಣಮಾಡಿ ಹೊಳೇನರಸೀಪುರವನ್ನು ೩-10 ಗಂಟೆಗೆ ತಲುಪಿ, ಅಲ್ಲಿ ಬೊಂಬಾಯಿನ ಇಂಜನೀಯರು ಶಾಖೆಯುದ್ಯೋಗದಲ್ಲಿರುವ ರಾವ್‌ಸಾಹೇಬ್ ಕೆ ರಾಮಸ್ವಾಮಿಯವರು 50,000 ಸಾವಿರ ರೂ ಗಳನ್ನು ವೆಚ್ಚಮಾಡಿ ತಮ್ಮ ಮಾತೃಶ್ರೀಯವರ ಹೆಸರಿನ ಮೇಲೆ ಸುಂದರವಾಗಿ ಕಟ್ಟಿಸಿರುವ ಹೆರಿಗೆಯಾಸ್ಪತ್ರೆಯ ಆರಂಭೋತ್ಸವವನ್ನು ಜರುಗಿಸಿ ಅನಂತರ ರೈಲು ಬಂಡಿಯಲ್ಲಿ ಪ್ರಯಾಣಮಾಡಿ ರಾತ್ರಿ ೮ ಗಂಟೆಗೆ ರಾಜಧಾನಿಯನ್ನು ತಲುಪುವರು ಮಹಾಸ್ವಾಮಿಯವರ ಆಗಮನಾರ್ಥವಾಗಿ ಚಿಕ್ಕಮಗಳೂರಿನಲ್ಲಿ ಧರ್ಮಪ್ರಕಾಶ ಚಂದ್ರೇಗೌಡರು ಸಾವಿರ ರೂಪಾಯಿಗಳನ್ನು ವೆಚ್ಚಮಾಡಿ ವಿಶಾಲವೂ. ಸುಂದರವೂ ಆದ ಚಪ್ಪರವನ್ನು ಹಾಕಿಸಿ ಮಹಾಪ್ರಭು ಸಹೋದರರ ಸ್ವಾಗತಕ್ಕೆ ತಕ್ಕ ಏರ್ಪಾಟನ್ನು ಮಾಡುತ್ತಿರುವರು ಇದರಂತೆಯೇ ಹಾಸನದಲ್ಲೂ ಹೊಳೆನರಸೀಪುರದಲ್ಲೂ ಸ್ವಾಗತದೇರ್ಪಾಡು ಬಹಳ ಸಡಗರದಿಂದ ನಡಯುತ್ತಿರುವುವು

ಅಲ್ವಾರು ಮಹಾರಾಜರ ಜೂಬಿಲಿಯುತ್ಸವ

ಅಲ್ವಾರು ಸಂಸ್ಥಾನದ ಮಹಾರಾಜರವರ ಜ್ಯೂಬಿಲಿಯುತ್ಸವವು ಅತಿ ವಿಜೃಂಭಣೆಯಿಂದ ಜರುಗಿಸಲ್ಪಟ್ಟಿತು. ತತ್ಸಂಬಂಧವಾಗಿ ಬಂದಿದ್ದ ಯೂರೋಪ್ಯ ಮತ್ತು ಭಾರತೀಯ ಅತಿಥಿಗಳಿಗೆ ಕಳೆದ ಶನಿವಾರ ರಾತ್ರಿ ಒಂದು ದಿವ್ಯವಾದ ಅರಸೌತಣವು ನಡೆದಿತು. 170 ಅತಿಥಿಗಳು ಬಂದಿದ್ದರು ಆ ಕಾಲದಲ್ಲಿ ರಾಜರು ಭಾರತ ಸರ್ವಸೇನಾಧಿಪತಿಗಳೇ ಮೊದಲಾದ ಅತಿಥಿಗಳ ಮತ್ತು ಸಂಸ್ಥಾನಾಧಿಪತಿಗಳ ಶ್ರೇಯಸ್ಸನ್ನು ಕೋರಿ ಉಪನ್ಯಾಸ ಮಾಡಿದರು ಅಲ್ವಾರ್ ಮಹಾರಾಜರ ಶಿಷ್ಟಾಚಾರವನ್ನು, ಪ್ರಭುಭಕ್ತಿಯನ್ನೂ ಕುರಿತು ಕಾನ್‌ಗಬ್ಬಿ ಫೋರ್ಡ್ ರವರು ಮಾತನಾಡಿದರು. ಅಲ್ವಾರು ಮಹಾರಾಜರನ್ನು ಸ್ತೋತ್ರ ಭಾರತ ಸಂಸ್ಥಾನಾಧಿಪತಿಗಳು ಗರ್ವಪಡುತ್ತಾರೆಂದೂ, ಪಟ್ಟಿಯಾಲಾ ಮಹಾರಾಜರು ಧರ್ಮಾತ್ಮರತ್ನವೆಂದೂ, ಭಾರತದ ಸಂಸ್ಥಾನಾಧಿಪರಾದ ನವಾಬರೂ, ಅಲ್ವಾರ್ ಮಹಾರಾಜರು ಅತ್ಯುತ್ತಮ ಮೇಧಾವಿ ಸಂಪನ್ನರೆಂದು ಕೀರ್ತಿಶೇಷರಾದ ಮಾಂಟೆಗುರವರು ಹೇಳಿದ್ದ ವಾಕ್ಯವನ್ನು ತನ್ನ ಸ್ಮೃತಿಪಥಕ್ಕೆ ತರುತ್ತೇನೆಂದು ನವನಗರ್ ಸಂಸ್ಥಾನಾಧಿಪತಿಗಳಾದ ಜಾಂಸಾಹೇಬರವರು, ಇತರ ರಾಜರುಗಳೂ ಅಲ್ವಾರ್ ರಾಜರ ಪದವಿಯೌನ್ನತ್ಯವನ್ನೂ ಔದಾರ್ಯವನ್ನೂ ಕುರಿತು ಪ್ರಸ್ತಾಪಿಸಿದರು. ಭಾರತ ಅತಿಥಿಗಳ ಪರವಾಗಿ ಪ್ರಶಂಸಿಸುವಾಗ್ಗೆ ಭಾರತ ಸಂಸ್ಥಾನಗಳಿಗೂ, ಬ್ರಿಟಿಷ್ ಇಂಡ್ಯಾಕ್ಕೂ ವೈರುದ್ಧ್ಯವಿಲ್ಲವೆಂದು ಡಾಕ್ಟರ್ ಅನ್ಸಾರಿಯವರು ಹೇಳಿದರು ಅತಿಥಿಗಳು ಪ್ರೇಮಪೂರ್ವಕವಾಗಿ ಮಾಡಿದ ಪ್ರಶಂಸೆಗೆ ಪ್ರತ್ಯುತ್ತರವನ್ನು ಕೊಡುವಾಗ್ಗ '' ಪ್ರೇಮಕ್ಕಿಂತಲೂ ಅತಿಶಯವಾದ ವಸ್ತುವು ಬೇರೊಂದುಂಟೇ ಇಂತಹ ಪ್ರೇಮವನ್ನು ನನ್ನ ಮೇಲೆ ನೀವು ವರ್ಷಿಸುತ್ತಿರುವಿರಿ ಬ್ರಿಟಿಷ್ ಇಂಡ್ಯಾಕ್ಕೂ, ಭಾರತ ಸಂಸ್ಥಾನಗಳಿಗೂ ನಿಜವಾದ ವೈರುದ್ಧ್ಯವೇನೂ ಇಲ್ಲವೆಂಬುದನ್ನು ನಾನು ಅಂಗೀಕರಿಸುತ್ತೇನೆ ಆದರೆ ಭಾರತ ಸಂಸ್ಥಾನಗಳಲ್ಲಿ ವಾಸಿಸುವ ಭಾರತೀಯರೂ, ಬ್ರಿಟಿಷ್ ಇಂಡ್ಯಾ ಪ್ರಜೆಗಳಂತೆ ಸ್ನೇಹವಾತ್ಸಲ್ಯಾದಿ ಗುಣಗಳನ್ನು ಕಲಿತಿದ್ದಾರೆಂಬುದಕ್ಕೆ ನಿದರ್ಶನಗಳು ಬೇಕಾಗಿರುತ್ತವೆ ಸಂಸ್ಥಾನಗಳಲ್ಲಿರುವವರ ಮತ್ತು ಬ್ರಿಟಿಷ್ ಇಂಡ್ಯಾದಲ್ಲಿರುವವರ ರಕ್ತವು ಒಂದೇ ಅಲ್ಲವೆ! ಆಂಗ್ಲ ಸಾರ್ವಭೌಮರವರ ಆಳ್ವಿಕೆಯಲ್ಲಿ ಈ ಮಹಾಸಾಮ್ರಾಜ್ಯವನ್ನು ಮಹೋನ್ನತವಾಗಿ ಮಾಡಲು ಪ್ರತಿಯೊಬ್ಬನೂ ಪಾಟುಪಡಬೇಕು ಬ್ರಿಟಿಷ್ ಇಂಡ್ಯಾ ಪ್ರಜೆಗಳ ಅಭಿವೃದ್ಧಿಯನ್ನು ಆತ್ಯಧಿಕವಾಗಿ ಕೋರುತ್ತೇನೆ ಭಾರತ ದೇಶದಲ್ಲಿ ಐಕಮತ್ಯವನ್ನು ಕೊಡದಿರುವ ದೇಶೀಯ ಸಂಸ್ಥಾನವಾವುದೂ ಇಲ್ಲವು ನಾವೆಲ್ಲಿದ್ದರೂ ಅಂದರೆ ದೇಶೀಯ ಸಂಸ್ಥಾನದಲ್ಲಿದ್ದರೂ, ಬ್ರಿಟಿಷ್ ಇಂಡ್ಯಾದಲ್ಲಿದ್ದರೂ ನಮ್ಮ ವಿಧ್ಯುಕ್ತ ಕರ್ಮವನ್ನು ಚೆನ್ನಾಗಿ ಮಾಡಬೇಕಾದುದು ಧರ್ಮವು.'' ಎಂದು ಹೇಳಿದರು

ಒಳದೇಶದ ವೃತ್ತಾಂತಗಳು.

ಮೈಸೂರಿನ ಚಿನ್ನದಗಣಿಗಳಿಂದ ತೆಗೆದ ಚಿನ್ನದ ಒಟ್ಟು ಹುಟ್ಟುವಳಿಯು 1926-27 ವರ್ಷದಲ್ಲಿ 316 ಲಕ್ಷ ರೂಪಾಯಿ. ಇದರಲ್ಲಿ ಮೈಸೂರು ಸರ್ಕಾರಕ್ಕೆ ಕೊಟ್ಟ ರಾಜಾದಾಯವು 12 ಲಕ್ಷ ರೂಪಾಯಿ.

ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ನಡೆಯುತ್ತಿದ್ದ ಮ|| ಬಿ ನಾಗಪ್ಪನವರ ಮೇಲೆ ಮ|| ರಾಜುರವರು ಹೂಡಿದ್ದ ಮಾನನಷ್ಟದ ಮೊಕದ್ದಮೆಯು ರದ್ದಾಯಿತು. ಮ|| ನಾಗಪ್ಪನವರು ರಾಜುರವರಿಗೂ ಅವರ ತಂದೆಯವರಿಗೂ ಕ್ಷಮಾಪಣೆಯನ್ನು ಬರೆದುಕೊಟ್ಟರು.

ತಾ|| 17-1-1927 ರಲ್ಲಿ ವಿನೋದರತ್ನಾಕರ ಶ್ರೀಯುತ ಜಿ ಎಚ್ ವೀರಣ್ಣನವರು ತಮ್ಮ ಸ್ವಗ್ರಾಮವಾದ ಗುಬ್ಬಿಯಲ್ಲಿ ಇತ್ತೀಚೆಗೆ ಸ್ಥಾಪಿಸಲ್ಪಟ್ಟಿರುವ 'ವೀರಶೈವ ತರುಣಸಂಘ'ದ ಫಂಡಿನ ಶ್ರೇಯೋಭಿವೃದ್ಧಿಗಾಗಿ ಒಂದುನೂರು ರೂಪಾಯಿ ಸಹಾಯಮಾಡಿರುವರೆಂದು ಕೇಳಿ ಸಂತೋಷಪಡುತ್ತೇವೆ

ಇದೇ ಜನವರಿ ತಾ|| ೩೧ ನೇ ಗುರುವಾರ ಚಾಮರಾಜನಗರ ತಾಲ್ಲೂಕು ಮರಿಯಾಲಮಠದಲ್ಲಿ ವೀರಶೈವಪ್ರಮುಖರ ಸಭೆಯು ಸೇರಿ ನಂಜನಗೂಡು ಸಬ್‌ಡಿವಿಜನ್ನಿನ ವೀರಶೈವಸಭೆಯು ಇತಃಪರ ಪ್ರತಿವರ್ಷದಲ್ಲೂ ಯಾವುದಾದರೊಂದು ಸ್ಥಳದಲ್ಲಿ ನಿರುಪಾಧಿಕವಾಗಿ ನಡೆಯುವಬಗೆಗೆ ತಕ್ಕ ವ್ಯವಸ್ಥೆ ಮಾಡುವವರಾಗಿರುವರೆಂದು ತಿಳಿಯುತ್ತೇವೆ

ದೊಡ್ಡಬಳ್ಳಾಪುರದ ಸಮೀಪದಲ್ಲಿರುವ ಘಾಟಿ ಸುಬ್ರಹ್ಮಣ್ಯದಲ್ಲಿ ಪ್ರತಿ ವರ್ಷವೂ ದೊಡ್ಡ ಜಾತ್ರೆಯು ನಡೆಯುವುದು. ಈ ಜಾತ್ರೆಯಲ್ಲಿ ದನಗಳ ಪ್ರದರ್ಶನವೂ ಮಾರಾಟವೂ ನಡೆಯುವುವು ಈ ಪ್ರದರ್ಶನವು ಈ ವರ್ಷ ದಿವಾನ್‌ಸಾಹೇಬರ ಅಧ್ಯಕ್ಷತೆಯಲ್ಲಿ ನಡಯಿತು ದನಗಳಲ್ಲಿ ಜೋಡಿ ಒಂದಕ್ಕೆ 50 ರೂ. ನಿಂದ 1,000 ರೂ. ವರೆಗೂ ಬೆಲೆಬಾಳುವ ರಾಸುಗಳು 50,000 ವರೆಗೂ ಬಂದಿದ್ದು ಹತ್ತು ಲಕ್ಷ ರೂಪಾಯಿನ ವ್ಯಾಪಾರವು ನಡೆಯಿತು

ಬೆಂಗಳೂರು ನಾರ್ಮಲ್ ಸ್ಕೂಲಿನ ಉಪಾಧ್ಯಾಯರ ಪೈಕಿ ಕೆಲವರು ಶ್ರೀಮನ್ ಮಹಾರಾಜರವರಿಗೆ ಬೆಂಗಳೂರು ಗಲಭೆ ವಿಚಾರದಲ್ಲಿ ಒಪ್ಪಿಸಿದ ಬಿನ್ನವತ್ತಳೆಗೆ ರುಜುಹಾಕಿದ ತಪ್ಪಿಗಾಗಿ ಕೆಲಸದಿಂದ ನಿವೃತ್ತಿಮಾಡಲ್ಪಟ್ಟಿದ್ದರಷ್ಟೆ ಅವರಲ್ಲಿ ಮ್ಯುನಿಸಿಪಲ್ ಸ್ಕೂಲಿನ ಉಪಾಧ್ಯಾಯನೊಬ್ಬನು ಸರ್ಕಾರದವರನ್ನು ಕ್ಷಮಾಪಣೆ ಬೇಡಿಕೊಂಡುದರಿಂದ ಆತನಿಗೆ ಅವನ ಕೆಲಸವು ಹಿಂತಿರುಗಿ ಕೊಡಲ್ಪಟ್ಟಿರುವುದೆಂದು ಸುದ್ದಿಬಂದಿದೆ.

ಭದ್ರಾವತಿ ಕಬ್ಬಿಣ ಕಾರ್ಖಾನೆಯ ಕೆಲಸ ಕಾರ್ಯಗಳನ್ನು ಇದುವರೆಗೂ ಸರ್ ವಿಶ್ವೇಶ್ವರಯ್ಯನವರು ನೋಡಿಕೊಳ್ಳುತ್ತಿದ್ದರು. ಇನ್ನು ಮುಂದೆ ಸರ್ಕಾರ ಅಧಿಕಾರಿಗಳು ಈ ಕೆಲಸವನ್ನು ನೋಡಿಕೊಳ್ಳಬೇಕೆಂದು ತೀರ್ಮಾನವಾಗಿ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾದ ಮ|| ಎಚ್. ಮಾಧವರಾಯರು ಸದರಿ ಕಾರ್ಖಾನೆಯ ಡೈರೆಕ್ಟರಾಗಿ ನಿಯಮಿಸಲ್ಪಡುವರೆಂದೂ ಸರ್ ವಿಶ್ವೇಶ್ವರಯ್ಯನವರು ಇತಃಪರ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವರೆಂದೂ ತಿಳಿದುಬಂದಿದೆ.

... ಪಟ್ಟಣ ... ರಲ್ಲಿರುವ ಶ್ರೀ ರಾಜಸೇವಾಸಕ್ತ ವಿ ... ಎಂಬಿನವರು ... ಕಂಪೆನಿಯವರು, ಮತ್ತು ಮದ್ರಾಸಿನ ಪ್ರೆಸ್ ವ್ಯಾಪಾರಿಗಳಾದ ಮ|| ಸಿ. ಎಸ್. ಡಿ ಸ್ವಾಮಿ ... ಯವರು ... ಒಂದಾಗಿಯೂ ಮುದ್ರಣಮಾಡಿಸಿರುವ 1929 ನೆಯ ವರ್ಷದ ಕ್ಯಾಲಂಡರುಗಳನ್ನು ಸಂತೋಷದಿಂದ ಸ್ವೀಕರಿಸಿರುತ್ತೇವೆ

ಕೃಷ್ಣರಾಜಪೇಟೆ ತಾ|| ಹೇಮಗಿರಿ ಟಿ ನರಸೀಪುರ ತಾ|| ಮುಡುಕುತೊರೆ ಮತ್ತು ಮೂಗೂರು ಗ್ರಾಮಗಳ ಅಕ್ಕಪಕ್ಕ ಗ್ರಾಮಗಳಲ್ಲಿ ಕಾಲರ ಉಪದ್ರವವಿರುವುದರಿಂದ ಈ ಸ್ಥಳಗಳಲ್ಲಿ ನಡೆಯತಕ್ಕ ಜಾತ್ರೆಗಳನ್ನು ನಿಲ್ಲಿಸಿರುವುದಾಗಿ ಇದೇ ಜನವರಿ ತಾ|| 8 ರಲ್ಲಿ ಅಪ್ಪಣೆಮಾಡಲ್ಪಟ್ಟಿದ್ದಿತು ಆದರೆ ಈಗ ಮೇಲ್ಕಂಡ ಸ್ಥಳಗಳಲ್ಲಿ ಜಾತ್ರೆ ನಡೆಯಬಹುದೆಂದೂ ಸಾಂಕ್ರಾಮಿಕ ಬಾಧ್ಯಗಳಿರತಕ್ಕ ಸ್ಥಳಗಳಿಂದ ಬರುವ ಜನರನ್ನು ಮಾತ್ರ ಸೇರಿಸಕೂಡದೆಂದೂ ಪ್ರಭುತ್ವದವರ ಅಪ್ಪಣೆಯಾಗಿರುತ್ತದೆಂದು ಮೈಸೂರು ಡಿ|| ಮ್ಯಾಜಿಸ್ಟ್ರೇಟರು ಮತ್ತು ಡಿ|| ಕಮೀಷನರು ತಿಳಿಸಿರುತ್ತಾರೆ

1928-29 ನೆಯ ವರ್ಷದಲ್ಲಿ ಅಸೆಸರುಗಳಾಗಿಯೂ ಜ್ಯೂರಿಗಳಾಗಿಯೂ ಇರಲು ಸೂಚಿಸಲ್ಪಟ್ಟಿರುವ ದೊಡ್ಡ ಮನುಷ್ಯರುಗಳ ಹೆಸರುಗಳು 1928 ನೇ ನವೆಂಬರ್ ತಾ|| 8 ಮತ್ತು 29 ರ ಸರ್ಕಾರಿ ಗೆಜೆಟ್ಟಿನ 13.. ರಿಂದ 1331 ನೆಯ ಮತ್ತು 1.73 ರಿಂದ 1277 ನೆಯ ಪುಟಗಳ ವರೆಗೂ ಪ್ರಕಟಿಸಲ್ಪಟ್ಟಿರುತ್ತವೆ ಈ ವಿಚಾರದಲ್ಲಿ ಆಕ್ಷೇಪಗಳೇನಾದರೂ ಇದ್ದಲ್ಲಿ ಅವನ್ನು ಇದೇ ಜನವರಿ ತಾ|| 31 ರ ಮಧ್ಯಾಹ್ನ ರಾಜಧಾನಿಯ ಸೆಷನ್ಸ್ ಕೋರ್ಟಿನಲ್ಲಿ ಸೆಷನ್ಸ್ ಜಡ್ಜಿಯವರೂ ಡೆಪ್ಯುಟಿ ಕಮೀಷನರೂ ಕೇಳುವರು ಆದುದರಿಂದ ಆ ದಿವಸ ಗೆಜೆಟ್ಟಿನಲ್ಲಿ ಪ್ರಕಟವಾಗಿರುವ ಹೆಸರಿನವರು ಬಂದು ಹೇಳಿಕೊಳ್ಳಬಹುದಾಗಿ ಅಪೇಕ್ಷಿಸಲ್ಪಟ್ಟಿರುತ್ತಾರೆ

ನವಾಬ್ ಕಲಾಮಿಯವರು ತಮ್ಮ ಭಿನ್ನಾಭಿಪ್ರಾಯವನ್ನು ವಿಶ್ವೇಶ್ವರಯ್ಯ ಸಮಿತಿಯವರಿಗೆ ತಿಳಿಸಿರುವರಷ್ಟೆ ಇದನ್ನು ವಿಮರ್ಶೆಮಾಡಿ ಸರ್ಕಾರಕ್ಕೆ ತಿಳಿಸಲೋಸುಗ ಬೆಂಗಳೂರಿನಲ್ಲಿ ಮೊನ್ನೆ ಮಂಗಳವಾರ ಸದಸ್ಯರೆಲ್ಲರೂ ಸಭೆಸೇರಿ ಚರ್ಚೆಮಾಡಿದರು ಮ|| ಕಲಾಮಿಯವರಿಗೆ ವರದಿಯನ್ನು ಪರಿಶೀಲಿಸಲು ಸಾಕಾದಷ್ಟು ಅವಕಾಶವನ್ನು ಕೊಡಲಿಲ್ಲವೆಂದೂ ಮುಸಲ್ಮಾನರು ಮೊದಲು ಹಿಂದುಗಳಮೇಲೆ ಬೀಳಲಿಲ್ಲವೆಂದೂ ನವಾಬರವರು ಅಭಿಪ್ರಾಯಪಟ್ಟಿರುವರಂತೆ, ಗೋಪ್ಯದಲ್ಲಿ ಸಾಕ್ಷ್ಯವನ್ನು ಕೊಟ್ಟವರ ಹೇಳಿಕೆಗೆ ಸಂರಕ್ಷಣೆಯನ್ನು ಕೊಡುವ ಕಾಯಿದೆಯನ್ನು ಸರ್ಕಾರದವರು ಕೈಕೊಳ್ಳಬೇಕೆಂದು ಸಮಿತಿಯವರು ತಮ್ಮ ಅಭಿಮತವನ್ನು ತಿಳಿಸಿರುವರಂತೆ ನವಾಬ್ ಕಲಾಮಿಯವರ ಟಿಪ್ಪಣಿಯ ಸಲುವಾಗಿ ವರದಿಯನ್ನು ಬದಲಾಯಿಸಬೇಕೆಂದು ಕೆಲ ಸದಸ್ಯರು ಸೂಚಿಸಲು ಪುನಃ ವರದಿಯ ತಂಟೆಗೆ ಹೋಗುವುದು ಯುಕ್ತವಲ್ಲವೆಂದು ಬಹುಮತದಿಂದ ವ್ಯವಸ್ಥೆಯಾಯಿತಂತೆ. ವಿಶ್ವೇಶ್ವರಯ್ಯ ಸಮಿತಿಯ ಕಾರ್ಯಕಲಾಪಗಳು ಇಲ್ಲಿಗೆ ಮುಕ್ತಾಯವಾದುವು

ಭರತಖಂಡದ ವೃತ್ತಾಂತಗಳು.

ಡಾ|| ಅಭಯಂಕರ್‌ರವರ ಕುಮಾರ್ತೆಯು ಸೂರತ್ತಿನ ಯುವಜನ ಸಭೆಯಲ್ಲಿ ಬೈಸಿಕಲ್ ಸ್ವಾರಿಯಲ್ಲೂ ಗಾನದಲ್ಲೂ ವ್ಯಾಸರಚನೆಯಲ್ಲೂ ಪ್ರಥಮ ಬಹುಮಾನವನ್ನು ಹೊಂದಿದುದಲ್ಲದೆ ಪಾಂಡಿತ್ಯದ ಪದಕವನ್ನು ಪಡೆದರು

ಈಗ ವೈಸ್‌ರಾಯರಾಗಿರುವ ಇರ್ವಿನ್‌ರವರು ೪ ತಿಂಗಳ ರಜದಮೇಲೆ ಇಂಗ್ಲೆಂಡಿಗೆ ಬರುವ ಜೂನ್ ತಿಂಗಳ ಕಡೆಯಲ್ಲಾಗಲಿ ಜುಲೈ ತಿಂಗಳ ಪ್ರಾರಂಭದಲ್ಲಾಗಲಿ ಹೋಗುತ್ತಾರೆಂದೂ ಆಗ ಮದರಾಸಿನ ಗೌರ್ನರವರಾದ ಲಾರ್ಡ್ ಗೋಷೆನ್‌ರವರು ವೈಸ್‌ರಾಯರಾಗಿ ನಿಯಮಿಸಲ್ಪಡುವರೆಂದೂ ತಿಳಿಯಬರುತ್ತದೆ

ಅಲಹಾಬಾದಿನ ವಾಸಿಯಾದ ಗಂಗೇಂದ್ರನಾಥಶರ್ಮನೆಂಬ ವೈದ್ಯನು ತನ್ನ ಸೇವಕನನು ಕೊಲೆಮಾಡಿ ಅವನ ಚೂರು ಚೂರಾಗಿ ಕತ್ತರಿಸಿ ಹಾಸಿಗೆಯಲ್ಲಿ ಸುತ್ತಿ ದೂರ ದೇಶಕ್ಕೆ ಸಾಗಿಸುವ ಪ್ರಯತ್ನವನ್ನು ಮಾಡಿ ರೈಲ್ವೆಗಾಡಿಯಲ್ಲಿ ಸಿಕ್ಕಿಬಿದ್ದನಾದುದರಿಂದ ನ್ಯಾಯಾಸ್ಥಾನದಲ್ಲಿ ವಿಚಾರಣೆನಡೆದು ಮರಣದಂಡನೆಗೆ ಗುರಿಮಾಡಲ್ಪಟ್ಟಿರುವನು

ಕಲ್ಕತ್ತಾ ಸ್ಟೇಟ್ಸ್‌ಮನ್ ಪತ್ರಿಕೆಯ ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದ 26 ವರ್ಷ ವಯಸ್ಸಿನ ಎಡ್ವಿನ್ ಡಿಸಿಲ್ವಾ ಎಂಬುವನು 17 ವರ್ಷ ವಯಸ್ಸಿನ ಎಪ್ಪಿಡಿಸಿಲ್ವ ಎಂಬ ಕನ್ಯೆಯ ಪ್ರೇಮಪಾಶದಲ್ಲಿ ಸಿಕ್ಕಿದ್ದನು ಆದರೆ ಆಕೆಯ ತಾಯಿಯು ಅವರಿಬ್ಬರ ವಿವಾಹಕ್ಕೊಪ್ಪಂಬಡಲಿಲ್ಲವಾಗಿ ಎಡ್ವಿನ್ ಯುವಕನು ಆಗ್ರಹಪರವಶನಾಗಿ ಕನ್ಯೆಯನ್ನು ಕತ್ತಿಯಿಂದ ಹೊಡೆದು ಸಾಯಿಸಿ ತಾನು ವಿಷಪಾನಮಾಡಿ ಸತ್ತನು

ಆಫ್ಘನ್ ರಾಜ ವಂಶಕ್ಕೆ ಸೇರಿದವರನೇಕರು ಹಿಂದುಸ್ಥಾನದಲ್ಲಿ ವಾಸಿಸುತ್ತಿರುವರು ಇವರ ಪೈಕಿ ರಾಜಕುವರರು ಸುಂಭತ್ತುಮಂದಿ ಸೆರೆಹಿಡಿಯಲ್ಪಟ್ಟು ಬಿರ್ಮಾದೇಶಕ್ಕೆ ಕಳುಹಲ್ಪಟ್ಟಿರುವರು ಅಫ್ಘಾನಿಸ್ಥಾನದ ರಾಜಕೀಯ ಪರಿಸ್ಥಿತಿಯು ಚೆನ್ನಾಗಿರುವುದಿಲ್ಲವೆಂದು ತಿಳಿದು ಬ್ರಿಟಿಷ್ ಸರ್ಕಾರದವರು ಎಚ್ಚರಿಕೆಯನ್ನು ತೆಗೆದುಕೊಳ್ಳುತ್ತಿರುವರು. ಹಿಂದುಸ್ಥಾನದಿಂದ ಯಾರೂ ಅಫ್ಘಾನಿಸ್ಥಾನಕ್ಕೆ ಹೋಗಲಾಗದೆಂದು ಸರ್ಕಾರದವರು ಅಪ್ಪಣೆ ಮಾಡಿರುವರು.

ತಮ್ಮ ಕವಾತ ಮಾಡಿಕೊಂಡಿರುವ ಒಬ್ಬ ತಿಕೆಯು ... ಬ್ರಿಟಿಷ್ ಪ್ರಭುತ್ವದವರು ನಡೆದುಕೊಳ್ಳಬೇಕೆಂದೂ ಸಂಸ್ಥಾನಾಧೀಶ್ವರರುಗಳು ಕೋರುತ್ತಿದ್ದೆಂದು ಅದನ್ನು ಬ್ರಿಟಿಷ್ ಪ್ರಜೆಗಳಾಗಲೀ ಪ್ರಜೆಗಳು ಅನುಮೋದಿಸಬೇಕೆಂದೂ ಮಾರ್ನಿಂಗ್ ಪೋಸ್ಟ್ ಪತ್ರಿಕೆಯು ಸುದ್ದಿಗಾರನು ಬರೆದಿರುವುದರಮೇರೆ ಆ ಪತ್ರಿಕೆಯು ಅದನ್ನು ಸಮರ್ಥಿಸಿ ಅಗ್ರಲೇಖನವನ್ನು ಬರೆದಿರುತ್ತದೆ ಸಂಸ್ಥಾನಾಧೀಶ್ವರರು ಎಷ್ಟೋ ಸ್ನೇಹದಿಂದ ವರ್ತಿಸುತ್ತಿದ್ದಾರೆಂದೂ ಇಂಡಿಯಾದಲ್ಲಿರುವ ಬ್ರಿಟಿಷ್ ಪ್ರಭುತ್ವಕ್ಕಿಂತ ಇವರೇ ಹೆಚ್ಚು ಸ್ನೇಹದಿಂದಿರುತ್ತಾರೆಂದೂ ಬರೆದಿರುತ್ತದೆ

ಪೂನಾ ಪಟ್ಟಣದಲ್ಲಿ ರಾಧಾಬಾಯಿ ಎಂಬಾಕೆಗೆ ಇಬ್ಬರು ಮಕ್ಕಳು ಇವರು ತಾಯಿಯನ್ನು ಬಿಟ್ಟು ವಾಸಿಸುತ್ತಿದ್ದರು, ಇದರಿಂದ ದುಃಖಿತಳಾಗಿ ರಾಧೆಯು ತನ್ನ ಜೊತೆಗಾತಿಯಾದ ...ಗಳಿಗೆ ಹೇಳಿಕೊಂಡಳು ಈಕೆಯು ತನಗೆ ಪರಿಚಿತನಾದ ಋಷಿಯಲ್ಲಿಗೆ ಕರೆದೊಯ್ದಳು ಆತನು ರಾಧೆಯ ಆಭರಣಗಳನ್ನೆಲ್ಲಾ ಉಪಾಯಾಂತರದಿಂದ ಕಸುಕೊಂಡುದಲ್ಲದೆ ಆಕೆಗೆ ವ್ಯಾಮೋಹದ ಔಷಧಿಗುಳಿಗೆಯನ್ನು ಕೊಟ್ಟು ಪ್ರಜ್ಞೆತಪ್ಪಿಸಿ ಅತ್ಯಾಚಾರ ನಡೆಸಿದನೆಂದು ಪೋಲೀಸಿಗೆ ತಿಳಿಸಿರುವಳು ಈ ಸನ್ಯಾಸಿಯು ಸ್ಮರುದ್ರೂಪಿ ಯಾಗಿರುವನೆಂದೂ ಇದೇ ರೀತಿಯಲ್ಲಿ ಅನೇಕ ಸ್ತ್ರೀಯರನ್ನು ಮೋಸಗೊಳಿಸಿರುವನೆಂದೂ ತಿಳಿದು ಬಂದಿದೆ

ಅಮೇರಿಕೆಯ ಸ್ತ್ರೀಯೊಬ್ಬಳು ಹಿಂದುಗಳ ನಾಟ್ಯಶಾಸ್ತ್ರಾನುಸಾರ ನಾಟ್ಯವನ್ನು ಕಲಿಯಲೋಸುಗ ಕಲ್ಕತ್ತೆಗೆ ಬಂದಿರುವಳಂತೆ ಪಾಶ್ಚಾತ್ಯ ಸ್ತ್ರೀಯರಿಗೆ ನಾಟ್ಯದಲ್ಲಿ ಹೆಚ್ಚು ಅಭಿರುಚಿಯುಂಟೆಂಬುದಕ್ಕೆ ಇದೊಂದು ನಿದರ್ಶನವಾಗಿರುವುದು ... ರಲ್ಲಿ ಸದ್ಗೃಹಿಣಿಯರಿಗೂ ಸಹ ನಾಟ್ಯವೊಂದೇ ಅಲ್ಲದೆ ಇತರ ಅಂಗಸಾಧನೆಗಳಲ್ಲಿಯೂ ಅಭಿರುಚಿಯಿರುವುದು ಇದರಿಂದ ಅವರು ವಯಸ್ಕರಾದಾಗ್ಯೂ ತಮ್ಮ ಯೌವನವನ್ನು ಕಾಪಾಡಿಕೊಂಡಿರುವರು ಪ್ರದರ್ಶನಕ್ಕಲ್ಲದಿದ್ದರೂ ಆರೋಗ್ಯಸಾಧಕ್ಕಾಗಿಯೂ, ದೇಹದಾರ್ಢ್ಯಕ್ಕಾಗಿಯೂ ಹಿಂದು ಸ್ತ್ರೀಯರು ನಾಟ್ಯವೇ ಮೊದಲಾದ ಅಂಗಸಾಧನೆಗಳನ್ನು ಅಭ್ಯಾಸಮಾಡುವುದು ಉತ್ತಮವೆಂದು ಕುಚ್‌ಬಿಹಾರಿನ ಮಹಾರಾಣಿಯವರು ಹೇಳಿರುತ್ತಾರೆ

ಸೈಮನ್ ಸಮಿತಿಯವರು ಕಳೆದ 20 ನೇ ತಾರೀಖು ಕಲ್ಕತ್ತೆಗೆ ಹೋದಾಗ ರಾಷ್ಟ್ರೀಯ ಭಕ್ತರು 20,000 ಜನರನ್ನು ಸೇರಿಸಿ ಬಹಿಷ್ಕಾರ ಪ್ರದರ್ಶನವನ್ನು ಮಾಡಿದರೆ 'ಬ್ರಿಟಿಷ್ ಸಾಮ್ರಾಜ್ಯತ್ವವು ನಾಶವಾಗಲಿ' ಕ್ರಾಂತಿಯು ಹೊತ್ತಿ ಬೇಯಲಿ ಎಂಬ ಆಕ್ಷೇಪಣೀಯ ವಿಚಾರಗಳನ್ನು ಬಾವುಟಗಳ ಮೇಲೆ ಬರೆದು ಪ್ರದರ್ಶಿಸುತ್ತಿದ್ದವರನ್ನು ಪೋಲೀಸು ಅಧಿಕಾರಿಗಳು ಎಚ್ಚರಿಸಿ ಆ ಬಾವುಟಗಳನ್ನು ಪ್ರದರ್ಶಿಸಕೂಡದೆಂದು ಹೇಳಿದಾಗ್ಯೂ ಅವರು ಅದಕ್ಕೆ ಕಿವಿಗೊಡದಿರಲು ಅವರನ್ನು ಸೆರೆಹಿಡಿದರು ಮತ್ತೆ ಕೆಲವು ಬಾವುಟಗಳಲ್ಲಿ 'ಬಂಡವಾಳಸ್ಥರಿಗೆ ವಿನಾಶವಾಗಲಿ, " ರಷ್ಯಾದೇಶದ ಪ್ರಜಾಪ್ರಭುತ್ವವು ದೀರ್ಘಾಯುವಾಗಲಿ 'ಸ್ವೇಚ್ಛಾಪ್ರಭುತ್ವವು ಕೊನೆಗಾಣಲಿ' ಎಂದು ಬರೆಯಲ್ಪಟ್ಟಿತ್ತು ಬಹಿಷ್ಕಾರಿಗಳು ಶೋಕಸೂಚಕವಾದ ಕರಿಬಾವುಟಗಳನ್ನು ಹಿಡಿದಿದ್ದರು

ದೇಶಾಟನೆಗಾಗಿ ಪೃಥ್ವಿಯನ್ನೆಲ್ಲ ಸುತ್ತಿಕೊಂಡುಹೋಗಲು ಹಿಂದುಸ್ಥಾನಕ್ಕೆ ಬಂದಿದ್ದ ಬ್ರಿಟಿಷ್ ಸ್ತ್ರೀಯೊಬ್ಬಳು ಮಹಾತ್ಮಗಾಂಧಿಯವರನ್ನು ಸಂದರ್ಶಿಸಿ ಅವರ ಸತ್ಯಸಂಧತೆಯನ್ನೂ ನಿಷ್ಪೃಹತೆಯನ್ನೂ ಕೊಂಡಾಡಿ ಅವರಂತಹ ಮಹಾಪುರುಷರು ಪೃಥ್ವಿಯಲ್ಲಿನ್ನಿಲ್ಲವೆಂದು ಹೇಳಿರುವಳು ದೇಹ ಬಲಗುಂದಿದಾಗ್ಗ್ಯೂ ಅವರು ಎಂದಿಗೂ ಎದೆಗುಂದಿದವರಲ್ಲವೆಂದೂ, ಅವರಷ್ಟು ಧೈರ್ಯ ಸಾಹಸವುಳ್ಳವರು ಬೇರೊಬ್ಬರಿಲ್ಲವೆಂದೂ ರಾಜಕೀಯ ವಿಚಾರದಲ್ಲಿ ನಿರ್ಮಲಹೃದಯರೆಂದೂ, ಪೂರ್ಣ ದೇಶಾಭಿಮಾನಿಗಳೆಂದೂ ಅಭಿಪ್ರಾಯಪಟ್ಟಿರುವಳು ಗಾಂಧಿಜೆಯವರು 1930 ರಲ್ಲಿ ಇಂಗ್ಲೆಂಡಿಗೆ ಹೋಗುವರಂತೆ ಅಲ್ಲಿ ವ್ಯಾಖ್ಯಾನಗಳನ್ನು ಮಾಡಲು ಚೈತನ್ಯವಿಲ್ಲದವರಾದಾಗ್ಯೂ ಬ್ರಿಟಿಷ್ ಮುಂದಾಳುಗಳನೇಕರೊಡನೆ ಸಂಭಾಷಣೆಮಾಡಿ ಹಿಂದುಸ್ಥಾನದ ಭವಿಷ್ಯತ್ ಸ್ಥಿತಿಯ ವಿಚಾರವನ್ನು ಚರ್ಚಿಸುವರೆಂದು ನಿರೀಕ್ಷಿಸಲ್ಪಟ್ಟಿದೆ

ವಿದೇಶದ ವೃತ್ತಾಂತಗಳು.

ಹಾಂಕಾಂಗಿನಲ್ಲಿ ಚೀನಾ ಹೊಗೆ ಹಡಗೊಂದು ... ಅದರೊಳಗಿದ್ದವರಲ್ಲಿ ... ಜನರು ... ಯನ್ನು ಹೊಂದಿ ... ಜನರು ಮಾತ್ರ ಉಳಿದುಕೊಂಡಿರುವರು

ತುರ್ಕಿಸ್ಥಾನದಲ್ಲಿ ದಂಗೆಯು ಪ್ರಬಲವಾಗುತ್ತಿರುವುದು ಸರ್ಕಾರದ ಸೈನಕ್ಕೂ ದಂಗೆಕೋರರಿಗೂ ವಿಶೇಷ ನಷ್ಟವಾಗಿರುವುದಾದರೂ ಶಾಂತಿಯಾಗುವ ಸಂಭವವು ಇನ್ನೂ ತೋರುತ್ತಿರುವುದಿಲ್ಲ

ಕಳೆದ ಡಿಸೆಂಬರು ಕಡೆಯ ವಾರದ ವರೆಗೆ 2,40,000 ಮಂದಿ ಕೆಲಸವಿಲ್ಲದಿದ್ದರು ಜನವರಿ ತಾ|| 7 ರಲ್ಲಿ ... 160 ಮಂದಿ ಕೆಲಸವಿಲ್ಲದಿದ್ದು ಒಟ್ಟು ಜನರ ಸಂಖ್ಯೆ 1,5.2,700 ಇದರಲ್ಲಿ 3 ... ಕಳೆದವರ್ಷಕ್ಕಿಂತ ಹೆಚ್ಚು

ಜಪಾನ್ ಸಮುದ್ರದಲ್ಲಿ ಒಂದು ಸಣ್ಣ ದ್ವೀಪವಿರುವುದು ಇದರ ಹೆಸರು 'ಮಿಯಾಜಿಮಾ' ಎಂದು ಈ ದ್ವೀಪದಲ್ಲಿ ಯಾರೂ ಹುಟ್ಟಲೂ ಬಾರದು, ಸಾಯಲೂ ಬಾರದೆಂದು ಕಾನೂನು ಇರುವುದು ಈ ದ್ವೀಪವನ್ನು ದೇವತೆಗಳ ವಾಸಕ್ಕಾಗಿ ಬಿಟ್ಟಿರುವರಂತೆ

ಎಲ್ಲೂ ಎ.ನವ್ ಆಸ್ಪತ್ರೆಯಲ್ಲಿ ಅಧಿಕ ... ಪದವಿಯ ... ಸತ್ಯ ... ಈ ಶಾಸ್ತ್ರಜ್ಞನು ಉಪಯೋಗಿಸಿದ ಗ ... ಪೆರ್ನ್ಯುಮೆಸೋಸೆಸ್ ಎಂಬ ... ಪತ್ರಿಕೆಯಲ್ಲಿ ಸಪ್ರಮಾಣ ಪ್ರತಿಪಾದಿಸಲಾಗಿದೆ

ಪ್ಯಾರಿಸ್ ಪಟ್ಟಣದ ನಾಟಕ ಶಾಲೆಯ ಬಳಿ ಪೋಲೀಸಿನವರೂ ರಾಜಭಾಲಕವಾಗಬೇಕೆಂದು ಕೋರುವವರಿಗೂ ಬಡಿದಾಟವಾಗಿ ಪೋಲೀಸಿನವರಲ್ಲಿ 6 ಮಂದಿಗಳಿಗೇಟುಬಿದ್ದು ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಹೊಂದುತ್ತಿರುವರು ರಾಜಪಾಲನಾ ಪಕ್ಷಗಳಲ್ಲಿ 6 ಮಂದಿ ಸೆರೆ ಹಿಡಿಯಲ್ಪಟ್ಟಿರುವರು

ಕೆಲವರಿಗೆ ಕಾರಣಾಂತರಗಳಿಂದ ಸುಖವಾದ ನಿದ್ರೆಯು ಲಭಿಸುವುದಿಲ್ಲ ಇಂಥವರು ಕಪ್ಪು ಬಟ್ಟೆಯನ್ನು ಹಾಸಿ, ಕಪ್ಪು ಬಟ್ಟೆಯನ್ನು ಹೊದೆದು, ಕಪ್ಪು ಬಟ್ಟೆಯ ಪರದೆಯನ್ನು ಕಟ್ಟಿಕೊಂಡು ಮಲಗಿದರೆ ಸುಖನಿದ್ರೆಯು ಪ್ರಾಪ್ತವಾಗುವುದೆಂದು ಇಟಲಿ ದೇಶದ ವೈದ್ಯಶಾಸ್ತ್ರಜ್ಞರೊಬ್ಬರು ಪ್ರಕಟಿಸಿರುತ್ತಾರೆ

ಬಂದೀಖಾನೆಗಳಲ್ಲಿರುವ ಸ್ತ್ರೀ ಖೈದಿಗಳ ರಕ್ಷಣೆಗೂ, ನಿರ್ಗತಿಕರಾದ ಹೆಂಗಸರು ಹಣ್ಣುಮಕ್ಕಳ ರಕ್ಷಣೆಗೂ ಪೋಲೀಸ್ ಸ್ತ್ರೀ ಸೈನ್ಯವು ಅವಶ್ಯಕವೆಂದು ಕಲ್ಕತ್ತೆಯ ಪೋಲೀಸಾಧಿಪತಿಯವರಿಗೆ ಲಂಡನ್‌ನಗರದ ಸ್ತ್ರೀ ಪೋಲೀಸ್ ಸೈನ್ಯಾಧಿಕಾರಿಯಾದ ಮಿಸೆಸ್ ಸ್ಟಾನ್ಲೆ ಎಂಬಾಕೆಯು ತಿಳಿಸಿರುತ್ತಾರೆ

ಸರ್ ಕೆ ವಿ ರೆಡ್ಡಿನಾಯಿಡುಯವರು ದಕ್ಷಿಣಾಫ್ರಿಕೆಯನ್ನು ತಲುಪಿದರು ಅಲ್ಲಿಂದ್ ಬ್ರಿಟಿಷ್ ಕೌನ್ಸಿಲರೂ ಭಾರತ ಸಂಘದವರೂ ರೆಡ್ಡಿಯವರನ್ನು ಸುಸ್ವಾಗತಿಸಿದರು ಶಾಸ್ತ್ರಿಗಳ ಕಾರ್ಯವನ್ನು ಪ್ರಶಂಸಿಸಿದುದು ಮಾತ್ರವಲ್ಲದ ದಕ್ಷಿಣಾಫ್ರಿಕೆಯ ಕಮೀಷನರವರ ತೀರ್ಮಾನವನ್ನೂ ಕೊಂಡಾಡಿದರು ಇಂಡೋ ಯೂನಿಯನ್ ಸಂಬಂಧವು ಮುಂದ ಇನ್ನೂ ಅಭಿವೃದ್ಧಿಯಾಗುವುದಾಗಿ ಆಶಿಸುತ್ತೇನೆಂದು ಹೇಳಿದರು

ಕಾಂದಹಾರಿಗಳ ಸಹಾಯದಿಂದ ಅಮಾನುಲ್ಲಾಖಾನ್‌ರವರು ಯುದ್ಧಸನ್ನದ್ಧರಾಗಿ ಕಾಬೂಲಿನಮೇಲ ದಂಡೆತ್ತಿ ಹೊರಟಿರುವರು ತಾವು ರಾಜ್ಯಪರಿತ್ಯಾಗಮಾಡಿದ್ದುದನ್ನು ಹಿಂದಕ್ಕೆ ತೆಗೆಕೊಂಡು ಪುನಃ ರಾಜಪದವಿಯನ್ನು ಸ್ವೀಕರಿಸುವರು ಘಜಿನಿ ಮತ್ತು ಕಾಂದಹಾರ ಪ್ರಾಂತಗಳ ಜನರೆಲ್ಲರೂ ಅಮಾನುಲ್ಲಾರವರ ಪರವಾಗಿ ಕಾದಾಡಲು ಸಿದ್ಧರಾಗಿರುತ್ತಾರೆ ತಮ್ಮ ಸಹೋದರರಾದ ಇನಾಯತುಲ್ಲಾಖಾನರಿಗೆ ರಾಜ್ಯವನ್ನೊಪ್ಪಿಸಿ ಕಾಂದಹಾರಿಗೆ ಬಂದ ಅಮಾನುಲ್ಲರವರು, ಕಾಬೂಲು ದಂಗೆಕೋರರ ವಶವಾದುದನ್ನೂ ಇನಾಯತುಲ್ಲಾರವರ ಉಚ್ಚಾಟನೆಯನ್ನೂ ತಿಳಿದು ಆಗ್ರಹಗೊಂಡು ಕಾಬೂಲನ್ನು ಪುನಃ ವಶಪಡಿಸಿಕೊಳ್ಳಲುದ್ಯುಕ್ತರಾಗಿರುವರು ಅಫ್ಘಾನಿಸ್ಥಾನದಲ್ಲಿ ಮುಂದೆ ಶಾಂತಿಸ್ಥಾಪನೆಯಾಗಿ ರಾಜ್ಯಭಾರವು ಕ್ರಮದಿಂದ ನಿರ್ವಹಿಸಲ್ಪಡಬೇಕಾಗಿದ್ದರೆ ದಕ್ಷರಾದ ಅಮಾನುಲ್ಲರವರೇ ರಾಜರಾಗಬೇಕು ಹಾಗಿಲ್ಲದಿದ್ದರೆ ರಾಜ್ಯದಲ್ಲಿ ಅನಾಯಕತ್ವವು ತಪ್ಪಲಾರದು

ಈಗ ನಡೆಯುತ್ತಿರುವ ಪಾರ್ಲಿಮೆಂಟಿನ ಕಡೇ ಅಧಿವೇಶನವು ಕಳೆದ ಮಂಗಳವಾರ ಪ್ರಾರಂಭವಾಯಿತು ಕ್ರಿಸ್‌ಮಸ್ ಹಬ್ಬವಾದ ಮೇಲೆ ಸಭೆಯು ಕೂಡಿದುದು ಇದೇ ಮೊದಲು ಬರುವ ಮೇ ತಿಂಗಳ ಮಧ್ಯದಲ್ಲಿ ಪಾರ್ಲಿಮೆಂಟ್ ಸಭೆಯು ಪೂರ್ತಿಯಾಗುವುದರೊಳಗಾಗಿ ಇನ್ನೊಂದು ಅಧಿವೇಶನವು ಜರುಗುವುದು ಸ್ಥಾನಿಕ ಪ್ರಭುತ್ವ ಸಂಸ್ಕರಣದಲ್ಲಿ ಮುಖ್ಯವಾಗಿ ಈ ಪಾರ್ಲಿಮೆಂಟು ಮುಳುಗಿ ಹೋಗುತ್ತಿರುವುದು ಮುಂದೆ ಬರುವ ಎಲೆಕ್ಷನ್ ಗಾಗಿ ಏರ್ಪಡುವ ನಿಯೋಜಕ ಕೆಲಸದಿಂದ ರಾಜಕೀಯ ಪ್ರಮೋಧವು ಸಾಗುತ್ತಿರುವುದು ಒಂದು ಮೈಲು ದೂರದಲ್ಲಿರುವ ಪ್ರಜೆಗಳಿಗೂ ಕೂಡ ಕೇಳುವ ಹಾಗೆ ಉಪನ್ಯಾಸಗಳು ನಡೆಯಲೇರ್ಪಾಡಾಗುವುದು ಇತ್ತೀಚಲ್ಲೇ ಪ್ರಕಟವಾಗಿರುವ ಓಟುದಾರರ ಪಟ್ಟಿಯಲ್ಲಿ 21 ವರ್ಷಕ್ಕೆ ಮೇಲ್ಪಟ್ಟ ಸ್ತ್ರೀಯರ ಹೆಸರೂ ಪುರುಷರಂತೆಯೇ ಸ್ತ್ರೀಯರಿಗು ಕೂಡ ನಿಯೋಜಕಾಧಿಕಾರ ಕೊಟ್ಟ ಸ್ತ್ರೀಯರ ಹೆಸರೂ ಸೇರಿಸಲ್ಪಡುವುವು

ಈ ವರ್ಷ ಯೂರೋಪಿನಲ್ಲಿ ಎಲ್ಲೆಲ್ಲಿಯೂ ಚಳಿಯು ಹೆಚ್ಚಾಗಿ ಜನಗಳಿಗೆ ನಾನಾವಿಧವಾದ ತೊಂದರೆಗಳು ಪ್ರಾಪ್ತವಾಗಿರುವುವು ಜರ್ಮನಿಯಲ್ಲಿ ರೈಲ್ವೆಗಾಡಿಗಳ ಸಂಚಾರವೂ ಮೋಟಾರ್ ಗಾಡಿಗಳ ಸಂಚಾರವೂ ನಿಂತುಹೋಗಿವೆ ಇಟಲಿಯಲ್ಲಿ ಆಲ್ಪ್ಸ್‌ಪರ್ವತದಿಂದ ಸಿಸಿಲಿ ದ್ವೀಪದವರೆಗೆ ಮಂಜಿನಿಂದಾಗಿ ... ದಂತಿರುವುದು ಇಂಗ್ಲೆಂಡಿನಲ್ಲಿ ಹಿಮದ ಗಾಳಿಯು ಎದ್ದು ವಿಶೇಷ ನಷ್ಟವಾಯಿತು ಅನೇಕರು ಚಳಿಯನ್ನು ತಡೆಯಲಾರದೆ ಬೀದಿಯಲ್ಲಿಯೇ ಬಿದ್ದುಹೋಗುವರು ಇಂತಹವರನ್ನು ವೈದ್ಯಶಾಲೆಗೆ ಸಾಗಿಸುವರು ಅನೇಕ ಗ್ರಾಮಗಳಲ್ಲಿ ನೂರಾರುಮಂದಿ ಮೃತಪಟ್ಟಿರುವರು

ಅನೇಕರು ಹೊಟ್ಟೆಯೊಳಗಿನ ಹುಣ್ಣು ಮೊದಲಾದ ರೋಗ ... ಕಾಯಿಲೆಯಿಂದ ನರಳುವರು ಇವರ ಕಾಯಿಲೆಗೆ ಕಾರಣವೇನೆಂಬುದನ್ನೂ ಹೊಟ್ಟೆಯೊಳಗೆ ಏನಾಗಿರುವುದೆಂಬುದನ್ನೂ ತಿಳಿದು ಅದನ್ನು ಸುಲಭವಾಗಿ ಗುಣಪಡಿಸುವುದು ಇದಕ್ಕಾಗಿ ಈಗ ಜರ್ಮನಿಯಲ್ಲಿ ಒಬ್ಬ ವೈದ್ಯನು ಹೊಟ್ಟೆಯೊಳಗಿನ ಚಿತ್ರವನ್ನು ತೆಗೆದುಕೊಳ್ಳುವ "ಫೋಟೋ ಕ್ಯಾಮರಾ" ವನ್ನು ರಚಿಸಿರುವನು ಇದು ಅರ್ಧ ಅಂಗುಲ ಅಗಲ ಎರಡು ಅಂಗುಲ ಉದ್ದವಿರುವುದು ಇದನ್ನು ರೋಗಿಯು ಹೊಟ್ಟೆಯೊಳಕ್ಕೆ ನುಂಗಿದರೆ ಅದು ಒಳಗೆ ಹೋಗಿ ಅಲ್ಲಿನ ಚಿತ್ರವನ್ನು ತೆಗೆಯುವುದು ಅನಂತರ ಒಂದು ರಬ್ಬರಿನ ಕೊಳವೆಯ ಸಹಾಯದಿಂದ ಅದನ್ನು ಹೊರಗೆ ತೆಗೆದು ಹೊಟ್ಟೆಯಲ್ಲಿ ಏನಾಗಿರುವುದೆಂಬುದನ್ನು ತಿಳಿದುಕೊಳ್ಳುವರು ಇದರ ಸಹಾಯದಿಂದ ಅನುಪಾನವನ್ನು ಮಾಡಲು ಸುಲಭವಾಗುವುದು

(ಪತ್ರಿಕೆಯಿಂದ)

ಬೆಂಗಳೂರು ಗಲಭೆಯ ವಿಚಾರಣಾ ಸಮಿತಿಯ ವರದಿ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಪಬ್ಲಿಕ್ ಆಫೀಸಿನ ಹತ್ತಿರ ನಡೆದ ಗಲಭೆ

ಈ ಮಧ್ಯೆ ಇತರ ಹುಡುಗರು ಮಧ್ಯಾಹ್ನ ಎರಡು ಘಂಟೆಯಿಂದ ಪಬ್ಲಿಕ್ ಆಫೀಸಿನ ಹತ್ತಿರ ಸೇರಲು ಆರಂಭಿಸಿದರು. ದಿವಾನರ ಬಂಗಲೆಯಿಂದ ಚದರಿಸಲ್ಪಟ್ಟವರು ಮತ್ತು ದಿವಾನರ ಮೋಟಾರಿನ ಹಿಂದೆ ಬಂದವರು ಎಲ್ಲಾ ಇಲ್ಲಿ ಸೇರಿದರು. ಅವರು ಗುಂಪು ಗುಂಪಾಗಿ ಮಧ್ಯದ ಮೆಟ್ಟಿಲಿನ ಹತ್ತಿರದಲ್ಲೂ, ಹುಲ್ಲುಗಾವಲಿನಮೇಲೂ ಜಮಾಯಿಸಿದರು. ಅವರು ಅಲ್ಲಿಂದ ಚದರದೆ ಇದ್ದುದರಿಂದಲೂ, ಚೇಷ್ಟೆಮಾಡುವರಾಗಿ ಕಂಡುಬಂದುದರಿಂದ ಡಿ. ಪೊ|| ಅ|| ಸೂಪರಿಂಟೆಂಡೆಂಟರು 6 ಜನ ಸವಾರರನ್ನು ದಿವಾನರ ಬಂಗಲೆಯಿಂದ ಕರೆದುಕೊಂಡು ಬಂದರು. ಎರಡು ಕಡೆಯವರಿಗೂ ಗಾಯಗಳಾದವು. ಪೋಲೀಸಿನವರ ಮತ್ತು ಸೈನಿಕರ ಬಲವು ಸಾಲದೆಂದು ಕಂಡುಬಂದುದರಿಂದ ಇನ್ನೂ ಹೆಚ್ಚು ಸೈನಿಕರು ಸಹಾಯಕ್ಕೆ ಬರಬೇಕೆಂದು ಪ್ರಾರ್ಥಿಸಿಕೊಂಡ ಮೇರೆಗೆ ಲೆಫ್ಟಿನೆಂಟ್ ಕರ್ನಲ್ ಲ್ಯಾಂಡನ್‌ರವರ ಆಧೀನದಲ್ಲಿ, 110 ಮಂದಿ ಲ್ಯಾನ್ಸರುಗಳು ಬಂದರು. ಹುಡುಗರು ಹುಲ್ಲಿನಮೇಲೂ ಇತರ ಕಡೆಗಳಲ್ಲೂ ರಸ್ತೆಯಲ್ಲೂ, ಮರಗಳ ಕೆಳಗೂ, ಇದ್ದುದರಿಂದ ಅವರನ್ನು ಚದುರಿಸಲು ಆಗಲಿಲ್ಲ. ಅವರು ಈ ಕಡೆಯಿಂದ ಆ ಕಡೆಗೂ ಅಲ್ಲಿಂದ ಇಲ್ಲಿಗೂ ಓಡಾಡುತ್ತಿದ್ದುದರಿಂದ ರಸ್ತೆಯಲ್ಲಿ ಜಮಾಯಿಸಿದ್ದ ಕಲ್ಲುಗಳನ್ನು ತೆಗೆದು ಸೈನಿಕರಮೇಲೆ ಎಸೆಯಲು ಆರಂಭಿಸಿದರು. ಸವಾರರ ಪಕ್ಕಸೆಯೂ, ಹುಡುಗರ ಕಲ್ಲೆಸೆಯುವಿಕೆಯೂ ಗಾಯಗಳನ್ನು ಇಬ್ಬರಿಗೂ ಮಾಡಿತು. ಮೈಲಾರಯ್ಯ ಎಂಬ ಹುಡುಗನು ಸವಾರನಿಗೆ ಅಡ್ಡವಾಗಿ ಬಿದ್ದುಬಿಟ್ಟನು. ಆಗ ಆ ಕುದುರೆಯು ಅವನನ್ನು ತುಳಿಯಿತು. ಆದ್ದರಿಂದ ಅವನಿಗೆ ಏಟುಬಿದ್ದು ಕೊನೆಗೆ ಕಾಲು ಕತ್ತರಿಸಬೇಕಾಯಿತು. ಕೊನೆಗೆ ಗಲಾಟೆ ಇನ್ನೂ ಹೆಚ್ಚಾಗಲು ಮತ್ತೆ 80 ಮಂದಿ ಸವಾರರನ್ನು ಕರೆಸಿಕೊಳ್ಳಬೇಕಾಯಿತು. ಆದರೆ ಇವರಿಂದ ಕೆಲಸ ಮಾಡಿಸಲಿಲ್ಲ. ಪಬ್ಲಿಕ್ ಆಫೀಸಿನ ಕಾವಲಿಗಾಗಿ 61 ಮಂದಿ ಕಾಲಾಳುಗಳನ್ನೂ 4 ಮಂದಿ ಆಫೀಸರುಗಳನ್ನೂ ಕರೆಸಿಕೊಳ್ಳಲಾಯಿತು.

ಎಲಹಂಕಗೇಟ್, ಕಾಂತರಾಜ ಅರಸ್ ಸರ್ಕಲ್, ಜೈಲಿನ ಹತ್ತಿರ ನಡೆದ ಗಲಭೆ

ಮಧ್ಯಾಹ್ನ ಮೂರು ಘಂಟೆ ಸಮಯದಲ್ಲಿ ಎಲಹಂಕ ಗೇಟಿನ ಬಳಿ ಹೋದ ಸವಾರರೂ ಮೊದಲೇ ಅಲ್ಲಿ ನೇಮಿಸಲ್ಪಟ್ಟಿದ್ದ ಸವಾರರೂ ಡಿಸ್ಟ್ರಿಕ್ಟ್ ಆಫೀಸಿನ ಕಾಂಪೌಂಡಿನಲ್ಲೂ, ಆನಿಸ್ಸ್ ರೋಡಿನಲ್ಲೂ ಇದ್ದ ಹುಡುಗರೊಂದಿಗೆ ಸೇರಿಕೊಂಡ ಇತರ ಜನರ ಸಮೇತ ಚದರಿಸಲು ಸಾಹಸ ಮಾಡಿದರೂ ಅದು ಸಾರ್ಥಕವಾಗಲಿಲ್ಲ. ಗಲಾಟೆ ಹೆಚ್ಚುವ ಸಂಭವ ಕಂಡುಬಂದುದರಿಂದ ಒಬ್ಬ ಪೋಲೀಸು ಅಧಿಕಾರಿಯು ಹುಡುಗರ ಮೆಚ್ಚುಗೆಗೆ ಪಾತ್ರರಾದ ಮತ್ತು ಮುನ್ಸಿಪಲ್ ಕಮಿಷನರಾದ ಮ|| ಶಂಕರನಾರಾಯಣರಾಯರಿಗೆ, ಅವರು ಬಂದು ಹುಡುಗರಿಗೆ ಬುದ್ಧಿ ಹೇಳಬೇಕೆಂದು ಟೆಲಿಫೋನ್ ಮೂಲಕ ತಿಳಿಸಿದರು. ದಿವಾನರು ಮ|| ಶಂಕರನಾರಾಯಣರಾಯರ ಸಂಗಡ ಡೆಪ್ಯುಟಿ ಕಮಿಷನರನ್ನು ಕಳುಹಿಸಿದರು. ಇಷ್ಟು ಹೊತ್ತಿಗೆ ಹುಡುಗರೊಂದಿಗೆ ದೊಡ್ಡವರೂ ಸೇರಿಕೊಂಡಿದ್ದರು. ಮ|| ಬಿ. ಕೆ. ಗರುಡಾಚಾರ್ಯರೇ ಮೊದಲಾದ ಇತರ ಪುರಮಹನೀಯರ ಕೋರಿಕೆಯಂತೆ ಸವಾರರನ್ನು ಡೆಪ್ಯುಟಿ ಕಮಿಷನರು ಹಿಂದಕ್ಕೆ ಕರೆದುಕೊಂಡರು. ಸ್ವಲ್ಪಕಾಲ ಗಲಭೆ ಶಾಂತವಾಗಿದ್ದು, ಮತ್ತೆ ಪ್ರಾರಂಭವಾಯಿತು. ಜೈಲಿನ ಕಡೆ ಹೋಗುತ್ತಿದ್ದ ಸವಾರರಿಗೆ ಹುಡುಗರು ಕಲ್ಲುಗಳನ್ನು ಎಸೆಯಲು ಅನೇಕ ಸವಾರರಿಗೆ ಗಾಯಗಳಾದುವು. ಕಾಂತರಾಜ ಅರಸ್ ಸರ್ಕಲ್ ಹತ್ತಿರದಲ್ಲಿದ್ದವರಿಗೂ ಸವಾರರಿಗೂ ಮತ್ತೆ ಜಗಳಕ್ಕೆ ಆರಂಭವಾಯಿತು. ಕೆಲವು ಸವಾರರು ಮೆಟ್ರಿಯೋಲಾಜಿಕಲ್ ಅಬ್ಸರ್ವೇಟರಿಯ ಕಾಂಪೌಂಡಿನೊಳಕ್ಕೆ ನುಗ್ಗಿದರು. ಹಾಗೆ ನುಗ್ಗುವ ರಭಸದಲ್ಲಿ ಆಕಸ್ಮಾತ್ತಾಗಿ ಮ|| ಶಂಕರನಾರಾಯಣರಾಯರಿಗೆ ಭರ್ಜಿಯು ಏಟು ಬಿತ್ತು. ಅಲ್ಲದೆ ತನ್ನ ಭರ್ಜಿಯನ್ನು ಮ|| ಶಂಕರನಾರಾಯಣರಾಯರ ಕಡೆ ಒಬ್ಬ ಸವಾರನು ಬಹಳ ಕೋಪದಿಂದ ತೋರಿಸುತ್ತಿದ್ದನೆಂದು ಮ|| ಶಂಕರನಾರಾಯಣರಾಯರ ಹೇಳಿಕೆಯಿಂದ ತಿಳಿದುಬಂತು. ಅಲ್ಲೇ ಹತ್ತಿರದಲ್ಲಿ ವಾಸವಾಗಿರುವ ಸೆಂಟ್ರಲ್ ಕಾಲೇಜಿನ ಪ್ರಿನ್ಸಿಪಾಲರಾದ ಡಾಕ್ಟರ್ ಮೆಟ್‌ಕಾಫ್‌ರವರು ಮಧ್ಯಾಹ್ನ ಸುಮಾರು 4½ ಗಂಟೆ ಸಮಯದಲ್ಲಿ ಹುಡುಗರ ಸವಾರರ ಮೇಲೆ ಕಲ್ಲುಗಳ ಮಳೆಗರೆಯುತ್ತಿದ್ದುದನ್ನು ನೋಡಿದರು. ಕಾಂತರಾಜ ಅರಸ್ ಸರ್ಕಲಿನಲ್ಲಿ ಬಹಳ ಹೆಚ್ಚು ಜನಗಳು ಇದ್ದುದರಿಂದ ಸಹಾಯಕ್ಕೆ ಇನ್ನೂ ಜನರು ಬೇಕೆಂದು ಮಿಲಿಟರಿ ಅಧಿಕಾರಿಯು ಹೇಳಿಕಳುಹಿಸಿದರು. ತಕ್ಕಷ್ಟು ಸವಾರರು ಒದಗಿದರು. ಆದರೆ ಸಾಯಂಕಾಲ 6½ ಗಂಟೆಗೆ ಮೇಜರ್ ಕೃಷ್ಣೆ ಅರಸ್‌ನವರು ಅಲ್ಲಿಗೆ ಬರುವ ವರೆಗೆ ಗಲಾಟೆ ಹಾಗೇ ಇತ್ತು. ಅನಂತರ ಕೆಲವರ ಸಹಿತ ಮೌಂಟೆಡ್ ಸವಾರರು ದಿವಾನರ ಕಛೇರಿ ಹೌಸಿನ ಕಡೆಗೆ ಕಳುಹಿಸಲ್ಪಟ್ಟರು.

ಮುಷ್ಕರದ ಮುಖಂಡರ ಬಿಡುಗಡೆ

ದೊಂಬಿಯವರೂ ಸವಾರರೂ ಹಿಂದೆ ನಮೂದಿಸಿದ ಅನೇಕ ಸ್ಥಳಗಳಲ್ಲಿ ಇದ್ದಾಗ ಕೆಲವು ಮುಖ್ಯ ಗೃಹಸ್ಥರೂ ಲಾಯರುಗಳೂ ಸೇರಿ ದಿವಾನರನ್ನೂ ಇತರ ಸರಕಾರಿ ಅಧಿಕಾರಿಗಳನ್ನೂ ಕಂಡು ಹುಡುಗರ ಸ್ಥಿತಿಗತಿಗಳ ಕಡೆಗೆ ಗಮನ ಕೊಡಬೇಕೆಂದೂ, ಮುಖಂಡರನ್ನು ಬಿಡುಗಡೆ ಮಾಡಬೇಕೆಂದೂ ಕೇಳಿದರು. ದಿವಾನರು ಹುಡುಗರ ಪರವಾಗಿ ಆರುಮಂದಿ ಮುಖಂಡರನ್ನು ನೋಡುವುದಾಗಿ ಹೇಳಿದರು. ಸರಕಾರದವರು ಸಿಟಿ ಮ್ಯಾಜಿಸ್ಟ್ರೇಟರ ಮುಂದೆ ಜಾಮೀನು ಪತ್ರ ಬರೆದುಕೊಟ್ಟರೆ ಆ ಮುಖಂಡರನ್ನು ಬಿಡುಗಡೆ ಮಾಡುವುದಾಗಿಯೂ ಹೇಳಿದರು. ಹುಡುಗರ ಹಿತಕ್ಕಾಗಿ ಮುಖಂಡರು ಇದಕ್ಕೆ ಒಪ್ಪುವಹಾಗೆ ಮಾಡಲ್ಪಟ್ಟಿತು. ಅದರಂತೆಯೇ ಸಾಯಂಕಾಲ 5|| ಘಂಟೆ ಹೊತ್ತಿಗೆ ಸಿಟಿ ಮ್ಯಾಜಿಸ್ಟ್ರೇಟರ ಮುಖಂಡರನ್ನು ಬಿಡುಗಡೆ ಮಾಡಿದರು. ಇವರ ಬಿಡುಗಡೆಗೆ ಪ್ರಯತ್ನಮಾಡಿದ ಗೃಹಸ್ಥರು ಈ ಮುಖಂಡರಿಂದಲೂ ಜೈಲಿನ ಗೇಟಿನಲ್ಲಿದ್ದ ಹುಡುಗರಿಂದಲೂ ಸುಲ್ತಾನ್ ಪೇಟೆ ಸ್ಕೂಲಿಗೆ ಹೋಗುವುದಿಲ್ಲವೆಂಬುದಾಗಿಯೂ ಧರ್ಮಾಂಬುಧಿ ಕೆರೆಯ ಸಮೀಪದಲ್ಲಿ ಸೇರಿ ಅನಂತರ ಸುಮ್ಮನೆ ಮನೆಗಳಿಗೆ ಹೋಗುವುದಾಗಿಯೂ ಭರವಸೆ ತೆಗೆದುಕೊಂಡಿದ್ದರು.

ದಿವಾನರ ಬಂಗ್ಲೆಗೆ ಮುಸಲ್ಮಾನರ ಭೇಟಿ

ಮುಖಂಡರ ಬಿಡುಗಡೆಯಾದನಂತರ ಡೆ|| ಕಮಿಷನರವರು ಡಿ|| ಪೊ|| ಸೂಪರಿಂಟೆಂಡೆಂಟರನ್ನು, ಅ|| ಪೊ|| ಸೂ|| ರವರ ಆಫೀಸಿಗೆ ಕರೆದುಕೊಂಡುಹೋಗಿ ರಾತ್ರಿಯ ಗಸ್ತಿಗಾಗಿ ತಕ್ಕ ಏರ್ಪಾಡು ಮಾಡಲು, ದಿವಾನರ ಬಂಗ್ಲೆಗೆ ಹೋದರು. ಆಗ ಅಲ್ಲಿ ಸುಮಾರು 50 ರಿಂದ 100 ಮಂದಿಯವರೆಗೆ ಸಿಟಿ ಮತ್ತು ದಂಡಿನ ಮುಸಲ್ಮಾನರು ಒಂದುಗೂಡಿದ್ದರು. ದಿವಾನರ ಸಾಹೇಬರು ಕೇಳಿದರೆ ... ದಿವಾನರಿಗೆ ಕಷ್ಟಗಳನ್ನು ತಿಳಿಸುವುದಕ್ಕಾಗಿ ಬಂದಿದ್ದರು. ಅವರನ್ನು ನೋಡಿದ ನಂತರ ಅವರು ಹೋದುದರಿಂದ ದಿವಾನರು ಮತ್ತೆ ಮನೆಗೆ ಸೋಡಿ ಬರುತ್ತಿದ್ದರು.

ಬಿಡುಗಡೆ ಹೊಂದಿದ ಮುಖಂಡರ ಮೆರವಣಿಗೆ

ಧರ್ಮಾಂಬುಧಿಕೆರೆಯ ಹತ್ತಿರ ಮೀಟಿಂಗ್ ಮಾಡಿ ಸುಮ್ಮನೆ ಮನೆಗೆ ಹೋಗುವುದಾಗಿ ಹೇಳಿದ್ದ ಹುಡುಗರೂ, ಮುಖಂಡರೂ ಹಾಗೆ ಮಾಡಲಿಲ್ಲ. ಮ|| ಗಳಾದ ಸುಬ್ರಹ್ಮಣ್ಯಂ ಮತ್ತು ಶಿವರಾಮಯ್ಯನವರುಗಳನ್ನು ಕೆಲವರು ತಮ್ಮ ಹೆಗಲುಗಳಮೇಲೆ ಕೂರಿಸಿಕೊಂಡು ದೊಡ್ಡಪೇಟೆ ಮಾರ್ಕೆಟ್ ಚೌಕದ ಮಾರ್ಗವಾಗಿ ಸಾಯಂಕಾಲ ಸುಮಾರು 7 ಗಂಟೆ ಹೊತ್ತಿಗೆ ಸುಲ್ತಾನ್ ಪೇಟೆ ಸ್ಕೂಲಿಗೆ ಬಂದರು. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದ ಹುಡುಗರನ್ನು ನೋಡಬೇಕೆಂದು ದಾರಿಯಲ್ಲಿ ಈ ಮುಖಂಡರುಗಳು ಇಷ್ಟಪಟ್ಟರು. ಆದರೆ ಅಲ್ಲಿಗೆ ಹೋದರೆ ಗಾಯಪಟ್ಟವರಿಗೆ ತೊಂದರೆ ಕೊಟ್ಟ ಹಾಗಾಗುತ್ತದೆಂದು ಹೇಳಿ ಸಮಾಧಾನ ಪಡಿಸಿದ್ದರಿಂದ ಅಲ್ಲಿಗೆ ಹೋಗಲಿಲ್ಲ. ಮ|| ಭೀಮರಾಯರು ಅಸ್ವಸ್ಥರಾಗಿದ್ದುದರಿಂದ ಡಾ|| ಗೋಪಾಲಕೃಷ್ಣರಾಯರ ಮೋಟಾರಿನಲ್ಲಿ ಕುಳಿತು, ಬೇಲೂರು ಶ್ರೀನಿವಾಸಯ್ಯಂಗಾರ್ಯರ ಸಂಗಡ ಮೀಟಿಂಗ್ ಮಾಡಬೇಕೆಂದು ಗೊತ್ತುಮಾಡಿದ್ದ ಧರ್ಮಾಂಬುಧಿಕೆರೆ ಮಾರ್ಗವಾಗಿ ಬಂದರು. ಆದರೆ ಅಲ್ಲಿ ಅವರು ಇರಲಿಲ್ಲವಾದುದರಿಂದ ಬಳೇಪೇಟೆ ಮಾರ್ಗವಾಗಿ ಸುಲ್ತಾನ್‌ಪೇಟೆ ಸ್ಕೂಲಿಗೆ ಹೋಗುತ್ತ ಮ|| ಬೇಲೂರು ಶ್ರೀನಿವಾಸಯ್ಯಂಗಾರ್ಯರು ದಾರಿಯಲ್ಲಿ 5 ಕಡೆ ಚಿಕ್ಕ ಚಿಕ್ಕ ಭಾಷಣಗಳನ್ನು ಮಾಡಿದರು. ಉಳಿದ ಇಬ್ಬರು ಮುಖಂಡರು ಬಂದು ಮುಟ್ಟಿದ ಕೆಲವು ನಿಮಿಷಗಳನಂತರ ಇವರೂ ಸ್ಕೂಲಿಗೆ ಹೋದರು. ಅಲ್ಲಿಗೆ ಹೋದಮೇಲೆ ಮ|| ಬೇಲೂರು ಶ್ರೀನಿವಾಸಯ್ಯಂಗಾರ್ಯರು ಮೋಟಾರಿನಮೇಲೆ ನಿಂತು ಭಾಷಣಮಾಡಿದರು. ಈ ಭಾಷಣದ ಸಂಬಂಧವಾಗಿ ನಾವು 4 ಮತ್ತು 6 ನೇ ಪ್ರಕರಣಗಳಲ್ಲಿ ವಿಮರ್ಶಿಸುತ್ತೇವೆ.

ದೊಂಬಿ ನಡೆದಾಗ ಪೋಲೀಸು ಉಸ್ತುವಾರಿ ಹೇಗಿತ್ತು ?

ಸಂಬಂಧಪಟ್ಟ ಅಧಿಕಾರಿಗಳು ಅಂದಾಜು ಹಾಕುವುದರಲ್ಲೇ ಇದ್ದರು. ಮೂರುಸಾವಿರದಿಂದ ಐದುಸಾವಿರದವರೆಗಿದ್ದ ಜನರ ಗುಂಪಿನ ಉಸ್ತುವಾರಿ ನೋಡುಕೊಳ್ಳುವುದಕ್ಕೆ ಅರುಜನ ಮಾತ್ರ ಪೋಲೀಸಿನವರಿದ್ದರು.

ದೊಂಬಿ ನಡೆದು ಗುಂಡು ಹಾರಿಸಲ್ಪಟ್ಟಾಗ, ಪೋಲೀಸು ಇನ್ಸ್‌ಪೆಕ್ಟರ್ ಜನರಲ್‌ರವರೂ ಡೆ|| ಕಮಿಷನರೂ ಡಿ| ಪೋಲೀಸ್ ಸೂಪರಿಂಟೆಂಡೆಂಟರೂ, ಅ| ಸೂಪರಿಂಟೆಂಡೆಂಟರ ಆಫೀಸಿನಲ್ಲಿ ಆ ರಾತ್ರಿ ಉಸ್ತುವಾರಿಯನ್ನು ಯಾವರೀತಿ ಏರ್ಪಡಿಸಬೇಕೆಂಬ ಅಂದಾಜಿನಲ್ಲೇ ಕುಳಿತಿದ್ದರು.

ದೊಂಬಿ ನಡೆದು ಗುಂಡುಹಾರಿಸಲ್ಪಟ್ಟಿತೆಂಬ ವರ್ತಮಾನ ತಿಳಿದಕೂಡಲೇ ದಿವಾನರು ಕುದುರೆ ಸವಾರರನ್ನು ಕಳುಹಿಸಿದರು.

ಮಿ|| ಅಬ್ಬಾಸ್‌ಖಾನರೂ ಅವರ ಮನೆಯವರೂ ಮೋಟಾರಿನಲ್ಲಿ ತಮ್ಮ ಮನೆಯಿಂದ ಆ ರಾತ್ರಿ ಹೊರಟರು. ದೊಂಬಿ ಸಮಾಚಾರವು ದಂಡಿನಲ್ಲಿ ಹರಡಲು ಮಹಮ್ಮದೀಯರು ಗುಂಪುಗುಂಪಾಗಿ ಬಂದರು. ಆದರಿಂದ ಪಟ್ಟಣದ ಜನರೆಲ್ಲಾ ಭೀತಿಗೊಂಡಿದ್ದರು.

ದೊಂಬಿ

ಇಷ್ಟು ಹೊತ್ತಿಗೆ ಪೋಲೀಸ್ ರೋಡ್ ಮತ್ತು ಅರ್ಕಾಟ್ ಶ್ರೀನಿವಾಸಾಚಾರ್ ಬೀದಿಗಳು ಸಂಧಿಸುವ ಸ್ಥಳದಲ್ಲಿರುವ ಬೈಸಿಕಲ್ ಷಾಪಿನ ಮಹಡಿ ಮೇಲೂ ಕೆಳಭಾಗದಲ್ಲೂ ಮಹಮ್ಮದೀಯರ ಗುಂಪು ಸೇರಿತ್ತು. ಮೆರವಣಿಗೆಯು ಸ್ಕೂಲಿನಹತ್ತಿರ ಬರುವ ಸಮಯದಲ್ಲಿ ಸಬ್ ಇನ್ಸ್‌ಪೆಕ್ಟರ್ ಮಿ|| ಶೇಷಾದ್ರಿ ಅಯ್ಯರು ಸ್ಕೂಲು ಕಾಂಪೌಂಡಿನಲ್ಲಿ ತರುಗಾಡುತ್ತ ಗುಂಪನ್ನು ಹತೋಟಿಯಲ್ಲಿಟ್ಟುಕೊಳ್ಳಲು ಪ್ರಯತ್ನಿಸುತ್ತಿದ್ದರು. ಇವರ ಕೈಕೆಳಗೆ ಸಾರ್ಜೆಂಟ್ ವೆಂಕಟೇಶಯ್ಯ, ಕಾನ್ಸ್‌ಟೇಬಲ್‌ಗಳಾದ ಸಲಸಿಂಹಯ್ಯ ಮತ್ತು ಮರಿಯಪ್ಪ ಇವರು ಸ್ಕೂಲುಗೇಟಿನ ಬಳಿ ಉಸ್ತುವಾರಿ ನೋಡುಕೊಳ್ಳುತ್ತಿದ್ದರು. ಇನ್ನಿಬ್ಬರು ಕಾನ್ಸ್‌ಟೇಬಲ್‌ಗಳು ನಾಲ್ಬಂದ್‌ವಾಡಿ ಚೌಕದ ಹತ್ತಿರ ಎಲ್ಲೋ ಇದ್ದರು. ಮೆರವಣಿಗೆಯುಸ್ಕೂಲಿನ ಹತ್ತಿರ ಬಂದಾಗ ಉಸ್ತುವಾರಿ ನೋಡಿಕೊಳ್ಳುವುದಕ್ಕಾಗಿ ಏರ್ಪಟ್ಟಿದ್ದ ಪೋಲೀಸು ಆಡಳಿತವು ತೃಪ್ತಿಕರವಾಗಿರಲಿಲ್ಲ. ಗುಂಪಿನ ಜನರು 3 ಸಾವಿರದಿಂದ 5 ಸಾವಿರದ ವರೆಗೂ ಇದ್ದರೆಂದು ಹೇಳಲ್ಪಟ್ಟಿದೆ. ಇಷ್ಟು ದೊಡ್ಡ ಗುಂಪನ್ನು ಹತೋಟಿಯಲ್ಲಿಟ್ಟುಕೊಳ್ಳುವುದಕ್ಕೆ ಒಬ್ಬ ಸಬ್ ಇನ್ಸ್‌ಪೆಕ್ಟರು ಒಬ್ಬ ಸಾರ್ಜೆಂಟು ಮತ್ತು ನಾಲ್ಕುಜನ ಕಾನ್ಸ್‌ಟೇಬಲುಗಳು ಮಾತ್ರ ಇದ್ದರು. ಬಿಡುಗಡೆ ಹೊಂದಿದ ಮುಖಂಡರು ಸ್ಕೂಲಿನ ಹತ್ತಿರ ಬಂದನಂತರ ಕಾಂಪೌಂಡಿನೊಳಕ್ಕೆ ಹೋಗಿ ಮಂಗಳಾರತಿ ಮಾಡಿಸಿಕೊಂಡು ಹೊರಟುಹೋದರು. ಮಂಗಳಾರತಿಯು ಸುಮಾರು ಐದು ನಿಮಿಷಗಳಲ್ಲಿ ಮುಗಿದುಹೋಯಿತು. ಸ್ವಲ್ಪ ಹೊತ್ತಿನೊಳಗಾಗಿಯೇ ಗದ್ದಲವು ಪ್ರಾರಂಭವಾಗಿ ಹೊಡೆತ ಅಡಿ ಮಾರಾಮಾರಿಯಾಗಿ ಪರಿಣಮಿಸಿತು. ಮಾರಾಮಾರಿಯ ವಿಚಾರದಲ್ಲಿ ಬೇರೆಬೇರೆ ವಿಧವಾದ ಹೇಳಿಕೆಗಳು 4 ಮತ್ತು 6 ನೆ ಅಧ್ಯಾಯಗಳಲ್ಲಿ ವಿವರಿಸಲ್ಪಟ್ಟಿವೆ. ಈ ಮಾರಾಮಾರಿಯಲ್ಲಿ ಗಾಯಪಟ್ಟವರ ಪೈಕಿ 76 ಜನ ಹಿಂದುಗಳೂ ಇಬ್ಬರು ಮಹಮ್ಮದೀಯರೂ ವಿಕ್ಟೋರಿಯಾ ಆಸ್ಪತ್ರೆಗೆ ಸಾಗಿಸಲ್ಪಟ್ಟರು.

ದೊಂಬಿನಡೆಯುತ್ತಿದ್ದಾಗ ಆ ಸಮಾಚಾರವನ್ನು ತಿಳಿಸಿ ಸಹಾಯವನ್ನು ತರುವುದಕ್ಕಾಗಿ ಕೆಲವರು ಅಸಿಸ್ಟೆಂಟ್ ಸೂಪರಿಂಟೆಂಡೆಂಟರ ಆಫೀಸಿಗೂ ಮಾರ್ಕೆಟ್ ಪೋಲೀಸ್ ಸ್ಟೇಷನ್ನಿಗೂ ಓಡಿಹೋದರು. ಅ|| ಸೂಪರಿಂಟೆಂಡೆಂಟರ ಆಫೀಸಿನಲ್ಲಿ ಆ ರಾತ್ರಿ ಯಾವವಿಧವಾದ ಉಸ್ತುವಾರಿ ಏರ್ಪಾಡನ್ನು ಮಾಡಬೇಕೆಂದು ಆಲೋಚನೆಮಾಡುತ್ತ ಕುಳಿತಿದ್ದ ಪೊ|| ಇನ್ಸ್‌ಪೆಕ್ಟರ್ ಜನರಲ್‌ರವರೂ, ಡೆ|| ಕಮಿಷನರೂ ಡಿ| ಪೋಲೀಸ್ ಸೂಪರಿಂಟೆಂಡೆಂಟರೂ ಮಾರಾಮಾರಿ ನಡೆದ ಗುಂಡುಹಾರಿಸಲ್ಪಟ್ಟಿತೆಂದು ಕೇಳಿದ ಒಡನೆ ಮೇಜರ್ ಕೃಷ್ಣೆ ಅರಸಿನವರೊಡನೆ ಕೃತ್ಯನಡೆದ ಸ್ಥಳಕ್ಕೆ ಹೋದರು. ಡಿ| ಪೊ|| ಸೂಪರಿಂಟೆಂಡೆಂಟರು ಮತ್ತು ಅ|| ಸೂಪರಿಂಟೆಂಡೆಂಟರು ಮೊದಲು ಅಂದರೆ ಸುಮಾರು 8 ಗಂಟೆ ರಾತ್ರಿಗೆ ಆ ಸ್ಥಳಕ್ಕೆ ಬಂದರು. ಆಗ ಅರ್ಕಾಟ್ ಶ್ರೀನಿವಾಸಾಚಾರ್ ಬೀದಿ ದಕ್ಷಿಣಭಾಗದಲ್ಲಿ 200-300 ಮಂದಿ ಮಹಮ್ಮದೀಯರ ಗುಂಪೂ ಅದೇ ಬೀದಿಯ ಉತ್ತರಭಾಗದಲ್ಲಿ ಒಬ್ಬ ಮಂದಿ ಹಿಂದುಗಳ ದೊಡ್ಡ ಗುಂಪೂ ಇದ್ದುದನ್ನು ಅವರು ನೋಡಿದರು. ಮುಸಲ್ಮಾನರು ಲಾಠಿಗಳನ್ನು ಹಿಡಿದುಕೊಂಡಿದ್ದರು. ಹಿಂದುಗಳು ಮಸೀದಿಕಡೆಗಿರುವ ಕುದುರೆ ಲಾಯದ ಕಟಕಟೆ ಬಾಗಿಲಿನ ಕಡೆಗೆ ಕಲ್ಲುಗಳನ್ನು ಹೊಡೆಯುತ್ತಿದ್ದರು. ಅಕ್ಕಪಕ್ಕದಲ್ಲಿದ್ದ ಮಹಮ್ಮದೀಯರನ್ನು ಹೆದರಿಸುವುದಕ್ಕಾಗಿ ಈ ರೀತಿ ಹೊಡೆಯುತ್ತಿದ್ದರೆಂದು ಕಾಣುವುದು. ನಾಲ್ಬಂದ್‌ವಾಡಿ ಚೌಕದ ಹತ್ತಿರದಲ್ಲಿ ಗುಂಪುಸೇರಿದ್ದ ಮಹಮ್ಮದೀಯರು ದಿವಾನ್‌ಸಾಹೇಬರಿಗೆ ಏಟುಬಿದ್ದಿತೇ ಎಂದು ತಮ್ಮನ್ನು ಕೇಳಿದರೆಂದೂ, ದಿವಾನ್‌ಸಾಹೇಬರಿಗೆ ಏಟುಬೀಳಲಿಲ್ಲವೆಂದು ಪೋಲೀಸ್ ಸೂಪರಿಂಟೆಂಡೆಂಟರು ಜವಾಬು ಕೊಡಬೇಕಾಯಿತೆಂದೂ ಡಿ|| ಪೋಲೀಸ್ ಸೂಪರಿಂಟೆಂಡೆಂಟರ ಹೇಳಿಕೆ.

ಮಿ|| ಅಬ್ಬಾಸ್ ಖಾನರು ಮನೆಯಿಂದ ಹೊರಟು ಎರಡು ನಿಮಿಷಗಳಲ್ಲಿ ಸುಲ್ತಾನ್ ಪೇಟೆ ಸ್ಕೂಲಿನ ಹತ್ತಿರ ಗಲಾಟೆ ಆರಂಭವಾಯಿತು. ಮಿ|| ಅಬ್ಬಾಸ್ ಖಾನರು ತಮ್ಮ ಮನೆಯ ಹತ್ತಿರ ಬಂದಾಗ ಕೆಲವು ಜನಗಳು ಮೋಟಾರಿಗೆ ಅಡ್ಡಗಟ್ಟಿದರು. ಆದರೂ ಅವರು ಹೇಗೋ ತಪ್ಪಿಸಿಕೊಂಡು ಹೋದರು. ಅವರ ಜೊತೆಯಲ್ಲಿದ್ದವರಿಗೆ ಸ್ವಲ್ಪ ಏಟುಗಳು ಬಿದ್ದವು. ಮೋಟಾರು ಬೇರೆ ಕಡೆಗೆ ಹೋದ ಮೇಲೆ ಡಿ| ಪೋಲೀಸ್ ಸೂಪರಿಂಟೆಂಡೆಂಟರ ಜೊತೆಯಾಗಿ

ಮಿ| ಅಬ್ಬಾಸ್ ಖಾನರ ಮನೆಯ ಹತ್ತಿರ ಸೇರಿದ್ದ ಗುಂಪನ್ನು ಚದರಿಸಲು ಡಿ| ಪೊ|| ಸೂಪರಿಂಟೆಂಡೆಂಟರು, ಅ|| ಪೊ|| ಸೂಪರಿಂಟೆಂಡೆಂಟರು, ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ರವರು, ಡೆಪ್ಯುಟಿ ಕಮಿಷನರವರು ಅಲ್ಲಿಗೆ ಬಂದರು. ಬಹಳ ಕಾಲ ಕಷ್ಟಪಟ್ಟು ಗುಂಪನ್ನು ಚದರಿಸಿ ತರುವಾಯ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರು ಆ ಕೃತ್ಯನಡೆದ ಸ್ಥಳದ ಬಳಿ ಇದ್ದು ಕಾವಲು ಏರ್ಪಡಿಸಿದರು.

ಕೊಂಬೆಯ ಹಾಗೆ ಅವರ ಭೇಟಿ ಕೊಟ್ಟಿದ್ದೆಂದೂ ಡಿ| ಪೋಲೀಸ್ ಸೂಪರಿಂಟೆಂಡೆಂಟರ ಹೇಳಿಕೆ.

ಮಿ| ಅಬ್ಬಾಸ್ ಖಾನರ ಮನೆಯ ಹತ್ತಿರ ಸೇರಿದ್ದ ಗುಂಪನ್ನು ಚದುರಿಸಲು ಡಿ| ಪೊ| ಸೂಪರಿಂಟೆಂಡೆಂಟರೂ, ಅ| ಪೊ| ಸೂಪರಿಂಟೆಂಡೆಂಟರೂ ಬಂದರು. ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್, ಡೆಪ್ಯುಟಿ ಕಮಿಷನರ್ ಅಲ್ಲಿಗೆ ಬಂದರು. ಆಕಸ್ಮಿಕವಾಗಿ ಧರ್ಮಾಧಿಕಾರಿ ಚೆಂಪೇಗೌಡರು ದೊಂಬಿ ವರ್ತಮಾನವನ್ನು ಕಾರ್ಲ್‌ಟನ್ ಭವನದಲ್ಲಿ ತಿಳಿಸಿದ ಫಲಿತಾಂಶವಾಗಿ ಕುದುರೆ ಸವಾರರ ಒಂದು ದಳವು ಕಳುಹಿಸಲ್ಪಟ್ಟಿತು. ಮಿಲಿಟರಿಯವರನ್ನು ನೋಡಿದ ಒಡನೆ ಆಯುಧಪಾಣಿಗಳಾಗಿದ್ದ ಗುಂಪಿನವರು ಚದರಿಹೋದರು. ಸ್ವಲ್ಪ ಹೊತ್ತಾದ ಮೇಲೆ ಅಂದರೆ, ಸುಮಾರು 8½ ಗಂಟೆಗೆ ಸ್ಪೆಷಲ್ ರಿಜರ್ವ್ ಪೋಲೀಸ್ ಬಳವೊಂದು ಬಂದಿತು. ಅರ್ಕಾಟ್ ಶ್ರೀನಿವಾಸಾಚಾರ್ ಬೀದಿಯ ಮುಖ್ಯ ಚೌಕಗಳಲ್ಲೆಲ್ಲಾ ಸವಾರರು ನಿಲ್ಲಿಸಲ್ಪಟ್ಟರು. ಸ್ಕೂಲು ಕಾಂಪೌಂಡಿನ ಹತ್ತಿರ ಕೆಲವು ಕಾನ್ಸ್‌ಟೇಬಲ್‌ಗಳನ್ನು ನೇಮಿಸಿದರು.

ನಗರದ ಇತರ ಕಡೆಗಳಲ್ಲಿ ಆಯುಧಪಾಣಿಗಳಾದ ಜನರ ಗುಂಪುಗಳು

ಕೃತ್ಯನಡೆದ ಸ್ಥಳದಲ್ಲಿ ಕೊಡಲೆ ಶಾಂತಿಯು ನೆಲೆಗೊಳಿಸಲ್ಪಟ್ಟಿತು. ಆದರೆ, ಕೆಲವು ಹಿಂದುಗಳೂ ಮಹಮ್ಮದೀಯರೂ ಪಕ್ಕದಲ್ಲಿದ್ದ ಸೌದೆ ಅಂಗಡಿಗಳಿಂದ ಕಟ್ಟಿಗೆಗಳನ್ನು ಎಳೆದುಕೊಂಡು, ಅರಳೇಪೇಟೆಯಲ್ಲಿ ಸ್ಕೂಲಿನ ಪಕ್ಕದಲ್ಲೂ ಇತರ ಬೀದಿಗಳು ಮತ್ತು ಗಲ್ಲಿಗಳಲ್ಲೂ ಸುತ್ತುತ್ತಿದ್ದರು. ಮನೆಗಳನ್ನು ಮುತ್ತಿದರೆಂದೂ ಹೆಂಗಸರನ್ನು ಮಾನಭಂಗಪಡಿಸಿದರೆಂದೂ ವರ್ತಮಾನಗಳು ಹರಡಿದುದರಿಂದ 31 ನೇ ತಾರೀಖಿನ ದಿನದಲ್ಲೂ ಅನಮೇಲೆ ಕೆಲವು ದಿನಗಳಲ್ಲೂ ಜನರು ಬಹಳ ಭೀತಿಗೊಂಡಿದ್ದರು.

ದಂಡಿನ ಮಹಮ್ಮದೀಯರು

ದಂಗೆ ಸಮಾಚಾರವು ದಂಡಿನಲ್ಲಿ ಗೊತ್ತಾದ ಕೂಡಲೆ ಅನೇಕ ಮುಸಲ್ಮಾನರು ನಗರಕ್ಕೆ ಬಂದರು. ಒಂದು ಗುಂಪಿನವರು ರಾತ್ರಿ 11 ಗಂಟೆ ಸುಮಾರಿಗೆ ಸುಲ್ತಾನ್‌ಪೇಟೆಗೆ ಬಂದು ನಾಲ್ಬಂದ್‌ವಾಡಿ ಮಸೀದಿಯು ಸುರಕ್ಷಿತವಾಗಿರವುದೆ ಎಂದು ಲೆಫ್ಟಿನೆಂಟ್ ಬಸವರಾಜೆ ಅರಸಿನವರನ್ನು ಕೇಳಲು ಅವರನ್ನು ಮಿಲಿಟರಿಯವರ ಉಸ್ತುವಾರಿಯಲ್ಲಿ ಮಸೀದಿ ಹತ್ತಿರ ಕರೆದುಕೊಂಡುಹೋಗಿ ತೋರಿಸಿ ಆಮೇಲೆ ಮಾರ್ಕೆಟ್ ಚೌಕಕ್ಕೆ ಕರೆದುಕೊಂಡು ಹೋದರು. ದಂಡಿನಿಂದ ಬಂದ ಮುಸಲ್ಮಾನರ ಗುಂಪಿನವರು ಅರಳೇಪೇಟೆಯಲ್ಲಿ ತಿರುಗುತ್ತಿದ್ದಾರೆಂದು ಅ|| ಪೊ| ಸೂಪರಿಂಟೆಂಡೆಂಟರವರಿಗೆ ವರ್ತಮಾನಬಂದ ಕೂಡಲೆ ಅವರು ಅಲ್ಲಿಗೆ ಹೋಗಿ ನೋಡಲಾಗಿ ಅಲ್ಲಿ ಯಾರೂ ಇರಲಿಲ್ಲ. ಸುಮಾರು ಮಧ್ಯರಾತ್ರಿ ಸಮಯದಲ್ಲಿ 300 ರಿಂದ 500 ಜನ ಮಹಮ್ಮದೀಯರ ಗುಂಪೊಂದು ದಂಡಿನ ಕಡೆಯಿಂದ ನಗರಕ್ಕೆ ಬರುತ್ತಿರುವುದಾಗಿಯೂ ತಾವು ಆ ಗುಂಪಿನವರನ್ನು ಇಂಪೀರಿಯಲ್ ಥಿಯೇಟರಿನಬಳಿ ನೋಡಿದುದಾಗಿಯೂ ಅಲಸೂರು ಗೇಟ್ ಪೋಲೀಸ್ ಸ್ಟೇಷನ್ನಿಂದ ಅ|| ಪೊ| ಸೂಪರಿಂಟೆಂಡೆಂಟರಿಗೆ ವರ್ತಮಾನಬಂತು. ಮಿ|| ಅಬ್ಬಾಸ್ ಖಾನರು ಸುರಕ್ಷಿತವಾಗಿದ್ದಾರೆಂದೂ ಮಾರ್ಕೆಟ್ ಚೌಕದಬಳಿ ಇರುವ ಗೋರಿಗೆ ಯಾವ ಅಪಾಯವೂ ಆಗಲಿಲ್ಲವೆಂದೂ ತಿಳಿದು ಆ ಗುಂಪಿನವರು ಹೊರಟುಹೋದರು. ದಂಡಿನಿಂದ ಬಂದಿದ್ದ ಈ ಮಹಮ್ಮದೀಯ ಗುಂಪುಗಳವರು ಬೀದಿಗಳಲ್ಲಿ ತಿರುಗುತ್ತಿದ್ದುದನ್ನು ನೋಡಿ ಪಟ್ಟಣದ ಜನರು ಬಹಳ ಭೀತಿಗೊಂಡಿದ್ದರು.

ಮಿ|| ಅಬ್ಬಾಸ್ ಖಾನರು ಮನೆಯಿಂದ ಹೊರಟುದು

ಈ ಕೃತ್ಯಕ್ಕೆ ಒಬ್ಬರು ಸವಾರರ ಅಧಿಕಾರಿಯ ಸೂಚನೆಯಂತೆ ಮಿ|| ಅಬ್ಬಾಸ್ ಖಾನರು ರಾತ್ರಿ 11½ ಗಂಟೆ ಸುಮಾರಿಗೆ ತಮ್ಮ ಮನೆ ಜನರೊಡನೆ ಗೋಷಾಹಾಕಿದ್ದ ಮೋಟಾರಿನಲ್ಲಿ ತಮ್ಮ ಮನೆಬಿಟ್ಟು ಹೊರಟರು. ಮೋಟಾರು ಹೆಬ್ಬಾಳಿನಲ್ಲಿ ಸವಾರರ ಪಹರೆಯಲ್ಲಿದ್ದ ಮಿ|| ಅಬ್ಬಾಸ್ ಖಾನರ ಸಂಬಂಧಿಯ ಮನೆಗೆ ಎರಡಾವರ್ತಿ ಹೋಗಿಬಂತು.

ಪತ್ರವ್ಯವಹಾರ

ಪತ್ರವ್ಯವಹಾರಕರ ಅಭಿಪ್ರಾಯಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಓದುಗರು ತಿಳಿಯತಕ್ಕದ್ದು.—ಸಂಪಾದಕ

ಪ್ರಾಣಿದಯೆಗೆ ತಿರಸ್ಕಾರ

ಉದಾರಬುದ್ಧಿಯುಳ್ಳ ಬೆಂಗಳೂರು ಶ್ರೀ ಗೋರಕ್ಷಕ ಮಂಡಲಿಯವರು ಈ ರಾಷ್ಟ್ರದ ವಿದ್ಯಾರ್ಥಿಗಳಲ್ಲಿ 'ದಯೆ' ಯು ಹುಟ್ಟಬೇಕೆಂದು ಬಹುಮಾನ ಏರ್ಪಾಡು ಮಾಡಿರಲು ಕೆಲವು ಉಪಾಧ್ಯಾಯರುಗಳು ಪತ್ರಿಕೆಗಳನ್ನು ತೆಗೆದುಕೊಂಡರೆ ಚಂದಾಹಣ ಕಟ್ಟಬೇಕಾಗುತ್ತದೆಯೋ ಎಂಬ ಭಯದಿಂದ ವಾಪಸುಮಾಡಿ ನಮ್ಮಗಳನ್ನು ನಷ್ಟಕ್ಕೆ ಗುರಿಮಾಡಿರುವರು. ಇನ್ನುಮುಂದೆ ಹೀಗೆಮಾಡದೆ ಆದರದಿಂದ ಸ್ವೀಕರಿಸಿ ಅದರಲ್ಲಿರುವ ತತ್ವಗಳನ್ನು ವಿದ್ಯಾರ್ಥಿಗಳಿಗೆ ಬೋಧಿಸಿ ಮಂಡಲಿಯವರ ಮತ್ತು ಸಂಪಾದಕರ ಮನ್ನಣೆಗಳಿಗೆ ಪಾತ್ರರಾಗಬೇಕೆಂದು ಸವಿನಯಪ್ರಾರ್ಥನೆ.

ಗುಂಡೂರಾವ್ ಶಾಸ್ತ್ರಿ
ಸಂಪಾದಕ

ಕಾರುಹಿನಶೆಟ್ಟಿಗಳ ಮಹಾಸಭೆ.

ಕಳೆದ ಡಿಸೆಂಬರ್ ತಾ|| 16 ನೇ ಶುಕ್ರವಾರ ಶ್ರೀರಂಗಪಟ್ಟಣ ತಾ|| ಪಾಲಹಳ್ಳಿಯಲ್ಲಿ ಮೇಲ್ಕಂಡ ಮಹಾಸಭೆಯು ಮೇಲ್ಕೋಟೆಯ ಕಾರುಹಿನಶೆಟ್ಟಿಗಳ ಸಂಘದವರ ಪ್ರೋತ್ಸಾಹದಿಂದ ಸೋಮವಾರಪೇಟೆ ಮ|| ಕೆ. ಎಸ್. ಶ್ರೀನಿವಾಸಶೆಟ್ಟರವರ ಅಧ್ಯಕ್ಷತೆಯಲ್ಲಿ ಜರಗಿತು. ಸೋಮವಾರಪೇಟೆಯ ಕಾಫೀಪ್ಲಾಂಟರ್ ಡಿ. ಚಿಕ್ಕಬಸಪ್ಪನವರ ಪತ್ನಿ ಶ್ರೀಮತಿ ಸಾಕಮ್ಮನವರು, ಮ|| ಎಚ್. ಕೆ. ರಂಗಯ್ಯನವರು ಮೊದಲಾದ ಕುಲಾಭಿಮಾನಿಗಳು ದಯಮಾಡಿಸಿದ್ದರು. ಸಮಾಜದವರ ವಿದ್ಯಾಬುದ್ಧಿ ಕೆಲಸ ವ್ಯಾಪಾರ ವೇದಭಾಷಣದ ಅಭಿವೃದ್ಧಿಯ ವಿಚಾರವಾಗಿ ಅನೇಕ ಉಪನ್ಯಾಸಗಳು ನಡೆದು ಕೆಲ ನಿರ್ಣಯಗಳು ಮಾಡಲ್ಪಟ್ಟವು. ಅನಂತರ ಶ್ರೀಮತಿ ಸಾಕಮ್ಮನವರು ಮಠೋದ್ಧಾರಕ್ಕಾಗಿ ಕುಲದೇವತಾಸ್ವರೂಪದಿಂದ ಮಹಾಸಭೆಗೆ ದಯಮಾಡಿಸಿರುತ್ತಾರೆಂದು ಅವರ ಗುಣಪ್ರಶಂಸೆ ಮಾಡಲ್ಪಟ್ಟು ಸಭಾಕಾರ್ಯವು ವಿಸರ್ಜಿಸಲ್ಪಟ್ಟಿತು. ಬಂದಿದ್ದ ಕುಲಾಭಿಮಾನಿಗಳಿಗೆ ಸ್ಥಳದವರಿಂದ ದಿವ್ಯವಾದ ಔತಣವು ಮಾಡಿಸಲ್ಪಟ್ಟಿತು. ಎಲ್ಲರೂ ವಾದ್ಯವೈಭವದಿಂದ ರಾಜಬೀದಿ ಮೊದಲಾಗಿ ಸಕಲ ಬೀದಿಗಳಲ್ಲೂ ಉತ್ಸವಗೊಂಡು ಕಾರುಹಿನಶೆಟ್ಟಿಗಳ ಸಂಘಕ್ಕೆ ಬಂದರು. ಪರೋತ್ಕರ್ಷವನ್ನು ಸಹಿಸದ ಈ ಊರಿನ ಒಂದು ಪಂಗಡದವರು ಈ ಉತ್ಸವವನ್ನೂ, ಮಹಾಸಭಾಕಾರ್ಯವನ್ನೂ ನೋಡಿ ಸಹಿಸಲಾರದೆ ತಮ್ಮ ಕೈಗಳನ್ನು ತಾವೇ ಹಿಸುಕಿಕೊಳ್ಳುತ್ತಿದ್ದರು. ಆದರೆ ಪ್ರತಿಕ್ರಿಯೆಯನ್ನು ಮಾಡಲು ಅವರಿಗೆ ಅವಕಾಶವಾಗಲಿಲ್ಲ.

ಪ್ರತ್ಯಕ್ಷದರ್ಶಿ.

ಒಂಗು ಇಂತಿಯೋಚನರಣ

ಕೆಲ್ಲಾಗು ತಾಲ್ಲೂಕು ಕುಂಕನಹಳ್ಳಿ ಗ್ರಾಮದ ಕ್ಕೆ 1 ೨ ತಿಂಗಳ ಹಿಂದೆ ಪೋಲೀಸು ರಕ್ಷಣೆಗಾಗಿ ಬಂದಿದ್ದ ಪೊಲೀಸಿನವರು ಇದೀಗ ಬೇರೆ ಸ್ಥಳಕ್ಕೆ ವರ್ಗವಾಗಿ ಹೋಗುವರೆಂದು ತಿಳಿದು ವಿಷಾದವಾಗುತ್ತದೆ. ಇವರು ಈ ಗ್ರಾಮಕ್ಕೆ ಬಂದಾಗಿನಿಂದ ಜನರಲ್ಲಿ ಮುಖ್ಯರಾಗಿ ಅವರುಗಳಿಗೆ ಅನುಕೂಲವಾದ ತಿಳುವಳಿಕೆಯನ್ನು ಕೊಟ್ಟು ಎಲ್ಲರ ಅನುರಾಗಕ್ಕೆ ಪಾತ್ರರಾಗಿದ್ದರು ಮತ್ತು ಪೋಲೀಸು ಉದ್ಯೋಗಿಯು ಒಬ್ಬರ ಬೆನ್ನಿಗೆ ಇದ್ದು ನುಗ್ಗುತ್ತಿರುವುದು ಈ ಪೊಲೀಸಿನವರ ವಾಸಕ್ಕೆ ಅನುಕೂಲವಾಗಿ ಒಂದು ಕಟ್ಟಡವನ್ನು ಸ್ವಂತ ಖರ್ಚಿನಿಂದ ಕಟ್ಟಿಕೊಡಲು ವಾಗ್ದಾನಮಾಡಿದ್ದರು. ಜನಾನುರಾಗಿಗಳಾದ ಈ ದಫೇದಾರರನ್ನು ಗ್ರಾಮಸ್ಥರು ಒಂದು ಸಂತೋಷಕೂಟದಿಂದ ಸತ್ಕರಿಸಿ ಅವರ ಗುಣವರ್ಣನೆ ಮಾಡಿದ್ದಲ್ಲದೆ ಅವರ ಅಗಲಿಕೆಯಿಂದ ತಮಗುಂಟಾದ ವ್ಯಸನವನ್ನು ಪ್ರದರ್ಶಿಸಿದರು.

ಗ್ರಾಮಸ್ಥ

ಕಡೂರು ತಾಲ್ಲೂಕು ಯಳ್ಳಂಬಳಸೆ.

ಈ ಗ್ರಾಮಕ್ಕೆ ಮೆಹರ್ಬಾನ್ ಸರ್ಕಾರದವರು ಸೊಸೈಟಿಯನ್ನು ಪ್ರಜೆಗಳ ಉಪಯೋಗಕ್ಕಾಗಿ ಮುಂಜೂರು ಮಾಡಿದ್ದರಮೇಲೆ ಅಸಿಸ್ಟೆಂಟ್ ರಿಜಿಸ್ಟ್ರಾರ್ ಸೂಪರ್‌ವೈಸರಾದ ಮ್ಯ॥ ಕೆ ಪರಮೇಶ್ವರಯ್ಯನವರು ತಾ 10 1 20 ರಲ್ಲಿ ಈ ಗ್ರಾಮಕ್ಕೆ ದಯಮಾಡಿಸಿ ಸೊಸೈಟಿಯಿಂದ ಉಂಟಾಗತಕ್ಕ ಪ್ರಯೋಜನಗಳನ್ನು ಸರ್ವರಿಗೂ ವಿಶದವಾಗಿ ತಿಳಿಯಪಡಿಸಿ ತಾ॥ 20 ರಲ್ಲಿ ಸೊಸೈಟಿಯನ್ನು ಆದರ ಪುರೋಭಿವೃದ್ಧಿಗಾಗಿ ಕೆಲಸಮಾಡತಕ್ಕ ಪ್ರೆಸಿಡೆಂಟರನ್ನೂ, ವೈಸ್‌ಪ್ರೆಸಿಡೆಂಟರನ್ನೂ, ಟ್ರಜರರ್ ಸೆಕ್ರೆಟರಿಯವರನ್ನೂ, ಮೆಂಬರುಗಳನ್ನೂ ಸಹ ಚುನಾಯಿಸಿದರು. ಅನಂತರ ಸೇರಿದ್ದ ಸಭಿಕರೆಲ್ಲರೂ ಅವರವರ ಯೋಗ್ಯತಾನುಸಾರವಾಗಿ ಒಟ್ಟು 217 ಷೇರುಗಳನ್ನು ಪಡೆದುಕೊಂಡು ಆಗತಾನೇ ರೂ 100 3 0 ಗಳ ವಸೂಲು ಬಂದದ್ದು ಈ ಸೊಸೈಟಿಯ ಮುಂದಿನ ಪುರೋಭಿವೃದ್ಧಿ ಹೊಂದತಕ್ಕ ಶುಭಸೂಚನೆಯಾಗಿರುತ್ತೆ. ಪ್ರತಿಯೊಬ್ಬರೂ ಆರಂಭದ ಶೂರತ್ವವನ್ನು ಬಿಟ್ಟು ಸೊಸೈಟಿಯನ್ನು ಪುರೋಭಿವೃದ್ಧಿಗೆ ತಂದುಕೊಂಡು ತಮ್ಮತಮ್ಮಗಳ ಕಷ್ಟಗಳನ್ನು ದೂರಮಾಡಿಕೊಳ್ಳುವುದಕ್ಕೆ ಪ್ರಯತ್ನಪಡುವುದಕ್ಕೆ ಸಿದ್ಧರಾಗಬೇಕಲ್ಲದೆ ಅವಿಚ್ಛಿನ್ನವಾಗಿ ದೇಹಶ್ರಮವನ್ನು ವಹಿಸಿ ಕೆಲಸಮಾಡಿದಲ್ಲಿ ಶಾಶ್ವತವಾದ ಕೀರ್ತಿಯು ಉಂಟಾಗಬಹುದಾಗಿ ಪೂರ್ಣವಾಗಿ ನಂಬುತ್ತೇನೆ. ಮಂಗಳಾರತಿ ಆದನಂತರ ನೆರೆದಿದ್ದ ಸಭಿಕರಿಗೆಲ್ಲಾ ಫಲ ಪುಷ್ಪ ತಾಂಬೂಲಾದಿಗಳು ಹಂಚಲ್ಪಟ್ಟು ಸೊಸೈಟಿಯು ಪುರೋಭಿವೃದ್ಧಿಗೆ ಬರಬೇಕೆಂದು ಜಯಘೋಷದೊಡನೆ ಸಭೆಯು ಬರಖಾಸ್ತಾಯಿತು.

ಓರ್ವಪ್ರೇಕ್ಷಕ

ಕೈಲಾಸ ಸಮಾರಾಧನೆಯು

ಚಿಕ್ಕಮಗಳೂರಿನಲ್ಲಿ ಸುಪ್ರಸಿದ್ಧರೂ ಗುರುಲಿಂಗಜಂಗಮ ಸೇವಾಪರರೂ, ಜನಾನುರಾಗಿಗಳೂ ಆಗಿದ್ದ ಕಾಫಿಪ್ಲಾಂಟರ್ ಯಜಮಾನ್ ಚೆನ್ನಬಸಪ್ಪಶೆಟ್ಟರವರು ಪರಂಧಾಮವನ್ನೈದಿ ಇದೇ ಸಂವತ್ಸರ ಮಾರ್ಗಶಿರ ಬಹುಳ 12 ಸೋಮವಾರಕ್ಕೆ ಒಂದು ವರ್ಷವಾದ್ದರಿಂದ ಇವರ ಪುಣ್ಯತಿಥಿಯನ್ನು ಸಾಂಗವಾಗಿ ನೆರವೇರಿಸಬೇಕೆಂಬ ಸಂಕಲ್ಪಪೂರ್ವಕ ಕೈಲಾಸವಾಸಿಗಳವರ ಧರ್ಮಪತ್ನಿ ಶ್ರೀಮತಿ ರುದ್ರಮ್ಮನವರ ಅಪ್ಪಣೆಯಮೇರೆಗೆ ಇವರ ಅಳಿಯಂದಿರಾದ ಕಾಫಿಪ್ಲಾಂಟರೂ ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರೂ ಆಗಿರುವ ಮ॥ ಸಿ ಪಿ ಬಸವೇಗೌಡರವರು ಈ ಮೊದಲೇ ತತ್ಸಂಬಂಧವಾದ ಸಮಾರಾಧನಾಹ್ವಾನಪತ್ರಿಕೆಗಳನ್ನು ಅನೇಕಕಡೆ ಕಳುಹಿಸಿದ್ದರಲ್ಲದೆ ಪ್ರತ್ಯಕ್ಷ ಬಿನ್ನಹಪೂರ್ವಕ ಶ್ರೀ ಪೂಜ್ಯಪಾದರಾದ ಸ್ವಾಮಿಗಳವರನ್ನು ಬಿಜಮಾಡಿಸಿಕೊಂಡು ಎಂದು ಕೈಲಾಸವಾಸಿಗಳವರ ಬಂಗಲೆಯಲ್ಲಿ ಶ್ರೀ ಪಾದಪೂಜಸಮಾರಾಧನ ಕಾರ್ಯವನ್ನು ಕೈ॥ ಚನ್ನಬಸಪ್ಪಶೆಟ್ಟರವರ ಕುಮಾರ ಮಂಜುನಾಥನ ಮುಖೇನ ವಿಧ್ಯುಕ್ತವಾಗಿ ನಡೆಸಲ್ಪಟ್ಟಿತು. ಈ ಸಮಾರಾಧನೆಗೆ ಸುತ್ತುಮುತ್ತಲಿನ ಗ್ರಾಮದಿಂದ ಬಂದಿದ್ದ ಸಾವಿರಾರು ಜನ ಭಕ್ತಮಾಹೇಶ್ವರರು ವಿಶೇಷ ಭಕ್ಷ್ಯಭೋಜ್ಯಗಳಿಂದಲೂ ದಕ್ಷಿಣೆ ವಸ್ತ್ರದಾನ ಮೊದಲಾದವುಗಳಿಂದಲೂ ತೃಪ್ತಿಪಡಿಸಲ್ಪಟ್ಟರು. ಈ ಸಮಯದಲ್ಲಿ ಮ॥ ಸಿ ಪಿ ಬಸವೇಗೌಡರವರು ತಮ್ಮ ಮಾವನವರು ಜೀವಂತರಾಗಿರುವರೆಂಬ ಪವಿತ್ರಭಾವದಿಂದ ಪೂರ್ವದಂತೆ ಈಗಲೂ ಮುಂದೆಯೂ ಕೈಲಾಸವಾಸಿಗಳವರ ಸದ್ಗತಿ ಪ್ರಾಪ್ತಿಗೋಸ್ಕರ ವರ್ಷಾವರ್ಷದ ಪುಣ್ಯತಿಥಿಯನ್ನು ಕ್ರಮವಾಗಿ ನೆರವೇರಿಸಿ ಮಹಾತ್ಮರನ್ನು ಸತ್ಕರಿಸಿ ಶ್ರೀಗುರುವಿನಿಂದ ಆಶೀರ್ವಾದವನ್ನು ಪಡೆದು ಧನ್ಯವಾದಗಳನ್ನು ಸಮರ್ಪಿಸಿದ ಇವರಲ್ಲದೆ ನಿಜವಾದ ಗುರುಭಕ್ತರು ಮತ್ತು ಶಿಷ್ಯಭಕ್ತರು ; ಜೀವಮಾನ ಪರ್ಯಂತರ ತಮ್ಮ ತನುಮನಧನಗಳನ್ನು ಗುರುಲಿಂಗಜಂಗಮರ ಅಡಿದಾವರೆಗಳಲ್ಲಿ ಸಮರ್ಪಿಸಿ ಜನಾನುರಾಗಿಗಳಾಗಿಯೂ ರಾಜಭಕ್ತಿಯುತರಾಗಿಯೂ ಸಕಲವರ್ಗದವರ ಪ್ರೇಮಾಸ್ಪದರಾಗಿಯೂ ಇದ್ದು ಯಶಃಕಾಯರಾಗಿರುವ ಚೆನ್ನಬಸಪ್ಪಶೆಟ್ಟರ ಗುಣಕಥನವನ್ನು ಅನೇಕರು ಈಗಲೂ ಮಾಡುತ್ತಿರುವರು. ಈ ಪ್ರಸಿದ್ಧ ಪುರುಷರಿಗೆ ಜಗದೀಶ್ವರನು ಸಾಯುಜ್ಯಪದವಿಯನ್ನು ಕೊಟ್ಟು ಇವರ ಕುಟುಂಬದವರ್ಯಾವತ್ತರಿಗೂ ಮನಶ್ಶಾಂತಿಯನ್ನು ಆಯುರಾರೋಗ್ಯಭಾಗ್ಯಗಳನ್ನು ಅನುಗ್ರಹಿಸಲೆಂದು ಪ್ರಾರ್ಥಿಸುವ

ವೀರಮಾಹೇಶ್ವರ ಜನವಿಧೇಯ

ಹೆಚ್ ಹೆಚ್ ಜಿ ನಂಜುಂಡಾರಾಧ್ಯ

ಹಾಲುಮತದವರು (ಕುರುಬರು) ಲಿಂಗದೀಕ್ಷೆಯನ್ನು ಹೊಂದಿ ಶಿವಾಚಾರಸಂಪನ್ನರಾಗುವುದೇ ಮೇಲಾದ ಸನ್ಮಾರ್ಗವು

ನಮ್ಮ ಹಾಲುಮತಬಂಧುಗಳೇ, ಈ ನನ್ನ ಬರವಣಿಗೆಯು ಸ್ವಂತ ಅನುಭವದಿಂದಲೂ ಶಿವಜ್ಞಾನಿಗಳಿಂದಲೂ ಸಿದ್ಧಾಂತವಾದ ವಿಷಯಗಳನ್ನೇ ಒಳಗೊಂಡಿರುವನ್ನು ಮನುಷ್ಯಮಾತ್ರದವರೆಲ್ಲರೂ ಕ್ರಮೇಣ ಸುಧಾರಿಸುತ್ತ ಬಂದು ಆಚಾರವಂತರಾಗಿ ಮೋಕ್ಷಪ್ರಾಪ್ತಿಯನ್ನು ಹೊಂದಬೇಕೆಂಬುವುದು ಸರ್ವರಿಗೂ ತಿಳಿದ ಸಂಗತಿಯಾಗಿದೆ. ಅದರಂತೆ ಶಿವಾಚಾರ ಗ್ರಂಥಗಳಲ್ಲಿ ಉಲ್ಲೇಖಿಸಿರುವುದೇನೆಂದರೆ—

• ವೇದಲು ನಾನು ಈ ಕಡೆಯಲ್ಲದ | ಹದನನರಿಯದವ ಮ್ಯಾಗಣಂತೆ ॥ ಪೊದರು ಪೊಕ್ಕರು ಬಳಿಕ ಪೆಸರ ರಾಶಿ ಲಭಿಸದೆ. ತದನು ಬುದ್ಧಿಯು ಅಳಿತು | ಚರ್ಮದ ಹೊದಿಕೆಯಿಂದ ಬಿದುರು ಗಳಗರ ಮುತ್ತು ಲಭಿಸುವ ಹಂದರಹಾಕಿದರು ಎಂಬ ವಚನದಂತೆ ಸ ಧಾವಿಸುತ್ತ ಬಂದರಾಗಲ್ಲ ಶಿವಜ್ಞಾನಿಗಳಾದ ಮಹಾತ್ಮರು ಶಿವಾನುಭವವನ್ನು ತಿಳಿದು ಶಿವಸಿದ್ಧಾಂತವಾದ ಇಷ್ಟಲಿಂಗದ ಮಹಿಮೆಯನ್ನು ರೇಣುಕಾಚಾರ್ಯರೂ ಅಗಸ್ತ್ಯರೂ ಗೌತಮರೂ ಜನಾಂಗಕ್ಕೆಲ್ಲ ಶಿವಜ್ಞಾನಬೋಧೆಮಾಡಿ ಸರ್ವರಿಗೂ ಮೋಕ್ಷದ ಹಾದಿಯನ್ನು ತೋರಿಸಿರುವರೆಂಬುದಾಗಿ ಎಷ್ಟೋ ಆಧಾರಗಳಿವೆ. ನಮ್ಮ ಕುಲಗುರುಗಳಲ್ಲಿರುವ ಅಷ್ಟಾವರ್ಣಗಳೇ ನಮಗೆ ಲಿಂಗಧಾರಣವಾಗಿ ನಾವು ಆಚಾರವಂತರಾಗಲಿಕ್ಕೆ ಮುಖ್ಯವಾದ ಸಾಕ್ಷಿಗಳಾಗಿರುತ್ತವೆ. ಈ ಅಷ್ಟಾವರ್ಣಗಳು ಲೌಕಿಕಕ್ಕೆ ಸರಿಯಾಗಿ ಆರೋಗ್ಯವನ್ನುಂಟುಮಾಡುವಂಥವುಗಳಾಗಿಯೂ ಪಾರಮಾರ್ಥದ ಹಾದಿಯನ್ನು ತೋರಿಸತಕ್ಕ ಶಾಸ್ತ್ರೋಕ್ತವಾದ ಮಹಿಮೆಯ ಆಧಾರಗಳಾಗಿಯೂ ಇರುವವು. ಮನುಷ್ಯನು ಅಹಿಂಸಾಪರವಾದ ಆಚಾರವನ್ನು ಕೈಕೊಳ್ಳದವನಿಹ ಹೃದಯದಲ್ಲಿ ಅಂತಃಕರಣ ಶುದ್ಧಿಯಾಗಲಾರದು. ಸದಂತಃಕರಣವೃತ್ತಿಯೇ ಶಿವಜ್ಞಾನವನ್ನು ತಿಳಕೊಳ್ಳುವ ಯೋಗ್ಯತೆಯುಳ್ಳದ್ದಾಗಿದೆ. ಬಹಿರಂಗ ಆಚರಣೆಯನ್ನು ಮಾಡುತ್ತ ಮನಶ್ಶುದ್ಧಿಯಾಗಿ ಅಂತರಂಗದಲ್ಲಿ ಶಿವಜ್ಞಾನದ ಅರಿವು ಆಗುವದು. ಸಮಸ್ತ ಜೀವರಾಶಿಯಲ್ಲಿ ಮನುಷ್ಯ ಜನ್ಮವು ಶ್ರೇಷ್ಠವಾದುದು. ಇಂತಹ ಉತ್ಕೃಷ್ಟ ಜನ್ಮದಲ್ಲಿ ಶಿವಲಿಂಗದ ಸಾಕ್ಷಾತ್ಕಾರವನ್ನು ಹೊಂದದ ಹೊರತು ಗತ್ಯಂತರವಿಲ್ಲವೆಂದು ಹೇಳಲು ಸಂದೇಹವಿಲ್ಲ. ನಮ್ಮ ಕುಲಗುರುಗಳಿಂದಲೇ ಲಿಂಗಧಾರಣೆಯನ್ನು ಹೊಂದಿ ಸದಾಚಾರದಿಂದ ನಡೆದರೆ ಇಹಲೋಕದಲ್ಲಿ ನಿತ್ಯಾನಂದಸ್ವರೂಪರೂ ಮುಕ್ತಿಮಾರ್ಗಕ್ಕೆ ಅಂಕುರವಾಗುವ ಮಹಿಮರೂ ಆಗುವರು. ನಾವು ಪುರಾತನಕಾಲದಿಂದ ಶಿವಜ್ಞಾನಪಥದವರೇ ಇರುವದರಿಂದ ನಮಗೆ ಅಷ್ಟಾವರ್ಣಗಳು ನಮ್ಮ ಕುಲಗುರುಗಳಿಂದಲೇ ಲಭಿಸುತ್ತವೆ. ಈಚೆಗೆ 1910 ನೇ ಇಸವಿಯಲ್ಲಿ ಹಾಲುಮತ ಧರ್ಮೋತ್ತೇಜಕ ಮಹಾಸಭೆಯನ್ನು ಲಕ್ಷ್ಮೇಶ್ವರದಲ್ಲಿ ಕೂಡಿಸಿದಾಗ್ಗೆ ಕರ್ನಾಟಕದ ಯಾವತ್ತು ಗುರುವರ್ಗದವರೂ ನಾಲ್ಕುಸಾವಿರ ಮೇಲ್ಪಟ್ಟು ಶಿಷ್ಯವರ್ಗದ ಜನರೂ ಕೂಡಿ ಅಹಿಂಸಾಪರವಾದ ನೀತಿಯಿಂದ ನಡೆದವರಿಗೆಲ್ಲ ನಮ್ಮ ಗುರುಗಳು ಲಿಂಗಧಾರಣೆಮಾಡಿ ಆಚಾರವಂತರನ್ನಾಗಿ ಮಾಡಬೇಕೆಂದು ಬಹುಮತದಿಂದ ಠರಾವುಗಳನ್ನು ಪಾಸುಮಾಡಿದರು. ಅದರಂತೆ ಕೆಲವು ಗುರುವರ್ಗದವರು ತಮ್ಮ ಆ ಶಿಷ್ಯಮಂಡಲಿಗೆ ಸದುಪದೇಶಮಾಡಿ ಲಿಂಗಧಾರಣಮಾಡುತ್ತ ಆಚಾರವಂತರನ್ನಾಗಿ ಮಾಡಿದರು. ಅದನ್ನು ಕಂಡು ನಮ್ಮ ಶ್ರೀ ರಾಯಪ್ಪಯ್ಯಸ್ವಾಮಿ ಅವರಾಗಿಮಠ ಹುಲ್ಲೂರ ಇವರು ಈಗ ಒಂದುವರ್ಷದಲ್ಲಿ ನಾಲ್ಕುಸಾವಿರಜನರನ್ನು ಸದುಪದೇಶಕ್ಕೆ ಒಳಪಡಿಸಿ ಲಿಂಗಧಾರಣ ಮಾಡಿರುವರೆಂಬುದನ್ನು ತಿಳಿಸಲು ಆನಂದವಾಗುತ್ತದೆ. ನಮ್ಮ ಕುಲಗುರುಗಳಿಂದಲೇ ಆಚಾರವಂತರಾಗತಕ್ಕದ್ದು ಮಾನ್ಯವು. ಹಿಂದಕ್ಕೆ ಬಹುವಿಸ್ತಾರವಾಗಿ ರಾಜ್ಯವಾಳಿದ ನಮ್ಮ ಕದಂಬರು ಶ್ರೀ ಮಧುಕೇಶ್ವರನ ಕೃಪೆಗೆ ಪಾತ್ರರಾಗಿಯೂ ವಿಜಯನಗರದ ಬಲಾಢ್ಯರಾದ ಶ್ರೀ ವಿರೂಪಾಕ್ಷೇಶ್ವರನ ಕೃಪೆಗೆ ಪಾತ್ರರಾಗಿಯೂ ಯಾವಾಗಲೂ ಶಿವಪಥವನ್ನೇ ಹಿಡಿದು ನಡೆದದ್ದು ಧರೂ ಇತಿಹಾಸಪ್ರಸಿದ್ಧವಿದೆ. ಅಂತು ಶಿವೋಪಾಸಕರೇ ಇದ್ದರು. ಆದ್ದರಿಂದ ನಮ್ಮ ಕುಲಬಾಂಧವರು ಆಚಾರವಂತರಾಗಬೇಕೆಂಬುವ ಕಳಕಳಿಯಿಂದ ಶ್ರೀ ಗುರುವರ್ಗದವರೆಲ್ಲರೂ ತಮ್ಮ ಶಿಷ್ಯರನ್ನು ಉಪದೇಶಿಸಿ ಸನ್ಮಾರ್ಗಕ್ಕೆ ತರಬೇಕೆಂದು ಸವಿನಯಪ್ರಾರ್ಥನೆಯಿಂದ ಬೇಡಿಕೊಳ್ಳುವೆನು. ಮತ್ತು ಇದೇ ಕಾರ್ತಿಕ ಶು ೯ ರಲ್ಲಿ ರಾಮಗಿರಿಗ್ರಾಮಕ್ಕೆ ನಮ್ಮ ಶ್ರೀ ಹುಲ್ಲೂರ ರಾಯಪ್ಪಯ್ಯಸ್ವಾಮಿಗಳು ಬಂದು 300 ಜನ ಶಿಷ್ಯರಿಗೆ ಲಿಂಗದೀಕ್ಷೆಯನ್ನುಕೊಟ್ಟು ಸನ್ಮಾರ್ಗಕ್ಕೆ ಹಚ್ಚಿದರು. ನಾವೆಲ್ಲರೂ ಗುರುಕೃಪೆಗೆ ಪಾತ್ರರಾಗಿ ಉದ್ಧಾರ ಆದೆವು. ಕಾರಣ ನನ್ನ ಸರ್ವಬಾಂಧವರೇ ಆಚಾರವಂತರಾಗಿ ಮೋಕ್ಷಪ್ರಾಪ್ತಿಯನ್ನು ಹೊಂದಿ ಈಶ್ವರನ ಪಾದಾರವಿಂದವನ್ನು ಕಾಣುವರೆಂದು ಹಾರೈಸುತ್ತೇನೆ.

ತಮ್ಮಗಳ ಬಂಧು

ಕರಿಸಿದ್ದಪ್ಪ ಬೀರಪ್ಪ ಚಿಟಗೇರಿ ಸ್ವಾ॥ ರಾಮಗಿರಿ ಸಾ ಲಕ್ಷ್ಮೇಶ್ವರ

ಶ್ರೀ ಜಗದಾಚಾರ್ಯ ಸ್ವಾಮಿಗಳ ಒಡೆಯರವರ ಉದಯಪುರರಾಜಧಾನೀ ಪ್ರವಾಸ

ಶ್ರೀ ಪೀಠ ಸಿಂಹಾಸನಾಧೀಶ ಜಗದಾಚಾರ್ಯ ಜಗದ್ಗುರು ಚನ್ನಬಸಯ್ಯ ದಾಸಪುರಸಂಸ್ಥಾನದ ಶ್ರೀ ಸ್ವಾಮಿ ವಿರೂಪಾಕ್ಷ ಒಡೆಯರವರನ್ನು ಉದಯಪುರಸ್ಟೇಟಿನ ಕೆಲವು ಸರದಾರರು ಆಮಂತ್ರಣಕೊಟ್ಟು ಇದೇ ತಿಂಗಳ ಪ್ರಾರಂಭದಲ್ಲಿ ಉದಯಪುರ ರಾಜಧಾನಿಗೆ ಕರಿಸಿಕೊಂಡಿದ್ದರು. ಅಲ್ಲಿ ಜಗದಾಚಾರ್ಯ ಒಡೆಯರವರ ಮುಕ್ಕಾಂ 4-6 ದಿವಸವಿದ್ದು ಅಲ್ಲಿಯ ಕೆಲವು ಅಧಿಕಾರಿಗಳೊಡನೆ ಮತ್ತು ಸರದಾರರೊಡನೆ ಅನೇಕ ಧಾರ್ಮಿಕವಿಷಯದಲ್ಲಿ ಚರ್ಚಿಸಿ ಮುಂದೆ ಉದಯಪುರಸಂಸ್ಥಾನದಲ್ಲಿ ಅಥವಾ ಮೇವಾಡ ಪ್ರಾಂತದಲ್ಲಿ ಲಿಂಗಧಾರಣಾದಿವಿಷಯ ಹ್ಯಾಗೆ ಪ್ರಚಾರವಾಗಬೇಕು ಮೊದಲಾದ ವಿಷಯವನ್ನು ಪರಿಶೀಲಿಸಿಕೊಂಡು ಬಂದಿದ್ದು, ಮುಂದೆ ಕಾರ್ಯಾರಂಭಮಾಡಲಿದ್ದಾರೆ. ಉದಯಪುರಸಂಸ್ಥಾನದ ಸರ್ದಾರರಾದ ಶಕ್ತಸಿಂಹರೆಂಬವರು 70 ವರ್ಷದ ವೃದ್ಧರಿದ್ದು ಒಳ್ಳೇ ಶಿವಭಕ್ತರೂ ಧಾರ್ಮಿಕರೂ ಇರುತ್ತಾರೆ. ಇವರ ಮುಖ್ಯರಾದ ಧರ್ಮಾಚಾರ್ಯರೆಂಬುವರು 40 ವರ್ಷಗಳಿಂದ ಸ್ವಲ್ಪ ನಮಗೆ ಪರಿಚಿತರಾಗಿರುತ್ತಾರೆ. ಜಗದಾಚಾರ್ಯ ಒಡೆಯರವರ ದಯಮಾಡಿಸಿದ್ದಾಗ್ಗೆ ಮಹಾರಾಜರವರು ಉದಯಪುರದಲ್ಲಿಂದ 60 60 ಮೈಲು ದೂರದಲ್ಲಿರುವ ಜಯಸಮುದ್ರವೆಂಬ ಕೆರೆಯ ದಂಡೆಯಮೇಲೆ ಶಿಕಾರಿಗಾಗಿ ಹೋಗಿದ್ದು ಒಂದೆರಡು ತಿಂಗಳಿಂದ ಅಲ್ಲಿಯೇ ಇದ್ದರು. ಆದ್ದರಿಂದ ಮಹಾರಾಜರ ಮತ್ತು ಶ್ರೀ ಜಗದಾಚಾರ್ಯರ ಭೆಟ್ಟಿ ಆಗಲಿಲ್ಲ. ಶ್ರೀ ಜಗದಾಚಾರ್ಯ ಒಡೆಯರವರ ಶ್ರೀ ಗೌರೀಶಂಕರ ಅನೇಕ ವಿಷಯಗಳನ್ನು ಸಂಗ್ರಹಿಸಿಕೊಂಡು ಬಂದಿರುವರು.

ಈಗಿನ ಉದಯಪುರಸಂಸ್ಥಾನಾಧೀಶ್ವರರಿಗೆ ನೋಡಲು ಮೇವಾಡ ರಾಜ್ಯಾಧಿಪತ್ಯವು ಇವರಿಗೆ ದೊರಕಿತೆಂಬ ಬಗ್ಗೆ ಒಂದು ಮಹತ್ವವಾದ ಕಥೆಯನ್ನು ಉದಯಪುರಸಂಸ್ಥಾನದಲ್ಲಿರುವ ಪ್ರಾಚೀನ ಗ್ರಂಥಗಳಿಂದ ತಿಳಿದು ಬರುವದೇನೆಂದರೆ—ಬಪ್ಪರಾವಳನೆಂಬ ಓರ್ವ ಮಹಾಪುರುಷನು ಒಳ್ಳೇ ಶಿವಭಕ್ತನಾಗಿದ್ದು ಏಕಲಿಂಗಾರ್ಚನಾದಿಕ್ರಿಯೆಗಳಲ್ಲಿ ಧುರೀಣನಾಗಿ ಅದರಿಂದ ಶಿವನನ್ನು ಒಲಿಸಿಕೊಂಡು ಆ ಶಿವಾನುಗ್ರಹದಿಂದ ಮೇವಾಡರಾಜ್ಯಾಧಿಪತಿಯಾದನೆಂತಲೂ, ಆ ಬಪ್ಪರಾವಳರು ಪೂಜೆಮಾಡುತ್ತಿದ್ದ ಲಿಂಗವೇ ಈಗಲ್ಲ "ಏಕಲಿಂಗಜೀ" ಎಂಬ ನಾಮದಿಂದ ಉದಯಪುರಕ್ಕೆ 12 ಮೈಲು ದೂರದಲ್ಲಿ ಪ್ರಖ್ಯಾತವಿದ್ದು ಈ ಮಹಾದೇವಲಿಂಗವೇ ಈಗಲೂ ಈ ರಾಜವಂಶದವರಿಗೆ ಮುಖ್ಯ ಕುಲದೇವರಾಗಿರುವದು. ಮತ್ತು ಉದಯಪುರ ರಾಜವಾಡೆಯಲ್ಲಿ ಎಲ್ಲಿ ನೋಡಿದರು ಏಕಲಿಂಗವೆಂಬ ಶಿವಲಿಂಗದ ಫೋಟೋ ಹಾಗೂ ಗೋಡೆಗಳಲ್ಲೆಲ್ಲಾ ಏಕಲಿಂಗದ ದೇವಸ್ಥಾನ ಹಾಗೂ ಮೂರ್ತಿಯ ಚಿತ್ರವೇ ಚಿತ್ರಿಸಲ್ಪಟ್ಟಿವೆ. ಇಷ್ಟೇ ಅಲ್ಲದೆ ಆ ಏಕಲಿಂಗವನ್ನು ಪೂಜೆಮಾಡುತ್ತ ಕುಳಿತಿರುವಂತೆ ಈ ರಾಜವಂಶದ ಒಬ್ಬ ರಾಜರ ಲಿಂಗಪೂಜೆಯ ಫೋಟೋಗಳು ರಾಜವಾಡೆಯ ತುಂಬೆಲ್ಲಾ ಇರುವವು. ಇದು ಅಲ್ಲದೇ ಈ ರಾಜವಂಶದ ರಾಜರು ಯಾವ ಹುಕುಮಿನಲ್ಲಿಯೂ ತಮ್ಮ ಹೆಸರಿನ ಸಹಿಮಾಡುವದಿಲ್ಲ, ಆದರೆ "ಶ್ರೀ ಏಕಲಿಂಗಜೀ" ಎಂದು ಸಹಿಮಾಡುವರು. ಇದು ಏಕಲಿಂಗನ ರಾಜ್ಯವೆಂದು ಹೇಳುವರು. ರಾಜರು ಕೊಟ್ಟ ಯಾವ ಸನದುಗಳನ್ನು ಯಾವ ಹುಕುಮುಗಳನ್ನು ನೋಡಿದರೂ ಅವದರಲ್ಲಿ ಪ್ರಾರಂಭಕ್ಕೆ ಮೇಲೆ ಆದಿಯಲ್ಲಿ "ಶ್ರೀ ಏಕಲಿಂಗಜೀ" ಎಂದು ಬರೆಯುವರು. ಆದರೆ ಇತ್ತೀಚೆಗೆ ಉದಯಪುರಕ್ಕೆ 30 ಮೈಲು ದೂರದಲ್ಲಿ ಒಂದು ವೈಷ್ಣವ ದೇವಾಲಯವು ಸ್ಥಾಪಿತವಾಗಿ ಅದಕ್ಕೆ ನಾಥದ್ವಾರವೆಂಬ ಹೆಸರನ್ನಿಟ್ಟುಕೊಂಡು ರಾಜಾಶ್ರಯದಿಂದ ಒಳ್ಳೇ ಪ್ರಸಿದ್ಧಿಯಲ್ಲಿ ತಂದಿರುವರಲ್ಲದೆ ಸನದುಗಳ ಹಾಗೂ ಹುಕುಮುಗಳ ಕಾಗದದಮೇಲೆ ಆದಿಯಲ್ಲಿ ಬರೆಯುವ "ಶ್ರೀ ಲಿಂಗಜೀ" ಎಂಬುವ ಪವಿತ್ರ ನಾಮದೊಡನೆ ಉಪಜೀವಿಗಳಾದ ವೈಷ್ಣವರ ಪ್ರಾಬಲ್ಯದಿಂದ "ಶ್ರೀರಾಮಜೀ" ಎಂಬ ಹೆಸರು ಬರೆಯಲ್ಪಡುವದು. ಎಲ್ಲಿ ನೋಡಿದರೂ ಮಹಂತರುಗಳಿಂದ ವೈಷ್ಣವರ ಕಾಟ ತಪ್ಪದು.

ಆದರೆ ಇದೆಲ್ಲಾ ಇತಿಹಾಸದಿಂದ ಹಾಗೂ ಈಗಲೂ ರಾಜವಂಶದಲ್ಲಿ ನಡೆಗಿರುವ ಲಿಂಗಭಕ್ತಿಯ ವಿಷಯವನ್ನು ವಿಚಾರಮಾಡಿ ನೋಡಿದರೆ ಪೂರ್ವದಲ್ಲಿ ಈ ರಾಜವಂಶದವರು ಕೇವಲ ಲಿಂಗಧಾರಿಗಳಾದ ವೀರಶೈವರಾಜರಿರಬಹುದೆಂದು ಸ್ಪಷ್ಟವಾಗುತ್ತದೆ. ಆದರೆ ಕೆಲವು ಕಾಲದನಂತರ ಆಲಿಂಗಿಬ್ರಾಹ್ಮಣರ ಪ್ರಾಬಲ್ಯವು ಹೆಚ್ಚಾಗಿ ಲಿಂಗವನ್ನು ದೇಹದಿಂದ ತಗಿಸಿರಬಹುದೆಂತಲೂ ಕೇವಲ ಸ್ಥಾವರಲಿಂಗಪೂಜೆಗೆ ಹಚ್ಚಿರಬಹುದೆಂತಲೂ ತೋರುತ್ತದೆ. ಯಾಕೆಂದರೆ ಇಲ್ಲೀವರೆಗೆ ವೀರಶೈವಧರ್ಮಬೋಧಕರಾದ ಅಂಥಾ ಪಂಡಿತರು ಈ ದೇಶಕ್ಕೆ ಬಾರದ್ದರಿಂದ ವೀರಶೈವಧರ್ಮವು ಶಿಥಿಲವಾಗಿರುವದು ಸಹಜವಾಗಿರುತ್ತದೆ. ಆದರೆ ಸದ್ಯದ ಮೇವಾಡಪ್ರಾಂತದ ಹಾಗೂ ರಾಜರ ಪರಿಸ್ಥಿತಿಯನ್ನು ನೋಡಲಾಗಿ ಲಿಂಗಧಾರಣಾದಿ ವೀರಶೈವಧರ್ಮ ಪ್ರಚಾರವಾಗಲಿಕ್ಕೆ ಇದಕ್ಕಿಂತಲೂ ಉತ್ತಮವಾದ ಸ್ಥಾನವು ಹಿಂದುಸ್ಥಾನದಲ್ಲಿ ಮತ್ತೊಂದು ಸಿಗಲಾರದೆಂದು ನಿಸ್ಸಂದೇಹವಾಗಿ ಹೇಳಬಹುದು. ಆದ್ದರಿಂದ ಎಲ್ಲ ವೀರಶೈವಮಹಾಜನರೇ ವಿದ್ಯಾಪ್ರೋತ್ಸಾಹಕರಾದ ಶಿರಸಂಗಿ ದೇಸಾಯರಂಥಾ ಪುಣ್ಯಾತ್ಮ ಧರ್ಮಪ್ರೋತ್ಸಾಹಕ ದಾನಶೂರರೊಬ್ಬರು ವೀರಶೈವಧರ್ಮದಲ್ಲಿ ಶೀಘ್ರವೇ ಮುಂದಕ್ಕೆ ಬಂದು ತಮ್ಮ ಉದಾರಹೃದಯದಿಂದ ಧರ್ಮಪ್ರಸಾರಮಾಡಿಸಿದ ಸುದಿನವನ್ನು ಪರಶಿವನು ಎಂದಿಗೆ ಕಾಣಿಸುವನೋ ತಿಳಿಯದಾಗಿದೆ.

ಓರ್ವ ವೀರಶೈವ

ಬಳ್ಳಿಗಾವೆಯಿಂದ ಶಾಂತಿ

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಪಂಚಾಚಾರ್ಯಸ್ತುತಿಯ ಜೀವನಪಾಠ ಇಟ್ಟಾನೊಬ್ಬ ಶಾಸ್ತ್ರಿಯು ಶ್ರೀನಿವಾಸಾಚಾರ್ಯನೆಂಬ ಹೆಸರಿನಿಂದ ಬರೆದ ಲೇಖನದಲ್ಲಿ ವೀರಶೈವರು ತಮ್ಮ ಗ್ರಂಥಗಳನ್ನು ಶ್ರೀ ಗುರುಬಸವಲಿಂಗಾಯನಮಃ ಎಂದು ಪ್ರಾರಂಭಿಸುವರೆಂದ ಹಾಸ್ಯಮಾಡಿರುವನು. ಆದರಿಂದಲೂ ವೀರಶೈವರು ಬಸವನನ್ನು ಗುರುವೆಂದು ಭಾವಿಸುವರೆಂಬುದು ತಿಳಿದುಬರುವುದು ಮತ್ತು ಅದೇ ವ್ಯಕ್ತಿಯು ಲೇಖನದಿಂದಲೂ ಬಸವನಿಂದೆಯು ಕೇವಲ ಗರ್ವವನ್ನು ಮಾಡುವ ಮತ್ತು ಜನಕ್ಕದನ್ನು ದುರ್ಬೋಧಿಸುವ ಮೊದಲ ಶ್ರೀ ಬಸವನು ವಿಪ್ರನಾಗಿಯೂ ವೀರಶೈವಮತೋದ್ಧಾರಕನೆಂದು ಒಪ್ಪಿರುವನು. ವೀರಶೈವರ ಗುರುಗಳೂ ವಿರಕ್ತರೂ ಬಸವನಾಮವನ್ನು ಶಿವನಾಮದೊಡನೆ ಜಪಿಸುತ್ತಾ ಶಿಷ್ಯವರ್ಗದವನ್ನು ಬೋಧಿಸುತ್ತಲೂ ಇರುವರು. ಈ ವಿಷಯದಲ್ಲಿ ವೀರಶೈವರ ಪೂಜಾವಿಧಿ ಗ್ರಂಥಗಳೂ ಸಂಪ್ರದಾಯವೂ ಸಾಕ್ಷಿಯಾಗಿವೆ ಮತ್ತು ಈ ಮಂತ್ರಗಳನ್ನು ಶ್ರೀನಿವಾಸಾಚಾರ್ಯನು ನಿಂದಿಸಿರುವುದು ವಿರೋಧಿಪಕ್ಷದಿಂದ ಬಂದ ಒಂದು ಸ್ವತಂತ್ರವಾದ ಒಪ್ಪಿಗೆಯು.

ಇನ್ನು ಬಸವನು ನಿಜವಾಗಿಯೂ ಶಾಸ್ತ್ರಗಳ ಕೂಡ ತಾದಾತ್ಮ್ಯ ಹೊಂದಿದವನು ಎಂಬುದನ್ನು ಗಳ್ಳಪೇಟೆ ಗೆಜೆಟಿಯರಿನಲ್ಲಿ ಅವನ ಜೀವನದ ಅನೇಕ ಸಂಗತಿಗಳು ಪ್ರಮಾಣವಾಗಿವೆ. ಶಿವಶರಣರ ಕಥೆಯು ಬ್ರಾಹ್ಮಣರು ವಿಷಾದಿಸುವುದಕ್ಕೆ ಮಾದರಿಯಾದ ಚರಿತ್ರೆಯು ಜೈನರ ಲೇಖಕರ ಅಭಿಪ್ರಾಯದ ಪ್ರಕಾರವೇ ಈ ಕಥೆಗಳನ್ನು ನಾನಲ್ಲಿ ಅವರ ಮತಗಳ ಅಭಿಪ್ರಾಯದಿಂದ ಉದಾಹರಿಸಿ, ಮತ್ತು ಒಪ್ಪಿದುದರಿಂದ ಬರೆದಿರುವನು.

ಬಸವನು ಜೈನ ಸಂಪ್ರದಾಯ ಗ್ರಂಥವನ್ನು ಬರೆಯುವ ಮಾರ್ಗದಲ್ಲಿ ಜೈನನು ಹೀಗೆ ಎಂಬ ಶಂಕೆಯು ಬರುವುದು. ಸೂತ್ರಕ್ಕೆ ಭಾಷ್ಯವನ್ನು ಬರೆದವರೇ ಮತಾಚಾರ್ಯರೆಂದು ಇತ್ತೀಚೆಗೆ ಕೆಲವು ವ್ಯಾಖ್ಯಾನಕಾರರು ಪ್ರತಿಪಾದಿಸುವುದನ್ನು ಅನುಸರಿಸಿ ಒಂದು ಸೂತ್ರವನ್ನು ರಚಿಸಬೇಕು. ಆದರೆ ಸೂತ್ರಗಳಿಗೆ ದ್ವೈತ ಅದ್ವೈತ ವಿಶಿಷ್ಟಾದ್ವೈತಗಳೆಂಬ ಒಂದೊಂದು ಭಾಷ್ಯ

ಗಳಲ್ಲಿ ಒಂದು ಅಪೂರ್ವವಾದ ಸತ್ಯವೆಂದೆನಿಸುವ ಭ್ರಾಂತಿಯಲ್ಲ ಇಂತಹ ಸ್ವಾನುಭವಪೂರ್ಣವನ್ನು ಬರೆದು ತಮ್ಮ ದಾಕ್ಷಿಣ್ಯವನ್ನು ತೋರಿಸಿದವರು ಸಿದ್ಧಾಂತ ವಿಶಾರದರಲ್ಲದೇ ಬೇರೆ. ತಮ್ಮ ಮತದ ಸೂತ್ರಗಳಿಗೆ ವಿರೋಧವಾಗುತ್ತಲಿದೆ ಎಂದು ಕಾಣುವ ಸ್ಥಿತಿಯಿಲ್ಲದೆ ಆ ಎಚ್ಚರದ ಸೂತ್ರಗಳನ್ನು ಬಗ್ಗಿ ಎಳೆದು ತಮ್ಮ ಸಿದ್ಧಾಂತವನ್ನು ಸಿಲಿಕರು ವುದು ನಿಜವಾದ ಆಚಾರ್ಯಲಕ್ಷಣವಲ್ಲ

ಸತ್ಯವಾದ ಧರ್ಮವು ಸತ್ಪುರುಷರ ಆತ್ಮನಲ್ಲಿ ಹುದುಗಿರುವುದು ಆತ್ಮವಿಕಾಸವೇ ಧರ್ಮವಿಕಾಸವು ಆದರಿಂದಲೇ "ನಾಯಮಾತ್ಮಾ ಪ್ರವಚನೇನಲಭ್ಯೋ ಯಮೇವೈಷವೃಣುತೇ" ಎಂಬ ಮೊದಲಾದ ಶ್ರುತಿಗಳುಂಟು ಹಿಂದಿನ ಸತ್ಪುರುಷರು ವೇದಾಗಮಗಳಲ್ಲಿ ಬಿಚ್ಚಿದ ಹೃದಯವನ್ನು ತನ್ನ ಆತ್ಮಶಕ್ತಿಯಿಂದ ಗುರುತಿಸಿ ಆಯಾ ಕಾಲದ ಮಹಾಪುರುಷರು ತಮ್ಮ ದೇಶಕಾಲಪರಿಸ್ಥಿತಿಯನ್ನು ವಿಚಾರಿಸಿ ಸಾಮರ್ಥ್ಯವನ್ನುಳ್ಳವರಲ್ಲದರಿಂದ ಅಷ್ಟು ವಿಶದವಾಗಿ ಅರುಹದ ಧರ್ಮತತ್ವಗಳನ್ನು ತಮ್ಮಲ್ಲಿರುವ ಪ್ರಬಲ ಆತ್ಮವೀರ್ಯದಿಂದ ಮುಂದುವರಿಸುವ ಮಹಾತ್ಮರು ಧರ್ಮಸಂಸ್ಥಾಪಕರು ಅನಾದಿಕಾಲದಿಂದಲೂ ಈ ತತ್ವವನ್ನನುಸರಿಸಿ ಧರ್ಮಸಂಸ್ಥಾಪಕರು ಆಗಿರುವರು ಅವರು ಆತ್ಮನು ಓರ್ವನೆಂಬ ಉದಾತ್ತತತ್ವವನ್ನು ಬೀರಿಯೂ ಶೂದ್ರನು ವೇದಾಧಿಕಾರಿಯಲ್ಲವೆಂಬ ಸಿದ್ಧಾಂತವನ್ನು ಸಾರುವ ಬ್ರಹ್ಮವು ಜೀವನಿಂದ ಭಿನ್ನವು ಎಂದು ಬ್ರಹ್ಮಕ್ಕೂ ಜೀವನಿಗೂ ಇರುವ ಮಹಾಂತರವನ್ನು ಸಾರಿ ಆಂಶಿಕ ಪರಿಪೂರ್ಣ ಬ್ರಹ್ಮನನ್ನರಿಯಲು ವೇದಾಧ್ಯಯನವು ಜನ್ಮದಿಂದ ಕೆಲವರಿಗೆ ಮಾತ್ರ ಉಂಟು ಇನ್ನುಳಿದವರಿಗಿಲ್ಲ ಎಂಬ ಮತವನ್ನು ಹಂಚುವ ಭಾಷ್ಯಕಾರರಿಗಿಂತಲು ಎಷ್ಟೋ ಮಿಗಿಲು ಅವರಲ್ಲಿ ನಮ್ಮ ಬಸವನು

ದೇವರನ್ನು ತಿಳಿವುದು ವೇದಾಗಮಗಳಿಂದ ಆದರೆ ಆ ವೇದಾಗಮಗಳು ಬರಿಯ ಪುಸ್ತಕಗಳಲ್ಲಿ ಈಶನುಡಿಯೆನಿಸಿದ ನಿಗಮಾಗಮಗಳಂತೆ ಈಶನ ಸೃಷ್ಟಿಯೆನಿಸಿದ ಜಗತ್ತೂ ಶರೀರವೂ ವೇದವಾಗಿವೆ. ಇದನ್ನು ಗುರುತಿಸಿ ಬಸವನು ಶುದ್ಧ ಚರಣಕ್ಕೆ ಮುಖ್ಯತ್ವವನ್ನು ಕೊಟ್ಟುದುವನು ಸಂಸಾರ ತಾಪವನ್ನಾರಿಸುವ ಧರ್ಮಕ್ಕೆ ಮತ್ತು ಆ ಧರ್ಮದ ಉಚ್ಚತತ್ವಗಳಿಗೆ ಮುಮುಕ್ಷುಗಳಾದ ಆತ್ಮರುಗಳಲ್ಲಿ ಅಧಿಕಾರಿಗಳು ಎಂಬ ಉಚ್ಚತತ್ವವನ್ನು ವೀರಶೈವ ದೀಕ್ಷಾಪ್ರಾಪ್ತವಾದ ವೇದಾಗಮಗಳ ಸದಧ್ಯಯನದಿಂದಲೂ ಆತ್ಮಬಲದಿಂದಲೂ ಗುರುತಿಸಿ ಅಧ್ಯಯನ ಆತ್ಮಬಲಗಳನ್ನು ಹೇಳಿಯೂ ವೇದಾಗಮತತ್ವಗಳನ್ನು ತಿಳಿದು ತಿಳಿದಂತಾಚರಿಸಿದ ಸಿದ್ಧಾಂತಸ್ಥಾಪನಾಚಾರ್ಯರು ಪಂಚಾಧಿಕ ವೀರಶೈವಾಚಾರ್ಯರಲ್ಲದೆ ಬೇರೆಯವರಿಲ್ಲ ಅಂತಹ ಆಚಾರ್ಯರಲ್ಲಿ ಬಸವನು ಹೀಗಿದ್ದರೂ ಬಸವನನ್ನೆ ವೀರಶೈವರು ಪ್ರಥಮ ಆಚಾರ್ಯನೆನ್ನುವರು ಇದಕ್ಕೆ ಕಾರಣವುಂಟು ಉಳಿದ ಆಚಾರ್ಯರು ತಮ್ಮ ಜೀವಿತವನ್ನು ಭಕ್ತಿಮಾರ್ಗದಲ್ಲಿಸವಿಸಿ ದಾಸೋಹಂಭಾವದಿಂದುಂಡರಿಸಿಲ್ಲ ನುಡಿದಂತೆ ನಡೆವುದು, ಹಿಡಿದ ಶಿವವ್ರತವನ್ನು ಛಲದಿಂದ ಪಾಲಿಸುವುದು ತಾನು ಗುರುಲಿಂಗಜಂಗಮದ ದಾಸೋಹಕ್ಕಾಗಿಯೇ ಶರೀರವನ್ನು ಸವೆಯಿಸುವುದು ಭಕ್ತಿಮಾರ್ಗದಲ್ಲಿ ಶ್ರಮಸಾಧ್ಯವಾದದಾಗಿ ಉಳಿದ ಮಾರ್ಗದಲ್ಲಿಲ್ಲ. ಪರಿಪೂರ್ಣಾವಸ್ಥೆಯನ್ನು ಹೊಂದುವುದು ಭಕ್ತಿಮಾರ್ಗದಂತೆ ಉಳಿದ ಹೊಲಬಿನಲ್ಲಿಲ್ಲ ಇದರಿಂದ ಉಳಿದ ಆಚಾರ್ಯರಿಂದ ಅಥವಾ ಶರಣರಿಂದ ಬಸವನು ಬೇರೆ ಎಂಬುದಲ್ಲ ಬಸವನು ಶರಣರಲ್ಲೂ ಶರಣನು ಬಸವನಲ್ಲು ಅಡಗುವುದರಿಂದ ಬಸವನ ಪರಿಪೂರ್ಣತೆಯೇ ಅವರ ಪರಿಪೂರ್ಣತೆಯು. ಅವರ ಲೋಕೋತ್ತರತ್ವವೆ ಬಸವನ ಲೋಕೋತ್ತರತ್ವವು

ಗುಣಿಬಸವಚೆಂದವಮಿದ | ಪಣಿಪದೊಳ್ಪಾರ್ವಿದುದತ್ತ ಗಣನಿವಹ ಪದದ್ || ಗುಣಗಣಚರಿತ್ರಮಹಿಮೂ | ಷಣನೆನಿಸಿದೆವೆಸಗ ವಿಶ್ವವಿಶ್ವಂಭರೆಯೂಳ್ || ವೃಷಭೇಂದ್ರವಿಜಯ ೪೨—೫೦

ಬಸವನನ್ನು ಹಳಿವಾಗ ವಿಜಯಕಾರರು ಬಸವನು ಉಪನಯನವನ್ನು ಧಿಕ್ಕರಿಸಿದರಿಂದ ವೇದಾಧ್ಯಯನಕ್ಕೆ ಮಾರ್ಗವಿದ್ದಿಲ್ಲವಾದ್ದರಿಂದ ಅವನು ಅದರ ರಹಸ್ಯವನ್ನು ತಿಳಿಯಲಾರನೆಂದು ಬರೆದಿರುವರು ಇದು ನಮ್ಮ ಪ್ರಭೆಗೆ ಹೇಗೆ ರುಚಿಸುವುದೋ ತಿಳಿಯದು ಪ್ರಭೆಯ ಸಂಪಾದಕರಾಗಲಿ ಅದರ ಪೋಷಕರಾಗಲಿ ವಿಜಯಕಾರರ ಉಪನಯನವನ್ನು ಹೊಂದಿಲ್ಲ ಶ್ರೀ ರೇಣುಕಾದಿಗಳು ಆ ಉಪನಯನವನ್ನು ಹೊಂದಿ ಅದನ್ನು ಬೋಧಿಸುತ್ತಿರುವ ಮಾರ್ಗದಿಂದ ತಾವು ಚ್ಯುತರಾಗಿರುವೆವು ಇನ್ನು ಮುಂದೆ ಸುಸಂಸ್ಕೃತರಾಗುವೆವೆಂದರೆ ಅದೊಂದು ಮಾತು ಹಾಗಲ್ಲದಿದ್ದರೆ ಶ್ರೀ ರೇಣುಕಾದಿಗಳಿಗೂ ವೇದಾರ್ಥವು ತಿಳಿದಿದ್ದಿಲ್ಲ ಅವರು ಮತಸಾಪನಾಚಾರ್ಯರಲ್ಲ ಈ ವಿಷಯವನ್ನು ವಿಜಯಕಾರ ಪ್ರಭಾಕಾರರು ಎಂತು ಬಗೆಹರಿಸಿಕೊಳ್ಳುವರೋ ?

ಬಾವಟಿ ಸಿದ್ಧರಾಮಪ್ಪ

ಚಿತ್ರದುರ್ಗದ ಶ್ರೀಮನ್ಮಹಾರಾಜನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ರಜತೋತ್ಸವ

ಮೈಸೂರು ಸಂಸ್ಥಾನವನ್ನಾಳುವ ಮಹಾಸ್ವಾಮಿಯವರಾದ ಶ್ರೀಮನ್ಮಹಾರಾಜಾಧಿರಾಜ ಶ್ರೀಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್ರವರ ಸಿಂಹಾಸನಾರೋಹಣದ "ಸಿಲ್ವರ್‌ಜ್ಯುಬಿಲಿ" ಮಹೋತ್ಸವದಲ್ಲಿ ಭಾಗಿಗಳಾಗಿದ್ದ ಹಲವರಿಗೆ ಅದರಲ್ಲಿಯೂ ಮುಖ್ಯವಾಗಿ ವೀರಶೈವರಿಗೆ ಹತ್ತಿರವಾದ ಇನ್ನೊಂದು ಮಹೋತ್ಸವವನ್ನು ಧಾರ್ಮಿಕ ಸಾಮ್ರಾಜ್ಯದಲ್ಲಿ ನೆರವೇರಿಸುವ ಸುಯೋಗವು ಶೀಘ್ರವಾಗಿಯೇ ಲಭಿಸಿರುತ್ತದೆ ಗುರುಶ್ರೇಷ್ಠರೂ ಲೋಕಪೂಜ್ಯರೂ ಆಗಿರುವ ಶ್ರೀಮನ್ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರೇ ಈ ಅಭೂತಪೂರ್ವವಾದ ಸುಸಂಧಿಗೆ ಕಾರಣರಾಗಿರುತ್ತಾರೆ ಈ ಮಹನೀಯರು ಪ್ರಾಚೀನವೂ ಸರ್ವವೀರಶೈವ ಪೂಜ್ಯಸ್ಥಾನವೂ ಆದ ಚಿತ್ರದುರ್ಗ ಸಂಸ್ಥಾನಮಠಕ್ಕೆ ಅಧಿಕಾರವನ್ನು ವಹಿಸಿ ಇಂದಿಗೆ ಇಪ್ಪತ್ತೈದು ವರ್ಷಗಳು ಪೂರ್ತಿಯಾದವು ಆಸೇತು ಹಿಮಾಚಲಾಂತವಾದ ಭರತಖಂಡದ ಎಲ್ಲಾ ಭಾಗಗಳಲ್ಲೂ ಶಾಖಾಮಠಗಳುಳ್ಳುದಾಗಿಯೂ ವೀರಶೈವಸಮಾಜಕ್ಕೆ ಮುಖ್ಯ ಜಗದ್ಗುರು ಪೀಠವಾಗಿಯೂ ಇರುವ ಈ ಸಂಸ್ಥಾನ ಮಠದ ಘನತೆಗೆ ಅನುಗುಣವಾಗಿ ಈ ಮಹಾಪುರುಷರು ದೊರೆತಿರುವುದು ನಮ್ಮೆಲ್ಲರ ಭಾಗ್ಯೋದಯವನ್ನುವುದರಲ್ಲಿ ಸಂದೇಹವಿಲ್ಲ. ಇವರು ವಿದ್ಯಾವಂತರೂ ಆಚಾರಶೀಲರೂ ತಪೋನಿಷ್ಠರೂ ಪರಮವೈರಾಗ್ಯಶಾಲಿಗಳೂ ಅಸಾಧಾರಣವಾದ ಮೇಧಾವಿಗಳೂ ಲೋಕಸೇವಾಧುರೀಣರೂ ಆಗಿರುವರೆಂಬುದು ಜನಜನಿತವಾಗಿದೆ ಈ ಪೂಜ್ಯರು ಧಾರ್ಮಿಕ ನಿಜತತ್ವಗಳನ್ನು ಅರಿತು ಲೋಕಕಲ್ಯಾಣಕ್ಕಾಗಿ ಅವುಗಳನ್ನು ತ್ರಿಕರಣಪೂರ್ವಕವಾಗಿ ಆಚರಿಸಿ ತೋರಿಸಿರುವರೆಂಬುದನ್ನು ಅವರ ಈವರೆಗಿನ ಜೀವನಕ್ರಮದಿಂದಲೇ ನಿರ್ವಿವಾದವಾಗಿ ವ್ಯಕ್ತಪಡಿಸಿಕೊಳ್ಳಬಹುದಾಗಿದೆ ಇವರು ಅಧಿಕಾರಾರೂಢರಾದಾಗಿಂದಲೂ ವೀರಶೈವ ಜನಾಂಗದ ಪುರೋಭಿವೃದ್ಧಿಗಾಗಿ ವಿಶೇಷ ಪ್ರಯತ್ನ ಮಾಡುತ್ತಿರುವುದನ್ನು ಲಕ್ಷಿಸಿದರೆ ಜಗತ್ಪ್ರಖ್ಯಾತರಾದ ಶ್ರೀ ವಿವೇಕಾನಂದ ಮಹಾಸ್ವಾಮಿಗಳವರು ಕೊಂಡಾಡಿರುವ ಸನ್ಯಾಸತ್ವವೇ ಈ ಮಹಾಪುರುಷರ ಜೀವನತತ್ವವಾಗಿದೆ ಎಂಬುದು ವ್ಯಕ್ತಪಡುತ್ತದೆ ಕಳೆದ ಇಪ್ಪತ್ತೈದು ವರ್ಷಗಳ ಅವಧಿಯಲ್ಲಿ ಈ ವೀರಶೈವ ಸಮಾಜವು ಸರ್ವತೋಮುಖವಾಗಿ ಹೊಂದಿರುವ ಅಭಿವೃದ್ಧಿಯಲ್ಲಿ ಈ ಮಹನೀಯರು ತೋರಿರುವ ಆಸಕ್ತಿಯೂ ಇವರು ಮಾಡುತ್ತಿರುವ ಸಹಾಯವೂ ಬಹಳ ಮುಖ್ಯವಾಗಿದೆ ಇವರೇ ಎಂದರೆ ಜನಜೀವನದ ಹೀರಿಕೆ ಸ್ವಹಸ್ತದಿಂದ ಸತ್ಕರಿಸಿದರು ಆಗಿ ಪರಿಣಮಿಸಿತೆ ತಾರೆಂಬುದರಲ್ಲಿ ಬೇರೆಯೂ ಆಲೋಚಿಸಿ ಯಲ್ಲ ವಿದ್ಯಾಭಿವೃದ್ಧಿಗೂ ಧರ್ಮಸುಧಾರಣೆಗೂ ಸನಾತನ ಸಂಪ್ರದಾಯಗಳ ಈ ಯೋಗಿವರ್ಯರು ನಿರ್ವಹಿಸಿರುವ ಅತ್ಯುತ್ತಮ ಕಾರ್ಯಗಳು ಮೂವತ್ತೈದುಲಕ್ಷ ಪ್ರಜಾಸಂಖ್ಯೆಯುಳ್ಳ ಅಖಿಲವೀರಶೈವ ಸಮಾಜ ವ್ಯಕ್ತಿ ವ್ಯಕ್ತಿಗೂ ತಿಳಿದ ವಿಷಯಗಳಲ್ಲಿ ಮುಖ್ಯಾಂಶಗಳನ್ನು ಇಲ್ಲಿ ವಿವರಿಸುವುದು ಪ್ರಕೃತಲೇಖನದ ಉದ್ದೇಶವಲ್ಲ ಅಲ್ಲದೆ ಅವುಗಳೆಲ್ಲವನ್ನು ಸಂಗ್ರಹಿಸುವುದೂ ಅಸಾಧ್ಯ ಈಗ ಒದಗಿರುವ ಸಂದರ್ಭದ ಘನತೆಯನ್ನರಿತು ಅದಕ್ಕನುಗುಣವಾಗಿ ವರ್ತಿಸುವ ಶಿಷ್ಯಾಭಿಲಾಷೆಯು ಸ್ವರದಲ್ಲಿಯೂ ಉಂಟಾಗಲೆಂಬ ಉದ್ದೇಶದಿಂದ ಕೆಲವಂಶಗಳನ್ನು ವಸಿಸ್ತ್ರ ಸೂಚಿಸುವುದು ಅತ್ಯಗತ್ಯವೆಂದು ಭಾವಿಸುತ್ತೇನೆ

ವಿದ್ಯೆಯೇ ಸರ್ವಶ್ರೇಯಸ್ಸಿಗೂ ಮೂಲಕಾರಣವಾಗಿರುವುದರಿಂದ ವಿದ್ಯಾಭಿವೃದ್ಧಿಗೂ ಧಾರ್ಮಿಕ ಸುಧಾರಣೆಗೂ ಆವಶ್ಯಕವಾದ ಪ್ರೋತ್ಸಾಹಗಳನ್ನು ಕಲ್ಪಿಸುವುದೇ ತಮ್ಮ ಮುಖ್ಯ ಕರ್ತವ್ಯವೆಂಬ ಭಾವನೆಯಿಂದ ಈ ಮಹಾಪುರುಷರು ಕೊಟ್ಟಿರುವ ಉದಾರಾಶ್ರಯದಿಂದ ಮೈಸೂರು ಕೊಲ್ಹಾಪುರ ಹೈದರಾಬಾದು ಮುಂತಾದ ದೇಶೀಯ ಸಂಸ್ಥಾನಗಳಲ್ಲೂ ಧಾರವಾಡ ಮುಂತಾದ ಬ್ರಿಟಿಷ್ ಸೀಮೆಯಲ್ಲೂ ವಿದ್ಯಾರ್ಥಿ ನಿಲಯಗಳೂ ವೀರಶೈವ ಆಶ್ರಮಗಳೂ ಪಾಠಶಾಲೆಗಳೂ ಸಹ ಲಕ್ಷಾಂತರ ಹಣವ್ಯಯದಿಂದ ಸ್ಥಾಪಿಸಲ್ಪಟ್ಟು ಸುವ್ಯವಸ್ಥಿತವಾಗಿ ನಡೆಯುತ್ತಾ ಇವೆ ಅಲ್ಲದೆ ಸ್ವದೇಶ ಪರದೇಶಗಳಲ್ಲಿ ವಿದ್ಯಾಭ್ಯಾಸಂಗ ಮಾಡುತ್ತಿರುವ ವೀರಶೈವ ವಿದ್ಯಾರ್ಥಿಗಳಿಗೂ ಕೆಲ ಪರಮತ ವಿದ್ಯಾರ್ಥಿಗಳಿಗೂ ಸಹ ವೇತನಗಳು ಕೊಡಲ್ಪಡುತ್ತಾ ಇವೆ ಈ ವಿಷಾರ್ಡುಗಳ ಉಪಯೋಗವನ್ನು ಹೊಂದಿದ ನೂರಾರು ಜನರು ಈಗಾಗಲೇ ವೀರಶೈವಸಮಾಜದಲ್ಲಿ ಪ್ರೌಢರಾಗಿಯೂ ಪ್ರಮುಖರಾಗಿಯೂ ವಿರಾಜಿಸುತ್ತಿದ್ದಾರೆ

ಅಜ್ಞಾನಾಂಧಕಾರದಲ್ಲಿ ತೊಳಲುತ್ತಿದ್ದ ಈ ಸಮಾಜವನ್ನು ಎಚ್ಚರಿಸಲು ಈ ಮಹಾರಥರು ಅತಿಶಯ ಕಷ್ಟವನ್ನು ಸಹಿಸಿರುತ್ತಾರೆ ಇವರು ಮಠದಲ್ಲಿದ್ದುಕೊಂಡು ಭೋಗೋಪಚಾರಗಳಿಂದ ವ್ಯರ್ಥಕಾಲಹರಣಮಾಡದೆ ಈ ಇಪ್ಪತ್ತೈದು ವರ್ಷ ಕಾಲದಲ್ಲಿ ಬಹು ಭಾಗವನ್ನೆಲ್ಲಾ ಭರತಖಂಡದ ನಾನಾ ಭಾಗಗಳಲ್ಲಿ ಸಂಚರಿಸುವುದರಲ್ಲಿಯೇ ವಿನಿಯೋಗಿಸಿರುತ್ತಾರೆ ತಾವು ಹೋದೆಡೆಗಳಲ್ಲೆಲ್ಲಾ ಭಕ್ತಸಮೂಹವನ್ನಾಕರ್ಷಿಸಿ ಅವರ ಕಷ್ಟನಿಷ್ಠುರಗಳಲ್ಲಿ ಭಾಗಿಗಳಾಗಿ ಸಮಯೋಚಿತ ಆಚಾರನೀತಿಗಳನ್ನು ಅವರಿಗೆ ಬೋಧಿಸುತ್ತ ಅಸಾಧಾರಣವಾದ ಜನ ಜಾಗೃತಿಯನ್ನುಂಟುಮಾಡಿರುವ ವೀರಶೈವ ಗುರುಗಳಲ್ಲಿ ಅದ್ವಿತೀಯರಾಗಿರುತ್ತಾರೆ ಈ ದಿವ್ಯಮೂರ್ತಿಯ ಅಡಿದಾವರೆಗಳಲ್ಲಿ ಎರಗದ ಯಾವೊಬ್ಬ ಮಾನವನ ಆನಂದಕ್ಕೆ ಪಾರವೇ ಇಲ್ಲವು ಅಜ್ಞಾನಜನ್ಯವಾದ ಸಹಸ್ರಾರು ತೊಡರುಗಳನ್ನು ಬಗೆಹರಿಸಿ ಸಮಾಜಪುರುಷನು ವ್ಯಕ್ತಿಕವಾಗಿ ಬಾಳುವುದಕ್ಕೆ ಅವಶ್ಯಕವಾದ ಏಕಮತ್ಯವೂ ಸೋದರಭಾವವೂ ನೆಲೆಗೊಳ್ಳಲು ಈ ಪೂಜ್ಯಪಾದರು ಮಾಡಿರುವ ಏರ್ಪಾಡುಗಳು ಪ್ರಶಂಸನೀಯವಾಗಿವೆ ಸಮಾಜಕ್ಕೆ ಕೇಂದ್ರವೆಂತಿರುವ ಅಖಿಲಭಾರತವೀರಶೈವಮಹಾಸಭೆಯು ಕಾರಣಾಂತರಗಳಿಂದ ನಾಮಮಾತ್ರಾವಶೇಷವಾಗಿದ್ದುದನ್ನು ಕಂಡು ತಮ್ಮ ಅತ್ಯದ್ಭುತವಾದ ಶಕ್ತಿಯಿಂದ ಪುನರುಜ್ಜೀವನಗೊಳಿಸಲು ಪ್ರಯತ್ನಪಟ್ಟ ಮಹಾಮಹಿಮರು ಇವರಲ್ಲವೆ ? ಇವರ ಉದಾರ ಪ್ರೋತ್ಸಾಹದಿಂದಲೇ ಈ ಮಹಾಸಭೆಯು ಶಾಶ್ವತವಾಗಿ ನಿಲ್ಲುವ ಏರ್ಪಾಡಿಗಾಗಿ ವೀರಶೈವ ಶ್ರೀಮಂತರಿಂದ ಒಂದೆರಡುದಿವಸಗಳಲ್ಲಿಯೇ ಅರವತ್ತುನಾಲ್ಕುಸಾವಿರರೂಪಾಯಿಗಳವರೆಗೂ ವಾಗ್ದಾನವಾಗಿ ಆಗಲೇ ಮೂವತ್ತೈದುಸಹಸ್ರರೂಪಾಯಿಗಳು ಶೇಖರವಾದುದು ಯಾರಿಗೆತಾನೆ ಗೊತ್ತಿಲ್ಲ ?

ಈ ಗುರುವರೇಣ್ಯರ ಧಾರ್ಮಿಕಭಾವನೆಯು ಬಹು ಉದಾತ್ತವಾದುದು ರಾಗದ್ವೇಷವೂ ಡಾಂಭಿಕಾಚಾರವೂ ಇವರಿಗೆಂದೂ ಸಲ್ಲವು ವೀರಶೈವ ಧರ್ಮತತ್ವಗಳು ಮತ್ತು ಆಚಾರನೀತಿಗಳೂ ವೇದವೇದಾಂಗಸಮ್ಮತವಾಗಿಯೂ ಇಹಪರಲೋಕಸಾಧನವಾಗಿಯೂ ಇರುವವೆಂಬುದು ಲೋಕಪ್ರಖ್ಯಾತವಾಗಿದೆ ಇಂತಹ ಧರ್ಮವು ಯಾವನೊಬ್ಬ ವ್ಯಕ್ತಿಯ ಸ್ವತ್ತಲ್ಲವಾದುದರಿಂದ ಇದು ಪ್ರಸಾರವಾಗಿ ಸಮಸ್ತಮಾನವಕೋಟಿಯೂ ಉದ್ಧಾರವಾಗಲೆಂಬ ಕಾರುಣ್ಯಭಾವವೂ ನಮ್ಮ ಶ್ರೀಗಳವರಲ್ಲಿ ಯಾವಾಗಲೂ ತುಂಬಿತುಳುಕುತ್ತದೆ ಹಿಂದೂಧರ್ಮ ಪ್ರಪಂಚದಲ್ಲಿ ಇಂಥ ಗುರೋತ್ತಮರ ದರ್ಶನವು ಬಹುದುರ್ಲಭವವೆ ?

ಅನಂತಜಾತಿಗಳಿಗೂ ಧರ್ಮಗಳಿಗೂ ನೆಲೆಯಾಗಿರುವ ಈ ಭರತಖಂಡದಲ್ಲಿ ವೀರಶೈವಸಮಾಜದ ನ್ಯಾಯವಾದ ಹಕ್ಕುಬಾಧ್ಯತೆಗಳನ್ನು ಕಾಪಾಡಿಕೊಳ್ಳುವುದರಲ್ಲಿ ಮಹಾಸ್ವಾಮಿಗಳವರು ಅಪ್ರತಿಹತವಾದ ಶಕ್ತಿಸಾಹಸಗಳನ್ನು ತೋರಿಸಿರುತ್ತಾರೆ ಈ ಮಹನೀಯರ ಅಸಾಧಾರಣವಾದ ಪ್ರಯತ್ನ ವಿಶೇಷದಿಂದಲೇ ಆಗಿಂದಾಗ್ಗೆ ಸಮಾಜಕ್ಕೊದಗಿದ ಹಲವು ಪ್ರಮಾದಗಳು ಪಾರಾಗಿ ಸಮಾಜವೇ ತಲೆಯೆತ್ತಿಕೊಂಡು ತಿರುಗುವಂತಾಗಿರುತ್ತೆ ಇವರು ವೀರಶೈವರಾಗಿದ್ದಾಗ್ಯೂ ಇವರಲ್ಲಿ ಮೂರ್ತಿಗೊಂಡಿರುವ ನಿಸ್ವಾರ್ಥಬುದ್ಧಿಯನ್ನೂ ಭಕ್ತವಾತ್ಸಲ್ಯವನ್ನೂ ಗ್ರಹಿಸಿದ ಪರಧರ್ಮೀಯರೂ ಸಹ ಇವರಿಗೆ ತಲೆಬಾಗಿ ನಮಸ್ಕರಿಸುತ್ತಿದ್ದಾರೆ ಇವರು ಸ್ವಧರ್ಮಪರಿಪಾಲಕರಾಗಿದ್ದಾಗ್ಯೂ ಇತರರಿಗೆ ಶ್ರದ್ಧಾಸ್ಪದವಾಗಿರುವ ನಾನಾ ಮತಗಳಲ್ಲಿಯೂ ಸಹ ಗೌರವಗಳನ್ನಿಟ್ಟುಕೊಂಡು ಸರ್ವಸಮದೃಷ್ಟಿಯಿಂದ ವರ್ತಿಸುತ್ತಿದ್ದಾರೆ ಈ ವಿಧವಾದ ಉದಾರಸ್ವಭಾವರಾದ ಧರ್ಮಬೋಧಕರು ಹೆಚ್ಚು ಹೆಚ್ಚಾಗಿ ದೊರೆಯುವವರೆಗೂ ನಮ್ಮ ಹಿಂದೂದೇಶಕ್ಕೆ ಗತ್ಯಂತರವಿಲ್ಲವೆಂದೇ ಹೇಳಬಹುದು

ಮುಖ್ಯವಾಗಿ ಈ ಮಹಾಸ್ವಾಮಿಗಳವರ ದಿವ್ಯತೇಜಸ್ಸಿನ ಪ್ರಭಾವವು ಕಳೆದ ಕಾಲುಶತಮಾನದಲ್ಲಿ ವೀರಶೈವಜನಾಂಗದಲ್ಲೆಲ್ಲಾ ಪ್ರಸರಿಸಿ ಮಹದುಪಕಾರವನ್ನುಂಟು ಮಾಡಿರುವುದನ್ನು ಎಲ್ಲರೂ ಕಂಡುಕೇಳಿರುತ್ತಾರೆ ಈ ಮಹಾನುಭಾವರ ಜೀವನವನ್ನೂ ಕಾರ್ಯಕಲಾಪಗಳನ್ನೂ ಪರಿಶೀಲಿಸಿ ನೋಡಿದರೆ ಈ ಕಾಲದ ಅನೇಕ ಧರ್ಮಗುರುಗಳಿಗೆ ಅನುಕರಣೀಯವಾದ ಮೇಲ್ಪಂಕ್ತಿಯಾಗಿದ್ದಾರೆಂಬುದು ಮನಗಾಣುತ್ತದೆ ಪ್ರಪಂಚದ ಮಧ್ಯದಲ್ಲಿಯೇ ಜಲದೊಳಗಿರುವ ಕಮಲದಳದಂತೆ ಇರುತ್ತಿದ್ದಾಗ್ಯೂ ನಿರ್ಮಲವಾದ ಜ್ಞಾನವೈರಾಗ್ಯಸಂಪನ್ನರಾಗಿ ಪರಿಶೋಭಿಸುತ್ತಿದ್ದಾರೆ ಇಂತಹ ಮಹಾ ತಪಸ್ವಿಗಳಲ್ಲಿ ನಮಗಿರುವ ಭಕ್ತಿಯನ್ನು ಕಾರ್ಯತಃ ತೋರ್ಪಡಿಸುವ ಅಪೂರ್ವ ಸಮಯವು ನಮಗೊದಗಿರುವುದಿಲ್ಲವೆ ? ಈ ಇಪ್ಪತ್ತೈದು ವರ್ಷಗಳಲ್ಲಿ ಈ ಮಹನೀಯರು ಕೇವಲ ನಿಸ್ವಾರ್ಥರಾಗಿ ನಮ್ಮೆಲ್ಲರ ಪುರೋಭಿವೃದ್ಧಿಗಾಗಿ ಮಾಡಿರುವ ಅನಂತ ಮಹೋಪಕಾರಗಳ ಸಲುವಾಗಿ ನಮಗುಂಟಾಗಿರುವ ಆನಂದಾತಿಶಯಗಳನ್ನು ಅವರ ಚರಣಕಮಲದಲ್ಲಿ ಈ ರಜತೋತ್ಸವದ ಮೂಲಕ ಸಮರ್ಪಿಸಿ ಕೃತಕೃತ್ಯರಾಗಬೇಕಲ್ಲವೆ ? ಅಲ್ಲದೆ ಈಗಿನ ಸಂಕ್ಷೋಭಕಾಲದಲ್ಲಿ ಸಮಾಜಹಿತಚಿಂತಕರಾದ ಇಂತಹ ಧರ್ಮಪ್ರಭುಗಳು ಚಿರಕಾಲ ಪ್ರಸನ್ನರಾಗಿರುವಂತೆ ಶ್ರೀ ಪರಮಾತ್ಮನ ಅನುಗ್ರಹವನ್ನು ಪಡೆಯಬೇಕಾದುದು ನಮ್ಮೆಲ್ಲರ ಪವಿತ್ರವಾದ ಕರ್ತವ್ಯವಲ್ಲವೆ ? ಆದಕಾರಣ ಈ ಅತ್ಯಾನಂದಪ್ರದವಾದ ಈ ಮಹೋತ್ಸವವನ್ನು ಉಚಿತರೀತಿಯಿಂದ ಆಚರಿಸುವ ದೃಢ ನಿಶ್ಚಯವನ್ನು ವಹಿಸಿ ಎಲ್ಲಾ ವೀರಶೈವ ಸಹೋದರರೂ ಸಕಲ ಕೈಂಕರ್ಯ ಮಾಡಿ ಶ್ರೀಗಳವರ ದಿವ್ಯ ಕೃಪಾಕಟಾಕ್ಷಗಳ ಭಾಜನರಾಗುವ ಅವಕಾಶವನ್ನು ಸಮಾಜಬಾಂಧವರೆಲ್ಲರೂ ಅತಿಶೀಘ್ರದಲ್ಲಿಯೇ ಕಲ್ಪಿಸಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ

ಇಂತು ವಿಧೇಯ,

ದಾವಣಗೆರೆ } ಡಿ ಎಚ್ ಚಂದ್ರಶೇಖರಪ್ಪ ಬಿ ಎ., ಎಲ್‌ಎಲ್ ಬಿ.,
ತಾ|| ೧೮-೧-೩೯ } ಅಡ್ವೊಕೇಟ್ ಮತ್ತು ನ್ಯಾಯವಿಧಾಯಕ ಸಭೆಯ ಮೆಂಬರು

ಹೊರಡುವುದು ! ಶೀಘ್ರ ಹೊರಡುವದು !

ವಾರಪತ್ರಿಕ

ಶಿವಪ್ರತಾಪ.

ಸಂಪಾದಕರು—ಕಾವ್ಯತೀರ್ಥ ಗುರುಮೂರ್ತಿಶಾಸ್ತ್ರಿ, ಹಲ್ಲೂರ.

ರಾಜಕೀಯ ಸಾಮಾಜಿಕ, ಧಾರ್ಮಿಕ, ಔದ್ಯೋಗಿಕ, ಗ್ರಾಮಸುಧಾರಣ, ಗ್ರಾಮಸಂಘಟನೆ, ಮುಂತಾದ ವಿಷಯಗಳನ್ನೊಳಗೊಂಡು ಅಗದೀ ಸ್ವತಂತ್ರ ಮತ್ತು ಸ್ಫೂರ್ತಿದಾಯಕ ಲೇಖಗಳಿಂದ ಇದೇ ಮಾಘಮಾಸದಿಂದ ಹೊರಡುವುದು ಇದರಲ್ಲಿ ಸಂಕ್ರಾಂತಿಯಿಂದ(?) ಈಗಾಗಲೇ ಮಾದರೀ ಸಂಚಿಕೆಯು ಪ್ರಕಟವಾಗಿದೆ ಪತ್ರಬರೆದವರಿಗೆ ಅದನ್ನು ಪುಕ್ಕಟೆಯಾಗಿ ಕಳಿಸುತ್ತಿರುವೆವು ವಾರ್ಷಿಕ ವರ್ಗಣಿ ಟಪಾಲು ಮಹಸೂಲಸಹಿತ ಕೇವಲ ಮೂರು ರೂಪಾಯಿಗಳನ್ನು ಇಟ್ಟಿರುತ್ತೇವೆ ಅಪೇಕ್ಷೆ ಇದ್ದವರು ಕೂಡಲೇ ವರ್ಗಣಿದಾರರಾಗತಕ್ಕದ್ದು

ಹಾವೇರಿ } ವ್ಯವಸ್ಥಾಪಕ
ಶಿವಪ್ರತಾಪ ಕಾರ್ಯಾಲಯ

8

ಪ್ರಕಟನೆ

"ಜ್ಯೋತಿಶ್ಶಾಸ್ತ್ರಪಯೋನಿಧಿಃ"

ಫಲಕಾಂಡ ಶ್ಲೋಕತಾತ್ಪರ್ಯಗಳಿಂದಲೂ ಶ್ರೀಮನ್ಮಹಾರಾಜರವರ ಜಾತಕೋದಾಹರಣೆಯಿಂದಲೂ ಕೂಡಿರುತ್ತದೆ ಬೆಲೆ 4-0-0 ಟ ಖ 0-8-0.

"ಮುಹೂರ್ತರಾಜಚಂದ್ರಿಕೆ"

ಮುಹೂರ್ತಭಾಗ ಶ್ಲೋಕ ತಾತ್ಪರ್ಯಗಳಿಂದ ಕೂಡಿರುತ್ತದೆ ಬೆಲೆ 0 10 0 ಟ ಖ 0 4 0

ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುತ್ತವೆ ಮೇಲ್ಕಂಡ ಎರಡು ಪ್ರತಿಗಳನ್ನು ಒಟ್ಟಿಗೆ ತರಿಸುವವರಿಗೆ ಮಾತ್ರ ಟಪಾಲು ಖರ್ಚು ಮಾಫಿ ಇಂದ್ರ 0 8 0 ಬೆಲೆಯುಳ್ಳ ಧ್ಯಾನಶ್ಲೋಕಗಳಿಂದ ಕೂಡಿದ ಸುಂದರವಾದ 32 ಗ್ರಹಗಳ ಚಿತ್ರಪುಸ್ತಕ ಒಂದು ಉಚಿತವಾಗಿ ಕೊಡಲ್ಪಡುತ್ತದೆ ವಿಳಾಸವನ್ನು ಸ್ಪಷ್ಟ ಬರೆಯಬೇಕಾಗಿ ವಿನಂತಿ

ನಮ್ಮ ವಿಳಾಸ— 11

ಎ ಸಚ್ಚಿದಾನಂದ ಜೋಯಿಸರು ಸಿದ್ಧಾಂತಿ, ಮೈಸೂರು

೧೯೩೯ ನೆಯ ಇಸವಿ ಜನವರಿ ತಾ|| ೨೬ ರಿಂದ ೧೯೩೯ ನೆಯ ಇಸವಿ ಫೆಬ್ರವರಿ ತಾ|| ೧ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೬೦ ನೆಯ ಬಹುಧಾನ್ಯನಾಮಸಂವತ್ಸರದ ಪುಷ್ಯ ಬಹುಳ ಪಾಡ್ಯಮಿಯಿಂದ ಪುಷ್ಯ ಬಹುಳ ಸಪ್ತಮಿ ವರೆಗಿನ ಪಂಚಾಂಗ

ತಾ||	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಕರ ಮಾಸ
26	[1] ಗುರು	ಪಾಡ್ಯ	9-50	ಆಶ್ಲೇಷ	31 56	13
27	ಭಾನು	ಬಿದಿ	6 10	ಮಖ	30-16	14
28	ಸೋಮ	ತದಿ	3 48	ಪುಬ್ಬ	29 42	15
29	[2] ಮಂಗಳ	ಚೌತಿ	2 14	ಉತ್ತ	30 16	16
30	ಬುಧ	ಪಂಚ	1 58	ಹಸ್ತ	32-6	17
31	ಗುರು	ಷಷ್ಠಿ	3-1	ಚಿತ್ತ	35 6	18
1	ಶುಕ್ರ	ಸಪ್ತ	5 17	ಸ್ವಾತಿ	39 20	19

(1) ಮೂಲನಕ್ಷತ್ರ ಪ್ರವೇಶ ೨ ನೆಯವಾದ (2) ಮಳೆನಕ್ಷತ್ರ ಪ್ರವೇಶ ೩ ನೆಯವಾದ

ಮೈಸೂರು, ಮೈ ವಿದ್ಯಾಭಿವೃದ್ಧಿಯ ನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 12

ಮೈಸೂರ್ ಸ್ಟಾರ್

ಪ್ರತಿ ಶನಿವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಕಾರಾ ಪರಮಧಿಗತರಾಜಮಂಡಲಹಿತ್ಯಪಾ | ಘನಪಥತ್ಯಕಾವಕಾರಾ ಸತ್ಯಜ್ಞಸಹೃತ್ಯ ವೇಚರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸುತ್ಮಚೆಲಾಲೋಲಂಸುಧೀಪುಂಗವ ಸ್ತೋಮಾಭೀಪ್ಸದಲಿ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಶೀಮಾತೀತಯಶಃಪ್ರಕಾಶವಿಶ್ರುತಿಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತ್ರೀಯಂಸದಾಪೂರಿಗೆ ಗೌರೀಶಾನುಕಂಪೋದ್ವ್ಯಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರರಿಗೆ ೩-೮-೦]

[ಸಂಪುಟ ೪೨] ಮೈಸೂರು ಸ್ಟಾರ್ ಸನ್ ೧೯೨೯ ನೆಯ ಇಸವಿ ಫೆಬ್ರವರಿ ತಾರೀಖು ೨ ನೆಯ ಶನಿವಾರ [ಸಂಚಿಕೆ ೫

(ಚಿತ್ರಗುಪ್ತದಿಂದ)

ವಿಚಾರಣಾ ಸಮಿತಿಯ ವರದಿಯ ಮೇಲೆ ಸರ್ಕಾರಿ ಆರ್ಡರು

ವರದಿ ಮತ್ತು ಅದರ ಪ್ರಯೋಜನ

ಈ ವಿಧವಾದ ವಿಚಾರಣಾ ಕಾರ್ಯವು ಜಸ್ಟವಾದುದ ಜನರಲ್ಲಿ ಗಾಬರಿಯೂ ಜಾತಿ ದ್ವೇಷವೂ ಉಂಟಾಗಿದ್ದುದರಿಂದ ಅನೇಕ ವಿಧವಾದ ಅಭಿಪ್ರಾಯಗಳೂ ಊಹೆಗಳೂ, ಜನರ ಮನಸ್ಸಿನಲ್ಲಿ ಹಲವಾರು ವಿಚಾರಣಾ ಕಾಲದಲ್ಲಿ ಸಾಕ್ಷಿಗಳ ತಂತಮ್ಮ ಮನಸ್ಸಿಗೆ ತೋರಿದಂತೆ ಹೇಳಿಕೆ ಕೊಟ್ಟ ಅವಕಾಶ ದಾಕ್ಷಿಣ್ಯರಹಿತ ಧ್ಯೇಯ ಕಾರ್ಯತಃ ಅಚರಣೆ ಮುಂತಾದ ವಿಷಯಗಳಲ್ಲಿ ಸಮಿತಿಯವರು ಪರಸ್ಪರ ಅಸಂಬದ್ಧಾಭಿಪ್ರಾಯ ಪಟ್ಟಿರುವುದು ಸ್ವಾಭಾವಿಕವಾಗಿಯೇ ಇದೆ ಆದರೂ ಒಟ್ಟಿನಲ್ಲಿ ಅನೇಕ ಅನುಮಾನಗಳ ಪರಿಹಾರವಾಗಲು ವರದಿಯು ಸಹಾಯಕವಾಗಿದೆ

ವಿಚಾರಣೆಯಿಂದ ಜನರ ಮನಸ್ಸಿನಲ್ಲಿ ನೆಮ್ಮದಿಯುಂಟಾಯಿತು ಸಮಿತಿಯವರು ಹೇಳುವಂತೆ ಗಲಭೆಯು ಅಲ್ಪವಾದುದಾದರೂ ಆ ವಿಚಾರವಾಗಿ ಅನೇಕ ಉತ್ಪ್ರೇಕ್ಷೆಗಳು ಹೊರಟಿದ್ದುದಲ್ಲದೆ ವಿಚಾರಣಾ ಸಮಿತಿಯನ್ನು ನೇಮಿಸಿದುದರಿಂದ ಬಹುಮಟ್ಟಿಗೆ ನಿವಾರಣೆಯಾಯಿತು

ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರು

ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರು ಸ್ವಲ್ಪ ಮುಂದಾಲೋಚನೆ ಮಾಡಿ ಕಾರ್ಯ ನಡೆಸಿದ್ದರೆ ಈ ಗಲಭೆಯನ್ನು ತಪ್ಪಿಸಬಹುದಾಗಿತ್ತೆಂದು ಸಮಿತಿಯವರು ಅಭಿಪ್ರಾಯಪಡುತ್ತಾರೆ ಆದರೆ, ದುರದೃಷ್ಟವಶಾತ್ ಡೈರೆಕ್ಟರು ಸಂಚಾರದಲ್ಲಿದ್ದುದರಿಂದ ವಿಗ್ರಹಸಲ್ಲಿಟ್ಟದ ವಿಷಯವಾಗಿ ನಡೆಯುತ್ತಿದ್ದ ಒದಾವಣೆಗಳನ್ನೂ ಚಳವಳಿಯನ್ನೂ ಅವರು ಸರಿಯಾಗಿ ತಿಳಿದುಕೊಳ್ಳಲು ಸಾಧ್ಯವಾಗಲಿಲ್ಲ ಇವರು "ಹುಡುಗರ ಮನಸ್ಸಿಗೆ ನೋವುಂಟಾಗದಂತೆ ನೋಡಿಕೊಳ್ಳುತ್ತೇನೆ" ಎಂದು, ಸರ್ಕಾರದವರಿಗೆ ಭರವಸೆ ಕೊಟ್ಟಿದ್ದರೂ ಅದನ್ನು ಸಂಚಾರದಿಂದ ಕಡಪೆ ವಾಪಸು ಬರದಿದ್ದುದು ದುರದೃಷ್ಟವೇ ಸರಿ

ವಿಗ್ರಹದ ಸ್ಥಾಪನೆಯ ವಿಷಯಕ್ಕೆ ಡೈರೆಕ್ಟರೇ ಸ್ವಂತ ಜವಾಬ್ದಾರರೆಂದು ತಾವುವಂತೆ ಸರ್ಕಾರದವರು ನಡೆದುಕೊಂಡರು ಎಂದು ಸಮಿತಿಯವರು ಹೇಳುವ ವಿಚಾರದಲ್ಲಿ, ವಾಸ್ತವವಾಗಿ ನಡೆದುದೂ ಹಾಗೆಯೇ ಸರಿ ಈ ವಿಚಾರಕ್ಕೆ ಗಮನಕೊಟ್ಟು "ದೇವಸ್ಥಾನ" ಕಟ್ಟದಂತೆ ನೋಡಿಕೊಳ್ಳಿ ಎಂದು ಮಾತ್ರ ಸರ್ಕಾರದವರು ಡೈರೆಕ್ಟರಿಗೆ ತಿಳಿಸಿದ್ದರು ಸರ್ಕಾರದವರು ಹೀಗೆ ಮಾಡಿದುದು ಸರಿಯೆಂದು ಸಮಿತಿಯವರೂ ಒಪ್ಪಿಕೊಂಡಿದ್ದಾರೆ ಆದುದರಿಂದ ಜುಲೈ 20 ನೇ ತಾರೀಖಿನ ದಿನ ವಿಗ್ರಹವನ್ನು ಸ್ಥಾಪನೆ ಮಾಡುವಂತೆ ಸರ್ಕಾರದವರು ಹುಕುಂ ಮಾಡುವ ವರೆಗೆ ಪ್ರತಿಯೊಂದೂ ಡೈರೆಕ್ಟರ ಅಧೀನವಾಗಿಯೇ ಇತ್ತು

ಪೋಲೀಸಿನವರು

ಪೋಲೀಸಿನವರು ಹುಡುಗರ ವಿಚಾರದಲ್ಲಿ ಬಹಳ ತಾಳ್ಮೆಯನ್ನು ತೋರಿಸಿದರೆಂದು ಸಮಿತಿಯವರು ಅಭಿಪ್ರಾಯಪಟ್ಟು ಆಮೇಲೆ ಇಂಥ ತಾಳ್ಮೆಗೂ ಒಂದು ಮಿತಿ ಇರಬೇಕು ಮುಂದೆ ಈ ಬಗೆಯಾದ ಗಲಭೆಗಳು ನಡೆಯುವುದಾದರೆ "ಲಾ ಮಾರಿ ಸ್ವಲ್ಪವಾದರೂ ನಡೆಯಬೇಕು" ತೋರಿಕೊಳ್ಳುತ್ತಾರೆಂದು ತಿಳಿದುಬಂದಕೂಡಲೆ ತಕ್ಕ ಗಮನಕೊಟ್ಟು ಅದನ್ನು ನಿಲ್ಲಿಸಬೇಕು" ಎಂದು ಸೂಚಿಸಿರುವರು ಕೆಲವು ಪೋಲೀಸ್ ಅಧಿಕಾರಿಗಳು 1921 ನೇ ಇಸವಿ ಆಗಸ್ಟು 7 ನೇ ತಾರೀಖಿನ ಸರ್ಕಾರಿ ಆರ್ಡರು ಕಾವು ಇಂಥಹ ಸಂದರ್ಭಗಳಲ್ಲಿ ಸವ್ಯಸಿರಬೇಕೆಂದು ಹೇಳುವುದೆಂದು ಭಾವಿಸಿರುವಂತೆ ಕಾಣುತ್ತದೆ ಸಮಿತಿಯವರು ಅಭಿಪ್ರಾಯಪಡುವಂತೆ ಆರ್ಡರು, ಇಂಥಹ ಎಲ್ಲಾ ಸಂದರ್ಭಗಳಿಗೂ ಅನ್ವಯಿಸತಕ್ಕದ್ದಲ್ಲ ವಿದ್ಯಾರ್ಥಿಗಳು 'ಲಾ' ಮಾರಿ ವರ್ತಿಸಿದ ವಿಚಾರದಲ್ಲಿ ಪೋಲೀಸಿನವರು ತಕ್ಕಂತೆ ಕೆಲಸ ಮಾಡಬೇಕೆಂಬುದು ಸರ್ಕಾರದವರ ಅಭಿಪ್ರಾಯವಲ್ಲವೇ ಅಲ್ಲ

ಸಮಿತಿಯವರ ಮುಖ್ಯ ಆಕ್ಷೇಪಣೆಗಳು

ಸಮಿತಿಯವರು ಮುಖ್ಯವಾಗಿ, ಜುಲೈ 30 ನೇ ತಾರೀಖಿನ ದಿನ ಪೋಲೀಸಿನವರೂ ಮ್ಯಾಜಿಸ್ಟ್ರೇಟರೂ ತಂತಮ್ಮ ಕರ್ತವ್ಯವನ್ನು ನೆರವೇರಿಸಲಿಲ್ಲವೆಂದು ಆಕ್ಷೇಪಿಸುತ್ತಾರೆ ಅವುಗಳು ಯಾವುವೆಂದರೆ —

1 ಯಾವ ಕಾರ್ಯ ಮಾಡಬೇಕೆಂಬ ಬಗ್ಗೆ ಸರಿಯಾದ ಅಂದಾಜು ಮಾಡಿಕೊಳ್ಳಲಿಲ್ಲ ಮತ್ತು ಪೋಲೀಸ್ ಸ್ಟೇಷನ್‌ಗಳಿಗೂ ಗಲಭೆಗಳು ನಡೆದ ಸ್ಥಳಗಳಿಗೂ ವರ್ತಮಾನ ಕಳುಹಿಸುವ ಏರ್ಪಾಡುಗಳಿರಲಿಲ್ಲ

2 ಪ್ರತಿಮೆ ಮಾಡಲ್ಪಟ್ಟಿದ್ದವರನ್ನು ಬಿಡುಗಡೆ ಮಾಡಿದ ಒಡನೆ ಜನರ ಗುಂಪನ್ನು ಚದರಿಸಲು ತಕ್ಕ ಏರ್ಪಾಡು ಮಾಡಲಿಲ್ಲ

3 ಜುಲೈ 30 ನೇ ತಾರೀಖಿನ ರಾತ್ರಿ ದೊಂಬಿ ನಡೆಯುತ್ತಿದ್ದಾಗಲೂ ಆದ ಬಳಿಕವೂ ತಪ್ಪಿತಸ್ಥರನ್ನು ದಸ್ತಗಿರಿ ಮಾಡಲಿಲ್ಲ

4 ಗುಂಡುಗಳು ಹಾರಿಸಲ್ಪಟ್ಟವೆಂದು ಹೇಳುವ ಮನೆಗಳನ್ನು ಶೋಧಿಸಲಿಲ್ಲ

5, ತನಿಖೆಕ್ರಮ ಜರುಗಿಸುವುದನ್ನು ನಿಧಾನಮಾಡಿದರು

ಮೊದಲನೆ ವಿಚಾರದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಹೇಳುವುದೇನೆಂದರೆ —ಯಾವ ರೀತಿ ಕಾರ್ಯ ಮಾಡಬೇಕೆಂಬ ಬಗ್ಗೆ ಮೊದಲೇ ಯೋಚನೆ ಮಾಡಲಾಗಿತ್ತು ಅನೇಕ ರಾತ್ರಿ ದಸ್ತಗಿರಿಯವರನ್ನೂ 50 ಜನ ರಿಸರ್ವ್ ಪೋಲೀಸಿನವರನ್ನೂ ಸಿದ್ಧವಾಗಿಟ್ಟುಕೊಂಡು, ಅಗತ್ಯವಾದ ಕಡೆಗೆ ಕಳುಹಲಿ ಕಳುಹಿಸಲ್ಪಡಬೇಕಾಗಿತ್ತು, ಸ್ಥಳದಿಂದ ಸ್ಥಳಕ್ಕೆ ಸಮಾಚಾರ ಕಳುಹಿಸಿಕೊಳ್ಳಲು ಟೆಲಿಫೋನ್ ಮತ್ತು ಇತರ ಏರ್ಪಾಡುಗಳನ್ನು ಮಾಡಿದ್ದರೂ ಈ ಏರ್ಪಾಡುಗಳು ಸಾಕಾಗಲಿಲ್ಲವೆಂದು ಸಮಿತಿಯವರು ಅಭಿಪ್ರಾಯಪಡುತ್ತಾರೆ.

ಸಿಟಿ ಮ್ಯಾಜಿಸ್ಟ್ರೇಟರು

ಎರಡನೆ ವಿಚಾರದಲ್ಲಿ —ತಕ್ಕ ಎಚ್ಚರಿಕೆ ತೆಗೆದುಕೊಳ್ಳದೆ ಮುಖಂಡರನ್ನು ಬಿಡುಗಡೆ ಮಾಡಿದ ಜವಾಬ್ದಾರಿಯು ಸಿಟಿ ಮ್ಯಾಜಿಸ್ಟ್ರೇಟರನ್ನು ಹೊಂದಿದ್ದಾಗಿದೆ ಸಮಿತಿಯವರು ಹೇಳುವಂತೆ ಇತರ ಸರ್ಕಾರಿ ಆರ್ಡರ್ ಆಗಿದೆ ಯೆಂದು ಖಾಸಗಿ ದೊಡ್ಡ ಮನುಷ್ಯರೊಬ್ಬರು ಬಾಯಿಮಾತಿನಲ್ಲಿ ಹೇಳಿದ ಆಧಾರದ ಮೇಲೆ ಬಂಧನದಲ್ಲಿದ್ದವರನ್ನು ಬಿಡುಗಡೆ ಮಾಡಿದರು ಆರ್ಡರು ತಮ್ಮ ಸ್ವಂತದ್ದಲ್ಲವಾದುದರಿಂದ ಖಾಸಗಿ ದೊಡ್ಡ ಮನುಷ್ಯರು ಎಷ್ಟೇ ಜವಾಬ್ದಾರಿಯುಳ್ಳವರಾಗಿದ್ದರೂ ಅವರ ಬಾಯಿಮಾತಿನ ಆಧಾರದ ಮೇಲೆ ಮುಖಂಡರನ್ನು ಬಿಡುಗಡೆ ಮಾಡಬಾರದಾಗಿತ್ತು ಅಲ್ಲದೆ ಮುಖಂಡರನ್ನು ಬಿಡುಗಡೆಮಾಡಿದಮೇಲೆ ಜನರ ಗುಂಪನ್ನು ಚದರಿಸಲು ತಕ್ಕ ಏರ್ಪಾಡು ಮಾಡಬೇಕಾಗಿತ್ತಲ್ಲದೆ ಮೆರವಣಿಗೆಯನ್ನು ಪೋಲೀಸಿನವರು ಹಿಂಬಾಲಿಸಲು ಅನುಕೂಲವಾಗುವಂತೆ ಅವರಿಗೆ ಟೆಲಿಫೋನ್ ಮೂಲಕ ತಿಳಿಸಬೇಕಾಗಿತ್ತು

ಸಮಿತಿಯವರ ಈ ಅಭಿಪ್ರಾಯಗಳನ್ನು ಸರ್ಕಾರದವರು ಅನುಮೋದಿಸುತ್ತಾರೆ ಸರ್ಕಾರಿ ಆರ್ಡರನ್ನು ಒಬ್ಬರು ಖಾಸಗಿ ದೊಡ್ಡ ಮನುಷ್ಯರ ಮೂಲಕ ಕಳುಹಿಸಿದರೆಂದು ಸೂಚಿಸಿರುವ ಅಭಿಪ್ರಾಯವು ನಿರಾಧಾರವಾದುದೆಂದು ಬೇರೆ ಹೇಳಬೇಕಾಗಿಲ್ಲ

ಮೆರವಣಿಗೆಯು ಎಲಿಫಂಟ್‌ಗೇಟ್ ಹತ್ತಿರ ಹೋದುದನ್ನು ನೋಡಿದ ಕೂಡಲೆ ಪೋಲೀಸ್‌ನವರು ತಮ್ಮ ಅಧಿಕಾರಿಗಳಿಗೆ ತಿಳಿಸಿ ಅವರು ತಕ್ಕ ಎಚ್ಚರಿಕೆ ತೆಗೆದುಕೊಳ್ಳುವಂತೆ ಸೂಚಿಸಬೇಕಾಗಿತ್ತೆಂದು ಸಮಿತಿಯವರ ಪಡೆದ ಅಭಿಪ್ರಾಯದ ವಿಚಾರದಲ್ಲಿ, ಮೆರವಣಿಗೆಯವರ ಅಭಿಪ್ರಾಯವು ಗಳಿಗೆ ಗಳಿಗೆಗೂ ಬದಲಾವಣೆಯಾಗುತ್ತಿದ್ದುದರಿಂದ ಅವರು ಏನುಮಾಡುವರೆಂಬುದನ್ನು ತಿಳಿದುಕೊಳ್ಳಲು ಅಸಾಧ್ಯವಾಗಿದ್ದುದರಿಂದಲೂ ಪೋಲೀಸಿನವರನ್ನು ಪಟ್ಟಣದ ನಾನಾಭಾಗಗಳಿಗೆ ಕಳುಹಿಸಿಬಿಟ್ಟಿದ್ದುದರಿಂದಲೂ ಆ ಕಾಲದಲ್ಲಿ ಗಲಭೆಯನ್ನು ತಪ್ಪಿಸುವುದಕ್ಕೆ ತಕ್ಕಷ್ಟು ಸಿಬ್ಬಂದಿಯನ್ನು ಒಟ್ಟುಗೂಡಿಸುವುದು ಸಾಧ್ಯವಾಗುತ್ತಿತ್ತೆ ಎಂಬ ವಿಚಾರದಲ್ಲಿ ಸಂಶಯಪಡಬೇಕಾಗಿದೆ

ದಸ್ತಗಿರಿ ಮಾಡದಿದ್ದ ವಿಚಾರ

ಜುಲೈ 30 ನೇ ತಾರೀಖಿನ ರಾತ್ರಿ ದಸ್ತಗಿರಿಯನ್ನೇಕೆ ಮಾಡಲಿಲ್ಲವೆಂಬ ವಿಚಾರದಲ್ಲಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರೂ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರೂ ಈ ಕೆಳಗೆ ಕಂಡ ಸಮಜಾಯಿಷಿ ಕೊಟ್ಟಿದ್ದಾರೆ —

ದೊಂಬಿ ನಡೆದ ಸ್ಥಳಕ್ಕೆ ಮುಖ್ಯಾಧಿಕಾರಿಗಳು ಬರುವಷ್ಟರಲ್ಲಿ ದೊಂಬಿಯು ಮುಗಿದುಹೋಗಿತ್ತು ಕೆಲವು ಪೋಲೀಸ್‌ನವರಿಗೆ ಏಟು ಬಿದ್ದಿದ್ದುದರಿಂದಲೂ ಉಳಿದ ಕೆಲವರ ಗಾಯಗೊಂಡ ಪೋಲೀಸ್ ಅಧಿಕಾರಿಗಳೊಡನೆ ಆಸ್ಪತ್ರೆಗೆ ಹೋಗಿದ್ದುದರಿಂದಲೂ ಆಗ ಅಲ್ಲಿ ಒಬ್ಬ ಪೋಲೀಸಿನವನೂ ಇರಲಿಲ್ಲ ಹಿಂದುಗಳೂ ಮುಸಲ್ಮಾನರೂ ಸ್ಕೂಲಿನ ಎರಡು ಕಡೆ ಕೆಲವು ಗುಂಪುಕಟ್ಟಿಕೊಂಡು ಹೊಡೆದಾಟಕ್ಕೆ ಸಿದ್ಧವಾಗಿದ್ದುದರಿಂದ ಅವರನ್ನು ಚದರಿಸುವುದು ಅವಶ್ಯಕವಾಗಿತ್ತು ಯಾರನ್ನಾದರೂ ದಸ್ತಗಿರಿ ಮಾಡುವ ಆಲೋಚನೆಯನ್ನು ಮೊದಲನೆ ಸವಾರರ ದಳವು ಬಂದಾಗ ಮಾತ್ರ ಮಾಡಬಹುದಾಗಿತ್ತೇ ವಿನಹ ಅದಕ್ಕೆ ಮೊದಲು ಅಂತಹ ಯೋಚನೆಮಾಡುವುದಕ್ಕು ವ್ಯವಧಾನವಿರಲಿಲ್ಲ ಆದರೆ ಮಿಲಿಟರಿಯವರ ಬಂದ ಕೂಡಲೆ ಗುಂಪಿನ ಜನರು ಅಕ್ಕಪಕ್ಕದ ಸಂದುಗೊಂದುಗಳಲ್ಲಿ ಓಡಿಹೋದರು ಆದುದರಿಂದ ದೊಂಬಿ ನಡೆಸಿದವರನ್ನು ಆ ಕೂಡಲೆ ದಸ್ತಗಿರಿ ಮಾಡುವ ಸಂಭವವು ಅಸಾಧ್ಯವಾದುದು ಅಲ್ಲದೆ ಆಗ ಯಾರನ್ನಾದರೂ ದಸ್ತಗಿರಿ ಮಾಡಿದ್ದರೆ, ಅವರನ್ನು ಬಿಡಿಸಿಕೊಳ್ಳುವುದಕ್ಕೆ ಜನರು ಪ್ರಯತ್ನಪಡುವ ಆಸ್ಪದವು ಗಲಭೆಗೆ ಅವಕಾಶವಾಗುತ್ತಿತ್ತು ಅಲ್ಲದೆ ಆ ತನ್ನಡ್ಡ ಪಟ್ಟಣದ ಬೇರೆ ಬೇರೆ ಕಡೆಗಳಲ್ಲಿ ಹಿಂದುಗಳು ಸೇರಿ ಗಲಾಟೆಮಾಡಲು ಪ್ರಯತ್ನಿಸುತ್ತಿದ್ದಾರೆಂದು ವರ್ತಮಾನ ಬಂದುದರಿಂದ ಅವರನ್ನು ಚದರಿಸುವ ಏರ್ಪಾಡು ಮಾಡುವುದು ಅವಶ್ಯಕವಾಗಿತ್ತು ಆಮೇಲೆ ದಂಡಿನಿಂದ ಮುಸಲ್ಮಾನರು ಗುಂಪಾಗಿ ಬರುತ್ತಿದ್ದಾರೆಂದು ವರ್ತಮಾನ ಬಂತು ಮಧ್ಯರಾತ್ರಿ ಕಳೆಯುವವರೆಗೂ ಅಧಿಕಾರಿಗಳು ಮುಂದೆ ಅನಾಹುತಗಳು ಸಂಭವಿಸದಂತೆ ನೋಡಿಕೊಳ್ಳುವುದರಲ್ಲೇ ತೊಡಗಿದ್ದರು ಡಿ ಮ್ಯಾಜಿಸ್ಟ್ರೇಟರು ಎರಡರಲ್ಲಿ ಒಂದು ದಾರಿಯನ್ನು ಆರಿಸಿಕೊಳ್ಳಬೇಕಾಯಿತು ದಸ್ತಗಿರಿ ಮಾಡಿ ತನಿಖೆ ಕ್ರಮ ನಡೆಸಲು ಪ್ರಯತ್ನಿಸುವುದು ಅಥವ ಇದ್ದ ಸಿಬ್ಬಂದಿಯನ್ನು ಪಟ್ಟಣದಲ್ಲೆಲ್ಲಾ ಹಂಚಿ ಮುಂದೆ ನಗರದ ಹಿಂದುಗಳಿಗೂ ಮುಸಲ್ಮಾನರಿಗೂ ಹೊಡೆದಾಟಗಳು ನಡೆಯದಂತೆಯೂ ದಂಡಿನ ಮುಸಲ್ಮಾನರು ಪಟ್ಟಣದ ಮುಸಲ್ಮಾನರೊಡನೆ ಸೇರದಂತೆಯೂ ತಡೆದು ಶಾಂತಿಯು ನೆಲೆಗೊಳ್ಳುವಂತೆ ಮಾಡುವುದು ಈ ಎರಡರ ಪೈಕಿ ಎರಡನೆಯ ಮಾರ್ಗವನ್ನು ಅನುಸರಿಸುವುದೇ ಸೂಕ್ತವೆಂದು ಡಿ ಮ್ಯಾಜಿಸ್ಟ್ರೇಟರು ನಿರ್ಧರಿಸಿದರು

ಈ ಅಧಿಕಾರಿಗಳು ಹೇಳುವ ಅಂಶಗಳನ್ನು ಬಹುಮಟ್ಟಿಗೆ ಸಮಿತಿಯವರೂ ಒಪ್ಪಿಕೊಂಡಿದ್ದಾರೆ ಜನರೆಲ್ಲರೂ ಉದ್ರೇಕಗೊಂಡಿರುವಾಗ ದಸ್ತಗಿರಿ ಮಾಡುವುದರಿಂದ ಶಾಂತಿಯು ನೆಲೆಗೊಳ್ಳುವುದೆ ಅಥವಾ ಗಲಾಟೆಯು ನಡೆಯುವುದೇ ಎಂಬುದನ್ನು ನಿರ್ಧರಿಸುವುದು ಆ ಸ್ಥಳದಲ್ಲಿ ಹಾಜರಿದ್ದ ಅಧಿಕಾರಿಗೆ ಸರಿತೋರಿದಂತೆ ನಿರ್ಧರಿಸಿ ಕೆಲಸ ಮಾಡುವುದೇ ಸರಿಯಾದುದು ಈ ಸಂದರ್ಭದಲ್ಲಿ ಈ ಅಧಿಕಾರಿಗಳ ಉದ್ದೇಶದಲ್ಲಿ ಅನುಮಾನಪಡಬೇಕಾದುದೇನೂ ಇಲ್ಲ ಆದುದರಿಂದ ಅಂತಹ ಏಷಮಾವಸ್ಥೆಯಲ್ಲಿ ಅವರು ದಸ್ತಗಿರಿ ಮಾಡದ ಹೋದರೆಂಬ ಆಪಾದನೆ ಹೇಳುವುದು ಪ್ರಯೋಜನಕಾರಿಯಾದುದಲ್ಲವೆಂದು ಸರ್ಕಾರದವರು ಭಾವಿಸುತ್ತಾರೆ

ಮನೆ ಹುಡುಕಬೇಕಾಗಿತ್ತು

ಹೀಗೆ ಹೇಳಿದ ಮಾತ್ರಕ್ಕೆ ಪೋಲೀಸಿನವರೂ ಮ್ಯಾಜಿಸ್ಟ್ರೇಟರೂ ಮನೆ ಹುಡುಕುವುದನ್ನಾಗಲೀ ಸ್ಕೂಲಿನ ಎದುರುಗಡೆಯಿರುವ ಮನೆಗಳ ಸುತ್ತಲೂ ಕಾವಲಿರಿಸ ಹೋದುದಾಗಲೀ ಸರಿಯೆಂದು ಹೇಳಿದಂತಾಗಲಿಲ್ಲ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ತಾವು ಕೇಳಿದ ಗುಂಡಿನ ಶಬ್ದವನ್ನುಂಟುಮಾಡುವ ವರ್ತಮಾನಗಳನ್ನೆಲ್ಲಾ ತಾವು ನಂಬಲಿಲ್ಲವೆಂದೂ ಆ ವರ್ತಮಾನದ ಆಧಾರದಮೇಲೆ ಮನೆ ಹುಡುಕುವ ಪ್ರಯತ್ನಮಾಡುವುದು ಸರಿಯೆಂದು ತೋರಲಿಲ್ಲವಾದುದರಿಂದಲೂ ತಾವು ಆ ಸ್ಥಳಗಳಿಗೆ ಹೋಗಿ ನೋಡಿದಾಗ ಅನುಮಾನಾಸ್ಪದವಾದ ಏನನ್ನೂ ಕಾಣಲಿಲ್ಲವಾದುದರಿಂದ ಮನೆ ಹುಡುಕುವ ಪ್ರಯತ್ನ ಮಾಡಲಿಲ್ಲವೆಂದು ಹೇಳುತ್ತಾರೆ ಆದರೂ ಸ್ಕೂಲಿನ ಹತ್ತಿರವೂ ಬಾರ್ ಬಹದ್ದೂರ್ ಅಬ್ಬಾಸ್ ಖಾನರವರ ಮನೆ ಹತ್ತಿರವೂ ಕೆಲವು ಕಾನ್‌ಸ್ಟೇಬಲರನ್ನು ಕಾವಲಿಟ್ಟು ಸೈಕಲ್ ಅಂಗಡಿಯ ಕೈಸಾಲೆಯ ಮೇಲೂ ಕಾವಲಿಟ್ಟಿತ್ತೆಂದೂ ಈ ಏರ್ಪಾಡು ಒಂದು ವಾರದಮೇಲೆ ಅಡಿಷನಲ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಸ್ಥಳ ಮಹಜರು ಮಾಡುವವರೆಗೂ ನಡೆದು ಕೊಂಡು ಬಂದಿತೆಂದೂ ಹೇಳುತ್ತಾರೆ ಆದರೆ ಈ ಏರ್ಪಾಡುಗಳು ಸಾಕಾಗಿರಲಿಲ್ಲ ಇನ್ನೂ ಹೆಚ್ಚಾದ ನಿಗ ಕೊಟ್ಟು ಸಮಿತಿಯವರು ಹೇಳುವಂತೆ 31 ನೇ ತಾರೀಖಿನ ಬೆಳಿಗ್ಗೆಯಾದರೂ ಮನೆ ಹುಡುಕುವ ಕಾರ್ಯವನ್ನು ಮಾಡಬೇಕಾಗಿತ್ತೆಂದು ಸರ್ಕಾರದವರು ಭಾವಿಸುತ್ತಾರೆ ಈ ರೀತಿ ಮಾಡಿದ್ದರೆ ಯಾವ ಪ್ರಯೋಜನವಾದರೂ ಲಭಿಸುತ್ತಿತ್ತೋ ಇಲ್ಲವೋ ಅದು ಬೇರೆ ಮಾತು ಆದರೆ ಆರೀತಿ ಮಾಡಿದ್ದರೆ ಈಗ ಆರೀತಿ ಮಾಡಲಿಲ್ಲವೆಂದು ಪೋಲೀಸ್ ಮತ್ತು ಮ್ಯಾಜಿಸ್ಟ್ರೇಟರ ಮೇಲೆ ಸ್ವಾಭಾವಿಕವಾಗಿ ಬಂದಿರುವ ಆಕ್ಷೇಪಣೆಯನ್ನಾದರೂ ತಪ್ಪಿಸಿಕೊಳ್ಳಲು ಅವಕಾಶವಾಗುತ್ತಿತ್ತು

ಸರ್ಕಾರಿ ಮೆಂಬರುಗಳು

ಕಮಿಟಿಯವರು ಆಲೋಚಿಸುವಂತೆ ಪೋಲೀಸಿನವರಾಗಲಿ ಮ್ಯಾಜಿಸ್ಟ್ರೇಟರಾಗಲೀ ಸರ್ಕಾರದವರು ಹುಕುಂ ಮಾಡಿದ್ದರಿಂದ ಕಾರ್ಯ ನಡೆಸಲಿಲ್ಲ ಅಥವಾ ಬಿಡಲಿಲ್ಲ ಈ ಆಫೀಸರುಗಳು ಪ್ರತಿ ಸಮಯದಲ್ಲಿಯೂ ಸರ್ಕಾರಿ ಮೆಂಬರುಗಳ ಸಂಬಂಧದಲ್ಲಿಯೇ ಇದ್ದರೆಂದು ಕಮಿಟಿಯವರು ಹೇಳುವುದರಿಂದ ಅಧೀನರಾದ ಆಫೀಸರುಗಳು ತಮಗಿಂತಲೂ ದೊಡ್ಡವರಾದ ಅಧಿಕಾರಿಗಳ ಅಪ್ಪಣೆಯನ್ನೇ ಗಮನಿಸಿ ತಮ್ಮ ವಿವೇಚನೆಯನ್ನುಪಯೋಗಿಸುತ್ತಿದ್ದರೆಂದು ಅರ್ಥವಾಗುವುದು ಈ ಅಭಿಪ್ರಾಯವನ್ನು ಸರ್ಕಾರದವರು ತಮ್ಮ ಪರವಾಗಿಯೂ ತಮ್ಮ ಅಧಿಕಾರಿಗಳ ಪರವಾಗಿಯೂ ಒಪ್ಪುವುದಿಲ್ಲ ಮಂತ್ರಿಗಳು ಕಾರ್ಯ ನಡೆಯುತ್ತಲಿದ್ದ ಸಂಗತಿಗಳೆಲ್ಲವೂ ಸರ್ಕಾರಿ ಮೆಂಬರುಗಳಿಗೆ ತಿಳಿದುಬರುತ್ತಲಿದ್ದವೆಂಬುದು ನಿಜ ಆದರೆ ತಮಗೆ ತಿಳಿದುಬಂದ ವಿಷಯಗಳ ಮೇಲೆ ಸ್ಥೂಲವಾಗಿ ತಮ್ಮ ಸೂಚನೆಗಳನ್ನು ಕೊಡತಕ್ಕದ್ದು ಹೊರತು ಹೆಚ್ಚು ವಿಷಯಗಳನ್ನು ಅವರಿಂದ ನಿರೀಕ್ಷಿಸಲಾಗುವುದಿಲ್ಲ ಅವರುಗಳು ಆಗ ಸಂಬಂಧಪಟ್ಟ ಆಫೀಸರು ನಡೆಸ ಬೇಕಾದ ಕಾರ್ಯಗಳ ವಿಷಯಗಳಲ್ಲೆಲ್ಲ ಕೈ ಹಾಕುವುದು ಅಗತ್ಯವಾಗಿರಲಿಲ್ಲ ಏಕೆಂದರೆ ಆಫೀಸರುಗಳಿಗೆ ಲಾ ಪ್ರಕಾರ ಬೇಕಾದಷ್ಟು "ಅಧಿಕಾರ" ಇರುತ್ತದೆ ಇದಲ್ಲದೆ ಆ ಸಂದರ್ಭದಲ್ಲಿ ಆಫೀಸರುಗಳು ಮಾಡಿದ ಕೆಲಸಗಳಿಗೋಸ್ಕರ ಅವರುಗಳಿಂದ ಸಮಜಾಯಿಷಿಗಳನ್ನು ಕೇಳುವಂಥ ಅಥವಾ ಅವರ ತಪ್ಪುಗಳನ್ನು ಕಂಡು ಹಿಡಿಯುವಂಥ ಅಗತ್ಯವಿರಲಿಲ್ಲ ಹಾಗೆ ಮಾಡಿದ್ದರೆ ಕಮಿಟಿಯವರ ಕೆಲಸಕ್ಕೆ ಒಹಳ ತೊಂದರೆಯಾಗುತ್ತಿದ್ದಿತು

ಸರ್ಕಾರದವರು ಮಾಡಿದ ಏರ್ಪಾಡುಗಳು

ಜುಲೈ ತಾ 30 ರ ದಿವಸ ಅರೆಸ್ಟುಗಳನ್ನು ಜಪ್ತಿಗಳನ್ನು ಮಾಡದೆ ಪೋಲೀಸಿನವರು ಕರ್ತವ್ಯಭ್ರಷ್ಟರಾದರೆಂದು ಹೇಳುವುದು ನ್ಯಾಯವಾಗಿ ತೋರುವುದಿಲ್ಲ ಗಲಭೆಯು ಅನೇಕ ಕಡೆಗಳಲ್ಲಿ ವ್ಯಾಪಿಸಿತ್ತು ಕಾಲೇಜು ಪ್ರೈರ್ ದಿವಾನರ ಬಂಗಲೆ ಆಚಾರಕಟ್ಟೆ ಈ ಕಡೆಗಳಲ್ಲಿದ್ದ ಗಲಭೆಗಳು ಹತೋಟಿಗೆ ತೆಗೆದುಕೊಳ್ಳಲ್ಪಟ್ಟವು ಈ ಸ್ಥಳಗಳಲ್ಲೆಲ್ಲ ಪೋಲೀಸಿನವರೂ, ಮ್ಯಾಜಿಸ್ಟ್ರೇಟರೂ ಕೆಲಸಮಾಡುತ್ತಿದ್ದರು ಮತ್ತು ಸುಲ್ತಾನ್‌ಪೇಟೆ ಚಾವಡಿ ಶಾಲೆಯಬಳಿ ಗಲಭೆಯಾಗುತ್ತದೆಂದು ಊಹಿಸಲು ಕಾರಣವಿರಲಿಲ್ಲ ಅಲ್ಲದೆ ಮುಂದೆ ಕಾನ್‌ಸ್ಟೇಬಲರೂ, ಒಬ್ಬ ಸಬ್ ಇನ್ಸ್‌ಪೆಕ್ಟರೂ ಅಲ್ಲಿ ಇದ್ದರು. ಅಲ್ಲಿ ಏಟುಗಳು ಪ್ರಾರಂಭವಾದೊಡನೆ ಸವಾರರುಗಳನ್ನೂ ಕರೆಸಿದ್ದಾಯಿತು ಮತ್ತು ಸಾಧ್ಯವಾದಷ್ಟುಮಟ್ಟಿ ಪೋಲೀಸಿನವರನ್ನೂ ಒಟ್ಟುಗೂಡಿಸಿದ್ದಾಯಿತು ತಾ 31 ರ ದಿವಸ ಈ ಬಗ್ಗೆ ತನಿಖೆ ನಡೆಸಿ, ಅಪರಾಧಿಗಳನ್ನು ಬೈಲಿಗೆ ತರುವ ಬಗ್ಗೆ ಒಬ್ಬರು ಮ್ಯಾಜಿಸ್ಟ್ರೇಟರನ್ನು ನಿಯಮಿಸಲಾಯಿತು ಈ ತಾರೀಖಿನ ದಿನ ದೊಂಬಿಗಳು ನಡೆದಾವೆಂಬ ಭಯ ತೋರಿ ಮತ್ತು ಗುಂಡಗಳ ಜೋಡಣೆಯನ್ನು ಪರಿಶೀಲಿಸಲಾಯಿತು. ಪಟ್ಟಣದ ಎಲ್ಲ ಭಾಗಗಳಲ್ಲಿಯೂ ಪೋಲೀಸಿನವರು ಮತ್ತು ಮಿಲಿಟರಿಯವರು ಕೆಲ ದಿನಗಳವರೆಗೆ ಗಸ್ತು ತಿರುಗುತ್ತಿದ್ದುದರಿಂದ ಶಾಂತತೆಯು ನೆಲೆಸಿತು ಆ ಸಂದರ್ಭದಲ್ಲಿದ್ದ ದೊಂಬಿಯನ್ನು ಹತೋಟಿಗೆ ತೆಗೆದುಕೊಂಡುದೇ ಹೆಚ್ಚಿನ ವಿಷಯವಾಗಿದೆ ಆದೂ ಒಂದು ಗುಂಡನ್ನಾದರೂ ಹಾರಿಸದೆ ಒಂದು ಪ್ರಾಣವನ್ನಾದರೂ ಹರಣಮಾಡದೆ, ಹತೋಟಿಗೆ ತಂದುಕೊಂಡದ್ದೆಂದರೆ ಮತ್ತು ಹೆಚ್ಚಿನ ವಿಷಯವೇ

ತನಿಖೆ ಕ್ರಮವನ್ನು ನಡೆಯಿಸುವುದರಲ್ಲಿ ನಿಧಾನವಾಯಿತೆಂದು ಹೇಳುವಾಗ ಗಲಭೆಯಾದ ಮಾರನೆ ದಿವಸವೇ ಒಬ್ಬ ಸ್ಪೆಷಲ್ ಮ್ಯಾಜಿಸ್ಟ್ರೇಟರನ್ನು ನಿಯಮಿಸಲಾಯಿತೆಂಬ ವಿಷಯವನ್ನು ಗಮನಿಸಬೇಕಾಗುತ್ತದೆ ಆಮೇಲೆ ಜನರ ಅಪೇಕ್ಷೆಯೂ ಹಾಗೆಯೇ ತೋರಿಬಂದುದರಿಂದ, ಆ ಆಫೀಸರನ್ನು ಬದಲಾಯಿಸಿ ಜನಗಳು ಕೇಳಿದಂತೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ದರ್ಜೆಗಿಂತ ಮೇಲೆ ಒಬ್ಬ ಆಫೀಸರನ್ನು ನಿಯಮಿಸಲಾಯಿತು ಈ ಬದಲಾವಣೆಗಳಿಂದಾಗಿ ಸ್ವಲ್ಪ ನಿಧಾನವಾಯಿತು ನಿಜ. ಆದರೆ ಆಗ ಹುಟ್ಟುತ್ತಿದ್ದ ಪರಸ್ಪರ ವಿರೋಧವಾದ ಕಾರ್ಯಗಳನ್ನೂ, ಈ ತನಿಖೆ ನಡೆಸಲು ಸಾಕಷ್ಟು ವಿಶೇಷವಾಗಿ ತೆಗೆದುಕೊಂಡ ಕಾಲವನ್ನೂ ಆಲೋಚನೆಗೆ ತೆಗೆದುಕೊಂಡರೆ ಈ ಕ್ರಮಕ್ಕಿಂತ ಎಂದರೆ ಕೊಡಲಾಗಿದ್ದ ನ್ಯಾಯವನ್ನು ಕಂಡು

ನಾಲ್ಕನೇ ಪುಟವನ್ನು ನೋಡಿ

ಮೈಸೂರು ಸ್ಟಾರ್.

೧೯೨೯ ನೆಯ ಇಸವಿ ಫೆಬ್ರವರಿ ತಾ|| ೨ ನೆಯ ಶನಿವಾರ.

ವಿಶ್ವೇಶ್ವರಯ್ಯ ಸಮಿತಿಯ ಕಾರ್ಯಾಸಮರ್ಪಕತೆ.

ವಿಚಾರಣ ಸಮಿತಿಯ ಕಾರ್ಯಕಲಾಪಗಳು ಸಮರ್ಪಕವಾಗಿ ನಡೆಯುತ್ತಿರಲಿಲ್ಲವೆಂದು ಮಹಾಜನಗಳಿಗಿದ್ದ ಸಂಶಯವು ಈಗ ನಿರ್ಧಾರವಾಯಿತು. ಸಮಿತಿಯ ಅಧ್ಯಕ್ಷರು ಸದಸ್ಯರ ಸ್ವಾತಂತ್ರ್ಯವನ್ನೂ ಅವರ ಬಾಧ್ಯತೆಯನ್ನೂ ಗೌರವಿಸದೆ ಅವರು ಸಾಕ್ಷಿಗಳನ್ನು ಧಾರಾಳವಾಗಿ ಪ್ರಶ್ನಿಸಿ ಮುಖ್ಯ ವಿಚಾರಗಳಲ್ಲಿ ತಮಗಿರುವ ಸಂಶಯವನ್ನು ಪರಿಹಾರಮಾಡಿಕೊಳ್ಳಲು ಅವರಿಗೆ ಅವಕಾಶವನ್ನು ಕೊಡದೆ ಹೋದುದು ವಿಷಾದಕರವಾಗಿದೆ. ಸರ್ಕಾರದವರು ಸಮಿತಿಯನ್ನು ನಿಯಮಿಸಿದಾಗ ಗಲಭೆಯ ವಿಚಾರದಲ್ಲಿ ಸಾಕಾದಷ್ಟು ಸಂಗತಿಗಳನ್ನು ಸಮರ್ಪಕವಾಗಿ ಸಂಗ್ರಹಿಸಲು ಅವಶ್ಯಕವಾದಷ್ಟು ಅಧಿಕಾರವನ್ನು ಪ್ರತಿಯೊಬ್ಬ ಸದಸ್ಯರಿಗೂ ಕೊಟ್ಟಿದ್ದರಾದರೂ, ಸಮಿತಿಯ ಅಧ್ಯಕ್ಷರು ಆಗಿಂದಾಗ್ಗೆ ಸಾಕ್ಷಿಗಳ ವಿಚಾರಣೆಯ ಕಾಲದಲ್ಲಿ ಸದಸ್ಯರು ಕೇಳಬೇಕೆಂದಿದ್ದ ಪ್ರಶ್ನೆಗಳಿಗೆ ಅವಕಾಶಕೊಡದೆ ಮತ್ತು ತಮ್ಮ ಸ್ಥಾನಗೌರವವನ್ನು ಕಾಪಾಡಿಕೊಳ್ಳದೆ ವಿಜೃಂಭಿಸುತ್ತಿದ್ದರು. ಅಧ್ಯಕ್ಷರ ಈ ವರ್ತನೆಯನ್ನು ವಿಚಾರಣೆ ನಡೆಯುತ್ತಿರುವಾಗಲೇ ನಾವು ಸಂದರ್ಭಾನುಸಾರ ಖಂಡಿಸಿ ಬರೆದುದು ಯುಕ್ತವಾಗಿದ್ದಿತೆಂಬುದು ಸಮಿತಿಯ ಸದಸ್ಯರಾದ ಮ|| ಎಚ್ ಜಿ ಬಸವಪ್ಪನವರು ಅಧ್ಯಕ್ಷರಿಗೆ ಮೊನ್ನೆ ತಾನೆ ಬರೆದ ಕಾಗದದಿಂದ ಸಿದ್ಧಗೊಳ್ಳುತ್ತದೆ. ಸರ್ ವಿಶ್ವೇಶ್ವರಯ್ಯನವರ ಅಸಾಧಾರಣವಾದ ವರ್ತನೆಯನ್ನು ನಾವು ಖಂಡಿಸಿದುದು ಮಹಾ ಅಪರಾಧವೆಂದು ಕೆಲ ಪತ್ರಿಕೆಗಳು ಕೂಗಿದುವು. ಸದಸ್ಯರುಗಳಿಗೆ ಅಧ್ಯಕ್ಷರು ತೋರಿಸಿದ ಮಾನ ಮನ್ನಣೆಗಳ ರೀತಿನೀತಿಗಳನ್ನು ನಿದರ್ಶನಪೂರ್ವಕವಾಗಿ ಈಗ ನಾವು ವ್ಯಕ್ತಗೊಳಿಸಿರುವುದರ ಮೇಲೆ ಈ ಪತ್ರಿಕೆಗಳು ಏನು ಹೇಳುವುವೊ ನೋಡಬೇಕಾಗಿದೆ. ಅಧ್ಯಕ್ಷರು ತಾವುಬರೆದ ವರದಿಯನ್ನು ಚೆನ್ನಾಗಿ ಪರಿಶೀಲಿಸಿ ಮುಖ್ಯಾಂಶಗಳನ್ನು ಪರ್ಯಾಲೋಚಿಸುವುದಕ್ಕು ಸಹ ಸದಸ್ಯರಿಗೆ ಅವಕಾಶವನ್ನು ಕೊಡಲಿಲ್ಲವೆಂಬುದು ವ್ಯಕ್ತವಾಗುತ್ತದೆ. ವರದಿಯನ್ನೆಲ್ಲ ಮೇಧಾವಿಗಳಾದ ಇಬ್ಬರು ಸದಸ್ಯರುಗಳು ಮಾತ್ರ ಬರೆದು ಉಳಿದ ಐದುಮಂದಿಗ (ಇವರೆಲ್ಲ ಹಿಂದುಳಿದವರು) ಅವಲೋಕಿಸುವುದಕ್ಕು ಸಹ ಸಾಕಾದಷ್ಟು ಅವಕಾಶವನ್ನು ಕೊಡಲಿಲ್ಲವೆಂದ ಬಳಿಕ ವರದಿಯು ಮಹಾಜನಗಳ ಗೌರವಕ್ಕೂ, ಸರ್ಕಾರದವರ ಆದರಕ್ಕೂ ಎಷ್ಟರ ಮಟ್ಟಿಗೆ ಪಾತ್ರವಾಗಬಹುದೆಂದು ಊಹಿಸಬಹುದಾಗಿದೆ.

ವಿಚಾರಣೆಯು ನಡೆಯುತ್ತಿರುವ ಕಾಲದಲ್ಲಿ ಮ|| ಗಳಾದ ನಾಗಪ್ಪನವರೂ ಬಸವಪ್ಪನವರೂ ಸಾಕ್ಷಿಗಳನ್ನು ಪ್ರಶ್ನಿಸಲು ಪ್ರಯತ್ನಪಟ್ಟಾಗ ಅಧ್ಯಕ್ಷರು ಅವರನ್ನು ಗದರಿಸಿ ಶಂಕಪಡಿಸಿದರು. ಅಧ್ಯಕ್ಷರ ಈ ವಿಧವಾದ ವರ್ತನೆಯಿಂದ ವಿಚಾರಣೆಯು ಸಮರ್ಪಕವಾಗಿ ನಡೆಯಲು ಅವಕಾಶವಿಲ್ಲದೆ ಹೋಯಿತು. ಸರ್ ವಿಶ್ವೇಶ್ವರಯ್ಯನವರನ್ನು ಸರ್ಕಾರದವರು ಅಧ್ಯಕ್ಷರನ್ನಾಗಿ ನಿಯಮಿಸಿದಾಗ ನಾವು ಇವರನ್ನು ಆದರದಿಂದಲೂ ವಿಶ್ವಾಸದಿಂದಲೂ ಸ್ವಾಗತಿಸಿದೆವು. ಶಿಲ್ಪಶಾಸ್ತ್ರ ವಿಶಾರದರಾಗಿ ಲೋಕವಿಖ್ಯಾತಿಯನ್ನು ಪಡೆದು ಗುಣಾಢ್ಯರೆನಿಸಿದ ಸರ್ ವಿಶ್ವೇಶ್ವರಯ್ಯನವರು ಮೂಢಜನರ ಸ್ವಭಾವಗುಣವಾದ ಜಾತಿದ್ವೇಷ ವರ್ಣವೈಷಮ್ಯಗಳನ್ನು ಮರೆತು ಸರ್ವಸಮ್ಮತವಾಗಿ ನಡೆದುಕೊಳ್ಳುವರೆಂದು ನಾವು ನಿರೀಕ್ಷಿಸಿದ್ದೆವು. ಆದರೆ, ಈಗ ತಿಳಿದುಬಂದಿರುವ ವಿಷಯವನ್ನು ಪರಿಶೀಲಿಸಿದುದರ ಮೇಲೆ ನಮ್ಮ ನಿರೀಕ್ಷಣೆಯು ವ್ಯರ್ಥವಾಯಿತು. ಈಗ ಸರ್ಕಾರಕ್ಕೆ ಒಪ್ಪಿಸಿರುವ ವರದಿಯು ಸದಸ್ಯರೆಲ್ಲರಿಗೂ ಒಪ್ಪಿತವಾದುದಲ್ಲದಿದ್ದರೂ ಸಮಿತಿಯ ಬಹುಮತದಿಂದಲಾದರೂ ಅನುಮೋದಿತವಾಗದಿರುವುದು ಶೋಚನೀಯವೇ ಸರಿ. ಸಮಿತಿಯಲ್ಲಿದ್ದವರು ಒಟ್ಟು ಏಳುಮಂದಿ. ಅವರಲ್ಲಿ ಐದುಮಂದಿಗೆ ವರದಿಯನ್ನು ಅನುಮೋದಿಸುವುದರಲ್ಲಿ ಯಾವ ಭಾಗವೂ ದೊರೆಯದೇ ಇದ್ದುದು ಮಾತ್ರವಲ್ಲದೆ ವರದಿಯು ಕೇವಲ ಇಬ್ಬರಿಂದ ಮಾತ್ರ ಬರೆಯಲ್ಪಟ್ಟನಂತರವಾದರೂ ಉಳಿದ ಸದಸ್ಯರ ಪರಿಶೀಲನೆಗೂ ಹರ್ಗೂ ಅವಕಾಶ ಕೊಟ್ಟಿದ್ದರ ಅವರು ವರದಿಯಲ್ಲಿ ತಮಗೆ ಅಸಮ್ಮತವಾದ ಅಂಶಗಳನ್ನು ಬದಲಾಯಿಸುವಂತೆ ಮಾಡುತ್ತಿದ್ದರು. ಆದರೆ, ಅಧ್ಯಕ್ಷರು ಆ ರೀತಿ ಮಾಡದೆ ಹೋದುದರಿಂದ ವರದಿಯು ಬಹುಮತದಿಂದ ಬರೆಯಲ್ಪಟ್ಟುದಲ್ಲವೆಂದು ವ್ಯಕ್ತವಾಗುವುದು. ಈ ಕಾರಣದಿಂದ ವರದಿಯ ವಿಚಾರದಲ್ಲಿ ಸರ್ಕಾರಕ್ಕೂ ಮಹಾಜನಗಳಿಗೂ ಗೌರವವು ಇಲ್ಲದಂತಾಗಿರುತ್ತದೆ. ವರದಿಯು ಬರೆಯಲ್ಪಟ್ಟಮೇಲೆ ಅಧ್ಯಕ್ಷರು ಉಳಿದ ಸದಸ್ಯರನ್ನು ಕುರಿತು ಕೆಲವು ಪ್ರಶ್ನೆಗಳಿಗೆ ಮಾತ್ರ "ಹೌದೊ, ಅಲ್ಲವೊ" ಎಂಬ ಉತ್ತರವನ್ನು ಹೇಳಿರೆಂದು ಕೇಳಿದರಂತೆ! ಇಂತಹ ವರ್ತನೆಯ ಕಾರಣವನ್ನು ಅರಿಯದೆ ಸದಸ್ಯರು ಬೇರೆಮಾರ್ಗ ಕಾಣದೆ ತತ್ಕಾಲದಲ್ಲಿ ತಮಗೆ ತೋರಿದಂತೆ ಉತ್ತರಕೊಟ್ಟು ಸುಮ್ಮನಾದರು. ತಾವು ಯಾವ ಯಾವ ವಿಚಾರಗಳಿಗೆ ಸಮ್ಮತಿಯನ್ನಿತ್ತೆವೊ ಅಷ್ಟುಮಾತ್ರವಲ್ಲದೆ ವರದಿಯಲ್ಲಿ ತಮಗೆ ಒಪ್ಪದಿದ್ದ ಅನೇಕ ವಿಚಾರಗಳು ಗರ್ಭಿತವಾಗಿರುವುದನ್ನು ಈಗ ನೋಡಿದ ಸದಸ್ಯರು ಚಕಿತರಾಗಿ ತಾವು ಇಂತಹ ವರದಿಗೆ ರುಜುಮಾಡಿ ಮೋಸಹೋದೆವೆಂದು ಎಚ್ಚರಗೊಂಡು ಸಮಿತಿಯ ಅಧ್ಯಕ್ಷರಿಗೆ ಮ|| ಬಸವಪ್ಪನವರು ತಮ್ಮ ಅಸಮಾಧಾನವನ್ನು ಲಿಖಿತಮೂಲಕವಾಗಿ ತಿಳಿಸಿರುವರು. ವರದಿಯು ಹೇಗೆ ಯಾರಿಂದ ಬರೆಯಲ್ಪಟ್ಟಿತೆಂಬುದು ಈಗ ಬಯಲಿಗೆ ಬಂದಿತು. ಮಿಲ್ಲರ್ ಸಮಿತಿಯ ಸಲಹೆಗಳನ್ನನುಸರಿಸಿ ಸರ್ಕಾರದವರು ಶ್ರೀಮನ್ಮಹಾರಾಜರವರ ಲಕ್ಷಾಂತರ ಪ್ರಜೆಗಳ ಏಳ್ಗೆಗಾಗಿ ಅಭ್ಯುದಯವನ್ನು ತನಕತಕ್ಕ ಹಲವು ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿರುವ ವಿಚಾರದಲ್ಲಿ ವಿಶ್ವೇಶ್ವರಯ್ಯ ಸಮಿತಿಯವರು ತಮ್ಮ ಅಸಮಾಧಾನವನ್ನು ತೋರಿ ಮುಂದೆ ದೇಶದಲ್ಲಿ ನೆಮ್ಮದಿಯುಂಟಾಗಬೇಕಾದರೆ, ಮಿಲ್ಲರ್ ಸಮಿತಿಯ ಸಲಹೆಗಳನ್ನು ಪುರಸ್ಕರಿಸಬಾರದೆಂದು ವರದಿಯಲ್ಲಿ ಬರೆದಿರುವುದರ ಕಾರಣವು ಈಗ ವ್ಯಕ್ತವಾಗುವುದು. ಹಿಂದುಳಿದ ವರ್ಗದವರಿಗೆ ಬಹುಕಾಲದಿಂದಲೂ ನಡೆದುಬಂದಿರುವ ಆದರ ಪುರಸ್ಕಾರಗಳು ಸಾರೋದ್ಧಾರವಾಗಿ ನಡೆಯಬೇಕೆಂಬುದೇ ವರದಿಯ ಆಶಯವು. ಆದರೆ ಇದಕ್ಕೆ ಕುಂದುಕೊರತೆಯು ಒದಗಿರುವುದೇ ಮುಂಬರಿದವರ ಅಸಂತುಷ್ಟಿಗೆ ಕಾರಣವಾಗಿ ಗಲಭೆ, ಗದ್ದಲ, ಗೊಂದಲಗಳುತ್ಪನ್ನವಾಗುವುವೆಂಬುದು ವರದಿಯ ಅಭಿಪ್ರಾಯವಾಗಿರುವಂತೆ ತೋರುತ್ತದೆ. ಈ ವಿಚಾರದಲ್ಲಿ ಸಲಹೆಗಳನ್ನು ಕೊಡಬೇಕೆಂದು ಈ ಸಮಿತಿಯವರನ್ನು ಯಾರೂ ಕೇಳಲಿಲ್ಲವಾದರೂ ಅಸಂಬದ್ಧವಿಚಾರಗಳಲ್ಲಿ ಪ್ರವರ್ತಿಸಿ ತಮ್ಮ ಧ್ಯೇಯವನ್ನು ಸಮಿತಿಯ ಕೆಲ ಸದಸ್ಯರು ವ್ಯಕ್ತಪಡಿಸಿಕೊಂಡುದಕ್ಕಾಗಿ ನಾವು ವಿಷಾದಿಸುತ್ತೇವೆ. ಆದರೆ ಸರ್ಕಾರದವರು ವಿಚಕ್ಷಣೆಯಿಂದ ವರದಿಯನ್ನು ಪರಿಶೀಲಿಸಿ ಸೂಕ್ತತೋರಿದಂತೆ ಅಪ್ಪಣೆಮಾಡಿರುವುದು ಸಂತೋಷಪ್ರದವಾಗಿದೆ. ಮಿಲ್ಲರ್ ಸಮಿತಿಯ ಸಲಹೆಗಳ ವಿಚಾರದಲ್ಲಿ ಮಾಡಿರುವ ಅಸಂಬದ್ಧ ಪ್ರಲಾಪಕ್ಕೆ ತಕ್ಕ ಮರ್ಯಾದೆಯನ್ನು ಪ್ರಭುತ್ವದವರು ಕೊಡುವರೆಂದು ಮಹಾಜನಗಳು ನಿರೀಕ್ಷಿಸುತ್ತಾರೆ. ವರದಿಯು ಪ್ರಕಟಿಸಲ್ಪಡುವವರೆಗೂ ಹೊರಗಿನ ಜನಗಳಿಗೆ ಹೇಗೋ ಸದಸ್ಯರಿಗೂ ಹಾಗೆ ಅದರಲ್ಲಿ ಗರ್ಭಿತವಾದ ವಿಚಾರಗಳು ತಿಳಿಯದೇ ಇದ್ದು ಪ್ರಕಟಿಸಲ್ಪಟ್ಟಮೇಲೆ ತಾವು ರುಜುಮಾಡಿದ ವರದಿಯಲ್ಲಿ ತಮಗೆ ತಿಳಿಯದೆಯೂ ತಮಗೆ ಸಮ್ಮತವಿಲ್ಲದೆಯೂ ಇರುವ ವಿಚಾರಗಳನ್ನು ಕಂಡು ಮ|| ಬಸವಪ್ಪನವರು ಅಸಮಾಧಾನಗೊಂಡು ಸಮಿತಿಯಲ್ಲಿ ನಡೆದ ಒಳಸಂಚನ್ನು ಹೊರಪಡಿಸಿದುದಕ್ಕೋಸ್ಕರ ನಾವು ಅವರನ್ನು ಅಭಿನಂದಿಸುತ್ತೇವೆ. ಹೀಗೆಯೇ ಇತರ ಸದಸ್ಯರೂ ವರದಿಯನ್ನು ಸಾವಧಾನದಿಂದ ಪರಿಶೀಲಿಸಿ ತಮ್ಮ ಅಸಮಾಧಾನವನ್ನು ನಿರ್ಭಯವಾಗಿ ಪ್ರಕಟಿಸುವುದಾದರೆ, ಸಮಿತಿಯ ಸದಸ್ಯರು ತಮ್ಮ ಉತ್ತರವಾದಿತ್ವವುಳ್ಳ ಪವಿತ್ರ ಕರ್ತವ್ಯವನ್ನು ನಿರ್ದಾಕ್ಷಿಣ್ಯದಿಂದ ಮಾಡಿದಂತಾಗುವುದು. ಹಾಗೆ ಮಾಡುವರೇ ನೋಡುವ!

ಮ|| ವೆಂಕಟಕೃಷ್ಣಯ್ಯನವರ ವಿಜ್ಞಾಪನಾ ಪತ್ರಿಕೆಗೆ ಸರ್ಕಾರದ ಉತ್ತರ.

ಮೈಸೂರು ಪೇಟ್ರಿಯಟ್, ಸಾಧ್ವಿ ಮತ್ತು ಸಂಪದಭ್ಯುದಯ ಪತ್ರಿಕೆಗಳನ್ನು ಹೊರಡಿಸಕೂಡದೆಂದು ಸರ್ಕಾರದವರು ಮಾಡಿರುವ ಅಪ್ಪಣೆಯನ್ನು ತಪ್ಪಿಸಿಬಿಡಬೇಕೆಂದು ಪ್ರಾರ್ಥಿಸಿಕೊಂಡು ಮ|| ಎಂ ವೆಂಕಟಕೃಷ್ಣಯ್ಯನವರು ಶ್ರೀಮನ್ಮಹಾರಾಜರವರಿಗೆ ಬಿನ್ನೈಸಿಕೊಂಡಿದ್ದ ಬಿನ್ನವತ್ತಳೆಗೆ ಸರ್ಕಾರದಿಂದ ದೊರೆತಿರುವ ಉತ್ತರ —

ಬಿನ್ನವತ್ತಳೆಯಲ್ಲಿ ಕಂಡ ವರ್ತಮಾನಪತ್ರಿಕೆಗಳ ನಡತೆಯು ಬಹುಕಾಲದಿಂದಲೂ ಪ್ರಭುತ್ವದವರ ಲಕ್ಷ್ಯದಲ್ಲಿರುವುದು. ಈ ಪತ್ರಿಕೆಗಳು ಪ್ರಭುತ್ವದವರ ಮೇಲೆ ಅಸಮರ್ಥತೆ, ಪಕ್ಷಪಾತತೆ ಇತ್ಯಾದಿ ದೋಷಾರೋಪಣೆಗಳನ್ನು ಮಾಡಿರುತ್ತವಲ್ಲದೆ ಜಾತಿದ್ವೇಷ ವಿದ್ವೇಷಗಳನ್ನು ಹುಟ್ಟಿಸುವಂತಹ ಪತ್ರವ್ಯವಹಾರಗಳನ್ನೂ ಲೇಖನಗಳನ್ನೂ ಪದೇ ಪದೇ ಪ್ರಕಟಿಸಿರುತ್ತವೆ. ಈ ವಿಧವಾದ ನಡವಳಿಕೆಗಳು 1928 ನೆಯ ಜುಲೈ ತಾ|| 30 ರಲ್ಲಿ ಗಲಭೆಯು ನಡೆದಂದಿನಿಂದೀಚೆಗಂತೂ ವಿಶೇಷವಾಗಿ ಗಮನಿಸತಕ್ಕುವಾಗಿರುತ್ತವೆ. ಅನುತ್ತರವಾದಿತ್ವವೂ ಅಸಹ್ಯತರವೂ ಆದ ಲೇಖನಗಳೂ ಪತ್ರವ್ಯವಹಾರಗಳೂ ಪ್ರತಿಯೊಂದು ಸಂಚಿಕೆಯಲ್ಲೂ ಇದ್ದೇ ಇರುತ್ತಿದ್ದುವು. ಈ ಪತ್ರಿಕೆಗಳು ಸರ್ಕಾರಿಯಧಿಕಾರಿಗಳ ಮೇಲೆ ನಿರಾಧಾರವಾದ ದೋಷಾರೋಪಣೆಮಾಡಿ ಅವರ ವ್ಯಕ್ತಿದೂಷಣೆಯಲ್ಲಿ ಮಗ್ನವಾಗಿದ್ದುವು. ಜನರು ಜಾತಿದ್ವೇಷಪ್ರೇರಿತರಾಗಿ ಪ್ರಭುತ್ವವನ್ನು ತಿರಸ್ಕರಿಸುವಂತೆಯೂ, ಸಂಸ್ಥಾನದ ಗೌರವಕ್ಕೆ ಕುಂದುಂಟಾಗುವಂತೆಯೂ ಅನೇಕ ಲೇಖನಗಳು ಬರೆಯಲ್ಪಟ್ಟಿರುತ್ತವೆ.

ಈ ಪತ್ರಿಕೆಗಳನ್ನು ನಿಲ್ಲಿಸುವ ವಿಚಾರದಲ್ಲಿ ಪ್ರಭುತ್ವದವರು ಕೈಕೊಂಡ ನಡವಳಿಕೆಯು ವಿಜ್ಞಾಪನಾಪತ್ರಿಕೆಯಲ್ಲಿ ಹೇಳಲ್ಪಟ್ಟಿರುವಂತೆ ಆಕಸ್ಮಿಕವೂ ಅನಿರೀಕ್ಷಿತವೂ ಆದುದಲ್ಲ. ಈ ವಿಚಾರದ ಪೂರ್ವೋತ್ತರವು ಬಹಳವಾಗಿರುವುದೆಂಬುದು ಅರ್ಜಿದಾರರಿಗೆ ಚೆನ್ನಾಗಿ ಗೊತ್ತಿರುತ್ತದೆ. 1922 ನೆಯ ವರ್ಷದಲ್ಲಿ ಇವರ ವಿಚಾರಣೆಯು ನಡೆಸಲ್ಪಟ್ಟಿದ್ದಿತು. ಆಗ್ಗೆ ಇವರ ಮೇಲೆ ಶಿಕ್ಷಾಕ್ರಮವನ್ನು ಜರುಗಿಸಲು ಸಾಕಾದಷ್ಟು ಅವಕಾಶವಿದ್ದಿತಾದರೂ, ಅವರ ವಯಸ್ಸನ್ನೂ, ಅವರ ಬಹುಕಾಲದ ಪತ್ರಿಕೋದ್ಯಮವನ್ನೂ ಪರಿಗಣಿಸಿ ಅವರಿಗೆ ಎಚ್ಚರಿಕೆಯನ್ನು ಕೊಟ್ಟರೆ ಸಾಕೆಂಬುದಾಗಿ ಭಾವಿಸಲ್ಪಟ್ಟಿತು. ಅವರ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ಆಕ್ಷೇಪಕರವಾದ ವಿಚಾರಗಳು ಪದೇಪದೇ ಅವರ ಗಮನಕ್ಕೆ ತರಲ್ಪಟ್ಟು ಮುಂದೆ ಸುಧಾರಿಸಲ್ಪಡುವುವೆಂದು ನಿರೀಕ್ಷಿಸಲ್ಪಟ್ಟಿದ್ದಿತು. ಅಂತಹ ಲೇಖನಗಳಿಗೆ ಅವಕಾಶಕೊಡಲ್ಪಡುವುದಿಲ್ಲವೆಂದು ಅರ್ಜಿದಾರರು ಅನೇಕವೇಳೆ ವಾಗ್ದಾನಮಾಡಿದ್ದರು. ಅಲ್ಲದೆ ಪ್ರಭುತ್ವದವರಿಂದ ಎಚ್ಚರಿಕೆಗಳೂ ಕೊಡಲ್ಪಟ್ಟಿರುವುವು. ಕಳೆದ ಪ್ರಜಾಪ್ರತಿನಿಧಿಸಭೆಯಲ್ಲಿ ಸ್ಥಳೀಯ ಪತ್ರಿಕೆಗಳ ಆಕ್ಷೇಪಕರವಾದ ಬರವಣಿಗೆಯ ವಿಚಾರವು ಚರ್ಚೆಗೆ ಬಂದಾಗ್ಗೆ, ಅರ್ಜಿದಾರರ ಪತ್ರಿಕೆಗಳ ವರ್ತನವು ಬಹಳವಾಗಿ ಖಂಡಿಸಲ್ಪಟ್ಟಿತು. ನ್ಯಾಯಸ್ಥಾನದಿಂದ ಶಿಕ್ಷಿಸಲ್ಪಟ್ಟ ಸಂಪಾದಕರಿಂದಾಗಲಿ ಪ್ರಭುತ್ವದವರ ಎಚ್ಚರಿಕೆಗಳಿಂದಾಗಲಿ, ಅರ್ಜಿದಾರರ ವಾಗ್ದಾನಗಳಿಂದಾಗಲಿ ಪತ್ರಿಕೆಗಳನ್ನೇನೂ ಸುಧಾರಣೆಗೊಳಿಸಲಿಲ್ಲವಾದ ಕಾರಣ ಪ್ರಭುತ್ವದವರು ಈ ಪತ್ರಿಕೆಗಳ ಪ್ರಚಾರಕ್ಕೆ ಕೊನೆಯನ್ನು ನಿಲ್ಲಿಸಲು ಪತ್ರಿಕೆಗಳು ಹೊರಡದಂತೆ ತಡೆಯುವುದೊಂದೇ ಉಪಾಯವೆಂಬ ತೀರ್ಮಾನದಿಂದ ನಿರ್ಧರಿಸಿರುತ್ತಾರೆ. ಈ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ಆಕ್ಷೇಪಕರವಾದ ಲೇಖನಗಳಿಂದ ಪ್ರಜೆಗಳ ಮನಸ್ಸಿನಮೇಲೆ ಆಗುತ್ತಿದ್ದ ದುಷ್ಪರಿಣಾಮವನ್ನು ಪರಿಗಣಿಸಿ ಈ ಪತ್ರಿಕೆಗಳನ್ನು ನ್ಯಾಯಸ್ಥಾನದ ವಿಚಾರಣೆಗೆ ಗುರಿಮಾಡದೆ, ಇವುಗಳಂತೆಯೇ ವರ್ತಿಸುತ್ತಿದ್ದವುಗಳನ್ನು ಕೋರ್ಟಿನ ತೀರ್ಪಿಗೆ ಗುರಿಮಾಡುವುದು ಅನಾವಶ್ಯಕವೆಂದು ನಿರ್ಧರಿಸಿದ ಪ್ರಕಾರ ಅರ್ಜಿಯಲ್ಲಿ ಕಂಡ ಪತ್ರಿಕೆಗಳನ್ನು ವಿಚಾರಣೆಗೆ ಗುರಿಮಾಡುವುದು ಅನಾವಶ್ಯಕವಾಗಿರುತ್ತದೆ. ಚೀಫ್ ಸೆಕ್ರೆಟರಿ.

ಚಿಕ್ಕಮಗಳೂರಲ್ಲಾದ ಶಂಕುಸ್ಥಾಪನೋತ್ಸವ.

ಶ್ರೀಮನ್ಮಹಾರಾಜ ಸಹೋದರರ ಸವಾರಿಯು ಪ್ರೈವೇಟ್ ಸೆಕ್ರೆಟರಿ ಸರ್ ಚಾರ್ಲೆಸ್ ಟಾಡ್‌ಹಂಟರ್ರವರು, ಹುಜೂರು ಸೆಕ್ರೆಟರಿ ರಾಜಸಭಾಭೂಷಣ ಟಿ ತಂಬೂಶೆಟ್ಟರು, ಅಸಿಸ್ಟೆಂಟ್ ಸೆಕ್ರೆಟರಿ ಮಿ|| ಸಡಗ್ ಜಫ್‌ವಾರವರು, ಲೆಫ್ಟಿನೆಂಟ್ ಕರ್ನಲ್ ಬಿ ಸುಬ್ರಹ್ಮಣ್ಯರಾಜ ಅರಸಿನವರು, ಸರದಾರ್ ಗೋಪಾಲಕೃಷ್ಣ ಅರಸಿನವರು, ರಿಟೈರ್ಡ್ ಮುಜರಾಯಿಬಕ್ಷಿ ರಾ|| ಬ|| ಮ|| ಎಚ್. ಲಿಂಗರಾಜ ಅರಸಿನವರು, ಕ್ಯಾಪ್ಟನ್ ಡಿ. ಸಿ. ನಂಜರಾಜ ಬಹದ್ದೂರ್‌ರವರು, ಸರದಾರ್ ಗೋಪಾಲರಾವ್‌ಯವರು, ಸರದಾರ್ ನಬಿಖಾನ್‌ರವರು, ರಿಟೈರ್ಡ್ ಕನ್ಸರ್ವೇಟರ್ ಮ|| ಪಿ ಎಸ್ ಗೋವಿಂದರಾಯರು ಮತ್ತೆ ಕೆಲವರೊಡನೆಯೂ ಗಿರ್ದಿಪಾಸೆಯ ಪಿಷ್ಟಕತ್ತಿ ಪಹರೆಯವರು, ಕಟಿಕೆಯವರು, ಊಳಿಗದವರು, ವಾದ್ಯದವರು ಮೊದಲಾದ ಪರಿವಾರದೊಡನೆ ಕಳೆದ ಶುಕ್ರವಾರ ರಾತ್ರಿ 9 ಗಂಟೆಗೆ ಸ್ಪೆಷಲ್ ಟ್ರೇನಿನಲ್ಲಿ ಅರಸೀಕೆರೆ ಮಾರ್ಗವಾಗಿ ಕಡೂರಿಗೆ ಪ್ರಯಾಣಬೆಳಸಿತು. ಅತ್ತಲಾಗಿ ದಿವಾನ್ ಸಾಹೇಬರು ತಮ್ಮ ಪ್ರೈವೇಟ್ ಸೆಕ್ರೆಟರಿ ಮೊದಲಾದ ಪರಿವಾರದೊಡನೆ ಬೆಂಗಳೂರಿನಿಂದ ಅದೇರಾತ್ರಿ ಪೂನಾಮೇಲು ಟ್ರೇನಿನಲ್ಲಿ ಹೊರಟು ಕಡೂರು ಸ್ಟೇಷನ್ ಸಮೀಪದಲ್ಲಿ ಇಳಿಸತ್ತಿದ್ದಿತೆಂಬುದನ್ನು ತಿಳಿದು ಕಡೂರು ಸ್ಟೇಷನ್ ಹಿಂದಿರುವ ದೇವನೂರು ಸ್ಟೇಷನ್ನಿನಲ್ಲೇ ತಮ್ಮ ಸಲೂನ್ ಬಂಡಿಯನ್ನು ನಿಲ್ಲಿಸಿಕೊಂಡಿದ್ದು ಮಹಾಸ್ವಾಮಿಗಳ ಟ್ರೇನು ಬರುತ್ತಲೆ ಅದನ್ನೂ ಅಲ್ಲೇ ಬೆಳಕುಹರಿಯುವವರೆಗೆ ನಿಲ್ಲಿಸಿಕೊಂಡಿದ್ದು ಶನಿವಾರ ಬೆಳಗಿನ 7½ ಗಂಟೆಗೆ ಸಮಸ್ತರೂ ಅರಮನೆಯ ಮೋಟಾರು ಬಂಡಿಗಳಲ್ಲಿ ಚಿಕ್ಕಮಗಳೂರಿಗೆ ಪ್ರಯಾಣಬೆಳಸಿದರು. ಕಡೂರು ರೈಲ್ವೆಸ್ಟೇಷನ್ನಿನಿಂದ ಚಿಕ್ಕಮಗಳೂರಿನ ವರೆಗೆ ದಾರಿಯುದ್ದಕ್ಕೂ ಸಾಲುಮರಗಳಿಗೆ ಸುಣ್ಣ ಮತ್ತು ಕೆಮ್ಮಣ್ಣುಪಟ್ಟೆಗಳು ಬಳಿಯಲ್ಪಟ್ಟಿದ್ದುವಲ್ಲದೆ ತಳಿರುತೋರಣಗಳು ಕಟ್ಟಲ್ಪಟ್ಟಿದ್ದುವು. ಪ್ರತಿಯೊಂದು ಗ್ರಾಮದ ಸಮೀಪದಲ್ಲಿಯು ಗ್ರಾಮಸ್ಥರೂ ನೆರೆಯ ಜನರೂ ಮನೋಹರವಾದ ಚಪ್ಪರಗಳನ್ನು ಹಾಕಿ ವಸ್ತ್ರಾಭರಣಗಳನ್ನು ಧರಿಸಿಕೊಂಡು ಫಲಪುಷ್ಪಗಳ ತಟ್ಟೆಗಳ ಸಮೇತ ನಿರೀಕ್ಷಿಸಿಕೊಂಡಿದ್ದು ಮಹಾಸ್ವಾಮಿಗಳವರ ಸವಾರಿಯು ಚಿತ್ತೈಸುತ್ತಲೆ ಕೋಲಾಹಲಧ್ವನಿಯನ್ನು ಮಾಡುತ್ತ ಮುಖಂಡರ ಮೂಲಕ ಫಲಪುಷ್ಪಗಳನ್ನೊಪ್ಪಿಸಿ ತಮ್ಮ ಅಕುಟಿಲವಾದ ರಾಜಭಕ್ತಿಯನ್ನು ತೋರಿಸಿದರು. ಮಹಾಸ್ವಾಮಿಗಳು ಮಂದಹಾಸದಿಂದ ಸ್ವೀಕರಿಸಿ ನೆರೆದಿದ್ದ ಜನರನ್ನೆಲ್ಲ ಕರುಣಕಟಾಕ್ಷದಿಂದ ಈಕ್ಷಿಸುತ್ತ ಸುಮಾರು 9½ ಗಂಟೆ ಸಮಯಕ್ಕೆ ಚಿಕ್ಕಮಗಳೂರನ್ನು ತಲುಪಿ ಬಿಡಾರವಾಗಿ ಮಾಡಲ್ಪಟ್ಟಿದ್ದ ಡೆಪ್ಯುಟಿ ಕಮೀಷನರ ಬಂಗಲೆಯಲ್ಲಿಳಿದು ಕೊಂಚ ವಿಶ್ರಮಿಸಿಕೊಂಡು ಮನೋಹರವಾದ ಉಡುಪನ್ನೂ ಮುತ್ತಿನ ಕಂಠಾಭರಣವನ್ನೂ ಧರಿಸಿ ತಮ್ಮಂತೆಯೇ ಉಡುಪಿನಿಂದಲೂ ವಜ್ರಮಣಿಗಳ ಕಂಠಾಭರಣದಿಂದಲೂ ಅಲಂಕೃತರಾದ ಶ್ರೀಮದ್ಯುವರಾಜರೊಡನೆಯೂ ದಿವಾನರೊಡನೆಯೂ ಮೋಟಾರು ಬಂಡಿಯಲ್ಲಿ ಕುಳಿತು ತಳಿರುತೋರಣಗಳಿಂದಲೂ ಧ್ವಜಪತಾಕೆಗಳಿಂದಲೂ ನೀಲಿನ ಚಳೀವಿನಿಂದಲೂ ಅಲಂಕೃತವಾಗಿದ್ದ ಊರಿನ ದೊಡ್ಡಪೇಟೆಯ ಮಾರ್ಗವಾಗಿ ಹೊರಟು ಆದಿಕರ್ನಾಟಕರು, ಮಹಮ್ಮದೀಯರು ವೈಶ್ಯರು ವೀರಶೈವರು ಮೊದಲಾದ ಮತಸ್ಥರು ರಚಿಸಿದ್ದ ಚಪ್ಪರಗಳನ್ನೂ ಪರಾಮರ್ಶಿಸಿಕೊಂಡು ಸುಮಾರು 10½ ಗಂಟೆಗೆ ಧರ್ಮಪ್ರಕಾಶ ಹಂಪ್ರೇಗೌಡರಿಂದ ವಿಶಾಲವಾಗಿಯೂ ಮನೋಹರವಾಗಿಯೂ ಹಾಕಿಸಲ್ಪಟ್ಟಿದ್ದ ಚಪ್ಪರದ ಬಳಿಗೆ ಚಿತ್ತೈಸಿದರು. ಕೂಡಲೆ ಧರ್ಮಪ್ರಕಾಶರು ಬೆಂಗಳೂರಿನಿಂದ ಕರಿಸಿದ್ದ ವಾದ್ಯದವರು ಮಹಾಸ್ವಾಮಿಗಳವರ ಸುಖಾಗಮನವನ್ನು ಒಯಿಸಿ ವಾದ್ಯವನ್ನು ಮಾಡಿದರು. ಚಿಕ್ಕಮಗಳೂರಿನ ಮ್ಯುನಿಸಿಪಲ್ ಕೌನ್ಸಿಲಿನವರೂ ಧರ್ಮಪ್ರಕಾಶರೂ ಮಹಾಪ್ರಭು ಸಹೋದರರನ್ನು ಸುಸ್ವಾಗತಿಸಿ ಮರ್ಯಾದಿಸಿದರು. ಮಹಾಸ್ವಾಮಿಗಳು ಅವರೆಲ್ಲರನ್ನೂ ವಂದಿಸಿ ಮಂಟಪದೊಳಗೆ ಪ್ರವೇಶಿಸಿ ಪೀಠದಮೇಲೆ ಸಜ್ಜುಗೊಳಿಸಿದ್ದ ರಜತಾಸನಗಳಮೇಲೆ ಸಾವಿರಾರು ಸ್ತ್ರೀಪುರುಷರ ಕೋಲಾಹಲಧ್ವನಿಯ ಮಧ್ಯದಲ್ಲಿ ಮಂಡಿಸಿದರು. ಬಾಲಿಕೆಯರು ಮಂಗಳವನ್ನು ಹಾಡಿದರು. ತಿಪಟೂರಿನಿಂದ ಬಂದಿದ್ದ ವೀರಶೈವ ವೈದಿಕರುಗಳು ಫಲಮಂತ್ರಾಕ್ಷತೆಯೊಡನೆ ಮಂಟಪದ್ವಾರದಿಂದ ಪೀಠದವರೆಗೂ ಮಹಾಸ್ವಾಮಿಗಳವರ ಮುಂಗಡೆ ವೇದಘೋಷವನ್ನು ಮಾಡಿಕೊಂಡುಬಂದರು. ಮಹಾಸ್ವಾಮಿಯವರಪ್ಪಣೆ ಪಡೆದು ಮ್ಯುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟರು ವಿಜ್ಞಾಪನಾಪತ್ರಿಕೆಯ

ಸ್ಮಿ... ಒಂದ ... ಪ್ರೆಸಿಡೆಂಟರು ತರುವಾಯ ಸೈನಿಯರ್ ಗಾಂಧಿನಗರದ ಸಾರ್ವಜನಿಕರಿಂದ ಕಟ್ಟಲ್ಪಡುವ ಆಸ್ಪತ್ರೆ ಶಿಲಾನ್ಯಾಸವಾದ ನಂತರ ಸನ್ಮಾನಪತ್ರಗಳನ್ನೋದಿದನಂತರ ಮ|| ಚಂದ್ರೇಗೌಡರ ಪುತ್ರರೂ ಅವರ ದ್ವಿತೀಯ ಕುಮಾರ ಮ|| ದೇವೇಗೌಡ ಬಿ ಎ, ಯವರು ವಿಜ್ಞಾಪನಾಪತ್ರಿಕೆಯನ್ನೋದಿದನಂತರ ಅದನ್ನು ಮ|| ಚಂದ್ರೇಗೌಡರು ಬಹು ಸುಂದರವಾದ ಬೆಳ್ಳಿಯ ಕ್ಯಾಸ್ಕೆಟ್ಟನಲ್ಲಿಟ್ಟು ಮಹಾಸ್ವಾಮಿಯವರಿಗೊಪ್ಪಿಸಿದರು ಆ ಮೇಲೆ ಮಹಾಪ್ರಭುಗಳು ವಿಜ್ಞಾಪನಾಪತ್ರಿಕೆಗಳಿಗೆ ಉತ್ತರವನ್ನು ಮೃದುಮಧುರವಾಣಿಯಲ್ಲಿ ದಯಪಾಲಿಸಿದಮೇಲೆ ಮ|| ಚಂದ್ರೇಗೌಡರು ಪುಷ್ಪಹಾರ ಗುಚ್ಛಗಳನ್ನು ಪ್ರಭು ಸಹೋದರರಿಗೊಪ್ಪಿಸಿದರು. ತರುವಾಯ ಪ್ರಭುಗಳು ಬೆಳ್ಳಿಯ ಕರಣೆಯಿಂದ ಕೊಂಚ ಗಾರೆಯನ್ನು ತೆಗೆದುಕೊಂಡು ಆಸ್ತಿವಾರದ ಕಲ್ಲಿನ ಕೆಳಗೆ ಹಾಕಿದಕೂಡಲೆ ಚೀಫ್ ಇಂಜನಿಯರು ಸರಪಳಿಯನ್ನೆಳೆದು ಸುವರ್ಣಾಕ್ಷರಗಳಿಂದ ಕೆತ್ತಲ್ಪಟ್ಟಿದ್ದ ಕಲ್ಲನ್ನು ಕೆಳಗಿಳಿಸಿ ಉಚಿತವಾಗಿ ಕುಳ್ಳಿರಿಸಿದರು ಮಹಾಪ್ರಭು ಸಹೋದರರು ಸಭಿಕರ ಜಯಧ್ವನಿಯಾಗುತ್ತಿರುವಾಗ್ಗೆ ಮಂಟಪವನ್ನು ಬಿಟ್ಟು ಹೊರಟು ಮೋಟಾರುಬಂಡಿಯಲ್ಲಿ ಕುಳಿತು ವಿಹಾರಕ್ಕೆ ಚಿತ್ತೈಸಿದರು ಈ ಮಹೋತ್ಸವಕ್ಕೆ ಸ್ಥಳೀಯ ಅಧಿಕಾರಿಗಳೂ ಯೂರೋಪಿಯನ್ ಮತ್ತು ಹಿಂದು ಕಾಫಿಪ್ಲಾಂಟರುಗಳೂ, ಲಾ ಸೆಕ್ರೆಟರಿ ಮ|| ಪಿ ಮಹಾದೇವಯ್ಯನವರು, ಶಿವಮೊಗ್ಗ ಸಬ್‌ಜಡ್ಜ್ ಮ|| ಜಿ ಪರಮಶಿವಯ್ಯನವರು, ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರುಗಳಾದ ಮ|| ಡಿ ಎಸ್ ಮಲ್ಲಪ್ಪನವರು ಮ|| ಡಿ ಎಚ್ ಚಂದ್ರಶೇಖರಯ್ಯನವರು, ಮ|| ಎಚ್ ಜಿ ಬಸವಪ್ಪನವರು ಕೋಲಾರದಿಂದ ಸಾಹುಕಾರ್ ಚಿಕ್ಕಚನ್ನಂಜಪ್ಪಶೆಟ್ಟರು, ಬೆಂಗಳೂರಿನಿಂದ ಕ್ಯಾಪ್ಟನ್ ವೈ ಎ ಅಯ್ಯನವರು, ಎಂ ಎಲ್ ಇ ಫಂಡ್ ಸೆಕ್ರೆಟರಿ ಮ|| ಎಂ ನಾಗಪ್ಪನವರು ಮೈಸೂರಿನಿಂದ ಧರ್ಮಪ್ರಕಾಶ ಡಿ ಬನುಮಯ್ಯನವರು ಮೊದಲಾದ ದೊಡ್ಡ ಮನುಷ್ಯರುಗಳೂ ಬಂದಿದ್ದರು ಮಹಾಪ್ರಭುಗಳು ಮಾರನೆಯ ಬೆಳಿಗ್ಗೆ ಪರಿವಾರದೊಡನೆ ಬಾಬಾಬುಡನ್‌ಗಿರಿಗೆ ಮೋಟಾರು ಬಂಡಿಗಳಲ್ಲಿ ಚಿತ್ತೈಸಿ ದತ್ತಾತ್ರೇಯ ಪೀಠ ಮೊದಲಾದುದನ್ನು ಪರಾಮರ್ಶಿಸಿಕೊಂಡು. ಸಾಯಂಕಾಲ ಹಿಂದಿರುಗಿ ಮಾರನೆಯ ಬೆಳಿಗ್ಗೆ ಹಾಸನಕ್ಕೆ ದಯಮಾಡಿಸಿದರು ಧರ್ಮಪ್ರಕಾಶ ಚಂದ್ರೇಗೌಡರು ಮಹಾಪ್ರಭುಗಳ ಸುಖಾಗಮನಕ್ಕಾಗಿ ಅತ್ಯುತ್ಕೃಷ್ಟವಾದೇರ್ಪಾಡನ್ನು ಮಾಡಿ ಮಹಾಸ್ವಾಮಿಯವರ ಮೆಚ್ಚುಗೆಗೆ ಪಾತ್ರರಾದರು ಧರ್ಮಪ್ರಕಾಶರ ವಿಜ್ಞಾಪನಾಪತ್ರಿಕೆಯೂ ಮಹಾಪ್ರಭುಗಳ ಉತ್ತರವೂ ಬೇರೆಕಡೆ ಮುದ್ರಿಸಲ್ಪಟ್ಟಿವೆ

ಅಫ್ಘನ್‌ರಾಜ್ಯದ ಪರಿಸ್ಥಿತಿ.

ಕಾಬೂಲಿನಲ್ಲಿ ದಂಗೆಕೋರ ರಾಜನು ಜನಗಳಿಗೆ ಚಿತ್ರಹಿಂಸೆಕೊಡುತ್ತಿರುವನು ಹಿಂದು ನಿವಾಸಿಗಳಮೇಲೆ ತಲೆಗಂದಾಯವನ್ನು ಹಾಕಿರುವನಲ್ಲದೆ ನಾನಾವಿಧವಾದ ತೊಂದರೆಗಳಿಗೆ ಗುರಿಮಾಡುತ್ತಿರುವನು ಅಮಾನುಲ್ಲರವರ ರಾಜ್ಯಭಾರದಲ್ಲಿ ಖಜಾನೆ ಮಂತ್ರಿಯಾಗಿದ್ದ ಬ್ರಿಗೇಡಿಯರ್ ಜನರಲ್ ದಿವಾನ್ ನಿರಂಜನ್ ದಾಸ್ ರವರನ್ನು ದಂಗೆಕೋರರಾಜನು ತನಗೆ ಮಂತ್ರಿಯಾಗಿರಬೇಕೆಂದು ಕೇಳಿದನೆಂದೂ, ಅದಕ್ಕೆ ಒಪ್ಪದಿರಲು ಅವನನ್ನು ಕೊಲೆಮಾಡಿಸಿದನೆಂದೂ ವರ್ತಮಾನ ಬಂದಿತ್ತು ಆದರೆ ಈ ಸುದ್ದಿಯು ನಿರಾಧಾರವಾದುದೆಂದು ಈಗ ತಿಳಿದುಬಂದಿದೆ ನಾಕಾಲ್ ದೊರೆಯು ಹೊಸ ಮಂತ್ರಿಗಳನ್ನು ನಿಯಮಿಸಿಕೊಂಡು ರಾಜ್ಯಭಾರ ನಡೆಸುವ ಯತ್ನವನ್ನು ಮಾಡುತ್ತಲಿರುವನಾದರೂ ಜನಗಳ ಸಹಾನುಭೂತಿಯಿಲ್ಲದೆ ಪೇಚಾಡುತ್ತಿರುವನು ವಿದೇಶೀಯ ರಾಯಭಾರಿಗಳ ಸಂರಕ್ಷಣೆಯು ಸಮರ್ಪಕವಾಗಿಲ್ಲವಾದುದರಿಂದ ಅವರು ಕಾಬೂಲನ್ನು ಬಿಟ್ಟು ಹೊರಟುಹೋಗಬೇಕೆಂದೂ ದೇಶದಲ್ಲಿ ಶಾಂತಿಸ್ಥಾಪನೆಯಾಗಿ ಕ್ರಮವಾದ ರಾಜ್ಯಭಾರವು ನಿರ್ವಾಹವಾಗುವವರೆಗೂ ಹಿಂತಿರುಗುವುದಿಲ್ಲವೆಂದೂ ತಿಳಿಯಬರುತ್ತದೆ ಬ್ರಿಟಿಷ್ ರಾಯಭಾರಿಗಳು ಅಂತ್ಯದವರೆಗೂ ಅಲ್ಲಿಯೇ ಇದ್ದು ಸಮಯೋಚಿತ ನಡೆದುಕೊಳ್ಳುವರಂತೆ ಇತರರಿಗೆ ಪ್ರಾಣಭಯವಿರುವುದೆಂದೂ, ಅಮಾನುಲ್ಲರವರ ಪಕ್ಷದವರು ದಂಗೆಕೋರ ರಾಜನನ್ನೂ, ಬ್ರಿಟಿಷ್ ರಾಯಭಾರಿಯನ್ನೂ ದ್ವೇಷಿಸುತ್ತಿರುವರೆಂದೂ ಅವರಿಂದ ಇವರಿಗೆ ಅಪಾಯಸಂಭವಿಸಬಹುದೆಂದೂ ಕೆಲ ಬ್ರಿಟಿಷ್ ಪತ್ರಿಕೆಗಳು ಹೇಳುತ್ತಿವೆ ಇತ್ತ ಕಾಂದಹಾರಿನಲ್ಲಿ ಅಮಾನುಲ್ಲರವರು ಪುನಃ ರಾಜ್ಯಾಭಿಷೇಕವನ್ನು ಮಾಡಿಸಿಕೊಂಡು, ಸೈನ್ಯ ಸನ್ನದ್ಧರಾಗುತ್ತಿರುವರೆಂದೂ, ಚಳಿಗಾಲ ಕಳೆದು ವಸಂತಕಾಲ ಬಂದೊಡನೆಯೇ ಕಾಬೂಲಿನಮೇಲೆ ನುಗ್ಗುವರೆಂದೂ ಸುದ್ದಿಬಂದಿರುವುದು ಜಲಾಲಾಬಾದಿನಲ್ಲಿದ್ದ ಅಮಾನುಲ್ಲರವರ ಸೈನ್ಯಾಧಿಕಾರಿಯು ಸುತ್ತುಮುತ್ತಿನ ಪ್ರಾಂತ್ಯವನ್ನು ಹತೋಟಿಯಲ್ಲಿಟ್ಟುಕೊಂಡಿರುವನು ಸಮಯಬಂದಾಗ ಅಮಾನುಲ್ಲರವರಿಗೆ ಸಹಾಯಕನಾಗುವನು ಇನಾಯತುಲ್ಲರವರು ಅಮಾನುಲ್ಲರವರೊಡನೆ ಸಹಾಯಕರಾಗುತ್ತಿರುವರು ಅಮಾನುಲ್ಲರವರಿಗೆ ಸಹಾಯಕರಾಗಿದ್ದ ರಷ್ಯಾದೇಶೀಯರಾದ ಆಕಾಶನಾವೆಯ ಯಂತ್ರಗಾರರನ್ನು ದಂಗೆಕೋರ ದೊರೆಯು ಕೆಲಸದಿಂದ ನಿವೃತ್ತಿಮಾಡಿ ಅವರು ತಮ್ಮ ದೇಶಕ್ಕೆ ಕಾಲ್ನಡಿಗೆಯಲ್ಲಿಯೇ ಹೋಗಬೇಕೆಂದು ಕಠಿಣವಾದ ಆಜ್ಞೆಯಿತ್ತಿರುವನಂತೆ ಬ್ರಿಟಿಷರ ಸ್ನೇಹವನ್ನು ಬಯಸಿರುವ ನಾಕಾಲಿಗೆ ಇದು ಸಹಜವೆಂದು ನಂಬಬೇಕಾಗಿದೆ- ಈ ದಂಗೆಕೋರ ದೊರೆಯು ಬಹುಕಾಲ ರಾಜನಾಗಿರಲಾರನೆಂದು ತೋರುತ್ತಿದೆ. ಕಾಂದಹಾರಿನಲ್ಲಿಯೂ ಇತರ ಕಡೆಗಳಲ್ಲಿಯೂ ಅಮಾನುಲ್ಲರವರಮೇಲೆ ಜನಗಳಿಗೆ ಭಕ್ತಿವಿಶ್ವಾಸಗಳು ಹೆಚ್ಚುತ್ತಲಿವೆ.

ಒಳದೇಶದ ವೃತ್ತಾಂತಗಳು

ಮೈಸೂರು ನ್ಯಾಯವಿಧಾಯಕಸಭೆಯು ಬರುವ ಮಾರ್ಚಿ ತಾ|| ೧೮ ರಲ್ಲಿ ಸೇರುವುದಾಗಿರುವುದು.

ಶ್ರೀಮನ್ಮಹಾರಾಜರವರು ಮೈಸೂರು ಇನ್ಫೆಂಟ್ರಿ ಎರಡನೆ ಬೆಟಾಲಿಯನ್ ಜಮಾದಾರ್ ಮ|| ಸಿ ಸುಬ್ರಹ್ಮಣ್ಯಂ ರವರನ್ನು ಸುಬೇದಾರ ತರಗತಿಗೆ ಹೆಚ್ಚಿಸಿರುತ್ತಾರೆ

ಡೆಲ್ಲಿಯಲ್ಲಿ ನೆರೆಯುವ ನರೇಂದ್ರಮಂಡಲದ ಸಮಾವೇಶಕ್ಕೆ ನಮ್ಮ ದಿವಾನರು ಈ ತಾ|| ೦ ರಲ್ಲಿ ಶ್ರೀಮನ್ಮಹಾರಾಜರವರ ಪ್ರತಿನಿಧಿಯಾಗಿ ದಯಮಾಡಿಸುವವರಾಗಿರುವರು

ಸೀನಿಯರ್ ಅಸಿಸ್ಟೆಂಟ್ ಕಮಿಷನರ್ ಮ|| ಎಂ ಶೇಷಾದ್ರಿ, ಎಂ.ಎ, ರವರು ರಜ ಪೂರೈಸಿದನಂತರ ಹಾಸನದ ಫಸ್ಟ್ ಕ್ಲಾಸ್ ಮೆಜಿಸ್ಟ್ರೇಟರಾಗಿ ನಿಯಮಿಸಲ್ಪಟ್ಟಿರುವುದರಿಂದ ಮ|| ಎಸ್ ಎನ್ ಶ್ರೀನಿವಾಸರಾವ್ ಬಿ ಎ, ಯವರು ಹಿಂದಿರುಗಿ ಅಮಲ್ದಾರರಾಗಿ ಹೋಗಬೇಕಾಗಿದೆ

ನರಸಿಂಹರಾಜಪುರದ ಮುನ್ಸೀಫರಾದ ಮ|| ಬಿ ಲಕ್ಷ್ಮೀನಾರಾಯಣಜೋಯಿಸ್, ಬಿ ಎ, ಎಲ್ ಎಲ್ ಬಿ ಯವರು ೨೦ ದಿನಗಳ ಪ್ರಿವಿಲೇಜ್ ರಜವನ್ನು ತೆಗೆದುಕೊಂಡಿರುವುದರಿಂದ ಶಿವಮೊಗ್ಗ ಡಿ|| ಆಕ್ಟಿಂಗ್ ಶಿರಸ್ತೇದಾರ್ ಮ|| ಎಂ ಕೆ ಶಿವಶಂಕರರಾವ್ ಬಿ ಎ, ಬಿ ಎಲ್ ರವರು ನರಸಿಂಹರಾಜಪುರದ ಆಕ್ಟಿಂಗ್ ಮುನ್ಸೀಫರಾಗಿ ನಿಯಮಿಸಲ್ಪಟ್ಟಿರುವರು

ಮೆಡಿಕಲ್ ಗ್ರಾಜ್ಯುಯೇಟರುಗಳಾದ ಮ|| ಎಂ ರಾಮಚಂದ್ರರಾವ್, ಎಂ ಬಿ, ಬಿ ಎಸ್, ರವರು ತಾ|| 16-10-28 ರಿಂದ, ಮ|| ಬಿ ಅನಂತಸ್ವಾಮಿರಾವ್, ಬಿ ಎಸ್ ಸಿ, ಎಂ ಬಿ ಬಿ ಎಸ್ ರವರು ತಾ|| 10-11-28 ರಿಂದ ಮತ್ತು ಮ|| ಟಿ ಚಂದ್ರಶೇಖರಯ್ಯ, ಬಿ ಎ, ಎಂ ಬಿ ಬಿ ಎಸ್, ರವರು ತಾ|| 10-11-28 ರಿಂದ ಒಂದು ವರ್ಷದವರೆಗೆ ಪ್ರೊಬೇಷನರಿ ಹೆಲ್ತ್ಆಫೀಸರುಗಳಾಗಿ ನಿಯಮಿಸಲ್ಪಟ್ಟಿರುತ್ತಾರೆ

ಶ್ರೀಮನ್ಮಹಾರಾಜರವರು ಆಶ್ವಯುಜ ಮಾಸದಲ್ಲಿ ನವರಾತ್ರಿಯುತ್ಸವದ ಕಡೆಯದಿವಸ ಆನೆಯಮೇಲಿನ ಭಂಗಾರದ ಅಂಬಾರಿಯಲ್ಲಿ ಕುಳಿತು ಜಂಬೂಸವಾರಿ ಹೊರಡುತ್ತಾರಷ್ಟೆ ಈ ಭಂಗಾರದ ಅಂಬಾರಿಯು ಪುರಾತನವಾದುದರಿಂದ ಅದರಬದಲು 17 ಸಾವಿರ ತೊಲ ಭಂಗಾರದಲ್ಲಿ ಒಂದು ಅಂಬಾರಿಯನ್ನು ನವೀನ ರೀತಿಯಲ್ಲಿ ಮಾಡಲು ಶ್ರೀಮನ್ಮಹಾರಾಜರವರ ಅಪ್ಪಣೆಯಾಗಿ ತಕ್ಕ ಪ್ರಯತ್ನವು ನಡೆಯುತ್ತಿರುವುದಾಗಿ ಕೇಳುತ್ತೇವೆ

ಬೆಂಗಳೂರು ಸ್ಪೆಷಲ್ ಸೆಕೆಂಡ್‌ಕ್ಲಾಸ್ ಮೆಜಿಸ್ಟ್ರೇಟರಾದ ಮ|| ಪಿ ಸೂರ್ಯನಾರಾಯಣಶೆಟ್ಟಿ, ಬಿ ಎ, ಎಲ್ ಎಲ್ ಬಿ, ಯವರು 2 ತಿಂಗಳ ರಜವನ್ನು ತೆಗೆದುಕೊಂಡಿರುವುದರಿಂದ, ದಾವಣಗೆರೆ ಮುನ್ಸೀಫರಾದ ಮ|| ಫೆರೋಜ್‌ಷಾ ಪ್ರನೆಗರ್ ಬಿ.ಎ, ಎಲ್ ಎಲ್ ಬಿ, ಯವರು ಬೆಂಗಳೂರು ಸ್ಪೆಷಲ್ ಸೆಕೆಂಡ್‌ಕ್ಲಾಸ್ ಮೆಜಿಸ್ಟ್ರೇಟರಾಗಿಯೂ, ಕ್ಲೋಸ್‌ಪೇಟೆ ಸ್ಪೆಷಲ್ ಫಸ್ಟ್‌ಕ್ಲಾಸ್ ಮೆಜಿಸ್ಟ್ರೇಟರಾದ ಮ|| ಎಂ ಆರ್ ಸುಂದರರಾವ್, ಬಿ ಎ, ಎಲ್ ಎಲ್ ಬಿ, ಯವರು ದಾವಣಗೆರೆಯ ಮುನ್ಸೀಫರಾಗಿಯೂ ರಜದಮೇಲಿರುವ ಸೀನಿಯರ್ ಅಸಿಸ್ಟೆಂಟ್ ಕಮಿಷನರ್ ಮ|| ಸಿ ಎಚ್ ಕೃಷ್ಣರಾವ್, ಎಂ ಎ, ರವರು ಕ್ಲೋಸ್‌ಪೇಟೆಯ ಸ್ಪೆಷಲ್ ಫಸ್ಟ್‌ಕ್ಲಾಸ್ ಮೆಜಿಸ್ಟ್ರೇಟರಾಗಿಯೂ ವರ್ಗಾಯಿಸಲ್ಪಟ್ಟಿರುತ್ತಾರೆ

ಕಳೆದ ಶನಿವಾರ ಹುಟ್ಟಿದ ದಿವಸ ಮಧ್ಯಾಹ್ನ ಸುಮಾರು ದಕ್ಕಾಗಿ ಮೈಸೂರು ರೈಲ್ವೆ ಇಲಾಖೆಯ ವಾಸ್ತವ್ಯನಾದ ಒಬ್ಬ ಮಹಮ್ಮದೀಯನು ಮೈಸೂರಿನಿಂದ ಕೊಂಡುಕೊಂಡು ಬಂದಿದ್ದ ಗಂಧಕ ಮಣಿಶಿಲೆ ಪಟಾಸ್ ಇವುಗಳನ್ನು ಸೇರಿಸಿ ಪೊಟ್ಟಣಗಳನ್ನು ಕಟ್ಟಿ ಬಂದುಕೊಳಿನ ತುಂಬ ಉಳಿದ ಪುಡಿಯಿಂದ ಒಂದು ದೊಡ್ಡ ಪೊಟ್ಟಣವನ್ನು ಕಟ್ಟಿ ಅದನ್ನು ಕೆಳಕ್ಕೆ ನೂಕಲು ಅದರ ಭಾರಕ್ಕೆ ಪೊಟ್ಟಣಗಳೆಲ್ಲ ಹೊತ್ತಿಕೊಂಡು ಸಿಡಿಮದ್ದಿನ ಶಬ್ದವಾಯಿತು ಇದರ ಜ್ವಾಲೆಯು ಕಟ್ಟುತ್ತಿದ್ದವನಿಗೂ ಸಮೀಪದಲ್ಲಿದ್ದ ಎರಡು ಮಕ್ಕಳಿಗೂ ಮತ್ತು ಪ್ರಾಣಾಂತಿಯಾಗಿ ಮಲಗಿದ್ದ ಅವನ ಹೆಂಡತಿಗೂ ತಗುಲಿ ಎರಡು ಮಕ್ಕಳು ಬೂದಿಯಾಗಿ ಮೃತವಾದುವೆಂದೂ ಉಳಿದವರೆಲ್ಲರೂ ಪೂರ್ಣವಾಗಿ ಗಾಯವನ್ನು ಹೊಂದಿ ರಾಜಧಾನಿಯ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸಾಗಿಸಲ್ಪಟ್ಟು ಚಿಕಿತ್ಸೆಯನ್ನು ಹೊಂದುತ್ತಿರುವರೆಂದೂ ತಿಳಿಯಬರುತ್ತದೆ

ಶ್ರೀಮನ್ಮಹಾರಾಜರವರೂ ಶ್ರೀ ಯುವರಾಜರವರೂ ಚಿಕ್ಕಮಗಳೂರಲ್ಲಿ ಶಂಕುಸ್ಥಾಪನೋತ್ಸವವನ್ನೂ, ಹಾಸನದಲ್ಲೂ ಹಾಸನ ಪುರಸಭಾ...ರಲ್ಲಿ ಆಸ್ಪತ್ರೆಗಳ ಆರಂಭೋತ್ಸವವನ್ನೂ ನೆರವೇರಿಸಿ ಕಳೆದ ಮಂಗಳವಾರ ರಾತ್ರಿ 8 ಗಂಟೆಗೆ ಸ್ಪೆಷಲ್ ಟ್ರೇನಿನಲ್ಲಿ ಪರಿವಾರದೊಡನೆ ರಾಜಧಾನಿಯನ್ನು ಸುರಕ್ಷಿತವಾಗಿ ತಲುಪಿದರು ಮಹಾಸ್ವಾಮಿಗಳ ಸ್ವಾರಿಯು ಬಾಬಾಬುಡನ್‌ಗಿರಿಯ ಮೇಲೆ ದಯಮಾಡಿಸಿದ್ದಾಗ್ಗೆ ಎಕ್ಸೈಜ್ ಕಮಿಷನರಾದ ಮಿ|| ಶಾಜ್ ಓರ್ಮಾಸ್ ರವರು ದತ್ತಾತ್ರೇಯ ಪೀಠಾಧಿಕಾರಿಗಳಾದ ಅವರ ಜಾವನಸರ ಸಮೇತ ಪಳವಿಯನ್ನು ಧರಿಸಿಕೊಂಡು ಗುಹೆಯೊಳಗಿರುವ ದತ್ತಾತ್ರೇಯ ಎಂಬ ಅನುಸೂಯಾ ದೇವಿಯ ಸಮಾಧಿ ಮೊದಲಾದುವನ್ನೂ, ಕಾಶಿಗೆ ಹೋಗಿರುತ್ತದೆಂದು ಹೇಳಲ್ಪಡುವ ಸುರಂಗವನ್ನೂ ಗಂಧದ ಬಾವಿಯನ್ನೂ ವಿದ್ಯುಚ್ಛಕ್ತಿದೀಪಗಳ ಸಹಾಯದಿಂದ ಮಹಾಸ್ವಾಮಿಯವರಿಗೆ ತೋರಿಸಿದರು ಮಹಾಸ್ವಾಮಿಯವರುಗಳು ಸಂತುಷ್ಟರಾಗಿ ದತ್ತಾತ್ರೇಯ ಪೀಠಕ್ಕೆ ಕಾಣಿಕೆಯನ್ನೂ ಕಳ್ಳಿಗ...ನ್ನು ... ಸಿದರು ... ಹಾಸನವಾದರಿಕ್ಕೆ ... ಸರ್ಕಾರದ ... ಕ್ಷೇತ್ರವನ್ನು ... ಸ್ಥಾಪನಸಡೋರರ ... ಸಂತೋಷ... ಈ ... ದಲ್ಲಿ ಶ್ರೀಮನ್ಮಹಾರಾಜರ ವಿನಾ ಇತರರೆಲ್ಲರೂ ಭಾಗಿಗಳಾಗಿದ್ದರು

ವರ್ತಮಾನಸಂಗ್ರಹ

ಅಹಮದಾಬಾದಿನಲ್ಲಿ ಒಂದು ಕೊಲೆಯ ಮೊಕದ್ದಮೆಯ ವಿಚಾರಣೆಯು ನಡೆದು ಅಪರಾಧಿಗಳಾದ ನಾಲ್ಕುಮಂದಿ ಪರಾಸರಿಗೆ ಶಿಕ್ಷೆಯನ್ನು ವಿಧಿಸಿದ ನ್ಯಾಯಾಧೀಶನಮೇಲೆ ಆಗ್ರಹಗೊಂಡು ಒಬ್ಬ ಅಪರಾಧಿಯು ತನ್ನ ಕಾಲಿನಲ್ಲಿ ಮೆಟ್ಟಿದ್ದ ಜೋಡನ್ನು ತೆಗೆದು ಎಸೆದನು ಪೋಲೀಸಿನವರು ಹಿಡಿಯುವುದಕ್ಕೆ ಪ್ರಯತ್ನಿಸಲು ಅವನು ಅವರನ್ನು ಸಹ ಹೊಡೆದು ಗಾಯಪಡಿಸಿದನು. ಇದರಲ್ಲಿ ಉಳಿದ ಅಪರಾಧಿಗಳೂ ಸೇರಿದರು ಅಷ್ಟರಲ್ಲಿಯೇ ಹೆಚ್ಚಿಗೆ ಪೋಲೀಸ್ ಆಳುಗಳು ಬಂದು ನಾಲ್ಕುಮಂದಿ ಅಪರಾಧಿಗಳನ್ನು ಹಿಡಿದರು ಈ ಹೊಸ ಕೃತ್ಯಕ್ಕಾಗಿ ಬೇರೆ ವಿಚಾರಣೆಯು ನಡೆಯುತ್ತಿರುವುದು ಈ ಅತ್ಯಾಚಾರಕ್ಕಾಗಿ ಹೆಚ್ಚಿನ ಶಿಕ್ಷೆಯು ವಿಧಿಸಲ್ಪಡುವುದು

ಚೀಣೆಯಲ್ಲಿ ಕ್ಷಾಮನಿವಾರಣೆಯ ಸ್ವಯಂಸೇವಕರು ಕಷ್ಟಪಟ್ಟು ಕೆಲಸಮಾಡುತ್ತಿರುವರಾದರೂ ನಿವಾರಣೆಯು ಸಾಧ್ಯವಾಗದೆ ಲಕ್ಷಾಂತರಜನರು ಕ್ಷಾಮಪೀಡನೆಗೆ ಆಹುತಿಯಾಗುತ್ತಿರುವರು. ಸತ್ತವರು ರಾಶಿ ರಾಶಿಯಾಗಿ ಬಿದ್ದಿರುವರು ಅವರನ್ನು ಹೂಳುವುದಕ್ಕೆ ಹಳ್ಳತೋಡಲು ಸಹ ಅವಕಾಶವಿರುವುದಿಲ್ಲ ನಾಯಿಗಳಿಗೂ ಕೋಳಿಗಳಿಗೂ ಹಬ್ಬವಾಗಿರುವುದು ಸಾವಿರಾರುಮಂದಿ ಹೊಟ್ಟೆಗಿಲ್ಲದೆ ಗುಂಪುಗುಂಪಾಗಿ ವಿದೇಶ ಮಾಡಲಾರಂಭಿಸಿರುತ್ತಾರೆ ಬೀದಿಗಳಲ್ಲಿಯೂ, ರಸ್ತೆಗಳಲ್ಲಿಯೂ ಜನರು ಬಿದ್ದು ಸಾಯುತ್ತಿರುವರು ಗ್ರಾಮಾಂತರಗಳಲ್ಲಿ ದಾನ್ಯದ ಕಣಜಗಳನ್ನು ಪೋಲಿಸರೆಂದು ರೈತರನ್ನು ಚಿತ್ರಹಿಂಸೆ ಪಡಿಸುತ್ತಿರುವರು. ಉತ್ತರಚೀನೆಯೆಲ್ಲವೂ ಭೀಕರವಾಗಿರುವುದು

ಚಳಿಗಾಲದ ಹಿಮದ ಹಾವಳಿಯು ಯುರೋಪಿನ ಅನೇಕ ದೇಶಗಳಲ್ಲಿ ಬಹುತರವಾದ ಅನಾಹುತಗಳಿಗೆ ಕಾರಣವಾಗಿರುವುದು ಆಸ್ಟ್ರಿಯಾ ದೇಶದಲ್ಲಿ ಇಲ್ಲಾ ಜನವರಿ ತಿಂಗಳಲ್ಲಿ ಹಿಮವು ಬಿಡದೇ ಸಮನಾಗಿ ಬಿದ್ದುದರಿಂದ ಜನಸಂಚಾರವೂ ರೈಲ್ವೆ ಮೊದಲಾದ ಗಾಡಿಗಳ ಪ್ರಯಾಣವೂ ನಿಂತುಹೋಗಿ ಬಹಳ ತೊಂದರೆಯಾಗಿರುವುದು ರಸ್ತೆಯ ಹಿಮವನ್ನು ಗುಡಿಸುವುದಕ್ಕಾಗಿ ರಾಜಧಾನಿಯಾದ ವಿಯನ್ನಾಪಟ್ಟಣ ಒಂದರಲ್ಲೇ ಮ್ಯುನಿಸಿಪಾಲಿಟಿಯವರು ಒಂದುಲಕ್ಷ ಪೌನು ಖರ್ಚುಮಾಡಿರುವರು ಇದಕ್ಕಾಗಿ ನಿರುದ್ಯೋಗಿಗಳಾಗಿದ್ದ 12,000 ಮಂದಿ ಕೂಲಿಗಳು ಹಗಲು ರಾತ್ರಿ ಕೆಲಸಮಾಡುತ್ತಿರುವರು ಇಟಲಿಯಲ್ಲಿಯೂ ಯುಗೊಸ್ಲಾವಿಯಾದಲ್ಲಿಯೂ ಇದೇ ಪ್ರಕಾರ ಹಿಮವು ಬಿದ್ದಿರುವುದು

ಕಳೆದ ಸೋಮವಾರ ಬೆಂಗಳೂರಿಂದ ಮದರಾಸಿಗೆಹೋಗುತ್ತಿದ್ದ ರೈಲ್‌ಗಾಡಿಯಲ್ಲಿ ಮೇಲುಕೋಟೆಯ ರಾಜಮ್ಮನೆಂಬ ೨೦ ವರ್ಷ ವಯಸ್ಸಿನ ಶ್ರೀವೈಷ್ಣವ ಸ್ತ್ರೀಯು ಕೊಲೆಮಾಡಲ್ಪಟ್ಟಳು ರಾಜಮ್ಮನು ಏಕಾಕಿನಿಯಾಗಿ ಇಂಟರ್ಮೀಡಿಯೆಟ್ ಗಾಡಿಯಲ್ಲಿ ಪ್ರಯಾಣಮಾಡುತ್ತಿದ್ದಳು ರೈಲ್‌ಗಾಡಿಯು ತಿರುವಲಂಗಾಡು ನಿಲ್ದಾಣವನ್ನು ಸಮೀಪಿಸುತ್ತಿದ್ದಾಗ ಯಾವನೋ ಒಬ್ಬನು ಆಕೆಯಗಾಡಿಗೆ ಹೋಗಿ ನಿದ್ರಿಸುತ್ತಿದ್ದವಳನ್ನು ಕೊಂದನು ಇತನು ಅರ್ಕೋಣಂ ನಿಲ್ದಾಣದಲ್ಲಿ ಆಕೆಯ ಗಾಡಿಯನ್ನು ಪ್ರವೇಶಿಸಿದನು ಗಾಡಿಯು ನಿಲ್ದಾಣವನ್ನು ಬಿಟ್ಟು ಹೊರಟಕೂಡಲೆ ಪಕ್ಕದ ಗಾಡಿಯಲ್ಲಿದ್ದವರಿಗೆ ಸ್ತ್ರೀ ರೋದನವು ಕೇಳಿಸಲು ಅನುಮಾನಗ್ರಸ್ತರಾಗಿ ಅವರು ಗಾಡಿಯನ್ನು ನಿಲ್ಲಿಸುವುದಕ್ಕಾಗಿ ಅಪಾಯ ಸೂಚನೆಯ ಸರಪಳಿಯನ್ನು ಎಳೆದರು. ಗಾಡಿಯು ನಿಲ್ಲುವಷ್ಟರಲ್ಲಿ ಕೊಲೆಪಾತಕನು ಶವವನ್ನು ಗಾಡಿಯಿಂದ ಹೊರಗೆ ಹಾಕಿ ತಾನೂ ಅದರೊಡನೆ ಕೆಳಗೆ ಧುಮುಕಿ ಓಡಿಹೋದನು ಗಾಡಿಯು ಕೊಂಚದೂರ ಹೋಗಿ ನಿಂತುಬಿಟ್ಟು ಕೂಡಲೆ ಶವ ಬಿದ್ದಿದ್ದೆಡೆಗೆ ಹಿಂದಕ್ಕೆ ಬಂದಿತು ಘಾತಕನನ್ನು ಹುಡುಕುವಲ್ಲಿ ಸಿಕ್ಕಲಿಲ್ಲ ಸ್ತ್ರೀಯಳಿದ್ದ ಗಾಡಿಯನ್ನು ಶೋಧಿಸಲಾಗಿ ಕೆಲ ಕಾಗದಪತ್ರಗಳೂ, ರಕ್ತಮಯವಾದ ವಸ್ತ್ರವೂ ಸಿಕ್ಕಿದುವು ಕಾಗದದಲ್ಲಿ ಬರೆದಿದ್ದ ಪ್ರೇಮಭರಿತವಾದ ಬಾಷೆಯಿಂದ ರಾಜಮ್ಮನಿಗೂ ಕೊಲೆಪಾತಕನಿಗೂ ಇದ್ದ ಸಂಬಂಧವು ಸ್ಥಾಪನೆಯಾಗುತ್ತಿದೆ ಗುಳಿಕಾನಿಯಮೇಲೆ ಕಾಗದದಲ್ಲಿ ಬರೆದಿದ್ದ ರಾಮಚಂದ್ರರಾವೆಂಬವನು ಮದರಾಸಿನಲ್ಲಿ ಸೆರೆಹಿಡಿಯಲ್ಪಟ್ಟಿದ್ದು ಜಾಮೀನಿನಮೇಲೆ ಬಿಡಲ್ಪಟ್ಟಿರುವನು. ಪಕ್ಕದ ಗಾಡಿಯಲ್ಲಿ ಪ್ರಯಾಣಮಾಡುತ್ತಿದ್ದವನೊಬ್ಬನು ತಾನು ಕಂಡ ವಿಚಾರವನ್ನು ಪತ್ರಿಕೆಗೆ ತಿಳಿಸಿರುವನು ಅರ್ಕೋಣಂ ನಿಲ್ದಾಣದಿಂದ ರೈಲ್‌ಗಾಡಿಯು ಹೊರಟ ಸಮಯದಲ್ಲಿ ಒಬ್ಬಮನುಷ್ಯನು ರಾಜಮ್ಮನ ಗಾಡಿಗೆ ಹತ್ತಿದನು, ಪಕ್ಕದ ಗಾಡಿಯಲ್ಲಿದ್ದವನೊಬ್ಬನು ಸಿಂಬಳವನ್ನು ಸೀನುವುದಕ್ಕಾಗಿ ಕಿಟಕಿಯಿಂದ ಹೊರಗೆ ಬಗ್ಗಿದಾಗ ರಾಜಮ್ಮನ ಗಾಡಿಯಲ್ಲಿ ದುರಾತ್ಮನು ಮಲಗಿದ್ದ ರಾಜಮ್ಮನನ್ನು ಕೊಲ್ಲಲು ಚೂರಿಯನ್ನೆತ್ತಿದ್ದುದನ್ನು ಕಂಡು ಅಪಾಯಸೂಚಕವೆಂದು ತಿಳಿದು ಗಲಾಟೆಮಾಡಿ ರೈಲ್‌ಗಾಡಿಯನ್ನು ನಿಲ್ಲಿಸಲು ಯತ್ನಿಸಿದನು. ಪೋಲೀಸಿನವರು ನಿಜವಾದ ಅಪರಾಧಿಯನ್ನು ಪತ್ತೆ ಮಾಡುವವರಾಗಿರುವರು.

ಮೊದಲನೇ ಪುಟದಿಂದ ಮುಂದುವರಿದುದು

ಹಿಂದೂಮುಸಲ್ಮಾನರ ಕ್ಷೋಭೆಗಳಿಂದ ಬರುವಷ್ಟಕ್ಕೆ ನಿದಾನವಾಗಿರುವೆಂಬ ಭಾವನೆ ... ದೆ

ಮಿಸ್ಟರ್ ಅಬ್ಬಾಸ್ ಖಾನರ ಜಾಗದಲ್ಲಿ ಮುನಿಸಿಪಾಲಿಟಿಯಲ್ಲಿ ಕೇವಲ ಸರ್ಕಾರದ ಅಧಿಕಾರಿಯೊಬ್ಬರನ್ನು ಅಡಿಷನಲ್ ಡಿ॥ ಮ್ಯಾಜಿಸ್ಟ್ರೇಟರನ್ನು ... ನೇಮಿಸಿದ್ದರ, ಈ ರೀತಿ ಸಂಭವಿಸಿದುದು ಬಹಳ ಮಟ್ಟಿಗೆ ... ಆ ಸ್ಥಳದ ಮುನಿಸಿಪಲ್ ಸ್ವಾತಂತ್ರ್ಯವನ್ನು ... ಆಗಿದಲ್ಲವೆಂದೂ ಕಮಿಟಿಯವರ ಅಭಿಪ್ರಾಯಪಡುತ್ತಾರೆ. ಮೊದಲನೇ ಆಫೀಸರು ಮುನಿಸಿಪಲ್ ಕಮಿಷನರಾಗಿದ್ದ ಎರಡು ತಿಂಗಳವರೆಗೆ ಮಾತ್ರ ಖಾನ್ ಬಹದ್ದೂರ್ ಮಿ॥ ಅಬ್ಬಾಸ್‌ಖಾನರು ಪ್ರೆಸಿಡೆಂಟರಾಗಿದ್ದರು. ಮುನಿಸಿಪಲ್ ಕಮಿಷನರು ಪ್ರೆಸಿಡೆಂಟರ ಅಧೀನರಲ್ಲ, ಪೂರ್ಣ ಸ್ವತಂತ್ರರು. ಇವರನ್ನು ಚುನಾಯಿಸುವ ವಿಷಯದಲ್ಲಿ ಸರ್ಕಾರದವರು ಇವರ ಸೀನಿಯಾರಿಟಿ, ಇವರು ಪೋಲೀಸು ಆಫೀಸರಾಗಿಯೂ, ಮ್ಯಾಜಿಸ್ಟ್ರೇಟರಾಗಿಯೂ ಇದ್ದು ಪಡೆದ ಅನುಭವ ಇವುಗಳನ್ನು ಗಮನದಲ್ಲಿಟ್ಟರು. ಮ್ಯಾಜಿಸ್ಟ್ರೇಟರ ನಿಷ್ಪಕ್ಷಪಾತತೆ ಮತ್ತು ಸ್ವತಂತ್ರತೆಗಳ ವಿಷಯದಲ್ಲಿ ನಂಬಿಕೆಯನ್ನು ಹುಟ್ಟಿಸುವುದಕ್ಕೋಸ್ಕರವೇ ಇವರನ್ನು ಚುನಾಯಿಸಲಾಯಿತು ಮತ್ತು ಈ ಮ್ಯಾಜಿಸ್ಟ್ರೇಟರನ್ನು ನಿಯಮಿಸಲಾಯಿತೆಂಬ ಆರ್ಡರ್ ಹೊರಬಿದ್ದಾಗ ಜನರು ಆ ವಿಷಯದಲ್ಲಿ ಸಂತುಷ್ಟರಾದರೆಂದೇ ಸರ್ಕಾರದವರು ನಂಬುತ್ತಾರೆ.

ವಿಷಯುಗಳು ಪ್ರಜೆಗಳ ತಿಳುವಳಿಕೆಗೆ ಬರಲಿಕ್ಕೆ ಬಗ್ಗೆ ಸರ್ಕಾರದವರು ಕೈಗೊಂಡ ಕಾರ್ಯಗಳ ವಿಷಯದಲ್ಲಿ ಕಮಿಟಿಯವರು—"ಪ್ರಜೆಗಳಲ್ಲಿ ಅದರಲ್ಲಿಯೂ ಕೇವಲ ಕನ್ನಡ ಪತ್ರಿಕೆಗಳನ್ನು ನೋಡಿ ವಿಷಯಗಳನ್ನು ತಿಳಿದುಕೊಳ್ಳಬೇಕಾಗಿದ್ದ ಪರಸ್ಥಳದವರಲ್ಲಿ ಉಂಟಾಗಿದ್ದ ಗಾಬರಿಯನ್ನು ಕಡಮೆ ಮಾಡಲು ಸಹಾಯಮಾಡಿದುವು" ಎಂದು ಹೇಳುವರಾದರೂ ಎರಡು ವಿಷಯಗಳಲ್ಲಿ ಮಾತ್ರ ಆಕ್ಷೇಪಿಸುವರು. ಒಂದನೆಯದು—ವಿದ್ಯಾಭ್ಯಾಸಾಧಿಕಾರಿಗಳು ದೂರ್ಗ್ ತಾ॥ ೧ರಲ್ಲಿ ಆಕಸ್ಮಾತ್ ಸುಲ್ತಾನ್‌ಪೇಟೆ ಎ ವಿ ಸ್ಕೂಲಿಗೆ ಹೋದರು, ಅಲ್ಲಿ ಒಂದು ಗಣಪತಿಯನ್ನು ಕಟ್ಟುತ್ತಿರುವುದು ಅವರ ಗಮನಕ್ಕೆ ಬಂದಿತು ಎಂಬುದೇ ಅವರು ಆಕ್ಷೇಪಿಸುವ ಒಂದನೇ ಅಂಶವು. ಜುಲೈ ತಾ 30 ರಲ್ಲಿ ಗುಂಡುಹಾರಿಸಲ್ಪಡಲಿಲ್ಲವೆಂದು ಪ್ರಸಿದ್ಧ ಪತ್ರಿಕೆಯಲ್ಲಿ ತಿಳಿಸಿತ್ತೆಂಬುದು ಎರಡನೆಯ ಅಂಶವು. ಮೊದಲನೆಯ ಅಂಶವು ಅಷ್ಟು ಮುಖ್ಯವಾದುದಾಗಿಲ್ಲ. ಎರಡನೆಯ ವಿಷಯದಲ್ಲಿ ಹೇಳಬೇಕಾದದ್ದೇನೆಂದರೆ—ಆ ಸಂದರ್ಭದಲ್ಲಿ ಪೋಲೀಸಿನವರೂ ಮಿಲಿಟರಿಯವರೂ ಸೇರಿಕೊಂಡು ಬೇಕಾದಷ್ಟು ಕೊಲೆಯಾಗಿ ಹೋಯಿತೆಂದು ವರ್ತಮಾನ ಹುಟ್ಟಿಹೋಗಿದ್ದಿತು. ಈ ಗಾಬರಿಯನ್ನು ಶಾಂತಮಾಡುವುದಕ್ಕಾಗಿಯೇ ಪ್ರಸಿದ್ಧ ಪತ್ರಿಕೆಗಳು ಪ್ರಕಟಿಸಲ್ಪಟ್ಟದ್ದು. ಆದ್ದರಿಂದ ಬಹಳ ಅವಸರವಾಗಿ ಆಯಾ ಸಂದರ್ಭದಲ್ಲಿ ದೊರೆತಷ್ಟು ನಿಖರವಾದ ವರ್ತಮಾನಗಳನ್ನು ಬರೆದು ಆ ಪ್ರಕಟನೆಗಳನ್ನು ಪ್ರಸಿದ್ಧಿಸಲಾಯಿತು. ಕಮಿಟಿಯವರು ಹೇಳಿರುವಂತೆ ಬಯಸಿದ ಪ್ರಕಾರ ಆ ಪ್ರಕಟನೆಗಳಿಂದ ಶಾಂತಿಯುಂಟಾಯಿತು. ಗುಂಡು ಹಾರಿದ ವಿಷಯದ ಬಗ್ಗೆ ಆಗಿನ ಪ್ರಸಿದ್ಧ ಪತ್ರಿಕೆಯನ್ನು ಸರಿಪಡಿಸಿಕೊಳ್ಳಲು ಗುಂಡಿನೇಟಿನಿಂದಾದ ಗಾಯಪಡೆದಂತಹ ಒಂದು ಕೇಸು ದೊರೆತಿದೆಯೆಂದು ಸರ್ಕಾರದ ಗಮನಕ್ಕೆ ಬಂದಕೂಡಲೆ ಪ್ರಯತ್ನ ಮಾಡಲಾಗಿದೆ.

ಸಮಿತಿಯವರ ಸಲಹೆಗಳು

ಈ ಮುಂದೆ ಕಮಿಟಿಯವರು ಸಂಸ್ಥಾನದಲ್ಲಿ ಹಿಂದಿನಂತೆ ಶಾಂತಿಸಮಾಧಾನಗಳು ನೆಲೆಗೊಳ್ಳಬೇಕಾದರೆ ಯಾವ ಯಾವ ಮಾರ್ಗಗಳನ್ನು ಅವಲಂಬಿಸಬೇಕೆಂದು ತಿಳಿಸಿರುತ್ತಾರೆ. ಇವರ ಸಲಹೆಯ ಪ್ರತಿಯೊಂದೊಂದರ ವಿಷಯದಲ್ಲಿಯೂ ಸರ್ಕಾರದವರು ತಮ್ಮ ಅಭಿಪ್ರಾಯವನ್ನು ಕೊಟ್ಟಿರುತ್ತಾರೆ.

(a) ಗಲಭೆಯಲ್ಲಿ ಕಾಯಿದೆಯನ್ನು ಮೀರಿ ನಡೆದವರೆಲ್ಲರನ್ನೂ ಪತ್ತೆ ಮಾಡಿ ಶಿಕ್ಷೆಗೆ ಗುರಿಪಡಿಸಬೇಕೆಂಬ ವಿಚಾರ. ಅಡಿಷನಲ್ ಡಿ. ಮ್ಯಾಜಿಸ್ಟ್ರೇಟರು ನಾಲ್ಕು ತಿಂಗಳ ಮೇಲ್ಪಟ್ಟು ಕೇವಲ ದಿಲ್ ವಾರಿಯಾಗಿ ತನಿಖೆ ನಡೆಯಿಸಿದ್ದಾರೆ, ಮತ್ತು 461 ಮಂದಿ ಸಾಕ್ಷಿಗಳ ಹೇಳಿಕೆಯನ್ನು ತೆಗೆದುಕೊಂಡಿದ್ದಾರೆ. ಇದರ ಫಲಿತಾಂಶವಾಗಿ ಸಿಟಿ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ 24 ಮಂದಿ ಹಿಂದೂಗಳು ಮತ್ತು 11 ಮಂದಿ ಮಹಮ್ಮದೀಯರ ಮೇಲೆ ಕ್ರಮ ಜರುಗಿಸಲಾಯಿತು. ಧೊಂಬಿಯ ಕಾಲದಲ್ಲಿ ಹೊಡೆದಾಟವಲ್ಲದೆ ಗಲಭೆಯಾಗುವುದಕ್ಕೆ ಹಿಂದೆಯೂ ಮುಂದೆಯೂ ನಡೆದ ಎಲ್ಲಾ ವಿಧವಾದ ಅಪರಾಧಗಳನ್ನೂ ಒಳಗೊಂಡ ಕೇಸುಗಳು ಈ ತನಿಖೆಯಿಂದ ಹೊಂದಿದ್ದರುತ್ತವೆ. ಆಫೀಸರ ಸ್ಟೇಟ್‌ಮೆಂಟ್ ಮತ್ತು ವಿಚಾರಣೆಯ ಸಂಪೂರ್ಣಾನುಭವಗಳನ್ನು ಕುರಿತು ಆಲೋಚಿಸಿದರೆ ನಂಬಲರ್ಹವಾದ ರುಜುವಾತುಗಳಿರುವ ಪ್ರತಿಯೊಂದು ಕೇಸನ್ನೂ ವಿಚಾರಣೆಗೆ ಇಟ್ಟುಕೊಂಡಿದೆ. ಹೀಗಿರುವಲ್ಲಿ ಈ ವಿಷಯವನ್ನು ಪುನಃ ಎತ್ತಿಟ್ಟುಕೊಳ್ಳುವುದರಿಂದ ಯಾವ ಪ್ರಯೋಜನವೂ ಆಗುವುದಿಲ್ಲವೆಂದು ಸರ್ಕಾರಕ್ಕೆ ತೋರಿಬರುತ್ತದೆ. ಇದಲ್ಲದೆ ಪರಸ್ಪರಾನುರಾಗವನ್ನು ಸಂಸ್ಥಾಪಿಸುವ ಅಭಿಪ್ರಾಯದಿಂದ ಹಿಂದುಗಳ ಮೇಲಿನ ಮೊಕದ್ದಮೆಗಳನ್ನು ವಾಪಸ್ ತೆಗೆದುಕೊಳ್ಳಲಾಯಿತು. ಹಾಗೆ ವಾಪಸು ತೆಗೆದುಕೊಂಡದು ಅಪೇಕ್ಷಿತ ಫಲವನ್ನು ಕೊಟ್ಟಿತೆಂದು ಸರ್ಕಾರದವರು ನಂಬುತ್ತಾರೆ.

(b) ಮಿ॥ ಅಬ್ಬಾಸ್‌ಖಾನರ ಮನೆಯೊಳಕ್ಕೆ ಹುಡುಗರು ನುಗ್ಗಿದರು, ಅವರಲ್ಲಿ ನಾಲ್ಕು ಮಂದಿ ಹುಡುಗರು ಕೊಲ್ಲಲ್ಪಟ್ಟರೆಂಬ ವಿಚಾರದಲ್ಲಿ ಇನ್ನೂ ತನಿಖೆ ನಡೆಸಬೇಕೆಂಬ ಸಲಹೆಯ ವಿಷಯ. ಈ ವಿಚಾರದಲ್ಲಿ ಪೋಲೀಸಿನವರಿಂದಲೂ ಮೆಜಿಸ್ಟ್ರೇಟರಿಂದಲೂ ಪೂರ್ಣವಾದ ತನಿಖೆಗಳು ನಡೆದಿರುತ್ತವೆ. ಈ ತನಿಖೆಗಳಿಂದ ಏನೂ ಹೊರಬೀಳಲಿಲ್ಲ. ಕಮಿಟಿಯಿಂದ ನಡೆದ ವಿಚಾರಣೆಯಿಂದಲೂ ಈ ಭಾಗದಲ್ಲಿ ನಂಬಲರ್ಹವಾದ ರುಜುವಾತು ದೊರೆಯಲಿಲ್ಲ. ಈ ಸಂದರ್ಭದಲ್ಲಿ ನಂಬಲರ್ಹವಾದ ಸಂಗತಿಗಳು ಗೊತ್ತಾಗುವಷ್ಟಾದರೆ ಡಿಪಾರ್ಟ್‌ಮೆಂಟಿನ ಅಧಿಕಾರಿಗಳು ಸಂತೋಷದಿಂದ ಸ್ವೀಕರಿಸುವರು. ಆದರೆ ಕಮಿಟಿಯವರೇ 69 ನೇ ಪೇಜಿನಲ್ಲಿ ಹೇಳುವಂತೆ ನಗೆಗೀಡಾಗಿರುವ ವಿಷಯಗಳ ಮೇಲೆ ಮತ್ತೆ ತನಿಖೆ ಕ್ರಮವನ್ನು ನಡೆಸುವುದು ಲಾಭದಾಯಕವಲ್ಲವಾಗಿದೆ.

(c) ಬೆಂಗಳೂರು ಗಲಭೆಗೆ ಸಂಬಂಧಪಟ್ಟ ಎಲ್ಲಾ ಮೊಕದ್ದಮೆಗಳನ್ನೂ ವಿಚಾರಣೆ ಮಾಡಿ ಫೈಸಲ್ ಮಾಡುವುದಕ್ಕಾಗಿ ಜುಡಿಸಿಯಲ್ ಡಿಪಾರ್ಟ್‌ಮೆಂಟಿನ ದೊಡ್ಡ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಸ್ಪೆಷಲ್ ಕೋರ್ಟುಗಳನ್ನು ಸ್ಥಾಪಿಸಬೇಕೆಂಬ ಸಲಹೆಯ ವಿಷಯ—ಈಗಿನ ಸಂದರ್ಭದಲ್ಲಿ ಮತ್ತು ಪ್ರಕೃತ ಸ್ಥಿತಿಯಲ್ಲಿ ಈಗ ಸಿಟಿ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ನಡೆಯುತ್ತಿರುವ ಕೇವಲ ಕೆಲವು ಮೊಕದ್ದಮೆಗಳನ್ನು ತೀರ್ಮಾನಿಸಲು ಸ್ಪೆಷಲ್ ಕೋರ್ಟು ಬೇಕಾಗಿದೆಯೆಂದು ತೋರುವುದಿಲ್ಲ.

(d) ಪೋಲೀಸು ಖಾತೆಯನ್ನು ಉತ್ತಮಗೊಳಿಸಿ, ಪತ್ತೇದಾರಿ ಇಲಾಖೆಯನ್ನು ಬಲಪಡಿಸಬೇಕೆಂಬ ಸಲಹೆಯ ವಿಷಯ—ಈ ವಿಚಾರವು ಸಾಕಷ್ಟು ಕಾಲದ ಹಿಂದೆಯೇ ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಹಣ ಒದಗಿದಂತೆ ಈ ಕೆಲಸವು ಪ್ರಾರಂಭಿಸಲ್ಪಡುವುದು.

(e) ಇಂತಹ ಸಂದರ್ಭಗಳಲ್ಲಿ ದೊರೆಯುವಷ್ಟು ಮಂದಿ ಮೆಜಿಸ್ಟ್ರೇಟರೆಲ್ಲರನ್ನೂ ಒಟ್ಟುಗೂಡಿಸಿ, ಆ ಕಾಲದಲ್ಲಿ ಕೇವಲ ಕಾಯಬಲವನ್ನು ಉಪಯೋಗಿಸದೆಯೇ ಶಾಂತಸ್ಥಿತಿಯಲ್ಲಿ ಕಾರ್ಯಗಳನ್ನು ನಡೆಸುವ ಬಗ್ಗೆ ಮಿಲಿಟರಿಯವರಿಗೂ, ಪೋಲೀಸಿನವರಿಗೂ ಮಾರ್ಗದರ್ಶಕರಾಗಿರುವುದಕ್ಕಾಗಿ ... ಸಂದರ್ಭಗಳಲ್ಲಿ ... ಮಿಲಿಟರಿ ಅಧಿಕಾರಿಗಳು ಇಂತಹ ಸಂದರ್ಭಗಳಲ್ಲಿ ... ಕೆಲಸಮಾಡುವ ಕ್ರಮಗಳನ್ನು ತಿಳಿದವರಾಗಿರಬೇಕೆಂಬ ಸಲಹೆಯ ವಿಷಯ—ಈ ವಿಷಯಗಳನ್ನೆಲ್ಲ ಸರ್ಕಾರದವರು ಒಪ್ಪುತ್ತಾರೆ.

(f) ಕಾಗಿರುವಾಗಲೇ ಪರಿಸ್ಥಿತಿಗೆ ಸರಿಯಾಗಿ ಮಿಲಿಟರಿ ಇರಬೇಕೋ ಇರಬಾರದೋ ಎಂಬುದಿಗೆ ತೀರ್ಮಾನಮಾಡಬೇಕು ಮತ್ತು ಕ್ಷೋಭೆ ಮುಂತಾದವು ಗಲಭೆಗಳು ಬಂದಾಗ ಮಿಲಿಟರಿಯನ್ನು ನಿಯಮಿಸಲು ವಿಶೇಷತೆಗಳ ಎಚ್ಚರಿಕೆಯನ್ನು ಉಪಯೋಗಿಸಬೇಕೆಂಬ ಸಲಹೆ ವಿಷಯ—ಮಿಲಿಟರಿ ಇಲಾಖೆಯ ಪುನರ್ವ್ಯವಸ್ಥೆಯನ್ನು ಕುರಿತು ಆಲೋಚನೆಗಳ ಮೇಲೆ ನಿರ್ಧರಿಸುವುದು ನ್ಯಾಯವೂ ಅಲ್ಲ ಮತ್ತು ಸಾಧ್ಯವೂ ಅಲ್ಲ. ಮಿಲಿಟರಿ ಸೋಲ್ಜರಿಗೆ ಜಾತಿಮತಗಳಾಗಲೀ, ರಾಜಕೀಯ ಚಳವಳಿಯಾಗಲಿ ಒಂದೂ ಅವನಿಗೆ ತಿಳಿಯದೆಂಬುದೂ, ಅವನ ಕರ್ತವ್ಯವು ಅಧಿಕಾರಿಗೆ ವಿಧೇಯನಾಗಿ ನಡೆಯತಕ್ಕದು ಮಾತ್ರವೇ ಎಂಬುದೂ ಎಲ್ಲರಿಗೂ ಗೊತ್ತಿರುವ ಸಂಗತಿಯಾಗಿದೆ. ಪ್ರಜಾಭಾಗದ ಯಾವುದಾದರೊಂದು ಜನಾಂಗಕ್ಕೆ ಪ್ರತ್ಯೇಕವಾದ ಅಭಿಮಾನವನ್ನಾಗಲೀ ವೈಷಮ್ಯವನ್ನಾಗಲೀ ತೋರ್ಪಡಿಸುವಂತೆ ಮಾಡುವ ಯಾವುದಾದರೊಂದು ಮಾರ್ಗವೇ ಆಗಲಿ, ಸೂಚನೆಯೇ ಆಗಲಿ ಆ ದಳದ ನೀತಿಯನ್ನೇ ಕೆಡಿಸಿಬಿಡುತ್ತದೆ. ಪೋಲೀಸ್ ಮತ್ತು ಮಿಲಿಟರಿಯ ಒಟ್ಟುಗೂಡಿದ ದಳದ ವಿಷಯವನ್ನು ಕೋಮುವಾರು ಗಲಭೆಗಳಲ್ಲಿ ನಂಬಲಾಗುವುದಿಲ್ಲ ಎಂದುದರಿಂದ ಈ ಒಟ್ಟು ದಳವನ್ನು ಬಿಟ್ಟುಬಿಡಬೇಕು ಎಂದು ಹೇಳುವ ಕಮಿಟಿಯ ಅಭಿಪ್ರಾಯವು ಏನೆಂಬುದೇ ಸರ್ಕಾರಕ್ಕೆ ತಿಳಿಯದಾಗಿದೆ. ಪೋಲೀಸ್ ಮತ್ತು ಮಿಲಿಟರಿಯಲ್ಲಿ ಇತ್ತೀಚಿನವರು ಕಮಿಟಿಯವರು ಹೇಳುವಂತೆ ನಂಬಲನರ್ಹರಾಗಿ ಅದಕ್ಕೆ ವ್ಯತಿರಿಕ್ತ ಫಲವನ್ನೇ ಕೊಡುತ್ತಿದೆಯೆಂದು ಈವರೆಗಿನ ಅನುಭವವಿರುತ್ತದೆ.

(g) ಸರ್ಕಾರಿ ಹುದ್ದೆಗಳಿಗೆ ಯೋಗ್ಯತೆಯೂ ಅರ್ಹತೆಯೂ ಕಾರಣಗಳಾಗಿರಬೇಕೇ ವಿನಾ ಯಾವನಾದರೊಬ್ಬನು ಯಾವುದೋ ಒಂದು ಮತಕ್ಕೆ ಅಥವಾ ಕೋಮಿಗೆ ಸೇರಿದ ಮಾತ್ರಕ್ಕೆ ಹುದ್ದೆಯನ್ನು ಕೊಡಲಾಗದು. ಮಿಲ್ಲರ್ ಕಮಿಟಿಯ ರಿಪೋರ್ಟಿನ ಮೇಲಿನ ಸರ್ಕಾರಿ ಆಜ್ಞೆಯಿಂದ ಅಸಮಾಧಾನ ಮತ್ತು ಅಸೂಯೆ ಹುಟ್ಟಿರುತ್ತದೆ. ಈ ಬಗ್ಗೆ ಒಂದು ರೌಂಡ್ ಟೇಬಲ್ ಕಾನ್ಫರೆನ್ಸ್ ಅಥವಾ ಬ್ರಾಹ್ಮಣ—ಬ್ರಾಹ್ಮಣೇತರ ಮುಖಂಡರ ಸಭೆಯಲ್ಲಿ ವಿಷಯವನ್ನು ಚೆನ್ನಾಗಿ ಚರ್ಚಿಸಿ ಬೇರೆ ದೇಶಗಳಲ್ಲಿರುವ ಪದ್ಧತಿಗೆ ಅನುಸಾರವಾಗಿಯೂ ನ್ಯಾಯಸಮ್ಮತವಾಗಿಯೂ ಇರುವಂತೆ ತೀರ್ಮಾನವನ್ನೂ ಮಾಡಬೇಕು ಎಂಬ ಸಲಹೆಯ ವಿಷಯ. ಈ ಭಾಗವು ಬಹು ಕಷ್ಟವಾದ ವಿಷಯವನ್ನು ತಂದೊಡ್ಡುತ್ತದೆ. ಎಲ್ಲಾ ಕೋಮುಗಳಿಗೂ ಸರ್ಕಾರಿ ಅಧಿಕಾರಗಳಲ್ಲಿ ತಕ್ಕಷ್ಟು ಪ್ರಾತಿನಿಧ್ಯವನ್ನು ಕೊಡಬೇಕೆಂಬುದೇ ಈ ವಿಷಯದಲ್ಲಿ ಸರ್ಕಾರದ ಧ್ಯೇಯ. ಈ ಬಗ್ಗೆ ಆಯಾ ಹುದ್ದೆಗಳಿಗೆ ಕಡಿಮೆಯಾಗದಂತೆ ಯೋಗ್ಯತೆ ಮತ್ತು ಅರ್ಹತೆಗಳನ್ನು ಜಾಗರೂಕತೆಯಿಂದ ನಿರ್ಣಯ ಮಾಡಿದೆ. ಈಗಿರುವ ಏರ್ಪಾಡನ್ನು ಉತ್ತಮಗೊಳಿಸುವ ಬಗ್ಗೆ ಕೋಮುವಾರು ಮುಖಂಡರ ಸೂಚನೆಗಳನ್ನು ಸರ್ಕಾರದವರು ಆದರದಿಂದ ಸ್ವೀಕರಿಸುವರು.

(h) ಖಾಸಗಿ ದೊಡ್ಡ ಮನುಷ್ಯರು ಮತ್ತು ಪತ್ರಿಕಾಸಂಪಾದಕರು ಇವರುಗಳಿಂದೊಡಗೂಡಿ ಸರ್ಕಾರದ ಸೆಕ್ರೆಟರಿಯನ್ನೊಳ್ಗೊಂಡ ಒಂದು ಸಭೆ (ಬೋರ್ಡ್) ಸ್ಥಾಪಿತವಾಗಬೇಕು. ವರ್ತಮಾನ ಪತ್ರಿಕೆಗಳಲ್ಲಿ ಬರವಣಿಗೆಗಳನ್ನು ಈ ಸಭೆಯು ಗಮನಿಸುತ್ತ ಪರ್ಯಾಲೋಚಿಸುತ್ತಿರಬೇಕು. ಈ ಲೇಖನಗಳನ್ನು ವಿಮರ್ಶೆಮಾಡಿ ಒಂದು ಮಾಸಿಕ ವಿಮರ್ಶೆಯನ್ನು ಹೊರಡಿಸಬೇಕು ಮತ್ತು ಕಾಯಿದೆ ಪ್ರಕಾರ ಮೊಕದ್ದಮೆ ಮಾಡಬಹುದಾದ ಲೇಖನಗಳನ್ನು ಸರ್ಕಾರದ ಗಮನಕ್ಕೆ ತರಬಹುದು. ಸರ್ಕಾರವು ಸಹಾಯವನ್ನು ಕೊಟ್ಟು ಒಂದೆರಡು ದಿನಪತ್ರಿಕೆಗಳನ್ನು ಹೊರಡಿಸುವುದೂ ಒಂದು ಅಗತ್ಯವೇ ಸರಿ ಎಂಬ ಸಲಹೆಯ ವಿಷಯ. ಈ ರೀತಿಯಾಗಿ ಪತ್ರಿಕೆಗಳ ಮೇಲೋಟಕ್ಕಾಗಿ ಒಂದು ಬೋರ್ಡನ್ನು ಸ್ಥಾಪಿಸುವುದರಿಂದ ಪತ್ರಿಕೆಗಳಿಗೆ ತೊಂದರೆ ಮಾಡಿದಂತಾಗುತ್ತದೆ. ಮತ್ತು ಉಚಿತವಾಗಿ ಕೆಲಸ ನಡೆಸುವ ಸಂಸ್ಥೆಯನ್ನೇ ಏರ್ಪಡಿಸುವುದು ಸುಲಭಸಾಧ್ಯವೇನೂ ಅಲ್ಲ.

ಆದರೂ ಈ ವಿಷಯದಲ್ಲಿ ಇನ್ನುಮೇಲೆ ಪತ್ರಿಕೆಗಳಿಂದಲೂ ಪ್ರಜೆಗಳಿಂದಲೂ ಬರುವ ಸೂಚನೆಗಳನ್ನು ಸರ್ಕಾರದವರು ಆಲೋಚಿಸುವವರಾಗಿರುವರು. ಒಂದೆರಡು ದಿನಪತ್ರಿಕೆಗಳನ್ನು ಹೊರಡಿಸಬೇಕೆಂದರೆ ಈಗಿನ ವರ್ತಮಾನ ಪತ್ರಗಳ ಸ್ವಂತ ವ್ಯವಸ್ಥೆಯ ಮೇಲೂ ಅನುಕೂಲತೆಯ ಮೇಲೂ ನಿರ್ಧರವಾಗುತ್ತವೆಯೇ ವಿನಾ ಸರ್ಕಾರದ ಸಹಾಯವನ್ನೇ ಕಾದಿರುವುದಿಲ್ಲ. ಈ ವಿಚಾರಗಳನ್ನೇ ಖಾಸಗಿ ಜನರಿಗೇ ಬಿಡಬೇಕು. ಮತ್ತು ಹಾಗೆ ಪತ್ರಿಕೆಗಳಿಗೆ ಸಹಾಯಮಾಡುವುದರಿಂದ ಆವುಗಳೊಡನೆ ಸಂಬಂಧವನ್ನು ಬೆಳೆಸಿದ ಭಾಗದಲ್ಲಿ ಸರ್ಕಾರವು ಹೇಗೆ ಆಕ್ಷೇಪಣೆಗೊಳಗಾಗುವುದಿಲ್ಲವೋ ತಿಳಿಯದಾಗಿದೆ.

ಗಲಭೆಗೆ ಪರೋಕ್ಷ ಕಾರಣಗಳ ವಿಚಾರವಾಗಿ ಪ್ರಸ್ತಾಪಿಸುತ್ತ ಸಮಿತಿಯವರು ಮುಖ್ಯವಾಗಿ ನಾಲ್ಕು ಕಾರಣಗಳನ್ನು ಸೂಚಿಸಿದ್ದಾರೆ.

1 ಗಲಭೆ ನಡೆದ ಕಾಲದಲ್ಲಿ ನಡೆಯುತ್ತಿದ್ದ ಬರಹೋಲಿ ಸತ್ಯಾಗ್ರಹ
2 ಹಿಂದೂ ಮುಸಲ್ಮಾನರ ವೈಷಮ್ಯಗಳು
3 ಮದರಾಸಿನಲ್ಲಿ ಪ್ರಾರಂಭವಾದ ಬ್ರಾಹ್ಮಣ ಬ್ರಾಹ್ಮಣೇತರ ಪ್ರಶ್ನೆ
4 ಜವಾಬ್ದಾರಿ ಸರ್ಕಾರಕ್ಕಾಗಿ ಚಳುವಳಿ

ಹಿಂದೂ-ಮುಸಲ್ಮಾನರ ವೈರ.

ಈ ವಿಷಯವಾಗಿ ಸರ್ಕಾರದವರು ಹೇಳಬೇಕಾಗಿರುವುದು ಒಂದೇ ವಿಚಾರ. ಸಮಿತಿಯವರೇ ಒಪ್ಪಿಕೊಳ್ಳುವಂತೆ ಸಂಸ್ಥಾನದಲ್ಲಿ ಎಲ್ಲಿಯೂ ಹಿಂದು ಮುಸಲ್ಮಾನರ ವೈಷಮ್ಯವಿದೆಯೆಂದು ಸರ್ಕಾರದವರು ಭಾವಿಸಲು ಯಾವ ರುಜುವಾತೂ ಬಂದಿಲ್ಲ. ಆದ್ದರಿಂದ ಆ ದ್ವೇಷವನ್ನು ಬಿಡಿಸುವುದು, ಎರಡು ಕೋಮುಗಳನ್ನು ಹತ್ತಿರ ಸೇರಿಸುವ ಏನಾದರೂ ಅಭಿಪ್ರಾಯವನ್ನು ಹೋಗಲಾಡಿಸುವುದು ಈ ವಿಚಾರವಾಗಿ ಸಮಿತಿಯವರು ಸೂಚಿಸಿರುವ ಸಲಹೆಗಳನ್ನು ಸರ್ಕಾರದವರು ವಿಶೇಷಾಸಕ್ತಿಯಿಂದ ಅವಲೋಕಿಸಿದ್ದಾರೆ.

ಜನರ ನಡವಳಿಕೆ

ಟರ್ಕಿ ಮತ್ತು ಅಫ್ಘಾನಿಸ್ಥಾನದಲ್ಲಿ ಆಚರಣೆಗೆ ತಂದಿರುವಂತೆ ಸುಧಾರಣೆಗಳನ್ನು ನಡೆಸಿ ಜನರ ಆಚಾರ ವ್ಯವಹಾರಗಳನ್ನು ಸಮಧಾತುವಿಗೆ ತರಬೇಕೆಂದು ಸಮಿತಿಯವರು ಸೂಚಿಸಿದ್ದಾರೆ. ಈ ವಿಚಾರದಲ್ಲಿ ಸರ್ಕಾರದವರು ಏನನ್ನು ಮಾಡಬಹುದೋ ಅಷ್ಟನ್ನು ಮಾಡಿಯೂ ಮಾಡುತ್ತಲೂ ಇದ್ದಾರೆ. ಉಳಿದುದು ಕಾಲಕ್ರಮದಲ್ಲಿ ಜನರ ಸ್ವಯಿಚ್ಛಾಪೂರ್ವಕವಾಗಿ ನಡೆಯಬೇಕಾಗಿದೆ.

ಆಚಾರ ವ್ಯವಹಾರಗಳು ಸಮಧಾತುವಿಗೆ ಬರಬೇಕಾದರೆ, ವಿದ್ಯಾಭ್ಯಾಸ, ಪ್ರಚಾರಕಾರ್ಯ ಮುಂತಾದುವುಗಳಿಂದ ನಡೆಯಬೇಕಾಗಿರುವುದರಿಂದ ಪಾಠಶಾಲೆಗಳಲ್ಲಿ ಸಾಮಾಜಿಕ ಭಾವನೆಯನ್ನುಂಟುಮಾಡುವ ಪಾಠಗಳನ್ನು ಕಲಿಸುವುದು, ಮತ್ತು ವಯಸ್ಕರ ಪ್ರಯೋಜನಾರ್ಥವಾಗಿ ಉಪನ್ಯಾಸಗಳು, ಪ್ರಚಾರಕಾರ್ಯ ಮುಂತಾದವುಗಳನ್ನು ಕೈಗೊಳ್ಳುವುದು ಇವುಗಳನ್ನು ಮಾಡಬೇಕೆಂದು ಸಮಿತಿಯವರು ಸೂಚಿಸಿರುವ ಸಲಹೆಗಳಿಗೆ ಸರ್ಕಾರದವರು ತಕ್ಕ ಗಮನ ಕೊಡುವರು.

ಸಮುದಾಯಗಳ ಒಳಿತು(?)

... ಜನರ ಜೀವನದ ... ಉದ್ಯೋಗ ... ಬೇರೆ ಕೆಲಸಗಳು ... ಈ ವಿಷಯವನ್ನು ಕೈಗೊಂಡು ನಡೆಯುವುದಕ್ಕೆ ಸಹಾಯವನ್ನು ... ನಮ್ಮ ದೇಶದಲ್ಲಿ ... ಸ್ವಾತಂತ್ರ್ಯದಿಂದ ... ಈಗಿನ ಕಾಲದಲ್ಲಿ ... ಸರ್ಕಾರದವರು ಕೆಲವು ವರ್ಷಗಳಿಂದೀಚೆಗೆ ಹೆಚ್ಚು ಗಮನಕೊಡುತ್ತಿದ್ದಾರೆ.

ನಿರುದ್ಯೋಗ

ಜನರಲ್ಲಿ ನಿರುದ್ಯೋಗವನ್ನು ಕಡಿಮೆಮಾಡಿ, ಕೈಗಾರಿಕೆಗಳಿಗೆ ಪ್ರೋತ್ಸಾಹಕೊಟ್ಟು ದೇಶದ ಆರ್ಥಿಕಸ್ಥಿತಿಯನ್ನು ಉತ್ತಮಗೊಳಿಸುವುದಕ್ಕಾಗಿ ಸಮಿತಿಯವರು ಕೆಲವು ಸಲಹೆಗಳನ್ನು ಸೂಚಿಸಿರುವರು. ಇವುಗಳಲ್ಲಿ ಮೈಸೂರು ಯೂನಿವರ್ಸಿಟಿಗೆ ಸಂಬಂಧಪಟ್ಟಂತೆ ವ್ಯವಸಾಯದ ಪರೀಕ್ಷೆ ನಡೆಸುವುದು ಮತ್ತು ವ್ಯಾಪಾರದ ಪರೀಕ್ಷೆಯನ್ನು ಪುನಃ ಪ್ರಾರಂಭಿಸುವುದು ಈ ಎರಡು ವಿಷಯಗಳನ್ನೂ ಯೂನಿವರ್ಸಿಟಿಯವರ ಪರ್ಯಾಲೋಚನೆಗೆ ಕಳುಹಿಸಲಾಗುವುದು. ಸಿಲ್ವರ್‌ಜೂಬಿಲಿ ಟೆಕ್ನಿಕಲ್ ಕಾಲೇಜನ್ನು ಸ್ಥಾಪಿಸುವ ವಿಚಾರದಲ್ಲಿ ಸರ್ಕಾರದವರು ಇಷ್ಟರಲ್ಲೇ ಹುಕುಂ ಮಾಡುವವರಾಗಿದ್ದಾರೆ. ಮಿಡ್ಲ್ ಮತ್ತು ಹೈಸ್ಕೂಲುಗಳಲ್ಲಿ ಕೈಗಾರಿಕೆಗಳನ್ನು ಬೋಧಿಸುವುದು ಮತ್ತು ಹಳ್ಳಿಗಾಡಿನ ಪಾಠಶಾಲೆಗಳಲ್ಲಿ ವ್ಯವಸಾಯ ವಿದ್ಯೆಗೆ ಗಮನಕೊಡುವುದು, ಮತ್ತು ಅವಿದ್ಯೆಯನ್ನು ಹೋಗಲಾಡಿಸಲು ಪ್ರಯತ್ನಿಸುವುದು ಈ ವಿಚಾರಗಳಲ್ಲಿ 1914 ನೇ ವರ್ಷದಿಂದೀಚೆಗೆ ವಿದ್ಯಾಭ್ಯಾಸದ ಇಲಾಖೆಯ ವಾರ್ಷಿಕ ವರದಿಗಳನ್ನು ನೋಡಿದರೆ ವಿದ್ಯಾಪ್ರಚಾರದಲ್ಲಿ ಸರ್ಕಾರದವರು ಮಾಡಿರುವ ಅಗಾಧ ಪ್ರಯತ್ನಗಳೂ ವಿದ್ಯಾಭ್ಯಾಸಕ್ಕಾಗಿ ಎಷ್ಟು ಹೆಚ್ಚಾಗಿ ವೆಚ್ಚಮಾಡುತ್ತಿದ್ದಾರೆಂಬುದೂ ವ್ಯಕ್ತವಾಗುತ್ತದೆ. ಮುಂದೆಯೂ ಇದೇರೀತಿ ಸರ್ಕಾರದವರು ಏರ್ಪಡಿಸುವರೆಂಬ ವಿಚಾರದಲ್ಲಿ ಭರವಸೆ ಕೊಡಬೇಕಾದ ಅಗತ್ಯವೇ ಇಲ್ಲ.

ಕೈಗಾರಿಕೆಯ ಅಭಿವೃದ್ಧಿ ವಿಚಾರದಲ್ಲಿ ಸಂಸ್ಥಾನದ ಒಟ್ಟು ಆದಾಯದಲ್ಲಿ ಶೇಕಡ 6 ರಿಂದ 8 ರಷ್ಟು ಮೊಬಲಗನ್ನು ಹತ್ತುವರ್ಷಗಳ ವರೆಗೆ ಕೈಗಾರಿಕೆ ಕಸಬುಗಳಿಗಾಗಿ ಕೊಡಬೇಕೆಂದು ಸಮಿತಿಯವರು ಸೂಚಿಸಿದ್ದಾರೆ. ಕಳೆದ 15 ವರ್ಷಗಳಿಂದಲೂ ಸರ್ಕಾರದವರು ಕೈಗಾರಿಕೆಯ ಅಭಿವೃದ್ಧಿಗಾಗಿ ಪ್ರಯತ್ನಮಾಡಿರುವರು. ಕೈಗಾರಿಕೆಗಳಿಗೆ ಸರ್ಕಾರಿ ಸಹಾಯವನ್ನು ವಿಮರ್ಶಿಸಿ ಸಲಹೆ ಕೊಡಲು ನೇಮಿಸಿದ್ದ ಸಮಿತಿಯ ವರದಿಯು ಸರ್ಕಾರಕ್ಕೆ ಬಂದಮೇಲೆ ಈ ವಿಚಾರವನ್ನು ಸರ್ಕಾರದವರು ಪರ್ಯಾಲೋಚಿಸುವರು.

ರಾಜಕೀಯ ಸುಧಾರಣೆಗಳು

ಅಂತ್ಯದಲ್ಲಿ ರಾಜಕೀಯ ಅತೃಪ್ತಿಯನ್ನು ಹೋಗಲಾಡಿಸುವುದು ಹೇಗೆಂಬ ವಿಚಾರದಲ್ಲಿ ಸಮಿತಿಯವರು ಕೆಲವು ಸಲಹೆಗಳನ್ನು ಸೂಚಿಸಿರುವರು. ಇವುಗಳು ಶ್ರೀಮನ್ಮಹಾರಾಜ ಸರ್ಕಾರದವರಿಗೆ ತಿಳಿಯದ್ದಿಲ್ಲ. ಈ ವಿಚಾರದಲ್ಲಿ ನ್ಯಾಯವಾದ ಆಶೆಗಳನ್ನೆಲ್ಲಾ ನಡೆಸಿಕೊಡಲು ಸರ್ಕಾರದವರು ಯಾವಾಗಲೂ ಸಿದ್ಧರಾಗಿದ್ದಾರೆ. 1923 ನೇ ಇಸವಿಯಲ್ಲಿ ಸುಧಾರಣೆಗಳನ್ನು ಕೊಟ್ಟಮೇಲೆ ಪ್ರಜಾಪ್ರತಿನಿಧಿ, ನ್ಯಾಯವಿಧಾಯಕ ಸಭೆಗಳ ನಿಬಂಧನೆಗಳಲ್ಲಿ ಏನೇನು ಬದಲಾವಣೆಗಳಾಗಬೇಕೆಂಬುದನ್ನು ಅದಕ್ಕಾಗಿ ನೇಮಿಸಿದ್ದ ಒಂದು ಕಮಿಟಿಯವರು ಸರ್ಕಾರಕ್ಕೆ ಸೂಚಿಸಿರುವರು. ಇದರಿಂದಲೇ ರಾಜಕೀಯ ಸುಧಾರಣೆಗಳ ವಿಚಾರದಲ್ಲಿ ಸರ್ಕಾರದವರು ತಟಸ್ಥರಾಗಿಲ್ಲವೆಂಬುದು ವ್ಯಕ್ತವಾಗುತ್ತದೆ. ಈಗಿರುವ ರಾಜ್ಯಾಡಳಿತ ಕ್ರಮವನ್ನು ಸಂಪೂರ್ಣವಾಗಿ ಬದಲಾಯಿಸಿದರೂ ಅದರಿಂದ ದೊಂಬಿಗಳು ನಡೆಯದಂತೆ ತಪ್ಪಿಸುವುದಕ್ಕಾಗುವುದಿಲ್ಲವೆಂಬುದು ಇತರದೇಶದ ಉದಾಹರಣೆಗಳಿಂದ ಗೊತ್ತಾಗುತ್ತದೆ. ಅನುಚಾನವಾಗಿ ದೇಶದಲ್ಲಿ ನೆಲೆಗೊಂಡಿರುವ ಸಾಮಾಜಿಕಪದ್ಧತಿಗನುಸಾರವಾಗಿ ರಾಜ್ಯಾಡಳಿತಕ್ರಮವು ಏರ್ಪಡಬೇಕು. ಬೇರೆಬೇರೆ ವಿಧವಾದ ನಾಗರೀಕತೆ, ಸಂಸ್ಕೃತಿ ಇವುಗಳಿರುವ ದೇಶದಲ್ಲಿ ದ್ವಿಮುಖ ಸರ್ಕಾರ ಅಥವ ಇತರ ಕಡೆಯಲ್ಲಿ ಆಚರಣೆಯಲ್ಲಿರುವ ಇನ್ನೊಂದುಬಗೆಯ ಸರ್ಕಾರವನ್ನು ಅನುಸರಿಸುವುದು ಕಷ್ಟ. ರಾಜ್ಯಾಡಳಿತಕ್ರಮದ ವಿಚಾರವನ್ನು "ಜವಾಬ್ದಾರಿ ಸರ್ಕಾರಕ್ಕೆ ಒತ್ತಾಸೆಕೊಟ್ಟು ಕಾರ್ಯತಃ ಆಚರಣೆಗೆ ತರಲು ಸಹಕಾರಿಯಾದ ಸಾಮಾಜಿಕ ಪದ್ಧತಿಗನುಗುಣವಾಗಿ ಪರ್ಯಾಲೋಚಿಸಬೇಕಾಗಿದೆಯೇ ಹೊರತು ಬರಿ ರಾಜ್ಯಾಡಳಿತಕ್ರಮವನ್ನೇ ಆಲೋಚಿಸುವುದರಿಂದ ಪ್ರಯೋಜನವಿಲ್ಲ. ಅಗತ್ಯವಾದ ಬದಲಾವಣೆಗಳಾಗಕೂಡದೆಂಬುದು ಸರ್ಕಾರದ ಇಷ್ಟವಲ್ಲ. ಆದರೆ ಅವುಗಳು ಸಾಮಾಜಿಕ ಪದ್ಧತಿಗೆ ಸರಿಹೋಗತಕ್ಕವುಗಳಾಗಿರಬೇಕು. ಮೈಸೂರಿನಲ್ಲಿ ರಾಜಕೀಯ ಸುಧಾರಣೆಗಳನ್ನು ಸರ್ಕಾರದಿಂದ ಒಂದೊಂದಾಗಿ ಪಡೆದುಕೊಳ್ಳುವುದರ ಆವಶ್ಯಕತೆಯುಂಟು.

ಎನ್ ಮಾಧವರಾವ್, ಸರ್ಕಾರದ ಚೀಫ್ ಸೆಕ್ರೆಟರಿ

ಮೈಸೂರು ಸಂಸ್ಥಾನದ ಶ್ರೀಮನ್ಮಹಾರಾಜಾಧಿರಾಜ ರಾಜಪರಮೇಶ್ವರ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್ ಜಿ ಸಿ ಎಸ್ ಐ, ಜಿ.ಬಿ.ಇ, ಮಹಾಸ್ವಾಮಿಯವರ ಸನ್ನಿಧಾನಂಗಳಲ್ಲಿ ಮಹಾಸ್ವಾಮಿಯವರ ಪಾದಸೇವಕ ಚಿಕ್ಕಮಗಳೂರು ತಾ॥ ಅರಳಗುಪ್ಪೆ ಕಾಫಿ ಪ್ಲಾಂಟರು ಹಿಂದ್ರೇಗೌಡನು ಅತ್ಯಂತ ರಾಜಭಕ್ತಿಯುತನಾಗಿ ಒಪ್ಪಿಸಿದ ವಿಜ್ಞಾಪನಾ ಪತ್ರಿಕೆ

ಮಹಾಸ್ವಾಮಿ,

ಆಳುವ ಮಹಾಸ್ವಾಮಿಯವರ "ಸತ್ಯಮೇವೋದ್ಧರಾಮ್ಯಹಂ" ಎಂಬ ಸಂಕಲ್ಪಪೂರ್ಣ ಸರ್ವಸಮೃದ್ಧಿಯುಕ್ತವಾದ ಛತ್ರಛಾಯೆಯಲ್ಲಿ ಈ ಸಂಸ್ಥಾನದ ಪ್ರಜೆಗಳಲ್ಲಿ ಪ್ರತಿಯೊಬ್ಬರೂ ಸರ್ವತೋಮುಖವಾಗಿ ಸುಖಸಂಪತ್ತುಗಳ ಅಭಿವೃದ್ಧಿಯನ್ನು ಪಡೆಯುತ್ತ ಮಹಾಸ್ವಾಮಿಯವರ ಆಡಳಿತವು ಚಿರಸ್ಥಾಯಿಯಾಗಿರಲೆಂದು ಹಾರೈಸುತ್ತ ಸಂತೋಷಯುಕ್ತರಾಗಿರುವರೆಂದು ಕೃತಾರ್ಥಭಾವನೆಗಳಿಂದ ಮಹಾಸ್ವಾಮಿಯವರ ಸನ್ನಿಧಿಯಲ್ಲಿ ಬಿನ್ನೈಸಿಕೊಳ್ಳಲು ಅವಕಾಶ ದೊರೆತದ್ದಕ್ಕಾಗಿ ಆನಂದಭರಿತನಾಗಿರುತ್ತೇನೆ, ಮಹಾಸ್ವಾಮಿ

ಈ ಕಡೂರು ಡಿಸ್ಟ್ರಿಕ್ಟಿನ ಬಹುತರವಾಗಿ ಎಲ್ಲಾ ಪ್ರದೇಶವೂ ಮಲೆನಾಡಾಗಿಯೂ ನಾಗರಿಕತೆಯಿಂದ ಕೂಡಿರುವ ಮೈದಾನ ಡಿ॥ಗಳಿಗೆ ಬಹಳ ದೂರವಾಗಿಯೂ ಇರುವುದರಿಂದ ಈ ಪ್ರಾಂತ್ಯದ ಬಹು ಭಾಗದ ಜನಗಳು ಅವಿದ್ಯಾವಂತರಾಗಿರುವರಲ್ಲದೆ ಕೇವಲ ಅನಾರೋಗ್ಯ ಪ್ರದೇಶವಾದ ಈ ಭಾಗದಲ್ಲಿ ಆರೋಗ್ಯಭಾಗ್ಯವನ್ನು ಹೇಗೆ ಕಾಪಾಡಿಕೊಳ್ಳಬೇಕೆಂಬ ನಿವೇದನಾಶಕ್ತಿ ಇಲ್ಲದವರಾಗಿಯೂ ಇರುತ್ತಾರೆ. ಅಲ್ಲದೆ ಈ ಪ್ರಾಂತ್ಯದ ಬಡಜನಗಳನೇಕರು ಪ್ರತಿವರ್ಷವೂ ನಾನಾವಿಧವಾದ ರೋಗಗಳಿಗೆ ಪದೇ ಪದೇ ಗುರಿಯಾಗುತ್ತ ಎಲ್ಲಾ ಸೌಕರ್ಯಗಳಿಗೆ ಅವಕಾಶವಿರುವ ಮತ್ತು ಬಹುದೂರ ಪ್ರದೇಶದಲ್ಲಿರುವ ಬೆಂಗಳೂರು ಅಥವ ಮೈಸೂರು ಪಟ್ಟಣಕ್ಕೆ ಹೋಗಿ ತನ್ಮೂಲಕ ಉತ್ತಮ ವೈದ್ಯಸಹಾಯಗಳನ್ನು ಪಡೆದು ತಮಗೆ ಉಂಟಾಗಿರುವ ರೋಗಗಳನ್ನು ಗುಣಪಡಿಸಿಕೊಂಡು ಬರಲು ಪ್ರಯಾಣಸೌಕರ್ಯವಿಲ್ಲದ ಕೊರತೆಯಿಂದಲೂ ಅಪರಿಚಿತೆಯ ಭಯದಿಂದಲೂ ದೂರಪ್ರದೇಶಕ್ಕೆ ಹೋ

ನೇ ಆವಶ್ಯಕತೆ [illegible] ದೊರೆಯುವಂತೆ [illegible] ಸ್ತ್ರೀಯರಿಗೆ [illegible] ಗಳನ್ನು [illegible] ಈ ನಾಡಿನ [illegible] ಪ್ರಕೃತಿಯ [illegible] ಮಹಾಸ್ವಾಮಿಯವರ ಪ್ರಜೆಗಳ [illegible] ಯಲ್ಲಿ ಅನೇಕ ಜನಗಳು ನಿಮ್ಮ ಪ್ರಜೆಗಳು [illegible] ವಶವರ್ತಿಗಳಾಗಿ ತಮ್ಮ ಒಳ್ಳೆ ದೇಹ ಸಂಪತ್ತು ಮತ್ತು ಆರೋಗ್ಯ ಸಂಪತ್ತುಗಳು ಸರ್ವಶೂನ್ಯವಾಗಿ ಅಧೋಗತಿ ಹೊಂದುವ ಅವಕಾಶವಾಗುತ್ತಿರುವ ಕೊರತೆಯು ಅನೇಕ ವರ್ಷಗಳಿಂದಲೂ ಮಹಾಸ್ವಾಮಿಯವರ ಪಾದಸೇವಕನ ಮನಸ್ಸಿನಲ್ಲಿ ವ್ಯಾಪಿಸಿತ್ತೆಂದು ಅರಿಕೆಮಾಡಲು ಅಪೇಕ್ಷಿಸುತ್ತೇನೆ, ಮಹಾಸ್ವಾಮಿ

ಈ ಮಲೆನಾಡು ಪ್ರಾಂತ್ಯದ ಸ್ತ್ರೀಯರ ಜೊತೆಗೆ ತಕ್ಕ ವೈದ್ಯಸಹಾಯ ಸಂಪತ್ತುಗಳಿಲ್ಲದೆ ಅವಿದ್ಯಾಪಂಕದಿಂದ ವಿಶೇಷ ಅನುಭೋಗಿಗಳಾದ ಹೆಂಗಸರು ಹೆರಿಗೆ ಕಾರ್ಯಗಳನ್ನು ನಡೆಸುತ್ತಿರುವುದರಿಂದ ಉಂಟಾಗುತ್ತಿರುವ ಅನಾಹುತಗಳು ಅಷ್ಟಿಷ್ಟೆಂದು ವರ್ಣಿಸಲು ಅಸಾಧ್ಯವಾಗಿವೆ ಈ ವಿಧವಾದ ಕೊರತೆಯನ್ನು ಹೋಗಲಾಡಿಸಲು ಹೆರಿಗೆ ವಿಷಯವನ್ನು ಬೋಧಿಸುವ ಒಂದು ಪಾಠಶಾಲೆಯನ್ನು ಈ ಊರಿನಲ್ಲಿ ಸ್ಥಾಪಿಸಬೇಕಾದ್ದು ಅಗತ್ಯವೆಂಬ ಸಂಗತಿಯೂ ಕೂಡ ಮಹಾಸ್ವಾಮಿಯವರ ಪಾದಸೇವಕನ ಯೋಚನೆಯಲ್ಲಿದ್ದಿತು ಮಹಾಸ್ವಾಮಿ

ಮೇಲ್ಕಂಡ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ ಸರ್ವಶಕ್ತನಾದ ಈಶನ ಪ್ರೇರಣೆಯಿಂದ ಈ ಸೇವಕನು ಶುಭೋದಯ ಯುಕ್ತನಾಗಿರುವಾಗ್ಗೆ, ದೇಶಹಿತವೇ ಸ್ವಾಮಿಯ ಹಿತವೆಂದೂ ಸ್ವಾಮಿಯ ಹಿತವೇ ಜೀವಿತದ ಪರಮ ಧ್ಯೇಯವೆಂದೂ ತಿಳಿದು, ಅತಿಶಯವಾದ ಪ್ರಜೆಯಲ್ಲಿಯೂ ಪ್ರಭುವಿನಲ್ಲಿಯೂ [illegible] ನಮ್ಮ ಘನವೆತ್ತ ದಿವಾನ್ ಸಾಹೇಬರವರು ಸನ್ 1927 ನೇ ಇಸವಿ ಮಾರ್ಚಿ ತಿಂಗಳಲ್ಲಿ ಈ ಪ್ರಾಂತ್ಯ ಸಂಚಾರ ಬಂದ ವೇಳೆಯಲ್ಲಿ ಮೇಲ್ಕಂಡ ಕುಂದುಕೊರತೆಗಳನ್ನು ಅವರ ಗಮನಕ್ಕೆ ತಂದು ನನ್ನ ತಂದೆ ಮಲ್ಲೇಗೌಡರ ಜ್ಞಾಪಕಾರ್ಥವಾಗಿ ಎಲ್ಲಾ ಸೌಕರ್ಯಗಳಿಂದ ಕೂಡಿದ ಒಂದು ಜನರಲ್ ಆಸ್ಪತ್ರೆ ಮತ್ತು ಅದಕ್ಕೆ ಬೇಕಾದ ಕಟ್ಟಡಗಳೆಲ್ಲವನ್ನೂ ಮತ್ತು ನನ್ನ ತಾಯಿ ಸಿದ್ದಮ್ಮ ಹೆಗ್ಗಡತಿಯವರ ಜ್ಞಾಪಕಾರ್ಥವಾಗಿ ಒಂದು ಮೆಟರ್ನಿಟಿ ಸ್ಕೂಲು ಕಟ್ಟಡವನ್ನೂ ಸಹ ಕಟ್ಟಿಸಲು ಆಗಬಹುದಾದ ಒಂದು ಲಕ್ಷ ರೂಪಾಯಿಗಳನ್ನು ಉಚಿತವಾಗಿ ಕೊಡುವುದಾಗಿ ಅತ್ಯಂತ ಸಂತೋಷದಿಂದ ನಮ್ಮ ದಿವಾನ್ ಸಾಹೇಬರವರಲ್ಲಿ ಅರಿಕೆಮಾಡಿಕೊಂಡದ್ದಲ್ಲದೆ ಮೆಟರ್ನಿಟಿ ಸ್ಕೂಲಿಗಾಗಿ ಹಾಲಿ ಗೌರ್ನಮೆಂಟ್ ಮಿಡಲ್ ಸ್ಕೂಲಿರುವ ಕಟ್ಟಡವನ್ನು ಉಪಯೋಗಿಸಿಕೊಳ್ಳುವುದಕ್ಕಾಗಿ ಬಂದದ್ದರಿಂದ ಪ್ರತ್ಯೇಕವಾಗಿ ಸದರಿ ಮಿಡಲ್ ಸ್ಕೂಲನ್ನು ಮಹಾಸ್ವಾಮಿಯವರ ಪಾದಸೇವಕನ ಹೆಸರಿನಲ್ಲಿ ಕಟ್ಟಿಸಲು ಹತ್ತು ಸಾವಿರ ರೂಪಾಯಿಗಳನ್ನು ಸಹಾ ಉಚಿತವಾಗಿ ಕೊಡುವುದಾಗಿ ಅತ್ಯಂತ ಉತ್ಸಾಹದಿಂದ ಅರಿಕೆಮಾಡಿಕೊಂಡೆನು, ಮಹಾಸ್ವಾಮಿ

ಮಹಾಸ್ವಾಮಿಯವರ ಅಮಾತ್ಯವರ್ಗ್ಯರು ಈ ಸೇವಕನ ಇಷ್ಟದಂತೆ ಕಾರ್ಯವನ್ನು ನೆರವೇರಿಸಬಹುದೆಂದು ಅಪ್ಪಣೆಮಾಡಿದ್ದಲ್ಲದೆ, ಅವರೂ ಮಹಾಸ್ವಾಮಿಯವರ ಸರ್ಕಾರದವರೂ ಸಹ ಈ ಕಟ್ಟಡಗಳನ್ನು ಕಟ್ಟಲು ನಡೆಯಬೇಕಾದ ಕಾರ್ಯಕ್ರಮಗಳನ್ನೆಲ್ಲಾ ಬಹಳ ಜಾಗ್ರತೆಯಾಗಿಯೂ ತೃಪ್ತಿಕರವಾಗಿಯೂ ಏರ್ಪಡಿಸಿ ಈ ಕಟ್ಟಡಕ್ಕಾಗಿ ಅತ್ಯಮೌಲ್ಯವಾದ ಸುಂದರ ನಿವೇಶನವನ್ನು ಒದಗಿಸಿಕೊಟ್ಟು ಈ ಕಟ್ಟಡದ ಶಂಕುಸ್ಥಾಪನಾ ಮಹೋತ್ಸವವು ಈ ದಿನಸ ಮಹಾಸ್ವಾಮಿಯವರ ಅಮೃತಹಸ್ತದಿಂದ ನೆರವೇರಲು ಸೌಕರ್ಯಗಳನ್ನು ಕಲ್ಪಿಸಿಕೊಟ್ಟಿರುವುದಕ್ಕಾಗಿ ನಮ್ಮ ಘನವೆತ್ತ ದಿವಾನ್ ಸಾಹೇಬರವರಿಗೂ ಮತ್ತು ಮಹಾಸ್ವಾಮಿಯವರ ಸರ್ಕಾರದವರಿಗೂ ಈ ಪಾದಸೇವಕನು ಕೃತಜ್ಞತೆಯನ್ನು ಅರ್ಪಿಸುತ್ತಾನೆಂದು ಮಹಾಸನ್ನಿಧಿಯಲ್ಲಿ ಬಿನ್ನೈಸಿಕೊಳ್ಳಲು ಬಹಳ ಸಂತೋಷವುಳ್ಳವನಾಗಿದ್ದಾನೆ, ಮಹಾಸ್ವಾಮಿ

ಮಹಾಸ್ವಾಮಿಯವರು ಈ ಸೇವಕನ ಮೇಲೆ ಸಂಪೂರ್ಣ ಅನುಗ್ರಹವಿಟ್ಟು ರಾಜ್ಯಭಾರದ ಗುರುತರವಾದ ಕಾರ್ಯಭಾಗಗಳು ಅನೇಕವಿದ್ದಾಗ್ಗಲೂ ಇದಕ್ಕಾಗಿ ಅವಕಾಶವನ್ನು ತೆಗೆದುಕೊಂಡು ದೇಹಶ್ರಮವನ್ನು ಎಣಿಸದೆ ಇಲ್ಲಿಯವರೆಗೆ ಚಿತ್ತೈಸಿ ಆಸ್ಪತ್ರೆಯ ಶಂಕುಸ್ಥಾಪನಾ ಕಾರ್ಯವನ್ನು ಮಹಾಸ್ವಾಮಿಯವರ ಅಮೃತಹಸ್ತದಿಂದ ನೆರವೇರಿಸಲು ಅಭಿಮತವನ್ನಿತ್ತು ಪಾದಸೇವಕನನ್ನು ಕೃತಾರ್ಥನನ್ನಾಗಿ ಮಾಡಿದ್ದಕ್ಕಾಗಿ ಮಹಾಸ್ವಾಮಿಯವರಿಗೂ ಮಲೆನಾಡು ಪ್ರಜೆಗಳ ಶ್ರೇಯೋಭಿವೃದ್ಧಿಯನ್ನೇ ಧ್ಯೇಯವನ್ನಾಗಿಟ್ಟುಕೊಂಡು, ಪ್ರಕೃತ ಇಲ್ಲಿಗೆ ಚಿತ್ತೈಸಿರುವ ಶ್ರೀಮನ್ ಯುವರಾಜರವರಿಗೂ ಅತ್ಯಂತ ಭಕ್ತಿಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತೇನೆ ಮಹಾಸ್ವಾಮಿ

ಈ ದಿವಸವು ಈ ಡಿಸ್ಟ್ರಿಕ್ಟಿನ ಚರಿತ್ರೆಯಲ್ಲಿ ಚಿರಸ್ಮರಣೀಯವಾಗಿರುವುದಲ್ಲದೆ ಪ್ರಜಾಕೋಟಿಯ ಸುಖ ಸಂಪತ್ತುಗಳಲ್ಲಿ ಮಹಾಸ್ವಾಮಿಯವರಿಗೆ ಇರುವ ಅನನ್ಯಾಸಕ್ತಿಯನ್ನು ಸಹ ವ್ಯಕ್ತಪಡಿಸುತ್ತದೆ ಮಹಾಸ್ವಾಮಿ

ಈ ಕಟ್ಟಡಗಳ ಕಾರ್ಯವೆಲ್ಲವೂ ಸಂಪೂರ್ಣವಾದನಂತರ ಈ ಆಸ್ಪತ್ರೆಯ ಮತ್ತು ಮೆಟರ್ನಿಟಿ ಸ್ಕೂಲುಗಳ ಪ್ರಾರಂಭ ಮಹೋತ್ಸವವನ್ನು ಮಹಾಸ್ವಾಮಿಯವರ ಅಮೃತಹಸ್ತದಿಂದಲೇ ನೆರವೇರಿಸಬೇಕಾಗಿ ಭಕ್ತಿಪೂರ್ವಕವಾಗಿ ಪ್ರಾರ್ಥಿಸುತ್ತೇನೆ ಮಹಾಸ್ವಾಮಿ

ಮಹಾಸ್ವಾಮಿಯವರು ದಯವಿಟ್ಟು ಈ ಕಟ್ಟಡದ ಶಂಕುಸ್ಥಾಪನಾ ಕಾರ್ಯವನ್ನು ಮಹಾಸ್ವಾಮಿಯವರ ದಿವ್ಯ ಹಸ್ತದಿಂದ ಆಗಮಾಡಿಸಬೇಕಾಗಿ ಪ್ರಾರ್ಥಿಸಿ ಈ ವಿಜ್ಞಾಪನೆಯನ್ನು ಮುಗಿಸುತ್ತೇನೆ ಮಹಾಸ್ವಾಮಿ

ಅರಳಗುಪ್ಪೆ, ಚಿಕ್ಕಮಗಳೂರು ಟಾ ತಾ|| 20 1 1926	ಇಂತು ಮಹಾಸ್ವಾಮಿಯವರ ಪ್ರಜಾವರ್ಗಕ್ಕೆ ಸೇರಿದ ಅತ್ಯಂತ ವಿಧೇಯ ಸೇವಕ, ಅರಳಗುಪ್ಪೆ ಚಂದ್ರೇಗೌಡ

ಇದಕ್ಕುತ್ತರವಾಗಿ ಶ್ರೀಮನ್ಮಹಾರಾಜರವರ ಭಾಷಣ.

ಚಂದ್ರೇಗೌಡರೆ, ಮಹನೀಯರೆ ಮತ್ತು ಮಹಿಳೆಯರೆ !

ನಮ್ಮ ಸಂಸ್ಥಾನದಲ್ಲಿ ವ್ಯಾಧಿಪರಿಹಾರದ ಏರ್ಪಾಟಿನಲ್ಲಿ ಉತ್ಕೃಷ್ಟವಾದ ಒಂದು ನೂತನ ವಿಧಾನದ ಸಮಾರಂಭಮಹೋತ್ಸವವನ್ನು ನೆರವೇರಿಸುವುದಕ್ಕಾಗಿ ನಾವೆಲ್ಲರೂ ನೆರೆದಿರುವೆವು. ಈ ಹೊಸವಿಧಾನವು ದಿನೇ ದಿನೇ ಅತಿಶಯವಾಗಿ ಅಭಿವೃದ್ಧಿ ಹೊಂದುವುದಕ್ಕೆ ಇದೇ ಮೊದಲನೆಯ ಸೂಚನೆಯೆಂದು ಭಾವಿಸಬಹುದಾಗಿದೆ

ಇಲ್ಲಿನ ವೈದ್ಯಶಾಲೆಗಳಿಗೂ ಇಂಗ್ಲೆಂಡಿನ ವೈದ್ಯಶಾಲೆಗಳಿಗೂ ಇರುವ ಮುಖ್ಯ ವ್ಯತ್ಯಾಸವನ್ನು ನೀವುಗಳು ಅರಿತವರಾಗಿಯೇ ಇರುವಿರಿ ಇಲ್ಲಿನ ವೈದ್ಯಶಾಲೆಗಳು ಸರಕಾರದವರಿಂದ ನಡೆಯುತ್ತಿರುವುವು, ಅಲ್ಲಿನವಾದರೋ ಜನಸಾಮಾನ್ಯದಿಂದಲೇ ನಡೆಯುತ್ತಿರುವುವು ಇಂಗ್ಲೆಂಡಿನಲ್ಲಿಯೂ [illegible] ಕಾರ್ಯಕರ್ತರ [illegible] ಪುಸ್ತಕಗಳಲ್ಲಿ [illegible] ನಮ್ಮ ಈ ದೇಶದ ಪ್ರಜೆಗಳಿಗೆ ಬೇಕಾದಷ್ಟು ವೈದ್ಯಶಾಲೆಗಳನ್ನು ಸರಕಾರದವರು ಒದಗಿಸುವುದು ಸುಲಭ ಸಾಧ್ಯವಲ್ಲ ಆದುದರಿಂದಲೇ ಚಂದ್ರೇಗೌಡರಂತಹ ಧರ್ಮಬುದ್ಧಿಯುಳ್ಳವರಿಗೆ ತಮ್ಮ ಡಿಸ್ಟ್ರಿಕ್ಟಿನ [illegible] ಒದಗಿಸಿಕೊಡಬೇಕೆಂಬ [illegible] ಮೇಲಾದ [illegible] ಅದಲ್ಲದೆ ಅವರ ಡಿಸ್ಟ್ರಿಕ್ಟು ದೈವಾನುಗ್ರಹದಿಂದ ಎಷ್ಟು ರಮಣೀಯವಾಗಿದೆಯೋ ಕೆಲವು ರೋಗಗಳಿಗೂ ಅಷ್ಟೆ ಆಶ್ರಯವಾಗಿದೆ ಚಂದ್ರೇಗೌಡರು ಮಾಡಿರುವ ಯಥೇಷ್ಟವಾದ ದ್ರವ್ಯಪ್ರದಾನದಿಂದ ಈ ವಿಧವಾದ ವ್ಯಾಧಿಗಳಿಂದ ಪೀಡಿತರಾದವರ ಉಪಚಾರಕ್ಕಾಗಿ ಉತ್ಕೃಷ್ಟವಾದ ನೂತನರೀತಿಯ ಚಿಕಿತ್ಸಾಶಾಲೆಯನ್ನು ತೆರೆಯಲು ಅನುಕೂಲವಾಯಿತು ಈ ಶಾಲೆಗೆ ಮುಂದೆ ಬರಬಹುದಾದ ಸಹಸ್ರಾರು ರೋಗಿಗಳಿಗೆ ಇದರಿಂದ ಮಹೋಪಕಾರವಾಗುವುದೆಂದು ನಂಬಿದ್ದೇವೆ

ಇವರು ಮಾಡಿರುವ ಧರ್ಮವಿಷ್ಟೇ ಅಲ್ಲ. [illegible] ವೇದನೆಗಿಂತಲೂ ಸ್ತ್ರೀಯರ ಪ್ರಸವಕಾಲದ ವೇದನೆಯು ಅತಿ ಕಷ್ಟತರವಾದುದು ಅದರಲ್ಲೂ ಇವರು ಹೇಳಿದಂತೆ ಆ ಕಾಲದಲ್ಲಿ ಅವರನ್ನು ನೋಡಿಕೊಳ್ಳುವವರ ಅಜ್ಞತೆಯು ಬೆರೆತುದರಿಂದ ಈ ಕಷ್ಟವು ಇಮ್ಮಡಿಯಾಗುವುದು ಎಳೆಯ ವಯಸ್ಸಿನ ತಾಯಂದಿರ ಮರಣದಿಂದಲೂ, ಮಕ್ಕಳಿಗೆ ಹುಟ್ಟಿದ ಒಂದು ವರ್ಷದೊಳಗಾಗಿಯೇ ಸಂಭವಿಸುವ ಮರಣದಿಂದಲೂ ಮತ್ತು ಇತರರಲ್ಲಿ ಪೂರ್ವವಯಸ್ಸಿನಿಂದಲೇ ಅನುಸರಿಸಿ ಆ ಪರಿಣಾಮವಾಗಿ ಇರತಕ್ಕ ಶಾರೀರಕ ದೋಷಗಳಿಂದಲೂ ಆಗುವ ನಷ್ಟಕ್ಕಿಂತ ಘೋರವಾದ ನಷ್ಟವಾವುದೂ ಇಲ್ಲ. ನಮ್ಮ ಮುಂದಿನ ಪೀಳಿಗೆಯು ಸೌಖ್ಯದಿಂದಿರಬೇಕಾದರೆ ಗರ್ಭಿಣಿಯರ ಸಂರಕ್ಷಣೆಯೂ ಮತ್ತು ಶಿಶುಗಳ ಪಾಲನಪೋಷಣೆಗಳೂ ಪ್ರಥಮದಲ್ಲಿ ಮಾಡಬೇಕಾದ ಮುಖ್ಯ ಕರ್ತವ್ಯಗಳೆಂಬುದನ್ನು ಭಾರತೀಯರೆಲ್ಲರೂ ಒಪ್ಪುವರು ಈ ಡಿಸ್ಟ್ರಿಕ್ಟಿನ ಮುಖ್ಯ ಪಟ್ಟಣದಲ್ಲಿ ಗರ್ಭಿಣೀ ಶಿಶುಸಂರಕ್ಷಣೆಯ ಕ್ರಮದಲ್ಲಿ ಶಿಕ್ಷಣ ಕೊಡುವುದಕ್ಕಾಗಿ ಸ್ಕೂಲೊಂದನ್ನು ಏರ್ಪಡಿಸಲು ದ್ರವ್ಯಪ್ರದಾನ ಮಾಡುವುದರ ಮೂಲಕ ಚಂದ್ರೇಗೌಡರು ಮೇಲ್ಕಂಡ ಸದುದ್ದೇಶಗಳನ್ನು ತಮಗೆ ಸಾಧ್ಯವಾದಷ್ಟೂ ಸಾಧಿಸಿ ಕೃತಾರ್ಥರಾಗಿರುವರು

ಇಂಗ್ಲೆಂಡಿನಲ್ಲಿ ಪ್ರಜೆಗಳೇ ಮುಂದಾಳುಗಳಾಗಿ ನಿಂತು ತಮ್ಮ ಸ್ವಂತ ಖರ್ಚಿನಿಂದಲೇ ವೈದ್ಯಶಾಲೆಗಳನ್ನು ನಡೆಯಿಸುತ್ತಿರುವ ಪದ್ಧತಿಯಿಂದ ಒಂದು ಫಲವುಂಟು ತಾವು ವಿನಿಯೋಗಿಸುವ ದ್ರವ್ಯವನ್ನು ವೈದ್ಯಶಾಲೆಯ ತಮಗಿಷ್ಟವಾದ ಚಿಕಿತ್ಸಾಭಾಗಕ್ಕೆ ಮಾತ್ರ ಅವರು ಉಪಯೋಗಿಸುವರು ನಾಗಪ್ಪಶೆಟ್ಟರೂ ಕೃಷ್ಣಯ್ಯಶೆಟ್ಟರೂ ಮತ್ತು ಬಸವೇಗೌಡರೂ ಈ ಕ್ರಮವನ್ನೇ ಅನುಸರಿಸಿರುವರು ಇವರಲ್ಲಿ ಮೊದಲನೆಯವರು, ತಮ್ಮ ಧರ್ಮವನ್ನು ಈಗ ನಾವು ಹೇಳಿದ ಅತಿ ಕಷ್ಟಕ್ಕೆ ಗುರಿಯಾಗಿರುವ ತಾಯಂದಿರಿಗೆ ಮಾತ್ರವೆಂದು ನಿರ್ಧರಿಸಿರುವರು ಇದಕ್ಕಿಂತಲೂ ಮೇಲಾದ ಧರ್ಮವಿನ್ನಿಲ್ಲ ಎರಡನೆಯವರು ರೋಗಿಗಳ ಪೈಕಿ ನೇತ್ರರೋಗಿಗಳ ಚಿಕಿತ್ಸೆಗಾಗಿ ಮಾತ್ರ ದ್ರವ್ಯವನ್ನು ಕೊಟ್ಟಿರುವರು ಮೂರನೆಯವರು ತಮ್ಮ ಜಾತಿಯವರಿಗೆ ಮಾತ್ರ ವೈದ್ಯಶಾಲೆಯಲ್ಲಿ ತಕ್ಕ ಸೌಕರ್ಯಗಳನ್ನು ಕಲ್ಪಿಸುವುದಕ್ಕಾಗಿ ದ್ರವ್ಯಪ್ರದಾನ ಮಾಡಿರುವರು ಮಹಾಶಯರೆ ಇವುಗಳೂ ಅಂಥ ಸ್ತುತ್ಯವಾದ ಉದ್ದೇಶಗಳೇ ಇವರೂ ಮತ್ತು ಇತರ ಧರ್ಮಾತ್ಮರಾದ [illegible] ಲೋಕಸೇವಾಕಾರ್ಯದಲ್ಲಿ ಬದ್ಧಪರರಾಗಿ ಮುಂದುವರಿದು ರಾಜ್ಯಭಾರದ ಭರವನ್ನಿಟ್ಟು ಈ ಪರಿಯ ಧರ್ಮಗಳಿಗಾಗಿ ನಮ್ಮ ಸರಕಾರಕ್ಕೆ ಬಹು ದ್ರವ್ಯಪ್ರದಾನ ಮಾಡಿದ ವಿಷಯವನ್ನು ಕೇಳಿ ನಮಗೆ ಅಪರಿಮಿತವಾದ ಆನಂದವು ಉಂಟಾಗಿರುವುದು

ಈ ಧರ್ಮಕಾರ್ಯಗಳ ಸಂಬಂಧವಾಗಿ ಒಂದಂಶವು ಮಾತ್ರ ನೀವು ನೆನಪಿನಲ್ಲಿಡತಕ್ಕುದಾಗಿದೆ ಧರ್ಮಕ್ಕೆ ಪಾತ್ರರಾದವರು ದರಿದ್ರರು ಇಂಗ್ಲೆಂಡಿನಲ್ಲಿ ವೈದ್ಯಶಾಲೆಗಳು ಬಡವರ ಸೌಕರ್ಯಕ್ಕಾಗಿ ಮಾತ್ರ ಇವೆ ಭಾಗ್ಯವಂತರು ರೋಗೋಪಚಾರಶಾಲೆಗಳಿಗೆ (Nursing Homes) ಹೋಗುತ್ತಾರೆ ಮಧ್ಯವರ್ಗದವರಾದರೋ ಬಡವರ ವೈದ್ಯಶಾಲೆಗಳಲ್ಲಿ ಪ್ರವೇಶ ದೊರಕದೆಯೂ, ಭಾಗ್ಯವಂತರ ಉಪಚಾರಶಾಲೆಗಳಿಗೆ ಹೋಗಲು ದ್ರವ್ಯಸಂಪತ್ತಿ ಇಲ್ಲದೆಯೂ ಇರುವುದರಿಂದ ಅವರಿಗೆ ಸೌಕರ್ಯ ಕಲ್ಪನೆಯನ್ನು ಮಾಡುವುದಕ್ಕಾಗಿ ಇಂಗ್ಲೆಂಡಿನಲ್ಲಿ ಬಹು ಬುದ್ಧಿಯನ್ನೂ ಧನವನ್ನೂ ಈಗ ವ್ಯಯಮಾಡುತ್ತಿರುವರು ಇದೇ ರೀತಿಯಾಗಿ ಮಧ್ಯಮವರ್ಗದವರ ವಿಷಯಕವಾದ ಈ ಕೊರತೆ ನಮ್ಮಲ್ಲಿಯೂ ವಿಶೇಷವಾಗಿದೆ ಈ ವರ್ಗದವರು ವ್ಯಾಧಿಪೀಡಿತರಾಗಿ ಹೊಂದುವ ಚಿಕಿತ್ಸೋಪಚಾರಗಳ ಖರ್ಚಿನಲ್ಲಿ ಎಷ್ಟು ಭಾಗವನ್ನು ವಹಿಸಬಹುದೆಂಬುದು ನೀವು ಚೆನ್ನಾಗಿ ಯೋಚಿಸತಕ್ಕಂಶವಾಗಿದೆ

ನೀವು ಹೀಗೆ ಮಾಡಬೇಕಾದುದಕ್ಕೆ ಬೇರೊಂದು ಕಾರಣವೂ ಉಂಟು ವ್ಯಕ್ತಿಗಳೆಲ್ಲರೂ ವ್ಯಾಧಿಗ್ರಸ್ತರ ಸಂಕಟವನ್ನು ಪರಿಹಾರಮಾಡತಕ್ಕ ವ್ಯಕ್ತಿಯೋ ಸರ್ಕಾರವೋ ಮುಖ್ಯವೆಂದು ಹೇಳಬಹುದು. ಆದರೆ ಇತರ ವ್ಯಕ್ತಿಗಳಲ್ಲಿ ದೊರೆಯುವಷ್ಟು ಅಥವಾ ಈ ವ್ಯಕ್ತಿಯಲ್ಲಿ ದೊರಕುವುದಿಲ್ಲವಾದುದರಿಂದ ಪ್ರೈವೇಟ್ ಇದರಲ್ಲಿ ಅವರವು ಕಡಿಮೆ ಈ ಪ್ರಾಕ್ಟೀಸಿನ ಕೊರತೆಗೆ ಸರಕಾರಿ ವೈದ್ಯಶಾಲೆಗಳಿರುವುವೇ ಕಾರಣವು ಅನುಕೂಲವಾದ ಸರಕಾರಿ ವೈದ್ಯಶಾಲೆಗಳಿರುವುದರಿಂದಲೂ, ಅವುಗಳಲ್ಲಿ ಔಷಧೋಪಚಾರಗಳು ಧರ್ಮಾರ್ಥವಾಗಿ ನಡೆಯುವುದರಿಂದಲೂ ಹಲವು ಮಂದಿ ಸ್ವತಂತ್ರರೂ ಗೌರವಸ್ಥರೂ ಆದ ಜನರು ಈ ಧರ್ಮಸಹಾಯದ ವೃತ್ತಿಯನ್ನು ಅವಲಂಬಿಸುವ ಸಂಭವವು ಕಡಿಮೆಯಾಗಿದೆ ಇದನ್ನೂ ಜ್ಞಾಪಕದಲ್ಲಿಟ್ಟು, ಉತ್ತಮವಾದ ಸರಕಾರಿ ವೈದ್ಯಶಾಲೆಗಳಿದ್ದರೂ ಖಾಸಗಿ ವೈದ್ಯರಿಗೂ ಸಂಪೂರ್ಣ ಪ್ರೋತ್ಸಾಹವು ಲಭಿಸುವಂತಹ ಒಂದು ಮಾರ್ಗವನ್ನು ನೀವು ಕಂಡು ಹಿಡಿಯುವ ವಿಚಾರದಲ್ಲಿರುವಿರೆಂದು ನಂಬಿದ್ದೇವೆ

ಮಹಾಶಯರೆ ! ಡಾಕ್ಟರ್ ಮಹಮ್ಮದ್ ಉಸ್ಮಾನರವರು ತಮ್ಮ ಸ್ವಾಗತ ಭಾಷಣದಲ್ಲಿ ಚಿಕ್ಕಮಗಳೂರಿನ ಈ ಚಿಕಿತ್ಸಾಶಾಲೆಯು ಬೆಂಗಳೂರು ಮೈಸೂರು ಪಟ್ಟಣಗಳಲ್ಲಿರುವ ಚಿಕಿತ್ಸಾಶಾಲೆಗಳಿಗೆ ಎಂದು ಪ್ರತಿಸ್ಪರ್ಧಿಯಾಗುವುದೋ ಆ ಸುದಿನವನ್ನು ಎದುರು ನೋಡುತ್ತಿರುವುದಾಗಿ ಹೇಳಿದರು ಇದು [illegible] ಕಾಲಜ್ಞಾನದ ಮಾತಾಗಿ ತೋರಬಹುದು ಆದರೆ ಡಾಕ್ಟರ್ ಉಸ್ಮಾನರವರು ಮುಂದಾಗಬಹುದಾದುದನ್ನು ಸೂಚಿಸುವುದಕ್ಕೆ ಮುಂಚೆ, ತಮ್ಮ ಹಿಂದಿನ ಅನುಭವವನ್ನೂ [illegible] ಈಗ ನಾವು ಅಸ್ತಿಭಾರಸ್ಥಾಪನೆಮಾಡುವ ಕಟ್ಟಡಗಳಿಗೂ 34 ವರ್ಷಗಳ ಹಿಂದೆ ಅವರು ಕೆಲಸಕ್ಕೆ ಸೇರಿದಾಗ ಸಾಮಾನ್ಯವಾಗಿ ಇದ್ದ ಕಟ್ಟಡಗಳಿಗೂ ಹೋಲಿಸಿದ್ದಲ್ಲಿ [illegible] ಕಾಲಜ್ಞಾನದ ಮಾತೆಂದರೂ ಕೇವಲ ಯಥಾರ್ಥವಾದುದೆಂದರೂ ತೋರುತ್ತಿದ್ದಿತು ಆ ಕಾಲದಿಂದಲೂ ಈವರೆಗೆ ಚಿಕಿತ್ಸಾಶಾಲೆಗಳಲ್ಲಿ ಆಗಿರುವ ಉತ್ತಮವಾದ ಬದಲಾವಣೆಗಳಿಗಾಗಿ ಡಾಕ್ಟರ್ ಉಸ್ಮಾನರವರು ಪಟ್ಟ ಶ್ರಮವು ಅಲ್ಪವಾದುದಲ್ಲ ಸದ್ಯದಲ್ಲೇ ಕೆಲಸದಿಂದ ವಿಶ್ರಾಂತಿಹೊಂದುವ ಇವರು ಮಾಡಿರುವ ಕೆಲಸವು ಎಷ್ಟು ಸ್ಮರಣೀಯವಾದುದೆಂದು ಈ ಸಮಯದಲ್ಲಿ ಸಂತೋಷದಿಂದ ಹೇಳುವೆವು

ಮಹಿಳೆಯರೆ ಮತ್ತು ಮಹನೀಯರೆ ! ಕಡೂರು ಡಿಸ್ಟ್ರಿಕ್ಟಿನ ಹೊಸ ಜನರಲ್ ಆಸ್ಪತ್ರೆಯ ಅಸ್ತಿಭಾರಸ್ಥಾಪನೆಯನ್ನು ಈಗ ಸಂತೋಷದಿಂದ ನೆರವೇರಿಸುವೆವು. ಭಗವಂತನು ನಿಮ್ಮೆಲ್ಲರಿಗೂ ಮಂಗಳವನ್ನುಂಟುಮಾಡಲಿ

[illegible]

[illegible] ಲೇಖನಗಳಿಗೆ ಸಂಪಾದಕರು [illegible]

ಚಿಕ್ಕಮಗಳೂರಲ್ಲಿ ಶ್ರೀಮನ್ಮಹಾರಾಜರವರ ಅಮೃತ ಹಸ್ತದಿಂದ ನೆರವೇರಿಸಲ್ಪಟ್ಟ ಅರಳಗುಪ್ಪೆ ಮಲ್ಲೇಗೌಡರ ಜನರಲ್ ಆಸ್ಪತ್ರೆಯ ಶಂಕುಸ್ಥಾಪನಾ ಮಹೋತ್ಸವ ಸಮಾರಂಭ.

ಮಲೆನಾಡು ಪ್ರಾಂತವಾಗಿ ಕೇವಲ ಅನಾರೋಗ್ಯಕರವಾಗಿರುವ ಕಡೂರು ಡಿಸ್ಟ್ರಿಕ್ಟಿನ ಬಡಜನಗಳ ಉಪಯೋಗಾರ್ಥವಾಗಿ, ಎಲ್ಲಾ ಸೌಕರ್ಯಗಳಿಂದ ಕೂಡಿದ ಜನರಲ್ ಆಸ್ಪತ್ರೆಯೊಂದನ್ನು ತಮ್ಮ ತಂದೆ ಮಲ್ಲೇಗೌಡರ ಸ್ಮರಣಾರ್ಥವಾಗಿ ಕಟ್ಟಿಸುವುದಕ್ಕೂ, ಮತ್ತು ಹೆರಿಗೆ ವಿಷಯವನ್ನು ಈ ಅನಾರೋಗ್ಯ ಪ್ರಾಂತದ ಮೂಢ ಹೆಂಗಸರುಗಳಿಗೆ ಬೋಧಿಸುವುದಕ್ಕಾಗಿ ಒಂದು ಮೆಟರ್ನಿಟಿ ಸ್ಕೂಲನ್ನು ತಮ್ಮ ತಾಯಿ ಸಿದ್ದಮ್ಮ ಹೆಗ್ಗಡತಿಯವರ ಜ್ಞಾಪಕಾರ್ಥವಾಗಿ, ಸ್ಥಾಪಿಸುವುದಕ್ಕೂ ಸಹ ಒಂದು ಲಕ್ಷ ರೂಪಾಯಿಗಳನ್ನೂ, ತಮ್ಮ ಹೆಸರಿನಿಂದ ಚಿಕ್ಕಮಗಳೂರಿನಲ್ಲಿ ಒಂದು ಮಿಡ್ಲ್ ಸ್ಕೂಲ್ ಕಟ್ಟಡವನ್ನು ಕಟ್ಟಿಸಲು ಹತ್ತು ಸಾವಿರ ರೂಪಾಯಿಗಳನ್ನೂ ಶ್ರೀಮಂತ ಅರಳಗುಪ್ಪೆ ಕಾಫಿಪ್ಲಾಂಟರು ಧರ್ಮಪ್ರಕಾಶ ಚಂದ್ರೇಗೌಡರವರು ದಾನಮಾಡಿರುವ ವಿಷಯ ಸರ್ವ ವಿದಿತವಾಗಿಯೇ ಇರತಕ್ಕದ್ದು ಈ ರೀತಿ ತಾವು ಸಮುದ್ದೃಷ್ಟಿಯಿಂದ ಮಾಡಿರತಕ್ಕ ಮಹತ್ತರವಾದ ಧರ್ಮಕಾರ್ಯವು ಚಿರಕಾಲ ನಡೆಯಬೇಕಾದರೆ, ಅರಳಗುಪ್ಪೆ ಮಲ್ಲೇಗೌಡರ ಜನರಲ್ ಆಸ್ಪತ್ರೆಯ ಶಂಕುಸ್ಥಾಪನಾ ಮಹೋತ್ಸವವು ನಮ್ಮ ರಾಜರ್ಷಿಗಳಾದ ಶ್ರೀಮನ್ಮಹಾರಾಜಾಧಿರಾಜ ರಾಜಪರಮೇಶ್ವರ ಶ್ರೀಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್‌ರವರ ಅಮೃತಹಸ್ತದಿಂದಲೇ ನೆರವೇರಿಸಲ್ಪಡಬೇಕೆಂಬ ತಮ್ಮ ಸಂಕಲ್ಪವನ್ನು ದಾತೃಗಳಾದ ಧರ್ಮಪ್ರಕಾಶರವರು ಪ್ರಜೆಗಳ ಕಾಂಕ್ಷೆಯನ್ನು ಸಾಧ್ಯವಾದ ಮಟ್ಟಿಗೂ ನೆರವೇರಿಸುವುದರಲ್ಲಿ ಉದ್ಯುಕ್ತರಾದ ದಿವಾನ್ ಸಾಹೇಬರವರಲ್ಲಿ ಅರಿಕೆಮಾಡಿಕೊಂಡಿದ್ದಲ್ಲದೆ ಶ್ರೀಮದ್ಯುವರಾಜರವರ ಸವಾರಿಯು ಸಹ ಮಹಾಪ್ರಭುಗಳವರ ಜೊತೆಯಲ್ಲಿ ದಯಮಾಡಿಸಿ [illegible] ಕೇಳಿದಂತೆ ಈ ಮಹೋತ್ಸವವನ್ನು ಉಭಯ ಮಹಾಸ್ವಾಮಿಗಳೂ ತಮ್ಮ ಆಗಮನದಿಂದ ಪವಿತ್ರತಮವಾದದ್ದನ್ನಾಗಿ ಮಾಡುವಂತೆ ಆಳುವ ಮಹಾಸ್ವಾಮಿಯವರಲ್ಲಿ ಬಿನ್ನಯಿಸಿ [illegible] ನಡೆಯಿಸಿಕೊಡಬೇಕಾಗಿಯು ಸಹ ಅರಿಕೆಮಾಡಿಕೊಂಡ ಪ್ರಕಾರ ದಿವಾನ್ ಸಾಹೇಬರವರು ಧರ್ಮಪ್ರಕಾಶ ಚಂದ್ರೇಗೌಡರವರ ರಾಜಭಕ್ತಿಯುಕ್ತವಾದ ಪ್ರಾರ್ಥನೆಯನ್ನು ಮಹಾಸ್ವಾಮಿಯವರಿಗೆ ನಿವೇದಿಸಲು ಆಳುವ ಮಹಾಸ್ವಾಮಿಯವರು ಪ್ರಜಾಸೌಖ್ಯವೇ ತಮ್ಮ ಜೀವಿತದ ಪರಮ ಧ್ಯೇಯವೆಂಬ ಸ್ವಾಭಾವಿಕವಾದ ಸದ್ಗುಣಯುಕ್ತರಾಗಿ 1926 ನೇ ಜನವರಿ ತಾ|| 26ರಲ್ಲಿ ಈ ಮಹೋತ್ಸವ ಕಾರ್ಯವನ್ನು ಆಗಮಾಡಿಸುವುದಾಗಿ ಅಭಯವನ್ನು ದಯಪಾಲಿಸಿದರು ಮಹಾಸ್ವಾಮಿಗಳವರು ಶ್ರೀಮದ್ಯುವರಾಜರವರೊಡನೆ ಚಿಕ್ಕಮಗಳೂರಿಗೆ ದಯಮಾಡಿಸುವರೆಂಬ ಆನಂದವಾರ್ತೆಯು ಧರ್ಮಪ್ರಕಾಶರಿಗೆ ತಿಳಿದ ಕೂಡಲೆ ದ್ವಿಗುಣವಾದ ಉತ್ಸಾಹಭರಿತರಾಗಿ ಮಹಾಸ್ವಾಮಿಗಳವರ ಆಗಮನಾರ್ಥವಾಗಿ ನಡೆಯಬೇಕಾದ ಏರ್ಪಾಡುಗಳನ್ನೆಲ್ಲ ಹಗಲು ರಾತ್ರಿ ಎನ್ನದೆ ತೃಪ್ತಿಕರವಾಗಿ ನೆರವೇರಿಸಿ ಮನೋಹರವಾಗಿಯೂ, ವಿಶಾಲವಾಗಿಯೂ ಇರುವ ದಿವ್ಯ ಮಂಟಪವನ್ನು ಮಹಾಸ್ವಾಮಿಯವರ ದರ್ಬಾರಿಗಾಗಿ ಜನರಲ್ ಆಸ್ಪತ್ರೆಯ ಆವರಣದಲ್ಲಿ ರಚಿಸಿ ಸಿದ್ಧಗೊಳಿಸಿದರು ಈ ಮಂಟಪದ ರಚನೆಯ ಕಾರ್ಯದಲ್ಲಿಯೂ, ಮಹೋತ್ಸವದ ದಿವಸ ಸದರಿ ಸಭಾಮಂಟಪದಲ್ಲಿ ನಡೆದ ತೃಪ್ತಿಕರವಾದ ಏರ್ಪಾಡುಗಳಲ್ಲಿಯೂ ಸಹ ಚಿಕ್ಕಮಗಳೂರು ಟೌನ್ ಮ್ಯುನಿಸಿಪಲ್ ವೈಸ್‌ಪ್ರೆಸಿಡೆಂಟ್ ಮ|| ಗೋಪಾಲಕೃಷ್ಣನಾಯ್ಡುರು, ಕಾಫಿಪ್ಲಾಂಟರು ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರ್ ಮ|| ಸಿ ಕೆ ಬಸವೇಗೌಡರವರು ಮತ್ತು ಆರ್ ಎ ಮೆಂಬರ್ ಕೋಲಾರದ ಮ|| ಎ ಆರ್ ತಿಮ್ಮಚನ್ನಂಜಪ್ಪಸೆಟ್ಟರು ಮತ್ತು ಬೆಂಗಳೂರು ಮಲ್ಲೇಶ್ವರದ ಮ|| ಎಚ್ ಗುರುನಂಜಒಡೆಯರವರು ಧರ್ಮಪ್ರಕಾಶರವರಿಗೆ ತುಂಬಾ ಸಹಾಯಕರಾಗಿದ್ದರೆಂದು ತಿಳಿಸಲು ತುಂಬಾ ಸಂತೋಷವಾಗುತ್ತದೆ

ಚಿಕ್ಕಮಗಳೂರಿನ ಪುರವಾಸಿಗಳೂ, ಮ್ಯುನಿಸಿಪಾಲಿಟಿಯವರೂ ಕೂಡ ತಮ್ಮ ಅಮೋಘವಾದ ರಾಜಭಕ್ತಿಯನ್ನು ಶ್ರೀಮನ್ಮಹಾರಾಜರವರಿಗೂ ಶ್ರೀಮದ್ಯುವರಾಜರವರಿಗೂ ಸಮರ್ಪಿಸಲು ತಕ್ಕ ಏರ್ಪಾಡುಗಳನ್ನು ಮಾಡಿದರು ಪ್ರಭುವರ್ಯರ ಆಗಮನದ ಪ್ರೋಗ್ರಾಂ ತಿಳಿದ ನಂತರ ಇದ್ದ ಒಂದೇ ಒಂದು ವಾರದ ಅಲ್ಪ ಅವಧಿಯಲ್ಲಿ ಚಿಕ್ಕಮಗಳೂರು ಒಟ್ಟಿನಲ್ಲಿ ಸಾಕ್ಷಾತ್ ಮಹೇಂದ್ರನ ನಗರದಂತೆ ದೇದೀಪ್ಯಮಾನವಾಗಿ ಕಂಗೊಳಿಸುವ ಹಾಗಾಯಿತೆಂದರೆ ಇಲ್ಲಿನ ಪ್ರಜೆಗಳ ರಾಜಭಕ್ತಿಯ ಮಹತ್ವವು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ

ಪ್ರಜೆಗಳೆಲ್ಲರೂ ಮಹಾಸ್ವಾಮಿಗಳವರ ಆಗಮನದ ಶುಭದಿನವನ್ನು ಚಕೋರಪಕ್ಷಿಗಳಂತೆ ನಿರೀಕ್ಷಿಸುತ್ತಿರುವಂತೆ ಅತ್ಯಾತುರದಿಂದ ನಿರೀಕ್ಷಿಸುತ್ತಿದ್ದರು ಈ ಮಹೋತ್ಸವಕ್ಕೆ ಹುಜೂರ್ ದಿವಾನ್ ಸಾಹೇಬರವರ ಶ್ರೀಮನ್ಮಹಾರಾಜರವರ ಪ್ರೈವೇಟ್ ಸೆಕ್ರೆಟರಿಯವರಾದ ಸರ್ ಚಾರಲ್ಸ್ ಟಾಡ್ ಹಂಟರ್ ಸಾಹೇಬರು, ಹುಜೂರು ಸೆಕ್ರೆಟರಿಯವರಾದ ಮ|| ತಂಬುಶೆಟ್ಟಿಯವರೂ ರೆವಿನ್ಯೂ ಕಮಿಷನರ್ ಮ|| ಡಿಸೋಜಾ ಸಾಹೇಬರವರು, ಎಕ್ಸೈಜ್ ಕಮಿಷನರ್ ಮ|| ಸ್ನೈಡರ್ [illegible] ಸಾಹೇಬರವರು, ಸೀನಿಯರ್ ಸರ್ಜನ್ ಡಾಕ್ಟರ್ ಉಸ್ಮಾನ್ ಸಾಹೇಬರವರು ಕೋ ಆಪರೇಟಿವ್ ಸೊಸೈಟಿ ರಿಜಿಸ್ಟ್ರಾರ್ ಮ|| ಕೆ ಜಿ ರಾಮಯ್ಯನವರು, ಸರ್ಕಾರದ ಲಾ ಸೆಕ್ರೆಟರಿಯಾದ ಮ|| ಪಿ ಮಹಾದೇವಯ್ಯನವರು ಶಿವಮೊಗ್ಗ ಸಬ್‌ಡಿವಿಜನ್ ಮ|| ಜಿ. ಪರಮಶಿವಯ್ಯನವರೇ ಮೊದಲಾದ ಅನೇಕ ದೊಡ್ಡ ದೊಡ್ಡ ಆಫೀಸರುಗಳೂ ಆಗಮಿಸಿದ್ದರು [illegible] ಭಕ್ತಿಯುಳ್ಳವರಾದ ಮ|| ರಾಜಸೇವಾ [illegible] ಅರಸಿನವರು, ಮ|| ಸುಬ್ರಹ್ಮಣ್ಯರಾಜ್ ಅರಸಿನವರು ಮ|| ಸರ್ದಾರ್ ಎಂ. ಗೋಪಾಲಕೃಷ್ಣ ಅರಸಿನವರು ಮ|| [illegible] ಅರಸಿನವರು ಶ್ರೀಮದ್ಯುವರಾಜರವರ ಪ್ರೈವೇಟ್ ಸೆಕ್ರೆಟರಿಯವರಾದ ಮ|| ಎಸ್ ಸಿ ದೇವರಾಜ ಅರಸಿನವರು ದಿವಾನ್‌ರವರ ಪರ್ಸನಲ್ ಅಸಿಸ್ಟೆಂಟ್ ಮ|| ಮದನಗೋಪಾಲರಾವ್ ಅರಸಿನವರು ಮೊದಲಾದ ರಾಜಬಂಧುವರ್ಗದ ದೊಡ್ಡ ಮನುಷ್ಯರುಗಳೂ ಹಾಸನ ಮತ್ತು ಕಡೂರು ಡಿಸ್ಟ್ರಿಕ್ಟುಗಳ ಅನೇಕ ಜಮೀನ್ದಾರ್ ಮತ್ತು ಕಾಫಿಪ್ಲಾಂಟರುಗಳೂ ಮೈಸೂರು ದೇಶದ ಎಲ್ಲಾ ಡಿಸ್ಟ್ರಿಕ್ಟುಗಳಿಂದ ಆಹ್ವಾನಿಸಲ್ಪಟ್ಟಿದ್ದ ನಾಗರಿಕರು ಮತ್ತು ಇತರ ಎಲ್ಲಾ ಜನಾಂಗಗಳ ಮೊದಲ ಮನುಷ್ಯರುಗಳೂ ಧರ್ಮಪ್ರಕಾಶ ಚಂದ್ರೇಗೌಡರವರ ಬಂಧು ಮಿತ್ರರುಗಳೂ ಚಿಕ್ಕಮಗಳೂರಿಗೆ ದಯಮಾಡಿಸಿ ಮ|| ಚಂದ್ರೇಗೌಡರವರ ರಾಜಭಕ್ತಿ ಪ್ರದರ್ಶನಕ್ಕೆ ಸಂಪೂರ್ಣವಾಗಿ ನೆರವಾಗಿದ್ದರೆಂದು ತಿಳಿಸಲು ತುಂಬಾ ಆನಂದಪಡುತ್ತೇನೆ

ಈ ಮಹೋತ್ಸವ ದಿನದಂದು ಬೆಳಿಗ್ಗೆ ತಾ॥ 20ನೇ ಶನಿವಾರ ಬೆಳಿಗ್ಗೆ ಜಾವದಿಂದಲೂ ದಿಗ್ದಿಗಂತಗಳಿಂದ ಪ್ರಜೆಗಳು ಮಹಾಸ್ವಾಮಿಗಳ ದರ್ಶನ ತೆಗೆದುಕೊಳ್ಳುವುದಕ್ಕೆ ಸಾವಿರಾರು ಬಂದು ಪಟ್ಟಣದ ಎಲ್ಲಾ ಭಾಗಗಳಲ್ಲಿಯೂ ತುಂಬಿದ್ದರು. ಪುರಪ್ರಮುಖರು ಶ್ರೀಸ್ವಾಮಿಯವರ ಶಿಷ್ಯರು ತುಂಬಿ ಆನಂದದಿಂದ ಸ್ವಾಮಿಗಳ ದರ್ಶನಕ್ಕೆ ಕಾದುಕೊಂಡು ಉತ್ಸವಕ್ಕೆ ಸಹಕರಿಸಿದರು. ಮಹಾಸ್ವಾಮಿಗಳವರ ಆಗಮನವನ್ನು ನಿರೀಕ್ಷಿಸುತ್ತಿದ್ದರು. ಮೊದಲೇ ಗೊತ್ತುಪಡಿಸಿದ್ದ ಪ್ರಕಾರ ಶ್ರೀಯವರು ಪಲ್ಲಕ್ಕಿಯಲ್ಲಿ ಕುಳಿತು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಹೊರಟು ಬೆಳಿಗ್ಗೆ 9 ಘಂಟೆಗೆ ಪುರಪ್ರವೇಶ ಮಾಡಿದರು. ಮಹಾಸ್ವಾಮಿಗಳವರ ಆಗಮನವಾದ ಕೂಡಲೆ ಎಲ್ಲಾ ಕಡೆಗಳಲ್ಲಿಯೂ ಮಂಗಳವಾದ್ಯಗಳ ಘೋಷಗಳೆದ್ದವು. ಸುವಾಸಿನಿಯರು ಆರತಿಗಳನ್ನು ಬೆಳಗಿದರು. ಪ್ರಜೆಗಳೆಲ್ಲರೂ ನಾನಾ ಕಡೆಗಳಿಂದ ಜಯಘೋಷ ಮಾಡುತ್ತಿದ್ದರು. ಅಲ್ಲಲ್ಲಿ ರಚಿಸಲ್ಪಟ್ಟಿದ್ದ ದಿವ್ಯ ಮಂಟಪಗಳಲ್ಲಿ ಪುರಪ್ರಮುಖರು ಮಹಾಸ್ವಾಮಿಗಳವರಿಗೆ ಫಲಪುಷ್ಪಗಳನ್ನು ಭಕ್ತಿಪೂರ್ವಕವಾಗಿ ಅರ್ಪಿಸುತ್ತಿದ್ದರು. ಪ್ರಭುವರ್ಯರಾದರೋ, ತಮ್ಮ ಸ್ವಾಭಾವಿಕವಾದ ಹಸನ್ಮುಖದಿಂದ ಮಂದಹಾಸವನ್ನು ಎಲ್ಲಾ ಪ್ರಜೆಗಳ ಮೇಲೂ ಬೀರುತ್ತಾ ಸಂತಸವಾಗಿ ಉತ್ಸವದಿಂದ ಬಿಜಯಂಗೈಯುತ್ತಿದ್ದರು. ಮಹಾಸ್ವಾಮಿಗಳವರ ದರ್ಶನವಾದ ಕೂಡಲೆ ಪ್ರಜೆಗಳು ಮಾಡುತ್ತಿದ್ದ ಆನಂದಧ್ವನಿಗಳಿಗೆ ಕೊನೆ ಮೊದಲೇ ಇರಲಿಲ್ಲವೆಂದಮೇಲೆ ಆ ಮಹೋತ್ಸವದ ಆನಂದವನ್ನು ಹೆಚ್ಚು ವರ್ಣಿಸಬೇಕಾದ ಅಗತ್ಯವಿಲ್ಲ.

ಈ ಉತ್ಸವವು ಸುಮಾರು 10½ ಘಂಟೆಗೆ ಧರ್ಮಪ್ರಕಾಶ ಚಂದ್ರೇಗೌಡರವರ ದಿವ್ಯ ಮಂಟಪದ ಬಳಿಗೆ ಬಂತು. ಮಹಾಸ್ವಾಮಿಗಳವರ ಸವಾರಿಯು ಕಾರಿನಿಂದ ಕೆಳಕ್ಕೆ ಬಿಜಯಂಗೈಸಿದ ಕೂಡಲೆ ಅಲ್ಲಿ ನೆರೆದಿದ್ದ ಸಕಲ ವೈದಿಕ ವರ್ಗದವರು ಮಹಾಸ್ವಾಮಿಗಳವರಿಗೆ ಸುಸ್ವಾಗತವನ್ನು ಬಯಸಿ, ಫಲಮಂತ್ರಾಕ್ಷತೆಗಳನ್ನು ಅರ್ಪಿಸಿದರು. ಅನಂತರ ಪ್ರೋಗ್ರಾಂ ಪ್ರಕಾರ ದೇವಪ್ಪ ಕರಿಗಪ್ಪ ಸಾಹೇಬರವರು ಮೊದಲು ಧರ್ಮಪ್ರಕಾಶ ಚಂದ್ರೇಗೌಡರನ್ನೂ, ತರುವಾಯ ಮ್ಯುನಿಸಿಪಲ್ ಕೌನ್ಸಿಲರುಗಳನ್ನೂ ಮಹಾಸ್ವಾಮಿಯವರಿಗೆ ಪರಿಚಯಮಾಡಿಸಿದರು. ಬಳಿಕ ಆ ಮಂಟಪದ ತುಂಬ ಕಿಕ್ಕಿರಿದಿದ್ದ ಸಹಸ್ರಾರು ಪ್ರಜೆಗಳ ಜಯಘೋಷಗಳ ಮತ್ತು ಛಿನ್ನ ವೈದಿಕರ ವೇದಘೋಷಗಳ ಮಧ್ಯೆ ಉಭಯ ಮಹಾಸ್ವಾಮಿಗಳವರು ಮಂಟಪದೊಳಕ್ಕೆ ಚಿತ್ತೈಸಿ ಪೀಠಗಳನ್ನಲಂಕರಿಸಿದರು. ಕೂಡಲೆ ಚಿಕ್ಕಮಗಳೂರು ಮ್ಯುನಿಸಿಪಾಲಿಟಿಯ ಪ್ರೆಸಿಡೆಂಟರು ವಿಜ್ಞಾಪನಾಪತ್ರವನ್ನು ಓದಿ ಅಂದವಾದ ಕ್ಯಾಸ್ಕೆಟ್ಟಿನಲ್ಲಿಟ್ಟು ಒಪ್ಪಿಸಿದರು. ವೈಸ್ ಪ್ರೆಸಿಡೆಂಟರು ಮ॥ ಗೋಪಾಲಕೃಷ್ಣನಾಯಕರು, ಉಭಯ ಮಹಾಸ್ವಾಮಿಗಳವರಿಗೂ ಹಾರ ತುರಾಯಿಗಳನ್ನರ್ಪಿಸಿದರು. ತದನಂತರ ಸೀನಿಯರ್ ಸರ್ಜನ್ನರವರು ಅವರುಗಳು ಮಲ್ಲೇಗೌಡರ ಜನರಲ್ ಆಸ್ಪತ್ರೆಯ ಅವಶ್ಯಕತೆಯ ವಿಷಯವಾದ ರಿಪೋರ್ಟನ್ನೋದಿ ಒಪ್ಪಿಸಿದರು. ತರುವಾಯ ಧರ್ಮಪ್ರಕಾಶ ಚಂದ್ರೇಗೌಡರ 3 ನೆಯ ಮಗ ಮ॥ ಎ. ಸಿ. ದೇವೇಗೌಡ, ಬಿ.ಎ., ಯವರು ಮಹಾಸ್ವಾಮಿಗಳವರಿಗೆ ವಂದಿಸಿ ತಮ್ಮ ತಂದೆಯವರ ಪರವಾಗಿ ಭಕ್ತಿಪೂರ್ವಕವಾದ ಬಿನ್ನವತ್ತಲೆಯನ್ನು ಓದಿದ ಮೇಲೆ ಧರ್ಮಪ್ರಕಾಶ ಚಂದ್ರೇಗೌಡರವರು ಅತ್ಯಂತ ಅಂದವಾಗಿ ತಯಾರಿಸಿದ್ದ ಮನೋಹರವಾದ ಹೊಸಮಾದರಿಯ ಕ್ಯಾಸ್ಕೆಟ್ಟಿನಲ್ಲಿ ಬಿನ್ನವತ್ತಲೆಯನ್ನಿಟ್ಟು ಮಹಾಸ್ವಾಮಿಯವರಿಗೆ ಒಪ್ಪಿಸಿ ಹಾರ ತುರಾಯಿಗಳನ್ನು ಶ್ರೀಮನ್ಮಹಾರಾಜರವರಿಗೂ ಶ್ರೀಮದ್ಯುವರಾಜರವರಿಗೂ ಸಮರ್ಪಿಸಿದರು. ಮಹಾಸ್ವಾಮಿಯವರು ಮೇಲ್ಕಂಡ 2 ಬಿನ್ನವತ್ತಲೆಗಳಿಗೂ ಉತ್ತರವನ್ನು ದಯಪಾಲಿಸಿ ಫೌಂಡೇಷನ್ ಸ್ಟೋನ್ ಬಳಿಗೆ ಬಿಜಯಮಾಡಿಸಿದರು. ಆಗ ಮಂಗಳವಾದ್ಯದಿಂದಲೂ, ವೇದಘೋಷದಿಂದಲೂ ಸಭೆಯಲ್ಲವೂ ತುಂಬಿತುಳುಕುತ್ತಿರಲು ಮಹಾಪ್ರಭುಗಳವರು ತಮ್ಮ ಅಮೃತ ಹಸ್ತದಿಂದ ಶಂಕುಸ್ಥಾಪನಾ ಮಹೋತ್ಸವವನ್ನು ಅತ್ಯಂತ ಆನಂದದಿಂದ ನೆರವೇರಿಸಿ, ಬೀದಿಯುದ್ದಕ್ಕೂ ದರ್ಶನಾರ್ಥವಾಗಿ ಕಿಕ್ಕಿರಿದು ನಿಂತಿದ್ದ ಪ್ರಜೆಗಳಿಗೆ ದರ್ಶನವೀಯುತ್ತಾ ಬಿಡಾರಕ್ಕೆ ಚಿತ್ತೈಸಿದರು.

ಅದೇ ದಿನ ಸಾಯಂಕಾಲ 7 ಗಂಟೆ ಸಮಯದಲ್ಲಿ ಮ॥ ಚಂದ್ರೇಗೌಡರು ತಮ್ಮ ನೂರಾರು ಜನ ಮಕ್ಕಳು ಮ॥ ರಾ॥ ಗಳಾದ ಎ. ಸಿ. ಮಲ್ಲೇಗೌಡರು, ಎ. ಸಿ. ಶಿವಣ್ಣಗೌಡರು, ಬಿ. ಎ., ಮತ್ತು ಎ. ಸಿ. ದೇವೇಗೌಡರು, ಬಿ. ಎ., ಇವರುಗಳೊಂದಿಗೆ ಮಹಾಪ್ರಭುಗಳವರ ಬಿಡಾರಕ್ಕೆ ಹೋಗಿ ಶ್ರೀಮದ್ಯುವರಾಜರವರ ಮತ್ತು ದಿವಾನ್ ಸಾಹೇಬರವರ ಸನ್ನಿಧಿ ಶ್ರೀಮನ್ಮಹಾರಾಜರವರ ದರ್ಶನವನ್ನು ಪಡೆದರು. ಆಗ ಕೃಪಾಮೂರ್ತಿಗಳಾದ ಮಹಾಸ್ವಾಮಿಯವರು ಶ್ರೀಮಂತರ ಗೃಹಕೃತ್ಯದ ಯೋಗಕ್ಷೇಮವನ್ನೂ, ಮಕ್ಕಳ ವಿದ್ಯಾಭಿವೃದ್ಧಿಯ ವಿಷಯವನ್ನೂ, ಆಸ್ತಿಗಳ ಕಾರ್ಯಭಾರಕ್ರಮವನ್ನೂ ಆಲಿಸಿದ್ದಲ್ಲದೆ, ಸ್ಥಳದ ಕುಂದುಕೊರತೆಗಳನ್ನೂ ಅವುಗಳ ನಿವಾರಣೆಗೆ ಬೇಕಾದ ಸಲಹೆಗಳನ್ನೂ ಸಹ ಕೇವಲ ಕೃಪೆಯಿಂದ ವಿಚಾರಿಸಿ ಚಿತ್ತಕ್ಕೆ ತಂದುಕೊಂಡರು ಎಂದೂ, ಅನೇಕ ಜನ ಮುಖಂಡರುಗಳನ್ನು ಧಾರಾಳ ಸಂತಸದಿಂದ ನಿರೀಕ್ಷಿಸಿದ ಮೇಲೆ ಸಹೃದಯರಾದ ಮತ್ತು ಅನುಭವಿಗಳಾದ ಈ ಧರ್ಮರಾಜರನ್ನು ಬಹಳ ಉದಾರವಾಗಿ ಸಹಜದ ಸವಿ ಸ್ವಾಗತದ ಸಮ್ಮತಿಗಳೊಡನೆ ಮಾತುಗಳನ್ನು ಮಾಡಿಕೊಂಡರೆಂದು ಮಹಾಸ್ವಾಮಿಯವರು ಅನೇಕ ಬೋಧಿಸಿದರೆಂದೂ ತಿಳಿಯುತ್ತೇವೆ. ಇದಲ್ಲದೆ ಸಹಜವಾದ ಪ್ರಭುಗಳವರ ಹೃದಯದ ಇಂತಹ ಪ್ರಸ್ತಾವನೆಯ ಪ್ರೋತ್ಸಾಹದಿಂದ ಪ್ರಜೆಗಳು ಧನ್ಯರು! ಈ ಪ್ರಜೆಗಳು ಚಿರಕಾಲ ಬಂಧುವಿನಂತೆ ಪೋಷಿಸಲ್ಪಡುತ್ತಿರುವುದರಿಂದಲೇ ಈ ರಾಜ್ಯದ ಕೀರ್ತಿ ಎಲ್ಲಾ ದೇಶಗಳಲ್ಲಿಯೂ ಹಬ್ಬಿರುವುದು. ಇಂತಹ ಸತ್ಪ್ರಭುಗಳ ಸೇವೆಯನ್ನು ಕೈಗೊಂಡು ಸನ್ಮಾರ್ಗದಲ್ಲಿಯೇ ನಡೆಯುವ ಪ್ರಜೆಗಳ ಭಾಗ್ಯವೇ ಭಾಗ್ಯ! ಈ ನಮ್ಮ ಪ್ರಜೆಗಳಿಗೆ ಮಹಾಸ್ವಾಮಿಯವರ ದರ್ಶನ ಸೌಭಾಗ್ಯವನ್ನುಂಟುಮಾಡಿಕೊಟ್ಟ ಶ್ರೀಮಂತ ಧರ್ಮಪ್ರಕಾಶ ಚಂದ್ರೇಗೌಡರೇ ಶಿವಪಾದ ರಾಜಭಕ್ತರು. ಸತ್ಪ್ರಭುಗಳಿಗೆ ತಕ್ಕ ಸತ್ಪ್ರಜೆಯೆಂದರೆ ಇಂತಹ ಮಹನೀಯರೇ ಅಲ್ಲವೆ? ಈ ನಮ್ಮ ಧರ್ಮಪ್ರಕಾಶರು ಸತ್ಕಾರದೊಂದಿಗೆ ಚಿರಕಾಲ ಆಯುರಾರೋಗ್ಯ ಐಶ್ವರ್ಯದಿಂದ ಕೂಡಿರುತ್ತಾ ನಮ್ಮ ಶ್ರೀಮನ್ಮಹಾರಾಜರವರ ಸೇವೆಯನ್ನು ಯಥಾಶಕ್ತಿಯಿಂದ ಮಾಡುತ್ತಾ ಇತೋಪ್ಯಧಿಕವಾದ ದೇಶಾಭ್ಯುದಯ ಕಾರ್ಯಗಳನ್ನು ಮಾಡುವ ಶಕ್ತಿಯನ್ನು ಅನುಗ್ರಹಿಸಬೇಕೆಂದು ಆಚಿನ್ಮಯನಾದ ಪರಶಿವನನ್ನು ಅತ್ಯಂತ ಭಕ್ತಿಯಿಂದ ಬೇಡುವೆವು.

ಈ ಮಹೋತ್ಸವ ಕಾರ್ಯವು ನಿರಾತಂಕವಾಗಿ ನೆರವೇರುವಂತೆ ಸಮಯೋಚಿತವಾದ ಏರ್ಪಾಡುಗಳನ್ನು ಮಾಡಿಸಿದ್ದ ಹಜರತ್ ದೇವಪ್ಪ ಕರಿಗಪ್ಪ ಸಾಹೇಬರವರೂ, ಈ ಉತ್ಸವದಲ್ಲಿ ಮೊದಲಿಂದ ಕೊನೆಯವರೆಗೂ ಧರ್ಮಪ್ರಕಾಶ ಚಂದ್ರೇಗೌಡರಿಗೆ ನೆರವಾಗಿ ಪ್ರಮುಖರ ಮೊಹಸತು ಮಾಡಿದ ಮ॥ ಗಳಾದ ಸಿ. ಪಿ. ಬಸವೇಗೌಡರು ಮುನ್ಸಿ ವೈಸ್‌ಪ್ರೆಸಿಡೆಂಟರು ಗೋಪಾಲಕೃಷ್ಣನಾಯ್ಕರವರು ಸಹ ಶ್ಲಾಘನೆಗೆ ಪಾತ್ರರಾಗಿದ್ದಾರೆ. ಎಲ್ಲಾ ಧರ್ಮಪ್ರಕಾಶ ಚಂದ್ರೇಗೌಡರಿಗೂ ಮಲೆನಾಡಿನ ಪ್ರಜೆಗಳಿಗೂ ಶ್ರೀ ನೀಲಕಂಠನು ನಲ್ಲಿ ರಾಜ್ಯದನ್ನು ಪಡೆಯುವರು ನಿತ್ಯಕಲ್ಯಾಣವ. ರಾಜಭಕ್ತಿಯನ್ನು ಸರ್ವದಾ ದಯಪಾಲಿಸಿ ಚಿರಕಾಲ ಕಾಪಾಡಲೆಂದು ಆ ಚಿನ್ಮಯನನ್ನು ಬೇಡುವ ಓರ್ವ ಪ್ರತ್ಯಕ್ಷದರ್ಶಿ.

ಪ್ರಕಟನೆ.

ನಮ್ಮಲ್ಲಿ ಸಿನೇಮಾಕ್ಕೆ ಸಂಬಂಧಪಟ್ಟ ಪ್ಯಾಥೆ ಕಂಪೆನಿಯ ಪ್ರೊಜೆಕ್ಟರ್ ಮಿಷನ್, ಆರ್ಕುಲ್ಯಾಂಪ್, ಡೈನೋಮ, ಎಲೆಕ್ಟ್ರಿಕಲ್ ಫಿಟಿಂಗ್ಸ ವಗೈರೆ ಎಲ್ಲಾ ಸಾಮಾನುಗಳೂ, ಕೆಲವು ಕಾಮಿಕ್ ಫಿಲಂಗಳೂ ಸಹ ಮಾರಲಿಕ್ಕೆ ದೊರೆಯುತ್ತವೆ. ಎಲ್ಲಾ ಸಾಮಾನುಗಳ ಸೆಟ್ಟು ತಯಾರು ಇರುವುದರಿಂದ ಈ ದಿನವೇ ಸಿನೇಮಾ ನಡಿಸಬಹುದು. ಈ ಸಾಮಾನುಗಳು ಸೋವಿ ಕಿಮ್ಮತ್ತಿನಲ್ಲಿ ಸಿಗುತ್ತವೆಯಾದ್ದರಿಂದ ಈ ಸಮಯವನ್ನು ಕಳೆದುಕೊಳ್ಳಬಾರದಾಗಿ ಕೋರಿಕೆ.

Siddaradhya
Tirukappanavra mutt
Davangere.

[12—2]



9

" ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತರ "
ಆಯುರ್ವೇದೀಯ ಸಿದ್ಧೌಷಧಗಳು.

ಬಾಲರೋಗಹರ ಕಸ್ತೂರೀ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿದಿವಸವೂ ಚಿಕ್ಕಮಕ್ಕಳಿಗೆ ಕೊಡುತ್ತಾ ಬಂದರೆ ಹಾಗೇಯೇ ಅಗ್ನಿಮಾಂದ್ಯ ಅಜೀರ್ಣ, ಕೀವು ಗಾಳಿಗಳ ವ್ಯತ್ಯಾಸದಿಂದ ಬರುವ ರೋಗಗಳು ಬಾರದಂತೆ ದೇಹವನ್ನು ಕಾಪಾಡುತ್ತವೆ.

ಮಕ್ಕಳ ನೆಗಡಲು ಮೊಲ್ಲಾ ವಯಸ್ಸಿನವರಿಗೂ, ಶೀತ, ನೆಗಡಿ, ಕೆಮ್ಮು, ಜೀರ್ಣ, ಶೀತವಾತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ.

300 ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣಾ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ನಮ್ಮ ವಿಳಾಸವನ್ನೂ ಬಾಲರೋಗಹರ ಕಸ್ತೂರೀ ಮಾತ್ರೆ ಎಂಬ ಹೆಸರನ್ನೂ ನೋಡಿ ಕೊಂಡುಕೊಳ್ಳಿರಿ.

ವೈಶ್ವಾನರಾಸವ.

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ.)

ಮೂತ್ರವು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ, ವಾಂತಿಭೇದಿ ಮೊದಲಾದವುಗಳಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1ಕ್ಕೆ ರೂ. 1—0—0.

ಶ್ರೀನಿವಾಸತೈಲ.

ಪ್ಲೇಗು ರೋಗಿಯು ಪ್ರತಿ ಸಂದುಗಳಿಗೂ, ಗೆಡ್ಡೆಗೂ ಹಚ್ಚುವ ಔಷಧ. ಸೀಸೆ 1ಕ್ಕೆ ರೂ. 0—8—0.

ಶ್ರೀ ಸೀತಾರಾಘವವೈದ್ಯಶಾಲಾ, ಬ್ರಾಂಚಾಫೀಸು ಚಿಕ್ಕಪೇಟೆ, ಬೆಂಗಳೂರು ಸಿಟಿ.	"ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತರ", ಶ್ರೀ ಸೀತಾರಾಘವವೈದ್ಯಶಾಲಾ, ಹೆಡಾಫೀಸು ಮೈಸೂರು.

ಡಾಕ್ಟರ್ ಜೇ. ಬೀ. ಯವರ
ಸುಗಂಧ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರು



(Registered Trade Mark)

ಸರ್ಟಿಫಿಕೇಟುಗಳನ್ನು ಕೊಟ್ಟಿರುತ್ತಾರೆ. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಗುಣವಾಗುವ ವ್ಯಾಧಿಗಳು ಯಾವುವೆಂದರೆ:—ಪೀನಸಿ, ಒಂದುತಲೆನೋವು, ಕಣ್ಣಿನಲ್ಲಿನ ರೋಗಗಳು, ಕಿವಿಗಳಲ್ಲಿ ಉಂಟಾಗತಕ್ಕ ಸಕಲ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳ ಪರಿಹಾರವಾಗುವುದಲ್ಲದೆ ಅಂತಹ ಮೊಲ್ಲಿಹೋಗತಕ್ಕ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ನೂರು ಬಟ್ಟೆನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಟೀಕಿರೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಬಿಡಿಸವಾಗಿ ಉಪಯೋಗಿಸುತ್ತಾರೆ. ನಾವೆಲ್ಲರೂ ಪುಗಸಟ್ಟೆ ಕಳುಹಿಸಲಾಗುವುದು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೯—೦. ವಿ. ಪಿ. ೦—೯—೦. ದಜ್ಜನ್ ಗಳ್ಳೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸಂಪೂರ್ಣ ತಿಳಿಯುವಂತೆ ಬರೆಯಿರಿ.

ವಿಳಾಸ—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
ಪ್ರೋ. ಬಾ. ೫೧೧, ಮದರಾಸು.

[50—15]

೧೯೨೯ ನೇ ಇಸವಿಯ ಶಿದ್ದಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು ಮತ್ತು ಕ್ಯಾಲೆಂಡರುಗಳು.

1929 ನೇ ಇಸವಿಯ ಶಿದ್ದಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು.

1ನೇ ನಂ. ದೊಡ್ಡಸೈಜು ಪಾಕೆಟ್‌ಡೈರಿ ಪೆನ್ಸಲ್ ಇಟ್ಟು ಮುಚ್ಚಳ ಹಾಕಿದ್ದು $6\frac{1}{2}'' \times 4''$ 1ಕ್ಕೆ 0-12-0 ಪರಸ್ಥಳಕ್ಕೆ ಪೋಸ್ಟೇಜು 0-2-0.

2ನೇ ನಂ. ದೊಡ್ಡಸೈಜು ಮುಚ್ಚಳವಿಲ್ಲದ ಸಾದಾ ಪಾಕೆಟ್‌ಡೈರಿ $6\frac{1}{2}'' \times 4''$ 1ಕ್ಕೆ 0-10-0 ಪರಸ್ಥಳಕ್ಕೆ ಪೋಸ್ಟೇಜು 0-3-0.

1ನೇ ನಂ. ಚಿಕ್ಕಸೈಜು ಪಾಕೆಟ್‌ಡೈರಿ ಪೆನ್ಸಲ್ ಇಟ್ಟು ಮುಚ್ಚಳ ಹಾಕಿದ್ದು $5'' \times 3\frac{1}{2}''$ 1ಕ್ಕೆ 0-7-0 ಪರಸ್ಥಳಕ್ಕೆ ಪೋಸ್ಟೇಜು 0-2-0.

2ನೇ ನಂ. ಚಿಕ್ಕಸೈಜು ಪಾಕೆಟ್‌ಡೈರಿ ಮುಚ್ಚಳವಿಲ್ಲದ ಸಾದಾ $5'' \times 2\frac{1}{2}''$ 1ಕ್ಕೆ 0-5-0 ಪರಸ್ಥಳಕ್ಕೆ ಪೋಸ್ಟೇಜು 0-3-0.

ಮೇಲ್ಕಂಡ ದರದಂತೆ ನಿಮಗೆ ಬೇಕಾದಷ್ಟು ಡೈರಿಗಳ ಪೂರ್ಣ ಮೊಬಲಗು ರವಾನಿಸಿದಲ್ಲಿ ಪೋಸ್ಟಲ್ ಪಾರ್ಸಲ್ ಮೂಲಕ ರವಾನಿಸಲಾಗುತ್ತೆ. ಮೇಲ್ಕಂಡ ಡೈರಿಗಳನ್ನು ಒಟ್ಟಿಗೆ 12 ತರಿಸಿಕೊಳ್ಳುವವರಿಗೆ 1 ಡೈರಿ ಹೆಚ್ಚಿಗೆ ಕೊಡಲಾಗುತ್ತೆ. ವಿ. ಪಿ. ಮೂಲಕ ದಜ್ಜನ್‌ಗಟ್ಟಲೆ ತರಿಸಿಕೊಳ್ಳುವವರು ದಜ್ಜನ್ 1ಕ್ಕೆ 2 ರೂಪಾಯಿ ಮೊದಲು ಅಡ್ವಾನ್ಸ್ ರವಾನಿಸಬೇಕು.

1929 ನೇ ಇಸವಿಯ ಸಚಿತ್ರಕ್ಯಾಲೆಂಡರ್.

ಸೀಟ್ ಕ್ಯಾಲೆಂಡರ್ 50 ಕ್ಕೆ 1-2-0. 100 ಕ್ಕೆ 2-0-0, $3'' \times 4\frac{1}{2}''$ ಪಾಕೆಟ್ ಕ್ಯಾಲೆಂಡರ್ 12 ಕ್ಕೆ 0-0-0. 50 ಕ್ಕೆ 2-4-0, 100 ಕ್ಕೆ 4-0-0.

ಅನೇಕ ಬಣ್ಣಗಳಿಂದ ರವಿವರ್ಮ ಪ್ರೆಸ್ಸಿನಲ್ಲಿ ತಯಾರಾದ $10'' + 14''$ ಸೈಜಿನ ಶ್ರೀ ಮಹಾವಿಷ್ಣುವಿಗೆ ಸುದರ್ಶನಪ್ರದಾನ ಮಾಡುವ ಪರಮೇಶ್ವರನ ಚಿತ್ರದ ಕ್ಯಾಲೆಂಡರ್ 3 ಕ್ಕೆ 0-8-0, 6 ಕ್ಕೆ 0-14-0, 12 ಕ್ಕೆ 1-3-0.

ನಿಮಗೆ ಬೇಕಾದಷ್ಟು ಕ್ಯಾಲೆಂಡರುಗಳ ಪೂರ್ಣ ಮೊಬಲಗನ್ನು ಮನಿಯಾರ್ಡರ್ ಮಾಡಿದಲ್ಲಿ ಪ್ಯಾಕಿಂಗ್ ಪೋಸ್ಟೇಜು ಇಲ್ಲದೆ ಫ್ರೀಯಾಗಿ ರವಾನಿಸಲಾಗುತ್ತೆ. ವಿ. ಪಿ. ಮೂಲಕ ಕಳುಹಿಸಲಾಗಿ ರವಾನಿಸುವುದಿಲ್ಲ.

ಕ್ಯಾಲೆಂಡರುಗಳು ಮುಗಿದನಂತರ ಬರೆಯುವ ಮನಿಯಾರ್ಡರುಗಳನ್ನು ಹಿಂದಿರುಗಿಸಲಾಗುವುದು ವಾಪಸ್ ಮಾಡುತ್ತೆ.

ಮಾದರಿ ಕ್ಯಾಲೆಂಡರ್ ಅಪೇಕ್ಷಿಸುವವರು 0-5-0 ರವಾನಿಸಿದಲ್ಲಿ ಮೇಲ್ಕಂಡ 3 ನಮೂನೆ ಕ್ಯಾಲೆಂಡರುಗಳನ್ನು ಪೋಸ್ಟ್ ಮೂಲಕ ಫ್ರೀಯಾಗಿ ರವಾನಿಸಲಾಗುತ್ತೆ.

ಮನಿಯಾರ್ಡರ್ ರವಾನಿಸುವ ವಿಳಾಸ—

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಅಲ್ಯೂಮಿನಿಯಂ ವ್ಯಾಪಾರಿಗಳು, ಮೈಸೂರು.

[50—13]

೧೯೨೯ ನೆಯ ಇಸವಿ ಫೆಬ್ರವರಿ ತಾ॥ ೨ ರಿಂದ ೧೯೨೯ ನೆಯ ಇಸವಿ ಫೆಬ್ರವರಿ ತಾ॥ ೮ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೧ ನೆಯ ವಿಭವನಾಮಸಂವತ್ಸರದ ಪುಷ್ಯ ಬಹುಳ ಅಷ್ಟಮಿಯಿಂದ ಪುಷ್ಯ ಬಹುಳ ಚತುರ್ದಶಿ ವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಳೆ ಮಾಸ
2	[1] ಶನಿ	ಅಷ್ಟ	8-50	ವಿಶಾ	44-36	20
3	ಭಾನು	ನವ	15-18	ಅನೂ	50-39	21
4	ಸೋಮ	ದಶ	18-25	ಜ್ಯೇಷ್ಠ	57-12	22
5	[2] ಮಂಗಳ	ಏಕಾ	23-54	ಮೂಲ	60	23
6	ಬುಧ	ದ್ವಾದ	29-13	ಮೂಲ	3-50	24
7	ಗುರು	ತ್ರಯೋ	33-56	ಪೂಷಾ	0-57	25
8	[3] ಶುಕ್ರ	ಚತು	37-49	ಉಷಾ	15-20	26

(1) ಮಳೆನಕ್ಷತ್ರ-ಶ್ರವಣ ೪ ನೆಯಪಾದ. (2) ಮಳೆನಕ್ಷತ್ರ-ಧನಿಷ್ಠ ೧ ನೆಯಪಾದ, ಮಳೆನಕ್ಷತ್ರ ಧನಿಷ್ಠ ೨ ನೆಯಪಾದ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಪಂಚಾಕ್ಷರೀ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಮೈಸೂರ್ ಸ್ಟಾರ್

ಪ್ರತಿ ಶನಿವಾರ ಪ್ರಕಟಿಸಲ್ಪಡುವ ಪತ್ರಿಕೆ

ಮಹಿಶೂರಪುರೀಶಾರಾ ಪರಮ.ಧಿಗತಿರಾಜಮಂಡಲಹಿತೈಷಾ | ಘನಸಿಧಿತ್ವ ಶಾಂತತಾರಾ ಪಕ್ಷ್ಮಪಕ್ಷ್ಮ ನೇ ಚರಾಚರಾನ್ ||
ಶ್ರೀಮತ್ಕೃಷ್ಣನೃಪಾಲಸತ್ತಮಶೌರಲೋಕಾಂಬುಧಿಪೂರ್ಣಚಂದ್ರ ಸದ್ವಾರಾಧೀಶ ದಕ್ಷ ನಾಕಳ ಸಾಧ್ಯಪ್ರಾಪ್ಯವಾಪಿನಂ ||
ಸುಮಾತೀತಯಶಃಪ್ರಕಾಶವಿಭವಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತಲಿಯಂಸದಾಪೋರಿಗೆ ಗೌರೀಚಾರುಶಂಕರೋದ್ಯತ್ಪ್ರಕಂ ||

[ಸ್ಥಳದವರಿಗೆ ವಾರ್ಷಿಕ ಚಂದಾ ೧-೧೦-೦] [ಪರಸ್ಥಳದವರಿಗೆ ೩-೮-೦] [ಬ್ರಿಟೀಷರಿಗೆ ೩-೮-೦]

ಸಂಪುಟ ೪೨] ಮೈಸೂರು ಸ್ಟಾರ್ ಸನ್ ೧೯೨೯ ನೇ ಇಸವಿ ಫೆಬ್ರವರಿ ತಾರೀಖು ೯ ನೇಯ ಶನಿವಾರ [ಸಂಚಿಕೆ ೬

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ			ವಿ.ಪಿ. ಸಹ		
ವೀರಶೈವ ಶಿವಪೂಜಾವಿಧಿ	೦	೧೨	೦	೧	೨	
ಸಟೀಕ ವೀರಶೈವ ವಿಚಾರಸುಧೆ	೦	೮		೦	೧೩	೦
ಷಟ್ಸ್ಥಲವಿದ್ಯಾ	೦	೪	೦	೦	೯	೦
ಚಾರುಶೀಲಚರಿತ್ರೆ	೦	೫		೦	೧೦	೦
ಹರಿದಾಸಿ	೦	೪	೦	೦	೯	೦
ವೃಷಭಪಂಚಕ	೦	೪	೦	೦	೯	೦
ಗುರುಪಂಚಕೇಶ್ವರಶತಕ	೦	೧	೦	೦	೬	೦
ಬಸವೇಶ್ವರವಚನ	೦	೨	೦	೦	೩	
ಸಟೀಕ ಕಥಾಟಿಕಶಬ್ದಮಂಜರಿ	೦	೮	೦	೦	೧೩	೦
ಸಟೀಕ ಶತಕತ್ರಯ	೧	೦	೦	೧	೬	೦

ಮೈಸೂರ್ ಸ್ಟಾರ್ ಚಂದಾದಾರರಿಗೆ

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಬರುವುದರ ಒಳಗಾಗಿ ಪ್ರತಿಸ್ಥಳದ ಪಾಠಶಾಲೆಯು, ಸಂಸ್ಥೆ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ ೩-೮-೦ ಮೊಬಲಗನ್ನು ಮನಿಯಾರ್ಡರ್ ಮಾಡುವಾಗ್ಯೆ ಕೂಪನ್ನಿನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ ಮೇಲಿನ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮನಿಯಾರ್ಡರುಗಳಿಗೆ ಸಿಗದೇ ಹೋಗುವುದು, ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್

ಹತ್ತನೆಯ ವೀರಶೈವ ಮಹಾಸಭಾಕಾಲದಲ್ಲಿ ಪ್ರಸಿದ್ಧಿಸಲ್ಪಟ್ಟ

ವೀರಶೈವ ಕರದರ್ಪಣ.

ಡೆಮ್ಮಿ ¼ ಸೈಜಿನ 200 ದೊಡ್ಡ ಗ್ರೀಜುಪುಟಗಳು] ಬೆಲೆ ಒಂದೇ ಒಂದು ರೂಪಾಯಿ [300 ಭಾವಚಿತ್ರಗಳಿರುವುವು

ವೀರಶೈವರ ಸಂಬಂಧವಾದ ಎಲ್ಲ ವಿಷಯಗಳನ್ನೂ ಒಳಗೊಂಡಿರುವ ಏಕಮಾತ್ರ ಪುಸ್ತಕ

ವೀರಶೈವಮತಸಂಬಂಧವಾದ ಮಹತ್ವವಿಷಯಗಳಮೇಲೆ ಎಂದರೆ ವೀರಶೈವಮತತತ್ವನಿರೂಪಣೆ ವಿಶಾಲತ್ವ, ಬ್ರಾಹ್ಮಣಸಿದ್ಧಾಂತ ಜಗದ್ಗುರು ಪೀಠಗಳು, ಶ್ರೀ ಬಸವೇಶ್ವರ ಮೊದಲಾದ ವಿಷಯಗಳ ಮೇಲೆ ಸುಪ್ರಸಿದ್ಧ ಲೇಖಕರ ಲೇಖನಗಳು ಜಗದ್ಗುರುಪೀಠಗಳ ಮತ್ತು ಜಗದ್ಗುರು ಮಹಾಸ್ವಾಮಿಗಳವರ ಸಚಿತ್ರ ಚರಿತ್ರೆಗಳು, ಇಡೀ ಭರತಖಂಡದೊಳಗಿನ ವೀರಶೈವ ಸಂಸ್ಥೆಗಳ ಮತ್ತು ಅವುಗಳ ಸಮಗ್ರ ಇತಿಹಾಸಗಳು ಅಖಿಲಭರತಖಂಡದಲ್ಲಿ ಗತಿಸಿದ ವೀರಶೈವ ಮಹನೀಯರುಗಳ ಸಚಿತ್ರ ಜೀವಿತಚರಿತ್ರೆಗಳು ಅ. ಭಾ. ವೀರಶೈವ ಮಹಾಸಭೆಯು ಮೊದಲು ಹೇಗೆ ಪ್ರಾರಂಭವಾಯಿತೆಂಬ ವಿಷಯ ಚಿರಸ್ಥಾಯಿಫಂಡಿನ ವಿಷಯ ಮತ್ತು ಅದಕ್ಕೆ ಸಹಾಯಮಾಡಿದವರ ಭಾವಚಿತ್ರಗಳು ಮೊನ್ನೆ ನಡೆದ 10 ನೇ ವೀರಶೈವ ಮಹಾಸಭೆಗೆ ಮೈಸೂರು ಶ್ರೀಮದ್ಮಹಾರಾಜರವರಿಂದ ಕಳಿಸಲ್ಪಟ್ಟ ಸಂದೇಶ—ಈ ಎಲ್ಲ ವಿಷಯಗಳಿಂದೊಡಗೂಡಿದ ಉತ್ತಮ ಗ್ರಂಥ

ಇಡೀ ಪುಸ್ತಕವು ಭಾವಚಿತ್ರಗಳಿಂದ ತುಂಬಿತುಳುಕುತ್ತದೆ ಶ್ರೀಮದ್ಮಹಾರಾಜರವರ ಭಾವಚಿತ್ರ ಶ್ರೀ ಮುಮ್ಮಡಿ ಕೃಷ್ಣರಾಜಒಡೆಯರವರು ಶಿವಪೂಜೆಮಾಡುತ್ತಿರುವುದು, ಶ್ರೀಜಗದ್ಗುರು ಮಹಾಸ್ವಾಮಿಗಳ ಅಧ್ಯಕ್ಷತೆಯಲ್ಲಿ 10 ನೇ ಅ. ಭಾ. ವೀರಶೈವ ಮಹಾಸಭೆಯ ಅಧ್ಯಕ್ಷ ಮತ್ತು ಸ್ವಾಗತಸಂಘಾಧ್ಯಕ್ಷರ ಭಾವಚಿತ್ರಗಳು ಪಂಚಪೀಠಗಳ ದೃಶ್ಯಗಳು ಮತ್ತು ಪಂಚಜಗದ್ಗುರುಗಳ ಭಾವಚಿತ್ರಗಳು ಶ್ರೀ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳ ದೊಡ್ಡ ಭಾವಚಿತ್ರ ಮತ್ತು ಜಗದಾಚಾರ್ಯ [illegible] ಒಡೆಯರವರ ಹುಬ್ಬಳ್ಳಿ ಮತ್ತು ಗದಗಿನ ಜಗದ್ಗುರು ಮಹಾಸ್ವಾಮಿಗಳವರ ಭಾವಚಿತ್ರ, ಇನ್ನೂ ಈಗ ಎಲ್ಲ ಪ್ರಸಿದ್ಧ ಮಹಾಸ್ವಾಮಿಗಳವರ ಮತ್ತು ವೈದಿಕವರ್ಗದ ಭಾವಚಿತ್ರಗಳು ಇದರಲ್ಲಿರುವವು ಇದಲ್ಲದೆ [illegible] ದೇವರಾಯರು ಮೈಸೂರು ವೀರಸಂಗಪ್ಪನವರಾದಿಯಾಗಿ ಗತಿಸಿದ ಎಲ್ಲ ವೀರಶೈವರಗಳನ್ನೂ ಈಗಿನ ವೀರಶೈವ ಲೌಕಿಕ ವೈದಿಕ ಧರ್ಮಾತ್ಮರನ್ನೂ ಪ್ರಸಿದ್ಧ ಸ್ತ್ರೀಪುರುಷರನ್ನೂ ದೊಡ್ಡ ಉದ್ದೇಶದಾರರು, ವರ್ತಕರು [illegible] ನಟರು ಮೊದಲಾದವರನ್ನೂ ಇದರಲ್ಲಿ ಕಾಣಬಹುದು

ಈವರೆಗೆ ಈ ಮಾದರಿಯ ಪುಸ್ತಕವು ಬೇರೊಂದು ಪ್ರಕಟವಾಗಿಲ್ಲ ವೀರಶೈವರು ಸಂಗ್ರಹ ಮಾಡಿರುವ ಗ್ರಂಥವು ಬೆಂಗಳೂರಿನ ಮಹಾಸಭಾ ಕಾಲದಲ್ಲಿ ಮಾರಿ ಮಿಕ್ಕ ಕೆಲವು ಪ್ರತಿಗಳು ಮಾತ್ರ ಉಳಿದಿವೆ

ಬೇಕಾದವರು ಬೇಗನೆ ಬರೆಯಿರಿ ಬೆಲೆ 1 ರೂಪಾಯಿ ಟಪಾಲ್ ಖರ್ಚು ಪ್ರತ್ಯೇಕ

ಪ್ರಕಾಶಕ ಟಿ. ಎಚ್. ಚೆನ್ನಪ್ಪ,
ಲಾಡಲ್ ಮುದ್ರಾಕ್ಷರಶಾಲಾ, ಬೆಂಗಳೂರು ಸಿಟಿ

17

"ಶ್ರೀ ಧನ್ವಂತರಿ ವೈದ್ಯ ವೆಂಕಟಾಚಲಪಂಡಿತರ"

ಆಯುರ್ವೇದೀಯ ಸಿದ್ಧೌಷಧಗಳು

ಲೋಕಾಮಪೋಷಕ ಕಸ್ತೂರೀ ಮಾತ್ರೆಗಳು

ಈ ಮಾತ್ರೆಗಳನ್ನು ಪ್ರತಿದಿನವೂ ಚಿಕ್ಕಮಕ್ಕಳು ಹೆರಿಯರುಗಳು, ಹಾಗೇ ಮುದುಕರು ಉಪಯೋಗಿಸುತ್ತಿದ್ದರೆ ಆಹಾರ ಗುಣ ದೋಷಗಳ ವ್ಯತ್ಯಾಸದಿಂದ ಬರುವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ ಮಕ್ಕಳ ಮೊದಲು ಎಲ್ಲಾ ವಯಸ್ಸಿನವರಿಗೆ, ಶೀತ, ನೆಗಡಿ, ಕೆಮ್ಮು ಜ್ವರ, ಶೀತವಾತಜ್ವರ, ಬಳಲಿಕೆ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ

ಈ ಮಾತ್ರೆಗಳ ಬುಡ್ಡಿ 1ಕ್ಕೆ 1 ಆಣೆ ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ ನಮ್ಮ ವಿಳಾಸವನ್ನೂ ಲೋಕಾಮಯಹರ ಕಸ್ತೂರೀ ಮಾತ್ರೆ ಎಂಬ ಹೆಸರನ್ನೂ ನೋಡಿ ಕೊಂಡುಕೊಳ್ಳಿರಿ

ವೈಶ್ವಾನರಾಸವ

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ)

ಮೂತ್ರವು ಕಟ್ಟಿಹೋದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ, ಪ್ರಾಂಭವಾಗದೆ ಕೊಟ್ಟ ಮೊದಲನೇವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ ಸೀಸೆ 1ಕ್ಕೆ ರೂ 1—0—0

ಲಕ್ಷ್ಮೀವಿಲಾಸರಸ

(ಪ್ಲೇಗಿಗೆ)

ಹತ್ತಾರು ವರ್ಷಗಳಿಂದ ಪ್ರತಿವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ನಿಂಬುವುದಾಗಿ ಗುಣಪಡಿಸಿರುತ್ತದೆ ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ ಸನ್ನಿಪಾತಜ್ವರಗಳಿಗೂ ಅವಶ್ಯಕವಾಗಿರುತ್ತದೆ ಸೀಸೆ ಬೆಲೆ 1ಕ್ಕೆ ರೂ 1—0—0

ಶ್ರೀನಿವಾಸತೈಲ

ಪ್ಲೇಗ ರೋಗಿಯ ಪ್ರತಿ ಸಂದುಗಳಿಗೂ ಗೆಡ್ಡೆಗೂ ಲೇಪನ ಔಷಧ ಸೀಸೆ 1ಕ್ಕೆ ರೂ 0—8—0

• ಧನ್ವಂತರಿ

ಶ್ರೀ ಸೀತಾರಾಮಯ್ಯನವರ ಶಾಲಾ ಬ್ರಾಂಚಾಫೀಸು ೨೫ ಪೇಟೆ ಬೆಂಗಳೂರು ಸಿಟಿ

ಬಾಳ ವ ವೆಂಕಟಾಚಲಪಂಡಿತರ • ಶ್ರೀ ಸೀತಾರಾಘವಮ್ಮನ ವಿಲಾಸ, ರೋಡಾ ಫೀಸು ಮೈಸೂರು

೧೯೨೯ ನೇ ಇಸವಿಯ ಶಿದ್ದಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು ಮತ್ತು ಕ್ಯಾಲೆಂಡರುಗಳು.

1929 ನೇ ಇಸವಿಯ ಶಿದ್ದಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು.

1ನೇ ನಂ ದೊಡ್ಡಸೈಜು ಪಾಕೆಟ್‌ಡೈರಿ ಪೆನ್ಸಲ್ ಇಟ್ಟು ಮುಚ್ಚುವ ಪಾಕಿಟ್ಟು $6\frac{3}{4}" \times 4"$ 1ಕ್ಕೆ 1 12 0 ಪರಸ್ಥಳಕ್ಕೆ ಪೋಸ್ಟೇಜು 0 3 0

2ನೇ ನಂ ದೊಡ್ಡಸೈಜು ಮುಚ್ಚಳವಿಲ್ಲದ ಸಾದಾ ಪಾಕೆಟ್‌ಡೈರಿ $6\frac{1}{2}" \times 4"$ 1ಕ್ಕೆ 0 10 0 ಪರಸ್ಥಳಕ್ಕೆ ಪೋಸ್ಟೇಜು 0 3 0

1ನೇ ನಂ ಚಿಕ್ಕಸೈಜು ಪಾಕೆಟ್‌ಡೈರಿ ಪೆನ್ಸಲ್ ಇಟ್ಟು ಮುಚ್ಚುವ ಪಾಕಿಟ್ಟು $5" \times 2\frac{3}{4}"$ 1ಕ್ಕೆ 0 7 0 ಪರಸ್ಥಳಕ್ಕೆ ಪೋಸ್ಟೇಜು 0 2 0

2ನೇ ನಂ ಚಿಕ್ಕಸೈಜು ಪಾಕೆಟ್‌ಡೈರಿ ಮುಚ್ಚಳವಿಲ್ಲದ ಸಾದಾ $5 \times 2\frac{3}{4}"$ 1ಕ್ಕೆ 0 5 0 ಪರಸ್ಥಳಕ್ಕೆ ಪೋಸ್ಟೇಜು 0 2 0

ಮೇಲ್ಕಂಡ ದರದಂತೆ ನಮಗೆ ಬೇಕಾದಷ್ಟು ಡೈರಿಗಳ ಖರ್ಚಿನ ಮೊಬಲಗು ರವಾನಿಸಿದಲ್ಲಿ ಪೋಸ್ಟಲ್ ಪಾರ್ಸಲ್ ಮೂಲಕ ರವಾನಿಸಲಾಗುತ್ತೆ. ಮೇಲ್ಕಂಡ ಡೈರಿಗಳನ್ನು ಒಟ್ಟಿಗೆ 12 ತರಿಸಿಕೊಳ್ಳುವವರಿಗೆ 1 ಡೈರಿ ಹೆಚ್ಚಿಗೆ ಕೊಡಲಾಗುತ್ತೆ. ವಿ. ಪಿ. ಮೂಲಕ ತರಿಸಿಕೊಳ್ಳುವವರು ದರಕ್ಕೆ 1 ಕ್ಕೆ 4 ರೂಪಾಯಿ ಮೇರೆ ಅಡ್ವಾನ್ಸ್ ರವಾನಿಸಬೇಕು.

1929 ನೇ ಇಸವಿಯ ಸಚಿತ್ರಕ್ಯಾಲೆಂಡರ್

ಶೀಟ್ ಕ್ಯಾಲೆಂಡರ್ 50 ಕ್ಕೆ 1 2 0 100 ಕ್ಕೆ 2 0 0 $8 \times 4\frac{3}{4}"$ ಪಾಕೆಟ್ ಕ್ಯಾಲೆಂಡರ್ 12 ಕ್ಕೆ 0 4 0 50 ಕ್ಕೆ 2 0 0 100 ಕ್ಕೆ 4 0 0

ಅನೇಕ ಬಣ್ಣಗಳಿಂದ ರಚಿಸಿದ ಪ್ರೆಸ್ಸಿನಲ್ಲಿ ತಯಾರಾದ 1 + 14" ಸೈಜಿನ ಶ್ರೀ ಮಹಾವಿಷ್ಣುವಿನ ದರ್ಶನವಾದ ಸಾವಿರ ಗರುವ [illegible] ಚಿತ್ರದ ಕ್ಯಾಲೆಂಡರ್ 1 ಕ್ಕೆ 0 1 0 6 ಕ್ಕೆ 0 14 0 12 ಕ್ಕೆ 1 6 0

ಮೇಲೆ ಕಂಡ ಕ್ಯಾಲೆಂಡರುಗಳ ಪೂರಾ ಮೊಬಲಗನ್ನು ಮನಿಯಾರ್ಡರ್ ಮಾಡಿದಲ್ಲಿ ಪ್ಯಾಕಿಂಗ್ ಪೋಸ್ಟೇಜು ಇಲ್ಲದೆ ಫ್ರೀಯಾಗಿ ರವಾನಿಸಲಾಗುತ್ತೆ ವಿ. ಪಿ. ಮೂಲಕ ಖಂಡಿತವಾಗಿ ರವಾನಿಸುವುದಿಲ್ಲ

ಕ್ಯಾಲೆಂಡರುಗಳು ಮುಗಿದನಂತರ ಬರೆದಲ್ಲಿ ಮನಿಯಾರ್ಡರನ್ನು ಹಿಂದಕ್ಕೆ ಕಳುಹಿಸಲಾಗುತ್ತೆ

ಮಾದರಿ ಕ್ಯಾಲೆಂಡರ್ ಬೇಕಿದ್ದವರು 0 5 0 ರವಾನಿಸಿದಲ್ಲಿ ಮೇಲ್ಕಂಡ 8 ನಮೂನೆ ಕ್ಯಾಲೆಂಡರುಗಳನ್ನು ಪೋಸ್ಟ್ ಮೂಲಕ ಫ್ರೀಯಾಗಿ ರವಾನಿಸಲಾಗುತ್ತೆ

ಮನಿಯಾರ್ಡರ್ ರವಾನಿಸುವ ವಿಳಾಸ—

[50—14]

ಎಂ. ಎಸ್. ಶಿವ್ದಪ್ಪ ಅಂಡ್ ಬ್ರದರ್ಸ್, ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಡಾಕ್ಟರ್ ಜೆ. ಬಿ. ರವರ

ಸುಗಂಧ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿದು ಬಹಳ ಕಾಲದಿಂದ ಸಾವಿರಾರು ವೈದ್ಯರುಗಳು ಇದನ್ನು ಉಪಯೋಗಿಸಿ ಸಾವಿರಾರು

ಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವುವೆಂದರೆ—ಶೀತ, ಒಂದುಕಡೆ ತಲೆನೋವು ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ಸಕಲ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಶರೀರಕ್ಕೆ ಮನಸ್ಸಿಗೂ ಹಿತ ಮಾಡುತ್ತದೆ ಮೂರು ಚಿಟಿಕೆ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ವಿಶೇಷವಾಗಿ ಉಪಯೋಗಿಸುತ್ತಾರೆ ಯಾವರಿಸೀಗೆ ವರ್ಗಕ್ಕೆ ಕಳುಹಿಸಲಾಗುವುದು

ಬುಡ್ಡಿ ಒಂದಕ್ಕೆ ಕ್ರಯ ರೂ ೦—೪—೦ ವಿ ಪಿ ೦—೪—೦
ಡಜನ್ ೧ಕ್ಕೆ ಕ್ರಯ ರೂ ೨—೮—೦ ವಿ ಪಿ ಚಾರ್ಜು ೬ ಆಣೆ.

ದಯವಿಟ್ಟು ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ

ಪಿಳ್ಳೈ—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,

[60—16] ಪೋಸ್ಟ್ ಬಾ ೨೧೧, ಮದ್ರಾಸು.

ಮೈಸೂರು ಸ್ಟಾರ್

೧೯೩೯ನೆಯ ಇಸವಿ ಫೆಬ್ರುವರಿ ತಾ|| ೯ನೆಯ ಶನಿವಾರ

ನವೀನಶಸ್ತ್ರ ನಿರ್ಮಾಣವೂ, ಯುದ್ಧ ಸನ್ನಾಹವೂ

ಪ್ರಾಚೀನಕಾಲದ ರಾಮಾಯಣ ಭಾರತ ಯುದ್ಧಗಳಲ್ಲಿ ಶತ್ರುಗಳನ್ನು ನಿಗ್ರಹಿಸಲು ಆಗ್ನೇಯಾಸ್ತ್ರ, ವಾಯವ್ಯಾಸ್ತ್ರ ಸರ್ಪಾಸ್ತ್ರ ಮೊದಲಾದ ವಿಚಿತ್ರ ಅಸ್ತ್ರಗಳನ್ನು ಪ್ರಯೋಗಿಸುತ್ತಿದ್ದರೆಂದು ಪುರಾಣಗಳಲ್ಲಿ ಹೇಳಲ್ಪಟ್ಟಿರುವುದಷ್ಟೆ. ಈಗ ಅಂತಹ ಅಸ್ತ್ರಗಳ ವೈಚಿತ್ರ್ಯವನ್ನು ಮರೆಸುವಂತಹ ನವೀನ ಅಸ್ತ್ರಗಳು ನಿರ್ಮಿಸಲ್ಪಡುತ್ತಿರುವುವು. ಪಾಶ್ಚಾತ್ಯ ಜನಾಂಗಗಳಲ್ಲಿ ದ್ವೇಷಾಸೂಯೆಗಳು ಹೆಚ್ಚಿ ಒಬ್ಬರನ್ನೊಬ್ಬರು ನಿಗ್ರಹಿಸಲು ಅಸಾಧಾರಣವಾದ ಸನ್ನಾಹಗಳನ್ನು ಮಾಡುತ್ತಿರುವರು. ಆಯಾ ಜನಾಂಗಗಳ ವಿಜ್ಞಾನಶಾಸ್ತ್ರವೇತ್ತರು ತಮ್ಮ ಮೇಧಾಶಕ್ತಿಯಿಂದ ಮಾನವರ ಜೀವನ ಸೌಖ್ಯಕ್ಕೆ ಸಾಧಕವಾದ ಸೌಲಭ್ಯ ಸೌಕರ್ಯಗಳನ್ನು ನಿರ್ಮಿಸುವುದರ ಬದಲು ಬಿಡುವಿಲ್ಲದ ಸಂಶೋಧನೆಗಳನ್ನು ಮಾಡಿ ಪ್ರಾಣನಾಶಕ್ಕೆ ಅತಿ ಸುಲಭೋಪಾಯಗಳನ್ನು ಕಂಡು ಹಿಡಿಯುತ್ತಿರುವರು. ಈ ವಿಧವಾದ ಸಂಶೋಧನೆಗಳ ಮೇಲ್ಮೆಗಾಗಿ ಪಾಶ್ಚಾತ್ಯರಲ್ಲಿ ಸ್ಪರ್ಧೆಯು ನಡೆಯುತ್ತಿರುವುದು.

ಅತ್ತ ಜರ್ಮನರು ಕಳೆದ ಯುದ್ಧದಲ್ಲಿ ಬಲಿಷ್ಠರಾದ ಜನಾಂಗಗಳನ್ನು ಮೇಲೆ ಹಾಕಿಕೊಂಡು ರಣಾಂಗದಲ್ಲಿ ಪರಾಜಿತರಾಗಿ ತಮ್ಮ ಶತ್ರುಗಳಿಗಾದ ನಷ್ಟವನ್ನೆಲ್ಲಾ ನಾಲ್ಮಡಿಯಾಗಿ ಕಟ್ಟಿಕೊಡಬೇಕಾಯಿತು. ಜರ್ಮನರು ತಮ್ಮ ದೇಶದಲ್ಲಿ ವಸತಿಯು ಸಾಲದೆ ಜನಾಂಗಾಭಿವೃದ್ಧಿಯ ದೆಸೆಯಿಂದ ಜೀವನವು ಕಷ್ಟವಾಗಲು ಹೊಸ ವಸತಿಗಳನ್ನು ಸಂಪಾದಿಸುವುದಕ್ಕಾಗಿ ಯುದ್ಧಕ್ಕೆ ಹೊರಟರು. ಆದರೆ ಪರಾಜಿತರಾದುದರಿಂದ ತಮಗೆ ಮೊದಲಿದ್ದ ವಸತಿಗಳನ್ನು ಸಹ ಶತ್ರುಗಳಿಗೆ ಒಪ್ಪಿಸಿಬಿಡಬೇಕಾಯಿತು. ಸಾಲದುದಕ್ಕೆ ಧನರೂಪವಾಗಿ ಶತ್ರುಗಳಿಗೆ ನಷ್ಟವನ್ನು ಕಟ್ಟಿ ಕೊಡಬೇಕಾಗಿಯೂ ಬಂದಿತು. ಬೇರೆ ಯಾವ ಜನಾಂಗದವರಾದರು ಇಂತಹ ಕ್ಲೇಶಕ್ಕೆ ಈಡಾಗಿದ್ದರೆ ಅವರು ಅದನ್ನು ಸಹಿಸಲಾರದೆ ಭೂಗತವಾಗುತ್ತಿದ್ದರು. ಸಾಹಸಿಗಳಾದ ಜರ್ಮನರಾದರೊ ಎದೆಗುಂದದೆ ಇಮ್ಮಡಿಯಾದ ಉತ್ಸಾಹದಿಂದ ಕಾರ್ಯೋನ್ಮುಖರಾಗಿ ದುಡಿಯಲಾರಂಭಿಸಿದರು. ಯುದ್ಧದ ಕಾಲದಲ್ಲಿ ಅಸ್ತ್ರೋಪಕರಣಗಳನ್ನು ನಿರ್ಮಿಸಲು ಉಪಯೋಗಿಸುತ್ತಿದ್ದ ಯಂತ್ರಾಗಾರಗಳನ್ನು ಅರ್ಥಸಾಧಕ ಸಾಮಗ್ರಿಗಳನ್ನು ನಿರ್ಮಿಸಲು ಮಾರ್ಪಡಿಸಿದರು. ಇರುವೆಗಳಂತೆ ವಿರಾಮರಹಿತರಾಗಿ ದುಡಿಯಲಾರಂಭಿಸಿದರು. ತೀರಲಾರದಷ್ಟು ನಷ್ಟದ್ರವ್ಯವನ್ನು ಕೊಡಬೇಕೆಂದು ಜರ್ಮನರ ಮೇಲೆ ಭಾರವನ್ನು ಹೊರಿಸೋಣದರಿಂದ ಅವರನ್ನು ಭೂಗತಮಾಡಬೇಕೆಂದು ಯತ್ನಿಸಿದ ಅವರ ಶತ್ರುಗಳು ಈಗ ಜರ್ಮನರಿಗೆ ಮಹದುಪಕಾರ ಮಾಡಿದಂತಾಯಿತು. ಮೇಧಾವಿಗಳೂ ಕಾರ್ಯಸಾಹಸಿಗಳೂ, ದೃಢಾಂಗಿಗಳೂ ಆದ ಜರ್ಮನರು ತಮಗೆ ಸಂಭವಿಸಿದ ಕಷ್ಟನಿವಾರಣೆಗಾಗಿ ಹಗಲೂ ಇರುಳೂ ದುಡಿದು ಶತ್ರುಗಳಿಗೆ ನಷ್ಟದ್ರವ್ಯವನ್ನು ಕಟ್ಟಿಕೊಟ್ಟರು. ಇದರಿಂದ ಅವರ ಆರ್ಥಿಕ ಸಂಪತ್ತು ಹೆಚ್ಚಿತು. ಕೈಗಾರಿಕೆಗಳು ಅಸಾಧಾರಣವಾಗಿ ವೃದ್ಧಿಗೊಂಡವು. ಇತರ ಯಾವ ಜನಾಂಗಗಳಿಗೂ ಸಾಧ್ಯವಾಗದಷ್ಟು ಅಗ್ಗವಾಗಿ ತಮ್ಮ ಸಾಮಾನುಗಳನ್ನು ತಯಾರುಮಾಡುವ ಕೈಗಾರಿಕೆಗಳು ಜರ್ಮನಿಯಲ್ಲಿ ಉದ್ಭವಿಸಿರುವುವು. ಇತರ ಜನಾಂಗಗಳು ತಂತಮ್ಮ ಕೈಗಾರಿಕೆಗಳ ಸಂರಕ್ಷಣೆಗಾಗಿ ವಿದೇಶೀಯ ಸರಕುಗಳ ಮೇಲೆ ಎಷ್ಟು ಹೆಚ್ಚು ತೆರಿಗೆಯನ್ನು ಹಾಕಿದಾಗ್ಯೂ ಜರ್ಮನರು ತಮ್ಮ ಸರಕುಗಳನ್ನು ಸ್ವದೇಶದಲ್ಲಿ ತಯಾರಾದ ಸಾಮಾನುಗಳಿಗಿಂತಲೂ ಅಗ್ಗವಾಗಿ ಮಾರುವಷ್ಟು ಸುಲಭರೀತಿಯಿಂದ ತಯಾರುಮಾಡಲು ಶಕ್ತರಾಗಿರುವರು. ಈ ಕಾರಣಗಳಿಂದ ಜರ್ಮನರ ಆರ್ಥಿಕಸ್ಥಿತಿಯು ಉತ್ತಮವಾದುದಲ್ಲದೆ ಅವರು ಕಷ್ಟವನ್ನು ಸಹಿಸಲು ಹೆಚ್ಚು ಪರಿಶ್ರಮ ಉಳ್ಳವರಾದರು. ಇಷ್ಟೇ ಅಲ್ಲದೆ ಜರ್ಮನಿಯ ವಿಜ್ಞಾನಶಾಸ್ತ್ರ ಪರಿಶೋಧಕರು ಯುದ್ಧಕಾಲದಲ್ಲಿ ಶತ್ರುಗಳನ್ನು ಬಹು ಅಂತರಗಳಿಂದ ನಿಗ್ರಹಿಸುವ ಸುಲಭೋಪಾಯಗಳನ್ನು ಹೊಸದಾಗಿ ಕಂಡುಹಿಡಿದಿರುವರು. ನೋಡಿದರೆ ಕಾಣದೆಯೂ ಮೂಸಿದರೆ ವಾಸನೆಯಿಲ್ಲದೆಯೂ ಇರುವ ಒಂದು ವಿಧವಾದ ಅನಿಲವನ್ನು ಕಂಡುಹಿಡಿದಿರುವರು. ಈ ಅನಿಲವನ್ನು ಹುಟ್ಟಿಸುವ ಒಂದು ಸಿಡಿಮದ್ದಿನ ಗುಂಡನ್ನು ಲಕ್ಷಾಂತರ ಮಂದಿಯಿರುವ ರಣಾಂಗಣದಲ್ಲಿ ಆಕಾಶಯಾನದಿಂದ ಎಸೆದರೆ ಕ್ಷಣಮಾತ್ರದಲ್ಲಿ ಈ ವಿಷದ ಹಬೆಯು ಆ ಪ್ರಾಂತದ ವಾಯುಮಂಡಲದಲ್ಲೆಲ್ಲಾ ಪ್ರಸರಿಸಿ ಶತ್ರುಗಳನ್ನು ಒಂದು ಕ್ಷಣದಲ್ಲಿ ನಿರ್ಮೂಲಮಾಡುವುದು. ಇಂತಹ ಅನೇಕ ಯುದ್ಧ ಸಲಕರಣಗಳು ಜರ್ಮನರಿಂದ ವಿಶೇಷವಾಗಿ ಕಂಡುಹಿಡಿಯಲ್ಪಟ್ಟಿರುವುವು. ಕಣ್ಣಿಗೆ ಗೋಚರವಾಗದಂತಹ ಲೋಹದಿಂದ ಆಕಾಶಯಾನಗಳನ್ನು ನಿರ್ಮಿಸಿ ಅದರಲ್ಲಿ ವಿದ್ಯುಲ್ಲತೆಯ ಅದ್ಭುತ ದೀಪವೊಂದನ್ನಿಟ್ಟು ಅದರಿಂದ ಹೊರಡುವ ಬೆಳಕಿನಿಂದ ಭೂಸೈನ್ಯವನ್ನೆಲ್ಲ ಕ್ಷಣಮಾತ್ರದಲ್ಲಿ ನಾಶಮಾಡುವ ವಿಧಾನವನ್ನು ಅಮೆರಿಕನರು ಕಂಡುಹಿಡಿದಿರುವರು.

ಅಮೆರಿಕೆಯಲ್ಲಿ ಸ್ವಭಾವಸಿದ್ಧವಾದ ಭೂಗರ್ಭಸಂಪತ್ತು, ಜನಗಳ ಉತ್ಸಾಹಶಕ್ತಿಯೂ ಆ ಜನಾಂಗವನ್ನು ಆರ್ಥಿಕ ಸಂಪದಭಿವೃದ್ಧಿಯಲ್ಲಿ ಗಗನಕ್ಕೇರಿಸುತ್ತಿರುವುದು. ಕಳೆದ ಯೂರೋಪಿನ ಯುದ್ಧದಲ್ಲಿ ನಾಗರಿಕ ಜನರು ಒಬ್ಬರಮೇಲೊಬ್ಬರು ಬಿದ್ದು ಕೊರಳು ಕೊಯ್ಯುತ್ತಿರಲು ಅಮೆರಿಕೆಯು ತಟಸ್ಥವಾಗಿ ನಿಂತು [illegible] ಜನಗಳಿಗೆ ಆವಶ್ಯಕವಾದ [illegible] [illegible] ದವಸಧಾನ್ಯಾದಿ [illegible] ಅವರಿಗೆ ಮಾರಿಕೊಟ್ಟು ಯುದ್ಧದ ಪರಿಣಾಮವಾಗಿ [illegible] ಜನಾಂಗಗಳ [illegible] ಅಮೆರಿಕೆಯು ಯೂರೋಪಿನವರಲ್ಲಿ ದ್ವೇಷಾಸೂಯೆಗಳನ್ನು ಹುಟ್ಟಿಸಿದೆ. [illegible] ಪೃಥ್ವಿಯಲ್ಲೆಲ್ಲ ಆರ್ಥಿಕ ಸ್ಥಿತಿಯಲ್ಲಿ [illegible] ಶ್ರೇಷ್ಠಸ್ಥಾನದಲ್ಲಿರುವುದು. ಜನಾಂಗದ [illegible] ಒಂದಕ್ಕೆ ಹತ್ತರಷ್ಟು ಹೆಚ್ಚುತ್ತಿರುವುದು. ಜನಸಂಖ್ಯೆಯು ಇಮ್ಮಡಿಯಾಗಿರುವುದು. ವ್ಯಾಪಾರ ಕೈಗಾರಿಕೆಗಳು ಬಹಳ ಅಭಿವೃದ್ಧಿ ಸ್ಥಿತಿಯಲ್ಲಿರುವುವು. ಅಮೆರಿಕನರಲ್ಲಿ ಪ್ರತಿ ನಾಲ್ಕು ಜನರಿಗೆ ಒಂದರಂತೆ ಮೋಟಾರು ಗಾಡಿಗಳಿರುವುವು. ಇನ್ನು ಕೊಂಚ ಕಾಲದಲ್ಲಿಯೆ ಪ್ರತಿಯೊಬ್ಬನಿಗೂ ಒಂದರಂತೆ ಮೋಟಾರು ಗಾಡಿಯನ್ನು ಇಟ್ಟುಕೊಳ್ಳುವ ಆರ್ಥಿಕ ಶಕ್ತಿಯು ಬರುವುದೆಂದರೆ ಅಮೆರಿಕನರ ಸಂಪತ್ತು ಹೇಗಿರುವುದೆಂಬುದು ತಿಳಿಯಬಹುದಾಗಿದೆ. ಇದನ್ನು ನೋಡಿ ಯೂರೋಪಿನ ಜನಾಂಗಗಳು ಕರುಬಿ ಅಮೆರಿಕನರ ಮೇಲೆ ನಾನಾವಿಧದಲ್ಲಿ ಸ್ಪರ್ಧೆಗೆ ನಿಂತಿರುವರು. ಅವರಮೇಲೆ ಯುದ್ಧಕ್ಕೆ ಹೋಗಲು ಸನ್ನದ್ಧರಾಗುತ್ತಿರುವರು.

ಇಟಲಿಯು ಮುಸೊಲಿನಿಯ ಪ್ರಭುತ್ವದಲ್ಲಿ ಮುಂಬರಿಯುತ್ತಿರುವುದು. ಯೌವನಸ್ಥನಾದ ಪ್ರತಿಯೊಬ್ಬ ಪ್ರಜೆಯೂ ರಣಾಂಗಕ್ಕೆ ಹೋಗಲು ಸಿದ್ಧನಾಗಿರುವುದಕ್ಕಾಗಿ ಶಿಕ್ಷಣವನ್ನು ಹೊಂದುತ್ತಿರುವನು. ನೌಕಾಬಲವೂ, ಆಕಾಶನಾವೆಯೂ ಭೂಸೈನ್ಯವೂ ಏಕಕಾಲದಲ್ಲಿ ಸಿದ್ಧಪಡಿಸಲ್ಪಡುತ್ತಿರುವುವು. ಬ್ರಿಟಿಷರು ಬಹುಕಾಲದಿಂದಲೂ ಸಾಗರದ ರಾಣಿಯೆಂಬ ಬಿರುದನ್ನು ತಮ್ಮ ದೇಶಕ್ಕೆ ಉಳಿಸಿಕೊಳ್ಳಬೇಕೆಂದು ಅಸಮಸಾಹಸಮಾಡುತ್ತಿರುವರು. ಇದಕ್ಕಾಗಿ ಬಲವಾದ ನಾವೆಯನ್ನು ಕಟ್ಟಿಯೂ ಕಟ್ಟುತ್ತಲೂ ಇರುವರು. ಅಮೆರಿಕನರು ಯೂರೋಪಿಯನರ ಈ ಸನ್ನಾಹವನ್ನು ನೋಡಿ ತಾವು ತಟಸ್ಥರಾಗಿದ್ದರೆ ತಮಗೆ ಅಪಾಯ ಸಂಭವಿಸುವುದೆಂದು ತಿಳಿದು ತಾವು ಸಹ ಆತ್ಮರಕ್ಷಣೆಗಾಗಿ ಸೈನ್ಯಬಲವನ್ನು ಹೆಚ್ಚಿಸುತ್ತಿರುವರು. ಜಪಾನರು ತಮ್ಮ ನೆರೆಯಲ್ಲಿರುವ ಅಮೆರಿಕನರು ಮಾಡುತ್ತಿರುವ ಸೈನ್ಯಸನ್ನಾಹಗಳನ್ನು ನೋಡಿ ತಮಗೇನು ಕೇಡು ಸಂಭವಿಸುವುದೊ ಎಂದು ತಾವೂ ಯುದ್ಧಸನ್ನಾಹವನ್ನು ಮಾಡಿಕೊಳ್ಳುತ್ತಿರುವರು. ಈ ಪ್ರಕಾರ ಸ್ಪರ್ಧೆಯ ನಾಗರಿಕ ಜನರು ಯುದ್ಧ ಸನ್ನಾಹವನ್ನು ಬಹು ತೀವ್ರತರವಾಗಿ ಮಾಡುತ್ತಿದ್ದಾರೆ. ಎಲ್ಲಿ ಯಾರು ಯಾವ ಕಾರಣಕ್ಕಾಗಿಯಾದರೂ ಕೊಂಚ ಅಲಕ್ಷ್ಯವನ್ನು ತೋರಿಸಿ ಮೈಮರೆತು ಅಚಾತುರ್ಯದಿಂದ ದುಡುಕುವವರಾದರ ಅದೇ ನೆಪವೆಂದು ಯುದ್ಧಸನ್ನದ್ಧರಾಗಿರುವ ಜನಾಂಗಗಳು ಪ್ರತಿಕಕ್ಷಿಗಳಾಗಿನಿಂತು ಜಗಳವನ್ನು ಪ್ರಾರಂಭಿಸಲು ಸಮಯ ನೋಡುತ್ತಿರುವರು. ಪರದಾಸ್ಯದಲ್ಲಿರುವ ಜನಾಂಗಗಳ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಹಾನುಭೂತಿಯಿಂದ ಸಹಾಯಕರಾಗಿರಲು ತಾವಿರುವ ರಷ್ಯನರು ನಾಗರಿಕ ಜನಾಂಗಗಳೊಡನೆ ವೈರವನ್ನು ಸಂಪಾದಿಸಿರುವರು. ಈ ಜನಾಂಗಗಳು ರಷ್ಯನರಮೇಲೆ ಎದ್ದು ಅವರನ್ನು ನಿಗ್ರಹಿಸಲು ಸಮಯನೋಡುತ್ತಿರುವರು. ಇದಕ್ಕೆ ಚೀನಾ ಜನಗಳ ಅಂತಃಕಲಹದಲ್ಲಿ ಸಮಯವೂ ದೊರಕಿತ್ತು. ಆದರೆ ಕಾರಣಾಂತರಗಳಿಂದ ರಷ್ಯನರು ತಪ್ಪಿಸಿಕೊಂಡರು.

ಈಗ ಅಫ್ಘಾನಿಸ್ಥಾನದ ಪರಿಸ್ಥಿತಿಯಲ್ಲಿ ರಷ್ಯನರಿಗೂ ಬ್ರಿಟಿಷರಿಗೂ ಜಗಳ ಹುಟ್ಟುವ ಸಂಭವವು ತೋರುತ್ತಿರುವುದು. ಅಮಾನುಲ್ಲರವರು ಪ್ರಭುತ್ವಮಾಡುತ್ತಿದ್ದಾಗ ಆ ರಾಜ್ಯದಲ್ಲಿ ರಷ್ಯನರ ಪ್ರಾಬಲ್ಯವು ಹೆಚ್ಚಿತ್ತು. ಸೈನ್ಯಸುಧಾರಣೆಯಲ್ಲಿಯೂ ರಾಜ್ಯಭಾರ ಕ್ರಮದಲ್ಲಿಯೂ ಅಮಾನುಲ್ಲರವರು ಬಹುಮಟ್ಟಿಗೆ ರಷ್ಯನರ ಪದ್ಧತಿಯನ್ನು ಅನುಸರಿಸಿದ್ದರು. ಅಫ್ಘಾನಿಸ್ಥಾನವು ಹಿಂದೂಸ್ಥಾನದ ಹೆಬ್ಬಾಗಿಲಲ್ಲಿ ಇರುವುದರಿಂದ ಬ್ರಿಟಿಷರು ಬಹುಕಾಲದಿಂದಲೂ ಅಫ್ಘನ್ ಪ್ರಭುಗಳನ್ನು ತಮ್ಮ ವಶಪಡಿಸಿಕೊಂಡು ಅವರಿಗೆ ಪೊಗದಿಯನ್ನು ಕೊಟ್ಟು ಸ್ನೇಹವನ್ನು ಸಂಪಾದಿಸಿಕೊಂಡು ಬಂದರು. ಅಮಾನುಲ್ಲರವರು ಮಾತ್ರ ಇದಕ್ಕೊಪ್ಪದೆ ಬ್ರಿಟಿಷರಮೇಲೆ ಯುದ್ಧಮಾಡಿ ಸ್ವಾತಂತ್ರ್ಯವನ್ನು ಸಂಪಾದಿಸಿಕೊಂಡರು. ಅಂದಿನಿಂದೀಚೆಗೆ ಅಫ್ಘಾನಿಸ್ಥಾನದಲ್ಲಿ ರಷ್ಯನರ ಕಾರ್ಯಕಲಾಪವು ತೀವ್ರತರವಾಗಿ ನಡೆಯುತ್ತಿದ್ದಿತು. ಈಗ ಆ ದೇಶದಲ್ಲಿ ನಡೆಯುತ್ತಿರುವ ರಾಜಕೀಯ ಕಲಹವೂ ರಷ್ಯನರಿಂದಲೇ ಅಂಕುರಿಸಿದುದೆಂದು ಕೆಲ ಬ್ರಿಟಿಷ್ ಪತ್ರಿಕೆಗಳು ಹೇಳುತ್ತಿರುವುವು. ಅದು ಹೇಗಾದರೂ ಇರಲಿ. ಬ್ರಿಟಿಷರಂತೂ ಆ ದೇಶದಲ್ಲಿ ಯಾವ ಕಾಲಕ್ಕೆ ಏನು ಅಚಾತುರ್ಯವು ನಡೆಯುವುದೊ ಎಂದು ಆತಂಕಪಟ್ಟು ತಮ್ಮ ರಾಯಭಾರಿಯನ್ನು ಪ್ರಾಣಾಪಾಯಕ್ಕೊಳಗಾಗುವ ಸಂಭವವಿದ್ದರೂ ಕಾಬೂಲಿನಲ್ಲಿಯೇ ಇಟ್ಟಿರುವರು. ಇದರಿಂದ ಅಲ್ಲಿನ ರಾಜಕೀಯ ಪರಿಸ್ಥಿತಿಯು ಹೇಗೆ ಮಾರ್ಪಡುವುದೊ ನೋಡಬೇಕಾಗಿದೆ. ಅಂತು ಪ್ರಪಂಚದಲ್ಲಿ ಶಾಂತಿಭಂಗವಾಗಿ ಘೋರವಾದ ಯುದ್ಧವು ಶೀಘ್ರದಲ್ಲಿಯೇ ಸಂಭವಿಸುವುದರಲ್ಲಿ ಯಾವ ಸಂಶಯವೂ ಇಲ್ಲವೆಂದು ರಾಜಕೀಯ ವಿಚಾರಧುರೀಣರು ಹೇಳುತ್ತಿರುವರು. ಪಾಶ್ಚಾತ್ಯ ಜನಾಂಗಗಳ ಯುದ್ಧ ಸನ್ನದ್ಧತೆಯನ್ನು ನೋಡಿದರೆ ಇದು ನಂಬಲರ್ಹವಾಗಿರುವುದು.

ವಿಚಾರಣ ಸಮಿತಿಯ ವರದಿ

ಮ|| ಎಚ್. ಬಿ. ಬಸವಪ್ಪನವರ ಭಿನ್ನಮತ.

ಬೆಂಗಳೂರು ಗಲಭೆಯ ವಿಚಾರಣಸಮಿತಿಯ ಸದಸ್ಯರಾದ ಮ|| ಎಚ್. ಬಿ. ಬಸವಪ್ಪನವರು ತಮ್ಮ ಭಿನ್ನಾಭಿಪ್ರಾಯವನ್ನು [illegible] ಅಧ್ಯಕ್ಷರಾದ ಸರ್ ಎಂ. ವಿಶ್ವೇಶ್ವರಯ್ಯನವರಿಗೆ ಪ್ರತ್ಯೇಕವಾಗಿ ಬರೆದು ತಿಳಿಸಿದ್ದಾರೆ.

[illegible] ದಿವಸದ ಸಭೆಯಲ್ಲಿ ಹಾಜರಾಗಿ ಆ ಕಾರಣವನ್ನು [illegible] ಕಾರ್ಯದ ಮೂಲಕ [illegible] ಬಂದುದಕ್ಕಾಗಿ [illegible] ಭಿನ್ನ ಮತದ ಟಿಪ್ಪಣಿಯ ಬರಹದಲ್ಲಿ ನನ್ನ ಅಭಿಪ್ರಾಯವನ್ನು ತಿಳಿಸಬೇಕೆಂಬುದೇ ನನ್ನ ಆಶಯವಾಗಿದ್ದಿತು. ಆದರೆ ಅದಕ್ಕೆ ತಾವು ನನಗೆ ಅವಕಾಶಕೊಡದೆ ಹಾಗೆ ಮಾಡುವುದು ಪದ್ಧತಿಯಿಲ್ಲವೆಂದು ಹೇಳಿಬಿಟ್ಟಿರಿ. ನಾನು ನನ್ನ ಭಿನ್ನಾಭಿಪ್ರಾಯವನ್ನು ಸೂಚಿಸುವ ಸಂಭವವು ತಮ್ಮ ಅಸಾಧಾರಣವಾದ ವರ್ತನೆಯಿಂದ ಉಂಟಾಯಿತು. ವರದಿಯನ್ನು ಬರೆಯುವುದರಲ್ಲಿಯೂ ಚರ್ಚಿಸುವುದರಲ್ಲಿಯೂ ಅನುಮೋದಿಸುವುದರಲ್ಲಿಯೂ ತಾವು ಲೋಕವಾಡಿಕೆಯನ್ನು ಬಿಟ್ಟು ನಡೆದುಕೊಂಡಿರಿ.

ವರದಿಯನ್ನು ನಾನು ಸಾವಧಾನದಿಂದ ಪರಿಶೀಲಿಸುವುದಕ್ಕಾಗಿ ಅದರ ನಕಲನ್ನು ನನಗೆ ಮುಂಚಿತವಾಗಿಯೇ ಕೊಡದೆ ಹೋದುದರಿಂದ, ಅದರಲ್ಲಿ ಗರ್ಭಿತವಾಗಿರುವ ಅನೇಕ ವಿಚಾರಗಳನ್ನು ನಾನು ಪರ್ಯಾಲೋಚಿಸಲು ಅವಕಾಶ ದೊರೆಯದೆ ವರದಿಯನ್ನು ಸಭೆಯಲ್ಲಿ ಚರ್ಚಿಸಿದಾಗ ನನಗೆ ನನ್ನ ಅಭಿಪ್ರಾಯವನ್ನು ತಿಳಿಸಲು ಅಡಚಣೆಯಾಯಿತು. ಚರ್ಚೆಯು ನಡೆಯುತ್ತಿದ್ದ ದಿನಗಳಲ್ಲಿಯಾದರೂ ವರದಿಯನ್ನು ಮನೆಗೆ ತಗೆದುಕೊಂಡು ಹೋಗಿ ಅದನ್ನು ವಿಶದವಾಗಿ ಪರೀಕ್ಷಿಸಲು ಅವಕಾಶವನ್ನು ಸಹ ಕೊಡಲಿಲ್ಲ. ವಿಷಯಗಳನ್ನು ಸಂಗ್ರಹಿಸಲು ಮೂರು ತಿಂಗಳುಕಾಲ ಕಳೆದಾಗ್ಯೂ ಅವನ್ನು ಸಾವಧಾನದಿಂದ ಸದಸ್ಯರೆಲ್ಲರೂ ಪರಿಶೀಲಿಸಲು ಸಾಕಾದಷ್ಟು ಅವಕಾಶವನ್ನು ಕೊಟ್ಟಿದ್ದರೆ ಯಾವ ವಿಧವಾದ ನಷ್ಟವೂ ಸಂಭವಿಸುತ್ತಿರಲಿಲ್ಲ. ಪ್ರತಿಯೊಬ್ಬ ಸದಸ್ಯರೂ ಅವರವರ ಅಭಿಪ್ರಾಯವನ್ನು ಪ್ರತ್ಯೇಕವಾಗಿ ಬರೆಯುವಂತೆ ಮಾಡಿ ಅನಂತರ ಎಲ್ಲರೂ ಸೇರಿ ಅಭಿಪ್ರಾಯಗಳನ್ನು ಚರ್ಚಿಸಿದ್ದರೆ ಸರ್ವೋತ್ತಮವಾಗುತ್ತಿದ್ದಿತೆಂದು ನನಗೆ ತೋರುತ್ತದೆ. ಎಲ್ಲರಿಗೂ ಸಮ್ಮತವಾದ ವಿಚಾರಗಳನ್ನು ಒಟ್ಟಿಗೆ ಸಂಗ್ರಹಿಸಿ ಭಿನ್ನಮತದ ವಿಚಾರಗಳನ್ನು ಚರ್ಚೆಗಿಟ್ಟುಕೊಳ್ಳಬಹುದಾಗಿದ್ದಿತು. ಹಾಗೆ ಮಾಡದೆ ತಮಗೆ ತೋರಿದ ಕೆಲ ಪ್ರಶ್ನೆಗಳನ್ನು ಸದಸ್ಯರಿಗೆ ಕೊಟ್ಟು ಅವುಗಳಿಗೆ ಉತ್ತರಗಳನ್ನು ಕೇಳಿದಿರಿ. ಇದರಿಂದ ಆ ಪ್ರಶ್ನೆಗಳಿಗೆ ಸಂಬಂಧಪಟ್ಟ ವಿಷಯಗಳು ಮಾತ್ರ ವರದಿಯಲ್ಲಿ ನಮೂದಿಸಲ್ಪಡುವುವೆಂದು ನಾನು ತಿಳಿಯಲು ಕಾರಣವಾಯಿತು. ಆದರೆ ವರದಿಯು ಪ್ರಕಟಿಸಲ್ಪಟ್ಟಾಗ ಸದಸ್ಯರಿಗೆ ತಾವು ಹಾಕಿದ ಪ್ರಶ್ನೆಗಳ ಆಧಾರದಮೇಲೆ ಆ ವರದಿಯು ಬರೆಯಲ್ಪಟ್ಟಿಲ್ಲವೆಂಬುದನ್ನು ನೋಡಿ ನನಗೆ ಪರಮಾಶ್ಚರ್ಯವಾಯಿತು.

ತಾವು ವರದಿಯನ್ನು ಬರೆಯುವುದರಲ್ಲಿ ಒಬ್ಬ ಸದಸ್ಯರನ್ನು ಮಾತ್ರ ತಮ್ಮ ಸಹಾಯಕ್ಕೆ ಕರೆದುಕೊಂಡು ನೀವಿಬ್ಬರೇ 20 ದಿವಸಗಳಲ್ಲಿ ವರದಿಯನ್ನು ರಚಿಸಿದಿರಿ. ಆದುದರಿಂದ ವರದಿಯು ಒಟ್ಟು ಸಮಿತಿಯವರಿಂದ ಬರೆಯಲ್ಪಟ್ಟಂತಾಗಲಿಲ್ಲ. ಇತರ ಸದಸ್ಯರಿಗೆ ನೀವಿಬ್ಬರಂತೆಯೇ ಸಾಕ್ಷ್ಯವನ್ನು ಪರಿಶೀಲಿಸಲು ಸಾಕಾದಷ್ಟು ಅವಧಿಯನ್ನು ಕೊಡದಿರಲು ಕಾರಣವೇನೆಂಬುದು ವ್ಯಕ್ತವಾಗಿರುವುದಿಲ್ಲ. ವರದಿಯು ಕೇವಲ ಇಬ್ಬರು ಸದಸ್ಯರ ಅಭಿಪ್ರಾಯವನ್ನು ಒಳಗೊಂಡಿರುವುದೇ ವಿನಾ ಎಲ್ಲ ಸದಸ್ಯರ ಅಭಿಮತವನ್ನು ಸೂಚಿಸಲಾರದು. ಸದಸ್ಯರು ಪುನಃ ಪುನಃ ಕೇಳಿಕೊಂಡಾಗ್ಯೂ ಏಕೆ ಅವರಿಗೆ ಅವಕಾಶಕೊಡಲಿಲ್ಲವೊ ತಿಳಿಯದುದಾಗಿದೆ. "ವರದಿಯು ರಚಿಸಲ್ಪಟ್ಟಮೇಲೆ ಮೂರು ದಿನಗಳ ವರೆಗೆ ನಡೆದ ಚರ್ಚೆಯಲ್ಲಿ ವಿಷಯಗಳನ್ನು ಓದಿ ಅದಕ್ಕೆ ಹೌದೂ ಅಲ್ಲವೊ'' ಎಂಬ ಉತ್ತರವನ್ನು ಮಾತ್ರ ಹೇಳಬೇಕೆಂದು ತಾವು ಕೇಳಿದ್ದು ನಿಜ. [illegible] ಮುಂಚಿತವಾಗಿ ವರದಿಯನ್ನು ಸಾವಧಾನದಿಂದ ಪರಿಶೀಲಿಸದೆ ಇದ್ದುದರಿಂದ ಅಪರೀಕ್ಷಿತವಾಗಿ ಕೇಳಿದ ಪ್ರಶ್ನೆಗಳಿಗೆ ತತ್ಕ್ಷಣವೇ ಉತ್ತರಹೇಳಲು ನನಗೆ ಸಾಧ್ಯವಾಗಲಿಲ್ಲ. ಏಕೆಂದರೆ ಈ ವಿಧವಾದ ನಡೆವಳಿಕೆಯ ಪರಿಕ್ರಮವು ನನಗೆಂದೂ ಇರಲಿಲ್ಲ. ಆದುದರಿಂದ ಆ ಆತುರದಲ್ಲಿ ನನಗೆ ತೋರಿದುದನ್ನು ನಾನು ಹೇಳಬೇಕಾಯಿತು. ಮುಖ್ಯಾಂಶಗಳಿಗೆ ಮಾತ್ರ ಗಮನವನ್ನು ಕೊಟ್ಟು ಉಳಿದ ವಿಚಾರಗಳನ್ನು ತಮ್ಮ ವಿವೇಚನೆಗೆ ಬಿಟ್ಟುಕೊಟ್ಟು ಹಲವು ವಿಷಯಗಳಲ್ಲಿ ನನ್ನ ಅಭಿಮತವನ್ನು ಸೂಚಿಸಿ ವರದಿಯಲ್ಲಿ ಕೆಲ ತಿದ್ದುಪಡಿಗಳನ್ನು ಮಾಡಿರುವಿರಾದರೂ ನಾನು ತಿಳಿಸಬೇಕೆಂದಿದ್ದ ವಿಚಾರಗಳಿಗೆಲ್ಲಕ್ಕೂ ಅವಕಾಶ ದೊರೆಯದಿದ್ದುದು ವಿಷಾದಕರವಾಗಿದೆ. ಪ್ರಥಮದಲ್ಲಿಯೇ 'ಸರ್ಕಾರದ ಯಂತ್ರ ಮುರಿಯಿತು' ಎಂಬ ವಿಚಾರವನ್ನು, 'ಪ್ರತಿ ಗಂಟೆಯಲ್ಲಿಯೂ ಅವರ (ಪೊಲೀಸ್ ಮತ್ತು ಮೆಜಿಸ್ಟ್ರೇಟ್ ಅಧಿಕಾರಿಗಳು) ಸರ್ಕಾರದವರೊಡನೆ ಪರ್ಯಾಲೋಚಿಸುತ್ತಿದ್ದರು'' ಎಂಬುದನ್ನು ಸ್ಪಷ್ಟವಾಗಿ ವಿವರಿಸಿ ಆ ಶಬ್ದಗಳ ದ್ವಂದ್ವಾರ್ಥಗಳನ್ನು ವಿಶದಪಡಿಸಿರೆಂದು ಕೇಳಿದೆನು. ನಿನ್ನೆ ದಿನದ ಸಭೆಯಲ್ಲಿ ಸದಸ್ಯರು ನನ್ನ ಸಂಶಯಗಳ ವಿಚಾರವನ್ನು ಅಲ್ಲವೆನ್ನಲಿಲ್ಲ. ವರದಿಯ ನಕಲನ್ನು ಮುಂಚಿತವಾಗಿ ನನಗೆ ಕೊಡದಿದ್ದುದರಿಂದಲೂ, ಪೂರ್ವಾಸಂದರ್ಭವು ತಿಳಿಯದೆ ಈ ಪದಗಳ ಅರ್ಥವು ವ್ಯಕ್ತವಾಗದಿದ್ದುದರಿಂದಲೂ ವರದಿಯಲ್ಲಿ ಆವಶ್ಯಕವಾದ ಬದಲಾವಣೆಗಳನ್ನು ಸೂಚಿಸಲು ನನಗೆ ಸಾಧ್ಯವಾಗಲಿಲ್ಲ. ವರದಿಯ ನಕಲು ಅಚ್ಚಾಗಿ ನನ್ನ ಹಸ್ತಗತವಾದಮೇಲೆ ನನಗೆ ಸಂಶಯವೆಂದು ತೋರಿದ ಅಂಶಗಳನ್ನು ಗುರುತುಮಾಡಿಕೊಂಡೆನು. ಆದರೆ ಕಾಲಮೀರಿ ಹೋದುದರಿಂದ ಸುಮ್ಮನಾದೆನು.

ಮ|| ಕಲಾಮಿಯವರ ಭಿನ್ನಮತ ಟಿಪ್ಪಣಿಯನ್ನು ಸಮಿತಿಯವರು ಚರ್ಚಿಸದೆ ಅಧ್ಯಕ್ಷರಾದ ತಾವು ತಮ್ಮ ಅಧಿ

[illegible] ಕಚೇರಿಗೆ [illegible] ಸದಸ್ಯರ [illegible] ನೆರವೇರಿಸ್ಸುಗಳನ್ನು [illegible] ಸದಸ್ಯರು [illegible] ಬರಬೇಕೆಂದು ಸಂಕಲ್ಪಮಾಡಿದ್ದಾಗಿ [illegible] ನಿಮ್ಮ ಕಡೆಯವರನ್ನು ತಿಳಿಸಿದ ದಿನದ [illegible] ಯಾವ ಕಾರಣಕ್ಕಾಗಿ ಕರೆಯಲಿಲ್ಲವೆಂಬುದು ನನಗೆ ತಿಳಿಯದು. ಈ [illegible] ಬಗ್ಗೆ ನನ್ನ ಅಭಿಪ್ರಾಯವನ್ನು ಕೋರಿದರೆ ನಾನೇನೋ ಅವರನ್ನು ಬಿಟ್ಟು ಚರ್ಚೆಮಾಡಲು ಒಪ್ಪುತ್ತಿರಲಿಲ್ಲ. ಅಲ್ಲದೆ ಭಿನ್ನಾಭಿಪ್ರಾಯಪಟ್ಟ ಸದಸ್ಯರನ್ನು ಬಿಟ್ಟು ಅವರ ಟಿಪ್ಪಣಿಯನ್ನು ಅವರ ಪರೋಕ್ಷದಲ್ಲಿ [illegible] ಮಾಡಿದುದು ಅನುಚಿತವಲ್ಲದೆ ಕೇವಲ ಆಕ್ಷೇಪಣೀಯವೆಂದು ನನಗೆ ತೋರುತ್ತದೆ. ಹಾಗೆ ಮಾಡಿದುದರಿಂದ ತಾವು ಮೆ|| [illegible] ವಂಚನೆ ಮಾಡಿರುವಿರೆಂಬುದು ನನ್ನ ಅಭಿಮತವು.

ನೆನ್ನೆ ದಿನದ ಸಭೆಯು ನಡೆಯುವುದೆಂದು ನಾನು ನಿರೀಕ್ಷಿಸಿರಲಿಲ್ಲ. ಸಭೆಯು ಸೇರಿದ ಮೇಲೆ ಪ್ರಕಟಿಸಲ್ಪಟ್ಟ ವರದಿಯಲ್ಲಿ ನನಗೆ ಕಂಡುಬಂದ ದೋಷಗಳನ್ನೂ, ನ್ಯೂನಾತಿರಿಕ್ತಗಳನ್ನೂ ನಾನು ಧಾರಾಳವಾಗಿ ಹೇಳಲು ನನಗೆ ಶಕ್ತಿದೆ [illegible] ದೆನು. ಆದರೆ ನನ್ನ [illegible] ಯನ್ನು [illegible] ತಾವು [illegible] ದಕ್ಕಾಗಿ ನಾನು [illegible] ನೆ [illegible] ವಿಚಾರಗಳಲ್ಲಿ ನನ್ನ [illegible] ಕೊಡಿರೆಂದು ಕೇಳಿದೆನು. ಅದಕ್ಕೆ ತಾವು ಒಪ್ಪಲಿಲ್ಲ. ಈ ರೀತಿಯ ತಮ್ಮ ನಡತೆಯಿಂದ ಸಮಿತಿಯ ಸದಸ್ಯನಾದ ನನ್ನ ಪಕ್ಷವನ್ನು ತಾವು ಗಣಿಸಲಿಲ್ಲವೆಂದು ನನಗೆ ಬೋಧೆಯಾಗುತ್ತದೆ.

ನೆನ್ನೆ ದಿನದ ಸಭೆಯಲ್ಲಿ ನಾನು ಕೊಟ್ಟ [illegible] ಯನ್ನು ಸಮೂದಿಸಿ ತಮ್ಮ ಅಭಿಮತವನ್ನು ಬರೆಯಬೇಕೆಂದು ಕೇಳುದುದು ತಮಗೆ ಜ್ಞಾಪಕವಿರಬಹುದು. ಆದರೆ [illegible] ತಾವು ಒಪ್ಪಲಿಲ್ಲ. ತಾವು ಈ ರೀತಿಯಲ್ಲಿ ನಡೆಸಿದ ಕಾರ್ಯಕಲಾಪಗಳು ವಿಲಕ್ಷಣವಾದುವುವೆಂದು ನಾನು [illegible] ತಾವು ನನ್ನನ್ನು ಈ ರೀತಿ ಕಾಣುತ್ತೀರೆಂದು ನನಗೆ ಮೊದಲೇ ಗೊತ್ತಿದ್ದರೆ ನನ್ನ ಆತ್ಮಗೌರವರಕ್ಷಣೆಗಾಗಿ ಸದಸ್ಯತ್ವಕ್ಕೆ ಆಗಲೆ ರಾಜಿನಾಮೆ ಕೊಡುತ್ತಿದೆನು. ನನಗೆ ತೋರಿದಮಟ್ಟಿಗೂ ವರದಿಯ ವಿಚಾರವು ನೆನ್ನೆ ದಿನದ ಸಭೆಯಲ್ಲಿ ಪುನಃ ಪ್ರಸ್ತಾಪಿಸಲ್ಪಟ್ಟದರಿಂದ ಈ ಸಂಬಂಧದಲ್ಲಿ ನನ್ನ ಅಭಿಪ್ರಾಯವನ್ನು ತಿಳಿಸಲು ನನಗೆ ಸಂಪೂರ್ಣವಾದ ಹಕ್ಕಿರುವುದೆಂದು ಹೇಳಬಲ್ಲೆನು. ಹಾಗೆ ನನ್ನ ಹೇಳಿಕೆಯನ್ನು ಕೇಳಲು ಅವಕಾಶ ಕೊಡಲಾಗದಿದ್ದಲ್ಲಿ ವರದಿಗೆ ನಾನು ಕೊಟ್ಟಿದ್ದ ಸಮ್ಮತಿಯನ್ನು ಹಿಂದಕ್ಕೆ ತೆಗೆದುಕೊಂಡಿರುವೆನಲ್ಲದೆ ವರದಿಯಲ್ಲಿ ಸಮೂದಿಸಿರುವ ಅಭಿಪ್ರಾಯಗಳೆಲ್ಲವೂ ನನಗೆ ಸಮ್ಮತವಲ್ಲವೆಂಬುದನ್ನು ದಯೆಯಿಟ್ಟು ತಿಳಿಯಿರಿ.

ತಮಗೆ ರುಚಿಸದಿರುವ ಈ ಪತ್ರವನ್ನು ಬರೆದುದಕ್ಕಾಗಿ ಕ್ಷಮಿಸುವಿರೆಂದು ನಂಬುತ್ತೇನೆ.

(ರುಜು) ಎಚ್. ಪಿ. ಒಡೆಯಪ್ಪ
ಬೆಂಗಳೂರು, 23-1-1929
ಬೆಂಗಳೂರು ಗಲಭೆ
ವಿಚಾರಣಸಮಿತಿಯ ಸದಸ್ಯ

ಚಕ್ರವರ್ತಿಯವರ ಆರೋಗ್ಯ.

ಚಕ್ರವರ್ತಿಯವರ ದೇಹಾಸಕ್ತಿ [illegible] ವೃದ್ಧಿ [illegible] ತ್ತಿದೆ. ಕಳೆದ ಶನಿವಾರ ಮತ್ತು ಭಾನುವಾರ ಕೊಂಚಕಾಲದ ವರೆಗೆ ಕುರ್ಚಿಯ ಮೇಲೆ ಕುಳಿತುಕೊಳ್ಳಲು ಮತ್ತು ಎಕ್ಸ್ ರೆ ಚಿಕಿತ್ಸೆ ಮಾಡಿಸಿಕೊಳ್ಳಲು ಸಾಧ್ಯವಾಗಿದ್ದಿತು ಎಂದು ಸೋಮವಾರದ ಪ್ರಕಟನೆಯಿಂದ ತಿಳಿಯಬರುತ್ತದೆ.

ಮಲಮೂತ್ರ ಬಾಧೆಯ ನಿಗ್ರಹ

ಕೆಲವರು ಮಲಮೂತ್ರಬಾಧೆಯನ್ನು ನಿಗ್ರಹಿಸಿ ತಮ್ಮ ಕೆಲಸಕಾರ್ಯಗಳಲ್ಲಿ ಮಗ್ನರಾಗಿರುವರು. ಈ ಅಭ್ಯಾಸವು ಬಹಳ ಅಪಾಯಕರವಾದದೆಂದು ವೈದ್ಯಶಾಸ್ತ್ರಜ್ಞರು [illegible] ಸ್ತ್ರಾವೆ ಒಂದುಸಭೆಯ ಅಧ್ಯಕ್ಷರು ಮಹಿಳೆ [illegible] ವಾದರು ತೊಂದರೆ ಬಾಗಬಾರದೆಂದು ಸಂಕೋಚದಿಂದ ಸುಮ್ಮನಿದ್ದುಬಿಟ್ಟರು. ಅದರ ಭಾಷಣದ ಹೊತ್ತಿಗೆ ಸರಿಯಾಗಿ ಮೂತ್ರವು ಕಟ್ಟಿ ರಕ್ತವು ವಿಷಮಯವಾದುದರಿಂದ ಮರ್ಛಿತರಾದರು. ಪ್ರಜ್ಞೆಬಿದ್ದ ಕೂಡಲೆ ಮೂತ್ರವಿಸರ್ಜನೆಯಾಯಿತು. ಅನಂತರ ಪ್ರಜ್ಞೆಯು ಬಂದಿತು. ಇನ್ನೊಂದುಕಡೆ ಶಾಲೆಯಲ್ಲಿದ್ದ ಹುಡುಗಿಯೊಬ್ಬಳು ತನ್ನ [illegible] ದಿದ್ದುದರಿಂದ ಮಲವಿಸರ್ಜನೆಗಾಗಿ ಹೊರಗೆ ಹೋಗಲಿಲ್ಲವೆಂದು ವೈದ್ಯನು ಹೇಳಿದ್ದನು. ಇದ್ದಿದೆಯಲ್ಲಿ ವಿಸರ್ಜನೆ ಮಾಡಲು ಮನಸ್ಸೊಪ್ಪದೆ ಆಕೆಯು ಮಲವನ್ನು ತಡೆದಳು. ರೋಗವು ಹೆಚ್ಚಿತು. ಜ್ವರವು ಪ್ರಬಲಿಸಿತು. ಇದನ್ನು ಕಂಡು ಬಂಧುಗಳು ಆಕೆಯನ್ನು ಹೊರಗೆ ಕರೆದೊಯ್ದರು. ಮಲವಿಸರ್ಜನೆಯಾದಕೂಡಲೆ ಆಕೆಯು ಉಲ್ಲಾಸದಿಂದ ಹಿಂತಿರುಗಿದಳು. ರೋಗವು ಗುಣಮುಖವಾಯಿತು. ಇದರಿಂದ ಜನಗಳು ತಿಳಿಯಬೇಕಾದ ನೀತಿಯು ವ್ಯಕ್ತವಾಗಿರುವುದು. ಉದಾಸೀನದಿಂದಲೂ ಆಲಸ್ಯದಿಂದಲೂ ಜನಗಳು ಮಲಮೂತ್ರವನ್ನು ತಡೆಯುತ್ತಾರೆ. ಇದು ಕೇವಲ ಅನಾರೋಗ್ಯಕರವಾದ ದುರಭ್ಯಾಸ.

[illegible] ಜೀವನ.

ಇರುವೆಗಳ ಬುದ್ಧಿಶಕ್ತಿಗಳು [illegible] ಗಳು ಎಂದು [illegible] ಸಂಗತಿಗಳು [illegible] ಯವಾಗಿವೆ. [illegible] ಶಾಸ್ತ್ರಜ್ಞರು [illegible] ಇರುವೆಗಳ ಜೀವನವನ್ನು ಚೆನ್ನಾಗಿ ಅಭ್ಯಾಸಮಾಡಿ "ದಿ ಎಂಟಿಪೀಪಲ್" ಎಂಬ ಪುಸ್ತಕದಲ್ಲಿ ಅವುಗಳ [illegible] ಸೋಜಿಗದ ಸಂಗತಿಗಳನ್ನು ಬರೆದಿದ್ದಾನೆ. ಅವನು [illegible] ನಂದನ, ಕೀಟಕಗಳಿಂದ ಇರುವೆಗಳ ಉತ್ಪತ್ತಿಯಾಗಿದೆ. ಇಂದಿನವರೆಗೆ [illegible] ಸಾವಿರ ಜಾತಿಯ ಇರುವೆಗಳು ಮನುಷ್ಯನಿಗೆ ಗೊತ್ತಾಗಿವೆ. ಅವುಗಳಲ್ಲಿ ಇಂಜಿನಿಯರ, ಒಕ್ಕಲಿಗ, [illegible] ಮಾಡುವ, ಮನೆ ಕಾಯುವ ಕೆಲಸಮಾಡುವ, ಕೂಲಿ ಕೆಲಸ ಮಾಡುವ, ಶಿಪಾಯಿಯಾಗಿ ಆಡ್ಡಾಡುವ, [illegible] ಮೊದಲಾದ ಹಲವು ತರದ ಇರುವೆಗಳಿವೆ.

ಆಫ್ರಿಕೆಯಲ್ಲಿ ಕೆಲವು ಜಾತಿಯ ಇರುವೆಗಳಿವೆ. ಇವುಗಳ [illegible] ಚಮತ್ಕಾರವುಳ್ಳದಾಗಿದೆ. ಇವು [illegible] ಗಟ್ಟಿಯಾದ ಮನೆಗಳನ್ನು ಕಟ್ಟಿಕೊಳ್ಳುವುವು. ಮಳೆಗಾಳಿಯಿಂದ ಈ ಮನೆಗಳು ಬಿದ್ದುಹೋಗುವುದಿಲ್ಲ. ಮನೆಗಳ ಸುತ್ತಲೂ ತೋಟಗಳನ್ನು ಮಾಡಿಕೊಳ್ಳುವುವು. ಅವುಗಳಲ್ಲಿ [illegible] ಇರುವವು. ಕೆಲವು ಕಾಲಕ್ಕೆ ಬೇಕಾಗುವ ಕೋಟೆಗಳನ್ನು ಮಾಡಿಕೊಂಡಿರುವುವು. [illegible] ಬೀಜಗಳನ್ನು ಸಂಗ್ರಹಿಸಿಟ್ಟುಕೊಳ್ಳುವುವು. ಬಿನ್ನ ಬಿನ್ನ ಜಾತಿಯ ಇರುವೆಗಳು ಬಿನ್ನ ಬಿನ್ನ ವೃಕ್ಷಗಳನ್ನು ಸುತ್ತಲು ಮರ್ಗ್ಗ [illegible] ನೆಡುವುವು.

ಶಕ್ತಿಯುಳ್ಳ ಇರುವೆಗಳು ದುರ್ಬಲವಾದ ಇರುವೆಗಳನ್ನು ತಮ್ಮ ಗುಲಾಮರನ್ನಾಗಿ ಮಾಡಿಕೊಳ್ಳುವುವು. ಅವುಗಳಿಂದ ತಮ್ಮ ಮನೆ ಕಟ್ಟುವ ಕೆಲಸವನ್ನು ಮಾಡಿಸಿಕೊಳ್ಳುವುವು. ಕೆಲವು ಸಾರಿ ಒಂದು ಇರುವೆಯು 15 ರ ವರೆಗೆ ಗುಲಾಮರಿಂದ ಮಾಡಿಸಿಕೊಳ್ಳುತ್ತಿರುವುದು. ಇರುವೆಗಳಲ್ಲಿ ಯುದ್ಧದ ಪ್ರಸಂಗ ಒದಗಿದಾಗ ಗುಲಾಮ (ಸೇವಕ) ಇರುವೆಗಳು ಒಳ್ಳೇ ಹುರುಪಿನಿಂದ ತನ್ನ ಒಡೆಯನ ಸಲುವಾಗಿ ಯುದ್ಧಮಾಡುವುವು. ಯುದ್ಧವು ಆರಂಭವಾಗುವ ಮೊದಲು ಇವು ತಮ್ಮ ವೈರಿಗಳಿಗೆ ಒಂದು ಪ್ರಕಾರದ ಗಿಲಿಟು ಮಾಡಿಕೊಳ್ಳುವುವು. ಇದರಿಂದ ಇವು ವೈರಿಗಳಿಗೆ ಹೆದರಿಕೆ ಒರುವಂತವುಗಳಾಗಿ ತೋರುವುವು.

ಇರುವೆಗಳಲ್ಲಿ ಕೆಲವು ಮಧುವನ್ನು (ಜೇನತುಪ್ಪ) ಸಂಗ್ರಹ ಮಾಡುವಂಥವು ಇರುವುವು. ಇದು ಸ್ವಲ್ಪ ಸೋಜಿಗದ ಸಂಗತಿಯಾಗಿದೆ. ಬೇಗಂದರೆ ಕೆಲವು ಇರುವೆಗಳು ಜೇನತುಪ್ಪವನ್ನು ತಂದು ಬೇರೆ ಇರುವೆಗಳ ಬಾಯಲ್ಲಿ ಹಾಕುವುವು. ಅವುಗಳಿಂದ ಆ ಇರುವೆಗಳ ಶರೀರದಲ್ಲಿ ಮಧುವಿನ ಚೀಲಗಳಾಗುವುವು. ಆ ಮಧುವನ್ನು ಅವಶ್ಯ ಕಂಡಾಗ ಬೇರೆ ಇರುವೆಗಳು ತೆಗೆದುಕೊಂಡು ಹೋಗುವುವು. ಮಧುಸಂಚಯಮಾಡುವ ಇರುವೆಗಳು ಮತ್ತೆ ಇವುಗಳ ಶರೀರಗಳಲ್ಲಿ ಜೇನುತುಪ್ಪವನ್ನು ಕೂಡಿ ಹಾಕುವುವು. ಮಧುವನ್ನು ಇಟ್ಟುಕೊಂಡಿರುವ ಇರುವೆಗಳ ಸ್ವಾರ್ಥತ್ಯಾಗವು ಹೊಗಳತಕ್ಕಂಥಾದ್ದು ಆಗಿದೆ.

ಜರ್ಮನಿಯಲ್ಲಿಯ ಇರುವೆಗಳು ಅಡವಿಗಳಲ್ಲಿ ಹಾನಿಯನ್ನು ಮಾಡುವ ಕೀಟಗಳನ್ನು ನಾಶಮಾಡುವ ಕೆಲಸವನ್ನು ಮಾಡುವುವು. ದಕ್ಷಿಣ ಚೀನದಲ್ಲಿ ಸಂತರೆ-ಕಿತ್ತಳೆ ಹಣ್ಣುಗಳಿಗೆ ಹತ್ತುವ ಹುಳಗಳನ್ನು ನಾಶಮಾಡಿ ತೋಟದವರಿಗೆ ಲಾಭವನ್ನು ಮಾಡಿಕೊಡುವುವು. ಇಟಲಿಯಲ್ಲಿ [illegible] ಗಳನ್ನು [illegible] ವುವು.

ಒಳದೇಶದ ವೃತ್ತಾಂತಗಳು.

[illegible] ಮ|| ಎಸ್. [illegible] ನಾರಾಯಣಾಚಾರ್ಯರು ಕಂಪನಿಯವರು ಪ್ರಕಟಿಸುವ [illegible] ನೇ ವರ್ಷದ [illegible] ಈ ಪತ್ರಿಕೆಯು [illegible] ಪಟ್ಟಿದೆ.

ರಾಜಧಾನಿಯಲ್ಲಿ ಪಬ್ಲಿಕ್ ವರ್ಕ್ಸಿನ [illegible] ಎಂ. ಶ್ರೀನಿವಾಸಯ್ಯಂಗಾರ್ಯರ ಉದ್ಯೋಗ [illegible] ಒಂದು [illegible] ತಿಂಗಳ ರಜೆಯವರೆಗೂ ಮುಂದೆ ಹಾಕಲ್ಪಟ್ಟಿದೆ.

ಮದ್ರಾಸಿನ ಪ್ರಸಿದ್ಧ ಸಕ್ಕರೆ ವ್ಯಾಪಾರಿಗಳಾದ ಮ|| [illegible] ಕಂಪನಿಯವರು [illegible] ಮುದ್ರಿಸಿರುವ 1929 ನೇ ವರ್ಷದ [illegible] ಕ್ಯಾಲೆಂಡರನ್ನು [illegible] ಪತ್ತಿದೆ.

ಕಳೆದ [illegible] ಮಹಾರಾಜರವರ [illegible] ಸಮಾರಂಭದ [illegible] ಚಿತ್ರಗಳನ್ನು ಮಿಸ್ಟರ್ [illegible] ಪಂಚಶಾಲೆಯ [illegible] ವನ್ನು ಮೃಗಾಲಯದ [illegible] ಕ್ಕೆ [illegible] ತಿಳಿಯಬರುತ್ತದೆ.

ಕಳೆದ ಸೋಮವಾರ ಬೆಂಗಳೂರಿನ ಮೊದಲಿಯಾರ್ ಜನರು ಡಿಸ್ಟ್ರಿಕ್ಟ್ ಸರ್ಜನ್ ಡಾಕ್ಟರ್ ಟಿ. ಪಿ. [illegible] ಮೊದಲಿಯಾರರ ಅಧ್ಯಕ್ಷತೆಯಲ್ಲಿ ಬೆಂಗಳೂರು [illegible] ರಾವ್ ಬಹದ್ದೂರ್ [illegible] ಮೊದಲಿಯಾರರ [illegible] ಸರ್ಕಾರದ [illegible] ಜನರ [illegible] ಎಂದು [illegible] ವನ್ನೇರ್ಪಡಿಸಬೇಕಾಗಿ ನಿರ್ಧರಿಸಿದರು.

ಪೋಲೀಸ್ ಇನ್ಸ್‌ಪೆಕ್ಟರ್ [illegible] ಮ|| ಎಸ್. [illegible] ಹಿರಣ್ಣಯ್ಯನವರು ವಿಶ್ವೇಶ್ವರಯ್ಯ ಕಮಿಟಿಯ ರಿಪೋರ್ಟ್ [illegible] ಯಲ್ಲಿ ಅಪಮಾನಕರವಾದ ಮಾತುಗಳನ್ನು ಆಡಿದರೆಂದು [illegible] ಗಳಲ್ಲಿ [illegible] ಪ್ರಕಟವಾಗಿರುವ [illegible] ಟಿಪ್ಪಣಿಯನ್ನು [illegible] ದಿಸ್ಟ್ರಿಕ್ಟ್ [illegible] ಅವರು ರಾಜೀನಾಮೆ ಕೊಟ್ಟಿದ್ದಾರೆ ಎಂಬ ಸುದ್ದಿಯು [illegible] ಆಧಾರವಿಲ್ಲವೆಂದು [illegible] ಗುತ್ತಿದೆ.

[illegible] ಎಂಬ ಮಾಸಪತ್ರಿಕೆ [illegible] ಪ್ರತಿಯನ್ನು [illegible] ರೆಂದು [illegible] ನೋಟೀಸನ್ನು [illegible] ವಿಯಿಂದಲೂ [illegible] ಸಲ್ಲಿಸಿದ ತಪ್ಪು [illegible] ಗುತ್ತಿದ್ದರೆಂದೂ ತಿಳಿದುಬಂದಿದೆ. [illegible] ನಡೆಸಿದ [illegible] ರಾಮಚಂದ್ರರಾಯರು ಜಾಮೀನಿನಮೇಲೆ ಬಿಡಲ್ಪಟ್ಟಿರುವರು.

ಕಳೆದ ಜ|| 31ರಲ್ಲಿ ಡಾಕ್ಟರ್ [illegible] ರವರು ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರುದ್ಯೋಗಗಳಿಂದ ನಿವೃತ್ತರಾದರು. ಮತ್ತು ಡಾಕ್ಟರ್ ಎಸ್. ಸುಬ್ಬರಾಯರು ಸೀನಿಯರ್ ಸರ್ಜನ್ನುದ್ಯೋಗವನ್ನೂ, ಡಾಕ್ಟರ್ ಜೆ. ವಿ. [illegible] ಯವರು ಸ್ಯಾನಿಟರಿ ಕಮಿಷನರುದ್ಯೋಗವನ್ನೂ ವಹಿಸಿಕೊಂಡರು. [illegible] ಉದ್ಯೋಗಸ್ಥರುಗಳು ಡಾ|| [illegible] ನವರ ಗುಣಕಥನವನ್ನು ಮಾಡಿ ಅವರ ಮೇಲೆ ತಮಗಿದ್ದ ಪ್ರೀತಿ ವಿಶ್ವಾಸಗಳನ್ನು ಪ್ರದರ್ಶಿಸಿ ಮರ್ಯಾದೆಯಿಂದ ಬೀಳ್ಕೊಟ್ಟರು.

ಬೆಂಗಳೂರಿನ ಕೆಲ ಹಿಂದುಗಳು ಗಲಭೆಯ ಸಂಬಂಧದಲ್ಲಿ ವಿಚಾರಣೆ ನಡೆದು ಸರ್ಕಾರಕ್ಕೊಪ್ಪಿಸಿದ ವರದಿಯ ಮೇಲೆ ಸರ್ಕಾರದವರು ಹೊರಡಿಸಿರುವ ಆಜ್ಞೆಯು ತಮಗೆ ಸಮಾಧಾನವಾಗಿಲ್ಲವೆಂದು ಸೂಚಿಸುವುದಕ್ಕಾಗಿ ಕಳೆದ ಸೋಮವಾರ ಬೆಂಗಳೂರಿನಲ್ಲಿ ಸಭೆ ಸೇರಿ ಕೆಲ ನಿರ್ಧಾರಗಳನ್ನು ಮಾಡಿ ಸರ್ಕಾರದವರಿಗೆ ಕಳುಹಿದರಲ್ಲದೆ ಈ ಸಂಬಂಧದಲ್ಲಿ ನಡೆದ ವಿಚಾರಗಳನ್ನು ಜನಗಳಿಗೆ ತಿಳಿಸಲು ಉತ್ತರವಾದಿ ಸರ್ಕಾರವನ್ನು ಸ್ಥಾಪಿಸಲು ಆವಶ್ಯಕವಾದ ಕಾರ್ಯಕಲಾಪಗಳನ್ನು ನಡೆಸಲು ಒಂದು ಸಮಿತಿಯು ಏರ್ಪಾಡಾಯಿತು.

ಮೈಸೂರು ಸ್ಟಾರ್ ಪತ್ರಿಕಾ ಸಂಪಾದಕರು ಬೆಂಗಳೂರು ವೀರಕೇಸರಿ ಪತ್ರಿಕಾ ಸಂಪಾದಕರಾದ ಮ|| ಎಂ. ಸೀತಾರಾಮಶಾಸ್ತ್ರಿಗಳ ಮೇಲೂ ಶಿವ [illegible] ಎಂಬ ವ್ಯವಹಾರಕರ್ತರಾದ [illegible] ರಾಯ [illegible] ಎಂಬುವರಮೇಲೂ ಮೈಸೂರು ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಹೂಡಿರುವ ಮಾನನಷ್ಟದ ದಾವೆಯು ಕಳೆದ ಸೋಮವಾರ ವಿಚಾರಣೆಗಿಡಲ್ಪಟ್ಟಿದ್ದು ಒಂದನೇ ಅಪರಾಧಿಯಾಗಲಿ ಅವರಪರ ಲಾಯರಾಗಲಿ ಕೋರ್ಟಿಗೆ ಹಾಜರಿಲ್ಲವಾಗಿ ಇದೇ ತಾ||18ಕ್ಕೆ ವಾರಂಟ್ ಮಾಡಲ್ಪಟ್ಟು ಒಂದನೇ ಅಪರಾಧಿಗೆ ವಾರಂಟು ಕೊಡಬೇಕಾಗಿ ಆಜ್ಞೆಮಾಡಲ್ಪಟ್ಟಿತು. ಎರಡನೆಯ ಅಪರಾಧಿ ಹೆಸರಿನವರು ದಾವಣಗೆರೆಯಲ್ಲಾಗಲೀ ಇಲ್ಲವೆಂದು ಸಮನ್ಸು ವಾಪಸುಬಂದಿತು.

ಮುಸಲ್ಮಾನರ ಮೇಲೆ ನಡೆಯುತ್ತಿರುವ ಮೊಕದ್ದಮೆಗಳನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಸರ್ಕಾರದವರನ್ನು ಕೇಳಿಕೊಳ್ಳುವುದಕ್ಕಾಗಿ ಬೆಂಗಳೂರಿನ ಮುಸಲ್ಮಾನರು ಬಹಿರಂಗಸಭೆಯನ್ನು ಮಾಡಿ ಸರ್ಕಾರಕ್ಕೆ ತಮ್ಮ ನಿರ್ಧಾರಗಳನ್ನು ಕಳಿಸಿರುವರು. ತಮ್ಮ ಕೋರಿಕೆಯನ್ನು ನೆರವೇರಿಸುವವರೆಗೂ ಮುಸಲ್ಮಾನರು ಇದೇರೀತಿ ಸಭೆಗಳನ್ನು ಮಾಡಿ ಸರ್ಕಾರದವರಿಗೆ ತಮ್ಮ ಅಭಿಪ್ರಾಯವನ್ನು ಕಳಿಸುತ್ತಿರುವುದಾಗಿ ನಿಶ್ಚಯಮಾಡಿಕೊಂಡಿರುವಂತೆ ಹಿಂದುಗಳ ಮೇಲಿನ ಮೊಕದ್ದಮೆಗಳನ್ನು ಹಿಂದಕ್ಕೆ ತೆಗೆದುಕೊಂಡ ಬಳಿಕ ಮುಸಲ್ಮಾನರ ಮೇಲಿನ ಮೊಕದ್ದಮೆಗಳನ್ನು ಹಿಂದಕ್ಕೆ ತೆಗೆದುಕೊಂಡು ಜನಗಳಲ್ಲಿ ನಿಜವಾಗಿ ಶಾಂತಿಸೌಹಾರ್ದವು ನೆಲೆಗೊಳ್ಳುವಂತೆ ಮಾಡುವುದು ಸರ್ಕಾರದವರಿಗೆ ಉಚಿತವಾದುದೆಂದು ನಮಗೆ ತೋರುತ್ತದೆ. ಹಾಗೆ ಮಾಡದಿದ್ದರೆ ಮುಸಲ್ಮಾನರ ಮನಸ್ಸಿನಲ್ಲಿ ಅವರು ಸರ್ಕಾರವು ಹಿಂದು ಪಕ್ಷಪಾತವುಳ್ಳದ್ದೆಂದು ದೂಷಿಸಲು ಅವಕಾಶವಾಗುವುದು.

ಹಾಸನದ [illegible] ಒಂದು ಗ್ರಾಮದಲ್ಲಿ ಒಬ್ಬ ಹಾವಾಡಿಗನು ತನ್ನ ಗಾರುಡಿ ವಿದ್ಯೆಯನ್ನು ನೆರೆದಿದ್ದ ಜನರಿಗೆ ತೋರಿಸುತ್ತಿದ್ದಾಗ ಒಂದು ನಾಗರಹಾವನ್ನು ಬುಟ್ಟಿಯಿಂದ ಹೊರಕ್ಕೆ ತೆಗೆದು "ಇದು ವಿಷಹೇಗೆಯಲ್ಲಿಟ್ಟ ಹಾವು, ಇದರ ಹಲ್ಲಿನ ವಿಷವೆ [illegible] ಯಾರುಬೇಕಾದರೂ ಕಚ್ಚಿಸಿಕೊಂಡು ನೋಡಬಹುದು. ಇದರ ವಿಷವು ಏರಿದರೆ ಪ್ರಾಣ ಹೋಗುವಂತೆ ಮಾಡುವ ಮೂಲಿಕೆಯು ನನ್ನಲ್ಲಿದೆ" ಎಂದು ಹೇಳಿದನು. ಇದರ ಮೇಲೆ ಅಲ್ಲಿ ಯಾರೂ ಸರ್ಪದಿಂದ ಕಚ್ಚಿಸಿಕೊಳ್ಳಲು ಧೈರ್ಯಮಾಡದಿಲ್ಲವಾಗಿ, ಹಾವಾಡಿಗನು ತಾನೇ ಕಚ್ಚಿಸಿಕೊಂಡು, ತನ್ನಲ್ಲಿದ್ದ ಮೂಲಿಕಾಪ್ರಯೋಗಮಾಡಿಕೊಂಡನಾದರೂ ಪ್ರಯೋಜನವಾಗದೆ ಅವನು ಮೃತಪಟ್ಟನು. ಆದುದರಿಂದ ವಿಷಪರಿಹಾರ ಮೂಲಿಕೆಗಳೆಂದು ಹೇಳಿ ಅವನ್ನು ಮಾರಲಿಕ್ಕೆ ಬರುವವರ ಮಾತಿಗೆ ಮರುಳಾಗಿ ಹಾವಿನಿಂದಲೂ ಸರ್ಪದಿಂದಲೂ ಕಚ್ಚಿಸಿಕೊಂಡು ಪರೀಕ್ಷೆ ಸಲ್ಲಿಸುವವರು ಮೇಲ್ಕಂಡ ಅಂಶವನ್ನು ಸ್ಮರಿಸಿಕೊಂಡು ಜಾಗ್ರತೆಯಾಗಿರುವುದುತ್ತಮ.

ಭರತಖಂಡದ ವೃತ್ತಾಂತಗಳು.

ಹಿಂದುಸ್ಥಾನದ ವಾಯುವ್ಯ ಸರಹದ್ದಿನಲ್ಲಿ ಹೆಚ್ಚೆಯು ಅಧಿಕವಾಗಿರುವುದಲ್ಲದೆ ವಿಪರೀತವಾದ ಮಂಜಿನ ಮಳೆಯು ಸುರಿಯುತ್ತಿರುವುದು. ಅಫ್ಘಾನಿಸ್ಥಾನ, ಬೆಲುಚಿಸ್ಥಾನ, ಸಿಂದು ಮೊದಲಾದ ಪ್ರಾಂತಗಳಲ್ಲಿ ಚಳಿಯ ಹಾವಳಿಯನ್ನು ವಿವರಿಸಲು ಸಾಧ್ಯವಿಲ್ಲವೆಂತಿರುವುದು.

[illegible] ಸೀತಾಪತಿರಾವ್ [illegible] ವೈದ್ಯವಿದ್ಯಾ[illegible] [illegible] ಹೊಸತಾಗ ವಿಷಪ್ರಯೋಗ ಮಾಡಿದುದರಿಂದ [illegible] [illegible] ಒಂದು [illegible] ಒಂದು [illegible] ವಿಷಪದಾರ್ಥವನ್ನು ತಿಂದು [illegible] [illegible] [illegible] ಪಟ್ಟುಕೊಳ್ಳುತ್ತಾನೆ ಇವನು [illegible] [illegible] [illegible] ಕೊರಡುವ ಪತ್ರಿಕೆಗೆ ಕೆಲ ಸಂಪಾದಕನಾಗಿದ್ದನು

[illegible]ಜಾತೆಯ ಮುಖ್ಯಾಧಿಕಾರಿಗಳೂ ಮಂತ್ರಿಗಳೂ ಗುಜರಾತ್ ಕಾಲೇಜಿನ ಅಧಿಕಾರಿಗಳೊಡನೆ ಸಂಭಾಷಣೆ ನಡೆಸಿ ಮುಷ್ಕರವನ್ನು ಕೊನೆಗಾಣಿಸುವ ಯೋಚನೆ ಮಾಡುತ್ತಿರುವರು ಆದಾಗ್ಯೂ ವಿದ್ಯಾರ್ಥಿಗಳು ಇನ್ನೂ ಸತ್ಯಾಗ್ರಹವನ್ನಾಚರಿಸುತ್ತಿರುವರು ಕಾಲೇಜಿಗೆ ಹೋಗುತ್ತಿರುವ 10–15 ಮಂದಿ ವಿದ್ಯಾರ್ಥಿಗಳು ಮುಷ್ಕರಿಗಳ ಕಾಟದಿಂದ ತಪ್ಪಿಸಿಕೊಳ್ಳಲು ಬೆಳಗಿನ ಝಾವದ 4½ ಗಂಟೆಗೆದ್ದು ಕಾಲೇಜಿಗೆ ಹೋಗಿ ಸೇರಿಕೊಂಡರಂತೆ ! ವಿದ್ಯಾತುರವೆಂದರೆ ಹೀಗಿರಬೇಕಲ್ಲವೆ ?

ಕಳೆದ ನಾಲ್ಕು ದಿವಸಗಳಿಂದಲೂ ಬೊಂಬಾಯಿ ನಗರದಲ್ಲಿ ಮಂಜು ವಿಪರೀತವಾಗಿ ಸುರಿಯುತ್ತ ಚಳಿಯು [illegible] ಗಿದೆ ಮತ್ತು ವಾತಾವರಣದಲ್ಲಿ ಉಷ್ಣಾಂಶವು ನಿತ್ಯಕ್ಕಿಂತ 12 7 ಡಿಗ್ರಿ ಕಡಿಮೆಯಾಗಿದೆ, ಅಂದರೆ 53 7 ಡಿಗ್ರಿಯಿದೆ 1847 ನೆಯ ಇಸವಿಯಲ್ಲಿ ಮಾತ್ರ 53 3 ಡಿಗ್ರಿ ಉಷ್ಣವಿದ್ದಿತು ಆಧಿಪತ್ಯದ ಅನೇಕ ಕಡೆಗಳಲ್ಲಿ ಮಂಜು ವಿಪರೀತವಾಗಿ ಸುರಿಯುತ್ತಿರುವುದರಿಂದ ನಿಂತಿರುವ ಬೆಳೆಯು ನಾಶವಾಗುತ್ತಿರುವುದಲ್ಲದೆ ಮನುಷ್ಯರು ಮಡಿಯುತ್ತಿರುವುದಾಗಿ ತಿಳಿಯಬಂದಿದೆ

ಸಿಂಧು, ಪಂಜಾಬ್ ಮೊದಲಾದ ಪ್ರಾಂತ್ಯಗಳಲ್ಲಿ ಶೈತ್ಯಾಧಿಕ್ಯದಿಂದ ಅನೇಕ ಜನರು ರೈಲ್ ಗಾಡಿಗಳಲ್ಲಿ ಪ್ರಯಾಣಮಾಡುತ್ತಿದ್ದಾಗ ಮೃತಪಟ್ಟರು ಸೂರತ್ತಿನ ಪ್ರಾಂತ್ಯದಲ್ಲಿ ಬೆಳೆಗಳೆಲ್ಲ ನಾಶವಾಗಿರುವುವು ಅನೇಕ ಕೂಲಿಗಾರರು ಸತ್ತುಹೋದರು ಇನ್ನು ಒಂದೆರಡು ವಾರ ಚಳಿಯು ಕಡಿಮೆಯಾಗುವಂತೆ ತೋರುವುದಿಲ್ಲ ಚಳಿಯ ಹಾವಳಿಯು ಪಾಶ್ಚಾತ್ಯ ದೇಶಗಳಲ್ಲಿ ಸರ್ವಸಾಧಾರಣವಾಗಿರುವುದು ಆದರೆ ಹಿಂದುಸ್ಥಾನದಲ್ಲಿ ಇದು ಅಪೂರ್ವ ಈ ವರ್ಷಮಾತ್ರ ಚಳಿಯ ಆರ್ಭಟವು ಹೆಚ್ಚಾಗಿ ಅನರ್ಥಗಳು ಸಂಭವಿಸಿರುವುವು.

ಪಾಟಿಯಾಲಾ ಸಂಸ್ಥಾನದಲ್ಲಿ ಪ್ರಜೆಗಳು ಅಸಂತುಷ್ಟರಾಗಿ ಮಹಾರಾಜರಲ್ಲಿ ಅವಿಶ್ವಾಸಿಗಳಾಗಿರುವರು ತಮಗೆ ಈಗಿನ ಮಹಾರಾಜರು ಬೇಡವೆಂದು ಸಾರ್ವಭೌಮ ಸರ್ಕಾರಕ್ಕೆ ಅರ್ಜಿಹಾಕಿಕೊಂಡಿದ್ದರು ಇಂತಹ ಅರ್ಜಿದಾರರಲ್ಲಿ ಅಕಾಲಿ ಸಿಖ್ ಜನಗಳೇ ಬಹುಮಂದಿಯಿರುವರು ಅಂದಿನಿಂದೀಚೆಗೆ ಅಕಾಲಿಜನಗಳಿಗೆ ಚಿತ್ರಹಿಂಸೆ ನಡೆಯುತ್ತಿರುವುದು 260 ಮಂದಿ ಅಕಾಲಿಗಳು ಸೆರೆಸಿಡಿಯಲ್ಪಟ್ಟಿರುವರು ಮುಖಂಡರನ್ನು [illegible]ಕಾಂತವಾಸದಲ್ಲಿಟ್ಟಿರುವರು ಸೆರೆಯಲ್ಲಿರುವವರನ್ನು ಪ್ರತಿರಾತ್ರಿಯೂ ಕಠಿಣವಾಗಿಯೂ ಕ್ರೂರವಾಗಿಯೂ ಶಿಕ್ಷಿಸುತ್ತಿರುವರಂತೆ !

ಕಳೆದ ರಾಷ್ಟ್ರೀಯ ಸಭೆಯ ಕಾಲದಲ್ಲಿ ಅಮೆರಿಕೆಯಿಂದ ಭಾರತೀಯರಿಗೆ ಕಳಿಸಲ್ಪಟ್ಟ ಸಹಾನುಭೂತಿಯ ಅನುತಾಪ ಸಂದೇಶಗಳು ನಮ್ಮ ದೇಶಕ್ಕೆ ತಲಪದಂತೆ ಬ್ರಿಟಿಷ್ ಸರ್ಕಾರದವರಿಂದ ತಡೆಮಾಡಲ್ಪಟ್ಟುವು ಆಕಾಶವಾಣಿಯ ಮೂಲಕ ಕಳಿಸಲು ಮಾಡಿದ ಯತ್ನವೂ ಸರ್ಕಾರದವರಿಂದ ತಡೆಯಲ್ಪಟ್ಟಿತಂತೆ ! ಅಂಚೆಯ ಮೂಲಕ ಕಳಿಸಿದ ಕಾಗದಪತ್ರಗಳೂ ಮಧ್ಯೆ ನಾಶಪಡಿಸಲ್ಪಟ್ಟುವಂತೆ ! ಭಾರತೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅಮೆರಿಕನರೇ ಮೊದಲಾದ ಜನಾಂಗಗಳಿಗಿರುವ ಸಹಾನುಭೂತಿಯು ನಮಗೆ ತಿಳಿಯದಂತೆ ಮಾಡುವುದೇ ಸರ್ಕಾರದವರ ವರ್ತನೆಗೆ ಕಾರಣವಂತೆ !

ಪೂನಾನಗರದ ಫರ್ಗ್ಯುಸನ್ ಕಾಲೇಜಿನ ವಿದ್ಯಾರ್ಥಿಗಳು ವಾರ್ಷಿಕೋತ್ಸವವನ್ನು ನಡೆಸುವ ವಾಡಿಕೆಯಿರುವುದು ಈವರ್ಷ ಉತ್ಸವವನ್ನು ನಡೆಸುವ [illegible]ಚಾರವಾಗಿ ವಿದ್ಯಾರ್ಥಿಗಳಲ್ಲಿ ಎರಡು ಕಕ್ಷಿಗಳಾದುವು ಕಾಲೇಜಿನ ಮುಖ್ಯೋಪಾಧ್ಯಾಯರೂ ಒಂದು ಪಕ್ಷದ ವಿದ್ಯಾರ್ಥಿಗಳೂ, ಕಾಲೇಜಿನ ಇತರ ಅಧ್ಯಾಪಕರೂ ಸೇರಿ ಉತ್ಸವವನ್ನು ಒದಗಿಸುತ್ತಿರಲು ಇನ್ನೊಂದು ಪಕ್ಷದವರು ಮುಖವಾಡಗಳನ್ನು ಹಾಕಿಕೊಂಡು, ಸಭೆಗೆನುಗ್ಗಿ ಕಲ್ಲುಗಳನ್ನೆಸೆದು ಕಿಟಕಿಗಳನ್ನು ಒಡೆದು ಗಲಭೆಮಾಡಿ ರಾತ್ರಿ 10 ಗಂಟೆಯಿಂದ ಬೆಳಗಿನ 3 ಗಂಟೆಯವರೆಗೂ ಹೋರಾಡುತ್ತಿದ್ದು ಕಡೆವಾಯ ತಂತಮ್ಮ ಮನೆಗಳಿಗೆ ತೆರಳಿದರು

ಬರೋಡಾ ಸಮೀಪದಲ್ಲಿ ಕಟ್ಟುತ್ತಲಿರುವ ಸೇತುವೆಯ ಸ್ಥಿರಸ್ಥಾಪನಾರ್ಥವಾಗಿ ನರಬಲಿ ಕೊಡಲೋಸುಗ ಹಿಂದು ಮಕ್ಕಳನ್ನು ಪಠಾಣರು ಹಿಡಿದೊಯ್ಯುರೆಂಬ ಸುಳ್ಳು ಪ್ರತೀತಿ ಹುಟ್ಟಿ ಬೊಂಬಾಯಿನಗರದ ಕೂಲಿಕಾರ ಜನರು ಉದ್ರೇಕಿತರಾಗಿ ಕಂಡೆಡೆಯಲ್ಲೆಲ್ಲ ಪಠಾಣರಮೇಲೆ ಬಿದ್ದು ಅವರನ್ನು ಪ್ರಹರಿಸುತ್ತಲಿರುವರು ಈ ರೀತಿಯಲ್ಲಿ ಈಗಾಗಲೆ 25 ಮಂದಿ ಪಠಾಣರು ಕೊಲ್ಲಲ್ಪಟ್ಟಿರುವರು ಅನೇಕಮಂದಿ ಗಾಯಪಡೆದು ವೈದ್ಯಚಿಕಿತ್ಸೆಯಲ್ಲಿರುವರು ಈ ದೊಂಬಿಯನ್ನು ಹತೋಟಿಯಲ್ಲಿಡಲು ಪೋಲೀಸಿನವರು ಪೂರ್ಣಸಾಹಸ ಮಾಡುತ್ತಿರುವರಾದರೂ ಗಲಭೆಯು ಇನ್ನೂ ಶಮನವಾಗಿರುವುದಿಲ್ಲ. ಗೊಂದಲವಾದ ಸ್ಥಳಗಳಿಗೆ ಪತ್ರಿಕೆಗಳ ಸುದ್ದಿಗಾರರು ಹೋದರೆ ಅವರನ್ನು ಸಹ ಪುಂಡುಜನಗಳು ಹೊಡೆದು ಓಡಿಸಿಬಿಟ್ಟರಂತೆ

ಡಾ|| ಬೆಸೆಂಟಮ್ಮನವರು ಮದರಾಸಿನ ವಿದ್ಯಾರ್ಥಿಗಳಿಗೆ ಬುದ್ಧಿವಾದವನ್ನು ಹೀಗೆ ಹೇಳಿರುವರು ಯುವಕರ ಮತ್ತು ವಿದ್ಯಾರ್ಥಿಗಳ ಸಭೆಗಳಲ್ಲಿ ಭಾರತೀಯ ಸ್ವಾತಂತ್ರ್ಯದ [illegible]ವಾಗಿ [illegible]ಗಳನ್ನು [illegible] [illegible] [illegible] [illegible] ದೇಶೀಯ ಮ[illegible]ಗಳ [illegible] ಈ ದೊಡ್ಡ [illegible]ರವನ್ನು [illegible] [illegible] ಆದ ನಿಮ್ಮ [illegible]ಗಳ ದಯೆಯ [illegible] [illegible] [illegible] [illegible]ಗಳ ಪರಿಶೀಲನೆಗೆ ಯೋಗ್ಯ[illegible] [illegible] ಅಡ ಮುಂದಾಳುಗಳು ಮಾತ್ರ ಯೋಗ್ಯರು. ದೇಶಬಂಧು ಚಿತ್ತರಂಜನದಾಸ್ ರವರೇ ಮೊದಲಾದ ದೇಶಭಕ್ತರು ಸಮಬಾಳ್ವೆಯುಳ್ಳ ಜನಾಂಗಗಳನ್ನೊಳಗೊಂಡ ಸಾಮ್ರಾಜ್ಯಕ್ಕೆ [illegible] ಪಟ್ಟಿರುವುದು ಪ್ರತ್ಯೇಕವಾಗಿರುವುದಕ್ಕಿಂತಲೂ ಉತ್ತಮವೆಂದು ಹೇಳಿರುವರು. ನೀವು ಈ ವಿಚಾರವನ್ನು ಪರ್ಯಾಲೋಚಿಸಲು ಸಾಕಾದಷ್ಟು ಕಾಲ [illegible] ನೀವು ಇನ್ನೂ ತಂದೆತಾಯಿಗಳ ಪೋಷಣೆಯಲ್ಲಿರುವಿರಿ ಅವರು ನಿಮ್ಮ ಪೋಷಣೆಗಾಗಿಯೂ ವಿದ್ಯಾಭ್ಯಾಸಕ್ಕಾಗಿಯೂ ತಮ್ಮ ಸರ್ವಸ್ವವನ್ನೂ ಒಪ್ಪಿಸಿರುತ್ತಾರೆ ಅನೇಕರು ತಮ್ಮ ಆಸ್ತಿಪಾಸ್ತಿಗಳನ್ನು ಮಾರಿಯೂ, ಗಿರವಿ ಇಟ್ಟೂ ನಿಮ್ಮನ್ನು ಪೋಷಿಸುತ್ತಿರುವರು ಬಡವರಾದವರು ತಮ್ಮ ದೇಹವನ್ನು ನಿಮಗಾಗಿ ಧಾರೆಯೆರೆದು ತಮಗಿಲ್ಲದಿದ್ದರೂ ನಿಮ್ಮ ಸೌಕರ್ಯಗಳಿಗಾಗಿ ದುಡಿಯುತ್ತಿರುವರು ಅಂದಗಿರ ವೃದ್ಧಾಪ್ಯದಲ್ಲಿ ನೀವು ಅವರನ್ನು ಸಲಹಲು ಹಿಂತೆಗೆಯುವರಾಗು[illegible] [illegible] ನೀವು ಹೇಗೆ ತಾನೆ ನಿಮ್ಮ [illegible] ಜೀವನವನ್ನು ಸಹ ಲಕ್ಷ್ಯವನೆ ದುಡುಕಿ ನಡೆಯಲಾದೀತು ? [illegible] ಮಾಡಿದ ಅತ್ಯಾಚಾರಕ್ಕಾಗಿ ನಿಮ್ಮ ಪೋಷಕರಿಂದ ಜುಲ್ಮಾನೆ ಮೊದಲಾದ ದಂಡಗಳನ್ನು ತೆರಿಸುವುದು ಸರ್ವಥಾ ಯೋಗ್ಯವಾದುದಲ್ಲ ನಿಮಗೆ ಮುಷ್ಕರದ ಬುದ್ಧಿವಾದವನ್ನು ಹೇಳುವವರು ಸಹಾಯಕ್ಕೆ ಬರುವುದಿಲ್ಲ ಒಂದುದಿನ ಕೆಲ ವಿದ್ಯಾರ್ಥಿಗಳು ಮಹಾತ್ಮ ಗಾಂಧಿಯವರ ಮಾತುಕೇಳಿ ಜೀವನಕ್ಕೆ ಕಷ್ಟಬರಲು ಅವರ [illegible]ಗೆ ಹೋಗಿ ಸಹಾಯ ಕೇಳಲಾಗಿ ಅವರು ಯಾವ ಸಹಾಯವನ್ನೂ ಮಾಡದೆ ಅವರ ಸ್ವಾರ್ಥತ್ಯಾಗವನ್ನು ಹೊಗಳಿದರಂತೆ ! ಇನ್ನೇನು ಮಾಡಲಾದೀತು ? ನೂರಾರು ಮಂದಿ ಗಾಂಧಿಯವರಲ್ಲಿಗೆ ಹೋದರೆ ಅವರು ಅವರಿಗೆಲ್ಲಾ ಎನುತಾನೆ ಸಹಾಯಮಾಡಿಯಾರು ? ಆದುದರಿಂದ ನೀವು ವಿದ್ಯಾರ್ಥಿದೆಶೆಯಲ್ಲಿರುವಾಗ್ಗೆ ಚೆನ್ನಾಗಿ ವ್ಯಾಸಂಗಮಾಡಿ ಮುಂದೆ ದೇಶಸೇವಕರಾಗಲು ಅರ್ಹತೆಯನ್ನು ಸಂಪಾದಿಸಿರಿ ಆದರೆ ನಿಮ್ಮಿಂದ ಸಾಧ್ಯವಿಲ್ಲದ ಕೆಲಸಕ್ಕೆ ಪ್ರಕೃತಸ್ಥಿತಿಯಲ್ಲಿ ಕೈಹಾಕಿ ಕ್ಲೇಶಪರಂಪರೆಗಳಿಗೆ ಗುರಿಯಾಗಬೇಡಿರಿ

ವಿದೇಶದ ವೃತ್ತಾಂತಗಳು.

ಲಂಡನ್ ನಗರದ ಅಂಚೆಯಕಚೇರಿಯಲ್ಲಿ ಸುಮಾರು 10,000 ಪೌನು ಬೆಲೆಬಾಳುವ ವಜ್ರದ ಕಟ್ಟುಗಳುಳ್ಳ ಒಂದು [illegible] ಕಳವಾಗಿರುವುದು ಪೋಲೀಸರು ಪತ್ತೆಯ ತರಡೂದನ್ನು ನಡೆಸುತ್ತಿರುವರು

[illegible]ದಲ್ಲಿ ಅರಾಜಕತ್ವವನ್ನೆಬ್ಬಿಸಿ ದಂಗೆಮಾಡಿದ ಜನರಲ್ [illegible] ಮತ್ತು [illegible] [illegible]ವರನ್ನು ಸರ್ಕಾರದವರು ವಿಚಾರಣೆ ಮಾಡಿ [illegible] ಮರಣದಂಡನೆಯನ್ನು ವಿಧಿಸಿರುವರು ಮಾಜಿ [illegible] ಮಂತ್ರಿ [illegible] ಸಹ ಸೆರೆ[illegible]ದಿರುವರು ಇದಕ್ಕಾಗಿ ಜನಗಳಲ್ಲಿ ಅಸಮಾಧಾನ ಹುಟ್ಟಿರುವುದು ಅಷ್ಟರಿಗೆ [illegible] [illegible]ಗೆಂದು ರಾಜರಲ್ಲಿ [illegible]ಕೊಂಡಿರುತ್ತಾರೆ

ಕಾಬೂಲನ್ನು [illegible] ದಂಗೆಕೋರ [illegible] ಮತ್ತು [illegible] ಅಪಾಯದಲ್ಲಿದ್ದ ಜರ್ಮನಿಯ ಪ್ರಜೆಗಳನ್ನು ಬ್ರಿಟಿಷರು ಸುರಕ್ಷಿತವಾಗಿ ತಮ್ಮ ಆಕಾಶಯಾನಗಳಲ್ಲಿ ಪೇಷಾವರಿಗೆ ಸಾಗಿಸಿದರು ಇದಕ್ಕಾಗಿ ಜರ್ಮನ್ ಸರ್ಕಾರದವರು ಬ್ರಿಟಿಷ್ ಸರ್ಕಾರಕ್ಕೆ ತಮ್ಮ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಿರುವರು

ರಷ್ಯಾದೇಶದ ರಾಜಕೀಯ ಪ್ರಗತಿಗೆ ಕಾರಣವಾದ ಟ್ರಾಟ್ಸ್ಕಿಯವರನ್ನು ಅಲ್ಲಿಯ ಸರ್ಕಾರದವರು ಬಂಧನದಲ್ಲಿಟ್ಟಿರು ಅವರ ಪಕ್ಷದವರು ಗಲಭೆ ಮಾಡುತ್ತಿದ್ದುದರಿಂದ ಟ್ರಾಟ್ಸ್ಕಿಯವರು ದೇಶದಿಂದ ಹೊರಟು ಹೋಗಬೇಕೆಂದು ಅಪ್ಪಣೆಯಾಗಿರುವುದು ಟರ್ಕಿಯ ಸರ್ಕಾರದವರು ಟ್ರಾಟ್ಸ್ಕಿಯವರಿಗೆ ಇಷ್ಟವಾದರೆ ತಮ್ಮ ದೇಶದಲ್ಲಿರಲು ಅವಕಾಶ ಕೊಡುವುದಾಗಿ ತಿಳಿಸಿರುತ್ತಾರೆ

ಅಮೆರಿಕೆಯ ಸಂಯುಕ್ತಸಂಸ್ಥಾನದ ಆರ್ಥಿಕಸ್ಥಿತಿಯು ಕಳೆದ ಅರ್ಧಶತಮಾನದಲ್ಲಿ ಅಸಾಧಾರಣವಾಗಿ ಔನ್ನತ್ಯವನ್ನು ಪಡೆದಿರುವುದು ಜನಾಂಗದ ಐಶ್ವರ್ಯವು ಒಂದಕ್ಕೆ ಎಳೆಯಷ್ಟು ಹೆಚ್ಚಿರುವುದು ಜನಸಂಖ್ಯೆಯು ಇಮ್ಮಡಿಯಾಗಿರುವುದು ವ್ಯಾಪಾರ ಕೈಗಾರಿಕೆಗಳು ಮಿತಿಮೀರಿ ಪ್ರಬಲಿಸುತ್ತಿರುವುವು ಇದನ್ನು ನೋಡಿ ಸಹಿಸಲಾರದೆ ಜಪಾನಿನವರೂ, ಯೂರೋಪಿನವರೂ ಅಮೆರಿಕನ್ನರ ಪ್ರಾಬಲ್ಯವನ್ನು ಮುರಿಯುವ ಉದ್ದೇಶದಿಂದ ತಂತಮ್ಮ ನೌಕಾಬಲವನ್ನು ಹೆಚ್ಚಿಸುತ್ತಿರುವರು ಆದಕಾರಣ ಅಮೆರಿಕೆಯು ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಬೇಕಾದರೆ ನೌಕಾಬಲವನ್ನು ಹೆಚ್ಚಿಸಬೇಕು ಕಳೆದ ಯೂರೋಪಿನ ಯುದ್ಧವು ಪರಿಸಮಾಪ್ತಿಯಾದಮೇಲೆ ಬ್ರಿಟಿಷರು ತಮ್ಮ ನಾವೆಯನ್ನು ಹೆಚ್ಚಿಸಿಕೊಂಡು " ಸಾಗರದ ರಾಣಿ " ಎಂಬ ಬಿರುದನ್ನು ಬ್ರಿಟನ್ನಿಗೆ ಉಳಿಸಿಕೊಂಡಿರುವರು—ಎಂಬುದಾಗಿ ಅಮೆರಿಕೆಯ ಯುದ್ಧದ ಮಂತ್ರಿಗಳು ಭಾಷಣಮಾಡಿರುವರು ಶೀಘ್ರದಲ್ಲಿಯೇ ಶಾಂತಿಸಾಗರದಲ್ಲಿ ಮಹಾಯುದ್ಧವು ನಡೆಯುವುದೆಂದೂ, ಇದಕ್ಕಾಗಿ ಜಪಾನರು ಸನ್ನದ್ಧರಾಗುತ್ತಿರುವರೆಂಗೂ [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] ಪೋಟಿಯನ್ನು ನೋಡಿ ತಮ್ಮ ಆತ್ಮರಕ್ಷಣೆಗಾಗಿ ತಮ್ಮ ನೌಕಾಬಲವನ್ನು ಹೆಚ್ಚಿಸುವ ಪ್ರಯತ್ನದಲ್ಲಿರುವರು ಇದನ್ನೆಲ್ಲ ಪರಿಶೀಲಿಸಿದರೆ ಮತ್ತೊಂದು ಘೋರಯುದ್ಧವು ಶೀಘ್ರದಲ್ಲಿಯೇ ಸಂಭವಿಸುವುದೆಂದು ಧಾರಾಳವಾಗಿ ಹೇಳಬಹುದಾಗಿದೆ

ಪತ್ರವ್ಯವಹಾರ

ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬುಂಶವನ್ನು ಸರ್ವರೂ ತಿಳಿಯತಕ್ಕದ್ದು — ಸಂಪಾದಕ

ಸಂತೋಷವಾರ್ತೆ

ಮೊನ್ನೆ ತಾನೆ ನಡೆದ ಹಾಸನ ಡಿಸ್ಟ್ರಿಕ್ಟ್ ಎಗ್ಜಿಬಿಷನ್ನಿನಲ್ಲಿ ಬಂಗಾರದ ಪದಕವನ್ನೂ ಸರ್ಟಿಫಿಕೇಟನ್ನೂ ಸಂಪಾದಿಸಿದ ಮ|| ಸೂರ್ಯನಾಟ್ಯದ ಕೃಷ್ಣಪ್ಪನವರ ಕೊಳಲು ಸಂಗೀತವು ತಾ|| 25 1 29 ರಲ್ಲಿ ಶಿವಮೊಗ್ಗ ಟವುನ್ ದೊಡ್ಡಪೇಟೆಯಲ್ಲಿರುವ ಶ್ರೀ ಕಾಳಿಕಾಮ್ಮನವರ ದೇವಾಲಯದಲ್ಲಿ ಮ|| [illegible]ಗಸ್ತನವರ ಮಕ್ಕಳು ರಾಮಪ್ಪನವರ ಅಧ್ಯಕ್ಷತೆಯಿಂದ ಇಂಪಾಗಿಯೂ ಮನೋಹರವಾಗಿಯೂ ನಡೆದು ನೆರೆದಿದ್ದ ಪ್ರೇಕ್ಷಕಮಂಡಲಿಯವರ ಮನಸ್ಸನ್ನು ಆನಂದಗೊಳಿಸಿತು ಶಿವಮೊಗ್ಗಾ ವಾಸಿಗಳು ಪ್ರೋತ್ಸಾಹಿಸಿ ಮಲೆನಾಡಿನಲ್ಲಿಯೂ ಇಂಥಾ ಸಂಗೀತವಿದ್ವಾಂಸರಿರುವರೆಂಬುದನ್ನು ಬಹಿರಂಗವಾಗಲು ಶಿವಮೊಗ್ಗ ವಾಸಿಗಳು ಅವಕಾಶಕೊಟ್ಟುದು ಶ್ಲಾಘ್ಯವಾಗಿದೆ

ಪ್ರೇಕ್ಷಕ

ಶ್ರೀಮದಾರಾಧನಾ ಮಹೋತ್ಸವಾಹ್ವಾನಪತ್ರಿಕಾ

ಶ್ರೀಮನ್ ಮಹೀಶೂರು ದೇಶಾಧಿಪತಿ ನಾಲ್ವಡಿ ಶ್ರೀಮನ್ ಕೃಷ್ಣರಾಜೇಂದ್ರ ಭೂಪಪಾಲಿತ ಕೋಲಾರ ಡಿಸ್ಟ್ರಿಕ್ಟ್ ಚಿಂತಾಮಣಿ ತಾಲ್ಲೋಕು ಮುರಗಮಲ್ಲಾ ಹೋಬಳಿ ಬೆಲುಮಕೋಟೆ ಮುಕ್ತಗಿರಿ ಮುರದಬೆಳ ಶ್ರೀಮದ್ಬ್ರಹ್ಮರಮ್ಯಾಚಾರ್ಯವೆಂದು ಸುಪ್ರಸಿದ್ಧವಾಗಿರುವ ದೇವಗಂಗಾತೀರದಲ್ಲಿ ನಿಜಮೋಕ್ಷ ಸಿದ್ಧಿಯಂ ಪಡೆದ ಶ್ರೀಮನ್ನಿಶ್ಶನಿರಂಜನ ನಿರಾಭಾರಿ ಗುರುಕುಲತಿಲಕ ಶ್ರೀ ಶಿವಯೋಗಿ ಸಿದ್ಧಲಿಂಗ ದೇಶಿಕೇಂದ್ರ ಮಹಾಸ್ವಾಮಿಗಳವರ ಆರಾಧನಾಭಿಷೇಕಂಗಳು ರಾತ್ರಿಮಹೋತ್ಸವ ಮಹಾಜನರ ಸತ್ಕಾರಕ್ಷೇಪಂಗಳು ಸಹಾ ಪ್ರತಿಸಂವತ್ಸರ ನಡೆಯುವಂತೆ ಈ ಸಂವತ್ಸರದ ಮಾಘ ಶುದ್ಧ ಅಷ್ಟಮಿ ತಾ 17 2 29 ನೇ ಭಾನುವಾರ ಸ್ವಸ್ಥಾನದಲ್ಲಿ ನಡೆಯಬೇಕಾಗಿರೋದರಿಂದ ಭಕ್ತಮಾಹೇಶ್ವರಾದಿಯಾಗಿ ಸರ್ವರೂ ದಯಮಾಡಿಸಿ ಈ ಮಹಾ ಗುರುಕಾರ್ಯವನ್ನು ಸಾಂಗಗೊಳಿಸಿ ತಕ್ಕ ಲಕ್ಕ್ಯ ಲೀಲೆಗೂ ಭಾಗಿಗಳಾಗಿ ತೆರಳುವಿರೆಂದು ನಂಬಿ ಪ್ರೀತಿಯಿಂದ ಕೃತಪಡಿಸಿಕೊಂಡಿರುವ ಕಾರ್ಯಭಾಗಿಯಾದ

ತಮ್ಮ ಶ್ರೇಯೋಭಿಲಾಷಿ ಶ್ರೀ ಶಿವಯೋಗಿ, ಬಸವರಾಜ
ಮರಿದೇಶಿಕೇಂದ್ರ ಸ್ವಾಮಿಗಳು, ಮುಕ್ತಿಗಿರಿಮಠ

ಮಹಾತ್ಮ ಶ್ರೀಮಣ್ಣಯೋಗಿಗಳ ಜಯಂತ್ಯುತ್ಸವವು

ಮೊದಲು ಪ್ರಸಿದ್ಧಪಡಿಸಿದ ಪ್ರಕಾರ ಗದಗ ಶಹರದಲ್ಲಿ ಶ್ರೀ ವೀರಭದ್ರಪ್ಪ ಕಂಪನಿ ದರಲಾಲಿ ಅಂಗಡಿಯಲ್ಲಿ ಶ್ರೀ ಯೋಗಿಗಳ ಜಯಂತ್ಯುತ್ಸವವು ತಾ|| 19 1 1929 ನೇ ದಿವಸ ಬಹು ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು ಅಂಗಡಿಯನ್ನು ತಳಿರುತೋರಣಗಳಿಂದ ಶೃಂಗರಿಸಲ್ಪಟ್ಟಿದ್ದು ಕಾರ್ಯಕ್ರಮದ ಪ್ರಕಾರ ಮುಂಜಾನೆ ಉತ್ಸವ, ಪೂಜೆಗಳು ನೆರವೇರಿಸಲ್ಪಟ್ಟವು ಸಾಯಂಕಾಲದಲ್ಲಿ ಈ ಉತ್ಸವದ ನಿಮಿತ್ತವಾಗಿ ನೇಮಕದಿಯಿಂದ ಆಹ್ವಾನಿಸಲ್ಪಟ್ಟ ಶ್ರೀ ಕರ್ನಾಟಕ ಕವಿಚಂದ್ರ ಪಂಡಿತ ಶ್ರೀಕಂಠಶಾಸ್ತ್ರಿಯವರು ಶ್ರೀ ಯೋಗಿಗಳ ಕೀರ್ತನವನ್ನು ಬಹು ಸುರಸ್ಯವಾಗಿ ಮಾಡಿದರು ಈ ಕೀರ್ತನಸಮಾರಂಭಕ್ಕೆ ಊರೊಳಗಿನ ಹಾಗು ಸುತ್ತುಮುತ್ತಲಿನ ಯೋಗ್ಯ ಸಜ್ಜನರು ಕೂಡಿದ್ದರು ಶಾಸ್ತ್ರಿಗಳ ಕೀರ್ತನವು ಸಮಾಪ್ತಿಯಾದ ಬಳಿಕ ಶ್ರೀ ನಾರಾಯಣರಾವ ಲೋಖಂಡೆ ಬಿ ಎ, ಎಲ್ ಎಲ್ ಬಿ, ಹೈಕೋರ್ಟ್ ವಕೀಲ ಶ್ರೀ ರಂಗನಗೌಡ ಪಾಟೀಲ ಶ್ರೀ ಶಂಕರಪ್ಪ ಹಲಗೂರ ಮೊದಲಾದವರು ಶ್ರೀ ಯೋಗಿವರ್ಯರ ಚರಿತ್ರೆಯನ್ನೂ ಅವರ ಅಗಾಧವಾದ ತತ್ವಜ್ಞಾನವನ್ನೂ ವಿವರಿಸಿ ಹೇಳಿ ಆದರಂತೆ ಯುವಕರೂ ನಡೆಯಬೇಕೆಂದು ಭಾಷಣಮಾಡಿದ ಬಳಿಕ ಮಂಗಳಾರತಿಯಾಗಿ ಸಭಿಕರಿಗೆ ಪ್ರಸಾದವು ಹಂಚಲ್ಪಟ್ಟಿತು

ತಮ್ಮ
ರಂಗನಗೌಡ ಪಾಟೀಲ
ಕಾರ್ಯದರ್ಶಿ

ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳು ಬನಹಟ್ಟಿಗೆ ಆಗಮಿಸಿದ್ದುದು

ಶ್ರೀಮನ್ನಿರಂಜನ ಮೃತ್ಯುಂಜಯ ಮಹಾಸ್ವಾಮಿಗಳು ಮತ್ತು ಮಹಾದೇವ ಪಂಡಿತರು ಬನಹಟ್ಟಿ ಗ್ರಾಮಕ್ಕೆ ಆಗಮಿಸಿ ಸಣಪೇಟೆಯ ತೋಟದ ಏಕಾಂತಸ್ಥಳದಲ್ಲಿ ವಾಸಮಾಡಿದ್ದರು. ಮಹಾಸ್ವಾಮಿಯವರ ನೇತೃತ್ವದಲ್ಲಿ 8-10 ದಿವಸಗಳವರೆಗೆ ದಿನಾಲು ವೀರಶೈವರ ತಾತ್ವಿಕತೆಗಳೂ, ನೀತಿಪರವಾದ ಕಥೆಗಳೂ, ವಿದ್ಯಾರ್ಥಿಗಳ ಮತ್ತು ತರುಣರ ಸ್ಪರ್ಧೆಯ ಭಾಷಣಗಳೂ ಉತ್ತಮ ರೀತಿಯಿಂದ ಜರುಗಿದವು ಈ ಶಿವಸಭೆಗಳಿಗೆ 300 400 ಭಕ್ತಜನರು ಸಂಜೆಯಲ್ಲಿ ನೆರೆಯುತ್ತಿದ್ದರು. ಈ ಎಲ್ಲ ಕಾರ್ಯಕ್ರಮಗಳಲ್ಲಿ ಮೊದಲನೇ ಎರಡನೇ ದಿವಸ ಶಿವಯೋಗಿ ಮಹಾದೇವ ಪಂಡಿತರೂ, ಆಮೇಲೆ ರಬಕವಿಯ ಮಹಂತಯ್ಯ ಬಾಗೋಜಿಯವರೂ, ಚಿಕ್ಕೋಡಿಯವರೂ ತರುಣ ಸಂಘದವರೂ ಭಾಗವಹಿಸುತ್ತಿದ್ದರು, ಕಡೆಯ ದಿವಸ ಬಾಲಕರಲ್ಲಿ ನಂಬರ ಪಡೆದುಕೊಂಡಂಥ ವಿದ್ಯಾರ್ಥಿಗಳಿಗೆ ಇನಾಮುಗಳು ಕೊಡಲ್ಪಟ್ಟವು ಶ್ರೀಗಳವರು ಬನಹಟ್ಟಿ ಗ್ರಾಮಕ್ಕೆ ಆಗಮಿಸಿ ತಮ್ಮ ಆಶೀರ್ವಾದದಿಂದ ನಮ್ಮನ್ನು ಪುನೀತರನ್ನಾಗಿ ಮಾಡಿದ್ದರಿಂದ ನಾವು ಧನ್ಯರಾದೆವೆಂದು ತಿಳಿಸಲಿಕ್ಕೆ ಬಹಳ ಆನಂದವಾಗುತ್ತದೆ,

ಬನಹಟ್ಟಿ ತರುಣ ಸಂಘ,
ಚ. ಚೆ. ಲಿ.

ಪತ್ರಿಕೆಗಳ ಅಭಿಪ್ರಾಯಗಳು

ವೀರಶೈವಸಾಗ್ನಿ ಎಂಬ ಶ್ರೀಯುತ ಸುರಪುರ ಒನ್ ಬಸವಾಚಾರ್ಯರು. ಇವರು ಒಬ್ಬರು ವ್ಯಕ್ತಿಯಾಗಿ ಇವರಿಂದ ಈಗ ಇರಬೇಕು ನಮ್ಮ ಸಮಾಜ ಸೇವಾಕಾಂಕ್ಷಿಗಳು ಸಾಹಸವನ್ನು ಬೆಳೆಸುತ್ತಿದ್ದಾರೆ. ವೀರಶೈವರಲ್ಲಿ ಪ್ರತಿಭಾವಂತರು ಇಂದೇ ಬೆಳೆದ ಇವರು ವೀರಶೈವ ಧರ್ಮ ಪ್ರಚಾರಕರು ಇದ್ದಾರೆ. ಇಂತಹ ಇವರ ವೀರಶೈವ ಮತದಲ್ಲಿ ಧರ್ಮ ಒಂದೇ ಆಚಾರ ವಿಚಾರಗಳಲ್ಲಿ ಯಾರು, ಯಾರು? ಶಿವಲಿಂಗವನ್ನು ಧರಿಸಿದವರೆಲ್ಲರೂ ಪೂಜ್ಯರೇ ಎಂದು ಯುಕ್ತಿಯುಕ್ತವಾಗಿಯೂ ಶಾಸ್ತ್ರಾಧಾರಪೂರ್ವಕವಾಗಿಯೂ ಬರೆದಿರುತ್ತಾರೆ. ಇದನ್ನು ಎಲ್ಲಾ ವೀರಶೈವ ಮಹಾನೀಯರು ಓದಿನೋಡಿಕೊಂಡು ಹಿಂದಿನ ಜಂಗಮದವರು ಮುಂದುವರಿಯಲಿಕ್ಕೂ ಮುಂದುವರಿದ ಜಂಗಮದವರು ನಾನು ಎಂಬ ಹೆಮ್ಮೆಯನ್ನು ಬಿಟ್ಟು ಸಂಯುಕ್ತ ಸಮಾಜಸೇವೆ ಮಾಡಲಿಕ್ಕೂ ಅನುಕೂಲವಾಗಿದೆ. ಇಂತಹ ವಿಷಯ ಸಂದರ್ಭಗಳಲ್ಲಿ ಶ್ರೀಯುತ ಬೀಳಗಿಯವರು ಅನೇಕ ಸಾಹಸಪಟ್ಟು ಸಮಾಜದ ಐಕ್ಯತೆಗಾಗಿ ಕೆಲಸಮಾಡುತ್ತಿದ್ದಾರೆ. ಇಂಥವರ ಮೇಲ್ಪಂಕ್ತಿಯನ್ನು ಎಲ್ಲಾ ವೀರಶೈವರು ಅನುಸರಿಸಿದರೆ, ನಮ್ಮ ಸಮಾಜವು ಶೀಘ್ರದಲ್ಲೇ ಉನ್ನತಿಗೆ ಬರುತ್ತಿರುವುದಕ್ಕೇನು ಸಂದೇಹವೇ ಇಲ್ಲ. ಓ, ವೀರಶೈವಬಾಂಧವರೇ ವೀರಶೈವರಲ್ಲಿ ಜಾತಿಭೇದಗಳಿಲ್ಲವೆಂಬ ಪ್ರತಿಗಳನ್ನು ಓದಿನೋಡಿರಿ. ಇದು ಈಗ ಹಾಲಿ ಇರತಕ್ಕ ಸ್ಥಿತಿಗಳಿಗೆ ವೀರಶೈವತತ್ವಜ್ಞರಾದ ಸಂಪೂರ್ಣವಾಗಿ ಎಲ್ಲಾ ವೀರಶೈವರು ನೋಡಬೇಕಾಗಿರುತ್ತೆ. ಶ್ರೀಯುತ ಬೀಳಗಿಯವರನ್ನೂ ಶ್ರೀಯುತ ಸಿದ್ದರಾಮಪ್ಪ, ವಕೀಲ್ ... ಇವರನ್ನೂ ನಾವು ಎಷ್ಟು ವಂದಿಸಿದರೂ ಸಾಲದು. ಇಂತಹ ನಮ್ಮ ಮಹನೀಯರಿಗೆ, ಹೆಚ್ಚು ಆಯುರಾರೋಗ್ಯ ಐಶ್ವರ್ಯ ಸಂಪತ್ತುಗಳನ್ನು ಸಮಾಜಸೇವೆ, ದೇಶಸೇವೆಗಳನ್ನು ದೀರ್ಘಕಾಲ ಮಾಡಲು ಶಕ್ತಿಯನ್ನು ಶ್ರೀ ಶೈಲ ಮಲ್ಲಿಕಾರ್ಜುನ ಕರುಣಿಸಲೆಂದು ನಾನು ಸ್ವಕಾಲದಲ್ಲಿ ಪ್ರಾರ್ಥಿಸುತ್ತೇನೆ.

ಎಂ ಆರ್ ವೀರಭದ್ರಯ್ಯ, ಮಾಗಡಿ.

ಅಡೂರು ತಾ|| ಹುಲೀಕೆರೆ

ಈ ಗ್ರಾಮವು ಸುಮಾರು 320 ಮನೆಗಳುಳ್ಳದ್ದಾಗಿಯೂ ಸುಮಾರು 1400 ಪ್ರಜಾಸಂಖ್ಯೆಯುಳ್ಳದ್ದಾಗಿಯೂ ಇದೆ. ಇಷ್ಟು ದೊಡ್ಡ ಗ್ರಾಮದಲ್ಲಿ 5-6 ಮಾತ್ರ ಉಪ್ಪುನೀರಿನ ಬಾವಿಗಳೂ ಮಳೆಯ ನೀರನ್ನೇ ನಂಬಿರುವ ಒಂದು ಹೊಸಕೆರೆಯೂ ಇವೆ. ಮೇಲೆ ಹೇಳಿದ ಬಾವಿಗಳಲ್ಲಿ ... ಎಲ್ಲಾ ಭಾವಿಗಳಲ್ಲೂ, ಕಟ್ಟೆಯಲ್ಲಿಯೂ ನೀರು ಇರುವುದು ಈ ವರ್ಷದಲ್ಲಾಗಿ ಮಳೆಯಾದರಂತೂ ದುರ್ಭಿಕ್ಷದಲ್ಲಿ ಅಧಿಕವಾಗ ಎಂಬ ಗಾದೆಯಂತಿರುತ್ತದೆ. ಈ ಗ್ರಾಮವು ಇಷ್ಟು ದೊಡ್ಡ ದಾದರೂ, ಸೀರಿಗೆ ... ಗ್ರಾಮಪಂಚಾಯಿತಿಯವರು ಗ್ರಾಮಾಭಿವೃದ್ಧಿ ಬಗ್ಗೆ ಬಹಳ ಶ್ರಮವಹಿಸುತ್ತಾರೆ. ಬೀದಿಗಳನ್ನು ಚೊಕ್ಕಟವಾಗಿಯೂ ಇಟ್ಟು ರಾತ್ರಿ ತಿರುಗಾಡತಕ್ಕವರಿಗೆ ಕಂಬಾ ಹೊಸೆಯ ... ಇಲ್ಲಿ ಶ್ರೀ ವ್ಯಾ|| ಬಾಯ್ಸ ಮತ್ತು ಗರ್ಲ್ಸ್ ಸ್ಕೂಲುಗಳೂ, ಒಂದು ಉರ್ದು ಸ್ಕೂಲೂ ಇವೆ. ಒಂದು ಸ್ಕೂಲಿಗೆ ಕಟ್ಟಡ ಇಲ್ಲ. ಗ್ರಾಮಸ್ಥರು ಸ್ಕೂಲ್ ವಿಚಾರದಲ್ಲಿ ಸ್ವಲ್ಪವೂ ಗಮನಕೊಡುವುದಿಲ್ಲ. ದುದರಿಂದ ಇಲಾಖಾ ಅಧಿಕಾರಿಗಳು ಅಭಿಪ್ರಾಯಪಡುತ್ತಾರೆ. ಆದ್ದರಿಂದ ಗ್ರಾಮಸ್ಥರ ಕೆಲವರು ಬಹಳ ಮತಸರ್ವಸ್ವದಿಂದ ಇಷ್ಟು ಗ್ರಾಮದಲ್ಲಿ ವಿದ್ಯಾಭಿವೃದ್ಧಿಗೋಸ್ಕರ ಹೆಚ್ಚಾಗಿ ಸಹಾಯವಾಡಲು ಮುಂದುವರಿದಿದ್ದಾರೆ. ಮ|| ರಾ|| ತಿಪ್ಪಣ್ಣನವರು ಸ್ಕೂಲ್ ಬಿಲ್ಡಿಂಗಿಗೋಸ್ಕರವಾಗಿ ಸುಮಾರು 3 ಎಕರೆ ಜಮೀನನ್ನು ಸರ್ಕಾರಕ್ಕೆ ಬಿಡುತ್ತಾರೆ ಮತ್ತು ಕಟ್ಟಡದ ಬಗ್ಗೆ ಮ|| ಸಾಹುಕಾರ್ ಶರಣಪ್ಪನವರು 100 ರೂ. ಮ|| ಸಾ|| ಬುಡ್ಡೆಸಾಹೇಬರು 25 ರೂ. ಮ|| ಸಾ|| ಹುಚ್ಚಪ್ಪನವರು 25 ರೂ. ಗಳನ್ನು ಕೊಡುವುದಾಗಿಯೂ, ಈ ಕಟ್ಟಡದ ಪೂರ್ವಭಾಗಕ್ಕೆ ಒಂದು ಕಟ್ಟಡವನ್ನು ಮ|| ರಾ|| ರುದ್ರಪ್ಪನವರು ಸ್ವಂತವೆಚ್ಚದಿಂದ ಕಟ್ಟಿಸುವುದಾಗಿಯೂ, ಮ|| ರಾ|| ದಾವಲ್ ಸಾಹೇಬರು ಮತ್ತು ಮ|| ಹಯಾತ್ ಬೇಗ್ ಸಾಹೇಬರು ಈ ಜನವರಿ ಆರ್ಥಿಕವಾಗಿ ಕನ್ನಡ ಬಾಯ್ಸ್ ಸ್ಕೂಲಿಗೆ 100 ವಿದ್ಯಾರ್ಥಿಗಳು ಕುಳಿತು ಬರುವಂತೆ ಪ್ರೋತ್ಸಾಹಿಸ ಸ್ಕೂಲಿನ ಅಭಿವೃದ್ಧಿಗೆ ಸಹಾಯವಾಗುತ್ತಾರೆ. ಮ|| ರಾ|| ಚೆನ್ನಬಸಪ್ಪನವರು ಸ್ಕೂಲ್ ಕಟ್ಟಡಕ್ಕೋಸ್ಕರವಾಗಿ 60 ರೂ. ಗಳನ್ನು ಕೊಡುವುದಾಗಿ ವಚನವಿತ್ತಿದ್ದಾರೆ. ಈ ಮಹನೀಯರುಗಳ ಉತ್ಸಾಹವನ್ನು ಗ್ರಾಮಸ್ಥರೆಲ್ಲರೂ ಪ್ರೋತ್ಸಾಹಿಸಬೇಕು. ಇಲ್ಲಿ ಒಂದು ಕನ್ನಡ ಮಿಡ್ಲ್ ಸ್ಕೂಲನ್ನು ಕೊಡುವುದಾಗಿ ಸರ್ಕಾರದವರು ಕೊಡುತ್ತಾರೆ. ಈ ಮೇಲ್ಕಂಡ ಮಹನೀಯರುಗಳಿಗೂ, ಅವರ ಕುಟುಂಬವರ್ಗದವರಿಗೂ ಭಗವಂತನು ಆಯುರಾರೋಗ್ಯೈಶ್ವರ್ಯಗಳನ್ನೀಯಲೆಂದು ಬೇಡುತ್ತೇನೆ.

ಓರ್ವ ಗ್ರಾಮವಾಸಿ

ಶ್ರೀ ಭಗವಾನ್ ಬಸವೇಶ್ವರರನ್ನು ನಿಂದಿಸುವವರು ಇನ್ನಾದರು ನಾಚುವರೇನು?

ಸದಾ ಬಸವೇಶ್ವರ ನಿಂದಾಪರರಾದ ಬೇಲೂರಿನವರನ್ನು ಒರೆಯೊಡ್ಡುವುದರಲ್ಲಿ ಮುಂದಾಳುಗಳಾದ ವಿದ್ವಾಂಸರುಗಳೂ ಗುರುಭಕ್ತರುಗಳೂ ಹಲವಾರು ಆಧಾರಗಳಿದ್ದಲ್ಲದೆ ನಾಚುವರಿದ್ದಾರೆ. ಇದು ಕರ್ನಾಟಕಕ್ಕೆ ಗೊತ್ತಿರುವುದಷ್ಟೆ. ಶ್ರೀ ಜಗದ್ಗುರು ಕೇದಾರ ಸಿಂಹಾಸನಾಧೀಶ ಶ್ರೀ 108 ನೀಲಕಂಠ ಶಿವಾಚಾರ್ಯ ಮಹಸ್ವಾಮಿಗಳವರು ಸ್ವಾಮಿ ಇರುವ ... ಬೆಳಗಾವಿಯ ದೇವರಸ್ಥಾನದಲ್ಲಿ ... ಹಿಂದೆ ವಿಷಯಗಳಿಂದ ನಾನು ಶ್ರೀಗಳವರ ದರ್ಶನಕ್ಕೆ ಹೋಗಿರುವ ಕಾಲಕ್ಕೆ ಸನ್ನಿಧಾನದಲ್ಲಿ ತಾ|| 6-1-29 ನೇ ದಿವಸ ಶ್ರೀಗಳವರ ಕಡೆಯಿಂದ ರಾಯಚೂರು ಶ್ರೀಯುತ ಸಣ್ಣರು ಹಂಪಯ್ಯ ಮತ್ತು ಬಂಡಿ ಶ್ರೀಯುತ ಶ್ರೀವೀರಬಾಹು ಇವರ ದೀಕ್ಷಾ ಸಂಸ್ಕಾರದ ಸಮಾರಂಭವು ನಡೆದು ಮಾರನೇ ದಿವಸ ಸಭೆ, ಶ್ರೀವೀರಬಾಹು ಇವರ ... ಸನ್ನಿಧಿಯಲ್ಲಿ ನಾನು ... ತಿಳಿಸುತ್ತೇನೆ. ತನ್ನ ಸನ್ನಿಧಿಯಿಂದ ದ್ರವ್ಯಸಹಾಯ ಮಾಡಿದವರಿಗೆ ಶ್ರೀಗಳವರ ಸನ್ನಿಧಿಯಲ್ಲಿ ಬಸ್ತ್ರಿಕ್ಕೊಟ್ಟರು ... ಶ್ರೀಗಳವರು ಈದಿನದ ಸಭೆ ಭಾಷಣಮಾಡಿಕೊಂಡಿದ್ದಲ್ಲಿ ಸಹಾಯಮಾಡಿದವರಲ್ಲಿ ಬರುತ್ತೇನೆಂದು ಅವರ ಕೋರಿಕೆಯಿದ್ದದ್ದರಿಂದ ಅದೇ ದಿವಸ ಒಂದು ಬೃಹತ್ ಸಭೆ ನಡೆಯಿತು. ವ್ಯವಸ್ಥೆ ಮಾಡಿಸಿದರು. ಸದರಿ ಸಭೆಯಲ್ಲಿ (1) ಬಾದಾಮಿ ಬಟ್ಟೆ ಗಳವರು ಸಮಾಜದ ಮೇಲೂ, (2) ರಾಯಚೂರು ವೀರಶೈವ ಧರ್ಮಾರ್ಥ ಸಂಸ್ಥೆಯ ಕಾರ್ಯದರ್ಶಿಗಳು ಶ್ರೀಗಳವರ ಗುರುಭಕ್ತಿಯ ಪ್ರಭಾವದ ಬಗ್ಗೆ ಶ್ರಾಸ್ತ್ರಿಗಳು ವೀರಶೈವ ಧರ್ಮದ ಮೇಲೂ, (3) ರಾಯಚೂರು ಶ್ರೀ ವೀರಶೈವ ಧರ್ಮಾರ್ಥ ಪ್ರೌಢ ಪಾಠಶಾಲಾಧ್ಯಾಪಕ ವೇ|| ಬ್ರ|| ಶ್ರೀ ಸಿದ್ಧಾಂತ ಶಾಸ್ತ್ರಿಗಳು ಸಿದ್ಧಾಂತದ ಮೇಲೂ, (4) ಬಾಡಿ ಶ್ರೀಯುತ ಪ್ರಭುಲಿಂಗ ... ಶ್ರೀ ವಿದ್ಯಾ ಶಿಕ್ಷಣದ ಮೇಲೂ ಒಬ್ಬೇ ಸ್ವಾರಸ್ಯವಾಗಿ ಭಾಷಣಮಾಡಿದಮೇಲೆ ಸಭಾ ಶೋಭಾರ್ಥ ಶ್ರೀಗಳವರು ಬಸವಣ್ಣನ ಸ್ತುತಿಯ ವಿಷಯ ಸಮಯೋಚಿತವಾಗಿ ಬಸವನ ಬಗ್ಗೆ ಸಿ ಕೆಲವು ಮಾತನಾಡಿದರು. ಬಸವಣ್ಣನ ಶಿವಭಕ್ತಿಯ ಪ್ರಭಾವವನ್ನು ಸಮಾಜದಲ್ಲಿ ಶ್ರೀ ಬಸವೇಶ್ವರನ ಸೇವೆಯಿಂದ ಮಾಡುವ ಬಗ್ಗೆ ... ಬಸವೇಶ್ವರರ ಭಕ್ತಿಯೂ ಯಾವರೀತಿಯಲ್ಲಿ ಶಿವನು ಒಲಿದನೆಂಬ ಬಸವೇಶ್ವರನ ನಮ್ಮ ಆಶ್ರಯವು ... ನಮ್ಮ ಸಮಾಜವು ಶಿವನ ... ಬಗ್ಗೆ ಒಳ್ಳೆ ಕಳಕಳಿಯಾದ ಶಬ್ದ ಅನುಭವಗಳಿಂದ ಶ್ರೀಗಳವರು ಬಸವಣ್ಣನವರ ಅನೇಕ ವಿಷಯ ಅವರ ಶೇಷ್ಠರು ಅವರು ಗಳನ್ನೆಲ್ಲ ಸೂಚಿಸಿದರಲ್ಲದೆ ... ಬಸವನ ಸ್ತುತಿಯನ್ನು ವೀರಶೈವರಿಗೆ ಒದಗುವಂತೆ ಸಂಕ್ಷೇಪವಾಗಿ ಬೋಧಿಸಿದರು. ನೋಡಿದಿರಾ ಶ್ರೀಗಳವರ ಮಹಾತ್ಮೆ. ನಮ್ಮ ಮಠಾಧಿಪತಿಗಳು ಇಂಥ ಅನೇಕ ಸಭೆಗಳಲ್ಲಿ ಬಸವೇಶ್ವರನ ವಿಷಯದಲ್ಲಿ ನಿಂದಿಸಬಾರದೆಂದು ತಿಳಿದು ಬರೆಯುವವರನ್ನು ನೋಡಿದರೆ ನಮ್ಮ ಸಮಾಜದ ದುರ್ದೈವವೆಂದು ಹೇಳಬೇಕಾಗಿದೆ. ಇನ್ನಾದರೂ ಸಮಾಜದವರು ಬೇಲೂರು ನೋಡಿ ಧರ್ಮಶಾಸ್ತ್ರ ಬಸವೇಶ್ವರನನ್ನು ನಿಂದಿಸುವುದನ್ನು ಬಿಟ್ಟು ಪಶ್ಚಾತ್ತಾಪಪಟ್ಟು ಈ ಬೀಜದ ಉದ್ದೇಶವಾಗಿದೆ.

ಪ್ರತ್ಯಕ್ಷ ದರ್ಶಿಯಾದ ಸಮಾಜದ ಹಿತಚಿಂತಕ

ದಾವಣಗೆರೆ ತಾ|| ನಾಗನೂರಿನಲ್ಲಿ ಜಾತ್ರೆ

ಈ ನಾಗನೂರಿನ ಗ್ರಾಮದಲ್ಲಿ ಶ್ರೀ ಸಿದ್ದೇಶ್ವರ ಸ್ವಾಮಿಯ ರಥೋತ್ಸವದ ಶ್ರೀ ಸುಬ್ರಹ್ಮಣ್ಯಸ್ವಾಮಿಯವರ ರಥೋತ್ಸವವು ತಾ|| ... ಬಹಳ ವಿಜೃಂಭಣೆಯಿಂದ ಸಹಸ್ರ ಜನರ ಸಮೂಹದಿಂದ 14 ರಿಂದ 22ರ ವರೆಗೆ ಸಾಂಗವಾಗಿ ಅತಿ ವೈಭವದಿಂದ ನಡೆದಿರುತ್ತೆ. ಈ ವರುಷದ ಜಾತ್ರೆಯು ಇದುವರೆಗಿನ ಎಲ್ಲಾ ಸಾಲಿನ ಜಾತ್ರೆಯನ್ನು ಸಕಲ ವಿಧದಲ್ಲಿಯೂ ಮೀರಿಸಿತೆಂದು ಹೇಳಬಹುದು. ನಮ್ಮ ದೇವಸ್ಥಾನ ಕಮಿಟಿ ಸಾಹೇಬರವರು ದಯಮಾಡಿಸುತ್ತಾರಾಗಿ ಪಡಿಸಿ ಇದ್ದು, ಮಹಾಸ್ವಾಮಿಯವರ ದರ್ಶನಲಾಭವನ್ನು ಪಡೆಯಲು ಜಾಲ್ಲೂಕಿನ ಎಲ್ಲಾ ಭಾಗಗಳಿಂದಲೂ, ಜನರು ಬಂದಿದ್ದರು. ಅತ್ಯ ಗೌರವದಿಂದ ಹಜರತ್ ದೆವ್ವಟಿ ಕಮಿಷನರ್ ಸಾಹೇಬರವರು ದಯಮಾಡಿಸಿದ್ದರು. ಒಂದ ಈ ತಾಲ್ಲೂಕಿನಲ್ಲಿ ಅಮಲ್ದಾರರಾಗಿರುವ ಹಾಲಿ ಇದ್ದಿರುವ ಸ ರಿ ಆ ರಾಗಿರುವ ಮ|| ಎಂ. ಕರಿಬಸಪ್ಪ ಬಿ.ಎ. ಯವರು ದಯಮಾಡಿ ದನಗಳ ಪರಿಷಯಲ್ಲಿ ಅಗ್ರಾಸನವನ್ನು ವಹಿಸಿ ಉತ್ತಮವಾದ ರಾಸುಗಳಿಗೆ ಬೆಳ್ಳಿಯ ಬಟ್ಟಲುಗಳು, ನಗದುಹಣ, ಮತ್ತು ಸರ್ಟಿಫಿಕೇಟ್‌ಗಳು ದಯಪಾಲಿಸಿದುದು ಬಂದಿದ್ದ ಎಲ್ಲಾ ಪ್ರಜೆಗಳಿಗೂ ಮಹದಾನಂದವನ್ನುಂಟುಮಾಡಿತು.

ಈಸಲದ ಜಾತ್ರೆಗೆ ಪಶು ಸಾವಿರಕ್ಕೆ ಮೇಲ್ಪಟ್ಟ ದನಗಳೂ ಬಿಪ್ಪತ್ತೈದು ಸಾವಿರಕ್ಕೆ ಮೇಲ್ಪಟ್ಟು ಪ್ರಜೆಗಳೂ ವಿಶೇಷವಾಗಿ ಅಂಗಡಿಗಳೂ, ನಡೆ ಒಂದಿದ್ದವು ಎಲ್ಲಾ ದಾಬಿನಲ್ಲೂ ವ್ಯಾಪಾರವು ಬಹು ಬಿರುಸಾಗಿ ನಡೆದು ಕಂಟ್ರಾಕ್ಟರ್ ದಾರರಿಗೂ, ವ್ಯಾಪಾರಸ್ಥರಿಗೂ, ಮಹದಾನಂದವಾಗಿತ್ತು. ರಾಸು ಒಂದಕ್ಕೆ 600-600 ರೂಪಾಯಿನವರೆಗೂ ಬೆಲೆಯಾಗಿ ಸುಮಾರು 50-60 ಸಾವಿರ ರೂಪಾಯಿನ ವ್ಯಾಪಾರ ನಡೆಯಿತು. ಎರಡು ನಾಟಕ ಕಂಪನಿಗಳೂ, ರಾಟವಾಳ ವಗ್ಯೆರೆ ಇತರ ಆಟಪಾಟಗಳೂ ಬಂದಿದ್ದು ಪರಿಷೆಯ ಜನರಿಗೆ ಬಹಳ ಆನಂದವನ್ನುಂಟು ಮಾಡುತ್ತಿದ್ದವು. ಮುಖ್ಯವಾಗಿ ಪರಿಷೆಗೆ ಬಂದಿದ್ದ ಸರ್ಕಾರಿ ಅಧಿಕಾರಿಗಳು ವಗ್ಯೆರೆ ಎಲ್ಲಾ ಜನರಿಗೂ ಅನುಕೂಲವಾದ ವಸತಿ ಮೊದಲಿನಿಂದಲೂ ಶಿ ... ಕುಡಿಯುವುದಕ್ಕೆ ನೀರಿನ ಸರಬರಾಯಿ ಮತ್ತು ಸ್ವಚ್ಛವನ್ನು ಕಾಪಾಡುವುದರಲ್ಲೂ ಪಂಚಾಯಿತಿ ಮತ್ತು ರೇಂಜ್ ಸ್ಯಾನಿಟರಿ ಇನ್ಸ್‌ಪೆಕ್ಟರು ಬಹಳ ಶ್ರಮಪಟ್ಟು ನೋಡಿಕೊಳ್ಳುತ್ತಿದ್ದರು. ಮನುಷ್ಯರಿಗೂ ದನಗಳಿಗೂ ಯಾವರೋಗಾದಿ ಇತರಬಾಧೆಗಳು ಯಾವುದೆ ಬಹಳ ಸುರಕ್ಷಿತವಾಗಿತ್ತು. ಅಲ್ಲದೆ ಮತ್ತು ಬೆನುಗೊಂಡ ಸಾಹುಕಾರರುಗಳೂ ಈ ತಾಲ್ಲೂಕಿನ ಅಂಚಿನಲ್ಲಿ ವೆಲ್ಲ ರಿವರ್ ಮನೆಯ ಇತರ ಭಕ್ತಾದಿಗಳೂ ಸಹ ನೂರು ದೇವರ ಉತ್ಸವಾದಿಗಳನ್ನು ಮತ್ತು ಎಲ್ಲಾ ಕೋಲುಸಮಾರಾಧನೆಗಳನ್ನು ಸಾರಲ್ಕೆ ಸಂತರ್ಪಣೆಗಳನ್ನು ಅತಿ ವೈಭವದಿಂದ ನೆರವೇರಿಸಿದರು. ಈ ಪಾ ನಮ್ಮ ಅನುವಾದಾರರು ಮತ್ತು ಪೊಲೀಸ್ ಇನ್ಸ್‌ಪೆಕ್ಟರು ಸಹ ಬಂದಿದ್ದರು. ಜಾತ್ರೆಗೆ ಅನುಕೂಲವಾದ ಉತ್ತಮವಾದ ರಸ್ತೆಗಳ ... ಇವಿಲ್ಲಿ ತಾ ಮತ್ತು ರಾತ್ರಿ ಉತ್ಸವಗಳ ... ಅನೇಕರಿಗೆ ... ಹಾಗೂ ಸಂತರ್ಪಣೆ ಮತ್ತು ಸುರಕ್ಷಿತವಾಗಿ ಪ್ರಯಾಣಿಕರ ಸೌಕರ್ಯ ಕ್ಕಾಗಿ ಮೋಟಾರ್ ಬಸ್ಸುಗಳು ಬಿಡಲ್ಪಟ್ಟು ಪ್ರಮುಖವಾದ ರಸ್ತೆಯನ್ನು ಸರಿಪಡಿಸಿ ಪ್ರತಿಯೊಂದು ದೇವತಾಕಾರ್ಯ ಉತ್ಸವಗಳು ಮತ್ತು ಸಂತರ್ಪಣೆಗಳು ಇವುಗಳನ್ನು ನಮ್ಮ ಅನುಕೂಲವಾಗಿ ಬಹು ಶ್ರದ್ಧೆಯಿಂದ ನೋಡಿದರು. ಸಹಸ್ರಾರು ಜನಗಳಿಗೆ ಧರ್ಮದರ್ಶನವಾಗಿ ಶ್ರೀ ಸ್ವಾಮಿಯವರ ಬಂದಿದ್ದ ಜನರಲ್ಲಿ ಭಕ್ತಿಯೂ ಉಂಟಾಗಿ ಸದ್ಭಾವನೆ ಸಮಾಜ ವೈಭವದಿಂದ ನೆರವೇರಿದವು. ಇದಲ್ಲದೆ ನಮ್ಮ ಅಮಲ್ದಾರರ ರಾಜಭಕ್ತಿ ದೈವಭಕ್ತಿಗಳಿಂದ ಸರ್ವರಲ್ಲಿಯೂ ಯಾವ ವ್ಯತ್ಯಾಸವೂ ಇಲ್ಲದೆ ಜನಸಾಮಾನ್ಯರಿಗೆ ... ಜಾತ್ರೆಯು ಸಾಂಗವಾಗಿ ನೆರವೇರಿತು.

ಪ್ರತ್ಯಕ್ಷ ದರ್ಶಿ

ಶ್ರೀ ಜಗದ್ಗುರುಗಳವರ ರಜತೋತ್ಸವವನ್ನು ಏಕೆ ಮಾಡಬೇಕು?

ಒಂದಾನೊಂದು ಕಾಲದಲ್ಲಿ ಕೇವಲ ವೈಭವ ಸ್ಥಿತಿಯಲ್ಲಿದ್ದು ಕಾಲಗತಿಯಿಂದ ಯಾವ ನಮ್ಮ ವೀರಶೈವ ಸಮಾಜವು ಕ್ಷೀಣಾವಸ್ಥೆಯನ್ನು ಹೊಂದಿ ವಿದ್ಯಾಭಿವೃದ್ಧಿ, ಸಮಾಜಾಭಿವೃದ್ಧಿ ವಗ್ಯೆರೆಗಳಿಗೆ ಮೂಲಕಾರಣವಿಲ್ಲದೆ ಹಿಂದಿನ ಸ್ಥಿತಿಯಲ್ಲಿದ್ದಿತೋ ಆ ಸಮಯದಲ್ಲಿ ನಮ್ಮಗಳ ಸುಕೃತದಿಂದ ಚಿತ್ರದುರ್ಗದ ಶ್ರೀಮನ್ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರು ನಮ್ಮ ಜನಾಂಗಾಭಿವೃದ್ಧಿಗೆ ಮೂಲಕಾರಣವಾದ ಸಮಾಜದವರೆಲ್ಲ ಅಜ್ಞಾನದಲ್ಲಿದ್ದುದನ್ನು ತಿಳಿದು, ಸಮಾಜಾಭಿವೃದ್ಧಿಗಾಗಿ ಜನಗಳಲ್ಲಿ ಪ್ರಯತ್ನಿಸಿ, ವಿದ್ಯಾಭಿವೃದ್ಧಿ, ಸಮಾಜ ಸುಧಾರಣೆ ಮೊದಲಾದ ಆಂದೋಳನಗಳನ್ನು ಕೈಗೊಂಡು ಸಮಾಜವನ್ನು ಈಗಿನ ಉನ್ನತ ಸ್ಥಿತಿಗೆ ತಂದರು. ಇದಕ್ಕಾಗಿ ಸಮಾಜದವರು ಮಹಾಸ್ವಾಮಿಗಳವರಿಗೆ ಕೃತಜ್ಞರಾಗಿರಬೇಕಾದದ್ದಾಗಿದೆ. ಮಹಾಸ್ವಾಮಿಯವರ ಕೇವಲ ವೈರಾಗ್ಯದಿಂದ ತಮ್ಮ ಸಿಕ್ಷಣವೃತ್ತಿಯಿಂದ ... ಭಕ್ತರ ಹಿತವನ್ನೇ ಕುರಿತು ಸಕ್ರಿಯವಾಗಿ ದುಡಿದು ಈ ನಮ್ಮ ಸಮಾಜವು ಈ ಸ್ಥಿತಿಗೆ ಬರುವಂತೆ ಮಾಡಿದುದನ್ನು ಹೇಳಬೇಕಾಗಿಲ್ಲ. ಇದನ್ನರಿತೇ ಮಹಸ್ವಾಮಿಗಳವರು ಬೆಳೆದಿರುವುದನ್ನು ಲಕ್ಷಿಸದೆ ಸಕಲ ಪ್ರಯತ್ನದಿ ಇತರ ಸಮಾಜಗಳಂತೆ ನಮ್ಮ ಸಮಾಜವನ್ನು ಅಗ್ರಸ್ಥಾನಕ್ಕೆ ತಂದರು. ಸಮಾಜಾಭಿವೃದ್ಧಿಗೆ ವಿದ್ಯೆಯೇ ಮೂಲವೆಂದು ತಿಳಿದು ಅದನ್ನು ಹರಡಲು ಲಕ್ಷಾಂತರ ರೂಪಾಯಿಗಳ ವ್ಯಯದಿಂದ ಅಲ್ಲಲ್ಲಿ ವಿದ್ಯಾರ್ಥಿಗಳ ಊಟಕ್ಕೆ ಛತ್ರಗಳನ್ನು ಏರ್ಪಡಿಸಿ ಬಡವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಗಳನ್ನು ಕೊಡುತ್ತ, ವಿದ್ಯಾರ್ಥಿಗಳಿಗೆ ವೇತನವನ್ನು ಕೊಟ್ಟು ವಿದ್ಯಾಭ್ಯಾಸಮಾಡುವಂತೆ ಪ್ರೋತ್ಸಾಹಿಸಿದರು. ಸಂಸ್ಕೃತ ವಿದ್ಯಾಭ್ಯಾಸಕ್ಕೆ ಅನೇಕ ರೀತಿಯಿಂದ ಉತ್ತೇಜನವನ್ನು ಕೊಟ್ಟು ಸಂಸ್ಕೃತದಲ್ಲಿದ್ದ ಅನೇಕ ಗ್ರಂಥಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿಸಿ ವಿದ್ಯಾಭ್ಯಾಸ ಮಾಡಿಕೊಂಡು ಬರಲು ಸಮಾಜದವರನ್ನು ಪ್ರೋತ್ಸಾಹಿಸಿದರು. ಧರ್ಮಗ್ರಂಥಗಳನ್ನು ಬರೆಯಿಸಿ ಪ್ರಕಟಿಸಿ ಈ ರೀತಿಯಾಗಿ ಬರೆದಂತಹ ಧರ್ಮ ಸಾಹಿತ್ಯವನ್ನು ಪ್ರಚಾರಮಾಡಿದರು. ಇದರಿಂದ ವಿದ್ಯಾಭಿವೃದ್ಧಿಗೆ ಅನುಕೂಲವಾಗಿ ಈಗ ನಮ್ಮಲ್ಲಿ ವಿದ್ವಾಂಸರು ಅನೇಕರಿದ್ದಾರೆ. ಪ್ರಭುಗಳಿಗೆ ಪ್ರಾರ್ಥಿಸಿದರು. ಇಂತಹ ಮಹಾಪುರುಷರ ನೇತೃತ್ವದಲ್ಲಿ ನಮ್ಮ ಸಮಾಜವು ಸುಧಾರಣೆಯ ದಿಕ್ಕಿನಲ್ಲಿ ಮುಂದುವರಿದಿದೆ. ಸಮಾಜಕ್ಕಾಗಿ ಮಹಾಸ್ವಾಮಿಗಳವರು ನಮ್ಮ ಸಮಾಜದವರಿಗೆ ವಿದ್ಯಾಭ್ಯಾಸದ ಬಗ್ಗೆ ಕನ್ಯಾಶಾಲೆಗಳನ್ನು ಸ್ಥಾಪಿಸಿ ನಮ್ಮ ಸಮಾಜದ ಹೆಣ್ಣುಮಕ್ಕಳಿಗೆ ವಿದ್ಯೆಯನ್ನು ಕಲಿಸಲು ಏರ್ಪಡಿಸಿದರು. ... ಈಗಿನ ಸ್ಥಿತಿಯಲ್ಲಿ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆ ... ಸಮಾಜಕ್ಕೆ ಉಪಯುಕ್ತವಾದ ಕೆಲಸಗಳನ್ನು ಮಾಡುತ್ತಿದ್ದಾರೆ. ಶ್ರೀಗಳವರು ರಾಜಭಕ್ತಿಯೂ ದೇಶಭಕ್ತಿಯೂ ಉಳ್ಳವರಾಗಿ ದೇಶೋದ್ಧಾರ ಕಾರ್ಯಗಳಿಗೂ ಅನೇಕರೀತಿಯಿಂದ ಸಹಾಯಮಾಡುತ್ತಿರುವರು. ಇಂತಹ ಮಹಾಸ್ವಾಮಿಗಳವರಿಗೆ ಅವರ ಪಟ್ಟಾಭಿಷೇಕವಾಗಿ ಇಪ್ಪತ್ತೈದು ವರ್ಷಗಳಾದುವು. ಈ ಸಂತೋಷ ಸಮಯದಲ್ಲಿ ಜಗದ್ಗುರುಗಳ ಪಟ್ಟಾಭಿಷೇಕ ಸ್ಮರಣಾರ್ಥವಾಗಿ ಯಾವತ್ತು ವೀರಶೈವರು ಮಹಾಸ್ವಾಮಿಗಳವರ ರಜತೋತ್ಸವವನ್ನು ನೆರವೇರಿಸಬೇಕೆಂಬುದಾಗಿ ಆತ್ಯಂತ ಕಳಕಳಿಯ ಪ್ರಾರ್ಥನೆ.

ಯಾವ ಮಹಾಪುರುಷರಿಂದ ಬಲವು ಪಡೆದು ಬರುತ್ತಿರುವುದೋ, ಯಾವ ಮಹಾಪುರುಷರ ಸತತ ಪ್ರಯತ್ನದಿಂದ ನಮ್ಮ ಜನಾಂಗವು ಸುಧಾರಣೆಯ ಶಿಖರವನ್ನೇರುತ್ತಿದೆಯೋ, ಅಂತಹ ಮಹಾಸ್ವಾಮಿಗಳವರಾದ ಶ್ರೀ ಮನ್ನಿರಂಜನ ಜಗದ್ಗುರುಗಳವರ ರಜತಮಹೋತ್ಸವವನ್ನು ನೆರವೇರಿಸಿ ನಮ್ಮ ಭಕ್ತಿಯನ್ನು ತೋರ್ಪಡಿಸಲು ಇದೇ ಸುಸಮಯವಾಗಿದೆ. ಆದುದರಿಂದ ಸರ್ವಭಕ್ತರೂ ಈ ವಿಷಯದಲ್ಲಿ ಹೆಚ್ಚಾಗಿ ಮುತುವರ್ಜಿಯನ್ನು ವಹಿಸಿ ಶ್ರೀಗಳವರ ರಜತಮಹೋತ್ಸವವನ್ನು ಅತ್ಯಂತ ವೈಭವದಿಂದ ನೆರವೇರಿಸಬೇಕು ಮತ್ತು ಅವರ ರಜತೋತ್ಸವದ ಜ್ಞಾಪಕಾರ್ಥವಾಗಿ ಯಾವುದಾದರೂ ಶಾಶ್ವತವಾದ ಕೆಲಸವನ್ನು ಮಾಡಬೇಕು. ಈ ಶಾಶ್ವತವಾದ ಕೆಲಸ ಯಾವುದೆಂಬುದನ್ನು ಸಮಾಜದವರು ನಿರ್ಧರಿಸಬೇಕು. ಈ ರಜತೋತ್ಸವವು ಯಾವ ದಿವಸ ನಡೆಯುವುದಾಗಿದೆಯೋ ಆ ದಿವಸ ವೀರಶೈವರಿರುವ ನಾಲ್ಕು ಮನೆ ಹಳ್ಳಿಯಲ್ಲಿಯೂ ಎಂದರೆ ಭರತಖಂಡದಲ್ಲೆಲ್ಲಾ ಉತ್ಸವವು ನೆರವೇರಿ ಅನ್ನಸಂತರ್ಪಣೆ ಮೊದಲಾದುವುಗಳು ನಡೆಯಬೇಕು. ದೇವೋಪಾಸಕರಿಗೆ ಧನವನ್ನು ಕೊಡುವಂತೆ ಮತ್ತು ಪೂಜ್ಯರಾದ ದಿವಸ ಉತ್ಸವ ನಡೆಸಬೇಕು. ನಮ್ಮ ವೀರಶೈವ ಮಹನೀಯರೆಲ್ಲ ಈ ರೀತಿಯಾಗಿ ಸಮಾಜದ ಸರ್ವರೂ ಅನ್ಯೋನ್ಯ ಪ್ರೀತಿಯಿಂದ ಸಹಕರಿಸಿ ಮೇಲ್ಕಂಡ ರಜತೋತ್ಸವವನ್ನು ಅತ್ಯಂತ ವೈಭವದಿಂದ ನೆರವೇರಿಸಿ ವೀರಶೈವರ ಗುರುಭಕ್ತಿ ತೋರಿಸಬೇಕಾಗಿರುವ ಅನ್ನ ಸಮಾಜದವರಿಗೆ ಕೀರ್ತಿ ಹರ್ಷವನ್ನುಂಟುಮಾಡಬೇಕಾಗಿ ಕೋರುತ್ತೇನೆ.

ಆನೆಕೊಂಡದ ಮುಪ್ಪಣ್ಣ, ದಾವಣಗೆರೆ.

ದೊಡ್ಡಬಳ್ಳಾಪುರದ ಶ್ರೀ ನಾಟೀ ಸುಬ್ರಹ್ಮಣ್ಯಸ್ವಾಮಿ ಜಾತ್ರೆ

ಕಳೆದ ಜನವರಿ ತಾ|| 16 ರಲ್ಲಿ ಬ್ರಹ್ಮರಥೋತ್ಸವವು ನಡೆಯಿತು. ಜನವರಿ 20 ನೇ ತಾರೀಖು ಧನಿವಾರ ಉತ್ಸವವಾದ ರಾಸುಗಳಿಗೆ ಬಹುಮಾನಗಳನ್ನು ಕೊಡುವ ಸಮಾರಂಭವು ಜರುಗಿದ ನಮ್ಮ ದಿವಾನ್ ಸಾಹೇಬರವರ ಅಧ್ಯಕ್ಷತೆಯಲ್ಲಿ ನೆರವೇರಿತು. ಈ ಮಹಾಸಭೆಗೆ ಹಾಸನ ಡಿಸ್ಟ್ರಿಕ್ಟಿನ ಡೈರೆಕ್ಟರವರ ಕುಟುಂಬ ಮಿಸೆಸ್ ಪಾರ್ಕ್ಸರವರು ಅವರ ಪುತ್ರಿಯರು, ಮ|| ಗಳಾದ ನಗರ್ಸ್ತ್ರ ಸಹಾಯಕ ಸಂಘದ ರಿಜಿಸ್ಟ್ರಾರ್ ಕೆ ಎಚ್ ರಾಮಯ್ಯನವರು, ಅವರ ಕುಟುಂಬ ಶ್ರೀಮತಿ ದೇವಮ್ಮನವರು ಡೆಪ್ಯುಟಿ ಕಮಿಷನರ್ ಜಿ. ಬಿ. ಚೆಟ್ಟಿಯಾರ್‌ರವರು, ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟ್ ಬಿ. ಅಮೃತಾಚಾರ್ಯರು, ವೈಸ್ ಪ್ರೆಸಿಡೆಂಟ್ ಬಿ. ಮುನಿರಾಮಯ್ಯನವರು, ದಿವಾನ್‌ರವರ ಪ್ರೈವೇಟ್ ಸೆಕ್ರೆಟರಿಯವರು, ವರ್ಕ್ಸ್‌ನ ಅಸಿಸ್ಟೆಂಟರು, ಮತ್ತು ಸೂಪರಿಂಟೆಂಡೆಂಟರವರು, ರೆವಿನ್ಯೂ ಸಬ್‌ಡಿವಿಜನ್ ಆಫೀಸರ್ ಅ ಮುಸ್ತಫರವರು, ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರು, ಎಗ್ರಿಕಲ್ಚರ್ ಸೂಪರಿಂಟೆಂಡೆಂಟರು, ದೊಡ್ಡಬಳ್ಳಾಪುರದ ಮುನ್ಸಿಫರವರ ಅಮಲ್ದಾರರು, ರೇಂಜ್ ಎಜುಕೇಷನ್ ಅಸಿಸ್ಟೆಂಟ್ ಇನ್ಸ್‌ಪೆಕ್ಟರು, ಅಡ್ವೊಕೇಟ್ ಸಿದ್ದಲಿಂಗಯ್ಯನವರು, ವಿ. ಕೆ. ನಾರಾಯಣರಾವ್‌ರು, ಡಿಸ್ಟ್ರಿಕ್ಟ್ ಎಕ್ಸೈಜ್ ಆಫೀಸರ್ ಅಬ್ದುಲ್ ಖಾದರ್‌ರವರು, ಗೋವಿಂದರಾವ್ ಮಿ ರಾಜಣ್ಣನವರು, ಚಿಕ್ಕಬಳ್ಳಾಪುರದ ವಂಶ ಟಿ. ಕಾಮತರು, ಯಲಹಂಕದ ಪಿಳ್ಳೆ ಮುನಿಯಪ್ಪನವರು, ಡಿಸ್ಟ್ರಿಕ್ಟ್ ಪೊಲೀಸ್ ಸೂಪರಿಂಟೆಂಡೆಂಟ್ ಸಿದ್ದಲಿಂಗಯ್ಯನವರು ದೇವಸ್ಥಾನದ ಧರ್ಮದರ್ಶಿಗಳಾದ ಕೋಲಾರದಯ್ಯನವರು, ಶ್ರೀಕಂಠಪ್ಪನವರು, ಹೆಬ್ಬಾಳು ಪುಟ್ಟಣ್ಣ ಶೆಟ್ಟರು ವೀರೇಗೌಡರು ಹನುಮೇಗೌಡರು ಅಶ್ವತ್ಥನಾರಾಯಣಶೆಟ್ಟರು, ವೆಂಕಟಗಿರಿಯಪ್ಪನವರು, ಸರದಾರ್ ಚಿಕ್ಕಣ್ಣಶೆಟ್ಟರು, ದಾವ ಭ್ಯಾಮಪ್ಪನವರು, ಲಕ್ಷ್ಮೀನಾರಾಯಣಪ್ಪನವರು ವೈ ಸಿದ್ದಪ್ಪನವರು ಆಂಜನಪ್ಪ ಲಕ್ಷ್ಮೀನಾರಾಯಣಪ್ಪರು, ರಾಮಯ್ಯಶೆಟ್ಟರು, ಎನ್. ಜಿ. ಕರಿಬಸವನವರು, ಬೋರಣ್ಣಗೌಡಪ್ಪನವರು, ಟಿ. ತಮ್ಮಣ್ಣನವರು, ಡಿ ಶೋಣಪ್ಪನವರು, ಸಿ ನಂಜುಂಡಪ್ಪನವರು ಮುಂತಾಗಿ 5-6 ಸಾವಿರಜನರು ದಯಮಾಡಿಸಿದ್ದರು.

ಈ ಜಾತ್ರೆಯಲ್ಲಿ ಜೋಡಿ ಒಂದಕ್ಕೆ 50 ರೂ. ಮೊದಲ್ಗೊಂಡು 1000 ರೂ. ವರೆಗೆ ಬೆಲೆಯಾಗಿರುವ ಸುಮಾರು 8000 ಜತೆಗಳು ಸೇರಿದ್ದುವು. ಸುಮಾರು ಲಕ್ಷ ರೂಪಾಯಿಗಳವರೆವಿಗೂ ದನಗಳ ವ್ಯಾಪಾರವಾಯಿತು. ಸುಮಾರು 80000 ಜನರು 500 ಅಂಗಡಿಗಳು 30000 ಗಾಡಿಗಳು ಸೇರಿದ್ದು ಜನ ಸ್ತೋಮದಿಂದ ಜಾತ್ರೆ ದಿಕ್ಕುಗಳಲ್ಲಿಯೂ 3-4 ಮೈಲಿಗಳ ಪ್ರದೇಶವರೆಗೆ ಒಂದೇ ವಿಶಾಲವಾದ ಹೊಸ ನಗರವು ನಿರ್ಮಿತವಾಗಿತ್ತೋ ಕಂಡೆಂತಿತ್ತು. ಇಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಮ|| ಎ. ಜಿ. ರಾಮಯ್ಯನವರು ದಯೆಯಿಂದ ಶೇಕಡಾ ಇಪ್ಪತ್ತರಷ್ಟು ನರನಾರಿಯರಿಗೆ ಅನುಕೂಲವಾಗುವಂತೆ ಏರ್ಪಡಿಸಿ ಜನರ ಕ್ಷೇಮಕ್ಕಾಗಿ ತಾಕೀತುಮಾಡಿದ್ದರು. ಆನ್ಯರ ಹಾಗೂ ಡಾಕ್ಟರ್ ಇನ್ಸ್‌ಪೆಕ್ಟರು ಮತ್ತು ಸುಬ್ಬಣ್ಣನವರು ವ್ಯವಸ್ಥೆಯ ವಿಷಯಗಳನ್ನು ಬಹು ವ್ಯವಸ್ಥೆಯಿಂದ ನೋಡಿಕೊಂಡಿದ್ದರು.

ವೆಟರಿನರಿ ದಾಕ್ಟರವರು, ಪೋಲೀಸಿನವರು ಜಂತು ಮತ್ತು ದನಗಳನ್ನು ಸ್ವಸ್ಥಳಕ್ಕಾಗಿ ನಡೆಸಿದರು. ರೈಲ್ವೆ ಇಲಾಖೆಯವರು ಸ್ಪೆಷಲ್ ಟ್ರೈನುಗಳನ್ನು ಬಿಟ್ಟು ಜನರಿಗೆ ಅನುಕೂಲ ಪಡಿಸಿದರು. ಮೋಟಾರ್ ಬಸ್ಸುಗಳವರು ಜನರ ಹಿತಕ್ಕಾಗಿ ಅನೇಕವೇಳೆ ಬಸ್ಸುಗಳನ್ನು ಬಿಟ್ಟು ಅನುಕೂಲ ಮಾಡಿಕೊಟ್ಟರು.

ನಮ್ಮ ದಿವಾನ್ ಸಾಹೇಬರವರು ಅಮೃತಮಹಲಿನ ಟಿಪ್ಪಣಿ ಈ ಬಗ್ಗೆ ಜನರಿಗೆ ಬಹುಮಾನ ಕೊಡುತ್ತಿರುವುದು ಈ ಜಾತ್ರೆಯಲ್ಲಿ ನಡೆದ ರಾಜಯೋಗ್ಯ ನ್ಯಾಯ ಸನ್ನಿವೇಶದಿಂದ ಬಹುಮಾನಿಸಿಕೊಂಡರು. ಅನಂತರ ದಿವಾನ್‌ರವರು ಭಾಷಣಮಾಡುತ್ತಾ ಅವರಿಗೆ ದೇವರ ಮುಂಗಡ ಬಹುಮಾನ ಪತ್ರ ಕೊಟ್ಟು ಅಧ್ಯಕ್ಷತೆಯಿಂದ ರಾಷ್ಟ್ರೀಯ ಭಾವನೆಯನ್ನು ಕೆಲ ಪ್ರಚಾರವನ್ನು

ಸ್ವೀಕರಿಸಿ ಅಲ್ಲಿಂದ ವೃಷಭಮಹೋತ್ಸವದ ಸತ್ರಕ್ಕೆ ದಯಮಾಡಿಸಿ ಮಿತ್ರಮಂಡಳಿಯವರ ಫಲಾಹಾರವನ್ನು ಎತ್ತಿದರು. ಈ ಫಲಾಹಾರಕ್ಕೆ ಮತ್ತು ಇತರ ನಿಲ್ದಾಣ ಏರ್ಪಾಡುಗಳಿಗೆ ಸಬ್‌ಡಿವಿಜನ್ ಆಫೀಸರ್ ಮ ಟಿ. ... ಡಿಸ್ಟ್ರಿಕ್ಟ್ ಎಕ್ಸೈಜ್ ಆಫೀಸರು ಡಿಸ್ಟ್ರಿಕ್ಟ್ ... ಸಿಂಧಿಸಿದ್ದರು. ... ವಾಲಂಟಿಯರ್ ... ಆ ಮರು ... ಶ್ರೀನಿವಾಸ ... ಸಮಯಕ್ಕೆ ... ತಕ್ಕುದಾಗಿ ... ದರ್ಶನವಾದನಂತರ ದಿವಾನ್‌ರವರ ಮತ್ತು ಕೆಲವು ದೊಡ್ಡ ಮನುಷ್ಯರ ಭಾವಚಿತ್ರಗಳು ತೆಗೆಯಲ್ಪಟ್ಟವು. ಅನಂತರ ದಿವಾನ್ ಸಾಹೇಬರವರು ತಮ್ಮ ಪರಿವಾರದೊಂದಿಗೆ ದೇವಸ್ಥಾನದ ಜಾತ್ರೆಯಲ್ಲಿ ದನಗಳ ಪರೀಕ್ಷೆ ನಡೆಯುವ ಸ್ಥಳಕ್ಕೆ ಬಂದು ಬಹುಮಾನವನ್ನು ಹೊಂದಿದ್ದ ಅತ್ಯಂತ ಉತ್ಕೃಷ್ಟವಾದ ರಾಸುಗಳನ್ನು ಪರಾಮರಿಸಿ ಮೈಸೂರು ಸಂಸ್ಥಾನದ ಎಲ್ಲಾ ಡಿಸ್ಟ್ರಿಕ್ಟ್‌ಗಳ ಕಡೆಯಿಂದಲೂ ಬಂದಿದ್ದ ರಾಸುಗಳ ವಿಷಯವನ್ನು ತಿಳಿದು ಸಂತುಷ್ಟರಾದರು. ಮಹಾಸಭೆಯವರ ಜಯಘೋಷದ ಮಧ್ಯದಲ್ಲಿ ನಮ್ಮ ದಿವಾನ್ ಸಾಹೇಬರವರು ಮಹಾಸಭೆಯಲ್ಲಿ ಆಗ್ರಾಸನವನ್ನು ವಹಿಸಿದರು. ದೇವರ ಪ್ರಾರ್ಥನೆಯು, ವಿದ್ಯಾರ್ಥಿಗಳ ಸ್ವಾಗತ ಗೀತೆಗಳಾದನಂತರ ಮ॥ ಟಿ. ಕೊಂಗಾಡಿಯಪ್ಪನವರು ಜಾತ್ರೆಯ ಸಂಬಂಧವಾದ ವಾರ್ತೆಯುಳ್ಳ ರಿಪೋರ್ಟನ್ನು ಓದಿ ಒಪ್ಪಿಸಿದರು. ಅದರಲ್ಲಿ

(1) ರಂಗಮಂಟಪವನ್ನು ಕಟ್ಟಿಸತಕ್ಕದ್ದು.

(2) ದೇವಸ್ಥಾನದ ಸುತ್ತಲೂ ಪೌಳಿಗಳೂ ನೆಲಕ್ಕೆ ... ಕಲ್ಲುಗಳನ್ನು ಹಾಕಿಸತಕ್ಕದ್ದು.

(3) ಮಹಾದ್ವಾರವನ್ನು ಅಂದವಾಗಿಯೂ, ದೊಡ್ಡದಾಗಿಯೂ ಕಟ್ಟಿಸತಕ್ಕದ್ದು.

(4) ರಥವನ್ನು ಕಟ್ಟಿಸತಕ್ಕದ್ದು.

(5) ಧರ್ಮಶಾಲೆಯನ್ನು ಭದ್ರವಾಗಿ ಮಾಡತಕ್ಕದ್ದು.

(6) ರೈಲ್ವೆಸ್ಟೇಷನ್ನಿಂದ ರಸ್ತೆಯನ್ನು ಸರಿಪಡಿಸಿ ಮೋಟಾರ್ ಬಸ್ಸುಗಳ ಸಂಚಾರಕ್ಕೆ ಅನುಕೂಲಪಡಿಸತಕ್ಕದ್ದು.

(7) ಬಂಡಿಹಳ್ಳವನ್ನು ಸರಿಪಡಿಸಿ ಗಾಡಿಗಳ ಸಂಚಾರಕ್ಕೆ ಅನುಕೂಲಪಡಿಸತಕ್ಕದ್ದು.

(8) ನೀರಿಗೆ ಅನುಕೂಲವಾಗುವಂತೆ 2 ಕೆರೆಗಳನ್ನೂ, ಕೆಲವು ಗೋಕಟ್ಟೆಗಳನ್ನೂ ಕಟ್ಟಿಸತಕ್ಕದ್ದು.

(9) ದೇವಸ್ಥಾನದ ಕೆಲಸ ಕಾರ್ಯಗಳನ್ನು ನಡೆಸಲು ಸ್ಕೀಮನ್ನು ಏರ್ಪಡಿಸತಕ್ಕದ್ದು. ಮುಂತಾದ ವಿಷಯಗಳು ಗರ್ಭಿತವಾಗಿದ್ದುವು. ದಿವಾನರು ಈ ವಿಷಯಗಳನ್ನು ಆಲೋಚಿಸಿ ಅನುಕೂಲಪಡಿಸುವುದಾಗಿಯೂ, ಈ ಮಹಾಕ್ಷೇತ್ರಕ್ಕೆ ವಿದ್ಯುದ್ದೀಪಗಳನ್ನು ಹಾಕಿಸಲು ಜನರ ಸಹಾಯ ಮಾಡುವುದಾದರೆ ಸರ್ಕಾರದವರೂ ತಮ್ಮ ಪಾಲಿನ ಸಹಾಯವನ್ನು ಮಾಡತಕ್ಕದೆಂದೂ ಅಪ್ಪಣೆ ಕೊಟ್ಟರು. ಆಗ ಸಭಿಕರು ಗಟ್ಟಿಯಾಗಿ ಜಯಘೋಷ ಮಾಡಿ ಕರತಾಡನಗಳ ಮೂಲಕ ತಮ್ಮ ಸಂತೋಷವನ್ನು ಪ್ರದರ್ಶಿಸಿದರು. ಉತ್ಕೃಷ್ಟವಾದ ರಾಸುಗಳಿಗೆ ಸುವರ್ಣಪದಕಗಳನ್ನೂ, ಬೆಳ್ಳಿಪದಕಗಳನ್ನೂ ಸರ್ಟಿಫಿಕೇಟುಗಳ ಜೊತೆಯಲ್ಲಿ ತಮ್ಮ ಅಮೃತಹಸ್ತದಿಂದ ದಯಪಾಲಿಸಿದರು. ದನಗಳ ಪ್ರದರ್ಶನದಲ್ಲಿ ಈ ಭಾಗ ಕ್ಷೇತ್ರದಲ್ಲಿ ದಿವಾನ್‌ರವರ ಬಹುಮಾನವನ್ನು ಅಲಂಕರಿಸಿದವರಿಗೆ ನಮ್ಮ ದಿವಾನ್ ಸಾಹೇಬರವರೇ ಬಹುಮಾನವನ್ನು ಹಂಚಿದವರಲ್ಲಿ ಮೊದಲಿಗರು. ಈ ಮಹಾಸಭೆಯ ಸಂದರ್ಶನದಿಂದ ಸರ್ವರೂ ಸಂತೋಷಪಟ್ಟು ತಮ್ಮ ವಂದನೆಗಳನ್ನು ಅರ್ಪಿಸಿದರು. ... ಮೂಲಕ ಅರ್ಪಿಸಿದರು. ಅಮಲ್ದಾರ್ ಮ ಬಿ. ಕೆ. ಶ್ರೀನಿವಾಸಯ್ಯನವರು ತಮ್ಮ ತಂದೆ ... ಅವರಿಂದ ಆರಂಭವಾದ ಈ ಪತ್ರಿಕೆಯನ್ನು ... ಮಾಡಿದುದನ್ನು ನಮ್ಮ ದಿವಾನ್ ಸಾಹೇಬರವರು ಪರಾಮರಿಸಿ ತಮ್ಮ ಸಂತೋಷವನ್ನು ಪ್ರದರ್ಶಿಸಿದರು. ಬಳಿಕ ಮಂಗಳವಾದ್ಯಗಳು ಆಗುತ್ತಿರುವಲ್ಲಿ ದಿವಾನ್ ಸಾಹೇಬರವರಿಗೂ ಸಭಿಕರಿಗೂ ಹಾರ ತುರಾಯಿಗಳನ್ನು ಸಮರ್ಪಿಸಿದರು. ನಮ್ಮ ದಿವಾನ್ ಸಾಹೇಬರವರು ಇಂಗ್ಲಿಷಿನಲ್ಲಿ ದಯಪಾಲಿಸಿದ ಅಪ್ಪಣೆಯನ್ನು ಮ॥ ಎಸ್ ರಾಮಯ್ಯನವರು ಕನ್ನಡದಲ್ಲಿ ಸಭಿಕರಿಗೆ ತಿಳಿಯುವಂತೆ ತಮ್ಮ ಗಂಭೀರವಾಣಿಯಿಂದ ಅನುವಾದಿಸಿದರು.

ಅಲ್ಲಿ ನೆರೆದಿದ್ದ ರೈತರಿಗೆಲ್ಲಾ ... ಏರ್ಪಡಿಸಿ ಊಟೋಪಚಾರವನ್ನು ಮಾಡಿ ರಾತ್ರಿ 8 ಗಂಟೆಗೆ ಪಾಳಯದಿಂದ ಪ್ರಯಾಣವಾಗಿ ಬೆಂಗಳೂರಿಗೆ ದಯಮಾಡಿಸಿದರು.

ಈ ದಿವ್ಯಕ್ಷೇತ್ರದಲ್ಲಿ ಸತ್ರಗಳನ್ನು ಕಟ್ಟಿಸಿರುವ ಧರ್ಮಕರ್ತರು:

1 ವೈಶ್ಯರ ಮ॥ ... ಶೆಟ್ಟರ ವೈಶ್ಯಮಂಡಲಿಯವು ಒಂದು ಭಾಗ ಸತ್ರವನ್ನು ಕಟ್ಟಿಸಿದ್ದಾರೆ.

2 ನಗರ್ತರ ಮ॥ ಹುಣಸೂರು ಮರಿಯಪ್ಪನವರು ಮತ್ತು ಮ॥ ಟಿ ಶಿವಪ್ಪ ಮುಂತಾದವರು ಒಂದು ಸತ್ರವನ್ನು ಕಟ್ಟಿಸಿದ್ದಾರೆ.

3 ಬೆಂಗಳೂರು ದೇವಾಂಗದ ಮ॥ ಪ ರಾಮಣ್ಣನವರು ಒಂದು ಸತ್ರವನ್ನು ಕಟ್ಟಿಸಿದ್ದಾರೆ.

4 ಅರಸಮ್ಮ ಮತ್ತು ಟೌಡಪ್ಪ ಎಂಬುವರು ಒಂದು ಸತ್ರವನ್ನು ಕಟ್ಟಿಸಿದ್ದಾರೆ.

5 ಅಗಸರ ಲಕ್ಷ್ಮಪ್ಪನವರು ಮತ್ತು ಬಿ ರಾಮಯ್ಯನವರು ಒಂದು ಸತ್ರವನ್ನು ಕಟ್ಟಿಸಿದ್ದಾರೆ. ಇವರಲ್ಲದೆ

1 ಮ॥ ... ಲಕ್ಷ್ಮಯ್ಯನವರೂ,

2 ... ಗಂಗಾಧರಪ್ಪನವರೂ,

3 ಮಂಚೇನಹಳ್ಳಿ ಅವಿಕಾರ್ ... ಮುನಿಯಪ್ಪನವರೂ ಸಂತೆಗೆಯನ್ನು ... ದನಗಳಿಗೂ ಸೌಕರ್ಯಗಳನ್ನು ಉಂಟುಮಾಡಿಕೊಟ್ಟರು.

26 1 9೩೦ ಕೆ ಗುರುಮೂರ್ತಯ್ಯ,

ದೊಡ್ಡಬಳ್ಳಾಪುರ ಮಾಸ್ಟರ್

ದೇವಿಜಾತ್ರೆಗಳಲ್ಲಿ ಪಶುಪ್ರಾಣಿಬಲಿಯನ್ನು ಕೊಡಬೇಡಿರಿ!

ದೇವಿಯ ಆಜ್ಞೆಯನ್ನು ಪಾಲಿಸಿರಿ.

ಪ್ರಾಣಿಬಲಿಯು ಅಧೋಗತಿಗೆ ಕಾರಣವಾಗಿದೆ ಎಂಬುದಾಗಿ ಪದ್ಮೋತ್ತರಖಂಡ, ಅಧ್ಯಾಯ 104-105 ರಲ್ಲಿ ದೇವಿಯು ಈ ಪ್ರಕಾರ ಹೇಳಿರುವುದನ್ನು ಪಾಲಿಸಿ ಇನ್ನುಮೇಲಾದರೂ ಪ್ರಾಣಿವಧೆಯನ್ನು ಬಿಟ್ಟಿ, ಸಾತ್ವಿಕರೀತಿಯಿಂದ ಜಾತ್ರೆಯನ್ನು ನೆರವೇರಿಸಿ ಪುಣ್ಯಭಾಗಿಗಳಾಗಿರಿ.

"ಯಾವ ಜನರು ನನ್ನ ಪೂಜೆಯಾದಬೇಕೆಂಬ ನೆವದಿಂದ ಪ್ರಾಣಿಗಳ ಹಿಂಸೆಯನ್ನು ಮಾಡುತ್ತಾರೋ, ಅಜ್ಞಾನದಿಂದ ಮಾಡುವ ಮೋಹ ಪೂಜೆಯು ಅಪವಿತ್ರವಾಗಿಯೆ, ಆದುದರಿಂದ ದೋಷದಿಂದ ಅವರ ಅಧೋಗತಿಯು ನಿಶ್ಚಯವಾಗಿಯೂ ಅನುಭವಿಸುವರು. ಹಿಂಸೆ ಮಾಡುವ ಜನರು ನನಗಾಗಿ ಪಶುವಧೆಯನ್ನು ಮಾಡುತ್ತಾರೆ. ಇದರಿಂದ ನಿಶ್ಚಯವಾಗಿಯೂ ಅವರು ಕೋಟಿ ಕಲ್ಪಕಾಲದವರೆಗೆ ನರಕದಲ್ಲಿ ಯಾತನೆಪಡಬೇಕಾಗಿದೆ."

ಅದಾದ್ದರಿಂದ ಮೇಲ್ಕಂಡ ದೇವಿಯ ಆಜ್ಞೆಯನ್ನು ಪಾಲಿಸಿ ಬಲಿ ... ಜಾತ್ರೆಗಳನ್ನು ನಿಲ್ಲಿಸಿ ... ಕಲ್ಪಗಳಿಂದ ಒಳ್ಳೆ ... ಮಾಡಬೇಕಾಗಿಯೂ ... ಸುಮತಾಗಿಯೂ, ... ಮಾಡಿದ ... ಮಾಡುವುದಕ್ಕಾಗಿಯೂ ಪಾಪವಾಗುವುದಕ್ಕಾಗಿಯೂ, ಭಯಂಕರವಾದ ... ಸಂದರ್ಭದಲ್ಲಿ ಅನೇಕರು ಜ್ವರ, ಪ್ಲೇಗ್, ಕಾಲರಾ ... ಹೆಚ್ಚಾಗಿ ... ಗಳಿಂದ ... ದೊಡ್ಡ ... ಮಾಡುವರು. ಆದ್ದರಿಂದ ... ಧರ್ಮವೇ ನಮ್ಮ ಮುಖ್ಯ ... ನಮಗೆ ... ದೇವತೆಗಳನ್ನು ... ಪ್ರತಿಯೊಬ್ಬರ ಕರ್ತವ್ಯವಾಗಿದೆ. ನಮ್ಮ ... ಅವಿಧಿಗಳನ್ನು ... ಈ ಸಾತ್ವಿಕ ... ಪ್ರಾಣಿಗಳನ್ನು ರಕ್ಷಿಸಿದ ಪುಣ್ಯಕ್ಕೂ ದೇವಿಯ ಆಜ್ಞೆಯನ್ನು ಪಾಲಿಸಿದ ಶ್ರೇಯಸ್ಸಿಗೂ ಭಾಗಿಗಳಾಗುವುದು ಕರ್ತವ್ಯವಾದುದರಿಂದ ಪ್ರತಿಯೊಬ್ಬರೂ ತಂತಮ್ಮ ಸ್ಥಳದಲ್ಲಿ ನಡೆಯುವ ದೇವಿ ಜಾತ್ರೆಗಳಲ್ಲಿ ಪ್ರಾಣಿಬಲಿಯನ್ನು ತಪ್ಪಿಸಿ ಅಪಾರವಾದ ಕೀರ್ತಿಗೆ ಭಾಗಿಗಳಾಗಬೇಕಾಗಿ ಕೋರುತ್ತೇವೆ.

	ಕಾರ್ಯದರ್ಶಿ
ಶನವಸ್ಸವರ ದೇವೇಂದ್ರಪ್ಪನವರು } ಅಗ್ರಾಸನರು }	ಪ್ರಾಣಿದಯಾ ಪ್ರಚಾರಕಸಂಘ ದಾವಣಗೆರೆ

ಸೂಚನೆ: ಸಾತ್ವಿಕರೀತಿಯಿಂದ ಜಾತ್ರೆಗಳನ್ನು ನಡೆಸಿದವರು ... ದಯವಿಟ್ಟು ನಮ್ಮ ಸಂಘಕ್ಕೆ ರಿಪೋರ್ಟು ಮಾಡಬೇಕಾಗಿ ವಿನಂತಿ. ಸದರಿ ವಿಷಯವು ನಮ್ಮ ವಾರ್ಷಿಕ ರಿಪೋರ್ಟಿನಲ್ಲಿಯೂ ವೃತ್ತಪತ್ರಿಕೆಗಳಲ್ಲಿಯೂ ಪ್ರಸಿದ್ಧಿಸಲ್ಪಡುವುದು.

ಜಾಹೀರ ಪತ್ರಿಕ ನಂಬರು 1

ಬಳ್ಳಾರಿ ಜಿಲ್ಲಾ ವೀರಶೈವ ಮಹಾಸಭೆಯಲ್ಲಿ ವಿಜ್ಞಾಪನೆ

ಮಾನ್ಯರೆ, ವೀರಶೈವ ವಿದ್ಯಾವರ್ಧಕ ಸಂಘವು ಇದುವರಿಗೂ ವೀರಶೈವ ಕರ್ತವ್ಯ ... ಕೆಲಸಮಾಡುತ್ತಿರುವುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಆದರೆ ಅತ್ಯಂತ ವೀರಶೈವರಲ್ಲಿ ರಾಜಕೀಯ ಜಾಗ್ರತಿಯನ್ನುಂಟುಮಾಡಲು ... ಸಭೆಗೆ ತಮ್ಮ ಪ್ರತಿನಿಧಿಗಳನ್ನು ಕಳುಹಿಸುವ ... ಅವರಿಗೆ ಮಾಡಲಿಲ್ಲ. ಕಾರಣವೇನಂದರೆ ಈಸಂಘದ ಉದ್ದೇಶವು ಕೇವಲ ವಿದ್ಯಾಭಿವೃದ್ಧಿಗಾಗಿಯೇ ಇತ್ತು. ಸರವೀರಶೈವರ ... ಇದರಿಂದ ... ಅನೇಕರು ವಿದ್ಯಾವಂತರಾಗಿ ಎಂ ಎ ಬಿ ಎಲ್ ಬಿ ಎ ಬಿ ಎಲ್ ಮುಂತಾದ ದೊಡ್ಡ ಡಿಗ್ರಿಗಳನ್ನು ಹೊಂದಿ ಈಗ ಅನೇಕರು ... ಹೊಂದಿ ... ಉದ್ಯೋಗದಲ್ಲಿ ವೀರಶೈವರು ... ಇರುವುದು. ಹೀಗಿರುವುದರಿಂದ ವೀರಶೈವ ಮಹಾಜನರು ... ಪ್ರತಿಯೊಂದು ಸ್ಥಳದಲ್ಲಿ ಸೇರಿ ... ಒಂದು ಸಂಘವನ್ನು ಸ್ಥಾಪಿಸಿ ಅದರ ... ಪ್ರತಿನಿಧಿಗಳನ್ನು ... ಬಳ್ಳಾರಿ ಜಿಲ್ಲಾ ... ಯೂನಿಯನ್ ಬೋರ್ಡುಗಳಿಗೂ ತಮ್ಮ ಪ್ರತಿನಿಧಿಗಳನ್ನು ಕಳುಹಿಸಿ ಹಿಂದುಳಿದ ವೀರಶೈವರ ಕುಂದು ಕೊರತೆಗಳನ್ನು ನಿವಾರಣೆ ಮಾಡುವ ಪ್ರಯತ್ನಗಳನ್ನು ಕೈಕೊಳ್ಳುವುದು ಅತ್ಯಾವಶ್ಯಕವಾಗಿರುವುದು.

2 ಮದರಾಸು ಲೆಜಿಸ್ಲೇಟಿವ್ ಕೌನ್ಸಿಲ್ ಸಭೆಯ ಕಾಲಾವಧಿಯು ಮುಗಿಯಬಂದಿರುವುದರಿಂದ ... ಬರುವ ಚುನಾವಣೆಯಲ್ಲಿ ... ಸ್ಥಾನಗಳು ... ಬರಬೇಕಾಗಿದೆ. ... ರಾಜಕೀಯದಲ್ಲಿ ... ಚುನಾವಣೆಯ ಕಾಲದಲ್ಲಿ ಅತ್ಯಂತ ಪ್ರಯತ್ನ ... ವೀರಶೈವ ಬಾಂಧವರು ... ಬಹುಮತವಿಲ್ಲವು ... ವೀರಶೈವರು ... ಜಿಲ್ಲೆಯ ... ಆಗಲ್ಲಿ ... ಮತ್ತು ... ಒಂದು ... ಅದರ ಈ ಸಮಾಜದ ... ವೀರಶೈವರು ... ಪ್ರಯತ್ನವನ್ನು ಮಾಡಲಿಲ್ಲ. ... ಈ ರೀತಿ ... ವೀರಶೈವರಾದವರು ... ಒಂದುಬಾರಿ ಕೊಟ್ಟ ... 1926 ನೇ ಇಸವಿಯಲ್ಲಿ ಹೇಗಾದರೂ ಸಮಯಾಗಿ ... ವೀರಶೈವರ ... ಪ್ರತಿನಿಧಿಯನ್ನಾಗಿ ... ಒಳ್ಳೆ ... ಚುನಾವಣೆಯ ಕಾಲದಲ್ಲಿ ... ಇದರಿಂದ ಸರ್ಕಾರದವರು ನಮ್ಮ ಜನಾಂಗಕ್ಕೆ ಒಳ್ಳೆಯ ... ಕಲ್ಪಿಸದಿರುವುದು ... ವೀರಶೈವರು ... ಮೈಸೂರು ಮುಂತಾದ ಪ್ರಾಂತಗಳಲ್ಲಿ ಅತಿಶೀಘ್ರದಿಂದ ಮುಂದುವರಿಯುತ್ತಿರುವ ನಮ್ಮ ಬಾಂಧವರ ಏಳಿಗೆಯ ಮಾರ್ಗವನ್ನು ಅನುಸರಿಸುವರೆಂದು ... 1927 ನೇ ಡಿಸೆಂಬರಿನಲ್ಲಿ ಬೆಂಗಳೂರಿನಲ್ಲಿ ... ಅಖಿಲ ಭಾರತೀಯ ವೀರಶೈವ ಮಹಾಸಭೆಯಲ್ಲಿ ... ನಿರ್ಣಯವು ... ಈ ಜಾಹೀರಾತು ... ರಾಜಕೀಯ ಸಂಘದ ಸ್ಥಾಪನೆಗಾಗಿ ... ಪ್ರಯತ್ನಗಳು ... ಸರ್ಕಾರದವರು ... ಪ್ರಯತ್ನಮಾಡಿದಲ್ಲಿ ಇದುವರೆಗೆ ... ವುದು ನಮ್ಮ ಕಾರ್ಯವು.

ಇದಕ್ಕಾಗಿ ಸಮಸ್ತ ವೀರಶೈವರಿಗೆ ನಾವು ವಿನಯದಿಂದ ವಿಜ್ಞಾಪನೆಮಾಡಿಕೊಳ್ಳುವುದೇನೆಂದರೆ ಈ ರಾಜಕೀಯ ಸಂಘದ ಸ್ಥಾಪನೆಗಾಗಿ ಯಾವಸ್ಥಳದಲ್ಲಿ ಯಾವ ಕಾಲದಲ್ಲಿ ಸಭೆ ಸೇರಿದರೆ ಅನುಕೂಲವಾಗುವುದೆಂಬುದರ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ಪತ್ರಮೂಲಕವಾಗಲಿ ಪತ್ರಿಕಾಮೂಲಕವಾಗಲಿ ತಿಳಿಸಬೇಕೆಂದು ಕೋರುತ್ತೇವೆ.

1. ಕರಿಸಿದ್ದಪ್ಪ	2. ಹೀರದ ಶರಣಪ್ಪ,
3. ಶಿವ ಚನ್ನಬಸಪ್ಪ	4. ಕೆ ಮರಿಬಸವನಗೌಡು
5. ಚೆಟ್ ರಂಗನಗೌಡು,	6. ಅರಗಿನಡೋಣ ದೊಡ್ಡನಗೌಡು,

ತಾ॥ 30—1—1929

ತಿಳುವಳಿಕೆ ನೋಟೀಸು

... ತಾಲ್ಲೂಕು ... ವಾಸಿಗಳಾದ ... ತಿಳಿಯಪಡಿಸುವುದೇನೆಂದರೆ ... ನೋಟೀಸು ...

ನಮ್ಮ ತಂದೆಯಾದ ನಾಗನಹಳ್ಳಿ ಬಸಪ್ಪನ ಮಗ ಸಂಗಪ್ಪನು ಈ ಸಂಗಡ ... ಮಾಡಿಕೊಂಡು ಸುಮಾರು ಒಂದು ವರ್ಷದವರೆಗಾಯಿತು ಬೇರೆಕಡೆ ಇದ್ದುಕೊಂಡು ಜೀವನಮಾಡುತ್ತಾ ಇರುತ್ತಾನೆ. ನಾನು ಪ್ರಾಪ್ತ ವಯಸ್ಕನಾದಮೇಲೆ ನಮ್ಮ ತಂದೆ ಹೆಸರಿನಲ್ಲಿದ್ದ ಸ್ಥಿರ ಚರಸ್ವತ್ತುಗಳೆಲ್ಲಾ ವಿಭಕ್ತನಾದ ನನಗೆ ಸೇರಿದವು. ಈ ಮುಂಚೆಯೇ ನಮ್ಮ ತಂದೆಯ ಮಾಡಿದ್ದ ಸಾಲಗಳೆಲ್ಲವನ್ನು ನಾನೇ ವಹಿಸಿಕೊಂಡಿರುವೆನು. ಈತನು ಒಂದು ವರ್ಷದ ಹಿಂದೆ ಬೇರೆ ಸಂಸಾರಮಾಡಬೇಕೆಂದು ... ಈತನ ಜೀವನಕ್ಕೂ ತಕ್ಕಷ್ಟು ಆಧಾರವಾದ ಜಮೀನನ್ನು ಬಿಟ್ಟು ಕೊಟ್ಟಿದ್ದೇನೆ. ಈಗ ಈತನಿಗೆ ಬುದ್ಧಿಭ್ರಮಣೆ ಆಗಿರುತ್ತದೆ. ಪ್ರಯುಕ್ತ ಈತನು ಸ್ವಂತಕ್ಕಾಗಲಿ ... ಇನ್ನಾವ ಕಾರಣ ಸಾಲಮಾಡಲಿಕ್ಕೂ ಪ್ರಯತ್ನಪಡುತ್ತಾ ಇರುವುದಾಗಿ ವರ್ತಮಾನ ಕೇಳುತ್ತಾ ಇದ್ದೇನೆ.

ಈತನಿಗೆ ... ವರ್ಷ ವಯಸ್ಸಿಗಿಂತಲೂ ಜಾಸ್ತಿಯಾಗಿರುತ್ತದೆ. ಮತ್ತು ಬುದ್ಧಿಸ್ವಾಧೀನವಿರುವುದಿಲ್ಲ. ಇಂಥಾ ಕಾಲದಲ್ಲಿ ನನ್ನ ಅಭಿಪ್ರಾಯವಿಲ್ಲದೆ ... ನನ್ನ ಬಾಬತ್ತು ಮತ್ತು ನನ್ನ ತಂದೆ ವಶದಲ್ಲಿರುವ ಯಾವ ಆಸ್ತಿಯನ್ನೇ ಆಗಲಿ ಕ್ರಯ ಭೋಗ್ಯ ವಗೈರೆ ಮಾಡಿಕೊಂಡರೇ ಆಗಲಿ ಅಥವಾ ಈತನಿಗೆ ಸಾಲವಾಗಿ ಕೊಟ್ಟರೇ ಆಗಲಿ ಅವರ ಹಕ್ಕು ನನ್ನ ಆಸ್ತಿಮೇಲೆ ... ಆಗಿರುವುದರಿಂದ ಈತನಿಗೆ ಯಾರೂ ಸಾಲವನ್ನು ಕೊಡಕೂಡದೆಂದು ಈ ಮೂಲಕ ತಿಳಿಯಪಡಿಸಿರುತ್ತೇನೆ.

ಕೆರೆಯಾಗಳಹಳ್ಳಿ ಸಂಗಪ್ಪನಮಗ ಕೆಂಚಪ್ಪನ ರುಜು ರುಜುವಾತು



10

ಪ್ರಕಟನೆ.

ನಮ್ಮಲ್ಲಿ ಸಿನೀಮಾಕ್ಕೆ ಸಂಬಂಧಪಟ್ಟ ಪ್ರಾಜೆಕ್ಟರ್ ... ಡೈನಮೋ, ಎಲೆಕ್ಟ್ರಿಕಲ್ ... ವಗೈರೆ ಎಲ್ಲಾ ಸಾಮಾನುಗಳೂ, ಕೆಲವು ಕಾಮಿಕ್ ಫಿಲಂಗಳ ಸಹ ಬಾಡಿಗೆಗೆ ದೊರೆಯುತ್ತವೆ. ಎಲ್ಲಾ ಸಾಮಾನುಗಳ ಸೆಟ್ಟು ತಯಾರಿರುವುದರಿಂದ ಈ ದಿವಸವೇ ಸಿನೇಮಾ ನಡೆಸಬಹುದು. ಈ ಸಾಮಾನುಗಳು ಕೊಂಡುಕೊಳ್ಳಬೇಕಾದರೆ ... ಈ ಸಮಯವನ್ನು ಕಳೆದುಕೊಳ್ಳಬಾರದೆಂದು ಕೋರಿಕೆ.

Siddaradhya
Tirukappanavra mu
Davangere

೧೯೩೦ ನೇಯ ಇಸವಿ ಫೆಬ್ರವರಿ ತಾ॥ ೯ ರಿಂದ ೧೯೩೦ ನೇ ಇಸವಿ ಫೆಬ್ರವರಿ ತಾ ೧೫ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೧ ನೆಯ ಶುಕ್ಲನಾಮಸಂವತ್ಸರದ ಪುಷ್ಯ ಬಹುಳ ಅಮಾವಾಸ್ಯೆಯಿಂದ ಮಾಘ ಶುದ್ಧ ಷಷ್ಠಿ ವರೆಗಿನ ಪಂಚಾಂಗ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮ...
9	[1] ಭಾನು	ಅಮಾ	40-34	ಶ್ರವ	19-13	2
10	ಸೋಮ	ಪಾಡ್ಯ	40-58	ಧನ	22-55	2
11	[2] ಮಂಗಳ	ಬಿದಿ	42-10	ಶತ	24-55	2
12	[3] ಮಂಗಳ	ತದಿ	40 57	ಪೂಭಾ	25 35	
13	ಬುಧ	ಚೌತಿ	38 41	ಉಭಾ	25 11	
14	ಗುರು	ಪಂಚ	35 7	ರೇವ	23 34	
15	[4] ಶುಕ್ರ	ಷಷ್ಠಿ	30-53	ಅಶ್ವಿ	21-11	

(1) ಸರ್ವತ್ರಾಮಾವಾಸ್ಯೆ, ಮಹೋದಯ ಪುಣ್ಯಕಾಲ. (2) ... ನಕ್ಷತ್ರ-ಧನಿಷ್ಠ ... ನೆಯಪಾದ. (3) ಮೌನಗೌರೀವ್ರತಂ. (4) ಕುಮಾರಷಷ್ಠಿ, ಮಹಾನಕ್ಷತ್ರ-ಧನಿಷ್ಠ ... ನೆಯಪಾದ.

ಮೈಸೂರು, ವೈ. ಸಿದ್ದರಾಮಯ್ಯನವರಿಂದ ... ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M 124

ಮೈಸೂರ್ ಸ್ಟಾರ್

ಪ್ರತಿ ಶನಿವಾರ ಪ್ರಕಟಿಸಲ್ಪಡುವದು.

ಸೋಂಕೋರಪುರೀಶಾರಾ ಪರಮಧಿಗಕರಾಜಮಂಡಲಮಿಕೈನಾ । ಘನಪಥಕ್ಕತಾವಿಷಾರಾ ಪಕ್ಕಿಜ ನಕ್ಷತ್ರ ಪೋಷಿಂದಾಜುಮೋಕ್ ‖
ಶ್ರೀಮತ್ಕೃಷ್ಣನೃಪಾಲನಾತ್ತ ಮಹಲಾರೋಲಂಸುಧೀಪ್ತಂಗವ । ಸ್ತೋಮಾಭೀಷ್ಟಪಟೀಲ ಸಾರಲಿಕ ಸಾಮ್ರಾಜ್ಯಲಪಾಲಂಪಲಂ ‖
ಶೀನಾಶೀಕಯಕಪ್ರತಾಸವಿಭ್ರಲಂ ಸದ್ವೃತ್ತವಾಲಾಕುಲಂ । ಶ್ರೀಮಂಚಿತ್ತ ಲಯಂಸಮಾಪ್ರರಿಗೆ ಗೌರೀಶಾಮುಕೆಂಪೋಚ್ಚಲಂ ‖

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦]   [ಪರಸ್ಥಳದವರಿಗೆ ೨-೮-೦]   [ಬ್ರಿಟಿಷ್ ೩-೦-೦]

ಸಂಪುಟ ೪೨]   ಮೈಸೂರು ಸ್ಟಾರ್ ಸನ್ ೧೯೨೯ ನೆಯ ಇಸವಿ ಫೆಬ್ರವರಿ ತಾರೀಖು ೧೬ ನೆಯ ಶನಿವಾರ   [ಸಂಚಿಕೆ ೭

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೩—೦
ಷಟ್ಸ್ಥಲಬ್ರಹ್ಮ	೦—೪—೦	೦—೯—೦
ಚಾರುಶೀಲಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವೃಷಪಂಜರ	೦—೪—೦	೦—೯—೦
ಗುರುಶಂಕರಲೀಶ್ವರಶತಕ	೦—೧—೦	೦—೬—೦
ಬಸವೇಶ್ವರವಚನ	೦—೮—೦	೦—೧೩—೦
ಸಟೀಕ ಕರಸ್ಥಲ ಚನ್ನಬಸವ ಮಂಜರಿ	೦—೮—೦	೦—೧೩—೦
ಸಟೀಕ ಶತಕತ್ರಯ	೧—೨—೦	೧—೬—೦

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೦-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಪಳೆ ಚಂದಾದಾರರುಗಳು ಮನಿಯಾರ್ಡರ್ ಮಾಡುವಾಗ್ಯೆ ಕೂಪನ್ ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡ್ಸ್ ಮನಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

"ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತರ" ಆಯುರ್ವೇದೀಯ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರೀ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿದಿನವೂ ತಾಂಬೂಲದೊಡನೆಯಾಗಲಿ, ಹಾಗೇಯಾಗಲೀ ಉಪಯೋಗಿಸುತ್ತಿದ್ದರೆ ಆಹಾರ, ನೀರು ಗಾಳಿಗಳ ವ್ಯತ್ಯಾಸದಿಂದ ಬರುವ ರೋಗಗಳು ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳ ಮೊದಲು ಮುದುಕರ ವರೆಗೂ ಎಲ್ಲಾ ವಯಸ್ಸಿನವರಿಗೂ, ಶೀತ, ನೆಗಡಿ, ಕೆಮ್ಮು, ಜ್ವರ, ಶೀತವಾತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ.

ಮಾತ್ರೆಗಳುಳ್ಳ ಸೀಸೆ 1ಕ್ಕೆ ೩ ಆಣೆ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ನಮ್ಮ ವಿಳಾಸವನ್ನೂ, ಲೋಕಾಮಯಹರ ಕಸ್ತೂರೀ ಮಾತ್ರೆ ಎಂಬ ಹೆಸರನ್ನೂ ನೋಡಿ ಕೊಂಡುಕೊಳ್ಳಿರಿ.

ವೈಶ್ವಾನರಾಸವ.

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ.)

ಯಾತ್ರೆಯ ಕಾಲದಲ್ಲಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ, ಬಂದಾಗ ಕೊಟ್ಟರೆ ಮೊದಲನೇವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1ಕ್ಕೆ ರೂ. 1—0—0.

ಲಕ್ಷ್ಮೀವಿಲಾಸರಸ.

(ಪ್ಲೇಗಿಗೆ)

ಹತ್ತಾರು ವರ್ಷಗಳಿಂದ ಪ್ರತಿವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ನಂಬಿಕೆಯಾಗಿ ಗುಣಪಡಿಸಿರುತ್ತದೆ. ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿಪಾತಜ್ವರಗಳಿಗೂ ಅಮೋಘವಾಗಿರುತ್ತದೆ. ಸೀಸೆಯ ಬೆಲೆ 1ಕ್ಕೆ ರೂ. 1—0—0

ಶ್ರೀನಿವಾಸವೈಖ.

ಪ್ಲೇಗು ರೋಗಿಯ ಪ್ರತಿ ಸಂದುಗಳಿಗೂ, ಗೆಡ್ಡೆಗಳಿಗೂ ಹಚ್ಚುವ ಔಷಧ. ಸೀಸೆ 1ಕ್ಕೆ ರೂ. 0—8—0.

ಭಿಷಗ್ರತ್ನ

ಶ್ರೀ ಸೀತಾರಾಮಾಯುರ್ವೇದ ಶಾಲಾ,	ಪಾಳ್ಯದ ವೆಂಕಟಾಚಲಪಂಡಿತರ,
ಬ್ರಾಂಚ್ ಆಫೀಸು	ಶ್ರೀ ಸೀತಾರಾಮಾಯುರ್ವೇದ ಶಾಲಾ,
ಚಿಕ್ಕಪೇಟೆ, ಬೆಂಗಳೂರು ಸಿಟಿ.	ಚಾಮರಾಜ ಜೋಡಿ ಮೈಸೂರು.

ಹತ್ತನೆಯ ವೀರಶೈವ ಮಹಾಸಭಾಕಾಲದಲ್ಲಿ ಪ್ರಸಿದ್ಧಿಸಲ್ಪಟ್ಟ

ವೀರಶೈವ ಕರದರ್ಪಣ.

ಡೆಮ್ಮಿ ⅛ ಸೈಜಿನ 200 ದೊಡ್ಡ ಗ್ಲೇಜುಪುಟಗಳು.]   ಬೆಲೆ ಒಂದೇ ಒಂದು ರೂಪಾಯಿ.   [300 ಭಾವಚಿತ್ರಗಳಿರುವುವು.

ವೀರಶೈವರ ಸಂಬಂಧವಾದ ಎಲ್ಲ ವಿಷಯಗಳನ್ನೂ ಒಳಗೊಂಡಿರುವ ಏಕಮಾತ್ರ ಪುಸ್ತಕ.

ವೀರಶೈವಮತಸಂಬಂಧವಾದ ಮಹತ್ವವಿಷಯಗಳವೇಲೆ ಎಂದರೆ, ವೀರಶೈವಮತತತ್ತ್ವನಿರೂಪಣೆ, ಇತಿಹಾಸ, ಪ್ರಾಚೀನತೆ, ಸಿದ್ಧಾಂತ, ಜಗದ್ಗುರು ಪೀಠಗಳು, ಶ್ರೀ ಬಸವೇಶ್ವರ ಮೊದಲಾದ ವಿಷಯಗಳ ಮೇಲೆ ಸುಪ್ರಸಿದ್ಧ ಲೇಖಕರ ಲೇಖನಗಳು; ಜಗದ್ಗುರುಪೀಠಗಳ ಮತ್ತು ಜಗದ್ಗುರು ಮಹಾಸ್ವಾಮಿಗಳವರ ಸಚಿತ್ರ ಚರಿತ್ರೆಗಳು; ಇಡೀ ಭರತಖಂಡದೊಳಗಿನ ವೀರಶೈವ ಸಂಸ್ಥೆಗಳ ಮತ್ತು ಅವುಗಳ ಸಮಗ್ರ ಇತಿಹಾಸಗಳು; ಅಖಿಲಭರತಖಂಡದಲ್ಲಿ ಗತಿಸಿದ ವೀರಶೈವ ಮಹನೀಯರುಗಳ ಸಚಿತ್ರ ಜೀವಿತಚರಿತ್ರೆಗಳು; ಅ. ಭಾ. ವೀರಶೈವ ಮಹಾಸಭೆಯು ಮೊದಲು ಹೇಗೆ ಪ್ರಾರಂಭವಾಯಿತೆಂಬ ವಿಷಯ; ಬೆಳವಣಿಗೆ, ಮುಂದಿನ ವಿಷಯ ಮತ್ತು ಅದಕ್ಕೆ ಸಹಾಯಮಾಡಿದವರ ಭಾವಚಿತ್ರಗಳು; ಮೊನ್ನೆ ನಡೆದ 10 ನೇ ವೀರಶೈವ ಮಹಾಸಭೆಗೆ ಮೈಸೂರು ಶ್ರೀಮನ್ಮಹಾರಾಜರವರಿಂದ ಕಳಿಸಲ್ಪಟ್ಟ ಸಂದೇಶ—ಈ ಎಲ್ಲ ವಿಷಯಗಳಿಂದೊಡಗೂಡಿದ ಉತ್ತಮ ಗ್ರಂಥ.

(1) ರಥಸಪ್ತಮಿ, ಸೂರ್ಯಚಂದ್ರವ್ರತಂ, ಹೇಮಗಿರಿ ರಂಗಸ್ವಾಮಿ ರಥ, (2) ಮದ್ದೂರುತಾಲೂಕಿನಲ್ಲಿ ಶ್ರೀ ವರದರಾಜಸ್ವಾಮಿ ರಥ, (3) ಮಧ್ವನವಮಿ, ಮಹಾನಕ್ಷತ್ರಕಥಬ್ರಿಷ (4) ಸ್ವಾ ... ಭೀಷ್ಮೈಕಾದಶಿ, ತಿಲಪದ್ಮವ್ರತಂ. (5) ಮಹಾನಕ್ಷತ್ರ ... ನೇಯಪಾದ

ಮೈಸೂರು — ಮ. ರಾಮಚಂದ್ರಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No.

ಮೈಸೂರ್ ಸ್ಟಾರ್

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾನಾ ಪರಮಾಧಿಕರಾಜಮಂಡಲಮಿತ್ರಸಾ । ಭೂಪತಿಗಳ್ ... ವಿಶ್ವ ... ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಪಾಲೋಂಬುಧಿಚಂದ್ರಮ । ... ನಾಗಲಿಕ ಸಾದ್ಗುಣ್ಯಾಲಯಂ ॥
... ಸದ್ವೃತ್ತಮಾಲಾಧರಂ । ಶ್ರೀಮಂಚಕ್ರ ... ಗೌರೀಶಾನುಕಂಪೋದ್ಭವಂ ॥

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೩-೮-೦] [ಲೈಬ್ರರಿಗೆ ೩-೮-೦]

ಸಂಪುಟ ೪೨] ಮೈಸೂರು ಸ್ಟಾರ್ ಸನ್ ೧೯೨೯ ನೆಯ ಇಸವಿ ಫೆಬ್ರವರಿ ತಾರೀಖು ೨೨ ನೆಯ ಶುಕ್ರವಾರ [ಸಂಚಿಕೆ ೮

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	(ವಿ ಪಿ ಸೇರಿ)
ವೀರಶೈವ ಶಿವಪೂಜಾವಿಧಿ	೦ ೧೨ ೦	೧ ೨ ೦
ಸಟೀಕ ವೀರಶೈವ ವಿವಾಹವಿಧಿ	೦ ೮ ೦	೦—೧೩—೦
ಷಟ್ಸ್ಥಲವಿದ್ಯಾ	೦— ೪ —೦	೦— ೯ ೦
ಚಾರುಶೀಲಚರಿತ್ರೆ	೦— ೫	೦ ೧೦ ೦
ಹರಿದಾಸಿ	೦— ೪— ೦	೦ ೯—೦
ವ್ರತಪಂಚಕ	೦— ೪— ೦	೦— ೯—೦
ಗುರುಶಂಕರೇಶ್ವರಶತಕ	೦ — ೧ ೦	೦ ೬ ೦
ಬಸವೇಶ್ವರವಚನ	೦— ೮—೦	೦ ೧೩—೦
ಸಟೀಕ ಕರ್ಣಾಟಕಶಬ್ದಮಂಜರಿ	೦— ೮ —೦	೦— ೧೩ ೦
ಸಟೀಕ ಶತಕತ್ರಯ	೧ ೦—೦	೧— ೬ ೦

ಮೈಸೂರು ಸ್ಟಾರ್ ಚಂದಾದಾರರಿಗೆ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ ೩-೮-೦ ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ ೩-೮-೦, ವಿ ಪಿ ಮೂಲಕವಾದರೆ ಇನ್ನೂ ೪ ಆಣೆ ಚಾರ್ಜು ಬೀಳುತ್ತದೆ. ಹಳೆ ಚಂದಾದಾರರುಗಳು ಮನಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮನಿಯಾರ್ಡರುಗಳಿಗೆ ಸಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್

"ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತರ"

ಆಯುರ್ವೇದೀಯ ಸಿದ್ಧೌಷಧಗಳು

ಲೋಕಾಪಕಾರಕ ಕಸ್ತೂರೀ ಮಾತ್ರೆಗಳು



ಈ ಮಾತ್ರೆಗಳನ್ನು ಪ್ರತಿದಿನವೂ ತಾಂಬೂಲದೊಡನೆಯಾಗಲಿ ಹಾಗೇಯಾಗಲೀ ಉಪಯೋಗಿಸುತ್ತಿದ್ದರೆ ಆಹಾರ, ನೀರು ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ

ಮಕ್ಕಳ ಮೊದಲು ಮುದುಕರವರೆಗೆ ಎಲ್ಲಾ ವಯಸ್ಸಿನವರಿಗೂ, ಶೀತ, ನೆಗಡಿ, ಕೆಮ್ಮು, ಜ್ವರ, ಶೀತವಾತಜ್ವರ, ಬಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ

30 ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣೆ

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ ನಮ್ಮ ವಿಳಾಸವನ್ನೂ ಲೋಕಾಪಕಾರಕ ಕಸ್ತೂರೀ ಮಾತ್ರೆ ಎಂಬ ಹೆಸರನ್ನೂ ನೋಡಿ ಕೊಂಡುಕೊಳ್ಳಿರಿ

ಶೈತ್ಯಾನಲಾಸವ

(ಕಾಲರಾ ವಾಂತಿಭೇದಿಗೆ ಸಿದ್ಧೌಷಧ)

ಮೂತ್ರವು ಕಟ್ಟಿ ಹೊಟ್ಟೆಯುಬ್ಬರಿಸುವುದಾಗಲೀ ಭಂಟಾಗದೆ ಕೊಟ್ಟ ಮೊದಲನೇವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ ಸೀಸೆ 1ಕ್ಕೆ ರೂ 1—0—0

ಲಕ್ಷ್ಮೀವಿಲಾಸರಸ

(ಪ್ಲೇಗಿಗೆ)

ಹಲವಾರು ವರ್ಷಗಳಿಂದ ಪ್ರತಿವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ನಿಂತುವುದಾಗಿ ಗುಣಪಡಿಸಿರುತ್ತದೆ ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ ಸೀಸೆಯ ಬೆಲೆ 1ಕ್ಕೆ ರೂ 1—0—0

ಪ್ರೇಗನಾಶನಪ್ಲಾಸ್ತ್ರ

ಪ್ಲೇಗು ರೋಗಿಯ ಪ್ರತಿ ಸಂಗ ಡೆಗಳಿಗೂ ಗೆಡ್ಡೆಗೂ ತಕ್ಷಣ ಔಷಧ ಸೀಸೆ 1ಕ್ಕೆ ರೂ 0—8—0

	• ಭಿಷಗ್ರತ್ನ
ಶ್ರೀ ಸೀತಾರಾಮವೈದ್ಯಶಾಲಾ,	ಪಾಳ್ಯದ ವೆಂಕಟಾಚಲಪಂಡಿತರ
ಬ್ರಾಂಚಾಫೀಸು	ಶ್ರೀ ಸೀತಾರಾಮವೈದ್ಯ ಶಾಲಾ,
ಚಿಕ್ಕಪೇಟೆ ಬೆಂಗಳೂರು ಸಿಟಿ	ಹೆಡ್ ಫೀಸು ಮೈಸೂರು

ಹತ್ತನೆಯ ವೀರಶೈವ ಮಹಾಸಭಾಕಾಲದಲ್ಲಿ ಪ್ರಸಿದ್ಧಿಸಲ್ಪಟ್ಟ

ವೀರಶೈವ ಕರದರ್ಪಣ.

ಡೆಮ್ಮಿ ⅛ ಸೈಜಿನ 200 ದೊಡ್ಡ ಪ್ರೇಜುಗಳು) ಬೆಲೆ ಒಂದೇ ಒಂದು ರೂಪಾಯಿ (300 ಭಾವಚಿತ್ರಗಳಿರುವುವು

ವೀರಶೈವರ ಸಂಬಂಧವಾದ ಎಲ್ಲ ವಿಷಯಗಳನ್ನೂ ಒಳಗೊಂಡಿರುವ ಏಕಮಾತ್ರ ಪುಸ್ತಕ

ವೀರಶೈವಮತಸಂಬಂಧವಾದ ಮಹತ್ವವಿಷಯಗಳಮೇಲೆ ಎಂದರೆ ವೀರಶೈವಮತತತ್ತ್ವನಿರೂಪಣೆ ... ಜಗದ್ಗುರು ಪೀಠಗಳು, ಶ್ರೀ ಬಸವೇಶ್ವರ ಮೊದಲಾದ ವಿಷಯಗಳ ಮೇಲೆ ಸುಪ್ರಸಿದ್ಧ ಲೇಖಕರ ಲೇಖನಗಳು ಜಗದ್ಗುರು ಪೀಠಗಳ ಮತ್ತು ಜಗದ್ಗುರು ಮಹಾಸ್ವಾಮಿಗಳವರ ಸಚಿತ್ರ ಚರಿತ್ರೆಗಳು, ಇಡೀ ಭರತಖಂಡದೊಳಗಿನ ವೀರಶೈವ ಸಂಸ್ಥೆಗಳ ಮತ್ತು ಅವುಗಳ ಸಮಗ್ರ ಇತಿಹಾಸಗಳು ಅಖಿಲಭರತಖಂಡದಲ್ಲಿ ಗತಿಸಿದ ವೀರಶೈವ ಮಹನೀಯರುಗಳ ಸಚಿತ್ರ ಜೀವಿತಚರಿತ್ರೆಗಳು ಅ ಭಾ ವೀರಶೈವ ಮಹಾಸಭೆಯು ಮೊದಲು ಹೇಗೆ ಪ್ರಾರಂಭವಾಯಿತೆಂಬ ವಿಷಯ ... ಮತ್ತು ಅದಕ್ಕೆ ಸಹಾಯಮಾಡಿದವರ ಭಾವಚಿತ್ರಗಳು ಮೊನ್ನೆ ನಡೆದ 10 ನೇ ವೀರಶೈವ ಮಹಾಸಭೆಗೆ ಮೈಸೂರು ಶ್ರೀಮನ್ಮಹಾರಾಜರವರಿಂದ ಕಳಿಸಲ್ಪಟ್ಟ ಸಂದೇಶ—ಈ ಎಲ್ಲ ವಿಷಯಗಳಿಂದೊಡಗೂಡಿದ ಉತ್ತಮ ಗ್ರಂಥ

ಇಡೀ ಪುಸ್ತಕವು ಭಾವಚಿತ್ರಗಳಿಂದ ತುಂಬಿತುಳುಕುತ್ತಿದೆ ಶ್ರೀಮನ್ಮಹಾರಾಜರವರ ಭಾವಚಿತ್ರ, ಶ್ರೀ ಮುಮ್ಮಡಿ ಕೃಷ್ಣರಾಜಒಡೆಯರವರು ಶಿವಪೂಜೆಮಾಡುತ್ತಿರುವುದು, ಶ್ರೀಜಗದ್ಗುರು ಮಹಾಸ್ವಾಮಿಗಳ ಅಡ್ಡಪಾಲಕಿಉತ್ಸವ 10 ನೇ ಅ ಭಾ ವೀರಶೈವ ಮಹಾಸಭೆಯ ಅಧ್ಯಕ್ಷ ಮತ್ತು ಸ್ವಾಗತಸಂಘಾಧ್ಯಕ್ಷರ ಭಾವಚಿತ್ರಗಳು ... ಮತ್ತು ... ಭಾವಚಿತ್ರಗಳು ಶ್ರೀ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳ ದೊಡ್ಡ ಭಾವಚಿತ್ರ ಮತ್ತು ಜಗದಾಚಾರ್ಯ ... ಒಡೆಯರವರು ಹುಬ್ಬಳ್ಳಿ ಮತ್ತು ಗದಗಿನ ಜಗದ್ಗುರು ಮಹಾಸ್ವಾಮಿಗಳವರ ಭಾವಚಿತ್ರ ಇನ್ನುಳಿದ ಎಲ್ಲ ಪ್ರಸಿದ್ಧ ಮಹಾಸ್ವಾಮಿಗಳವರ ಮತ್ತು ವೈದಿಕವರ್ಗದ ಭಾವಚಿತ್ರಗಳು ಇದರಲ್ಲಿರುವ ... ದೇಸಾಯಿರು, ಮೈಸೂರು ವೀರಸಂಗಪ್ಪನವರಾದಿಯಾಗಿ ಗತಿಸಿದ ಎಲ್ಲ ವೀರಶೈವರುಗಳನ್ನೂ ಈಗಿನ ವೀರಶೈವ ಲೌಕಿಕ ವೈದಿಕ ಧುರೀಣರನ್ನೂ ಪ್ರಸಿದ್ಧ ಸ್ತ್ರೀಪುರುಷರನ್ನೂ ದೊಡ್ಡ ಹುದ್ದೇದಾರರು ... ನಟರು ಮೊದಲಾದವರನ್ನು ಇದರಲ್ಲಿ ಕಾಣಬಹುದು

ಇವರೆಗೆ ಈ ಮಾದರಿಯ ಪುಸ್ತಕವು ಇದೊಂದೇ ... ವೀರಶೈವನೂ ಸಂಗ್ರಹ ಮಾಡಿಡುವ ಗ್ರಂಥವು ಬೆಂಗಳೂರಿನ ಮಹಾಸಭಾಕಾಲದಲ್ಲಿ ಮಾರಿ ಮಿಕ್ಕ ಕೆಲವು ಪ್ರತಿಗಳು ಮಾತ್ರ ಉಳಿದಿವೆ

ಬೇಕಾದವರು ಒಡನೆ ಬರೆಯಿರಿ ಬೆಲೆ 1 ರೂಪಾಯಿ ಟಪಾಲು ಹಾಸಲು ಪ್ರತ್ಯೇಕ

ವಿಳಾಸ—ಟಿ ಎಸ್. ಚೆನ್ನಪ್ಪ,

10 ಮಾಡರ್ನ್ ಮುದ್ರಾಕ್ಷರಶಾಲಾ ಬೆಂಗಳೂರು ಸಿಟಿ

೧೯೨೯ ನೇ ಇಸವಿಯ ಶಿದ್ದಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು ಮತ್ತು ಕ್ಯಾಲೆಂಡರುಗಳು.

1929 ನೇ ಇಸವಿಯ ಶಿದ್ದಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು

1ನೇ ನಂ ದೊಡ್ಡಸೈಜು ಪಾಕೆಟ್‌ಡೈರಿ ಪೆನ್ಸಲ್ ಇಟ್ಟು ಮುಚ್ಚುವ ಪಾಕೆಟ್ಟು $6\frac{1}{2}\times4$" 1ಕ್ಕೆ 0 12 0 ಪರಸ್ಥಳಕ್ಕೆ ಪೋಸ್ಟೇಜು 0-3-0

2ನೇ ನಂ ದೊಡ್ಡಸೈಜು ಮುಚ್ಚಳವಿಲ್ಲದ ಸಾದಾ ಪಾಕೆಟ್‌ಡೈರಿ $6\frac{1}{2}$"$\times4$" 1ಕ್ಕೆ 0-10-0 ಪರಸ್ಥಳಕ್ಕೆ ಪೋಸ್ಟೇಜು 0 3 0

1ನೇ ನಂ ಚಿಕ್ಕಸೈಜು ಪಾಕೆಟ್‌ಡೈರಿ ಪೆನ್ಸಲ್ ಇಟ್ಟು ಮುಚ್ಚುವ ಪಾಕೆಟ್ಟು 5"$\times2\frac{1}{2}$" 1ಕ್ಕೆ 0 7 0 ಪರಸ್ಥಳಕ್ಕೆ ಪೋಸ್ಟೇಜು 0 2-0

2ನೇ ನಂ. ಚಿಕ್ಕಸೈಜು ಪಾಕೆಟ್‌ಡೈರಿ ಮುಚ್ಚಳವಿಲ್ಲದ ಸಾದಾ 5$\times2\frac{1}{2}$" 1ಕ್ಕೆ 0-5-0 ಪರಸ್ಥಳಕ್ಕೆ ಪೋಸ್ಟೇಜು 0-2 0

ಮೇಲ್ಕಂಡ ದರದಂತೆ ನಮಗೆ ಬೇಕಾದವರು ಡೈರಿಗಳ ಪೂರ್ತಿ ಮೊಬಲಗು ರವಾನಿಸಿದಲ್ಲಿ ಪೋಸ್ಟಲ್ ಪಾರ್ಸಲ್ ಮೂಲಕ ರವಾನಿಸಲಾಗುತ್ತೆ. ಮೇಲ್ಕಂಡ ಡೈರಿಗಳನ್ನು ಒಟ್ಟಿಗೆ 12 ತರಿಸಿಕೊಳ್ಳುವವರಿಗೆ 1 ಡೈರಿ ಜೊತೆಗೆ ಕೊಡಲಾಗುತ್ತೆ ವಿ ಪಿ ಮೂಲಕ ಡಜನ್ ಗಟ್ಟಲೆ ತರಿಸಿಕೊಳ್ಳುವವರು ಡಜನ್ 1 ಕ್ಕೆ 2 ರೂಪಾಯಿ ಮೇರೆ ಅಡ್ವಾನ್ಸ್ ರವಾನಿಸಬೇಕು

1929 ನೇ ಇಸವಿಯ ಸಚಿತ್ರಕ್ಯಾಲೆಂಡರ್

ಶೀಟ್ ಕ್ಯಾಲೆಂಡರ್ 50 ಕ್ಕೆ 1 2 100 ಕ್ಕೆ 2 0 0, 1 ... ಶೀಟ್ ಕ್ಯಾಲೆಂಡರ್ ... ಕ್ಕೆ ... 60 ಕ್ಕೆ 2 4 0 100 ಕ್ಕೆ 4 0 0

ಅನೇಕ ಬಣ್ಣಗಳಿಂದ ... ಪ್ರಿಂಟ್ ಮಾಡಿದ 10" + 14" ಸೈಜಿನ ಶ್ರೀ ಮಹಾರಾಜರವರ ... ಪಿಕ್ಚರ್ ಕ್ಯಾಲೆಂಡರು 3 ಕ್ಕೆ 0 ... 9 ಕ್ಕೆ 0 ... 0 12 ಕ್ಕೆ 1-6 0

... 1 ಬೇಕಾದವರು ಕ್ಯಾಲೆಂಡರುಗಳ ಪೂರ್ತಿ ಮೊಬಲಗನ್ನು ಮನಿಯಾರ್ಡರ್ ಮೂಲಕ ... ಪ್ಯಾಕಿಂಗ್ ಪೋಸ್ಟೇಜು ಇಲ್ಲದೆ ಫ್ರೀಯಾಗಿ ರವಾನಿಸಲಾಗುತ್ತೆ ವಿ ಪಿ ಮೂಲಕ ಕಳುಹಿಸಲಾಗುವುದಿಲ್ಲ

ಕ್ಯಾಲೆಂಡರುಗಳು ಮುಗಿದನಂತರ ಬರತಕ್ಕ ಮನಿಯಾರ್ಡರನ್ನು ಹಿಂತಿರುಗಿಸಲಾಗುತ್ತೆ

ಮಾದರಿ ಕ್ಯಾಲೆಂಡರ್ ಅಪೇಕ್ಷಿಸುವವರು 0 5-0 ರವಾನಿಸಿದಲ್ಲಿ ಮೇಲ್ಕಂಡ 3 ನಮೂನೆ ಕ್ಯಾಲೆಂಡರುಗಳನ್ನು ಪೋಸ್ಟು ಮೂಲಕ ಫ್ರೀಯಾಗಿ ರವಾನಿಸಲಾಗುತ್ತೆ

ಮನಿಯಾರ್ಡರ್ ರವಾನಿಸುವ ವಿಳಾಸ— [50—15]

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು

ಡಾಕ್ಟರ್ ಜೀ. ಬಿ ಯವರ

ಸುಗಂಧ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕೆಂಡುಹಿಡಿಯಲ್ಪಟ್ಟು ... ವರ್ಷಗಳು ಇದನ್ನು ಉಪಯೋಗಿಸಿ ಸಾವಿರಾರು

ಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವುವೆಂದರೆ—ಶೀತ, ತಲೆಶೂಲೆ, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮೂಗಿನ ವ್ಯಾಧಿಗಳು ... ಮೊದಲಾದ ವ್ಯಾಧಿಗಳನ್ನು ಸ್ವಸ್ಥಪಡಿಸಿ ... ಮಾಡುತ್ತದೆ ಮತ್ತು ಬಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯನ್ನು ಒಂದು ... ಬೆರೆಸಿ ... ಎಲ್ಲರೂ ... ಇದನ್ನು ಅನೇಕ ... ತಮ್ಮ ಗೃಹದಲ್ಲಿ ಕುಟುಂಬ ದಿನವಹಿ ಉಪಯೋಗಿಸುತ್ತಾರೆ ... ಪ್ರಶಂಸಿಸಲಾಗಿದೆ.

ಬಿಲ್ಲೆ ಒಂದಕ್ಕೆ ಕ್ರಯ ರೂ ೦—೪—೦ ವಿ ಪಿ ೦—೪—... ಡಜನ್ ಒಂದಕ್ಕೆ ಕ್ರಯ ರೂ ೨—೮—೦ ವಿ ಪಿ ಚಾರ್ಜು ೮ ಆಣೆ.

ದಯಮಾಡಿ ನಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ನೋಡಿಯೇ ತೆಗೆದುಕೊಳ್ಳಿರಿ

ವಿಳಾಸ—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,

[50 15] ಪೋ. ಬಾ. ೨೧೦, ಮದರಾಸು.

ಮೈಸೂರು ಸ್ಟಾರ್

ಮೈಸೂರು ೧೯೨೯ ಫೆಬ್ರವರಿ ೨೩ ನೆಯ ಶನಿವಾರ

ಬ್ರಾಹ್ಮಣರೂ, ಪ್ರಜಾಸಂರಕ್ಷಣೆಯೂ.

ದೈವ ನಿರ್ಮಾಣದಲ್ಲಿ ಯಾವನೊಬ್ಬನೂ ಜನ್ಮಸಿದ್ಧವಾಗಿ ಅಧಿಕವಾದ ಸವಲತ್ತಿಗೆ ಅರ್ಹತೆಯುಳ್ಳವನಾಗಿರುವುದಿಲ್ಲ. ಜನ್ಮತಃ ಪೂರ್ವ ಪುಣ್ಯಪರಿಪಾಕದಿಂದ ಬುದ್ಧಿಶಕ್ತಿಯನ್ನು ಪಡೆಯುವನಾದರೂ ಬಾಲ್ಯದಿಂದಲೂ ಬುದ್ಧಿಯನ್ನು ರುಜುಮಾರ್ಗದಲ್ಲಿರಿಸಿ ಸುಶಿಕ್ಷೆಯಿಂದ ವೃದ್ಧಿಗೊಳಿಸಬೇಕು. ಶಿಕ್ಷಣವೂ ಅಭ್ಯಾಸವೂ ಇಲ್ಲದಿದ್ದರೆ ಯಾವ ಮತೀಯನಾದರೂ ಒಂದೇ ದರ್ಜೆಯವನಾಗುವನು. ಬ್ರಾಹ್ಮಣರು ಬಹುಕಾಲದಿಂದಲೂ ವಿದ್ಯಾಭ್ಯಾಸಮಾಡಿ ಲೌಕಿಕ ಸಂಪತ್ತಿನಲ್ಲಿ ಮುಂಬರಿದ ಮಾತ್ರದಿಂದಲೇ ಕಾಲಾಂತರಕ್ಕೂ ಆ ವರ್ಗದವರು ಮಾತ್ರ ಪದವಿ ಅಧಿಕಾರ, ಐಶ್ವರ್ಯವನ್ನನುಭವಿಸಬೇಕೆಂದೂ, ಇತರರು ಅವರಂತೆಯೇ ವಿದ್ಯಾವಂತರಾಗಿ ಅವರಿಗೆ ಸರಿಸಮಾನರಾಗಿ ಮುಂಬರಿಯಲಾಗದೆಂದು ಹೇಳುವುದು ಉತ್ತಮಕುಲಪ್ರಸೂತರಿಗೆ ಯೋಗ್ಯವಾದುದಲ್ಲ. ಹಾಗೆನ್ನುವುದು ಅವರ ಮತದ ಪರಮ ಪವಿತ್ರವಾದ ಧರ್ಮಕ್ಕೆ ವಿರೋಧವಾದುದು.

ಈ ಕೆಳಗೆ ಮುದ್ರಿಸಿರುವ ವಿವರದಿಂದ ಸಂಸ್ಥಾನದಲ್ಲಿ ಬ್ರಾಹ್ಮಣರಿಗಿರುವ ಅಧಿಕಾರ, ಪದವಿ, ಐಶ್ವರ್ಯವು ವ್ಯಕ್ತವಾಗುವುದು. ಸಂಸ್ಥಾನದ ಒಟ್ಟು ಪ್ರಜಾಬಲವು ೬೦ ಲಕ್ಷ, ಅದರಲ್ಲಿ ಬ್ರಾಹ್ಮಣರಿರುವುದು ಎರಡು ಲಕ್ಷ, ಉಳಿದವರು ೫೮ ಲಕ್ಷ. ಬ್ರಾಹ್ಮಣರ ಸಂಖ್ಯೆಯ ಪ್ರಕಾರ ಅವರಿಗೆ ಸರ್ಕಾರಿಯುದ್ಯೋಗಗಳನ್ನು ಹಂಚುವುದಾದರೆ ಈಗ ಅವರು ಅನುಭವಿಸುತ್ತಿರುವುದರಲ್ಲಿ ಶೇಕಡ ಎರಡರಷ್ಟು ಸಹ ಅವರಿಗೆ ನ್ಯಾಯವಾಗಿ ಸಲ್ಲುವುದಿಲ್ಲ. ಹೀಗಿದ್ದರೂ ಬ್ರಾಹ್ಮಣ ಗುಲ್ಲುಗಾರರು ಬ್ರಾಹ್ಮಣರಿಗೆ ಇನ್ನು ಹೆಚ್ಚು ಸೌಲಭ್ಯಗಳು ಬೇಕೆಂದೂ, ಉದ್ಯೋಗಗಳು ಇನ್ನು ಹೆಚ್ಚಾಗಿ ತಮಗೆ ಸಲ್ಲಬೇಕೆಂದೂ ದುರಾಶೆಪಟ್ಟು ಗುಲ್ಲೆಬ್ಬಿಸುತ್ತಿರುವುದು ಸರ್ವಥಾ ಅನುಚಿತವಲ್ಲದೆ ಅಯೋಗ್ಯವಾದುದೆಂದು ಹೆಚ್ಚಾಗಿ ಒತ್ತಿ ಹೇಳಬೇಕಾದ ಆವಶ್ಯಕವಿಲ್ಲ.

ಮಿಲ್ಲರ್ ಸಮಿತಿಯ ವರದಿಯಿಂದ ಬ್ರಾಹ್ಮಣರಿಗಾದ ನಷ್ಟವು ತಾನೆ ಏನೆಂಬುದು ವ್ಯಕ್ತವಾಗುವುದಿಲ್ಲ. ನಾವು ಈ ಕೆಳಗೆ ಪ್ರಕಟಿಸಿರುವ ಪಟ್ಟಿಯನ್ನು ಪರಿಶೀಲಿಸಿದರೆ ಮಿಲ್ಲರ್ ವರದಿಗೆ ಮುಂಚೆ ಅಂದರೆ 1918 ರಲ್ಲಿ ಸರ್ಕಾರಿ ಉದ್ಯೋಗಗಳಲ್ಲಿದ್ದ ಬ್ರಾಹ್ಮಣರ ಸಂಖ್ಯೆಯೂ ಮಿಲ್ಲರ್ ಸಮಿತಿಯ ಸಲಹೆಯನ್ನು ಸರ್ಕಾರದವರು ಅಂಗೀಕರಿಸಿದ ಹತ್ತು ವರ್ಷಗಳ ಮೇಲೆ, ಅಂದರೆ 1928 ರಲ್ಲಿ ಮತ್ತಷ್ಟು ಬ್ರಾಹ್ಮಣ ಅಧಿಕಾರಿಗಳ ಸಂಖ್ಯೆಯು ಹೆಚ್ಚಿರುವುದೇ ವಿನಾ ಕಡಿಮೆಯಾಗಿರುವುದಿಲ್ಲ. ಹಾಗಾದರೆ ಬ್ರಾಹ್ಮಣರ ವಿವಾದವೇನು ? ಹಿಂದುಳಿದವರಿಗೆ ನಾಲ್ಕಾರು ಉದ್ಯೋಗಗಳು ಮಿಲ್ಲರ್ ವರದಿಯ ಆಶ್ರಯದಲ್ಲಿ ದೊರೆತುವು. ಬ್ರಾಹ್ಮಣರು ಆ ಉದ್ಯೋಗಗಳನ್ನು ಸಹ ತಮ್ಮವರಿಗೇ ಏಕೆ ಕೊಡಲಿಲ್ಲವೆಂಬ ಆಕ್ರೋಶದಿಂದ ಗುಲ್ಲೆಬ್ಬಿಸುತ್ತಿರುವರು. ಬ್ರಾಹ್ಮಣರು ಜನ್ಮಸಿದ್ಧವಾಗಿ ಕಾರ್ಯದಕ್ಷತೆಯುಳ್ಳವರಂತೆ ! ಆ ಕಾರಣದಿಂದ ಅವರಿಗೆ ಎಲ್ಲರೂ ಎಲ್ಲೆಲ್ಲಿಯೂ ಪೂಜ್ಯತೆಯನ್ನು ಕೊಟ್ಟು ಉಚ್ಚಸ್ಥಾನದಲ್ಲಿ ಕೂರಿಸಬೇಕಂತೆ ! ಹಾಗಿಲ್ಲದಿದ್ದರೆ ಅವರು ಗುಲ್ಲೆಬ್ಬಿಸಿ ಗಲಭೆ ಮಾಡುವುದೇ ಸಿದ್ಧವಂತೆ ! ಇದು ಯಾವ ನ್ಯಾಯ ? ಧರ್ಮವೋ ಕರ್ಮವೋ ಅದೊಂದೂ ಅವರಿಗೆ ಬೇಕಿಲ್ಲ. ಬಹು ಕಾಲದಿಂದಲೂ ಸರ್ಕಾರಿ ಅಧಿಕಾರಗಳನ್ನು ಅನುಭವಿಸುತ್ತಿರುವರಂತೆ ಆದ್ದರಿಂದ ಸರ್ಕಾರಿ ಉದ್ಯೋಗವೆಲ್ಲಾ ಅವರಿಗೆ ಒಳಗೀರಾಯಿತಂತೆ. ಅದನ್ನು ಇತರರಾರೂ ವಿವಾದಿಸಕೂಡದಂತೆ. ಸರ್ ವಿಶ್ವೇಶ್ವರಯ್ಯನವರೂ ಇದೇ ಅಭಿಪ್ರಾಯವನ್ನು ತಮ್ಮ ವರದಿಯಲ್ಲಿ ಬರೆದಿರುವುದಿಲ್ಲವೆ ? ವರದಿಯನ್ನು ಬರೆದವರೂ ಸೇರುಗಾರ ವರ್ಗದವರೆಂದ ಒಳಿಕ ಹಾಗೆ ಅಭಿಪ್ರಾಯಪಟ್ಟಿರುವುದೇನಾಶ್ಚರ್ಯವಿಲ್ಲವೆಂಬುದು ವ್ಯಕ್ತವಾಗುತ್ತದೆ.

ಬ್ರಾಹ್ಮಣರಿಗೆ ಸರ್ಕಾರದವರು ಅನ್ಯಾಯ ಮಾಡಿರುವರೆಂದೂ, ಆ ಅನ್ಯಾಯಕ್ಕೆ ಮಿಲ್ಲರ್ ವರದಿಯೇ ಕಾರಣವೆಂದೂ ಹೇಳುತ್ತಿರುವರಷ್ಟೆ. ಮಿಲ್ಲರ್ ವರದಿಯಲ್ಲಿ ಹೇಳಿರುವುದೇನು ?— ಸರ್ಕಾರಕ್ಕೆ ಸಲ್ಲುವ ಕಂದಾಯ ಕೌಳಿಗೆಯ ಆದಾಯದ ಮುಕ್ಕಾಲು ಮೂರುಪಾಲು ಹಿಂದುಳಿದವರಿಂದ ವಸೂಲಾಗುವುದಾದರೂ ಅವರಿಗೆ ಸರ್ಕಾರಿಯುದ್ಯೋಗಗಳಲ್ಲಿ ಉಚಿತವಾದ ಭಾಗವು ಅವರಿಗೆ ದೊರೆಯದಂತೆ ಕೇವಲ ಒಂದುವರ್ಗದವರೇ ಅನುಭವಿಸುತ್ತಿರುವುದರಿಂದ ನ್ಯಾಯವಾಗಿ ಹಿಂದುಳಿದವರಿಗೆ ಸಲ್ಲಬೇಕಾದಷ್ಟು ಉದ್ಯೋಗಗಳು ಇನ್ನುಮುಂದೆ ಅವರಿಗೆ ಕೊಡಬೇಕೆಂದೂ, ಬ್ರಾಹ್ಮಣವರ್ಗದವರು ಸಹಾನುಭೂತಿಯಿಂದ ಹಿಂದುಳಿದವರಿಗೆ ಉತ್ತೇಜನ ಕೊಟ್ಟು ಅವರನ್ನು ಮುಂಬರಿಸಬೇಕೆಂದೂ, ದೇಶಸೇವೆಯಲ್ಲಿ ಹಿಂದುಳಿದವರು ಭಾಗಿಗಳಾಗಲು ಅವರಿಗೆ ಅವಕಾಶಕೊಡಬೇಕೆಂದೂ ಹೇಳಿರುವರು. ನಮ್ಮ ಘನಸರ್ಕಾರದವರೂ, ಕೃಪಾಳುಗಳಾದ ನಮ್ಮ ಮಹಾಪ್ರಭುಗಳೂ ಮಿಲ್ಲರ್ ಸಲಹೆಗಳನ್ನು ಅನುಮೋದಿಸಿ ತದನುಸಾರ ಹಿಂದುಳಿದವರಿಗೆ ಉತ್ತೇಜನಕೊಡಬೇಕೆಂದು ಅಪ್ಪಣೆಯಿತ್ತರು. ಆದರೆ ವಾಸ್ತವವಾಗಿ ಅಪ್ಪಣೆಯು ಅನುಷ್ಠಾನದಲ್ಲಿ ತರಲು ಬ್ರಾಹ್ಮಣಾಧಿಕಾರಿಗಳು ಅವಕಾಶ ಕೊಡದೆ ನಾನಾತರನಾದ ತೊಂದರೆ ತೊಡಕುಗಳನ್ನು ತಂದೊಡ್ಡಿದರು. ಹೆಸರಿಗೆಮಾತ್ರ ಮೈಸೂರು ಸರ್ಕಾರದಲ್ಲಿ ಹಿಂದುಳಿದವರಿಗೆ ಸರ್ಕಾರದ ಉದ್ಯೋಗಗಳು ಹೆಚ್ಚುಹೆಚ್ಚಾಗಿ ಕೊಡಲ್ಪಡುತ್ತಿರುವುವೆಂದೂ ಬ್ರಾಹ್ಮಣರಿಗೆ ಉದ್ಯೋಗ ದೊರೆಯದೆ ಹೋಗುತ್ತಿರುವರೆಂದೂ ವ್ಯಸನಪಟ್ಟು ಹೇಳುವರು. ಆದರೆ ಪಕ್ಷ ಪಾತಿಗಳಾಗಿ ಗುಲ್ಲೆಬ್ಬಿಸುವ ಬ್ರಾಹ್ಮಣರು ಹಿಂದುಳಿದವರಿಗೆ ಸಲ್ಲಬೇಕಾದ ಒಟ್ಟಿಯನ್ನು ತಿಂದೇಪಟ್ಟಿರು. ಬಹುಕಾಲ ಮೋಸದಿಂದ ಹಿಂದುಳಿದವರನ್ನು ಕೋತಿಯ ಕೈಗೆ ಹತ್ತಿದ್ದ ಎಂಜಲು ರೊಟ್ಟಿಯಂತೆ ಎಲ್ಲರಿಗೂ ಮೋಸಮಾಡಿ ಒಟ್ಟಿಯನ್ನು ತಿಂದಿತೆಂಬ ಪ್ರತೀತಿಯು ಪ್ರಕಟವಾಗಿ ಹೋಯಿತು !

ವರ್ಗಗಳ ಕಸುಬನ್ನು ಅನುಸರಿಸಿ ಜೀವನವನ್ನು ನಡೆಸಿಕೊಳ್ಳಬೇಕೆಂಬುವ ಗುಲ್ಲುಗಾರರು ಮೊದಲು ತಮ್ಮ ವರ್ಗಗಳಿಗೆ ಬುದ್ಧಿಹೇಳಿ ತಮ್ಮ ಪೂರ್ವಜರಂತೆ ಪಂಚಾಂಗ ದರ್ಭೆಯನ್ನು ತೆಗೆದುಕೊಂಡು ನಿರ್ಮಲಾತ್ಮರಾಗಿ ಜನಗಳಿಗೆ ಆತ್ಮತತ್ವವನ್ನು ಬೋಧಿಸಿ ಜೀವನವನ್ನು ಸಾರ್ಥಕಗೊಳಿಸಿರೆಂದು ಹೇಳುವವರಾದರೆ ಇತರರೂ ಅವರವರ ಪೂರ್ವಿಕರ ಕಸಬನ್ನು ಕೈಕೊಳ್ಳುವವರು. ಅದನ್ನುಬಿಟ್ಟು ತಾವುಮಾತ್ರ ಪುರುಷೋತ್ತಮರೆಂದೂ, ಇತರರೆಲ್ಲಾ ಅಧಮರೆಂದೂ ವಿಜೃಂಭಿಸುತ್ತಾ ಹೋದರೆ ಮತ ವೈರವೈಷಮ್ಯಗಳೆಂದಿಗೂ ಕಡಿಮೆಯಾಗಲಾರವು. ಬ್ರಾಹ್ಮಣ ಸಹೋದರರೆ ! ಸಮಾಜದಲ್ಲಿ ಜೀವನೋಪಾಯವನ್ನು ಅವರವರ ಬುದ್ಧಿಶಕ್ತಿ, ಜ್ಞಾನಶಕ್ತಿಗನುಸಾರವಾಗಿ ಹಂಚಿಕೊಂಡು, ಸೌಹಾರ್ದದಿಂದಲೂ ಪರಸ್ಪರ ಸಹಾಯದಿಂದಲೂ ಸಂಪಾದಿಸಿಕೊಳ್ಳುವುದೇ ಸರ್ವಥಾ ನ್ಯಾಯವಾದ ಮಾರ್ಗವು. ಇತರರ ಏಳ್ಗೆಯನ್ನು ಕಂಡು ಕರುಬುವುದನ್ನು ಇನ್ನಾದರೂ ಬಿಟ್ಟುಬಿಡಿರಿ. "ಸರ್ವೇಜನಾಸ್ಸುಖಿನೋಭವಂತು" ಎಂಬ ನಿಮ್ಮ ಪೂರ್ವಜರ ಸಂಕಲ್ಪವನ್ನು ಸ್ಮರಣೆಯಲ್ಲಿಟ್ಟು ಅದನ್ನು ಅನುಸರಣೆಯಲ್ಲಿ ತನ್ನಿರಿ. ಹಾಗಲ್ಲದೆ ಸಕಲ ಸೌಭಾಗ್ಯಗಳೂ ನಿಮಗೇ ಇರಬೇಕೆಂದರೂ ಸಾಧ್ಯವಾಗಲಾರದು. ಇತರರು ನಿಮಗೆ ನ್ಯಾಯವಾಗಿ ಸಲ್ಲಬೇಕಾದುದನ್ನು ನಿಮ್ಮಿಂದ ಕಿತ್ತುಕೊಳ್ಳಲೂ ಸಾಧ್ಯವಾಗಲಾರದು. ಅವರವರ ಹಕ್ಕುಬಾಧ್ಯತೆಗಳು ಅವರವರಿಗೆ ಸಲ್ಲಲೇಬೇಕು.

ಸರ್ಕಾರಿಯುದ್ಯೋಗದಲ್ಲಿರುವ ಬ್ರಾಹ್ಮಣರಸಂಖ್ಯೆ

ಕಳೆದವರ್ಷ (1928) ಜುಲೈ ತಿಂಗಳಲ್ಲಿ ಸಂಸ್ಥಾನದ ಉದ್ಯೋಗದಲ್ಲಿ ತಿಂಗಳಿಗೆ 31 ರಿಂದ 130 ರ ವರೆಗೆ ಸಂಬಳ ತೆಗೆಯುವ ಬ್ರಾಹ್ಮಣರ ಸಂಖ್ಯೆ —

ಕಛೇರಿ	ಒಟ್ಟು ಸ್ಥಳಗಳು	ಬ್ರಾಹ್ಮಣರು.
ರೆ ಕಮೀಷನರ್	27	16
ಫಾರೆಸ್ಟ್ ಕನ್ಸರ್ವೇಟರ್	17	11
ಎಕ್ಸೈಜ್ ಕಮೀಷನರ್	21	13
ರಿಜಿಸ್ಟ್ರೇಷನ್ ಇ ಜ	13	7
ಜ॥ ಮತ್ತು ರೆ॥ ಸೆಕ್ರೆಟೇರಿಯಟ್	141	97
ಕಂಟ್ರೋಲರ್	114	248
ಚೀಫ್ ಕೋರ್ಟ್ ರಿಜಿಸ್ಟ್ರಾರ್	41	31
ಲಾ ಡಿಪಾರ್ಟ್‌ಮೆಂಟ್	11	8
ಪೋಲೀಸ್ ಇ ಜ	14	7
ವಿದ್ಯಾ ಶಾಖೆ ಡೈರೆಕ್ಟರ್	61	41
ವ್ಯವಸಾಯದ ಇಲಾಖೆ	23	11
ರೇಷ್ಮೆ ವ್ಯವಸಾಯ	8	5
ಕೈಗಾರಿಕೆ ವ್ಯಾಪಾರ	17	11
ಪರಸ್ಪರ ಸಹಾಯಸಂಘ	10	7
ವಿದ್ಯುಚ್ಛಕ್ತಿ	230	114

ಸರ್ಕಾರಿಯುದ್ಯೋಗಗಳಲ್ಲಿ ಒಟ್ಟು 1036 ಸ್ಥಳಗಳ ಪೈಕಿ ಬ್ರಾಹ್ಮಣರ 657 ಸ್ಥಳಗಳನ್ನು ಆಕ್ರಮಿಸಿಕೊಂಡು ಅನುಭವಿಸುತ್ತಿರುವರು. ಇತರ ವರ್ಗಗಳೆಲ್ಲ ಸೇರಿ 381 ಸ್ಥಳಗಳನ್ನು ಪಡೆದಿರುವರು. ಈ ಉದ್ಯೋಗಗಳೆಲ್ಲಾ ಕೆಳದರ್ಜೆಗೆ ಸೇರಿದ ಗುಮಾಸ್ತವರ್ಗದವು. ಉತ್ತಮವರ್ಗದವುಗಳಲ್ಲಿ 1928 ನೇ ಇಸವಿಯಲ್ಲಿದ್ದ ಸಂಖ್ಯೆ —

ಸಂಬಳ	ಬ್ರಾಹ್ಮಣರು	ಇತರರು.
250	446	124
250-300	230	51
300-800	77	12
800-1,200	22	1
1,200 ಮೇಲ್ಪಟ್ಟವು	10	3

ಇದೇ ಸಂಖ್ಯೆಗಳು 1918 ರಲ್ಲಿ ಹೇಗಿದ್ದುವೆಂದರೆ.—

ಸಂಬಳ	ಬ್ರಾಹ್ಮಣರು	ಇತರರು
100-250	462	64
250-450	150	28
450-800	45	17
800 ಮೇಲ್ಪಟ್ಟವು	11	8

ಒಟ್ಟು ಸ್ಥಳಗಳ ಪೈಕಿ ಉತ್ತಮವರ್ಗದಲ್ಲಿ 1918 ನೇ ಇಸವಿಯಲ್ಲಿ 602 ಮಂದಿ ಬ್ರಾಹ್ಮಣರೂ, 107 ಮಂದಿ ಇತರರೂ ಒಟ್ಟು ಸ್ಥಳಗಳ ಪೈಕಿ ಉತ್ತಮವರ್ಗದಲ್ಲಿ 1918ನೇ ಇಸವಿಯಲ್ಲಿ 602 ಮಂದಿ ಬ್ರಾಹ್ಮಣರೂ, 107 ಮಂದಿ ಇತರರೂ ಇದ್ದರು, 1928 ರಲ್ಲಿ 788 ಮಂದಿ ಬ್ರಾಹ್ಮಣರೂ 381 ಮಂದಿ ಇತರರೂ ಇದ್ದರು. ಈ ಸಂಖ್ಯೆಯನ್ನು ಪರಿಶೀಲಿಸಿದರೆ ಬ್ರಾಹ್ಮಣ ಉದ್ಯೋಗಸ್ಥರ ಸಂಖ್ಯೆಯು ಮಿಲ್ಲರ್ ವರದಿಯು ಹುಟ್ಟಿದಾಗಿನಿಂದ ಹೆಚ್ಚಿತೇ ವಿನಾ ಕಡಿಮೆಯಾಗಿರುವುದಿಲ್ಲವೆಂಬುದು ಮಹಾಜನಗಳಿಗೆ ವ್ಯಕ್ತವಾಗುವುದು. ಹೀಗಿದ್ದಾಗ್ಯೂ ಬ್ರಾಹ್ಮಣರು ತಮಗೆ ದೈವದತ್ತವಾದ ಅಧಿಕಾರ ಅನ್ಯಾಯವಾಗಿ ಅಪಹರಿಸಲ್ಪಟ್ಟಿತೆಂದೂ ತಮಗೆ ಈ ಸ್ಥಳಗಳಲ್ಲಿ ಉಳಿಗಾಲವಿಲ್ಲವೆಂದೂ ಗುಲ್ಲೆಬ್ಬಿಸುತ್ತಿರುವುದು ಯಾವ ನ್ಯಾಯ ಯಾವ ಧರ್ಮವೆಂಬುದನ್ನು ಶಾಸ್ತ್ರಕಾರರಾದ ಅವರೇ ತಿಳಿಯಬೇಕು. ಈ ವಿಧವಾದ ದುರಾಶೆಗಾಗಿಯೇ ಎಲ್ಲರೂ ನಾನಾ ಕಷ್ಟನಷ್ಟಗಳನ್ನು ಅನುಭವಿಸಬೇಕೆಂದೂ ಹೋರಾಟವೆಂದೂ ಬಹಿಷ್ಕಾರಮಾಡಿರೆಂದೂ ಕರೆಯುವುದು ?

ಬೆಂಗಳೂರಿನಲ್ಲಿ ನಡೆದ ನೀಚಕೃತ್ಯ

ಈಗ್ಗೆ ಕೆಲವು ದಿನಗಳಿಂದ ಮಕ್ಕಳನ್ನು ಹಿಡಿದುಕೊಂಡು ಹೋಗುತ್ತಾರೆಂಬ ಸುಳ್ಳು ವರ್ತಮಾನವನ್ನು ಬೆಂಗಳೂರು ಪಟ್ಟಣದಲ್ಲೆಲ್ಲಾ ಹರಡಿ ಕೇರಿಕೇರಿಗಳಲ್ಲೂ ಹಬ್ಬಿಸಿ ಜನರನ್ನು ಭಯಭ್ರಾಂತರನ್ನಾಗಿ ಮಾಡಿರುತ್ತಾರೆ. ಮೊನ್ನೆ ದಿನ ರಾಜಾಸಿಂಗನ ಪೇಟೆಯಲ್ಲಿ ಒಬ್ಬ ನಯುಸ್ಥಾಪ ರಿಸ್ಪರ್ ನೌಕರನನ್ನು, ಇವನೇ ಮಕ್ಕಳನ್ನು ಹಿಡಿದುಕೊಂಡು ಹೋಗುವನೆಂದು, ಅನ್ಯಾಯವಾಗಿ ಜನಗಳು ಹೊಡೆದು ಗತಪ್ರಾಣನನ್ನಾಗಿ ಮಾಡಿಬಿಟ್ಟರು. ಬಹಳ ವರ್ಷಗಳಿಂದಲೂ ನಮ್ಮ ಪಟ್ಟಣಕ್ಕೆ ಆಗಾಗ್ಗೆ ಬರುತ್ತಿದ್ದ ಪಂಜಾಬ್ ದೇಶಸ್ಥರಾದ ವಜೀರ್‌ಸಿಂಗ್ ಮತ್ತು ಈತನ ತಮ್ಮ ಮಕಾನ್‌ಸಿಂಗ್ ಎಂಬ ಇಬ್ಬರು ಅಣ್ಣತಮ್ಮಂದಿರು, ಮೊನ್ನೆ ಬೆಂಗಳೂರು ಪಟ್ಟಣದಲ್ಲೆಲ್ಲಾ ಜೋಯಿಸ್ಯ, ಸಾಮುದ್ರಿಕಗಳನ್ನು ಜನಗಳಿಗೆ ಹೇಳುತ್ತಾ, ತುಳಸೀತೋಟದ ಪೂರ್ಣಯ್ಯನವರ ಛತ್ರದಲ್ಲಿ ಇಳಿದುಕೊಂಡಿದ್ದರು. ವಜೀರ್ ಸಿಂಗ್ ಎಂಬುವನಿಗೆ ಇಬ್ಬರು ಮಕ್ಕಳು ಸಹ ಇರುತ್ತಾರೆ. ಮೇಲ್ಕಂಡ ಅಣ್ಣತಮ್ಮಂದಿರು ಅವೆನ್ಯೂರೋಡ್ ಸಿಂಗರ್ ಸೂಯಿಂಗ್ ಕಂಪೆನಿಕಡೆ ತಮ್ಮ ಭಿಕ್ಷಾವೃತ್ತಿಗೆ ಹೋಗುತ್ತಿರಲಾಗಿ, ಹಿಂದಿನಿಂದ 4-5 ಜನಗಳು ಬಂದು, ಇವರೇ ಮಕ್ಕಳನ್ನು ಹಿಡಿದುಕೊಂಡು ಹೋಗುವವರು ಎಂದು ಹಿಂದು ಮುಂದು ನೋಡದೆ ಇವರನ್ನು ವಿಪರೀತವಾಗಿ ಹೊಡೆದುಬಿಟ್ಟರು. ಪೆಟ್ಟುತಿಂದ ತಮ್ಮನಾದ ಮಕಾನ್‌ಸಿಂಗನು ಭಯಭರಿತನಾಗಿ ಓಡಿಹೋದನು. ಜನಗಳೆಲ್ಲಾ ಸೇರಿಕೊಂಡು ಅಣ್ಣನಾದ ವಜೀರ್‌ಸಿಂಗನ ತಲೆ ಹೊಡೆದು ಛಿದ್ರ ಛಿದ್ರವಾಗಿ ಮಾಡಿ ಅವನ ಬೆನ್ನು ಸೀಳಿಹೋಗುವಂತೆ ಹೊಡೆದು ಅವನ ಶರೀರದ ಯಾವತ್ತೂ ಅಂಗಗಳ ಮೇಲೂ ವಿಪರೀತ ಪ್ರಹಾರ ಮಾಡಿ ಅವನನ್ನು ಗತಪ್ರಾಣನನ್ನಾಗಿ ಮಾಡಿದರು. ತಕ್ಷಣವೆ ಪೋಲೀಸಿನವರು ಬಾರದಿದ್ದಲ್ಲಿ ಏನೇನು ಅನಾಹುತಗಳು ನಡೆಯುತ್ತಿದ್ದುವೋ ? ಇಷ್ಟರಲ್ಲೇ ಜನಗಳು ಈ ಇಬ್ಬರು ಅಣ್ಣತಮ್ಮಂದಿರ ಹತ್ತಿರವಿದ್ದ ಸರ್ಟಿಫಿಕೇಟುಗಳನ್ನೂ ದೋಚಿಕೊಂಡು ಹೋಗಿರುತ್ತಾರೆ. ಪೆಟ್ಟುತಿಂದವನು ಈಗ ಪೋಲೀಸಿನವರ ವಶದಲ್ಲಿ ಆಸ್ಪತ್ರೆಯಲ್ಲಿರುತ್ತಾನೆ. ಇದಲ್ಲವೆ ನಮ್ಮ ಜನಗಳ ಬುದ್ಧಿ ಕುಶಲತೆ !

ದಿವಾನ್ ಸಾಹೇಬರ ದೆಹಲಿ ಪ್ರವಾಸ.

ನಮ್ಮ ದಿವಾನ್ ಸಾಹೇಬರವರು ದೆಹಲಿಯಲ್ಲಿ ನಡೆದ ನರೇಂದ್ರಮಂಡಲದ ಸಭೆಗೆ ಮೈಸೂರಿನ ಪ್ರತಿನಿಧಿಗಳಾಗಿ ಹೋಗಿರುವರಷ್ಟೆ. ಈ ಸಂಬಂಧದಲ್ಲಿ ಅವರ ಪ್ರತಿಕಕ್ಷಿಗಳು ನಾನಾತರನಾದ ದುರಭಿಪ್ರಾಯಗಳನ್ನು ಪ್ರಚುರಗೊಳಿಸುತ್ತಿರುವರು. ಅವರ ದಿವಾನ್‌ಗಿರಿಯ ಮೂರುವರ್ಷಗಳ ಅವಧಿಯು ಇನ್ನು ಸ್ವಲ್ಪಕಾಲದಲ್ಲಿಯೇ ಪೂರೈಸುವುದೆಂದೂ, ಇನ್ನು ಮೂರು ವರ್ಷಗಳವರೆಗೆ ಅವರು ದಿವಾನ್‌ಗಿರಿಯಲ್ಲಿರಬೇಕಾದರೆ ವೈಸ್ರಾಯರ ಅನುಮತಿಯನ್ನು ಪಡೆಯಬೇಕಾಗಿರುವುದರಿಂದ ಅದಕ್ಕಾಗಿ ದೆಹಲಿಗೆ ತೆರಳಿರುವರೆಂದೂ ಕೆಲವರು ಹೇಳುತ್ತಾರೆ. ಇದು ಶುದ್ಧ ನಿರಾಧಾರವಾದುದು. ಮೆ॥ ಮಿರ್ಜಾ ಇಸ್ಮಾಯಿಲ್‌ರವರಿಗೆ ಇನ್ನು ಚಿಕ್ಕವಯಸ್ಸಾದುದರಿಂದ ಅವರು ನಿವೃತ್ತರಾಗಬೇಕಾದರೆ ಸುಮಾರು ಹತ್ತುವರ್ಷವಾದರೂ ಆಗಬೇಕು. ಅದೂ ಅಲ್ಲದೆ ತಮ್ಮ ದಿವಾನರನ್ನು ನಿಯಮಿಸಿಕೊಳ್ಳುವ ಮತ್ತು ನಿವೃತ್ತಿ ಮಾಡುವ ಅಧಿಕಾರವನ್ನು ನಮ್ಮ ಮಹಾಪ್ರಭುಗಳವರ ಪಿತೃವರ್ಯರಿಗೆ ಬ್ರಿಟಿಷ್ ಸರ್ಕಾರದವರು ಕೊಟ್ಟಿರುವರಾದ ಕಾರಣ ಮೆ॥ ಇಸ್ಮಾಯಿಲ್‌ರವರು ಇದಕ್ಕಾಗಿ ದೆಹಲಿಗೆ ಹೋಗಬೇಕಾದ ಪ್ರಮೇಯವೇನೂ ಇರುವುದಿಲ್ಲ. ಮೈಸೂರಿನಲ್ಲಿ ಗುಲ್ಲುಗಾರರ ಅಂಧಾಚಲಚಳವಳಿಯು ದಿನೇ ದಿನೇ ಪ್ರಬಲಿಸುತ್ತಿರುವುದರಿಂದ ಅವರನ್ನು ಸೆರೆಹಿಡಿದು ಬಂಧನದಲ್ಲಿಟ್ಟು ಶಾಂತಿ ಸಂರಕ್ಷಣೆಮಾಡಲು ಹೆಚ್ಚಿಗೆಯ ಕಾನೂನನ್ನು ಮಾಡಲು ವೈಸ್ರಾಯರ ಅನುಮತಿಯನ್ನು ಕೇಳಲೋಸುಗ ದಿವಾನ್ ಸಾಹೇಬರು ದೆಹಲಿಗೆ ಹೋದರೆಂದು ಹೇಳುವವರೂ ಇರುವರು. ನಮ್ಮ ಮಹಾಪ್ರಭುಗಳು ಪ್ರಜಾಸಂರಕ್ಷಣೆಗಾಗಿ ಆವಶ್ಯಕವಾದ ಯಾವ ಕಾನೂನನ್ನು ಬೇಕಾದರೂ ಮಾಡಿಕೊಳ್ಳುವ ಅಧಿಕಾರವುಳ್ಳವರಾಗಿರುವರಾದಕಾರಣ ದಿವಾನ್‌ಸಾಹೇಬರು ಇದಕ್ಕಾಗಿ ದೆಹಲಿಗೆ ಹೋಗಬೇಕಾದ ಅಗತ್ಯವಿಲ್ಲವೆಂಬುದು ವ್ಯಕ್ತವಾಗುವುದು. ಅಂತು ದಿವಾನ್‌ಸಾಹೇಬರ ಪ್ರತಿಕಕ್ಷಿಗಳು ಅವರನ್ನು ಒಂದಿಲ್ಲೊಂದುರೀತಿ ದೂಷಿಸಿ ಅವರನ್ನು ಅವಹೇಳನಗೊಳಿಸಲು ಸದಾ ಕಾದಿರುವರಾದಕಾರಣ ಅವರು ಯಾವ ಕೆಲಸಮಾಡಿದರೂ ಅದರಲ್ಲಿ ಇಲ್ಲದ ಸಲ್ಲದ ತಪ್ಪನ್ನು ಕಲ್ಪಿಸಿ, ಅವರನ್ನು ದೂರುವುದಕ್ಕಾರಂಭಿಸಿರುವರೆಂಬುದಕ್ಕೆ ಈಗಿನ ನಿರಾಧಾರವಾದ ಸುದ್ದಿಗಳೇ ತಕ್ಕ ನಿದರ್ಶನಗಳಾಗಿರುತ್ತವೆ.

[illegible]

[illegible] ವ [illegible] ಆರಂಭ [illegible] ಮುಡುಗಿಯು ಒಬ್ಬ [illegible] ಕೆಲಸಕ್ಕೆ ಮನೆಯೊಳಗೆ ಹೋಯಿತು ಮನೆಯ ಒಳಗೆ [illegible] ನೋಡಿ ದಾರಿಯಲಿ ಹೋಗುತ್ತಿ[illegible] ಸಲ್ಮಾನನನ್ನು ಹಿಡಿದು ಅಷ್ಟರಲ್ಲಿಯೇ ಹುಡುಗಿಯು [illegible] ದರು ಮುಸಲ್ಮಾನನನ್ನು ಹೊಡೆದು ತೆಂಗೇರಿ ಗೇಟ್ ಪೋಲೀಸ್ ಸ್ಟೇಷನ್ನಿಗೆ ಕರೆದೊಯ್ದರು [illegible] ಹಲ್ಲೆ ಮಾಡಿದು ಮೇಲೆ ಮುಸಲ್ಮಾನನು ನಿಷ್ಪತ್ರನಾದ [illegible] ಯಿಂದ [illegible] ಗಳೂರುವಾಸಿಯೆಂದೂ ಮಗುವು ರಾತ್ರಿವೇಳೆಯಲ್ಲಿ ಆವ [illegible] ಕಂಡು ಬೆದರಿ ತಿರುಗಿಕೊಂಡಳೆಂದೂ ತಿಳಿಯಬಂದುದರಿ[illegible] ಆವನನ್ನು ಸ್ಟೇಷನ್ನಿನಲ್ಲಿ ಕೊಂಡ ಹೊತ್ತು ಇರಿಸಿಕೊಂ[illegible] ಜನಗಳ ಗುಂಪು ಚದರಿದ ಮೇಲೆ ಆತನ ಮನೆಗೆ ಕಳ[illegible] [illegible] ದಂತೆ ಎಷ್ಟು ಸಮಾಧಾನ ಹೇಳಿದರೂ ಜನಗಳು ಸಂ[illegible] [illegible] ಒಳಿಯಲ್ಲಿ ಗುಂಪುಕಟ್ಟಿಕೊಂಡು ನಿಂತಿದ್ದರು ಪೋಲೀ[illegible] ಅಧಿಕಾರಿಗಳು ಕೂಡಲೇ ಒಂದು ಗುಂಪನ್ನು ಚದರಿಸಿದರು [illegible] ವಾರ ವ್ಯಾಪಾರಶಾಲ [illegible] ಒಳಿಯಲ್ಲಿ ಮತ್ತೊಂದು [illegible] ಂದಲವಾಯಿತು ಒಬ್ಬ ದಾರಿಹೋಕ ಮುಸಲ್ಮಾನನನ್ನು ಜನಗಳು ಮುತ್ತಿ ಹಿಂಸಿಸುತ್ತಿದ್ದರು ವಿಚಾರಣೆ ಮಾಡಲು [illegible] ನಿರಪರಾಧಿಯಾದ ದಾರಿಹೋಕನೆಂದು ತಿಳಿಯಿತು [illegible] ಸಿನವರು ಬಿಡುಗಡೆ ಮಾಡಿದರು ಆದೇ ದಿನ ಮಧ್ಯಾಹ್ನ [illegible] ಕಂಠದ ಸ್ಟ್ರೀಟ್ ಒಳಿಯಲ್ಲಿ ಮತ್ತೊಂದು ಗೊಂದಲವಾ[illegible] ಪಿರ್ ಮುಸಲ್ಮಾನ ವೃದ್ಧನೂ, [illegible] ಯಿಂದ ಬೆಂಗಳೂರಿನಲ್ಲಿ ಕೂಲಿಗಾಗಿ ಬಂದವರು ಸರಿಯಾದ [illegible] ಗ ದೊರೆಯದಿರಲು ಭಿಕ್ಷೆ ಬೇಡುತ್ತಿದ್ದರಂತೆ ಅವರು [illegible] ನ್ನು ಹಿಡಿಯುವವರೆಂದು ಯಾರೋ ಸುಳ್ಳು ಸುದ್ದಿ [illegible] ಸಿ ಗಲಭೆ ಮಾಡಿದರು ಅಷ್ಟರಲ್ಲೇ ಪೋಲೀಸ್ ಅಧಿಕಾ[illegible] ನ್ಯಾಯಾಧಿಕಾರಿಗಳೂ ಬಂದು [illegible] ಸಲ್ಮಾನರನ್ನು ಬಿಡುಗಡೆ ಮಾಡಿಸಿದರು ಬೂಟಾಟಿಕೆಯ ನೂ ಹೀಗೆಯೇ ನಿರಾಧಾರವಾದ ಸುಳ್ಳು ಸುದ್ದಿಯ ಪ್ರಚಾರ [illegible] ದ ನಡೆದ ದಂಗೆಯು ಮೊನ್ನೆ ತಾನೆ ಶಾಂತವಾಯಿತು ಬೆಂಗ[illegible] ನಲ್ಲಿ ಇಂತಹ ಗಲಭೆಯು ನಡೆಯುವ ಸಂಭವವಿರು[illegible] ಇದಕ್ಕೆ ಯಾರೋ ಕೆಲವರು ಕಾರಣವಾಗಿರಬಹು [illegible] ಹೊರಡುತ್ತದ ಸುಳ್ಳು ಸುದ್ದಿಯನ್ನು ಪ್ರಕಟಿಸುವುದ ಜನಗಳಲ್ಲಿ ಮತದ್ವೇಷವನ್ನೂ, ವರ್ಣವೈಷಮ್ಯವನ್ನೂ ಹುಟ್ಟಿ ಬಹವನ್ನು ಕಂಡುಹಾಕಿ ದಂಗೆಯೆಬ್ಬಿಸುವ ಯತ್ನದಲ್ಲಿರುವ [illegible] ತೋರುತ್ತದೆ ಗಣಪತಿಯಸಲುವಾಗಿ ಮಾಡಿದ ಅನಾ[illegible] ವಾದ ಚಳವಳಿಯೂ, ಅದರಿಂದಾದ ದುಷ್ಪರಿಣಾಮವೂ [illegible] ಮರೆತಿರುವುದಿಲ್ಲ ಈಗಾಗಲೇ ಮತ್ತೊಂದು ಗಲಭೆಯು [illegible] ರಿಸುವಂತೆ ತೋರುತ್ತದೆ ಈಗಲಾದರೂ ಶಾಂತಿರಕ್ಷಕಾ[illegible] ರಿಗಳು ಎಚ್ಚರಿಕೆಯಿಂದ ತಕ್ಕ ಏರ್ಪಾಡನ್ನು ಮಾಡಿ ಅನಾ[illegible] ನಡೆಯದಂತೆ ಮಾಡುವರೆಂದು ನಾವು ಯೋಚಿಸುತ್ತೇವೆ [illegible] ಳನ್ನು ಹಿಡಿಯುವರೆಂಬ ಸುದ್ದಿಯನ್ನು ಕೇಳಿ ಬಾಲಿಕಾ [illegible] ಶಾಲೆಗಳೆಲ್ಲಾ ಬರಿದಾಗಿರುವುವಂತೆ ಪೋಲೀಸ್ ಅಧಿಕಾರಿ[illegible] ಜಾಗ್ರತರಾಗಿ ಶಾಲೆಗಳ ಬಳಿಯಲ್ಲಿ ಕಾವಲಿಟ್ಟಿರುವಂತೆ

ಒಳದೇಶದ ವೃತ್ತಾಂತಗಳು.

ಸೈರ್ಮ ಸಮಿತಿಯವರೂ ಹೈದರಾಬಾದಿನ ನೈಜಾ[illegible] ವರೂ ಮುಂದಿನ ತಿಂಗಳಲ್ಲಿ ರಾಜಧಾನಿಗೆ ಶ್ರೀಮನ್ಮಹಾ[illegible] ರವರ ಅತಿಥಿಗಳಾಗಿ ದಯಮಾಡುತ್ತಾರೆಂ[illegible] ನಿದೆ

[illegible] ಈಸಲ ಭದ್ರಾವತಿ ಕಬ್ಬಿಣದ ಕಾರ್ಖಾನೆಯಲ್ಲಿ ಸುಮಾರ [illegible] ರು ಲಕ್ಷ ರೂಪಾಯಿ ತನಕ [illegible] ವುದಂದೂ, ಅಲ್ಲಿ ಉಕ್ಕನ್ನು ತಯಾರ್ಮಾಡುವ ಪ್ರಯ[illegible] ಸಾರ್ಥಕವಾಗಿರುವುದೆಂದೂ ಪ್ರಕಟವಾಗಿದೆ

ಮೈಸೂರು ಕೃಷ್ಣರಾಜ ಆಸ್ಪತ್ರೆಯಲ್ಲಿರುವ [illegible] ಪೆರ್ರಿಂಗ್‍ರವರು ವಾಣೀವಿಲಾಸ ಆಸ್ಪತ್ರೆಗೂ, ಶ್ರೀಮತಿ [illegible] ರಾಬಾಯಿ [illegible] ರವರು ವಾಣೀವಿಲಾಸ ಆಸ್ಪತ್ರೆ[illegible] ಕೃಷ್ಣರಾಜ ಆಸ್ಪತ್ರೆಗೂ ವರ್ಗಮಾಡಲ್ಪಟ್ಟಿರುವರು.

ವಿದ್ಯಾಇಲಾಖೆಯ ಮುಖ್ಯಾಧಿಕಾರಿಗಳಾದ ಶ್ರೀ [illegible] ಸುಬ್ಬರಾಯರಿಗೆ 10 ದಿನಗಳ ರಜಕೊಡಲ್ಪಟ್ಟಿರುವುದ [illegible] ಅವರ ಸಹಾಯಾಧಿಕಾರಿಗಳಾಗಿದ್ದ [illegible] ಹಿಯುದ್ದಿನ್ ರವರು ಮುಖ್ಯಾಧಿಕಾರಿಗಳ ಕೆಲಸವನ್ನು [illegible] ರುವರು

ಸರ್ಕಾರದವರು ಮಂಡ್ಯದಲ್ಲೂ ಮದ್ದೂರಿನಲ್ಲೂ [illegible] ಸಬ್‌ರಿಜಿಸ್ಟ್ರಾರ್ ಆಫೀಸುಗಳನ್ನು ನೂತನ [illegible] ಏರ್ಪಾಡು ಮಾಡುವುದಾಗಿಯೂ, ಮಂಡ್ಯದ [illegible] ಒಸರಾಳು, ದುದ್ದ ಹೋಬಳಿಗಳನ್ನೂ, ಮದ್ದೂರಿನ [illegible] ಗೆ ಮದ್ದೂರು, ಕೊಪ್ಪ, ಆತ್ಮಗೂರು ಹೋಬಳಿಗಳನ್ನೂ [illegible] ರುತ್ತಾರೆ. ಇದಲ್ಲದೆ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ ಆಫೀಸಿನ [illegible] ಯಾ ಡಿಸ್ಟ್ರಿಕ್ಟಿನ ಸಬ್‌ರಿಜಿಸ್ಟ್ರಾರ್ ಆಫೀಸನ್ನು [illegible] ಸಬ್‌ರಿಜಿಸ್ಟ್ರಾರಾಗಿರತಕ್ಕದ್ದೆಂದೂ ಹುಕುಂ ಮಾಡಿದಾರೆ.

ತಿಂಗಳಿಗೆ 10 ರೂ ಗಿಂತಲೂ ಕಡಿಮೆ ಸಂಬಳವುಳ್ಳವರಿಗೆ [illegible] ರ್ ಬಸ್ಸಿನ ಕೊನೇತರಗತಿಯ ಬಾಡಿಗೆಯನ್ನೂ, [illegible] ಗಿಂತಲೂ ಹೆಚ್ಚಾದ [illegible] ಪ್ರಯಾಣಕ್ಕೆ ದಿನ ಭತ್ಯವನ್ನು ಕೊಡಬೇಕೆಂದೂ, ಬಸ್‌ಗಳು ನಡೆಯುವ ಸ್ಥಳಗಳಿಗೆಲ್ಲಾ

[illegible] ಮಾಡುವುದಾದರೆ [illegible] ಭತ್ಯವನ್ನು ಕೊಡತಕ್ಕದ್ದೆಂದು [illegible] ತಿಂಗಳಿನಲ್ಲಿ ಸರ್ಕಾರಿ ಆಜ್ಞೆಯಾಗಿರುವುದಂತೆ

ಮೈಸೂರು ಸ್ಟಾರ್ [illegible] ವಿಶೇಷ ಸಂಚಿಕೆಯ ಮೇಲೆ ಹೂಡಿರುವ ವಿವಾದದ ತಾ|| 14 [illegible] ಯಲ್ಲಿ ಮೈಸೂರು ಸಿಟಿ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ವಿಚಾರಣೆಗೆ ಬಂದಿತು ಅಪರಾಧಿ ಮ|| ಎಂ. ಸೀತಾರಾಮಶಾಸ್ತ್ರಿಗಳು ಬಂದಿದ್ದರು ಎರಡನೇ ಅಪರಾಧಿ ದಾವಣಗೆರೆಯ ಚಕ್ರಸಾಧಕಶರ್ಮ ನೆಂಬ ಹೆಸರಿನವನು ದಾವಣಗೆರೆಯಲ್ಲಿ ಯಾರೂ ಇಲ್ಲವೆಂದು ಪೋಲೀಸರು ಸಮನ್ಸಿನ ಮೇಲೆ ಬರೆದಿರುವುದರಿಂದ ಆತನನ್ನು ಬಿಟ್ಟು ಒಂದನೇ ಅಪರಾಧಿಯ ಮೇಲೆ ವಿವಾದವನ್ನು ನಡೆಸಬೇಕೆಂದು [illegible] ಸಾಕ್ಷಿ [illegible] ನ್ನು [illegible] ದಿವಸಗಳಲ್ಲಿ ಕೊಡಬೇಕೆಂದ ಗೊತ್ತಾಗಿ [illegible] ಮಾರ್ಚಿ ತಾ|| [illegible] ಹಿಯಲಾಗಿದೆ

ಕ್ಷತ್ರಿಯ ಸಹಿತರಾದ ಮ|| ಪಿಟ್ಟಾಪುರದವರು ಜಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಪ್ರವಾಸಮಾಡುತ್ತಿರುವರಷ್ಟೆ ಮೊನ್ನೆ ತಾನೆ ಶ್ರೀ [illegible] ಮುಮ್ಮಡಿ ರಾಜೇಂದ್ರ ಮಹಾಸ್ವಾಮಿ ಯವರ ದರ್ಶನಕ್ಕಾಗಿ [illegible] ದಯಗೈದಿದ್ದರೆಂದೂ, ಶ್ರೀಗಳವರಿಂದ ಸತ್ಕರಿಸಲ್ಪಟ್ಟು ಆಶೀರ್ವಾದವನ್ನು ಪಡೆದು ಕರ [illegible] ರೆಂದೂ ಶ್ರೀಗಳವರು ವೀರಶೈವ ಸಮಾಜಕ್ಕೂ ವೀರಶೈವ ಪರ [illegible] ಮಾಡಿರುವ ಧನಸಹಾಯವು [illegible] ಮಹಾಧಿಪತಿಗಳಲ್ಲಿ [illegible] ಶ್ರೀಗಳವರು ಜೀರ್ಣೋದ್ಧಾರದ ಕಾರ್ಯಗಳನ್ನು ಪ್ರತ್ಯಕ್ಷವಾಗಿ ಮಾಡಿ [illegible] ಸಂಪಾದಿಸಿರುವರೆಂದೂ [illegible] ರವರು [illegible] ಸಿದ್ದರೆಂದು ತಿಳಿದುಬಂದಿದೆ

[illegible] ಕೋಟೆ ರಾಜಪುತ್ರನನ್ನು ರೈಲ್ ಗಾಡಿಯಲ್ಲಿ ಕೊಲೆ ಮಾಡಿದ ಘಾತುಕನು ಇನ್ನೂ ಪತ್ತೆಯಾಗಿರುವುದಿಲ್ಲ ಗುಮಾ[illegible] ಯ ಮೇಲೆ ಹಿಡಿಯಲ್ಪಟ್ಟಿದ್ದ ಇಬ್ಬರು ಯುವಕರನ್ನು ಪುದ[illegible] ರಾಸಿನಲ್ಲಿ ವಿಚಾರಣೆಗೆ ಕಳುಹುವುದಕ್ಕೆ ಮೊದಲು [illegible] ಕೈರ್‌ಗಾಡಿ ಯಲ್ಲಿ ಪ್ರಯಾಣಮಾಡುತ್ತಿದ್ದ ಕೊಲೆಪಾತಕನು ತಾನು ಕೊಂದುಹಾಕಿದವನ ಶರೀರವನ್ನು ಗಾಡಿಯಿಂದ ಹೊರಗೆ ಹಾಕಿ ಅವರೊಡನೆ ಧುಮುಕಿದಾಗ ಅವನನ್ನು ನೋಡಿದ ಮ|| ಕೆ ಆರ್ ಶ್ರೀನಿವಾಸಯ್ಯಂಗಾರ‍್ಯರನ್ನು ಕರೆದುಕೊಂಡು ಹೋಗಿ ಸೆರೆಯಲ್ಲಿದ್ದವರೊಡನೆ ಸುಮಾರು 30 ಮಂದಿ ಬೇರೆ ಜನಗಳನ್ನು ಮಿಶ್ರಮಾಡಿ ತಪ್ಪಿತಸ್ಥನನ್ನು ಗುರ್ತಿಸಿರೆಂದು ಕೇಳಿದಾಗ ಅವರು ಯಾರನ್ನೂ ಗುರ್ತಿಸದಿದ್ದುದರಿಂದ ಸೆರೆಯಲ್ಲಿದ್ದ ಇಬ್ಬರು ಯುವಕರನ್ನೂ ಬಿಡುಗಡೆಮಾಡಿದರಂತೆ

ಸರ್ಕಾರದವರು ಹೊಸ್ಸಿ [illegible] ಕಮೀಷನರ್ [illegible] ಹುದ್ದೆಯನ್ನು ವಜಾ ಮಾಡಿ ಡಾ|| ಆರಿಯಯವರನ್ನು ಇದೇ ಫೆಬ್ರವರಿಯಿಂದ ಸ್ಯಾನಿಟರಿ ಕಮೀಷನರಾಗಿ 800-50-1,000 ರೂಪಾಯಿ ಸಂಬಳದ ಮೇಲೆ ನೇಮಕಮಾಡಿರುತ್ತಾರೆ ಸಂಸ್ಥಾನದ ಪ್ರಜೆಗಳ ಆರೋಗ್ಯ ಭಾಗ್ಯವನ್ನು ಕಾಪಾಡಿ ಅಭಿವೃದ್ಧಿ ಗೊಳಿಸುವುದರಲ್ಲಿ [illegible] ಸಾನಿಟರಿ ಇಲಾಖೆಯು ಮೂಲ ಕಾರಣವಾಗಿದೆ ಇದುವರೆಗೆ [illegible] ಸರ್ಕಾರದವರ ಅಧಿಕಾರವೊಳಗೆ [illegible] ಸರ್ಕಾರದವರು ಆದಷ್ಟು [illegible] ಸಂತೋಷಪಡುವ ಆಗಿದೆ ಆರೋಗ್ಯ [illegible] ಗಳನ್ನು [illegible] ಅವರಿಗೆ [illegible] ಆದಕ್ಕೆ ಅನುಕೂಲ [illegible] ದಕ್ಕವ [illegible] ವುದೆಂದು [illegible]

ಬೆಂಗಳೂರು ಉಪ್ಪಾರಪೇಟೆಯ [illegible] ಲ್ಲಿ ಆನಿಕೇತಾ[illegible] ಎರಡು ಹೆಂಗಸು [illegible] ಕೊಂಡ ನೋ [illegible] ಗುತ್ತಿದ್ದ [illegible] ಒಬ್ಬಳು [illegible] ದೇನೆಂದು ಕೇಳಲು ಅವನು ಮಗುವಿರುವುದೆಂದೂ ಅದ[illegible] ನೆಂದೂ ಹೇಳಿದನಂತೆ ಇದನ್ನು ಕೇಳಿದಕೂಡಲೆ ಭಯ ದಿಂದ ಆ ಹೆಂಗಸು ಕಿರಿಚಿಕೊಂಡು ಗಲಭೆಮಾಡಿದಳು [illegible] ಗಳು [illegible] ಪೋಲೀಸ್ ಸ್ಟೇಷನ್ನಿಗೆ ಕರೆದುಕೊ[illegible] ಹೊದರು [illegible] ಮಾಡಿದುದರಲ್ಲಿ ಆ ಗುಬ್ಬ ಯಾವುದೋ ಆಸ್ಪತ್ರೆಯಲ್ಲಿ ಜನಿಸಿದೆಂದೂ [illegible] ಸತ್ತುದರಿಂದ ಆಸ್ಪತ್ರೆಯ ಕೆಲಸಗಾರರ [illegible] ರೂ [illegible] ತಿಳಿದುಬಂದು ಜನಗಳು [illegible] ಸ್ಸಾಗಿ ಆಶ್ಚರ್ಯಗೊಳಗಾದರು [illegible]

ದಾವಣಗೆರೆ ಕೃಷ್ಣರಾಜೇಂದ್ರ ಆಸ್ಪತ್ರೆಯ ಮೆಡಿಕಲ್ ಆಫೀಸರೂ ಆದ ಡಾಕ್ಟರ್ ಜೆ ಎಸ್ ರಾಮ್‌ರಾವ್, ಎ. ಎಂ ಡಿ ಎಸ್, [illegible] ರವರು ಈ ತಾ|| 15 ರಿಂದ 6 ತಿಂಗಳ ರಜವನ್ನು ಪಡೆದುಕೊಂಡಿರುವುದರಿಂದ ಅವರು ಬರುವವರೆಗೆ ಇದೇ ಆಸ್ಪತ್ರೆಯ ಸೀನಿಯರ್ ಮೆಡಿಕಲ್ ಆಫೀಸರಾದ ಡಾ|| ಟಿ ಬಾಲಕೃಷ್ಣನ್ ಪಿಳ್ಳೆ, ಎಲ್ ಎಂ ಎಸ್, ರವರು ಮೆಡಿಕಲ್ ಆಫೀಸರಾಗಿಯೂ ಮೆಡಿಕಲ್ ಸ್ಕೂಲಿನ ಸೂಪರಿಂಟೆಂಡೆಂಟರಾದ ಡಾ|| ಎಸ್ ನಾರಾಯಣಪ್ರಸಾದ್, ಎಲ್ ಎಂ ಎಸ್ ರವರು ಕೃಷ್ಣರಾಜೇಂದ್ರ ಆಸ್ಪತ್ರೆಯ ಸೀನಿಯರ್ ಮೆಡಿಕಲ್ ಆಫೀಸರಾಗಿಯೂ [illegible] ಹಳ್ಳಿ ಡೆಪ್ಯುಟಿ ಹೆಲ್ತ್ ಡಿಸ್ಪೆನ್ಸರಿಯ [illegible] ಬಿ.ಎ., ಎಲ್ ಎಂ ಎಸ್., ರವರು ಸ್ಕೂಲಿನ ಸೂಪರಿಂಟೆಂ ಡೆಂಟರಾಗಿಯೂ, [illegible] ಶ್ರೀನಿವಾಸರಾಯರು [illegible] ಆಸ್ಪತ್ರೆಯಿಂದ [illegible] ಆಗಿ [illegible] ಲ್ಪಟ್ಟಿರುವರು.

[illegible] ಪೋಲೀಸ್ ಸೂಪರಿಂಟೆಂಡೆಂಟ್ [illegible] ಕೃಷ್ಣಮೂರ್ತಿರಾಯರವರು ಬೆಂಗಳೂರು ಪೋಲೀಸ್ ಟ್ರೇನಿಂಗ್ ಸ್ಕೂಲಿಗೂ, ಮ|| ಎಸ್ ರಾಜಾರಾಮ ರಾಯರು ಪೋಲೀಸ್ ಟ್ರೇನಿಂಗ್ ಸ್ಕೂಲಿನಿಂದ ಸೈಪ್ಲೆ ಮತ್ತು ಸಿ ಐ ದಿ ಚಾರ್ಜಿನಿಂದ ದಾವಣಗೆರೆ ಸಬ್‌ಡಿವಿಜನ್‌ಗೂ, ಮ|| ಎಂ ಬಿ ವೆಂಕಟಾಚಾರ್ಯರು ದಾವಣಗೆರೆ ಸಬ್‌ಡಿವಿಜನ್ನಿಗೂ, ಮತ್ತು ಮ|| ಎಸ್ ಕೇಶವರಾಯರು ಪಟ್ಟಣಸಬ್ ಡಿವಿಜನ್ನಿನಿಂದ ಕಡೂರು ಮತ್ತು ಶಿವಮೊಗ್ಗ ಡಿ|| ಗಳಲ್ಲಿ ಶ್ರೀಗಂಧದ ಮರವನ್ನು ಹೋರಿಗೂಡದಂತೆ ಉಸ್ತುವಾರಿ ನೋಡಿಕೊಳ್ಳುವ ಕೆಲಸಕ್ಕೂ, ಮ|| ಬಿ ಲಕ್ಷ್ಮಣರಾಯರು ಶ್ರೀಗಂಧದ ಮರದ ಡ್ಯೂಟಿಯಿಂದ ಪಟ್ಟಣ ಸಬ್ ಡಿವಿಜನ್ನಿನಿಂದ ಕೋಲಾರದ ಚಿನ್ನದಗಣಿಯಲ್ಲಿ ಡಿಟೆಕ್ಟಿವ್ ಡಿಪಾರ್ಟುಮೆಂಟಿಗೂ ವರ್ಗಾಯಿಸಲ್ಪಟ್ಟಿರುತ್ತಾರೆ ಈಗ ಕೋಲಾರದ ಚಿನ್ನದಗಣಿಯಲ್ಲಿ ಅ|| ಪೋಲೀಸ್ ಸೂಪರಿಂಟೆಂಡೆಂಟ್ ಕೆಲಸವನ್ನು ಬದಲಿನೋಡುತ್ತಿರುವ ಮ|| [illegible] ಕೃಷ್ಣರಾಯರು ಪೋಲೀಸು ಇನ್ಸ್‌ಪೆಕ್ಟರ್ ಕೆಲಸಕ್ಕೆ ವಾಪ್ಸು ಕಳುಹಿಸಲ್ಪಟ್ಟಿರುವರು

ಭರತಖಂಡದ ವೃತ್ತಾಂತಗಳು.

ರೊ [illegible] ನಗರದ ಪ್ರಾಂತ್ಯದಲ್ಲಿ ಹಿಮದಮಳೆಯು ಸುರಿದು ರೈಲುಗಾಡಿಗಳೂ ಮೋಟಾರುಗಾಡಿಗಳೂ ಹಿಮದಲ್ಲಿಯೇ ಹೂತುಹೋಗಿರುವುವು ಅಂತಿಯೊವಸಂಸ್ಥಾನದಲ್ಲಿ ಮಂಜಿನ ಪ್ರವಾಹಗಳು ಬಂದು, ಹೊರಟಿದ್ದ ರೈಲುಗಾಡಿಗಳನ್ನು 21 ಅಡಿ ಎತ್ತರ ಹಿಮದೊಳಗೆ ಹೂತುಬಿಟ್ಟಿರುವುವು

ಕ್ಷಾಮನಿವಾರಣೆಗಾಗಿ ಸರ್ಕಾರಿಯಾಗಿಯೂ ಇತರ [illegible] ವಾಗಿಯೂ ಶೇಖರಿಸಿರುವ ಹಣವನ್ನು ದನಗಳ ಮೇವನ್ನು ಕೊಡುವುದಕ್ಕಾಗ್ಯೂ ಗ್ರಾಮಾಂತರಗಳಲ್ಲಿ ಬೇಸಾಯಕಕ್ಕೆ [illegible] ಒದಗಿಸುವುದಕ್ಕಾಗಿ ಉಪಯೋಗಿಸಬೇಕೆಂದು. ಬೊಂಬಾಯಿ ಪ್ರಭುತ್ವದವರು ನಿರ್ಧರಿಸಿರುವರು

ಸ್ವರಾಜ್ಯ ಸಮಿತಿಯವರು ಈಚೆ ಸೂರತ್‌ಗೆ ಬಾರ ಮದರಾಸಿಗೆ ಹೋದರು ಅದಿನ ಊರಿನಲ್ಲೆಲ್ಲಾ ಜನಗಳು ಹರತಾಳವನ್ನಾಚರಿಸಿ ಸ್ವರಾಜ್ಯ ಸಮಿತಿಗೆ ತಮ್ಮ ಬಹಿಷ್ಕಾರವನ್ನು ತಿಳಿಯಪಡಿಸಿದರು ಯಾವ ಅನಾಹುತವೂ ನಡೆಯದೆ ಬಹಿಷ್ಕಾರದ ಪ್ರದರ್ಶನವು ಊರೆಲ್ಲೆಲ್ಲಾ ಕಡಮೆಯೂ ಆಚರಿಸಲ್ಪಟ್ಟಿತು

ಜರ್ಮನಿಯ ಕೆಲವು ಭಾಗಗಳಲ್ಲಿ ಮಿತ್ರಮಂಡಲಿಯವರು ಆಕ್ರಮಿಸಿಕೊಂಡಿರುವವನಷ್ಟೆ ಆ ಪ್ರಾಂತ್ಯದಲ್ಲಿ ಕಾವಲು ನಿಂತಿದ್ದ ಸಿಪಾಯಿಗಳನೇಕರು ಕ್ಷೈತ್ಯದಿಂದ [illegible] ಯೇ ವ್ಯತಪಟ್ಟಿರುವರು ಜರ್ಮನಿಯ ಪಶ್ಚಿಮಭಾಗದಲ್ಲಿ ನೂರಾರುಮಂದಿ ಸತ್ತಿರುವರು, [illegible] ಪ್ರಾಂತ್ಯದಲ್ಲಿರುವ ಬ್ರಿಟಿಷ್ ಸೈನಿಕರಿಗೆ ಹಾಸಿಗೆಯನ್ನು ದಪ್ಪನಾಗಿರುವ [illegible] ಅಂಗಿಗಳನ್ನೂ, ಚರ್ಮದ ಅಂಗಿಗಳನ್ನೂ ಹಂಚುತ್ತಿರುವರು

[illegible] ರೈಲ್ವೆ ಅಸಿಸ್ಟೆಂಟ್ ಟ್ರಾಫಿಕ್ ಮ್ಯಾನೇಜರಾದ [illegible] ಎರ್ನೆಸ್ಟ್ [illegible] ಎಂಬುವರು ಪೇಟೆಯಾರು ಒಂದಿಯನ್ನು ಅಜಾಗರೂಕತೆಯಿಂದ ಹಡಿಸಿ ಒಬ್ಬ ನಾಸಾಯುವಿಗೆ ಸಾವನ್ನುಂಟುಮಾಡಿದ ಅಪರಾಧಕ್ಕಾಗಿ 1,000 ರೂ. ದಂಡವನ್ನು ವಿಧಿಸಿ ಅದರಲ್ಲಿ ಅರ್ಧಹಣವು ಸತ್ತವನ ಸಂಬಂಧಿಗಳಿಗೆ ಕೊಡಲ್ಪಡತಕ್ಕದ್ದೆಂದು ವಿಧಿಸಿ, ಅಪರಾಧಿಯು ಸತ್ತವನ ಸಂಬಂಧಿಗೆ 17 ,500 ರೂ ಯನ್ನು ಪರಿಹಾರದ್ರವ್ಯವಾಗಿ ಕೊಟ್ಟಿರುತ್ತೇನೆಂದು ತಿಳಿಸಿದಮೇಲೆ ಪೂರ್ಣ ಶಿಕ್ಷೆ ವಿಧಿಸಬೇಕಾದ ಅಗತ್ಯವಿಲ್ಲವೆಂದು ಮೆಜಿಸ್ಟ್ರೇಟರು ಅಭಿಪ್ರಾಯಪಟ್ಟರು

ಕಳೆದ ಜಿತ್ರವಾರ ಮಧ್ಯರಾತ್ರಿಯಲ್ಲಿ ಕೂಚ್‌ಬಿಹಾರ್ ಮಹಾರಾಣಿಯವರು ಕಲಕತ್ತಾದಿಂದ ಹೊಸದಿಲ್ಲಿಗೆ ಬಂದು ಸರ್ ಎಡ್ವರ್ಡ್ ಬಕ್ಸ್‌ರವರ ಮನೆಯಲ್ಲಿಳಿದುಕೊಂಡರು ಇವರು ಬಂದ 1 ಗಂಟೆಯಮೇಲೆ ಇವರ ಸಾಮಾನು ರೈಲ್ವೆ ಸ್ಟೇಷನ್ನಿನಿಂದ ಬಂದುವು. ಮಹಾರಾಣಿಯವರು ಮಲಗಿಕೊಂಡು ನಿದ್ರಿಸುತ್ತಿದ್ದಾಗ, ಕೆಲ ಕಳ್ಳರು ಅವರು ಮಲಗಿದ್ದ ಕೊಠಡಿಯೊಳಕ್ಕೆ ನುಗ್ಗಿ ಆಭರಣಗಳ ಪೆಟ್ಟಿಗೆಗಳನ್ನು ಅಪಹರಿಸಿದರು ಇವರಲ್ಲೊಬ್ಬ ಕಳ್ಳನು ರಾತ್ರಿ 3½ ಗಂಟೆಯಲ್ಲಿ ಮಹಾರಾಣಿಯವರ ಮೈಮೇಲಿರುವ ಆಭರಣವನ್ನು ಅಪಹರಿಸಲು ಪ್ರಯತ್ನಿಸುತ್ತಿದ್ದಾಗ ಮಹಾರಾಣಿಯವರೆಚ್ಚತ್ತು ಕೂಗಿಕೊಂಡರು ಸೇವಕರುಗಳು ಬರುವುದರೊಳಗಾಗಿ ಕಳ್ಳನು ಪಲಾಯನಮಾಡಿದನು. ಪೋಲೀಸಿನವರು ಕಳ್ಳರನ್ನು ಹುಡುಕಲು ಬಹಳ ಸಾಹಸಪಡುತ್ತಿದ್ದಾರೆ

ಬೆಳಗಾಂ ಡಿ|| ನಿಪ್ಪಾಣಿ ರಾಷ್ಟ್ರೀಯ ಶಾಲೆಯ ಶ್ರೀ ಜೂಷಿಯವರೂ, ಪೂನಾಪಟ್ಟಣದ ಶ್ರೀ ಮರಾಠೆಯವರೂ ಅತಿ ಸುಲಭ ರೀತಿಯಲ್ಲಿ ಗಡಿಯಾರಗಳನ್ನು ರಚಿಸುವ ವಿಧಾನವನು ಕಂಡುಹಿಡಿದಿರುತ್ತಾರೆ ಇದುವರೆಗೂ ಗಡಿಯಾರಗಳನ್ನು ರಚಿಸುತ್ತಿದ್ದುದಕ್ಕಿಂತಲೂ ಈ ನವೀನ ರೀತಿಯು ಅತಿ ಲಾಭಕರವಾದುದಾಗಿರುವುದು. ಈ ಮಹಾರಾಷ್ಟ್ರೀಯ ಯುವಕರು ರಚಿಸಿದ ಗಡಿಯಾರವೊಂದು ಕಳೆದ ಕಲ್ಕತ್ತೆಯ ರಾಷ್ಟ್ರೀಯ

ಸಭೆಯಲ್ಲಿ ಪ್ರದರ್ಶಿಸಲ್ಪಟ್ಟಿತ್ತು. ಈ ಗಡಿಯಾರಗಳು ವಿದ್ಯುಚ್ಛಕ್ತಿಯಿಂದ ನಡೆಯುವುವು. ಜಗತ್ತಿನ ಪ್ರಮುಖ ಶಿಲ್ಪಿಗಳು ಮಾಡಿದಂತೆ ಕಾಣುತ್ತವೆ. ಈ ಗಡಿಯಾರಗಳು ವಿದೇಶೀಯ ಗಡಿಯಾರಗಳ ಜತೆಯಲ್ಲಿ ಸ್ಪರ್ಧಿಸುವಷ್ಟು ದೇಶಾಭಿಮಾನಿಗಳಾದವರು ಈ ಗಡಿಯಾರಗಳನ್ನೇ ಕೊಳ್ಳುವುದರ ಮೂಲಕ ಸಾಹಸಿಗಳಾದ ದೇಶೀಯ ತಯಾರಿಗೆ ಉತ್ತೇಜನ ಕೊಡುವರೆಂದು ನಿರೀಕ್ಷಿಸಲ್ಪಟ್ಟಿರುವುದು. ಈ ಗಡಿಯಾರಗಳನ್ನು ವ್ಯಾಪಾರಕ್ಕಾಗಿ ಬಿಡಿಸಲು ಮೊನ್ನೆ ತಾನೆ ಬೊಂಬಾಯಿನಗರದಲ್ಲಿ ಒಂದು ಕಾರ್ಯಾಲಯವು ನಾಂಗ್ಲಿ ಸಂಸ್ಥಾನದ ರಾಜರವರಿಂದ ಸ್ಥಾಪಿಸಲ್ಪಟ್ಟಿತು.

ಅಹಮ್ಮದಾಬಾದಿನ ಮೋಂಡವಿಬೀದಿಯಲ್ಲಿ ವಾಸವಾಗಿರುವ ಮೂವರು ಅಕ್ಕಸಾಲಿಗ ಸಹೋದರರು ಕೃತ್ರಿಮನಾಣ್ಯಗಳನ್ನು ಮಾಡಲು ತಮ್ಮ ಮನೆಯಲ್ಲಿ ಒಂದು ನೆಲಮಾಳಿಗೆಯನ್ನು ಮಾಡಿ ಕ್ರಮವಾದ ಒಂದು ಕಾರ್ಯಾಲಯವನ್ನೇ ಇಟ್ಟುಕೊಂಡಿದ್ದರಲ್ಲದೆ ಈ ನಾಣ್ಯಗಳನ್ನು ಪ್ರಚಾರಮಾಡಲು ಭರತಖಂಡದ ಅನೇಕ ಸ್ಥಳಗಳಲ್ಲಿ ಶಾಖೆಗಳನ್ನೇ ಏರ್ಪಡಿಸಿಕೊಂಡಿದ್ದರು. ಪೋಲೀಸಿನವರು ಇದನ್ನು ತಿಳಿದು ಮೂವರು ಸಹೋದರರನ್ನೂ ನ್ಯಾಯವಿಚಾರಣೆಗೆ ಗುರಿಮಾಡಿರುವಲ್ಲಿ ಇಬ್ಬರು ಸಹೋದರರಿಗೆ 1 ವರ್ಷ ಕಠಿನ ಕಾರಾಗೃಹವಾಸಶಿಕ್ಷೆಯೂ 2000 ರೂ ದಂಡವೂ ಹಣಕೊಡದಿದ್ದಲ್ಲಿ ಇನ್ನು 18 ತಿಂಗಳು ಕಾರಾಗೃಹವಾಸಶಿಕ್ಷೆಯೂ ಅಲ್ಲದೆ 6 ವರ್ಷ ಕಠಿನ ಕಾರಾಗೃಹವಾಸಶಿಕ್ಷೆಯೂ 2000 ರೂ ದಂಡವೂ ಇದುತಪ್ಪಿದಲ್ಲಿ 18 ತಿಂಗಳ ಕಠಿನಕಾರಾಗೃಹವಾಸಶಿಕ್ಷೆಯೂ ವಿಧಿಸಲ್ಪಟ್ಟಿತು. ಮೂರನೆಯವನಿಗೆ 2 ವರ್ಷ ಕಠಿನಕಾರಾಗೃಹವಾಸಶಿಕ್ಷೆಯೂ 3000 ರೂ ಅರ್ಧದಂಡವೂ ತಪ್ಪಿದಲ್ಲಿ ಇನ್ನು 18 ತಿಂಗಳ ಕಾರಾಗೃಹವಾಸಶಿಕ್ಷೆಯು ಹೆಚ್ಚಾಗಿಯೂ ವಿಧಿಸಲ್ಪಟ್ಟಿತು.

ಮಹಾತ್ಮ ಗಾಂಧಿಯವರು ಹಿಂದೂದೇಶದಿಂದ ದೆಹಲಿಗೆ ಪ್ರಯಾಣಮಾಡಿ ಕಳೆದ ಭಾನುವಾರ ಅಲ್ಲಿಗೆ ತಲಪಿದರು. ದೈಹಲಿ ನಿಲ್ದಾಣದಲ್ಲಿ ಪಂಡಿತ ಮೋತಿಲಾಲ್ ನೆಹರು ಮಾಳವಿಯ ಜವಾಹರಲಾಲ್ ಮೊದಲಾದ ಮುಂದಾಳುಗಳು ಇದಿರ್ಗೊಂಡು ಸಾರ್ವಭೌಮ ನ್ಯಾಯವಿಧಾಯಕ ಸಭೆಯ ಅಧ್ಯಕ್ಷರಾದ ವಿಠಲಭಾಯಿ ಪಟೇಲರ ಗೃಹಕ್ಕೆ ಕರೆದೊಯ್ದರು. ಆ ದಿನ ಸಾಯಂಕಾಲ ಹಿಂದು ಮುಸಲ್ಮಾನ ಮುಂದಾಳುಗಳು ಸೇರಿ ಗಾಂಧಿಜಿಯವರೊಡನೆ ಮತೀಯ ಸಮಸ್ಯೆಯನ್ನೂ, ರಾಜಕೀಯ ಸಮಸ್ಯೆಗಳನ್ನೂ ವಿಮರ್ಶಿಸಿದರು. ಅಧ್ಯಕ್ಷ ಪಟೇಲರು ಗಾಂಧಿಜಿಯವರ ಸಲುವಾಗಿ ಏರ್ಪಡಿಸಿದ ಔತಣಕ್ಕೆ ವೈಸ್ರಾಯ್ ಲಾರ್ಡ್ ಅರ್ವಿನ್‌ರವರನ್ನೂ, ಮುಖ್ಯ ಸೇನಾಧಿಪತಿ ಲಾರ್ಡ್ ಬರ್ಡ್‌ವುಡ್‌ರವರನ್ನೂ ಇನ್ನೂ ಇತರ ಮುಖ್ಯಾಧಿಕಾರಿಗಳನ್ನೂ ಆಹ್ವಾನಿಸಿರುವರು. ಇವರೆಲ್ಲರೂ ಮಹಾತ್ಮರವರನ್ನು ಸಂದರ್ಶಿಸುವುದರಿಂದ ರಾಜಕೀಯ ವಿಚಾರವಾಗಿ ಮಾತುಗಳು ನಡೆಯಬಹುದೆಂದು ನಿರೀಕ್ಷಿಸಲಾಗಿರುವುದು. ಇದಕ್ಕೆ ಕಾರಣವೂ ಇರುವುದು. ವೈಸ್ರಾಯ್ ಅರ್ವಿನ್‌ರವರು ಇಷ್ಟರಲ್ಲೇ ಇಂಗ್ಲೆಂಡಿಗೆ ತೆರಳುವವರಾಗಿರುವರು. ಅಲ್ಲಿ ಬ್ರಿಟಿಷ್ ಮಂತ್ರಿಮಂಡಲದವರಿಗೆ ಹಿಂದುಸ್ಥಾನದ ಪರಿಸ್ಥಿತಿಯನ್ನು ರಾಷ್ಟ್ರೀಯ ಮುಂದಾಳುಗಳ ಅಭಿಮತವನ್ನೂ ತಿಳಿಸಲೋಸುಗ ಇಲ್ಲಿನ ಪ್ರಮುಖರನ್ನು ಸಂದರ್ಶಿಸಲು ಈ ಔತಣವು ಉಪಾಯವಾಗಿರುವುದೆಂದು ಊಹಿಸಬಹುದಾಗಿದೆ. ಇದರ ಪರಿಣಾಮವೇನಾಗುವುದೊ ನೋಡಬೇಕಾಗಿರುವುದು.

ದಿನ ದಿನಕ್ಕೆ ಯೂರೋಪಿನಲ್ಲಿ ಚಳಿಯು ಹೆಚ್ಚುತ್ತಿರುವುದು. ಅದರ ಹಾವಳಿಯು ವರ್ಣಿಸಲಸದಳವಾಗಿರುವುದು. ಬಾಲ್ಕನ್ ಪ್ರಾಂತ್ಯದಲ್ಲಿ 50 ಜನರೂ, ಜರ್ಮನಿಯಲ್ಲಿ 37 ಜನರು ಶೈತ್ಯದಿಂದ ಮಡಿದರು. ಫ್ರಾನ್ಸ್ ದೇಶವೆಲ್ಲಾ ಹಿಮಮಯವಾಗಿರುವುದು. ಡಿಯಪ್ ಎಂಬ ಬಂದರು ಮಂಜುಗಡ್ಡೆಯಿಂದ ಮುಚ್ಚಲ್ಪಟ್ಟಿರುವುದು. ಯೂರೋಪಿನಲ್ಲೆಲ್ಲಾ ಚಳಿಗಾಲವಾಗಿದ್ದಾಗ ಜನಗಳು ವಿಹಾರಕ್ಕಾಗಿ ಹೋಗುತ್ತಿದ್ದ ಜನಗಳು ವಿಹಾರಕ್ಕಾಗಿ ಹೋಗುತ್ತಿದ್ದ ಬ್ಯಾರಿಟ್ಜ್ ಎಂಬ ಪ್ರಾಂತ್ಯದಲ್ಲಿ ಸಹ ಈಗ ಏಳು ಅಂಗುಲ ಮಂಜುಗಡ್ಡೆ ಕಟ್ಟಿರುವುದು. ಬಿರುಸಾಗಿ ಹರಿಯುತ್ತಿದ್ದ ರ್‍ಹೋನ್ ನದಿಯೂ ವೆನಿಸ್ ನಗರದ ಸರೋವರಗಳೂ ಮಂಜುಗಟ್ಟಿಯಾಗಿರುವುವು. ಪ್ರೇಗ್ ಪಟ್ಟಣದಲ್ಲಿ ಸ್ಮಶಾನವು ಶವಗಳಿಂದ ಕಿಕ್ಕಿರಿದು ತುಂಬಿರುವುದು. ಸಮಾಧಿಗಳಲ್ಲಿ ಗುದ್ದಲಿಗಳಿಂದ ತೋಡುವುದು ಸಾಲದೇ ಇದ್ದುದರಿಂದ ಸುರಂಗದ ಮದ್ದಿನ ಸಹಾಯದಿಂದ ಹಳ್ಳ ತೋಡಿ ಶವಗಳನ್ನು ಒಟ್ಟೊಟ್ಟಿಗೆ ತುಂಬಿ ಮೇಲೆ ಮಣ್ಣು ಮುಚ್ಚುತ್ತಿರುವರು. ಪೋಲೆಂಡಿನಲ್ಲಿಯೂ ಬಾಲ್ಟಿಕ ಸಾಗರದ ಸುತ್ತಿನ ದೇಶಗಳಲ್ಲಿಯೂ ಆಸ್ಪತ್ರೆಗಳಲ್ಲಿ ಚಳಿಯ ಹೊಡೆತದಿಂದ ರೋಗಪೀಡಿತರಾದವರು ಕಿಕ್ಕಿರಿದು ತುಂಬಿರುವರು. ಸಮುದ್ರದಲ್ಲಿ ಪ್ರಯಾಣಮಾಡುತ್ತಿದ್ದ ಹಡಗುಗಳು ಅಲ್ಲಲ್ಲಿಯೇ ನಿಂತುಹೋಗಿರುವುವು. ಅವುಗಳ ನಿವಾರಣೆಗಾಗಿ ನಾನಾ ದೇಶಗಳ ಮಂಜುಗಡ್ಡೆಯನ್ನು ಭೇದಿಸುವ ಯಂತ್ರಗಳು ಹೊರಟಿರುವುವು. ರಷ್ಯಾದೇಶದಿಂದ ಈ ವಿಧವಾದ ಯಂತ್ರಗಳು ವಿಶೇಷವಾಗಿ ಸಹಾಯಮಾಡುತ್ತಿರುವುವು.

ಸ್ಟೇಟ್ ಕೌನ್ಸಿಲಿನಲ್ಲಿ ಸಭ್ಯರಾಗಿದ್ದ ಸರ್ ಫಿರೋಜ್‌ಸೇತ್ನರವರ ಸಹೋದರ ಹೋಮಿಸೇತ್ನರವರು ಬೊಂಬಾಯಿಯ ಹಾರ್ನ್‌ಬಿರೋಡಿನಲ್ಲಿ ಕೆನಡಾ ಕಟ್ಟಡದಲ್ಲಿ ವಾಸಿಸುತ್ತಿರುವರು. ಹೋಮಿಯವರೂ ಫಿರೋಜಿಯವರೂ ಜತೆಜತೆ ವ್ಯಾಪಾರ ಮಾಡುತ್ತಿದ್ದಾರೆ. ಇವರಲ್ಲಿ ಹೋಮಿಯವರು ಹತ್ತಿ ಶಾಖೆಯ ವ್ಯವಹಾರವನ್ನು ನೋಡಿಕೊಳ್ಳುತ್ತಿರುವರಲ್ಲದೆ, ಭಾರತದೇಶದ ಸರ್‍ಕ್ಯೂಲರ್ ಲಿಕ್ವಿಡೇಷನ್ ಕಂಪೆನಿಗೆ ಮುಖ್ಯಾಧಿಕಾರಿಗಳಾಗಿರುವರು. ಕಳೆದ ತಾ|| 13 ನೇ ಬುಧವಾರ ರಾತ್ರಿ ಹೋಮಿಯವರು ಕೆಳಗೆ ಮಲಗಿಕೊಂಡಿರುವಾಗ ಒಬ್ಬ ಕಳ್ಳನು ಇವರ ಕೊಠಡಿಯೊಳಕ್ಕೆ ಪ್ರವೇಶಿಸಲು ಬಾಗಿಲು ತೆರೆಯಲು ಆತನು ತಗಲಿದ ಶಬ್ದವಾಗಿ ಹೋಮಿಯವರಿಗೆ ಎಚ್ಚರವಾಯಿತು. ಅವರ ಮೇಲೆ ಕಳ್ಳನಿಗೂ ಹೋಮಿಯವರಿಗೂ ಸ್ವಲ್ಪ ಕಾಲ ಹೋರಾಟ ನಡೆಯಿತು. ಆ ಹೋರಾಟದಲ್ಲಿ ಕಳ್ಳನು ಹೋಮಿಯವರ ಎಡಗಣ್ಣನ್ನು ಕತ್ತಿಯಿಂದ 4 ಸಾರಿ ಹೊಡೆದನು. ಹಣವನ್ನು ಕತ್ತಿಯು ಸೀಳಿಕೊಂಡು ಹೋಗಿದ ಕಣ್ಣನು ಅಲ್ಲಿಂದೋಡಿ ಮೂರನೇ ಅಂತಸ್ತಿನಿಂದ 35 ಅಡಿ ಕೆಳಗಿರುವ ರಸ್ತೆಯಮೇಲೆ ದುಮುಕಿದನು. ಆದರೆ ಅವನು ತಲೆಕೆಳಗಾಗಿಬಿದ್ದು ಸತ್ತು ಹೋದನು. ತಾ|| 14 ರ ಬೆಳಿಗ್ಗೆ ಪೋಲೀಸರು ಒಂದು ಕಳ್ಳನ ಶವವನ್ನು ವಶಪಡಿಸಿಕೊಂಡು ವಿಚಾರಿಸುವಲ್ಲಿ ಅವನು ಮಹಮ್ಮದೀಯನೆಂದೂ, ಅವನ ಹೆಸರು ಮುರ್ತುಜಾ ಮುಖರುಜಯರಾಂ ಎಂದೂ ವಾಸಸ್ಥಲವು ಆಗ್ರಾಪಟ್ಟಣವೆಂದೂ ಅವನಿಗೆ 4 ಸಲ ಶಿಕ್ಷೆಯಾಗಿದ್ದಿತೆಂದೂ ತಿಳಿಯಬಂದಿತು. ಹೋಮಿಸೇತ್ನಾಯವರು ಆಸ್ಪತ್ರೆಯೊಳಗೆ ಅಪಾಯಸ್ಥಿತಿಯಲ್ಲಿರುವರು.

ವಿದೇಶದ ವೃತ್ತಾಂತಗಳು.

ಬ್ಯೂನಾಸ್ ಏರ್ಸ್ ನಗರದಲ್ಲಿ ಸಂಚಾರವೆಲ್ಲ ನಿಂತುಹೋಗಿರುವುದು ಇದ್ದಲು, ಆಹಾರಸಾಮಗ್ರಿಗಳೂ ಮುಗಿದುಹೋಗುತ್ತಿರುವುವು. ತೋಳಗಳು ಊರಿನಲ್ಲಿ ನುಗ್ಗಿ ದನಗಳನ್ನು ನುಂಗುತ್ತ ಜನಗಳಿಗೆ ತೊಂದರೆ ಪಡಿಸುತ್ತಿರುವುವು.

ಲಂಡನ್ ನಗರದಲ್ಲಿ ಶ್ರೀಮಂತೆಯೊಬ್ಬಳು 75,000 ರೂ ಬೆಲೆ ಬಾಳುವ ಕಂಠಹಾರವನ್ನು ಕಳೆದುಕೊಂಡಳು. ಅದನ್ನು ವಿಮೆ ಮಾಡಿದ್ದ ಕಂಪೆನಿಯವರು, ಯಾರಾದರೂ ಸಿಕ್ಕಿದವರು ತಂದುಕೊಟ್ಟರೆ 7,500 ರೂ ಬಹುಮಾನ ಕೊಡುವುದಾಗಿ ಪ್ರಕಟಿಸಿದ್ದರು. ಲಂಡನ್ ನಗರದ ಪಶ್ಚಿಮಭಾಗದಲ್ಲಿ ಒಬ್ಬ ಬಾಲಕನಿಗೆ ಹಾರವು ಸಿಕ್ಕಿತು. ಅದನ್ನು ತೆಗೆದುಕೊಂಡ ಶ್ರೀಮಂತೆಯೇ ಆ ಬಾಲಕನಿಗೆ ಬಹುಮಾನವನ್ನು ಕೊಟ್ಟಳೆಂದು ತಿಳಿದುಬಂದಿದೆ.

ರಾಜಮನೆತನದಲ್ಲಿ ಹುಟ್ಟಿದರೂ ದುರ್ಮಾರ್ಗ ಪ್ರವರ್ತಕನಾಗಿ ಬೆಳೆದ ಅಲೆಕ್ಸಾಂಡರ್ ಎಂಬ ಜರ್ಮನ್ ರಾಜಪುತ್ರನೊಬ್ಬನು, ತನ್ನ ತಾಯಿತಂದೆಗಳಿಂದ 1896 ರಲ್ಲಿ ಪದಚ್ಯುತನಾಗಿ, ದುಸ್ಸಹವಾಸದಲ್ಲಿಯೇ ಕಾಲವನ್ನು ಕಳೆಯುತ್ತ ಎಲ್ಲಾ ಬಗೆಯ ಹೇಯಕೃತ್ಯಗಳನ್ನು ಮಾಡಿದರೂ ಜೀವನ ಮಾಡಲಾರದೆ, ಕಡೆಗೆ ಒಂದು ಹೋಟಲಿನಲ್ಲಿ ಸೇವಾವೃತ್ತಿಗೆ ಸೇರಿಕೊಂಡಿದ್ದು, ಕಡೆಯಲ್ಲಿ ಬುದ್ಧಿ ಕೆಟ್ಟು, ವೃದ್ಧಾಲಯಕ್ಕೆ ಸಾಗಿಸಲ್ಪಡುತ್ತಿರುವಾಗ ದಾರಿಯಲ್ಲಿ ಮೃತನಾದನು.

ಮೆಕ್ಸಿಕೊ ದೇಶದಲ್ಲಿ ರಾಜ್ಯಭಾರಮಾಡುವ ಸ್ವದೇಶೀಯರು ಕ್ರೈಸ್ತ ಮತಾವಲಂಬಿಗಳೇ ಆದಾಗ್ಯೂ ಅವರಲ್ಲಿಯೇ ಒಳಭೇದಗಳಿರುವುದರಿಂದ ಆಗಾಗ್ಗೆ ದೇಶದಲ್ಲಿ ಪಕ್ಷಗಳಾಗಿ ಅಂತಃಕಲಹವು ಹೊತ್ತಿಬೀಳುತ್ತಿರುವುದು. ಅಲ್ಲಿನ ಕ್ಯಾಥೋಲಿಕ್ ಮಠಾಧಿಪತಿಗಳು ಜನಗಳಲ್ಲಿ ವೈಮನಸ್ಯವನ್ನು ಹುಟ್ಟಿಸುತ್ತಿರುವರೆಂದು ತಿಳಿದುಬಂದುದರಿಂದ ಅವರ ಸ್ವತ್ತನ್ನೆಲ್ಲಾ ತೆಗೆದು ಸರ್ಕಾರದವರು ದಂಗೆಯೇಳಬೇಕೆಂದು ಅಸ್ತ್ರಸಂಗ್ರಹ ಮಾಡಿಕೊಳ್ಳುತ್ತಿದ್ದ ರೈತರುಗಳಿಗೆ ಹಂಚಿಕೊಡಬೇಕೆಂದು ಯೋಚಿಸಿರುವರಂತೆ.

ಜರ್ಮನಿಯ ರಾಜಧಾನಿಯಾದ ಬರ್ಲಿನ್ ನಗರದಲ್ಲಿ ಒಂದು ಬ್ಯಾಂಕಿನವರು ನೆಲದಲ್ಲಿ ಆಳವಾಗಿ ಕಟ್ಟಿಸಿರುವ ಕಬ್ಬಿಣದ ಕೋಶಾಗಾರದ ಕೆಳಕ್ಕೆ ಕಳ್ಳರು ಅನೇಕ ದಿನಗಳಿಂದ ಸುರಂಗವನ್ನು ಕೊರೆದು, ಕೋಶಾಗಾರಕ್ಕೆ ತೂತನ್ನು ಹಾಕಿ ತೆಗೆದಿಟ್ಟ ಅನೇಕ ಲಕ್ಷ ಮಾರ್ಕುಗಳ ಬೆಲೆಬಾಳುವ ಆಭರಣಗಳನ್ನು ತೆಗೆದುಕೊಂಡು ಹೋಗಿರುವರು. ಪಾಶ್ಚಾತ್ಯದೇಶಗಳ ಕಳ್ಳರು ಅತಿಬುದ್ಧಿವಂತರೆಂಬುದನ್ನು ಇದರಿಂದ ತಿಳಿಯಬಹುದು. ಈ ಕಾರಣದಿಂದಲೇ ಅಲ್ಲಿನ ಜನರು ಆಭರಣಗಳ ಮೇಲೆ ವಿಶೇಷ ಧನವ್ಯಯ ಮಾಡದೆ, ತಮ್ಮ ಸಂಪಾದನೆಯನ್ನೆಲ್ಲಾ ಬ್ಯಾಂಕುಗಳಲ್ಲಿಟ್ಟು, ಲೇವಾದೇವಿ ನಡೆಸುವರು.

ಸಾಕ್ಸೊನಿನ ಬಾಲ್ಯದಲ್ಲಿ ಆತನ ಜೊತೆಗಾರನೊಬ್ಬನು ಆಟವಾಡುತ್ತಿರುವಾಗ್ಗೆ ತನಗೆ ರಾಜಪದವಿ ದೊರಕಿದರೆ ನಿನಗೆ ನು ಬೇಕೆಂದು ಕೇಳಿದ್ದನಂತೆ. ಅದಕ್ಕವನು ತನಗೆ ಸೇನಾಧಿಪತಿಯ ಪದವಿ ಬೇಕೆಂದು ಕೇಳಿದ್ದನಂತೆ. ಈಗ ಸಾಕ್ಸೊ ನಿಜವಾಗಿಯೂ ದೊರೆತನಕ್ಕೆ ಬಂದುದನ್ನು ನೋಡಿ ಬಾಲ್ಯದ ಸ್ನೇಹಿತನಾದ ಅವನು ಸಾಕ್ಸೊನಿನ ಬಳಿಗೆ ಹೋಗಿ ತನಗೆ ಬಾಲ್ಯದಲ್ಲಿ ಕೊಟ್ಟಿದ್ದ ಭಾಷೆಯನ್ನು ನೆರವೇರಿಸಬೇಕೆಂದನಂತೆ. ಆಗ ದೊರೆಯು ಆತನ ಕೋರಿಕೆಯನ್ನು ನಡೆಸಬೇಕೆಂದು ತನ್ನ ಮಂತ್ರಿಗೆ ಹೇಳಲು, ಅವನು ಅದಕ್ಕೊಪ್ಪದೆ ಆತನಲ್ಲಿ ಸೇನಾನಾಯಕನಾಗುವ ಅರ್ಹತೆ ಕಾಣಲಿಲ್ಲವೆಂದನಂತೆ. ಈ ಸಂದರ್ಭದಲ್ಲಿ ದೊರೆಗೂ ಮಂತ್ರಿಗೂ ವೈಮನಸ್ಯ ಹುಟ್ಟಿರುವುದಂತೆ.

ಪರ್ಷಿಯನ್ ಕೊಲ್ಲಿಯಲ್ಲಿರುವ ಬಹರಿನ್ ದ್ವೀಪಗಳು ಆ ದೇಶಕ್ಕೆ ಸೇರಿದುವಾದರೂ ಕೆಲಕಾಲದಿಂದ ಬ್ರಿಟಿಷರು ಅಲ್ಲಿ ತಮ್ಮ ಅಧಿಕಾರವನ್ನು ನಡೆಸುತ್ತಿರುವರು. ಪರ್ಷಿಯನರು ಅಲ್ಲಿಗೆ ಹೋಗಬೇಕಾದರೆ ಬ್ರಿಟಿಷ್ ಪ್ರತಿನಿಧಿಯ ಅನುಮತಿಯನ್ನು ಪಡೆಯಬೇಕಾಗಿರುವುದು. ಇದು ಅಪಮಾನಕರವೆಂದೂ, ತಮಗೆ ಸೇರಿದ ದ್ವೀಪಗಳಲ್ಲಿ ಬೇರೆ ಸರ್ಕಾರದವರು ಅಧಿಕಾರ ನಡೆಸಲಾಗದೆಂದೂ ಪರ್ಷಿಯಾಸರ್ಕಾರದವರು ಬ್ರಿಟಿಷ್ ಸರ್ಕಾರಕ್ಕೆ ತಿಳಿಸಿರುವುದಲ್ಲದೆ ಸರ್ವ ರಾಷ್ಟ್ರೀಯ ಸಭೆಯ ಸದಸ್ಯರಿಗು[illegible] ನಿವೇದಿಸಿಕೊಂಡಿರುವರು. [illegible] ವುದೂ ನೋಡಬೇಕಾಗಿರುವುದು.

ಇಂಗ್ಲೆಂಡಿನಲ್ಲಿ ಡಾ ನಿವೃತ್ತ ಹಿಮ ಬೀಳುತ್ತಿರುವುದರಿಂದ ಶೀತವು ಹೆಚ್ಚಿ ಜನರು ಹಗಲಾಗಲೆಲ್ಲ ನಿರೋಧಕ್ಕಾಗಿ ಕಾಲಿಗೆ ಹಲಗೆಗಳನ್ನು ಕಟ್ಟಿಕೊಂಡು ಹಿಮದಮೇಲೆ ಇಂಗ್ಲೀಷರು ಜಾರುಗುಪ್ಪೆಗಳ ಮೇಲೆ ಜಾರುಬಂಡಿಗಳನ್ನು ಹಾಕಿಕೊಂಡು ವಿನೋದಪಡುತ್ತಿರುವರು. ಹಿಂದೆ ಎಂದೂ ಇಲ್ಲದಷ್ಟು ಶೈತ್ಯವು ಇಂಗ್ಲೆಂಡಿನಲ್ಲಿ ಈ ವರ್ಷ ಪ್ರಾಪ್ತವಾಗಿರುವುದು. ಚಳಿಯಿಂದ ನೂರಾರು ಜನರು ಸತ್ತಿರುವರು. ಒಂದು ಮನೆಗೆ ಬೆಂಕಿಬಿದ್ದು ಉರಿಯುತ್ತಿರಲು ಅದನ್ನು ಆರಿಸುವುದಕ್ಕಾಗಿ ನೀರಿನ ಕೊಳವೆಗಳಿಂದ ನೀರನ್ನು ಎರಚುವುದಕ್ಕೆ ಪ್ರಯತ್ನಿಸಲು ಶೈತ್ಯದಿಂದ ನೀರು ಕೊಳವೆಯೊಳಗೆ ಗಟ್ಟಿಯಾಗಿ ಕಟ್ಟಡವೆಲ್ಲಾ ಉರಿದುಹೋಯಿತು. ಯೂರೋಪೆಲ್ಲವೂ ಏಕಕಾಲದಲ್ಲಿ ಹಿಮಾಲಯವಾಗಿರುವುದು.

ಶೈತ್ಯಾಧಿಕ್ಯದಿಂದ ಆಸ್ಟ್ರೇಲಿಯಾದೇಶದಲ್ಲೆಲ್ಲ ಬಡಜನಗಳು ಕ್ಷಾಮಪೀಡಿತರಾಗಿರುವರು. ಇವರ ಮೈಕೆ 2 ಲಕ್ಷ ಜನಗಳು ನಿರುದ್ಯೋಗಿಗಳಾದುದರಿಂದ ಅನ್ನೋದಕವಿಲ್ಲದೆ ಕೃಶಾವಸ್ಥೆಯುಲ್ಲಿರುವರು. ಇದರ ನಿವಾರಣೆಗಾಗಿ ಸರ್ಕಾರದವರು, ಸೈನಿಕರ ಸಹಾಯದಿಂದ ಸರ್ಕಾರಿ ಅಡಿಗೆಮನೆಗಳನ್ನು ವಿಯನ್ನ ಪಟ್ಟಣದ ಅನೇಕ ಭಾಗಗಳಲ್ಲಿ ಏರ್ಪಡಿಸಿ ದಿನಕ್ಕೆರಡುಸಾರಿ ಆ ಬಡಪಾಯಿಗಳಿಗೆ ಆಹಾರವನ್ನು ಹಂಚುತ್ತಿರುವರು. ಹೋಗಾರರಾದ ರೊಟ್ಟಿವ್ಯಾಪಾರಿಗಳು ಸಾವಿರಾರು ಜನಗಳಿಗೆ ರೊಟ್ಟಿಯನ್ನು ದಾನಮಾಡುತ್ತಿರುವರು. ಸರ್ಕಾರದವರು ನಿರ್ಗತಿಕರಾದವರಿಗೆ ನಿವಾಸವನ್ನೂ, ಬಡಜನರಿಗೆ ಬೆಂಕಿಕಾಯಿಸಿಕೊಳ್ಳುವುದಕ್ಕೋಸ್ಕರ ಸೌದೆಯನ್ನೂ ಇದ್ದಲನ್ನೂ ಹಂಚುತ್ತಿರುವರು. ಚಳಿಯ ದೆಸೆಯಿಂದ ನೀರಿನ ಕೊಳವೆಗಳು ಒಡೆದು ಕುಡಿಯುವ ನೀರಿಗೂ ಅಭಾವಬಂದಿರುವುದು.

ಲೂಯಿ ವೇಬರ್ ಎಂಬ ಫ್ರೆಂಚ್ ಸ್ತ್ರೀಯು ಒಬ್ಬ ಚಲುವ ಮಾಡುವವರ ಮನೆತನದಲ್ಲಿ ಹುಟ್ಟಿದರೂ, ಅತಿ ಸುಂದರಿಯಾಗಿದ್ದುದರಿಂದ ತನ್ನ ಹದಿನೇಳನೆಯ ವಯಸ್ಸಿನಲ್ಲಿ ಪ್ರಖ್ಯಾತಳಾದ ನಾಟ್ಯಗಾರ್ತಿ ಎಂಬ ಹೆಸರನ್ನು ಪಡೆದು, ಪ್ಯಾರಿಸ್ ರಾಜಧಾನಿಯಲ್ಲೆಲ್ಲ ಸುಪ್ರಸಿದ್ಧಳಾಗಿದ್ದಳು. ರಾಜಮನೆತನದವರಲ್ಲಿಯೂ ಸಖ್ಯತ್ವವನ್ನು ಬೆಳಸಿದಳು. ಬೇಕಾದಷ್ಟು ದ್ರವ್ಯಾರ್ಜನೆ ಮಾಡಿ ಕೆಟ್ಟ ಸಹವಾಸಕ್ಕೆ ಬಿದ್ದುದರಿಂದ, ಕ್ರಮೇಣ ದೊಡ್ಡವರ ಸ್ನೇಹವನ್ನು ಕಳೆದುಕೊಂಡು, ಒಂದು ಸರ್ಕಸ್ ಕಂಪನಿಯಲ್ಲಿ ಸಂಬಳಕ್ಕೆ ಸೇರಿಕೊಂಡಳು. ಕೆಲವು ಕಾಲದ ಮೇಲೆ ಅಲ್ಲಿಂದ ಸ್ಥಾನಭ್ರಷ್ಟಳಾಗಿ ಬೀದಿಗಳಲ್ಲಿ ಮಿಠಾಯಿ ಮಾರುತ್ತ ಜೀವನಮಾಡಿ, ತನ್ನ ಎಪ್ಪತ್ತನೆಯ ವಯಸ್ಸಿನಲ್ಲಿ ನಿರ್ಗತಿಕಳಾಗಿ ಮೃತಳಾಗಿರುತ್ತಾಳೆ. ಯೌವನವೂ ಐಶ್ವರ್ಯವೂ ನಶ್ವರವಾದುವುಗಳೆಂದು ಈಕೆಯು ತನ್ನ ಜೀವನದಿಂದ ತೋರ್ಪಡಿಸಿರುತ್ತಾಳೆ.

ಇಂಗ್ಲೆಂಡಿನಲ್ಲಿ ಶ್ರೀಮಂತೆಯೊಬ್ಬಳು 60 ಸಾವಿರ ರೂಪಾಯನ್ನು ಪಕ್ಷಿಗಳ ರಕ್ಷಣಾಲಯವನ್ನು ಕಲ್ಪಿಸಿ ನಡೆಸುವುದಕ್ಕಾಗಿ ದಾನಮಾಡಿದಳು. ಶಾಸ್ತ್ರಜ್ಞರ ಪರಿಶೋಧನೆಗಾಗಿ ಪಕ್ಷಿಗಳನ್ನೂ ಪ್ರಾಣಿಗಳನ್ನೂ ಕೊಲ್ಲುವ ಪದ್ಧತಿಯನ್ನು ತಪ್ಪಿಸಿ ಅಂತಹ ಪ್ರಾಣಿಗಳನ್ನು ರಕ್ಷಿಸುವುದೇ ಈ ಮಹಾತ್ಮಳಾದ ಧರ್ಮಿಷ್ಟೆಯ ಉದ್ದೇಶವಾಗಿದ್ದಿತು. ಆದರೆ ಆಕೆಯ ಮರಣಾನಂತರ ಆಕೆಯ ಸಂಬಂಧಿಗಳು ನ್ಯಾಯಸ್ಥಾನದಲ್ಲಿ ವ್ಯಾಜ್ಯ ಹೂಡಿದರು. ಈ ದಾನದಿಂದ ಮನುಷ್ಯರಿಗೆ ಯಾವರೀತಿಯಲ್ಲಿಯೂ ಉಪಕಾರವಾಗುವ ಸಂಭವವು ತೋರದಿದ್ದುದರಿಂದ ಅಂತಹ ದಾನವು ಸ್ಥಿರವಾಗಲಾರದೆಂದು ನ್ಯಾಯಾಧೀಶರು ತೀರ್ಮಾನ ಮಾಡಿದರಂತೆ. ದೈವನಿರ್ಮಾಣದಲ್ಲಿ ನಿರ್ಜೀವವಾದ ಸರ್ವಸ್ವವೂ ಸ್ವಾರ್ಥಪರನಾದ ಮನುಷ್ಯನ ಉಪಯೋಗಕ್ಕಾಗಿಯೇ ಇರುವುದೆಂದೂ ಜೀವವುಳ್ಳ ಪಶುಪ್ರಾಣಿಗಳಿಗು ಸಹ ಯಾವ ಸೌಕರ್ಯವೂ ದೊರೆಯಲಾಗದೆಂದೂ ಅಭಿಪ್ರಾಯಪಡುವ ಮಾನವನ ಜನ್ಮವು ಎಷ್ಟು ಪವಿತ್ರವಾದುದಾಗಿರುವುದು. ಪಾಪಪುಣ್ಯ ಜೀತಿಯಿಲ್ಲದೆ ಮತಾಚಾರಗಳನ್ನೂ ಮರೆತಿರುವ ಪಾಶ್ಚಾತ್ಯರು ಹೀಗೆ ಅಭಿಪ್ರಾಯಪಡುವುದೇನಾಶ್ಚರ್ಯವಲ್ಲ.

ಗ್ರಹಕೃತ್ಯದ ನೋಟೀಸು

ಹೊಳೆನರಸೀಪುರ ತಾಲ್ಲೂಕು ದೊಡ್ಡ ಕಾಡ್ನೂರು ಹೋಬಳಿ ನಗರಹಳ್ಳಿಯಲ್ಲಿರುವ ವೀರಶೈವಮತದ ಶಂಭುಸವೇಗೌಡನ ಮಗ ದ್ಯಾವಪ್ಪ ಬಿನ್ ಅಪ್ಪಾಜಿಯು ಈ ಮೂಲಕ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ—

ನಾನು ಮತ್ತು ನನ್ನ ಅಣ್ಣ ಪವತಿ ಬಸಪ್ಪ ಸಹ ಶಂಭುಸವೇಗೌಡನ ಮಕ್ಕಳು ನಮ್ಮ ಪಿತ್ರಾರ್ಜಿತ ಸ್ವತ್ತುಗಳು ಅವಿಭಕ್ತ ಕುಟುಂಬಕ್ಕೆ ಸೇರಿರುತ್ತದೆ. ನನ್ನ ಅಣ್ಣನಿಗೆ 1 ವರ್ಷದ ಬಸಪ್ಪನೆಂಬ ಒಬ್ಬ ಮಗನು ಮಾತ್ರ ಇರುವನು. ನಾನೂ ನನ್ನ ಪವತಿ ಅಣ್ಣ ಬಸಪ್ಪ ಸಹ ಇದೇ ಗ್ರಾಮದ ಸಾಹುಕಾರ್ ಕೃಷ್ಣೇಗೌಡರಲ್ಲಿ ಮಾಡಿರುವ ಸಾಲವನ್ನು ಸ್ವತ್ತನ್ನು ಮಾರದೆ ವರಮಾನದಿಂದ ತೀರಿಸಿ ನನ್ನ ಒಪ್ಪಿಗೆಯಿಲ್ಲದೆ ಅವಿಭಕ್ತ ಆಸ್ತಿಯನ್ನು ಪರಾಧೀನ ಪಡಿಸುವ ಪ್ರಯತ್ನದಲ್ಲಿರುತ್ತಾನೆಂದು ಕೇಳುತ್ತೇನೆ. ಈಗಿರುವ ಸಾಲವನ್ನು ತೀರಿಸಲು ನಾನು ಸಿದ್ಧನಾಗಿರುವುದರಿಂದಲೂ ನನ್ನ ಅನುಮತಿಯಿಲ್ಲದೆ ಸ್ವತ್ತನ್ನು ಮಾರಲು ನನ್ನ ಅಣ್ಣನಿಗೆ ಅಧಿಕಾರವಿಲ್ಲದ್ದರಿಂದಲೂ ಯಾರಾದರೂ ಆಸ್ತಿ ಕ್ರಯ, ಭೋಗ್ಯ, ಆಧಾರ ಮಾಡಿಕೊಂಡರೆ ನಾನಾಗಲಿ ಕುಟುಂಬದ ಸ್ವತ್ತಾಗಲಿ ಬದ್ಧರಾಗುವುದಿಲ್ಲವೆಂದು ಎಚ್ಚರಿಸುತ್ತೇನೆ.

[8—1]

[illegible] ಟ್ರ್ಯೂಯನೆರ ದೇಶತ್ಯಾಗ

ಜರ್ಮನ್ ದೇಶದ ಪ್ರಜಾಪ್ರಭುತ್ವವನ್ನು [illegible] ರಾಜ ಕೈಸರ್‌ನ [illegible] ವನ್ನು ಅಧಿಕಾರ [illegible] ಕಾರಣದಿಂದ ದೇಶಭ್ರಷ್ಟನಾಗಿ [illegible] ಟ್ರ್ಯೂಯನೆರ [illegible] ತ್ತಿಕೆಗೆ ಹೋಗಿರುವರು [illegible] ಕಾಲ [illegible] ರುವರು [illegible] ಯೋಗಲಿಲ್ಲ [illegible] ಜನರ ಅನುಮತಿಯನ್ನು ಕೇಳಿರುವನು ಅಲ್ಲಿನ ಮಂತ್ರಿ ಮಂಡ ಲದವರು ಅನುಮತಿಯನ್ನು ಕೊಡಬಹುದೆಂದು ಒಪ್ಪಿರು ತ್ತಾರೆ

ಅಮಾನುಲ್ಲರ ರಾಜ್ಯಪರಿತ್ಯಾಗದ ಕಥೆ

ಅಮಾನುಲ್ಲ ರಾಜರು ರಾಜ್ಯಪರಿತ್ಯಾಗಮಾಡಿ ಕಾಬೂ ಲನ್ನು ಬಿಟ್ಟು ಹೊರಡಲು ಕಾರಣವೇನೆಂಬುದನ್ನು ಸ್ಪಷ್ಟವಾಗಿ ತಿಳಿಯಬೇಕೆಂದು ಅನೇಕರಿಗೆ ಕುತೂಹಲವಿರಬಹುದು ಕಾಬೂ ಲಿನ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದ ಷೇಕ್ ಬಷೀರ್ ಅಹ ಮದ್ ರವರು ಮೊನ್ನೆ ಲಾಹೋರಿಗೆ ಬಂದು [illegible] ದರು ಡೋರ ಮುಖಂಡನು ಕಾಬೂಲನ್ನು ವಶಪಡಿಸಿಕೊಂಡಾಗ್ಗೆ ಅಹ ಮದ್ ರವರು ಕಾಬೂಲಿನಲ್ಲಿದ್ದರಾದುದರಿಂದ ಅವರನ್ನು ಪತ್ರಿ ಕಾಪ್ರತಿನಿಧಿಯೊಬ್ಬನು ಭೇಟಿಮಾಡಿ ಅಮಾನುಲ್ಲರವರ ರಾಜ್ಯ ಪರಿತ್ಯಾಗದ ಕಥೆಯನ್ನು ಕೇಳಿದನು ಅಮಾನುಲ್ಲರವರ ವಶದಲ್ಲಿ ಬೇಕಾದಷ್ಟು ಮದ್ದು, ಗುಂಡು, ಆಹಾರ ಸಾಮಗ್ರಿಗಳೆಲ್ಲವೂ ಇದ್ದುದಾದಾಗ್ಯೂ ಸಾಕೋ ಕಾಬೂಲನ್ನು ಸಮೀಪಿಸುತ್ತಿದ ಹಾಗೆಯೇ ಮೌಲ್ವಿಯೊಬ್ಬನು ಒಂದು ದಂಗೆಕೋರರ ದಂಡು 15 000 ಬಲವಿರುವುದೆಂದು ಹೇಳಿ ಅಮಾನುಲ್ಲರವರ ಸೈನಿಕರಿಗೆ ಗಾಬರಿ ಹಿಡಿಸಿದನು ಇದಕ್ಕೊಂದು ತಿಂಗಳಿಂದೆ ಸಾಕೋ ವಿನ ಸೈನ್ಯವು ಕಾಬೂಲನ್ನು ಮುತ್ತಿದಾಗ ಅಮಾನುಲ್ಲರ ಸೇನೆಯು ಅವರನ್ನು ಹೊಡೆದೋಡಿಸಿಬಿಟ್ಟಿದ್ದರು [illegible] ಸಾಕೋ [illegible] ಸೈನ್ಯವನ್ನು ತಂದಿರುವನೆಂದೂ [illegible] ಕಾದಾಡುವುದು ನಿರರ್ಥಕವಾದುದೆಂದೂ ಕಪಟಿಯಾದ [illegible] ಅಮಾನು ಲ್ಲರ ಸೈನಿಕರಿಗೆಲ್ಲ ಬೋಧಿಸಿದನು ಅವರು ಆ ಮಾತು [illegible] ವೆಂದು ನಂಬಿ ದಂಗೆಕೋರರ ಮೇಲೆ ಬೀಳಲೊಲ್ಲದೆ ಹೋದರು ವಾಸ್ತವವಾಗಿ ನೋಡಿದರೆ ಸಾಕೋವಿನೊಡನೆ ೫೦ ಮಂದಿಯೂ ಸಹ ಸೈನಿಕರಿರಲಿಲ್ಲ ಆದಾಗ್ಯೂ ಉಪಾಯಾಂತರದಿಂದ [illegible] ಕೋರ ಮುಖಂಡನು ಕೋಟೆಯೊಳಗೆ ನುಗ್ಗಿ ಮದ್ದುಗುಂಡಿನ ಉಗ್ರಾಣವನ್ನು ಮೊದಲು ವಶಪಡಿಸಿಕೊಂಡನು ಅನಂತರ ಅಮಾನುಲ್ಲರವರು ನಡೆದ ಅಚಾತುರ್ಯದಿಂದ ಬೇರೆ ಮಾರ್ಗ ತೋಚದೆ ವೃಥಾ ತಮ್ಮ ಪ್ರಜೆಗಳ ರಕ್ತಪಾತವಾಗುವುದಕ್ಕೆ ಎಂದು ಮರುಗಿ ರಾಜ್ಯವನ್ನು ಪರಿತ್ಯಾಗಮಾಡಿ ತಮ್ಮ ಸಹೋ ದರನಿಗೆ ಪಟ್ಟವನ್ನೊಪ್ಪಿಸಿದರು ಕೂಡಲೆ ಕಾಬೂಲನ್ನು ಬಿಟ್ಟು ತೆರಳುವುದು ಕ್ಷೇಮವೆಂದು ಅವರಿಗೆ ತೋರಿತು ಇದ ಕ್ಕಾಗಿ ತಮ್ಮ ಆಕಾಶನಾವೆಯ ರಷ್ಯನ್ ವೈಮಾನಿಕರು ಸಮೀ ಪದಲ್ಲಿರಲಿಲ್ಲವಾದುದರಿಂದ ಮೋಟಾರ್ ಗಾಡಿಗಳಲ್ಲಿ ಕುಳಿತು ಸುರ ಕ್ಷಿತವಾಗಿ ಕಾಂದಹಾರನ್ನು ತಲುಪಿದರು ಇನಾಯತುಲ್ಲರವರು ತಮಗೆ ಪಟ್ಟ ಪ್ರಾಪ್ತವಾದ ರೀತಿಯನ್ನು ಪರಿಶೀಲಿಸುವದರೊಳ ಗಾಗಿಯೇ ಬಾಚಾಯಿ ಸಾಕೋ ತಗಲೇ ಕಾಬೂಲನ್ನು ಮುತ್ತಿ ಕೋಟೆಯೊಳಗೆ ಪ್ರವೇಶಿಸಿದ್ದನೆಂದು ಗೊತ್ತಾಯಿತ ಆದಿನ ಶುಕ್ರವಾರವಾದ ದರಿಂದ ಮಸೀದಿಗಳಲ್ಲಿ ನಮಾಜಿಗಾಗಿ ಸೇರಿದ್ದ ಸಾಕೋವಿನ ಹಿಂಬಾಲಕರು [illegible] ವನ್ನು [illegible] ತಮ್ಮ ಸೂಸಡೊರೆಗೆ [illegible] [illegible] ದಲ್ಲಿ ತುಪಾಕಿಗಳನ್ನು [illegible] ಕೊಂದುಹಾಕಿದರು ಈ [illegible] ಯಾಂತರದಿಂದ ರಾಜಧಾನಿಯನ್ನು ವಶಪಡಿಸಿಕೊಂಡು ಅನೇಕ ತಿಂಗಳುಕಾಲ ಸಾಕಾಗುವಷ್ಟು ಹಣವನ್ನೂ ಮದ್ದುಗುಂಡು ಸಾಮಗ್ರಿಗಳನ್ನೂ ಸುಲಭವಾಗಿ ಸಂಪಾದಿಸಿಕೊಂಡನು ಇನಾ ಯತುಲ್ಲರವರು ತಮಗೆ ಅಪ್ರಾರ್ಥಿತವಾಗಿ ದೊರೆತ ರಾಜಪದ ವಿಯು ಸ್ಥಿರವಾದುದಲ್ಲವೆಂದೂ ತಮಗೆ ಮೋಸವಾಯಿತೆಂದೂ ತಿಳಿಯಲು ಬಹುಕಾಲ ಹಿಡಿಯಲಿಲ್ಲ ಶೀಘ್ರದಲ್ಲಿಯೇ ಸಾಕೋ ಅರಮನೆಗೆ ನುಗ್ಗಿ ವಶಪಡಿಸಿಕೊಂಡನು. ಇನಾಯತುಲ್ಲರವರನ್ನು ಕಾಂದಹಾರಿಗೆ ಸುರಕ್ಷಿತವಾಗಿ ತಲುಪಿಸಲು [illegible] ಕೊಂಡನು ಈ ಕಥೆಯನ್ನು ಕೇಳಿದವರೆಲ್ಲ ಈಗ [illegible] ಯಗೊಂಡಿರುವರು

(ಆರೋಗ್ಯ ಚಂದ್ರಿಕೆಯಿಂದ)

ಮನುಷ್ಯವರ್ಗಕ್ಕೆ ಸರಿಯಾದ ಆಹಾರವಾವುದು?

ಭಗವದ್ಗೀತೆಯಲ್ಲಿ ಶ್ರೀ ಕೃಷ್ಣಪರಮಾತ್ಮನು “ಮನು ಷ್ಯರ ಸ್ವಭಾವ ಗುಣಗಳು ಅವರು ಸೇವಿಸುವ ಆಹಾರವನ್ನು ಅನುಸರಿಸುವುವೆಂದು” ಹೇಳಿರುವನು ಯಾವ ಪದಾರ್ಥವು ಶರೀರದೊಳಕ್ಕೆ ಪ್ರವೇಶಿಸಿದಾಗ, ದೇಹನಿರ್ಮಾಣದ ಪದಾರ್ಥ ಗಳನ್ನು ಸೃಷ್ಟಿಸಿ, ಶಕ್ತ್ಯುತ್ಪಾದನೆಗಳನ್ನುಂಟುಮಾಡುವುದೋ, ಅಥವಾ ದೇಹಕಾರ್ಯಗಳು ಕ್ರಮವಾಗಿ ನಡೆಯುವಂತೆ ಏರ್ಪಡಿ ಸುವುದೋ ಅದೇ “ಆಹಾರ” ವೆನಿಸುವುದು ಶರೀರದ ಬೆಳ ವಣಿಗೆಗಾಗಿ, ಆಹಾರಗಳನ್ನು ಸೇವಿಸತಕ್ಕ ಪ್ರಾಣಿಗಳಲ್ಲಿ, ಪರ್ಣಾ ಹಾರಿಗಳೆಂದೂ, ಫಲಾಹಾರಿಗಳೆಂದೂ, ಮಾಂಸಾಹಾರಿಗಳೆಂದೂ ಮೂರು ವಿಧವುಂಟು ಮನುಷ್ಯರು ಸಾಮಾನ್ಯವಾಗಿ ಫಲಾಹಾ ರಿಗಳು. ಏಕೆಂದರೆ? ಅವರ ದೇಹದೊಳಗಿನ ಅವಯವಗಳಾ [illegible] ಗಳು, ಹಲ್ಲು ಮೊದಲಾದ ಅವಯವಗಳಾ [illegible] ಸಮ್ಮತಿಸುವುದು ಹಿಂದೂ ಆಯುರ್ವೇದದ ಪ್ರಕಾರ [illegible] [illegible] ಮನುಷ್ಯ ರಿಗೆಂದು [illegible] ಆಹಾರ ಸಾಮಗ್ರಿಗಳು [illegible] ಇರುವುವೆಂದು ಸೂಚಿಸಿರುವ

ಆಹಾರ ವಸ್ತುಗಳಲ್ಲಿರುವ ಮುಖ್ಯ ಪದಾರ್ಥಗಳು ಯಾವು ವೆಂದರೆ, (1) ನೀರು (2) ಉಪ್ಪು (3) ಕಾರ್ಬೋ ಹೈಡ್ರೇ ಟುಗಳು, (4) ಪ್ರೋಟೀನ್ ಗಳು (5) ಜಿಡ್ಡಿನ ವಸ್ತುಗಳು, (6) ವಿಟಮಿನ್ ಗಳೆಂಬ ಜೀವಸತ್ವಗಳು

ಈ ಕೆಳಗಿನ ಮೂರು ಕಾರಣಗಳಿಗಾಗಿ ಪ್ರಾಣಿಗಳಿಗೆ ಆಹಾರ ಸೇವನೆಯು ಅವಶ್ಯವಾಗಿದೆ—

(1) ದೇಹಕ್ಕೆ ಶಕ್ತಿಯನ್ನು ಕೊಡುವುದು (2) ದೇಹವು [illegible] ದೇಹದಲ್ಲಿ ಸವೆದುಹೋದ ಭಾಗಗಳನ್ನು [illegible] ದಕ್ಕೂ ಬೇಕಾದ ಪದಾರ್ಥಗಳನ್ನು [illegible] ಪವು ಚೆನ್ನಾಗಿ ಬೆಳೆದು ದೇಹಕಾರ್ಯಗಳು [illegible] ವಂತೆ ಮಾಡಲು ಬೇಕಾದ ಪದಾರ್ಥಗಳನ್ನೊದಗಿ [illegible] ವುದು

ಆಹಾರವು ದೇಹಕ್ಕೆ ಪುಷ್ಟಿ [illegible] ಸುವುದಕ್ಕೆ ಮುಂಚೆ, ಪ್ರಕೃತಿಸಿದ್ಧವಾದ ಮತ್ತು ರಸಾಯನಸಂ ಬಂಧವಾದ ಕೆಲವು ಮಾರ್ಪಾಡುಗಳನ್ನು ಹೊಂದಬೇಕಾಗಿದೆ. ಪಾಕಮಾಡುವುದು, [illegible] ದೇಹದೊಳಕ್ಕೆ [illegible] ರಕ್ತಗತವಾಗುವವು [illegible] ಮುಂತಾದ ಕಾರ್ಯಗಳಿಂದ ಆಹಾರಕ್ಕೆ ಈ ಬದಲಾವಣೆಗಳಾಗುವುವು [illegible] ಇಂದ ನೋಡಿದರೂ ಮನುಷ್ಯವರ್ಗಕ್ಕೆ ಮಾಂಸಾಹಾರಕ್ಕಿಂತ ಸಸ್ಯಾಹಾರವೇ ಉತ್ತಮವೆನಿಸಿದೆ ಮಾಂಸಾಹಾರದಲ್ಲಿ ನಮ್ಮ ಶರೀರದ ಬೆಳವಣಿಗೆಗೆ ಬೇಕಾದ ಪದಾರ್ಥವೆಲ್ಲವೂ ಇರುವುದಿಲ್ಲ ಅವುಗಳಲ್ಲಿ ಸಕ್ಕರೆಯೂ, ಪಿಷ್ಟಪದಾರ್ಥವೂ ಸುಣ್ಣ ಮುಂತಾದ ಖನಿಜ ಲವಣಗಳೂ ತಕ್ಕಷ್ಟು ಪ್ರಮಾಣದಲ್ಲಿಲ್ಲ

ಮನುಷ್ಯವರ್ಗದ ಬಾಹ್ಯಾಂಗಗಳೂ ಶರೀರದೊಳಗಿನ ಅವಯವಗಳೂ, ಮನುಷ್ಯರ ಸ್ವಭಾವಗಳೂ ಮತ್ತು ಪಚ ನದ ಪ್ರಾಬಲ್ಯ ಮತ್ತು [illegible] ಇವೆಲ್ಲಾ, ಶೀಘ್ರದಲ್ಲಿ [illegible] ರಕ್ತಗತವಾಗುವ [illegible] ಮತ್ತು [illegible] ಗಳಲ್ಲಿರುವ ಪದಾರ್ಥಗಳನ್ನೇ ಅಪೇಕ್ಷಿಸುತ್ತಿವೆ ಇವು ಬಹಳ ಬಲಕಾರಿಗಳು ಮತ್ತು ದೇಹಕ್ಕೆ ಅನುಕೂಲ ವಾದುವು

ಸಸ್ಯಾಹಾರದಿಂದ ದೇಹಕ್ಕೆ ಹೆಚ್ಚು [illegible] ಪದಾರ್ಥಗಳು ಒದಗುವುವೆಂದೂ, ಅವು ಹೆಚ್ಚು ಪ್ರಯೋಜನಕಾರಿಯೆಂದೂ ಅದರಲ್ಲಿ ಶಕ್ತಿವರ್ಧಕ ಗುಣವೂ, ಜಾಗ್ರತೆಯಾಗಿ ವ್ಯಾಪಾರಾದು ಗಳನ್ನು ಮಾಡುವ ಶಕ್ತಿಯೂ ಅಧಿಕವಾಗಿದ್ದು ಮನುಷ್ಯ ಜಾತಿಗೆ ಮಾಂಸಾಹಾರಕ್ಕಿಂತ ಹೆಚ್ಚು ಉಪಯೋಗಕಾರಿಯಾದು ದೆಂದೂ ನಿದರ್ಶನಪೂರ್ವಕವಾಗಿ ತೋರಿಸಬಹುದು ಮತ್ತು ಅದರ ಉತ್ತಮಗುಣವು ಬಹಳ ಹಿಂದಿನ ಕಾಲದಿಂದಲೂ ತಿಳಿ ಬಂದಿದೆ.

ಅನೇಕ ರೋಗಗಳನ್ನು [illegible] ಸಸ್ಯಾಹಾರವನ್ನೇ ಚಿಕಿತ್ಸಾರೂಪವಾಗಿ ಉಪಯೋಗಿಸ [illegible] ವುದೂ ಉಂಟು [illegible] ಮತ್ತು [illegible] ಅನ್ನ ಮತ್ತು [illegible] ಮತ್ತು [illegible] ಇವನ್ನು ಸೇವಿ ಸುವುದರಿಂದ [illegible] ಬಾರದಂತೆ ತಡೆಯ [illegible] ಶಕ್ತಿದಾಯಕವಾದ ದೇಹಸತ್ವವನ್ನು ಹೊಂದುವುದು ಮನು ಷ್ಯರ ಉದ್ದೇಶವೇ ಹೊರತು, ಕಾಡುಮೃಗಗಳಂತೆ ಮಾಂಸಾಹಾ ರಿಗಳಾಗಿ ಉದ್ರೇಕಕ್ಕೆ [illegible] ಸ್ವಭಾವವನ್ನು [illegible] ಪ್ರಯೋಜನವು [illegible] ಮನುಷ್ಯನು [illegible] ಕೋರತು, [illegible] ಅವುಗಳ ಮಾಂಸವನ್ನು ತಿನ್ನತಕ್ಕ [illegible] ಬದ ಕಲಸವು [illegible] ಪರಸ್ಪರ [illegible] ನೀತಿ ಸದಾಚಾರ ಸದಾಲೋಚನೆಗಳ ದೃಷ್ಟಿಯಿಂದ ಮನು ಷ್ಯನ ಅಂತಿಮೋದ್ದೇಶವೇನೆಂದರೆ, ಪ್ರಾಣಿಗಳನ್ನು ಕೊಲ್ಲುವ ಅಥವಾ ಹಿಂಸಿಸುವ ಅಭ್ಯಾಸವನ್ನು ನಾಶಪಡಿಸುವುದೇ! ಪ್ರಾಣವನ್ನು ಯಾರುಬೇಕಾದರೂ ತೆಗೆಯಬಹುದೇ ಹೊರತು, ಅದನ್ನು ಯಾರೂ ಕೊಡಲಾರರು ಪ್ರಾಣದ ಮೇಲೆ ಎಲ್ಲರಿಗೂ ಆಶೆಯೇ! ಅದರ ರಕ್ಷಣೆಗಾಗಿ ಎಂತಹ ಕೆಲಸವನ್ನಾದರೂ ಮಾಡುವರು ಅದಮೋದಮರಿಗಾದರೂ ಆಶ್ಚರ್ಯಕರವೂ, ಪ್ರೀತಿದಾಯಕವೂ ಸಂತೋಷಪ್ರದವೂ ಆದ ವಸ್ತುವೆ ಪ್ರಾಣ ವೇ ಅಂತಹ ಅಮೋಘವಾದ ಒಂದು ಪ್ರಾಣವನ್ನು ಜಿಹ್ವೆಯ ಸವಿದಿಂದ ಒಂದು ವಿನೋದಕ್ಕಾಗಿ ಕಳೆಯುವುದು ನಾಗರಿಕವಾದ ಯಾವ ಜನಾಂಗಕ್ಕೂ ಸಂತೋಷಪ್ರದವಾಗಿರಲಾರದು. ಇದರೆ ಮಾಂಸಾಹಾರಿಗಳಾದ ಕ್ರೂರಜಂತುಗಳಿಂದಲೂ, ವಿಷಜಂತು ಗಳಿಂದಲೂ ಕೂಡಿದ ದಟ್ಟವಾದ ಅರಣ್ಯಪ್ರದೇಶಗಳನ್ನು ವಾಸ ಯೋಗ್ಯವಾಗಿ ಮಾಡಲು, ಆ ಪ್ರಾಣಿಗಳನ್ನು ಕೊಲ್ಲಬೇಕಾಗಿ ರುವಾಗ ಆ ನಾಶಕಾರ್ಯವನ್ನು ಒಪ್ಪಿ [illegible] ಒಂದು ಧರ್ಮಯುದ್ಧವನ್ನು ಕೈಕೊಳ್ಳುವಂತೆ ಅವಶ್ಯಕರ್ತವ್ಯವಾಗಿ ಭಾವಿಸಿ ಮಾಡಬೇಕೇ ಹೊರತು, ಅದನ್ನೊಂದು ಆಟವಾಗಿ ಭಾವಿಸಕೂಡದು ಪ್ರಪಂಚದ ಕಷ್ಟಗಳನ್ನು ಬಿಡಿಸುವುದು ಮನುಷ್ಯ ಧರ್ಮವೇ ಹೊರತು, ಪ್ರಪಂಚಕ್ಕೇ ಶತ್ರುಗಳಾಗು ವುದು ಸುನ್ಯಾಯವಲ್ಲ

[illegible] ವಯಲ್ಲಿ [illegible] ಮನುಷ್ಯನು [illegible] [illegible] ಮತ್ತು ಶಕ್ತಿಗಳಿಗೆ ನಾಶಕಾರಿಗಳಾಗಿ ರೋಗ ಗಳನ್ನು ನಿವಾರಿಸುವದಾಗಿ, ಮನಸ್ಸಿಗೆ ಸಂತೋಷ [illegible] ಯನ್ನು ಉಂಟುಮಾಡುವ ಸಸ್ಯಾಹಾರವನ್ನೇ ಸೇವಿಸಬೇಕು

ಮುಖ್ಯವಾಗಿ ರಕ್ತಾದಿಗಳ ಸಂಯೋಗವಿಲ್ಲದಿರುವ ಆಹಾರಕ್ಕೆ [illegible] ತ್ತಮವಾದ ಆಹಾರವು ತನ್ನ ದೈಹಿಕ, ಮಾನಸಿಕ, ನೈ ತಿಕ ಮತ್ತು ಆತ್ಮಿಕಶಕ್ತಿಗಳನ್ನು [illegible] ಹೊಂದಬೇಕೆಂಬ ಆಪೇಕ್ಷೆಯುಳ್ಳವರು ಪ್ರಕೃತಿಯಲ್ಲಿ ದೊರೆಯುವ ಸಸ್ಯಾಹಾರಗಳನ್ನೇ ಸೇವಿಸಬೇಕು

ಅಲ್ಲದೆ, ಭಾರತಜನಾಂಗದವರೆಲ್ಲರೂ ಸಂಪೂರ್ಣವಾಗಿ ಸಸ್ಯಾಹಾರಗಳನ್ನೇ ಸೇವಿಸಲು ಪ್ರಾರಂಭಿಸಿದರೆ, ಭಾರತದೇಶ ದಲ್ಲಿ ದನಕರುಗಳು ಚೆನ್ನಾಗಿ ಬಾಳಿ, ಒಳ್ಳೆಯ ಹಾಲು ಸಮೃದ್ಧ ವಾಗಿ ಮತ್ತು ಸುಲಭವಾಗಿ ಸಿಕ್ಕುವಂತಾಗುವುದು ಮತ್ತು ದೇಹಾಭಿವೃದ್ಧಿಗೆ ಅತ್ಯವಶ್ಯವಾದ ವ್ಯವಸಾಯ ಮತ್ತು ವ್ಯಾಪಾ ರಗಳೂ ವೃದ್ಧಿಹೊಂದಲು ಸಹಕಾರಿಯಾದಂತಾಗುವುದು

ಮನುಷ್ಯನ ಸೃಷ್ಟಿಗೂ, ಆತನ ನೈತಿಕಬಾಳ್ವಿಕೆಗೂ ಅನು [illegible] ಸಸ್ಯಾಹಾರವನ್ನು [illegible] ತಂದರೆ, ಭೂಮಿಯು [illegible] ತಾಗುವುದಕ್ಕೆ ಅನುಕೂಲವನ್ನು ಕಲ್ಪಿಸಿದಂತಾ [illegible] ಖರ್ಚು ಕಡಿಮೆಯಾಗುವುದು ಇವುಗಳಿಂದ ಪ್ರತಿ ಮನುಷ್ಯರ ಮತ್ತು ಒಟ್ಟಿನಲ್ಲಿ ದೇಶದ ಸಂಪದಭಿವೃದ್ಧಿಯೂ [illegible] ಮಟ್ಟಿಗೆ ಹೆಚ್ಚುವುದು

ಬೆಂಗಳೂರಿನಲ್ಲಿ ಬೀದಿಮಾರಮ್ಮನ ಜಾತ್ರೆ

(ಪ್ರಾಣದಯೆಯಿಂದ)

ಈ ಊರಿನಲ್ಲಿ ಪ್ಲೇಗ್‌ರೋಗವು ಪ್ರಾರಂಭವಾಯಿತೆಂದು ಕೆಲವರ [illegible] ವಿಚಾರಣೆಗಾಗಿ ಮಾರಮ್ಮನ ಪೂಜೆಗೆ ಆರಂಭಿಸಿದರು ಈ ತಿಂಗಳ 1ನೇ ತಾರೀಕು ಮಂಗಳವಾರ - [illegible] ಆಂಜನೇಯಸ್ವಾಮಿದೇವಾಲಯದ [illegible] ದಲ್ಲಿರುವ ಮಾರಮ್ಮನ ಗುಡಿಯಲ್ಲಿ ಈ ಪೂಜೆಯು ನೂರಾರು ಕುರಿ ಕೋಳಿಗಳ ಬಲಿಯಿಂದ ನಡೆಯುವುದೆಂಬ ಈ ಊರಿನ ಪ್ರಾಣಿದಯಾ ಪ್ರಚಾರಕಸಂಘದವರು ತಿಳಿದು ಧರ್ಮದರ್ಶಿಗಳಾದ ಶ್ರೀ [illegible] ನವರ ಬಳಿಗೆ ಹೋಗಿ ಸಾತ್ವಿಕ ಪೂಜೆಯಿಂದಲೂ ಅನ್ನದಾನದಿಂದಲೂ ದೇವಿಯು [illegible] ಹೇಳಿದರೆ ಅವರು ಅದರಂತೆ ನಡೆಸಬಹುದೆಂಬ ಭರವಸೆ [illegible] ಶ್ರೀ ಸಾವಂದಿಶೆಟ್ಟರೂ ಪಂಡಿತ ಎಲ್ಲಪ್ಪನವರೂ [illegible] ನವರೂ ಅವರ ಮನೆಗೆ ಹೋದರು ಮನೆಯವರು ಕುರಿಗಳನ್ನು ಕೊಂಡು ಬರಲು [illegible] ಹೋಗಿರುವರೆಂಬ ವಿಷಯವನ್ನು ತಿಳಿದು 3 ಜನರೂ ಗಾಡಿಮಾಡಿಕೊಂಡು ಅಲ್ಲಿಗೆ ಹೋಗಿ ಶ್ರೀ [illegible] ನವರನ್ನು ಪ್ರಾಣಿಗಳಲ್ಲಿ ದಯೆಯನ್ನು ತೋರಿರಿ ಎಂದು ಪ್ರಾರ್ಥಿಸಲು ಅವರು ಮೂಕ - ಪ್ರಾಣಿಗಳ ಬದುಕಿಕೊಂಡವು, ದಯಾಧರ್ಮವು [illegible] ಆದ [illegible] ಸಾತ್ವಿಕ ರೀತಿಯಿಂದ [illegible] ಹೋಗಿ ಪೂಜೆಮಾಡ ವೆಂದು ಹೇಳಿ ಅದೇ ಗಾಡಿಯಲ್ಲೇ ವಾಪಸ್ ಬಂದು ಅನ್ನದಾನಕ್ಕೆ ಏರ್ಪಾ ಡುಮಾಡಿದರು ಇದೇ ದಿವಸ ಪಕ್ಕದ ಬೀದಿಯಲ್ಲಿ ಜಾತ್ರೆ ನೆರೆಯುವು ದೆಂದ ತಿಳಿದು ಅಲ್ಲಿಗೂ ಇವರು ಹೋಗಿ ಆ ಜಾತ್ರೆಗೆ ಮುಂದಾಳುಗಳಾದ [illegible] ಹಾಲುಕಪ್ಪೆಗೌಡರ ಮುನಿಯಪ್ಪ ಮತ್ತು ವೆಂಕಟಪ್ಪ ಎಂಬ [illegible] ಪ್ರಾಣಿವಧೆ ಮಾಡದೆ ಅಮ್ಮನ ಪೂಜೆಮಾಡಿರೆಂದು ಕೇಳಲು ಅವರು [illegible] ಹೇಳುವುದೇನೋ ನ್ಯಾಯ ಆದರೆ ಕ್ರಿಯಾಕ್ಕೆ ತಂದಿರುವವು ಈ [illegible] ಹಾಗೆ ನಡೆಸಲಾಗುವುದಿಲ್ಲ ಅಮ್ಮನ ಮುಂದೆ ಬಲಿಯಾದ ಕುರಿ [illegible] ಹಂಚಿಕೊಳ್ಳಲು ಮನೆಗೆ ಒಂದುರೂಪಾಯಿನಂತೆ ಕೊಡು ವುದಾಗಿ ಸರಿಗೆಯವರೂ ಇತರರೂ ಹೇಳಿರುವರು ಬಲಿ ಇಲ್ಲವಾದರೆ ಅದು [illegible] ಇನ್ನು ಎಷ್ಟೋ ಅನಾಚಾರಗಳು ನಡುಗಿವೆ ದೇವಿಗೆ [illegible] ಮಾಂಸಾಹಾರಿಗಳಾದವರಿಗೆ ಆಗತ್ಯ ಬೇಕೇ ಬೇಕು” ಎಂದು ವಾದಿಸಿದರು ಆಗ ಶ್ರೀ ಪಂಡಿತ ಎಲ್ಲಪ್ಪನವರೂ ಸಾವಂದಿ ಶೆಟ್ಟರೂ [illegible] ಪೂಜಾ ವಿಚಾರವನ್ನೂ ಅನ್ನದಾನದ ವಿಚಾರವನ್ನೂ [illegible] ಯಂತೆ ಮಾಡುವೆವು ಆ ಕುರಿಗಳನ್ನು ನಮ್ಮ ವಶಪಡಿಸಿರಿ ಎಂದು ಕೇಳಿದರು ಆಗ ಅವರ [illegible] ಯಿಲ್ಲದೆ ಒಪ್ಪಿ ದರ ಬಳಿಕ [illegible] ಪ್ರಾಣಿದಯಾಸಂಘದವರು [illegible] ಅಮ್ಮನ ಆರಾಧನೆಯನ್ನು ನಡೆ ಸಿದರು

ಶಾಂತಿಭೇದಿಗೆ ಶಾಂತಿ.

[illegible] ದಲ್ಲಿ ಊರಿನೊಳಗೆ ಶಾಂತಿಭೇದಿರೋಗವು ಶುರುವಾದಾಗ ಮಾರಮ್ಮನವರಿಗೆ ಕೋಣ ಹಂದಿ, ಕುರಿ ಇವುಗಳನ್ನು ಬಲಿಕೊಟ್ಟಲ್ಲಿಯೇ ರೋಗವು ಶಾಂತಿಯಾಗುವುದು. ಎಂಬ ಭ್ರಾಂತಿಯಿಂದ ಅಮ್ಮನವರನ್ನು ತೃಪ್ತಿಪಡಿಸುವ ಉದ್ದೇಶದಿಂದ ಜನಾಂಗದ ಒಂದಾಗಿ [illegible] ಆಚರಿಸಿಕೊಂಡುಬರುವುದು ಕಂಡುಬರುತ್ತದೆ ಇದು ಹಳೆ [illegible] ಇದು ಈಗೀನದೇ ಮಂಗಳವಾರದಲ್ಲಿ [illegible] ಮುದು ವೆ ಮೆರವಣಿಗೆಯಂತೆ [illegible] ಕರೆದುಕೊಂಡು [illegible] [illegible] ಹೋಗುವುದನ್ನು ಕಂಡು ಬೆರಗಾಗುತ್ತಿರುವ ನೋಟಿಗರ ಸ್ಥಿತಿ.

ಇದು ಪಾರಂಪರ್ಯವಾಗಿ ನಡೆದುಬಂದಿರುವ ಸಂಪ್ರದಾಯವಾಗಿರುತ್ತೆ. ಭ್ರಾಂತಿ ಎಂದರೇನು ಎಂದು ಯಾರಾದರೂ ಕೇಳಬಹುದು. ಇದು ಭ್ರಾಂತಿ [illegible] ಕೇವಲ ಮೂಢನಂಬಿಕೆ ಎಂದರೂ ತಪ್ಪೇನು

[illegible] ತಿಳಿಯದ ಮೂಢರನ್ನು ಸಾಧಾರಣ [illegible] ಮಾಡಬಹುದು [illegible] ಸಂಪನ್ನರನ್ನಾಗಿ ಮಾಡಬಹುದು [illegible] ತಿಳಿಯದ ಅವಿವೇಕಿಯನ್ನು [illegible] ಸಾಧ್ಯವೆಂಬುದಾಗಿ [illegible] ಸುಭಾಷಿತ ಪಠನವಿರುತ್ತದೆ

ಹಾಗಾದರೆ ಇದು ಮೂಢನಂಬಿಕೆಯಿಂದ ಉದ್ಭವಿಸುವ ಭ್ರಾಂತಿಯೆಂದಾ ಯಿತು ಹಾಗಲ್ಲದೆ ಇದಕ್ಕೆ ಉತ್ತರವೇನು? ಮನುಷ್ಯನು ತನ್ನನ್ನು ತಾನು ಉದ್ಧರಿಸಿಕೊಳ್ಳಬೇಕು, ತನ್ನನ್ನು ತಾನು ಕೆಳಕ್ಕೆ ಕೆಡಿಸಿಕೊಳ್ಳಬಾರದು ತನಗೆ ತಾನೇ ಶತ್ರು ತನಗೆ ತಾನೇ ಮಿತ್ರ, ಎಂಬುದು— ಗೀತಾಶಾಸ್ತ್ರವಚನವು ಯಾರ [illegible] ಹಿಂಸೆಮಾಡುವವರು, ಕೆಲ ಗಳನ್ನು ಕೊಂದು ಮಾಡುವ ಯಜ್ಞವು ಯಜ್ಞವಲ್ಲ. [illegible] ಇದೇ [illegible] ಆಧಾರಭೂತವಾದ [illegible] ಕೇವಲ ಈ ನವ ಧರ್ಮದ ಗೋಚರಕ್ಕೆ ಬರುವುದಿಲ್ಲವೇ? ಹಾ! [illegible] ಕಾಲಗತಿಯೆ! ಇದೇನಾಶ್ಚರ್ಯ!

ಎತ್ತಿನ್ನಿಯೂ ಜುಜಾಲಣಿಯು ತಪ್ಪನೇ ಜುರಡುಂಬಿಕೊಂಡಿರುವ ಈ [illegible] ಜನರು ಕರೆಗೆ [illegible] ಹಾಡು

[illegible] ಈ ಕೆಲಸ [illegible] ಸ್ವಭಾವಿಕ [illegible] (ಅಪ್ಪರಬುದ್ಧಿ) ದಿಂದ [illegible] ಪ್ರಕೃತಿಗಳ [illegible] ಅಂತರಂಗದಲ್ಲಿಯೇ ಅಡಗಿ ಹೋಯಿತು ಎಂದು ಕಾಲಗತಿಯು ಹೀಗಿದ್ದರೂ ವಿಚಾರ ಮಾಡುವ ಶಕ್ತಿಯು ಪ್ರತಿ ಒಬ್ಬನಲ್ಲಿಯೂ ಇದೆ ಈ ಸಮುದಾಯದ ಪ್ರತಿ ಯೊಂದವರೂ ವಿಚಾರಮಾಡುವಂತಿದ್ದರೆ ಈ ಆಚರಣೆಗೆ [illegible] ಹೀಗೆಂದು ಹೇಳುತ್ತಾರೆ

ಹಾಗಾದರೆ ಈ ದೇವರಿಗೆ ಹೀಗೆ ದುರ್ಬಲಪ್ರಾಣಿಗಳ ದೇವರು ಎಂಬ ಹೆಸರನ್ನಾದರೂ ಬರಿಸಿದವರು ಯಾರು ? ಈ ಪಾಪದ ಪ್ರಾಣಿಗಳನ್ನು ಬಲಿ ಕೊಡುವವರೇ ಅಲ್ಲವೆ ? ಹಾಗಲ್ಲದಿದ್ದರೆ ಮೇಲೆ ಹೇಳಿದ ಇತರ ಪ್ರಾಣಿಗಳನ್ನು ಯಾಕೆ ಬಲಿಕೊಡಬಾರದು ? ಈ ವಿಚಿತ್ರ ವಿಚಿತ್ರ ಆದ್ದರಿಂದ ಪ್ರಾಂತಭೇದಿಗೆ ಶಾಂತಿ ಇದಲ್ಲ ಇದು ಕೇವಲ ಭ್ರಾಂತಿ

ಪತ್ರವ್ಯವಹಾರ

ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ

ಚಿಕ್ಕಮಗಳೂರು ವೀರಶೈವ ಹಾಸ್ಟಲ್

ಈ ಹಾಸ್ಟಲ್ ಪ್ರೆಸಿಡೆಂಟರು ಶ್ರೀ ಚೆನ್ನವೃಷಭದೇಶಿಕೇಂದ್ರ ಮಹಾಸ್ವಾಮಿಗಳವರ ಸನ್ನಿಧಾನಲ್ಲು ಮತ್ತು ಕಮಿಟಿಮೆಂಬರುಗಳಲ್ಲು ವಿಜ್ಞಾಪಿಸಿಕೊಳ್ಳುವುದೇನೆಂದರೆ.—ಈ ಹಿಂದೆ ಈ ಹಾಸ್ಟಲಿನಲ್ಲಿ ನಡೆದ ಜನರಲ್ ಮೀಟಿಂಗಿನಲ್ಲಿ ಈ ಹಾಸ್ಟಲಿಗೆ ಒಂದು ಮೈಲು ದೂರದಲ್ಲಿರುವ ಶ್ರೀ [illegible] ಪುರದಲ್ಲಿ ಒಂದು ವೈದಿಕಪಾಠಶಾಲೆಯನ್ನು ಜಾಗ್ರತೆ ಏರ್ಪಡಿಸಬೇಕೆಂದು ರೆಜ್ಯುಲೇಷನ್ ಆದ್ದು ಸರಿಯಷ್ಟೆ. ಕಾರ್ಯಕರ್ತರು ಈವರಿವಿಗೆ ಈ ವಿಚಾರದಲ್ಲಿ ಪ್ರೆಸಿಡೆಂಟರಾಗಲಿ, ಹಾಸ್ಟಲ್ ಕಮಿಟಿಮೆಂಬರುಗಳಾಗಲಿ ಯಾವ ಏರ್ಪಾಟನ್ನು ಮಾಡದೆ ಇರುವುದು ತುಂಬಾ ವ್ಯಸನಕರವಾದ ಸಂಗತಿಯಾಗಿದೆ. ಈ ನವನಾಗರೀಕಕಾಲದಲ್ಲಿ ಪ್ರತಿಯೊಂದು ವರ್ಗದವರೂ ತಂತಮ್ಮ ಮತಾಭಿವೃದ್ಧಿಗೆ ಹಗಲೂ ಇರುಳೂ ತನ ಮನಧನಗಳನ್ನೆಲ್ಲ ವಿನಿಯೋಗಿಸಿ ಕೆಲಸಮಾಡುತ್ತಿರುವುದನ್ನು ತಾವುಗಳೆಲ್ಲರೂ ಕಣ್ಣಾರೆ ನೋಡುತ್ತಿದ್ದಾಗ್ಯೂ ಇನ್ನೂ ತಾವುಗಳು ಗಾಢನಿದ್ರೆಯಲ್ಲಿರುವುದನ್ನೋಡಿದರೆ ಮನಸ್ಸಿಗೆ ತುಂಬಾ ವ್ಯಸನವಾಗುತ್ತದೆ. ಈಗಲೂ ಈ ವಿಚಾರವಾದ [illegible] ಒಂದನ್ನು ಈ ಹಾಸ್ಟಲ್ ಸೆಕ್ರೆಟರಿಯವರು ಮುಂದಿನ ಮೀಟಿಂಗಿನಲ್ಲಿ ಚರ್ಚೆಗೆ ಇಟ್ಟು ತೀರ್ಮಾನದ ವಿಚಾರ ಈ ಸಂಘದ ಜನರಲ್‌ಬಾಡಿಯವರ ತಿಳುವಳಿಕೆಗೆ ಇದೇ ಮೈಸೂರು ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಬೇಕಾಗಿ ನಂಬುತ್ತೇನೆ. ಅಲ್ಲದೆ ಸಂಘದ ಅಭಿವೃದ್ಧಿಗೆ ಮುಖ್ಯವಾದ ಈ ವಿಚಾರದಲ್ಲಿ ಪ್ರತಿಯೊಬ್ಬ ಮೆಂಬರೂ ಮುಂದಾಳುಗಳಾಗಿನಿಂತು ಜಾಗ್ರತೆ ವೈದಿಕಪಾಠಶಾಲೆ ಇಡುವ ಏರ್ಪಾಡು ಮಾಡುವಂತೆ ತಮ್ಮಗಳೆಲ್ಲರ ಮನಸ್ಸಿನಲ್ಲಿಯೂ ಸರ್ವಶಕ್ತನಾದ ಪರಶಿವನು ಪ್ರೇರಿಸಲೆಂದು ಪ್ರಾರ್ಥಿಸುತ್ತೇನೆ.

ಓರ್ವ ಜನರಲ್ ಕಮಿಟಿ ಮೆಂಬರ

ವಿವಾಹಮಹೋತ್ಸವಸಮಾರಂಭ

ಕಳೆದ [illegible] ಮಾಸದಲ್ಲಿ ತರೀಕೆರೆ ಪಟೇಲ್ ಹಂ [illegible] ಶಿವಪ್ಪಗೌಡರ ಪುತ್ರಿ ಚಿ। ಸೌ। ಪಾರ್ವತಮ್ಮನಿಗೂ ಚಿಕ್ಕಮಗಳೂರು ಟವನ್ನಿನಲ್ಲಿರುವ ಅಡ್ಡಗದ್ದೆ ಮ। ರುದ್ರಶೆಟ್ಟರ ಮೊಮ್ಮಗ ಬಸವಪ್ಪಶೆಟ್ಟರು [illegible] ಪ್ರೆಸ್ ಪ್ರೊಪ್ರೈಟರ್ ಇವರಿಗೆ ವಿಧ್ಯುಕ್ತವಾಗಿ ನಡೆದ ಪಾಣಿಗ್ರಹಣಮಹೋತ್ಸವಕ್ಕೆ ಬೀರೂರಿನಿಂದ ಬರಮಾಡಲ್ಪಟ್ಟಿದ್ದ ಶಿವಕಥಾಧುರಂಧರ ವೇ। ಸಂ। ಚಿ। ನಂಜುಂಡಾರಾಧ್ಯರು [illegible] ಇವರು ವಿವಾಹಮಂಟಪದಲ್ಲಿ ಊರಿನ ಪ್ರಮುಖಮಹಾಶಯರು ಸರ್ಕಾರಿ ಎಲ್ಲ ಆಫೀಸರುಗಳು ಮಹಿಳೆಯರು ಬಾಲಕರೇ ಮೊದಲಾದವರು ನೆರೆದಿರುವಾಗ್ಗೆ ಪ್ರಕೃತಸಮಯಕ್ಕೆ ಅನುಗುಣವಾಗಿ ಗಿರಿಜಾಕಲ್ಯಾಣವೆಂಬ ಕಥೆಯನ್ನು ಯುಕ್ತಿಯುಕ್ತವಾಗಿ ಮಾಡಿ ಬಾಲ್ಯವಿವಾಹ [illegible] ವಿವಾಹ ಸಂಪ್ರದಾಯಗಳನ್ನು ನಿರೋಧಿಸಿ ಅಖಿಲಭಾರತ 10 ನೆಯ ವೀರಶೈವಮಹಾಸಭೆಯಲ್ಲಿ ನಿರ್ಣಯಿಸಿದಪ್ರಕಾರ ಪ್ರೌಢವಿವಾಹಗಳನ್ನೂ ಪುನರ್ವಿವಾಹಗಳನ್ನೂ ಆದಷ್ಟು ರೂಢಿಯಲ್ಲಿ ಬರಮಾಡಬೇಕೆಂದು [illegible] ಉದಾಹರಣೆಗಳಿಂದ ಹೃದಯಂಗಮವಾಗುವಂತೆ ಅನುವಾದವನ್ನೂ ಮಾಡಿದರು. ಅಲ್ಲಿ ನೆರೆದಿದ್ದ ಸನಾತನಧರ್ಮಿಗಳೂ ಮಹಮ್ಮದೀಯರೂ ಕೀರ್ತನಕಾರರ ವಾಕ್ಚಾತುರ್ಯವನ್ನು ನೋಡಿ ಮಧ್ಯೆ ಮಧ್ಯೆ [illegible] ಆನಂದವನ್ನು [illegible] ಕಡೆಯಲ್ಲಿ ಕಾಫಿಪ್ಲಾಂಟರ್ ಮ। ವೃಷಭಶೆಟ್ಟರವರು [illegible] ವಧೂವರರ ಸ್ಮರಣಾರ್ಥವಾಗಿ ಶ್ರೀ। ವೀರಸಂಗಪ್ಪನವರ ಹೆಸರಿನಮೇಲೆ ಒಂದುರೂಪಾಯನ್ನು, ಚಿಕ್ಕಮಗಳೂರು ವೀರಶೈವ ಹಾಸ್ಟಲಿಗೆ 5 ರೂಪಾಯಿಗಳನ್ನು ತೆಗೆಯಿಸಿ ವಧೂವರರಿಗೆ ಉಮಾಮಹೇಶ್ವರನು ಸತ್ಸಂತಾನಾಭಿವೃದ್ಧಿಯನ್ನು ದಯಪಾಲಿಸಲೆಂದು ಕೇಳಿಕೊಂಡರು

ಎಲ್ ಸಿ ಶಿವಲಿಂಗಪ್ಪ ಮಾಸ್ಟರ್, ಬೀರೂರು

[ಮೇಲ್ಕಂಡ 6 ರೂಪಾಯಿ ಬಂದಿವೆ]

ಮಳವಳ್ಳಿ ಮ್ಯುನಿಸಿಪಾಲಿಟಿಯ ಅವ್ಯವಸ್ಥೆ

ಮೈಸೂರು ಡಿಸ್ಟ್ರಿಕ್ಟ್ ಮಳವಳ್ಳಿ ಟವನ್ ಮ್ಯುನ್ಸಿಪಾಲಿಟಿ [illegible] ಮಾನಗಳು ತಮ್ಮ [illegible] ಕಾಲದಲ್ಲಿ [illegible] ಇಲ್ಲಿನ ರೇಟ್‌ಪೇಯರ್‌ಗಳಿಗೆ ಅನುಕೂಲವಾಗುವುದೆಂದು ಯೋಚಿಸಿ ತಮ್ಮ ಸನ್ನಿಧಿಗೆ ಅರಿಕೆಮಾಡಿಕೊಂಡಿರುತ್ತೇವಾಗ ದಯಮಾಡಿ ಇದನ್ನು ಪ್ರಚುರಪಡಿಸಬೇಕಾಗಿ ಪ್ರಾರ್ಥನೆ. ಇದು ಟವನ್ ಮ್ಯುನ್ಸಿಪಾಲಿಟಿಯಾಗಿ ಸುಮಾರು ಹತ್ತುವರ್ಷಗಳಾಗಿರುತ್ತವೆ. ಅದಕ್ಕೆ ಬೇಕಾದ ಬಿಲ್ ಕಲೆಕ್ಟರ್ ಮೊದಲಾದ ಎಲ್ಲ ನೌಕರರು ಇರುತ್ತಾರೆ. ಒಬ್ಬ ಸ್ಯಾನಿಟರಿ ಆಫೀಸರನ್ನು ನೇಮಿಸಿಕೊಳ್ಳಲು ಗೌರ್ನಮೆಂಟ್ ಅಪ್ಪಣೆಯಾಗಿ ಅದರಂತೆ ಒಬ್ಬರನ್ನು ನೇಮಿಸಿದ್ದರು. ಅವರು ಇದ್ದಾಗ್ಗೆ ಈ ಟವನ್ ಕೆಲಸಗಳು ಕೊಂಚ ಸಮರ್ಪಕವಾಗಿತ್ತು. ಇದರಿಂದ ಈ ಟವನ್ ಮ್ಯುನ್ಸಿಪಾಲಿಟಿಯ ಕಂಟ್ರಾಕ್ಟರಾಗಿ ಕೆಲಸಮಾಡುತ್ತಿದ್ದ ಫಾಯಿದೆಗೆ ಕೊಂಚ ಅನಾನುಕೂಲವುಂಟಾದಂತೆ ತೋರಿದ್ದರಿಂದ ಈ ಕಂಟ್ರಾಕ್ಟರುಗಳ ಸಂಬಂಧಿಗಳಾದ ಮ್ಯುನಿಸಿಪಲ್ ಕೌನ್ಸಿಲರ್‌ಗಳು [illegible] ಎಂದು ಅವರನ್ನು [illegible] ಪುನಃ ಆ ಕೆಲಸವನ್ನೇ [illegible] ಇದರಿಂದ ಇಲ್ಲಿನ ಕೆಲಸಗಳು ಎಷ್ಟು ಅನಾದರವಾಗಿ ನಡೆಯುತ್ತಿವೆ ಮತ್ತು ಬೀದಿಗಳ [illegible] ಯಾವಾಗಲೂ [illegible] ಈ ಟವನ್ನಿಗೆ [illegible] 10 ವರ್ಷದ [illegible] ಈ ದಿನಗಳಲ್ಲು ಇಲ್ಲಿನ ಕೆಲವು ವಿಚಾರಗಳ ಅವ್ಯವಸ್ಥೆಯನ್ನು ಕುರಿತು ಗೌರ್ನಮೆಂಟಿಗೂ ಡೆಪ್ಯುಟಿಕಮಿಷನರ್ ಸಾಹೇಬರವರಿಗೂ ಸಹ ಅರ್ಜಿ ಗುಜರಾಯಿಸಿಕೊಂಡಿದ್ದ ಮೇಲೆ ಮಂಡ್ಯದ ಸಬ್‌ಡಿವಿಜನ್ ಸಾಹೇಬರವರು ವಿಚಾರಣೆಮಾಡಿ ವರ್ಷದಮೇಲಾದಾಗ್ಯೂ ಅದರ ಫಲಿತಾಂಶವೇನಾಗಿದೆಯೆಂಬುದು [illegible] ಗೊತ್ತಿಲ್ಲ. ಅಲ್ಲದೆ ಈಚೆಗೆ [illegible] ಇನ್ಸ್‌ಪೆಕ್ಷನ್ ಆಗಿರುತ್ತೆಂದೂ ವರ್ತಮಾನವಿದೆ. ಇದರ ಪರಿಣಾಮವೇನಾಗಬೇಕಾಗಿದೆ. ಈ ವಿಚಾರಗಳನ್ನೆಲ್ಲಾ ಹಾಲಿ ಬಂದಿರತಕ್ಕ ನಮ್ಮ ಹೊಸ ಡೆಪ್ಯುಟಿಕಮಿಷನರ್ ಸಾಹೇಬರವರಾದರೂ ಕ್ರಮಪಡಿಸುತ್ತಾರೆಂದು ನಿರೀಕ್ಷಿಸುವ,

ರೇಟ್‌ಪೇಯರು

ಶ್ರೀ ಜಗದ್ಗುರುಗಳಿಗೆ ೩ ನೇ ಕೌನ್ಸಿಲರ ಭೇಟಿ

3 ನೇ ಕೌನ್ಸಿಲರ್ ಮ। [illegible] ರವರು ಇದೇ 16 ನೇ ತಾರೀಖು ಶುಕ್ರವಾರ ರಾತ್ರಿ 9 ಗಂಟೆಗೆ ಬೃಹನ್ಮಠದಲ್ಲಿ ಶ್ರೀ ಜಗದ್ಗುರುಗಳ ದರ್ಶನಕ್ಕೆ ಬಂದಿದ್ದರು. ದಾವಣಗೆರೆಯಿಂದ [illegible] ಷಡಾಕ್ಷರಪ್ಪನವರು ಮೈಸೂರು ಮಠದ ವೀರಭದ್ರಪ್ಪನವರೂ ಮ। ಯಜಮಾನ ಮೋತಿ ದೊಡ್ಡಪ್ಪನವರು [illegible] ಹಳ್ಳಿ ಗುರುಸಿದ್ಧಪ್ಪನವರು ಹೊನ್ನಾಳಿ ಚೆನ್ನಪ್ಪನವರು ಅಂದನೂರು ಮುಪ್ಪಣ್ಣನವರು [illegible] ಬೀರೂರು [illegible] ಇವರೇ ಮೊದಲಾದ ದೊಡ್ಡ ಮನುಷ್ಯರು ಶ್ರೀ ಜಗದ್ಗುರುಗಳ ಅಪ್ಪಣೆಮೇರೆಗೆ ಬಂದಿದ್ದರು. 9 ಗಂಟೆಗೆ ಸರಿಯಾಗಿ ಬಂದೊಡನೆ ಕೌನ್ಸಿಲರು ದರ್ಬಾರ ಹಾಲಿಗೆ ದಯಮಾಡಿಸಿ ಅಲ್ಲಿ ಮಹೂರ್ತಗೊಂಡಿದ್ದ ಮಹಾಸ್ವಾಮಿಗಳಿಗೆ ಅಭಿವಂದಿಸಿ ಉಚಿತಸ್ಥಾನದಲ್ಲಿ ಮಂಡಿಸಿದರು. [illegible] ಬಂದಾಗ್ಗೆ ಒಮ್ಮೆ ಬೆಂಗಳೂರಿನಲ್ಲಿ [illegible] ಶ್ರೀಗಳವರ ದರ್ಶನಸಂಭಾಷಣೆ ನಡೆದಿರುವುದಾಗಿಯೇ ಮಹಾಸ್ವಾಮಿಗಳ ಕಾರ್ಯಕಲಾಪಗಳನ್ನು ಕುರಿತು ಪ್ರಸ್ತಾಪಿಸಿದರು. ಮಹಾಸಂಸ್ಥಾನದ [illegible] ಸಂಸ್ಥಾನದ ಆಶ್ರಯದಿಂದ [illegible] ಹೆಂಚಿನ ಕಾರ್ಖಾನೆ [illegible] ಇದರಿಂದ [illegible] ಚಿತ್ರದುರ್ಗದಲ್ಲಿ ಸರ್ಕಾರಿ [illegible] ಗಳಿಗೆ ಈ ಹೆಂಚುಗಳನ್ನು ಉಪಯೋಗಿಸಲಾಗ ಬೇಕೆಂಬ ಅಭಿಪ್ರಾಯವನ್ನು ಸೂಚಿಸಿದರು. ಕಡೆಯಲ್ಲಿ ಶ್ರೀ ಜಗದ್ಗುರುಗಳನ್ನು ಕುರಿತು ಹೇಳಿದುದೇನೆಂದರೆ ಅನೇಕ ಮಠಗಳು ಉಂಟು ಅನೇಕ ಸ್ವಾಮಿಗಳೂ ಉಂಟು ಆದರೆ [illegible] ಇಂತಹ ಮಹಾಸ್ವಾಮಿಗಳನ್ನು ಪಡೆದ ವೀರಶೈವಸಮಾಜದ ಪುಣ್ಯಕ್ಕೆ ಎಣೆಯಿಲ್ಲ ವೀರಶೈವಮಂಡಲಿಯು ಈ ಸ್ವಾಮಿಗಳಿಗೆ ಎಷ್ಟು ಕೃತಜ್ಞರಾಗಿದ್ದರೂ ಸಾಲದು. ಈ ಮಧ್ಯೆ ಮ। ಯಜಮಾನ ಮೋತಿ ದೊಡ್ಡಪ್ಪನವರು ಶ್ರೀ ಜಗದ್ಗುರುಗಳ ರಜತೋತ್ಸವವನ್ನು ದಾವಣಗೆರೆಯಲ್ಲಿ ನೆರವೇರಿಸುವ ವಿಚಾರ [illegible] ಇವರಂತಹ ದೊಡ್ಡ ಅಧಿಕಾರಿಗಳ ಸಹಾಯ ಸಹಾನುಭೂತಿಗಳ ವಿಚಾರ [illegible] ತಿಳಿಸಿದರು. ಕೌನ್ಸಿಲರು ಬಹು ಸಂತೋಷಪಟ್ಟು ಇಂತಹ ಕಾರ್ಯಗಳಲ್ಲಿ [illegible] ಸಂತೋಷಗಳನ್ನು ವ್ಯಕ್ತಪಡಿಸಿದರು. ಕಡೆಯಲ್ಲಿ ಶ್ರೀ ಜಗದ್ಗುರುಗಳು [illegible] ಸಾಹೇಬರ ವಿಶಾಲದೃಷ್ಟಿಯನ್ನು ಸರ್ವವರ್ಗದವರ ಅಭಿವೃದ್ಧಿಯಲ್ಲಿ ಇವರ [illegible] ಕುರಿತು [illegible] ಶ್ರೀ ಜಗದ್ಗುರುಗಳು [illegible] ದಾವಣಗೆರೆ ಮಹಾಜನರು [illegible] ಸಮಾರಂಭವನ್ನು ಮಹಾಸ್ವಾಮಿ [illegible] ಶ್ರೀ ಜಗದ್ಗುರುವು [illegible]

ಓರ್ವ ಭಕ್ತ

11 ನೆಯ ಅಖಿಲಭಾರತ ವೀರಶೈವಮಹಾಸಭೆ

ಬೆಂಗಳೂರಿನಲ್ಲಿ ವೀರಶೈವ ಮಹಾಸಭೆಯು ನೆರೆದಂದಿನಿಂದೀಚೆಗೆ ವೀರಶೈವ ಮಹಾಸಭೆಯನ್ನು ಮತ್ತೆಲ್ಲಿಯಾದರೂ ನೆರೆಯಿಸುವ ಆಲೋಚನೆಯೇ ಸಮಾಜದಲ್ಲಿ ನಡೆದಂತೆ ತೋರುತ್ತಿರುವುದು ಶೋಚನೀಯವಾಗಿದೆ. ಒಟ್ಟಿಗೆ 8 10 ವರ್ಷಗಳಕಾಲ ನಿಂತುಹೋಗಿದ್ದ ಮಹಾಸಭೆಯನ್ನು ಬೆಂಗಳೂರಿನ ವೀರಶೈವ ಮಹಾಜನರು ಪ್ರಯತ್ನವಿಶೇಷದಿಂದ [illegible] ಆಗ ಮಹಾಸಭೆಯು ಇನ್ನು ಮುಂದೆ ನಿರಂತರವಾಗಿ ವರ್ಷಂಪ್ರತಿ ನೆರೆಯದೆ ಇರುವುದಿಲ್ಲವೆನಿಸಿತು. ಆದರೆ ಅದು ಕಾರ್ಯತಃ ಫಲಕಾರಿಯಾಗಲಿಲ್ಲ. ಈ ಕಳೆದ ಡಿಸೆಂಬರು ತಿಂಗಳಿನಲ್ಲಿ ಮಹಾಸಭೆಯು ಎಲ್ಲಾದರೂ ಒಂದೆಡೆಯಲ್ಲಿ ನೆರೆಯಲೆಂಬ ಬಗ್ಗೆ ಸಮಾಜಬಾಂಧವರಿಗೆ ಸಕಾಲದಲ್ಲಿ ಪತ್ರಿಕಾಮುಖೇನ ಎಚ್ಚರಿಕೆಯನ್ನು ಕೊಟ್ಟರು ಆದರೆ ಅದು ಅರಣ್ಯರೋದನವಾಯಿತು. ಆದರೆ ಈ ವರ್ಷವು ಶುಭಸೂಚಕವಾಗಿದೆ. ಏಕೆಂದರೆ, ನೈಜಾಂಪ್ರಾಂತದ ರಾಯಚೂರಿನ ವೀರಶೈವಬಂಧುಗಳು ತಮ್ಮಲ್ಲಿ ಈ ವರ್ಷ ಮಹಾಸಭೆಯನ್ನು ನೆರೆಯಿಸುವಬಗ್ಗೆ ಉತ್ಸಾಹಶಾಲಿಗಳಾಗಿರುತ್ತಾರೆಂಬ ಖಚಿತವಾದ ವರ್ತಮಾನವನ್ನು ತಿಳಿಸಲು ಬಹಳ ಸಂತೋಷವಾಗುತ್ತದೆ. ವೀರಶೈವ ಮಹಾಸಭೆಯು [illegible] ಅಖಿಲಭರತಖಂಡದಲ್ಲಿ ನೈಜಾಂಪ್ರಾಂತವು ಈಗ್ಗೆ ಅತ್ಯವಶ್ಯಕವಾಗಿದೆ. ವೀರಶೈವಮಹಾಸಭೆಯು [illegible] ಈ ಪ್ರಾಂತದಲ್ಲಿ ಮಹಾಸಭೆಯು ನೆರೆದಿರುವುದಿಲ್ಲ. ಅಲ್ಲದೆ ಆ ಪ್ರಾಂತದ ಸಮಾಜಬಾಂಧವರಾದರೂ ಇತರಕಡೆಗಳಲ್ಲಿ ನೆರೆದ ಮಹಾಸಭೆಗಳಿಗೆ ಸಹ ಹೆಚ್ಚಾಗಿ ಬಂದು ಹೋಗಿ, ಮಹಾಸಭೆಗಳ ಪ್ರಯೋಜನಗಳನ್ನು ಅಷ್ಟಾಗಿ ಪಡೆದುಕೊಳ್ಳುತ್ತಿಲ್ಲ. ಈ ಪ್ರಾಂತವು ಬಹುಮಂದಿ ವೀರಶೈವರಿಂದ ನಿಬಿಡೀಕೃತವಾಗಿದೆ, ಅಲ್ಲಿಯ ಪ್ರಾಮುಖ್ಯ ಜನಾಂಗವೇ ಇದೆಂದರೂ ಅಡ್ಡಿಯಿಲ್ಲ. ಆದರೂ [illegible] ಸಮಾಜದ ಹಿತೈಷಿಗಳು ಅನೇಕ ವರ್ಷ [illegible] ನೈಜಾಂಪ್ರಾಂತದ ಪ್ರಧಾನಾಂಗದಂತಿರುವ ರಾಯಚೂರಿನ ಸಮಾಜಬಂಧುಗಳು ಈ ಭಾಗದಲ್ಲಿ ಆದಷ್ಟು ಶ್ರಮವಹಿಸಿ ಕಾರ್ಯವನ್ನು ನೆರವೇರಿಸಿ, ತಮ್ಮ ಪ್ರಾಂತದ ಮತ್ತು ಇಡೀ ಭರತಖಂಡದ ವೀರಶೈವಸಮಾಜದ ಕೃತಜ್ಞತೆಗೆ ಪಾತ್ರರಾಗುವುದರಲ್ಲಿ ಯಾವ ಸಂದೇಹವೂ ತೋರುವುದಿಲ್ಲ. ಈ [illegible] ರಾಯಚೂರಿನ ವೀರಶೈವಮತಬಾಂಧವರಿಗೆ ನಾವು ಅಭಿನಂದನಗಳನ್ನರ್ಪಿಸುವವರಾಗಿದ್ದೇವೆ. ಮಹಾಸಭೆಯನ್ನು ಅಲ್ಲಿ ನೆರೆಯಿಸುವ ಮೂಲಪ್ರಯತ್ನವು ಬೆಂಗಳೂರಿನ ಮಾಡರ್ನ್ ಮುದ್ರಾಕ್ಷರಶಾಲೆಯ ಮ॥ ಬಿ ಎಸ್ ಚೆನ್ನಪ್ಪನವರಿಂದ ನಡೆಯಿತೆಂದು ತಿಳಿಸಲು ನಾವು ತುಂಬ ಸಂತೋಷಿಸುತ್ತೇವೆ. ಮ। ಚೆನ್ನಪ್ಪನವರು ಕಳೆದವಾರ ರಾಯಚೂರಿಗೆ ಹೋಗಿ ಮೊದಲು ಅಲ್ಲಿನ [illegible] ದೊಡ್ಡಮನುಷ್ಯರೊಡನೆ [illegible] ಪ್ರಸ್ತಾಪಿಸಿ, ಪ್ರೋತ್ಸಾಹಿಸಿ, ಅಲ್ಲಿನ ವೀರಶೈವ ಮಹಾಜನರ ಒಂದು ಸಭೆಯನ್ನೇ ಸೇರಿಸುವಾಗ [illegible] ಮಾಡಿ ಮಹಾಸಭೆಯನ್ನು ಮುಂದಿನ ಡಿಸೆಂಬರು ತಿಂಗಳಿನಲ್ಲಿ ನೆರೆಯಿಸುವ ಕಾರ್ಯಕ್ಕಾಗಿ ಬೇಕಾದ ಸನ್ನಾಹಗಳನ್ನು ಮಾಡಲು ಒಂದು [illegible] ಕಮಿಟಿಯನ್ನು ಏರ್ಪಡಿಸಿರುವರು. ಇವರ ಈ ಸಮಾಜಾಭಿವೃದ್ಧಿ ಪ್ರಯತ್ನವು ಸಾಫಲ್ಯಗೊಂಡುದಕ್ಕಾಗಿ ಮ। ಚೆನ್ನಪ್ಪನವರನ್ನು ಸಹ ನಾನು ಅಭಿನಂದಿಸುತ್ತೇನೆ. ಇದಕ್ಕಾಗಿ ಬೇಕಾದ [illegible], ಔದಾರ್ಯ, ಸಹನಶೀಲತೆ, ಪರಸ್ಪರಾನುರಾಗ ಮತ್ತು [illegible] ಗಳನ್ನು ರಾಯಚೂರಿನ ವೀರಶೈವಮಹಾಜನರಿಗೆ ಭಗವಂತನು ದಯಪಾಲಿಸಿ ಇವರ ಈ ಸತ್ಪ್ರಯತ್ನವು ಕಾರ್ಯರೂಪಿಯಾಗುವಂತೆಯೂ ಫಲದಾಯಕವಾಗುವಂತೆಯೂ ಮಾಡಲೆಂದು ನಾವು ಪ್ರಾರ್ಥಿಸುವ,

ಮಹಾಸಭಾಭಿಮಾನಿ



12

ಪ್ರಕಟನೆ.

ನಮ್ಮಲ್ಲಿ ಸಿನೋಮಕ್ಕೆ ಸಂಬಂಧಪಟ್ಟ [illegible] ಕಂಪೆನಿಯು [illegible] ಡೈನೋಮ ಎಲೆಕ್ಟ್ರಿಕಲ್ [illegible] ವಗೈರೆ ಎಲ್ಲಾ ಸಾಮಾನುಗಳೂ ಕೆಲವು [illegible] ಫಿಲಂಗಳೂ [illegible] ಎಲ್ಲಾ ಸಾಮಾನುಗಳ ಸೆಟ್ಟು [illegible] ಈ ಸಾಮಾನುಗಳು [illegible] ಈ ಸಮಯವನ್ನು ಕಳೆದು ಕೊಳ್ಳದಂತೆ ಕೋರಿಕೆ

Siddaradhya
Tirukappanavra mutt
12—3) Davangere

೧೯೨೯ ನೇಯ ಇಸವಿ ಫೆಬ್ರವರಿ ತಾ|| ೨೩ ರಿಂದ ೧೯೨೯ ನೇಯ ಇಸವಿ ಮಾರ್ಚಿ ತಾ|| ೧ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೦ ನೆಯ ವಿಭವನಾಮಸಂವತ್ಸರದ ಮಾಘ ಶುದ್ಧ ಪೌರ್ಣಿಮೆಯಿಂದ ಮಾಘ ಬಹುಳ ಷಷ್ಠಿ ವರೆಗಿನ ಪಂಚಾಂಗ

ತಾ||	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಕುಂಭ ಮಾಸ
23	ಶನಿ	ಪೌರ್ಣ	43-30	ಮಖ	49 49	12
24	ಭಾನು	ಪಾಡ್ಯ	41 20	ಪುಬ್ಬ	49 21	13
25	[1] ಸೋಮ	ಬಿದಿ	39 10	ಉತ್ತ	49 34	14
26	ಮಂಗಳ	ತದಿ	39 35	ಹಸ್ತ	51-3	15
27	ಬುಧ	ಚೌತಿ	40 34	ಚಿತ್ತ	53-40	16
28	[2] ಗುರು	ಪಂಚ	19 7	ಸ್ವಾತಿ	57 49	17
1	ಶುಕ್ರ	ಷಷ್ಠಿ	16 21	ವಿಶಾ	60	18

(1) ಮಳೆನಕ್ಷತ್ರ ಶತಭಿಷ ೧ ನೆಯಪಾದ, [illegible] ಸ್ವಾಮಿರಥ. (2) ಮಳೆನಕ್ಷತ್ರ ಶತಭಿಷ ೪ ನೆಯಪಾದ

ಮೈಸೂರು ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 4

ಮೈಸೂರ್ ಸ್ಟಾರ್

ಪ್ರತಿ ಶನಿವಾರ ಪ್ರಕಟಿಸಲ್ಪಡುವದು

[ಸ್ಥಳದವರಿಗೆ ವಾರ್ಷಿಕ ಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರರಿಗೆ ೩-೮-೦]

ಸಂಪುಟ ೪೨] ಮೈಸೂರು ಸ್ಟಾರ್ ಸೆ ೧೯೨೯ ನೆಯ ಇಸವಿ ಮಾರ್ಚಿ ತಾರೀಖು ೨ ನೆಯ ಶನಿವಾರ [ಸಂಚಿಕೆ ೯

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ	(ವಿ ಪಿ ಸೇರಿ)
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲಶಂತ್ರ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಸಂತತ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಸಟೀಕ ಕರ್ಣಾಟಕಶಬ್ದಮಂಜರಿ	೦—೮—೦	೦—೧೩—೦
ಸಟೀಕ ಶತಕತ್ರಯ	೧—೦—೦	೧—೬—೦

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ ೨-೮-೦, ಲೈಬ್ರರಿ ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ ೩-೮-೦ ವಿ ಪಿ ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ ಹಳೆ ಚಂದಾದಾರರುಗಳು ಮನಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು ಜವಾಬಿಗೆ ಬರೆಯುವ ಒಂದು ಕಾಗದ ಕಾರ್ಡು ಮನಿಯಾರ್ಡರುಗಳಿಗೆ ಸ್ಟಾಂಪುಕೊಟ್ಟು ಉತ್ತರಕೊಡಲಾಗುವುದಿಲ್ಲ ಮ್ಯಾನೇಜರ್

ಪತ್ತನೆಯ ವೀರಶೈವ ಮಹಾಸಭಾಕಾಲದಲ್ಲಿ ಪ್ರಸಿದ್ಧಿಸಲ್ಪಟ್ಟ

ವೀರಶೈವ ಕರದರ್ಪಣ.

ಡೆಮ್ಮಿ ⅛ ಸೈಜಿನ 200 ದೊಡ್ಡ ಗ್ರೇಜುಪುಟಗಳು) ಬೆಲೆ ಒಂದೇ ಒಂದು ರೂಪಾಯಿ [300 ಛಾಯಾಚಿತ್ರಗಳಿರುವವು

ವೀರಶೈವರ ಸಂಬಂಧವಾದ ಎಲ್ಲ ವಿಷಯಗಳನ್ನೂ ಒಳಗೊಂಡಿರುವ ಏಕಮಾತ್ರ ಪುಸ್ತಕ

ವೀರಶೈವಮತಸಂಬಂಧವಾದ ಮಹತ್ವವಿಷಯಗಳಮೇಲೆ ಎಂದರೆ ವೀರಶೈವಮತತತ್ವನಿರೂಪಣೆ, ತ್ರಿಕಾಲತ ಬ್ರಾಹ್ಮಣಸಿದ್ಧಾಂತ, ಜಗದ್ಗುರು ಪೀಠಗಳು, ಶ್ರೀ ಬಸವೇಶ್ವರ ಮೊದಲಾದ ವಿಷಯಗಳ ಮೇಲೆ ಸುಪ್ರಸಿದ್ಧ ಲೇಖಕರ ಲೇಖನಗಳು ಜಗದ್ಗುರುಪೀಠಗಳ ಮತ್ತು ಜಗದ್ಗುರು ಮಹಾಸ್ವಾಮಿಗಳವರ ಸಚಿತ್ರ ಚರಿತ್ರೆಗಳು, ಇಡೀ ಭರತಖಂಡದೊಳಗಿನ ವೀರಶೈವ ಸಂಸ್ಥೆಗಳ ಮತ್ತು ಅವುಗಳ ಸಮಗ್ರ ಇತಿಹಾಸಗಳು ಅಖಿಲಭರತಖಂಡದಲ್ಲಿ ಗತಿಸಿದ ವೀರಶೈವ ಮಹನೀಯರುಗಳ ಸಚಿತ್ರ ಜೀವಿತಚರಿತ್ರೆಗಳು ಅ ಭಾ ವೀರಶೈವ ಮಹಾಸಭೆಯು ಮೊದಲು ಹೇಗೆ ಪ್ರಾರಂಭವಾಯಿತೆಂಬ ವಿಷಯ ಬೆಳಗಾವಿ ಯಿಂದಿನ ವಿಷಯ ಮತ್ತು ಅದಕ್ಕೆ ಸಹಾಯಮಾಡಿದವರ ಭಾವಚಿತ್ರಗಳು ಮೊನ್ನೆ ನಡೆದ 10 ನೇ ವೀರಶೈವ ಮಹಾಸಭೆಗೆ ಮೈಸೂರು ಶ್ರೀಮನ್ಮಹಾರಾಜರವರಿಂದ ಕಳಿಸಲ್ಪಟ್ಟ ಸಂದೇಶ—ಈ ಎಲ್ಲ ವಿಷಯಗಳಿಂದೊಡಗೂಡಿದ ಉತ್ತಮ ಗ್ರಂಥ

ಇಡೀ ಪುಸ್ತಕವು ಛಾಯಾಚಿತ್ರಗಳಿಂದ ತುಂಬಿತುಳುಕುತ್ತದೆ ಶ್ರೀಮದ್ರಾಜಾಧಿರಾಜರವರ ಛಾಯಾಚಿತ್ರ ಶ್ರೀ ಮುಮ್ಮಡಿ ಕೃಷ್ಣರಾಜಒಡೆಯರವರ ಶಿವಪೂಜೆಮಾಡುತ್ತಿರುವುದು ಶ್ರೀಜಗದ್ಗುರು ಮಹಾಸ್ವಾಮಿಗಳ ಅಡ್ಡಪಾಲಕಿಉತ್ಸವ 10 ನೇ ಅ ಭಾ ವೀರಶೈವ ಮಹಾಸಭೆಯ ಅಧ್ಯಕ್ಷ ಮತ್ತು ಸ್ವಾಗತಸಂಘಾಧ್ಯಕ್ಷರ ಛಾಯಾಚಿತ್ರಗಳು, ಪಂಚಪೀಠಗಳ ದೃಶ್ಯಗಳು ಮತ್ತು ಪಂಚಜಗದ್ಗುರುಗಳ ಛಾಯಾಚಿತ್ರಗಳು ಶ್ರೀ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳ ದೊಡ್ಡ ಛಾಯಾಚಿತ್ರ ಮತ್ತು ಜಗದಾಚಾರ್ಯ ಎಡೆಯೂರು ತೋಂಟದ ಸಿದ್ಧಲಿಂಗ ... ಮತ್ತು ಗದುಗಿನ ಜಗದ್ಗುರು ಮಹಾಸ್ವಾಮಿಗಳವರ ಛಾಯಾಚಿತ್ರ ಇನ್ನುಳಿದ ಎಲ್ಲ ಪ್ರಸಿದ್ಧ ಮಹಾಸ್ವಾಮಿಗಳವರ ಮತ್ತು ವೈದಿಕವರ್ಗದ ಛಾಯಾಚಿತ್ರಗಳು ಇದರಲ್ಲಡಗಿವೆ ಇದಲ್ಲದೆ ಶ್ರೀ ಸಿರಸಂಗಿ ದೇಸಾಯಿಯು ಮೈಸೂರು ವೀರಸಂಗಪ್ಪನವರಾದಿಯಾಗಿ ಗತಿಸಿದ ಎಲ್ಲ ವೀರಶೈವರುಗಳನ್ನೂ ಈಗಿನ ವೀರಶೈವ ಲೌಕಿಕ ವೈದಿಕ ಧುರ್ಯರನ್ನೂ ಪ್ರಸಿದ್ಧ ಸ್ತ್ರೀಪುರುಷರನ್ನೂ ದೊಡ್ಡ ಹುದ್ದೆದಾರರು ವರ್ತಕರು ಗಾಯಕರು ನಟರು ವೈದ್ಯರುಂದವರನ್ನೂ ಇದರಲ್ಲಿ ಕಾಣಬಹುದು

ಈವರೆಗೆ ಈ ಮಾದರಿಯ ಪುಸ್ತಕವು ಇದೊಂದೇ ಪ್ರತಿಯೊಬ್ಬ ವೀರಶೈವನೂ ಸಂಗ್ರಹ ಮಾಡತಕ್ಕ ಗ್ರಂಥವು ಬೆಂಗಳೂರಿನ ಮಹಾಸಭಾ ಕಾಲದಲ್ಲಿ ಎಂದೇ ಮಿಕ್ಕ ಕೆಲವು ಪ್ರತಿಗಳ ಮಾತ್ರ ಉಳಿದಿವೆ

ಬೇಕಾದವರು ಒಡನೆ ಬರೆಯಿರಿ ಬೆಲೆ 1 ರೂಪಾಯಿ ಟಪಾಲ್‌ಹಾಸಲು ಪ್ರತ್ಯೇಕ

ವಿಳಾಸ—ಟಿ. ಬಿ. ಚೆನ್ನಪ್ಪ,

೪೦ ಮಾಡಲ್ ಮುದ್ರಾಕ್ಷರಶಾಲಾ ಬೆಂಗಳೂರು ಸಿಟಿ

"ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತರ" ಆಯುರ್ವೇದೀಯ ಸಿದ್ಧೌಷಧಗಳು

ಲೋಕಾಮಯಹರ ಕಸ್ತೂರೀ ಮಾತ್ರೆಗಳು

ಈ ಮಾತ್ರೆಗಳನ್ನು ಪ್ರತಿದಿನವೂ ಕಾಂಬಿಸಿಡತಕ್ಕ ದನೆಯಾಗಲಿ ಮಾರೀಯಾಗಲೀ ಉಪಯೋಗಿಸುತ್ತಿದ್ದರೆ ಆಹಾರ ನೀರು ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತವೆ ಮಕ್ಕಳ ಮೊದಲು ಎಲ್ಲಾ ವಯಸ್ಸಿನವರಿಗೂ, ಕೆಮ್ಮು, ನೆಗಡಿ ಕೆಮ್ಮುಲು ಜ್ವರ, ಶೀತವಾತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ

೨00 ಮಾತ್ರೆಗಳಿರುವ ಸೀಸೆ 1ಕ್ಕೆ ೩ ಆಣೆ

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ ನಮ್ಮ ವಿಳಾಸವನ್ನೂ ಲೋಕಾಮಯಹರ ಕಸ್ತೂರೀ ಮಾತ್ರೆ ಎಂಬ ಹೆಸರನ್ನೂ ನೋಡಿ ಕೊಂಡುಕೊಳ್ಳಿರಿ

ವೈಶ್ವಾನರಾಸವ

(ಕಾಲರಾ ವಾಂತಿಭೇದಿಗೆ ಸಿದ್ಧೌಷಧ)

ಮುಖ್ಯವು ಹೊಟ್ಟೆಯುಬ್ಬರಿಸುವುದಾಗಲಿ, ವುಂಡಿಗದ ಕೆಟ್ಟ ಹೊಡೆಸಿವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ ಸೀಸೆ 1ಕ್ಕೆ ರೂ 1—0—0

ಲಕ್ಷ್ಮೀವಿಲಾಸರಸ

(ಪ್ಲೇಗಿಗೆ)

ಹತ್ತಾರು ವರ್ಷಗಳಿಂದ ಪ್ರತಿವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ನೆಂಬುವುದಾಗಿ ಗುಣಪಡಿಸುತ್ತದೆ ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ ಸೀಸೆಯ ಬೆಲೆ 1ಕ್ಕೆ ರೂ 1—0—0

ಶ್ರೀನಿವಾಸತೈಲ

ಪ್ಲೇಗು ರೋಗಿಯ ಪ್ರತಿ ಸಂದುಗಳಿಗೂ, ಗೆಡ್ಡೆಗೂ ಹಚ್ಚುವ ಔಷಧ ಸೀಸೆ 1ಕ್ಕೆ ರೂ 0—8—0

ಶ್ರೀ ಸೀತಾರಾಘವವೈದ್ಯಶಾಲಾ, ಬ್ರಾಂಚಾಫೀಸು ಚಿಕ್ಕಪೇಟೆ ಬೆಂಗಳೂರು ಸಿಟಿ	"ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತರು ಶ್ರೀ ಸೀತಾರಾಘವವೈದ್ಯಶಾಲಾ, ಹೆಡ್ಡಾಫೀಸು ಮೈಸೂರು

ಡಾಕ್ಟರ್ ಜೀ. ಬಿ. ಯವರ

ಸುಗಂಧ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕೆಂಡುಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರು



ಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವುವೆಂದರೆ—ತಲೆನೋವು, ಒಂಟಿತಲೆನೋವು, ತಲೆಯಲ್ಲಿನ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ಸಕಲ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನು ಹೆಚ್ಚು ಮಾಡುತ್ತದೆ ಮೂರು ಬಟ್ಟೆ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ನಿತ್ಯವಾಗಿ ಉಪಯೋಗಿಸುತ್ತಾರೆ ಮಾದರಿಗಾಗಿ ಪುಗಿಗಟ್ಟಿ ಕಳುಹಿಸಲಾಗುವುದು

ಒಡ್ಡಿ ಒಂದಕ್ಕೆ ಕ್ರಯ ರೂ. ೦—೪—೦ ವಿ ಪಿ ೦—೯—೦
ಡಜನ್ ೧ಕ್ಕೆ ಕ್ರಯ ರೂ ೨—೮—೦ ವಿ ಪಿ ಚಾರ್ಜ್ ೪ ಆಣೆ.

ದಯವಿಟ್ಟು ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ

ವಿಳಾಸ—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,

[60—19] ಪೋ. ಬಾ. ೩೧೧, ಮದರಾಸು.

೧೯೨೯ ನೇ ಇಸವಿಯ ಶಿದ್ಧಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು ಮತ್ತು ಕ್ಯಾಲೆಂಡರುಗಳು.

1929 ನೇ ಇಸವಿಯ ಶಿದ್ಧಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು

1ನೇ ನಂ ದೊಡ್ಡಸೈಜು ಪಾಕೆಟ್‌ಡೈರಿ ಪೆನ್ಸಲ್ ಇಟ್ಟು ಮುಚ್ಚಳ ಹಾಕಿದ್ದು $6\frac{1}{2}" \times 4"$ 1ಕ್ಕೆ 0 12 0 ಪರಸ್ಥಳಕ್ಕೆ ಪೋಸ್ಟೇಜು 0-3-0

2ನೇ ನಂ ದೊಡ್ಡಸೈಜು ಮುಚ್ಚಳವಿಲ್ಲದ ಸಾದಾ ಪಾಕೆಟ್‌ಡೈರಿ $6\frac{1}{2}" \times 4"$ 1ಕ್ಕೆ 0 10 0 ಪರಸ್ಥಳಕ್ಕೆ ಪೋಸ್ಟೇಜು 0 3-0

1ನೇ ನಂ ಚಿಕ್ಕಸೈಜು ಪಾಕೆಟ್‌ಡೈರಿ ಪೆನ್ಸಲ್ ಇಟ್ಟು ಮುಚ್ಚಳ ಹಾಕಿದ್ದು $5" \times 2\frac{1}{2}"$ 1ಕ್ಕೆ 0 7-0 ಪರಸ್ಥಳಕ್ಕೆ ಪೋಸ್ಟೇಜು 0 2-0

2ನೇ ನಂ ಚಿಕ್ಕಸೈಜು ಪಾಕೆಟ್‌ಡೈರಿ ಮುಚ್ಚಳವಿಲ್ಲದ ಸಾದಾ $5" \times 2\frac{1}{2}"$ 1ಕ್ಕೆ 0-5 0 ಪರಸ್ಥಳಕ್ಕೆ ಪೋಸ್ಟೇಜು 0-2-0

ಮೇಲ್ಕಂಡ ಪ್ರಕಾರ ನಿಮಗೆ ಬೇಕಾದಷ್ಟು ಡೈರಿಗಳ ಪೂರ್ತಿ ಬೆಲೆಯನ್ನು ರವಾನಿಸಿದಲ್ಲಿ ಪೋಸ್ಟಲ್ ಪಾರ್ಸಲ್ ಮೂಲಕ ರವಾನಿಸಲಾಗುತ್ತೆ ಮೇಲ್ಕಂಡ ಡೈರಿಗಳನ್ನು ಒಟ್ಟಿಗೆ 12 ತರಿಸಿಕೊಳ್ಳುವವರಿಗೆ 1 ಡೈರಿ ಬಿಟ್ಟಿಗೆ ಕೊಡಲಾಗುತ್ತೆ ವಿ ಪಿ ಮೂಲಕ ಕಳುಹಿಸಿದ್ದ ತರಿಸಿಕೊಳ್ಳುವವರು ದಯಾ 1 ಕ್ಕೆ ೪ ರೂಪಾಯಿ ಮನಿ ಆರ್ಡರ್ ರವಾನಿಸಬೇಕು

1929 ನೇ ಇಸವಿಯ ಸಚಿತ್ರಕ್ಯಾಲೆಂಡರ್.

ಶೀಟ್ ಕ್ಯಾಲೆಂಡರು 50 ಕ್ಕೆ 1-4-0 100 ಕ್ಕೆ 2 0 0, $3" \times 4\frac{1}{2}"$ ಪಾಕೆಟ್ ಕ್ಯಾಲೆಂಡರ್ 12 ಕ್ಕೆ 0-8-0 50 ಕ್ಕೆ 2 4-0 100 ಕ್ಕೆ 4-0 0

ಅನೇಕ ಬಣ್ಣಗಳಿಂದ ರವಿವರ್ಮ ಪ್ರೆಸ್ಸಿನಲ್ಲಿ ತಯಾರಾದ $10" + 14"$ ಸೈಜಿನ ಶ್ರೀ ಮಹಾವಿಷ್ಣುವಿಗೆ ಸುದರ್ಶನ ಪ್ರದಾನ ಮಾಡುವ ಪರಮೇಶ್ವರನ ಪಿಕ್ಚರ್ ಕ್ಯಾಲೆಂಡರ್ 3 ಕ್ಕೆ 0 8 0 6 ಕ್ಕೆ 0-14-0 12 ಕ್ಕೆ 1 6 0.

ನಮಗೆ ಬೇಕಾದಷ್ಟು ಕ್ಯಾಲೆಂಡರುಗಳ ಪೂರ್ತಿ ಬೆಲೆಗಳನ್ನು ಮನಿಯಾರ್ಡರ್ ಮಾಡಿದಲ್ಲಿ ಪ್ಯಾಕಿಂಗ್ ಪೋಸ್ಟೇಜು ಇಲ್ಲದೆ ಫ್ರೀಯಾಗಿ ರವಾನಿಸಲಾಗುತ್ತೆ ವಿ ಪಿ ಮೂಲಕ ಮಂಜೂರಿಯಾಗಿ ರವಾನಿಸುವುದಿಲ್ಲ

ಕ್ಯಾಲೆಂಡರುಗಳು ಮುಗಿದನಂತರ ಬಂದಕ್ಕ ಮನಿಯಾರ್ಡರನ್ನು ಹೋದವರ ಪ್ರಕಾರ ವಾಪಸ್ ಮಾಡುತ್ತೆ

ಮಾದರಿ ಕ್ಯಾಲೆಂಡರ್ ಅಪೇಕ್ಷಿಸುವವರು 0 5-0 ರವಾನಿಸಿದಲ್ಲಿ ಪ್ರತ್ಯೇಕ 3 ತರಹದ ಕ್ಯಾಲೆಂಡರುಗಳನ್ನು ಪೋಸ್ಟ್ ಮೂಲಕ ಫ್ರೀಯಾಗಿ ರವಾನಿಸಲಾಗುತ್ತೆ

ಮನಿಯಾರ್ಡರ್ ರವಾನಿಸುವ ವಿಳಾಸ— [60—16]

ಎಂ. ಎಸ್. ಶಿದ ಪ. ಅಂಡ್ ಬ್ರದರ್ಸ್. ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು

ಸೂಚನೆ.

ಬ್ಯಾಂಕಿನ ಶಕ್ತಿವಾರ ಮುಖಾ ತಿವಶಾಸ್ತ್ರಿ ಷಟ್ಟಿ ವಾರದ ಪ್ರಯುಕ್ತ, ತಾ|| ೨-೩-೨೯ ರ ಸ್ಟಾರ್ ಪತ್ರಿಕೆಯು ಪ್ರಕಟಿಸಲ್ಪಡುವುದಿಲ್ಲ. ಸಂ.

NOTICE

KARNATAKA COMMERCIAL BANK LTD, MYSORE.

The District & Sessions Judge Mysore, passed orders on 23-2 29, appointing Mr. P. Ramaswamy, Mysore as *Interrum Liquidator of* the above Bank.

P. RAMASWAMY.

Lansdowne Bazaar, Mysore

ಮೈಸೂರು ಸ್ಟಾರ್.

೧೯೨೯ ನೆಯ ಇಸವಿ ಮಾರ್ಚಿ ತಾ|| ೨ ನೆಯ ಶನಿವಾರ

ಅಫ್ಘಾನಿಸ್ಥಾನದ ಪರಿಸ್ಥಿತಿ

ಕಾಬೂಲಿನಲ್ಲಿದ್ದ ವಿದೇಶೀಯ ರಾಯಭಾರಿಗಳೆಲ್ಲರೂ ತಂತಮ್ಮ ದೇಶಗಳಿಗೆ ತೆರಳಿದರೆಂದು ಕೇಳಲು ಸಂತೋಷವಾಗುತ್ತದೆ. ಏಕೆಂದರೆ, ಅಫ್ಘಾನಿಸ್ಥಾನದಲ್ಲಿ ಅಮಾನುಲ್ಲಾಖಾನರು ರಾಜರಾಗಿರುವವರೆಗೂ ದೇಶದಲ್ಲಿ ಶಾಂತಿ ಸಮಾಧಾನವು ನೆಲೆಯಾಗಿದ್ದಿತು. ಎಲ್ಲರೂ ಯಾವ ಭಯವೂ ಇಲ್ಲದೆ ನೆಮ್ಮದಿಯಿಂದಿರುತ್ತಿದ್ದರು. ಆದರೆ ದರೋಡೆಯವರ ಮುಖಂಡನಾದ ಸಾಕೌ ದೊರೆಯಾದಾಗಿನಿಂದ ಜನಗಳು ಪಕೋಟಿಯಿಲ್ಲದೆ ಸ್ವೇಚ್ಛಾಪ್ರವರ್ತಕರಾದರು. ಘೋರ ರಾಜನು ತನಗೆ ಲಭಿಸಿದ ಹೊಸ ಪದವಿಯನ್ನು ನಿರ್ವಹಿಸಲಾರದೆ ಜನಗಳ ಮೇಲೆ ಬಿದ್ದು ಹಿಂಸಿಸಲಾರಂಭಿಸಿದನು. ಬಲಾತ್ಕಾರದಿಂದ ಜನಗಳನ್ನು ಸೈನ್ಯಕ್ಕೆ ಸೇರಿಸಿಕೊಳ್ಳುತ್ತಿರುವನು. ಜನಗಳ ಆಸ್ತಿಪಾಸ್ತಿಗಳನ್ನೆಲ್ಲಾ ಸುಲಿಗೆ ಮಾಡುತ್ತಿರುವನು. ತನಗೆ ಬೇಕಾದ ಕನ್ಯೆಯರನ್ನು ಹಿಡಿದು ತರಿಸಿ ಬಲಾತ್ಕಾರದಿಂದ ವಿವಾಹ ಮಾಡಿಕೊಳ್ಳುತ್ತಿರುವನು. ರಾಜ್ಯದಲ್ಲೆಲ್ಲ ಜನಗಳು ಆಮೋದವಿಲ್ಲದೆ ಹಾಹಾಕಾರಪಡುತ್ತಿರುವರು. ಈ ಮಧ್ಯೆ ಅಮಾನುಲ್ಲರವರು ರಂಜಾನ್ ಹಬ್ಬವಾದ ಕೂಡಲೆ ತಾವು ಕಾಬೂಲನ್ನು ಮುತ್ತುವುದಾಗಿಯೂ, ಕಾಬೂಲಿನಲ್ಲಿರುವ ಜನರು ಮೊದಲು ತಮಗೆ ಮಾಡಿದ ಅಪರಾಧವನ್ನು ಮನ್ನಿಸುವುದಾಗಿಯೂ, ತಮಗೆ ದ್ರೋಹಮಾಡಿದ ಜನರನ್ನು ಮಾತ್ರ ಹಿಡಿದು ಕಠಿಣವಾಗಿ ಶಿಕ್ಷಿಸುವುದಾಗಿಯೂ ಪ್ರಕಟನೆಗಳನ್ನು ಆಕಾಶಯಾನಗಳ ಮೂಲಕ ಜನಗಳಿಗೆಲ್ಲಾ ತಿಳಿಯುವಂತೆ ಹಂಚಿರುವರು. ಈ ಪ್ರಕಟನೆಯನ್ನು ನೋಡಿದ ಜನರು ಕಾಬೂಲನ್ನು ಮುತ್ತಿದಾಗ ತಮಗೆ ಪ್ರಾಣಾಪಾಯ ಸಂಭವಿಸದೇಇರದೆಂದು ಯೋಚಿಸಿ ಊರನ್ನು ಬಿಟ್ಟು ಹೊರಡಲು ಯತ್ನಿಸಿದಾಗ ಸಾಕೌ ದೊರೆಯು ಅವರನ್ನು ತಡೆದು ನಿರ್ಬಂಧದಲ್ಲಿಟ್ಟಿರುವನು. ಅವರಲ್ಲನೇಕರನ್ನು ಕಠಿಣ ಶಿಕ್ಷೆಗೆ ಗುರಿಮಾಡಿರುವನು. ಇಂತಹ ವಿಷಮಕಾಲದಲ್ಲಿ ವಿದೇಶೀಯ ರಾಯಭಾರಿಗಳು ಕಾಬೂಲಿನಲ್ಲಿರುವುದಾದರೆ ಜನಗಳ ಅಂತಃಕಲಹದಲ್ಲಿ ಅವರನ್ನು ಕಾಪಾಡುವವರಾರು? ಅವರಿಗೆ ಪ್ರಾಣಸಂರಕ್ಷಣೆಯಾಗದೆ ಯಾರಿಗಾದರೂ ಅಪಾಯ ಸಂಭವಿಸುವುದಾಗಿದ್ದಲ್ಲಿ ಅವರ ಸರ್ಕಾರದವರು ಅಫ್ಘಾನಿಸ್ಥಾನದ ಅಂತಃಕಲಹದಲ್ಲಿ ಕೈಹಾಕಬೇಕಾಗುತ್ತಿದ್ದಿತು. ಹಾಗೆ ವಿದೇಶೀಯರೊಬ್ಬರು ಜಗಳಕ್ಕೆ ಬಂದಿದ್ದರೆ ಇತರರೂ ಬರಬೇಕಾದ ಸಂಭವವೊದಗಿ ಪರಿಣಾಮದಲ್ಲಿ ದೊಡ್ಡ ಯುದ್ಧವು ಸಂಘಟಿಸುತ್ತಿದ್ದಿತು. ಆದುದರಿಂದ ವಿದೇಶೀಯ ರಾಯಭಾರಿಗಳು ಸಕಾಲದಲ್ಲಿಯೇ ಕಾಬೂಲನ್ನು ಬಿಟ್ಟು ತೆರಳಿದುದು ಅಫ್ಘಾನಿನ ಕಲಹವು ತೀವ್ರವಾಗಿ ಪರಿಸಮಾಪ್ತಿಯಾಗಲು ಅವಕಾಶವಾಯಿತು.

ಹಿಂದೆ ಸೈನ್ಯಾಧಿಪತಿಯಾಗಿದ್ದ ನಾದಿರ್ ಖಾನರು ತಮ್ಮ ದೇಶದಲ್ಲಿ ನಡೆಯುತ್ತಿರುವ ಅಂತಃಕಲಹವನ್ನೂ, ಅದರಿಂದ ದೇಶಕ್ಕಾಗಿರುವ ಅಪಾಯವನ್ನೂ ನೋಡಿ ಸಹಿಸಲಾರದೆ ತಮಗೆ ದೇಹಾಲಸ್ಯವಾಗಿದ್ದರೂ ಲಕ್ಷಿಸದೆ ಸ್ವದೇಶಕ್ಕೆ ಬಂದಿರುವರು. ಇವರಲ್ಲಿ ಅಫ್ಘಾನಿಸ್ಥಾನ ಜನರೆಲ್ಲರಿಗೂ ಪೂರ್ಣ ವಿಶ್ವಾಸವೂ, ಗೌರವವೂ ಇರುವುದರಿಂದ ಇವರೇ ಪ್ರಭು ಪದವಿಗೆ ಆಶೆಪಟ್ಟು ಬಂದಿರುವರೆಂದು ಕೆಲವರು ತಿಳಿದಿದ್ದರು. ಆದರೆ ನಾದಿರ್ ಖಾನರು ಈ ಸಂಬಂಧದಲ್ಲಿ ತಮ್ಮ ಅಭಿಮತವನ್ನು ನಿಸ್ಪೃಹವಾಗಿ ತಿಳಿಸಿರುವರು. ತಾವು ಸ್ವದೇಶಕ್ಕೆ ಹಿಂತಿರುಗಿದುದು ದೇಶಾಭಿಮಾನದಿಂದಲೇ ವಿನಾ ರಾಜ್ಯಾಭಿಲಾಷೆಯಿಂದಲ್ಲವೆಂದೂ, ಅಂತಃಕಲಹವನ್ನು ಕೊನೆಗಾಣಿಸುವುದೇ ತಮ್ಮ ಧ್ಯೇಯವೆಂದೂ ಹೇಳಿರುವರು. ನಾದಿರ್ ಖಾನರಲ್ಲಿ ಸಾಕೌ ದೊರೆಗೂ ಕೂಡ ಗೌರವವಿರುವುದಂತೆ. ಆದುದರಿಂದ ಇವರು ಕಾಬೂಲಿಗೆ ಹೋಗುವುದಾದರೆ ಯಾವ ಕಲಹವೂ ಇಲ್ಲದೆ ಘೋರ ರಾಜನು ನಾದಿರ್ ಖಾನರಿಗೆ ತನ್ನ ಪದವಿಯನ್ನು ಒಪ್ಪಿಸಿಬಿಡುವನೆಂದೂ ಅದನ್ನು ಖಾನರು ತಮ್ಮ ಪೂರ್ವದ ಸ್ವಾಮಿಯಾದ ಅಮಾನುಲ್ಲರವರಿಗೆ ಒಪ್ಪಿಸುವರೆಂಬುದಾಗಿಯೂ ಯೋಚಿಸಬಹುದಾಗಿರುವುದು. ನಾದಿರ್ ಖಾನರು ಬೊಂಬಾಯಿಯಿಂದ ದೆಹಲಿಗೆ ಪ್ರಯಾಣ ಮಾಡಿ ಅಲ್ಲಿಂದ ಪೆಷಾವರಿಗೆ ತೆರಳಿದರು. ಅಲ್ಲಿ ಅಫ್ಘಾನಿಸ್ಥಾನದ ಪರಿಸ್ಥಿತಿಯನ್ನು ಚೆನ್ನಾಗಿ ಪರಿಶೀಲಿಸಿ ಕಾಂದಹಾರಿಗೆ ಹೋಗಿ ಅಮಾನುಲ್ಲರವರೊಡನೆ ಆಲೋಚನೆ ಮಾಡಿ ಮುಂದಿನ ಕಾರ್ಯಕ್ರಮವನ್ನು ಗೊತ್ತುಮಾಡುವುದಾಗಿ ತಿಳಿಯಬರುತ್ತದೆ.

"ಅಮಾನುಲ್ಲಖಾನರ ದರೋಡೆ ಘರದಿಂದ ಯುದ್ಧಸನ್ನಾಹ ಮಾಡಿಕೊಂಡು ಕಾಂದಹಾರಿನಿಂದ ಘಜನಿಯ ಕಡೆಗೆ ಹೊರಟಿದ್ದಾರೆಂದು ತಿಳಿದುಬಂದಿದೆ. ಅವರ ಸಹಾಯಕ್ಕಾಗಿ ರಷ್ಯಾದೇಶದ ಆಕಾಶಯಾನಗಳೂ, ಸೈನಿಕರೂ, ಮದ್ದು ಗುಂಡು ಮೊದಲಾದ ಯುದ್ಧಸಾಮಗ್ರಿಗಳೂ ಕಳಿಸಲ್ಪಟ್ಟಿರುತ್ತವೆ. ಅಂತು ರಂಜಾನ್ ಹಬ್ಬವಾದ ಕೂಡಲೆ ಕಾಬೂಲನ್ನು ಮುತ್ತುವ ಕದನವು ನಡೆಯುತ್ತದೆ. ಈ ಸುದ್ದಿಯನ್ನು ಕೇಳಿದ ಕಾಬೂಲ್ ನಿವಾಸಿಗಳು ಪ್ರಾಣಭೀತಿಯಿಂದ ಆ ಪಟ್ಟಣವನ್ನು ಬಿಟ್ಟು ಹೊರಡಲೆತ್ನಿಸಿದರು. ಸಾಕೌ ದೊರೆಯಾದವನು ತನ್ನ ರಾಜಧಾನಿಯು ಬರಿದಾಗುವುದೆಂಬ ಭಯದಿಂದ ಹಾಗೆ ಯಾರೂ ಪಟ್ಟಣವನ್ನು ಬಿಟ್ಟು ಹೋಗಲಾಗದೆಂದೂ, ಒಂದು ವೇಳೆ ಹೋದವರಿಗೆ ಕಠಿಣಶಿಕ್ಷೆಯು ವಿಧಿಸಲ್ಪಡುವುದೆಂದೂ ಪ್ರಕಟಿಸಿರುತ್ತಾನೆ. ಕೆಲವರು ಈ ನಿಯಮವನ್ನು ಉಲ್ಲಂಘಿಸಲು ಯತ್ನಿಸಿದಾಗ ಅವರನ್ನು ಹಿಡಿದು ಕಠಿಣಶಿಕ್ಷೆಗೆ ಗುರಿಮಾಡಿಸಿದನು. ಈ ಮಧ್ಯೆ ತನ್ನ ಹಿಂಬಾಲಕರಾದ ಜನಗಳನ್ನೆಲ್ಲ ಸೇರಿಸಿ ದೊಡ್ಡದೊಂದು ಸಭೆಯನ್ನು ನೆರೆಯಿಸಬೇಕೆಂದು ತೆರದೂದು ಮಾಡುತ್ತಿರುವನು. ಅಮಾನುಲ್ಲಖಾನರು ಮೊದಲು ತಾವು ರಾಜ್ಯಪರಿತ್ಯಾಗಮಾಡುವ ಕಾಲದಲ್ಲಿ, ಯಾರೂ ತಮಗೆ ಮೋಸಮಾಡುವ ಉದ್ದೇಶದಿಂದ ತಮ್ಮನ್ನು ಪದವಿತ್ಯಾಗ ಮಾಡಿರೆಂದು ಕೇಳಿದುದಾಗಿ ತಿಳಿದಿರಲಿಲ್ಲ. ಆದರೆ ಈಚೆಗೆ ಈ ದ್ರೋಹವು ತಿಳಿದುಬಂದುದರಿಂದ ಅಂತಹ ಪರಮ ದ್ರೋಹಿಗಳನ್ನು ಹಿಡಿದು ತಕ್ಕ ಶಿಕ್ಷೆ ಮಾಡಬೇಕೆಂದಿರುವರು. ನಾದಿರ್ ಖಾನರೊಬ್ಬರು ಮಾತ್ರ ಅಫ್ಘನ್ ಜನರ ಎಲ್ಲಾ ಪಕ್ಷದವರಿಗೂ ಬೇಕಾದವರಾದುದರಿಂದ ರಕ್ತಪಾತವಿಲ್ಲದೆ ಎಲ್ಲ ಕಾರ್ಯಕಲಾಪಗಳೂ ಸುಲಲಿತವಾಗಿ ನಡೆದು ಅಮಾನುಲ್ಲರವರು ಪುನಃ ಪ್ರಭುತ್ವವನ್ನು ವಹಿಸುವರೆಂದು ಹೇಳಬಹುದಾಗಿದೆ. ಅಂತು ಈ ಸಮಯದಲ್ಲಿ ನಾಗರಿಕ ಪ್ರಪಂಚವೆಲ್ಲವೂ ಅಫ್ಘಾನಿಸ್ಥಾನದ ಮೇಲೆ ದೃಷ್ಟಿಯಿಟ್ಟು ಅಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ಕುತೂಹಲದಿಂದ ನೋಡುತ್ತಿರುವುದು.

ಮ|| ಎಂ ವೆಂಕಟಕೃಷ್ಣಯ್ಯನವರು ಗಡೀಪಾರಾಗುವರೆ ?

ಮೈಸೂರು ಮ|| ಎಂ. ವೆಂಕಟಕೃಷ್ಣಯ್ಯನವರನ್ನು ಗಡೀಪಾರ್ ಮಾಡುವರೆಂದು ವದಂತಿ. ಅದನ್ನು ನಿರ್ಭಯವಾಗಿ ಎದುರುಗೊಳ್ಳಲು ಸಿದ್ಧರಾಗಿರುವಂತೆ. ಈಗ ಅವರು ಸರಕಾರದ ಅನುಮತಿಯಿಲ್ಲದೆ, "ಸಿವಿಕ್ ಅಂಡ್ ಸೋಷಿಯಲ್ ರಿವ್ಯೂ" ಎಂಬುದನ್ನು ಹೊರಡಿಸುತ್ತಿದ್ದಾರೆ. ಇದು ರಾಜಕೀಯ ವಿಚಾರದಿಂದ ಕೂಡಿಲ್ಲವಾಗಿದ್ದರೂ ಅದರ ಮೊನ್ನಿನ ಸಂಚಿಕೆಯಲ್ಲಿ ಅವರು ಈರೀತಿ ಬರೆದಿರುವರು—" ಯಾವ ವಿಷಯದ ಮೇಲೆಯೇ ಆಗಲಿ ಸರಕಾರಕ್ಕೆ ಒಂದು ಒರೆ ಎಳೆಯದೇ ನಮಗೆ ಬರೆಯಲಿಕ್ಕೆ ಸಾಧ್ಯವೇ ಇಲ್ಲ. ಅದು ನಮ್ಮ ಮೇಲೆ ಹಾರಿಬಿದ್ದು ನಮಗೆ ರೂ ೧೦೦೦ ದಂಡವನ್ನೂ ಗಡಿಪಾರು ಮೊದಲಾದ ಶಿಕ್ಷೆ ವಿಧಿಸುವುದನ್ನೂ ತಪ್ಪಿಸಲು ನಮಗೆ ಸಾಧ್ಯವೇ ಇಲ್ಲ. ನಾವು ಅಂತಹ ಶಿಕ್ಷೆಗೆ ತಲೆಬಾಗಿ ನಮ್ಮ ಕರ್ತವ್ಯವನ್ನು ಮಾಡತಕ್ಕದ್ದು. ಅಥವಾ ಪತ್ರಿಕಾ ಪ್ರಪಂಚವನ್ನು ಬಿಟ್ಟುಬಿಡತಕ್ಕದ್ದು. ನಾವು ಸರ್ಕಾರದ ಯಜ್ಞಕ್ಕೆ ಬಲಿಯಾಗಲು ಸಿದ್ಧರಾಗಿದ್ದೇವೆ. ರಾಜನಿಷ್ಠೆಯ ಖಡ್ಗವು ನಮ್ಮ ಕೊರಳಿನಮೇಲೆ ತೂಗಾಡುತ್ತಿರುವುದು. ನಾವು ಗಲ್ಲಿಗೆ ನಮ್ಮ ಕತ್ತನ್ನಿಕ್ಕಿದ್ದೇವೆ. ಆದರಿಂದ ನಾವು ನಮ್ಮ ಶಿರಸ್ಸನ್ನು ಶರೀರದಿಂದ ಭಿನ್ನಗೊಳಿಸಲು ಸಿದ್ಧರಾಗದೆ ಉಪಾಯವಿಲ್ಲ"

ಈ ಸಮಾಚಾರವನ್ನು ಫ್ರೀಪ್ರೆಸ್ ನವರು ಮದ್ರಾಸಿನ ಪತ್ರಿಕೆಯೊಂದಕ್ಕೆ ಕಳುಹಿಸಿರುವರು.

ಒಳದೇಶದ ವೃತ್ತಾಂತಗಳು.

ಉದಕಮಂಡಲಕ್ಕೆ ಚಿತ್ತೈಸಿದ್ದ ಶ್ರೀಮನ್ಮಹಾರಾಜರವರ ಸ್ವಾರಿಯು ನೆನ್ನೆಯದಿವಸ ರಾಜಧಾನಿಗೆ ಚಿತ್ತೈಸಿತು.

ಬೊಂಬಾಯಿಗೆ ದಯಮಾಡಿಸಿರುವ ಮಹಾಮಾತೃಶ್ರೀ ವಾಣೀವಿಲಾಸ ಸನ್ನಿಧಾನ, ಸಿ. ಐ. ಯವರ ಸ್ವಾರಿಯು ನಾಳೆಯ ದಿವಸ ರಾಜಧಾನಿಗೆ ಚಿತ್ತೈಸುವುದು.

ಮೊನ್ನೆ ಕೋಲಾರದ ವಿದ್ಯಾರ್ಥಿಗಳು ಮುಷ್ಕರ ಹಿಡಿದಿದ್ದ ವಿಚಾರದಲ್ಲಿ ಡಾ|| ಸಾಹೆ ಚನ್ನಪ್ಪನವರು ಜಾಗ್ರತೆಯಿಂದ ಕೋಲಾರಕ್ಕೆ ಹೋಗಿ ವಿದ್ಯಮಾನಗಳನ್ನು ತಿಳಿದುಕೊಂಡು ಸಮಾಧಾನಗೊಳಿಸಿದುದು ಶ್ಲಾಘನೀಯವಾಗಿರುತ್ತದೆ.

ಈ ತಿಂಗಳು ೯ ನೇ ತಾ|| ಗೆ ಅಂತ್ಯವಾದ ಒಂದು ವಾರದಲ್ಲಿ ನಮ್ಮ ಸರ್ಕಾರಕ್ಕೆ ಮೈಸೂರು ರೈಲ್ವೆ ಇಲಾಖೆಯಿಂದ ೬೯,೯೦೦ ರೂ. ಗಳು ಉತ್ಪತ್ತಿಯಾಗಿರುತ್ತವೆ. ಈ ವರ್ಷ ಮೊದಲ್ಗೊಂಡ ಈ ತಾರೀಖಿನ ವರೆಗೆ ಒಟ್ಟು ೩೧,೫೫,೬೦೦ ರೂ. ಗಳು ಹುಟ್ಟುವಳಿಯಾಗಿದೆ.

ಬೆಂಗಳೂರು ದಂಡಿಗೆ ಸೇರಿದ ಅಲ್ಲಸೂರಿನ ಸಬ್ ಅಸಿಸ್ಟೆಂಟ್ ಸರ್ಜನ್ನರಾದ ತಿರುಮಲರಾಯರು ತಮ್ಮಲ್ಲಿಗೆ ವೈದ್ಯಚಿಕಿತ್ಸೆಗಾಗಿ ಬಂದಿದ್ದ ಮಿಲ್ಟರಿ ಅಕೌಂಟ್ಸ್ ಕಂಟ್ರೋಲರಾಫೀಸಿನ ಕ್ಲಾರ್ಕಾದ ಮ|| ಗೋಪಾಲಾಚಾರ್ಯರವರ ಮಗಳು ೧೮ ವರ್ಷ ವಯಸ್ಸಿನ ಚಂಪಕಾ ಎಂಬಾಕೆಯ ಭಂಗಪಡಿಸಿದ ಸರಸಿಯನ್ನು ಅಪಹರಿಸಿದುದಕ್ಕಾಗಿ ದಂಡಿನ ಮ್ಯಾಜಿಸ್ಟ್ರೇಟ್ ಕೋರ್ಟಿನ ನ್ಯಾಯಾಧೀಶರು ೬ ತಿಂಗಳ ಕಠಿಣ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಿದರು.

ಕೋಲಾರ ಡಿಸ್ಟ್ರಿಕ್ಟಿನಲ್ಲಿ ಕಳೆದ ಆಗಸ್ಟ್, ಸೆಪ್ಟೆಂಬರ್ ಅಕ್ಟೋಬರ್ ತಿಂಗಳುಗಳಲ್ಲಿ ಕೆಲವು ಬ್ರಾಹ್ಮಣಗಳಲ್ಲಿನ ದೇವಾಲಯಗಳನ್ನು ಅಪವಿತ್ರಮಾಡಿದ ಪುಂಡುಜನರನ್ನು ಪತ್ತೆ ಮಾಡಿ ಕೊಟ್ಟವರಿಗೆ ೫೦೦ ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುವೆಂದು ಆ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮೀಷನರಾದ ಮ|| ಎ ವಿ ರಾಮನಾಥನ್‌ರವರು ಪ್ರಕಟಿಸಿರುತ್ತಾರೆ. ಈ ಸಂಬಂಧವಾದ ಸಮಾಚಾರವನ್ನು ಕೋಲಾರ ಡಿಸ್ಟ್ರಿಕ್ಟ್ ಪೋಲೀಸು ಸೂಪರಿಂಟೆಂಡೆಂಟರಿಗೆ ತಿಳಿಸಬೇಕೆಂದು ಕೋರಲ್ಪಟ್ಟಿದೆ.

ಬೆಂಗಳೂರು ಡಿಸ್ಟ್ರಿಕ್ಟ್ ಡೆ|| ಕ|| ಮ|| ಜಿ.ಬಿ. ಹೆಬ್ಬಿಕರ್ರವರು ತುಮಕೂರಿಗೆ ವರ್ಗಮಾಡಲ್ಪಟ್ಟಿರುವರು. ಎಕ್ಸೈಜ್ ಕಮಿಷನರಾಗಿ ಬದಲಿ ನೋಡುತ್ತಿದ್ದ ಮ|| ಸಯ್ಯದ್ ತಾಜ್ ಪೀರಜಾದೆ ಸಾಹೇಬರು ಬೆಂಗಳೂರು ಡಿಸ್ಟ್ರಿಕ್ಟಿನ ಡೆ|| ಕ|| ರಾಗಿ ನಿಯಮಿಸಲ್ಪಟ್ಟಿರುವರು. ಮ|| ಹೆಬ್ಬಿಕರ್ರವರ ವರ್ಗವು ಬೆಂಗಳೂರು ಗಲಭೆಗೆ ಸಂಬಂಧಪಟ್ಟಿಲ್ಲವೆಂದೂ ಅವರು ಕಳೆದ ಮೂರು ವರ್ಷಗಳಿಂದಲೂ ಬೆಂಗಳೂರಿನಲ್ಲಿದ್ದುದರಿಂದ ಈಗ ಸ್ಥಳ ಬದಲಾಯಿಸಬೇಕಾಯಿತೆಂದೂ ತಿಳಿಯಬರುತ್ತದೆ.

ನಂಜನಗೂಡು ಕಪಿಲಾನದಿಯಲ್ಲಿ ಸ್ನಾನಮಾಡುತ್ತಿದ್ದ ಅಜ್ಞಾತನವರು ಮೆಟ್ಟಿಲಿನ ಮೇಲೆ ಇಟ್ಟಿದ್ದ ೨೦೦ ರೂಪಾಯಿಗಳನ್ನು ಕಳುವುಮಾಡಿದ್ದ ಒಬ್ಬ ಹುಡುಗನಿಂದ ನಂಜನಗೂಡಿನ ಪೋಲೀಸು ಸಬ್ ಇನ್ಸ್‌ಪೆಕ್ಟರ್ ಎ ಜಿ ಲಿಂಗಯ್ಯನು ಅಪಹರಿಸಿ, ನಂಬಿಕೆಗೆ ದ್ರೋಹಮಾಡಿದನೆಂಬ ಅಪರಾಧಕ್ಕಾಗಿ ನಂಜನಗೂಡಿನ ಸ್ಪೆಷಲ್ ಮ್ಯಾಜಿಸ್ಟ್ರೇಟರಿಂದ ವಿಚಾರಣೆಗೊಂಡು ೩ ತಿಂಗಳು ಕಾರಾಗೃಹವಾಸವನ್ನೂ ೩೦೦ ರೂಪಾಯಿಗಳ ದಂಡವನ್ನೂ ವಿಧಿಸಲ್ಪಟ್ಟನು.

ಕೋಲಾರ ಚಿನ್ನದ ಗಣಿಗಳ ಪೈಕಿ ಮೈಸೂರ್ ಮೈನ್ ಗಣಿಯ ಎಡ್ಗರ್ ಷಾಫ್ಟ್ ಎಂಬ ಕಾಲುವೆಯಲ್ಲಿ ಕಳೆದ ಶನಿವಾರ ಸಾಯಂಕಾಲ ಕೆಲಸ ಮಾಡುತ್ತಿದ್ದ ೧೩ ಮಂದಿ ಕೂಲಿ ಆಳುಗಳ ಮೇಲೆ ಕಲ್ಲು ಸಿಡಿತವೆಂಬ ಕಂಪನವುಂಟಾಗಿ ಕಲ್ಲುಮಣ್ಣು ಅಪಾರವಾಗಿ ಕಳಚಿ ಬಿದ್ದು ಆ ಪೈಕಿ ಒಂಭತ್ತು ಮಂದಿ ಕೆಳಗೆ ಸಿಕ್ಕಿ ಆಕಸ್ಮಿಕ ಮರಣ ಹೊಂದಿದರೆಂದು ಕೇಳಿ ವಿಷಾದಿಸುತ್ತೇವೆ. ಈ ಕಲ್ಲು ಸಿಡಿತವೆಂಬುವುದು ಗಣಿಯೊಳಗೆ ಹುಟ್ಟಲು ಕಾರಣವೇನೆಂಬುದು ಇದುವರೆಗೆ ಯಾರಿಗೂ ತಿಳಿಯದೆ ಹೋಗಿದೆ. ಅದು ಸಿಡಿದಾಗ ಮಹಾಶಬ್ದವಾಗುವುದಲ್ಲದೆ ಭೂಮಿಯೂ ನಡುಗಿ ಹೋಗುತ್ತದೆ.

ಹೈದರಾಬಾದು ಸಂಸ್ಥಾನಾಧೀಶ್ವರರಾದ ನೈಜಾಮರವರು ನಮ್ಮ ಶ್ರೀಮನ್ಮಹಾರಾಜರವರಿಂದಾಹ್ವಾನಿಸಲ್ಪಟ್ಟು ಈ ತಿಂಗಳ ಮೂರನೆಯ ವಾರದಲ್ಲಿ ರಾಜಧಾನಿಗೆ ಬರುವರೆಂದು ಕೆಲವರೂ ಮುಂದೆ ಬರುವ ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವ ಸಮಯದಲ್ಲಿ ಬರುವರೆಂದು ಮತ್ತೆ ಕೆಲವರೂ ಹೇಳುತ್ತಿರುವರು. ನೈಜಾಂರವರು ನಮ್ಮ ಸಂಸ್ಥಾನಕ್ಕೆ ಬರುವುದು ಇದೇ ಮೊದಲಾದುದರಿಂದ ಅವರ ಆಗಮನಕ್ಕೆ ತಕ್ಕ ಸ್ವಾಗತದೇರ್ಪಾಟು ನಡೆಯಬೇಕಾಗಿರುತ್ತದೆ. ಅಂತಹ ಏರ್ಪಾಟೇನೂ ಈವರೆಗೆ ನಡೆಯದಿರುವುದರಿಂದ ಅವರು ಸದ್ಯದಲ್ಲಿ ಬರುವುದು ಸಂಶಯವೆಂದೇ ಹೇಳಬಹುದಾಗಿದೆ.

ಮುಂದಿನ ಜೂನ್ ತಿಂಗಳು ೧೦ ನೇ ತಾ|| ಸುಮಾರಿಗೆ ನಡೆಸಲ್ಪಡುವ ಪ್ರಜಾಪ್ರತಿನಿಧಿಸಭೆಯ ಆಯವ್ಯಯದ ಅಧಿವೇಶನಕ್ಕೆ ಸದಸ್ಯರು ನಿರ್ಧಾರಗಳನ್ನೂ ಅರಿಕೆಗಳನ್ನೂ ಪ್ರಶ್ನೆಗಳನ್ನೂ ಏಪ್ರಿಲ್ ತಿಂಗಳು ೮ ನೇ ತಾ|| ಒಳಗಾಗಿ ಡೆಪ್ಯುಟಿ ಕಮಿಷನರಿಗೆ ಕಳುಹಿಸಬೇಕೆಂದೂ, ಈ ವಿಷಯಗಳನ್ನು ಆರಾಯಿಸುವ ಬಗ್ಗೆ ಡಿಸ್ಟ್ರಿಕ್ಟ್ ಪ್ರತಿನಿಧಿಗಳ ಮೀಟಿಂಗನ್ನು ಡೆಪ್ಯುಟಿ ಕಮಿಷನರುಗಳು ಏಪ್ರಿಲ್ ತಿಂಗಳು ೧೯ ನೇ ತಾ|| ಒಳಗಾಗಿ ನಡೆಸಿ, ಆರಾಯಿಸಲ್ಪಟ್ಟ ವಿಷಯಗಳನ್ನು ಏಪ್ರಿಲ್ ೨೭ ನೇ ತಾ|| ಒಳಗಾಗಿ ಪ್ರಜಾಪ್ರತಿನಿಧಿಸಭೆಯ ಸೆಕ್ರೆಟರಿ ಸಾಹೇಬರಿಗೆ ತಲುಪುವಂತೆ ರವಾನಿಸಬೇಕೆಂದೂ ಸರ್ಕಾರದವರು ಪ್ರಕಟಿಸಿರುತ್ತಾರೆ.

ಮೈಸೂರು ಸ್ಟಾರ್ ಪತ್ರಿಕಾ ಸಂಪಾದಕರ ಮೇಲೆ ಮ|| ಆರ್. ಗೋಪಾಲಸ್ವಾಮಯ್ಯರ್‌ರವರು ಬೆಂಗಳೂರು ಸಿಟಿ ಫಸ್ಟ್‌ಕ್ಲಾಸ್ ಬೆಂಚ್ ಮೆಜಿಸ್ಟ್ರೇಟರುಗಳ ಕೋರ್ಟಿನಲ್ಲಿ ಮಾಡಿರುವ ಮಾನನಷ್ಟದ ವಿವಾದವು ಕಳೆದ ತಾ|| ೨೭ ನೇ ಶುಕ್ರವಾರ ವಿಚಾರಣೆಗೆ ಬಂದು ಫಿರ್ಯಾದಿಯರ ಒಂದನೇ-ಸಾಕ್ಷಿಯ ವಾಟಿಸವಾಲು ನಡೆದು ಆ ದಿವಸ ಮುಗಿಯದಿದ್ದುದರಿಂದ ಈ ತಾ|| ೧೩ ಕ್ಕೆ ಮುಂದುವರಿಸಲ್ಪಟ್ಟಿತು. ಮ|| ಎಚ್. ವೈ. ಶಿಸ್ಸೆಯವರೂ, ಉದ್ಯೋಗದಿಂದ ನಿವೃತ್ತರಾದ ಓರ್ವ ಉಪಾಧ್ಯಾಯರೂ ಮಾಡಿರುವ ವಿವಾದಗಳು, ಉಭಯ ಫಿರ್ಯಾದಿಗಳು ತಾ|| ೨೭ ರಲ್ಲಿ ಕೋರ್ಟಿಗೆ ಬರಲಿಲ್ಲವಾಗಿ ಇದೇ ತಾ|| ೧೩ ಕ್ಕೆ ವಿಚಾರಣೆಗಿಡಲ್ಪಟ್ಟುವು.

ಬೆಂಗಳೂರು ದಂಡಿನಲ್ಲಿ ಮಕ್ಕಳುಗಳನ್ನು ಕೆಲ ಭಿಕ್ಷುಕರುಗಳು ಹಿಡಿದುಕೊಂಡು ಹೋಗುತ್ತಾರೆಂಬ ಸುದ್ದಿಯು ಹರಡಿ

ಜನರು [illegible] ಅನಾನುಕೂಲವು ನಡೆಯುತ್ತಿರುವುದು [illegible] ಸ್ಸು ಜನಜನಿಕವಾಗಿ [illegible] ಮುಸ್ಲಿಂ ಕೈದಿಯನ್ನು ಕೋರ್ಟಿಗೆ ಕರೆತರುತ್ತಿದ್ದ ಪೋಲೀಸಿನವರ ಮೇಲೆ [illegible] ದನ್ನು ಅನುಮಾನಿಸಿ ಅನವಶ್ಯಕವಾದ ಅತ್ಯಾಚಾರವನ್ನು ನಡೆಯಿಸದಿದ್ದರೆ [illegible] ಭಂಗ ಪಡಿಸಲು ಬಂದ ಪೋಲೀಸಿನವರನ್ನು ಪ್ರತಿ[illegible] ರೀತಿಯಾಗಿ ಅತ್ಯಾಚಾರ ನಡಯಿಸಿದ ಕೆಲವರು [illegible] ಲ್ಪಟ್ಟು ವಿಚಾರಣೆಗೆ ಗುರಿಮಾಡಲ್ಪಟ್ಟಿರುವರು

ಕಳೆದ ಜುಲೈ ತಾ|| 30 ರಲ್ಲಿ ಆದವಾ ಆದರಿಂದೀಚೆಗೆ ಸತ್ಯನಾರಾಯಣನೆಂಬವನು ಅನುಮಾನಾಸ್ಪದವಾದ ಪರಿಸ್ಥಿತಿಯಲ್ಲಿ ಮರಣ ಹೊಂದಿದನೆಂದು 1929ನೇ ಡಿಸೆಂಬರ್ ತಾರೀಖು 11 ರ ಮೈಸೂರು ಪೇಟ್ರಿಯಟ್ ಪತ್ರಿಕೆಯಲ್ಲಿ ಪ್ರಕಟವಾಗಿದ್ದಿತು ಈ ಸಂಬಂಧವಾಗಿ ಪೋಲೀಸಿನವರು ವಿಚಾರ ಮಾಡಿದುದರಲ್ಲಿ, ಆದಿದ್ರಾವಿಡನಾದ ನಟೇಶನೆಂಬುವನ ಕೂಡ ವಾಸ ಮಾಡುತ್ತಿದ್ದ ಸತ್ಯನಾರಾಯಣನೆಂಬ ಹುಡುಗನು 1929 ನೇ ಎಪ್ರಿಲ್ ತಿಂಗಳಲ್ಲಿ ನಡೆದ ಕರಗದ ಉತ್ಸವಕ್ಕೆ ಕೊಂಚ ದಿವಸಗಳ ಹಿಂದೆ ರಕ್ತಾತಿಸಾರದಿಂದ ಸತ್ತನೆಂದೂ, ಅವನ ಶವಸಂಸ್ಕಾರದಲ್ಲಿ ಗಂಗಮ್ಮ ಚೆರ್ರಿಯ ವಾಸಸ್ಥರಾದ ಅನೇಕ ಜನರು ಭಾಗಿಗಳಾಗಿದ್ದರೆಂದೂ ವ್ಯಕ್ತಪಟ್ಟಿರುತ್ತದೆ ಆ ಹುಡುಗನು 1929 ನೇ ಜುಲೈ ತಾ|| 30 ರ ಬಹಳ ದಿನಗಳ ಹಿಂದೆಯೇ ಸ್ವಭಾವಕಾರಣದಿಂದ ಮಡಿದನು ಎಂದು ಪಬ್ಲಿಸಿಟಿ ಆಫೀಸರು ತಿಳಿಸುತ್ತಾರೆ

ತಲಕಾಡಿನ ಬಳಿ ಮುಡುಕತೊರೆಯಲ್ಲಿ ಪದ್ಧತಿಯಂತೆ ಕಳೆದ ತಾ|| 1[illegible] ರಿಂದ ರಥೋತ್ಸವವೂ ದನಗಳ ಜಾತ್ರೆಯೂ ನೆರವೇರಿದುವು ಆ ಮಧ್ಯೆ ಅಂದರೆ ತಾ|| [illegible] ನೇ ಶನಿವಾರ ಸುಮಾರು 1 ಘಂಟೆ ರಾತ್ರಿ ಹೊತ್ತಿನಲ್ಲಿ ಸು[illegible] ಹೋಟಲಿನ ಚಪ್ಪರದಲ್ಲಿ ಬೆಂಕಿ ಕಾಣಿಸಿಕೊಂಡು ಬಹು ಬೇಗನೆ ಸುತ್ತಮುತ್ತಲಿದ್ದ ವರ್ತಕರ ಅಂಗಡಿಗಳಿಗೆ ವ್ಯಾಪನೆಯಾಗಿ ಸುಮಾರು [illegible] ಅಂಗಡಿಗಳು ವ್ಯಾಪಾರ ಪದಾರ್ಥಗಳ ಸಮೇತ ಉರಿದುಹೋದವು ಇದರಿಂದ ಸುಮಾರು 70 ಸಾವಿರ ರೂಪಾಯಿ ಕನಕ ನಷ್ಟವಾಯಿತೆಂದು ಕೇಳುತ್ತೇವೆ ಡಪ್ಯುಟಿ ಕಮಿಷನರು, ಪೋಲೀಸ್ ಸೂಪರಿಂಟೆಂಡೆಂಟರು, ಸಬ್-ಡಿವಿಜನ್ ಆಫೀಸರು, ಅಮಲ್ದಾರರೇ ಮೊದಲಾದ ಸರ್ಕಾರಿ ಅಧಿಕಾರಿಗಳೂ ಖಾಸಗಿ ಪ್ರಜೆಗಳೂ ವಿಶೇಷವಾಗಿ ಸಾಹಸಪಟ್ಟು ಬೆಂಕಿಯನ್ನು ಶಮನಮಾಡಿದರೆಂದು ತಿಳಿಯಬರುವುದು ಇದರಲ್ಲಿ ಪ್ರಾಣನಷ್ಟವೇನೂ ಆಗಲಿಲ್ಲವೆಂದು ಕೇಳಿ ಸಂತೋಷಪಡುತ್ತೇವೆ

ಬೆಂಗಳೂರು ಸಿಟಿಯಲ್ಲಿ ಫಲಸರ್ಕು ವ್ಯಾಪಾರಿಗಳಾದ ಶ್ರೀ|| [illegible]ವಣ್ಣನವರ ದ್ವಿತೀಯ ಕುಮಾರರು ಮ|| ಪಿ. ವಿ. ಧರ್ಮಪ್ಪನವರು ತಮ್ಮ ಜ್ಯೇಷ್ಠ ಪುತ್ರಿ ಚಿ|| ಸೌ|| ಶಾರದಾಂಬೆಯನ್ನು ಕೋಲಾರದ ಮ|| ಡಿ ನಂಜುಂಡಪ್ಪನವರ ಕುಮಾರ ಮ|| ಚೆನ್ನಬಸಪ್ಪನವರಿಗೆ ಕೊಟ್ಟು ಕಳೆದ ತಾ|| [illegible]ರಲ್ಲಿ ಬಹಳ ವಿಜೃಂಭಣೆಯಿಂದಲೂ, ವಿಚಕ್ಷಣೆಯಿಂದಲೂ ವಿವಾಹಮಹೋತ್ಸವವನ್ನು ನಡಿಸಿದರು ಪರಸ್ಥಳಗಳಿಂದ ನೂರಾರು ಮಂದಿ ಬಂಧುಮಿತ್ರರುಗಳು ಬಂದಿದ್ದರಲ್ಲದೆ ಸರ್ ಕೆ [illegible] ಪುಟ್ಟಣ್ಣಶೆಟ್ಟರು ಚೀಫ್ ಜಡ್ಜಿಯವರಾಗಿದ್ದ ದಿವಾನ್ ಬಹದ್ದೂರ್ ಕೆ ಎಸ್ ಚಂದ್ರಶೇಖರಯ್ಯರ್‌ರವರು ಲಾ ಸೆಕ್ರೆಟರಿ ಮ|| ಪಿ ಮಹದೇವಯ್ಯನವರು, ಕೋ ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರ್ ಮ|| ಕೆ ಎಚ್ ರಾಮಯ್ಯನವರು ಮೊದಲಾದ ಸರ್ಕಾರಿ ಅಧಿಕಾರಿಗಳೂ, ಮ್ಯುನಿಸಿಪಲ್ ಕೌನ್ಸಿಲರುಗಳೂ, ಲಾಯರುಗಳೂ ವರ್ತಕರುಗಳೂ ಆಹ್ವಾನಿಸಲ್ಪಟ್ಟಿದ್ದು ಸಂಗೀತಶ್ರವಣದಿಂದಲೂ ಗಂಧಪುಷ್ಪ ಫಲತಾಂಬೂಲ ವಿನಿಯೋಗದಿಂದಲೂ ಸತ್ಕರಿಸಲ್ಪಟ್ಟರು

ಅ|| ಪೋಲೀಸ್ ಸೂಪರಿಂಟೆಂಡೆಂಟರಾದ ಮ|| ಎಂ [illegible] ಮರಿಯಪ್ಪನವರು ಮ|| ವಿ ಎಸ್ ಸಂಜೀವರಾಯರ ಮೇಲೆ ಮಾಡಿರುವ ಮೊಕದ್ದಮೆಯು [illegible] ನೇ ತಾರೀಖಿನ ದಿನ ವಿಚಾರಣೆಗೆ ಬಂದು ಫಿರ್ಯಾದಿಪರ ಐದು ಜನರ ಸಾಕ್ಷಿ ವಿಚಾರಣೆ ನಡೆಯಿತು ಮ|| ಮರಿಯಪ್ಪನವರು ತಾ|| 17 [illegible] ಸುಲ್ತಾನಪೇಟೆಯ ಶಾಲೆಯಲ್ಲಿ ಜರುಗಿದ ಗಣಪತಿ ಪೂಜೆಗೆ ಪ್ರವೇಶವು ಟಿಕೇಟ್ ಮೂಲಕ ಇತ್ತೆಂದೂ ಮ|| ಸಂಜೀವರಾಯರು ಟಿಕೇಟಿಲ್ಲದೆ ಒಳಗೆ ಬಂದಾಗ ತಾವು ಅವರನ್ನು ಹೊರಗೆ ಕರೆತಂದು ಸಬ್ ಇನ್ಸ್‌ಪೆಕ್ಟರ್ ಬಸಪ್ಪನವರ ವಶಪಡಿಸಿದೆನೆಂದೂ, ಅವರು ಪುನಃ ಬಾಗಿಲಬಳಿ ಬಂದರೆಂದೂ, ಆಗ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸರು ಒಳಗೆ ಬಿಟ್ಟರೆಂದೂ ಮ|| ಸಂಜೀವರಾಯರು ಗೇಟನ್ನು ನೂಕಿಕೊಂಡು ಒಳಗೆ ಬಂದರಾದುದರಿಂದ ಸೆಕ್ಷನ್ 353, 186 ಮತ್ತು 189 ಸಿ ಪಿ ಸಿ ಪ್ರಕಾರ ಮೊಕದ್ದಮೆನಡಿಸಲು ಕಾರಣವಾಯಿತೆಂದೂ ಎಂದು ತಿಳಿಸಿದರು ಅನಂತರ ಅವರು 3 ದಸ್ತಾವೇಜುಗಳನ್ನು ತೋರಿಸಿದರು ಅವುಗಳಲ್ಲಿ ಒಂದು ತಾ|| 1[illegible] ರಲ್ಲಿ ಡಿಸ್ಟ್ರಿಕ್ಟ್ ವಿದ್ಯಾ ಇಲಾಖೆಯ ಆಫೀಸರು ಡಿ ಎಸ್. ಪಿ ಯವರಿಗೆ ಬರೆದ ಕಾಗದವು ಅದರಲ್ಲಿ ಹೀಗಿತ್ತು —"ನಾನು ಈ ಮೂಲಕ 500 ಟಿಕೇಟುಗಳನ್ನು ಕಳುಹಿಸಿದ್ದೇನೆ ಇವನ್ನು ಪತ್ರಿಕಾ ಪ್ರತಿನಿಧಿಗಳಿಗೂ ಇತರ ಗೃಹಸ್ಥರಿಗೂ ಕೊಡಿರಿ ಅಲ್ಲದೆ ಮ|| ಟಿ [illegible]

[illegible] ಅವನ್ನು [illegible] ಆದರಾಶ ಕೊಡಲು [illegible] ಸಿದ್ಧ [illegible] ವಿದ್ಯಾರ್ಥಿಗಳ ಸಮ್ಮೇಳನ [illegible] ನೋಡಬೇಕು [illegible] ನಿಯಮಿಸಲ್ಪಟ್ಟಿತು

ಬರತಖಂಡದ ವೃತ್ತಾಂತಗಳು

ಕಳೆದ ಒಂದನೇ ತಿಂಗಳು ಬೆಂಗಳೂರು ಮೈಲ್ ಗಾಡಿಯಲ್ಲಿ ರಾಜಮ್ಮಾಳ್ ಎಂಬ ಮೇಲುಕೋಟೆಯ ಅಯ್ಯಂಗಾರ್ ಸ್ತ್ರೀಯನ್ನು ಕೊಂದು ಹಾಕಿದ ಕೊಲೆಪಾತಕನನ್ನು ಪತ್ತೆ ಮಾಡಿಕೊಟ್ಟವರಿಗೆ [illegible] ರೂ ಗಳು ಬಹುಮಾನವಾಗಿ ಕೊಡಲ್ಪಡುವುದೆಂದು ಮದ್ರಾಸ್ ಸರ್ಕಾರದ ಕ್ರೈಮ್ ಪೋಲೀಸ್ ಸೂಪರಿಂಟೆಂಡೆಂಟರು ಪ್ರಕಟಿಸಿರುತ್ತಾರೆ

ಸಿಂಧು ಪ್ರಾಂತದಲ್ಲಿ ಸಂಚಾರಮಾಡಲು ಬರಬೇಕೆಂದು ಆ ದೇಶದವರು ಮಹಾತ್ಮ ಗಾಂಧಿಯವರನ್ನು ಪ್ರಾರ್ಥಿಸಿದಾಗ ಲಾಲಾ ಲಜಪತರಾಯರ ಸ್ಮಾರಕ ನಿಧಿಗಾಗಿ ನಮಗೆ ನೀವು ಒಂದು ಲಕ್ಷ 5000 ರೂ [illegible] ಯನ್ನು ಕೊಡಲೊಪ್ಪಿದರೆ ಬರುತ್ತೇವೆಂದು ಹೇಳಿ ಅವರುಗಳು ಅದಕ್ಕೊಪ್ಪಿಕೊಂಡುದರ ಮೇಲೆ ಕಳೆದ ಫೆಬ್ರವರಿ ತಾ|| [illegible] ರಿಂದ ತಾ|| 1[illegible] ರ ವರೆಗೆ ಆ ಪ್ರಾಂತದಲ್ಲಿ ಸಂಚರಿಸಲಾಗಿ ಮಹಾತ್ಮರು ನಿರೀಕ್ಷಿಸಿದ್ದುದಕ್ಕಿಂತ ಹೆಚ್ಚಾಗಿ ಅಂದರೆ [illegible] 1 ಲಕ್ಷ [illegible] ಶೇಖರವಾಯಿತಂತೆ

ಬಂಗಾಳದಲ್ಲಿ ಮಂತ್ರಿಗಳಾಗಿದ್ದ ನವಾಬ್ ಮುಷರಫ್ ಹುಸೇನರವರು ತಮ್ಮ ರಾಜೀನಾಮೆಯನ್ನು ಹಿಂದೆಗೆದುಕೊಂಡರೆಂಬ ಅಪವಾದನೆಯು ಮೊನ್ನೆ ಬಂಗಾಳದ ಶಾಸನಸಭೆಯವರು ಮೊನ್ನೆ ಸಭೆಯಲ್ಲಿ ನಮಗೆ ಮಂತ್ರಿಗಳಲ್ಲಿ ವಿಶ್ವಾಸವಿಲ್ಲವೆಂದು ಬಹುಮತದಿಂದ ನಿರ್ಧಾರ ಮಾಡಿದರು ನವಾಬರೊಡನೆ ಮಂತ್ರಿಗಳಾಗಿ ಕೆಲಸ ಮಾಡಿದ ನಾಟೋರಿನ ರಾಜರವರು ಸಹ ನಿಂದೆಗೆ ಗುರಿಯಾದರು ಅವರೀರ್ವರೂ ಪದವಿ ತ್ಯಾಗಮಾಡಬೇಕಾಯಿತು ಈ ಸಂಬಂಧದಲ್ಲಿ ಸಭೆಯ ಮುಂದಾಳುಗಳು ಅತಿ ಉಗ್ರಭಾಷಣಗಳನ್ನು ಮಾಡಿ ದ್ವಂದ್ವ ಸರ್ಕಾರದಿಂದಾಗುವ ದುಷ್ಟಪರಿಣಾಮವನ್ನು ವಿಶದಪಡಿಸಿದರು

ಬೊಂಬಾಯಿ ನಗರದಲ್ಲಿ ಗತಿಸಿದ ಮೆ|| ಮಹಮದಾಲಿ ಜಿನ್ನರವರ ಪತ್ನಿಯ ಉತ್ತರಕ್ರಿಯೆಯು ಮುಸಲ್ಮಾನ ಸ್ಮಶಾನದಲ್ಲಿ ನಡೆಯಿತು ರತಿಬಾಯಿ ಜಿನ್ನಾರವರು ಜನ್ಮತಃ ಪಾರ್ಸಿಗಳಾದಾಗ್ಯೂ ವಿವಾಹಿತರಾದ ಮೇಲೆ ಮಹಮ್ಮದೀಯ ಮತವನ್ನವಲಂಬಿಸಿದರು ಆದಕಾರಣ ಶವವು ಹೂಳಲ್ಪಟ್ಟಿತು ಪಾರ್ಸಿಗಳಾಗಿದ್ದ ಪಕ್ಷದಲ್ಲಿ ಅವರ ಮತಾನುಸಾರ ಶವವನ್ನು ಎತ್ತರವಾದ ಗೋಪುರಗಳ ಮೇಲೆ ಇಟ್ಟು ಪಕ್ಷಿಗಳಿಗೆ ಆಹಾರವಾಗಿ ಕೊಡಬೇಕಾಗಿದ್ದಿತು ರತಿಬಾಯಿ ಜಿನ್ನಾರವರು ಬೊಂಬಾಯಿಯ ಸ್ತ್ರೀಸಮಾಜದಲ್ಲಿ ಮುಂದಾಳಾಗಿದ್ದುದರಿಂದ ಸಕಲ ಕೋಮಿನ ಸ್ತ್ರೀಯರೂ ಕಳೇಬರದೊಡನೆ ಶ್ಮಶಾನಕ್ಕೆ ಹೋಗಿ ತಮಗೆ ಮೃತಳಲ್ಲಿದ್ದ ಗೌರವವನ್ನೂ ವಿಶ್ವಾಸವನ್ನೂ ಪ್ರದರ್ಶಿಸಿದರು ಮೆ|| ಜಿನ್ನಾರವರು ಸುಪ್ರಸಿದ್ಧ (ಬ್ಯಾರಿಸ್ಟರ್) ವಕೀಲರಾದುದರಿಂದ ಬೊಂಬಾಯಿಯ ವಕೀಲರುಗಳೆಲ್ಲರೂ ತಮ್ಮ ಅನುತಾಪವನ್ನು ಸೂಚಿಸುವುದಕ್ಕಾಗಿ ನೆರೆದಿದ್ದರು

ಮದರಾಸಿನ ಸ್ವರಾಜ್ಯ ಸಮಿತಿಯವರು ಒಂದು ದಿನ ರಾಷ್ಟ್ರೀಯ ಮುಂದಾಳುಗಳು ಊರಿನಲ್ಲಿಲ್ಲ ಹರತಾಳವನ್ನಾಚರಿಸಿ ಸೈಮನರಿಗೆ ಬಹಿಷ್ಕಾರ ಹಾಕಿದರು ಆ ದಿನ ಅಲ್ಲಿನ ಶಾಲೆಗಳ ವಿದ್ಯಾರ್ಥಿಗಳೂ ಶಾಲೆಗೆ ಹೋಗದೆ ರಾಷ್ಟ್ರೀಯ ಅಭಿಮತದಲ್ಲಿ ತಮ್ಮ ಸಹಾನುಭೂತಿಯನ್ನು ಪ್ರದರ್ಶಿಸಿದರು ನ್ಯಾಯಶಾಲೆಯ ಮುಖ್ಯೋಪಾಧ್ಯಾಯರಾದ ರತ್ನಸ್ವಾಮಿಯವರು ಆದಿನ ಶಾಲೆಗೆ ಹೋಗದಿದ್ದ ವಿದ್ಯಾರ್ಥಿಗಳನ್ನು ಹೊರಹಾಕಿರುವರು [illegible] ವಿದ್ಯಾರ್ಥಿಗಳೆಲ್ಲರೂ ಮುಷ್ಕರ ಹೂಡಿ [illegible] ಯೋಚನೆ ಮಾಡುತ್ತಿರುವರು ಹಾಗೆ ಮಾಡಿದರೆ ಅಂತಹ ವಿದ್ಯಾರ್ಥಿಗಳೆಲ್ಲರನ್ನೂ ಸೇರಿಸಿಕೊಳ್ಳುವುದಾಗಿ [illegible] ಯವರು ಪ್ರಕಟಿಸಿರುತ್ತಾರೆ ಇವರ ವರ್ತನೆಯನ್ನು ಸರ್ಕಾರದ ವಿದ್ಯಾ ಇಲಾಖೆಯ ಅಧಿಕಾರಿಗಳು ಅನುಮೋದಿಸಿರುವರು ಗುಜರಾತ್ ಕಾಲೇಜು ಮುಷ್ಕರದ ಸಂದರ್ಭದಲ್ಲಿಯೂ ಬೊಂಬಾಯಿ ಸರ್ಕಾರದವರು ಮೊದಲು ಹೀಗೆಯೇ ವರ್ತಿಸಿ ವಿದ್ಯಾರ್ಥಿಗಳ ಒತ್ತಾಯದಿಂದ ಸ್ವಾತಂತ್ರ್ಯವನ್ನಾದರಿಸಲು ಆಶ್ಯದಲ್ಲಿ ಸರ್ಕಾರದವರು [illegible] ಯನ್ನು ಬದಲಾಯಿಸಬೇಕಾಗಿ ಬಂದಿತು ಈಗಲೂ ಮದರಾಸಿನಲ್ಲಿ ವಿದ್ಯಾರ್ಥಿಗಳು ಹೇಗೆ ವರ್ತಿಸುವರೋ ನೋಡಬೇಕು

ವಿದೇಶದ ವೃತ್ತಾಂತಗಳು.

ಗ್ರೇಟ್ ಬ್ರಿಟನ್ನಿನಲ್ಲಿ ತಾ|| 1[illegible] ರ ವರೆಗೆ 1,[illegible] ಮಂದಿ ಉದ್ಯೋಗವಿಲ್ಲದಿದ್ದರು ಇದರ ಹಿಂದಿನ ವಾರಕ್ಕಿಂತ ಈ ವಾರದಲ್ಲಿ 1[illegible] ಜನರು ಹೆಚ್ಚು ಈ ವಾರದಲ್ಲಿ ನಿರುದ್ಯೋಗಿಗಳ ಸಂಖ್ಯೆಯು ಹೆಚ್ಚಲು ಮಂಜಿನಾಧಿಕ್ಯವೇ ಕಾರಣವು

1924 ರಲ್ಲಿ ಪಾರ್ಲಿಮೆಂಟು ಸಭೆಯಾರಂಭವಾದಂದಿನಿಂದೀಚೆಗೆ [illegible] ಮಂದಿ ಸದಸ್ಯರು ಸತ್ತುಹೋಗಿರುವರು ಕನ್ಸರ್ವೆಟಿವ್ ಪಕ್ಷದ ಮೆಂಬರಾದ [illegible] ಗತಿಸಿದರು ಕಳೆದ ತಿಂಗಳಿನಿಂದಲ್ಲಿ ಐವರು ಸದಸ್ಯರು ಮೃತಿಹೊಂದಿರುತ್ತಾರೆ

[illegible] ವರ್ತಮಾನ ಪತ್ರಿಕೆಗಳನ್ನು ಸ್ವಂತ [illegible] ಪ್ರತಿಗಳನ್ನು [illegible] ಅದರ ಸ್ವಾಧೀನ [illegible] ಆಲೋಚಿಸಿ [illegible] ಆರಂಭಿಸಿರುವರು

ಟರ್ಕಿ ದೇಶದ ನಾವಿಕಾಧಿಕಾರಿಯಾಗಿದ್ದ ಎಬುರಹ್ [illegible] ಬಂಬಾಶನು ಕೆಲವು ನಾವಿಕ ಗುಟ್ಟುಗಳನ್ನು [illegible] ರಿಗೆ ಹಾಕಿದನೆಂಬ ಅಪರಾಧಕ್ಕಾಗಿ ಪೋಲೀಸಿನವರಿಂದ ದಸ್ತಗಿರಿ ಮಾಡಲ್ಪಟ್ಟಿರುತ್ತಾನೆ ಅವನಲ್ಲಿದ್ದ ಕೆಲವು ಗೂಢವಾದ ಸರ್ಕಾರಿ ಕಾಗದ ಪತ್ರಗಳು ಸಿಕ್ಕಿವೆ

ಯುದ್ಧ ಕಾರ್ಯಾಲಯವೆಂಬ ಹೆಸರನ್ನು ತೆಗೆದು ಸೈನಿಕ ರಕ್ಷಣ ಕಾರ್ಯಾಲಯವೆಂದೂ, ಯುದ್ಧ ಮಂತ್ರಿ ಎಂಬ ಹೆಸರನ್ನು ತೆಗೆದು ಸೈನಿಕ ರಕ್ಷಕ ಮಂತ್ರಿ ಎಂದೂ ಕರೆಯಬೇಕೆಂದ ಒಂದು ನಿರ್ಧಾರವನ್ನು ಎವರು ಕನ್ಸರ್ವೆಟಿವ್ ಸದಸ್ಯರುಗಳು ಪಾರ್ಲಿಮೆಂಟ್ ಸಭೆಯಲ್ಲಿ ಪ್ರವೇಶಗೊಳಿಸಿರುವರು

ಪೋಲೆಂಡಿನಲ್ಲಿ ಶೈತ್ಯಾಧಿಕ್ಯದಿಂದ ರೈಲ್ವೇ ಇಲಾಖೆಯವರಿಗೂ ಮತ್ತು ಅಲ್ಲಿದ್ದ ಬೀಸ ಗಣಿಗಳಿಗೂ ಹತ್ತು ಲಕ್ಷ ಪೌಂಡುಗಳ ನಷ್ಟವುಂಟಾಗಿದೆ ಕಪ್ಪುಸಮುದ್ರವು ಹೆಪ್ಪುಗಟ್ಟಿಕೊಂಡಿರುವುದರಿಂದ ಅಲ್ಲಿ ಹಡಗುಗಳ ಸಂಚಾರವು ನಿಲ್ಲಿಸಲ್ಪಟ್ಟಿರುತ್ತದೆ ಡ್ಯಾನ್ಯೂಬ್ ನದಿಯಲ್ಲಿ 9 ಅಡಿಗಳೆತ್ತರಕ್ಕೆ ಮಂಜಿನಗಡ್ಡೆಗಳು ಕವಿದುಕೊಂಡಿವೆ ಒಟ್ಟಿನಲ್ಲಿ ಶೈತ್ಯಾಧಿಕ್ಯದಿಂದ ಅಪಾರವಾದ ನಷ್ಟ ಕಷ್ಟಗಳು ಸಂಭವಿಸಿವೆ

[illegible] ಕಾಬೂಲಿನಲ್ಲಿದ್ದ ಬ್ರಿಟಿಷ್ ರಾಯಭಾರಿಯು ಕಾಬೂಲನ್ನು ಸಂಪೂರ್ಣವಾಗಿ ಬಿಟ್ಟು ಸ್ವದೇಶಾಭಿಮುಖನಾಗಿ ಹೊರಟನು ನಾದಿರ್‌ಖಾನನು ಪೆಷಾವರಿನಲ್ಲಿರುವ ಆಫ್ಘನ್ ವರ್ತಕ ಸಂಸ್ಥೆಯ ಬಳಿಯಿರುವ 30 ಲಕ್ಷ ರೂ ಗಳನ್ನು ತನಗೆ ಕೊಟ್ಟು ಬಿಡಬೇಕೆಂದು ನೋಟೀಸು ಕೊಟ್ಟಿರುತ್ತಾನೆ ಅಮಾನುಲ್ಲಾ ರಾಜರು ರಂಜಾನ್ ಪೂರೈಸಿದನಂತರ ಕಾಬೂಲಿಗೆ ಮುತ್ತಿಗೆ ಹಾಕಲು ತಕ್ಕ ಸನ್ನಾಹಗಳನ್ನು ಮಾಡುತ್ತಿರುವರು ಕಾಬೂಲಿನಲ್ಲಿ ಜಿರ್ಗಾ ಸಭೆಯನ್ನು ನಡೆಸಲು ಜೋರಾಗಿ ಪ್ರಯತ್ನಗಳು ನಡಿಸಲ್ಪಡುತ್ತವೆ

ಶ್ರೀ|| ಸಂಜೀವಯ್ಯನವರ ವಿಚಾರದಲ್ಲಿ ಸರ್ ವಿಶ್ವೇಶ್ವರಯ್ಯನವರ ಅಭಿಪ್ರಾಯ.

ಶ್ರೀ|| ನೀಲಗಿರಿ ಜಿ ಸಂಜೀವಯ್ಯನವರ ಪರ ವಕೀಲರು ಸರ್ [illegible] ವಿಶ್ವೇಶ್ವರಯ್ಯನವರಿಗೆ ಕೊಟ್ಟಿದ್ದ ನೋಟೀಸಿಗೆ ಸರ್ [illegible] ವಿಶ್ವೇಶ್ವರಯ್ಯನವರು ಈ ಕೆಳಗೆ ಕಂಡಂತೆ ಉತ್ತರವನ್ನು ಶ್ರೀ|| ಸಂಜೀವಯ್ಯನವರ ವಕೀಲರಿಗೆ ಕಳುಹಿಸಿರುವರು

"ನೀವು 1929 ನೆ ಫೆಬ್ರವರಿ 8 ನೇ ತಾರೀಖಿನ ದಿನ ಬೆಂಗಳೂರು ವಿಳಾಸಕ್ಕೆ ನನಗೆ ಬರೆದಿದ್ದ ಕಾಗದವು ನಿನ್ನೆದಿನ ಬೊಂಬಾಯಿಯಲ್ಲಿ ನನ್ನ ಕೈ ಸೇರಿತು

ನಿಮ್ಮ ಕಾಗದದಲ್ಲಿ ನಮೂದಾಗಿರುವ, ನಿಮ್ಮ ಕಕ್ಷಿ ಮ|| ನೀಲಗಿರಿ ಸಂಜೀವಯ್ಯನವರ ವಿಚಾರದಲ್ಲಿ ನಾನು ಅವಮಾನಕರವಾದ ಮಾತುಗಳನ್ನಾಡಿದೆನೆಂಬುದು ನನಗೆ ತಿಳಿದಿರುವ ಮಟ್ಟಿಗೂ ತೀರಾ ಸುಳ್ಳಾದುದು ನಿಮ್ಮ ಕಕ್ಷಿಗೂ ನನಗೂ ಯಾವ ವೈಯಕ್ತಿಕ ಸಂಬಂಧವೂ ಇಲ್ಲ ಹೀಗಿರುವಲ್ಲಿ ನಾನು ಅವರನ್ನು ದೂಷಿಸಬೇಕಾದ ಕಾರಣವೇ ಇಲ್ಲ ಸುಳ್ಳುಗಾರ ಎಂಬ ಶಬ್ದವನ್ನು ನಾನು ಉಪಯೋಗಿಸುವ ಯೋಚನೆಯನ್ನೂ ಮಾಡಿದವನಲ್ಲ, ನಿಮ್ಮ ಕಕ್ಷಿಯ ವಿಚಾರದಲ್ಲಿ ಯಾವ ದೊಡ್ಡ ಮನುಷ್ಯನೂ ಆ ರೀತಿ ಹೇಳುವುದಿಲ್ಲ

ನಿಮ್ಮ ಕಕ್ಷಿಯ ವಿಚಾರದಲ್ಲಿ ಅಸಮಾಧಾನಕರವಾದ ಅಥವಾ ದೋಷಾರೋಪಣೆಯಾದ ಮಾತನ್ನು ನಾನೆಂದಿಗೂ ಯಾವ ಸಂದರ್ಭದಲ್ಲಿಯೂ ಉಪಯೋಗಿಸಿದೆನೆಂದು ನನಗೆ ಜ್ಞಾಪಕವಿಲ್ಲ ಏನಾದರೂ ನಡೆದಿದ್ದರೆ, ಸಮಿತಿಯ ಮುಂದೆ ನಿಮ್ಮ ಕಕ್ಷಿಯು ಕೊಟ್ಟ ಹೇಳಿಕೆಯು ಔಚಿತ್ಯಯುಕ್ತವೂ ಸರ್ವಸಾಂಗ್ರಾಹಿಕವಾದುದೂ ಆಗಿತ್ತೆಂದು ನನಗೆ ಜ್ಞಾಪಕವಿದೆ

ನನಗೆ ಜ್ಞಾಪಕವಿರುವಮಟ್ಟಿಗೆ, ನಾನು ನಿಮ್ಮ ಕಕ್ಷಿಯ ವಿಚಾರವಾಗಿ ಆಡಿದ ಮಾತುಗಳನ್ನಾಗಲೀ ನೀವು ಕಾಗದದಲ್ಲಿ ನಮೂದಿಸಿರುವಂತಹ ವಿಷಯಗಳನ್ನಾಗಲಿ ಸಮಿತಿಯ ಯಾವ ಸದಸ್ಯರೂ ನನ್ನ ಗಮನಕ್ಕೆ ತರಲಿಲ್ಲ

ನಿಮ್ಮ ಕಕ್ಷಿಗೆ ಈ ವಿಷಯವನ್ನು ತಿಳಿಸಿದವರ ಹೆಸರು, ತಿಳಿಸಿದ ಕಾಲ, ಸಂದರ್ಭ, ನಾನು ಏನು ಹೇಳಿದನೆಂಬ ವಿಚಾರ ಇವೇ ಮೊದಲಾದ ವಿವರಗಳನ್ನು ತಿಳಿಸುವುದಾದರೆ ನಾನು ಬೆಂಗಳೂರಿಗೆ ಬರೆದು ವಿಚಾರಿಸುತ್ತೇನೆ

(ರುಜು) ಎಂ ವಿಶ್ವೇಶ್ವರಯ್ಯ

ಹುಲಿಯೋ, ಇಲಿಯೋ ?

ಬೆಂಗಳೂರಿನಲ್ಲಿ ಮಂತ್ರಿಮಂಡಲಿ ಹಾಕುವವರ ಸಂಬಂಧವಾದ ಸಂಭಾಷಣೆ

ಎರಡನೇ ಬಾಸ್ —[illegible], ಸ್ವಾಮಿ ತೆಪ್ಪಗೆ ಹನ್ನಾಗದೆ ನಿಮ್ಮವರ ಧಕ್ಕೆ ಶ್ರೇಷ್ಠವಾಗಿ ಹೋದು

ಹನುಮಲ್ಲ — [illegible] ನೀವು ಸಾಹುಕಾರ, ಎಷ್ಟು ಬರುತ್ತಿರುವಿ ?

ಚಾ — ಇದು ಕೇಳಿಕೋ! ನಾವು ಒಂದು ಮಾರ್ಗದ ಲ್ಲಿ ಹೋಗುತ್ತಿದ್ದೆ, ಎಷ್ಟೊತ್ತು, ಟ್ರಾಮಂತಾ ದವಾಖಾನೆ ಪೋಲೀಸ್ ಸ್ಟೇಷನ್ ನಿಂದ ಒಂದು

ಹ — ನ್ನ ನಿಗೆ ಇಂತಹೇ ಮೊನ್ನೆ ಪಾಪದವನು, ಪೋಲೀಸ್ ಸ್ಟೇಷನ್ನಿನ ಬಳಿ, ಎನ್, ಎಸೋಕನೆ! ಮಂ ಗಳೂರಿನ ಒಬ್ಬನನ್ನು ಹಿಡಿದನು ನಿಮಿಷಮಾತ್ರದಲ್ಲಿ ನೂರಾರು ಜನ ಸೇರಿ ಅವನನ್ನು ಚೆನ್ನಾಗಿ ಥಳಿಸಿದರು. ಪಾಪ, ಮುದುಕ ಪೆಟ್ಟು ತಿನ್ನಲಾರದೆ, ಅತ್ತುಕೊಂಡು, "ಮೈನವೇಚಿ, ಮೈನವೆ" ಅಂದರೂ ಬಿಡಲಿಲ್ಲ ಇವನ ಜೊತೆಯಲ್ಲಿ ಒಬ್ಬ ಹುಡುಗ ಅವನನ್ನು ಮಂಕುಮಾಡಿದ್ದ ಅವನು "ಏ, ಹಮಾರನಾನಾ" ಎನ್ನುತ್ತಿದ್ದ

ಸ — ಮಂಕುಬೂದಿಯು ಅಷ್ಟೇ, ಮಣ್ಣೂ ಅಲ್ಲ ಎಲ್ಲಾ ಸುಳ್ಳು ಯಾರೋ ಒಬ್ಬ ಬೇಗೆನಚ್ಚಿದ, ಅದು ಉರಿಯುತ್ತಿದೆ ಇಷ್ಟೇ ಅಲ್ಲದೆ ಒಬ್ಬರಿಗಿಂತೊಬ್ಬರು ವರ್ತಮಾನಗಳನ್ನು ಹೆಚ್ಚಿಸುತ್ತಲೂ ಇರುವರು "ನರಿ, ಹುಲಿ ಎಂಬಂತೆ ಆಗುತ್ತಿದೆ!

ಚಾ — ಅರೆ, ಇಲ್ಲಿ ಕೇಳು ಅಲ್ಲೆಲ್ಲೊ — ಅದೆಲ್ಲಪ್ಪ, ಉ, ಹೂ, ಬಂತುಕಾಣಪ್ಪ, ಬರೋಡೆ — ಒಂದು ದೊಡ್ಡ ಸೇತುವೆ ಕಟ್ಟುತ್ತಿರುವರಂತೆ, ಅದಕ್ಕೆ ಬೇಕಂತೆ, ನರಬಲಿ! ಇವರಿಗೆ ಸರಕಾರದವರು "ರಾದಾರಿ" ಕೊಟ್ಟಿರುವರಯ್ಯ!

ಹ — ಬಾಯಿಮುಚ್ಚಪ್ಪ! ಬಿಲ್ಲೆಗಾರ್‍ರು ನೋಡಿದರೆ ಲಾಕಪ್ ಮಾಡ್ಯಾರು ಹುಡುಗ ಹುಡುಗಿಯರನ್ನು ಬಲಿಕೊಡಲು ನಮ್ಮ ಸಮ್ಮತಿಯುಂಟು ಎಂದು ಯಾವ ಸರ್ಕಾರವು ಹೇಳೀತು? ಮೊನ್ನೆ ಕೆಂಗೇರಿ ಗೇಟ್ ಪೊಲೀಸ್ ಸ್ಟೇಷನ್ನಿನ ಬಳಿ ಹೀಗೆ ಅಂದರು "ಹೇಳುವವನಿಗೆ ವಿವೇಕವಿಲ್ಲದಿದ್ದರೆ ಕೇಳುವವನೂ ಹಾಗೆಯೇ,' ಅನ್ನಬೇಕೆ? ನೀವು ಹೇಳಿ, ಸೆಟ್ಟರೆ

ಅದಕ್ಕೆ ಸೆಟ್ರು —(ನಸುನಗುತ್ತ) ನಮ್ಮ ಹುಡುಗ ನ್ಯೂಸ್ ಪೇಪರ್ ಓದುತ್ತಾನೆ ಬೊಂಬಾಯಿಯಲ್ಲಿ ಮೊನ್ನೆ ನಡೆದ ದಂಗೆಯು ಮಕ್ಕಳನ್ನು ಪಠಾನರು ಕದಿಯುವುದರಿಂದುಂಟಾದುದೆಂದು ಹೇಳಿದ ಈಗ ನಾನು ನಮ್ಮ ಎಳೆಕೂಸು ದಂಡವಕ್ರನನ್ನು ಮರಕ್ಕೆ ಕಳುಹಿಸುವುದಿಲ್ಲ ನಾಲ್ಕಾರು ದಿನಗಳ ಪಾರಗಳು ಹೋದರೆ ಹೋಗಲಿ, ಮಗುವನ್ನು ಕಳಕೊಂಬುವದಕ್ಕಾದೀತೆ?

ಹ — ಬೊಂಬಾಯಿ ಸಮಾಚಾರ, ಮಿಲ್ಲಿನ ಕಾರಗಾರ್‍ರ ಮುಷ್ಕರ (ಸ್ಟ್ರೈಕ್) ದಿಂದಾದದ್ದು ಈಗ ಎಲ್ಲಲ್ಲೂ ಸ್ಟ್ರೈಕ್ ಯೆಂಬೀ ಮುಷ್ಕರವು ಪ್ರಬಲವಾಯಿತು ಮಾತೆತ್ತಿದರೆ ಸ್ಟ್ರೈಕ್. ಇದನ್ನು ನೋಡಿ ಬೊಂಬಾಯಿನ ಮಿಲ್ಲುಗಳ ಯಜಮಾನರು ಪಂಜಾಬಿನಿಂದ ಪಠಾನರನ್ನು ಕೆಲಸಗಳಿಗೆ ಕರೆತಂದು ಅವರನ್ನು ತರಬೇತು ಮಾಡಿರುವರು ಆದಕಾರಣ ಅವರನ್ನು ನೋಡಿದರೆ ಇವರಿಗೆ ಆಗದು ಇದು ಹೀಗೇ ಮುಸುಕುತ್ತಿದ್ದು ಕಳೆದ ದಂಗೆಯಲ್ಲಿ ಪರಿಣಮಿಸಿತು ಬರೋಡೆ ಅಂದರೇನು, ಸೇತುವೆ ಅಂದರೇನು, ನರಬಲಿ ಅಂದರೇನು ಇದ್ಯಾವ ಕಾತಮ್ಮನ ಕಥೆ?

ಚಾ — ಇದು ಲೇಕ್ ಸಿಟಿ ಜನರನ್ನು ಅಂದರೆ ಮಿಲ್‍ಗಳಲ್ಲಿ ಕೆಲಸ ಮಾಡುವವರನ್ನು ಉರಿದುಂಬಲು (ಸ ಲ್ಯಾಕ್ ಸೀಟಿ ಗಲಭೆ ನಡೆದ ಮೇಲೆ ನಾವೂ ಕನ್ನಡವನ್ನು ಕಲಿತುಕೊಂಡಿದ್ದೇವೆ) ವಿಲಾಯಿತಿಯಿಂದ ಹಜರತ್ ಜಾಮುಸ್‍ಸಾ ಎಂಬ ಫರಂಗಿಯು ಅವರ ಸ್ನೇಹಿತರೂ ಬಂದಿದ್ದರು ಇವರು ಚೆಕಾಸ್ಟೈರ್ ಕಾರಗಾರರ ಮುಖಂಡರಂತೆ ಇವರ ಪ್ರಯತ್ನ ಬಹು ದೊಡ್ಡದು ಅದು ಸಾಧ್ಯವೋ ಅಸಾಧ್ಯವೋ ನನಗೆ ತಿಳಿಯದ ವಿಲಾಯತಿಯಲ್ಲಿ ಸ್ಟ್ರೈಕ್ ಆದರೆ ಇಲ್ಲೂ ಸ್ಟ್ರೈಕ್ ಆಗುವಂತೆ ಮಾಡಿ ಲೇಬರ್ ಪಾರ್ಟಿಯೆಂದು ಪಾರ್ಲಿಮೆಂಟಿನಲ್ಲಿರುವುದರ ಮಹಿಮೆಯನ್ನು ತೋರಿಸಲು ಮಾಡಿದ ಉಪಾಯ

ಕ — ಇದೀಗ ವಾಸ್ತವ ಬೊಂಬಾಯಿಯಲ್ಲಿ ಹಿಂದೂ ಕಾರಗಾರರಿಗೂ ಪಠಾನರಿಗೂ ಪರಸ್ಪರ ವಿರೋಧ ಈ ಕಾರಣದಿಂದ ಹುಟ್ಟಿ 100 ಜನರು ಸಾಯುವುದರಲ್ಲೂ 70 ಜನರಿಗೆ ಪೆಟ್ಟು ಬಿದ್ದು ಅಂದು ಆಸ್ಪತ್ರೆಗಳಲ್ಲಿ ಚಿಕಿತ್ಸೆ ಹೊಂದುವದರಲ್ಲೂ ಪರಿಣಮಿಸಿತು ನಮ್ಮಲ್ಲಿ ಅಂಥಾ ಅನಾಹುತಗಳು ನಡೆಯಲಿಲ್ಲ ಈಗ ಎಲ್ಲರೂ ಎಚ್ಚತ್ತುಕೊಂಡಿರುವರು ರಾಗಿಹಳ್ಳಿ ಸಿಂಗನವೇಟೆಯಲ್ಲಿ ಮೊನ್ನೆ ಹಿಂದೂ ಮುಸಲ್ಮಾನರು ಒಂದಾಗಿ ಸೇರಿ ಆ ಗಲಾಟೆ ನಡೆಸಿದರು ಕಳೆದ ಜುಲೈ 30 ನೇ ತಾರೀಖು ಸ್ಥಳಕ್ಕೆ ಬಂದು ಪೊಲೀಸಿನವರು ತಕ್ಷಣ ಹುಷಾರಾದರು ಅಧಿಕಾರಿಗಳು, ಪೊಲೀಸ್ ಸಿಬ್ಬಂದಿ ಮತ್ತು ರಿಜರ್ವ್ ಪೊಲೀಸಿನವರು ಎಲ್ಲರೂ ಸೇರಿ, ಜನರನ್ನು ಸಮಾಧಾನಪಡಿಸಿದರು

ಹ — ಸಿಟಿ ಮ್ಯಾಜಿಸ್ಟ್ರೇಟರೂ ಇದ್ದರಷ್ಟೆ ಇವರೈಯ್ಯನ್ಯಾಯಸ್ತರು ಇವರಿಗೆ ಎಲ್ಲಾ ಜಾತಿಗಳವರೂ ಒಂದೆ ಎನು ತಾಳ್ಮೆ, ಎಷ್ಟು ಶಾಂತಿ, ಕೇಸಿನ ಸಿಚ್ಯುತಿ ಅರಿತುಕೊಂಬಲು ಎಷ್ಟು ಶ್ರದ್ಧೆ! ಬೇಷ್, ಬೇಷ್

ಚಾ. — ಅಥ್ಥಾ! ಅಕ್ಕಸಟ್ಟಿ! ನೀನ ಹೇಳಿದ್ದು ಸಾಚಾ ಮಾತು ನಾನೇ ಅನ್ನಬೇಕೆಂದಿದ್ದೆ

ಹ. — ಆದು ತಿನ್ನುವ ಕೋಳೀಕಾಲು ಮುರಿದೆತೆನ್ನುವಂತೆ, ಕೈಕಾಲುಮುರಿದ, ತಲೆಬುರುಡೆ ಹೊಡೆದ ಮುಸಲ್ಮಾನರನ್ನು ಬಿಟ್ಟದ್ದಕ್ಕೋ?

ಚಾ — ಇದೇನು, ಇದ್ಯೇನ್ ನ್ಯಾಯ, ಅವರು ಬಿಟ್ಟರೆ! ಫಿರ್ಯಾಧಿ (ಪೋಲೀಸಿನವರು) ಕೇಸು ವಾಪಸು ತೆಗೆದುಕೊಳ್ಳಲು ಬಳುಕಿಂಕೊಂಡು ಅಂದ, "ನಿಮ್ಮಸ್ವರಾಜಿ ಮಾಡಿಕೊ" ಎಂದು ಜಜಾಕಿಯೂ. ಈ ಕೇಸುಗಳು ವಿಚಾರಣೆಯಾಗುವಾಗ್ಗೆ ಕೆಲವು ವೇಳೆ ಹಾಜರಾಗುತ್ತಿದ್ದ ಮ (ಸ್ಟ್ಯಾಂಡ್) ಹೇಳಿ ದಂಗೆ ವಿಚಾರಣೆ ಕ್ರಿಮಿನಲ್ ಇನ್ನೂ ಬಾಕಿ ಇದೆ ನೀವು ಬೇಕಾದ ಹಾಗೆ "ಸೋಪೈಟ್ ಕೇಸ್" ಎಂದು ದಿಕ್ಕು ದಿಸೆತಪ್ಪಿ ಹತ್ತಿ ಹಾರಿ, ದುಸ್ಥಿತಿಗಾಗಿ ನೋಡುವದು, ಇನ್ನಾ ಚಿಂತೆ ಎಷ್ಟೋ ಮಾಡಿದ್ದೇ ಗುಣ

ಸ. — ಉಪನ್ಯಾಸ ಸಾಕು, ಸಾಬಿ. ನಾನೂ ಅವರ ಸುಗುಣವನ್ನು ಒಪ್ಪುವನು. ಜುಲೈ 30 ನೇ ರಾತ್ರಿ ಇವರಿದ್ದಿದ್ದರೆ ಆ ಹೊಗಲಾಯಿತನಕ್ಕೆ ಬರುತಿತ್ತು ಸೊಡ್ಡ ಹುಡುಗ ಮೊನ್ನೆ ನೋಡು, ಸ್ವಲ್ಪ ಗಲಾಟೆ ಆರಂಭವಾಗಲು ತಕ್ಷಣ ಅಲ್ಲಿಗೆ ಬಂದು ಸಮಾಧಾನಗಳಿಂದ ಗದ್ದಲವನ್ನು ನಿಲ್ಲಿಸಿದರು. ತೊಲಗಿ ಹೋದೀತು ತಂದರು ಇದಲ್ಲವೆ ಕ್ಷತ್ರಿಯ ಸ್ವಭಾವ ಇದಿರಲಿ, "ಹುಲಿಗಿರಿ ಬಂದೀಭ್ರಾಂತಿ ಶಮನವಾಗುವುದು ಹೇಗೆ? ನಿನ್ನೆ ಬಂದು, ಮೊನ್ನೆ ಬಂದು ದಿನಕೊಂದೊಂದು ಕೇಸು ನಡೆಯುತ್ತಲೇ ಇರುವುವು. ಇದೆಲ್ಲವು ಸುಳ್ಳೆಂದು ಸರ್ಕಾರಿಯವರು ಹುಕುಂ ಹೊರಡಿಸಿರುವರು ಹಾಗೂ ಜನರ ಚಪಲ ಅಳಿಯಲಿಲ್ಲ ಅದೊ, ತಾರಾಮಂಡಲ ಹಾರಿತು ಒಸ್ಸಿ ದೇವರನ್ನು ನೋಡೋಣ. ಎಲ್ಲರು ಚದರಿದರು

ತಪಸ್ಸು ಮತ್ತು ಬ್ರಹ್ಮಚರ್ಯ

(ಸಾಧು ವಾಸ್ವಾನಿ ಅವರಿಂದ)

"ನಾನು ಒಂದು ಹೂವನ್ನು ನೋಡಿ ನೀನು ಅಷ್ಟು ಸುಂದರವಾದ ರೂಪವನ್ನು ತಾಳಿದುದು ಹೇಗೆ? ಎಂದು ಕೇಳಿದೆನು ಆ ಪುಷ್ಪವು "ನಾನು ಯಾವಾಗಲೂ ಸೂರ್ಯರಶ್ಮಿಯನ್ನು ಮುದ್ದಿಟ್ಟುಕೊಂಡು ಸಂತೋಷಪೂರ್ವಕವಾಗಿ ಆಕರ್ಷಿಸಿದುದರಿಂದ, ನನಗೆ ಈ ಸುಂದರರೂಪವು ಬಂದಿತು 'ಎಂದು ಉತ್ತರ ಕೊಟ್ಟಿತು ಸೂರ್ಯರಶ್ಮಿಯು ಆ ಪುಷ್ಪಗಳಲ್ಲಿ ಚೆನ್ನಾಗಿ ವ್ಯಾಪಿಸುವುದು ಮತ್ತು ಪುಷ್ಪವು ಸೂರ್ಯನಿಗಿದಿರಾಗಿ ಮಾಡುವ ತಪಸ್ಸಿನಿಂದ ಅದಕ್ಕೆ ಅಷ್ಟು ಕಳೆಯೇರುವುದು ನಮ್ಮ ಜೀವನದ ಸೌಂದರ್ಯಕ್ಕೂ ಇಂತಹ ತಪಸ್ಸೇ ಆಧಾರವು ಈ ತಪಸ್ಸೇ ನಿಜವಾದ ಜ್ಞಾನಕ್ಕೂ ಕಾರಣವು ಆಗಿನ ಮನಸ್ಥೈರ್ಯವೇ ನಿಜವಾದ ಶಕ್ತಿಯೆನಿಸುವುದು

ಕೆಲವು ದಿನಗಳ ಹಿಂದೆ ಒಬ್ಬಾನೊಬ್ಬ ಶಾಸ್ತ್ರಜ್ಞನು, ಕಟ್ಟಡಗಳನ್ನೂ, ಮನುಷ್ಯರನ್ನೂ ಕ್ಷಣಮಾತ್ರದಲ್ಲಿ ಕೊಲ್ಲುವ ಮರಣರಶ್ಮಿಯೊಂದನ್ನೂ ತಾನು ಕಂಡುಹಿಡಿದಿರುವುದಾಗಿ ಪ್ರಚುರಪಡಿಸಿದ್ದನು ಆ ಮರಣರಶ್ಮಿಯು ಇನ್ನು ಮುಂದಿನ ಯುದ್ಧಗಳಲ್ಲಿ ಉಪಯೋಗಿಸಲ್ಪಡಬಹುದೆಂದೂ ಕೆಲವರು ಹೇಳುವರು ನಮ್ಮ ಪುರಾತನ ಋಷಿಗಳಾದರೋ ಜೀವರಶ್ಮಿಯೊಂದನ್ನು ಕಂಡುಹಿಡಿದು, ಅದಕ್ಕೆ "ಬ್ರಹ್ಮಚರ್ಯ" ಎಂಬ ಹೆಸರನ್ನು ಕೊಟ್ಟರು ಅದೇ ಮನುಷ್ಯನಲ್ಲಿರುವ ಜೀವೋದ್ಧಾರಶಕ್ತಿ! ಬ್ರಹ್ಮಚರ್ಯವೇ ಜೀವರಶ್ಮಿ! ಭೋಗವೇ ಮರಣರಶ್ಮಿ ಈಗಿನಕಾಲದ ಜನರಲ್ಲಿ ನಾಗರಿಕತೆಯು ಅಪಾರವಾಗಿ ಅವರಿಗೆ ಭೋಗೇಚ್ಛೆಯೇ ಅಧಿಕವಾಗಿರುವುದರಿಂದ, ಅವರು ಯಾವಾಗಲೂ ಕಾಮಾದಿಸಂತೃಪ್ತಿಗಳಿಗೆ ಆಪೇಕ್ಷಿಸಿ ಮರಣರಶ್ಮಿಗಿದಿರಾಗಿಯೇ ನಿಂತಿರುವರು

ಮೊದಲು ನಮ್ಮ ಭರತಖಂಡದಲ್ಲಿ ಬ್ರಹ್ಮಚರ್ಯವು ವಿದ್ಯಾಭ್ಯಾಸಕ್ಕೆ ತಳಹದಿಯಾಗಿದ್ದಿತು ಗುರುಕುಲಾಶ್ರಮಗಳಲ್ಲಿ ವಾಸಮಾಡತಕ್ಕವರಿಗೆಲ್ಲ ಈ ಬ್ರಹ್ಮಚರ್ಯವು ವಿಧಿಸುತ್ತು

ಬ್ರಹ್ಮಚರ್ಯದ ಐದು ಅಂಗಗಳು

ಕೈಗಳಲ್ಲಿ ಐದು ಬೆರಳುಗಳಿರುವಂತೆ ಬ್ರಹ್ಮಚರ್ಯಕ್ಕೂ ಐದು ಅಂಗಗಳುಂಟು ಆಹಾರನಿಯಮವೇ ಅವುಗಳಲ್ಲಿ ಮೊದಲನೆಯದು ವಿಶೇಷವಾಗಿ ಉಪ್ಪು, ಖಾರ ಮುಂತಾದುವುಗಳನ್ನು ಬೆರಸಿ ಉಷ್ಣಕಾರಿಗಳಾದ ಆಹಾರಗಳನ್ನು ಸೇವಿಸಬಾರದು ನಮ್ಮ ಶಾಸ್ತ್ರಗಳಲ್ಲಿ ಸಾತ್ವಿಕಾಹಾರಕ್ಕೆ ಪ್ರಾಮುಖ್ಯವುಂಟು ನೀರೇ ಎರಡನೆಯದು ನೀರನ್ನು ಧಾರಾಳವಾಗಿ ಕುಡಿಯಬೇಕು ಹೊಟ್ಟೆಗೆ ಒಂದೇಸಲ ಕುಡಿಯದೆ ಸ್ವಲ್ಪ ಸ್ವಲ್ಪವಾಗಿ ಕುಡಿಯಬೇಕು ದಿನಕ್ಕೆ 10 ಲೋಟಾ ನೀರನ್ನಾದರೂ ಕುಡಿಯಬೇಕು ಆಟಪಾಟಗಳು ಮೂರನೆಯ ಅಂಗವು ಆಟಗಳು ಅನೇಕರೊಡನೆ ಕಲೆಯುವ ಅಭ್ಯಾಸವನ್ನೂ ಪರಸ್ಪರ ಸಹಕಾರ ಬುದ್ಧಿಯನ್ನೂ ಹುಟ್ಟಿಸುವುವು ಈಗ ಇಂಡಿಯಾದೇಶಕ್ಕೆ ಇದು ಅತ್ಯವಾಗಿ ಬೇಕು ಪರಸ್ಪರ ವೈಷಮ್ಯದಿಂದಲೇ ನಾವು ಅಧೋಗತಿಗೆ ಬಂದಿರುವೆವು ಆಟಗಳು ನಮ್ಮ ದೇಹಶಕ್ತಿಯನ್ನು ಹೆಚ್ಚಿಸುವುವು ಧೈರ್ಯೋತ್ಸಾಹಗಳಿಂದಲೂ ಶಕ್ತಿಯಿಂದಲೂ ಕೂಡಿರುವ ಮನುಷ್ಯರೇ ದೇಶಾಭಿವೃದ್ಧಿಗೆ ಸಹಾಯಕರಾಗುವರು

ನಾಲ್ಕನೆಯದು ಇಂದ್ರಿಯ ಜಯವು ಬಾಲ್ಯವಿವಾಹವೆಂಬ ದುಷ್ಟಪದ್ಧತಿಯನ್ನು ಒಡನೆ ನಿಲ್ಲಿಸಬೇಕು ವಿದ್ಯಾರ್ಥಿಗಳೂ, ಯುವಕರೂ ಕೆಟ್ಟ ನಾವೆಲುಗಳನ್ನು ಓದಬಾರದು ಪುರಾತನ ಮಹರ್ಷಿಯರ ಮತ್ತು ವೀರರ ಚರಿತ್ರೆಗಳನ್ನು ಓದುವುದೊಳ್ಳೆಯದು ಶ್ರೀರಾಮ, ಶ್ರೀಕೃಷ್ಣ, ಭೀಷ್ಮ, ಯುಧಿಷ್ಠಿರ ಮುಂತಾದ ಪುರಾಣಪುರುಷರ ಚರಿತ್ರೆಗಳನ್ನೂ, ನವೀನ ಇತಿಹಾಸದಲ್ಲಿ ಪ್ರಖ್ಯಾತರಾದ ಅಬ್ರಹಾಮ್ ಲಿಂಕನ್ ಮತ್ತು ವಾಷಿಂಗ್‍ಟನ್ ಮುಂತಾದವರ ಜೀವನ ಚರಿತ್ರೆಗಳನ್ನೂ ಓದಬೇಕು ದೇವಪ್ರಾರ್ಥನೆಯೇ ಐದನೆಯ ಅಂಗವು ಪ್ರಾರ್ಥನೆಯಲ್ಲಿ ವ್ಯಾಧಿನಿವಾರಕಶಕ್ತಿಯಿರುವುದು ಮತ್ತು ಪ್ರತಿದಿನವೂ ಪ್ರಾರ್ಥನೆಮಾಡುವುದರಿಂದ ನಿಮ್ಮ ದೇಹಾರೋಗ್ಯವೂ ಹೆಚ್ಚುವುದು. ಪ್ರಾರ್ಥನೆಮಾಡುವುದರಿಂದ ಲೋಕಕ್ಕೆ ಕ್ಷೇಮವನ್ನುಂಟುಮಾಡಬಹುದು ಇನ್ನೂ ಯುವಕರಾದ ನೀವು ನಿಮ್ಮ ಸಮಾಜ, ನಗರ ಸಂಸ್ಥಾನ ಮತ್ತು ಒಟ್ಟು ದೇಶದ ಸೇವೆಗೆ ಸಿದ್ಧವಾಗಿ ಧ್ಯಾನಿಸುತ್ತಿರಿ 'ಸರ್ವೇಜನಾಸ್ಸುಖಿನೋಭವಂತು' ಎಂಬ ಲೋಕಕ್ಷೇಮಕ್ಕಾಗಿಯೇ ಪ್ರಾರ್ಥಿಸಿ ಬರುವಂತಹ ಸೇವೆಗಾಗಿಯೂ, ಅದಕ್ಕಾಗಿ ಕಷ್ಟಗಳನ್ನು ಸಹಿಸುವುದಕ್ಕಾಗಿಯೂ, ಮತ್ತು ಭರತಖಂಡದ ಪುನರುಜ್ಜೀವನಕ್ಕಾಗಿಯೂ ಭಗವಂತನು ನಿಮಗೆ ಶಕ್ತಿಸಾಮರ್ಥ್ಯಗಳನ್ನು ಕೊಡುವಂತೆ ಆತನನ್ನು ಪ್ರತಿದಿನವೂ ಪ್ರಾರ್ಥಿಸಿರಿ — ಆ ಚ

ಕುಂಚಿಟಿಗರ ವಿದ್ಯಾಭಿವೃದ್ಧಿ ನಿಧಿ.

ಶ್ರೀಮತಿ ಅಲಮ್ಮನವರು ತಮ್ಮ ಯಜಮಾನರಾದ ಮ|| ಜೆ ಕೆ ನರಸಿಂಹಯ್ಯನವರ ಹೆಸರಿನಲ್ಲಿ ಮಾಡಿದ ಉದಾರವಾದ ಸಹಾಯ

ಕುಂಚಿಟಿಗರು ಹಿಂದೂಸ್ಥಾನದಿಂದ ದಕ್ಷಿಣಕ್ಕೆ ತೆರಳಿಬಂದವರು ಇವರಲ್ಲಿ ಅನೇಕರು ಧೀರರಾಗಿ ಶತ್ರುಗಳೊಡನೆ ಕಾದಾಡಿ ರಾಜ್ಯ ಕಟ್ಟಿ, ಯಶೋವಂತರಾಗಿದ್ದರು ಮಿಕ್ಕವರು ಕೃಷಿ ಕೈಗಾರಿಕೆ ವ್ಯಾಪಾರಗಳಲ್ಲಿ ಅಗ್ರಗಣ್ಯರೆನಿಸಿದರು ಇವರ ಪರಾಕ್ರಮ, ಔದಾರ್ಯಗಳನ್ನು ತಿಳಿಸತಕ್ಕ ಅನೇಕ ಕುರುಹುಗಳಿವೆ ಹೀಗಿದ್ದಾಗ್ಯೂ ಈ ಸಮಾಜವು ಧೈರ್ಯ ಪರಾಕ್ರಮಗಳನ್ನು ತೊರೆದು ಕೃಷಿ, ಕೈಗಾರಿಕೆ, ವ್ಯಾಪಾರಗಳಲ್ಲಿ ಬಹಳ ಹಿಂದುಳಿದಿದೆ ಇದಕ್ಕೆ ಕಾಲದೇಶಕ್ಕನುಸಾರವಾದ ಅಭಿವೃದ್ಧಿಯನ್ನವಲಂಬಿಸದಿರುವುದೇ ಕಾರಣ ಇವರಲ್ಲಿ ಶೇಕಡ ೧ ರಂತೆಯು ಕೂಡ ಅಕ್ಷರ ಒಲ್ಲವರಿಲ್ಲ ಪೂರ್ವದ ಬುಡಕಟ್ಟಿನ ಏಕಮತ್ಯವೆಲ್ಲಾ ಹೋಗಿದೆ ಇಂಥಾ ದುಸ್ಥಿತಿಯನ್ನು ನೋಡಿ, ವಿದ್ಯಾಪ್ರಚಾರಕ್ಕೂ ಏಕಮತ್ಯಸಾಧನಕ್ಕೂ ಅನುಕೂಲವಾಗುವಂತೆ ಮೂರು ತಿಂಗಳ ಹಿಂದೆ ಒಂದು ಸಂಘವು ಏರ್ಪಾಡಾಯಿತು ಎಲ್ಲಾ ಹಿರಿಯರೂ ಇದರಲ್ಲಿ ಸಾನುಭೂತಿಯುಳ್ಳವರಾಗಿ, ಅದರ ಕೆಲಸದಲ್ಲಿ ಆಸಕ್ತಿಯನ್ನು ವಹಿಸಿ ನಿಂತರು ವಿದ್ಯಾಭಿವೃದ್ಧಿ ನಿಧಿಗೆ ಮೈಸೂರು ಏನರಿಂದಲೇ ಒಂದು ಲಕ್ಷ ರೂಪಾಯಿ ವಾಗ್ದಾನವಾಯಿತು ಇದರಲ್ಲಿ ಲೇಟ್ ಸಾಹುಕಾರ್ ಜೆ. ಕೆ ನರಸಿಂಹಯ್ಯನವರ ಧರ್ಮಪತ್ನಿ ಶ್ರೀಮತಿ ಅಲಮ್ಮನವರು ಅವರ ಜ್ಞಾತಿಗಳಾದ ಮ|| ರಾ|| ನರಸಿಂಹಯ್ಯನವರು ಸಹ ತಮ್ಮ ಹಿರಿಯರಾದ ಲೇಟ್ ಸಾಹುಕಾರ್ ಜೆ ಕೆ ನರಸಿಂಹಯ್ಯನವರ ಹೆಸರಿನಲ್ಲಿ 10,000 ರೂಪಾಯಿಗಳಷ್ಟು ದಾನ ಮಾಡಿರುವುದು ತುಂಬಾ ಸ್ತುತ್ಯವಾಗಿರುತ್ತದೆ ಇಷ್ಟು ಅಪಾರವಾದ ಪ್ರಥಮ ಸಹಾಯವು ಇತರ ಮಹನೀಯರಿಗೂ ಮಾರ್ಗದರ್ಶಕವಾಗಿ ಪರಿಣಮಿಸಿದೆ. ಇದಕ್ಕಾಗಿ ಇಡೀ ಕುಂಚಿಟಿಗ ಜನಾಂಗವೇ ಅವರಿಗೆ ಚಿರಋಣಿಯಾಗಿರುವುದು ಭಗವಂತನು ಅವರಿಗೂ ಮೃತರಾದ ಜೆ ಕೆ ನರಸಿಂಹಯ್ಯನವರ ಆತ್ಮಕ್ಕೆ ಶಾಂತಿಯನ್ನೀಯಲಿ ಸಮಾಜದವನು

ಗೃಹಕೃತ್ಯದ ನೋಟೀಸು

ಹೊಳೆನರಸೀಪುರ ತಾಲ್ಲೂಕು ದೊಡ್ಡ ಕಾಡನೂರು ಹೋಬಳಿ ನೇರಳೆಹಳ್ಳಿಯಲ್ಲಿರುವ ವೀರಶೈವಮತದ ಕರಿಬಸವೇಗೌಡನ ಮಗ ದ್ಯಾವಪ್ಪ ಉರಫ್ ಅಪ್ಪಾಜಯ್ಯ ಈ ಮೂಲಕ ಸಮಸ್ತ ಜನರಿಗೂ ತಿಳಿಯಪಡಿಸುವದೇನೆಂದರೆ—

ನಾನು ಮತ್ತು ನನ್ನ ಅಣ್ಣ ಸತಿ ಬಸಪ್ಪ ಸಹ ಕರಿಬಸವೇಗೌಡ, ಮಕ್ಕಳು ನಮ್ಮ ಪಿತ್ರಾರ್ಜಿತ ಸ್ವತ್ತಲ್ಲವೂ ಅವಿಭಕ್ತ ಕುಟುಂಬಕ್ಕೆ ಸೇರಿರುತ್ತದೆ ನನ್ನ ಅಣ್ಣನಿಗೆ 1 ವರ್ಷದ ಬಸಪ್ಪನೆಂಬ ಒಬ್ಬ ಮಗನು ವಾಸ್ತವದಲ್ಲಿ ನಾನೂ ನನ್ನ ಸತಿ ಅಣ್ಣ ಬಸಪ್ಪ ಸಹ ಇದೇ ಗ್ರಾಮದ ಸಾಹುಕಾರ ಶ್ರವಣಗೌಡರಲ್ಲಿ ಮಾಡಿರುವ ಸಾಲವನ್ನು ಸ್ವತ್ತನ್ನು ಮಾರದೆ ಪಾವತಿಮಾಡಲಿಕ್ಕೆ ತೀರಿಸಿ ನನ್ನ ಭಾಗ್ಯವಾದವಂಶದ ವಿಭಾಗಮಾಡಿಕೊಡುತ್ತೇನೆಂದು ಹೇಳಿದರೂ ನನ್ನ ಅಣ್ಣನ ಹೆಂಡತಿ ಬಸಮ್ಮನು ಕೇಳದೆ ಜನರ ದುರ್ಬೋಧೆಯಿಂದ ನನ್ನ ಅನುಮತಿಯಿಲ್ಲದೆ ಅವಿಭಕ್ತ ಆಸ್ತಿಯನ್ನು ಪರಾಧೀನ ಮಾಡುವ ಪ್ರಯತ್ನದಲ್ಲಿರುತ್ತಾಳೆಂದು ಕೇಳುತ್ತೇನೆ ಈಗಿರುವ ಸಾಲವನ್ನು ತೀರಿಸಲು ನಾನು ಸಿದ್ಧನಾಗಿರುವುದರಿಂದಲೂ ನನ್ನ ಅನುಮತಿಯಿಲ್ಲದೆ ಸ್ವತ್ತನ್ನು ಮಾರಲು ನನ್ನ ಅತ್ತಿಗೆ ಬಸಮ್ಮನಿಗೆ ಅಧಿಕಾರವಿಲ್ಲದ್ದರಿಂದಲೂ ಯಾರಾದರೂ ಆಕೆಯಿಂದ ಕ್ರಯ, ಭೋಗ್ಯ, ಆಧಾರ ಮಾಡಿಕೊಂಡರೆ ನಾನಾಗಲಿ ಕಟುಂಬದ ಸ್ವತ್ತಾಗಲಿ ಬದ್ಧರಾಗ ವುದಿಲ್ಲವೆಂದು ಎಚ್ಚರಿಸುತ್ತೇನೆ [3—2]

ಸ್ವೀಕಾರ.

ಶ್ರೀ ವೀರನಂಗಪ್ಪನವರ ಅಸ್ತಿತಾಂಬೂಲಸಂಭಾವನೆಯ ಬಗೆಗೆ ಕೆಳಗೆ ಕಂಡ ವಿವಾಹ ಮೊದಲಾದ ಶುಭಕಾರ್ಯಗಳಲ್ಲೂ ಇತರ ಸಂದರ್ಭಗಳಲ್ಲೂ ಬೆಗೆದ ಕಳುಹಲ್ಪಟ್ಟ ಮೊಬಲಗನ್ನು ವಂದನಾಪೂರ್ವಕವಾಗಿ ಸ್ವೀಕರಿಸಿರುತ್ತೇವೆ — ಸಂ

ಬೆಂಗಳೂರು ಪಟೇಲರು ಮಿಣಿಗೆ ಆರ್ ಚಾಮಣ್ಣನವರ ಮಕ್ಕಳು ಮ|| ಪಿ ಎ ಭದ್ರಪ್ಪನವರ ಜ್ಯೇಷ್ಠಪುತ್ರಿ ಚಿ|| ಸೌ|| ಶಾರದಾಂಬನನ್ನು ಕೆಂಪಾರದ ಮ|| ಭರಮಶೆಟ್ಟರ ನಂಜುಂಡಪ್ಪನವರ ಪುತ್ರ ಚಿ|| ಚನ್ನಬಸಪ್ಪನವರಿಗೆ ಕೊಟ್ಟು ನಡಸಿದ ವಿವಾಹಮಹೋತ್ಸವದಲ್ಲಿ ವಧೂವರರ ಕಡೆಯಿಂದ ಬಂದ್ದು 6 ರೂ

ಪತ್ರವ್ಯವಹಾರ.

ಪತ್ರವ್ಯವಹಾರದ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು — ಸಂಪಾದಕ.

ಚಾಮರಾಜನಗರದ ಚಾಮರಾಜಗರದ ನಾಲಾ ಅವ್ಯವಸ್ಥೆ.

ಚಾಮರಾಜನಗರದ ಕರೆಗೆ ನೀರು ಬರಲು ಏರ್ಪಡಿಸಿದುವ ನಾಲೆ ಕೆಲಸವನ್ನು ಮುಗಿದಿಲ್ಲ ಅದಕ್ಕಾಗಿ ತೆಗೆದುಕೊಂಡಿರುವ ಜಮೀನು ಕಂಪನ್ಸೇಷನ್ ಹಣ ಇನ್ನೂ ಬಾಕಿಯಾಗಿಲ್ಲ ಕುಡಿಯುವ ನೀರಿಗೆ ಅಭಾವವಾಗುತ್ತಿರುವಾಗ ಡಿ. ಪಿ ಡಬ್ಲ್ಯು ಇಲಾಖೆಯವರು ವಿಳೆ

ಮಾಡಬೇಕೆಂಬ ಅಭಿಪ್ರಾಯವಲ್ಲವೆ? ... ಬೇಗ ... ಉಪಕಾರ ಮಾಡಬೇಕು.

ಸ್ಥಳವಂತ

ಶೃಂಗೇರಿಯಲ್ಲಿ ನಡೆದ ... ಬಲಿ

ಈ ... ಶಾಸ್ತ್ರಿಯವರ ಕಳೆದ ... ರಲ್ಲಿ ನಡೆದ ಅನೇಕ ... ಪ್ರಾಣಿಬಲಿ ... ನಿಲ್ಲಿಸಬೇಕಾಗಿ ... ಹಾಲಿ ... ಗಳನ್ನು ... ಇಂಥ ಪ್ರಾಣಿಬಲಿಯನ್ನು ನಡೆಯಿಸ ... ಅನೇಕ ... ಗಳನ್ನು ... ದರಲ್ಲಿ ಲೋಕಪ್ರಖ್ಯಾತಿಯನ್ನು ಹೊಂದಿದ ... ಗುರುಗಳವರ ಸ್ಥಳದಲ್ಲಿಯೇ ಈ ... ಬಹು ವಿಸ್ಮಯ ... ಈ ಸಂಸ್ಥಾನದಲ್ಲಿ ಇಂಥ ಪ್ರಾಣಿಬಲಿ ... ಪದ್ಧತಿಯನ್ನು ... ಪ್ರಾರ್ಥಿಸುತ್ತೇನೆ.

ಕನ್ನ ... ಚಂದಾದಾರ

ಕಮಲದಳ ಹಿರಿಯೂರ್

ದೇಶಸಂಚಾರಾರ್ಥವಾಗಿ ಮೈಸೂರಿನಿಂದ ಹೊರಟ 5 ಜನ ರೋವರ್ ಸ್ಕೌಟುಗಳು ಸಂಚಾರಮಾಡುತ್ತ ... ತಾ 11-2-28 ರಲ್ಲಿ ಬಂದರು. ಇಲ್ಲಿನ ... ಸ್ಕೌಟ್ ... ಅವರಿಗೆ ... ಗೌರವದಿಂದ ಬರಮಾಡಿದರು. ... ಎಚ್. ಎಸ್. ವೆಂಕಟರಾಮಯ್ಯ ... ಕೃಷ್ಣರಾಜೇಂದ್ರ ... ಅಧ್ಯಕ್ಷತೆಯಲ್ಲಿ ... ಜಿ. ಹೆಚ್. ... ಸ್ಕೌಟು, ಹಿರಿಯೂರ್

ಮಾಗಡಿ ವೈಶ್ಯ ಶ್ರೀ ಕನ್ನಿಕಾಪರಮೇಶ್ವರಿ ವೇದವಿದ್ಯಾಲಯ

ಮಾಗಡಿಗ್ರಾಮದ ಬ್ರಾಹ್ಮಣ ಪುರೋಹಿತರುಗಳು ವೈಶ್ಯರ ಮನೆಗಳಿಗೆ ಹೋಗಿ ... ವೈಶ್ಯರ ಮನೆಗಳಿಗೆ ... ವೇದವಿದ್ಯಾಭ್ಯಾಸವನ್ನು ... ಶ್ರೀ ಕನ್ನಿಕಾಪರಮೇಶ್ವರಿ ವೇದವಿದ್ಯಾಲಯವು ತಾ ... 1-28 ರಲ್ಲಿ ... ವೈಶ್ಯ

... ನಗರದಲ್ಲಿ ಒಂದು ಸನ್ಮಾನ ...

ಕಳೆದ 21-2-28 ರಲ್ಲಿ ... ವೈಸ್ ಪ್ರೆಸಿಡೆಂಟು ... ಮುಂದೆಯೂ ... ವೈಸ್ ಪ್ರೆಸಿಡೆಂಟರ ... ವಿ. ಎಸ್. ...

ಕುಮ್ಮಾರಿನ ನವ್ಯ ... ಕಮಿಷನರು

ಇವರು ... ಮಹಾರಾಜರವರಿಗೆ ... ಬಂಧುಗಳಾಗಿರುವುದರಿಂದ ... ವೈಶ್ಯರ ... ಸರ್ಕಾರದವರು ... ಪೂರ್ವಪದ್ಧತಿ ... ವ್ಯವಸಾಯಗಾರರ ಹಿತೈಷಿ

ವೀರಶೈವ ಸ್ತ್ರೀಯ ... ವ್ಯಾಲಾಪ

ನವ್ಯ ವೀರಶೈವರ ... ಮುಂಬೈ ... ತಾ 11-2-28 ... ಇಂಗ್ಲೆಂಡಿನಲ್ಲಿ ... ಎಂ. ಎ. (ಲಂಡನ್) ... ವೀರಶೈವ ಮಹಿಳಾ ವಿದ್ಯಾಭಿಲಾಷಿ

ಬೆಂಗಳೂರು ಪಟ್ಟಣದ ... ಮ್ಯುನಿಸಿಪಾಲಿಟಿಯ ವಿಚಾರಗಳು

ಕಳೆದ ... ಊರಿನಲ್ಲಿ ಮ್ಯುನಿಸಿಪಾಲಿಟಿಯು ... ಪ್ರೆಸಿಡೆಂಟು ...

... ಮೈಸೂರು ಪೇಟೆಯ ... 10-13 ... ಟವರ್ ಹಿತಚಿಂತಕ

ವೀರಶೈವರ ಕೆಲ ತಪ್ಪುಗಳು

ವೀರಶೈವರಲ್ಲಿ ಅನೇಕ ... ಶೈವರು ... ಬ್ರಾಹ್ಮಣರು ... ವೀರಶೈವ ವಿದ್ಯಾರ್ಥಿಗಳ ... ಯುವರಾಜರ ...

... ಮಿ. L. P. Rice ... "Kanarese Literature" ಎಂಬ ಗ್ರಂಥದಲ್ಲಿ — "The Lingayets are strict vegetarians. On this account, all other castes except Brahmins take meals in their house" ಎಂದು ... ಬ್ರಾಹ್ಮಣರ ...

ಗಳಲ್ಲ ಅಕ್ಷತೆಗಳು ಬ್ಲಿ ಲಿಂಗಾಯತರಿಗೆ ಬೇರೆ ಧೋರಣೆ ನಿಯೋಜಿ ರತಾ ೩ ನೆ ವ ಕ್ರಿಗಳೆಲ್ಲವನ್ನೂ ಆಲೋಚಿಸಿ ಈಶ್ವರನು ತನ ಆತ ದೀರ್ಘವಾಗಿ ಇರಲೆಂದು ಬಯಸುವಂತೆ ನಡೆಯುವರಲ್ಲಿ ಬ್ರಹ್ಮ ಕಳೆ ಕಗ ಆಶೀರ್ವಾದ ಗುರುವರ್ಯರು ಜನ ಗಾಣಿಕೆ ಕೃತ್ಯ ಎಂದು ಮುಂತಾಗಿ ಮೇಲೆ ವಸ್ತು ಪೂಜೆಯಿಂದಲ್ಲಿ ತಮ್ಮ ಒಟ್ಟು ಮಿಗಳ ಮೂರಕ್ಕೇ ಕೊಡಬೇಕು ತಿರುಗಿ ನಾವು ಎದರಿಂದ ಹೋಗಿರುವೆವು ಎಲ್ಲರೂ ಒಟ್ಟು ದೀಗ ಕೈಕ ಮಠೋತ್ಸವದ ಕಡೆಗೆ ನಮಗೆ ಕೊಂಡಿರು

ಜೀಗೆ ಬಸವಲಿಂಗಪ್ಪ

ಮುಕ್ತಿಗಿರಿ ಮಹಾಕ್ಷೇತ್ರದ ವೈಭವ

ಕೋಲಾರ ಡಿಸ್ಟ್ರಿಕ್ಟು ಚಿಂತಾಮಣಿ ತಾಲ್ಲೂಕು ಮುರಗಮಲ್ಲ ಹೋಬಳಿ ಚಲಿಮಕೋಟೆ ಮುಕ್ತಿಗಿರಿ ಮಠವು ಶ್ರೀಮದ್ವೀರಶೈವಾಚಾರ್ಯರ ವಂಶ ಗದ್ದುಗೆಯಾಗಿರುವುದರಿಂದ ಗಿರಿಯ ಹತ್ತಿರವೇ ಪೂರ್ವದಿಕ್ಕಿನಿಂದ ಕೂಡಿರುವ ಈ ಕ್ಷೇತ್ರಕ್ಕೆ ಪರಶಿವಲಿಂಗಪ್ರಸಾದಸ್ಥಲಗಳಿಂದ ಕೂಡಿದ ಶ್ರೀ ಶಿವಯೋಗಿ ಸಿದ್ಧಲಿಂಗ ದೇಶೀಕವರೇಣ್ಯರವರು ಈಗ ಸುಮಾರು 30 35 ವರುಷದ ಕೆಳಗೆ ಅನೇಕ ಕ್ಷೇತ್ರಗಳನ್ನು ಸಂಚರಿಸಿ ಬಂದು ನೋಡಲಾಗಿ ಇದು ತಪಸ್ಸಿಗೆ ಯೋಗ್ಯವಾದ ಸ್ಥಳವೆಂದು ತಿಳಿದು ಸಂಕಲ್ಪಿಸಿ ಯಾವ ಕಟ್ಟಡದ ಅಕ್ಷಯವಿಲ್ಲದೆ ಪರ್ವತಗಳ ಗುಹಾದಿಗಳಲ್ಲಿ ವಾಸಮಾಡುತ್ತ ಬಂದಂಥ ಮುಮುಕ್ಷುಗಳನ್ನುದ್ಧರಿಸುತ್ತ ಶಿಷ್ಯಸಮೂಹದೊಡನೆ ಬ್ರಹ್ಮಜ್ಞಾನೋಪದೇಶದಿಂದ ತಪಸ್ಸನ್ನಾಚರಿಸಿ ಮಠವನ್ನು ಸ್ಥಾಪಿಸಿ ವಿಚಾರಪರರೂ ಸದ್ಗುಣಿಗಳೂ ಆದ ಈಗಿರುವ ಶ್ರೀಗಳವರಿಗೆ ಉತ್ತರಾಧಿಕಾರವನ್ನು ಕೊಟ್ಟು ಸುಮಾರು 8-9 ವರುಷದ ಕೆಳಗೆ ಶಿವಸಾಯುಜ್ಯವನ್ನೈದಿದರು. ಅಂದಿನಿಂದಲೂ ಇವರ ಸಾಹಸದಿಂದ ಮಠವು ಸಾಲದ ಕಟ್ಟಡಗಳಿಂದ ದಿನೇ ದಿನೇ ಅಭಿವೃದ್ಧಿಗೆ ಬರುತ್ತಿರುವುದು ಸರ್ವರೂ ತಿಳಿದಿರುವ ಸಂಗತಿ. ಈ ಮಠಕ್ಕೆ ಅನನ್ಯಭಕ್ತಿಯಿಂದ ನಡೆದುಕೊಳ್ಳುತ್ತಿರುವವರು ಈ ಪ್ರಾಂತ್ಯ ವೀರಶೈವಜನಸಾಮಾನ್ಯವು ಆಗಿರುವುದರಿಂದ ಈ ಡಿಸ್ಟ್ರಿಕ್ಟಿಗೆ ಶ್ರೇಷ್ಠವಾಗಿರುವ ಈ ಮಠದ ಮೂರ್ತಿಗಳ ತಪೋಬಲವೂ ದಯಾಳುತ್ವವೂ ವರ್ಣಿಸಲಸದಳವಾಗಿರುವುದು. ಇದರ ಪ್ರಸಂಗವಾಗಿ ಈ ಸಂವತ್ಸರವು ತಾ॥ 16 2-29 ನೇ ಶನಿವಾರ ಅಂಕುರಾರ್ಪಣ ಮೊದಲಾದ ಕಾರ್ಯಗಳು ತಾ॥ 17 2 29 ನೇ ಭಾನುವಾರ ಪ್ರಾತಃಕಾಲ ಶ್ರೀ ಶಿವಯೋಗಿಸಿದ್ಧಲಿಂಗ ದೇಶಿಕೇಂದ್ರಸ್ವಾಮಿಗಳ ಗದ್ದುಗೆಗೆ ಬೆಂಗಳೂರು ವೇ ಶಿವಯೋಗಿಪ್ಪ ಗಳವರ ಪೌರೋಹಿತ್ಯದಿಂದ ವೇದಘೋಷದೊಡನೆ ನಮಕ ಚಮಕ ರುದ್ರಗಳಿಂದ ಮಹಾರುದ್ರಾಭಿಷೇಕವೂ ಸಹಸ್ರನಾಮ ಪೂಜೆಯೂ ನಡೆದು ತದನಂತರ ಮಠಾಧ್ಯಕ್ಷರಾದ ಶ್ರೀ ಶಿವಯೋಗಿ ಬಸವರಾಜ ಮಹದೇಶಿಕೇಂದ್ರ ಮಹಾಸ್ವಾಮಿಗಳವರ ಪಾದವನ್ನು ವೇದಪರರಿಂದಲೂ ಭಕ್ತರುಗಳಿಂದಲೂ ಅಷ್ಟೋತ್ತರ ಸಹಸ್ರಬಿಲ್ವಾರ್ಚನೆ ಮೊದಲಾಗಿ ಧೂಪದೀಪ ನೈವೇದ್ಯಾದಿಗಳಿಂದ ಪೂಜಿಸಿ ಮನದಣಿಯುವಂತೆ ಆನಂದಪರವಶರಾದರು. ತರುವಾಯ ಗುರುಗಳಿಂದ ಕೃಪಾದೃಷ್ಟಿಯನ್ನು ಹೊಂದಿ ನಗರ ಪ್ರದಕ್ಷಿಣೆಯಲ್ಲಿ ಧ್ವಜ ಛತ್ರಿ ಚಾಮರಗಳೊಡನೆ ವಾದ್ಯಘೋಷದಿಂದ ಭಜನಾ ಶಿವನಾಮಸಂಕೀರ್ತನಾದಿಗಳಿಂದ ದ ಹಾಕ್ಷೇತ್ರವು ಕೈಲಾಸದಂತೆ ಭಾಸಮಾನವಾಗುತ್ತಿತ್ತು. ಅಲ್ಲಿಂದ ಮುಕ್ತೀಶ್ವರ, ಸಪ್ತಮಾತೃಕಾ ವೇಣುಗೋಪಾಲ, ವಿಶ್ವೇಶ್ವರ, ಬಸವೇಶ್ವರ ಆಂಜನೇಯ ಮೊದಲಾದ ದೇವಸ್ಥಾನಗಳಲ್ಲಿ ದೇವರುಗಳಿಗೆ ಪಂಚಾಮೃತದೊಡನೆ ಪೂಜೆಯೂ ಮಹಾಮಂಗಳಾರತಿಯೂ ನಡೆದು ಸರ್ವರೂ ಶ್ರೀಗಳವರಿಂದ ತೀರ್ಥಪ್ರಸಾದ ಸ್ವೀಕರಿಸಿದನಂತರ ಸಾಧುಸತ್ಪುರುಷರೂ ಸರಕಾರದ ಅಧಿಕಾರಿಗಳೂ ಬಡವರೂ ಸುಮಾರು 1 5 ಸಾವಿರ ಜನರು ಅನ್ನಸಂತರ್ಪಣೆಯಿಂದ ತೃಪ್ತಿಪಡಿಸಲ್ಪಟ್ಟರು. ಆ ರಾತ್ರಿ ಸಾಯಂಕಾಲ ಮಗ್ಗಿಗಳಿಂದ ಶೃಂಗರಿಸಲ್ಪಟ್ಟ ಮಂಟಪದಲ್ಲಿ ಶ್ರೀಗಳವರ ದೊಡ್ಡ ಫೋಟೋವನ್ನು ಬಿಜಯಂಗೈಸಿ ಕಳಸ ಬಿರುದುಗಳಿಂದಲೂ ಬಾಣಬಿರುಸುಗಳಿಂದಲೂ ವಾದ್ಯ ವೇದಘೋಷಗಳಿಂದಲೂ ಉತ್ಸವವು ಬಹಳ ವಿಜೃಂಭಣೆಯಾಗಿ ನಡೆಯಿತು. ಮಹಿಳೆಯರು ಆರತಿಯೆತ್ತಿ ಮಂಗಳಗಳನ್ನು ಹಾಡುತ್ತ ಅಲ್ಲಲ್ಲಿ ವಾಗಣೆಗಳಲ್ಲಿ ಪೂಜಿಸುತ್ತ ಮಠಕ್ಕೆ ಉತ್ಸವವು ಬಿಜಯಮಾಡಿಸಿದನಂತರ ಮ॥ ಪಟ್ಟಾಭಿರಾಮದಾಸರವರಿಂದ ಉಪದೇಶ ಶಿವಕಥಾ ಕೀರ್ತನೆಗಳು ಬೆಳಗಿನವರೆಗೂ ನಡೆಸಲ್ಪಟ್ಟವು. ಅಧಿವಾಸನಾದಿಗಳಾದ ವ ಬೆಂಗಳೂರು ಯೂನಿಯನ್ ಗರಡಿ ಚಿಕ್ಕವೀರಪ್ಪನವರು ಮ॥ ಮ್ಯುನಿಸಿಪಲ್ ಕೌನ್ಸಿಲರ್ ಮೆಂಬರು ಚ ಶಿವಸಿದ್ದಪ್ಪನವರು ಮೈಸೂರು ಬಾಡಿಗಾರ್ಡ್ ಕೃಷ್ಣರಾವ್ ಮಾನೆಯವರು ಶಿಷ್ಟಗಟ್ಟದ ಮ ವಿರೂಪಾಕ್ಷಪ್ಪನವರು ಮ ಪೋಟಿಪ್ಪನವರು, ವಡಿಗೇನಹಳ್ಳಿ ಆನೇಕಲ ನಂಜುಂಡಪ್ಪನವರು ಬೆಂಗಳೂರು ಮೈಸೂರು ಲಾಯರ್ಸ ಸೋಷಿಯೇಷನ್ ಲಿಂಬಾಣಿದಾಸ್ ಮುನ್ಸಾಫಿ ಬೀಚಗಾನಹಳ್ಳಿಯವರು ಚಿಂತಾಮಣಿ ಮ॥ ಶಿವ ಬಸವರಾಜಪ್ಪರು ಶ್ರೀನಿವಾಸಪುರದ ಮ ವೀರಪ್ಪನವರು ಮ॥ ಸೋಮಪ್ಪನವರು ದೊಡ್ಡಬಳ್ಳಾಪುರದ ಸರಾಫ್ ಪುಟ್ಟಣ್ಣನವರು ಬಿ ಸಿದ್ದಪ್ಪನವರು ಇನ್ನೂ ಕೆಲವು ಉದಾರಮತಿಗಳಿಂದ ಕಾರ್ಯಕಲಾಪಗಳು ಬಹಳ ವಿಜಾರಣೆಯಿಂದಲೂ ವಿಜೃಂಭಣೆಯಿಂದಲೂ ಸಾಂಗವಾಗಿ ನಡೆದವು. ಗೌರ್ನವೆಂಟ ಉತ್ಸವಾರಿ ಬಹಳ ಸಮರ್ಪಕವಾಗಿದ್ದಿತು. ಇಲ್ಲಿ ಎಲ್ಲಿಗೆ ಸ್ವಲ್ಪ ಕೊಂಡರಿ ಇದ್ದದ್ದರಿಂದ ಗೌರ್ನಮೆಂಟನವರು ಒಂದು ಭಾವಿಯನ್ನ ಕಟ್ಟಿಸಿ ಕೊಟ್ಟರೆಂದು ಕೇಳಿ ಬಹಳ ಸಂತೋಷಪಡುತ್ತೇವೆ. ತಾ॥ 18-2-29 ನೇ ಸೋಮವಾರ ಮೊಟ್ಟಂಬು ದೊಡ್ಡನುಮಪ್ಪರು ಮಠದ ಉಪದೇಶಕ್ಕೆ ಶಿವಯನ್ನು ಸಂತಸು ಮಾಡೋಣ ನಡೆಸಿ ಚತುರ್ಮಾಸ ಪ್ರದವಾದ ಕೆಲವು ವಿಷಯಗಳನ್ನು ತಿಳಿಸಿದಾಗ ಸಾಸಾದವು. ಮುಂದೆ ಏಪ್ರಿಲ್ ತಾ॥ 16 1-9 ಕ್ಕೆ ಒಂದು ವಿವಾಹಂಗು ನಡೆಸಲು ಸರ್ವಸಮ್ಮತಿಯಿಂದ ನಿಶ್ಚಯವಾಯಿತು. ಬಂದಿದ್ದ ಭಕ್ತ ಮಹಾಜನರೆಲ್ಲರೂ ಶ್ರೀಗಳವರ ಆಶೀರ್ವಾದವನ್ನು ಪಡೆದು ಜಯ ಜಯಕಾರ ಮಾಡುತ್ತ ಕ್ಷೇತ್ರವನ್ನು ಮೂರ್ತಿಗಳನ್ನೂ ಸ್ತೋತ್ರಮಾಡುತ್ತ ತೆರಳಿದರು. ಈ ಕಾರ್ಯಗಳಲ್ಲಿ ಭಾಗಿಗಳಾದ ಸರ್ವರೂ ದಯಾಮಯನಾದ ಭಗವಂತನು ಆಯುರಾರೋಗ್ಯ ಮಂಗಳವನ್ನಿಯಲಿ

ಓರ್ವ ವ ಬಾಧಿತನಾದಿ

ಶ್ರೀ ಶಿವಯೋಗಮಂದಿರ ಯಾತ್ರಾ ಮಹೋತ್ಸವವು

ಅಖಿಲ ವೀರಶೈವಬಾಂಧವರೇ, ಬಹುಕಾಲದಿಂದ ನಡೆದು ಬಂದ ವ ಜಾ ಶಿವರಾತ್ರಿಯ ಮಹೋತ್ಸವವನ್ನು ಆದನ್ನು ಪರಿಪಾಲಿಸುವ ಬಗೆಯನ್ನು ಶಾಸ್ತ್ರಾರ್ಥ ಆಚರಿಸುವಂತಾಗಿದ್ದಿ ಈ ಯೋಗಮಂದಿರ ವಾರಿಧಾರ್ಥಿಗೆ ಲೌಕಿಕ ಲಾಭವು ತಮ್ಮಲ್ಲಿಗೆ ದೊರೆಯ ಬೇಕೆಂದು ಹಿಂದೆ ಇದೆಂದಾಲೋ ಎಂದಿನಂತೆ ಈ ವರ್ಷವೂ ನಡೆಯುವ ಜಾತ್ರೆಯು ಜರುಗಲಿದ ವೆ ಈ ಬೇರೆ ಬೇರೆ ಪ್ರಾಂತಗಳಿಂದ ಧನ ಕನಕಾದಿ ದವರು ಶಾಸ್ತ್ರಜ್ಞರೂ ಪ್ರಸಿದ್ಧ ವ್ಯಾಖ್ಯಾತರೂ ಮತ್ತು ಶೀಲಗಳುಳ್ಳವರೂ ಬರುವರು. ಜಾಸ್ತಿ ದಾವಣಗೆರೆ ಶ್ರೀ ಗಳವರ ಸನ್ನಿಧಿಯು ಇಲ್ಲಿಯೇ ಇರುವುದು. ಈ ಸುಸಂಧಿಯನ್ನು ವ್ಯರ್ಥವಾಗಿ ಕಳೆಯದೆ ಅತ್ಯಕ ಮೆಚ್ಚುಗೆಯಾಗಿರಲಿ ಶ್ರೀ ಶ್ರೀ ಗಳವರ ದರ್ಶನಾಶೀರ್ವಾದಗಳನ್ನು ಪಡೆಯುವರಲ್ಲದೆ ನಂತ ನಿಯ ವಿ ತ ಉದ್ಧಾರಕ್ಕನುವನ್ನು ಐದುವದರಿಂದ ನಾನಾ ಶಿವಾನಂದಕ್ಕೆ ಅರ್ಧರ ಇದೇ ಮಾರ್ಚಿ ತಾ॥ 9ನೇ ಶನಿವಾರ ಶಿವರಾತ್ರಿ ಶಿವಭಜನೆಯೂ ರಾತ್ರಿ ಪ್ರಾತಃಪೂಜೆ ಶಿವ ರ ನೇ ಗಳವರ ಉತ್ಸವವೂ ತಾ॥ 10 ರ ಭಾನುವಾರ ಬಿ. ದಿ ಶ್ರೀ ಶಿವ ಬ ॥ ನಿ ಭಾರ್ಥಿ ದಿ ಅವರಿಸಿಕೊಂಡು ಜ್ಞಾನಗೋಷ್ಠಿಯು ನಡೆಯುವದು. ಸಂಗೀತಪರಿಷತ್ತಿನ ಆಮಂತ್ರಿತರ ಗಾಯಕರು ಕೀರ್ತನಕಾರರು ಇವರಿಂದ ಮತ್ತು ಶ್ರೀ ಬೇರೆ ಬೇರೆ ಸ್ಥಳಗಳಿಂದ ಬಂದ ಪ್ರಸಿದ್ಧ ವ್ಯಾಖ್ಯಾನಕಾರ ಉಪನ್ಯಾಸಗಳಿಂದ ಸಿಂಹಾಸನಾರೋಹಣ ಉತ್ಸವ ಶ್ರೀಮಂಗಳ ಇಳಿ ಬೆ ಸಾಯಿ ಭಜನೆ ಕ ಪ್ರಾರಂಭಿಸುವುದು ಮಹಾ ಅನೇಕ ಶ್ರೀ ಸದ್ಗುರುಗಳ ಶಿವಶೀರ್ವಾದಗಳು ನಡೆಯುವವು. ತಾ॥ 11 ಸೋಮವಾರ ರಥೋತ್ಸವ ಶಿಷ್ಯರ ಪ್ರ ವ್ಯವಸ್ಥೆ ನಗರದ ನಡೆಯುವದು ಪುಣ್ಯ ಪ್ರದಕ್ಷಿಣೆ ಬಂದ ಮತ್ತು ಯೋಗಿಗಳ ಪರೀಕ್ಷೆಯ ಸಲಕ್ಕೆ ಕಡಿಮೆಯಿಲ್ಲದಂತೆ ಮಾಡಲ್ಪಟ್ಟ ಯೋಗ್ಯವೆಂದು ಕಂಡುಬಂದವುಗಳಿಗೆ ತಕ್ಕ ಸಂಭಾವನೆಯು ಕೊಡಲ್ಪಡುವುದು. ಕಾರಣ ತಾವು ತಮ್ಮ ಗ್ರಾಮದ ಅಭಿಮಾನಿಗಳೊಡನೆ ಅವಶ್ಯವಾಗಿ ಬಂದು ಶ್ರೀ ಗಳವರ ದರ್ಶನಾಶೀರ್ವಾದಗಳನ್ನು ಪಡೆಯಬೇಕೆಂದು ಕೋರುವ

ತಮ್ಮ ಹಿತೈಷಿ,

ವ್ಯವಸ್ಥಾಪಕ ಶಿವಯೋಗಮಂದಿರ

ದಾವಣಗೆರೆ ವೀರಶೈವ ವಿದ್ಯಾವರ್ಧಕ ಫಂಡ್ ಸಂಘದಲ್ಲಿ

1-7-27 ರ ಲಾಗಾಯ್ತು 31-6-28 ರ ವರೆಗೆ ನಡೆದ

ಜಮಾ ಖರ್ಚು ಲೆಕ್ಕದ ತಖ್ತೆ

ಜಮಾ,

1 7 27 ರ ವರೆಗೆ ಬ್ಯಾಲೆನ್ಸ್ ಶೀಟಿನಲ್ಲಿ ನಮೂದಿರುವ	
ಮೂಲಧನ	63178-11 0
ಪಕ್ಕೆ ಫಂಡಿನ ವಸೂಲಿಯಿಂದ ನಗದಾಗಿ	3410 16 0
ಮಾಲು ಮಾರಾಟ ಮಾಡಿದ್ದು	361 14-0
ಲಗ್ನ ಮುಂತಾದ ಶುಭಕಾರ್ಯಗಳಿಂದ	123 8-0
ಮೈಸೂರು ಬ್ಯಾಂಕ್ ಷೇರು, ಡಿವಿಡೆಂಡ್ ಸ್ಟೇಟ್ ಲೋನ್ ಮತ್ತು ಫಿಕ್ಸ್‌ಡ್ ಡಿಪಾಜಟ್ ವಗೈರೆಯಿಂದ ಬಂದ ಬಡ್ಡಿ	4586 15 0
ಶ್ರೀ ಪ್ರಭುದೇವರ ಗದ್ದುಗೆ ರಿಪೇರಿಗಾಗಿ ಬಂದದ್ದು	200 0 0
ಬಿಗಟೇರಿ ಸಣ್ಣರಾಚಪ್ಪನವರ ಫಂಡ್	1825 14 0
ಗದಗಿನ ಕುಪ್ಪದ ಅಡಿವಪ್ಪನವರಿಂದ	101 0-0
ಪಂಚರ ಶಿಗಿ ಮಠದ ಜುಟ್ಟೇರಪ್ಪನವರ ಫಂಡ್	14 4 0
ಶ್ರೀ ಬಸವೇಶ್ವರ ಜಯಂತಿ ಫಂಡ್	೨ 0 0
ಶ್ರೀ ಶಿವಯೋಗಾಶ್ರಮದ ಬಾಬತು	6 6 0
ಶ್ರೀ ವಿರಕ್ತಮಠದ ಮನೆ ಬಾಡಿಗೆ	78- 0 0
ಮೈಸೂರು ಮಠದ ಚೆನ್ನವೀರಯ್ಯನವರಿಂದ	735 0 0
ಜುಮ್ಲ	74627 8 6

ಖರ್ಚು

ಮೈಸೂರು ಬ್ಯಾಂಕ್ ಷೇರು 100 ಕ್ಕೆ		10000 0 0
ಮೈಸೂರು ಸ್ಟೇಟ್ ಲೋನ್ ಬಾಂಡ ಶೇ 7 ರಂತೆ		5000 0 0
ಡಿಟೋ	ಶೇ 6½	21100 0 0
ಡಿಟೋ	ಶೇ 6¾	1725 0-0
ಅಂಚೆ ಸೇವಿಂಗ್ಸ್ ಬ್ಯಾಂಕ್ ಡಿಪಾಜಟ್		1688 13 0
ಮೈಸೂರು ಬ್ಯಾಂಕ್ ಫಿಕ್ಸ್‌ಡ್ ಡಿಪಾಜಟ		27537 0 0
ಬಾಂಡೆ ಸಾಮಾನು		107 1 0
ಫರ್ನಿಚರ್		106 0 0
ನಾಲುಕೊಟ್ಟ ಬಾಬತು ರಾಜನಹಳ್ಳಿ ರಂಗಪ್ಪನವರಿಂದ		74- 0 0
ನಗದು ಶಿಲ್ಕು		769 1 0
ಬೋರ್ಡಿಂಗ್ ಖರ್ಚು		1578 0 0
ಫಂಡಿನ ಎಸ್ಟಾಬ್ಲಿಷ್‌ಮೆಂಟ್ ಖರ್ಚು		1018 8-0
ಶ್ರೀಗಳವರ ಮತ್ತು ಮಠದ ಖರ್ಚು		585 12-6
ಕೋಲಾರ ಸೆಕೆಂಡರಿ ಬೋರ್ಡಿಂಗ್ ಖರ್ಚು		183 1 3
ಸ್ಕಾಲರ್‌ಷಿಪ್ ಆ ಕಾಲೇಜ್ ಬಿ ಎ ಇಂಟರ್‌ಮೀಡಿಯಟ್ ಟೆಕ್ನಿಕಲ್ ಸಂಸ್ಕೃತ ಹೈಸ್ಕೂಲ್ ಮಿಡಲ್ ಸ್ಕೂಲು ವಿದ್ಯಾರ್ಥಿಗಳಿಗೆ		2831 0-0
ಬಿಗಟೇರಿ ಸಣ್ಣರಾಚಪ್ಪನವರ ಫಂಡ್ ಸ್ಕಾಲರ್‌ಷಿಪ್		106 0 0
ಸಾದಿಲ್ವಾರ್ ಪೋಸ್ಟೇಜ್ ಸೇರಿ		16 7 ?
ಒಟ್ಟು		4037 8 6

ದಾವಣಗೆರೆ ವೀರಶೈವವಿದ್ಯಾವರ್ಧಕಫಂಡ್ ಸಂಘದ ಮಾನೇಜಿಂಗ್ ಕಮಿಟಿಗೆ 1926-29, 19—30 ನೇ ಸಾಲಿಗೆ ಚುನಾಯಿಸಲ್ಪಟ್ಟ ಮೆಂಬರುಗಳು

(1) ತಿರುಕಪ್ಪನವರ ಮಠದ ಹಡಾಗಿ ರಪ್ಪನವರು ಬ್ಯಾಂಕರ್ಸ್ ಮತ್ತು ಜಮೀನ್ದಾರ್ (ಪ್ರೆಸಿಡೆಂಟ್) (2) ಯಜಮಾನ್ ಮೋತಿ ವೀರಪ್ಪನವರು ಜಮೀನ್ದಾರ್ ಮತ್ತು ಕಮಿಷನ್ ಏಜಂಟ್ (ವೈಸ್‌ಪ್ರೆಸಿಡೆಂಟ್) (3) ಹೆಚ್ಚಾಳು ಮಠದ ಸಿದ್ಧರಾಮಯ್ಯನವರು ಬಿ ಎ ಎಲ್‌ಎಲ್ ಬಿ, ಅಡ್ವೊಕೇಟ್ (ಸೆಕ್ರೆಟರಿ (4) ಮೈಸೂರುಮಠದ ಚೆನ್ನವೀರಯ್ಯನವರು ಜಮೀನ್ದಾರ್ ಕಮಿಷನ್ ಏಜಂಟ್ ಡಿಸ್ಟ್ರಿಕ್ಟು ಬೋರ್ಡು ಮೆಂಬರು (ಅಸಿಸ್ಟಂಟ್ ಸೆಕ್ರೆಟರಿ ಮತ್ತು ಟ್ರೆಜರರ್) (5) ಗೌಡರಮಠದ ನ ಗಮ್ಮನವರ ಎ ಎ, ಬಿ ಎಲ್, ಅಡ್ವೊಕೇಟ್ (ಆಡಿಟರ್) (6) ಅರಕೆರೆ ಚೆನ್ನಬಸಪ್ಪನವರು ಜಮೀನ್ದಾರ್, ಕಾಟನ್‌ಮರ್ಚೆಂಟ್ ವ ಕರೆಸ್ಪಾಂಡೆಂಟ್ ಅನಿಲ್ಲ ಮೆಂಬರು (7) ಪಲ್ಲಾಗಟ್ಟ ಗುರುಸಿದ್ದಪ್ಪನವರು ಜಮೀನ್ದಾರ್, ಮತ್ತು ಕಮಿಷನ್ ಏಜಂಟ್ (8) ಬೇತೂರು ಸಣ್ಣತಿಪ್ಪನವರು ಜಮೀನ್ದಾರ್ ಮತ್ತು ಕಮಿಷನ್ ಏಜಂಟ್ (9) ಮಾಗಾನಹಳ್ಳಿ ಗುರುಬಸಪ್ಪನವರು ಜಮೀನ್ದಾರ್ ಮತ್ತು ಕಾಟನ್‌ಮರ್ಚೆಂಟ್ (10) ಜಂಬಿಗೆಮಠದ ಪ್ರಭಯ್ಯನವರು ಜಮೀನ್ದಾರ್ ಮತ್ತು ಕಮಿಷನ್ ಏಜಂಟ್ (11) ಬೆಳ್ಳುಳ್ಳಿ ಚೆನ್ನವೀರಪ್ಪನವರು ಜಮೀನ್ದಾರ್ (12) ಅಂದನೂರು ಮುರುಗೆಪ್ಪನವರು ಜಮೀನ್ದಾರ್ ಮತ್ತು ಕಮಿಷನ್ ಏಜಂಟ್ (13) ಅಂದನೂರು ಕೊಟ್ರಬಸಪ್ಪನವರು ಜಮೀನ್ದಾರ್ ಮತ್ತು ಕಮಿಷನ್ ಏಜಂಟ್ (14) ಬಿಸ್ಲಹಳ್ಳಿ ವೀರಭದ್ರಪ್ಪನವರು ಜಮೀನ್ದಾರ್ ಮತ್ತು ಮರ್ಚಂಟ್ (15) ರಾಜನಹಳ್ಳಿ ಗೂಡಪ್ಪನವರು ಕಮಿಷನ್ ಏಜಂಟ್ ಮತ್ತು ಮ್ಯುನಿಸಿಪಲ್ ಮೆಂಬರು

ಪ್ರತಿವರ್ಷವು ಸ್ಕಾಲರ್‌ಷಿಪ್ ಅಪೇಕ್ಷಿಸತಕ್ಕ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚುತ್ತ ಇದೆ. ಈ ಫಂಡಿನ ವರಮಾನವು ವರ್ಷೇವರ್ಷೇ ಬಹಳ ಕಡಿಮೆಯಾಗುತ್ತ ಬರುತ್ತದೆ. ವಿದ್ಯಾಭಿಮಾನಿಗಳು ಆದ ಈ ಫಂಡಿನ ಸಂಬಂಧವಾಗಿ ಹಿಂದಿನ ಬಾಬತು ಪಕ್ಕೆ ಹಣವನ್ನು ಕೊಡತಕ್ಕದ್ದಿದ್ದರೆ ಮುಂದೆ ಸಹಾಯ ಕೊಟ್ಟು ವಿದ್ಯಾಭಿವೃದ್ಧಿಗೆ ಮುಂದೆಯೂ ಸಹಾಯಮಾಡಬೇಕೆಂದು ಕೇಳಿಕೊಳ್ಳುವ ಭಾಗಿಗಳಾಗಬೇಕಾಗಿ ಅಪೇಕ್ಷಿಸುತ್ತೇವೆ

(Sd) ಎಚ್ ಎಂ. ಸಿದ್ಧರಾಮಯ್ಯ, ಬಿ.ಎ, ಎಲ್‌ಎಲ್.ಬಿ

ಅಡ್ವೊಕೇಟ್

ಆನರರಿ ಸೆಕ್ರೆಟರಿ ವಿ. ವಿ ಫಂಡ್ ಸಂಘ, ದಾವಣಗೆರೆ

ಶ್ರೀ ಚನ್ನಬಸವೇಶ್ವರಸ್ವಾಮಿಯ ಜಗತ್ಪ್ರಸಿದ್ಧ ಕ್ಷೇತ್ರವಾದ ಉಳವಿಯಲ್ಲಿ ಶ್ರೀ ಸಂಗಮೇಶ್ವರ ಮಹಾಕ್ಷೇತ್ರದಲ್ಲಿ ನಡೆದ ಜಾತ್ರೆ

ಮಹಾಶಿವರಾತ್ರಿ ಮಹೋತ್ಸವ ದಯವಿಟ್ಟು ಬಿಡದೆ ಆಗಮಿಸಿ ಶ್ರದ್ಧೆ

ಆಚಾರ ಸಂಬಂಧವಾಗಿ ನಡೆಯುವ ಮೇಳಕ್ಕೆ ಸುತ್ತ ಮತ್ತಲಿನ ಪ್ರಾಂತಗಳಿಂದ ಜಾನಪದ ವರ್ತಕರು ಶಿವಭಕ್ತರು ದೂರದೂರದಿಂದ ಬಂದು ಸೇರುವರು. ದೇವಸ್ಥಾನದ ಹಿರಿಯ ಶ್ರೀ ತಿಮ್ಮಯ್ಯ ಶಿವಯೋಗಿಗಳವರ ಸನ್ನಿಧಿಯಲ್ಲಿ ಶಿವಭಜನೆ ಮುಕ್ತರಾಗಿ ಸದಾ ನಿತ್ಯಾನಂದದಲ್ಲಿ ಮಲ್ಲಿಯಾಗಿ ವಾಸಿಸುವ ಮಹಾಸ್ವಾಮಿಗಳ ಸನ್ನಿಧಿ ಕ್ಷೇತ್ರದಲ್ಲಿ ಪ್ರತಿವರ್ಷದಂತೆ ಈ ವರ್ಷದಲ್ಲಿ ಫಾಲ್ಗುಣ ಶುದ್ಧ ಪ್ರತಿಪದೆಯಿಂದ ಗಣಪತಿ ಶಂಕರಭಾರತಿಯವರು, ಶ್ರೀಯುತ ಕೃಷ್ಣಯ್ಯಾದಿಗಳಲ್ಲಿ ವಾಹನ ನಗರಮೇಲೆ ಸ್ವಾಮಿಯ ಉತ್ಸವವು, ಕಾಲಬು ಶುಕ್ರವಾರ ಮಹಾಸ್ವಾಮಿಯ ರಥೋತ್ಸವವು, ಶನಿವಾರ ಪಟ್ಟದ ಸಾಧಿಗಳ ಮತಸಂಬಂಧವಾದ ಉಪನ್ಯಾಸ ಕೀರ್ತನ ಮುಂತಾದವುಗಳು ಸದರಿಯ ದಿವಸದಲ್ಲಿ ಮಹಾಸ್ವಾಮಿಯು ಸಿಂಹಾಸನಾರೋಹಣದ ಉತ್ಸವವು ಭಾನುವಾರ ಓಕಳಿಯೊಂದಿಗೆ ಈ ಪ್ರಕಾರವಾಗಿ ಜರುಗುತ್ತವೆ. ಇದೇ ಸಮಯದಲ್ಲಿ ಪ್ರತಿವರ್ಷದಂತೆ ಈ ವರುಷವೂ ಶ್ರೀಮಂತ ರಸ್ತಾಪುರದ ಮುನಿಯಪ್ಪನವರು ಮಹೋತ್ಸವಕ್ಕೆ ಬರುವ ಭಕ್ತಮಹಾಶಯರಿಗೆ ಅನ್ನಸಂತರ್ಪಣೆಯಿಂದ ಸ್ವಾಮಿಯಲ್ಲಿ ಇರುವ ಭಕ್ತಿ ಪ್ರೇಮೋದ್ರೇಕವನ್ನು ಇತರ ಭಕ್ತಾದಿಗಳಿಗೆ ತೋರ್ಪಡಿಸುವ ಮಾರ್ಗದರ್ಶಕರಾಗಿ ಇರುತ್ತಾರೆ. ಆದಪ್ರಯುಕ್ತ ತಾವುಗಳು ಸಕಾಲಕ್ಕೆ ಬಂದು ಇಲ್ಲಿ ನಡೆಯತಕ್ಕ ಮಹೋತ್ಸವವನ್ನು ನೋಡಿ ನೇತ್ರಾನಂದ ಮನಾನಂದ ದಿಂದ ಭೌತಿಕದಿಂದ ಕೂಡಿದ ಶರೀರವನ್ನು ಇಹ ಪರ ಸುಖಗಳಲ್ಲಿ ಕೃತಕೃತ್ಯವನ್ನಾಗಿ ಮಾಡಿಕೊಳ್ಳಬೇಕೆಂದು ಇಚ್ಛಿಸುತ್ತೇನೆ

ತಮ್ಮಗಳ ಹಿತಚಿಂತಕ,

ರಸ್ತಾಪುರದ ಮುನಿಯಪ್ಪ ರಾಯಚೂರು



13

ಪ್ರಕಟನೆ.

ನಮ್ಮಲ್ಲಿ ಸಿನೇಮಾಕ್ಕೆ ಸಂಬಂಧಪಟ್ಟ ಪ್ರಖ್ಯಾತ ಕಂಪೆನಿಯ ಪ್ರೊಜೆಕ್ಟರ್ ಮಿಷನ್, ಆರ್ಕ್‌ಲ್ಯಾಂಪ್ಸ ಡೈನಮೋ, ಎಲೆಕ್ಟ್ರಿಕಲ್ ಫಿಟಿಂಗ್ಸ್ ವಗೈರೆ ಎಲ್ಲಾ ಸಾಮಾನುಗಳೂ, ಕೇಬಲ್ ಕಾಮಿಕ್ ಫಿಲಂಗಳೂ ಸಹ ಖರೀದಿಗೆ ದೊರೆಯುತ್ತವೆ. ಎಲ್ಲಾ ಸಾಮಾನುಗಳ ಸೆಟ್ಟು ತಯಾರು ಇರುವುದರಿಂದ ಈ ದಿವಸವೇ ಸಿನೇಮಾ ನಡೆಸಬಹುದು. ಈ ಸಾಮಾನುಗಳು ಸೋವಿ ಕಿಮ್ಮತ್ತಿನಲ್ಲಿ ಸಿಗುತ್ತವೆಯಾದ್ದರಿಂದ ಈ ಸಮಯವನ್ನು ಕಳೆಯ ಕೊಳ್ಳಬಾರದಾಗಿ ಕೋರಿದೆ

Siddaradhya
Tirukappanavra mutt
Davangere

(12—6)

೧೯೨೯ ನೇ ಇಸವಿ ಮಾರ್ಚಿ ತಾ॥ ೨ ರಿಂದ ೧೯೨೯ ನೇ ಇಸವಿ ಮಾರ್ಚಿ ತಾ॥ ೮ ರ ವರೆಗೆ ಸಲ್ಲುವ ಶಾಲಿವಾಹನಶಕೆ ೧೮೫೦ ನೆಯ ವಿಭವನಾಮಸಂವತ್ಸರದ ಮಾಘ ಬಹುಳ ಸಪ್ತಮಿಯಿಂದ ಮಾಘ ಬಹುಳ ದ್ವಾದಶಿ ವರೆಗಿನ ಪಂಚಾಂಗ

ತಾ॥	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾಸ
2	ಶನಿ	ಸಪ್ತ	60 59	ವಿಶಾ	3 12	19
3	[1]ಭಾನು	ಅಷ್ಟ	56 5	ಅನೂ	9 6	20
4	ಸೋಮ	ನವ	60	ಜ್ಯೇಷ್ಠ	15 31	21
5	ಮಂಗಳ	ನವ	1 30	ಮೂಲ	12.5	22
6	ಬುಧ	ದಶ	6 52	ಪೂಷಾ	28 23	23
7	[2]ಗುರು	ಏಕಾ	11 24	ಉಷಾ	33 58	24
8	ಶುಕ್ರ	ದ್ವಾದ	15 6	ಶ್ರವ	38-45	25

(1) ಮೂಲನಕ್ಷತ್ರ ಪೂರ್ವಭಾದ್ರ ೧ ನೆಯಪಾದ. (2) ಮೂಲನಕ್ಷತ್ರ ಪೂರ್ವಭಾದ್ರ ೨ ನೆಯಪಾದ

ಮೈಸೂರು ವೈ. ಬಸವಾರ್ಕ್ಯಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED

ಮೈಸೂರ್ ಸ್ಟಾರ್

ಪ್ರತಿ ಶನಿವಾರ ಪ್ರಕಟಿಸಲ್ಪಡುವುದು

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೩-೮-೦] [ಬೈಡ್ರೀರಿಗೆ ೩-೮-೦]

ಸಂಪುಟ ೪೨] ಮೈಸೂರು ಸ್ಟಾರ್ ಸನ್ ೧೯೨೬ ನೆಯ ಇಸವಿ ಮಾರ್ಚಿ ತಾರೀಖು ೧೩ ನೆಯ ಶನಿವಾರ [ಸಂಚಿಕೆ ೧೧

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ			(ವಿ.ಪಿ. ಸೇರಿ)		
ವೀರಶೈವ ಶಿವಪೂಜಾವಿಧಿ	೦	೧೨	೦	೧	೩	೦
ಸಟೀಕ ವೀರಶೈವ ವಿವಾಹವಿಧಿ	೦	೮	೦	೦	೧೪	೦
ಷಟ್ಸ್ಥಲವಿದ್ಯಾ	೦	೪	೦	೦	೬	೦
ಚಾರುಶೀಲಚರಿತ್ರೆ	೦	೫	೦	೦	೧೦	೦
ಚಂದ್ರಾಸಿ	೦	೪	೦	೦	೬	೦
ವೃಷಪಂಚಕ	೦	೪	೦	೦	೬	೦
ಗುರುಶಂಕರೇಶ್ವರಶತಕ	೨	೧	೦	೦	೬	೦
ಬಸವೇಶ್ವರಜನನ	೦	೮	೦	೦	೧೪	೦
ಸಟೀಕ ಆರಾಟಕಪಟ್ಟ ಮುಂಜರಿ	೦	೮	೦	೦	೧೪	೦
ಸಟೀಕ ಷಟಕತ್ರಯ	೧	೦	೦			

ಮೈಸೂರು ಸ್ಟಾರ್ ಚಂದಾನಿರ್ಣಯ

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ ೩-೮-೦ ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ ೩-೮-೦, ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ ಹಳೆ ಚಂದಾದಾರರುಗಳು ಮನಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮನಿಯಾರ್ಡರುಗಳಿಗೆ ಸಿಗಾಗೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್

೧೦೦೦ ರೂಪಾಯಿ ಇನಾಮು

ಪಿರಜಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್. ಕಾವಸೆ, ಇವರ

ಅಲ್ಪವಯಸ್ಕರಿಗಾಗಿ ಕ್ಷೀಣರಾಗ ಬೇಡಿರಿ) **ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ವಜ್ರಾಂಗ ಸುಂದರಪಾಕ.** (ವ್ಯರ್ಥ ಖರ್ಚು ಮಾಡಿ ಕ್ಷೀಣತೆ ಕಾಯಿಲೆ ತಂದುಕೊಳ್ಳಬೇಡಿರಿ)

ಈ ಪಾಕಸೇವನೆಯಿಂದ ಎಲ್ಲ ಧಾತುವಿನ ವಿಕಾರಗಳು, ಧಾತುಕೋಶದಲ್ಲಿಯ ಉಷ್ಣತೆ ಮತ್ತು ವ್ಯಭಿಚಾರದಿಂದುಂಟಾದ ಇಂದ್ರಿಯ ಶಿಥಿಲತೆ, ನಪುಂಸಕತ್ವ, ಸ್ವಪ್ನಾವಸ್ಥೆ ಮೂತ್ರದೊಂದಿಗೆ ಧಾತುಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ವೀರ್ಯವು ತೆಳುವಾಗುವದರಿಂದ ಉಂಟಾದ ರೋಗದ ಮೂಲಕ ಸಂತತಿಯಾಗದಿರೋಣ ನಡನೋವು ಸಂಧುನೋವು ಎದೆನೋವು ಹಾರ್ಟ್ (ಡಿಸೀಜ್) ಜೀರ್ಣಜ್ವರ ಮೂಲವ್ಯಾಧಿ, ಮೂತ್ರರೋಗ, ಹಳೇಪರಮಾ ಮತ್ತು ಗರ್ಮಿ ರಸಾಯನ ಸೇವನೆಯಿಂದಾದ ದುಷ್ಟವಿಕಾರಗಳು ಯಾವದೇ ತರದ ಜ್ವರದಿಂದ ಎದ್ದಮೇಲೆ ಆದ ಕ್ಷೀಣತೆ, ಮೆಂದುವಿನ ಅಶಕ್ತತೆ, ಉರಿಮೂತ್ರ ಕೈಕಾಲು ಉರಿಯೋಣ, ಎಲ್ಲ ಪಿತ್ತವಿಕಾರಗಳು, ನಿದ್ರೆಯು ಬಾರದೆ ಇರೋಣ ಸ್ತ್ರೀಯರಿಗೆ ಸಂತತಿ ನಷ್ಟವಾಗೋಣ, ಮೇಲಿಂದಮೇಲೆ ಗರ್ಭಪಾತವು ಎಲ್ಲ ಬಗ್ಗೆಯ ಬಿಳುಪು ಗರ್ಭಾಶಯ ವಿಕಾರದಿಂದ ಸಂತತಿ ಆಗದೆ ಇರೋಣ ಮುಂತಾದ ವೃದ್ಧ ಸ್ತ್ರೀಪುರುಷರ ಸರ್ವರೋಗಗಳು ಹೋಗಿ ವಿಶೇಷ ಹಸಿವೆಯು ಆಗುತ್ತದೆ ಶರೀರಕ್ಕೆ ಸಾಧಕವಾಗಿ ಧಾತುವೃದ್ಧಿಯಾಗಿ ವೀರ್ಯ ಘಟ್ಟಿ ಆಗುವದಲ್ಲದೆ ಪುರುಷತ್ವವು ಹೆಚ್ಚುತ್ತದೆ ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಹಾಯಕ ಆಗುತ್ತದೆ ಈ ಪ್ರಕಾರ ಕಾಯುವ ಧಾತುಪೌಷ್ಟಿಕಮಾತ್ರೆಯ ಮತ್ತು ಜನ್ನಿನ ಪಾಕವನ್ನು ಈ ಜೋತಿನವರಿಗೆ ಯಾರೂ ಮಾಡಿಲ್ಲ ... ತಕ್ಕೊಂಡು ಅನುಭವಿಸಿ ಈ ಪಾಕದಲ್ಲಿ ಬಹುಪ್ರಯಾಸದಿಂದ ಸಂಪಾದಿಸಿದ ಅಪರೂಪ ೨೨ ವಸ್ತುಗಳು ... ಕಸ್ತೂರಿ ... ಕೇಸರಿ ... ಮುಸಳೀ ... ಬೀಜ ... ಬಂಗಾರ ... ಚಂದ್ರೋದಯ ... ಮುಂತಾದ ಔಷಧಿಗಳು ಈ ಜಿನಸುಗಳಲ್ಲಿ ಧಾತುವೃದ್ಧಿಗೆ ಗುಣವಿಲ್ಲೆಂದು ಮತ್ತು ಈ ಜಿನಸು ಹಾಕಿಲ್ಲೆಂದು ಸಿದ್ಧಪಡಿಸಿಕೊಟ್ಟವರಿಗೆ ೧೦೦೦ ರೂಪಾಯಿ ಇನಾಮು ಕೊಡುವೆವು ಮುಂಜಾನೆ ೨ ತೊಲೆಯ ೧ ವಡಿ ರಾತ್ರಿ ಭೋಜನಾನಂತರ ೨ ತೊಲೆಯ ೧ ವಡಿ [illegible] ... ರೂ ೩ ಡಬ್ಬಿಗೆ ೧೪ ರೂ ... ಡಬ್ಬಿಗಳನ್ನು ತಕ್ಕೊಂಡರೆ ಪೋಸ್ಟೇಜ ಮಾಫ.

[50—11] ಪತ್ತೆ:—ಮಾಲಕ ವೈದ್ಯ ವ್ಹಿ. ಎಸ್. ಕಾವಸೆ ಮು. ಪೋ. ಮಿರಜ.

"ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತರ" ಆಯುರ್ವೇದೀಯ ಸಿದ್ಧೌಷಧಗಳು

ಲೋಕಾಮಯಹರ ಕಸ್ತೂರೀ ಮಾತ್ರೆಗಳು

ಈ ಮಾತ್ರೆಗಳನ್ನು ಪ್ರತಿದಿನವೂ ತಾಂಬೂಲದೊಡನೆಯಾಗಲಿ ಪಾಗೀಯಾಗಲೀ ಉಪಯೋಗಿಸುತ್ತಿದ್ದರೆ ಆಹಾರ, ನೀರು ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ ಮುಖ್ಯವಾಗಿ ಮೊದಲು ಮುಪ್ಪಿನ ವಯಸ್ಸಿನವರಿಗೂ ಶೀತ, ನೆಗಡಿ ಕೆಮ್ಮು, ದಮ್ಮು, ಶೀತವಾತಜ್ವರ, ವಿಷಮಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ

೩೦ ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣೆ

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ ವಡ್ಡ ವಿಳಾಸವನ್ನು ಲೋಕಾಮಯಹರ ಕಸ್ತೂರೀ ಮಾತ್ರೆ ಎಂಬ ಹೆಸರನ್ನು ನೋಡಿ ಕೊಂಡುಕೊಳ್ಳಿರಿ

ವೈಶ್ವಾನರಾಸವ

(ಕಾಲರಾ ವಾಂತಿಭೇದಿಗೆ ಸಿದ್ಧೌಷಧ)

ಮುತ್ತ್ರವು ಕಟ್ಟುವುದಾಗಲಿ ಹೊಟ್ಟೆಯುಬ್ಬರಿಸುವುದಾಗಲಿ, ವಾಂತಿಯಾಗದೆ ಕೊಟ್ಟ ಮೊದಲನೇವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ ಸೀಸೆ 1ಕ್ಕೆ ರೂ 1—0—0

ಲಕ್ಷ್ಮೀವಿಲಾಸರಸ

ಪ್ಲೇಗಿಗೆ)

ಹತ್ತಾರು ವರ್ಷಗಳಿಂದ ಪ್ರತಿವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ನಿಂಬುವುದಾಗಿ ಗುಣಪಡಿಸಿರುತ್ತದೆ ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ ಸೀಸೆಯ ಬೆಲೆ 1ಕ್ಕೆ ರೂ 1—0—0

ಶ್ರೀನಿವಾಸತೈಲ

ಪ್ಲೇಗು ರೋಗಿಯ ಗ್ರಂಥಿ ಸಂದುಗಳಿಗೂ ಗೆಡ್ಡೆಗೂ ಹಚ್ಚುವ ಔಷಧ ಸೀಸೆ 1ಕ್ಕೆ ರೂ 0—8—0

ಭಿಷಗ್ರತ್ನ

ಶ್ರೀ ಸೀತಾರಾಘವವೈದ್ಯಶಾಲಾ ಬ್ರಾಂಚಾಫೀಸು ತರ್ಕಪೇಟೆ ಬೆಂಗಳೂರು ಸಿಟಿ

ಪಾಳ್ಯದ ವೆಂಕಟಾಚಲಪಂಡಿತರು ಶ್ರೀ ಸೀತಾರಾಘವವೈದ್ಯಶಾಲಾ, ಹೆಡ್ ಆಫೀಸು ಮೈಸೂರು

ಪ್ರಸಿದ್ಧಪತ್ರಿಕೆ.

ಹೊಳೇನರಸೀಪುರದ ದನಗಳ ಪ್ರದರ್ಶನ.

23-3 26 ರ ಲಾಗಾಯಿತು 27-3-26 ರ ವರೆಗೆ

ಹೊಳೇನರಸೀಪುರದಲ್ಲಿ 1926 ನೇ ಮಾರ್ಚಿ ಮಾಹೆ 21 ನೇ ತಾ|| ದಿವಸ ನಡೆಯುವ ಶ್ರೀ ಲಕ್ಷ್ಮೀನರಸಿಂಹಸ್ವಾಮಿಯವರ ರಥೋತ್ಸವದ ಕಾಲದಲ್ಲಿ ದನಗಳ ಪ್ರದರ್ಶನವನ್ನು 23-3-26 ನೇ ಮಂಗಳವಾರದ ಲಾಗಾಯ್ತು 27-3-26 ನೇ ಶನಿವಾರ ಪೂರ್ತಾ ಉಭಯ ದಿನಗಳು ಸೇರಿ ೫ ದಿನಗಳು ನಡೆಯಿಸಲು ಏರ್ಪಡಿಸಿರುತ್ತೆ

(೧) ಉತ್ತಮವಾದ ರಾಸುಗಳಿಗೆ ಬಹುಮಾನ ಕೊಡಲಾಗುತ್ತೆ

(೨) ಹುಲ್ಲು ನೀರಿನ ವಸತಿ ಧಾರಾಳವಾಗಿರುತ್ತೆ

(೩) ದನಗಳ ಮಾರಾಟ ಜೋರಾಗಿ ನಡೆಯುತ್ತೆ

(೪) ದನಗಳ ಮಾಲೀಕರು ಮತ್ತು ವ್ಯಾಪಾರಸ್ಥರು ಈ ಪ್ರದರ್ಶನವು ಯಶಸ್ವಿಯಾಗಿ ನಡೆಯಲು ಉತ್ತೇಜನ ಕೊಡಬೇಕೆಂತಲೂ ಶ್ರೀ ಲಕ್ಷ್ಮೀನರಸಿಂಹಸ್ವಾಮಿಯವರ ಕೃಪೆಗೆ ಪಾತ್ರರಾಗುತ್ತಾರೆಂತ ಕೋರಿದೆ

Hole Narsipur
Date . 3 1926

B. Subba Rao,
President,
Hole Narsipur Municipality

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು

14 ಕ್ಯಾರೆಟ್ ಭಂಗಾರದ ನಿಬ್ಬು ಹಾಕಿದ ಖಾತ್ರಿಯೂ ಬಂದೋಬಸ್ತೂ ಆದ ಫೌಂಟೆನ್ ಪೆನ್ಗಳು.

ವೆರ್ಲ್ಡ್ ವಂಡರ್ ಫೌಂಟೆನ್ ಪೆನ್ 1ಕ್ಕೆ	1	1	0
,, ಬಿಗ್ ಬ್ಯಾರಲ್ ಪೆನ್ 1ಕ್ಕೆ	3	–	0
,, ಸ್ಕ್ರೂ ಕ್ಯಾಪ್ ಪೆನ್ 1ಕ್ಕೆ	1	8	0
,, ಮಾಟಲ್ ಕಲರ್ ಪೆನ್ 1ಕ್ಕೆ	1	14	0
,, ಮಾಟಲ್ ಸ್ಕ್ರೂ ಕ್ಯಾಪ್ ಪೆನ್	1	1	0
,, ಬ್ಲಾಕ್ ಕಲರ್ ಸೆಲ್ಫ್ ಫಿಲಿಂಗ್ ಪೆನ್	6	8	0
,, ಸೇಫ್ಟಿ ಪೆನ್ 1ಕ್ಕೆ	1	1	0
,, ಲೇಡಿಸ್ ಸೈಜಿನ ಮಾಟಲ್ ಕಲರ್ ಪೆನ್ 1ಕ್ಕೆ	1	8	0
ಸ್ವಾನ್ ಬಗ್ ಪೆನ್ 1ಕ್ಕೆ 3 8 0 ಮತ್ತು	3	12	0
ಸ್ವಾನ್ ಫೌಂಟೆನ್ ಪೆನ್ 1ಕ್ಕೆ 6 8 0 ಮತ್ತು	7	0	0
ವಾಟರ್ ಮೆನ್ ಐಡಿಯಲ್ ಪೆನ್ 1ಕ್ಕೆ 8 0 0 ಮತ್ತು	5	8	0
ವಾಟರ್ ಮೆನ್ ಸೇಫ್ಟಿ ಪೆನ್ 1ಕ್ಕೆ	12	0	0

ಮನಿಯಾರ್ಡರ್ ಕಳುಹಿಸುವ ವಿಳಾಸ—

ಖಾತ್ರಿಯೂ ಬಂದೋಬಸ್ತೂ ಆದ ಟೈಂಪೀಸ್ಗಳು

ಸಣ್ಣ ಸೈಜಿನ ಎವರ್ ರೆಡಿ ಟೈಂಪೀಸ್ 1ಕ್ಕೆ	2	2	0
ದರ್ಮನಿ ಗ್ಯಾರಂಟಿಯ ಟೈಂಪೀಸ್ 1ಕ್ಕೆ	3	12	0
ಅಮೆರಿಕಾ ಟೈಂಪೀಸ್ 1ಕ್ಕೆ	0	13	0
ಅಮೆರಿಕಾ ಅಲಾರಂ ಟೈಂಪೀಸ್ 1ಕ್ಕೆ	2	6	0
ಬಿಗ್ ಬೆನ್ ಅಲಾರಂ ಟೈಂಪೀಸ್ 1ಕ್ಕೆ	9	0	0
ಬಿಗ್ ಬೆನ್ ... ಅಲಾರಂ ಟೈಂಪೀಸ್ 1ಕ್ಕೆ	14	0	0
೧೦ ರೋಜಿಗೆ ಒಂದಾವರ್ತಿ ಕೀ ಕೊಡುವ ಕ್ಲಾಕ್ 1ಕ್ಕೆ		2	
ಟೈಂ ತೋರಿಸಿ ಘಂಟೆ ಹೊಡೆಯುವ ಕ್ಲಾಕ್ 1ಕ್ಕೆ		11	
ಘಂಟೆ ಅರ್ಧ ಘಂಟೆ ಹೊಡೆದು ಅಲಾರಂ ಬಾರಿಸುವ ಕ್ಲಾಕ್ 1ಕ್ಕೆ		12	
ಘಂಟೆ ತೋರಿಸಿ ಇಷ್ಟಪಟ್ಟ ಟೈಮಿಗೆ ಅಲಾರಂ ಬಾರಿಸಿ ಗಾನಮಾಡುವ ಕ್ಲಾಕ್ 1ಕ್ಕೆ	12	0	0
ಇಂಗ್ಲೆಂಡಿನ ... ಟೈಂಪೀಸ್ 1ಕ್ಕೆ	6	0	0

[— 17]

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು

ಮೈಸೂರು ಸ್ಟಾರ್

೧೯೨೮ ನೆಯ ಇಸವಿ ಮಾರ್ಚಿ ತಾ|| ೧೭ ನೆಯ ಶನಿವಾರ

A RETROSPECT

It looks as though the time has arrived for those interested in the progress of the State to make a dispassionate examination of the events that have transpired since the Bangalore disturbances. It would be worth while doing so because we can no longer feel that we are still in the current of forces let loose as an aftermath of the disturbances and because there is ample constructive work before us. It has been our usual experience that those politicians who are least inclined to turn out some positive practical constructive work are the persons who are most prone to create sensation and divert the attention of the public mind. In fact it is a deliberate plan with them. These political charlatans are not by any means keen on the progress of the masses but are only eager to thwart the even course of the administration. The more an administration is inclined towards real uplift of the people, the more loud and disturbing become the professional agitators. It will thus not be difficult to understand the part played by the professional agitators in Mysore before and after the Bangalore disturbances. It pays them to keep up the agitation as long as it could be done. We are glad to find that the original bluster and bravado has all but disappeared and in the case of many of these professional politicians there has been a wholesome return to sanity. In Mysore City for instance, Mr M Venkatkrishnayya who wanted to become a martyr by seeking deportation, has thought evidently that discretion is the better part of valour and sought peace in retirement. His own peace doubtless will mean peace around also. He probably knew that if he wagged his tail any more the arm of law would reach him in a manner he had not originally anticipated, namely the confiscation of the press. There is only the redoubtable *Tai Nadu* which acts as a relief to decent journalism and which makes vain efforts to create ripples in the otherwise placid waters of the City. It is Bangalore that has become the storm centre since the disturbances. Though there seems to be a little improvement yet it cannot be said that the mischeavous elements are at an end. Those agitators must have been under the happy delusion that they have only to croak and bellow and the Government of His Highness the Maharaja would go topsy turvy. Many of these will have seen the folly and futility of their past actions and started stewing in their own juice. We would not wonder if some of them would even try to get back into the good graces of Government by offering explantions for their conduct. The more irresponsible of the agitators are still out for creating trouble and we are glad that Government is becoming alive to the danger ahead. Evidently Government gave a very long rope to those mischief-makers. It cannot be denied that the arrest of the two Editors of defunct *Veerakesari* and *Vavajeevan* will have a wholesome effect on our politics. If the authorities concerned were a little more vigilant and vigourous they could have nipped this sort of agitation very much earlier. There are still some foreign journals like the *Indian States Journal* and the *Swarajya* which are trading on the goodness of our Government and which ought to be taught proper lesson by way of being proscribed or otherwise dealt with. One good however, the agitation has done. It has shown who is who! Who could have expected Mr Hosakoppa Krishna Rao becoming so disrespectful as to talk of our beloved sovereign lightly or Mr D V Gundappa, a nominated member of the Legislative Council, to write all sorts of things and finally to advocate boycott of Sir John Simon and his colleagues who were out here as guests of His Highness? May we hope that a retrospect will not be profitless and that with lessons gained from the past there will be yet better days in store for the people of Mysore whose loyalty to His Highness and His Highness' Government is the one thing that has shone resplendant during all the troublous days and above all the din and dust that followed in the wake of the disturbances.

ಗತಕಾರ್ಯವಿಮರ್ಶನ

ಬೆಂಗಳೂರು ಗಲಭೆಯಾದನಂತರ ನಡೆದ ವಿದ್ಯಮಾನಗಳನ್ನು ನಿರ್ಪಕ್ಷಪಾತಬುದ್ಧಿಯಿಂದ ವಿಮರ್ಶಿಸುವುದು ಸಂಸ್ಥಾನದ ಪುರೋಭಿವೃದ್ಧಿ ಕಾಂಕ್ಷಿಗಳಿಗೆ ಇದು ತಕ್ಕ ಸಮಯವಾಗಿದೆ ಏಕೆಂದರೆ, ಗಲಭೆಯ ಪರಿಣಾಮವಾಗಿ ನಡೆಸಲ್ಪಟ್ಟ ಪ್ರಚಂಡ ಚಳವಳಿಯು ಈಗ ಮುಗಿದುಹೋಗಿರುತ್ತದಲ್ಲದೆ ನಾವು ಮಾಡಬೇಕಾದ ಫಲಪ್ರದ ಕಾರ್ಯವು ವಿಶೇಷವಾಗಿರುತ್ತದೆ. ನಿಜವಾಗಿ ಕಾರ್ಯಪ್ರಯೋಜಕವಾದ ಕಾರ್ಯಗಳನ್ನು ಮಾಡಬೇಕೆಂಬ ಉದ್ದೇಶ ಕಾಂಕ್ಷೆಯಿಲ್ಲದಿರುವವರೇ ಗುಲ್ಲೆಬ್ಬಿಸಿ ಜನರ ಮನಸ್ಸನ್ನು ಕೆರಳಿಸತಕ್ಕವರೆಂಬುದು ಅನುಭವಸಿದ್ಧವಾಗಿದೆ. ಈ ಮಹಾಪುರುಷರು ಜನತೆಯ ಪುರೋಭಿವೃದ್ಧಿಯ ವಿಚಾರದಲ್ಲಿ ಲೇಶಮಾತ್ರ ಗಮನವಿಡದೆ ಸುಲಲಿತವಾಗಿ ನಡೆಯುವ ರಾಜ್ಯಾಡಳಿತಕ್ಕೆ ಪ್ರತಿಬಂಧಕ ಪಡಿಸಲು ಕಾತುರಪಡುತ್ತಿರುವರು. ಪ್ರಭುತ್ವದವರು ಪ್ರಜಾಭಿವೃದ್ಧಿ ಕಾರ್ಯವನ್ನು ಮಾಡಲೆಷ್ಟು ಕುತೂಹಲವಿಷ್ಟರಾಗಿರುವರೋ ಆಂದೋಳನಕಾರರು ಅಷ್ಟು ಗೊಂದಲವನ್ನೆಬ್ಬಿ ಪ್ರತಿಬಂಧಕವನ್ನುಂಟುಮಾಡುವರು. ಬೆಂಗಳೂರಿನಲ್ಲಿ ಗಲಭೆಯು ನಡೆಯುವುದಕ್ಕೆ ಮೊದಲೂ ನಡೆದ ಮೇಲೂ ಈ ಕಸಬುದಾರ ಚಳವಳಿಕಾರರು ಮಾಡಿದ ಸಂಧಾನ ಕಾರ್ಯವನ್ನರಿತುಕೊಳ್ಳುವುದೇನೂ ಕಷ್ಟವಲ್ಲವು. ಎಲ್ಲಿಯವರೆಗೆ ಸಾಧ್ಯವೋ ಅಲ್ಲಿಯವರೆಗೆ ಚಳವಳಿಗಳನ್ನು ನಡೆಯಿಸಿಕೊಂಡು ಬರುವಲ್ಲಿ ಅವರಿಗೆ ಪ್ರಯೋಜನವುಂಟು. ಈ ಕಸಬುದಾರ ಆಂದೋಳಕರ ಮೊದಲಿನ ಆರ್ಭಟವು ಈಗ ಅಡಗಿ, ಅವರಲ್ಲನೇಕರಿಗೆ ಜ್ಞಾನೋದಯವಾಗಿರುವುದು ಸಂತೋಷಪ್ರದವಾಗಿದೆ. ಇದಕ್ಕೆ ಉದಾಹರಣೆಯಾಗಿ ರಾಜಧಾನಿಯಲ್ಲಿ ಮ|| ಎಂ ವೆಂಕಟಕೃಷ್ಣಯ್ಯನವರು ಗಡೀಪಾರು ಶಿಕ್ಷೆಗಾದರೂ ಗುರಿಯಾಗಿ ದೇಶಕಿತಕ್ಕೋಸ್ಕರ ಶಿಕ್ಷೆಯನ್ನನುಭವಿಸಿದವನೆಂಬ ಖ್ಯಾತಿಯನ್ನು ಪಡೆಯಬೇಕೆಂದು ಸಂಕಲ್ಪಿಸಿದ್ದವರು ಈಗ ತಾಳುವವನು ಬಾಳುವನು ಎಂಬ ಗಾದೆಯನ್ನು ಸ್ಮರಿಸಿಕೊಂಡು ಮೌನವ್ರತವನ್ನು ತಾಳಿರುತ್ತಾರೆ. ಇವರ ಈ ಶಾಂತಬುದ್ಧಿಯಿಂದ ವಾತಾವರಣವೇ ಶಾಂತವಾಯಿತೆಂದು ಹೇಳುವುದರಲ್ಲಿ ಸಂಶಯವಿಲ್ಲ. ಇನ್ನು ಹೆಚ್ಚು ಚಾಲವನ್ನಾಡಿಸಿದರೆ ಪ್ರಥಮತಃ ತಾವು ನಿರೀಕ್ಷಿಸಿರಲಿಲ್ಲವಾದ ಕಠಿನ ಶಾಸನವು ಅಂದರೆ ಮುದ್ರಣ ಯಂತ್ರಸಾಮಗ್ರಿಗಳ ಮುಟ್ಟುಗೋಲು ಈಗ ಪ್ರಾಪ್ತವಾಗುತ್ತದೆಂಬ ಅರಿವೆಯು ಇವರಿಗುಂಟಾಯಿತೆಂದು ತೋರುತ್ತದೆ. ರಾಜಧಾನಿಯಲ್ಲಿ ಶಾಂತಿಯ ವಾತಾವರಣವನ್ನು ಕಲುಷಿತವನ್ನಾಗಿ ಮಾಡಲು ವೃಥಾ ಘರ್ಜಿಸುತ್ತಿರುವ 'ತಾಯಿನಾಡು' ಪತ್ರಿಕೆಯೊಂದು ಮಾತ್ರ ತೋರಾಡುತ್ತಿದೆ. ಗಲಭೆಯಾದಾರಭ್ಯ ಬೆಂಗಳೂರು ಪಟ್ಟಣವು ಉದ್ರೇಕಿತ ಚಳವಳಿಗಳಿಗೆ ಮಾತೃಸ್ಥಾನವಾಗಿ ಪರಿಣಮಿಸಿದೆ. ಅಲ್ಲಿ ಈಗ ಕೊಂಚ ಶಾಂತವಾಗಿರುವಂತೆ ತೋರುತ್ತಿದರೂ, ಇನ್ನೂ ಆ ಗುಲ್ಲುಗಾರರ ಸೊಲ್ಲು ಅಡಗಿಲ್ಲವು. ಶ್ರೀಮನ್ಮಹಾರಾಜರವರ ಪ್ರಭುತ್ವವು ತಲೆಕೆಳಗಾದಾಗಲೇ ತನ್ನ ಆಂದೋಳನವು ಶಾಂತವಾಗುವುದೆಂದು ಈ ಚಳವಳಿಗಾರರು ಭ್ರಮಿಸಿರುವಂತೆ ತೋರುತ್ತದೆ. ಇವರಲ್ಲನೇಕರು ಇವರೆಗೆ ತಾವು ಮಾಡಿರುವ ಅತಿಚಾರದ ತಪ್ಪನ್ನೂ, ನಿಸ್ಸಾರತ್ವವನ್ನೂ ಅರಿತುಕೊಂಡು ಅದರ ಫಲವನ್ನು ಉಣ್ಣಲುಪಕ್ರಮಿಸಿರುವರು. ಇವರಲ್ಲಿ ಕೆಲರು ತಮ್ಮ ನಡವಳಿಯ ವಿಚಾರದಲ್ಲಿ ತಕ್ಕ ಸಮಾಧಾನವನ್ನು ಹೇಳಿ ಪ್ರಭುತ್ವದವರ ಕ್ಷಮೆಯನ್ನು ಈಗಲಾದರೂ ಬೇಡುವುದು ಶ್ರೇಯಸ್ಕರವೆಂದು ಆದರೆ ಇನ್ನೂ ಗಲಭೆ ಕೆಲ ಚಳವಳಿಕಾರರು ಈಗಲೂ ಮಾಡುತ್ತಿರುವ ಗಲಭೆಯಿಂದಾಗಬಹುದಾದ ಕೇಡು ಪ್ರಭುತ್ವದವರ ದೃಷ್ಟಿಪಥಕ್ಕೆ ಈಗಲಾದರೂ ಬಿದ್ದಿರುವುದು ಸಂತೋಷಪ್ರದವಾಗಿದೆ. ಗುಲ್ಲುಗಾರರ ಹಾವಳಿಯನ್ನು ಪ್ರಭುತ್ವದವರು ಅವರಿಗೆ ಬಿಗಿಗೊಳಿಸದೆ ಬಿಟ್ಟುಕೊಂಡು ಬಂದಿರುವರಾದರೂ, ಈಗ ನಿಂತುಹೋಗಿರುವ ವೀರಕೇಸರಿ ಮತ್ತು ನಡೆಯುತ್ತಿರುವ ನವಜೀವನ ಪತ್ರಿಕೆಗಳ ಸಂಪಾದಕರುಗಳನ್ನು ರಾಜದ್ರೋಹಾಪರಾಧಕ್ಕಾಗಿ ಸೆರೆಹಿಡಿಸಿ ಮಜಿಸ್ಟ್ರೇಟರ ವಿಚಾರಣೆಗೆ ಗುರಿಪಡಿಸಿರುವುದರಿಂದ ಅವರ ಸಹೋದ್ಯೋಗಿ ಚಳವಳಿಕಾರರು ಎದೆಮುಟ್ಟಿ ನೋಡಿಕೊಳ್ಳುವಂತಾಗಿದೆ. ಈ ಹಾವಳಿಯನ್ನು ನಿಲ್ಲಿಸಬೇಕಾದವರಾದ ಅಧಿಕಾರಿಗಳು ಕೆಲ ಕಾಲಕ್ಕೆ ಮುಂಚೆಯೇ ಜಾಗ್ರತರಾಗಿ ಆಂದೋಳನವನ್ನು ಮೊಳಕೆಯಲ್ಲೇ ಚಿವುಟಿದ್ದರೆ ಇಷ್ಟೊಂದು ಪ್ರಯಾಸವೇ ಇರುತ್ತಿರಲಿಲ್ಲ. ನಮ್ಮ ಪ್ರಭುತ್ವದವರ ಈ ಸೌಮ್ಯಪ್ರಕೃತಿಯನ್ನು ಅರಿತುಕೊಂಡು ಸೊಕ್ಕಿನಿಂದ ಕಲೆಬರಗಳನ್ನು ಪ್ರಕಟಿಸುತ್ತಿರುವ ಪರದೇಶದ "ಇಂಡಿಯನ್ ಸ್ಟೇಟ್ ಜರ್ನಲ್ ಮತ್ತು ಸ್ವರಾಜ್ಯ" ಎಂಬ ಆಂಗ್ಲಭಾಷಾ ಪತ್ರಿಕೆಗಳು ನಮ್ಮ ಸೀಮೆಗೆ ಬರದಂತೆ ಮಾಡಿ ಅವುಗಳಿಗೆ ವಿವೇಕವನ್ನು ಕಲಿಸತಕ್ಕದು ಆವಶ್ಯಕವಾಗಿದೆ. ಇವರೆಗೆ ನಡೆದಿರುವ ಆಂದೋಳನದಿಂದ ಒಂದುಪಕಾರವಾಗಿರುತ್ತದೆ. ಇದರಿಂದ ಯಾರ್ಯಾರ ಮನೋಭಾವವು ಎಂತಹುದೆಂಬುದು ಗೋಚರವಾಯಿತು. ಮ|| ಹೊಸಕೊಪ್ಪ ಕೃಷ್ಣರಾಯರು ಶ್ರೀಮನ್ಮಹಾರಾಜರವರ ವಿಚಾರದಲ್ಲಿ ಒಹು ಅಗೌರವದಿಂದ ಮಾತನಾಡುವರೆಂದೂ, ಪ್ರಭುತ್ವದವರಿಂದ ನಾಮಕರಣರಾದ ಸಭಾ ಸದಸ್ಯರಾಗಿ ನಿಯಮಿಸಲ್ಪಟ್ಟಿರುವ ಮ|| ಡಿ ವಿ ಗುಂಡಪ್ಪನವರು ಪತ್ರಿಕೆಗಳಲ್ಲಿ ಮನಸ್ಸಿಗೆ ಬಂದಂತೆ ಬರೆದು ಶ್ರೀಮನ್ಮಹಾರಾಜರವರ ಅತಿಥಿಗಳಾಗಿ ಬಂದಿದ್ದ ಸರ್ ಜಾನ್ ಸೈಮನ್ನರವರನ್ನು ಬಹಿಷ್ಕರಿಸಬೇಕೆಂದು ಬೋಧಿಸುವರೆಂದೂ ಯಾರು ತಾನೆ ನೆನೆಸಿದ್ದರು? ಈ ವಿಮರ್ಶನದಿಂದ ಕಾಲ ವ್ಯರ್ಥವಾಗದೆ ಜ್ಞಾನೋದಯವಾಗಿ, ತೊಂದರೆಯ ಕಾಲಗಳಲ್ಲಿ ಪ್ರಭುತ್ವ ಪಕ್ಷವನ್ನು ವಹಿಸಿ ಹೋರಾಡಿ ಶ್ರೀಮನ್ಮಹಾರಾಜರವರಲ್ಲೂ ಅವರ ಪ್ರಭುತ್ವದವರಲ್ಲೂ ತಮಗಿರುವ ಅಕುಟಿಲವೂ ಅಚಲವೂ ಆದ ಭಕ್ತಿವಿಶ್ವಾಸಗಳನ್ನು ಪ್ರದರ್ಶಿಸುವ ಸಂಸ್ಥಾನದ ಸಧ್ಯ ಪ್ರಜೆಗಳಿಗೆ ಶುಭವಾಗುವುದೆಂದು ನಿರೀಕ್ಷಿಸುತ್ತೇವೆ.

ವೀರಶೈವ ಮಹಾಸಭೆ

ಈ ಸಭೆಯ ಹತ್ತನೇ ಅಧಿವೇಶನವು ಸರ್ ಕೆ ಪಿ ಪುಟ್ಟಣ್ಣಶೆಟ್ಟರ ಯಾಜಮಾನ್ಯದಲ್ಲಿ ಬೆಂಗಳೂರು ವೀರಶೈವ ಸಮಾಜಬಂಧುಗಳು ವೀರಶೈವ ಪ್ರಪಂಚವೇ ತಲೆದೂಗುವ ಹಾಗೆ ಅಭೂತಪೂರ್ವವಾದ ಉತ್ಸಾಹದಿಂದಲೂ, ವೈಭವದಿಂದಲೂ ನಡೆಯಿಸಲ್ಪಟ್ಟು, ಮುಂದೆ ಪ್ರತಿವರ್ಷದಲ್ಲೂ ಮಹಾಸಭೆಯು ತಪ್ಪದೆ ನಡೆಯುವಂತೆ ಕೋರಲ್ಪಟ್ಟಿದ್ದಿತು. ಆದರೆ, ಯಾವ ಕಾರಣದಿಂದಲೋ ಭರತಖಂಡದ ಯಾವ ಪ್ರಾಂತದವರೂ ಹನ್ನೊಂದನೆಯ ಅಧಿವೇಶನವನ್ನು ನೆರವೇರಿಸಲು ಪ್ರಯತ್ನಿಸಲಿಲ್ಲವೆಂದು ಬರೆಯಲು ವಿಷಾದವಾಗುತ್ತದೆ. ಈ ಕಾರಣದಿಂದ ಮುಂದಾದರೂ ಯಾವ ಸ್ಥಳದಲ್ಲಾಗಲಿ ನಡೆಯುವ ಸಂಭವ ಉಂಟೋ ಇಲ್ಲವೋ ಎಂಬ ಅನುಮಾನವುಂಟಾಗಿದ್ದಿತು. ಆದರೆ ಈಚೆಗೆ ಬೆಂಗಳೂರಿನ ಮಾಡರ್ನ್ ಮುದ್ರಾಕ್ಷರಶಾಲೆಯ ಯಜಮಾನರಾದ ಮ|| ಟಿ ಎಚ್ ಹನುಮಪ್ಪನವರು ಕಾರ್ಯಾರ್ಥವಾಗಿ ನೈಜಾಂ ಸಂಸ್ಥಾನಕ್ಕೆ ಸೇರಿದ ರಾಯಚೂರಿಗೆ ಹೋಗಿರುವಾಗ್ಗೆ, ಅಲ್ಲಿಯ ವೀರಶೈವಸಮಾಜ ಪ್ರಮುಖರೊಡನೆ ಮಹಾಸಭಾ ವಿಚಾರವಾಗಿ ಪ್ರಸ್ತಾಪಿಸಿ ಒಂದು ಸಭೆಯನ್ನು ಕೂಡಿಸಿ ಮಹಾಸಭೆಯೆಂದರೇನು, ಅದರ ಉದ್ದೇಶ ಪ್ರಯೋಜನಗಳೇನು? ಎಂಬುದನ್ನು ತಿಳಿಯ ಹೇಳಿ ಈ ವರ್ಷದ ಡಿಸೆಂಬರ್ ತಿಂಗಳಲ್ಲಿ ಹನ್ನೊಂದನೆಯ ಅಧಿವೇಶನವನ್ನು ರಾಯಚೂರಿನಲ್ಲಿ ನಡಸುವಂತೆ ನಿರ್ಧರಿಸಿ ಮುಂದಿನ ಕಾರ್ಯಕ್ರಮಗಳನ್ನು ಪರ್ಯಾಲೋಚಿಸುವ ಬಗೆಗೆ ಒಂದು ತಾತ್ಕಾಲಿಕ ಆಲೋಚನಾಸಂಘವನ್ನೇರ್ಪಡಿಸಿದ ವಿಚಾರವು ಈ ಸ್ಟಾರ್ ಪತ್ರಿಕೆಯ ಹಿಂದಿನ ಸಂಚಿಕೆಯಲ್ಲಿ ಪ್ರಕಟವಾಗಿದ್ದುದನ್ನು ನೋಡಿ ಸಮಾಜಬಾಂಧವರು ಪರಮಾನಂದಗೊಂಡು ಮುಂದಿನ ಕಾರ್ಯಭಾಗವನ್ನು ಬಹು ಕುತೂಹಲದಿಂದ ನಿರೀಕ್ಷಿಸುತ್ತಿರುವರಷ್ಟೆ. ಈಗ ಈ ಪತ್ರಿಕೆಯ ಬೇರೊಂದು ಕಡೆ "ವೀರಶೈವ ಮಹಾಸಭೆಯ ವಿಚಾರ" ಎಂಬ ಶೀರ್ಷಿಕದಿಂದ ಪ್ರಕಟವಾಗಿರುವ ಪತ್ರವ್ಯವಹಾರದಲ್ಲಿ, ಬೆಳಗಾಂ ಡಿ|| ಗೋಕಾಕ ತಾ|| ಸಾವಳಗಿಯಲ್ಲಿರುವ ಶ್ರೀಮನ್ನಿರಂಜನ ಶಿವಯೋಗಿ ಶ್ರೀ ಶಿವಲಿಂಗಸ್ವಾಮಿಯವರು ಹನ್ನೊಂದನೆಯ ಅಖಿಲಭಾರತ ವೀರಶೈವ ಮಹಾಸಭೆಯನ್ನು ಇದೇ ಮೇ ತಿಂಗಳ 1, 2 ಮತ್ತು 3 ನೇ ತಾರೀಕುಗಳಲ್ಲಿ ಘಟಪ್ರಭಾ ನದೀದಡದ ಮೇಲಿರುವ ತಮ್ಮ ಮಠದ ಪವಿತ್ರಕ್ಷೇತ್ರಸ್ಥಳದಲ್ಲಿ ನಡಯಿಸಲು ಸಂಕಲ್ಪಿಸಿರುವುದಾಗಿಯೂ ಮಹಾಸಭೆಯ ನಿರೀಗೆ ಈ ಕ್ಷೇತ್ರವು ಪ್ರಶಸ್ತವಾಗಿರುವುದರಿಂದ ವೀರಶೈವ ಸಮಾಜಬಂಧುಗಳು ತಮ್ಮನುಮತಿಯನ್ನು 15 ದಿವಸಗಳೊಳಗೆ ತಿಳಿಸಬೇಕಾಗಿಯೂ ಕೋರುತ್ತಾರೆ.

ವೀರಶೈವ ಸಮಾಜವು ಮಹಾಸಭೆಯು ಗಂಧವನ್ನೇ ಅರಿಯದಿದ್ದ ಕಾಲದಲ್ಲಿ ಅಂದರೆ 1904 ರಲ್ಲಿ ವೀರಶೈವರ ನೈತಿಕ ಸಾಮಾಜಿಕ ಧಾರ್ಮಿಕ ವಿದ್ಯಾಭಿವೃದ್ಧಿಗಳಿಗೆ ಕಲ್ಪತರುವೆಂಬ ವೀರಶೈವ ಮಹಾಸಭೆಯನ್ನು ಆರಂಭಿಸಿ ಕೆಲ ಕಾಲದವರೆಗೆ ನಡೆಯಿಸಿಕೊಂಡು ಬಂದ ಶ್ರೀ ಹಾನಗಲ್ಲು ಕುಮಾರ ಮಹಾಸ್ವಾಮಿಗಳೂ, ಅವರ ಸಹಾಯಕರಾದ ಶ್ರೀ ಬೀಳೂರು ಮಹಾಸ್ವಾಮಿಗಳೂ ನಿರಂಜನಮೂರ್ತಿಗಳೇ. ಈ ಮಹಾಸಭೆಯು ಕೆಲ ಕಾಲ ನಡೆಯದೆ ನಿಂತುಹೋಗಿದ್ದುದರ ಮೇಲೆ ಸಮಾಜಾಭಿವೃದ್ಧಿ ಕಾಂಕ್ಷಿಗಳಾದ ದಾವಣಗೆರೆಯ ವೀರಶೈವ ಬಂಧುಗಳು ಎಂಟನೆಯ ಮಹಾಸಭೆಯನ್ನು ಪ್ರಯತ್ನಪುರಸ್ಸರವಾಗಿ ನೆರೆಯಿಸಿದ್ದ ವೇಳೆಯಲ್ಲಿ ಮಹಾಸಭೆಯು ನಿರಾತಂಕವಾಗಿ ನಡೆದುಕೊಂಡುಹೋಗುವ ಬಗೆಗೆ ಚಿರಸ್ಥಾಯಿ ಫಂಡುಕೊಡಲು ಅನುಗ್ರಹಿಸಿದ ಶ್ರೀಮುಚ್ಚಗದ್ದುಗೆ ಜಯದೇವ ಮಹಾಸ್ವಾಮಿಗಳೂ ನಿರಂಜನಮೂರ್ತಿಗಳೇ, ಈಗ ಹನ್ನೆರಡನೆಯ ಸಭೆಯನ್ನು ನೆರೆಯಿಸಲು ಸಂಕಲ್ಪಿಸಿ ಸಮಾಜದವರ ಸಹಾಯ ಸಹಾನುಭೂತಿಯನ್ನು ಕೋರಿರುವ ಸಾವಳಗಿ ಮಠಾಧ್ಯಕ್ಷರಾದ ಶ್ರೀ ಶಿವಲಿಂಗ ಮಹಾಸ್ವಾಮಿಗಳೂ ನಿರಂಜನಮೂರ್ತಿಗಳೇ ಆಗಿರುತ್ತಾರೆ. ಅಲ್ಲದೆ ನಮ್ಮ ಸಮಾಜಾಭಿವೃದ್ಧಿ ಕಾರ್ಯಗಳೆಲ್ಲ ಇವರೆಗೆ ಶ್ರೀಮನ್ನಿರಂಜನಮೂರ್ತಿಗಳಿಂದಲೇ ಆಗಿರುತ್ತವೆ ಮತ್ತು ಮುಂದೆಯೂ ಅವರಿಂದಲೇ ಆಗಬೇಕಾಗಿರುತ್ತವೆಂದು ಇವರೆಗಿನ ಅನುಭವದಿಂದ ಸಮಾಜದವರಿಗೆ ಮನದಟ್ಟಾಗಿರುತ್ತದೆ. ಆದುಕಾರಣ ಹನ್ನೊಂದನೆಯ ಮಹಾಸಭೆಯನ್ನು ನೆರೆಯಿಸಲು ಸಂಕಲ್ಪಿಸಿರುವ ಶ್ರೀಮನ್ನಿರಂಜನ ಶಿವಲಿಂಗ ಮಹಾಸ್ವಾಮಿಗಳು ಈ ಮಹಾಕಾರ್ಯವನ್ನು ನಿರ್ವಹಿಸುತ್ತಾರೆಂಬುದರಲ್ಲಿ ಸಂದೇಹ ತೋರುವುದಿಲ್ಲ. ಇದಕ್ಕಾಗಿ ನಾವು ಈ

[illegible] ಪ್ರವಾಸಿಗರು ನಿರಾಶೆಗೊಂಡಿದ್ದಾರೆ [illegible] ಬರಸ್ವಾಯು [illegible] ಆಗಿದೆ ಎಂದು ಹೇಳುತ್ತಾರೆ [illegible] ಪ್ರಾಂತದ ಸರ್ಕಾರಿಯ ಅಧಿಕಾರಿಗಳಿಗೂ [illegible] [illegible] ವಾಗಿದೆ [illegible] ದೈವಾನುಗ್ರಹದಿಂದಲೂ, ಚಿರಸ್ಥಾಯಿಭಂಗಿಗಳವರ ಪ್ರೋತ್ಸಾಹದಿಂದಲೂ [illegible] ಯಲ್ಲಿ ನೆರವೇರುವುದಾದರೆ, ಇದನ್ನು ಬರುವ ಡಿಸೆಂಬರ್ ತಿಂಗಳಲ್ಲಿ ಕೂಡಿಸಬೇಕೆಂಬ ಪ್ರಯತ್ನಶೀಲರಾಗಿರುವ ರಾಯಚೂರಿನ [illegible] ರಕ್ಷಿತಬಂಧುಗಳು ನಿರುತ್ಸಾಹಿಗಳಾಗದೆ ಹನ್ನೆರಡನೆಯ ಸಭೆಯನ್ನು ತಮ್ಮಲ್ಲಿ ನೆರವೇರಿಸಲು ಏಕೀಭೂತೋತ್ಸಾಹಶೀಲರಾಗಿರಬೇಕಾಗಿ ಅಪೇಕ್ಷಿಸುತ್ತೇವೆ

ಸಂಪಾದಕವ್ಯೂಯರು ಸೆರೆಹಿಡಿಯಲ್ಪಟ್ಟರು.

ಬೆಂಗಳೂರಲ್ಲಿ ನಿತ್ಯದಲ್ಲೂ ಪ್ರಕಟವಾಗುತ್ತಿದ್ದು ಈಗ [illegible] ಹೋಗಿರುವ ವೀರಕೇಸರಿ ಪತ್ರಿಕಾಸಂಪಾದಕರಾದ ಮ॥ [illegible] ಸೀತಾರಾಮಶಾಸ್ತ್ರಿಗಳು "ಮೈಸೂರು [illegible] ಸಿದ್ಧವಾಗಿರಲಿ! 50 ಜನರು ಪ್ರೆಸ್ ಕಾನೂನನ್ನು ಮುರಿಯಲು ಸಿದ್ಧಮಾಡಿಧೇನೆ ಜೈಲುಗಳಿಗೆ ಸಿದ್ಧ [illegible] ಹುಡುಗಾಟ! ಮಿರ್ಜಾಸಾಹೇಬರ ದರ್ಬಾರು [illegible] ಮುಟ್ಟಬೇಕು ಬಾವಾಟಿ [illegible] ಸರ್ಕಾರವು ಸ್ಥಾಪಿಸಲ್ಪಡಬೇಕು ಸರ್ಕಾರದವರು ಸಿದ್ಧವಾಗಿರಲಿ!" ಎಂದು ಬೆಂಗಳೂರಲ್ಲಿ ನಿತ್ಯದಲ್ಲೂ ಹೊರಡುವ ನವಜೀವನ ಪತ್ರಿಕೆಯ 20-2-1930 ರ ಸಂಚಿಕೆಯಲ್ಲಿ ಪ್ರಕಟಿಸಿದ್ದರು [illegible] ರಾಜದ್ರೋಹಕರವೆಂದು ಪೋಲೀಸಿನವರು ಮ॥ ಸೀತಾರಾಮಶಾಸ್ತ್ರಿಗಳನ್ನೂ, ನವಜೀವನದ ಸಂಪಾದಕರಾದ ಮ॥ ಅಶ್ವತ್ಥನಾರಾಯಣರಾಯರನ್ನೂ ಸೆರೆಹಿಡಿದು ಬೆಂಗಳೂರು ಡಿ॥ ಮೆಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಿರುವಾಗ್ಗೆ, ಆಪಾದಿತರನ್ನು ಜಾಮೀನಿನ ಮೇಲೆ ಬಿಡಬೇಕೆಂದು ಅವರವರ ವಕೀಲರುಗಳು ವಾದಿಸಿದರಾದರೂ ಮೆಜಿಸ್ಟ್ರೇಟರು ಬಿಡಲಿಲ್ಲ ಇದರಮೇಲೆ ಚೀಫ್ ಕೋರ್ಟಿಗೆ ಅಪೀಲು ಮಾಡಿಕೊಳ್ಳಲಾಗಿ, 2 ನೇ ಜಡ್ಜಿಯಾದ ಮ॥ ಶ್ರೀನಿವಾಸಯ್ಯಂಗಾರ್‌ರವರು ಅಪರಾಧಿಗಳ ಮತ್ತು ಫಿರ್ಯಾದಿ ಪೋಲೀಸಿನವರ ವಕೀಲರುಗಳ ವಾದವಿವಾದಗಳನ್ನು ಆಲಿಸಿ ಜಾಮೀನಿನ ಮೇಲೆ ಬಿಡಲಾಗುವುದಿಲ್ಲವೆಂದು ಅಪ್ಪಣೆ ಮಾಡಿದರು ಉಭಯ ಆಪಾದಿತರು ಈಗ ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿರಿಸಲ್ಪಟ್ಟಿರುತ್ತಾರೆ ಅವರ ವಿಚಾರಣೆಯು ಇಂದಿನಿಂದ ಡಿ॥ ಮೆಜಿಸ್ಟ್ರೇಟರಲ್ಲಿ ಆರಂಭವಾಗತಕ್ಕದ್ದಾಗಿದೆ ಪ್ರಭುತ್ವದವರನ್ನು ಪ್ರತಿಭಟಿಸಿ ಕಾರಾಗೃಹಕ್ಕೆ ಹೋಗಲು 50 ಜನರೊಡನೆ ಸಿದ್ಧನಾಗಿದ್ದೇನೆಂದು ವಿಜೃಂಭಿಸುವ ದೇಶೋದ್ಧಾರಕ ಸೀತಾರಾಮಶಾಸ್ತ್ರಿಗಳು ವಕೀಲರ ಸಹಾಯ ಪಡೆದುದೇಕೆ? ಈ ವರ್ತನವು ಸಾತ್ವಿಕನಿರೋಧವೆನಿಸಿಕೊಳ್ಳುವುದೆ?

ಒಳದೇಶದ ವೃತ್ತಾಂತಗಳು.

ನೆನ್ನೆಯವರ ದಿವಾನರ ಅಧ್ಯಕ್ಷತೆಯಲ್ಲಿ ಆರಂಭವಾಗಿರುವ ಮೈಸೂರು ಎಕನಾಮಿಕ್ ಕಾನ್ಫರೆನ್ಸು ಈ ದಿವಸ ಮುಕ್ತಾಯವಾಗಿರುವುದು

ಈ ಪತ್ರಿಕೆಯಲ್ಲಿ ಗರ್ಭಿತವಾಗಿರುವ ಬೆಂಗಳೂರು [illegible] ಅವರ ಸಂತಾನ ವಿಜ್ಞಾನ ಪುಸ್ತಕ ಪ್ರಕಟನೆಯನ್ನು ವಾಚಕರು ಅವಲೋಕಿಸಬೇಕಾಗಿ ಕೋರುತ್ತೇವೆ

ಬರುವ ತಾ॥ 7 ಮತ್ತು 9 ರಲ್ಲಿ ಮೈಸೂರು [illegible] ರಾಯರು [illegible] ರಾಜಧಾನಿಯ ಅಡ್ವೊಕೇಟ್ ಮ॥ [illegible] ನರಸಿಂಹಯ್ಯನವರ ಅಧ್ಯಕ್ಷತೆಯಲ್ಲಿ ನಡೆಯುವುದಾಗಿ ಪ್ರಕಟವಾಗಿದೆ

ರೆವಿನ್ಯೂ ಕಮೀಷನರರಾದ ಮ॥ [illegible] ಉದ್ಯೋಗದ ಅವಧಿಯು ಇದೇ ವರ್ಷದ ಸೆಪ್ಟೆಂಬರ್ ತಿಂಗಳಲ್ಲಿ ಮುಗಿಯುವುದರಿಂದ ಇನ್ನೊಂದು ವರ್ಷದ ವರೆಗೆ ಹೆಚ್ಚಿಸಲ್ಪಟ್ಟಿರುವುದಾಗಿ ತಿಳಿಯುತ್ತೇವೆ

ನೆನ್ನೆಯ ದಿವಸ ಬೆಳಿಗ್ಗೆ ಶ್ರೀಮದ್ಯುವರಾಜರವರು ಹೂಡಿಕೆರೆಗೆ ದಯಮಾಡಿಸಿ ಅಲ್ಲಿ ಇರ್ರಿಗೇಷನ್ [illegible] ಆರಂಭಿಸಿ ಸಾಯಂಕಾಲದಲ್ಲಿ ಅಲ್ಲಿಂದ ಸತ್ಕಾರವನ್ನು ಹೊಂದಿ ಹಿಂತಿರುಗಿದರು

ಮೈಸೂರು ಸೀಮೆಯ ರೆಸಿಡೆಂಟರಾದ [illegible] ಅವರು [illegible] ಹೋಗಿದ್ದಾಗ್ಗೆ [illegible] ಕ್ಯಾಂಪ್‌ನವರು [illegible] ತಿಳಿಯಲು ವ್ಯಸನವಾಗುತ್ತದೆ

ಚೀಫ್ ಕೋರ್ಟಿನ ಜಡ್ಜಿಯವರಾದ ಮ॥ [illegible] ಬಿ ಎ , ಬಿ ಎಲ್ , ರವರು ಪಡೆದುಕೊಂಡಿರುವ [illegible] ತಿಂಗಳ ರಜವು [illegible] ತಾ॥ 27 ರ ವರೆಗೆ ಹೆಚ್ಚಿಸಲ್ಪಟ್ಟಿರುತ್ತದೆ ಇವರು ಸಕುಟುಂಬರಾಗಿ [illegible] ಪುಣ್ಯಕ್ಷೇತ್ರ ಸಂಚಾರದಲ್ಲಿರುವರು

ಶ್ರೀಮನ್ಮಹಾರಾಜರವರ ಸ್ವಾರಿಯು ಮಂಗಳವಾರ ಬೆಂಗಳೂರಿಗೆ [illegible] ಚಿತ್ತೈಸಿದ್ದು [illegible] ರಾಜಧಾನಿಗೆ [illegible] ಮತ್ತು ನಾಳೆಯ ದಿವಸ [illegible] ಪ್ರೈವೇಟ್ ಸೆಕ್ರೆಟರಿ [illegible] ಪರಿವಾರದೊಡನೆ ಚಿತ್ತೈಸುವುದಾಗಿರುವುದು.

ಕಳೆದ ಭಾನುವಾರ ರಾತ್ರಿ ಬೆಂಗಳೂರು [illegible] ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಹೊಂದುತ್ತಿದ್ದ [illegible] ರೋಗದಿಂದೆಯನ್ನು [illegible], ಆಸ್ಪತ್ರೆಗೆ ಸಂಬಂಧಿಸಿದಂತೆ ಕಟ್ಟಲ್ಪಟ್ಟಿದ್ದಲ್ಲಿಗೆ ಹೋಗಿ [illegible] ಪ್ರಾಣಹತ್ಯ ಮಾಡಿಕೊಂಡನು.

ರಾಜಧಾನಿಯ ಒಂದನೇ ಮುನ್ಸಿಫರಾದ ಮ॥ [illegible] ರವರು [illegible] ಕಮಿಟಿಯ ಸೆಕ್ರೆಟರಿಯಾಗಿ ನಿಯಮಿಸಲ್ಪಟ್ಟಿರುವುದರಿಂದ ಅವರು ಬರುವವರೆಗೆ ಬೆಂಗಳೂರಿನ ಮ॥ ಎ. ಕೆಂಪಯ್ಯ, ಬಿ. ಎ , ಎಲ್ ಎಲ್, ಬಿ , ಯವರು ಆಫೀಸಿಂಗ್ ಒಂದನೇ ಮುನ್ಸೀಫರಾಗಿ ನಿಯಮಿಸಲ್ಪಟ್ಟಿರುವರು

[illegible] ಮ॥ [illegible] ರಾಜೂಗೊಡ್ಡ [illegible] ಪೋಲೀಸಿನವರು [illegible] ಕೋರ್ಟಿನಲ್ಲಿ ಮಾಡಿದ್ದ [illegible] ಸಾಧಾರಣ [illegible] ವರುಷ [illegible] ಕೋರ್ಟಿನಲ್ಲಿ [illegible] ಹೊರಬಿದ್ದಿದೆ [illegible] ಬಂದಿತು [illegible] ಕೊಂಡಿದ್ದರು

[illegible] ಹೊಸದಾಗಿ ಕಟ್ಟಲ್ಪಟ್ಟಿರುವ [illegible] ಆರಂಭೋತ್ಸವಕ್ಕಾಗಿ ಅಲ್ಲಿಯ [illegible] ಕಳೆದ ಮಂಗಳವಾರ [illegible] ಗುರುವಾರ ಆರಂಭೋತ್ಸವವನ್ನು ಜರುಗಿಸಿ ಕಾಲೋಚಿತವಾದ ಭಾಷಣ ಮಾಡಿ ಸಮುಸ್ತರಿಂದಲೂ ವಿಶೇಷ ಮರ್ಯಾದೆಯನ್ನು ಹೊಂದಿದರು

ಗೌರ್ನಮೆಂಟ್ ಅಸಿಸ್ಟೆಂಟ್ ಸೆಕ್ರೆಟರಿಯವರಾದ ಆ [illegible] ಮ॥ ಎಂ ವೀರರಾಜ ಅರಸ್ ಬಿ ಎ , ಬಿ ಎಲ್ , ರವರು [illegible] ಕಾರ್ಯನಿರ್ವಾಹಕ [illegible] ಸೆಕ್ರೆಟರಿಯವರಾಗಿ ನಿಯಮಿಸಲ್ಪಟ್ಟಿರುತ್ತಾರೆ ಅವರ ಬದಲು [illegible] ಮ॥ [illegible] ರಾಘವಾಚಾರ್ [illegible] ರವರ ಅಧೀನರಾಗಿಯೂ ಅಸಿಸ್ಟೆಂಟ್ ಸೆಕ್ರೆಟರಿಯಾಗಿ ವರ್ಗಾಯಿಸಲ್ಪಟ್ಟಿರುವರು

ಕಳೆದ ಮಂಗಳವಾರ ರಾತ್ರಿ ಬೆಂಗಳೂರು [illegible] ತಿಂಗಳ [illegible] ರೂಪಾಯಿ [illegible] ಗಂಟುಗಳಲ್ಲಿ ಕಟ್ಟಿ [illegible] ಪೋಲೀಸಿನವರನ್ನು [illegible] ಆ ಗಂಟುಗಳಲ್ಲಿ [illegible] ರೂಪಾಯಿ ಪದಾರ್ಥಗಳಿದ್ದುವಂತೆ

[illegible] ಸಬ್‌ಡಿವಿಜನ್ ಆಫೀಸರಾದ ಮ॥ [illegible] ಬಿ ಎ ಯವರಿಗೆ ಕಳೆದ ಫೆಬ್ರವರಿ ತಾ॥ 17 ರಿಂದ 3 ತಿಂಗಳ ಪ್ರಿವಿಲೇಜ್ ರಜ ಕೊಡಲ್ಪಟ್ಟಿರುತ್ತದೆ ಈ ಅವಧಿಯಲ್ಲಿ [illegible] ಆಫೀಸರಾದ ಮ॥ ಎಂ ಶಂಕರ [illegible] ಎ ಎ ಯವರು [illegible] ಆಫೀಸಿಂಗ್ ಸಬ್‌ಡಿವಿಜನ್ ಆಫೀಸರಾಗಿ ನಿಯಮಿಸಲ್ಪಟ್ಟಿರುವರು ಮ॥ [illegible] ರವರು [illegible] ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಹೊಂದಿ ಗುಣಹೊಂದಿರುತ್ತಾರೆಂದು ತಿಳಿಯಲು ಸಂತೋಷವಾಗುತ್ತದೆ

ಮೈಸೂರು ಸಂಸ್ಥಾನೋದ್ಧಾರಕ್ಕಾಗಿಯೇ ಅವತರಿಸಿ [illegible] ಪತ್ರಿಕೆಗಳಿಗೆ ಸಮಾಚಾರಗಳನ್ನು ಬರೆದು [illegible] ರವರು [illegible] ಸಂಜೀವರಾಯರು [illegible] ವಿಚಾರಣೆಯು ನಡೆಯುತ್ತಿರುವಾಗ್ಗೆ ಡ್ಯಾಲಿ ಮೆಮೋರಿಯಲ್ ಹಾಲಿನ ದ್ವಾರದಬಳಿ ಕಾವಲಿದ್ದ ಪೋಲೀಸಿನವರು [illegible] ಅವರನ್ನು [illegible] ಅವಮಾನಪಡಿಸಿದರೆಂದು [illegible] ಪೋಲೀಸಿನವರು ರಾಯರ ಮೇಲೆ ಇಂಡಿಯನ್ ಪೀನಲ್ ಕೋಡ 353 ನೇ ಸೆಕ್ಷನ್ ಪ್ರಕಾರ ಹೂಡಿರುವ ವಿವಾದದಲ್ಲಿ ಆ ದಿವಸ ಕಾವಲಿದ್ದ ಪೋಲೀಸ್ ಕಾನಸ್ಟೆಬಲು [illegible] ಮ॥ ಜಂಗಂನಾಯಕ್ ಸಾರ್ಜೆಂಟ್ ವೆಂಕಟಸುಬ್ಬಯ್ಯ, [illegible] ರಯ್ಯ ಕಮಿಟಿಯ [illegible] ಮ॥ ರಾಜಾರಾವ್ [illegible] ಯ್ಯಂಗಾರ್ ಇವರುಗಳು ಫಿರ್ಯಾದು ಅರ್ಜಿಯಲ್ಲಿ ಕಂಡ ವಿಷಯವು ನಡೆದುದುಂಟೆಂದು ಸಾಕ್ಷಿ ನುಡಿದಿರುವರು ಮ॥ ಎಚ್ [illegible] ಯ್ಯಂಗಾರ್ ಎಂಬವರ ಸಾಕ್ಷ್ಯ [illegible] ಈ ತಿಂಗಳ [illegible] ಮುಂದಕ್ಕೆ ಹಾಕಲ್ಪಟ್ಟಿರುತ್ತದೆ

ಮುಮ್ತಾಜ್ ಬೇಗಮಳು ಸಂಗೀತಗಾತಿಯಾದುದು

ಮುಂಬಾಯಿನಗರದಲ್ಲಿ ಶ್ರೀಮಂತನಾಗಿದ್ದ ಬಾವಲಾವೇಟನ ಕೊಲೆಯಲ್ಲಿ ಪ್ರಖ್ಯಾತಳಾದ ಮತ್ತು ಪದಚ್ಯುತರಿಂದ ಇಂದೂರಿನ ಮಹಾರಾಜ ಸರ್ ತುಕೋಜಿರಾಯರ ಪ್ರಾಣಪ್ರೇಯಸಿಯಾಗಿದ್ದ ಮುಮ್ತಾಜ್ ಬೇಗಮ್ಮಳು ಗಾಯನವೃತ್ತಿಯನ್ನು ಕೈಕೊಂಡು ಕಳೆದ ಫೆಬ್ರವರಿ ತಾ॥ 1 ಮತ್ತು 17 ರ ರಾತ್ರಿ ಮುಂಬಾಯಿ ರಾಯಲ್ ಆಪರಾಹೌಸ್ [illegible] ಸಂಗೀತವನ್ನು ಮಾಡಿದಳು

[illegible] ವರ್ಷ ವಯಸ್ಸಳು ಮಾತ್ರವಾಗಿರುವ ಮುಮ್ತಾಜ್ ಬೇಗಮ್ಮಳು [illegible] ಪ್ರಾಣಾಪಕತ್ವಯುಳ್ಳವಳಾಗಿ [illegible] ಈಗ ನಾನು ಸಂಸಾರ ಮತ್ತು ಇತರ [illegible] ಗಳಿಂದ ಮುಕ್ತಳಾಗಿರುವೆನು ನಾನು ತುಕೋಜಿರಾಯರ ರಾಣಿವಾಸವನ್ನು ಸೇರುವುದಕ್ಕೆ ಬಂದುವರ್ಷ ಮುಂಚಿನಿಂದ ಈವರೆಗೂ ನನ್ನ [illegible] ಗಾಯನ [illegible] ಕೈಕೊಳ್ಳ [illegible] ಈಗ ಅದನ್ನು ಅನುಸರಿಸಲಿಷ್ಟಪಡುವವಳಾಗಿರುವೆ ಎಂದು ಒಬ್ಬ ಪತ್ರಿಕಾಪ್ರತಿನಿಧಿಯೊಡನೆ ಹೇಳಿದಳು

ಚಲನಚಿತ್ರಗಳ ಪ್ರದರ್ಶನಕ್ಕಾಗಿ ಅಭಿನಯಿಸುವೆನೆಂದು ಪತ್ರಿಕೆಗಳಲ್ಲಿ ಪ್ರಕಟವಾಗಿರುತ್ತದೆ ಇದು ನಿಜವೆ ಎಂದು ಪ್ರಶ್ನಿಸಲು [illegible] ತಮ್ಮ ಕಂಪೆನಿಯಲ್ಲಿ ಅಭಿನಯಿಸುವುದಾದರೆ [illegible] ಕೊಡುತ್ತೇವೆಂದು [illegible] ಕಂಪೆನಿಯವರು ಕೇಳಿರುತ್ತಾರೆ ಅದನ್ನು ನಾನು [illegible] ನನಗೆ ಪ್ರಾಣಾಪಕತ್ವಯಿರುವ ಹಾಡುಗಾರಿಕೆಯ [illegible] ಕೈಕೊಳ್ಳುವೆನಲ್ಲದೆ ಮತ್ತಾವುದನ್ನೂ ಅಂಗೀಕರಿಸತಕ್ಕವಳಲ್ಲ ಎಂದುತ್ತರವನ್ನಿತ್ತಳು

ಮುಂದೆ [illegible] ದೇಶಗಳಿಗೆ ಹೋಗುವಿರೋ ಇಲ್ಲವೋ ಎಂದು ಪ್ರಶ್ನಿಸಿದುದಕ್ಕೆ "ಇಂಗ್ಲೆಂಡಿನಲ್ಲಿಗಾಯನ [illegible] ಒಂದು ಆಂಗ್ಲ ಕಂಪೆನಿಯವರು ಪತ್ರವ್ಯವಹಾರವನ್ನು ನಡೆಸುತ್ತಿರುವರು ಪರಸ್ಪರ [illegible] ಇಂಗ್ಲೆಂಡಿಗೆ ಹೋಗಿ ಅಲ್ಲಿ ಕೆಲ ದಿನಗಳಿದ್ದು ಅನಂತರ ಪ್ರಪಂಚ ಪರ್ಯಟನ ಮಾಡುವೆನು ಎಂದು ಉತ್ತರವನ್ನಿತ್ತಳು

ನೀನು ಪುನಃ [illegible] ಸಂಭವವುಂಟೆ ಎಂದು ಪ್ರಶ್ನಿಸಲು "[illegible] ಮದುವೆ [illegible] ಅವನೊಡನೆ ನಾನು ಸುಖವಾಗಿ ಬಾಳುತ್ತಿದ್ದೆನು" ಎಂದುತ್ತರವನ್ನು ಕೊಟ್ಟು [illegible] ನಾಟಕರಂಗಗಳಲ್ಲಿ [illegible] ಎಂದು [illegible]

ಇವಳ [illegible] ವಯಸ್ಸಿನಲ್ಲಿಯೇ ತಂದೆಯಿಂದ ಸಂಗೀತಾಭ್ಯಾಸವನ್ನು [illegible] ಪ್ರಾಣಾಪಕತ್ವಯುಳ್ಳವಳಾಗಿರುತ್ತಾಳೆ ಇವಳು 6 ನೇ ವರ್ಷ ವಯಸ್ಸಿನಲ್ಲಿ ತಾಯಿಯು ಸಂಗೀತಾಭ್ಯಾಸಕ್ಕಾಗಿ ಹೈದರಾಬಾದಿನಲ್ಲಿ ಪ್ರಸಿದ್ಧ ಸಂಗೀತಗಾರನಾದ [illegible] ಎಂಬುವನ ಬಳಿಗೆ ಇವಳನ್ನು ಕರೆದುಕೊಂಡುಹೋಗಿ ಬಿಟ್ಟಳು ಆತನು 6 ವರ್ಷಕಾಲ ಇವಳಿಗೆ ಸಂಗೀತ ವಿದ್ಯೆಯನ್ನು ಕಲಿಸಿದನು ಸ್ತ್ರೀಯರಲ್ಲಿ ಇವಳೊಬ್ಬಳಿಗೇ ಆತನು ವಿದ್ಯೆ ಹೇಳಿದುದು ಅಲ್ಲಿಂದ ಇವಳ ತಾಯಿಯು ಮಗಳನ್ನು ಇಂದೂರಿಗೆ ಕರೆದುಕೊಂಡುಹೋದಳು ಅಲ್ಲಿ ಹೋಳಿ ಹಬ್ಬದ ದಿವಸ ಭರತಖಂಡದ ನಾನಾ ಭಾಗದಿಂದ ಬಂದಿದ್ದ ಸಂಗೀತಗಾರರ ಮತ್ತು ಸಂಗೀತಗಾತಿಯರ ಸಭೆಯಲ್ಲಿ ಮುಮ್ತಾಜಳು ತನ್ನ ಅಪೂರ್ವವಾದ ಗಾನವಿದ್ಯೆಯನ್ನು ಪ್ರದರ್ಶಿಸಿದಳು ಆಗ್ಗೆ 12 ವರ್ಷ ವಯಸ್ಸು ಮಾತ್ರವಾಗಿದ್ದಾಗ್ಗೂ ಇವಳ ಗಾನಚಾತುರ್ಯವನ್ನು ನೋಡಿದ್ದವರೆಲ್ಲರೂ ಬಹುವಾಗಿ ಕೊಂಡಾಡಿದರು ಆಗಲೇ ತುಕೋಜಿರಾಯರು ಇವಳನ್ನು ತಮ್ಮ ಆಸ್ಥಾನದ ಗಾಯಕಳನ್ನಾಗಿ ತಿಂಗಳಿಗೆ 1600 ರೂ ಸಂಬಳದ ಮೇಲೆ ನಿಯಮಿಸಿಕೊಂಡರು ಇದಲ್ಲದೆ ಇವಳ ಸೇವಕರಿಗೆ, ಇತರ ವೆಚ್ಚಕ್ಕೂ 1000 ರೂ ಕೊಡಲು ಗೊತ್ತುಮಾಡಲ್ಪಟ್ಟಿತು [illegible] ವರ್ಷದ ಮೇಲೆ ಪದಚ್ಯುತರಾದ ಮಹಾರಾಜರು ಇವಳಲ್ಲಿ ವ್ಯಾಮೋಹಿತರಾಗಿ ಇವಳನ್ನು ತಮ್ಮ ರಾಣಿವಾಸದಲ್ಲಿ ಸೇರಿಸಿಕೊಂಡರು ಇಂದೂರಿನಲ್ಲಿ ರಾಣಿಯು ವಾಸವಾಗಿದ್ದು, ಕಾಲ ಕಳೆದುದೂ ಅಲ್ಲಿಂದ ತಪ್ಪಿಸಿಕೊಂಡುಬಂದ ಮೇಲೆ ನಡೆದ ವೃತ್ತಾಂತವೂ ಬಹು ಕೌತುಕವಾಗಿ ಮುಗಿದಿದೆ

"NO SILENCE.

Silence has done considerable damage to the interests of the State and to the people of Mysore This fact has become marked in recent events. People who have given in the past their attention entirely to their business of income-trade or agriculture-have miscalculated in thinking that their interests are safe, if in broader questions of State, they keep silent India in general and Mysore in particular have suffered as a whole, *a small section of the people having* utilised their position and knowledge to selfish ends Madras was the first Province to feel awakened and to set to work to make amends for the past negligence The Justice Party in Madras will live in the History of South India as a remarkable organisation for its work of regeneration and liberation in Political life of the Non-Brahmin Community which ages ago had built up kingdoms and literatures all over India With the advent of the British into India, a small community came into *power* and influence and its zenith is over-reached to-day The Britisher used this community for his own purposes. He sees to-day, the folly of his short-sighted policy It has done him no good. Nor has it done good to India The Justice Party was quick in awakening and quicker in its work Fortunately for it, good leaders were available. Three of such able leaders have gone and still there are many *more, foremost* amongst them being Mr A Ramaswamy Mudaliar The Government of India itself is aware of the soundness and justice of the policy of the Justice *Party*, as it could be ascertained from their publication. Mr J Coleman, Director of Public Information, says in the book 'India in 1927–28' "What is now one of the strongest and most solidly organised bodies of political opinion in all India" is Justice Party. While speaking of the attitude of the Political Parties towards Simon Commission, he speaks of it as follows —"The Non-Brahmin or Justice Party in Madras, which has a counterpart in the Bombay Non-Brahmin organization is one of the most important and powerful of all Political organization in India." This is no small compliment It is a fact The organization is very sound and truthful

Now that we hear that in Mysore steps are being taken to hold a Non Brahmin Conference, it is a move in the *right* direction and it ought to meet before it is late Just as the Justice Party broke the silence of Madras and did justice to the masses So the leading Non-Brahmans of Mysore should unite and start an organisation on the lines the Justice Party

are done. The leading men of the ... may be invited to help us to build up the organisation. The need is urgent. The people are tired of the spirit of rebelliousness against Peace and Order on the part of a few misguided agitators. Mr. Nilgiri Sanjeevayya will be doing a great service to the country by collecting together all the forces of unity and friendliness which were being gathered by the late Mr. M. Basavayya. Before his mission was given a sound foundation he was unfortunately snatched away from us by the hands of Death. But the cause being righteous, hundred like him should come to fill the breach caused by his death. The Non-Brahman Conference is sure to bring into existence an organisation for which Mysore is longing. Nilgiri Sanjeevayya is destined to leave a name in Mysore like the one of Dr. Nair, Sir P. T. Thyagaraja Chetty, Raja Panagal and last but not least M. Basavayya. Nilgiri Sanjeevayya ki-Jai.

Free Thinker

ಗೃಹಕೃತ್ಯದ ನೋಟೀಸು

ಹೊಳೆನರಸೀಪುರ ತಾಲ್ಲೂಕು ದೊಡ್ಡ ಕಾಡನೂರು ಹೋಬಳಿ ನಗರ್ಲ ಹಳ್ಳಿಯಲ್ಲಿರುವ ವೀರಶೈವಮತದ ಕರಿಬಸವೇಗೌಡನ ಮಗ ದ್ಯಾವಪ್ಪ ಉರ್ಫ್ ಅಪ್ಪಾಜಿಯು ಈ ಮೂಲಕ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ—

ನಾನು ಮತ್ತು ನನ್ನ ಅಣ್ಣ ಪವತಿ ಬಸಪ್ಪ ಈಹ ಕರಿಬಸವೇಗೌಡನ ಮಕ್ಕಳು ನಮ್ಮ ಪಿತ್ರಾರ್ಜಿತ ಸ್ವತ್ತೆಲ್ಲವೂ ಅವಿಭಕ್ತ ಕುಟುಂಬಕ್ಕೆ ಸೇರಿರುತ್ತದೆ. ನನ್ನ ಅಣ್ಣನಿಗೆ ೪ ವರ್ಷದ ಬಸಪ್ಪನೆಂಬ ಒಬ್ಬ ಮಗನು ಮಾತ್ರ ಇರುವನು. ನಾನೂ ನನ್ನ ಪವತಿ ಅಣ್ಣ ಬಸಪ್ಪ ಸಹ ಇದೇ ಗ್ರಾಮದ ಸಾಹುಕಾರ್ ಕ್ರಿಷ್ಣಗೌಡರಲ್ಲಿ ಮಾಡಿರುವ ಸಾಲವನ್ನು ಸ್ವತ್ತನ್ನು ಮಾರದೆ ವರಮಾನದಿಂದ ತೀರಿಸಿ ನನ್ನ ಲಗ್ನವಾದನಂತರ ವಿಭಾಗಮಾಡಿಕೊಡುತ್ತೇನೆಂದು ಹೇಳಿದರೂ ನನ್ನ ಅಣ್ಣನ ಹೆಂಡತಿ ಬಸಮ್ಮನು ಕೇಳದೆ ಜನರ ದುರ್ಬೋಧೆಯಿಂದ ನನ್ನ ಅನುಮತಿಯಿಲ್ಲದೆ ಅವಿಭಕ್ತ ಆಸ್ತಿಯನ್ನು ಪರಾಧೀನ ಮಾಡುವ ಪ್ರಯತ್ನದಲ್ಲಿರುತ್ತಾಳೆಂದು ಕೇಳುತ್ತೇನೆ. ಈಗಿರುವ ಸಾಲವನ್ನು ತೀರಿಸಲು ನಾನು ಸಿದ್ಧನಾಗಿರುವುದರಿಂದಲೂ ನನ್ನ ಅನುಮತಿಯಿಲ್ಲದೆ ಸ್ವತ್ತನ್ನು ಮಾರಲು ನನ್ನ ಅತ್ತಿಗೆ ಬಸಮ್ಮನಿಗೆ ಅಧಿಕಾರವಿಲ್ಲದ್ದರಿಂದಲೂ ಯಾರಾದರೂ ಆಕೆಯಿಂದ ಕ್ರಯ, ಭೋಗ್ಯ, ಆಧಾರ ಮಾಡಿಕೊಂಡರೆ ನಾನಾಗಲಿ ಕುಟುಂಬದ ಸ್ವತ್ತಾಗಲಿ ಬದ್ಧರಾಗುವುದಿಲ್ಲವೆಂದು ಎಚ್ಚರಿಸಿರುತ್ತೇನೆ. (3—3)

ಸ್ವೀಕಾರ.

ಶ್ರೀ ವೀರಸಂಗಪ್ಪನವರ ಅಗ್ರತಾಂಬೂಲಸಂಭಾವನೆಯ ಬಗೆಗೆ ಈ ಕೆಳಗೆ ಕಂಡ ವಿವಾಹ ಮೊದಲಾದ ಶುಭಕಾರ್ಯಗಳಲ್ಲೂ ಇತರ ಸಂದರ್ಭಗಳಲ್ಲೂ ತೆಗೆದ ಕಳುಹಲ್ಪಟ್ಟ ಮೊಬಲಗನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿರುತ್ತೇವೆ—ಸಂ

ಮಾಗಡಿ ತಾ ಚಕ್ರಭಾವಿಮಠದ ಶ್ರೀ ಪಟ್ಟಾಧ್ಯಕ್ಷ ಮಹಾಸ್ವಾಮಿಗಳವರು ನಡೆಯಿಸಿದ ಶ್ರೀಮುರುಳಸಿದ್ಧೇಶ್ವರಸ್ವಾಮಿ ಸಂಸ್ಕಾರ ಮಹೋತ್ಸವದಲ್ಲಿ ಮೈಸೂರು ದಿನಸಿ ಅಂಗಡಿ ಮ॥ ಕೆಂಪಣ್ಣನವರ ಮೂಲಕ 1 ರೂ.

ಮೈಸೂರು ಹಳೆ ಅಗ್ರಹಾರದಲ್ಲಿರುವ ದಿನಸಿ ಅಂಗಡಿ ಮ॥ ಕೆಂಪಣ್ಣನವರ ಕುಮಾರ ವೀರಭದ್ರಪ್ಪನವರ ಶಿವದೀಕ್ಷಾ ಮಹೋತ್ಸವದಲ್ಲಿ 1 ರೂ

ಪತ್ರವ್ಯವಹಾರ

ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ

ಅನಂಗೀಕೃತ ಲೇಖನಗಳು

(1) ಕಷ್ಟಕ್ಕೆ ಒಳಗಾಗಿರುವವರು—ವೀರಶೈವಪ್ರಮುಖರಲ್ಲಿ ಇಂತಹ ನಕ್ಷತ್ರಗಳುಂಟೆಂಬ ನಿಮ್ಮ ಲೇಖನ ಸ್ಪಷ್ಟವಾಗಿರುವುದಿಲ್ಲವಲ್ಲದೆ ನಿಷ್ಠುರವಾಗಿರುವುದರಿಂದ ಪ್ರಕಟಿಸಲ್ಪಡಲಾಗುವುದಿಲ್ಲ. ಸಂ.

ಶ್ರೀ ಚಾಮುಂಡೇಶ್ವರಿ ಅಮ್ಮನವರ ರಥೋತ್ಸವ

ಬೆಂಗಳೂರು ಡಿ ಚಿಕ್ಕಬಳ್ಳಾಪುರ ತಾಲ್ಲೂಕ್ ಹಾರೋಹಳ್ಳಿಯಲ್ಲಿ ಪದ್ಧತಿಯಂತೆ ಇದೇ ವಿಭವನಾಮ ಸಂ॥ ಫಾಲ್ಗುಣ ಶುದ್ಧ ತ್ರಯೋದಶಿ ... ಬಿದಿಗೆ ಪರ್ಯಂತ (ಮಾರ್ಚಿ ತಾ 23 ರ ಲಾಗಾಯ್ತು 27ರ ವರೆಗೆ) 6 ದಿವಸ ಜಾತ್ರೆಯೂ ದನಗಳ ಪರಿಷೆಯೂ ಈ ಮಧ್ಯೆ ಪೌರ್ಣಮಿ ರಥೋತ್ಸವವೂ ನಡೆಯುತ್ತವೆ. ತಿಂಡಿಗೂ, ನೀರಿಗೂ, ನೆರಳಿಗೂ ಅನುಕೂಲವಾಗಿದೆ. ಬೆಂಗಳೂರಿಂದಲೂ ಚಿಕ್ಕಬಳ್ಳಾಪುರದಿಂದಲೂ ಬರತಕ್ಕವರಿಗೆ ಬಾಡಿಗೆ ಮೋಟಾರ್ ಬಸ್ಸುಗಳ ಸೌಕರ್ಯವಿದೆ. ಪ್ರಸಿದ್ಧಿಯನ್ನು ಪಡೆದ ಚಿಕ್ಕಬಳ್ಳಾಪುರ ತಾಲ್ಲೂಕಿನ ದನಗಳು ಬಹಳವಾಗಿ ಸೇರುತ್ತವೆ. ಇಲ್ಲಿನ ಮಿಡ್ಲ್ ಸ್ಕೂಲ್‌ನಲ್ಲಿ ವ್ಯವಸಾಯದ ಪ್ರದರ್ಶನವೂ ಸಹಾ ನಡೆಯುತ್ತದೆ. ಭಕ್ತಾದಿಗಳೂ ವ್ಯವಸಾಯಗಾರರೂ ವರ್ತಕರೂ ದನಗಳ ವ್ಯಾಪಾರಿಗಳೂ ದಯಮಾಡಿ ಇದರ ಪ್ರಯೋಜನವನ್ನು ಹೊಂದಿ ಶ್ರೀ ಜಗನ್ಮಾತೆಯ ಅನುಗ್ರಹಕ್ಕೆ ಪಾತ್ರರಾಗುವರೆಂದು ನಂಬಿರುವ,

ಚಿಟ್ಟಿ ಅಂಗಡಿ ರಾಮಯ್ಯ ಧರ್ಮದರ್ಶಿ ಮತ್ತು ಕಮಿಟಿ ಮೆಂಬರ್,
ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಾಲಯ, ಹಾರೋಹಳ್ಳಿ

ವಿಳಸೇ ವಾರ್ಷಿಕೋತ್ಸವ

ಮೈಸೂರು ರಾಜಧಾನಿಯಲ್ಲಿರುವ "ಭಾರತಜ್ಞಾನ ಕಲಾಸಂಘ"ದ 7 ನೇ ವಾರ್ಷಿಕಮಹೋತ್ಸವವು ತಾ॥ 24-2-29 ನೇ ಭಾನುವಾರ ಅತಿ ವಿಜೃಂಭಣೆಯಿಂದ ನಡೆಯಿತು. ಮ॥ ಎಂ ಪುಟ್ಟಯ್ಯ, ಬಿ ಎ, ಬಿ ಎಲ್, ರವರು ಅಧ್ಯಕ್ಷತೆಯನ್ನು ವಹಿಸಿದ್ದರು. ಈ ಮಹೋತ್ಸವಕ್ಕಾಗಿ ಸಂಘದ ಮೆಂಬರುಗಳೂ, ಹಿಂದಕ್ಕೆ ಬರುಗಳೂ ಅಲ್ಲದೆ ಸಂಘದಿಂದ ಆಹ್ವಾನಿಸಲ್ಪಟ್ಟ ಇತರ ಮಹನೀಯರುಗಳಾದ ಮ॥ ಕೆ ಎಸ್ ಧರಣೇಂದ್ರಯ್ಯ, ಬಿ ಎ, ರವರು ಮ॥ ಜನಪಾಲ ಪೊನ್ನಯ್ಯನವರು, ಮ॥ ಎಂ ಸಿ ಮಲ್ಲಯ್ಯನವರು ಮೊದಲುಗೊಂಡು ಇನ್ನೂ ಅನೇಕ ಮಹನೀಯರು ಸುಮಾರು ನೂರು ಜನರಿಗೆ ಮೇಲ್ಪಟ್ಟು ಸಭೆ ಸೇರಿದ್ದರು. ಕಾರ್ಯಕ್ರಮದಂತೆ ಸಂಘದ ವಾರ್ಷಿಕ ವರದಿಯು ಓದಲ್ಪಟ್ಟನಂತರ ಮೊಲ್ಲಂದ ವಾಹನ ಯುಕ್ತಿ ... ವಿನ್ಯಾಸವೃತ್ತಿ, ಪರಸ್ಪರ ಸಹಾಯ ಮತ್ತು ಕಲೆಗಳ ಪ್ರಾಶಸ್ತ್ಯ ಇವುಗಳ ಮೇಲೆ ಅವರೋಪದೇಶ ... ಗಳನ್ನು ಮಾಡಿದರು ... ಪ್ರಕಾಶಾನುಕೂಲ ಅಪ್ಪಣೆಯ ... ಸಂಘದ ವಕ್ತಾರರ ... ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆ ಯಿಂದ ಸಭೆಯು ಮುಕ್ತಾಯವಾಯಿತು.

ಪ್ರೇಕ್ಷಕ.

ಮುರುಳಸಿದ್ಧೇಶ್ವರ ವಿಗ್ರಹಮೂರ್ತಿ ಸಂಸ್ಕಾರ ಮಹೋತ್ಸವವು.

ಮಾಗಡಿ ತಾಲ್ಲೂಕು ಚಕ್ರಭಾವಿಯಲ್ಲಿರುವ ಶ್ರೀಮದುಜ್ಜಯನೀಪೀಠದ ಶಾಖೆಗಳಾದ ಮಠದ ಪಟ್ಟಾಧ್ಯಕ್ಷ ಮಹಾದೇವಸ್ವಾಮಿಗಳು ತಾ॥ 25 2-29 ನೇ ಸೋಮವಾರ ಶ್ರೀಮುರುಳಸಿದ್ಧೇಶ್ವರ ವಿಗ್ರಹಮೂರ್ತಿ ಸಂಸ್ಕಾರ ಕಾರ್ಯದೊಡನೆ 50 ವಟುಗಳಿಗೆ ಬ್ರಹ್ಮೋಪದೇಶ ಪೂರ್ವಕವಾದ ಶಿವದೀಕ್ಷಾಮಹೋತ್ಸವವನ್ನು ಪರಳೋರು ಬ್ರ॥ ಶ್ರೀ॥ ವೇ॥ ಮಹಾದೇವ ಶಾಸ್ತ್ರಿಗಳವರಿಂದ ವೇದೋಕ್ತವಾಗಿ ನಡೆಸಲ್ಪಟ್ಟಿತು. ಸಾಯಂಕಾಲ ಶ್ರೀಮುರುಳಸಿದ್ಧೇಶ್ವರಸ್ವಾಮಿಯ ಉತ್ಸವವು ಪುರವೀಧಿಗಳಲ್ಲಿ ವಾದ್ಯವೈಭವದೊಡನೆ ವಿಜೃಂಭಣೆಯಿಂದ ನಡೆಯಿತು. ಮೂರನೆ ಮಂಗಳವಾರ ಸಾಯಂಕಾಲ ಸಾವಿರಾರು ಭಕ್ತಮಾಹೇಶ್ವರರೊಡನೆ ಸಭೆ ಸೇರಿ ಮೊಲ್ಕಂಡ ವೇ॥ ಮಹಾದೇವಶಾಸ್ತ್ರಿಗಳು ವೀರಶೈವ ಮತದ ಉತ್ಕೃಷ್ಟತೆಯ ಮೇಲೆ ಬಹಳ ಸ್ವಾರಸ್ಯವಾಗಿ ಉಪನ್ಯಾಸಮಾಡಿದರು. ಅನಂತರ ಸದರಿ ಶಾಸ್ತ್ರಿಗಳಿಗೆ ಗುರುವರ್ಯರಿಂದ ಬಹುಮಾನಪೂರ್ವಕವಾದ ಆಶೀರ್ವಾದವು ನಡೆಯಿತು. ಸಭೆಯವರಿಂದ ಶ್ರೀಮುರುಳಸಿದ್ಧೇಶ್ವರಸ್ವಾಮಿಯ ಜಯಜಯಕಾರವು ನಡೆದು ನಮ್ಮ ಸ್ವಾಮಿಯವ ಶ್ರೀಮನ್ಮಹಾರಾಜರವರ ಮತ್ತು ಅವರ ಕುಟುಂಬ ...ದವರ ಶ್ರೇಯಃಪ್ರಾರ್ಥನೆಯು ನಡೆದು ಸಭೆಯು ಭರಖಾಸ್ತಾಯಿತು.

ಪ್ರತ್ಯಕ್ಷದರ್ಶಿ

ಸಾಗರದ ವೃತ್ತಾಂತ.

ಬಿಸಲಿನ ತಾಪವು ಹೆಚ್ಚಾಗಿದೆ. ಪ್ರಜೆಗಳ ಆರೋಗ್ಯ ಚೆನ್ನಾಗಿದೆ. ನೀರಿಗೆ ಅಭಾವವಿಲ್ಲ. ನಮ್ಮ ಡಿಸ್ಟ್ರಿಕ್ಟ್ ಹಜರ್ ಡೆಪ್ಯುಟಿಕಮಿಷನರ್ ಸಾಹೇಬರವರು ಈ ತಿಂಗಳಲ್ಲಿಯೇ ಹುಜೂರು ಜಮಾಬಂದಿಗೆ ದಯಮಾಡಿಸುವ ವರ್ತಮಾನವಿದೆ. ನಮ್ಮ ತಾ ಸಬ್‌ಡಿವಿಜನ್ ಸಾಹೇಬರವರು ಸೊರಬದ ತಾ, ಜಮಾಬಂದಿಗೆ ದಯಮಾಡಿಸಿರುತ್ತಾರೆ. ನಮ್ಮ ತಾಲೂಕಿನ ಪ್ರಜೆಗಳ ಪ್ರೇಮಕ್ಕೆ ಪಾತ್ರರಾಗಿರುವ ಅಮಲ್‌ದಾರ್ ಮ ಬಿ ಸಿ ಸರಾಫ್ ರವರಿಗೆ ಕನಕಗಿರಿಗೆ ವರ್ಗವಾಗಿದೆಯೆಂಬ ಸಮಾಚಾರವನ್ನು ಕೇಳಿ ಎಲ್ಲರಿಗೂ ತುಂಬಾ ವಿಷಾದಕರವಾಗಿದೆ. ಇವರು ಇನ್ನೂ ಚಿಕ್ಕವಯಸ್ಸಿನವರಾಗಿದ್ದು ದೊಡ್ಡವರು ಚಿಕ್ಕವರು ಎಂಬ ತಾರತಮ್ಯವಿಲ್ಲದೆ ಎಲ್ಲರಲ್ಲಿಯೂ ಏಕೀಭಾವದಿಂದ ವರ್ತಿಸಿ ಶ್ರದ್ಧೆಯಿಂದ ಸುಮಾರು ಎರಡುವರೆ ವರ್ಷಗಳಿಂದಲೂ ಪ್ರಜೆಗಳ ಅಭಿವೃದ್ಧಿಗಾಗಿಯೇ ಕೆಲಸಮಾಡಿ ಎಲ್ಲರ ಕೃತಜ್ಞತೆಗೆ ಪಾತ್ರರಾಗಿರುವರು. ಇಂಥವರು ಈ ತಾಲೂಕಿನಿಂದ ಹೋಗುವುದು ಜನಗಳ ದುರದೃಷ್ಟವೇ ಸರಿ. ಈಗ ಮೂರು ನಾಲ್ಕು ದಿನಗಳಿಂದಲೂ ಇವರಿಗೆ ಇವರ ಆಪ್ತಮಿತ್ರ ಮುಂತಾದವರಿಂದ ಸತ್ಕಾರಗಳು ನಡೆಯುತ್ತಿವೆ. ಈ ಸತ್ಕಾರ ಕೂಟಗಳೇ ಇವರ ಮೇಲಿನ ಪ್ರಜಾನುರಾಗವನ್ನು ಪ್ರದರ್ಶಿಸುತ್ತವೆ. ಇವರಿಗೆ ದೇವರು ಉನ್ನತಾಧಿಕಾರವನ್ನೂ ಸಕಲಸಂಪತ್ತುಗಳನ್ನೂ ಕೊಡಲೆಂತ ಹಾರೈಸುತ್ತೇವೆ.

Shivalingayya Gowda, Kagodu,
Dist. Board member

ದಾವಣಗೇರಿ ಸಮಾಚಾರದಲ್ಲಿ ತಪ್ಪು ತಿಳುವಳಿಕೆ

ಈಚೆಗೆ ವಿಶ್ವಕರ್ನಾಟಕ, ವೃತ್ತಾಂತ ಪತ್ರಿಕೆ ಮೊದಲಾದ ವೃತ್ತಪತ್ರಿಕೆಗಳಲ್ಲಿ ಈ ಊರಿನ ವಿಷಯವಾಗಿಯೂ, ಮ್ಯುನಿಸಿಪಾಲಿಟಿಯ ವಿಷಯವಾಗಿಯೂ ಕೆಲವು ಲೇಖನಗಳು ಬಂದಿರುವುದು ಸರಿಯಷ್ಟೇ. ಸದರಿ ಲೇಖನಗಳನ್ನು ಸಂಘದವರು ಬರೆದಿರುವರೆಂದು ಊರಿನ ಕೆಲವರು ಮಾತನಾಡಿಕೊಳ್ಳುತ್ತಿರುವುದಾಗಿ ಕೇಳಿದೆವು. ಈ ರೀತಿಯಾಗಿ ಮಾತನಾಡಿಕೊಳ್ಳಲಿಕ್ಕೆ ಯಾವ ಕಾರಣವೂ ಇಲ್ಲ. ಈ ಲೇಖನಗಳಿಗೂ ನಮಗೂ ಯಾವ ಸಂಬಂಧವೂ ಇಲ್ಲ. ನಾವು ಬರೆಯತಕ್ಕ ಲೇಖನಗಳು ಪ್ರಾಣದಯಾ ವಿಷಯಕವಾದವುಗಳು. ನಾವು ಬರೆದ ಎಲ್ಲಾ ಲೇಖನಗಳನ್ನು ನಮ್ಮ ಹೆಸರಿನೊಂದಿಗೆ ಪ್ರಕಟಿಸುತ್ತೇವೆ. ಹೆಸರಿಲ್ಲದ ಲೇಖನಗಳನ್ನು ನಾವು ಬರೆದಿಲ್ಲ ಮತ್ತು ಬರೆಯುವುದೂ ಇಲ್ಲ. ಹೀಗಿದ್ದಾಗ್ಯೂ ನಮ್ಮ ವಿಷಯದಲ್ಲಿ ಕೆಲವರು ಊಹಾಪೋಹ ಮಾಡುತ್ತಿರುವದನ್ನು ದೃಢವಾಗಿ ಖಂಡಿಸುವೆವಲ್ಲದೆ ಸದರೀ ಲೇಖನಗಳಿಗೂ ನಮಗೂ ಯಾವ ಸಂಬಂಧವೂ ಇಲ್ಲವೆಂಬುದನ್ನು ಈ ಲೇಖನ ಮೂಲಕ ಒತ್ತಾಯದಿಂದ ತಿಳಿಸುವೆವು. ಈ ವಿಷಯದಲ್ಲಿ ನಮ್ಮ ಅಭಿಪ್ರಾಯದಲ್ಲಿ ಇಲ್ಲಿಯ ಮ್ಯುನಿಸಿಪಾಲಿಟಿ ಪ್ರೆಸಿಡೆಂಟರಾದ ಮ॥ ರಾ॥ ಅಬ್ದುಲ್ ಖಾಲಿಕ್ ಇವರು ತುಂಬಾ ಮುತವರ್ಜಿ ವಹಿಸಿ ಮ್ಯುನಿಸಿಪಾಲಿಟಿಯ ಕಾರ್ಯಗಳನ್ನು ನೆರವೇರಿಸುತ್ತಿರುವರು. ಸಂಘದವರು ಊರಿನ ಹಿತಸಾಧನೆಗಾಗಿ ಪ್ರಯತ್ನಿಸುತ್ತಿದ್ದು ಏನಾದರೂ ಕುಂದುಕೊರತೆಗಳು ಕಂಡುಬಂದಲ್ಲಿ ಪ್ರೆಸಿಡೆಂಟರನ್ನು ಕಂಡು ಮಾತನಾಡಿ ಬೇಕಾದ ಅನುಕೂಲತೆಗಳನ್ನು ಕಲ್ಪಿಸಲು ಪ್ರಯತ್ನಿಸುತ್ತಿರುವೆವು. ಹೀಗಿದ್ದಾಗ್ಯೂ ವೃಥಾ ಸಂಘದವರ ಮೇಲೆ ಇಲ್ಲದ ಆಕ್ಷೇಪಣೆಗಳನ್ನು ಹೊರಿಸಲು ಪ್ರಯತ್ನಿಸುತ್ತಿರುವುದಕ್ಕಾಗಿ ವಿಷಾದಿಸುವೆವು.

ತಾ॥ 7 3-29, ಕಾರ್ಯದರ್ಶಿ,
ದಾವಣಗೇರಿ ಪ್ರಾಣದಯಾ ಜ್ಞಾನಪ್ರಸಾರಕ ಸಂಘ.

ಉಗವಳೆಂಡ ಗವಿಮಠದ ಶ್ರೀ ಕರಿಬಸವಸ್ವಾಮಿಗಳವರ ಮಹಾರಥೋತ್ಸವ

ಉರವಕೊಂಡ ಗವಿಮಠ ಸಂಸ್ಥಾನದ ಶ್ರೀಮನ್ನಿರಂಜನ ಜಗದ್ಗುರು ಶ್ರೀ ಚಂದ್ರಮೌಳಿ ಸಿದ್ಧಲಿಂಗೇಶ್ವರಸ್ವಾಮಿ ಮಹಾರಥೋತ್ಸವವು ಇದೇ ಫಾಲ್ಗುಣ ಶು 10 ಬುಧವಾರ ನಡೆಯುತ್ತದೆ. ಈ ಮಹೋತ್ಸವ ಸಮಾರಂಭವು ಫಾಲ್ಗುಣ ಶು 5 ಭೃಗುವಾರ ನಾಂದೀಪೂಜಾ ಅಂಕುರಾರ್ಪಣ ಕಂಕಣಧಾರಣೆ, ಶು॥ 6 ಶನಿವಾರ ಮಹಾಸ್ವಾಮಿಯ ಶೇಷವಾಹನೋತ್ಸವ, ಶು॥ 7 ಭಾನುವಾರ ಮಯೂರವಾಹನೋತ್ಸವ, ಶು॥ 8 ಸೋಮವಾರ ಗಜವಾಹನೋತ್ಸವ, ಶು॥ 9 ಮಂಗಳವಾರ ಶ್ರೀ ಮಹಾಗಣಾರಾಧನೆ, ವೃಷಭವಾಹನೋತ್ಸವ, ಶು॥ 10 ಬುಧವಾರ ಶ್ರೀ ಮಹಾಸ್ವಾಮಿಯ ಮಹಾರಥೋತ್ಸವ, ಶು॥ 11 ಗುರುವಾರ ತಸುಮಕ್ ಓಂಕಾರ ದಾಸೋತ್ಸವ, ಶು॥ 12 ಶುಕ್ರವಾರ ವಸಂತೋತ್ಸವ ಈ ಪ್ರಕಾರವಾಗಿ ಮಾಮೂಲು ಪದ್ಧತಿಯಂತೆ ಪ್ರತಿದಿನವೂ ಅತಿ ವೈಭವದಿಂದ ನಡೆಯುತ್ತಿರುವುವು.

ರಥೋತ್ಸವ ಸಮಾರಂಭಕ್ಕಾಗಿ ದಯಮಾಡಿಸುವ ವೀರಶೈವ ಶ್ರೀಮದ್ಗುರುವರ್ಯ ಷಟ್ಸ್ಥಲಾಧಿಕಾರಿಗಳವರಿಗೂ ಶ್ರೀಮನ್ನಿರಂಜನ ಚರವರ್ಯ ಮಹಾಮೂರ್ತಿಗಳವರಿಗೂ ವಿಧ್ಯುಕ್ತವಾಗಿ ಪೂಜಾರಾಧನೆಯೂ, ಬಂದ ಭಕ್ತ ಮಾಹೇಶ್ವರ ವೃಂದಕ್ಕೆ ಪ್ರತಿಕಾಲ ಲಿಂಗಪೂಜಾ ಭೋಜನಾದ್ಯುಪಚಾರಗಳೂ ಈ ... ನ ಇಷ್ಟಪ್ರಕಾರ ಶ್ರೀಮನ್ನಿರಂಜನ ಜಗದ್ಗುರು ಶ್ರೀ ಚನ್ನಬಸವ ಮಹಾಸ್ವಾಮಿಗಳವರ ಸನ್ನಿಧಿಯಿಂದ ನಡೆಸಲ್ಪಡುತ್ತವೆ. ಅಲ್ಲದೆ, ಬಹುಜನಸ್ವಾಮಿಯಾಗಿ ವಿಶಿಷ್ಟ ಭಕ್ತಮಹೇಶ್ವರ ಸಮುದಾಯದ ಆಗಮ, ಇಲ್ಲಿ ನಡೆಯುವ ವಿಶಿಷ್ಟ ವೈಭವಗಳನ್ನು ನೋಡಿ ಕರಿತ್ಯಪ್ರತಿ ದಾಸರ ದರ್ಶನಾದಿಗಳನ್ನು ಮಾಡಿಕೊಂಡು ಪುಣ್ಯವಂತರ ಪರಮಪ್ರಸಾದವನ್ನು ಪಡೆಯಬೇಕೆಂದು ಜನಸಾಮಾನ್ಯಕ್ಕೆ ಪಾತ್ರರಾಗಬೇಕೆಂದು ಕೋರಲಾಗಿದೆ. ಉರುಗಾದ್ರಿ ಗವಿಮಠ ಸಂಸ್ಥಾನ ಪಾ॥ ಬಂ॥ ಸಿದ್ಧಲಿಂಗಪ್ಪ

ವೀರಶೈವ ಮಹಾಸಭೆಯ ವಿಚಾರ.

ಈ ಸಾರಿ ಸನ್ 1929 ನೇ ಇಸ್ವಿ ಮೇ ತಿಂಗಳ 1-2-3 ತಾರೀಖುಗಳಲ್ಲಿ ಜರುಗುವಂತೆಯು ಅಖಿಲ ಭಾರತ ವೀರಶೈವ ಮಹಾಸಭೆಯನ್ನು ಶ್ರೀಮನ್ನಿರಂಜನ ಶಿವಯೋಗಿ ಶ್ರೀ ಶಿವಲಿಂಗಸ್ವಾಮಿ ಸಂಸ್ಥಾನ ಸಾವಳಗಿ ಮಠ ತಾ॥ ಗೋಕಾಕ ಜಿಲ್ಲಾ ಬೆಳಗಾಂವ ಈ ಪವಿತ್ರ ಕ್ಷೇತ್ರದಲ್ಲಿ ಕರೆಯಬೇಕೆಂದು ವಿಚಾರಮಾಡಿದ್ದೇವೆ. ಸಾವಳಗಿ ಮಠವು ಪವಿತ್ರ ಶಿವಯೋಗಿಗಳ ಕ್ಷೇತ್ರಸ್ಥಳವದೆ. ಘಟಪ್ರಭಾನದೀ ದಂಡೆಯಮೇಲೆ ಇರುವದರಿಂದ ... ವಿಶಾಲವಾಗಿರುತ್ತದೆ. ಮಠವು ವಿಶಾಲವಾಗಿರುವದಲ್ಲದೆ ಮಠದ ಸುತ್ತಲಿನ ಬೈಲು ಗಿಡಗಳಿಂದ ತುಂಬಿ ಪ್ರಶಸ್ತವಾಗಿದೆ. ಈಗ್ಗೆ ಸದ್ಯಕ್ಕೆ ಐದು ಸಾವಿರ ಜನರು ಕೂಡ್ರುವಷ್ಟು ಮಂಟಪವು ತಯಾರವದೆ. ಸದರೀ ಮಠವು ಗೋಕಾಕ ಸ್ಟೇಷನ್‌ದಿಂದ ಮೂರು ಮೈಲು ಮೇಲಿರುತ್ತದೆ. ಗಾಡಿ ಮೋಟಾರುಗಳು ಹೋಗಿ ಬರುವಂತೆ ತಕ್ಕ ಮಟ್ಟಿಗೆ ರಸ್ತೆ ಇರುತ್ತದೆ ಮತ್ತು ಗೋಕಾಕ ಸ್ಟೇಷನ್‌ದಿಂದ ಮೂರು ಮೈಲು ಮೇಲೆ ರಮಣೀಯವಾದ ಘಟಪ್ರಭೆಯ ಧಬಧಬೆಯೂ, ನೂಲಿನ ವಿಶಾಲವಾದ ಗಿರಣಿಯೂ ಇರುತ್ತದೆ. ಸದರೀ ಮಹಾಸಭೆಗೆ ಬೇಕಾಗುವ ಸಾಮಾನುಗಳ ಪೂರೈಕೆ ಆಗುವಂತದೆ. ಮಹಾಸಭೆಗೆ ಬರಹೋಗುವ ಜನರುಗಳು ಇಳಿದುಕೊಳ್ಳುವ ವ್ಯವಸ್ಥೆಯೂ ಊಟಗಳ ವ್ಯವಸ್ಥೆಯೂ ಚೆನ್ನಾಗಿ ಆಗುವಂತೆ ಅದೆ. ಆದ್ದರಿಂದ ಯಾವತ್ತು ವೀರಶೈವ ಸಮಾಜದವರು ಮತ್ತು ಮುಖಂಡರು ಈ ಪ್ರಕಟಣೆಯನ್ನು ಓದಿಕೊಂಡು ಯೋಗ್ಯವಿಚಾರ ಮಾಡಿ ತಮ್ಮ ಸದಭಿಪ್ರಾಯವನ್ನು ನಮಗೆ ತಿಳಿಸಿದಲ್ಲಿ ಮುಂದಿನ ಕಾರ್ಯಕ್ರಮವನ್ನು ಮುಖಂಡರು ಮಾಡತಕ್ಕ ಕರ್ತವ್ಯವನ್ನೂ ಹಿಂದಿನಿಂದ ತಿಳಿಸುವೆವು. ಅವಧಿಯು ಸ್ವಲ್ಪವಿರುವದರಿಂದಲೂ, ಮಾಡತಕ್ಕ ಕಾರ್ಯವು ದೊಡ್ಡದೂ ಬಹಳ ಮಹತ್ವದ್ದೂ ಇರುವದರಿಂದಲೂ ಯಾವತ್ತು ವೀರಶೈವ ಮುಖಂಡರು ತಮ್ಮ ಅಭಿಪ್ರಾಯವನ್ನು ಈ ಪ್ರಕಟಣೆಯು ತಾ॥ ನಿಂದ 15 ದಿವಸದೊಳಗಾಗಿ ದಯಯಿಟ್ಟು ತಿಳಿಸುವವರಾಗಬೇಕು.

ಶ್ರೀ ಶಿವಲಿಂಗಸ್ವಾಮಿ, ಸಾವಳಗಿ ಮಠ

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ.

ವೀರಶೈವ ಮತಸಂಸ್ಥಾಪನಾಚಾರ್ಯರಾದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಮಹೋತ್ಸವವನ್ನು ಪದ್ಧತಿಯ ಪ್ರಕಾರ ಇದೇ ವಿಭವ ಸಂ ಫಾಲ್ಗುಣ ಶುದ್ಧ 13, ಶನಿವಾರ (23 3 29) ದಿವಸದಲ್ಲಿ ಈ ಕೆಳಗೆ ನಮೂದಿಸಿರುವ ಪ್ರೋಗ್ರಾಂ ಪ್ರಕಾರ ಬೆಂಗಳೂರು ಪಟ್ಟಣದಲ್ಲಿ ನಡೆಯಲು ನಿರ್ಧರಿಸಿದೆ. ತಾ॥ 23 3 1929 ರ ಶನಿವಾರ ಪ್ರಾತಃಕಾಲ 6 ಘಂಟೆಯಿಂದ 12 ರ ವರಿವಿಗೆ ಮಹಂತಿನ ಮಠದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಲಿಂಗೋದ್ಭವ ವಿಗ್ರಹ ಮೂರ್ತಿಗೆ ಏಕಾದಶವಾರ ರುದ್ರಾಭಿಷೇಕ, ಸಹಸ್ರಬಿಲ್ವಾರ್ಚನೆ (2) ಮಧ್ಯಾಹ್ನ 12 ಘಂಟೆಗೆ ಮಹಂತಿನಮಠದಲ್ಲಿ ಭಕ್ತಮಾಹೇಶ್ವರರ ಸಮಾರಾಧನೆ. (3) ಮಧ್ಯಾಹ್ನ 3 ಘಂಟೆಯಿಂದ 5 ಘಂಟೆವರಿವಿಗೆ, ಜಗದಾಚಾರ್ಯರು ಪ್ರಪಂಚದಲ್ಲಿ ಮಾಡಿರುವ ಲೀಲೆಗಳ ವಿಷಯಕವಾದ ಭಾಷಣಗಳು. (4) ಸಾಯಂಕಾಲ 5 ಘಂಟೆಗೆ ಶ್ರೀಮಾನ್ ರಾಜಸಭಾಭೂಷಣ ದಿವಾನ್ ಬಹದ್ದೂರ್ ಸರ್ ಕೆ. ಪಿ ಪುಟ್ಟಣ್ಣಚೆಟ್ಟರು, ಕೆ.ಟಿ ಸಿ.ಐ ಇ. ಇವರ ಅಧ್ಯಕ್ಷತೆಯಲ್ಲಿ ಮಹಾಜನರ ಸಭೆ ಸೇರುವುದು

ಸಭಾಕಾರ್ಯ.

(1) ಸ್ತೋತ್ರ (2) ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಫಂಡ್ ವಾರ್ಷಿಕ ರಿಪೋರ್ಟ್ (3) ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯ ಕೃಪಾಪೋಷಿತ ವೀರಶೈವಧರ್ಮ ಗ್ರಂಥಭಾಂಡಾರ ವಾರ್ಷಿಕ ರಿಪೋರ್ಟ್ (4) ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯ ಕೃಪಾಪೋಷಿತ ಸಂಸ್ಕೃತ ಧರ್ಮಪಾಠಶಾಲಾ ಪ್ರೀ ಬೋರ್ಡಿಂಗ್ ರಿಪೋರ್ಟ್ (5) ಮೋಕ್ಷಂಡ ಭಗವತ್ಪಾದರವರಲೀಲೆಯ ವಿಷಯವಾಗಿ ಶಿವಕೀರ್ತನ ಕವಿಕೇಸರಿ ಇತ್ಯಾದಿ ಬಿರುದಾಂಕಿತರಾದ ಬ್ರಂ ಶ್ರೀ ವೇ ದೊಡ್ಡಬಳ್ಳಾಪುರದ ಶಿವದೇವಶಾಸ್ತ್ರಿಗಳಿಂದ ರಚಿಸಲ್ಪಟ್ಟಿರುವ ಪಂಚಶ್ಲೋಕೀ ಶ್ರವಣ (6) ಅಧ್ಯಕ್ಷರ ಭಾಷಣ

(1) ಸಾಯಂಕಾಲ 7 ಘಂಟೆಯಿಂದ 11 ಘಂಟೆವರಿವಿಗೆ ಮಹಂತಿನ ಮಠದಿಂದ ರಾಜಬೀದಿಗಳಲ್ಲಿ ನಂದೀಧ್ವಜಸಹಿತ ಪೂಜ್ಯರಾದ ಜಗದಾಚಾರ್ಯರ ವಿಗ್ರಹ ಮೂರ್ತಿಯ ಪುಷ್ಪಕವಿಮಾನೋತ್ಸವ. (2) ಆಚಾರ್ಯರ ವಿಗ್ರಹಮೂರ್ತಿಯು ಮಠಕ್ಕೆ ಬಿಜಯಂಗೈಸಿದನಂತರ ಷೋಡಶೋಪಚಾರ ಲಾಜೋಪಚಾರ ಪೂರ್ವಕ ಪ್ರಸಾದ ಹಂಚುವುದು (3) ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆ.

ದೇಶದ ಶೆಟ್ಟರು ಯಜಮಾನರು

ಶ್ರೀಮದ್ವೀರಶೈವ ವಿದ್ಯಾವರ್ಧಕ ಸಂಸ್ಕೃತ ಪಾಠಶಾಲಾ, ಚಾಮರಾಜನಗರ

ಮೇಲೆ ಕಂಡ ಪಾಠಶಾಲೆಯು ಈ ಊರು ಶ್ರೀ ವರ್ತಕವರ್ಧಕ ಧರ್ಮಸತ್ರದಲ್ಲಿ ಕಳೆದ 4-3 29 ರಲ್ಲಿ ಸ್ಥಾಪಿಸಲ್ಪಟ್ಟಿತು. ವರ್ತಕವರ್ಧಕ ಬ್ಯಾಂಕಿನ ಜನರಲ್ ಮೀಟಿಂಗಿನಲ್ಲಿ ಪಾಠಶಾಲೆಯನ್ನು ಸ್ಥಾಪಿಸುವದು ಆವಶ್ಯಕವೆಂದು ತೀರ್ಮಾನವಾದಮೇಲೆ, ಆ ದಿವಸ ಮಾಂಬಳ್ಳಿ ಸಾಹುಕಾರ್ ಮ॥ ಬಸವಣ್ಣದೇವರ ಅಧ್ಯಕ್ಷತೆಯಲ್ಲಿ ಒಂದು ಸಭೆಯು ಜರುಗಿಸಲ್ಪಟ್ಟಿತು. ಸ್ಥಳದ ವೀರಶೈವ ದೊಡ್ಡಮನುಷ್ಯರೂ, ವರ್ತಕರೂ, ಬ್ಯಾಂಕಿನ ಡೈರೆಕ್ಟರುಗಳೂ, ವಿ.ತ್ರರೂ ಸಭೆ ಸೇರಿದರು. ದೇವತಾ ಪ್ರಾರ್ಥನೆ, ಗ್ರಾಮೋಫೋನು ಸಂಗೀತಗಳು ನಡೆದಮೇಲೆ ಮ॥ ರಾಮಕೃಷ್ಣ ಶಾಸ್ತ್ರಿಯವರು ವೀರಶೈವರ ಉನ್ನತಿ, ಸಂಸ್ಕೃತ ವಿದ್ಯಾಭ್ಯಾಸದ ಆವಶ್ಯಕತೆ ಮತ್ತು ಮಹಮ್ಮ ಸ್ಕೂಲಿನ ಪುರೋಭಿವೃದ್ಧಿ ಈ ವಿಚಾರಗಳ ಮೇಲೆ ಉಪನ್ಯಾಸಮಾಡಿದರು. ಆದಾದನಂತರ ಮಂಗಳಾರತಿಯಾಗಿ, ಸುಮುಹೂರ್ತದಲ್ಲಿ ಸ್ಕೂಲಿನ ಕೆಲಸವು ಪ್ರಾರಂಭಿಸಲ್ಪಟ್ಟಿತು. ಸಮಸ್ತರಿಗೂ ಗಂಧ ಪುಷ್ಪ ತಾಂಬೂಲಗಳು ಹಂಚಲ್ಪಟ್ಟವು. ಇಲ್ಲಿನ ವೈಸ್ ಪ್ರೆಸಿಡೆಂಟ್ ಮ॥ ಸಂಗನಬಸಪ್ಪನವರು ವೀರಶೈವರ ಪರವಾಗಿ ಸಾಹುಕಾರರನ್ನೂ, ಬ್ಯಾಂಕಿನ ಷೇರುದಾರರು, ಮತ್ತು ಡೈರೆಕ್ಟರುಗಳನ್ನೂ, ದಿವಾಂಟರು ಮ॥ ಪುಟ್ಟವೀರಣ್ಣನವರನ್ನೂ ಈ ಪುಣ್ಯಕೆಲಸದ ವಿಚಾರವಾಗಿ ಹೊಗಳಿ ತಮ್ಮ ಕೃತಜ್ಞತೆಯನ್ನು ಪ್ರಕಾಶಪಡಿಸಿದರು. ಸಾಹುಕಾರ್ ಮ॥ ಬಸವಣ್ಣದೇವರು ಕಾಲೋಚಿತವಾದ ಬುದ್ಧಿವಾದಗಳನ್ನು ಅಪ್ಪಣೆಕೊಡಿಸಿ, ಪಾಠಶಾಲೆಯ ತಾತ್ಕಾಲಿಕ ಖರ್ಚುಗಳಿಗಾಗಿ ದೊರಕಬೇಕಾದ

ಶ್ರೋತೃಗಳನ್ನು ಜೆರಗಿದಲು ಸ್ವಲ್ಪ ಒತ್ತೀಪ ತಿಳಿಸಿದರು. ಈ ಸಭೆ ಪಾಠಶಾಲೆಯ ಶ್ರೇಯಸ್ಸನ್ನು ಬಯಸುವಂತೆ ಆಶೀರ್ವಾದ ಸಭೆಯು ಮುಗಿಯಿತು.

ಈ ಊರಿನಲ್ಲಿ ಇಂತಹ ಪಾಠಶಾಲೆಯು ಪ್ರಾರಂಭಿಸಲ್ಪಟ್ಟಿದ್ದು ಸಂತೋಷದ ಸಂಗತಿ. ಈ ಪ್ರಯತ್ನಕ್ಕೆ ಮ॥ ಪುಟ್ಟವೀರಪ್ಪನವರು ಅತ್ಯಂತ ಶ್ರಮವನ್ನು ವಹಿಸಿರುವರು. ಪಾಠಶಾಲೆಯಲ್ಲಿ ಸಂಸ್ಕೃತ ಕಲಿಯುವುದಕ್ಕೆ ತಿಳಿದ ಒಬ್ಬರು ಉಪಾಧ್ಯಾಯರು ನಿಯಮಿಸಲ್ಪಟ್ಟಿರುವರು. ಈಗಾಗಲೇ ಹತ್ತಾರು ವಿದ್ಯಾರ್ಥಿಗಳು ಸೇರಿರುವರು. ಈ ಪಾಠಶಾಲೆಯಲ್ಲಿ ವೀರಶೈವ ವಿದ್ಯಾರ್ಥಿಗಳು ನಿಶ್ಶುಲ್ಕವಾಗಿಯೂ, ಇತರ ವಿದ್ಯಾರ್ಥಿಗಳು ಜನರಲ್ಲಾಗಿಯೂ ವಿದ್ಯಾಭ್ಯಾಸಮಾಡಲು ಅನುಕೂಲಮಾಡಲ್ಪಟ್ಟಿದೆ. ಈ ಪಾಠಶಾಲೆಯನ್ನು ದೇವರು ಅಭಿವೃದ್ಧಿಗೆ ತರಲೆಂದೂ, ಇದನ್ನು ಸ್ಥಾಪಿಸಲು ಪ್ರಯತ್ನ ಮಾಡಿದ ಪುಟ್ಟವೀರಪ್ಪನವರ ಹೆಸರು ಚಿರಕಾಲ ಬೆಳಗಲೆಂದೂ, ನಾನಾಬಗೆ ಸಹಾಯ ಪ್ರೋತ್ಸಾಹಗಳನ್ನು ಮಾಡಿದ ನಮ್ಮ ಸಾಹುಕಾರ್ ಮ॥ ಬಸಪ್ಪ ದೇವರ ಮನಸ್ಸು ಸಾರ್ಥಕಗೊಂಡಿತೆಂದೂ ಹಾರೈಸುತ್ತೇನೆ.

ಪ್ರತ್ಯಕ್ಷದರ್ಶಿ

ನೂತನ ದೇವಾಲಯ ಪ್ರವೇಶಮಹೋತ್ಸವ

ಅರಸೀಕೆರೆ ತಾ॥ ಅಗ್ಗುಂದ ಗ್ರಾಮದಲ್ಲಿ ಕಳೆದ ಮಾಘ ಶುದ್ಧ ೧೩ನೇ ಗುರುವಾರ ಶ್ರೀ ಬಸವೇಶ್ವರಸ್ವಾಮಿಯ ನೂತನ ದೇವಾಲಯ ಪ್ರವೇಶ ಮಹೋತ್ಸವದೊಂದಿಗೆ ಯಳಂದೂರಿನ ಶ್ರೀ ಪಟ್ಟಾಧ್ಯಕ್ಷಸ್ವಾಮಿಗಳವರ ಮತ್ತು ಸಾಣೆಹಳ್ಳಿ ಶ್ರೀ ಚರಮೂರ್ತಿಸ್ವಾಮಿಗಳವರ ನೇತೃತ್ವದಲ್ಲಿ ಪಂಚ ಕಲಶಸ್ಥಾಪನಾಪೂರ್ವಕ ವೇ॥ ಸೊಲ್ಲಾಪುರದ ಯೋಗೀಶ ಶಾಸ್ತ್ರಿಗಳು ಮತ್ತು ಮಾದಿಹಳ್ಳಿ ವೇ॥ ಮುರಿದೇವರು, ವೇ॥ ಬಸಪ್ಪಶಾಸ್ತ್ರಿಗಳು ಮುಂತಾದ ಶಾಸ್ತ್ರಿವರ್ಗದವರಿಂದ ವಿಧಿಪ್ರಕಾರವಾಗಿ ವಟುಗಳಿಗೆ ದೀಕ್ಷಾ ಸಂಸ್ಕಾರ ಮಹೋತ್ಸವವೂ ನಡೆದು ಆ ದಿನವೂ, ಮರು ದಿನವೂ ಸಹಸ್ರಾರು ಜನರ ಪಂಕ್ತಿಸಮಾರಾಧನೆಯೂ ವಿಜೃಂಭಣೆಯಿಂದ ಸಂತರ್ಪಣೆಯು ನಡೆಯಿತು. ತಾ॥ 23-2-1929 ನೇ ಶನಿವಾರ ಸಾಯಂಕಾಲ ಶ್ರೀ ಸಿದ್ಧಹಳ್ಳಿ ಶ್ರೀಮಠದ ಸ್ವಾಮಿಗಳು ಮತ್ತು ಕಾಶಿಯಲ್ಲಿ ತರ್ಕಶಾಸ್ತ್ರವಿಶಾರದ, ಶಾಸ್ತ್ರ ತೀರ್ಥ ಮುಂತಾದ ಬಿರುದನ್ನು ಪಡೆದಿರುವ ಶ್ರೀ ಪಟ್ಟಾಧ್ಯಕ್ಷ ಮಹಾಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಮಹಾಜನಗಳ ಸಭೆಸೇರಿ ಶ್ರೀಯುತ ಸಂಸ್ಥಾನದ ಪಟ್ಟಾಧ್ಯಕ್ಷರು ಸನಾತನಧರ್ಮ, ಸ್ತ್ರೀ ಸುಧಾರಣಾ, ಬಾಲ್ಯವಿವಾಹ ನಿಷೇಧ ಇವುಗಳ ವಿಚಾರದಲ್ಲಿ ಸರ್ವರ ಹೃದಯಂಗಮವಾಗುವಂತೆಯೂ ಮ॥ ದೊಡ್ಡ ಮೇಟಿಕುರಿಕೆ ಸ್ಕೂಲ್ ಹೆಡ್ಮಾಸ್ಟರ್ ಎ. ಪಿ. ಚಂದ್ರಲಿಂಗಪ್ಪನವರು ಏಕನಿಷ್ಠೆ ವಿಚಾರದಲ್ಲಿ ಬಹು ಸ್ವಾರಸ್ಯವಾಗಿಯೂ ಎ. ಬೊಮ್ಮೇನಹಳ್ಳಿ ಸ್ಕೂಲ್ ಮಾಸ್ಟರು ಬಸಯ್ಯನವರು ಮತ್ತು ಮಲ್ಲೇದೇವನಹಳ್ಳಿ ಸ್ಕೂಲ್‌ಮಾಸ್ಟರು ಮ॥ ರುದ್ರಯ್ಯನವರು ವಿದ್ಯಾಭ್ಯಾಸದ ವಿಚಾರದಲ್ಲಿಯೂ ಮ॥ ಪಿ. ವೀರಪ್ಪಯ್ಯನವರು ಜಂಗಮಾಧಿಕಾರ ವಿಚಾರವಾಗಿಯೂ, ಮಾದಾಪುರದ ಶ್ರೀ ವಿರಕ್ತಸ್ವಾಮಿಗಳು ಮತ್ತು ತಮ್ಮಡಿಹಳ್ಳಿ ಶ್ರೀ ವಿರಕ್ತಸ್ವಾಮಿಗಳವರು ಧಾರ್ಮಿಕವಿದ್ಯಾಭ್ಯಾಸವಿಚಾರವಾಗಿಯೂ, ವೇ॥ ಯೋಗೀಶಶಾಸ್ತ್ರಿಗಳು ಮತ್ತು ವೇ॥ ಸಿದ್ಧಲಿಂಗಯ್ಯನವರು ಸಂಸ್ಕೃತವಿದ್ಯಾಭ್ಯಾಸದ ಆವಶ್ಯಕತೆಯ ವಿಚಾರವಾಗಿಯೂ ಭಾಷಣಮಾಡಿದರು. ಅನಂತರ ಅಧ್ಯಕ್ಷರು ಸಭಾಪಾಲಕರಿಗೆ ಅನೇಕ ಸಲಹೆಗಳನ್ನು ಕೊಟ್ಟರು. ಸಭೆಯಲ್ಲಿ ಶ್ರೀಯುತ ಹಂಡಿದಸ್ವಾಮಿಗಳು, ಶ್ರೀ ಸಿದ್ಧಹಳ್ಳಿ ಸ್ವಾಮಿಗಳು, ಮತ್ತು ಯಳಸದ ಶ್ರೀ ಸ್ವಾಮಿಗಳವರ ಅಪ್ಪಣೆಕೊಳ್ಳಲ್ಪಟ್ಟ ಸಭೆಯಲ್ಲಿ ತಿಪಟೂರು ಶ್ರೀ ವೀರಶೈವರ ಸ್ಟೂಡೆಂಟ್ಸ್ ಹೋಂನಲ್ಲಿ ವೈದಿಕ ಪಾಠಶಾಲೆಯನ್ನು ಪ್ರಾರಂಭಮಾಡಬೇಕೆಂದು ರೆಜಲ್ಯೂಷನ್ ಪಾಸಾಯಿತು. ಗ್ರಾಮದವರಿಂದ ಚಿಕ್ಕಮಗಳೂರು ವೀರಶೈವ ಸ್ಟೂಡೆಂಟ್ಸ್ ಹೋಂ ಅಭಿವೃದ್ಧಿಗಾಗಿ ಐದು ರೂಪಾಯಿಗಳನ್ನೂ ತಿಪಟೂರು ಶ್ರೀ ವೀರಶೈವ ಸ್ಟೂಡೆಂಟ್ಸ್ ಹೋಂ ಅಭಿವೃದ್ಧಿಗಾಗಿ ಐದು ರೂಪಾಯಿಗಳನ್ನೂ ಹಾಜರಿದ್ದ ಆಯಾ ಹೋಮಿನ ಪ್ರೆಸಿಡೆಂಟರವರ ಹಸ್ತ ದಲ್ಲಿ ಮಾಡಲ್ಪಟ್ಟು ಅನಂತರ ಸಭಿಕರಿಗೆ ಗಂಧ, ಪುಷ್ಪ ತಾಂಬೂಲಗಳು ಹಂಚಲ್ಪಟ್ಟು ನಮ್ಮನ್ನಾಳುವ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯಿಂದ ಸಭೆಯು ಭಂಗವಾಯಿತು.

ಓರ್ವ ಉತ್ಸವಭಾಗಿ

ಅಂತರಗಟ್ಟೆಯಲ್ಲಿ ಲಂಬಾಣಿಯವರ ಸಭೆ

ತಾ॥ 23-3-1929 ರಲ್ಲಿ ಕಡೂರು ತಾ॥ ಅಂತರಗಟ್ಟೆ ಜಾತ್ರೆಯಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನ ಮೆಂಬರು ಮ॥ ಹೆಚ್. ವಿ. ಕೋದಂಡರಾಮಯ್ಯನವರ ಅಧ್ಯಕ್ಷತೆಯಲ್ಲಿ ಲಂಬಾಣಿಯವರ ಒಂದು ಸಭೆಯು ನೆರೆಯಿತು. ಈ ಜಾತ್ರೆಗೆ ಲಂಬಾಣಿಯವರ ಒಟ್ಟು 7000 ಪ್ರಜೆ ಸೇರಿತ್ತು. ರೆ ಅ ಮೆಂಬರು ಮ॥ ಚಾಕರನಾಯಕರು ಲಂಬಾಣಿಯವರ ಸ್ಥಿತಿಯಲ್ಲಿ ಆರ್ಥಿಕ ಮತ್ತು ನೈತಿಕ ವಿಷಯವಾಗಿ ಉಪನ್ಯಾಸಮಾಡಿದರು. ಅಧ್ಯಕ್ಷರು ಲಂಬಾಣಿಯವರ ಅಭಿವೃದ್ಧಿಯ ವಿಷಯವನ್ನು ಕುರಿತು ಸಲಹೆಗಳನ್ನು ಕೊಟ್ಟು ಮಾತನಾಡಿದರು. ಅನಂತರ ಈ ಕೆಳಗಿನ ನಿರ್ಣಯಗಳು ತೀರ್ಮಾನಿಸಲ್ಪಟ್ಟು ಸರ್ಕಾರದವರನ್ನು ಪ್ರಾರ್ಥಿಸಬೇಕೆಂದು ಠರಾವು ಆಯಿತು.

(1) ಈಗ ಬಾಯಿಯಲ್ಲಿರುವ 5 ಎಕರೆಗೆ ಬದಲಾಗಿ 10 ಎಕರೆಗಳನ್ನು ಕೊಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸುವುದು.

(2) ಜಮೀನುಗಳನ್ನು ರಿಯಾಯಿತಿಯಿಂದ ಕೊಡುವ ಅಧಿಕಾರವನ್ನು ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರ್‌ರವರಿಗೆ ಕೊಡುವುದು.

(3) ನಮ್ಮ ವರ್ಗದವರ ದರಖಾಸ್ತು ಬಂದಕೂಡಲೆ ಜಮೀನು ಬಿಟ್ಟಿಗೆ ಸೇರಿದ್ದಾಗ್ಯೂ ವಿಳಂಬ ಮಾಡದೆ ತಾ॥ ಅಧಿಕಾರಿಗಳು ಮೋಲ್ಕಂಡ ಶಿಫಾರಸ್ಸು ಮಾಡುವುದು.

(4) ಲಂಬಾಣಿಯವರಿಗಾಗಿ ಒಬ್ಬ ಹೆಡ್ ಟೀಚರನ್ನು ನೇಮಿಸುವುದು.

(5) ಬೆಂಗಳೂರಿನಲ್ಲಿ ಒಂದು ಫ್ರೀ ಬೋರ್ಡಿಂಗ್ ಸ್ಥಾಪಿಸುವುದು.

(6) ಹೊಳಲ್ಕೆರೆ ತಾಲ್ಲೂಕಿನಲ್ಲಿರುವ ದೇವರಗುಡ್ಡ ಫಾರೆಸ್ಟಿನಲ್ಲಿ ಒಂದು ಲಂಬಾಣಿಗ್ರಾಮವು ಕಟ್ಟುವುದಕ್ಕೋಸ್ಕರ 300 ಎಕರೆ ಜಮೀನು ಕೇಳುವುದು.

(7) ಅಂತರಗಟ್ಟೆಯಲ್ಲಿ ಪ್ರತಿವರ್ಷವೂ ಜಾತ್ರೆಕಾಲದಲ್ಲಿ ಲಂಬಾಣಿಯವರ ಸಭೆಸೇರಬೇಕು.

(8) ಅಂತರಗಟ್ಟೆಯಲ್ಲಿ ಒಂದು ಜಮೀನು ಪಡೆದು ಅಲ್ಲಿ ತೋಟ ಬೆಳೆಸುವುದು.

(9) ನಮ್ಮ ಸಂಘದವರಿಗೊಂದು ಒಟ್ಟುಗೂಡಿ ಕೊಡುವ ವೇತನದ ಮೊಬಲಗಿನಲ್ಲಿ ಒಂದು ಗೊತ್ತಾದ ಮೊತ್ತವನ್ನು ಲಂಬಾಣಿಯವರಿಗೆ ಎಂದು ಪ್ರತ್ಯೇಕಿಸುವುದು.

ಇದಕ್ಕಾಗಿ 50,000 ರೂ. ಯನ್ನು ಸರ್ಕಾರದವರು ಮುಂಜೂರು ಮಾಡುವುದು.

(10) ಲಂಬಾಣಿಯವರ ಅಭಿವೃದ್ಧಿಗಾಗಿ ಸರ್ಕಾರದವರು ಪರಸ್ಪರ ಸಹಾಯ ಸಂಘಗಳ ಮೂಲಕ್ಕೆ 50,000 ರೂ. ಯನ್ನು ಬಡ್ಡಿ ಇಲ್ಲದೆ ಸಾಲವಾಗಿ ಕೊಡುವುದು.

(11) ಲಂಬಾಣಿಯವರು ಮದ್ಯಪಾನವನ್ನು ಮಾಡಕೂಡದೆಂದು, ಖಂಡಿತವಾಗಿ ನಿಷೇಧನಾನಿರೋಧಮಾಡಿದೆ.

ಟಿ. ಸಿ. ರಾಮಾನಾಯಕ್, ಸೆಕ್ರೆಟರಿ, ಲಂಬಾಣಿಸಂಘ.

ಬೀರೂರಿನಲ್ಲಿ ಶ್ರೀ ಗಂಗಾಧರೇಶ್ವರ ಸ್ವಾಮಿಗಳ ನೂತನವಾದ ಶ್ರೀಮಠ ಪ್ರವೇಶ ಮಹೋತ್ಸವವು.

ಶ್ರೀಮದ್ಬಾಳೆಹೊನ್ನೂರು ಸಿಂಹಾಸನಾಧೀಶ್ವರರಾದ ಶ್ರೀ ರಂಭಾಪುರಿ ಜಗದ್ಗುರು ಮಹಾಸ್ವಾಮಿಗಳ ಶಾಖಾಮಠ, ಶ್ರೀ ಗಂಗಾಧರಸ್ವಾಮಿಗಳ ಶಿಷ್ಯರು ಶ್ರೀ ಸಿದ್ಧಲಿಂಗಸ್ವಾಮಿಗಳು ಬೀರೂರಿನ ಈ ನೂತನವಾದ ಮಠವನ್ನು ಕಟ್ಟಿಸಿ ಪ್ರವೇಶಮಹೋತ್ಸವವನ್ನು ನೆರವೇರಿಸಬೇಕೆಂದು ಮೇರೆಗೆ ಸದರಿ ಶ್ರೀಪಾದರುಗಳು ತಾ॥ 10-2-1929 ರವಿವಾರ ಇಲ್ಲಿಗೆ ದಯಮಾಡಿಸಿದರು. ಮರುದಿನ ತಾ॥ 11-2-29 ಸೋಮವಾರ ಪಲ್ಲಕ್ಕಿಯ ಮೂಲಕ ಪ್ರಸಿದ್ಧ ಪಡಿಸಿದಂತೆ ಸಭೆಯು ಕೂಡಿ ಇಲ್ಲಿಯ ಗುರು ಬಸವಪ್ಪನವರ ಮಠಾಧ್ಯಕ್ಷರಾದ ಶಿವಭಾರತಿ ಕೇದಾರಸಿದ್ಧಸ್ವಾಮಿಗಳು, ಪಾವನಲಿಂಗಚಕ್ರವರ್ತಿಗಳಾದ ಚಿಕಾಪುರದ ಹಿರೇಮಠದ ಪಟ್ಟಾಧ್ಯಕ್ಷರು ಚನ್ನವೀರದೇಶಿಕೇಂದ್ರರು, ಶ್ರೀ ಶರಣಬಸವೇಶ್ವರರ ಮನೆಯ ಈಗಿನ ಯಜಮಾನರಾದ ಶಿವಶರಣರು ಮತ್ತು ರಾ॥ ಗಳಾದ ಮಡಿಯಪ್ಪನವರು ಚೌಧರಿ, ಲಕ್ಷ್ಮಯ್ಯ ಬಾಜಿ ವಿಶ್ವನಾಥಪ್ಪನವರು ಮಾರು ಸಣ್ಣಪ್ಪನವರು, ಸಿದ್ಧಲಿಂಗಪ್ಪ ಸಂದ್ಯಾಡ ಗುರಪ್ಪ ಸಂದ್ಯಾಡ, ಶಿವಶರಣಪ್ಪ ಅಡಿಕೆ ಶರಣಪ್ಪ ವಿಶಾಪುರ ವೀರಪ್ಪ ಕೊಂಡದ ಇವರೇ ಮೊದಲಾದ ಅನೇಕ ಪಟ್ಟಣಿಗರಿಂದ ಅಲಂಕೃತವಾಗಿತ್ತು. ಈ ವೇದಿಕೆ ನಿಶ್ಚಯಿಸಿದ ಪ್ರಕಾರ ಶ್ರೀ ಮಹಾಂತಸ್ವಾಮಿಗಳ ಶಿವಯೋಗಮಂದಿರ ಇವರಿಂದ ವಿದ್ಯಾರ್ಥಿಗಳ ಪರೀಕ್ಷೆಯು ತೆಗೆದುಕೊಳ್ಳಲ್ಪಟ್ಟಿತು. ಪ್ರಶ್ನೆಗಳಿಗೆ ವಿದ್ಯಾರ್ಥಿಗಳು ಸಮಂಜಸ ಉತ್ತರಗಳನ್ನು ಕೊಟ್ಟದ್ದರಿಂದ ಆನಂದ ಭರಿತರಾದ ಇಲಕಲ್ಲ ಶ್ರೀ ಸ್ವಾಮಿಗಳವರು ನಾನಾದ ವಿದ್ಯಾರ್ಥಿಗಳಿಗೆ ಅವರವರ ಯೋಗ್ಯತಾನುಸಾರವಾಗಿ ಪುಸ್ತಕಗಳನ್ನು ಆಶೀರ್ವಾದ ಮಾಡಿದರು. ಈ ಶ್ರೀಗಳಂತೆ ಸಂತುಷ್ಟರಾದ ಶ್ರೀ ಶರಣಬಸವೇಶ್ವರರ ಮನೆಯ ಯಜಮಾನರಾದ ಶಿವಶರಣರು ಸಹ ಕೆಲವು ರೂಪಾಯಿಗಳನ್ನು ಇನಾಮಾಗಿ ಕೊಟ್ಟರು. ಆ ಬಳಿಕ ಸಭಾಧ್ಯಕ್ಷರುಗಳಾದ ಭಕ್ತಜನರ ಕೋರಿಕೆಯಂತೆ ಭಾಷಣಗಳು ಪ್ರಾರಂಭವಾದವು. ಮೊದಲು ಇಲಕಲ್ಲ ಶ್ರೀಗಳವರ ಭಾಷಣವು ವಿದ್ಯಾವಿಷಯವಾಗಿ ಎಲರ ಮನಸ್ಸಿನ ಮೇಲೆ ಪರಿಣಾಮ ವಾಗುವಂತೆ ಒಪ್ಪುವಂತಾಗಿ ಸಾಗಿತು. ತದನಂತರ ಶಿವಯೋಗಮಂದಿರದ ಶ್ರೀಗಳವರ ಭಾಷಣವು ಪ್ರಾರಂಭವಾಯಿತು. ವೇದೋಪನಿಷದಾದಿ ಪ್ರಮಾಣಪೂರ್ವಕ ಈ ಪಟಿಮರ ದಿವ್ಯವಾದ ಗಹನವಾದ ಭಾಷಣವನ್ನು ಕೇಳಿ ಜನರು ಚಕಿತರಾಗಿ ಚಿತ್ರದೊಳಗಿನ ಗೊಂಬೆಗಳಂತೆ ಸ್ತಬ್ಧರಾಗಿದ್ದರು. ಈ ಮಹಿಮರ ಸರಸವಾಣಿಯು ಚಿಕ್ಕಮಕ್ಕಳಲ್ಲಿಯು ಸಹ ತನ್ನ ಮಾಧುರ್ಯವನ್ನು ವ್ಯಕ್ತಗೊಳಿಸುತ್ತಿತ್ತು. ಆ ಬಳಿಕ ಈ ಪಾಠಶಾಲಾಧ್ಯಾಪಕರಾದ ಶಾಸ್ತ್ರಿಗಳಿಗೆ ತಿಂಗಳೊಂದಕ್ಕೆ ಮೂವತ್ತು ರೂಪಾಯಿಗಳಂತೆ ವೇತನವನ್ನು ಉದಾರಾಂತಃಕರಣದಿಂದ ಸರ್ವದಾ ಕೊಡುತ್ತಿದ್ದ ರಾ॥ ಗುರಪ್ಪನವರು ಮುಖಾ ಈ ಉಭಯತರು ತಮ್ಮ ತಂದೆಯ ಸತ್ಕೀರ್ತಿಯು ಅಳಿಯದೆ ಸ್ಥಿರವಾಗಿ ಉಳಿಯಲೆಂದು ಅವರ ಹೆಸರಿನಂತೆ ಮೇಲಿನ್ನಿನಿಸಿದ ಶಾಸ್ತ್ರಿಗಳ ವೇತನವನ್ನು ಈಗಲೂ ಕೊಡುತ್ತಿರುವದಲ್ಲದೆ ಮುಂದಾದರೂ ನಿರಂತರ ಕೊಡಲೊಪ್ಪಿ ತಮ್ಮ ತಂದೆಯ ಕೀರ್ತಿಪ್ರಭೆಯನ್ನು ತಪ್ಪುತ್ತಿರುವದು ಅಸಾಧ್ಯವೆಂದದೆ ಸಂಗತಿಯಲ್ಲವೇ? ಈ ಸತ್ಪುತ್ರರಿಗೂ ಮತ್ತು ಈ ಶಾಲೆಯು ಸುವ್ಯವಸ್ಥೆಯಿಂದ ಸಾಗುವದರ ಸಲುವಾಗಿ ಸದಾ ಯುಕ್ತಿಯುಕ್ತರಾದ ಶ್ರೀಮಂತ ಲಕ್ಷ್ಮಯ್ಯ ಬಾಜಿ, ರಾ॥ ಸಿದ್ಧಪ್ಪ ಭೀಮಳ್ಳಿ, ರಾ॥ ಸೂಗಪ್ಪ ಸಣ್ಣ ಮುಂತಾದ ಸದ್ಭಕ್ತರಿಗು ಸದಾ ಇಂಥ ಉತ್ತಮ ಬುದ್ಧಿಯನ್ನೇ ಜಗದೀಶನು ಅನುಗ್ರಹಿಸಲೆಂದು ಆಶೀರ್ವಾದಿಸಿ ಶ್ರೀಗಳು ತಮ್ಮ ಭಾಷಣವನ್ನು ಪೂರೈಸಿದರು. ತದನಂತರ ಈ ಪಾಠಾಧ್ಯಾಪಕರಾದ ಶಾಂತಿಕಾಳಿ ಶಾಸ್ತ್ರಿಗಳವರ ಭಾಷಣವಾದ ಮೇಲೆ ಸರಸವಾಗಿ ಕೇಳುವಂತೆ ಜರಗಿತು. ವೇದಮಂತ್ರ ಪಾಠ್ಯ ನಿಪುಣರಾದ ವೀರಪ್ಪನವರು ಕೊಂಡೇದ ಇವರು ಸ್ವಲ್ಪ ಕಾಲ ಉಪಸಂಹಾರರೂಪವಾದ ಭಾಷಣವನ್ನು ಮಾಡಿದ ಮೇಲೆ ಶ್ರೀಗಳವರ ಅಭಿಮತವನ್ನು ಎಲ್ಲ ಸಭಿಕರಿಗೂ ಅರುಹಿದರು. ಬಳಿಕ ಮಂಗಳಾರತಿಯೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಅನಂತರ ಯಾವತ್ತು ಜನರು ಶ್ರೀಗಳಿಂದ ಆಶೀರ್ವಾದಗಳನ್ನು ಹೊಂದಿ ತಮ್ಮ ಸ್ಥಳಗಳಿಗೆ ತೆರಳಿದರು.

ಓರ್ವ ಪ್ರತ್ಯಕ್ಷದರ್ಶಿ

ಶ್ರೀ ಭೋಗಮಲ್ಲೇಶ್ವರ ದೇವಸ್ಥಾನದ ಕಟ್ಟಡ ಶ್ರೀ ಬಸವೇಶ್ವರ ಗಣಪತಿ ಮತ್ತು ಅಮ್ಮನವರ ಪ್ರತಿಷ್ಠಾ, ಶ್ರೀ ವೀರಭದ್ರ ದೇವರ ದೇವಸ್ಥಾನದಲ್ಲಿ ನವಗ್ರಹ ಶಿಲಾಮೂರ್ತಿಗಳ ಸ್ಥಾಪನಾ ಸಮಾರಂಭ

ಬೀರೂರಲ್ಲಿ ಜಮೀನುದಾರರೂ ಪ್ರಸಿದ್ಧ ವರ್ತಕರೂ ಬೀರೂರು ಮ್ಯುನಿಸಿಪಲ್ ವೈಸ್‌ಪ್ರೆಸಿಡೆಂಟರೂ ಆದ ದೊಡ್ಡಮನೆ ರಾಜಪ್ಪನವರ ಕೆಲವು ದಿವಸಗಳಿಂದಲೂ ಸಂಕಲ್ಪಿಸಿಕೊಂಡ ಪ್ರಕಾರ ಮೇಲ್ಕಂಡ ದೇವಾಲಯ ನವಗ್ರಹ ಶಿಲಾಮೂರ್ತಿಗಳ ಪ್ರತಿಷ್ಠಾಪನಾರಂಭವು, ತಾ॥ 28-2-29 ನೇಯ ಗುರುವಾರ ದಿವಸ ಎಲ್ಲಾ ಸುಕಾರ್ಯದಿಂದ ನಡೆಯಿಸಲ್ಪಟ್ಟಿತು. ಬ್ರಹ್ಮಾದಿ ನಾಲ್ಕು ದಿಕ್ಕಿನ ದೇವತೆಗಳನ್ನು ಪ್ರತಿಷ್ಠೆಯ ಬಿಟ್ಟು ಕೊಂಡು, ಸ್ಥಳದ ಶ್ರೀ ವೀರಭದ್ರಸ್ವಾಮಿಯವರಿಗೆ ಪಲ್ಲಕ್ಕಿಗಳಲ್ಲಿ ಮಂಗಳವಾದ್ಯ ಸಮೇತ ವಿಜೃಂಭಣೆಯಿಂದ ದೇವಸ್ಥಾನಗಳಿಗೆ ತರಲ್ಪಟ್ಟು ತತ್ಪೂರ್ವಕ ಈ ಕಾರ್ಯಕ್ಕೆ ಅಂಗಭೂತವಾದ ಪುಣ್ಯಾಹ ವಾಚನಾ ಮೊದಲಾದ ಕಾರ್ಯಗಳ, ಬೆಂಗಳೂರಿನಿಂದ ಪುರೋಹಿತರಾಗಿ ಬಂದಿದ್ದ ಶ್ರೀ ವೇ॥ ಗುರುಲಿಂಗಶಾಸ್ತ್ರಿಗಳವರ ವೇ॥ ಶರಬಸವಶಾಸ್ತ್ರಿಗಳವರು, ವಿದ್ಯಾರ್ಥಿ ಚರಮೂರ್ತಿಗಳು ಇವರಿಂದ ನಡೆಯಿಸಿ ಗುರುವಾರ ಶುಭಲಗ್ನಕ್ಕೆ ಸರಿಯಾಗಿ ಶಾಸ್ತ್ರೋಕ್ತ ಗಣಪತಿ ಮತ್ತು ಮೂಲಸ್ಥಾನದ ಸತ್ಸಂಕಲ್ಪದಂತೆ ಆಗಮೋಕ್ತರೀತಿ ವಿಧ್ಯುಕ್ತವಾಗಿ ನವಗ್ರಹಗಳು, ಶ್ರೀ ಬಸವೇಶ್ವರ ಗಣಪತಿ ಮತ್ತು ಅಮ್ಮನವರ ಪ್ರತಿಷ್ಠಾಪನೆಯು ಸಾಂಗವಾಗಿ ನಡೆಯಿತು. ಇದೇ ಸಮಯಕ್ಕೆ ಆರಿಕೆರೆಯ ಕಲ್ಮಠದ ಶ್ರೀಮನ್ನಿರಂಜನ ಜಗದ್ಗುರು ಶ್ರೀಮಹಾಸ್ವಾಮಿಗಳವರೂ ಬ್ರಹ್ಮಸಮುದ್ರದ ಬೃಹನ್ಮಠಾಧೀಶ ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳು ಕಂಸಾಗರದ ಪಟ್ಟದ ಶಿವಾನಂದಶಾಸ್ತ್ರಿಗಳು ಇವರುಗಳು ದಯಮಾಡಿಸಿದ್ದರಿಂದ ಜನಗಳಲ್ಲಿ ವಿಶೇಷ ಆನಂದವುಂಟಾಗಿತ್ತು. ತಾ॥ 1-3-29 ನೇ ಶುಕ್ರವಾರ ಶ್ರೀ ಸ್ವಾಮಿಗಳವರ ಪಾದಪೂಜಾ ಸಹಿತ ನವಗ್ರಹಮೂರ್ತಿಗಳಿಗೆ ರುದ್ರಾಭಿಷೇಕ ವಿರಕ್ತರಿಗೆ ಪಾದಪೂಜಾರಂಭ ಮಹೇಶ್ವರಾರಾಧನೆಯು ದಕ್ಷಿಣೆ, ಗೋದಾನ ಭೂದಾನ, ಅನ್ನದಾನ ವಸ್ತ್ರದಾನಗಳ ಸಂತೋಷಪೂರ್ವಕ ನಡೆದವು. ಈ ವಿಷಯದಲ್ಲಿ ಮ॥ ಸದಸಿಂಹಬಾಳಪ್ಪನವರ ಮತ್ತು ಬಂಗಾರಸೆಟ್ಟರವರು ಇಂಥಾ ಮಹತ್ಕಾರ್ಯಗಳನ್ನು ಆಗಾಗ್ಗೆ ನಡೆಯಿಸಿ ಅನುಭವಶಾಲಿಗಳಾದರಿಂದ ಮ॥ ಹಾಲಪ್ಪನವರ ಅಪೇಕ್ಷೆಯಂತೆ ಬೆಂಗಳೂರಿನಿಂದ ಶಾಸ್ತ್ರಿಗಳನ್ನು ಕರೆಸಿಕೊಟ್ಟು ಕೆಲಸಗಳು ಸಾಂಗಗೊಳ್ಳುವ ಪರಿ ಎಲ್ಲರ ಪ್ರತ್ಯಕ್ಷ ಸಹಾಯಕರಾಗಿದ್ದುದು ಸ್ತುತ್ಯಹವಾದ ಸಂಗತಿಯಾಗಿದೆ. ಈ ಮಹತ್ಕಾರ್ಯದಲ್ಲಿ ಊರಿನ ಕೆಲವೊಂದು ಮುಖಂಡರೂ ಬಹು ಜನರು ನೆರೆದು ಮುಂದೆ ನಿಂತು ಕಾರ್ಯ ನೆರವೇರಿಸಿದ್ದಕ್ಕೋಸ್ಕರ ಮ॥ ಹಾಲಪ್ಪನವರು ಕೃತಜ್ಞರಾಗಿರುವರು. ಈ ಶುಭಕಾರ್ಯದ ಜ್ಞಾಪಕಾರ್ಥವಾಗಿ ಶ್ರೀ॥ ಬೀರೂರಿನ ನಗರ ಸೇವಾಂಶದಲ್ಲಿ ಕಾಲು ಮತ್ತು ಜಾಸ್ತಿ ಹಾಲಪ್ಪನವರ ಸೌಭಾಗ್ಯವತಿ ಧರ್ಮಪತ್ನಿ ಶ್ರೀ ತಿಪ್ಪಮ್ಮನವರು ಕೊಟ್ಟಿದ್ದು, ಶ್ರೀ ಶೈವಶಾಸ್ತ್ರಿಗಳ ಶ್ರೀ ವಿಶ್ವನಾಥ ಸ್ವಾಮಿಗಳವರ ಪ್ರಸಾದಿಂದ ಹಾಲಪ್ಪನವರು ಸಭೆಯ ಸತ್ಕಾರ ಸ್ವೀಕರಿಸಿ ಶ್ರೀ ಸೋಮೇಶ್ವರ ಮಠದಲ್ಲಿ ನೆರೆದಿದ್ದ ಸಕಲರಿಗೂ ಬೇಕಾದ ಕರ್ಪೂರ ಆರತಿ ಸಹಿತವಾಗಿ ಶ್ರೀ ಗುರುಗಳವರಿಗೆ ಯೋಗ್ಯ ಕಾಣಿಕೆಗಳನ್ನು ಪಡೆದುಕೊಂಡು ಧನ್ಯರಾಗಿ ವೇ॥ ಶಾಸ್ತ್ರಿಗಳವರಿಗೆ ವಿಶೇಷ ಸಂಭಾವನೆಗಳಿಂದ ತೃಪ್ತಿಪಡಿಸಿ ಬಂದ ಮಹಾಜನಗಳ ಸಂತೋಷಕ್ಕೆ ಪಾತ್ರರಾಗಿ ಊರಿನ ಜನಗಳಿಗೆ ಅನುಕರಣೀಯರಾಗಿರುವರು. ಈ ಮಹಾಶಯರು ಸದ್ಯ ಬೀರೂರಿನ ಮುನಿಸಿಪಲ್ ಆಫೀಸ್ ವೈಸ್ ಪ್ರೆಸಿಡೆಂಟರಾಗಿ ನಿಷ್ಪಕ್ಷಪಾತದಿಂದ ಕೆಲಸಮಾಡುತ್ತ ಜನಾನುರಾಗಿಗಳಾಗಿ ತಮ್ಮ ಶಕ್ತಿ ಸಾಮರ್ಥ್ಯಗಳಿಂದ ಕಾರ್ಯನಿರ್ವಹಿಸುತ್ತಿರುವ ಇವರಿಗೂ ಇವರ ಪತ್ನಿ ಪುತ್ರಾದಿಗಳಿಗೂ ಜಗದೀಶ್ವರನು ಆಯುರಾರೋಗ್ಯಗಳನ್ನು ದಯಪಾಲಿಸಲೆಂದು ಹಾರೈಸುವ

ಶಿವಕಥಾಪಂಡಿತ ಹೆಚ್. ಬಿ. ನಂಜುಂಡಾರಾಧ್ಯ, ಹಿರೇಮಠ, ಬೀರೂರು.

[ಮೇಲ್ಕಂಡ ೧೦೦ ಒಪ್ಪಿದೆ]

ಪಟ್ಟಾಧಿಕಾರ ಮಹೋತ್ಸವ

ಈಗ್ಗೆ ಸುಮಾರು ೩ ವರ್ಷಗಳಲ್ಲಿ ಶ್ರೀರಂಗಪಟ್ಟಣದ ತಾ॥ ಕೆಸಬಾ ಕ್ಯಾತನಹಳ್ಳಿ ವ ಸಾಹುಕಾರ್ ಸಿದ್ಧಲಿಂಗಯ್ಯನವರು ಮತ್ತು ಇತರ ಆಜುಬಾಜು ಗ್ರಾಮಗಳ ವೀರಶೈವ ದೊಡ್ಡಮನುಷ್ಯರು ಸೇರಿ ತಮ್ಮ ಪ್ರಾಂತ್ಯದಲ್ಲಿ ಆಚಾರವಿಚಾರಗಳಿಗೂ ಅವಶ್ಯ ಮುಂತಾದ ಶುಭಕಾರ್ಯಗಳಿಗೂ ಒಂದು ಗುರುಸ್ಥಲದ ಪಟ್ಟದ ಮಠವು ತಮ್ಮ ಪ್ರಾಂತ್ಯದಲ್ಲಿ ಇಲ್ಲದೆ ಇರುವುದರಿಂದ ತುಂಬಾ ತೊಂದರೆಯಾದ ಪ್ರಯುಕ್ತ ಸದರಿ ಕ್ಯಾತನಹಳ್ಳಿ ಮ॥ ಸಿದ್ಧಲಿಂಗಯ್ಯನವರು ತಮ್ಮ ಗ್ರಾಮದಲ್ಲಿ ಒಂದು ಮಠವನ್ನು ಕಟ್ಟಿಸಿ ವೇ॥ ಪ್ರಭುಸ್ವಾಮಿ ಎಂಬವರಿಗೆ ನಂಜನಗೂಡು ತಾ॥ ಸುತ್ತೂರು ವೀರಸಿಂಹಾಸನ ಮಠದ ಪಟ್ಟಾಧ್ಯಕ್ಷರಾದ ಶ್ರೀ॥ ವೇ॥ ಶಿವರಾತ್ರಿ ಸ್ವಾಮಿಗಳವರಿಂದ ಅಯ್ಯವಾಧಿಕಾರವನ್ನು ಕೊಡಿಸಿ ೪-೬ ಸಹಸ್ರ ರೂಪಾಯಿಗಳವರೆಗೂ ವ್ಯಯಮಾಡಿ ಬಹಳ ವಿಜೃಂಭಣೆಯಿಂದ ನೆರವೇರಿಸಿದ್ದರು. ಸದರಿ ಸ್ವಾಮಿಗಳನ್ನು ವಿದ್ಯಾಭ್ಯಾಸಕ್ಕಾಗಿ ಸಿದ್ಧಗಂಗಾಮಠದಲ್ಲಿ ಬಿಟ್ಟಿದ್ದರು. ಇವರು ಸರಿಯಾಗಿ ವಿದ್ಯಾಭ್ಯಾಸ ಮಾಡದೆ ದುರ್ಮಾರ್ಗಕ್ಕೆ ಬಿದ್ದು ಲಿಂಗ ಲೋಪಮಾಡಿಕೊಂಡು ತಕ್ಕೂ ಅಲ್ಲದೆ ಧರ್ಮಕ್ಕೆ ವಿರುದ್ಧ ಕಾರ್ಯಗಳನ್ನು ಆಚರಿಸಿ ಗುರುತ್ವವನ್ನು ಕಳೆದುಕೊಂಡದ್ದರಿಂದ ಸದರಿ ಕ್ಯಾತನಹಳ್ಳಿ ಮಠದ ಭಕ್ತರೂ ಧರ್ಮದರ್ಶಿಗಳು ಸದರಿ ಮಠದಲ್ಲಿ ಪಂಚಾಯಿತಿ ಸೇರಿ ಸ್ವಾಮಿಗಳು ಆಚರಿಸಿದ ಅನ್ಯಾಯಗಳನ್ನು ಕುರಿತು ಚರ್ಚಿಸಲಾಗಿ ಸದರಿ ಪಂಚಾಯಿತಿಯಲ್ಲಿ ಧರ್ಮದರ್ಶಿಗಳು ಮತಾಚಾರಗಳು, ಅಯ್ಯನು ಧರ್ಮಕ್ಕೂ ವಿರುದ್ಧವಾಗಿ ನಡೆದ ಪ್ರಭುಸ್ವಾಮಿ ಎಂಬವರನ್ನು ಅಯ್ಯವಾಧಿಕಾರದಿಂದ ನಿವೃತ್ತಿಮಾಡಿ ಮಠಾಧಿಪತ್ಯಕ್ಕೆ ಅರ್ಹರಾದ ಒಬ್ಬರನ್ನು ಆರಿಸಬೇಕೆಂದು ನಿರ್ಧರಿಸಿ ಇದೇ ವಿಭವನಾಮಸಂವತ್ಸರದ ಮಾಘ ಬಹುಳ ೨ ಸೋಮವಾರ ತಾ॥ 25-3-1929 ರಲ್ಲಿ ಧರ್ಮದರ್ಶಿಗಳು ಮೇಲ್ಕಂಡ ಕ್ಯಾತನಹಳ್ಳಿ ಮಠಕ್ಕೆ ಸುತ್ತೂರು ವೀರಸಿಂಹಾಸನ ಮಠದ ಪಟ್ಟಾಧ್ಯಕ್ಷರಾದ ಶ್ರೀ ವೇ॥ ಶಿವರಾತ್ರಿ ಸ್ವಾಮಿಗಳವರಿಂದ ವೇ॥ ಶಿವಪ್ರಭುಸ್ವಾಮಿ ಎಂಬವರಿಗೆ ಪಂಚ ಬ್ರಹ್ಮ ಕಲಶಾರಾಧನಪೂರ್ವಕವಾಗಿ ಅಯ್ಯವಾಧಿಕಾರವನ್ನು ವಿಧ್ಯುಕ್ತವಾಗಿ ನೆರವೇರಿಸಿದರು. ಕೆಲವು ವಟುಗಳಿಗೆ ಧರ್ಮಾರ್ಥವಾಗಿ ಶಿವದೀಕ್ಷಾ ಸಂಸ್ಕಾರವೂ ಸಹ ಜರುಗಿಸಲ್ಪಟ್ಟಿತು. ಪಂಚಮಿ ಗುರುವಾರ ಮ॥ ಸಾಹುಕಾರ್ ಸಿದ್ಧಲಿಂಗಯ್ಯನವರು ತಮ್ಮ ತಾಯಿಯವರ ಜನ್ಮಸ್ಥಳವಾದ ಚಾಕನಕಟ್ಟೆ ಹಳ್ಳಿಯಲ್ಲಿ ಈಶ್ವರ ವಿಗ್ರಹ ಪ್ರತಿಷ್ಠೆಯನ್ನೂ, 15-20 ವಟುಗಳ ದೀಕ್ಷೆಯನ್ನೂ ವಿಧ್ಯುಕ್ತವಾಗಿ ಮಾಡಿಸಿದರು. ಈ ಮಹೋತ್ಸವ ಕಾಲದಲ್ಲಿ ಅನೇಕ ವಿರಕ್ತ ವರ್ಗದ ಸ್ವಾಮಿಗಳೂ, ಪಟ್ಟಾಧಿಕಾರಿಗಳೂ, ವೀರಶೈವ ಮಹಾಜನಗಳು ಸಹ ಸೇರಿದ್ದರು. ಸುತ್ತೂರು ವೀರಸಿಂಹಾಸನ ಮಠದ ಪಟ್ಟಾಧ್ಯಕ್ಷರಾದ ಶ್ರೀ॥ ವೇ॥ ಶಿವರಾತ್ರಿ ಸ್ವಾಮಿಗಳವರ ಕರಕಂಜಾತರಾದ ವೇ॥ ಶ್ರೀ॥ ಶಿವರಾತ್ರಿ ರಾಜೇಂದ್ರಸ್ವಾಮಿಗಳವರು ಅಪ್ಪಾವರಣ ವಿಚಾರವಾಗಿಯೂ ಕ್ಯಾತನಹಳ್ಳಿ ಮಠದ ಪಟ್ಟದ ವೇ॥ ಶಿವಪ್ರಭು ಸ್ವಾಮಿಗಳವರು ಧರ್ಮದ ವಿಚಾರವಾಗಿಯೂ ರಂಗಾಪುರದ ಸಂಸ್ಕೃತ ಪಾಠಶಾಲಾ ವಿದ್ಯಾರ್ಥಿ ಗೋಪುರದ ವೇ॥ ಬಿ. ಮಹಂತಸ್ವಾಮಿ ಎಂಬವರು ಭಕ್ತಿ ವಿಷಯವಾಗಿಯೂ ಉಪನ್ಯಾಸಗಳನ್ನು ಮಾಡಿ ಸಭಿಕರನ್ನು ಆನಂದಗೊಳಿಸಿದರು. ಅನಂತರ ಶಿವಕಥಾಪಂಡಿತ ಸಿಂಹಗಿರಿಯ ದೊಡ್ಡ ಬೃಂ॥ ಶ್ರೀ॥ ವೇ॥ ಶಿವಯ್ಯಶಾಸ್ತ್ರಿಗಳು ವಿದ್ಯಾಭ್ಯಾಸ ವಿಷಯವಾಗಿಯೂ ನ ಶಿವಿಷಯವಾಗಿಯೂ ಬಹು ಸ್ವಾರಸ್ಯವಾಗಿ ಭಾಷಣ ಮಾಡಿದರು. ಆ ಮೇಲೆ ವಿರಕ್ತಸ್ವಾಮಿಗಳ ಪಾದಪೂಜಾ ಸಮಾರಂಭವು ನಡೆದು ನೆರೆದಿದ್ದ ಭಕ್ತಮಾಹೇಶ್ವರರಿಗೆ ತೀರ್ಥಪ್ರಸಾದ ವಿನಿಯೋಗವಾಗಿ ಗುರು ಸಂತರ್ಪಣೆಯು ನಡೆಯಿತು. ಸಾಯಂಕಾಲ ಸ್ವಾಮಿಗಳ ಉತ್ಸವವು ವಿಜೃಂಭಣೆಯಿಂದ ಜರುಗಿದನಂತರ ಮೈಸೂರು ಶಿವಕಥಾಪಂಡಿತ ಸಿಂಹಗಿರಿಯ ದೊಡ್ಡ ಬೃಂ॥ ಶ್ರೀ॥ ವೇ॥ ಶಿವಯ್ಯಶಾಸ್ತ್ರಿಗಳವರ ಶಿವಕಥಾಪ್ರವಚನವು ನಡೆದು ಕಡೆಯಲ್ಲಿ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯು ಮಂಗಳಮಹೋತ್ಸವದೊಡನೆ ಮಾಡಲ್ಪಟ್ಟಿತು. ಈ ಮಠದ ಧರ್ಮದರ್ಶಿಗಳು ತುಂಬಾ ಶ್ರಮ ವಹಿಸಿ ಕಾರ್ಯವನ್ನು ನೆರವೇರಿಸಿದರು. ಈ ಮಹೋತ್ಸವ ಕಾಲದಲ್ಲಿ ಸುತ್ತೂರು ಶ್ರೀಗಳವರ ಅಪ್ಪಣೆ ಮೇರೆಗೆ ಮೈಸೂರು ವೀರಶೈವ ಅನಾಥಾಲಯಕ್ಕೆ 4 ರೂಪಾಯಿಗಳೂ ಸ್ಟಾರ್ ಪತ್ರಿಕಾ ಪೋಷಣೆಗಾಗಿ 3 ರೂಪಾಯಿಗಳೂ ಧರ್ಮದರ್ಶಿಗಳಿಂದ ಕಳುಹಿಸಲ್ಪಟ್ಟವು. ಮೇಲ್ಕಂಡ ಮಠದ ಧರ್ಮದರ್ಶಿಗಳಿಗೂ, ಮ॥ ಸಾಹುಕಾರ್ ಸಿದ್ಧಲಿಂಗಯ್ಯನವರಿಗೂ ಭಗವಂತನು ಮಂಗಳವನ್ನುಂಟುಮಾಡಲಿ ಎಂದು ಕೋರುವ

ಪ್ರತ್ಯಕ್ಷದರ್ಶಿ.

[ಮೇಲ್ಕಂಡ ೫ ರೂ ಗಳು ಮ॥ ಪಟಗೇಲ್‌ದಾರ್ ವೀರಭದ್ರಪ್ಪನವರ ಮೂಲಕ ಸಂದಿದೆ]

ಕಲ್ಯಾಣಪ್ರಾಂತದ ವೀರಶೈವ ಧರ್ಮಸುಧಾರಣೆಯ ಸಭೆಯು ಹುಮನಾಬಾದ

ಮಾರ್ಚಿ 31 ನೇ ತಾರೀಖಿನ ದಿನ ಮ ಕೆ ಎಚ್ ರಾಮಯ್ಯನವರೂ ಮ|| ಬಿ. ಎನ್ ವಿಜಯದೇವರವರೂ ಚನ್ನಪಟ್ಟಣಕ್ಕೆ ಬಂದು ಹಿಂದೂ ಮಹಮ್ಮದೀಯರ ಮುಖಂಡರುಗಳನ್ನು ಸಂದರ್ಶಿಸಿ, ನಿಜವಾದ ವರ್ತಮಾನವನ್ನು ತಿಳಿದುಕೊಂಡು, ಗಲಾಟೆಗೆ ಅವಕಾಶವಾಗದಂತೆ ನೋಡಿಕೊಳ್ಳಬೇಕೆಂದು ಬುದ್ಧಿವಾದ ಹೇಳಿ, ಪುನಃ ಏಪ್ರಿಲ್ 3 ನೇ ತಾರೀಖು ನಡೆಯುವ ಶಾಂತಿಸಭೆಗೆ ತಪ್ಪದೆ ಬರುವುದಾಗಿ ಹೇಳಿ ಹೋದರು

ಹಿಂದೂ ಮಹಮ್ಮದೀಯರು ಬೇರೆ ಬೇರೆ ಸಭೆಗಳನ್ನು ಮಾಡಿಕೊಂಡು, ತಮ್ಮ ತಮ್ಮ ಪಂಗಡದ ಜನರಿಗೆ ತಿಳಿವಳಿಕೆ ಹೇಳಬೇಕೆಂದು ಶಾಂತಿಸ್ಥಾಪನಾ ಸಭೆಯಲ್ಲಿ ಗೊತ್ತಾಗಿತ್ತಂತೆ ಮಹಮ್ಮದೀಯರು ಆಗಾಗ ಸಭೆಗಳನ್ನು ನಡೆಸುತ್ತಿದ್ದರಂತೆ ಆ ರೀತಿ ಹಿಂದುಗಳು ಮೀಟಿಂಗುಗಳನ್ನು ನಡೆಸಲು ಹಳ್ಳಿಗಳಿಂದ ಜನರು ಬರಬೇಕಾಗಿದ್ದುದರಿಂದ ಸಾಧ್ಯವಾಗಲಿಲ್ಲ ಏಪ್ರಿಲ್ 2 ನೇ ತಾರೀಖಿನ ದಿವಸ ಭೈರಾಪಟ್ಟಣದ ಹತ್ತಿರವಿರುವ ತೋಪಿನಲ್ಲಿ ಹಿಂದುಗಳು ಒಂದು ಮೀಟಿಂಗು ನಡೆಸಿ ಒಂದೊಂದು ಗ್ರಾಮಕ್ಕೆ ಇಬ್ಬರು ಮೂವರು ಮುಖ್ಯಸ್ಥರುಗಳನ್ನು ಗೊತ್ತುಮಾಡಿ ಅವರ ಮುಖಾಂತರ ಶಾಂತಿ ಕಮಿಟಿಯಲ್ಲಿ ತೀರ್ಮಾನಿಸುವ ವಿಷಯಗಳನ್ನು ಇವರಿಗೆ ತಿಳಿಸಿ, ಸಮಾಧಾನವು ನೆಲೆಗೊಳ್ಳುವಂತೆ ಮಾಡಬೇಕೆಂದೂ, ಅಲ್ಲದೆ ಯಾವ ವಿಧವಾದ ಗಲಾಟೆಯನ್ನು ಯಾವ ಹಿಂದುವಾದರೂ ನಡೆಸಿದನೆಂದು ಗೊತ್ತಾದರೆ ಆ ಊರಿನ ಮುಖ್ಯಸ್ಥರು ಅತನಿಗೆ ತಕ್ಕ ಬಂದೋಬಸ್ತು ಮಾಡತಕ್ಕದ್ದೆಂದೂ ತೀರ್ಮಾನಿಸಿಕೊಂಡರು ಇಂಥ ವ್ಯಾಜ್ಯಗಳಿಂದ ಉಂಟಾಗತಕ್ಕ ಅನರ್ಥ ಪರಂಪರೆಗಳನ್ನು ಅಲ್ಲಿದ್ದ ಜನರಿಗೆ ತಿಳಿಸಲಾಯಿತು

3ನೇ ತಾರೀಖಿನ ದಿವಸ ಶಾಂತಿಸಭೆಯ ಮೀಟಿಂಗು ಕ್ಲೋಸ್‌ಪೇಟೆ ಸಬ್ ಡಿವಿಜನ್ ಆಫೀಸರ ಅಧ್ಯಕ್ಷತೆಯಲ್ಲಿ ಗಣಕ್ಕಿ ಎಫಿಮೀಟರಿನಲ್ಲಿ ನಡೆಯಿತು. ಸಭೆಗೆ ಮ|| ಕೆ ಎಚ್ ರಾಮಯ್ಯನವರೂ ಮ ಬಿ ಎನ್ ವಿಜೇಯದೇವರವರೂ ದಯಮಾಡಿಸಿದ್ದು ಸಮಯೋಚಿತ ಬುದ್ಧಿವಾದವನ್ನು ಹೇಳಿದರು. ಸಭೆಗೆ ಕಮಿಟಿಯ ಮೆಂಬರುಗಳಲ್ಲದೆ ಸಾವಿರಾರು ಜನ ಹಿಂದು ಮಹಮ್ಮದೀಯರು ಬಂದಿದ್ದರು ಹಿಂದು ಮುಸಲ್ಮಾನ ದೊಡ್ಡ ಮನುಷ್ಯರುಗಳು ತಮ್ಮ ತಮ್ಮ ಪಂಗಡಗಳವರ ತೊಂದರೆಯನ್ನು ತಿಳಿಸಿದ ಮೇಲೆ ಒಂದು ಪಂಗಡದವರು ಮತ್ತೊಂದು ಪಂಗಡದವರಲ್ಲಿ ಗುರ್ತು ಹಿಡಿಯಬಾರದೆಂದು ತೀರ್ಮಾನಿಸಲಾಯಿತು ಶಾಂತಿಸ್ಥಾಪನೆಯಾದಮೇಲೆ ಆಯಾ ಪಂಗಡಗಳವರು ಮಾಡಿರುವ ಕೇಸುಗಳನ್ನು ವಾಪಸು ತೆಗೆದುಕೊಳ್ಳಲು ಅಪ್ಪಣೆ ಕೊಡುವಂತೆ ಸಭೆಯವರು ಸರ್ಕಾರದವರನ್ನು ಪ್ರಾರ್ಥಿಸಬೇಕೆಂದು ಸೂಚಿಸಿದಾಗ ಈ ಸೂಚನೆಯನ್ನು ಮ|| ಅಬ್ದುಲ್ ಖುದ್ದೂಸ್ ಸಾಹೇಬರವರು ಒಪ್ಪಲಿಲ್ಲ ತಾವು ಬೇರೆ ಮೀಟಿಂಗು ಮಾಡಿ ತಮ್ಮವರೆಲ್ಲರ ಅಭಿಪ್ರಾಯವನ್ನು ತಿಳಿದುಕೊಂಡು, ಅನಂತರ ತಮ್ಮ ಅಭಿಪ್ರಾಯವನ್ನು ತಿಳಿಸುತ್ತೇವೆಯೆಂದು ಹೇಳಿದರು ಇದು ಅನೇಕರಿಗೆ ಅಸಮಾಧಾನವನ್ನೂ ಸಂಶಯವನ್ನೂ ಉಂಟುಮಾಡಿತು ಆ ದಿವಸದ ಮೀಟಿಂಗು ಅಲ್ಲಿಗೆ ಮುಗಿಯಿತು

ಅವರು ಹೇಳಿದಂತೆ ಬೇರೆ ಮೀಟಿಂಗು ನಡಸಿ ಅವರ ಅಭಿಪ್ರಾಯಗಳನ್ನು ಇದುವರೆಗೂ ತಿಳಿಸಲಿಲ್ಲ ಸ್ವಲ್ಪ ಸಮಾಧಾನವು ನೆಲೆಸಿದಮೇಲೆ ಹೊಸದಾಗಿ ಹಿಂದುಗಳಮೇಲೆ ಕೇಸುಗಳನ್ನು ಮಾಡುತ್ತಿರುವುದಾಗಿ ತಿಳಿಯ ಬರುತ್ತದೆ ಇದುವರೆವಿಗೆ ಒಬ್ಬ ಮಹಮ್ಮದೀಯನನ್ನೂ ಹತ್ತು ಜನ ಹಿಂದುಗಳನ್ನೂ ದಸ್ತಗಿರಿಮಾಡಿರುತ್ತಾರೆ ಮೊನ್ನೆಯ ದಿವಸ ಅಂದರೆ ತಾ|| 8-4-29ರಲ್ಲಿ ಮಹಮ್ಮದೀಯರನ್ನು ಹೊಡೆದ ಹಿಂದುಗಳನ್ನು ಗುರ್ತಿಸುವ ಕಾರ್ಯವು ನಡೆಯಿತು ಅದರಲ್ಲಿ ಇಬ್ಬರನ್ನು ದಸ್ತಗಿರಿಮಾಡಿರುತ್ತಾರೆ ಈ ಕಾರ್ಯವು ನಡೆಯುವಾಗ ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟರವರು ಹಿಂದುಗಳನ್ನು ಸಿಟ್ಟಾಗಿ ಕಾಣುತ್ತಾ ಮಾತನಾಡಿದರಂತೆ ಇವರ ಈ ವಿಧವಾದ ವರ್ತನೆಯಿಂದ ಹಿಂದುಗಳಿಗೆ ವ್ಯಾಕುಲವುಂಟಾಗಿರುತ್ತದೆ ಅಲ್ಲದೆ, ಮುಂದೆ ಏನು ಮಾಡುವರೋ ಎಂದು ಸಂಶಯಗ್ರಸ್ತರಾಗಿರುತ್ತಾರೆ ಈಗ 14 ದಿವಸಗಳಿಂದ ದಸ್ತಗಿರಿ ಮಾಡಿರುವವರ ಸ್ಥಿತಿ ಕಳವಳ ಮಾಡಿಸಿದರೆಂದು ಗೌರವಸ್ಥರೂ, ಭಾರಿ ಶ್ರೀಮಂತರೂ ದೊಡ್ಡ ಲೇವಾದೇವಿದಾರರೂ ಆದ ವರಗೇರಹಳ್ಳಿ ಮ|| ಪುಟ್ಟೇಗೌಡರನ್ನು ಹಿಡಿದು ಒಂದು ದಿವಸ ಅಪಮಾನಿಸಿ ಮೇಲೆ ಬಿಟ್ಟಿರುತ್ತಾರೆ ಕೇಸು ಕೋರ್ಟಿನಲ್ಲಿರುವುದರಿಂದ ಈ ವಿಷಯದಲ್ಲಿ ಹೆಚ್ಚು ಹೇಳಲಾರೆ ಶಾಂತಿ ಸಭೆಯನ್ನು ಏರ್ಪಡಿಸಿ ಆ ಮೂಲಕ ಸಮಾಧಾನವು ನೆಲೆಗೊಳ್ಳುವಂತೆ ಮಾಡಿ, ಅಧಿಕಾರಿಗಳು ಈಗ ತೀರ್ಮಾನ ಮಾಡುತ್ತಿರುವುದು ಜನರಲ್ಲಿ ಅಸಮಾಧಾನವನ್ನೂ ಅಪನಂಬಿಕೆಯನ್ನೂ ಉಂಟುಮಾಡಿದೆ

ನಾನು 6 ನೇ ತಾರೀಖಿನ ದಿವಸ ನಡೆದ ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗಿಗೆ ಹೋಗಿದ್ದೆ ಆ ದಿವಸ ಮೀಟಿಂಗು ಮುಗಿಯಲಿಲ್ಲವಾದ್ದರಿಂದ ಆದಿತ್ಯವಾರ ಬೆಳಿಗ್ಗೆ ಪುನಃ ಮೀಟಿಂಗು ನಡೆಯಿತು ಅದನ್ನು ತೀರಿಸಿಕೊಂಡು ಆ ದಿವಸ ಮಧ್ಯಾಹ್ನವೇ ನಾನು ಬಂದುಬಿಟ್ಟೆ ನಾನು ಬೆಂಗಳೂರಿನಲ್ಲಿದ್ದ ಸಮಾಚಾರವನ್ನು ತಿಳಿದ ಕೆಲವು ಮಹಮ್ಮದೀಯ ದೊಡ್ಡ ಮನುಷ್ಯರು ಅದಕ್ಕೆ ಬೇಕಾದ ಕಥೆಗಳನ್ನು ಹುಟ್ಟಿಸಿ ಸುಳ್ಳು ಸಮಾಚಾರವನ್ನು ಹಬ್ಬಿಸುತ್ತಿರುತ್ತಾರಂತೆ. ಅವರು ನನ್ನನ್ನೇ ಕರೆದು ನಿಜವಾದ ಸಂಗತಿಯನ್ನು ತಿಳಿದುಕೊಂಡು ತಪ್ಪು ಭಾವನೆಗೆ ಅವಕಾಶವಿಲ್ಲದಂತೆ ಮಾಡಬಹುದಾಗಿತ್ತು. ಹಾಗಿಲ್ಲದೆ ಅಲ್ಲದ ಸಲ್ಲದ ಕಟ್ಟುಕಥೆಗಳನ್ನು ಹುಟ್ಟಿಸುತ್ತಿರುವುದರಿಂದ ಅವರ ಅಭಿಪ್ರಾಯವೇನಿರಬಹುದೆಂದು ಗೊತ್ತಾಗದಂತಾಗಿದೆ.

ಹಿಂದುಗಳನ್ನು ಹೊಡೆದ ಮಹಮ್ಮದೀಯರನ್ನು ಗುರ್ತಿಸುವ ಕಾರ್ಯವು ನಿನ್ನೆ ನಡೆಯಿತಂತೆ ಅದರಲ್ಲಿ ಯಾರನ್ನು ದಸ್ತಗಿರಿಮಾಡಿದರೆಂಬುದು ಇನ್ನೂ ಗೊತ್ತಾಗಲಿಲ್ಲ

ಈ ಮೇಲ್ಕಂಡ ವಿಷಯಗಳು ಜನರ ಅವಗಾಹನೆಗೆ ಬರುವುದರಿಂದ ನನ್ನ ವಿಷಯದಲ್ಲಿ ಕೆಲವರಿಗೆ ಉ[redacted]ಯವು ಹೋಗಬಹುದೆಂದು ನಂಬಿರುತ್ತೇನೆ [redacted]lappa.

ಗೃಹಕ್ಲೇಶದ ಸ್ಫೋಟನ.

ಚಾಮರಾಜನಗರದ ತಾಲ್ಲೂಕು ಬದನೆ ಹೋಬಳಿ ಅರಳಿಕಟ್ಟೆಯಲ್ಲಿರುವ ಶಿವನಂಜೇಗೌಡನ ಧರ್ಮಪತ್ನಿ ಸಂಗಮ್ಮನು ಸರ್ಕಾರಕ್ಕೂ ಜನರಿಗೂ ತಿಳಿಯಪಡಿಸುವುದೇನೆಂದರೆ.

ನನ್ನ ಅತ್ತೆಯಾದ ಶಿವಮ್ಮನು ನಮ್ಮ ಬಾಬತ್ತು ನಮ್ಮ ಸ್ವಾಧೀನದಲ್ಲಿರುವ ಕೆಲವು ಸ್ವತ್ತುಗಳು ತನಗೆ ನನ್ನ ತಂದೆಯಿಂದ ಕ್ರಯವಾಗಿರುವುದಾಗಿ ಹೇಳಿಕೊಂಡು ಇವುಗಳನ್ನು ಪರಭಾರೆ ಮಾಡಲು ಪ್ರಯತ್ನಪಟ್ಟಿರುವುದಾಗಿ ವರ್ತಮಾನ ಕೇಳುತ್ತೇನೆ ನಮ್ಮ ತಂದೆಯ ಬಾಬತ್ತು ಸ್ವತ್ತುಗಳು ಯಾವುದೂ ಈಕೆಗೆ ಕ್ರಯವಾಗಿರುವುದಿಲ್ಲ ಯಾವ ಸ್ವತ್ತೂ ಇವಳ ಸ್ವಾಧೀನದಲ್ಲಿ ಇರಲೂ ಇಲ್ಲ ಯಾವದಕ್ಕೂ ಇವಳು ಕಂದಾಯ ವಗೈರೆ ಪಾವತಿ ಮಾಡಿಯೂ ಇಲ್ಲ ವೃಥಾ ಇಲ್ಲವಾದ ವ್ಯಾಜ್ಯವನ್ನು ಉಂಟುಮಾಡಲು ಕೆಲವು ದುಷ್ಟಜನಗಳ ಪ್ರೇರಣೆಯಿಂದ ಇವಳು ಈರೀತಿ ಪ್ರಯತ್ನಪಟ್ಟಿರುತ್ತಾಳೆ ಇವಳಿಂದ ಕ್ರಯ ಭೋಗ್ಯ ವಗೈರೆಗಳನ್ನು ಮಾಡಿಕೊಳ್ಳತಕ್ಕವರಿಗೆ ಯಾವ ವಿಧವಾದ ಪ್ರಯೋಜನವೂ ಆಗಲಾರದೆಂದು ಈ ಮೂಲಕ ಎಚ್ಚರಿಸಿರುತ್ತೆ ಇವಳ ಮತ್ತು ಇವಳ ಗಂಡನ ಹೆಸರಿಗೆ ಈಗ್ಗೆ ಸುಮಾರು 25 ವರ್ಷದಲ್ಲಿ ಶಾರದಾಂತರದಿಂದ ಒಂದು ನೆಪಮಾತ್ರವಾದ ಕ್ರಯದಸ್ತಾವೇಜು ಹುಟ್ಟಿತ್ತು ಅದು ಜಾರಿಗೆ ಬರಲಿಲ್ಲವಾಗಿ ಈ ಕ್ರಯವು ಊರ್ಜಿತವಾಗಲಿಲ್ಲ ಇದುವಿನಾ ಇನ್ಯಾವ ಕ್ರಯವೂ ಇವಳ ಹೆಸರಿಗೆ ಆಗಿರುವುದಿಲ್ಲ

ಈ ಎಡಗೈ ಹೆಬ್ಬೆಟ್ಟಿನ ಗುರ್ತಿನ ರುಜು ಮಾಡಿದ್ದು ಹಾಕಿದ್ದಕ್ಕೆ
ನಂಜುಂಡಾರಾಧ್ಯನ ಬರಹ

ಸ್ವೀಕಾರ.

ಶ್ರೀ ವೀರಸಂಗಪ್ಪನವರ ಅಗ್ರತಾಂಬೂಲಸಂಭಾವನೆಯ ಬಗೆಗೆ ಈ ಕೆಳಗೆ ಕಂಡ ವಿವಾಹ ಮೊದಲಾದ ಶುಭಕಾರ್ಯಗಳಲ್ಲೂ ಇತರ ಸಂದರ್ಭಗಳಲ್ಲೂ ದೊರೆತ ಕಳುಹಲ್ಪಟ್ಟ ಮೊಬಲಗನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿದ್ದೇವೆ ಸಂ

(1) ಮೈಸೂರು ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿರುವ ಮ ಬೆಂಗಳೂರು ರುದ್ರಪ್ಪನವರ ಕುಮಾರ ಮ ಯಲ್ಲಪ್ಪನವರಿಗೂ ಬೆಂಗಳೂರು ಕಂಟೋನ್ಮೆಂಟ್ ಹಲಸೂರು ಮ ಚಿಕ್ಕಲಿಂಗಪ್ಪಶೆಟ್ಟರ ಪುತ್ರಿ ಚಿ ಸೌ|| ವಿಶಾಲಾಕ್ಷಮ್ಮನಿಗೂ ನಡೆದ ವಿವಾಹಮಹೋತ್ಸವದಲ್ಲಿ ವಧೂವರರ ಕಡೆಯಿಂದ ಮ ಬೆಂಗಳೂರು ಶಿವಪ್ಪನವರ ಮೂಲಕ 2 ರೂಪಾಯಿ (2) ಹಾಸನದ ತಾ ಕೆರಗೋಡುಗ್ರಾಮದ ಮ ಪುಟ್ಟಯ್ಯನವರ ಮನೆಯಲ್ಲಿ ನಡೆದ ವಿವಾಹಮಹೋತ್ಸವದಲ್ಲಿ ವಧೂವರರ ಕಡೆಯಿಂದ ಬೆಟ್ಟದಪುರದ ಮಠದಲ್ಲಿರುವ ಮ ವೀರಯ್ಯನವರ ಮೂಲಕ 2 ರೂಪಾಯಿ

ಪತ್ರವ್ಯವಹಾರ

(ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬುದನ್ನು ಸಗೌರವ ತಿಳಿಯತಕ್ಕದ್ದು ಸಂಪಾದಕ)

ವಿದ್ಯಾರ್ಥಿಗಳ ಸತ್ಕಾರ

ಮಹನೀಯರೇ! ಸಾಗರಬೆಟ್ಟದ ಸಾಹುಕಾರರುಗಳಾದ ಗೋಪುಸೋಮು ಚನ್ನಪ್ಪನವರೂ, ಕೋರಿ ಸಂಗಪ್ಪನವರೂ, ದಳವಾಯಿ ಬಸವಲಿಂಗಪ್ಪನವರೂ, ಉಡುಗಣಿ ಕೊಟ್ರಪ್ಪನವರೂ ಏಕೀಭವಿಸಿ ಈ ಸೆಂಟರಿಗೆ ಬಂದಿದ್ದ ಬ್ರಾಹ್ಮಣೇತರ ಪಂಗಡಗಳ ಎಲ್ಲಾ ವಿದ್ಯಾರ್ಥಿಗಳಿಗೂ ಪರೀಕ್ಷೆ ಪ್ರಾರಂಭವಾದ ದಿನದಿಂದ ಮುಗಿಯುವವರೆಗೂ ಪ್ರತಿನಿತ್ಯ ಬೆಳಿಗ್ಗೆ, ಊಟ, ತಿಂಡಿ, ವಾಸಾದಿಗಳಿಗೆ ಸರಿಯಾದ ಸೌಲಭ್ಯಗಳನ್ನೊದಗಿಸಿಕೊಟ್ಟು ಪುತ್ರವಾತ್ಸಲ್ಯದಿಂದ ನೋಡಿಕೊಳ್ಳುತ್ತಿದ್ದರೆಂದು ತಿಳಿಸಲು ಸಂತೋಷವಾಗುತ್ತದೆ ದಾನಗಳಲ್ಲೆಲ್ಲಾ ಶ್ರೇಷ್ಠವಾದ ಅನ್ನದಾನವನ್ನು ಮಾಡಿದ ಈ ಮಹನೀಯರಿಗೂ ಈ ಏರ್ಪಾಡನ್ನು ಮಾಡುವಂತೆ ಪ್ರೋತ್ಸಾಹಕೊಟ್ಟು ಕಾರ್ಯಕ್ರಮಗಳನ್ನು ಜರುಗಿಸಿದ ಈ ಸೆಂಟರ್ ಪರೀಕ್ಷಾ ಚೀಫ್ ಸೆಕ್ರೆಟರಿಯವರಿಗೂ ಶ್ರೀ ಭಗವಂತನು ಆಯುರಾರೋಗ್ಯಾದಿಗಳನ್ನು ಕೊಡಲೆಂದು ಪ್ರಾರ್ಥಿಸುವ
ಬಡವಿದ್ಯಾರ್ಥಿಗಳ ಹಿತಚಿಂತಕ ಜಿ ತೀರ್ಥಪ್ಪ

ನಂಜನಗೂಡು ತಾಲ್ಲೂಕು ಕಗಲೂರಿನಲ್ಲಿ ಇದೇ ವಿಭವನಾಮ ಸಂವತ್ಸರ ಫಾಲ್ಗುಣ ಬಹುಳ ತದಿಗೆ ಗುರುವಾರ (ತಾ 28-3 1929) ರಲ್ಲಿ ಕೊಳ್ಳೇಗಾಲದ ತಾಲ್ಲೂಕು ಮೊಡ್ಡ ಇಂದುವಾಡಿಯಲ್ಲಿರುವ ಕನಕಗಿರಿ ಮಠದ ಶ್ರೀ ನಂಜಪ್ಪನವರ ಮಕ್ಕಳು ಚಿ ಬಸವಲಿಂಗಪ್ಪನಿಗೂ ಚಾಮರಾಜನಗರದ ತಾಲ್ಲೂಕು ಉಡಿಗಾಲದ ಮ ಗುರುಪಾದಪ್ಪನವರ ಪುತ್ರಿ ಚಿ ಸೌ ಕಂ ಶೋಭಿತೆಯಾದ ಪುಟ್ಟಗೌರಮ್ಮನಿಗೂ ನಡೆದ ಪಾಣಿಗ್ರಹಣಮಹೋತ್ಸವದಲ್ಲಿ ನಂಜನಗೂಡು ಚೆಟ್ ಜಿ ಮಹದೇವಪ್ಪನವರು, ಶ್ರೀ ಯ ವೀರಸಂಗಪ್ಪನವರು ವೀರಶೈವರುತೋದ್ಧಾರವನ್ನು ಮಾಡಿ ವೀರಶೈವ ಬ್ರಾಹ್ಮಣರು ಎಂಬುದನ್ನು ಸ್ಥಾಪನೆಮಾಡಿದ ವಿಷಯವನ್ನು ತಿಳಿಸಿದ್ದ ಸಭಿಕರಿಗೆಲ್ಲ ತಿಳಿಯಪಡಿಸಿದನಂತರ ಅಗ್ರತಾಂಬೂಲದ ಸಂಭಾವನೆ ವರನಪರವಾಗಿ ಕೆಂಡಗಣ್ಣಸ್ವಾಮಿಗಳವರ ರುದ್ರಮುನಿಸ್ವಾಮಿಗಳವರಿಂದ 2 ರೂಪಾಯಿಗಳು ವಧುವಿನಪರವಾಗಿ ಮ ಗುರುಪಾದಪ್ಪನವರಿಂದ 1 ರೂಪಾಯಿ ಒಟ್ಟು 3 ರೂಪಾಯಿಗಳು ಚೆಟ್ ಜಿ ಮಹದೇವಪ್ಪನವರವಶಕ್ಕೆ ಕೊಡಲ್ಪಟ್ಟಿತು ಅನಂತರ ನೆರೆದಿದ್ದ ಸಭಿಕರಿಗೆ ಗಂಧಪುಷ್ಪ ಫಲಸಹಿತ ತಾಂಬೂಲ ನಡೆದು ನಿರಂಜನ ಮೂರ್ತಿಗಳ ಆಶೀರ್ವಾದಕ್ಕೆ ಪಾತ್ರರಾಗಿ ವಧೂವರರಿಗೆ ಆಶೀರ್ವದಿಸಿ ಸಭಾ ಮುಕ್ತಾಯಗೊಳಿಸಲ್ಪಟ್ಟಿತು ಸ್ಥಳನಿವಾಸಿ

[ಮೇಲ್ಕಂಡ 3 ರೂಪಾಯಿಗಳನ್ನು ಸ್ವೀಕರಿಸಿದೆ ಸಂ]

ವಂದನಾರ್ಪಣ

ಮೊಳಕಾಲ್ಮೂರು ತಾಲ್ಲೂಕಿನ ಅಮಲ್ದಾರರಾಗಿದ್ದ ಮ|| ಎಂ ಪುಟ್ಟಸ್ವಾಮಿ, ಬಿ.ಎ, ಯವರು ಶಾಶ್ವತವಾಗಿ ಛಿನ್ನ ಕೆಲಸಕ್ಕೆ ಅಂದರೆ ಮೊದಲಿನ ಕೋ-ಆಪರೇಟಿವ್ ಇನ್ಸ್‌ಪೆಕ್ಟರ ಕೆಲಸಕ್ಕೆ ಕಳುಹಲ್ಪಟ್ಟದ್ದು ಈಗ ಪುನಃ ಅಮಲ್ದಾರರಾಗಿ ನಿಯಮಿಸಲ್ಪಟ್ಟಿರುವರೆಂಬು ಕೇಳಿ ಈ ಊರಿನ ನಿವಾಸಿಗಳು ಬಹಳವಾಗಿ ಸಂತೋಷಪಟ್ಟು ಮ|| ಮಹೇಶಲರಾಮಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದು ಭಗವತ್ಪ್ರಾರ್ಥನಾನಂತರ ಸಂಗೀತಶ್ರವಣವಾಗಿ ಮ|| ಗಳಾದ ಎಂ ರಂಗಪ್ಪನವರು ಮತ್ತು ಬಿ. ಲಕ್ಷ್ಮಣನವರು ಅಮಲ್ದಾರ್ ಪುಟ್ಟಸ್ವಾಮಿಯವರ ಸ್ವಭಾವಾನುರಾಗ ಸರಳತೆ ನಿಷ್ಪಕ್ಷಪಾತತೆ ಮೊದಲಾಗ ಗುಣಕಥನವನ್ನು ಮಾಡಿದರು ಕಡೆಯಾಗಿ ಮ|| ಪುಟ್ಟಸ್ವಾಮಿಯವರಿಗೆ ಅವರ ಪೂರ್ವದ ಕೆಲಸವನ್ನು ಅಂದರೆ ಅಮಲ್ದಾರಿಯನ್ನು ಕೊಟ್ಟದಕ್ಕಾಗಿ ಘನಸರ್ಕಾರದವರಿಗೆ ಸಭಿಕರ ವಂದನೆಯನ್ನು ಅರ್ಪಿಸಬೇಕೆಂದೂ, ಮ|| ಪುಟ್ಟಸ್ವಾಮಿಯವರು ಮಧುಗಿರಿ ತಾಲ್ಲೂಕಿನಿಂದ ಈ ತಾಲ್ಲೂಕಿಗೆ ಶಾಶ್ವತ ವರ್ಗವಾಗಿ ಬರಲೆ[redacted]ಂಟ್ ಕವಾಲನರ ಪದವಿಗೇರುವಂತ ಅನ[redacted]ರ್ಥಿಸುವುದಾಗಿ

ವಿವಾಹವಾಗಿಂದ ಸಭೆಗೆ ಬಂದಿದ್ದ ... ಪುಟ್ಟಸ್ವಾಮಿಯವರು ಭೇಟಿಗಿರುವುದರಿಂದ ಈ ಸ್ವಭಾವದವರಾದುದರಿಂದ ಇವರ ಸ್ವಭಾವ ಪರೀಕ್ಷೆ ನಡೆಸುವವರನ್ನು ಹತ್ತಿರ ಸೇರಿಸದೆ ಬಹಳ ಜಾಗರೂಕರಾಗಿರುವರೆಂದು ಪರೀಕ್ಷಿಸಿದ ನಾವು, ಇವನ್ನು ಅನ್ಯಥಾ ಭಾವಿಸದೆ ಜಾರಿಸುವರೆಂದು ನಂಬುತ್ತೇನೆ ಶ್ರೀಮಾನ್ಯಭಾವ.

ಹುಣಸಿಘಟ್ಟದ ಗ್ರಾಮದಲ್ಲಿ ಜರುಗಿದ ವಿವಾಹಮಹೋತ್ಸವ

ತರೀಕೆರೆ ತಾ|| ಹುಣಸಿಘಟ್ಟ ಗ್ರಾಮದಲ್ಲಿ ಕಳೆದ ವಿಭವನಾಮ ಸಂವತ್ಸರದ ಫಾಲ್ಗುಣ ಬ|| ೨ ತಾ|| 27 3 1929 ನೇ ಬುಧವಾರ ಬೆಳಿಗ್ಗೆ ಶುಭಮುಹೂರ್ತದಲ್ಲಿ ಬೀರೂರಿನಲ್ಲಿರುವ ವೇ|| ಕೋಟಿ ಚಿಕ್ಕಯ್ಯದೇವರ ಮೊಮ್ಮಗ ವೀರಭದ್ರಯ್ಯನವರ ತೃತೀಯ ಕುಮಾರ ಚಿ|| ಸೋಮನಾಥಯ್ಯನೆಂಬ ವರನಿಗೂ, ಹುಣಸಿಘಟ್ಟದ ಮಠದ ವೇ|| ಶಂಕರಯ್ಯನವರ ಮಕ್ಕಳು ಮುರುಳಯ್ಯನವರ ಪುತ್ರಿ ಚಿ|| ಸೌ|| ನಂಜಮ್ಮನೆಂಬ ಕನ್ಯೆಗೂ ಪಾಣಿಗ್ರಹಣ ಮಹೋತ್ಸವವು ವಿಧ್ಯುಕ್ತವಾಗಿ ವಿಜೃಂಭಣೆಯಿಂದ ನೆರವೇರಿತು ಈ ಮಹೋತ್ಸವಕ್ಕೆ ಆಗಮಿಸಿದ್ದ ಬಂಧುಬಾಂಧವರು ಇಷ್ಟಮಿತ್ರರುಗಳಿಗೆ ಫಲಾಹಾರ ಮತ್ತು ಭೋಜನದ ಏರ್ಪಾಡು ವೇ|| ಎಂ ಪಿ. ಮುರುಳಸಿದ್ಧಯ್ಯನವರಿಂದ ಚೆನ್ನಾಗಿ ಏರ್ಪಡಿಸಲ್ಪಟ್ಟಿತ್ತು ಈ ಶುಭ ಸಮಯದಲ್ಲಿ ವರನ ಪರವಾಗಿ ವೇ ಎಂ ಪಿ ಮುರುಳಸಿದ್ಧಯ್ಯನವರಿಂದ ಬೆಂಗಳೂರು ವೀರಶೈವ ವಿದ್ಯಾಭಿವೃದ್ಧಿ ಫಂಡಿಗಾಗಿ 5 ರೂ ಶ್ರೀ|| ವೀರಸಂಗಪ್ಪನವರ ಅಗ್ರತಾಂಬೂಲಕ್ಕಾಗಿ 2 ರೂ, ವಧುವಿನ ಪರವಾಗಿ ವೇ ಶಂಕರಯ್ಯನವರ ಮಕ್ಕಳು ರುದ್ರಯ್ಯನವರಿಂದ ಮೈಸೂರ್ ಸ್ಟಾರ್ ಪತ್ರಿಕಾ ಪೋಷಣಕ್ಕಾಗಿ 2 ರೂ ಬೆಂಗಳೂರು ವೀರಶೈವ ವಿದ್ಯಾಭಿವೃದ್ಧಿ ಫಂಡಿಗಾಗಿ 2 ರೂ, ಶ್ರೀ ವೀರಸಂಗಪ್ಪನವರ ಅಗ್ರತಾಂಬೂಲಕ್ಕಾಗಿ 1 ರೂ ತೆಗೆಯಲ್ಪಟ್ಟು ವೇ|| ಶಿವಮೊಗ್ಗ ಟಿ ಎನ್ ಆರ್ ಆರಾಧ್ಯರ ವಶಕ್ಕೆ ಕೊಡಲ್ಪಟ್ಟು ಈ ಶುಭಕಾರ್ಯವು ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಸ್ಮರಣಪೂರ್ವಕವಾಗಿ ಸಾಂಗಗೊಳಿಸಲ್ಪಟ್ಟಿತು *ಈ ನೂತನ ವಧೂವರರಿಗೆ ಶ್ರೀ ಸದಾಶಿವನು ಇಷ್ಟೋಪ್ಯತಿಶ*ಯವಾದ ಮಂಗಳವನ್ನುಂಟುಮಾಡಲಿ ಮತಸೇವೆಯನ್ನು ಬಹುಕಾಲದಿಂದ ಮಾಡುತ್ತಿರುವ ಸ್ಟಾರ್ ಪತ್ರಿಕಾ ಪೋಷಣಕ್ಕಾಗಿ ಈ ಮೇಲ್ಕಂಡ ಮಹನೀಯರಂತೆ ಸರ್ವ ವೀರಶೈವರೂ ಸಹಾಯಮಾಡಬೇಕಾಗಿ ವಿನಯದಿಂದ ಕೋರುವ,
ಉತ್ಸವಭಾಗಿ.

ಹಿಂದೀಪ್ರಚಾರಸಭೆ ಮೊಳಕಾಲ್ಮೂರು

ಮದ್ರಾಸಿನ ದಕ್ಷಿಣಭಾರತ ಹಿಂದೀಸಭೆಯ ಪರೀಕ್ಷೆಗಳಲ್ಲಿ ಕೇಗಾಡ ಹೊಂದಿದವರಿಗೆ ಯೋಗ್ಯತಾಪತ್ರಗಳನ್ನು ಹಂಚುವ ಸಮಾರಂಭವು ಮೊಳಕಾಲ್ಮೂರು ಮಾಧ್ಯಮಿಕ ಶಾಲೆಯ ವಿಶಾಲಭವನದಲ್ಲಿ ಜಿಲ್ಲಾ ವಿದ್ಯಾಧಿಕಾರಿಗಳಾದ ರಾ ರಾ ಅನಂತಸುಬ್ಬರಾವ್ ಬಿ ಎ, ಎಲ್ ಟಿ, ಯವರ ಅಧ್ಯಕ್ಷತೆಯಲ್ಲಿ ತಾ|| 11-3-29 ನೇ ಸಾಯಂಕಾಲ ಏರ್ಪಟ್ಟಿತ್ತು ಭರತ ಖಂಡದಲ್ಲಿ ಏಕಭಾಷೆಯ ಪ್ರಯೋಜನವನ್ನು ಕುರಿತು ಜಿಲ್ಲಾ ಸಭೆಯ (District Board) ಸದಸ್ಯರಾದ ಮ ರಾ|| ನಾರಾಯಣರಾಯರು ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿ ಕೊನೆಯಲ್ಲಿ ಹಿಂದೀ ಪ್ರಚಾರಕರನ್ನು ವಂದಿಸಿದರು ರಾಷ್ಟ್ರಭಾಷೆಯ ಮಹತ್ವದ ವಿಷಯದಲ್ಲಿ ಮ ರಾ ರಂಗಸ್ವಾಮಯ್ಯಂಗಾರ್‌ರವರು ಹಿಂದೀಪತ್ರಿಕೆಗಳಿಂದ ಮುಖ್ಯಭಾಗಗಳನ್ನೋದಿದರು ಅನಂತರ ಹಿಂದೀ ಪ್ರಚಾರಕರಾದ ಶ್ರೀ|| ಟಿ ಕೆ ಕೇಶವರಾಯರು ದಕ್ಷಿಣ ಹಿಂದೂಸ್ಥಾನದಲ್ಲಿ ರಾಷ್ಟ್ರಭಾಷೆಯ ಆಂದೋಳನದ ಸಂಕ್ಷಿಪ್ತ ಚರಿತ್ರೆಯನ್ನೂ, ಶ್ರೇಷ್ಠ ಸಾಹಿತ್ಯ ಸಂಸ್ಕೃತಿಗಳಿಂದ ಕೂಡಿದ ಹಿಂದೀಭಾಷೆಯನ್ನು ಕಲಿಯುವುದರಿಂದಾಗುವ ಪ್ರಯೋಜನಗಳನ್ನೂ ತಿಳಿಸಿದರು ಅನಂತರ, ಅಧ್ಯಕ್ಷರು ಭಿನ್ನ ಭಿನ್ನ ಜಾತಿಗಳಿಂದ ಕೂಡಿರುವ ಹಿಂದೂಸ್ಥಾನದಲ್ಲಿ ಏಕ ಭಾಷಾಪ್ರಚಾರದಿಂದ ಐಕಮತ್ಯವು ಹೇಗೆ ಸಾಧಿಸಬಹುದೆಂಬುವನ್ನೂ ಪ್ರಪಂಚದಲ್ಲಿ ಅಭಿವೃದ್ಧಿಗೆ ಬಂದಿರುವ ಯಾವ ದೇಶವೂ ಏಕಭಾಷಾಪ್ರಚಾರವಿಲ್ಲದೆ ಬಂದಿಲ್ಲವೆಂಬ ವಿಷಯವನ್ನೂ ಒಂದೇ ಭಾಷೆಯು ಸರ್ಕಾರದಲ್ಲಿಯೂ, ಜನಗಳಲ್ಲಿಯೂ ಬಳಕೆಯಲ್ಲಿರುವುದಾದರೆ ಬಹಳ ಅನುಕೂಲವಾಗುವುದೆಂಬುದನ್ನೂ, ಹಿಂದೂಸ್ಥಾನದ 23 ಕೋಟಿ ಜನಗಳಿಗೆ ತಿಳಿಯುವ ಈ ಹಿಂದೀಭಾಷೆಯನ್ನು ಸಕಲರೂ ಅಭ್ಯಸಿಸಬೇಕಾದ ಅವಶ್ಯವೆಂಬುದನ್ನೂ ಕುರಿತು ಎಲ್ಲಾ ಜನಗಳ ಮನಸ್ಸಿನಲ್ಲಿ ನಾಟುವ ರೀತಿಯಲ್ಲಿ ಉಪನ್ಯಸಿಸಿ ಕೇಗಾಡ ಹೊಂದಿದವರಿಗೆ ಯೋಗ್ಯತಾ ಪತ್ರಗಳನ್ನು ಸ್ವಹಸ್ತದಿಂದ ದಯಪಾಲಿಸಿದರು ತಾಂಬೂಲ ಮತ್ತು ಸಕ್ಕರೆಯು ಹಂಚಲ್ಪಟ್ಟಮೇಲೆ ಸಭೆಯು ವಿಸರ್ಜಿಸಲ್ಪಟ್ಟಿತು

ಪರಮೇಶ್ವರ ಗಾಯಕವಾಡ್, ಹಿಂದೀ ವಿದ್ಯಾರ್ಥಿ

ಪಟೇಲರುಗಳ ಅವ್ಯವಸ್ಥೆ

ಮೈಸೂರ್ ಘನ ಸರ್ಕಾರದವರು ದಯಪಾಲಿಸಿರುವ ಸಮಸ್ತ ಶಾಖೆಗಳವರಂತೆ ಆಯಾ ಆಫೀಸರುಗಳು ಕಾರ್ಯಕ್ರಮಗಳನ್ನು ನಡೆಯಿಸುತ್ತಾ ಬರುವುದನ್ನು ವಿಧಾಯಕವಾಗಿರುವ ಅದೇ ಕಾನೂನುಗಳನ್ನು ಅನುಸರಿಸಲು ಪಟೇಲರುಗಳಿಗೆ ಮಾತ್ರ ಅವಕಾಶಕೊಡದೆ ಇರುವುದನ್ನು ನೋಡಿದರೆ ಪಟೇಲರುಗಳನ್ನು ಸರ್ಕಾರದವರು ಭಾವನಾ ಪ್ರತಿಮೆಗಳಂತೆ ಏರ್ಪಡಿಸಿರುವುದಾಗಿ ಕಾಣಬರುತ್ತೆ ಪಟೇಲರುಗಳಿಗೆ ಉಂಟಾಗಿರತಕ್ಕ ಅನೇಕ ನ್ಯೂನತೆಗಳ ವಿಚಾರದಲ್ಲಿ ಈ ಹಿಂದೆ ಚನ್ನಪಟ್ಟಣದಲ್ಲಿ ಲೇಟ್ ಶ್ರೀಯುತ ಕಬ್ಬಳ್ಳಿ ಚನ್ನಬಸಪ್ಪನವರು ನಡೆಯಿಸಿದ ಮೀಟಿಂಗೇ ಕೊನೆಯದಾಗಿ ಪರಿಣಮಿಸಿ ಈ ವರೆಗೂ ಯಾವ ಮಹನೀಯರುಗಳೇ ಆಗಲಿ ಉತ್ತೇಜನಕೊಟ್ಟು ಸಾರ್ವಜನಿಕ ಮೀಟಿಂಗನ್ನು ನಡೆಯಿಸುವುದಕ್ಕೆ ಏರ್ಪಾಡು ಮಾಡದೇ ಇರುವುದು ಬಹಳ ಶೋಚನೀಯವಾಗಿದೆ ಸಂಸ್ಥಾನದ ಜ್ಯಾನುಭೋಗರ ಕಾನ್ಫರೆನ್ಸು ಸಾರ್ವದಾ ನಡೆಯುತ್ತಲೇ ಇರುವುದು ತಮ್ಮೆಲ್ಲರಿಗೆಲ್ಲಾ ವಿದಿತವಾಗಿಯೇ ಇರಬಹುದು ನಮಗೆ ಯಾಕೆ ಕಾನ್ಫರೆನ್ಸು, ಅವರೇ ಮುಂದುವರಿಯಲಿ ನಾವು ಹಿಂದೆಯೇ ಇರೋಣ ಎಂಬ ಉದಾಸೀನವನ್ನು ವಹಿಸಿಕೊಂಡಿರುವ ಪಟೇಲರುಗಳೇ ದಯಮಾಡಿ ಕಣ್ಣುಗಳನ್ನು ತೆರೆದು ಅವ್ಯವಸ್ಥೆಗಳನ್ನು ನೋಡಿರಿ, ಆಲಸ್ಯತೆಯುತ್ತಾ ಕೂತಲ್ಲಿ ಖಂಡಿತ ಮುಂದಕ್ಕೆ ಮುಂದುವರಿಯಲಾರಿರಿ.

ಸಂಸ್ಥಾನದಲ್ಲಿ ಬಹಳ ಹಿಂದುಳಿದಿರುವ ಕಡೂರು ಡಿಸ್ಟ್ರಿಕ್ಟಿನಲ್ಲಿ ಸಮ್ಮೇಳನ ಕಡೂರಿನಲ್ಲಿ ತಾಲ್ಲೂಕು ಕಾನ್ಫರೆನ್ಸು ಮಾಡುವುದಕ್ಕೆ ಪ್ರಯತ್ನಪಡಿರಿ ಸಮಸ್ತ ಪಟೇಲರುಗಳೇ ಅನಾವಶ್ಯಕವಾಗಿ ವ್ಯಯ ಮಾಡುತ್ತಿರುವ ಕಾಲವನ್ನು ದೇಶಸೇವೆಯಲ್ಲಿ ಉಪಯೋಗಿಸಿ ಶ್ರೇಯಸ್ಸನ್ನು ಪಡೆಯಿರಿ ಸ್ವಲ್ಪ ಕಾಲದಲ್ಲಿಯೇ ಪಟೇಲರುಗಳ ತಾಲ್ಲೂಕು ಕಾನ್ಫರೆನ್ಸನ್ನು ಮಾಡುವುದಕ್ಕೆ ತಕ್ಕ ಪ್ರಯತ್ನಗಳನ್ನು ನಡೆಯಿಸುತ್ತಾ ಇರುವುದಾಗಿ ವರ್ತಮಾನಕೇಳುತ್ತೇನೆ. ಆ ವಿಧವಾದ ಉತ್ಸಾಹದಿಂದ ಕಾನ್ಫರೆನ್ಸು ಮಾಡತಕ್ಕ ಬಗ್ಗೆ ಏರ್ಪಾಡು ಮಾಡುವ ಮಹಾಶಯರುಗಳಿಗೆ ತಕ್ಕ ಸೌಕರ್ಯಗಳನ್ನು ಸಮಸ್ತ ಪಟೇಲರುಗಳೂ ಒದಗಿಸಿಕೊಟ್ಟು ತಮಗೆ ಉಂಟಾಗಿರತಕ್ಕ ತೊಂದರೆಗಳನ್ನು ... ಬಗ್ಗೆ ಈ ಮೂಲಕ ತಮ್ಮಗಳನ್ನು ಅನನ್ಯಭಾವ[redacted]ಗಳ ಹಿತಚಿಂತಕ.

೧೧ ನೆಯ ಅಖಿಲಭಾರತವೀರಶೈವ ಮಹಾಸಭೆ

ತತ್ಸಂಭವರಾದ ಇದುವರೆಗೆ ನಮ್ಮ ಸಿಕಾಂದರದಲ್ಲಿ ಒಟ್ಟು ೧೦ ಅಖಿಲಭಾರತವೀರಶೈವ ಮಹಾಸಭೆಗಳು ನೆರವೇರಿದ್ದು ಸಂಘಟಿತ ಶಕ್ತಿಯ ದೃಷ್ಟಿ ಈ ಸಭೆಗಳು ನಿರವೇರಿದ ಕಾಲಕಾಲದಲ್ಲಿಯೇ ಜಾಗೃತಿ ಸಮಾಜೋದ್ಧಾರಕ್ಕೆ, ವಿದ್ಯಾಪ್ರಸಾರ, ಕಲಾಕೌಶಲ್ಯಗಳ ಉನ್ನತಿ ಮುಂತಾದವುಗಳು ಆಗಿದ್ದು ಅಂದಬಳಿಕ ಈ ಸಭೆಯನ್ನು ಯಾವಾಗಲೂ ಆತಂಕವಿಲ್ಲದೆ ಪ್ರತಿವರ್ಷ ನೆರವೇರಿಸತಕ್ಕದ್ದು ವೀರಶೈವರ ಕರ್ತವ್ಯವು. ಈ ಸಭೆಯಿಂದಲೇ ನಮ್ಮ ಜನರಿಗೆ ಇಷ್ಟರ ಮಟ್ಟಿಗಾದರೂ ಜಾಗೃತಿ ಪ್ರಾಪ್ತವಾಗಿವೆ ಮತ್ತು ಇಂಥ ಸಭೆಗಳು ಕೂಡುವದರಿಂದ ಯಾವತ್ತು ಭಾಗಗಳಲ್ಲಿಯ ನಮ್ಮ ಮತದ ಸತ್ಪುರುಷರ ಮತ್ತು ಮಹಾ ಪಂಡಿತರ ದರ್ಶನವು ಆಗುವದು. ಮಹಾತ್ಮರ ದರ್ಶನದಿಂದ ನವ ಪ್ರೇರಕ ಆಚಾರಗಳು ದೊರೆಯಾಗುವದಲ್ಲದೆ ನಮ್ಮ ನೀಚಗುಣಗಳು ಸಹ ಹೊರಟು ಮುಕ್ತರಾಗುವೆವು. ಈ ಪ್ರಕಾರ ಮುಕ್ತರನ್ನಾಗಿ ಮಾಡತಕ್ಕ ಅಖಿಲಭಾರತ ವೀರಶೈವ ಮಹಾಸಭೆಯು ಸ ೧೦ ವರ್ಷಗಳತನಕ ನಿಂತುಹೋಗಿತ್ತು. ಇದಕ್ಕೆ ವೀರಶೈವರ ಅನೈಕಮತ್ಯವೇ ಮುಖ್ಯ ಕಾರಣವು. ಈ ಪ್ರಕಾರ ನಮ್ಮ ಸಮಾಜದಲ್ಲಿ ಅನೈಕಮತ್ಯವು ಹುಟ್ಟಿ ಸಭೆಗಳು ನಿಂತುಹೋಗಿರುವದು ಗುರುವರ್ಗ ಮತ್ತು ವಿರಕ್ತವರ್ಗದವರಿಂದಲ್ಲವೆ? ಈ ಪ್ರಕಾರ ಅನೈಕಮತ್ಯವು ಬೆಳೆಸತಕ್ಕ ಮಹಾಪುರುಷರನ್ನು ಹೊಂದಿಟ್ಟ ಬೆಂಗಳೂರಿನ ವೀರಶೈವಸ್ವಾಮಿಗಳ ಏಕೀಭಾವದಿಂದ ೧೦ ನೆಯ ಅಖಿಲಭಾರತವೀರಶೈವ ಮಹಾಸಭೆಯನ್ನು ನೆರವೇರಿಸಿದರು. ಆಗ್ಗೆ ಸಮಸ್ತ ವೀರಶೈವರ ಬಾಂಧವರಿಗೆ ಇನ್ನು ಮುಂದೆ ಆತಂಕವಿಲ್ಲದೆ ಈ ಸಭೆಯು ನೆರವೇರುವದೆಂದೆನಿಸಿತು. ಅಂದರೆ ನಮ್ಮ ಸಮಾಜದ ದುರ್ದೈವದ ಬಗ್ಗೆ ಏನು ಹೇಳಬೇಕಾದರೂ ತೀರದು. ಕಳೆದ ಡಿಸೆಂಬರ್ ತಿಂಗಳಲ್ಲಿ ಬರಬೇಕಾದ ೧೧ ನೆಯ ಸಭೆಯು ನೆರೆಯಲಿಲ್ಲ. ಹೀಗೆ ನಮ್ಮ ಸಮಾಜದ ದುರ್ದೈವವೆಂದು ಬಿಟ್ಟಿದ್ದಾಗಲೆ ಸಭೆಯು ನೆರವೇರದೆ ನಿಂತುಹೋಗುವದಕ್ಕೆ ಏನೂ ಸಂದೇಹವಿಲ್ಲವೆಂದು ತಿಳಿದು ಈಗ ನಮ್ಮ ಸ್ವಜಾಂದೇಶಕ್ಕೆ ಒಳಪಟ್ಟ ರಾಯಚೂರು ವೀರಶೈವಪ್ರಮುಖರು ತಂತಮ್ಮ ಅನೈಕಮತ ದರೆಡೆ ಲಕ್ಷ್ಯಕೊಡದೆ ಸಮಸ್ತರೂ ಏಕೀಭವಿಸಿ ಇದೇ ವರ್ಷ ಡಿಸೆಂಬರ್ ತಿಂಗಳಲ್ಲಿ ೧೧ ನೆಯ ಅಖಿಲಭಾರತವೀರಶೈವ ಮಹಾಸಭೆಯನ್ನು ನೆರವೇರಿಸಲು ಒಪ್ಪಿಗೊಂಡಿದ್ದಾರೆ. ಈ ಸಭೆಯು ನೆರವೇರಿಸುವದಕ್ಕೋಸ್ಕರ ಸಕಲರೂ ಒಟ್ಟಾಗಿ ಕಾರ್ಯಗಳನ್ನು ಮಾಡುವವರಾಗಿ ಮುನ್ಸೂಚಿಸಲೆಂದು ನಾನು ಆ ಸಚ್ಚಿದಾನಂದ ಮೂರ್ತಿಯನ್ನು ಅನನ್ಯಭಾವದಿಂದ ಪ್ರಾರ್ಥಿಸುತ್ತೇನೆ.

ಕೆ. ವಿರೂಪಾಕ್ಷಗೌಡ ವಕೀಲ,
ರಾಯಚೂರು.

ದೇವರಸೇವೆಮಾಡಲಿಕ್ಕೂ ಪಕ್ಷಪಾತವೇ?

ಯುಗಟಿಪುರದ ಶ್ರೀ ಪ್ರಸನ್ನವಿರೂಪಾಕ್ಷ(?)ಸ್ವಾಮಿಯವರ ಭಕ್ತನಾದ ಈ ಕೆಳಗೆ ಸಹಿಮಾಡಿರುವ ನಾನು ಮಹಾಜನರ ಸಮಕ್ಷಮ ಅರಿಕೆ ಮಾಡಿಕೊಳ್ಳುವದೇನೆಂದರೆ—ನಾನು ಮತ್ತು ನನ್ನ ವಂಶೀಯರು ಯಾವಾಗಲೂ ಶ್ರೀ ಸ್ವಾಮಿಯವರ ರಥೋತ್ಸವದ ದಿವಸ ಮಹಾಸ್ವಾಮಿ ಪೂಜೆ ಮತ್ತು ರಥಾರೋಹಣ ವಗೈರೆ ಕೆಲಸ ಕಾರ್ಯಗಳಲ್ಲಿ ಉಪವಾಸವೇ ಮೊದಲಾದ ನಿಯಮ ವ್ರತಗಳಿಂದ ಸೇವೆಮಾಡಿ ಪ್ರಸಾದ ಸ್ವೀಕರಿಸುವ ಪದ್ಧತಿಯುಂಟು. ೧೯೧೮ ನೇ ಸಾಲಿನವರೆಗೂ ನಮ್ಮಗಳ ಸೇವೆಯು ಯಾವ ಆತಂಕವಿಲ್ಲದೆ ನಿರ್ವಿಘ್ನವಾಗಿ ನಡಿಯುತ್ತ ಬಂದಿತು. ಈಚೆಗೆ ಈ ಸ್ಥಳವಂದಿಗರಾದ ಗುಲ್ಲುಗಾರರ ಚಳವಳಿಯಿಂದ ವೀರಶೈವ ಸ್ವಾಮಿಗಳಮೇಲೆ ಸ್ಥಳೀಯ ಅಧಿಕಾರಿಗಳ ಸಹಾಯದಿಂದ ಕೆಲವು ವ್ಯಾಜ್ಯ ತೆಗೆದರು. ಇದು ಆ ಲಿಂಗಾಯತ ಇತ್ಯರ್ಥವಾಗದೆ ಮಹದ್‌ಬೂಬ್ ಮೊದಲಾದ ತಗಾದೆ ನಾಡೇ ಬರವರ ಕೋರ್ಟಿನಲ್ಲಿ ವಿವಾದ ನಡಿಯುತ್ತ ಇದೆ. ಆ ಲಿಂಗಾಯತ ನಮ್ಮಗಳ ಸೇವೆಗೆ ಭಂಗಬಂದ ಕಾರಣದಿಂದ ನಾವುಗಳು ನಾನಾ ವಿಧವಾದ ಕಷ್ಟಗಳನ್ನು ಅನುಭವಿಸಿ ಈಗ ಸುಮಾರು ಆರು ತಿಂಗಳಿಂದ ನಾಯಿಯಿಂದ ಕೆಲ ಅಸಾಧ್ಯವಾದ ರೋಗಗಳು ವ್ಯಾಪ್ತವಾಗಿ ಪ್ರಾಣಾಪಾಯ ಪ್ರಸಂಗ ಉಂಟಾಗಲು, ನಾವುಗಳು ವಿಶೇಷ ಗಾಬರಿಯಾಗಿ ಶ್ರೀ ಸ್ವಾಮಿಯವರ ಮೊರೆಹೊಕ್ಕು ಅಪ್ಪಣೆ ಕೇಳಿದ್ದರಲ್ಲಿ ನಮ್ಮಿಂದ ತೆಗೆದುಕೊಳ್ಳುತ್ತ ಬಂದಿದ್ದ ಸೇವೆಯನ್ನು ನೀವು ಮಾಡದೆ ಬಿಟ್ಟಿರುವದರಿಂದ ಈ ತೊಂದರೆಗಳು ಬಂದಿರುವದಾಗಿಯೂ ಯಥಾರೀತಿ ಪದ್ಧತಿಮೇರೆಗೆ ನನ್ನ ಸೇವೆ ನಡೆಸಿಕೊಂಡು ಬಂದಲ್ಲಿ ತೊಂದರೆಪರಿಹಾರವಾಗುವದಾಗಿಯೂ ಅಪ್ಪಣೆಯಾದ್ದರಿಂದ ಈ ಸಾಲಿನ ರಥೋತ್ಸವಕಾಲದಲ್ಲಿ ರಥೋತ್ಸವ ನಡಿಸಲ್ಪಡುವ ಮುಜರಾಯಿ ಅಧಿಕಾರಿಯವರಲ್ಲಿ ತಾ|| ೨೨-೪-೧೯೨೯ ರಲ್ಲಿ ಅರ್ಜಿ ಕೊಟ್ಟು ನನ್ನ ಸೇವೆಗೆ ಅವಕಾಶಕೊಡಿಸಬೇಕೆಂದು ಅನೇಕ ವಿಧವಾಗಿ ಅರಿಕೆ ಮಾಡಿಕೊಂಡಾಗ್ಯೂ ನನ್ನ ಅಹವಾಲನ್ನು ಗಮನಕ್ಕೆ ತಾರದೆ ಸ್ವಾರ್ಥದ ತಂತ್ರಗಾರರಿಗೆ ಅಂತರಂಗದಲ್ಲಿ ಸಲಹೆಕೊಟ್ಟು ಈಗ ಆಗ ಎಂಬ ಕಾಲಹರಣಮಾಡಿ ನನ್ನ ಅರ್ಜಿಗೆ ಇದುವರೆಗೂ ಯಾವ ಉತ್ತರವನ್ನೂ ಕೊಡದೆ ಮೂ|| ತಾ|| ೨೩ ರಲ್ಲಿ ರಥೋತ್ಸವ ನಡೆಯುವ ಸ್ಥಳವಾದ ಪೂರ್ವ ಸಿದ್ಧತಾ ಬಾಧೆಯೂ ನಮ್ಮಗಳ ಸೇವೆಗೆ ವಿಘ್ನವನ್ನು ಆಚರಿಸಿದ್ದಲ್ಲದೆ ನಾನು ಇದಕ್ಕಾಗಿ ಸಿದ್ಧಪಡಿಸಿಕೊಂಡಿದ್ದ ಸಂಸ್ಥಾನ ಸುಮಾರು ೧೧ ರೂಪಾಯಿಗಳವರೆಗೂ ನಷ್ಟವಾಗುವಂತೆ ಮಾಡಿ ಗೌ|| ರಥೋತ್ಸವವಾಗಲೂ ಗೌರ್ನ್‌ಮೆಂಟ್ ಆರ್ಡರ್ ಪ್ರಕಾರ ನಡಿಯದೆ ಹವಾಲೆಯು ಕೋರಿಯುವಂತೆ ಬಾಹ್ಯ ಜನರಿಂದ ನಡಿಸಿದ್ದಾಗಿರುತ್ತೆ. ಈ ಉತ್ಸವದಲ್ಲಿ ತಾಲ್ಲೂಕು ಪೋಲೀಸ್ ಇನ್ಸ್‌ಪೆಕ್ಟರವರು, ರೇಂಜ್ ಸಬ್ ಇನ್ಸ್‌ಪೆಕ್ಟರವರು ವಗೈರೆ ರಿಜರ್ವ್ ಸಬ್ ಇನ್ಸ್‌ಪೆಕ್ಟರವರು ಭಾಗಿಗಳಾಗಿದ್ದರು. ಹೀಗೆ ಎಲ್ಲಾ ಜಾತಿ ಜನರೂ ಸೇರಿ ರಥೋತ್ಸವ ನಡೆಸುವಲ್ಲಿ ಒಂದೇ ಪಂಗಡದ ೩೦ ಜನರು ಸೇರಿ ರಥೋತ್ಸವ ನಡೆಸುತ್ತೇವೆಂದು ಬಿನ್ನೈಸುವ ಕೆಲವರ ಪ್ರಾರ್ಥನೆಯನ್ನು ಸರ್ಕಾರದವರು ನಂಬಿ ಅವರಿಗೆ ಅವಕಾಶವನ್ನು ಕೊಡುತ್ತಾಬಂದಿರುವದು ಸ್ಥಳೀಯ ಅಧಿಕಾರಿಗಳ ಪಕ್ಷಪಾತವಲ್ಲವೆ? ಈ ಸ್ವಲ್ಪ ಜನರೇ ರಥೋತ್ಸವ ಮಾಡುತ್ತೇವೆಂದು ಹೇಳುವದು ಸಾಧ್ಯವೇ? ಇದು ನ್ಯಾಯ ಶರಣ ವ್ಯಾಜ್ಯವಲ್ಲವೆ? ಇದು ಬಹುಜನರ ಉತ್ಸಾಹ ಭಂಗವಲ್ಲವೆ? ಇವರು ಗೌರ್ನ್‌ಮೆಂಟ್ ಆರ್ಡರು ಪ್ರಕಾರ ನಡೆಸಿದಂತಾಯಿತೆ? ಹೀಗೆಲ್ಲಾ ಇದ್ದು ವೀರಶೈವ ಮತಸ್ಥನಾದ ನಾನು ಅರ್ಜಿ ಕೊಟ್ಟು ಕೇಳಿಕೊಂಡಾಗ್ಯೂ ನನಗೆ ಅವಕಾಶ ಕೊಡದೆ ಇದ್ದುದನ್ನು ನೋಡಿದರೆ ವೀರಶೈವರಲ್ಲಿ ಇರುವ ಅಸೂಯೆಯನ್ನು ವ್ಯಕ್ತಪಡಿಸುತ್ತದೆ. ಹಿಂದೂಗಳೆಲ್ಲರೂ ಒಂದೇ ಎಂಬ ಬಾಯಿಮಾತ್ರದಲ್ಲಿ ಹೇಳುತ್ತ ಅಂತರಂಗದಲ್ಲಿ ಶತ್ರುಗಳಾಗಿರುವ ಇವರಲ್ಲಿ ಪ್ರೀತಿ ವಿಶ್ವಾಸ ಸಂಬಂಧಗಳೆಂತು ಉಂಟಾಗಬೇಕು? ವಾಚಕರೇ ಯೋಚಿಸಿ. ಇದೇ ರೀತಿಯಾಗಿ ಈ ಮೈಸೂರು ಅನೇಕ ಕಡೆಗಳಲ್ಲಿ ಸನಾತನಧರ್ಮದ ತೊಂದರೆಗಳನ್ನು ಬಿಟ್ಟು ವೈಷಮ್ಯದಲ್ಲಿ ನಿಷ್ಪಕ್ಷಪಾತದಿಂದ ನಡಿಯುತ್ತ ಬಂದಲ್ಲಿ ನಮ್ಮ ಹಿಂದೂ ಸಮಾಜಕ್ಕೆ ಸೇರಿದವರ ಐಕ್ಯವೂ ಆಗುವುದರಲ್ಲಿ ಯಾವ ಸಂದೇಹವೂ ಇರುವುದಿಲ್ಲ. ಸರ್ಕಾರದವರು ಇನ್ನಾದರೂ ದಿವಸಗಳ ಪರಿಗೆ ಈ ತಂತ್ರಗಾರರ ಮಾಯಾಜಾಲವನ್ನು ತಿಳಿದುಕೊಂಡು ಎಲ್ಲಾ ಪ್ರಜೆಗಳ ಹಿತಬಂಧನ ಕಡೆಗೆ ಗಮನಾಯು ಮಾಡುವರೋ ನೋಡ[illegible]

ಶ್ರೀ ಸ್ವಾಮಿಭಕ್ತ,
ಸಿ. ಮಠ ಯುಗಟಿ.

ವಿದ್ಯಾರ್ಥಿಗಳ ಮುಷ್ಕರ ಸಮಿತಿಯ ವರದಿ.

ಮುಷ್ಕರಗಳಿಗೆ ಕಾರಣಗಳು.

ತಪ್ಪಿತಸ್ಥ ಪಂಡಿತ ಎಲ್ಲಾ ವಿದ್ಯಾರ್ಥಿಗಳು

ಬೆಂಗಳೂರಿನ ೬ ಶಾಲೆಗಳ ಹೈಸ್ಕೂಲುಗಳ ವಿದ್ಯಾರ್ಥಿಗಳ ಮುಷ್ಕರವು ನಡೆದ ಸಂದರ್ಭದಿಂದ ಸರ್ಕಾರದವರ ನೇಮಿಸಿದ್ದ ಸಮಿತಿಯವರು ತಮ್ಮ ವರದಿಯನ್ನು ಸರ್ಕಾರಕ್ಕೆ ಕಳುಹಿಸಿರುವರು.

ವರದಿಯನ್ನು ಸರ್ಕಾರದವರು ಮಾರ್ಚಿ ೨೯ನೇ ತಾರೀಖಿನ ಮೈಸೂರು ಗೆಜೆಟ್ಟಿನಲ್ಲಿ ಪ್ರಕಟಿಸಿದ್ದಲ್ಲದೆ ೧೯೨೯ನೇ ಮೇ ಅಂತ್ಯದೊಳಗಾಗಿ ಸಾರ್ವಜನಿಕರು ವರದಿಯ ಮೇಲಿನ ತಮ್ಮ ಅಭಿಪ್ರಾಯಗಳನ್ನು ಎಜುಕೇಷನ್ ಡಿಪಾರ್ಟ್‌ಮೆಂಟ್ ಸೆಕ್ರೆಟರಿಯವರಿಗೆ ಬರೆದು ತಿಳಿಸಬೇಕಾಗಿ ಕೋರಿರುವರು. ವರದಿಯ ಮುಖ್ಯಾಂಶಗಳನ್ನು ಇಲ್ಲಿ ಪ್ರಕಟಿಸಿದೆ.

ಬೆಂಗಳೂರು ಸಿಟಿ ಹೈಸ್ಕೂಲ್, ಬೆಂಗಳೂರು ಸುಲ್ತಾನ್‌ಪೇಟೆ ಮಿಡಲ್ ಸ್ಕೂಲಿನ ವಿದ್ಯಾರ್ಥಿಗಳು ಮುಷ್ಕರ ಹೂಡಿದುದೇ ಮೂಲಕಾರಣವಾಗಿ ಪರಿಣಮಿಸಿತು. ಸುಲ್ತಾನ್‌ಪೇಟೆ ಸ್ಕೂಲಿನ ವಿದ್ಯಾರ್ಥಿಗಳಲ್ಲಿ ಸಹಾನುಭೂತಿಯನ್ನು ತೋರಿಸುವುದಕ್ಕಾಗಿ ಬೆಂಗಳೂರಿನ ಇತರ ಪಾಠಶಾಲೆಗಳ ವಿದ್ಯಾರ್ಥಿಗಳೂ ಕೆಲವು ಸೂರು ಚಿಕ್ಕಪಟ್ಟಣ, ಮೈಸೂರು ಮುಂತಾದ ಕಡೆಗಳ ವಿದ್ಯಾರ್ಥಿಗಳೂ ಮುಷ್ಕರ ಹೂಡಿದ್ದರು. ಆದುದರಿಂದ ವಿದ್ಯಾರ್ಥಿಗಳು ಮುಂದೆ ಮುಷ್ಕರ ಹೂಡದ ರೀತಿ ಒಂದು ವೇಳೆ ಮುಷ್ಕರ ಹೂಡಿದರೆ ಅದನ್ನು ತಪ್ಪಿಸಲು ಏನು ಮಾಡಬೇಕೆಂಬ ವಿಷಯದಲ್ಲಿ ಸಲಹೆಗಳನ್ನು ಕೊಡಲು ಸರ್ಕಾರದವರು ಒಂದು ಸಮಿತಿಯನ್ನು ಏರ್ಪಡಿಸಿದರು.

ಸಮಿತಿ

ಈ ಸಮಿತಿಗೆ ಶ್ರೀ ಕೆ ಆರ್ ಶ್ರೀನಿವಾಸಯ್ಯಂಗಾರ್ಯರವರೇ ಅಧ್ಯಕ್ಷರು. ಶ್ರೀಗಳಾದ ಎಚ್ ಎಸ್ ಸುಬ್ಬರಾವ್, ಶಂಕರನಾರಾಯಣರಾವ್, ಕೆ ಎಚ್ ರಾಮಯ್ಯ, ಪಿ ಸಿ ರೋಲೋ, ಇ ಪಿ ಮೆಟ್ಕಾಫ್, ಎ ಬಿ ವಾಲ್ಟರ್, ಎಂ ಶ್ರೀನಿವಾಸರಾವ್, ಬಿ ವೆಂಕಟರಾಮಯ್ಯರ್, ಬಿ ಎಚ್ ಚಂದ್ರಶೇಖರಯ್ಯ, ಎ ಎಸ್ ರಾಜೋಜಿರಾವ್ ಇವರುಗಳು ಸದಸ್ಯರಾಗಿದ್ದರು. ಎ ಎಂ ಎಸ್ ಮೊಹಿಯುದ್ದೀನ್‌ರವರು ಸಮಿತಿಯ ಕಾರ್ಯದರ್ಶಿಗಳಾಗಿದ್ದರು. ಸಮಿತಿಯವರು ತಮ್ಮ ವರದಿಯನ್ನು ಸರ್ಕಾರಕ್ಕೆ ಕಳುಹಿಸಿರುವರು.

ವರದಿ

ಈ ವರದಿಯು ಅಷ್ಟೇನು ದೊಡ್ಡದಾಗಿಲ್ಲ. ಮೈಸೂರು ಗೆಜೆಟ್ಟಿನಲ್ಲಿ ೯ ಪುಟಗಳಷ್ಟಿದೆ. ೫ ಅಧ್ಯಾಯಗಳಾಗಿ ವಿಭಾಗಿಸಲ್ಪಟ್ಟಿದೆ. ಮೊದಲನೇ ಅಧ್ಯಾಯದಲ್ಲಿ ಸಮಿತಿಯನ್ನು ನೇಮಿಸಿದುದರ ಉದ್ದೇಶ, ವಿಷಯಗಳನ್ನು ಸಂಗ್ರಹಿಸಲು ಸಮಿತಿಯವರು ಕೈಗೊಂಡ ಕಾರ್ಯಗಳು, ನಡೆಸಿದ ಮೀಟಿಂಗುಗಳ ಸಂಖ್ಯೆ ಇವೇ ಮೊದಲಾದುವು ವಿವರಿಸಲ್ಪಟ್ಟಿವೆ. ಸಮಿತಿಯವರು ಬ್ರಿಟಿಷ್ ಇಂಡಿಯಾ ಮತ್ತು ದೇಶೀಯ ಸಂಸ್ಥಾನಗಳ ವಿದ್ಯಾಭ್ಯಾಸದ ಇಲಾಖೆಗಳಿಗೆ ಕಾಗದಗಳನ್ನು ಬರೆದು ಆ ಪ್ರಾಂತಗಳಲ್ಲಿ ವಿದ್ಯಾರ್ಥಿಗಳ ಮುಷ್ಕರಗಳನ್ನು ತಪ್ಪಿಸಲು ಯಾವ ಏರ್ಪಾಡುಗಳನ್ನು ಅವರು ಕೈಗೊಂಡಿದ್ದರೆಂಬುದನ್ನು ಕೇಳಿ ತಿಳಿದುಕೊಂಡುದರಲ್ಲಿ ಈ ವಿಚಾರವಾಗಿ ಯಾವ ನಿಯಮ ನಿಬಂಧನೆಗಳನ್ನು ಎಲ್ಲಿಯೂ ಏರ್ಪಡಿಸಲಿಲ್ಲವೆಂಬುದು ವ್ಯಕ್ತಪಟ್ಟಿದೆ.

ಇದೇ ರೀತಿ ಸಮಿತಿಯವರು ನಮ್ಮ ಸಂಸ್ಥಾನದ ನ್ಯಾಯವಿಧಾಯಕ ಸಭೆ, ಪ್ರಜಾಪ್ರತಿನಿಧಿಸಭೆ, ಯೂನಿವರ್ಸಿಟಿ ಸೆನೆಟ್ ಮುಂತಾದವುಗಳ ಸದಸ್ಯರಿಗೂ ಕೆಲವು ಮುಖಂಡರಿಗೂ ಮುಖ್ಯೋಪಾಧ್ಯಾಯರಿಗೂ ಪ್ರೊಫೆಸರು ಪ್ರಿನ್ಸಿಪಾಲರ ಮುಂತಾದವರಿಗೂ ಕಾಗದ ಬರೆದು ಸಲಹೆಗಳನ್ನು ಕೇಳಿದ್ದರು. ಸುಮಾರು ೨೦೦ ಮಂದಿ ದೊಡ್ಡಮನುಷ್ಯರು ಸಮಿತಿಯವರಿಗೆ ತಮ್ಮ ಅಭಿಪ್ರಾಯಗಳನ್ನು ಬರೆದು ಕಳುಹಿಸಿದ್ದರು. ಸಮಿತಿಯವರು ಇತರ ಸಂಸ್ಥೆಗಳ ದೊಡ್ಡಮನುಷ್ಯರ ಹೇಳಿಕೆಗಳನ್ನು ಕೇಳಿದ ಕೊಂಡರು. ಪ್ರತಿಯೊಂದು ಕಾಲೇಜಿನ ವಿದ್ಯಾರ್ಥಿಗಳ ಪ್ರತಿನಿಧಿಯೊಬ್ಬರು ಸಮಿತಿಯ ಮುಂದೆ ಹೇಳಿಕೆ ಕೊಡಲು ಅವಕಾಶ ಕೊಡಲ್ಪಟ್ಟಿತ್ತು. ಮಹಾರಾಜಾ ಕಾಲೇಜ್ ಮತ್ತು ಇತರ ಮಾತ್ರ ಈ ಅವಕಾಶವನ್ನು ಉಪಯೋಗಿಸಿಕೊಂಡರು. ಸಮಿತಿಯವರು ಒಟ್ಟು ಹದಿನಾರು ಮೀಟಿಂಗುಗಳನ್ನು ನಡೆಸಿರುವರು.

ಸಂಸ್ಥಾನದಲ್ಲಿನ ಮುಷ್ಕರದ ಚರಿತ್ರೆ

ವರದಿಯ ಎರಡನೇ ಅಧ್ಯಾಯದಲ್ಲಿ ಸಂಸ್ಥಾನದಲ್ಲಿ ಮುಷ್ಕರಗಳ ಚರಿತ್ರೆಯನ್ನು ಸಂಕ್ಷೇಪವಾಗಿ ವಿವರಿಸಿದ್ದಾರೆ. ಮೊದಲು ೧೯೨೧ ನೇ ಇಸವಿ ಆಗಸ್ಟ್ ೧ ನೇ ತಾರೀಖಿನ ದಿನ ಅಂದರೆ ಲೋಕಮಾನ್ಯ ತಿಲಕರ ಮರಣದ ವರ್ಷ ದಿನ ಬೆಂಗಳೂರು ಮೈಸೂರು ಪಟ್ಟಣಗಳಲ್ಲಿ ವಿದ್ಯಾರ್ಥಿಗಳು ಪಾಠಶಾಲೆಗೆ ಹೋಗದೆ ತಪ್ಪಿಸಿಕೊಂಡರು. ಅನಂತರ ಅದೇ ವರ್ಷ ನವಂಬರ್ ೧೭ ನೇ ತಾರೀಖು ಪ್ರಿನ್ಸ್ ಆಫ್ ವೇಲ್ಸ್ ರವರು ಹಿಂದೂಸ್ಥಾನಕ್ಕೆ ಇಳಿದ ದಿನ ಬೆಂಗಳೂರು ವಿದ್ಯಾರ್ಥಿಗಳ ಮುಷ್ಕರವು ಹೂಡಿದ್ದರು. ಆಮೇಲೆ ೧೯೨೮ ನೇ ಇಸವಿ ಫೆಬ್ರವರಿ ೩ ನೇ ತಾರೀಖಿನ ದಿನ ಸೈಮನ್ ಕಮಿಷನ್ ಹಿಂದೂಸ್ಥಾನಕ್ಕೆ ಬಂದ ದಿನ ಬೆಂಗಳೂರು ಮೈಸೂರು ಪಟ್ಟಣಗಳ ವಿದ್ಯಾರ್ಥಿಗಳ ಮುಷ್ಕರ ಹೂಡಿದ್ದರು. ಕಡೆಯದಾಗಿ ಗಣಪತಿ ಗಲಭೆ ಸಂಬಂಧವಾಗಿ ವಿದ್ಯಾರ್ಥಿಗಳ ಮುಷ್ಕರ ಹೂಡಿದ್ದರು. ಈ ಸಂದರ್ಭಗಳಲ್ಲೆಲ್ಲಾ ವಿದ್ಯಾರ್ಥಿಗಳನ್ನು ಸಂಬಂಧಪಟ್ಟ ಅಧಿಕಾರಿಗಳ ಶಿಕ್ಷಿಸದೆ ಅವರಿಗೆ ಎಚ್ಚರಿಕೆ ಕೊಟ್ಟು ಕಳುಹಿಸಿದರು.

ಮುಷ್ಕರದ ಸ್ವರೂಪ

ಮೂರನೇ ಅಧ್ಯಾಯದಲ್ಲಿ ಮುಷ್ಕರವೆಂಬ ಪದವು ಯಾವ ವಿಚಾರದಲ್ಲಿ ಯಾವ ಅರ್ಥದಲ್ಲಿ ಉಪಯೋಗಿಸಲ್ಪಟ್ಟಿದೆ ಎಂಬುದನ್ನು ತಿಳಿಸಲಾಗಿದೆ. ತಮ್ಮ ನ್ಯಾಯವಾದ ಬೇಡಿಕೆಗಳ ಅಸಮಾಧಾನದಿಂದ ಕೆಲಸವನ್ನು ತ್ಯಜಿಸುವ ಕೂಲಿಗಾರರ ಮುಷ್ಕರಕ್ಕೂ ಇದಕ್ಕೂ ವ್ಯತ್ಯಾಸವಿದೆ. ಜೀವನದ ವಿದ್ಯಾರ್ಥಿಗಳು ಯಾವುದೋ ಒಂದು ಕಾರಣದಿಂದ ಒಟ್ಟಾಗಿ ಸ್ಕೂಲಿಗೆ ಗೈರುಹಾಜರಾದರೆ ಅದನ್ನು ಮುಷ್ಕರವೆಂದು ಕರೆಯುವುದು ತಪ್ಪೆಂದೂ ಹೇಳಿದ್ದಾರೆ. ಅಲ್ಲದೆ ವಿದ್ಯಾರ್ಥಿಗಳು ತಮಗೆ ಮೇಲ್ಪಟ್ಟವರಲ್ಲಿ ಗೌರವ ವಿಧೇಯತೆಗಳನ್ನು ತೋರಿಸಬೇಕಾದುದು ಅವಶ್ಯವೆಂದೂ ಶಾಲೆಯ ಆಡಳಿತದಲ್ಲಿರುವ ತಪ್ಪುಗಳಲ್ಲಿ ವಿದ್ಯಾರ್ಥಿಗಳು ಅಸಮಾಧಾನಪಡುವುದಕ್ಕೆ ಕಾರಣವೇ ಇಲ್ಲವೆಂದೂ ಈ ಅಧ್ಯಾಯದಲ್ಲಿ ತಿಳಿಸಲ್ಪಟ್ಟಿದೆ.

ಮುಷ್ಕರಗಳಿಗೆ ಕಾರಣಗಳು

ವರದಿಯ ನಾಲ್ಕನೆಯ ಅಧ್ಯಾಯದಲ್ಲಿ ವಿದ್ಯಾರ್ಥಿಗಳ ಮುಷ್ಕರಗಳಿಗೆ ಕಾರಣಗಳು ವಿವರಿಸಲ್ಪಟ್ಟಿವೆ. ಹಿಂದೂ ವಿದ್ಯಾರ್ಥಿಗಳು ಯಾವಾಗಲೂ ತಂದೆತಾಯಿಗಳಿಗೂ, ಗುರುಹಿರಿಯರಿಗೂ ವಿಧೇಯರಾಗಿ ನಡೆದುಕೊಳ್ಳುತ್ತ ಬಂದಿರುವರೆಂದೂ ಗುರುಶಿಷ್ಯರ ಸಂಬಂಧವು ನಮ್ಮ ದೇಶದಲ್ಲಿ ಪ್ರಾಚೀನ ಕಾಲದಿಂದಲೂ ನಡೆದುಬಂದಿದೆಯೆಂದೂ ಸಮಿತಿಯವರ ಅಭಿಪ್ರಾಯವಾಗಿದ್ದಾರೆ. ಅದರ [redacted] ಷ್ಕರಗಳಿಗೆ ಕೆಲವು ಕಾರಣಗಳಿವೆಯೆಂದು ವ [redacted]

ರಾಷ್ಟ್ರೀಯ ಭಾವನೆ

ಪ್ರಕೃತಕಾಲದಲ್ಲಿ ಹಿಂದೂಸ್ಥಾನದಲ್ಲಿ ಎಲ್ಲೆಲ್ಲಿಯೂ ರಾಷ್ಟ್ರೀಯ ಭಾವನೆ ಹೆಚ್ಚುತ್ತಿರುವುದೂ ವಿದ್ಯಾರ್ಥಿಗಳಲ್ಲಿ ಸ್ವಾಭಿಮಾನ ಹೆಚ್ಚಿರುವುದೂ ಸಮಿತಿಯವರ ಅಭಿಪ್ರಾಯವಾಗಿದೆ. ಅಲ್ಲದೆ ಅವರ ಸಾಮಾಜಿಕ ಜೀವನದ ಪ್ರೇರಕ ಕಾರಣಗಳ ಬಗ್ಗೆ ಅವರಿಗೆ ಅರಿವು ಮೂಡಿದೆ. ಬಹುಜನರ ರಾಜಕೀಯ ಆಕಾಂಕ್ಷೆಗಳು ರಾಜಕೀಯ ಕಾರ್ಯಕ್ಷೇತ್ರದಲ್ಲೂ ಕಲಹಗಳಿಂದ ಬೆಳೆದು ಮುಷ್ಕರಗಳೇ ಮುಂತಾದವು ಸಂಭವಿಸುತ್ತಿದ್ದು ಅವುಗಳ ಪರಿಣಾಮ ವಿದ್ಯಾಭ್ಯಾಸದ ಕಾರ್ಯಕ್ಷೇತ್ರಕ್ಕೆ ಬೀಳದಿರುವುದು ಅಸಾಧ್ಯ. ರಾಜಕೀಯ ಮತ್ತು ಸಾಮಾಜಿಕ ಧುರೀಣರು ವಿದ್ಯಾರ್ಥಿಗಳ ಮನಸ್ಸನ್ನು ಕೆರಳಿಸುವಂತೆ ಪ್ರಚೋದಿಸುತ್ತಿರುವುದೇ ಕಾರಣವೆಂದು ಸಮಿತಿಯವರು ಅಭಿಪ್ರಾಯಪಟ್ಟಿದ್ದಾರೆ. ಅಂದರೆ ವಿದ್ಯಾರ್ಥಿಗಳಲ್ಲಿ ರಾಷ್ಟ್ರೀಯ ಭಾವನೆಯುಂಟಾದುದು ಮೊದಲನೇ ಕಾರಣ.

ಮನೆಯವರ ಮೇಲ್ವಿಚಾರಣೆಗೊಳಗಾಗದಿರುವುದು

ಅನೇಕ ಮಂದಿ ವಿದ್ಯಾರ್ಥಿಗಳು ತಮ್ಮ ಸಂಬಂಧಿಕರಿಂದ ದೂರವಾಗಿದ್ದುಕೊಂಡು ಅವರ ಮೇಲ್ವಿಚಾರಣೆಗೆ ಒಳಪಡದಿರುವುದೇ ಎರಡನೇ ಕಾರಣ. ವಿದ್ಯಾರ್ಥಿಗಳು ತಮ್ಮ ತಂದೆತಾಯಿಗಳ ಮೇಲ್ವಿಚಾರಣೆಗೆ ಒಳಪಡದಿದ್ದಾಗ ಕೆಲವು ರಾಜಕೀಯ ಚಳವಳಿಗಾರರು ವಿದ್ಯಾರ್ಥಿಗಳನ್ನು ತಮ್ಮ ಸಾಧನಗಳನ್ನಾಗಿ ಉಪಯೋಗಿಸಿಕೊಂಡು ಪ್ರಯತ್ನಪಡುತ್ತಾರೆ. ಮೂರನೇ ಕಾರಣ ಈ ಸಂಬಂಧವಾಗಿ ಸ್ಕೂಲಿನವರು ಮುಷ್ಕರಗಳನ್ನು ತಪ್ಪಿಸಿಕೊಳ್ಳುವುದಕ್ಕೆ ಅವಕಾಶವಿಲ್ಲದಿರುವಾಗ ಆ ಕಾರ್ಯವನ್ನು ಸ್ಕೂಲಿನವರ್ಯಾರೂ ನಡೆಸಬೇಕು. ಆದರೆ ಈಗಿನ ವಿದ್ಯಾಭ್ಯಾಸದ ಕ್ರಮದಲ್ಲಿ ಇದಕ್ಕೆ ಅವಕಾಶವಿಲ್ಲವೆಂದು ಸಮಿತಿಯವರು ಅಭಿಪ್ರಾಯಪಟ್ಟಿದ್ದಾರೆ.

ಮನೆಯವರ ಸಹಾಯ

ಪ್ರಕೃತಕಾಲದಲ್ಲಿ ವಿದ್ಯಾರ್ಥಿಯ ಅಭಿವೃದ್ಧಿ ವಿಚಾರದಲ್ಲಿ ಮನೆಯವರೂ ಪಾಠಶಾಲೆಯವರೂ ಸಹಕರಿಸಿ ಕೆಲಸ ಮಾಡುತ್ತಿಲ್ಲ. ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಿದ ಮಾತ್ರಕ್ಕೆ ತಮ್ಮ ಕರ್ತವ್ಯವು ಮುಗಿಯಿತೆಂದು ಅನೇಕ ತಾಯಿತಂದೆಗಳು ಭಾವಿಸಿಕೊಂಡಿದ್ದಾರೆ. ಹೀಗೆ ನವರು ತಮ್ಮ ಮಕ್ಕಳ ಅಭಿವೃದ್ಧಿಯಲ್ಲಿ ಸಹಾನುಭೂತಿಯನ್ನು ತೋರಿಸುತ್ತಾರೆ. ಉದಾಹರಣೆಗೆ ಬೆಂಗಳೂರು ಮುಷ್ಕರದಲ್ಲಿ ವಿದ್ಯಾರ್ಥಿಗಳು ತಮಗೆ ತಮ್ಮ ತಂದೆತಾಯಿಗಳೂ ಮುಖಂಡರೂ ಬೆಂಬಲವಾಗಿದ್ದಾರೆಂದು ಭಾವಿಸಿಕೊಳ್ಳಲು ಅವಕಾಶವಿತ್ತು. ನಮ್ಮ ಅಭಿಪ್ರಾಯದಲ್ಲಿ ವಿದ್ಯಾರ್ಥಿಗಳು ಕೆಡುವುದಕ್ಕೆ ಇದಕ್ಕಿಂತಲೂ ಬೇರೆ ಕೆಟ್ಟ ಕಾರ್ಯವಿಲ್ಲ. ಆದುದರಿಂದ ವಿದ್ಯಾರ್ಥಿಗಳ ಹಿತ ವಿಚಾರದಲ್ಲಿ ಮನೆಯವರು ಸ್ಕೂಲಿನವರೊಡನೆ ಸಹಕರಿಸಬೇಕು. ಸ್ಕೂಲಿನವರು ಮನೆಯವರ ಸಹಾನುಭೂತಿಯನ್ನು ಪಡೆದು ಪ್ರತಿಯೊಬ್ಬ ವಿದ್ಯಾರ್ಥಿಯ ಒಳಜೀವನವನ್ನು ತಿಳಿದುಕೊಂಡು ಆತನಿಗಿರುವ ಕುಂದುಕೊರತೆಗಳನ್ನು ನೀಗಿಸಬೇಕು.

ವಿದ್ಯಾರ್ಥಿಪ್ರತಿನಿಧಿಯ ಅಭಿಪ್ರಾಯ

ವಿದ್ಯಾರ್ಥಿಗಳ ಸ್ಕೂಲಿಗೆ ತಪ್ಪಿಸಿಕೊಳ್ಳಲು ಇನ್ನೂ ಅನೇಕ ಕಾರಣಗಳ ಸಮಿತಿಯವರ ಮುಂದೆ ಹೇಳಲ್ಪಟ್ಟಿವೆ. ಹಿಂದೂದೇಶದ ವಿದ್ಯಾರ್ಥಿಗಳು ಹೆಚ್ಚಾಗಿ ಓದಬೇಕಾಗಿದೆಯೆಂದೂ ಅವರಿಗೆ ಸಾಕಾದಷ್ಟು ವಿರಾಮ ದೊರೆಯುತ್ತಿಲ್ಲವೆಂದೂ, ಆದುದರಿಂದ ಯಾವುದಾದರೊಂದು ಕಾರಣದಿಂದ ಒಂದು ದಿನವಾದರೂ ಸ್ಕೂಲಿಗೆ ಹೋಗದೆ ತಪ್ಪಿಸಿಕೊಳ್ಳಲು ಅವರು ಪ್ರಯತ್ನಿಸುವರೆಂದೂ ಮಹಾರಾಜಾ ಕಾಲೇಜು ವಿದ್ಯಾರ್ಥಿಗಳ ಪ್ರತಿನಿಧಿಯು ಸಮಿತಿಯವರ ಮುಂದೆ ಹೇಳಿದರು. ನಮ್ಮ ಸ್ಕೂಲು ಮತ್ತು ಕಾಲೇಜುಗಳಲ್ಲಿ ಮಾನಸಿಕ ಬೆಳವಣಿಗೆಗೆ ಮಾತ್ರ ಗಮನಕೊಡುತ್ತಿರುವರೆಂದೂ ಅದರಲ್ಲೂ ಒಂದೇ ವಿಧವಾದ ವಿದ್ಯಾಭ್ಯಾಸವನ್ನು ಮಾಡಿಸುತ್ತಾ ಪರೀಕ್ಷೆಗಳಿಗೆ ಹೆಚ್ಚು ಪ್ರಾಶಸ್ತ್ಯ ಕೊಡುತ್ತಿರುವರೆಂದೂ, ಇದರಿಂದ ಸ್ವಾಭಾವಿಕವಾಗಿ ವಿದ್ಯಾರ್ಥಿಗಳಿಗೆ ಸ್ಕೂಲಿನ ಕೆಲಸದಲ್ಲಿ ಅಶ್ರದ್ಧೆಯೂ, ಜಿಗುಪ್ಸೆಯೂ ಉಂಟಾಗುವುದೆಂದೂ ಸಮಿತಿಯವರ ಅಭಿಪ್ರಾಯವಾಗಿದೆ.

ಪಾಠಶಾಲೆಗಳಲ್ಲಿ ವಿದ್ಯಾರ್ಥಿಗಳ ಸಾಮಾಜಿಕ ಜೀವನದ ಬೆಳವಣಿಗೆಯ ಕಡೆಗೆ ಹೆಚ್ಚು ಗಮನಕೊಡಬೇಕಾದುದು ಅಗತ್ಯವೆಂದೂ, ಪಾಠಗಳಿಗೆ ಗೊತ್ತುಮಾಡಿರುವ ಕಾಲದಲ್ಲಿ ಸ್ವಲ್ಪಭಾಗವನ್ನು ಸಾಮಾಜಿಕ ಗುಣಗಳ ಬೆಳವಣಿಗೆಗಾಗಿ ಉಪಯೋಗಿಸುವುದು ಆವಶ್ಯಕವೆಂದೂ ಸಮಿತಿಯವರು ಭಾವಿಸುತ್ತಾರೆ.

ಉಪಾಧ್ಯಾಯರ ಅಶಕ್ತತೆ

ನಮ್ಮ ಅನೇಕ ಉಪಾಧ್ಯಾಯರು ವಿದ್ಯಾವಂತರಾಗಿದ್ದರೂ ತಮ್ಮ ವಿದ್ಯಾರ್ಥಿಗಳ ಪ್ರೀತಿ ವಿಶ್ವಾಸ ಗೌರವವನ್ನು ಪಡೆಯತಕ್ಕ ಗುಣಗಳು ಅವರಲ್ಲಿ ಕಾಣಬರುತ್ತಿಲ್ಲವೆಂದು ಸಮಿತಿಯವರು ಸೂಚಿಸಿದ್ದಾರೆ. ಅನೇಕ ಉಪಾಧ್ಯಾಯರುಗಳು ತಮ್ಮ ಕೆಲಸದಲ್ಲಿ ಉತ್ಸಾಹ ತೋರುತ್ತಿಲ್ಲವೆಂದೂ, ಮುಂದೆ ಬೇರೆ ಕೆಲಸವನ್ನು ಸಂಪಾದಿಸಿಕೊಳ್ಳುವ ಉದ್ದೇಶದಿಂದ ಎಷ್ಟೋ ಮಂದಿ ಉಪಾಧ್ಯಾಯರಾಗಿ ಬರುವರೆಂದೂ ಅನೇಕ ಉಪಾಧ್ಯಾಯರು ತಮ್ಮ ವಿದ್ಯಾರ್ಥಿಗಳೊಡನೆ ಸಲುಗೆಯಾಗಿ ನಡೆದುಕೊಳ್ಳುತ್ತಿಲ್ಲವೆಂದೂ ಆದುದರಿಂದ ವಿದ್ಯಾರ್ಥಿಗಳು ತಮ್ಮ ಮುಖ್ಯ ಕರ್ತವ್ಯವನ್ನು ಮರೆತು ದಾರಿತಪ್ಪಿ ಹೋಗುವುದರಲ್ಲಿ ಆಶ್ಚರ್ಯವಿಲ್ಲವೆಂದೂ ಒಬ್ಬರು ಪ್ರೊಫೆಸರು ಸಮಿತಿಯ ಮುಂದೆ ಅಭಿಪ್ರಾಯಪಟ್ಟಿದ್ದಾರೆ. ವಿದ್ಯಾರ್ಥಿಗಳ ಕಷ್ಟನಿಷ್ಠುರಗಳಲ್ಲಿ ಸಹಾನುಭೂತಿಯನ್ನು ತೋರಿಸಿ ಅವರ ಪ್ರೀತಿವಿಶ್ವಾಸಗಳನ್ನು ಸಂಪಾದಿಸಿಕೊಳ್ಳುವುದಕ್ಕಾಗಿ ಉಪಾಧ್ಯಾಯರು ಪ್ರಯತ್ನಪಡಬೇಕೆಂದು ಸಮಿತಿಯವರು ಅಭಿಪ್ರಾಯಪಡುತ್ತಾರೆ.

ಕಡೆಯದಾಗಿ ಉಪಾಧ್ಯಾಯರಿಗೂ ವಿದ್ಯಾರ್ಥಿಗಳಿಗೂ ಹೆಚ್ಚು ಸಂಬಂಧವಿಲ್ಲದಿರುವುದು ಒಂದು ದೊಡ್ಡ ಕುಂದೆಂದು ಸಮಿತಿಯವರು ಹೇಳಿದ್ದಾರೆ. ಮಹಾರಾಜಾ ಕಾಲೇಜು ವಿದ್ಯಾರ್ಥಿಗಳ ಪ್ರತಿನಿಧಿಯು ಸಮಿತಿಯವರಿಗೆ ಈ ಕೆಳಗೆ ಕಂಡ ರೀತಿಯಲ್ಲಿ ತಿಳಿಸಿದ್ದಾರೆ: "ನಮ್ಮಲ್ಲಿರುವ ಕೆಟ್ಟಗುಣಗಳನ್ನು ಹೋಗಲಾಡಿಸಿ ಒಳ್ಳೆಯ ಗುಣಗಳು ಅಭಿವೃದ್ಧಿಗೆ ಬರುವಂತೆ ಮಾಡಬೇಕಾದದ್ದು ಉಪಾಧ್ಯಾಯರ ಕರ್ತವ್ಯ. ಆದರೆ ನಮ್ಮಲ್ಲಿ ನಿಜವಾದ ಭಕ್ತಿಯನ್ನು ತೋರಿಸುವ ಉಪಾಧ್ಯಾಯರು ಬಹಳ ಕಡಿಮೆ. ಈಗ ನಾವು ಅವರ ಅಧಿಕಾರಕ್ಕಾಗಿ ಅವರ ಹೆಚ್ಚುಗಾರಿಕೆಗಾಗಿ ನಮ್ಮ ಆಶೆಗಳನ್ನು ತ್ಯಾಗಮಾಡಿದ್ದೇವೆ. ಅವರೊಡನೆ ಬೆರೆತುಕೊಳ್ಳಲು ಹಿಂಜರಿಯುತ್ತೇವೆ. ಹಾಗೆಂದರೆ ನಮ್ಮ ಅವಶ್ಯಕತೆಗಳಲ್ಲಿ ಅವರು ಸಹಾನುಭೂತಿಯನ್ನು ತೋರಿಸುತ್ತಾರೆಂದು ನಮಗೆ ನಂಬಿಕೆ ಇಲ್ಲ. ನಮ್ಮ ಅಭಿಪ್ರಾಯವನ್ನು ಅಥವಾ ಅವರ ಅಭಿಪ್ರಾಯಗಳನ್ನು ಸ್ವತಂತ್ರವಾಗಿ, ಸಮಾನರಾಗಿ ಚರ್ಚಿಸುವುದಿಲ್ಲ. ಅದರಿಂದ ಅವರಿಗೂ ನಮಗೂ ಆಗಬೇಕಾದ ಸಹಾಯವೂ ಸಂಬಂಧವೂ ಬಾಯಾಡದೆ ಮುಷ್ಕರದ ರೂಪದಲ್ಲಿ ಪರಿಣಮಿಸುತ್ತದೆ."

ವಿ ವ[redacted]ರ್ ಸಿ ವಿದ್ಯಾರ್ಥಿಗಳ ಮುಷ್ಕರವು ಒಳಿಸಿಕೊ[redacted] ಒಪ್ಪಿ ಶಾಸ್ತ್ರ ... ಸಮಿತಿಯವರು

...ಕೇಳಿದ್ದಾರೆ. ಸರಕಾರೀ ಶಿಕ್ಷಣಗಳಲ್ಲಿ ಈ ರೀತಿ ಇಲ್ಲ. ಇಂಥ ಏಳಿಗೆ ಉಪಾಧ್ಯಾಯರಷ್ಟೆ ಆಗಿಂದಾಗ ವರ್ಗಮಾಡುತ್ತಿರುವುದು. ಉಪಾಧ್ಯಾಯರುಗಳು ತಾವು ವಿದ್ಯಾರ್ಥಿಗಳಿಗಿಂತ ಉತ್ತಮರೆಂದು ... ಒಂದೊಂದು ತರಗತಿಯಲ್ಲಿ ಅನೇಕ ಮಂದಿ ವಿದ್ಯಾರ್ಥಿಗಳಿರುವುದು, ಮತ್ತು ಉಪಾಧ್ಯಾಯರ ಸಂಬಳ ಕಡಿಮೆಯಾಗಿರುವುದರಿಂದ ಅವರು ಹೆಚ್ಚು ಪಾಠಗಳಿಗಾಗಿ ಬೇರೆ ಕಡೆ ಗಮನಕೊಡುವುದು ಇವೇ ಮುಂತಾದವು ಕಾರಣಗಳೆಂದು ಸಮಿತಿಯವರು ಅಭಿಪ್ರಾಯಪಟ್ಟಿದ್ದಾರೆ.

ಮನೆ ಮತ್ತು ಸ್ಕೂಲು

ಪಾಠಶಾಲೆಗಳಲ್ಲಿ ವಿದ್ಯಾರ್ಥಿಗಳು ಒಳ್ಳೇ ನಡತೆಯಿಂದ ಇರಬೇಕಾದರೆ ಮನೆಯವರು ಸ್ಕೂಲಿನವರೊಡನೆ ಸಹಕರಿಸುವುದು ಅಗತ್ಯ. ಇದಕ್ಕಾಗಿ ಉಪಾಧ್ಯಾಯರು ತಮ್ಮ ವಿದ್ಯಾರ್ಥಿಗಳ ತಾಯಿತಂದೆಗಳನ್ನು ಪರಿಚಯ ಮಾಡಿಕೊಂಡು ಅವರ ಬಳಿಗೆ ಆಗಿಂದಾಗ್ಗೆ ಹೋಗಿ ಮಾತಾಡಬೇಕು. ಹಾಗೆಯೇ ಮನೆಯವರು ಆಗಿಂದಾಗ್ಗೆ ಪಾಠಶಾಲೆಯಲ್ಲಿ ನಡೆಯುವ ಚರ್ಚೆ, ಸಭೆಗಳು, ಆಟಪಾಟಗಳು ಮುಂತಾದವುಗಳಿಗೆ ಬರುತ್ತಿರಬೇಕು. ಆ ಸಂದರ್ಭಗಳಲ್ಲಿ ಉಪಾಧ್ಯಾಯರುಗಳು ತಾಯಿತಂದೆಗಳೊಡನೆ ಅವರ ಮಕ್ಕಳ ವಿದ್ಯಾಭ್ಯಾಸದ ವಿಚಾರಗಳನ್ನು ಕುರಿತು ಮಾತನಾಡಬೇಕು. ಪ್ರತಿಯೊಂದು ಪಾಠಶಾಲೆಯಲ್ಲೂ ಹಿರಿಯರ ಸಂಘವನ್ನು ಸ್ಥಾಪಿಸಿ ವರ್ಷಕ್ಕೊಮ್ಮೆ ಪಾಠಶಾಲೆಗಳಲ್ಲಿ ಹಿರಿಯರ ದಿನಗಳನ್ನು ಆಚರಿಸಬೇಕು. ಈಗ ಆಚರಣೆಯಲ್ಲಿರುವಂತೆ ಮೂರು ತಿಂಗಳಿಗೊಮ್ಮೆ ವಿದ್ಯಾರ್ಥಿಗಳ ಅಭಿವೃದ್ಧಿಯ ವರದಿಯನ್ನು ತಂದೆತಾಯಿಗಳಿಗೆ ಕಳುಹಿಸುವುದಕ್ಕೆ ಬದಲಾಗಿ ಅಂತಹ ವರದಿ ... ಕಳುಹಿಸಬೇಕು. ಕೆಲವು ವೇಳೆ ವಿದ್ಯಾರ್ಥಿಗಳನ್ನು ಪ್ರತಿ ತಿಂಗಳಲ್ಲಿಯೂ ... ದಂತೆಯೇ ಕೆಟ್ಟ ದಾರಿಗಳಿಗೆ ... ಅವರ ತಂದೆತಾಯಿಗಳಿಗೆ ಗೊತ್ತಿಲ್ಲದ ... ಕಳುಹಿಸುವುದ ... ಹೋಗುತ್ತಾರೆ. ಆದುದರಿಂದ ಮಾಸಿಕ ವರದಿಗಳ ... ಮಾಡುವುದು ಸ್ಕೂಲಿನವರಿಗೆ ಸ್ವಲ್ಪ ಹೆಚ್ಚಿನ ಕೆಲಸವಾದರೂ ಇದನ್ನು ... ಪ್ರಯೋಜನಕಾರಿಯಾಗಿದೆ.

ಹಾಸ್ಟೆಲ್‌ಗಳು

ವಿದ್ಯಾಭ್ಯಾಸಕ್ಕಾಗಿ ತಮ್ಮ ಸ್ವಂತ ಊರುಗಳನ್ನು ಬಿಟ್ಟು ಪರಸ್ಥಳಗಳಿಗೆ ಹೋಗುವ ವಿದ್ಯಾರ್ಥಿಗಳು ಸಾಮಾನ್ಯವಾಗಿ ರಾಜಕೀಯ ಚಳವಳಿಗಾರರ ಕೈಗೊಂಬೆಗಳಾಗಿ ಪರಿಣಮಿಸುವ ಸಂಭವ ಹೆಚ್ಚು. ಆದುದರಿಂದ ಅಂತಹದಕ್ಕೆ ಅವಕಾಶಕೊಡದಿರಬೇಕಾದರೆ ಪ್ರತಿಯೊಂದು ಸ್ಕೂಲಿಗೂ ಹಾಸ್ಟೆಲು ಸ್ಥಾಪಿಸಲ್ಪಡಬೇಕಲ್ಲದೆ ಪರಸ್ಥಳದ ವಿದ್ಯಾರ್ಥಿಗಳು ಹಾಸ್ಟೆಲ್‌ಗಳಲ್ಲಿ ವಾಸಮಾಡುವಂತೆ ನಿರ್ಬಂಧಿಸಲ್ಪಡಬೇಕು. ಬಡ ವಿದ್ಯಾರ್ಥಿಗಳ ಸಲುವಾಗಿ ಹಾಸ್ಟೆಲುಗಳಲ್ಲಿ ಧರ್ಮದ ಫಂಡನ್ನು ಏರ್ಪಡಿಸಬೇಕು. ಜಾತಿ ಸಂಬಂಧವಾದ ಹಾಸ್ಟೆಲುಗಳಿರುವ ಕಡೆ ಎಲ್ಲಾ ಹಾಸ್ಟೆಲುಗಳವರೂ ಆಗಿಂದಾಗ್ಗೆ ಕಲೆಯುವಂತೆ ಅವಕಾಶ ಕಲ್ಪಿಸಬೇಕು.

ವಿರಾಮ ಕಾಲದಲ್ಲಿ ಆಟಪಾಟಗಳು

ಸ್ಕೂಲು ಬಿಟ್ಟ ಮೇಲೆ ವಿದ್ಯಾರ್ಥಿಗಳು ಸ್ವತಂತ್ರರಾಗಿರುತ್ತಾರೆ. ಆದುದರಿಂದ ಅವರ ವಿರಾಮ ಕಾಲದಲ್ಲಿ ಅವರಿಗೆ ಮನೋಲ್ಲಾಸವನ್ನುಂಟುಮಾಡುವಂತಹ ಮತ್ತು ಅವರ ಬುದ್ಧಿಶಕ್ತಿಯನ್ನು ಹೆಚ್ಚಿಸುವಂತಹ ಆಟಪಾಟಗಳನ್ನು ಏರ್ಪಡಿಸಿ ಅವರು ಕೆಟ್ಟ ದಾರಿಯಲ್ಲಿ ಹೋಗಲು ಅವಕಾಶವಿಲ್ಲದಂತೆ ನೋಡಿಕೊಳ್ಳಬೇಕು. ಸಮಾಜಸೇವೆ, ಪರೋಪಕಾರ ಕಾರ್ಯಗಳು ಮುಂತಾದವುಗಳಿಗೆ ಅವರು ಗಮನ ಕೊಡುವಂತೆ ಮಾಡಬೇಕು.

ಉಪಾಧ್ಯಾಯರ ಚುನಾವಣೆ

ಉಪಾಧ್ಯಾಯರ ಚುನಾವಣೆಯಲ್ಲಿ ವಿದ್ಯಾಯೋಗ್ಯತೆಯ ಅರ್ಹತೆಗೆ ಮಾತ್ರವಲ್ಲದೆ ಅವರ ಇತರ ಗುಣಗಳಿಗೂ ಗಮನ ಕೊಡಬೇಕು. ಉಪಾಧ್ಯಾಯರು ಒಂದು ದೀಪದಂತಿದ್ದು ಆ ದೀಪದಿಂದ ನೂರಾರು ದೀಪಗಳು ಉರಿಯುವಂತೆ ಆಗಬೇಕು. ಆದುದರಿಂದ ಉಪಾಧ್ಯಾಯರನ್ನು ನೇಮಿಸಿಕೊಳ್ಳುವಾಗ ಮೊದಲು ಕೆಲವು ಕಾಲದವರೆಗೆ ಅವರನ್ನು ಪರೀಕ್ಷಾರ್ಥವಾಗಿ ನೇಮಿಸಿಕೊಂಡು ಅನಂತರ ಎಲ್ಲಾ ವಿಧದಲ್ಲೂ ಅವರು ಅರ್ಹರೆಂದು ಕಂಡುಬಂದರೆ ಖಾಯಂ ಮಾಡಬೇಕು.

ಉಪಾಧ್ಯಾಯರ ಸಂಬಳ

ಸರಿಯಾಗಿ ಯೋಗ್ಯತೆಯುಳ್ಳವರು ಉಪಾಧ್ಯಾಯರ ವೃತ್ತಿಯನ್ನು ಅವಲಂಬಿಸುವಂತೆ ಆಕರ್ಷಿಸುವುದಕ್ಕಾಗಿ ಕೆಳಗಿನ ದರ್ಜೆಯ ಉಪಾಧ್ಯಾಯರ ಸಂಬಳಗಳನ್ನು ಹೆಚ್ಚಿಸಬೇಕು. ಅಲ್ಲದೆ ಯೋಗ್ಯರಾದ ಉಪಾಧ್ಯಾಯರಿಗೆ ಬಹುಮಾನಗಳನ್ನು ಕೊಡುವುದು, ಅವರನ್ನು ದರ್ಬಾರುಗಳಿಗೆ ಆಹ್ವಾನಿಸುವುದು ಮುಂತಾದ ಮರ್ಯಾದೆಗಳಿಂದ ಗೌರವಿಸಬೇಕು.

ತರಗತಿಗಳ ಪ್ರಮಾಣ

ಈಗ ನ್ಯಾಷನಲ್ ತರಗತಿಗಳಲ್ಲಿ ೩೦ ಅಥವಾ ೪೦ ಮಂದಿ ಮತ್ತು ಹೈಸ್ಕೂಲು ತರಗತಿಗಳಲ್ಲಿ ೫೦ಕ್ಕೂ ಮೀರಿ ವಿದ್ಯಾರ್ಥಿಗಳಿರಬೇಕೆಂದು ಇಲಾಖೆಯವರು ಗೊತ್ತುಮಾಡಿರುವರು. ಬೇರೆ ಬೇರೆ ವಿಷಯ ಬೋಧಕರು ಸ್ಕೂಲಿನ ಎಲ್ಲಾ ತರಗತಿಗಳ ವಿದ್ಯಾರ್ಥಿಗಳಿಗೂ ಆ ಪಾಠಕ್ಕೆ ಮಾತ್ರ ಜವಾಬ್ದಾರರಾಗಿರುತ್ತಾರೆ. ಇದಕ್ಕೆ ಬದಲಾಗಿ ಒಂದೊಂದು ತರಗತಿಗೆ ಒಬ್ಬೊಬ್ಬರು ಉಪಾಧ್ಯಾಯರನ್ನು ಜವಾಬ್ದಾರರನ್ನಾಗಿ ಮಾಡುವುದು ಅನುಕೂಲ. ಆದರೆ ಹೈಸ್ಕೂಲುಗಳಲ್ಲಿ ಬೇರೆ ಬೇರೆ ವಿಷಯವನ್ನು ಬೇರೆ ಬೇರೆ ಉಪಾಧ್ಯಾಯರು ಬೋಧಿಸುವುದನ್ನು ತಪ್ಪಿಸುವುದು ಸಾಧ್ಯವಾದುದಲ್ಲವಾದುದರಿಂದ ಉಪಾಧ್ಯಾಯರ ವಶಕ್ಕೆ ೨೦ ಅಥವಾ ೩೦ ಮಂದಿ ವಿದ್ಯಾರ್ಥಿಗಳನ್ನು ಒಳಪಡಿಸಿ ಅವರ ನಡತೆ ಮುಂತಾದ ವಿಚಾರಗಳಿಗೆ ಆಯಾ ಉಪಾಧ್ಯಾಯರು ಜವಾಬ್ದಾರರಾಗಿರುವಂತೆ ಮಾಡಬೇಕು. ಈ ಉಪಾಧ್ಯಾಯರು ತಮ್ಮ ಮೇಲ್ವಿಚಾರಣೆಗೆ ಒಳಪಟ್ಟಿರುವ ವಿದ್ಯಾರ್ಥಿಗಳ ತಂದೆತಾಯಿಗಳನ್ನು ಆಗಿಂದಾಗ್ಗೆ ಕಂಡು ಪ್ರಸ್ತಾಪಿಸುತ್ತಿರಬೇಕು. ಈ ಪದ್ಧತಿಯನ್ನು ಕಾಲೇಜುಗಳಲ್ಲಿಯೂ ಆಚರಣೆಗೆ ತರಬಹುದು.

ಉಪಾಧ್ಯಾಯರ ವರ್ಗ

ಸ್ಕೂಲಿನ ಖ್ಯಾತಿಯು ಉಪಾಧ್ಯಾಯರ ಮೇಲಿನ ಭಾರವಾಗಿದೆ. ಆದುದರಿಂದ ಉಪಾಧ್ಯಾಯರನ್ನು ಆಗಿಂದಾಗ್ಗೆ ವರ್ಗಾಯಿಸದೆ ಒಂದೇ ಸ್ಕೂಲಿನಲ್ಲಿ ಕೆಲವು ವರ್ಷಗಳವರೆಗಾದರೂ ನಿಲ್ಲಿಸಬೇಕು.

ಮುಖ್ಯೋಪಾಧ್ಯಾಯರುಗಳಿಗೆ ಹೆಚ್ಚಿಗೆ ಸ್ವಾತಂತ್ರ್ಯ

ಸದ್ಯಕ್ಕೆ ಮುಖ್ಯೋಪಾಧ್ಯಾಯರುಗಳಿಗೆ ಹೆಚ್ಚಿಗೆ ಸ್ವಾತಂತ್ರ್ಯವಿಲ್ಲ. ಅಗತ್ಯ ತೋರಿಬಂದರೆ ಒಂದು ದಿನದ ಬ್ಯಾಗಾದರೂ ಅವರು ತಮ್ಮ ಪಾಠಶಾಲೆಗಳಿಗೆ ರಜಾ ಕೊಡಲು ಅಧಿಕಾರವಿಲ್ಲ. ಆ ರೀತಿ ರಜಾ ಕೊಡಬಹುದೇ ಇಲ್ಲವೇ ಎಂಬುದನ್ನು ನಿರ್ಧರಿಸಲು ಅವರು ಅರ್ಹರಾಗಿರುವುದರಿಂದ ಇಂಥಾ ವಿಚಾರಗಳಲ್ಲಿ ಅವರ ವಿವೇಚನಾಶಕ್ತಿಯನ್ನು ಉಪಯೋಗಿಸಿ ಕೆಲಸಮಾಡಲು ಅವಕಾಶ ಕೊಡಬೇಕು. ಒಂದು ಸ್ಥಳದಲ್ಲಿರುವ ಅನೇಕ ಸ್ಕೂಲುಗಳಿಗೆ ರಜಾ ಕೊಡಬೇಕಾಗಿ ಬಂದರೆ ಆಗ ಸಂಬಂಧಪಟ್ಟ ಅಧಿಕಾರಿಗಳ ಅನುಮತಿಯನ್ನು ಪಡೆದು ಎಲ್ಲಾ ಸ್ಕೂಲಿನವರಿಗೂ ರಜಾ ಕೊಡುವಂತೆ ಏರ್ಪಡಿಸಬೇಕು. ಇದರಿಂದ ರಜಾ ಪಡೆಯದಿದ್ದ ಸ್ಕೂಲು ವಿದ್ಯಾರ್ಥಿಗಳಿಗೆ ತೊಂದರೆ ಕೊಡುವುದಕ್ಕೆ ಅವಕಾಶವಿರುವುದಿಲ್ಲ.

ಉಪಾಧ್ಯಾಯಿನಿಯರು

ಪ್ರಾಥಮಿಕ ಮತ್ತು ಮಾಧ್ಯಮಿಕ ಪಾಠಶಾಲೆಗಳ [redacted] ...ಶಿಕ್ಷಣವಾದರೆ ಹೈಸ್ಕೂಲುಗಳಲ್ಲೂ ಉಪಾ[redacted] ...ಬೇಕೆಂಬ ಸಲಹೆಯೊಂದು ಬಂದಿದೆ. ಪ್ರಾಥ[redacted]

...ವ್ಯಗಳು ನಡೆಯುವ ಸಂಭವವಿಲ್ಲ. ಆಗಲೂ ನ್ಯಾಯಕ್ಕೆ ಭಂಗ ತರುವಂತಹ ಒಳ್ಳೇ ನಡತೆಯನ್ನು ತೋರಿಸಬೇಕಾಗಿರುವುದರಿಂದಲೂ, ... ಉತ್ತಮವಾದ ಶಿಕ್ಷಣ ಕೊಡಬೇಕೆಂದು ... ಈ ಸಲಹೆಯನ್ನು ಇವರು ಅನುಮೋದಿಸಿದ್ದಾರೆ.

ಹೆಚ್ಚಿಗೆ ಬಂಡವಾಳಗಳು

ವಿದ್ಯಾರ್ಥಿಗಳಲ್ಲಿ ಶಿಸ್ತುಮತ್ತು ಭಾವನೆಯುಂಟಾಗುವಂತಹ ಕಾರ್ಯಕಲಾಪಗಳಿಗೆ ಅವಕಾಶ ಕೊಡುವುದರ ಅಗತ್ಯವನ್ನು ಕುರಿತು ನಾವು ಪ್ರಸ್ತಾಪಿಸಿದ್ದೇವೆ. ವಿದ್ಯಾರ್ಥಿಗಳ ಬೌದ್ಧಿಕ ಮತ್ತು ಸಾಮಾಜಿಕ ಗುಣಗಳು ಬೆಳೆಯಬೇಕಾದರೆ ಅಂತಹ ಶಿಕ್ಷಣವು ಅಗತ್ಯ. ವ್ಯವಸ್ಥಿತವಾದ ಆಟಗಳು ಸಾಮಾಜಿಕ ಮತ್ತು ನೈತಿಕ ಗುಣಗಳ ಬೆಳವಣಿಗೆಗೆ ಸಹಾಯಮಾಡುವುದರಿಂದ ಪ್ರತಿಯೊಂದು ಸ್ಕೂಲಿನಲ್ಲೂ ಒಂದು ಸ್ವಂತದ ಆಟದ ಬೈಲಿರಬೇಕು. ಆಟಗಳು ಚರ್ಚೆಗಳು ಸಂಗೀತದಿಂದೊಡಗೂಡಿದ ನಾಟಕಾಭಿನಯಗಳು, ಮತ್ತು ಹೊರ ಪಯಣಗಳು ಇವೆಲ್ಲಾ ಈ ಶಿಕ್ಷಣಕ್ಕೆ ಸಾಧನಗಳಾಗಿವೆ. ಈ ಭಾಗದಲ್ಲಿ ವಿದ್ಯಾರ್ಥಿಗಳಿಗೆ ಸಹಾಯಕರಾಗಿರುವುದೇ ಉಪಾಧ್ಯಾಯರ ಮುಖ್ಯ ಉದ್ದೇಶವಾಗಿರಬೇಕು. ಈ ಅಂಶವನ್ನು ಮಹಾರಾಜಾ ಕಾಲೇಜಿನ ವಿದ್ಯಾರ್ಥಿಗಳ ಪ್ರತಿನಿಧಿಗಳು ಒತ್ತಿ ಹೇಳಿರುವರು.

ವಿದ್ಯಾರ್ಥಿಗಳೂ ರಾಜಕೀಯ ವಿಚಾರಗಳೂ

ವಿದ್ಯಾರ್ಥಿಗಳಿಗೂ ರಾಜಕೀಯ ವಿಚಾರಗಳಿಗೂ ಇರುವ ಸಂಬಂಧದ ವಿಚಾರದಲ್ಲಿ ಅನೇಕ ಅಭಿಪ್ರಾಯಗಳು ಹೊರಬಿದ್ದಿವೆ. ಈ ಅಭಿಪ್ರಾಯಗಳನ್ನೆಲ್ಲಾ ನಾವು ಸಾವಧಾನವಾಗಿ ಆಲೋಚಿಸಿ ಹೈಸ್ಕೂಲು ಮತ್ತು ಕಾಲೇಜು ವಿದ್ಯಾರ್ಥಿಗಳು ರಾಜಕೀಯ ಹಾಗು ಸಾಮಾಜಿಕ ವಿಷಯಗಳನ್ನು ತಮ್ಮ ಚರ್ಚಾಸಭೆಗಳಲ್ಲಿ ಚರ್ಚಿಸಲು ಅವಕಾಶ ಕೊಡಲ್ಪಡಬೇಕೆಂದು ಖಂಡಿತವಾಗಿ ಹೇಳುತ್ತೇವೆ. ರಾಜಕೀಯ ತತ್ವಗಳು ಮತ್ತು ಅವುಗಳ ಆಚರಣೆ ಈ ಎರಡನ್ನೂ ವಿಶ್ವವಿದ್ಯಾಲಯದ ಶಿಕ್ಷಣದಲ್ಲಿ ಪ್ರತ್ಯೇಕಿಸುವುದಕ್ಕಾಗುವುದಿಲ್ಲ. ಪ್ರತ್ಯಕ್ಷ ರಾಜಕೀಯ ವಿಚಾರಗಳ ... ದವುಗಳಿದ್ದರೂ ಮುಂದಿನ ವಿದ್ಯಾಶಾಲೆಗಳಲ್ಲಿ ಅವುಗಳಿಗೊಂದು ಸ್ಥಳ ಇದೆ. ಇದೆ. ಇಂಥಾ ಚರ್ಚೆಗಳಲ್ಲಿ ಉಪಾಧ್ಯಾಯರುಗಳೂ, ಪ್ರೊಫೆಸರುಗಳೂ ಭಾಗಿಗಳಾಗಿ ... ಸ್ಪರ್ಧೆಯಾಗುವ ವಿಷಯಗಳ ವಿಚಾರದಲ್ಲಿ ವಿದ್ಯಾರ್ಥಿಗಳಿಗೆ ತಕ್ಕ ಸಲಹೆಯ ... ಅವರಲ್ಲಿರಬಹುದಾದ ತಪ್ಪಭಿಪ್ರಾಯಗಳನ್ನು ಹೋಗಲಾಡಿಸ... ರೀತಿ ಉಪಾಧ್ಯಾಯರುಗಳು ಚರ್ಚೆಗಳಲ್ಲಿ ಭಾಗಿಗಳಾಗುವುದು ... ಈ ... ತಮ್ಮ ಅಭಿಪ್ರಾಯವನ್ನು ಕೂಲಂಕಷವಾಗಿ ಹೊರಗೆಡಹು... ವಿದ್ಯಾರ್ಥಿ... ರೊಡನೆ ಸಂಬಂಧ ಬೆಳೆಸಲು ವಿದ್ಯಾರ್ಥಿಗಳಿಗೆ ... ವರು ಪ್ರತ್ಯಕ್ಷ ... ವುದರಿಂದ ಸ್ಕೂಲು ಅಥವಾ ಕಾಲೇಜು ವಿದ್ಯಾರ್ಥಿಗಳು ... ಅವಕಾಶ ಕೊಡಬೇಕಾಗಿ... ಬರಮಾಡಿಕೊಂಡು ಅವರು ತಮ್ಮ ... ಪ್ರತ್ಯಕ್ಷ ... ಉಪನ್ಯಾಸಗಳನ್ನು ಮಾಡುವಂತೆ ಏರ್ಪಡಿಸ... ಸ್ಕೂಲು ಅಥವಾ ಕಾಲೇಜಿನಲ್ಲಿ ... ನಿಷ್ಪಕ್ಷತೆಯನ್ನು ಮಾಡಿಕೊಳ್ಳುವ ಕಾಲ ... ಬೇಕು. ಆದರೆ ವಿದ್ಯಾರ್ಥಿದೆಸೆಯು ... ಉಂಟುಮಾಡುವಂತಹ ... ವಾದುದರಿಂದ ತಮ್ಮ ವಿದ್ಯಾಭ್ಯಾಸಕ್ಕೆ ... ಗಮನ ಕೊಡಲಾಗದೆಂಬುದನ್ನು ರಾಜಕೀಯ ವಿಚಾರಗಳಿಗೆ ವಿದ್ಯಾರ್ಥಿಗಳ ... ದನ್ನು ಅವರಿಗೆ ವಿಶದವಾಗಿ ತಿಳಿಸಬೇಕು.

ವಿದ್ಯಾರ್ಥಿಗಳ ಸಹಾನುಭೂತಿ

ಪಾಠಶಾಲೆಯ ನಿಯಮ ನಿಷ್ಠೆಗಳನ್ನು ಕಾಪಾಡಿಕೊಂಡು ಹೋಗುವ ವಿಚಾರದಲ್ಲಿ ಸಾಮಾನ್ಯವಾಗಿ ವಿದ್ಯಾರ್ಥಿಗಳಿಗೆ ಎಡೆಕೊಡುವುದಿಲ್ಲ. ಪಾಠಶಾಲೆಯ ನಿಯಮ ನಿಬಂಧನೆಗಳು ಉಪಾಧ್ಯಾಯರ ಇಷ್ಟವೆಂದೂ, ತಮ್ಮನ್ನು ದಂಡ ಹಿಡಿಯುವುದು ಉಪಾಧ್ಯಾಯರ ಕೆಲಸವೆಂದೂ, ತಾವು ಯಾವ ಪಾತ್ರವೂ ಇಲ್ಲದೆ ವಿಧೇಯತೆಯಿಂದ ನಡೆದುಕೊಳ್ಳುವುದು ತಮ್ಮ ಕರ್ತವ್ಯವೆಂದೂ ವಿದ್ಯಾರ್ಥಿಗಳು ಈಗ ಭಾವಿಸಿದ್ದಾರೆ. ನವೀನ ವಿದ್ಯಾಭ್ಯಾಸ ಕ್ರಮಾನುಸಾರವಾಗಿ ಪಾಠಶಾಲೆಯ ನಿಯಮ ನಿಷ್ಠೆಗಳನ್ನು ಕಾಪಾಡುವುದರಲ್ಲಿ ವಿದ್ಯಾರ್ಥಿಗಳ ಭಾಗ ವಹಿಸುವಂತೆ ಅವಕಾಶ ಕೊಡಬೇಕಾಗಿದೆ. ಇದರಿಂದ ವಿದ್ಯಾರ್ಥಿಗಳಲ್ಲಿ ತಮ್ಮ ಸ್ವಂತ ಜವಾಬ್ದಾರಿಯ ಮೇಲೆ ಹದ್ದುಬಸ್ತು ಉಂಟಾಗುವುದಲ್ಲದೆ ಅವರು ಒಟ್ಟು ಪಾಠಶಾಲೆಯ ದೃಷ್ಟಿಯಿಂದ ಆಲೋಚಿಸಲು ಅವಕಾಶವಾಗುವುದು. ಇದಕ್ಕಾಗಿ ಬರೋಡಾಗಳಲ್ಲೂ ಹಿಂದೂಸ್ಥಾನದಲ್ಲೂ ಪಾಠಶಾಲೆಗಳಲ್ಲಿ ಸ್ವಾಯತ್ತ ಕ್ರಮವು ಆಚರಣೆಯಲ್ಲಿದೆ. ಬೆಂಗಳೂರಿನ ... ಪಾಠಶಾಲೆಯಲ್ಲಿ ಪ್ರತಿಯೊಂದು ತರಗತಿಯಿಂದ ಐದುಮಂದಿ ವಿದ್ಯಾರ್ಥಿ ಪ್ರತಿನಿಧಿಗಳಿಂದೊಡಗೂಡಿದ ... ಏರ್ಪಟ್ಟಿದೆ ... ಈ ... ನಿಷ್ಠೆಗಳನ್ನು ನೋಡಿಕೊಂಡು ಬರುವುದ ಹೆಚ್ಚಿಗೆ ... ಉಪಾಧ್ಯಾಯರ ಸಲಹೆ ಪಡೆದು ಏರ್ಪಡಿಸುವುದು ... ಈ ಪದ್ಧತಿಯ ತೃಪ್ತಿಕರವಾಗಿ ... ನಡೆದಿದೆಯೆಂದೂ ಕೇಳಿದ್ದೇವೆ. ಇದರಿಂದ ಪ್ರತಿನಿಧಿಗಳ ಮೂಲಕ ಎಲ್ಲಾ ವಿದ್ಯಾರ್ಥಿಗಳ ಸಹಾನುಭೂತಿಯನ್ನು ಪಡೆಯುವುದಕ್ಕೆ ಅವಕಾಶವಿರುವ ಕಾರಣ ಅನುಕೂಲವಾದ ಇಡಗಳಲ್ಲಿ ಹೈಸ್ಕೂಲುಗಳಲ್ಲಿ ಈ ಪದ್ಧತಿಯನ್ನು ಆಚರಣೆಗೆ ತರುವುದು ಉತ್ತಮವಾಗಿದೆಯೆಂದು ಭಾವಿಸುತ್ತೇವೆ. ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಪ್ರತಿನಿಧಿಸಭೆಗಳನ್ನು ಸ್ಥಾಪಿಸುವುದು ಅನುಕೂಲ. ಇಂಥಾ ಸಭೆಯೊಂದು ಮೈಸೂರು ಮಹಾರಾಜ ಕಾಲೇಜಿನಲ್ಲಿ ಸ್ಥಾಪಿಸಲ್ಪಟ್ಟಿದೆಯೆಂದು ಕೇಳುತ್ತೇವೆ. ಈ ಸಭೆಯವರು ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನು ಚರ್ಚಿಸಿ ತಮ್ಮ ಅಭಿಪ್ರಾಯಗಳನ್ನು ಪ್ರಿನ್ಸಿಪಾಲರಿಗೆ ತಮ್ಮ ಅಂತಿಗಳನ್ನು ಮೇಲ್ಪಟ್ಟವರಿಗೆ ಒಪ್ಪಿಸಿದ್ದರೆ ಅವರ ಇವುಗಳಲ್ಲಿ ಸಹಾನುಭೂತಿಯನ್ನೂ ತೋರಿಸುವರು.

ಮಿಲಿಟರಿ ಶಿಕ್ಷಣ

ವಿದ್ಯಾರ್ಥಿಗಳಲ್ಲಿ ನಿಧೇಯತೆಯ ಅಭಿವೃದ್ಧಿಗೆ ಬರಬೇಕಾದರೆ ಕಾಲೇಜು ವಿದ್ಯಾರ್ಥಿಗಳಿಗೆ ಮಿಲಿಟರಿ ಶಿಕ್ಷಣವನ್ನು ಕೊಡುವುದು ಅವಶ್ಯಕವಾಗಿದೆ. ಮೈಸೂರು ಯೂನಿವರ್ಸಿಟಿ ಸೆನೆಟ್‌ನವರು ಈ ಶಿಕ್ಷಣವನ್ನು ಕಡ್ಡಾಯವಾಗಿ ನಡೆಸಬೇಕೆಂದು ತೀರ್ಮಾನಿಸಿರುವಂತೆ ಕೇಳುತ್ತೇವೆ. ಇದರಿಂದ ವಿದ್ಯಾರ್ಥಿಗಳಲ್ಲಿ ಧೈರ್ಯ, ಸ್ವಶಕ್ತಿಯಲ್ಲಿ ನಂಬಿಕೆ ಈ ಗುಣಗಳು ಉಂಟಾಗುವುದಲ್ಲದೆ ಪ್ರಜೆಯಾದವನ ಕರ್ತವ್ಯವನ್ನೂ ಜವಾಬ್ದಾರಿಯನ್ನೂ ಸರಿಯಾಗಿ ತಿಳಿದುಕೊಳ್ಳುವುದಕ್ಕೆ ಅವಕಾಶವಾಗುವುದು.

ಸ್ಕೌಟಿಂಗ್

ಸ್ಕೌಟ್ ಪದ್ಧತಿಯ ಒಹಳ ಪ್ರಯೋಜನಕಾರಿಯಾದುದೆಂದು ಎಲ್ಲಾ ಸಾಕ್ಷಿಗಳ ಅಭಿಪ್ರಾಯವಾಗಿದ್ದರೂ ಸ್ಕೌಟ್ ಪದ್ಧತಿಯು ಈಗ ಅಷ್ಟು ಪ್ರಚಾರದಲ್ಲಿಲ್ಲದಿರುವುದಕ್ಕೆ ಪಟ್ಟಣಗಳ ಸ್ಕೌಟ್ ಮಾಸ್ಟರುಗಳು ಹೆಚ್ಚು ಆಸಕ್ತಿಯನ್ನು ತೆಗೆದುಕೊಳ್ಳದಿರುವುದೂ ಅವರಿಗೆ ಇಲಾಖೆಯವರು ಪ್ರೋತ್ಸಾಹ ಕೊಡದಿರುವುದೂ, ಬಡ ವಿದ್ಯಾರ್ಥಿಗಳು ಯೂನಿಫಾರಂ ಖರೀದಿ ಮಾಡಿಕೊಳ್ಳಲು ಅವಕಾಶವಿಲ್ಲದಿರುವುದೂ ಕಾರಣಗಳೆಂದು ಹೇಳಲಾಗಿದೆ. ಆದುದರಿಂದ ಸರ್ಕಾರದವರು ಹೆಚ್ಚಿಗೆ ಗ್ರಾಂಟ್ ಕೊಡುವುದೇ ಮೊದಲಾದ ಕಾರ್ಯಗಳಿಂದ ಈ ಕ್ರಮವು ಹೆಚ್ಚಾಗಿ ಪ್ರಚುರಕ್ಕೆ ಬರುವಂತೆ ಮಾಡಬೇಕು.

ಮತ ಮತ್ತು ನೀತಿ ಬೋಧೆ

ಮತ ಮತ್ತು ನೀತಿಬೋಧೆಯು ಅವಶ್ಯಕ [redacted] ...ದುಗಳ ಮತ್ತು ದೊಡ್ಡ ಚರಿತ್ರೆಗಳ ಮೂಲಕ[redacted] ...ಯು ಸರ್ವಮತಗಳ ಸಾರಾಂಶವಾಗಿರಬೇಕ[redacted]

...ವ್ಯರ ವಿಚಾರದಲ್ಲಿ ಎಲ್ಲಾ ಸ್ಕೂಲು ಮತ್ತು ಕಾಲೇಜುಗಳಲ್ಲೂ ಶಿಕ್ಷಣ ಕೊಡುವುದೇ ಲಕ್ಷ್ಯವಾಗಿದೆ.

ಮುಷ್ಕರಗಳು ನಡೆದಾಗ ವಿಧಿಸ ತಕ್ಕ ಶಿಕ್ಷೆ

ಮೇಲೆ ಹೇಳಿರುವ ಸಲಹೆಗಳನ್ನು ಕಾರ್ಯರೂಪಕ್ಕೆ ತಂದರೆ ಮುಷ್ಕರಗಳು ಕಡಿಮೆಯಾಗುವುವು. ಸಕ್ರಮವಾದ ವಿದ್ಯಾರ್ಥಿಗಳ ಅರಿಕೆಗಳಿಗೆ ತಕ್ಕ ಗಮನ ಕೊಡಬೇಕು. ರಾಜರು ವಿದ್ಯಾರ್ಥಿಗಳಿಗೆ ಮಹಾಜನರು ತಂದೆತಾಯಿಗಳು ಗೊತ್ತಾಗದೆ ಅಂಥಾ ಸಂದರ್ಭಗಳಲ್ಲಿ ವಿದ್ಯಾರ್ಥಿಗಳ ಅರಿಕೆಗಳನ್ನು ನಿರಾಕರಿಸಿಕೊಡಬೇಕು. ವಿದ್ಯಾರ್ಥಿಗಳು ತಕ್ಕ ವಿಧೇಯರಾಗಿ ನಡೆದುಕೊಳ್ಳಬೇಕು.

ಅವಿಧೇಯ ನಡವಳಿಕೆಯುಳ್ಳ ವಿದ್ಯಾರ್ಥಿಗಳನ್ನು ಶಿಕ್ಷಿಸುವುದಕ್ಕೆ ಸ್ಕೂಲಿನವರಿಗೆ ಬೇಕಾದಷ್ಟು ಅಧಿಕಾರವಿದೆ. ಜುಲ್ಮಾನೆ ಹಾಕುವುದೂ, ವಿದ್ಯಾರ್ಥಿವೇತನವನ್ನು ವಜಾಮಾಡುವುದೂ, ಬಹುಮಾನ ಕೊಡದಿರುವುದೂ, ಹಾಜರಿಯನ್ನು ಹೊಡೆದುಹಾಕುವುದೂ, ಡಿಸ್ಮಿಸ್ ಮಾಡುವುದೂ ಇವೇ ಮುಂತಾದ ಶಿಕ್ಷೆಗಳೇ ಸಾಕಾಗಿವೆ. ಮುಷ್ಕರಗಳು ನಡೆದಾಗ ಮುಖಂಡರುಗಳಿಗೆ ಹೆಚ್ಚಿಗೆ ಶಿಕ್ಷೆಯನ್ನು ವಿಧಿಸಬೇಕು. ಅವರ ಅನುಯಾಯಿಗಳನ್ನು ಧಮಕಿ ಹಾಕಿ, ಎಚ್ಚರಿಕೆ ಹೇಳುವುದು ಇವುಗಳಿಂದ ತಿದ್ದಬೇಕು. ಎಲ್ಲಾ ಪಾಠಶಾಲೆಗಳವರೂ ಮುಷ್ಕರ ಹೂಡಿದರೆ ಆಗ ಯಾವ ವಿಧವಾದ ಶಿಕ್ಷೆಯನ್ನು ವಿಧಿಸಲಾಗದೆಂದು ಕೆಲವು ಮಂದಿ ಸಾಕ್ಷಿಗಳ ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಹೆಚ್ಚಿನ ಸಾಕ್ಷಿಗಳು ಅಂಥಾ ಸಂದರ್ಭದಲ್ಲಿ ಶಿಕ್ಷೆ ವಿಧಿಸಬೇಕೆಂದು ಪಟ್ಟಿರುವ ಅಭಿಪ್ರಾಯವನ್ನು ನಾವು ಅನುಮೋದಿಸುತ್ತೇವೆ. ಅನೇಕ ಸ್ಕೂಲುಗಳಲ್ಲಿ ಮುಷ್ಕರ ನಡೆದರೆ ಶಿಕ್ಷೆಯು ಎಲ್ಲಾ ಸ್ಕೂಲುಗಳಿಗೂ ಒಂದೇ ವಿಧವಾಗಿರಬೇಕು. ಆದುದರಿಂದ ಕಾಲೇಜುಗಳಲ್ಲಿ ಮುಷ್ಕರ ನಡೆದರೆ ಎಂತಹ ಶಿಕ್ಷೆಯನ್ನು ವಿಧಿಸಬೇಕೆಂಬುದನ್ನು ವೈಸ್‌ಚಾನ್ಸಲರ್‌ರೂ ಸ್ಕೂಲುಗಳಲ್ಲಿ ಮುಷ್ಕರಗಳು ನಡೆದರೆ ಎಂತಹ ಶಿಕ್ಷೆ ವಿಧಿಸಬೇಕೆಂಬುದನ್ನು ವಿದ್ಯಾಭ್ಯಾಸದ ಡೈರಕ್ಟರೂ ನಿರ್ಧರಿಸಬೇಕು. ಅಗತ್ಯವಾದರೆ ಸಿವಿಲ್ ಅಧಿಕಾರಿಗಳ ಸಹಾಯವನ್ನೂ ಪಡೆದು ಅವಿಧೇಯರಿಗೆ ಶಿಕ್ಷೆಯನ್ನು ವಿಧಿಸಬೇಕು.

ಅಂತ್ಯದಲ್ಲಿ ವಿದ್ಯಾರ್ಥಿಗಳ ನ್ಯಾಯವಾದ ಅರಿಕೆಗಳಿಗೆ ಮನ್ನಣೆಯನ್ನು ಸ್ಕೂಲಿನವರು ತೋರಬೇಕಾಗಿದೆ. ಮಹಾಜನರೂ ಪತ್ರಿಕೆಗಳವರೂ ವಿದ್ಯಾರ್ಥಿಗಳ ಅಭಿವೃದ್ಧಿಯ ದೃಷ್ಟಿಯಿಂದ ಸ್ಕೂಲಿನವರೊಡನೆ ಸಹಕರಿಸಬೇಕಾಗಿದೆ.

ಪ್ರಕಟನೆ.

ನಮ್ಮಲ್ಲಿ ಸಿನೋಮೋಕ್ಕೆ ಸಂಬಂಧಪಟ್ಟ ಪ್ರಾಕಿ ಕೆಂಪೆನಿಯ ಪ್ರೊಜೆಕ್ಟರ್ ಮಿಶ್ಯನ್, ಆರ್ಕ್‌ಲ್ಯಾಂಪು ಡೈನಮೋ, ಎಲಿಕ್ಟ್ರಿಕಲ್ ಫಿಟಿಂಗ್ಸು ವಗೈರೆ ಎಲ್ಲಾ ಸಾಮಾನುಗಳೂ ಕೆಲವು ಕಾಮಿಕ್ ಫಿಲಂಗಳೂ ಸಹ ಖರೀದಿಗೆ ದೊರೆಯುತ್ತವೆ. ಎಲ್ಲಾ ಸಾಮಾನುಗಳ ಸೆಟ್ಟು ತಯಾರಿರುವುದರಿಂದ ಈ ದಿವಸವೇ ಸಿನೋಮಾ ನಡೆಸಬಹುದು. ಈ ಸಾಮಾನುಗಳು ಸೋವಿ ಕಿಮ್ಮತ್ತಿನಲ್ಲಿ ಸಿಗುತ್ತವೆಯಾದ್ದರಿಂದ ಈ ಸಮಯವನ್ನು ತಳೆದುಕೊಳ್ಳಬಾರದಾಗಿ ಕೋರಿಕೆ

Siddaradhya
Iirukappanavia mutt
Davangere

(13 .1



18

೧೯೩೯ ನೆಯ ಇಸವಿ ಏಪ್ರಿಲ್ ತಾ|| ೧೩ ರಿಂದ ೧೯೩೯ ನೆಯ ಇಸವಿ ಏಪ್ರಿಲ್ ತಾ|| ೧೯ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೬೧ ನೆಯ ಶುಕ್ಲಸಂವತ್ಸರದ ಚೈತ್ರ ಶುದ್ಧ ಚೌತಿಯಿಂದ ಚೈತ್ರ ಶುದ್ಧ ದಶಮಿ ವರೆಗಿನ ಪಂಚಾಂಗ

ತಾ||	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮೋಕ ಮಾಸ
13	ಗುರು	ಚೌತಿ	19-16	ರೋಹಿಣಿ	61 5	1
14	ಭಾನು	ಪಂಚಮಿ	24-12	ಮೃಗ	45 45	2
15	ಸೋಮ	ಷಷ್ಠಿ	18 18	ಆರ್ದ್ರಾ	35 10	3
16	ಮಂಗಳ	ಸಪ್ತ	13 15	ಪುನ	39 35	4
17	ಬುಧ	ಅಷ್ಟ	6 38	ಪುಷ	35-10	5
18	ಗುರು	ನವ	12-53 18	ಆಶ್ಲೇ	32 30	6
19	ಶುಕ್ರ	ದಶ	57-2	ಮಖ	30 5	7

(1) ಮಳೆ ನಕ್ಷತ್ರ ಅಶ್ವಿನಿ ೧ ನೆಯ ಪಾದ (2) ಮಳೆ ನಕ್ಷತ್ರ ಅಶ್ವಿನಿ ೨ ನೆಯ ಪಾದ (3) ಶ್ರೀರಾಮನವಮಿ

ಮೈಸೂರು ಸ್ಟಾರ್ ವಿದ್ಯಾಶಾಲೆಯ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಮೈಸೂರ್ ಸ್ಟಾರ್

ಪ್ರತಿ ಶನಿವಾರ ಪ್ರಕಟಿಸಲ್ಪಡುವದು.

[ಸ್ಥಳದವರಿಗೆ ವಾರ್ಷಿಕಚಂದಾ ೨-೧೦-೦] [ಪರಸ್ಥಳದವರಿಗೆ ೩-೮-೦] [ಲೈಬ್ರರಿಗೆ ೬-೮-೦]

[ಸಂಪುಟ ೪೨] ಮೈಸೂರು ಸ್ಟಾರ್ ಸನ್ ೧೯೨೮ ನೆಯ ಇಸವಿ ಏಪ್ರಿಲ್ ತಾರೀಖು ೨೦ ನೆಯ ಶನಿವಾರ [ಸಂಚಿಕೆ ೧೬

ಬಸವೇಶ್ವರ ಜಯಂತಿಗಾಗಿ ಖರೀದಿ ಕಡಿಮೆ ಮಾಡಿದೆ.

ಶ್ರೀ ಬಸವೇಶ್ವರ ಜನನ

ರವಿವರ್ಮಾ ಪ್ರೆಸ್ಸಿನಲ್ಲಿ ತಯಾರಿಸಿದ ಶ್ರೀ ಬಸವೇಶ್ವರ ಜನನದ 14' × 20' ಸೈಜಿನ ಆಯಿಲ್ ಕಲರ್ ಚಿತ್ರಪಟವನ್ನು 0-8-0 ಕಳುಹಿಸುವವರಿಗೆ 1 ಪಟವನ್ನೂ 0-14-0 ಕಳುಹಿಸುವವರಿಗೆ 2 ಪಟವನ್ನೂ 4-0-0 ರೂಪಾಯಿ ರವಾನಿಸುವವರಿಗೆ 12 ಕಾಪಿಗಳ ನ್ನು ಪೋಸ್ಟೇಜು ಖರ್ಚೇ ವಹಿಸಿ ಫ್ರೀ ಪಾರ್ಸಲ್ ಮೂಲಕ ರವಾನಿಸಲಾಗುತ್ತೆ.

ವಿ. ಪಿ. ಮೂಲಕ ರವಾನಿಸಿದಲ್ಲಿ ಪೋಸ್ಟೇಜು ದುಬಾರಿಯಾಗುತ್ತಾದ್ದರಿಂದ ವಿ. ಪಿ. ಮೂಲಕ ರವಾನಿಸಿ ರೆಂದು ಬರತಕ್ಕ ಆರ್ಡರ್‌ಗಳಿಗೆ ಸಿಗಾ ಕಳುಹುವುದಿಲ್ಲ.

ವಿಳಾಸ ಎಂ. ಎಸ್. ಗಿಡ್ಡಪ್ಪ ಅಂಡ ಬ್ರದರ್ಸ್, ಹಾರ್ಡ್ವೇರ್ ವ್ಯಾಪಾರಿಗಳು, ಮೈಸೂರು. [ ]

ವೀರಶೈವಮತಗ್ರಂಥಗಳು

ಶಿವಾಧಿಕ್ಯಶಿಖಾಮಣಿಃ.

ಪ್ರತಿ ಸೈವೆಲ

ಇದು ತೋಂಟದಲ್ಲಿ ಶ್ರೀಮದ್ರೇಣುಕಾಚಾರ್ಯರಿಗೂ ವೈಷ್ಣವರಿಗೂ ನಡೆದ ವಾದ ಪ್ರತಿಪಾದಕರೂಪವಾಗಿದೆ. ಇದರಲ್ಲಿ ಶಿವೋತ್ಕರ್ಷ ಲಿಂಗಧಾರಣ ಆಪಾದಿತ ಊರ್ಧ್ವಪುಂಡ್ರನಿಷೇಧ ವಿಷ್ಣುಶಾರಸಂಹಾರ ಶಂಖ ಚಕ್ರ ಮುದ್ರಾಧಾರಣ ನಿಷೇಧ ಪ್ರದರ್ಶಕಾಲದಲ್ಲಿ ವಿಷ್ಣು ದರ್ಶನಾಧಿಕ್ಯಾರವೇ ಮೊದಲಾದ ಅಸಾಧಾರಣ ಗಳಾದ ನಾನಾ ವಿಷಯಗಳ ಸಪ್ರಮಾಣವಾಗಿ ಬೋಧಿಸಲ್ಪಟ್ಟಿವೆ. ಇದನ್ನು ವೀರಶೈವರು ಅವಶ್ಯವಾಗಿ ನೋಡಬೇಕಾಗಿದೆ.

ನ್ಯಾಯಶತಕಂ ಇದರ ಪ್ರತಿಯೊಂದು ಶ್ಲೋಕದಲ್ಲೂ ... ಮೊದಲಾದ ಒಂದೊಂದು ನ್ಯಾಯವನ್ನು ... ವಿದ್ವಜ್ಜನರಿಗೆ ಆನಂದವನ್ನುಂಟು ಮಾಡ ... ಶಿವಾಧಿಕ್ಯ ... ಅತ್ಯುತ್ತಮವಾಗಿದೆ. ಬೆಲೆ ೦-೨-೦

ವಿ. ಪಿ. ಖರ್ಚು ಪ್ರತ್ಯೇಕ

ಶ್ರೀ ಸೋಮಶೇಖರಸ್ವಾಮಿಗಳು,

ನಮಶ್ಶಿವಾಯಮಠ,

[ ] ಬಸಪ್ಪಾಜಿ ಗಾರ್ಡನ್ ಮೈಸೂರು

"ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತರ" ಆಯುರ್ವೇದೀಯ ಸಿದ್ಧೌಷಧಗಳು

ಲೋಕಾಮಯಹರ ಕಸ್ತೂರೀ ಮಾತ್ರೆಗಳು

ಈ ಮಾತ್ರೆಗಳನ್ನು ಪ್ರತಿದಿನವೂ ... ಉಪಯೋಗಿಸುತ್ತಿದ್ದರೆ ಆಹಾರ ನೀರು ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

... ಮೊದಲು ಯಾವ ವಯಸ್ಸಿನವರಿಗೂ, ಶೀತ ನೆಗಡಿ ಕೆಮ್ಮು ... ಶೀತವಾತಜ್ವರ ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ.

300 ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣೆ

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ನಮ್ಮ ವಿಳಾಸವನ್ನೂ ಲೋಕಾಮಯಹರ ಕಸ್ತೂರೀ ಮಾತ್ರೆ ಎಂಬ ಹೆಸರನ್ನೂ ನೋಡಿ ಕೊಂಡುಕೊಳ್ಳಿರಿ.

ವೈಶ್ವಾನರಾಸವ

(ಕಾಲರಾ ವಾಂತಿಭೇದಿಗೆ ಸಿದ್ಧೌಷಧ)

ಮೂತ್ರವು ಕಟ್ಟಿಹೋದಾಗಲಿ ಹೊಟ್ಟೆಯು ಉಬ್ಬಿರುವಾಗಲಿ ... ವೊದಲೇ ಸೇವಿಸಿದರೆ ರೋಗವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1ಕ್ಕೆ ರೂ 1—0—0

ಲಕ್ಷ್ಮೀವಿಲಾಸರಸ

(ಪ್ಲೇಗಿಗೆ)

ಪತ್ರಾರು ವರ್ಷಗಳಿಂದ ... ಪ್ಲೇಗು ರೋಗಿಗಳಿಗೆ ರೋಗವನ್ನು ... ಗುಣಪಡಿಸಿರುತ್ತದೆ. ಪ್ಲೇಗಿಗೆ ಮಾತ್ರವಲ್ಲದೆ ... ಜ್ವರಗಳಿಗೂ ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ. ಸೀಸೆಯ ಬೆಲೆ 1ಕ್ಕೆ ರೂ 1—0—0

ಶ್ರೀನಿವಾಸತೈಲ

ಪ್ಲೇಗ ರೋಗಿಯ ಪ್ರತಿ ಗಂಟುಗಳಿಗೂ ... ಔಷಧ ಸೀಸೆ 1ಕ್ಕೆ ರೂ 0—8—0

ಭಿಷಗ್ರತ್ನ

ಶ್ರೀ ನಿವಾಸಾಯುರ್ವೇದಶಾಲಾ [redacted] ...ಪಂಡಿತರ

ವ್ಯಾಪಾರಶಾಖೆ ... [redacted]

ಚಿಕ್ಕಪೇಟೆ, ಬೆಂಗಳೂರು ಸಿಟಿ

೧೦೦೦ ರೂಪಾಯಿ ಇನಾಮು

ಪೊರಸಿಯಲ್ಲಿ ಆಯುರ್ವೇದೀಯ ಪ್ರಸಿದ್ಧ ವೈದ್ಯ ವ್ಹಿ. ಎಸ್. ಶಾಪಸೆ, ಇವರ

ಅಲ್ಪವಯಸ್ಸಾಗಿ ... ನಾಗ ... ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ... ಕಾಯು ... ವಜ್ರಾಂಗ ಸುಂದರಪಾಕ. (ರಿಜಿಸ್ಟರ್ಡ) ...

ಈ ಪಾಕಸೇವನೆಯಿಂದ ಎಲ್ಲಾ ಧಾತುಗಳು ... [illegible]

[೨೦—16] ಪತ್ತೆ:—ಮಾಲಿಕ ವೈದ್ಯ ವ್ಹಿ. ಎಸ್. ಶಾಪಸೆ ಮು. ಪೋ. ಮಿರಜ.

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	(ವಿ. ಪಿ. ಸೇರಿ)		ಕ್ರಯ	(ವಿ. ಪಿ. ಸೇರಿ)
...ವ ಶಿವಪೂಜಾವಿಧಿ	೦—೧೨—೦	೦—೩—೦	ವ್ರತಸಂಚಿಕೆ	೦—೪—೦	೦—೯—೦
...ವೀರಶೈವ ವಿವಾಹವಿಧಿ	೦—೯—೦	೦—೧೩—೦	ಗುರುಶಂಕರಲಿಂಗೇಶ್ವರಚರಿತೆ	೦—೧—೦	೦—೬—೦
...ಬಾ	೦—೪ [redacted]	[redacted] —೦	ಬಸವೇಶ್ವರವಚನ	೦— [redacted]	[redacted] ೨—೦
...ಲಿಚರಿತ್ರೆ	೦— [redacted]	[redacted] ೦	ಸಟೀಕ ಕಲ್ಯಾಣಚನ್ನಬಸವ ...	೦ [redacted]	[redacted] —೦
...	೦— [redacted]	[redacted] ೦	ಸಟೀಕ ಶಿವಸ್ತವ...	೧ [redacted]	[redacted] —೦

ಮೈಸೂರು ಸ್ಟಾರ್

ಸೆ ೧೯೨೮ ನೆಯ ಇಸವಿ ಏಪ್ರಿಲ್ ತಾ ೨೦ ನೆಯ ಶನಿವಾರ

THE MYSORE MONOPOLIST

The Mysore monopolist is becoming a by word for all that is reactionary unprogressive and selfish in our society He is really a die hard From the senator on the olympian heights to the ubiquitous lawyer the Mysore monopolist is the same fellow making frantic and frightful efforts to secure his position of vantage against the onward march of liberalism Education has not roused the soul in him has not elevated his ideals nor broadened his outlook To him it is purely a means for material gain for himself and if it ever extends beyond his self it is to his kith and kin his community and never beyond This craving for power this greed for gain has made them forget their duties by their own countrymen to such an extent that one need not wonder if to day the masses who had trusted them all along find them the least trust worthy and exhibit a total lack of confidence in them Never was trust so misplaced Never was trust so grievously betrayed The code of Manu has so developed and hardened their notion of superiority and has made them so self centred that there is no hope of their ever reconciling themselves to the changing ideals of the times except by compulsion It is an interesting and not unprofitable study to watch these folk fighting every step against every measure of popular progress It does not matter even if it is a losing game There is another point worthy of note There are some among Brahmins who profess to be non partizanlike and very liberal in their attitude But one has only to wait for the occasion and scratch them and you will catch tartar The Senate meeting held recently and the Lawyers Conference at Kolar gave sufficient evidence of the die hard spirit of the Mysore monopolist An ex professor who adorned the staff of the Central College moved a resolution to the effect that recruitment to the University appointments should be solely on the ground of efficiency It was a sight to see member after member of the monopolist class getting up to support this uncalled for and mischievous proposition The Registrar also of the same class allowed his communal instinct to get the better of his official loyalty and went about making a difference between the best candidate and the most efficient candidate Mr S Venkatesiah whose professions on behalf of the backward classes have never been any but the most prolific suggested that if Government wanted to encourage the backward classes they could fix a number for them and that the rest of the appointments could be recruited solely on the ground of efficiency The mischievous insinuation of this suggestion should be patent to anybody At the same meeting we find another monopolist member criticising the Government for constituting committees for purposes of settling admissions scholarships and freeships in the Medical and Engineering Colleges Evidently the monopolist does not want the co-operation of others and wants a free hand for his undisturbed sway It is worse with the Lawyers Conference The President's address which is one of those pieces of manuscript eloquence the origin of which it is not easy to trace contains the most novel ideas He cannot feel satisfied unless he unburdens his soul by decrying the present method of recruitment whereby the monopolist patron of judicial appointments has no free hand and has got to be equitable to all communities The President one of the worst reactionaries of the Mysore monopolistic clique wants competitive examinations for all judicial posts What a pity that the present Chief Judge or the other Puisne Judges were raised to the judgeships of the Chief Court before passing in a competitive exam[redacted] an excellent suggestion a[redacted] should think they ought to take a lesson from the address even when appointing judges to High Courts of British India It would be foolish to think that the President of the Conference or men of his ilk do not understand that examinations could form no adequate test for judicial appointments. For where could there be examination for finding out whether a man has a judicial temperament absolute uprightness sound commonsense etc? In fact character and industry count as much as if not more than memorising capacity for a judgeship and is it not always safer to judge of those virtues from the work and conduct of practising lawyers than trust to an uncertain examination This President seems to have also talked of responsible government and such other vague things Why? The Mysore Lawyer Conference bids fair to become a redhot political assembly It would appear from the proceedings that there was plenty of sympathy for the two editors now on their trial for sedition and plenty of condemnation of Government action In fact it was all politics and very little of law at the conference There are so many problems immediately connected with the legal profession improvement of the morale of the bar the elimination of the tout system the means of improving the position of the litigant public these found no place in their deliberations To tackle those problems would mean discipline sustained and organised work and some amount of sincere service But there is nothing easier than throwing invectives at Government It costs nothing It gives some notoriety That is enough One has to pity these monopolists and their law tactics Manu and Yagnavalkya would throw their hands in horror if they see their descendants in this unedifying inglorious plight Will the monopolists learn a lesson when there is yet time to repair the wrongs done in the past or will they persist in their blind and thoughtless war against irresistible forces of democracy and heap upon themselves more and more of ignominy? Let us hope they will be wise betimes

HAPPY MYSORE

(Contributed)

Every one that visits Mysore Prince or Commoner Politician or Social Reformer Indian or Foreigner gives out as his profound impression that Mysore is happy He who visits the cities and he who goes into the interior and sees the people at work in the fields he who waits upon the Mysore Sovereign and pays his respects to him and he who meets the poorest of His Highness's subjects rich and happy and contented he who comes to buy or to sell in Mysore who ever that feel the heart of Mysore — ay that is living The League Delegate recently said The people of this place Mysore appear to be happy and well cared for Nobody can be happy unless he is well cared for The Sovereign of the State takes good care of his subjects and the result is they are happy Many distinguished personage have recently visited Mysore and all have come to the same conclusion that the people of Mysore are well governed and are happy

Why then is the Swarajya of Madras loud in its vituperations That is the story of this short note In wars soldiers are hired from outside They are paid heavily to shed blood They have no patriotism Their heart is dead They fear the rod of him whereof he resideth no soul They kill and they are prepared to be killed In India-one part of it viz Madras is well known for its war in words The son of Madras live on this luxury of tongue They write forcibly. Where wars are to be described on paper, there they are In all parts of India to day, it is the pen of Madras that writes the longest columns of News Papers The Swarajya is that sort of Paper. Its editor toured in Mysore a few days and was none the poorer for it He sells his goods for the [redacted]res to the paper During the f[redacted] of men who had preserved [redacted] lot of privileges to his affectionately ... deprived of them as they had no right to ... They began to make Mysore ... s article papers whose tongues ... itoperation amuck Of course madness must be arrested They stopped They have called in the aid the Swarajya of Madras How long will this last?

To come back to our happy theme Mysore is happy It should at once be said that the universally endorsed happiness of the people is due to the care which the beloved Sovereign of the State and his Government are devoting to secure it at all costs The serenity of the Sovereign and the patience of his Government have saved the good name of Mysore and the visitors are able to see it in all walks of life in Mysore and in all parts of it Let our gracious Sovereign to whose care we owe our happiness live long to protect our happiness

ಮೈಸೂರು ಏಕಸ್ವಾಮ್ಯಗಾರರು

ನಮ್ಮ ಸಂಸ್ಥಾನದಲ್ಲಿ ಎಲ್ಲಾ ಉದ್ಯೋಗ ಸುಖಸವಲತ್ತುಗಳೆಲ್ಲವನ್ನೂ ಒಟ್ಟಿನಿಂದಲೂ ಒಂದು ವರ್ಗದವರೇ ಗುತ್ತಿಗೆ ಹಿಡಿದು ಅನುಭವಿಸುತ್ತ ಬಂದಿರುವುದರಿಂದ ಅವರನ್ನು ಏಕಸ್ವಾಮ್ಯಗಾರರೆಂಬ ಪರ್ಯಾಯನಾಮದಿಂದ ಸಂಬೋಧಿಸುತ್ತೇವೆ ಇತರ ಸಮಾಜಾಭಿವೃದ್ಧಿ ಕಾರ್ಯಗಳಿಗೆಲ್ಲ ಈ ಸ್ವಾರ್ಥಪರರಾದ ಏಕಸ್ವಾಮ್ಯಗಾರರು ಯಾವಾಗಲೂ ವಿಘ್ನಕಾರಿಗಳೆಂಬ ವಾಡಿಕೆಯು ಮಾತಾಗಿದೆ ಉಚ್ಚನೀಚಭಾವವಳಿದು ಸಮಸಮಾನ ಭಾವಾಭಿವೃದ್ಧಿಯಾಗಬೇಕೆಂಬ ಪ್ರಯತ್ನದಲ್ಲಿ ತಮ್ಮ ಶ್ರೇಷ್ಠತ್ವಕ್ಕೆ ವ್ಯತಿಚಾರದಂತೆ ಅದನ್ನು ಕಾಪಾಡಿಕೊಳ್ಳುವುದಕ್ಕಾಗಿ ಎಂತಹ ಬೀಭತ್ಸಕಾರ್ಯವನ್ನಾದರೂ ಮಾಡುವಲ್ಲಿ ಉನ್ನತ ... ಸ್ಥಾನೀಯ ಸದಸ್ಯರಿಂದ ಹಿಡಿದು ಸರ್ವವ್ಯಾಪಿಯಾದ ವಕೀಲರವರೆಗೆ ಏಕಸ್ವಾಮ್ಯಗಾರರೆಲ್ಲರೂ ಒಂದೇ ಆಗಿರುತ್ತಾರೆ ಇವರು ಪೂರ್ಣ ವಿದ್ಯಾವಂತರಾಗಿದ್ದರೂ ಇನ್ನೂ ಸಂಕುಚಿತಭಾವವನ್ನು ಬಿಟ್ಟು ಉದಾರಮನಸ್ಕರಾಗಿಲ್ಲ ಈ ವಿದ್ಯೆಯಾದರೂ ಅವರ ಸ್ವಪ್ರಯೋಜನಕ್ಕಾಗಿರುವುದು ಒಂದು ವೇಳೆ ಇದರಿಂದ ತಮ್ಮ ಬಂಧುಬಳಗದವರಿಗೂ ಜಾತಿಯವರಿಗೂ ಪ್ರಯೋಜನವಾಗಬಹುದೇ ವಿನಾ ಇತರರಿಗೇನೂ ಇಲ್ಲ ಇವರ ಅಧಿಕಾರ ಸಂಪತ್ತುಗಳ ದುರಾಶೆಯು ತಮ್ಮ ಕರ್ತವ್ಯ ಧರ್ಮವನ್ನು ಮರೆಯುವಂತೆ ಮಾಡಿರುವುದರಿಂದ, ಜನರು ತಮ್ಮ ಹಿತಸಾಧಕರೆಂದು ನಂಬಿ ಇವರಲ್ಲಿಟ್ಟಿದ್ದ ವಿಶ್ವಾಸವನ್ನು ಇವರು ಕಳೆದುಕೊಂಡಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ ಮನುಧರ್ಮಶಾಸ್ತ್ರದ ಜಾತಿ ಶ್ರೇಷ್ಠತೆಯಿಂದ ಗರ್ವಿತರಾದ ಇವರು ನಿರ್ಬಂಧವಿಲ್ಲದೆ ತಲವಾಗಿಯೇ ಕಾಲಾನುಗುಣ್ಯವಾಗಿ ನಡೆಯತಕ್ಕವರಾಗಿಲ್ಲ ಪ್ರತಿಯೊಂದು ಪ್ರಜಾಭಿವೃದ್ಧಿ ಕಾರ್ಯವನ್ನು ಈ ಏಕಸ್ವಾಮ್ಯಗಾರರು ಪ್ರತಿಭಟಿಸುತ್ತಿರುವುದನ್ನು ತಿಳಿಯುವುದರಿಂದ ಎಷ್ಟೋ ಪ್ರಯೋಜನವುಂಟು ಇವರಲ್ಲಿ ಕೆಲವರು ಯಾವ ಪಕ್ಷವನ್ನೂ ಸೇರದೆ ಬಹಳ ಉದಾರಭಾವವುಳ್ಳವರಾಗಿರುತ್ತೇವೆಂದು ಹೇಳಿಕೊಳ್ಳುವರು ಆದರೆ ಸಮಯ ಬಿದ್ದಾಗ ಇವರ ಗುಣವನ್ನು ಪರೀಕ್ಷಿಸಿ ನೋಡಿದರೆ ಇವರ ನಿಜಸ್ವರೂಪವು ಗೊತ್ತಾಗುವುದು ಇದಕ್ಕೆ ವಿಶ್ವವಿದ್ಯಾಲಯದ ಅಧಿಕಾರಿಗಳ ಮೀಟಿಂಗ ಮತ್ತು ಕೋಲಾರದಲ್ಲಿ ಜರುಗಿದ ಲಾಯರುಗಳ ಕಾನ್ಫರೆನ್ಸು ಒಳ್ಳೇ ನಿದರ್ಶನಗಳಾಗಿರುತ್ತವೆ ವಿಶ್ವವಿದ್ಯಾಲಯಕ್ಕೆ ಸಂಬಂಧಪಟ್ಟ ಉದ್ಯೋಗಗಳೆಲ್ಲವೂ ಕಾರ್ಯದಕ್ಷರಾದವರಿಗಲ್ಲದೆ ಬೇರೆಯವರಿಗೆ ಕೊಡಕೂಡದೆಂಬ ಬಗೆಗೆ ಒಂದು ನಿರ್ಧಾರವು ಸೆನೆಟ್ ಮೀಟಿಂಗಿನಲ್ಲಿ ಒಬ್ಬ ಸಭ್ಯರಿಂದ ತರಲ್ಪಟ್ಟಿತು ಇದಕ್ಕೆ ಈ ಏಕಸ್ವಾಮ್ಯಗಾರ ವರ್ಗಕ್ಕೆ ಸೇರಿದ ಪ್ರತಿಯೊಬ್ಬ ಸದಸ್ಯರೂ ಬಹಳ ಉತ್ಸಾಹದಿಂದಲೂ, ಸಡಗರದಿಂದಲೂ ಅನುಮೋದನವನ್ನಿತ್ತ ದೃಶ್ಯವು ಪ್ರೇಕ್ಷಣೀಯವಾಗಿದ್ದಿತು ಕೆಲವು ಉದ್ಯೋಗಸ್ಥಾನಗಳ ವಿಚಾರವು ಚರ್ಚೆಗೆ ಬಂದಾಗ, ಏಕಸ್ವಾಮ್ಯಗಾರರ ಪಂಗಡದವರಾದ ವಿಶ್ವವಿದ್ಯಾಲಯದ ರಿಜಿಸ್ಟ್ರಾರರವರು ಮಹಾಕಾರ್ಯದಕ್ಷತೆಯನ್ನು ಪ್ರಶಂಸಿಸಿ ಮಾತನಾಡಿದರು ಯಾವಾಗಲೂ ಹಿಂದುಳಿದ ವರ್ಗದವರ ಶ್ರೇಯೋಭಿಲಾಷಿಗಳೆಂದು ವಿಜೃಂಭಿಸುತ್ತಿರುವ ಶಾಸನದ ಅಡ್ವೊಕೇಟ್ ಮಿ ಎಸ್ ವೆಂಕಟೇಶಯ್ಯನವರು, ಹಿಂದುಳಿದವರನ್ನು ಪ್ರಭುತ್ವದವರು ಪ್ರೋತ್ಸಾಹಿಸಬೇಕೆಂದಿದ್ದಲ್ಲಿ ಇಂತಿಷ್ಟು ಉದ್ಯೋಗಸ್ಥಾನಗಳು ಅವರುಗಳಿಗೆ ಕೊಡತಕ್ಕದ್ದೆಂದು ನಿರ್ಧರಿಸಿ ಉಳಿದವುಗಳನ್ನೆಲ್ಲ ಕಾರ್ಯದಕ್ಷರಾದವರಿಗೇನೇ ಕೊಡಬೇಕೆಂದು ಸೂಚಿಸಿದರು ಇದೇ ಮೀಟಿಂಗಿನಲ್ಲಿ ಮತ್ತೊಬ್ಬ ಏಕಸ್ವಾಮ್ಯಗಾರ ಸದಸ್ಯರು ವೈದ್ಯ ಮತ್ತು ಇಂಜನಿಯರಿಂಗ್ ಶಾಲೆಗಳಿಗೆ ವಿದ್ಯಾರ್ಥಿಗಳನ್ನು ಸೇರಿಸಲು, ಅವರಿಗೆ ವೇತನವನ್ನು ಕೊಡಲು ಮತ್ತು ಫೀಯನ್ನು ಮನ್ನಿಸಲು ಕೆಲ ಕಮಿಟಿಗಳನ್ನು ನಿಯಮಿಸಿರುವುದಕ್ಕಾಗಿ ಪ್ರಭುತ್ವದವರನ್ನು ಖಂಡಿಸಿದರು ಈ ವಿಚಾರದಲ್ಲಿ ಇತರ ವರ್ಗದವರ ಪ್ರವೇಶವಿಲ್ಲದೆ ಏಕಸ್ವಾಮ್ಯಗಾರರು ತಾವೇ ತಲವಾಗಿರಬೇಕೆಂಬುದು ಅವರ ಮನೋಗತವೆಂದು ಸಿದ್ಧವಾಗುತ್ತದೆ ಲಾಯರುಗಳ ಕಾನ್ಫರೆನ್ಸಿನ ನಡವಳಿಕೆಗಳು ಇನ್ನೂ ವಿಷಾದಕರವಾಗಿವೆ ಈಗಿನ ಏರ್ಪಾಟಿನಿಂದ ನ್ಯಾಯ[redacted] ಉದ್ಯೋಗ ವಿನಿಯೋಗದಲ್ಲಿ ಏಕಸ್ವಾ[redacted]ರಿಗೂ ಎಲ್ಲ ವರ್ಗದವರಿಗೂ ಸಮ

ಒಂದೆರಡು ವಿಚಾರಗಳನ್ನು ಕುರಿತು ನಾಲ್ಕು ಮಾತುಗಳನ್ನಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ. ರಾಜಧಾನಿಯ ದೊಡ್ಡ ಪೇಟೆಯು ಬಹು ಕಾಲದಿಂದಲೂ ನಮ್ಮ ವ್ಯಾಪಾರಕ್ಕೆ ಕೇಂದ್ರವಾಗಿದ್ದು ಬಹಳ ಪ್ರಸಿದ್ಧವಾಗಿದ್ದು ಮತ್ತು ಶ್ರೀಮನ್ಮಹಾರಾಜರವರ ಅರಮನೆಗೆ ಮಾರ್ಗವಾಗಿದೆ. ಇಂತಹ ಪೇಟೆಯು ವ್ಯಾಪಾರಾದಿಗಳಲ್ಲಿ ಹಿಂದುಳಿದು ಅನಾರೋಗ್ಯವಾಗಿರುವಂತೆ ಮುನಿಸಿಪಲ್ ಕೌನ್ಸಿಲಿನವರೂ ಪ್ರಭುತ್ವದವರೂ ಲಕ್ಷ್ಯವಿಟ್ಟು ನೋಡಿಕೊಳ್ಳುವುದು ಧರ್ಮವಾಗಿದೆ. ಅಲ್ಲಿಯ ರಸ್ತೆ ದಸರಾ ಸಂದರ್ಭದಲ್ಲಿ ರಥವು ಹೋಗಲು ತಕ್ಕಂತೆ ಅಗಲವಾಗಿಸಲ್ಪಟ್ಟು ಪೇಟೆಯು ಅಕಸ್ಮಾತ್ ಬೆಂಕಿ ಬಿದ್ದಾಗ ರಕ್ಷಣೆ ಮಾಡಲು ಅನುಕೂಲವಾಗುವುದು ಆವಶ್ಯಕವು. ಮತ್ತೊಂದು ವಿಷಯವೇನೆಂದರೆ ರಾಜಧಾನಿಯ ಪೊಲೀಸು ಸುಧಾರಿಸಲ್ಪಡುತ್ತಿದ್ದರೂ ಪೊಲೀಸು ಸ್ಟೇಷನ್ನಿಗೆ ಸಮೀಪದಲ್ಲೇ ನಡೆದಿರುವ ಅನೇಕ ಕಳ್ಳತನಗಳು ಇನ್ನೂ ಕಂಡುಹಿಡಿಯಲ್ಪಟ್ಟಿಲ್ಲವೆಂದು ಹೇಳುತ್ತೇನೆ. ಆದುದರಿಂದ ಪ್ರಜೆಗಳ ಆಸ್ತಿಯ ರಕ್ಷಣೆಗೆ ಪ್ರಬಲವಾದ ಏರ್ಪಾಡು ಮಾಡಲ್ಪಟ್ಟು ಕಳ್ಳತನ ನಡೆಯದಂತೆ ನಡೆದ ಕಳ್ಳತನಗಳನ್ನು ಕಂಡು ಹಿಡಿಯಲು ಸಮರ್ಥರಾದ ಪೊಲೀಸಿನವರು ನಿಯಮಿಸಲ್ಪಡಬೇಕು.

ಪ್ರಜೆಗಳ ಆರ್ಥಿಕಾಭಿವೃದ್ಧಿಗಾಗಿ ಏರ್ಪಡಿಸಿರುವ ಅನೇಕ ಕಮಿಟಿಗಳಿಗೆ ಮೈಸೂರು ವರ್ತಕರನ್ನು ತೆಗೆದುಕೊಳ್ಳದಿರುವುದು. ಕೋಲಾರದ ಬೆಂಗಳೂರು ವರ್ತಕರು ಆದರಲ್ಲೂ ಕೆಲ ಗೊತ್ತಾದವರು ಸರ್ಕಾರದ ಲಕ್ಷ್ಯದಲ್ಲಿ ಪ್ರಮುಖರಾಗಿ ಭಾವಿಸಲ್ಪಡುತ್ತಾರೆ. ನಮ್ಮ ಸಂಘಕ್ಕಿಂತಲೂ ಬಹಳ ಕಡಿಮೆ ಮೆಂಬರುಗಳನ್ನುಳ್ಳ ಬೆಂಗಳೂರು ಛೇಂಬರ್ ಆಫ್ ಕಾಮರ್ಸ್ ಸಂಘದಿಂದ ನ್ಯಾಯವಿಧಾಯಕ ಸಭೆಗೆ ಒಬ್ಬ ಮೆಂಬರನ್ನು ತೆಗೆದುಕೊಂಡಿರುತ್ತಾರಾದುದರಿಂದ ಅದಕ್ಕಿಂತಲೂ ಹೆಚ್ಚು ಮಂದಿ ಮೆಂಬರುಗಳನ್ನುಳ್ಳ ನಮ್ಮ ಸಂಘದಿಂದ ಒಬ್ಬರನ್ನು ನ್ಯಾಯವಿಧಾಯಕ ಸಭೆಯ ಮೆಂಬರನ್ನಾಗಿ ತೆಗೆದುಕೊಳ್ಳಬೇಕೆಂದು ನಾವು ಪದೇ ಪದೇ ಪ್ರಾರ್ಥಿಸುತ್ತಿದ್ದೇವೆ. ಸರ್ಕಾರದವರ ಗಮನಕ್ಕೆ ತಾರದಿರುವುದು ಕೋರತಕ್ಕದ್ದಾಗಿದೆ. ಡಿಸ್ಟ್ರಿಕ್ಟ್ ಬೋರ್ಡುಗಳು ಹಾಗೂ ನಮ್ಮ ಪ್ರತಿನಿಧಿಯೊಬ್ಬನನ್ನು ತೆಗೆದುಕೊಂಡಿರುವುದಿಲ್ಲವಾದುದರಿಂದ ನಾವು ಈ ವಿಚಾರದಲ್ಲಿ ಸಕಲಪ್ರಯತ್ನವನ್ನು ಮಾಡುತ್ತಿರಬೇಕು.

ಶ್ರೀಮನ್ಮಹಾರಾಜರವರ ಸಾಕ್ಷಾತ್ಕಾರವನ್ನು ಅನುಗ್ರಹವನ್ನು ಪ್ರಾರ್ಥಿಸುತ್ತಾ ಈ ನಮ್ಮ ವಿಷಯಗಳು ಪ್ರಭುತ್ವದ ಗಮನಕ್ಕೆ ಬರುವುದೆಂದು ನಂಬುತ್ತೇನೆ. ಆದುದರಿಂದ ನನ್ನ ನ್ಯಾಯವಾದ ಕ[redacted]ಗೆ ತೆರೆಸಲ್ಪಡದೆ ಇರುವುದಿಲ್ಲ, ನಮ[redacted]ಬ್ಬೈಬ್ಬ ರಾಗಿಯೂ, ಒಟ್ಟುಗೂಡಿಯೂ ಪ[redacted]ಯಬೇಕು ಇರುತ್ತದೆ.

ಧಾರವಾಡದ ಮುಗಿದ ಪೂರ್ವಕ್ಕೆ ಮೊದಲು ಒಂದು ದಿವಸ ಬೆಳಗ್ಗೆ ಜೀವವೇ ನಾನು ಈ ಕ್ರಿ ಶ ೧೮೭೨ನೇ ಇಸವಿಯಲ್ಲಿ ಲಾರ್ಡ್ ಮೇಯೋ ರಾಜಧಾನಿಯನ್ನು ಬಿಟ್ಟು ನೀಲಗಿರಿ ಸಂಸ್ಥಾನದ ಕ್ರಿ ಶ ೧೮೭೬ರಲ್ಲಿ ದೊರೆಯವರಿಂದ ಸ್ಥಾಪಿಸಲ್ಪಟ್ಟ ಸರ್ವೆ ಆಫ್ ಇಂಡಿಯಾ ಎಂಬ ಇಲಾಖೆಗೆ ಸೇರಿ ಭಾರತೀಯ ದೇಶಗಳಿಗೆ ಪ್ರಯಾಣಮಾಡುವವನು ತನ್ನ ಜೀವನವೃತ್ತಾಂತದ ಪ್ರತಿ ಬರೆದು ತಂದಿರುವ ಕಂಪೆನಿ ಏಜೆಂಟರ ಸಂಗಡ ಹಾದಿ ಇನ್ಸ್ಪೆಕ್ಟರ್ ಕೆಲಸ ಮಾಡುವವನಾಗಿ ಯೂರೋಪು ಮತ್ತು ಗ್ರೇಟ್ ಬ್ರಿಟನ್ನಿನಲ್ಲಿ ಸಂಚರಿಸಿಕೊಂಡಿರುವುದು. ನಾನು ಪ್ರಾಯಶಃ ೬ ತಿಂಗಳ ಕಾಲ ನಿಮ್ಮನ್ನಗಲಿರಬೇಕಾಗಿದೆ. ವ್ಯಾಪಾರಕ್ಕೆ ನಮ್ಮ ಕೇಂದ್ರಸ್ಥಾನಗಳಾದ ನಗರಗಳಲ್ಲಿ ಸಂಚರಿಸಿ ನಮ್ಮ ಧ್ಯೇಯದಿಂದ ಮುಖ್ಯವಾಗಿ ಮೈಸೂರಿನ ವ್ಯಾಪಾರಾಭಿವೃದ್ಧಿಗೆ ಅನುಕೂಲವಾದ ವಿಷಯಗಳನ್ನು ತಿಳಿದುಕೊಂಡುಬರುವೆನು. ಆದುದರಿಂದ ನಮ್ಮ ಸಂಘಕ್ಕೆ ನನ್ನಿಂದಾಗಬೇಕಾದ ಕೆಲಸವೇನೂ ನಿಲ್ಲದೆ ನಾನು ಹಿಂದಿರುಗಿ ಬಂದಾಗ ಕಾರ್ಯಗಳೆಲ್ಲ ಸರಿಯಾಗಿ ನಡೆದಿರುವುದನ್ನು ನೋಡಲಿಚ್ಛಿಸುತ್ತೇನೆ.

ಪತ್ರವ್ಯವಹಾರ

(ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು —ಸಂಪಾದಕ)

ಗುರುಲೀಲಾಭಿಮಾನಿಗಳು ದಯಮಾಡಿ ಸಂದೇಹವನ್ನು ಪರಿಹರಿಸುವವರಾಗಿರಿ

ರೇಣುಕಾಚಾರ್ಯರ ವಂಶಾವಳಿ

ಕಡೂರು ಜಿಲ್ಲಾ ೦ ನೆಯ ಶಾಸನವು (ಚಿಂತೆಹೊಸ್ಕೂರು ಹೋಬಳಿ ಬಾಳೆಹಳ್ಳಿ ವ ರ ಮಠದ ವ್ಯಾಪಾರದ ದಕ್ಷಿಣದಲ್ಲಿಯ ಶಿಲಾಶಾಸನ ಕ್ರಿ ಶ ೧೬೦೬) ಶಾ ಶ ೧೫೨೮ರಲ್ಲಿ ಶ್ರೀ ವೀರಾಸಿಂಹಾಸನಾಧೀಶ್ವರರಾದ ರೇಣುಕಾರ್ಯ ಸಿಂಹಾಸನಾಧಿಪತಿಗಳಾದ ಕುಮಾರ ಚೆನ್ನಬಸವೇಶ ಒಡೆಯ ಎಂಬುವರು ಇದ್ದರೆಂಬುದನ್ನು ಸೂಚಿಸುತ್ತದೆ (Vide Epigraphia Karnataka Vol VI Kadur inscriptions by B L Rice, 1901 page 76) ಈ ಶೀಗನ ಸ್ವಾಮಿಗಳು ಆದಾಯಕರ ಪಟ್ಟವಲ್ಲದ ಪಾಲನ್ನು ಶ್ರೀ ಕ್ರಿ ಶ ೧೯೨೧ ಕ್ರಿ ಶ (ನೋಡು ಯ ಪ ರುದ್ರಮುನಿ ದೇವರ ಅನುಗಂಧ ಪ್ರತಿಯನ್ನು ೧೯೭೧ ಪುಟ ೬೩) ಏಕೆಂಬ ರೇಣುಕ ನರಸ ಹೃದಯ ವ್ಯಾಪ್ತ ವಿಚಾರ ವಿಷ್ಣುವರ್ಧನ ಮಹಾಶಯರು ತಿಳಿಸುವರಾಗಿ ಉತ್ತರವನ್ನು ದಯಪಾಲಿಸಿದಲ್ಲಿ ನನ್ನ ವೀರಶೈವ ಮತದ ಕೃತಿಯ ಕುಂದು ಯಾತಕ್ಕೆ ಆಗಬೇಕೆಂದು ಸವಿನಯವಾಗಿ ಪ್ರಾರ್ಥಿಸುತ್ತೇನೆ.

Sindigi Siddhappa

ಗುರುಲೀಲಾಭಿಮಾನಿಗಳು ದಯಮಾಡಿ ಅನುಮಾನಗಳನ್ನು ದೂರಮಾಡಿರಿ

ಆಚಾರ್ಯರ ಜಯಂತಿಗಳು

ಈಗ ನಡೆಯುವ ಆಚಾರ್ಯರ ಜಯಂತಿಗಳು ಪಂಚಾಚಾರ್ಯರವರು ಪ್ರತಿಯುಗಾರಂಭದಲ್ಲಿಯೂ ಪಂಚಕಾಲದಲ್ಲಿಯೇ ಉದ್ಭವಿಸಿದರು (ನೋಡು ಉಜ್ಜಯಿನಿ ಭಂಗಿಮಠದ ಗುರುಸಿದ್ಧಶಾಸ್ತ್ರಿಗಳವರು ಪ್ರಕಟಿಸಿದ ೧೯೩೧ ಪುಟ ೧೧) ಕಲಿಯುಗದ ಆರಂಭ ಭಾದ್ರಪದ ಬ ಗುರುವಾರ (ಕ್ರಿ ಪೂ ೩೧೦೨ ಬಿ ಸಿ) ಪ್ರಾರಂಭವಾಗಿದೆ (Vide Indian Ephemeris by Dewan Bahadur L D Swami Kannu Pillai, M A B L Madras L L B London 1915 page 16 Chronology of India by C Mabel Duff 1899 Page 4) ಜಯಂತಿಯು ಯುಗಾದಿಯಂದು ಇದು ಹೀಗಿರುವುದರಿಂದ ಈಗಿನ ಜಯಂತಿಗಳಲ್ಲಿ ನಡೆಯುವ ಆಚರಣೆಯು ಬುದ್ಧನ ಸಮಕಾಲೀನ ಶಾಸನದ ಗ್ರಂಥಗಳ ಸ್ವಾಮಿಗಳವರ ಸಾರ ಸಾರ ಸಮಯದ ಶ್ರದ್ಧಾವಿಚಾರ ವಿಷ್ಣುವರ್ಧನ ಮಹಾಶಯರು ನನ್ನಲ್ಲಿ ಉತ್ತರವನ್ನು ದಯಪಾಲಿಸಿದಲ್ಲಿ ನನ್ನ ವೀರಶೈವ ಮತದ ಕೃತಿಯ ಕುಂದು ಯಾತಕ್ಕೆ ಆಗಬೇಕೆಂದು ಸವಿನಯವಾಗಿ ಪ್ರಾರ್ಥಿಸುತ್ತೇನೆ.

Sindigi Siddhappa

ಪರಲೋಕಯಾತ್ರೆಯ ವರ್ತಮಾನ

ಶಿವಮೊಗ್ಗ ಜಿಲ್ಲಾ ಶಿಕಾರಿಪುರ ತಾಲ್ಲೂಕಿನವರಾದ ಪಟೇಲ್ ಚನ್ನಬಸಪ್ಪಗೌಡರು ತಾ ೧೦-೪-೧೯೨೨ರಲ್ಲಿ ಶಿವಾಧೀನರಾದ ವಿಷಯವನ್ನು ಕೇಳಿ ಎಲ್ಲರ ಮನಸ್ಸಿಗೂ ಬಹಳ ವಿಷಾದವಾಗಿದೆ. ಈ ಸತ್ಪುರುಷರು ಹಿಂದೆ ಮೈಸೂರು ಪ್ರತಿನಿಧಿಸಭೆಯ ಮೆಂಬರಾಗಿದ್ದು ಶಿಕಾರಿಪುರ ತಾಲ್ಲೂಕಿನ ಪ್ರಜೆಗಳ ಕಷ್ಟಗಳನ್ನು ಸರ್ಕಾರದವರ ಗಮನಕ್ಕೆ ತಂದು ಅವುಗಳ ನಿವಾರಣೋಪಾಯಗಳಿಗೆ ಸಹಾಯಕರಾಗಿ ಬೇಕಾದ ಕೆಲಸಮಾಡಿದರು. ಇವರು ದೊಡ್ಡ ವಿದ್ಯಾವಂತರಾಗಿ ಎಲ್ಲಾ ವಿಷಯಗಳ ಸೌಕರ್ಯವನ್ನು ಕೈಕೊಂಡು ಗ್ರಾಮದ ತಮ್ಮ ಸುಖಕಡೆಗೆ ಲಕ್ಷ್ಯಕೊಡದೆ ನ್ಯಾಯಾಲಯಗಳನ್ನು ಕೊಡದೆ ಗ್ರಾಮಂತರಗಳಲ್ಲಿನ ವ್ಯಾಜ್ಯಗಳನ್ನು ಪರಿಹರಿಸಲು ಭಗವಂತ ಇವರಾಗಿದ್ದು ಎಲ್ಲಾ ಸಣ್ಣವರ ಅನುರಾಗಕ್ಕೆ ಪಾತ್ರರಾಗಿದ್ದರು. ಇದಲ್ಲದೆ ಮತಗ್ರಂಥಗಳನ್ನೂ ಇತರ ಪುರಾತನಗ್ರಂಥಗಳನ್ನೂ ಕೇಳಿ ಅನೇಕ ವಿಷಯಗಳನ್ನು ಅರಿತುಕೊಂಡು ಲೌಕಿಕ ಸಾಮಾಜಿಕ ವ ಪ್ರಾಮಾಣಿಕ ವಿಚಾರಗಳನೆಲ್ಲ ಪತ್ರಿಕೆಗಳಿಗೆ ಅನೇಕ ಲೇಖನಗಳನ್ನು ಬರೆದು ಸಮಾಜ ಸೇವೆಯನ್ನೂ ಭಾಷಾಸೇವೆಯನ್ನೂ ಮಾಡಿ ಮತ್ತು ಗ್ರಂಥಗಳಿಗೆ ಸಹಾಯಮಾಡಿ ಧರ್ಮದಿಗ್ವಿಜಯ ಇವರು ಚಿಕ್ಕವ ಒಂದು ಇದುವರೆಗೆ ಒಂದು ಲೇಖನವನ್ನು ಬರೆದು ಪ್ರೀತಿಯ ಕಳೆ ಹಿಸಿ ಪ್ರಕಟಿಸಿದ ಪರಲೋಕಯಾತ್ರೆಮಾಡಿದರು. ಇಂತಹ ಮಹಾತ್ಮರು ಶಿವಾಧೀನವಾದುದರಿಂದ ಈ ಪ್ರಾಂತದ ಜನಗಳು ಬಹಳ ದುಃಖಿತರಾಗಿದ್ದಾರೆ. ಮೃತರ ಆತ್ಮಕ್ಕೆ ಶಾಂತಿಯನ್ನೂ ಅವರ ಕುಟುಂಬಕ್ಕೆ ದುಃಖನಿವಾರಣೆಯನ್ನೂ ಮಾಡಬೇಕೆಂದು ಪರಮಾತ್ಮನನ್ನು ಬೇಡುವ

ಮಿ ಹಾಲಪ್ಪ

ಚಿಕ್ಕಸ್ವಾಮಿ ಮಾಸ್ಟರು ಈಸೂರು

ನಾಟಕೋತ್ಸವಸಮಾರಂಭ

ಬಳಗಾಂವ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಬೈಲಹೊಂಗಲದಲ್ಲಿ ಶ್ರೀಮತಿ ಗಾನರತ್ನ ಗಂಗೂಬಾಯಿ ಗುಳೇದಗುಡ್ಡ ಇವರ ಶ್ರೀ ವೃಷಭೇಂದ್ರ ಕನ್ನಡ ಸಂಗೀತ ನಾಟಕಕಂಪೆನಿಯು ಬಂದಿದ್ದು ಈಗ ತಿಂಗಳ ಅಂಗವಾಗಿ ಯತು ತಮ್ಮ ಗಾಯನಯುಕ್ತವಾದ ಸೊಗಸಾದ ನಾಟಕಗಳನ್ನು ಪ್ರತಿದಿನ ಸಂಗೀತಮಯದಿಂ, ಪ್ರೇಕ್ಷಕರಿಗೆ, ಪ[redacted]ಕರುಗಳ ಕಂಪ್ಯಾನಿಯ ಮುಖಾಂತರ ಪೌರಾಣಿಕ ನಾಟ[redacted]ಪ್ರೇಕ್ಷಕರಿಗೆ ಆನಂದಗೊಳಿಸು[redacted]ಬಹಳ ಚಿತ್ತಾಕರ್ಷಕವಾಗಿರುವುದು ಬುಧ[redacted]ಎಸ್, ಎಸ್, ಕೊಯಮುತ್ತೂ[redacted]

ಡಾ|| ರಾ|| ಬಿ ಶಿವಲಿಂಗಪ್ಪನವರು ಮತ್ತು ಬಿ ಲಿಂಗಪ್ಪನವರು ಮೈಸೂರಿಗೆ ಆಧಿಕಾರಿಗಳಿಂದ ಪಾರಿತೋಷಕವನ್ನು ಪಡೆದಿದ್ದಾರೆ. ಇದಕ್ಕೆ ಬಂದಿದ್ದರು. ಇಲ್ಲಿ ಶ್ರೀ ಶಿವಯೋಗಿ ಸ್ವಾಮಿಗಳು ಹರಸಿದ ಮಠದ ಇವರು ಶ್ರೀಮತಿ ಗಾನರತ್ನ ಗಂಗೂಬಾಯಿ, ಶ್ರೀಮತಿ ಎಲ್ಲಮ್ಮ ಪ್ರಸಿದ್ಧ ನಟಿ ರಾಣಿ ಬಸಮ್ಮ ಪ್ರಭಾವತಿ, ಇವರಿಗೆ ಇವರ ಶಕ್ತಿ ಸಲುವಾಗಿ ನಾಟಕಗಳ ಆ ಕಲಾ ಮತ್ತು ಸಹಜೀಯರು ನಿಜವಾದ ಗುರುಗಳು ಇದನ್ನು ಪ್ರಸಿದ್ಧ ಕಲಾವಿದರಾದ ಕೊಂಡಾಡಿದರು. ಇವರ ಪ್ರದರ್ಶನಗಳು ಇಲ್ಲಿ ಬಹಳ ಜನ ಸೇರಿದ್ದರು. ಶ್ರೀಮತಿ ಗಂಗೂಬಾಯಿ ಗುಳೇದಗುಡ್ಡ ಇವರಿಗೆ "ಕನ್ನಡ ನಟೀರತ್ನ" ವೆಂಬ ಪದವಿಯನ್ನು ಒಂದು ಸುವರ್ಣ ಪದಕವನ್ನು ದಯಪಾಲಿಸಿದರು. ಇದಕ್ಕೂ ಮುಂಚೆ ನರಗುಂದದಲ್ಲಿ ಮತ್ತು ಬಸವಣ್ಣನವರ ಉತ್ಸವಕ್ಕೆ ಶ್ರೇಷ್ಠ ವ್ಯಾಪಾರಿಗಳು ಇವರ ನಾಟಕಗಳು ಮಂಡಳಿಯನ್ನು ಗಾಯನಕ್ಕೆ ಮೆಚ್ಚಿ ಬಸವಣ್ಣನವರ ಶ್ರೀ ಗಾನರತ್ನ ಗಂಗೂಬಾಯಿ ಸ್ವಾಮಿಗಳು ಕಡಬಗೇರಿ ಮಠದ ಇವರ ಹಸ್ತದಿಂದ ಕೊಡಿಸಿದರು. ಈ ಕಂಪೆನಿಯಲ್ಲಿ ಶ್ರೀಮತಿ ಗಾನರತ್ನ ಗಂಗೂಬಾಯಿ, ಶ್ರೀಮತಿ ಎಲ್ಲಮ್ಮ ಮತ್ತು ಬಸವಣ್ಣಪ್ಪ ಹಿ ಮುಡಿಯಾಳಯ್ಯನವರು, ಸಂಗೀತದ ಕಲೆಗಳನ್ನು ಪರಿಚಯಿಸಿ ಗುರುಗಳು, ಬಹಳ ಮತ್ತು ಕನ್ನಡ ನಟ ಸಂಗೀತ ಗುರುಲಿಂಗಪ್ಪನವರು ಹಾಡಿ ಪಡೆದ ನಾಟಕಗಳನ್ನು ಒಟ್ಟ ಮನೋಹರವಾಗಿ ಮಾಡಿದರು. ಇನ್ನು ಈ ಕಂಪೆನಿಯವರು ತಮ್ಮಲ್ಲಿಯೇ ಬಾಗಲಕೋಟೆ ಕಡೆಗೆ ಹೋಗುವವರಾದ್ದರಿಂದ ಜನರೆಲ್ಲರು ಇವರಿಗೆ ಮಂಗಳವನ್ನು ಕೋರಿ ಓರ್ವ ಶ್ರೀ ಅಭಿಮಾನಿ, ಬೈಲಹೊಂಗಲ

ಶ್ರೀ ಬಸವೇಶ್ವರ ಜಯಂತಿ

(ರೇವಣಕೆ ಉಪಾಧ್ಯಾಯರು ಮತ್ತು ಬಸವೇಶ್ವರ ಜಯಂತಿ ಸಮ್ಮೇಳನ, ದೇವನಾಯಕನಹುಡ್ಯ)

ಪುಣ್ಯಭೂಮಿಯಾದ ಈ ಭರತಖಂಡದಲ್ಲಿ ಆರ್ಯಧರ್ಮವನ್ನುದ್ಧರಿಸಿ ಜನಸಾಮಾನ್ಯವನ್ನು ಮುಕ್ತಿಮಾರ್ಗಕ್ಕೆ ಒಯ್ಯುವ ಪವಿತ್ರಕಾರ್ಯವು ಅನೇಕ ಮಹಾಪುರುಷರಿಂದ ನಡೆದಿತ್ತಿದೆ. ಶಂಕರಾಚಾರ್ಯ, ಮಧ್ವಾಚಾರ್ಯ, ರಾಮಾನುಜಾಚಾರ್ಯ, ವರ್ಧಮಾನ, ಬುದ್ಧ, ಮುಂತಾದ ಮಹನೀಯರೆಲ್ಲ ತಂತಮ್ಮ ಮತಗಳನ್ನು ಪ್ರಪಂಚಕ್ಕೆ ಸಾರಿ ಉಪದೇಶವನ್ನು ಇಂದ ಈಗಲೂ ಸ್ಮರಣೀಯರಾಗಿದ್ದಾರೆ. ಈಗ್ಗೆ ಸುಮಾರು ೮೦೦ ವರ್ಷಗಳ ಹಿಂದೆ ಬಸವೇಶ್ವರನು ಅವತರಿಸಿ ಬಳಿವಾಗಿದ್ದ ವೀರಶೈವಮತವನ್ನು ಉದ್ಧಾರ ಮಾಡಿದನು. ಈತನು ಇತರ ಆಚಾರ್ಯರಂತೆ ಕೇವಲ ಧಾರ್ಮಿಕರಾಗಿರದೆ ನಾಗರಿಕತೆ, ರಾಜನೀತಿದಾರ ಕರ್ತೃತ್ವ ಶಕ್ತಿ ಹೊಂದಿದವನು, ಸಂಘಸಂಸ್ಥೆಯ ವಿಚಾರ ಇನ್ನು ಪ್ರಜಾಸತ್ತೆ ಕಲಾವೃತ್ತಿಯುಳ್ಳ ಆಗಿದ್ದನು. ಸ್ತ್ರೀಯರಿಗೆ ಸ್ವಾತಂತ್ರ್ಯವು ಅವಶ್ಯಕವೆಂದು ಸಾರಿದ ಮಹಾ ಆಧುನಿಕ ನಾಗರಿಕರ ಅಭಿಮತವನ್ನು ಬಸವೇಶ್ವರನು ಅಂದೇ ತಿಳಿದಿದ್ದನು. ಜಗತ್ತಿನನ್ನವಾಗಿದ್ದಾನೆ ವ್ಯಭಿಚಾರವನ್ನು ಪ್ರಚಲಿತ ಸ್ತ್ರೀಯರನ್ನು ಗೌರವಿಸಿದ ಇವನು ಪ್ರಪಂಚಕ್ಕೆ ಮೊದಲ ದರ್ಶಕನಾಗಿದ್ದಾನೆ. "ಸರನಾರಿಯರು ಸಂಗೀತಗಾರರಲ್ಲಿ ಹಿಂಡಿಯೊಳಗೆ" ಎಂದು ಪರಿಶುದ್ಧ ನಡೆನುಡಿಗಳನ್ನು "ಕಾಯಕವೇ ಕೈಲಾಸ" ಎಂದು ಬಸವೇಶ್ವರನೇ ಅಪ್ಪಣೆ ಕೊಡಿಸಿದ್ದಾನೆ. ಬಸವೇಶ್ವರನು "ಅರಿಯಲಾಗದ ಸರ್ವಧರ್ಮ" ಎಂಬ ಮಹಾತ್ಮನವನ್ನು ತಿಳಿಯ ಪ್ರಾರಂಭಕ್ಕೆ ಹಿಂಸೆಯನ್ನು ಕೊಟ್ಟವನಲ್ಲ. "ಕಳಬೇಡ ಕೊಲಬೇಡ, ಹುಸಿಯ ನುಡಿಯಲು ಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ" ಎಂದು ತಾನೇ ಅದರಂತೆ ತನ್ನ ಹೃದಯವನ್ನು ಬಿಚ್ಚಿ ತೋರಿಸುವ ಪರಮಗುರುವಾಗಿದ್ದಾನೆ. ಅವನ ಸಮತಾಭಾವವು ಅರಳಿ ತಕ್ಕವರಾದ ಪವಿತ್ರ ವೈರಾಗ್ಯದೊಳಗಡೆ ಆತನು ಕೆಳಗಿನ ಬಂದ ಭಕ್ತರನ್ನು ಅಪ್ಪಿಕೊಂಡು ಆಧ್ಯಾತ್ಮಿಕ ಜ್ಞಾನವನ್ನು ನೀಡಿದ ಯೋಗಿಯಾಗಿದ್ದಾನೆ. "ಸ್ತ್ರೀ ಪುರುಷರಿಬ್ಬರಲ್ಲಿಯೂ ಭೇದವಿಲ್ಲ" ಎಂಬ ಮಹಾಸಿದ್ಧಾಂತವನ್ನು ಜಗದ್ಗುರುಗಳಾಗಿ ಸಾರಿದನು. ವಂದ್ಯನಾದ ಪರಮೇಶ್ವರನ ಭೂಮಿಗೆ ಎಲ್ಲರನ್ನು ಪ್ರೇಮಭಾವದಿಂದ ಕರೆ ಯುತ್ತಿರುವನು. ಇವನು ರಾಜನೀತಿಯಲ್ಲಿ ಲೋಕಪ್ರಸಿದ್ಧನಾಗಿದ್ದರೂ ವಿನಯಶೀಲನಾಗಿದ್ದನು. ಅಹಂಕಾರವಿಲ್ಲದವನಾಗಿ ಸತ್ಯವನ್ನೇ ನುಡಿಯುತ್ತಿದ್ದನು. "ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ" ಎಂದು ತನ್ನ ಅಹಂಭಾವವನ್ನು ಬಿಟ್ಟು ಹಾಡಿದನು. ಆತನು ಸಾಮಾಜಿಕ ಎಲ್ಲ ಸ್ತರದವರಿಗೆ ಬಸವೇಶ್ವರನು ವೀರಶೈವಮತವನ್ನು ಉದ್ಧಾರ ಮಾಡಿದನೆಂದು ಅನೇಕರು ಆನಂದದಿಂದ ಒಪ್ಪಿಕೊಳ್ಳುತ್ತಿರುವರು. ಹಿಂದಿನವರು ಬಸವೇಶ್ವರನನ್ನು "ವೀರಶೈವಮತಸಂಸ್ಥಾಪಕ" ನೆಂದು ಕೊಂಡಾಡಿರುವರು. ಬಸವನು ಗುರು ಕರ್ಮ, ವಿದ್ಯಾ ಶಕ್ತಿಯಾಗಿ ಸಮಾಜಕಾರ್ಯದ ಸರ್ವ ವಿಧ ಶಿವದೀಕ್ಷೆಯನ್ನು ಕೊಟ್ಟು ಸಮಾಜವನ್ನು ಎತ್ತಿ ಹಿಡಿದನು. ಬ್ರಾಹ್ಮಣರು ಕ್ಷತ್ರಿಯರು, ಮತ್ತು ವೈಶ್ಯವರ್ಗ ಮೊದಲಾದ ಉತ್ತಮ ಜಾತಿಯವರನ್ನು ವೀರಶೈವರನ್ನಾಗಿ ಮಾಡಿದವನಲ್ಲದೆ ನೀಚ ಚಂಡಾಲ, ಮಾದಿಗರನ್ನು ಲಿಂಗಧಾರಿಗಳನ್ನಾಗಿ ಮಾಡಿ ಮತವನ್ನು ಪ್ರಚಾರಗೊಳಿಸಿದನು. ಜಾತಿಭೇದವನ್ನು ತೊಡೆದುಹಾಕಿದ ಬಸವೇಶ್ವರನು, ಈಶ್ವರ ಸೃಷ್ಟಿಯಲ್ಲಿ ಎಲ್ಲಾ ಮಾನವರೂ, ಪರಿಶುದ್ಧರಾಗಿ ಪರಮೇಶ್ವರನ ವರಪ್ರಸಾದರಾದ ಶಿವಭಕ್ತ ಸಂಸ್ಕಾರದಿಂದ ಪುನೀತರಾಗಿ ಮೋಕ್ಷ ಪಡೆಯಬೇಕೆಂಬ ಉದಾರ ಭಾವನೆಯು ಅವನಲ್ಲಿ ಹೊರಹೊಮ್ಮಿತು. ಅನೇಕ ಅನುಯಾಯಿಗಳು ಶೇಖರಿಸಿದಂಥ ಶಿವ ಭಾವವು ಅವನಲ್ಲಿರಲಿಲ್ಲ. ಬಸವನು ಮಾಡಿದ ಸಮಾಜಸೇವೆಯು ನೂತನ ಜೀವನವನ್ನು ನೀಡಿತು. ಆ ಮಹನೀಯನ ಜೀವನವನ್ನು ಆದರ್ಶವನ್ನಾಗಿ ಇಟ್ಟುಕೊಂಡು ನಡೆಯುವುದು ನಮ್ಮ ಕರ್ತವ್ಯವಾಗಿದೆ. ಇಂಥಾ ಮಹನೀಯನು ಈ ಸಮಾಜದಲ್ಲಿ ಅವತರಿಸಿದುದರಿಂದ ನಮ್ಮ ಭಾಗ್ಯ. ಅವನ ಜಯಂತಿಯನ್ನು ಆಚರಿಸಿ ಅವನ ಸ್ಮರಣೆಯನ್ನು ಮಾಡಿ, ಅವನ ಕೃತಿಗಳ ಅನುಷ್ಠಾನದಲ್ಲಿ ನಿರತರಾಗುವದು ನಮ್ಮ ಪಾತ್ರವಾಗಿದೆ. ಇದರಿಂದ ನಮ್ಮ ಜೀವನ ಭಾವನೆಗಳು ದೂರವಾಗಿ ಸಮಾಜದಲ್ಲಿ ಏಕಮುಖ ಅಭಿವೃದ್ಧಿ ಹೆಚ್ಚುವುದು. ಮೇಲಾಗಿ ಬಸವನ ಸಂದೇಶ ಕೃತ್ಯದ ಅವಶ್ಯಕತೆ ಮತ್ತು ದ್ವಿತೀಯ ಸಂಘದ ಆ ಪವಿತ್ರ ಕಾರ್ಯ ಸಮಾಜಕ್ಕಿರಲಿ. ವೀರಶೈವರು ಸೈಕಾಮ ವರ್ಷ ಕೆಲಸಗಳು ಕನ್ನಡದ ಶ್ರೀ ಬಸವಣ್ಣನವರ ವಚನಗಳನ್ನು, ಬಸವೇಶ್ವರನ ಕೃತಿಗಳನ್ನು ಪ್ರಕಟಿಸಲು ಪ್ರಯತ್ನಿಸಬೇಕಾಗಿದೆ.

ದಿ|| ಬೋಗಿನ ಪ್ರವೇಶಕ್ಕೆ ಬಾಲಿಕಾಶ್ರಮದವರ ಪ್ರಯತ್ನ

ಒಬ್ಬರ ಜೀವನ ಸಾರ್ಥಕವಾಗುವುದು ಇತರರಿಗೆ ಉಪಕಾರ ಮಾಡುವುದರಿಂದ ಎಂದು ಸೂಚಿಸಿ ಹೇಳುವುದು ಆ ಪ್ರಯತ್ನದವರು ಎಂದು ತಿಳಿಸುವಂತೆ ಬಾಲಿಕಾಶ್ರಮದವರು ಹೊಸದಾಗಿ ಆರಂಭಿಸಿದ ಶಾಲೆಗೆ ಸಹಾಯ ಮಾಡುವ ಧಾರ್ಮಿಕರು ನಮ್ಮಲ್ಲಿ ಕಡಿಮೆ ಎಂದು ಸಕಾರಣವಾಗಿ ಹೇಳಬಹುದು. [redacted] ಮಂದಿ ಮನೆಗಳನ್ನು [redacted] ಸರಿಸಿ [redacted] ಕಷ್ಟ ಪಡುತ್ತಿದ್ದಾರೆ [redacted] ರಣ [redacted] ಕಷ್ಟ ಹೋಗಿದೆ [redacted]

ದಾವಣಗೆರೆ ದೈವದವರು ಮೊದಲು ಬಹಿಷ್ಕಾರ ಹಾಕಿದ ಮೇಲೆ ಅವರು ಹೇಳಿದ ಮಾತಿನ ಮೇಲೆ ಇವರು ಸ್ಪಷ್ಟವಾಗಿ ಹೇಳಿದರು. ಇದೇ ಬಾಳೆಹಳ್ಳಿಯವರ ಪಕ್ಷದ ಉಜ್ಜನಿಯವರು ಯಾರ ವಿರೋಧವಾಗಿ ಜನರನ್ನು ದುಡಿಯುವ 20 ವರ್ಷಗಳಿಂದ ಉತ್ಸಾಹದಿಂದ ಸಮಾಜ ಸೇವೆಯನ್ನು ಮಾಡುತ್ತ ಬಂದಿರುವರು. ಎಲ್ಲರೂ ಈಗ ಅವರ ಯೋಗ್ಯತೆಯನ್ನು ಬಲ್ಲವರಾಗಿರುತ್ತಾರೆ.

ಈ ಸುದ್ದಿ ದೈವದವರ ಕಿವಿಗೆ ಬಿದ್ದ ಮೇಲೆ ಸರ್ ಪುಟ್ಟಣ್ಣಶೆಟ್ಟರ ಮತ್ತು ಮಹದೇವಯ್ಯನವರ ಕೂಡ ಆಲೋಚಿಸಲು ಇವರ ಕಡೆಯವರು ಹೋದ ಸುದ್ದಿಯು ಬಹಳವಾಗಿತ್ತು.

ಉತ್ಸವ ತಿಥಿಯನ್ನು ವೈಶಾಖ ಶುದ್ಧ ಏಕಾದಶಿ ಭಾನುವಾರ ಗೊತ್ತು ಮಾಡಿರುವುದು ಬಹು ಚೆನ್ನಾಗಿದೆ. ನಮ್ಮಲ್ಲಿ ಸರ್ವಸಾಧಾರಣವಾಗಿ ಉತ್ಸವ ಆರಾಧನೆ ವಿನೋದಕೂಟ ಪುರಾಣ ಪುಣ್ಯಕಥೆ ಕೀರ್ತನೆಗಳು ನಡೆಯುವುದು "ಬಿಡುವು" ವಾರಗಳಲ್ಲಿ ಎಂದರೆ ಭಾನುವಾರ ಸಂತೆ ದಿವಸ...

[illegible]

ಶ್ರೀ ಬಸವಜಯಂತ್ಯುತ್ಸವ

(ಲೇಖಕರು ಶ್ರೀ ಅನಿಕೋಂಡದ ಮುಪ್ಪಣ್ಣನವರ, ದಾವಣಗೆರೆ)

ವೀರಶೈವ ಮತೋದ್ಧಾರಕನೂ ಕರ್ನಾಟಕ ಭಾಷಾಭಿವರ್ಧಕನೂ ... ಶ್ರೀ ಬಸವೇಶ್ವರ ಜಯಂತಿಯು ಇದೇ ತಿಂಗಳು 11 ನೇ ಶನಿವಾರವಾಗಿ ಬರುತ್ತದೆ. ...

[illegible]

ಈ ರೀತಿಯಾಗಿ ಶ್ರೀ ಬಸವೇಶ್ವರ ಜಯಂತಿಯು ಎಲ್ಲೆಲ್ಲಿಯೂ ನಡೆಯಬೇಕು ...

[illegible]

ಜೀವನವನ್ನು ತಿಳಿದುಕೊಳ್ಳುವ ಸಲುವಾಗಿ ... ಹೆಚ್ಚು ವಿವರಣೆ ಕೊಡುವುದು ...

ಭರತಖಂಡದ ಎಲ್ಲಾ ಭಾಗಗಳಲ್ಲಿಯೂ ಈ ಕಾಲದಲ್ಲಿ ಪ್ರತಿ ವರ್ಷ ಸೇರುತ್ತಿರುವ ಸಾಮಾಜಿಕ ಪರಿಷತ್ತುಗಳಾಗಲಿ ಅಥವಾ ಈ ದೇಶದ ಸಮಾಜ ಸುಧಾರಕರಾಗಲಿ ಬಸವನ ಕಾರ್ಯಕ್ಕಿಂತ ಹೆಚ್ಚಿನದಾವುದನ್ನೂ ಮಾಡಲಾರರು. ಭರತಖಂಡದ ಚರಿತ್ರೆ ಮತ್ತು ಭಾರತೀಯರ ಆಚಾರಪದ್ಧತಿಗಳನ್ನು ಬಹು ಚೆನ್ನಾಗಿ ತಿಳಿದುಕೊಂಡಿದ್ದ ಸರ್ ಜೇಮ್ಸ್ ಕ್ಯಾಂಪಬೆಲ್‌ರವರು "ಕೇವಲ ಒಂದೇ ಭರತಖಂಡದ ಈಗಿನ ಸಮಾಜಸುಧಾರಕನು ಬಸವನ ನುಡಿಯನ್ನೇ ನುಡಿಯುತ್ತಲೂ, ಆತನ ಅಭಿಪ್ರಾಯವನ್ನೇ ಬೋಧಿಸುತ್ತಲೂ ಇದ್ದಾನೆ."

ವೀರಶೈವ ವಿದ್ಯಾರ್ಥಿ ನಿಲಯಗಳು

ವೀರಶೈವ ಮತವು ಆದಿಯಿಂದಲೂ ತನ್ನ ಧರ್ಮಬಲದಿಂದ ಪವಿತ್ರ ಸ್ಥಾನವನ್ನು ಗಳಿಸಿಕೊಂಡಿದೆ. ಈ ಮತದ ಗತವೈಭವವನ್ನು ಒಂದು ಕ್ಷಣ ಹೃದಯಮಂದಿರದಲ್ಲಿ ಚಿತ್ರಿಸಿಕೊಂಡರೆ ಯಾವೊಬ್ಬ ನಿಷ್ಪಕ್ಷಪಾತ ಸಾಹಿತ್ಯ ಪ್ರಿಯನ ಮನಸ್ಸಾಗಲಿ ಚಂಚಲವಗೊಳ್ಳದಿರಲಾರದು. ಧಾರ್ಮಿಕ ದೃಷ್ಟಿಯಿಂದಲೂ ಸಂಘಸಂಸ್ಥಾಪನ ವಿಧಾನದಿಂದಲೂ ರಾಜಕೀಯ ಪ್ರಾಧಾನ್ಯದಿಂದಲೂ ...

[illegible]

ಈ ಮುನ್ನ ವೈದ್ಯ ಭೂಮಿ ...

ಅದು ವಿದ್ಯಾರ್ಥಿಗಳ ... ಸಮಾಜದ ... ಧಾರ್ಮಿಕ ... ಸಮಾಜಸೇವಕ, ಮುದಗೆರೆ ಓ. ಎಸ್. ಬಿ. (ಬಿ)



ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ

ರೋಗಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ...

ಗೆಲವಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ — ತಲೆನೋವು ... ರೋಗಗಳು ... ಸರ್ವ ವ್ಯಾಧಿಗಳು ... ದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ... ವ್ಯಾಧಿಗಳನ್ನು ಸ್ವಸ್ಥಪಡಿಸಿ ... ಮಾಡುತ್ತದೆ ... ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ...

ವಿಳಾಸ: ... ಗುರುಬಸವ ಅಂಡ್ ಕಂಪನಿಲಿಮಿಟೆಡ್,

(6) 7) ಪೋ. ಬಾ ... ಮೈಸೂರು.

೧೯೩೫ ನೆಯ ಇಸವಿ ಮೇ ತಾ|| ೪ ರಿಂದ ೧೯೩೫ ನೆಯ ಇಸವಿ ಮೇ ತಾ|| ೧೦ ರ ವರೆಗೆ ಸಲ್ಲುವ ಶಾಲಿವಾಹನಶಕೆ ೧೮೫೭ ಯುವನಾಮ ಸಂವತ್ಸರದ ಚೈತ್ರ ಬಹುಳ ದಶಮಿಯಿಂದ ವೈಶಾಖ ಶುದ್ಧ ಸಪ್ತಮಿ ವರೆಗಿನ ಪಂಚಾಂಗ

ತಾ||	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮೋಷ ಮಾಸ
4	ಶನಿ	ದಶ	25 42	ಶತ	22 22	22
5	[1] ಭಾನು	ಏಕಾ	2 33	ಪೂಭಾ	1.0	23
6	[2] ಸೋಮ	ದ್ವಾದ್ವ	31 5	ಉಭಾ	24.16	24
7	[3] ಮಂಗಳ	ತ್ರಯೋ	31 30	ರೇವತಿ	33 30	25
8	ಬುಧ	ಚತು	18.0	ಅಶ್ವಿನಿ	29.32	26
9	[4] ಗುರು	ಅಮಾ	14 26	ಭರಣಿ	19 0	27
10	[5] ಶುಕ್ರ	ಪಾಡ್ಯ	8 18	ಕೃತ್ತಿ	16.0	28

(1) ಸರ್ವೈಕಾದಶಿ (2) ಪ್ರದೋಷ (3) ಮಳೆ ನಕ್ಷತ್ರ ಭರಣಿ ೪ ನೆಯ ಪಾದ (4) ಕರಗದ ಅಮಾವಾಸ್ಯೆ, ಕರಗದಾಸನ, ... (5) ... ವ್ರತಂ

ಶ್ರೀ ... ವಿಶ್ವನಾಥಯ್ಯನವರಿಂದ ... ಪ್ರಕಟಿಸಲ್ಪಟ್ಟಿತು

ಬೇಕಾದ ... ಮತ್ತು ಬೆಲೆ ಕಡಿಮೆ ...

1751 18ನೆ ... ಪತ್ರಿಕೆಯಲ್ಲಿ ಪ್ರಕಟವಾದ ...

REGISTERED No. M.

ಮೈಸೂರ್ ಸ್ಟಾರ್

ಪ್ರತಿ ಶನಿವಾರ ಪ್ರಕಟಿಸಲ್ಪಡುವುದು

ಮಹಿಶೂರಪುರೀಶಾನಾ ಪರಮಧಿಗಶರಾಜಮಂಡಲಿಶ್ಯಾ ಭಸವಭಕ್ತಾವಶಚಾ ಶಕ್ತ್ಯಾ ನಕ್ಷತ್ರ ಮೋಚಾಯೋಯಂ ‖
ಶ್ರೀಮತ್ಕೃಷ್ಣನೃಪಾಲನುತ ಸಕಲಾರೋಗ್ಯಸುಧೀಭುಂಗವ । ಸಿದ್ಧನಾಥಪ್ರದರ್ಶಿತ ನಾಕರಿಕ ಸಾಧು ಪ್ರಾಪ್ಯಪಾಲಂರಲಂ ‖
ಶಿವಮಾರ್ಗೀಯ ಸದ್ಧರ್ಮಪ್ರಕಾಶನಪರಂ ಶಬ್ದ ಪ್ರಕಾಶಮಾನಂ । ಶ್ರೀಮದ್ಭಕ್ತಿಯುಗಪರಾಯಣರಿಗೆ ಗೌರೀಶಾನುಕಂಪೋದ್ಭವಂ ‖

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರರಿಗೆ ೩-೮-೦]

ಸಂಪುಟ ೪೨] ಮೈಸೂರು ಸ್ಟಾರ್ ಸನ್ ೧೯೨೯ ನೆಯ ಇಸವಿ ಮೇ ತಾರೀಖು ೧೮ ನೆಯ ಶನಿವಾರ [ಸಂಚಿಕೆ ೨೦

ಬಸವೇಶ್ವರ ಜಯಂತಿಗಳಿಗೆ ಖರೀದಿ ಕಡಿಮೆ ಮಾಡಿದೆ.

ರವಿವರ್ಮ ಪ್ರೆಸ್ಸಿನಲ್ಲಿ ತಯಾರಿಸಿದ ಶ್ರೀ ಬಸವೇಶ್ವರ ಜನನದ 14"×20" ಸೈಜಿನ ಆಯಿಲ್ ಕಲರ ಚಿತ್ರಪಟವನ್ನು 0-8-0 ಕಳುಹಿಸುವವರಿಗೆ 1 ಪಟವನ್ನೂ 0-14-0 ಕಳುಹಿಸುವವರಿಗೆ 2 ಪಟವನ್ನೂ, 4-0-0 ರೂಪಾಯಿ ರವಾನಿಸುವವರಿಗೆ 12 ಕಾಪಿಗಳನ್ನೂ ಪೋಸ್ಟೇಜು ನಾವೇ ವಹಿಸಿ ಫ್ರೀ ಪಾರ್ಸಲ್ ಮೂಲಕ ರವಾನಿಸಲಾಗುತ್ತೆ

ವಿ ಪಿ ಮೂಲಕ ರವಾನಿಸಿದಲ್ಲ ಪೋಸ್ಟೇಜು ದುಬಾರಿಯಾಗುತ್ತಾದ್ದರಿಂದ ವಿ ಪಿ ಮೂಲಕ ರವಾನಿಸಿರೆಂದು ಬರತಕ್ಕ ಆರ್ಡರ್‌ಗಳಿಗೆ ನಿಗಾ ಕೊಡುವುದಿಲ್ಲ

ವಿಳಾಸ- ಎಂ ಎಸ್ ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು

[60—26]

೧೦೦೦ ರೂಪಾಯಿ ಇನಾಮು.

ಮಿರಜಿಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ ಪ್ಹಿ ಎಸ್. ಕಾಪಸೆ, ಇವರ

ಅಲ್ಪವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ | **ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ (ಸ್ವರಿಜ) ಬಜರಂಗ ಸುಂದರಪಾಕ.** | ಧೋಕಲಿಸಿದರೆ ಕ್ಷೀಣತೆ ಕಾಯ್ದು ಕೊಳ್ಳುವಿ

ಈ ಪಾಕಸೇವನೆಯಿಂದ ಎಲ್ಲ ಧಾತುಜನ್ಯ ವಿಕಾರಗಳ ಧಾತುಕೋಶದಲ್ಲಿಯ ಉಷ್ಣತೆ ಮತ್ತು ಮೈಥುನದಿಂದುಂಟಾದ ಇಂದ್ರಿಯ ಶಿಥಿಲತ್ವ ನಪುಂಸಕತ್ವ, ಸ್ವಪ್ನಾವಸ್ಥೆ ಮೂತ್ರದೊಂದಿಗೆ ಧಾತುಹೋಗೋದು ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋದು ವೀರ್ಯವು [illegible]ಗುವದರಿಂದುಂಟಾದ ರೋಗದ ಮೂಲಕ ಸಂತತಿಯಾಗದಿರೋದು ನಡನೋವು ಸಂದುನೋವು ಎದೆನೋವು ಹಾರ್ಟ (ಡಿಸೀಜ) ಜೀರ್ಣಜ್ವರ, ಮೂಲವ್ಯಾಧಿ, ಮಧುಮೇಹ ಹಳೇಪರ್ಮ ಮತ್ತು ಗರ್ಮಿ ರಸಾಯನ ಸೇವನೆಯಿಂದಾದ ದುಷ್ಟವಿಕಾರಗಳ ಯಾವದೇ ಕಂದ ಜ್ವರದಿಂದ ಎದ್ದ ಮೇಲೆ ಆದ ಕ್ಷೀಣತೆ, ಮೆಂದುವಿನ ಅಶಕ್ತತೆ ಉರಿಮೂತ್ರ ಕೈಕಾಲು ಉರಿಯೋದು ಎಲ್ಲ ಪಿತ್ತವಿಕಾರಗಳ ನಿವೃತ್ತಿಯು. ಬಾರದೆ ಇರೋದು ಸ್ತ್ರೀಯರಿಗೆ ಸಂತತಿ ನಷ್ಟವಾಗೋದು, ಮೇಲಿಂದಮೇಲೆ ಗರ್ಭಪಾತವು ಎಲ್ಲ ಬಣ್ಣದ ಶೆರಗು ಗರ್ಭಾಶಯ ವಿಕಾರದಿಂದ ಸಂತತಿ ಆಗದೆ ಇರೋದು ಮುಂತಾದ ವೃದ್ಧ [illegible] ಜನರಿಗೆ ವಿಶೇಷ ಹಿತಕರ. ಉಗ [illegible] ಸಾಧ್ಯವಾಗಿ ಧಾತುವೃದ್ಧಿಯಾಗಿ ವೀರ್ಯ ಪುಷ್ಟ ಆಗುವದಲ್ಲದೆ ಪುರುಷತ್ವ ಹೆಚ್ಚುತ್ತದೆ ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಹಾಯಕ ಆಗುತ್ತದೆ ಈ ಪ್ರಕಾರ ಕಾಯುವ ಧಾತು ಪೌಷ್ಟಿಕಶಕ್ತಿಯು ಮತ್ತು ಎಷ್ಟಿನ ಪಾಕವನ್ನು ಈ ಜೊತ್ತಿನವರಿಗೆ ಯಾರೂ ಮಾಡಿಲ್ಲ ರಸಿಕರು ಬಹ ಸುಮಂಧವರು ತಕ್ಕೊಂಡು ಅನುಭವಿಸಿ ಈ ಪಾಕದಲ್ಲಿ ಬಹುಪ್ರಯಾಸದಿಂದ ಸಂಪಾದಿಸಿದ ಔಷಧಿ [illegible] ವನಸ್ಪತಿ—ಶತಾವರಿ ಸಾಲಮಕಂದ ಮಧು ಕಂದ ಬಿಳಾಕಂದ ಶಾಲಿಮಿಲೀಕಂದ [illegible] ಅಶ್ವಗಂಧ ಕಂದ, ಮಧುಕಂದ ಮುಸಳೀಕಂದ ಸೇಮರೀಕಂದ ದ್ವೀಪಾಂತರವಚಾಕಂದ ತವಕಬೀಜ ಸಮುದ್ರಶೋಕಬೀಜ ಶಕಬೀಜ [illegible] ಬಾಳಬೀಜ, ಧೋತರೀಬೀಜ ಸಿಪಲಿಬೀಜ ತಿಳಿದವಂತಾಗ ಅಡವಿ ಇಲ್ಲಿಸಪಂಚಾಂಗ ಕಮಾಪತ್ರ ಜಾಯಪತ್ರೆ ಶಿಲಾಪತ್ರಿ, ಮದನಮಸ್ತ, [illegible] ಕಮರಕಸ ಕಡಿಲ್ಯಾಗೊಂದ ಪಂಚಾಬಮಿಶ್ರಿ ಸಾಲಮಿಶ್ರಿ ಸಫೇದಮಿಶ್ರಿ ತಾಲೀಮಖಾನಾ ಬೀಜ ಹರಣಬೀಜ ಮುಂಗಬೇಟೆ [illegible] ಗೋಟ್ಗೆ, ಕಬಾಬ ಸಕ್ಕರೆ ಗಜ ಆದಮಾಲು ವಾಕೇರಿಬಾಸಾ ಗೋಖರು ಅಡವಿಪಂಡಿಗೋರು ಬಂಡು, ಅಮೃತಸತ್ವ ಇಸಬಗೋಲ [illegible] ಅವಳಕಾಟಿ ಸಿಲಾಜಿತ, ಜಾಜೀಕಾಯಿ ಧೂಪಾಮಸ್ತಕಿ ವಂಶಲೋಚನ ಪರಧಾಲಾ, ಕೇಸರಿ ಯಾಲಕ್ಕಿ ಕಲ್ಲಸಕ್ಕರೆ ಈ ಜಿನಸುಗಳಲ್ಲಿ [illegible] ಗುಣವಿಲ್ಲೆಂದು ಮತ್ತು ೫೩ ಜಿನಸು ಹಾಕಿಲ್ಲೆಂದು ಸಿದ್ಧಪಡಿಸಿಕೊಟ್ಟವರಿಗೆ ೧೦೦೦ ರೂಪಾಯಿ ಇನಾಮು ಕೊಡುವೆವು ಮುಂಜಾನೆ ತೊಲಿಯ ೧ ವಡಿ, ರಾತ್ರಿ ಭೋಜನಾನಂತರ ೧ ತೊಲಿಯ ಒಂದು ವಡಿಯನ್ನು ತಕ್ಕೊಂಡು ಅದರಮೇಲೆ ಸ್ವಲ್ಪ ಕಾಸಿದ ೨೦ ತೊಲಿ ಹಾಲ [illegible] ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ, ಸ್ತ್ರೀವರ್ಜ್ಯವಿಲ್ಲ ೨೧ ದಿವಸ ಸಾಕಾಗುವದನ್ನು ಈ ಪಾಕದ ೮೮ ತೊಲ ಡಬ್ಬಿಗೆ [illegible] ೪ ಡಬ್ಬಿಗೆ ೧೪ | ರೂ ೧ ಡಬ್ಬಿಗೆ ೨೭ ರೂ ವ್ಹಿ ಪಿ ಖರ್ಚು ಬೇರೆ ೪ ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು

[50—10] ಪತ್ತೆ : —ಮಾಲಕ ವೈದ್ಯ ವ್ಹಿ ಎಸ್ ಕಾಪಸೆ ಮು. ಪೋ. ಮಿರಜ,

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ	(ವಿ ಪಿ ಸೇರಿ)		ಕ್ರಯ	(ವಿ ಪಿ ಸೇರಿ)
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦	ವೃತರಂಜಕ	೦—೪—೦	೦—೬—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೪—೦	ಗುರುಶಂಕರದೇವ್ಯರಿತೆ	೦—೧—೦	೦—[illegible]—೦
ಅಷ್ಟಾವರಣ	೦—೪—೦	೦—೬—೦	ಬಸವೇಶ್ವರಜನನ	೦—೮—೦	೦—೧೦—೦
ಷಟ್ಸ್ಥಲಪ್ರಕಾಶಿಕೆ	೦—೫—೦	೦—೧೦—೦	ಸಟೀಕ ಕಥಾ ಚಿಕಿತ್ಸಾ ಮಂಜರಿ	೦—೮—೦	೦—೧೪—೦
ಶಿವರಾತ್ರಿ	೦—೪—೦	೦—೬—೦	ಸಟೀಕ ಶತಕತ್ರಯ	೧—೦—೦	೧—೬—೦

ಮೈಸೂರು ಸ್ಟಾರ್ ಚಂದಾನಿಬಂಧನೆ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ | ನವಿಯೂ, ಕಾಗದ ಬರೆಯುವಾಗಲೂ ತಮಗೆ ಒದುತಿರುವ
೨-೮-೦ ; ಲೈಬ್ರರಿ, ವಾಚನಾಲಯ, ಸೊಸೈ[illegible] | [illegible]ತ್ರಿಕೆಯ ಕವರ್ ಮೇಲಿನ ನಂಬ್ರ [illegible]
ಗಳಿಗೆ ವಾರ್ಷಿಕ ಚಂದಾ ರೂ. ೩-[illegible] | ನಂಬರನ್ನು ಮರೆಯದೆ ಬರೆಯತಕ್ಕ
[illegible] ಇನ್ನೂ ೪ ಆಣೆ ಜಾಸ್ತಿ [illegible] | [illegible]ಂದ ಕಾಗದ ಕಾರ್ಡು ಮನಿಯ
[illegible] ಗಳು ಮನಿಯಾರ್ಡರ್ ಮಾಡುವಾ | [illegible] ಉತ್ತರ ಕೊಡಲಾಗುವದಿಲ್ಲ

ವೀರಶೈವಮತಗ್ರಂಥಗಳು.

ಶಿವಾಧಿಕ್ಯಶಿಖಾಮಣಿಃ

ಪ್ರತಿ ೧ ಕ್ಕೆ ಬೆಲೆ ೧-೦-೦

ಇದು ಚೋಳದೇಶದಲ್ಲಿ ಶ್ರೀಮದ್ರೇಣುಕಾಚಾರ್ಯರಿಗೂ, ವೈಷ್ಣವ ಮತಸ್ಥನಾದ ವಿಜಯೇಂದ್ರತೀರ್ಥರಿಗೂ ನಡೆದ ಪ್ರಶ್ನೋತ್ತರರೂಪವಾಗಿದೆ ಇದರಲ್ಲಿ ಶಿವೋತ್ಕರ್ಷ, ಲಿಂಗಧಾರಣ, ಅಷ್ಟಾವರಣ, ಊರ್ಧ್ವಪುಂಡ್ರವಿರಸನ ವಿಷ್ಣುವಿನವತಾರಸಂಹಾರ, ಶಂಖ ಚಕ್ರ ಮುದ್ರಾಧಾರಣ ನಿಷೇಧ, ಪ್ರದೋಷಕಾಲದಲ್ಲಿ ವಿಷ್ಣುದರ್ಶನಧಿಕ್ಕಾರವೇ ಮೊದಲಾದ ಅಸಾಧಾರಣಗಳಾದ ನೂರು ವಿಷಯಗಳು ಶಾಸ್ತ್ರಪೂರ್ಣವಾಗಿ ಬೋಧಿಸಲ್ಪಟ್ಟಿವೆ ಇದನ್ನು ವೀರಶೈವರು ಅವಶ್ಯವಾಗಿ ನೋಡಬೇಕಾಗಿದೆ

ನ್ಯಾಯಶತಕಂ—ಇದರ ಪ್ರತಿಯೊಂದು ಶ್ಲೋಕದಲ್ಲೂ ಕಾಕತಾಲೀಯ ಕಾಕದಂತ ವೊದಲಾದ ಒಂದೊಂದು ನ್ಯಾಯವನ್ನು ಧಾಪರಿಸಿ ವಿದ್ವಜ್ಜನರಿಗೆ ಆನಂದವನ್ನುಂಟುಮಾಡುವಂತೆ ಶಿವಾಧಿಕ್ಯವು ವರ್ಣಿಸಲ್ಪಟ್ಟಿದೆ ಪಾರಾಯಣಕ್ಕೆ ಅತ್ಯುತ್ತಮವಾಗಿದೆ ಬೆಲೆ ೦-೨-೦.

ವಿ ಪಿ ಖರ್ಚು ಪ್ರತ್ಯೇಕ.

ಶ್ರೀ ಸೋಮಶೇಖರಸ್ವಾಮಿಗಳು,
ನಮಶ್ಶಿವಾಯಮಠ,
[12—4] ಟಿಸಬ್ಬಾಜ ಗಾರ್ಡನ್, ಮೈಸೂರು

"ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತರ"
ಆಯುರ್ವೇದೀಯ ಸಿದ್ಧೌಷಧಗಳು

ಲೋಕಾಮಯಹರ ಕಸ್ತೂರೀ ಮಾತ್ರೆಗಳು

ಈ ಮಾತ್ರೆಗಳನ್ನು ಪ್ರತಿದಿನವೂ ತಾಂಬೂಲದೊಡನೆಯಾಗಲಿ ಹಾಗೆಯಾಗಲೀ ಉಪಯೋಗಿಸುತ್ತಿದ್ದರೆ ಆಹಾರ ನೀರು ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ

ವಾಶ್ಶಳ ಮೊದಲು ಎಲ್ಲಾ ವಯಸ್ಸಿನವರಿಗೂ, ಶೀತ, ನೆಗಡಿ, ಕೆಮ್ಮು ಜೀರ್ಣ, ಶೀತವಾತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ

300 ಮಾತ್ರೆಗಳಿರುವ ಸೀಸೆ 1ಕ್ಕೆ ೩ ಆಣೆ

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ ನಮ್ಮ ವಿಳಾಸವನ್ನೂ ಲೋಕಾಮಯಹರ ಕಸ್ತೂರೀ ಮಾತ್ರೆ ಎಂಬ ಹೆಸರನ್ನೂ ನೋಡಿ ಕೊಂಡುಕೊಳ್ಳಿರಿ

ವೈಶ್ವಾನರಾಸವ

(ಕಾಲರಾ ವಾಂತಿಭೇದಿಗೆ ಸಿದ್ಧೌಷಧ)

ಮೂತ್ರವು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ, ಪ್ರಾರಂಭವಾಗದೆ ಕೊಟ್ಟ ಮೊದಲನೇವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ ಸೀಸೆ 1ಕ್ಕೆ ರೂ 1—0—0

ಪ್ಲೇಗ್‌ವಿನಾಶರಸ

(ಪ್ಲೇಗಿಗೆ)

ಹದಿನಾರು ವರ್ಷಗಳಿಂದ ಪ್ರತಿವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ನಿಶ್ಚಯವಾಗಿ ಗುಣಪಡಿಸಿರುತ್ತದೆ ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ ಸೀಸೆಯ ಬೆಲೆ 1ಕ್ಕೆ ರೂ 1—0—0

ಶ್ರೀನಿವಾಸತೈಲ

ಪ್ಲೇಗು ರೋಗಿಯ ಪ್ರತಿ ಸಂದುಗಳಿಗೂ, ಗೆಡ್ಡೆಗೂ ಹಚ್ಚುವ ತೈಲ ಸೀಸೆ 1ಕ್ಕೆ ರೂ 0—8—0

ಬ್ರಾಂಚ್

ಆಯುರ್ವೇದ ವೈದ್ಯಶಾಲಾ, [illegible]
ಬ್ರಾಂಚ್‌ಫೀಸು ಶ್ರೀ [illegible]
ಬೆಂಗಳೂರು ಸಿಟಿ [illegible]

NOTICE

Wanted a Kannada & English knowing qualified and experienced Ayurvedic Doctor on a monthly salary of Rs 75 with an annual increment of Rs 5 up to Rs 100 for the Gadag Betgeri Municipality Candidates who have passed their examination from any recognised Ayurvedic Institute will be given preference. Applications should reach the undersigned with testimonials if any on or before 20/5/29

T. V. KOTI,
President
Gadag Betgeri Municipality

ಮೈಸೂರು ಸ್ಟಾರ್.

೧೯೨೯ ನೇಯ ಇಸವಿ ಮೇ ತಾ|| ೧೮ ನೇಯ ಶನಿವಾರ

DECEPTION

With certain people in our land deception has been a favourite game for centuries So well versed are they in the art that there are even occasions when they mistake their own deceptions for realities It is remarkable with what consummate skill they try to play fraud on the public with what brazenness they speak and with what bravado they bluster It does not matter if they have not half a dozen ryots of Mysore at a meeting but yet they will hold a Mysore State Congress Not merely that They will proclaim it from the housetops to the whole world that it was a most representative gathering In describing the procession with three jaded ponies or the deliberations in the presence of innocent or misguided youths and instigated or misdirected mill hands they surpass Milton himself. In airing their views nothing less than picturing in lurid colours a reign of terror of insecurity of person and property in the State will satisfy these super patriots This drama or better still farce is not without a chorus In fact the chorus is their very inspiration. What could that chorus be but the Bangalore disturbances the theme which is well on its way to become a Marathon a Hastings or shall we say a Waterloo or coming nearer a Kurukshetra a Panipat or a Thalikota Yes with these do-nothing but talk much super patriots the one absorbing theme is the battle of 30th July 1928 and we would not wonder if they even arrange for celebrating an anniversary of it The stage-managing of this farce was very cleverly done The chosing of the characters in a play is an art by itself Last year they wanted to give a non Brahman colour and secure some substantial support and consideration for their Congress and they put the well-known mercantile magnate Mr Manickyavelu Moodaliar in the chair This time they wanted to prop up our old friend of Lakshmipuram who had lost ground considerably in recent months Where were they to find the non Brahman element to give the Congress a non communal colour No non-Brahman politician of any standing could be got at So get hold of some one to fit in with the character Who could do it better than the contractor who had rendered yeoman service in connection with the Bangalore disturbances who turned from an utter novice into a seasoned politician in less than a day and who could be depended upon by the coach. There were of course other patriots, or compatriots of the stage managers during the Bangalore disturbances who were harnessed for the purpose The stage managers got the characters to play their parts well keeping themselves appropriately in the background. It was not very different with the Youth Conference which was doubtless presided over by one whose qualification was certainly his youth and which sang much the same song as the Congress, the inspiration or rather the inspirers being the same for both. It is needless to discuss the resolutions which display more a slavishness for catch words than any knowledge of the peculiar conditions, more capable of admitting fine speeches, of which there were [illegible]ay, than of being translated [illegible] only to see the numerous [illegible]t year's congress at Mysore and the long sleep the congressmen took till this year's congress to know the barrenness of their work. How much better, if these men could put forth an ounce of action of some tangible benefit instead of these tons of words, oral and written. But action would expose deception which is the last thing they would like to do So long as deception pays and so long as there are men enough who could be fooled why not continue the game? Meantime one word to our non-Brahman leaders. Open your eyes wide and see if your position in the State has improved materially during all these years, whether the people are as yet freed from the spell of the monopolists or they are as yet anything but helpless hewers of wood and drawers of water. Pray, but not shibboleths and platitudes by which the traps are carefully laid, side track you from your main purpose to regain for the people their proper place in the general administration of the State and help forward a general awakening among the ignorant illiterate oppressed and depressed masses

ವಂಚನೆ.

ನಮ್ಮ ಸೀಮೆಯಲ್ಲಿ ಕೆಲ ಜನರಿಗೆ ಶತಮಾನಗಳಿಂದಲೂ ವಂಚನೆಯು ಅವರ ಮುಖ್ಯೋದ್ಯಮವಾಗಿರುತ್ತದೆ ಈ ವೃತ್ತಿಯಲ್ಲಿ ಅವರು ಮಗ್ನರಾಗಿರುವದರಿಂದಲೇ ಅನೇಕ ವೇಳೆ ನಿರ್ವಂಚನೆಯಿಂದ ಮಾಡಬೇಕಾದ ಕಾರ್ಯಗಳು ಸಹ ವಂಚನೆಯಾಗಿಯೇ ಪರಿಣಮಿಸುವುವು ಅವರು ಜನರನ್ನು ಬಹು ಚಾತುರ್ಯದಿಂದ ಮೋಸಗೊಳಿಸುವುದೂ, ಎಣ್ಣೆಕಟ್ಟಿ ಮಾತನಾಡುವುದೂ, ಅಟ್ಟಹಾಸದಿಂದ [illegible] ಪ್ರಖ್ಯಾತವಾಗಿರುತ್ತವೆ ೬-೮ ಜನ ರೈತರು ಸಹ ಇಲ್ಲದ ಕೂಟವನ್ನು ಮೈಸೂರು (ಕಾಂಗ್ರೆಸ್) ಸಾರ್ವಜನಿಕ ಸಭೆಯೆಂದು ಕರೆದು ನೆರವೇರಿಸಿದರು ಇಷ್ಟೇ ಅಲ್ಲದೆ ಮನೆಯ ಮಾಳಿಗೆಮೇಲೆ ನಿಂತು ಈ ಸಭೆಯು ಅತ್ಯಂತ ಜಯಪ್ರದವಾಗಿ ಜರುಗಿತೆಂದು ಪ್ರಪಂಚಕ್ಕೆಲ್ಲ ಸಾರುತ್ತಿರುವರು ಇದರ ಸ್ವಾಗತ ಮಂಡಲಿಯ ಅಧ್ಯಕ್ಷರನ್ನೂ ಮಹಾಸಭಾಧ್ಯಕ್ಷರನ್ನೂ ಎಳೆಯಲಾರದ ಮೂರು ಮುದಿ ಕುದುರೆಗಳನ್ನೂಡಿದ ರಥದಲ್ಲಿ ಕುಳ್ಳಿರಿಸಿ ಮೆರಯಿಸಿದ ಉತ್ಸವ ವೈಭವವನ್ನೂ ಪ್ರಪಂಚಜ್ಞಾನವಿಲ್ಲದ ತರುಣರನ್ನು ಮತ್ತು ನಕ್ರಮಾರ್ಗಾವಲಂಬಿಗಳಾದ ಗಿರಣಿಯ ಕೂಲಿಕಾರರನ್ನು ಸೇರಿಸಿ ನೆರೆಯಿಸಿದ ಮಹಾಸಭೆಯ ನಡವಳಿಕೆಯನ್ನೂ ವರ್ತಮಾನ ಪತ್ರಿಕೆಗಳಲ್ಲಿ ವರ್ಣಿಸುವುದರಲ್ಲಿ ಕಾಳಿದಾಸಾದಿ ಮಹಾಕವಿಗಳನ್ನು ಸಹ ಮೀರಿಸಿರುತ್ತಾರೆ ಈ ಪರಮ ದೇಶಾಭಿಮಾನಿಗಳು ಮೈಸೂರು ಸಂಸ್ಥಾನದಲ್ಲಿ ಜನರು ತಮ್ಮ ಪ್ರಾಣಕ್ಕೂ ಆಸ್ತಿಗೂ ಭದ್ರತೆಯಿಲ್ಲದ್ದರಿಂದ ಭಯಗ್ರಸ್ತರಾಗಿದ್ದಾರೆಂದ ಭಾಷಣಮಾಡಿ ವೃತ್ತಪತ್ರಿಕೆಗಳಿಗೆ ಬರೆದು ಆತ್ಮತೃಪ್ತಿಯನ್ನು ಹೊಂದುತ್ತಿರುವರು ಈ ಕಾಂಗ್ರೆಸ್ ಎಂಬ ನಾಟಕಕ್ಕೆ ಅಲ್ಲ ಪ್ರಹಸನಕ್ಕೆ ಒಂದು ಪಲ್ಲವಿ ಇಲ್ಲದೆ ಇಲ್ಲ ಅದು ಜನರನ್ನು ಉರಿದುಂಬಿಸುವುದಾಗಿದೆ ಆ ಪಲ್ಲವಿಯು ಬೆಂಗಳೂರಲ್ಲಿ ನಡೆದ ಗಲಭೆಯ ವಿಚಾರ ಎನ್ನುವುದೂ ಅಲ್ಲ. ಸಾಗರದ [illegible] ಈ ಗಲಭೆಯು ಕುರುಕ್ಷೇತ್ರ ಪಾಣಿಪಟ್ಟು ಅಥವಾ ತಾಳಿಕೋಟೆ ಯುದ್ಧಕ್ಕೆ ಹೋಲಿಸಲ್ಪಡಬೇಕಾಯಿತು ಈ [illegible] ದೇಶಾಭಿಮಾನಿಗಳಿಗೆ ೧೯೨೮ ನೇ ಜುಲೈ ತಾ|| ೩೦ ರಲ್ಲಿ ನಡೆದ ಮಹಾಯುದ್ಧವನ್ನು ಕುರಿತು ಮಾತನಾಡುವುದು [illegible] ಬೇರಾವ ಕೆಲಸವೂ ಬೇಕಾಗಿಲ್ಲದಿರುವುದರಿಂದ, ಆ ಯುದ್ಧದ ವಾರ್ಷಿಕೋತ್ಸವವನ್ನು ಮಾಡಲು ಆವರಿಸಿದರೂ ಸಹ ಆಶ್ಚರ್ಯಪಡಬೇಕಾದುದಿಲ್ಲ ಈ ಕಾಂಗ್ರೆಸ್ಸು ಪ್ರಹಸನದ ಕಾರ್ಯಕ್ರಮವು ಬಹು ಬುದ್ಧಿವಂತಿಕೆಯಿಂದ ಏರ್ಪಡಿಸಲ್ಪಟ್ಟಿತು ಇಂತಹ ಪ್ರಹಸನಾಭಿನಯಕ್ಕೆ ತಕ್ಕ ಪಾತ್ರಗಳನ್ನು ಆರಿಸುವುದೂ ಒಂದು ಕೌಶಲ್ಯವೇ ಕಳೆದ ವರ್ಷ ನೆರೆಯಿಸಿದ ಈ ಕಾಂಗ್ರೆಸ್ಸಿಗೆ ಬ್ರಾಹ್ಮಣೇತರ ಸಭೆಯ ಸ್ವರೂಪವನ್ನು ಕೊಟ್ಟು ಅವರ ಸಹಾಯ ಸಹಾನುಭೂತಿಗಳನ್ನು ಸಂಪಾದಿಸಿದುದಲ್ಲದೆ ಪ್ರಸಿದ್ಧ ವರ್ತಕರಾದ ಮ|| ಮಾಣಿಕವೇಲು ಮೊದಲಿಯಾರರನ್ನು ಅಧ್ಯಕ್ಷರನ್ನಾಗಿ ಮಾಡಿದ್ದರು ಈ ವೇಳೆ ಯಾವನೂ ರಾಜನೀತಿಜ್ಞರಾದ ಬ್ರಾಹ್ಮಣೇತರರಾರೂ ಅಧ್ಯಕ್ಷ ಪದವಿಗೆ ದೊರೆಯಲಿಲ್ಲವಾಗಿ ಈಗ ಕೆಲ ತಿಂಗಳಿಂದಲೂ ತಮ್ಮ ಪ್ರಾಶಸ್ತ್ಯವನ್ನು ಬಹುಮಟ್ಟಿಗೆ ಕಳೆದುಕೊಂಡಿರುವ ರಾಜಧಾನಿಯ ಲಕ್ಷ್ಮೀಪುರದ ನಮ್ಮ ಮುದಿ ಸ್ನೇಹಿತರಿಗೆ ಅಧ್ಯಕ್ಷಪಟ್ಟವು ಕಟ್ಟಲ್ಪಟ್ಟಿದ್ದಿತು ಈ ಪ್ರಹಸನದ ಇತರ ಪಾತ್ರಾಭಿನಯಕ್ಕೆ ರಾಜಕೀಯ ವಿಚಾರದಲ್ಲಿ ನವಾಗದ ಬ್ರಾಹ್ಮಣೇತರರ ಕೊರತೆಯಿಲ್ಲವಾಗಿ ಬೆಂಗಳೂರು ಗಲಭೆಯ ಚಳವಳಿಗಾರರಿಗೆ ವಿಶೇಷ ಸಹಾಯವಮಾಡಿ ಪ್ರಖ್ಯಾತರಾಗಿರುವ ಕಂಟ್ರಾಕ್ಟರು ರಾಜಕೀಯ ಗಂಧವನ್ನೇ ಅರಿಯದಿದ್ದರೂ ಒಂದು ದಿವಸದ ಮಟ್ಟಿಗೆ ರಾಜಕೀಯ ಧುರಂಧರರಾಗಿ ಮಾಡಲ್ಪಟ್ಟು ಈ ಕಾಂಗ್ರೆಸ್ ಪ್ರಹಸನಕ್ಕೆ ಮುಖ್ಯಾಭಿನೇತೃವಾಗಿ ನಿಯೋಜಿಸಲ್ಪಟ್ಟಿದ್ದರು ಈ ಪ್ರಹಸನದ ಸ್ಟೇಜ್ ಮ್ಯಾನೇಜರುಗಳಿಗೆ ಬೆಂಗಳೂರು ಗಲಭೆಯ ಚಳವಳಿಯಲ್ಲಿ ಬಹಳವಾಗಿ ಸಹಾಯಕರಾಗಿದ್ದವರೂ ಈ ಪ್ರಹಸನ[illegible]ಗಳಾಗಿದ್ದರು ಈ ಮ್ಯಾನೇಜರುಗಳ [illegible] ಕೊಂಡು ಆಯಾ ಪಾತ್ರಗಳು [illegible] ಕಾಲೆ [illegible] ತಕ್ಕದಾಗನ್ನು ಮಾಡಿದ್ದರು ಹಿರೇ ಸೋಲೆಯಲ್ಲಿ ಜರುಗಿದ ಯುವಕರ ಸಮ್ಮೇಳನದ ಕಾರ್ಯಕ್ರಮವು ಕಾಂಗ್ರೆಸ್ ಸಮ್ಮೇಳನದ ನಾಟ್ಯಕ್ರಮದಿಂದ ಭಿನ್ನವಾಗಿರಲಿಲ್ಲ ಈ ಯುವಕರ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದವರೂ ಯುವಕರಾಗಿದ್ದುದೇ ಒಂದು ದೊಡ್ಡ ಅರ್ಹತೆಯಾಗಿದ್ದಿತಲ್ಲದೆ ಕಾಂಗ್ರೆಸ್ಸಿನಂತೆ ಜನರ ಮನಸ್ಸನ್ನುದ್ರೇಕಗೊಳಿಸುವುದೇ ಅದರ ಮುಖ್ಯೋದ್ದೇಶವಾಗಿದ್ದಿತು. ಅನುಷ್ಠೇಯವಾಗಿರದೆ ಬರೇ ಸರಸ್ವತೀಪ್ರಸನ್ನವಾದ ಮತ್ತು ಬಹುಮಟ್ಟಿಗೆ ಕಳೆದ ವರ್ಷದ ಕಾಂಗ್ರೆಸ್ ಸಭೆಯಲ್ಲಿ ಅಂಗೀಕೃತವಾದ ನಿರ್ಧಾರಗಳೇ ಮಾಡಲ್ಪಟ್ಟಿರುತ್ತವೆ ಈರೀತಿ ಬಂಡಿಗಟ್ಟಲೆ ನಿರ್ಧಾರಗಳನ್ನು ಮಾಡಿ ಅವನ್ನು ಪತ್ರಿಕೆಗಳಲ್ಲಿ ಪ್ರಕಟಿಸುವುದಕ್ಕಿಂತಲೂ ಅವುಗಳಲ್ಲಿ ಸ್ವಲ್ಪವನ್ನಾದರೂ ಆಚರಣೆಗೆ ತಂದಲ್ಲಿ ಎಷ್ಟೋ ಪ್ರಯೋಜನವಾಗುವುದು. ಆದರೆ ನಿಗೂಢಾಭಿಪ್ರಾಯದಿಂದ ಮಾಡಿದ ನಿರ್ಧಾರಗಳು ಅನುಷ್ಠಾನಕ್ಕೆ ತರಲ್ಪಟ್ಟಲ್ಲಿ ಅವರ ವಂಚನೆಯು ಹೊರಬೀಳುವುದು ಈ ವಂಚನೆಯಿಂದ ಪ್ರಯೋಜನವಾಗುವವರೆಗೂ, ಜನರು ಮರುಳಾಗಿರುವವರೆಗೂ ಅದು ನಿರುಪಾಧಿಕವಾಗಿ ನಡೆದುಕೊಂಡುಬರಬಹುದಲ್ಲವೆ ? ಈ ಸಂದರ್ಭದಲ್ಲಿ ನಮ್ಮ ಹಿಂದುಳಿದ ಬಂಧುಗಳಿಗೆ ನಾವು ಹೇಳುವುದೇನಂದರೆ— ನೀವು ನಿಮ್ಮ ಕಣ್ಣುಗಳನ್ನು ತೆರೆದು ಸಂಸ್ಥಾನದಲ್ಲಿ ನಿಮ್ಮ ಸ್ಥಿತಿಯು ವಾಸ್ತವ್ಯವಾಗಿ ಉತ್ತಮವಾಗಿರುವುದೆ ಮತ್ತು ಸರ್ಕಾರಿಯಧಿಕಾರಗಳನ್ನು ಗುತ್ತಿಗೆ ಹಿಡಿದಿರುವವರ ಉಪಟಳವು ಕಡಿಮೆಯಾಗಿ ನೀರನ್ನೂ ಕಟಿಗೆಯನ್ನೂ ಹೊರುವುದು ಮೊದಲಾದ ನಿಮ್ಮ ದೀನಾವಸ್ಥೆಯು ಕಳೆದಿರುವುದೆ ? ಎಂಬುದನ್ನು ಚೆನ್ನಾಗಿ ಪರ್ಯಾಲೋಚಿಸಿ, ಸ್ವಕಾರ್ಯಸಾಧನೆಗಾಗಿ ಮೃದುಮಾತುಗಳನ್ನಾಡುವವರ ಬಲೆಗೆ ಬಿದ್ದು ಮೋಸಹೋಗದೆ ಸಂಸ್ಥಾನದ ರಾಜ್ಯಾಡಳಿತದಲ್ಲಿ ನಿಮ್ಮವರಿಗೆ ತಕ್ಕ ಸ್ಥಾನವನ್ನು ದೊರಕಿಸುವ ಪ್ರಯತ್ನದಿಂದ ವಿಮುಖರಾಗದೆ ಜನತೆಯು ಅಜ್ಞಾನದಿಂದಲೂ, ಅವಿದ್ಯೆಯಿಂದಲೂ, ದೀನಾವಸ್ಥೆಯಿಂದಲೂ ಪಾರಾಗುವ ವಿಚಾರದಲ್ಲಿ ನಿಮ್ಮ ಶಕ್ತಿ ಸಾಧನಗಳನ್ನೆಲ್ಲ ವಿನಿಯೋಗಿಸುವವರಾಗಬೇಕು

ರಾಜಧಾನಿಯಲ್ಲಿ ಬಸವಜಯಂತ್ಯುತ್ಸವ

ಕಳೆದ ಶನಿವಾರ ರಾಜಧಾನಿಯ ಹಳೇ ಅಗ್ರಹಾರದಲ್ಲಿರುವ ಶ್ರೀ ಚಿಕ್ಕಬಸವೇಶ್ವರ ದೇವಸ್ಥಾನದಲ್ಲೂ, ವಾಣೀವಿಲಾಸ ರೋಡಿನಲ್ಲಿರುವ ಮ|| ಕ್ಯಾತನಹಳ್ಳಿ ಸಾಹುಕಾರ್ ಸಿದ್ದಲಿಂಗಯ್ಯನವರ [illegible] ಸಂಸ್ಕೃತ ಪಾಠಶಾಲೆಯ ಕಟ್ಟಡದಲ್ಲೂ, ಕೃಷ್ಣರಾಜಮೊಹಲ್ಲ, ವಾಣೀವಿಲಾಸ ಮಾರ್ಕೆಟ್ಟಿನ ಇದಿರಿಗಿರುವ ಸೀತಾರಾಮಯ್ಯನವರ ಕಟ್ಟಡದಲ್ಲೂ ಶ್ರೀ ಬಸವಜಯಂತ್ಯುತ್ಸವಗಳು ಅತ್ಯಂತ ವಿಜೃಂಭಣೆಯಿಂದ ನಡೆಯಿಸಲ್ಪಟ್ಟು ಅಂದಿನಿಂದ ೧೦ ದಿನಗಳವರೆಗೆ ಪ್ರತಿ ಸಾಯಂಕಾಲ ಪ್ರಸಿದ್ಧ ವಿದ್ವಾಂಸರ ಸಂಗೀತದಿಂದಲೂ, ವೀಣಾ ಮತ್ತು ಪಿಟೀಲುವಾದನಗಳಿಂದಲೂ, ಶಿವಕಥಾಶ್ರವಣದಿಂದಲೂ ದೇವತಾಸೇವೆಯು ನಡೆಸಲ್ಪಡುತ್ತಿದೆಯಲ್ಲದೆ ರಾಜಧಾನಿಯ ಅಧಿಕಾರಿಗಳು, ವರ್ತಕರುಗಳು, ಶಾಯಿರುಗಳು ಮೊದಲಾದ ದೊಡ್ಡ ಮನುಷ್ಯರುಗಳು ಆಹ್ವಾನಿಸಲ್ಪಟ್ಟು ಗಂಧಪುಷ್ಪ ವಿನಿಯೋಗದಿಂದ ಸತ್ಕರಿಸಲ್ಪಡುತ್ತಿರುವರು ರಾಜಧಾನಿಯ ದೊಡ್ಡಪೇಟೆಯಲ್ಲಿರುವ ದೇಶದ ಶ್ರೀಬಸವೇಶ್ವರ ದೇವಸ್ಥಾನದಲ್ಲಿ ಪ್ರತಿ ವರ್ಷವೂ ಬಹಳ ವಿಜೃಂಭಣೆಯಿಂದ ನಡೆಯುತ್ತಿದ್ದ [illegible] ಈ ವೇಳೆ ಕೆಲವರ ಅನುಚಿತ ಪ್ರಯತ್ನದಿಂದ [illegible] ನಿಂತುಹೋದುದಲ್ಲದೆ ಶ್ರೀ ರುದ್ರಾಭಿಷೇಕವು [illegible] ಸರ್ಕಾರದವರಿಂದ ನಿರ್ಬಂಧ ತಳ್ಳಿಸಲ್ಪಟ್ಟಿತೆಂದು ತಿಳಿಸಲು ಅತ್ಯಂತ ಖೇದವಾಗುತ್ತದೆ. ಈ ದೇಶದಬಸವೇಶ್ವರಸ್ವಾಮಿಗೆ ಲಿಂಗಿಗಳವರು ಮಾತ್ರವಲ್ಲದೆ ಇತರ ಕೋಮಿನವರೂ ಭಕ್ತರಾಗಿದ್ದುಕೊಂಡು ಸೇವೆಯನ್ನು ಮಾಡುತ್ತಿರುವರು ಈ ದೇವಸ್ಥಾನವು ಸ್ಥಾಪಿತವಾದ ನೂರಾರು ವರ್ಷಗಳಿಂದಲೂ ಸ್ವಾಮಿಯ ಪೂಜೆಯು ನಿರಾತಂಕವಾಗಿ ನಡೆದುಕೊಂಡುಬರುತ್ತಿರುವುದಲ್ಲದೆ ವಿಶೇಷೋತ್ಸವಗಳಲ್ಲಿ ಅನ್ನ ಸಂತರ್ಪಣೆ ಮೊದಲಾದ ಸ್ವಾಮಿ ಸೇವಾಕಾರ್ಯಗಳಿಗೆ ಬ್ರಾಹ್ಮಣರು ಮುಸಲ್ಮಾನರು ಮೊದಲಾಗಿ ಸಮಸ್ತ ವರ್ಣದವರೂ ದ್ರವ್ಯಸಹಾಯ ಮಾಡಿಯೂ, ಮಾಡುತ್ತಲೂ ಇರುವರು ಇಂತಹ ಸಾರ್ವಜನಿಕ ದೇವಸ್ಥಾನದಲ್ಲಿ ಈವೇಳೆ ಶ್ರೀ ಬಸವಜಯಂತ್ಯುತ್ಸವವು ಅತ್ಯಂತ ವಿಜೃಂಭಣೆಯಿಂದ ಜರುಗಲು ತಕ್ಕ ಸನ್ನಾಹವು ನಡೆಯುತ್ತಿರುವಷ್ಟರಲ್ಲಿ, ದೇವಸ್ಥಾನಕ್ಕೆ ಕಡಾಚಿಟು ಬಂದು ಬರೀ ಜಣ್ಣು ಕಾಯಿಗಳನ್ನು ಕೊಟ್ಟು ಪೂಜೆ ಮಾಡಿಸಿಕೊಂಡುಹೋಗುತ್ತ ಮತ್ತು ಬಸವಜಯಂತಿಯನ್ನು ಈ ವರೆಗೂ ತಮ್ಮ ಸ್ವಾಧೀನದಲ್ಲಿರುವ ಮಲ್ಲಿಕಾರ್ಜುನಸ್ವಾಮಿ ಮಠವೆಂದು ಈಚೆಗೆ ನಾಮಕರಣ ಮಾಡಿಕೊಂಡಿರುವ ಉಪ್ಪಿನಕೇರಿ ಮಠದಲ್ಲಿ ಮಾಡುತ್ತ ಬಂದಿರುವ ಅಡ್ವೋಕೇಟ್ ಮ|| ಎಂ ಪಿ ಭೋಗಯ್ಯನವರ ಪಂಗಡದವರು ವಿಘ್ನಸಂತೋಷಿಗಳ ಮತ್ತು ಬಸವನಿಂದಕರ ದುರ್ಬೋಧೆಯಿಂದ ಇತರ ಪಂಗಡದ ಲಿಂಗಾಯತರೊಡನೆ ಸಂಘಮಿತ್ರರಾಗಿ ಪ್ರಸಾದ ವಿನಿಯೋಗ ಮೊದಲಾದ ಸಮಸ್ತ ಕಾರ್ಯಗಳನ್ನು ನಡೆಸಬೇಕಾಗಿ ಕೊಡಿಸಬೇಕೆಂದೂ, ಇಲ್ಲವಾದಲ್ಲಿ ಯಾವ ಪಂಗಡದವರೂ ಬಸವಜಯಂತಿಯನ್ನು ನಡೆಯಿಸದಂತೆ ಕಟ್ಟು ಮಾಡಬೇಕೆಂದೂ ಸಿಟಿ ಮೆಜಿಸ್ಟ್ರೇಟ್ ಕೋರ್ಟಿಗೆ ಅಡ್ವೊಕೇಟ್ ಮ|| ಎಂ. ಪಿ ಭೋಗಯ್ಯನವರು [illegible] ಕೆಲವನ್ನು ಸೇರಿಸಿಕೊಂಡು ಅರ್ಜಿ ಕೊಟ್ಟ [illegible] ಈ ವಿಚಾರವಾಗಿ ಕೆಲ ಲಿಂಗ[illegible] ಮುಕ [illegible] [illegible]ಸ್ಥಿತಿಯು ಮರೆಮಾಚಲ್ಪಟ್ಟು ಮನ [illegible] [illegible]ರಿಂದ ಯಾವ ಪಂಗಡದವರು

ತಾಲೂಕಿನವರು ಪೂಜಾರಿಯವರಿಗೆ ವಿರೋಧವಾಗಿ ಕೆಲವು ಒಕ್ಕಲಿಗರನ್ನು ಕೂಡಿ ಸ್ವಾಮಿಯ ಸೇವೆಗೆ ಕಂಟಕರಾಗಿಯೂ, ಪರಸ್ಪರ ದ್ವೇಷಕ್ಕೆ ಕಾರಣಭೂತರಾಗಿಯೂ ಇರುವರೆಂಬುದು ಸಮಸ್ತರಿಗೂ ವ್ಯಕ್ತವಾಗಲೆಂಬುದ್ದೇಶದಿಂದ, ಮ|| ಎಂ ಪಿ ಭೋಗಯ್ಯನವರು ಕೋರ್ಟಿಗೆ ಕೊಟ್ಟಿರುವ ಇಂಗ್ಲಿಷ್ ಅರ್ಜಿಯು ಯಥಾವತ್ತಾಗಿ ಬೇರೊಂದುಕಡೆ ಮುದ್ರಿಸಲ್ಪಟ್ಟಿದೆ ಇದರ ಕನ್ನಡ ಪರಿವರ್ತನವೂ, ಈಚೆಗೆ ನಡೆದಿರುವ ವಿದ್ಯಮಾನವೂ ಮುಂದಿನ ವಾರದ ಸ್ಟಾರ್ ಪತ್ರಿಕೆಯಲ್ಲಿ ಕೊಡಲ್ಪಡುವುವು ಈ ವ್ಯವಹಾರವು ಇನ್ನೂ ವಿಚಾರಣೆಯಲ್ಲಿರುವುದರಿಂದ ಅದು ಪೂರೈಸುವವರೆಗೂ ನಮ್ಮಭಿಪ್ರಾಯವನ್ನು ಕೊಡಲವಕಾಶವಿಲ್ಲ

ಒಳದೇಶದ ವೃತ್ತಾಂತಗಳು

ರಾಜಧಾನಿಯ ಒಂದನೆ ಮುನಸೀಫರಾದ ಮ|| ಸಿ ಸುಬ್ಬಕೃಷ್ಣ ಅಯ್ಯರ್‌ರವರು ಬೇರೆ ಕೆಲಸದ ಮೇಲೆ ಹೊರಡುವುದರಿಂದ ೨ ತಿಂಗಳು ಬರುವವರೆಗೆ ಅಡಿಷನಲ್ ಮು ... ಗೋಪಾಲ್‌ರವರು ಆಕ್ಟಿಂಗ್ ಒಂದನೇ ಮುನಸೀಫರಾಗಿ ನಿಯಮಿಸಲ್ಪಟ್ಟಿರುತ್ತಾರೆ

ಉತ್ತರ ಆರ್ಕಾಟು ಡಿ|| ತಿರುಪತ್ತೂರು ತಾ ತ್ರಿಗುಣೇಟಿಯಲ್ಲಿ ವೀರಶೈವ ಧರ್ಮಾಭಿಮಾನಿಗಳಾಗಿದ್ದ ಅವಳೆ ಮಳಿಗೆ ಕೆ ಪಿ ಸಣ್ಣರುದ್ರಪ್ಪನವರು ಕಳೆದ ತಾ|| 11 ನೆಯ ಶನಿವಾರ ಶಿವಸಾಯುಜ್ಯವನ್ನು ಹೊಂದಿದರೆಂದೂ ಇವರ ಅಕಾಲಮರಣದಿಂದ ಅವರ ಕುಟುಂಬಕ್ಕೇ ಅಲ್ಲದೆ ಮಿತ್ರಮಂಡಲಿಗೆಲ್ಲ ಬಹಳ ವ್ಯಸನವಾಗಿರುತ್ತದೆಂದೂ ಆ ಸ್ಥಳದವರೊಬ್ಬರು ಬರೆದಿರುತ್ತಾರೆ

ರಾಜಧಾನಿಯಲ್ಲಿ ನೆನ್ನೆಯ ಸಾಯಂಕಾಲ ಒಳ್ಳೇ ಮಳೆಯಾಯಿತು ಸಂಸ್ಥಾನದ ಅನೇಕ ಕಡೆ ಮಳೆಯು ವಿಶೇಷವಾಗಿ ಬಂದು ಕೆರೆಕಟ್ಟೆಗಳು ತುಂಬಿಕೊಳ್ಳುವುದಾಗಿಯೂ ಹೊಲದ ಪೈರು ಚೆನ್ನಾಗಿರುವುದಾಗಿಯೂ, ಆದರೆ ಕಾಫಿ ಹೂವು ಉದುರಿಹೋಗಿ ತೋಟಗಾರರಿಗೆ ಬಹಳ ನಷ್ಟ ಸಂಭವಿಸುವುದಾಗಿಯೂ, ಅಧಿಕತರವಾದ ಗಾಳಿಯು ಬೀಸಿ ಅನೇಕ ತೆಂಗು ಅಡಕೆ ಮರಗಳು ಬಿದ್ದುಹೋಗಿ ವಿಶೇಷ ನಷ್ಟಸಂಭವಿಸಿರುವುದಾಗಿಯೂ ತಿಳಿಯಬಂದಿದೆ

ನೀಲಗಿರಿ ಡಿಸ್ಟ್ರಿಕ್ಟಿನಲ್ಲಿ ನೆಲ್ಲ್ಯಾಳ ಎಂಬ ಒಂದು ಪುರಾತನ ರಾಜರ ಸಂಸ್ಥಾನವಿದ್ದು ರಾಜ್ಯ ಬ್ರಿಟಿಷರ ಆಡಳಿತದಲ್ಲಿದೆ ಈ ಸಂಸ್ಥಾನಕ್ಕೆ ಸೇರಿದ ಕಾಡುಗಳಲ್ಲಿ ಆನೆಗಳನ್ನು ಹಿಡಿಯುವ ವಿಶೇಷಾಧಿಕಾರವುಂಟೆಂದೂ ಇಂತಹ ಅಧಿಕಾರವು ವಂಶಪಾರಂಪರ್ಯವಾಗಿ ಬೇರೆ ರಾಜರುಗಳಿಗಿಲ್ಲವೆಂದೂ ಮಹಾರಾಜರವರು ವಿಶೇಷ ದ್ರವ್ಯ ವ್ಯಯಮಾಡಿ ೯½ ಅಡಿ ಎತ್ತರವಿರುವ ಒಂದು ಹೆಣ್ಣು ಆನೆಯನ್ನು ಹಿಡಿಸಿ ಅದನ್ನು ಪಳಗಿಸುತ್ತಿರುವರೆಂದೂ ತಿಳಿಯಬರುತ್ತದೆ

ರಾಜಧಾನಿಯ ವೀರಶೈವ ಅನಾಥಾಲಯಕ್ಕೆ ಸೇರಬಯಸುವವರು 18 ವರ್ಷ ವಯಸ್ಸಿಗೆ ಮೀರದ ತಂದೆಯಿಲ್ಲದ ಮತ್ತು ಬಹಳ ಬಡವರಾದ ವೀರಶೈವ ವಿದ್ಯಾರ್ಥಿಗಳು (1) ತಮ್ಮ ಹೆಸರು ಪೂರ್ತಿ ವಿಳಾಸ, (2) ಪ್ರದೇಶ (3) ತಾಯಿ ಅಥವಾ ಪೋಷಕರ ಹೆಸರು, (4 ಏನಾದರೂ ಆಸ್ತಿ ಇದ್ದರೆ ಅದರ ವಿಸ್ತಾರ ಮೊದಲಾದ ವಿವರ, (5) ವಿದ್ಯಾರ್ಥಿ ತೇರ್ಗಡೆ ಹೊಂದಿರುವ ಪರೀಕ್ಷೆ ಮತ್ತು ರಿಜಿಸ್ಟರ್ ನಂಬರು (6) ಕಳೆದ 3 ವರ್ಷಗಳಿಂದ ವ್ಯಾಸಂಗ ಮಾಡಿದ ತರಗತಿಗಳ ಮತ್ತು ಸ್ಕೂಲಿನ ಹೆಸರು, (7) ವಯಸ್ಸು ಈ ಸಂಗತಿಗಳನ್ನು ವಿಶದವಾಗಿ ಬರೆದು ತಾನು ರತ್ತೆಂಬ ಬಗ್ಗೆ ಸ್ಥಳದ ದೊಡ್ಡಮನುಷ್ಯರಿಂದ ಸರ್ಟಿಫಿಕೇಟನ್ನು ಪಡೆದು ಅದರ ಜೊತೆ ವಿಳಾಸ ಮೊದಲ 1929 ನೇ ಇಸವಿ ಜೂನ್ 5 ನೇ ತಾರೀಖಿನೊಳಗಾಗಿ ತಲುಪುವಂತೆ ಅಪ್ಲಿಕೇಷನ್ನನ್ನು ತಮ್ಮ ಹೆಸರಿಗೆ ಕಳುಹಿಸಿಕೊಡಬೇಕೆಂದು ಅನಾಥಾಲಯದ ಪ್ರೆಸಿಡೆಂಟರಾದ ಮ|| ಆರ್ ವಲ್ಲಿಕಾರ ರಸಪ್ಪನವರು ಅಪೇಕ್ಷಿಸಿರುತ್ತಾರೆ

ಮೈಸೂರು ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟರಾದ ಮ| "ಧರ್ಮೇಂದ್ರಸಿಂಗ್", ಬಿ ಎ ಯವರು ಗಂಧದೆಣ್ಣೆಯ ವಿವಾದವನ್ನು ನಡೆಸುವುದರಲ್ಲಿ ನಿರತರಾಗಿರುವುದರಿಂದ ರಾಜಧಾನಿಯ ಸಿಟಿ ಪೋಲೀಸ್ ಸೂಪರಿಂಟೆಂಡೆಂಟರಾದ ಮ|| ಸಿದ್ಧರಾಜ ಅರಸಿನವರ ಆಕ್ಟಿಂಗ್ ಡಿ|| ಪೋಲೀಸ್ ಸೂಪರಿಂಟೆಂಡೆಂಟರಾಗಿಯೂ ಮ|| ಲಕ್ಷ್ಮಣರಾಯರು ಸಿಟಿ ಪೋಲೀಸ್ ಸೂಪರಿಂಟೆಂಡೆಂಟರಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ ಮ| ಸಿದ್ಧರಾಜ ಅರಸಿನವರು ರಾಜಧಾನಿಯ ಡಿ|| ಪೋಲೀಸ್ ಸೂಪರಿಂಟೆಂಡೆಂಟ ರಾದಮೇಲೆ ಕೋಟೆಯ ಉತ್ತರ ಬಾಗಿಲಿನ ಬಳಿ ಒಬ್ಬನು ವಿರಕ್ತ ವೇಷಧಾರಿಯಾಗಿ ಪ್ರಾಣಬಿಟ್ಟ ಮಕ್ಕಳನ್ನು ದೊಡ್ಡಕೆರೆಯ ಮೇಲೆ ಅರಳೀಮರಕ್ಕೆ ನೇಣು ಹಾಕಿಕೊಂಡು ಸತ್ತ ಕಾರಣವೂ ದೊಡ್ಡ ಗಡಿಯಾರದ ಬಳಿ ಇರುವ ಮ|| ಅಬ್ದುಲ್ ಖಾದರ್ ಸೇಟರ ಜವಳಿ ಅಂಗಡಿಯಲ್ಲಿ ನಡೆದ 50 ಸಾವಿರ ರೂ ಬೆಲೆಯ ರೇಷ್ಮೆ ಬಟ್ಟೆಗಳ ಕಳುವೂ, ಶ್ರೀರಾಮಪೇಟೆಯಲ್ಲಿ ಒಬ್ಬ ವೃದ್ಧ ವಿಧವೆಯ ಕೊಲೆಯೂ, ಸೂಪರಿಂಟೆಂಡೆಂಟರ ಅಧೀನದ ಇದ್ದರಿಗೆ ಅಂಗಡಿಯಲ್ಲಿ ನಡೆದ 15-20 ಸಾವಿರ ರೂಪಾಯಿಗಳ ಕಳ್ಳತನವೂ ಇವರಿಗೆ ಇಂದು ಹಿಡಿಯಲ್ಪಡಲಿಲ್ಲವು ಅಲ್ಲದೆ ಪ್ರತಿ ವರ್ಷವೂ ಯುಗಾದಿ ಹಬ್ಬದ ದಿವಸ ಸಂತೋಷಾರ್ಥವಾಗಿ ಇಸ್ಪೀಟು ಆಟವನ್ನು ಡಕ್ಕಿ ಆಡುತ್ತಿರುವಂತೆ ಈ ವರ್ಷವೂ ಆಡುತ್ತಿದ್ದ ಶ್ರೀಮಂತ ವರ್ತಕರುಗಳು ಸೆರೆ ಹಿಡಿಯಲ್ಪಟ್ಟು ಕೊನೆಯ ಮೇಲೆ ಬಿಡಲ್ಪಟ್ಟರುವರು, ಈ ವರೆಗೆ ಯಾರೂ ಮಾಡದಿರುವ ಇಂತಹ ಸಾಹಸ ಕಾರ್ಯಗಳನ್ನು ಮಾಡಿ ತಮ್ಮ ಶಕ್ತಿಸಾಮರ್ಥ್ಯವನ್ನು ಪ್ರದರ್ಶಿಸಿರುವ ಮ|| ಸಿದ್ಧರಾಜ ಅರಸಿನವರಿಗೆ ಡಿ|| ಪೋಲೀಸ್ ಸೂಪರಿಂಟೆಂಡೆಂಟರ ಸ್ಥಾನ [redacted] ದೊಡ್ಡದಾದ ಡಿಸ್ಟ್ರಿಕ್ಟಿಗೆ ಅವರನ್ನು ಅಧಿಕ ... ಸ್ಪೆಕ್ಟರ್ ಜನರಲ್‌ರವರನ್ನು ವಂದಿಸುತ್ತೇವೆಂದ ...

IN THE COURT OF THE CITY MAGISTRATE MYSORE

C R No 735 of 28-29

PETITIONERS —(1) Mr M P Bhogiah Advocate and Municipal Councillor Doddapetta Mysore (2) Veerabhadriah, Pandit and Municipal Sheikdar, Doddapet Mysore (3) Veerabhadriah Merchant Chammal Mutt Street Mysore (4) Chickkachandrappa Zamindar, Chammal Mutt Street Mysore (5) Suthur Santha veerasastry, Chammal Mutt Street Mysore (6) N R Rudrappa Chammal Mutt Street Mysore (7) Puttaswamy Merchant Chammal Mutt Street Mysore (8) Basavanna Sahukar Doddapetta Mysore

OPPONENTS —(1) Poojari Virupakshappa Ganjam Mutt Doddapetta Mysore (2) Bale Hucheveerappa Chammal Mutt Street Mysore (3) Siddalingappa, Medical Shop Doddapetta Mysore (4) Mahadevappa Garadikeri Doddapetta Mysore (5) Gangadharappa Ganjam Mutt Doddapetta Mysore (6) Suthur Rudradevaru Kurubageri Lashkar Mohalla Mysore (7) Gurukar Murudappa Doddapetta Mysore

Under Section 144 Cr P C the petitioners beg to submit as follows —

(1) In Doddapetta of Lashkar Mohalla Mysore there is a Lingayet Temple of god Basaweswara which is worshipped by all the Lingayet residents of that Mohalla

(2) The first opponent happens to be the poojari of this Temple The petitioners and the opponents happen to be the devotees of this god It is most unfortunate that misunderstandings arose recently among the Lingayets of Doddapetta Although these misunderstandings were purely personal and confined to certain individuals yet they spread into the affairs relating to the public institutions like the Japadakatte Mutt and the Basweswara Temple situated in Doddapetta On account of these squabbles due to the obstructive and destructive tactics of the opponents the procession of the swami of the above Mutt at the time of his installation last year was not allowed by Mr H Lingaraj Urs the previous Muzarai Bhakshi and the Honours usually given by the Palace were withheld on that occasion The Dinner usually given to the Bhaktas on such an occasion was also stopped much to the chagrin of the newly installed Swami

(3) At present the affairs of the above said Japadakatte Mutt are now improving and cause no room for disturbance of the peace among its disciples since the new swami is treating all his Bhaktas equally and is himself controlling the Mutt affairs on proper lines without being influenced by any party

But the affairs of the Temple have not yet improved The first opponent who happens to be a timid poojari and who was previously amenable to all the devotees of the Temple without any distinction under the strong control and guidance of his Brother in law the late lamented Astana Vidwan N R Karibasappasastri has of late begun to be influenced and controlled by Mr Virupakshiah the editor of the Mysore Star under whom he is now serving as office clerk on a small pittance Mr Y Virupakshiah belongs to the party of the opponents but there is bitter ill feeling between the petitioners and their party on one side and the opponents and their party on the other The opponents party consists of not more than ten houses all belonging to only one sub-sect But the petitioners party consists of more than forty or fifty influential houses which represent several sub-sects including the one to which the petitioners belong

(4) There are three well recognised Basaweswara Temples in Mysore City The Lingayets of Veerangere usually visit the Basaweswara Temple of that place The Lingayets of Old Agrahar visit Chikka Basaweswara Temple near Old Karahatti The Lingayets of Doddapetta usually visit the Temple in Doddapetta only

(5) The Doddapetta Basaweswara temple which had been all along in an insignificant condition was granted Palace Honours about four months back on the request of 1st petitioner who led a deputation to Mr Thamboo Chetty the Huzur Secretary

Thereafter splits arose among the Lingayets in Doddapetta owing to the factious spirit of the opponents Taking advantage of the circumstance that opponent I the Poojari of the temple happens [redacted] nder Mr Y Virupakshayya the [redacted] S r the opponents and the [redacted] to have resolved to obstru [redacted] their pa y by all possib [redacted] g into the Temple for obse [redacted] ents on 11th May 1929 S [redacted]

there is an imminent danger of Breach of peace. Petitioner No 3 has already filed a complaint under Sections 143 and 500 against the opponents 2 to 7 and the case is posted to 29th May 1929.

(5) It is needless to observe that every Lingayet of Lashkar Mohalla whichever may be his sub-sect has got a present subsisting and substantial right to enter the Basaweswara Temple in question and offer worship without any hindrance The Doctrine of equality is the most important precept preached by Basweswara in whose name Baswajayanti is to be observed For a brief enunciation of his holy precepts the latest issue of Mysore Star dated 27th April 1929 is herewith produced

(6) Since all the parties of Lashkar Mohalla enter the temple on 11—5—1929, to take part not only in the worship of the god inside the temple but also in the procession outside accompanied with Palace Honours the petitioners humbly pray

(1) That suitable action may be immediately taken under Section 144 Cr. P. C., for preventing obstruction and annoyance to the petitioners concerned and for preventing disturbance of public tranquility

(2) Pending the decision of this case the petitioners pray that an exparte order may be urgently passed so that both the parties may be prevented from entering the temple in question for Basavajayanti during the next month

(3) They also pray that licence may not be granted to any party to take the god in procession in the streets thus obviating any insult to the Palace Honours newly granted, on the request of first petitioner to the Huzur Secretary

Sworn before me M Narayana Swami, Bench Magistrate 29th April 1929 Mysore

(Sd) M P Bhogiah
(Sd) ಚಿಕ್ಕ ಚಂದ್ರಯ್ಯ
(Sd) ಸುತ್ತೂರು ಶಾಂತವೀರಶಾಸ್ತ್ರಿ
(Sd) ಯಂ ವೀರಭದ್ರಯ್ಯ
(Sd) K Rudriah,
(Sd) G Basavanna
(Sd) Veerabhadriah

ORDER

Forwarded with compliments to the Assistant Superintendent of Police Mysore city for early report after needful enquiry if any action under Sec 144 Cr P C is necessary The Report may be sent up before 4—5—29

MYSORE (Sd) M CHANNARAJ URS
24 5-29 *City Magistrate*

ಬಸವಜಯಂತಿ ಮಹೋತ್ಸವಗಳು

ಬಳ್ಳಾರಿ

ಶ್ರೀಮನ್ನಾರಂಬದ ಬಳ್ಳಾರಿ ಬಸದ ಶ್ರೀ ಮಂ ಕೊಟ್ಟೂರು ಸ್ವಾಮಿಗಳವರ ಶುಭಾಗಮನದಿಂದ ಜೊತೆಗೂಡಿ ಮಠವು ಶೃಂಗರಿಸಲ್ಪಟ್ಟು ಶ್ರೀ ಬಸವೇಶ್ವರನಿಗೆ ರುದ್ರಾಭಿಷೇಕ ಅನಂತರ ವೀರಮಾಹೇಶ್ವರರಿಗೆ ಭೋಜನ ಮೊದಲಾದ ಕಾರ್ಯಗಳು ನೆರವೇರಿಸಲ್ಪಟ್ಟವು ವೀರಮಾಹೇಶ್ವರರುಗಳು ದಕ್ಷಿಣೆ ತಾಂಬೂಲಾದಿಗಳಿಂದ ತೃಪ್ತಿಪಡಿಸಲ್ಪಟ್ಟರು ಸಾಯಂಕಾಲದಲ್ಲಿ ಸದರಿ ಸ್ವಾಮಿಗಳವರ ಶಿಷ್ಯರಾದ ಸಿದ್ಧಲಿಂಗ ಮಂದಿರದ ಕಡೆಯಿಂದ ಬಸವೇಶ್ವರನ ಅನಂತ ಮಹಿಮೆಗಳು ಒಳ್ಳೇ ವಾಗ್ವೈಖರಿಯಿಂದ ಭಕ್ತಮಹೋತ್ಸವದಿಂದಾಗಿ ಸಭೆಗೆ ಸಂತೋಷವಾಗುವಂತೆ ಹೇಳಲ್ಪಟ್ಟವು ನಡೆಸಲ್ಪಟ್ಟಿತು ರಾಯ್ದುರ್ಗ,

ಗುರುಬಸಪ್ಪ ಹಂಡಿ ಹೊಸಪ್ಯಾಟೆ.

ಕಡೂರು ತಾಲ್ಲೋಕು ಯಳ್ಳಂಬಳಸೆ.

ಕಳೆದ ವರ್ಷದಲ್ಲಿ ನೆರವೇರಿಸಿದ ಮೇರೆ ಈ ವರ್ಷದಲ್ಲಿಯೂ ಸಹ ಶ್ರೀ ಬಸವೇಶ್ವರ ದೇವರ ಸ್ಮಾರಕ ದಿನವನ್ನು ತಾ|| 11 5-29 ನೇ ಶನಿವಾರ ಪ್ರತಿಯೊಂದು ಜಂಗಮದವರೂ ಏಕೀಭವಿಸಿಕೊಂಡು ಎಲ್ಲಾ ದೇವಾಲಯಗಳಲ್ಲಿ ಅಭಿಷೇಕ ಮಂಗಳಾಚರಣೆಗಳನ್ನು ನೆರವೇರಿಸಿದ ತರುವಾಯ ನೆರೆದಿದ್ದ ಮಹಾಜನಗಳಿಗೆಲ್ಲ ಫಲಾಹಾರಗಳಿಂದ ತೃಪ್ತಿಪಡಿಸಿದ ಅನಂತರ ಶ್ರೀ ಮಹಾತ್ಮರಾದ ಬಸವೇಶ್ವರ ದೇವರ ಪಟದ ಫೋಟೋವನ್ನು ಪಲ್ಲಕ್ಕಿಯಲ್ಲಿಟ್ಟು ಶೃಂಗರಿಸಿ ಗ್ರಾಮದ ದೇವತೆಯ ಮತ್ತು ಶೃಂಗರಿಸಿದ ಬಸವಣ್ಣಗಳ ಸಮೇತ ವಾದ್ಯಘೋಷಗಳೊಡನೆ ಗ್ರಾಮದಲ್ಲೆಲ್ಲಾ ಮೆರವಣಿಗೆ ನೆರವೇರಿಸಿ ನಂತರ ಆಯಾ ದೇವಾಲಯಗಳಿಗೆ ಬಿಜಯಂಗೈಸಿ ಮಂಗಳಾಚರಣೆ ಮಾಡಿ ಶ್ರೀ ಬಸವೇಶ್ವರ ದೇವರು ಸಮಸ್ತರಿಗೂ ಆಯುರಾರೋಗ್ಯೈಶ್ವರ್ಯಾದಿಗಳನ್ನು ದಯಪಾಲಿಸಬೇಕೆಂದು ಪ್ರಾರ್ಥಿಸಿ ಜಯಘೋಷದೊಡನೆ ಸ್ವಸ್ಥಾನಗಳಿಗೆ ತೆರಳಿದರು

ಓರ್ವ ಪ್ರೇಕ್ಷಕ.

ಬಸ್ತಗಿರಿ ತಾ|| ಸಂತೆಬೆನ್ನೂರು ಹೋ|| ಕಲ್ಲೇನಹಳ್ಳಿ

ಪಟ್ಟಣ ವೃತ್ತಾಂತ ಈ ಗ್ರಾಮಸ್ಥರು ತಮ್ಮ ತಮ್ಮ ಮನೆಗಳನ್ನು ಸಾರಣೆ ತೋರಣಗಳಿಂದಲೂ ತಳಿರುತೋರಣಗಳಿಂದಲೂ ರಂಗವಲ್ಲಿಗಳಿಂದಲೂ ಅಲಂಕರಿಸಿ ಅನೇಕ ಪುಷ್ಪಮಾಲಿಕೆಗಳಿಂದ ಮನೋಹರವಾದ ಮಂಟಪದಲ್ಲಿ ಶ್ರೀ ಬಸವೇಶ್ವರರ ಭಾವಚಿತ್ರವನ್ನು ಮುತ್ತೈದೆಯರಿಗೂ ಅಲಂಕೃತವಾದ ಬಸವನ್ನು ಕೆಳದಲೂ ಗ್ರಾಮದ ದಿಂದಲೂ ಮಹಾಸಂಭ್ರಮದಿಂದಲೂ ಮಾಡಿ ಉತ್ಸವವನ್ನು ಅತಿ ವೈಭವದಿಂದ ನಡೆಸಲ್ಪಟ್ಟಿತು ಇದುವರೆಗೂ ನಡೆಯದ ಗ್ರಾಮದಲ್ಲಿ ಈ ಉತ್ಸವವು ಅತಿವಿಜೃಂಭಣೆಯಿಂದ ನಡೆದದ್ದನ್ನು ನೋಡಿ ಜನಗಳು ಆನಂದಗೊಂಡರು ಉತ್ಸವವು ಸ್ವಸ್ಥಾನವನ್ನು ಸೇರಿದ ಮೇಲೆ ಗ್ರಾಮಸ್ಥರು ಶ್ರೀ ಬಸವೇಶ್ವರನಿಗೆ ಮಂಗಳಾರತಿಯನ್ನು ಮಾಡಿ- [redacted] ರ ತೆರಳಿದರು ಈ ಉತ್ಸವದಲ್ಲಿ ಮುಖ್ಯರು [redacted] ರ ಚನ್ನಬಸಪ್ಪನವರಿಗೂ ಗ್ರಾಮದ [redacted] ವರಿಗೂ ಗ್ರಾಮಸ್ಥರಿಗೂ ಶ್ರೀ ಬಸವೇಶ್ವ [redacted] ನ್ನು ಕೊಟ್ಟು ಕಾಪಾಡಲೆಂದು ಪ್ರಾರ್ಥಿಸುತ್ತೇನೆ

ಉತ್ಸವಭಾಗಿ

ತಿಕ್ಕಮಳಗೂರು ತಾ|| ಹಿರೇಗೌಡನಹಳ್ಳಿ

ಇಲ್ಲಿನ ಗ್ರಾಮದ ಗ್ರಾಮಸ್ಥರು ಬಸವೇಶ್ವರ ಜಯಂತಿ ಯನ್ನು ತಾ|| 11-5-1929 ನೇ ಶನಿವಾರ ದಿವಸ ಶ್ರೀ ಬಸವೇಶ್ವರ ಜಯಂತಿ ಮಹೋತ್ಸವವನ್ನು ಪಟೇಲ್ ಗ ರುದ್ರಪ್ಪನವರ ಮತ್ತು ಶ್ಯಾನುಭೋಗ ರಾಮಲಿಂಗಪ್ಪನವರ ಪ್ರೋತ್ಸಾಹದಿಂದ ಗ್ರಾಮಸ್ಥರೆಲ್ಲರೂ ಐಕಮತ್ಯದಿಂದ ಆಚರಿಸಿ ಪ್ರತಿ ಮನೆಯಲ್ಲಿಯೂ ಬಸವೇಶ್ವರನ ಪೂಜೆ, ಗ್ರಾಮದ ಎಲ್ಲಾ ದೇವಸ್ಥಾನಗಳಲ್ಲಿಯೂ ಪೂಜೆ, ಮಂಗಳಾರತಿ, ಪಾನಕ ಪನಿವಾರಗಳನ್ನು ನಡೆಸಿ, ಸಾಯಂಕಾಲ ಶ್ರೀ ಸಿದ್ದೇಶ್ವರಸ್ವಾಮಿಯ ಉತ್ಸವದ ಜೊತೆಯಲ್ಲಿ ಎಲ್ಲರೂ ತಮ್ಮ ತಮ್ಮ ಮನೆಯ ಬಸವಣ್ಣಗಳನ್ನು ಅಲಂಕರಿಸಿ ವಾದ್ಯಘೋಷ ಮುಂತಾದ ಜಯಘೋಷದೊಡನೆ ಬರುವ ಕಾಲದಲ್ಲಿ ಸ್ತ್ರೀಯರು ಮಂಗಳಾರತಿಯನ್ನೆತ್ತಿದರು ಉತ್ಸವ ಪೂರೈಸಿ ದೇವಸ್ಥಾನಕ್ಕೆ ಬಂದನಂತರ ಮಂಗಳಾರತಿ, ದೇವತಾಪ್ರಾರ್ಥನೆ, ರಾಜಾಶೀರ್ವಾದ ನಡೆದು ಪ್ರತಿಯೊಬ್ಬರೂ ಇದಕ್ಕಿಂತಲೂ ಅತಿಶಯವಾಗಿ ಈ ಬಸವಜಯಂತಿ ಉತ್ಸವವನ್ನು ಪ್ರತಿ ವರ್ಷವೂ ನಡೆಸುವಂತೆ ಭಗವಂತನು ಅನುಗ್ರಹಿಸಲೆಂದು ಪ್ರಾರ್ಥಿಸಿ ತಂತಮ್ಮ ಮನೆಗೆ ತೆರಳಿದರು ಪ್ರತ್ಯಕ್ಷದರ್ಶಿ

ಬಿ ಶ್ಯಾನುಭ್ಯ ಸೂಲಕ್ಕೆ [illegible]

ಹಡೂರು ತಾಲ್ಲೂಕು ಮಲ್ಲದೇವಿಹಳ್ಳಿ

ವೈಶಾಖ ಶು ॥ ಶನಿವಾರ ದ್ವಿತೀಯಸಂಧ್ಯಾವಾದ ಶ್ರೀ ಬಸವೇಶ್ವರನು ಭೂಲೋಕದಲ್ಲಿ ಅವತರಿಸಿದ ದಿನವಾದುದರಿಂದ ಈ ಗ್ರಾಮದ ಪರಿಶ್ಚ ಜನರೆಲ್ಲರೂ ಗೋವು ಬಸವಣ್ಣಗಳಿಗೆ ಅಲಂಕಾರಮಾಡಿ ಪೂಜಿಸಿ ಹಬ್ಬವನ್ನು ಆಚರಿಸಿದರು ಜಗಲು ಶೃಂಗರಿಸಿದ್ದ ಬಸವಣ್ಣಗಳನ್ನು ಬಸವೇಶ್ವರನ ಭಾವಚಿತ್ರವನ್ನು ದೇವರುಗಳನಮೇತ ಕೈವಾಹನದಲ್ಲಿ ಹಿಡಿದುಕೊಂಡು ಸಂದೀಪ್ಯಜನಸಹಿತವಾಗಿ ವಾದ್ಯಘೋಷದೊಡನೆ ಬಹುವಿಜೃಂಭಣೆಯಿಂದ ತಳಿರ ತೋರಣಗಳಿಂ ಶೃಂಗರಿಸಲ್ಪಟ್ಟಿದ್ದ ಬೀದಿಗಳಲ್ಲಿ ಉತ್ಸವ ಹೊರಟು ಅಲ್ಲಲ್ಲಿ ಜನರೊಪ್ಪಿಸಿದ ಕರ್ಪೂರದಾರತಿಯನ್ನು ಕೈಗೊಂಡು ಶ್ರೀ ಸಿದ್ದೇಶ್ವರಸ್ವಾಮಿ ದೇವಸ್ಥಾನಕ್ಕೆ ಬಂದು ಅಲಂಕೃತವಾಗಿದ್ದ ಪೀಠದಲ್ಲಿ ದೇವರನ್ನು ಇರಿಸಿದರು ಪಟೇಲ್ ಬಸಪ್ಪನವರು ವ ಮುದ್ದಂಗಪ್ಪನವರು, ಟಿ ರಂಗಪ್ಪನವರು ಇನ್ನು ಮುಂತಾದವರು ಸಭೆಯೊಡ ಚಪ್ಪಳೆ ನೀಡಿ ಮಾಡಿದೆವಯ್ಯನವರಿಂದ ಶಿವಶರಣಲೀಲಾ ವೇದ ಭಗವದ್ಗೀತಾಪಠನವೂ ಅಷ್ಟಾವರಣಮಹತ್ವ ವ ತು ಭಕ್ತಿ ಜ್ಞಾನ ವಿಷಯವಾಗಿ ಉಪನ್ಯಾಸವೂ ನಡೆದ ಅನಂತರ ಸ್ವಾಮಿ ಪ್ರಸಾದವಿನಿಯೋಗದಿಂದ ಸಭೆಯು ವಿಸರ್ಜಿಸಲ್ಪಟ್ಟಿತು. ಬಿ ವೀರಪ್ಪನವರು ಉತ್ಸಾಹಿಯಾಗಿ ಪ್ರತಿ ವರ್ಷ ಭಗವಂತನಾದ ಶ್ರೀಬಸವೇಶ್ವರನ ಸೇವೆಯನ್ನು ಮಾಡಿ ಸ್ವಾಮಿಯ ಕೃಪೆಗೆ ಪಾತ್ರರಾಗಲೆಂದು ಕೋರುವ, ಎಸ್ ಸಿದ್ದಪ್ಪ

ಬೆಂಗಳೂರು ಶಾರದಾ ಸ್ತ್ರೀ ಸಮಾಜ

ಬೆಂಗಳೂರು ಶ್ರೀ ಶಾರದಾಸಮಾಜದ ಕಟ್ಟಡದಲ್ಲಿ ಸಮಾಜದವರಿಂದ ಶ್ರೀ ಬಸವೇಶ್ವರ ಜಯಂತಿಯು ಕೇವಲ ವಿಜೃಂಭಣೆಯಾಗಿ ನೆರವೇರಿಸಲ್ಪಟ್ಟಿತು ಕಾರ್ಯನಿರ್ವಾಹಕ ಕಮಿಟಿಯವರು ಏರ್ಪಡಿಸಿದ್ದ ಪ್ರಕಾರ ಬಣಕ ಹಾಮೋನಿಯಂ, ಸಂಗೀತ ಮುಂತಾದ ಕಲೆಗಳನ್ನು ಸಮಾಜದಲ್ಲಿ ಅಭ್ಯಾಸಮಾಡಿ ಬಾಂಡಿತ್ಯವನ್ನು ಪಡೆದ ವಿದ್ಯಾರ್ಥಿನಿಯರು ರಾಷ್ಟ್ರಗೀತವನ್ನು ಲಲಿತವಾಗಿ ಹಾಡಿ ದಯಮಾಡಿಸಿದ್ದ ಮೆಂಬರುಗಳೇ ಮುಂತಾದ ಎಲ್ಲಾ ಸ್ತ್ರೀಯರನ್ನೂ ಆನಂದಸಾಗರದಲ್ಲಿ ಮುಳುಗುವಂತೆ ಮಾಡಿದರು ತರುವಾಯ ಶ್ರೀ ಬಸವೇಶ್ವರನ ಚಾರಿತ್ರಿಕ ವಿಷಯವನ್ನೂ ಮತ್ತು ಬಸವೇಶ್ವರನ ಅವತಾರದ ದೆಸೆಯಿಂದ ನಮ್ಮ ಕನ್ನಡನಾಡಿಗೂ ಕರ್ನಾಟಕಭೂಮಿಗೂ ವೀರಶೈವರೇ ಮೊದಲಿಂದ ಸನಾತನಕ್ಕೆ ಹೊಂದಿ ಸ್ತ್ರೀವರ್ಗ ಸ್ವಾತಂತ್ರ್ಯ ಮತ್ತು ಆಧ್ಯಾತ್ಮಿಕ ಮುಂತಾದ ಸಂಸ್ಥೆಗಳನ್ನು ರಚನೆಗಳಿಗೂ ಉಂಟಾದ ಮಹಿಮೆಯನ್ನು ಕುರಿತು ಸಮಾಜದ ಪ್ರೆಸಿಡೆಂಟರಾದ ಲೇಡಿ ಸರ್ ಕೆ ಪಿ ಪುಟ್ಟಣ್ಣಶೆಟ್ಟಿ ಇವರಿಂದ ಬರೆಯಲ್ಪಟ್ಟದ್ದ ಭಾಷಣವನ್ನು ಅವರ ನಿಯೋಜಿತ ಗುರಿಕಾರ್ ಬಸವಲಿಂಗಪ್ಪನವರ ಪುತ್ರಿಯಾದ ಅಮಲ್ದಾರ್ ಲಿಂಗಣ್ಣನವರ ಪತ್ನಿ ಶ್ರೀಮತಿ ಒಳತಮ್ಮನವರ ಸರಳವಾಗಿ ಓದಿದ ನಂತರ ಮಂಗಳವನ್ನು ಮಾಡಿ ಸರ್ವರಿಗೂ ಪುಷ್ಪತಾಂಬೂಲಾದಿಗಳನ್ನು ಹಂಚಿ ಆರ ವ ಶ್ರೀಮನ್ಮಹಾರಾಜಾ ಸಾಹೇಬ್ ಬಹದ್ದೂರವರಿಗೂ ಶ್ರೀ ವ ಯುವರಾಜರವರಿಗೂ ಶ್ರೀ ಜಯಚಾಮರಾಜ ಒಡೆಯರವರಿಗೂ ಆರೋಗ್ಯ ಆಯುರಾದಿ ಶ್ರೀ ಬಸವೇಶ್ವರನು ಸಕಲ ಸನ್ಮಂಗಳವನ್ನೀಯಲೆಂದು ಪ್ರಾರ್ಥಿಸಿ ಜಯಘೋಷಮಾಡಲ್ಪಟ್ಟಿತು ಪ್ರೇಕ್ಷಕ

ನೋಟೀಸು

ತಿರುಕಣ್ಣಾಳ ಲಿ ಬಸಪ್ಪಯ್ಯ ಹೊಸಹಳ್ಳಿಯವರ ಸಾ ಮ ದೇವಾಪುರ ಹಾಲಿ ವಸ್ತಿ ಹನುಮನಹಳ್ಳಿ ತಾ ಕ್ಷಕೆ ರು ರಂಗೆಮ್ಮನ್ನು ಇವಳಿಗೆ

ಕೆಳಗೆ ಸಹಿಮಾಡಿದವನ ಈ ನೋಟೀಸಿನ ಮೂಲಕ ತಿಳಿಸುವುದೇನೆಂದರೆ— ನೀನು ನನ್ನ ಒಳ್ಳೆಯ ಹೆಂಡತಿ ಇದ್ದು ಈಗ 3 1 ವರುಷ ಸುಮಾರಿಗೆ ಬಾಳ್ವೆಮಾಡಿಕೊಂಡಬಂದು ಅಷ್ಟರಲ್ಲಿ ಒಂದು ಹೆಣ್ಣುಮಕ್ಕಳು ಸಹ ಹುಟ್ಟಿ ಒಂದುವರುಷ ಆಯುತಿಂಗಳಾಗಿರುವುದು ಹೀಗಿರುವ ನೀನು ನನ್ನ ತಂದೆಯ ಮನೆಗೆ ಹೋಗಿ ಬರುವೆನು ಎಂದು ನನ್ನ ತಾಯಿಗೆ ಸಹ ಹೇಳದೆ ಮನೆಬಿಟ್ಟು ನನ್ನ ತವರುಮನೆಗೆ ಹೊರಟು ಹೋದೆಯಷ್ಟೆ ನೀನು ಎಷ್ಟು ಹೇಳಿಕಳಿಸಿದರೂ ನನ್ನ ತಂದೆ ನಿನ್ನನ್ನು ಕಳಿಸಲಿಲ್ಲ ಮತ್ತೆ ನನ್ನ ಸಂಗಡ ಬಾಳ್ವೆಮಾಡಿಕೊಂಡಿರುತ್ತೇನೆಂದು ಬರೆದುಕೊಟ್ಟರೂ ನೀನು ಇದುವರೆಗೂ ನನ್ನ ಮನೆಗೆ ಬರಲಿಲ್ಲ. ಹೋದವಳು ಈಗ ಎಂಟು ತಿಂಗಳು ಆದರೂ ಬಂದಿರುವುದಿಲ್ಲ. ಕಾರಣ ಈಗ ನೋಟೀಸು ಕೊಡುವ ಕಾರಣವೇನೆಂದರೆ ನನ್ನ ಮನೆಯಿಂದ ಒಯ್ದ ಒಡವೆಗಳ ವಿವರ —1) ಬಂಗಾರದ ಓಲೆ ಒಂದು ಜೊತೆ ತೂಕ 3 ತೊಲ 40 ರೂಪಾಯಿ, ಬೆಳ್ಳಿಪಟ್ಟಿ 1 ಜೊತೆ 16 ರೂಪಾಯಿ, ಬೆಳ್ಳಿ ಲಿಂಗದ ಕರಡಿಗೆ ಒಂದು ತೂಕ 12 ರೂಪಾಯಿ, ಬಂಗಾರದ ತಾಳಿ 1 ಜೊತೆ 40 ರೂಪಾಯಿ, ವಸ್ತ್ರದ ಸೀರೆ ಒಂದು 40 ರೂಪಾಯಿ ಇವು ಒಟ್ಟು ನನ್ನ ಕಡೆಗೆ ಕೊಡಬೇಕಾಗಿದೆ ಇವುಗಳನ್ನು ಈ ಪ್ರಕಾರ ದಾನದ ರೂಪಾಯಿ ಈ ನೋಟೀಸು ಮುಟ್ಟಿದ ಎಂಟು ದಿನದೊಳಗಾಗಿ ತೆಗೆದುಕೊಂಡು ಬಂದು ಸಂಸಾರ ಮಾಡುವುದು ಇಲ್ಲದಿದ್ದರೆ ಈ ನೋಟೀಸಿನ ಮೂಲಕ ನಿನ್ನ ಹೆಂಡತಿತನ ತ್ಯಜಿಸಿ ದ ರೀತಿಯಲ್ಲಿ ನನ್ನ ಮೇಲೆ ಕೋರ್ಟಿನಲ್ಲಿ ಸವಾಲು ಹಾಕುವುದಾದರೆ ಆ ವ್ಯವಹಾರದಲ್ಲಿ ಬರುವುದು ಅಂತಾ ಈಗ ನೋಟೀಸು ಸಹಿ

ಬಸಪ್ಪಯ್ಯ [redacted] ಯವರ ಸಾಕ್ಷಿ ಮೂಲ ವಾಯು [redacted] ನೇಯ ಇಸವಿ

ಶಿರಾ ತಾಲ್ಲೂಕು ಹುಲಿಕೆರೆ

ಈ ಗ್ರಾಮದ ಸ್ವಾಮಿಗಳು ತಾ 11-5-29 ನೇ ಗ್ರಾಮ ಸಂವತ್ಸರದ ಸ್ವಾಮಿ ಶ್ರೀ ಆನಂದ ಕಲ್ಮಠ ಕಲ್ಯಾಣ ಒಡೆಯರ ಪ್ರೋತ್ಸಾಹದಿಂದ ಈ ಗ್ರಾಮದ ಬೀದಿಯಲ್ಲಿ ಶ್ರೀ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಪಲ್ಲಕ್ಕಿಯ ಮೇಲೆ ಬಸವ ಫೋಟೋವನ್ನು ಪಕ್ಷ ಪುಷ್ಪಾದಿ ಮಾಲೆಗಳಿಂದ ಅಲಂಕರಿಸಿ, ಧೂಪದೀಪನೈವೇದ್ಯ ತಾಂಬೂಲಾದಿಗಳಿಂದರ್ಚಿಸಿ, ಜಯ ನಮಃ ಶಿವಾಯ ಸಕೇ ಹರಹರಮಹಾದೇವ ಎಂಬ ಜಯರವದಿಂದ ಘಂಟಾನಾದವನ್ನು ಕೊಟ್ಟು ಮಹಾಮಂಗಳಾರತಿಯನ್ನು ಪೂರೈಸಿದನಂತರ ಬಸವನ ವಚನಮಾಲೆ ಭಯಂಗಳನ್ನು ಓಚ್ಚಿಸುವ ಬಸವನವಚನ ಶ್ರವಣಾನಂತರ ಪುನಃ ಮಂಗಳಾರತಿಯನ್ನು ಮಾಡಿದ ನೋಲೆ ಅಲ್ಲಿ ನೆರೆದಿದ್ದ ಸಭಿಕರಿಗು ಮತ್ತು ಇತರ ಜನಗಳಿಗು ಸಹ ಫಲಾಹಾರ ತಾಂಬೂಲಾದಿಗಳ ವಿನಿಯೋಗವಾಯಿತು ಅಲ್ಲಿ ನೆರೆದಿದ್ದ ಸಭಿಕರೆಲ್ಲರೂ ಈಗ 2-3 ವರ್ಷದಿಂದಲೂ ಸೋಮವಾರದ ನೇಗಿಲಿಗೆ ಬಸವನನ್ನು ಕಟ್ಟುವದನ್ನು ಬಿಡಬೇಕೆಂದು ನಿರ್ಧರಿಸಲ್ಪಟ್ಟಿದ್ದರೂ ಕೆಲವು ಜನರು ಇನ್ನೂ ಸೋಮವಾರ ನೇಗಿಲಿಗೆ ಬಸವನನ್ನು ಕಟ್ಟುವುದನ್ನು ಹಿಂತೆಗೆದುಕೊಳ್ಳುವಂತೆ ನಿರ್ಧರಿಸಿದರು. ನಮ್ಮ ಶ್ರೀಮನ್ಮಹಾರಾಜಾ ಸಾಹೇಬ್ ಬಹದ್ದೂರವರ ಶ್ರೇಯಸ್ಸನ್ನು ಪ್ರಾರ್ಥನೆಯನ್ನು ಮಾಡಿ ಸಭೆಯು ಭರಕಾಸ್ತುಮಾಡಲ್ಪಟ್ಟಿತು ಈ ಮಹೋತ್ಸವದಲ್ಲಿ ಭಾಗಿಗಳಾಗಿದ್ದ ಮಹಾಜನರಿಗೆಲ್ಲಾ ಅಷ್ಟೈಶ್ವರ್ಯಗಳು ಭಗವಾನ್ ಬಸವೇಶ್ವರನು ಆಯುರಾರೋಗ್ಯ ಐಶ್ವರ್ಯಾದಿ ಸುಖಸಂಪತ್ತನ್ನೀಯಲೆಂದು ಕೋರುವ ಗ್ರಾಮದ ಪಿಸಿ ಅರ್ಚಕ ಉಜ್ಜಪ್ಪ ಬಂಡಕುಂಟೆ

ದಾವಣಗೆರೆ ತಾ|| ನೀರ್ಲಗಿ

ದಾವಣಗೆರೆ ತಾ ನೀರ್ಲಗಿ ಗ್ರಾಮಸ್ಥರು ತಾ 11-5-1929 ನೇ ಶನಿವಾರ ಬೆಳಿಗ್ಗೆ 8 ಗಂಟೆಯಲ್ಲಾಯಿತು ನಮ್ಮ ಗ್ರಾಮದ ಬೀದಿಗಳನ್ನು ತಳಿರು ತೋರಣ ಧ್ವಜಪತಾಕೆಗಳಿಂದ ಅಲಂಕರಿಸಿ ಮಧ್ಯಾಹ್ನ 12 ಗಂಟೆಯ ಸಮಯದಲ್ಲಿ ಗಂಟೆಯವರೆಗೆ ಶ್ರೀ ಈಶ್ವರದೇವಾಲಯದಲ್ಲಿ ಭಜನೆಯ ನಂತರ 3 ಗಂಟೆಯಿಂದ ಮೊದಲ್ಗೊಂಡು ಗ್ರಾಮದಲ್ಲಿರುವ ಬಸವಣ್ಣಗಳನ್ನು ಅಲಂಕರಿಸಿಕೊಂಡು ಶ್ರೀ ಬಸವೇಶ್ವರ ಫೋಟೋವನ್ನು ಅಲಂಕರಿಸಿದ ಪಲ್ಲಕ್ಕಿಯಲ್ಲಿಟ್ಟು ಈಶ್ವರದೇವಾಲಯದಿಂದ ಭಾವಿಯ ಬಳಿಗೆ ಬಿಜಯಂಗೈಸಿದ ಗಂಗಾಪೂಜೆ ಪೂರೈಸಿ ಅಲ್ಲಿ ನೆರೆದಿದ್ದ ಮಹಾನಾಯರುಗಳನ್ನು ಅಲ್ಪಾಹಾರ ಗಂಧಪುಷ್ಪ ತಾಂಬೂಲಾದಿಗಳಿಂದ ಸಂತೋಷಪಡಿಸಿ ಅಲ್ಲಿಂದ ಮುಂದೆ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ಪೂರೈಸಿಕೊಂಡು ರಾತ್ರಿ 9 ಗಂಟೆಗೆ ಉತ್ಸವವು ಪೂರೈಸಿತು ಅನಂತರ 1 ಗಂಟೆಯವರೆಗೆ ಸುರದ ಚನ್ನವೀರಯ್ಯನವರು ಪಟೇಲ್ ದ್ಯಾಮಪ್ಪ ಸ್ಕೂಲ್ ಮಾಸ್ಟರ್ ಚನ್ನಪ್ಪನವರು ವ ತ ಎ ಸಿ ಕೆಂಚವೀರಪ್ಪನವರ ವೀರಶೈವಮತವನ್ನು ಅಭಿವೃದ್ಧಿಗೆ ತಂದ ಬಸವೇಶ್ವರನ ವಿಚಾರದಲ್ಲಿ ಸ್ಪಷ್ಟವಾಗಿ ಉಪನ್ಯಾಸಮಾಡಿದರು ಭಜನಾಸಂಘದ ಬಡಗಿ ಚನ್ನವೀರಪ್ಪ ಮಠದ ರುದ್ರಯ್ಯ ಅಗಸೇರ ರಾಮಪ್ಪ ಇವರು ಮಂಗಳಾರತಿಯ ಜೊತೆ ಭಜನೆ ಪೂರೈಸಿದರು ಮ್ಯಾನೇಜರ್ ಸಿದ್ದಪ್ಪನವರು ಸ್ಕೂಲ್ ಬಾಲಕರಿಂದ ಆಟಪಾಟಗಳನ್ನು ಆಡಿಸಿ ಬಹುಮಾನ ಕೊಟ್ಟರಲ್ಲದೆ ಬಸವೇಶ್ವರ ಜಯಂತಿಮಹೋತ್ಸವದ ಈ ಪ್ರಕಾರವಾಗಿ ಆಚರಿಸಿ ನಮ್ಮ ಗ್ರಾಮದ ರೀಡಿಂಗ್ ರೂಮಿಗೆ ಅರ್ಥಸಹಾಯಮಾಡಿದರೆಂದು ತಿಳಿಸಲು ಒಪ್ಪಿಕೊಂಡರು ಆಚಾರಿ ವೀರಪ್ಪ ನೀರ್ಲಗಿ

ಹ್ಯಾಡಗಿ

ಶ್ರೀ ವಿರೋಧಿನಾಮ ಸಂವತ್ಸರದ ವೈಶಾಖ ಶುದ್ಧ ತದಿಗೆ ಶನಿವಾರ ತಾ 11-5-29 ರಲ್ಲಿ ಭಗವಾನ್ ಶ್ರೀ ಬಸವೇಶ್ವರನ ಜಯಂತ್ಯುತ್ಸವವು ಬಹುವಿಜೃಂಭಣೆಯಿಂದ ನೆರವೇರಿತು ಕಾರ್ಯಕ್ರಮದ ಮೇರೆಗೆ ಆ ದಿವಸ ಪ್ರಾತಃಕಾಲ 6 ರಿಂದ 8 ರ ವರೆಗೆ ಶ್ರೀ ಬಸವೇಶ್ವರನ ಅರ್ಚನೆ, ಮಧ್ಯಾಹ್ನ 11-1 ಗಂಟೆಯವರೆಗೆ ಈ ಪ್ರಕಾರ ಕಾರ್ಯಗಳು ನಡೆದ ಬಳಿಕ ಸಾಯಂಕಾಲ 4 ಕ್ಕೆ ಆ ವ ಜಾತ್ಯನ ಭಾವಚಿತ್ರದ ಮೆರವಣಿಗೆಯು ಭಜನೆ ಬ್ಯಾಂಡ್ ಓಲಗ, ಡೋಲು ವೊದಲಾದ ವಾದ್ಯಗಳೊಡನೆ ಬರುವ ಪುರಪ್ರದಕ್ಷಿಣೆ ಮಾಡಿಕೊಂಡು ರಾತ್ರಿ 8 ಘಂಟೆಗೆ ಶ್ರೀ ದೇವಾಲಯವನ್ನು ಸೇರಿತು ತರುವಾಯ ತಳಿರ ತೋರಣಗಳಿಂದ ಶೃಂಗರಿಸಲ್ಪಟ್ಟ ಮಂಟಪದಲ್ಲಿ ಸಭೆಯು ನೆರವೇರಿತು ಪ್ರಥಮತಃ ಹುಬ್ಬಳ್ಳಿ [illegible] ಅಧ್ಯಕ್ಷನನ್ನು ಮಾಡಿ ಶ್ರೀ ಬಸವೇಶ್ವರನ ಚರಿತ್ರೆ ಹಾಗೆ ಅವನ ತತ್ವಬೋಧೆಗಳ ಸಂಬಂಧವಾಗಿ [illegible] ಭಾಷಣಗಳಾದವು ಬಳಿಕ ಅಧ್ಯಕ್ಷರ ಉಪಸಂಹಾರ ಭಾಷಣವಾಗಿ ಮಂಗಳಾರತಿ ಜಯಘೋಷದೊಡನೆ ಸಭೆ ವಿಸರ್ಜನೆಯಾಯಿತು ಆ ರಾತ್ರಿ 1½ ಘಂಟೆಯವರೆಗೆ ಇಡೀ ಊರಿನ ಜನರು ಪ್ರಸಾದವನ್ನು ಸ್ವೀಕರಿಸಿದರು. ಉತ್ಸವದ ದಿವಸ ವ್ಯಾಪಾರಸ್ಥರು ಮತ್ತು ವ್ಯವಹಾರಗಳನ್ನು ನಿಲ್ಲಿಸಿ ಉದ್ಯೋಗಗಳನ್ನು ಬಿಟ್ಟು ಇದ್ದುದು ಇಲ್ಲಿನ ಎಲ್ಲಾ ಕೋಮಿನವರು ಅಂಗಡಿಗಳನ್ನು ಹಾಕದೆ ವ್ಯಾಪಾರವನ್ನು ಬಂದ್ ಮಾಡಿದ್ದರು. ಇದರಿಂದ ಸುಶಿಕ್ಷಿತರಿಗೆ ಮತ್ತು ಸರ್ವರಿಗೂ ಧರ್ಮದ ಪ್ರಾಮುಖ್ಯತೆ ತಿಳಿದು ಬಸವೇಶ್ವರನ ಕೃಪೆಯಿಂದ ಉತ್ಸವವು ನಡೆಯಿತು. ಈ ಸಂದರ್ಭದಲ್ಲಿಯೂ ನಮ್ಮ ಎಂಬ ಸಹಾಯವು ನಡೆಯಬೇಕೆಂದು ಪ್ರಾರ್ಥಿಸಿದೆವು ಎಲ್ಲರಿಗೂ ತಿಳಿಸುವ ನ ಕೇಳಿ ವಿನ್ನೈಸಿಕೊಳ್ಳುವ ಸೆಕ್ರೆಟರಿ

ಶ್ರೀ ಲಿಂಗರಾಜ ಲಾಯಬ್ರರಿ ಹ್ಯಾಡಗಿ

ಕೊಪ್ಪಳ ಜಿಲ್ಲಾ ಮೈಕೆ ಕಸಬಾ ಇಟಿಗಿ

ಸಮಗ್ರ ಕರ್ನಾಟಕದಲ್ಲಿ ಪ್ರಸಿದ್ಧಿ ಹೊಂದಿರುವ ಕರ್ನಾಟಕ ವಾಙ್ಮಯ ಪಿತೃಗಳಾದ ಬಸವೇಶ್ವರನ ಜಯಂತ್ಯುತ್ಸವವು ಈ ಸಲ ಶ್ರೀಮನ್ ಬಸವೇಶ್ವರ ಜಯಂತ್ಯುತ್ಸವವು ಬಹು ವಿಜೃಂಭಣೆಯಿಂದ ನೆರವೇರಿತು ಈ ದಿನ ವ ಧ್ಯಾಹ್ನದಲ್ಲಿ ಮಹಾಗಣಾರಾಧನೆಯು ಜರುಗಿದಮೇಲೆ 4 ಘಂಟೆಯ ಸುಮಾರಕ್ಕೆ ಶ್ರೀ ಶರಣಬಸವೇಶ್ವರ ವಾಚನಾಲಯದಲ್ಲಿ ಶ್ರೀಮನ್ನಿರಂಜನಜಗದ್ಗುರು ಕೊಟ್ಟೂರಿನ ಹಾವೇರಿ ಶಿವಬಸವ ಮಹಾಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಪ್ರಥಮತಃ ಶಿವಭಜನೆಯ ಅರ ಗ ತು ಆ ವ ಲಿ ಶ್ರೀ ಶಿವಯೋಗಿ ಮಂದಿರದ ಸಾಧಕ ವರ್ಗದ ಅನ್ನದಾನಿ ವ ಶಿವೇಶರು ಮೊದಲಾದವರ ವಾಙ್ಮಯ ಹಾಗು ಬಳಿಕ ಸಾಲಿಮಠ ಸಂಸ್ಕೃತ ಪಾಠಶಾಲಾ ಶಿಕ್ಷಕರಾದ ವೇ॥ ಪ॥ ಪ್ಯಾ ಗಂಗಾಧರಶಾಸ್ತ್ರಿ ಹಾವೇರಿ ಬೃಹನ್ಮಠರ ಇವರು ತಮ್ಮ ಅನ್ಯತಮವಾದ ವಾಗ್ಝರಿಯಿಂದ ಸರ್ವರ ವ ಸ್ಸನ್ನು ಸೆಳೆದು ಶ್ರೀ ಬಸವೇಶ್ವರನ ಜಯಂತಿಯ ಆವಶ್ಯಕತೆಯನ್ನು ಬೋಧಿಸಿದರು ಅನಂತರ ಮುಪ್ಪಿನ ಶ್ರೀ ಶಿವಕೀರ್ತನಕಾರರಾದ ಹಿರೇಹಾಳ ವೀರಪ್ಪಯ್ಯಶಾಸ್ತ್ರಿಗಳು ಬಸವೇಶ್ವರ ಕೀರ್ತನೆಯನ್ನು ಮಾಡುವಂತೆ ಕಾಡಿಸ ಮನಸಮಾಡುವಂತೆ ಒಪ್ಪಿಗೆ ರಸವತ್ತಾಗಿ ಮಾಡಿದರು ಈ ವೇದಿಕೆ ತಳಿರುತೋರಣಗಳಿಂದಲಂಕೃತವಾದ ರಾಜಬೀದಿಯಲ್ಲಿ ಬಸವೇಶ್ವರ ಪ್ರತಿಮೆಯನ್ನು ಮೂರ್ತಿಗೊಳಿಸಿದ್ದ ರಥವು ಕವಣೆ ನಾನಾ ವಾದ [redacted] ಭಜನೆಗಳಿಂದಲೂ ಜಯಘೋಷದಿಂದಲೂ [redacted] ಜರುಗಿತು ಸಭೆಯು ಮತ್ತು ಉತ್ಸವ [redacted] ಬಂದುದರಿಂದ ಬಹು

ಶಾಂತತೆಯಿಂದ ಕಾಲ ಕಳೆದೆವು ಈ ದಿನ ತಾ 11 ಶ್ರೀ ಬಸವೇಶ್ವರ ಜಯಂತಿಯನ್ನು ಬಹು ಸಡಗರದಿಂದ ನಡೆಸಲಾಯಿತು. ಇಂತಹ ಉತ್ಸವಗಳು ಈ ಗ್ರಾಮದಲ್ಲಿ ಪ್ರತಿವರ್ಷವೂ ನಡೆಯುವಂತಾಗಲು ಬಸವೇಶ್ವರನು ಕೃಪೆಗೈಯ್ಯಲೆಂದು ಹಾರೈಸುವೆವು

ಚಿಂಚಾಳೈರ್ಯಾ ಇಟಗಿ ಹಿರಿಮಠ

ತರೀಕೆರೆ

ಶ್ರೀ ವೀರಶೈವಬಂಧುವು ಮತ್ತು ವೀರಶೈವಮತಜೀರ್ಣೋದ್ಧಾರಕನೂ ಆದ ಶ್ರೀ ಬಸವೇಶ್ವರನ ಜಯಂತಿಮಹೋತ್ಸವವನ್ನು ತಾ|| 11-5-1929 ನೇ ಶನಿವಾರ ಈ ಪಟ್ಟಣದ ಸಕಲ ವೀರಶೈವಮತಾಭಿಮಾನಿಗಳು ಅಸಾಧಾರಣ ವೈಭವದಿಂದ ನೆರವೇರಿಸಿದರು ಮ|| ಹಂಜ ಬಸಪ್ಪನವರು ಶ್ರೀ ಅಮೃತೇಶ್ವರ ಬಸವೇಶ್ವರ ದೇವಾಲಯದಲ್ಲಿ ಪ್ರಭಾತದಲ್ಲಿ ಶ್ರೀ ರುದ್ರಾಭಿಷೇಕವನ್ನು ನೆರವೇರಿಸಿ ಶ್ರೀಗುರುಕೃಪೆಗೆ ಪಾತ್ರರಾದರು ಪೂರ್ವಕಾಲಭಾವಿಯಾಗಿಯೇ ಏರ್ಪಡಿಸಿದ್ದ ಕ್ರಮದಂತೆ ಅದಿನ ಮುಂಚಿತವಾಗಿ ಪಟ್ಟಣದಲ್ಲಿ ತಳಿರುತೋರಣ ರಂಭಾಸ್ತಂಭ ಸಾಲುದೀಪಗಳು ರಂಗವಲ್ಲಿಗಳಿಂದ ಸಕಲ ಪುರವೀಧಿಗಳು ಅಲಂಕರಿಸಲ್ಪಟ್ಟು ಎಲ್ಲಿಲ್ಲಿಯೂ ಶ್ರೀ ಬಸವೇಶ್ವರರ ಜಯಧ್ವಾನವೂ ಮಂತ್ರಘೋಷವೂ ಕೇಳಿಬರುತ್ತಿದ್ದವು ಶ್ರೀ ಅಮೃತೇಶ್ವರ ಬಸವೇಶ್ವರ ದೇವಾಲಯದಲ್ಲಿ ಸುವಾಸಿತ ಪುಷ್ಪಮಾಲಿಕೆಗಳಿಂದ ಶೋಭಾಯಮಾನವಾಗಿ ಶೃಂಗರಿಸಲ್ಪಟ್ಟಿದ್ದ ಶ್ರೀ ಪರಮೇಶ್ವರ ಬಸವೇಶ್ವರಮೂರ್ತಿಗಳನ್ನು ಪ್ರೇಕ್ಷಕರನ್ನ ಭಕ್ತಿಪರವಶರನ್ನಾಗಿ ಮಾಡುತ್ತಿದ್ದ ಪುಷ್ಪಪಲ್ಲಕ್ಕಿಯಲ್ಲಿ ಬಿಜಮಾಡಿಸಿ 1 ಗಂಟೆಗೆ ಮಂಜುಳವಾದ ಭಜನೆಯಿಂದಲೂ ಬ್ಯಾಂಡು ವೇ ದಲಾದ ವಾದ್ಯವಿಶೇಷಗಳಿಂದಲೂ ಅಸಂಖ್ಯಾತ ಭಕ್ತಮಾಹೇಶ್ವರ ಶ್ರೇಣಿಯಿಂದಲೂ ಪರಿವೇಷ್ಟಿತವಾಗಿದ್ದ ಮಹೋತ್ಸವವು ಎಲ್ಲಾ ಬೀದಿಯಿಂದ ಹೊರಟು ಭಕ್ತರಿಂದ ಒಪ್ಪಿಸಲ್ಪಟ್ಟ ಮಂಗಳಾರತಿಯನ್ನು ಸ್ವೀಕರಿಸುತ್ತ ನಡೆದಿದೆಗೆ ಚಕ್ರಸ್ಥಾನದಲ್ಲಿ 6½ ಗಂಟೆಯಾಯಿತು ಅಂದಿನ ರಾತ್ರಿ 10 ಗಂಟೆಯಾಗಿ 18 ಗಂಟೆಯವರೆಗೆ ಶ್ರೀ ಅಮೃತೇಶ್ವರ ಬಸವೇಶ್ವರ ದೇವಾಲಯದಲ್ಲಿ ತರುಣರಲ್ಲಿ ಒಬ್ಬ ಮುಖ್ಯಾತರಾಗಿರುವ ವ ತು ಬಂಗಾರಿಗಳು ಆದ ವೇ|| ಕೀರ್ತನಕಾರ ಮಹಲಿಂಗದೇವರು 'ಭಕ್ತಿ ಮತ್ತು ಶ್ರೀಬಸವೇಶ್ವರ ವಿಜಯ' ಎಂಬ ತಮ್ಮ ಭಕ್ತಿರಸ ವ ತು ಸಂಗೀತಗಳಿಂದ ಕೂಡಿದ ಕೀರ್ತನವನ್ನು ಮಾಡಿದರು ಶ್ರೀ ಬಸವೇಶ್ವರರ ಅಸಾಧಾರಣ ಲೀಲಾಮಹತ್ವವನ್ನು ಕೇಳಿ ಸರ್ವರೂ ಶ್ರೀ ಗುರು ಧ್ಯಾನಲೀಲಾಮಗ್ನರಾಗಿದ್ದರು ಕೀರ್ತನವು ಸಮಾಪ್ತವಾಗಲು ಮಹಾಮಂಗಳವೂ ಪುಷ್ಪಾಂಜಲಿಯೂ ನೆರವೇರಿ ಪ್ರಸಾದವಿನಿಯೋಗವಾಯಿತು ಅನಂತರ ಕಾರ್ಯದರ್ಶಿಗಳಿಗೊಬ್ಬರ ಕಾಲೋಚಿತ ಭಾಷಣದಿಂದ ಸಭೆಯು ವಿರಮಿಸಲ್ಪಟ್ಟಿತು ಕಾರ್ಯದರ್ಶಿಗಳು

ವೀರಶೈವತರುಣರಸಂಘ, ತರೀಕೆರೆ

ಹೊನ್ನಾಳಿ ತಾ|| ಸೋಗಿಲು

ಹೊನ್ನಾಳಿ ತಾಲ್ಲೂಕು ಸೋಗಿಲುಗ್ರಾಮದಲ್ಲಿ ತಾ|| 11-5-1929 ನೇ ಶನಿವಾರ ಸರ್ವರೂ ಇದೇ ಗ್ರಾಮದಲ್ಲಿರುವ ಶ್ರೀ ಪ್ರಭು ಕೋಂಟೇಶ ಸ್ವಾಮಿಗಳವರ ಗದ್ದುಗೆಯ ಮಠದಲ್ಲಿ ಶ್ರೀ ವಿನಾಯಕನ ಮತ್ತು ಬಸವೇಶ್ವರನ ಶ್ರೀಮನ್ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳವರ ಫೋಟೋಗಳನ್ನು ವಿಧ್ಯುಕ್ತವಾಗಿ ಬೆಳಗಿನ 6 ಗಂಟೆಗೆ ಪೂಜಿಸಿ ಧೂಪದೀಪ ನೈವೇದ್ಯಗಳನ್ನು ಅರ್ಪಿಸಿ ಸಾಷ್ಟಾಂಗದಂಡಪ್ರಣಾಮಗಳಿಂದ ಈ ನಮ್ಮ ವೀರಶೈವಜ್ಯೋತಿಯಾದ ಶ್ರೀ ಬಸವೇಶ್ವರನು ಈ ಹಿಂದೆ ಮಾಡಿರುವ ಮಹದುಪಕಾರವನ್ನು ಮತ್ತು ಮೇಲ್ಕಂಡ ಶ್ರೀ ಜಗದ್ಗುರುಗಳವರು ಈ ಹಿಂದೆ ಮಾಡಿರುವ ಮಾಡುತ್ತಲೂ ಇರುವ ಸಮಾಜೋದ್ಧಾರ ಕಾರ್ಯಗಳನ್ನು ಕೊಂಡಾಡಿ 8 ಗಂಟೆಗೆ ಮನೆಗೆ ಬಂದು ಮನೆಗಳನ್ನು ತಳಿರುತೋರಣಗಳಿಂದ ಅಲಂಕರಿಸಿ ಬಸವಣ್ಣ (ಎತ್ತು) ಗಳನ್ನು ಮೈತೊಳೆದು ಶೃಂಗರಿಸಿ ಪೂಜಿಸಿದ ತರುವಾಯ ಶ್ರೀ ವೀರಭದ್ರಸ್ವಾಮಿಯೇ ದೇವಸ್ಥಾನಕ್ಕೆ ಉತ್ಸವ ಹೊರಟು ದೇವರುಗಳಿಗೆ ಧೂಪದೀಪ ನೈವೇದ್ಯಗಳನ್ನು ಸಮರ್ಪಿಸಿ ಎಲ್ಲರೂ ತಮ್ಮ ಮನೆಗಳಿಗೆ ಬಂದು ಗಣತೃಪ್ತಿಯನ್ನು ಪೂರೈಸಿದರು ಸಾಯಂಕಾಲ ಶ್ರೀ ಗದ್ದುಗೆಯ ಮಠದಲ್ಲಿ ಸಭೆಸೇರಿ ಶ್ರೀ ಕೋಂಟೇಸ್ವಾಮಿಗಳಿಂದ ಹೇಳಲ್ಪಟ್ಟ ಸಂಕ್ಷೇಪ ಬಸವ ತತ್ವವನ್ನು ತಿಳಿದುಕೊಂಡು ಬಳಿಕ ವರ್ಷಕ್ಕೊಂದು ಈ ವರ್ಷ ಉತ್ಸವದ ಉತ್ಸಾಹವಾಗಿ ಮಾಡುತ್ತೇವೆ ಯಾವಾಗಲೂ ಈ ಉತ್ಸವವನ್ನು ದೊಡ್ಡ ಹಬ್ಬದಂತೆ ನಾವುಗಳು ತಪ್ಪದೆ ಆದರಿಯವಾಗಿ ಆಚರಣೆಯಲ್ಲಿಟ್ಟುಕೊಳ್ಳಬೇಕೆಂಬ ವಿಷಯದ ಮೇಲೆ ಉಪನ್ಯಾಸವಾಗಿ ಸರ್ವಾನುಮತದಿಂದ ಈ ರೀತಿ ಸಿದ್ಧಾಂತ ಗೊಳಿಸಲ್ಪಟ್ಟಿತು ಅನಂತರ ಶ್ರೀ ಭಗವಾನ್ ಬಸವೇಶ್ವರ ಮಹಾರಾಜಕೀಯ ಎಂಬ ನಾಮಸ್ಮರಣೆಯೊಡನೆ ನಮ್ಮನ್ನಾಳುವ ಶ್ರೀ ದಿವಾನ್ ಚಕ್ರವರ್ತಿಗಳವರಾದ ಜಾರ್ಜ್ ಸಾರ್ವಭೌಮ ಪ್ರಭುಗಳಿಗೂ ಶ್ರೀಮನ್ಮಹಾರಾಜಾ ಮೈಸೂರ ಶ್ರೀಕೃಷ್ಣರಾಜೇಂದ್ರ ಒಡೆಯರವರಿಗೂ ಶ್ರೀಮದ್ಯುವರಾಜರವರಿಗೂ ಜಯಚಾಮರಾಜ ಒಡೆಯರವರಿಗೂ ದಾಬಳ ಟೋಂಟದ ಗಳಿಸ್ಯಾ ನವ್ವುಗಳಿಗೂ ಸಹ ಶ್ರೀ ಭಗವಾನ್ ಬಸವೇಶ್ವರನು ಆಯುರಾರೋಗ್ಯಶ್ರೇಯಾದಿಗಳನ್ನೀಯಲೆಂದು ಪ್ರಾರ್ಥಿಸಿ ತೆರಳಿದವನಿಂದ ಸಭೆಯು ಮುಕ್ತಾಯವಾಯಿತು

ಶ್ರೀ ಬಸವೇಶ್ವರ ಮತ್ತು ಜಗದ್ಗುರುಗಳವರ ಪಾದಕಿಂಕರ

ಎಚ್ ಗುರುಶಾಂತಪ್ಪ, ಸೋಗಿಲು

ಕ್ಯಾತನಹಳ್ಳಿ

ವೃ | ಬಸವನ ನಾಮವಂ ನೆನೆವುದುಂ | ಬಸವೇಶನಕೀರ್ತನಗಳಂ ಪಠಿಸಿ ಪಾಡುದುಂ | ಬಸವನಪುಣ್ಯಮೂರ್ತಿಯನೊಲಿದು ಧ್ಯಾನಿಸುತ್ತಿರೆ ನರಂಗೆ ಜನ್ಮಸಾಫಲ್ಯವುಂಟು | ಇದಕ್ಕೆ ಸಂದೇಹವಿಲ್ಲ ಕೇಳುವುದುಂಟೆ | ಮಹತ್ವ ಸದ್ಭಾವವುಂಟು | ಮಹಾನಂದವುಂಟು ಸ್ವಾಮಿಯೆಂಬ ||

(ಉಭಯಕವಿಶಾರದ ಶ್ರೀ ಷಡಕ್ಷರಕವಿವರ್ಯರಿಂದ,)

ಶ್ರೀ ಪರಮೇಶ್ವರನ ಅವತಾರವಾದ ಶ್ರೀ ಬಸವೇಶ್ವರಜಯಂತಿಯನ್ನು ಏರ್ಪಡಿಸಿ ಈಗ್ಗೆ 8-10 ವರ್ಷಗಳಾದವು ಶಿವಾರಭ್ಯ ಮ್ಮ ಗುರುಕಾರ್ ಚನ್ನಬಸಪ್ಪನವರು ಮತ್ತು ಶ್ಯಾನುಭೋಗ ಶೆಟ್ಟಿ ಯುವಕರು ಇನ್ನು ಮುಂತಾದ ಭಕ್ತಾದಿಗಳು ಸದಾ ಪ್ರತಿ ಜಯಂತ್ಯುತ್ಸವ ಈ ಮಹಾಪುರುಷನ ಜನ್ಮದಿನದಲ್ಲಿ ಪ್ರಸ್ತ ಪಡಿಸಿ ಕಾರ್ಯಗಳಂ ಮಾಡುತ್ತಿದ್ದರು ಮಾಮೂಲಿನಂತೆ ತಾ|| 11-5-29 ನೇ ಶನಿವಾರ ಬೆಳಿಗ್ಗೆ 7 ಘಂಟೆಗೆ ಸಕಲ ವೀರಶೈವ ಮಂಡಲಿಯವರು ಸ್ನಾನಾದಿ ತಮ್ಮ ಕ್ರಿಯೆಗಳಂ ತೀರಿಸಿಕೊಂಡು, ದೇಶದ ಪೇಟೆ ಬಸವೇಶ್ವರ ದೇವಾಲಯಕ್ಕೆ ಬಂದು ಇಂದಿನ್ಯಾನ ಮೊದಲಾದ ಸಾಮಗ್ರಿಗಳ ಬಿರುದು ಬಾವಲಿಗಳ ವಾದ್ಯವೈಭವದಿಂದ ಮುಪ್ಪಿನದ್ದ ಅಗಳಗ ನದಿಗೆ ಹೋಗಿ ಗಂಗೆಯನ್ನು ತಂದು, ಅಗ್ನಿಗೆರಿ ಕಳಶಗಳನ್ನಲಂಕರಿಸಿಕೊಂಡು ಶ್ರೀ ಗುರುಭಾವ ದೇವಿಕೆರೆಯ ಮಠದ ಪಿ ಸ್ವಾಮಿಗಳವರನ್ನು ಉತ್ಸವದೊಡನೆ ಬೀಳ್ಕೊಡುವ ಮಾಡಿಕೊಂಡು 9 ಘಂಟೆಗೆ ದೇವಸ್ಥಾನವನ್ನು ಸೇರಿದರು. ತರುವಾಯ [redacted] ಸ್ವಾಮಿಗಳಿಂದ ರುದ್ರಾಭಿಷೇಕ ಸಹಸ್ರನಾಮಾದಿ ಕಾರ್ಯ[redacted] ಬಸವೇಶ್ವರಸ್ವಾಮಿಗೆ ಮಹನ್ಯಾಸಪೂರ್ವಕವಾ[redacted] ಪೂಜೆಯು ಸಲ್ಪಟ್ಟಿತು ಮಂತ್ರಗಳಿಂದ [redacted] ಷೋಡಶೋಪಚಾರದಿಂ ಬಸವ

ಪ್ರಸಾದವೂ ನಡೆಯಿತು. ಮರುದಿನ ವೇದೋಕ್ತವಾದ ರಾಜೋಪಚಾರದಿಂ ಸರ್ವ [illegible] ಭಕ್ತಿಯಿಂದ [illegible] ಮಾಡಿದರು. ಆ ದಿನ ಸಾಯಂಕಾಲ ೩ ಘಂಟೆಗೆ ಶ್ರೀ ಬಸವೇಶ್ವರನ [illegible] ಪ್ರಮಥರೇಶ್ವರ ಫೋಟೋಗಳು ಸಹ ಪುಷ್ಪಾಂದೋಳನದಲ್ಲಿ ಮಾಡಿಸಿ ನಂದಿಧ್ವಜ [illegible] ವಾದ್ಯದೊಡನೆ ಪೇಟೆಗಳುತ್ಸವದಿಂ ಮುಗಿದ ಬಳಿಕ ಶ್ರೀ ಬಸವೇಶ್ವರಸ್ವಾಮಿಯು [illegible] ದೇವಸ್ಥಾನಕ್ಕೆ ಬಿಜಮಾಡಿಸಿ, ನೀರಾಜನಾದಿ ಶಾಸ್ತ್ರಗಳಂ [illegible] ಪ್ರಸಾದಗಳಂ ತೆಗೆದುಕೊಂಡು ಈ ಸುದಿನವು ವೀರಶೈವ ಜನಾಂಗ [illegible] ಮಾಡಿದ ಬಸವೇಶ್ವರನು ಜನಿಸಿದ ಮಹಾಪುಣ್ಯದಿನವೆಂದು ಕೊಂಡಾಡಿದರು. ಕೆ ಪಿ. ಪರಶಿವಯ್ಯ, ಕಾರ್ಯದರ್ಶಿ,

ಹಾವೇರಿ

ಹಾವೇರಿ [illegible] ಸಮಸ್ತ ವೀರಶೈವರು ಮತ್ತು ಇತರೇ [illegible] ವೈಶಾಖ ಶುದ್ಧ ೩ ಶನಿವಾರ ಮಹಾಪ್ರಸಾದ [illegible] ಶ್ರೀ [illegible] ಸಿಂಹಾಸನಾಧ್ಯಕ್ಷ ಶ್ರೀ [illegible] ಶಿವಾಚಾರ್ಯರು [illegible] ಧರ್ಮೋದ್ಧಾರಕನೂ ಮಹೋದ್ಧಾರಕನೂ ಆದ ಶ್ರೀ ಬಸವೇಶ್ವರನ ಉಭಯ ಮಹಾನುಭಾವರ ಜಯಂತಿಯನ್ನು ಒಳ್ಳೇ ವಿಜೃಂಭಣೆಯಿಂದ ಆಚರಿಸಿದರು. ಅವರ ಕಾರ್ಯಕ್ರಮ ಪ್ರಾತಃಕಾಲದಲ್ಲಿ [illegible] ತಳಿರುತೋರಣಗಳಿಂದಲೂ ಪತಾಕೆಗಳಿಂದಲೂ ಅಲಂಕೃತವಾದ [illegible] ಸಿಂಹಾಸನಗಳ ಮೇಲೆ [illegible] ಮಹಾತ್ಮರ [illegible] ಸ್ಥಾಪಿಸಿ ವಿಧಿವಿಧಾನುಸಾರ ರುದ್ರಾಭಿಷೇಕ ಪೂಜೆ ಮಾಡಲ್ಪಟ್ಟಿತು [illegible] ಒಂದು ಘಂಟೆಯಿಂದ ೫ ಘಂಟೆಯವರೆಗೆ [illegible] ಮಹೇಶ್ವರ [illegible] ಇತರೇ ಬಡ ಬಗ್ಗರಿಗೂ ವಿಶೇಷವಾಗಿ ಅನ್ನಸಂತರ್ಪಣೆಯು ಮಾಡಲ್ಪಟ್ಟಿತು ೬ ಘಂಟೆಯಿಂದ ೮ ವರೆಗೆ ಶ್ರೀ ಜಗದ್ಗುರು [illegible] ವಿಷಯಗಳ ಬಗ್ಗೆ ಮತ್ತು ಶ್ರೀ ಬಸವೇಶ್ವರನಲ್ಲಿದ್ದ [illegible] ಸ್ವದೇಶಾಭಿಮಾನ ಸ್ವಮತೋದ್ಧಾರ ಕನ್ನಡ ಭಾಷಾಪ್ರೇಮ, ಸ್ವದೇಶೀವ್ರತ [illegible] ಇತ್ಯಾದಿಗುಣಗಳಬಗ್ಗೆ ವೇದಾಂಗ ವಿದ್ಯಾಲಯದ ವಿದ್ಯಾರ್ಥಿಗಳ [illegible] ಖಾದೀ ಭಂಡಾರದ ಕಾರ್ಯದರ್ಶಿಗಳಾದ [illegible] ಪಂಡಿತ ಬಸವರಾಜಶಾಸ್ತ್ರಿಗಳು [illegible] ಬೃಹಸ್ಪತಿ ಮ॥ [illegible] ನವರು [illegible] ಸೆಕ್ರೆಟರಿ ವೇದಾಂಗವಿದ್ಯಾಲಯ ಇವರುಗಳ [illegible] ಬೋಧಪ್ರದಾಯಕವಾದ ವ್ಯಾಖ್ಯಾನಗಳು ನಡೆದವು. ಆನಂತರ ಸಕಲ ವೈಭವಗಳಿಂದಲೂ ವೇದಘೋಷಗಳಿಂದಲೂ ಭಜನಾಸಂಘಗಳಿಂದಲೂ [illegible] ಘೋಷಗಳಿಂದಲೂ [illegible] ಹೊರಟು ರಾಜಬೀದಿಯಲ್ಲಿ ರಚಿಸಿದ ಆಯಾಯ ಮಂಟಪಗಳಲ್ಲಿ ಭಕ್ತರಿಂದ ಅರ್ಪಿಸಲ್ಪಟ್ಟ ಫಲಪುಷ್ಪಾದಿಗಳನ್ನು ಸ್ವೀಕರಿಸುತ್ತ ರಾತ್ರಿ ೧೧ ಘಂಟೆಗೆ ಮಠಕ್ಕೆ ತಲ್ಪಿತು. ಬಾಂಧವರೇ! ಜಗದಾಚಾರ್ಯರ ಹಾಗೂ ಬಸವಾದಿ ಪ್ರಮಥಪುಂಗವರ ಜಯಂತಿಯನ್ನು ಒಂದೇ ಸ್ಥಳದಲ್ಲಿ ಸಹಾನುಭೂತಿಯಿಂದ [illegible] ನೆರವೇರಿಸಿದ ಹಾವೇರಿಯ ವೀರಶೈವ ಸಹೋದರರು ಸರ್ವರಿಗೂ ಮಾರ್ಗದರ್ಶಕರಾಗಿರುವರು ಈ ವಿಧವಾಗಿ ಸಮ್ಮೇಲನವು ನಡೆದದ್ದು [illegible] ಭಾವಿಸಬೇಕಲ್ಲದೆ ಬೇರೆ ಇಲ್ಲ. ಏಕೆಂದರೆ ಇಂತಹ [illegible] ಗುರುವರ್ಗ ವಿರಕ್ತವರ್ಗದೊಳಗಿಂದ [illegible] ಕಾರಣವಾಗಿರುವದು ಇಂಥ ಆದರ್ಶ ಭೂತವಾದ ಕೃತಿಯನ್ನು ಮುಂದಿನ ವರ್ಷ ಪ್ರತಿಯೊಬ್ಬರೂ ಆಚರಿಸಿ ಸಮಾಜ ಸಂಘಟನೆಯನ್ನು ಮಾಡಿಕೊಳ್ಳುವ ಸದ್ಬುದ್ಧಿಯನ್ನು ದಯಪಾಲಿಸಬೇಕೆಂದು ಅನನ್ಯಭಾವದಿಂದ ಈಶನನ್ನು ಪ್ರಾರ್ಥಿಸುತ್ತೇನೆ. ಓರ್ವ ಸಮಾಜ ಹಿತಕಾಂಕ್ಷಿ.

ತುಂಕೂರು ತಾಲ್ಲೂಕು [illegible]

ಶ್ರೀ ಬಸವೇಶ್ವರ ಜಯಂತಿ ಮಹೋತ್ಸವಕ್ಕೆ ೫ ವರ್ಷಗಳ ಲಾಗಾಯಿತು ಮ॥ [illegible] ನವರ ಪ್ರೇರಣೆಯಿಂದ ಪ್ರತಿ ವರ್ಷವೂ ನಡೆದು ಬಂದಂತೆ ಈ ಸಾರಿ ಶ್ರೀ ಬಸವೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಮನೋಹರವಾದ ಚಪ್ಪರವನ್ನು ಹಾಕಿ [illegible] ದ್ವಾರದ [illegible] ಬಸವೇಶ್ವರನ ಮೇಲೆ [illegible] ವೀರಶೈವರು ಅಂದವಾಗಿ ನಿರ್ಮಿಸಿ ತಳಿರುತೋರಣಗಳಿಂದಲೂ, ಕದಳೀ ಸ್ತಂಭಗಳಿಂದಲೂ ಅಲಂಕರಿಸಿದ್ದಲ್ಲದೆ ಶ್ರೀ ಬಸವೇಶ್ವರನ ಉತ್ಸವಕ್ಕಾಗಿ ಅಂದವಾದ ನಾಲ್ಕು ಗಾಲಿಗಳ ರಥವನ್ನು ನಿರ್ಮಿಸಿ ಅದರ ಮೇಲೆ ಬಸವೇಶ್ವರ ಜನನ ಮೊದಲಾದ [illegible] ಆನಂದವನ್ನುಂಟುಮಾಡುವ ಫೋಟೋಗಳನ್ನು ಅಲಂಕರಿಸಿದ್ದಲ್ಲದೆ [illegible] ಅಲಂಕಾರವು ಅತಿ ಮನೋಹರವಾಗಿದ್ದಿತು. ಆ ದಿವಸ ಬೆಳಗಿನ ೫ ಘಂಟೆಗೆ ಸರಿಯಾಗಿ [illegible] ಭಜನಾಸಂಘ ಮತ್ತು ಮನೋಹರವಾದ [illegible] ವಾದ್ಯದೊಡನೆ ದ್ವಿತೀಯ [illegible] ಶ್ರೀ ಬಸವೇಶ್ವರನ ಉತ್ಸವವು ಊರಲ್ಲೆಲ್ಲಾ ಮೆರೆದು ಪ್ರತಿಮನೆಯ [illegible] ಮಂಗಳಾರತಿಗಳನ್ನೂ ಸ್ವೀಕರಿಸಿ ಜಯಘೋಷದಿಂದ ಸ್ವಸ್ಥಾನವನ್ನು ಸೇರಿ ಮಹಾ ಮಂಗಳಾರತಿಯಾಗುವಾಗ್ಗೆ ಮಧ್ಯಾಹ್ನ ೧೨ ಘಂಟೆಯಾಯಿತು, ನೆರೆದಿದ್ದ ಮಹಾಜನಗಳ ಊಟ [illegible] ನಡೆದನಂತರ ೩ ಘಂಟೆ ಆಗಿಹೋಯಿತು ಸಾಯಂಕಾಲ ೫ ಘಂಟೆ ಸರಿಯಾಗಿ ಪ್ರತಿ ಮನೆಗಳಿಂದಲೂ [illegible] ಬಂದ ಮಹಾ[illegible]ಗಳನ್ನು ತೃಪ್ತಿಪಡಿಸಿದರು ಸಾಯಂಕಾಲ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಶಿವಭಜನಾ [illegible] ಸೇರಿದ್ದ ಮಹಾಸಭೆಯಲ್ಲಿ ಶ್ರೀ ಜಗದ್ಗುರು [illegible] ಸ್ವಾಮಿಗಳಿಂದ [illegible] ವಿದ್ಯಾಭ್ಯಾಸಂಗ ಮಾಡುತ್ತಿದ್ದ [illegible] ದೇವಪ್ಪನೆಂಬ ಬಾಲಕನು ಶ್ರೀ ಬಸವೇಶ್ವರನಿಂದ ವೀರಶೈವ ಜನಾಂಗಕ್ಕೂ, ಪ್ರಪಂಚಕ್ಕೂ ಆದ ಮಹದುಪಕಾರವನ್ನು ಕುರಿತು ಸರಸವಾದ ಭಾಷಣವನ್ನು ಮಾಡಿದನು ಇದೇ ಗ್ರಾಮದ [illegible] ಎಂ. ಸ್ಕೂಲಿನ ಉಪಾಧ್ಯಾಯರಾಗಿದ್ದ [illegible] ಎಂಬ ೧೮ ವರ್ಷದ ತರುಣನು ಬಸವೇಶ್ವರರು ಅನೇಕ [illegible]ಗಳನ್ನು [illegible] ಪ್ರಸಂಗವನ್ನು [illegible] ವಿಷಯವನ್ನು ಕುರಿತು ಮಾಡಿದ ಭಾಷಣವು ಒಳ್ಳೆ ಆನಂದವನ್ನುಂಟುಮಾಡಿತು. ಆನಂತರ ಮ॥ [illegible]ನವರು ಶ್ರೀ ಬಸವೇಶ್ವರನಿಂದ ನಡೆದ [illegible] ವಿಚಾರವಾಗಿ ಭಾಷಣ ಮಾಡಿದ್ದಲ್ಲದೆ ಸಮಸ್ತ ಜನಾಂಗದವರೂ ಈ ಬಸವಜಯಂತಿಯನ್ನು ಮಾಡಬೇಕೆಂಬುದಕ್ಕೆ [illegible] ನೆರೆದಿದ್ದ ಮಹಾಜನಗಳ ಅನುಮತಿಯನ್ನು ಪಡೆದು ಶ್ರೀ ಬಸವೇಶ್ವರನಿಗೆ ಮಹಾಮಂಗಳಾರತಿಯಾಗಿ [illegible] ಶ್ರೀಮನ್ಮಹಾರಾಜರವರ [illegible] ಸಭೆಯು [illegible]ಯಿತು ಓರ್ವ ಪ್ರತ್ಯಕ್ಷದರ್ಶಿ

ಬೊಂಬಾಯಿ

ಅತ್ [redacted] ತಾ॥ 11 6 1929 ನೇ ಶನಿವಾರ ದಿನ [redacted] ಶ್ರೀ ಬಸವೇಶ್ವರ ಜಯಂತಿ ಉತ್ಸವವನ್ನು [redacted] ನೆರವೇರಿಸಿದರು ಮುಂಜಾನೆ ೮ ಘಂಟೆಗೆ, [redacted] [illegible] ಗುಡಿಯಲ್ಲಿ ಶ್ರೀ ಬಸವೇಶ್ವರನ ಚಿತ್ರದ ಫೋಟೋದ ಮೇಲೆ [illegible] ಸ್ವೀಕರಿಸಲಾಯಿತು [illegible] ಕಾಲಕ್ಕೆ ಶ್ರೀ ಬಸವೇಶ್ವರ ಚಿತ್ರದ ಮೆರವಣಿಗೆಯು [illegible] ವಾದ್ಯದಿಂದ ಹೊರಟು, [illegible] ಅಂಗಡಿಗೆ ಬಂದು ಮುಟ್ಟಿತು. ಮತ್ತು ಅಲ್ಲಿ ಶ್ರೀಯುತ ಕಲ್ಯಾಣಶೆಟ್ಟಿ ಶಿವಮಲ್ಲಪ್ಪ ಬಿ ಎ [illegible] ಇವರ ಅಧ್ಯಕ್ಷತೆಯಲ್ಲಿ ಸಭೆಯು ನಡೆಯಿತು ಮೊದಲು ಶ್ರೀಯುತ [illegible] ವೀರಶೈವ ಧರ್ಮದ ಸ್ವಾತಂತ್ರ್ಯ ಮತ್ತು ಉದಾತ್ತ ತತ್ವಗಳ ವಿಷಯವಾಗಿ ಸುಲಭವಾಗಿ ಎಲ್ಲರಿಗೂ ತಿಳಿಯುವಂತೆ ಹೇಳಿದರು. ಬಸವೇಶ್ವರನು ೧೨ನೆ ಶತಮಾನದಲ್ಲಿರುವ ವೇದಾಗಮ ಉಪನಿಷತ್ತುಗಳ ಸಾರವನ್ನು [illegible] ಎಲ್ಲರಿಗೂ ತಿಳಿಯುವಂತೆ ಬೋಧಿಸಿದ್ದನ್ನು [illegible] ಮನಸ್ಸಿಗೆ ನಾಟುವಂತೆ ಹೇಳಿದರು. ನಂತರ ಮ॥ ಬಾಪೂರಾವ ಮತ್ತು ಬಾಳಾಸಾಹೇಬ [illegible] ಭಾಷಣಗಳಾದ ಮೇಲೆ ಶ್ರೀಯುತ [illegible] ಬಸವ [illegible]ನವರು ಈ ಸಭೆಯು ಶ್ರೀ ಬಸವೇಶ್ವರ [illegible] ಕಾಶೀನಾಥ ಶಾಸ್ತ್ರಿಯವರು ಮತ್ತು ಅವರಿಗೆ ಸಹಾಯ ಮಾಡುವ [illegible] ತೀವ್ರವಾಗಿ [illegible] ಎಂಬ [illegible] (ಠರಾವು) ಸಭೆಯ ಮುಂದಿಟ್ಟರು ಅದಕ್ಕೆ ಎಲ್ಲರೂ ಸಮ್ಮತಿಸಿದರು. ಆ ಮೇಲೆ ಅಧ್ಯಕ್ಷರೂ ಶ್ರೀ ಬಸವೇಶ್ವರ ಜಯಂತಿಯನ್ನು ಪ್ರತಿಯೊಬ್ಬ ವೀರಶೈವನೂ ಮಾಡಲೇಬೇಕೆಂದೂ, ಬಸವೇಶ್ವರನು ವೀರಶೈವ ಧರ್ಮ [illegible] ಪುನರುಜ್ಜೀವನಕನೆಂದೂ [illegible] ಸಮಾಜ ಶುದ್ಧಿ, ಸಂಘಟನೆಗಳ ಕಾರ್ಯವು ಈಗಿನ ಸಮಾಜ ಸುಧಾರಕರಿಗೂ [illegible] ಹೇಳಿದರು [illegible] ಕನ್ನಡ [illegible] ಭೇದವು [illegible] ಕನ್ನಡವೇ ತಾಯ್ನುಡಿ ಎಂದು ಹೇಳಿ ತಮ್ಮ ಸ್ಫೂರ್ತಿದಾಯಕ ಭಾಷಣವನ್ನು ಮುಗಿಸಿದರು

ಹಿಂದೂಮುಸಲ್ಮಾನರ ದಂಗೆಯಿಂದ ತಳಮಳಿಸಿದ ಮುಂಬಯಿಯಲ್ಲಿ ಶ್ರೀ ಬಸವಜಯಂತಿಯನ್ನು ಒಳ್ಳೇ ವೈಭವದಿಂದ ಜರಗಿಸಿದುದು ಮುಂಬಯಿಯ ವೀರಶೈವರಿಗಲ್ಲ ಭೂಷಣವಾಗಿರುವುದು ಇದರಂತೆ ವರ್ಷ ವರ್ಷಕ್ಕೆ ಶ್ರೀ ಬಸವೇಶ್ವರನು ಹೆಚ್ಚು ಹೆಚ್ಚಿಗೆ ಉತ್ಸಾಹವನ್ನೂ ಶಕ್ತಿಯನ್ನೂ ಕೊಡಲೆಂದು ಪ್ರಾರ್ಥಿಸುತ್ತೇವೆ

ಸಾಗರ.

ಧಾರವಾಡದ ಶ್ರೀಮನ್ನಿರಂಜನ ಪ್ರಣವಸ್ವರೂಪಿಗಳಾದ ಶ್ರೀ ಮೃತ್ಯುಂಜಯಮಹಾಸ್ವಾಮಿಗಳವರು ತಮ್ಮ ಗುರುಕುಲದ ವಿದ್ಯಾರ್ಥಿಗಳೊಡನೆ ಗೋಕರ್ಣದ ಪ್ರವಾಸಕ್ಕೆ ಹೊರಟಾಗ್ಗೆ ಸಾಗರದ ಮಹಾಜನಗಳ ಆಗ್ರಹದ ಮೂಲಕ [illegible] ಉಳಿದುದರಿಂದ ಅವರ [illegible] ಕೆಳಗೆ ಇಲ್ಲಿ ಶ್ರೀ ಬಸವೇಶ್ವರ ಜಯಂತ್ಯುತ್ಸವವು [illegible] ವಿಜೃಂಭಣೆಯಿಂದ ನೆರವೇರಿತು ಉತ್ಸವದ ದಿವಸ ಮುಂಜಾನೆ ಬಸವೇಶ್ವರ ದೇವಸ್ಥಾನದಲ್ಲಿ ಕಾರ್ಯಕ್ರಮದ ಪ್ರಕಾರ ಶಿವಭಜನೆ ಮಂಗಳಾದಿಗಳಾದವು. ಸಂಜೆಯ ೪ ಗಂಟೆಗೆ ಶ್ರೀಗಳವರು ಇಳಕೊಂಡ ಗೃಹದಲ್ಲಿ ಒಂದು ಸಾರ್ವಜನಿಕ ಸಭೆಯನ್ನು ನೆರವೇರಿಸಲಾಯಿತು. ಸಭೆಗೆ ಶಿವಮೊಗ್ಗ ಡಿಸ್ಟ್ರಿಕ್ಟ ಡೆಪ್ಯುಟಿ ಕಮಿಶನರಾದ ಶ್ರೀ ಎಂ ಎನ್ [illegible] ಅವರು ಅಧ್ಯಕ್ಷರಾಗಿದ್ದರು ಶ್ರೀ ಎಚ್ ಮಹಾಂತಪ್ಪ ಬಿ ಎ., ಎಲ್ ಎಲ್.ಬಿ, ಇವರು ಅಧ್ಯಕ್ಷರ ಸುಸ್ವಾಗತವನ್ನು ಬಯಸಿ [illegible] ಅಧ್ಯಕ್ಷ ಮಹಾಶಯರು ನಮ್ಮ ಬೇಡಿಕೆಯನ್ನು ಮಾನ್ಯಮಾಡಿ ಈ ಹೊತ್ತಿನ ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದ್ದು ನಮ್ಮ ಸುದೈವವೆಂದು ಹೇಳಿದರು ಶ್ರೀ [illegible] ಪಾಟೀಲರು ಬಿ ಎ , ಆನರ್ಸ ಇವರು “ಗುರುಕುಲದ ಅವಶ್ಯಕತೆ” ಮತ್ತು ವೀರಭದ್ರಪ್ಪಗೌಡರು ಬಿ ಎ , ಇವರು “ವಿದ್ಯೆಯ ಮಹತ್ವ” ಎಂಬ ವಿಷಯಗಳಮೇಲೆ ಭಾಷಣಮಾಡಿದರು ಶ್ರೀ ಎಂ ವಿ ಎಂ ಇವರು ಧಾರವಾಡ ಬೋರ್ಡಿಂಗಿನ ಚರಿತ್ರೆಯನ್ನೂ ಅದರ ಉದ್ದೇಶವನ್ನೂ ಕಾರ್ಯಕ್ರಮವನ್ನೂ ಹೇಳಿದರು ಧಾರವಾಡ ಸಂಸ್ಕೃತಪಾಠಶಾಲಾಧ್ಯಾಪಕರಾದ, ಕಾವ್ಯ, ತರ್ಕ, ನ್ಯಾಯ, ವೇದ ಮೊದಲಾದ ವಿಷಯಗಳಲ್ಲಿ [illegible] ವೇ॥ ಮಹಾದೇವಪಂಡಿತರು ಶ್ರೀ ಬಸವೇಶ್ವರನ ಜೀವನ ಕ್ರಮವನ್ನು ಕುರಿತು ಹೇಳುವಾಗ್ಗೆ ಅವನ ಅಹಿಂಸಾ, ಸತ್ಯ, [illegible] ಕರ್ಮಯೋಗ, ಭಕ್ತಿಯೋಗ ಮೊದಲಾದ ಸದ್ಗುಣಗಳನ್ನು ಅವನ ವಚನದ ಉದಾಹರಣೆಗಳ ಮೂಲಕ ಬಹುಸ್ವಾರಸ್ಯವಾಗಿ ಭಾಷಣಮಾಡಿದರು ಶ್ರೀಗಳವರು ಎಲ್ಲ ಸಮಾಜದವರಲ್ಲಿಯೂ ಪ್ರೇಮಭಾವನೆ ಬೆಳೆಯಲೆಂದು ಮತ್ತು ವಿದ್ಯಾರ್ಥಿಗಳ ಸೇವೆಯೇ ಪರಮಕರ್ತವ್ಯವೆಂದೂ ಅಪ್ಪಣೆ ಕೊಡಿಸಿದರು ಅಧ್ಯಕ್ಷಮಹಾಶಯರು ತಮ್ಮ ಭಾಷಣದಲ್ಲಿ ಗುರುಕುಲದ ಅವಶ್ಯಕತೆ, ವಿದ್ಯಾರ್ಥಿಗಳು ಒಟ್ಟುಗೂಡಿ ವಾಸಿಸುವದರಿಂದಾಗುವ ಪರಸ್ಪರ ಪ್ರೇಮದ ಬೆಳವಣಿಗೆ, ವೀರಶೈವರು ಸ್ಥಾಪಿಸಿದ ವಿದ್ಯಾ[illegible]ಗಳು ಮೊದಲಾದವುಗಳನ್ನು ಚೆನ್ನಾಗಿ ತಿಳಿಯುವಂತೆ ಭಾಷಣಮಾಡಿದರು ಅವರ ಹೃದಯಂಗಮ ಭಾಷಣವು ಅವರ ಸರಳತನ, ವಿದ್ಯಾರ್ಥಿಗಳ ಮೇಲಿನ ಪ್ರೇಮ, ವೀರಶೈವಮತದಲ್ಲಿರುವ ಅವರ ಮಮತೆ ಮೊದಲಾದವುಗಳನ್ನು ವ್ಯಕ್ತಪಡಿಸುತ್ತದೆ ಕಡೆಗೆ ಶ್ರೀ ಹೊಳೆಬಸಪ್ಪ ನ್ಯಾಸನಗಿ ಇವರು ವೀರಶೈವರ ಗತವೈಭವವನ್ನು ಕುರಿತು ಹೇಳಿ ಉಪಸಂಹಾರ ಮಾಡಿದರು. ಸಂಜೆಯಲ್ಲಿ ಶ್ರೀ ಬಸವೇಶ್ವರರ ಪಾಲಕಿ ಉತ್ಸವವು ಶ್ರೀಗಳವರ [illegible] ಹೊರಟಿತು. ಬರೇ ವೀರಶೈವರಷ್ಟೇ ಅಲ್ಲದೆ ಬ್ರಾಹ್ಮಣ, ವೈಶ್ಯ, ಮುಸಲ್ಮಾನ ಮೊದಲಾದ ಸಮಾಜದವರೂ ಭಕ್ತಿಯನ್ನೂ ಸಹಾನುಭೂತಿಯನ್ನೂ ತೋರಿಸಿದರು [illegible] ಬಂಧುಗಳು ಅನುಕರಣೀಯ[illegible] ಈ ಉತ್ಸವದಲ್ಲಿ ಶ್ರೀ ಎಚ್. ಮಹಾಂತಪ್ಪ ಬಿ ಎ , ಎಲ್ ಎಲ್ ಬಿ ಶ್ರೀ ಗುರುಬಸನಗೌಡ ಪಾಟೀಲ ಕಾಗೋಡ ಬಿ ಎ , ಆನರ್ಸ, ಶ್ರೀ ವೀರಭದ್ರಪ್ಪಗೌಡರು ಬಿ ಎ , ಶ್ರೀ ಬಸಲಿಂಗಪ್ಪನವರು ಗೊಜನೂರ ಶ್ರೀ ಬಸವಣ್ಣೆಪ್ಪ [illegible], ಶ್ರೀ ಚೆನಬಸಪ್ಪ ಗುಂಡಾಲಿ, ಶ್ರೀ ಹೊಳೆಬಸಪ್ಪ ನ್ಯಾಸನಗಿ ಮೊದಲಾದವರ ವಿಶೇಷ ಪ್ರಯತ್ನದಿಂದಲೇ ಉತ್ಸವವು ಬಹುವಿಜೃಂಭಣೆಯಿಂದ ಸಾಂಗವಾಯಿತು, ಶ್ರೀ ಬಸವೇಶ್ವರನು ಎಲ್ಲರಲ್ಲಿಯೂ ಪರಸ್ಪರ ಪ್ರೇಮವನ್ನು ದಯಪಾಲಿಸಲೆಂದು ಬೇಡಿಕೊಳ್ಳುವೆನು

ಓರ್ವ ಪ್ರತ್ಯಕ್ಷದರ್ಶಿ

ಟಿ ನರಸೀಪುರ.

॥ ಶ್ಲೋಕ ॥

[illegible] ಬಸವೇ[illegible] ।

[illegible] ॥

([illegible] ಶ್ರೀ ಬಾದರಾಯಣ)

ಮಹಾಸಭೆಯಲ್ಲಿ [illegible] ಪರಶಿವನಿಂದ ಸ್ಥಾಪಿಸಲ್ಪಟ್ಟು ಶ್ರೀ ನಂದಿ, [redacted] ಪ್ರಚಾರಗೊಳಿಸಲ್ಪಟ್ಟು ಅಪ್ರತಿ [redacted] ಹೊಂದಿರುವಂಥ ಈ ವೀರಶೈವ ಮತವ [redacted] ಕೆಳಗೆ [illegible] ಕಾಲ [redacted] [illegible] ಇವರ [illegible]ವಾದಿಗಳಲ್ಲಿ [illegible] ಆಗಲಿ ಸುಧಾರಕರು [illegible] ಶಕ್ತಿ [illegible] ಯಾವ ಮಹಾತ್ಮನು [illegible] ವೀರಶೈವ ತತ್ವೋದ್ಧಾರಕ [illegible] ಪವಿತ್ರಸ್ವರೂಪವಾದ [illegible] ಯಾವ ಮಹಾತ್ಮನು [illegible] ಅನೇಕ [illegible] ವೀರಶೈವ ಮತದ ಧ್ವಜವನ್ನು ಎತ್ತಿ [illegible], ಯಾವ ಮಹಾತ್ಮನು ವೇದವೇದಾಂತಗಳ ರಹಸ್ಯ ತತ್ವಗಳನ್ನು ಜನಸಾಮಾನ್ಯರಿಗೂ ತಿಳಿಯುವಂತೆ ಕನ್ನಡ ವಚನ ರೂಪದಲ್ಲಿ ಅನೇಕ ಗ್ರಂಥಗಳನ್ನು ರಚಿಸಿ ಮತ್ತು ರಚಿಸುವಂತೆ ಪ್ರೋತ್ಸಾಹ ಮಾಡಿ ಕರ್ನಾಟಕ ಭಾಷೆಯನ್ನು ಅಭಿವೃದ್ಧಿಗೆ ತಂದು ಕರ್ನಾಟಕ [illegible], ಯಾವ ಮಹಾತ್ಮನು ತನ್ನ ಸಮಾಜಕ್ಕೇ ಅಲ್ಲದೆ ಸ್ವದೇಶಕ್ಕೂ ಸಮಸ್ತ ವರ್ಗದವರ ಉದ್ಯೋಗಗಳಿಗೂ [illegible] ಅಸ್ಪೃಶ್ಯರಾದಿ ಚಂಡಾಲ ಪರ್ಯಂತರ ಸಮಸ್ತರ ಸಮಾನ[illegible] ಮದ್ಯಪಾನ ನಿರೋಧ, ಅಸ್ಪೃಶ್ಯತಾನಿವಾರಣ, ಸ್ವದೇಶಿ ವಸ್ತ್ರಧಾರಣ, ಸತ್ಯಾಗ್ರಹ ಮೊದಲಾದ [illegible] ಈ ಮಹತ್ಕಾರ್ಯಗಳಿಗೆ [illegible] ಈಗಿನ ಮಹಾತ್ಮಾ ಗಾಂಧಿಯವರೇ ಮೊದಲಾದ ಸ್ವದೇಶೀಯರಿಂದಲೂ, ಮ್ಯಾಕ್ಸ್ ಮುಲ್ಲರ್ ಮೊದಲಾದ ಪಾಶ್ಚಾತ್ಯ ಪಂಡಿತರುಗಳಿಂದಲೂ ಹೊಗಳಿಸಿಕೊಳ್ಳುತ್ತಿರುವನೋ ಯಾವ ಮಹಾತ್ಮನು ತನ್ನ ತ್ರಿಕರಣಪೂರ್ವಕವಾದ ಸ್ವದೇಶಸೇವಾ, ರಾಜನೀತಿ [illegible] ಮೊದಲಾದ ಮಹತ್ಕಾರ್ಯಗಳಿಂದ ತನ್ನ ರಾಜನು ಪ್ರಸಿದ್ಧನಾದ [illegible] ಅವನ ಹೆಸರು ಆಚಂದ್ರಾರ್ಕವಾಗಿ ಉಳಿಯುವಂತೆ ಮಾಡಿಬಿಟ್ಟು ಹೋದನೋ ಅಂತಹ ಬಿಜ್ಜಳ ರಾಜನ ಅಮಾತ್ಯ ಶ್ರೇಷ್ಠನೂ, ಆಧುನಿಕ ಸ್ವದೇಶಭಕ್ತರುಗಳಿಗೆ ಆದ್ಯಪ್ರವರ್ತಕನೂ, ಬ್ರಾಹ್ಮಣಾದಿ ಸಮಸ್ತ ವರ್ಗದವರಿಂದಲೂ ಹೊಗಳಿಸಿಕೊಳ್ಳುತ್ತಿರುವವನೂ, ಕರ್ನಾಟಕ ಭಾಷೋದ್ಧಾರಕನೂ ವೀರಶೈವಮತ ಪುನರುಜ್ಜೀವನಕನೂ, ಧರ್ಮಸ್ಥಾಪಕನೂ, ಶ್ರೀಮದ್ಭಕ್ತಿಯ [illegible] ಆದ ಮಹಾತ್ಮ ಶ್ರೀ ಬಸವದಂಡನಾಧೀಶನ ಜಯಂತ್ಯುತ್ಸವವು ಪದ್ಧತಿ ಪ್ರಕಾರ ಇಲ್ಲಿಯ ಶ್ರೀ ವೀರಶೈವಬ್ರಾಹ್ಮಣ ಮಹಾಜನರುಗಳಿಂದ ಕಳೆದ ತಾ, 11 6 29 ನೇ ಶನಿವಾರ ಪ್ರಾತಃಕಾಲ ಈ ಕೆಳಕಂಡ ಮೇರೆಗೆ ವಿಜೃಂಭಣೆಯಿಂದ ಜರುಗಿಸಲ್ಪಟ್ಟಿತು. ಈ ಉತ್ಸವಕ್ಕಾಗಿ [illegible] ಬೆಳ್ಳಿಯ ಬಸವೇಶ್ವರನನ್ನು ಬೆಳ್ಳಿಯ ಪ್ರಭಾವಳಿಯಿಂದಲೂ, ಶ್ರೀ ಬಸವ ದಂಡಾಧೀಶನ ಜನನದ ಭಾವಚಿತ್ರದಿಂದಲೂ ಅಲಂಕರಿಸಿ ವಾದ್ಯಘೋಷದೊಡನೆಯೂ, [illegible], ಶ್ರೀ ಕಾವೇರೀ ಕಪಿಲಾ ಸ್ಫಟಿಕ ಸರೋವರ ತ್ರಿವೇಣೀ ಸಂಗಮ ಕ್ಷೇತ್ರದಲ್ಲಿ ರಾಜಿಸುತ್ತಿರುವ ಶ್ರೀ [illegible] ಬಸವೇಶ್ವರಸ್ವಾಮಿಯ ಸನ್ನಿಧಿಗೆ ಉತ್ಸವಪೂರ್ವಕವಾಗಿ ಹೋಗಿ ಶ್ರೀ ಬಸವೇಶ್ವರಸ್ವಾಮಿಗೂ ಮತ್ತು ಶ್ರೀ ಬಸವದಂಡನಾಥನ ಭಾವಪಟಕ್ಕೂ ಸಹ ವೇ॥ [illegible] ಶಾಸ್ತ್ರಿಗಳು ಮತ್ತು ಇವರ ಕುಮಾರರುಗಳಿಂದ ವಿಧ್ಯುಕ್ತವಾಗಿ ನಮಕ ಚಮಕ ಪುರುಷಸೂಕ್ತ, ಪಂಚಬ್ರಹ್ಮಮಂತ್ರಾದಿಗಳಿಂದ ಮಹಾರುದ್ರಾಭಿಷೇಕವೂ ಶ್ರೀ ಬಸವ ಸಹಸ್ರನಾಮಾರ್ಚನಪೂರ್ವಕ ಷೋಡಶೋಪಚಾರಪೂಜೆಯೂ, ರಾಜೋಪಚಾರಗಳೂ ವೇದಘೋಷದೊಡನೆ ಸಾಂಗವಾಗಿ ನೆರವೇರಿಸಲ್ಪಟ್ಟು ಮಹಾನೈವೇದ್ಯವು ಮಾಡಲ್ಪಟ್ಟು ಅಲ್ಲಿ ನೆರೆದಿದ್ದ ಭಕ್ತಮಹೇಶ್ವರರಿಗೂ ಇತರರಿಗೂ ವಿನಿಯೋಗಿಸಲ್ಪಟ್ಟಿತು. ಸಾಯಂಕಾಲ [illegible] ರೀತಿಯಲ್ಲಿ ಅಲಂಕರಿಸಿದ್ದ ಶ್ರೀ ಬಸವದಂಡಾಧೀಶನ ಉತ್ಸವವು [illegible] ಮಾಡಿ ಮತ್ತು ವಾದ್ಯವೈಭವದೊಡನೆ ಹೊರಟು ಪುರದ ಎಲ್ಲಾ ಬೀದಿಗಳಲ್ಲಿಯೂ ಉತ್ಸವಗೊಂಡು, ಸಮಸ್ತ ವರ್ಗದವರಿಂದಲೂ ಅರ್ಪಿಸಲ್ಪಟ್ಟ ಫಲಪುಷ್ಪಾದಿಗಳನ್ನು ಸ್ವೀಕರಿಸಿ, ಸಾಲಿನ ಆರತಿಗಳಿಂದಲೂ, ತಳಿರುತೋರಣಗಳಿಂದಲೂ ಅಲಂಕೃತವಾಗಿದ್ದ ಮ॥ ರಾ॥ [illegible] ಪುಟ್ಟಣ್ಣನವರ ಧರ್ಮಶಾಲೆಗೆ ಬಿಜಯಂಗೈಸಿತು ಅಲ್ಲಿ ಷೋಡಶೋಪಚಾರಪೂಜೆಯೂ ರಾಜೋಪಚಾರಗಳೂ ನಡೆದನಂತರ ನೆರೆದಿದ್ದ ಸಮಸ್ತರಿಗೂ ಮಂಗಳಾರತಿ ಪ್ರಸಾದಗಳು ಹಂಚಲ್ಪಟ್ಟು ಸಮಸ್ತರೂ ಶ್ರೀ ಬಸವದಂಡಾಧೀಶನ ಜಯಘೋಷಮಾಡುತ ತೆರಳಿದರು. ಪುನಃ ರಾತ್ರಿ ೮ ಗಂಟೆಗೆ ಆಹ್ವಾನಿಸಲ್ಪಟ್ಟಿದ್ದ ಸಜ್ಜನರು ನೆರೆದನಂತರ ರಾಜೋಪಚಾರಪೂರ್ವಕ ಮಹಾಮಂಗಳಾರತಿಯು ನಡೆದು ಸರ್ವರಿಗೂ ಮಂಗಳಾರತಿ ಪ್ರಸಾದಗಳು ಹಂಚಲ್ಪಟ್ಟು ಸರ್ವರೂ ಶ್ರೀ ಬಸವೇಶ್ವರನ ಮಹಾತ್ಮೆಯನ್ನು ಹೊಗಳುತ್ತಾ [illegible] ಶ್ರೀಮನ್ಮಹಾರಾಜರವರಿಗೂ ಅವರ [illegible] ಕುಟುಂಬಕ್ಕೂ ಶ್ರೀ ಬಸವೇಶ್ವರನು ಸಕಲ ಸನ್ಮಂಗಳವನ್ನೀಯಲೆಂದು ಪ್ರಾರ್ಥನೆಯೊಡನೆ ಬಸವಧ್ಯಾನದಿಂದ ತಂತಮ್ಮ ಮನೆಗಳಿಗೆ ತೆರಳಿದರು

ಓರ್ವ ಪ್ರತ್ಯಕ್ಷದರ್ಶಿ.

ದಾವಣಗೆರೆಯಲ್ಲಿ ಬಸವಜಯಂತಿಯೂ ಬಾಳೆಹಳ್ಳಿಯವರ ಪ್ರವೇಶದರ್ಬಾರೂ.

ಈ ಸಾರಿ ಬಸವಜಯಂತಿಯು ಯಥಾರೀತಿ ಸಂತೋಷಕರವೂ, ಭಕ್ತಿರಸ ಪೂರಿತವೂ ಆಗಿತಲ್ಲದೆ ಬೋಧಪ್ರದವೂ ಆಗಿತ್ತು, [illegible] ಮ॥ ಹುಬ್ಬಳ್ಳಿ ವಕೀಲ ಪಾಟೀಲ ಸಿದ್ದರಾಮಪ್ಪನವರ ಉಪನ್ಯಾಸವೂ ಮೈಸೂರಿನ ವೇ॥ ಶಿವಕಥಾ ಪಂಡಿತ [illegible] ಶಿವಪ್ಪಶಾಸ್ತ್ರಿಗಳ ಶಿವಕೀರ್ತನೆಯೂ ಜರುಗಿ ಪ್ರಮಥಭಕ್ತಿಗೆ ಪ್ರೋತ್ಸಾಹಕವಾಗಿತ್ತು, ಉತ್ಸವ ಸಮಾರಂಭದ ವಿನೋದಗಳು ಭಕ್ತರ ಮನವನ್ನು [illegible] ದೊಡ್ಡಪೇಟೆ ಕಾಯಿಪೇಟೆ [illegible] ಕಾರ್ಯಕರ್ತರುಗಳನ್ನು [illegible]. ದೊಡ್ಡಪೇಟೆಯ [illegible] ಉತ್ಸವವೂ, ಕಾಯಿಪೇಟೆಯ [illegible] [illegible] ಬಸವ[illegible] ಭಜನಾಸಂಘದವರ [illegible] ಬಸವಸ್ತೋತ್ರವನ್ನು [illegible] ಈ ಉತ್ಸವ ಸಮಾರಂಭದ [illegible] ಸುಮಾರು ೨,೦೦೦ [illegible] ಸಾಯಂಕಾಲ ೬ ಗಂಟೆಗೆ [illegible] ಚೆನ್ನಪ್ಪ ಬಿ ಎ , ಎಲ್ ಎಲ್.ಬಿ , ಇವರ ಅಧ್ಯಕ್ಷತೆಯಲ್ಲಿ ಮ॥ ಹುಬ್ಬಳ್ಳಿ ಪಾಟೀಲ ಸಿದ್ಧರಾಮಪ್ಪನವರು ಬಸವೇಶ್ವರನ ವಿಷಯವಾಗಿ ಉಪನ್ಯಾಸಮಾಡಿದರು [illegible] ಬಸವ[illegible] [illegible] [redacted] [illegible] ಎಂಬ [illegible] [redacted] [illegible] [redacted] [illegible] [redacted] [illegible]

ಉಳಿದ ಲಿಂಗೈಕ್ಯ ಶ್ರೀ ಜಗದ್ಗುರು ಸಿದ್ಧಲಿಂಗೇಶ್ವರ ಸ್ವಾಮಿಗಳ ಆಶೀರ್ವಾದದಿಂದ ಅವರ ಪ್ರತಿಷ್ಠೆಯನ್ನು ವೃದ್ಧಿಪಡಿಸಿದ ಇವರಿಗೆ ಗುರು ಲಿಂಗ ಜಂಗಮ ಭಕ್ತಿಯು ಸಹಜವಾಗಿತ್ತು. ಶ್ರೀ ಸಿದ್ಧಲಿಂಗೇಶ್ವರ ಕ್ಷೇತ್ರದ ಮಠದ ಕಾರ್ಯಗಳನ್ನು ನಡೆಸಿ ಲಿಂಗೋಪಾಸನೆಯ ಕ್ಷೇತ್ರವಾದ ಜ್ಯೋತಿರ್ಲಿಂಗ ಶಿವಾಲಯದಲ್ಲಿ ಲಿಂಗೋಪಾಸನೆಯೊಡನೆ ಈ ಸ್ವಾಮಿಗಳವರು ಪರಶಿವನ ಪದಕಮಲವನ್ನು ಸೇರಿ ಲಿಂಗೋಪಾಸನಾದನು.

ಇವರು ಸಿದ್ಧಾಂತಶಿಖಾಮಣಿಯ 3 ನೇ ಪರಿಚ್ಛೇದದ 81, 82, 83, 84 ಶ್ಲೋಕಗಳಲ್ಲಿ ಹೇಳಿರುವ ಧರ್ಮವನ್ನು ಪಾಲಿಸಿ ಶಿವಯೋಗವನ್ನು ಅಭ್ಯಾಸ ಮಾಡಿ ವೀರಶೈವ ಧರ್ಮದ ತತ್ವಗಳನ್ನು ಪ್ರಚಾರಪಡಿಸಿದರು. ಇವರ ಕಾರ್ಯಗಳು ವೀರಶೈವ ಸಮಾಜಕ್ಕೆ ಅತ್ಯಂತ ಉಪಕಾರವಾಗಿವೆ. ಇವರ ಉತ್ಸವವು ಪ್ರತಿವರ್ಷ ಜರುಗುತ್ತಿದ್ದು 1927 ರಲ್ಲಿ ಬೆಂಗಳೂರಿನಲ್ಲಿ ನಡೆದ ಸಭೆಯಲ್ಲಿ ಇವರ ಜೀವನ ಚರಿತ್ರೆಯನ್ನು ಬರೆಯಬೇಕೆಂದು ನಿರ್ಣಯಿಸಲಾಯಿತು [illegible]

[illegible]

ದಾವಣಗೆರೆವಾಸಿ

ಪತ್ರವ್ಯವಹಾರ

ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು ಸಂಪಾದಕ

ಗುಮ್ಮಗೋಳದ ಶ್ರೀ ಬಸವೇಶ್ವರನ ಜಾತ್ರೆಯೂ ಜೀವದಯಾ ಸಂಸ್ಥೆಯವರೂ

ಗವನೆ ಕಾಲಂತ ಗುಮ್ಮಗೋಳದಲ್ಲಿ ಪ್ರತಿವರ್ಷದಂತೆ ಈ ವರ್ಷವೂ ಕಳೆದ ಚೈತ್ರ ಶುದ್ಧ ೧೦ ಯಿಂದ ಏಳು ದಿನಗಳವರೆಗೆ ಜನಗಳ ಜಾತ್ರೆಯು ನೆರೆದಿತ್ತು [illegible] ಬಿಟ್ಟ [illegible] [redacted]

ದೇಯದಿಂದ ಪ್ರಶ್ನೆಗಳನ್ನು [illegible] ಶ್ರೀ ಗುರುಭಕ್ತ ಶರಭ

ಬೇಣಿ ವೀರಶೈವ ವಿದ್ಯಾಲಯ ರಂಜೇರಿ

(ಲೇಖಕರು—ಹರೇಕರ ಮಂಜಪ್ಪನವರು)

ಈ ನಮ್ಮ ಭರತಖಂಡವು ಆಧುನಿಕ ವಿದ್ಯಾಕಲಾಕೌಶಲ್ಯಗಳಲ್ಲಿ ಸುಧಾರಿಸಿದ ರಾಷ್ಟ್ರಗಳಿಗಿಂತ ಹಿಂದೆ ಬಿದ್ದಿದೆಯೆಂಬುದು ನಿರ್ವಿವಾದವಾಗಿದೆ. [illegible]

ನೈಜಾಮು ರಾಜ್ಯದಲ್ಲಿಯೇ ಮೊದಲು ಶಿಕ್ಷಣ ಕಡಮೆ [illegible]

[illegible]

ಯಾತಗಿರಿಯಲ್ಲಿ ಸಂಸ್ಕೃತ ಶಿಕ್ಷಣಕ್ಕಾಗಿಯೇ ಶ್ರೀ ಶಂಕರರಾಜೇಂದ್ರ ಸ್ವಾಮಿಗಳವರು [illegible]

ರಂಜೇರಿಯಲ್ಲಿ ಶ್ರೀ ಶಾಂತವೀರಮಹಾಸ್ವಾಮಿಗಳವರ ಅಧ್ಯಕ್ಷತೆಯಲ್ಲಿ [illegible]

ಶ್ರೀಮನ್ನಿರಂಜನ ಶಾಂತವೀರ ಮಹಾಸ್ವಾಮಿಗಳವರಂತೆಯೇ [illegible]

ತೆರಿಷ್ಟ ಶ್ರೀ ಫಕೀರಸ್ವಾಮಿಗಳವರ ರಥೋತ್ಸವ

ಸದರ ಸ್ವಾಮಿಗಳು ಯಾತ್ರಾ ಮಹೋ[redacted] [illegible]

ಜೀವಕ್ಕೆ ಸರಿಯಾಗಿ [illegible] ಸ್ವಾಮಿ ಚಿಟ್ಟಿ ನವುಶಾಸ್ತ್ರರ

ನೋಟೀಸ್

ಶ್ರೀಮನ್ನಿರಂಜನ ಜಗದ್ಗುರು ಮೂರು ಘಟಾಧೀಶ್ವರ ಶ್ರೀ ಬೋರ್ಡಿಂಗ್ ಸಾಮರಿಂಬಡಿ ಧಾರವಾಡ ಈ ಸಂಸ್ಥೆಯಿಂದ

ಕೇವಲ ಬಡವರಾದ ಇಂಗ್ಲೀಷ ಹಾಗು ಸಂಸ್ಕೃತ ಅಭ್ಯಾಸ ಮಾಡತಕ್ಕ ವೀರಶೈವ ವಿದ್ಯಾರ್ಥಿಗಳಿಗೆ ಈ ಮೂಲಕ ತಿಳಿಸುವದೇನಂದರೆ,—

ಈ ವರ್ಷ ಸದರಿ ಬೋರ್ಡಿಂಗಿಗೆ ಹೊಸದಾಗಿ ಸೇರಲಪೇಕ್ಷಿಸುವ ಇಂಗ್ಲೀಷ ಹಾಗು ಸಂಸ್ಕೃತವಿದ್ಯಾರ್ಥಿಗಳನ್ನು ಆರಿಸುವ ಕೆಲಸವು ಸಂಸ್ಥೆಯ ಜನರಲ್ ಕಮಿಟಿಯಲ್ಲಿ ಬರುವ ಜೂನ ತಿಂಗಳ 9 ನೇ ತಾರೀಖಿಗೆ ಜರುಗುವದು ಕಾರಣ ಬೋರ್ಡಿಂಗಿಗೆ ಸೇರಬಿಚ್ಚಿಸುವ ವಿದ್ಯಾರ್ಥಿಗಳು ತಮ್ಮ ಅರ್ಜಿಗಳನ್ನು ತಾ|| 6 6 1929 ರೊಳಗಾಗಿ ಸಂಸ್ಥೆಯ ವಿಳಾಸಕ್ಕೆ ಮುಟ್ಟುವಂತೆ ಕಳಿಸತಕ್ಕದ್ದು. ತಡವಾಗಿ ಬಂದ ಅರ್ಜಿಗಳ ವಿಚಾರವಾಗುವದಿಲ್ಲ. ಹೊಸದಾಗಿ ಕಳಿಸುವ ಅರ್ಜಿಯ ನಮೂನೆಗಳು ಸಂಸ್ಥೆಯಲ್ಲಿ ಛಾಪಿಸಿ ದೊರೆಯುತ್ತವೆ. ಅವನ್ನು ನೀವು ಸಮಕ್ಷಮ ಇಲ್ಲವೆ ಪೋಸ್ಟದ್ವಾರ 1 ಆಣೆ ಟಿಕೇಟ್ಟ್ ಕಳಿಸಿ ತರಿಸಿಕೊಳ್ಳಬಹುದು. ಅರ್ಜಿ ಕಳಿಸತಕ್ಕವರು ಈ ಹೊಸ ನಮೂನೆಯಲ್ಲಿಯೇ ಬರೆದು ಕಳಿಸತಕ್ಕದ್ದು. ಕಾಲೇಜದ ವಿದ್ಯಾರ್ಥಿಗಳಿಗೆ ಮೊದಲು ಸ್ಥಳಗಳನ್ನು ಕೊಟ್ಟು ಉಳಿದ ಸ್ಥಳಗಳನ್ನು ಕೆಳಗಿನ ಕ್ಲಾಸಿನ ವಿದ್ಯಾರ್ಥಿಗಳಿಗೆ ಕೊಡುವುದರಲ್ಲಿ ಬರುತ್ತದೆ. ಈ ಸಂಸ್ಥೆಯಲ್ಲಿ ಈ ಮೊದಲು ಇದ್ದ ವಿದ್ಯಾರ್ಥಿಗಳು ಸಹ ಹೊಸದಾಗಿ ಅರ್ಜಿಗಳನ್ನು ಹೊಸ ನಮೂನೆಗಳಿಂದ ಕಳಿಸತಕ್ಕದ್ದು. ಇದಕ್ಕೆ ತಪ್ಪುವವರಿಗೆ ಈ ವರ್ಷ ಬೋರ್ಡಿಂಗಿನಲ್ಲಿ ಸ್ಥಳ ಕೊಡಲಿಕ್ಕೆ ಸಂಸ್ಥೆಯು ಜವಾಬದಾರಿ ಇರುವುದಿಲ್ಲ ತಿಳಿಯುವದು

ಶಿವಪ್ಪ ಬಟ್ಟ ಸೆಕ್ರೆಟರಿ,

ತಾ|| 9 5 1929 ಧಾರವಾಡ

ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ವಿದ್ಯಾರ್ಥಿನಿಲಯ (ವೀರಶೈವ ಹಾಸ್ಟಲ್) ಅರಸೀಕೆರೆ.

ಅರಸೀಕೆರೆ ಟವನ್ ಮಿಡ್ಲ್ ಸ್ಕೂಲಿನಲ್ಲಿ ಇಂಗ್ಲೀಷ್ ಕನ್ನಡ ವಿದ್ಯಾಭ್ಯಾಸ ಮಾಡತಕ್ಕ ವೀರಶೈವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಅರಸೀಕೆರೆಯಲ್ಲಿರುವ ಹಲಸ್ವಾರ್ ಧರ್ಮಧುರಂಧರ ಸಾಹುಕಾರ ಮಾಯಿಳಸಿದ್ದಪ್ಪನವರು ವೀರಶೈವ ಹಾಸ್ಟಲಿಗೆ ದಾನರೂಪವಾಗಿ ಕೊಟ್ಟಿರುವ ಕಟ್ಟಡಕ್ಕೆ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಹೆಸರನ್ನಿಟ್ಟು ಇದೇ ತಿಂಗಳು ತಾ|| 23 ನೇ ಬುಧವಾರ ಹಾಸನದ ಡಿಸ್ಟ್ರಿಕ್ಟ್ ಡೆಪ್ಯುಟಿಕಮಿಷನ್ ಸಾಹೇಬರವರಾದ ಮ|| ಎಸ್ ಅಬ್ದುಲ್ ವಾಜದ್ ಬಿ ಎ ರವರ ಅಧ್ಯಕ್ಷತೆಯಲ್ಲಿ ಹಾಸ್ಟಲ್ ಕಟ್ಟಡದ ಪ್ರವೇಶೋತ್ಸವವು ನೆರವೇರಿಸಲ್ಪಡುತ್ತದೆ ಆದ್ದರಿಂದ, ಅರಸೀಕೆರೆ ಮಿಡ್ಲ್ ಸ್ಕೂಲಿನಲ್ಲಿ ವ್ಯಾಸಂಗಮಾಡಲು ಅಪೇಕ್ಷಿಸುವ ವೀರಶೈವವಿದ್ಯಾರ್ಥಿಗಳು ತಾ 30 5 29 ರ ಒಳಗಾಗಿ ಅರಸೀಕೆರೆ ಶ್ರೀ ಜಗದ್ಗುರು ಜಯದೇವ ವೀರಶೈವ ಹಾಸ್ಟಲ್ ಪ್ರಸಿಡೆಂಟರಾದ ಅಷ್ಟಂಪುರದ ಶೆಟ್ಟರು ಗುರುಸಿದ್ಧಪ್ಪನವರ ಅಡ್ರೆಸ್ಸಿಗೆ ತಲುಪುವಂತೆ ಅಪ್ಲಿಕೇಷನ್ನುಗಳನ್ನು ಕಳುಹಿಸತಕ್ಕದ್ದು. ಈ ವರ್ಷ ಈ ಹಾಸ್ಟಲಿನಲ್ಲಿ 25 ಮಂದಿ ಬಡವಿದ್ಯಾರ್ಥಿಗಳಿಗೆ ಮಾತ್ರ ಉಚಿತವಾಗಿ ಭೋಜನವನ್ನೂ ವಸತಿಗೂ ಅನುಕೂಲಪಡಿಸಿದೆ. ಅನುಕೂಲಸ್ಥರ ಮಕ್ಕಳು ಈ ಹಾಸ್ಟಲ್ ಕಮಿಟಿಯವರು ನಿಷ್ಕರ್ಷೆ ಮಾಡುವ ಊಟದ ಖರ್ಚನ್ನು ಮಾಹೆಯಾನ ಕೊಡಬೇಕಾಗುತ್ತದೆ. ಈ ವಿದ್ಯಾರ್ಥಿಗಳಿಗೆ ವಾಸಕ್ಕೆ ಮಾತ್ರ ಉಚಿತವಾಗಿ ಸ್ಥಳ ಕೊಡಲ್ಪಡುತ್ತದೆ. ಹಾಲಿ ಇರುವ ಈ ಹಾಸ್ಟಲ್ ಕಟ್ಟಡದಲ್ಲಿ 100 ಮಂದಿ ವಿದ್ಯಾರ್ಥಿಗಳ ವಾಸಕ್ಕಾಗಿ ಅನುಕೂಲಪಡಿಸಿರುತ್ತೆ. ಅಪ್ಲಿಕೇಷನ್ ಕೊಡತಕ್ಕ ವಿದ್ಯಾರ್ಥಿಗಳು ಹಿಂದೆ ತಾವು ವ್ಯಾಸಂಗಮಾಡುತ್ತಿದ್ದ ಸ್ಕೂಲ್ ಹೆಡ್ಮಾಸ್ಟರವರಿಂದಲೂ ಸ್ಥಳದ ದೊಡ್ಡ ಮನುಷ್ಯರುಗಳಿಂದಲೂ ಸರ್ಟಿಫಿಕೇಟುಗಳನ್ನು ಪಡೆದು ಅಪ್ಲಿಕೇಷನ್ನು ಜತೆಯಲ್ಲಿ ಲಗತ್ತು ಕಳುಹಿಸತಕ್ಕದ್ದು. ವಿದ್ಯಾರ್ಥಿಗಳು ಚಿಕ್ಕವಯಸ್ಸಿನವರಾಗಿಯೂ ಪ್ರೈಮರಿ ತರಗತಿಗಳಲ್ಲಿ ತೇರ್ಗಡೆ ಹೊಂದಿ ಇಂಗ್ಲೀಷ್ ಮಿಡ್ಲ್ ಸ್ಕೂಲಿಗೆ ಸೇರಲು ಯೋಗ್ಯರಾಗಿ ಇರುವವರು ಮಾತ್ರ ಸೇರಿಸಲ್ಪಡುತ್ತಾರೆ.

ಅಷ್ಟಂಪುರದ ಶೆಟ್ಟರು ಗುರುಸಿದ್ಧಪ್ಪ

ಪ್ರಸಿಡೆಂಟ್,

ಶ್ರೀ ಜಗದ್ಗುರು ಜಯದೇವ ವೀರಶೈವ ಹಾಸ್ಟಲ್ ಅರಸೀಕೆರೆ

೧೯೨೯ ನೆಯ ಇಸವಿ ಮೇ ತಾ|| ೧೮ ನಿಂದ ೧೯೨೯ ನೆಯ ಇಸವಿ ಮೇ ತಾ|| ೨೪ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೧ ನೆಯ ಶುಕ್ಲನಾಮಸಂವತ್ಸರದ ವೈಶಾಖ ಶುದ್ಧ ದಶಮಿಯಿಂದ ವೈಶಾಖ ಬಹುಳ ಪಾಡ್ಯಮಿ ವರೆಗಿನ ಪಂಚಾಂಗ

ತಾ||	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ವೃಷ ಮಾಸ
18	ಶನಿ	ದಶ	22 10	ಉತ್ತ	48.20	5
19	1 ಭಾನು	ಏಕಾ	20 25	ಹಸ್ತ	48 52	6
20	2 ಸೋಮ	ದ್ವಾದ	19 30	ಚಿತ್ತ	51 8	7
21	3 ಮಂಗಳ	ತ್ರಯೋ	20 00	ಸ್ವಾತಿ	58 50	8
22	ಬುಧ	ಚತು	23 2	ವಿಶಾ	57.33	9
23	4 ಗುರು	ಪೌರ್ಣ	26 5	ಅನೂ	60.0	10
24	5 ಶುಕ್ರ	ಪಾಡ್ಯ	30 13	ಅನೂ	2-50	11

(1) ಸರ್ವೈಕಾದಶಿ (2) ಪ್ರದೋಷ, ಪರಶುರಾಮದ್ವಾದಶಿ (3) ಮಳೆ ನಕ್ಷತ್ರ ಕೃತ್ತಿಕ ೪ ನೆಯ [redacted] ವ್ರತಂ (5) ಎಂಪೈರ್ ಡೆ

ಮೈಸೂರು : ವ್ಯಿ. ವಿರೂಪಾಕ್ಷ[redacted] ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED NO. M. 124

ಮೈಸೂರ್ ಸ್ಟಾರ್

ಪ್ರತಿ ಶನಿವಾರ ಪ್ರಕಟಿಸಲ್ಪಡುವದು.

[illegible] ‖
[illegible] ‖
[illegible] ‖

[ಸ್ಥಳದವರಿಗೆ ವಾರ್ಷಿಕಚಂದಾ ೧-೧೧-೦] [ಮುಸ್ಸಿಲದವರಿಗೆ ೨-೮-೦] [ಕ್ಷೇತ್ರರಿಗೆ ೩-೮-೦]

ಸಂಪುಟ ೪೨] ಮೈಸೂರು ಸ್ಟಾರ್ ಸನ್ ೧೯೨೯ ನೆಯ ಇಸವಿ ಮೇ ತಾರೀಖು ೨೫ ನೆಯ ಶನಿವಾರ [ಸಂಚಿಕೆ ೨೧

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಗಳ, ಮೈಸೂರು.

[50—26]



ಒಂದು ಸಾರಿ ಶಾಯಿ ತುಂಬಿದರೆ ಸಾವಿರಾರು ಶಬ್ದಗಳನ್ನು ಬರೆಯುವ ... ದ 14 ಕ್ಯಾರೆಟ್ ಬಂಗಾರದ ನಿಬ್ ಹಾಕಿದ ... ಆದ ಇದರಿಂದ ... ಫೌಂಟೆನ್ ಪೆನ್ ಹೊಸದಾಗಿ ... ತಯಾರಾಗಿ ... ಆಗಿದೆ

"Lincoln" Self Filling Pen ಲಿಂಕನ್ ಸೆಲ್ಫ್ ಫಿಲಿಂಗ್ ಫೌಂಟೆನ್ ಪೆನ್ 1 ಕ್ಕೆ ಕ್ರಯ 8 15 0

ಮೊಲ್ಯಂಡ ಪೆನ್ ಒಬ್ಬ ಮನುಷ್ಯನ ಜನ್ಮಾವಧಿ ಬಾಳಿಕೆ ಬರತಕ್ಕದ್ದೆಂದು ತಯಾರಿಸಿದವರು ಭರವಸೆ ಹೇಳುತ್ತಾರೆ

ಒಂದು ಪೆನ್ ತರಿಸಿ ನೋಡಿ

ಅಪೇಕ್ಷಿಸುವವರಿಗೆ ಕ್ಯಾಟಲಾಗ್ ಫ್ರೀಯಾಗಿ ರವಾನಿಸಲಾಗುತ್ತೆ

ವಿಳಾಸ— ಎಂ ಎಸ್ ಶಿದ್ದಪ್ಪ ಅಂಡ್ ಬ್ರದರ್ಸ್,

ಹಾರ್ಮೋನಿಯಂ ವ್ಯಾಪಾರಗಳು, ಮೈಸೂರು.

೧೦೦೦ ರೂಪಾಯಿ ಇನಾಮು

ಮಿರಜಿಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್. ಕಾವಸೆ, ಇವರ

ಅಲ್ಪವಯಸ್ಸಿನಲ್ಲಿ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ (ಸ್ಟಾರ್ ರಿಜ) ವಜ್ರಾಂಗ ಸುಂದರಪಾಕ.

ಧೀಕರಿಸಿದರೆ ಕ್ಷೀಣತೆ ಕಾಯ್ದು ಕೊಳ್ಳುವಿರಿ

ಈ ಪಾಕಸೇವನೆಯಿಂದ ಎಲ್ಲ ಧಾತುಜನ್ಯ ವಿಕಾರಗಳು, ಧಾತುಕ್ಷೀಣತೆ ... ಇಂದ್ರಿಯ ಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥೆ ... ಧಾತುಹೋಗುವದು, ... ವೀರ್ಯ ... ಜೀರ್ಣಜ್ವರ, ... ರಸಾಯನ ಸೇವನೆಯಿಂದಾದ ದುಷ್ಟವಿಕಾರಗಳು ... [illegible]

[60—69] ಪತ್ತೆ:—ಮಾಲಕ ವೈದ್ಯ ವ್ಹಿ. ಎಸ್ ಕಾವಸೆ ಮು|| ಪೋ|| ಮಿರಜಿ.

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ.	(ವಿ ಪಿ ಸೇರಿ)		ಕ್ರಯ	(ವಿ ಪಿ ಸೇರಿ)
ವ್ರತಪಂಚಕ	೦—೪—೦	೦—೬—೪	ವೀರಶೈವ ಶಿವಪೂಜಾವಿಧಿ	೦ ೧೨ ೦	೧—೨ ೦
ಗುರುಕಂಠಶೀಕ್ಷ್ಯಕ	೦—೧—೦	೦—೩—೦	ಸಟೀಕ ವೀರಶೈವ ವಿವಾಹವಿಧಿ	೦ ೮ ೦	೦ ೧೩—೧
ಬಸವೇಶ್ವರವಚನ	೦—೮—೦	೦—೧೩—೧	ಷಟ್ಸ್ಥಲವಚನ	೦ ೪ ೦	೦—೬—೦
ಸಟೀಕ ಕರಸ್ಥಲವಚನ ಮಂಜರಿ	೦—೨—೦	೦—೧೩ ೦	ಪಾರ್ವತೀಪರಿಣಯ	೦ ೫ ೦	೦—೧೦ ೦
ಸಟೀಕ ಶತಕತ್ರಯ	೧—೨—೦	೧—೬ ೦	ಶಿವರಾತ್ರಿ	೦—೪—೦	೦ ೬—೦

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಸ್ಥಳದವರಿಗೆ ರೂ. ೨-೮-೦ ; [redacted] ಸೊಸೈಟಿ ಮೊದ ಲಾದ ಸಂಸ್ಥೆಗಳಿ [redacted] ೩-೮-೦ ; ವಿ.ಪಿ. ಮೂಲಕವಾದರೆ [redacted] ಬೀಳುತ್ತದೆ. ಪತಿ ಚಂದಾದಾರರು [redacted] ಮಾಗ್ಯ ಕವರ

ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆ [redacted] ವಿಳಾಸದ ಪಕ್ಕ ದಲ್ಲಿರುವ ನಂ [redacted] ಬೇಕಾದ್ದು ಹಾಗೆ ಬರೆಯದೆ ಒಂ [redacted] ದಾರರುಗಳಿಗೆ ತಿಳಿಸಿಕೊಟ್ಟ [redacted] ಮ್ಯಾನೇಜರ್

ವೀರಶೈವಮತಗ್ರಂಥಗಳು.

ಶಿವಾಧಿಕ್ಯಶಿಖಾಮಣಿಃ.

ಪ್ರತಿ ೧ ಕ್ಕೆ ಬೆಲೆ ೧-೦-೦

ಇದು ಚೋಳದೇಶದಲ್ಲಿ ಶ್ರೀಮದ್ರೇಣುಕಾಚಾರ್ಯರಿಗೂ, ವೈಷ್ಣವ ಮತಸ್ಥನಾದ ವಿಜಯೀಂದ್ರತೀರ್ಥರಿಗೂ ನಡೆದ ಪ್ರಶ್ನೋತ್ತರರೂಪವಾಗಿದೆ. ಇದರಲ್ಲಿ ಶಿವೋತ್ಕರ್ಷ, ಲಿಂಗಧಾರಣ ಆವ್ಹಾನದಣ, ಊರ್ಧ್ವಪುಂಡ್ರನಿರ ಸನ ವಿಷ್ಣುವತಾರಸಂಹಾರ, ಶಂಖ ಚಕ್ರ ಮುದ್ರಾಧಾರಣ ನಿಷೇಧ, ಪ್ರದೋಷಕಾಲದಲ್ಲಿ ವಿಷ್ಣುದರ್ಶನನಿಷೇಧ ಮೊದಲಾದ ಅಸಾಧಾರಣ ಗಳಾದ ನೂರು ವಿಷಯಗಳು ಸಪ್ರಮಾಣವಾಗಿ ಬೋಧಿಸಲ್ಪಟ್ಟಿವೆ. ಇದನ್ನು ವೀರಶೈವರು ಅವಶ್ಯವಾಗಿ ನೋಡತಕ್ಕದ್ದಾಗಿದೆ

ನ್ಯಾಯಶತಕಂ—ಇದರ ಪ್ರತಿಯೊಂದು ಶ್ಲೋಕದಲ್ಲೂ ಕಾಕಾಕ್ಷಿಗೋಲಕ ಕಾಕತಾಳ ಮೊದಲಾದ ಒಂದೊಂದು ನ್ಯಾಯವನ್ನು ಘಟಿಸಿ, ವಿದ್ವಜ್ಜನರಿಗೆ ಆನಂದವನ್ನುಂಟುಮಾಡುವಂತೆ ಶಿವಾಧಿಕ್ಯವ ವರ್ಣಿಸಲ್ಪಟ್ಟಿದೆ. ಪಾರಾಯಣಕ್ಕೆ ಅತ್ಯುತ್ತಮವಾಗಿದೆ. ಬೆಲೆ ೦ ೨-೦.

ವಿ ಪಿ. ಖರ್ಚು ಪ್ರತ್ಯೇಕ

ಶ್ರೀ ಸೋಮಶೇಖರಸ್ವಾಮಿಗಳು,

ಸಮಷ್ಟಿವಾಯಮಠ,

[12—6] ಬಸಪ್ಪಾಜಿ ಗಾರ್ಡನ್, ಮೈಸೂರು.

"ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತರ" ಆಯುರ್ವೇದೀಯ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರೀ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿದಿನವೂ ಶಾಂಬೂಲದೊ ಡನೆಯಾಗಲಿ, ಹಾಗೆಯಾಗಲೀ ಉಪಯೋಗಿಸುತ್ತಿದ್ದರೆ ಆಹಾರ, ನೀರು ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳ ಮೊದಲು ಎಲ್ಲಾ ವಯಸ್ಸಿನವರಿಗೂ, ಶೀತ, ನೆಗಡಿ, ಕೆಮ್ಮು, ಜ್ವರ, ಶೀತವಾತಜ್ವರ, ಬಳಲ್ಪರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ

300 ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣೆ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ, ನಮ್ಮ ವಿಳಾಸವನ್ನೂ, ಲೋಕಾಮಯಹರ ಕಸ್ತೂರೀ ಮಾತ್ರೆ ಎಂಬ ಹೆಸರನ್ನೂ ನೋಡಿ ಕೊಂಡುಕೊಳ್ಳಿರಿ.

ವೈಶ್ವಾನರಾಸವ

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ.)

ಮುಖ್ಯವು ಕೆಟ್ಟುಹೋದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ, ವಾಂತಿ ಆದ ಕೂಡಲೆ ಮೊದಲನೇವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1ಕ್ಕೆ ರೂ. 1—0—0.

ಲಕ್ಷ್ಮೀವಿಲಾಸರಸ.

(ಪ್ಲೇಗಿಗೆ;

ಹತ್ತಾರು ವರ್ಷಗಳಿಂದ ಪ್ರತಿವರ್ಷವೂ ಸಾವಿರಾರು ಪ್ಲೇಗು ರೋಗಿ ಗಳಿಗೆ ರೋಗವನ್ನು ನಿಂಬಾವುದಾಗಿ ಗುಣಪಡಿಸಿರುತ್ತದೆ ಪ್ಲೇಗಿಗೆ ಮಾತ್ರ ವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿಪಾತಜ್ವರಗಳಿಗೂ ಅಮೃತವಾಗಿರು ತ್ತದೆ ಸೀಸೆಯ ಬೆಲೆ 1ಕ್ಕೆ ರೂ. 1—0—0

ಶ್ರೀನಿವಾಸಕ್ಕೈಲ.

ಪ್ಲೇಗು ರೋಗಿಯ ಪ್ರತಿ ಸಂದುಗಳಿಗೂ, ಬೆನ್ನಿಗೂ ಹಚ್ಚುವ ಔಷಧ. ಸೀಸೆ 1ಕ್ಕೆ ರೂ 0—8—0.

[redacted] ಭಿಷಗ್ರತ್ನ ಶ್ರೀ ಸೀತಾಪಾಕ್ಷ [redacted] ಕಟಾಚಲಪಂಡಿತರ ಬ್ರಾ [redacted] ಯಾಶಾಲೆವೈದ್ಯ ಶಾಲಾ, ಚಿಕ್ಕಪೇಟೆ, [redacted] ಹೀಸು ಮೈಸೂರು,

Office of the President,
City Municipal Council, Mysore
Dated 15th May 1929

MEMO

Instances have come to notice where motor car owners have been exposed to annoyance at the toll gates for want of production of the passes, though their cars have been duly registered. To avoid chances to the public of being unnecessarily harassed at the toll gates, it is hereby ordered that a list of cars and buses registered in this Municipality shall be hung up at every toll gate for purposes of reference. In case passes are not produced, the toll gate contractor should allow the car owners to pass the gate if their car numbers are in the above list

Y. RAMASWAMI,
President

ಮೈಸೂರು ಸ್ಟಾರ್

೧೯೨೯ ನೆಯ ಇಸವಿ ಮೇ ತಾ|| ೨೭ ನೆಯ ಸೋಮವಾರ

COMMUNALISM IN SERVICES STILL GROWING STRONG

At the rate at which appointments and promotions are made in spite of all the clamour by non Brahmans in spite of all the Government orders, in spite of all the indisputable claims of the backward classes and in spite of all visible and invisible danger of the preponderance or monopoly of any one community there seems to be little hope for the masses of Mysore to participate in the administration of the State to any effective extent for many many years to come We are indebted to the *Bangalore Times* for giving us a few figures which speak for themselves Out of 1063 appointments in the lower cadres in the different offices in the headquarters the Brahmans hold 679 and the non Brahmans 384 In the higher grades carrying a salary up to Rs 250 there are 419 Brahmans and 124 non brahmans In appointments carrying a salary ranging from Rs 250 to Rs 500 there are 230 Brahmans and 54 non Brahmans In those ranging between Rs. 500 and Rs. 800 there are 77 Brahmans and 12 non brahmans only. There are only 1 non brahmans and 22 Brahmans in places carrying a salary between Rs. 800 and Rs. 1200 In appointments above Rs 1200 there are 2 non Brahmans and 10 Brahmans This is indeed a serious not to say alarming situation That a community which does not form even 4 per cent of the total population should predominate in the administration to so powerful an extent to the exclusion of the other 96 per cent is surely a piece of the grossest injustice to the latter who are mostly the people who fill in the coffers of the State The matter cannot simply be brushed aside by a statement that other people would not qualify themselves adequatey For one thing, the facilities for qualifying themselves were not many in the past. For another, which is more important, even the few who had qualifications used to be offerred only clerksnips. Those times luckily have changed, thanks to the progressive policy adopted during the last 10 years. But things evidently have not improved any where to the extent justice and the needs of the situation demand. The soft corner for the candidates of the priestly community which has been holding the monopoly is yet there in much the same pronounced manner as in the good old days. If there are two fresh appointments to be made, it does not matter how many non-Brahman candidates apply and to what different castes they belong *one of the two is invariably reserved for a* Brahman candidate. If there are three fresh appointments it is the same case, for, in spite of many fully qualified non-Brahman candidates one at least is reserved for a Brahmin. If it is four or if it is eight it is all the same, a seat or two [redacted] ys reserved for the Brahmans. [redacted] ay probationary, Police pro[redacted] probationary or for a matter [redacted] probationary, or any fresh appointments the reservation for the Brahman is there. But where is there such a reservation for the numerous, the unrepresented and under-represented non-Brahman communities. The curious thing is that these appointments never come singly, because the cause for complaint from the non-Brahmans would be less if along with non-Brahman a non-Brahman also is provided. Where is the immediate chance for the non-Brahman masses to make up the lost position when there is this constant factor always present in all appointments. Our own diognosis of the case is that the different non-Brahman communities do not cry sufficiently loud and do not express sufficient resentment when disappointed and express it in an effective manner. Whereas our Brahman friends while they are snatching away the majority of appointments have never stopped their cry that they have no place in service. If we take the promotions it reveals no better tale. In the subordinate ranks the non-Brahman officials suffer many a hardship which hardly gain the notice of official superiors. Then again in the matter of promotions to the amildary the bulk of them go to Brahmans. We do not know who prepares the list of eligible officials for the Amildary, but the appointments however, do not indicate that there is any sense of real justice behind such appointments It is not very different in other departments. While some of the Brahman B Es get appointed as sub Engineers the non-Brahman B Es get only Overseerships. If one goes higher, the prize appointments very often go to this favoured class Take for instance the appointment of the Deputy Registrar of Co-operative Societies. There are very many efficient non Brahman officers senior in rank who, if anything would have done greater justice to the place but it has been given to one much junior the ex Private Secretary of the Dewan. What sin had the senior non Brahman Assistant Commissioners *committed that none of them should have been* thought of for this important post? Need we say anything about the new Secretary to the Stores Purchase Committee which carries a decent allowance Was there no other senior non Brahman officer fit for the job or is it that the present officer has specialised in business or mercantile methods? We could very well understand supercessions in order to bring up a less favoured and less fortunate class. But for our life we cannot understand putting back the already backward classes. The *Justice* of Madras in reviewing the position of non-Brahmans in Mysore Service states "It is the task of fairmindedness as well as of statesmanship to recognise the reality of the situation and find out ways and means to break the monopoly that has overgrown around the administration of the State and render justice to the depressed and down trodden communities Very are they depressed at such a state of affairs We would wish that the non Brahmans should demand a fresh enquiry into this inequality and injustice and secure for the backward classes some effective chance of gaining a decent place in the administration in the near future for we are convinced that at the present rate even a century will not suffice for the people to come to their own

ಸರ್ಕಾರಿಯುದ್ಯೋಗದಲ್ಲಿ ಒಂದೇ ವರ್ಗದ ಪ್ರಾಬಲ್ಯವು ಹೆಚ್ಚುತ್ತಲೇ ಇದೆ

ಸರ್ಕಾರಿಯುದ್ಯೋಗವನ್ನು ಒಂದೇ ವರ್ಗದವರು ಗುತ್ತಿಗೆ ಹಿಡಿದು ಅನುಭವಿಸುತ್ತಲಿರುವುದರಿಂದ ಪ್ರತ್ಯಕ್ಷವಾಗಿ ಅಪ್ರತ್ಯಕ್ಷವಾಗಿ ಉಂಟಾಗಿರುವ ಕೆಡಕನ್ನು ಹಿಂದುಳಿದ ವರ್ಗದವರು ಪ್ರಭುತ್ವದವರ ಗಮನಕ್ಕೆ ತಂದು ಈ ಕ್ರಮವನ್ನು ತಪ್ಪಿಸಬೇಕೆಂದು ಮೊರೆಯಿಟ್ಟುದರ ಮೇಲೆ ಎಲ್ಲ ವರ್ಗದವರ ಪ್ರಾತಿನಿಧ್ಯವು ಅವರ ಜನಸಂಖ್ಯಾನುಗುಣವಾಗಿರಬೇಕೆಂಬ ಬಗೆಗೆ ಸರ್ಕಾರಿಯಾಜ್ಞೆಯಾಗಿದ್ದರೂ ಒಂದೇ ವರ್ಗದವರಿಗೆ ಹೊಸದಾಗಿ ಕೆಲಸಗಳು ಕೊಡಲ್ಪಡುತ್ತಿರುವುದನ್ನೂ ಅವರ ಉದ್ಯೋಗವು ಅಭಿವೃದ್ಧಿಗೊಳಿಸಲ್ಪಡುತ್ತಿರುವುದನ್ನೂ ನೋಡಿದರೆ ಮೈಸೂರಿನ ಹಿಂದುಳಿದ ವರ್ಗದವರಿಗೆ ನಮ್ಮ ಪ್ರಭುತ್ವದಲ್ಲಿ ಸಾಕಾದಷ್ಟು ಉದ್ಯೋಗಗಳು ಅನೇಕ ವರ್ಷಗಳವರೆಗೆ ದೊರಕುವ ಸಂಭವವೇ ಇಲ್ಲವೆಂದು ತೋರುತ್ತದೆ ಸರ್ಕಾರಿಯುದ್ಯೋಗಗಳಲ್ಲಿ ಯಾವ್ಯಾವ ವರ್ಗದವರೆಷ್ಟೆಷ್ಟು ಜನರಿರುವರೆಂಬುದರ ಲೆಖ್ಖ [redacted] ದಕ್ಕಾಗಿ ಬೆಂಗಳೂರು ಟೈಂಸ್ ಎಂಬ [redacted] ವಂದಿಸುತ್ತೇವೆ ಹೆಡ್‌ಕ್ವಾರ್ಟರು[redacted] ಫೀಸುಗಳ ಕೆಳ ದರ್ಜೆಯ ಉದ್ಯೋ[redacted] ಬ್ರಾಹ್ಮಣರೂ ೩೮೪ ಹಿಂದುಳಿದವರೂ ಇರುತ್ತಾರೆ ೨೫೦ ರೂ ಸಂಬಳದವರೆಗಿನ ಉದ್ಯೋಗಗಳಲ್ಲಿ ೪೧೯ ಬ್ರಾಹ್ಮಣರೂ ೧೨೪ ಹಿಂದುಳಿದವರೂ ಇರುತ್ತಾರೆ ೨೫೦ ರಿಂದ ೫೦೦ ರೂ ವರೆಗಿನ ಸಂಬಳದ ಉದ್ಯೋಗಗಳಲ್ಲಿ ೨೩೦ ಬ್ರಾಹ್ಮಣರೂ ೫೪ ಹಿಂದುಳಿದವರೂ, ೫೦೦ ರಿಂದ ೮೦೦ ರೂ. ವರೆಗಿನ ಸಂಬಳದ ಉದ್ಯೋಗಗಳಲ್ಲಿ ೭೭ ಬ್ರಾಹ್ಮಣರೂ, ೧೨ ಹಿಂದುಳಿದವರೂ, ೮೦೦ ರಿಂದ ೧೨೦೦ ರೂ. ವರೆಗಿನ ಸಂಬಳದ ಉದ್ಯೋಗಗಳಲ್ಲಿ ೨೨ ಬ್ರಾಹ್ಮಣರೂ ೧ ಹಿಂದುಳಿದವರೂ, ೧೨೦೦ ರೂ ಗೆ ಮೇಲ್ಪಟ್ಟ ಸಂಬಳದ ಉದ್ಯೋಗಗಳಲ್ಲಿ ಇಬ್ಬರು ಹಿಂದುಳಿದವರೂ, ೧೦ ಜನ ಬ್ರಾಹ್ಮಣರೂ ಇರುತ್ತಾರೆ ಈ ಪರಿಸ್ಥಿತಿಯು ಖಂಡಿತವಾಗಿ ಅತ್ಯಂತ ಹೃದಯದ್ರಾವಕವಾಗಿದೆ ಸಂಸ್ಥಾನದ ಒಟ್ಟು ಪ್ರಜಾಸಂಖ್ಯೆಯಲ್ಲಿ ಶೇಕಡ ೪ ಭಾಗವು ಸಹ ಇಲ್ಲದಿರುವ ವರ್ಗವು ಶೇಕಡ ೯೬ ರಷ್ಟಿರುವ ಹಿಂದುಳಿದ ವರ್ಗದವರನ್ನು ಸರ್ಕಾರಿಯುದ್ಯೋಗದಲ್ಲಿ ಸೇರಗೊಡದೆ ತಾವೇ ಪ್ರಬಲರಾಗಿರುವುದು ಸಂಸ್ಥಾನದ ಉತ್ಪನ್ನವನ್ನೆಲ್ಲಾ ತಮ್ಮ ಬೊಕ್ಕಸಕ್ಕೆ ತುಂಬುತ್ತಿರುವವರ ಪರಮಾನ್ಯಾಯಕ್ಕೊಳ್ಳವಾಗಿದೆ ಇದಕ್ಕೆ ಇತರ ವರ್ಗದವರಿಗೆ ಸಾಕಾದಷ್ಟು ಅರ್ಹತೆಯಿಲ್ಲವೆಂದು ಹೇಳಿ ಕೈಯೊದರಿಬಿಟ್ಟರೆ ಸಾಲದು ಪೂರ್ವದಲ್ಲಿ ಹಿಂದುಳಿದ ವರ್ಗದವರು ಅಂತಹ ಯೋಗ್ಯತೆಯನ್ನು ಸಂಪಾದಿಸಲು ಅವರಿಗೆ ತಕ್ಕ ಅನುಕೂಲ್ಯಗಳಿರಲಿಲ್ಲ ಒಂದು ವೇಳೆ ಯೋಗ್ಯತೆಯುಳ್ಳವರಾಗಿದ್ದರೂ ಕ್ಲಾರ್ಕುಗಳ ಉದ್ಯೋಗದ ವಿನಾ ಹೆಚ್ಚಿನ ಉದ್ಯೋಗವು ದೊರಕುತ್ತಿರಲಿಲ್ಲ. ಆದರೆ ದೈವಾನುಗ್ರಹದಿಂದ ಆ ತರಹ ಅರಿಷ್ಟಕಾಲವೆಲ್ಲ ತೊಲಗಿ ಕಳೆದ ೧೦ ವರ್ಷಗಳಿಂದಲೂ ಅಭ್ಯುದಯ ಕಾಲವು ಪ್ರಾಪ್ತವಾಗಿರುವುದಕ್ಕಾಗಿ ನಾವು ಆ ಪರಮಾತ್ಮನಿಗೆ ಕೃತಜ್ಞರಾಗಿರುತ್ತೇವೆ ಆದರೂ ನ್ಯಾಯವಾಗಿ ಆಗಬೇಕಾದಷ್ಟು ವಸ್ತುಸ್ಥಿತಿಯು ಸುಧಾರಿಸಿಲ್ಲವು ಸರ್ಕಾರಿಯುದ್ಯೋಗವನ್ನು ಗುತ್ತಿಗೆ ಹಿಡಿದಿರುವ ಮತ್ತು ಶ್ರೇಷ್ಠರೆಂದು ಹೇಳಿಕೊಳ್ಳುವ ವರ್ಗದ ಅಭ್ಯರ್ಥಿಗಳಿಗೆ ಪೂರ್ವಕಾಲದಂತೆಯೇ ಉದ್ಯೋಗಸ್ಥಾನಗಳು ಈಗಲೂ ಬಹಳ ಸುಲಭಸಾಧ್ಯವಾಗಿವೆ ಎರಡು ಉದ್ಯೋಗಸ್ಥಾನಗಳು ಹೊಸದಾಗಿ ಕಲ್ಪಿಸಲ್ಪಟ್ಟಲ್ಲಿ ಅವುಗಳನ್ನು ಪಡೆಯಲು ಹಿಂದುಳಿದ ವರ್ಗಕ್ಕೆ ಸೇರಿದ ಬೇರೆ ಬೇರೆ ಪಂಗಡದವರು ಅನೇಕ ಜನರು ಅಭ್ಯರ್ಥಿಗಳಾಗಿದ್ದರೂ ಆ ಎರಡು ಉದ್ಯೋಗಸ್ಥಾನಗಳಲ್ಲಿನ ಒಂದು ಬ್ರಾಹ್ಮಣಾಭ್ಯರ್ಥಿಗೆ ಕಾದಿಡಲ್ಪಡುವುದು ಒಂದು ವೇಳೆ ೩ ಅದ... ಉದ್ಯೋಗಸ್ಥಾನಗಳಿದ್ದರೆ ಅವುಗಳಲ್ಲಿ ಒಂದೆರಡಕ್ಕಿಂತ ಹೆಚ್ಚು ಸ್ಥಾನಗಳು ಬ್ರಾಹ್ಮಣಾಭ್ಯರ್ಥಿಗಳಿಗೆ ಸಿದ್ಧವಾಗಿಯೇ ಇರುವುವು ಟೈಪಿಸ್ಟ್ ಪ್ರಬೇಷನರಿಗಾಗಲಿ, ಪೋಲೀಸ್ ಪ್ರಬೇಷನರಿಗಾಗಲಿ, ರೆವಿನ್ಯೂ ಪ್ರಬೇಷನರಿಗಾಗಲಿ ಮತ್ಯಾವ ಹೊಸ ಉದ್ಯೋಗಕ್ಕಾಗಲಿ ಕೆಲ ಸ್ಥಾನಗಳು ಬ್ರಾಹ್ಮಣರಿಗೆ ಮೀಸಲಾಗಿಯೇ ಇರುತ್ತವೆ ಆದರೆ ಬಹು ಸಂಖ್ಯಾಕರಾದ, ಉದ್ಯೋಗಗಳಲ್ಲಿ ಪ್ರಾತಿನಿಧ್ಯವಿಲ್ಲದ ಒಂದು ವೇಳೆ ಇದ್ದರೂ ತಕ್ಕಷ್ಟಿಲ್ಲದ ಹಿಂದುಳಿದ ವರ್ಗದವರಿಗೆ ಯಾವ ಉದ್ಯೋಗಸ್ಥಾನವೂ ಕಾದಿಡಲ್ಪಡುವುದಿಲ್ಲ ಇಂತಹ ಉದ್ಯೋಗವು ಒಬ್ಬೊಬ್ಬನಿಗೇ ಕೊಡಲ್ಪಡದೆ ಒಬ್ಬ ಬ್ರಾಹ್ಮಣನ ಜತೆಗೆ ಒಬ್ಬ ಹಿಂದುಳಿದವನಿಗೆ ಕೊಡಲ್ಪಡುವುದರಿಂದ ಹಿಂದುಳಿದವರ ದೂರು ಅಷ್ಟು ಹೆಚ್ಚಾಗಿರುವುದಿಲ್ಲ ಈ ವಿಧವಾದ ಉದ್ಯೋಗ ವಿನಿಯೋಗದಿಂದ ಹಿಂದುಳಿದ ವರ್ಗದವರು ತಮಗೆ ಸಲ್ಲಬೇಕಾದಷ್ಟು ಸ್ಥಾನಗಳನ್ನು ಹೊಂದಲು ಅವಕಾಶವೇ ಇಲ್ಲವಾಗಿದೆ ಇದಕ್ಕೆ ನಮ್ಮ ಹಿಂದುಳಿದ ವರ್ಗದವರ ಪಕ್ಷಪಾತದಿಂದ ಉದ್ಯೋಗಗಳು ದೊರಕದೆ ತಮಗುಂಟಾಗುವ ಮನೋವ್ಯಥೆಯನ್ನು ಪ್ರಬಲವಾಗಿ ಬಹಿರಂಗಪಡಿಸದೆ ಮನಸ್ಸಿನಲ್ಲೇ ಸಂಕಟಪಡುತ್ತಿರುವುದೇ ಕಾರಣವೆಂದು ನಮಗೆ ತೋರುತ್ತದೆ ಆದರೆ ನಮ್ಮ ಬ್ರಾಹ್ಮಣ ಮಿತ್ರರು ಉದ್ಯೋಗಸ್ಥಾನಗಳಲ್ಲಿ ಬಹು ಭಾಗವನ್ನೆಲ್ಲಾ ತಾವೇ ಕಸುಕೊಳ್ಳುತ್ತಿದ್ದರೂ ಸರ್ಕಾರಿಯುದ್ಯೋಗವೆಲ್ಲಾ ಇತರರ ಪಾಲಾಯಿತೆಂದು ಬೊಬ್ಬೆ ಇಡುವುದು ಮಾತ್ರ ತಪ್ಪಿಲ್ಲ ಉದ್ಯೋಗಾಭಿವೃದ್ಧಿ ವಿಚಾರವಾದರೂ ಇದೇ ಪಾಡಾಗಿದೆ ಕೆಳ ದರ್ಜೆಯ ಉದ್ಯೋಗಗಳಲ್ಲಿರುವ ಹಿಂದುಳಿದವರು ಅನುಭವಿಸುತ್ತಿರುವ ಕಿರುಕುಳವು ಮೇಲ್ಪಟ್ಟ ಅಧಿಕಾರಿಗಳ ಗಮನಕ್ಕೆ ಬರುವುದೇ ಇಲ್ಲ ಅಮಲ್ದಾರಿ ಉದ್ಯೋಗಸ್ಥಾನಗಳಲ್ಲಿ ಬಹು ಭಾಗವು ಬ್ರಾಹ್ಮಣರ ಪಾಲೇ ಆಗುವುದರಿಂದ ಹಿಂದುಳಿದ ಉದ್ಯೋಗಿಗಳು ಆಸ್ಥಾನಗಳಿಗೇರುವ ಸಂಭವವೇ ಇಲ್ಲ. ಅಮಲ್ದಾರಿ ಉದ್ಯೋಗಕ್ಕೆ ಅರ್ಹರಾದವರ ಹೆಸರುಗಳ ಪಟ್ಟಿಯನ್ನು ಯಾರು ಸಿದ್ಧಪಡಿಸುವರೋ ಗೊತ್ತಿಲ್ಲವಾದರೂ, ಆ ಉದ್ಯೋಗಗಳ ವಿನಿಯೋಗದಲ್ಲಿ ಮಾತ್ರ ನ್ಯಾಯವಾಗಲಿ, ನಿಷ್ಪಕ್ಷಪಾತವಾಗಲಿ ಇರುವುದು ಕಂಡುಬರುವುದಿಲ್ಲ ಇತರ ಶಾಖೆಗಳ ಉದ್ಯೋಗ ವಿನಿಯೋಗವೂ ಇದಕ್ಕೆ ಹೊರತಾಗಿಲ್ಲ ಬಿ. ಇ. ಎಸ್. ಪರೀಕ್ಷೆಯಲ್ಲುತ್ತೀರ್ಣರಾಗಿರುವ ಕೆಲ ಬ್ರಾಹ್ಮಣರಿಗೆ ಸಬ್ ಇಂಜಿನೀಯರುದ್ಯೋಗವೂ, ಅದೇ ಪರೀಕ್ಷೆಯಲ್ಲುತ್ತೀರ್ಣರಾಗಿರುವ ಹಿಂದುಳಿದವರಿಗೆ ಓವರ್‌ಸೀಯರುದ್ಯೋಗವೂ ದೊರಕುವುದು ತಾರತಮ್ಯವನ್ನು ಬ್ರಾಹ್ಮಣಾಧಿಕಾರಿಗಳೇ ಹೇಳಬೇಕಾಗಿದೆ, ಸಾಮಾನ್ಯವಾಗಿ ದೊಡ್ಡ ಅಧಿಕಾರಗಳೆಲ್ಲ ಈ ಜನರ ಪಾಲೇ ಆಗುತ್ತಿವೆ ಇದಕ್ಕೆ ಪರಸ್ಪರ ಸಹಕಾರ ಸಂಘಗಳ ಡೆಪ್ಯುಟಿ ರಿಜಿಸ್ಟ್ರಾರ ಉದ್ಯೋಗಸ್ಥಾನವೇ ಒಳ್ಳೇ ನಿದರ್ಶನವಾಗಿರುತ್ತದೆ ಸಮರ್ಥರಾಗಿಯೂ, ಮೇಲು ದರ್ಜೆ ಅಂದರೆ ಸೀನಿಯರರಾಗಿಯೂ ಇರುವ ಹಿಂದುಳಿದ ವರ್ಗದ ಅಧಿಕಾರಿಗಳನೇಕರಿದ್ದರೂ ದಿವಾನರ [redacted] ವೇಟ್ ಸೆಕ್ರೆಟರಿಯಾಗಿದ್ದ ಬಹಳ ಕೆಳಗಿರು[redacted] ಆಗಿರುವ ಮ|| ಎಂ ಎಸ್. ರಾ[redacted] ಡೆಪ್ಯುಟಿ ರಿಜಿಸ್ಟ್ರಾರ್ ಕೆಲಸವು ಕೊಡಲ್ಪ[redacted] ಅಧಿಕಾರಿಗಳು ಅವರಿಗಿಂತಲೂ

... ದೊಡ್ಡ ಉದ್ಯೋಗಗಳನ್ನು ತೊರೆದವರು ಇವರು ಮಾಡಿದ ... ? ಕೈತುಂಬ ಸಂಬಳ ಒದುವ ಸ್ಟೋರ್ ... ಟೇರು ಸೆಕ್ರೆಟರಿಯುದ್ಯೋಗ ವಿಚಾರವನ್ನು ಮಾತ್ರ ಹೇ... ಳಾಗಿಯೇ ಇಲ್ಲ. ಈ ಉದ್ಯೋಗಕ್ಕೆ ತಕ್ಕವರಾರೂ ಬ್ರಾಹ್ಮಣೇತರ ಅಧಿಕಾರಿಗಳಲ್ಲಿ ದೊರಕಲಿಲ್ಲವೋ ಈಗ ನಿಯಮಿಸಲ್ಪಟ್ಟವರಿಗೆ ವಾಣಿಜ್ಯವಿಚಾರದಲ್ಲಿ ವಿಶೇಷ ತಿಳುವಳಿಕೆ ಇರುವುದೂ ... ತ್ತಾಗಲಿಲ್ಲ. ಅಭಿಮಾನಶಾಲಿಗಳಿಲ್ಲದೆಯೂ, ಅದೃಷ್ಟವಿಲ್ಲದೆ ... ಇರುವವರನ್ನು ಮುಂದುವರಿಸಲು ಈ ರೀತಿ ಮೇಳೈಸುವುದನ್ನು ಕಂಡಿರುವೆವು. ಆದರೆ ಹಿಂದುಳಿದವರನ್ನು ಇನ್ನೂ ಹಿಂದೂ... ವುದರ ರೀತಿನೀತಿಯನ್ನು ನಮ್ಮ ಪುರುಷಾವಧಿಯಲ್ಲಿ ಆ... ವು. ನಮ್ಮ ಸರ್ಕಾರಿಯುದ್ಯೋಗಗಳಲ್ಲಿರುವ ಹಿಂದುಳಿದವರ ...ಯನ್ನು ಕುರಿತು ಮದರಾಸಿನ ಜಸ್ಟಿಸ್ ಆಂಗ್ಲ ದಿನಪತ್ರಿಕೆ ... ವಿಮರ್ಶಿಸುವಾಗ್ಗೆ "ಸಂಸ್ಥಾನದ ಉದ್ಯೋಗಗಳನ್ನು ಗು...ಗೆ ಹಿಡಿದಿರುವವರ ಪ್ರಾಬಲ್ಯವು ಮಿತಿಮೀರಿರುವುದರಿಂದ ಅ...ನ್ನು ಅಣಗಿಸಿ ವಿಪನ್ನರಾದ ಮತ್ತು ಅಧೋಗತಾಗಳಿಗೆ ...ಯಲ್ಪಟ್ಟಿರುವ ವರ್ಗಗಳನ್ನು ಮೇಲಕ್ಕೆತ್ತಲು ತಕ್ಕ ...ಮಗಳನ್ನು ಕಂಡು ಹಿಡಿಯುವುದು ನಿಷ್ಪಕ್ಷಪಾತಿಯಾದ ...ವೊಬ್ಬ ದೇಶಾಭಿಮಾನಿಯ ಆದ್ಯಕರ್ತವ್ಯವಾಗಿದೆ ...ದು ಹೇಳಿರುತ್ತದೆ. ಹಿಂದುಳಿದವರು ಈಗಿನ ಪರಿಸ್ಥಿತಿಯಲ್ಲಿ ...ನ್ನರಾಗಿರುವುದರಲ್ಲಿ ಸಂದೇಹವಿಲ್ಲ. ನಮ್ಮ ಹಿಂದುಳಿದ ವರ್ಗ...ದವರು ಈಗಿನ ಸ್ಥಿತಿಯಲ್ಲೇ ಇರುವುದಾದರೆ ಇನ್ನು ಒಂದು ಶತ...ಮಾನವಾದರೂ ಉದ್ಧಾರವಾಗ ವಂತಿಲ್ಲವಾದುದರಿಂದ, ಸರ್ಕಾರಿಯುದ್ಯೋಗದಲ್ಲಿ ತಮ್ಮಗಳಿಗಾಗುತ್ತಿರುವ ಅನ್ಯಾಯ ಪಕ್ಷ...ತೆಗಳು ನಿವಾರಣೆಯಾಗಿ ದೊಡ್ಡ ಸ್ಥಾನಗಳು ಮುಂದೆ ...ದಾರಾಳವಾಗಿ ದೊರಕುವಂತೆ ಮಹಾಪ್ರಭುಗಳವರನ್ನು ಪ್ರಾರ್ಥಿಸಿಕೊಳ್ಳಬೇಕಾಗಿ ಕೋರುತ್ತೇವೆ.

ಆಫ್ಘನ್ ಯುದ್ಧ

ಬಾಚಾಸ್ಸಾಕೊವಿಗೆ ವಿಜಯ ಪರಂಪರೆಯು ಹೆಚ್ಚುತ್ತಲೇ ಇದ್ದರೂ, ಅವನ ಪ್ರಭುತ್ವವು ಕಾಬೂಲಿನಲ್ಲಿ ನೆಲೆಸಿರುವುದಾದರೂ ಕಾಬೂಲಿನ ಜನರ ಜೀವಿತವು ಅತಿ ದುರ್ಭರವಾಗಿರು... ಅಮಾನುಲ್ಲಾಯವರ ಮೇಲೆ ಅಭಿಮಾನವನ್ನು ತೋರಿ...ತನ ಜನರಲ್ಲಿ ಇಬ್ಬರು ಮೂವರು ವಿಚಾರಣೆಯಿಲ್ಲದೆ ...ಯಿಂದ ಸುಡಿಸಲ್ಪಡದೆ ಇರುವ ದಿನವೇ ಇಲ್ಲವು. ... ಪ್ರಜೆಗಳಿಗೆ ವಾಕ್‌ಸ್ವಾತಂತ್ರ್ಯವಾಗಲಿ ವ್ಯಕ್ತಿಗೆ ಅಭಯ ಹಸ್ತವಾಗಲಿ ಇರುವುದಿಲ್ಲ. ಜೀವನಾವಶ್ಯಕವಾದ ಪದಾರ್ಥಗಳ ಬೆಲೆಯು ವಿಪರೀತವಾಗಿ ಏರುತ್ತಿದೆ. ಪೆಟ್ರೋಲಿಯಂ ಮತ್ತು ಸೀಮೆಯೆಣ್ಣೆಯು 1 ಗ್ಯಾಲನ್ನಿಗೆ 20 ರೂ. ನಂತೆ ಮಾರಲ್ಪಡುತ್ತಿವೆ. ಅಂಗಡಿಗಳಲ್ಲಿ ತುಪ್ಪ ಸಿಕ್ಕುವುದಿಲ್ಲ. ಮಾಂಸ ಮಾತ್ರ ಕೊಂಡವರಿಗೆ ದೊರಕುತ್ತದೆ. ಬಾಕಿ ಮದ್ದು ಗುಂಡು ಸಾಮಗ್ರಿಗಳ ಸಪ್ಲೈ ಆಗುತ್ತಿಲ್ಲ. ...ರುವ ಸರಕು ಕರಗುತ್ತಿದೆ. ಇದುವರೆಗೆ ಜರುಗಿದ ವಿಪ್ಲವಾ...ಗೆ ಖಜಾನೆಯು ಹಣವು ನಿರಲಕ್ಷ್ಯವಾಗಿ ಮಿತಿಮೀರಿ ವೆಚ್ಚ ...ಮಾಡಲ್ಪಟ್ಟಿರುವುದರಿಂದ ದ್ರವ್ಯವು ಕರಗಿರುತ್ತದೆ. ದೇಶದಲ್ಲಿ ...ನಾಭಾವವುಂಟಾಗಿದೆ. ದವಸದಿಂದಲೂ ಪ್ರವಕರಿಂದಲೂ ...ಕಾರ ಧನವು ಬಲವಂತದಿಂದ ವಸೂಲು ಮಾಡಲ್ಪಡುತ್ತಿರುವುದು ...ದಿಂದ ಸಿಪಾಯಿಗಳಿಗೆ ಸಂಬಳ ಕೊಡಲು ಸಹ ಹಣವಿಲ್ಲವು. ...ಕಾರಣ ಸಿಪಾಯಿಗಳು ತಮ್ಮ ಆಯುಧಗಳನ್ನೂ ಮದ್ದು ...ಗುಂಡುಗಳನ್ನೂ ಮಾರಿಕೊಂಡು ಆಹಾರ ಪದಾರ್ಥಗಳನ್ನು ...ಕೊಳ್ಳುತ್ತಿರುವರು. ಹೀಗಿದ್ದರೂ ಪಟಾಲಮ್ಮುಗಳಿಗೆ ಹೊಸ ಸೈನಿಕರು ಹೊಸದಾಗಿ ಸೇರಿಸಲ್ಪಡುತ್ತಲೇ ಇರುವರು ಎಂದು ಕಾಬೂಲಿನಿಂದ ಬಂದ ವರ್ತಕನು ತಿಳಿಸಿರುತ್ತಾನೆ.

ಬಾಚಾಸ್ಸಾಕೊವಿನ ಕ್ರೌರ್ಯವು

ಅಮಾನುಲ್ಲಾಯವರ ಪಕ್ಷಾವಲಂಬಿಯಾದ ಶಾಜಿ ...ದಾರರಿಮನನ್ನು ಬಾಚಾಸ್ಸಾಕೊ ಎಂದು ತೋಪಿನ ...ಬಾಯಿಗೆ ಕಟ್ಟಿಸಿ ಕಾಬೂಲ್ ಪಟ್ಟಣದ ಬೀದಿಗಳ... ಕೊಂದುಹಾಕಿಸಿದನು.

ಬಾಚಾಸ್ಸಾಕೊವಿಗೆ ಪ್ರಾಣಭೀತಿ

...ಚಾಸ್ಸಾಕೊ ತನ್ನ ಪ್ರಾಣವನ್ನು ಯಾರು ತೆಗೆದುಬಿಡುವರೋ ಎಂದು ಭಯಪಟ್ಟುಕೊಂಡು ಹೊರಕ್ಕೆ ಬರುತ್ತಿಲ್ಲ. ... ದಿವಸ ಸಮಾಜಿಗೂಗಿಯೂ ಹೋಯಿರುವುದಿಲ್ಲ. ...ವಾಸಮಾಡುತ್ತಿರುವ ಅರಮನೆ ಎಂಬ ಭವನದ ಸುತ್ತಲೂ ...ಮದ್ದುಗಳಿಡಲ್ಪಟ್ಟು ಸಂರಕ್ಷಿಸಲ್ಪಟ್ಟಿರುವುದು. ಯಾವ ...ದು ಇದನ್ನು ತಿಳಿಯದೆ ಭವನದೊಳಕ್ಕೆ ಕಳ್ಳತನದಿಂದ ...ಕಲೆತ್ನಿಸಿದಲ್ಲಿ ಸಿಡಿಮದ್ದು ಹಾರಿ ಕೂಡಲೆ ಪ್ರಾಣಬಿಡು... ಕಾಬೂಲಿನಿಂದ ಜಲಾಲಾಬಾದಿಗೆ ಹೋಗುವ ಮಾರ್ಗ... ಬೇರೆ ಬೇರೆ ಗುಂಪಿನವರಿಗೆ ಒದಗುತ್ತಿರುವ ಅಂತಃಕಲಹಗಳ... ಆ ಮಾರ್ಗವು ಅಪಾಯಕರವಾಗಿದೆ. ನಾದಿರ್‌ಖಾನನು ...ವಿಲ್ಲದೆ ಬಹಳ ತೊಂದರೆಪಡುತ್ತಿದ್ದಾನೆ, ಆಸ್ಪದೆ ದುಡ್ಡಿಗಿಯೇ ಪಿತಾಮರಿಗೆ ಹೇಳಿಕಳುಹಿಸಿದ್ದಾನೆ.

ಒಳದೇಶದ ವೃತ್ತಾಂತಗಳು.

ನೆನ್ನೆಯ ದಿವಸ ಶ್ರೀಮನ್ಮಹಾರಾಜರವರ ಸ್ವಾರಿಯು ಉದಕಮಂಡಲಕ್ಕೆ ಚಿತ್ತೈಸಿತು.

ಮೈಸೂರು ವಿಶ್ವವಿದ್ಯಾನಿಲಯದ [redacted] ಬರುವ ಜೂನ್ ... ಂಗಳಲ್ಲಿ ಜರು...

...ಉದಕಮಂಡಲದಲ್ಲಿರುವ ದಿವಾನರು ಬರುವ ಜೂನ್ ತಾ|| 1 ...ನ್ನು ... ಸ್ಥಿರವಾಗಿ ಇದ್ದ ಮ|| ಮಿರ್ಜಾ ರವರು ಈ ತಾ|| 20–30 ರಲ್ಲೂ ಬೆಂಗಳೂರಿಗೆ ದಯಮಾಡಿಸುವವರಾಗಿರುವರು.

ಪ್ರಜಾಪ್ರತಿನಿಧಿ ಸಭೆಯ ಬಜೆಟ್ ಅಧಿವೇಶನವು ರಾಜಧಾನಿಯ ಜಗನ್ಮೋಹನ ಪ್ರಾಸಾದದಲ್ಲಿ ಬರುವ ಜೂನ್ ತಾ|| 10 ನೇ ಸೋಮವಾರ ಮಧ್ಯಾಹ್ನ 12 ಘಂಟೆಗೆ ಆರಂಭವಾಗುವುದು.

ಬರುವ ಜೂನ್ ತಾ|| 16 ನೇ ಭಾನುವಾರ ಬೆಳಿಗ್ಗೆ ರಾಜಧಾನಿಯಲ್ಲಿರುವ ದಿವಾನರ ಬಿಡಾರವಾದ ಲೋಕ್‌ರಂಜನ ಕಟ್ಟಡದಲ್ಲಿ ಸಂಸ್ಥಾನದ ದೊಡ್ಡ ಅಧಿಕಾರಿಗಳ ಸಮ್ಮೇಳನವು ಜರುಗುವುದು.

ಬೆಂಗಳೂರು ಸುಣ್ಣಕಲ್ಲುಪೇಟೆ ವಾಸಸ್ಥರಾದ ವೆಂಕಟಾಚಾರ್ ಎಂಬವರ 1½ ವರ್ಷ ವಯಸ್ಸಿನ ಮಗುವು ಆಡುತ್ತಿರುವಾಗ್ಗೆ ನೀರು ತುಂಬಿದ್ದ ಕಲ್ಲಿನ ತೊಟ್ಟಿಯೊಳಕ್ಕೆ ಬಿದ್ದು ಮೃತವಾಯಿತು.

ಕಳೆದ ಭಾನುವಾರ ಶ್ರೀಮದ್ರಂಭಾಪುರಿ ವೀರಸಿಂಹಾಸನಾಧೀಶ ಜಗದ್ಗುರು ಶಿವಾಚಾರ್ಯ ಮಹಾಸ್ವಾಮಿಗಳ ದಾವಣಗೆರೆ ಪುರಪ್ರವೇಶೋತ್ಸವವು ಸಿದ್ಧವಾಗಿ ನಡೆಯಿತೆಂದೂ, ಪ್ರೋಲೀಸಂಬಂಧ ಬಹಳ ಸಡಗರವಾಗಿತ್ತೆಂದೂ ತಿಳಿಯಬರುತ್ತದೆ.

ಗೌರ್ನಮೆಂಟ್ ಕನ್ನಡ ಟ್ರೈನಿಂಗ್ ಆಫೀಸ್ ಕ್ಲಾರ್ಕ್ ಮ|| ಜಿ. ಚೆನ್ನಬಸಪ್ಪ, ಬಿ. ... ಎಲ್, ರವರು ಆಕ್ಟಿಂಗ್ ಡೆಪ್ಯುಟಿ ಅಮಲ್ದಾರರಾಗಿ ನಿಯಮಿಸಲ್ಪಟ್ಟು ತಿಪಟೂರು ಮ್ಯುನಿಸಿಪಾಲಿಟಿಯ ಚೀಫ್ ಆಫೀಸರಾಗಿ ಕೆಲಸ ಮಾಡಲು ನಿಗಾಮಿಸಲ್ಪಟ್ಟಿರುತ್ತಾರೆ.

ಬರುವ ಜೂನ್ ತಾ|| 6–7 ಮತ್ತು 8 ರಲ್ಲಿ ಕಡೂರು ಡಿಸ್ಟ್ರಿಕ್ಟ್ ಕಾಂಗ್ರೆಸ್ಸು ಮತ್ತು ಪ್ರದರ್ಶನವು ಎರಡನೇ ಕ್ಲಾಸಿನವರ ಅಧ್ಯಕ್ಷತೆಯಲ್ಲಿ ಜರುಗುವುದರಿಂದ ಪ್ರದರ್ಶನಕ್ಕೆ ವಸ್ತುಗಳನ್ನು ಕಳುಹಿಸಬೇಕಾದವರು ಜೂನ್ ತಾ|| 1 ರೊಳಗೆ ಕಳುಹಬೇಕಾಗಿ ಕೋರಲ್ಪಟ್ಟಿದೆ.

ಇದೇ ತಾ|| 21 ನೇ ಮಂಗಳವಾರ ದಕ್ಷಿಣ ಇಂಡ್ಯಾ ವೀರಶೈವ ಜಂಗಮ ಮಹಾಸಭೆಯ ಮೂರನೇ ಅಧಿವೇಶನವು ದೊಡ್ಡ ವರ್ತಕರೂ, ಮ್ಯುನಿಸಿಪಲ್ ಕೌನ್ಸಿಲರೂ, ತಾ|| ಬೋರ್ಡು ಮೆಂಬರೂ ಆದ ಮ|| ಎ. ವಯ್ಯಾಪುರಿ ಪಂಡಾರಿಗಳವರ ಅಧ್ಯಕ್ಷತೆಯಲ್ಲಿ ತಿರುಚಂಗೋಡು ಜಂಗಮ ಮಠದಲ್ಲಿ ಜರುಗಿತು.

ಕಳೆದ ಶನಿವಾರ ಮೈಸೂರು ಡಿಸ್ಟ್ರಿಕ್ಟ್ ಕಾನ್ಫರೆನ್ಸಿನ 12 ನೇ ಅಧಿವೇಶನವು ಡಿ|| ಕವಿನಾಸಪ್ಪನವರಿಂದ ಆರಂಭಿಸಲ್ಪಟ್ಟು ವ್ಯವಸಾಯದ ಕಾನ್ಫರೆನ್ಸು, ಭಾನುವಾರ ವಿದ್ಯಾಭ್ಯಾಸ, ಮ್ಯುನಿಸಿಪಲ್ ಮತ್ತು ಪರಸ್ಪರ ಸಹಾಯ ಸಂಘಗಳ ಕಾನ್ಫರೆನ್ಸುಗಳು ಜರುಗಿ ಅನೇಕ ಉಪನ್ಯಾಸಗಳ ನಡೆದು ಕೆಲ ನಿರ್ಧಾರಗಳು ಮಾಡಲ್ಪಟ್ಟವು.

ಬೆಂಗಳೂರು ಸಿಟಿ ಪೋಲೀಸ್ ಸೂಪರಿಂಟೆಂಡೆಂಟರಾದ ಮ|| ಮರಿಯಪ್ಪನವರು ವಿದ್ಯಾಭೂಷಣ ಮ|| ಪಂಚೀವರಾಯರಮೇಲೆ ಮಾಡಿದ್ದ ಪಿರ್ಯಾದಲ್ಲಿ ವಿಧಿಸಲ್ಪಟ್ಟಿರುವ ಅರ್ಥದಂಡವನ್ನು ಮನ್ನಿಸಬೇಕೆಂದು ಡಿಸ್ಟ್ರಿಕ್ಟ್ ಜಡ್ಜಿಯವರಲ್ಲಿ ಅಪೀಲುಮಾಡಿ ಅದು ಇತ್ಯರ್ಥವಾಗುವವರೆಗೆ ದಂಡದ್ರವ್ಯವನ್ನು ಬಿರಮಾಡದೆ ನಿಧಾನಿಸಿರುವಂತೆ ಅಪ್ಪಣೆಯಾಗಬೇಕೆಂದು ರಾಯರು ಪ್ರಾರ್ಥಿಸಿಕೊಂಡಿದ್ದುದರ ಮೇಲೆ 3 ವಾರ ನಿಧಾನಿಸಬೇಕೆಂದು ಜಡ್ಜಿಯವರು ಅಪ್ಪಣೆ ಮಾಡಿರುತ್ತಾರೆ.

ಬರುವ ಜೂನ್ ತಾ|| 1 ನೇ ಶನಿವಾರ ನೆಲಮಂಗಲದಲ್ಲಿರುವ ಶ್ರೀ ಜಯದೇವ ಮುರುಘರಾಜೇಂದ್ರ ವೀರಶೈವ ವಿದ್ಯಾರ್ಥಿನಿಲಯದಲ್ಲಿ ಬೆಂಗಳೂರು ಪೇಟೆ ಮುನಿಸಿಪಲ್ ಕೌನ್ಸಿಲರಾದ ಸ್ವಾರಿ ಸ್ವಾರ ಮ|| ನಿ. ನಾಗಪ್ಪನವರ ಅಧ್ಯಕ್ಷತೆಯಲ್ಲಿ ಜರುಗುವ ನೆಲಮಂಗಲದ ತಾಲ್ಲೂಕು ಒಕ್ಕಲಿಗರ ಮಹಾಸಭೆಯ ಆರಂಭೋತ್ಸವವು ಕೈತೆಯ ಸಚಿವರಿಂದ ಮ|| ಕೆ. ಮೆರ್ವಾರರವರಿಂದ ನಡೆಯಿಸಲ್ಪಡುತ್ತಾದುದರಿಂದ ಕುಲಾಭಿಮಾನಿಗಳು ಸಭೆಗೆ ದಯಮಾಡಿಸಬೇಕೆಂದು ಸ್ವಾಗತ ಮಂಡಳಿಯವರು ಅಪೇಕ್ಷಿಸುತ್ತಾರೆ.

ಮ|| ಗೌರವ ಸೀತಾರಾಮಶಾಸ್ತ್ರಿಗಳ ಮೇಲೂ, ಅಧ್ಯಕ್ಷ ನಾರಾಯಣರಾಯರ ಮೇಲೂ ಬೆಂಗಳೂರು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಲ್ಲಿ ನಡೆಯುತ್ತಿರುವ ರಾಜದ್ರೋಹದ ಮೊಕದ್ದಮೆ ವಿಚಾರಣೆಯು ಈ ತಾ|| 27 ಕ್ಕಿಡಲ್ಪಟ್ಟಿತ್ತು. ಆ ಅವಧಿ ತರಲ್ಲಿ ಮ|| ಅಶ್ವತ್ಥನಾರಾಯಣರಾಯರು ರಾಜದ್ರೋಹಕರ ಲೇಖನಗಳಿಗೆ ತಮ್ಮ ನವಜೀವನ ಪತ್ರಿಕೆಯಲ್ಲಿ ಅವಕಾಶ ಕೊಟ್ಟದ್ದು ತಮ್ಮ ತಪ್ಪೆಂದೂ, ಅದನ್ನು ಕ್ಷಮಿಸಿ ತಮ್ಮನ್ನು ಬಿಟ್ಟುಕೊಡಬೇಕೆಂದೂ ಪ್ರಭುತ್ವದವರನ್ನು ಪ್ರಾರ್ಥಿಸಿಕೊಂಡಿರುವುದರ ಮೇಲೆ ಅವ (ರಾಯ) ರ ವಿಚಾರಣೆ ಸಂಭವವಿರುವುದಾಗಿ ವರ್ತಮಾನವಿದೆ.

ಮೈಸೂರು ಸಿಟಿಮೆಜಿಸ್ಟ್ರೇಟ್ ಕೋರ್ಟಿನಲ್ಲಿ

ಸಿ. ಆರ್. ನಂ. 730–1928–29

ಪಿರ್ಯಾದಿದಾರರು—

(1) ... ಎಂ. ಪಿ. ಬೆಂಗಳೂರು ಅಡ್ವೋಕೇಟ್ ಮತ್ತು ಮ್ಯುನಿಸಿಪಲ್ ಕೌನ್ಸಿಲರ್ ದೊಡ್ಡಪೇಟೆ ಮೈಸೂರು (2) [redacted]

...ಬಾಲಕವೀರಣ್ಣ, ಆವಾಲ್ಲರದ ಬೀದಿ, ಮೈಸೂರು (7) ಚಿಕ್ಕಣ್ಣ, ಮರ್ಚೆಂಟ್, ಮೈಸೂರು, (8 ಬಸವಣ್ಣ, ಸಾಹುಕಾರ್, ದೊಡ್ಡಪೇಟೆ, ಮೈಸೂರು.

ಇದಿರು ಅರ್ಜಿದಾರರು—

(1) ಪೂಜಾರಿ ವಿರೂಪಾಕ್ಷಪ್ಪ, ಗಂಜಾಂಮಠ, ದೊಡ್ಡಪೇಟೆ ಮೈಸೂರು (2) ಬಳೆ ಮುದ್ದಣ್ಣ, ಬನುಮಯ್ಯರದ ಬೀದಿ, ಮೈಸೂರು (3) ಸಿದ್ದಲಿಂಗಪ್ಪ ಮಡಿಕೇರ್‌ನಾಯ್ಕ್, ದೊಡ್ಡಪೇಟೆ, ಮೈಸೂರು, (4) ಮಹಾದೇವಪ್ಪ, ನರಸೀಕೆರೆ, ದೊಡ್ಡಪೇಟೆ, ಮೈಸೂರು (5) ಗಂಗಾಧರಪ್ಪ, ಗಂಜಾಂಮಠ, ದೊಡ್ಡಪೇಟೆ, ಮೈಸೂರು. (6) ಸುತ್ತೂರು ರುದ್ರದೇವರು, ಕುಂಬಾರಗೇರಿ, ಒಕ್ಕರ್ ಮೊಹಲ್ಲ ಮೈಸೂರು. (7) ಗುರುಕಾರ್ ಮುರುಡಪ್ಪ, ದೊಡ್ಡಪೇಟೆ, ಮೈಸೂರು

ಕ್ರಿಮಿನಲ್ ಪ್ರೊಸೀಜರ್ ಕೋಡು 144 ನೇ ಸೆಕ್ಷನ್ನಿನ ಪ್ರಕಾರ ಅರ್ಜಿದಾರರು ಬಿನ್ನೈಸುವುದೇನೆಂದರೆ—

(1) ಮೈಸೂರು ಒಕ್ಕರ್ ಮೊಹಲ್ಲ ದೊಡ್ಡಪೇಟೆಯಲ್ಲಿ ಒಂದು ಲಿಂಗಾಯತ ಬಸವೇಶ್ವರದೇವಸ್ಥಾನವಿದೆ. ಈ ದೇವರನ್ನು ಈ ನೆರೆಹೊರೆಯಲ್ಲಿರುವ ಲಿಂಗಾಯತರೆಲ್ಲರೂ ಪೂಜಿಸುವರು.

(2) ಮೊದಲನೇ ಇದಿರು ಅರ್ಜಿದಾರನು ಈ ದೇವಸ್ಥಾನದ ಪೂಜಾರಿಯಾಗಿರುತ್ತಾನೆ. ಅರ್ಜಿದಾರರೂ ಮತ್ತು ಇದಿರು ಅರ್ಜಿದಾರರೂ ಈ ದೇವರ ಭಕ್ತರಾಗಿರುತ್ತಾರೆ. ದೊಡ್ಡಪೇಟೆಯಲ್ಲಿ ಲಿಂಗಾಯತರುಗಳಲ್ಲಿ ದುರದೃಷ್ಟವಶಾತ್ ಇತ್ತೀಚೆಗೆ ಮನಸ್ತಾಪವುಂಟಾಗಿದೆ. ಈ ಮನಸ್ತಾಪವು ಒಟ್ಟಿಟ್ಟರಲ್ಲಿ ಹುಟ್ಟಿ ... ಅನ್ಯಾಯದಿಂದ ಈಗ ದೊಡ್ಡಪೇಟೆಯಲ್ಲಿರುವ ಜಂಗಮರಿಂದಲ್ಲದೆ ಮತ್ತು ಬಸವೇಶ್ವರದೇವಸ್ಥಾನಗಳ ವಿಚಾರಗಳಲ್ಲೂ ವ್ಯಾಪಿಸಿರುವುದು ಬಹಳ ಬೇಸರಕರವಾಗಿದೆ. ಇದಿರು ಅರ್ಜಿದಾರರ ಈ ವಿಧವಾದ ಕುಹಕ ನಿರ್ಬಂಧಗಳ ದೆಸೆಯಿಂದ ಹುಟ್ಟಿದ ಮನಸ್ತಾಪಕ್ಕಾಗಿ ಕಳೆದ ವರ್ಷ ನಡೆದ ಮೆಲ್ಲಾಂದ ಮಠದ ಸ್ವಾಮಿಗಳ ಪಟ್ಟಾಭಿಷೇಕ ಕಾಲದಲ್ಲಿ ಅರಮನೆಯಿಂದ ಪಲ್ಲಕ್ಕಿ ... ಮುಖಂಡರು ... ಲಿಂಗರಾಜ ಅರಸಿನವರಿಂದ ... ಈ ತರಹದ ಸಂದರ್ಭಗಳಲ್ಲಿ ಭಕ್ತರಿಗೆ ಮಾಡಿಸಲ್ಪಡುವ ಊಟವು ಸಹ ನಿಲ್ಲಿಸಲ್ಪಟ್ಟಿತು.

(3) ಈ ನೂತನ ಸ್ವಾಮಿಗಳು ತಮ್ಮ ಭಕ್ತರುಗಳನ್ನೆಲ್ಲ ಯಾವ ಕಾರಣವೂ ಇಲ್ಲದೆ ಒಂದೇ ವಿಧವಾಗಿ ಪರಿಗಣಿಸುತ್ತಿರುವುದರಿಂದಲೂ, ಯಾವ ಪಕ್ಷದವರ ಪಾಕ್ಷ್ಯಕ್ಕೂ ಆಗಗಿಡದೆ ಮಠದ ಆಡಳಿತವನ್ನು ಸ್ವತಃ ನೋಡುತ್ತಿರುವುದರಿಂದಲೂ ಮಠದ ಈಗಿನ ಪರಿಸ್ಥಿತಿಯು ನಮ್ಮಗಳ ಧಿಂಸಕ್ಕೆ ಅವಕಾಶವಿಲ್ಲದಂತೆ ಉತ್ತಮವಾಗಿದೆ.

ಆದರೆ ದೇವಸ್ಥಾನದ ಸ್ಥಿತಿಯು ಮಾತ್ರ ಇನ್ನು ನೆಟ್ಟಗಾಗಿಲ್ಲವು. ಅಂದುಬರುವ ಕಾರಣ ಮೊದಲನೇ ಇದಿರು ಅರ್ಜಿದಾರನು ತನ್ನ ಧಾರ್ಮಿಕವಾದ ಕರ್ತವ್ಯವನ್ನು ... ಭಕ್ತರುಗಳಲ್ಲಿ ಎಲ್ಲಾ ಭಕ್ತರುಗಳನ್ನೂ ಒಂದೇ ಸಮನಾಗಿ ಕಾಣುತ್ತಿದ್ದವನು ಈಗ ಮೈಸೂರು ಸ್ಟಾರ್ ಪತ್ರಿಕೆಯ ಎಡಿಟರ್ ಮ|| ವೈ. ವಿರೂಪಾಕ್ಷಯ್ಯನವರಲ್ಲಿ ... ಸಂಬಳದ ಮೇಲೆ ರೈಟರಾಗಿ ಸೇರಿಕೊಂಡು ಅವರ ದಾಕ್ಷಿಣ್ಯಕ್ಕೆ ಬದ್ಧನಾಗಿ ನಡೆದುಕೊಳ್ಳುತ್ತಿರುವನು. ಮ|| ವೈ. ವಿರೂಪಾಕ್ಷಯ್ಯನವರು ಇದಿರು ಅರ್ಜಿದಾರರ ಪಕ್ಷಕ್ಕೆ ಸೇರಿದವರಾಗಿರುತ್ತಾರೆ. ಅರ್ಜಿದಾರರ ಪಕ್ಷದವರಿಗೂ ಇದಿರು ಅರ್ಜಿದಾರರ ಪಕ್ಷದವರಿಗೂ ಬಹಳ ಮನಸ್ತಾಪವುಂಟಾಗಿರುತ್ತದೆ. ಇದಿರು ಅರ್ಜಿದಾರರ ಪಕ್ಷದವರ ಮನೆಗಳು ಹತ್ತಕ್ಕಿಂತ ಹೆಚ್ಚಾಗಿಲ್ಲ ಮತ್ತು ಅವರೆಲ್ಲರೂ ಒಂದೇ ಬಂದಾಗಲಿ ಸೇರಿರುತ್ತಾರೆ. ಆದರೆ ಅರ್ಜಿದಾರರ ಪಕ್ಷದವರ ಮನೆಗಳು 40–50 ಕ್ಕೆ ಮೇಲ್ಪಟ್ಟು ಅವರೆಲ್ಲರೂ ವಿಶೇಷವಾದ ಮನುಷ್ಯರಾಗಿರುತ್ತಾರೆ. ಅದೇ ಅರ್ಜಿದಾರರ ಪಂಗಡವೂ ಕೇರಿ ನಾನಾ ಪಂಗಡದವರಾಗಿರುತ್ತಾರೆ.

(4) ಮೈಸೂರು ಪಟ್ಟಣದಲ್ಲಿ ಮೂರು ಪ್ರಸಿದ್ಧವಾದ ಬಸವೇಶ್ವರ ದೇವಸ್ಥಾನಗಳಿರುತ್ತವೆ. ವೀರನಗೆರೆ ಲಿಂಗಾಯತರು ಅಲ್ಲಿಯ ಬಸವೇಶ್ವರ ದೇವಸ್ಥಾನಕ್ಕೆ ಹೋಗುತ್ತಾರೆ. ಹಳೇ ಅಗ್ರಹಾರದ ಲಿಂಗಾಯತರು ಅವೇ ಕಲೋ... ಬಳಿ ಇರುವ ಚಿಕ್ಕಬಸವೇಶ್ವರ ದೇವಸ್ಥಾನಕ್ಕೆ ಹೋಗುತ್ತಾರೆ. ದೊಡ್ಡಪೇಟೆಯ ಲಿಂಗಾಯತರು ದೊಡ್ಡಪೇಟೆಯಲ್ಲಿರುವ ಬಸವೇಶ್ವರ ದೇವಸ್ಥಾನಕ್ಕೆ ಮಾತ್ರ ಹೋಗುತ್ತಾರೆ.

(5) ಅವರಿಗೆ ಬಹಳ ಅನಾದಿಯಿಂದಲೂ ತಮ್ಮ ದೊಡ್ಡಪೇಟೆಯ ಬಸವೇಶ್ವರ ದೇವಸ್ಥಾನಕ್ಕೆ ಈಗ್ಗೆ 4 ತಿಂಗಳ ಕೆಳಗೆ ಒಂದನೇ ಅರ್ಜಿದಾರನು ಒಂದು ರಾಯಿಪಡನ್ನು ... ನಿಲ್ಲಿಸಿ ... ದರಲ್ಲಿ ... ಕೊಂಡುಹೋಗಿ ... ಮೇಲೆ ಲಿಂಗಮುದ್ರೆ ಮರ್ಯಾದೆಯು ದೊರಕಿತು.

ಇದರ ಮೇಲೆ ದೊಡ್ಡಪೇಟೆ ಲಿಂಗಾಯತರ ಗಳಲ್ಲಿ ಇದಿರು ಅರ್ಜಿದಾರರ ಪಕ್ಷಭೇದದಿಂದ ಮನಸ್ತಾಪ ಹುಟ್ಟಿತು. ಒಂದನೇ ಅಪರಾಧಿಯು ಮೈಸೂರು ಸ್ಟಾರ್ ಪತ್ರಿಕೆಯ ಎಡಿಟರಾದ ಮ|| ವೈ. ವಿರೂಪಾಕ್ಷಯ್ಯನವರಲ್ಲಿ ರೈಟರಾಗಿರುತ್ತಾನೆಂಬ ಧೈರ್ಯದ ಮೇಲೆ ಅರ್ಜಿದಾರರಿಗೂ, ಅವರ ಪಂಗಡದವರಿಗೂ 1929 ನೇ ಮೇ ತಾ|| 11 ರಲ್ಲಿ ನಡೆಯುವ ಬಸವಜಯಂತಿಯಲ್ಲಿ ಅರ್ಜಿದಾರರೂ, ಅವರ ಪಂಗಡದವರೂ ದೇವಸ್ಥಾನಕ್ಕೆ ಪ್ರವೇಶಿಸದಂತೆ ಅಡ್ಡಿಪಡಿಸಲು ನಿರ್ಧರಿಸಿರುವುದಾಗಿ ತಿಳಿಯಬರುತ್ತದೆ. ಅರ್ಜಿದಾರರ ಕಡೆಯ ನೆಮ್ಮದಿ ಭಂಗವಾಗುವ ಸಂಭವವಿದೆ. 3 ನೇ ಅರ್ಜಿದಾರನು ಈ|| ಮೇ 2 ರಿಂದ 7 ರ ವರೆಗಿನ ಇದಿರು ಅರ್ಜಿದಾರರ ಮೇಲೆ 143 ಮತ್ತು 506 ನೇ ಸೆಕ್ಷನ್ನುಗಳನ್ನನುಸರಿಸಿ ಫಿರ್ಯಾದು ಮಾಡಿರುತ್ತಾನೆ. ಇದರ ವಿಚಾರಣೆಯು 1929 ನೇ ಮೇ ತಾ|| 29 ಕ್ಕಿಡಲ್ಪಟ್ಟಿದೆ.

(6) ಈಗ ಪ್ರಾಸ್ತಕ್ಕೆ ಕಾರಣವಾದ ಬಸವೇಶ್ವರ ದೇವಸ್ಥಾನಕ್ಕೆ ಹೋಗಿ ಯಾವ ಅಭ್ಯಂತರವೂ ಇಲ್ಲದೆ ದೇವರ ಪೂಜೆ ಮಾಡಿಸಲು ಒಕ್ಕರ್ ನೆರೆಹೊರೆಯ ಸ್ವತಃ... ಲಿಂಗಾಯತರಿಗೂ ನ್ಯಾಯವಾದ ಹಕ್ಕಿರುತ್ತದೆ. ಯಾರ ಹೆಸರಿನ ಮೇಲೆ ಬಸವಜಯಂತಿಯು ಆಚರಿಸಲ್ಪಡುತ್ತದೋ ಅಂಥಾ ಬಸವೇಶ್ವರನ ತತ್ವಬೋಧೆಯಲ್ಲಿ ಎಲ್ಲರೂ ಸಮಾನಸ್ಥರೆಂದು ಎಂಬುದು ಮುಖ್ಯ ತತ್ವವಾಗಿರುತ್ತದೆ. ಇದೇ ತತ್ವವಿರುವುದು ಪ್ರಕಟವಾಗಿರುವ 1930 ನೇ ಏಪ್ರಿಲ್ ತಾ|| 2 ರ ಮೈಸೂರು ಸ್ಟಾರ್ ಪತ್ರಿಕೆಯು ಇದರ ಜೊತೆ ಹಾಜರುಪಡಿಸಲ್ಪಟ್ಟಿದೆ.

(6) ತಾ|| 11–5–1929 ರಲ್ಲಿ ಒಕ್ಕರ್ ಮೊಹಲ್ಲೆಯ ಎಲ್ಲಾ ಪಂಗಡದವರೂ ದೇವರ ಪೂಜೆಗಾಗಿ ದೇವಸ್ಥಾನಕ್ಕೆ ಹೋಗುತ್ತಾರಲ್ಲದೆ ಜೊತೆಯಲ್ಲಿ ಆನವಾಯಿತಿಯ ನಿರ್ಧಾರದಿಂದ ನಡೆಯುವ ಉತ್ಸವದಲ್ಲಿ ಸೇರುತ್ತಾರಾದುದರಿಂದ ಅರ್ಜಿದಾರರು ಈ ಕೆಳಗೆ ಕಂಡ ಪ್ರಕಾರ ಪ್ರಾರ್ಥಿಸುತ್ತಾರೆ—

(1) ಅರ್ಜಿದಾರರ ಪ್ರವೇಶಕ್ಕೆ ತಡೆಯೂ ತೊಂದರೆಯೂ ಆಗದಂತೆ ಮತ್ತು ಜನರ ನೆಮ್ಮದಿ ಭಂಗವಾಗದಂತೆ ಕ್ರಿಮಿನಲ್ ಪ್ರೊಸೀಜರ್ ಕೋಡಿನ 144 ನೇ ಸೆಕ್ಷನ್ನನ್ನನುಸರಿಸಿ ಆಜ್ಞೆ ತ[redacted]

2. ಈ ಪಿರ್ಯಾದಿನ ಮೇಲೆ ಇತ್ಯರ್ಥ[redacted] ...ಲ್ಲಿ ಜರುಗುವ ಎಸವಜಯಂತಿಗಾಗಿ ... ಪಿರ್ಯಾದಿಯವರ ಪ್ರವೇಶಿಸದಂತೆ ... ಆಗಬೇಕೆಂದು ಅರ್ಜಿದಾರರು ಪ್ರಾರ್ಥಿಸ[redacted]

[illegible]

ನಮ್ಮ ಸಮಕ್ಷಮ ಸ್ವಹಸ್ತ ಸಹಿ ಹಾಕಿದೆ ಸಿಟಿ ಮ್ಯಾಜಿಸ್ಟ್ರೇಟ್, ತಾ|| 20ನೇ ಏಪ್ರಿಲ್ 1929, ಮೈಸೂರು

(ರುಜು) M. P. Bhogiah.
(ರುಜು) ಚಿಕ್ಕಚಂದ್ರಯ್ಯ.
(ರುಜು) ಸುತ್ತೂರು ಶಾಂತವೀರಶಾಸ್ತ್ರಿ
(ರುಜು) ಎಂ ವೀರಭದ್ರಯ್ಯ.
(ರುಜು) ಕೆ. ರುದ್ರಯ್ಯ
(ರುಜು) G. Basavanna.
(ರುಜು) ವೀರಭದ್ರಯ್ಯ.

ಕ್ರಿಮಿನಲ್ ಪ್ರೊಸೀಜರ್ ಸೆಕ್ಷನ್ 144ರ ಪ್ರಕಾರ ತಕ್ಕ ಕಾರ್ಯಭಾಗ ವನ್ನು ನಡೆಯಿಸುವ ಆವಶ್ಯಕತೆಯಿರುತ್ತದೆಯೆ ಎಂಬುದನ್ನು ವಿಚಾರಣೆ ಯಿಂದ ವರದಿ ಮಾಡುವ ಬಗೆಗೆ ಮೈಸೂರು ಸಿಟಿ ಪೋಲೀಸು ಅಸಿಸ್ಟೆಂಟ್ ಸೂಪರಿಂಟೆಂಡೆಂಟ್‌ರವರಿಗೆ ಕಳುಹಿಸಲ್ಪಟ್ಟಿದೆ ವರದಿಯು ತಾ|| 4 6 29ರೊಳಗೆ ಕಳುಹಲ್ಪಡತಕ್ಕದ್ದು

ಮೈಸೂರು, 24 4-29 (ರುಜು) ಎಂ ಚೆನ್ನರಾಜ ಅರಸ್, ಸಿಟಿ ಮೆಜಿಸ್ಟ್ರೇಟ್

ಸಿಟಿ ಪೋಲೀಸಿನವರ ಅಭಿಪ್ರಾಯವನ್ನು ತಿಳಿದುಕೊಂಡು ತಾ 11.6.1929 ರಿಂದ 2 ತಿಂಗಳವರೆಗೆ ವ್ಯಾಜ್ಯಕ್ಕೆ ಕಾರಣವಾದ ಬಸವೇಶ್ವರ ದೇವಸ್ಥಾನಕ್ಕೆ ಅರ್ಜಿದಾರರೂ ಇತರ ಅರ್ಜಿದಾರರೂ ಪ್ರವೇಶಿಸಕೂಡ ದೆಂದು ರುದ್ರಾಭಿಷೇಕವನ್ನು ಮಾಡಕೂಡದೆಂದು ಸಿಟಿ ಮೆಜಿಸ್ಟ್ರೇಟರು ಅಪ್ಪಣೆ ಮಾಡಿರುವುದರಮೇಲೆ ಈ ಅಪ್ಪಣೆಯನ್ನು ತೆಗೆದು ಬಿಡ (ರದ್ದು ಮಾಡ) ಬೇಕೆಂದು ಇದರ ಅರ್ಜಿದಾರರು ಇದೇ ಸಿಟಿ ಮೆಜಿಸ್ಟ್ರೇಟರಿಗೆ ಕೊಟ್ಟಿರುವ ಅರ್ಜಿಯ ವಿಚಾರಣೆಯು ಈ ದಿವಸ ನಡೆಯುತ್ತದೆ ಇದರ ಫಲಿತಾಂಶವು ಮುಂದೆ ತಿಳಿಸಲ್ಪಡುವುದು

ಮೈಸೂರುಸೀಮೆಯ ಮುಜರಾಯಿ ಕಮಿಷನರವರ ಆಫೀಸಿನಿಂದ,

ಇಸ್ತಿಹಾರ್‌ನಾಮೆ.

ಕಡೂರು ಡಿ|| ನರಸಿಂಹರಾಜಪುರ ಸಬ್ ತಾಲ್ಲೂಕು ಕಸಬಾ ಶ್ರೀ ಸಿಂಗನಗದ್ದೆ ಬಸ್ತಿಮಠಕ್ಕೆ ಕೆಲವು ವರುಷಗಳಿಂದಲೂ ಸ್ವಾಮಿಗಳು ಇಲ್ಲದೆ ಎಲ್ಲಾ ಭಾಗದಲ್ಲಿಯೂ ಅರ್ಹರಾದ ಒಬ್ಬರು ಉತ್ತರಾಧಿಕಾರಿಗಳನ್ನು ಚುನಾವಣೆಮಾಡುವ ವಿಚಾರವು ಸರ್ಕಾರದವರ ಮತ್ತು ಶಿಷ್ಯಮಂಡಲಿಯವರ ಆಲೋಚನೆ ಯಲ್ಲಿ ಇರುವುದು ಸರಿಯಷ್ಟೆ.

ಪ್ರಸ್ತುತ ಸಾಲಿಗ್ರಾಮದಲ್ಲಿರುವ ಸ್ವಸ್ತಿಶ್ರೀ ಕೃತಸಾಗರ ರಾ. ಅಪ್ಪಾಂಪೈಯ್ಯ ಸ್ವಾಮಿಗಳವರು ವಿದ್ಯಾವಂತರಾಗಿಯೂ ಶಾಂತಸ್ವಭಾವವುಳ್ಳವರಾಗಿಯೂ ಮತ್ತು ಆಚಾರ ನಿಷ್ಠರಾ ಗಿಯೂ ಇರುವ ಪ್ರಯುಕ್ತ ಸದರಿಯವರನ್ನ ಖಾಲಿ ಇರುವ ಪೀಠಕ್ಕೆ ಉತ್ತರಾಧಿಕಾರಿಗಳನ್ನಾಗಿ ಚುನಾಯಿಸಬಹುದೆಂತ ಬಸ್ತಿಮಠದ ಧರ್ಮದರ್ಶಿಗಳು ಮತ್ತು ಮುಂದ ಕೆಲವರು ಶಿಷ್ಯರು ಸಹ ಅಭಿಪ್ರಾಯಪಟ್ಟಿರುವದಲ್ಲದೆ ಅಂಥಾ ಅಭಿಪ್ರಾಯ ವನ್ನ ಲಿಖಿತಮೂಲಕವಾಗಿ ಸರ್ಕಾರದವರ ಅವಗಾಹನೆಗೆ ತಂದಿರುತ್ತಾರೆ

ಸಮಾಜದ ಹಿತಕ್ಕಾಗಿಯೂ ಮತ್ತು ಧರ್ಮಾಭಿವೃದ್ಧಿ ಗಾಗಿಯೂ ಈ ಗುರು ಪೀಠಾಧಿಕಾರವನ್ನು ಸ್ವೀಕರಿಸಲು ತಮ್ಮ ಮನಃ ಪೂರ್ವಕವಾಗಿ ಒಪ್ಪಿಯಿರುತ್ತೇವೆಂತ ಶ್ರೀ ಕೃತಸಾಗರ ಸ್ವಾಮಿಗಳವರು 9 9-1928 ನೇ ಮಗ್ಗಿಂನಲ್ಲಿ ಬರಹಮೂಲಕ ತಮ್ಮ ಅನುಮತಿಯನ್ನು ತಿಳಿಸಿರುತ್ತಾರೆ ಸದರಿಯವರನ್ನು ಖಾಲಿ ಯಿರುವ ಗುರು ಪೀಠಕ್ಕೆ ಉತ್ತರಾಧಿಕಾರಿಗಳನ್ನಾಗಿ ಚುನಾಯಿ ಸಲು ಶ್ರೀ ಮಠಕ್ಕೆ ಸಂಬಂಧಪಟ್ಟ ಶಿಷ್ಟ ಜನಾಂಗದವರು ತಮ್ಮ ಅಭಿಪ್ರಾಯವನ್ನ 1929 ನೇ ಜೂನ್ ಮಾಹೆ 15 ನೇ ತಾರೀಖಿನ ಒಳಗೆ ಬರೆದು ಸಹ ಮಾಡಿರುವವರಿಗೆ ತಿಳಿಸಬೇ ಕಾಗಿ ಕೋರಿದೆ. ಅನಂತರ ಬರುವ ಆಕ್ಷೇಪಣೆಗಳನ್ನ ಅಂಗೀ ಕರಿಸುವುದಿಲ್ಲ

(Sd.) P. G. D'Souza
Muzrai Commissioner

ಲಗ್ನ ಪತ್ರಿಕೆಗಳ

ಮುದ್ರಣಕ್ರಮ

ನಮ್ಮ ಕರ್ಕಿ ಎಲೆಕ್ಟ್ರಿಕ್ ಮುದ್ರಾಶಾಲೆ ಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮ ಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾ ಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲಿ ಅಪೇಕ್ಷಿತವಾದವು ಗಳನ್ನು ಉಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ. ಹೆಚ್ಚು ವಿಷಯ ವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರಾಫೀಸು, ಮೈಸೂರು.

ಜಗದ್ಗುರುಗಳ ಜಯಂತಿಗಳು.

ಗದಗ ಅಕ್ಕಿಯ ಓಣಿಯಲ್ಲಿ ಈ ಒಳಗಾಗಿ ಸ್ಥಾಪಿಸಲ್ಪಟ್ಟಿರುವ ಶ್ರೀಮದ್ ಗದಗ ಪಂಚಾಚಾರ್ಯ ಸೇವಾಸಂಘ ಮತ್ತು ವಾಚನಾ ಲಯದ ಭವ್ಯ ಮಂಟಪದಲ್ಲಿ ತಾ|| 11 6 29 ನೇ ಶನಿವಾರ ಶ್ರೀಮದೇಕೋರಾ ಮಾರಾಧ್ಯರ ಭಾವಚಿತ್ರವನ್ನು ತಾ|| 13 6-29ನೇ ಸೋಮವಾರ ಶ್ರೀಮದ್ರೇಣು ಕಾಚಾರ್ಯರ ಭಾವಚಿತ್ರವನ್ನು ಶೃಂಗರಿಸಿದ ಸಿಂಹಪೀಠದಲ್ಲಿರಿಸಿ ನಾನಾ ಶೋಭಕಾರಗಳಿಂದಲೂ ವೇದಘೋಷದಿಂದಲೂ ಭಜನೆ ಸ್ತೋತ್ರ ಮಂಗಳಾ ರತಿ ಮುಂತಾದ ವೈಭವದಿಂದಲೂ ಊರೊಳಗಿನ ಸಮಸ್ತ ಪುರಪ್ರಮುಖರಿಂದ ಲೂ ಮುನಸಿಪಲ್ ಕೌನ್ಸಿಲ್ಲರುಗಳಿಂದಲೂ ಅಸಂಖ್ಯಾತರಾದ ಭಕ್ತಾದಿಗಳು ನೈವೇದ್ಯವರ್ಪಿಸಿ ಪೂಜಿಸಿದರು. ಕ್ರಮವಾಗಿ ತಾ|| 11 6 1929 ನೇ ಶನಿವಾರ ರಾತ್ರಿ 7 ಗಂಟೆಗೆ ಸಭೆಗೂಡಿ ಷ|| ಬ್ರ|| ನಾಗಭೂಷಣಶಾಸ್ತ್ರಿಗಳು ವ್ಯಾಕರಣತೀರ್ಥ ಇವರ ಕೀರ್ತನವು ಪ್ರಾರಂಭವಾಯಿತು. ಶಾಸ್ತ್ರಿಗಳವರು ಶ್ರೀಮದೇಕೋರಾಮಾರಾಧ್ಯರ ಕೀರ್ತನದಲ್ಲಿ ಪಾಂಡವರು ಸಕುಟುಂಬ ರಾಗಿ ಹಿಮವತ್‌ಕೇದಾರಕ್ಕೆ ಹೊರಟು ತಮ್ಮ ಧರ್ಮ ಸಂಯೋಗದಿಂದ ಈಶ್ವರ ಪ್ರತ್ಯಕ್ಷತೆ ಹೊಂದಿದ್ದನ್ನು, ಆಡಗೆ ಅಜಾತಶತ್ರುವಾದ ಧರ್ಮ ರಾಜನೊಬ್ಬನೇ ತಮ್ಮನಾದ ಭೀಮಸೇನನ ಶವವನ್ನು ಮಾಯಾಸಾಧಕರಿಗೊಪ್ಪಿ ಸಿಟ್ಟು ಕೇದಾರಸಾಧನದಲ್ಲಿಗೆ ಹೋಗುತ್ತಿರುವಾಗ ಮಾರ್ಗದಲ್ಲಿ ಶ್ರೀ ಭಗವ ತ್ಪಾದರು ಪ್ರತ್ಯಕ್ಷವಾಗಿ ಆವನ ಈ ಮಾಯಾ ಮೋಹವನ್ನು ವಿಚ್ಛೇದನ ಮಾಡಿ ಸಹೋದರನ್ನಿಗೆದ್ದನ್ನು ಹೃದಯಂಗಮವಾಗಿ ಹೇಳುವಾಗ ಸಭ್ಯರ ಆನಂದಾಶ್ರುಗಳು ಭಕ್ತಿಪರವಶತೆಯಿಂದ ಧಾರಾಳವಾಗಿ ಉಕ್ಕಿಬರುತ್ತಿದ್ದವು ಮತ್ತು ಬಾಣಾಸುರನ ಮಗಳಾದ ಉಷಾದೇವಿಯು ಆಚಾರ್ಯರ ದರ್ಶ ನೋತ್ಕಂಠಿತೆಯಾಗಿ ಬಂದು ಅಲ್ಲಿ ತನ್ನ ಸ್ಮಾರಕವಾಗಿ ಅತಿವಿಶಾಲವಾದ ಮಠವನ್ನು ಕಟ್ಟಿಸಿ ಆದಕ್ಕೆ ಉಷಾಮಠವೆಂದು ಹೆಸರಿಟ್ಟು ಕೆಲವು ಗ್ರಾಮ ಗಳನ್ನು ಉಂಬಳಿಯಾಗಿ ಕೊಟ್ಟ ಶಿಲಾಶಾಸನದ ವಿಷಯವನ್ನು ವಿಸ್ತಾರ ವಾಗಿ ಹೇಳಿ ಈ ಗ್ರಾಮದ ಮಧ್ಯದಲ್ಲಿರುವ ಸದರಿ ಉಷಾಮಠಕ್ಕೆ ಈಗ ಹಿಂದೀಭಾಷೆಯಿಂದ "ಊಖೀಮಠ" ಅನ್ನುವದು ಸುಪ್ರಸಿದ್ಧ ವಿರುತ್ತದೆಂಬುದನ್ನು ರಸಾಲವಾಣಿಯಿಂದ ಬೋಧಿಸಿದರು. ಆನಂತರ ಶಿರೋಳ ಬೃಹನ್ಮಠಾಧ್ಯಕ್ಷ ಪಂಚಾಕ್ಷರಿಶಾಸ್ತ್ರಿಗಳವರು ಸದರಿ ಕೀರ್ತನೆಯಿಂದ ಜನರ ಮನಸ್ಸಿನಲ್ಲಿ ಜಗದಾಚಾರ್ಯರ ವಿಷಯಕ್ಕೆ ಉಂಟಾದ ಭಕ್ತಿಯನ್ನು ಮತಸ್ಥಾಪನಾಚಾರ್ಯರ ಜಯಂತಿಗಳೇ ಶುದ್ಧ ಸಾಂಪ್ರದಾಯದ ವೀರಶೈ ವರ ಮುಖ್ಯ ಹಬ್ಬಗಳೆಂಬದನ್ನು ವಿಸ್ತಾರವಾಗಿ ಬೋಧಿಸಿದರು. ತಾ 12-6 29 ನೇ ರವಿವಾರ ಸಂಜೆ 6 ಘಂಟೆಗೆ ಶ್ರೀ ಷ|| ವಯೋವೃದ್ಧರೂ ಜ್ಞಾನವೃದ್ಧರೂ ಆದ ಹಿರೇಮಠದ ಚನ್ನವೀರಾರ್ಯರ ಅಧ್ಯಕ್ಷತೆಯಲ್ಲಿ ಸಭೆ ಗೂಡಿ ಡಾ ಚಂದ್ರಶೇಖರಸ್ವಾಮಿ ಇಟಗಿ ಇವರ ಭಾಷಣವು ನಡೆ ಯಿತು. ಡಾಕ್ಟರು ಆಜನ್ಮ ಬ್ರಹ್ಮಚಾರಿಗಳೂ, ನಿಸ್ಪೃಹರೂ, ವೇದಾಂತ ಸಾರ ನಿಪುಣರೂ ಇರುವ ಪ್ರಯುಕ್ತ ಸಾಮಾಜಿಕವಾಗಿ ಸರ್ವಧರ್ಮಸಮ್ಮ ತ ವಿಷಯವನ್ನೇ ತೆಗೆದುಕೊಂಡು ಅದರಲ್ಲಿ ಶ್ರೀಮತ್ ಪರಶಿವಾವತಾರಿಗಳೂ, ಜಗದ್ವಂದ್ಯರೂ ಆದ ಶ್ರೀಮತ್ ಪಂಚಾಚಾರ್ಯರೇ ವೀರಶೈವ ಮತಾಮ ತಸ್ಥಾಪನಾಚಾರ್ಯರೆಂಬುದನ್ನು ವಿಶದೀಕರಿಸಿ ಹೇಳಿದ್ದಲ್ಲದೆ ಇವರ ಜ ಯಂತಿಗಳನ್ನು ಸರ್ವರೂ ಬಹು ದೊಡ್ಡ ಹಬ್ಬಗಳಂತೆ ತಪ್ಪದೆ ಆಚರಿಸು ವಂತೆ ಇನ್ನುಳಿದ (ಸಮಾಜಕ್ಕೆ ಮಹದುಪಕಾರ ಮಾಡಿ) ವಿಭೂತಿಗಳ ಜಯಂ ತಿಯನ್ನಾದರೂ ಮಾಡುವದು ಒಳಿತೆಂದು ಒತ್ತಿ ಹೇಳಿದರು. ಆಮೇಲೆ ಶಿ ಪಂಚಾಕ್ಷರಿ ಶಾಸ್ತ್ರಿಗಳು ಅಧ್ಯಕ್ಷರ ಹಾಗೂ ಸಭೆಗೆ ಬಂದ ಮಹಾಶಯರ ಮತ್ತು ಡಾ ಚಂದ್ರಶೇಖರಶಾಸ್ತ್ರಿಗಳ ಆಭಾರ ಮನ್ನಿಸಲು ಶ್ರೀಮತ್ ಪಂ ಚಾಚಾರ್ಯರ ಜಯಘೋಷದಿಂದ ಸಭೆಯು ವಿಸರ್ಜಿಸಲ್ಪಟ್ಟಿತು ತಾ|| 13 6 29 ನೇ ಸೋಮವಾರ ಶ್ರೀಮದ್ರೇಣುಕಾಚಾರ್ಯರ ಜಯಂತಿಯು ಸು ದಿನವಾದ್ದರಿಂದ ಮಧ್ಯಾಹ್ನ 4 ಘಂಟೆಗೆ ಆಚಾರ್ಯರ ಭಾವಚಿತ್ರದ ಪೂಜಾ ಸಮಾರಂಭವು ಮುಗಿಯಲು ಸಂಜೆ 6 ಘಂಟೆಗೆ ಪುನಃ ಸಭೆಯು ಗೂಡಿತು ಇಂದಿನ ಸಭೆಗೆ ಸದಾಚಾರನಿರತರೂ ಮಠಧರ್ಮದಲ್ಲಿ ನಿಷ್ಠಾವಂ ತರಾದ ಶ್ರೀ ಶಿ ಅರಳೇ ಮಠದ ಸಿದ್ಧಲಿಂಗ ಶಿವಾಚಾರ್ಯರು ಅಧ್ಯಕ್ಷರಾಗಬೇಕೆಂದ ರ. ಮರಿಗೆಪ್ಪ ಹಂಚಿನಾಳ ಕನ್ನಡ ಎಜಂಟ್ ಗದಗ ಇವರು ಸೂಚಿಸಲು ಶಿ ವ ರಭದ್ರಯ್ಯನವರು ಹಿರೇಮಠ ಮುಳಗುಂದ ಸಾ ಗದಗ ಇವರು ಗದಗ ಮ್ಯುನಿಸಿಪಲ್ ಕೌನ್ಸಿಲರಾದ ಶಿ ಗದ್ದಿ ಮಠದ ಸಂಗಯ್ಯನವರು ಹಾಗೂ ಇತರ ಸಭಾಸದರ ಹೇಳಿಕೆಯಂತೆ ಅನು ಮೋದಿಸಿದವನ್ನು ಕೊಡಲಾಗಿ ಅಧ್ಯಕ್ಷಸ್ಥಾನವನ್ನು ಶ್ರೀ ಅರಳೇಮಠ ರ ಇ ವರು ತಮ್ಮ ಯೋಗ್ಯ ಭಾಷಣದಿಂದ ಸರ್ವರ ಕರತಾಡನದ ಶಬ್ದದಲ್ಲಿ ಸ್ವೀ ಕರಿಸಿದರು ವೇ|| ಪಂಚಾಕ್ಷರ ಶಾಸ್ತ್ರಿಗಳು ಬೃಹನ್ಮಠ ಶಿರೋಳ ಇವರು "ಶಾಂತಿ" ವಿಷಯ ಕವಾದ ಭಾಷಣದಲ್ಲಿ ವೀರಶೈವರು ಆಚರಿಸಬೇಕಾದ ಅನೇಕ ಮಹತ್ವ ಸಂಗತಿಗಳನ್ನು ಅರಿಕೆ ಮಾಡಿ ಇದಕ್ಕಲ್ಲದೆ ನಮ್ಮ ಮತ ಸ್ಥಾಪನಾಚಾರ್ಯರಾದ ರೇಣುಕ ದಾರುಕ ವಿಶ್ವಕರ್ಣ ಘಂಟಾಕರ್ಣ ಗಜಕರ್ಣರೇ ಮೊದಲಾದವರು ಬ್ರಹ್ಮಸೂತ್ರಗಳ ಮೇಲೆ ಮಾಡಿರುವ ಭಾ ಷ್ಯಾದಿಗಳು ಜಗಮಾನ್ಯವಾಗಿ ಕಂಗೊಳಿಸ ಹದನ್ನು ಯುಕ್ತಿಪುರಸ್ಸರವಾಗಿ ಯೂ, ಆಧಾರಯುಕ್ತವಾಗಿಯೂ ತಿಳಿಸಿದರು ಆನಂತರ ವ್ಯಾಕರಣತೀರ್ಥ ನಾಗಭೂಷಣ ಶಾಸ್ತ್ರಿಗಳವರು "ದಾರುಕವಿಜಯ" ವೆಂಬ ಕೀರ್ತನವನ್ನು ಅತಿ ವಿಸ್ತಾರವಾಗಿಯೂ, ರಸಭರಿತವಾಗಿಯೂ ಹೇಳಲು ಪ್ರಾರಂಭಿಸಲು ಅಲ್ಲಿಗೆ ರಾತ್ರಿ 9½ 10 ಘಂಟೆ ಸಮಯವಾದ ಪ್ರಯುಕ್ತ ಇವರ ವಿನಂತಿ ಮೇರೆಗೆ ಕಥೆಯನ್ನು ಸಂಕ್ಷೇಪರೂಪದಿಂದ ಮುಗಿಸಿದರು ಬಳಿಕ ಅಧ್ಯಕ್ಷ ರ ಸಮಯೋಚಿತ ಭಾಷಣವಾಗಿ ದಾರುಕರ ಭಾವಚಿತ್ರಪಟಕ್ಕೆ ಪುನಃ ಮಂ ಗಳಾರತಿಯಾಗಿ, ಭಜನೆಯೂ ಜರಗಿ ಸಭೆಯು ಭಕ್ತಿಪರವಶವಾಗಿ ಶ್ರೀಮಂತ ಪಂಚಾಚಾರ್ಯರ ನಾಮಸ್ಮರಣೆಯಿಂದ ಶ್ರೀಪಾದ ಜಯಘೋಷ ಮಾಡಿ, ನಮ್ಮ ಬ್ರಿಟಿಷ್ ಸಾರ್ವಭೌಮ ಸರಕಾರಕ್ಕೆ ಸಿಂಹಾಸನದಲ್ಲಿಯೂ ಯಶಃಪ್ರಾ ಪ್ತಿಯಾಗಲೆಂದು ಬೇಡಿಕೊಂಡು ಸಭೆಯು ವಿಸರ್ಜಿಸಲ್ಪಟ್ಟಿತು. ದರವರ್ಷ ದಂತೆ ವಿಶೇಷ ಖರ್ಚಿನ ಆಡಂಬರಕ್ಕೆ ಹೋಗದ ಭಕ್ತಿಶ್ರದ್ಧೆಯಿಂದ ಪದ್ಧತಿಗ ನುಸರಿಸಿ ಮಹದಾಚಾರ್ಯರ ಜಯಂತಿಗಳನ್ನು ಮಾಡುವುದು ಸುಶಿಕ್ಷಿತ ಶುದ್ಧ ಸಾಂಪ್ರದಾಯ ವೀರಶೈವರ ಅವಶ್ಯಕರ್ತವ್ಯವಾದ್ದರಿಂದ ಈ ಪ್ರಕಾರ ವೇ ಮುಂದಾದರೂ ಆಚರಿಸುವ ಸದ್ಬುದ್ಧಿಯನ್ನು ಶ್ರೀಮತ್ ಪಂಚಾಚಾರ್ಯ ರು ಸರ್ವರಿಗೂ ಅನುಗ್ರಹಿಸಲೆಂದು ಪ್ರಾರ್ಥಿಸುವ,

"ಗದ್ದಿಗಿ ರು ಪಂಚಾಚಾರ್ಯ ಸೇವಾಸಂಘ
ಮತ್ತು ವಾಚನಾಲಯದ ಸ್ವಾಹಿಕ ಸೇವಕ",
K. M. Lakkund[redacted]

ಬಸವಜಯಂತಿ ಮಹೋತ್ಸವಗಳು.

ಬಿಜಾಪುರ ಜಿ|| ಹುನಗುಂದ ತಾ|| ಕಮತಗಿ.

ಈ ಗ್ರಾಮದಲ್ಲಿ ಶ್ರೀ ಬಸವೇಶ್ವರ ಜಯಂತಿ ಉತ್ಸವವನ್ನು ತಾ|| 11 5 ವೈಶಾಖ ಶುದ್ಧ 3 ಶನಿವಾರ ನೆರವೇರಿಸಲ್ಪಟ್ಟಿತು. ಜನರು ಈ ಉತ್ಸವ ವನ್ನು ಹಬ್ಬದಂತೆ ಆಚರಿಸಿದರು. ಎತ್ತುಗಳನ್ನು ಗಳೇ ಹೂಡಿದ್ದಿಲ್ಲ. ಸಾಲೆ ಶಾಲೆಕ್ಕೆ ಫೋಟೋ ಮೆರವಣಿಗೆಯಾಗಿ ರಾ|| ಹಿರೇಮಠ ಮಾಸ್ತರ ಗುರು ಗೂಡ್ಡ ಹಾಗು ರಾ|| ವರ್ತಕಗೌಡ ಪಾಟೀಲ ಕಾರಕೂನ ರಾ|| ಲೋ ಬೋರ್ಡ ಇವರ ವ್ಯಾಖ್ಯಾನಗಳಾದವು

ಸೆಕ್ರೆಟರಿ ಶ್ರೀ ಹುಚ್ಚೇಶ್ವರ ವಾಚನಾಲಯ ಕಮತಗಿ

ಗುಲ್ಬರ್ಗ

ಅನೇಕಮಹಿಮೆಗಳನ್ನು ತೋರಿ, ವೀರಶೈವಮತವನ್ನುದ್ಧಾರಮಾಡಿ ಶಿವಪದವಿಯನ್ನು ಹೊಂದಿ ಈಗಲೂ ಭಕ್ತಿಯಿಂದ ನಡೆದವರಿಗೆ ಬೇಡಿದಿಷ್ಟಾರ್ಥ ಗಳನ್ನು ಕೊಡುತ್ತಿರುವ ಮಹಿಮಾಶಾಲಿ ಶ್ರೀ ಶರಣಬಸವೇಶ್ವರದೇವಾಲಯ ಭವ್ಯವಾದ ಮುಂಟಪವು ಇದೇ ವರ್ಷ ಪೂರೈಯಿಸಲುವಾಗಿ ತಂದಿದ್ದ ಚಿ ವಿಚಿತ್ರವಾದ ಗಾಜಿನಸಾಮಾನುಗಳಿಂದಲೂ, ಸುತ್ತಲೂ ಕಟ್ಟಿದ ತಳಿರುತೋ ರಣ ಮತ್ತು ಬಣ್ಣದ ಪತಾಕಿಗಳಿಂದಲೂ, ಸುಂದರವಾದ ವೃಷಭೇಶ್ವರ ಭಾ ಚಿತ್ರವನ್ನಿರಿಸಿದ ಸಿಂಹಾಸನದಿಂದಲೂ ಅತಿಮನೋಹರವಾಗಿ ಕಾಣಿಸುತ್ತಿತ್ತು ಇಂಥ ಶೋಭಾಯಮಾನವಾದ ಮಂಟಪದಲ್ಲಿ ಸರ್ವಜನರು ಸಾಯಂಕಾಲಕ್ಕೆ ಬಸವೇಶ್ವರನ ಸಿಂಹಾಸನದೆದುರಿಗೆ ನಡೆದ ಶರಣಬಸವೇಶ್ವರ ದಾಸೋಹ ವಿದ್ಯಾರ್ಥಿಗಳ ಭಜನೆಯನ್ನು ಒಂದೇ ಚಿತ್ತದಿಂದ ಕೇಳಿ ಆನಂದಭರಿತರಾದರು ಅನಂತರ ೧೦ ವರ್ಷದ ಬಾಲಕನಾದ ಅಪ್ಪಾರಾವ ದೇಶಮುಖ ನಾಗ ಕಲ ಈತನು, ಬಸವಜಯಂತಿಯನ್ನು ಈ ಎರಡು ವರ್ಷಮಾಡಿದಂತೆ ಮುಂ ಪ್ರತಿವರ್ಷ ರಮ್ಯವಾಗಿ ಮಾಡುವುದಕ್ಕೆ ಸರ್ವರೂ ಪ್ರಯತ್ನಪಡಬೇಕೆಂ ಚಿಕ್ಕ ಭಾಷಣಮಾಡಿದನು. ಆಮೇಲೆ ಮಂಗಲಾರತಿಯನ್ನು ಮಾಡಿ ಶಿ ನಾಮಘೋಷಗೈದಿದನಂತರ ಸಭಾವಿಸರ್ಜನವಾದಿದರು.

ಪ್ರತ್ಯಕ್ಷದರ್ಶಿ

ನಿಜಾಮು ಇಲಾಖಾ ದುಬಲಗುಂಡಿ ತಾ|| ಗೋರಟ.

ಈ ಗ್ರಾಮದಲ್ಲಿ 200 ವೀರಶೈವರ ಮನೆಗಳೂ ಇತರ ಜನರ ಮ ಗಳೂ ಇದ್ದಾಗ್ಯೂ ಶಿಥಿಲವಾಗಿರುವ ಶ್ರೀ ನಂದೀಶ್ವರಸ್ವಾಮಿಯ ದೇವಾ ಯವು ಪರಿಪಡಿಸಲ್ಪಟ್ಟು ಮಾಯವಾಗಿರುವ ನಂದೀಶ್ವರ ವಿಗ್ರಹವು ಪುನಃ ಸ್ಥಾಪಿಸಲ್ಪಡದಿರುವುದು ಆಶ್ಚರ್ಯಜನಕವಾಗಿದೆ. ಈ ಗ್ರಾಮದ ಕೆ ಭಕ್ತರುಗಳು ಶ್ರೀ ಕಾಶೀಪಟ್ಟಣಕ್ಕೆ ಹೋಗಿ ನಂದೀಶ್ವರ ವಿಗ್ರಹವನ್ನು ತೆಗೆದುಕೊಂಡು ಬಂದಿರುವರಾದರೂ ಇನ್ನೂ ದುರ್ದೈವದಿಂದ ಪ್ರತಿಷ್ಠೆ ಮಾಡಿಲ್ಲವಾದ್ದರಿಂದ ನಂದೀಶ್ವರ ಪೂಜೆಯನ್ನು ಮಾಡುವುದು ಹೇಗೆಂದು ಯೋಚಿಸುತ್ತಿರುವಷ್ಟರಲ್ಲಿ ಶ್ರೀ ಬಸವೇಶ್ವರನ ಮಹಿಮೆಯಿಂದ ನಂದೀಶ್ವರನೇ ಪ್ರತ್ಯಕ್ಷನಾಗಿ "ನಾನು ದೇವಸ್ಥಾನದಲ್ಲಿಲ್ಲವೆಂದು ನೀವು ಚಿಂತಿಸಬೇಡಿ ಈಗೋ ನಾನು ಪ್ರತ್ಯಕ್ಷನಾಗಿರುತ್ತೇನೆ. ಪೂಜಾದಿಗಳನ್ನು ಮಾಡಿ" ಎಂದು ಹೇಳಿದನೋ ಎಂಬಂತೆ ದೇವಸ್ಥಾನದ ಗದ್ದಿಗೆಯ ಮೇಲೆ ಬಸವನಾಗಿ ಬ ರುವ ಗೂಳಿಯು ಬಂದು ಕುಳಿತಿರುವುದನ್ನು ನೋಡಿ ಆಶ್ಚರ್ಯಚಕಿತರಾ ತಾಳಮೇಳಗಳಿಂದಲೂ ಮೋಹಕೋಪಚಾರದಿಂದಲೂ ಪೂಜಿಸಿ ಸಮಸ್ತರಿಗೆ ಪ್ರಸಾದವನ್ನು ಹಂಚಿ ರಾತ್ರಿ ಬಸವೇಶ್ವರನ ಫೋಟೋವನ್ನು ಪಾಲ್ಕಿಯ ರಿಸಿ, ಶ್ರೀ ಆದಿ ಅಪ್ಪಾಸ್ವಾಮಿ ಹಿರೇಮಠದವರನ್ನು ಮುಕ್ತಾಂದು ಪಾ ಯಲ್ಲಿ ಕುಳ್ಳಿರಿಸಿ ಊರಲ್ಲೆಲ್ಲ ಉತ್ಸವಮಾಡಿ ಸ್ವಸ್ಥಳಕ್ಕೆ ಬಂದು ಮಹಾ ಮಂಗಳಾರತಿ ಮಾಡಿ ಶ್ರೀಗಳವರಾಶೀರ್ವಾದ ಪಡೆದು ತೆರಳಿದರು.

ಶಿವಪ್ಪ ಚವಳಿ.

ಕಾನಕಾನಹಳ್ಳಿ, ತಾ|| ಸರ್ವಮಾನ್ಯ ಮೊಳಿಗೆ ಬೇವಿನಕುಪ್ಪೆ

ತಾ 11 ನೇ ಶನಿವಾರ ಶ್ರೀ ಬಸವೇಶ್ವರನ ಜಯಂತ್ಯುತ್ಸವವು ಪ್ರ ವರ್ಷವೇ ಮೊಟ್ಟಮೊದಲು ಆ ದ್ವಿತೀಯ ಶಂಭುವಿನ ಮಹಿಮೆಯಿಂದ ಗ್ರಾಮದ ವೀರಶೈವಮಂಡಲಿಯವರು ಮೊದಲೆ ಮಠದ ಶ್ರೀ ವೇ|| ಚರಮೂ ರ್ತಿಗಳು ಸೋಮಶೇಖರ ಸ್ವಾಮಿಗಳವರಿಂದ ಕ್ರಮಪ್ರಕಾರ ಪೂಜೆಗೈಸಿ ನಂತರ ಸದರಿ ಸ್ವಾಮಿಯವರು 4 ಘಂಟೆಗೆ ಸರಿಯಾಗಿ ಆ ದ್ವಿತೀಯ ಶಂ ಭುವಿನ ವಿಚಾರವಾಗಿ 6 ಘಂಟೆವರೆಗೂ ಬಹಳ ಸ್ವಾರಸ್ಯವಾದ ಉಪನ್ಯಾಸ ವನ್ನು ಮಾಡಿದನಂತರ ಸ್ವಾಮಿಯವರು ಈ ವರ್ಷದ ಜಯಂತ್ಯುತ್ಸವದ ಹಾಗೆ ಪ್ರತಿ ವರ್ಷವೂ ಜಯಂತಿ ಉತ್ಸವವನ್ನು ನೆರವೇರಿಸಬೇಕೆಂದು ಹೇಳಿ ದ್ದರ ಮೇಲೆ ಸಭಿಕರೆಲ್ಲಾ ಒಪ್ಪಿ ಕರತಾಡನ ಮಾಡಿದರು ಆ ರಾತ್ರಿ ಘಂಟೆಗೆ ಸರಿಯಾಗಿ ಊರ ಮುಂದಿನ ಬಸವೇಶ್ವರನನ್ನು ಮತ್ತು ಬಸವೇ ಶ್ವರನ ಭಾವಚಿತ್ರವನ್ನು ಪ್ರತ್ಯೇಕವಾಗಿ ವಿರಾಜಿಸಿದ್ದ ಜೋಡಿನ ಅಡ್ಡ ಪಲ್ಲ ಕ್ಕಿಯಲ್ಲಿರಿಸಿ ಎರಡು ಉತ್ಸವಗಳನ್ನು ಸಹ ಈ ಗ್ರಾಮದ ಪಾ|| ಬಸಪ್ಪ ನವರು ಮತ್ತು ಗ್ರಾಮದ ವೀರಶೈವ ಮುಖ್ಯಸ್ಥರುಗಳು ಇನ್ನು ಮುಂ ದವರುಗಳು ಉತ್ಸವದಲ್ಲಿ ಭಾಗಿಗಳಾಗಿ ಹನ್ನೊಂದು ಘಂಟೆಯ ವರೆಗೆ ಬಹಳ ವಿಜೃಂಭಣೆಯಿಂದ ನೆರವೇರಿಸಿದನಂತರ ನೆರೆದಿದ್ದ ಜನಗಳಿಗೆ ಬಸವೇಶ್ವರನ ಪ್ರಸಾದರೂಪವಾದ ಕೋಸಂಬರಿ, ಪಾನಕ ಕೊಡಲ್ಪಟ್ಟಿತು ಪ್ರತಿ ವರ್ಷವೂ ಇದರಂತೆ ನಡೆಯಲೆಂದು ಆ ದ್ವಿತೀಯ ಶಂಭುವನ್ನು ಪ್ರಾರ್ಥಿಸಿ ತೆರಳಿದರು.

ಚಂದಾದಾರ.

ಯಾದಗಿರಿ.

ಅದ್ಭುತ ಮಹಿಮಾಶಾಲಿಯೂ, ಕರ್ನಾಟಕ ಭಾಷೋದ್ಧಾರಕನೂ ಆದ ಬಸವೇಶ್ವರನ ಜಯಂತಿಯ ದಿವಸ ಯಾದಗಿರಿಯ ಎಲ್ಲ ಮತದ ವ ರ್ತಕರ ಅಂಗಡಿಗಳೆಲ್ಲಾ ಬಂದುಮಾಡಲ್ಪಟ್ಟಿದ್ದವು ಸರ್ವ ಮತದವರೂ ಈ ಉತ್ಸವದಲ್ಲಿ ಭಾಗಿಗಳಾಗಿದ್ದರು. ಅರ್ಥಾತ್ ಸರ್ವರೂ ಬಸವೇಶ್ವರನ ಮಹಿಮಾತಿಶಯವನ್ನು ಅರಿತು ಉತ್ಸವವನ್ನು ಮಾಡಿದ್ದನ್ನು ನೋಡಿದ ಯಾವ ವೀರಶೈವನಿಗೆ ತಾನೇ ಸಂತೋಷವಾಗಲಿಕ್ಕಿಲ್ಲ! ಪ್ರತಿಯೊಂದು ಮನೆ ಯವರು ಆ ಹೊತ್ತಿನ ದಿವಸ ಹಬ್ಬದಂತೆ ಆಚರಿಸಿದರು, ಸಾಯಂಕಾಲ ದಲ್ಲಿ ವಾಲೇಜಿನಿಂದ ಉತ್ಸವವು ಹೊರಟಿತು. ಅನೇಕ ವಾದ್ಯ ವೈಭವಗಳೊ ಡನೆ ಹೊರಟ ಈ ಉತ್ಸವದಲ್ಲಿ ೪-೫ ಸಾವಿರ ಜನರು ಕೂಡಿ ಯಾದಗಿರಿ ನಲ್ಲಿ [redacted] ವನೇ ಆದದ್ದಿಲ್ಲವೆಂದು ಹಾಡಿಹರಸುತ್ತಿದ್ದರು. ಮ [redacted] ಲ್ಲಿ ಸಭೆಸೇರಿ ಅನೇಕ ವಿದ್ವಾಂಸರ ಭಾಷಣ [redacted] ನ್ನು ಅಚ್ಚುಕಟ್ಟಾಗಿ ನಡೆಯಲಿಕ್ಕೆ ಯಾ [redacted] ಲಿಯವರ ಧನಸಹಾಯವೇ ಕಾರಣವು. ಈ

…ಟ ಸರ್ವ ಶ್ರೀಯುತರು ಇಲ್ಲಿಯ ಬಾಲಿ ಕಂಪನಿಯ ಪರವಾಗಿ ರಂಗಸಜ್ಜಿಕೆಯನ್ನು ಕೊಡಿಸಿ ಹುಬ್ಬಳ್ಳಿ ಇವರಿಗರುತ್ತವೆ. ಇವರು ಬಹಳ ಅಭಿಮಾನದಿಂದ ಶ್ರಮ ವಹಿಸಿ ಕಾರ್ಯವನ್ನು ಮಾಡಿರುತ್ತಾರೆ. ಇವರು ಇವರಿಗೆ ಸರ್ವ ಸಂಭಕರನ್ನು ಕೊಡಲೆಂದು ಇಚ್ಛಿಸುವೆನು. ಒಟ್ಟಿನ ಮೇಲೆ ಬಸವೇಶ್ವರ ಜಯಂತಿಯು ಒಳ್ಳೇ ಚೆನ್ನಾಗಿ ಆದದ್ದು ಸಂತೋಷಕರವಾಗಿದೆ.

ಓರ್ವ ಉತ್ಸವಭಾಗಿ

ಚಿತಾಪುರ

ಗುಲ್ಬರ್ಗಾ ಜಿಲ್ಲಾ ಮೈಕಿ ಚಿತಾಪುರವೆಂಬ ಗ್ರಾಮದಲ್ಲಿ ಇದೇ ವೈಶಾಖ ಶುದ್ಧ ೩ ಶನಿವಾರ ಸಕಲ ವೀರಶೈವರು ಶ್ರೀ ಬಸವೇಶ್ವರ ಜಯಂತಿಯನ್ನು ಒಳ್ಳೇ ವೈಭವದಿಂದ ನೆರವೇರಿಸಿದರು. ಆಹೊತ್ತು ಊರಲ್ಲಿ ಎಲ್ಲರೂ ತಮ್ಮ ತಮ್ಮ ಮನೆಗಳಲ್ಲಿ ಇದೊಂದು ದೊಡ್ಡ ಹಬ್ಬವನ್ನಾಗಿ ಆಚರಿಸಿದಲ್ಲದೆ ಶ್ರೀಮನ್ನಿರಂಜನ ರಾವೂರ ಸಿದ್ಧಲಿಂಗಸ್ವಾಮಿಗಳವರನ್ನೂ, ದಿಗ್ಗಾವಿಯ ಚರಮೂರ್ತಿಗಳನ್ನೂ ಬರಮಾಡಿಕೊಂಡು ಹಿರೇಮಠದಲ್ಲಿ ಪಾದಪೂಜಾ ಅನ್ನಸಂತರ್ಪಣೆಯನ್ನು ಮಾಡಿ ಆ ಮಠದ ಅಧಿಕಾರಿಗಳಾದ ಶ್ರೀ ಚಂದ್ರಶೇಖರಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಮಧ್ಯಾಹ್ನ ೪ ಘಂಟೆಗೆ ಸಭೆ ಸೇರಿ ಮಿ|| ಕಂಠಳಪ್ಪ ಫೋಟೋಗ್ರಾಫರ್ ಗುರುಮಠಕಲ್ಲು ಮಿ|| ನಾಗಪ್ಪ ನ್ಯಾಮದರಿ ಇವರು ಬಸವೇಶ್ವರನ ವಿಷಯವಾಗಿಯೂ, ಧರ್ಮದ ವಿಷಯವಾಗಿಯೂ ಭಾಷಣ ಮಾಡಿದರು. ಅನಂತರ ಅಧ್ಯಕ್ಷರು ಜಯಂತಿಯ ಉದ್ದೇಶ, ಬಸವೇಶ್ವರನು ವೀರಶೈವ ಸಮಾಜಕ್ಕೆ ಮಾಡಿದ ಉಪಕಾರ ಈ ವಿಷಯಗಳ ಮೇಲೆ ಭಾಷಣವನ್ನು ಮಾಡಿ ರಾತ್ರಿ ೭ ಘಂಟೆಗೆ ಸಭಾ ವಿಸರ್ಜನೆಯನ್ನು ಮಾಡಿದರು. ಆ ದಿವಸ ಬಜಾರವೆಲ್ಲ ಬಂದಿಸಲ್ಪಟ್ಟು ಗ್ರಾಮವು ತಳಿರು ತೋರಣಗಳಿಂದಲೂ, ಧ್ವಜ ಪತಾಕೆಗಳಿಂದಲೂ, ಅಲ್ಲಲ್ಲಿ ಬಸವೇಶ್ವರನ ಭಾವಚಿತ್ರಗಳಿಂದಲೂ, ಅಲಂಕೃತವಾಗಿ ಎಂಥಾ ನಾಸ್ತಿಕನಿಗಾದರೂ ಭಕ್ತಿ ಭಾವವನ್ನು ಹುಟ್ಟಿಸುವಂಥಾದ್ದಾಗಿತ್ತು. ಆಮೇಲೆ ಬಸವೇಶ್ವರನ ಚಿತ್ರಪಟದ ಮೆರವಣಿಗೆಯು ೭ ಘಂಟೆಗೆ ಪ್ರಾರಂಭವಾದದ್ದು ೧೨ ಘಂಟೆಯವರೆಗೂ ಗ್ರಾಮದಲ್ಲೆಲ್ಲ ಶೋಭೆಯನ್ನುಂಟುಮಾಡಿ ಮಠಕ್ಕೆ ಬಂದು ತಲ್ಪಿತು.

ಓರ್ವ ಬಸವಭಕ್ತ

ನಾರಾಯಣಪೇಟೆ

ಇದೇ ತಾ|| ೧೧ ನೇ ಶನಿವಾರ ನಾರಾಯಣಪೇಟೆಯಲ್ಲಿ ಪದ್ಧತಿಪ್ರಕಾರ ಜರಿಗಿದ ಸಮಾರಂಭವು ಸಾರಣೆಕಾರಣೆಗಳಿಂದಲೂ ತಳಿರುತೋರಣಗಳಿಂದಲೂ ಧ್ವಜಪತಾಕೆಗಳಿಂದಲೂ ನೋಟಕರ ಮನಾನಂದಕಾಗುವಂತೆ ಕೋರುತ್ತಿತ್ತು. ಆ ಸಮಾರಂಭವನ್ನು ಶ್ರೀ ಬಸವೇಶ್ವರ ದೇವಾಲಯದಲ್ಲಿಯೇ ಸಮಸ್ತ ಪುರನಿವಾಸಿಗಳು ಒಟ್ಟಾಗಿ ಅತ್ಯಂತ ಉತ್ಸಾಹದಿಂದ ನೆರವೇರಿಸಿದರು. ಪ್ರಮಥಗಣತಿಂತಿಣಿಯು ಮೃಷ್ಟಾನ್ನ ಭೋಜನವು ಭಕ್ತರೆಲ್ಲರಿಗೂ ಕಾಂಬಲವು ಕೊಡಲ್ಪಟ್ಟು ತೃಪ್ತಿಗೊಳಿಸಲ್ಪಟ್ಟಿತು. ಮಧ್ಯಾಹ್ನ ೨ ಗಂಟೆಯವರೆಗೂ ಮಹಾಗಣಾರಾಧನೆಯು ನಡೆದು ಅನಂತರ ಸಭೆ ಸೇರಿ ಕೆಲ ವಿದ್ವಾಂಸರ ಭಾಷಣಗಳಾದನಂತರ ವೇ|| ರಾ|| ಸಂಸ್ಕೃತಪಾಠಶಾಲಾಧ್ಯಾಪಕರ ಶ್ರೀಕಂಠಶಾಸ್ತ್ರಿಗಳು ಪರಶಿವಸ್ವರೂಪಿಯಾದ ಬಸವೇಶ್ವರನ ಅವತಾರ ಮಹತ್ವಗಳನ್ನು ಮನವತ್ತರ ಚಿತ್ತಾಕರ್ಷಕವಾಗುವಂತೆ ಹೇಳಿ ಉಪಸಂಹಾರ ಕ್ರಮದಿಂದ ಸಭೆಯು ವಿಸರ್ಜಿಸಲ್ಪಟ್ಟಿತು. ಆಮೇಲೆ ಮ|| ಬಸಪ್ಪನವರು ಕಾನಾಗಡ್ಡಿ ವ್ಯವಸ್ಥಾಪಕ ಇವರ ಪುತ್ರಿ ೧೦ ವರ್ಷದ ವಿದ್ಯಾವತಿ ನಾಗಮ್ಮ ಬಾಯಿ ಮತ್ತು ಶರಣಮ್ಮ ಬಾಯಿ ಈ ಉಭಯ ಕನ್ಯಾರತ್ನಗಳು ನೂರಾರು ಮಹಿಳೆಯರಲ್ಲಿ ಬಸವನ ಭಾವಪಟವನ್ನು ತೊಟ್ಟಿಲಲ್ಲಿಟ್ಟು ಬಸವನಾಮಾಭಿಧಾನವಾದ ಪದ್ಯಗಳನ್ನೂ ಜೋಗುಳವನ್ನೂ ಸುಸ್ವರದಿಂದ ಹಾಡಿ ನಾಮಕರಣ ಮಾಡಿ ಬಾಗಿನವನ್ನು ಕೊಟ್ಟು ಆರತಿಯನ್ನೆತ್ತಿದಮೇಲೆ ನಾನಾ ವಾದ್ಯಗಳ ಸಮೇತ ಮಂಗಳಾಚರಣೆ ನಡೆದು ಪ್ರಸಾದವು ಹಂಚಲ್ಪಟ್ಟು ಈಶ್ವರನಾಮಸಂಕೀರ್ತನೆಯಿಂದ ಸಭೆಯು ಸಮಾಪ್ತಿಗೊಂಡಿತು.

ಓರ್ವ ಪ್ರತ್ಯಕ್ಷದರ್ಶಿ

ಗುಂಡ್ಲುಪೇಟೆ ತಾ|| ಪಡುಗೂರು.

ತಾ|| ೧೧ ನೇ ಶನಿವಾರ ಈ ಗ್ರಾಮದ ಬಸವೇಶ್ವರಸ್ವಾಮಿಯ ದೇವಸ್ಥಾನವನ್ನೂ ಬೀದಿಗಳನ್ನೂ ತಳಿರುತೋರಣಗಳಿಂದಲಂಕರಿಸಿ, ಬೆಳಗಿನ ೮ ಘಂಟೆಗೆ ಉತ್ಸವಮೂರ್ತಿಯನ್ನು ಶೃಂಗರಿಸಿದ ಪುಷ್ಪಪಲ್ಲಕ್ಕಿಯಲ್ಲಿಟ್ಟು ಭಜನೆ ನಂದಿಧ್ವಜ ವಾದ್ಯಾದಿಮಂತ್ರಗಳಿಂದ ಬೀದಿಗಳಲ್ಲಿ ಉತ್ಸವವನ್ನು ಎಲ್ಲಾ ಜನರೂ ನಡೆಯಿಸಿದರು. ಎಲ್ಲಾ ಜನಗಳಿಗೂ ಭೋಜನವಾಗಿ ಮಧ್ಯಾಹ್ನ ಈ ಗ್ರಾಮದ ವೀರಶೈವರೇ ಆದಿಯಾಗಿ ಎಲ್ಲಾ ಮತಸ್ಥರೂ ಬಸವೇಶ್ವರಸ್ವಾಮಿ ದೇವಸ್ಥಾನದ ಮುಂಭಾಗದ ಮೈದಾನದಲ್ಲಿ ಸಭೆ ಸೇರಿ ಬಸವಪುರಾಣ ಪಾರಾಯಣವನ್ನು ನಡೆಸಿದನಂತರ ಮ|| ಮಾಸ್ಟರ್ ವೆಂಕಟರಮಣಯ್ಯನವರೂ ಮ|| ಪಿ. ಸಿ. ಲೆಕ್ಕಪ್ಪನವರೂ ಬಸವಾವತಾರಕ್ಕೆ ಕಾರಣವನ್ನೂ ಬಸವೇಶ್ವರನಲ್ಲಿದ್ದ ಶಕ್ತಿ ಸಾಮರ್ಥ್ಯಗಳನ್ನೂ ಬಸವೇಶ್ವರನಿಗೂ ಇತರ ಅವತಾರ ಪುರುಷರಿಗೂ ಇರುವ ವ್ಯತ್ಯಾಸವನ್ನೂ ಶ್ರೀಮಾನ್ ಬಸವೇಶ್ವರನು ನಡೆಯಿಸಿದ ಅನೇಕ ಪವಾಡಗಳನ್ನೂ … ಇಂದ ಸಭಿಕರ ಮನಸ್ಸಿಗೆ ಹಿಡಿಯುವಂತೆ ಚೆನ್ನಾಗಿ ಬೋಧಿಸಿದರು. ಅನಂತರ ವಾದ್ಯಗಳು ಭೋರ್ಗರೆಯುತ್ತಿರುವಾಗ್ಗೆ ಸಭೆಯು ಮುಕ್ತಾಯವಾಯಿತು. ದೇವರಿಗೆ ಮಂಗಳಾರತಿ ಮಾಡಲ್ಪಟ್ಟು ಸಭಿಕರಿಗೆ ಗಂಧಪುಷ್ಪ ಫಲತಾಂಬೂಲಾದಿಗಳು ನಡೆಸಲ್ಪಟ್ಟವು. ಆ ಮಹಾನುಭಾವನಾದ ಬಸವೇಶ್ವರಸ್ವಾಮಿ ಉತ್ಸವವನ್ನು ಐಕಮತ್ಯದಿಂದ ನಡೆಸಲು ಆದರಣೀಯರಾದ ಮ|| ಪಟೇಲ್ ಒಡೆಯಪ್ಪನವರಿಗೂ ಮ|| ಮುದ್ದಶೆಟ್ಟಿ ಪುಟ್ಟಪ್ಪನವರಿಗೂ, ಈ ಸ್ವಾಮಿ ಕಾರ್ಯದಲ್ಲಿ ಭಾಗಿಗಳಾದ ಮಹನೀಯರಿಗೂ ಶ್ರೀ ಬಸವೇಶ್ವರಸ್ವಾಮಿಯು ಮಂಗಳವನ್ನುಂಟುಮಾಡಲೆಂದು ಕೋರುವ,

ಶ್ರೀ ಬಸವಭಕ್ತ ಬಿ. ಅಂಗಡಿ ಬಸಪ್ಪ.

ಚಿಕ್ಕಮಗಳೂರು ತಾ|| ವಸ್ತಾರೆ ರೋಡ್ ಶಿವಯೋಗೀಶ್ವರ ಆಶ್ರಮ.

ಈ ವರುಷ ಬಸವಜಯಂತಿಯ ದಿವಸವಾಗಿ ಯಾವ ಆಲೋಚನೆಯೂ ಇಲ್ಲದೆ ಏಕಕಾಲದಲ್ಲಿಯೇ ಪ್ರಮಥರ ಕೃಪಾಬಲದಿಂದ ಅನೇಕ ಕಡೆಯಿಂದ ದವಸಧಾನ್ಯಗಳು ಒದಗಿ ನೋಡುವಂತೆ ಆಶ್ರಮದಲ್ಲಿ ಇದೇ ತಾ|| ೧೧ ನೇ ಶನಿವಾರ ಮಧ್ಯಾಹ್ನ ೧೨ ರಿಂದ ಸಾಯಂಕಾಲ ೭ ಘಂಟೆಯವರೆಗೆ ಬಂದಂಥ ಸಾವಿರಾರು ಜನ ಭಕ್ತಮಹೇಶ್ವರರುಗಳಿಗೆ ಸಂತರ್ಪಣೆಯು ನಡೆದು, ತಳಿರುತೋರಣಗಳಿಂದಲಂಕೃತವಾದ ಬೀದಿಯಲ್ಲಿ ಮಹೇಶ್ವರರ ಮತ್ತು ಶ್ರೀಗಳವರಾದ ಶ್ರೀ ಸಿದ್ಧಲಿಂಗಸ್ವಾಮಿಗಳ ಪಲ್ಲಕ್ಕಿಯ ಉತ್ಸವವು ಸಕಲ ವಾದ್ಯದೊಡನೆ ಸದರಿ ಆಶ್ರಮದಿಂದ ಹೊರಟು ರಾಜಬೀದಿಯಲ್ಲಿ ಬರುವಾಗ ನೋಡುವವರ ಮನಸ್ಸನ್ನು ಆಕರ್ಷಿಸುತ್ತ ಬಹಳ ವೈ [redacted] ತು. ಅನಂತರ ರಾತ್ರಿ ೮ ರಿಂದ ಬೆಳಗಿನ ೬ [redacted] ಬ್ಬೀದೇವರಹಳ್ಳಿ ಭಕ್ತಾದಿಗಳು ಸಾವಿರಾ… ಎಂಬ ಬೈಲಾಟ ನಾಟಕವನ್ನು ಬಹಳ ವಿ… ಕರುಣಾಮಯ ಶ್ರೀಮನ್ನಿರಂಜನ ಶ್ರೀ ಸಿದ್ಧ…

…ರು ಬಸವೇಶ್ವರನು ಪ್ರತಿಪಾದಿಸಿದ ಮತೀಯ … ತಿಳಿಸಿ … ಉಪನ್ಯಾಸ ಮಾಡಿದರು. ಈ ಕಾಲ ನಮ್ಮ ದೇಶದ … ಪ್ರತಿಯೊಬ್ಬರೂ ಸದ್ರಿ ಪ್ರಕಾರ ನಡೆಸಲು ಪ್ರಯತ್ನಿಸಬೇಕೆಂದು ಆಜ್ಞೆ ಕೊಡಿಸಿದರು. ಜಯಘೋಷದೊಡನೆ ನಮ್ಮನ್ನಾಳುವ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರವರ ಶ್ರೀಯವರ ಪ್ರಾರ್ಥನೆಯಿಂದ ಸಭಾ ವಿಸರ್ಜಿಸಲ್ಪಟ್ಟಿತು. ಓರ್ವ ಪ್ರತ್ಯಕ್ಷದರ್ಶಿ.

ಕಂಪ್ಲಿ ಜಿಲ್ಲಾ ಬಳ್ಳಾರಿ.

ಪ್ರತಿವರುಷದ ಪದ್ಧತಿ ಪ್ರಕಾರ ಇದೇ ವೈಶಾಖ ಶು|| ೩ ಸ್ಥಿರವಾರ ವೀರಶೈವಮತೋದ್ಧಾರಕನಾದ ಬಸವೇಶ್ವರನ ಜನ್ಮದಿವಸನಿಮಿತ್ತ ಉದಯ ೧೦ ಗಂಟೆಗೆ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ವೇದೋಕ್ತ ಮಂತ್ರದಿಂದ ಪಂಚಾಭಿಷೇಕ ಷೋಡಶೋಪಚಾರಗಳಿಂದ ಪೂಜಾಸಮಾರಂಭವನ್ನು ಜರಿಗಿಸಿ ೮ ಗಂಟೆಯಿಂದ ಗ್ರಾಮದ ತಳಿರುತೋರಣಗಳಿಂದಲಂಕೃತವಾದ ಮುಖ್ಯ ಬೀದಿಯಲ್ಲಿ ಶ್ರೀ ಬಸವೇಶ್ವರನ ಚಿತ್ರಪಟವನ್ನು ಪ್ರಭಾವಳಿ ಮೂರ್ತಿ ಉತ್ಸವವನ್ನೂ ಸ್ತೋತ್ರ ಪಂಚಕಳಸ ಮಕರತೋರಣ ಇತ್ಯಾದಿ ಬಿರುದುಗಳೊಡನೆ ಅತಿ ವಿಜೃಂಭಣೆಯಿಂದ ಜರುಗಿಸಲ್ಪಟ್ಟಿತು. ಉತ್ಸವದ ಮುಂಭಾಗದಲ್ಲಿ ಶೃಂಗರಿಸಿದ ಆನೆಯು ತನ್ನ ಸೊಂಡಲಿನಿಂದ ಚಮರ ಬೀಸುತ್ತ ಮಾವುತನ ಸಹಾಯದಿಂದ ತನ್ನ ಆಶ್ಚರ್ಯಕರವಾದ ನಾಟ್ಯವನ್ನು ತೋರಿಸುತ್ತ ಶ್ರೀ ಬಸವೇಶ್ವರಮೂರ್ತಿಗೆ ಪುಷ್ಪವೃಷ್ಟಿಗರೆಯುತ್ತಿತ್ತು. ಬೀದಿಯಲ್ಲಿ ಸುಮಂಗಲಿಯರು ಬಸವೇಶ್ವರನಿಗೆ ಫಲಪುಷ್ಪಗಳನ್ನರ್ಪಿಸಿ ಮಂಗಲವನ್ನು ಮಾಡುತ್ತಿದ್ದರು. ಉತ್ಸವದಲ್ಲಿ ಶ್ರೀಮದ್ವೀರಶೈವ ಭಕ್ತಮಾಹೇಶ್ವರರ ಮತ್ತು ಶಿವಭಕ್ತಿಸಂಪನ್ನರಾದ ಕರ್ನಾಟಕಾಭಿಮಾನಿಗಳು ಸಹಸ್ರಜನರು ನೆರದಿದ್ದು ಉತ್ಸವವು ವೈಭವದೊಡನೆ ರಾತ್ರಿ ೧೦ ಗಂಟೆಗೆ ಸ್ವಸ್ಥಾನವನ್ನು ಸೇರಿತು. ತದನಂತರ ವೇ|| ಪಗಡದಿನ್ನಿ ಚಂದ್ರಶೇಖರಶಾಸ್ತ್ರಿಗಳವರು ನೆರದಿದ್ದ ಜನರಿಗೆ ಭಗವಾನ್ ಬಸವೇಶ್ವರನು ಅವತರಿಸಿದ ಕಾರಣವನ್ನೂ ಆತನ ಪವಾಡಗಳನ್ನೂ, ವಿಸ್ತಾರವಾಗಿ ಹೇಳಿದರು. ಸರ್ವರೂ ಕೇಳಿ ಬಸವನಾಮಸಂಕೀರ್ತನೆಯಿಂದ ಮಂಗಲವನ್ನು ಮಾಡಿ ಜಯಘೋಷದೊಡನೆ ಸಮಾಪ್ತಿಗೊಳಿಸಿದರು. ಈ ಕಾರ್ಯವೆಲ್ಲವೂ ಕಂಪ್ಲಿ ಧರ್ಮಕರ್ತ ತೆಂಬ್ರಹಳ್ಳಿ ಮ|| ಗುರುಸಿದ್ದಯ್ಯನವರ ಯಜಮಾನ್ಯದಲ್ಲಿ ನಡೆದಿತೆಂದು ತಿಳಿಸಲು ಸಂತೋಷವಾಗುತ್ತದೆ.

ಬಸವಭಕ್ತ

ಹೆಗ್ಗಡದೇವನಕೋಟೆ ತಾ|| ಅಂತರಸಂತೆ

ಈ ಗ್ರಾಮದ ಶ್ರೀ ಬಸವೇಶ್ವರ ಭಜನಾ ಸಂಘದವರಿಂದ ಮಾಮೂಲ್ ಮೇರೆಗೆ ಇದೇ ವೈಶಾಖ ಶುದ್ಧ ೩ ಶನಿವಾರ ಶ್ರೀಮದ್ವೀರಶೈವ ಶಂಭು ಶ್ರೀ ಬಸವೇಶ್ವರಸ್ವಾಮಿ ಜಯಂತ್ಯುತ್ಸವ ಕಾರ್ಯಗಳು ವಿಧಿವತ್ತಾಗಿ ನಡೆಸಲ್ಪಟ್ಟು, ಸಾಯಂಕಾಲ ಶ್ರೀ ಬಸವೇಶ್ವರ ಜನನದ ಭಾವಚಿತ್ರವನ್ನು ದಿವ್ಯತರವಾಗಿ ಶೃಂಗರಿಸಲ್ಪಟ್ಟ ಪುಷ್ಪಮಂಟಪದೊಳಗಿರಿಸಲ್ಪಟ್ಟು ಉತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ನೆರವೇರಿಸಿದರು. ಉತ್ಸವದಲ್ಲಿ ನೂರಾರು ಭಕ್ತಮಾಹೇಶ್ವರರು ಭಾಗಿಗಳಾಗಿದ್ದರು. ಇದೇ ಗ್ರಾಮದ ಶ್ರೀ ವೃಷಭೇಂದ್ರವಿಲಾಸ ಕರ್ನಾಟಕ ನಾಟಕ ಮಂಡಳಿಯವರ ಭಜನೆಯು ತುಂಬಾ ಕರ್ಣಾನಂದವಾಗಿತ್ತು. ಅನಂತರ ಭಜನಾ ಮಂದಿರದಲ್ಲಿ ಶ್ರೀಯವರಿಗೆ ಮಹಾಮಂಗಳಾರತಿ ನಡೆದು ನಮ್ಮನ್ನಾಳುವ ಪ್ರಭುವರ್ಯರ ಶ್ರೀಯವರ ಪ್ರಾರ್ಥನಾನಂತರ ಶ್ರೀ ಭಗವಾನ್ ಬಸವರಾಜಕೀ ಜೈ ಎಂಬ ಜಯಘೋಷದೊಡನೆ ಸಭೆಯು ಬರಖಾಸ್ತಾಯಿತು. ಈ ಸಾರಿ ಶ್ರೀಯವರ ಉತ್ಸವ ಕಾಲದಲ್ಲಿ ಅಂಗಡಿಬೀದಿ ಮ|| ಗಳಾದ ಮುದ್ದು ಲಿಂಗಶೆಟ್ಟರು, ಚೆಂದ್ರಪ್ಪ ಶೆಟ್ಟರು, ಭೋಗಶೆಟ್ಟರು, ಎಂ. ಬಿ. ನಂಜಪ್ಪ ಶೆಟ್ಟರು, ಅಂತರಸಂತೆ ಎ. ಸುಬ್ಬಣ್ಣನವರು, ಮಾದಲಾಪುರ ಗ್ರಾಮದ ಹುಚ್ಚಪ್ಪನವರು, ಎಸ್ ಬಸಪ್ಪನವರು ಸಹ ತುಂಬಾ ಮುತುವರ್ಜಿ ವಹಿಸಿದ್ದರು. ಅಲ್ಲದೆ ಇದೇ ಸರಗೂರಿನ … ಗ್ರಾಮದ ಪಾಲುಮುತವ ಮ|| ಎಸ್. ಬಿ. ಮಾದೇಗೌಡರು ಶ್ರೀಯವರ ಪೂಜಾ ಸಮಯದಲ್ಲಿಡಲು, ೧೬ ರೂಪಾಯಿ ಬೆಲೆ ಬಾಳುವ ಒಂದು ಜೊತೆ ದೀಪಸ್ತಂಭವನ್ನು ಕೊಡಿಸಿಕೊಡುವುದಾಗಿ ವಾಗ್ದಾನ ಮಾಡಿದರು. ಇವರಿಗೂ ಮತ್ತು ಶ್ರೀಯವರ ಸೇವಾಕಾರ್ಯದಲ್ಲಿ ಸಹಾಯಮಾಡಿದ ಸರ್ವ ಭಗವದ್ಭಕ್ತರಿಗೂ ಮಹಾತ್ಮ ಶ್ರೀ ಬಸವೇಶ್ವರಸ್ವಾಮಿಯು ಸದಾ ಮಂಗಳವನ್ನುಂಟುಮಾಡಲೆಂದು ಹಾರೈಸುತ್ತೇನೆ.

ಸೆಕ್ರೆಟರಿ
ಶ್ರೀ ಬಸವೇಶ್ವರ ಭಜನಾ ಸಂಘ

ಕಡೂರು ತಾಲ್ಲೋಕು ಕಾರೇಹಳ್ಳಿ

ಈಗ್ಗೆ ೩ ವರ್ಷಗಳ ಹಿಂದೆ ಈ ಊರಿನಲ್ಲಿ ಇದೇ ಜಯಂತಿ ಹಬ್ಬದ ದಿವಸ ಬಸವೇಶ್ವರದೇವರು ಸ್ಥಾಪಿತವಾಯಿತು. ಈ ವರ್ಷ ನಮ್ಮ ಸ್ಕೂಲಿಗೆ ಟ್ರೈನಿಂಗ್ ಪಡೆದು ಬಂದಿರುವ ಮಾಸ್ಟರವರು ಶ್ರೀ ಬಸವೇಶ್ವರನ ಮಹಿಮಾತಿಶಯಗಳನ್ನು ಜನಗಳ ಮನಸ್ಸಿಗೆ ಬರುವಂತೆ ತಿಳಿಯಹೇಳಿ, ಅನ್ಯಮತೀಯರೇ ಬಸವೇಶ್ವರನ ಮಹಿಮೆಯನ್ನು ಕೊಂಡಾಡುತ್ತಾ ಈ ಹಬ್ಬವನ್ನು ಆಚರಿಸುತ್ತಿರುವಾಗ ವೀರಶೈವರಿಗೆ ಈ ದಿವಸವು ಎಷ್ಟು ಪವಿತ್ರದಿನವೆಂಬುದನ್ನು ತಮ್ಮ ಭಾಷಣದಿಂದ ವ್ಯಕ್ತಪಡಿಸಿ ವೈ|| ಶು|| ೩ ಶನಿವಾರ ೧ ನೇ ವಾರ್ಷಿಕ ಜಯಂತಿಯನ್ನು ನಾಡ ಹಬ್ಬವಾಗಿ ಆಚರಿಸುವಂತೆ ಮಾಡಿದರು. ಈ ದಿನ ಊರಲ್ಲೆಲ್ಲಾ … ಸಾರಿಸಲ್ಪಟ್ಟು … ವಿವಿಧ ರಂಗವಲ್ಲಿಗಳಿಂದ ಅಲಂಕೃತರಾಗಿ ಬಸವಣ್ಣಗಳನ್ನು ಬೀದಿಯ ಗಾಡಿಗಳಿಗೆ ಕಟ್ಟಿದ್ದ ನೈವೇದ್ಯ ಪೂಜೆಗಳಿಂದ ಸತ್ಕರಿಸಿದರು. ಮೇಲಂಗೆ ಷೋಡಶೋಪಚಾರ ಪೂಜೆಯು … ಬಸವೇಶ್ವರದೇವಸ್ಥಾನದ ಬಳಿ … ಯಾದದ್ದರಿಂದ ಸಕ್ಕರೆ ಭಕ್ಷ್ಯ ಭೋಜನಗಳು ಮುಗಿದ ತರುವಾಯ ಘನಶಾಸ್ತ್ರರವರು ನಮ್ಮ ಸ್ಕೂಲಿಗೆ ಕೊಟ್ಟಿರುವ ಧ್ವಜಪಟಗಳ ಸಹಿತ ವೈಭವದೊಡನೆ ಉತ್ಸವವು ಸಾಯಂಕಾಲ ಹೊರಟಿತು. ಇದನ್ನು ನೋಡಲು ಗ್ರಾಮಸ್ಥರು … ಬಂದಿದ್ದರು. ಈ ಕಾರ್ಯವನ್ನು ಮುತುವರ್ಜಿ ವಹಿಸಿ ವಿಜೃಂಭಣೆಯಿಂದ ನಡೆಯುವಂತೆ ಏರ್ಪಡಿಸಿದ ಯಜಮಾನ್ ಪಟೇಲ್ ಈರೇಗೌಡರು, ಮ|| ಈರೇಗೌಡರು, ಮಾಸ್ಟರ್ ಬಿ. ಶಂಕರಪ್ಪನವರು. ಇವರು ಎಲ್ಲಾ ಮಹಾಜನಗಳಿಗೂ ಶ್ರೀ ಬಸವೇಶ್ವರನು ಆಯುರಾರೋಗ್ಯೈಶ್ವರ್ಯಗಳನ್ನು ಕೊಟ್ಟು ಕಾಪಾಡಲೆಂದು ಪ್ರಾರ್ಥಿಸುತ್ತೇನೆ. ಈ ವೇಳೆಯಲ್ಲಿ ದೇವರ ಮನೆಕೊಟ್ಟ ಮ|| ಶಿದ್ದೇಗೌಡರು ಬಸವೇಶ್ವರನಿಗೆ ಎರಡು ಕಂಚಿನ ದೀಪಸ್ತಂಭಗಳನ್ನು ತಮ್ಮ ಭಕ್ತಿಯಾಗಿ ಕೊಟ್ಟದ್ದು … ವಿಷಯವಾಗಿದೆ. ಪ್ರತಿವರ್ಷವೂ ಹೀಗೆ ನಡೆಯುವಂತೆ, ಬಸವೇಶ್ವರನು ಜನರಿಗೆ ಬುದ್ಧಿಯನ್ನು ಪಾಲಿಸಲೆಂದು ಪ್ರಾರ್ಥಿಸುತ್ತೇನೆ.

ಎಂ. ಹುಚ್ಚಯ್ಯ ವಿದ್ಯಾರ್ಥಿ, ಸ್ಕೂಲ್ ಕಾರೇಹಳ್ಳಿ.

ಮುಕ್ತೇವಿ

[redacted] ನಿವಾರ ಇಲ್ಲಿಯ ಶಿವಾನುಭವ ಸಂಘದವರು ಬಸವೇ… ವರ್ಷಕ್ಕಿಂತ ಈ ವರ್ಷ ಬಹಳ ಉತ್ಸಾಹದಿ… ದೇವಸ್ಥಾನದ ಮುಂದೆ ಮತ್ತು … ಗಂಟೆಗಳನ್ನು … ಶನಿವಾರ ಪ್ರಾತಃಕಾಲ [redacted]

…ನಡ್ಲಿ … ಬಸವೇಶ್ವರ ಫೋಟೋವನ್ನು ಮೆರವಣಿಗೆ … ಪೂಜಾ ಅನಂತರ ಮಹಾ ಮಂಗಳಾರತಿ ನಡೆದು ಸಂಜೆ ೬ ಘಂಟೆಗೆ ಮ|| ಚನ್ನಬಸಪ್ಪ … ಬಿ.ಎ., ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ … ಇವರು ಬಸವೇಶ್ವರನ … ಹೇಳಿದ ಮೇಲೆ, ಮ|| ಗೆ… ಇವರು ಬಸವೇಶ್ವರನ ಮಹತ್ವವನ್ನು ಚೆನ್ನಾಗಿ ಬೋಧಿಸಿದರು. ರಾ|| ಚನ್ನಬಸಪ್ಪನವರು ಅಸ್ಪೃಶ್ಯತಾನಿವಾರಣೆಯ ಬಗ್ಗೆ ಮಾತನಾಡಿದ ಮೇಲೆ … ಇವರು ಈ ವರ್ಷದಲ್ಲಿ ಆಗತಕ್ಕ ಜಾತಿ ಜಾತ್ರೆಯನ್ನು ಬಂದುಮಾಡಲಿಕ್ಕೆ ಸರ್ಕಾರದವರನ್ನು ವಿನಯಪೂರ್ವಕ ಬೇಡಿಕೊಂಡರು. ಮಿ|| ಚನ್ನಬಸಪ್ಪ ಹಿರೇಮಠ ಬಿ.ಎ., ಶಿವಪುತ್ರಪ್ಪ … ಇಂಟರ್ ಕ್ಲಾಸ್ ಈ ಉಭಯತರು ಬಸವೇಶ್ವರನ ಮಹತ್ವವನ್ನು ಈಗಿನ ಪರಿಸ್ಥಿತಿಗೆ ಹೊಂದಿಸಿ ಬಹು ಚೆನ್ನಾಗಿ ತಿಳಿಸಿದರು. ಅನಂತರ ಇಲ್ಲಿಯ ವಿರಕ್ತಮಠದ ಶಿವಲಿಂಗಸ್ವಾಮಿಗಳು ಬಸವೇಶ್ವರನ ಮಹತ್ವದಮೇಲೂ, ದೇವದಾಸಿ … ಮೇಲೂ ಎಲ್ಲ ರೈತ ಜನರಿಗೆ ಒಳ್ಳೇ … ಅರ್ಧ ಘಂಟೆಯವರೆಗೆ ಸ್ಫೂರ್ತಿದಾಯಕ ಭಾಷಣ ಮಾಡಿದರು. ಅಧ್ಯಕ್ಷರ ಸಮಾರೋಪ ಭಾಷಣವಾದ ಮೇಲೆ ಎಂ. ಎಸ್. ಪಾಟೀಲ ಸಬ್-ಜಡ್ಜ್ ಇವರು ಜಾತಿಯ ಜಾತ್ರೆಯ ಸಂಬಂಧ ಹೇಳಿದರು. ಅತ್ತರ ಗುಲಾಬಿ ಹಾರ ತುರಾಯಿ ಹಂಚಲ್ಪಟ್ಟಮೇಲೆ ಸಭೆಯ ಕೆಲಸವು ಸಮಾಪ್ತಿಯಾಯಿತು. ಅನಂತರ ಪಾಲಕಿಯಲ್ಲಿ ಬಸವೇಶ್ವರನ ಫೋಟೋ ಇಡಲ್ಪಟ್ಟು ಮೆರವಣಿಗೆಯು ರಾತ್ರಿ ೧೦ ಘಂಟೆವರೆಗೆ ನಡೆದು ಎಲ್ಲ ಕಾರ್ಯ ಸಮಾಪ್ತಿಯಾಯಿತು. ಈ ಉತ್ಸವಕ್ಕೆ ಹಿರೇಮಠದ ಪಟ್ಟಾಧಿಕಾರಿಗಳೂ, ವಕೀಲರೂ ಡಾಕ್ಟರರೂ ಶಾಲಾ ಮಾಸ್ತರರೂ ಕಚೇರಿ ಕಾರಕೂನರೂ ಊರ ದೊಡ್ಡ ದೊಡ್ಡ ಪ್ರಮುಖರೂ ಸೇರಿ ಸಾವಿರಾರು ಜನರು ಉತ್ಸವದಲ್ಲಿ ಭಾಗಿಗಳಾಗಿದ್ದರು.

ಸೇವಕ, ಶಿವಾನಂದ.

ರಾಯಚೂರು ಜಿಲ್ಲೆಕ್ಕೆ ಸೇರಿದ ಮಸ್ಕಿ.

ನಮ್ಮ ಗ್ರಾಮದಲ್ಲಿ ಪದ್ಧತಿಯಂತೆ ಇದೇ ವೈಶಾಖ ಶು|| ೩ ಶ್ರೀ ಬಸವಜಯಂತಿಯ ಹಬ್ಬವನ್ನು ಸರ್ವವೀರಶೈವರೂ ಇತರ ಮತಸ್ಥರೂ ತಂತಮ್ಮ ಮನೆಗಳಲ್ಲಿ ಉತ್ಸಾಹದಿಂದ ಮಾಡಿದರು. ಮುಂಜಾನೆ ಜಲಾಶಯಕ್ಕೆ ಹೋಗಿ ಬಸವಣ್ಣಗಳನ್ನು ಮೈತೊಳೆದುಕೊಂಡು ಬಂದು ಯಾವ ಶ್ರಮದ ಕೆಲಸಗಳಿಗೂ ಹಚ್ಚದೆ ಪೂಜೆ ಪುರಸ್ಕಾರಾದಿಗಳನ್ನು ಗೈದು ವಿಶ್ರಾಮಕೊಟ್ಟರು. ಸಾಯಂಕಾಲ ೬ ಗಂಟೆಗೆ ಶ್ರೀ ವೇ|| ಬಸವಪ್ಪಶಾಸ್ತ್ರಿಗಳವರ ಮಠಕ್ಕೆ ಸರ್ವಸದ್ಗೃಹಸ್ಥರೂ ಮುಖಂಡರೂ ವ್ಯಾಪಾರಸ್ಥರೂ ಶಾಸ್ತ್ರಿಗಳಿಂದ ಮುಂಚಿತವಾಗಿಯೇ ಸೂಚಿತವಾದಂತೆ ಬಂದು ಸೇರಿದ್ದರು. ಪ್ರಾರಂಭದಲ್ಲಿ ಶ್ರೀ ಬಸವನ ಸ್ತೋತ್ರವಾದ ಬಳಿಕ ಶ್ರೀ ವೇ|| ಗುರುಶಾಂತಯ್ಯ ಹಿರೇಮಠ ನೀರಲಕೆರೆ ಇವರು ಶಾಸ್ತ್ರ ಮೊದಲೇ ಬರೆದು ತಂದಿದ್ದ ಶ್ರೀ ಬಸವ ಚರಿತ್ರೆಯೊಳಗಿನ ಪವಾಡಗಳ ಮಹಿಮೆಗಳನ್ನೂ ಬಸವಣ್ಣನವರ ವಚನಗಳನ್ನೂ ಜನರ ಮನಸ್ಸಿನಮೇಲೆ ಸುಬೋಧವಾಗುವಂತೆ ಸ್ಪಷ್ಟ ಓದಿ ಹೇಳಿದರು. ಅನಂತರ ಶ್ರೀ ವೇ|| ಬಸವಪ್ಪಶಾಸ್ತ್ರಿಗಳವರೂ ಸದರಿ ವಿಷಯವನ್ನು ಪುಷ್ಟೀಕರಿಸಿ ಆ ಮತೋದ್ಧಾರಕನಾದ ಬಸವಣ್ಣನವರ ಎಷ್ಟೋ ಮಹತ್ವಗಳನ್ನು ವಿಶದವಾಗಿ ವರ್ಣಿಸಿ ಪಾಮರರಿಗೂ ತಿಳಿಯುವಂತೆ ಬೋಧಿಸಿದರು. ಆ ಬಳಿಕ ಸಿದ್ಧರಾಮಪ್ಪ … ಪ್ರತಿವರ್ಷ ಶ್ರೀ ಬಸವಜಯಂತಿಯನ್ನು ಸಕಲರೂ ಇದೇ ಪ್ರಕಾರ ಅವಶ್ಯಕವಾಗಿ ತಪ್ಪದೆ ಮಾಡಬೇಕೆಂತಲೂ ಯಥಾವತ್ ಸಮ್ಮೇಳನ ಕೂಡಿ ಆ ಮಹಾತ್ಮನ ಪುಣ್ಯಚರಿತ್ರೆಯನ್ನೋದಿ ಕೀರ್ತನೆಗಳನ್ನು ಹಾಡಿ ವ್ಯಾಖ್ಯಾನಗಳನ್ನು ಕೇಳಿ ಧನ್ಯರಾಗಬೇಕೆಂತಲೂ ತಿಳಿಸಿದ ತರುವಾಯ ಪಾಠಶಾಲಾ ವಿದ್ಯಾರ್ಥಿಗಳಿಂದ ಮಂಗಲವನ್ನು ಮಾಡಿಸಿ ೭ ಗಂಟೆಗೆ ಸರಿಯಾಗಿ ಮೊದಲೇ ಗೊತ್ತುಪಡಿಸಿದ್ದಂತೆ ಬಜಾರ ಬಸವೇಶ್ವರನ ದೇವಾಲಯಕ್ಕೆ ಬಂದು ಸದ್ರಿ ನಾಗರಿಕರಿಂದ ತಯಾರಿಸಿದ ಉಚ್ಚಾಸನದಲ್ಲಿ ಶ್ರೀ ಬಸವೇಶ್ವರನ ಫೋಟೋವನ್ನು ಇರಿಸಿ … ವಾದ್ಯ ವೈಭವದೊಡನೆ ಬಜಾರದ ಶ್ರೀ ವೀರಭದ್ರದೇವರ ದೇವಸ್ಥಾನಕ್ಕೆ ಬಂದು ಹಿಂತಿರುಗಿ ಸದರಿ ಬಸವೇಶ್ವರನ ದೇವಾಲಯಕ್ಕೆ ಬಂದು ಮಂಗಲ ಮುಕ್ತಾಯ ಮಾಡಿದರು.

ಓರ್ವ ಚಂದಾದಾರ.

ಉರವಕೊಂಡೆ

ಉರವಕೊಂಡೆ ಗವಿಮಠಸಂಸ್ಥಾನದ ಶ್ರೀಮನ್ನಿರಂಜನ ಜಗದ್ಗುರು ಶ್ರೀ ಕರಿಬಸವ ಮಹಾಸ್ವಾಮಿಗಳವರ ಮಠದಲ್ಲಿ ಶುಕ್ಲಸಂವತ್ಸರ ವೈಶಾಖ ಶು|| ೩ … ಶನಿವಾರ ಅತಿ ವೈಭವದಿಂದ … ಪದ್ಧತಿಯಂತೆ ಜಯಂತಿಯು ನಡೆದು ಇರುತ್ತದೆ. ಆ ಕಡೆ ಗ್ರಾಮದ ಭಕ್ತಮಾಹೇಶ್ವರರ ಮಂದಿರಗಳಲ್ಲಿಯೂ … ಗ್ರಾಮಗಳ ಭಕ್ತಮಾಹೇಶ್ವರರ ಮನೆಗಳಲ್ಲಿಯೂ, ಮಠಗಳಲ್ಲಿಯೂ, ಶಿವಾಲಯಗಳಲ್ಲಿಯೂ ನಡೆದು ಇರುತ್ತದೆ. ಸಂಸ್ಥಾನ ಮಠದಲ್ಲಿಯೂ ಆ ದಿವಸ ಪ್ರಾತಃಕಾಲ ಮೊದಲುಗೊಂಡು ೧೦ ಘಂಟೆವರೆಗೂ ಶ್ರೀ ರುದ್ರಸೂಕ್ತಾದಿ ಮಹಾಮಂತ್ರಗಳಿಂದಲೂ ಶಿವಸಹಸ್ರನಾಮ ಸಹಸ್ರನಾಮಸ್ತುತಿ ಪಾರಾಯಣಗಳಿಂದಲೂ ಪೂಜಾಮಂಗಳಾಚರಣೆಯಿಂದ ಭಕ್ತಮಾಹೇಶ್ವರವೃಂದಕ್ಕೆ ತೃಪ್ತಿಕರವಾಗಿ ಗಣಾರಾಧನೆಯು ನಡೆಯಿತು. ಸಾಯಂಕಾಲ ೬ ಘಂಟೆಯಿಂದ ಭೂಷಣಾಲಂಕೃತವಾದ ಪಂಚಕಳಸ ಸಂಯುಕ್ತ ರಜತ ಪಲ್ಲಕ್ಕಿಯಲ್ಲಿ ಶ್ರೀಮದ್ಬಸವೇಶ್ವರದೇವರ ಭಾವಚಿತ್ರಪಟವನ್ನು ಮಹಾಮೂರ್ತಿಗೊಳಿಸಿ ಸ್ತೋತ್ರಭಕ್ತಿ ಧ್ವಜಪತಾಕಾದಿ ಬಿರುದಾವಳಿಗಳಿಂದಲೂ ಶೃಂಗಾರವಾದ ಅಂಬಾರಿಯಿಂದಲಂಕೃತವಾದ ಪಟ್ಟದಾನೆ ಶೃಂಗಾರದಿಂದಲೂ ಪುರದಿಂದ ವಿವಿಧವಾದ್ಯವೈಭವದಿಂದ ಉತ್ಸವ ಹೊರಟು ಊರ ರಾಜಮಾರ್ಗದ ಮಧ್ಯಕ್ಕೆ ಬಂದಕೂಡಲೇ ಆ ಗ್ರಾಮದ ಭಕ್ತಮಾಹೇಶ್ವರರು ಭಕ್ತಪ್ರಮುಖರಾಗಿ ಸರ್ವರೂ ಉತ್ಸವವನ್ನು ಎದುರುಗೊಂಡು ಅಲ್ಲಿನ ಶ್ರೀ ಪೇಟೆ ಬಸವೇಶ್ವರ ದೇವಸ್ಥಾನದ ಶ್ರೀ ಭಕ್ತೇಶ್ವರ ಮೂರ್ತಿಯು ಪಲ್ಲಕ್ಕಿಯಲ್ಲಿ … ಉಭಯ ಉತ್ಸವಗಳು ನಂದಿಧ್ವಜದ ಕುಣಿತದಿಂದಲೂ, ಶ್ರೀ ಬಸವಾದಿ ಪ್ರಮಥರು ಅಂಬಿಗರ ಚೌಡಯ್ಯ ಮುಂತಾದ ಶಿವಶರಣರು ಹಾಡಿ ಪಾಡಿದ ಗೀತಾಪಠನಾದಿಗಳಿಂದಲೂ ಪುರಂಧ್ರಿಯರು ಪದಗಳನ್ನು ಹೇಳುತ್ತಾ ಭಕ್ತಿಪುರಸ್ಸರವಾಗಿ ರಾಜಬೀದಿಗಳಲ್ಲಿ ಉತ್ಸವವು ಹೊರಟು … ರಾತ್ರಿ ೨ ಗಂಟೆಗೆ ಮಠವನ್ನು ಸೇರಲು ಪೂಜ್ಯಪಾದರ … ಗಣಗಳಿಗೂ ಮಠದ ಮೂಲಸ್ಥಾನದ ಶ್ರೀ ಚಂದ್ರಮೌಳಿ ಸಿದ್ಧಲಿಂಗೇಶ್ವರ ದೇವರಿಗೂ ಭಗವಾನ್ ಬಸವೇಶ್ವರದೇವರಿಗೂ ಪೂಜಾ ಮಂಗಳಾರತಿಗಳನ್ನು ಮಾಡಿ ಶ್ರೀ ಪಾರ್ವತಿ ಪರಮೇಶ್ವರರ ಮಹಾಸ್ತೋತ್ರದಿಂದ ಉತ್ಸವವನ್ನು ಸಮಾಪ್ತಿಗೊಳಿಸಿದರು.

ಬಸವೇಶ್ವರನ ಭಕ್ತ.

ಶ್ರೀ ಮಂಗಲನಾಡಿನ ನಾಚ್ಯೇರಿ ಗ್ರಾಮ.

[redacted] ನೇ ಶನಿವಾರ ಬಸವಜಯಂತಿಮಹೋತ್ಸವವು … ನಡೆಸಲ್ಪಟ್ಟಿತು. ಈ ಉತ್ಸವಕ್ಕೆ ಶ್ರೀಮಂಗ… ಂದರೆ ಹೊಸ ಗಣದ … ಬಂದಿದ್ದ… ೨ ಬೋಧಕ … ಎ. ಜಿ. ಪಾಟೀ… ನವರು ಇನ್ನು ಕೆಲವರು ಸಹ ನೆರದಿದ್ದ…

...ಸಮಾರಂಭಕ್ಕೆ ವಿಶೇಷ ಒಂದು ಶೋಭೆ ಕೊಟ್ಟಿತು. ಅಧ್ಯಕ್ಷರ ಆಗಮನ ಕಾಲದಲ್ಲಿ ಶ್ರೀ ಬಸವೇಶ್ವರನ ಉತ್ಸವವನ್ನು ಇಟ್ಟು ಪೂಜಿಸಿ ಭಜನೆ ಕೀರ್ತನೆ ಮಂಗಳವಾದ್ಯ ವೈಭವದಿಂದ ಸಭಾಸ್ಥಾನಕ್ಕೆ ಕರೆತಂದರು. ಅಲ್ಲಿ ಸೇರಿದ್ದ ಸಹಸ್ರಾರು ವೀರಶೈವ ಸದ್ಭಕ್ತರಿಗೂ ಇತರ ಜನಗಳಿಗೂ ಪ್ರಸಾದ ವಿನಿಯೋಗ ಮಾಡಿ ಪಟೇಲ್ ಶಾನುಭೋಗರು ಸಹ ಸಂತೋಷದಿಂದ ಭಾಗವಹಿಸಿದರು. ಈ ಉತ್ಸವಕ್ಕೆ ಹಣವನ್ನು ಸಹಾಯಮಾಡಿ ಸಂಘದ ಪ್ರಾರಂಭವನ್ನು ಕೊಟ್ಟ ಶ್ರೀ ವೀರಶೈವ ಮಹಾಸಭೆಯ ಕಾರ್ಯದರ್ಶಿಗಳು ಪಟೇಲ್ ಶಾನುಭೋಗರವರು ಪ್ರಸಿಡೆಂಟರಾಗಿಯೂ ಸೆಕ್ರೆಟರಿಯಾಗಿಯೂ ಸಂಘಕ್ಕೆ ಸಹಾಯಕರಾಗಿಯೂ ಇದ್ದು ಪಟೇಲ್ ಶ್ರೀ ಸಿದ್ದಪ್ಪನವರು, ಮುತ್ತಯ್ಯ ಅಪ್ಪಯ್ಯನವರೂ, ನಂಜುಂಡ ವೀರಪ್ಪನವರು, ಮಲ್ಲಪ್ಪ ಮುಂತಾದ ಭಕ್ತರು ಸಹ ಮೆಂಬರುಗಳಾಗಿಯೂ ಸೇರಿದರು. ಅಂದೇ 100 ರೂಪಾಯಿಗಳವರೆಗೆ ಅದೇ ದಿನ ಜಮೆ ಆಯಿತು. ಇನ್ನೂ ಅನೇಕ ಸಾಲಿಗರು ಸಂಘಕ್ಕೆ ಸೇರುವಂತೆ ಭಾಗ್ಯನಿಶ್ಚಯವಾಗಿದೆ. ಅನಂತರ ಸಂಘದ ವಿಷಯವಾಗಿ ಬೇರೆ ದೇಶಗಳಲ್ಲಿ ವೀರಶೈವರು ಸಂಘವನ್ನು ಅಭಿವೃದ್ಧಿ ಗೆ ತಂದು ಅದರಿಂದ ಎಷ್ಟೋ ಪ್ರಯೋಜನಗಳನ್ನು ಹೊಂದಿರುವ ವಿಷಯವನ್ನೂ, ಬಸವಣ್ಣನವರ ಚರಿತ್ರೆ ವಿಷಯವನ್ನೂ, ಬಸವೇಶ್ವರರು ವೀರಶೈವ ಮತವನ್ನು ಉದ್ಧಾರಮಾಡಿದ ವಿಷಯವನ್ನೂ, ಕೊಡಗಿನ ವೀರಶೈವರು ಹಿಂದುಳಿದಿರುವ ವಿಷಯವನ್ನೂ ಕುರಿತು ನಂಜಲಿ ಬಿ. ನಂಜಪ್ಪಯ್ಯನವರು ಒಂದು ಸ್ವಾರಸ್ಯವಾದ ಭಾಷಣವನ್ನು ಮಾಡಿದನಂತರ ಸಭೆಯ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸಿ ಶ್ರೀ ಬಸವೇಶ್ವರನ ಫೋಟೋವನ್ನು ಒಂದು ಅಂದವಾದ ಪುಷ್ಪಮಂಟಪದ ವಿಮಾನದಲ್ಲಿ ಇರಿಸಿ ವಾದ್ಯದೊಡನೆ ಭಜನೆ ಕೀರ್ತನೆಗಳನ್ನು ಮಾಡಿಕೊಂಡು ನಾಲ್ಕುಬೀದಿಗಳಲ್ಲೂ ಎಲ್ಲಾ ವೀರಶೈವರ ಮನೆಗಳಿಗೂ ಮೆರವಣಿಗೆ ಹೋಗಿ ಪ್ರಸಾದವನ್ನು ಶ್ರೀಬಸವೇಶ್ವರರಿಗೆ ಪೂಜೆ ಮಂಗಳಾರತಿ ಆದ ಬಳಿಕ ಅಲ್ಲಿ ಸೇರಿದ ಎಲ್ಲಾ ಜನಗಳು ಪ್ರಸಾದ ಸ್ವೀಕಾರಮಾಡಿದರು. ಪ್ರಸಾದ ವಿತರಣೆಯಿಂದ ಈ ಸಭೆಯು ರಾತ್ರಿ 10 ಘಂಟೆಗೆ ಮುಕ್ತಾಯ ಹೊಂದಿತು. ವೀರಶೈವ ಸಮಾಜದ ಸಂಘದ ಏಳ್ಗೆಗೋಸ್ಕರ ಬಸವಯ್ಯನವರು ಹೆಚ್ಚಾಗಿ ಭಾಗಿಗಳಾಗಿ ಅನೇಕ ತೊಂದರೆ ತೆಗೆದುಕೊಂಡ ಡಿ ಬೋರ್ಡು ಮೆಂಬರು ವ. ಎ. ಜ. ಮಾದಪ್ಪನವರನ್ನು ಎಷ್ಟು ವಂದಿಸಿದರೂ ಸಾಲದು. ಇವರಿಗೆ ಮಂಗಳವನ್ನುಂಟುಮಾಡಲೆಂದು ಶ್ರೀ ಬಸವೇಶ್ವರನನ್ನು ನಾವು ಪ್ರಾರ್ಥಿಸುತ್ತೇವೆ. ಮುತಕಿತ್ಸ...

ಅರಕಲಗೂಡು ತಾ|| ಬಸವಾಪಟ್ಟಣ

ಈ ಗ್ರಾಮದ ವೀರಶೈವ ಮಹಾಜನಗಳು ಗ್ರಾಮದ ಮಧ್ಯದ ಶ್ರೀ ಬಸವೇಶ್ವರಸ್ವಾಮಿಯವರ ದೇವಸ್ಥಾನವನ್ನು ಜೀರ್ಣೋದ್ಧಾರಗಳಿಂದಲೂ, ಬಣ್ಣ ದಮಲಾಟ್ಟಿಗೆಗಳಿಂದಲೂ ಅಲಂಕರಿಸಿ ಇದೇ ವೈಶಾಖ ಶು ೧ ಸೋಮವಾರ ಪ್ರಾತಃಕಾಲ ಶ್ರೀ ಬಸವೇಶ್ವರಸ್ವಾಮಿಯವರಿಗೆ ಶತರುದ್ರಾಭಿಷೇಕವನ್ನೂ ರುದ್ರಾಭಿಷೇಕವನ್ನೂ ಮಾಡಿಸಿ ಅಲ್ಲಿ ನೆರೆದಿದ್ದ ಭಕ್ತಮಹೇಶ್ವರರನ್ನು ಪುಷ್ಪ ಫಲತಾಂಬೂಲಾದಿಗಳಿಂದ ಸತ್ಕರಿಸಿದರು. ಸಾಯಂಕಾಲ ಪ ವಿಲೇ ಮಲ್ಲಯ್ಯನವರ ಸರ್ವರೂ ಆನಂದಪಡುವಂತೆ ಗಿರಿಜಾಕಲ್ಯಾಣವೆಂಬ ಶಿವಕಥೆಯನ್ನು ಮಾಡಿದರು. ಮಾರನೆದಿನ ಪ್ರಾತಃಕಾಲ ಶ್ರೀಸ್ವಾಮಿಯವರಿಗೆ ಅನವೋಕ್ತ ಪ್ರಕಾರ ಸಹಸ್ರನಾಮಪೂಜೆಯು ನಡೆಯಿತು. ಅನಂತರ ವೃಷಭಗಳಿಗೆ ಪಂಚ ವೈಭವಗಳೊಡನೆ ಆಭರಣ ಸ್ನಾನಗಳಾಗಿ ಅಪೂಪಗಳು ಪೂಜಾದಿಗಳಿಂದ ತೃಪ್ತಿಪಡಿಸಿ ಮೆರವಣಿಗೆಮಾಡಿದರು. ಪ್ರಮುಖ ಗ್ರಾಮದ ನೆಯ ಭಕ್ತಿಪೂರ್ವಕವಾಗಿ ನಡೆಯಿತು. ರಾತ್ರಿ ವೇ|| ಶ್ರೀ ಶಿವವೀರಸ್ವಾಮಿಗಳು "ರಾಜಶೇಖರವಿಳಾಸ" ಎಂಬ ಶಿವಕಥೆಯನ್ನು ಮಾಡಿದರು. ಭಾನುವಾರ ಮಧ್ಯಾಹ್ನ ಗ್ರಾಮಾಂತರ ವೀರಶೈವ ಜನ್ಮಶತಿಗಳ ಹಾಸನದ ಡಿ ಬೋರ್ಡು ವೈಸ್‌ಪ್ರಸಿಡೆಂಟ್ ಮ|| ಮಹದೇವಪ್ಪನವರ ಅಧ್ಯಕ್ಷತೆಯಲ್ಲಿ ಸಭೆಯಿತು. ಈ ಸಭೆಗೆ ಎಕ್ಸಾಮಿನ್ ಸೂಪರಿಂಟೆಂಡೆಂಟ್ ವ. ಎಚ್. ಕೆ. ಮಲ್ಲಪ್ಪನವರು ಅರಕಲಗೂಡು ಡಿ. ಬೋ. ಮೆಂಬರು ಮ. ನಾಗಣ್ಣನವರು ನ. ಗುರುಪ್ಪಗೌಡರು ಇನ್ನೂ ಇತರ ದೊಡ್ಡಮನುಷ್ಯರುಗಳು ಸಹ ಆ ಗ್ರಾಮದ ಗ್ರಾಮಭಕ್ತ ಮಹಾಜನರೂ ಎಕ್ಸಾಮಿನ್ ಸೂಪರಿಂಟೆಂಡೆಂಟ್ ಮ|| ಮಲ್ಲಪ್ಪನವರ ಈ ಸ್ಥಳದ ಶಾಲೆಗಳನ್ನೂ, ವಿದ್ಯಾರ್ಥಿನಿಲಯವನ್ನೂ ಮತ್ತು ಆಸ್ಪತ್ರೆ ಇವುಗಳಿಂದ ಉಂಟಾಗಿರುವ ಪ್ರಯೋಜನಗಳನ್ನೂ ಕುರಿತು ಸಾರಿ ಹೇಳಿ ವೀರಶೈವ ಜನಾಂಗದಿಂದ ಹಿಂಬರುವ ವಿದ್ಯಾಪ್ರಯೋಜನಾಗಿಯೂ ಇದರಿಂದ ಈ ಬಸವಾಪಟ್ಟಣದಲ್ಲಿ ಒಂದು ವೀರಶೈವಹಾಸ್ಟಲ್ ಅತ್ಯಾವಶ್ಯಕವಾಗಿ ಇರಬೇಕೆಂತಲೂ ಈ ಹಾಸ್ಟಲಿಗೆ ವೀರಶೈವ ಮಹಾಜನಗಳು ತಮ್ಮ ಯೋಗ್ಯತಾನುಸಾರ ಉದಾರ ಸಹಾಯವನ್ನು ಕೊಡಬೇಕೆಂದು ಹೇಳಿ ಈ ಜನಾಂಗದ ಏಳ್ಗೆಗೆ ಆವಶ್ಯಕ ಬೇಕಾದ ವಿಷಯಗಳನ್ನು ಬಹು ಸ್ವಾರಸ್ಯವಾಗಿ ಜನಗಳ ಮನಸ್ಸಿಗೆ ಹಿಡಿಸುವಂತೆ ಉಪನ್ಯಾಸ ಮಾಡಿದರು. ಸಭಿಕರೆಲ್ಲರೂ ಆನಂದಪಟ್ಟು ಕರತಾಡನದೊಡನೆ ಒಪ್ಪಿಗೆಯನ್ನಿತ್ತರು. ಪುನಃ ಈ ಬಗ್ಗೆ ವಿವೇ ಹಿಮಿಯ ಇದೇ ರೀತಿ ನಾವು ಸಂಪತ್ತು ಅರದ ಮಾರ್ಗಶಿರ ಶುದ್ಧ ಪಾ|| ರಥೋತ್ಸವ ಕಾಲದಲ್ಲಿ ಮಾಡಬೇಕೆಂದು ನಿಶ್ಚಯಿಸಿದರು. ಅದರ ವಿಚಾರ ಹಾಸನ ಪಾರ್ಥವುರದಲ್ಲಿ ನಡೆಯಬೇಕೆಂದು ನಿರ್ಣಯವಾಯಿತು. ಈ ಸಭೆಯಲ್ಲಿ ಬಸವಾಪಟ್ಟಣಗ್ರಾಮದ ಕಿ|| ಶಿವಣ್ಣಶೆಟ್ಟರು ಮ್ಯಾಗಡಿ ಪಾ ನಾ ಅರೇಹಳ್ಳಿ ಶೆಟ್ಟರು ಗ್ರಾಮದ ವೀರಶೈವ ಮಹಾಜನಗಳು ಇಲ್ಲಿಂದ ಮುಂದೆ ಪ್ರತಿವರ್ಷವೂ ನಡೆಯುವ ಬಸವ ಜಯಂತಿ ಮಹೋತ್ಸವಕಾಲದಲ್ಲಿ ೩ ದಿವಸವೂ ಅಭಿಷೇಕಗಳನ್ನೂ ಪ್ರಮುಖ ಗಣಂಗಳನ್ನೂ ಮತ್ತು ಭಕ್ತಮಾಹೇಶ್ವರರನ್ನೂ ಸತ್ಕಾರಿಸುವುದು ಉಟ ಉಪಚಾರಾದಿಗಳಿಂದ ಸತ್ಕರಿಸುವುದಕ್ಕೂ ಈ ಮಠಕ್ಕೆ ಒಂದು ದಿನ ಮಾತ್ರ ಗ್ರಾಮದ ವೀರಶೈವ ಮಹಾಜನರಿಗೆ ಊಟವನ್ನು ಮಾಡುವುದಕ್ಕೂ ಸಹ ಕೇಳಿಕೊಂಡರು. ಅನಂತರ ಗ್ರಾಮಸ್ಥರು ಗ್ರಾಮದ ಯಜಮಾನ್ ಶೆಟ್ಟರು ಮತ್ತು ಪಟೇಲ್ ಮ|| ಬಿಡಕೆಂಚೇಗೌಡರು ಮುಂತಾದವರು ಮ|| ಅರೇಶೆಟ್ಟರ ಉದಾರ ಮನಸ್ಸನ್ನು ಶ್ಲಾಘಿಸಿ ಅವರ ಇಚ್ಛೆಯಂತೆ ನಡೆಯಿಸಲು ಒಪ್ಪಿಗೆಯನ್ನಿತ್ತರು. ಈ ಗ್ರಾಮದ ಕು. ಮಲ್ಲಣ್ಣಶೆಟ್ಟರ ಮಕ್ಕಳು ಸು|| ದೊಡ್ಡಮನೆ ಮಲ್ಲಪ್ಪಶೆಟ್ಟರು ಈ ಬಸವಾಪಟ್ಟಣದಲ್ಲಿ ಹೊಸದಾಗಿ ಸ್ಥಾಪಿತವಾಗಿರುವ ಆಸ್ಪತ್ರೆಗೆ ಟ್ರಸ್ಟಿಕ್ಕೆ 1000 ರೂ. ಬೆಲೆ ಬಾಳುವ ಸ್ಥಳವನ್ನು ಧರ್ಮಾರ್ಥವಾಗಿ ಕೊಡುವ ಹಾಗೂ ಜಮೀನಿನ ಬಾಜೂ ಜಮೀನಿನಲ್ಲಿ ಒಂದು ಪಠಮಗೃಹವಾಗಿ ಸರ್ಕಾರ ತಮ್ಮ ಸ್ವಂತ ಖರ್ಚಿನಿಂದ ಕಟ್ಟಿಸಿ ಕೊಟ್ಟು ಸರ್ಕಾರಕ್ಕೆ ಒಪ್ಪಿಸುತ್ತೇವೆಂತಲೂ, ಸರ್ಕಾರದವರು ದಯವಿಟ್ಟು ಆಸ್ಪತ್ರೆ ಮಂಜೂರುಮಾಡಬೇಕೆಂದು ಇದೀಕೆಯಾದವರೆಂತೆ ಮಹಾಜನಗಳು ಪ್ರಾರ್ಥಿಸಬೇಕೆಂತಲೂ ಕೇಳಿಕೊಂಡರು. ಇವರ ಧರ್ಮಬುದ್ಧಿಗೂ, ಮೂಕಪ್ರಾಣಿಗಳ ಮೇಲಿರುವ ದಯೆಗೂ ಸಹ ಸಭಿಕರೆಲ್ಲರೂ ಕರೆದೂಗಿ ಇದು ಅತಿ ಶ್ಲಾಘನೀಯ ವಿಷಯವೆಂದು ತಮ್ಮ ಅಭಿಪ್ರಾಯಗಳನ್ನಿತ್ತರಲ್ಲದೆ ಇವರಿಗೂ, ಇವರ ಕುಟುಂಬಕ್ಕೂ ಜಗದೀಶ್ವರನು ಆಯುರಾರೋಗ್ಯ ಐಶ್ವರ್ಯಾದಿಗಳನ್ನಿತ್ತು ಚಿರಕಾಲ ರಕ್ಷಿಸಲೆಂದು ಕರತಾಡನಗಳೊಡನೆ ಪರಮೇಶ್ವರನನ್ನು ಪ್ರಾರ್ಥಿಸಿದರು. ನಮ್ಮ ಸೀಮೆಯಲ್ಲಿ ಇಂತಹ ಮಹನೀಯರುಗಳು ಧರ್ಮಬುದ್ಧಿಯುಳ್ಳವರಾಗಿ ಇವರನ್ನು ಅನುಸರಿಸಿ ತ್ಯಾಗಗಳಲ್ಲಿ ಜನಸಾಮಾನ್ಯ [redacted] ...ವಂತೆ ಧರ್ಮಕಾರ್ಯ ಕೈ ಕೊಂಡು ಮಾಡಬೇಕೆಂದು ಸಹ [redacted] ...ನೇವೆ ಇಲ್ಲವೆಂದು ತಿಳಿಸುತ್ತಾ ಜನಸಾಮಾನ್ಯ [redacted] ...ನ್ನು, ಶಿವಾನಂದ...

ನಾವು ಮಾರ್ಗಗಳನ್ನು ಕುರಿತು ಮೇ|| ಪ್ರಿನ್ಸಿಪಾಲ್ ವೀರಭದ್ರಪ್ಪನವರು. ಈ ಹ್ಯಾದ ಬಸವೇಶ್ವರನ ಕಾರುಣ್ಯಗಳು ಗ್ರಾಮಸ್ಥರಾಗಿ ಆನ್ನಸತ್ರಕ್ಕೆ ಸಹಾಯ ಬದಲಾಗಿ ಈ ಬಸವಾಪಟ್ಟಣದ ಹಾಸ್ಟಲ್ ವಿಷಯದಲ್ಲಿ ತಾವು ಗ್ರಾಮಾಂತರಗಳಲ್ಲಿ ಸಂಚಾರ ಮಾಡಿ ವೀರಶೈವ ಮಹಾಜನಗಳಿಂದ ದ್ರವ್ಯಸಹಾಯ ಮಾಡಿಸ ಪ್ರಯತ್ನಿಸಿಯೂ ಸಹ ಒಪ್ಪಿಕೊಂಡರು. ಈ ಹಾಸ್ಟಲ್ ಪ್ರಾರಂಭದ ಆ ಗ್ರಾಮದ ಪ್ರತಿ ವರ್ಷವೂ ಒಂದೊಂದು ರೂಪಾಯಿಯಂತೆ ಮಹಾಜನಗಳು ಹೇಳುವ ಸ್ಥಳದಲ್ಲಿ ಪ್ರಾಪ್ತವಾಗುವುದಾಗಿ ವೇ|| ಪಟೇಲ್ ನಂಜಪ್ಪ ಗೌಡರು ಏಣಗ್ಯಾನ ಮಾಡಿದರು. ಅನಂತರ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯಿಂದ ಮಂಗಳ ಮಾಡಿದರು. ಸೋಮವಾರ ಶ್ರೀ ಬಸವೇಶ್ವರಸ್ವಾಮಿಯವರ ಭಾವಚಿತ್ರದೊಡನೆ ಗ್ರಾಮದಲ್ಲಿ ಓಕುಳಿಯಾಡಿ ಕಾವೇರಿ ಸ್ನಾನ ಮಾಡಿ, ನದೀ ಮಧ್ಯೆ ಇರುವ ಲಿಂಗದಮಂಟಪದಲ್ಲಿ ಪೂಜೆ, ಭಕ್ಷ್ಯ ಭಕ್ಷಾಹಾರಾದಿಗಳನ್ನು ವೈಭವದಿಂದ ನಡೆಸಿದರು. ಸಾಯಂಕಾಲ ಶ್ರೀ ಪಂಚ್ಯಾಕರ ವರಹೇಶ್ವರಸ್ವಾಮಿಯವರ ಮತ್ತು ಬಸವೇಶ್ವರರ ಪಂಟಪೋತ್ಸವವು ನಡೆದು ಸಾಯಂಕಾಲದೊಡನೆ 6 ಘಂಟೆಗೆ ಪ್ರಾರಂಭವಾಗಿ 12 ಘಂಟೆಯ ವರೆಗೂ ವಿಜೃಂಭಣೆಯಿಂದ ನಡೆಯಿತು. ಈ ಮಹೋತ್ಸವ ಕಾರ್ಯವನ್ನು ಮ|| ಪಟೇಲ್ ವಿಜಕೆಂಚೇಗೌಡರು ಶೆಟ್ಟರ ಮುಕ್ತಸೆಟ್ಟಿ, ಮ|| ಮ|| ರಾಚಪ್ಪಶೆಟ್ಟರೂ ಮ|| ಹ|| ಅಪ್ಪಾಜಿಶೆಟ್ಟರೂ ಮುಂತಾದವರು ಮ|| ದೊಡ್ಡಮನೆ ಮಲ್ಲಪ್ಪಶೆಟ್ಟರವರ ಮುಖಂಡರುಗಳೊಡನೆ ಶ್ರದ್ಧಾಭಕ್ತಿಗಳಿಂದ ಸಾಂಗವಾಗಿ ನಡೆಸಿದರು. ಇದಕ್ಕಾಗಿ ಆ ಗ್ರಾಮದ ವೀರಶೈವ ಮಹಾಜನಗಳೆಲ್ಲರೂ ತಮ್ಮ ಕೃತಜ್ಞತೆಯನ್ನು ತೋರಿಸಿದರು.

ಪ್ರತ್ಯಕ್ಷದರ್ಶಿ

ಪತ್ರವ್ಯವಹಾರ

☞ ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬುದನ್ನು ಸಹೃದಯರು ತಿಳಿಯತಕ್ಕದ್ದು.—ಸಂಪಾದಕ

ದೇವಸ್ಥಾನ ಜೀರ್ಣೋದ್ಧಾರ

...ಹಾಸನ ತಾಲ್ಲೂಕು ಅರಸೀಕೆರೆ ಟವನ್ ವ್ಯಾಪಾರಕ್ಕೆ ಮುಖ್ಯಸ್ಥಳವಾಗಿಯೂ ಜನಾಭಿವೃದ್ಧಿ ಭಾಗ ಹಿಂದಿನೊಡಗೂಡಿದ್ದಾಗಿಯೂ ಅನೇಕ ಜನ ವೀರಶೈವ ಶ್ರೀಮಂತರಿದ್ದರೂ ಶೋಚನೀಯವಾದ ಸ್ಥಿತಿಯಲ್ಲಿ ಇರುವುದು ಸರ್ವಜನವಿದಿತ. ಏಕೆಂದರೆ ಒಂದೇ ಒಂದು ವಿಚಾರವಿದೆ ಇಂಥಾ ಅನುಕೂಲಕರ ಪ್ರತ್ಯಕ್ಷ ಕ್ಷೇತ್ರದಲ್ಲಿ ಅ|| ಗೌಡರಪೇಟೆ ಮುಗಳ ಸಿದ್ದಪ್ಪನವರ ವಾಸವೂ ಇಲ್ಲಿ ಕಂಡ ಜನಗಳಾಗಿ ಭಂಗವೆನಿಸುವ ಕೇಳಿ ... ಶ್ರೀಮಂತರ ಉದಾರಬುದ್ಧಿಯೂ ನಮ್ಮ ಶೀಘ್ರಮಯ ಸೌಜನ್ಯವೂ ದೈವಭಕ್ತಿಯೂ ಪರೋಪಕಾರ ಪರತಂತ್ರತೆಯೂ ಒಂದಕ್ಕೊಂದು ಒಂದು ಅತಿಶಯವಾಗಿ ಕೇವಲ ಸ್ವಲ್ಪ ದಿವಸದಲ್ಲಿಯೇ ಯಶಸ್ವಿಯಾಗುತ್ತಿರುತ್ತವೆ. ಇವರ ಗ್ರಾಮದ ವೀರಶೈವ ಶ್ರೀಮಂತರ ವಿಶೇಷತೆಯಿಂದ ಪಾರುಬಿದ್ದ ಪುರಾತನವಾದ ಜಗದ್ಗುರು ಶಿವದೇವಸ್ಥಾನವನ್ನು ಉತ್ತಮ ಸ್ಥಿತಿಗೆ ತಂದು ಶ್ರೀ ಚಂದ್ರಮೌಳೀಶ್ವರ ಸ್ವಾಮಿಯವರ ದೇವಸ್ಥಾನವೆಂಬ ಹೆಸರಿನಿಂದ ಸಕಾಲದಲ್ಲಿ ಅರ್ಚನಾದಿಗಳಿಗೆ ಎಲ್ಲಾ ಇಟ್ಟು ಶೋಭಾಯಮಾನವಾಗಿ ಮಾಡಿರುವುದು ಇವರ ದೈವಭಕ್ತಿಯನ್ನು ವ್ಯಕ್ತಗೊಳಿಸುತ್ತದೆ. ಶ್ರೀಸನ್ನಿಧಿ ವೀರಶೈವ ಬಡ ವಿದ್ಯಾರ್ಥಿಗಳ ಅಶನವಸನಾದಿಗಳಿಗೆ ವೀರಶೈವ ಆಶ್ರಮವನ್ನು ಅರಸೀಕೆರೆಯಲ್ಲಿ ಈ ಮಾಹೆಯಲ್ಲಿ ಸ್ಥಾಪನ ಮಾಡಿರುವುದು ಇವರ ಪರೋಪಕಾರ ಪರತಂತ್ರತೆಯನ್ನು ಪ್ರಕಟಗೊಳಿಸುತ್ತದೆ. ಇಂಥಾ ಸುಗುಣಗಳಿಂದ ಪರಿಪೂರ್ಣರಾಗಿ ಲೋಕದ ಕ್ಷೇಮವೇ ತಮ್ಮ ಕ್ಷೇಮವೆಂದು ತಿಳಿದು ಕೇವಲ ಪಾರಮಾರ್ಥಬುದ್ಧಿಯಿಂದ ನಡೆಯುತ್ತಿರುವ ಶೆಟ್ಟಿ ಗುರುಶಿದ್ದಪ್ಪನವರಿಗೆ ಲೋಕೇಶನು ಇಹಪರಸೌಖ್ಯವಿತ್ತು ಆಯುರಾರೋಗ್ಯ ಐಶ್ವರ್ಯಾದಿಗಳನ್ನು ದಯಪಾಲಿಸಲೆಂದು ಅಂತಃಕರಣ ಪೂರ್ವಕವಾಗಿ ಪ್ರಾರ್ಥಿಸುವ

ಶಿವಭಕ್ತ

ಶ್ರೀ ಜಗದ್ಗುರು ಜಯದೇವ ವೀರಶೈವ ಹಾಸ್ಟಲ್ ತುಮಕೂರು.

ಜೂನ್ ತಿಂಗಳ ಹಾಸ್ಟಲ್ ಈ ವರ್ಷ ಬೇಸಿಗೆ ರಜಾ ಆದ ನಂತರ ... ನೇ ತಾರೀಖು ಶಾಲೆಗಳು ತೆರೆಯುವ ದಿವಸ ಹಾಸ್ಟಲ್ ನಲ್ಲಿ ಸ್ಥಳ ಬೇಕಾದವರು ... ರುಜು ಹಾಕಿ ಪ್ರವೇಶ ಅರ್ಜಿ ಮತ್ತು ೧೯ ನೇ ತಾರೀಖಿನೊಳಗೆ ... ಮಾಡತಕ್ಕದ್ದು ... ಕುರಿತು ಅಪ್ಲಿಕೇಷನ್ ಫಾರಂ ನಮ್ಮಲ್ಲಿ ದೊರೆಯುತ್ತದೆ.

ಪ್ರೆಸಿಡೆಂಟ್

ಶ್ರೀ ಜಗದ್ಗುರು ಜಯದೇವ ವೀರಶೈವ ಹಾಸ್ಟಲ್ ಕಮಿಟಿ, ತುಮಕೂರು.

ದಾವಣಗೆರೆ ವೀರಶೈವ ವಿದ್ಯಾವರ್ಧಕ ಸಂಘ.

ಪ್ರಸಾದ ನಿಲಯ ಬಿಡಿ ... ಟೆಂಪಲ್ ... ರಿಗೆ

ಸೂಚನೆ

ದಾವಣಗೆರೆ ಹೈಸ್ಕೂಲಿನಲ್ಲಿ ಅಭ್ಯಾಸ ಮಾಡತಕ್ಕ ವೀರಶೈವ ವಿದ್ಯಾರ್ಥಿಗಳು ಈ ಸಂಘದ ಪ್ರಸಾದನಿಲಯದಲ್ಲಿ ಬೋರ್ಡಿಂಗ್ ಸೀಟ್ ಕೊಡಲ್ಪಡುವುದು. ಅಪೇಕ್ಷೆಯುಳ್ಳವರು ಈ ಸಂಘದ ಪ್ರಿಂಟ್ ಫಾರಂನಲ್ಲಿ ಬರುವ ಜ್ಯೂನ್ ತಿಂಗಳು ೧ ನೇ ತಾರೀಖಿನೊಳಗಾಗಿ ಅಪ್ಲಿಕೇಷನ್ ಹಾಕಿಕೊಳ್ಳತಕ್ಕದ್ದು.

(1) ಕಾಲದಲ್ಲಿ ಬರುವ ಅಪ್ಲಿಕೇಷನ್ನುಗಳು ತಿರಸ್ಕರಿಸಲ್ಪಡುವುವು.

(2) ಒಂದುವೇಳೆ ಬೋರ್ಡಿಂಗಿನಲ್ಲಿ ಸೀಟುಗಳು ಇದ್ದರೆ ಮಾತ್ರ ಅಂಗೀಕರಿಸಲ್ಪಡುವುವು.

(3) ಅಪ್ಲಿಕೇಷನ್ನಿನಲ್ಲಿ ನಮೂದಿಸಿರುವ ಪ್ರಶ್ನೆಯೊಂದು ವಿಷಯಗಳು ಸರಿಯಾದ ಕಾರಣಗಳಿಂದ ಭರ್ತಿಮಾಡಲ್ಪಟ್ಟಿರದಿದ್ದರೆ ತಾಗ್ಗಿಲ್ಲದ ಭಾಗದಲ್ಲಿ ತಿರಸ್ಕರಿಸಲ್ಪಡುವುವು.

(4) ಅನುಕೂಲವಾದ ಬಡ ವಿದ್ಯಾರ್ಥಿಗಳು ಸಂಘದ ರೂಲ್ಸಿಗೆ ಒಳಪಟ್ಟು ಬೋರ್ಡಿಂಗಿಗೆ ಸೇರಲಿಷ್ಟಪಟ್ಟಲ್ಲಿ ಮಾಹೆಯಾನ ಆಗುವ ಖರ್ಚಿನಲ್ಲಿ ಹೇಳಿದ ಪ್ರಕಾರ ಕೊಟ್ಟು ಸೇರಲು ಅವಕಾಶವಿರುತ್ತೆ. ಅಪೇಕ್ಷೆಯುಳ್ಳವರು ಜ್ಯೂನ್ ೩ ರ ಒಳಗಾಗಿ ಅಪ್ಲಿಕೇಷನ್ನಿನೊಂದಿಗೆ ಹತ್ತುರೂಪಾಯಿ ಅಡ್ವಾನ್ಸು ಕಳಿಸತಕ್ಕದ್ದು.

(5) ಅಪ್ಲಿಕೇಷನ್ ಫಾರಂ ಅಪೇಕ್ಷಿಸುವವರು ಪೋಸ್ಟು ಖರ್ಚಿಗಾಗಿ ಒಂದು ಆಣೆ ಸ್ಟಾಂಪು ಕಳಿಸತಕ್ಕದ್ದು.

ಎ. ಎಸ್. ಎಲ್. ಬಿ.,

ಅಧ್ಯ, ದಾವಣಗೆರೆ.

ಸೂಚನೆ.

ಶ್ರೀ ಕ್ಷೇತ್ರ ಚಿತ್ರದುರ್ಗದಲ್ಲಿ ಬ್ರಾಹ್ಮಣ್ಯ ವಿಭಾಗದವರಲ್ಲದ ವೀರಶೈವ ಬಡ ವಿದ್ಯಾರ್ಥಿಗಳು ತಮ್ಮ ಗ್ರಾಮಸ್ಥರ ಪಾಪ್ಪರ್ ಸರ್ಟಿಫಿಕೇಟುಗಳೊಂದಿಗೆ 1929 ನೇ ಜೂನ್ 5 ನೇ ತಾರೀಖಿನೊಳಗಾಗಿ ಅಪ್ಲಿಕೇಷನ್ ಹಾಕಿಕೊಂಡಲ್ಲಿ ಬರುವ ಬೇಂದು ಕೆಂದುಬಂದವರಿಗೆ ದಾಸ್ತ್ರ ಶ್ರೀ ಜಗದ್ಗುರು ಜಯದೇವ ವೀರಶೈವ ಹಾಸ್ಟಲಿನಲ್ಲಿ ಭೋಜನವನ್ನು ವಾಸಕ್ಕೂ ಉಚಿತವಾಗಿ ಅನುಕೂಲ ಮಾಡುವದಲ್ಲದೆ. ಏತಕ್ಕೆ ಸರ್ಟಿಫಿಕೇಟು ಫಾರಂ, ಅಪ್ಲಿಕೇಷನ್ ಫಾರಂ ಸಹಿತ ಹಾಸ್ಟಲ್ ಮ್ಯಾನೇಜರ್ ಶಿವಸಂಗಪ್ಪನವರ ಕಡೆಗೆ ದೊರೆಯುತ್ತವೆ

SATI HALAPPA,

ಸೆಕ್ರೆಟರಿ, ಚಿತ್ರದುರ್ಗ



22

ಡಾಕ್ಟರ್ ಜೀ. ಬೀ. ಯವರ

ಸುಗಂಧ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರು

ಸಲಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಶ್ವಾಸಮಾಗುವ ವ್ಯಾಧಿಗಳು ಯಾವಂದರೆ ...ತಲೆಶೂಲೆ, ಒಂದುಕಡೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಸ. ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟ ನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲಾ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳ ತಮ್ಮ ಗೃಹದಲ್ಲಿ ಕುಟುಂಬ ವಿಶೇಷವಾಗಿ ಉಪಯೋಗಿಸುತ್ತಾರೆ. ಸಾವಿರಾರು ಪ್ರಶಂಸೆಗಳು ಬಂದಿರುತ್ತವೆ.

ಬುಡ್ಡಿ ಒಂದಕ್ಕೆ ಕ್ರಯ ರೂ ೦—೪—೦. ವಿ. ಪಿ. ೦—೭—೦
ಡಜನ್ ಒಂದಕ್ಕೆ ಕ್ರಯ ರೂ ೨—೮—೦. ವಿ. ಪಿ. ಚಾರ್ಜು ಅಡ ಅಕ.

ದಯವಿಟ್ಟು ನಿಮ್ಮ ಹೆಸರನ್ನು, ಅಡ್ರಸ್ಸನ್ನೂ ಸಂಪೂರ್ಣ ತಿಳಿಯುವಂತೆ ಬರೆಯಿರಿ.

ವಿಳಾಸ :—ಗುರುಬಸವ ಅಂಡ್ ಕಂಪನಿಲಿಮಿಟೆಡ್,

(51—28) ಪೋ. ಬಾ. ೫೧೧, ಮದರಾಸು.

೧೯೨೯ ನೆಯ ಇಸವಿ ಮೇ ತಾ|| ೨೫ ರಿಂದ ೧೯೨೯ ನೆಯ ಇಸವಿ ಮೇ ತಾ|| ೩೧ ರ ವರೆಗೆ ನಡೆಯುವ ಶಾಲಿವಾಹನಶಕ ೧೮೫೧ ನೆಯ ಶುಕ್ಲನಾಮಸಂವತ್ಸರದ ವೈಶಾಖ ಬಹುಳ ದಿನಗಳಿಂದ ವೈಶಾಖ ಬಹುಳ ಅಷ್ಟಮಿ ವರೆಗಿನ ಪಂಚಾಂಗ

ತಾ||	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಇಂ ಮಾಸ
25	ಶನಿ	ಬಿದಿ	35 5	ಜ್ಯೇಷ್ಠ	10.0	12
26	ಭಾನು	ತದಿ	40 13	ಮೂಲ	16 25	13
27	ಸೋಮ	ಚೌತಿ	45 2	ಪೂಷಾ	23 0	14
28	ಮಂಗಳ	ಪಂಚ	19 20	ಉಷಾ	28-34	15
29	ಬುಧ	ಷಷ್ಠಿ	53-0	ಶ್ರವ	31-5	16
30	ಗುರು	ಸಪ್ತ	55-20	ಧನಿ	38 35	17
31	ಶುಕ್ರ	ಅಷ್ಟ	56-25	ಶತ	42 3	18

(1) ಮಳೆ ನಕ್ಷತ್ರ [redacted] ...ಪಾದ. (2) ಮಳೆ ನಕ್ಷತ್ರ ರೋಹಿಣಿ ೩ ನೆಯ [redacted] ...1.

ಮೈಸೂರು [redacted] ...ನ ಕ್ರಿಶ್ಣಾ ಎಸ್ಟೇಟ್ ಪ್ರಿಂಟಿಂಗ್ ವರ್ಕ್ಸ್ ಮುದ್ರಿ...

REGISTERED NO M 24

ಮೈಸೂರ್ ಸ್ಟಾರ್

ಪ್ರತಿ ಶನಿವಾರ ಪ್ರಕಟಿಸಲ್ಪಡುವದು.

[illegible]

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಶ್ಲೈಬ್ರರಿಗೆ ೩-೮-೦]

ಸಂಪುಟ ೪೨] ಮೈಸೂರು ಸ್ಟಾರ್ ಸನ್ ೧೯೨೮ ನೆಯ ಇಸವಿ ಜೂನ್ ತಾರೀಖು ೧ ನೆಯ ಶನಿವಾರ [ಸಂಚಿಕೆ ೨೨

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್.

[50—37] ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು



ಒಂದು ಸಾರಿ ಶಾಯಿ ತುಂಬಿದರೆ ಸಾವಿರಾರು ಶಬ್ದಗಳನ್ನು ಬರೆಯಬಹುದಾದ 14 ಕ್ಯಾರಟ್ ಬಂಗಾರದ ನಿಬ್ ಹಾಕಿದ [illegible] ಫೌಂಟೆನ್ ಪೆನ್ [illegible]

[illegible] Pen ಒಂದಕ್ಕೆ [illegible] ಕ್ರಯ [illegible]

ಮೋಟ್ಟಂದ ಎಷ್ಟ್ ಒಬ್ಬ ಮನುಷ್ಯನ ಜನ್ಮಾವಧಿ ಬಾಳಿಕೆ ಬರತಕ್ಕದ್ದೆಂದು ತಯಾರಿಸಿದವರ ಭರವಸೆ [illegible]

ಒಂದು ಪೆನ್ ತರಿಸಿ ನೋಡಿ

ಅಪೇಕ್ಷಿಸುವವರಿಗೆ ಕ್ಯಾಟಲಾಗ್ ಫ್ರೀಯಾಗಿ ರವಾನಿಸಲಾಗುತ್ತೆ.

ವಿಳಾಸ— ಎಂ ಎಸ್ ಶಿದ್ದಪ್ಪ ಅಂಡ್ ಬ್ರದರ್ಸ್,

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

೧೦೦೦ ರೂಪಾಯಿ ಇನಾಮು

ಮಿರಜೆಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್. ಕಾಪಸೆ, ಇವರ

ಅಲ್ಪವಯಸ್ಕರಿಗೆ ಕ್ಷೀಣರಾಗ ಬೇಡಿರಿ | ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ (ರಿಜಿ) ವಜ್ರಾಂಗ ಸುಂದರಪಾಕ. (ಸ್ವರ [illegible]

[illegible]

[50—1] ಪತ್ತೆ:—ಮಾಲಕ ವೈದ್ಯ ವ್ಹಿ. ಎಸ್. ಕಾಪಸೆ ಮು॥ ಪೋ॥ ಮಿರಜ.

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ.	(ವಿ ಪಿ ಸೇರಿ)		ಕ್ರಯ.	(ವಿ ಪಿ ಸೇರಿ)
[illegible]	೦—೯—೦	೦—೯—೦	ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
[illegible]	೦—೧—೦	೦—೬—೦	ಜಟಿಲ ವೀರಶೈವ ವಿವಾಹವಿಧಿ	೮—೦	೦—೧೩—೦
[illegible]	೦—೮—೦	೦—೧೩—೦	ಸತ್ಯ [illegible]	೦—೪—೦	೦—೯—೦
[illegible]	೦—೮—೦	೦—೧೩—೦	[illegible]	೦—೫—೦	೦—೧೧—೦
[illegible]	೧—೧—೦	೧—೬—೦	[illegible]	೧—೪—೦	೧—೯—೦

ಮೈಸೂರು ಸ್ಟಾರ್ ಚಂದಾನಿಬಂಧನೆಯು

ಸ್ಟಾರ್ [redacted] ಚಂದಾ ಪರಸ್ಥಳದವರಿಗೆ [redacted] ಲಯ, ಪೋಸ್ಟೇಜ್ ಸೇರ [redacted] ರೂ ೩-೮-೦; ವಿ. ಪಿ. [redacted] ಸ್ಟ್ರಿ ಕೀಳುತ್ತದೆ. ಹಳೆ [redacted] ಮಾಡುವುದಕ್ಕೆ ಚಂದಾ

ನಲ್ಲಿಯ [redacted] ಗೆಲ್ಲ ಜನಗಳಿಗೆ ಒದಗುತ್ತಿರುವ [redacted] ಸ್ಟಾರ್ [redacted] ನಮ್ಮ [illegible] ಚಲ್ಲಿಸು [redacted] ಒಂದಕ್ಕೆ [illegible] ಒಳಯ [redacted] ಮುದ್ರಿಸುವ [illegible] ನಿಗಾಕ [redacted] [illegible] ಮೈಸೂರು.

ವೀರಶೈವಮತಗ್ರಂಥಗಳು.

ಶಿವಾಧಿಕ್ಯಶಿಖಾಮಣಿಃ.

ಪ್ರತಿ ೧ ಕ್ಕೆ ಬೆಲೆ ೧-೦-೦

ಇದು [illegible] ಶ್ರೀಮದ್ರೇಣುಕಾಚಾರ್ಯರಿಗೂ, ವೈಷ್ಣವ ಮತಸ್ಥನಾದ [illegible] ನಡೆದ ಪ್ರಶ್ನೋತ್ತರರೂಪವಾಗಿದೆ. ಇದರಲ್ಲಿ ಶಿವೋತ್ಕರ್ಷ, ಲಿಂಗಧಾರಣ ಅಷ್ಟಾವರಣ, ಊರ್ಧ್ವಪುಂಡ್ರ [illegible] ಮುದ್ರಾಧಾರಣ [illegible] ಪ್ರದೋಷಕಾಲದಲ್ಲಿ ವಿಷ್ಣುದರ್ಶನಾಧಿಕ್ಯ [illegible] ಮೊದಲಾದ ಅಸಾಧಾರಣಗಳಾದ ನೂರು ವಿಷಯಗಳು ಸಪ್ರಮಾಣವಾಗಿ ಬೋಧಿಸಲ್ಪಟ್ಟಿವೆ. ಇದನ್ನು ವೀರಶೈವರು ಅವಶ್ಯವಾಗಿ ನೋಡಬೇಕಾಗಿದೆ

ನ್ಯಾಯಶತಕಂ— ಇದರ ಪ್ರತಿಯೊಂದು ಶ್ಲೋಕದಲ್ಲೂ [illegible] ಮೊದಲಾದ ಒಂದೊಂದು ನ್ಯಾಯವನ್ನು [illegible] ವಿದ್ವಜ್ಜನರಿಗೆ ಆನಂದವನ್ನುಂಟುಮಾಡುವಂತೆ ಶಿವಾಧಿಕ್ಯವು ವರ್ಣಿಸಲ್ಪಟ್ಟಿದೆ. [illegible] ಬೆಲೆ ೦-೨-೦.

ವಿ. ಪಿ. ಖರ್ಚು ಪ್ರತ್ಯೇಕ

ಶ್ರೀ ಸೋಮಶೇಖರಸ್ವಾಮಿಗಳು,

ನಮಶ್ಶಿವಾಯಮಠ,

[1—8] [illegible] ಗಾರ್ಡನ್, ಮೈಸೂರು

“ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತರ”

ಆಯುರ್ವೇದೀಯ ಸಿದ್ಧೌಷಧಗಳು

[illegible] ಕಸ್ತೂರೀ ಮಾತ್ರೆಗಳು.



ಈ ಮಾತ್ರೆಗಳನ್ನು ಪ್ರತಿದಿನವೂ [illegible] ಉಪಯೋಗಿಸುತ್ತಿದ್ದರೆ ಆಹಾರ, [illegible] ದೇಹವನ್ನು ಕಾಪಾಡುತ್ತದೆ

[illegible] ಶೀತ [illegible], ಬೇಧಿ, ಶೀತವಾತಜ್ವರ, [illegible] ಅನೇಕ ರೋಗಗಳನ್ನು ಗುಣಪಡಿಸುತ್ತದೆ

[illegible] ಮಾತ್ರೆಗಳುಳ್ಳ ಸೀಸೆ 1ಕ್ಕೆ ೬ ಆಣೆ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ನಮ್ಮ ವಿಳಾಸವನ್ನೂ [illegible] ಕಸ್ತೂರೀ ಮಾತ್ರೆ ಎಂಬ ಹೆಸರನ್ನೂ ನೋಡಿ ಕೊಂಡುಕೊಳ್ಳಿರಿ.

ವೈಶ್ವಾನರಾಸವ

([illegible] ಸಿದ್ಧೌಷಧ.)

[illegible] ಸೀಸೆ 1ಕ್ಕೆ ರೂ. 1—0—0

[illegible]

(ಪ್ಲೀಹಕ್ಕೆ)

[illegible] ಸೀಸೆ 1ಕ್ಕೆ ರೂ. 1—0—0

ಶ್ರೀನಿವಾಸತೈಲ.

[illegible] [redacted] [illegible]

ಮೈಸೂರು ನಗರ

MISGUIDED LABOURERS

The mill-hands of the Minerva and the Maharaja mills at Bangalore will have by this time realised what convenient tools they have become in the hands of some designing political charlatans and what a folly they committed in listening to their siren voices. It is extremely regrettable that they should have placed themselves under the irresponsible leadership of outsiders who are only out to play their game. It might no doubt please the fancy of these charlatans to get the poor starving mill hands to attend their processions their congress and youth meetings and form an admiring audience to their vocal fire works. It might also please them to denounce the Government in the presence of the mill hands and exhibit their righteous indignation about the capitalist sucking their very life blood and encourage simpletons to strike or continue the strike. But will these charlatans feed the poor labourers? After all have the labourers any such real reasonable grievance which they could not try to get redressed without resorting to a general strike? Were not the labourers working without complaint until these political charlatans put their noses into the affair and sought a kind of hero-worship by making golden promises. For ought we know, the management of the two mills is in the hands of the most sympathetic men and there is hardly another mill elsewhere in India where the mill hands are treated better. They are also men who are perfectly willing to listen to all reasonable requests and do the needful. But that evidently is not what the political charlatans would aspire for. Their profession is sensation mongering and so long as sensation could be kept on no matter at what tremendous cost to the poor labourers, no matter at what loss to the companies they will be quite satisfied. They have not the brains to think what damage these unreasonable strikes would do to the textile industry in India and what good to the Lancashire and Japan mill owners. We are surprised that a journal like *Chitragupta* should make an appeal for help to the labourers without giving grounds on which they seek such help. That in any case is the puerile way in which poor labourers are being helped. We would have very much liked to see that there was some form of counter propaganda to prevent the mischief wrought by these political busybodies and save the labourers from their present troubles. There would be some justification for strikes if they had ample union funds on which they could fall back upon though even then strikes should only be the last resort. But it would be inhuman and criminal if so-called leaders were to egg on or participate in strikes without sinews of war. When the leaders will be having their *samaradanes* the strikers will be starving or semi-starving. We do hope that the labourers will realise that they stand to gain far more by co-operation than non-co-operation and by constitutional agitation than by strikes and hooliganism.

SLAUGHTER OF THE INNOCENTS

The results in the Intermediate and B. A. Examinations are quite unsatisfactory this year particularly in the former where in the total not more than 40 per cent are given a pass. When we come to the Intermediate in Science the slaughter is truly tragic. It would appear that out of about 10 students in B. Sc. Botony Zoology etc in the Mysore Intermediate College any three have been declared as passed. There must be something radically wrong somewhere. It is the University that takes care to safeguard its interests by interfering with S. S. L. C. results and yet after two years of its own training to these very students they [redacted] incompetent to pass their examina[redacted] in our humble opinion stan[redacted] it is best that this University [redacted] hands of the present ... [illegible] ... altogether unresponsive to public needs and standards and is living in a world of its own. We would urge some member of the Assembly to bring forward this question by an adjournment motion and show a bit of its mind to those in the giddy heights of the University.

MONOPOLY WITHIN MONOPOLY

The place of the Public Prosecutor at Mysore will be falling vacant at the end of next month and it does not look as though the new incumbent is appointed as yet. There is one feature in the history of this office in Mysore which it is worth while for the authorities to know. For the last 31 years this office which is a fairly coveted one has been the *monopoly* of one particular sect of Brahmins, the last one enjoying it for a period of 10 years. It is for the authorities to judge whether it is fair to continue such an exclusive monopoly by one particular brand of a community any more when other candidates who have been very successful both as civil and criminal practitioners are available. It is hardly necessary for us to state that a change is called for and that this monopoly within monopoly should be avoided.

ವಿಭ್ರಾಂತ ಕೂಲಿಕಾರರು

ಬೆಂಗಳೂರಿನ ಮಿನರ್ವ ಮತ್ತು ಮಹಾರಾಜ ಮಿಲ್ಲು ಗಳ ಕೆಲಸಗಾರರು ತಮ್ಮ ... ಜೊತೆಗೆ ... ವರ್ತಿಸುತ್ತಿರುವುದು ... ರಾಜಕೀಯ ... ಕೈ ಸೂತ್ರದ ಬೊಂಬೆಗಳಾಗಿ ... [illegible] ... ಕೂಲಿಕಾರರ ... ಕಾಂಗ್ರೆಸ್ಸು ಮತ್ತು ... ಸಭೆಯ ... ಕೂಲಿಕಾರರ ... [illegible] ... ಇವುಗಳ ಕೂಲಿಕಾರರ ಸ್ಥಿತಿಗಿಂತಲೂ ಭರತಖಂಡದ ಮತ್ತಾವ ಮಿಲ್ಲಿನ ಕೂಲಿಕಾರರ ಸ್ಥಿತಿಯ ಉತ್ತಮವಾಗಿಲ್ಲವೆಂಬುದು ತಿಳಿಯುತ್ತಿದೆ ಮಿಲ್ಲಿನ ಈ ಮಿಲ್ಲುಗಳ ಯಜಮಾನರು ಕೂಲಿಕಾರರ ನ್ಯಾಯವಾದ ಕೋರಿಕೆಯನ್ನು ವಿಚಾರಿಸಿ ಸಾಧ್ಯವಾದ ಉಪಕಾರ ವನ್ನು ಮಾಡಲು ಸಿದ್ಧರಾಗಿರುವವರನ್ನುವುದರಲ್ಲಿ ಅಭ್ಯಂತರ ವಿಲ್ಲವು ಆದರೆ ಈ ವಿಧವಾದ ಉಪಕಾರವು ಕೂಲಿಕಾರರ ಕಪಟ ಹಿತಚಿಂತಕರಿಗೆ ಬೇಕಾಗಿಲ್ಲ ... ಕೂಲಿಕಾರರು ಕೆಲಸಕ್ಕೆ ಹೋಗದೆ ಮುಷ್ಕರ ಹಿಡಿದು ಗದ್ದಲ ಮಾಡುವುದರಿಂದ ... ಕೂಲಿಕಾರರಿಗಾಗುವ ಹಾನಿ ... ಭರತಖಂಡದ ಕೈಗಾರಿಕೆಗೆ ಎಂತಹ ಅನರ್ಥವು ... ಮಿಲ್ಲುಗಳ ಬಟ್ಟೆಗಳ ಮಾರಾಟವು ಹೆಚ್ಚಿ ಅವುಗಳ ಯಜಮಾನರಿಗೆ ... [redacted] ... ಸಹೋದ್ಯೋಗಿ ... [redacted] ... ಪತ್ರಿಕೆಯು ಬೆಂಗಳೂರಿನಲ್ಲಿ ... [redacted] ... ಕೂಲಿ ಕಾರರಿಗೆ ... [redacted] ...

... ಸಹಾಯ ಬೇಕು ... ಕೂಲಿಕಾರರು ಕೆಲಸಕ್ಕೆ ಹೋಗದೆ ... ಮುಷ್ಕರ ಹಿಡಿದು ... ಕೂಲಿಕಾರರ ಮುಂದಾಳುಗಳೆಂದ ... ಕೂಲಿಕಾರರನ್ನು ಮುಷ್ಕರಗಳಲ್ಲಾಗಿ ಮಾಡಿ ... [illegible] ... ನ್ಯಾಯವಾದ ಮಾರ್ಗದಲ್ಲಿ ತಮ್ಮ ಕಷ್ಟಗಳ ... ಪರಿಹರಿಸಿಕೊಳ್ಳುವವರಾಗಲೆಂದು ಕೋರುತ್ತೇವೆ.

ರಾಜಧಾನಿಯ ಪಬ್ಲಿಕ್ ಪ್ರಾಸಿಕ್ಯೂಟರು.

ಕಳೆದ 10 ವರ್ಷಗಳಿಂದಲೂ ... ಈ ಉದ್ಯೋಗ ಸ್ಥಾನವನ್ನು ಅನುಭವಿಸುತ್ತಿರುವವರು ಈ ತಿಂಗಳ ಅಂತ್ಯದಲ್ಲಿ ನಿವೃತ್ತರಾಗುವರು ... ಆದರೆ ಅವರಿಗೆ ಬದಲು ಯಾರು ನಿಯಮಿಸಲ್ಪಡುವರೆಂಬುದು ಇನ್ನೂ ಗೊತ್ತಾಗಿಲ್ಲ. ... ಪಬ್ಲಿಕ್ ಪ್ರಾಸಿಕ್ಯೂಟರುದ್ಯೋಗವು ... ಕಳೆದ 31 ವರ್ಷಗಳಿಂದಲೂ ಅನುಭವಿಸುತ್ತ ಬಂದಿರುವರೆಂಬೂ ... ಕ್ರಿಮಿನಲ್ ಮತ್ತು ಸಿವಿಲ್ ವಾದಗಳನ್ನು ಬಹಳ ಸಮರ್ಥತೆಯಿಂದ ನಡೆಸುತ್ತ ... ವಕೀಲರುಗಳಿರುವಾಗ್ಗೆ ಒಂದೇ ... ಈ ಉದ್ಯೋಗವನ್ನು ಕೊಡುತ್ತ ಬಂದಿರುವುದರ ಯುಕ್ತಾಯುಕ್ತತೆಯನ್ನು ... ಪರಿಶೀಲಿಸಿ ... ನಿಯಮಿಸುವುದು ಧರ್ಮವೆಂದು ನಾವು ಹೇಳಬೇಕಾದ ಅಗತ್ಯವೇ ಇರುವುದಿಲ್ಲ.

ಅಮಾನುಲ್ಲಾಯವರ ದೇಶಪರಿತ್ಯಾಗ.

ಆಫ್ಘಾನಿಸ್ಥಾನದ ಅಮೀರರಾದ ಅಮಾನುಲ್ಲಾಯವರು ತಮ್ಮ ಪತ್ನಿ ಸೂರಿಯಾ ರಾಣಿಯೊಡನೆ ಪಾಶ್ಚಾತ್ಯದೇಶ ಸಂಚಾರವನ್ನು ... ಯೋಗ್ಯವಾದ ಮಾನ ಮರ್ಯಾದೆಗಳನ್ನು ... ನಾಗರೀಕತೆ ... ಯೂರೋಪಿಯನರು ... ಪೋಷಾಕು ... ಇವರ ಪರಿಣಾಮವಾಗಿ ... ಅಮಾನುಲ್ಲಾಯವರು ... ರಾಣೀ ಸಮೇತ ರಾಜಧಾನಿಯಿಂದ ... ಬಚ್ಚಾಸಾಕೊ ಎಂಬ ... ಅಮಾನುಲ್ಲಾಯವರು ... ಅಮಾನುಲ್ಲಾಯವರು ತಮ್ಮ ರಾಜ್ಯವನ್ನು ಬಿಟ್ಟು ... ದೇಶಕ್ಕೆ ಪ್ರಯಾಣಮಾಡಲು ... ಬಯಸಿ ... [redacted] ... ಉಪಕಾರ ನಡೆಯಲು ... [redacted] ... ಅಮಾನುಲ್ಲಾ ... [redacted] ...

[illegible]ಸ್ವಾದುವಾದನೂ ಒನರೆಯು ಜನವ್ನು ಮ. ಶೈಕ್ಷಣಿಕ [illegible]ಂದ ಕ್ರಮೇಣ ಒಂದೊಂದನ್ನಾಗಿ ಸುಧಾರಣೆ ಯತ್ನದಿಂದ [illegible]ದಲು ವಿಕಕಾಲದಲ್ಲಿ ಪೂರ್ವಾಚಾರವನ್ನು ಸಂಪೂರ್ಣವಾಗಿ [illegible]ದಲಾಯಿಸಲು ಪ್ರಯತ್ನಿಸುವುದರ ದುಷ್ಪರಿಣಾಮದಿಂದ [illegible]ವು ದೇಶತ್ಯಾಗ ಮಾಡಬೇಕಾಗಿ ಬಂದಿತು ಅನುಕೂಲ [illegible]ಮಾಜ ಸುಧಾರಕರು ಅಪ್ಘಾನಿಸ್ಥಾನದ ಪರಿಸ್ಥಿತಿಯನ್ನು ನಿದ [illegible]ನವಾಗಿಟ್ಟುಕೊಂಡು ಜನರ ಪೂರ್ವಾಚಾರಗಳನ್ನೆಲ್ಲ ಏಕಕಾ[illegible]ದಲ್ಲಿ ಹೋಗಲಾಡಿಸಿ ಎಲ್ಲರನ್ನೂ ಒಟ್ಟುಗೂಡಿಸುವ ಪ್ರಯತ್ನ[illegible]ನ್ನು ಮಾಡಿ ಅನರ್ಥಕ್ಕೆ ಗುರಿಯಾಗದೆ ಜನರು ವಿದ್ಯಾವಂತ[illegible]ಗಿ ತಮ್ಮ ಪೂರ್ವಪದ್ಧತಿಗಳಲ್ಲಿರುವ ನ್ಯೂನತೆಗಳನ್ನರಿತು ಸಿದ್ಧ[illegible]ವಾದ ಹೊಸಪದ್ಧತಿಗಳನ್ನು ಕ್ರಮಕ್ರಮೇಣ ಅನುಸರಿಸು[illegible]ವಂತೆ ಮಾಡುವುದು ಶ್ರೇಯಸ್ಕರವು 'ಕುಳಿತುಕೊಂಡು ಮಲಗ[illegible] ನಿಂತಹಾಗೆ ಮಲಗಿಕೊಂಡಲ್ಲಿ ತಿಳಿಯೋಣೆಯುವುದು' ಎಂಬ [illegible]ಲೋಕೋಕ್ತಿಯು ಅಮಾನುಲ್ಲಾರವರ ಸಮಾಜಸುಧಾರಣಾ ಪ್ರಯತ್ನದಲ್ಲಿ ಅಕ್ಷರಶಃ ನಿಜವಾಗಿ ಕಂಡುಬಂದಿರುವುದು

ಒಳದೇಶದ ವೃತ್ತಾಂತಗಳ

ಧರ್ಮಕಾರ್ಯಗಳಿಗಾಗಿ ಸರ್ಕಾರದ್ದು ಪ್ರದುವಂ[illegible] [illegible]ಟ್ಟಿರುವ ಹಣಕ್ಕೆ ಶೇಕಡ ೬ ರೂ ನಂತೆ ಬಡ್ಡಿಯು 1930 ನೇ [illegible]ಲೈ ತಾ|| 30 ಎಂ [illegible] ವರ್ಗಾಯಿಸಿದವರಿಗ ಕೊಡಲ್ಪಡು ವುದಾಗಿ ಸರಕಾರದಪ್ಪಣೆಯಾಗಿರುತ್ತದೆ

ಡೆಪ್ಯುಟಿ ಕಮಿಷನರುಗಳಾದ ಮ|| ಎ ವಿ ರಾಮನಾಥ [illegible]ರವರು ೩ ನೇ ತರಗತಿಯಿಂದ ಟೆಕ್ಕಿಂಗ್ 1 ನೆ ತರಗತಿಗೂ, ಮ|| ಎಚ್ ಎ ರಾಮಯ್ಯ [illegible] ೩ ನೇ ತರಗತಿಯಿಂದ ಟೆಕ್ಕಿಂಗ್ ೩ ನೇ ತರಗತಿಗೂ ಹೆಚ್ಚಿಸಲ್ಪಟ್ಟಿರುತ್ತಾರೆ

ಧರ್ಮಪ್ರಕಾಶ ಚಂದ್ರೇಗೌಡರ ತೃತೀಯ ಕುಮಾರರು ಮ|| ಎ ಸಿ ದೇವೇಗೌಡರು ಬಿ ಟಿ ಪರೀಕ್ಷೆಗ ಹೋಗಿದ್ದು ಉತ್ತೀರ್ಣರಾಗಿರುತ್ತಾರೆಂದೂ ಇವರು ಇನ್ನೂ ಪ್ರೌಢವಿದ್ಯಾಭ್ಯಾಸಕ್ಕಾಗಿ ಸೀಮೆಗೆ ಪ್ರಯಾಣಮಾಡುವರೆಂದೂ ಕೇಳಿ ಸಂತೋಷಿಸುತ್ತೇವಲ್ಲದೆ ಇವರನ್ನು ಅಭಿನಂದಿಸಿ ಇವರು ಸೀಮೆಯಲ್ಲಿ ಉಚ್ಛ ಶ್ರೇಷ್ಠವಾದ ವಿದ್ಯಾಪ್ರಶಸ್ತಿಗಳನ್ನು ಪಡೆದು ಬರುವವರಾಗಲೆಂದು ಕೋರುತ್ತೇವೆ

ಮೈಸೂರು ಸೀಮೆಯ ಸೈನ್ಯದ ಚೀಫ್ ಕಮಾಂಡೆಂಟರಾದ ಪ|| ಕರ್ನಲ್ ಡ್ಯಾಂಡ್ರ್ ಸಿ ಬಿ ಇ, ಡಿ ಎಸ್ ಒ, ಯವರು ಇಂದಿನಿಂದ ಸೆಪ್ಟಂಬರ್ ತಾ|| ೨ ರ ವರೆಗೆ ರಜವನ್ನು ತೆಗೆದುಕೊಂಡಿರುವ ಪ್ರಯುಕ್ತ ಅವರ ಪರ್ಸನಲ್ ಅಸಿಸ್ಟೆಂಟರಾದ ಮೇ|| ಎ ಜಿ ಪಾರ್ಕ್ ರವರು ತಮ್ಮ ಕೆಲಸದ ಒತೆಗೆ ಚೀಫ್ ಕಮಾಂಡೆಂಟರ ಅಧೀನ ಕೆಲಸವನ್ನು ನೋಡಿಕೊಳ್ಳಬೇಕಾಗಿ ಅಪ್ಪಣೆಯಾಗಿದೆ

ಬೆಂಗಳೂರು ಸಿಟಿ ಪೋಲೀಸ ಸೂಪರಿಂಟೆಂಡೆಂಟರಾಗಿದ್ದ ಮ|| ಟಿ ಈಶ್ವರ್ ರವರು ಕೋಲಾರ ಸಬ್ ಡಿವಿಷನ್ನಿಗೆ ವರ್ಗವಾಗಿದ್ದುದು ತಪ್ಪಿ ಚಿಕ್ಕಬಳ್ಳಾಪುರ ಸಬ್ ಡಿವಿಷನ್ನಿಗೆ ವರ್ಗಾಯಿಸಲ್ಪಟ್ಟಿರುವುದರಿಂದ ಅಲ್ಲಿಯ ಸಬ್ ಡಿವಿಜನ್ ಆಫೀಸರಾದ ಮ|| ಜಿ ಮಲ್ಲಿಕಾರ್ಜುನಯ್ಯನವರು ತೀರ್ಥಹಳ್ಳಿಗೆ ವರ್ಗಾಯಿಸಲ್ಪಟ್ಟು, ಅಲ್ಲಿಗೆ ವರ್ಗವಾಗಬೇಕಾಗಿದ್ದ ಮ|| ಶ ಗುರುದತ್ ರವರು ಕೋಲಾರದಲ್ಲೇ ಉಳಿಸಲ್ಪಟ್ಟಿರುವರು

ಗಂದದೇವಸ್ಥಾನದ ದ್ರವ್ಯಲೋಪದ ವಿಚಾರವಾಗಿ ಮ|| ಬಿ ವೆಂಕಟಾಚಾರ್ಯರ ಮೇಲೆ ಸ್ಪೆಷಲ್ ಡಿ|| ಮೆಜಿಸ್ಟ್ರೇಟ್ ಮ|| ಟಿ ಜಿ ರಾಮಯ್ಯರ್‌ರವರಲ್ಲಿ ನಡೆಯುತ್ತಿರುವ ವಿವಾದದಲ್ಲಿ ಸರ್ವ್ಹೇಯರ್ ಅಂಡ್ ಟ್ರೆಕರ್ಸ್ ಡೈರೆಕ್ಟರುಗಳಾದ ಮ|| ಎ ಶ ಗರುಡಾಚಾರ್ಯರ ಮತ್ತು ಮಂದಿ ಪಾಪಯ್ಯನವರ ಸಾಕ್ಷ್ಯವು ನಡೆದಿದೆ ಆ ದ್ರವ್ಯಲೋಪಕ್ಕೆಲ್ಲ ಮ|| ಆಚಾರ್ಯರೇ ಹೊಣೆಯೆಂದು ಆ ಉಭಯತ್ರರೂ ಹೇಳಿರುತ್ತಾರೆ

ನಿಮ್ನವರ್ಗದ ಜನರಲ್ಲಿ ವಿದ್ಯಾಭಿರುಚಿಯು ಹುಟ್ಟುವುದಕ್ಕಾಗಿ ಆ ವರ್ಗದ ಹುಡುಗರು ಸ್ಕೂಲುಗಳ ಎಗ್ಸಾಮಿನೇಷನ್ ಮತ್ತು ತಿಂಗಳ ಫೀಯನ್ನು ೩ ವರ್ಷಕಾಲದವರೆಗೆ ಕೊಡಬೇಕಾದುದಿಲ್ಲವೆಂದು 1926 ರಲ್ಲಿ ಸರ್ಕಾರದವರು ಅಪ್ಪಣೆಮಾಡಿದ್ದು ಈಗ 1929 ನೇ ಜುಲೈ ತಾ|| 1 ರಿಂದ ಇನ್ನೂ ೩ ವರ್ಷಕಾಲದವರೆಗೆ ಎಡ್ಮಿಷನ್ ಮತ್ತು ಸ್ಕೂಲು ಫೀಯನ್ನು ಆಟದ ಮತ್ತು ಲೈಬ್ರರಿಯ ಫೀಯನ್ನು ಸಹ ಕೊಡಬೇಕಾದುದಿಲ್ಲವೆಂದು ಪುನಃ ಅಪ್ಪಣೆ ಮಾಡಿರುತ್ತಾರೆ

ಕಳೆದ ಮಾರ್ಚಿ ತಾ|| 18 ರಲ್ಲಿ ಪ್ರಜಾಮಿತ್ರ ಮಂಡಲಿಯವರು ಸಭೆಸೇರಿ ನಿರ್ಧರಿಸಿದ ಪ್ರಕಾರ ಮೈಸೂರು ಬ್ರಾಹ್ಮಣೇತರ ಮಹಾಸಭೆಯನ್ನು ಸೇರಿಸುವ ಕಾಲ ಸ್ಥಳ ಮೊದಲಾದ ವಿಷಯಗಳನ್ನು ಪರ್ಯಾಲೋಚಿಸಿ ನಿರ್ಧರಿಸುವುದಕ್ಕಾಗಿ ಇದೇ ಜೂನ್ ತಾ|| 10 ನೇ ಮಂಗಳವಾರ ಸಾಯಂಕಾಲ ರಾಜಧಾನಿಯ ಕಬ್ಬನಪೇಟೆ ಚಿನ್ನಬಸಪ್ಪನವರ ಹಾಸ್ಟೆಲಿನಲ್ಲಿ ನಡೆಯುವ ಸಭೆಗೆ ಮಹಾಸಭಾಭಿಮಾನಿಗಳೆಲ್ಲರೂ ದಯಮಾಡಿಸಬೇಕೆಂದು ಮ|| ನೀಲ್ಗಿರಿ ಸಂಜೀವಯ್ಯನವರು ಕೋರಿರುತ್ತಾರೆ

ಮೇ ತಾ|| [redacted] ನಕ್ಷತ್ರ ಗೋಚರವು ನಿನ್ನೆಯ ದಿವಸ [redacted] ಆರಂಭವಾದಾಷ್ಟ ನಿನ್ನೆತ್ತಿ[redacted] ಕ್ಷಣವಾಗಿ ಬಂದಿದ್ದರೂ ಕಳೆಯ[redacted] ನಾಯ್ಕರ ಚಕ್ಷ

ನೆ ಹಾಗಿ ಎಲ್ಲಾ ಕಡೆಯಲ್ಲಿ ಬೀಳುತ್ತಿರುವುದೇ ಆ ಮಳೆ ಪ್ರಾರಂಭವಾಗಿ ಎರಡೇ ದಿನಗಳಲ್ಲಿ ವೃಕ್ಷಗಳೂ ಫಲಗಳೂ ಮನೆಗಳ ಮೇಲು ಹುಲ್ಲಿನ ಕಾಗದ ಸಾಕಷ್ಟಾಗಿ ಜನರಿಗೆ ಬಹಳ ನಷ್ಟ ಸಂಭವಿಸಿರುವುದಾಗಿ ಕೇಳುತ್ತೇವೆ.

ಮ|| ಗಳಾದ ಎಂ ಶ್ರೀನಿವಾಸಮೂರ್ತಿ ಬಿ ಎ, ಬಿ ಎಲ್ ಶ್ರೀಕಂಠಯ್ಯ, ಬಿ ಎಸ್ ಸಿ, ಮತ್ತು ಡಿ ವೆಂಕಟಸ್ವಾಮಿ ಬಿ ಎಸ್ ಸಿ, ಈ ಮೂವರು ಪ್ರೊಬೇಷನರಿ ರೈಲ್ವೆ ಸಬ್ ಅಸಿಸ್ಟೆಂಟ್ ಲೋಕೋಸೂಪರಿಂಟೆಂಡೆಂಟರಾಗಿ ನಿಯಮಿಸಲ್ಪಟ್ಟಿರುತ್ತಾರೆ ಈ ಉದ್ಯೋಗಕ್ಕೆ ಬಿ ಎ ಮತ್ತು ಬಿ ಎಸ್ ಸಿ ಪ್ರಶಸ್ತಿಯನ್ನು ಪಡೆದಿರುವ ಕೆಲ ವೀರಶೈವ ತರುಣರು ಅಭ್ಯರ್ಥಿಗಳಾಗಿದ್ದರೂ ಒಬ್ಬನಾದರೂ ಆರಿಸಲ್ಪಡದೆ ಇರುವುದು ಸಖೇದಾಶ್ಚರ್ಯದಾಗಿದೆ ಈ ಕಾಟೆಯ ಉದ್ಯೋಗಗಳಲ್ಲಿ ವೀರಶೈವರೂ ಇರುವಂತೆ ಕೋರಲಿಚ್ಛಿಸುವ

ಕೋಲಾರ ರಿಟೈರ್ಡ್ ಸಬ್ ಜಡ್ಜಿಯವರಾದ ರಾವ್ ಸಾಹೇಬ್ ಮ ಎಚ್ [illegible]ಸ್ಪಯ್ಯನವರ ದ್ವಿತೀಯ ಕುಮಾರಿಯರೂ ರಾಜಧಾನಿಯ ಅಡ್ವೊಕೇಟ್ ಮ|| ಎಚ್ ಸಿ ದಾಸಪ್ಪನವರ ಧರ್ಮಪತ್ನಿಯರೂ ಆದ ಸೌ|| ಲಕ್ಷ್ಮಮ್ಮ, ಬಿ ಎ, ಯವರು ಬೆಂಗಳೂರು ಮಹಾರಾಣಿಯವರ ಗರ್ಲ್ಸ್ ಸ್ಕೂಲಿನಲ್ಲಿ ಉಪಾಧ್ಯಾಯಿನಿಯರಾಗಿದ್ದು ಎಲ್ ಟಿ ಪರೀಕ್ಷೆಗೋದಲು ಮದರಾಸಿಗೆ ಹೋಗಿ ಆ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರೆಂದು ಕೇಳಿ ಸಂತೋಷಿಸುತ್ತೇವಲ್ಲದೆ ಆಕೆಯವರನ್ನು ಅಭಿನಂದಿಸಿ ಅವರು ಇನ್ನೂ ಹೆಚ್ಚಿನ ವಿದ್ಯಾಪ್ರಶಸ್ತಿಗಳನ್ನು ಪಡೆದು ಅಭಿವೃದ್ಧಿಯನ್ನೈದಿ ಖ್ಯಾತಿವಂತೆಯರಾಗಲೆಂದು ಹರಸುತ್ತೇವೆ [illegible] ಸುಪುತ್ರ ಸುಪುತ್ರಿಯರುಗಳನ್ನು ಪಡೆದಿರುವ ರಾವ್ ಸಾಹೇಬರೇ ಧನ್ಯರು

ರಾಜಧಾನಿಯ ದೊಡ್ಡ ಪೇಟೆಯಲ್ಲಿರುವ ದೇಶದ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ನಡೆಯಬೇಕಾಗಿದ್ದ ಶ್ರೀ ಬಸವಜಯಂತಿಯನ್ನು ೭ ತಿಂಗಳಕಾಲ ಯಾರೂ ನಡೆಸಕೂಡದೆಂದು ಮೈಸೂರು ಸಿಟಿ ಮೆಜಿಸ್ಟ್ರೇಟರು ಮಾಡಿರುವ ಆರ್ಡರನ್ನು ರದ್ದು ಮಾಡಬೇಕೆಂದು ಇವರು ಆ ಡಾರರು ಕಳೆದ ಶನಿವಾರ ಅರ್ಜಿ ಕೊಟ್ಟರು ಈ ವಿಚಾರವನ್ನು ಪುನಃ ವಿಮರ್ಶಿಸಲು ಆದೇಶ ರದ್ದುಮಾಡಲು ಈ ಕೋರ್ಟಿಗೆ ಅಧಿಕಾರವಿಲ್ಲವೆಂದೂ ಇದಕ್ಕೆ ಆಧಾರವನ್ನು ತೋರಿಸುತ್ತೇನೆಂದೂ ಅರ್ಜಿದಾರರಾದ ಮ|| ಎಂ ಬಿ ಬೋಗಯ್ಯನವರೂ [illegible] ರದ್ದು ಮಾಡಲು ಈ ಕೋರ್ಟಿಗೆ ಅಧಿಕಾರವುಂಟೆಂದು ಇದಿರ [illegible] ರಾದ ಮ|| ಜೆ ರಾಮಸ್ವಾಮಯ್ಯನವರೂ ವಾದಿಸಿದುದರ ಮೇಲೆ ಇವರ ಇತ್ಯರ್ಥದ ಒಗಿಗೆ ಈ [illegible] ಮುಂದುವರಿಸಲ್ಪಟ್ಟಿತು

ಈಸಲ ನಡೆದ ಮೈಸೂರು [illegible] ಪರೀಕ್ಷೆಗೆ ಮಹಾರಾಜರವರ ಕಾಲೇಜಿನಿಂದ ಹೋಗಿದ ಅಪ್ಪಳ್ಳಿ ಹಾಸ್ಟಲಿನ 1 [illegible] ವಿದ್ಯಾರ್ಥಿಗಳಲ್ಲಿ ಮ|| ಗಳಾದ (1 [illegible]ರಸಪ್ಪ ( ) [illegible] (3) ಕೊಟ್ರಪ್ಪ ರು ಒ ಪ್ಪ (4) ಎಸ್ [illegible] ( ) [illegible] ರುದ್ರಪ್ಪ ( ) [illegible] ಎಸ್ ಆರಾಧ್ಯ [illegible]ರುಗಳು ಸಂಪೂರ್ಣವಾಗಿಯೂ ಟಿ ಎಂ ಮಹಾದೇವಯ್ಯ ಮತ್ತು ಡಿ ಗಂಗಾಧರ್ ಇವರು ಅಪೂರ್ಣವಾಗಿಯೂ ಚಿಕ್ಕದೇವರಾಜ ಹಾಸ್ಟಲಿನ [illegible]ವಿದ್ಯಾರ್ಥಿಗಳಲ್ಲಿ ಮ|| ಗಳಾದ ಎಸ್ ಎಸ್ ಮುರುಗಪ್ಪನವರು ಸಂಪೂರ್ಣವಾಗಿಯೂ ವಿ ಎಂ ಚಂದ್ರಪ್ಪ ಮತ್ತು ಎಂ [illegible]ರು ಅಪೂರ್ಣವಾಗಿಯೂ ಬೋರ್ಡಿನವರಲ್ಲಿ ಮ|| ಗಳಾದ ಲಿಂಗಪ್ಪಯ್ಯನವರು ಸಂಪೂರ್ಣವಾಗಿಯೂ ಎಂ [illegible] ರುದ್ರಯ್ಯನವರು ಅಪೂರ್ಣವಾಗಿಯೂ ಕಲೇಜ್ ಹಾಸ್ಟಲ್ ವಿದ್ಯಾರ್ಥಿಗಳಲ್ಲಿ ವ [illegible] ಶಿವಶಂಕರ್‌ರವರು ಅಪೂರ್ಣವಾಗಿಯೂ ತೇರ್ಗಡೆ ಹೊಂದಿರುತ್ತಾರೆಂದು ತಿಳಿಸಲು ಸಂತೋಷವಾಗುತ್ತದಲ್ಲದೆ ಇವರುಗಳನ್ನು ಅಭಿನಂದಿಸುತ್ತೇವೆ

ಮೈಸೂರು ಡಿ|| [illegible] ಮತ್ತು ಪ್ರವಾಹ ಸಮಿತಿ ಸಭೆಯ ಮೆಂಬರಾದ ಚಾಮರಾಜನಗರ ತಾಲ್ಲೂಕು ಕ[illegible] ಶ್ರೀಮಂತ ಕೆ [illegible]ರಣ್ಣನವರು ತಮ್ಮ ತಂದೆಯವರ ಸ್ಮಾರಕವಾಗಿ ಹತ್ತಾರು ಸಾವಿರ ರೂಪಾಯಿ ನ ವೆಚ್ಚದಿಂದ ಕಟ್ಟಿಸಿರುವ ಪಾಠಶಾಲಾ ಮಂದಿರದ ಪ್ರಾರಂಭೋತ್ಸವವು ಕಳೆದ [illegible] ವಾರ ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮ|| ಆ ವಿ ಅನಂತರಾಮಯ್ಯರವರಿಂದ ನೆರವೇರಿಸಲ್ಪಟ್ಟಿತು ಈ ಮಹೋತ್ಸವಕ್ಕಾಗಿ ಮ|| ವೀರಣ್ಣ ಸಾಹುಕಾರರು ವಿಶಾಲವಾದ ಚಪ್ಪರವನ್ನು ಹಾಕಿಸಿ ಸುಂದರವಾಗಿ ಅಲಂಕರಿಸಿದ್ದರು ಮೈಸೂರು ನಂಜನಗೂಡು, ಟಿ. ನರಸೀಪುರ, ಕೊಳ್ಳೇಗಾಲ, ತಾಲ್ಲೂಕು ಮಧುವನಹಳ್ಳಿ ಮೊದಲಾದ ಸ್ಥಳಗಳಿಂದ ಆಹ್ವಾನಿತರುಗಳಾದ ಮ|| ಗಳಾದ ಕೆ[redacted] ದಾಸಪ್ಪ ಬಿ ಎಸ್ ಪುಟ್ಟಸ್ವಾ[redacted]ಗಳನ್ನು ಪತ್ರಿಕೆ ರುಗಳನ್ನೂ ಅ[redacted] ವಿದ್ಯಾರ್ಥಿ [illegible] ಸ್ಥಾನಗಳಿಂದಲೂ

ಪತ್ರಿಸಿ ರಾಜಧಾನಿಯಲ್ಲಿರುವ ಚಿತ್ರಶಾಲಾ [illegible]ಯ ಕಲಾವಿಶಾರದ ಮ|| ಡಿ ಎಂ. ವೀರಪ್ಪನವರಿಂದ ಡಿ|| ಕಮಿಷನರೇ ಆದಿಯಾಗಿ ಮಿತ್ರಮಂಡಲಿಯವರ ಭಾವಚಿತ್ರವನ್ನು ತೆಗೆಸಿದರೆಂದೂ, ಡಿ|| ಕಮಿಷನರು ಪ್ರಾರಂಭೋಪನ್ಯಾಸದಲ್ಲಿ ಧರ್ಮಕರ್ತರುಗಳ ಉದಾರಬುದ್ಧಿಯನ್ನು ಬಹಳವಾಗಿ ಪ್ರಶಂಸಿಸಿ ಇತರ ಶ್ರೀಮಂತರುಗಳು ಅವರನ್ನು ಅನುಕರಿಸಿ ಕೃತಾರ್ಥರಾಗಬೇಕೆಂದು ಅಪ್ಪಣೆ ಕೊಡಿಸಿದರೆಂದೂ ಉತ್ಸವ ಬಾಗಿಗನೊಬ್ಬರು ಬರೆದಿರುತ್ತಾರೆ

ವರ್ತಮಾನಸಂಗ್ರಹ.

ಜಪಾನಿನಲ್ಲಿ ಪಾರಿಟ್ಯಾ ಇತ್ತ ಕಡೆ ಮನೆಗಳು ಬೆಂಕಿಯಿಂದ ಹೊತ್ತಿಕೊಂಡು 3500 ಮನೆಗಳು ನಾಶವಾದುವು.

ಪ್ಯಾರಿಸ್ಸಿನಲ್ಲಿ ಲಿಯೋಕ್ರಿಸು ಎಂಬಾಕೆಯು ನಿಮಿಷಕ್ಕೆ 40 ಮಾರುಗಳನ್ನು ಟೈಪ್ ಮಾಡುತ್ತಾಳಂತೆ ಈವರೆಗೆ ಇದಕ್ಕಿಂತ ಹೆಚ್ಚಾಗಿ ಯಾರೂ ಟೈಪು ಮಾಡಿಲ್ಲವಂತೆ

ಸಾರ್ವಭೌಮರವರ ಆರೋಗ್ಯ ಸ್ಮಾರಕಕಾರ್ಯಕ್ಕಾಗಿ ಒಂದು ಧನ ನಿಧಿಯೇರ್ಪಡಿಸಲ್ಪಟ್ಟಿದೆ ಈ ನಿಧಿಗೆ ಪ್ರೈಸ್‌ರಾಯರು ಕೊಡಿಸುತ್ತಿರುವ ಹಣಕ್ಕೆ ಈವರೆಗೆ 27408 ರೂ. ಸೇರಿರುತ್ತದೆ

ಇದೇ ತಾ|| 23 ರ ಮಧ್ಯಾಹ್ನ ಕಲಕತ್ತಾ ಪಟ್ಟಣದಲ್ಲಿ ಬಿಸಲಿನ ತಾಪವು ಸಹಿಸಲಶಕ್ಯವಾಗಿ ಅನೇಕರಿಗೆ ತೊಂದರೆಯಾಯಿತೆಂದಲೂ ಸಾಯಂಕಾಲದೊಳಗೆ ಮಳೆಯು ಬಂದು ಕೊಂಚ ಸಮಾಧಾನಪಡಿಸಿತೆಂದೂ ತಿಳಿಯಬರುತ್ತದೆ.

ದಿಲ್ಲಿಪಟ್ಟಣದಲ್ಲಿ ವೈಸ್‌ರಾಯರು ವಾಸಮಾಡುವ ಪ್ರಾಸಾದದ ಕಾವಲುಗಾರರಿಗಾಗಿ ಕಟ್ಟಲ್ಪಡುತ್ತಿರುವ ಮನೆಗಳ ಮಾಡು ಕುಸಿದು ಕೆಳಗಳ ಮೇಲೆ ಬಿದ್ದು ಅಪಾಯ ಸಂಭವಿಸಿತು ಸಬ್ ಡಿವಿಜನ್ ಆಫೀಸರಾದ ಗ್ರ್ಯಾಂಟ್‌ರವರು ಆ ಸಮಯದಲ್ಲಿ ಅಲ್ಲಿದ್ದರಾದರೂ ಅವರು ದೈವವಶಾತ್ ಅಪಾಯಕ್ಕೆ ಸಿಕ್ಕಲಿಲ್ಲವು

ಸಿಲೋನಿಗೆ ಸೇರಿದ ಒಂದು ಗ್ರಾಮದಲ್ಲಿ ಹೊಟ್ಟೆ ನೋವಿನಿಂದ ಬಹಳವಾಗಿ ಬಾಧೆಪಡುತ್ತ ಕೃಶವಾಗಿದ್ದ 12 ವರ್ಷ ವಯಸ್ಸಿನ ಹುಡುಗನು ಸಿಲೋನಿನ ಆಸ್ಪತ್ರೆಗೆ ಕರೆತರಲ್ಪಟ್ಟು ಶಸ್ತ್ರಚಿಕಿತ್ಸೆ ಮಾಡಿ ನೋಡಲಾಗಿ ಅವನ ಹೊಟ್ಟೆಯಲ್ಲಿ 1813 ಬೆಣಚುಕಲ್ಲುಗಳಿದ್ದುದು ಕಂಡುಬಂದಿತು ಆ ಹುಡುಗನು ಅವನ್ನು ಕ್ರಮ ಕ್ರಮವಾಗಿ ನುಂಗಿರಬೇಕೆಂದು ಡಾಕ್ಟರೂಹಿಸಿರುತ್ತಾರೆ

ಮಹಾತ್ಮ ಗಾಂಧಿಯವರು ಆಂಧ್ರದೇಶಗಳಲ್ಲಿ 41 ದಿವಸ ಒಂದೇ ಸಮನಾಗಿ ಸಂಚರಿಸಿದರೂ ಆರೋಗ್ಯ ಕೆಡದೆ ಇದೇ ತಾ|| 31 ರಲ್ಲಿ ಬೊಂಬಾಯಿಗೆ ಬಂದರು ಆಂಧ್ರದೇಶ ಸಂಚಾರಕಾಲದಲ್ಲಿ ಪಾರಂಭದಿಂದಲೂ ಮಹಾತ್ಮರು ಆಡಿನ ಹಾಲನ್ನು ಕುಡಿಯುವುದನ್ನು ಬಿಟ್ಟು ಹಸಿಗೋಧಿಯನ್ನೂ ಕಾಯಿಪಲ್ಯಗಳನ್ನೂ ಸೇವಿಸುತ್ತಿರುವುದರಿಂದ ಅವರ ಆರೋಗ್ಯಸ್ಥಿತಿಯು ಕೆಡದೆ ಉತ್ತಮವಾಗಿರುವುದಂತೆ.

ಮೈಸೂರಲ್ಲಿ ವ್ಯವಸಾಯದ ಕಾಲೋನಿ.

ಭದ್ರಾ ಕಾಲುವೆಯ ಆಶ್ರಯದಲ್ಲಿ ಒಂದು ವ್ಯವಸಾಯದ ಕಾಲೋನಿಯನ್ನು ಸ್ಥಾಪಿಸಬೇಕೆಂದು ಮೈಸೂರು ವ್ಯವಸಾಯದ ಖಾತಾ ಡೈರೆಕ್ಟರು ಕೊಟ್ಟ ಸಲಹೆಯು ಸರಕಾರದಿಂದ ಮಂಜೂರ್ಮಾಡಲ್ಪಟ್ಟು, ಆ ಬಾಬಿಗಾಗಿ ಬೇಕಾದ ಅಂದಾಜು ಮೊಬಲಗನ್ನು ನ್ಯಾಯವಿಧಾಯಕಸಭೆಯ ಬಜೆಟ್ ಅಧಿವೇಶನದಲ್ಲಿ ಮಂಜೂರುಪಡಿಸಬೇಕೆಂದು ಸೂಚನೆ ಮಾಡಿರುತ್ತಾರೆ ಸಲಹೆಯ ಮುಖ್ಯಾಂಶಗಳು, (1) ವ್ಯವಸಾಯದಲ್ಲಿ ಯೋಗ್ಯ ಶಿಕ್ಷಣವನ್ನು ಹೊಂದಿದವರಿಗೆ ಪ್ರೋತ್ಸಾಹಕೊಟ್ಟು ಅವರ ಅನುಭವವು ದೇಶಕ್ಕೂ ಅವರಿಗೂ ಉಪಯುಕ್ತವಾಗುವಂತೆ ಮಾಡುವುದು (2) ಇದುವರೆಗೆ ಸರಿಯಾಗಿ ಅಚ್ಚುಕಟ್ಟಿಗೆ ಬಾರದಿರುವ ಭೂಮಿಯನ್ನು ಅಚ್ಚುಕಟ್ಟಿಗೆ ತಂದು ಉತ್ಪನ್ನವನ್ನು ಹೆಚ್ಚಿಸುವುದು (3) ವ್ಯವಸಾಯದಲ್ಲಿ ನೂತನ ಸುಧಾರಣೆಗಳನ್ನು ಪ್ರಚುರಪಡಿಸಲು ಒಂದು ಕೇಂದ್ರವನ್ನು ಸ್ಥಾಪಿಸುವುದು

ಇದಕ್ಕಾಗಿ ಒಬ್ಬೊಬ್ಬರಿಗೆ ಖುಷ್ಕಿ 30 ಎಕರೆ ತರಿ ಮತ್ತು 10 ಎಕರೆ ಉಳ್ಳ ಬಿಡುವುಗಳು ಕೊಡಲ್ಪಡುವುವು. ಈಗಿರುವ ವಿಧಿಯನ್ನು ಅನುಸರಿಸುವವರುಗಳು ಕನಿಷ್ಠ 20 ವರ್ಷಗಳ ಕಾಲದವರೆಗೆ ಬೇಸಾಯವನ್ನು ಮಾಡಬೇಕು ಕಾಲೋನಿಯು ವ್ಯವಸಾಯದ ಇಲಾಖೆಯ ಡೈರೆಕ್ಟರ ಅಧೀನದಲ್ಲಿರತಕ್ಕದ್ದು ಇದಕ್ಕಾಗಿ ಪ್ರತಿಯೊಬ್ಬನಿಗೆ[redacted] ಗೊತ್ತಾಗಿದೆ, ಇದರಲ್ಲಿ 1000 ಮ[redacted] ಕೊಡಬೇಕು ಉಳಿದ ಹಣವು ಸ [redacted] ಕಟ್ಟಿಯೂ ನೈ ಪಾಲು ರದಿ 1 ಕೊ[redacted]

ಶೋಲಾಪುರ ಪಟ್ಟಣದ ಮಿಲ್ಲುಗಳಲ್ಲಿ ಕೆಲಸಗಾರರು ಕೆಲಸಕ್ಕೆ ಹೋಗದೆ ಮುಷ್ಕರ ಹೂಡಿದ್ದು ಈವರೆಗೆ 30000 ಜನರು ನಗರವನ್ನು ಬಿಟ್ಟು ಸ್ವಗ್ರಾಮಗಳಿಗೆ ಹೋಗಿರುತ್ತಾರೆ. ಈ ಜನರು ರೈಲುಬಂಡಿಯಲ್ಲಿಯೂ ಹಡಗಿನಲ್ಲಿಯೂ ಕಮ್ಮಿ ದರದಿಂದ ಪ್ರಯಾಣಮಾಡಲು ಕೂಲಿಕಾರರ ಸಂಘದವರು ಕಂಪೆನಿಯವರ ಕೂಡ ಮಾತನಾಡಿ 60 ಸಾವಿರ ಮಂದಿ ಪ್ರಯಾಣ ಮಾಡಲು ತಕ್ಕ ಏರ್ಪಾಡು ಮಾಡಿಸುತ್ತಿದ್ದಾರೆ. ನಾಸಿಕಾದ ಮಿಲ್ಲಿನ ವಾರ್ಷಿಕೋತ್ಸವ ಸಮಾರಂಭದಲ್ಲಿ ಅಧ್ಯಕ್ಷತೆಯನ್ನು ವಹಿಸಿದ್ದ ರೇಮಂಡ್‌ರವರು ಭಾಷಣಮಾಡುವಾಗ್ಗೆ "ಕಳೆದ ವರ್ಷ ಕೂಲಿಕಾರರ ಮುಷ್ಕರದಿಂದ 21 ಲಕ್ಷ ರೂಪಾಯಿ ನಷ್ಟವಾಗಿರುತ್ತದೆ. ಇದಕ್ಕೆಲ್ಲಾ ಕಮ್ಯೂನಿಸ್ಟುಗಳೇ ಜವಾಬ್ದಾರರು. ಈ ದೇಶದಲ್ಲಿ ಪರಸ್ಪರ ಮಾಘಸ್ಪರ್ಧೆಯಾಗಬೇಕಾದಲ್ಲಿ ಕಮ್ಯೂನಿಜಮ್ ಅಡಗಬೇಕು" ಎಂದು ಹೇಳಿದರು.

Office of the President,
City Municipal Council
Mysore Dt 25-5 29

ಮೈಸೂರು ಸಿಟಿ ಮ್ಯುನಿಸಿಪಾಲಿಟಿ

ನೋಟೀಸ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ,

1929–1930 ನೇ ಸಾಲಿಗೆ ಮೈಸೂರು ಸಿಟಿ ಟೋಲ್‌ಗೇಟುಗಳಲ್ಲಿ ಟೋಲ್ ಫೀಸು ವಸೂಲ್ಮಾಡುವ ಕಂಟ್ರಾಕ್ಟ್ ಬಾಬನ್ನು ತಾ|| 15–5 1929 ರಲ್ಲಿ ಈ ಆಫೀಸಿನಲ್ಲಿ ಬಹಿರಂಗವಾಗಿ ಹರಾಜು ಮಾಡಿಸಿದ್ದದ್ದು ಸರಿಯಷ್ಟೆ. ಆದರೆ ಆ ದಿವಸ ಮಾಡಲ್ಪಟ್ಟ ಛಡದರಖಾಸ್ತು ಮ್ಯುನಿಸಿಪಲ್ ಕೌನ್ಸಿಲ್ಲಿನಲ್ಲಿ ಮಂಜೂರ್ಮಾಡಲ್ಪಡಲಿಲ್ಲವಾಗಿ ಇದೇ ಬಾಬನ್ನು ತಾ|| 10-6-1929 ನೇ ಸೋಮವಾರ ಮಧ್ಯಾಹ್ನ 1 ಘಂಟೆಗೆ ಸರಿಯಾಗಿ ಮ್ಯುನಿಸಿಪಲ್ ಆಫೀಸಿನಲ್ಲಿ ಪುನಃ ಬಹಿರಂಗವಾಗಿ ಹರಾಜು ಮಾಡಿಸಲಾಗುತ್ತೆ. ಬಿಡ್‌ಮಾಡಲು ಅಪೇಕ್ಷೆಯುಳ್ಳವರು ಮ್ಯುನಿಸಿಪಲ್ ಆಫೀಸಿಗೆ ಬಂದು ಹರಾಜಿನ ಷರತ್ತುಗಳನ್ನು ತಿಳಿಯಬಹುದು

ವೈ ರಾಮಸ್ವಾಮಿ,
ಪ್ರೆಸಿಡೆಂಟ್

[2—1]

ಲಗ್ನಪತ್ರಿಕೆಗಳ

ಮುದ್ರಣಕ್ರಮ

ನಮ್ಮ ಕ್ರೌನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಕೊಡುತ್ತೇವೆ ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು

ಮ್ಯಾನೇಜರ್,
ಸ್ಟಾರ್ ಪ್ರೆಸ್ ಮೈಸೂರು

ದಾವಣಗೆರೆ ಸಾಧುವೀರಶೈವ ಹಾಸ್ಟಲ್

ನಮ್ಮ ಶ್ರೀಮುರುಘಾ ಸಂಸ್ಥಾನದಿಂದ ವೀರಶೈವ ಬಡವಿದ್ಯಾರ್ಥಿಗಳಿಗೋಸ್ಕರವಾಗಿ ಪಾರಮಾರ್ಥಿಕ ಶಿಕ್ಷಣವನ್ನು ಹೊಂದಲು ದಾವಣಗೆರೆಯಲ್ಲಿ ಈ ವರ್ಷ ಪವಿತ್ರವಾದ ಸಹಸ್ರಕ್ಕೆ ತಕ್ಕ ವೀರಶೈವ ಉಚಿತ ವಿದ್ಯಾರ್ಥಿನಿಲಯ ಸಂಸ್ಥಾನದಿಂದ ಏರ್ಪಡಿಸಿ ಅನುಕೂಲ ಮಾಡಿರುವುದಾಗಿದೆ. ಹೈಸ್ಕೂಲುಗಳಲ್ಲಿ ಅಭ್ಯಾಸ ಮಾಡತಕ್ಕ ವಿದ್ಯಾರ್ಥಿಗಳಿಗೋಸ್ಕರ ಮೈಸೂರು ಪ್ರಿನ್ಸಿಪಲ್ಲಿ ತುಮಕೂರು ಹಾಸನ ಚಿತ್ರದುರ್ಗ ದಾವಣಗೆರೆ ಮುಂತಾದ ಸ್ಥಳಗಳಲ್ಲಿ ತಕ್ಕ ಅನುಕೂಲಗಳನ್ನು ಮಾಡಿರುತ್ತೆ. ಈ ವಿದ್ಯಾರ್ಥಿಗಳಿಗೋಸ್ಕರ ಬಂಗಳೂರಿನ ಸಿಟಿಯ ಬೈಲು ಸಹ ವಾಸಕ್ಕೆ ಸ್ಥಳವನ್ನು ಏರ್ಪಡಿಸಿರುವುದು ಪ್ರಸಿದ್ಧವಾಗಿರತಕ್ಕದ್ದೆ. ಅಲ್ಲದೆ ನಮ್ಮ ಶ್ರೀಗಳವರ ಸವಾರಿಯು ಮೈಸೂರು ಪ್ರಾಂತ ದಯಮಾಡಿಸಿದಾಗ ನಮ್ಮ ಮಠದ ಸಂಸ್ಥಾನದ ಶಾಖೆಗೆ ಸೇರಿದ ಚಿಕ್ಕಪುರದ ವಿರಕ್ತ ಮಠಾಧಿಕಾರಿಗಳಾದ ಶ್ರೀ ಚಿಕ್ಕವೀರ ದೇಶಿಕೇಂದ್ರ ಸ್ವಾಮಿಗಳವರ ಮೈಸೂರಿನಲ್ಲಿ ತಮ್ಮ ಹೆಸರಿನಿಂದ ವೀರಶೈವ ಬಡವಿದ್ಯಾರ್ಥಿಗಳಿಗೆ ಪ್ರಸಾದ ಮೂಲಕ ಅನ್ನದಾನ ನಡೆಯುವಂತೆ ಏರ್ಪಾಡು ಮಾಡಿರುತ್ತಾರೆ. ಇದರಂತೆ ಶ್ರೀಮಠ|| ಸಂಸ್ಥಾನದಿಂದ ಬೆಂಗಳೂರು ಪ್ರೆಸಿಡೆನ್ಸಿಯಲ್ಲಿಯೂ ಅಲ್ಲಲ್ಲಿ ಅನೇಕ ಸಂಸ್ಥೆಗಳು ಏರ್ಪಾಡಾಗಿರುವುದರಿಂದ ವಿದ್ಯಾರ್ಥಿಗಳಿಗೆ ಹೆಚ್ಚಾದ ಅನುಕೂಲವಾಗಿರುತ್ತವೆ.

ಸ್ಕಾಲರ್‌ಷಿಪ್ಪಿಗೋಸ್ಕರ ದೊಡ್ಡ ಮನುಷ್ಯರನೇಕರು ಶಿಫಾರಸ್ ಮಾಡಿದಂತೆ ಇರುವಂತೆಯೂ ಮಠ|| ಸಂಸ್ಥಾನದಿಂದ ಆ ಪ್ರಕಾರ ಕೇಳುವರಿಗೆ ಯುಕ್ತ ಕ್ಷೇತ್ರದಷ್ಟು ವೇತನವನ್ನು ಕೊಡುತ್ತಾ ಬಂದಿರುವುದಾಗಿದೆ. ಶಿಫಾರಸ್ ಹೊಂದಿದ ಕೆಲವು ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ ದೊರೆಯದೆ ಇರುವ ಮೂಲಕ ಅಂಥವರಿಗೆ ಬಹಳ ಅಸಮಾಧಾನವಾಗಿರುವ ಸಂಗತಿಯು ಶ್ರೀಮಠ|| ಸಂಸ್ಥಾನದ ಚಾಕರಿಗೆ ಬಂದಿರುವದರಿಂದ ಇನ್ನುಮುಂದೆ ಪ್ರತ್ಯೇಕ ವ್ಯಕ್ತಿಗೆ ವಿದ್ಯಾಭ್ಯಾಸದ ಸಲುವಾಗಿ ಸ್ಕಾಲರ್‌ಷಿಪ್ ದೊರೆಯುವ ಮಠ|| ಸಂಸ್ಥಾನಕ್ಕೆ ಶಿಫಾರಸ್ ಮಾಡಬಾರದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಇನ್ನುಮುಂದೆ ಅವರ ಮುಂತಾದ ಕಡೆಗಳಲ್ಲಿ ಕೆಲವು ಸಂಸ್ಥೆಗಳ ಆಧ್ಯಸಮಾಜಕ್ಕೆ ವಿದ್ಯಾರ್ಥಿಗಳಿಗೆ ಮಠ|| ಸಂಸ್ಥಾನದ ತಕ್ಕ ಸೌಲಭ್ಯಗಳನ್ನು ಮಾಡುವುದು ಅತ್ಯಾವಶ್ಯಕವಾಗಿರುವುದರಿಂದ, ಅಂಥಾ ಸಂಸ್ಥೆಗಳನ್ನು ಏರ್ಪಾಡುಮಾಡಿಸಲು ಮಠ|| ಸಂಸ್ಥಾನದ ಪೂರ್ಣ ಲಕ್ಷ್ಯವಿರುತ್ತದೆ ಎಂದು ತಿಳಿಸಪಡಿಸಿದೆ.

ಪಿ. ಬೆಂಗಳೂರು ಪಟ್ಟಣದವರ.

ಜಾಹೀರಾತು.

ಸಮಸ್ತ ವೀರಶೈವ ಭಕ್ತರಿಗೆ ತಿಳಿಸುವದೇನೆಂದರೆ ನಮ್ಮ ಶ್ರೀ ಸಿದ್ಧಾರೂಢ ಸ್ವಾಮಿಗಳವರು ದಾವಣಗೆರೆ ತುರುವಪ್ಪನವರ ಮಠದಲ್ಲಿ ೬ ನೆ ತಾರೀಖು ಶ್ರಾವಣ ಸೋಮವಾರ ಮುಂತಾದ ದಿವಸಗಳಲ್ಲಿ ಪ್ರವಚನ ನಡೆಯುತ್ತದೆ. ಎಲ್ಲಾ ಸಜ್ಜನರೂ ಬಂದು ಕೇಳಬೇಕಾಗಿ ಪ್ರಾರ್ಥನೆ. ಈ ಸಮಯವನ್ನು ತಪ್ಪಿಸಿಕೊಳ್ಳಬಾರದಾಗಿ ಕೋರಿಕೆ.

Siddaradhya
Tuuruapparavaru mutt
Davangere

[12—2]



28

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರು

ನರ್ಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ — ಶೀತ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು ಜಲದೋಷ ಮುಂತಾದ ವ್ಯಾಧಿಗಳ ಪರಿಹಾರವಾಗುವದಲ್ಲದೆ ಕಂಡಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನು ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಬೆರೆಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೆ ಪುಗಸಟ್ಟೆ ಕಳುಹಿಸಲಾಗದು.

ಬುಡ್ಡಿ ಒಂದಕ್ಕೆ ಕ್ರಯ ರೂ ೦—೪—೦ ವಿ ಪಿ ೦—೯—೦
ಡಜನ್ ಒಂದಕ್ಕೆ ಕ್ರಯ ರೂ ೨—೮—೦ ವಿ ಪಿ ಚಾರ್ಜು ಪ್ರತ್ಯೇಕ

ಕಳುಹುವಾಗ ನಿಮ್ಮ ಹೆಸರನ್ನೂ ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[೫— ೩] ಪೋ. ಬಾ. ೫೧೧, ಮದರಾಸು

೧೯೨೯ನೆಯ ಇಸವಿ ಆಗಸ್ಟ್ ತಾ|| ೧೭ರಿಂದ ೧೯೨೯ನೆಯ ಇಸವಿ ಆಗಸ್ಟ್ ತಾ ೨೩ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೧ ನೆಯ ಶುಕ್ಲನಾಮ ಸಂವತ್ಸರದ ಶ್ರಾವಣ ಶುದ್ಧ ಬಹುಳ ಪಕ್ಷದಿಂದ ಶ್ರಾವಣ ಬಹುಳ ಕಡೆಗೆ ವರೆಗಿನ ಪಂಚಾಂಗ

ತಾ||	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸಿಂಹ ಮಾಸ
17	ಶನಿ	ದ್ವಾದ	3 30	ಪೂರ್ವಾ	10 38	1
18	ಭಾನು	ತ್ರಯೋ	9 32	ಉತ್ತರಾ	23 20	2
19	ಸೋಮ	ಚತು	16 35	ಶ್ರವ	28 42	3
20	ಮಂಗಳ	ಪೌರ್ಣ	19 10	ಧನಿ	34 15	4
21	ಬುಧ	ಪಾಡ್ಯ	23 0	ಶತ	39 1	5
22	ಗುರು	ಬಿದಿ	25 10	ಪೂಭಾ	40 40	6
23	ಶುಕ್ರ	ತದಿ	23 12	ಉಭಾ	42 18	7

(1) ಶ್ರಾವಣಶನಿವಾರ, ದಾಮೋದರದ್ವಾದಶಿ, ಪ್ರದೋಷ. (2) ಮಹಮ್ಮದ್ ಜನ್ಮದಿನ (3) ಹುಣ್ಣಿಮೆ, ಋಗ್ ಉಪಾಕರ್ಮ (4) ಮಂಗಳಗೌರೀವ್ರತ, ಯಜುರ ಉಪಾಕರ್ಮ, ವಿಷ್ಣುಪಂಚಕ ಮುಖ 3 ನೇ ಪಾದ. (5) ಮೇಲನಕ್ಷತ್ರ ಮುಖ 4 ನೆಯ ಪಾದ.

ಮೈಸೂರು : ವೈ. ಬಿರೂಪಾಕ್ಷಯ್ಯನವರಿಂದ ಕ್ಯಾಶ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಮೈಸೂರ್ ಸ್ಟಾರ್

ಪ್ರತಿ ಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾನಾ ಪರಮಧಿಗತರಾಜಮಂಡಲಹಿಕ್ಷಿತಾ | ಘನಪಥಕ್ಶಾವಕಾರಾ ಪಕ್ಷಪ್ಷ ನಕ್ಷತ್ರ ಮೋಹರಾಜೇಯಾ ||
ಶ್ರೀಮತ್ಕೃಷ್ಣನೃಪಾಲನುತ್ತಮರಕಾರೋಲಂಸುಧೀಪುಂಗನ | ಸ್ತೋಮಾಭೀಷ್ಟದಶೀಲ ನಾಕಲಿಕ ಸಾಧ್ಗುಣ್ಯಲವಾಲಂದಲಂ ||
ಸೀಮಾತೀತಯಶಃಪ್ರಕಾಶವಿಭುಂ ಸದ್ವೃತ್ತಮಾಲಾಕುಲಂ | ಶ್ರೀಮಂಚಿತ್ತಕೆಯಿಂಸದಾಪುರಿಗೆ ಗೌರೀಶಾನುಕಂಪೋಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರರಿಗೆ ೩-೮-೦]

ಸಂಪುಟ ೪೨] ಮೈಸೂರು ಸ್ಟಾರ್ ಸಕ ೧೯೨೯ ನಯ ಇಸವಿ ಆಗಸ್ಟ್ ತಾರೀಖು ೩೧ ನೆಯ ಶನಿವಾರ [ಸಂಚಿಕೆ ೩೫

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್.

[50—33] ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

೬೦೦ ಸಾವಿರ ಹಾಯಿ ತಿಂಬಿದರೆ ಸಾವಿರಾರು ಶಬ್ದಗಳನ್ನು ಬರೆಯಬಹುದಾದ 14 ಕ್ಯಾರಟ್ ಭಂಗಾರದ ನಿಬ್ ಹಾಕಿದ ಇತ್ತೀಚಿಗೆ ಬಂದೊ ಒನ್ನು ಆದ ಇದರ ಕೆಂಪ ಫೌಂಟೇನ್ ಪೆನ್ ಹೊಸದಾಗಿ ಸೀಮೆಯಲ್ಲಿ ತಯಾರಾಗಿ ಸಪ್ಲೈ ಆಗಿದೆ

"Lincoln" Self Filling Pen ಲಿಂಕನ್ ಸೆಲ್ಫ್ ಫಿಲಿಂಗ್ ಫೌಂಟೇನ್ ಪೆನ್ 1 ಕ್ಕೆ ಕ್ರಯ 8 15 0

ಮೇಲ್ಕಂಡ ಪೆನ್ ಒಬ್ಬ ಮನುಷ್ಯನ ಜನ್ಮಾವಧಿ ಬಾಳಿಕೆ ಬರತಕ್ಕದ್ದೆಂದು ತಯಾರಿಸಿದವರು ಭರವಸೆ ಹೇಳಿರುತ್ತಾರೆ

ಒಂದು ಪೆನ್ ಕರಿಸಿ ನೋಡಿ

ಅಪೇಕ್ಷಿಸುವವರಿಗೆ ಕ್ಯಾಟಲಾಗ್ ಫ್ರೀಯಾಗಿ ರವಾನಿಸಲಾಗುತ್ತೆ

ವಿಳಾಸ—ಎಂ.ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು

೧೦೦೦ ರೂಪಾಯಿ ಇನಾಮು

ಮಿರಜಿಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್. ಕಾವಸೆ, ಇವರ

ಅಲ್ಪವಯಸ್ಕರಾಗಿ ಕ್ಷೀಣರಾಗ ಬೇಡಿರಿ | ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ (ಸ್ಟಾರ್ ರಿಜಿ) ವಜ್ರಾಂಗ ಸುಂದರಪಾಕ. | ಕ್ಷೀಣರಾದರೆ ಕ್ಷೀಣಾಕೆ ಆಯುಷ್ಯ ಕೊಳ್ಳುವಿರಿ

ಈ ಪಾಕಸೇವನೆಯಿಂದ ಎಲ್ಲ ಧಾತುಜನ್ಯ ವಿಕಾರಗಳು, ಧಾತುಕೋಶದಲ್ಲಿಯ ಉಷ್ಣತೆ, ಮುಷ್ಟಿ ಮೈಥುನದಿಂದುಂಟಾದ ಇಂದ್ರಿಯ ಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥೆ ಮೂತ್ರದೊಂದಿಗೆ ಧಾತುಹೋಗೋಣ ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ವೀರ್ಯವು ಕುಳುವಾಗುವದರಿಂದುಂಟಾದ ರೋಗದ ಮೂಲಕ ಸಂತತಿಯಾಗದಿರೋಣ, ನಡನೋವು ಸಂದುನೋವು, ಎದೆನೋವು ಹಾರ್ಟ (ಚಿಕಿಡ), ಜೀರ್ಣಜ್ವರ ಮೂಲವ್ಯಾಧಿ, ಮುಖರೋಗ, ಹಳೇಸರ್ಪ ಮತ್ತು ಗರ್ಮಿ, ರಸಾಯನ ಸೇವನೆಯಿಂದಾದ ದುಷ್ಟವಿಕಾರಗಳು ಯಾವದೇ ತರದ ಜ್ವರದಿಂದ ಎದ್ದ ಮೇಲೆ ಆದ ಕ್ಷೀಣತೆ, ಮೆಂದುವಿನ ಅಶಕ್ತತೆ, ಉರಿಮೂತ್ರ, ಕೈಕಾಲು ಉರಿಯೋಣ, ಎಲ್ಲ ಪಿತ್ತವಿಕಾರಗಳು, ನಿದ್ರೆಯು ಬಾರದೆ ಇರೋಣ, ಸ್ತ್ರೀಯರಿಗೆ ಸಂತತಿ ನಷ್ಟವಾಗೋಣ, ಮೇಲಿಂದಮೇಲೆ ಗರ್ಭಪಾತವು, ಎಲ್ಲ ಬಣ್ಣದ ಸೆರಗು, ಗರ್ಭಾಶಯದ ವಿಕಾರದಿಂದ ಸಂತತಿ ಆಗದೆ ಇರೋಣ ಮುಂತಾದ ವೃದ್ಧ [illegible]

ಕೇವಲ ಸ್ವಪ್ನಾವಸ್ಥೆ — ಈ ವಿಕಾರಕ್ಕೆ ೭ ದಿವಸಗಳಲ್ಲಿ ಗುಣ ೨೧ ದಿವಸ ಸಾಕಾಗುವಷ್ಟು ಸೀಸೆ ೧ ಕ್ಕೆ ೩ ರೂಪಾಯಿ ಗಳು.

ಪ್ರಮೇಹ (ಪರಮಾ)— [illegible] ದಿವಸ ಸಾಕಾಗುವಷ್ಟು ಸೀಸೆ ೧ ಕ್ಕೆ ೪ ರೂಪಾಯಿಗಳು

ಪಿನಸಿ — ಮೂಗಿನೊಳಗಿನ ಗಂಟಾಳ ಸಿಕ್ಕು, ರಕ್ತ ಕೀವು, ಹಳ್ಳು ದುರ್ಗಂಧ, ಕ್ರಿಮಿ ನಾಶವಾದರಿನೋಣ ದಮ್ಮುರೋಗ ಇವೇ ಎಲ್ಲ ವಿಕಾರಗಳಿಗೆ ೭ ದಿವಸಗಳಲ್ಲಿ ಗುಣ ೨೧ ದಿವಸ ಸಾಕಾಗುವಷ್ಟು ಸೀಸೆ ೧ ಕ್ಕೆ ಅಂಚೆವೆಚ್ಚ ಸೇರಿ ೩ ರೂಪಾಯಿ ಗಳು ಪೂರ್ಣ ಗುಣವಾಗಲಿಕ್ಕೆ ೩ ಸೀಸೆಗಳು.

[60—7] ಪತ್ತೆ:—ಮಾಲಿಕ ವೈದ್ಯ ವ್ಹಿ. ಎಸ್. ಕಾವಸೆ ಮು. ಪೋ. ಮಿರಜಿ,

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ ಪಿ ಸೇರಿ)		ಕ್ರಯ	(ವಿ ಪಿ ಸೇರಿ)
ವ್ರತಪಂಚಕ	೦—೪—೦	೦—೯—೦	ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಗುರುಶಂಕರಲಿಂಗೇಶ್ವರಶತಕ	೦—೧—೦	೦—೬—೦	ಸಚಿತ್ರ ವೀರಶೈವ ವಿವಾಹವಿಧಿ	೭—೮—೦	೦—೧೩—೦
ಬಸವೇಶ್ವರಚನಸ	೨—೮—೦	೨—೧೩—೦	ಷಟ್ಸ್ಥಲವಿದ್ಯಾ	೦—೪—೦	೦—೯—೦
ಸಚಿತ್ರ ಕಲಾ ಟೀಕಸಹ ಮಂಜರಿ	೦—೮—೦	೦—೧೩—೦	ಬಾಡಾಹಂಬಚರಿತ್ರೆ	೦—೫—೦	೦—೧೦—೦
ಸಚಿತ್ರ ಚರಿತ್ರೆಯು	೧—೦—೦	೧—೬—೦	ಹರಿದಾಸ	೨—೪—೦	೨—೯—೦

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಹೇಳುತ್ತದೆ. ಹಳೆ ಚಂದಾದಾರರುಗಳು ಮನಿಯಾರ್ಡರ್ ಮಾಡುವಾ[illegible]ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಿನ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು [illegible]ಗಳಿಗೆ [illegible]ಕೊಟ್ಟು ಉತ್ತರ ಕೊಡಲಾಗುವದಿಲ್ಲ.

MYSORE RAILWAYS.

Auction Sale Notice.

[59 2

Advertisement No. 39. C.

In accordance with Section 40 of the Mysore Railways Regulation No. 1 of 1894 all unclaimed and lost properties in possession of the Railway Administration, over 6 months old will be disposed of by Public Auction on Sunday the 15th September 1929 from 9 a.m. in the Mysore Station premises by the Railway Auctioneer.

List of such articles may be seen in the Lost Property Office, Mysore.

2. The auctioneer does not bind himself to accept the higher or any bid at all and it is open to him to cancel the auction for reasons found sufficient by him.

3. The highest bidder whose bid is accepted should pay the full amount soon after the auction is closed and must arrange to remove the articles immediately, failing which they will be reauctioned at his risk.

Traffic Manager's Office Mysore. 15th August 1929. — A. A. KHAN. *Traffic Manager.*

"ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತರ"
ಆಯುರ್ವೇದೀಯ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರೀ ಮಾತ್ರೆಗಳು.



ಈ ಮಾತ್ರೆಗಳನ್ನು ಪ್ರತಿದಿನವೂ ತೆಗೆದುಕೊಳ್ಳುತ್ತಿದ್ದರೆ, ಹಾಗೆಯೂ ಆಗಲೀ ಉಪಯೋಗಿಸುತ್ತಿದ್ದರೆ ಆಹಾರ, ನೀರು ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ,

ಮತ್ತು ಮೊದಲು ಮುಂತಾದ ವಯಸ್ಸಿನವರಿಗೂ, ಶೀತ, ನೆಗಡಿ, ಕೆಮ್ಮುಗಳು, ಜೀರ್ಣ, ಶೀತವಾತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ.

300 ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣೆ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ನಮ್ಮ ವಿಳಾಸವನ್ನೂ, ಲೋಕಾಮಯಹರ ಕಸ್ತೂರೀ ಮಾತ್ರೆ ಎಂಬ ಹೆಸರನ್ನೂ ನೋಡಿ ಕೊಂಡುಕೊಳ್ಳಿರಿ.

ವೈಶ್ವಾನರಾಸವ.

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ.)

ಮೂತ್ರವು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ, ವಾಂತಿ ಗಡಿ ಕೊಟ್ಟು ನೋವುನೋವೆಳೆಯುಂಟಾದರೆ ರೋಗವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1ಕ್ಕೆ ರೂ. 1—0—0.

ಲಕ್ಷ್ಮೀವಿಲಾಸರಸ.

(ಪ್ಲೇಗಿಗೆ)

ಹಲವು ವರ್ಷಗಳಿಂದ ಪ್ರತಿವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ನಿಂಬುವುದಾಗಿ ಗುಣಪಡಿಸಿರುತ್ತದೆ. ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ. ಸೀಸೆಯ ಬೆಲೆ 1ಕ್ಕೆ ರೂ. 1—0—0

ಶ್ರೀನಿವಾಸತೈಲ.

ಪ್ಲೇಗು ರೋಗಿಯ ಪ್ರತಿ ಗಂಡುಗಳಿಗೂ ಗಡ್ಡೆಗೂ ಹಚ್ಚುವ ಔಷಧ ಸೀಸೆ 1ಕ್ಕೆ ರೂ 0—8—0.

ಶ್ರೀ ಸೀತಾರಾಮ ಆಯುರ್ವೇದ ಶಾಲಾ, ವ್ಯಾಪಾರಿಗಳು ಪೇಟೆ ಬೆಂಗಳೂರು ಸಿಟಿ

"ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತರ ಶ್ರೀ ಸೀತಾರಾ[illegible] ಚೆನ್ನಪಟ್ಟಣ

[illegible]
Dated [illegible] August 1920

NOTICE.

The period of 31 days within which the tax [illegible] motor vehicles bicycles and tricycles are to be registered has expired. Any vehicles not yet registered should be got licensed without delay. If they are found plying without license the owners thereof will be liable to prosecution without further notice.

Y RAMASWAMI,
President

« ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು »

ಕರ್ನಾಟಕದ ರಾಷ್ಟ್ರೀಯ ಉತ್ಸವವು
ನವರಾತ್ರಿಯ ನಾಡಹಬ್ಬ

ಮಾಹನೀಯರೇ,

ಕರ್ನಾಟಕದ ನಾಡಹಬ್ಬವೆಂದರೆ ಕರ್ನಾಟಕ ದೇವಿಯ ಶರೀರದಲ್ಲಿಯ ಯಾವತ್ತು ನಾಡಿಗಳಲ್ಲಿ ರಕ್ತಸಂಚಲನವನ್ನುಂಟು ಮಾಡುವ ಹಬ್ಬವು. ಅವಳ ಸಕಲ ಅವಯವಗಳಲ್ಲಿ ಚೈತನ್ಯವನ್ನು ಸ್ಫುರಣಗೊಳಿಸುವ ಹಬ್ಬವು. ಅವಳ ಶಾರೀರಿಕ ಮಾನಸಿಕ, ಆಧ್ಯಾತ್ಮಿಕ ವಿಕಾಸಕ್ಕೆ ಸರ್ವವಿಧದಿಂದಲೂ ಆಸ್ಪದವನ್ನು ಕಲ್ಪಿಸಿಕೊಡುವ ಹಬ್ಬವು. ಒಟ್ಟಿಗೆ ಅದು ನಮ್ಮ ಸ್ವಾಭಿಮಾನದ ಹಬ್ಬ, ಶಕ್ತಿವರ್ಧಿನೀ ಹಬ್ಬ, ಚೈತನ್ಯದಾಯಿನೀ ಹಬ್ಬ. ಅದು ಸ್ವದೇಶಾಭಿಮಾನದ ಜನನಿ. ರಾಷ್ಟ್ರೀಯತ್ವದ ಧಾತ್ರಿ. ಇಂತಹ ನಾಡಹಬ್ಬವನ್ನು ನಾಡಿಗರು ನಾ ನೀ ಎಂದು ಮುಂದೆ ಬಂದು ಕರ್ನಾಟಕದ ನಡುಮನೆಯಾದ ಧಾರವಾಡ ನಗರದಲ್ಲಿ ರಾಷ್ಟ್ರಾಭಿಮಾನದ ವಿನಾಗದಿಂದ ನೆರವೇರಿಸಬೇಡವೇ?

ಈ ಹಬ್ಬದ ಹೆಸರಿಗೆ ತಕ್ಕಂತೆ ಇದರಲ್ಲಿ ಸರ್ವಶಕ್ತಿಗಳ ಪ್ರದರ್ಶನವಾಗಬೇಕು. ಸರ್ವ ಮತಗಳ ಏಕೀಕರಣವಾಗಬೇಕು. ಸರ್ವಜಾತಿಗಳ ಸಂಘಟನವಾಗಬೇಕು. ಸರ್ವವರ್ಗಗಳ ಸಮೀಕರಣವಾಗಬೇಕು. ಇದು ಸರ್ವವಿಚಾರಗಳ ನಿಧಾನವೂ ಭಾವೀ ಉನ್ನತಿಯ ಬೀಜವೂ ಭಾರತೀಯರ ಭಾಗ್ಯೋದಯದ ಸೂಚಕ ಚಿಹ್ನವೂ ಹೊಸವಿಚಾರಗಳ ಉಗಮಸ್ಥಾನವೂ ಹೊಸ ಆಚಾರಗಳ ಆದರ್ಶಸ್ಥಾನವೂ ಆಗಬೇಕು.

ಈ ತರಹದ ವ್ಯಾಪಕವಾದ ಉದಾತ್ತ ಕಲ್ಪನೆಯಿಂದ ಕರ್ನಾಟಕವು ಈ ನಾಡಹಬ್ಬವನ್ನು ಹೂಡಿರುತ್ತದೆ. ಮತ್ತು ಇದಕ್ಕೆ ಮೂರ್ತಸ್ವರೂಪವನ್ನು ಕೊಡುವ ಉದ್ದೇಶದಿಂದ ಧಾರವಾಡದವರು ಬರುವ ಅಕ್ಟೋಬರ 3 ರಿಂದ 13 ರ ವರೆಗೆ ಈ ಹಬ್ಬವನ್ನು ಆಚರಿಸುವದನ್ನು ಗೊತ್ತುಮಾಡಿದ್ದಾರೆ. ಈ ವರುಷದ ನಾಡಹಬ್ಬದಲ್ಲಿ ಹಿಂದುಸ್ಥಾನದ ಹಾಗೂ ಕರ್ನಾಟಕದ ಸರ್ವಾಂಗಸುಂದರವಾದ ಉನ್ನತಿಗೆ ಎಲ್ಲ ರೀತಿಯಿಂದಲೂ ನೆರವಾಗುವಂತೆ, ವಿದ್ವತ್ಪೂರ್ಣ ಉಪನ್ಯಾಸ, ಕೀರ್ತನೆ ಮೊದಲಾದ ಪ್ರದರ್ಶನ, ಲಲಿತಕಲಾಪ್ರದರ್ಶನ, ಔದ್ಯೋಗಿಕ ಪ್ರದರ್ಶನ, ಶರೀರ ಸಂಪತ್ತಿನ ಪಂದ್ಯಾಟ, ಕವಿಸಮ್ಮೇಲನ, ಐತಿಹಾಸಿಕ ವ್ಯಾಖ್ಯಾನ [illegible] ಇವೇ ಮುಂತಾದ ಅನೇಕ ಚೈತನ್ಯೋದ್ಬೋಧಕ ಕಾರ್ಯಗಳನ್ನು ಕೈಕೊಳ್ಳುವದನ್ನು ಗೊತ್ತುಮಾಡಲಾಗಿದೆ.

ಇವೆಲ್ಲ ಕಾರ್ಯಕ್ರಮಗಳಿಗೋಸ್ಕರ ಕನಿಷ್ಠ 5 [illegible] ರೂಗಳ ಬೇಕಾಗುವವೆಂದು ಎಣಿಸಿದೆ. ಕರ್ನಾಟಕದ ಕೇಂದ್ರವೆಂದು ಅಭಿಮಾನ ತಾಳುವ ಧಾರವಾಡಕ್ಕೆ ಇಷ್ಟು ಹಣದ ಭಾರವೇ? ಇದರಿಂದ ಧಾರವಾಡವು ಧಾರವಾಡದಲ್ಲಿ ಮಾತ್ರವೇ ಅಲ್ಲ, ಇಡೀ ಕರ್ನಾಟಕದಲ್ಲಿಯೇ ಯಾವ ಬಗೆಯ ಸ್ಫೂರ್ತಿಯನ್ನು ಹುಟ್ಟಿಸಬಹುದೆಂಬುದನ್ನು ಲಕ್ಷ್ಯದಲ್ಲಿ ತಂದು ಧಾರವಾಡಸ್ಥರೆಲ್ಲರೂ ಕೈ ಸಡಿಲು ಬಿಟ್ಟು ಸಹಾಯ ಮಾಡಬೇಕಾಗಿ ಪ್ರಾರ್ಥನೆ.

ತಮ್ಮ ವಿಧೇಯರಾದ

ಟೋಳ ವಿಶ್ವನಾಥರಾಯ ಎಂ ಎಲ್ ಸಿ, ಶೆಟ್ಟಿ ಆಲೂರ [illegible] ಎಲ್ ಎಲ್ ಬಿ, ಪಾಟೀಲ ಬಿ ಎಲ್, ಎಲ್ ಎಲ್ ಬಿ, ಪಾಟೀಲ ಡಿ ಎಲ್ ಎಲ್ ಎಲ್ ಬಿ, ಗುಂಜಾಳ ಕೃಷ್ಣರಾಯ ಬಿ ಎ, ನಲವಡಿ ಗಿರಿಮಪ್ಪ ಎಲ್ ಎಲ್ ಬಿ, ಪರಗಣ್ಣವ ರಾಮರಾಯ ಎಲ್ ಎಲ್ ಬಿ, ದಿವಾಕರ ರಂಗರಾಯ ಎಂ ಎ ಎಲ್ ಎಲ್ ಬಿ, ಆಲೂರ ವೆಂಕಟರಾಯ, ಮಾಳೀಮಠ ಸಿದ್ಧೇಶ್ವರಸ್ವಾಮಿ ಎಲ್ ಎಲ್ ಬಿ, ಎಚ್ ಎಸ್ ಶಿವಲಿಂಗಶಾಸ್ತ್ರಿ, ದೇಶಪಾಂಡೆ ದತ್ತಾತ್ರೇಯರಾಯರು, ದೇಸಾಯಿ ಹನುಮಂತರಾಯ ಎಲ್ ಎಲ್ ಬಿ, ಗಂಗಾಧರರಾವ ದತ್ತರಾಯ, ಎಲ್ ಎಲ್ ಬಿ, ಗುಂಜಾಳ ವಾಸುದೇವರು, ಎಲ್ ಎಲ್ ಬಿ, ದೇಶಪಾಂಡೆ ನಾರಾಯಣರಾಯ ಎಲ್ ಎಲ್ ಬಿ

ಧಾರವಾಡದ ಮಹಾನವಮಿ ಉತ್ಸವದಲ್ಲಿ ಖಾದಿ ಹಾಗೂ ಔದ್ಯೋಗಿಕ ಪ್ರದರ್ಶನವು
ಕಾರಖಾನೆದಾರರಿಗೆ ವಿನಂತಿ.

ಬರುವ ಅಕ್ಟೋಬರ 3ರಿಂದ 13ನೇ ತಾರೀಖಿನ ವರೆಗೆ ನಡೆಯುವ ಮಹಾನವಮಿ (ನವರಾತ್ರಿ) ಉತ್ಸವದಲ್ಲಿ ಉಳಿದ ಕಾರ್ಯಕ್ರಮಗಳೊಂದಿಗೆ ಖಾದೀ ಹಾಗೂ ಕರ್ನಾಟಕ ಔದ್ಯೋಗಿಕ ಪ್ರದರ್ಶನವೊಂದನ್ನು ಏರ್ಪಡಿಸುವುದು ಗೊತ್ತಾಗಿದೆ. ಆ ಭಾ [illegible] ಸಂಘದವರು ಖಾದೀ ಪ್ರದರ್ಶನದ ವ್ಯವಸ್ಥೆಯನ್ನು ಕೈಕೊಳ್ಳುವರು. ಕರ್ನಾಟಕದ ಇತರ ಕಾರಖಾನೆದಾರರ ಇಷ್ಟು ಆಸ್ಥೆ ಸಂಘಟಿತವಾಗಿರದ್ದರಿಂದ ಅವರಿಗೆ ಈ ವಿನಂತಿಯನ್ನು ಮಾಡಿಕೊಳ್ಳಬೇಕಾಗಿದೆ.

ಮೈಸೂರ, ಮಂಗಳೂರ, ಉತ್ತರಕನ್ನಡ, ಕೊಡಗು ಮುಂತಾದ ಪ್ರಾಂತಗಳಲ್ಲಿ ಅನೇಕ ಚಿಕ್ಕ ದೊಡ್ಡ ಔದ್ಯೋಗಿಕ ಕಾರಖಾನೆಗಳು ನಡೆಯುತ್ತಿರುವವು. ಅವುಗಳಲ್ಲಿ ಎಷ್ಟೋ ಕಾರಖಾನೆಗಳು ಸರಕಾರದ ಆಶ್ರಯದಿಂದಲೂ ನಡೆಯುತ್ತಿರುವವು. ಆ ಎಲ್ಲ ಕಾರಖಾನೆಗಳಿಂದ ನಮ್ಮ ಔದ್ಯೋಗಿಕ ಪ್ರದರ್ಶನಕ್ಕೆ ಸರಕುಗಳು ಬಂದರೆ ಕನ್ನಡನಾಡಿನ ಪ್ರಮುಖ ಸ್ಥಳವಾದ ಧಾರವಾಡದಲ್ಲಿ ಅಖಿಲ ಕರ್ನಾಟಕದ ಉದ್ಯೋಗಗಳನ್ನು ಪ್ರದರ್ಶಿಸಿದಂತಾಗುವುದು. ಅಲ್ಲದೆ ಅವರಿಗೆ ಒಳ್ಳೇ ಗಿರಾಕಿಯೂ ದೊರೆಯಬಹುದು.

ಪ್ರದರ್ಶನಕ್ಕೆ ಸರಕುಗಳನ್ನು ಕಳಿಸುವವರು ತಮ್ಮ ವೆಚ್ಚದಿಂದಲೇ ಕಳಿಸಿ ಪುನಃ ತರಿಸಿಕೊಳ್ಳಬೇಕಾಗುವುದು. ಪ್ರದರ್ಶನದ ಸ್ಥಳಕ್ಕೆ ಬಾಡಿಗೆ ಮುಂತಾದ್ದೇನೂ ಇಲ್ಲ. ಆ ಸರಕುಗಳ ಇಳಿಸುವ ಸುರಕ್ಷಿತತೆ, ಜಾಹೀರಾತು, ಯೋಗ್ಯಪ್ರದರ್ಶನ, ಮಾರಾಟ ಹಾಗೂ ಪುನಃ ಅವುಗಳನ್ನು ಸರಿಯಾಗಿ ಹಿಂತಿರುಗಿಸುವ ಹೊಣೆಯನ್ನು ನಾವೇ ಹೊರುತ್ತೇವೆ. ಕರ್ನಾಟಕ

ಉದ್ಯೋಗಗಳ ಶ್ರೇಯಸ್ಸಿಗಾಗಿ [illegible] ಸಹಾಯ ಮಾಡಬೇಕೆಂದು [illegible] ನಮ್ಮ [illegible] ಮಾಡಲು ವಿನಂತಿ [illegible]

ಸರಕುಗಳನ್ನು ಕಳಿಸುವವರು ಈ ಕಾರ್ಯಾಲಯಕ್ಕೆ [illegible] ತಮ್ಮ ಸರಕಿನ ಪಟ್ಟಿಯನ್ನು ಕಳಿಸಬೇಕು [illegible] ಕರ್ನಾಟಕದ ಪ್ರದರ್ಶನದ [illegible] ಆದಷ್ಟು ಬೇಗ [illegible] ನಾವಾದರೂ ಬರೆದು [illegible] ಕರ್ನಾಟಕಸ್ಥರು ನಮಗೆ ಈ ಕಾರ್ಯದಲ್ಲಿ ಸಹಾಯ ಮಾಡಬೇಕು.

ವೆಂ ಶ್ರೀ ಮಿರಜಿ
ಶ್ರೀ ಅ ಜೋಶಿ
ಕಾರ್ಯದರ್ಶಿಗಳು

ಪತ್ರವ್ಯವಹಾರವನ್ನು ವೆಂ ಮಿರಜಿ, ಧಾರವಾಡ ಕಾರ್ಯಾಲಯ ಇವರೊಂದಿಗೆ ಮಾಡಬೇಕು.

ಹೆಂಗಸರಿಗೆ ಅನುಕೂಲವಾದ ಅಂಗಸಾಧನೆಗಳು ಮತ್ತು ಅದರ ಆವಶ್ಯಕತೆ

(ಆರೋಗ್ಯಚಂದ್ರಿಕೆ ಇಂದ)

ಸ್ತ್ರೀಯರು ಸ್ವಭಾವತಃ ಅಬಲೆಯರೆಂಬ ಪೂರ್ವಕಾಲದ ನಂಬಿಗೆಯು ಈಗೀಗ ಸಂಪೂರ್ಣವಾಗಿ ಅಳಿಸಿಹೋಗುತ್ತಿದೆ. ಹೆಂಗಸರ ಪರಾಯ ನಾಮಗಳಲ್ಲಿ «ಅಬಲೆ» «Weaker sex» ಎಂಬ ಸಂಕೇತವನ್ನೇ ಆಂಗ್ಲೀಯ ಭಾಷೆಯಿಂದ ತೆಗೆದುಹಾಕಬೇಕೆಂದು ಒಬ್ಬ ಶರೀರವ್ಯಾಯಾಮ ಉಪದೇಶಕರು ಹೇಳಿರುವರು. ಅದಕ್ಕನುಸಾರವಾಗಿ ಈಚೆಗೆ ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ಸ್ತ್ರೀಜಾತಿಯಲ್ಲಿ ಶರೀರವ್ಯಾಯಾಮದ ಅಭಿರುಚಿಯು ಕೆರಳಿದೆ. ದೇಹದಾರ್ಢ್ಯದಲ್ಲಿ ಪುರುಷರಿಗಿಂತ ತಾವೇ ಮೇಲೆನಿಸಿಕೊಳ್ಳಲು ಅಥವಾ ಅವರಿಗೆ ಸಮಾನರೆನಿಸಿಕೊಳ್ಳಲು ಪ್ರಯತ್ನಿಸುತ್ತಿರುವರು. ವಾಸ್ತವದಲ್ಲಿ ಸ್ತ್ರೀಯರಿಗೆ ಬಲಹೀನತೆಯು ಸ್ವಾಭಾವಿಕವೆಂಬುದು ಸುಳ್ಳು. ಬಲಹೀನತೆಯದ್ದಲ್ಲಿ ದೂಷಣಗಳೊಂದೂ ಇರಲಾರವು. ಹೆಂಗಸರು ದುರ್ಬಲರಾಗಿರುವುದಕ್ಕೆ ಪ್ರಕೃತಿಸಿದ್ಧವಾದ ಕಾರಣವೇನೂ ಇರುವುದಿಲ್ಲ. ಸ್ತ್ರೀಯರಿಗೂ ಸರ್ವಸಾಧಾರಣವಾದ ದೇಹಬಲವಿದ್ದೇ ಇರುವುದು. ಹೆಂಗಸರಿಗೆ ಅಬಲೆಯರೆಂಬ ಹೆಸರನ್ನೇ ನಿಘಂಟಿನಿಂದ ತೆಗೆದುಹಾಕಬೇಕೆಂಬ ಅಭಿಪ್ರಾಯವನ್ನು ಕಾರ್ಯತಃ ಸಮರ್ಥಿಸುವ ಪ್ರಯತ್ನಗಳೂ ಈಗೀಗ ನಡೆಯುತ್ತಿವೆ. ಇಂಗ್ಲೆಂಡು ಅಮೆರಿಕಾ ಜರ್ಮನಿ ಜಪಾನ್ ಈ ದೇಶಗಳ ಜನಾಂಗಗಳಲ್ಲಿ ತಮ್ಮ ಸ್ತ್ರೀಯರ ದೇಹಾರೋಗ್ಯವನ್ನೂ ಶರೀರದಾರ್ಢ್ಯವನ್ನೂ ಬೆಳೆಸುವ ಪ್ರಯತ್ನದಲ್ಲಿ ಅನ್ಯೋನ್ಯ ಸ್ಪರ್ಧೆಯಿಂದ ಕೆಲಸ ನಡೆಯುತ್ತಿರುವುದು.

ಈ ವಿಚಾರದಲ್ಲಿ ಇಂಡಿಯಾ ದೇಶದ ಸಂಗತಿಯೇನು? ಪೂರ್ವಕಾಲದ ಹಿಂದೂ ರಮಣಿಯರು ಯುಕ್ತಿ ಸಾಹಸಗಳಲ್ಲಿ ಪುರುಷರಿಗೆ ಯಾವ ಭಾಗದಲ್ಲಿಯೂ ಕಡಿಮೆಯಾಗಿರಲಿಲ್ಲ. ಅವರೂ ತಮತಮಗೆ ಯೋಗ್ಯವಾದ ವ್ಯಾಯಾಮಗಳಲ್ಲಿಯೂ ವಿನೋದಗಳಲ್ಲಿಯೂ ಪಂದ್ಯದಾಟಗಳಲ್ಲಿಯೂ ಅಕ್ಕರೆಯನ್ನು ವಹಿಸುತ್ತಿದ್ದರು. ಕೆಲವು ಸ್ತ್ರೀಯರು ಅಂಗಸಾಧನೆಗಳಲ್ಲಿ ಅದ್ಭುತ ಚಮತ್ಕಾರಗಳನ್ನು ತೋರಿಸುತ್ತಿದ್ದುದಲ್ಲದೆ ಕೆಲವರು ವೀರಭಟರಂತೆ ಯುದ್ಧಚಾತುರ್ಯವನ್ನೂ ತೋರಿಸಿರುವರು. ತಿರುಗಾಡುವುದು ಒಂದು ಉತ್ತಮವಾದ ಮತ್ತು ಸುಲಭವಾದ ವ್ಯಾಯಾಮವೆಂಬುದು ಪೂರ್ವಕಾಲದಿಂದ ನಮ್ಮವರಿಗೂ ತಿಳಿಯದ ಸಂಗತಿಯಲ್ಲ. ಬೆಳಗ್ಗೆ ಮತ್ತು ಸಾಯಂಕಾಲದ ಹೊತ್ತಿನಲ್ಲಿ ತಮ್ಮ ಮನೆಯೊಳಗಿನ ತೋಟಗಳಲ್ಲಿಯಾದರೂ ಪುಷ್ಪವಾಟಿಕೆಯ ನೆವದಿಂದ ತಿರುಗಾಡಿ ಬರುವುದು ನಮ್ಮ ಸ್ತ್ರೀಯರಿಗೆ ವ್ಯಾಯಾಮಕ್ಕೂ ಮನೋವಿನೋದಕ್ಕೂ ಅನುಕೂಲವಾದ ಮಾರ್ಗವಾಗಿದ್ದಿತು. ಸೀತೆ ದಮಯಂತಿ ಚಂದ್ರಮತಿ ಮುಂತಾದ ಮಹಾ ಪತಿವ್ರತೆಯರು ತಮ್ಮ ಪತಿಯ ಪಾದಬ್ರಾಯೆಯನ್ನು ಹಿಂಬಾಲಿಸಿ, ಕಲ್ಲು ಮುಳ್ಳುಗಳು ತುಂಬಿದ ಅರಣ್ಯದಲ್ಲಿ ಕಾಡಿಂದ ಕಾಡಿಗೂ ಬೆಟ್ಟದಿಂದ ಬೆಟ್ಟಕ್ಕೂ ಸುತ್ತಿ ಅಲೆದಾಡಿದರೂ ಅದರಿಂದ ಅವರಿಗೆ ಬಳಲಿಕೆಯಾಗಲಿ ಬೇಸರವಾಗಲಿ ಇಲ್ಲದೆ ಸದಾ ಹರ್ಷೋತ್ಸಾಹಗಳಿಂದ ಕೂಡಿದ್ದರೆಂದೂ ಕೇಳುವೆವು. ಹೀಗಿರುವಾಗ ಅವರನ್ನು ದುರ್ಬಲರೆಂದು ಹೇಳುವುದೆಲ್ಲಿಯದು? ಇಂತಹ ತಿರುಗಾಡುವ ರೂಪವಾದ ವ್ಯಾಯಾಮವು ಹೆಂಗಸರಿಗೆ ಬಹಳ ಸುಲಭವಾದದು ಮತ್ತು ಅನುಕೂಲವಾದುದೆಂದು ತಿರುಗಿ ಹೇಳಬೇಕಾಗಿಲ್ಲ.

ಈ ವಿಧವಾದ ತಿರುಗಾಡುವ ಹೊರತು ಈಜುವುದು, ಕುಣಿತ ಸ್ತ್ರೀಯರ ಮೈಗೆ ಬಹಳ ಗುಣಕಾರಿಯಾದ ವ್ಯಾಯಾಮವೆನಿಸಿದೆ. ಹೆಂಗಸರು ಈಜುವುದೆಂದರೆ ನಮ್ಮಲ್ಲಿ ಅನೇಕರಿಗೆ ಈ ಕಾಲದಲ್ಲಿ ಹಾಸ್ಯಾಸ್ಪದವಾಗಿ ತೋರಬಹುದು. ಪೂರ್ವಕಾಲದಲ್ಲಿ ಸ್ತ್ರೀಯರಿಗೂ ಈಜಾಟವೂ ಕಲಿಸುವುದು ವಾಡಿಕೆಯಾಗಿದ್ದಿತು. ಅರಮನೆಗಳಲ್ಲಿಯೂ ಶ್ರೀಮಂತ ಗೃಹಗಳಲ್ಲಿಯೂ ಮನೆಯ ಹಿಂದಿನ ತೋಟಗಳಲ್ಲಿ ಈಜುವುದಕ್ಕಾಗಿಯೇ ಪ್ರತ್ಯೇಕವಾದ ಕೊಳಗಳನ್ನು ಕಟ್ಟಿಸಿಡುತ್ತಿದ್ದರು. ಅಲ್ಲಿ ಹೆಂಗಸರು ತಾವಾಗಿ ಈಜುತ್ತಲೂ ಜಲಕ್ರೀಡೆಯನ್ನು ಸಂತೋಷವಾಗಿ ಆಟವಾಡುವುದಕ್ಕೂ ಅನುಕೂಲವಿತ್ತು. ಶ್ರೀ ಭಾಗವತದಲ್ಲಿ ಕೃಷ್ಣನ ಗೋಪಸ್ತ್ರೀಯರೊಡನೆ ಜಲಕ್ರೀಡೆಯಾಡಿದ್ದನ್ನು ನಾವು ಕೇಳುವೆವಲ್ಲವೆ? ಸ್ತ್ರೀಯರಿಗೆ ಈಜುವುದೂ ಕೂಡ ಪೂರ್ವಕಾಲದಲ್ಲಿ ಒಂದು ವ್ಯಾಯಾಮವಾಗಿತ್ತೆಂಬುದಕ್ಕೆ ಇದೊಂದು ದೃಷ್ಟಾಂತ ಸಾಕು. ಯಮುನಾ ಪ್ರವಾಹದಲ್ಲಿ ಆಗಿನ ಹೆಂಗಸರ ಜಲಕ್ರೀಡೆಯ ಸ್ವಾರಸ್ಯವೆಂದರೆ ಅವರು ಈಜು ಕಲಿತವರಾಗಿಯೇ ಇರಬೇಕು.

ಸೂರ್ಯನಮಸ್ಕಾರವೆಂಬುದು ಹೆಂಗಸರಿಗೆ ಎರಡನೆಯ ವ್ಯಾಯಾಮವೆನಿಸುವುದು. ಪೂರ್ವಕಾಲದ ಸ್ತ್ರೀಯರಿಗೆ ದಿನಚರಿಯಲ್ಲಿ ಇದೂ ಒಂದಾಗಿದ್ದಿತು. ನಮಸ್ಕಾರ ಕಾಲಗಳಲ್ಲಿ ನಡೆಯಬೇಕಾದ ಅಂಗವ್ಯಾಪಾರಗಳು ಒಳ್ಳೇ ವ್ಯಾಯಾಮಗುಣವನ್ನು ಕೊಡುವುವು. ಇದೇ ವಿಧವಾಗಿ ಗುರುಹಿರಿಯರನ್ನು ಕಂಡಾಗಲೂ ದೇವಾಲಯಗಳಿಗೆ ಹೋದಾಗಲೂ ಪದೇ ಪದೇ ಮೈಬಗ್ಗಿ ನಮಸ್ಕರಿಸಬೇಕೆಂಬ ವೈದಿಕ ನಿಯಮಗಳಲ್ಲಿಯೂ ಆರೋಗ್ಯಕರವಾದ ವ್ಯಾಯಾಮಗುಣಗಳುಂಟು.

ಈಚೀಚೆಗೆ ಆ ಪದ್ಧತಿಗಳೆಲ್ಲ ನಮ್ಮ ಸ್ತ್ರೀಯರಲ್ಲಿ ಸಂಪೂರ್ಣವಾಗಿ ಬಿಟ್ಟುಹೋಗಿರುವುದರಿಂದ ನಮ್ಮ ಸ್ತ್ರೀಯರು ಅದರಲ್ಲಿಯೂ ಮುಖ್ಯವಾಗಿ ದೊಡ್ಡ ದೊಡ್ಡ ಊರುಗಳಲ್ಲಿಯೂ ನಗರಗಳಲ್ಲಿಯೂ ವಾಸಮಾಡತಕ್ಕ ಹೆಂಗಸರು ಮನೆಯೊಳಗೇ ಅಡಗಿಕೊಂಡು ಕಟ್ಟಿ ಹಾಕಿದಂತಿದ್ದು ಅಡಿಗೆ ಮನೆಯಲ್ಲಿಯೇ ಹೆಚ್ಚು ಕಾಲವನ್ನು ಕಳೆಯುತ್ತಿರುವರು. ಸ್ವಲ್ಪ ಉಪವಾಸವುಳ್ಳವರು ಒಮ್ಮೆಮ್ಮೆ ಸಾಯಂಕಾಲಗಳಲ್ಲಿ ಹೊರಗಿನ ಸಂಚಾರಕ್ಕಾಗಿ ಹೊರಟರೂ ಕೂಡುಬಂಡಿಗಳಲ್ಲಿಯೋ, ಮೋಟಾರುಗಾಡಿಗಳಲ್ಲಿಯೋ ಕುಳಿತು ಸವಾರಿ ಹೊರಡುವರು. ಇದರಿಂದ ಅವರ ಮೈಗೆ ಸ್ವಲ್ಪಮಾತ್ರವಾದರೂ ವ್ಯಾಯಾಮಕ್ಕೆ ಅವಕಾಶವಿಲ್ಲವಿದೆ. ಆದುದರಿಂದ ನಮ್ಮ ದೇಶದ ಹೆಂಗಸರು ಕೇವಲ ದುರ್ಬಲರಾಗಿ, ಕ್ಷಯರೋಗ ಮೊದಲಾದ ಕ್ರೂರವ್ಯಾಧಿಗಳಿಗೆ ಸಿಕ್ಕಿಬೀಳುವುದರಿಂದ ನಮ್ಮಲ್ಲಿ ಸ್ತ್ರೀಮರಣ, ಶಿಶುಮರಣಗಳು ಬೇರೆ ಎಲ್ಲಾ ದೇಶಗಳಿಗಿಂತ ಅಧಿಕವಾಗಿರುವುದೂ ಏನೂ ಆಶ್ಚರ್ಯವಲ್ಲ.

ಈಗೀ ವಿಷಯದಲ್ಲಿ ನಮ್ಮ ನೆರೆಯವರಾದ ಜಪಾನ್ ದೇಶದವರಾದರೋ ಕಳೆದ ಐವತ್ತು ವರ್ಷಗಳಿಂದೀಚೆಗೆ ಬಹಳ ಉತ್ತಮಸ್ಥಿತಿಗೆ ಬಂದು, ನಮ್ಮ ಇಂಡಿಯಾ ದೇಶದಂತಿರುವ ಬೇರೆ ದೇಶಗಳಿಗೆಲ್ಲ [illegible] ಆದರ್ಶವಾಗಿರುವರು. [illegible] ವ್ಯಾಯಾಮ [illegible] ಪ್ರಚಾರ [illegible] ಬಾಲಿಕೆಯರಿಗೆ [illegible] ವ್ಯಾಯಾಮ [illegible] ಹೆಂಗಸರ ಗಂಡಸರ [illegible] ಕಲಿಸುವರು.

ನಮ್ಮ ಇಂಡಿಯಾ ದೇಶದಲ್ಲಿಯೂ ಹೆಂಗಸರು ಜಪಾನ್ ಹುಡುಗಿಯರಿಗಾಗಿ ಏರ್ಪಟ್ಟಿರುವ ಅಂತಹ ವ್ಯಾಯಾಮ ಕ್ರಮಗಳನ್ನೇ ಅನುಸರಿಸುವುದರಲ್ಲಿ ಬಹಳ ಗೌರವವೂ ಲಾಭವೂ ಉಂಟು. ಜಪಾನ್ ಹುಡುಗಿಯರಿಗೆ ಕಲಿಸಿಕೊಡುವ ವ್ಯಾಯಾಮಕ್ರಮಗಳೆಂತವೆಂಬುದನ್ನು ಇಲ್ಲಿ ನಾವು ಸಂಗ್ರಹವಾಗಿ ತಿಳಿಯಬೇಕಾದುದು ಈಗ ಕಾಲೋಚಿತವಾಗಿದೆ. ಆ ವ್ಯಾಯಾಮಗಳು ಬಹಳ ಸುಲಭವಾಗಿರುವುದರೊಡನೆ ನಮ್ಮ ದೇಶಾಚಾರಕ್ಕೆ ಏನೂ ವಿರೋಧವಿಲ್ಲವೆಂತಿವೆ.

ಜಪಾನ್ ದೇಶದಲ್ಲಿ ಹುಟ್ಟಿದುದು ಮೊದಲೇ ಹೆಣ್ಣುಮಕ್ಕಳಿಗೆ ವ್ಯಾಯಾಮಶಿಕ್ಷಣವು ಕೊಡಲ್ಪಡುವುದು. ಸಣ್ಣ ಶಿಶುವಿಗೆ ಪ್ರತಿದಿನವೂ ಬೆಳಗ್ಗೆ ಎಣ್ಣೆ ಹಚ್ಚಿ ಮೈ ತೊಳೆದು ಸ್ನಾನಮಾಡಿಸಿ ಅದರ ಮೈಯನ್ನು ಚೆನ್ನಾಗಿ ಒತ್ತಿ [illegible] ನಮ್ಮ ದೇಶದಲ್ಲಿನ [illegible] 25 30 ವರ್ಷಗಳಿಗೆ ಹಿಂದಿನವರೆಗೂ ಈ ಪದ್ಧತಿ ಸರ್ವಸಾಧಾರಣವಾಗಿದ್ದಿತು. ಜಪಾನಿನಲ್ಲಿ ಬಹಳ ದುರ್ಬಲವಾಗಿ ರೋಗಗ್ರಸ್ತವಾಗಿರುವ [illegible] ವ್ಯಾಯಾಮ [illegible] ವ್ಯಾಯಾಮವಿಲ್ಲದಿರುವುದೇ [illegible] ದೇಹದ [illegible] ಅವರು ಚೆನ್ನಾಗಿ ತಿಳಿದಿರುವರು. [illegible] ರೋಗ [illegible] ಅಥವಾ ಅಂಗವಿಕಲವಾಗಿರಲಿ ಆ ಮಗುವನ್ನು [illegible] ಹೊರಗೆ ತಂದು ತಿರುಗಾಡಿಸುವರು. [illegible] ಪುದರಲ್ಲಿಯೂ ಜಪಾನಿನವರು ಬಹಳ [illegible] ಯಾವಾಗಲೂ ಹಗುರವಾದ ಮತ್ತು ಸಡಿಲವಾದ [illegible] ಮಕ್ಕಳಿಗೆ ಉಡಿಸುತ್ತ ಮೈಮೇಲೆ ಧಾರಾಳವಾಗಿ ಗಾಳಿ [illegible] ಕಾಲಸ್ಥಿತಿಯನ್ನೂ ಮಕ್ಕಳ ಶರೀರಪ್ರಕೃತಿಯನ್ನೂ [illegible] ಅನುಸಾರವಾಗಿ ಶಾಖವಾದ ಅಥವಾ ತಣ್ಣಗಾದ ಉಡುಪುಗಳ [illegible] ಧಾರಾಳವಾಗಿ ಮಕ್ಕಳಿಗೆ ತಣ್ಣೀರನ್ನು ಕುಡಿಸುವರು. [illegible] ತಣ್ಣೀರನ್ನು ಕೊಡುವರೇ ಹೊರತು ಮುಂದುಗಡೆ ಹಾಕಿದ ಪಾನೀಯಗಳನ್ನು ಕುಡಿಸುವುದಿಲ್ಲ. ಬಹಳ ಸಣ್ಣ ವಯಸ್ಸಿನ ಹುಡುಗಿಯಾದರೂ ತನಗೆ ಸಮಾನವಯಸ್ಸುಳ್ಳ ಗೆಳತಿಯರೊಡನೆ ವಿನೋದದಿಂದ ಆಟವಾಡದೆ ಒಂಟಿಯಾಗಿ [illegible] ಅವರಿಗೆ ನಾಲ್ಕು ಅಥವಾ ಐದು ವಯಸ್ಸು ತುಂಬುವುದರೊಳಗಾಗಿಯೇ «ಪ್ಲೇ ಟೆಕ್ನಿ» [illegible] ಕಲಿಸುವರು. ಆ ಹುಡುಗಿಯರ ತಾಯಿಯರೇ ಅವರಿಗೆ ಆ ಅಂಗಸಾಧನೆಯ ಶಿಕ್ಷಣವನ್ನು ಕೊಡುವರು. ತಂದೆಯೂ ಆಗಾಗ್ಗೆ [illegible] ಪ್ರೋತ್ಸಾಹಗೊಳಿಸುತ್ತ ದಿನಕ್ಕೆ ಎರಡು ಬಗೆಯ ವ್ಯಾಯಾಮಗಳನ್ನು ಮಾಡಿಸುತ್ತ ಒಂದೊಂದು ಸಾಧನೆಗೆ ಕೆಲನಿಮಿಷಕ್ಕೂ [illegible] ನಿಮಿಷಗಳಿಗೆ ಅಧಿಕವಲ್ಲದೆ ನಡೆಸುವರು. ಹೀಗೆ ಬೇರೆಬೇರೆ ತರದ [illegible] ವ್ಯಾಯಾಮಕ್ರಮಗಳ [illegible] ಈ ಸಾಧನೆಗಳಲ್ಲಿ ಮೊದಲು ಸುಲಭವಾದವನ್ನು [illegible] ಕ್ರಮಕ್ರಮವಾಗಿ ಹೆಚ್ಚಿಸುತ್ತ 12 ವಯಸ್ಸಿನೊಳಗಾಗಿ ಆ ಎಲ್ಲಾ ಬಗೆಯ ವ್ಯಾಯಾಮಗಳನ್ನೂ ಕಲಿಸುವರು. ಈ ವ್ಯಾಯಾಮಗಳಲ್ಲಿ ಎಲ್ಲಾ ಅವಯವಗಳಿಗೂ ಒಳ್ಳೇ ಸಾಧನೆಯುಂಟಾಗಿ ದೇಹಕ್ಕೆಲ್ಲ ಸಮವಾದ ಪುಷ್ಟಿಯೂ ಬಲವೂ ಬರುವುದು. ಹೊರಗಿನ ಮೈದಾನಗಳಲ್ಲಿ ಯಾವ ವಿಧದಿಂದಲೂ ಅಪಾಯಕರವಲ್ಲದ ಆಟಗಳನ್ನಾಡಿಸುವುದರಲ್ಲಿ ತಂದೆತಾಯಿಗಳೇ ತಮ್ಮ ಮಕ್ಕಳಿಗೆ ಆಗಾಗ ವಿಶೇಷ ಪ್ರೋತ್ಸಾಹಗಳನ್ನು ಕೊಡುವರು. ಇದಕ್ಕಾಗಿ [illegible] ಮನೆಯಲ್ಲಿಯೇ ಅದಕ್ಕಿರುವ ಹಲವು ನಿಯಮಗಳನ್ನು ನಿರ್ಬಂಧಿಸಿ ಕಲಿಸುವುದೂ ಉಂಟು. ಮಕ್ಕಳಿಗೆ ಇಂತಹ ಮೈದಾನದಾಟಗಳಿಗಿಂತ ಆರೋಗ್ಯಕರವಾದ ವ್ಯಾಯಾಮವು ಬೇರೊಂದಿಲ್ಲವೆಂದೇ ಹೇಳಬಹುದು.

ನಮ್ಮ ಇಂಡಿಯಾ ದೇಶದಲ್ಲಿ ಹೆಂಗಸರಿಗೆ ಸ್ವಭಾವಸಿದ್ಧವಾದ ದೇಹದುರ್ಬಲತೆಯನ್ನು ತಪ್ಪಿಸಿ ಅವರನ್ನು ಸದಾರೋಗ್ಯ ಸೌಖ್ಯಗಳಿಂದಿರುವಂತೆ ಮಾಡುವುದಕ್ಕೆ ಬೇಕಾದ ಉತ್ತೇಜನಗಳನ್ನೂ ಸೌಲಭ್ಯಗಳನ್ನೂ ಕಲ್ಪಿಸಿಕೊಡುವುದು ನಮ್ಮ ಸರಕಾರದ ಮತ್ತು ಪ್ರಜಾಪ್ರಮುಖರ ಮೇಲೆ ಬಿದ್ದ ಭಾರವಾಗಿದೆ. [illegible] ಪುರೋಭಿವೃದ್ಧಿಯೂ ದೇಶೋನ್ನತಿಯೂ ಆಯಾ ದೇಶದ [illegible] ಅನುಸರಿಸಿವೆ ಎಂಬುದು [illegible]

[illegible] ಕ್ಷಯರೋಗಕ್ಕೆ ಕಾರಣಗಳು ಮತ್ತು ಅವುಗಳ ಪರಿಹಾರೋಪಾಯಗಳು

1 ಗೃಹಿಣೀರೋಗವೆಂಬುದು ಬಾಲ್ಯವಯಸ್ಸಿನಲ್ಲಿ ಕಾಣತಕ್ಕ ವ್ಯಾಧಿ. ಪ್ರಾಯವಾಗಿ ಮಕ್ಕಳಿಗೆ ಆಹಾರದೋಷದಿಂದಲೇ ಈ ವ್ಯಾಧಿಯು ಬರುವುದು. ಮಕ್ಕಳಿಗೆ ಸರಿಯಾದ ಆಹಾರವಿಲ್ಲದಿರುವುದರಿಂದಲೂ ಜನನಿಬಿಡವಾದ ಪಟ್ಟಣ ಪ್ರಾಂತಗಳಲ್ಲಿರುವುದರಿಂದಲೂ ಗಾಳಿಬೆಳಕಿಗೆ ಅವಕಾಶವಿಲ್ಲದ ಕತ್ತಲೆ ಕೋಣೆಗಳಲ್ಲಿ ಮಕ್ಕಳನ್ನು ಮಲಗಿಸಿರುವುದರಿಂದಲೂ ಅವು ಈ ವ್ಯಾಧಿಗೆ ಗುರಿಯಾಗುವುವು.

ಆದರೆ ಮೊಲೆಹಾಲಿನಿಂದಲೇ ಬೆಳೆದ ಮಕ್ಕಳಿಗೆ ಈ ವ್ಯಾಧಿಯು ಬರುವುದು ಅಪರೂಪ.

[illegible] ಆರಂಭದಲ್ಲಿ ಈ ವ್ಯಾಧಿಯನ್ನು ಅಲಕ್ಷ್ಯ ಮಾಡಿಬಿಟ್ಟರೆ ಮಕ್ಕಳು ಬಲಹೀನವಾಗುತ್ತ ಬರುವುದರೊಡನೆ ಮೈಮೂಳೆಯು ದೃಢವಾಗಿಲ್ಲದೆ ವಕ್ರತ್ವವನ್ನು ಹೊಂದಿ ಎದೆ ಮತ್ತು ಕಾಲು ಈ ಅವಯವಗಳಲ್ಲಿ ವಿಕಾರವು ಉಂಟಾಗಬಹುದು. ಆದ್ದರಿಂದ ವ್ಯಾಧಿಯನ್ನು ಆರಂಭದೆಸೆಯಲ್ಲಿಯೇ ಗುಣಪಡಿಸಬೇಕು.

3 ಮಕ್ಕಳಿಗೆ ಹಾಲು ಬೆಣ್ಣೆ, ತುಪ್ಪ ಕೆನೆ ಮುಂತಾಗಿ ಪ್ರಾಣಿಜನ್ಯವಾದ ಕೊಬ್ಬಿನ ಪದಾರ್ಥಗಳನ್ನು ಆಯಾ ಮಕ್ಕಳ ಜೀರ್ಣಶಕ್ತಿಗೆ ತಡೆಯುವಷ್ಟು ಪ್ರಮಾಣಕ್ಕೆ ಕೊಡುತ್ತ ಬರಬೇಕು. ಅನ್ನ ಮತ್ತು ರೊಟ್ಟಿ ಇವುಗಳನ್ನು ಬಹಳ ಹೆಚ್ಚಾಗಿ ತಿನ್ನಿಸಬಾರದು. ಆ ಮಕ್ಕಳ ಆಹಾರದಲ್ಲಿರುವ ದೋಷಗಳನ್ನು ನೀಗಿಸುವುದಕ್ಕಾಗಿ ದಿನಕ್ಕೆ ಮೂರುಸಾರಿ ಆಯಾ ಮಕ್ಕಳ ವಯಃಪ್ರಮಾಣಕ್ಕೆ ತಕ್ಕಂತೆ ಮೀನೆಣ್ಣೆಯನ್ನು ಕೊಡುತ್ತ ಬರಬೇಕು.

4 ಮಕ್ಕಳನ್ನು ಒಳ್ಳೇ ಗಾಳಿ ಬೆಳಕಿರುವ ಮತ್ತು ಸೂರ್ಯರಶ್ಮಿ ಬೀಳುವ ಪಡಸಾಲೆಗಳಲ್ಲಿಯೇ ಬೆಳಗ್ಗೆ ಮತ್ತು ಸಾಯಂಕಾಲಗಳ ಹೊತ್ತಿನಲ್ಲಿ ಹೆಚ್ಚು ಹೊತ್ತು ಆಡಿಸುತ್ತಿರಬೇಕು. ಮಕ್ಕಳ ಎಲ್ಲಾ ಅವಯವಗಳ ಮೇಲೆಯೂ ಸೂರ್ಯರಶ್ಮಿಯು ಬೀಳುವಂತಿರಬೇಕು.

6 ಅಂತಹ ವ್ಯಾಧಿಸೂಚನೆಯುಳ್ಳ ಮಕ್ಕಳಿಗೆ ಪ್ರತಿದಿನವೂ ಮೈಗೆ ಎಣ್ಣೆಯನ್ನು ಲೇಪಿಸಿ ನೀವುವುದರಿಂದ ಅವುಗಳ ಮೈಗೆ ಬಲವೂ, ಪುಷ್ಟಿಯೂ ಉಂಟಾಗುವುದು.

7 ಮಕ್ಕಳ ಮೈಮೂಳೆಯು ಮೃದುವಾಗಿದ್ದವರೆಗೂ ಆ ಮಕ್ಕಳನ್ನು ಹಾಸುಗೆಯಲ್ಲಿಯೇ ಮಲಗಿಸಿಟ್ಟಿರಬೇಕೇ ಹೊರತು, ಬಲಾತ್ಕಾರವಾಗಿ ಎಳೆದಾಡಿ ಅವುಗಳ ಮೈಮೂಳೆಯು ಬಗ್ಗಲು ಅವಕಾಶ ಕೊಡಬಾರದು.

ಬೆಂಗಳೂರಿನ ಗಲಾಟೆಸಂಬಂಧವಾದ ಮೊಕದ್ದಮೆ.

೧೯೨೯ ನೇ ಜುಲೈ ತಾ॥ ೩೦ ನೇ ಮಂಗಳವಾರ ಬೆಂಗಳೂರಿನಲ್ಲಿ ನಡೆದ ಗಲಭೆಯಲ್ಲಿ ಭಾಗಿಗಳಾಗಿದ್ದರೆಂದು ೧೩೩ ಜನರ ಮೇಲೆ ತಪ್ಪುಗಳನ್ನು ಆರೋಪಿಸಿ ಎಂಟು ಮೊಕದ್ದಮೆಗಳು ಬೆಂಗಳೂರು ಸ್ಪೆಷಲ್ ಮೆಜಿಸ್ಟ್ರೇಟ್ ಮ॥ ಪಿ. ಮಲ್ಲಿಕಾರ್ಜುನಸ್ವಾಮಿ, ಬಿ.ಎ., ಯವರ ಕೋರ್ಟಿನಲ್ಲಿ ಪೋಲೀಸರಿಂದ ಹೂಡಲ್ಪಟ್ಟಿವೆ.

ಒಂದನೇ ಮೊಕದ್ದಮೆ.

1 ಎಸ್. ವಿ. ಸುಬ್ರಹ್ಮಣ್ಯಂ 2. ಸಿ. ಭೀಮರಾವ್ 3. ಮುನಿಯಪ್ಪ 4 ಶೇಖರ್ 5 ಪಿ. ಆರ್. ರಾಮಯ್ಯ 6 ವಿಶ್ವನಾಥ 7. ಪಿ. ಬಿ. ನಾರಾಯಣರಾವ್ 8. ರಾಜಾರಾವ್ (ಸೀನಿಯರ್) 9 ಕೆ. ಜೀವನರಾವ್ 10. ಟಿ. ಬಿ. ರಾಜಾರಾವ್ 11. ಟಿ ಟಿ. ಶರ್ಮ 12 ಬಿ ಆರ್. ಶ್ರೀನಿವಾಸರಾವ್ 13 ಲಕ್ಷ್ಮೀನರಸಿಂಹಯ್ಯ.

ಈ 13 ಜನರು ತಾ॥ 30-7-29 ರ ಬೆಳಗಿನ 10 ಗಂಟೆ ಸಮಯದಲ್ಲಿ, ಸುಲ್ತಾನ್‌ಪೇಟೆ ಮಿಡ್ಲ್ ಸ್ಕೂಲಿಗೆ ವಿದ್ಯಾರ್ಥಿಗಳನ್ನು ಬಿಡಕೂಡದೆಂದು ಡಿ॥ ಮೆಜಿಸ್ಟ್ರೇಟರು ಮಾಡಿದ್ದ ಆಜ್ಞೆಯನ್ನುಲ್ಲಂಘಿಸಿ ಅಕ್ರಮಕೂಟ ಕೂಡಿದ್ದರಲ್ಲದೆ ನಾಗರಿಕರಲ್ಲಿ ಅಡ್ಡಕಟ್ಟಿ ಕಲ್ಲುಗಳನ್ನೆಸೆದು ಬಾಗಿಲ್ಗಳ ಪದರುಗಳನ್ನು ಒಡೆದು ದೊಂಬಿಕಲಹ ನಡೆಸಿರುವುದರಿಂದ ಇಂಡಿಯನ್ ಪೀನಲ್ ಕೋಡು 143, 147, 148, 149, 150, ಮತ್ತು 153 ನೇ ಸೆಕ್ಷನ್ನುಗಳ ಪ್ರಕಾರ ಅಪರಾಧಗಳಿಗೆ ಗುರಿಯಾಗಿರುತ್ತಾರಾದುದರಿಂದ ಅವರ ಮೇಲೆ ವಿವಾದ ಹೂಡಲ್ಪಟ್ಟಿದೆ. ಫಿರ್ಯಾದಿಯ ಪರ ಪೋಲೀಸು ಅಧಿಕಾರಿಗಳು, ಅಧಿಕಾರಿಗಳು ಮೊದಲಾಗಿ 16 ಮಂದಿ ಸಾಕ್ಷಿಗಳಾಗಿ ಕರೆಯಲ್ಪಟ್ಟಿರುತ್ತಾರೆ.

ಎರಡನೇ ಮೊಕದ್ದಮೆ.

1 ಗೋಪಾಲ್ 2 ಕೇಶವುಲು 3 ಪಟೇಲ್ ಮುನಿಸ್ವಾಮಿ 4 ಮುನಿಸ್ವಾಮಿ ನಾಯುಡು 5 ರಾಜಗೋಪಾಲ ರೆಡ್ಡಿ 6 ಗೋವಿಂದರಾವ್ 7. ಶ್ರೀನಿವಾಸುಲು 8. ವೆಂಕೋಬರಾವ್ 9 ಬಿಕ್ಷಾಸಾ 10. ಮುನಿಸ್ವಾಮಿ 11. ನಾಗರಾಜಮಣಿ 12 ಬಿ ಸುಬ್ರಹ್ಮಣ್ಯಂ.

ಈ 12 ಜನರು ತಾ॥ 30-7-29 ರ ಸಾಯಂಕಾಲ 5½-6 ಗಂಟೆಯ ಸಮಯದಲ್ಲಿ ಬಿನ್ನಿಮಿಲ್ ಬಳಿ ಕಾವಲಿದ್ದ ಮ॥ ಕೃಷ್ಣಯ್ಯಂಗಾರರೇ ಮೊದಲಾದ ಪೋಲೀಸಿನವರಮೇಲೆ ಕಲ್ಲುಗಳನ್ನೆಸೆದು ಅವರನ್ನು ಬಿನ್ನಿ ಮಿಲ್ಲಿನ ಕೆಲಸಗಾರರನ್ನು ಸುಲ್ತಾನ್‌ಪೇಟೆಗೆ ಕರೆದುಕೊಂಡು ಹೋಗುವ ಪ್ರಯತ್ನದಲ್ಲಿ ಪೋಲೀಸಿನವರಿಗೆ ಪೆಟ್ಟನ್ನು ಕೊಟ್ಟು ಅವರ ಕರ್ತವ್ಯದ ಕೆಲಸಗಳನ್ನು ನಡೆಯದಂತೆ ಮಾಡಿ ಇಂಡಿಯನ್ ಪೀನಲ್ ಕೋಡು 143, 147, 148, 353 ಮತ್ತು 426 ನೇ ಸೆಕ್ಷನ್ನುಗಳಲ್ಲಿ ಕಂಡ ಅಪರಾಧಗಳನ್ನು ನಡೆಯಿಸಿರುವುದರಿಂದ ಅವರುಗಳ ಮೇಲೆ ವಿವಾದ ಹೂಡಲ್ಪಟ್ಟಿದೆ.

3 ನೇ ಮೊಕದ್ದಮೆ.

1. ಮುನಿಸ್ವಾಮಿ 2. ರಾಮಯ್ಯ 3. ಮುರುಗೇಶ 4. ಚಾಕ್ರಿ 5. ದೇವರಾಜ 6. ವೆಂಕಟಪ್ಪ 7. ಗೋಪಾಲ 8 ಕೇಶವುಲು 9. ಮುನಿಸ್ವಾಮಿ 10 ನರಸಿಂಹಸ್ವಾಮಿ 11. ನಾಗೇಂದ್ರಸಾ 12 ರಾಜಗೋಪಾಲ ರೆಡ್ಡಿ 13. ಗೋವಿಂದರಾವ್ 14. ಪಾರ್ಥಸಾರಥಿ 15. ಬಿಕ್ಷಾಸಾ 16. ಅಮೃತಸಾ 17. ನಾರಾಯಣ 18. ಸಿಂಹಗಿರಿ 19 ಡಿ. ಎಲ್. ರಾಮಸ್ವಾಮಿ 20. ಗೋವಿಂದಸ್ವಾಮಿ 21 ಮುನಿಸ್ವಾಮಿ 22. ಗಂಗಾಧರಸಾ 23. ವಿನಾಯಕ 24. ತಂಗವೇಲು 25 ಲಕ್ಷ್ಮಣಸಾ 26. ಕೃಷ್ಣಸ್ವಾಮಿ 27. ಶ್ರೀನಿವಾಸುಲು 28. ಪಟೇಲ್ ಮುನಿಸ್ವಾಮಿ 29. ವೆಂಕೋಬರಾವ್ 30 ಸುಂದರರಾಜ 31. ರಾಮಸ್ವಾಮಿ ನಾಯುಡು 32 ತಿಮ್ಮಸ್ವಾಮಿ 33. ನರಸಿಂಹ 34 ಸುಬ್ರಹ್ಮಣ್ಯಂ 35. ಮುನಿಸ್ವಾಮಿ (ಕೋರ್ಟಿನಲ್ಲಿ ಹಾಜರಿದ್ದವರು) 250 ರೂ. ಮುಚ್ಚಳಿಕೆ ಜಾಮೀನು 250 ರೂ ಜಾಮೀನುದಾರರು 36. ಎಸ್. ವೆಂಕಟಸುಬ್ಬಯ್ಯ 37. ಟಿ. ಟಿ ಶರ್ಮ 38 ಎಚ್. ಕೆ ವೀರಣ್ಣಗೌಡ 39. ರಾಜಾರಾವ್ 40 ಜೀವಣ್ಣರಾವ್ 41. ಪಿ ಆರ್ ರಾಮಯ್ಯ 42. ಬಿ. ಆರ್. ಶ್ರೀನಿವಾಸರಾವ್ 43 ವಿಶ್ವನಾಥರಾವ್ 44 ಕೋದಂಡ 45. ಗೋವಿಂದರಾಜು 46 ವೆಲ್ಲಯ್ಯ 47. ಲಕ್ಷ್ಮೀನರಸಿಂಹಯ್ಯ 48. ದೊರೆಸ್ವಾಮಿ 49 ಮಾಣಿಕ್ಯಂ 50 ಬಂಗಾರಯ್ಯ 51 ಸಂಜೀವಪ್ಪ 52. ರಾಮಸ್ವಾಮಿ 53. ವೆಂಗಟಾಚಲಂ ಶಾಸ್ತ್ರಿ 54 ಚಿನ್ನಪ್ಪ 55. ದಾಮೋದರಂ 56 ರಾಜಶೇಖರಂ ವೆಂಕಟಸುಬ್ಬಯ್ಯ 57 ದೊಡ್ಡವೀರಣ್ಣ 58. ಮುನಿಸ್ವಾಮಪ್ಪ 59. ನಂಜಪ್ಪ 60. ವೆಂಕಟರಮಣ 61 ಚಿಂದಯ್ಯ 62. ಪೆರುಮಾಳಯ್ಯ 63. ಬಸಪ್ಪ 64. ರಾಮರಾವ್ 65 ಪಿ. ಶ್ರೀನಿವಾಸಮೂರ್ತಿ 66 ರಾಮರಾವ್ 67 ಗೋವಿಂದದಾಸ 68 ಮರಿಯಪ್ಪ 69 ಬಸವಯ್ಯ 70 ವರದ 71 ಕೆ ರಾಮಚಂದ್ರರಾವ್ (ಬಿ ಎ. ವಿದ್ಯಾರ್ಥಿ) 72 ಸುಬ್ಬಣ್ಣ 73 ಬಿ. ಸುಬ್ರಹ್ಮಣ್ಯಂ 74 ಗಂಗಾಧರಪ್ಪ 75 ವೆಂಕಟರಾವ್ 76 ಅಪ್ಪಪ್ಪ 77. ಜಯರಾಮ 78 ವೆಂಕಟರಮಣ 79 ಪೆಟ್ಟಣ್ಣಮಯ್ಯ 80 ಸೋಮಯ್ಯ 81 ಸೈಯದ್ ಗಫೂರ್ 82 ಶ್ರೀಕಂಠಯ್ಯ 83 ನರಸಿಂಹಯ್ಯ 84 ಲಕ್ಷ್ಮೀನರಸಿಂಹಯ್ಯ 85. ಮುದ್ದನಾಗಪ್ಪ 86 ಕೃಷ್ಣಪ್ಪ 87. ರಾಮಚಂದ್ರರಾವ್ c/o K. S. Srinivasan 88 ಮಲ್ಹಾರರಾವ್ 89 ವೆಂಕೋಬರಾವ್ 90. ಸುಬ್ರಹ್ಮಣ್ಯಂ ರಾವ್ ಸಿಂಧೆ 91 ನಂಜುಂಡಪ್ಪ 92 ನಂಜುಂಡ ಶೆಟ್ಟಿ 93. ರಾಘವೇಂದ್ರ ರಾವ್ 94. ಶ್ರೀನಿವಾಸ ಶೆಟ್ಟಿ 95. ಕೃಷ್ಣಯ್ಯಂಗಾರ್ 96. ಸುಬ್ಬರಾವ್ (ನಾಗೇಶ್ವರಯ್ಯರ ಮಗ) 97. ಬಿ. ರಾಮಯ್ಯ 98. ರಾಜಶೇಖರ.

ಈ 97 ಮಂದಿಗಳು ತಾ॥ 30-7-29 ರಲ್ಲಿ ಎಸ್ ವಿ. ಸುಬ್ರಹ್ಮಣ್ಯಂ ಸಿ. ಭೀಮರಾವ್ ಇವರುಗಳ ದಸ್ತಗಿರಿಯಾದಮೇಲೆ ಕಲ್ಲು, ದೊಣ್ಣೆ, ಕತ್ತಿ ಮೊದಲಾದ ಆಯುಧಗಳನ್ನು ಹಿಡಿದುಕೊಂಡು ಸುಲ್ತಾನ್‌ಪೇಟೆ ಶಾಲಾಪ್ರವೇಶಸಂಬಂಧವಾಗಿ ಡಿ॥ ಮೆಜಿಸ್ಟ್ರೇಟರು ಮಾಡಿದ್ದ ಆಜ್ಞೆಯನ್ನುಲ್ಲಂಘಿಸಿ ಸುಲ್ತಾನ್‌ಪೇಟೆ ಚೌಕದಲ್ಲಿ ಗುಂಪುಸೇರಿ ಪೋಲೀಸಿನವರ ಮತ್ತು ಮೆಜಿಸ್ಟ್ರೇಟರ ಬಿಡದಿ ವಾಹನವನ್ನು ಸುಟ್ಟು ಪೋಲೀಸಿನವರ ಮೇಲೆ ಕಲ್ಲುಗಳನ್ನೆಸೆಯುವುದೇ ಮೊದಲಾಗಿ ಅಕ್ರಮಗಳನ್ನು ನಡೆಸಿದರು. ಇವರ ಗುಂಪನ್ನು ಚದರಿಸಲು ಮಾಡಿದ ಪ್ರಯತ್ನವೆಲ್ಲವೂ ನಿಷ್ಫಲವಾಗಲು, ಚದರಿ ಹೋಗದಿದ್ದರೆ ಗುಂಡು ಹಾರಿಸಬೇಕಾಗುತ್ತದೆಂದು ಡಿ॥ ಮೆಜಿಸ್ಟ್ರೇಟರು ಎಚ್ಚರಿಕೆ ಕೊಟ್ಟಾಗ್ಯೂ ಹೇಳಿದರೂ ದೊಂಬಿಗಾರರು ಕೇಳದೆ ಮೆಜಿಸ್ಟ್ರೇಟರ ಮೇಲೆ ಬಿದ್ದು ಅವರಿಗೆ ಅಪಾಯವಾಗಿರುವುದಲ್ಲದೆ ಪ್ರಾಣಾಪಾಯದ ಭೀತಿಯನ್ನೂ ಉಂಟುಮಾಡಿದರು, ಗುಂಡನ್ನು ಹಾರಿಸಲು ಪ್ರಾರಂಭವಾದಮೇಲೂ ಡಿ॥ ಮೆಜಿಸ್ಟ್ರೇಟರ ಆಜ್ಞೆಯನ್ನು ತಿರಸ್ಕರಿಸಿ ಸಮಾಧಾನಗೂ ಗಾಸಿಯನ್ನುಂಟುಮಾಡಿದರು. ಆದ್ದರಿಂದ ಮೇಲ್ಕಂಡ ಅಪರಾಧಿಗಳು ಇಂ. ಪಿ. ಕೋಡು 143, 147, 148, 149, 151, 152, 332, 353 ಮತ್ತು 393 ನೇ ಸೆಕ್ಷನ್ನುಗಳ ಪ್ರಕಾರ ಶಿಕ್ಷೆಗೆ ಗುರಿಮಾಡಲ್ಪಟ್ಟಿರುತ್ತಾರೆ. ಈ ಮೊಕದ್ದಮೆಯಲ್ಲಿ ಸಿಟಿ ಮೆಜಿಸ್ಟ್ರೇಟ್ [illegible] ನರಸಿಂಹಸ್ವಾಮಿನಾಯುಡುಯವರು ಸಿಟಿ ಸೂಪರಿಂಟೆಂಡೆಂಟ್ ಮೊದಲಾದವರು, ಅ॥ ಸೂಪರಿಂಟೆಂಡೆಂಟ್ ಮ॥ ಮಾಧವಯ್ಯನವರು. ಗಲಾಟೆ ನಡೆದ ಸ್ಥಳದಲ್ಲಿ ಕಾವಲಿದ್ದ ಪೋಲೀಸಿನವರು ಸೇರಿ ಒಟ್ಟು 37 ಜನರು ಸಾಕ್ಷಿಗಳಾಗಿ ಕರೆಯಲ್ಪಟ್ಟಿರುತ್ತಾರೆ.

ಮೇಲ್ಕಂಡ 3 ಮೊಕದ್ದಮೆಗಳಲ್ಲಿ 2 ನೇ ಮತ್ತು 3 ನೇ ಮೊಕದ್ದಮೆಗಳು ಇದೇ ತಾ॥ 38 ರಲ್ಲಿ ವಿಚಾರಣೆಗೆ ತೆಗೆದುಕೊಳ್ಳಲ್ಪಟ್ಟವು. ಅಪರಾಧಿಗಳೂ ಅವರ ಪರ ವಕೀಲರುಗಳೂ, ಪೋಲೀಸಿನವರೂ ಕೋರ್ಟಿನೊಳಗೆ ಕಿಕ್ಕಿರಿದು ಸೇರಿದ್ದರು. ಕೋರ್ಟಿನ ಹೊರಗಡೆ ಪೋಲೀಸಿನವರ ಕಾವಲಿದ್ದಿತು. ಸರ್ಕಾರದ ಪರವಾಗಿ ವಾದಿಸಲು ಅಡ್ವೋಕೇಟ್ ಮ॥ ಸಿ. ಕೇಶವಾಚಾರ್ಯರವರು ಸ್ಪೆಷಲ್ ಪಬ್ಲಿಕ್ ಪ್ರಾಸಿಕ್ಯೂಟರಾಗಿ ನಿಯಮಿಸಲ್ಪಟ್ಟಿರುತ್ತಾರೆ. ಅಪರಾಧಿಗಳ ಪರ ವಾದಿಸಲು ಮ॥ ಗಳಾದ ಸಿ ಪಿ. ನರಸಿಂಹಯ್ಯಂಗಾರ್ಯರು, ಎಂ ಪಿ. ಸೋಮಶೇಖರರಾಯರು, ವೆಂಗಟರಂಗಯ್ಯಂಗಾರ್ಯರೇ ಮೊದಲಾಗಿ 10-15 ಜನ ಅಡ್ವೋಕೇಟರುಗಳು ವಕೀಲಿಯನ್ನು ವಹಿಸಿರುತ್ತಾರೆ. ಅಪರಾಧಿಗಳು ತಮ್ಮ ಅಂಗಶೋಧನೆಯಿಂದ ಕೋರ್ಟಿನೊಳಕ್ಕೆ ಬಿಡಲ್ಪಡುತ್ತಿದ್ದರು. ವಕೀಲರುಗಳನ್ನುಳಿದಿರುವ ಅಪರಾಧಿಗಳ ಕಡೆಯವರು ಇರುವರೇ? ಎಂದು ಮೆಜಿಸ್ಟ್ರೇಟರು ಪ್ರಶ್ನಿಸಲಾಗಿ ಅನೇಕ ಮಂದಿ ವಕೀಲರುಗಳ ಸಹಾಯದಿಂದ ಅಪರಾಧಿಗಳ ಪರ ವಾದಿಸಲು ತಾವು ಸನ್ನದ್ಧರಾಗಿರುತ್ತೇವೆಂದು ಮ॥ ಸಿ ಪಿ ನರಸಿಂಹಯ್ಯಂಗಾರ್ಯರು ತಿಳಿಸಿದರು.

ಕೋರ್ಟು ಪ್ರವೇಶದ ವಿಚಾರವಾಗಿ ಮೆಜಿಸ್ಟ್ರೇಟರ ಆರ್ಡರು

ಈ ಮೊಕದ್ದಮೆಗಳಲ್ಲಿ ಅಪರಾಧಿಗಳೂ, ಪತ್ರಿಕಾ ಪ್ರತಿನಿಧಿಗಳೂ, ಪ್ರೇಕ್ಷಕರೂ ಕೋರ್ಟನ್ನು ಪ್ರವೇಶಿಸುವ ವಿಚಾರದಲ್ಲಿ ಬೆಂಚ್ ಕ್ಲಾರ್ಕ ಮತ್ತು ಡ್ಯೂಟಿ ಮೇಲಿರುವ ಪೋಲೀಸು ಅಧಿಕಾರಿಗಳ ತಿಳುವಳಿಕೆಗಾಗಿ ಈ ಪ್ರಕಾರ ಕಟ್ಟಳೆಯನ್ನು ಮಾಡಿರುತ್ತಾರೆ :—

1 ಅಪರಾಧಿಗಳು ಕೋರ್ಟನ್ನು ಪ್ರವೇಶಿಸುವುದಕ್ಕೆ ಮೊದಲು ಅವರುಗಳ ಅಂಗಶೋಧನೆ ಮಾಡಲ್ಪಡಬೇಕು. ಗೌರವಸ್ಥರಾದ ಅಪರಾಧಿಗಳ ಅಂಗಶೋಧನೆ ಮಾಡಬೇಕಾದುದಿಲ್ಲ.

2 ಬುಟ್ಟಿ ವಿನಾ ಇತರ ಪಾದರಕ್ಷೆಗಳನ್ನು ಹಾಕಿಕೊಂಡಿರುವವರು ಅವನ್ನು ಕೋರ್ಟಿನ ಹೊರಗಡೆ ಬಿಟ್ಟು ಒಳಕ್ಕೆ ಬರಬೇಕು.

3 ಕೋರ್ಟಿನೊಳಗೆ ಕುಳಿತುಕೊಳ್ಳಲು ಸ್ಥಳ ಸಾಲದಿದ್ದರೆ ಹೊರಗಿನ ಜನರಾರೂ ಒಳಕ್ಕೆ ಬಿಡಲ್ಪಡತಕ್ಕದ್ದಲ್ಲ.

4 ಕೋರ್ಟಿನೊಳಗೆ ಸ್ಥಳವಿರುವವರೆಗೆ ವಕೀಲರುಗಳೂ, ಪತ್ರಿಕಾ ಪ್ರತಿನಿಧಿಗಳೂ ಬಿಡಲ್ಪಡುವರು.

5 ಪತ್ರಿಕಾ ಪ್ರತಿನಿಧಿಗಳು ತಮಗಾಗಿ ಗೊತ್ತುಮಾಡಲ್ಪಟ್ಟಿರುವ ಸ್ಥಳಗಳಲ್ಲೇ ಕುಳಿತುಕೊಳ್ಳಬೇಕು.

6 ಸರ್ಕಾರದ ಟೋಪಿಯನ್ನು ಧರಿಸಿರುವ ಪತ್ರಿಕಾ ಪ್ರತಿನಿಧಿಗಳು ಟಲಿಗೇಟನ್ನಾದರೂ ಧರಿಸಬೇಕು.

ಇದರ ವಿರುದ್ಧವಾಗಿ ಅಪರಾಧಿಗಳ ಅರ್ಜಿ.

ಈ ಹೊಸ ಕಟ್ಟಳೆಗಳ ವಿಚಾರದಲ್ಲಿ ಅಪರಾಧಿಗಳ ಪರವಾಗಿ ಈ ಕೆಳಗೆ ಕಂಡಂತೆ ಒಂದು ಅರ್ಜಿಯು ಮೆಜಿಸ್ಟ್ರೇಟರಿಗೆ ಕೊಡಲ್ಪಟ್ಟಿತು :

1. "ಅಪರಾಧಿಗಳನ್ನು ಕೋರ್ಟಿನೊಳಕ್ಕೆ ಬರುವುದಕ್ಕೆ ಮೊದಲು ಅವರ ಅಂಗಶೋಧನೆಯನ್ನು ಮಾಡಬೇಕೆಂಬ ಈ ಘನವಾದ ಕೋರ್ಟಿನ ನರ ಹೊಸ ಕಟ್ಟಳೆಗಳ ವಿಚಾರದಲ್ಲಿ ಅಪರಾಧಿಗಳು ಬಿನ್ನವಿಸಿಕೊಳ್ಳುವುದೇನೆಂದರೆ :—

2. ಈ ರೀತಿ ಶೋಧಿಸುವುದು ಅಪರಾಧಿಗಳಿಗೆ ಅವಮಾನಕರವಾಗಿರುವುದು ಮಾತ್ರವಲ್ಲದೆ ಅವರ ಮಾನ, ಗೌರವಗಳಿಗೆ ಬಹಿರಂಗವಾಗಿ ಕುಂದನ್ನುಂಟುಮಾಡತಕ್ಕದ್ದಾಗಿದೆ.

3 ಕೋರ್ಟಿನವರೂ ಪೋಲೀಸಿನವರೂ ಅಪರಾಧಿಗಳ ವಿಚಾರದಲ್ಲಿ ಈ ರೀತಿ ನಡೆದುಕೊಳ್ಳುವುದಕ್ಕೆ ಕಾರಣವಾಗಲೀ ಆವಶ್ಯಕತೆಯಾಗಲೀ ಇಲ್ಲ.

4. ಅಪರಾಧಿಗಳನ್ನು ಕೋರ್ಟಿನೊಳಕ್ಕೆ ಬಿಡುವ ವಿಚಾರದಲ್ಲಿ ಹಕ್ಕು ಕಟ್ಟಳೆಗಳನ್ನೇರ್ಪಡಿಸುವುದಕ್ಕೆ ಈ ಘನವಾದ ಕೋರ್ಟಿಗೆ ಅಧಿಕಾರವಿದ್ದರೂ, ಅಪರಾಧಿಗಳ ಅಂಗಶೋಧನೆಯನ್ನು ಮಾಡುವಂತೆ ಹುಕುಂ ಮಾಡುವುದಕ್ಕೆ ಈ ಕೋರ್ಟಿಗೆ ಅಧಿಕಾರವಿಲ್ಲ.

5. ಈ ಅನಾಧಾರವಾದ ನಿಬಂಧನೆಗಳನ್ನು ಮಾಡುವುದಕ್ಕೆ ಯಾವ ಕಾರಣವೂ ಸೂಚಿಸಲ್ಪಟ್ಟಿಲ್ಲ.

6 ಈ ಕ್ರಮವು ವಿಚಿತ್ರವೂ, ಹಿಂಸಾತ್ಮಕವೂ ಆಗಿರುವುದಲ್ಲದೆ ಕೇವಲ ಅಲಕ್ಷ್ಯಭಾವದಿಂದಾಗಿದೆ.

"ನಮ್ಮ ಮತ್ತು ಅಪರಾಧಿಗಳ ಗೌರವ ದೃಷ್ಟಿಯಿಂದ, ಗೌರವಸ್ಥರಾದ ಮತ್ತು ಇತರ ಅಪರಾಧಿಗಳೆಂಬುದನ್ನು ನಿರ್ಧರಿಸುವುದಕ್ಕಾಗುವುದಿಲ್ಲ.

ಈ ವಿಚಾರದಲ್ಲಿ ವಾದ

ಈ ಅರ್ಜಿಯನ್ನು ನೋಡಿ, ಮೆಜಿಸ್ಟ್ರೇಟರು ಈ ಮೊಕದ್ದಮೆಯಲ್ಲಿ ಸರ್ಕಾರದ ಪರವಾಗಿ ಅಪರಾಧಿಗಳಿದ್ದಾರೆ ಅವರುಗಳಲ್ಲಿ ಎಲ್ಲಾ ಅಂತಸ್ತಿನವರೂ ಇದ್ದಾರೆ. ಆದುದರಿಂದ ಈ ಬಗೆಯ ಎಚ್ಚರಿಕೆ ರಾವ ಗಳನ್ನು ತೆಗೆದುಕೊಳ್ಳುವುದು ಆವಶ್ಯಕವೆಂಬುದನ್ನು ವಕೀಲರು ಒಪ್ಪಿಕೊಳ್ಳತಕ್ಕದ್ದೆಂದು ನಂಬುತ್ತೇನೆ ಎಂದರು. ಅನೇಕ ವಕೀಲರು "ಇಲ್ಲ, ಇಲ್ಲ, ಇದು ಆವಶ್ಯಕವಿಲ್ಲ"ವೆಂದರು.

ಮ॥ ಸಿ ಪಿ ನರಸಿಂಹಯ್ಯಂಗಾರರು—ಇಂತಹ ನಿಬಂಧನೆಗಳು ಯಾವ ಮೊಕದ್ದಮೆಯಲ್ಲೂ ಮಾಡಲ್ಪಟ್ಟಿಲ್ಲ.

ಮೆಜಿಸ್ಟ್ರೇಟರು—ಯಾವ ಮೊಕದ್ದಮೆಯಲ್ಲಿ ಅಪರಾಧಿಗಳು ಮುಂದಿಯಮೇಲೆ ಜಾರ್ಜ್‌ಷೀಟ್ ಹಾಕಿರಲ್ಲ ಅಲ್ಲದೆ, ಗೌರವಸ್ಥರಾದ ಅಪರಾಧಿಗಳಿಗೆ ಇದು ಅನ್ವಯಿಸುವುದಿಲ್ಲ.

ಮ॥ ನರಸಿಂಹಯ್ಯಂಗಾರ್ಯರು—ಅಂತಹವರ ಹೆಸರುಳ್ಳ ಒಂದು ಪಟ್ಟಿಯನ್ನು ಪೋಲೀಸ್ ಅಧಿಕಾರಿಗಳ ವಶಕ್ಕೆ ಕೊಡಬಹುದು

ಮೆಜಿಸ್ಟ್ರೇಟರು—ಹಾಗೆಯೇ ಮಾಡಲಾಗುವುದು.

ಮ॥ ವೆಂಕಟವರದಯ್ಯನವರ ಅರ್ಜಿ.

ನ್ಯೂ ಸಂಪಿಗೆ ವೆಂಕಟವರದಯ್ಯನವರು ತಮ್ಮ ವಕೀಲಿಯನ್ನು ಬಿಡುವುದಕ್ಕೆ ಅನೇಕ ಕಾರಣಗಳಿಲ್ಲ, ಈ ಪಟ್ಟಿಯಲ್ಲಿ ಅನೇಕ ಕೋರ್ಟುಗಳಲ್ಲಿ ನಡೆಯುವ ವಿಚಾರಣೆಯಿಂದ ಬಂದು ಈ ಮೊಕದ್ದಮೆಯ ನಡೆಯುವ ಪ್ರತಿದಿನವೂ ಕೋರ್ಟಿಗೆ ಹಾಜರಾಗಬೇಕಾದರೆ ತಮ್ಮ ವೃತ್ತಿಗೆ ನಷ್ಟವಾಗಿ ತಮ್ಮ ಅಕ್ಷಿಗಾರರಿಗೆ ತೊಂದರೆಯಾಗುತ್ತದೆ. ತಮ್ಮ ವೃತ್ತಿಯನ್ನು ಸಾಗಿಸುವುದು ಪರದ್ದೇವಿಯಿಂದ ಪೋಲೀಸಿನವರು ತಮ್ಮ ಮೇಲೆ [illegible] ಕೊಂಡಿರುವುದರಿಂದಲೂ ಈ ಕಾರಣಗಳಿಂದ ತಾವು [illegible] ಹಿಡಿದುಕೊಂಡು ದಿನವೂ ಕೋರ್ಟಿಗೆ ಹಾಜರಾಗಬೇಕೆಂಬುದು, ತಮ್ಮ ಅವರನ್ನು ಹಾಜರಾಗುವುದನ್ನು ಅವಶ್ಯವಿಲ್ಲ ದಿನ ಬರುತ್ತಾ ಹಾಜರಾಗುವುದಕ್ಕೂ ಹುಕುಂ ದಯಪಾಲಿಸಬೇಕೆಂದೂ ಅರ್ಜಿ ಕೊಟ್ಟಿಕೊಂಡಿದ್ದರು.

ಮೆಜಿಸ್ಟ್ರೇಟರ ಹುಕುಂ.

ಈ ಅರ್ಜಿಯ ಮೇಲೆ ಮೆಜಿಸ್ಟ್ರೇಟರು ಅಪರಾಧಿಗಳ ಇಷ್ಟವನ್ನು ನಿರ್ವಹಿಸಿ ಕೋರ್ಟಿನಲ್ಲಿ ಹಾಜರಿರಬೇಕೆಂದು ಆರ್ಡರ್ ಮಾಡಿದರು.

ಅಪೀಲು.

ಮ॥ ವೆಂಕಟವರದಯ್ಯನವರು ಮೆಜಿಸ್ಟ್ರೇಟರ ಈ ಆರ್ಡರಿನ ಮೇಲೆ, ಸೆಷನ್ಸ್ ಕೋರ್ಟಿಗೆ ನಾಳೆ ದಿನವೇ ಅಪೀಲು ಮಾಡುವುದಾಗಿ ಕೋರ್ಟಿನ ಮುಂದೆ ಹೇಳಿದರು.

ಮೈಸೂರು ಸರ್ಕಾರದ ಗಂಧದೆಣ್ಣೆಯ ವಿಚಾರ.

ಅಪರಾಧಿಯ ಲಿಖಿತಮೂಲಕವಾದ ಹೇಳಿಕೆ.

ಇದೇ ತಾ॥ 21 ರಲ್ಲಿ ಅಡಿಷನಲ್ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರ ಮುಂದೆ ಮಿ॥ ಬಿ ಸೀತಾರಾಮಾಚಾರ್ಯರು ತಮ್ಮ ಹೇಳಿಕೆಯನ್ನು ಬರೆದುಕೊಟ್ಟರು ಆ ಹೇಳಿಕೆಯ ಮುಖ್ಯಾಂಶವೇನೆಂದರೆ.—ನಾನು ಎಸ್ಸೆನ್ ಫ್ಲೋರ್ ಪ್ರಾಡೆಕ್ಟ್ಸ್ ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರಾಗಿದ್ದೇನೆ. ಈ ಕಂಪೆನಿಯವರು ಮೈಸೂರು ಸರ್ಕಾರು ಗಂಧದೆಣ್ಣೆಯ ಮಾರಾಟಕ್ಕಾಗಿ ಕಂಟ್ರಾಕ್ಟನ್ನು ಮಾಡಿಕೊಂಡರು ಮಾರಾಟವು 1923 ನೇ ಸೆಪ್ಟಂಬರಿನಲ್ಲಿ ಪ್ರಾರಂಭವಾದರೂ, ಕಂಟ್ರಾಕ್ಟಿನ ಕರಾರು 10-6-25 ರಲ್ಲಿ ಮಾಡಲ್ಪಟ್ಟಿತು. "ಏಜೆನ್ಸಿ" ಎಂಬ ಪದವು ಅಗ್ರಿಮೆಂಟಿನಲ್ಲಿ ಉಪಯೋಗಿಸಿದ್ದರೂ ಮೈಸೂರು ಸರ್ಕಾರಕ್ಕೂ ಎಸ್ಸೆನ್ ಫ್ಲೋರ್ ಪ್ರಾಡೆಕ್ಟ್ಸ್‌ಗೂ ಕಾನೂನಿಗೆ ಅನುಸಾರವಾಗಿ ಸಂಬಂಧವಿಲ್ಲ ಅಲ್ಲದೆ "ಟ್ರಸ್ಟ್" ಎಂಬ ಪದವು ಅಗ್ರಿಮೆಂಟಿನ ಪ್ರಕಾರವಾಗಿಯೂ ಈಗ ನಡೆಯುತ್ತಿರುವ ವ್ಯಾಪಾರದ ಪ್ರಕಾರವಾಗಿಯೂ ಎಸ್ಸೆನ್ ಫ್ಲೋರ್ ಪ್ರಾಡೆಕ್ಟ್ಸ್‌ಗೂ ಗೌರ್ನಮೆಂಟಿಗೂ ಅನುಸರಿಸುವುದಿಲ್ಲ ನನಗೂ ಮೈಸೂರು ಸರ್ಕಾರಕ್ಕೂ ಕಾನೂನು ರೀತಿಯಾಗಿ ಯಾವ ಸಂಬಂಧವೂ ಇಲ್ಲ ನಾನು ಗಂಧದೆಣ್ಣೆಯ ಏಜೆಂಟಲ್ಲ. ಇದರ ಸಂಬಂಧದ ಹಣವೆಲ್ಲವೂ ನನ್ನ ವಶಪಡಿಸಲ್ಪಟ್ಟಿತ್ತು ಮತ್ತು ಅದು ನನ್ನ ಸ್ವಾಧೀನದಲ್ಲಿತ್ತು ಎಂದು ಹೇಳುವುದು ಸರಿಯಲ್ಲ. ಎಸ್ಸೆನ್ ಫ್ಲೋರ್ ಪ್ರಾಡೆಕ್ಟ್ಸ್‌ನವರು 1923 ರಲ್ಲಿ ಗಂಧದೆಣ್ಣೆಯ ವ್ಯಾಪಾರವನ್ನು ಪ್ರಾರಂಭಿಸಿದಾಗ ಮಿ॥ ಕೆ. ಬಿ ಮೌಲಾಂಕರ್ರವರು ಲಂಡನ್ನಿನಲ್ಲಿ ಅವರ ಪ್ರತಿನಿಧಿಗಳಾಗಿದ್ದರು. ಗಂಧದೆಣ್ಣೆಯ ವ್ಯಾಪಾರವೆಲ್ಲವೂ ಅವರಲ್ಲಿತ್ತು. ಆಗಾಗ್ಗೆ ಕಳುಹಿಸುತ್ತಿದ್ದ ಗಂಧದೆಣ್ಣೆಯೂ ಅದರ ಮಾರಾಟದಿಂದ ಬರಬೇಕಾದ ಹಣವನ್ನು ವಸೂಲು ಮಾಡುವುದೂ ಅವರ ಅಧೀನದಲ್ಲಿತ್ತು ಎಸ್ಸೆನ್ ಫ್ಲೋರ್ ಪ್ರಾಡೆಕ್ಟ್ಸ್‌ನ ಡೈರೆಕ್ಟರುಗಳು ಬೋರ್ಡಿನಲ್ಲಿ ತೀರ್ಮಾನಿಸಿದಂತೆ ಅವರು ಮೆಸರ್ಸ್ ಕೂಟ್ಸ್ ಅಂಡ್ ಕಂಪನಿಯಲ್ಲಿ ಲೆಕ್ಕವನ್ನು ಇಡಲಾರಂಭಿಸಿದರು. ನಾನು ಎಸ್ಸೆನ್ ಫ್ಲೋರ್ ಪ್ರಾಡೆಕ್ಟ್ಸ್‌ನ ಮ್ಯಾನೇಜಿಂಗ್ ಡೈರೆಕ್ಟರಾಗಿ ಮಿ॥ ಮೌಲಾಂಕರರೊಂದಿಗೆ ಪ್ರತಿನಿಧಿಯಂತೆ ವ್ಯವಹಾರ ನಡೆಸುತ್ತಿದ್ದೆ. ಮಿ॥ ಮೌಲಾಂಕರ್ರವರು ಲಂಡನ್ನಿನಲ್ಲಿ ಎಸ್ಸೆನ್ ಫ್ಲೋರ್ ಪ್ರಾಡೆಕ್ಟ್ಸ್‌ನ ಪ್ರತಿನಿಧಿಯಾಗಿಯೂ ಮೈಸೂರು ಆರ್ಟ್ಸ್‌ಪ್ಲಾಸ್ ಕಂಪೆನಿ, ಮೈಸೂರು ಡೆವಲೊಪ್‌ಮೆಂಟ್ ಸಿಂಡಿಕೇಟ್ ಮತ್ತು ಶ್ರೀ ಕೃಷ್ಣರಾಜೇಂದ್ರಮಿಲ್ ಇವುಗಳ ಏಜೆಂಟ್ ಮತ್ತು ಪತ್ರವ್ಯವಹಾರಕರಾಗಿದ್ದರು. ನನ್ನ ಮೇಲೆ ಮಾಡಿರುವ ಛಾರ್ಜುಷೀಟಿನಲ್ಲಿ ಹೇಳಿರುವಂತೆ ಹಣದ ನಾಲ್ಕು ಐಟಂಗಳು ಮಿ॥ ಮೌಲಾಂಕರರವರೊಂದಿಗೆ ನಡೆಸಿದ್ದಾಗಿದೆ ಅವರಿಂದ ಬರಬೇಕಾದ ಹಣವನ್ನು ತೆಗೆದುಕೊಂಡಿದ್ದೂ ಅವರಿಂದ ಬರಬೇಕಾದ್ದು ಉಂಟೆಂದು ನಂಬಿದ್ದೂ ಸರಿಯೆಂದು ನಾನು ನಂಬುತ್ತೇನೆ ಪ್ರಾಸಿಕ್ಯೂಷನಿನಲ್ಲಿ ಹೇಳಿರುವಂತೆ ನಾನೇ ಹಣವನ್ನೆಲ್ಲ ದುರುಪಯೋಗ ಮಾಡಿದ್ದೇನೆಂಬುದು (ನಾನೇ ತೆಗೆದುಕೊಂಡಿದ್ದೇನೆಂಬುದು) ಸುಳ್ಳು.

ದಿವಂಗತರಾದ ವರ್ಧಮಾನಯ್ಯನವರು ಈ ಎಸ್ಸೆನ್ ಫ್ಲೋರ್ ಪ್ರಾಡೆಕ್ಟ್ಸ್‌ನ ಗವರ್ನಿಂಗ್ ಡೈರೆಕ್ಟರಾಗಿರುವವರೆಗೂ ನಾನು ಅವರ ಸಲಹೆಯಂತೆ ನಡೆಯುತ್ತಿದ್ದೆನು. 1923 ನೇ ನವೆಂಬರ್ ತಿಂಗಳಿನಲ್ಲಿ ಶ್ರೀ॥ ವರ್ಧಮಾನಯ್ಯನವರ ದೇಹಸ್ಥಿತಿಯು ಸರಿಯಾಗಿರಲಿಲ್ಲವಾದುದರಿಂದ ಶ್ರೀ ಕೃಷ್ಣರಾಜೇಂದ್ರ ಮಿಲ್ಸ್, ಮೈಸೂರು ಡೆವಲೊಪ್‌ಮೆಂಟ್ ಸಿಂಡಿಕೇಟ್, ಮೈಸೂರು ಆರ್ಟ್ಸ್‌ಪ್ಲಾಸ್ ಪ್ರಾಡೆಕ್ಟ್ಸ್ ಮತ್ತು ಎಸ್ಸೆನ್ ಫ್ಲೋರ್ ಪ್ರಾಡೆಕ್ಟ್ಸ್ ಇವುಗಳ ನಿರ್ವಹಣೆಗಳನ್ನು ಅವರ ಸಲಹೆಯಿಲ್ಲದೆಯೇ ನಡೆಸಬೇಕಾಗಿ ಬಂದಿತು. ಪರದೇಶಗಳಲ್ಲಿ ಮೈಸೂರಿನ ಗಂಧದೆಣ್ಣೆಯ ಮಾರಾಟವನ್ನು ಹೆಚ್ಚಿಸಿ ಉತ್ತಮ ಪ್ರಚಾರಮಾಡಲು ನಾನು ಪಟ್ಟಿರುವ ಶ್ರಮಕ್ಕೂ ನನ್ನ ಪ್ರಯತ್ನಗಳಿಗೂ ಮೈಸೂರು ಸರ್ಕಾರದವರು ನನಗೆ ಈಗ ತೋರಿಸುತ್ತಿರುವ ಕೃತಜ್ಞತೆಯು ಸರಿಯಾದುದಲ್ಲ ನಾನು ನಿರಪರಾಧಿಯಾಗಿದ್ದೇನಾದುದರಿಂದ ತಾವು ನನ್ನನ್ನು ಬಿಡುಗಡೆ ಮಾಡಬೇಕೆಂದು ಕೋರುತ್ತೇನೆ.

NOTICE.

Applications (in the prescribed form) are invited from candidates who have passed the Sub-Overseers Examination from the School of Engineering, Bangalore or any other recognised institution for the following vacancies of Sub-Overseers (Temporary) in the Mysore Public Works Department.—

11	General vacancies (open to all classes).	Nos. 102-109 on Rs. 35-5/2-80. Nos. 110-112 on Rs. 35-5/2-50.
25	Special vacancies (Open to members of backward communities).	Nos. 120-44 on Rs. 35-5/2-80.

Applications should reach the undersigned before the 10th September 1929.

By order,
D. C. SUBBARAYAPPA,
Secretary, Central Recruitment Board.

ಮೈಸೂರು ಸ್ಟಾರ್.

೧೯೨೯ ನೆಯ ಇಸವಿ ಆಗಸ್ಟ್ ತಾ|| ೩೧ ನೆಯ ಶನಿವಾರ

MISCHIEF—THOU ART AFOOT

The mischievous and unscrupulous agitation that began against the present administration before the Bangalore disturbances of last year has kept on ever since with unabated rigour. That the agitation is unprincipled, is purely intended to blackmail the present *regime* and directed against particular non-Brahmin Officers needs no special mention. If it is analysed, it will be seen that it is not carried on by any political party, it means no constructive business, in fact, it has no constructive programme. As for its methods, the less said the better. It never believes in constitutional agitation, never in moving through the various constitutional avenues, the Legislative Council or the Representative Assembly. The local journals are not enough for carrying on its propaganda. It will summon the aid of every Brahmin-edited and anti-Indian journal in India and even abroad for its unpatriotic and unscrupulous propaganda. What shall we say about the authors of the agitation? A few handful of men, some of them disappointed in life, with little or no stake these are the persons who are creating a howl in the name of Mysoreans or rather Mysore Hindus. Let it not be understood that these professional irresponsible agitators stand all by themselves. Though the generality of the Mysore public has absolutely nothing to do with the artificial agitation and are dead against it still as the *Justice* of Madras pointed out recently there is a good deal of countenancing of the agitation by the co-religionists of the agitators both in and out of Government Service. One has only to take statistics of the increased circulation of the *Swarajya* and other anti-Government journals among officials to find out which way the wind has been blowing in Mysore during the last one year. Why? Poor *Hindu* of Madras even, the moment it says something disinterested, something which would be necessarily favovrable to Government, there is at once a talk of boycotting it. The journals that are the favourites of officials—and we know to what class they belong mostly—are those which abuse the Government most. Here then is an agitation a handful not numbering more than a dozen or so carried on in a most disreputable and unconstitutional manner, the only programme of which is to abuse Government. Not one of these agitators has had one iota of substantial practical service to his credit. Still in view of the inspiration and sympathy it gets, not always in secret it needs to be reckoned with. It is not statesmanship to ignore and shut one's eyes when mischief is afoot. As we have said before the agitation has supe... it will not take so... It is no longer a communal fight, because the Moslems are out of it, though of course the agitators are playing upon the religious sentiments of ignorant and credulous Hindus in order to keep it up. There would be no more food for the agitation the moment they cease to play upon communal feelings. As past masters in the fame of divide and rule, they know what pays them most. Nothing is easier than rousing religious feelings, and especially of oriental peoples. Would it be difficult to rouse the feelings of those communities who are not admitted into Sanskrit Colleges and into the interior of temples on the ground that it is their inalienable right and to organise mobs for forcible entry or Satyagraha or whatever other euphemistic expression they might chose. Direct action always appeals to mobs and where there is a religious turn given to it, it could easily assume huge proportions. Our Bangalore agitators cannot wag their tails in the constitutional bodies because these latter are not composed of knaves or fools to the extent the agitators would desire. The mischievous instinct being there it has to find some manifestation, no matter at what and at whose cost. This year since they could not bear the peaceful atmosphere of Bangalore, the agitators thought of a hartal this time and a Ganapati Pooja to boot on an odd day. On these we have already had our say. We will not be far wrong if we say that the weakness and vacillation of Government has contributed not a little to the strength of the agitation. There is a fairly effective interpellation sent this time to the Representative Assembly from the Mysore District as to whether the Government have a policy about permitting students of defferent denominations in a school in installing their own deities, whether the D. P. I. was right in permitting old boys from taking part in the *pooja* whether it is possible to ascertain the identity and the strength of the old boys of a Middle School, whether the students could approach the head of the Department directly and so on. It would be absurd and ridiculous if in every school and college in the State the students of the different communities set up their deities and call in the public on all and sundry days. Imagine the Maharaja's College students installing a Ganapathi here, a Narayana there, an Iswara at another, and then a crescent and a cross and the devotees of each asking the Vice-Chancellor for permission and their being granted the same. If there is an image in a school by historic chance it is not that it should be disturbed from its place but no more added significance than is due should be given. It is nothing short of fraud if there are people to insist upon any public worship to an imaged and unconsecrated image. We wonder what the Department or Government is going to do on the Vinayck Chouti day whether they are going to repeat the old mistake of allowing the public to enter the Sultanpet School or whether they are going to follow any principle. If need be, they may permit only the present students to have their pooja not of the fixed Ganapathi but of a newly brought image of Ganapathi which has to finally take its abode in water after a few days, as is the practice everywhere. We hope the Government will follw a definite policy with regard to all the schools in the State and not abandon its judgment to please the clamour of a few mischief-mongers.

ಹಾವಳಿಯು ಪ್ರಬಲಿಸಿತು

ಗತವರ್ಷ ಬೆಂಗಳೂರಿನಲ್ಲಿ ಗಲಭೆ ನಡೆಯುವುದಕ್ಕೆ ಪೂರ್ವ ವೇ ಈಗಿನ ಪ್ರಭುತ್ವಾಧಿಕಾರವನ್ನು ಪ್ರತಿಭಟಿಸುವ ದುರುದ್ದೇಶ ದಿಂದ ಆರಂಭಿಸಲ್ಪಟ್ಟ ಆಂದೋಳನವು ಅಂದೇ ಪಟ್ಟಿನಿಂದ ನಡೆ ಸಲ್ಪಡುತ್ತಿರುವುದು. ಈ ಆಂದೋಳನವು ಪ್ರಸಕ್ತ ಪ್ರಭುತ್ವದ ಕೀರ್ತಿಗೆ ಕಳಂಕವನ್ನುಂಟುಮಾಡುವ ದುಷ್ಟ ಹೇತುವಿನಿಂದ ಆಚರಿಸಲ್ಪಡುವುದಾಗಿರುತ್ತದೆಂದು ಪ್ರತ್ಯೇಕವಾಗಿ ಹೇಳಬೇಕಾದ ಅವಶ್ಯಕತೆಯೇನೂ ಇಲ್ಲ. ಹಾಗೆಯೇ ಬ್ರಾಹ್ಮಣೇತರ ಅಧಿಕಾರಿಗಳ ಮೇಲೆ ಈ ಆಂದೋಳನವು ಯಾವ ರಾಜಕೀಯ ಪಕ್ಷದಿಂದಲೂ ನಡೆ ಯಿಸಲ್ಪಡುತ್ತಿಲ್ಲವೆಂದೂ ನಿರುಪಯುಕ್ತವಾದ ಕಾರ್ಯಕ್ರಮವುಳ್ಳ ದಾಗಿಲ್ಲವೆಂದೂ ಸ್ಪಷ್ಟವಾಗುತ್ತದೆ. ಅದು ಕಾರ್ಯ ವಿಧಾನವನ್ನು ಕುರಿತು ಎಷ್ಟು ಸ್ವಲ್ಪವಾಗಿ ಹೇಳಿದರೂ ಅಷ್ಟೂ ಉತ್ತಮ. ನ್ಯಾಯವಾದ ಆಂದೋಳನಾದಾರಿಯಿಂದಾಗಲಿ ಪ್ರಜಾಪ್ರತಿನಿಧಿ ಮತ್ತು ನ್ಯಾಯವಿಧಾಯಕ ಸಭೆಗಳ ಮೂಲ ಕವಾಗಲಿ ಉದ್ದಿಷ್ಟಕಾರ್ಯಸಾಧನೆ ಮಾಡುವುದರಲ್ಲಿ ಅವರಿಗೆ ಭರ ವಸೆಯಿಲ್ಲವು. ಇವರು ಸ್ವದೇಶಾಭಿಮಾನವೂ, ತಾರತಮ್ಯಜ್ಞಾನವೂ ರಹಿತವಾದ ತಮ್ಮ ಕಾರ್ಯವನ್ನು ಸಾಧಿಸಲು ಸ್ವದೇಶ ಪತ್ರಿಕೆ ಗಳ ಸಹಾಯವು ಸಾಲದೆ ಪರದೇಶಗಳಲ್ಲಿ ಬ್ರಾಹ್ಮಣ ಸಂಪಾದ ಕರಿಂದಲೂ, ಭರತಖಂಡದ ವಿರೋಧಿಗಳಿಂದಲೂ ನಡೆಸಲ್ಪಡು ತ್ತಿರುವ ಆಂಗ್ಲಪತ್ರಿಕೆಗಳ ಸಹಾಯವನ್ನು ಅಪೇಕ್ಷಿಸುತ್ತಾರೆ. ಈ ಆಂದೋಳನಕಾರರ ವಿಚಾರವಾಗಿ ಏನು ಹೇಳೋಣ ? ಯಾವ ಸಂಘವನ್ನೂ ಅವಲಂಬಿಸದೆ ತಮ್ಮ ಜೀವನದಲ್ಲಿ ನಿರಾಶರಾಗಿ ರುವ ಎಷ್ಟೋ ಕೆಲವು ಜನರು ಮೈಸೂರಿನ ಹಿಂದುಗಳೆಂದು ಕರೆ ದುಕೊಂಡು ಪತ್ರಿಕೆಗಳಲ್ಲಿ ಬೊಬ್ಬೆ ಇಡುತ್ತಿರುವರು. ಆಂದೋ ಳನವನ್ನೇ ಕಸುಬಾಗಿಟ್ಟುಕೊಂಡಿರುವ ಉತ್ತರವಾದಿತ್ವವಿಲ್ಲದ ಜನರು ಮಾತ್ರವೆ ಈ ಹೀನಕಾರ್ಯದಲ್ಲುದ್ಯುಕ್ತರಾಗಿದ್ದಾರೆಂದು ತಿಳಿಯಬಾರದು. ಇಂತಹ ಚಳವಳಿಯಲ್ಲಿ ಮೈಸೂರಿನ ಜನತೆ ಯು ಬಹು ಪ್ರತಿಕೂಲವಾಗಿರುವುದಾದರೂ, ಮದ್ರಾಸಿನ ಜಸ್ಟಿಸ್ ಪತ್ರಿಕೆಯು ಈಚೆಗೆ ಹೇಳಿರುವಂತೆ ಸರ್ಕಾರಿ ಯುದ್ಯೋಗದಲ್ಲಿರುವ ಮತ್ತು ಇಲ್ಲದಿರುವ ಚಳವಳಿಗಾರರ ಸಜಾತೀಯ ಜನರನೇಕರ ಸಹಾಯವು ಸಂಪೂರ್ಣವಾಗಿರುತ್ತದೆ. ಸರ್ಕಾರಕ್ಕೆ ವಿರುದ್ಧವಾಗಿ ಲೇಖನಗಳನ್ನು ಪ್ರಕಟಿಸುವ ಸ್ವರಾ ಜ್ಯ ಮೊದಲಾದ ಪತ್ರಿಕೆಗಳನ್ನು ಸರ್ಕಾರಿಯುದ್ಯೋಗಸ್ಥರಲ್ಲಿ ಎಷ್ಟು ಜನರು ತರಿಸುತ್ತಿದ್ದಾರೆಂಬುದನ್ನು ವಿಚಾರಿಸಿದಲ್ಲಿ ಕಳೆದ ಒಂದು ವರ್ಷದಿಂದಲೂ ಮೈಸೂರಿನ ವಾತಾವರಣವು ಯಾವ ರೀತಿ ಪರಿಣಮಿಸಿರುತ್ತದೆಂಬುದು ವ್ಯಕ್ತವಾಗುತ್ತದೆ. ಒಂದು ಪತ್ರಿಕೆಯು ಚಳವಳಿಗಾರರಿಗೆ ಅಪ್ರಿಯರಾಗಿರುವ ಪ್ರಭುತ್ವದ ಪಕ್ಷವನ್ನು ವಹಿಸಿ ಬರೆದಲ್ಲಿ ಆ ಕೂಡಲೆ ಅದನ್ನು ಬಹಿಷ್ಕರಿಸುವ ಪ್ರಯತ್ನವು ನಡೆಯುವುದು. ಪ್ರಕೃತದಲ್ಲಿ ಪ್ರಭುತ್ವವನ್ನು ದೂಷಿ ಸುತ್ತಿರುವ ಪತ್ರಿಕೆಗಳೇ ಸರ್ಕಾರಿಯುದ್ಯೋಗಸ್ಥರುಗಳಿಗೆ ಬಹಳ ವಾಗಿ ಬೇಕಾಗಿರತಕ್ಕವು. ಹೀಗೆ ಪ್ರಭುತ್ವದವರನ್ನು ದೂಷಿ ಸುವುದನ್ನು ಮುಖ್ಯ ಧ್ಯೇಯವನ್ನಾಗಿಟ್ಟುಕೊಂಡು ಅನ್ಯಾಯವಾದ ಕುತ್ಸಿತ ಕಾರ್ಯಗಳನ್ನು ಮಾಡತಕ್ಕ ಜನರು ಒಂದು ಡಜನ್ನಿಗೆ ಮೇಲ್ಪಟ್ಟಿಲ್ಲವೆಂದು ಧಾರಾಳವಾಗಿ ಹೇಳಬಹುದು. ಈ ಚಳವಳಿ ಗಾರರಲ್ಲಿ ಒಬ್ಬನಾದರೂ ಕಿಂಚಿತ್ ದೇಶೋಪಯುಕ್ತ ಕಾರ್ಯವ ನ್ನು ಮಾಡಿರುವುದಿಲ್ಲ. ಆದರೂ ಅವರುಗಳಿಗೆ ಅಂತರಂಗದಲ್ಲಿ ಮಾ ತ್ರವಲ್ಲದೆ ಬಹಿರಂಗದಲ್ಲೂ ತೋರಿಸಲ್ಪಡುತ್ತಿರುವ ಉತ್ತೇಜನ ಸಹಾನುಭೂತಿಗಳಿಂದ ಅವರುಗಳು ಮಹಾಕಾರ್ಯಸಾಧಕರೆಂದು ಭಾವಿಸಲ್ಪಡಬೇಕಾಗಿದೆ. ಹಾವಳಿಯು ಪ್ರಬಲಿಸುತ್ತಿರುವ ವೇಳೆ ಯಲ್ಲಿ ಅದನ್ನು ಕಡೆಗಣಿಸಿ ಕಣ್ಮುಚ್ಚಿಕೊಂಡು ಕುಳಿತಿರುವುದು ರಾಜಕಾರ್ಯನಿಪುಣತೆಯ ಲಕ್ಷಣವಲ್ಲವು. ನಾವು ಹಿಂದೆ ಹೇಳಿರು ವಂತೆ ಆಂದೋಳನವು ಮುಚ್ಚುಮರೆಯಿಲ್ಲದೆ ನಡೆಸಲ್ಪಡುತ್ತಿದೆ. ಹಿಂದುಗಳ ಮನಸ್ಸು ಧರ್ಮಲೋಪ ವಿಚಾರದಲ್ಲಿ ಬಹುಬೇಗೆ ನೊಂದು ಉದ್ರೇಕಗೊಳ್ಳುವುದು ಸ್ವಭಾವವಾದುದರಿಂದ ಅವರ ಮನಸ್ಸನ್ನುದ್ರೇಕಗೊಳಿಸುವುದಕ್ಕಾಗಿ ಈ ಆಂದೋಳಕಾರರು ತಮ್ಮ ಚಳವಳಿಗೆ ಧರ್ಮ ಕಲಹ ಸ್ವರೂಪವನ್ನು ಕೊಟ್ಟು ಅದನ್ನು ನಡೆಸುತ್ತಿರುವರಾದರೂ ಮಹಮ್ಮದೀಯರು ಇದಕ್ಕೆ ಸಂಬಂಧ ಪಟ್ಟಿಲ್ಲವಾದುದರಿಂದ, ಹಿಂದುಗಳ ಜಾತಿಯ ಕಲಹವಾಗುವು ದಿಲ್ಲವು. ಧರ್ಮಲೋಪವಿಚಾರದಲ್ಲಿ ಜನರ ಮನಸ್ಸನ್ನುದ್ರೇಕ ಗೊಳಿಸದಿದ್ದಲ್ಲಿ ಆಂದೋಳಕಾರರ ಚಳವಳಿಗೆ ಅವಕಾಶವೇ ಇರುವುದಿಲ್ಲ. ಈ ಜನರು ಒಬ್ಬರಿಂದೊಬ್ಬರನ್ನು ಅಗಲಿಸುವುದ ರಿಂದ ಕಿಮಗಾಗುವ ಪ್ರಯೋಜನವನ್ನು ಬಹುಕಾಲದಿಂದಲೂ ಅರಿತಿರುತ್ತಾರೆ. ಪೂರ್ವದೇಶೀಯರಾದ ಜನರ ಮನಸ್ಸನ್ನು ಉ ದ್ರೇಕಗೊಳಿಸಲು ಧರ್ಮಲೋಪವಿಚಾರದ ಎಣಾ ಮತ್ತಾವ ಮಾರ್ಗವೂ ಅಷ್ಟು ಸುಲಭವಲ್ಲವು. ಸಂಸ್ಕೃತ ಪ್ರೌಢವಿದ್ಯಾ ಶಾಲೆಗಳಿಗೂ ಮತ್ತು ದೇವಸ್ಥಾನಗಳಿಗೂ ಪ್ರವೇಶಿಸಲು ಪ್ರತಿ ಯೊಬ್ಬ ಮಾನವನಿಗೂ ಜನ್ಮಸಿದ್ಧವಾದ ಹಕ್ಕುಂಟೆಂಬುದರ ಮೇಲೆ, ಸಂಸ್ಕೃತ ಪ್ರೌಢವಿದ್ಯಾಶಾಲೆ ಮತ್ತು ದೇವಸ್ಥಾನ ಗಳ ಪ್ರವೇಶಕ್ಕೆ ಅವಕಾಶವಿಲ್ಲದಿರುವ ಪಂಗಡದವರ ಮನ ಸ್ಸನ್ನುದ್ರೇಕಗೊಳಿಸಿ ಸತ್ಯಾಗ್ರಹವನ್ನಾಗಲಿ ಮತ್ತಾವ ಕಠಿಣಚ ರ್ಯವನ್ನಾಗಲಿ ಕೈಕೊಳ್ಳುವಂತೆ ಮಾಡುವುದೇನೂ ಕಷ್ಟವಲ್ಲವು. ಪ್ರತ್ಯಕ್ಷ ನಿದರ್ಶನವು ಜನತೆಯ ಮನಸ್ಸಿಗೆ ಚೆನ್ನಾಗಿ ಹಿಡಿ ಯುವುದರಿಂದ ಅದಕ್ಕೆ ಧರ್ಮಸ್ವರೂಪವನ್ನು ಕೊಟ್ಟಲ್ಲಿ ಅದು ಬಹು ಸುಲಭವಾಗಿ ಸಾಟಿ ಪ್ರಬಲವಾಗುವುದು. ಈ ಚಳ ವಳಿಗಾರರ ಇಚ್ಛೆಗೆ ಬೇಕಾದಂತಹ ದಡ್ಡರು ಪ್ರತಿಷ್ಠಿತವಾಗಿರ್ಪ ಟ್ಟಿರುವ ಸಭೆಗಳಲ್ಲಿ ಹೆಚ್ಚಾಗಿಲ್ಲದಿರುವುದರಿಂದ ಅಲ್ಲಿ ಅವರು ಗಳು ತಮ್ಮ ಬಾಲ ಬಿಚ್ಚಲವಕಾಶವಿಲ್ಲವು. ಯಾವ ರೀತಿಯಿಂ ದಾದರೂ ಕಿಡಿಕನ್ನು ಮಾಡುವುದೇ ತಮ್ಮ ಹುಟ್ಟು ಗುಣ ವಾಗುಳ್ಳ ಆಂದೋಳನಕಾರರು ಈ ವರ್ಷ ಬೆಂಗಳೂರಿನ ಸಮಾಧಾನಸ್ಥಿತಿಯಿಲ್ಲದಿರುವುದನ್ನು ನೋಡಿ ಸಹಿಸಲಾರದೆ ಕಳೆದ ವರ್ಷ ನಡೆದ ಗಲಭೆಯ ಜ್ಞಾಪಕಾರ್ಥವಾಗಿ ಹರತಾಳವನ್ನು ಆಚರಿಸಿ ಅಪ್ರಶಸ್ತವಾದ ದಿವಸ ಗಣಪತಿಯ ಪೂಜೆಯನ್ನು ಮಾಡಬುದ್ಧಿಗಿಸಿದರು. ಈ ಚಳವಳಿಗೆ ಪ್ರಭುತ್ವದವರ ಅಸಮ ರ್ಥತೆಯೂ, ಅಸ್ಥಿರಬುದ್ಧಿಯೂ ಬಹಳಮಟ್ಟಿಗೆ ಪುಷ್ಟೀಕರ ವಾಗಿದ್ದುವು. ಸರ್ಕಾರೀ ಪಾಠಶಾಲೆಗಳಲ್ಲಿ ಭಿನ್ನಮತದ ವಿದ್ಯಾ

[illegible]ಗಳ ಸಂಕಷ್ಟ ಎಗ್ಗ[illegible] ವನ್ನು ಕೊಡುವಲ್ಲಿ ಪ್ರಭುತ್ವದವರು [illegible] ಇಷ್ಟು ದಿನ ಇಟ್ಟುಕೊಂಡಿರುವರೆ, ಸುಲ್ತಾನ್‌ಪೇಟೆ ಸ್ಕೂಲಿನ ಗಣಪತಿಯ ಪೂಜೆಯನ್ನು ಮಾಡುವ [illegible] ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದ ಸ್ಕೂಲಿನಲ್ಲಿ ಅವಕಾಶ ಕೊಟ್ಟರು ಸ್ಕೂಲು ಏಳಿಗೆಯೇ, ಹಳೇ ವಿದ್ಯಾರ್ಥಿಗಳು ತಿಂಥವರೇ ಎಂದೂ ಇಂತಿಷ್ಟು ಜನರೇ ಎಂದೂ ಕಂಡುಹಿಡಿಯಲು ಸಾಧ್ಯವೆ, ವಿದ್ಯಾರ್ಥಿಗಳು ವಿದ್ಯಾಶಾಖಾಧಿಕಾರಿಗಳನ್ನೇ ನೇರವಾಗಿ ಕೇಳಬಹುದೆ ? ಎಂದು ಮೊದಲಾಗಿ ಕೆಲ ಪ್ರಶ್ನೆಗಳು ಬರುವ ಪ್ರಜಾಪ್ರತಿನಿಧಿ ಸಭೆಯಲ್ಲಿ ಕೇಳಲ್ಪಡುವುವು ಸಂಸ್ಥಾನದ ಪ್ರತಿಯೊಂದು ಸ್ಕೂಲಿನಲ್ಲೂ, ಕಾಲೇಜಿನಲ್ಲೂ ಎಲ್ಲ ಮತದ ವಿದ್ಯಾರ್ಥಿಗಳೂ ತಂತಮ್ಮ ದೇವರುಗಳನ್ನು ಪ್ರತಿಷ್ಠಿಸಿ ಅವುಗಳ ಪೂಜೆಗೆ ಯಾವಾಗಲೂ ವಿಶೇಷ ಕಾಲದಲ್ಲೂ ಜನರನ್ನು ಆಹ್ವಾನಿಸುವುದು ಬಹಳ ಅಸಂಗತವೂ, ಹಾಸ್ಯಾಸ್ಪದವೂ ಆಗಿರುತ್ತದೆ ಮಹಾರಾಜ ಕಾಲೇಜಿನ ವಿದ್ಯಾರ್ಥಿಗಳಲ್ಲಿ ಕೆಲರು ಗಣಪತಿಯನ್ನೂ, ಮತ್ತೆ ಕೆಲರು ನಾರಾಯಣನನ್ನೂ, ಬೇರೆ ಕೆಲರು ಈಶ್ವರನನ್ನೂ, ಅರ್ಧಚಂದ್ರನ (ಕ್ರೆಸೆಂಟು) ನನ್ನೂ, ಶಿಲುಬೆಯನ್ನೂ ಸ್ಥಾಪಿಸಿ ಅದರ ಪೂಜೆಗೆ ಪ್ರಿನ್ಸಿಪಾಲರ ಅನುಮತಿಯನ್ನು ಕೇಳಿಸಿದರು ಮತ್ತು ಅವರು ಅನುಜ್ಞೆಯನ್ನು ಕೊಡಬಹುದು. ಒಂದು ಸ್ಕೂಲಿನಲ್ಲಿ ಬಹುಕಾಲಾಂತರದಿಂದ ಒಂದು ವಿಗ್ರಹವು ಸ್ಥಾಪಿತವಾಗಿದ್ದಲ್ಲಿ ಅದನ್ನು ತೆಗೆಯತಕ್ಕದೂ ಅಲ್ಲ ಅದಕ್ಕೆ ಹೆಚ್ಚು ಪ್ರಾಶಸ್ತ್ಯವನ್ನು ಕೊಡತಕ್ಕದೂ ಅಲ್ಲ ಅಂಗವಿಹೀನವಾಗಿರುವ ಮತ್ತು ವಿಧ್ಯುಕ್ತವಾಗಿ ಪ್ರತಿಷ್ಠಿಸಲ್ಪಡದಿರುವ ವಿಗ್ರಹವನ್ನು ಆರಾಧಿಸಬೇಕೆಂದು ಹಟ ಮಾಡುವುದು ಮಾತ್ರ ಶುದ್ಧ ಮೋಸಕೃತ್ಯವಲ್ಲದೆ ಬೇರೆ ಇಲ್ಲ ಬೆಂಗಳೂರು ಸುಲ್ತಾನಪೇಟೆ ಮಿಡ್ಲ್ ಸ್ಕೂಲಿನಲ್ಲಿ ವಿನಾಯಕನ ಪೂಜೆಗೆ ಜನರು ಸೇರಲು ಹಿಂದೆ ಅವಕಾಶಕೊಟ್ಟಿದ್ದಂತೆ ಬರುವ ವಿನಾಯಕನ ಚೌತಿ ದಿವಸವೂ ಜನರು ಸೇರಲು ವಿದ್ಯಾಶಾಖೆಯವರಾಗಲಿ ಪ್ರಭುತ್ವದವರಾಗಲಿ ಅವಕಾಶಕೊಡುವರೋ, ಯಾವ ನ್ಯಾಯಕ್ರಮವನ್ನಾದರೂ ಅನುಸರಿಸುವರೋ ಎಂದು ಕುತೂಹಲದಿಂದ ನಿರೀಕ್ಷಿಸುತ್ತಿದ್ದೇವೆ ಒಂದು ವೇಳೆ ಆವಶ್ಯಕತೆ ತೋರಿದಲ್ಲಿ ಈಗಿನ ವಿದ್ಯಾರ್ಥಿಗಳು ಮಾತ್ರ ಎಲ್ಲ ಕಡೆಯೂ ಆಚರಣೆಯಲ್ಲಿರುವಂತೆ ಕೆಲ ದಿನಗಳಿಟ್ಟು ಅನಂತರ ಜಲಾಧಿವಾಸವನ್ನು ಮಾಡಿಸತಕ್ಕ ಮೆರೆಯುವ ವಿನಾಯಕ ಮೂರ್ತಿಯನ್ನು ತಂದಿಟ್ಟು ಪೂಜಿಸಲು ಅವಕಾಶವನ್ನು ಕೊಡಬಹುದು ಸಂಸ್ಥಾನದಲ್ಲಿರತಕ್ಕ ಎಲ್ಲ ಸ್ಕೂಲುಗಳ ವಿಚಾರದಲ್ಲಿ ಪ್ರಭುತ್ವದವರು ಒಂದೇ ವಿಧವಾದ ನೀತಿಯನ್ನು ಅನುಸರಿಸುವರಲ್ಲದೆ ಕೆಲ ಕಂಟಕಮಾರಿಗಳ ಪೊಳ್ಳು ಕೂಗಿಗೆ ಹೆದರಿ ಅವರನ್ನು ಸಂತೋಷಪಡಿಸಲೆತ್ನಿಸುವುದಿಲ್ಲವೆಂದು ನಿರೀಕ್ಷಿಸುತ್ತೇವೆ

ವಂದನಾರ್ಪಣೆ

ಹೈದರಾಬಾದುಸಂಸ್ಥಾನಕ್ಕೆ ಸೇರಿದ ಪರಳೀ ವೈಜನಾಥಲಿಂಗಕ್ಕೆ ವೀರಶೈವರು ಅರ್ಚೇಯವಾಗಿ ಮಾಡುತ್ತಿರುವ ರುದ್ರಾಭಿಷೇಕದ ವಿಚಾರದಲ್ಲಿ ಅವರಿಗೂ ಕೆಲ ಬ್ರಾಹ್ಮಣರಿಗೂ ಮೂರುವರ್ಷಗಳ ಕೆಳಗೆ ವಿವಾದವು ಹುಟ್ಟಿ ರಿಟೈರ್ಡ್ ಹೈಕೋರ್ಟು ಜಡ್ಜರಾದ ಶ್ರೀ|| ರಾಯ ಬಾಲಮುಕುಂದಸಾಹೇಬರ ಅಧ್ಯಕ್ಷತೆಯಲ್ಲಿ ಏರ್ಪಟ್ಟಿದ್ದ ನ್ಯಾಯಸ್ಥಾನದಲ್ಲಿ ಉಭಯ ಪಕ್ಷಗಳ ವಾದ ವಿವಾದಗಳು ನಡೆದು ಕಡೆಯಲ್ಲಿ ವೀರಶೈವರಿಗನುಕೂಲವಾಗಿ ತೀರ್ಮಾನಿಸಲ್ಪಟ್ಟಿದ್ದಿತಾದರೂ, ಶ್ರೀ ನೈಜಾಂ ಪ್ರಭುಗಳ ಸಮ್ಮತಿಯ ಹಸ್ತಾಕ್ಷರ (ಮುಜು) ವಾಗಿದಿದ್ದುದರಿಂದ ಈವರೆಗೆ ಪ್ರಕಟವಾಗಿದಿದ್ದಿತು ಆದರೆ ಅದು ಈಗ ಶ್ರೀ ನೈಜಾಂಪ್ರಭುಗಳ ಚಿತ್ತಕ್ಕೆ ಬಂದು ಅವರು ನ್ಯಾಯಮೂರ್ತಿಗಳ ತೀರ್ಪಿಗೆ ತಮ್ಮ ಸಮ್ಮತಿಯ ಹಸ್ತಾಕ್ಷರವನ್ನು ಬರೆದು ವೀರಶೈವರು ತಮ್ಮ ಧರ್ಮಸಂಬಂಧವಾದ ಕಾರ್ಯಗಳನ್ನು ಸ್ವತಃ ಮಾಡಿಕೊಳ್ಳಬಹುದೆಂದೂ, ಈ ವಿಚಾರದಲ್ಲಿ ಬ್ರಾಹ್ಮಣರು ಕೈಹಾಕಬಾರದೆಂದೂ ಆಜ್ಞೆಮಾಡಿ ತಮ್ಮ ನ್ಯಾಯಪಕ್ಷಪಾತಬುದ್ಧಿಯನ್ನು ಪ್ರಕಟಿಸಿರುವುದಕ್ಕಾಗಿ ನಾವು ಅವರನ್ನು ಅಭಿನಂದಿಸಿ ಅವರಿಗೆ ನಮ್ಮ ಕೃತಜ್ಞತಾಪೂರ್ವಕವಾದ ವಂದನೆಯನ್ನರ್ಪಿಸುತ್ತೇವಲ್ಲದೆ ಎಲ್ಲಕಡೆಯ ವೀರಶೈವಸಮಾಜದವರು ತಂತಮ್ಮಲ್ಲಿ ಸಭೆಕೂಡಿಸಿ ತಮ್ಮೊಳಗೆ ತಮ್ಮ ಕೃತಜ್ಞತಾಪೂರ್ವಕವಾದ ವಂದನೆಯನ್ನು ತಂತಿಯ ಮೂಲಕ ನೈಜಾಂ ಪ್ರಭುಗಳಿಗೆ ತಿಳಿಸುವವರಾಗಬೇಕೆಂದು ಕೋರುತ್ತೇವೆ

ಒಳದೇಶದ ವೃತ್ತಾಂತಗಳು.

ಸಿಮ್ಲಾಕ್ಕೆ ದಯಮಾಡಿಸಿದ್ದ ಶ್ರೀಮನ್ಮಹಾರಾಜರವರ ಸ್ವಾರಿಯು ಕಳೆದ ಸೋಮವಾರ ರಾಜಧಾನಿಗೆ ಸುರಕ್ಷಿತವಾಗಿ ಚಿತ್ತೈಸಿತು.

ಮಡಿಕೇರಿಯಲ್ಲೂ ಅದರ ನೆರೆ ಪ್ರಾಂತಗಳಲ್ಲೂ ಮಳೆಯಾಗುತ್ತಿರುವುದಾಗಿಯೂ, ಆದಿವಾರ ಮಡಿಕೇರಿಯೊಂದರಲ್ಲೇ 10·03 ಅಂಗುಲ ಮಳೆಯಾಗಿರುವುದಾಗಿಯೂ ಅಲ್ಲಿಯ ಪತ್ರಿಕೆಯು ತಿಳಿಸುತ್ತದೆ.

ಸರ್ ಕೆ. ಪಿ ಪುಟ್ಟಣ್ಣಸೆಟ್ಟರಮೇಲೆ ಅಡ್ವೊಕೇಟ್ ಮ|| ಬಿ. ಶ್ಯಾಮರಾಯರು ಬೆಂಗಳೂರು ಒಂದನೇ ಮುನ್ಸೀಫ್ ಕೋರ್ಟಿನಲ್ಲಿ 800 ರೂ ಗಳ ಪರಿಹಾರದ್ರವ್ಯವನ್ನಪೇಕ್ಷಿಸಿ ಹಾಕಿರುವ ವಿವಾದದ ವಿಚಾರಣೆಯು ಬರುವ ಸೆಪ್ಟಂಬರ್ ತಾ|| 4 ಕ್ಕೆ ಇಡಲ್ಪಟ್ಟಿರುತ್ತದೆ [redacted]

ಶಾಸನಸಭೆಯ ಚುನಾವಣೆ ರಾಜಧಾನಿಯ ವಿಭಾಗಕ್ಕೆ [illegible] ಪ್ರಾರಂಭವಾಗಿ [illegible] ನಡೆಯುವ [illegible] ಡಿ|| ಸಿ| ಕಮಿಷನರೂ ಡಿ|| ಬೋರ್ಡ್ ಪ್ರೆಸಿಡೆಂಟರೂ ಆದ ಮ|| ಎಂ ಎಸ್ ಬಾಲರಾಜ ಅರಸ್, ಬಿ ಎ, ಯವರಿಂದ ನಡೆಸಲ್ಪಡುವುದು

ಪೋಲೀಸು ಸೂಪರಿಂಟೆಂಡೆಂಟರುಗಳಾದ ಮ|| ವೆಲ್ಲರ್ ರವರು ಬೆಂಗಳೂರು ಸಿಟಿ ಮತ್ತು ತಾಲ್ಲೂಕಿನಿಂದ ಬೆಂಗಳೂರು ಡಿಸ್ಟ್ರಿಕ್ಟಿಗೂ ಮ|| ಗಳಾದ ರಣಧೀರಸಿಂಗ್‌ರವರು ಬೆಂಗಳೂರು ಸಿಟಿ ಮತ್ತು ತಾಲ್ಲೂಕಿಗೂ, ಹಿರಿಯಮರ್ದೀಕರವರು ಕಡೂರು ಡಿ|| ಗೂ, ಆರ್ ಪಿ ಮಲ್ಲಪ್ಪನವರು ಕಡೂರಿನಿಂದ ಮೈಸೂರು ಡಿ|| ಗೂ ವರ್ಗಾಯಿಸಲ್ಪಟ್ಟಿರುತ್ತಾರೆ

ಬೆಂಗಳೂರು ಸಿಟಿ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ಖಾನ್ ಬಹದ್ದೂರ್ ಅಬ್ಬಾಸ್ ಖಾನರ ಮೇಲೆ ಚಂದ್ರರಾಜನು ಮಾಡಿದ್ದ ವಿವಾದದಲ್ಲಿ ಮ|| ಖಾನ್ ರವರು ಡಿಸ್ಚಾರ್ಜ್ ಮಾಡಲ್ಪಟ್ಟು ಮ|| ರಾಮಚಂದ್ರರಾವ್ ಸಿಂಧೆ ರವರು ಮಾಡಿದ್ದ ವಿವಾದದಲ್ಲಿ ಚಾರ್ಜ್ ಮಾಡಲ್ಪಟ್ಟಿದ್ದರಷ್ಟೆ ಈ ವಿವಾದದಲ್ಲಿ ಅವರ ಅಪರಾಧವು ಸ್ಥಿರಪಡಲಿಲ್ಲವಾದುದರಿಂದ ನೆನ್ನೆಯದಿವಸ ಮ|| ಖಾನರವರ ನಿರ್ದೋಷಮುಕ್ತರಾಗಿ ಮಾಡಲ್ಪಟ್ಟರು

ಕಾನಕಾನಹಳ್ಳಿ ತಾ|| ಉಯ್ಯಂಬಳ್ಳಿ ಹೋ|| ದೊಡ್ಡಪಾಲಳ್ಳಿಯ ಅಂಗಡಿಬೀದಿಯಲ್ಲಿ ಕಳೆದ ತಾ|| 31 ರ ರಾತ್ರಿ ದೊಡ್ಡ ಜಮೀನ್ದಾರನಾದ ಚಿಕ್ಕಯ್ಯನ ಕೆಂಪೇಗೌಡನೆಂಬವನು ಮಚ್ಚು ಕೊಡಲಿ ಮೊದಲಾದವುಗಳಿಂದ ದೂಡಿಯಲ್ಪಟ್ಟು ಕೊಲೆ ಮಾಡಲ್ಪಟ್ಟನು ಪೋಲೀಸಿನವರು ನಾಲ್ವರನ್ನು ಅನುಮಾನದ ಮೇಲೆ ಹಿಡಿದು ಸೆರೆಯಲ್ಲಿಟ್ಟಿರುತ್ತಾರೆ ಮತ್ತು ಪೋಲೀಸು ಅ|| ಸೂಪರಿಂಟೆಂಡೆಂಟರೂ ಅಮಲ್ದಾರರೂ ಕೃತ್ಯನಡೆದ ಸ್ಥಳಕ್ಕೆ ಹೋಗಿ ವಿದ್ಯಮಾನವನ್ನು ವಿಚಾರಿಸುತ್ತಲಿರುವುದಾಗಿ ತಿಳಿಯಬಂದಿದೆ

ಕಳೆದ 3-4 ದಿನಗಳಿಂದಲೂ ರಾಜಧಾನಿಯಲ್ಲಿ ಆಗಾಗ್ಗೆ ಕೊಂಚ ಕೊಂಚ ಮಳೆಯಾಗುತ್ತಿದೆ ಇದರಂತೆ ಇತರ ಕಡೆಯಲ್ಲೂ ಆಗಿದ್ದಲ್ಲಿ ರಾಗಿ ಬಿತ್ತಿರುವವರಿಗೂ ಬಿತ್ತುವವರಿಗೂ ಬಹಳ ಉಪಯೋಗವಾಯಿತೆಂದು ಹೇಳಬಹುದು ಮಳೆಯ ಅಭಾವದಿಂದ ಕುಡಿಯುವ ನೀರಿಗೆ ತೊಂದರೆಯಾಗಿರುವುದಲ್ಲದೆ ಅನೇಕ ಗ್ರಾಮಗಳಲ್ಲಿ ಪ್ಲೇಗು ರೋಗವು ಕಲೆಹೋರಿ ಜನರು ಹೊರಗಡೆ ವಾಸಿಸುತ್ತಲಿರುವರು ಕಾಲಾನುಗುಣವಾಗಿ ದೊಡ್ಡ ನುಳಿಗಳು ಬಂದು ಕೆರೆಕಟ್ಟೆಗಳು ತುಂಬಿದಲ್ಲಿ ರೋಗಾದಿ ಉಪದ್ರವಗಳು ಹೆಚ್ಚಿ ಬಹಳ ನಷ್ಟ ಸಂಭವಿಸುವುದರಲ್ಲಿ ಅಭ್ಯಂತರವಿಲ್ಲವು ಎಲ್ಲವೂ ದೈವಚಿತ್ತ !

ದಾವಣಗೆರೆಯಲ್ಲಿ ನಡೆದ ಗಲಭೆಯ ಕಾರಣವನ್ನು ವಿಚಾರಿಸಲು ನಿಯಮಿಸಲ್ಪಟ್ಟಿರುವ ಮ|| ಡಿಸೋಜ ಯವರು ದಾವಣಗೆರೆಗೆ ಹೋಗಿ ವಿಚಾರಣೆಗುಪಕ್ರಮಿಸಿರುವರು ಆದರೆ ಈ ಗಲಭೆಯ ಸಂಬಂಧವಾಗಿ ಸೆರೆಹಿಡಿಯಲ್ಪಟ್ಟಿರುವವರ ವಿಚಾರಣೆಯೂ ಕ್ರಿಮಿನಲ್ ಕೋರ್ಟಿನಲ್ಲಿ ನಡೆಯುತ್ತಿರುವುದರಿಂದ ಅದು ಇತ್ಯರ್ಥವಾಗುವವರೆಗೆ ತಾವುಗಳು ಏನನ್ನೂ ಹೇಳುವುದಿಲ್ಲವೆಂದು ದಾವಣಗೆರೆ ನಿವಾಸಿಗಳು ಹೇಳುತ್ತಾರೆಂದೂ, ಈ ಕಾರಣದಿಂದ ಮ|| ಡಿಸೋಜ ಯವರು ಕೂಡಲೆ ಹಿಂದಿರುಗಿ ಬೆಂಗಳೂರಿಗೆ ಬರುವವರಾಗಿರುವರೆಂದೂ ಕೇಳುತ್ತೇವೆ ದಾವಣಗೆರೆ ನಿವಾಸಿಗಳು ಈ ರೀತಿ ಹೇಳುವುದು ಬಹಳ ಸಮಂಜಸವಾಗಿದೆ

ಇದೇ ತಾ|| 21 ನೆಯ ಬುಧವಾರ ಮ|| ಪರಪ್ಪ ಶಿವಲಿಂಗಪ್ಪ ಶೆಟ್ಟಿ, ಬಿ ಎ, ಯವರು ಕೊಲ್ಹಾಪುರ ಸಂಸ್ಥಾನಕ್ಕೆ ಸೇರಿದ ಗಡಹಿಂಗ್ಲಜದಲ್ಲಿ ಕೈಲಾಸವಾಸಿಗಳಾದರೆಂದು ಕೇಳಿ ಬಹಳವಾಗಿ ವಿಷಾದಿಸುತ್ತೇವೆ ಇವರು ವೀರಶೈವ ಮಹಾಸಭೆಯ ಅನೇಕ ಅಧಿವೇಶನಗಳಲ್ಲಿ ಧಾರ್ಮಿಕ, ನೈತಿಕ, ಸಾಮಾಜಿಕ ವಿಚಾರವಾಗಿ ಮರಾಟಿ, ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಸ್ಫೂರ್ತಿದಾಯಕವಾದ ಭಾಷಣಗಳನ್ನು ಮಾಡಿ ತಮ್ಮ ಪಾಂಡಿತ್ಯವನ್ನೂ ಧರ್ಮಾಭಿಮಾನವನ್ನೂ ವಾಗ್ಮಿತೆಯನ್ನೂ ವ್ಯಕ್ತಪಡಿಸಿ ಜನಪ್ರಿಯರಾಗಿದ್ದರಲ್ಲದೆ, ಈಚೆಗೆ ಸಂಸ್ಕೃತಾಭ್ಯಾಸವನ್ನು ಮಾಡಿ ವಿಪಯೋಗಮಂದಿರದಲ್ಲಿ ಬಹುಕಾಲದವರೆಗೆ ಧರ್ಮಬೋಧಕರಾಗಿದ್ದರು ಇಂತಹ ಉಪಯುಕ್ತ ವ್ಯಕ್ತಿಯನ್ನು ಕಳೆದುಕೊಂಡುದು ವೀರಶೈವ ಸಮಾಜದ ದುರ್ದೈವವೇ ಸರಿ

ಕೊಡಗು ಬಿಟ್ಟಂಗಾಲ ಗ್ರಾಮದ ಕುದುಕುಳಿರ ಒಬ್ಬ ಹುಡುಗನು ಕಳೆದ ತಾ|| 20 ರಲ್ಲಿ ವ್ಯಕ್ತನಾಗಲು ಮನೆಯವರು ಅವನ ದೇಹವನ್ನು ತೊಳೆದು ಮಲಗಿಸಿ ಸ್ಮಶಾನಕ್ಕೆ ಹೋಗಿ ಗುಂಡಿತೋಡಿ ಶವವನ್ನು ತೆಗೆದುಕೊಂಡುಹೋಗಲು ಮನೆಗೆ ಬಂದು ನೋಡುವಾಗ್ಗೆ, ಮೃತನ ಕೈಯ ಬೆರಳು ಅಲ್ಲಾಡುವುದನ್ನು ಕಂಡು ಭಯಭ್ರಾಂತರಾಗಿರುವಲ್ಲಿ ಆ ಹುಡುಗನೆದ್ದು ಕುಳಿತುಕೊಂಡು ಕುಡಿಯಲಿಕ್ಕೆ ನೀರನ್ನು ಕೇಳಿ ಕುಡಿದು ಈಗ ಅವನು ಸ್ವಸ್ಥನಾಗಿದ್ದಾನೆಂದು ಕೊಡಗು ಪತ್ರಿಕೆಗೆ ಯಾರೋ ತಿಳಿಸಿರುತ್ತಾರೆ. ಇದರಲ್ಲಿ ಅಸ್ವಾಭಾವಿಕವಾಗಲಿ ಆಶ್ಚರ್ಯವಾಗಲಿ ಇಲ್ಲ. ಪ್ರಾಣವಾಯು ಕಟ್ಟಿ ರಕ್ತಚಲನೆಯು ನಿಂತುಹೋಗುವುದರಿಂದ ಮೃತರಾದಂತೆ ತೋರುವವರನ್ನು ಅಂತಹವರನ್ನು ಕೂಡಲೆ ದಹನಮಾಡದೆ ಕೆಲಗಂಟೆಯ ಕಾಲ ನಿರೀಕ್ಷಿಸಿ ಅನಂತರ ಮಾಡುವುದುತ್ತಮವೆಂದು ವೈದ್ಯರ ಅಭಿಪ್ರಾಯವಾಗಿರುತ್ತದೆ.

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲರೂ, ಪ್ರಸಿದ್ಧ ಜವಳಿ ವರ್ತಕರೂ ಆದ ಮ|| ಕೆ. ಧನಕೋಟಿಶೆಟ್ಟರು ತಮ್ಮ ಕುಮಾರ ಚಿ|| ನಾ|| ಬಾಲರಾಜಯನ್ನು ಮಹಾಮಾನ ಸಾಹುಕಾರ್ ಮ[redacted]ಕಟರಮಣಶೆಟ್ಟರ ಕುಮಾರಿ ಚಿ|| ಸೌ|| ಸುಬ್ಬಲಕ್ಷ್ಮಿಗೆ ಕೊಟ್ಟು ಕಳೆದ ಭಾನುವಾರ ರಾಜಧಾನಿ ಯ ಜಗನ್ಮೋಹನ ಮಹಲ್ ಛತ್ರಶಾಲೆಯಲ್ಲಿ ವಿವಾಹಮಹೋತ್ಸವವನ್ನು ಬಹಳ ವಿಜೃಂಭಣೆಯಿಂದಲೂ ವಿಚಕ್ಷಣೆಯಿಂದಲೂ ಜರುಗಿಸಿ ರಾಜಧಾನಿಯ ಸರ್ಕಾರೀ ಅಧಿಕಾರಿಗಳು ಮ್ಯು|| ಕೌನ್ಸಿಲರುಗಳು ವಕೀಲರುಗಳು ವರ್ತಕರುಗಳು ಮೊದಲಾದ ದೊಡ್ಡ ಮನುಷ್ಯರುಗಳನ್ನು ಆಹ್ವಾನಿಸಿ ಗಂಧಪುಷ್ಪ ಫಲವಿನಿಯೋಗದಿಂದ ಸತ್ಕರಿಸಿದರು ಕಳೆದ 6-8 ದಿವಸಗಳಿಂದಲೂ ಒಂದೇ ಸಮನಾಗಿ ಸ್ಥಳ ಪರಸ್ಥಳಗಳ ಬಂಧುಬಳಗದವರಿಗೆ ದಿವ್ಯವಾದ ಔತಣಗಳನ್ನು ಮಾಡಿಸಿ ಎಲ್ಲರನ್ನೂ ಸಂತೃಪ್ತಿಗೊಳಿಸಿ ತಮ್ಮ ಔದಾರ್ಯವನ್ನು ಪ್ರದರ್ಶಿಸಿದರು. ನೂತನ ದಂಪತಿಗಳಿಗೆ ಸಕಲ ಸನ್ಮಂಗಳವಾಗಲೆಂದು ಹರಸುವೆವು.

ಇದೇ ತಾ|| 20 ರ ಬೆಳಿಗ್ಗೆ ಯಡತೊರೆ ಸಮೀಪದಲ್ಲಿ ಒಬ್ಬ ರೈತನು ಗದ್ದೆಗೆ ನೀರನ್ನು ಹಾಯಿಸುತ್ತಿರುವಾಗ್ಗೆ ಒಂದು ನಾಗರಹಾವು ಅವನ ಕಾಲನ್ನು ಕಚ್ಚಿತು ಅವನು ಆ ಕೂಡಲೆ ಹಾವಿನ ಕುತ್ತಿಗೆಯನ್ನು ತನ್ನ ಬಲಗೈ ಮುಷ್ಟಿಯಲ್ಲಿ ಬಲವಾಗಿ ಹಿಡಿದುಕೊಂಡಿರುವಾಗ್ಗೆ ಜ್ಞಾನತಪ್ಪಿ ಬದಿಯೊಳಗೆ ಬಿದ್ದನು ಸಮೀಪದಲ್ಲಿ ಜನರು ಇದನ್ನು ನೋಡಿ ಕೂಡಲೆ ಓಡಿ ಬಂದರಾದರೂ ಅವನ ಕೈಯಲ್ಲಿ ಹಾವಿದ್ದುದನ್ನು ಕಂಡು ಹೆದರಿ ಅವನ ಬಳಿಗೆ ಹೋಗದೆ ಬಹಳ ಹೊತ್ತು ನಿಂತಿದ್ದು ಅನಂತರ ಅವನ ಸಮೀಪಕ್ಕೆ ಬಂದು ನಾಡಿ ಪರೀಕ್ಷಿಸಿ ಸತ್ತುಹೋದನೆಂದು ತಿಳಿದು ಅವನನ್ನು ಅವನ ಮನೆಗೆ ಸಾಗಿಸಿ ಮನೆಯವರೆಲ್ಲರೂ ಗೋಳಾಡುತ್ತಿರುವಾಗ್ಗೆ ಅಕಸ್ಮಾತ್ ಮೈಸೂರಿನಿಂದ ಯಡತೊರೆಗೆ ಬಂದಿದ್ದ ಮ|| ಚಂದ್ರಭಾನುಸಿಂಗರವರು ಈ ವಿಚಾರವನ್ನು ತಿಳಿದು ಆ ಸ್ಥಳಕ್ಕೆ ಹೋಗಿ ಸರ್ಪದಷ್ಟನನ್ನು ಪರೀಕ್ಷಿಸಿ ಅವನ ಬಾಯಿಯನ್ನು ತೆರೆಯಲಿಕ್ಕಾಗದೆ ಹೋದುದರ ಮೇಲೆ ಅವನ ಕಣ್ಣಿಗೆ ಔಷಧವನ್ನು ಹಾಕಿ ಅದರಿಂದ ಅವನು ಬಾಯಿ ಬಿಡಲಾಗಿ ಬಾಯಿಗೆ ಔಷಧಿಯನ್ನು ಹಾಕಿದ ಕೂಡಲೆ ಜಲವಿಸರ್ಜನೆಯಾಯಿತು, ಆದರೂ ಸ್ಮೃತಿ ಬರಲಿಲ್ಲವಾಗಿ ಪಂಡಿತರು ಅವನನ್ನು ರೈಲುಬಂಡಿಯಲ್ಲಿ ಮೈಸೂರಿಗೆ ಸಾಗಿಸಿಕೊಂಡುಬಂದು ತಮ್ಮ ಮನೆಯಲ್ಲಿ ರಾತ್ರಿಯೆಲ್ಲಾ ಉಪಚರಿಸಿದುದರಮೇಲೆ ಅವನಿಗೆ ಸ್ಮೃತಿ ಬಂದಿತು. ಆಗ ಅವನು ಮುಷ್ಟಿಯಲ್ಲಿ ಹಿಡಿವಿದ್ದ ಹಾವು ಕೆಳಗೆ ಬಿದ್ದಿತಾದರೂ ಸತ್ತುಹೋಗಿದ್ದಿತು ಆ ಸರ್ಪದಷ್ಟನ ಮುಷ್ಟಿಯಲ್ಲಿ ಹಾವು ಹಿಡಿಯಲ್ಪಟ್ಟಿದ್ದ ಅವಸ್ಥೆಯಲ್ಲೇ ಫೋಟೋ ತೆಗೆಯಿಸಲ್ಪಟ್ಟಿರುತ್ತದೆ ಈ ವಿಚಿತ್ರ ಘಟನೆಯನ್ನು ಜನರು ನೋಡಿ ಆಶ್ಚರ್ಯಚಕಿತರಾಗಿ ಪಂಡಿತರ ಉಪಕಾರ ಬುದ್ಧಿಯನ್ನು ಕೊಂಡಾಡಿದರು

ವರ್ತಮಾನಸಂಗ್ರಹ.

ಕಳೆದ ಉಪಾಕರ್ಮದ ದಿವಸ ಬೊಂಬಾಯಿನ ಸಾಮಾಜಿಕ ಸುಧಾರಣೆಯ ಕೂಟದವರು 1,000 ಪಂಚಮರಿಗೆ ಯಜ್ಞೋಪವೀತ ಧಾರಣೆಯನ್ನು ಮಾಡಿಸಿದರು. ಈ ಕೂಟದ ಉಪಾಧ್ಯಕ್ಷರಾದ ಡಾಕ್ಟರ್ ನಾಯಕ್‌ರವರೇ ಆ ದಿವಸ ಆಚಾರ್ಯರಾಗಿದ್ದು ಎಲ್ಲ ಕರ್ಮವನ್ನೂ ಯಥಾವಿಧಿಯಾಗಿ ನೆರವೇರಿಸಿದರಂತೆ

ನ್ಯಾಯಕಲಾಶಾಲೆ ಅಂದರೆ ಲಾ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಕೃಷ್ಣಪಾಂಡುರಂಗ, ಬಿ ಎ, ಎಂಬಾತನು ಬೊಂಬಾಯಿನಿಂದ ಸೂರತ್ತಿಗೆ ರೈಲ್ವೆಬಂಡಿಯಲ್ಲಿ ಪ್ರಯಾಣಮಾಡುತ್ತಿರುವಾಗ್ಗೆ ಮಧ್ಯದಾರಿಯಲ್ಲಿ ಇದಿರಾಗಿ ಬರುತ್ತಿದ್ದ ರೈಲುಬಂಡಿಯ ಕದವು ಅವನಿಗೆ ತಗುಲಿ ಅವನು ಸತ್ತುಹೋದನು. ಆದಕಾರಣ ಅವನ ಹೆಂಡತಿ ರಾಧಾಬಾಯಿ ಎಂಬಾಕೆಯು ಬಿ.ಬಿ. ಸಿ ಐ ರೈಲ್ವೆ ಕಂಪನಿಯವರಮೇಲೆ ಒಂದುಲಕ್ಷದ ಇಪ್ಪತ್ತು ಸಾವಿರ ರೂಪಾಯಿ ನಷ್ಟಪರಿಹಾರವನ್ನು ಕೋರಿ ವಿವಾದವನ್ನು ಹೂಡಿರುತ್ತಾಳೆ

ಸೊಲ್ಲಾಪುರದಲ್ಲಿ ಅಕ್ಕಲಕೋಟೆಯ ನರಸಿಂಹ ಕುಲಕರ್ಣಿ ಎಂಬ ಬ್ರಾಹ್ಮಣ ಮಲ್ಲನಿಗೂ ದಿಲ್ಲಿಯ ಮುಸಲ್ಮಾನ ಪೈಲ್ವಾನನಿಗೂ 100 ರೂಪಾಯಿನ ಪಂಥದಮೇಲೆ ಕುಸ್ತಿನಡೆದು ಮೊದಲನೆಯ ದಪ್ಪನಲ್ಲಿ ಬ್ರಾಹ್ಮಣ ಮಲ್ಲನು 7 ನಿಮಿಷಗಳೊಳಗೆ ಪೈಲ್ವಾನನನ್ನು ಕೆಡವಿಬಿಟ್ಟನು ಆದರೆ ಅಖಾಡಾಬಿಟ್ಟು ಹೊರಕ್ಕೆ ಬಂದಿದ್ದರೆಂಬುದರಮೇಲೆ ಇನ್ನೊಂದಾವೃತ್ತಿ ಕುಸ್ತಿ ನಡೆದಿತು. ಆಗಲೂ ಬ್ರಾಹ್ಮಣಮಲ್ಲನೇ ಗೆದ್ದನಾದರೂ ಅಖಾಡಾಬಿಟ್ಟು ಹೊರಕ್ಕೆ ಬಂದಿದ್ದರೆಂಬ ವಿವಾದ್ದನಡೆದು ಪಂಚಾಯತರು ಬ್ರಾಹ್ಮಣನೇ ಗೆದ್ದನೆಂದು ನಿರ್ಧರಿಸಿ ಅವನಿಗೆ ಪಂಥದ ಹಣದಲ್ಲಿ 60 ರೂ. ಗಳನ್ನೂ ಪೈಲ್ವಾನನಿಗೆ 40 ರೂ ಗಳನ್ನೂ ಕೊಡಿಸಿದರು.

ಕೊಯಮತ್ತೂರು ಡಿ|| ಮುತ್ತೂರಿನಲ್ಲೂ ಅದರ ನೆರೆ ಗ್ರಾಮಗಳಲ್ಲೂ ಕೊರವರು ಹಗಲುವೇಳೆಯಲ್ಲಿ ವರ್ತಕರ ವೇಷವನ್ನು ಹಾಕಿಕೊಂಡು ವ್ಯಾಪಾರಮಾಡುತ್ತ ರಾತ್ರಿವೇಳೆಯಲ್ಲಿ ದರೋಡೆ ಮಾಡುತ್ತಿದ್ದರು ಪೋಲೀಸಿನವರು ಇವರನ್ನು ಹಿಡಿಯಲು ಮಾಡಿದ ಪ್ರಯತ್ನವೆಲ್ಲ ನಿರರ್ಥಕವಾದುದರಮೇಲೆ 40 ಜನ ಪೋಲೀಸಿನವರು ಹೆಂಗಸರಂತೆ ಸೀರೆಯನ್ನುಟ್ಟು ಆಭರಣಗಳನ್ನು ಧರಿಸಿಕೊಂಡು ಆ ಕೊರವರು ವಾಸಿಸುವ ಕಾಡಿಗೆ ಹೋಗಿ ಎಲೆಯನ್ನು ಆರಿಸುತ್ತಿರುವಾಗ್ಗೆ ಅವರನ್ನು ಹೆಂಗಸರೆಂದೇ ಕಳ್ಳರು ತಿಳಿದು ಅವರ ಆಭರಣಗಳನ್ನು ಕಿತ್ತುಕೊಳ್ಳಲು ಸಮೀಪಕ್ಕೆ ಬಂದಕೂಡಲೆ ವೇಷಧಾರಿಗಳಾದ ಪೋಲೀಸಿನವರು ಆ ಕಳ್ಳರಮೇಲೆ ಬಿದ್ದು ಅವರನ್ನು ಭದ್ರವಾಗಿ ಹಿಡಿದುಕೊಂಡು ಕೈಕೋಳಗಳನ್ನು ತೊಡಿಸಿದರು. ಆ ಕಳ್ಳರು ಆಯುಧಪಾಣಿಗಳಾಗಿದ್ದರೂ ಪ್ರತಿಭಟಿಸಲು ಸಾಧ್ಯ[redacted]

ಜಾಹೀರಿನ ನೋಟೀಸು.

ಬ್ಯಾಡಗಿಯ ವಕೀಲರು ಮತ್ತು ವ್ಯಾಪಾರಸ್ಥರಿಗೆ ನೋಟೀಸು—

ನನ್ನ ಅಳಿಯನಾದ ಸಜ್ಜನಶೆಟ್ಟರ ಬಸಪ್ಪ ತಂದೆ ಗುರುಬಸಪ್ಪ ಇವನು ತಾರೀಖು ೧೯ನೇ ಜುಲೈ ೧೯೨೮ ರಂದು ನಮ್ಮಿಂದ ಬೇರೆಯಾಗಿರುವನು. ಆದರೆ ಅವನು ನಮ್ಮ ಮನೆತನದ ವ್ಯವಹಾರಗಳನ್ನು ಮಾಡುವುದಕ್ಕೆ ಯಾವ ಹಕ್ಕು ಇರುವದಿಲ್ಲ. ಕಾರಣ ತಮಗೆ ಈ ನೋಟೀಸು ಮೂಲಕ ತಿಳಿಸುವದೇನಂದರೆ —ನನ್ನ ಮಾಲ್ಕಿಯ ಯಾವತ್ತು ಜಮೀನು ವ ಕಾಗದಪತ್ರಗಳ ಸಂಬಂಧದ ಬಗ್ಗೆ ನನ್ನ ಸಮ್ಮತಿ ಇಲ್ಲದೆ ಯಾವ ತರದಿಂದಲೂ ಸದರಿಯವನ ಕೂಡ ನನ್ನ ಸಂಬಂಧದ ಲೇವಾದೇವಿ ನಡೆಸಬಾರದು. ಹಾಗೆ ನಡಿಸಿದಲ್ಲಿ ಏನಾದರು ಹಾನಿ ಬಂದದ್ದಕ್ಕೆ ನಾನು ಜವಾಬ್ದಾರನಿರುವದಿಲ್ಲ ತಿಳಿಯಿರಿ.

ಇಷ್ಟೇ ಅಲ್ಲದೆ—ನೀವು ನನಗೆ ನನ್ನ ಮಾಲ್ಕಿಯ ಸಂಬಂಧದ ಯಾವತ್ತು ವ್ಯವಹಾರಗಳ ವಿಷಯಕ್ಕೆ ಚಿಕ್ಕೇರೂರು ತಾಲೂಕು ಕೋಡ ಅಥವಾ ಬ್ಯಾಡಗಿ ತಾಲೂಕು ರಾಣೇಬೆನ್ನೂರು ಈ ಎರಡು ಮುಕ್ಕಾಮಿನಲ್ಲಿ ಬರೆಯತಕ್ಕದ್ದು ಅಂತ ಕೊಟ್ಟ ಜಾಹೀರು ನೋಟೀಸು.

ತಾ॥ ಸದರ್,

ತಾ॥ 25 8 1928. VEERAPPA BASHETTAPPA,
Sajjanshetter, Byadgi

ಸ್ವತಃ ತಲೆಚೀಟಿ ಹಚ್ಚುವ ಯಂತ್ರ.

ಜರ್ಮನಿಯಲ್ಲಿ ಹೊಸತರದ ಶೋಧನವನ್ನು ಮಾಡಿರುವರು. ಅಂಚೆಗೆ ಹಾಕುವ ಪತ್ರಗಳಿಗೆ ನಾವೇ ಚೀಟಿ ಹಚ್ಚಬೇಕೆಂದಿರುವದಿಲ್ಲ. ಪತ್ರವನ್ನು ಅಂಚೆ ಆಫೀಸಿನಲ್ಲಿರುವ ಒಂದು ಸಣ್ಣ ದ್ವಾರದಲ್ಲಿ ನೂಕಿದೊಡನೆ ಅದು ಒಂದು ತರದ ತ್ರಾಸಿನ ಮೇಲೆ ಕುಳಿತುಕೊಳ್ಳುವದು. ತ್ರಾಸಿನ ಇನ್ನೊಂದೆ ಡೆಯಲ್ಲಿ ನಮಗೆ ಎಷ್ಟರ ಚೀಟಿ ಬೇಕೋ, ಅಷ್ಟು ದುಡ್ಡನ್ನಿಟ್ಟು ಬಿಟ್ಟರೆ ಸರಿ, ಒಡನೆಯೇ ಕೇವಲ ಯಂತ್ರಶಕ್ತಿಯಿಂದ ಅಷ್ಟೇ ಹಣದ ಚೀಟಿ ಆ ಪತ್ರಕ್ಕೆ ಒತ್ತಲ್ಪಡುವದು

ಟೆಲಿಗ್ರಾಫ್ ಮೂಲಕ ಚಿತ್ರಗಳು

ಟೆಲಿಗ್ರಾಫಿನ ಮೂಲಕ ಚಿತ್ರಗಳನ್ನು ಒಂದೂರಿನಿಂದ ಇನ್ನೊಂದೂರಿಗೆ ಕಳುಹಿಸುವುದು ಸಾಧ್ಯವಿದೆಯೆಂಬುದು ಈ ಮೊದಲೇ ಕಂಡುಹಿಡಿಯಲ್ಪಟ್ಟಿ ದೆಯಾದರೂ ಅದನ್ನು ಹೆಚ್ಚಾಗಿ ಯಾರೂ ಕಾರ್ಯಕ್ಕೆ ಮಾಡಿರಲಿಲ್ಲ. ಇನ್ನು ಮುಂದೆ ಪತ್ರಿಕೆಗಳಿಗೂ, ಇತರ ಕೆಲವು ಕೆಲಸಗಳಿಗೂ ಸಹಾಯಕ ವಾಗುವಂತೆ, ಲಂಡನಿನಿಂದ ಬರ್ಲಿನಿಗೆ ಟೆಲಿಗ್ರಾಫಿನ ಮೂಲಕ ಚಿತ್ರಗಳನ್ನು ರವಾನಿಸುವ ಕರ್ಲಸು ಪ್ರಾರಂಭವಾಗುವದು. ಎರಡು ಮೂರು ತಿಂಗಳು ಗಳೊಳಗಾಗಿಯೇ ಇದು ಪ್ರಾರಂಭಿಸುವದಂತೆ

ಸ್ನಾಯುವಿನಿಂದ ವಿದ್ಯುಚ್ಛಕ್ತಿ.

ನಮ್ಮ ಶರೀರದೊಳಗಿನ ಸ್ನಾಯುವು ಚಲಿಸುವಾಗ ಅದರಿಂದ ವಿದ್ಯುತ್ ಶಕ್ತಿಯು ಸ್ವಲ್ಪ ಸ್ವಲ್ಪವಾಗಿ ಹೊರಡುವದೆಂದು ಕೇಂಬ್ರಿಡ್ಜ್ ಯುನಿವರ್ಸಿಟಿಯ ಪ್ರೊಫೆಸರ್ ಆಡ್ರಿಯನ್ ಎಂಬವರು ಕಂಡುಹಿಡಿದಿರುವರು. ಅವರೊಮ್ಮೆ ಫೊನೋಗ್ರಾಫಿನಲ್ಲಿ ತಿರುಗುವ ರೆಕಾರ್ಡನ್ನು ಇಡುವ ಬದಲು ಫೊನೋಗ್ರಾಫಿನ ಸೂಜಿಯನ್ನು ತನ್ನ ತೋಳಿಗೆ ಚುಚ್ಚಿ ಎರಡು ತಾಸುಗಳ ವರೆಗೆ ಮೊಣಕಾಲೂರಿ ಕುಳಿತರು. ಫೊನೋಗ್ರಾಫು ತಿರುಗಲಾರಂಭಿಸಿತು ಸ್ನಾಯುವಿನಿಂದ ಹೊರಡುವ ಶಬ್ದವು ಫೊನೋಗ್ರಾಫಿಗೆ ಜೋಡಿಸಿದ 'ಲೌಡ ಸ್ಪೀಕರ್' ಎಂಬ ಯಂತ್ರದಲ್ಲಿ ಐದುಸಾವಿರಪಾಲು ಹೆಚ್ಚಿಸಲ್ಪಟ್ಟು ಕೇಳಿಸಿತು. ಲೋಹದ ಶಬ್ದದ ರೀತಿಯ ಶಬ್ದವು ಕೇಳಿಸಿತು. ಸ್ನಾಯುವು ವಿದ್ಯುಚ್ಛಕ್ತಿಯ ಬ್ಯಾಟರಿಯಂತಿದ್ದು, ಪ್ರತಿಸಲವೂ ಅದು ಚಲಿಸುವಾಗ ವಿದ್ಯುತ್ ಪ್ರವಾಹವು ಹೊರಡುವದೆಂದು ಅವರು ಕಂಡುಹಿಡಿದಿರುವರು

ಆನೆಯ ಜ್ಞಾಪಕಶಕ್ತಿ.

ಒಮ್ಮೆ ನಡೆದುಹೋದ ಘಟನೆಗಳು ಮನುಷ್ಯನಿಗೆ ಮರವೆಯಾದರೂ ಆನೆಗಳಿಗೆ ಅವು ಮರೆತುಹೋಗುವದಿಲ್ಲವೆಂಬುದು ಕಂಡುಹಿಡಿಯಲ್ಪಟ್ಟಿದೆ ಅಮೇರಿಕೆಯಲ್ಲಿ ಒಂಟೆರಿಯಾ ಜಿಲ್ಲೆಯ ಒಂದು ಸ್ಥಳದಲ್ಲಿ ಸರ್ಕಸಿನ ಪ್ರಾಣಿಗಳೆಲ್ಲವನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಒಯ್ಯುತ್ತಿದ್ದರು. ಅದರಲ್ಲಿ ಒಂದು ಆನೆ ಇದ್ದಿತು. ಈ ಆನೆಯು ಮೊದಲು ಬೇರೊಂದು ಸರ್ಕಸಿನಲ್ಲಿರುವಾಗ ಅದರ ಸಂಗಾತಿಯಾಗಿದ್ದ ಜಂಬೋ ಎಂಬ ಹೆಸರಿನ ಆನೆಯು ರೈಲುಬಂಡಿಯ ಅಡಿಯಲ್ಲಿ ಸಿಲುಕಿ ಸತ್ತುಹೋಗಿದ್ದಿತು ಆ ಆನೆಯು ಸತ್ತ ಸ್ಥಳವು ಒಂಟೆರಿಯಾ ಜಿಲ್ಲೆಯಲ್ಲಿಯೇ ಆಗಿದ್ದಿತು. ಆದು ಹಿಂದೆ ಸತ್ತ ಸ್ಥಳವನ್ನು ನೋಡಿದೊಡನೆ ಈ ಆನೆಯು ಥಟ್ಟನೆ ನಿಂತು ಬಿಟ್ಟಿತು, ಗರಗರನೆ ತಿರುಗಿತು, ಆರ್ತನಾದವನ್ನು ಮಾಡಿತು, ಸೊಂಡಿಲು ಊರಿತು, ದುಃಖವನ್ನು ಬೇರೆ ಬೇರೆ ವಿಧದಿಂದ ಪ್ರದರ್ಶಿಸಿತು. ಐವತ್ತು ವರುಷಗಳ ಹಿಂದೆ ಅದರ ಜೊತೆಗಿದ್ದ ಆ ಆನೆಯು ಸತ್ತುಹೋಗಿದ್ದಿತಾದರೂ ಈ ಆನೆಗೆ ಅದರ ನೆನಪು ಮರೆತು ಹೋಗಿರಲಿಲ್ಲ

ವೇಶ್ಯೆಯ ಆತ್ಮಹತ್ಯೆ

ಕಲಕತ್ತಾದಲ್ಲಿ ಚಿತ್ಪುರ್‌'ದ ವೇಶ್ಯೆಯೊಬ್ಬಳು ಒಬ್ಬ ಪ್ರಿಯನೊಡನೆ ಮಧ್ಯರಾತ್ರಿಯವರೆಗೂ ಸಂತೋಷದಿಂದ ಇದ್ದು ಬೇರೆ ಕೋಣೆಯನ್ನು ಪ್ರವೇಶಿಸಿ ತನ್ನ ಕುತ್ತಿಗೆಗೆ ನೇಣುಹಾಕಿಕೊಂಡಳು ಆಕೆಯ ಕೋಣೆಗೂ, ಆಕೆಯ ಅಕ್ಕನ ಕೋಣೆಗೂ ಟೆಲಿಫೋನಿನ ಜೋಡಣೆ ಇದ್ದಿತು. ಸುಮಾರು 3 ಗಂಟೆ ರಾತ್ರಿಯಲ್ಲಿ ಆಕೆಯ ಅಕ್ಕನು ಆಕೆಯನ್ನು ಟೆಲಿಫೋನು ಮೂಲಕ ಕರೆದಳು. ಉತ್ತರವು ಬಾರದ ಕಾರಣ ತಿರಿಗಿ ಕರೆದಳು. ಆಗಲೂ ಪ್ರತ್ಯುತ್ತರ ಬಾರದ ಕಾರಣ ಪೋಲೀಸರ ಸಹಾಯದಿಂದ ಆಕೆಯ ಕೋಣೆಯ ಬಾಗಿಲುಗಳನ್ನೊಡೆದು ಒಳಗೆ ಹೋಗಿನೋಡಲು ಆಕೆಯ ಶವವು ನೇತಾಡುತ್ತಿದ್ದುದು ಕಂಡುಬಂದಿತು. ಆಕೆಯ ಮೈಮೇಲಿದ್ದ ಬಹು ಬೆಲೆ ಬಾಳುವ ಆಭರಣಗಳು ಇದ್ದ ಹಾಗೆಯೇ ಇದ್ದುವು. ಆಕೆಯು ತಿರಿಗಿ ಒಂದು ಕಾಗದವನ್ನು ಕಟ್ಟಿದ್ದಳು ಅದನ್ನು ಬಿಚ್ಚಿ ನೋಡಲಾಗಿ, ತಾನು ಹುಟ್ಟಿದಲ್ಲಿ ಬಹಿರಂಗವಾದ ವೇಶ್ಯೆಯೆಂದು ಕರೆಯಲ್ಪಡುವುದರಿಂದ ತನಗೆ ತನ್ನ ಶರೀರದ ಮೇಲೆ ಜಿಗುಪ್ಸೆಯುಂಟಾಗಿ ಆತ್ಮಹತ್ಯವನ್ನು ಮಾಡಿಕೊಂಡೆನೆಂದೂ, ಬೇರೆಯಾವ ಹೆಂಗಸರೂ ಇನ್ನು ಮುಂದೆ ವೇಶ್ಯೆಯರಾಗಿ ಅಸಹ್ಯಜೀವನವನ್ನು ನಡಿಸಬಾರದೆಂದೂ ಅದರಲ್ಲಿ ಬರೆದಿದ್ದಳು.

ಬೆಂಕಿಯನ್ನು ಆಕರ್ಷಿಸುವ ಗಿಡಗಳು.

ಇಂಗ್ಲಂಡಿನಲ್ಲಿ ಒಂದು ತರದ ಗಿಡವಿದೆ. ಅದನ್ನು ಅಂಗ್ಲ ಭಾಷೆಯಲ್ಲಿ "ಡಿಕ್ಟ್ಯಾಮ್ನಸ್" ಎಂಬ ಹೆಸರಿಂದ ಕರೆಯುವರು. ಒಂದು ಬೆಂಕಿ ಕಡ್ಡಿಯನ್ನು ಗೀಚಿ ಅದರ ಸಮೀಪಕ್ಕೆ ಕೊಂಡುಹೋದರೆ ಒಡನೆಯೇ ಗಿಡದಲ್ಲಿ ನೇರಳೆ ಬಣ್ಣದ ಉಜ್ವಲವಾದ ಜ್ಯೋತಿಯುಂಟಾಗುವದು. ವಿದ್ಯು

ತ್ಪರಿಣಾಮದಿಂದ ಅದು ಹೀಗಾಗುವದೋ ಗಿಡಕ್ಕೆ ಯಾವ ತರದ ಹಾನಿಯೂ ಉಂಟಾಗುವದಿಲ್ಲ. ಹೂವಿನ ಒಳಗೆ ಹೊರಗೆ ಬಾರದ ಜ್ವಾಲೆಯು ... ಪ್ರತ್ಯಕ್ಷ ಮಾಡಿ ನೋಡಬಹುದು ... ಇವನ್ನೆಲ್ಲ ಕಾಣಬಹುದು. ಆಫ್ಘಾನಿಸ್ತಾನದಲ್ಲಿ ಒಂದು ಪರ್ವತವಿದೆ. ದೂರದಿಂದ ನೋಡು ವಾಗ ಆ ಪರ್ವತಪ್ರಾಂತದಲ್ಲಿ ನಿಬಿಡವಾದ ಗಿಡಗಳು ಉರಿಯುತ್ತಿರುವಂತೆ ಕಾಣುವದು. ಆದರೆ ಆ ಗಿಡಗಳನ್ನು ಸಮೀಪಿಸಿದರೆ ಬೆಂಕಿಯು ಇರುವದಿಲ್ಲ. ಹಿಮಾಲಯದಲ್ಲಿಯೂ ಒಂದು ತರದ ಗಿಡವು ರಾತ್ರಿ ಕತ್ತಲೆಯ ಸಮಯದಲ್ಲಿ ಇಂಥಹ ರೀತಿಯಲ್ಲಿಯೇ ಪ್ರಕಾಶವನ್ನು ಕೊಡುವದಂತೆ

ಬಿಳಿಯವರ ಮನೆಯಲ್ಲಿ ಕರಿಹೆಂಗಸು!

ಯುನೈಟೆಡ್ ಸ್ಟೇಟ್ಸಿನ ಪ್ರೆಸಿಡೆಂಟರ ಪತ್ನಿಯು ಕೆಲವು ದಿನಗಳ ಹಿಂದೆ ವೈಟ್‌ಹೌಸ್ ಎಂಬಲ್ಲಿ ಒಬ್ಬ ನಿಗ್ರೋ ಕಾಂಗ್ರೆಸ್ ಮನುಷ್ಯನ ಪತ್ನಿಯನ್ನು ಫಲಾಹಾರಕ್ಕಾಗಿ ಆಮಂತ್ರಿಸಿದರು. ಇದರಿಂದ ವಾಶಿಂಗಟನ್ನಿನಲ್ಲಿ ಹೆಚ್ಚೇಕೆ ಇಡೀ ಅಮೇರಿಕೆಯಲ್ಲಿಯೇ ಒಂದು ಹೊಸ ತರದ ಸ್ಥಿತಿಯು ಉಂಟಾಗಿರುತ್ತದೆ, ನಿಗ್ರೋ ಹೆಂಗಸಾದ ಮಿಸೆಸ್ ಒಸ್ಕರ್ ಡಿ ಪ್ರೀಸ್ಟರಿಗೆ ಇದರಿಂದ ಬಹು ಆನಂದವಾಗಿ, ಅವಳು ಈ ಆಮಂತ್ರಣವನ್ನು ಸ್ವೀಕರಿಸಿದಳು. ಪ್ರೆಸಿಡೆಂಟರ ಪತ್ನಿಯೂ ಆಕೆಯನ್ನು ತನ್ನ ಸರಿಸಮಾನವಾಗಿ ಎಣಿಸಿ ತನ್ನ ಬಳಿಯಲ್ಲಿ ಕುಳ್ಳಿರಿಸಿಕೊಂಡಳು. ಅಮೇರಿಕನರಿಗೆ ನಿಗ್ರೋ ಜನರನ್ನು ಕಂಡರಾಗದು. ಇದು ಅವರಿಗೊಂದು ದೊಡ್ಡ ಸಾರ್ವಜನಿಕ ಕೊರತೆಯಾಗಿ ತೋರಿಬಂದಿದೆ. ದಕ್ಷಿಣ ರಾಜ್ಯಗಳಲ್ಲಿ ಧಿಕ್ಕಾರವು ಇದರಿಂದ ತೀರ ಉದ್ವಿಗ್ನರಾಗಿರುವರು ಏಕೆಂದರೆ ಅವರು ನಿಗ್ರೋ ಜನರನ್ನು ಬಹಳವಾಗಿ ದ್ವೇಷಿಸುತ್ತಿರುವರು. ಮಿಸೆಸ್ ಡಿ ಪ್ರೀಸ್ಟಳು ನಿಗ್ರೋವಾದರೂ ಚತುರಳೂ, ವಿದ್ಯಾವಂತಳೂ ಆಗಿರುವಳಂತೆ ಅವಳ ಉಡಿಗೆತೊಡಿಗೆಗಳು ಅಮೇರಿಕನರ ಯೋಗ್ಯತೆಗೆ ಕೀಳಾಗಿರಲಿಲ್ಲ. ಅಮೇರಿಕೆಯ ವಾರ್ತಾ ಪತ್ರಿಕೆಗಳು ಈ ವಿಚಾರವಾಗಿ ದೊಡ್ಡ ದೊಡ್ಡ ಲೇಖನಗಳನ್ನು ಬರೆದಿವೆಯಂತೆ. ಅವಳ ಹೆಸರಿಗೆ ಮಿಸೆಸ್. ಎಂಬ ಶಬ್ದವನ್ನು ಕೂಡಿಸುವುದಕ್ಕೂ ಮನಸ್ಸಿಲ್ಲದೆ "ನಿಗ್ರೆಸ್" 'ನಿಗ್ರೋವಿನ ಪತ್ನಿ' ಎಂದು ಮೊದಲಾಗಿ ಅವಳನ್ನು ಸಂಬೋಧಿಸಿರುವರು. ಪ್ರತಿಯೊಂದು ಸಂಸ್ಥಾನದಲ್ಲಿಯೂ ಮಿಸೆಸ್ ಹೂವರರ (ಪ್ರೆಸಿಡೆಂಟನ ಪತ್ನಿಯ) ಈ ತರದ ವರ್ತನೆಯನ್ನು ಖಂಡಿಸಿ ಸಭೆಗಳು ನಡೆದವು. ವೈಟ್‌ಹೌಸಿನಲ್ಲಿ ಈ ತರದ ನಡತೆಯು ಎಂದಿಗೂ ಸಲ್ಲದೆಂದು ಹಲವರು ನಾಚಿಕೆಯಿಂದ ತಲೆ ತಗ್ಗಿಸಿರುವರಂತೆ,

ಸ್ವೀಕಾರ

ಶ್ರೀ॥ ವೀರಸಂಗಪ್ಪನವರ ಅಗ್ರತಾಂಬೂಲಸಂಭಾವನೆಯ ಒಗೆಗೆ ಈ ಕೆಳಗೆ ಕಂಡ ವಿವಾಹ ಮೊದಲಾದ ಶುಭಕಾರ್ಯಗಳಲ್ಲೂ ಇತರ ಸಂದರ್ಭಗಳಲ್ಲೂ ತೆಗೆದು ಕಳುಹಲ್ಪಟ್ಟ ಮೊಬಲಗನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿರುತ್ತೇವೆ—ಸಂ.

ಮೈಸೂರು ದೊಡ್ಡಪೇಟೆ ಗಂಜಾಂಮರದ ವೇ॥ ಸಿದ್ಧಲಿಂಗಸ್ವಾಮಿಯವರ ಧರ್ಮಪತ್ನಿ ಸೌ॥ ಮುದ್ದುವೀರಮ್ಮನವರು ಲಿಂಗೈಕ್ಯರಾದ ಪ್ರಯುಕ್ತ ಇವರ ಹನ್ನೊಂದನೇ ದಿವಸದ ಗಣಾರಾಧನಾಮಹೋತ್ಸವದಲ್ಲಿ ಟಿ ನರಸೀಪುರದ ವೇ॥ ಹೆಚ್ ಪರಶಿವಮೂರ್ತಿಯವರ ಮೂಲಕ ೧ ರೂ

ಪತ್ರವ್ಯವಹಾರ

ಪತ್ರವ್ಯವಹಾರಕರ ಲೇಖಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು —ಸಂಪಾದಕ

ಅನಂಗೀಕೃತಲೇಖ

ಅದವಾನಿಯ ಓರ್ವ ಮಠಾಭಿಮಾನಿಗಳು—ಶ್ರೀಮದ್ಗದಗ ಡಂಬಳ ವಿಚಾರವನೆ ಎಂಬ ನಿಮ್ಮ ಲೇಖವು ಪತ್ರ ಧರ್ಮಾಧಿಕಾರಸ್ಥಾನಕ್ಕೆ ಬರೆಯಲ್ಪಟ್ಟು ನಿರ್ಣಯಿಸಿಕೊಳ್ಳಬೇಕಲ್ಲದೆ ಪತ್ರಿಕೆಯಲ್ಲಿ ಬಹಿರಂಗಪಡಿಸಲ್ಪಡತಕ್ಕದ್ದಲ್ಲ —ಸಂ

ಶ್ರೀ ಪಟ್ಟದ್ದೇವರ ಆಂದೋಲಿಕೋತ್ಸವ

ಗದಗಿನಲ್ಲಿರುವ ಶ್ರೀತೋಂಟದ ಮಹಾಮಠಂತದ ಅಧೀಶ ಸ್ಥಿರಪಟ್ಟಾಧ್ಯಕ್ಷ ಮಹಾಸ್ವಾಮಿಗಳವರ ದಿವ್ಯ ಸನ್ನಿಧಿಯಲ್ಲಿ ಇದೇ ಶ್ರಾವಣ ಶು॥ ೩ ಭಾನುವಾರ ಬೆಳಗ್ಗೆ ವೀರಮಾಹೇಶ್ವರ ವಟುಗಳ ಶಿವದೀಕ್ಷಾ ಸಂಸ್ಕಾರವೂ ಮಧ್ಯಾಹ್ನ ಮಹಾಸ್ವಾಮಿಯವರ ಪಾದಪೂಜೆಯೂ ಅನಂತರ ಗಣಾರಾಧನೆಯೂ ಸಾಯಂಕಾಲದಲ್ಲಿ ಶ್ರೀಗಳವರ ಆಂದೋಲಿಕೋತ್ಸವವೂ ನಡೆದು ಮಹಾಸ್ವಾಮಿಯವರು ಹಿಂದಿರುಗಿ ಮರಳ್ಮದಯೆ ಮಾಡಿಸಿ ಸಭಾಂಗಣದಲ್ಲಿ ಸಿದ್ಧಗೊಳಿಸಲ್ಪಟ್ಟಿದ್ದ ಸಿಂಹಾಸನಾರೋಹಣ ಗೈದನಂತರ ಧರ್ಮಸಭೆಯು ಜರುಗಿತು ಈ ಸಭೆಯಲ್ಲಿ ಶಿವಯೋಗಮಂದಿರದ ಪಂಚಾಕ್ಷರಿ ಗವಾಯಿಗಳ ಕೀರ್ತನವೂ, ಬಸವಲಿಂಗಯ್ಯನವರು, ದಾವಣಗೆರೆ ತಲಗಿಮಠದ ಮಹಲಿಂಗಶಾಸ್ತ್ರಿಗಳೇ ಮೊದಲಾದ ವಿದ್ವಜ್ಜನರ ಧಾರ್ಮಿಕ ಭಾಷಣಗಳೂ ಜರುಗಿದಮೇಲೆ ಅಧ್ಯಕ್ಷ ಮಹಾಸ್ವಾಮಿಯವರು ಮಾಡಿದ ಉಪಸಂಹಾರ ಭಾಷಣವು ನೆರೆದಿದ್ದ ಸಭಿಕರ ಚಿತ್ತಾಕರ್ಷಕವಾಗಿದ್ದಿತು ಈ ಉತ್ಸವ ಸಮಾರಂಭ ಕಾರ್ಯವು ಮ॥ ಗಳಾದ ವೇ॥ ದಾವಣಗೆರೆ ಸಾಲಿಮಠದ ಗ॥ ಪ್ರ ಮ॥ ಯಾಸೆ ತೋಟಿಯ್ಯನವರು ಮ॥ ಗಳಾದ ಗುರುಪ್ಪ ಸಂಗನಬಸಪ್ಪ ಶೆಟ್ಟಿ, ಶಾಂತವೀರಪ್ಪ ಕೋಟಿ, ಮುದ್ದಪ್ಪ ಸಣ್ಣಬಸಪ್ಪ ಕೋಟಿ ಸಿದ ರಾಮಪ್ಪ ಮರಿಯಪ್ಪ ಮಾನ್ವಿ, ಕರಿಯಪ್ಪ ಬಸಪ್ಪ ಮಾನ್ವಿ, ಕೊಟ್ರಪ್ಪ ರಾಟಿಪ್ಪ ಇಂಗಳ್ಳಿ, ರಾ॥ ಸಾ॥ ಶಿವಪ್ಪ ದಂಡಪ್ಪ ಮಾನ್ವಿ, ರಾ॥ ಸಾ ವೀರಪ್ಪ ಅಂದಾನಪ್ಪ ಮಾನ್ವಿ, ದೊಡ್ಡವೀರಪ್ಪ ಶಿ ಭಂಗಾರಶೆಟ್ಟರ, ಈಶ್ವರಪ್ಪ ಹೊಳೆಯಪ್ಪ ಬಾಳ್ತಿ, ಅಡಿವೆಪ್ಪ ಶಿವಪ್ಪ ಹುಬ್ಬಳ ಮತ್ತು ಬಸವಪ್ಪ ವೀರಪ್ಪ ಬಳ್ಳಾರಿ ಈ ಮಹನೀಯರುಗಳ ಶ್ರದ್ಧಾಭಿಮಾನದಿಂದ ಬಹಳ ವಿಜೃಂಭಣೆಯಿಂದ ನಿರ್ವಿಘ್ನವಾಗಿಯೂ ಜರುಗಿತೆಂದು ಬರೆಯಲು ಆನಂದವಾಗುತ್ತದೆ.

ಉತ್ಸವಭಕ್ತ.

ನೈಜಾಮ ನಾಡಿನಲ್ಲಿ ನವೀನೋತ್ಸಾಹ

ನೈಜಾಮ ಪ್ರಾಂತದಲ್ಲಿ ವೀರಶೈವರ ಅದೇಕೆ ಎಲ್ಲಾ ಜನಾಂಗದ ಉನ್ನತಿಗಾಗಿ ಹೆಣಗಾಡುತ್ತಿರುವವರೆಂದರೆ ಗುಲುಬರ್ಗದ ಶ್ರೀಮನ್ನಿರಂಜನ ಶಾಂತವೀರ ಮಹಾಸ್ವಾಮಿಗಳವರು. ಅವರ ಪ್ರಯತ್ನವಿಶೇಷದಿಂದ ನೈಜಾಮನಾಡಿನಲ್ಲಿ ಎನಿತ್ತೋ ಕಾರ್ಯಗಳು ನಡೆದಿರುತ್ತವೆ. ... ಪೂರ್ವಪರಂಪರಾಗತವಾದ ಅಧಃಪತನದಿಂದ ಬಳಲುತ್ತಿರುವ ಕೊಡೆಕಲ್ಲ, ಮದರ್ಗೆ ... ಕಟ್ಟೀರದಂತಹ ಹಳ್ಳಿಗಳಿಗೆ ... ಹಿಂದುಳಿದ ಜನಾಂಗಗಳಿಗೆ ... ಉದ್ದಾರಕನೆಂದು ಕಾರ್ಯ ... ಇಂತಹದೊಂದು ಉದಾಹರಣೆಯನ್ನು ಮಾತ್ರ ಇವರಡಿಯಲ್ಲಿ ಪ್ರಸಿದ್ಧಿಸಲಾಗಿದೆ ಈ ಉದಾಹರಣೆಯಿಂದ ನಮ್ಮ ನೈಜಾಮನಾಡಿನ ಅನುಕರಣಶೀಲವಾದ ಜನಾಂಗವು ವಿಶೇಷ ಪ್ರೋತ್ಸಾಹಗೊಂಡು ಅದರಂತೆಯೇ ಆಚರಿಸುವದಾಗಿ ನಂಬಿದೆ. ಶೇಡಮ್ ತಾಲೂಕು ಕಾವಳಗ್ರಾಮ ನಿವಾಸಿಗಳಾದ, ಬಸವಂತರಾವ್ ಎಂಬ ಸದ್ಗೃಹಸ್ಥರು ಶಿವಾಧೀನರಾಗಲು ಅವರ ಪತ್ನಿ ಶಿವಮ್ಮನವರಲ್ಲಿ ಮತ್ತು ಮೃತರ ಬಂಧು ನರಸರಡ್ಡಿ ಎಂಬವರಲ್ಲಿ ವ್ಯಾಜ್ಯಕ್ಕೆ ಮೊದಲಾಯಿತು ಇದು ವಿಕೋಪಕ್ಕೆ ಹೋಗಿ ಅನರ್ಥಕಾರಕವಾಗಬಾರದೆಂದು ಶ್ರೀಮನ್ನಿರಂಜನ ಶಾಂತವೀರಸ್ವಾಮಿಗಳ ಅನುಜ್ಞೆಯಂತೆ ಮಳ್ಳೀ ಸಯ್ಯದ ಮಾರಾ ಪಾಟೀಲ ಶ್ರೀಯುತ ಮಲ್ಲರಡ್ಡಿ ಪೂಡಿರಡ್ಡಿ, ಶ್ರೀಯುತ ಬಿದನೂರು ಮಾಲೀಪಾಟೀಲ ಮತ್ತು ಶ್ರೀಯುತ ಗುರುಬಸವಯ್ಯನವರು ಶಾಲಿವಾನಸ್ತದರೇ ಮೊದಲಾದವರು ಪಂಚರಾಗಿ ಆ ವ್ಯಾಜ್ಯವನ್ನು ಅಲ್ಲಿಯೇ ತೀರ್ಮಾನಮಾಡಿದರು ಆ ಕಾಲಕ್ಕೆ ಶಿವಾಧೀನರಾದ ಬಸವಂತರಾಯರ ಪತ್ನಿ ಶಿವಮ್ಮನವರ ತಮ್ಮ ಪತಿಯ ಸ್ಮರಣಾರ್ಥವಾಗಿ 2000 ರೂ ಗಳನ್ನು ಮತ್ತು ಶಿವಾಧೀನರ ಬಂಧುಗಳಾದ ನರಸರಡ್ಡಿಯವರು ತಮ್ಮ ಬಂಧುಗಳ ಸ್ಮರಣಾರ್ಥವಾಗಿ ೫೦೦ ರೂಪಾಯಿಗಳನ್ನು ಶಿವಾಧೀನರ ಹೆಸರಿನಿಂದ ಸ್ಥಾಪಿಸಿ ಆ ಶಾಲೆಯ ಅಧ್ಯಕ್ಷರ ಶ್ರೀಮನ್ನಿರಂಜನ ಶಾಂತವೀರಸ್ವಾಮಿಗಳೇ ಇರಬೇಕೆಂದು ನಿಶ್ಚಯ ಮಾಡಲ್ಪಟ್ಟಿದೆ ನೈಜಾಮನ ವೀರಶೈವರೇ ನೀವುಗಳಾದರೂ ಇಂತಹ ಅನುಕರಣದಿಂದ ಜನಾಂಗದ ಕಲ್ಯಾಣಕ್ಕೆ ಭಾಗಿಗಳಾಗುವಿರೆಂದು ನಂಬುವ

ತಮ್ಮ ಮಳ್ಳೀ ಸಯ್ಯದ ಮಾರಾ ಪಾಟೀಲ, ಪಾಟೀಲ

ಶ್ರೀ ಹಾಲುಮತಸ್ಥರ (ಕುರುಬರ) ಲಿಂಗಧಾರಣೆಯು

ಈ ಶ್ರಾವಣಮಾಸದಿಂದ ಧರ್ಮಕಾರ್ಯಗಳು ಒಳ್ಳೇ ಉತ್ಸಾಹದಿಂದ ಜರಗುತ್ತಿರುವವು ಅದರಂತೆ ನಮ್ಮ ಹಾಲುಮತದ ಬಂಧುಗಳಿಗೆ ಲಿಂಗಧಾರಣೆಯ ಶುಭಕಾರ್ಯವು ಬಲು ಸಂಭ್ರಮದಿಂದ ನಡೆಯುತ್ತಿರುವದನ್ನು ನೋಡಿ ನನಗೆ ಒಳ್ಳೇ ಸಂತೋಷವೆನಿಸುತ್ತದೆ ಈಗಾಗಲೆ ನಮ್ಮ ಮುಂಬಯಿ ಕರ್ನಾಟಕ, ನೈಜಾಮ ಹಾಗು ಬಳ್ಳಾರಿ ಪ್ರಾಂತಗಳ ಬಹು ಭಾಗಗಳ ಹಾಲುಮತ ಬಂಧುಗಳು ಲಿಂಗಧಾರಿಗಳಾಗಿರುವರು. ನಾನು ಗದಗ ಜೀವದಯಾಜ್ಞಾನಪ್ರಚಾರಕ ಸಂಘದ ವತಿಯಿಂದ ಅಹಿಂಸಾಧರ್ಮವನ್ನು ಬೋಧಿಸಲಿಕ್ಕೆ ಅಲ್ಲಲ್ಲಿ ಹೋದಾಗ ಈ ಶ್ರಾವಣಮಾಸದಲ್ಲಿ ಹಾಲುಮತದವರು ಬಹು ಭರದಿಂದ ಲಿಂಗಧಾರಣವಾಗುತ್ತಿರುವುದನ್ನು ನೋಡಿಯೂ ಕೇಳಿಯೂ ನಾನು ಧನ್ಯನಾದೆನು ಅನಾದಿ ಕಾಲದಿಂದಲೂ ಶ್ರೀ ಹಾಲುಮತ ಬಂಧುಗಳಿಗೂ ಲಿಂಗವಿದ್ದು, ಮಧ್ಯಕಾಲದಲ್ಲಿ ಅವರು ವಿದ್ಯಾವಿಹೀನರಾಗಿ ಆಚಾರವಿಚಾರಗಳಲ್ಲಿ ತೀರ ಹೀನಸ್ಥಿತಿಗೆ ಹೋದುದರಿಂದ ಅವರಿಗೆ ಲಿಂಗವು ಮರೆಯಾಗಿದ್ದಿತು. ಆದರೆ ಈಗ ಆ ಸಮಾಜದಲ್ಲಿ ವಿದ್ಯಾವಂತರೂ ಧಾರ್ಮಿಕತತ್ವವೇತ್ತರೂ ಹೆಚ್ಚಾಗುತ್ತ ಬಂದಬಂದಂತೆ ಅವರ ಸಮಾಜದ ಪೂರ್ವದ ಇತಿಹಾಸವು ಶೋಧವಾಗಿ, ತಾವು ಇಂತಹ ಶ್ರೇಷ್ಠವರ್ಣದವರೆಂಬ ಅರಿವು ಆ ನಮ್ಮ ಬಂಧುಗಳಿಗೆ ಇಷ್ಟು ದಿವಸಗಳಮೇಲಾದರೂ ಆದುದಕ್ಕೆ ನನಗೆ ಬಹು ಸಂತೋಷವೆನಿಸುತ್ತದೆ.

ಹಾಲುಮತಸ್ಥರು ಮೊದಲಿಂದಲೂ ವೀರಶೈವರಿದ್ದರೆಂದೂ, ಕೇವಲ ಸಾತ್ವಿಕಾಹಾರಿಗಳಾಗಿ ಅಹಿಂಸಾಧರ್ಮನಿರತರಾಗಿದ್ದರೆಂದೂ ತಿಳಿಯಲಿಕ್ಕೆ ಅನೇಕ ಆಧಾರಗಳಿರುವವು ಹಾಲುಮತದ ಮೂಲಪುರುಷರಾದ ಬೀರಪ್ಪನವರೆಂಬ ಮಹಾಪುರುಷರಿಗೆ ಶ್ರೀ ಜಗದ್ಗುರು ರೇಣುಕಾಚಾರ್ಯರು ವೀರಶೈವದೀಕ್ಷೆಯನ್ನಿತ್ತು ಲಿಂಗಧಾರಣ ಮಾಡಿದರೆಂದು ತಿಳಿದುಬರುತ್ತಿದೆ. ಮತ್ತು ಈಗಲೂ ಸಹ ಹಾಲುಮತದ ಗುರುವರ್ಗದವರು ಅಷ್ಟಾವರಣಯುಕ್ತರಾಗಿರುವುದರಿಂದಲೂ ಅವರ ಗುರುಗಳು ವೀರಶೈವ ಧರ್ಮದ ಶ್ರೀ ಪಟ್ಟದಚರಮೂರ್ತಿ ಸ್ವಾಮಿಗಳವರಿಂದಲೂ ಹಾಲುಮತ ಬಂಧುಗಳು ಅಷ್ಟಾವರಣಯುಕ್ತರಾದ ವೀರಶೈವರೇ ಹೊರತು ಬೇರೆಯವರಲ್ಲವೆಂದು ಸ್ಪಷ್ಟವಾಗಿ ಗೊತ್ತಾಗುತ್ತದೆ ಆದ್ದರಿಂದ ಈಗ ಹಾಲುಮತಸ್ಥರು ಲಿಂಗಧಾರಿಗಳಾಗುತ್ತಿರುವದು ಹೊಸದಾಗಿ ಅಲ್ಲ. ಮಧ್ಯಕಾಲದಲ್ಲಿ ಲಿಂಗವನ್ನಗಲಿದವರು ಈಗ ಪುನಃ ಲಿಂಗವನ್ನು ಧರಿಸುತ್ತಿರುವರು.

ನೈಜಾಮ ಇಲಾಖೆಯೊಳಗೆ ಕೊಪ್ಪಳ ಜಿಲ್ಲೆಯಲ್ಲಿ "ದ್ಯಾಂಪುರ" ವೆಂಬ ಗ್ರಾಮವಿದ್ದು, ಅಲ್ಲಿ ಮೊನ್ನೆ ಮೊನ್ನೆ ಹಾಲುಮತದ ಎರಡುನೂರು ಜನರಿಗೆ ಅವರ ಇಚ್ಛಾನುಸಾರ ಶಾಸ್ತ್ರೋಕ್ತ ಪ್ರಕಾರ ಲಿಂಗಧಾರಣವಾಗಿರುವುದು. ಈ ಧರ್ಮಕಾರ್ಯದಲ್ಲಿ ಕೊಪ್ಪಳ ಗವಿಮಠದ ಶ್ರೀಮನ್ನಿರಂಜನ ಜಗದ್ಗುರುಗಳವರೂ, ಅರವಂಡಿ ಮತ್ತು ಹಿರೇಸಿಂದೋಗಿ ಪಟ್ಟದ ಸ್ವಾಮಿಗಳವರೂ, ಹಾಲುಮತದ ಗುರುಗಳಾದ ಶ್ರೀ ಗುರುವಿನ ಮಹಾದೇವಯ್ಯನವರೂ ಆ ಸುತ್ತಲಿನ ಅನೇಕ ಜನ ಮುಖಂಡರೂ ಬದ್ಧಕಂಕಣರಾಗಿದ್ದರು ಇದರಂತೆ ಎಲ್ಲ ವೀರಶೈವ ಧರ್ಮಾಧಿಕಾರಿಗಳೂ, ಹಾಲುಮತದ ಗುರುವರ್ಗದವರೂ ಸಮಾಜದ ಪ್ರಮುಖರೂ ಈ ಧಾರ್ಮಿಕ ಕಾರ್ಯದಲ್ಲಿ ಕೈಹಾಕಿ ಬಲವಾದ ಚಳವಳಿಯನ್ನೆಬ್ಬಿಸಿ, ಹಾಲುಮತದ ಪುನರುದ್ಧಾರಕ್ಕಾಗಿ, ಸಮಾಜವೆಲ್ಲವೂ ಅಹಿಂಸಾಧರ್ಮನಿರತವಾಗಿ ಲಿಂಗಮಯವಾಗುವಂತೆ ಮಾಡುವದಲ್ಲದೆ, ತಾವು ಮಾಡಿದ ಕಾರ್ಯವನ್ನು "ಮೈಸೂರು ಸ್ಟಾರ್" "ಬಸವರಾಜ" "ಲೋಕಮತ" "ನವಕರ್ನಾಟಕ" ಮತ್ತು "ಕರ್ನಾಟಕ ಟಾಯಿಮ್ಸ್" ಮೊದಲಾದ ಪತ್ರಿಕೆಗಳಲ್ಲಿ ಪ್ರತಿವಾರವೂ ಪ್ರಕಟಿಸುತ್ತ ಬರಬೇಕಾಗಿ ಕೇಳುವೆನು ಗುರುಪಾದಪ್ಪ ಕಲ್ಯಾಣಶೆಟ್ಟಿ,

ಅಹಿಂಸಾ ಪ್ರಚಾರಕ,

ಶ್ರೀ ಜೀವದಯಾಜ್ಞಾನಪ್ರಚಾರಕ ಸಂಸ್ಥಾ ಗದಗ.

ಪುರಾಣಪ್ರವಚನವು.

ಧಾರವಾಡ ಜಿಲ್ಲಾ ನರಗುಂದ ಪೇಟಾಪೈಕಿ ಶಿರೋಳಗ್ರಾಮದಲ್ಲಿರುವ ಶ್ರೀಮನ್ನಿರಂಜನ ವಿರಕ್ತ ಮಹಾಮಠದಲ್ಲಿ ಇದೇ ಶ್ರಾವಣ ಶು॥ ೪ ಗುರುವಾರದಿಂದ ಅಷ್ಟಾದಶ ಪುರಾಣಗಳಲ್ಲೊಂದಾದ ಶ್ರೀ ಪದ್ಮಪುರಾಣಾಂತರ್ಗತ ಶ್ರೀ ಶಿವಗೀತಾಪುರಾಣ ಪ್ರವಚನವು ಪ್ರತಿನಿತ್ಯದಲ್ಲಿಯೂ ನಡೆಯಿಸಲ್ಪಟ್ಟಿರುತ್ತದೆ ಸದರಿ ಪುರಾಣವನ್ನು ಕಲ್ಲಾಪುರದ ಗುರುಸಿದ್ದಶರ್ಮ ಇವರು ಸಂಗೀತ ಸಾಹಿತ್ಯಗಳೊಂದಿಗೆ ಒಳ್ಳೇ ಸರಸವಾಗಿ ಓದುತ್ತಿರುವರಲ್ಲದೆ ಸದರಿ ಶ್ರೀಮನ್ನಿರಂಜನ ವಿರಕ್ತ ಮಹಾಮಠದ ಪೂಜ್ಯಪಾದ ಶ್ರೀ ಶಿವಾನುಭವ ಚರಮೂರ್ತಿ ಮಹಾಸ್ವಾಮಿಗಳವರು ತಮ್ಮ ಅಧಿಕಾರವಾಣಿಯಿಂದ ಪುರಾಣದ ಅರ್ಥವನ್ನು ನಿಜಗುಣಾರಾಧ್ಯರೇ ಮೊದಲಾದ ಕನ್ನಡ ಕವಿಗಳ ಕೈವಲ್ಯಪದ್ಧತಿ ಮೊದಲಾದವುಗಳಲ್ಲಿ ಉದಾಹರಿಸಲ್ಪಟ್ಟ ಕನ್ನಡ ಪದ್ಯಗಳ ಹಾಗೂ ಸಮಯೋಚಿತವಾದ ಸಂಸ್ಕೃತ ಶ್ಲೋಕಗಳೊಂದಿಗೆ ಪಂಡಿತ ಪಾಮರರಿಗೆ ಕೂಡ ಅತ್ಯಂತ ಸುಗಮವಾಗಿ ತಿಳಿಯುವಹಾಗೆ ಸುಶ್ರಾವ್ಯವಾದ ಸಂಗೀತದೊಂದಿಗೆ ಅಪ್ಪಣೆ ಕೊಡಿಸುತ್ತಿರುವರು. ಅಲ್ಲದೆ ... ಯಂತೆ

[illegible] ವಿದ್ಯಾರ್ಥಿಗಳ ಭೋಜನ [illegible] ಪ್ರಾರಂಭವಾಗಿ ೮ ಘಂಟೆಗೆ [illegible] ಈ ಉತ್ಸವ [illegible] ಭಕ್ತಿಭಾವ [illegible] ಶ್ರೀ ಭಾಗವಹಿಸಿ [illegible] ಸ್ವಾಮಿಗಳವರೂ ತ್ರ ಶಾಲಾ ಪ್ರಧಾನಸ್ವಾಮಿ ನಗರದಲ್ಲಿ [illegible] ಸದರಿ ಕಾರ್ಯವನ್ನು [illegible] ಭಕ್ತಿ [illegible] ನೆರವೇರಿಸುತ್ತಿರುವರು. ಇದೇ [illegible]

ಓರ್ವ ವೀರಶೈವ [illegible], ಶಿರಹಟ್ಟಿ.

ಲಿಂಗಾಂಗಿ ಧರ್ಮದ ಶುಭಸೂಚನಾ

[illegible] ಚಿಟ್ಗುಪ್ಪ [illegible] ಸುಮಾರು 11 ರ ಹಿಂದೆ [illegible] ಲಿಂಗಾಂಗಿ ಧರ್ಮದ ಉನ್ನತಿಯ ವಿಷಯವಾದ ಚರ್ಚೆ [illegible] ಶ್ರೀಗಳವರು [illegible] ಬಿಹಾರಿದ ಪಟ್ಟಣಗಳನ್ನು [illegible] ಲಿಂಗಾಂಗಿ ಧರ್ಮದ [illegible] ಶ್ರೀ ಒಡೆಯರವರು ಈ ಕಾರ್ಯವನ್ನು [illegible] ಲಿಂಗಾಂಗಿ ಧರ್ಮದ ಉನ್ನತಿಯ ವಿಷಯವಾದ ಕಾರ್ಯದಲ್ಲಿ [illegible] ಲಿಂಗಾಂಗಿ ಧರ್ಮದ ಬೋಧೆಯು. ಎರಡನೇದು [illegible] ಲಿಂಗದಲ್ಲಿ ಭಕ್ತಿ [illegible] ಈ ರೀತಿಯಾದ ಕಾರ್ಯಕ್ರಮವನ್ನು [illegible] ಶ್ರೀಗಳು ಮಾಡಿರುವ ಮಹತ್ವದ ಸಂಗತಿಯನ್ನು [illegible] ಇಂಥಾ ಮಹತ್ವ ಕಾರ್ಯವನ್ನು ಕೈಕೊಂಡಿ ಶ್ರೀ ಜಗದ್ಗುರು ಸ್ವಾಮಿಗಳವರಿಗೆ [illegible] ಸಾರ್ವಭೌಮ ಧರ್ಮವನ್ನಾಗಿ [illegible]

ಮುತ್ತಾಂ [illegible]

ಶೋಚನೀಯ ಮೃತ್ಯು

[illegible] ಇವರು [illegible] ಹೆಗ್ಗೆರೆ [illegible] ವಿದ್ಯಾಭ್ಯಾಸವನ್ನು [illegible] ನೆಪೋಲಿಯನ್ ಬೋನಾಪಾರ್ಟ್‌ನ [illegible] ಇವರು ವೈಸೂರು [illegible] ನೇ ತಾರೀಖಿನ ದಿವಸ [illegible] ವಿದ್ಯಾಭ್ಯಾಸದಬಗ್ಗೆ [illegible] ದಯಾಳುತ್ವ [illegible]

T. R. Nesvi, B.Ag.,
General Secretary
V. V. Sangh [redacted]

ವೀರಶೈವ ವಿದ್ಯಾವರ್ಧಕ ಸಂಘ, ಧಾರವಾಡ

ಈ ಸಂಘದ [illegible] ತಾ|| 11 ನೆ [illegible] ಶ್ರೀ [illegible] ಅಧ್ಯಕ್ಷತೆಯಲ್ಲಿ [illegible] ಹುಬ್ಬಳ್ಳಿ [illegible] ವೀರಶೈವ [illegible]

ಅಧ್ಯಕ್ಷರು: [illegible] ರಾಮಪ್ಪನವರು [illegible]

ಉಪಾಧ್ಯಕ್ಷರು: [illegible]

[illegible] ಪಾಟೀಲ [illegible]

[illegible] ಹಂಸಭಾವಿ

ಕಾರ್ಯಕಾರಿ ಮಂಡಳ

ನ | ಗಳಾದ (1) [illegible] ಹಂಸಭಾವಿ (2) [illegible] (3) [illegible] ಗೌಡರು ಪಾಟೀಲ ಹಂಸಭಾವಿ (4) [illegible] (5) [illegible] (6) [illegible] (7) [illegible] (8) [illegible] (9) [illegible] (10) [illegible] (11) [illegible] (12) [illegible] (13) [illegible] (14) [illegible] (15) ಶ್ರೀ [illegible]

[illegible] ಸೆಕ್ರೆಟರಿ,

[illegible] ಸಂಘ, ಹಂಸಭಾವಿ

ಮದ್ರಾಸು ವೀರಶೈವ ವಿದ್ಯಾರ್ಥಿಗಳ ಅಭಿನಂದನ

ಮದರಾಸ ವಿಶ್ವವಿದ್ಯಾನಿಲಯದ [illegible] ಎಂ. ಎ., [illegible] ಬಿ. ಎಲ್. [illegible] ಎಂ. ವಿ. [illegible] ಬಿ. ಎ. [illegible] 16 [illegible] ವೀರಶೈವ ವಿದ್ಯಾರ್ಥಿಗಳು [illegible] ಮದ್ರಾಸಿನ [illegible] ವಿದ್ಯಾರ್ಥಿಗಳು [illegible] ವೀರಶೈವ [illegible] ಮದ್ರಾಸಿನ [illegible] ನಾಗಲಿಂಗಪ್ಪನವರು [illegible]

ವದಿ, ನಾಗಲಿಂಗಪ್ಪನವರು ಮದ್ರಾಸು [redacted]

[illegible] ಶೀಘ್ರದಲ್ಲಿ [illegible] ಗುರು [illegible] ವಿಜ್ಞಾನ [illegible]

ಬಹಳ ಕಡಿಮೆಯಾಗಿ [illegible] ಮಾಡುವ ಅಗತ್ಯವನ್ನೂ ಕುರಿತು ಬಹಳ ಸರಳವಾಗಿ ಭಾಷಣ ಮಾಡಿದ ಮೇಲೆ ಧರಿತಬಂಧದ ಸಾರ್ವಭೌಮರವರ ಮತ್ತು [illegible] ಶ್ರೀಮನ್ಮಹಾರಾಜರವರ ಶ್ರೇಯಸ್ಸು [illegible] ಸಭೆಯು ವಿಸರ್ಜಿಸಲ್ಪಟ್ಟಿತು.

ಬಿ. ಬಸವಲಿಂಗಯ್ಯ, ಬಿ. ಎ.

ಶ್ರೀಮದಪಣೇ ಮಹಾಶಿವಯೋಗಿಗಳ ಶಿವಾಮೂರ್ತಿಯುತ್ಸವ

ಶ್ರೀಮನ್ನಿರಂಜನ ಜಗದ್ಗುರು ಮುರುಘರಾಜೇಂದ್ರ ಶ್ರೀ [illegible] ಧಾರವಾಡ ಈ ಸಂಸ್ಥೆಯ ವಿದ್ಯಾರ್ಥಿನಿಲಯದ [illegible] ಶ್ರೀ ಶಿವಯೋಗಿಗಳ ಉತ್ಸವವನ್ನು ಮಾಡಬೇಕೆಂದು ಧಾರವಾಡದ ಭಕ್ತಾದಿಗಳು [illegible] 18-8-29 [illegible] ಶ್ರೀ ಶಿವಯೋಗಿಗಳ [illegible] ಧಾರವಾಡ [illegible] ಶ್ರೀ ಶಿವಯೋಗಿಗಳ [illegible] ಶ್ರೀಮನ್ನಿರಂಜನ [illegible] ಶ್ರೀಯುತ ಪಿ. ಎನ್. [illegible] ಶ್ರೀಯುತ [illegible] ಶಿವಲಿಂಗ [illegible] ಶ್ರೀಯುತ [illegible] ಶ್ರೀಮನ್ನಿರಂಜನ [illegible]

ಓರ್ವ ಪ್ರತ್ಯಕ್ಷದರ್ಶಿ ಧಾರವಾಡ.

ವಾರ್ಷಿಕೋತ್ಸವಗಳು.

ಪ್ರತಿ ವರ್ಷದ ಪದ್ಧತಿಯಂತೆ [illegible] 9 ನೇ [illegible] ಶ್ರೀ ಲಿಂಗರಾಜ [illegible] ಶ್ರೀ [illegible] 6 ಕ್ಕೆ ಶ್ರೀಗಳವರ [illegible] ಕಾಣಿಕೆ [redacted]

[illegible]

ಶ್ರೀ ವರುಣ ವೀರಭದ್ರ ... [illegible]

ಜ. ಘ. ಸಂಕಣ್ಣನವರ,

ಸೆಕ್ರೆಟರಿ ಶ್ರೀ ಲಿಂಗರಾಜ ಲಾಯಬ್ರರಿ, ಬ್ಯಾಡಿಗಿ

ನೂತನ ಅನುಷ್ಠಾನ ಸಮಾಪ್ತಿಯ ಮಹೋತ್ಸವಾನಂದ

[illegible]

ಉತ್ತರ ಪ್ರೇಕ್ಷಕ

ಅನುಭವಿಕ ಶರೀರ ಸಂಪತ್ತಿಯೂ ಪ್ರಪಂಚದ ಸುಖವೂ ಬೇಕು (ಪೂರ್ಣಲಾಭ)

ಕಮಿಶನ್ ಭರಪೂರ

ಪ್ರೇಮವಿಲಾಸ

[ಅರ್ಥಾತ್] ವಜ್ರಶರೀರ.

ಇದಕ್ಕೆ ಪಥ್ಯವಿಲ್ಲ ಕೇವಲ ಪುಂಡಿನಿಮಿತ್ತ

ಇದನ್ನು ಸೇವಿಸಿದರೆ ವೀರ್ಯ ನಷ್ಟವಾದದ್ದು ಧಾತುಸ್ರಾವ ಕೆಟ್ಟದ್ದು ಕೆಡಿಕೆ (ಗರ್ಮಿ) ಪರ್ಮ ರಸಾಯನ ದೋಷ ಮುಂತಾದ ಅನೇಕ ತರದ ರೋಗಗಳು ನಾಶವಾಗಿ ದೇಹವು ಪುಷ್ಟಿಯಾಗಿ ಬಹಳ ಶಕ್ತಿ ಬೆಳೆದು ದೇಹವು ವಜ್ರದಂತೆ ಘಟ್ಟಿಯಾಗಿ ವೀರ್ಯವು ಘನವಾಗಿ ಬೆಳೆದು ಪುರುಷತ್ವವುಳ್ಳವನಾಗಿ ಕಾಮಶಕ್ತಿಯು ಪ್ರಜ್ವಲಿಸಿ ಅಮೋಘ ಸ್ತ್ರೀ ಸುಖಭೋಗಕ್ಕೆ ಇದೊಂದು ಅವಶ್ಯಕವೇ ಸರಿ

ಬಾಟ್ಲಿ 1ಕ್ಕೆ [illegible] ಕಮಿಶನ್

ಡಾ ಆರ್. ಎಲ್. ಹಿರೇಮಠ, ಆರೋಗ್ಯಮಂದಿರ

ಆಯುರ್ವೇದೌಷಧಿ (ಕಾರ್ಖಾನೆ) [illegible]

(ಮು ಟಾ) ಕಮತನೂರ [illegible]

ವೀರಶೈವಮತಗ್ರಂಥಗಳು

ಶಿವಾಧಿಕ್ಯಶಿಖಾಮಣಿಃ

ಪ್ರತಿ ೧ ಕ್ಕೆ ಬೆಲೆ ೧-೦-೦

ಇದು ಚೋಳದೇಶದಲ್ಲಿ ಶ್ರೀಮದ್ವೀರಶೈವಾಚಾರ್ಯರಿಗೂ ವೈಷ್ಣವಮತಸ್ಥರಾದ ವಿಜಯೀಂದ್ರತೀರ್ಥರಿಗೂ ನಡೆದ ಪ್ರಶ್ನೋತ್ತರರೂಪವಾಗಿದೆ ಇದರಲ್ಲಿ ಶಿವೋತ್ಕರ್ಷ, ಲಿಂಗಧಾರಣ, ಅವತಾರಗಳು, ಊರ್ಧ್ವಪುಂಡ್ರವಿವರಣ, ವಿಷ್ಣ್ವವತಾರಸಂಹಾರ, ಶಂಖ ಚಕ್ರ ಮುದ್ರಾಧಾರಣ ನಿಷೇಧ ಪ್ರದೋಷಕಾಲದಲ್ಲಿ ವಿಷ್ಣುದರ್ಶನಾಧಿಕ್ಯ ಮೊದಲಾದ [illegible] ಗಳಾದ ನಾನಾ ವಿಷಯಗಳು ಸಪ್ರಮಾಣವಾಗಿ ಬೋಧಿಸಲ್ಪಟ್ಟಿವೆ ಈ ಗ್ರಂಥಕ್ಕೆ ಸರ್ವರಿಗೂ ತಿಳಿಯುವಂತೆ ಸುಲಭಶೈಲಿಯಿಂದ ಕನ್ನಡ ಟೀಕೆಯನ್ನು ಬರೆದಿದ್ದೇವೆ ಇದನ್ನು ವೀರಶೈವರು ಅವಶ್ಯವಾಗಿ ನೋಡಬೇಕಾಗಿದೆ

ನ್ಯಾಯಶತಕಂ—ಇದರ ಪ್ರತಿಯೊಂದು ಶ್ಲೋಕದಲ್ಲೂ ಕಾಕತಾಳೀಯ, [illegible] ಮೊದಲಾದ ಒಂದೊಂದು ನ್ಯಾಯವನ್ನು [illegible] ಬೆಲೆ ೦-೩-೦

ವಿ. ಪಿ. ಖರ್ಚು ಪ್ರತ್ಯೇಕ.

ಶ್ರೀ ಸೋಮಶೇಖರಸ್ವಾಮಿ ಗಳು,

ನಮಶ್ಶಿವಾಯಮಠ,

[12—12] [illegible] ಮೈಸೂರು.

ಪ್ರೆರೇಟರ್

[illegible]

Siddaradhya

Tirukappanavara mut

Davangere

[12 9]



20

ಡಾಕ್ಟರ್ ಜೀ. ಬೀ. ಯವರ

ಸುಗಂಧ ನಶ್ಯದ ಪುಡಿ

[illegible]

[illegible]

ವಿಳಾಸ —ಗುರುಬಸವ ಅಂಡ್ ಕಂಪನಿಲಿಮಿಟೆಡ್,

[50 1-1] ಪೋ. ಬಾ. ೫೧೦, ಮದರಾಸು

೧೯೨೯ನೆಯ ಇಸವಿ ಆಗಸ್ಟ್ ತಾ॥ ೩೧ರಿಂದ ೧೯೨೯ನೆಯ ಇಸವಿ ಸೆಪ್ಟಂಬರ್ ತಾ॥ ೬ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೧ ನೆಯ ಶುಕ್ಲನಾಮಸಂವತ್ಸರದ ಶ್ರಾವಣ ಬಹುಳ ದ್ವಾದಶಿಯಿಂದ ಭಾದ್ರಪದ ಶುದ್ಧ ತದಿಗೆ ವರೆಗಿನ ಪಂಚಾಂಗ

ತಾ॥	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸಿಂಹ ಮಾಸ
31	1 ಶನಿ	ದ್ವಾದ	43 15	ಪುನ	21 20	16
1	ಭಾನು	ತ್ರಯೋ	37 26	ಪುಷ್ಯ	16 0	16
2	2 ಸೋಮ	ಚತು	32 10	ಆಶ್ಲೇ	13 30	17
3	3 ಮಂಗಳ	ಅಮಾ	27 15	ಮಘ	11-10	18
4	ಬುಧ	ಪಾಡ್ಯ	23-25	ಪುಬ್ಬ	8-12	19
5	4 ಗುರು	ಬಿದಿ	20-18	ಉತ್ತ	6-40	20
6	5 ಶುಕ್ರ	ತದಿ	18 12	ಹಸ್ತ	6-16	21

(1) ಪ್ರದೋಷಶನಿವಾರ. (2) ಮಳೆನಕ್ಷತ್ರ ಪುಬ್ಬ ೩ ನೆಯ ಪಾದ (3) ಮಂಗಳಗೌರೀವ್ರತ. (4) ಸಾಮವೇದೋಪಾಕರ್ಮ. (5) ಮಳೆನಕ್ಷತ್ರ ಪುಬ್ಬ ೪ ನೆಯ ಪಾದ, ಸ್ವರ್ಣಗೌರೀವ್ರತ.

ಮೈಸೂರು, ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಮೈಸೂರ್ ಸ್ಟಾರ್

ಪ್ರತಿ ಶನಿವಾರ ಪ್ರಕಟಿಸಲ್ಪಡುವದು.

[illegible]

[ಸ್ಥಳದವರಿಗೆ ವಾರ್ಷಿಕ ಚಂದಾ ೧-೧೦-೦] [ಪರಸ್ಥಳದವರಿಗೆ ೨-೬-೦] [ಪ್ರತಿಗೆ ೦-೨-೦]

ಸಂಪುಟ ೪೨] ಮೈಸೂರು ಸ್ಟಾರ್ ಸನ್ ೧೯೨೯ನೆಯ ಇಸವಿ ಸೆಪ್ಟೆಂಬರ್ ತಾರೀಖು ೧೪ನೆಯ ಶನಿವಾರ [ಸಂಚಿಕೆ ೩೭

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್.

[60—34] ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.



[illegible]

"ಶಿದ್ದಪ್ಪಾಸ್ ಮಾಡಲ್ ಡಿಲಕ್ಸ್"

ಹಾರ್ಮೋನಿಯಂ ಎಂಬುದೇ

ಇದರ ಕ್ರಯ 1 ಕ್ಕೆ 60—0—0 ಮಾತ್ರ

ದೊಡ್ಡ ಸೈಜದಂತೆ ... 1 ಕ್ಕೆ 62—8—0

ಅಪೇಕ್ಷಿಸುವವರಿಗೆ ಸಚಿತ್ರಕ್ಯಾಟಲಾಗನ್ನು ಸಂತೋಷದಿಂದ ಕಳುಹಿಸುತ್ತೇವೆ

ವಿಳಾಸ— ಎಂ.ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು

೧೦೦೦ ರೂಪಾಯಿ ಇನಾಮು

ಮಿರಜಿಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್. ಕಾಪಸೆ, ಇವರ

ಅಲ್ಪವಯಸ್ಕರಿಗೆ ಕ್ಷೀಣರಾಗ ಬೇಡಿ | ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ (ಸ್ವರರಿಜಿ) ವಜ್ರಾಂಗ ಸುಂದರಪಾಕ. | ಧೀಶರೀರದ ಕ್ಷೀಣತೆ ಕಾಯ್ದುಕೊಳ್ಳಿರಿ

ಈ ಪಾಕಸೇವನೆಯಿಂದ ಎಲ್ಲ ಧಾತುಜನ್ಯ ವಿಕಾರಗಳು, ಧಾತುಕೋಶದಲ್ಲಿಯ ಉಷ್ಣತೆ ಮುಷ್ಟಿ ಮೈಥುನದಿಂದುಂಟಾದ ಇಂದ್ರಿಯ ಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥೆ ಮೂತ್ರದೊಂದಿಗೆ ಧಾತುಹೋಗೋಣ, [illegible]

ಕೇವಲ ಸ್ವಪ್ನಾವಸ್ಥೆ [illegible]

ಪ್ರಮೇಹ (ಪರಮಿ) [illegible]

ಪಿನಸು [illegible]

[50—8] ಪತ್ತೆ:—ಮಾಲಕ ವೈದ್ಯ ವ್ಹಿ. ಎಸ್ ಕಾಪಸೆ ಮು. ಪೋ. ಮಿರಜ.

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)		ಕ್ರಯ.	(ವಿ.ಪಿ. ಸೇರಿ)
ಪ್ರಹಸನಗಳು	೦—೪—೦	೦—೬—೦	ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಗುರುಶಂಕರಚರಿತ್ರೆ	೦—೧—೦	೦—೩—೦	ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೧—೦
ಬಸವೇಶ್ವರವಚನ	೦—೮—೦	೦—೧೧—೦	ಷಟ್ಸ್ಥಲ	೦—೪—೦	೦—೬—೦
ಸಟೀಕ ಶಿವಾನುಭವ ಮಂಜರಿ	೦—೫—೦	೦—೭—೦	ಚಾರುಶೀಲಚರಿತ್ರೆ	೦—೫—೦	೦—೭—೦
ಸಟೀಕ ಷಟ್ಸ್ಥಲ	೧—೦—೦	೧—೨—೦	ಶರಣಾರ್ಥಿ	೦—೪—೦	೦—೬—೦

ಮೈಸೂರು ಸ್ಟಾರ್ ಚಂದಾದಾರರಿಗೆ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೬-೦; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೦-೦; ವಿ.ಪಿ. ಮೂಲಕವಾದರೆ ಇನ್ನೂ ... ಆಣೆ ಹೆಚ್ಚು [illegible] ಚಂದಾದಾರರುಗಳು ಮನಿಯಾರ್ಡರ್ [redacted] ಸಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಿನ ತಮ್ಮ ವಿಳಾಸದ ಪಕ್ಕ ದಲ್ಲಿರುವ ನಂಬರನ್ನು ಮರೆಯದೆ ಬರೆಯಬೇಕು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮನಿಯಾರ್ಡರುಗಳಿಗೆ [illegible] ಉತ್ತರ ಕೊಡಲಾಗುವುದಿ [redacted]

MYSORE RAILWAYS.

Auction Sale Notice.

[50-3]

Advertisement No 39 C.

In accordance with Section 40 of the Mysore Railways Regulation No. 4 of 1894, all unclaimed and lost properties in possession of the Railway Administration, over 6 months old, will be disposed of by Public Auction on Sunday the 15th September 1929 from 9 a.m. in the Mysore Station premises by the Railway Auctioneer

List of such articles may be seen in the Lost Property Office, Mysore.

2 The auctioneer does not bind himself to accept the higher or any bid at all and it is open to him to cancel the auction for reasons found sufficient by him

3 The highest bidder whose bid is accepted should pay the full amount soon after the auction is closed and must arrange to remove the articles immediately, failing which they will be reauctioned at his risk

Traffic Manager's Office, Mysore. *15th August 1929.* — A. A. KHAN, *Traffic Manager.*

"ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತರ" ಆಯುರ್ವೇದೀಯ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರೀ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿದಿವಸವೂ [illegible]

300 ಮಾತ್ರೆಗಳುಳ್ಳ ಸೀಸೆ 1ಕ್ಕೆ 4 ಆಣೆ. [illegible]

ಮೈಶ್ವಾನರಚೂರ್ಣ

[illegible]

ಬ್ರಹ್ಮಿಕೇಶವರ್ಧನತೈಲ.

(ತಲೆಗೆ)

[illegible] ಸೀಸೆ 1ಕ್ಕೆ ರೂ. 1—0—0

ಶ್ರೀನಿವಾಸತೈಲ.

[illegible] ಸೀಸೆ 1ಕ್ಕೆ ರೂ. 0—8—0.

* ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತರು.

ಶ್ರೀ ಸೀತಾರಾಮ ಆಯುರ್ವೇದ ವೈದ್ಯಶಾಲೆ, ಬ್ರಾಂಚ್ ಆಫೀಸು ಚಿಕ್ಕಪೇಟೆ, ಬೆಂಗಳೂರು ಸಿಟಿ. [redacted]

ಮೈಸೂರು ಸ್ಟಾರ್

ಶನಿವಾರ ಸೆಪ್ಟೆಂಬರ್ ೧೪ ೧೯೨೯

RETURNING SANITY.

The firm handling of the situation by the Police and the Magistracy on the 30th July 1929 at Bangalore has had a very wholesome effect on the mischievous and the rowdy section of the citizens On the Vinayaka Chouti Day all these mischief mongers and political charlatans were conspicuous by their absence at or anywhere near the Sultanpet Middle School We are glad to find that the Government or rather the Department of Education restricted the admissions into the school on that morning to the present students and those past students of the school who were still students of other educational institutions There is sense in such an order We are glad also that there was no bungling as there was on the 30th July 1929, when giving permission to the boys of the school was itself a blunder that being an odd day and what was worse, was the day chosen for hartal by some of the mischievous folk If instead of giving a large order that all old boys could take part in the pooja at the last moment when the building was in charge of District Magistrate and that without setting any limit as to who the old boys were, they had thought of limiting them as they did on the Chouti day there would probably have been less trouble then. The whole trouble arises from the fact that students are made convenient tools by designing politicians which is condemned by all right thinking men It is a source of real satisfaction that those rowdy elements which manifested themselves on the 30th July 1929 have begun to realise the folly of their actions and they kept quiet on the Chouti day No doubt these discomfited heroes are comforting themselves on the change in the District Magistrate and are trying their best to make it appear that their inaction on the 7th instant was due to the change They of course knew that if they wagged their tails they would be answered properly probably in a more effective manner than last time What is more there are the cases pending against a large number of persons Wisely therefore they kept aloof from the premises of the political Ganesha of the school Some of them took to another mode of making themselves felt somehow and set up for the first time a Hindu Mahasabha Ganapathi and are advertising about their procession etc in the connection In some of the Brahmin papers it is stated that on the Chouti day the Vinayaka was taken in procession with all due pomp and splendour by a large body of leading citizens And lo! this large body consisted of about 8 or 10 persons composed of the son of Mr Bhima Rao of Balepet fame and the S V and T T who are only too familiar to Bangalore public How egregiously pettiminded how wilfully mischievous, how pitifully lowly our men are can be seen by a Hindu Mahasabha (started with grand ideals about giving equal opportunities to all classes among the Hindus to enter Sanskrit Colleges and to study Vedas to enter and worship at the sanctum sanctorium of all temples etc,) turning all its activities towards organising a Ganapathi Pooja which everyone observes at his own house Why only Ganapathi Pooja It may just as well begin hereafter with the Pooja on the Ugadi, Deepavali, Sri Ramanavami and such other festival days. But we can be sure they will not do all that because they know that that has no political significance Their religious fervour as we see is in worshipping the particular Ganesha of the Sultanpet School They wanted to be valourous on the 30th July and got birches on their backs and buck shots to boot. That memory has not yet faded Now they thought discretion was the better part of valour. If the political Ganesha of the school is not available why not another Ganesha organised by another pseudo-social institution Yet these are people who clamour for Swarajya If there is one set of people who have made India look so hopelessly low in the eyes of the rest of the world it is of the type that is now playing all the pranks in Bangalore and setting up the communal agitation One thing we are glad of Those citizens of Bangalore who were misled by the political agitators and even the latter are beginning to realise the folly and the futility of their actions and returning to their proper senses Let us hope that they will completely regain their balance ere long and things will move smoothly and pleasantly

ಚಿತ್ತಸ್ಥೈರ್ಯ

೧೯೨೯ ನೆಯ ಜುಲೈ ತಾ|| ೩೦ ನೇ ಮಂಗಳವಾರ ಬೆಂಗಳೂರು ಸುಲ್ತಾನ್‌ಪೇಟೆಯಲ್ಲಿ ನಡೆಯಲಿಕ್ಕಿದ್ದ ದೊಂಬಿಕಲಹವನ್ನು ಅಡಗಿಸಲು ಪೋಲೀಸಿನವರೂ ಮೆಜಿಸ್ಟ್ರೇಟರುಗಳೂ ಮಾಡಿದ ಕಾಲೋಚಿತವೂ ವಿವೇಕಪೂರಿತವೂ ಆದ ಏರ್ಪಾಟು ಬೆಂಗಳೂರಿನ ಕಲಹಪ್ರಿಯರಾದ ಕಿಡಿಗೇಡಿಗಳಮೇಲೆ ಒಳ್ಳೇ ಪರಿಣಾಮವನ್ನುಂಟುಮಾಡಿತು ಕಳೆದ ವಿನಾಯಕನ ಚೌತಿ ದಿವಸ ಗಣೇಶನ ಪೂಜೆಗೆ ಸುಲ್ತಾನಪೇಟೆ ಸ್ಕೂಲಿನಲ್ಲಿ ಈಗ ಓದುತ್ತಿರುವ ಮತ್ತು ಹಿಂದೆ ಓದುತ್ತಿದ್ದು ಈಗ ಬೇರೆ ಸ್ಕೂಲಿಗೆ ಸೇರಿರುವ ವಿದ್ಯಾರ್ಥಿಗಳು ಮಾತ್ರ ಪ್ರವೇಶ ಚೀಟಿಯನ್ನು ಪಡೆದು ಬರಬೇಕೆಂದು ನಿರ್ಬಂಧ ಪಡಿಸಿದ್ದುದರಿಂದ ಕಿಡಿಗೇಡಿಗಳೂ ರಾಜಕೀಯಾಂದೋಳಕಾರರೂ ಆ ಪೂಜೋತ್ಸವದಲ್ಲಿ ಭಾಗಿಗಳಾಗಲವಕಾಶವಿಲ್ಲದೆ ಆ ದಿವಸ ಆ ಸ್ಕೂಲಿನಲ್ಲಾಗಲಿ ಅದರ ಸಮೀಪದಲ್ಲಾಗಲಿ ಅವರುಗಳ ಸುಳಿವೇ ಇರಲಿಲ್ಲ ಈ ವಿವೇಕಪೂರಿತವಾದ ಏರ್ಪಾಟನ್ನೂ, ಆಜ್ಞೆಯನ್ನೂ ಅಧಿಕಾರಿಗಳು ಮಾಡಿದ್ದುದೂ, ಅಪ್ರಶಸ್ತವೂ ಹರತಾಳಾಚರಣೆಯ ದಿನವೂ ಆದ ೧೯೨೯ ನೇ ಜುಲೈ ತಾ|| ೩೦ ರಲ್ಲಿ ಗಣಪತಿಪೂಜೆಯನ್ನು ಮಾಡಲು ವಿವೇಚನೆಯಿಲ್ಲದೆ ಎಲ್ಲ ವಿದ್ಯಾರ್ಥಿಗಳಿಗೂ ಅನುಜ್ಞೆಯನ್ನು ಕೊಟ್ಟಂತಹ ಅವಿವೇಕ ಕಾರ್ಯವು ಈ ವೇಳೆ ನಡೆಸಲ್ಪಡದಿದ್ದುದೂ ಸಂತೋಷಪ್ರದವಾಗಿದೆ ಜುಲೈ ತಾ|| ೩೦ ರಲ್ಲಿ ಸುಲ್ತಾನ್‌ಪೇಟೆ ಸ್ಕೂಲು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರ ಆಜ್ಞೆಗೊಳಪಟ್ಟಿದ್ದಾಗ್ಗೆ ಸಮಸ್ತ ವಿದ್ಯಾರ್ಥಿಗಳ ಪ್ರವೇಶಕ್ಕೆ ಅವಕಾಶವನ್ನು ಕೊಡದೆ ವಿನಾಯಕನ ಚೌತಿ ದಿವಸ ಆ ಸ್ಕೂಲಿನಲ್ಲೀಗ ಓದುತ್ತಿರುವ ಮತ್ತು ಹಿಂದೆ ಓದುತ್ತಿದ್ದು ಈಗ ಬೇರೆ ಸ್ಕೂಲುಗಳಿಗೆ ಸೇರಿರುವ ವಿದ್ಯಾರ್ಥಿಗಳ ಪ್ರವೇಶಕ್ಕೆ ಮಾತ್ರ ಅವಕಾಶ ಕಲ್ಪಿಸಲ್ಪಟ್ಟಿದ್ದಂತೆ ಮಾಡಲ್ಪಟ್ಟಿದ್ದಲ್ಲಿ ಅಂತಹ ತೊಂದರೆಯೂ ಸಂಭವಿಸುತ್ತಿರಲೇ ಇಲ್ಲ ವಿದ್ಯಾರ್ಥಿಗಳು ವಿವೇಕಿಗಳ ತಿರಸ್ಕಾರಕ್ಕೆ ಪಾತ್ರರಾದ ರಾಜಕೀಯ ಚಳವಳಿಗಾರರ ಕೈಸೂತ್ರದ ಬೊಂಬೆಗಳಾಗಿ ಪರಿಣಮಿಸಿರುವುದೇ ಇಂತಹ ತೊಂದರೆಗಳಿಗೆ ಕಾರಣವಾಗಿರುತ್ತದೆ ಕಳೆದ ಜುಲೈ ತಾ|| ೩೦ ರಲ್ಲಿ ದೊಂಬಿಯನ್ನು ನಡೆಸಿದ ಚಳವಳಿಗಾರರು ತಮ್ಮ ಅಪರಾಧವನ್ನು ಅರಿತುಕೊಂಡು ಚೌತಿಯ ದಿವಸ ಮೌನರಾಗಿದ್ದುದು ನಿಜವಾಗಿಯೂ ಸಂತೋಷಪ್ರದವಾಗಿದೆ ಆದರೆ ಈ ಪರಾಜಿತರಾದ ರಾಜಕೀಯ ಸಮರಶೂರರು, ಕಳೆದ ಜುಲೈ ತಾ|| ೩ ರಲ್ಲಿದ್ದ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರ ಬದಲಾಗಿ ಬೇರೆ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ಬಂದುದೇ ವಿನಾಯಕನ ಚೌತಿ ದಿವಸ ಯಾವ ಗದ್ದಲವೂ ನಡೆಯದಿರಲು ಮುಖ್ಯ ಕಾರಣವೆಂದು ಹೇಳುತ್ತ ಆತ್ಮತೃಪ್ತಿಯನ್ನು ಪಡುತ್ತಲಿರುವರು. ಹಿಂದಿನಂತೆ ಚೌತಿ ದಿವಸ ವರ್ತಿಸಿದ್ದರೆ ಅಗ್ಗಿಂತಲೂ ಈ ವೇಳೆ ಹೆಚ್ಚಾದ ಪ್ರತಿಫಲವನ್ನನುಭವಿಸುತ್ತಿದ್ದೆವೆಂಬುದನ್ನು ಚಳವಳಿಗಾರರು ಚೆನ್ನಾಗಿ ಅರಿತಿದ್ದರು ಇಷ್ಟೇ ಅಲ್ಲದೆ ಆಗಿನ ದೊಂಬಿಯಲ್ಲಿ ಭಾಗಿಗಳಾಗಿದ್ದವರಲ್ಲಿ ಅನೇಕರಮೇಲೆ ಕ್ರಿಮಿನಲ್ ಮೊಕದ್ದಮೆಗಳು ನಡೆಯುತ್ತಿವೆ. ಇವನ್ನೆಲ್ಲ ಅರಿತೇ ಅವರುಗಳು ರಾಜಕೀಯ ಚಳವಳಿಯ ಅಧಿದೇವತೆಯಾಗಿ ಸುಲ್ತಾನ್‌ಪೇಟೆ ಸ್ಕೂಲಿನ ಗಣಪತಿಯ ಗೋಜಿಗೆ ಹೋಗದೆ ಪೃಥಕ್ಕಾಗಿ ನಿಂತುಬಿಟ್ಟರು ಇವರಲ್ಲಿ ಕೆಲರು ಮತ್ತೊಂದು ಎತ್ತುಗಡೆಯನ್ನು ಮಾಡಿ ಹಿಂದು ಮಹಾಸಭಾ ಗಣಪತಿಯನ್ನು ಹೊಸದಾಗಿ ಪ್ರತಿಷ್ಠಿಸಿ ಇಷ್ಟರಲ್ಲೇ ಅದರ ಜಲಪ್ರವೇಶೋತ್ಸವವನ್ನು ಮಹಾ ಆಟ್ಟಹಾಸದಿಂದ ನಡೆಸುವವರಾಗಿರುವರು ಚೌತಿಯ ದಿವಸ ಗಣಪತಿಯು ಹಿಂದು ಮಹಾಸಭಾ ಮಂದಿರಕ್ಕೆ ಒಯ್ಯಲ್ಪಟ್ಟಾಗ್ಗೆ ಸ್ವಯಂಪ್ರಕಾಶರಾದ ಬಳೇಪೇಟೆ ಮ|| ಭೀಮರಾಯರು, ಎಸ್. ವಿ ಮತ್ತು ಟಿ ಟಿ ಯವರೇ ಮೊದಲಾಗಿ ೮-೧೦ ಜನರು ಉತ್ಸವದಲ್ಲಿ ಭಾಗಿಗಳಾಗಿದ್ದರು ಇಷ್ಟು ಮಾತ್ರಕ್ಕೆ ಆ ಉತ್ಸವದಲ್ಲಿ ಅನೇಕ ಮುಖಂಡರು ಸೇರಿದ್ದರೆಂದು ಬ್ರಾಹ್ಮಣ ಪತ್ರಿಕೆಗಳಲ್ಲಿ ಉತ್ಪ್ರೇಕ್ಷಿಸಿ ಬರೆಯಲ್ಪಟ್ಟಿದೆ (ಹಿಂದುಗಳಲ್ಲಿ ಸಮಸ್ತ ವರ್ಣದವರೂ ಸಂಸ್ಕೃತ ಮಹಾಪಾಠಶಾಲೆಗಳಿಗೆ ಸೇರಿ ವೇದಾಧ್ಯಯನ ಮಾಡುವುದು, ದೇವಸ್ಥಾನದ ಗರ್ಭಗುಡಿಗೆ ಹೋಗಿ ದೇವರ ಸೇವೆ ಮಾಡುವುದೇ ಮೊದಲಾದ ಸೌಲಭ್ಯಗಳನ್ನು ಕಲ್ಪಿಸಿಕೊಡುವ ಘನತರವಾದ ಉದ್ದೇಶದಿಂದ ಸ್ಥಾಪಿತವಾದ) ಹಿಂದು ಮಹಾಸಭೆಯು ಪ್ರತಿಯೊಬ್ಬ ಹಿಂದುವೂ ತನ್ನ ಮನೆಯಲ್ಲಿಟ್ಟು ಪೂಜಿಸುವಂತಹ ಗಣಪತಿಯನ್ನು ಹಿಂದೂ ಮಹಾಸಭೆಯಲ್ಲಿಟ್ಟು ಪೂಜಿಸುವ ಏರ್ಪಾಟನ್ನು ಮಾಡಿರುವುದು ನಮ್ಮವರ ಎಷ್ಟು ಅಲ್ಪ ಸಂಕುಚಿತವೂ, ಅಪ್ರಯೋಜಕವೂ ಆದ ಮನೋಭಾವವನ್ನು ವ್ಯಕ್ತಗೊಳಿಸುತ್ತದೆ ಗಣಪತಿಪೂಜೆ ಮಾತ್ರವಲ್ಲದೆ ಇನ್ನುಮೇಲೆ ಯುಗಾದಿ, ದೀಪಾವಳಿ ಶ್ರೀರಾಮನವಮಿ ಮೊದಲಾದ ಹಬ್ಬದಿನಗಳಲ್ಲಿ ಪೂಜೆನಡೆಸಲು ಪ್ರಾರಂಭಿಸಬಹುದಾಗಿದೆ ಆದರೆ ಆ ಹಬ್ಬ ದಿನಗಳಲ್ಲಿ ಪೂಜೋತ್ಸವಕ್ಕೆ ರಾಜಕೀಯ ಪ್ರಾಮುಖ್ಯತೆ ಇಲ್ಲದಿರುವುದರಿಂದ ಅವರು ಅವನ್ನಾಚರಿಸುವುದಿಲ್ಲವೆಂದು ಖಂಡಿತವಾಗಿ ಹೇಳಬಲ್ಲೆವು ಅವರ ಧರ್ಮಾಭಿಮಾನೋತ್ಸಾಹವೆಲ್ಲವೂ ಸುಲ್ತಾನ್‌ಪೇಟೆ ಸ್ಕೂಲಿನ ಗಣಪತಿಯ ಪೂಜೆಯಲ್ಲೇ ಲೀನವಾಗಿರುತ್ತದೆ ಕಳೆದ ಜುಲೈ ತಾ|| ೩೦ ರಲ್ಲಿ ಅವರುಗಳು ತಮ್ಮ ಶೌರ್ಯಪ್ರದರ್ಶಿಸುವಾಗ್ಗೆ ಒದೆಯನ್ನೂ ಗುಂಡಿನ ಚರೆ ಏಟುಗಳನ್ನೂ ತಿಂದರು ಅದನ್ನು ಅವರಿನ್ನೂ ಮರೆತಿಲ್ಲವು ಆದುದರಿಂದಲೇ ಕಾಲೋಚಿತವಾಗಿ ನಡೆಯುವುದು ಒಳ್ಳೇ ಶೌರ್ಯಪ್ರದರ್ಶನವೆಂದು ಅವರು ಈಗ ಅರಿತುಕೊಂಡಿರುತ್ತಾರೆ. ಅವರಿಷ್ಟಾರ್ಥಸಿದ್ಧಿಗೆ ಸ್ಕೂಲಿನ ರಾಜಕೀಯ ಗಣೇಶನು ದೊರಕದಿದ್ದರೆ ರಾಜಕೀಯ ಸಾಮಾಜಿಕ ಸಂಸ್ಥೆಯ ಸಿದ್ಧಿವಿನಾಯಕನಾಗಬಹುದಷ್ಟೆ ಈ ಜನರೇ ಸ್ವರಾಜ್ಯ ಪ್ರಾಪ್ತಿಗಾಗಿ ಬೊಬ್ಬೆಯಿಡುತ್ತಿರುವವರು ಬೆಂಗಳೂರಿನಲ್ಲಿ ಎಲ್ಲ ವಿಧವಾದ ತಗಾದೆಯನ್ನು ಮಾಡಿ ಜಾತಿ ಸಂಬಂಧವಾದ ಕಲಹವನ್ನುಂಟುಮಾಡುತ್ತಿರುವಂತಹವರೇ ಪ್ರಪಂಚದ ಬೇರೆ ಭಾಗದವರು ನಮ್ಮ ಭರತಖಂಡವನ್ನು ಬಹು ಕೀಳಾಗಿ ಕಾಣುವಂತೆ ಮಾಡಿದವರಾಗಿರುತ್ತಾರೆ ರಾಜಕೀಯ ಚಳವಳಿಗಾರರ ಬಲೆಗೆ ಬಿದ್ದಿದ್ದ ಬೆಂಗಳೂರಿನವರು ಮತ್ತು ಆ ಚಳವಳಿಗಾರರು ಕೂಡ ಈಗ ತಮ್ಮ ತಪ್ಪನ್ನೂ ತಮ್ಮ ಅಕೃತ್ಯದ ಪರಿಣಾಮವನ್ನೂ ಅರಿತುಕೊಳ್ಳುತ್ತಿರುವುದು ಬಹು ಸಂತೋಷಪ್ರದವಾಗಿದೆ ಅವರುಗಳು ಕೂಡಲೆ ಸಂಪೂರ್ಣ ಚಿತ್ತಸ್ಥೈರ್ಯವನ್ನು ಹೊಂದುವರೆಂದೂ, ಎಲ್ಲ ಕಾರ್ಯಗಳು ಸರಳವಾಗಿಯೂ ಸಂತೋಷಕರವಾಗಿಯೂ ನಡೆಯುವುವೆಂದೂ ನಿರೀಕ್ಷಿಸುತ್ತೇವೆ

ಒಳದೇಶದ ವೃತ್ತಾಂತಗಳು.

ಕರ್ನಲ್ ಪೋಪ್ ಎಂಬ ಐರೋಪ್ಯರು ಸಂಸ್ಥಾನದ ಸೇನೆಯ ಚೀಫ್ ಕಮಾಂಡೆಂಟರಾಗಿ ನಿಯಮಿಸಲ್ಪಟ್ಟಿರುತ್ತಾರೆ

ಬೆಂಗಳೂರು ಸಿಟಿ ಅಸಿಸ್ಟೆಂಟ್ ಪೋಲೀಸ್ ಸೂಪರಿಂಟೆಂಡೆಂಟರಾದ ಮ|| ಎಂ ಸಿ ಮರಿಯಪ್ಪನವರ ಮೇಲೆ ಪತ್ರಿಕಾ ಪ್ರತಿನಿಧಿಯಾದ ಮ|| ಎಚ್ ಶರ್ಮಯವರು ಮಾಡಿರುವ ಮಾನನಷ್ಟದ ವಿವಾದವು ಇದೇ ತಾ|| ೨೭ ಕ್ಕೆ ವಿಚಾರಣೆಗಿಡಲ್ಪಟ್ಟಿರುತ್ತದೆ

ಭದ್ರಾವತಿ ಕಬ್ಬಿಣದ ಕಾರ್ಖಾನೆಯ ಮೇಲ್ವಿಚಾರಕ ಸಮಿತಿಯ ಅಧ್ಯಕ್ಷರಾಗಿದ್ದ ಸರ್ ಎಂ ವಿಶ್ವೇಶ್ವರಯ್ಯನವರು ಅಧ್ಯಕ್ಷತೆಯನ್ನು ಬಿಟ್ಟುದರಿಂದ ಒಂದನೇ ಕೌನ್ಸಿಲರಾದ ರಾಜಕಾರ್ಯಪ್ರಸಕ್ತ ದಿವಾನ್ ಬಹದ್ದೂರ್ ಎಂ ಎನ್ ಕೃಷ್ಣರಾಯರು ಮೇಲ್ಕಂಡ ಸಮಿತಿಯ ಅಧ್ಯಕ್ಷರಾಗಿ ನಿಯಮಿಸಲ್ಪಟ್ಟಿರುತ್ತಾರೆ

ಈ ತಾ ೧೬ ನೇ ಭಾನುವಾರ ರಾಜಧಾನಿಗೆ ಬರುವವರಾಗಿರುವ ಡಾಕ್ಟರ್ ಅನ್ಸಾರಿಯವರಿಗೆ ಪೌರಕಾರ್ಯನಿರ್ವಾಹಕ ಸಭೆಯವರಿಂದ ಒಂದು ಸನ್ಮಾನ ಪತ್ರವನ್ನೊಪ್ಪಿಸಬೇಕೆಂದು ೧೧ ಮಂದಿ ಕೌನ್ಸಿಲರುಗಳು ಬರೆದಿರುವ ವಿಷಯವನ್ನು ಕೌನ್ಸಿಲರುಗಳು ಬರುವ ಸೋಮವಾರ ಪ್ರಾತಃಕಾಲ ಸಭೆಸೇರಿ ಪರ್ಯಾಲೋಚಿಸಿ ಇತ್ಯರ್ಥಗೊಳಿಸುವವರಾಗಿರುವರು.

ನಮ್ಮ ಸರ್ಕಾರದ ಸೆಕ್ರೆಟೆರಿಯಟ್ಟಿನ ರಿಜಿಸ್ಟ್ರಾರರಾಗಿದ್ದ ಮ|| ಕೆ ಆ ರಾಮರಾವ್ ಬಿ ಎ, ಯವರು ಉದ್ಯೋಗದಿಂದ ನಿವೃತ್ತರಾಗುವುದರ ಪೂರ್ವಭಾವಿಯಾಗಿ ಫರ್ಲೋ ರಜಾವನ್ನು ಪಡೆದುಕೊಂಡಿರುವುದರಿಂದ, ಇದೇ ಸೆಕ್ರೆಟೆರಿಯಟ್ಟಿನಲ್ಲಿ ಸೂಪರಿಂಟೆಂಡೆಂಟರಾಗಿದ್ದ ಮ|| ಕೆ ಎಸ್ ರಾಮಯ್ಯರ್, ಬಿ ಎ, ಯವರು ರಿಜಿಸ್ಟ್ರಾರರಾಗಿ ನಿಯಮಿಸಲ್ಪಟ್ಟಿರುತ್ತಾರೆ

ಗಂಧದೆಣ್ಣೆಯ ಸಂಬಂಧವಾದ ವಿದ್ಯಮಾನವನ್ನು ತಿಳಿದುಕೊಳ್ಳಲು ಇಂಗ್ಲೆಂಡಿಗೆ ಕಳುಹಿಸಲ್ಪಟ್ಟಿರುವ ಚೀಫ್ ಕೆಮಿಸ್ಟ್ರಿಯವರಾದ ಮ|| ಎನ್ ಮಾಧವರಾಯರು ಈಗ ಹೊಸದಾಗೇರ್ಪಟ್ಟಿರುವ ಟ್ರೇಡ್ ಕಮಿಷನರ್ ಎಂಬುದ್ಯೋಗವನ್ನು ಮ|| ಬಿ ಟಿ ಕೇಶವಯ್ಯಂಗಾರರು ಸೀಮೆಗೆ ಬಂದು ವಹಿಸಿಕೊಳ್ಳುವವರೆಗೆ ನೋಡಿಕೊಳ್ಳಬೇಕಾಗಿ ಸರ್ಕಾರದಪ್ಪಣೆಯಾಗಿರುತ್ತದೆ

ನಾಳೆಯ ದಿವಸ ಮಧ್ಯಾಹ್ನ ಕೃಷ್ಣರಾಜಪೇಟೆಯಲ್ಲಿ ಒಕ್ಕಲಿಗರ ವಾರ್ಷಿಕೋತ್ಸವ ಸಂಬಂಧವಾಗಿ ಆ ತಾಲ್ಲೂಕಿನ ೭ ನೇ ಒಕ್ಕಲಿಗರ ಮಹಾಸಭೆಯು ಫ್ರೆಂಚ್ ರಾಕ್ಸ್ ಸಬ್ ಡಿವಿಜನ್ ಆಫೀಸರಾದ ಮ|| ಅಪ್ಪಾಜಿಗೌಡರವರ ಅಧ್ಯಕ್ಷತೆಯಲ್ಲಿ ಜರುಗುವುದು, ಆ ಕಾಲದಲ್ಲಿ ಒಕ್ಕಲಿಗ ಸಮಾಜಾಭಿವೃದ್ಧಿಕಾರಕವಾದ ಉಪನ್ಯಾಸಗಳು ನಡೆದು ಉಪಯುಕ್ತ ನಿರ್ಧಾರಗಳು ಮಾಡಲ್ಪಡುವುವು

ಈ ಮೈಸೂರು ಸ್ಟಾರ್ ಪತ್ರಿಕಾ ಸಂಪಾದಕರಾದ ಮ|| ವೈ. ವಿರೂಪಾಕ್ಷಯ್ಯನವರ ಮೇಲೆ ಬೆಂಗಳೂರಿನ ಮ|| ಆರ್. ಗೋಪಾಲಸ್ವಾಮಿ ಅಯ್ಯರ್‌ರವರು ಬೆಂಗಳೂರು ಎರಡನೇ ಸ್ಪೆಷಲ್ ಮೆಜಿಸ್ಟ್ರೇಟರ ಕೋರ್ಟಿನಲ್ಲಿ ಮಾಡಿದ್ದ ಮಾನನಷ್ಟದ

...ನಾವರಣವಾದ ಪ್ರಯುಕ್ತ ... ವನ್ನು ಕಳೆದ ಸೋಮವಾರ ... ಮಾಡಿರುವಂತೆ ತಿಳುವಳಿಕೆ ಕಂಡುಬರುತ್ತದೆ.

ರಾಜಧಾನಿಯ ಪ್ರೆಸಿಡೆನ್ಸಿ ಪೊಲೀಸ್ ಕಮಿಷನರ ... ಆಫೀಸ್ ಸುಪರಿಂಟೆಂಡೆಂಟರಾದ ಮ|| ಎಂ ಎಸ್. ... ಜಿ ಆ ಹಿ. ಅಭಿಸ್ಟಂಟರವರು ಕಳೆದ ಗುರುವಾರ ರಾತ್ರಿ ತಮ್ಮ ಆಂಗಡಿಯಲ್ಲಿ ಶ್ರೀಗಣಪತಿಯ ಮಂಗಳಾರತಿಯನ್ನು ವೈಭವದಿಂದ ನಡೆಯಿಸಿ ಮಿತ್ರಮಂಡಲಿಯನ್ನು ಬರಮಾಡಿಕೊಂಡು ಗಂಧ ಪುಷ್ಪ ತಾಂಬೂಲ ಮತ್ತು ಶ್ರೀ ಸ್ವಾಮಿಯ ಪ್ರಸಾದ ವಿನಿಯೋಗದಿಂದ ಸತ್ಕರಿಸಿದರು.

ಟ್ರೇಡ್ ಕಮಿಷನರಾಗಿ ನಿಯಮಿಸಲ್ಪಟ್ಟು ಸೀಮೆಗೆ ಪ್ರಯಾಣಮಾಡುವ ಮ|| ಬಿ ಟಿ. ಕೇಶವಯ್ಯಂಗಾರರ ಬದಲು ಶಿವಮೊಗ್ಗ ಡಿಸ್ಟ್ರಿಕ್ಟ್ ಡೆ|| ಕಮಿಷನರಾಗಿ ನಿಯಮಿಸಲ್ಪಟ್ಟಿರುವ ಮ|| ಎಂ. ಎಚ್. ಬಾಲರಾಜ ಅರಸಿನವರು ಕಳೆದ ಸೋಮವಾರ ಮೈಸೂರು ಡಿ|| ಡೆ|| ಕ|| ಉದ್ಯೋಗದ ಛಾರ್ಜನ್ನು ಮ|| ಟಿ. ಜಿ. ರಾಮಯ್ಯರ್‌ರವರಿಗೆ ವಹಿಸಿ ಗುರುವಾರ ಶಿವಮೊಗ್ಗ ಡಿ|| ಡೆ|| ಕಮಿಷನರ್ ಉದ್ಯೋಗವನ್ನು ವಹಿಸಿಕೊಂಡರು.

ನೆನ್ನೆಯ ಸಾಯಂಕಾಲ ರಾಜಧಾನಿಯ ಒಕ್ಕಲಿಗರ ವಿದ್ಯಾರ್ಥಿನಿಲಯದವರು ಶ್ರೀ ಗಣೇಶನ ಮಂಗಳಾರತಿಯನ್ನು ಬಹಳ ವಿಜೃಂಭಣೆಯಿಂದ ನೆರವೇರಿಸಿ ರಾಜಧಾನಿಯ ಅಧಿಕಾರಿಗಳು, ಪ್ರೊಫೆಸರುಗಳು, ಲಾಯರುಗಳು, ಮ್ಯು|| ಕೌನ್ಸಿಲರುಗಳು ವರ್ತಕರು ಮೊದಲಾದವರುಗಳನ್ನು ಆಹ್ವಾನಿಸಿ ಆಸ್ಥಾನ ಸಂಗೀತ ವಿದ್ವಾನ್ ಮ|| ವಾಸುದೇವಾಚಾರ್ಯರ ಹಾಡುಗಾರಿಕೆಯಿಂದಲೂ ಶ್ರೀ ಗಣಪತಿಯ ಮಂಗಳಾರತಿ ಪ್ರಸಾದ ವಿನಿಯೋಗದಿಂದಲೂ ಸತ್ಕರಿಸಿದರು.

ಸಾಮಾನ್ಯವಾಗಿ ಗೌರಿ ಹಬ್ಬದಲ್ಲಿ ಜಡಿಮಳೆ ಬರುತ್ತಿದ್ದುದು ಈ ವೇಳೆ ಸುತರಾಂ ಬಾರದೆ ಜನರಿಗೆ ಹಾಹಾಕಾರವನ್ನುಂಟುಮಾಡಿದ್ದಿತು. ಆದರೆ ಈ ದಿವಸ ಪ್ರಾತಃಕಾಲದಿಂದ ಜಡಿಮಳೆಗಾರಂಭವಾದಂತೆ ತೋರುತ್ತದೆ ಇದರಿಂದ ನಿಂತಿರುವ ರಾಗಿ ಮೊದಲಾದ ಪೈರುಗಳು ಚೇತರಿಸಿಕೊಳ್ಳಬಹುದೆಂದು ತೋರುತ್ತದೆ ಮತ್ತು ಮುಂದೆ ದೊಡ್ಡ ಮಳೆಗಳು ಬಂದು ಕೆರೆ ಕಟ್ಟೆಗಳು ತುಂಬದಿದ್ದಲ್ಲಿ ಕುಡಿಯಲು ನೀರಿಲ್ಲದೆ ಜನರೂ, ದನಕರುಗಳೂ ಬಹಳ ತೊಂದರೆಪಡಬೇಕಾಗುತ್ತದೆ

ಕಳೆದ ಭಾನುವಾರ ಬೆಳಗ್ಗೆ ಶ್ರೀಮನ್ಮಹಾರಾಜರವರು ರಾಜಧಾನಿಗೆ ಬಂದಿದ್ದ ದಿವಾನರೊಡನೆ ಮೋಟಾರು ಬಂಡಿಯಲ್ಲಿ ನಾಗಮಂಗಲದ ಬಳಿ ಕಟ್ಟಲ್ಪಡುತ್ತಿರುವ ಕೆರೆಯ ಕೆಲಸವನ್ನು ಪರಾಮರ್ಶಿಸಿಕೊಂಡು ಕೃಷ್ಣರಾಜಸಾಗರಕಟ್ಟೆಯ ಮಾರ್ಗವಾಗಿ ರಾಜಧಾನಿಗೆ ಚಿತ್ತೈಸಿದರು. ಸೀರಾವರ ಚೀಫ್ ಇಂಜನಿಯರು, ಡೆಪ್ಯುಟಿ ಕಮಿಷನರು ಮೊದಲಾದ ಅಧಿಕಾರಿಗಳು ಮಹಾಸ್ವಾಮಿಯವರ ಸ್ವಾರಿಯೊಡನೆ ಹೋಗಿದ್ದರು. ದಿವಾನರು ಕಳೆದ ಸೋಮವಾರ ಸಾಯಂಕಾಲ ಬೆಂಗಳೂರಿಗೆ ಹಿಂದಿರುಗಿ ಪ್ರಯಾಣ ಮಾಡಿದರು

ಬೆಂಗಳೂರು ಸಿಟಿ ಮೆಜಿಸ್ಟ್ರೇಟರಾದ ಮ|| ಸಿ. ನಾರಾಯಣಸ್ವಾಮಿ ನಾಯಿಡು, ಬಿ ಎ, ಬಿ ಎಲ್., ಯವರು ದಸರಾ ರಜದೊಡನೆ ೮೫ ದಿನಗಳ ಪ್ರಿವಿಲೆಜ್ ರಜವನ್ನು ಪಡೆದುಕೊಂಡಿರುವುದರಿಂದ ಮೈಸೂರು ಸಬ್ ಡಿವಿಜನ್ ಆಫೀಸರಾಗಿದ್ದ ಮ|| ಎಂ. ವೆಂಕಟೇಶಯ್ಯಂಗಾರ್, ಎಂ. ಎ, ಯವರು ಬೆಂಗಳೂರು ಸಿಟಿ ಮೆಜಿಸ್ಟ್ರೇಟರಾಗಿಯೂ ರೆವಿನ್ಯೂ ಕಮಿಷನರ ಪರ್ಸನಲ್ ಅಸಿಸ್ಟಂಟರಾಗಿದ್ದ ಮಿ|| ಇಸ್ಮಾಯಿಲ್ ಷರೀಫ್, ಬಿ. ಎ, ಯವರು ಮೈಸೂರು ಸಬ್ ಡಿವಿಜನ್ ಆಫೀಸರಾಗಿಯೂ ವರ್ಗಾಯಿಸಲ್ಪಟ್ಟಿರುತ್ತಾರೆ.

ಶಿವಮೊಗ್ಗೆಯಲ್ಲಿ ಅನಿತ್ಯವಾಗಿ ಸ್ಥಾಪಿತವಾಗಿರುವ ಸಬ್ ಜಡ್ಜಿ ಕೋರ್ಟು ತೆಗೆದುಹಾಕಲ್ಪಡುವುದರಿಂದ ಸಬ್ ಜಡ್ಜಿ ಯಾದ ಮ|| ವಿ ಪರಮಶಿವಯ್ಯ, ಬಿ ಎ, ಎಲ್ ಎಲ್ ಬಿ ಯವರು ಚಿತ್ರದುರ್ಗಕ್ಕೆ ಫಸ್ಟ್ ಕ್ಲಾಸ್ ಮೆಜಿಸ್ಟ್ರೇಟರಾಗಿಯೂ, ಬೆಂಗಳೂರು ಫಸ್ಟ್ ಕ್ಲಾಸ್ ಮೆಜಿಸ್ಟ್ರೇಟರಾಗಿದ್ದ ಮ|| ಎ ಮಲ್ಲಿಕಾರ್ಜುನಯ್ಯ, ಬಿ ಎ, ಯವರು ಬೆಂಗಳೂರು ಸ್ಪೆಷಲ್ ಮೆಜಿಸ್ಟ್ರೇಟರಾಗಿ ನಿಯಮಿಸಲ್ಪಟ್ಟಿರುವುದರಿಂದ ಚಿತ್ರದುರ್ಗದಲ್ಲಿದ್ದ ಮ|| ಸಿ. ಎಚ್. ಕೃಷ್ಣರಾವ್, ಎಂ. ಎ, ರವರು ಬೆಂಗಳೂರು ಫಸ್ಟ್ ಕ್ಲಾಸ್ ಮೆಜಿಸ್ಟ್ರೇಟರಾಗಿಯೂ ವರ್ಗಾಯಿಸಲ್ಪಟ್ಟಿರುತ್ತಾರೆ.

ಎರಡನೆಯ ಕೌನ್ಸಿಲರಾದ ಮ|| ಸಿ. ಎಸ್ ಬಾಲಸುಂದರಂ ಅಯ್ಯರ್‌ರವರು ಮೊನ್ನೆಯ ದಿವಸ ಬೆಂಗಳೂರನ್ನು ಬಿಟ್ಟು ಕಾನಕಾನಹಳ್ಳಿ, ಮಳವಳ್ಳಿ, ಮದ್ದೂರು, ಮಂಡ್ಯ ಈ ಊರುಗಳನ್ನು ಪರಾಮರ್ಶಿಸಿಕೊಂಡು ನೆನ್ನೆ ಸಾಯಂಕಾಲ ರಾಜಧಾನಿಗೆ ಬಂದು ಈ ದಿವಸ ಬೆಳಿಗ್ಗೆ ಕೃಷ್ಣರಾಜಪೇಟೆಗೆ ಹೋಗಿ ಅದನ್ನು ನೋಡಿಕೊಂಡುಬಂದು ಮಧ್ಯಾಹ್ನ ವಸ್ತುಪ್ರದರ್ಶನದ ಮೇಲ್ವಿಚಾರಕ ಸಮಿತಿಯ ಮೀಟಿಂಗನ್ನು ನಡೆಸುವರು. ಸೋಮವಾರ ಇಲ್ಲಿಂದ ಚನ್ನರಾಯಪಟ್ಟಣದ ಮಾರ್ಗವಾಗಿ ಹೊರಟು ತಿಪ್ಟೂರು, ತುಮಕೂರು ಮೊದಲಾದ ಸ್ಥಳಗಳನ್ನು ನೋಡಿಕೊಂಡು ಬೆಂಗಳೂರನ್ನು ಸೇರುವರು.

ಗಂಧದೆಣ್ಣೆಯ ಸಂಬಂಧವಾಗಿ ಮ|| ಬಿ. ಸೀತಾರಾಮಶಾಸ್ತ್ರಿ ವಿಚಾರಣೆಯನ್ನು ನಡೆಯಿಸಲು ಸ್ಪೆಷಲ್ ಮೆಜಿಸ್ಟ್ರೇಟರಾಗಿ ನಿಯಮಿಸಲ್ಪಟ್ಟಿದ್ದ ಮ|| ಟಿ ಜಿ. ರಾಮಯ್ಯರ್‌ರವರು ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟ್ ಮತ್ತು ಟ್ರಿನ್ಸ್ ಬೋರ್ಡಿನ ಚೇರ್ಮನ್ ಉದ್ಯೋಗಗಳನ್ನು ವಹಿಸಿಕೊಳ್ಳಬೇಕೆಂದೂ ಈ ಕೆಲಸವು ತೀರುವವರೆಗೆ ಸ್ಪೆಷಲ್ ... ಡೆಪ್ಯುಟಿ ಕಮಿಷನರಾಗಿ ... ಕೆಂದೂ ಸರ್ಕಾರದಪ್ಪಣೆಯಾಗಿದೆ. ಮ|| ರಾಮಯ್ಯರ್‌ರವರು ನಾಳಿದ್ದು ಮ|| ... ವಿನಾಯಕ ... ಮಧ್ಯಾಹ್ನ ಮ್ಯು|| ಕೌನ್ಸಿಲ್ ಮತ್ತು ಟ್ರ|| ಬೋರ್ಡಿನ ಅಧ್ಯಕ್ಷತೆಯನ್ನು ವಹಿಸಿಕೊಳ್ಳುವರಾಗಿ ತಿಳಿಯುತ್ತೇವೆ.

ಇದೇ ತಾ|| ೧೮ ರ ಪ್ರಾತಃಕಾಲ ಸರದಾರ್ ವಲ್ಲಭಾಯಿ ಪಟೇಲ್‌ರವರು ಮದ್ರಾಸ್ ರೈಲುಬಂಡಿಯಲ್ಲಿ ಬೆಂಗಳೂರಿಗೆ ಬಂದರು ಸಜಾತಿಯರಾದ ಬೆಂಗಳೂರು ಗುಜ್ರಾತಿಯ ಜನರೂ, ಕಾಂಗ್ರೆಸ್ ಸಭಾಭಿಮಾನಿಗಳೂ ನಿಲ್ದಾಣದಲ್ಲಿದಿರ್ಗೊಂಡು ಸುಸ್ವಾಗತಿಸಿದರು ಗುಜ್ರಾತಿ ಜನರು, ಬೆಂಗಳೂರು ಪೌರಕಾರ್ಯನಿರ್ವಾಹಕ ಸಭೆಯವರು ಮತ್ತು ಕೆಲ ಸಂಸ್ಥೆಗಳವರು ಪಟೇಲರವರಿಗೆ ಸನ್ಮಾನಪತ್ರಗಳನ್ನೊಪ್ಪಿಸಿದರು ಅವುಗಳೆಲ್ಲಕ್ಕೂ ಪಟೇಲರವರು ಉತ್ತರವನ್ನು ಕೊಡುವಾಗ್ಗೆ ಈ ಸಂಸ್ಥಾನದಲ್ಲಿ ಬ್ರಾಹ್ಮಣ ಬ್ರಾಹ್ಮಣೇತರ ಎಂಬ ಭೇದವಿರುವುದು ಮತ್ತು ಅನರ್ಹರಾದ ಬ್ರಾಹ್ಮಣೇತರರು ಸರ್ಕಾರಿಯುದ್ಯೋಗವನ್ನು ಅಪೇಕ್ಷಿಸುವುದು ಅನರ್ಥಕಾರಿಯೆಂದೂ, ಬ್ರಾಹ್ಮಣೇತರರು ವ್ಯಾಪಾರ, ವ್ಯವಸಾಯ ವೃತ್ತಿಗಳಲ್ಲಿ ನಿಮಗ್ನರಾಗಿರಬೇಕೆಂದೂ ಬೋಧಿಸಿದರು ಇವರು ರಾಜಕೀಯ ವಿಶಾರದರೂ, ದೇಶಭಕ್ತಾಗ್ರೇಸರರಾದ ಮಹಾತ್ಮರ ನಿಜಭಕ್ತರೂ ಆಗಿರುವುದರಿಂದ ತಮ್ಮ ಲೋಕಾನುಭವವನ್ನು ಇತರರಿಗೆ ತಿಳುಪತಕ್ಕದು ಯುಕ್ತವಾಗಿರುವುದಾದರೂ ಸ್ವಪರಿಚಯವಿಲ್ಲದ ವಿಷಯವನ್ನು ಸ್ವಾರ್ಥಪರರ ಮುಖಾಂತರ ತಿಳಿದು ಅದನ್ನು ನಂಬಿ ಇತರರಿಗೆ ಬೋಧಿಸುವುದು ಸಮಂಜಸವಲ್ಲವು.

ರಾಜಧಾನಿಯ ಹವರ್ತಮಂಡ ವೀಧಿಯಲ್ಲಿರುವ ಪ್ರಸಿದ್ಧ ಶ್ರೀಮಂತರಾದ ಮ|| ಅತ್ತಿಗುಪ್ಪೆ ಸೂರ್ಯನಾರಾಯಣಶೆಟ್ಟರು ಪ್ರತಿ ವರ್ಷದಲ್ಲೂ ಶ್ರೀಮನ್ಮಹಾರಾಜರವರ ದಸರಾ ಮತ್ತು ವರ್ಧಂತಿಮಹೋತ್ಸವಗಳನ್ನು ನೋಡಲು ರಾಜಧಾನಿಗೆ ಬರತಕ್ಕ ವೈಶ್ಯಜನರಿಗೆ ತಮ್ಮ ಸತ್ರದಲ್ಲೂ, ಮನೆಯಲ್ಲೂ ದ್ವಿಕಾಲ ಭೋಜನವನ್ನು ಉಚಿತವಾಗಿ ಮಾಡಿಸುತ್ತಿರುವ ಪದ್ಧತಿಯಂತೆ ಈ ವೇಳೆಯೂ ದಸರಾ ಮಹೋತ್ಸವ ಕಾಲದಲ್ಲಿ ಪರಸ್ಥಳದ ವೈಶ್ಯರ ವಸತಿಗೂ, ಭೋಜನಕ್ಕೂ ತಕ್ಕೇರ್ಪಾಟನ್ನು ಮಾಡಿರುತ್ತಾರಲ್ಲದೆ ತಮ್ಮ ಮಕ್ಕಳು ಕಾಶಿಯಾತ್ರೆಗೆ ಹೋಗಿದ್ದು ತಂದಿರುವ ಗಂಗೆಯನ್ನು ವೈಶ್ಯಮಂಡಲಿಯವರಿಗೆ ಹಂಚಿ ತನ್ಮೂಲಕ ಯಾತ್ರಾ ಫಲವು ಅವರುಗಳಿಗೂ ಲಭಿಸುವಂತೆ ಮಾಡುವವರಾಗಿರುವರು. ರಾಜಧಾನಿಗೆ ಬರುವ ಪ್ರತಿಯೊಂದು ರೈಲು ಬಂಡಿಗೂ ತಮ್ಮ ಕಡೆಯವರನ್ನು ಕಳುಹಿಸಿ ವೈಶ್ಯ ಜನರನ್ನು ಬರಮಾಡಿಕೊಂಡು ತಮ್ಮ ಸತ್ರದಲ್ಲೂ, ಮನೆಗಳಲ್ಲೂ ಇಳಿಸಿ ಅವರ ಸತ್ಕಾರವನ್ನು ಪರಿಚಾರಕರುಗಳ ಮೂಲಕ ಮಾಡಿಸುವುದಲ್ಲದೆ ಮ|| ಶೆಟ್ಟರು ತಮ್ಮ ಕುಟುಂಬದವರೊಡನೆ ಸ್ವತಃ ಮಾಡುತ್ತಿರುವುದು ಬಹಳ ಸ್ತುತ್ಯವೂ, ಅನುಕರಣೀಯವೂ, ಅವರ ದಾಕ್ಷಿಣ್ಯಾಭಿಮಾನಪ್ರದರ್ಶಕವೂ ಆಗಿರುತ್ತದೆ ಇವರು ದೀರ್ಘಾಯುಷ್ಮಂತರಾಗಿದ್ದು ಅತಿಥಿಸತ್ಕಾರವನ್ನು ಇನ್ನೂ ಸ್ವತಃಯವಾಗಿ ಮಾಡಿ ಕೀರ್ತಿಭಾಜನರೂ, ಉದ್ಯಾನಪಾತ್ರರೂ ಆಗಲೆಂದು ಹಾರೈಸುತ್ತೇವೆ

ಭರತಖಂಡದ ವೃತ್ತಾಂತಗಳು.

ಮಂಗಳೂರಿನಲ್ಲಿ ನಾಲ್ಕು ಕಾಲುಗಳೂ ನಾಲ್ಕು ಕೈಗಳೂ, ಎರಡು ತಲೆಗಳೂ ಇರುವ ಶಿಶುಗಳು ಕಾಣುವೆಯಂ... ಜನಿಸಿರುವ ಒಂದು ಹಾಸ್ಯ ಪ್ರದರ್ಶನ ನಡೆಯುತ್ತಿದೆಯಂತೆ!

ಕಾಶೀ ... ವ್ಯಾ... ಪಟ್ಟಪ್ರದಾನೋತ್ಸವವು ಈ ತಾ|| ೨೧ ರಲ್ಲಿ ಜರುಗುವುದು. ಶ್ರೀ ಮಹಾತ್ಮ ಗಾಂಧಿಯವರು ಪಟ್ಟಾಭಿಷ್ಟರುಗಳ ಉಪನ್ಯಾಸವ ... ಮಾಡುವವರಾಗಿರುವರು

ಮದ್ರಾಸು ಟಂಕಸಾಲೆ ವೀಧಿಯಲ್ಲಿ ಆನುವಂಶದ ರಂಗ... ಎಂಬ ೧೦ ವರ್ಷ ವಯಸ್ಸಿನ ಒಬ್ಬ ಮನುಷ್ಯನು ದಕ್ಷಿಣಾಮೂರ್ತಿ ದೇವರ ಉಪಾಸನೆ ಮಾಡಲು ೭ ದಿನಗಳವರೆಗೆ ಆಹಾರ ನಿದ್ರೆಯ ವ್ರತವನ್ನು ಆಚರಿಸಿದನು ಆತನು ೭ ದಿವಸ ಉಪವಾಸವಿದ್ದು ೯ ನೆಯ ದಿನವಾದ ಹೂಂದ ... ನಾದನು

ಬೆಂಗಳೂರು ಡಿಸ್ಟ್ರಿಕ್ಟಿಗೆ ಸೇರಿದ ಹಾವಸಕಟ್ಟೆಯಲ್ಲಿ ಒಂದು ಹೆಣ್ಣು ಹಂದಿಯು ಕೆಲವು ಮರಿಗಳನ್ನು ಈಯಿತು ಅವುಗಳಲ್ಲೊಂದಕ್ಕೆ ಏಳಾಲವು. ಬರಿಟೂ ಎರಡು ಕಿವಿಗಳೂ ಸೊಂಡಿಲೂ ಇದ್ದು ಅದು ಆನೆಮರಿಯಂತೆಯೇ ಇದ್ದಿತು, ಆದರೆ ಜನನಕಾಲದಲ್ಲೇ ಸತ್ತುಹೋಗಿದ್ದಿತಂತೆ! ಇದರ ಕಳೇಬರವು ಸೆನರಾ ಮೈಸ್ಕೂಲಿನ ಪ್ರದರ್ಶನಾಲಯದಲ್ಲಿಡಲ್ಪಟ್ಟಿರುವುದಾಗಿ ಪ್ರಕಟನಾಗಿದೆ.

ದಿಲ್ಲಿಯ ಪಟ್ಟಣದಲ್ಲಿ ಅಸ್ಪೃಶ್ಯರು ಶಿವದೇವಾಲಯವನ್ನು ಪ್ರವೇಶಿಸಲು ಅವಕಾಶ ಕೊಡಬೇಕೆಂದು ದೇವಸ್ಥಾನದ ಅಧಿಕಾರಿಗಳಿಗೆ ಅರ್ಜಿಗಳನ್ನು ಬರೆದುಕೊಂಡು ಹೋರಾಡುತ್ತಿರುವರು ಅವರ ಪ್ರವೇಶಕ್ಕೆ ಅಧಿಕಾರಿಗಳಲ್ಲಿ ಕೆಲವೊಪ್ಪಿರುವರು ಮತ್ತೆ ಕೆಲರು ನಿರೋಧಿಸುತ್ತಿರುವರು. ಈ ಅಸ್ಪೃಶ್ಯರಲ್ಲಿ ಕೆಲವರು ಆಗಲೇ ಫೈರಂಗಿಗಳ ನೆರವಿಂದ ದೇವಸ್ಥಾನವನ್ನು ಪ್ರವೇಶಿಸಲು ಪಕ್ಷವಹಿಸಿರುವರು.

ನೆಲ್ಲೂರು ... ಜೆನರಲ್ ಆಸ್ಪತ್ರೆಯಲ್ಲಿ ೩೫ ವರ್ಷ ವಯಸ್ಸಿನ ಮಹಮ್ಮದೀಯ ಸ್ತ್ರೀಗೆ ೪ ಹೆಣ್ಣುಮಕ್ಕಳು ಹುಟ್ಟಿದುವು ... ಗಳಲ್ಲಿ ಮೂರು ಜನಿಸಿದ ೩ ಗಂಟೆಯವರೆಗೆ ಬದುಕಿದ್ದುವು ... ಬೆಳಿಗ್ಗೆ ... ಸತ್ತು ಜನಿಸಿತು. ಈ ಮಕ್ಕಳಲ್ಲಿ ಮೊದಲನೆಯದು ೨ ಪೌಂಡು, ಎರಡನೆಯದು ೩ ಪೌಂಡು, ಮೂರನೆಯದು ೩ ಪೌಂಡು, ನಾಲ್ಕನೆಯದು ೨½ ಪೌಂಡು ತೂಕವಿದ್ದುವು ಈ ಮಕ್ಕಳನ್ನೂ ಅವುಗಳ ತಾಯಿಯನ್ನೂ ನೋಡಲು ಜನರು ತಂಡತಂಡವಾಗಿ ಬರುತ್ತಿದ್ದರು.

ಮದ್ರಾಸು ಟಂಕಸಾಲೆ ವೀಧಿಯಲ್ಲಿರುವ ಜೈನ ದೇವಾಲಯದಲ್ಲಿ ದೇವರಿಗೆ ಧರಿಸುವ ೨೫,೦೦೦ ರೂ. ಬೆಲೆ ಬಾಳುವ ಕಿರೀಟವು ಕಳುವಾಗಿರುವ ವಿಚಾರವು ಪೊಲೀಸಿನವರಿಗೆ ತಿಳಿದು ಅವರು ಆ ದೇವಾಲಯದಲ್ಲಿ ಮೊದಲು ಕರಣೀಕನಾಗಿದ್ದ ರಾಮನಾಲ್ ಎಂಬವನನ್ನೂ, ಅಂಕುಬಾಯಿ ಎಂಬ ಕಸ ಗುಡಿಸುವವಳನ್ನೂ ಹಿಡಿದು ವಿಚಾರಿಸುವಲ್ಲಿ ಆ ಗುಮಾಸ್ತನು ಕಿರೀಟವನ್ನು ಅಂಕುಬಾಯಿಯ ಮೂಲಕ ಒಬ್ಬ ದೇವದಾಸಿಯ ಮನೆಯಲ್ಲಿರಿಸಿದ್ದನೆಂದು ಗೊತ್ತಾದುದಲ್ಲದೆ ಕಿರೀಟವು ದೊರಕಿದುದರ ಮೇಲೆ ಪೊಲೀಸರು ಅವರಿಬ್ಬರನ್ನೂ ಮೆಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಿರುವರು.

ಹೈದರಾಬಾದು ಸಂಸ್ಥಾನಾಧೀಶ್ವರರಾದ ನೈಜಾಂ ಪ್ರಭುಗಳ ದ್ವಿತೀಯ ಕುಮಾರರ ವಿವಾಹ ಸಂಬಂಧವಾಗಿ ಕಳೆದವಾರದ ಸರ್ಕಾರೀ ಗೆಜೆಟ್ಟಿನಲ್ಲಿ ವಿವರವು ಪ್ರಕಟಿಸಲ್ಪಟ್ಟಿದೆ ಈ ರಾಜಕುಮಾರಿಯನ್ನು ಗತಿಸಿದ ಮುಜಫರ್ ಜಂಗ್‌ರವರ ಕುಮಾರ ೨೦ ವರ್ಷ ವಯಸ್ಸಿನ ಇವರು ಅಕ್ಸೆಸರಿ...ರವರಿಗೆ ಕೊಡಲು ನಿರ್ಧರವಾಗಿರುವುದಲ್ಲದೆ, ಈ ವರನಿಗೆ ನವಾಬ್ ಜಂಗ್ ಎಂಬ ಪ್ರಶಸ್ತಿಯೂ, ರಾಜಕುಟುಂಬದವರು ಧರಿಸುವ ತಲೆ ಪಾಗನ್ನು ಧರಿಸುವ ಅಧಿಕಾರವೂ ಕೊಡಲ್ಪಟ್ಟಿದೆ. ಈ ನೂತನ ಅಳಿಯಂದಿರು ವಾಣಿಜ್ಯ ವಾಣಿಜ್ಯಮಿಕ ವಿಷಯದಲ್ಲಿ ಶಿಕ್ಷೆಯನ್ನು ಹೊಂದಲು ಸ್ವಲ್ಪ ದಿನ ಇಂಗ್ಲೆಂಡಿಗೆ ಪ್ರಯಾಣ ಮಾಡುವವರಾಗಿರುವರು ಈ ರಾಜವಿವಾಹಕ್ಕೆ ತಕ್ಕೇರ್ಪಾಟು ನಡೆಯುತ್ತಲಿರುವುದು

ಮದ್ರಾಸು ಪಟ್ಟಣದಲ್ಲಿ ಶ್ರೀಮಂತರಾದ ರಾವ್ ಗೋವಿಂದದಾಸರ ಉಪಪತ್ನಿಯಾಗಿದ್ದ ಬ್ರಾಹ್ಮಣ ಸ್ತ್ರೀಯ ಗರ್ಭದಲ್ಲಿ ಜನಿಸಿದ ... ಕೃಷ್ಣ ಎಂಬವನೂ, ಅವನ ಇಬ್ಬರು ಸಹೋದರರೂ ತಮ್ಮನ್ನು ಪೋಷಿಸುವ ಭಾರವು ರಾವ್ ಗೋವಿಂದದಾಸರ ಮೇಲೆ ಬೀಳುತ್ತಿರುತ್ತದೆ ಹಾಗೆ ನಿರ್ವಹಿಸಲಾಗುವುದಿಲ್ಲವೆಂದು ಅವರು ಹೇಳುವುದಾದರೆ ತಮ್ಮಲ್ಲಿ ಪ್ರತಿಯೊಬ್ಬನಿಗೂ ತಿಂಗಳೊಂದಕ್ಕೆ ೩೦೦ ರೂ ಗಳ ಜೀವನಾಂಶವನ್ನು ಕೊಡಿಸಬೇಕೆಂದು ದಾವೆಯನ್ನು ಹೂಡಿದರು ತಾನು ವಾದಿಯರ ತಾಯಿಯನ್ನಿಟ್ಟುಕೊಂಡಿರಲಿಲ್ಲವಾದುದರಿಂದ ವಾದಿಗಳಿಗೆ ಜೀವನಾಂಶ ಕೊಡಬೇಕಾದುದಿಲ್ಲವೆಂದೂ ಒಂದು ವೇಳೆ ಕೊಡಬೇಕಾಗಿದ್ದರೂ ತನ್ನ ವರಮಾನವು ತಿಂಗಳಿಗೆ ೧೫೦ ರೂ. ಗಿಂತ ಹೆಚ್ಚಾಗಿಲ್ಲವೆಂದು ಪ್ರತಿವಾದಿಯು ವಾದಿಸಿದರು. ನ್ಯಾಯಾಧೀಶರು ಉಭಯರ ವಾದವಿವಾದಗಳನ್ನು ಕೇಳಿ ವಾದಿಗಳ ತಾಯಿಯನ್ನು ಪ್ರತಿವಾದಿಯಿಟ್ಟುಕೊಂಡಿದ್ದುದು ನಿಜವೆಂದು ನಿದರ್ಶನಕ್ಕೆ ಬಂದಿರುವುದರಿಂದ ವಾದಿಗಳಿಗೆ ಜೀವನಾಂಶ ಸಲ್ಲಬೇಕೆಂದೂ ಪ್ರತಿವಾದಿಯ ವರಮಾನವು ವರ್ಷಕ್ಕೆ ೧೦,೦೦೦ ರೂ. ಇರುವುದರಿಂದ ವಾದಿಗಳಲ್ಲಿ ಪ್ರತಿಯೊಬ್ಬನಿಗೂ ತಿಂಗಳೊಂದಕ್ಕೆ ೫೦ ರೂ ನಂತೆ ಜೀವನಾಂಶ ಸಲ್ಲತಕ್ಕುದೆಂದೂ ತೀರ್ಮಾನಿಸಿದರು.

ಸಿದೇಶದ ವೃತ್ತಾಂತಗಳು.

... ದ್ವೀಪದಲ್ಲಿ ಸಮುದ್ರವು ಉಕ್ಕಿದುದರಿಂದ ೨೦೦ ಜನರು ನ್ಯಾಶರಾದರು ಉಳಿದವರಿಗೆ ನಿಲ್ಲಲು ನೆರಳೂ ತಿನ್ನಲು ... ಇಲ್ಲದಂತಾಗಿದೆ

ಪ್ರೊಸ್ತ್ರಾಪಿಸ ... ಪಟ್ಟಣವನ್ನು ಚೈನಾದವರು ಪುನಃ ವಶಪಡಿಸಿಕೊಂಡರು ಚಂಗಿಸಂಗ್ ಮಂಚೂರಿಯ ಹತ್ತಿರ ಕೂಡ ರಷ್ಯನರು ಬಂಧಿಸಲ್ಪಟ್ಟರು

ಪರ್ಷಿಯಾದ ... ಗಳಲ್ಲಿ ಪ್ರವಾಹವು ಒಂದು ಹಿಂದೆ ಅನೇಕ ಅನರ್ಥವನ್ನುಂಟುಮಾಡಿದುದಲ್ಲದೆ ಪುನಃ ಹೊಸದಾಗಿ ಪ್ರವಾಹವು ಏರಿ ಒಂದು ೫೦೦೦ ಮನೆಗಳು ನಾಶವಾಗಿ ೧ ... ಜನರು ... ರು

... ಯಲ್ಲಿ ನಿರುದ್ಯೋಗಿಗಳ ಸಂಖ್ಯೆಯು ತಾ|| ೨-೯-೨೮ ರಲ್ಲಿ ೧೧,೭೨ ... , ತಾ|| ೨೬-೮-೨೮ ರಲ್ಲಿ ೧೧,೫೬,೫೦೦, ತಾ|| ... ರಲ್ಲಿ ೧೧,೫೨,೯೦೦ ಇದ್ದಿತು. ಇವರ ಸಂಖ್ಯೆಯಲ್ಲಿ ತಾ|| ... ಕ್ಕಿಂತ ೧,೭೨,೩೭೭ ಮಂದಿಯೂ ತಾ|| ೨೬-೮-೨೮ ಕ್ಕಿಂತ ೬೦೦ ಮಂದಿಯೂ ಕಡಮೆಯಾದರು.

ಅಮಾನುಲ್ಲಾ ... ರವರ ಮಗಳು ಆಫ್ಘನಿಸ್ತಾನದಿಂದ ಬಾಹ್ಯಲೋಕಕ್ಕೆ ... ಬಹಾದ್ದೂರ್ ... ದಾಗ ... ವಹಿಸಲು ನಿರಾಕರಿಸಿದುದರಿಂದ ಬಚ್ಚಾಸಾಕನು ಅಮಾನುಲ್ಲಾರವರ ಮಗಳಿಗೆ ಛಾರವನ್ನು ... ಹಗ್ಗಗಳಿಗೆ ಮೊಳೆಗಳನ್ನು ಜಡಿದು ರಕ್ತವು ಪ್ರವಾಹದಂತೆ ಸುರಿಯುತ್ತಿರುವಾಗ್ಗೆ ಫಿರಂಗಿಯ ಬಾಯಿಗೆ ಅಮಾನುಲ್ಲಾರವರನ್ನು ಕಟ್ಟಿಸಿ ಗುಂಡಿನಿಂದ ಹೊಡೆಸಿದನು ಎಂದು ಅವರ ಮಗಳು ತಂದೆಯ ಕ್ರೂರ ಮರಣದ ವಿಚಾರವನ್ನು ವಿವರಿಸಿ ಹೇಳುತ್ತಾಳೆ

ಪಾಲೆಸ್ಟೈನಿನಲ್ಲಿ ಪೊಲೀಸು ... ಹುದ್ದೆಗಳಿಗಾಗಿ ... ನಿಯಮಿಸಲ್ಪಟ್ಟ ೧೦೦ ಮಂದಿ ...

ತಲು ದೀರ್ಘ ಇಟ್ಟಿ ... ಪ್ರಹಾರ ಮಾಡಿದರು ... ನ್ಯೂಯಾರ್ಕ್ ... ವರ್ತಮಾನಪತ್ರಿಕೆಗಳು ... ೧೦ ಮಂದಿ ಸೇರಿಸಲ್ಪಟ್ಟ ... ದವರೆಂದು ತಿಳಿಸುತ್ತವೆ

... ಅಮೆರಿಕದ ... ಯಿಂದ ನೌಕೆ ... ದೇಶಕ್ಕೆ ... ಪ್ರಾರಂಭವಾಗಿ ಸುಮಾರು ೩೦೦ ಜನರು ಗಾಯಪಡೆದಿರುವರು ಇದರಿಂದ ... ತಳಕಳಗಾಗುವುದೆಂದು ಭಯಪಟ್ಟು ಸ್ವಸ್ಥವನ್ನು ಸಿದ್ಧಗೊಳಿಸುತ್ತಿದೆ

ದಾನಶೀಲನೆಂದು ಹೊಗಳಲ್ಪಡುತ್ತಿರುವ ಘೋರ್ಡ್ ಎಂಬ ವ್ಯಾಪಾರಿಯಾದ ಹೆನ್ರಿ ಫೋರ್ಡ್ ವಾರ್ಡ್‌ರವರು ಬರೆದಿರುವ ಮರಣಶಾಸನದ ಪ್ರಕಾರ ಆತನ ಒಟ್ಟು ಆಸ್ತಿಯು ೬,೦೭,೪೦,೦೭೦ ರೂಪಾಯಿಗಳೆಂದು ಗೊತ್ತಾಗುತ್ತದೆ ಇದರಲ್ಲಿ ೩,೯೦,೦೦,೦೦೦ ರೂ ತೆರಿಗೆಗೆ ಹೋಗುತ್ತ, ಉಳಿಯುವ ೨,೭೭,೪೦,೦೭೦ ರೂಗಳಲ್ಲಿ ೧,೦೬,೯೦,೦೦೦ ರೂಗಳು ಧರ್ಮಕಾರ್ಯಗಳಿಗೆ ವಿನಿಯೋಗಿಸಲ್ಪಡುವುವು.

ಜಪಾನಾ ಸೈನಿಕರೂ ಬಿಳೀ ಗಾರ್ಡುಗಳೂ ರಷ್ಯನರ ಮೇಲೆ ಕೈಮಾಡಿದುದರಿಂದ ತಾವು ಯುದ್ಧಸನ್ನದ್ಧರಾಗಬೇಕಾಯಿತೆಂದು ರಷ್ಯಾ ಪ್ರಭುತ್ವದವರು ಹೇಳುತ್ತಿರುವರಲ್ಲದೆ ರಷ್ಯಾದ ಸ್ಪೈಟುಗಳು ಕೊರಿಯಾದವರ ಸಹಾಯದಿಂದ ಜೈನಾದ ಮೇಲೆ ದಂಡೆತ್ತಿ ಹೊರಟು ಊರುಗಳನ್ನು ಸುಟ್ಟು ಜನರನ್ನು ಸುಲಿಗೆ ಮಾಡುತ್ತಿರುವರು ೩೦೦೦೦ ಜೈನಾ ಸೇನೆಯು ಅಲ್ಲಿ ಕೂಡಿರುತ್ತದೆ ಇದಕ್ಕೆ ಮೊದಲು ನಡೆದ ಯುದ್ಧದಲ್ಲಿ ೨೦೦ ಮಂದಿ ಜೈನಾದವರು ಮಡಿದರು

ಫ್ರಾನ್ಸಿನಲ್ಲಿ ಮುಖ್ಯಮಂತ್ರಿಯಾಗಿದ್ದ ಕ್ಲೆಮೆನ್ಸೋ ಎಂಬವರಿಗೆ ಈಗ ೮೦ ವರ್ಷ ವಯಸ್ಸಾಗಿದೆ ಆದರೂ ಇವರು ೩೦ ವರ್ಷ ತರುಣನಂತೆ ದೇಹದಾರ್ಢ್ಯವುಳ್ಳವರಾಗಿರುತ್ತಾರೆ ಇದಕ್ಕೆ 'ನಾನು ನಿತ್ಯವಿಧಿಗಳನ್ನೂ ವ್ಯಾಯಾಮಗಳನ್ನೂ ಕ್ರಮತಪ್ಪದೆ ಮಾಡುತ್ತಿದ್ದೇನೆ ಆದರೂ ಆಹಾರವನ್ನು ಸ್ವಲ್ಪಮಾತ್ರ ಬಹುಮಿತಿಯಾಗಿ ತೆಗೆದುಕೊಳ್ಳುತ್ತೇನೆ ಇದೇ ನನ್ನ ದೇಹದಾರ್ಢ್ಯಕ್ಕೆ ಮುಖ್ಯಕಾರಣ ಮನುಷ್ಯರೆಲ್ಲರೂ ನನ್ನ ಜೀವನಕ್ರಮವನ್ನನುಸರಿಸಿ ನಡೆದರೆ ಅವರ ಜೀವಿತಕಾಲವು ಒಂದು ಶತಮಾನದಿಂದ ಮೂರು ಶತಮಾನಗಳಿಗೆ ಹೆಚ್ಚುವುದು' ಎಂದು ಹೇಳುತ್ತಾರೆ

ಜೈನಾದವರಿಗೂ ರಷ್ಯನರಿಗೂ ಎರಡು ದಿವಸ ಬಹು ತೀಕ್ಷ್ಣವಾಗಿ ಯುದ್ಧ ನಡೆಯಿತು ರಷ್ಯಾದವರಿಂದ ಹಿಡಿಯಲ್ಪಟ್ಟಿದ್ದ ಸೋವಿಯಟ್ ಪ್ರದೇಶದಲ್ಲಿ ಜೈನಾ ಸೈನಿಕದಳವೂ ವೈಟ್‌ಗಾರ್ಡ್ ಗುಂಪೂ ೧೦ ಸಾರಿ ಹೊಸದಾಗಿ ರಷ್ಯಾದವರನ್ನು ಪ್ರತಿಭಟಿಸಿದರು ಇದಕ್ಕೆ ನಾನ್ಕಿಂಗು ಮುಕ್ಡೆನು ದೊರೆತನದವರೇ ಬಾಧ್ಯರು ಎಂದು ಒಂದು ಸ್ಟೇಟ್‌ಮೆಂಟನ್ನು ಬರೆದು ಸೋವಿಯಟ್ ವಿದೇಶ ವರ್ಗದವರು ? ಮಾಸ್ಕೋ ರಾಯಭಾರಿಗೆ ಕೊಟ್ಟು ಅದನ್ನು ನಾನ್ಕಿಂಗು ಮುಕ್ಡೆನ್ನು ದೊರೆತನದವರಿಗೆ ತಲುಪಿಸಬೇಕೆಂದು ಕೋರಿದರು ಇದೇ ತಾ|| ೧೦ ನೇ ಮಂಗಳವಾರ ಸೋವಿಯಟ್ಟಿನ ವಿಮಾನಗಳು ಪೋಗ್ರಾಣಿಕ್ ರೈಲು ಸ್ಟೇಷನ್ ಟೆಲಿಗ್ರಾಫ್ ಆಫೀಸು ರೇಡಿಯೋ ಸ್ಟೇಷನ್ ಇವುಗಳ ಮೇಲೆ ಬಾಂಬುಗಳನ್ನು ಹಾಕಿ ಅವನ್ನು ಧ್ವಂಸಮಾಡಿದುವು ಇದರಿಂದ ೮ ಮಂದಿ ಸೈನಿಕರಿಗೂ ೨೦ ಮಂದಿ ರೈಲ್ವೆ ಉದ್ಯೋಗಿಗಳಿಗೂ ಪ್ರಾಣಾಪಾಯವಾಗಿರುತ್ತದೆ ಎಂದು ಮುಕ್ಡೆನುವಾರ್ತೆಯು ತಿಳಿಸುತ್ತದೆ

ಶಂಕರ ಕಾಲೇಜಿನ ವಿದ್ಯಾರ್ಥಿಗಳ ಪರೀಕ್ಷೆಯ ಪರಿಣಾಮಗಳು

ಈ ವರ್ಷ ನಮ್ಮ ಕಾಲೇಜಿನ ವತಿಯಿಂದ ಕಲ್ಕತ್ತಾ ಯೂನಿವರ್ಸಿಟಿಯ ಪರೀಕ್ಷೆಗೆ ಕಳಿಸಿದ ... ಜನರಲ್ಲಿ ಕೆಳಗೆ ಬರೆದ ೭ ಜನ ವಿದ್ಯಾರ್ಥಿಗಳು ಪಾಸಾಗಿರುವವರ ವಿವರ —

ಸಾಹಿತ್ಯ ಮಧ್ಯಮದಲ್ಲಿ

1 ಕಾಶೀನಾಥ ಶಾಸ್ತ್ರೀ ಹರೇಗಲ್ಲು
2 ಶಂಭುಲಿಂಗ ಶರ್ಮಾ ಭೀಮನಹಳ್ಳಿ
3 ವೀರಭದ್ರ ಶರ್ಮಾ ಅಮರಾಪುರ

ಸಾಹಿತ್ಯಾದ್ಯದಲ್ಲಿ

1 ಚನ್ನವೀರ ದೇವರು ತಾಳಿಕೋಟಿ
2 ಗುರುಶಾಂತ ದೇವರು ಶಹಪೂರು
3 ಚಂದ್ರಶೇಖರಯ್ಯ ಸೂಣಕಲ್ಲಬಿದರಿ

ವ್ಯಾಕರಣಾದ್ಯದಲ್ಲಿ

1 ಸಿದ್ಧೇಶ್ವರ ನಾರಾಯಣಪೇಟೆ

ಸೆಕ್ರೆಟರಿ
ಶಂಕರ ಕಾಲೇಜು ಯಾದಗಿರಿ

ಮಾನವ ಧರ್ಮಶಾಸ್ತ್ರ

[ಮ|| ರಾ|| ದೇವಸ್ಥಾನಿ ನರಸಿಂಹ ನಾರಾಯಣರಾಯರು ಮದ್ರಾಸು ಆಂಧ್ರಪತ್ರಿಕೆಯಲ್ಲಿ ಬರೆದಿರುವುದರ ಅನುವಾದ]

ಮನುಸ್ಮೃತಿಯು ಸ್ಮೃತಿಗಳೆಲ್ಲಲ್ಲ ಮೊದಲನೆಯದೆಂದೂ, ಸಂಪೂರ್ಣ ಪ್ರಾಮಾಣಿಕ ಹಿಂದುಗಳೆಲ್ಲರಿಂದ ಭಾವಿಸಲ್ಪಟ್ಟು ಗೌರವಿಸಲ್ಪಡುತ್ತಿದೆ ಎಂಬುದಕ್ಕೆ ಸಂದೇಹವೇ ಇಲ್ಲ ಪ್ರಕೃತದಲ್ಲಿ ವ್ಯಾಪಕವಾಗಿರುವ ಈ ... ಸ್ಮೃತಿ ... ವರ್ಣಾಶ್ರಮ ... ಮನುವು ... ಕಾಲದಲ್ಲಿ ... ಬರೆಯಲ್ಪಟ್ಟಿತೆಂದು ... ಸುಮಾರು ... ವಿರಚಿತವಾದ ... ಆಧಾರಗಳ ... ಸಂದೇಹ ... ಧರ್ಮಶಾಸ್ತ್ರವೆಂಬ ಹೆಸರು ಬಂದಿರುತ್ತದೆ ಈ ಶಾಸ್ತ್ರದಿಂದ ಧರ್ಮಸೂತ್ರವೇ ಅಲ್ಲದೆ ಶ್ರೌತಸೂತ್ರ ಗೃಹ್ಯಸೂತ್ರ ಸಹ ಇವರಿಗೆ ದೊರಕಿರುತ್ತವೆ ಈ ಧರ್ಮಶಾಸ್ತ್ರದ ಪ್ರಾತಿಪದಿಕವಾದ ಗದ್ಯ ಧರ್ಮಸೂತ್ರವು ಇನ್ನೂ ದೊರಕಿಲ್ಲವು ಆದುದರಿಂದ ಈ ಗ್ರಂಥಸೂತ್ರಕಾಲವು (೬೦೦ ಬಿ ಸಿ - ೩೦೦ ಬಿ ಸಿ) ಅನಂತರವೇ ಬರೆಯಲ್ಪಟ್ಟಿರಬೇಕು ಇದರ ಮೊದಲನೇ ವ್ಯಾಖ್ಯಾನಕರ್ತನ ಮೇಧಾತಿಥಿಯು ೧೦೦೦ ಎ ಡಿ ಯಲ್ಲಿ ಜೀವಿಸಿರಬೇಕೆಂದು ಸ್ಪಷ್ಟವಾಗಿ ನಮಗೆ ತಿಳಿದುಬಂದಿರುವುದರಿಂದ ಈ ಗ್ರಂಥವು ತನ್ನ ಪಕ್ಷ ೬೦೦ ಎ ಡಿ ಯಲ್ಲಿ ಬರೆಯಲ್ಪಟ್ಟಿರಬೇಕು ಕುಮಾರಿಲಭಟ್ಟನು ಅಷ್ಟಲ್ಲ ಯವನ ... ವ್ಯಾಖ್ಯಾನವನ್ನು ೭೦೦ ಎ ಡಿ ಯಲ್ಲಿ ರಚಿಸಿರಬೇಕೆಂದು ಸ್ಪಷ್ಟವಾಗುತ್ತದೆ ಮಾನವಧರ್ಮಶಾಸ್ತ್ರದಲ್ಲಿಯ ಭಾಷಾಪ್ರಯೋಗದಿಂದ ಕ್ರಿಸ್ತ ಹುಟ್ಟಿದಮೇಲೆ ಈ ಗ್ರಂಥವು ೧೦೦ ಎ ಡಿ ಗೂ ೫೦೦ ಎ ಡಿ ಗೂ ಮಧ್ಯದಲ್ಲಿ ಬರೆಯಲ್ಪಟ್ಟಿರುವುದೆಂದು ಊಹಿಸಬಹುದು ಇದರಲ್ಲಿ ಹೇಳಲ್ಪಟ್ಟಿರುವ ಈಗಿನ ಸಾಂಘಿಕಪರಿಣಾಮವಾದಕ್ಕೆ ಸಂಬಂಧಪಟ್ಟ ಕೆಲ ಧರ್ಮಗಳನ್ನು ಈ ಕೆಳಗೆ ಉದಹರಿಸಿರುವೆನು

(1) ಕರೀಣಾನೆ ... ವೇದವನ್ನರಿಯದ ಬ್ರಾಹ್ಮಣ ಇವು ನಾಮಮಾತ್ರವಲ್ಲದೆ ಪ್ರಯೋಜನವಾದುವಲ್ಲವು (ಅ II ಶ್ಲೋ 157)

(2) ನಪುಂಸಕನಿಗೆ ಹೆಂಡತಿಯೂ ಒಂದ ಹಸುವಿಗೆ ಮತ್ತೊಂದು ಹಸುವೂ ಬುದ್ಧಿಹೀನನಿಗೆ ಧರ್ಮೋಪದೇಶವೂ ಹೇಗೆ ಅನುಪಯೋಗವೋ ಹಾಗೆ ವೇದವನ್ನರಿಯದ ಬ್ರಾಹ್ಮಣನು ಕೂಡ ಅನುಪಯೋಗಿಯು (II 168) ಈ ಜನ್ಮದಲ್ಲೇ ಆತನೂ ಆತನ ಕುಟುಂಬವೂ ಶೂದ್ರರೇ (II 168) ವೇದಜ್ಞಾನವಿಲ್ಲದ ಬ್ರಾಹ್ಮಣನು ಅಗ್ನಿಹೋತ್ರದಲ್ಲಿ ಸಟ್ಟೆಗೆಯಂತೆ ಭಸ್ಮವಾಗುವನು (III 168)

(3) ಬ್ರಾಹ್ಮಣ ಕ್ಷತ್ರಿಯ ವೈಶ್ಯರುಗಳು ತಮ್ಮ ಕೆಳಗಿನ ವರ್ಣದವರಲ್ಲಿ ಹೆಣ್ಣನ್ನು ತಂದು ಲಗ್ನವಾಗಬಹುದು (III 13) ಆದರೆ ಬ್ರಾಹ್ಮಣನು ಶೂದ್ರಕನ್ಯೆಯನ್ನು ವಿವಾಹಮಾಡಿಕೊಂಡಲ್ಲಿ ಅವಳ ಹೊಟ್ಟೆಯಲ್ಲಿ ಹುಟ್ಟುವ ಮಗನು ಶೂದ್ರನಾಗುವನು (III 17)

(4) ಸ್ತ್ರೀಯರನ್ನು ಗೌರವಿಸುವ ಕುಟುಂಬವು ಸಂಪತ್ತಿನಿಂದ ಕೂಡಿ ದೇವತೆಗಳನ್ನು ಕೂಡ ಸಂತೋಷಪಡಿಸಬಲ್ಲುದು ಸ್ತ್ರೀಯರು ವ್ಯಸನಯುಕ್ತರಾದರೆ ಆ ಕುಟುಂಬವು ನಾಶವಾಗುವುದು (3 ೨೫೧)

(5) ಚಂಡಾಲ ನಾಯಿ ಹಂದಿ ನಪುಂಸಕ ಹುಂಜ ಬಹಿಷ್ಟೆ ಸ್ತ್ರೀ ಇವರುಗಳು ನೋಡುತ್ತಿರುವಂತೆ ಬ್ರಾಹ್ಮಣನು ಭೋಜನಮಾಡಕೂಡದು (3 ೨೩೯) ನೀಚ ಜಾತಿಯವನನ್ನು ಮುಟ್ಟುವುದರಿಂದ ಬ್ರಾಹ್ಮಣನ ಶಕ್ತಿ ಎಲ್ಲವೂ ನಾಶವಾಗುವುದು (3 241)

(6) ಎಳ್ಳು ಅಕ್ಕಿ ಬೇಳೆ ನೀರದಂಟು ಇವುಗಳಿಂದ ಒಂದು ತಿಂಗಳು ಮೀನಿನ ಮಾಂಸದಿಂದ ಎರಡು ತಿಂಗಳು ಜಿಂಕೆ (Ante ...) ಮಾಂಸದಿಂದ ನಾಲ್ಕು ತಿಂಗಳು ಪಕ್ಷಿಮಾಂಸದಿಂದ ಐದು ತಿಂಗಳು ಮೇಕೆ ಮಾಂಸದಿಂದ ಆರು ತಿಂಗಳು ಜಿಂಕೆಯ ಮಾಂಸದಿಂದ ೮ ರಿಂದ ೯ ತಿಂಗಳು ಕಾಡ ಹಂದಿ ಕಾಡ ಕೋಣಗಳ ಮಾಂಸದಿಂದ ೧೦ ತಿಂಗಳು ಮೊಲದ ಮಾಂಸದಿಂದ ೧ ತಿಂಗಳ ಹಸುವಿನ ಹಾಲಿನಿಂದ ಒಂದು ವರ್ಷ ಕೆಂಪು ಆಡಿನ ಮಾಂಸದಿಂದ ಎಷ್ಟು ಕಾಲದವರೆಗಾದರೂ ಶ್ರಾದ್ಧದಲ್ಲಿ ಬ್ರಾಹ್ಮಣರಿಗೆ ಉಣಬಡಿಸಿದರೆ ಪಿತೃಗಳು ತೃಪ್ತಿಹೊಂದುವರು (3 ೨೬೭ ರಿಂದ ೨೭೨ ವರೆಗೆ)

(7) ಬ್ರಾಹ್ಮಣನು ಬ್ರಹ್ಮಚರ್ಯವ್ರತವನ್ನು ಬಿಟ್ಟು ವೇದಾಧ್ಯಯನ ಮಾಡತಕ್ಕ ಮತ್ತು ಅಧ್ಯಯನ ಮಾಡಿಸುತ್ತ ಧಾನ್ಯದ ಹಿಟ್ಟಿನಿಂದ ಗಂಜಿಮಾಡಿ ಕುಡಿದು ತೃಪ್ತಿಹೊಂದಿ ಶುದ್ಧಜೀವನವನ್ನು ಮಾಡಬೇಕು (4 10 ರಿಂದ 12 ವರೆಗೆ)

(8) ಪತ್ನಿಯೊಡನೆ ಊಟಮಾಡಕೂಡದು ಪತ್ನಿಯ ಊಟಮಾಡುವುದನ್ನು ನೋಡಕೂಡದು (4 ೪೩)

(9) ಶೂದ್ರನಿಗೆ ಬುದ್ಧಿ ಹೇಳಕೂಡದು ದೇವರಿಗೆ ಅರ್ಪಿಸಿದ ಆಹಾರವನ್ನು ಅವನಿಗೆ ಇಡಕೂಡದು ಧರ್ಮ ... ಸಂಬಂಧವಾದ ಕರ್ಮವನ್ನು ಅವನಿಗೆ ಹೇಳಕೂಡದು ... ಹಾಗೆ ಹೇಳಿದವನಾದರೆ ಆ ಶೂದ್ರನೊಡನೆ ಅಸಂವೃತವೆಂಬ ನರಕಕ್ಕೆ ಬ್ರಾಹ್ಮಣನು ಬೀಳುವನು (4 ೮೦ ೮೧)

(10) ಶೂದ್ರರಿಂದ ದಾನವನ್ನು ತೆಗೆದುಕೊಳ್ಳಕೂಡದು ... ಅಂಗಡಿ ಇಟ್ಟಿರುವವನಿಂದಲೂ ... (೨೧೮) ಅಶಾಸ್ತ್ರೀಯ ದಾನವನ್ನು ತೆಗೆದುಕೊಂಡವನು ... ೨೧ ನರಕಗಳಲ್ಲಿ ಬೀಳುವನು (4 ೮೭)

(11) ಶೂದ್ರನಿಗೆ ಕೇಳಿಸುವಂತೆ ವೇದಾಧ್ಯಯನ ಮಾಡಕೂಡದು (4 ೯೯)

(12) ವೇದಾಧ್ಯಯನ ಮಾಡದಿರುವ ಬ್ರಾಹ್ಮಣನು ದಾನವನ್ನು ತೆಗೆದುಕೊಂಡಲ್ಲಿ ಕಲ್ಲಿನಿಂದ ಮಾಡಿದ ದೋಣಿಯಲ್ಲಿ ಕುಳಿತು ನೀರಿನಲ್ಲಿ ಮುಳುಗುವ ಹಾಗೆ ಆಗುವನು ಅಂತಹ ಬ್ರಾಹ್ಮಣನಿಗೆ ದಾನ ಕೊಡತಕ್ಕವನು ಅಲ್ಲದೆ ಒಳ್ಳೆ ನೀರನ್ನು ಸಹ ಕುಡಿಯಲಿಕ್ಕೆ ಅವನಿಗೆ ಕೊಡಕೂಡದು (4 ೧೯೦ ರಿಂದ ೧೯೪)

(13) ಸಂಗೀತಗಾರ ಶ್ವಪಚ ಹೆಟ್ಟು ಬಡ್ಡಿಗೆ ಸಾಲ ಕೊಡುವವನು ನಪುಂಸಕ ವೈದ್ಯ ಇವರುಗಳ ಅನ್ನವನ್ನು ತಿನ್ನಕೂಡದು (4 ೨೧೧ ರಿಂದ 212)

(14) ಬೆಳ್ಳುಳ್ಳಿ ಈರುಳ್ಳಿಯನ್ನು ತಿನ್ನಕೂಡದು (V 5) ಕೋಳಿಯನ್ನು ... ಇತರ ಅನೇಕ ಜಂತುಗಳನ್ನು ತಿನ್ನಕೂಡದು (V 16) ಐದು ನಖವುಳ್ಳ ಪ್ರಾಣಿಗಳಲ್ಲಿ ಕಾಡುಹಂದಿ ಮುಳ್ಳುಹಂದಿ ... ಇವುಗಳನ್ನು ತಿನ್ನಬಹುದು ಒಂಟೆಯ ವಿನಾ ಒಂದು ದಂತವಂಕ್ತಿಯುಳ್ಳ ಜಂತುವನ್ನು ತಿನ್ನಬಹುದು (V 18)

(15) ದೇವಪಿತೃಯಜ್ಞವನ್ನು ಮಾಡಿದ ತರುವಾಯ ಅಂತಹ ಮಾಂಸವನ್ನು ಭಕ್ಷಿಸತಕ್ಕದ್ದು ಉಳಿದ ಕಾಲದಲ್ಲಿ ಅದನ್ನು ಬಿಟ್ಟಿರುವುದೇ ಉತ್ತಮವು (V ೩೧ ರಿಂದ ೫೬ ರ ವರೆಗೆ) ಶ್ರಾದ್ಧದಲ್ಲಿ ಕೊಡುವ ಮಾಂಸವನ್ನು ತಿನ್ನಬೇಕು ಹಾಗೆ ಮಾಡದಿದ್ದರೆ ೨೧ ಜನ್ಮಗಳವರೆಗೆ ಮೃಗವಾಗಿ ಹುಟ್ಟುವರು (V 35) ಮಾಂಸವನ್ನು ತಿನ್ನುವುದನ್ನಾಗಲಿ ಮದ್ಯವನ್ನು ಕುಡಿಯುವುದನ್ನಾಗಲಿ, ಸಂಭೋಗವನ್ನಾಗಲಿ ಮತ್ತೇನನ್ನಾಗಲಿ ಬಿಡುವುದರಿಂದ ಬಹಳ ಸತ್ಫಲವುಂಟಾಗುವುದು (V 56)

(16) ದ್ವಿಜನು ಶೂದ್ರರನ್ನು ಸ್ಪರ್ಶಿಸಿದರೆ ದ್ವಿಜನಿಗೆ ಜುಲ್ಮಾನೆ ವಿಧಿಸಬಹುದು ಆದರೆ ಶೂದ್ರನು ದ್ವಿಜನನ್ನು ಸ್ಪರ್ಶಿಸಿದರೆ ಶೂದ್ರನ ನಾಲಗೆಯನ್ನು ಕತ್ತರಿಸಬೇಕು ... ಉಪದೇಶವನ್ನು ... ಶೂದ್ರನು ... ೧೦ ಅಂಗುಲದ ... ಕಾದ ಕಬ್ಬಿಣದ ... ಬಾಯಲ್ಲಿ ಇಡಬೇಕು (VIII ೨೭೦ ೨೭೧)

(17) ಶೂದ್ರನು ಬ್ರಾಹ್ಮಣರಿಗೆ ಧರ್ಮವನ್ನು ಕುರಿತು ಉಪದೇಶ ಮಾಡಿದರೆ ... ಬಾಯಲ್ಲಿಯೂ ಕಿವಿಯಲ್ಲಿಯೂ ಕಾದ ಎಣ್ಣೆಯನ್ನು ಹುಯ್ಯಬೇಕು (VIII 272)

(18) ... ತನ್ನ ಯಾವ ಅವಯವದಿಂದ ... ಬಾಧಿಸಿದರೆ ಆ ಅವಯವವನ್ನು ಕತ್ತರಿಸಿಹಾಕಬೇಕು ಹೊಡೆಯಲು ಶೂದ್ರನು ಕೈಯನ್ನಾಗಲಿ ಕಾಲನ್ನಾಗಲಿ ಎತ್ತಿದರೆ ಅವನ ಕೈಕಾಲು ಕತ್ತರಿಸಲ್ಪಡಬೇಕು (VIII ೨೭೯ ೨೮೦)

(19) ಶೂದ್ರನು ದ್ವಿಜನ ಪಕ್ಕದಲ್ಲಿ ಕುಳಿತುಕೊಳ್ಳಲು ಪ್ರಯತ್ನಿಸಿದರೆ ಅವನ ಸೊಂಡಿಯಮೇಲೆ ಬರೆಹಾಕಿ ದೇಶದಿಂದ ಹೊರಡಿಸಬೇಕು (VIII ೨೮೧)

(20) ಬ್ರಾಹ್ಮಣನು ಇತರರ ಶಿರಚ್ಛೇದನಮಾಡಿದ ಅಪರಾಧಕ್ಕೆ ಗುರಿಯಾದಲ್ಲಿ ಅವನ ತಲೆಯನ್ನು ಬೋಳಿಸಿ ಅವನ ಆಸ್ತಿಯನ್ನು ಅವನಿಗೆ ಕೊಡಿಸಿಬಿಟ್ಟು ದೇಶದಿಂದ ಹೊರಡಿಸಬೇಕು (VIII ೩೭೦ ೩೮೦)

(21) ಬ್ರಾಹ್ಮಣನು ತನಗಿಷ್ಟವಾದ ... ವಸ್ತುವನ್ನು ಯಥೇಚ್ಛವಾಗಿ ಶೂದ್ರನಿಂದ ತೆಗೆದುಕೊಳ್ಳಬಹುದು (VIII 217)

ಮುಖ್ಯವಾಗಿ ಗಮನಿಸತಕ್ಕದ್ದು—ಮೇಲಿನ ೧೦ ರಿಂದ ೨೧ ರ ವರೆಗಿನ ಧರ್ಮಗಳ ವಿವರವಾಗಿ ಸ್ವಾಗತವಿರುವ ಪುಸ್ತಕ ಈ ಶಾಸ್ತ್ರವನ್ನು ಸುಟ್ಟುಬಿಡಬೇಕೆಂಬ ಕೋರಿಕೆಯಲ್ಲಿ ಆಶ್ಚರ್ಯವೇನಿದೆ ?

(22) ಸ್ತ್ರೀಗೆ ಎಂದಾಗಲೂ ಯಾವ ವಿಧದಲ್ಲೂ ಸ್ವಾತಂತ್ರ್ಯವಿಲ್ಲ ಬಾಲ್ಯತನದಲ್ಲಿ ತಂದೆಯೂ ಯೌವನದಲ್ಲಿ ಗಂಡನೂ, ವಾರ್ಧಕ್ಯದಲ್ಲಿ ಮಕ್ಕಳೂ ಅವಳನ್ನು ತಮ್ಮ ಪೋಷಣೆಯಲ್ಲಿಟ್ಟುಕೊಂಡು ಸಂರಕ್ಷಿಸಬೇಕು (IX ೩)

(23) ... ಪುತ್ರರು ಹುಟ್ಟದಿದ್ದಲ್ಲಿ ಗಂಡನ ಸಹೋದರನಿಂದಾಗಲಿ ಸಪಿಂಡನಿಂದಾಗಲಿ ... ಅವನನ್ನು ಸ್ತ್ರೀಯು ತನ್ನ ಪತಿಯನ್ನಾಗಿ ... ಬಹುದು (IX ೫೯) ಹಾಗೆ ನಿಯಮಿಸಲ್ಪಟ್ಟವನು ... ಒಬ್ಬ ಮಗನನ್ನು ಮಾತ್ರ ಹುಟ್ಟಿಸತಕ್ಕದ್ದು (IX ೬೦) ಕೆಲ ಶಾಸ್ತ್ರಜ್ಞರು ಇಬ್ಬರು ಪುತ್ರರು ಹುಟ್ಟುವವರೆಗೂ ಆಕೆಯನ್ನು ... ಹೇಳುತ್ತಾರೆ (IX 61) ಇದು ... ಪುನರ್ವಿವಾಹವನ್ನು ಮಾಡಿಕೊಳ್ಳಕೂಡದು (IX ೬೫ ೬೮)

(24) ಕನ್ಯೆಗೆ ... ನಿಶ್ಚಯವಾದಮೇಲೆ ವರನು ಸತ್ತುಹೋದಲ್ಲಿ ಅವನ ಸಹೋದರನನ್ನು ಆ ಕನ್ಯೆಯು ತಪ್ಪದೆ ವಿವಾಹಮಾಡಿಕೊಳ್ಳಬಹುದು (IX ೬೯) ಅವರಿಗೆ ಹುಟ್ಟುವ ಮಗನು ಸತ್ತುಹೋದವನ ಮಗನೇ ಆಗುತ್ತಾನೆ

(25) ... ಗುರುವಾಜ್ಞೆಯಿಂದ ಯಾತ್ರೆ ಮಾಡುವುದಕ್ಕಾಗಲಿ ವಿದ್ಯೆಯನ್ನು ಕಲಿಯಲಿಕ್ಕಾಗಲಿ ದೇಶಾಂತರಗತನಾದರೆ ಅವನ ಹೆಂಡತಿಯು ೮ ೯ ವರ್ಷಗಳವರೆಗೆ ನಿರೀಕ್ಷಿಸಿದ್ದು ತರುವಾಯ ವಿವಾಹವನ್ನು ಮಾಡಿಕೊಳ್ಳಬಹುದು ಅವನು ವಿದ್ಯಾಸನವನ್ನಾಗಲಿ ಗೌರವವನ್ನಾಗಲಿ ಸಂಪಾದಿಸಲು ಹೋಗಿದ್ದರೆ ೬ ವರ್ಷದವರೆಗೂ ಕಾಮಾತುರನಾಗಿ ಹೋಗಿದ್ದರೆ ಮೂರುವರ್ಷದವರೆಗೂ ನಿರೀಕ್ಷಿಸಿಕೊಂಡಿದ್ದು ಅನಂತರ ಆಕೆಯು ಮದುವೆ ಮಾಡಿಕೊಳ್ಳಬಹುದು (IX 76)

(26) ರಜಸ್ವಲೆಯಾಗದ ಕನ್ಯೆಯನ್ನು ಸದ್ಗುಣವಂತನಲ್ಲದವನಿಗೆ ಕೊಡುವುದಕ್ಕಿಂತ ಆಕೆ ಸಾಯುವವರೆಗೂ ಅವಿವಾಹಿತಳಾಗಿ ಮನೆಯಲ್ಲಿರುವುದೇ ಉತ್ತಮ (IX ೮೯) ಆಕೆ ಮೂರುವರ್ಷ ಕಳೆದಮೇಲೆ ತನ್ನ ವರ್ಣದಲ್ಲಿ ಯಾರನ್ನಾದರೂ ವಿವಾಹಮಾಡಿಕೊಳ್ಳಬಹುದು (IX 90)

(27) ಕನ್ಯೆಯು ತನ್ನ ತಂದೆತಾಯಿಗಳಿಂದಲೂ ಬಂಧುಗಳಿಂದಲೂ ವಿವಾಹಮಾಡಲ್ಪಡದೆ ... ಯಾಗಿ ತಾನು ವರನ ವಿವಾಹಮಾಡಿಕೊಂಡಲ್ಲಿ ಆಕೆಯಾಗಲಿ ಪತಿಯು ಗಂಡನಾಗಲಿ ಯಾವ ಪಾಪಕ್ಕೂ ಗುರಿಯಾಗುವುದಿಲ್ಲ (IX ೯೧) ಹಾಗೆ ವಿವಾಹಮಾಡಿಕೊಂಡಲ್ಲಿ ತನ್ನ ತಂದೆತಾಯಿಗಳು ಇಟ್ಟಿರುವ ನಗಗಳನ್ನು ಅವರಿಗೆ ಕೊಟ್ಟುಬಿಡಬೇಕು (IX ೯೨) ರಜಸ್ವಲೆಯಾದ ಸ್ತ್ರೀಯನ್ನು ವಿವಾಹಮಾಡಿಕೊಂಡ ಗಂಡನು ಹೆಂಡತಿಯ ತಂದೆಗೆ ಕನ್ಯಾಶುಲ್ಕವನ್ನು ಕೊಡಕೂಡದು (IX 93)

(28) ಬ್ರಾಹ್ಮಣನು ತನ್ನ ವರ್ಣದಲ್ಲಿಯಾಗಲಿ ಕೀಳುವರ್ಣದಲ್ಲಿಯಾಗಲಿ ವಿವಾಹಮಾಡಿಕೊಂಡಲ್ಲಿ ಅವರ ಹೊಟ್ಟೆಯಲ್ಲಿ ಹುಟ್ಟುವ ಪುತ್ರರು ತಮ್ಮ ತಾಯಿಯ ವರ್ಣಸಂಬಂಧವಾಗಿ ತಂದೆಯಾಸ್ತಿಯಲ್ಲಿ ೪ ೩ ೨ ೧ ಭಾಗದ ಪ್ರಕಾರ ಹಂಚಿಕೊಳ್ಳಬೇಕು (IX 10೨) ಆದರೆ ಮೇಲ್ಕಂಡ ವರ್ಣಗಳ ಭಾರ್ಯೆಯರಿಂದ ಪುತ್ರಸಂತತಿಯಿಲ್ಲದಿದ್ದಲ್ಲಿ ಶೂದ್ರ ಹೆಂಡತಿಯ ಹೊಟ್ಟೆಯಲ್ಲಿ ಹುಟ್ಟಿದ ಪುತ್ರರ ತನ್ನ ತಂದೆಯಾಸ್ತಿಯಲ್ಲಿ ಯಾವಾಗಲೂ ಹತ್ತನೆಯೊಂದು ಭಾಗಕ್ಕೆ ಮಾತ್ರ ಹಕ್ಕುದಾರರಾಗುವರು (IX 10೩)

13 ಈ ಕೇಸಿನಲ್ಲಿ ಮಿ|| ಆರ್ ಗೋಪಾಲಸ್ವಾಮಿ ಅಯ್ಯರ್‌ರವರ ನಡವಳಿಕೆಯು ವಿಚಿತ್ರವಾಗಿದೆ. ಅವರ ಹೇಳಿಕೆಯನ್ನು ನಂಬಿ ನೋಡಿದಲ್ಲಿ ಎಕ್ಸಿಬಿಟ್ ಪಿ 1 (ಎ) ನಲ್ಲಿ ಕಂಡಂತೆ ಅವರು ಯಾವ ಮಾತನ್ನೂ ಯಾರೂ ಬರೆದಿಲ್ಲವೆಂದು ಅಥವಾ ಆಡಿಲ್ಲವೆಂದು ಧೀರ್ಘವಾಗಿ ಹೇಳಬಹುದು. ಹಾಗಾದರೆ ಎಕ್ಸಿಬಿಟ್ ಪಿ 1 (ಎ) ಯನ್ನು ಓದಿದಾಗ ಅವರ ನಡವಳಿಕೆಯು ಹೇಗಿದ್ದಿತೆಂದು ಹೇಳಬೇಕು. ಎಕ್ಸಿಬಿಟ್ ... ತಾ|| 23-11-28 ರಲ್ಲಿ ಪ್ರಕಟವಾಗಿದೆ. ಅವರು ಸ್ಟಾರ್ ದಿನಪತ್ರಿಕೆಯ ಚಂದಾದಾರರಾದುದರಿಂದ ಅದು ಅವರಿಗೆ ತಾ|| 24-11-28 ರಲ್ಲಿ ತಲ್ಪಿರಬೇಕು. ಆದುದರಿಂದ ಮಿ|| ಆರ್ ಗೋಪಾಲಸ್ವಾಮಿ ಅಯ್ಯರ್‌ರವರು ಎಕ್ಸಿಬಿಟ್ ಪಿ 1 (ಎ) ಯನ್ನು ತಾ|| 24-11-28 ರಲ್ಲಿ ಓದಿರಬೇಕು. ಎಕ್ಸಿಬಿಟ್ ಪಿ 1 (ಎ) ತಾ|| 23-6-21 ರ ಸಂಪದಭ್ಯುದಯಪತ್ರಿಕೆಯಿಂದ ಉದ್ಧರಿಸಲ್ಪಟ್ಟಿರುತ್ತದೆಂದು ಎಕ್ಸಿಬಿಟ್ ಪಿ 1 ರಲ್ಲಿ ಸ್ಪಷ್ಟವಾಗಿ ಬರೆಯಲ್ಪಟ್ಟಿದೆ. ಅಂತಹ ಮಾತುಗಳನ್ನು ತಾವು ಯಾವಾಗಲೂ ಆಡಿಲ್ಲವೆಂದು ತಿಳಿದಿದ್ದಾಗ ಅವರು ಯಾವ ರೀತಿ ವರ್ತಿಸಬೇಕಾಗಿದ್ದಿತು? ಅವರು ಎಕ್ಸಿಬಿಟ್ ಪಿ 1 (ಎ) ನ ಅಸಲು ಪ್ರತಿಯನ್ನು ಸಂಪಾದಿಸಲು ಕೂಡಲೆ ಪ್ರಯತ್ನಿಸಬೇಕಾಗಿದ್ದಿತು. ಅದರೆ ಅವರು ಆ ರೀತಿ ಮಾಡಲೇ ಇಲ್ಲ. ಅಸಲು ಆಡಿದ ಸಂಪದಭ್ಯುದಯಪತ್ರಿಕೆಯ ಪ್ರತಿಯೊಂದನ್ನು ಸಂಪಾದಿಸಲು ಪ್ರಯತ್ನ ಸಹ ಪಡಲಿಲ್ಲವೆಂದು ಹೇಳುತ್ತಾರೆ. ಅವರು ಪಿ 1 (ಎ) ನಲ್ಲಿರುವ ಮಾತುಗಳನ್ನೂ ವಾಕ್ಯಗಳನ್ನೂ ಬರೆಯಬೇಡ ಅಥವಾ ಆಡದೆ ಇದ್ದ ಪಕ್ಷದಲ್ಲಿ ಮೈಸೂರ್ ಸ್ಟಾರಿನ ಎಡಿಟರಿಗೆ ತಕ್ಷಣದಲ್ಲೇ ನೋಟೀಸನ್ನು ಕೊಡಬೇಕಾಗಿದ್ದಿತು. ಅದರೆ ಅವರು ಆ ರೀತಿ ಮಾಡಲಿಲ್ಲ. ಅವರು ತಾ|| 10-12-28 ರಲ್ಲಿ ಒಂದು ನೋಟೀಸನ್ನು ಕೊಡಿಸಿರುತ್ತಾರೆ. ಅಷ್ಟು ದಿವಸದ ವರೆಗೆ ಮಿ|| ಆರ್ ಗೋಪಾಲಸ್ವಾಮಿ ಅಯ್ಯರ್‌ರವರು ಏನು ಮಾಡಿದರು? ಅವರು ಅಸಲು ಪತ್ರಿಕೆಯನ್ನು ಸಂಪಾದಿಸಲು ಪ್ರಯತ್ನಿಸಿಲ್ಲವಾಗಲಿ ಕೂಡಲೆ ನೋಟೀಸನ್ನು ಕೊಡಿಸಿಲ್ಲ. ಎಕ್ಸಿಬಿಟ್ ಪಿ 1 (ಎ) ಯಲ್ಲಿರುವ ಮಾತುಗಳನ್ನಾಗಲಿ ವಾಕ್ಯಗಳನ್ನಾಗಲಿ ಬರೆಯಲಿಲ್ಲವೆಂದು ಆಡಲಿಲ್ಲವೆಂದೂ ನೋಟೀಸನ್ನು ಕೊಡಬೇಕಾಗಿ ತಮ್ಮ ಲಾಯರಿಗೆ ತಿಳಿಸಿದೆನೆಂದು ಹೇಳುತ್ತಾರೆ. ಹಾಗೆ ಹೇಳಿದುದು ನಿಜವಾಗಿದ್ದಲ್ಲಿ ಎಕ್ಸಿಬಿಟ್ ಡಿ 1 ನೋಟೀಸು ಮೇಲೆ ಹೇಳಿರುವ ಸೂಚನೆಯ ಪ್ರಕಾರ ಬರೆಯಲ್ಪಡಬೇಕಾಗಿದ್ದಿತು. ಆದರೆ ಮೇಲೆ ಕಂಡಂತೆ ಮಿ|| ಗೋಪಾಲಸ್ವಾಮಿ ಅಯ್ಯರ್‌ರವರ ಎಕ್ಸಿಬಿಟ್ ಪಿ 1 (ಎ) ನಲ್ಲಿ ಕಂಡ ಮಾತುಗಳನ್ನು ವಾಕ್ಯಗಳನ್ನು ಎಲ್ಲಾ ಆಡಿಲ್ಲ ಮತ್ತು ಬರೆದಿಲ್ಲವೆಂದು ಎಕ್ಸಿಬಿಟ್ ಡಿ 1 ನೋಟೀಸಿನಲ್ಲಿ ತಿಳಿಸಲ್ಪಟ್ಟಿಲ್ಲ. ಇದಲ್ಲದೆ ಎಕ್ಸಿಬಿಟ್ ಡಿ 1 ನೋಟೀಸನ್ನು ಕೊಡುವ ಮುಂಚೆ ... ಅಂದರೆ ಲಾಯರು ಅದನ್ನು ಬರೆದಾಗಲೂ ... ನೋಡಲಿಲ್ಲವೆಂದು ಫಿರ್ಯಾದಿಯು ಹೇಳುತ್ತಾನೆ. ಇದೇ ... ನೋಡಲೇ ಇಲ್ಲವೆಂದು ಫಿರ್ಯಾದಿಯು ಹೇಳುತ್ತಾನೆ ... ಜವಾಬಿಗೆ ಎಕ್ಸಿಬಿಟ್ ಪಿ 3 ಎಂದು ಗುರ್ತುಮಾಡಲ್ಪಟ್ಟಿದೆ ... ಗೋಪಾಲಸ್ವಾಮಿ ಅಯ್ಯರ್‌ರವರು ಆಪಾದಿಯು ಲಾಯರಿಂದ ಪುನಃ ಪಾಟಿಸವಾಲು ಮಾಡಲ್ಪಟ್ಟಾಗ ಎಕ್ಸಿಬಿಟ್ ಪಿ 3 ನೋಟೀಸಿಗೆ ವಿರೋಧವಾಗಿ ಹೇಳುತ್ತಾರೆ. ಫಿರ್ಯಾದನ್ನು ದಾಖಲ್ಮಾಡುವುದಕ್ಕೆ ಮೊದಲು ಎಕ್ಸಿಬಿಟ್ ಪಿ 3 ಯನ್ನು ಓದಿದ್ದೆನೆಂದೂ, ಈ ಎಕ್ಸಿಬಿಟ್ ಪಿ 3 ನ್ನು ನೋಡಿದ 8-10 ದಿನಗಳೊಳಗಾಗಿ ಫಿರ್ಯಾದನ್ನು ದಾಖಲ್ಮಾಡಿದೆನೆಂದೂ ಫಿರ್ಯಾದಿಯು ಹೇಳಿರುತ್ತಾನೆ. ಪುನಃ ತಮ್ಮ ಸಾಕ್ಷ್ಯವನ್ನು ಈ ಕೋರ್ಟಿನಲ್ಲಿ ಕೊಡುವಾಗ್ಗೆ "ನನ್ನ ಫಿರ್ಯಾದಿನ 4 (ಬಿ) ಪ್ಯಾರಾದಲ್ಲಿ ಹೇಳಿರುವ ಪ್ರಕಾರ ಆಪಾದಿಯು ಅಸಲು ಪತ್ರಿಕೆಯಲ್ಲಿದ್ದುದನ್ನು ಬದಲಾಯಿಸಿ ತಪ್ಪಾಗಿ ಬರೆದಿರುತ್ತಾನೆಂದು ನಾನು ವಿಶೇಷವಾಗಿ ಹೇಳಲಿಲ್ಲ. ನಾನು ಅಂತಹ ಲೇಖನವನ್ನು ಬರೆಯಲ್ಪಡಿರುವುದರಿಂದ ಆಪಾದಿಯು ಅಸಲು ಪತ್ರಿಕೆಯಲ್ಲಿದ್ದುದನ್ನು ಬದಲಾಯಿಸಿ ತಪ್ಪಾಗಿ ಬರೆದಿರುತ್ತಾನೆಂಬುದು ನನ್ನ ಊಹೆಯಾಗಿದೆ. ಆಪಾದಿಯು ಯಾವ ರೀತಿಯಲ್ಲಿ ಅಸಲನ್ನು ಬದಲಾಯಿಸಿ ತಪ್ಪಾಗಿ ಬರೆದಿರುತ್ತಾನೆಂದು ಹೇಳಲಾರೆ. 1923 ನೇ ಜೂನ್ ತಾ|| 23 ನೇ ಸಂಚಿಕೆಯು (ಸಂಪದಭ್ಯುದಯದ) ನ್ನು ನಾನು ನೋಡಿಲ್ಲವೆಂದು ಈಗಲೂ ಖಂಡಿತವಾಗಿ ಹೇಳುತ್ತೇನೆ. ಮೊದಲನೆಯ ಸಾಕ್ಷಿ ವಿಚಾರಣೆ ಆದಾಗ್ಗೆ ನನ್ನಲ್ಲಿ ಮೇಲ್ಕಂಡ ಪತ್ರಿಕೆಯು ಇರಲಿಲ್ಲ" ಎಂದು ನುಡಿದಿರುತ್ತಾರೆ. ಈ ರೀತಿಯಾಗಿ ಮಿ|| ಆರ್. ಗೋಪಾಲಸ್ವಾಮಿ ಅಯ್ಯರ್‌ರವರು ತಮ್ಮ ಫಿರ್ಯಾದಿನ 4 (ಬಿ) ಪ್ಯಾರಾದಲ್ಲಿ ಹೇಳಿರುವ ... ನ್ನು ಸ್ಪಷ್ಟವಾಗಿ ತೋರಿಸುವುದಕ್ಕೋಸ್ಕರ ಬರೆದಿರುವ ... ಸಮರ್ಥನೆಯನ್ನು ಕೊಟ್ಟಿರುತ್ತಾರೆ ... ಆಪಾದಿಯು ಅಸಲನ್ನು ಬದಲಾಯಿಸಿ ತಪ್ಪಾಗಿ ಹೇಳಿರುತ್ತಾನೆ ಎಂಬ ವಿಚಾರದಲ್ಲಿ ... ಎಕ್ಸಿಬಿಟ್ ಪಿ 1 (ಎ) ಅಸಲಿನ ಹೇಳಿಕೆಯನ್ನು ... ಗಳನ್ನು ಕೊಟ್ಟಿರುತ್ತಾನೆ ... ಅಸಲನ್ನು ಬದಲಾಯಿಸಿ ತಪ್ಪಾಗಿ ಬರೆದಿರುತ್ತಾನೆಂದು ... ಅಸಲನ್ನು ಬದಲಾಯಿಸಿ ತಪ್ಪಾಗಿ ಬರೆಯುವುದು ಮತ್ತು ಕದಲಿಸುವುದು ಕಲ್ಲುಗಳ ಪ್ರಯೋಗದಿಂದ ಅಸಲು ಲೇಖನವಿದ್ದಿತೆಂದೂ, ಇದನ್ನು ಮಿ|| ಆರ್. ಗೋಪಾಲಸ್ವಾಮಿ ಅಯ್ಯರ್‌ರವರು ತಮ್ಮ ಫಿರ್ಯಾದಿನಲ್ಲೆಲ್ಲೂ ನಿರಾಕರಿಸಿರುವುದಿಲ್ಲವೆಂದೂ ಅದರ ಸಿಂಧುತ್ವವನ್ನು ಒಪ್ಪಿದ್ದರೆಂದೂ, ಆಪಾದಿಯು ಅಸಲನ್ನು ಬದಲಾಯಿಸಿ ತಪ್ಪಾಗಿ ಬರೆದಿರುತ್ತಾನೆಂದೂ ವ್ಯಕ್ತವಾಗುತ್ತದೆ. ಮಿ|| ಆರ್ ಗೋಪಾಲಸ್ವಾಮಿ ಅಯ್ಯರ್‌ರವರ ಯೋಗ್ಯತೆಯುಳ್ಳ ಮನುಷ್ಯನು ತನ್ನ ಫಿರ್ಯಾದಿನ 4 (ಬಿ) ಪ್ಯಾರಾದಲ್ಲಿ ಕಂಡ ವಿಷಯವನ್ನು ಸಮರ್ಥಿಸುವದರಲ್ಲಿ ಹಾಸ್ಯಾಸ್ಪದವಾದ ಸಮಾಧಾನವನ್ನು ಹೇಳಿರುವುದು ಬಹಳ ಆಶ್ಚರ್ಯಕರವಾಗಿದೆ. ಅವರು ಎಕ್ಸಿಬಿಟ್ ಡಿ 1 ನೋಟೀಸನ್ನು ನೋಡಲೇ ಇಲ್ಲವೆಂದೂ, ಎಕ್ಸಿಬಿಟ್ ಪಿ 3 ಯನ್ನು ಒಂದು ನೇಳಿ ನೋಡಿದೆನೆಂದೂ ಇನ್ನೊಂದುವೇಳೆ ನೋಡಲಿಲ್ಲವೆಂದೂ, ಅಸಲನ್ನು ಆಪಾದಿಯು ಯಾವ ರೀತಿ ಬದಲಾಯಿಸಿ ತಪ್ಪಾಗಿ ತಿಳಿಸಿರುತ್ತಾನೆಂದು ಹೇಳಲಾರೆನೆಂದೂ, ಎಕ್ಸಿಬಿಟ್ ಪಿ 1 (ಎ) ನ ಅಸಲನ್ನು ತಾ|| 27-3-29 ಕ್ಕೆ ಮೊದಲು ನೋಡಿರಲಿಲ್ಲವೆಂದೂ ಹೇಳಿರುತ್ತಾರೆ. ಈ ವಿದ್ಯಮಾನಗಳಿಂದ ಮಿ|| ಆರ್ ಗೋಪಾಲಸ್ವಾಮಿ ಅಯ್ಯರ್‌ರವರನ್ನು ನಂಬಲು ಲೇಶವಾದರೂ ಸಂಶಯವಿದೆಯೆಂದು ಕಂಡುಬಂದಿದೆ. ಅವರ ಫಿರ್ಯಾದಿನಿಂದಲೂ, ಕೋರ್ಟಿನಲ್ಲಿ ಕೊಟ್ಟಿರುವ ಸಾಕ್ಷ್ಯದಿಂದಲೂ ಅವರಿಗೆ ತಮ್ಮ ಸ್ಟೇಟ್‌ಮೆಂಟನ್ನು ಪುಷ್ಟೀಕರಿಸುವ ಪ್ರಯತ್ನದಲ್ಲಿ ಸ್ವಮಂಡನೆಯಾದ ಹೇಳಿಕೆಯನ್ನೂ ಅಬದ್ಧವಾದ ಸಮಾಧಾನವನ್ನೂ ಕೊಟ್ಟಿರುವುದು ವ್ಯಕ್ತಪಟ್ಟಿರುತ್ತದೆ.

14 ಮಿ|| ಆರ್ ಗೋಪಾಲಸ್ವಾಮಿ ಅಯ್ಯರ್‌ರವರು ಎಕ್ಸಿಬಿಟ್ ಡಿ 3 ನ್ನು ತಾ|| 27-3-29 ಕ್ಕೆ ಮೊದಲು ನೋಡಲಿಲ್ಲವೆಂದೂ ಎಕ್ಸಿಬಿಟ್ ಪಿ 1 (ಎ) ಯನ್ನು ತಾವು ನೋಡಿದಮೇಲೆ ಎಕ್ಸಿಬಿಟ್ ಪಿ 1 (ಎ) ನಲ್ಲಿ ಮುದ್ರಿತವಾಗಿರುವ ವಿವಾದಾಸ್ಪದ ವಿಷಯವನ್ನು ತಾವು ಪ್ರಥಮತಃ ತಿಳಿದೆನೆಂದು ಹೇಳುತ್ತಾರೆ. ಎಕ್ಸಿಬಿಟ್ ಡಿ 2, ಎಕ್ಸಿಬಿಟ್ ಡಿ 3, ಎಕ್ಸಿಬಿಟ್ ಡಿ 6 ಮತ್ತು ಎಕ್ಸಿಬಿಟ್ ಡಿ 7 ಇವುಗಳಲ್ಲವೂ ಎಕ್ಸಿಬಿಟ್ ಪಿ 1 (ಎ) ನಲ್ಲಿ ಮುದ್ರಿತವಾಗಿರುವ ವಿವಾದಾಸ್ಪದವಿಷಯವು ಬಹಳ ಹಿಂದೆಯೇ ಡಿ 3, ಡಿ 6 ಮತ್ತು ಡಿ 7 ಎಕ್ಸಿಬಿಟ್ಟುಗಳಲ್ಲಿ ಮುದ್ರಿತವಾಗಿ ಪ್ರಕಟಿಸಲ್ಪಟ್ಟಿದ್ದಿತೆಂದು ವ್ಯಕ್ತಪಡಿಸುತ್ತವೆ. 1921 ನೇ ಇಸವಿಯ ಎಕನಾಮಿಕ್ ಕಾನ್ಫರೆನ್ಸಿನಲ್ಲಿ ಮಾತನಾಡಿದ ವಿವರವಾಗಿ ಎಕ್ಸಿಬಿಟ್ ಡಿ 3 ಗೆ ಮೊದಲೇ ಅಂದರೆ 1921 ರಲ್ಲಿ ಎರಡು ... ನಡೆದ ಕೂಡಲೇ ಎಕ್ಸಿಬಿಟ್ ಡಿ 2 ರಲ್ಲಿ ಪ್ರಕಟವಾಗಿದ್ದಿತು. ಎಕ್ಸಿಬಿಟ್ ಪಿ 1 (ಎ) ನಲ್ಲಿ ಪ್ರಕಟವಾಗಿರುವ ವಿವಾದಾಸ್ಪದ ವಿಷಯವು ಎಕ್ಸಿಬಿಟ್ ಪಿ 1 (ಎ) ನಲ್ಲಿ ಪ್ರಕಟವಾಗಿರುವುದೇ ಮೊದಲಲ್ಲವೆಂದು ಈಗ ಸಿದ್ಧವಾಗಿರುವ ದಾಖಲೆಗಳಿಂದ ಗೊತ್ತಾಗುತ್ತದೆ. ಆದರೆ, ಸಾಮಾಜಿಕ ಮತ್ತು ರಾಜಕೀಯ ಕಾರ್ಯಕರ್ತರೆಂದು ಹೇಳಿಕೊಳ್ಳುವ ಮಿ|| ಆರ್ ಗೋಪಾಲಸ್ವಾಮಿ ಅಯ್ಯರ್‌ರವರು ವಿವಾದಾಸ್ಪದ ವಿಷಯವನ್ನು ತಾವು ಪ್ರಥಮತಃ ಎಕ್ಸಿಬಿಟ್ ಪಿ 1 (ಎ) ನಲ್ಲೇ ನೋಡಿದನೆಂದು ಹೇಳುತ್ತಾರೆ. ಮಿ|| ಗೋಪಾಲಸ್ವಾಮಿ ಅಯ್ಯರ್‌ರವರ ಹೇಳಿಕೆಯನ್ನು ನಾನು ನಂಬಲಾರೆ. ಆ ಕೇಸನ್ನು ಗೆಲ್ಲುವುದಕ್ಕೋಸ್ಕರ ಸಂಪೂರ್ಣ ಸುಳ್ಳು ಹೇಳಿಕೆಯಾಗಿದೆ.

15 ವಿವಾದಾಸ್ಪದ ವಿಷಯವು ಮುದ್ರಿತವಾಗಿ ಪ್ರಕಟವಾದೊಡನೆಯೇ ಅವರ ತಿಳಿವಳಿಕೆಗೆ ಬಂದಿರುತ್ತದೆಂದು ಈ ಮುಂದಿನ ಸಂದರ್ಭಗಳಿಂದ ನಿರ್ಧರಿಸಿ ಹೇಳಬಹುದಾಗಿದೆ. ಮಿ|| ಆರ್ ಗೋಪಾಲಸ್ವಾಮಿ ಅಯ್ಯರ್‌ರವರು ಸಂಪದಭ್ಯುದಯ ಮೈಸೂರ್ ಸ್ಟಾರ್ ಮೊದಲಾದ ಪತ್ರಿಕೆಗಳನ್ನು ಕಳೆದ 10-15 ವರ್ಷಗಳಿಂದಲೂ ಓದುತ್ತಿರುವುದಾಗಿ ಹೇಳುತ್ತಾರೆ ಮತ್ತು ತಾವು ಮಾನಸ್ಥರಿಗೆ ಬರೆಯುತ್ತೇನೆಂದೂ ಹೇಳುತ್ತಾರೆ. ಮಿ|| ಆರ್ ಗೋಪಾಲಸ್ವಾಮಿ ಅಯ್ಯರ್‌ರವರ ಸಾಮಾಜಿಕ ಮತ್ತು ರಾಜಕೀಯ ಕಾರ್ಯಕಲಾಪಗಳ ಸಂಬಂಧ ಸ್ಥಳೀಯ ಪತ್ರಿಕೆಗಳ ಅಭಿಪ್ರಾಯವನ್ನು ತಿಳಿದುಕೊಳ್ಳುವ ... ಇದಲ್ಲದೆ 1919 ರಿಂದ 1924 ರ ವರೆಗೆ ನ್ಯೂ ... ವಿಜಯ ... ಸೆಕ್ರೆಟರಿಯಾಗಿದ್ದನಲ್ಲದೆ 4 ಮ್ಯುನಿ... ಗಳ ಸೆಕ್ರೆಟರಿಯಾಗಿದ್ದು ಅವುಗಳಿಗಾಗಿ ಸಂಪದಭ್ಯುದಯ ... ಪತ್ರಿಕೆಗಳನ್ನು ಇತರ ಪತ್ರಿಕೆಗಳೊಡನೆ ತರಿಸುತ್ತಿ... ಮಿ|| ಗೋಪಾಲಸ್ವಾಮಿ ಅಯ್ಯರ್‌ರವರು ಮೈಸೂರು ಸ್ಟಾರ್ ಮತ್ತು ಸಂಪದಭ್ಯುದಯ ಪತ್ರಿಕೆಗಳನ್ನು 10-15 ವರ್ಷಗಳಿಂದ ... ರೀಡಿಂಗ್ ರೂಮುಗಳಿಗೆ ಸೆಕ್ರೆಟರಿಯಾಗಿದ್ದು ... ಪ್ರಜಾಪ್ರತಿನಿಧಿಸಭೆಯ ಮೊದಲಾದ ಸಂಸ್ಥೆಗಳ ಮೆಂಬರಾಗಿದ್ದುದರಿಂದಲೂ ಸಾಮಾಜಿಕ ಮತ್ತು ರಾಜಕೀಯ ಕಾರ್ಯಕರ್ತರಾಗಿರುವುದರಿಂದಲೂ ಅವರು ಎಕ್ಸಿಬಿಟ್ ಡಿ 2 ಅಥವಾ ಎಕ್ಸಿಬಿಟ್ ಡಿ 3 ಅಥವಾ ಎಕ್ಸಿಬಿಟ್ ಡಿ 6 ಅಥವಾ ಎಕ್ಸಿಬಿಟ್ ಡಿ 7 ನ್ನಾದರೂ ಓದಿರಬೇಕೆಂದು ಒಂದುವೇಳೆ ಓದದಿದ್ದಲ್ಲಿ ಆ ವಿಷಯವನ್ನು ಅವರ ಸ್ನೇಹಿತರು ಅವರ ಗಮನಕ್ಕೆ ತಂದಿರಬೇಕೆಂದೂ ಭಾವಿಸಬೇಕಾಗಿದೆ. ಮಿ|| ಆರ್ ಗೋಪಾಲಸ್ವಾಮಿ ಅಯ್ಯರ್‌ರವರೇನೂ ವನವಾಸಿಗಳಲ್ಲ ಮತ್ತು ಸ್ನೇಹಿತರಿಲ್ಲದವರಲ್ಲ. ಅವರ ಸಾಮಾಜಿಕ ಮತ್ತು ರಾಜಕೀಯ ಕಾರ್ಯಕರ್ತರಾಗಿರುವುದರಿಂದ ಅವರಿಗೆ ಸ್ಥಳೀಯ ವೃತ್ತಪತ್ರಿಕೆಗಳ ಸಂಬಂಧವು ಬಿತ್ತರಗಳು ಇದ್ದೇ ಇರಬೇಕು. ಈ ಕಾರಣಗಳಿಂದ ಎಕ್ಸಿಬಿಟ್ ಪಿ 1 (ಎ) ಯನ್ನೋದುವುದಕ್ಕೆ ಮೊದಲು ವಿವಾದಾಸ್ಪದವಿಷಯವು ಮಿ|| ಗೋಪಾಲಸ್ವಾಮಯ್ಯರ್‌ರವರಿಗೆ ತಿಳಿದಿರಲಿಲ್ಲವೆಂದು ಹೇಳುವುದು ಬಹಳ ಆಶ್ಚರ್ಯಕರವಾಗಿದೆ. ವಿವಾದಾಸ್ಪದ ವಿಚಾರವು ಪ್ರಕಟವಾದವೇಳೆಯಲ್ಲಿ ಅಥವಾ ಆ ತಿಂಗಳಲ್ಲಿ ಅದನ್ನು ಮಿ|| ಗೋಪಾಲಸ್ವಾಮಯ್ಯರ್‌ರವರು ತಿಳಿದಿರಲೇಬೇಕೆಂದು ಮತ್ತೊಂದು ಸಂದರ್ಭದಿಂದ ಹೇಳಬಹುದಾಗಿದೆ. 1923 ನೇ ಏಪ್ರಿಲ್ ತಿಂಗಳ ಮೈಸೂರು ಸ್ಟಾರ್ ಪತ್ರಿಕೆಯಲ್ಲಿ ಮಿ|| ಆರ್ ಗೋಪಾಲಸ್ವಾಮಯ್ಯರ್‌ರವರಿಗೆ ವಿರೋಧವಾಗಿ ಕೆಲ ಲೇಖನಗಳು ಬರೆಯಲ್ಪಟ್ಟಿದ್ದವು, ಅವರು ಕೊಂಚವೂ ಕಾಲಹರಣಮಾಡದೆ ತಾ|| 22-4-23 ರ ಸ್ಟಾರ್ ಪತ್ರಿಕೆಯಲ್ಲಿ ಆ ಲೇಖನಗಳಿಗೆ ಖಂಡಿತ ಜವಾಬ್ ಬರೆದಿರುವುದೂ ಎಕ್ಸಿಬಿಟ್ ಡಿ 8 ಮತ್ತು ಎಕ್ಸಿಬಿಟ್ ಡಿ 9 ರಿಂದ ಗೊತ್ತಾಗುತ್ತದೆ. ಅವರು ಜವಾಬು ಕೊಟ್ಟಿರುವ ಲೇಖನಕ್ಕೆ ಎಕ್ಸಿಬಿಟ್ ಡಿ 10 ಎಂದು ಗುರ್ತುಮಾಡಲ್ಪಟ್ಟಿದೆ. ಎಕ್ಸಿಬಿಟ್ ಡಿ 8 ಮತ್ತು ಎಕ್ಸಿಬಿಟ್ ಡಿ 9 ಪತ್ರಿಕೆಗಳಲ್ಲಿ ಬರೆಯಲ್ಪಟ್ಟಿರುವ ಲೇಖನಗಳನ್ನು ಆಕ್ಷೇಪಕರವಾಗಿದ್ದ ಲೇಖನಗಳಿಗೆ ಮಿ|| ಗೋಪಾಲಸ್ವಾಮಿ ಅಯ್ಯರ್‌ರವರು ಉತ್ತರಬರೆದರು. ಎಕ್ಸಿಬಿಟ್ ಡಿ 8 (ಎ) ಮತ್ತು ಎಕ್ಸಿಬಿಟ್ ಡಿ 9 (ಎ) ಲೇಖನಗಳಿಗೆ ಉತ್ತರವನ್ನು ಬರೆದು ಅವನ್ನು ಖಂಡಿಸದೆ ಹಾಗೆಯೇ ಬಿಟ್ಟುಬಿಡದ ಕಾರಣ ಗೊತ್ತಾಗಲಿಲ್ಲ. ಎಕ್ಸಿಬಿಟ್ ಡಿ 8 ಮತ್ತು ಎಕ್ಸಿಬಿಟ್ ಡಿ 9 ರಲ್ಲಿ ಪ್ರಕಟವಾಗಿರುವ ಲೇಖನಗಳು ತಕ್ಷಣದಲ್ಲೇ ಅವರ ತಿಳಿವಳಿಕೆಗೆ ಬಂದಿರುವುದರಿಂದಲೂ, ಎಕ್ಸಿಬಿಟ್ ಡಿ 10 ರಲ್ಲಿ

ಅಂದರೆ ಈ ವಿಷಯದಲ್ಲಿ ಅವರ ಅಭಿಪ್ರಾಯದಂತೆಯೇ ಅವರು ಎಕ್ಸಿಬಿಟ್ ... 1 ನ್ನು ತಯಾರಿಸಿದರೆಂಬುದು ... ವಿಚಾರಿಸಿ ... ತಿಳಿಯಲು ... ಸಂಬಂಧಿಸಿದ್ದಿಲ್ಲ.

16. ಈ ಕೇಸಿನ ಕಾಗದಗಳಿಂದ ಡಿ 2, ಡಿ 3, ಡಿ 6 ಮತ್ತು ಡಿ 7 ನೇ ಎಕ್ಸಿಬಿಟ್ಟುಗಳಲ್ಲಿ ಕಂಡ ಲೇಖನಗಳು ಪ್ರಕಟವಾದ ಕೂಡಲೇ ಮಿ|| ಗೋಪಾಲಸ್ವಾಮಿ ಅಯ್ಯರ್ ರವರ ಅಧಿಕಾರಿಗಳಿಗೆ ಬರೆದು [illegible] ಮಿ|| ಗೋಪಾಲಸ್ವಾಮಿ ಅಯ್ಯರ್ ರವರು [illegible] ಅವರ ವಿವಾದಕ್ಕೆ ಬಲ [illegible] ಎಕ್ಸಿಬಿಟ್ ಡಿ 3 ರ ತಾರೀಖು 21-6-21 ಈ ಎಕ್ಸಿಬಿಟ್ ಡಿ 2 (ಎ) ನಲ್ಲಿ ಕಂಡ ಮಾತುಗಳನ್ನು ಮಿ|| ಗೋಪಾಲಸ್ವಾಮಿ ಅಯ್ಯರ್ ರವರು ತಾ|| 14-6-21 ರಲ್ಲಿ ನಡೆದ ಎಕನಾಮಿಕ್ ಕಾನ್ಫರೆನ್ಸಿನಲ್ಲಿ ಆಡಿದರೆಂದು ಎಕ್ಸಿಬಿಟ್ ಡಿ 2 ರಲ್ಲಿ [illegible] ಸಂಸ್ಥಾನದ [illegible] ಎಡಿಟರು ತಾ|| 14-6-21 ರ ಎಕನಾಮಿಕ್ ಕಾನ್ಫರೆನ್ಸಿನಲ್ಲಿ ಮಿ|| ಗೋಪಾಲಸ್ವಾಮಿ ಅಯ್ಯರ್ ರವರು ಆಡಿದುದನ್ನು ಆಧಾರ ಮಾಡಿಕೊಂಡು ತಾ|| 23-6-21 ರಲ್ಲಿ ಎಕ್ಸಿಬಿಟ್ ಡಿ 3 ನ್ನು ಬರೆದಿರುವರು. ಮಿ|| ಗೋಪಾಲಸ್ವಾಮಿ ಅಯ್ಯರ್ ರವರು ಈ ಲೇಖನಗಳನ್ನು ಈಗ ಒಪ್ಪಿಕೊಂಡಲ್ಲಿ ಅಪರಾಧಿಯ ಮೇಲೆ ಹಾಕಿರುವ ಕೇಸಿಗೆ ಬಲವು [illegible] ಅಪರಾಧಿಯು ಎಕ್ಸಿಬಿಟ್ ಪಿ 1 (ಎ) ನಲ್ಲಿ ಅಧೋಮುಖದ ಕಾಗದಗಳಲ್ಲಿರುವ ಪ್ರಕರಣವನ್ನು ತಪ್ಪಾಗಿ ಬರೆದಿರುವುದರ [illegible] ಅಪರಾಧಿಯ ಮೇಲೆ [illegible] ಇರುವುದಿಲ್ಲ. ಆದುದರಿಂದ ಮಿ|| ಗೋಪಾಲಸ್ವಾಮಿ ಅಯ್ಯರ್ ರವರು ಎಕ್ಸಿಬಿಟ್ ಡಿ 2 ಮತ್ತು ಎಕ್ಸಿಬಿಟ್ ಡಿ 3 ಗಳಲ್ಲಿರುವ ಲೇಖನಗಳ [illegible] ತನಗೆ ಗೊತ್ತೇ ಇಲ್ಲವೆಂದು ಹೇಳುವುದು ಒಳ್ಳೇ ಉಪಾಯವೆಂದು ಯೋಚಿಸಿರುತ್ತಾರೆ. ಆದರೆ [illegible] ಎಕ್ಸಿಬಿಟ್ ಡಿ 2 ನ್ನಾಗಲಿ ಎಕ್ಸಿಬಿಟ್ ಡಿ 3 ನ್ನಾಗಲಿ ಕೇಸ್ ನಡೆದ ಪೂರ್ವಕ್ಕೆ ಮೊದಲು ನಾನು ನೋಡಿಲ್ಲವೆಂದು ಮಿ|| ಗೋಪಾಲಸ್ವಾಮಿ ಅಯ್ಯರ್ ರವರು ಹೇಳುವುದು ತಮ್ಮ ಸಾಕ್ಷ್ಯದಿಂದಲೇ ಅಸಿದ್ಧವಾಗಿರುತ್ತದೆ.

17. ಡಿ 2, ಡಿ 3, ಡಿ 6 ಮತ್ತು ಡಿ 7 ಎಕ್ಸಿಬಿಟ್ಟುಗಳಲ್ಲಿ ಆರ್ಟಿಕಲ್ಲುಗಳನ್ನು ಅವು ಪ್ರಕಟವಾದ ಕೂಡಲೇ ಮಿ|| ಗೋಪಾಲಸ್ವಾಮಿ ಅಯ್ಯರ್ ರವರು ನೋಡಿದ್ದರೆಂದು ನಿರ್ಧರಿಸುತ್ತೇನೆ.

18. ಮಿ|| ಆರ್ ಗೋಪಾಲಸ್ವಾಮಿ ಅಯ್ಯರ್ ರವರು ಡಿ 2, ಡಿ 3, ಡಿ 6 ಮತ್ತು ಡಿ 7 ನೇ ಎಕ್ಸಿಬಿಟ್ಟುಗಳಲ್ಲಿ ಪ್ರಕಟವಾಗಿರುವ ಆರ್ಟಿಕಲ್ಲುಗಳು ತಮ್ಮ ತಿಳಿವಳಿಕೆಗೆ ಬಂದಿದ್ದಾಗ್ಯೂ ಅವನ್ನು [illegible] ಆರ್ಟಿಕಲ್ಲುಗಳು ಸರಿಯೆಂದು ಅವರು ಒಪ್ಪಿಕೊಂಡಿರುವುದು ಸಿದ್ಧವಾಗುತ್ತದೆ. ಎಕ್ಸಿಬಿಟ್ ಪಿ 1 (ಎ) ನ ಅಸಲಾದ ಎಕ್ಸಿಬಿಟ್ ಡಿ 3 ನ್ನು ಮಿ|| ಗೋಪಾಲಸ್ವಾಮಿ ಅಯ್ಯರ್ ರವರು ತಮ್ಮ ಫಿರ್ಯಾದಿನಲ್ಲಿ ಸಹ [illegible]. ಆದರೆ ಎಕ್ಸಿಬಿಟ್ ಪಿ 2 (ಎ) [illegible] ಪ್ರಶ್ನೆ ಬರುವುದು? ಎಕ್ಸಿಬಿಟ್ ಪಿ 2 ತಾ|| 13-6-21 ರಂದು ನಡೆದ ಎಕನಾಮಿಕ್ ಕಾನ್ಫರೆನ್ಸಿನ ನಡವಳಿಕೆಯ ಅಚ್ಚಾದ ಪುಸ್ತಕ. ಎಕ್ಸಿಬಿಟ್ ಡಿ 2 (ಎ) ಮತ್ತು ಎಕ್ಸಿಬಿಟ್ ಡಿ 3 (ಎ) ಗಳಲ್ಲಿರುವ ಮಾತುಗಳ ವಾಕ್ಯಗಳು ಎಕ್ಸಿಬಿಟ್ ಪಿ 2 (ಎ) ನಲ್ಲಿರುವುದಿಲ್ಲ. ಎಕ್ಸಿಬಿಟ್ ಪಿ 2 (ಎ) ಮಿ|| ಗೋಪಾಲಸ್ವಾಮಿ ಅಯ್ಯರ್ ರವರಿಗೆ ಪ್ರಬಲವಾದ ಆಧಾರವಾಗಿರುತ್ತದೆ. ಎಕ್ಸಿಬಿಟ್ ಡಿ 1 ಬರೆಯಲ್ಪಟ್ಟಾಗಲೂ ಫಿರ್ಯಾದು ಬರೆಯಲ್ಪಟ್ಟಾಗಲೂ ಫಿರ್ಯಾದಿಯಲ್ಲಿ ಎಕ್ಸಿಬಿಟ್ ಪಿ 2 ಇರಲಿಲ್ಲವೆಂದು ದೃಢವಾಗಿ ಹೇಳಬಲ್ಲೆ. ಫಿರ್ಯಾದಿಯಲ್ಲಿ ಎಕ್ಸಿಬಿಟ್ ಪಿ 2 ಇದ್ದ ಪಕ್ಷದಲ್ಲಿ ಅವನ ನೋಟೀಸೂ ಫಿರ್ಯಾದೂ ಬೇರೆ ರೀತಿಯಾಗಿ ಬರೆಯಲ್ಪಡುತ್ತಿದ್ದುವು. ಈಗ ಎಕ್ಸಿಬಿಟ್ ಪಿ 2 (ಎ) ಯನ್ನು ನೋಡಿದರೆ ಎಕ್ಸಿಬಿಟ್ ಡಿ 2 ಮತ್ತು ಎಕ್ಸಿಬಿಟ್ ಡಿ 3 ಗಳಲ್ಲಿರುವ ಮಾತುಗಳು [illegible] ಎಕ್ಸಿಬಿಟ್ ಪಿ 2 (ಎ) ನಲ್ಲಿಲ್ಲವೆಂಬುದರಲ್ಲಿ ಸಂಶಯವಿಲ್ಲ. ಆದುದರಿಂದ ಎಕ್ಸಿಬಿಟ್ ಡಿ 2 (ಎ) ಮತ್ತು ಎಕ್ಸಿಬಿಟ್ ಡಿ 3 (ಎ) ಗಳಲ್ಲಿರುವ ಮಾತುಗಳನ್ನು ಮಿ|| ಗೋಪಾಲಸ್ವಾಮಿ ಅಯ್ಯರ್ ರವರು ಆಡಲಿಲ್ಲವೆಂದು ನಿರ್ಧರಿಸಬಹುದಲ್ಲವೆ? ಹಾಗೆಂದಿಗೂ ನಿರ್ಧರಿಸಲಿಕ್ಕಾಗುವುದಿಲ್ಲವೆಂದು ನನಗೆ ತೋರುತ್ತದೆ. ಆ ದಿವಸ [illegible] ಮಿ|| ಆರ್ ಗೋಪಾಲಸ್ವಾಮಿ ಅಯ್ಯರ್ ರವರು [illegible] ಎಕ್ಸಿಬಿಟ್ ಪಿ 2 (ಎ) ನಲ್ಲಿ [illegible] ಎಕನಾಮಿಕ್ ಕಾನ್ಫರೆನ್ಸಿನಲ್ಲಿ [illegible] ಮಿ|| ಗೋಪಾಲಸ್ವಾಮಿ ಅಯ್ಯರ್ ರವರು [illegible] ಎಕ್ಸಿಬಿಟ್ ಪಿ 2 (ಎ) ನಲ್ಲಿ [illegible] ಎಕನಾಮಿಕ್ ಕಾನ್ಫರೆನ್ಸಿನಲ್ಲಿ ಒಂದು ವಾಕ್ಯವನ್ನು ಮಾತ್ರ [illegible] ಎಕ್ಸಿಬಿಟ್ ಪಿ 2 (ಎ) ನಲ್ಲಿ [illegible] ಎಕ್ಸಿಬಿಟ್ ಪಿ 2 ನಲ್ಲಿ [illegible] ಮಿ|| ಗೋಪಾಲಸ್ವಾಮಿ ಅಯ್ಯರ್ ರವರ ಎಕ್ಸಿಬಿಟ್ ಡಿ 2 (ಎ) ನಲ್ಲಿ ಪ್ರಕಟವಾಗಿರುವ ಮಾತುಗಳನ್ನಾಡಿದುದು [illegible] ಎಕ್ಸಿಬಿಟ್ ಡಿ 2 (ಎ) [illegible] ಎಕ್ಸಿಬಿಟ್ ಡಿ 3 [illegible] ಮಿ|| ಗೋಪಾಲಸ್ವಾಮಿ ಅಯ್ಯರ್ ರವರು [illegible] ಎಕ್ಸಿಬಿಟ್ ಡಿ 3 [illegible] ಮಿ|| ಗೋಪಾಲಸ್ವಾಮಿ ಅಯ್ಯರ್ ರವರಿಗೆ [illegible] ಮಿ|| ವೆಂಕಟಕೃಷ್ಣಯ್ಯನವರು [illegible] ಮೈಸೂರು ಬ್ರಾಹ್ಮಣರ [illegible] ಮಿ|| ಗೋಪಾಲಸ್ವಾಮಿ ಅಯ್ಯರ್ ರವರು ಹೇಳುವವರೂ ಅಂತಹ [illegible] ತಾ|| 13-6-21 ರಲ್ಲಿ ನಡೆದ ಎಕನಾಮಿಕ್ ಕಾನ್ಫರೆನ್ಸಿನಲ್ಲಿ ಮಿ|| ಗೋಪಾಲಸ್ವಾಮಿ ಅಯ್ಯರ್ ರವರು ಹೇಳಿದ [illegible] 10 ದಿವಸಗಳೊಳಗೆ [illegible] ಎಕ್ಸಿಬಿಟ್ ಡಿ 3 ಮತ್ತು ಎಕ್ಸಿಬಿಟ್ ಡಿ 2 ಗಳು [illegible] ಹೇಳಬೇಕು?

ಎಕ್ಸಿಬಿಟ್ ಡಿ 3 (ಎ) [illegible] ಮಾತುಗಳನ್ನು ಮಿ|| ಗೋಪಾಲಸ್ವಾಮಿ ಅಯ್ಯರ್ ರವರು [illegible] 1921 ನೇ ಜೂನ್ ತಾ|| 14 ರಲ್ಲಿ ಆಡಿದ್ದಾರೆಂದೂ, ಎಕ್ಸಿಬಿಟ್ ಡಿ 2 (ಎ) ಮತ್ತು ಎಕ್ಸಿಬಿಟ್ ಡಿ 3 (ಎ) ಗಳಲ್ಲಿ [illegible] ಎಕ್ಸಿಬಿಟ್ ಡಿ 1 ನ್ನು ಬರೆದವನು ಹೇಳಿರುವುದರಿಂದಲೂ, ಎಕ್ಸಿಬಿಟ್ ಡಿ 3 ಗಳಲ್ಲಿ ಮಿ|| ಗೋಪಾಲಸ್ವಾಮಿ ಅಯ್ಯರ್ ರವರು [illegible] ಇರುವುದರಿಂದಲೂ ಮಿ|| ಗೋಪಾಲಸ್ವಾಮಿ ಅಯ್ಯರ್ ರವರು ಆಡಿದ ಮಾತುಗಳೆಂದು ಎಕ್ಸಿಬಿಟ್ ಡಿ 2 ನ್ನು ಬರೆದವನೂ ಎಕ್ಸಿಬಿಟ್ ಡಿ 3 ನ್ನು ಬರೆದವನೂ ಅವುಗಳಲ್ಲಿ ಸೇರಿರುವುದು ನಿಜವೆಂದು [illegible] ನಿರ್ಧರಿಸಬೇಕಾಗುತ್ತದೆ. ಈ ಕಾರಣಗಳಿಂದ ಮಿ|| ಆರ್ ಗೋಪಾಲಸ್ವಾಮಿ ಅಯ್ಯರ್ ರವರು ಎಕ್ಸಿಬಿಟ್ ಡಿ 2 (ಎ) ಮತ್ತು ಎಕ್ಸಿಬಿಟ್ ಡಿ 3 (ಎ) ಗಳಲ್ಲಿ ಕಂಡ ಮಾತುಗಳನ್ನು 1921 ನೇ ಜೂನ್ ತಾ|| 14 ರಲ್ಲಿ ಜರುಗಿದ ಎಕನಾಮಿಕ್ ಕಾನ್ಫರೆನ್ಸಿನಲ್ಲಿ ಆಡಿದರೆಂದೂ, ಮಿ|| ಆರ್ ಗೋಪಾಲಸ್ವಾಮಿ ಅಯ್ಯರ್ ರವರು ಆಡಿದ ಈ ಮಾತುಗಳನ್ನು 23-6-21 ರಲ್ಲಿ ಅಪರಾಧಿಯು ಪ್ರಕಟಿಸಿರುವುದು ಮೊದಲಲ್ಲವೆಂದೂ ಅಪರಾಧಿ ಈ ಮಾತುಗಳನ್ನು ತಾ|| 4-9-21 ರಲ್ಲಿ ಎಕ್ಸಿಬಿಟ್ ಡಿ 7 ರಲ್ಲೂ ತಾ|| 12-8-21 ರಲ್ಲಿ ಎಕ್ಸಿಬಿಟ್ ಡಿ 6 ರಲ್ಲೂ ಪ್ರಕಟಿಸಿರುತ್ತಾನೆಂದೂ, ಎಕ್ಸಿಬಿಟ್ ಡಿ 6 ಮತ್ತು ಎಕ್ಸಿಬಿಟ್ ಡಿ 7 ರಲ್ಲಿ ಕಂಡ ಪ್ರಕಟನೆಗಳನ್ನು ಮಿ|| ಗೋಪಾಲಸ್ವಾಮಿ ಅಯ್ಯರ್ ರವರು ಆಕ್ಷೇಪಿಸಿಯೇ ಇಲ್ಲವೆಂದೂ ನಾನು ಸಂಶೋಧನೆಯಿಂದ ನಿರ್ಧರಿಸುತ್ತೇನೆ.

19. ಎಕ್ಸಿಬಿಟ್ ಡಿ 2 (ಎ) ಮತ್ತು ಎಕ್ಸಿಬಿಟ್ ಡಿ 3 (ಎ) ಗಳಲ್ಲಿ ಪ್ರಕಟವಾಗಿರುವ ಮಾತುಗಳನ್ನು ಫಿರ್ಯಾದಿಯು ಆಡಿದುದು ನಿಜವೆಂದು ಸಿದ್ಧಗೊಳಿಸಲ್ಪಟ್ಟ ಕಾರಣದಿಂದ [illegible] ಅವಶ್ಯಕವಾಗುವುದಿಲ್ಲ.

20. ಎಕ್ಸಿಬಿಟ್ ಪಿ 1 ನ್ನು ಅಪರಾಧಿಯು ಪ್ರಕಟಿಸಿದ ಪೂರ್ವದಿಂದ ನೋಡೋಣ. ಎಕ್ಸಿಬಿಟ್ ಪಿ 1 ರಲ್ಲಿ ಹೇಳಿರುವಂತೆ ಅದು ಎಕ್ಸಿಬಿಟ್ ಡಿ 1 ರಲ್ಲಿ [illegible] ಪ್ರಕಟಿಸಲ್ಪಟ್ಟ [illegible] ಅಪರಾಧಿಯ [illegible] ಬಾಧ್ಯತೆ [illegible] ಈ ವಿಚಾರಗಳೇ ಪ್ರಸಕ್ತವಾಗಿ ನಿರ್ಧರಿಸಲ್ಪಡಬೇಕಾಗಿದೆ.

21. ಅಪರಾಧಿಯು ಎಕ್ಸಿಬಿಟ್ ಪಿ 1 ರಲ್ಲಿ ಕಂಡ ಅಂಶವನ್ನು ದುರ್ಬುದ್ಧಿಯಿಂದ ಪ್ರಕಟಿಸಿರುತ್ತಾನೆಯೋ ಇಲ್ಲವೋ ಎಂಬುದನ್ನೂ ಫಿರ್ಯಾದಿಯು ತನಗೆ ಅವಮಾನವಾಗಿರುತ್ತದೆಂದು ಹೇಳುವಂತಹವನ್ನು ಅವನು ಸಿದ್ಧಗೊಳಿಸಿರುತ್ತಾನೆಯೇ ಇಲ್ಲವೇ ಎಂಬುದನ್ನೂ ಪ್ರಸಕ್ತ ವಿವಾದಾಂಶದ ಸ್ವಭಾವಾದ ವಿವಾದಗಳಲ್ಲಿ ನಾವು ನೋಡಬೇಕಾಗಿದೆ.

22. ಎಕ್ಸಿಬಿಟ್ ಪಿ 1 ರಲ್ಲಿ ಪ್ರಕಟವಾಗಿರುವ ವಿಷಯವನ್ನು ಮಿ|| ಆರ್ ಗೋಪಾಲಸ್ವಾಮಿ ಅಯ್ಯರ್ ರವರ [illegible] ಎಕ್ಸಿಬಿಟ್ ಪಿ 1 ರಲ್ಲಿರುವ [illegible] ಸಾರಾಂಶವು ಈ ಪ್ರಕಾರವಾಗಿದೆ — ಈ ಸಂಸ್ಥಾನದಲ್ಲಿ [illegible] ಪ್ರಜಾರಕ್ಷಣೆ [illegible] ಎಕ್ಸಿಬಿಟ್ ಪಿ 1 [illegible] ಮಿ|| ಆರ್ ಗೋಪಾಲಸ್ವಾಮಿ ಅಯ್ಯರ್ ರವರು [illegible] ಎಕ್ಸಿಬಿಟ್ ಡಿ 2 (ಎ) [illegible] ಎಕ್ಸಿಬಿಟ್ ಡಿ 3 (ಎ) [illegible] ಎಕ್ಸಿಬಿಟ್ ಪಿ 1 [illegible] ಮಿ|| ಆರ್ ಗೋಪಾಲಸ್ವಾಮಿ ಅಯ್ಯರ್ ರವರ [illegible] ಎಕ್ಸಿಬಿಟ್ ಪಿ 2 (ಎ) ನಲ್ಲಿ [illegible] ಮಿ|| ಆರ್ ಗೋಪಾಲಸ್ವಾಮಿ ಅಯ್ಯರ್ ರವರ [illegible] ಎಕ್ಸಿಬಿಟ್ ಪಿ 1 ರಲ್ಲಿ ಒಡೆಯ [illegible] ಎಕ್ಸಿಬಿಟ್ ಡಿ 2 (ಎ) ಯನ್ನು [illegible] ಎಕ್ಸಿಬಿಟ್ ಪಿ 1 (ಎ) ನ್ನು [illegible] ಎಕ್ಸಿಬಿಟ್ ಡಿ 2 (ಎ) ನಲ್ಲಿ ಕಂಡ ಅಂಶಕ್ಕೂ ಎಕ್ಸಿಬಿಟ್ ಪಿ 1 ರಲ್ಲಿ

ಕೆಲವರು [illegible] ಎಕ್ಸಿಬಿಟ್ ಪಿ 1 (ಎ) ನಲ್ಲಿ [illegible] 'ಸ್ವಾರ್ಥ ಬುದ್ಧಿ' [illegible] ಎಕ್ಸಿಬಿಟ್ ಪಿ 1 (ಎ) [illegible] ನಾನು ಅಭಿಪ್ರಾಯಪಡುತ್ತೇನೆ.

23. ಅಧೋಮುಖದ ಕಾಗದಗಳಲ್ಲಿರುವ ಎಕ್ಸಿಬಿಟ್ ಪಿ 1 (ಎ) ವಾಕ್ಯವನ್ನು ಮಿ|| ಗೋಪಾಲಸ್ವಾಮಿ ಅಯ್ಯರ್ ರವರು ಹೇಳಿದರೆಂಬುದು ತನ್ನ ಅಭಿಪ್ರಾಯವಲ್ಲವೆಂದೂ [illegible] ಎಕ್ಸಿಬಿಟ್ ಪಿ 1 ನ್ನು [illegible] ಅಪರಾಧಿಯು [illegible] ಎಕ್ಸಿಬಿಟ್ ಪಿ 1 ರ [illegible] ಎಕ್ಸಿಬಿಟ್ ಡಿ 7 ರಲ್ಲಿ [illegible] ಅಪರಾಧಿಯ 2 ನೇ ಸಾಕ್ಷಿ [illegible] ಅಪರಾಧಿಗೆ [illegible] 1 ನೇ ಸಾಕ್ಷಿಯು ಹೇಳಿರುತ್ತಾರೆ.

24. ಈ ಸಮಾಧಾನವು ಸಂಪೂರ್ಣವೆಂಬುದರಲ್ಲಿ ಅನುಮಾನವಿಲ್ಲ. ಆದರೆ ಅಪರಾಧಿಯ 1 ನೇ ಮತ್ತು 2 ನೇ ಸಾಕ್ಷಿಗಳ ಹೇಳಿಕೆಯನ್ನು ನಾವು ನಂಬಲಿಕ್ಕಾಗದು. ಅಪರಾಧಿಯ 1 ಮತ್ತು 2 ನೇ ಸಾಕ್ಷಿಗಳು [illegible] ಅಪರಾಧಿಯ 1 ಮತ್ತು 2 ನೇ ಸಾಕ್ಷಿಗಳ ಹೇಳಿಕೆಯನ್ನು ಎಕ್ಸಿಬಿಟ್ ಪಿ 1 [illegible] ನೋಡೋಣ.

25. ಈ ಸಂಸ್ಥಾನದಲ್ಲೂ ಎಂಬುದರಿಂದ ಆರಂಭವಾಗಿ ಪ್ರಜಾರಕ್ಷಣೆ [illegible] ಎಕ್ಸಿಬಿಟ್ ಪಿ 1 ರಿಂದ [illegible] ಅಪರಾಧಿ [illegible] ಎಕ್ಸಿಬಿಟ್ ಡಿ 3 (ಎ) [illegible] ಅಪರಾಧಿಯು [illegible] ಎಕ್ಸಿಬಿಟ್ ಪಿ 1 [illegible] ಅಪರಾಧಿಯ 1 ಮತ್ತು 2 ನೇ ಸಾಕ್ಷಿಗಳ ಹೇಳಿಕೆಯನ್ನು [illegible] ಎಕ್ಸಿಬಿಟ್ ಪಿ 1 ರ [illegible] ಅಪರಾಧಿಯ 2 ನೇ ಸಾಕ್ಷಿ [illegible]

6 ನೇ ಪುಟವನ್ನು ನೋಡಿ

ಮೈಸೂರು ಸ್ಟಾರ್.

೧೯೨೦ನೇ ಇಸವಿ ಅಕ್ಟೋಬರ್ ೯ನೇ ಶನಿವಾರ

ಒಪ್ಪಿಕೊಂಡರೆ ಆಗಬಹುದು

ಮೈಸೂರು ಸೀಮೆಯ ಹಿಂದುಳಿದ ವರ್ಗದವರ ಪಾರಮಾರ್ಥ, ಸಾಮಾಜಿಕ ಪ್ರ ಗಾತಿಯಾರ್ಥಾಭಿವೃದ್ಧಿಗಾಗಿ ಏರ್ಪಟ್ಟಿರುವ ಪ್ರಜಾಮಿತ್ರಮಂಡಲಿಯ ಕೆಲ ಪ್ರಮುಖ ಸದಸ್ಯರುಗಳು ಕಳೆದ ದಸರಾ ಮಹೋತ್ಸವ ಸಮಯದಲ್ಲಿ ಮೈಸೂರು ಸಂಸ್ಥಾನದ ಬ್ರಾಹ್ಮಣೇತರ ಮಹಾಸಭೆಯನ್ನು ನೆರೆಯಿಸಿ ತನ್ಮೂಲಕ ತಮ್ಮ ಮಿತ್ರಮಂಡಲಿಯ ಉದ್ದೇಶ ಸಾಧನೋಪಾಯಗಳನ್ನು ಪರ್ಯಾಲೋಚಿಸಬೇಕೆಂದು ಪ್ರಯತ್ನಿಸಿದ್ದರು ಆದರೆ ಕೆಲ ಅನಿವಾರ್ಯದಿಂದ ಮಹಾಸಭೆಯನ್ನು ಕೂಡಿಸಲು ಸಾಧ್ಯವಾಗಲಿಲ್ಲವಾಗಿ, ಈ ದಸರಾ ಮಹೋತ್ಸವದಲ್ಲಿ ನೆರೆಯಿಸಬೇಕೆಂದು ಸಂಕಲ್ಪಿಸಿ, ಅದಕ್ಕಾಗಿ ಬೇಕಾದ ಪ್ರಯತ್ನವನ್ನು ಮಾಡುತ್ತಿರುವರಲ್ಲದೆ ಕಳೆದ ಭಾನುವಾರ ಬೆಂಗಳೂರಿನಲ್ಲಿ ಸಭೆ ಸೇರಿದ್ದು, ಮೈಸೂರು ಸಂಸ್ಥಾನದ ಪ್ರಥಮ ಬ್ರಾಹ್ಮಣೇತರ ಮಹಾಸಭೆಯು ಇದೇ ಅಕ್ಟೋಬರ್ ತಾ|| 10, 11 ಮತ್ತು 12 ರಲ್ಲಿ ರಾಜಧಾನಿಯಲ್ಲಿ ಮದ್ರಾಸು ಮ್ಯುನಿಸಿಪಲ್ ಕಾರ್ಪೊರೇಷನ್ನಿನ ಪ್ರೆಸಿಡೆಂಟರಾದ ಮ|| ಎ ರಾಮಸ್ವಾಮಿ ಮೊದಲಿಯಾರ್, ಬಿ ಎ, ಬಿ ಎಲ್., ರವರ ಅಧ್ಯಕ್ಷತೆಯಲ್ಲಿ ನಡೆಯತಕ್ಕದೆಂದು ನಿರ್ಧರಿಸಿ, ಒಂದು ಸ್ವಾಗತಮಂಡಲಿಯನ್ನೇರ್ಪಡಿಸಿದರು ಈ ಸಭೆಯ ನಡವಳಿಕೆಯು ಬೇರೆ ಕಡೆ ಮುದ್ರಿಸಲ್ಪಟ್ಟಿದೆ

ಬೆಂಗಳೂರಿನಲ್ಲಿ ನೆರೆದಿದ್ದ ಆಲೋಚನಾ ಸಭೆಯ ನಡವಳಿಕೆಯನ್ನು ಕುರಿತು ತಾ|| ೩೦ ರ ಚಿತ್ರಗುಪ್ತ ಪತ್ರಿಕೆಯು 'ಪರಸ್ಪರ ವಿರುದ್ಧ ತತ್ವ' ಎಂಬ ಶೀರ್ಷಿಕೆಯ ಅಗ್ರಲೇಖದಲ್ಲಿ ಪ್ರಸ್ತಾಪಿಸುವಾಗ್ಗೆ, "ವಿದ್ಯಾಭ್ಯಾಸ, ಸಮಾಜದಲ್ಲಿ ಸ್ಥಾನ, ಸರ್ಕಾರಿ ಉದ್ಯೋಗಗಳು, ರಾಜಕೀಯ ಸಂಸ್ಥೆಗಳಲ್ಲಿನ ಸ್ಥಾನಗಳು ಮೊದಲಾದುವುಗಳಲ್ಲಿ ಬ್ರಾಹ್ಮಣೇತರರು ಬಹಳ ಹಿಂದುಳಿದಿರುವರೆಂದೂ, ಇವರಿಗೆ ತಮ್ಮ ಸಂಖ್ಯಾನುಗುಣವಾಗಿ ನ್ಯಾಯವಾಗಿ ಸಲ್ಲಬೇಕಾಗಿರುವ ಹಕ್ಕುಬಾಧ್ಯತೆಗಳನ್ನು ಸಾಧಿಸಿಕೊಡುವುದೇ ಪ್ರಜಾಮಿತ್ರಮಂಡಲಿಯ ಮುಖ್ಯೋದ್ದೇಶವೆಂದೂ ಆ ಸಂಸ್ಥೆಯ ಉದ್ದೇಶಗಳಿಂದ ಹೊರಪಡುವುದು ಈ ಧ್ಯೇಯವನ್ನು ಸಾಧಿಸತಕ್ಕವರಾರಾದರೂ ಮಂಡಲಿಯ ಸದಸ್ಯರಾಗಲು ಅವಕಾಶವಿರುವುದರಿಂದ, ಜಾತೀಯ ಪ್ರಾತಿನಿಧ್ಯವನ್ನೊಪ್ಪುವ ಬ್ರಾಹ್ಮಣರು ಕೂಡ ಪ್ರಜಾಮಿತ್ರಮಂಡಲಿಯ ಸದಸ್ಯರಾಗಿ ಬ್ರಾಹ್ಮಣೇತರರ ಏಳ್ಗೆಗಾಗಿ ಕೆಲಸಮಾಡಬಹುದಾಗಿದೆ ಆದರೆ ಮುಂದೆ ನೆರೆಯುವ ಬ್ರಾಹ್ಮಣೇತರ ಮಹಾಸಭೆಯ ಕಾರ್ಯಕಲಾಪಗಳಲ್ಲಿ ಪ್ರಜಾಮಿತ್ರಮಂಡಲಿಯ ಧ್ಯೇಯವನ್ನಂಗೀಕರಿಸಲು ಸಿದ್ಧರಾಗಿರುವ ಬ್ರಾಹ್ಮಣರು ಭಾಗಿಗಳಾಗಲು ಅವಕಾಶವಿರುವುದಿಲ್ಲ. ಇಂದಮೇಲೆ ಮಹಾಸಭೆಯು ಪ್ರಜಾಮಿತ್ರಮಂಡಲಿಯ ಉದ್ದೇಶನಿಯಮಗಳಿಗೆ ವ್ಯತಿರಿಕ್ತವಾಗಿದೆಯೆಂದು ಹೇಳಬೇಕಾಗುವುದು" ಎಂದು ಅಭಿಪ್ರಾಯಪಟ್ಟಿರುತ್ತದೆ

ಈ ಪ್ರಜಾಮಿತ್ರಮಂಡಲಿಯ ಸ್ಥಾಪಕರಾದ ಶ್ರೀ|| ಎಂ ಬಸವಯ್ಯನವರು 1918 ನೇ ಇಸವಿಯಲ್ಲಿ ರಾವ್ ಸಾಹೇಬ್ ಚನ್ನಯ್ಯನವರ ಯಜಮಾನ್ಯದಲ್ಲಿ ಮ|| ಗಳಾದ ನವಾಬ್ ಕಲಾಮು, ಶ್ರೀ|| ಎಂ ಸುಬ್ಬಯ್ಯ, ಸಾಹುಕಾರ್ ಡಿ ಬಸವಯ್ಯ, ಪ್ರಭೃತಿಗಳಿಂದ ಕೂಡಿದ ಒಂದು ರಾಯಭಾರವನ್ನು ಶ್ರೀಮನ್ಮಹಾರಾಜರವರಲ್ಲಿಗೆ ತೆಗೆದುಕೊಂಡುಹೋಗಿ, ಬಾಲವಿದ್ಯಾಭ್ಯಾಸವು ಉಚಿತವಾಗಿ ಮಾಡಿಸಲ್ಪಡಲು ಶಾಸನವೇರ್ಪಟ್ಟಿದ್ದರೂ ಗ್ರಾಮವಾಸಿಗಳು ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಎಷ್ಟೋ ಧನವ್ಯಯವನ್ನು ಮಾಡುತ್ತಿರುವುದರಿಂದಲೂ, ಉಚಿತ ವಿದ್ಯಾಭ್ಯಾಸಕ್ಕಾಗಿ ತಗಲುವ ವೆಚ್ಚದಲ್ಲಿ ಅರ್ಧವನ್ನು ಗ್ರಾಮವಾಸಿಗಳು ವಹಿಸಬೇಕಾಗಿದ್ದರೂ ಅದರ ಫಲವನ್ನು ನಗರವಾಸಿಗಳು ಅನುಭವಿಸುತ್ತಿರುವರಲ್ಲದೆ ಗ್ರಾಮವಾಸಿಗಳಿಗೆ ದೊರೆಯುತ್ತಿಲ್ಲವಾದುದರಿಂದಲೂ ವಿದ್ಯಾಭ್ಯಾಸ ಸೌಕರ್ಯವು ಎಲ್ಲಾ ಪ್ರಜೆಗಳಿಗೂ ಒಂದೇ ತೆರನಾಗಿರುವಂತೆಯೂ, ಸರ್ಕಾರಿ ಉದ್ಯೋಗಗಳನ್ನು ಒಂದೇ ವರ್ಗದವರು ಬಹು ಕಾಲದಿಂದ ಗುತ್ತಿಗೆ ಹಿಡಿದು ಅನುಭವಿಸುತ್ತಿರುವುದು ತಪ್ಪಿ ಹಿಂದುಳಿದ ವರ್ಗದವರಿಗೆ ಅವರ ಸಂಖ್ಯಾನುಗುಣವಾಗಿ ಉದ್ಯೋಗಗಳು ದೊರಕುವಂತೆಯೂ ಅನುಗ್ರಹಿಸಬೇಕೆಂದು ಬಿನ್ನೈಸಿಕೊಂಡುದರ ಮೇಲೆ ಮಹಾಪ್ರಭುಗಳು ಹಿಂದುಳಿದ ವರ್ಗದವರ ನ್ಯಾಯವಾದ ಆಪೋತ್ತರಗಳಲ್ಲಿ ಸಹಾನುಭೂತಿಯನ್ನು ತೋರಿಸಿ ಅವುಗಳನ್ನು ಪ್ರಸಾದಿಸಲು ಪ್ರಭುತ್ವದವರು ತಕ್ಕೇರ್ಪಾಟನ್ನು ಮಾಡುವುದಾಗಿ ಅಪ್ಪಣೆಯನ್ನು ಕೊಡಿಸಿದರು ಅದರಮೇಲೆ ಸರ್ಕಾರೀ ಪಾಠಶಾಲೆಗಳಲ್ಲಿ ಎಲ್ಲಾ ಪ್ರಜೆಗಳಿಗೂ ಒಂದೇ ತೆರನಾಗಿ ವಿದ್ಯಾಭ್ಯಾಸವು ನಡೆಯುವಂತೆ ಏರ್ಪಡಿಸಲ್ಪಟ್ಟಿತಲ್ಲದೆ ಸರ್ಕಾರಿಯುದ್ಯೋಗ ವಿಚಾರದಲ್ಲಿದ್ದ ಕೊರತೆಯ ನಿವಾರಣೋಪಾಯವನ್ನು ಸೂಚಿಸಲು ಸರ್ ಲೆಸ್ಲಿ ಮಿಲ್ಲರ್‌ರವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯೇರ್ಪಡಿಸಲ್ಪಟ್ಟಿತು ಈ ಕಮಿಟಿಯವರು ವಿಶೇಷಾಲೋಚನೆಯಿಂದ ಏಳು ವರ್ಷಕಾಲದಲ್ಲಿ ಸರ್ಕಾರಿಯುದ್ಯೋಗಗಳಲ್ಲಿ ಹಿಂದುಳಿದ ವರ್ಗದವರ ಸಂಖ್ಯೆಯು ಶೇಕಡ ೫೦ ರಷ್ಟು, ಒಂದು ವರೆಗೂ ಹಿಂದುಳಿದ ವರ್ಗದವರಿಗೇ ಉದ್ಯೋಗಗಳು ಕೊಡಲ್ಪಡಬೇಕಾಗಿ ಸೂಚಿಸಿ ರಿಪೋರ್ಟನ್ನು ಮಾಡಿದರು ಇದರನ್ವಯ ಪ್ರಭುತ್ವದವರ ಅಪ್ಪಣೆಯೂ ಆಯಿತು. ಆದಾಗ್ಯೂ ಉದ್ಯೋಗನಿಯೋಗಗಳಲ್ಲಿ ಕಮಿಟಿಯವರ ಸೂಚನೆಯು ಅಕ್ಷರಶಃ ಪಾಲಿಸಲ್ಪಡದೆ ಸರ್ಕಾರದ ಅಪ್ಪಣೆಯು ಅನುಷ್ಠಾನಕ್ಕೆ ಬಾರದೆ ಇರುವುದರಿಂದ ಬಹಳ ಜನಗಳು ಉದ್ಯೋಗವನ್ನು ಕಳೆದುಕೊಂಡು ಮತ್ತೆ ಕಷ್ಟಪಡುವಂತಾಗಿದೆ. [illegible] ತಟಸ್ಥ ಪ್ರಜಾಮಿತ್ರಮಂಡಲಿಯವರು ಮಿಲ್ಲರ್ ಕಮಿಟಿ ರಿಪೋರ್ಟಿನ ಮೇಲೆ ಹುಟ್ಟಿರುವ ಸರ್ಕಾರದಪ್ಪಣೆಯು ಅಕ್ಷರಶಃ ಅನುಷ್ಠಾನಕ್ಕೆ ಬರುವಂತೆ ಕಟ್ಟುಪಾಡನ್ನು ಮಾಡಬೇಕಲ್ಲದೆ ಸರ್ಕಾರಿಯುದ್ಯೋಗಗಳಲ್ಲಿ ಹಿಂದುಳಿದವರ ಸಂಖ್ಯೆಯನ್ನು ಶೇಕಡ ೬೦ ಕ್ಕೆ ಹೆಚ್ಚಿಸಬೇಕೆಂದು ಪ್ರಜಾಪ್ರತಿನಿಧಿ ಮತ್ತು ನ್ಯಾಯನಿರ್ಮಾಪಕ ಸಭೆಗಳ ಮೂಲಕ ಪ್ರಾರ್ಥಿಸಿಕೊಳ್ಳುತ್ತಬರುವವರಾದರು. ಅತ್ಯಂತ ಬಹುಕಾಲದಿಂದಲೂ ಗುತ್ತಿಗೆ ಹಿಡಿದು ಅನುಭವಿಸುತ್ತಿದ್ದ ಸರ್ಕಾರಿಯುದ್ಯೋಗಕ್ಕೆ ಇತರರೂ ಪಾಲುಗಾರರಾಗಿ ಬಂದರೆಂದು ಪ್ರಕ್ಷುಬ್ಧರಾದ ಬ್ರಾಹ್ಮಣರು, ಮಿಲ್ಲರ್ ಕಮಿಟಿಯ ರಿಪೋರ್ಟಿನ ಮೇಲೆ ಹುಟ್ಟಿರುವ ಸರ್ಕಾರದಪ್ಪಣೆಯ ಏಳು ವರ್ಷದ ಕಾಲಾವಧಿಯು ಪೂರೈಸಿದುದರಿಂದ ಅದನ್ನು ತಪ್ಪಿಸಬೇಕೆಂದು ವಾದಿಸುವವರಾದರು. ಇದರಮೇಲೆ ದಿವಾನರಾದ ಮಿ|| ಮಿರ್ಜಾರವರು ಉಭಯ ವರ್ಗದವರ ವಾದ ಪ್ರತಿವಾದಗಳನ್ನು ಕೇಳಿ ಮಿಲ್ಲರ್ ಕಮಿಟಿ ರಿಪೋರ್ಟು ಮೇಲಿನ ಸರ್ಕಾರಿಯಪ್ಪಣೆಯ ಕಾಲಪರಿಮಿತಿಯ ಗೋಜಿಗೆ ಹೋಗದೆ ಬಿಡುವಾಗುವ ಸರ್ಕಾರಿಯುದ್ಯೋಗಗಳಲ್ಲಿ ಎರಡು ಸ್ಥಾನಗಳು ಹಿಂದುಳಿದವರಿಗೂ, ಒಂದು ಸ್ಥಾನವು ಅರ್ಹರಾದ ಇತರ (ಬ್ರಾಹ್ಮಣ) ರಿಗೂ ಕೊಡಲ್ಪಡುವುದಾಗಿ ವಾಗ್ದಾನಮಾಡಿದರಲ್ಲದೆ ಸರ್ಕಾರಿಯಪ್ಪಣೆ ಸಹ ಆಯಿತು

ಮೇಲೆ ಹೇಳಿದ ನಡವಳಿಕೆಗಳಿಂದ ಸರ್ಕಾರಿಯುದ್ಯೋಗವನ್ನು ಬಹುಕಾಲದಿಂದಲೂ ಒಂದೇವರ್ಗದವರು ಆಕ್ರಮಿಸಿಕೊಂಡು ಹಿಂದುಳಿದ ವರ್ಗದವರಲ್ಲಿ ತಮ್ಮಂತೆಯೇ ಅಥವಾ ತಮಗಿಂತಲೂ ಅತಿಶಯವಾಗಿಯೇ ನಿರ್ವಹಿಸಬಲ್ಲವರಿಗೆ ಅವಕಾಶ ಕೊಡದಿದ್ದ ಸ್ವಾರ್ಥಪರರ ಅನ್ಯಾಯಾಚರಣೆಯು ತಪ್ಪಿ ಸರ್ವವರ್ಗದವರೂ ನಿಷ್ಪಕ್ಷಪಾತದಿಂದ ಸರ್ಕಾರಿಯುದ್ಯೋಗವನ್ನು ಅನುಭವಿಸಲು ಮಿಲ್ಲರ್ ಕಮಿಟಿ ರಿಪೋರ್ಟಿನ ಆಧಾರದ ಸರ್ಕಾರಾಜ್ಞೆ ಗತ್ಯಂತರವಿಲ್ಲವೆಂಬುದು ನಿರ್ವಿವಾದಂಶವಾಗಿದೆ ಹಿಂದುಳಿದ ವರ್ಗದವರಿಗೆ ಕಲ್ಪವೃಕ್ಷದಂತಿರುವ ಈ ಮಿಲ್ಲರ್ ಕಮಿಟಿಯ ರಿಪೋರ್ಟನ್ನು ಪುರಸ್ಕರಿಸುವವರೆಲ್ಲರೂ ಜಾತಿ ತಾರತಮ್ಯವಿಲ್ಲದೆ ಹಿಂದುಳಿದ ವರ್ಗದವರ ಹಿತಚಿಂತಕರೆಂಬುದರಲ್ಲಿ ಅಭ್ಯಂತರವೇ ಇಲ್ಲ. ಒಂದುವೇಳೆ ಹಿಂದುಳಿದ ವರ್ಗದವರಲ್ಲಿ ಆರಾದರೂ ಈ ರಿಪೋರ್ಟನ್ನು ತಿರಸ್ಕರಿಸಿದಲ್ಲಿ ಅವರು ಹಿಂದುಳಿದವರ ಶತ್ರುಗಳಲ್ಲದೆ ಮಿತ್ರರಲ್ಲವೆಂದು ನಾವು ಸಾರಿಹೇಳುತ್ತೇವೆ ಇಂತಹದರಲ್ಲಿ ಮಿಲ್ಲರ್ ಕಮಿಟಿಯ ರಿಪೋರ್ಟು ಆವಿರ್ಭವಿಸಿದಾರಭ್ಯ ಈ ಹೊತ್ತಿನವರೆಗೂ ಅದನ್ನು ಮತ್ಸರಿಸಿ ಪ್ರತಿಭಟಿಸುತ್ತಿರುವ ಮುಂಬರಿದ ವರ್ಗದವರು ಹಿಂದುಳಿದ ವರ್ಗದವರ ಹಿತಚಿಂತಕರೆಂದು ಹೇಳುವುದು ಆಭಾಸವಲ್ಲವೆ? ಒಂದುವೇಳೆ ನಮ್ಮ ಚಿತ್ರಗುಪ್ತನ ಅಭಿಪ್ರಾಯದಂತೆ ಮುಂಬರಿದ ವರ್ಗದವರು ಹಿಂದುಳಿದ ವರ್ಗದವರ ನಿಜವಾದ ಹಿತಚಿಂತಕರಾಗಿದ್ದಲ್ಲಿ ಹಿಂದುಳಿದ ವರ್ಗದವರ ಪಾಲಿಗೆ ಕಾಮಧೇನುವಿನಂತಿರುವ ಮಿಲ್ಲರ್ ಕಮಿಟಿಯ ರಿಪೋರ್ಟನ್ನು ತಾವು ಪುರಸ್ಕರಿಸುತ್ತೇವೆಂದು ತ್ರಿಕರಣಪೂರ್ವಕವಾಗೊಪ್ಪಿ ಎಲ್ಲ ಪತ್ರಿಕೆಗಳಲ್ಲೂ ತಮ್ಮ ಹೆಸರುಗಳನ್ನು ಕೊಟ್ಟು ಪ್ರಕಟಿಸುವುದಲ್ಲದೆ ಬರುವ ಪ್ರಜಾಪ್ರತಿನಿಧಿಸಭೆಯಲ್ಲಿ ದಿವಾನ್ ಅಧ್ಯಕ್ಷರ ಸಮ್ಮತಿಯನ್ನು ಪಡೆದು ಏಕವಾಕ್ಯತೆಯಿಂದ ಹೇಳಲಿ ಈರೀತಿ ಮುಂಬರಿದ ವರ್ಗದವರು ಆಚರಿಸಿ ತಮ್ಮ ನಿಜಸ್ವರೂಪವನ್ನು ವ್ಯಕ್ತಗೊಳಿಸಿದರೆ ಅವರು ಬ್ರಾಹ್ಮಣೇತರ ಮಹಾಸಭೆಗೆ ಸೇರಿಸಿಕೊಳ್ಳಲ್ಪಡುವರಲ್ಲದೆ ಹಿಂದುಳಿದ ವರ್ಗದವರ ಮುಂದಾಳುಗಳಾಗಿ ಸಹ ಮಾಡಲ್ಪಡುವರೆಂದು ನಾವು ಖಂಡಿತವಾಗಿ ಹೇಳುತ್ತೇವೆ ಹಾಗಲ್ಲದೆ ಅವರ ನಿಸರ್ಗವಾದ ವಂಚನೆಯ ಮಾತುಗಳಿಗೆ ಬೆರಗಾಗಿ ಮತ್ತು ಯಾವುದೋ ಒಂದು ವ್ಯಕ್ತಿಯ ಮೇಲೆ [illegible] ಮುಂಬರಿದ ವರ್ಗದವ (ಬ್ರಾಹ್ಮಣ) ರು ಒಂದು [illegible] ಕೆಂದೂ ಅವರನ್ನು ಶತ್ರುಗಳನ್ನಾಗಿ [illegible] ಮಹಾಸಭೆಯಿಂದ ದೂರೀಕರಿಸುವುದು [illegible] ಪ್ರಜಾಮಿತ್ರಮಂಡಲಿಯ ಧ್ಯೇಯಕ್ಕೆ [illegible] ವುದು ಖಂಡಿತವಾಗಿಯೂ ಅನುಚಿತವು [illegible] ವಂತೆ ಬ್ರಾಹ್ಮಣರು ಒಪ್ಪಿಕೊಂಡರೆ [illegible] ಗುವುದು ಹಾಗಲ್ಲದೆ 'ಸ್ವಾರ್ಥ [illegible] ವಂಚಿಸಲ್ಪಟ್ಟೆವೊ [illegible] ಮತ್ತು ಬಡಮಗುವನ್ನು ನೋಡಿ ಗಾಣಿಗ [illegible] ಅಷ್ಟೊ ಆಂದಂತೆ ವರ್ತಿಸಿದರೆ ಮಾತ್ರ ಈ ನಾಗರಿಕ [illegible] ವಧಿಯ ಕಾಲದಲ್ಲಿ ಯಾರೂ ಒಪ್ಪರು

ಬ್ರಾಹ್ಮಣೇತರಮಹಾಸಭೆ

ಈ ಮಹಾಸಭೆಯು ಇದೇ ತಾ|| 10, 11 ಮತ್ತು 12 ನೇ ತಾರೀಖುಗಳಲ್ಲಿ ಮದ್ರಾಸು ಮ್ಯುನಿಸಿಪಲ್ ಕಾರ್ಪೊರೇಷನ್ನಿನ ಪ್ರೆಸಿಡೆಂಟರಾದ ಮ|| ಎ ರಾಮಸ್ವಾಮಿ ಮೊದಲಿಯಾರರ ಅಧ್ಯಕ್ಷತೆಯಲ್ಲಿ ರಾಜಧಾನಿಯ ಟೌನ್ ಹಾಲಿನಲ್ಲಿ ನೆರೆಯುವುದಾಗಿ ನಿಶ್ಚಯಿಸಲ್ಪಟ್ಟು ಪ್ರಜಾಮಿತ್ರಮಂಡಲಿಯ ಅಧ್ಯಕ್ಷರಾದ ರಾವ್ ಸಾಹೇಬ್ ಚೆನ್ನಯ್ಯನವರ ಯಜಮಾನ್ಯದಲ್ಲಿ ದೊಡ್ಡ ಮನುಷ್ಯರುಗಳಿಂದ ಕೂಡಿದ ಸ್ವಾಗತಸಂಘವೇರ್ಪಡಿಸಲ್ಪಟ್ಟಿರುವುದಲ್ಲದೆ ತಕ್ಕ ಸನ್ನಾಹಗಳು ಬಹಳ ಚಟುವಟಿಕೆಯಿಂದಲೂ ಶ್ರದ್ಧೆಯಿಂದಲೂ ನಡೆಸಲ್ಪಡುತ್ತಿವೆ ಈ ಮಹಾಸಭೆಯನ್ನು ನೆರೆಯಿಸುವುದರ ಉದ್ದೇಶ ಪ್ರಯೋಜನ ಮೊದಲಾದ ವಿಚಾರಗಳು ನಮ್ಮ ಅಗ್ರಲೇಖದಲ್ಲಿ ಸಂಕ್ಷೇಪವಾಗಿ ತಿಳಿಸಲ್ಪಟ್ಟಿರುತ್ತವೆ. ಮಹಾಸಭಾಧ್ಯಕ್ಷತೆಯನ್ನು ವಹಿಸುವವರಾಗಿರುವ ಮ|| ರಾಮಸ್ವಾಮಿ ಮೊದಲಿಯಾರರು ಪ್ರಖ್ಯಾತ ವಿದ್ವಾಂಸರೂ, ದೇಶಾಭಿಮಾನಿಗಳೂ, ರಾಜಕಾರ್ಯವಿಶಾರದರೂ, ವಾಚಾಳಿಗಳೂ ಆಗಿರುವುದಲ್ಲದೆ ಜಸ್ಟಿಸ್ ಪಕ್ಷದ ಮುಖ್ಯಸ್ಥರಲ್ಲೊಬ್ಬರು. ಮದ್ರಾಸಿನ ದೇಶೀಯ ಸಂಸ್ಥಾನಿಕ ಸಂಘದ ಅಧ್ಯಕ್ಷತೆಯನ್ನು ವಹಿಸಿ [illegible] ಸಮರ್ಥರಾಗಿರುತ್ತಾರೆ ಇಂತಹವರ ಅಧ್ಯಕ್ಷತೆಯಲ್ಲಿ ಈ ದೇಶದ ಬ್ರಾಹ್ಮಣೇತರ ಪ್ರಥಮ ಮಹಾಸಭೆಯು ಸರ್ವಾಂಗಸುಂದರವಾಗಿಯೂ ಜಯಪ್ರದವಾಗಿಯೂ ನಡೆಯುವುದೆಂದು ನಮಗೆ ಪೂರ್ಣ ಭರವಸೆಯುಂಟು. ಹಿಂದುಳಿದ ವರ್ಗದವರ ಅಭಿವೃದ್ಧಿಗೆ ಸಾಧಕವಾದ ಅನೇಕ ಏರ್ಪಾಟುಗಳು ಪ್ರಜೆಗಳನ್ನು ಪುತ್ರನಿರ್ವಿಶೇಷದಿಂದ ಪರಿಪಾಲಿಸುತ್ತಿರುವ ಶ್ರೀಮನ್ಮಹಾರಾಜರವರಿಂದ ಅನುಗ್ರಹಿಸಲ್ಪಟ್ಟಿರುವುದಾದರೂ, ಸ್ವಾರ್ಥಪರರಾದ ವರ್ಗದವರಿಂದ ಅವು ಸಂಪೂರ್ಣವಾಗಿ ಅನುಷ್ಠಾನಕ್ಕೆ ತರಲ್ಪಡದಿರುವುದರಿಂದ, ಅವನ್ನು ಸಾಧಿಸುವುದಲ್ಲದೆ ತಮಗಿರುವ ಕುಂದುಕೊರತೆಗಳನ್ನು ಸಂಪೂರ್ಣವಾಗಿ ನಿವಾರಿಸಿಕೊಳ್ಳಲು ಈ ಮಹಾಸಭೆಯ ಉತ್ಪಾದನವು ಅತ್ಯವಶ್ಯವಾಗಿರುವುದರಿಂದ ಸ್ವಜನಾಭಿವೃದ್ಧಿ ಕಾಂಕ್ಷಿಗಳಾದ ಹಿಂದುಳಿದ ವರ್ಗದವರೆಲ್ಲರೂ ತಪ್ಪದೆ ಈ ಮಹಾಸಭೆಗೆ ಬಂದು ಕಾಲೋಚಿತವಾದ ಸೂಚನೆಗಳನ್ನು ಕೊಟ್ಟು ಸಭಾಕಾರ್ಯವು ನಿರ್ವಿಘ್ನವಾಗಿ ನಡೆಯುವಂತೆ ಮಾಡಿ ಕೃತಕೃತ್ಯರಾಗುವರೆಂದು ನಿರೀಕ್ಷಿಸುತ್ತೇವೆ

ದಶರಾತ್ರಿಯುತ್ಸವ

ನಮ್ಮ ಪ್ರಭುವರ್ಯರಾದ ಶ್ರೀಮನ್ಮಹಾರಾಜ ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್‌ರವರು ಕಳೆದ ತಾ|| ೭ ನೇ ಗುರುವಾರ ಪ್ರಾತಃಕಾಲ ಮಂಗಳಸ್ನಾನಾನಂತರ ದೇವತಾರ್ಚನೆಯನ್ನು ಮಾಡಿ ದಿವ್ಯ ವಸ್ತ್ರಾಭರಣವಿಭೂಷಿತರಾಗಿ ಗುಪ್ತ ರಾಜಮರ್ಯಾದೆಯಿಂದ ಸಭಾಂಗಣಕ್ಕೆ 9-10 ಗಂಟೆಗೆ ದಯಮಾಡಿ ಸ್ವಸ್ತಿವಾಚನ ನವಗ್ರಹಮುಖ ಮೊದಲಾದವುಗಳನ್ನು ಪೂರೈಸಿಕೊಂಡು ವಂದಿಮಾಗಧರ ಪರಾಕುಗಳನ್ನು ಗಮನಿಸುತ್ತ ಅಲಂಕೃತವಾದ ಸಿಂಹಾಸನದ ಬಳಿಗೆ ಚಿತ್ತೈಸಿ ಅದನ್ನು ವಿಧಿವತ್ತಾಗಿ ಪೂಜಿಸಿ ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ ಸರದಾರ್ ಗೋಪಾಲರಾಜ ಅರಸಿನವರ ಕರಾವಲಂಬನದಿಂದ 9-50 ಘಂಟೆಗೆ ಸಿಂಹಾಸನಾರೋಹಣಮಾಡಿದರು ವಾದ್ಯಗಳು ಘೋಷಗೈದುವು ಸೈನಿಕರು ಜಯಘೋಷಮಾಡಿದರು ಪ್ರೇಕ್ಷಕರು ಕರತಾಡನದಿಂದ ಕೋಲಾಹಲಧ್ವನಿಗೈದರು ಕೋಟೆಯ ಕೊತ್ತಲಿನಿಂದ 21 ಗುಂಡುಗಳು ಹಾರಿಸಲ್ಪಟ್ಟುವು ಸಾಲಂಕೃತಗಳಾದ ಪಟ್ಟದ ಆನೆ ಕುದುರೆಗಳು ಸಕಲ ರಾಜಮರ್ಯಾದೆಯೊಡನೆ ದೊಡ್ಡ ಕೆರೆಯಬಳಿಗೆ ಉತ್ಸವಪೂರ್ವಕವಾಗಿ ಹೊರಟವು ಸಭಿಕರ ಮುಜರೆಯಾದಮೇಲೆ ದಿವಾನರು, ಚಾಮರಾಜನಗರ [illegible] ರು, ಕೌನ್ಸಿಲರುಗಳು ವೈಸ್ ಛಾನ್ಸಲರು ಸರದಾರರುಗಳು ಇವರುಗಳಿಂದ ನಜರೊಪ್ಪಿಸಲ್ಪಟ್ಟಿತು ಅನಂತರ ಸಿಪಾಯಿಗಳು ಮೂರು ವೇಳ ಸುರುಟನ್ನು ಹಾರಿಸಿದರು ಚತುರಂಗಸೇನೆಯ ಮುಜರೆಯಾಯಿತು ನಾನಾವಿಧ ವಾದ್ಯಗಳು ಕ್ರಮವರಿತು ಮನೋಹರವಾಗಿ ಆಗುತ್ತಿದ್ದುವು ಪಟ್ಟದ ಆನೆ ಕುದುರೆಗಳು ಕೆರೆಯ ಬಳಿ ಪೂಜೆಗೊಂಡು ಯಥಾಮರ್ಯಾದೆಯಿಂದ ಅರಮನೆಯನ್ನು ಸೇರಿದುವು ಸಭಿಕರಿಗೆ ಪುಷ್ಪಹಾರ ತಾಂಬೂಲಗಳು ಕೊಡಲ್ಪಟ್ಟು ಸಭಾವಿಸರ್ಜನೆಯಾಗುವ ಹೊತ್ತಿಗೆ 11 ಗಂಟೆಯಮೇಲಾಗಿದ್ದಿತು ಅರಮನೆಯ ಮುಂದಿನ ವಿಶಾಲವಾದ ಬೈಲಿನಲ್ಲೂ ಉಭಯ ಪಾರ್ಶ್ವಗಳಲ್ಲೂ ಸ್ತ್ರೀಯರಿಗಾಗಿ ಏರ್ಪಡಿಸಲ್ಪಟ್ಟಿರುವ ಪಾಪಟಿಗೆ ಮೇಲೂ ಜನರು ಕಿಕ್ಕಿರಿದು ನೆರೆದಿದ್ದು ಉತ್ಸವವೈಭವವನ್ನು ನೋಡಿ ಆನಂದಭರಿತರಾಗಿ ಜಯಜಯಾಕಾರಗಳನ್ನು ಮಾಡುತ್ತಿದ್ದರು. ಆ ದಿವಸ ಸಾಯಂಕಾಲ 7 ಗಂಟೆಗೆ ಅದ್ಭುತವಾದ [illegible] ವಿದ್ಯುದ್ದೀಪಾವಳಿಗಳಿಂದ ಕಣ್ಣಿಗೆ ಹಬ್ಬವನ್ನುಂಟುಮಾಡುತ್ತಿದ್ದ ಅರಮನೆಯ ಮುಂಗಡ ಪದಾತಿ ಸೇನೆಯ [illegible] ಪ್ರೇಕ್ಷಕಸಮೂಹವೂ ತುಂಬಿದಲಾಗಿ ಸ್ವಾಂಗಣವು [illegible] ಅತಿಶಯವಾಗಿ ರಾರಾಜಿಸುತ್ತಿದ್ದ [illegible] ಶ್ರೀಮನ್ಮಹಾರಾಜರವರು ಅಲಂಕರಿಸಿದಮೇಲೆ [illegible] ಸಿಂತಕೂಡಲೆ ಕುಸ್ತಿಗಳು ಕತ್ತಿಯ [illegible] ಮೊದಲಾದ ಸಂಧಾನಗಳು ನಡೆಯುತ್ತಿರುವಾಗ್ಗೆ [illegible] ನಜರೊಪ್ಪಿಸಲ್ಪಟ್ಟಿತು ಕೆರೆಗೆ ಹೋಗಿದ್ದ ಪಟ್ಟದ ಆನೆ ಕುದುರೆಗಳು ಅರಮನೆಗೆ ಬಂದಮೇಲೆ ಸಭಿಕರ ಮುಜರೆಯಾಗಿ ಹಾರತಾಂಬೂಲಗಳ ವಿನಿಯೋಗದಿಂದ ೭೩ ಗಂಟೆಗೆ ದರ್ಬಾರು ಮುಗಿದಿತು. ಈ ರೀತಿಯಾಗಿ ಬರುವ ಶನಿವಾರದವರೆಗೂ ಪ್ರತಿ ಸಾಯಂಕಾಲ ನಡೆಯುವುದು ಆ ದಿವಸ ಸಾಯಂಕಾಲ ಮಳೆಯಾದುದರಿಂದ ನೋಟಕರಿಗೆ ಬಹಳ ಉತ್ಸಾಹಭಂಗವಾಯಿತು ನೆನ್ನೆಯ ದಿವಸ ಮಳೆಯಿಲ್ಲದಿದ್ದುದರಿಂದ ಪ್ರೇಕ್ಷಕರು ಆನಂದಭರಿತರಾಗಿದ್ದರು.

ಒಳದೇಶದ ವೃತ್ತಾಂತಗಳು.

ಮೈಸೂರು ಸೆಕ್ರೆಟರಿಯವರಾದ ಮ|| ಟಿ ತಂಬೂಚೆಟ್ಟಿಯವರು ತಮ್ಮ ಕುಮಾರಿಯೊಡನೆ ಇಂಗ್ಲೆಂಡಿಗೆ ಹೋಗಿದ್ದವರು ಸಂಗೀತ ವಿದ್ಯಾಭ್ಯಾಸ ಮಾಡಲು ಕುಮಾರಿಯನ್ನು ಅಲ್ಲಿಯೇ ಬಿಟ್ಟು ಇದೇ ತಾ|| ೯ ರಲ್ಲಿ ರಾಜಧಾನಿಗೆ ಬರುವವರಾಗಿರುವರು.

ಇದೇ ತಾ|| ೮, ೯ ಮತ್ತು 10 ರಲ್ಲಿ ನಡೆಯುವ ಮೈಸೂರು ಸಂಸ್ಥಾನದ ಸಹಕಾರ ಸಂಘಗಳ 10ನೇ ಮಹಾಸಭೆಯ ಅಧಿವೇಶನದ ಅಧ್ಯಕ್ಷತೆಯನ್ನು ವಹಿಸಲು ಲಕ್ಸ್ಮಿಡ್ ಕೌನ್ಸಿಲರ್,

ಮೈಸೂರು ಸಂಸ್ಥಾನದ

ಬ್ರಾಹ್ಮಣೇತರ ಮಹಾಸಭೆಯು

ತಾ|| 10, 11, 12 ನೇ ಗುರುವಾರ, ಶುಕ್ರವಾರ ಮತ್ತು ಶನಿವಾರ

ರಾಜಧಾನಿಯ ಟೌನ್‌ಹಾಲಿನಲ್ಲಿ

ಮದ್ರಾಸಿನ ಮ್ಯುನಿಸಿಪಲ್ ಕಾರ್ಪೋರೇಷನ್ ಪ್ರೆಸಿಡೆಂಟರಾದ

ಮ|| ಎ. ರಾಮಸ್ವಾಮಿ ಮೊದಲಿಯಾರ್,

ಬಿ. ಎ., ಬಿ ಎಲ್, ರವರ ಅಧ್ಯಕ್ಷತೆಯಲ್ಲಿ ಜರುಗುವುದು.

ಮದರಾಸು, ಬೊಂಬಾಯಿ ಮೊದಲಾದ ಸ್ಥಳಗಳಿಂದ ಅನೇಕ ಬ್ರಾಹ್ಮಣೇತರ ಮುಂದಾಳುಗಳು ದಯಮಾಡಿಸುತ್ತಾರಾದುದರಿಂದ ಸಂಸ್ಥಾನದ ಎಲ್ಲ ಭಾಗಗಳಿಂದಲೂ ಬ್ರಾಹ್ಮಣೇತರ ಬಂಧುಗಳು ದಯಮಾಡಿಸಿ ಮಹಾಸಭೆಯನ್ನು ಜಯಪ್ರದವಾಗಿ ನಡೆಯುವಂತೆ ಮಾಡಬೇಕೆಂದೂ, ಈ ಸಭೆಯಲ್ಲಿ ಚರ್ಚಿಸಿ ನಿರ್ಧರಿಸಬೇಕಾದ ವಿಷಯಗಳು ಈ ತಾ|| 8 ರಲ್ಲಿ ಚೇರ್ಮನ್ನರಿಗೆ ತಲುಪುವಂತೆ ಕಳುಹಿಸಿಕೊಡಲ್ಪಡಬೇಕೆಂದೂ ಕೋರುತ್ತೇವೆ.

ಸಭಾ ಪ್ರವೇಶಧನ.

ಸ್ವಾಗತಮಂಡಲಿಯ ಸದಸ್ಯರಿಗೆ	5—0—0
ಪ್ರತಿನಿಧಿಗಳಿಗೆ	1—0—0
ಪ್ರೇಕ್ಷಕರಿಗೆ	0—8—0
ಸ್ತ್ರೀಯರಿಗೆ	ಉಚಿತ

ಎ. ಚಂದ್ರೇಗೌಡ,
ಡಿ. ಬಸಮಯ್ಯ,
ಉಪಾಧ್ಯಕ್ಷರು.

ಸಭಾ ಆಫೀಸು,
ಕಬ್ಬಹಳ್ಳಿ ಹನ್ನಬಸಪ್ಪನವರ ಆಶ್ರಮ,
ಮೈಸೂರು

ಎಚ್. ಚೆನ್ನಯ್ಯ,
ಅಧ್ಯಕ್ಷ,
ಸ್ವಾಗತ ಮಂಡಲಿ.

ಮ|| ಕೆ. ಆರ್. ಶ್ರೀನಿವಾಸಯ್ಯಂಗಾರ್, ಎಂ. ಎ., ಯವರು ದಯೆಯಿಟ್ಟು ಒಪ್ಪಿರುವುದಾಗಿ ರಿಜಿಸ್ಟ್ರಾರ್‌ರವರು ತಿಳಿಸಿರುತ್ತಾರೆ.

ಪಾಶ್ಚಾತ್ಯ ದೇಶಪರ್ಯಟನಕ್ಕಾಗಿ ಹೋಗಿದ್ದ ರಾಜಧಾನಿಯ ಪ್ರಸಿದ್ಧ ಬಟ್ಟೆಯ ವ್ಯಾಪಾರಿಗಳೂ, ವರ್ತಕ ಸಂಘದ ಅಧ್ಯಕ್ಷರೂ ಆದ ಮಿ|| ಮಹಮ್ಮದ್ ಸೇಟರು ಕಳೆದ ತಾ|| ೨೦ ರಲ್ಲಿ ಬೊಂಬಾಯಿಗೆ ಬಂದು ಅಲ್ಲಿಂದ ಹೈದರಾಬಾದಿನ ಮಾರ್ಗವಾಗಿ ನಾಳೆಯ ದಿವಸ ಬೆಳಗ್ಗೆ ರಾಜಧಾನಿಯನ್ನು ತಲುಪುವರೆಂದು ತಿಳಿಸಲು ಸಂತೋಷವಾಗುತ್ತದೆ.

ಬೆಂಗಳೂರಿನಲ್ಲಿ ಮೊದಲನೇ ಗಲಭೆ ನಡೆದ ಮೇಲೆ ಊರಿಗೆ ಬಂದಿರುವ ಅಡ್ವೊಕೇಟ್ ಮ|| ಎಚ್. ಎಸ್. ರಾಜುಯವರ ವೃದ್ಧ ತಂದೆಯವರು ಬಹು ಕಾಲದಿಂದ ರುಗ್ಣರಾಗಿದ್ದು ಕಳೆದ ವಾರ ಸ್ವಗೃಹದಲ್ಲಿ ವಿಧಿವಶರಾದರೆಂದು ತಿಳಿಸಲು ವಿಷಾದವಾಗುತ್ತದೆ. ಇವರು ಬಹಳ ವರ್ಷಗಳವರೆಗೆ ವಕೀಲರಾಗಿದ್ದು ಒಳ್ಳೇ ಹೆಸರನ್ನೂ, ಧನವನ್ನೂ ಸಂಪಾದಿಸಿದ್ದರು. ಇವರ ನಿಧನಕ್ಕಾಗಿ ಅನೇಕರು ತಮ್ಮ ಸಂತಾಪ ಪ್ರದರ್ಶಿಸಿದರಲ್ಲದೆ ಚೀಫ್ ಕೋರ್ಟಿನಲ್ಲಿ ಇವರ ಗುಣಕಥನ ಮಾಡಲ್ಪಟ್ಟು ಗೌರವಾರ್ಥವಾಗಿ ಆ ದಿವಸ ಕೋರ್ಟು ಮುಚ್ಚಲ್ಪಟ್ಟಿತ್ತು.

ಮೈಸೂರು ಸ್ಟಾರ್ ಪತ್ರಿಕೆಗೆ ಕಾಲಾಣೆ ಸ್ಟಾಂಪನ್ನು ಹಚ್ಚುವ ವಿಚಾರವು ಕಳೆದ ೩ ತಿಂಗಳಿಂದಲೂ ವಾದಗ್ರಸ್ತವಾಗಿದ್ದು ಕಳೆದ ಶನಿವಾರ ಇತ್ಯರ್ಥವಾಗಿ ಕಾಲಾಣೆ ಸ್ಟಾಂಪನ್ನು ಹಚ್ಚಿ ಭಾನುವಾರ ಬೆಳಗ್ಗೆ ರಾಜಧಾನಿಯ ದೇವರಾಜ ಮಾರ್ಕೆಟ್ ಪೋಸ್ಟಾಫೀಸಿಗೆ ಕೊಡುವುದೆಂದು ನಮಗೂ ಅದನ್ನು ಸ್ವೀಕರಿಸುವಂತೆ ಪೋಸ್ಟ್‌ಮಾಸ್ಟರಿಗೂ ಪೋಸ್ಟ್‌ಮಾಸ್ಟರ್ ಜನರಲ್‌ರವರಿಂದ ಸೂಚಿಸಲ್ಪಟ್ಟಿರುವುದಾದರೂ ಪೋಸ್ಟ್‌ಮಾಸ್ಟರು ಭಾನುವಾರ ತೆಗೆದುಕೊಳ್ಳಲು ತಿರಸ್ಕರಿಸುವುದರಿಂದ ಈ ಸಂಚಿಕೆಗೆ ಅರ್ಧಾಣೆ ಸ್ಟಾಂಪನ್ನು ಹಚ್ಚಬೇಕಾಗಿ ಬಂದಿತು. ಈ ತೊಂದರೆ ಯಾವಾಗ ನಿವಾರಣೆಯಾಗುತ್ತದೋ ನೋಡಬೇಕು.

ಕಳೆದ ಸೋಮವಾರ ರಾತ್ರಿ ರಾಜಧಾನಿಯ ಪಶ್ಚಿಮಭಾಗದಲ್ಲಿರುವ ವಿದ್ಯುದ್ದೀಪಗಳು ಕೆಲ ಕಾಲ ಹೊತ್ತಿರಲಿಲ್ಲವಾಗಿ ಆ ಶಾಖೆಯ ಕೆಲಸಗಾರನು ಡಿಸ್ಟ್ರಿಕ್ಟ್ ಆಫೀಸಿನ ಬಳಿ ದೀಪದ ಕಂಭದ ಮೇಲೆ ಹತ್ತಿ ಸರಿಪಡಿಸುತ್ತಿರುವಾಗ್ಗೆ ವಿದ್ಯುಚ್ಛಕ್ತಿಯು ತಗುಲಿ ಕೂಡಲೆ ಮೃತನಾದನು. ಇತರರು ಅದನ್ನು ಕಂಡು ಮೃತದೇಹವನ್ನು ಹಗ್ಗದ ಸಹಾಯದಿಂದ ಕೆಳಕ್ಕಿಳಿಸಿದರು. ಆ ಕಂಭದ ತಂತಿಗಳಲ್ಲಿ ವಿದ್ಯುಚ್ಛಕ್ತಿ ಇದ್ದಿತೇ ಇಲ್ಲವೇ ಎಂಬುದನ್ನು ಪರೀಕ್ಷಿಸಿ ಅನಂತರ ಕೆಲಸಗಾರನನ್ನು ಕಂಭದ ಮೇಲೆ ಹತ್ತಿಸಿದ್ದಲ್ಲಿ ಪ್ರಾಣಾಪಾಯವಾಗುತ್ತಿರಲಿಲ್ಲ. ಇನ್ನು ಮೇಲೆ ಈ ಶಾಖೆಯವರು ಅಜಾಗರೂಕರಾಗಿರಲಾರರೆಂದು ನಿರೀಕ್ಷಿಸುತ್ತೇವೆ.

ಡಾಕ್ಟರ್ ಅನ್ಸಾರಿಯವರು ಕಳೆದ ಭಾನುವಾರ ಬೆಳಗ್ಗೆ ರಾಜಧಾನಿಗೆ ಬಂದು ಪ್ರಭುತ್ವದ ಆತಿಥ್ಯದಲ್ಲಿದ್ದು ಆ ದಿವಸವನ್ನೂ, ಮಾರನೆಯ ದಿವಸವೂ ಹಿಂದಿ ಪ್ರಸಾರಕ ಮಂಡಳಿಯ ಮಹಾಸಭೆಯ ಅಧ್ಯಕ್ಷತೆಯನ್ನು ವಹಿಸಿ ನಡೆಯಿಸಿದರು. ಹಿಂದಿ ಭಾಷೆಯು ಭರತಖಂಡದ ಸಾರ್ವಜನಿಕ ಭಾಷೆಯಾಗಿ ಮಾಡಲ್ಪಡುವುದರ ಅವಶ್ಯಕತೆಯನ್ನೂ, ಸೌಲಭ್ಯವನ್ನೂ ಕುರಿತು ಡಾಕ್ಟರವರು ತಮ್ಮ ವಾಗ್ವೈಖರಿಯಿಂದ ಸಭಿಕರ ಮನಸ್ಸಿಗೆ ಹಿಡಿಯುವಂತೆ ಬಹು ಉತ್ಕೃಷ್ಟ ಭಾಷಣವನ್ನು ಮಾಡಿ ಎಲ್ಲರ ತಲೆಯನ್ನೂ ತೂಗಿಸಿದರು. ಇವರಿಗೆ ರಾಜಧಾನಿಯ ಪೌರಕಾರ್ಯನಿರ್ವಾಹಕ ಮಂಡಳಿಯವರು ಒಂದು ಸನ್ಮಾನಪತ್ರವನ್ನಿತ್ತು ಅವರಲ್ಲಿ ತಮಗಿರುವ ಪ್ರೀತಿಯನ್ನು ಪ್ರದರ್ಶಿಸಿದರು.

ಹೋದವರ್ಷ ರಿಪನ್ನು ಪ್ರದೇಶವಾಗಿ ನಿಯಮಿಸಲ್ಪಟ್ಟು ಅಮಲ್ದಾರಿ ಕೆಲಸದ ಅನುಭವವನ್ನು ಹೊಂದಿ ರಾಜಧಾನಿಯಲ್ಲಿ ಕುದುರೆಸ್ವಾರಿಯನ್ನು ಕಲಿಯುತ್ತಿರುವ ಮ|| ಎಚ್. ಎಸ್. ನಂಜೇಗೌಡ್, ಬಿ. ಎ., ಎಲ್ ಎಲ್. ಬಿ., ಯವರು ಈ ವರ್ಷ ನಡೆದ ಬೊಂಬಾಯಿ ವಿಶ್ವವಿದ್ಯಾನಿಲಯದ ಎಂ. ಎ., ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಪ್ರಶಸ್ತಿಯನ್ನು ಪಡೆದಿರುವುದು ಸಂತೋಷಪ್ರದವಾಗಿದೆ. ವೀರಶೈವ ಜಾತಿಗಾರರುಗಳಲ್ಲಿ ಈವರೆಗೆ ಯಾರೂ ಪಡೆಯದಿದ್ದ ಉನ್ನತ ವಿದ್ಯಾ ಪ್ರಶಸ್ತಿಯನ್ನು ಪಡೆದು ಸರಕಾರಿಯುದ್ಯೋಗಕ್ಕೆ ಸೇರಿರುವುದು ಸಮಾಜಕ್ಕೆ ಭೂಷಣವಾಗಿದೆ. ವಿನಯಾದಿ ಸದ್ಗುಣ ಸಂಪನ್ನರಾದ ಮ|| ಗೌಡರು ಸರಕಾರಿಯುದ್ಯೋಗದಲ್ಲಿ ಅಭಿವೃದ್ಧಿಯನ್ನು ಹೊಂದಲೆಂದು ಹಾರೈಸುತ್ತೇವೆ.

ಮೈಸೂರು ಮಹಾರಾಜರವರ ಕಾಲೇಜಿನ ಒಕ್ಕದಿನೋತ್ಸವವು ದಿವಾನರಾದ ಮ|| ಮಿರ್ಜಾ ಇಸ್ಮಾಯಿಲ್‌ರವರ ಅಧ್ಯಕ್ಷತೆಯಲ್ಲಿ ನಡೆಯುವುದಾಗಿ ಈ ಉತ್ಸವ ಕಾರ್ಯನಿರ್ವಾಹಕ ಮಂಡಳಿಯು ಪ್ರಕಟಿಸಿರುತ್ತದಷ್ಟೆ. ಮಿ|| ಮಿರ್ಜಾಯವರು ಈ ಕಾಲೇಜಿನ ವಿದ್ಯಾರ್ಥಿಗಳಾಗಿರಲಿಲ್ಲವಾದುದರಿಂದ, ಅವರ ಅಧ್ಯಕ್ಷತೆಯಲ್ಲಿ ಈ ಉತ್ಸವ ಸಮಾರಂಭವು ನಡೆಯಕೂಡದೆಂದು ರಾಜಧಾನಿಯ ಮ|| ಕೆ. ಚಂದ್ರಶೇಖರಯ್ಯನವರೇ ಮೊದಲಾಗಿ 10-15 ಜನ ಅಡ್ವೊಕೇಟರುಗಳೂ, ವಿದ್ಯಾರ್ಥಿಗಳೂ ಆಕ್ಷೇಪಿಸಿ ವೃತ್ತಪತ್ರಿಕೆಗಳಿಗೆ ಬರೆದು ಪ್ರತಿಭಟಿಸುತ್ತಿರುವರು. ಉತ್ಸವ ಕಾರ್ಯನಿರ್ವಾಹಕ ಮಂಡಳಿಯವರು ಈ ವಿಚಾರಗಳನ್ನು ಮುಂದಾಗಿ ಪರ್ಯಾಲೋಚಿಸಿ ಅನಂತರ ಮಿ|| ಮಿರ್ಜಾಯವರು ಅಧ್ಯಕ್ಷತೆ ವಹಿಸಲು ಅವರನ್ನು ಪ್ರಾರ್ಥಿಸಬೇಕಾಗಿದ್ದಿತು. ಈಗ ಅವರ ಅಧ್ಯಕ್ಷತೆಯಲ್ಲಿ ನಡೆಯುತ್ತದೆಂದು ಸರ್ವತ್ರ ಪ್ರಕಟವಾಗಿರುವಾಗ ಅವರು ಅಧ್ಯಕ್ಷರಾಗಕೂಡದೆಂದು ಹಟಿಸಿ ಆಶ್ಚರ್ಯಸ್ತಂಭನಗೊಳಿಸುವುದು ಯುಕ್ತವಲ್ಲವು. ಅಲ್ಲದೆ ಈ ಕಾಲೇಜಿನ ವಿದ್ಯಾರ್ಥಿಯಾಗಿಲ್ಲದಿದ್ದವರು ಅಧ್ಯಕ್ಷರಾಗಕೂಡದೆಂಬ ನಿಯಮವೇನೂ ಇಲ್ಲವೆಂದು ಕೇಳುತ್ತೇವೆ.

ಕಳೆದ ಗುರುವಾರ ಮಧ್ಯಾಹ್ನ 2½ ಘಂಟೆಯಿಂದ ಸಾಯಂಕಾಲದವರೆಗೂ ರಾಜಧಾನಿಯಲ್ಲಿ 2 ಅಂಗುಲದವರೆಗೆ ಮಳೆ ಸುರಿದಿತು. ಇದರಿಂದ ಶ್ರೀಮನ್ಮಹಾರಾಜರವರ ರಾತ್ರಿ ದರ್ಬಾರನ್ನು ನೋಡಲು ಆತುರಪಡುತ್ತಿದ್ದ ಜನರ ಆಶಾಭಂಗವಾಯಿತು. ಈ ಮಹೋತ್ಸವವನ್ನು ನೋಡಲು ಬಹು ದೂರದೇಶಗಳಿಂದ ರೈಲು, ಮೋಟಾರು ಮತ್ತು ಎತ್ತು ಬಂಡಿಗಳ ಮೂಲಕ ಸಾವಿರಗಟ್ಟಲೆ ನಿತ್ಯದಲ್ಲೂ ಬರುತ್ತಿರುವರಾದುದರಿಂದ ವಿಜಯದಶಮಿಯು ಕಳೆಯುವ ತನಕ ಮಳೆಯು ವಿರಾಮ ಕೊಟ್ಟಲ್ಲಿ ಪರಸ್ಥಳದ ವಾಸಕರ್ತೂ, ನೋಟಕರ್ತೂ ಅನುಕೂಲವಾಗುತ್ತದೆ. ಮಂಡಿ ಮತ್ತು ದೇವರಾಜ ಮೊಹಲ್ಲಾಗಳಲ್ಲಿ ಪ್ಲೇಗ್ ರೋಗವು ತಲೆದೋರಿ ವಿಕ್ಟೋರಿಯಾ ಆಸ್ಪತ್ರೆಯಲ್ಲೂ, ಮಳುವಾಂಬಾ ಮತ್ತು ದೇವಾಂಬಾ ಅಗ್ರಹಾರಗಳಲ್ಲೂ ಕೆಲವು ಮರಣಗಳಾಗಿರುವುವಾಗಿ ತಿಳಿಯಬಂದಿದೆ. ಈಗ ನಾನಾ ಕಡೆಯಿಂದ ಜನರು ಸಾವಿರಗಟ್ಟಲೆ ಬಂದು ಸೇರುತ್ತಿರುವುದರಿಂದ ಹೆಲ್ತಾಫೀಸರು ಮೊದಲ್ಗೊಂಡ ಅಧಿಕಾರಿಗಳು ವಾಸಿಸುವ ಮತ್ತು ತಿರುಗಾಡುವ ಕಡೆ ವಿಶೇಷ ಗಮನ ಕೊಡುತ್ತಿರುವಂತೆ ಜನಸಂದಣಿ ಹೆಚ್ಚಾಗಿರುವ ಕಡೆಗಳಲ್ಲಿಯೂ ಸಂಚರಿಸಿ ಶುಚೀಕರಣಕ್ಕೆ ತಕ್ಕ ಏರ್ಪಾಟನ್ನು ಮಾಡಿ ಜನಾರೋಗ್ಯಕ್ಕೆ ಅಪಾಯವಿಲ್ಲದಂತೆ ನೋಡಿಕೊಳ್ಳುವುದು ಅವಶ್ಯಕವೆಂದು ಸೂಚಿಸುತ್ತೇವೆ.

ಮೈಸೂರು ಬ್ರಾಹ್ಮಣೇತರ ಮಹಾಸಭೆ

ಈ ತಿಂಗಳ ... ತಾರೀಖು ... ಮೈಸೂರಿನಲ್ಲಿ ನಡೆಯಬೇಕಾಗಿರುವ ಬ್ರಾಹ್ಮಣೇತರ ಮಹಾಸಭೆಯ ಸ್ವಾಗತಮಂಡಲಿಯ ಸಭೆಯೊಂದು ... ವೆಂಕಟಪ್ಪ ... ನವರ ಅಧ್ಯಕ್ಷತೆಯಲ್ಲಿ ... ನಡೆದು ಈ ಕೆಳಗೆ ಕಂಡ ನಿರ್ಣಯಗಳು ಅಂಗೀಕರಿಸಲ್ಪಟ್ಟವು

1 ಮಹಾಸಭೆಯ ಆಡಳಿತವು ಪ್ರಜಾಮಿತ್ರಮಂಡಲಿಯ ಉದ್ದೇಶದಂತಿರಬೇಕು,

2 ಪ್ರಜಾಮಿತ್ರಮಂಡಲಿಯ ಉದ್ದೇಶಗಳನ್ನು ಒಪ್ಪುವವರೆಲ್ಲರೂ ಮಹಾಸಭೆಯ ಸ್ವಾಗತಮಂಡಲಿಯ ಸದಸ್ಯರಾಗಬಹುದು

3 ಐದುರೂಪಾಯಿ ಮತ್ತು ಇದಕ್ಕೆ ಹೆಚ್ಚಾಗಿ ಕೊಡಲು ಸಿದ್ಧರಾಗಿರುವ ಬ್ರಾಹ್ಮಣೇತರರೆಲ್ಲರೂ ಸ್ವಾಗತಮಂಡಲಿಯ ಸದಸ್ಯರಾಗಬಹುದು

4 ಒಂದುರೂಪಾಯಿ ಕೊಡುವವರೆಲ್ಲರೂ ಪ್ರತಿನಿಧಿಗಳಾಗಬಹುದು

5 ಪ್ರೇಕ್ಷಕರಿಗೆ ... ಮಾತ್ರ

6 ಸ್ತ್ರೀಯರು ಪ್ರೇಕ್ಷಕರಾಗಿ ಬಂದಲ್ಲಿ ಅವರಿಂದ ಏನೂ ಫೀ ಮಾಡಬೇಕಾದ್ದಿಲ್ಲ

7 ಮಹಾಸಭೆಯ ಕಾರ್ಯಕಲಾಪಗಳಿಗಾಗಿ ಒಬ್ಬರು ಅಧ್ಯಕ್ಷರು, ಇಬ್ಬರು ಉಪಾಧ್ಯಕ್ಷರು ಆರುಜನ ಕಾರ್ಯದರ್ಶಿಗಳು, ಇಬ್ಬರು ಕೋಶಾಧಿಕಾರಿಗಳು ಮತ್ತು ಒಂದು ಕಾರ್ಯನಿರ್ವಾಹಕಮಂಡಲಿಯು ಇರತಕ್ಕದ್ದು

8 ರಾವ್ ಸಾಹೇಬ್ ಹೆಚ್ ಚನ್ನಯ್ಯನವರು ಅಧ್ಯಕ್ಷರಾಗಿ ಬಹುಮತದಿಂದ ಚುನಾಯಿಸಲ್ಪಟ್ಟರು

9 ಮ|| ಗಳಾದ ದಿವಾನ್ ಪ್ರಕಾಶ ಚಂದ್ರೇಗೌಡರು ಮತ್ತು ಧರ್ಮಪ್ರಕಾಶ ಬಸಮ್ಮಯ್ಯನವರು ಉಪಾಧ್ಯಕ್ಷರಾಗಿ ಚುನಾಯಿಸಲ್ಪಟ್ಟರು

10 ಮ|| ಗಳಾದ ಎಂ ಸಿ ಲಿಂಗೇಗೌಡ ಬಿ ಎ ... ಪುಟ್ಟಸ್ವಾಮಿ, ಬಿ ಎ, ಎಲ್ ಎಲ್ ಬಿ, ಬಿ ... ಗುಪ್ತ, ವಿ ವೆಂಕಟಪ್ಪ, ಜಿ ಚನ್ನಪ್ಪ ಬಿ ಎ ಎಲ್ ಎಲ್ ಬಿ ಮತ್ತು ಮಹಮ್ಮದ್ ಸೇಟ್‌ರವರು ಕಾರ್ಯದರ್ಶಿಗಳಾಗಿ ಚುನಾಯಿಸಲ್ಪಟ್ಟರು

11 ಮ|| ಗಳಾದ ಟಿ ರಾಜಪ್ಪ ಮತ್ತು ಸತ್ತಾರ್ ಸೇಟರು ಕೋಶಾಧಿಕಾರಿಗಳಾಗಿ ಚುನಾಯಿಸಲ್ಪಟ್ಟರು

ಮೈಸೂರು ರಂಗಾಚಾರ್ಲುಯವರ ಹಾಲಿನಲ್ಲಿ ಬರುವ ಅಕ್ಟೋಬರ್ 10, 11, 12 ನೇ ತಾರೀಖುಗಳಲ್ಲಿ ಮಹಾಸಭೆಯನ್ನು ನಡೆಸುವಂತೆ ತೀರ್ಮಾನವಾಯಿತು

ಅಧ್ಯಕ್ಷರಾಗುವಂತೆ ಮದ್ರಾಸು ... ಸಭಾಧ್ಯಕ್ಷರಾದ ಮ|| ಎ ರಾಮಸ್ವಾಮಿ ಮೊದಲಿಯಾರ್ ಎಂ ಎ ಬಿ ಎಲ್ ರವರನ್ನು ಬೇಡಿಕೊಳ್ಳಬೇಕೆಂದು ನಿರ್ಧಾರವಾಯಿತು

ಬೊಂಬಾಯಿ ಮತ್ತು ಮದ್ರಾಸು ಬ್ರಾಹ್ಮಣೇತರ ಪಕ್ಷದ ಮುಖಂಡರನ್ನು ಬರಮಾಡಬೇಕೆಂದೂ ಅವರ ... ಕಾರ್ಯಗಳನ್ನು ನಿರ್ವಾಹಕ ಮಂಡಲಿಯವರು ನೋಡಿಕೊಳ್ಳಬೇಕೆಂದೂ ಅದರ ಖರ್ಚನ್ನು ನಿರ್ವಾಹಕ ಮಂಡಲಿಯವರು ಸದಸ್ಯರಿಂದ ಬರುವ ಚಂದಾ ಹಣದಲ್ಲಿ ಕೊಡಬೇಕೆಂದೂ ನಿರ್ಣಯವಾಯಿತು

ಮ|| ಗಳಾದ ಹೆಚ್ ಸಿ ದಾಸಪ್ಪ ಡಿ ... ಮಲ್ಲಪ್ಪ ನೀಲಗಿರಿ ಸಂಜೀವಯ್ಯ ಗುಲಾಂ ಅಹಮದ್ ಕಲಾಮಿ, ಖಾನ್ ಬಹದ್ದೂರ್ ಮಹಮದ್ ಅಬ್ಬಾಸ್ ಖಾನ್, ಬಿ ಡಿ ನಾಯುಡು ಹೆಚ್ ಜಿ ಬಸವಪ್ಪ ಮತ್ತು ... ಸಿ ಬಸವೇಗೌಡ ಮುಂತಾದವರನ್ನೊಳಗೊಂಡ ಒಂದು ಕಾರ್ಯನಿರ್ವಾಹಕಮಂಡಲಿಯು ಏರ್ಪಟ್ಟಿತು

ಹಿಂದುಳಿದ ಪಂಗಡಗಳ ಪ್ರಜಾಪ್ರತಿನಿಧಿ ಮತ್ತು ನ್ಯಾಯವಿಧಾಯಕಸಭಾ ಸದಸ್ಯರಲ್ಲೂ ಇತರ ಮಹಾಶಯರಲ್ಲೂ ವಿಜ್ಞಾಪನೆ

ಮಹಾಶಯರೇ,

ಬರುವ ತಾ|| 10-11 12 ರಲ್ಲಿ ಮೈಸೂರಿನಲ್ಲಿ ಬ್ರಾಹ್ಮಣೇತರ ಮಹಾಸಭೆಯು ಜರಗಲು ನಿರ್ಧರಿಸಿರುವುದು ಸರಿಯಷ್ಟೆ ಆ ಸಭೆಯಲ್ಲಿ ದೇಶದ ಏಳ್ಗೆಗೆ ಬೇಕಾದ ನಿರ್ಧಾರಗಳನ್ನು ಚರ್ಚಿಸಬೇಕಾಗಿರುತ್ತದೆ ಅದರಲ್ಲೂ ಅತಿಮುಖ್ಯವಾದ ವಿಚಾರವೆಂದರೆ ಪ್ರಜಾಸ್ವಾತಂತ್ರ್ಯವನ್ನು ಹೆಚ್ಚಿಸುವ ವಿಷಯ ... ಸರ್ಕಾರದ ತೀರ್ಮಾನ ಈ ವಿಚಾರಗಳನ್ನೆಲ್ಲಾ ಪಾಸುಮಾಡಿಸಲು ತಮ್ಮ ಸಹಾಯಗಳು ಅವಶ್ಯವಾಗಿ ಬೇಕಾಗಿರುತ್ತೆ ಆದ್ದರಿಂದ ತಾವುಗಳು ಬರುವ ತಾರೀಖು 8 ರ ಒಳಗೆ ತಪ್ಪದೆ ಮೈಸೂರಿಗೆ ದಯಮಾಡಿಸಬೇಕಾಗಿಯೂ ತಮ್ಮ ಜತೆಯಲ್ಲಿ ಅನೇಕ ಡೆಲಿಗೇಟುಗಳನ್ನು ಬರಮಾಡಬೇಕೆಂಬುದಾಗಿಯೂ ಪ್ರಾರ್ಥನೆ

(1) ಡಿ ಎಸ್, ಮಲ್ಲಪ್ಪ, ಎಂ ಎಲ್ ಸಿ, ಎಂ ಆರ್ ಎ (2) ಡಿ ಹೆಚ್, ಚಂದ್ರಶೇಖರಯ್ಯನವರು ಎಂ ಎಲ್ ಸಿ (3) ಮೆನಿಕ್ಕಣರಾವ್, ಕಿಂದರವರು ಎಂ ಎಲ್ ಸಿ ಎಂ ಆರ್ ಎ (4) ಟಿ ವೆಂಕಟಪ್ಪನವರು ಎಂ ಆರ್ ಎ, ಎಂ ಎಲ್ ಸಿ, (5) ಜಿ ಚನ್ನಪ್ಪನವರು ಎಂ ಆರ್ ಎ, ಎಂ.ಎಲ್ ಸಿ, (6) ಹೆಚ್ ಜಿ, ಬಸವಪ್ಪ ಎಂ ಎಲ್ ಸಿ, (7) ಬಿ ಪಿ. ಬಸಪ್ಪಶೆಟ್ಟಿ ಎಂ.ಆರ್ ಎ, (8) ಸಿ ಕೆ ಮಲ್ಲಪ್ಪ ಎಂ.ಆರ್.ಎ,

... ಹಿಂದಿನಿಂದ ಮುಂದುವರಿದುದು ...

... ಆಪಾದಿತನ ... ಸಾಕ್ಷ್ಯದಲ್ಲಿ ... ಅವನು ಉದ್ದೇಶಪೂರ್ವಕವಾಗಿ ... ಅಪರಾಧಿಯ ... ಸಾಕ್ಷಿ ... ಅಪರಾಧವನ್ನು ... ಎಂದು ... ನಿರ್ಧರಿಸಲ್ಪಟ್ಟಿದೆ

26 ... ಅಪರಾಧಿಯು ... ಎಕ್ಸಿಬಿಟ್ ಪಿ 1 ರಲ್ಲಿರುವ ಎಕ್ಸಿಬಿಟ್ ಪಿ 1 ... 23 6 21 ನೇ ತಾರೀಖಿನನ್ನು ಮುದ್ರಿಸುತ್ತಲೇ ... ಆಕ್ಷೇಪಣೆಯುಳ್ಳ ಭಾಗಗಳಲ್ಲಿ ನುಡಿ ವಾಕ್ಯವು ಸಂಪಾದಕೀಯದಲ್ಲಿ ... ಅಭಿಪ್ರಾಯವಾಗಿರುತ್ತದೆಂದೂ ಅದರ ಮೇಲ್ಗಡೆಯಲ್ಲಿರುವ ವಾಕ್ಯವು ಮ|| ಗೋಪಾಲಸ್ವಾಮಯ್ಯರವರ ಅಭಿಪ್ರಾಯವಾಗಿರುತ್ತದೆಂದೂ ಎಕ್ಸಿಬಿಟ್ 3 (ಎ) ಆ ಪತ್ರಿಕೆಯಿಂದ ಗೊತ್ತಾಗುತ್ತದೆ

27, ತಾ|| 23 6 21 ರ ಲೇಖನವನ್ನು ಅಪರಾಧಿಯು 1928 ನೇ ನವೆಂಬರ್ ತಿಂಗಳಿನಲ್ಲಿ ಏತಕ್ಕೆ ಪ್ರಕಟಿಸಿದನೆಂಬ ಮತ್ತೊಂದು ಪ್ರಶ್ನೆಯು ಹುಟ್ಟುತ್ತದೆ ಆಗಿನ ಸಂದರ್ಭದಲ್ಲಿ ಅದನ್ನು ಪ್ರಕಟಿಸಲು ತಾನು ಪ್ರೇರೇಪಿಸಲ್ಪಟ್ಟುದಾಗಿ ಅವನು ಹೇಳುತ್ತಾನೆ ಡಿ 17 ರಿಂದ ಡಿ 25 ರ ವರೆಗಿನ ಎಕ್ಸಿಬಿಟ್ಟುಗಳನ್ನು ಅಪರಾಧಿಯು ದಾಖಲ್ಮಾಡಿದ್ದಾನೆ ಈ ಎಕ್ಸಿಬಿಟ್ಟುಗಳನ್ನು ನೋಡಿದಲ್ಲಿ 1928 ನೇ ಜುಲೈ ತಾ|| 30 ರಲ್ಲಿ ನಡೆದ ದೊಂಬಿಯ ಅನಂತರ ಮೈಸೂರು ದಿವಾನರನ್ನು ಅತ್ಯಂತ ಹೀಯವಾಗಿಯೂ, ತುಚ್ಛವಾಗಿಯೂ ದೂಷಿಸಿ ಲೇಖನಗಳು ಬಹಳ ಬರೆಯುತ್ತಿದ್ದುವೆಂದು ಗೊತ್ತಾಗುತ್ತದೆ ಬ್ರಾಹ್ಮಣ ಪತ್ರಿಕೆಗಳು ಆ ರೀತಿ ದೂಷಿಸಿ ಬರೆಯುತ್ತಿದ್ದುದು ಯುಕ್ತವಲ್ಲವೆಂದು ನನಗೆ ತೋರುತ್ತದೆ ಮತ್ತು ಇದಿರು ಪಕ್ಷಕ್ಕೆ ಸೇರಿದ ಅಪರಾಧಿಯು ತಾನು ಹೇಳುತ್ತಿದ್ದಂತೆ ಆ ಸಮಯದಲ್ಲಿ ಗಾಳಿಯು ಹೇಗೆ ಬೀಸುತ್ತಿದ್ದಿತೆಂಬುದನ್ನು ಜನರಿಗೆ ತೋರಿಸುವುದಕ್ಕೋಸ್ಕರ ಬ್ರಾಹ್ಮಣ ಪತ್ರಿಕೆಯಿಂದಲೇ ಕೆಲ ಸಂಗತಿಗಳನ್ನೆತ್ತಿ ಪ್ರಕಟಿಸಿದವನಾದನು ಅಪರಾಧಿಯ ನಡತೆಯೂ ಯುಕ್ತವಾಗಿಲ್ಲವೆಂಬುದು ನನ್ನ ಅಭಿಪ್ರಾಯ ಸಾರ್ವಜನಿಕ ಕಾರ್ಯಗಳ ಪ್ರಾರಂಭದಲ್ಲಿ ದೃಷ್ಟಿಯಿಂದ ನೋಡಲ್ಪಡಬೇಕೆಂದು ಆ ಪ್ರಖ್ಯಾತ ಭಾರತ ಪುರುಷರಾದ ಗೋಖಲೆಯವರು ಹೇಳಿರುವ ಬುದ್ಧಿವಾದವನ್ನು ಅಂತೆ ಇಲ್ಲದೆ ಜನರನ್ನೂ, ಸಂಸ್ಥೆಗಳನ್ನೂ ಖಂಡಿಸತಕ್ಕ ಕೆಲ ಪತ್ರಿಕಾಕರ್ತರೂ, ಪ್ರಜಾಸೇವೆ ಮಾಡತಕ್ಕವರೂ ಅನುಸರಿಸುವುದಾದರೆ ಸಾರ್ವಜನಿಕ ಕಾರ್ಯಗಳ ವಾತಾವರಣವು ಬಹಳ ಗಂಭೀರವಾಗಿಯೂ ಪರಿಶುದ್ಧವಾಗಿಯೂ ಇರುವುದು ಮುಖ್ಯವಾಗಿ ಅಂತಹ ಮಹಾಪುರುಷರುಗಳಿಂದ ನಾವು ಕಲಿತುಕೊಳ್ಳುವುದು ಬಹಳವಾಗಿದೆ ಆದರೆ ಆಗದ ಸಂಗತಿಯನ್ನು ನಾವು ನೋಡಬೇಕಲ್ಲದೆ ಆಗಬೇಕಾಗಿದ್ದ ಸಂಗತಿಯನ್ನು ನೋಡಬೇಕಾದುದಿಲ್ಲ ಬ್ರಾಹ್ಮಣರ ವರ್ತಮಾನ ಪತ್ರಿಕೆಗಳಲ್ಲಿ ಸರ್ಕಾರದವರನ್ನು ಮುಖ್ಯವಾಗಿ ದಿವಾನರನ್ನು ದೂಷಿಸಿ ಬರೆಯಲ್ಪಡುತ್ತಿದ್ದಿತೆಂಬುದು 15 ರಿಂದ 25 ರ ವರೆಗಿನ ಎಕ್ಸಿಬಿಟ್ಟುಗಳಿಂದ ಲೇಶವೂ ಅನುಮಾನವಿಲ್ಲದೆ ರುಜುವಾತಾಗಿರುತ್ತದೆ ಅಪರಾಧಿಯು ಅದರ ಪ್ರಾಬಲ್ಯವನ್ನು ಪ್ರತಿಭಟಿಸಲು ಎಕ್ಸಿಬಿಟ್ ಪಿ 1 ನ್ನು ಮುದ್ರಣ ಮಾಡಿದನು "ರೋಮಿನಲ್ಲಿ ರೋಮನರು ಮಾಡುವಂತೆ ಮಾಡು" ಎಂಬ ಗಾದೆಯನ್ನು ಅಪರಾಧಿಯು ಅನುಸರಿಸಿದನು ಆದುದರಿಂದ ಆಗಿನ ಸಂದರ್ಭವು ಎಕ್ಸಿಬಿಟ್ ಪಿ 1 ನ್ನು ಪ್ರಕಟಿಸುವಂತೆ ಅಪರಾಧಿಯನ್ನು ಹುರಿದುಂಬಿಸಿತೆಂದು ನಾನು ಅಭಿಪ್ರಾಯಪಡುತ್ತೇನೆ

28 ಸಂಪದಭ್ಯುದಯದಿಂದ ಎಕ್ಸಿಬಿಟ್ ಡಿ 3 (ಎ) ಭಾಗವನ್ನೆತ್ತಿ, ಎಕ್ಸಿಬಿಟ್ ಪಿ 1 ರಲ್ಲಿ ಯಥಾವತ್ತಾಗಿ ಪ್ರಕಟಿಸಿರುವುದರ ಹೊರತಾಗಿ ಮಿ|| ಆರ್ ಗೋಪಾಲಸ್ವಾಮಯ್ಯರವರ ಮೇಲಿನ ದ್ವೇಷದಿಂದಾಗಲಿ ಹೊಟ್ಟೆಕಿಚ್ಚಿನಿಂದಾಗಲಿ ಅಪರಾಧಿಯು ಎಕ್ಸಿಬಿಟ್ ಪಿ 1 ನ್ನು ಪ್ರಕಟಿಸಿದನೆಂಬುದಕ್ಕೆ ಯಾವ ರುಜುವಾತೂ ಇಲ್ಲ ಅಪರಾಧಿಯು ಎಕ್ಸಿಬಿಟ್ ಪಿ 1 ನ್ನು ಪ್ರಕಟಿಸುವುದರಲ್ಲಿ ಮಿ| ಆರ್ ಗೋಪಾಲಸ್ವಾಮಯ್ಯರವರಮೇಲೆ ದ್ವೇಷವಾಗಲಿ ಅವರಿಗೆ ಕೇಡನ್ನು ಮಾಡಬೇಕೆಂಬ ಅಭಿಪ್ರಾಯವಾಗಲಿ ಇದ್ದಿತೆಂಬುದನ್ನು ಫಿರ್ಯಾದಿಯು ಸಿದ್ಧಮಾಡಿ ತೋರಿಸಿರುವನೇ ಈ ಪ್ರಶ್ನೆಯ ವಿಚಾರದಲ್ಲಿ ಎಳ್ಳಷ್ಟು ರುಜುವಾತಿಲ್ಲ ಇದಕ್ಕೆ ವಿರುದ್ಧವಾಗಿ ಆರ್ ಗೋಪಾಲಸ್ವಾಮಯ್ಯರವರು ತಮ್ಮ ... ವಿಚಾರಣೆಯಲ್ಲೇ ಅಪ

ರಾಜಧಾನಿಯ ಮ್ಯುನಿಸಿಪಲ್ ... ತಿರುಗಾಡುವ ಬೈಸಿಕಲ್ಲು, ಮೋಟಾರು ಮೊದಲಾದ ... ಗಳಿಗೆ ಸಂಬಂಧಿಸಿರುವುದನ್ನು ಒಟ್ಟಾಗಿ ... ಕುದುರೆ ಎತ್ತುಗಳ ಸ್ಥಿತಿಯನ್ನು ನೋಡಿಕೊಳ್ಳುವ ... ಸೂಪರಿಂಟೆಂಡೆಂಟರಾಗಿದ್ದ ಮ|| ತಿರುಮಲ ... ರವರನ್ನು ... ಸಿಕ್ಯಾರಿಯೇಜ್ ಇನ್ಸ್‌ಪೆಕ್ಟರಾಗಿ ... ರು ನಿಯಮಿಸಿಕೊಂಡಿರುತ್ತಾರೆ ... ಮಾಡುವುದಕ್ಕಾಗಿ ಕೊಡಲ್ಪಡುವ ... ಹಣ ... ಸಲ್ಲಿಸದೆ 100 ... ರೂ ... ಉಳಿಸಿಕೊಂಡಿದ್ದು ಅದನ್ನು ದುರುಪಯೋಗಪಡಿಸಿ ... ಇದರ ಸಂಬಂಧವಾದ ಲೆಖ್ಖವನ್ನು ಮ್ಯುನಿಸಿಪಲ್ ... ಪರೀಕ್ಷಿಸುತ್ತಿರುವರೆಂದೂ, ಮ|| ತಿರುಮಲ ... ಮಾಯವಾಗಿರುವರೆಂದೂ ಕೇಳುತ್ತೇವೆ ... ಯುವರು ಬಹಳ ದಿಟ್ಟವಾಗಿ ... ದರ್ಪದಿಂದಲೂ ನಿಸ್ಪೃಹತೆಯಿಂದಲೂ ಕೆಲಸಮಾಡುವವರಾಗಿ ತೋರಿಸಿಕೊಳ್ಳುತ್ತಿದ್ದವರು ಇಂತಹ ದುಷ್ಕೃತ್ಯವನ್ನು ಮಾಡಿರುವರೆಂದರೆ ಸಹಿಂದಾಶ್ಚರ್ಯವಾಗುತ್ತದೆ ಆಲ್ಲದೆ ಮ್ಯುನಿಸಿಪಲ್ ಲೆಖ್ಖ ಶೋಧನೆಗಾಗಿ ಸರ್ಕಾರದವರಿಂದ ಒಬ್ಬ ಆಡಿಟರು ನಿತ್ಯವಾಗಿ ನಿಯಮಿಸಲ್ಪಟ್ಟು ಪ್ರತಿನಿತ್ಯದಲ್ಲೂ ... ಲೆಖ್ಖ ಶೋಧನೆ ಮಾಡುತ್ತಿದ್ದಾಗ್ಯೂ 1000-1000 ರೂ ವರೆಗೆ ಕೈಬಿಟ್ಟಿರುವುದು ಆಡಿಟರಿಗೆ ಗೋಚರವಾಗದಿದ್ದುದಂತೂ ಪರಮಾಶ್ಚರ್ಯವಾಗಿದೆ ಈ ದ್ರವ್ಯಶೋಧನ ಪರಿಶೋಧನೆಯು ಪರಿಣಾಮವೇಂತಾಗುವುದೆಂದು ಜನರು ಕುತೂಹಲದಿಂದ ನಿರೀಕ್ಷಿಸುತ್ತಿರುವರು ಮ|| ತಿರುಮಲಸ್ವಾಮಿಯರಿಗೆ ಪ್ರಾಪ್ತವಾಗಿರುವ ಈ ದುರವಸ್ಥೆಯಿಂದ ಅವರ ಅಕ್ಕಯವರಾದ ಶ್ರೀಮತಿ ಕೆ ಡಿ, ರುಕ್ಮಿಣಿಯಮ್ಮ, ಬಿ ಎ, ಸೂಪರಿಂಟೆಂಡೆಂಟ್, ಮಹಾರಾಣಿಯವರ ಕಾಲೇಜ್ ಇವರಿಗೂ ಇವರ ಕುಮಾರರಿಗೂ ಮನೋವ್ಯಥೆಯುಂಟಾಗಿರುವುದೆಂದು ಕೇಳಿ ವಿಷಾದಿಸುತ್ತೇವೆ

ರಾಧಿಯು ತಮ್ಮ ಒಳ್ಳೇ ಸ್ನೇಹಿತನಾಗಿದ್ದನೆಂದು ಹೇಳಿರುವುದರಿಂದ ಒಳ್ಳೇ ಸ್ನೇಹಿತರಾಗಿದ್ದರೆಂದು ಹೇಳಲು ... ಮಿ|| ಆರ್ ಗೋಪಾಲಸ್ವಾಮಯ್ಯರವರು ... ಸಾಕ್ಷಿ ... ಅಪರಾಧಿ ... ಫಿರ್ಯಾದಿಯನ್ನು ... ಒಳ್ಳೇ ... ಫಿರ್ಯಾದಿ ಡಿ (ಬಿ) ... ಬರೆದುಕೊಳ್ಳುತ್ತಿದ್ದರು ... ಮಿ|| ಆರ್ ಗೋಪಾಲಸ್ವಾಮಯ್ಯರವರ ... ಇದರ ಒಂದು ನಿದರ್ಶನವಾಗಿದೆ ಮೈಸೂರ್ ಸ್ಟಾರಿನ ಮೇಲೆ ಕಾರ್ಯಭಾಗವನ್ನು ನಡೆಸಬೇಕೆಂದು ಮಿ|| ಆರ್ ಗೋಪಾಲಸ್ವಾಮಯ್ಯರವರು ವರ್ತಮಾನಪತ್ರಿಕೆಗಳಿಗೆ ಬರೆದಿದ್ದ ದರಮೇಲಿನ ದ್ವೇಷದಿಂದ ಅಪರಾಧಿಯು ಎಕ್ಸಿಬಿಟ್ ಪಿ 1 ನ್ನು ಪ್ರಕಟಿಸಬೇಕೆಂದು ಹೇಳಬಹುದು ಈರೀತಿ ಬರೆದವರು ಮಿ|| ಗೋಪಾಲಸ್ವಾಮಯ್ಯರವರೊಬ್ಬರೇ ಅಲ್ಲ, ಒಟ್ಟು ಬ್ರಾಹ್ಮಣಸಮಾಜವೇ ಪ್ರಕ್ಷುಬ್ಧವಾಗಿದ್ದಿತು ಈ ವಿಚಾರವು ಎಕ್ಸಿಬಿಟ್ ಡಿ 16 ಸ್ವರಾಜ್ಯದಿಂದ ರುಜುವಾತಾಗಿರುವುದಲ್ಲದೆ ಮಿ|| ಗೋಪಾಲಸ್ವಾಮಯ್ಯರವರೂ ಅದನ್ನೊಪ್ಪಿಕೊಂಡಿರುತ್ತಾರೆ ಅಪರಾಧಿಯು ಎಕ್ಸಿಬಿಟ್ ಪಿ 1 ನ್ನು ಪ್ರಕಟಿಸಿದಾಗ ಅವನಿಗೆ ಮಿ|| ಗೋಪಾಲಸ್ವಾಮಯ್ಯರವರ ಮೇಲೆ ದ್ವೇಷವಾಗಲಿ, ಅಸೂಯೆ ಆಗಲಿ ಇದ್ದಿತೆಂಬುದನ್ನು ರುಜುವಾತು ಪಡಿಸಲು ಯಾವ ದಾಖಲೆಯೂ ಇಲ್ಲ ಅಪರಾಧಿಗೆ ಯಾವ ದುರಭಿಪ್ರಾಯವೂ ಇರಲಿಲ್ಲವೆಂಬುದು ಎಕ್ಸಿಬಿಟ್ ಪಿ 1 ನ್ನು ಮುದ್ರಿಸುವುದರಲ್ಲಿ ಅಪರಾಧಿಯ 2 ನೇ ಸಾಕ್ಷಿ ಬಸಪ್ಪನವರಿಂದ ತಿದ್ದಲ್ಪಟ್ಟುದು ಹೊರತಾಗಿ ಅಪರಾಧಿಯು ಯಾವ ಬದಲಾವಣೆಯನ್ನೂ ಮಾಡಲಿಲ್ಲವೆಂಬುದಕ್ಕೆ ಅಪರಾಧಿಗೆ ಯಾವ ದುರಭಿಪ್ರಾಯ ಇರಲಿಲ್ಲವೆಂಬುದು ಒಂದು ರುಜುವಾತಾಗಿರುತ್ತದೆ

29 1921 ನೇ ಇಸವಿಯಲ್ಲಿ ಸಂಪದಭ್ಯುದಯ ಪತ್ರಿಕೆಯ ಎಡಿಟರ ಮತ್ತು ಆರ್ ಗೋಪಾಲಸ್ವಾಮಯ್ಯರವರ ಅಭಿಪ್ರಾಯಗಳು ಹೇಗಿದ್ದುವೆಂಬುದನ್ನು ಬಹಿರಂಗಪಡಿಸುವುದಕ್ಕಾಗಿ ಎಕ್ಸಿಬಿಟ್ ಪಿ 1 ನ್ನು ಅಪರಾಧಿಯು ತನ್ನ ಪತ್ರಿಕೆಯಲ್ಲಿ ಪ್ರಕಟಿಸುವುದರ ಉದ್ದೇಶವಾಗಿದ್ದಿತೆಂದು ನಾನು ಅಭಿಪ್ರಾಯಪಡುತ್ತೇನೆ

30 ಮೈಸೂರ್ ಸ್ಟಾರ್ ಯಾವಾಗಲೂ ಬ್ರಾಹ್ಮಣರನ್ನು ನಿಂದಿಸುತ್ತದೆಂದು ಫಿರ್ಯಾದಿಯು ಹೇಳುತ್ತಾನೆ ಇದಕ್ಕೆ ರುಜುವಾತೇನೂ ಇಲ್ಲ ನಾಗರಿಕರಾದ ಸಹೋದರರೆಂದು ತಾನು ಕರೆಯುವ ಬ್ರಾಹ್ಮಣರ ವಿಚಾರದಲ್ಲಿ ಸ್ಟಾರಿನ ವರ್ತನವು ಹೇಗಿರುವುದೆಂಬುದು ತಾ|| 13 11 28 ನೇ ಎಕ್ಸಿಬಿಟ್ ಡಿ ... ಮತ್ತು ತಾ|| 4 10-28 ನೇ ಎಕ್ಸಿಬಿಟ್ ಡಿ 1 ರಿಂದ ಗೊತ್ತಾಗುತ್ತದೆ ಅಲ್ಲದೆ ಡಿ 11 ರಿಂದ ಡಿ 14 ರ ವರೆಗಿನ ಎಕ್ಸಿಬಿಟ್ಟುಗಳು ಫಿರ್ಯಾದಿಯ ಹೇಳಿಕೆಯನ್ನು ನಿರಾಕರಿಸುತ್ತವೆ

31 ಊಹಿಸಿ ಹೇಳಿರುವುದರ ವಿಚಾರವಾಗಿಯು ಮತ್ತು ಎಕ್ಸಿಬಿಟ್ ಪಿ 1 (ಎ) ಪ್ರಕಟನೆಯಿಂದ ಅಪರಾಧಿಯು ತಿಳಿದಿರುವ ವಿಚಾರವಾಗಿಯು ಒಂದು ಮಾತನಾಡಬೇಕಾಗಿದೆ ಎಕ್ಸಿಬಿಟ್ ಪಿ 1 ರಲ್ಲಿ ಆಕ್ಷೇಪಣೆಯುಳ್ಳ ಕಾಲಂಗಳೊಳಗಿರುವ ವಾಕ್ಯವು ಬ್ರಾಹ್ಮಣರುಗಳಿಂದ ಬಹಳ ದೂರ ವರ್ತಿಸಲ್ಪಟ್ಟಿರುವ ಮಿ ಗೋಪಾಲಸ್ವಾಮಯ್ಯರವರೇ ಹೇಳಿರುವಂತೆ ಬ್ರಾಹ್ಮಣರ ಅಭಿಪ್ರಾಯವನ್ನು ಅನುಸರಿಸಿ ಮಾತನಾಡುವ ಮ|| ವೆಂಕಟಕೃಷ್ಣಯ್ಯನವರ ಅಭಿಪ್ರಾಯವಾಗಿರುತ್ತದೆಂದು ಚರ್ಚಿಸಲ್ಪಟ್ಟ ಸಂಗತಿಗಳಿಂದ ಯಾವ ಅನುಮಾನವೂ ಇಲ್ಲದೆ ನಿರ್ಧರಿಸಲ್ಪಟ್ಟಿರುತ್ತದೆ ಅಲ್ಲದೆ ಮೈಸೂರು ಸಂಸ್ಥಾನದಲ್ಲೂ ಬ್ರಿಟಿಷ್ ಇಂಡಿಯಾ ... ವಾಕ್ಯವನ್ನು ಫಿರ್ಯಾದಿ ... ದು ನಿಸ್ಸಂದೇಹವಾಗಿ ಸಿದ್ಧಗೊಳಿಸಲ್ಪಟ್ಟಿರುತ್ತದೆ ಬ್ರಾಹ್ಮಣ ಸಮಾಜದಲ್ಲಿ ಸ್ವಲ್ಪ ಗಣ್ಯರಾಗಿರುವವರು ಎಕ್ಸಿಬಿಟ್ ಪಿ 1 (ಎ) ರಲ್ಲಿ ಕಂಡ ಅಭಿಪ್ರಾಯವನ್ನು ಹೊಂದಿದವರಾಗಿ ಬ್ರಾಹ್ಮಣ ಪತ್ರಿಕೆಗಳು ಸರ್ಕಾರವನ್ನೂ ದಿವಾನರನ್ನೂ ... ದೇಶಾಭಿಮಾನರಹಿತರೂ, ಸಂಸ್ಥಾನಾಭಿವೃದ್ಧಿಗೆ ಅತಂಕರೂ ಎಂದು ಅಪರಾಧಿಯು ತಿಳಿದು ತನ್ನ ಅಭಿಪ್ರಾಯವನ್ನು ಕೊಡಲು ಪ್ರೋತ್ಸಾಹಿಸಲ್ಪಟ್ಟನೆಂದು ನಾನು ಅಭಿಪ್ರಾಯಪಡುತ್ತೇನೆ ಮೇಲ್ಕಂಡ ವಿಷಯಗಳ ಪರಿಶೀಲನೆಯಿಂದ ಅಪರಾಧಿಯು ಕೊಟ್ಟಿರುವ ಅಭಿಪ್ರಾಯವು ಖಂಡಿತವಾಗಿ ... ನಾನು ತಿಳಿಯುತ್ತೇನೆ ಎಕ್ಸಿಬಿಟ್ ಡಿ 2 (ಎ) ... ತೋರಿಸಿದಾಗ ಎಕ್ಸಿಬಿಟ್ ಡಿ 2 (ಎ) ನಲ್ಲಿ ಕಂಡ ... ಆಡಿದ್ದ ಪಕ್ಷದಲ್ಲಿ ಅಪರಾಧಿಯು ... ತಾನು ರಾಜದ್ರೋಹಿಯೆಂದು ಅಪರಾಧಿಯ ... ನಾಯಕನೆಂದು ಫಿರ್ಯಾದಿಯು ಹೇಳಿದನು ಆದರೆ ... ಫಿರ್ಯಾದಿಯನ್ನು ರಾಜದ್ರೋಹಿಯೆಂದು ಕರೆದಿಲ್ಲ ... ರಾಜಭಕ್ತರೇ ಎಂಬುದನ್ನು ವಿಚಾರ ... ಹೇಳಿ ಎಂದು ಎಕ್ಸಿಬಿಟ್ ಪಿ 1 (ಎ) ನಲ್ಲಿ ಅಪರಾಧಿಯು ಕೋರಿರುತ್ತಾನೆ

32 ಮೇಲೆ ಚರ್ಚಿಸಿರುವ ವಿಷಯಗಳಿಂದ ಅಪರಾಧಿಯು ತಾ 23 ... ರ ಸಂಪದಭ್ಯುದಯ ಪತ್ರಿಕೆಯಿಂದ ಎಕ್ಸಿಬಿಟ್ ಪಿ 1 ನ್ನು ಉದ್ಧರಿಸಿ ಪ್ರಕಟಿಸುವುದರಿಂದ ಫಿರ್ಯಾದಿಯನ್ನು ಅವಮಾನಪಡಿಸಿಲ್ಲವೆಂದೂ ಎಕ್ಸಿಬಿಟ್ ಪಿ 1 ಪ್ರಕಟನೆಯಮೇಲೆ ಅವನು ಮಾಡಿರುವ ಟೀಕೆಯು ಫಿರ್ಯಾದಿಗೆ ಖಂಡಿತವಾಗಿ ಅವಮಾನಕರವಲ್ಲವೆಂದೂ ನಾನು ನಿರ್ಧರಿಸಿರುತ್ತೇನೆ

33 ಎಕ್ಸಿಬಿಟ್ ಪಿ 3 ಯನ್ನು ನೋಡಿದುದರಲ್ಲಿ ಅದು ಎಕ್ಸಿಬಿಟ್ ಡಿ 1 ನೋಟೀಸಿಗೆ ಸರಿಯಾದ ಉತ್ತರವಾಗಿರುವುದಿಲ್ಲ ಮೇಲೆ ಚರ್ಚಿಸಿರುವಂತೆ ಎಕ್ಸಿಬಿಟ್ ಡಿ 1 ಸ್ಪಷ್ಟವಾಗಿ ಬರೆಯಲ್ಪಡದಿರುವುದರಿಂದ ಎಕ್ಸಿಬಿಟ್ ಪಿ 3 ಕ್ಕೆ ಫಿರ್ಯಾದಿಯಿಂದ ಇನ್ನೊಂದುತ್ತರ ಕೊಡಲ್ಪಡಬೇಕಾಗಿದ್ದಿತು ಫಿರ್ಯಾದಿಯು ಎಚ್ಚರಿಕೆಯಿಂದ ಎಲ್ಲ ವಿಷಯವನ್ನೂ ಪರ್ಯಾಲೋಚಿಸಿ ತನಗೆ ಇಂತಿಂಥಾ ವಿಷಯವು ಅವಮಾನಕರವಾಗಿರುತ್ತದೆಂದು ಸ್ಪಷ್ಟವಾಗಿಯೂ ಸಂಕ್ಷಿಪ್ತವಾಗಿಯೂ ಬರೆದು ತಿಳಿಸಿದ್ದಲ್ಲಿ ಈ ವಿವಾದವು ಪ್ರಾಯಶಃ ಕೋರ್ಟಿಗೆ ಬರುತ್ತಿರಲಿಲ್ಲ ಆದರೆ 1928 ನೇ ನವೆಂಬರ್ ತಿಂಗಳಿನ ಪರಿಸ್ಥಿತಿಯು ಬಿಗುವಾಗಿದ್ದಿತು ಮತ್ತು ಫಿರ್ಯಾದಿಯು ಇತರರಂತೆ ದುರಹಂಕಾರಭಾವನೆಯಲ್ಲಿ ಸಿಲ್ಕಿ ಅಪರಾಧಿಯ ಮೇಲೆ ಅಭಿಯೋಗ ನಡೆಸಲು ಎಕ್ಸಿಬಿಟ್ ಪಿ 1 ಕ್ಕೆ ಅಮುಖವಾದ ಅರ್ಥವನ್ನು ಪ್ರಯೋಗಿಸುವುದರಲ್ಲಿ ಫಿರ್ಯಾದಿಯು ತನ್ನ ಕೇಸನ್ನು ಪುಷ್ಟೀಕರಿಸುವಂತಹ ವಾಸ್ತವ್ಯವೂ ಸಂಭಾವ್ಯವೂ ಆದ ಸಾಕ್ಷ್ಯವನ್ನು ಕೊಟ್ಟಿರುವುದಿಲ್ಲ

34 ಆದುದರಿಂದ ಅಪರಾಧಿಯು ಐ ಪಿ ಸಿ 500 ನೇ ಸೆಕ್ಷನ್ ಪ್ರಕಾರ ಯಾವ ತಪ್ಪನ್ನೂ ಮಾಡಿಲ್ಲವೆಂದು ನಿರ್ಧರಿಸಿ ಅಪರಾಧಿಯನ್ನು ಸಿ ಪಿ ಸಿ 258 ನೇ ಸೆಕ್ಷನ್ ಪ್ರಕಾರ ದೋಷಮುಕ್ತನನ್ನಾಗಿ ಮಾಡಿರುತ್ತೇನೆ

ಕೋರ್ಟಿನಲ್ಲಿ ಬಹಿರಂಗವಾಗಿ ಹೇಳಲ್ಪಟ್ಟಿತು

ರುಜು—ಕೆ ರಾಜಶೇಖರ ಪೂನೆಗರ್ ಫಸ್ಟ್ ಕ್ಲಾಸ್ ಮಾಜಿಸ್ಟ್ರೇಟ್

ಎರಡನೇ ಕೋರ್ಟು

ತಾ|| 6 ನೇ ಸೆಪ್ಟೆಂಬರ್ '29,

ಸ್ತ್ರೀ ಶಿಕ್ಷಣ

ಶ್ರೀ ವೀರಸಂಗಪ್ಪನವರ ಅಕ್ಕ ಶಾಂಭವಿಯ ಭಾವನೆಯು. ಒಳಗೆ ಈ ಕೆಳಗೆ ಕಂಡ ವಿವಾಹ ಮದುವೆ ಗೆ ಕೊಟ್ಟಿರುವುದಗಳನ್ನೂ ಇತರ ಸಂಘ ಸಂಸ್ಥೆ ಗಳಿಗೆ ಕಳುಹಿಸಲ್ಪಟ್ಟ ಹಣವನ್ನು ಕೃತಜ್ಞತಾಪೂರ್ವಕ ಸ್ವೀಕರಿಸುತ್ತೇವೆ.—ಸಂ

ತುಮಕೂರು ತಾ|| ಬೆಳ್ಳಾವಿಯಲ್ಲಿರುವ ಗುರು ಹಿರೇಮಠದ ವೇ|| ಗಂಗಾಧರ ಶಾಸ್ತ್ರಿಗಳವರ ಕುಮಾರಿ ಸೌ|| ಪಾರ್ವತಮ್ಮನವರಿಗೂ ಗುಬ್ಬಿಯಲ್ಲಿರುವ ಕುಮಾರಸ್ವಾಮಿ ಮಠದ ವೇ|| ವೀರಪ್ಪಶಾಸ್ತ್ರಿಗಳವರ ಮಕ್ಕಳು ಶಿವಕುಮಾರ ವೇ|| ಶಿವರುದ್ರ ಶಾಸ್ತ್ರಿಗಳಿಗೂ ನಡೆದ ವಿವಾಹಮಹೋತ್ಸವದಲ್ಲಿ 1 ರೂ, ಸಿರಾದಲ್ಲಿರುವ ಮ|| ಚಿಕ್ಕನಿ ಸಿದ್ಧಯೊನ್ನಪ್ಪನವರ ಮೊಮ್ಮಗಳು ಸೌ|| ಚೆನ್ನಮ್ಮನಿಗೂ ಮಾಗಡಿ ಮ|| ನಿರಂಜನ ಚೆಟ್ಟರ ಕುಮಾರ ಸ್ವಾ|| ಸಿದ್ಧರಾಮಯ್ಯನವರಿಗೂ ನಡೆದ ವಿವಾಹಮಹೋತ್ಸವದಲ್ಲಿ 1 ರೂ. ಈ 2 ರೂಪಾಯಿಗಳು ಬೆಂಗಳೂರು ಸುಲ್ತಾನಪೇಟೆಯಲ್ಲಿರುವ ನಾಗನಾಯ್ಕನ ಕೋಟೆ ಹೊಸಮಠದ ವೇ|| ಎಸ್. ಸಿದ್ಧರಾಮಯ್ಯನವರ ಮೂಲಕ ಬಂದಿವೆ.

ಪತ್ರವ್ಯವಹಾರ

ಪತ್ರವ್ಯವಹಾರ ಕರ್ತೃಗಳಿಗೆ ಸಂಪಾದಕರು ಜವಾಬ್ದಾರಿಗಳಲ್ಲ ವೆಂಬಂಶವನ್ನು ಸಕಲರೂ ತಿಳಿಯತಕ್ಕದು.—ಸಂಪಾದಕ

ಗಣಪತಿನೋತ್ಸವ

ತಾ|| 7 9 29ರ ಮಧ್ಯಾಹ್ನ 2 ಘಂಟೆಯಲ್ಲಿ ಬಳ್ಳಾರಿ ಡಿ|| ಹೂವಿನಹಡಗಲಿ ತಾ|| ಹೊಳಲು ಒಳಗಿನ ಪಾಠಶಾಲೆಯ ಹೆಡ್ಮಾಸ್ತರು ಮತ್ತು 4 ಮಂದಿ ದೊಡ್ಡ ಮನುಷ್ಯರು ಸಹ ಕೂಡಿ ವಾದ್ಯ ಘೋಷಣೆಯಿಂದ ಈ ಗ್ರಾಮದ ಕೋಟೆಯೊಳಗೆ ಇರುವ ವೀರಭದ್ರಸ್ವಾಮಿ ದೇವಾಲಯದಿಂದ ವಿಘ್ನೇಶ್ವರನನ್ನು ಬಹು ವಿಜೃಂಭಣೆಯಿಂದ ಬಾಲಿಕಾ ಶಾಲೆಗೆ ತೆಗೆದುಕೊಂಡುಬಂದು ಇಟ್ಟು ಪೂಜಿಸಿದ ಮೇಲೆ ಈ ಗ್ರಾಮದ ಶ್ರೀಮದ್ ಜಗದ್ಗುರು ನಿರಂಜನ ಜಂಗಮದೇವರ ಮಲ್ಲಿಕಾರ್ಜುನ ಮಹಾಸ್ವಾಮಿಗಳನ್ನು ಘೋಷಣೆಯಿಂದ ಕರೆದುಕೊಂಡುಬಂದು ಅಧ್ಯಕ್ಷಸ್ಥಾನದಲ್ಲಿ ಕೂಡ್ರಿಸಿದರು. ಅಮೇಲೆ ಬಾಲಿಕೆಯರು ದೇವರ ಪ್ರಾರ್ಥನೆ ರಾಜನ ಕೀರ್ತನೆ ಹಾಡಿ ಶ್ರೀಜಗದ್ಗುರುಗಳ ಸ್ತೋತ್ರ ಸಹ ಹಾಡಿದಮೇಲೆ ಹೆಡ್ಮಾಸ್ತರು ಹೊಳಲು ಹಿರೇಮಠದ ಚನ್ನಬಸವಯ್ಯನವರು ಕೆಲವು ವಿಷಯವನ್ನು ಕುರಿತು ಭಾಷಣಮಾಡಿದರು. ಜಗದ್ಗುರುಗಳು ದಯಮಾಡಿಸಿದ್ದಕ್ಕಾಗಿ ನಾವುಗಳು ಧನ್ಯರಾದೆವೆಂದು ಕೆಲ ಬಾಲಿಕೆಯರು ಹೇಳಿ ಮಂಗಳವನ್ನು ಹಾಡಿದ ಮೇಲೆ ಸಭಾ ವಿಸರ್ಜನೆಯಾಗಿ ಘೋಷಣೆಯಿಂದ ಶ್ರೀ ಜಗದ್ಗುರುಗಳನ್ನು ಮಠಕ್ಕೆ ಕಳುಹಿಸಿಕೊಟ್ಟು ವಿಘ್ನೇಶ್ವರನ ಮಹೋತ್ಸವವನ್ನು ನಾಲ್ಕು ಘಂಟೆ ತನಕ ಮಾಡಿ ಮುಗಿಸಿದರು.

ಚೆನ್ನೂರು ಅನಿಕೇಟ್ಟರ ಬಸಪ್ಪ ಹೊಳಲು

ಮುಡಿಗುಂಡದಲ್ಲಿ ನಡೆದ ಶ್ರೀ ಗಣಪತಿಪೂಜಾ ಮಹೋತ್ಸವ ಸಮಾರಂಭ

ಮುಡಿಗುಂಡದ ಶ್ರೀ ಸುವರ್ಣಪೀಠಾಧಿರಾಜದಲ್ಲಿ ಶ್ರೀಯುತ ಗುರುಕಾರ್ ಮಂಟಪಪ್ಪನವರಿಂದ ವರ್ಗೇಶ್ವರ ಆಯಾಸ ವಿಘ್ನೇಶ್ವರನ ನೂತನವಾಗಿ ನಿರ್ಮಿಸಲ್ಪಟ್ಟಿರುವ ಭವ್ಯವಾದ ಮಂಟಪದ ಮಧ್ಯೆ ನಿರ್ಮಿಸಲ್ಪಟ್ಟಿರುವ ದಿವ್ಯ ಶಿಲಾಮಂಟಪದಲ್ಲಿ ಕಳೆದ ಭಾದ್ರಪದ ಶುದ್ಧ ಚೌತಿ ಆದಿಯಾಗಿ ವಿದ್ಯಾರ್ಥಿಗಳಿಂದ ಶ್ರೀ ಗಣೇಶಪೂಜಾ ಮಂಗಳಕರ ಮಹೋತ್ಸವಗಳು ಬಹು ವಿಜೃಂಭಣೆಯಿಂದ ನಡೆದುಬಂದು ಕೆಲ ವಿಶಿಷ್ಟ ಪಿತಾಮಹರೆಂದಲ ಕೊನೆಗೆ ಮೊನ್ನೆ ಕಳೆದ ತಾ|| 16 9 29 ನೇ ಸೋಮವಾರ ರಾತ್ರಿ ತಳಿರುತೋರಣಾದಿಗಳಿಂದ ಅಲಂಕರಿಸಲ್ಪಟ್ಟದ್ದ ದಿವ್ಯ ಮಂಟಪದಲ್ಲಿ ದೊಡ್ಡ ಸಭೆಯೊಂದು ಸೇರಿಸಲ್ಪಟ್ಟಿತು. ಈ ಸಭೆಗೆ ತಲ್ಲಾರು ಸಾಹುಕಾರ್ ಶ್ರೀಯುತ ಟಿ. ಎಸ್. ಸದಾಶಿವಮೂರ್ತಿಯವರು, ಇದೇ ಊರಿನ ಶಾನುಭೋಗರು ಮತ್ತು ಡಿಸ್ಟ್ರಿಕ್ಟ್ ಬೋರ್ಡು ಮೆಂಬರಾದ ಶ್ರೀಯುತ ಸಂಗಪ್ಪನವರು ಮುಂತಾದವರು, ಎಂ. ಎಸ್. ಸಂಗನಬಸಪ್ಪನವರು, ಗುರುಕಾರ್ ಚೆನ್ನಪ್ಪನವರು ಹೆಡ್ಮಾಸ್ಟರ್ ಮುದ್ದೆಯಂ ಪುಟ್ಟಪ್ಪನವರು ಮುಂತಾದ ಬಸವಲಿಂಗಪ್ಪನವರು, ಎಂ. ಸಿ. ದಕ್ಷಿಣಾಮೂರ್ತಿಯವರು, ಇವರು ಮುಂತಾದ ಅನೇಕ ಪುರ ಪ್ರಮುಖ ಮಹನೀಯರುಗಳೂ, ಸುತ್ತಮುತ್ತಲ ಗ್ರಾಮಗಳ ಅನೇಕಾನೇಕ ಜನರುಗಳೂ ಸೇರಿ ಎರಡು ಮೂರು ಸಹಸ್ರದವರೆಗೆ ದಯಮಾಡಿಸಿ ಸಭೆಯನ್ನಲಂಕರಿಸಿದ್ದರು. ಈ ಮಹಾಸಭೆಗೆ ನಮ್ಮ ವಿಜ್ಞಾಪನೆ ಮೇರೆಗೆ ದಯಮಾಡಿಸಿದ್ದ ಮೈಸೂರಿನ ಶಿವಕಥಾಪಂಡಿತ ಶಿರೋಮಣಿ ಬ್ರ|| ಶ್ರೀ|| ವೇ|| ಶಿವಯ್ಯಶಾಸ್ತ್ರಿಗಳವರು ತಮ್ಮ ಘನತರವಾದ ಸಂಗೀತದಿಂದಲೂ ಅಮೋಘವಾದ ವಾಗ್ಝರಿಯಿಂದಲೂ ಅಸಾಧಾರಣವಾದ ಕಥಾಶೈಲಿಯಿಂದಲೂ ನವರಸಭರಿತವಾಗಿ ಪ್ರಾರಂಭದಲ್ಲಿ ನಾರದಗಾಥಾ ವಿಚಾರವನ್ನೂ ಅನಂತರ ಸಾನಂದಗಣೇಶನ ಚರಿತಾಮೃತವ ಪಂಚಾಕ್ಷರೀ ಹಿಮೆಯನ್ನೂ ಉಪನ್ಯಾಸಮಾಡಿ ಅಪಾರವಾದ ಸಭಾ ಸಮುದ್ರವ ಆನಂದದಿಂದ ತುಂಬಿ ತುಳುಕುವಂತೆ ಮಾಡಿದರು. ಕಥಾಸಮಾಪ್ತಿ ಯಾದ ಅನಂತರ ಜಯಘೋಷದೊಡನೆ ಶ್ರೀ ಗಣೇಶಸ್ವಾಮಿಗೆ ಮಂಗಳಾರತಿಯನ್ನು ನಡಿಸಿ ಸಭೆಗೆ ಗಂಧಪುಷ್ಪ ತಾಂಬೂಲಾದಿಗಳು ಹಂಚಲ್ಪಟ್ಟವು. ಈ ದಿವಸದ ಸಕಲ ಸತ್ಕಾರ ಕಾರ್ಯಗಳನ್ನೂ ಶ್ರೀಯುತ ಗುರುಕಾರ್ ಮಂಟಪಪ್ಪನವರು ಪರಮಾನಂದದಿಂದ ವಹಿಸಿಕೊಂಡು ಸಭಾ ಕಾರ್ಯಗಳನ್ನು ನಡೆಸಿದರು. ಎಂಥಾ ಉದಾರಮನಸ್ಸು! ಇದಲ್ಲವೇ ದೈವಭಕ್ತಿ, ಧರ್ಮಶ್ರದ್ಧೆ! ಶ್ರೀ ಗಣೇಶಸ್ವಾಮಿಯು ಶ್ರೀ ಗುರುಕಾರ್ ಮಂಟಪಪ್ಪನವರನ್ನೂ, ಅವರ ಕುಟುಂಬಕ್ಕೂ ಆಯುರಾರೋಗ್ಯ ಐಶ್ವರ್ಯಾದಿಗಳನ್ನಿತ್ತು ಕಾಪಾಡುವ ಲ್ಲದೆ ಅಖಿಲ ಶ್ರೀಮಂತ ಸಮೂಹಕ್ಕೂ ದೈವಭಕ್ತಿ ಧರ್ಮಶ್ರದ್ಧೆಗಳನ್ನುಂಟಾಗುವಂತೆ ಮಾಡಲೆಂದು ಪ್ರಾರ್ಥಿಸುವ,

ಸುಬಹ್ಮಣ್ಯ

ಯಾದಗಿರಿಯ ಭೂಕೈಲಾಸವಾಸಿಯು

(ಒಂದು ಲಕ್ಷ ರೂಪಾಯಿಗಳ ದಾನವು)

ಯಾದಗಿರಿಯ ಶ್ರೀಮಂತ ಲಿಂಗೇರಿ ಕೋನಪ್ಪನವರು ಒಂದು ಧಾರ್ಮಿಕ ಕಾರ್ಯವನ್ನು ಮಾಡಬೇಕೆಂಬುವ ಸದುದ್ದೇಶದಿಂದ ಒಂದು ಮಂದಿರವನ್ನು ಕಟ್ಟಿಸಲಿಕ್ಕೆ ಪ್ರಾರಂಭ ಮಾಡಿ ಅದು ಮುಗಿಯುವುದರೊಳಗಾಗಿಯೇ ಶಿವಾಧೀನರಾದರು. ಅವರು, ಅವರ ಅಣ್ಣರಿರಾದ ಶ್ರೀಯುತ ಸಿದ್ದಪ್ಪನವರು ಈ ಆಸ್ತಿಯು ತಮಗೆ ಬರಬೇಕೆಂದು, ದಾವೆಯನ್ನು ಹೂಡಿದ್ದರು ಕೋನಪ್ಪನವರು ತೀರಿಕೊಳ್ಳುವ ಕಾಲದಲ್ಲಿ ತಮ್ಮ ಮಗಳಾದ ಶಿವಮ್ಮನ (ಮ|| ಏಕ್, ರುದ್ರಪ್ಪ ವಕೀಲರ ಪತ್ನಿಯು) ಹೆಸರಿಗೆ ಆಸ್ತಿಯನ್ನು ಬರೆದು ಬಿಡುಗಡೆ ಮಾಡಿದ್ದರು. ಹೀಗೆಯೇ ಕೂಡ ದ ಮನೆತನವೆಂದು ಒಂದು ಪ್ರಕ್ಷದವರು, ಬೇರೆ ಅದ ಮನೆತನವೆಂದು ಒಂದು ಪಕ್ಷದವರು ಕೋರ್ಟಿನಲ್ಲಿ ಹಿಡಿದುಕೊಂಡರು. ಒಂದುಕಡೆ ಪರಕೀಯರ ತಾವು ಬೇಕಾದಷ್ಟು ಕಿರುಕುಳ ಕೊಡುತ್ತಾ ಬಂದರು ಇದನ್ನು ನೋಡಿ ಸಮಾಜದ ಹಿರಿಯರಾದ ಶ್ರೀ ಕ್ಷೇತ್ರದ ಮಹಾಪುರುಷರು ಶ್ರೀಯುತ ಸಿದ್ಧಪ್ಪನವರನ್ನೂ ರುದ್ರಪ್ಪನವರನ್ನೂ ಕರೆಸಿ ವಿಚಾರಿಸಿದಾಗ ಶ್ರೀ ಜಗದ್ಗುರುಗಳು ಕೊಡುವ ತೀರ್ಪನ್ನು ಒಪ್ಪುವುದಾಗಿ ಹೇಳಿದರು. ಅದರಂತೆ ಶ್ರೀ ಜಗದ್ಗುರುಗಳು ಉಭಯತರನ್ನೂ ಕರೆದು ಸಲಹೆ ಮಾಡಲು ತಮ್ಮ ಆಸ್ತಿಯಲ್ಲಿ ಒಂದು ಲಕ್ಷ ರೂಪಾಯಿಗಳನ್ನು ಧರ್ಮಕ್ಕೆ ವಿನಿಯೋಗಿಸಬೇಕೆಂದು ಹೇಳಲಾಗಿ, ಶ್ರೀಯುತ ಸಿದ್ಧಪ್ಪನವರೂ, ರುದ್ರಪ್ಪನವರೂ ಶ್ರೀಗಳವರ ಅಪ್ಪಣೆಯಂತೆ ನಡೆಯುತ್ತೇವೆಂದು ಹೇಳಿದರಲ್ಲದೆ, ಅದರಂತೆ ನಡೆದುಕೊಂಡು ಶ್ರೀಯುತ ಕೋನಪ್ಪನವರ ಪುತ್ರಿ ಶಿವಮ್ಮನವರು ಮತ್ತು ಶ್ರೀಯುತ ಸಿದ್ಧಪ್ಪನವರ ಮಗ ಬಸವರಾಜಪ್ಪ ಇವರಿಬ್ಬರ ಹೆಸರಿನಿಂದ ಒಂದು ಲಕ್ಷ ರೂಪಾಯಿಗಳ ದಾನಪತ್ರವಾಗಿ ಧರ್ಮಸಂಸ್ಥೆಗೆ ಕೊಡುವ ಬೇಕೆಂದು ನಿರ್ಣಯಿಸಿದ ಪ್ರಕಾರ ಉಭಯರೂ ಒಪ್ಪಿಕೊಂಡರು. ಪಾಟಕರೇ ಈ ನಿರ್ಣಯವನ್ನು ಕೇಳಿದ ಯಾವ ವೀರಶೈವನಿಗೆ ತಾನೆ ಆನಂದವಾಗಲಿಕ್ಕಿಲ್ಲ! ಸಮಾಜದೇವಿಯನ್ನು ಮಾಡತಕ್ಕ ಗುರುಗಳಿ ಗುರುಗಳ ಹೇಳಿದಂತೆ ನಡೆಯತಕ್ಕ ಶಿಷ್ಯರು ಇದ್ದರೆ ಯಾವ ಸಮಾಜವು ತಾನೇ ಸುಧಾರಿಸಲಿಕ್ಕಿಲ್ಲ. ಅಂತೂ ಇಂತೂ ಯಾದಗಿರಿಯು ಇಂದಿಗೆ ಭೂಕೈಲಾಸವೆನಿಸಿತು. ಶ್ರೀಯುತ ಸಿದ್ಧಪ್ಪನವರನ್ನು ಎಷ್ಟು ಕೊಂಡಾಡಿದರೂ ತೀರದು. ಸ್ವಾರ್ಥವನ್ನು ಬಿಟ್ಟು ಸಮಾಜದ ಉಪಕಾರವನ್ನು ಮಾಡಿಸಲಿಕ್ಕೆ ಪ್ರಯತ್ನವನ್ನು ಮಾಡಿದ ಸಿದ್ಧಪ್ಪನವರಿಗೆ ದೇವರು ಸಕಲೈಶ್ವರ್ಯ ಸಂಪತ್ತನ್ನು ಕೊಡಲಿ. ಶ್ರೀಯುತ ಎಸ್. ರುದ್ರಪ್ಪ ಪ್ಲೀಡರ್ ವಕೀಲ ಇವರು ತಮ್ಮ ಮಾವನವರಾದ ಕೋನಪ್ಪನವರ ಇಚ್ಛೆಯನ್ನು ಪೂರ್ತಿ ಮಾಡಿ ಧರ್ಮಕಾರ್ಯವನ್ನು ಮಾಡಿದ್ದಕ್ಕೆ ಇಡೀ ವೀರಶೈವ ಸಮಾಜವೇ ಅವರಿಗೆ ಋಣಿಯಾಗಿರುವುದು. ಒಂದು ಲಕ್ಷ ರೂಪಾಯಿಗಳನ್ನು ದಾನ ಮಾಡುವುದೆಂದರೆ ಸಾಧಾರಣವಾದ ಮಾತಲ್ಲ. ಇಂತಹ ಕಾರ್ಯಗಳು ಯಾದಗಿರಿಯಲ್ಲಿ ಪುನಃ ಪುನಃ ಆಗುತ್ತಿರಲಿ ಮೇಲೆ ಯಾದಗಿರಿಯು ಸಕಲ ಜನರಿಗೆ ಯಾದ ಅಂದರೆ ನೆನಪು ಉಳಿಯುವಂತಾಗಿ ಹೆಸರು ಸಾರ್ಥಕವಾಯಿತು. ಇಂತಹ ದೊಡ್ಡ ಕಾರ್ಯವನ್ನು ಬಹಳ ಚತುರತೆಯಿಂದ ಕೊನೆಗಾಣಿಸಿ ಧರ್ಮಕಾರ್ಯವನ್ನು ಮಾಡಿಸಿದ ಶ್ರೀ ಕಾಂತಿವೀರಸ್ವಾಮಿಗಳವರು ಉಳಿದ ಸ್ವಾಮಿಗಳವರಿಗೆ ಆದರ್ಶರಾಗಿರುತ್ತಾರೆ. ದಾನ ಪತ್ರದ ವಿಷಯವನ್ನೂ, ಈ ಸಂಸ್ಥೆಯಲ್ಲಿ ಯಾವ ಕಾರ್ಯವು ನಡೆಯುತ್ತದೆಂಬುದನ್ನು ಮುಂದಿನ ಲೇಖದಲ್ಲಿ ತಿಳಿಸುತ್ತೇವೆ.

ಚಂದ್ರಶೇಖರಶಾಸ್ತ್ರಿ ವ್ಯಾಕರಣತೀರ್ಥ, ಪ್ರಿನ್ಸಿಪಾಲ

ಸಂಸ್ಕೃತಶಾಲೆ ಯಾದಗಿರಿ

ಕುರುಬರ ಸಭೆಯು

ರೋಣ ತಾ|| ಅಬ್ಬಿಗೇರಿ ಗ್ರಾಮದಲ್ಲಿ ಅಯಿನ್ಯಾಂತದ ಪಾಟೀಲಮತದವರು ತಾ|| 29 1929 ನೇ ದಿವಸ ಒಂದು ದೊಡ್ಡ ಕುರುಬರ ಸಭೆಯನ್ನು ಮಾಡ ಬೇಕೆಂತಲೂ ಅದಕ್ಕಾಗಿ ಗೌಡಯ್ಯನವರ ನಿಜಸಿಂಹಾಸನಾಧೀಶ ಶ್ರೀ ಜಗದ್ಗುರುಗಳವರನ್ನು ದಯಮಾಡ ಒಡೆಯರನ್ನು ಆ ಸಭೆಗೆ ಅಧ್ಯಕ್ಷರನ್ನಾಗಿ ಮಾಡಬೇಕೆಂತಲೂ ನಿಶ್ಚಯಿಸಿ ಅದರಂತೆ ದೇಶ ಮಧ್ಯದಲ್ಲಿ ಜಾಹೀರಾತುಗಳನ್ನು ಹಂಚಿದರು. ಅದರ ಅವರಂತೆ ಕುರುಬರ ಸಭೆಯ ಯಾತ್ರ ಕಾರ್ಯಗಳನ್ನು ತಯಾರಿಸಿಕೊಂಡು ನಿಚ್ಚಯದಲ್ಲಿ ಆ ಗ್ರಾಮದ ಕೆಲವು ವಿಘ್ನಸಂತೋಷಿಗಳು ಅಂದರೆ ಬಸವಣ್ಣನಿಂದ ಕರು ಶ್ರೀ ಜಗದ್ಗುರುಗಳ ಆಗಮನವಾಗದಂತೆಯೂ ಕುರುಬರ ಸಭೆಯಾಗದಂತೆಯೂ ಪ್ರಯತ್ನ ಮಾಡುತ್ತಿದ್ದರು ಹ್ಯಾಗೆಂದರೆ ಅಲ್ಲಿಯ ಕೆಲವು ಅಧ್ಯಾಪಕರೆಂಬವರು ಬಸವಪಂಕ್ತಿಯನ್ನು ಸುಟ್ಟು ಧಾಕರ್ಜೀತು ಹಾಗೂ ವೀರಶೈವರಲ್ಲಿ ಬಸವನಾಮವನ್ನು ಎಂದು ಅಲ್ಲದೆಹೋ ಅಂದೇ ನಮ್ಮ ಸ್ವದಿತಕ್ಕ ಬರುತ್ತದೆಂಬ ಮನೋಭಾವನೆ ಉಳ್ಳವರಾಗಿ ವೀರಶೈವ ಮಹೋದಯ ಪತ್ರಿಕೆಯಲ್ಲಿ ಬೆಟ್ಟದಷ್ಟು ಪಟ್ಟ ಬರೆದುಬಿಡುವ ಶಾಸ್ತ್ರ ಒದಗ್ಗಿರೆಂಬುದರಲ್ಲಿ ದ ಚಿ ಚ ಜನಮಾಯಾವಗಳನ್ನುತಿಳಿಸಿಕೊಂಡು ಬೋಧಿಸುತ್ತಿರುವರು. ಈ ಸಭೆಯನ್ನು ನಿಲ್ಲಿಸಬೇಕೆಂದು ಅವರಿಂದ ಕೊಡುವ ಬರೆಯನ್ನು ಒಟ್ಟುಮಾಡಿಕೊಂಡಿದ್ದರು. ಆದರೆ ಆ ಏಂದರೆ ಹೋಗುವ ಅಸದ ಶ್ರೀ ಜಗದ್ಗುರುಗಳು ಒಡೆಯರವರ ಪ್ರಭಾವಕ್ಕೆ ಸಿಲುಕದ್ದರಿಂದ ಮಧ್ಯದಲ್ಲಿಯೆ ನಿರಾಶೆ ಹೊಂದಿದರು. ಆದರೆ ಶಿವಾನುಭವಿ ನವಪ್ರಗತ ವಾದಿಗಳು ವಿಚಾರಿಸಿ ಸಿನಿಕ ಸ್ವಸ್ಥರಾಗಿ ಅವರ ಅವಿವೇಕ ಸಭೆಗೆ ಬುಡದಿ ಸುರಿಸಬೇಕೆಂದು ತೀರ್ಮಾನಿಸಿ ಆಗಲಿಸಿಬಿಟ್ಟರು ಯೋಗ್ಯತಾವಂತರೆಂದು ಬೋಧಿಸಿ ಹೇಳಿದ ಸಿಂದಗಿಯ ಚೆಂದ್ರಶೇಖರನ ಉಪದೇಶದಿಂದಲೂ, ಶ್ರೀ ಸಿದ್ಧಲಿಂಗ ಶಿವಯೋಗಿಗಳವರ ಪತ್ರಿಕೆ ಮೇಲಿಂದಲೂ ಧೈರ್ಯದಿಂದ ಕೆಲ ದಿವಸಗಳ ತರುವಾಯ ಶ್ರೀ ಜಗದ್ಗುರುಗಳು ಒಡೆಯರವರು ಅಬ್ಬಿಗೇರಿ ಮಠದಲ್ಲಿ ತಂಗಿದ್ದರು. ನಿರೀಕ್ಷಿಸಿದ ಸಭೆಯು ಆದ್ಯತೆಯಿಂದ ಪ್ರಾರಂಭವಾಯಿತು. ಸ್ವಾಗತಮಂತ್ರಿಯಾದ ಮಹಾತ್ಮರು ಉತ್ಸಾಹದಿಂದ ಕುರುಬರ ಸಭೆಯನ್ನು ನಡೆಸಿಕೊಂಡರು. 10-4 ನೇ ದಿವಸ ಸಭೆಯು ಮುಂದುವರಿದು ಬಹಳ ಉತ್ತಮವಾಗಿ ನೆರವೇರಿತು. ಅಂದು ಸಾಯಂಕಾಲ ಒಳ್ಳೆ ಸಂತೋಷದಿಂದ ತಾ|| 10 4 ನೇ ದಿವಸ ಪಟ್ಟದವರನ್ನೂ ಶ್ರೀ ಗುರುಗಳನ್ನೂ ಒಳ್ಳೆ ವಿಜೃಂಭಣೆಯಿಂದ ಉತ್ಸವವನ್ನು ಮಾಡುತ್ತ ಪ್ರಾಂತ್ಯಗಳನ್ನು ಸಾರಿದರು. ಕಡೆಯ ದಿವಸ ಮಹಾಪೂಜೆಯೊಡನೆ ಸಭಾದ ವಿಸರ್ಜನೆ ಮಾಡಿದರು. ಆ ಹೊತ್ತಿನ ದಿವಸ ಹಾಲುಮತದವರ ದೊಡ್ಡ ಸಭೆಯಾಗಿ ಅದರಲ್ಲಿ ಆ ರುದ್ರರ ಲಿಂಗಧಾರಣೆಗಳಾದವು. ಹಾಗೂ ಅಹಲ್ಯಾದೇವಿಯು ಸಾರ್ವಜನಿಕ ಉತ್ಸವವು ಪ್ರವರ್ತನವಾಗಬೇಕೆಂದು ಅನೇಕ ವಿಷಯಗಳ ಠರಾವುಗಳನ್ನು ಪಾಸುಮಾಡಿಕೊಂಡರು. ಅಗ್ರ ಸಂಗ್ರಹವೆಲ್ಲಾ ಮುಗಿಸಿದುದಾದ ಅಧ್ಯಕ್ಷರು ನಾಡಿನವರ ಭಾಷಣವು ಒಳ್ಳೆ ವಿಶ್ವಾಸದಿಂದ ನಡೆಯಿತು. ಅನಂತರ ಶ್ರೀ ಜಗದ್ಗುರುಗಳ ಒಡೆಯರವರ ಅಮೃತಭಾಷಣದಿಂದ ಜನರು ಆನಂದ ಕರ ಪಡೆದರು. ಜಗದ್ಗುರುಗಳವರು ಎತ್ತಿತು. ಈ ಹೊತ್ತು ನಾವು ಸಭೆಯಲ್ಲಿ ಎಲ್ಲವನ್ನೂ ಹೊಂದಿದೆವೆಂದೂ ನಾಳೆ ವೀರಶೈವರ ಸಭೆ ಆಗಬೇಕೆಂದು ಗ್ರಾಮದ ಮುಖ್ಯರು ವೀರಶೈವರ ಜನಾಂಗವು ಸಭೆಯನ್ನು ಆಗಲಿಕ್ಕೆ ಪುನಃ ಪಟ್ಟು ಹಿಡಿದರು. ವಿಶೇಷವಾಗಿ ಸ್ವಾಗತಿಸಿ ಬೇರೊಂದು ದೊಡ್ಡದಾದ ಸಭೆಯಾಗಬೇಕೆನ್ನ ಲ್ಲದೆ ಶ್ರೀ ಜಗದ್ಗುರುಗಳು ಒಡೆಯರವರು ಅಧ್ಯಕ್ಷತೆಯಲ್ಲಿ ಉತ್ಸವವನ್ನು ಸಭಾಕಾರ್ಯವನ್ನೂ ನೆರವೇರಿಸಿದರು. ಉತ್ಸವ ಹಾಗೂ ಸಭಾಕಾರ್ಯದ ದಿವಸವೆಲ್ಲ ಗೋಕಾಕದ ಫೌಜದಾರ ಮಹಾಶಯರು ಪೊಲೀಸ ಅಧಿಕಾರಿ ಹೋಸ ಬಂದೋಬಸ್ತನ್ನು ಮಾಡಿದರು. ನೀಚ ಕರ್ಮದ ಸಭೆಯಲ್ಲಿ ಶ್ರೀ ಜಗದ್ಗುರುಗಳು ಒಡೆಯರವರು ವೀರಶೈವರ ಸನಾತನತ್ವ ದಿಗ್ವಿಜಯ ವೈದಿಕತ್ವ ವಿಷಯದಲ್ಲಿ ವಿಚಾರಗಳನ್ನು ಅನೇಕ ವೇದಾದಿ ಸಕಲ ಶಾಸ್ತ್ರಗಳ ಪ್ರಮಾಣದಿಂದ ನಿರೂಪಿಸಿದರು. ಮುಖ್ಯವಾಗಿ ಹುಟ್ಟಿದವರು ಲಿಂಗಧಾರಣೆ ಮಾಡಿಕೊಳ್ಳಬೇಕೆಂದು ಕುರುಬರಿಗೆ ಉಪದೇಶಿಸಿದರು. ಜಾತಿಭೇದ ದುರ್ಭಾವನೆ ನಿವಾರಣೆಯಾಗಬೇಕೆಂದು ಹೇಳಿ ಲಿಂಗಾಯತರ ಕಾರ್ಯವನ್ನು ಪ್ರಶಂಸಿಸಿ ನಿಜವಾದ ವೀರಶೈವ ಪರಂಪರೆಯನ್ನು ಉಳಿಸಿಕೊಳ್ಳಬೇಕೆಂದು ಅನೇಕ ಶಾಸ್ತ್ರಾಧಾರಗಳಿಂದ ತಿಳಿಸಿದರು. ಅನಂತರ ಅಬ್ಬಿಗೇರಿ ಶಾಲಾ ಹೆಡ್ಮಾಸ್ತರ ಹಾಗೂ ಶಿಕ್ಷಕರು ಧನ್ಯವಾದಗಳನ್ನು ಸಮರ್ಪಿಸಿದರು. ಆ ಬಳಿಕ ನೆರೆದಿದ್ದ ಸಮಸ್ತ ಜಾತಿಯವರಿಗೆ ಲಿಂಗಧಾರಣೆಯಾಗುವ ಬಗ್ಗೆ ಲಿಂಗಾಂಗಿಗಳಾದ ನಾವೆಲ್ಲರೂ ಪ್ರಯತ್ನಪಡಬೇಕೆಂದು ಹೇಳಿದರು. ನಂತರ ಶ್ರೀ ಜಗದ್ಗುರುಗಳವರಿಗೆ ಮಂಗಳಾರತಿಯನ್ನು ಮಾಡಿಕೊಂಡು ಶ್ರೀ ಜಗದ್ಗುರುಗಳು ಒಡೆಯರವರ ಜಯಘೋಷದೊಡನೆ ಸಭಾ ವಿಸರ್ಜನೆಯಾಯಿತು.

ಪ್ರೇಕ್ಷಕ.

ಶಾಸ್ತ್ರೀಯ ನಾಟಕದ ಹೊಸ ದಿಕ್ಕಿನಲ್ಲಿ ಒಂದು ಪ್ರಯತ್ನ

ತಾ|| 14 9 29 ನೇ ಶನಿವಾರ ಶ್ರೀ ತಾ|| ಶಂಕರಲಿಂಗನ ನವರಾತ್ರಿ ಸ್ಕೂಲಿನ ಪ್ರಸಿದ್ಧ ಮಹೋತ್ಸವ ಶ್ರಾವಣದಲ್ಲಿ ಶ್ರೀಯುತ ಶಿವಾ ಸ್ವಾಮಿನವರ ಸಂಘದ ಚಿನ್ನಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಅಧಿವೇಶನಕ್ಕೆ ಕೆಲವು ಜನ ಸರ್ಕಾರಿ ನೌಕರರು, ಈ ಸುತ್ತಮುತ್ತಲ ಎಲ್ಲಾ ಸ್ಕೂಲಿನ ಮಾಸ್ತರುಗಳೂ, ಪಟೇಲ್ ಶಾನುಭೋಗರುಗಳೂ, ಪಿ. ಡಿ. ಮೆಂಬರುಗಳೂ ದಯಮಾಡಿ ಸ್ಕೂಲ್ ಹಾಲ್ ಕಿಕ್ಕಿರಿಯುವಂತೆ ಸಭೆಯು ಸ್ವಾಗತಕರಿಸಿದ್ದರು. ಕೆಲವು ಉಪನ್ಯಾಸಗಳು ಮಾಡಲ್ಪಟ್ಟವಾಗಳಲ್ಲಿ ನಡೆದ ಮೇಲೆ ಅಧ್ಯಕ್ಷರವರು ಸ್ಕೂಲಿನ ಅಭಿವೃದ್ಧಿ ವಿಚಾರ, ಪುಸ್ತಕ ಭಂಡಾರಗಳ ಉಪಯೋಗ ಉಚಿತ ರೀತಿಯಲ್ಲಿ ಆವಶ್ಯಕತೆ ನಿವಾರಣೆಗಳನ್ನು ಮಾಡುವ ವಿಧಾನ ಇತ್ಯಾದಿ ಉಪಯುಕ್ತ ವಿಷಯಗಳನ್ನು ಕುರಿತು ತಮ್ಮ ಸರಳ ಶೈಲಿಯಿಂದ ಉಪನ್ಯಾಸಮಾಡಿ ಸಭಾಸದರನ್ನು ಆನಂದಪಡಿಸಿದರು. ಸ್ಕೂಲಿನ ಪುಸ್ತಕ ಭಂಡಾರಕ್ಕೆ ಅಧ್ಯಕ್ಷರೇ ಮೊದಲು ಚಂದಾ ಹಣವನ್ನು ಕೊಟ್ಟನಂತರ ಸಭಾಸದರಲ್ಲಿ ಕೆಲವರು ಚಂದಾ ಹಣವನ್ನು ಪಾಲ್ಗೊಳ್ಳುವಂತೆ ದರು. ಅನಂತರ ಗಂಧಪುಷ್ಪ ತಾಂಬೂಲ ವಿನಿಯೋಗವಾಗಿ ಶ್ರೀಯುತ ಸಿದ್ಧರ ಶ್ರೀಯುತ ಪ್ರಾರ್ಥನೆಯೊಂದಿಗೆ ಸಭಾವಿಸರ್ಜನೆಯಾಯಿತು. ಈ ದಿನ ರಾತ್ರಿ ಇಲ್ಲಿನ ಶಾಲಾಧ್ಯಾಪಕರಾದ ಮ|| ಎಚ್. ವೀರಭದ್ರಯ್ಯನವರು ಸ್ವತಃ ರಚಿಸಿ ಸ್ಕೂಲ್ ಬಾಲಕರುಗಳಿಂದ ಅಭ್ಯಾಸಮಾಡಿಸಿರುವ ಶಿಬಿ ಪ್ರೇಮಭಂಗ ಅಥವಾ ದಯಾವಿಜಯವೆಂಬ ನಾಟಕವು ಅಭಿನಯಿಸಲ್ಪಟ್ಟಿತು. ಈ ನಾಟಕಕ್ಕೆ ಹಾರ್ಮೋನಿಯಂ, ತಬಲಾ, ಸಂಗೀತಗಳಲ್ಲಿ ಪ್ರಸಿದ್ಧರಾದ ವಿದ್ವಾಂಸರುಗಳು ಬೆಂಗಳೂರು ಅಮರಾಪುರ ಮುಂತಾದ ದೂರಪ್ರದೇಶಗಳಿಂದ ಬಂದಿದ್ದರು. ಈ ಹೊಸ ಕಥೆಯನ್ನು ನೋಡುವುದಕ್ಕೆ ಅಕ್ಕಪಕ್ಕದ ಹಳ್ಳಿ ಗ್ರಾಮಗಳ ಅನೇಕ ಜನರು ಬಂದು ನಾಟಕವನ್ನು ಪ್ರಶಂಸಿಸಿದರು. ಇದು ಕೇವಲ ಹೊಸ ನಾಟಕ. ಇದರ ಮುಖ್ಯವಾದ ಸಾರಾಂಶವೇನೆಂದರೆ —ಒಬ್ಬ ರಾಜನು ಮಕ್ಕಳಿಲ್ಲದೆ ಅನೇಕ ದೇವರನ್ನು ಭಜಿಸಿ ಕಡೆಗೆ ದೇವಿ ವರದಿಂದ ಒಬ್ಬ ಸುತನನ್ನು ಪಡೆದು ಕೆಲವು ದಿವಸಗಳನಂತರ ಈ ಸಂತೋಷಕ್ಕೆ ಕಾರಣಳಾದ ದೇವಿಯ ತೃಪ್ತಿಗಾಗಿ ಒಂದು ಟಗರು ಮರಿಯನ್ನು ಕಂಡು ರಾಜೋಪಚಾರಗಳಿಂದ ಸಾಕಿ ದೇವಿಗೆ ಬಲಿಯಾಗಿ ಕೊಡುವನು. ಆ ಮೂಕ ಪ್ರಾಣಿಯಲ್ಲಿ ಕೇವಲ ಪುತ್ರನಷ್ಟೇ ಪ್ರೇಮ ಈ ರಾಜಪುತ್ರನು ಮಕ್ಕಳನ (ಟಗರಿನ) ವಿಯೋಗ ದುಃಖದಿಂದ ಮೃತಿಯನ್ನೈದುವನು. ಅಕಾಲಿಕವಾದ ಈ ದುಃಖ ಸಂಭವದಿಂದ ಸರಸ್ವತಿಯು ರಾಜನಿಗೆ ದೇವಿಯು ಸ್ವಪ್ನದಲ್ಲಿ ಬಂದು ನಿನ್ನ ತಪ್ಪಿಗೆ ತಕ್ಕ ಪ್ರಾಯಶ್ಚಿತ್ತವನ್ನು ಕೊಟ್ಟಿರುವೆನು. ನೀನು ಇನ್ನು ಮುಂದೆಯಾದರೂ ಬುದ್ಧಿಯನ್ನು ತಂದುಕೊಂಡು ನಿನ್ನ ಪ್ರಜೆಗಳನ್ನೆಲ್ಲಾ ಪ್ರಾಣಿಹಿಂಸೆಯನ್ನು ತಪ್ಪಿಸುವ ಕಾರ್ಯಕ್ಕೆ ವಿನಿಯೋಗಿಸಿದರೆ ಅದೇ ಸುಕುಮಾರನನ್ನೇ ಪುನಃ ಕೊಡುವೆನೆಂದು ಹೇಳಿ ಅದೃಶ್ಯಳಾಗುವಳು. ರಾಜನು ದೇವಿಯ ಆಜ್ಞೆಯನ್ನು ಶಿರಸಾವಹಿಸಿ ದೊಡ್ಡದಾಗಿ ಜೀವದಯಾ ಸಂಘವನ್ನು ಸ್ಥಾಪಿಸಿ ತನ್ನ ಅಕಾಲಮೃತ್ಯುಗಳನ್ನೆಲ್ಲಾ ಆ ಸಂಘಕ್ಕೆ ಮೆಂಬರ್ ಮಾಡಿಸಿ ತಾನೂ ದಾಸನಾಗುವನು. ದೇವಿಯ ವರದಿಂದ ಪುನಃ ಜನಿಸಿದ ರಾಜಪುತ್ರನಿಗೆ ಪಟ್ಟಾಭಿಷೇಕವಾದಮೇಲೆ ಮಂಗಳವಾಗುವುದು.

ಈ ನೀತಿಬೋಧಕವಾದ ನಾಟಕವನ್ನು ಕೇವಲ ಚಿಕ್ಕವಯಸ್ಸಿನ ಮಕ್ಕಳು ಸ್ವತಃ ಸಂಗೀತ ಸಹಾಯಕ್ಕೆ ತಕ್ಕ ಹಾವಭಾವಗಳೊಂದಿಗೆ ಪ್ರೇಕ್ಷಕರ ಕಣ್ಣುಗಳಿಗೆ ಆನಂದವಾಗುವಂತೆ ಅಭಿನಯಿಸಿದರು. ಈ ಗ್ರಂಥಕಾರರು ಬ್ರಹ್ಮಾನಂದಸ್ವಾಮಿಗಳಿಂದ ತಂಪಿತಿನಿಯನ್ನು ಓದಿದ ನರಕಾನ ನಾಡುವ ಪಾತ್ರವನ್ನು ವಹಿಸಿ ಜನಗಳಿಗೆ ಅನೇಕ ನೀತಿಬೋಧೆಯನ್ನು, ಈ ನಾಟಕದಲ್ಲಾದ ಜೀವದಯಾ ಪ್ರಚಾರಕ ಸಂಘಕ್ಕೆ ಅಧ್ಯಕ್ಷರಾಗಿ ಅಮೋಘವಾದ ಉಪನ್ಯಾಸವನ್ನು ಮಾಡಿ ಪ್ರೇಕ್ಷಕರನ್ನು ಆನಂದಪಡಿಸಿದರು. ಇದು ಪ್ರೇಕ್ಷಕರೆಯಾದ ಪಾತ್ರಗಳು. ಈ ನಾಟಕವು ಲೋಕಸದಿಂದ ಪ್ರೇಕ್ಷಕರಿಗೆ ಇನ್ನೊಂದಿಗೂ ಪ್ರದರ್ಶಿಸಬೇಕೆಂದು ವಿನಂತಿಯನ್ನು ಮಾಡುವುದಲ್ಲದೆ ಸ್ವಲ್ಪ ಹಣವನ್ನು ತಿನ್ನ ಹಾಕಿದವರು ಹೋಗಿ ಒಪ್ಪಿಸಿದ್ದರು. ಕೆಲವರು ಹಾಗೆಯೇ ವಾಗ್ದಾನವನ್ನು ಮಾಡಿದರು. ಮ|| ವೀರಭದ್ರಯ್ಯನವರ ಬಹು ದಿವಸಗಳಿಂದಲೂ ಈ ಜೀವದಯಾ ವಿಚಾರದಲ್ಲಿ ಆಸಕ್ತರಾಗಿ ನಡೆಸಿದ್ದು ದೇವತಾ ಕನ್ಯಾ ಸ್ಥಾಪನ ಅನುಭವದಿಂದ ಇರುವರೆಂದು ಯಾವ ಜೀವದಯಾ ವಿಚಾರಗಳೂ ರಚಿಸಿದ್ದ ಈ ನಾಟಕವನ್ನು ಅತ್ಯಂತ ಶ್ರಮದಿಂದ ಬರೆದು ಈ ಹಳ್ಳಿಯ ಬಾಲಕರಿಂದ ಈ ಮಹೋತ್ಸವದಲ್ಲಿ ಅಭಿನಯಿಸುವಂತೆ ಅನೇಕ ಕಷ್ಟನಷ್ಟದಿಂದ ಮಾಡಿರುವುದಕ್ಕಾಗಿ ಇವರನ್ನು ಎಷ್ಟು ಅಭಿನಂದಿಸಿದರೂ ತೀರದು. ನಾಟಕಕಾರರು ಇನ್ನೂ ಇಂತಹ ನಾಟಕಗಳನ್ನು ರಚಿಸಿದರೆ ಹೆಚ್ಚು ಸಹಾಯವಾಗುವುದು, ಆದ್ದರಿಂದ ನಾಟಕಕಾರರೂ ಈಗಿನ ಹೊಸ ನಾಡದಲ್ಲಿ ಅನುಸರಿಸಿ ಉತ್ತಮ ರೀತಿಯಿಂದ ಬರೆಯಲ್ಪಟ್ಟರುತ್ತದೆ. ಆದ್ದರಿಂದ ಜೀವದಯಾ ಪ್ರಚಾರಕರೂ ನಾಟಕದ ಮಹದುದ್ದೇಶಗಳನ್ನು ಮೊಸಳೆ ನಾಟಕವನ್ನು ಪ್ರೋತ್ಸಾಹಿಸಿ ಗ್ರಂಥಕರ್ತರ ಶ್ರಮವನ್ನು ಸಾರ್ಥಕಪಡಿಸಿ ಈ ರೀತಿ ಜೀವದಯಾ ಪ್ರಚಾರದ ಮಾರ್ಗದಿಂದ ಹೆಚ್ಚು ಪ್ರಯೋಜನವನ್ನು ಹೊಂದಿ ಪ್ರಾಣಿಹಿಂಸೆಯನ್ನು ಸಂಪೂರ್ಣ ನಿಲ್ಲಿಸುವಂತೆ ಸಹಾಯ ಮಾಡಬೇಕೆಂದು ಜಗದೀಶನನ್ನು ತ್ರಿಕಾಲವೂ ಪ್ರಾರ್ಥಿಸುವೆನು. ಅಸ್ತು! ಮಂಗಳಮಸ್ತು!!

ಒಬ್ಬ ಪ್ರೇಕ್ಷಕ.

ಇದೇನು

ದೇವಿಯು ಭಕ್ತರಕಾಪಾಡುತ್ತಾಳೆಯೋ, ಅವರುಗಳ ರಕ್ತ ಹೀರುತ್ತಾಳೆಯೋ?

ಅಹಿಂಸಾಮಯವಾದ ಹಿಂದೂಧರ್ಮದಲ್ಲಿ ಇತ್ತೀಚೆಗೆ ಮಾಂಸಾಹಾರಿ ಜನರ ಸಂಸರ್ಗದಿಂದ ಮಾಂಸಾಹಾರ ನುಸುಳುವ ಚಟವು ಬಿದ್ದಿದೆ. ಅದನ್ನು ತಿನ್ನಬಾರದೆಂದು ಧರ್ಮಶಾಸ್ತ್ರಗಳು ಸ್ಪಷ್ಟವಾಗಿ ಸಾರುತ್ತಿದ್ದರೂ, ನಾಲಿಗೆಯ ರುಚಿಗೆ ಮರುಳಾದ ಎಷ್ಟೋ ಜನಾಂಗದವರು ಮಾಂಸತಿನ್ನುವ ತಮ್ಮ ದುರ್ಬುದ್ಧಿಯನ್ನು ಸಾಧಿಸಿಕೊಳ್ಳುವ ಸಲುವಾಗಿ ಬಲಿಯನ್ನು ಕೊಡುವ ದೆಂದು ದೇವಿಯು ಒಲಿಯುವಳೆಂತಲೂ, ಪ್ರಾಣಿಗಳನ್ನು ಬಲಿಕೊಡಬೇಕೆಂತಲೂ ಆಕೆಗೆ ನೈವೇದ್ಯಮಾಡನಂತರ ಆ ಮಹಾ ಪ್ರಸಾದವನ್ನು ಎಲ್ಲರೂ ಸೇವಿಸಬೇಕೆಂತಲೂ ಇವನ್ನು ಏನೇನೋ ಹೇಳುವರು. ಆಹಾ! ಈ ಮಾತು ನಿಜವಿರಬಹುದೇ? ಯಾವ ತಾಯಿಯು ಲೋಕದೊಳಗಿನ ಎಲ್ಲ ಪ್ರಾಣಿಗಳೂ ಹುಟ್ಟಿದವೋ, ಅವಳು ಇರುವೆಯಿಂದಾದಿಯಾಗಿಕೊಂಡು ಮನುಷ್ಯನವರೆಗಿರುವ ಎಲ್ಲ ಪ್ರಾಣಿಗಳಿಗೂ ತಾಯಿಯಲ್ಲವೇ? ತಾಯಿಯು ಪ್ರೀತಿಯು ಎಲ್ಲ ಮಕ್ಕಳಮೇಲೆಯೂ ಸಮವಾಗಿರುವುದು. ಆಕೆಯು ದುಃಖ ಪಟ್ಟಿದರೆ ಹೆಚ್ಚು ಇಲ್ಲದ ಪ್ರಾಣಿಗಳ ಮೇಲೆ ಕಡಿಮೆ ಪ್ರೀತಿಯನ್ನು ಎಂದೂ ಮಾಡಿದವಳಲ್ಲ. ಮನುಷ್ಯನ ನಾಲಿಗೆಯ ಸವಿಕ್ಕಾಗಿಯೇ ಆಕೆಯು ಅಳಿದ ತನ್ನ ಮಕ್ಕಳನ್ನು ಹಡೆದುಕೊಂಡು ಅಂದಮೇಲೆ ದೇವಿಯು ಬಲಿ ಬೇಡುತ್ತಿರುವಳೆಂದು ಆ ಮಾತೆಯಮೇಲೆ ಅಪವಾದ ಹೊರಿಸಿ ತಮ್ಮ ನಾಲಿಗೆ ... ತೀರಿಸಿಕೊಳ್ಳುವುದು ಯುಕ್ತವೇ ಹೇಳಿರಿ.

ದಯಾಳುಗಳೇ! [illegible] ಮತ್ತು [illegible] ದೇವಿಗೆ [illegible] ಸಂಹಾರ ಸಮಯದಲ್ಲಿ ಮೂಕ ಪ್ರಾಣಿಗಳು 'ಬ್ಯಾ' ಎಂಬ ಆರ್ತಧ್ವನಿಯಿಂದ ತನ್ನನ್ನು ಕರೆಯಲು ಆ ಜಗದ್ಜನನಿಯು ಸುಮ್ಮನಿರುವಳೇ? ಆ ಕೋಟಿಜಾತಕರಿಗೆ ತಕ್ಕ ಶಾಸನವನ್ನು ಮಾಡದಿರುವಳೇ? ಈಗ ಆ ಮಹಾ ತಾಯಿಯ ಪ್ರೇರಣೆಯಿಂದಲೇ ಅಲ್ಲಲ್ಲಿಗೆ ಜೀವರಕ್ಷಾ ಜ್ಞಾನಪ್ರಚಾರಕ ಸಂಸ್ಥೆಗಳು ಸ್ಥಾಪಿಸಲ್ಪಟ್ಟಿರುವವು. ನಿಜವಾದ ಸ್ಥಿತಿಯು ಹೀಗಿದ್ದರೂ, ಎಷ್ಟೋ ಜನರು ದೇವಿಗೆ ಬಲಿಕೊಡುವದೆಂಬ ನೆವದಿಂದ ಆ ಮೂಕಪ್ರಾಣಿಗಳನ್ನು ಕೊಂದು ತಿಂದು [illegible] ಇದೇನು ದೇವಿಯ ಭಕ್ತರಾಗಿ ನಿಕೆಯೊ, ಕುರಿಗಳ ರಕ್ತ ಹೀರುವಿಕೆಯೊ?

ಪವಿತ್ರ ಹಿಂದುಧರ್ಮಾನುಯಾಯಿಗಳೇ! ಕಾಮನಪೂಜೆಯನ್ನು ಎಂದೂ ಮಾಡಬೇಡಿರಿ. ಅದರಿಂದ ದೇವಿಯು ಸಂತೋಷಹೊಂದುವಳೆಂಬ ತಪ್ಪು ತಿಳುವಳಿಕೆಯನ್ನು ದೂರಮಾಡಿರಿ. ಆ ಮಹಾ ತಾಯಿಯನ್ನು ಮೆಚ್ಚಿಸುವ ಬಗೆಗೆ ನಿರ್ಮಲವಾದ ಭಕ್ತಿಪೂರ್ವಕವಾಗಿ ಹೂಪತ್ರೆಗಳಿಂದ ಪೂಜಿಸಿರಿ. ತೆಂಗು, ಕಾಯಿ, ಹಣ್ಣು, ಹಾಗಿಗಳಿಂದ ತೃಪ್ತಿಪಡಿಸಿರಿ. ಎಲ್ಲ ಪ್ರಾಣಿಗಳ ಮೇಲೆಯೂ ದಯೆಯುಳ್ಳವರಾಗಿರಿ. ಇದೇ ನಿಜವಾದ ಪೂಜೆ! ಇದೇ ನಿಜವಾದ ಭಕ್ತಿ!! ಇದೇ ದೇವಿಯನ್ನೊಲಿಸುವ ನಿಜವಾದ ಮಾರ್ಗ!!! ಆದ್ದರಿಂದ ಅಹಿಂಸಾಯುಕ್ತವಾದ ಸಾತ್ವಿಕಪೂಜೆಯಿಂದಲೇ ದೇವಿಯನ್ನು ಪೂಜಿಸಿ, ಸಕಲ ಧರ್ಮಾನುಯಾಯಿಗಳೂ ದೇವಿಯ ನಿಜವಾದ ಕೃಪೆಗೆ ಪಾತ್ರರಾಗಬೇಕೆಂಬುದೇ ನಮ್ಮ ಕೋರಿಕೆಯು. ತಮ್ಮ,

ಶ್ರೀ ಜೀವರಕ್ಷಾ ಜ್ಞಾನಪ್ರಚಾರಕ ಸಂಸ್ಥಾ ಅರಳೇಪೇಟೆ ಗದಗ ಸಿಟಿ

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ
ಮುರುಘರಾಜೇಂದ್ರ ಮಹಾಸ್ವಾಮಿನಾಂ

ಶ್ರೀಮುಕ್ತಿಸ್ಥೊಲಾದ್ರಿ ಬೃಹನ್ಮಠ ಮಹಾಸಂಸ್ಥಾನದ ಏಜೆಂಟರ ಆಫೀಸಿನಿಂದ ಮೈಸೂರು ಮೆಡ್ರಾಸ್ ಮುಂಬಯಿ ನೈಜಾಮ ಸೆಂಟ್ರಲ್ ಪ್ರಾವಿನ್ಸ್ ಕೊಡಗು ಮತ್ತು ಕೊಲ್ಹಾಪುರ ವಗೈರೆ [illegible] ವೀರಶೈವ ಮಹಾಶಯರುಗಳಿಗೆ ಸೂಚಿಸುವುದೇನೆಂದರೆ —

ಬೃಹನ್ಮಠದ ಸುತ್ತಮುತ್ತಲೂ ಇರುವ ಗಾರೇಹಟ್ಟಿ ಮೊದಲಾದ ಗ್ರಾಮಗಳಲ್ಲಿಯೂ, ದಾವಣಗೆರೆ, ಹೊಳಲ್ಕೆರೆ ಮೊದಲಾದ ಸ್ಥಳಗಳಲ್ಲಿಯೂ [illegible] ಈ ಮೂಲಕ ಪ್ರಕಟಿಸಿದೆ. ಪಿ. ಲಿಂಗಪ್ಪ ಏಜೆಂಟ್

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿನಾಂ ದಸರಾಮಹೋತ್ಸವಾಹ್ವಾನಪತ್ರಿಕಾ

ಕರ್ನಾಟಕ ಮಹಾರಾಷ್ಟ್ರ [illegible] ವೀರಶೈವ ಮಂಡಳಿಗಳ ಎಲ್ಲ ಶಿಷ್ಯರಿಗೂ ಹೆಡೂರು ೩ ಬೀರೂರ ವಾಸಿಗಳಾದ ವರ್ತಕರುಗಳ ಸೆಟ್ಟರ ಯಜಮಾನರು, ಗೌಡರು ಬುದ್ಧಿವಂತರು ಮೊದಲಾದ ವೀರಶೈವ ಮಂಡಲಿಯವರು ತಿಳಿಸಿಕೊಳ್ಳುವುದೇನೆಂದರೆ

ಇದೇ ಶುಕ್ಲಸಂವತ್ಸರದ ದಸರಾಮಹೋತ್ಸವವು ಇಲ್ಲಿಯೇ ನೆರವೇರಬೇಕೆಂಬ ನಮ್ಮಗಳ ಪ್ರಾರ್ಥನೆಯನ್ನು ಶ್ರೀ ಮಹಾಸ್ವಾಮಿಯವರು ಅಂಗೀ[illegible]

[illegible] ಬುದ್ಧಿಗೆ ಪ್ರಾರ್ಥಿಸಿ [illegible] ಶ್ರೀ [illegible] ಚನ್ನಬಸಪ್ಪ, [illegible] ಬೊಮ್ಮನ ರಂಗಪ್ಪ, [illegible] ಪಟೇಲ್ ಬಸಪ್ಪ

ಲಂಬಾಣಿ ಹಾಸ್ಟಲ್ ಅರಸೀಕೆರೆ.

ಈ ಲಂಬಾಣಿ ಹಾಸ್ಟಲಿಗೆ ಮೈಸೂರುಸಂಸ್ಥಾನದಿಂದ ಯಾವ ವಿದ್ಯಾರ್ಥಿಯಾದರೂ ಬಂದು ಸೇರಬಹುದು. ಇಂಗ್ಲೀಷು ಮಿಡಲ್ ಸ್ಕೂಲಿಗೆ 1 ನೇ ತರಗತಿಯಿಂದ [illegible] ಕನ್ನಡ ೪ ನೇ ತರಗತಿಗೆ ಸೇರತಕ್ಕವರ ಬರಬಹುದು. ಅರಸೀಕೆರೆಯಲ್ಲಿರುವ ಲಂಬಾಣಿಸಂಘದ ಸೆಕ್ರೆಟರಿ ವ್ಯಾ ಬಿ. [illegible] ರಾಘವೇಂದ್ರರಾಯರಿಗಾಗಲಿ ಮುಂಚಿತವಾಗಿಯೇ ಬರೆದುಕೊಳ್ಳಬೇಕು. ಜೆ. ಪಿ. ಕೋದಂಡರಾವ ಯ್ಯ.

ಮೈಸೂರು ಸ್ಟಾರ್ ಚಂದಾನಿರ್ಣಯು

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ ೩-೮-೦, ಲೈಬ್ರರಿ, ವಾಚನಾಲಯ, ಸೂಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ ೪-೮-೦, ವಿ. ಪಿ. ಮೂಲಕವಾದರ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮನಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯಬೇಕ್ಕದ್ದು. ತಿಳಿಸಿ ಬರೆಯದ ಒಂದ ಕಾಗದ ಕಾರ್ಡು ಮನಿಯಾರ್ಡರುಗಳಿಗೆ ಸಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ. ಮ್ಯಾನೇಜರ್

ಉತ್ತಮ ವೀರಶೈವ ಗ್ರಂಥಗಳು.

	ಕ್ರಯ			(ವಿ. ಪಿ. ಸೇರಿ)		
ವೀರಶೈವ ಸಿದ್ಧಾಂತಶಿಖಾಮಣಿ	೧	೧೨	೦	೨	೪	೦
ಪಂಡಿತಾರಾಧ್ಯಚರಿತಂ ೩ ಪ್ರತಿಕ						
ಅಗಳು ಸೇರಿದ ಪೂರ್ಣಗ್ರಂಥ	೩	೦	೦	೩	೧೨	೦
ಬಸವರಾಜವಿಜಯ	೧	೩		೧	೮	೦
ಚನ್ನಬಸವೇಶವಿಜಯ	೧	೬	೦	೧	೧೨	೦
ರೆ ರೇಣುಕಸಿದ್ಧೇಶ್ವರ ಪುರಾಣ	೦	೧೨	೦	೧	೦	೦

ಕ್ಯಾಟಲಾಗ್ ಕರಿಸಿ ನೋಡಿ
ಶ್ರೀ ವಿದ್ಯಾರ್ಕ್ ಎಚ್ ಆರ್ ಕರಿಬಸವಶಾಸ್ತ್ರೀ ಅಂಡ್ ಸನ್ಸ್
ಗ್ರಂಥಪ್ರಸಾರಕಮಂಡಲಿ ಮೈಸೂರು

ಮೈಸೂರು ಸ್ಟಾರ್ [illegible]
[illegible]

	ಕ್ರಯ			(ವಿ. ಪಿ. ಸೇರಿ)		
[illegible]	೨	೧೨	೦	೧	೩	೦
[illegible]	೦	೦	[illegible]	[illegible]	೧೨	೦
[illegible]	೦	೪	[illegible]	೦	೯	೦
[illegible]	೦	೫	೦	೦	೧೦	೦
[illegible]	೧	೪	೦	೦	೯	೦
ವೃತಪಂಚಕ	೨	೪	೦	೦	೯	೦
ಗುರುಶಂಕರೇಶ್ವರಶತಕ	೦	೧	೦	೦	೬	೦
ಬಸವೇಶ್ವರವಚನ	೦	೮	೦	೦	೧೩	೦
[illegible]	೦	೮	೦	೦	೧೩	೦
ಸತೀಶ ಶತಕತ್ರಯ	೧	೦	೦	೧	೭	೦



ಡಾಕ್ಟರ್ ಜೀ. ಬೀ. ಯವರ

ಸುಗಂಧ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕೆಂಡುಹಿಡಿಯಲ್ಪಟ್ಟ [illegible] ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ — ತಲೆ ನೋವು ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನು ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ [illegible] ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯಷ್ಟು [illegible] ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳ [illegible] ಕುಟುಂಬ ಚಿಹ್ನವಾಗಿ ಉಪಯೋಗಿಸುತ್ತಾರೆ. [illegible] ಕಳುಹಿಸಲಾಗುತ್ತದೆ.

[illegible]

ಪೀ. ಸ [illegible] ಅಂಡ್ ಕಂಪನಿ ಲಿಮಿಟೆಡ್,
ಪೋ. ಬಾ. ೨೧೧೦, ಮದ್ರಾಸು

[illegible] ಅಕ್ಟೋಬರ್ [illegible] ವರೆಗೆ ಸಲ್ಲುವ [illegible] ಶುದ್ಧ [illegible] ವರೆಗಿನ ಪಂಚಾಂಗ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಇಂಗ್ಲಿ ತಾರೀಖು
೫	ಶನಿ	ಶುದ್ಧ	೬೦-೦	ಸ್ವಾತಿ	27 38	19
6	¹ಭಾನು	ಚೌತಿ	51 50	ವಿಶಾ	30 15	20
7	ಸೋಮ	ಪಂಚ	55 2	ಅನೂ	34 30	21
8	ಮಂಗಳ	ಷಷ್ಠಿ	60-0	ಜ್ಯೇಷ್ಠ	30-40	22
9	²ಬುಧ	ಷಷ್ಠಿ	0 35	ಮೂಲ	15 43	23
10	³ಗುರು	ಸಪ್ತ	0 30	ಪೂಷಾ	52 0	24
11	ಶುಕ್ರ	ಅಷ್ಟ	9 35	ಉಷಾ	60 0	25

(1) ಮಹಾನಕ್ಷತ್ರ ಚಿತ್ತ ೪ ನೆಯ ಪಾದ (2) ಕಾಳರಾತ್ರಿ, ಪಶು ಪಾಸುಪತಸಂಪಾದಾ, ಶಾರದಾಪೂಜ (3) ಪ ಆನಕ್ಷತ್ರ ಚಿತ್ತ 1 ನೆಯಪಾದ

೧೦೦೦ ರೂಪಾಯಿ ಇನಾಮು

ಮಿರಜಿಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್. ಕಾಪಸೆ, ಇವರ

ಅಲ್ಪವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

(ರಜಿ) ವಜ್ರಾಂಗ ಸುಂದರಪಾಕ. (ಸ್ಟಾರ್

[illegible]

ಈ ಪಾಕಸೇವನೆಯಿಂದ ಎಲ್ಲ ಧಾತುಜನ್ಯ ವಿಕಾರಗಳು ಧಾತುಕ್ಷೀಣದಲ್ಲಿಯ ಉಷ್ಣತೆ ಮುಷ್ಟಿ ಮೈಥುನದಿಂದ ಬಂದ ಇಂದ್ರಿಯ ಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತುಹೋಗೋಣ, [illegible] ಮೂಲವ್ಯಾಧಿ, ಮುಖರೋಗ, ಚಳೀಜ್ವರ ಮತ್ತು [illegible] ರಸಾಯನ ಸೇವನೆಯಿಂದಾದ ದುಷ್ಪರಿಣಾಮಗಳು [illegible] ಮೇಲೆ ಆದ ಕ್ಷೀಣತೆ, ಮೊಂಡುತನ ಅಶಕ್ತತೆ, ಉರಿಮೂತ್ರ, ಕೈಕಾಲು ಉರಿಯೋಣ ಎಲ್ಲ ಪಿತ್ತವಿಕಾರಗಳು ನಿದ್ರೆಯು ಬಾರದೆ ಇರೋಣ [illegible] ಸಂತತಿ ನಷ್ಟವಾಗೋಣ, ಮೇಲಿಂದಮೇಲೆ ಗರ್ಭಪಾತವು ಎಲ್ಲ ಬಗೆಯ ರೋಗ, ಗರ್ಭಾಶಯ ವಿಕಾರದಿಂದ ಸಂತತಿ ಆಗದೆ ಇರೋಣ [illegible] ಸರ್ವರೋಗಗಳು ಹೋಗಿ ವಿಶೇಷ ಹಸಿವೆಯು ಆಗುತ್ತದೆ. [illegible] ಧಾತುವೃದ್ಧಿಯಾಗಿ ವೀರ್ಯ ಘಟ್ಟಿ ಆಗ [illegible] ಹೆಚ್ಚುತ್ತದೆ. [illegible] ಸಂತತಿ ಆಗಲಿಕ್ಕೆ ಸಹಾಯಕ ಆಗುತ್ತದೆ. ಈ ಪ್ರಕಾರ ಕಾಯಮು ಧಾತು ಪೌಷ್ಟಿಕ [illegible] ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು [illegible] ಸಿದ್ಧಮಾಡಿ ಕೊಟ್ಟವರಿಗೆ ೧೦೦೦ ರೂಪಾಯಿ ಇನಾಮು ಕೊಡುವೆವು. ಮುಂಜಾನೆಗೆ ೩ ತೊಲೆಯು ೧ ವಡಿ, ರಾತ್ರಿ ಭೋಜನಾನಂತರ ೩ ತೊಲೆಯು ಒಂದು ವಡಿಯನ್ನು ತಕೊಂಡು, ಅದರಮೇಲೆ ಸ್ವಲ್ಪ ಕಾಸಿದ ೨೦ ತೊಲ ಹಾಲ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ, [illegible] ೨೧ ದಿವಸ ಸಾಕಾಗುವಷ್ಟು [illegible] ಡಬ್ಬಿಗೆ ೧೪|| ರೂ ೩ ಡಬ್ಬಿಗೆ ೧೪| ರೂ ೬ ಡಬ್ಬಿಗೆ [illegible] ರೂ ವ್ಹಿ. ಪಿ. ಖರ್ಚು ಬೇರೆ. ೩ ಡಬ್ಬಿಗಳನ್ನು ತಕ್ಕೊಂಡರ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ — ಈ ವಿಕಾರಕ್ಕೆ ೭ ದಿವಸಗಳಲ್ಲಿ ಗುಣ [illegible] ೨೧ ದಿವಸ ಸಾಕಾಗುವಷ್ಟು ಸೀಸೆ ೧ ಕ್ಕೆ ೩ ರೂಪಾಯಿಗಳು

ಪ್ರಮೇಹ (ಪರಮಾ) — ಬೇಕಾದಂಥ ಹಳೇ ಹಾಗು ಹೊಸ ಪ್ರಮೇಹವಿದ್ದರೂ ೨೧ ತಾಸುಗಳಲ್ಲಿ ಗುಣ [illegible] ೩ ದಿವಸ ಸಾಕಾಗುವಷ್ಟು ಸೀಸೆ ೧ ಕ್ಕೆ ೪ ರೂಪಾಯಿಗಳು

ಪಿನಸಿ — ಮೂಗಿನೊಳಗಿನ ಗಂಟಾಕಿ ಹುಕ್ಕು, ರಕ್ತ ಕೀವು, ಹುಣ್ಣು, ದುರ್ಗಂಧ, ಕ್ರಿಮಿ, ಶಾಕಣವರದರೋಗ, ದಟ್ಟಸೋಣ ಇವೇ ಎಲ್ಲ ವಿಕಾರಗಳಿಗೆ ೭ ದಿವಸಗಳಲ್ಲಿ ಗುಣ. ೨೧ ದಿವಸ ಸಾಕಾಗುವಷ್ಟು ಸೀಸೆ ಗಕ್ಕೆ [illegible] ರೂಪಾಯಿಗಳು ಪೂರ್ಣಗುಣವಾಗಲಿಕ್ಕೆ ೩ ಸೀಸೆಗಳು

[50—0] ಪತ್ತೆ: — ಮಾಲಕ ವೈದ್ಯ ವ್ಹಿ. ಎಸ್. ಕಾಪಸೆ ಮು. ಪೋ. ಮಿರಜಿ.

ಮೈಸೂರು ಮೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REG. NO. M 124

ಮೈಸೂರ್ ಸ್ಟಾರ್

ಪ್ರತಿ ಶನಿವಾರ ಪ್ರಕಟಿಸಲ್ಪಡುವದು.

[illegible]

[ಸ್ಥಳದವರಿಗೆ ವಾರ್ಷಿಕ ಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರರಿಗೆ ೩-೮-೦]

ಸಂಪುಟ ೪೨] ಮೈಸೂರು ಸ್ಟಾರ್ ಸೆ ೧೯೨೯ ನೆಯ ಇಸವಿ ಅಕ್ಟೋಬರ್ ತಾರೀಖು ೧೨ ನೆಯ ಶನಿವಾರ [ಸಂಚಿಕೆ ೪೧

೧೦೦೦ ರೂಪಾಯಿ ಇನಾಮು

ಮಿರಜಿಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್. ಕಾಪಸೆ, ಇವರ

ಅಲ್ಪವಯಸ್ಸಿನವರಿಗೆ - ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ (ರಜಿಸ್ಟರ್ಡ) ವಜ್ರಾಂಗಸುಂದರಪಾಕ.

ಧಿಕ್ಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ

ಈ ಪಾಕಸೇವನೆಯಿಂದ ಎಲ್ಲ ಧಾತುಜನ್ಯ ವಿಕಾರಗಳು, ಧಾತುಕೋಶದಲ್ಲಿಯ ಉಷ್ಣತೆ, ಮುಷ್ಟಿ ಮೈಥುನದಿಂದುಂಟಾದ ಇಂದ್ರಿಯ ಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತುಹೋಗೋದು, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋದು, ವೀರ್ಯಪುಷ್ಟಿಯಿಲ್ಲದರಿಂದುಂಟಾದ ರೋಗಗಳು, ಸಂತತಿಯಿಲ್ಲದಿರೋದು, ನಡನೋವು, ಸಂದುನೋವು, ಎದೆನೋವು, ಹಾರ್ಟ ಸಿಂಧು, ಜೀರ್ಣಜ್ವರ, ಮೂಲವ್ಯಾಧಿ, ಮಧುಮೇಹ, ಹಳೇಪರಮಾ ಮತ್ತು ಗರ್ಮಿ, ರಸಾಯನ ಸೇವನೆಯಿಂದಾದ ದುಷ್ಟ ವಿಕಾರಗಳು, ಯಾವದೇ ತರದ ಜ್ವರದಿಂದ ಎದ್ದಮೇಲೆ ಆದ ಕ್ಷೀಣತೆ, ಮೆದುಳಿನ ಅಶಕ್ತತೆ, ಆಲಸ್ಯ, ಕೈಕಾಲು ಉರಿಯೋದು, ಎಲ್ಲ ಶಿರೋವಿಕಾರಗಳು, ನಿದ್ರೆಯು ಬಾರದೆ ಇರೋದು, ಸ್ತ್ರೀಯರಿಗೆ ಸಂತತಿ ನಷ್ಟವಾಗೋದು, ಮೇಲಿಂದಮೇಲೆ ಗರ್ಭಪಾತವು, ಎಲ್ಲ ಬಗ್ಗದ ಶರೀರ, ಗರ್ಭಾಶಯದ ವಿಕಾರದಿಂದ ಸಂತತಿ ಆಗದೆ ಇರೋದು, ಮುಂತಾದ ವೃದ್ಧ ಸ್ತ್ರೀಪುರುಷರ ಸರ್ವರೋಗಗಳು ಹೋಗಿ ವಿಶೇಷ ಹಸಿವೆಯು ಆಗುತ್ತದೆ. [illegible] ಸಾಹಜವಾಗಿ ಧಾತುವೃದ್ಧಿಯಾಗಿ ವೀರ್ಯ ಘಟ್ಟ ಆಗುವದಲ್ಲದೆ ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಹಾಯವಾಗುತ್ತದೆ. ಈ ಪ್ರಕಾರ ಕಾಯಮ ಧಾತುಪೌಷ್ಟಿಕವಾದ್ದರಿಂದ ಮತ್ತು ಜಿದ್ದಿನ ಪಾಕವನ್ನು ಈ ಯುಕ್ತಿನವರೆಗೆ ಯಾರೂ ಮಾಡಿಲ್ಲ. [illegible] ಅನುಭವಿಸಿ ಈ ಪಾಕದಲ್ಲಿ ಬಹು ಪ್ರಯಾಸದಿಂದ ಸಂಪಾದಿಸಿದ [illegible] ವನಸ್ಪತಿ [illegible] ಜನ್ಮಗಳ ಹೆಸರು [illegible] [illegible] ಶ್ರೇಷ್ಠರೆಂದ [illegible] ಧನ್ವಂತರಿ [illegible] ದಯಾಳು [illegible] ಈ ಜನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂಬುದು ಮತ್ತು [illegible] ಸಿದ್ಧಮಾಡಿ ಕೊಟ್ಟವರಿಗೆ ೧೦೦೦ ರೂಪಾಯಿ ಇನಾಮು. ತೊಡುವ ಕ್ರಮ ಮುಂಜಾನೆಗೆ ೨ ತೊಲೆಯ ೧ ವಡಿ, ರಾತ್ರಿ ಭೋಜನಾನಂತರ ೨ ತೊಲೆಯ ಒಂದು ವಡಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ ೨೦ ತೊಲ ಹಾಲು ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ, ಸ್ತ್ರೀವರ್ಜ್ಯವಿಲ್ಲ, ೨೧ ದಿವಸ ಸಾಕಾಗುವಷ್ಟು ಈ ಪಾಕದ ೮೪ ತೊಲಿ ಡಬ್ಬಿಗೆ ೫ ರೂ ೩ ಡಬ್ಬಿಗೆ ೧೪ ರೂ ೬ ಡಬ್ಬಿಗೆ ೨೭ ರೂ ವ್ಹಿ. ಪಿ ಖರ್ಚು ಬೇರೆ. ೩ ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವುದು

ಕೇವಲ ಸ್ವಪ್ನಾವಸ್ಥೆ — ಈ ವಿಕಾರಕ್ಕೆ ೭ ದಿವಸಗಳಲ್ಲಿ ಗುಣ ೨೧ ದಿವಸ ಸಾಕಾಗುವಷ್ಟು ಸೀಸೆ ೧ ಕ್ಕೆ ೩ ರೂಪಾಯಿಗಳು

ಪ್ರಮೇಹ (ಪರಮಾ) — ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ ೨೪ ತಾಸುಗಳಲ್ಲಿ ಗುಣ ೫ ದಿವಸ ಸಾಕಾಗುವಷ್ಟು ಸೀಸೆ ೧ ಕ್ಕೆ ೪ ರೂಪಾಯಿಗಳು.

ಪಿನಸ — ಮೂಗಿನೊಳಗಿನ ಗಂಟಾಳ ಬಿಕ್ಕು, ರಕ್ತ, ಕೀವು, ಹುಣ್ಣು, ದುರ್ಗಂಧ, ಕ್ರಿಮಿ ನಾಶವಾದದಿರೋದು, [illegible] ಇವೇ ಎಲ್ಲ ವಿಕಾರಗಳಿಗೆ ೭ ದಿವಸಗಳಲ್ಲಿ ಗುಣ ೨೧ ದಿವಸ ಸಾಕಾಗುವಷ್ಟು ಸೀಸೆ ೧ಕ್ಕೆ [illegible] ೩ ರೂಪಾಯಿಗಳು ಪೂರ್ಣಗುಣವಾಗಲಿಕ್ಕೆ ೨ ಸೀಸೆಗಳು

[60—10] ಪತ್ತೆ :— ಮಾಲಕ ವೈದ್ಯ ವ್ಹಿ. ಎಸ್. ಕಾಪಸೆ ಮು. ಪೋ. ಮಿರಜ.

ಎಂ. ಎಸ್. ಶಿದ್ದಪ್ಪ ಅಂಡ ಬ್ರದರ್ಸ್.

[60—38] ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.



[illegible] ಆಕ್ಸಿಸ್ಟರ್ [illegible]

"ಶಿದ್ದಪ್ಪಾಸ್ ಮಾಡಲ್ ಬಿಲ್ಟ್"

ಹಾರ್ಮೋನಿಯಂ [illegible]

ಇದರ ಕ್ರಯ 1 ಕ್ಕೆ 50 — 0 — 0 ಮಾತ್ರ

ಛಾಪು [illegible] 1 ಕ್ಕೆ [illegible] 8 — 0

ಅಪೇಕ್ಷಿಸುವವರಿಗೆ ಸಚಿತ್ರಕ್ಯಾಟಲಾಗನ್ನು ಸಂತೋಷದಿಂದ ಕಳುಹಿಸುತ್ತೇವೆ

ವಿಳಾಸ — ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಉತ್ತಮವೀರಶೈವ ಗ್ರಂಥಗಳು

	ಕ್ರಯ.	(ವಿ. ಪಿ. ಸೇರಿ)
ವೀರಶೈವ ಸಿದ್ಧಾಂತಶಿಖಾಮಣಿ	೧—೧೨—೦	೨—೪—೦
ಪಂಡಿತಾರಾಧ್ಯಚರಿತ್ರೆ ೫ ಪ್ರತಿ		
ಇಗಳು ಸೇರಿದ ಪೂರ್ಣಗ್ರಂಥ	೫—೦—೦	೫—೧೨—೦
ಬಸವರಾಜವಿಜಯ	೧—೨—೦	೧—೮—೦
ಚನ್ನಬಸವೇಶವಿಜಯ	೧—೬—೦	೧—೧೨—೦
ರೇವಣಸಿದ್ಧೇಶ್ವರ ಪುರಾಣ	೦—೧೨—೦	೧—೨—೦

ಕ್ಯಾಟ್ಲಾಗ್ ತರಿಸಿ ನೋಡಿ.

ಆರ್. ವಿದ್ವಾನ್, ಎಚ್. ಆರ್. ಕರಿಬಸವಶಾಸ್ತ್ರಿ, ಅಂಡ್ ಸನ್ಸ್.

ಗ್ರಂಥಪ್ರಸಾರಕಮಂಡಲಿ, ಮೈಸೂರು.

ನೋಟೀಸು

[2—1] [50—6]

1930 ನೆಯ ಸಾಲಿಗೆ ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಗೆ ಬೇಕಾಗುವ ಆಹಾರ ಸಾಮಾಗ್ರಿಗಳಿಗಾಗಿ ಟೆಂಡರ್ ಮಾಡಿದ ಟೆಂಡರುಗಳು 1929 ನೆಯ ಇಸವಿ ನವಂಬರ್ 6 ನೆಯ ತಾರೀಖಿನ ದಿವಸ ಆಸ್ಪತ್ರೆಯ ಮುಖ್ಯ ಅಧಿಕಾರಿಯವರಿಂದ ತೆಗೆದುಕೊಳ್ಳಲ್ಪಡುತ್ತವೆ. ವಿಶೇಷಸಂಗತಿಗಳಿಗೆ 1929 ನೆಯ ಇಸವಿ ಸೆಪ್ಟೆಂಬರ್ 26 ನೇ ತಾರೀಖಿನ ಮೈಸೂರು ಗೆಜೆಟ್ 1 ನೆಯ ಭಾಗದ 1046-49 ನೆಯ ಪುಟಗಳನ್ನು ನೋಡತಕ್ಕದ್ದು.

MEDICAL OFFICER,
Krishnarajendra Hospital
MYSORE.

ಪ್ರಕಟನೆ.

ನಮ್ಮಲ್ಲಿ ಸಿನೇಮಕ್ಕೆ ಸಂಬಂಧಪಟ್ಟ ಖ್ಯಾತ ಕಂಪನಿಯ ಪ್ರೊಜೆಕ್ಟರ್ ಮಷಿನ್ ಆರ್ಕ್‌ಲ್ಯಾಂಪು, ಡೈನಮೋ, ಎಲೆಕ್ಟ್ರಿಕಲ್ ಫಿಟಿಂಗ್ಸು ವಗೈರೆ ಎಲ್ಲಾ ಸಾಮಾನುಗಳೂ, ಕೆಲವು ಫಿಲಂಗಳೂ ಇವೆ. ಮಾರಿದಾಗ ದೊರೆಯುತ್ತವೆ ಎಲ್ಲಾ ಸಾಮಾನುಗಳ ನಷ್ಟ [illegible] ಇರುವುದರಿಂದ ಈ ದಿವಸವೇ ಸಿನೇಮ ನಡಿಸಬಹುದು. ಈ ಸಾಮಾನುಗಳು ನೋಡಿ ತಿಮ್ಮತ್ತಿನಲ್ಲಿ ಸಿಗುತ್ತವೆಯಾದ್ದರಿಂದ ಈ ಸಮಯವನ್ನು ಕಳೆಯದೆ ತೆಕ್ಕಬಾರದಾಗಿ ಕೋರಿಕೆ

[12—6]

Siddaradhya
Firukappanavara mutt
Davangere.

ವೀರಶೈವಮತಗ್ರಂಥಗಳು.

ಶಿವಾಧಿಕ್ಯಶಿಖಾಮಣಿಃ.

ಪ್ರತಿ ೧ ಕ್ಕೆ ಬೆಲೆ ೧—೦—೦

ಇದು ಚೋಳದೇಶದಲ್ಲಿ ಶ್ರೀಮದ್ರೇಣುಕಾಚಾರ್ಯರಿಗೂ, ವೈಷ್ಣವ ಮತಸ್ಥನಾದ ವಿಜಯೀಂದ್ರತೀರ್ಥರಿಗೂ ನಡೆದ ಪ್ರತಿಸ್ಪರ್ಧೆ ರೂಪವಾಗಿದೆ. ಇದರಲ್ಲಿ ಶಿವೋತ್ಕರ್ಷ, ಲಿಂಗಧಾರಣ, ಅಸ್ಪೃಶ್ಯತಾ, ಊರ್ಧ್ವಪುಂಡ್ರಧಾರಣ, ವಿಷ್ಣುವಶಾರಸಂಹಾರ, ಶಂಖ ಚಕ್ರ ಮುದ್ರಾಧಾರಣ ವಿಷಯ, ಪ್ರದೋಷಕಾಲದಲ್ಲಿ ವಿಷ್ಣುದರ್ಶನಾಧಿಕ್ಯವೇ ಮೊದಲಾದ ಅಸಾಧಾರಣಗಳಾದ ನೂರು ವಿಷಯಗಳು ಸಪ್ರಮಾಣವಾಗಿ ಬೋಧಿಸಲ್ಪಟ್ಟಿವೆ. ಈ ಗ್ರಂಥಕ್ಕೆ ಸರ್ವರಿಗೂ ತಿಳಿಯುವಂತೆ ಸುಲಭಶೈಲಿಯಿಂದ ಕನ್ನಡ ಟೀಕೆಯನ್ನು ಬರೆದಿದ್ದೇವೆ. ಇದನ್ನು ವೀರಶೈವರು ಅವಶ್ಯವಾಗಿ ನೋಡಬೇಕಾಗಿದೆ.

ನ್ಯಾಯಶತಕಂ — ಇದರ ಪ್ರತಿಯೊಂದು ಶ್ಲೋಕದಲ್ಲೂ [illegible] ಕಾಕತಾಳ ಮೊದಲಾದ ಒಂದೊಂದು ನ್ಯಾಯವನ್ನು [illegible] ವಿದ್ವಜ್ಜನರಿಗೆ ಆನಂದವನ್ನುಂಟುಮಾಡುವಂತೆ ಶಿವಾಧಿಕ್ಯವು ವರ್ಣಿಸಲ್ಪಟ್ಟಿದೆ. ವಿದ್ಯಾರ್ಥಿಗಳಿಗೆ ಅತ್ಯುತ್ತಮವಾಗಿದೆ. ಬೆಲೆ ೦-೩-೦.

ವಿ. ಪಿ. ಖರ್ಚು ಪ್ರತ್ಯೇಕ.

ಶ್ರೀ ಸೋಮಶೇಖರಸ್ವಾಮಿಗಳು,
ನವುಲ್ಕಿ ನಾಯಮರ,

[12—3] ಬಸಪ್ಪಾಜಿ ಗಾರ್ಡನ್, ಮೈಸೂರು.

"ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತರ" ಆಯುರ್ವೇದೀಯ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರೀ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿದಿನವೂ ತಾಂಬೂಲದೊಂದಿಗಾಗಲಿ, ಜಾಗೇಯನಾಗಲೀ ಉಪಯೋಗಿಸುತ್ತಿದ್ದರೆ ಆಹಾರ, ನೀರು ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ,

ಮಕ್ಕಳ ಮೊದಲು ಮುದುಕರವರೆಗೂ, ಶೀತ, ನೆಗಡಿ, ಕೆಮ್ಮು, ಜ್ವರ, ಶೀತವಾತಜ್ವರ, ಚಳಿಜ್ವರ ಮೊದಲಾದ ಅನೇಕ ರೋಗಗಳನ್ನು ಗುಣಪಡಿಸುತ್ತವೆ

300 ಮಾತ್ರೆಗಳುಳ್ಳ ಸೀಸೆ 1ಕ್ಕೆ 4 ಆಣೆ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ನಮ್ಮ [illegible] ಲೋಕಾಮಯಹರ ಕಸ್ತೂರೀ ಮಾತ್ರೆ ಎಂಬ ಹೆಸರನ್ನು ನೋಡಿ ಕೊಂಡುಕೊಳ್ಳಿರಿ.

ಮೈಶಾತ್ಯವಿದಾಸವ.

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ.)

ಮುಕ್ಕಿನ [illegible] ಹೊಟ್ಟೆಯುಬ್ಬರವುಗಳ, ವಾಂತಿ [illegible] ರೋಗವನ್ನು ಸ್ವಾಧೀನಕ್ಕೆ ತರುತ್ತದೆ ಸೀಸೆ 1ಕ್ಕೆ ರೂ. 1—0—0

ಲಕ್ಷ್ಮೀವಿಲಾಸರಸ.

(ಪ್ಲೇಗಿಗೆ)

ಹತ್ತಾರು ವರ್ಷಗಳಿಂದ ಪ್ರತಿವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ನಿಲ್ಲಿಸುವುದಾಗಿ ಗುಣಪಡಿಸಿರುತ್ತದೆ. ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿಪಾತಜ್ವರಗಳಿಗೂ ಅತ್ಯುತ್ತಮವಾಗಿರುತ್ತದೆ ಸೀಸೆಯ ಬೆಲೆ 1ಕ್ಕೆ ರೂ. 1—0—0

ಶ್ರೀನಿವಾಸತೈಲ.

ಪ್ಲೇಗು ರೋಗಿಯ ಪ್ರತಿ ಗಂಟುಗಳಿಗೂ, ಗೆಡ್ಡೆಗಳಿಗೂ ತಕ್ಷಣ ಔಷಧ ಸೀಸೆ 1ಕ್ಕೆ ರೂ. 0—8—0.

ಭಿಷಗ್ರತ್ನ

ಶ್ರೀ ನಾರಾಯಣಸ್ವಾಮಿ ವೈದ್ಯಶಾಲಾ,	ಪಾಳ್ಯದ ವೆಂಕಟಾಚಲಪಂಡಿತರ
ಪ್ರೊಪ್ರೈಟರು	ಶ್ರೀ ನಾರಾಯಣಸ್ವಾಮಿ ವೈದ್ಯಶಾಲಾ,
ಚಿಕ್ಕಪೇಟೆ, ಬೆಂಗಳೂರು ಸಿಟಿ	ದೊಡ್ಡಪೇಟೆ ಮೈಸೂರು.

ಮೈಸೂರು ಸ್ಟಾರ್

ಅಕ್ಟೋಬರ್ ೧೨ ರ ಶನಿವಾರ

MYSORE NON-BRAHMIN CONFERENCE.

AN UNQUALIFIED SUCCESS

The First Mysore Non-Brahmin Conference which concluded its three days' session today is in our opinion an epoch making one and has gone a considerable way in rallying the ranks of the Mysore Non-brahmins, some of whom had begun to grow a little luke warm of late. It has definitely taken a stand that monopolies should go and that the Non-brahmins should be able to effectively participate in administration by getting adequate representation for all the various communities in the different departments of Public service. The Conference met on the 10th afternoon at 3-30 in the spacious and beautifully decorated Rangacharlu Memorial Hall. There was an unprecedented gathering of delegates and the *elite* of the State Officers and Non-officials were present including two members of the Executive Council. The welcome address of the Chairman of the Reception Committee Rao Sahib H. Chennayya and the Presidential address of Mr. A. Ramaswamy Mudaliar were both magnificent expositions of the Non-brahmin ideals and position. The Chairman who has been in the movement from its very inception in Mysore after paying glowing tributes to the memories of the departed leaders Messrs M. Basaviah, M. Subbiah, Sir M. Kantaraj Urs, S. A. Jivaratnya, Mushir-ul-Mulk Mir Humza Hussein, Hutchaveere Gowda, Sahukar Kabbally Channabasappa, Natkallappa, Sulebele Shamanna, N. R. Karibasava Sastry and to the memory of the great statesman the Raja of Panagal traced the history and the achievements of the Prajamitra Mandali founded by the late Mr. M. Basaviah. He then spoke of the need for a movement like this as arising from the monopolistic tendencies of one community which arrogated to itself all knowledge and latterly of political power—a movement born to do away with the social tyrannies and obstacles to progress and to elevate the masses in the land. He gave an effective answer to the usual criticism that this movement is a job-hunting movement and said that the jobs were only a means to an end. The movement he said was a social revolt against the fossilised India of Manu. The idea that only one class is intellectually fit to bring us religious salvation and be our masters in the political world is too antedeluvian and has been sufficiently exploded. Further he says "we refuse to hold down our head in sumtuous adoration of self-constituted human gods." The Chairman while welcoming more adherents to the cause regretted the want of concentrated action, and want of party discipline. He wanted that only tried men should be entrusted with responsible work and that men sitting on hedges should not be encouraged. "Nothing is easier" he said "than to do things wrongly or to undo things. But to do things rightly, correctly and well does require culture and training." He pleaded for Hindu-Muslim unity and the removal of untouchability. As regards the constitutional question he said the problem in Mysore was different from the position in British India. We had no foreign rule in Mysore. The ruler he said was besides a most sagacious and high-souled Sovereign and there was never any hostility between Mysore Durbar and the constitutional reform. He did not want any undue haste in discussing the question. He also was glad to notice that the demand of the Non-Brahmins had not arisen from any dissatisfaction with the present administration and that Mr. Mirza's regime as *Dewan* had an excellent record of achievements to its credit. He expected the same justice from Brahmins as they along with other leaders claimed at the hands of the Britishers. He gave a handsome compliment to the President elect whom he characterised as a people's man and a hero. The President delivered a most thrilling address which was listened to with the deepest attention with frequent applauses. The address will be reviewed in our next, as we think, we cannot do justice to it in the limited space available here.

ಬ್ರಾಹ್ಮಣೇತರರ ಮಹಾಸಭೆ

ಕಳೆದ ತಾ|| ೧೦ ನೆಯ ಗುರುವಾರ ಮಧ್ಯಾಹ್ನ ೩ ಗಂಟೆಗೆ ಸ್ಥಳೀಕರಿಗೆ ಅಲ್ಲದೆ ಸ್ಥಳಾಂತರದವರಿಗೂ ನೋಡಲು ಅತ್ಯಂತ ಮನೋಹರವಾಗಿ ಅಲಂಕರಿಸಲ್ಪಟ್ಟಿದ್ದ ರಂಗಾಚಾರ್ಲು ಮೆಮೋರಿಯಲ್ ಹಾಲಿನಲ್ಲಿ ಮದ್ರಾಸಿನ ಪ್ರಖ್ಯಾತ ಬ್ರಾಹ್ಮಣೇತರ ಪ್ರೆಸಿಡೆಂಟರಾದ ಮಿ|| ಎ ರಾಮಸ್ವಾಮಿ ಮೊದಲಿಯಾರ್‌ರವರ ಅಧ್ಯಕ್ಷತೆಯಲ್ಲಿ ಆರಂಭಗೊಂಡ ಮೈಸೂರು ಪ್ರಥಮ ಬ್ರಾಹ್ಮಣೇತರರ ಮಹಾಸಭೆಯು ನಿನ್ನೆ ಸಾಯಂಕಾಲ ೭ ಗಂಟೆಗೆ ಜಯಪ್ರದವಾಗಿ ಪರಿಸಮಾಪ್ತಿಗೊಂಡಿತೆಂದು ತಿಳಿಸಲು ಪರಮಾನಂದವಾಗುತ್ತದೆ. ಈ ಮಹಾಸಭಾರಂಭದ ದಿನ ಎರಡು ಮೂರನೇ ಕೌನ್ಸಿಲರುಗಳು, ರಾಜಸಭಾಭೂಷಣ ದಿವಾನ್ ಬಹದ್ದೂರ್ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರು, ವಿದ್ಯಾಭ್ಯಾಸ ಮತ್ತು ವೈದ್ಯಶಾಖೆಗಳ ಅಧಿಕಾರಿಗಳು, ಶಿವಮೊಗ್ಗ ಡೆಪ್ಯುಟಿ ಕಮಿಷನರು, ಮಿ|| ಎಂ ಬಾಳಿರಾಜ ಅರಸಿನವರು ಇನ್ನೂ ಅನೇಕ ಅಧಿಕಾರಿಗಳು ದಯಮಾಡಿಸಿದ್ದರಲ್ಲದೆ ನೂರಾರುಮಂದಿ ಪ್ರತಿನಿಧಿಗಳೂ ಪ್ರೇಕ್ಷಕರುಗಳೂ ಬಂದಿದ್ದರು. ಸ್ವಾಗತಮಂಡಲಿಯ ಅಧ್ಯಕ್ಷರಾದ ರಾವ್‌ಸಾಹೇಬ್ ಎಚ್ ಚೆನ್ನಯ್ಯನವರು ಮತ್ತು ಅಧ್ಯಕ್ಷ ಮಹಾಶಯರಾದ ಮಿ|| ರಾಮಸ್ವಾಮಿಮೊದಲಿಯಾರರು ಮಾಡಿದ ಭಾಷಣಗಳು ವಿಚಾರ ಪರಿಪೂರ್ಣತೆಯೂ ಬೋಧಪರವೂ ಆಗಿರುತ್ತವಲ್ಲದೆ ಹಿಂದುಳಿದವರ ಧ್ಯೇಯವನ್ನೂ ಆಕಾಂಕ್ಷೆಯನ್ನೂ ಚೆನ್ನಾಗಿ ವಿಮರ್ಶಿಸಿರುತ್ತವೆ. ರಾವ್‌ಸಾಹೇಬರು ನಮ್ಮ ಹಿಂದುಳಿದ ವರ್ಗದವರ ಮುಂದಾಳುಗಳಾಗಿದ್ದು ಗತಿಸಿದ ಎಂ ಬಸವಯ್ಯನವರು, ಸರ್ ಎಂ ಕಾಂತರಾಜ ಅರಸಿನವರು, ಎಸ್ ಜೀವರಯ್ಯನವರು, ಮಿರ್ ಹಂಸಾಹುಸೇನರವರು, ಹುಚ್ಚೀರೇಗೌಡರು, ಕಬ್ಬಳ್ಳಿ ಚನ್ನಬಸಪ್ಪನವರು, ರಾ|| ಸಾ|| ನಟ್ಕಳ್ಳಪ್ಪನವರು, ಸೂಲಬೆಲೆ ಶ್ಯಾಮಣ್ಣನವರು, ಎನ್ ಆರ್ ಕರಿಬಸವಶಾಸ್ತ್ರಿಗಳು, ಮದ್ರಾಸಿನ ಪನಗಲ್ ರಾಜರವರು ಇವರುಗಳ ಉಪಕಾರವನ್ನು ಸ್ಮರಿಸಿದಮೇಲೆ ಬಸವಯ್ಯನವರಿಂದ ಸ್ಥಾಪಿತವಾದ ಪ್ರಜಾಮಿತ್ರಮಂಡಲಿಯ ಧ್ಯೇಯ ಮತ್ತು ಅದರಿಂದಾಗಿರುವ ಪ್ರಯೋಜನಾದಿಗಳನ್ನೂ, ಒಂದೇವರ್ಗದವರು ಜ್ಞಾನಪ್ರಧಾನರಾದ ಏಕ್ಕೆಯನ್ನೂ, ಸರ್ಕಾರಿಯುದ್ಯೋಗವನ್ನೂ ತಮ್ಮ ಸ್ವಂತ ಪಾಲಾಗಿಟ್ಟುಕೊಂಡಿರುವುದನ್ನು ತಪ್ಪಿಸಿ ಸರ್ವರೂ ಜ್ಞಾನಾರ್ಜನೆಯನ್ನೂ ಸರ್ಕಾರಿಯುದ್ಯೋಗವನ್ನೂ, ಸಮಾಜದಲ್ಲಿ ಉಚ್ಚನೀಚಭಾವವಿಲ್ಲದೆ ಸಮಸಮಾನತ್ವವನ್ನೂ ಹೊಂದುವ ಪ್ರಯತ್ನವನ್ನು ಮಾಡುವುದರ ಆವಶ್ಯಕತೆಯನ್ನೂ ಇತರ ಉಪಯುಕ್ತ ವಿಚಾರಗಳನ್ನೂ ಚೆನ್ನಾಗಿ ಪ್ರತಿಪಾದಿಸಿರುವರು. ಇವರ ಭಾಷಣದ ಕನ್ನಡ ಪರಿವರ್ತನವು ಈ ಪತ್ರಿಕೆಯ ಮೇರೆಕಡೆ ಪ್ರಕಟಿಸಲ್ಪಟ್ಟಿದೆ. ಸಭಾಧ್ಯಕ್ಷರ ಭಾಷಣವು ದೀರ್ಘವಾಗಿರುವುದರಿಂದ ಅದರ ವಿಮರ್ಶಾವಲೋಕನವು ಮತ್ತೊಂದುವೇಳೆ ಮಾಡಲ್ಪಡುವುದು.

ನವರಾತ್ರಿಯುತ್ಸವ ಸಮಾಪ್ತಿ

ಕಳೆದ ತಾ|| ೩ ನೆಯ ಗುರುವಾರ ಉತ್ಸವ ಪ್ರಾರಂಭವಾದಂದಿನಿಂದ ಪ್ರತಿ ಸಾಯಂಕಾಲ 7 ಗಂಟೆಗೆ ಶ್ರೀಮನ್ಮಹಾರಾಜರವರು ದಿವ್ಯವಸ್ತ್ರಾಭರಣ ಭೂಷಿತರಾಗಿ ಸಿಂಹಾಸನಾರೋಹಣ ಮಾಡಿ ಕಳಭಾಗದಲ್ಲಿ ನಡೆಯುವ ಕುಸ್ತಿಗಳನ್ನೂ ಕಲ್ಪವಟಾ ನರ್ತನಗಳನ್ನೂ ವಿಧವಿಧವಾಗಿ ಪಂಜನ್ನು ತಿರುಗಿಸುವುದನ್ನೂ ಪರಾಂಬರಿಸುವುದಲ್ಲದೆ ಇಂಗ್ಲಿಷು ಕನ್ನಡ ವಾದ್ಯಗಾರರು ಕ್ರಮವಾಗಿ ಮನೋಹರವಾಗಿ ನುಡಿಸುವ ವಾದ್ಯಗಳನ್ನೂ ಸ್ಥಳವರ್ಣಿಸಿದ ಸಂಗೀತವನ್ನೂ ಕೇಳುತ್ತಿದ್ದರು. ತರುವಾಯ ನಾಡಿನ ಗಣ್ಯರಿಂದ ಉಡುಗೊರೆಯ ನಜರನ್ನೂ ಅಂಗೀಕರಿಸುತ್ತ ಪಟ್ಟದಾನೆ ಕುದುರೆಗಳು ಕರೆತರಲ್ಪಟ್ಟು ಅರಮನೆಗೆ ಹಿಂತಿರುಗಿದಮೇಲೆ ಸಕಲ ಮರ್ಯಾದೆಗಳನ್ನು ಕೈಕೊಂಡು ರಾತ್ರಿ ೩-೪ ಗಂಟೆಯ ಹೊತ್ತಿನವರೆಗೆ ದರ್ಬಾರ್ ನಡೆಸುತ್ತಿದ್ದರು. ಈ ಪ್ರಕಾರವಾಗಿ ನೆನ್ನೆಯವರೆಗೆ ನಡೆದು ಈ ದಿವಸ ಸಾಯಂಕಾಲ ಜಂಬೂಸವಾರಿಯಿಂದ ಉತ್ಸವ ಮುಕ್ತಾಯವಾಗುವುದು. ಈ ದಿವಸ ಬೆಳಿಗ್ಗೆ ಪಟ್ಟದಾನೆ ಕುದುರೆಗಳೂ ಪಟ್ಟದಕತ್ತಿಯೂ ಸಕಲ ರಾಜಮರ್ಯಾದೆಯೊಡನೆ ಕರೆದು ತಂದು ವಿಜಯಮಾಡಿ ಪೂಜೆಗೊಂಡು ರಾತ್ರಿ ಯಥಾಪ್ರಕಾರ ದರ್ಬಾರು ಮುಗಿಸಿದರು. ನಾಳೆಯ ದಿವಸ ಬೆಳಿಗ್ಗೆ ೬ ಗಂಟೆಗೆ ಪಟ್ಟದಾನೆ ಕುದುರೆಗಳೂ, ಪಟ್ಟದಕತ್ತಿಯ ಪೂಜೆ ನೆರವೇರಿದ ಮೇಲೆ ಶಮಿಪೂಜೆಗಾಗಿ ಹೊರಡುವುದು. ಮನೋರಂಜನೆಯಿಂದ ಎನ್ನಿಸಿಕೊಳ್ಳುವ ಮೂರನೆಯ ದಿನ ಸಾಯಂಕಾಲ ೪ ಗಂಟೆಗೆ ಶ್ರೀಮನ್ಮಹಾರಾಜರವರು ಅನೇಕ ವಸ್ತ್ರಾಭರಣಾಲಂಕೃತರಾಗಿ ಆನೆಯಮೇಲಿನ ಅಂಬಾರಿಯಲ್ಲಿ ಮಂಡಿಸಿ ಸಕಲ ಬಿರುದಾವಳಿಗಳಿಂದಲೂ ಚತುರಂಗ ಸೈನ್ಯದೊಡನೆ, ಜಂಬೂಸವಾರಿ ಚಿತ್ತೈಸುವರು. ಅರಮನೆಯ ಮುಂಭಾಗದ ಬೈಲಿನಲ್ಲಿ ಶ್ರೀ ತ್ರಿನಯನೇಶ್ವರಸ್ವಾಮಿಯ ದೇವಸ್ಥಾನಕ್ಕೆ ಸ್ವಲ್ಪ ಗೋಪುರವೂ, ದೇವಸ್ಥಾನದ ದಕ್ಷಿಣಭಾಗಕ್ಕೆ ಕೋಟೆ ದೂರದಲ್ಲಿ ಒಂದು ಕೃತಕ ದೇವಾಲಯವು ತಾತ್ಕಾಲಿಕವಾಗಿ ಕಟ್ಟಿಯಿಂದ ನಿರ್ಮಿಸಲ್ಪಟ್ಟಿವೆ. ಇವೆರಡರ ಮಧ್ಯೆ ಹಾಕುತ್ತಿದ್ದ ನಗರಪಾಲಕೆಯ ಚಪ್ಪರವು ಈ ವೇಳೆ ತಪ್ಪಿಸಲ್ಪಟ್ಟು ವಿದ್ಯುದ್ದೀಪಾವಳಿಯು ಕಮಾನುಗಳು ಹಾಕಲ್ಪಟ್ಟಿರುತ್ತವೆ. ಅರಮನೆಯ ಸಭಾಂಗಣವೂ, ಮುಂಭಾಗವೂ, ದೇವಸ್ಥಾನಗಳೂ, ಕೋಟೆಯ ಉತ್ತರ ದಕ್ಷಿಣ ದ್ವಾರಗಳೂ ಸಹಸ್ರಾರು ವಿದ್ಯುದ್ದೀಪಗಳಿಂದ ಅಲಂಕರಿಸಲ್ಪಟ್ಟಿರುತ್ತವಲ್ಲದೆ ಅರಮನೆಯ ಮುಂಭಾಗದ ಬೈಲಿನಲ್ಲಿ ಮಹಾ ಪ್ರಕಾಶ

ಮಾನವಾದ ವಿದ್ಯುದ್ದೀಪಗಳು ನಡಿಸಲ್ಪಟ್ಟು ಎಲ್ಲರಿಗೆ ಗಡಗಳ ಕೆಂಪ ಕಣ್ಣು ಇಟ್ಟುಕೊಳ್ಳುವ ಉತ್ಸವಕ್ಕೆ ಮುತ್ತಿಸಲ್ಪಟ್ಟು ಆಗಮನ ನಿಂತದಾದ ಸ್ಥಳಗಳನ್ನು ಕ್ಷೇತ್ರಮಂದಿರಗಳ ದಿನ್ನೆಗಳು ಸೇರಿಸಲ್ಪಟ್ಟಿವೆ. ಉತ್ಸವಕ್ಕೆ ಬರುವ ಪ್ರಜೆಗಳ ಕಣ್ಣು ಬೇಕೆಂಬ ಈ ಉತ್ಸವವನ್ನು ನೋಡುವುದಕ್ಕೆ ಮಾಸ್ತಿಗೆ ನೂರಾರು ಜನರು ಬಂದಿದ್ದರು. ಚಾರಿತ್ರಿಕವಾದ ಶ್ರೀ ಕೃಷ್ಣರಾಜೇಂದ್ರ ಭೂಪತಿ ಉಪಾಸನೆಯವರೆಗೆ ಸೇರಿದ ಇಂತಹ ವೈಭವವನ್ನು ನೋಡದಿರುವ ಕಣ್ಣುಗಳಿದ್ದು ಫಲವಿಲ್ಲವೆಂದು ಹೇಳಿಕೊಳ್ಳುತ್ತಿರುವರು. ಈ ಉತ್ಸವ ವಿಭವಂಗಳಿಗೆಲ್ಲ ಮಹಾಪ್ರಭುವರ್ಯರು ತಮ್ಮ ಸಕಲ ವರ್ಗಗಳ ಪ್ರಜೆಗಳನ್ನೂ ಪುತ್ರನಿರ್ವಿಶೇಷದಿಂದ ಪರಿಪಾಲಿಸುತ್ತ ಸಂತೋಷಗೊಳಿಸುತ್ತಿರುವುದೇ ಮುಖ್ಯ ಕಾರಣವು. ಮಹಾತ್ಮ ಗಾಂಧಿ ಮೊದಲಾದ ಪುರುಷಶ್ರೇಷ್ಠರುಗಳಿಂದ ರಾಮರಾಜರೆಂದೂ, ರಾಜರ್ಷಿಗಳೆಂದೂ ಪ್ರಶಂಸಿಸಲ್ಪಡುತ್ತಿರುವ ಮಹಾನುಭಾವರನ್ನು ಪ್ರಭುಗಳನ್ನಾಗಿ ಪಡೆದಿರುವ ಈ ದೇಶೀಯರ ಪುಣ್ಯಕ್ಕೆ ಪಾರವೇ ಇಲ್ಲ. ಇಂತಹ ರಾಜಶ್ರೇಷ್ಠರಾದ ಶ್ರೀ ಕೃಷ್ಣರಾಜೇಂದ್ರ ಪ್ರಭುಗಳಿಗೂ ಇವರ ಸಹೋದರರಾದ ಶ್ರೀಮದ್ಯುವರಾಜರವರಿಗೂ, ಈ ಸಂಸ್ಥಾನದ ಕುಲದೀಪಕರಾದ ಶ್ರೀ ಜಯಚಾಮರಾಜ ಒಡೆಯರವರಿಗೂ, ರಾಜ ಕುಟುಂಬದವರಿಗೂ ರಾಜ ಕುಲದೇವತೆಯಾದ ಶ್ರೀ ಚಾಮುಂಡೇಶ್ವರಿಯು ದೀರ್ಘಾಯು ರಾರೋಗ್ಯಗಳನ್ನಿತ್ತು ಅವರುಗಳ ಮೂಲಕ ನಮ್ಮ ಮೈಸೂರು ದೇಶದ ಸುಖಸಂಪದ್ವೈಭವಗಳು ವೃದ್ಧಿಗೊಳ್ಳುವಂತೆ ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ.

ಒಳದೇಶದ ವೃತ್ತಾಂತಗಳು

ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಯ ಮೆಡಿಕಲ್ ಆಫೀಸರಾದ ಡಾ|| ರಾವ್‌ಸಹೇಬರವರಿಗೆ ಕೊಡಲ್ಪಟ್ಟಿದ್ದ ರಜವು ಇನ್ನೂ ೬ ತಿಂಗಳವರೆಗೆ ಹೆಚ್ಚಿಸಲ್ಪಟ್ಟಿರುತ್ತದೆ.

ವೃತ್ತಪತ್ರಿಕೆಗಳ ಸುದ್ದಿದಾಯಕರಾದ ಬೆಂಗಳೂರಿನ ಮಿ|| ಎಸ್ ಸಂಜೀವರಾಯರವರಿಗೆ ಬೆಂಗಳೂರು ಸಿಟಿ ಅ|| ಪೋಲೀಸು ಸೂಪರಿಂಟೆಂಡೆಂಟ್ ಮಿ|| ಎಂ ಸಿ ಮರಿಯಪ್ಪನವರ ವಿಚಾರದಲ್ಲಿ ಡಿ|| ಮೆಜಿಸ್ಟ್ರೇಟರಿಂದ ೧೦೦ ರೂ ದಂಡವು ವಿಧಿಸಲ್ಪಟ್ಟಿದ್ದಿತಷ್ಟೆ. ಇದರಮೇಲೆ ರಾಯರು ಸೆಷನ್ಸ್ ಜಡ್ಜಿಯವರಿಗೆ ಮಾಡಿಕೊಂಡಿದ್ದ ಅಪೀಲಿನಲ್ಲಿ ದಂಡವು ೨೦ ರೂ ಗೆ ಇಳಿಸಲ್ಪಟ್ಟಿತು.

ರಾಜಧಾನಿಯ ಲೆಜಿಸ್ಲೆಟಿವ್ ಕೌನ್ಸಿಲರೂ ದೊಡ್ಡವರ್ತಕರೂ ರೈಸ್‌ಮಿಲ್ ಯಜಮಾನರೂ ಆದ ಮಿ|| ಎಂ ಸಿ ತಮ್ಮಯ್ಯನವರು ಮತ್ತು ದೊಡ್ಡ ಚಿನ್ನರಪ್ಪನವರು, ಕೌನ್ಸಿಲರ್ ಮತ್ತು ಅಡ್ವೊಕೇಟರಾದ ಮಿ|| ಪಿ ಸೀತಾರಾಮಯ್ಯನವರು, ಅರಮನೆ ಆಫೀಸ್ ಮ್ಯಾನೇಜರ್ ಮಿ|| ಸಚ್ಚಿದಾನಂದ ಪಿಳ್ಳೆಯವರು ಸಾಹುಕಾರ್ ಡಿ ಚೌಡಪ್ಪನವರು, ಮಿ|| ಡಿ ವಿಶ್ವಂಭರಯ್ಯನವರ ಈ ದೊಡ್ಡಮನುಷ್ಯರುಗಳಿಗೆ ಅರಮನೆಯ ದರ್ಬಾರಿನಲ್ಲಿ ಖಾಸಾಹಾರದ ಮರ್ಯಾದೆ ನಡೆಯುವಂತೆ ಶ್ರೀಮನ್ಮಹಾರಾಜರವರ ಅಪ್ಪಣೆಯಾಗಿರುವುದಕ್ಕಾಗಿ ಈ ದೊಡ್ಡವರುಗಳನ್ನು ನಾವು ಅಭಿನಂದಿಸುತ್ತೇವೆ.

ಬ್ರಾಹ್ಮಣೇತರ ಮಹಾಸಭಾಧ್ಯಕ್ಷರಾದ ಮಿ|| ಎ ರಾಮಸ್ವಾಮಿ ಮೊದಲಿಯಾರರವರು ಕಳೆದ ಗುರುವಾರ ಬೆಳಿಗ್ಗೆ ರೈಲು ಟ್ರೇನಿನಲ್ಲಿ ತಮ್ಮ ಮಿತ್ರಮಂಡಲಿಯೊಡನೆ ಬಂದಾಗ ಸ್ವಾಗತಮಂಡಲಿಯ ಅಧ್ಯಕ್ಷರು ಉಪಾಧ್ಯಕ್ಷರು ಸೆಕ್ರೆಟರಿಗಳು ಸದಸ್ಯರುಗಳು ಮತ್ತು ಪುರಪ್ರಮುಖರುಗಳು ಅಧ್ಯಕ್ಷರನ್ನಿದಿರ್ಗೊಂಡು ಮರ್ಯಾದಿಸಿ ಉತ್ಸವದೊಡನೆ ಕರೆದುಕೊಂಡು ಒಂದುರ ಮಧ್ಯದಾರಿಯಲ್ಲಿ ಮ್ಯುನಿಸಿಪಾಲಿಟಿಯವರ ಅಧ್ಯಕ್ಷರನ್ನು ತಮ್ಮಾಪೀಸಿಗೆ ಬರಮಾಡಿಕೊಂಡು ಒಂದು ಸ್ವಾಗತಪತ್ರವನ್ನೊಪ್ಪಿಸಿ ಸತ್ಕರಿಸಿದರು. ಉತ್ಸವದಲ್ಲಿ ಸಾವಿರಾರು ಜನರು ನೆರೆದಿದ್ದರು. ಮಿ|| ಮೊದಲಿಯಾರರು ನಾಳೆಯ ದಿವಸ ಟೌನ್‌ಹಾಲಿನಲ್ಲಿ ಉಪನ್ಯಾಸಮಾಡಿ ಸೋಮವಾರ ಮೇಲಿನಿಂದ ಸ್ವಸ್ಥಳಕ್ಕೆ ಪ್ರಯಾಣಮಾಡುವವರಾಗಿರುವರು.

ಕೋಲಾರದ ಡಿ|| ಹೊಸಕೋಟೆ ತಾ|| ಹೊಸೂರು ಗ್ರಾಮದಲ್ಲಿ ಪ್ಲೇಗ್ ರೋಗವು ಪ್ರಾರಂಭವಾಗಿ ಗ್ರಾಮಸ್ಥರು ಊರನ್ನು ಬಿಟ್ಟು ಹೊರಗಡೆ ವಾಸಮಾಡುತ್ತಿದ್ದುದರಿಂದ ಈ ಗ್ರಾಮದ ಆಸ್ಪತ್ರೆಯೂ ಹೊರಗೆ ಸಾಗಿಸಲ್ಪಟ್ಟಿತು. ರೋಗವು ನಿಂತು ಜನರು ಗ್ರಾಮಕ್ಕೆ ಹಿಂದಿರುಗಿ ಬಂದಿರುವರಾದರೂ ಆಸ್ಪತ್ರೆಯು ಮಾತ್ರ ಇನ್ನೂ ಊರ ಹೊರಗೆ ಇಡಲ್ಪಟ್ಟಿರುವುದರ ಕಾರಣ ಜನರಿಗೆ ಬಹಳ ತೊಂದರೆಯಾಗಿರುತ್ತದೆ. ಈ ಗ್ರಾಮದಲ್ಲಿ ೫೦೦ ಮನೆಗಳೂ, ೪೦೦೦ ಪ್ರಜೆಗಳೂ ಇರುತ್ತಾರಲ್ಲದೆ ಪೊಲೀಸು ಸ್ಟೇಷನ್ನೂ ಪೋಸ್ಟಾಫೀಸೂ ಇರುತ್ತವೆ. ಇಷ್ಟು ದೊಡ್ಡ ಗ್ರಾಮಕ್ಕೆ ಆಸ್ಪತ್ರೆಯು ದೂರವಾಗಿರುವುದರಿಂದ ಜನರಿಗೆ ಬಹಳ ತೊಂದರೆಯಾಗಿರುತ್ತದೆಂದು, ಜನರು ಅನೇಕವಿಧವಾಗಿ ಪ್ರಾರ್ಥಿಸಿಕೊಂಡರಾದರೂ ಆಸ್ಪತ್ರೆಯು ಊರೊಳಕ್ಕೆ ತರಲ್ಪಡದಿರುವುದರ ಕಾರಣ ಗೊತ್ತಾಗಲಿಲ್ಲವೆಂದೂ, ಈಗಲಾದರೂ ಆಸ್ಪತ್ರೆಯು ಊರೊಳಕ್ಕೆ ಕೂಡಲೆ ಸಾಗಿಸಲ್ಪಡುವಂತೆ ಸರ್ಕಾರದವರಾದರೂ ಅಪ್ಪಣೆಮಾಡಬೇಕೆಂದೂ ಜಿಲ್ಲೆಯ ಗ್ರಾಮವಾಸಿಯೊಬ್ಬರು ಬರೆದಿರುತ್ತಾರೆ.

ವರ್ತಮಾನಸಂಗ್ರಹ

ಪ್ರಿಂಕೆಥ್ಯೂನ್ ಎಂಬಾತನು ಐವತ್ತುವರುಷ ಸ್ತ್ರೀಯರನ್ನು ಮದುವೆಯಾದನಂತೆ. ಪ್ರತಿಯೊಬ್ಬ ಹೆಂಗಸಿಗೂ ಮದುವೆಯಾಗುವ ವೇಳೆಯಲ್ಲಿ, ಆಗಿಗೆ ೧೯ ವರುಷ ಸನತಿಬನೀ ವರನ ಪಡೆದೇ ಗೊತ್ತಿರಲಿಲ್ಲ. ಈ ಬುದ್ಧಿಯು ವರಕಾರಕ್ಕೆ ಗೊತ್ತಾಗಿ ಮಚೆಸ್ಟ್ರೇಟರು 'ಪ್ರಿಂಕೆಥ್ಯೂನ್' ನನ್ನು ವಿಚಾರಿಸುವಾಗ ಆವನು "ಐವತ್ತುಮಂದಿ ಮಡದಿಯರಿದ್ದೂ ನನಗೆ ತೃಪ್ತಿಯಾಗುತ್ತಿದ್ದರೆ ನೀವು ಕೇಳುವ ಪ್ರಶ್ನೆಗೆ ನಾನು ಉತ್ತರ ಕೊಡುತ್ತಿದ್ದೆನು" ಎಂದು ಹೇಳಿದನಂತೆ!

ಈಜುವುದರಲ್ಲೂ ಬಹಳಕಾಲದವರೆಗೆ ನೀರಿನಲ್ಲಿರುವುದರಲ್ಲೂ ಕಲ್ಕತ್ತದಲ್ಲಿ ನಡೆದಿರುವ ಪಂದ್ಯಗಳಲ್ಲೆಲ್ಲ ಗೆದ್ದು ಹೆಸರಾಂತಿರುವ ವೀರೇಂದ್ರನಾಥನಾಥ್ ಮತ್ತು ಮೃತ್ಯುಂಜಯ ಗೋಸ್ವಾಮಿ ಎಂಬವರು ಆಚೆ ಶನಿವಾರ ಬೆಳಗ್ಗೆ ೯-೩೦ ಗಂಟೆಗೆ ಈಜುವುದಕ್ಕಾರಂಭಿಸಿ ಮೂರನೆಯ ದಿವಸ ಬೆಳಗಿನ ೧೧-೨೦ ಗಂಟೆಗೆ ಗೋಸ್ವಾಮಿ ಎಂಬವರು ವೈದ್ಯರ ಸೂಚನೆಯ ಮೇರಿಗೆ ಹೊರಕ್ಕೆ ಬಂದುಬಿಟ್ಟರು ಮತ್ತು ನಾಳರವರು ೮೩ ಗಂಟೆ ೧೫ ನಿಮಿಷಗಳ ವರೆಗೆ ಈಜುತಲಿದ್ದು ಭಾನುವಾರ ಮಧ್ಯಾಹ್ನ ೪-೪೫ ಗಂಟೆಗೆ ಹೊರಕ್ಕೆ ಬಂದರು

ಸಿಂಧ ಪ್ರಾಂತದಲ್ಲಿ ಮಳೆಯಾದಿಕ್ಯದಿಂದ ಬೆಳೆಯು ಒಹಳ ಮಟ್ಟಿಗೆ ನಾಶವಾಯಿತು ಈಗ ಮಿಡಿತೆಗಳು ವಿಪರೀತವಾಗಿ ಹೆಚ್ಚಿ ಉಳಿದಿರುವ ಬೆಳೆಯನ್ನು ನಹ ನಾಶಮಾಡುತ್ತಿರುವುವು. ಈ ಮಿಟ್ಟೆಗಳು ೬ ಮೈಲುಗಳವರೆಗೆ ಆವರಿಸಿಕೊಂಡಿದ್ದುದರಿಂದ ಆ ಮಾರ್ಗದಲ್ಲಿ ರೈಲುಬಂಡಿಯು ಮುಂದೆ ಸಾಗದೆ ಕೆಲ ಕಾಲದವರೆಗೆ ನಿಲ್ಲಬೇಕಾಗಿ ಬಂದಿತು. ಈ ಮಿಟ್ಟೆಗಳನ್ನು ನಾಶಮಾಡುವುದಕ್ಕಾಗಿ ಒಂದು ವಿಧದ ವಿಷದ್ರಾವಕವನ್ನು ಪ್ರಯೋಗಿಸಲು ಸರಕಾರದವರು ೦೦೦೦ ರೂಪಾಯಿಗಳನ್ನು ಕೊಟ್ಟಿರುವರು ಎಂದು ಉತ್ತರದೇಶದ ಪತ್ರಿಕೆಯು ತಿಳಿಸುತ್ತದೆ

ಪಶ್ಚಿಮಖಾನ ದೇಶಕ್ಕೆ ಸೇರಿದ ನಸಾಪೂರ ಎಂಬ ಗ್ರಾಮದಲ್ಲಿ ಸ್ತ್ರೀಯರಿಗೆ ಒಳ ತೊಡಿಸಲು ಹಿಂದು ಬಳೆಗಾರರಿಲ್ಲದ್ದರಿಂದ ಮಹಮ್ಮದೀಯ ಪುರುಷರೇ ತೊಡಿಸುವ ಪದ್ಧತಿಯಂತೆ. ಈಗ್ಗೆ ಒಂದು ತಿಂಗಳ ಹಿಂದೆ ಆ ಗ್ರಾಮದ ಶಾಲೋಪಾಧ್ಯಾಯನಾದ ನಾರಾಯಣರಾಯನು ಪಾಠಶಾಲೆಗೆ ಹೋಗಿರುವಾಗ್ಗೆ ಆತನ ಹೆಂಡತಿ ಲಕ್ಷ್ಮೀಬಾಯಿ ಎಂಬಾಕೆಯು ಮಹಮ್ಮದೀಯ ಬಳಗಾರನನ್ನು ಕರೆಯಿಸಿ ಬಳೆಗಳನ್ನು ತೊಡಿಸಿಕೊಂಡು ಅವುಗಳ ಬೆಲೆಯನ್ನು ಆತನಿಗೆ ಕೊಟ್ಟು ಬಳೆಮಲ್ಲಾರಕ್ಕೆ ಪದ್ಧತಿಯ ಪ್ರಕಾರ ನಮಸ್ಕಾರ ಮಾಡಿ ಏಳುವಾಗ್ಗೆ ಕಾಮಾಂಧನಾದ ಮಹಮ್ಮದೀಯ ಬಳೆಗಾರನು ಆಕೆಯ ಮೈಮೇಲೆ ತನ್ನ ಕೈಯನ್ನಿಡಲು ಲಕ್ಷ್ಮೀಬಾಯಿ ಕೋಪಗೊಂಡು ಆವನನ್ನು ಒದೆಯಲು ಆವನು ಕೆಳಕ್ಕುರುಳಿದ ಕೂಡಲೆ ಏತರಿಸಿಕೊಂಡು ಪಲಾಯನನಾದನು ಅನಂತರ ಲಕ್ಷ್ಮೀಬಾಯಿಯು ಪರಪುರುಷನು ತನ್ನ ಮೈ ಮುಟ್ಟಿದನೆಂದು ಬಹಳವಾಗಿ ವ್ಯಸನಪಟ್ಟು ಇನ್ನು ಜೀವಿಸಬಾರದೆಂದು ಸಂಕಲ್ಪಿಸಿ ನಡೆದ ವಿದ್ಯಮಾನವನ್ನೆಲ್ಲ ಒಂದು ಕಾಗದದಲ್ಲಿ ಬರೆದು ಆ ಕಾಗದವನ್ನು ತನ್ನ ಗಂಡನ ಮೇಜಿನ ಮೇಲಿಟ್ಟು ಆವನ ಭಾವಚಿತ್ರವನ್ನು ಕೈಯಲ್ಲಿ ಹಿಡಿದುಕೊಂಡು ಬಾವಿಯ ಬಳಿಗೆ ಹೋಗಿ ಚಿತ್ರಪಟದ ಸುತ್ತಲೂ ಪ್ರದಕ್ಷಿಣೆ ಬಂದು ನಮಸ್ಕಾರ ಮಾಡಿ ಪತಿಯ ನಾಮಸ್ಮರಣೆಯಿಂದ ಬಾವಿಯಲ್ಲಿ ದುಮುಕಿ ಆತ್ಮಹತ್ಯ ಮಾಡಿಕೊಂಡಳು. ಗಂಡನು ಶಾಲೆಯ ಕೆಲಸವನ್ನು ಮುಗಿಸಿಕೊಂಡು ಮನೆಗೆ ಬಂದು ಬಾಗಿಲನ್ನು ತಟ್ಟಿ ಎಷ್ಟು ಕೂಗಿದರೂ ತೆಗೆಯಲಿಲ್ಲವಾಗಿ ಬಾಗಿಲನ್ನೊಡೆದು ಒಳಕ್ಕೆ ಹೋಗಿ ಹೆಂಡತಿಯನ್ನು ಹುಡುಕಿ ಎಲ್ಲೂ ಕಾಣದೆ ತನ್ನ ಮೇಜಿನ ಮೇಲೆ ಬಿದ್ದಿದ್ದ ಕಾಗದವನ್ನು ತೆಗೆದುಕೊಂಡು ಓದಿನೋಡಿ ಕೂಡಲೇ ಬಾವಿಯ ಸಮೀಪಕ್ಕೆ ಹೋಗಿ ತನ್ನ ಚಿತ್ರಪಟವು ಬಾವಿಕಟ್ಟೆಯ ಮೇಲೂ, ಪತ್ನಿಯ ಶವವು ಬಾವಿಯೊಳಗಡೆಯೂ ಬಿದ್ದಿರುವುದನ್ನು ಕಂಡು ಅತ್ಯಂತವಾಗಿ ರೋದಿಸಿ ಹತಾಶನಾಗಿ ತಾನೂ ಬಾವಿಯಲ್ಲಿ ಬಿದ್ದು ಪ್ರಾಣತ್ಯಾಗ ಮಾಡಿದನೆಂತಲೂ, ಸ್ತ್ರೀಯರಿಗೆ ಬಳೆಯನ್ನು ಪುರುಷರು ತೊಡಿಸುವುದು ತಪ್ಪಿ ಸ್ತ್ರೀಯರೇ ತೊಡಿಸುವಂತಾದರೆ ಇಂತಹ ಅತ್ಯಾಚಾರಗಳಿಗೂ ಅನಾಹುತಕ್ಕೂ ಅವಕಾಶವಿರುವುದಿಲ್ಲವೆಂದೂ ಧಾರವಾಡದ ಟೈಂಸ್ ಪತ್ರಿಕೆಯು ತಿಳಿಸುತ್ತದೆ

ಹೋದ ತಿಂಗಳ ತಾ|| ೧೦ ನೇ ಮಂಗಳವಾರ ಮಧ್ಯಾಹ್ನ ಸಂಪಗಾವಿ ತಾಲ್ಲೂಕು ಬುಧರಗಟ್ಟಿವೆಂಬ ಸಣ್ಣ ಗ್ರಾಮದ ಹೊರ ಬೈಲಿನಲ್ಲಿ ದನಾ ಕಾಯುವ ಹುಡುಗರು ದನಗಳನ್ನು ಬಿಟ್ಟುಕೊಂಡಿರುವಾಗ್ಗೆ ದನಗಳು ಬಾಯಾರಿ ಆ ಪ್ರಾಂತದಲ್ಲೆಲ್ಲೂ ಕುಡಿಯಲಿಕ್ಕೆ ನೀರು ಸಿಕ್ಕದೆ ಬಹಳ ಸಂಕಟಪಡುತ್ತಿರುವಾಗ, ಮೇಘರಾಜನಲ್ಲಿ ಮೊರೆಯಿಟ್ಟು ಆವನನ್ನು ಪ್ರಾರ್ಥಿಸುತ್ತಿದ್ದೋ ಎಂಬಂತೆ ಒಂದು ಹಸು ತನ್ನ ಮುಖವನ್ನು ಆಕಾಶದ ಕಡೆ ತಿರುಗಿಸಿ ಅಂಬಾ ಎಂದು ಕೂಗುತ್ತಿರುವದನ್ನು ಅದರ ಸ್ವಾಮಿಯಾದ ಫಕೀರಪ್ಪ ಎಂಬ ಹುಡುಗನು ನೋಡಿ ಬಹಳವಾಗಿ ಮರುಗಿ ತನ್ನ ದನಗಳನ್ನು ಮನೆಗೆ ಹೊಡೆದುಕೊಂಡು ಹೋಗಿ ಕೊಟ್ಟಿಗೆಯಲ್ಲಿ ಕಟ್ಟಿಹಾಕಿ ನೀರಿಗೆ ಕೊಂದವೆಯಾಗಿರುವುದರಿಂದ ಮಳೆಯನ್ನು ಬರಿಸಲು ಏನು ಮಾಡಬೇಕೆಂದು ಕೆಲವರನ್ನು ಕೇಳಿದನು ಅದಕ್ಕವರು "ನಕ್ಕು ಮಳೆ ಬರಿಸಲು ಮನುಷ್ಯನ ಕೈಯಲ್ಲಾದೀತೆ, ನಿನಗೇನು ಹುಚ್ಚು ಸುಮ್ಮನಿರೆಂದು ಹೇಳಿದರು ಆದರೂ ಆ ಹುಡುಗನು ತೃಪ್ತನಾಗದೆ ಆ ದಿವಸ ನಿರಾಹಾರವನ್ನು ಮಾಡಿ ಮಾರನೆಯ ದಿವಸ ಸ್ನಾನಮಾಡಿದ ದಿವಸನ್ನುಟ್ಟು ಊರ ಮುಂದಿನ ಬಸವೇಶ್ವರ ದೇವಾಲಯಕ್ಕೆ ಹೋಗಿ ಮಳೆಯನ್ನು ತರಿಸಿಕೊಡೆಂದು ಬಹು ಭಕ್ತಿಯಿಂದ ಪ್ರಾರ್ಥಿಸುತ್ತ ಕುಳಿತನು ಗ್ರಾಮಸ್ಥರು ಇದನ್ನು ತಿಳಿದು ಆವನ ಬಳಿಗೆ ಬಂದು ನಿನ್ನ ಮನೆಗೆ ಹೋಗು ಮಳೆ ಬರದ ನಂತರ ನಿನಗೇನು ನಾವು ಉಪವಾಸಾದ್ದು ನೀನಿಲ್ಲಿ ಏಕೆ ಕುಳಿತಿರುವೆ ಎಂದರು. ಎಷ್ಟು ವಿಧವಾಗಿ ಹೇಳಿದರೂ ಕೇಳದೆ ಮಳೆಯ ಅಭಾವದಿಂದ ಪ್ರಾಣಿಗಳು ಪಡುವ ಕಷ್ಟವನ್ನು ನಾನು ನೋಡಿ ಸಹಿಸಲಾರೆ, ಇನ್ನು ಐದು ದಿವಸಗಳಲ್ಲಿ ದೇವರು ಮಳೆ ಸುರಿಸುವನು, ಆ ವರೆಗೆ ನಾನು ಇಲ್ಲೇ ಇದ್ದು ದೇವರನ್ನು ಪ್ರಾರ್ಥಿಸುವೆನು, ಇದರಿಂದ ನಾನು ಸತ್ತರೆ ಪ್ರಾಣಿಗಳ ಸಂಕಟವನ್ನು ನೋಡುವುದೇ ತಪ್ಪುತ್ತದೆಂದು ಹೇಳಿ ಅಲ್ಲಿಯೇ ಕುಳಿತುಬಿಟ್ಟನು. ಆ ಹುಡುಗನ ಶುದ್ಧ ಭಕ್ತಿಗೂ, ದೃಢ ಮನಸ್ಸಿಗೂ ದೇವರು ಮೆಚ್ಚಿದನೋ ಎಂಬಂತೆ ಅವನ ಸಂಕಲ್ಪಾನುಸಾರವಾಗಿ ನಾಲ್ಕನೆಯ ದಿವಸ ಕೊಂಚವಾಗಿಯೂ, ಮೂರನೆಯ ದಿವಸ ವಿಶೇಷವಾಗಿಯೂ ಮಳೆ ಬಂದು ಊರಿನವರಿಗೆ ಪರಮಾಶ್ಚರ್ಯವನ್ನೂ, ಆನಂದವನ್ನೂ ಉಂಟುಮಾಡಿತು ಇದರ ಮೇರಿ ಊರಿನವರು ಆ ಹುಡುಗನ ದೃಢಸಂಕಲ್ಪಕ್ಕೂ, ನಿಜ ಭಕ್ತಿಗೂ ದೇವರು ಪ್ರಸನ್ನನಾಗಿ ಅವನಿಷ್ಟಾರ್ಥವನ್ನು ನೆರವೇರಿಸಿದುದಕ್ಕಾಗಿ ಆನಂದಪಟ್ಟು ಆ ಹುಡುಗನನ್ನು ಕೊಂಡಾಡುವವರಾದರೆಂದು ಒಬ್ಬನು ಧಾರವಾಡದ ಟೈಂಸ್ ಪತ್ರಿಕೆಯಲ್ಲಿ ಬರೆದಿರುತ್ತಾನೆ ಇದು ನಿಜವಾಗಿದ್ದಲ್ಲಿ ಆ ದನಕಾಯುವ ಬಾಲಕನು ಕಲಿಯುಗದ ಧ್ರುವನೆನಿಸುವನಲ್ಲವೆ!

ಗಾಂಧಿಗಳ ಧ್ಯೇಯವು

'ನನಗೆ ಪ್ರತ್ಯಕ್ಷವಾಗಿ ದೇವರನ್ನು ನೋಡಬೇಕು ನನ್ನ ದೇವರು ಯಾರು? 'ಸತ್ಯ' ನಾನು ದೇವರನ್ನು ನೋಡುವ ದಾರಿ ಯಾವುದು 'ಅಹಿಂಸ' ಇದೇ ನನ್ನ ಜೀವಿತದ ಮುಖ್ಯ ಧ್ಯೇಯ

"ನಾನು ಕೇವಲ ಹಿಂದೂದೇಶದ ಸ್ವಾತಂತ್ರ್ಯಾರ್ಥಿಯಾಗಿಯೇ ಜೀವದಾರಣೆಯನ್ನು ಮಾಡಿಕೊಂಡಿರುವುದು ಕಾರಣವೇನು? ಇದೇ ಸತ್ಯದ ವಿಷ್ಣು ನಾನು ನನ್ನ ಧ್ಯೇಯವನ್ನು ಪಡೆಯಬೇಕಾದರೂ ಇದೇ ದಾರಿಯಿಂದ ಸಂಪೂರ್ಣ ಸ್ವಾತಂತ್ರ್ಯವಿಲ್ಲದಿದ್ದರೆ ದೇವರನ್ನು ಹೇಗೆ ಧ್ಯಾನಿಸಲಿ? ನನ್ನ ತಾಯಿಯು ಪರತಂತ್ರಳಾಗಿರುವಾಗ ಆವಳ ಪುತ್ರ ಕೋಟಿಯಲ್ಲೊಬ್ಬನಾದ ನನಗೆಲ್ಲಿಯ ಸ್ವಾತಂತ್ರ್ಯ! ಅದಕ್ಕಾಗಿಯೇ ನಾನು ಹಿಂದೂದೇಶದ ಸ್ವಾತಂತ್ರ್ಯಕ್ಕಾಗಿ ಪ್ರತಿದಿವಸವೂ ಹೋರಾಡುತ್ತಿರುವೆನು. ಇಂತಹ ಸ್ಫೂರ್ತಿದಾಯಕವಾದ ಶಬ್ದಗಳು ಆಗಾಗ ಮಹಾತ್ಮರ ಬಾಯಿಯಿಂದ ಹೊರಡುತ್ತಿರುತ್ತವೆ ಆದರೆ ಇವುಗಳಲ್ಲಿ ಅನೇಕ ಸಂಶಯಗಳು ಒದಬಹುದು ನಿಜವಾಗಿ ಮೋಕ್ಷಾರ್ಥಿಯಾದವನಿಗೆ ತನ್ನ ದೇಶದ ಸ್ವಾತಂತ್ರ್ಯವೇಕೆ? ಸಮಾಜದ ಹಿತಾಹಿತಚಿಂತನ ಯೇಕೆ? ಬಂಧುಬಳಗದವರ ಗೋಜಿಯೇಕೆ? ಕೇವಲ ಅಧ್ಯಾತ್ಮವಿಚಾರದಲ್ಲಿ ಮಗ್ನನಾಗಿ ಒಂದು ಮೂಲೆ ಸೇರಿದ್ದು ಧ್ಯಾನಿಸಬಹುದಲ್ಲವೇ? ಹಿಂದೆ ಅನೇಕರು ಹೀಗೆಯೇ ಪರಮಾತ್ಮನಲ್ಲಿ ಐಕ್ಯವನ್ನು ಹೊಂದಿಲ್ಲವೆ? ಎಂದು ಆದರೆ ಮಹಾತ್ಮರ ವಿಚಾರವಂತಹದಲ್ಲ ಮೋಕ್ಷಸಾಧನೆಗೆ ಬೇರೆ ಮಾರ್ಗಗಳಿರುವುವೆಂದು ಅವರ ತಿಳುವಳಿಕೆಯಲ್ಲ ಅವರು ಜನ ಇಂತಹ ಭಿನ್ನಾಭಿಪ್ರಾಯಗಳಿಗೆ ಈ ರೀತಿ ಸಮಾಧಾನವನ್ನು ಕೊಡುತ್ತಾರೆ

'ನಿಜವಾಗಿಯೂ ನಾನೊಬ್ಬ ಸತ್ಯಶೋಧಕನು ಆದರೆ ಕೇವಲ ಆಧ್ಯಾತ್ಮಿಕಚಿಂತನೆಯಿಂದ ಸತ್ಯವನ್ನು ಶೋಧಿಸಿ ಮೋಕ್ಷವನ್ನು ಪಡೆಯುವ ಕೆಲಸವು ನನ್ನಿಂದ ಅಸಾಧ್ಯ ಈ ಮಾಂಸದೇಹದಿಂದ ನನ್ನ ಅಂತರಾತ್ಮವನ್ನು ಪ್ರತ್ಯೇಕವಾಗಿಡುವುದಕ್ಕೆ ದೇಹಾಭಿಮಾನವನ್ನು ನಾನೆಂದೂ ಕಿಂಚಿತ್ತೂ ಇಲ್ಲ ಕಿಂಚಿತ್ತೂ ಸ್ವಹಿತಸಿದ್ಧಿಗಾಗಿ ಮಾಡುವ ಈ ನನ್ನ ಕೆಲಸವು ಸ್ವಾರ್ಥವಲ್ಲವೆ? ಹೌದು ಕೇವಲ ಸ್ವಾರ್ಥ ಆದರೆ ನಾನು ಐಹಿಕೇಂದ್ರಿಯ ತೃಪ್ತಿಗಾಗಿ ಯಾವ ಕೆಲಸವನ್ನೂ ಕೈಕೊಂಡಿಲ್ಲ ದೊಡ್ಡವನಾಗಬೇಕು, ಆಳನಾಗಬೇಕು, ರಾಜ್ಯವನ್ನಾಳಬೇಕು ಎಂಬಾಶೆಯೊಂದೂ ನನಗಿಲ್ಲ. ಚಿಕ್ಕಮಗುವಿಗೆ ಬೆಳಕನ್ನು ನೋಡಿ ಆನಂದಪಡಬೇಕೆಂದಿರುವಂತೆಯೇ ನನಗಿರುವುದು" ದೇವರನ್ನು ನೋಡಿ ಆನಂದಪಡಬೇಕೆಂಬ ಆಶೆಯೊಂದೇ ಆದರೆ ಈ ಆಶೆಯನ್ನು ಪೂರ್ತಿಗೊಳಿಸ ಪುದಕ್ಕಾಗಿ ಶೂನ್ಯವಾದಗುಂಡು ಗುಹೆಯಲ್ಲಿ ಕುಳಿತು ಧ್ಯಾನಾಸಕ್ತನಾಗುವುದೆಂದರೆ ನನಗೇನೂ ಇಷ್ಟವಿಲ್ಲ ಏಕೆಂದರೆ ಸರ್ವವನ್ನೂ ತೊರೆದು ಗುಹೆಯನ್ನು ಹಿಡಿದು ತಪಸ್ಸುಮಾಡಿ ಮೋಕ್ಷವನ್ನು ಪಡೆದವರಿಗೂ 'ಜನಕಾ' ದಿಗಳಂತೆ ಸಂಸಾರದಲ್ಲಿದ್ದು ನಿಷ್ಕಾಮಿಗಳಾಗಿ ಪರಮಾತ್ಮನಲ್ಲಿ ಐಕ್ಯವಾದವರಿಗೂ ಇರುವ ವ್ಯತ್ಯಾಸವೇನು? ಮಾತೃಭೂಮಿಯ ಸೇವೆಗಾಗಿ ನಿರಂತರವಿಡುವ ಪೌರುಷಯುಕ್ತವಾದ ಕಷ್ಟವೇ ನನ್ನ ಮೋಕ್ಷಸಾಧನೆಯದಾರಿ ಪ್ರಪಂಚದ ಸಮಸ್ತ ವಸ್ತುಗಳಲ್ಲಿಯೂ ಐಕ್ಯವನ್ನು ಹೊಂದಿ ಅನಂತರ ಪರಮಾತ್ಮನಲ್ಲೀ ಲೀನನಾಗುವೆನು ಆದುದರಿಂದಲೇ ನಾನು ಗೀತೋಪದೇಶದಂತೆ ಶತ್ರುಗಳಲ್ಲಿಯೂ ಮಿತ್ರರಲ್ಲಿಯೂ ಒಂದೇ ರೀತಿಯಾದ ಪ್ರೇಮವನ್ನು ತೋರುವೆನು. ಬೇರೆ ಬೇರೆ ಮತಸ್ಥರು ಅಸೂಯೆಯಿಂದಲೋ ಇನ್ನಾವ ಕಾರಣದಿಂದಲೋ ನನ್ನನ್ನು ದ್ವೇಷಿಸಬಹುದು ಆದರೆ ನಾನು ನನ್ನ ಹೆಂಡತಿ ಮಕ್ಕಳಲ್ಲಿ ಎಂತಹ ಪ್ರೇಮವನ್ನು ತೋರುವೆನೋ ಅಂತಹ ಪ್ರೇಮವನ್ನೇ ಅವರಲ್ಲಿಯೂ ತೋರಿಸುವೆನು ಇದನ್ನೇ ನಾನು ಶಾಶ್ವತವಾದ ಶಾಂತಿ - ಬೇಕಾದ ಸ್ವಾತಂತ್ರ್ಯದ ದಾರಿಯೆಂದು ತಿಳಿದಿರುವೆನು ಸುಲಭವಾದ ದಾರಿಯೆಂದು ಇದನ್ನು ಹಿಡಿಯಲಿಲ್ಲ ನನ್ನ ಜೀವಮಾನವೆಲ್ಲಾ ಇದರಿಂದ ಬಿಡಿಸಿಕೊಳ್ಳಲಾರದೆ ಇದ್ದೇನೆ ಎಂದೂ ತಿಳಿದಿದ್ದೇನೆ"

ಧ್ರಾ ಟ

ಬನವಾಸಿಗೆ ? ಎರಡು ಮುಸಲ್ಮಾನರ ಶಾಂತಿ ಮತ್ತು

ಸಹಾಯಕ ಸಮಿತಿ

ವಿಜ್ಞಾಪನ ಪತ್ರಿಕೆ.

ಈ ಜಗತ್ತಿನಲ್ಲಿ ಕಾರುಣ್ಯದ ಯಥಾರ್ಥ ದೇವರೇ ತಂದೆ ಮನುಷ್ಯರೆಲ್ಲರೂ ಸಹೋದರರು" ಎಂಬೀ ಕ್ರಿಸ್ತ ಭಾವನೆಗಳು ದಿನದಿನಕ್ಕೂ ವಿಸ್ತಾರವಾಗುತ್ತಾ ಇರುವುದನ್ನು ಎಲ್ಲರೂ ತಿಳಿದವರಾಗಿರುತ್ತಾರೆ. ಹೀಗಿದ್ದಾಗ್ಯೂ ಈ ಸದ್ಭಾವನೆಗಳನ್ನು ನಾಶಗೊಳಿಸುವಂತೆ ಆಗಾಗ ಬಲವಾದ ಕಲಹಗಳು ಹುಟ್ಟಿ ರೋಗಗಳಂತೆ ಆಗಿಂದಾಗ್ಗೆ ಗೋಚರಿಸುತ್ತಿರುವುದು ಈ ಕಾಲದ ಪ್ರಸಂಗದ ದೌರಾಗ್ಯವಾಗಿರುತ್ತದೆ ಈ ವಿಧವಾದ ದುರ್ಘಟನೆಗಳಿಗೆ ಅನೇಕ ಸಂದರ್ಭಗಳಲ್ಲಿ ತಪ್ಪು ತಿಳುವಳಿಕೆಯಿಂದಲೋ ಆಥವ ಮನಸ್ಸಿನ ಉದ್ವೇಗದಿಂದಲೋ ಪ್ರೇರಕರಾದ ಕೆಲ ಕೆಲವು ವ್ಯಕ್ತಿಗಳೇ ಕಾರಣರಾಗಿರುವರೆಂಬುದನ್ನು ಹೇಳಬೇಕಾದುದಿಲ್ಲ. ಆದರೆ ಹುಟ್ಟಿ ಕಾರಣಗಳು ಹೇಗಿದ್ದಾಗ್ಯೂ ಪರಿಣಾಮಗಳು ಮಾತ್ರ ಸರ್ವರಿಗೂ ಅಹಿತವನ್ನುಂಟುಮಾಡುವುದರಲ್ಲಿ ಸಂದೇಹವೇ ಇಲ್ಲ

ಇದಕ್ಕೆ ಕಳೆದ ಜೂಲೈ ತಿಂಗಳಲ್ಲಿ ದಾವಣಗೆರೆಯಲ್ಲಿ ನಡೆದ ಹಿಂದು ಮುಸಲ್ಮಾನರ ಗಲಭೆಗಳೇ ಸಾಕ್ಷಿಭೂತವಾಗಿವೆ ಇದರಿಂದ ಅನೇಕ ಕಡೆಯ ಪ್ರತ್ಯಕ್ಷ ಕಷ್ಟನಷ್ಟಗಳೂ ಅಲ್ಲದೆ ಅಪ್ರತ್ಯಕ್ಷ ರೀತಿಯಿಂದಲೂ ಸಹ ಹಿಂದೂ ಮುಸಲ್ಮಾನ ಜನಾಂಗಗಳಲ್ಲಿ ಪರಸ್ಪರ ಪ್ರೀತಿವಿಶ್ವಾಸಗಳು ಕಡಮೆಯಾಗಿ ಅಲ್ಲಲ್ಲೇ ದ್ವೇಷಾಸೂಯೆಗಳು ಅಂಕುರಿಸಲು ಕಾರಣವಾಯಿತು ಈ ಪರಿಸ್ಥಿತಿಯು ಉಭಯ ಜನಾಂಗಗಳಿಗೂ, ತನ್ಮೂಲಕ ದೇಶಕ್ಕೂ ಕ್ಷೇಮಕರವಾದುದಲ್ಲ ಹೀಗಿರುವಲ್ಲಿ ಒಂದೇ ದೇಶದಲ್ಲಿ ಹುಟ್ಟಿ ಒಬ್ಬರ ಪಕ್ಕದಲ್ಲಿ ಒಬ್ಬರ ವಾಸಿಸುತ್ತ ಪ್ರಜೆಗಳೆಲ್ಲರನ್ನೂ ಮಕ್ಕಳಂತೆ ಭಾವಿಸಿರುವ ಶ್ರೀಮನ್ಮಹಾರಾಜ ಶ್ರೀಕೃಷ್ಣರಾಜ ಒಡೆಯರ್ ಬಹದ್ದೂರ್ ರವರ ಆಶ್ರಯಕ್ಕೆ ಒಳಪಟ್ಟು ಇರುವ ಹಿಂದು ಮುಸಲ್ಮಾನರೆಲ್ಲರೂ ಪರಸ್ಪರ ಸೌಹಾರ್ದ, ಐಕ್ಯಮತ್ಯಗಳಿಂದ ಜೀವಿಸುವುದು ಅತ್ಯಗತ್ಯವಾದ ಕರ್ತವ್ಯವಲ್ಲವೆ?

ಈ ಸದಾಲೋಚನೆಗಳಿಂದ ಕೂಡಿದಾಗ ಹಿಂದು ಮುಸಲ್ಮಾನ ಮಹಾಜನರು ನಮ್ಮ ಸಂಸ್ಥಾನದ ಅಮುಖ್ಯವರ್ಗರಾದ ಮಿ. ಮಿರ್ಜಾ ಎಂ ಇಸ್ಮಾಯಿಲ್ ರವರು ಜುಲೈ ತಿಂಗಳು ೧೮ ನೇ ತಾರೀಖಿನಲ್ಲಿ ಈ ಸ್ಥಳಕ್ಕೆ ದಯಮಾಡಿಸಿದ ವೇಳೆ ಅವರ ಸಮ್ಮುಖದಲ್ಲಿ ಸಭೆಗೂಡಿ ಹಿಂದೂ ಮುಸಲ್ಮಾನ ಜನಾಂಗಗಳಲ್ಲಿ ತಾತ್ಕಾಲಿಕವಾಗಿ ಉಂಟಾಗಿರುವ ಅಸಮಾಧಾನವನ್ನು ಹೋಗಲಾಡಿಸಿ ಶಾಂತಿಸಮಾಧಾನವನ್ನು ಉಂಟುಮಾಡುವುದಕ್ಕೂ ಮತ್ತು ಗಲಭೆ ಸಂಬಂಧದಿಂದ ಉಭಯ ಜನಾಂಗಗಳಲ್ಲಿ ಕೆಲವರಿಗೆ ಸಂಭವಿಸಿರುವ ಕಷ್ಟನಷ್ಟಗಳನ್ನು ಸಾಧ್ಯವಾಗುವಷ್ಟುಗೆ ಪರಿಹರಿಸ ಪುದಕ್ಕೂ ಸಹ ಕಷ್ಟ ಪ್ರಯತ್ನಗಳನ್ನು ಕೈಕೊಳ್ಳಬೇಕಾಗಿ ತೀರ್ಮಾನಿಸಿಕೊಂಡು ಇದಕ್ಕಾಗಿ "ದಾವಣಗೆರೆ ಹಿಂದೂ ಮುಸಲ್ಮಾನರ ಶಾಂತಿ ಮತ್ತು ಸಹಾಯಕ ಸಮಿತಿ" ಎಂಬ ಅಭಿಧಾನದಿಂದ ಈ ಕೆಳಗೆ ರುಜು ಮಾಡಿರುವವರಿಂದ ಕೂಡಿದ ಒಂದು ಸಮಿತಿಯು ಸ್ಥಾಪಿತವಾಯಿತು ಈ ಉದ್ದೇಶ ನೆರವೇರಲು ಅವಶ್ಯಕವಾಗಿರುವ ಹಣವನ್ನು ಚಂದಾ ಮೂಲಕ ಎತ್ತಬೇಕಾಗಿ ಆಲೋಚಿಸಿ ದಯಾಪರರಾದ ಮಹಾ ಜನಗಳಿಗೂ ಮತ್ತು ಸರ್ಕಾರಕ್ಕೂ ಉದಾರ ಸಹಾಯವನ್ನು ಕೊಡಬೇಕಾಗಿ ವಿನಯದಿಂದ ಪ್ರಾರ್ಥಿಸಿಕೊಳ್ಳುತ್ತೇವೆ ಚಂದಾ ಹಣವನ್ನು ಈ ಸಮಿತಿಯ ಅಧ್ಯಕ್ಷರ ಹೆಸರಿಗೆ ಮನಿಯಾರ್ಡರ್ ಮೂಲಕವಾಗಲಿ ಅಥವಾ ಬ್ಯಾಂಕು ವಗೈರೆ ಟ್ರೆಜರಿಗಳಲ್ಲಿ ಕಟ್ಟುವುದರ ಮೂಲಕವಾಗಲಿ ಕಳುಹಿಸಬಹುದು

ಈ ಪಾವನವಾದ ಕಾರ್ಯದ ಮಹತ್ವವನ್ನು ಸರ್ವರೂ ಗ್ರಹಿಸಿ ಉದಾರಹೃದಯವನ್ನು ತೋಟ್ಟು ತನ್ಮೂಲಕ ದೇಶದಲ್ಲಿ ಶಾಂತಿಯನ್ನೂ, ಸ್ನೇಹವನ್ನೂ ಉಂಟುಮಾಡುವ ಪವಿತ್ರ ಕಾರ್ಯವಾದ ಕೀರ್ತಿಗೂ ಮತ್ತು ಪುಣ್ಯಕ್ಕೂ ಭಾಗಿಗಳಾಗುವಿರೆಂದು ಆಶಿಸುತ್ತೇವೆ

ರುಜು---ಟಿ ದೇವೀರಪ್ಪನವರು (ಅಧ್ಯಕ್ಷರು), ಅಜ್ಜಂಪುರದ ಶೆಟ್ಟರ ಸಿದ್ಧರಾಮಣ್ಣನವರು, ಮುದ್ದೇಗೌಡರ ಮುರಿಗೆಪ್ಪನವರು ಬೋಂದಾಡೆ ಬಸಪ್ಪನವರು ಮಹಬೂಬ್ ಅಲ್ಲಿ ಖಾನ್ ಸಾಹೇಬರು, ಕಾಟವಾಡ ದಾಮೋದರ್ ಸೇಟರು ಜಿ ಮಹಮದ್ ಗೌಸ್ ದಿವಾನ ಸಾಹೇಬರು, ಮಾರ್ವಾಡಿ ಲಖ್ಮಾಜಿ ಸೇಟರು, ಎನ್ ನರಸಿಂಹ ಮೂರ್ತಿಯವರು (ಸೆಕ್ರೆಟರಿ) ಡಿ ಎಚ್ ಚಂದ್ರಶೇಖರಯ್ಯನವರು (ಉಪಾಧ್ಯಕ್ಷರು) ಟಿ ಯಂ ಹಾಲಸ್ವಾಮಪ್ಪಯ್ಯನವರು, ಟಿ ಜವಾಬ್ ಬೋಡಿ ಬೊಮ್ಮಪ್ಪನವರು, ಬಿ ಚೆನ್ನಬಸಪ್ಪನವರು, ಅಬ್ದುಲ್ ಅಜೀಜ್ ಸಾಹೇಬರು ಮಿಯಾ ಸಾಹೇಬರು, ಬಿ ಚೆನ್ನಪ್ಪನವರು, ಚನ್ನಗಿರಿ ರಂಗಪ್ಪನವರು

ನೋಟೀಸು.

ಹುಣಸೂರು ತಾಲ್ಲೂಕ್ ಬಿಲ್ಲಿಕೆರೆ ಹೋಬಳಿ ರಾಮೇನಹಳ್ಳಿ ಗ್ರಾಮದಲ್ಲಿದ್ದ ಪರಿವಾರದ ಜಾತಿ ಅಳ್ಳಮರಿಯನ ದ್ಯಾವನಾಯ್ಕನ ೩೦೦ ಗ ೪೦ ವರುಷ ವಯಸ್ಸುಳ್ಳ ದ್ಯಾವನಾಯ್ಕ ಉರುಫ್ ಮಂಚನಾಯ್ಕನು ಎಲ್ಲೋ ಹೋಗಿ ೧೮ ದಿವಸವಾಯಿತು. ಈತನನ್ನು ಯಾರಾದರೂ ಪತ್ತೆ ಮಾಡಿಕೊಟ್ಟರೆ ೫ ರೂಪಾಯಿಗಳನ್ನು ಇನಾಂ ಕೊಡುತ್ತೇನೆ,

ಪಟೇಲ್ ಗಟ್ಟಿಸಿದ್ದಪ್ಪ ರಾಮೇನಹಳ್ಳಿ

1929 ನೇ ಅಕ್ಟೋಬರ್ ತಾ|| 10 ರಲ್ಲಿ ಜರುಗಿದ ಮೈಸೂರು ದೇಶದ ಪ್ರಥಮ ಬ್ರಾಹ್ಮಣೇತರ ಮಹಾಸಭೆಯಲ್ಲಿ ಸ್ವಾಗತಮಂಡಳಿಯ ಅಧ್ಯಕ್ಷರಾದ ರಾವ್‌ಸಾಹೇಬ್ ಎಚ್. ಚೆನ್ನಯ್ಯನವರು ಮಾಡಿದ ಭಾಷಣ.

ಮಹಿಳೆಯರೇ, ಮಹಾಶಯರೇ, ಮತ್ತು ಪ್ರತಿನಿಧಿಸೋದರರೇ,

ಈ ಮಹಾಸಭೆಯ ಅಧ್ಯಕ್ಷಪದವಿಯನ್ನು ವಹಿಸಲು ನಮ್ಮ ಪ್ರಾರ್ಥನೆಯಂತೆ ದಯೆಯಿಟ್ಟು ಒಪ್ಪಿಕೊಂಡು ದಯಮಾಡಿಸಿರುವ ಮ|| ಎ. ರಾಮಸ್ವಾಮಿ ಮೊದಲಿಯಾರ್, ಎಂ. ಎ., ಬಿ. ಎಲ್, ರವರನ್ನೂ, ಇಮ್ಮಡಿಗೆಸ್ಟ್ಸ್‌ರನ್ನೂ ನಮ್ಮ ಸಂಸ್ಥಾನವಲ್ಲ

ಪ್ರಥಮತಃ ನಡೆಯುವ ಈ ಬ್ರಾಹ್ಮಣೇತರ ಮಹಾಸಭೆಗೆ ಸ್ವಾಗತಮಂಡಲಿಯ [illegible] ಅಧ್ಯಕ್ಷನಾದ ನಾನು [illegible] ಸ್ವಾಗತಿಸುತ್ತೇನೆ. [illegible] ಕಾರ್ಯಕ್ಕೆ [illegible] ಪ್ರಯಾಣ ಮಾಡಿ [illegible] ನಿರೀಕ್ಷಿಸುತ್ತಿರುವ ನನ್ನ [illegible] ಆದರೆ, ಮನಾಧಿಕಾರಿಯಂತೆ ನ್ಯಾಯವಾಗಿ ಕಾರ್ಯ [illegible] ನನ್ನ ಸ್ವಂತ ದಯಾಗಿ [illegible] ರುವುದಕ್ಕಿಂತ ಮಹತ್ವಾದುದರಿಂದ ವಿಶ್ರಾಂತಿಯಿಂದಿರಬೇಕಾದ ಈ ನನ್ನ ಅಪರವಯಸ್ಸಿನಲ್ಲಿ ಯಾವ ನೆಪವನ್ನೂ ಹೇಳದೆ ಒಪ್ಪಿಕೊಳ್ಳಬೇಕಾಗಿಬಂದಿತು. ಈ ಸಂಸ್ಥಾನದ ಬ್ರಾಹ್ಮಣೇತರ ವರ್ಗಗಳ ಮಹಾಸಭೆಯನ್ನು ಈವರೆಗೆ ದೊಡ್ಡದಾಗಿ ನಡೆಯಿಸದೆ ಮಿತ್ರರುಗಳ ಮತ್ತು ಹಿತಚಿಂತಕರುಗಳ ಸಂಬಂಧವಾದ ಸಾಮಾನ್ಯ ಕೂಟಗಳನ್ನು ನಡೆಯಿಸುವುದರಲ್ಲಿ ಮಾತ್ರ ಸಂತೃಪ್ತರಾಗಿರುವುದು ಕಳೆದ ಹತ್ತು ವರ್ಷಗಳಿಗೆ ಮೇಲ್ಪಟ್ಟಾಗಿನಿಂದಲೂ ನಮ್ಮ ಸಂಸ್ಥಾನದಲ್ಲಿ ನಡೆದಿರುವ ಬ್ರಾಹ್ಮಣೇತರರ ಚಳವಳಿಯನ್ನು ನೋಡುತ್ತಿರುವವರಿಗೆ ಆಶ್ಚರ್ಯವಾಗಿ ತೋರದಿರದು. ಈ ಕಾರ್ಯದ ಫಲಪ್ರಾಪ್ತಿಯು ಹೇಳಿಕೊಳ್ಳುವಂತಿಲ್ಲವಾದರೂ ಅದ[illegible], [illegible] ಮಾತ್ರ ಕಡಮೆಯಾಗದೆ ಬಲವಾಗುತ್ತಿರುವುದು ಅವರಿಗೆ ಮತ್ತಷ್ಟು ಹೆಚ್ಚಾದ ಆಶ್ಚರ್ಯವನ್ನುಂಟುಮಾಡುವುದು. ಪ್ರಸಕ್ತ ಕಾಲದಲ್ಲಿ ಇಂತಹ ಮಹಾಸಭೆಯನ್ನು ನೆರೆಯಿಸುವುದರ ಆವಶ್ಯಕತೆಯನ್ನು ಕುರಿತು ಒಂದೆರಡು ಮಾತುಗಳನ್ನಾಡುವುದು ಅಪ್ರಾಸಂಗಿಕವಾಗಿರಲಾರದು. ಪ್ರಾಸ್ತವ್ಯವಾಗಿಯೂ ಅನೇಕ ಕಡೆಗಳಲ್ಲಿ ಆ ರೀತಿಯಾಗಿ ಅಭಿಪ್ರಾಯಪಡಲ್ಪಟ್ಟಿರುತ್ತದೆ.

ಕಳೆದ 10 12 ವರ್ಷಗಳಿಂದಲೂ ನಮ್ಮ [illegible] ಎಷ್ಟರಮಟ್ಟಿಗೆ ನಡೆದಿರುತ್ತವೆಂಬುದನ್ನು ಗೊತ್ತುಮಾಡಿಕೊಂಡು ಮುಂದಿನ ಅಭಿವೃದ್ಧಿಗೆ ಯಾವ ರೀತಿ ಕೆಲಸ ಮಾಡಬೇಕೆಂಬುದನ್ನು ಪರ್ಯಾಲೋಚಿಸುವುದೇ ಈ ಮಹಾಸಭೆಯನ್ನು ನೆರೆಯಿಸುವುದರ ಮುಖ್ಯೋದ್ದೇಶವಾಗಿರುತ್ತದೆ. ಸಂಪೂರ್ಣವಾಗಿ ಕ್ರಮವನ್ನನುಸರಿಸಿ ಮಾಡಲ್ಪಡಲಿಲ್ಲವಾದರೂ ನನಗೆ ತಿಳಿದಮಟ್ಟಿಗೆ ಉತ್ತಮವಾಗಿ ಮಾಡಲ್ಪಟ್ಟಿದೆ. ಈಗ ಅದಕ್ಕೆ ಮುಂದಾಣಿಕೆಯಿಂದ ಸಮರ್ಪಕವಾಗಿ ಮಾಡುವುದು ಅತ್ಯಾವಶ್ಯಕವು. ನಾವು ಮೈಸೂರಿನಲ್ಲಿ ಮಾಡುವ ಕಾರ್ಯವು ಇತರರಿಂದ ಬೇರೆಯಾಗಿರುವುದಿಲ್ಲ. ಇದಲ್ಲದೆ ಇದು ದಕ್ಷಿಣ ಹಿಂದುಸ್ಥಾನದಲ್ಲಿ ದೊಡ್ಡ ಪ್ರಮಾಣದಿಂದ ನಡೆಯುತ್ತಿರುವ ಕಾರ್ಯದ ಒಂದು ಭಾಗವಾಗಿದೆ. ನಮಗಿಂತಲೂ ಎಷ್ಟೋ ಮುಂದುವರಿಯುತ್ತಿರುವವರಾದರೂ ನಮ್ಮ ಧ್ಯೇಯದಂತೆಯೇ ಧ್ಯೇಯವುಳ್ಳವರಾಗಿರುವವರಲ್ಲಿ ನಮ್ಮುದ್ದೇಶಸಾಫಲ್ಯಕ್ಕಾಗಿ ಭ್ರಾತೃಭಾವವನ್ನು ಹುಟ್ಟಿಸುವುದಕ್ಕಿಂತಲೂ ಬೇರೊಂದುತ್ತಮ ಮಾರ್ಗವನ್ನು ನಾವು ಅನುಸರಿಸಲಾರೆವು. ಈ ಮಹಾಸಭೆಯನ್ನು ನಡೆಸುವುದರ ಆವಶ್ಯಕತೆಗೆ ಮತ್ತೊಂದು ಕಾರಣವುಂಟು. 1928ನೇ ಜುಲೈ ತಾ|| 30 ರಲ್ಲಿ ಬೆಂಗಳೂರೊಳಗೆ ದುರ್ದೈವದಿಂದ [illegible] ನಡೆದಾರಭ್ಯ ಶ್ರೀಮನ್ಮಹಾರಾಜರವರ ಪ್ರಭುತ್ವದ ಮೇಲೆ [illegible] ವು ಬಹಳ ಬಲದಿಂದ ನಡೆಸಲ್ಪಡುತ್ತಿರುವುದು ಅನ್ಯಾಯವೂ ದೇಶಾಭಿಮಾನರಹಿತವೂ ಆಗಿರುತ್ತದೆ. ಈ ಅಭಿಯೋಗವನ್ನು ಕೆಲವರು ಮಾತ್ರ [illegible] ನಡೆಸುತ್ತಿದ್ದಾರೆಂಬುದನ್ನು ನೆನೆಸಲ್ಪಡಬೇಕು. [illegible] ಮೈಸೂರಿನಲ್ಲಿ [illegible] ಜನರು ಈ ಚಳವಳದ ಗೋಜಿಗೇ ಹೋಗದೆ ಅದನ್ನು [illegible] ಆಗ್ರಹದಿಂದಲೂ ಉಪೇಕ್ಷೆಯಿಂದಲೂ ಕಾಣುತ್ತಿರುವರು. ಇದರ ವಿಳಂಬಗೆಯನ್ನು ನಮ್ಮ ಶ್ರೀಮನ್ಮಹಾರಾಜರವರ ಪರಮ ಭಕ್ತರೂ, ದೇಶಾಭಿಮಾನಿಗಳೂ ಆದ ನಾವು ತಾಳ್ಮೆಯಿಂದಲೂ ಶಾಂತಾರದಿಂದಲೂ ನಿಗ್ರಹಿಸದೆ ಬಿಟ್ಟುಕೊಡತಕ್ಕದಾಗಿಲ್ಲವು. ಆದುಕಾರಣ ಈ ಚಳವಳಿಯ ಕೃತಕಸ್ವರೂಪವನ್ನು ಹೊರಗಿನ ದೇಶದವರಿಗೆಲ್ಲ ತಿಳಿಸಿ ಅದರಿಂದ ಸಂಸ್ಥಾನದೊಳಗೆ ಇನ್ನೂ ಆಗುತ್ತಿರುವ ಘಾತುಕ ಪರಿಣಾಮವನ್ನು ಆರಿಸುವುದು ನಮ್ಮ ಒಂದು ಭಾಗದ ಜನರ ಆವಶ್ಯಕರ್ತವ್ಯವಾಗಿರುತ್ತದೆ.

ಈ ಪ್ರಯತ್ನವು ಸಂಸ್ಥಾನದಲ್ಲಿ ಆರಂಭವಾದಾರಭ್ಯ ಇದರಲ್ಲಿ ನಾನೂ ಭಾಗಿಯಾಗಿರುವುದರಿಂದ ಈ ಪ್ರಯತ್ನದ ಸಂಕ್ಷಿಪ್ತ ಚರಿತ್ರೆಯನ್ನು ಹೇಳುವುದು ಅಪ್ರಾಸಂಗಿಕವಾಗಲಾರದು. ಹಾಗೆ ಮಾಡುವುದರಲ್ಲಿ ಪೂರ್ವಭಾವಿಯಾಗಿ ಜಾತೀಯುದ್ಧಾರಕ್ಕಾಗಿ ಪ್ರಜಾಸ್ವಾತಂತ್ರ್ಯ ಪ್ರಯತ್ನವನ್ನು ಮಾಡಿದವರಲ್ಲಿ ಮುಖಂಡರಾಗಿದ್ದ ಕೆಲ [illegible] ಸ್ಮರಣೆಯನ್ನು ಮಾಡತಕ್ಕದಾಗಿದೆ. ಅವರುಗಳಲ್ಲಿ ನನ್ನ ಮಿತ್ರರಾದ ಶ್ರೀ|| ಬಸವಯ್ಯನವರು ಪ್ರಮುಖರಾಗಿದ್ದರು. ಜನತೆಯ [illegible] ಭಾಗವು ರಾಜಕೀಯ ಮತ್ತು ಸಾಮಾಜಿಕ ತೊಂದರೆಯ ಅಗಾಧ ಕೂಪದಲ್ಲಿ ಬಿದ್ದು ನರಳುತ್ತಿರುವುದನ್ನು ಅಂತು ಒಳ್ಳೇ ಕಾಲಜ್ಞಾನಿಯಂತೆ ಅದರ ನಿವಾರಣೋಪಾಯವನ್ನು ಪ್ರಥಮತಃ ಕಂಡುಹಿಡಿದವರು ಶ್ರೀ|| ಬಸವಯ್ಯನವರು. ಡಾಕ್ಟರ್ ಟಿ. ಎಂ. ನಾಯರ್‌ರವರು ಮತ್ತು ಸರ್ ಪಿ. ತ್ಯಾಗರಾಜಸೆಟ್ಟರು ಮದ್ರಾಸಿಗೆ ಹೇಗಿದ್ದರೋ ಹಾಗೆ ಮ|| ಬಸವಯ್ಯನವರು ನಮ್ಮ ಮೈಸೂರಿಗಿದ್ದರು. ಆದುಕಾರಣವೇ ಇವರು ಮೈಸೂರಿನ ಜನೋದ್ಧಾರಕಾರ್ಯಜನಕರೆಂದು ಹೇಳಬೇಕಾಗಿದೆ. ಅವರ ಕಾಲಜ್ಞಾನದ ದಿವ್ಯದೃಷ್ಟಿಯು [illegible] ವರ್ಣನಾತೀತ [illegible] ಶಕ್ತಿ, ಸ್ವಾರ್ಥತ್ಯಾಗಬುದ್ಧಿ, ಅದ್ಭುತ ಸಂಘಟನ ಸಾಮರ್ಥ್ಯ, ಕೆಲಸದ ಕಾರ್ಯದಕ್ಷತೆ ಸ್ಥಿರಮನಸ್ಸು ಈ ಗುಣಗಳೆಲ್ಲವೂ [illegible] ದುರ್ದೈವದಿಂದ ವಿಧಿವಶರಾದರು. ಅಭೂತಪೂರ್ವವಾದ ಧೈರ್ಯ, ವಿಶೇಷ [illegible] ಸಹಾನುಭೂತಿ ಮತ್ತು ಉತ್ಸಾಹಗಳನ್ನು [illegible] ಗುಣಗಳ ಪೋಷಕರಾಗಿದ್ದ [illegible] ಮುಂದಾಳುಗಳಾಗಿದ್ದರಲ್ಲದೆ [illegible] ವಿಶೇಷವಾಗಿ [illegible] ಧೈರ್ಯದಿಂದ ಕಾದಾಡುವವರಾಗಿದ್ದರು. ಇವರು ಸಹ ತಮ್ಮ ಚಿಕ್ಕ ವಯಸ್ಸಿನಲ್ಲೇ ಗತಿಸಿದ್ದು ನಮ್ಮ ದುರದೃಷ್ಟವು. ಇನ್ನು ಆ ಚಿರಸ್ಮರಣೀಯರಾದ ಸರ್ ಎಂ. ಕಾಂತರಾಜ ಅರಸಿನವರು ಜಗದ್ವಿಖ್ಯಾತ ಶ್ರೀಮಂತರಾಗಿದ್ದರೂ ಪ್ರಜೆಗಳ ಒಳ್ಳೇ ಸ್ನೇಹಿತರಾಗಿದ್ದರು. ಇಂತಹವರನ್ನು ಕಳೆದುಕೊಂಡುದಕ್ಕಾಗಿ ನಾವು ಬಹಳವಾಗಿ ಚಿಂತಿಸುತ್ತೇವೆ. ಇವರು ನಮ್ಮ ಸಂಸ್ಥಾನದಲ್ಲಿ ಮುಖ್ಯ ಧನವಂತರಾಗಿದ್ದರೂ ಹಿಂದುಳಿದವರಲ್ಲೂ, ನಿಮ್ನ ಜಾತಿಗಳಲ್ಲೂ ವಿಶೇಷ ಕನಿಕರವುಳ್ಳವರಾಗಿದ್ದರು. ನಮ್ಮ ಸಂಸ್ಥಾನದ ಅವರ ಸುಪ್ರಖ್ಯಾತ ದಿವಾನಗಿರಿಯಲ್ಲಿ ಪ್ರಜೆಗಳು ವಿಶೇಷ ಪ್ರಯೋಜನವನ್ನು ಹೊಂದಿದರು. ಆಕ್ಟಿಂಗ್ ದಿವಾನರಾಗಿದ್ದು ನಿವೃತ್ತಿಯನ್ನು ಹೊಂದಿದ್ದ ಮಿ. ಹೀರ್-ಉಲ್-ಮುಲ್ಕ್ ಮಾರ್ [illegible] ರವರ ನಿಧನವು ಸಹ ಬಹಳ ವ್ಯಸನಕರವಾಗಿದೆ. ಇವರು ಉದ್ಯೋಗದಲ್ಲಿದ್ದಾಗಲೂ, ಅದನ್ನು ಬಿಟ್ಟಮೇಲೂ ಜನತೆಯ ಅಭಿವೃದ್ಧಿಗಳಲ್ಲಿ ತಮ್ಮ [illegible] ಸಹಾನುಭೂತಿಯನ್ನು ವ್ಯಕ್ತಪಡಿಸುತ್ತಿದ್ದರು. ಶ್ರೀರಂಗಪಟ್ಟಣದ ಮ|| ಎಸ್. ವಿ. ಜವರಯ್ಯನವರು ತಮ್ಮನ್ನು ಪ್ರತಿಭಟಿಸುತ್ತಿದ್ದ ಪ್ರಬಲ ಶತ್ರುಗಳನ್ನು ನಿಗ್ರಹಿಸಿ ಹಿಂದುಳಿದ ಮತ್ತು ತಿರಸ್ಕೃತರಾದ ಜನರ ಮುಖ್ಯವಾಗಿ ಮೈಸೂರು ಡಿಸ್ಟ್ರಿಕ್ಟ್ ಜನರ ಮನಸ್ಸಿನಲ್ಲಿ ಧೈರ್ಯಸ್ಥೈರ್ಯವನ್ನುಂಟುಮಾಡಿ ಹಿಂದುಳಿದ ಜನರ ಉದ್ಧಾರ ಕಾರ್ಯದಲ್ಲಿ ಹೋರಾಡುತ್ತಿದ್ದು ಅಕಾಲಮೃತ್ಯುವಿನ ಪಾಲಾದ ವಿಚಾರವು ಮರೆಯತಕ್ಕದಾಗಿಲ್ಲ. ಕಳೆದ 30 ವರ್ಷಗಳಿಂದ ತಮ್ಮಂತ್ಯದವರೆಗೆ [illegible] ಪ್ರಜಾಪ್ರತಿನಿಧಿಸಭಾ ಸದಸ್ಯರಾಗಿಯೂ ನಮ್ಮುದ್ಯಮದಲ್ಲಿ ಆಸಕ್ತರಾಗಿಯೂ ಇದ್ದ ತಿಪಟೂರು ತಾಲ್ಲೂಕು ಕಡಬದ ಮ|| [illegible] ರೇಗೌಡರು ಕಳೆದತಿಂಗಳಲ್ಲಿ ವಿಧಿವಶರಾದರೆಂದು [illegible] ವ್ಯಸನವಾಗುತ್ತದೆ. ಇವರು ನಮ್ಮ ಕಾರ್ಯದಲ್ಲಿ ಇತ್ತೀಚೆಗೆ [illegible] ಗಿದ್ದರಲ್ಲದೆ ಒಳ್ಳೇ ಧರ್ಮಿಷ್ಠರಾಗಿಯೂ ಇದ್ದರು. [illegible] ಧರ್ಮಕಾರ್ಯವನ್ನು ಮಾಡಿಯೂ, ಇನ್ನೂ [illegible] ಯೂ ಇದ್ದ ಕಬ್ಬಳ್ಳಿ ಸಾಹುಕಾರ್ ಮ|| [illegible] ಪ್ಪನವರ ಮತ್ತು ನಮ್ಮ ಕಾರ್ಯದಲ್ಲಿ ಸಹಾಯಕರಾಗಿದ್ದ ರಾವ್ ಸಾಹೇಬ್ ನಲ್ಲಪ್ಪನವರ ನಿಧನದಿಂದ ಅಪಾರ ನಷ್ಟವಾಗಿರುವುದೆಂದು ತಿಳಿಸಲು ಅತ್ಯಂತ ಖೇದವಾಗುತ್ತದೆ. ರಾಜಕಾರ್ಯ [illegible] ರಾದರೂ ಮದ್ರಾಸಿನ ಮುಂದಾಳುಗಳೂ ಆದ ಆ ಪ್ರಖ್ಯಾತ ಪನಗಲ್ ರಾಜರವರು ಕಳೆದ ವರ್ಷ ವಿಧಿವಶರಾದುದಕ್ಕಾಗಿ ನಮ್ಮ ಮದ್ರಾಸಿನ ಸಹೋದರರುಗಳೊಡನೆ ನಾವೂ ನಮ್ಮ ಅನುತಾಪವನ್ನು ಪ್ರದರ್ಶಿಸದೆ ಇರಲಾರೆವು. ಈ ರಾಜಾ ಸಾಹೇಬರ ಪರಿಚಯವನ್ನು [illegible] ಮಾಡಿಕೊಳ್ಳುವ ಭಾಗ್ಯವು ನನಗುಂಟಾಗಿದ್ದಿತು. ಜನತೆಯ ಅಭಿವೃದ್ಧಿಯನ್ನು ನೆರವೇರಿಸುವಲ್ಲಿ ಅವರ ಆತ್ಮವು ಸದಾ ಎಷ್ಟರಮಟ್ಟಿಗೆ [illegible] ವಾಗಿಯೂ ಆದರಪೂರ್ವಕವಾಗಿಯೂ ತವಕಪಡುತ್ತಿದ್ದಿತೆಂಬುದನ್ನು ನಾನು [illegible] ಅವರಿಗೆ ಹಿಂದುಳಿದ ವರ್ಗದವರ ಉದ್ಧಾರ ಕಾರ್ಯ [illegible] ಧರ್ಮ [illegible] ಮದ್ರಾಸಿನಲ್ಲಿ [illegible] ಪರಿಣಮಿಸುತ್ತಿದೆ. ಮುಖ್ಯ ನಾಯಕ [illegible] ಕಾದ ಈ ಸದ್ಗುಣಗಳು ನಮ್ಮುದ್ಯಮ [illegible] ಯಾವಾಗಲೂ [illegible] ಸ್ವರ್ಗವಾಸಿಗಳ ಸ್ಮರಣೆಯು ನಾವು ನಮ್ಮ ಕಾರ್ಯ [illegible] ವುದರಲ್ಲಿ ಸಹಾಯಕ್ಕಾಗುವುದಾಗಲಿ.

ಮೈಸೂರಿನಲ್ಲಿ ಕೈಕೊಳ್ಳಲ್ಪಟ್ಟಿರುವ [illegible] ಕಾರ್ಯಕ್ಕೆ ನನ್ನ ಮಿತ್ರರಾದ ಮ|| [illegible] ಕರೆಂದು ಹೇಳುತ್ತೇನೆ. ಈ ಕಾರ್ಯವು ದುರಾಕ್ಷೇಪಕರ [illegible] ಳೂ ತಪ್ಪು ತಿಳುವಳಿಕೆಯ ಗುರಿಯಾಗಿದೆ. ಈಗ ಅದನ್ನು ವಿಸ್ತರಿಸಿ ಸುಲಭವಾಗಿ ಹೇಳುತ್ತೇನೆ. ಈ [illegible] ಬೇಧವನ್ನು ಕಲ್ಪಿಸತಕ್ಕವರೆಂದು [illegible] ಮೇಲೆ ದ್ವೇಷದ ಮನಸ್ಸನ್ನು [illegible] ಕಥೆಯಾಗಿರಲಿಲ್ಲವು. ನಮ್ಮ ಉದ್ದೇಶವನ್ನು [illegible] ಅವಮಾನಗೊಳಿಸಬೇಕೆಂದು ಸ್ವಾರ್ಥಪರರು ಮಾಡುತ್ತಿದ್ದ ಪ್ರಯತ್ನವು ಈಗಲೂ ತಪ್ಪಿಲ್ಲವು. ಅವರ ಪ್ರತಿಭಟನ ಕಾರ್ಯವನ್ನು ನಾನು [illegible] ಕಾಲವನ್ನು ನೋಡಿರುತ್ತೇನೆ ಮತ್ತು ಅವರು ನಮ್ಮುದ್ಯಮವನ್ನು ಪ್ರತಿಭಟಿಸಿದರೂ ಅದು ಧರ್ಮವಾದುದೆಂದು ಸಾಧಿಸಲು ಸಹಾಯಕವಾಗಿರುತ್ತದೆ. ತಮ್ಮ ಕಾರ್ಯದ ದೌರ್ಬಲ್ಯವನ್ನು, ನಮ್ಮ ಉದ್ದೇಶದ ಪ್ರಾಬಲ್ಯವನ್ನೂ ನಮ್ಮ ಅಹಿತರು ಚೆನ್ನಾಗಿ ಬಲ್ಲವರಾಗಿದ್ದರೂ, ಈಗಿನ ಪ್ರಜಾಸ್ವಾತಂತ್ರ್ಯ ಪ್ರಯತ್ನದಿಂದ [illegible] ವಾಗಿ ನುಚ್ಚುನೂರಾಗಿ ಹೋಗುತ್ತಿರುವ ತಮ್ಮ ಸ್ವಾತಂತ್ರ್ಯಾಧಿಕಾರವನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿರುವವರ ಕೋರಿಕೆ ತಕ್ಕ ಸಮಾಧಾನವನ್ನು ಹೇಳಲು ಇದು ಸಮಯವಲ್ಲ. ಸಮಸ್ತ ಲಾಭವನ್ನೂ ಗುತ್ತಿಗೆ ಹಿಡಿದು ಅನುಭವಿಸುತ್ತಿರುವವರು ಸ್ವದೇಶಾಭಿಮಾನವನ್ನು [illegible] ಸ್ವಾತಂತ್ರ್ಯ [illegible] ಧರ್ಮಶಾಸ್ತ್ರವನ್ನು [illegible] ಗೀತೆಯ ಮತ್ತು ವೇದದ ಉದಾತ್ತತತ್ತ್ವಬೋಧೆಗೆ ಸಂಪೂರ್ಣ ವಿರೋಧವಾಗಿದೆ.

ಉತ್ತಮ ವಿಧದ ವ್ಯವಸಾಯದ ಮುಟ್ಟುಗಳಿಗೆ ಈಚೆಗೆ ಎಲ್ಲೆಲ್ಲಿಯೂ ಹೆಚ್ಚು ಗಿರಾಕಿಯು ದೊರೆಯುತ್ತಾ ಇದೆ. ಇಲಾಖೆಯವರೇ ಪ್ರಕೃತ ವರ್ಷದಲ್ಲಿ ಇಂತಹ ಉತ್ತಮ ವಿಧದ 3,000 ನೇಗಿಲುಗಳನ್ನು ವಿಕ್ರಯಿಸಿದರು. ಇದಕ್ಕೆ ಹಿಂದಿನ ವರುಷ 1,600 ನೇಗಿಲುಗಳನ್ನು ಮಾತ್ರ ಅವರು ವಿಕ್ರಯಿಸಿದ್ದರು. ಇದಲ್ಲದೆ, ಉತ್ತಮವಾದ ಕಬ್ಬಿನ ಬೀಜಗಳನ್ನೂ, ಒಳ್ಳೆಯ ಬೀಜದ ಒಕ್ಕಲನ್ನೂ, ಜನರ ರೋಗಾಣುವು ಬಲವಾಗಿ, ಅವುಗಳಿಗೆ ವಿಶೇಷ ಹೆಚ್ಚಾಗಿ ಗಿರಾಕಿ ಇದ್ದಿತು. ಪರಸ್ಪರ ಸಹಾಯಸಂಘಗಳಿಂದಲೂ, ಗ್ರಾಮಸಂಘಗಳಿಂದಲೂ ವ್ಯವಸಾಯದ ಇಲಾಖೆಯ ಕೆಲಸಕ್ಕೆ ಹೆಚ್ಚು ಹೆಚ್ಚಾಗಿ ಸಹಾಯವಾಗುತ್ತಾ ಬಂದಿದೆ. ಅನೇಕಲು ತಾಲ್ಲೂಕು ಮತ್ತು ಗೌರಿಬಿದನೂರು ತಾಲ್ಲೂಕುಗಳು— ಇವುಗಳಲ್ಲಿಂತು, ವ್ಯವಸಾಯದ ಮುಟ್ಟುಗಳು, ಬೀಜದ ಧಾನ್ಯಗಳು ಮತ್ತು ಗೊಬ್ಬರ ಇವುಗಳನ್ನು ವಿಕ್ರಯಿಸುವ ಕೆಲಸವನ್ನು ಪೂರ್ತಿಯಾಗಿ ಪರಸ್ಪರ ಸಹಾಯಸಂಘಗಳಿಗೇ ಒಪ್ಪಿಸಲಾಗಿತ್ತು.

ಇಲಾಖೆಯ ಕೆಳಗೆ ವ್ಯವಸಾಯದ ವಿಷಯಗಳೊಂದನ್ನು (ಎಂದರೆ ವ್ಯವಸಾಯದ ಕಾಲೇಜಿನಿಯೊಂದನ್ನು) ಸ್ಥಾಪಿಸುವುದಕ್ಕಾಗಿ ಒಂದು ಏರ್ಪಾಡನ್ನು ಮಂಜೂರುಮಾಡಲಾಗಿದೆ. ಈ ಕೆಲಸವು ಶೀಘ್ರದಲ್ಲಿಯೇ ಪ್ರಾರಂಭವಾಗುವುದು.

ಸಂಸ್ಥಾನದಲ್ಲಿ ದನಕರುಗಳ ತಳಿಯನ್ನು ಉತ್ತಮಪಡಿಸುವ ವಿಚಾರವನ್ನು ಸಮಗ್ರವಾಗಿ ಪರ್ಯಾಲೋಚಿಸಿ ಸಲಹೆಗಳನ್ನೊಪ್ಪಿಸುವ ಕೆಲಸವನ್ನು ಒಂದು ಸಮಿತಿಯವರಿಗೆ ವಹಿಸಲಾಯಿತು. ಅವರ ವರದಿಯು ಪರ್ಯಾಲೋಚನೆಯಲ್ಲಿದೆ.

ಪಶುವೈದ್ಯ ಇಲಾಖೆ

ಈ ಇಲಾಖೆಯವರು ಪ್ರಕೃತ ವರ್ಷದಲ್ಲಿ ದನಗಳಿಗೆ ದೊಡ್ಡ ರೋಗವೇ ಮೊದಲಾದ ಅಂಟುರೋಗಗಳು ಪ್ರಸರಿಸದಂತೆ ಮಾಡುವುದಕ್ಕಾಗಿ ವಿಶೇಷವಾದ ಪ್ರಯತ್ನಗಳನ್ನು ನಡೆಸಿದರು. ಇದೇ ಈ ಇಲಾಖೆಯಲ್ಲಿ ನಡೆದ ಮುಖ್ಯ ಕೆಲಸವೆನ್ನಬಹುದು. ಈ ರೋಗಗಳು ತಗಲದಂತೆ 1927-28 ರಲ್ಲಿ 101,098 ದನಗಳಿಗೆ "ಇನಾಕ್ಯುಲೇಷನ್" ಮಾಡಿದ್ದರಲ್ಲಿ, 1928-29 ರಲ್ಲಿ 208,077 ದನಗಳಿಗೆ "ಇನಾಕ್ಯುಲೇಷನ್" ಮಾಡಲಾಯಿತು. ಬೀರೂರು, ಹಾಸನ, ಹೆಗ್ಗಡದೇವನಕೋಟೆ, ಹಿರಿಯೂರು ಮತ್ತು ದೇವನಹಳ್ಳಿ ಈ 5 ಸ್ಥಳಗಳಲ್ಲಿಯೂ ಹೊಸದಾಗಿ ಪಶುವೈದ್ಯಶಾಲೆಗಳನ್ನು ಸ್ಥಾಪಿಸಲಾಯಿತು.

ಕುರಿಗಳಿಗೂ, ದನಕರುಗಳಿಗೂ, ಸಂಬಂಧಪಟ್ಟ ವಿಚಾರಗಳಲ್ಲಿ ಪರಿಶೋಧನೆಯ ಕೆಲಸವನ್ನು ನಡೆಸಿ, ಹೊಸಹೊಸ ಅಂಶಗಳನ್ನು ಕಂಡುಹಿಡಿಯುವುದಕ್ಕಾಗಿ ಇಬ್ಬರು ಅಸಿಸ್ಟೆಂಟ್ ಸೂಪರಿಂಟೆಂಡೆಂಟರುಗಳನ್ನು ನೇಮಿಸಲಾಯಿತು. ದನಕರುಗಳ ಕೆಲವು ಮುಖ್ಯವಾದ ರೋಗಗಳನ್ನು ಕುರಿತು ಪರಿಶೀಲನೆಯನ್ನು ನಡಿಸಲು ಆರಂಭ ಪ್ರಯತ್ನವೊಂದು ಈ ಮೂಲಕ ನಡೆಯುತ್ತಲಿರುವುದಾಗಿದೆ.

ವಿದ್ಯಾಭ್ಯಾಸ

ಪ್ರಕೃತ ವರ್ಷದಲ್ಲಿ ಸಂಸ್ಥಾನದಲ್ಲಿ ವಿದ್ಯಾಭ್ಯಾಸದ ಸಂಬಂಧವಾಗಿ ಮಾಡಿರುವ ಅತಿ ಮುಖ್ಯವಾದ ಏರ್ಪಾಟುಗಳಲ್ಲಿ ಕೆಲವನ್ನು ಸೂಚಿಸುವುದಾದರೆ ಅವು ಯಾವುವೆಂದರೆ.

(1) ಮೈಸೂರು ವಿದ್ಯಾಭ್ಯಾಸಕ್ಕೆ ದಿನೇದಿನೇ ಅವಶ್ಯಕತೆಯು ಹೆಚ್ಚುತ್ತಿದೆ. ಇದಕ್ಕಾಗಿ ತಕ್ಕ ಅನುಕೂಲತೆಯನ್ನು ಕಲ್ಪಿಸುವುದಕ್ಕೋಸ್ಕರ "ಗ್ರಾಂಟ್ ಇನ್ ಏಡ್" ಪದ್ಧತಿಯನ್ನು ಅನುಸರಿಸಿ ಸಾಗರ, ದೊಡ್ಡಬಳ್ಳಾಪುರ ಮತ್ತು ಚಿಂತಾಮಣಿಯಲ್ಲಿ ಮ್ಯುನಿಸಿಪಲ್ ಹೈಸ್ಕೂಲುಗಳನ್ನು ಏರ್ಪಡಿಸಲಾಯಿತು. ಕೋಲಾರ ಸಾಲಿನಲ್ಲಿ ಇದೇ ರೀತಿಗಳಲ್ಲಿ ಮಾಸ್ತಿ ಹಳ್ಳಿಯಲ್ಲಿಯೂ ಹೋಳೆನರಸೀಪುರದಲ್ಲಿಯೂ ಮತ್ತೆರಡು ಹೈಸ್ಕೂಲುಗಳನ್ನು ಏರ್ಪಡಿಸಲಾಗಿದೆ. ಮುನಿಸಿಪಾಲಿಟಿಗಳು ಮುಂತಾದ ಸ್ಥಳೀಯ ಸಂಸ್ಥೆಗಳವರು, ಹೈಸ್ಕೂಲು ವಿದ್ಯಾಭ್ಯಾಸಕ್ಕೆ ತಮ್ಮ ನೆರವನ್ನು ಕೊಟ್ಟು ಹುಲುಸಾಗಿ ಬೆಳೆಸುವುದಕ್ಕೆ ಬೆಂಬಲವನ್ನು ಪಡೆದಿದ್ದು ಮುಂದೆ ಒದಗಿ ಬರುವ ಸಂದರ್ಭಗಳಲ್ಲಿ ಸರ್ಕಾರದವರು ಆಯಾ ಸ್ಥಳಗಳಲ್ಲಿ ಈ ವಿಧವಾಗಿ ಹೈಸ್ಕೂಲುಗಳನ್ನು ಏರ್ಪಡಿಸಲು ಅವರಿಗೆ ಅನುಮತಿಯನ್ನು ಕೊಡುವರು. ಅಲ್ಲದೆ ವೆಚ್ಚದ ಒಂದು ಭಾಗವನ್ನು ಸರ್ಕಾರದವರು ವಹಿಸುವರು. ಆದರೆ ಒಂದು ಷರತ್ತನ್ನು ವಿಧಿಸುವರು. ಆ ರೀತಿ ಮಾಡುವುದು. ಅಂಥ ಸ್ಕೂಲುಗಳಲ್ಲಿ ವ್ಯಾಸಂಗಕ್ರಮವು ಸಮರ್ಪಕವಾಗಿರುವಂತೆ ಸ್ಥಳೀಯ ಸಂಸ್ಥೆಯವರು ನಡೆಸಿಕೊಂಡುಬರಬೇಕೆಂಬುದೇ ಆ ಷರತ್ತು.

(2) ಸ್ಕೂಲುಗಳಲ್ಲಿನ ವಿದ್ಯಾರ್ಥಿಗಳ ಆರೋಗ್ಯಸಂರಕ್ಷಣೆಗಾಗಿ ಮಾಡಿರುವ ಏರ್ಪಾಡನ್ನು ಮತ್ತಷ್ಟು ಹೆಚ್ಚಿಸಿ ಕೆಲವು ಇತರ ಸ್ಥಳಗಳಲ್ಲಿಯೂ ಆಚರಣೆಗೆ ತಂದುದು.

(3) ಮಹಿಳೆಯರಿಗಾಗಿ ಶಿಕ್ಷಣ ಕೊಡುವುದಕ್ಕಾಗಿ ಪ್ರತ್ಯೇಕವಾದ ಒಂದು "ಟ್ರೈನಿಂಗ್ ಕಾಲೇಜನ್ನು" ಏರ್ಪಡಿಸಿದುದು.

(4) ಹಿಂದುಳಿದ ಪಂಗಡಗಳ ಪ್ರೋತ್ಸಾಹಕ್ಕಾಗಿ ಒದಗಿಸಿದ್ದ ವಿದ್ಯಾರ್ಥಿವೇತನದ ಮೊಬಲಗಿನ ಮೊತ್ತಕ್ಕೆ ಮತ್ತೆ 50,000 ರೂ ಗಳನ್ನು ಕೊಡುವುದನ್ನು ಮಂಜೂರುಮಾಡಿದುದು.

(5) ಬೆಂಗಳೂರಿನಲ್ಲಿ ಆದಿಕರ್ಣಾಟಕ ಪಂಗಡದ ವಿದ್ಯಾರ್ಥಿನಿಯರಿಗಾಗಿ ಒಂದು "ಬೋರ್ಡಿಂಗ್ ಹೌಸನ್ನು" ಹಾಗೂ ಅನುಕೂಲಗಳನ್ನು ಕಲ್ಪಿಸಿರುವ "ಬೋರ್ಡಿಂಗ್ ಹಾಸ್ಟೆಲನ್ನು" ಒಂದನ್ನು ಏರ್ಪಡಿಸಿರುವುದು.

(6) ಗ್ರಾಮಾಂತರ ಪ್ರದೇಶಗಳಲ್ಲಿ ಪಾಠಶಾಲೆಗಳ ಕಟ್ಟಡಗಳಿಗಾಗಿ ಜನಗಳು "ಕಂಟ್ರಿಬ್ಯೂಷನು" ಗಳನ್ನು (ಸಹಾಯದ್ರವ್ಯವನ್ನು) ಸಲ್ಲಿಸಿರುವ ಊರುಗಳಲ್ಲಿ ಕಟ್ಟಡಗಳನ್ನು ಕಟ್ಟಿಸುವುದಕ್ಕಾಗಿ 1928-29ನೆಯ ಸಾಲಿಗೆ 15,000 ರೂ ಮೊತ್ತವನ್ನು ಮಂಜೂರುಮಾಡಿದುದು.

ಇವು ಅಲ್ಲದೆ ಪ್ರಕೃತ ವರ್ಷದಲ್ಲಿ ಆದರಿಸಿದ ಏರ್ಪಾಡುಗಳಲ್ಲಿ ಅತಿ ಮುಖ್ಯವಾದ ಏರ್ಪಾಡುಗಳು.

ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿನ ಪ್ರಾಥಮಿಕ ವಿದ್ಯಾಭ್ಯಾಸ ಸಂಬಂಧವಾದ ಆಡಳಿತದಲ್ಲಿನ ಕೆಲವು ನ್ಯೂನತೆಗಳನ್ನು ಸರಿಪಡಿಸುವುದಕ್ಕಾಗಿ 1929ನೆಯ ನೆಯ ಸಾಲಿನಲ್ಲಿ ಸರ್ಕಾರದವರು ಹುಕುಂ ಸಾದರ್ಮಾಡಿದರು. ಈ ಹುಕುಂ ಮೇರೆಗೆ ಪ್ರಾಥಮಿಕ ವಿದ್ಯಾಭ್ಯಾಸದ (ಅಂದರೆ, ಪ್ರೈಮರಿ ವಿದ್ಯಾಭ್ಯಾಸದ) ಆಡಳಿತವು ಒಂದು ಪ್ರತ್ಯೇಕ ಕಮಿಟಿಗೆ ವಹಿಸಲ್ಪಟ್ಟು ಸಿಟಿ ಮುನಿಸಿಪಾಲಿಟಿಗಳ ಮೇಲ್ವಿಚಾರಣೆಯಲ್ಲಿ ನಡೆಯುತ್ತಿರುವ ಯೋಜನೆಯನ್ನು ಜಾರಿಗೆ ತರುವಂತೆ ಮುನಿಸಿಪಾಲಿಟಿಯವರು ನೀಡಿ ನಿರ್ವಹಿಸಬೇಕು ಸಹ ವಿದ್ಯಾಲಯ ಸಹ ದಸ್ತುಗಳು, ವ್ಯಾಸಂಗಕ್ರಮವು, ಪಠ್ಯಪುಸ್ತಕಗಳು ಇವುಗಳ ಪರಿಶೀಲನೆ ವ್ಯವಸ್ಥೆ ಮಾಡುವ ಅಧಿಕಾರವು ಮುನಿಸಿಪಾಲಿಟಿಗಳಿಗೆ ಪೂರ್ಣ ವಹಿಸಲ್ಪಟ್ಟಿವೆ

ಶಾಲಾಶಾಲೆಗಳಲ್ಲಿ ವ್ಯಾಸಂಗಶಾಲೆ, ಲಾಬೊರೇಟರಿ, ಪಠನಮಂದಿರ ದಿನವೊಂದಕ್ಕೆ [illegible] ಗಂಟೆಗಳ ಕಾಲ ತೆರೆದಿರಬೇಕೆಂದು [illegible] ಧ್ಯಾಯರ ಮತ್ತು ವಿದ್ಯಾರ್ಥಿಗಳ ಸೌಕರ್ಯಕ್ಕೆ ಇವುಗಳು [illegible] ನಿವಾಸ ಈ ಮೊದಲಾದವುಗಳು [illegible] ಬೇಕಾಗಿದೆ. [illegible]

ಹಿಂದುಳಿದವರಲ್ಲಿ ಲೌಕಿಕ ಶಿಕ್ಷಣವನ್ನು ಕಲಿಸತಕ್ಕ [illegible] ಗಳನ್ನು ನಡೆಸಬೇಕೆಂದು [illegible] ಪ್ರಜಾಪ್ರತಿನಿಧಿ ಸಭೆಯವರೂ ಅರಿಕೆ ಮಾಡಿಕೊಂಡಿರುತ್ತಾರೆ. ಅಲ್ಲದೆ ಈ ತರಗತಿಗಳ ವಿಷಯದಲ್ಲಿ ವಿದ್ಯಾರ್ಥಿಗಳಿಗೆ ಮಮತೆಯೂ ಇದೆ. ಆದಕಾರಣ [illegible] ಬರುವ ತರಗತಿಗಳನ್ನು ಮುಂದೆಯೂ ನಡೆಸಿಕೊಂಡು ಬರುವುದಕ್ಕೂ ಮತ್ತು ಇತರ ಗ್ರಾಮಾಂತರ ಪ್ರದೇಶದ [illegible] ಸ್ಕೂಲುಗಳಲ್ಲಿ ಅಂಥ ತರಗತಿಗಳನ್ನು ಹೊಸದಾಗಿ ಏರ್ಪಡಿಸುವುದಕ್ಕೂ ಸರ್ಕಾರದವರು ಮಂಜೂರಾತಿಯನ್ನು ದಯಪಾಲಿಸಿರುತ್ತಾರೆ.

ಮತ್ತೆ [illegible] ಹೋದಲ್ಲಿ ಅವರನ್ನು [illegible] ಸೇರಿಸಿಕೊಳ್ಳುವುದಿಲ್ಲವೆಂಬ ನಿಯಮವನ್ನು [illegible] ಈ ನಿರ್ಬಂಧವನ್ನು ಪರೀಕ್ಷಾರ್ಥವಾಗಿ ಅಳವಡಿಸಿ ಅದರ ಪರಿಣಾಮವನ್ನು ಪರಿಶೀಲಿಸಿ ನೋಡಬೇಕೆಂದು ಯೋಚನೆ ಮಾಡಿದೆ.

ವಿಶ್ವವಿದ್ಯಾನಿಲಯ

[illegible] ವರ್ಷದಲ್ಲಿ ಹಿಂದುಳಿದ ಪಂಗಡಗಳ ವಿದ್ಯಾರ್ಥಿವೇತನಗಳಿಗಾಗಿ ವಿಶ್ವವಿದ್ಯಾನಿಲಯಕ್ಕೆ [illegible] ರೂ. ಗಳ ಹೆಚ್ಚಿಗೆ ಮೊತ್ತವನ್ನು ಮಂಜೂರು ಮಾಡಲಾಯಿತು. [illegible] ವಿದ್ಯಾರ್ಥಿವೇತನಗಳನ್ನು [illegible] ವಿಶ್ವವಿದ್ಯಾನಿಲಯದವರಿಗೆ ಇದರ ದೆಸೆಯಿಂದ ಸಾಧ್ಯವಾಯಿತು. [illegible]

ವಿಶ್ವವಿದ್ಯಾನಿಲಯದಲ್ಲಿ ನಾನಾ ತರಗತಿಗಳಿಗೆ [illegible] ಫೀಜುಗಳನ್ನು ಪರೀಕ್ಷೆಗಳಿಗೆ [illegible] ಫೀಜುಗಳನ್ನು [illegible]

ಬೊಂಬಾಯಿ ಮದರಾಸು ಮೊದಲಾದ [illegible] ವಿಶ್ವವಿದ್ಯಾನಿಲಯಗಳಲ್ಲಿ [illegible]

ಜಮೀನು ಅಡಮಾನದ ಬ್ಯಾಂಕುಗಳು

ಜಮೀನು ಅಡಮಾನಗಳ ಒಂದು ಪ್ರಥಮ [illegible] (ಸೆಂಟ್ರಲ್ ಬ್ಯಾಂಕನ್ನು) ಬೆಂಗಳೂರಿನಲ್ಲಿ ಸ್ಥಾಪಿಸಲು [illegible] ಸರ್ಕಾರದವರು ಮಂಜೂರಾತಿಯನ್ನು ಕೊಟ್ಟರು. [illegible]

ವ್ಯವಸಾಯಕ್ಕೆ ಸಂಬಂಧಪಟ್ಟ [illegible] ರಾಯಲ್ ಕಮಿಷನ್ [illegible]

[illegible]

ಜಮೀನು ಅಡಮಾನದ ಸೆಂಟ್ರಲ್ ಕೋ ಆಪರೇಟಿವ್ ಬ್ಯಾಂಕೊಂದನ್ನು [illegible] ಬೆಂಗಳೂರಿನಲ್ಲಿ ಸ್ಥಾಪಿಸಬೇಕೆಂಬ [illegible]

ಕೈಗಾರಿಕೆಗಳು ಮತ್ತು ಕಾರ್ಖಾನೆಗಳು

[illegible] ಇಂಜಿನಿಯರಿಂಗ್ ವರ್ಕ್‌ಷಾಪ್ [illegible] ವರ್ಕ್‌ಶಾಪಿನ [illegible]

ಕೃಷ್ಣರಾಜಸಾಗರದ ಬಯಲಿನಲ್ಲಿ ಕಬ್ಬಿನ ವ್ಯವಸಾಯವನ್ನು [illegible] ಸರ್ ಆಲ್‌ಫ್ರೆಡ್ ಚಾಟರ್ಟನ್‌ರವರು [illegible]

[illegible] ಕೈಗಾರಿಕೆ ಮತ್ತು ವಾಣಿಜ್ಯದ ಇಲಾಖೆಯ [illegible]

ಕಾರ್ಖಾನೆಗಳಲ್ಲಿ ದುಡಿಯುವ ಕೆಲಸಗಾರರಿಗೆ [illegible]

ಕುಡಿಯುವ ನೀರಿನ ಬಾವಿಗಳು

ನಮ್ಮ ದೇಶದಲ್ಲಿ ಶುದ್ಧವಾದ ಕುಡಿಯುವ ನೀರು [illegible] ಬಾವಿಗಳನ್ನು [illegible]

[illegible] ಜಲವನ್ನು ಒದಗಿಸುವ [illegible] ಬಾವಿಗಳ [illegible]

ಸರ್ಕಾರದವರೇ ಜಲಸಂಪತ್ತಿಯನ್ನು ಒದಗಿಸುವ ಭಾಗದಲ್ಲಿ [illegible]

[illegible]

ಜಲವಸತಿಯನ್ನು ಒದಗಿಸುವ ಈ ವಿಷಯ [illegible] ಈ ಭಾಗದಲ್ಲಿ ನಾವು ಕೆಲಸವನ್ನು ನಡೆಸಬೇಕು ಹೇಗೆ ಮಾಡಬೇಕಾದುದು ಅತ್ಯಾವಶ್ಯಕವೆಂದು ನನ್ನ ಮನಸ್ಸಿಗೆ ತೋರುತ್ತದೆ.

ವಾಗಿಯೇ ಇದೆ. ಅಲ್ಲದೆ, ಆದಾಯ ಅಂದಾಜುಗಳಿಂದ ಸರಿದೂಗಬೇಕಾಗಿದೆ. ಇದಕ್ಕಾಗಿಯೇ ಇತ್ತೀಚೆಗೆ ಅದರಂತೆ, ಆ ನೌಕರರು ತಮ್ಮ ಅನುಭವಕ್ಕೆ ತಕ್ಕ ಕೊಡಲು ಶಕ್ತ ಸಾಧ್ಯವಾದಷ್ಟು (ಇನ್ನೂ ದೊರಕುವವರೆಗೂ), ಸರ್ಕಾರದವರು ತಮ್ಮ ನಿರ್ವಹಿಸುತ್ತಿರುವವು ಎಂದು. ಆದರೆ ಸಂಬಳಗಳ ಕೆಳ ದರ್ಜೆಯ ನೌಕರರ ಸ್ಥಿತಿಯನ್ನು ಉತ್ತಮಗೊಳಿಸುವುದಕ್ಕಾಗಿ ಸ್ಥಿತಿಯನ್ನು ಪರಿಶೀಲಿಸುವ ವಿಷಯದಲ್ಲಿ ಸರ್ಕಾರದವರಿಗೆ ಸಹಾನುಭೂತಿಯಿದೆಯೆಂದು ಕಳೆದ ೨ ವರುಷಗಳಲ್ಲಿ ಸರ್ಕಾರದವರು ಸ್ವೀಕರಿಸಿರುವ ಕ್ರಮಗಳು ಈ ವಿಷಯದಲ್ಲಿ ವಿಶೇಷವಾಗಿ ತಮ್ಮ ಗಮನಕ್ಕೆ ತರಬಯಸುವೆನು. ಆ ವರುಷಗಳಲ್ಲಿ ಸರ್ಕಾರದವರು ರೆವಿನ್ಯೂ ಇಲಾಖೆಯ ಮತ್ತು ಇತರ ಇಲಾಖೆಗಳ ಕೆಳ ದರ್ಜೆಯ ನೌಕರರಿಗೂ, ಜವಾನ ಸಿಬ್ಬಂದಿಯವರಿಗೂ, ಬಡ್ತಿಗಳನ್ನು ಕೊಡುವುದಕ್ಕಾಗಿ ೩ ಲಕ್ಷ ರೂ. ವರೆಗಿನ ಹೆಚ್ಚಿಗೆ ವೆಚ್ಚವನ್ನು ಮಂಜೂರು ಮಾಡಿರುತ್ತಾರೆ. ಸುಮಾರು ೩೩ ಕಚೇರಿಗಳಲ್ಲಿ, (ಎಂದರೆ ಆಫೀಸುಗಳಲ್ಲಿ) ನೌಕರರ ಸಂಬಳಗಳನ್ನು ಹೆಚ್ಚಿಸಲು ಸರ್ಕಾರದವರಿಗೆ ಇದುವರೆಗೆ ಸಾಧ್ಯವಾಗಿದೆ. ಪೊಲೀಸ್ ನೌಕರರ ಪುನರ್ವಿಮರ್ಶೆ, ರೆವಿನ್ಯೂ ಇಲಾಖೆಯ ಸಿಬ್ಬಂದಿಗಳ ಸಂಬಳಗಳನ್ನು ಹೆಚ್ಚಿಸುವುದು ಮತ್ತು ಸ್ಪೆಷಲ್ ಮ್ಯಾಜಿಸ್ಟ್ರೇಟರ ಕೋರ್ಟುಗಳ ಸಿಬ್ಬಂದಿಗಳ ಸಂಬಳಗಳನ್ನು ಹೆಚ್ಚಿಸುವುದು ಈ ಬಾಬುಗಳಿಗಾಗಿ ಬಾಕಿ ಸಾಲಿನಲ್ಲಿಯೂ ಕೂಡ ಸ್ವಲ್ಪ ಹಣವನ್ನು ಒದಗಿಸಿರುವುದು ತಮಗೆಲ್ಲರಿಗೂ ವೇದ್ಯವಾಗಿಯೇ ಇದೆ. ಇದು ಏನೇನೂ ಸಾಲದೆಂಬುದು ಸರ್ಕಾರದವರಿಗೆ ಖಂಡಿತವಾಗಿಯೂ ಗೊತ್ತುಂಟು. ಆದರೂ, ಹೆಚ್ಚು ಹಣವನ್ನು ಒದಗಿಸುವುದು ಸುಲಭವೂ ಸಾಧ್ಯವೂ ಅಲ್ಲ. ಗುಮಾಸ್ತರಿಗೂ, ಉಪಾಧ್ಯಾಯರಿಗೂ ಕನಿಷ್ಠಪಕ್ಷ ತಿಂಗಳಿಗೆ ೨೫ ರೂ. ಗೆ ಕಡಮೆಯಿಲ್ಲದಂತೆ ಸಂಬಳಗಳು ಬರುವಂತೆ ಮಾಡಿಕೊಡಬೇಕೆಂಬುದು ಸರ್ಕಾರದವರಿಗಿರುವ ಪ್ರಬಲವಾದ ಆಕಾಂಕ್ಷೆಯಾಗಿದೆ. ಡಿಸ್ಟ್ರಿಕ್ಟ್ ಪೋಲೀಸ್ ಕಾನ್‌ಸ್ಟೇಬಲರ ಸಂಬಳಗಳನ್ನು ಕನಿಷ್ಠಪಕ್ಷ ೧೬ ರೂ. ಗಳಿಗಾದರೂ ಹೆಚ್ಚಿಸಬೇಕು ಮತ್ತು ಸಿಟಿ ಪೋಲೀಸ್ ಕಾನ್‌ಸ್ಟೇಬಲುಗಳಿಗೆ ತಿಂಗಳಿಗೆ ೧೮ ಅಥವಾ ೧೯ ರೂ. ಗಳನ್ನಾದರೂ ಕೊಡಬೇಕು. ಇವುಗಳನ್ನೆಲ್ಲಾ ಮಾಡಬೇಕಾದರೆ, ವರುಷವೊಂದಕ್ಕೆ ಪ್ರಾಯಶಃ ಹತ್ತು ಲಕ್ಷ ರೂ. ವರೆಗೂ ಹೆಚ್ಚು ವೆಚ್ಚವನ್ನು ಕೈಕೊಳ್ಳಬೇಕಾಗುತ್ತದೆ. ಇಷ್ಟು ಹಣವನ್ನು ಒದಗಿಸುವುದು ಸದ್ಯದಲ್ಲಿಯೇ ಸಾಧ್ಯವಿಲ್ಲ. ಆದರೂ ನಾವು ನಿರೀಕ್ಷಿಸುವುದಕ್ಕಿಂತಲೂ ಶೀಘ್ರವಾಗಿಯೇ ಅದು ಸಾಧ್ಯವಾಗಬಹುದೆಂಬ ನಂಬಿಕೆಯು ನನಗುಂಟು. ಸಾಧ್ಯವೆಂದೊಡನೆಯೇ ಲೇಶವೂ ಸಾವಕಾಶಮಾಡದೆ ಈ ನೌಕರರ ಸಂಬಳಗಳನ್ನು ಹೆಚ್ಚಿಸಬೇಕೆಂಬ ದೃಢಸಂಕಲ್ಪವು ಸರ್ಕಾರದವರ ಮನಸ್ಸಿನಲ್ಲಿ ಖಚಿತವಾಗಿದೆ. ಈ ಅಂಶವನ್ನು ಅವರೆಲ್ಲರೂ ಖಂಡಿತವಾಗಿ ನಂಬಿ, ಧೈರ್ಯವನ್ನಿಟ್ಟುಕೊಳ್ಳಬಹುದಾಗಿದೆ.

ಆದರೆ, ಸಂಬಳಗಳ ದರಗಳನ್ನು ಗಣ್ಯವಾಗಿ ಹೆಚ್ಚಿಸಬೇಕಾದರೆ, ಸಾಧ್ಯವಿರುವ ಮಟ್ಟಿಗೂ ನೌಕರರ ಸಂಖ್ಯೆಯನ್ನೂ ತಗ್ಗಿಸಬೇಕಾಗುವುದು. ಸಂಬಳವನ್ನು ಹೆಚ್ಚಿಸುವುದನ್ನು ಪರ್ಯಾಲೋಚಿಸುವಾಗ್ಗೆ, ಈ ಅಂಶವನ್ನೂ ಸಂಗಡವೇ ಯೋಚಿಸಬೇಕಾಗುತ್ತದೆಂಬುದನ್ನು ನಾವು ನೆನಪಿನಲ್ಲಿಡಬೇಕು. ಸಿಬ್ಬಂದಿಯ ಸಂಖ್ಯೆಯಲ್ಲಿ ಹೆಚ್ಚುತ್ತಲೇ ಹೋಗುವ ಸಂಭವವಿರುತ್ತದೆ. ಅವಕಾಶದ ಸಮಯವು ದೊರೆತಂತೆಲ್ಲಾ ಇದಕ್ಕೆ ಅವಕಾಶವನ್ನೇ ತಪ್ಪಿಸುತ್ತ ಬರಬೇಕಾದುದು ಅವಶ್ಯಕ. ಸಾಧ್ಯವೆಂದಾಗೆಲ್ಲಾ ನೌಕರರ ಸಂಖ್ಯೆಯನ್ನು ಕಡಮೆ ಮಾಡುವುದಕ್ಕೆ ನಾವು ಪ್ರಯತ್ನಪಡದೆ ಹಟಸ್ಥರಾದಲ್ಲಿ, ನಮ್ಮ ಉದ್ದೇಶವು ನೆರವೇರುವುದೇ ಬಹಳ ಕಷ್ಟವಾಗುವುದು. ಎಂದರೆ, ನಾನಾ ನೌಕರಿಗಳಿಗೂ ಕನಿಷ್ಠಪಕ್ಷ ಘಟನಾ ಮೊಬಲಗುಗಳೆಂದು ಗೊತ್ತಾಗಿರುವ ಸಂಬಳಗಳ ದರಗಳನ್ನು ಕಾಲಾನುಗುಣ್ಯವಾಗಿ ನಾವು ಹೆಚ್ಚು ಮಾಡುವುದೂ ಬಹಳ ಕಷ್ಟವಾಗುವುದು, ನಿಯತಕಾಲಗಳಲ್ಲಿ ಬಡ್ತಿಯು ದೊರೆಯುತ್ತ ಹೋಗುವಂತೆ ಸಂಬಳಗಳನ್ನು ಗೊತ್ತುಮಾಡುವುದು ಸಹ, ಆಗ್ಗೆ ಇದರಂತೆಯೇ ಬಹಳ ಕಷ್ಟವಾಗುವುದು. ಹೀಗಾಗಲು ಅವಕಾಶಕೊಡದಿರುವುದು ಮೇಲಲ್ಲವೇ?

ಸುಂಕದ ಕಟ್ಟೆಗಳು (ಟೋಲ್ ಗೇಟುಗಳು)

ಅಪ್ರಿಯತವೆಂದು ಭಾವಿಸಲ್ಪಟ್ಟಿರುವ ಸುಂಕದ ಕಟ್ಟೆಗಳು (ಎಂದರೆ ಪ್ರಾವಿನ್ಶಿಯಲ್ ಸುಂಕದ ಕಟ್ಟೆಗಳು) ಕೆಲವನ್ನು ಈಚೆಗೆ ಸಂಸ್ಥಾನದ ಒಳಭಾಗದ ಪ್ರದೇಶಗಳಲ್ಲಿ ಅಲ್ಲಲ್ಲಿ ಸ್ಥಾಪಿಸಿರುವುದು ಸರಿಯಷ್ಟೆ. ಎತ್ತಿನ ಬಂಡಿಗಳು ಅವುಗಳ ಮಾರ್ಗವಾಗಿ ಹೋಗುವಾಗ್ಗೆ ಸುಂಕವನ್ನು ವಸೂಲು ಮಾಡದಂತೆ ವಿನಾಯಿತಿಯನ್ನು ಕಲ್ಪಿಸಬೇಕೆಂಬುದಾಗಿ ನ್ಯಾಯವಿಧಾಯಕ ಸಭೆಯವರೂ ಪ್ರಜಾಪ್ರತಿನಿಧಿ ಸಭೆಯವರೂ ಪದೇಪದೇ ಅಂತೆ ಮಾಡಿಕೊಂಡರು. ಅವರ ಕೋರಿಕೆಯನ್ನು ಸಲ್ಲಿಸುವುದಕ್ಕೋಸ್ಕರ, ವ್ಯಾಪಾರಕ್ಕಾಗಿ ಸಾಮಾನುಗಳನ್ನು ಸಾಗಿಸುವ ಬಂಡಿಗಳು ಹೊರತು ಉಳಿದ ಯಾವ ಬಗೆಯ ಬಂಡಿಗಳ ಮೇಲೂ ಸುಂಕವನ್ನು ಕೊಡಬೇಕಾದುದಿಲ್ಲವೆಂಬುದಾಗಿ ವಿನಾಯಿತಿಯನ್ನು ಕಲ್ಪಿಸಿ ಆಜ್ಞೆ ಮಾಡಲಾಯಿತು. ಮೈಸೂರು ದೇಶದಿಂದ ಇಂಡಿಯಾ ಸರ್ಕಾರದವರಿಗೆ ಈಗ ಸಲ್ಲಿಸಲ್ಪಡುತ್ತಿರುವ ಪೆಟ್ರೋಲ್ ತೆರಿಗೆಯ ಮೊಬಲಗಿನ ವರಮಾನವು ಸಂಸ್ಥಾನಕ್ಕೆ ಬರಬೇಕಾಗಿದೆ. ಅದನ್ನು ಅವರಿಂದ ಹಿಂದಕ್ಕೆ ಪಡೆಯುವುದಕ್ಕಾಗಿ ಈಗ ಪತ್ರವ್ಯವಹಾರವು ನಡೆಯುತ್ತಾ ಇದೆ.

ರೆವಿನ್ಯೂ ಇಲಾಖೆ

ರೆವಿನ್ಯೂ ಇನ್ಸ್‌ಪೆಕ್ಟರುಗಳನ್ನು ಹೊಸದಾಗಿ ನೇಮಿಸಿಕೊಂಡು ಅವರಿಗೆ ತಕ್ಕ ಶಿಕ್ಷಣವನ್ನು ಕೊಡುವ ಏರ್ಪಾಟನ್ನು ೧೯೨೯ನೆಯ ಏಪ್ರಿಲ್ ತಿಂಗಳಲ್ಲಿ ಸರ್ಕಾರದವರು ಮಂಜೂರು ಮಾಡಿದರು.

ರೆವಿನ್ಯೂ ಇಲಾಖೆಯ ನೌಕರರ ಸಂಬಳಗಳನ್ನೂ, ಅವರಿಗೆ ಬಡ್ತಿಯ ಸಂಭವಗಳನ್ನೂ ಹೆಚ್ಚಿಸಿ ಅನುಕೂಲಮಾಡಿಕೊಡುವ ವಿಚಾರವನ್ನು ಪರಿಶೀಲಿಸಿ ವರದಿಯನ್ನೊಪ್ಪಿಸಲು ಒಂದು ವಿಶೇಷ ವಿಧದ ಸಮಿತಿಯನ್ನು ನೇಮಕ ಮಾಡಲಾಗಿದ್ದಿತು. ಆ ಸಮಿತಿಯವರ ಸಲಹೆಗಳನ್ನು ಪರ್ಯಾಲೋಚಿಸಿ ಹುಕುಂ ಮಾಡಲ್ಪಟ್ಟಿತು. ೬೦ ರೂ. ಮತ್ತು ಅದಕ್ಕೆ ಕಡಮೆಯಾಗಿ ಬರುವಂಥ ಗುಮಾಸ್ತರುಗಳ ಸಂಬಳಗಳ ಸ್ಕೇಲನ್ನು ಹೆಚ್ಚು ಮಾಡಿ ಮಂಜೂರು ಮಾಡಲಾಯಿತು, ಡಿಸ್ಟ್ರಿಕ್ಟ್ ಕಚೇರಿಗಳಲ್ಲಿ ೧೫ ನೌಕರಿಗಳನ್ನೂ, ತಾಲ್ಲೂಕು ಕಚೇರಿಗಳಲ್ಲಿ ೮೫ ನೌಕರಿಗಳನ್ನೂ, ಅಂತು ಒಟ್ಟು ೧೦೦ ನೌಕರಿಗಳನ್ನು ವಜಾ ಮಾಡಲಾಯಿತು. ಒಂದೊಂದು ಬಗೆಯ ನಾನಾ ನೌಕರಿಗಳಿಗೂ ಒಂದೇ ಸಮನಾದ ಸಂಬಳದ ಸ್ಕೇಲನ್ನು ಮಂಜೂರ್ಮಾಡಿದೆ. ನೌಕರರನ್ನು ಅವಶ್ಯಕತೆಬಿದ್ದಾಗಲೆಲ್ಲ, ಒಂದು ವಿಧದ ನೌಕರಿಯಿಂದ ಅದೇ ಸಂಬಳದ ಮತ್ತೊಂದು ವಿಧದ ನೌಕರಿಗೆ ಬದಲಾಯಿಸಲು ಇದರಿಂದ ಅನುಕೂಲವಾಗುತ್ತದೆ.

ಬೆಂಗಳೂರು ತಾಲ್ಲೂಕಿನಲ್ಲಿ ಕೆಲಸವು ಅಲಕ್ಷ್ಯವಿಲ್ಲದೆ ಬೇಗ ನಡೆಯುವಂತೆ ಸೌಕರ್ಯವನ್ನುಂಟುಮಾಡುವುದಕ್ಕಾಗಿ ಈ ತಾಲ್ಲೂಕನ್ನು ಎರಡು ಭಾಗವಾಗಿ ವಿಂಗಡಿಸಲಾಯಿತು. ಬೆಂಗಳೂರು ನಗರಕ್ಕೇ ಪ್ರತ್ಯೇಕವಾಗಿ ಒಬ್ಬ ಅಮಲ್ದಾರರನ್ನು ಎರಡು ವರುಷಗಳ ಪರ್ಯಂತ ಈಗ ನೇಮಿಸಿದ್ದಾರೆ. ಇವರಲ್ಲದೆ ಬೆಂಗಳೂರು ತಾಲ್ಲೂಕಿಗೇ ಒಬ್ಬರು ಅಮಲ್ದಾರರೂ ಡೆಪ್ಯುಟಿ ಅಮಲ್ದಾರರೂ ಇದ್ದೇ ಇರುತ್ತಾರೆ. [illegible] ಸಬ್ ತಾಲ್ಲೂಕನ್ನು ೧೯೨೮ನೆಯ ಜುಲೈ ೧ನೆಯ ತಾರೀಖು ಮೊದಲ್ಗೊಂಡು, ಕೊರಟಗೆರೆ ಸಬ್ ತಾಲ್ಲೂಕನ್ನು ೧೯೨೯ನೆಯ ಜನವರಿ ೧ನೆಯ ತಾರೀಖು ಮೊದಲ್ಗೊಂಡು ಪೂರಾ ತಾಲ್ಲೂಕುಗಳನ್ನಾಗಿ ಮಾರ್ಪಡಿಸಲಾಯಿತು. ರೆವಿನ್ಯೂ ಇನ್ಸ್‌ಪೆಕ್ಟರುಗಳ ಸಂಬಳವನ್ನು ಹೆಚ್ಚಿಸಿ, ಅವರ ಸೇವೆಯನ್ನು ಮುಕ್ತಾಯಗೊಳಿಸಲಾಯಿತು. ಈ ತಿಂಗಳು ೧ನೆಯ ತಾರೀಖಿನಿಂದ (ಎಂದರೆ ೧೯೨೯ನೆಯ ಅಕ್ಟೋಬರ್ ೧ನೆಯ ತಾರೀಖು ಮೊದಲ್ಗೊಂಡು) ೧೭ ಹೋಬಳಿಗಳನ್ನು ವಜಾಮಾಡಲಾಯಿತು.

ಗ್ರಾಮಪಂಚಾಯತಿಗಳು.

ಗ್ರಾಮಪಂಚಾಯತಿಯ ಏರ್ಪಾಟು ಸಂಸ್ಥಾನದ ಎಲ್ಲ ಕಡೆಗಳಲ್ಲಿಯೂ ಕೆಲವು ವರುಷಗಳಿಂದ ಚಲಿತವಾಗಿ ವೃದ್ಧಿಹೊಂದುತ್ತಿದೆ. ಈ ಅಂಶವು ಈ ಭಾಷಣದ ಎರಡನೆಯ ಭಾಗದಲ್ಲಿ ಕೊಟ್ಟಿರುವ ಸಂಗತಿಗಳಿಂದ ತಮಗೆ ವೇದ್ಯವಾಗುವುದು. ಗ್ರಾಮಪಂಚಾಯತಿಗಳ ಸಮ್ಮೇಳನಗಳು ಮತ್ತು ಡಿಸ್ಟ್ರಿಕ್ಟ್ ಸಮ್ಮೇಳನಗಳು ನಡೆದುವು. ಅವುಗಳಿಗೆ ಪ್ರತಿನಿಧಿಗಳು ವಿಶೇಷವಾಗಿ ಬಂದಿದ್ದರು. ಇದಲ್ಲದೆ ಕೋಲಾರ ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳಲ್ಲಿ ಗ್ರಾಮಪಂಚಾಯತಿ ಇನ್ಸ್‌ಪೆಕ್ಟರುಗಳ ಹುದ್ದೆಗಳನ್ನು ವಜಾ ಮಾಡಿ ಅವರು ನಡೆಸುತ್ತಿದ್ದ ಕರ್ತವ್ಯಗಳನ್ನು ರೆವಿನ್ಯೂ ಇನ್ಸ್‌ಪೆಕ್ಟರುಗಳಿಗೇ ವಹಿಸಿದೆವು. ಮಾದರಿ ಗ್ರಾಮಗಳಾಗಿ ಏರ್ಪಡಿಸಲು ಪ್ರತಿಯೊಂದು ಹೋಬಳಿಯಲ್ಲಿಯೂ ಕೆಲಕೆಲವು ಗ್ರಾಮಗಳನ್ನು ಚುನಾಯಿಸಿಕೊಂಡು ಅವುಗಳನ್ನು ಆ ರೀತಿ ಅಭಿವೃದ್ಧಿಗೆ ತರಲು ವಿಶೇಷವಾದ ಗಮನವನ್ನು ಕೊಡುತ್ತಾ ಇದೆ. ಈ ಗ್ರಾಮಗಳನ್ನು ನೋಡಿ, ಇತರ ಗ್ರಾಮಪಂಚಾಯತಿಗಳವರೂ ಅನೇಕ ರೀತಿಯಾಗಿ ತಮ್ಮ ತಮ್ಮ ಗ್ರಾಮಗಳನ್ನೂ ಅಭಿವೃದ್ಧಿಗೆ ತರುವುದಕ್ಕೆ ಇದು ಮೇಲುಪಂಕ್ತಿಯಾಗಿರುವುದಕ್ಕಾಗಿ ಅವಕಾಶವನ್ನು ಕಲ್ಪಿಸಬೇಕೆಂಬ ಉದ್ದೇಶದಿಂದ ಹೀಗೆ ಮಾಡಲಾಯಿತು. ಈ ವರುಷದ ದಸರಾ ಪ್ರದರ್ಶನದಲ್ಲಿ ಗ್ರಾಮಪಂಚಾಯತಿಯ ಸಂಬಂಧದ ಸಂಗತಿಗಳು ತಿಳಿಯಲು ಅನುಕೂಲಿಸುವಂತೆ ತಕ್ಕ ಏರ್ಪಾಡನ್ನು ಮಾಡಿ, ನಕ್ಷೆಗಳು, ಪಟಗಳು, ಮಾದರಿಗಳು ಮುಂತಾದವುಗಳನ್ನು ಪ್ರದರ್ಶಿಸುವ ಹಾಗೆ ಅಪ್ಪಣೆ ಮಾಡಿದ್ದೇವೆ. ಗ್ರಾಮಾಂತರ ಪ್ರದೇಶಗಳಲ್ಲಿಯ ಜನಜೀವನದ ಸ್ಥಿತಿಗತಿಗಳನ್ನೆಲ್ಲಾ ಜನರಿಗೆ ಮುಂದಿಟ್ಟು ಮಾಡಿಕೊಡಬೇಕೆಂಬುದೇ ಹೀಗೆ ಮಾಡಿರುವುದರಲ್ಲಿ ನಮ್ಮ ಉದ್ದೇಶ.

ಭದ್ರಾವತಿಯ ಕಬ್ಬಿಣದ ಕಾರ್ಖಾನೆ

ಸರ್ ಎಂ. ವಿಶ್ವೇಶ್ವರಯ್ಯನವರು ಭದ್ರಾವತಿ ಕಬ್ಬಿಣದ ಕಾರ್ಖಾನೆಯ ಕಾರ್ಯನಿರ್ವಾಹಕ ಮಂಡಲಿಯ ಅಧ್ಯಕ್ಷರ ಕೆಲಸದಿಂದ ವಿಶ್ರಾಂತರಾದರು. ಫಾರೆಸ್ಟ್ ಇಲಾಖೆ, ಕೈಗಾರಿಕೆ ಮತ್ತು ವಾಣಿಜ್ಯದ ಇಲಾಖೆ, ಭೂಗರ್ಭಶೋಧನೆಯ ಇಲಾಖೆ, ಗಣಿಗಳ ಇಲಾಖೆ — ಈ ಇಲಾಖೆಗಳ ಚಾರ್ಜಿನಲ್ಲಿರುವ ಕೌನ್ಸಿಲಿನ ಮೆಂಬರವರಾದ ರಾಜಕಾರ್ಯಪ್ರಸಕ್ತ ದಿವಾನ್ ಬಹದ್ದೂರ್ ಮಿ|| ಎಂ. ಎನ್. ಕೃಷ್ಣರಾಯರವರು ಈಗ ಆ ಅಧ್ಯಕ್ಷಸ್ಥಾನವನ್ನು ವಹಿಸಿದ್ದಾರೆ.

ಆಗ್ಗೆ ಆರೂವರೆ ವರುಷಗಳಿಗೆ ಹಿಂದೆ, ಭದ್ರಾವತಿ ಕಾರ್ಖಾನೆಯ ಉದ್ಯಮವು ಸಫಲವಾಗಿ ನೆರವೇರುವುದೋ ಇಲ್ಲವೋ ಎಂಬುದೇ ಅನುಮಾನವಾಗಿ ವಿಶೇಷ ಆತಂಕವುಂಟಾಗಿದ್ದಿತು. ಅಂತಹ ವಿಷಮಸ್ಥಿತಿಯು ಒದಗಿದ್ದ ಸಮಯದಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರು ಸರ್ಕಾರದವರ ಬಿನ್ನಹದ ಮೇಲೆ ಅದರ ಆಡಳಿತವನ್ನು ವಹಿಸಿದರು. ಅವರು ಈ ಕೆಲಸದಿಂದ ವಿಶ್ರಾಂತರಾದುದರ ದೆಸೆಯಿಂದ ಕಾರ್ಖಾನೆಗೆ ಒಂದು ದೊಡ್ಡ ನಷ್ಟವು ಸಂಭವಿಸಿದೆ. ಕಾರ್ಖಾನೆಯ ಆಡಳಿತ ನಿರ್ವಾಹಕ ಮಂಡಲಿಗೆ ಅವರು ಅಧ್ಯಕ್ಷರಾಗಿದ್ದ ಕಾಲದಲ್ಲಿ ಅವರು ಸಂತತವೂ ಅದರ ಯೋಗಕ್ಷೇಮವನ್ನೇ ಕುರಿತು ಚಿಂತಿಸುತ್ತಿದ್ದರು. ಕಾರ್ಖಾನೆಯನ್ನು ಅಭಿವೃದ್ಧಿಸ್ಥಿತಿಗೆ ತರಬೇಕೆಂಬ ದೃಢನಿಶ್ಚಯದಿಂದ ಕೂಡಿ, ಅವರು ಶ್ರಮವನ್ನೂ ಲೆಕ್ಕಿಸದೆ ಸರ್ವದಾ ವಿಶೇಷ ಶ್ರದ್ಧೆಯಿಂದ ಕೆಲಸಮಾಡುತ್ತಿದ್ದರು. ಇದಕ್ಕಾಗಿ ಸರ್ಕಾರದವರು ಅವರಿಗೆ ಎಷ್ಟು ಕೃತಜ್ಞರಾಗಿದ್ದರೂ ತೀರದು. ಸ್ವಾರ್ಥತ್ಯಾಗವೂ ಉತ್ಸಾಹಪಕ್ವತೆಗಳೂ, ಸರ್ ಎಂ. ವಿಶ್ವೇಶ್ವರಯ್ಯನವರ ವ್ಯಕ್ತಿಲಕ್ಷಣಗಳೋ — ಎನ್ನುವಂತೆ ಅವರಲ್ಲಿ ನೆಲಸಿವೆ. ತದನುಗುಣವಾದ ತೀವ್ರಾಸಕ್ತಿಯಿಂದ, ಅವರು ಈ ಕಾರ್ಖಾನೆಯ ಆಡಳಿತವನ್ನು ನೆರವೇರಿಸಿದ್ದಾರೆ. ಅವರು ಈ ರೀತಿ ಕೆಲಸ ನಡೆಸಿರುವುದಕ್ಕಾಗಿ ನಮ್ಮ ಅಂತರವಾದ ಅಭಿನಂದನವನ್ನೂ, ಕಾರ್ಖಾನೆಯನ್ನು ಈಗಿರುವಷ್ಟು ಉತ್ತಮಸ್ಥಿತಿಗೆ ತಂದುದಕ್ಕಾಗಿ ಅವರಲ್ಲಿ ನಮಗಿರುವ ಅಗಾಧವಾದ ಕೃತಜ್ಞತೆಯನ್ನೂ, ವ್ಯಕ್ತಗೊಳಿಸುವುದರಲ್ಲಿ, ಕೌನ್ಸಿಲರೂ ಏಕವಾಕ್ಯತೆಯಿಂದ ನನ್ನೊಡನೆ ಸೇರುವರೆಂದು ನಾನು ದೃಢವಾಗಿ ನಂಬಿದ್ದೇನೆ.

ಅವರು ಯಾವ ಪ್ರತಿಫಲವನ್ನೂ ಸ್ವೀಕರಿಸದೆ ಕೆಲಸಮಾಡುತ್ತಾ, ಈ ಕಾರ್ಖಾನೆಯನ್ನು ಅಭಿವೃದ್ಧಿಸ್ಥಿತಿಗೆ ತರುವುದಕ್ಕೋಸ್ಕರ ೬½ ವರುಷಗಳ ಕಾಲ ವಿಶ್ರಾಂತಿಯನ್ನೂ ಪಡೆಯದೆ ಏಕಪ್ರಕಾರವಾಗಿ ಶ್ರಮಪಟ್ಟಿರುತ್ತಾರೆ. ಯೂರೋಪು ಮತ್ತು ಅಮೇರಿಕಾ ಖಂಡಗಳಲ್ಲಿ ಇಂತಹ ಕಾರ್ಖಾನೆಗಳಲ್ಲಿ ಯಾವ ರೀತಿ ಕೆಲಸವು ನಡೆಯುತ್ತಿದೆಯೆಂಬುದನ್ನು ವಿಶೇಷ ರೀತಿಯಲ್ಲಿ ಪರಿಶೀಲಿಸುವುದಕ್ಕಾಗಿ ಅವರು ತಮ್ಮ ಸ್ವಂತ ವೆಚ್ಚದಿಂದ ಆ ಎರಡು ಖಂಡಗಳಲ್ಲಿಯೂ ಸಂಚಾರಮಾಡಿಕೊಂಡು ಬಂದರು. ಅವರು ಈ ವಿಧದ ಉದ್ಯೋಗದಕ್ಷತೆಯನ್ನೂ ಕಾರ್ಯಶ್ರದ್ಧೆಯನ್ನೂ ತೋರಿಸಿ ಕೆಲಸಮಾಡಿದುದಕ್ಕಾಗಿ, ಅವರಿಗೆ ನಾವು ಎಷ್ಟು ಕೃತಜ್ಞರಾಗಿದ್ದೇವೆಂಬ ಅಂಶವನ್ನು ಯಥಾಯೋಗ್ಯವೆನಿಸುವ ಹಾಗೆ ತಕ್ಕಂತೆ ವ್ಯಕ್ತಗೊಳಿಸಿ ಮುಗಿಸುವುದು ಸಾಧ್ಯವೇ ಇಲ್ಲ.

ಮಾನ್ಯರಾದ ನಮ್ಮ ಸಹೋದ್ಯೋಗಿಗಳವರು ಈಚೆಗೆ ಈ ಕಾರ್ಖಾನೆಯ ಆಡಳಿತವನ್ನು ವಹಿಸಿರುವುದು ಸರಿಯಷ್ಟೆ. ಸರ್ ಎಂ. ವಿಶ್ವೇಶ್ವರಯ್ಯನವರ ಇದುವರೆಗೂ ಮಾಡಿರುವ ಒಳ್ಳೆಯ ಕೆಲಸವನ್ನು, ಲೇಶಮಾತ್ರವೂ ಲೋಪಬಾರದಂತೆ ಶ್ರದ್ಧೆಯಿಂದಲೂ, ಉತ್ಸಾಹದಿಂದಲೂ ಮತ್ತೀ ಕಾರ್ಯವಾಗಿ ಮುಂದುವರಿಸಿಕೊಂಡು ಬರುವ ಭಾಗದಲ್ಲಿ ಅವರು ಸರ್ವಪ್ರಯತ್ನಗಳನ್ನೂ ನಡೆಸಿಯೇ ನಡೆಸುತ್ತಾರೆ. ಈ ಭಾಗದಲ್ಲಿ ಅವರ ಪರವಾಗಿ ಈ ಸಭೆಯವರಿಗೆ ನಾನು ಭರವಸೆ ಹೇಳಬೇಕಾದ ಅವಶ್ಯಕತೆಯೇ ಇಲ್ಲ. ಅವರು ಗುರುತರವಾದ ತಮ್ಮ ಕರ್ತವ್ಯಗಳ ಜೊತೆಗೆ ಈ ಜವಾಬ್ದಾರಿಯನ್ನೂ ವಹಿಸಿಕೊಂಡಿರುವುದಕ್ಕಾಗಿ ಅವರಿಗೆ ನಾವು ಕೃತಜ್ಞರಾಗಿರಬೇಕಾಗಿದೆ. ಕ್ಲೇಶದಾಯಕವಾದ ಈ ಕೆಲಸವನ್ನು ಸಫಲರೀತಿಯಲ್ಲಿ ನೆರವೇರಿಸುವ ಶಕ್ತಿ ಸಾಮರ್ಥ್ಯಗಳು ಅವರಿಗುಂಟೆಂಬುದನ್ನು ನಾನು ಚೆನ್ನಾಗಿ ಬಲ್ಲೆನು. ಅವರ ಪ್ರಯತ್ನಗಳೆಲ್ಲವೂ ಸಾಂಗವಾಗಿಯೂ, ಸುಮುಖವಾಗಿಯೂ, ನೆರವೇರಿ ತನ್ಮೂಲಕ ನಮ್ಮ ಇಷ್ಟಾರ್ಥವು ಸಂಪೂರ್ಣವಾಗಿ ಕೈಗೂಡುವಂತಾಗಲೆಂಬುದೇ ನನ್ನ ಹಾರೈಕೆ. ತಮ್ಮ ಹಾರೈಕೆಯೂ ಸಹ, ಅದೇ ರೀತಿಯಲ್ಲಿ ದೆಯೆಂದು ನಾನು ದೃಢವಾಗಿ ನಂಬಿದ್ದೇನೆ.

ಗಂಧದೆಣ್ಣೆಯ ಕಾರ್ಖಾನೆಗಳು.

ಗಂಧದೆಣ್ಣೆಯ ವ್ಯಾಪಾರದ ಕೆಲಸವನ್ನು ಈಗ ಸ್ವಲ್ಪ ಕಾಲದವರೆಗೂ ಸರ್ಕಾರಿ ಉದ್ಯೋಗಸ್ಥರಲ್ಲದವರಿಗೆ ವಹಿಸಿದ್ದುದು ಸರಿಯಷ್ಟೆ. ಈ ಏರ್ಪಾಟಿನಲ್ಲಿ ಕೆಲವು ನ್ಯೂನತೆಗಳಿರುವುವೆಂಬುದು ಈಚಿನ ವಿದ್ಯಮಾನಗಳ ದೆಸೆಯಿಂದ ಸರ್ಕಾರದವರಿಗೆ ಚೆನ್ನಾಗಿ ಅನುಭವಕ್ಕೆ ಬಂದಿತು. ಗಂಧದೆಣ್ಣೆಯ ವ್ಯಾಪಾರಕ್ಕೆ ಸಂಬಂಧಪಟ್ಟ ಸಮಗ್ರವಿಚಾರಗಳನ್ನೂ ಇಂಗ್ಲೆಂಡಿನಲ್ಲಿಯೂ ಮತ್ತು ಅಮೇರಿಕಾದಲ್ಲಿಯೂ ಕೂಲಂಕಷವಾಗಿ ಪರಿಶೀಲಿಸಿ ನೋಡುವುದಕ್ಕಾಗಿ ಸರ್ಕಾರದವರು ಮಿ|| ಎನ್. ಮಾಧವರಾಯರನ್ನು ಕಳುಹಿಸಿ ಕೊಟ್ಟರು. ಅಲ್ಲದೆ, ಸರ್ಕಾರದವರಿಗೆ ಬರಬೇಕಾದ ಹಣಗಳನ್ನು ವಸೂಲ್ಮಾಡುವುದಕ್ಕೂ, ಮತ್ತು ಗಂಧದೆಣ್ಣೆಯ ವ್ಯಾಪಾರದ ಸಂಬಂಧದಲ್ಲಿ ಸರ್ಕಾರದವರ ಪ್ರಯೋಜನಾಂಶಗಳು ಅಬಾಧಿತವಾಗಿ ಸುರಕ್ಷಿತವಾಗಿರುವಂತೆ ವ್ಯವಸ್ಥೆ ಮಾಡುವುದಕ್ಕೂ, ತಕ್ಕ ಸಂಸ್ಥೆಗಳನ್ನು ಹೊಸದಾಗಿ ಏರ್ಪಡಿಸುವ ಕೆಲಸವನ್ನೂ ಅವರು ಮಾಡಬೇಕೆಂದು ಅವರಿಗೆ ವಹಿಸಿದ್ದೆವು. ಅವರಿಂದ ಕಾಗದಗಳು ಬಂದಿವೆ. ಅದಕ್ಕನುಸಾರವಾಗಿ ತಕ್ಕ ಏರ್ಪಾಟುಗಳನ್ನು ಮಾಡಿರುವುದಲ್ಲದೆ, ಅವರು ಈಗ ಅಮೇರಿಕಾದಲ್ಲಿ ತಾವು ಮಾಡಬೇಕಾಗಿದ್ದ ಕೆಲಸವನ್ನು ಪೂರೈಸಿ, ಲಂಡನ್ ನಗರಕ್ಕೆ ಹಿಂದಿರುಗಿದ್ದಾರೆ. ಗಂಧದೆಣ್ಣೆಯ ವ್ಯಾಪಾರದ ಸಂಬಂಧವಾಗಿ ಆ ನಗರದಲ್ಲಿ ಇತ್ಯರ್ಥಪಡಿಸಬೇಕಾಗಿರುವ ಕೆಲವು ವಿಷಯಗಳನ್ನು ಕುರಿತು, ಅವರು ಸಮಾಲೋಚನೆಗಳನ್ನು ನಡೆಸುತ್ತಿದ್ದಾರೆ.

ಈ ಸಂಬಂಧದಲ್ಲಿ ಆಡಳಿತಕ್ಕೆ ಸೇರಿದಂತೆ ಈಚೆಗೆ ಸ್ವೀಕರಿಸಿದ ಒಂದು ಏರ್ಪಾಟನ್ನು ತಮ್ಮ ಅವಗಾಹನೆಗೆ ತರಬಯಸುವೆನು; ಮೈಸೂರು ಸರ್ಕಾರದ ಪರವಾಗಿ ಲಂಡನ್ ನಗರದಲ್ಲಿ "ಟ್ರೇಡ್ ಕಮಿಷನರ್" ಎಂಬ ಹೆಸರಿನ ವಾಣಿಜ್ಯನಿಯೋಗಿಯೊಬ್ಬರನ್ನು ಈಚೆಗೆ ನೇಮಕಮಾಡಿದ್ದೇವೆ. ಹೀಗೆ ಮಾಡಬೇಕಾದುದು ತೀರ ಅವಶ್ಯಕವೆಂಬುದಾಗಿ ಕಂಡುಬಂದಿತು. ಹೀಗೆ ಇಲ್ಲಿಯ ಅಧಿಕಾರಿಯೊಬ್ಬರನ್ನು ನೇಮಕಮಾಡಬೇಕಾದುದು ಗಂಧದೆಣ್ಣೆಯ ವ್ಯಾಪಾರದ ಯೋಗಕ್ಷೇಮದ ದೃಷ್ಟಿಯಿಂದ ಕೇವಲ ಪ್ರಯೋಜನಕರವೆಂದು ಮೊದಲಿನಲ್ಲಿ ಕಂಡುಬಂದಿತು. ಅದಕ್ಕನುಗುಣವಾಗಿ ಹಾಗೆ ಮಾಡಿಯೂ ಮಾಡಿದೆವು. ಆದರೆ, ಈ ಪ್ರಯತ್ನವು ಈಗ ತಳೆದಿರುವ ರೂಪವೇ ಬೇರೆ. ಮೊದಲಿನಲ್ಲಿ ನಮ್ಮ ಉದ್ದೇಶಕ್ಕೆ ಸೇರದೆಹೋಗಿದ್ದ ಕೆಲವು ಹೆಚ್ಚಿನ ಪ್ರಯೋಜನಗಳನ್ನೂ ಪಡೆಯಬೇಕೆಂದು ಈಗ ನಿರ್ಧರಿಸಿದ್ದೇವೆ. ಗಂಧದೆಣ್ಣೆಯ ವ್ಯಾಪಾರದ ಸಂಬಂಧದಲ್ಲಿ ನಡೆಯಬೇಕಾದ ಆತಂಕಗಳನ್ನು ನೋಡಿಕೊಳ್ಳುವುದು ಮಾತ್ರವೇ ಅಲ್ಲದೆ, ಇನ್ನೂ ಹೆಚ್ಚಿನ ಕರ್ತವ್ಯಗಳನ್ನೂ ಈ ಹೊಸ ಅಧಿಕಾರಿಯವರಿಗೆ ವಹಿಸಬೇಕೆಂದು ನಿಶ್ಚಯಮಾಡಿದ್ದೇವೆ. ಸಂಸ್ಥಾನದ ವ್ಯಾಪಾರ ವಾಣಿಜ್ಯಗಳ ಅಭಿವೃದ್ಧಿಗೆ ಸಾಧಕವಾದ ಕೆಲವು ಕಾರ್ಯಗಳನ್ನೂ ಇವರು ನೆರವೇರಿಸಬೇಕಾಗುತ್ತದೆ. ಅವುಗಳು ಯಾವುವೆಂದರೆ, ನಮ್ಮ ಸಂಸ್ಥಾನದ ಆಮದು ರಫ್ತುಗಳ ವಿಚಾರವನ್ನು ಕೂಲಂಕಷವಾಗಿ ಪರಿಶೀಲಿಸುವುದು, ನಮ್ಮ ದೇಶದವರಿಗೆ ಅತ್ಯಂತ ಲಾಭದಾಯಕವಾದ ರೀತಿಯಲ್ಲಿ ಆಮದು ರಫ್ತುಗಳು ನಡೆಯುವಂತೆ ತಕ್ಕ ಸಲಹೆಗಳನ್ನು ಕೊಡುವುದು. ಮೈಸೂರು ಸಂಸ್ಥಾನದ ಸಾಮಾನುಗಳಿಗೆ ವಿದೇಶಗಳಲ್ಲಿ ಈಗಿರುವುದಕ್ಕಿಂತಲೂ ಹೆಚ್ಚು ಗಿರಾಕಿಗಳನ್ನು ದೊರೆಯಿಸುವುದು ಎಷ್ಟುಮಟ್ಟಿಗೆ ಸಾಧ್ಯವೆಂಬುದನ್ನು ವಿಚಾರಿಸಿ ಕಂಡುಹಿಡಿಯುವುದು. ನಮ್ಮ ದೇಶದಲ್ಲಿ ನಡೆಸಲು ಪ್ರತ್ಯೇಕ ಸಹಜವಾದ ಅನುಕೂಲಗಳಿರುವಂತಹ ಯಾವುದಾದರೂ ಕೈಗಾರಿಕೆಯನ್ನು ನಡೆಸಿ, ವಿದೇಶಗಳ ಬಳಕೆಗೆ ಅವಶ್ಯವಾಗಿ ಬೇಕಾಗಿರುವ ಸಾಮಾನುಗಳನ್ನು ಒದಗಿಸುವುದಕ್ಕಾದೀತೇ — ಎಂಬುದನ್ನು ಆಲೋಚಿಸಿ ನೋಡಿ ಸಲಹೆಗಳನ್ನು ಕೊಡುವುದು. ಇವುಗಳೆಲ್ಲಾ ಅವರ ಕರ್ತವ್ಯಗಳಾಗಿವೆ. ವಿಜ್ಞಾನ ವಿಚಾರಗಳಲ್ಲಿಯೂ, ಕಸಬುವಾರೀ ತಯಾರಿಯ ವಿಚಾರಗಳಲ್ಲಿಯೂ, ವಿದೇಶೀಯರು ಏಕಪ್ರಕಾರವಾಗಿ ಪರಿಶೋಧನೆಗಳನ್ನು ನಡೆಸಿ, ಹೊಸಹೊಸ ವಿಷಯಗಳನ್ನು ಕಂಡುಹಿಡಿಯುತ್ತಲೇ ಇರುತ್ತಾರೆ. ಅವುಗಳನ್ನುಪಯೋಗಿಸಿಕೊಂಡು ಕೈಗಾರಿಕೆಯ ವಿಧಾನಗಳಲ್ಲಿ ಅವಶ್ಯಾನುಗುಣವಾಗಿ ಬಗೆಬಗೆಯ ಮಾರ್ಪಾಟುಗಳನ್ನು ಮಾಡಿ, ಅವರು ವಿಶೇಷವಾಗಿ ಲಾಭವನ್ನು ಗಳಿಸುತ್ತಾರೆ. ಇದು ಎಲ್ಲರಿಗೂ ತಿಳಿದೇ ಇದೆ. ಸಾಧ್ಯವಾದಮಟ್ಟಿಗೂ ಈ ಮಾರ್ಪಾಟುಗಳ ವಿಚಾರವನ್ನು ಪರಿಶೀಲಿಸುತ್ತಿದ್ದು, ನಮ್ಮ ಸಂಸ್ಥಾನದಲ್ಲಿ ನಡೆಯುವ ಕೈಗಾರಿಕೆಗಳ ಸಂಬಂಧದಲ್ಲಿ ಉಪಯೋಗವಾಗತಕ್ಕವುಗಳನ್ನು ತಿಳಿಸುವ ಭಾರವೂ ಸಹ "ಟ್ರೇಡ್ ಕಮಿಷನರ್" ಎಂಬ ಈ ಅಧಿಕಾರಿಯವರನ್ನೇ ಸೇರಿದೆ. ಅವರ ಕರ್ತವ್ಯಗಳು ಇಲ್ಲಿಗೇ ಪೂರೈಸಲಿಲ್ಲ. ನಮ್ಮ ದೇಶದಲ್ಲಿ ಈಗ ನಡೆಯುತ್ತಿರುವ ಕೈಗಾರಿಕೆಗಳ ಸಂಬಂಧದಲ್ಲಿ ಇಲ್ಲಿನವರಿಗೆ ಉಪಯೋಗವಾಗುವ ಕೆಲವು ಸಂಗತಿಗಳನ್ನು ಸಂಗ್ರಹಿಸಿ ಕಳುಹಿಸುವ ಕೆಲಸವನ್ನೂ ಅವರಿಗೆ ವಹಿಸಿದ್ದೇವೆ. ಎಂದರೆ, ಇದೇ ವಿಧದ ಕೈಗಾರಿಕೆಗಳನ್ನು ನಡೆಸುವುದರಲ್ಲಿ ಯಾವ ಯಾವ ಉತ್ತಮವಿಧಾನಗಳನ್ನು ಅನುಸರಿಸಿ ಹೇಗೆಹೇಗೆ ಅಲ್ಲಿ ಕೆಲಸಮಾಡುತ್ತಿದ್ದಾರೆಂಬುದೊಂದು, ಅಲ್ಲಿ ಆಚರಣೆಯಲ್ಲಿರುವ ವಾಣಿಜ್ಯಕ್ರಮದ ಮೇರೆಗೆ ಪರ್ಯಾಲೋಚಿಸಿ ನೋಡಿದರೆ, ಆ ಕೈಗಾರಿಕೆಗಳಿಂದ ತಯಾರಾದ ವಸ್ತುಗಳಿಗೆ ಗಿರಾಕಿಗಳನ್ನು ದೊರಕಿಸಿಕೊಳ್ಳುವ ಭಾಗದಲ್ಲಿ ಹೇಗೆ ಹೇಗೆ ಕೆಲಸ ಮಾಡುವುದು ಸಾಧ್ಯವಿದೆಯೆಂಬುದೊಂದು, ಈ ಸಂಗತಿಗಳನ್ನು ಕ್ರಮವಾಗಿ ತಿಳಿಸುವ ಭಾರವೂ ಅವರ ಮೇಲಿದೆ. ನಮ್ಮ ದೇಶದಲ್ಲಿ ದೊರೆಯುವ ಅನುಕೂಲ್ಯಗಳ ದೆಸೆಯಿಂದ ಮುಂದೆ ಯಾವ ಯಾವ ಕೈಗಾರಿಕೆಯ ಉದ್ಯಮಗಳನ್ನು ಪ್ರಾರಂಭಿಸುವ ಸಾಧ್ಯತೆಯು ಕಂಡು ಬರುತ್ತದೋ, ಆ ಕೈಗಾರಿಕೆಗಳ ಸಂಬಂಧದಲ್ಲಿಯೂ, ಅವರು ಈ ಸಂಗತಿಗಳನ್ನು ಕುರಿತು ಕಳುಹಿಸಬೇಕೆಂದೂ ಅಪ್ಪಣೆ ಮಾಡಿದ್ದೇವೆ. ಈ ಎಲ್ಲ ಕರ್ತವ್ಯಗಳನ್ನೂ ಅವರಿಗೆ ವಹಿಸಿರುವುದರ ದೆಸೆಯಿಂದ ವಾಣಿಜ್ಯಕ್ಷೇತ್ರದಲ್ಲಿ ನಮ್ಮ ದೇಶಕ್ಕೆ ವಿಶೇಷ ಹೆಚ್ಚಿನ ಪ್ರಯೋಜನಗಳು ಲಭಿಸುವುದಕ್ಕೆ ಒಳ್ಳೆಯ ಸಮಯವು ದೊರೆಯುವಂತಾಗುತ್ತದೆ. ವಾಣಿಜ್ಯದ ದೃಷ್ಟಿಯಿಂದ ನೋಡಿದರೆ, ಈ ಹೊಸ ಅಧಿಕಾರವನ್ನು ಕಲ್ಪಿಸಿರುವುದು ಕೇವಲ ಪ್ರಯೋಜನಕರವಾಗಿ ಪರಿಣಮಿಸುವುದೆಂಬುದು ಸ್ವತಸ್ಸಿದ್ಧವಾಗಿಯೇ ಇದೆ. ವಾಣಿಜ್ಯದಲ್ಲಿಯೂ, ಕೈಗಾರಿಕೆಯಲ್ಲಿಯೂ ಉದ್ಯುಕ್ತರಾಗಿರುವ ನಮ್ಮ ದೇಶಬಾಂಧವರು, ಲಂಡನ್ ನಗರದಲ್ಲಿ ನಮ್ಮ ಸಂಸ್ಥಾನದ ವಾಣಿಜ್ಯನಿಯೋಗಿಯವರು ಇರುವುದರ ದೆಸೆಯಿಂದ ಲಭಿಸುವ ಪೂರ್ಣಪ್ರಯೋಜನವನ್ನು ಪಡೆಯಲು ಶೀಘ್ರವಾಗಿ ಪ್ರಯತ್ನಮಾಡುವರೆಂಬುದಾಗಿ ನಾನು ದೃಢವಾಗಿ ನಂಬಿದ್ದೇನೆ.

ನೀರಾವರಿ ಸಂಬಂಧದ ಕಾಮಗಾರಿಗಳು.

ನಮ್ಮ ದೇಶದಲ್ಲಿ ಭಾರೀ ನೀರಾವರಿ ಸಾಧನಗಳೂ ಸಣ್ಣಪುಟ್ಟ ನೀರಾವರಿ ಸಾಧನಗಳೂ, ಅನೇಕವಾಗಿರುವುದು ಸರಿಯಷ್ಟೆ. ಅವುಗಳ ಮೇಲೆ ಮತ್ತೆ ಕೆಲವನ್ನು ಹೊಸದಾಗಿ ಕಟ್ಟಿಸುವ ಕೆಲಸವು ಗಣನೀಯವಾದ ರೀತಿಯಲ್ಲಿ ನಡೆಯಿತು. ಅವುಗಳಲ್ಲಿ ಕಂಡ ಹಾಗೆಲ್ಲಾ ಶಿಥಿಲವಾಗುವುಗಳಲ್ಲಿ ಕೆಲವನ್ನು ಸರಿಮಾಡಿಸುವ ಕೆಲಸವೂ, ಮತ್ತೆ ಕೆಲವನ್ನು ಜೀರ್ಣೋದ್ಧಾರ ಮಾಡಿಸುವ ಕೆಲಸವೂ, ಇದರಂತೆಯೇ ಸಮರ್ಪಕವಾಗಿ ನಡೆಯಿತು. ಭದ್ರಾ ನದಿಯ ಆಣೆಕಟ್ಟೆಯ ಕಾಮಗಾರಿಯು ಪೂರೈಸಿತು. ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಕಪಿಲಾನದಿಗೆ ಅಡ್ಡವಾಗಿ ಕಟ್ಟುತ್ತಿರುವ ಆಣೆಕಟ್ಟೆಯ ಕಾಮಗಾರಿಯು ಪ್ರಗತಿಸ ಹೊಂದುತ್ತಿದೆ. ಅಲ್ಲಿ ನಡೆಯುತ್ತಿರುವ ಮುಖ್ಯವಾದ ಇತರ ಕಾಮಗಾರಿಗಳು ಯಾವುವೆಂದರೆ — ಅಂದನಾಪುರದ ಬಳಿಯಲ್ಲಿ ಆಣೆಯನ್ನು ಹಾಕುತ್ತಿರುವ ಜಲಾಶಯದಲ್ಲಿ ಕೆಲಸ, ಮತ್ತು ಶಿಂಬಿ, ನಿಡಸಾಲೆ ಮತ್ತು [illegible] ಈ ಸ್ಥಳಗಳಲ್ಲಿ ಕೆರೆಗಳನ್ನು ಕಟ್ಟುವ ಕೆಲಸ. ಇವುಗಳಿಗಾಗಿ ಒಟ್ಟು ೨೮ ಲಕ್ಷ ರೂಪಾಯಿಗಳ ಮೊಬಲಗು ವೆಚ್ಚವಾಗಬೇಕಾಗುತ್ತದೆ. ನಾಗಮಂಗಲ ತಾಲ್ಲೂಕಿನಲ್ಲಿರುವ [illegible] ಕೆರೆಯನ್ನು ಜೀರ್ಣೋದ್ಧಾರ ಮಾಡುವ ಕಾಮಗಾರಿಯೂ ನಡೆಯುತ್ತಿದೆ. ಕಾಮಸಮುದ್ರದ ಬಳಿಯಲ್ಲಿರುವ [illegible] ನದಿಗೆ ಅಡ್ಡಕಟ್ಟೆಯನ್ನು ಹಾಕಿ ಒಂದು ದೊಡ್ಡ ಕೆರೆಯನ್ನು ಕಟ್ಟಿಸುವ ಕಾಮಗಾರಿಯನ್ನು ಈಚೆಗೆ ಪ್ರಾರಂಭಿಸಲಾಗಿದೆ. ಇದಕ್ಕೆ ೩ ಲಕ್ಷ ರೂ. ಮೊಬಲಗು ವೆಚ್ಚವಾಗುತ್ತದೆ. ಭಾರೀ ನೀರಾವರಿಯ ಸಾಧನಗಳು ಮತ್ತು ಸಣ್ಣಪುಟ್ಟ ನೀರಾವರಿಯ ಸಾಧನಗಳು, ಇವುಗಳ ಸಂಬಂಧದಲ್ಲಿಯೂ ಕೂಡ, ಒಂದು ತ್ರೈವಾರ್ಷಿಕ ಕಾರ್ಯಕ್ರಮದ ಪಟ್ಟಿಯನ್ನು ರಚಿಸಿಕೊಂಡು, ಅದಕ್ಕನುಗುಣವಾಗಿ ಕೆಲಸ ನಡೆಸುವ ವಿಧಾನವನ್ನು ಅವಲಂಬಿಸಿದ್ದೇವೆ. ಮುಂದಿನ ೩ ವರುಷಗಳ ಅವಧಿಗೆ ಇಂತಹ ಕಾರ್ಯಕ್ರಮದ ಪಟ್ಟಿಯು ರಚಿಸಲ್ಪಡುತ್ತಾ ಇದೆ. ಹಳೆಯವುಗಳಿಗೆ ಕಾಮಗಾರಿಗಳನ್ನು ನಡಸುವ ಕೆಲಸಗಳೂ, ಹೊಸವುಗಳನ್ನು ಪಡೆ

NOTICE.

Wanted immediately tenders from carting contractors to bring Timber logs 53,000 c. ft from Puthadi Forest near Sultans Battery to Nanjangud. Stacks ready for delivery on Road-side.

Wanted a Typist to join service immediately. Apply to Mr. E. K. PALIA, M.A. *Ismail Manzil, Near Government House, Mysore.*

FOR SALE.

Agricultural Virgin Soil available in blocks of 50 acres to 5,000 acres near Sultans Battery. Fit for Tea and Coffee Plantations, Pepper, Oranges and Lime orchards or groundnut and any annual crops. Price Rs. 40/ per acre.

Apply for details to Mr E K PALIA, M.A., *Ismail Manzil, Near Government House, Mysore*

ಮೈಸೂರು ಸ್ಟಾರ್.

೧೯೨೯ನೆಯ ಇಸವಿ ಅಕ್ಟೋಬರ್ ತಾ|| ೧೯ ನೆಯ ಶನಿವಾರ.

THE MYSORE REPRESENTATIVE ASSEMBLY.

DEWAN SAHEB'S ANNOUNCEMENT.

Elsewhere we have published the address of the Dewan-President to the Representative Assembly and we hasten to offer our hearty congratulations and express our sincere gratitude to him for the announcement granting the privilege of having elected *non-official* presidents to the District Boards of Mysore, Shimoga, Kadur, Tumkur and Chitaldrug. It is a great step in the advancement of Local Self-Government and a step in the right direction. The other three districts have already the privilege. There have not been men wanting who are never tired of saying that the Mysore Durbar is against any such reforms. We are sure that this privilege would be utilised to the best advantage of the people in the districts. It will also prove a good training ground for non-official gentlemen to shoulder further administrative responsibilities as occasions arise. We are also glad to note that Government intend restoring to the Bangalore Municipal Council the privilege of having its own president. Another *welcome pronouncement of the Dewan Saheb* is the exemption of all country carts except these which carry timber for commercial purposes from payment of toll at all newly established interior provincial toll-gates. It is also pleasing to note that the Government intend improving the pay and prospects of school teachers and the Police constabulary, both District and City. Yet another pleasant feature of the address is the reassuring position of our finances. The actuals of last year are an improvement over the revised estimate presented in June last. The revenue surplus of last year is Rs 6 33 lakhs or about a couple of lakhs over the revised. The improvement over the budget will thus be Rs 18½ lakhs, a matter on which the State may well congratulate itself. We are happy to note the *increased realisations from* Sandal Oil of Rs. 12 lakhs and the rest contributed by Excise Stamps and Civil works. We are glad that the Government has thought fit to have a Trade Commissioner of Mysore at London. The possibilities of this new office are very great and we do trust that the experiment will prove successful. It is difficult for us to traverse the many other grounds all of which show a uniform progress. We are *in particular grateful to the Dewan Saheb* for placing the question of Town and Village Improvement prominently before the programme of development. The Dewan also said that the Viceroy would be paying the State a visit next month. We have no doubt that the august representative of His Majesty will get a fitting reception, and he will in his turn be happy to note the advance the State is making. We have said before and we will not hesitate to repeat that the Dewan's optimism is something unique and despite the doubts of some persons about our finances the Dewan Saheb's anticipations have always proved true. There are yet more schemes of development notably the expansion of Primary Education which we are sure will be inaugurated erelong to the great glory of His Highness and the present administration and the everlasting benefit of the people of the State.

NON-BRAHMIN CONFERENCE PRESIDENT'S ADDRESS.

We said in our last issue that we could not review the address of the President of the Non-Brahmin Conference for want of space. *Mr. Ramaswamy Mudaliar's address* is a memorable statement which is at once a most truthful analysis and a most beautiful and telling exposition of the present political situation. It is remarkable how closely he has been following the Mysore politics these years and how correct are the conclusions he has *arrived at.* He paid a most glowing tribute to the memories of the late Mr. Basaviah and the late Raja of Pangal. As regards the non-Brahmin movement he said that the very fact of its survival for so many years must convince its critics that "there is some cardinal principle of truth and justice on which it is based, some rocky foundation of equity from which it cannot be shaken." That principle is "equal opportunities to all" and of "justice to everyone and injustice to none." How true are his words "no one who is a student of human psychology can deny that the present position of utter inequality in the social and political positions of the two communities is harmful to both, that it corrupts the one and degrades the other." He says "we are serving the cause of democracy and preventing catastrophes which may result erelong if the growing evils in the country are not checked." Discussing the policy of the movement and its achievement he says that no exaggerated promises are made and the past record is their best recommendation. "We have won a place under *the sun for each distinct community,* however backward and uneducated and ignorant it might once have been." Further "we have opened up the road to a better social order." The most notable achievement of the movement according to Mr Mudaliar is the turning of "the focus of attention on the much neglected masses in villages *in whose name* much exploitation has gone on for ages and for whose benefit little or nothing has been done till very recently." When talking of the claims of non-Brahmins for their due share in the Public Services he asked whether the septennial limit had been worked up to and regretted the inaction of the non Brahmin leaders to follow up the work of the late Mr Basaviah. *We make no apology to quote the following* beautiful passage "Have they learnt no *lessons from his (Mr M Basaviah's) great* life of self sacrifice and discipline? He who stood so calmly and so patiently, alone, unfriended, Casabianca like, facing the gathering storm of a proud heirarchy and the slings and arrows of ephemeral and vain-glorious power, he who smiled with forbearance when a dizzy and over flattered head of the administration accused him of trying to grow the lantana of communal discord in the pleasure gardens of monopolist Mysore, he who felt his withers unstrung when power and pelf threw their sarcasm and sting at his unselfish endeavours—how comes it O Chamundeswari that his memory is not kept green in this great land of yours and his disciples lack the courage and spirit of self sacrifice to bear his cross and carry it to the promised land"

(To be continued)

ಪ್ರಜಾಪ್ರತಿನಿಧಿ ಸಭಾಧ್ಯಕ್ಷರ ಭಾಷಣ

ಕಳೆದ ಸೋಮವಾರ ದಿವಾನ್ ಸಾಹೇಬರು ಪ್ರಜಾಪ್ರತಿನಿಧಿಸಭೆಯನ್ನು ಆರಂಭಿಸುವಾಗ ಮಾಡಿದ ಭಾಷಣವು ಎರಡು ಭಾಗಗಳಾಗಿ ವಿಂಗಡಿಸಲ್ಪಟ್ಟು ಮೊದಲನೆಯ ಭಾಗದಲ್ಲಿ ಪ್ರಭುತ್ವದವರು ಗತಸಂವತ್ಸರದಲ್ಲಿ ಮಾಡಿರುವ ಮತ್ತು ಪ್ರಸಕ್ತವರ್ಷದಲ್ಲಿ ಮಾಡಬೇಕಾಗಿರುವ ಕಾರ್ಯಕಲಾಪಗಳೂ, ಸಂಸ್ಥಾನದ ಆಯವ್ಯಯ ವಿಚಾರಗಳೂ, ಎರಡನೆಯ ಭಾಗದಲ್ಲಿ ಅವುಗಳ ವಿವರಣೆಯೂ ಕೊಡಲ್ಪಟ್ಟಿವೆ. ಇವುಗಳಲ್ಲಿ ಅತ್ಯಾವಶ್ಯಕವಾದ ಮೊದಲನೆಯ ಭಾಗವು ಈ ಪತ್ರಿಕೆಯ ಬೇರೆಕಡೆ ಸಮಗ್ರವಾಗಿ ಮುದ್ರಿಸಲ್ಪಟ್ಟಿರುತ್ತದೆ. ಇದರಲ್ಲಿ ಕಂಡ ವಿಷಯಗಳನ್ನೆಲ್ಲಾ ಸಿಂಹಾವಲೋಕಿಸಲು ಸ್ಥಳಾನುಕೂಲವಿಲ್ಲಮದರಿಂದ ಕೆಲವು ಮುಖ್ಯ ವಿಷಯಗಳನ್ನು ಮಾತ್ರ ಕುರಿತು ಪ್ರಸ್ತಾಪಿಸುತ್ತೇವೆ. ಸಂಸ್ಥಾನದ 8 ಡಿಸ್ಟ್ರಿಕ್ಟುಗಳಲ್ಲಿ ಮೂರು ಡಿಸ್ಟ್ರಿಕ್ಟುಗಳಿಗೆ ತಮ್ಮ ಅಧ್ಯಕ್ಷರನ್ನು ತಾವೇ ಆರಿಸಿ ನಿಯಮಿಸಿಕೊಳ್ಳುವ ಸ್ವತಂತ್ರಾಧಿಕಾರವನ್ನು ಕೆಲ ಕಾಲದ ಹಿಂದೆಯೇ ಕೊಟ್ಟಿರುವಂತೆ ಉಳಿದ ಮೈಸೂರು, ತುಮಕೂರು, ಕಡೂರು, ಶಿವಮೊಗ್ಗ ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ತಂತಮ್ಮ ಅಧ್ಯಕ್ಷರನ್ನು ತಾವೇ ನಿಯಮಿಸಿಕೊಳ್ಳುವ ಅಧಿಕಾರವನ್ನು ಕೊಟ್ಟಿರುವುದಕ್ಕಾಗಿಯೂ, ತನ್ನ ಅಧ್ಯಕ್ಷರನ್ನು ಆರಿಸುವ ಅಧಿಕಾರವನ್ನು ಕಳೆದುಕೊಂಡಿರುವ ಬೆಂಗಳೂರು ಮ್ಯುನಿಸಿಪಾಲಿಟಿಗೆ ಆ ಅಧಿಕಾರವನ್ನು ಪುನರಪಿ ಕೊಡುವುದಾಗಿ ವಾಗ್ದಾನಮಾಡಿರುವುದಕ್ಕಾಗಿಯೂ, ಹೊಸದಾಗಿ ಏರ್ಪಟ್ಟಿರುವ ಪ್ರಾಂತಿಕ ಟೋಲ್‌ಗೇಟುಗಳಲ್ಲಿ ವ್ಯಾಪಾರಕ್ಕಾಗಿ ಮರದ ದಿಮ್ಮಿಗಳನ್ನು ಸಾಗಿಸುವ ಬಂಡಿಗಳ ಹೊರತು ಉಳಿದ ನಾಡು ಬಂಡಿಗಳಿಗೆ ಸುಂಕವನ್ನು ತಪ್ಪಿಸಿರುವುದಕ್ಕಾಗಿಯೂ ನಾವು ದಿವಾನರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ. ಸ್ಥಳೀಯ ಸರ್ಕಾರಗಳಿಗೆ ಉಚಿತ ಸ್ವತಂತ್ರಾಧಿಕಾರವನ್ನು ಕಾಲಕ್ರಮೇಣ ಕೊಡುತ್ತಿರುವುದರಿಂದ, ಮೈಸೂರು ಪ್ರಭುತ್ವದವರು ಇಂತಹ ಸುಧಾರಣೆಗಳಿಗೆ ವಿರುದ್ಧವಾಗಿರುವರೆಂದು ಅಸೂಯಾಪರರು ಆಕ್ಷೇಪಿಸುತ್ತಿರುವುದು ಮಾತ್ರ ತಪ್ಪಿಲ್ಲ. ಸ್ಥಳೀಯ ಸರ್ಕಾರದವರು ಅಂದರೆ ಡಿಸ್ಟ್ರಿಕ್ಟ್ ಬೋರ್ಡಿನವರು ಈಗ ತಮಗೆ ಕೊಡಲ್ಪಟ್ಟಿರುವ ಸ್ವತಂತ್ರಾಧಿಕಾರವನ್ನು ತಂತಮ್ಮ ಡಿಸ್ಟ್ರಿಕ್ಟಿನ ಪ್ರಜೆಗಳ ಅಭಿವೃದ್ಧಿ ಕಾರ್ಯಗಳಲ್ಲಿ ವಿನಿಯೋಗಿಸಿ ಇನ್ನೂ ಹೆಚ್ಚು ಸ್ವಾತಂತ್ರ್ಯವನ್ನು ಪಡೆಯಲು ಅರ್ಹರೆಂದೆನಿಸಿಕೊಳ್ಳುವವರಾಗಲೆಂದು ಆಶಿಸುತ್ತೇವೆ. ಪ್ರಭುತ್ವದವರು ಪಾಠಶಾಲೋಪಾಧ್ಯಾಯರುಗಳ, ಡಿಸ್ಟ್ರಿಕ್ಟು ಮತ್ತು ಸಿಟಿ ಪೋಲೀಸು ಕಾನಸ್ಟೆಬಲುಗಳ ಸಂಬಳವನ್ನೂ ಉದ್ಯೋಗಸ್ಥಾನದ (ದರ್ಜೆಯ) ನ್ನೂ ಹೆಚ್ಚಿಸುವುದಾಗಿ ಹೇಳಿರುವುದೂ, ಸಂಸ್ಥಾನದ ಆರ್ಥಿಕಸ್ಥಿತಿಯು ಉತ್ತಮವಾಗಿರುವುದೆಂದು ಭರವಸೆಕೊಟ್ಟಿರುವುದೂ ಸಂತೋಷಪ್ರದವಾಗಿವೆ. ಕಳೆದ ವರ್ಷದುತ್ಪನ್ನದಲ್ಲಿ ವೆಚ್ಚ ಕಳೆದು 6.33 ಲಕ್ಷ, ಅಥವಾ ನಿರೀಕ್ಷಿಸಿದ್ದಕ್ಕಿಂತ ಪ್ರಾಯಶಃ 2 ಲಕ್ಷ ರೂಪಾಯಿಗಳು ಹೆಚ್ಚಾಗಿ ಉಳಿದಿರುತ್ತವೆ. ನಿರೀಕ್ಷಿತವಾಗಿದ್ದುದಕ್ಕಿಂತ 18½ ಲಕ್ಷ ರೂ. ಹೆಚ್ಚಾಗುತ್ಪನ್ನವಾಗಿರುವುದು ಅಭಿನಂದನೀಯವು. ಹೀಗಾಗಲು ಗಂಧದೆಣ್ಣೆಯಿಂದ 12 ಲಕ್ಷವೂ, ಎಕ್ಸೈಸು, ಸ್ಟಾಂಪು, ಮತ್ತು ಸಿವಿಲ್ ಕೆಲಸಗಳಿಂದ ಉಳಿದ ಹಣವೂ ಉತ್ಪನ್ನವಾಗಿರುವುದೇ ಕಾರಣವಾಗಿದೆ. ನಮ್ಮ ಸಂಸ್ಥಾನದ ಗಂಧದೆಣ್ಣೆಗೆ ಸರಿಯಾದ ವ್ಯಾಪಾರಗಾರರ (ಗಿರಾಕಿಗಳ)ನ್ನು ಗೊತ್ತುಮಾಡಿ ಹೆಚ್ಚು ಆದಾಯ ಬರುವಂತೆ ತಕ್ಕೇರ್ಪಾಟನ್ನು ಮಾಡುವುದಕ್ಕಾಗಿಯೂ, ನಮ್ಮ ಸೀಮೆಯ ವ್ಯಾಪಾರಾಭಿವೃದ್ಧಿಗೆ ತಕ್ಕ ಮಾರ್ಗವನ್ನು ಕಂಡು ಹಿಡಿಯುವುದಕ್ಕಾಗಿಯೂ ಒಬ್ಬ ಟ್ರೇಡ್ ಕಮಿಷನರನ್ನು ಅಂದರೆ ವಾಣಿಜ್ಯನಿಯೋಗಿಯನ್ನು ಲಂಡನ್ನಿನಲ್ಲಿ ನಿಯಮಿಸಿರುವುದು ಯುಕ್ತವಾಗಿರುವುದಲ್ಲದೆ ಈ ಪ್ರಯತ್ನವು ಫಲಕಾರಿಯಾಗಿ ಪರಿಣಮಿಸುವುದೆಂದು ನಿರೀಕ್ಷಿಸುತ್ತೇವೆ. ಪ್ರಭುತ್ವದವರು ಕೈಕೊಳ್ಳಬೇಕಾಗಿರುವ ಅಭಿವೃದ್ಧಿ ಕಾರ್ಯಗಳಲ್ಲಿ ಪಟ್ಟಣ ಮತ್ತು ಗ್ರಾಮಗಳ ಅಭಿವೃದ್ಧಿ ವಿಚಾರವನ್ನು ಪ್ರಾಮುಖ್ಯವಾಗಿ ಗಣಿಸಿರುವುದಕ್ಕೋಸ್ಕರ ದಿವಾನರನ್ನು ನಾವು ವಂದಿಸುತ್ತೇವೆ. ವೈಸ್‌ರಾಯ ಪ್ರಭುಗಳು ಬರುವ ತಿಂಗಳಿನಲ್ಲಿ ನಮ್ಮ ಸಂಸ್ಥಾನವನ್ನು ಸಂದರ್ಶಿಸುವರೆಂದು ದಿವಾನರು ತಿಳಿಸಿರುವರು. ಸಾರ್ವಭೌಮರವರ ಪ್ರತಿನಿಧಿಗಳಾಗಿ ದಯಮಾಡಿಸುವ ಈ ಮಹೋನ್ನತರ ಪದವಿಗೂ ನಮ್ಮ ಸಂಸ್ಥಾನದ ಖ್ಯಾತಿಗೌರವಗಳಿಗೂ ತಕ್ಕಂತೆ ಸತ್ಕಾರವು ನಡೆಯುವುದಲ್ಲದೆ, ನಮ್ಮ ಸಂಸ್ಥಾನವು ಅಭಿವೃದ್ಧಿಗೊಳ್ಳುತ್ತಿರುವುದನ್ನು ಅವರು ಕಣ್ಣಾರ ನೋಡಿ ಸಂತೋಷಪಡುವುದರಲ್ಲೂ ಯಾವ ಸಂಶಯವಿಲ್ಲ. ಸಂಸ್ಥಾನದ ಆರ್ಥಿಕಾಭಿವೃದ್ಧಿ ವಿಚಾರದಲ್ಲಿ ದಿವಾನರ ನಿರೀಕ್ಷಣೆಯು ಅಸಾಧಾರಣವಾದುದೆಂದೂ, ಕೆಲವರು ಸಂಶಯ ಪಡುವಂತೆ ಅದೆಂದಿಗೂ ಫಲಕಾರಿಯಾಗದೆ ಹೋಗುವುದಿಲ್ಲವೆಂದೂ ನಾವು ಹಿಂದೆ ಹೇಳಿರುತ್ತೇವಲ್ಲದೆ ಈಗಲೂ ಹೇಳುತ್ತೇವೆ. ಪ್ರಾಥಮಿಕ ವಿದ್ಯಾಭ್ಯಾಸದ ವಿಚಾರದಲ್ಲಿ ಇನ್ನೂ ಅನೇಕ ಸುಧಾರಣೆಗಳಾಗಬೇಕಾಗಿರುತ್ತವೆ. ಅವು ಶೀಘ್ರದಲ್ಲಿಯೇ ಅನುಗ್ರಹಿಸಲ್ಪಟ್ಟು ಶ್ರೀಮನ್ಮಹಾರಾಜರವರ ಮತ್ತು ಅವರ ಈಗಿನ ಪ್ರಭುತ್ವದವರ ಕೀರ್ತಿಪ್ರತಿಷ್ಠೆಗಳಿಗೂ, ಸಂಸ್ಥಾನದ ಪ್ರಜೆಗಳ ನಿರಂತರವಾದ ಅಭಿವೃದ್ಧಿಗೂ ಸಾಧಕವಾಗುವವೆಂದು ನೆನಸುತ್ತೇವೆ.

ಒಳದೇಶದ ವೃತ್ತಾಂತಗಳು.

ನಾಳೆಯ ದಿವಸ ಮಧ್ಯಾಹ್ನ 4 ಗಂಟೆಗೆ ಶ್ರೀಮನ್ಮಹಾರಾಜರವರು ವಸ್ತುಪ್ರದರ್ಶನಾಲಯಕ್ಕೆ ಚಿತ್ತೈಸಿ ಎಲ್ಲವನ್ನೂ ಪರಾಂಬರಿಸಿ ಉತ್ತಮವಾದ ವಸ್ತುಗಳಿಗೆ ಬಹುಮಾನಗಳನ್ನು ದಯಪಾಲಿಸುವರು.

ನೆನ್ನೆಯ ದಿವಸ ಸಾಯಂಕಾಲ ರಾಜಧಾನಿಯ ವಸ್ತುಪ್ರದರ್ಶನಾಲಯಕ್ಕೆ ಹೋಗಿದ್ದ ಜನರಲ್ಲಿ ಹೆಚ್ಚು ಬೆಲೆಯ ಜರತಾರಿ ಸೀರೆಯನ್ನುಟ್ಟು ಆಭರಣಗಳನ್ನು ಧರಿಸಿಕೊಂಡಿದ್ದ ಮಧ್ಯವಯಸ್ಸಿನ ಹೆಂಗಸು ಒಂದು ಜವಳಿಯ ಅಂಗಡಿಯಲ್ಲಿ ಬಟ್ಟೆಗಳನ್ನು ನೋಡುತ್ತಿರುವಾಗ್ಗೆ 30 ರೂ ಬೆಲೆಯ ಸೀರೆಯನ್ನು ಅಪಹರಿಸಿಕೊಂಡು ಬಂದುದನ್ನು ಅಂಗಡಿಯವನು ಕಂಡು ಮೌನವಾಗಿದ್ದು ಆಕೆಯು ಪ್ರದರ್ಶನಾಲಯವನ್ನು ಬಿಟ್ಟು ಹೊರಗೆ ಹೋಗುವ ಸಮಯದಲ್ಲಿ ದ್ವಾರದಾಚೆ ಆಕೆಯನ್ನು ತಡೆದು ನಿಲ್ಲಿಸಿ ಆಕೆಯು ಕದ್ದಿದ್ದ ಸೀರೆಯ ವಿಷಯವನ್ನು ಕೇಳಿ ಅದನ್ನು ಕೊಂಡ ಚೀಟಿಯನ್ನು ತೋರಿಸೆಂದು ಕೇಳಿದನು. ಆಕೆಯು ಭಯಗ್ರಸ್ತಳಾಗಿ ತಬ್ಬಿಬ್ಬಾಗಿ ಮಾತನಾಡಲು ಆಕೆಯನ್ನು ಪೋಲೀಸರ ವಶಮಾಡಿದನು. ಅಷ್ಟರಲ್ಲಿ ಆಕೆಯ ಕಡೆಯವರಿಂದ ಅಂಗಡಿಯವನಿಗೆ ಅದರ ಬೆಲೆಯಾದ 30 ರೂ. ಗಳನ್ನು ಕೊಟ್ಟುಬಿಡಿಸಿದರೆಂದು ಕೇಳುತ್ತೇವೆ.

ನಾವು ಹಿಂದಿನ ಸಂಚಿಕೆಯಲ್ಲಿ ತಿಳಿಸಿದ್ದಂತೆ ಶ್ರೀಮನ್ಮಹಾರಾಜರವರ ಜಂಬೂ ಸವಾರಿಯು ಯಥಾನುರೂಪದಿಂದಲೂ ವಿಶೇಷ ವಿಜೃಂಭಣೆಯಿಂದಲೂ ನಡೆಯಿತು. ಈ ವೇಳೆ ಬನ್ನಿಮಂಟಪಕ್ಕೆ ಹೋಗುವಾಗ್ಗೆ ಶ್ರೀಮದ್ಯುವರಾಜರವರ ಕುಮಾರರಾದ ಶ್ರೀ ಜಯಚಾಮರಾಜ ಒಡೆಯರ್ ಬಹದ್ದೂರ್‌ರವರು ಸವಾರಿಯಲ್ಲಿ ಕುಳಿತು ಅಂಬಾರಿಯೊಳಗೆ ಶ್ರೀಮನ್ಮಹಾರಾಜರವರ ಎಡಪಾರ್ಶ್ವದಲ್ಲಿ ಮಂಡಿಸಿದುದು ಅತ್ಯಂತ ಶೋಭಾಯಮಾನವೂ, ಪ್ರೇಕ್ಷಕರೆಲ್ಲರಿಗೂ ಆಗಿನ್ನು ಪ್ರೇಕ್ಷಣೀಯವಾದ ಪರಮಾನಂದಕರವಾಗಿದ್ದಿತು. ಆ ದಿವಸ ಮಳೆಯು ನಿಂತು ಹೋಗಿದ್ದುದರಿಂದ ಪ್ರೇಕ್ಷಕರ ಆನಂದಕ್ಕೆ ಪಾರವೇ ಇಲ್ಲ. ಈ ಮಹೋತ್ಸವಕ್ಕಾಗಿ ರಾಜಧಾನಿಗೆ ರೈಲುಬಂಡಿಗಳ ಮೂಲಕ 74000 ವರೆಗೆ ಪರಸ್ಥಳದ ಜನರು ಬಂದಿದ್ದರೆಂದು ತಿಳಿಯಬರುತ್ತದೆ. ಇಷ್ಟೇ ಅಲ್ಲದೆ ಮೋಟಾರುಕಾರುಗಳ, ಮೋಟಾರು ಬಸ್ಸುಗಳ ಮತ್ತು ಎತ್ತಿನ ಬಂಡಿಗಳ

ಇಂಥ ಕಾರ್ಯಕ್ರಮದ ನಿಯಮವನ್ನು ಅನುಸರಿಸಿ ಇನ್ನೂ ಹೆಚ್ಚು ಕೆಲಸ ಮಾಡಬೇಕೆಂಬುದನ್ನು ನಿರ್ಧರಿಸುವುದಕ್ಕೆ ಇನ್ನೂ ಸಮಯವಾಗಿಲ್ಲವೆಂದು ತೋರುತ್ತದೆ. ಪೂರ್ವಭಾವಿಯಾದ ಅನುಭವದಿಂದ ಸ್ವತಂತ್ರವಾದ ಪ್ರಚಾರದ ಸಾಧನಗಳನ್ನು ಉಪಯೋಗಿಸುವ ವಿಷಯ ಒಮ್ಮತವಾದ ಬಳಿಕ ಮಾತ್ರ ಇಂಥ ಕಾರ್ಯಕ್ರಮವನ್ನು ಏರ್ಪಡಿಸಿ ಕೊಂಡರೆ, ಅದರಿಂದ ಹೆಚ್ಚು ಪ್ರಯೋಜನ ಉಂಟಾಗುವುದು. ಸರ್ಕಾರದವರ ಮತ್ತು ಸ್ಥಳೀಯ ಸಂಸ್ಥೆಗಳವರ ಆವಶ್ಯಕತೆಯಿದ್ದಾಗ ಈ ಕಾರ್ಯವನ್ನು ಮುಂದೆ ನಡೆಸಿಕೊಂಡು ಹೋಗಬೇಕಾಗುವುದು. ಈ ವಿಷಯದಲ್ಲಿ ಹಳ್ಳಿಗಳು, ಊರುಗಳು ಮೊದಲಾದ ಸ್ಥಳಗಳಲ್ಲಿ ಕೆಲಸ ಮಾಡುವವರಿಗೆ ಅನುಭವಕ್ಕೆ ಬಂದ ಹೊಸ ಹೊಸ ವಿಷಯಗಳನ್ನು ಪರಿಶೀಲಿಸಿ, ಅದಕ್ಕೆ ತಕ್ಕ ಪ್ರಚಾರದ ವಿಧಾನವನ್ನು ಗೊತ್ತುಮಾಡಬೇಕಾದ ಪ್ರಶ್ನೆಯು ಹುಟ್ಟಬಹುದು. ಈಗಿನ ಆವಶ್ಯಕತೆಗಳಲ್ಲಿ ಅತಿ ಮುಖ್ಯವಾದುವುಗಳಲ್ಲೊಂದಾದ ಪ್ರಾಥಮಿಕ ವಿದ್ಯಾಭ್ಯಾಸದ ವಿಚಾರದಲ್ಲಿ ಅನುಭವವನ್ನು ಪಡೆಯುವುದಕ್ಕಾಗಿ ಅನುಸರಿಸಬೇಕಾದ ಕ್ರಮವೇ, ಬಹುಶಃ ಈ ವಿಷಯದಲ್ಲಿಯೂ ಶ್ರೇಷ್ಠವಾದುದಾಗಿರಬಹುದು. ಸದ್ಯದಲ್ಲಿ ಈ ವಿಷಯವನ್ನು ಕುರಿತು ನಾನು ಮತ್ತೇನನ್ನೂ ಹೇಳಬೇಕಾಗಿಲ್ಲ. ನನ್ನ ಅಭಿಪ್ರಾಯಗಳನ್ನು ಸಾಮಾನ್ಯವಾಗಿ ಸೂಚಿಸುತ್ತೇನೆ. ತಾವುಗಳೂ ಸಹ ಈ ವಿಷಯಕ್ಕೆ ಗಮನವನ್ನು ಕೊಟ್ಟು, ತಕ್ಕ ಸಾಧನೋಪಾಯಗಳನ್ನು ಕಲ್ಪಿಸುವುದಕ್ಕೆ ಸಹಾಯಮಾಡುವಿರೆಂದು ನಂಬಿದ್ದೇನೆ.

ರೇಷ್ಮೆಯ ವ್ಯವಸಾಯ.

ಪ್ರಸಕ್ತ ವರ್ಷದಲ್ಲಿ ರೇಷ್ಮೆಯ ವ್ಯವಸಾಯದ ಇಲಾಖೆಯವರು ರೇಷ್ಮೆಯ ಹುಳುಗಳನ್ನು ಸಾಕಿ, ಅವುಗಳಿಂದ «ಬಿತ್ತನೆ» ಗಳನ್ನು ಪಡೆದು ಬಾರು ಪವರಿಗೂ, ಇತರರಿಗೂ ಸುಮಾರು 7,33,000 ದಷ್ಟು ರೋಗರಹಿತವಾದ «ಬಿತ್ತನೆ» ಗಳನ್ನು ವಿಕ್ರಯಿಸಿದರು. ರೇಷ್ಮೆಯ «ಬಿತ್ತನೆ» ಯನ್ನು ತಯಾರಿಸುವ ಕಾರ್ಯಾಲಯಗಳನ್ನು ನಡೆಸಿಕೊಂಡು ಬರುವವರಿಗೆ ಸರ್ಕಾರದವರು ದ್ರವ್ಯಸಹಾಯವನ್ನು ಮಾಡುವ ಏರ್ಪಾಡು ಈಚೆಗೆ ಮಂಜೂರಾಗಿರುವುದು ಸರಿಯಷ್ಟೆ. ಈ ಏರ್ಪಾಡನ್ನು ರೇಷ್ಮೆಯ ಕೈಗಾರಿಕೆಯಲ್ಲಿ ಆಸಕ್ತರಾಗಿರುವ ಖಾಸಗಿ ಜನಗಳು ಉತ್ಸಾಹದಿಂದ ಉಪಯೋಗಿಸಿಕೊಂಡು, ಇಂತಹ ಕಾರ್ಯಾಲಯಗಳನ್ನು ಸ್ಥಾಪಿಸಿರುವುದು ಸಂತೋಷಕರವಾದ ಅಂಶವಾಗಿದೆ. ಇವುಗಳಿಂದ ಪ್ರಸಕ್ತ ವರ್ಷದಲ್ಲಿ ಸುಮಾರು 3 ಲಕ್ಷ ರೋಗರಹಿತವಾದ «ಬಿತ್ತನೆ» ಗಳು ಜನರಿಗೆ ವಿಕ್ರಯಿಸಲ್ಪಟ್ಟವೆ «ಮೈಸೂರು ಡೊಮೆಸ್ಟಿಕ್ ಬೇಸಿನ್ನು» ಗಳೆಂಬ ರೇಷ್ಮೆ ಗೂಡುಗಳನ್ನು ಬಿಚ್ಚಿ ಹಸನಾಗಿ ನೂಲನ್ನು ತೆಗೆಯುವುದಕ್ಕಾಗಿ ಉಪಯೋಗವಾಗುವ ಯಂತ್ರಸಾಧನಗಳು, ಜನರ ಮೆಚ್ಚಿಕೆಗೆ ಪಾತ್ರವಾಗಿವೆ. ಸಂಸ್ಥಾನದ ನಾನಾ ಭಾಗಗಳಲ್ಲಿಯೂ ಸುಮಾರು ಹತ್ತು ಸ್ಥಳಗಳಲ್ಲಿ «ಬೇಸಿನ್ನು» ಗಳನ್ನುಪಯೋಗಿಸಿ ಕೆಲಸ ನಡೆಯುತ್ತಾ ಇದೆ. ಮೈಸೂರಿನಲ್ಲಿರುವ «ಫಿಲೇಚರ್» ಎಂಬ ರೇಷ್ಮೆಯ ಕಾರ್ಖಾನೆಗೆ, ಮತ್ತೆ ಹತ್ತು ಬೇಸಿನ್ನುಗಳನ್ನು ಸೇರಿಸಿ ಬಲಾಯಿಸಲಾಯಿತು. ಈ ಕಾರ್ಖಾನೆಯನ್ನು ರೇಷ್ಮೆ ವ್ಯವಸಾಯಕ್ಷೇತ್ರದಲ್ಲಿರುವ ಹೆಚ್ಚು ಅನುಕೂಲವಾದ ಮತ್ತೊಂದು ಕಟ್ಟಡಕ್ಕೆ ಬದಲಾಯಿಸಬೇಕೆಂದು ಉದ್ದೇಶಿಸಲಾಗಿದೆ. ಪ್ರಸಕ್ತ ವರ್ಷದಲ್ಲಿ ರೇಷ್ಮೆಯ ವ್ಯವಸಾಯಕ್ಕಾಗಿ 6,050 ರೂಪಾಯಿಗಳ ವರೆಗೂ ಜನಗಳಿಗೆ ಸಾಲಗಳನ್ನು ಮಂಜೂರು ಮಾಡಲಾಯಿತು.

ಜ್ಯುಡಿಷಿಯಲ್ ಇಲಾಖೆ.

ಸ್ಪೆಷಲ್ ಮ್ಯಾಜಿಸ್ಟ್ರೇಟರುಗಳು, ಸಂಚಾರ ಹೊರಟು ಗೊತ್ತಾದ ಮೇರೆ ತಾಲ್ಲೂಕು ಕಸಬೆಗಳಲ್ಲಿ ಕೋರ್ಟನ್ನು ನಡೆಸಿ, ಮೊಕದ್ದಮೆಗಳನ್ನು ವಿಚಾರಣೆಮಾಡುವ ಏರ್ಪಾಡನ್ನು ಆಚರಣೆಗೆ ತರಲಾಗಿದೆಯಷ್ಟೆ. ಇದರಿಂದ ಹೇಗೆ ಕೆಲಸ ನಡೆಯುವುದೆಂಬುದನ್ನು ಪರೀಕ್ಷಿಸಿ ನೋಡಲಾಯಿತು. ಅದು ಫಲಕಾರಿಯಾಗಿ ನಡೆಯುವಂತೆ ಕಂಡುಬಂದಿತು, ಆದುದರಿಂದ ಆ ಏರ್ಪಾಡನ್ನು 1929ನೆಯ ಜೂನ್ 1ನೆಯ ತಾ॥ ಲಾಗಾಯಿತು ಮತ್ತೆ ಜಾರಿಯಲ್ಲಿಡಲಾಯಿತು; ಮತ್ತು ಈರೀತಿ ಮ್ಯಾಜಿಸ್ಟ್ರೇಟರು ಸಂಚಾರ ಹೊರಟು ಕೋರ್ಟನ್ನು ನಡೆಸತಕ್ಕ ಸ್ಥಳಗಳಲ್ಲಿದ್ದ ಬೆಂಚು ಕೋರ್ಟುಗಳನ್ನು ವಜಾ ಮಾಡಲಾಯಿತು.

ಕೋಲಾರದ ಮೊದಲನೆಯ ತರಗತಿಯ ಮ್ಯಾಜಿಸ್ಟ್ರೇಟರೂ, ಬೆಂಗಳೂರು ಸ್ಮಾಲ್ ಕಾಸ್ ಕೋರ್ಟಿನ ಜಡ್ಜಿಯವರೂ, ತಮ್ಮಲ್ಲಿಗೆ ಬೆಂಗಳೂರು ಡಿವಿಜನ್ನಿನ ಡಿ॥ ಜಡ್ಜಿಯವರು ಕಳುಹಿಸಿಕೊಡತಕ್ಕ ಸಿವಿಲ್ ಅಪೀಲು ಮೊಕದ್ದಮೆಗಳನ್ನು ವ್ಯವಸ್ಥೆ ಮಾಡಲನುಕೂಲಿಸುವಂತೆ ಅವರುಗಳನ್ನು ಅಡಿಷನಲ್ ಸಬಾರ್ಡಿನೇಟ್ ಜಡ್ಜಿಗಳನ್ನಾಗಿ ನೇಮಕಮಾಡಿದ್ದೇವೆ. ಇದೇ ರೀತಿಯಲ್ಲಿ ಹಾಸನ ಮತ್ತು ಚಿತ್ರದುರ್ಗದ ಮೊದಲನೆಯ ತರಗತಿಯ ಮ್ಯಾಜಿಸ್ಟ್ರೇಟರುಗಳಿಗೂ, ಮೊಕದ್ದಮೆಗಳನ್ನು ವಿಚಾರಣೆಮಾಡಿ ವ್ಯವಸ್ಥೆಮಾಡುವ ಅಧಿಕಾರವನ್ನು ಕೊಡುವ ಉದ್ದೇಶವಿದೆ. ಸಿವಿಲ್ ಮೊಕದ್ದಮೆಗಳನ್ನೂ, ಕ್ರಿಮಿನಲ್ ಮೊಕದ್ದಮೆಗಳನ್ನೂ, ಒಂದೇ ಕೋರ್ಟಿನಲ್ಲಿ ವಿಚಾರಣೆಮಾಡುವ ಏರ್ಪಾಡನ್ನು ಹೊಳೆನರಸೀಪುರದಲ್ಲಿ ಪರೀಕ್ಷಾರ್ಥವಾಗಿ ಆಚರಣೆಗೆ ತಂದಿದ್ದೇವೆ. ನರಸಿಂಹರಾಜಪುರದಲ್ಲಿರುವ ಮುನ್ಸೀಫರವರು ಎ ನೆಯ ತರಗತಿಯ ಮ್ಯಾಜಿಸ್ಟ್ರೇಟರ ಅಧಿಕಾರಗಳೊಡನೆ ಕ್ರಿಮಿನಲ್ ಮೊಕದ್ದಮೆಗಳನ್ನೂ ವಿಚಾರಣೆಮಾಡುವಂತೆ ಏರ್ಪಾಡು ನಡೆಯುತ್ತದೆ. ಸಾಧ್ಯವಾದ ಕಡೆಯಲ್ಲೆಲ್ಲಾ ಹೀಗೆ ಸಿವಿಲ್ ಮತ್ತು ಕ್ರಿಮಿನಲ್ ಅಧಿಕಾರಗಳನ್ನು ಒಟ್ಟುಗೂಡಿಸುವ ಈ ಏರ್ಪಾಡನ್ನು ಇನ್ನೂ ಹೆಚ್ಚುಹೆಚ್ಚಾಗಿ ಜಾರಿಗೆ ತರುವ ವಿಷಯವನ್ನು ಚೀಫ್ ಕೋರ್ಟಿನವರು ಪರ್ಯಾಲೋಚಿಸುತ್ತಿದ್ದಾರೆ.

ಪೋಲೀಸು ಇಲಾಖೆ.

ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಆಗಿರುವ ಪೋಲೀಸು ಸೂಪರಿಂಟೆಂಡೆಂಟರ ಜೊತೆಗೆ ಬೆಂಗಳೂರು ನಗರ ಮತ್ತು ಬೆಂಗಳೂರು ತಾಲ್ಲೂಕು ಇವೆರಡಕ್ಕೋಸ್ಕರವೇ ಮತ್ತೊಬ್ಬರು ಹೆಚ್ಚಿಗೆ ಪೋಲೀಸು ಸೂಪರಿಂಟೆಂಡೆಂಟರು ಇರುವ ಏರ್ಪಾಡನ್ನು 1928 ನೆಯ ಸೆಪ್ಟೆಂಬರ್ ತಿಂಗಳಿನಲ್ಲಿ ಮಂಜೂರು ಮಾಡಲಾಯಿತು. ಪೋಲೀಸ್ ಕಾನ್‌ಸ್ಟೇಬಲುಗಳ ಕನಿಷ್ಠ ಪ್ರಮಾಣದ ಸಂಬಳವನ್ನು ತಿಂಗಳಿಗೆ 12 ರೂಪಾಯಿಗಳಿಂದ 13 ರೂಪಾಯಿಗಳಿಗೆ ಹೆಚ್ಚಿಸಬೇಕೆಂದು ತೀರ್ಮಾನವಾಗಿದೆ.

ಡಿಸ್ಟ್ರಿಕ್ಟ್ ರಿಜರ್ವ್ ಪೋಲೀಸು ಸಿಬ್ಬಂದಿಯಲ್ಲಿ 10 ಮಂದಿ ದಫೇದಾರರುಗಳನ್ನೂ 100 ಕಾನ್‌ಸ್ಟೇಬಲುಗಳನ್ನೂ 1929 ರಲ್ಲಿ ಕಡಿತ ಮಾಡಲಾಯಿತು. ಅದುದರಿಂದ ಪ್ರಜಾಶಾಂತಿಗೆ ಭಂಗವುಂಟಾಗತಕ್ಕ ಪರಿಸ್ಥಿತಿಗಳು ಒದಗಿದಾಗ, ಸರಿಯಾದ ಹಕೀಕತಿಯಲ್ಲಿ ಕೆಲಸ ನಡೆಸುವುದಕ್ಕೆ ಡಿಸ್ಟ್ರಿಕ್ಟುಗಳಲ್ಲಿ ಈಗಿರುವ ಪೋಲೀಸು ಸಿಬ್ಬಂದಿಯು ಸಾಲದೆಂದು ಕಂಡುಬಂದಿದೆ; ಮತ್ತು ಬೆಂಗಳೂರಿನಲ್ಲಿರುವ ಪ್ರಾವಿನ್ಷಿಯಲ್ ರಿಜರ್ವ್ ಪೋಲೀಸ್ ಸಿಬ್ಬಂದಿಯಿಂದ ಅಗತ್ಯ ಅವಸರಸಮಯಕ್ಕೆ ಜನರನ್ನು ಕಳುಹಿಸಿಕೊಟ್ಟಲ್ಲದೆ ನಿರ್ವಾಹವೇ ಇಲ್ಲದಂತಾಗಿದೆ. ಆದಕಾರಣ, ಇಂತಹ ಜರೂರು ಸಂದರ್ಭಗಳಿಗೆ ಒದಗುವುದಕ್ಕಾಗಿ ಕಳೆದ ಏಪ್ರಿಲ್ ತಿಂಗಳಿನಲ್ಲಿ ಈ «ಪ್ರಾವಿನ್ಷಿಯಲ್ ರಿಜರ್ವ್» ಸಿಬ್ಬಂದಿಗೆ ಮತ್ತೆ 50 ಮಂದಿಯನ್ನು ಹೆಚ್ಚಾಗಿ ನೇಮಕಮಾಡಿ ಕೊಳ್ಳಲಾಯಿತು. ಬಳ್ಳಾರಿ ಜಿಲ್ಲೆಯ ಸಾಮ್ರಾಜ್ಯದಲ್ಲಿ ಮತ್ತೆ 100 ಮಂದಿ ಕಾನ್‌ಸ್ಟೇಬಲುಗಳನ್ನು ಹೆಚ್ಚಿಸಿದ್ದಾರೆ. ಈ ಸಿಬ್ಬಂದಿಗೆ ನೇಮಕವಾದ ಬಳಿಕ, ಈ 150 ಮಂದಿ ಕಾನ್‌ಸ್ಟೇಬಲುಗಳೂ ಪ್ರಾವಿನ್ಷಿಯಲ್ ರಿಜರ್ವ್ ಸಿಬ್ಬಂದಿಗೆ ಸೇರಿರತಕ್ಕದೆಂದು ಆಜ್ಞೆ ಮಾಡಲಾಗಿದೆ. ರಿಜರ್ವ್ ಪೋಲೀಸ್ ಸಿಬ್ಬಂದಿಯಲ್ಲಿ ಅವಶ್ಯಕವಾದ ಸಂದರ್ಭಗಳಿಗೆ ಒದಗುವಂತೆ ನೇಮಕಮಾಡಿರುವ ಬಂದೋಬಸ್ತಿನ ಪೋಲೀಸಿನವರ ಪಾರ್ಟಿಗಳೂ ಇದ್ದುವಷ್ಟೆ. ಈ ಪಾರ್ಟಿಗಳನ್ನೂ ಸಹ ಈಚೆಗೆ ಪ್ರಾವಿನ್ಷಿಯಲ್ ರಿಜರ್ವ್ ಪೋಲೀಸ್ ದಳದೊಡನೆ ಸೇರಿಸಲಾಗಿದೆ. ಅಲ್ಲದೆ, ಆ ಪಾರ್ಟಿಗಳನ್ನು ರಿಜರ್ವ್ ಸಿಬ್ಬಂದಿಗೆ ಸೇರಿದ ದಳಗಳಂತೆ ಭಾವಿಸಬೇಕೆಂದೂ ಹುಕುಂ ಮಾಡಿದೆ. ಈ ಪೋಲೀಸು ದಳಗಳನ್ನು ಈಗಿನ ಆವಶ್ಯಕತೆಗಳಿಗೆ ತಕ್ಕಂತೆ ಪುನಃ ರಚಿಸಬೇಕೆಂಬ ವಿಷಯವೂ ಸಹ ಪರ್ಯಾಲೋಚನೆಯಲ್ಲಿದೆ. ಇದಲ್ಲದೆ, ಪ್ರಾವಿನ್ಷಿಯಲ್ ರಿಜರ್ವ್ ಪೋಲೀಸಿನವರನ್ನು ಪೋಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರವರ ದರ್ಜೆಯುಳ್ಳ ಒಬ್ಬ ಅಧಿಕಾರಿಯು ವಶದಲ್ಲಿಡಬೇಕೆಂಬ ಉದ್ದೇಶವೂ ಇದೆ. ಅಲ್ಲದೆ, ಈ ಪೋಲೀಸು ದಳಕ್ಕೆ 9 ಮಂದಿ ಇನ್ಸ್‌ಪೆಕ್ಟರುಗಳೇ ಮುಂತಾದ «ಸಬಾರ್ಡಿನೇಟ್» ದರ್ಜೆಯ ಅಧಿಕಾರಿಗಳನ್ನು ಹೆಚ್ಚಾಗಿ ಸೇರಿಸುವ ವಿಚಾರವೂ ಸಹ, ಮಂಜೂರಾಗಿದೆ.

ವೈದ್ಯದ ವಿಚಾರ.

1928-29 ನೆಯ ಸಾಲಿನಲ್ಲಿ 22 ಚಿಕಿತ್ಸಾಲಯಗಳನ್ನು ಸ್ಥಾಪಿಸಲಾಯಿತು. ಈಗ್ಗೆ ಅನೇಕ ವರುಷಗಳ ಅವಧಿಯಲ್ಲಿ ಒಂದಾವ ವರುಷವೂ ಇಷ್ಟು ಹೆಚ್ಚು ಸಂಖ್ಯೆಯ ಚಿಕಿತ್ಸಾಲಯಗಳನ್ನು ಸ್ಥಾಪಿಸಲಿಲ್ಲ. ಕೆಡವಿದ ಯವೆತ್ತದಲ್ಲಿ ನಡೆಸಲ್ಪಡುವ ಲೋಕಲ್ ಫಂಡ್ ಡಿಸ್ಪೆನ್ಸರಿಗಳನ್ನು ಮೈಸೂರು, ತುಮಕೂರು, ಹಾಸನ ಮತ್ತು ಚಿತ್ರದುರ್ಗ, ಈ ಡಿಸ್ಟ್ರಿಕ್ಟ್‌ಗಳಿಗೆ ಸೇರಿದ ಕೆಲಕೆಲವು ಸ್ಥಳಗಳಲ್ಲಿ ಏರ್ಪಡಿಸಲಾಯಿತು.

ಕ್ಷಯರೋಗ ನಿವಾರಣೆಗಾಗಿ ನಡೆಸಬೇಕಾದ ಏರ್ಪಾಡುಗಳು ಯಾವುವೆಂಬುದನ್ನು ಪರ್ಯಾಲೋಚಿಸಿ ವರದಿಯನ್ನೊಪ್ಪಿಸುವ ಕೆಲಸವನ್ನು ಡಾಕ್ಟರ್ ಚಂದ್ರಶೇಖರಯ್ಯನವರಿಗೆ ಒಪ್ಪಿಸಿದ್ದುದು ಸರಿಯಷ್ಟೆ. ಅವರು ನಡೆಸಿದ ಪರಿಶೋಧನೆಯ ಫಲಿತಾಂಶವಾಗಿ ದೊಡ್ಡದೊಡ್ಡ ನಗರಗಳಲ್ಲಿಯೂ, ಇತರ ಊರುಗಳಲ್ಲಿಯೂ, ಕ್ಷಯರೋಗ ನಿರೋಧಕವಾದ ಕಾರ್ಯಾಲಯಗಳನ್ನು ನೆರವೇರಿಸುವ ಏರ್ಪಾಡನ್ನು ಮಾಡುವ ವಿಚಾರಕ್ಕೆ ಗಮನಕೊಡುತ್ತಾ ಇದೆ. ಕುಷ್ಠರೋಗಿಗಳಿಗೆ ಸಂಬಂಧಪಟ್ಟ ರೆಗ್ಯುಲೇಷನ ನಿಯಮಗಳನ್ನು ಮಂಡ್ಯ ಮತ್ತು ಮಳವಳ್ಳಿ ತಾ॥ ಗಳಲ್ಲಿ ಜಾರಿಗೆ ತರುವಂತೆ ಸರ್ಕಾರದವರು ಅಪ್ಪಣೆ ಮಾಡಿದರು. ಕುಷ್ಠರೋಗಿಗಳ ಚಿಕಿತ್ಸಾಲಯದಲ್ಲಿ ಈಗಿರುವುದಕ್ಕಿಂತಲೂ ಹೆಚ್ಚು ಮಂದಿಗಳನ್ನು ಸಲ್ಲಿಸಿಕೊಂಡು ಚಿಕಿತ್ಸೆಮಾಡಲು ಸ್ಥಳವಕಾಶವನ್ನು ಕಲ್ಪಿಸುವ ಏರ್ಪಾಡನ್ನೂ ಅವರು ಮಂಜೂರು ಮಾಡಿದರು. ಅಲ್ಲದೆ ಕುಷ್ಠರೋಗಿಗಳು ಬಂದು ಚಿಕಿತ್ಸೆಹೊಂದಿ, ಔಷಧವನ್ನು ತೆಗೆದುಕೊಂಡು ಹೋಗುವ ಒಂದು «ಔಟ್‌ಪೇಷೆಂಟ್ ಡಿಸ್ಪೆನ್ಸರಿ» ಯನ್ನು ಏರ್ಪಡಿಸಲಾಯಿತು. ಚಿಕಿತ್ಸೆಯನ್ನು ಪಡೆದ ಕುಷ್ಠರೋಗಿಗಳ ಸಂಖ್ಯೆಯು ಈ ವರ್ಷ 151 ರಿಂದ 245 ಕ್ಕೆ ಹೆಚ್ಚಿತು.

ನೈರ್ಮಲ್ಯರಕ್ಷಣೆ ಮತ್ತು ಸಿಡುಬುಹಾಕುವ ಏರ್ಪಾಡು.

ನೈರ್ಮಲ್ಯರಕ್ಷಣೆಯಿಂದ ಆರೋಗ್ಯಸಾಧಕವಾಗುವಂತೆ ತಕ್ಕ ಏರ್ಪಾಡುಗಳನ್ನು ನೆರವೇರಿಸುವ «ಸ್ಯಾನಿಟರಿ» ಇಲಾಖೆಯ ಕೆಲಸಗಳು ದಿನೇ ದಿನೇ ಹೆಚ್ಚುತ್ತಿವೆ. ಆದುದರಿಂದ, ಇತರ ಕರ್ತವ್ಯಗಳ ಹೊಣೆಯಿಲ್ಲದೆ, ಪೂರಾ ಕಾಲವೂ ಈ ಇಲಾಖೆಯ ಕರ್ತವ್ಯಗಳನ್ನೇ ನಿರ್ವಹಿಸುವುದಕ್ಕಾಗಿ ಒಬ್ಬರು ಸ್ಯಾನಿಟರಿ ಕಮಿಷನರವರನ್ನೇ ಪ್ರತ್ಯೇಕವಾಗಿ ನೇಮಕಮಾಡಿದೆವು. ಅಲ್ಲದೆ, ಡೆಪ್ಯುಟಿ ಸ್ಯಾನಿಟರಿ ಕಮಿಷನರವರ ಹುದ್ದೆಯನ್ನು ತೆಗೆದುಹಾಕಿದೆವು.

ಜನನ ಮರಣಗಳ ಲೆಕ್ಕಗಳನ್ನು ಎಲ್ಲ ಕಡೆಗಳಿಂದಲೂ ಸಂಗ್ರಹಿಸಿ ಏಕರೀತಿಯಾಗಿಯೂ ಶಾಸ್ತ್ರೀಯ ವಿಧಾನದಿಂದಲೂ, ಬುದ್ಧಿವಂತಿಕೆಯಿಂದಲೂ, ಕ್ರಮಪಡಿಸುವುದು ಆವಶ್ಯಕವೆಂಬುದು ಈ ಭಾಗದಲ್ಲಿ ಬಹುಕಾಲದಿಂದಲೂ ಕೊರತೆಯಾಗಿತ್ತು. ಜನನ ಮರಣಗಳ ಲೆಕ್ಕಗಳನ್ನು ರಿಜಿಸ್ಟರು ಮಾಡುವ ಈಗಿನ ಪದ್ಧತಿಯನ್ನು ಉತ್ತಮಗೊಳಿಸಬೇಕೆಂಬ ಉದ್ದೇಶದಿಂದಲೂ, ಸಂಸ್ಥಾನದಲ್ಲಿರುವ 16,688 ಗ್ರಾಮಗಳಿಂದಲೂ ಸರಿಯಾದ ಲೆಕ್ಕಗಳನ್ನು ತರಿಸಿಕೊಳ್ಳಬೇಕೆಂಬ ಉದ್ದೇಶದಿಂದಲೂ ಜನನಮರಣಗಳ ಲೆಕ್ಕಗಳನ್ನು ಸಂಗ್ರಹಿಸಿ ಕ್ರಮಪಡಿಸುವುದಕ್ಕಾಗಿಯೇ «ವೈಟಲ್ ಸ್ಟಾಟಿಸ್ಟಿಕ್ಸ್ ಬ್ಯೂರೋ» ಎಂಬ ಕಾರ್ಯಾಲಯವೊಂದನ್ನು ಏರ್ಪಡಿಸಲಾಗಿದೆ. ಈ ಲೆಕ್ಕಗಳಿಗೆ ಸಂಬಂಧಪಟ್ಟ ಕೆಲಸಗಳಲ್ಲಿ ನಿಪುಣರಾದ ಒಬ್ಬ ಅಫೀಸರನ್ನು 1929 ನೆಯ ಜುಲೈ 1 ನೆಯ ತಾ॥ ನಲ್ಲಿ ನೇಮಕಮಾಡಲಾಯಿತು. ಅವರು ಕಳುಹಿಸಿರುವ ಪ್ರಾಥಮಿಕ ವರದಿಯನ್ನು ಆರೋಗ್ಯರಕ್ಷಣೆಯ ಇಲಾಖೆಯವರು ಒಂದು ಚಿಕ್ಕ ಪುಸ್ತಕದ ರೂಪದಲ್ಲಿ ಪ್ರಕಟಿಸಬೇಕೆಂದಿದ್ದಾರೆ. ವೈದ್ಯದ ಇಲಾಖೆಯ ಪ್ರತಿನಿಧಿಗಳೂ, ಸ್ಯಾನಿಟರಿ ಇಲಾಖೆಯ ಪ್ರತಿನಿಧಿಗಳೂ, ಸೇರಿ 1928 ನೆಯ ಡಿಸೆಂಬರಿನಲ್ಲಿ ಬೆಂಗಳೂರು ನಗರದಲ್ಲಿ ಒಂದು ಸಮ್ಮೇಳನವನ್ನು ನಡೆಸಿದರು. ಅದಕ್ಕೆ ಸಂಸ್ಥಾನದ ಎಲ್ಲ ಭಾಗಗಳಿಂದಲೂ, ಪ್ರತಿನಿಧಿಗಳು ಬಂದಿದ್ದರು. ಈ ಇಲಾಖೆಗಳವರು ಸಮ್ಮೇಳನವನ್ನು ನಡೆಸಿದುದು, ಇದೇ ಮೊಟ್ಟಮೊದಲನೆಯದಾಗಿ. ಪ್ರಸಕ್ತ ವರ್ಷದಲ್ಲಿ ಸ್ಯಾನಿಟರಿ ಇಲಾಖೆಯವರು ವಿಶೇಷವಾಗಿ ಗಮನ ಕೊಡುತ್ತಿರುವ ಮುಖ್ಯವಾದ ವಿಷಯಗಳು ಯಾವುವೆಂದರೆ—3 ಮಂದಿ ಇನ್ಸ್‌ಪೆಕ್ಟರ್ ಆಫ್ ಹೆಲ್ತ್ ಆಫೀಸರುಗಳನ್ನು ನೇಮಿಸುವ ವಿಚಾರ, ಸ್ಥಳದಿಂದ ಸ್ಥಳಕ್ಕೆ ಹೋಗಿ ಅಂಟು ಜಾಡ್ಯಗಳ ವಿಷಯವನ್ನು ಪರಿಶೋಧನೆಮಾಡುವ ಅಧಿಕಾರಿಗಳ ಸಿಬ್ಬಂದಿಯೊಂದನ್ನು ನೇಮಕ ಮಾಡುವ ವಿಚಾರ, ಸಂಸ್ಥಾನದ ಎಲ್ಲ ಕಡೆಗಳಿಗೂ ಅನ್ವಯಿಸುವ ಹಾಗೆ ಮತ್ಸ್ಯದ ಪೋಷಣೆಗೆ ಸಂಬಂಧಪಟ್ಟ ಕಾರ್ಯಾಲಯಗಳ ಏರ್ಪಾಡನ್ನು ಮಾಡುವ ವಿಚಾರ, ಗ್ರಾಮಾಂತರ ಪ್ರದೇಶಗಳಲ್ಲಿ ಸಿಡುಬು ಹಾಕಿಸಬೇಕೆಂಬ ನಿರ್ಬಂಧವನ್ನು ಕಲ್ಪಿಸಿ ಆಚರಣೆಗೆ ತರುವ ವಿಚಾರ, ಗ್ರಾಮಾಂತರ ಪ್ರದೇಶಗಳಲ್ಲಿ ಯಾವಯಾವ ಸ್ಥಳಗಳ ಸ್ಥಿತಿಗತಿಗಳಿಗೆ ಯಾವಯಾವ ನಮೂನೆಗಳಲ್ಲಿ ಕಕ್ಕಸುಗಳನ್ನು ನಿರ್ಮಿಸುವಂತೆ ಮಾಡುವುದು ಉಚಿತವೆಂಬುದನ್ನು ಗೊತ್ತು ಮಾಡುವ ವಿಚಾರ. ಈ 5 ವಿಚಾರಗಳಿಗೂ ಇಲಾಖೆಯವರು ಗಮನಕೊಟ್ಟು ಪ್ರಸಕ್ತ ವರ್ಷದಲ್ಲಿ ಅವುಗಳನ್ನು ಪರ್ಯಾಲೋಚನೆಯಲ್ಲಿಟ್ಟುಕೊಂಡಿದ್ದರು.

ಆರೋಗ್ಯ ಪರಿಶೀಲನ (ಹೆಲ್ತ್ ಸರ್ವೆ).

ಮಲೇರಿಯಾ ಜ್ವರದ ಸಂಬಂಧದಲ್ಲಿ ಯಾವ ಯಾವ ಪ್ರಾಂತದ ಜನರಲ್ಲಿ ಜ್ವರದ ಗಡ್ಡೆಗಳು ಇವೆಯೆಂಬುದನ್ನು ಪರಿಶೀಲನೆಮಾಡುವ ಕೆಲಸವನ್ನು ಸರ್ಕಾರದವರು ಡಾಕ್ಟರ್ ಸ್ಟೀಫೆನವರಿಗೆ ವಹಿಸಿದ್ದರು. ಅವರು ಸಂಸ್ಥಾನದ ನಾನಾ ಪ್ರದೇಶಗಳಿಗೂ ಹೋಗಿ, ಪರಿಶೀಲನೆಗಳನ್ನು ನೆರವೇರಿಸಿದರು. ಅದರ ಫಲಿತಾಂಶವಾಗಿ, ಮಲೇರಿಯಾ ಜ್ವರದ ಹಾನಿಯನ್ನು ತಗ್ಗಿಸುವ ಉದ್ದೇಶದಿಂದ (ಮೈಸೂರು ತಾಲ್ಲೂಕಿನ) ನಾಗೇನಹಳ್ಳಿ, ಮೂಡಿಗೆರೆ, ಮತ್ತು ಹಿರಿಯೂರು—ಈ 3 ಸ್ಥಳಗಳಲ್ಲಿಯೂ ಒಂದೊಂದು ಪ್ರಯೋಗಕ್ಷೇತ್ರವು ಸ್ಥಾಪಿಸಲ್ಪಟ್ಟಿತು. ಅಲ್ಲಿ ಮಲೇರಿಯಾ ಜ್ವರದ ಸಂಬಂಧವಾಗಿ ಅನೇಕ ಪ್ರಯೋಗಗಳು ನಡೆದುವು. ಇದುವರೆಗೆ ಅಲ್ಲಿ ನಡೆದಿರುವ ಶಾಸ್ತ್ರಶೋಧನೆಗಳ ಫಲಿತಾಂಶವಾಗಿ, ಮಲೇರಿಯಾ ಜ್ವರದ ಹಾವಳಿಯನ್ನಡಗಿಸಿ ಹತೋಟಿಗೆ ತರುವುದಕ್ಕೆ ಸಾಧಕವಾದ ಏರ್ಪಾಡುಗಳನ್ನು ಡಾಕ್ಟರ್ ಸ್ಟೀಫೆನವರು ಆ ಪ್ರಾಂತ್ಯದಲ್ಲಿ ಆಚರಣೆಗೆ ತರುವವರಾಗಿದ್ದಾರೆ.

ಆರೋಗ್ಯ ಶಾಸ್ತ್ರೀಯವಾದ ಪರಿಶೋಧನೆಗಳನ್ನು ನಡೆಸುವುದಕ್ಕೆ ಬೇಕಾದ ಸಾಧನ ಸಂಪತ್ತುಗಳಲ್ಲಿ ನಿಯಮಿತವಾದ ಸಹಾಯಮಾಡುವುದಕ್ಕಾಗಿ ಮುಂದೆ ಸ್ಥಾಪಿಸಬೇಕಾದ ಸಂಸ್ಥೆಯೂ ತಕ್ಕ ವ್ಯವಸ್ಥೆಯನ್ನು ಮಾಡಬೇಕೆಂಬುದಾಗಿ ಸರ್ಕಾರದವರು ಸಂಕಲ್ಪಿಸಿದ್ದಾರೆ. ಹಾಗೆ ಮಾಡಬೇಕಾದರೆ ಎಷ್ಟು ಖರ್ಚಾಗಬಹುದು, ಅದರ ವಿಧಿ ನಿಯಮಗಳೇನು ಆವಶ್ಯಕ, ಅದಕ್ಕಾಗಿ ಎಷ್ಟು ಹೊಣೆಯನ್ನು ವಹಿಸಬೇಕಾಗಿಬರುತ್ತದೆ—ಎಂಬ ಸಂಗತಿಗಳೂ ನಿರ್ಧಾರವಾಗಿ ಗೊತ್ತಾಗಬೇಕು. ಅವುಗಳನ್ನು ನಿರ್ಧರಿಸುವುದಕ್ಕಾಗಿ ತಕ್ಕ ವಿಚಾರಣೆಗಳನ್ನೂ ಪರಿಶೀಲನೆಗಳನ್ನೂ ನಡೆಸಿ ವರದಿಯನ್ನೊಪ್ಪಿಸಲು ಸರ್ಕಾರದವರು ಈಗ ಒಂದು ಸಿಬ್ಬಂದಿಯನ್ನು ಮಂಜೂರು ಮಾಡಿದ್ದಾರೆ.

ಅಮೇರಿಕಾಖಂಡದ ಕೊಲಂಬಿಯಾ ವಿಶ್ವವಿದ್ಯಾಲಯದ ರಾಕ್ ಫೆಲ್ಲರ್ ಎಂಬ ಪ್ರಖ್ಯಾತರು ಕೊಟ್ಟ ನಿಧಿಯ ಸಹಾಯದಿಂದ «ರಾಕ್ ಫೆಲ್ಲರ್ ಫೌಂಡೇಷನ್» ಎಂಬ ಹೆಸರಿನ ವ್ಯವಸ್ಥೆಯೊಂದು ಏರ್ಪಟ್ಟಿದೆಯಷ್ಟೆ. ನಮ್ಮ ಸಂಸ್ಥಾನದಲ್ಲಿ ರೋಗಗಳ ವಿಚಾರವನ್ನು ಪರಿಶೀಲನೆ ಮಾಡಲು ಕೆಲವು ವರ್ಷಗಳ ಕಾಲ ಕೆಲಸ ಮಾಡುವುದಕ್ಕಾಗಿ ಡಾಕ್ಟರ್ ಸ್ಟೀಫೆನವರನ್ನು ಕಳುಹಿಸಿಕೊಟ್ಟಿರುವವರೂ ಆ ವ್ಯವಸ್ಥೆಯ ಆಡಳಿತಗಾರರೇ. ಅವರು ಡಾಕ್ಟರ್ ಸ್ಟೀಫೆನವರನ್ನು ಇನ್ನೂ ಸ್ವಲ್ಪ ಕಾಲ ಇಲ್ಲಿ ಇಟ್ಟಿರುವುದಲ್ಲದೆ 1930 ನೆಯ ಜನವರಿ 1 ನೆಯ ತಾ॥ ನಿಂದ 3 ವರುಷಗಳವರೆಗೆ ಇಲ್ಲಿ ಕೆಲಸಮಾಡಲು, ಒಬ್ಬರು ಸ್ಯಾನಿಟರಿ ಇಂಜನಿಯರವರನ್ನೂ ಕಳುಹಿಸಿಕೊಡುವುದಾಗಿ ದಯೆಯಿಟ್ಟು ಒಪ್ಪಿರುತ್ತಾರೆ. ಪಬ್ಲಿಕ್ ವರ್ಕ್ಸ್ ಇಲಾಖೆಯ «ಸ್ಯಾನಿಟರಿ ಇಂಜನಿಯರಿಂಗ್» ಶಾಖೆಯನ್ನು, ಈ ಸ್ಯಾನಿಟರಿ ಇಂಜನಿಯರವರ ಹತೋಟಿಗೆ ವಹಿಸಬೇಕೆಂಬುದಾಗಿ ಸರ್ಕಾರದವರು ಆಲೋಚಿಸಿದ್ದಾರೆ.

ನಗರಾಭಿವೃದ್ಧಿ ಮತ್ತು ಗ್ರಾಮಾಭಿವೃದ್ಧಿ.

ನಗರಾಭಿವೃದ್ಧಿಯ ವಿಚಾರದಲ್ಲಿ ಮ್ಯುನಿಸಿಪಾಲಿಟಿಗಳೇ ಮೊದಲಾದ ಆಯಾ ಸ್ಥಳೀಯ ಸಂಸ್ಥೆಗಳವರಿಗೆ ಸಹಾಯಮಾಡುವುದು, ಸ್ಥಳ ನೈರ್ಮಲ್ಯ, ಜಲಮಾರ್ಗಗಳ ಮತ್ತು ಚರಂಡಿಗಳ ಏರ್ಪಾಡು, ನೀರು ಸರಬರಾಯಿ, ಈ 3 ಬಾಬತಿನ ಕೆಲಸವೂ ಈಗಲೂ ಇದಕ್ಕಿಂತ ಇನ್ನೂ ಉತ್ತಮವಾಗುವ ಹಾಗೆ ತಕ್ಕ ಕಾರ್ಯಕ್ರಮಗಳನ್ನು ರಚಿಸಿ ಆಯಾ ಸಂಸ್ಥೆಗಳವರಿಗೆ ಒದಗಿಸಿಕೊಡುವುದು; ಈ 2 ಕಾರ್ಯಗಳನ್ನೂ ನೆರವೇರಿಸುವುದಕ್ಕಾಗಿ ಸ್ಯಾನಿಟರಿ ಇಲಾಖೆಗೆ 1 ಸ್ಪೆಷಲ್ ಸಿಬ್ಬಂದಿಯನ್ನು ಈಗ ಸುಮಾರು 3 ವರುಷಗಳ ಹಿಂದೆ ಸೇರಿಸಿದೆವು ಈ ಸಂಗತಿಯು ತಮಗೆ ವೇದ್ಯವಿರಬಹುದು. ಡಿಸ್ಟ್ರಿಕ್ಟುಗಳಲ್ಲಿ ನಡೆಯುವ ಈ ಸಂಬಂಧದ ಕಾಮಗಾರಿಗಳಿಗಾಗಿ ಸರ್ಕಾರದವರು ಪ್ರತಿವರ್ಷವೂ ಸುಮಾರು 1½ ಲಕ್ಷ ರೂ. ಗಳನ್ನು ವೆಚ್ಚಮಾಡುತ್ತಿದ್ದಾರೆ.

ಈ ಸಿಬ್ಬಂದಿಯವರು ಮ್ಯುನಿಸಿಪಾಲಿಟಿಗಳಿಗೋಸ್ಕರ ಸುಮಾರು 1 ಸಾವಿರ ನಕ್ಷೆಗಳನ್ನೂ, ಕಾರ್ಯಕ್ರಮದ ವಿವರಗಳನ್ನೂ, (ಎಂದರೆ, «ಪ್ಲಾನ್» ಗಳನ್ನೂ, «ಪ್ರಾಜೆಕ್ಟು» ಗಳನ್ನೂ) ತಯಾರುಮಾಡಿ ಕೊಟ್ಟಿದ್ದಾರೆ. ಇದನ್ನು ನೋಡಿದರೆ, ಸರ್ಕಾರದವರು ಒದಗಿಸಿಕೊಟ್ಟ ಈ ಸೌಕರ್ಯಗಳನ್ನೂ ಮ್ಯುನಿಸಿಪಾಲಿಟಿಗಳವರು ವಿಶೇಷವಾಗಿ ಉಪಯೋಗಿಸಿಕೊಂಡಿರುವರೆಂಬ ಸಂಗತಿಯು ವ್ಯಕ್ತವಾಗುತ್ತದೆ. ಅತಿವಿಶೇಷವಾಗಿ ಗಮನಕೊಡತಕ್ಕಿರುವ ಅಂಶಗಳಲ್ಲಿ ಟೌನುಗಳ ಬಡಾವಣೆಯ ಏರ್ಪಾಡೂ ಒಂದಾಗಿದೆ. ಮ್ಯುನಿಸಿಪಾಲಿಟಿಗಳೇ ಮುಂತಾದ ಸ್ಥಳೀಯ ಸಂಸ್ಥೆಗಳವರು ತಮ್ಮ ಊರುಗಳನ್ನು ಬಡಾವಣೆಗೊಳಿಸಿ ವಿಸ್ತಾರವನ್ನು ಹೆಚ್ಚು ಮಾಡಿಕೊಳ್ಳುವುದರಿಂದಲೇ ತೃಪ್ತರಾಗಿಲ್ಲ. ಊರಿನ ರಮಣೀಯತೆಯು ಹೆಚ್ಚುವಂತೆ ಅವರು ಅನೇಕ ಉದ್ಯಾನಗಳನ್ನೂ, ಉಪವನಗಳನ್ನೂ, ನಿರ್ಮಿಸಿಕೊಂಡಿದ್ದಾರೆ. ಅಲ್ಲದೆ, ಊರಿಗೆ ಅಲಂಕಾರಪ್ರಾಯವಾಗಿರುವಂತೆ ಕಟ್ಟಡಗಳು ಪಟ್ಟಣಕ್ಕೆ ಒಪ್ಪುವಂತೆ ಸಾರ್ವಜನಿಕ ಭವನಗಳೇ ಮೊದಲಾದವುಗಳಿಗಾಗಿ ಪ್ರಶಸ್ತರೀತಿಯಲ್ಲಿ ನಿವೇಶನಗಳನ್ನು ಕೊಟ್ಟಿದ್ದಾರೆ. ಇದೆಲ್ಲವನ್ನೂ ನೋಡಿದರೆ, ನಮ್ಮ ದೇಶಬಾಂಧವರಿಗೆ ತಮ್ಮ ಊರಿನ ಸೌಂದರ್ಯವನ್ನು ಹೆಚ್ಚು ಮಾಡಿಕೊಳ್ಳುವುದರಲ್ಲಿಯೂ ಅಭಿರುಚಿಯುಂಟೆಂಬುದೂ, ಅವರು ಅದರ ವಿಷಯದಲ್ಲಿಯೂ ತೀವ್ರಾಸಕ್ತಿಯುಳ್ಳವರಾಗಿದ್ದಾರೆಂಬುದೂ, ವ್ಯಕ್ತವಾಗಿ, ತನ್ಮೂಲಕ ಮನಸ್ಸಿಗೆ ಎಷ್ಟೋ ಹರ್ಷವುಂಟಾಗುತ್ತದೆ.

ಕಳೆದ ಐದು ವರುಷಗಳಿಂದೀಚೆಗೆ, ಮುಖ್ಯಮುಖ್ಯವಾದ ಒಂಬತ್ತು ಊರುಗಳಿಗೆ ಕುಡಿಯುವ ನೀರಿನ ವಸತಿಯನ್ನು ಕಲ್ಪಿಸಿಕೊಡಲಾಗಿದೆ. ಇವುಗಳಲ್ಲಿ 2 ಊರುಗಳು ಡಿಸ್ಟ್ರಿಕ್ಟ್ ಕಸಬೆಗಳಾಗಿವೆ, ಇತರ 17 ಊರುಗಳಿಗೆ ನೀರು ಸರಬರಾಯಿ ಕಾಮಗಾರಿಯ ಕಾರ್ಯಕ್ರಮದ ವಿವರಗಳನ್ನು (ಎಂದರೆ, «ಪ್ರಾಜೆಕ್ಟು» ಗಳನ್ನು) ರಚಿಸಿ ಒದಗಿಸಲಾಗಿದೆ. ಊರುಗಳನ್ನು ವಿಸ್ತರಿಸುವುದಕ್ಕಾಗಿ ಬೇರೆಬೇರೆ ಪ್ರದೇಶಗಳಲ್ಲಿ ಮನೆಗಳನ್ನು ಕಟ್ಟಿ ಬಡಾವಣೆಗೊಳಿಸುವುದು, ಸಂತೆಯ ನಾಲೆಗಳನ್ನು ಅಚ್ಚುಕಟ್ಟಾಗಿ ಏರ್ಪಡಿಸುವುದು, ಮಾದರಿ ಗ್ರಾಮಗಳನ್ನೇರ್ಪಡಿಸುವುದು, ಮಾದರಿಯ ಮನೆಗಳು, ಮಾದರಿಯ ಪಶುಶಾಲೆಗಳು (ಎಂದರೆ, ಮಾದರಿಯ «ದನದಕೊಟ್ಟಿಗೆ» ಗಳು) ಮುಂತಾದವುಗಳನ್ನು ಕಟ್ಟಿಸುವುದು ಈ ನಾಲ್ಕು ವಿಚಾರಗಳಲ್ಲಿಯೂ ಮುನಿಸಿಪಾಲಿಟಿಗಳೇ ಮುಂತಾದ ಸ್ಥಳೀಯ ಸಂಸ್ಥೆಗಳಿಗೆ ನಕ್ಷೆಗಳೂ, ಸಲಹೆಗಳೂ, ವಿಶೇಷವಾಗಿ ಒದಗಿಸಲ್ಪಟ್ಟಿವೆ. ಊರುಗಳನ್ನು ಅಭಿವೃದ್ಧಿಗೆ ತರುವ ವಿಷಯದಲ್ಲಿಯೂ, ನೈರ್ಮಲ್ಯರಕ್ಷಣೆಯ ವಿಚಾರದಲ್ಲಿಯೂ, ಪ್ರಜೆಗಳು ತೀವ್ರಾಸಕ್ತಿಯನ್ನು ತೋರ್ಪಡಿಸಿದ್ದಾರೆ. ಅಲ್ಲದೆ ಈ ಭಾಗದಲ್ಲಿ ಅವರು ಸರ್ಕಾರದವರಿಗೆ ನೆರವಾಗಿ ನಿಂತು ವಿಶೇಷ ಶ್ರದ್ಧೆಯಿಂದ ಕೆಲಸ ನಡೆಸಿಯೂ, ನಡೆಸುತ್ತಲೂ ಬಂದಿದ್ದಾರೆ. ಇದೇರೀತಿಯಲ್ಲಿ ಏಕಪ್ರಕಾರವಾಗಿ ಇನ್ನು ಮುಂದೆಯೂ ಅಭಿವೃದ್ಧಿ ಕಾರ್ಯಗಳು ನಡೆಯುತ್ತ ಹೋದರೆ ನಮ್ಮ ದೇಶದ ಗ್ರಾಮಗಳು ಇನ್ನು ಸ್ವಲ್ಪ ಕಾಲದೊಳಗಾಗಿಯೇ ವಿಶೇಷ ಅಭಿವೃದ್ಧಿಗೆ ಬರುತ್ತವೆ. ಅಲ್ಲದೆ, ಅವು ಸೌಂದರ್ಯದ ನೋಟದಿಂದ ಸೊಂಪುಗೂಡಿ ಮೆರೆಯುವಂತಾಗುತ್ತವೆ. ನಾವೆಲ್ಲರೂ ಅವುಗಳನ್ನು ನೋಡಿ ಅಭಿಮಾನದಿಂದ ಹಿಗ್ಗಿ ಆನಂದಪಡುವುದಕ್ಕೆ ಸರ್ವಸಮರ್ಪಕವಾದ ಕಾರಣಗಳಿರುವ ಸುದಿನವೂ ಬೇಗನೆ ಬರುತ್ತದೆ. ನನ್ನ ಅಭಿಪ್ರಾಯದಲ್ಲೀ ನಮ್ಮ ಗ್ರಾಮಗಳು ಹೀನಸ್ಥಿತಿಯಲ್ಲಿರುವುದೆಂದಾಗಲಿ ಉತ್ತಮವಾದ ಉಚ್ಚಸ್ಥಿತಿಗೆ ಬರಲು ಅಸಾಧ್ಯವೆಂದಾಗಲಿ ಹೇಳಬಹುದಲ್ಲ. ಗ್ರಾಮಗಳು ಮಾತ್ರ ಹೀನಸ್ಥಿತಿಯಲ್ಲಿ ಹಿಂದೆ ಬಿದ್ದಿವೆ. ಇತರ ವಿಚಾರಗಳಲ್ಲಿ ಎಷ್ಟು ಏಳಿಗೆಯಾದರೂ ಸಾರ್ಥಕವಲ್ಲ. ಗ್ರಾಮಗಳು ಎಷ್ಟೆಷ್ಟು ಅಭಿವೃದ್ಧಿಯಲ್ಲಿದ್ದರೆ, ದೇಶವೂ ಅಷ್ಟಷ್ಟು ಉತ್ತಮವಾದುದೆಂದು ಧಾರಾಳವಾಗಿ ಹೇಳಬಹುದು. ಇದೇ ಸ್ಥಿರವಾದ ನನ್ನ ಅಭಿಪ್ರಾಯ.

ಸ್ಥಳೀಯ ಪ್ರಜಾಧಿಕಾರದ ಏರ್ಪಾಡು.

ಇನ್ನು ಸ್ಥಳೀಯ ಪ್ರಜಾಧಿಕಾರದ ಏರ್ಪಾಡನ್ನು ಕುರಿತು ಒಂದೆರಡು ಸಂಗತಿಗಳನ್ನು ತಮಗೆ ಪ್ರಸ್ತಾಪಿಸಬಿಡುತ್ತೇನೆ. ಅದರ ವಿಷಯವಾಗಿ ಬೇರೆ ಸಂದರ್ಭದಲ್ಲಿ ಮೊದಲೇ ಪ್ರಸ್ತಾಪಿಸಿದ್ದೇನೆ. ಆಗ ಹೇಳದೆ ಇದ್ದ ಅಂಶವನ್ನೇ ಮಾತ್ರವೇ ಇಲ್ಲಿ ಪ್ರಸ್ತಾಪಿಸುತ್ತೇನೆ. ಗ್ರಾಮಪಂಚಾಯತಿಗಳು, ಮುನಿಸಿಪಾಲಿಟಿಗಳು, ಡಿ॥ ಬೋರ್ಡುಗಳು—ಇವೇ ಮುಂತಾದ ಸ್ಥಳೀಯ ಸಂಸ್ಥೆಗಳಿಗೆ ಸ್ವಾತಂತ್ರ್ಯವುಳ್ಳ ಹೆಚ್ಚಿನ ಅಧಿಕಾರಗಳನ್ನು ಕೊಟ್ಟು ಅವು ಅಭಿವೃದ್ಧಿಗೆ ಬರುವಂತೆ ಉತ್ತೇಜನಕೊಡುವ ವಿಷಯದಲ್ಲಿ ಸರ್ಕಾರದವರು ಬದ್ಧಸಂಕಲ್ಪದಿಂದ ಕೂಡಿದ್ದಾರೆ. ಪ್ರಜಾಪ್ರತಿನಿಧಿಗಳು ಈ ಸಂಸ್ಥೆಗಳ ಕಾರ್ಯಕಲಾಪಗಳನ್ನು ಎಷ್ಟೆಷ್ಟು ವಿಚಕ್ಷಣೆಯಿಂದ ನಡೆಸಿ ತಮ್ಮ ಯೋಗ್ಯತೆಯನ್ನು ತೋರಿಸಿಕೊಳ್ಳುವರೋ ಅಷ್ಟಷ್ಟು ಸಮರ್ಥರಾದವರೆಂದು ಸರ್ಕಾರದವರಿಗೂ ಅಷ್ಟಷ್ಟು ಹೆಚ್ಚಿನ ನಂಬಿಕೆಯುಂಟಾಗುವುದು. ಹೀಗೆ ನಡೆಯುವುದರಿಂದ ಅವರು ಸರ್ಕಾರದವರ ಭಾರವನ್ನೂ ಹೆಚ್ಚುಹೆಚ್ಚಾಗಿ

ಇಳಿಸಿ ತಗ್ಗಿಸಲಾಗಿರುವುದಕ್ಕೆ ಕಾರಣ ಅಷ್ಟೇ ಅಲ್ಲ, ಪ್ರಜಾವರ್ಗದವರು ಹೀಗೆ ಬಿಕ್ಕಟ್ಟಿನಿಂದಲೂ, ಕಷ್ಟದಿಂದಲೂ, ಸ್ಥಳದ ಆಡಳಿತವನ್ನು ನಡೆಸುವುದಕ್ಕೆ ಶಕ್ತರಾಗಿಲ್ಲ, ಸರ್ಕಾರದವರ ಸಹಾಯವಿಲ್ಲದೆ ಯಾವ ಕೆಲಸವನ್ನೂ ಮಾಡಲು ಸಾಧ್ಯವಿಲ್ಲ. ಈ ಸಂಸ್ಥೆಗಳವರು ಜವಾಬ್ದಾರಿಯ ಕೆಲಸಗಳಿಗೆ ಯೋಗ್ಯರೆಂದು, ಆದ್ದರಿಂದ ಸ್ವಾತಂತ್ರ್ಯವನ್ನು, ಸರ್ಕಾರದವರು ಹಿಂತೆಗೆದುಕೊಳ್ಳುವುದು ಸರಿಯಲ್ಲ. ಒಂದು ವೇಳೆ ಪ್ರಜಾಪ್ರತಿನಿಧಿಗಳ ಸರ್ಕಾರದವರು ತಾವೇ ಕೈಹಾಕುವುದಾದರೆ, ಆ ಸಂಸ್ಥೆಗಳ ಬೆಳವಣಿಗೆಯು ನಷ್ಟವಾಗುವುದು. ಆದ್ದರಿಂದ ಈ ರೀತಿ ಮಾಡದೆ ಸ್ವತಂತ್ರವಾಗಿ ಬಿಡಬೇಕು. ಈ ವಿಷಯವನ್ನು ತಾವು ಮುಖ್ಯವಾಗಿ ಪರಿಶೀಲಿಸಬೇಕಾಗಿ ನಾನು ಪ್ರಾರ್ಥನೆ ಮಾಡುತ್ತೇನೆ.

ಸರ್ಕಾರದವರು ಈ ವಿಷಯದಲ್ಲಿ ಉದಾರಭಾವನೆಗಳಿಂದ ಕೂಡಿ ಕಾರ್ಯನಿಯಮವೊಂದನ್ನು ಜಾರಿ ಮಾಡಿಕೊಂಡೇ ಇದ್ದಾರೆ. ಇದಕ್ಕೆ ನಿದರ್ಶನವಾಗಿ ಒಂದು ಸಂಗತಿಯನ್ನು ನಾನು ತಮಗೆ ಜ್ಞಾಪಿಸಬಯಸುತ್ತೇನೆ. ಬೆಂಗಳೂರು ನಗರದ ಪೌರಕಾರ್ಯನಿರ್ವಾಹಕ ಸಭೆಯವರು ತಮ್ಮ ಅಧ್ಯಕ್ಷರನ್ನು ಚುನಾಯಿಸಿಕೊಳ್ಳುವ ಅಧಿಕಾರವನ್ನು ಮತ್ತೆ ಅವರಿಗೆ ಕೊಡಬೇಕೆಂಬುದಾಗಿ, ಸರ್ಕಾರದವರು ಅನುಸರಿಸಬೇಕೆಂದಿರುವ ಕಾರ್ಯನಿಯಮದ ಉದಾರಭಾವವನ್ನು ಸೂಚಿಸುವ ಮತ್ತೊಂದು ಅಂಶವನ್ನೂ, ತಮ್ಮ ಅವಗಾಹನೆಗೆ ತರಲು ಇಚ್ಛಿಸುತ್ತೇನೆ. ಮೈಸೂರು, ಶಿವಮೊಗ್ಗ, ಕಡೂರು, ತುಮಕೂರು ಮತ್ತು ಚಿತ್ರದುರ್ಗ ಈ ಡಿ|| ಗಳಲ್ಲಿ ಡಿ|| ಬೋರ್ಡುಗಳ ಸದಸ್ಯರು ತಮ್ಮ ತಮ್ಮ ಡಿ|| ಬೋರ್ಡಿಗೆ ಅಧ್ಯಕ್ಷರಾಗಿರಲು ಸರ್ಕಾರಿ ಉದ್ಯೋಗಸ್ಥರಲ್ಲದವರನ್ನು ಚುನಾಯಿಸಿಕೊಳ್ಳುವ ಅಧಿಕಾರವನ್ನು ಕೊಡಬೇಕೆಂಬುದಾಗಿ ಸರ್ಕಾರದವರು ತೀರ್ಮಾನಿಸಿದ್ದಾರೆ. ಈಗ್ಗೆ ಕೆಲವು ವರುಷಗಳ ಹಿಂದೆ, ಸರ್ಕಾರದವರು ಕೆಲವು ಡಿ|| ಬೋರ್ಡುಗಳಿಗೆ ಈ ಅಧಿಕಾರವನ್ನು ಕೊಟ್ಟಿದ್ದರಷ್ಟೆ. ಹೀಗೆ ಆಧಿಕಾರವನ್ನು ಪಡೆದಿರುವ ಡಿ|| ಬೋರ್ಡುಗಳಲ್ಲಿ ಸರ್ಕಾರಿ ಅಧಿಕಾರಿಗಳಲ್ಲದವರೇ ಅಧ್ಯಕ್ಷರಾಗಿದ್ದಾರೆ. ಅವರುಗಳು ಕೇವಲ ದಕ್ಷತೆಯಿಂದಲೂ, ದಿಟತನದಿಂದಲೂ, ತಮ್ಮ ಕರ್ತವ್ಯಗಳನ್ನು ನಿರ್ವಹಿಸಿಕೊಂಡು ಬಂದಿರುವುದನ್ನು ನೋಡಿ, ಸರ್ಕಾರದವರಿಗೆ ವಿಶೇಷ ಸಂತೋಷ ಉಂಟಾಯಿತು. ಅಲ್ಲದೆ, ಈಗ ಮತ್ತೆ 4 ಡಿಸ್ಟ್ರಿಕ್ಟು ಬೋರ್ಡುಗಳಿಗೆ ಈ ಅಧಿಕಾರವನ್ನು ಕೊಡಲು ಸರ್ಕಾರದವರಿಗೆ ಪ್ರೇರಣೆಯುಂಟಾದುದೂ, ಇದರ ದೆಸೆಯಿಂದಲೇ. ಈಗ ಹೊಸದಾಗಿ ಈ ಅಧಿಕಾರವನ್ನು ಕೊಡುವ 4 ಡಿ|| ಗಳಲ್ಲಿಯೂ ಸಹ, ಅವುಗಳಂತೆಯೇ, ಅಷ್ಟೇ ದಿಟತನದಿಂದ ಕೆಲಸ ನಡೆಯುವುದೆಂಬುದಾಗಿ ನಾವು ನಿಸ್ಸಂದೇಹವಾಗಿ ಭರವಸೆಯನ್ನಿಟ್ಟುಕೊಳ್ಳಬಹುದಾಗಿದೆ.

ಪರಿಸಮಾಪ್ತಿ.

ಕಳೆದ ವರುಷದಲ್ಲಿ ನಡೆದ ಆಡಳಿತಗಳನ್ನೂ, ಕಾರ್ಯಕಲಾಪಗಳನ್ನೂ ಕುರಿತು ನಾನು ವಿಮರ್ಶನಾದಿ ವಿವರಿಸಿದುದು ಇಲ್ಲಿಗೆ ಪೂರೈಸಿತು. ಆ ಸಂಬಂಧದಲ್ಲಿ ನಾನು ಮತ್ತಾವ ಸಂಗತಿಗಳನ್ನೂ ತಮಗೆ ಜ್ಞಾಪಿಸಬೇಕಾದುದಿಲ್ಲ.

ಮಹನೀಯರೆ, ಪ್ರಜೆಗಳಲ್ಲಿ ಪ್ರತಿಯೊಂದು ಪಂಗಡದವರೂ, ಸುಖ ಸಂತೋಷಗಳಿಂದ ಕೂಡಿ ಪರಿತೃಪ್ತರಾಗಿ ಜೀವನ ಮಾಡುವುದಕ್ಕೆ ಸಾಧಕವಾದ ಸೌಕರ್ಯಗಳೆಲ್ಲವನ್ನೂ ಉಂಟುಮಾಡಿಕೊಡಬೇಕಾದುದೇ ನಮ್ಮೆಲ್ಲರ ಮುಖ್ಯಕರ್ತವ್ಯವಾಗಿದೆ. ಮಹತ್ತರವಾದ ಈ ಕರ್ತವ್ಯಸಾಧನೆಯ ಪ್ರಯತ್ನದಲ್ಲಿ ನಾವೆಲ್ಲರೂ ಒಟ್ಟುಗೂಡಿ ವರ್ತಿಸೋಣ. ಯಾವುದೊಂದರಿಂದಲೂ ಲೇಶಮಾತ್ರವೂ ವ್ಯಗ್ರಚಿತ್ತರಾಗದೆ ಏಕಾಗ್ರಬುದ್ಧಿಯಿಂದ ಕೂಡಿ ವ್ಯವಹರಿಸೋಣ. ಪ್ರಜೆಗಳಲ್ಲಿ ಸಮಸ್ತ ಪಂಗಡದವರಿಗೂ ಸುಖದ ಸುಗ್ಗಿಯು ಸಂಪೂರ್ಣವಾಗಿ ದೊರೆಯುವವರೆಗೂ, ಸಂತತವೂ ಅವಿಶ್ರಾಂತರಾಗಿ ದುಡಿದು ಧನ್ಯರಾಗೋಣ. ಕೃಪಾಳುವಾದ ಭಗವಂತನು ನಮ್ಮ ಅಭೀಷ್ಟಸಿದ್ಧಿಯನ್ನು ದಯಪಾಲಿಸಿ ಅನುಗ್ರಹಿಸಲೆಂಬುದೇ, ನನ್ನ ಭಕ್ತಿಪೂರ್ವಕವಾದ ಪ್ರಾರ್ಥನೆ.

1ನೆಯ ಅಕ್ಟೋಬರ್ 1929 — ಮಿರ್ಜಾ ಎಂ. ಇಸ್ಮಾಯಿಲ್, ಮೈಸೂರು ಸಂಸ್ಥಾನದ ದಿವಾನರವರು

ಸ್ವೀಕಾರ

ಶ್ರೀ|| ವೀರಸಂಗಪ್ಪನವರ ಅಗ್ರತಾಂಬೂಲಸಂಭಾವನೆಯ ಬಗೆಗೆ ಈ ಕೆಳಗೆ ಕಂಡ ವಿವಾಹ ಮೊದಲಾದ ಶುಭಕಾರ್ಯಗಳಲ್ಲೂ ಇತರ ಸಂದರ್ಭಗಳಲ್ಲೂ ತೆಗೆದು ಕಳುಹಲ್ಪಟ್ಟ ಮೊಬಲಗನ್ನು ವಂದನಾಪೂರ್ವಕವಾಗಿ ಸ್ವೀಕರಿಸಿರುತ್ತೇವೆ—ಸಂ

ಗುಬ್ಬಿ ತಾ|| ದಂಡಿನ ಶಿವರದಲ್ಲಿರುವ ಮ|| ಮುಟ್ಟೀರಶೆಟ್ಟರ ತಮ್ಮಂದಿರು ರುದ್ರಯ್ಯನವರ ಲಗ್ನದಲ್ಲಿ ದಂಡಿನ ಶಿವರದ ಮ|| ಯಜಮಾನ್ ಆದಪ್ಪನವರ ಮೂಲಕ ೧ ರೂ

ಪತ್ರವ್ಯವಹಾರ

☞ ಪತ್ರವ್ಯವಹಾರಕರ ಲೇಖಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು —ಸಂಪಾದಕ

ವಿದ್ಯಾದಾನದ ಪ್ರತಿಫಲ

ಬಳ್ಳಾರಿಯಲ್ಲಿರುವ ಮದ್ರಾಸು ವೀರಶೈವ ವಿದ್ಯಾವರ್ಧಕ ಸಂಘದಿಂದ ವೇತನವನ್ನು ಪಡೆದು ವಿದ್ಯಾಭ್ಯಾಸದಿಂದ ನಿವೃತ್ತರಾಗಿ ಉದ್ಯೋಗದಲ್ಲಿ ತೊಡಗಿರುವವರ ಸಂಖ್ಯೆಯು ನೂರಕ್ಕೆ ಮುಟ್ಟಿರುವುದು. ಸಂಘದ ನಿಯಮದಂತೆ ಕೆಲವರು ತಮ್ಮ ವೇತನದ ಹಣವನ್ನು ಮುಟ್ಟಿಸಿರುವರು ಮತ್ತೆ ಕೆಲವರು ಮುಟ್ಟಿಸುತ್ತಿರುವರು. ಉಳಿದವರು ಮಾತ್ರ ಸಂಘದಿಂದ ಎಷ್ಟು ಕಾಗದಗಳನ್ನು ಬರೆದರೂ ವಕೀಲರ ಮೂಲಕ ನೋಟೀಸುಗಳನ್ನು ಕಳಿಸಿದರೂ ಅದಕ್ಕೆ ಉತ್ತರವನ್ನು ಕೊಡದೆ ಮೌನಮುದ್ರೆಯನ್ನು ಧರಿಸಿರುವರು. ಸಂಘವು ಅನಿವಾರ್ಯಾಂತರವನ್ನು ಕಾಣದೆ ಕೆಲವರ ಮೇಲೆ ಬಳ್ಳಾರಿಯ ಮುನ್ಸೀಫ್ ಕೋರ್ಟಿನ ನ್ಯಾ|| ನಂಬರು 600 601 602 609 ರಲ್ಲಿ ದಾವಾ ನಡೆಸಿರುವುದು. ನೋಡಿದಿರಾ ಓದು ಕಲಿತವರು ತಮಗೆ ಸಿಕ್ಕಿದ ವಿದ್ಯಾದಾನದ ಪ್ರತಿಫಲವನ್ನು ಹೇಗೆ ತೀರಿಸುವರು! ಸಂಘದ ಮೆಂಬರು.

ಮಹಾತ್ಮಾಗಾಂಧಿಯವರ ಷಷ್ಟ್ಯಬ್ದಪೂರ್ತಿ ಮಹೋತ್ಸವವು

(ಹರಪನಹಳ್ಳಿ)

ಇದೇ ತಾ|| 2-10-29 ನೇ ಬುಧವಾರ ಬೆಳಗ್ಗಿನಿಂದ ಮಹೋತ್ಸವವು ಬಳ್ಳಾರಿ ಜಿಲ್ಲಾ ಹರಪನಹಳ್ಳಿಯಲ್ಲಿ ಒಳ್ಳೇ ಉತ್ಸಾಹದಿಂದ ನೆರವೇರಿಸಲ್ಪಟ್ಟಿತು. ಮಧ್ಯಾಹ್ನ 3 ಘಂಟೆಯಿಂದ ಸಾಯಂಕಾಲ 6 ಘಂಟೆಯವರೆಗೂ ಮಹಾತ್ಮರ ಭಾವಚಿತ್ರವನ್ನು ಹೂವಿನ ಮಾಲೆಗಳಿಂದಲಂಕರಿಸಲ್ಪಟ್ಟ ರಥದಲ್ಲಿಟ್ಟು ಮುಖ್ಯಬೀದಿಗಳಲ್ಲೆಲ್ಲಾ ಉತ್ಸವದೊಡನೆ ಮೆರೆಯಿಸಲ್ಪಟ್ಟಿತು. ಅನಂತರ ಇಲ್ಲಿಯ ಪ್ರಸಿದ್ಧ ಮೈದಾನದಲ್ಲಿ ಮೊದಲು ಸ್ವಯಂಸೇವಕರು "ವಂದೇ ಮಾತರಂ" ಗೀತವನ್ನು ಹಾಡಿದಮೇಲೆ ಇಲ್ಲಿಯ ಮುನಿಸಿಪಲ್ ಪ್ರೆಸಿಡೆಂಟರಾದ ಶ್ರೀ ವಿ. ವಸುನಾಲಪ್ಪನವರ ಹಸ್ತದಿಂದ ರಾಷ್ಟ್ರೀಯ ಧ್ವಜಾರೋಹಣಕಾರ್ಯವು ಸಾಂಗವಾಗಿ ನಡೆಸಲ್ಪಟ್ಟಿತು. ಅನಂತರ ಶಾಲೆಯ ಹುಡುಗರು ಪ್ರಾರ್ಥನಾ ಗೀತವನ್ನು ಹಾಡಿದಮೇಲೆ ಶ್ರೀ ಹೆಚ್. ಎಸ್. ಸದಾಶಿವಯ್ಯ, ಎಂ.ಎ. ಎಲ್.ಎಲ್.ಬಿ. ಯವರು ಅಧ್ಯಕ್ಷಸ್ಥಾನವನ್ನು ವಹಿಸಿ ಮಹಾತ್ಮಾಗಾಂಧಿಯವರ ಜೀವನಚರಿತ್ರೆಯನ್ನು ವಿಸ್ತಾರವಾಗಿ ಉಪನ್ಯಾಸಮಾಡಿದರು. ಅನಂತರ ಶ್ರೀ ವಿ. ವಸುನಾಲಪ್ಪನವರು ಮಹಾತ್ಮರ ಆಯುರಾರೋಗ್ಯ ಐಶ್ವರ್ಯಾಭಿವೃದ್ಧಿಯನ್ನು ಹಾರೈಸಿ ಉಪನ್ಯಾಸಮಾಡಿದ ಮೇಲೆ ಮಂಗಳಾರತಿ ಯೊಂದಿಗೆ ಸಭೆಯು ವಿಸರ್ಜಿತವಾಯಿತು. ಕಡೆಯಲ್ಲಿ ರಾಷ್ಟ್ರಗೀತವನ್ನು ಹಾಡಿ ಸಭೆಯ ಕಾರ್ಯಕ್ರಮಗಳು ಜಯಘೋಷಗಳೊಡನೆ ಮುಕ್ತಾಯವಾಯಿತು.

ಓರ್ವ ಉತ್ಸವಭಾಗಿ.

ನೂತನ ಸ್ಕೂಲು ಕಟ್ಟಡದ ಪ್ರವೇಶೋತ್ಸವ

ಚಿತ್ರದುರ್ಗ ತಾ|| ಹೊಸಬೀಡಿನಲ್ಲಿ ಹೊಸದಾಗಿ ಕಟ್ಟಲ್ಪಟ್ಟಿರುವ ಕಟ್ಟಡದ ಪ್ರವೇಶೋತ್ಸವವು ತಾ|| 7-10-29 ರಲ್ಲಿ ಚಿತ್ರದುರ್ಗ ಡಿ|| ಡೆಪ್ಯುಟಿ ಕಮಿಷನರ್ ರವರಿಂದ ನಡೆಸಲ್ಪಟ್ಟಿತು. ಡಿ|| ಇಂಜನಿಯರು, ಎಕ್ಸಿಕ್ಯುಟಿವ್ ಆಫೀಸರು, ಸಬ್‌ಡಿವಿಜನ್ ಸಾಹೇಬರು, ಅಮಲ್ದಾರರು, ರೇಂಜ್ ಅ|| ಇನ್ಸ್‌ಪೆಕ್ಟರು, ಕರವತನೂರು ಮತ್ತು ಚಿತ್ರದುರ್ಗ ರೆವಿನ್ಯೂ ಇನ್ಸ್‌ಪೆಕ್ಟರುಗಳು, ಪೋಲೀಸು ಆಫೀಸರು ಇವರೇ ಮೊದಲಾದ ಅಧಿಕಾರಿಗಳೂ, ಡಿ|| ಬೋರ್ಡಿನ ವೈಸ್‌ಪ್ರೆಸಿಡೆಂಟ್ ಮ|| ವೀರಭದ್ರಪ್ಪನವರು, ಎಳಗೋಡು ಶ್ರೀಮಂತ ರುದ್ರಪ್ಪನವರು, ಡಿ|| ಅ|| ಮೆಂಬರ್ ಸಾಣಿಕೆರೆ ಕೃಷ್ಣಪ್ಪನವರೇ ಮೊದಲಾಗಿ ದೊಡ್ಡಮನುಷ್ಯರುಗಳೂ ಆಗಮಿಸಿದ್ದರು. ಸ್ಕೂಲ್ ಕಟ್ಟಡದಲ್ಲಿ ಚಪ್ಪರ ಹಾಕಲ್ಪಟ್ಟು ಅಲಂಕರಿಸಲ್ಪಟ್ಟಿತ್ತು. ಮಳೆಯಾಧಿಕ್ಯದಿಂದ ಮಂಟಪದಲ್ಲಿ ಸಭೆಮಾಡಲಿಕ್ಕಾಗಲಿಲ್ಲವಾಗಿ ಕಟ್ಟಡದಲ್ಲೇ ನಡೆಸಲ್ಪಟ್ಟಿತು. ಡೆ|| ಕಮಿಷನರವರು ಅಗ್ರಾಸನವನ್ನಲಂಕರಿಸಿದಮೇಲೆ ವಿದ್ಯಾರ್ಥಿಗಳಿಂದ ದೇವರ ಪ್ರಾರ್ಥನೆ ನಡೆದು ಸ್ಕೂಲಿನ ವರದಿಯನ್ನು ಮ|| ಡಿ. ಎಂ. ಚಂದ್ರಶೇಖರಯ್ಯನವರೋದಿದರು. ತರುವಾಯ ಸ್ಕೂಲಿನ 60 ವರ್ಷಗಳ ಚರಿತ್ರೆಯೂ, ಅದರ ಅಭಿವೃದ್ಧಿಗೆ ಕಾರಣರಾದ ಹೆ|| ಮಾ|| ಎಂ. ಗುರುಬಸವಯ್ಯನವರು, ಈಗಿನ ಹೆ|| ಮಾ|| ವಿ. ನಿರೂಪಾಕ್ಷಯ್ಯನವರು, ಮೊದಲಾದ ಸ್ಕೂಲಿನ ಅಧಿಕಾರಿಗಳು ಕಟ್ಟಡಕ್ಕೆ ನಿವೇಶನವನ್ನು ಧರ್ಮಾರ್ಥವಾಗಿ ಕೊಟ್ಟ ಗೌಡರ ದೊಡ್ಡಹಟ್ಟಪ್ಪನವರು ಕಾರ್ಯನಿರ್ವಾಹಕಮಂಡಳಿಯ ಅಧ್ಯಕ್ಷರು ಇವರುಗಳೇ ಮೊದಲಾದವರ ಆಭಾರಮನ್ನಣೆ ಕೋರಿಕೆಗಳ ಪ್ರಾರ್ಥನೆ ಇತ್ಯಾದಿ ಕಾರ್ಯಗಳು ನೆರವೇರಿಸಲ್ಪಟ್ಟವು. ಎಲ್ಲ ವಿಚಾರಗಳನ್ನು ಡೆ|| ಕಮಿಷನರು ಹಸನ್ಮುಖದಿಂದ ಆಲಿಸಿ ಸಮಂಜಸವಾದುತ್ತರವನ್ನಿತ್ತರು. ಚಿತ್ರದುರ್ಗದ ರೇಂಜ್ ಅ|| ಇನ್ಸ್‌ಪೆಕ್ಟರ್ ಎಚ್. ರಾಮಣ್ಣ, ಬಿ. ಎ., ಬಿ. ಟಿ., ಯವರು ಅಧ್ಯಕ್ಷರಿಗೂ ಸಭಿಕರಿಗೂ ವಂದನೆಯನ್ನರ್ಪಿಸಿದಮೇಲೆ ಗಂಧ ಪುಷ್ಪ ತಾಂಬೂಲಗಳ ವಿನಿಯೋಗವಾಗಿ ಉಪಾಹಾರನಂತರ ತೆರಳಿದರು.

ಉತ್ಸವಭಾಗಿ

ಮದ್ರಾಸು ವೀರಶೈವ ಹಾಸ್ಟಲಿನ ಪ್ರಾರಂಭಮಹೋತ್ಸವ

ಮದ್ರಾಸಿನಲ್ಲಿರುವ ವೀರಶೈವಮಹನೀಯರು ಮತ್ತು ವೀರಶೈವ ವಿದ್ಯಾರ್ಥಿಗಳು 7-10-29 ನೇ ಸೋಮವಾರ ಮದ್ರಾಸು ವೀರಶೈವಸಂಘದ ಅಧ್ಯಕ್ಷರೂ ಗುರುಬಸವ ಅಂಡ್ ಕಂಪೆನಿ (ಲಿಮಿಟೆಡ್) ಯ ಮ್ಯಾನೇಜಿಂಗ್ ಡೈರೆಕ್ಟರೂ ಆದ ಮ|| ಎಸ್. ಸಿ. ನಾಗಸೆಟ್ಟಿರವರ ಅಧ್ಯಕ್ಷತೆಯಲ್ಲಿ ವೀರಶೈವ ಹಾಸ್ಟಲನ್ನು ಪ್ರಾರಂಭಿಸುವುದಕ್ಕಾಗಿ ಪಾರ್ಕ್ ಟೌನ್ನಿನ ಹನುಮಂತರಾಯನ ಬೀದಿ 41 ನೇ ನಂಬರಿನ ಕಟ್ಟಡದಲ್ಲಿ ನೆರೆದಿದ್ದರು. ಈ ಮಹೋತ್ಸವಕ್ಕೆ ಮದ್ರಾಸಿಗೆ ಕಾರ್ಯಾರ್ಥವಾಗಿ ಬಂದಿದ್ದ ಪ್ರಾಂತಿಕ ವೀರಶೈವಬಾಂಧವರೂ ಆಗಮಿಸಿದ್ದರು. ದೇವತಾಪ್ರಾರ್ಥನಾನಂತರ ಈ ಕೆಳಗೆ ಕಂಡ ಪ್ರಕಾರ ಅಧ್ಯಕ್ಷರು ತಮ್ಮ ಅಮೃತವಾಣಿಯಿಂದ ಭಾಷಣವನ್ನು ಮಾಡಿ ಹಾಸ್ಟಲಿನ ಪ್ರಾರಂಭ ಮಹೋತ್ಸವ ಕಾರ್ಯವನ್ನು ನೆರವೇರಿಸಿದರು.

ಅಧ್ಯಕ್ಷರ ಭಾಷಣ

ಸಹೋದರರೆ, ಇಲ್ಲಿ ಏತಕ್ಕಾಗಿ ನಾವುಗಳು ನೆರೆದಿರುತ್ತೇವೆಂಬುದು ತಮಗೆ ತಿಳಿದಿರುತ್ತದೆ. ವೀರಶೈವಸಂಘದ ಕಾರ್ಯನಿರ್ವಾಹಕ ಕಮಿಟಿಯಲ್ಲಿ 6-10-1929 ರಲ್ಲಿ ತೀರ್ಮಾನಿಸಿದ "ವೀರಶೈವ ಹಾಸ್ಟಲ" ನ್ನು ಪ್ರಾರಂಭ ಮಾಡಬೇಕೆಂದು ನೆರೆದಿರುತ್ತೇವೆ. ಹಾಸ್ಟಲು ಪ್ರಾರಂಭವಾಡಲ್ಪಟ್ಟಿತೆಂದು ಹೇಳುವುದಕ್ಕೆ ಮೊದಲು ನಾನು ಕೆಲವು ವಿಷಯಗಳನ್ನು ತಿಳಿಸಬೇಕೆಂದು ಅಪೇಕ್ಷಿಸುತ್ತೇನೆ. ಪ್ರೌಢವಿದ್ಯಾಭ್ಯಾಸಕ್ಕಾಗಿ ಬಂದು ಮದ್ರಾಸಿನಲ್ಲಿರುವ ನಮ್ಮ ಜನಾಂಗದ ವಿದ್ಯಾರ್ಥಿಗಳು ಇಲ್ಲಿರುವವರೆಗೂ ಬಹಳ ಅನಾನುಕೂಲಗಳನ್ನು ಅನುಭವಿಸುತ್ತಿದ್ದರು. ಹಾಸ್ಟಲನ್ನು ಸ್ಥಾಪಿಸಬೇಕೆಂಬುದಾಗಿ ನನಗೆ ಬಹಳ ಕಾಲದಿಂದಲೂ ಅಪೇಕ್ಷೆ ಇತ್ತು. ಆದರೆ ಅನೇಕ ಕಾರಣಗಳಿಂದ ನನ್ನ ಪ್ರಯತ್ನಗಳು ಸಫಲವಾಗಲಿಲ್ಲ. ಈಗಲಾದರೂ ಹಾಸ್ಟಲನ್ನು ಸ್ಥಾಪಿಸಲು ಅನುಕೂಲ ಕಾಲವು ಒದಗಿಬಂದಿರುತ್ತದೆ. 1929 ನೇ ಅಕ್ಟೋಬರ್ ತಾ|| 1 ರಲ್ಲಿ ವೀರಶೈವ ಹಾಸ್ಟಲನ್ನು ಸ್ಥಾಪಿಸಬೇಕೆಂದು ಮದ್ರಾಸು ವೀರಶೈವಸಂಘದವರು ನಿಶ್ಚಯಿಸಿದ್ದರು. ಹಾಸ್ಟಲಿಗಾಗಿ ಅನುಕೂಲವಾದ ಕಟ್ಟಡವು ಇದುವರೆಗೂ ದೊರೆಯಲಿಲ್ಲ. ಆದಷ್ಟು ಜಾಗ್ರತೆಯಾಗಿ ಹಾಸ್ಟಲನ್ನು ಪ್ರಾರಂಭಿಸುವುದು ಆವಶ್ಯಕವೆಂದು ತೋರಿಬಂದದ್ದರಿಂದ ತಕ್ಕ ಕಾರ್ಯಗಳನ್ನು ನಡೆಸಬೇಕಾಯಿತು. ಮ|| ಗುರುಬಸವ ಅಂಡ ಕಂಪೆನಿಯ ವ್ಯವಸ್ಥಾಪಕರು ಶೀಘ್ರದಲ್ಲಿ ಹಾಸ್ಟಲನ್ನು ಪ್ರಾರಂಭಿಸುವುದಕ್ಕಾಗಿ ತಮ್ಮದೇ ಒಂದು ಕಟ್ಟಡವನ್ನು ಕೇವಲ ಪ್ರೀತಿಯಿಂದ ನಮ್ಮ ವಶಕ್ಕೆ ಕೊಟ್ಟಿರುತ್ತಾರೆ. ವಿದ್ಯಾರ್ಥಿಗಳ ಪರಸ್ಪರ ಪ್ರೀತಿಯಿಂದಲೂ, ಏಕಮತ್ಯದಿಂದಲೂ ವೀರಶೈವಸಮಾಜದವರ ಪ್ರೋತ್ಸಾಹದಿಂದಲೂ, ಈ ಹಾಸ್ಟಲು ಅಭಿವೃದ್ಧಿಯನ್ನೈದಿ ಶಾಶ್ವತವಾದ ಸಂಸ್ಥೆಯಾಗುವುದೆಂದು ನಾನು ನಂಬುತ್ತೇನೆ. ನಮ್ಮ ಹಾಸ್ಟಲು ಪ್ರಾರಂಭದಲ್ಲಿ ಕೇವಲ ಚಿಕ್ಕದಾದರೂ, ಪರಿಣಾಮದಲ್ಲಿ ಉತ್ತಮಸ್ಥಿತಿಯನ್ನು ಹೊಂದುವುದೆಂದೂ, ಇದರಿಂದ ವೀರಶೈವ ವಿದ್ಯಾರ್ಥಿಗಳು ನಿರಾತಂಕವಾಗಿ ವಿದ್ಯಾರ್ಜನೆಮಾಡುವುದಕ್ಕೆ ಅವಕಾಶವಾಗುವುದೆಂದೂ ನಾನು ನಂಬುತ್ತೇನೆ. ಬೇರೆಬೇರೆ ಸ್ಥಳಗಳಿಂದ ಬರತಕ್ಕ ವೀರಶೈವ ವಿದ್ಯಾರ್ಥಿಗಳು ಈ ಹಾಸ್ಟಲಿನಲ್ಲಿ ಸೇರಿ ಪರಸ್ಪರ ಪರಿಚಯವನ್ನುಂಟುಮಾಡಿಕೊಂಡು ಸಮಾಜಾಭಿವೃದ್ಧಿ ಕಾರ್ಯದಲ್ಲಿ ತತ್ಪರರಾಗುವುದಕ್ಕೆ ಅವಕಾಶವಿರುತ್ತದೆ. ದಯಾಮಯನಾದ ಭಗವಂತನು ಈ ಹಾಸ್ಟಲಿಗೂ, ವಿದ್ಯಾರ್ಥಿಗಳಿಗೂ ಶ್ರೇಯೋಭಿವೃದ್ಧಿಯನ್ನುಂಟುಮಾಡಲೆಂದು ಪ್ರಾರ್ಥಿಸಿ, ಹಾಸ್ಟಲು ಪ್ರಾರಂಭವಾಯಿತೆಂದು ಸಂತೋಷದಿಂದ ಹೇಳುತ್ತೇನೆ. ಅನಂತರ ಜಾಯಿಂಟ್ ಸೆಕ್ರೆಟರಿಯಾದ ಮ|| ಬಿ. ಬಸವಲಿಂಗಯ್ಯ, ಬಿ. ಎ., ಯವರು ಮ|| ಹೆಚ್. ಬಿ. ರುದ್ರಪ್ಪನವರು ಮತ್ತು ಡಾಕ್ಟರ್ ತಮ್ಮರೆಡ್ಡಿ ಎಂ.ಬಿ., ಬಿ.ಎಸ್., ರವರು ಭಾಷಣಮಾಡಿದನಂತರ ಅಧ್ಯಕ್ಷರು ತಮ್ಮ ಉಪಸಂಹಾರ ಭಾಷಣದಲ್ಲಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಕರವಾದ ಸದುಪದೇಶವನ್ನು ಮಾಡಿದರು. ತದನಂತರ ಜಗದ್ವಂದ್ಯನಾದ ಪರಮೇಶ್ವರನ ಭಾವಚಿತ್ರಕ್ಕೆ ಮಂಗಳ ಮಾಡಲ್ಪಟ್ಟು, ನೆರೆದಿದ್ದವರಿಗೆ ಗಂಧಪುಷ್ಪಾದಿಗಳನ್ನು ಹಂಚಲ್ಪಟ್ಟು, ಶ್ರೀಮುಖಂಡಿಯ ಚಕ್ರವರ್ತಿ ಪಂಚಮ ಜಾರ್ಜ್ ಪ್ರಭುಗಳವರ ಮತ್ತು ಮೈಸೂರು ಶ್ರೀಮನ್ಮಹಾರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ರವರ ಶ್ರೇಯೋಭಿವೃದ್ಧಿಯು ನಡೆದು ಹಾಸ್ಟಲಿನ ಪ್ರಾರಂಭೋತ್ಸವವು ಪರಿಸಮಾಪ್ತಿಗೊಳಿಸಲ್ಪಟ್ಟಿತು.

ಬಿ. ಬಸವಲಿಂಗಯ್ಯ,
ಜಾಯಿಂಟ್ ಸೆಕ್ರೆಟರಿ, ವೀರಶೈವಸಂಘ,

ಸ್ವಹಸ್ತಪತ್ರದ ನೋಟೀಸು

[೩—1]

ಮುಜಾವರಹಳ್ಳಿ ಕಾಸಬಾ ಹೋಬಳಿ ಹೊಸಬಾಳು ಗ್ರಾಮವಾಸಿ ಮೃತ ಗುರುಶಾಂತಪ್ಪನವರ ಹೆಂಡತಿಯಾದ ನಾನು ಈ ನೋಟೀಸು ನೀಡಲು ಕಾರಣವೇನೆಂದರೆ ನನ್ನ ಗಂಡ ಮೃತಪಟ್ಟ ನಂತರ ನನ್ನ ಮಕ್ಕಳ ಗಾರ್ಡಿಯನ್ ಆಗಿ ನಾನು ಇರುತ್ತೇನೆ. ಅವರ ಸ್ಥಿರ ಚರ ಸ್ವತ್ತುಗಳ ವಿಷಯದಲ್ಲಿ ಯಾರೂ ಯಾವ ವ್ಯವಹಾರಗಳನ್ನೂ ಮಾಡತಕ್ಕದ್ದಲ್ಲ. ಆದ್ದರಿಂದ ನಮ್ಮ ಪಿತ್ರಾರ್ಜಿತ ಚರ ಸ್ಥಿರ ಆಸ್ತಿಗಳಿಗೂ ನಾನೇ ಬಾಧ್ಯಸ್ಥಳಾಗಿರುತ್ತೇನೆ. ಈ ಬಾಬ್ತು ಸ್ವತ್ತುಗಳನ್ನು ಬೇರೆಯವರಿಂದ ಯಾರಾದರೂ ಮೋಸದಿಂದ ನನ್ನ ಗಂಡ ಮೃತ್ಯುವಿನನಂತರ ಆಧಾರ ಭೋಗ್ಯ ಕ್ರಯ ಮುಂತಾದ ಕೆಲಸಗಳನ್ನು ಮಾಡಿದ್ದರೆ ಅದು ಊರ್ಜಿತವಾಗತಕ್ಕದ್ದಲ್ಲ. ಯಾರಾದರೂ ಈ ಕೆಲಸಗಳನ್ನು ಮಾಡಿಕೊಂಡರೆ ಅವರುಗಳಿಗೆ ತಗಲುವ ನಷ್ಟಕ್ಕೆ ನಾನು ಜವಾಬ್ದಾರಳಲ್ಲ ಎಂದು ಈ ಮೂಲಕ ಸಮಸ್ತ ಜನರಿಗೂ ತಿಳಿಯಪಡಿಸುತ್ತೇನೆ.

ಈ ಗುರ್ತು ಮಹಂತಪ್ಪ ಮೈನರ್ ಗಾರ್ಡಿಯನ್ ತಾಯಿ ಪುಟ್ಟಮಾದಮ್ಮನ ಎಡಗೈ ಹೆಬ್ಬೆಟ್ಟಿನ ಗುರ್ತಿನ ರುಜು.

ಪ್ರಕಟನೆ.

ನಮ್ಮಲ್ಲಿ ಸಿನೇಮಕ್ಕೆ ಸಂಬಂಧಪಟ್ಟ ಪ್ಯಾತಿ ಕಂಪೆನಿಯ ಪ್ರೊಜೆಕ್ಟರ್ ಮಿಷನ್, ಆರ್ಕ್‌ಲ್ಯಾಂಪು, ಡೈನಮೊ, ಎಲೆಕ್ಟ್ರಿಕಲ್ ಫಿಟಿಂಗ್ಸ್ ವಗೈರೆ ಎಲ್ಲಾ ಸಾಮಾನುಗಳೂ, ಕೆಲವು ಕಾಮಿಕ್ ಫಿಲಂಗಳೂ ಸಹ ಖರೀದಿಗೆ ದೊರೆಯುತ್ತವೆ. ಎಲ್ಲಾ ಸಾಮಾನುಗಳ ಸೆಟ್ಟು ತಯಾರು ಇರುವುದರಿಂದ ಈ ಹೊಸವೇ ಸಿನೇಮ ನಡಿಸಬಹುದು. ಈ ಸಾಮಾನುಗಳು ಸೋವಿ ಕಿಮ್ಮತ್ತಿನಲ್ಲಿ ಸಿಗುತ್ತವೆಯಾದ್ದರಿಂದ ಈ ಸಮಯವನ್ನು ಕಳೆದುಕೊಳ್ಳಬಾರದಾಗಿ ಕೋರಿಕೆ.

Siddaradhya
Tirukappanavara mutt
Davangere.

[21—7]

ಡಾಕ್ಟರ್ ಜೀ. ಬೀ. ಯವರ

ಸುಗಂಧ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ —ನೆಗಡಿ ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕೆಂಪಕ್ಕೆ ಮೇಲ್ಪಟ್ಟ ಈ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ.

(Registered Trade Mark)

ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸತಕ್ಕದ್ದೆಂದು ಅಭಿಪ್ರಾಯಪಟ್ಟಿರುವರು.

ಬುಡ್ಡಿ ಒಂದಕ್ಕೆ ಕ್ರಯ ರೂ ೦—೪—೦ ವಿ. ಪಿ. ೦—೪—೦
ಡಜನ್ ೧ಕ್ಕೆ ಕ್ರಯ ರೂ ೨—೮—೦ ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ — ಗುರುಬಸವ ಅಂಡ್ ಕಂಪನಿಲಿಮಿಟೆಡ್,
ಪೋ. ಬಾ ೩೧೦, ಮದರಾಸು.

[50—11]

೧೯೨೯ನೆಯ ಇಸವಿ ಅಕ್ಟೋಬರ್ ತಾ|| ೧೯ ರಿಂದ ೧೯೨೯ನೆಯ ಇಸವಿ ಅಕ್ಟೋಬರ್ ತಾ|| ೨೫ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೧ನೆಯ ಶುಕ್ಲನಾಮಸಂವತ್ಸರದ ಅಶ್ವೀಜ ಬಹುಳ ಪಕ್ಷದಿಂದ ಅಶ್ವೀಜ ಬಹುಳ ಅಷ್ಟಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಚಾಂದ್ರಮಾಸ
19	ಶನಿ	ಪಾಡ್ಯ	24-48	ಅಶ್ವಿ	10 48	3
20	1 ಭಾನು	ಬಿದಿ	21 38	ಭರ	19 0	4
21	ಸೋಮ	ತದಿ	16-48	ಕೃತ್ತಿ	16-20	5
22	ಮಂಗಳ	ಚೌತಿ	13 20	ರೋಹಿ	13-10	6
23	2 ಬುಧ	ಪಂಚ	7 5	ಮೃಗ	9 35	7
24	ಗುರು	ಷಷ್ಠಿ	2 10 59 40	ಆದ್ರ್ರ	6 20	8
25	ಶುಕ್ರ	ಅಷ್ಟ	40 10	ಪುನ	1 23	*9

(1) ಮಳೆನಕ್ಷತ್ರ-ಚಿತ್ತ ೪ ಸಮಾಪ್ತಿ. (2) ಮಳೆನಕ್ಷತ್ರ-ಸ್ವಾತಿ ೧ನೆಯ ಪಾದ.

ಮೈಸೂರು, ವೈ. ಎರಪ್ಪಾಚಾರ್ಯ್ಯನವರಿಂದ ಶ್ರೀ ವಿವೇಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REG NO M 121

ಮೈಸೂರ್ ಸ್ಟಾರ್

ಪ್ರತಿ ಶನಿವಾರ ಪ್ರಕಟಿಸಲ್ಪಡುವದು

ನಾಹಂಕೂರಧರಾಕಾರಾ ನರಮಧಿಗತರಾ ಮಂಡಲಹಿತ್ಯಾ । ಧೈನಪಥಕ್ರಾವಕಾರಾ ಪಕ್ಷಪ್ಷ ನಕ್ಷತ್ರ ಸೋಹರಾಜೇಯಾಃ ॥
ಶ್ರೀಮತ್ಕೃಷ್ಣನೃಪಾಲನುತಮತಟಾರೋಲುಸಿತೋಫೇನ । ಸ್ತೋಮಾಭೇದ್ಯದಲ ನಾಕಲಿತ ಸಾದ್ಗುಣ್ಯಾವಾಲವಂ ॥
ಸೀತಾರಾಣಕಂಟತಪ್ರಕಾಶದಿಷ್ಟಂ ನಕ್ಷತ್ರವಾಲಾಕೋಲಂ । ಶ್ರೀಮಂದಿಕೆಯುಂಸದಾಭಿವೆಗೆ ಗೌರೀಶಾವಾಕಂಥೋಜ್ವಲಂ ॥

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಬೈಪ್ರೆಂಗೆ ೫-೮-೦]

ಸಂಪುಟ ೪೨] ಮೈಸೂರು ಸ್ಟಾರ್ ಸೆ ೧೯೨೯ ನೆಯ ಇಸವಿ ಅಕ್ಟೋಬರ್ ತಾರೀಖು ೨೬ ನೆಯ ಶನಿವಾರ [ಸಂಚಿಕೆ ೪೩

INSURE IN THE MYSORE STATE LIFE INSURANCE, PUBLIC BRANCH.

Life Insurance is admittedly the best form of investemnt and the greatest safeguard against the old age and death

The best, safest cheapest, most profitable and most convenient place for insurance is the Branch of the Mysore State Life Insurance

Policies are issued from Rs 100 to Rs 10,000 and copies of rules and forms of application can be had from all Government Treasuries, Economing Superintendents, Helpers and the Insurance Office Public Office Buildings, Bangalore

Sd/ S SHAMANNA,
Secretary,
Insurance Committee

ಪ್ರಕಟನೆ.

ನಮ್ಮಲ್ಲಿ ಸಿನೋಮಕ್ಕೆ ಸಂಬಂಧಪಟ್ಟ ಖ್ಯಾತಿ ಕಂಪೆನಿಯ ಪ್ರೊಜೆಕ್ಟರ್ ಮಷಿನ್, ಅಕ್ಯುಮುಲೇಟರ್, ಡೈನಮೊ, ಎಲೆಕ್ಟ್ರಿಕಲ್ ಫಿಟಿಂಗ್ಸ್ ವಗೈರೆ ಎಲ್ಲಾ ಸಾಮಾನುಗಳೂ, ಕೆಲವು ಕಾಮಿಕ್ ಫಿಲಂಗಳೂ ಸಹ ಮಾರಿಡಿಗೆ ದೊರೆಯುತ್ತವೆ ಎಲ್ಲಾ ಸಾಮಾನುಗಳ ಸೆಟ್ಟು ತಯಾರು ಇರುವುದರಿಂದ ಈ ದಿವಸವೇ ಸಿನೋಮ ನಡಿಸಬಹುದು ಈ ಸಾಮಾನುಗಳು ನೋಡಿ ಕಿಮ್ಮತ್ತಿನಲ್ಲಿ ಸಿಗುತ್ತವೆಯಾದ್ದರಿಂದ ಈ ಸಮಯವನ್ನು ಕಳೆದು ಕೊಳ್ಳಬಾರದಾಗಿ ಕೋರಿಕೆ

Siddaradhya
Tirukappanavari mutt
[12—8] Davangere

" ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತರ "

ಆಯುರ್ವೇದೀಯ ಸಿದ್ಧೌಷಧಗಳು

ಲೋಕಾಮಯಹರ ಕಸ್ತೂರೀ ಮಾತ್ರೆಗಳು

ಈ ಮಾತ್ರೆಗಳನ್ನು ಪ್ರತಿದಿನವೂ ತಾಂಬೂಲದೊಡನೆಯಾಗಲಿ ಹಾಗೆಯಾಗಲಿ ಉಪಯೋಗಿಸುತ್ತಿದ್ದರೆ ಆಹಾರ, ನೀರು ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ

ವಿತ್ಯ ಮೊದಲು ಮುಖ್ಯ ವಯಸ್ಸಿನವರೆಗೂ ಶೀತ ನೆಗಡಿ ಕೆಮ್ಮು ಜ್ವರ ಶೀತವಾತಜ್ವರ ಟೈಫಾಯ್ಡ್ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ

300 ಮಾತ್ರೆಗಳಿರುವ ಸೀಸೆ 1ಕ್ಕೆ ಕ ಆಣೆ

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ ನಮ್ಮ ದಿವಾಸವನ್ನೂ ಲೋಕಾಮಯಹರ ಕಸ್ತೂರೀ ಮಾತ್ರೆ ಎಂಬ ಹೆಸರನ್ನೂ ನೋಡಿ ಕೊಂಡುಕೊಳ್ಳಿ

ವೈಶ್ವಾನರಾಸವ

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ)

ಮೊಕ್ಕವು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ, ಪುಂಟಾಗದೆ ಹೊಟ್ಟೆ ನೋವಿರುವದೇ ಆದರೂ ರೋಗವನ್ನು ಸ್ವಾಧೀನಕ್ಕೆ ತರುತ್ತವೆ ಸೀಸೆ 1ಕ್ಕೆ ರೂ 1—0—0

ಲಕ್ಷ್ಮೀವಿಲಾಸರಸ.

(ಪ್ಲೇಗಿಗೆ)

ಹತ್ತಾರು ವರ್ಷಗಳಿಂದ ಪ್ರತಿವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ನಿಂತುವುದಾಗಿ ಗುಣಪಡಿಸಿರುತ್ತದೆ, ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ ಸೀಸೆಯ ಬೆಲೆ 1ಕ್ಕೆ ರೂ 1—0—0

ಶ್ರೀನಿವಾಸಕ್ಯಾಪ್ಸೂಲ್.

ಪ್ಲೇಗು ರೋಗಿಯ ಪ್ರತಿ ಸಂದುಗಳಿಗೂ, ಗೆಡ್ಡೆಗೂ ಹಚ್ಚುವ ಔಷಧಿ ಸೀಸೆ 1ಕ್ಕೆ ರೂ. 0—8—0.

• ಭಿಷಗ್ರತ್ನ
ಶ್ರೀ ಸೀತಾರಾಘವವೈದ್ಯಶಾಲಾ, ಪಾಳ್ಯದ ವೆಂಕಟಾಚಲಪಂಡಿತರ ಬ್ರಾಂಚಾಫೀಸು ಶ್ರೀ ಸೀತಾರಾಘವವೈದ್ಯಶಾಲಾ, ಚಿಕ್ಕಪೇಟೆ, ಬೆಂಗಳೂರು ಸಿಟಿ. ಚಿಕ್ಕಗಡಿಯಾರ ಹತ್ತಿರ ಮೈಸೂರು.

೧೦೦೦ ರೂಪಾಯಿ ಇನಾಮು

ಮಿರಜಿಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್. ಕಾಪಸೆ, ಇವರ

ಅಲ್ಪವಯಸ್ಸಿನಲ್ಲಿ ಕ್ಷೀಣರಾಗ ಬೇಡಿ — **ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ (ಸ್ವರಿಜ) ವಜ್ರಾಂಗ ಸುಂದರಪಾಕ.** — ಧೀಃಕರಿಸಿದರೆ ಕ್ಷೀಣತೆ ಕಾಯ್ದು ಕೊಳ್ಳುವಿರಿ

ಈ ಪಾಕಸೇವನೆಯಿಂದ ಎಲ್ಲ ಧಾತುಜನ ವಿಕಾರಗಳು ಧಾತುಶೋಷದಲ್ಲಿಯ ಉಷ್ಣತೆ ಮುಂತಾದ ವ್ಯಾಧಿಗಳಿಂದುಂಟಾದ ಇಂದ್ರಿಯ ಶಿಥಿಲತ್ವ ನಪುಂಸಕತ್ವ, ಸ್ವಪ್ನಾವಸ್ಥೆ ಮೂತ್ರದೊಂದಿಗೆ ಧಾತುಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ವೀರ್ಯವು ತೆಳುವಾಗುವದರಿಂದುಂಟಾದ ರೋಗದ ಮೂಲಕ ಸಂತತಿಯಾಗದಿರೋಣ, ನಡಸೋವು ಸಂದುನೋವು ಎದೆನೋವು ಹಾರ್ಟ ಸಂಧಿವಾತ ಜೀರ್ಣಜ್ವರ ಮೂಲವ್ಯಾಧಿ ಮಧುಮೇಹ ಹಳೇಪರಮಾ ಮತ್ತು ಗರ್ಮಿ ರಸಾಯನ ಸೇವನೆಯಿಂದಾದ ದುಷ್ಟವಿಕಾರಗಳು ಯಾವದೇ ಕಠಿಣ ಜ್ವರದಿಂದ ಎದ್ದ ಮೇಲೆ ಆದ ಕ್ಷೀಣತೆ ಮೊದಲಿನ ಅಶಕ್ತತೆ ಉಂಟಾದ ಕೈಕಾಲು ಉರಿಯೋಣ ಎಲ್ಲ ಪಿತ್ತವಿಕಾರಗಳು ನಿದ್ರೆಯು ಬಾರದೆ ಇರೋಣ, ಸ್ತ್ರೀಯರಿಗೆ ಸಂತತಿ ನಷ್ಟವಾಗೋಣ ಮೇಲಿಂದಮೇಲೆ ಗರ್ಭಪಾತವು ಎಲ್ಲ ಬಗ್ಗೆದ ಕೆರಗು ಗರ್ಭಾಶಯ ವಿಕಾರದಿಂದ ಸಂತತಿ ಆಗದೆ ಇರೋಣ, ಮುಂತಾದ ವ್ಯಾಧಿ ಸ್ತ್ರೀಪುರುಷರ ಸರ್ವರೋಗಗಳು ಹೋಗಿ ವಿಶೇಷ ಹಸಿವೆಯು ಆಗುತ್ತದೆ ಶರೀರಕ್ಕೆ ಸಾಕ್ಷವಾಗಿ ಧಾತುವೃದ್ಧಿಯಾಗಿ ವೀರ್ಯ ಘಟ್ಟಿ ಆಗುವದಲ್ಲದೆ ಪುರುಷತ್ವವು ಹೆಚ್ಚುತ್ತದೆ ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಹಾಯಕ ಆಗುತ್ತದೆ ಈ ಪ್ರಕಾರ ಕಾಯಮ ಧಾತುಪೌಷ್ಟಿಕಯುಕ್ತಿಯು ಮತ್ತು ಪಿಡ್ಡಿನ ಪಾಕವನ್ನು ಈ ಹೊತ್ತಿನವರೆಗೆ ಯಾರೂ ಮಾಡಿಲ್ಲ ರಸಿಕರು ಬಯಸುವಂಥವರು ತಕ್ಕೊಂಡು ಅನುಭವಿಸಿ ಈ ಪಾಕದಲ್ಲಿ ಬಹು ಪ್ರಯಾಸದಿಂದ ಸಂಪಾದಿಸಿದ ಅಪರೂಪ ೫೨ ವನಸ್ಪತಿ ಮಾಸಾದ ಅಡಚಣೆ ಅದರಿಂದ ಜಿನ್ನುಗಳ ಹೆಸರು ಕಡಿಮೆ ಸಮೂದ ಮಾಡಿರುತ್ತದೆ ಶ್ರೀಸ್ವಕಂದ ಮುಸಳೀಕಂದ ಧಿಮಂತರ ಮಹಾಕಂದ ವಿಧಾರಿಕಂದ ಶಾಲಿಮಖಾಣ ಜರದಾಕುಂ ರಕ್ತಪುರುಷ ಕವುರಮಸ ಕಧಿರ್ಯ್ ಗೊಂದ ಶಿಲಾಜಿತ ಪೂರ್ಣಚಂದ್ರ ದಯಂಗ ಮಕರಧ್ವಜ ರಸ ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು ೫೨ ಜಿನಸು ಹಾಕಿಲ್ಲೆಂದು ಸಿದ್ಧಮಾಡಿ ಕೊಟ್ಟವರಿಗೆ ೧೦೦೦ ರೂಪಾಯಿ ಇನಾಮು ಕೊಡುವೆವು ಮುಂಜಾನೆಗೆ ೨ ತೊಲೆಯು ೧ ವಡಿ, ರಾತ್ರಿ ಭೋಜನಾನಂತರ ೨ ತೊಲಿಯ ಒಂದು ವಡಿಯನ್ನು ತಕೊಂಡು ಅದರಮೇಲೆ ಸ್ವಲ್ಪ ಕಾಸಿದ ೨೦ ತೊಲ ಹಾಲ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ, ಸ್ತ್ರೀಯೂ ನಿರ್ಬಂಧವಿಲ್ಲ ೨೧ ದಿವಸ ಸಾಕಾಗುವದಕ್ಕೆ ಈ ಪಾಕದ ೮೪ ತೊಲಿ ಡಬ್ಬಿಗೆ ೫ ರೂ ೩ ಡಬ್ಬಿಗೆ ೧೪ ರೂ ೬ ಡಬ್ಬಿಗೆ ೨೬ ರೂ. ವ್ಹಿ. ಪಿ. ಖರ್ಚು ಬೇರೆ ೩ ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವುದು

ಕೇವಲ ಸ್ವಪ್ನಾವಸ್ಥೆ — ಈ ವಿಕಾರಕ್ಕೆ ೭ ದಿವಸಗಳಲ್ಲಿ ಗುಣ ೨೧ ದಿವಸ ಸಾಕಾಗುವದಕ್ಕೆ ಸೀಸೆ ೧ ಕ್ಕೆ ೩ ರೂಪಾಯಿಗಳು.

ಪ್ರಮೇಹ (ಪರಮಾ) — ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ ೨೪ ತಾಸುಗಳಲ್ಲಿ ಗುಣ ೫ ದಿವಸ ಸಾಕಾಗುವದಕ್ಕೆ ಸೀಸೆ ೧ ಕ್ಕೆ ೪ ರೂಪಾಯಿಗಳು

ಪಿನಸಿ — ಮೂಗಿನೊಳಗಿನ ಗಂಟಾಲ ಹುಣ್ಣು ರಕ್ತ ಕೀವು ಹುಣ್ಣು ದುರ್ಗಂಧ ಕ್ರಿಮಿ ಪಾತವಾದದಿರೋಣ ದಪ್ಪನೋಣ ಇವೇ ಎಲ್ಲ ವಿಕಾರಗಳಿಗೆ ೭ ದಿವಸಗಳಲ್ಲಿ ಗುಣ ೨೧ ದಿವಸ ಸಾಕಾಗುವದಕ್ಕೆ ಸೀಸೆ ೧ಕ್ಕೆ ಅಂಚೆವೆಚ್ಚ ಸೇರಿ ೪ ರೂಪಾಯಿಗಳು. ಪೂರ್ಣಗುಣವಾಗಲಿಕ್ಕೆ ೨ ಸೀಸೆಗಳು

[50—1] ಪತ್ತೆ : — ಮಾಲಕ ವೈದ್ಯ ವ್ಹಿ. ಎಸ್ ಕಾಪಸೆ ಮು. ಪೋ. ಮಿರಜ,

೧೯೩೦ ನೇ ಇಸವಿಯ ಶಿದ್ಧಪ್ಲಾಸ್ ಮಾಡಲ್ ಮೈಸೂರು ಕ್ಯಾಲೆಂಡರುಗಳು

1	ಅನೇಕ ವಿಷಯಗಳನ್ನೊಳಗೊಂಡ ಪರಮೋತ್ಕೃಷ್ಟ ಮತ್ತು ಮನೋಹರವಾದ ಬಣ್ಣದ ಚಿತ್ರಗಳು 17 ನ್ನು ಇಟ್ಟು ಅಂದವಾಗಿ ತಯಾರಿಸಿದ ದೊಡ್ಡ ಸೈಜಿನ ಗಟಿತ್ತ ಷೀಟು ಕ್ಯಾಲೆಂಡರ್	೧ ಕ್ಕೆ 1 — 0	100 ಕ್ಕೆ 2— 0—0
೨	9½ × 4½ ಸೈಜಿನ ಪಾಕೆಟ್ ಕ್ಯಾಲೆಂಡರ	೭೦ ಕ್ಕೆ 1 — 4 — 0	100 ಕ್ಕೆ 4—12—0,
೩	5½ × 1½ ಸೈಜಿನ ಇಂಗ್ಲೀಷ್ ಪಾಕೆಟ್ ಕ್ಯಾಲೆಂಡರ್	13 ಕ್ಕೆ 0 —11—0	25 ಕ್ಕೆ 1—11—0
೪	ಅನೇಕ ಬಣ್ಣಗಳಿಂದ ರಚಿತವಾದ ಪ್ರೆಸ್ಸಿನಲ್ಲಿ ಅಂದವಾಗಿ ಪ್ರಿಂಟಾದ 10 × 11 ಸೈಜಿನಲ್ಲಿ ಈಶ್ವರ ಪಾರ್ವತಿ ಗಣಪತಿ ಸಂಗೀತಮೇಳವಿರುವ ಚಿತ್ರದ ಕ್ಯಾಲೆಂಡರು	1 ಕ್ಕೆ — 4—0	12 ಕ್ಕೆ 1 — 3—0,
5	15 × 2½ ಸೈಜಿನಲ್ಲಿ ಪಟ್ಟ ಅಕ್ಷರದಿಂದ ಪ್ರಿಂಟಾಗಿರುವ ಶಿಂಗಳಿಗೆ 1 ಷೀಟಿನ ತ ಹರಿಯುವ ವಾಲ್ ಕ್ಯಾಲೆಂಡರ್	1 ಕ್ಕೆ 0— 4 — 0	12 ಕ್ಕೆ 2— 1—0

೧೦ ಆಣೆ ರವಾನಿಸಿದವರಿಗೆ ಮೇಲ್ಕಂಡ 5 ನಮೂನೆ ಕ್ಯಾಲೆಂಡರನ್ನು ಮಾದ್ರಿಗಾಗಿ ಫ್ರೀ ಪೋಸ್ಟಲ್ ಮೂಲಕ ರವಾನಿಸಲಾಗುತ್ತೆ, ಮೇಲ್ಕಂಡ ಪ್ರಕಾರ ವಿತರಣೆ ಬೇಕಾಗುವ ಕ್ಯಾಲೆಂಡರುಗಳಿಗೆ ಆಗುವ ಪೂರ್ತಿ ಹಣವನ್ನು ರವಾನಿಸಿದಲ್ಲಿ ಪೋಸ್ಟಲ್ ಪಾರ್ಸಲ್ ದ್ವಾರ ಎತ್ತು ವಿಲಾಸಕ್ಕೆ ಸರಿಯಾಗಿ ರವಾನಿಸಲಾಗುತ್ತೆ ವಿ ಪಿ ಮೂಲಕ ಕ್ಯಾಲೆಂಡರುಗಳನ್ನು ರವಾನಿಸ ಪೂರಿಂದ ಪೋಸ್ಟೇಜು ದುಬಾರಿಯಾಗುತ್ತೆಯಾದ್ದರಿಂದ ವಿ ಪಿ ಮೂಲಕ ರವಾನಿಸಲು ಬರೆಯತಕ್ಕ ಆರ್ಡರುಗಳಿಗೆ ಮುಂಚಿತವಾಗಿಯೇ ಹಣ ಕಳುಹಿಸಿ.

ಕ್ಯಾಲೆಂಡರುಗಳು ಮುಗಿದನಂತರ ಬರತಕ್ಕ ಆರ್ಡರುಗಳನ್ನು ಸೋದ ನಂಬಿದಂತೆ ವಾಪಸ್ ಮಾಡಲಾಗುತ್ತೆ

ಮುನಿಯಾರ್ಡರ್ ರವಾನಿಸುವ ವಿಳಾಸ — ಎಂ ಎಸ್ ಸಿದ್ದಪ್ಪ ಅಂಡ್ ಬ್ರದರ್ಸ್,

[0—4] ಸಾರ್ವೋನಿಯಂ ವ್ಯಾಪಾರಿಗಳು, ಮೈಸೂರು

ವೀರಶೈವಮತಗ್ರಂಥಗಳು.

ಶಿವಾಧಿಕ್ಯಶಿಖಾಮಣಿಃ.

ಪ್ರತಿ ೧ ಕ್ಕೆ ಬೆಲೆ ೧-೨-೦

ಇದು ಚೋಳದೇಶದಲ್ಲಿ ಶ್ರೀಮದಪ್ಪಯ್ಯದೀಕ್ಷಿತರಿಗೂ ವೈಷ್ಣವ ಮತಸ್ಥನಾದ ವಿಜಯೀಂದ್ರತೀರ್ಥರಿಗೂ ನಡೆದ ಪ್ರತ್ಯಕ್ಷ ಚರಿತ್ರವಾಗಿದೆ ಇದರಲ್ಲಿ ಶಿವೋತ್ಕರ್ಷ, ಲಿಂಗಧಾರಣ, ಅಷ್ಟಾವರಣ ಊರ್ಧ್ವಪುಂಡ್ರನಿರಸನ, ವಿಷ್ಣುವೇತಾರಸಂಹಾರ ಶಂಖ ಚಕ್ರ ಮುದ್ರಾಧಾರಣ ನಿಷೇಧ ಪ್ರದೋಷಕಾಲದಲ್ಲಿ ವಿಷ್ಣುದರ್ಶನಧಿಕ್ಕಾರವೇ ಮೊದಲಾದ ಅಸಾಧಾರಣ ಗರಾಜ ನೂರು ವಿಷಯಗಳು ಸಪ್ರಮಾಣವಾಗಿ ಬೋಧಿಸಲ್ಪಟ್ಟಿವೆ ಈ ಗ್ರಂಥಕ್ಕೆ ಸರ್ವರಿಗೂ ತಿಳಿಯುವಂತೆ ಸ್ವಬುದ್ಧಿಯಿಂದ ಕನ್ನಡ ಟೀಕೆಯನ್ನು ಬರೆದಿದ್ದೇವೆ ಇದನ್ನು ವೀರಶೈವರು ಅವಶ್ಯವಾಗಿ ನೋಡಬೇಕಾಗಿದೆ.

ನ್ಯಾಯಶತಕಂ — ಇದರ ಪ್ರತಿಯೊಂದು ಶ್ಲೋಕದಲ್ಲಿ ಅಕ್ಕೃತ್ತಿಗೋಚರ, ಕಾಕತಾಳ ಮೊದಲಾದ ಒಂದೊಂದು ನ್ಯಾಯವನ್ನು ದಾಹರಿಸಿ, ವಿದ್ವಜ್ಜನರಿಗೆ ಆನಂದವನ್ನುಂಟುಮಾಡುವಂತೆ ಶಿವಾಧಿಕ್ಯವು ವರ್ಣಿಸಲ್ಪಟ್ಟಿದೆ ಪಾರಾಯಣಕ್ಕೆ ಅತ್ಯುತ್ತಮವಾಗಿದೆ. ಬೆಲೆ ೦ ೨ ೦

ವಿ. ಪಿ. ಖರ್ಚು ಪ್ರತ್ಯೇಕ.

ಶ್ರೀ ಸೋಮಶೇಖರಸ್ವಾಮಿಗಳು,

[12—5] ನವಾತ್ಮಿಕಾಯಮಠ, ಬಸಪ್ಪಾಜಿ ಗಾರ್ಡನ್, ಮೈಸೂರು.

ಉತ್ತಮವೀರಶೈವ ಗ್ರಂಥಗಳು

	ಕ್ರಯ	(ವಿ ಪಿ ಸೇರಿ)
ವೀರಶೈವ ಸಿದ್ಧಾಂತಶಿಖಾಮಣಿ	೧—೧೨—೦	೨— ೪—೦
ಪಂಡಿತಾರಾಧ್ಯಚರಿತಂ ೫ ಪ್ರತಿಕ		
ಇಗಲು ಸೇರಿದ ಪೂರ್ಣಗ್ರಂಥ	೫— ೦— ೦	೫—೧೨—೦
ಬಸವರಾಜವಿಜಯ	೧— ೨—೦	೧— ೪—೦
ಚನ್ನಬಸವೇಶವಿಜಯ	೧— ೬—೦	೧—೧೨—೦
ರೇವಣಸಿದ್ಧೇಶ್ವರ ಪುರಾಣ	೦ —೧೨—೦	೧— ೦—೦

ಕ್ಯಾಟಲಾಗ್ ತರಿಸಿ ನೋಡಿ,

ಆ॥ ವಿದ್ವಾನ್ ಎಚ್. ಆರ್. ಕರಿಬಸವಶಾಸ್ತ್ರಿ,

ಅಂಡ್ ಸನ್ಸ್.

ಗ್ರಂಥಪ್ರಸಿದ್ಧಿಕರ್ತರು, ಮೈಸೂರು

ಪ್ರಸಿದ್ಧ ಪತ್ರಿಕೆ.

ಸುಲ್ತಾನ್‌ಬತೇರಿ ಸಮೀಪದಲ್ಲಿರುವ ಷ್ಟೇಟ್ಸಿನ ... ಸಿಂದ 5000 ಅಡಿ ಸೋಡದ ನಾಟಗಳನ್ನು ಗಾಡಿ ಮತ್ತು ... ಸಾಗಿಸಲು ಇಷ್ಟವುಳ್ಳವರು ಟೆಂಡರುಗಳನ್ನು ಕಳಿಸಬ ಕೋರ ತಕ್ಕದ್ದು. ನಮ್ಮ ಆಫೀಸಿನಲ್ಲಿ ಕೆಲಸಗಾರರು ಬಿಟ್ಟು ಬೈಸುಸ್ತು ಬೇಕಾಗಿದೆ ಇಷ್ಟವುಳ್ಳವರು ಅರ್ಜಿ ಕಳುಹಿ ... ಎರಡು ಕಡೆಯವರು ಇಷ್ಟ ವುದು

ಮಾರಾಟಕ್ಕೆ ಸಿದ್ಧವಾಗಿದೆ.

ಸುಲ್ತಾನ್‌ಬತೇರಿ ಸಮೀಪದಲ್ಲಿ ಟಿ, ಕಾಫಿ, ಮೆಣಸು, ಕಿತ್ತಲೆ ತೋಟಗಳನ್ನು ಮಾಡುವ ಮತ್ತು ನಿಂಬೆ ಅಥವಾ ನೆಲ ಗಡಲೆಕಾಯಿಯನ್ನೂ ಬೆಳೆಯಲು ಅನುಕೂಲವಾದ ಜಮೀನು 50 ಎಕರೆಯಿಂದ 5,000 ಎಕರೆ ವರೆಗಿನ ಲಾಟುವಾರು ಕ್ರಯಕ್ಕೆ ದೊರೆಯುತ್ತದೆ.

ಈ ಮೇಲ್ಕಂಡ ವಿಷಯಗಳಿಗೆಲ್ಲ ಈ ಕೆಳಗಿನ ವಿಳಾಸಕ್ಕೆ ಬರೆಯುವುದು

ಇ ಕೆ ಪಾಲಿಯ, ಎಂ.ಎ,
ಇಸ್ಮಾಯಿಲ್ ಮನ್ಜಿಲ್,
ಗೌರ್ನಮೆಂಟ್ ಹೌಸ್ ಹತ್ತಿರ, ಮೈಸೂರು.

ಹರಾಜಿನ ಇಸ್ತಿಹಾರ್.

ಮೈಸೂರು ಕಾವೇರಿ ರೈಸ್‌ಮಿಲ್ ಪ್ರೊಪ್ರೈಟರ್ ಮ|| ಯಂ. ಶಿವರಾಮಯ್ಯನವರಿಂದ ಮೈಸೂರು ಬ್ಯಾಂಕಿಗೆ ಆಧಾರವಾಗಿ ಇರುವ ಸ್ವತ್ತುಗಳ ಪೈಕಿ ಸದರಿ ಮೈಸೂರಿನಲ್ಲಿರುವ ಬ್ಯಾಂಕ್ ಮ್ಯಾನೇಜರು ಮೇಲ್ಕಂಡ ಶಿವರಾಮಯ್ಯನವರಿಂದ ಪವರ್ ಆಫ್ ಅಟಾರ್ನಿಯನ್ನು (Power of Attorney) ಪಡೆದು ಈ ಕೆಳಗಿನ ಷೆಡ್ಯೂಲ್‌ನಲ್ಲಿ ಕಂಡ ಸ್ಥಿರಸ್ವತ್ತನ್ನು ತಾ|| 27-10-20 ನೇ ಭಾನುವಾರ ಪ್ರಾತಃಕಾಲ 8½ ಘಂಟೆಯ ಲಾಗಾಯಿತು ಬಹಿರಂಗವಾಗಿ ಸ್ವತ್ತಿನ ಬಳಿ ಹರಾಜು ಮಾಡುತ್ತಾರೆ ಇಷ್ಟವುಳ್ಳವರು ಧಡದರಖಾಸ್ತಿನಿಂದ ಈ ಕೆಳಗೆ ನಮೂದಿಸಿರುವ ಷರತ್ತುಗಳಿಗೆ ಅನುಮೋದಿಸಿ ಸ್ವತ್ತನ್ನು ಪಡೆಯಬಹುದು

ಷರತ್ತುಗಳು.

(1) ಹರಾಜಾದನಂತರ ಆಖೈರ್ ಬಿಡ್ಡನ್ನು ಹೆಡ್ಡಾಫೀಸ್ ಮಂಜೂರಾತಿಯಿಂದ ಖಾಯಂ ಮಾಡತಕ್ಕದ್ದಿರುತ್ತೆ

(2) ಆಖೈರು ಬಿಡ್‌ದಾರರು ಬಿಡ್ಡಿನ $\frac{1}{10}$ (ಹತ್ತನೆಯ ಒಂದು) ಭಾಗವನ್ನು ತಕ್ಷಣವೇ ಡಿಪಾಜಿಟ್ ಮಾಡಿ ಬಾಕಿ ಮೊಬಲಗನ್ನು ಹರಾಜು ಮಂಜೂರಾದ 15 ದಿವಸಗಳೊಳಗಾಗಿ ಪಾವತಿಮಾಡತಕ್ಕದ್ದು ತಪ್ಪಿದಲ್ಲಿ ಸ್ವತ್ತನ್ನು ದುಸ್ರಾ ಹರಾಜು ಮಾಡಲಾಗುತ್ತೆ ಅದರಿಂದುಂಟಾಗುವ ಎಲ್ಲಾ ನಷ್ಟಗಳಿಗೂ ಅವರೇ ಜವಾಬ್ದಾರರಾಗಿರತಕ್ಕದ್ದು

(3) ಖರೀದಿಪತ್ರದ ಮತ್ತು ರಿಜಿಸ್ಟ್ರಿ ವಗ್ಯೆರೆ ಖರ್ಚುಗಳನ್ನೆಲ್ಲಾ ಬಿಡ್‌ದಾರರೇ ವಹಿಸತಕ್ಕದ್ದು

(4) ಬಿಡ್‌ಗಳನ್ನು ಅಂಗೀಕರಿಸುವುದಕ್ಕೆ ಅಥವಾ ತಿರಸ್ಕರಿಸುವುದಕ್ಕೆ ಬ್ಯಾಂಕಿನವರು ಸಂಪೂರ್ಣ ಅಧಿಕಾರವುಳ್ಳವರಾಗಿರುತ್ತಾರೆ. ಹಾಗೆ ತಿರಸ್ಕರಿಸುವುದಕ್ಕೆ ಬ್ಯಾಂಕಿನವರು ಯಾವ ಕಾರಣಗಳನ್ನೂ ತಿಳಿಸಲಾಗುವುದಿಲ್ಲ

ಸ್ವತ್ತಿನ ತಪಸೀಲು

ಮೈಸೂರು ಚಾಮರಾಜಮೊಹಲ್ಲಾ ಲಕ್ಷ್ಮೀಪುರದಲ್ಲಿರುವ ಪೂರ್ವಕ್ಕೆ ರಸ್ತೆ ಪಶ್ಚಿಮಕ್ಕೆ ಕನ್ಸರ್‌ವೆನ್ಸಿ ಗಲ್ಲಿ ದಕ್ಷಿಣಕ್ಕೆ ಶ್ರೀನಿವಾಸ ರಾಘವಾಚಾರ್‍ಯರ ಬಂಗಲೆ ಮತ್ತು ಉತ್ತರಕ್ಕೆ ಅಡ್ವೊಕೇಟ್ ಸಿ ನರಸಿಂಹಯ್ಯನವರ ಬಂಗಲೆ ಈ ಮಧ್ಯೆ ಇರುವ ಪೂರ್ವಪಶ್ಚಿಮ 160 ಅಡಿ ದಕ್ಷಿಣೋತ್ತರ 170 ಅಡಿ ಮ್ಯುನಿಸಿಪಲ್ ನಂಬರ್ 25 ಉಳ್ಳ ಸೈಟು ಇದಕ್ಕೆ ಸೇರಿದ ಕಾಂಪೌಂಡು ಔಟ್‌ಹೌಸ್‌ಗಳು ಸಹ

ವಿ. ಎಲ್. ನಾರಣಯ್ಯ,
ಮ್ಯಾನೇಜರ್,
ಮೈಸೂರು ಬ್ಯಾಂಕ್ ಲಿಮಿಟೆಡ್, ಮೈಸೂರು.

ಮೈಸೂರು ಸ್ಟಾರ್.

೧೯೨೦ನೆಯ ಇಸವಿ ಅಕ್ಟೋಬರ್ ತಾ|| ೨೩ನೆಯ ಶನಿವಾರ

NON-BRAHMIN CONFERENCE PRESIDENT'S ADDRESS.

(Continued from last issue)

It may, however, be said to the credit of our non-Brahmin friends here that they have been true to Mr Basaviah's ideals and they in their own humble way tried during all *these years of varying fortunes to keep up* the torch lit by Mr. Basaviah burning. We do not deny that his followers have not kept up to the same spirit of self-effacement and often personal jealousies and consideration ... upper hand but on the whole the non-Brahmins have stood loyally by the mission of the movement. Turning to the question of the representation of the non-Brahmin communities in the public services he said it was their fundamental birthright to claim an adequate share. He asked: Just imagine what it means to you to have as your administrators those who start with the presumption that they are a superior race, that they form the cream of the earth and that all other human mortals must bow in humble reverence, whatever their culture, character, position, wealth and social standing may be." He was astonished that the very monopolists who decried the non Brahmin cry for fair distribution of offices were themselves concentrating all their activities on these official posts. He never could believe all that ... and hypocrisy." He said that since 1917 the monopolists are more strongly entrenched in services than ever. His words on the future of Mysore are really invaluable. The problems of British India are peculiar to its ... the difficulties and complexities of those problems cannot be associated with conditions in the States and the methods pursued in one place are utterly unsuited to the other. *To make a pale imitation of political institutions* in British India to organise branches of "congresses" to bring about 'hartals' to celebrate 'national weeks" and to observe heroes' days' is either to make one of ludicrous in the eyes of all thoughtful people or to wantonly try to deceive the people and play upon their feelings and sentiment. He then paid a splendid tribute to His Highness' rule and said: Mysore has rightly been considered a Model State and prestige of its ruler and the sanity of its people stand on a very high pedestal indeed to-day in the international world and in trans-continental India." "How sad" he exclaimed "is it to reflect that there are traducers who in their hatred and petty mindedness are prepared to drag into the mire the good name and fame of your State and are sedulously spreading through subsidised agencies the most diabolical untruths of your State and its activities." He *wanted them* 'to expose the *hollow* agitation of those who smile and smirk before authority and yet pen the most vitriolic untruths under the safe cover of anonymity. He made a passionate plea for Hindu Muslim unity and for a blessed oblivion of the past. He deprecated quack remedies provided to a gullible public by a certain variety of politicians. He was sure that people in the long run would be sick of these movements of ephemeral glory and put their faith in democratic movements like this which were built on the solid foundations of earnest and steady work. He pleaded finally for those finest qualities of discipline, zeal and patience which make for steady and strenuous work which will be rewarded by the larger and richer national life which will result from the awakening of the masses. Mr Ramaswamy Mudaliar has earned the undying gratitude of the people of the State for the fine lead *he has given to Mysore and let us* hope that the non Brahmin movement in Mysore will flourish here to the great good of the entire State.

ಬ್ರಾಹ್ಮಣೇತರಮಹಾಸಭಾಧ್ಯಕ್ಷರ ಭಾಷಣ

ಅಧ್ಯಕ್ಷರಾದ ಮ|| ರಾಮಸ್ವಾಮಿ ಮೊದಲಿಯಾರ್‌ರವರ ಭಾಷಣದಲ್ಲಿ, ಪ್ರಸಕ್ತ ರಾಜಕೀಯ ಪರಿಸ್ಥಿತಿಯು ಯಥಾರ್ಥವಾಗಿಯೂ ಮನೋಜ್ಞವಾಗಿಯೂ ವರ್ಣಿಸಲ್ಪಟ್ಟಿರುವುದರಿಂದ ಈ ಭಾಷಣವು ಸ್ಮರಣೀಯವಾಗಿರುವುದು. ಇದರ ಕನ್ನಡ ಅನುವಾದಪ್ರಕಟನವು ಬೇರೊಂದು ಕಡೆ ಆರಂಭಿಸಲ್ಪಟ್ಟಿರುವುದರಿಂದ ಅದರಲ್ಲಿ ಕಂಡ ಮುಖ್ಯವಿಷಯವನ್ನು ಕುರಿತು ಇಲ್ಲಿ ಪ್ರಸ್ತಾಪಿಸುತ್ತೇವೆ. ಮ|| ರಾಮಸ್ವಾಮಿ ಮೊದಲಿಯಾರ್‌ರವರು ಕೆಲ ವರ್ಷಗಳಿಂದಲೂ ನಮ್ಮ ಮೈಸೂರಿನ ರಾಜಕೀಯ ವಿಚಾರವನ್ನು ಬಹಳ ಆಸಕ್ತಿಯಿಂದ ಅರಿತುಕೊಂಡು ಅದರ ಮೇಲಿನ ತಮ್ಮ ಖಚಿತವಾದ ಅಭಿಪ್ರಾಯವನ್ನು ಕೊಟ್ಟಿರುವರು. ಗತಿಸಿದ ಬಸವಯ್ಯನವರ ಮತ್ತು ಇತರ ರಾಜರನ ಉಪಕಾರವನ್ನು ವಿಶೇಷವಾಗಿ ಸ್ಮರಿಸಿ, ಆತ್ಮೀಕ ಶ್ರದ್ಧಾಭಕ್ತಿಯನ್ನು ಅರ್ಪಿಸಿ ... ಬ್ರಾಹ್ಮಣೇತರರ ಚಳುವಳಿಯ ಪ್ರಯತ್ನವನ್ನು ಕ್ರಮವಾಗಿ ಪ್ರಸ್ತಾಪಿಸುವಾಗ್ಗೆ, ಇದು ಬಹಳ ವರ್ಷಗಳಿಂದಲೂ ಇರುವ ಅಸಮಾಧಾನದಿಂದಲೇ ನಿಕೃಷ್ಟವಾದ ಒಂದು ಸ್ಥಿತಿಯಲ್ಲಿ ಹುಟ್ಟಿದುದರಿಂದ ಇದನ್ನು ಕಡೆಗಣಿಸಲಿಕ್ಕಾಗುವುದಿಲ್ಲವೆಂದೂ, ಸತ್ಯವೂ ಧರ್ಮವೂ ಇದ ನಿಜತತ್ವವುಳ್ಳದಾಗಿ ದುಷ್ಟರಿಂದಲೂ ನಿಂದನೆಗೆ ವ್ಯರ್ಥವಾಗುವುದೆಂದು ಹೇಳಿರುವರು. ಎಲ್ಲರಿಗೂ ಒಂದೇ ವಿಧವಾದ ಸಮಯಾನುಕೂಲವಿರಬೇಕು, ಪ್ರತಿಯೊಬ್ಬನಿಗೂ ಅನುಕೂಲವಾಗಬೇಕಲ್ಲದೆ ಯಾರಿಗೂ ಅನ್ಯಾಯವಾಗಬಾರದು ಎಂಬುದೇ ಅವರ ಮುಖ್ಯ ತತ್ವವಾಗಿರುತ್ತದೆ. ಎರಡು ವರ್ಗದವರ ಸಾಮಾಜಿಕ ಮತ್ತು ರಾಜಕೀಯ ವಿಚಾರಗಳಲ್ಲಿ ಈಗಿರುವ ಸಂಪೂರ್ಣ ಅಸಮಾನ ಪರಿಸ್ಥಿತಿಯಿಂದ ಉಭಯರಿಗೂ ಕೆಡಕಾಗುವುದಲ್ಲದೆ, ಒಬ್ಬರು ನೀತಿಭ್ರಷ್ಟರಾಗುವರು, ಇನ್ನೊಬ್ಬರು ಸ್ಥಾನಭ್ರಷ್ಟರಾಗುವರು ಎಂದು ಅವರು ಹೇಳಿರುವುದು ಅಕ್ಷರಶಃ ನಿಶ್ಚಯವು. ನಾವು ಪ್ರಜಾಸ್ವಾತಂತ್ರ್ಯಕ್ಕಾಗಿ ಸೇವಿಸುತ್ತಿದ್ದೇವಲ್ಲದೆ ದೇಶದಲ್ಲಿ ಬೆಳೆಯುತ್ತಿರುವ ಅನಿಷ್ಟವನ್ನು ಕೂಡಲೆ ನಿಗ್ರಹಿಸದಿರುವುದರಿಂದುಂಟಾಗುವ ಕ್ಷೋಭೆಯನ್ನು ತಪ್ಪಿಸುತ್ತಿದ್ದೇವೆಂದೂ, ಬ್ರಾಹ್ಮಣೇತರರ ಪ್ರಯತ್ನದ ರೀತಿಯನ್ನೂ, ಅದರಿಂದಾಗಿರುವ ಪ್ರಯೋಜನವನ್ನೂ ಕುರಿತು ಹಲವುವಾಗ್ಗೆ, ಉತ್ಪ್ರೇಕ್ಷಿತ ವಾಗ್ದಾನಗಳು ಮಾಡಲ್ಪಡುತ್ತಿಲ್ಲವೆಂಬುದು ಹಿಂದಿನ ನಡವಳಿಕೆಯಿಂದ ವ್ಯಕ್ತವಾಗುತ್ತದೆಂದೂ, ವಿದ್ಯಾಬುದ್ಧಿಯಿಲ್ಲದೆ ಹಿಂದುಳಿದಿರುವ ಪ್ರತಿಯೊಂದು ಸಂಗಡಕ್ಕೂ ಅದಕ್ಕೆ ತಕ್ಕ ಸ್ಥಾನವನ್ನು ಸಂಪಾದಿಸಿ ಕೊಟ್ಟಿರುತ್ತೇವಲ್ಲದೆ ಸಾಮಾಜಿಕ ಪರಿಸ್ಥಿತಿಯು ಉತ್ತಮಗೊಳ್ಳಲು ತಕ್ಕ ಮಾರ್ಗವನ್ನು ಕಲ್ಪಿಸಿರುತ್ತೇವೆಂದೂ ಹೇಳಿರುವರು. ಮ|| ಮೊದಲಿಯಾರರು ಹೇಳಿರುವ ಮೇರಿಗೆ, ಕಾಲಾಂತರದಿಂದಲೂ ಯಾರ ಹಣದಿಂದ ಅನೇಕ ಉಪಯುಕ್ತಕಾರ್ಯಗಳು ನಡಸಲ್ಪಡುತ್ತಿದ್ದಾಗ್ಯೂ ಅವರ ಪ್ರಯೋಜನಾರ್ಥವಾಗಿ ಈವರೆಗೆ ಯಾವ ಕಾರ್ಯವೂ ಲೇಶಮಾತ್ರ ಮಾಡಲ್ಪಟ್ಟಿಲ್ಲವೋ ಅಂತಹ ಉಪೇಕ್ಷಿತ ... ಮವಾಸಿಗಳ ಕಡೆಗೆ ಲಕ್ಷ್ಯವಿಡುವಂತೆ ಮಾಡಿರುವುದೇ ಬ್ರಾಹ್ಮಣೇತರರ ಪ್ರಯತ್ನದ ಮಹಾಫಲವಾಗಿದೆ. ಸರ್ಕಾರಿಯುದ್ಯೋಗಗಳಲ್ಲಿ ಬ್ರಾಹ್ಮಣೇತರರಿಗೆ ನ್ಯಾಯವಾಗಿ ಸಲ್ಲಬೇಕಾದ ... ನಗಳನ್ನು ಕುರಿತು ಪ್ರಸ್ತಾಪಿಸುವಾಗ್ಗೆ, ಸರ್ಕಾರಿಯುದ್ಯೋಗ ... ಯೋಗದ ವಿಚಾರವಾಗಿ ಕೊಡಲ್ಪಟ್ಟಿದ್ದ 7 ವರ್ಷ ಕಾಲಾವಧಿಯು ಸಂಪೂರ್ಣವಾಗಿ ಘಟಿಸಿರುತ್ತದಯೆ ಎಂದು ಪ್ರಶ್ನಿಸಿ ಬ್ರಾಹ್ಮಣೇತರರ ಮುಖಂಡರುಗಳು ಕೈ|| ಬಸವಯ್ಯನವರ ಧ್ಯೇಯವನ್ನು ಅನುಸರಿಸಿ ಕೆಲಸಮಾಡದಿದ್ದುದಕ್ಕಾಗಿ ತಮ್ಮ ಅಸಮಾಧಾನವನ್ನು ಸೂಚಿಸಿರುತ್ತಾರೆ ವಂಶಪಾರಂಪರ್ಯವಾಗಿ ಉದ್ಯೋಗಾದಿ ಸೌಭಾಗ್ಯಗಳನ್ನು ಅನುಭವಿಸುತ್ತಿರುವವರ ಕೋಪತಾಪಗಳನ್ನು ಒಂದು ದಿವಸದ ಬಾಳಿನ ಮತ್ತು ಬಿಡಗಿನ ಅಧಿಕಾರ ಮುಕ್ತರಾದವರ ನಿರ್ಘೃಣವಾದ ವಾಕ್ಪ್ರಹರಗಳನ್ನೂ ... ಶಾಂತಿಯಿಂದಲೂ ಸ್ಥೈರ್ಯದಿಂದಲೂ ಸಹಿಸಿಕೊಂಡು, ಮತ್ತು ಮೈಸೂರಿನ ಎಷ್ಟೊಂಡಗಾರರ ... ಹಾರವನ್ನು ... ಮನಸ್ಯವಂಬ ಲಂಚಾನಾಗಿವನ್ನು ... ಪ್ರಯುಕ್ತಿಸುತ್ತಿದ್ದಾರೆಂದು ಮಿತಿಮೀರಿದ ಹೂಗ ... ಹೋಗಿದ್ದ ಮುಖ್ಯ ರಾಜ್ಯಾಧಿಕಾರಿಯು ... ವನ್ನು ಮುಗುಳುನಗೆಯಿಂದ ಸ್ವೀಕರಿಸಿಕೊಂಡು ... ಇಲ್ಲದೆ ತಾವೊಬ್ಬರೇ ಹೋರಾಡುತ್ತಿದ್ದ ... ಸ್ವಾರ್ಥತ್ಯಾಗಿಯಾದ ಕೈ|| ಬಸವಯ್ಯನವರ ಗುಣವನ್ನು ... ನೂ ಅನುಕರಿಸಿರುವರು ಓ! ಶ್ರೀ ಚಾಮುಂಡೇಶ್ವರಿಯ ... ಕೃಪಾಪಾತ್ರವಾದ ಈ ದೇಶದಲ್ಲಿ ಆ ಮಹಾಪುರುಷನ ಹೆಸರು ಸಾರ್ವದಾ ನೆನಪಿನಲ್ಲಿರುವಂತೆ ಮಾಡಲ್ಪಡಬೇಕು, ಮತ್ತು ಅವನ ಉದ್ದಿಷ್ಟ ಕಾರ್ಯಸಾಧನ ಪ್ರಯತ್ನವನ್ನು ಅತನ ಅನುಯಾಯಿಗಳು ಧೈರ್ಯದಿಂದಲೂ ಆತ್ಮತ್ಯಾಗಬುದ್ಧಿಯಿಂದಲೂ ಮಾಡದಿರುವುದು ಅತ್ಯಂತ ಶೋಚನೀಯವಾಗಿದೆಯಾದುದರಿಂದ, ಅವರುಗಳಿಗೆ ಆ ಸದ್ಬುದ್ಧಿಯನ್ನು ಅನುಗ್ರಹಿಸೆಂದು ಬೇಡಿರುವರು

ಇಲ್ಲಿನ ಬ್ರಾಹ್ಮಣೇತರ ಮಿತ್ರರುಗಳು ಕೈ|| ಬಸವಯ್ಯನವರ ಧ್ಯೇಯವನ್ನನುಸರಿಸಿ ನಿಜವಾಗಿ ನಡೆದುಕೊಳ್ಳುವವರಾಗಿರುವರಲ್ಲದೆ ಕೈ|| ಬಸವಯ್ಯನವರಿಂದ ಹೊತ್ತಿಸಲ್ಪಟ್ಟ ಜ್ಯೋತಿಯನ್ನು ನಂದಿಸದೆ ತಮ್ಮ ದೈಷ್ಟಪರಿವರ್ತನಕಾಲವಾದ ಕೆಲ ವರ್ಷಗಳಿಂದಲೂ ಕಾಪಾಡಿಕೊಂಡು ಬರುತ್ತಿರುವರು ಕೈ|| ಬಸವಯ್ಯನವರ ಅನುಯಾಯಿಗಳು ಸ್ವಾರ್ಥತ್ಯಾಗದಲ್ಲಿ ಹಿಂದಿನ ಉತ್ಸಾಹವನ್ನು ತೋರಿಸುತ್ತಿಲ್ಲವೆಂಬುದನ್ನೂ, ಅನೇಕಸಲ ವ್ಯಕ್ತಿಪ್ರೇರಣಾಸೂಯೆಯೂ ದುರಭಿಮಾನವೂ ಪ್ರಾಮುಖ್ಯವಾಗಿರುತ್ತವೆಂಬುದನ್ನೂ ನಾವು ಅಲ್ಲಗಳೆಯುವುದಿಲ್ಲ ಆದರೆ ಒಟ್ಟಿನಲ್ಲಿ ಬ್ರಾಹ್ಮಣೇತರರು ಈ ಪ್ರಯತ್ನದಲ್ಲಿ ನಿಜವಾಗಿಯೂ ಅಭಿಮಾನಶಾಲಿಗಳಾಗಿರುತ್ತಾರೆನ್ನುವುದರಲ್ಲಿ ಸಂದೇಹವಿಲ್ಲ. ಸರ್ಕಾರಿಯುದ್ಯೋಗಗಳಲ್ಲಿ ಬ್ರಾಹ್ಮಣೇತರ ಸಂಗಡದವರ ಪ್ರಾತಿನಿಧ್ಯವಿರಬೇಕೆಂದು ಕೇಳಲು ಅವರಿಗೆ ಜನ್ಮಸಿದ್ಧವಾದ ಹಕ್ಕಿರುತ್ತದೆಂದು ಮತ್ತು ತಾವು ಶ್ರೇಷ್ಠವರ್ಗದವರೆಂದೂ, ಭೂಮಿಯ ಸತ್ವಾಂಶವೆಂದೂ ಇತರ ಮನುಷ್ಯಜೀವಿಗಳೆಲ್ಲರೂ ಎಷ್ಟೇ ವಿದ್ಯಾವಂತರಾಗಿಯೂ, ಗುಣಾಢ್ಯರಾಗಿಯೂ, ಉನ್ನತಸ್ಥಾನಾಪನ್ನರಾಗಿಯೂ, ಧನಾಢ್ಯರಾಗಿಯೂ, ಸಮಾಜದಲ್ಲಿ ಗಣ್ಯರಾಗಿಯೂ ಇದ್ದಾಗ್ಯೂ ಅವರು ತಮ್ಮಲ್ಲಿ ಪೂಜ್ಯಬುದ್ಧಿಯಿಂದ ತಲೆಬಾಗಿ ನಡೆದುಕೊಳ್ಳಬೇಕೆಂದು ಭಾವಿಸಿಕೊಂಡಿರುವವರು ನಿಮ್ಮ ಅಧಿಕಾರಿಗಳಾಗಿರುವುದರಿಂದ ನಿಮಗೆ ಯಾವ ಪ್ರಯೋಜನವಾಗುತ್ತದೆಂಬುದನ್ನು ನೀವು ಊಹಿಸಿನೋಡಿ ಎಂದು ಹೇಳಿರುತ್ತಾರೆ. (ಸರ್ಕಾರಿಯ

ಸ್ಥಿತಿಗತಿಗಳನ್ನು ಸ್ವತಂತ್ರ [illegible] ನೇಮಿಸಿಕೊಡಬೇಕೆಂದು ಪ್ರಸ್ತಾಪಿಸಿದ್ದ ಕೇಳಿಕೆಯನ್ನು ಬಿಸಾಡಿಬಿಟ್ಟ [illegible] (ಸಂಸ್ಥಾನಾಧಿಪತಿಗಳಿಂದ) [illegible] ತಮ್ಮ [illegible] ಸಾಧಿಸುತ್ತಿರುವುದಕ್ಕಾಗಿ ಚಕ್ರವರ್ತಿಗಳು ವಿಶೇಷವಾಗಿ ಸೂಚಿಸಲ್ಪಟ್ಟಿರುವರು. [illegible] ಕಪಟಮಾತುಗಳನ್ನು ಆದರಿಸದೇ [illegible] ಎತ್ತಿಹಿಡಿದವರು ತಮ್ಮ ಸಂಸ್ಥಾನಗಳು ಇತರರ ವಶವಾಗದಂತೆ ಮೊದಲಿಗಿಂತಲೂ ಬಹಳ ಬಲವಾಗಿ ಭದ್ರಪಡಿಸಿಕೊಂಡಿರುವರೆಂದು ಹೇಳಿರುತ್ತಾರೆ. ಮೈಸೂರಿನ ಭಾವಿಸ್ಥಿತಿಯನ್ನು ಕುರಿತು ಅವರು ಹೇಳಿರುವ ಮಾತುಗಳು ನಿಜವಾಗಿಯೂ ಅಮೋಘವಾದುವು. "ಬ್ರಿಟಿಷ್ ಇಂಡಿಯಾದ ಸಮಸ್ಯೆಗಳು ಅಲ್ಲಿಗೇ ಅಸಾಧಾರಣವಾಗಿರುವುದರಿಂದ, ಆ ಸಮಸ್ಯೆಗಳ ತೊಂದರೆಗಳನ್ನೂ ತೊಡಕುಗಳನ್ನೂ ದೇಶೀಯ ಸಂಸ್ಥಾನಗಳ ಸ್ಥಿತಿಗತಿಗಳಿಗೆ ಹೋಲಿಸುವುದಕ್ಕಾಗುವುದಿಲ್ಲ ಮತ್ತು ಒಂದು ಸ್ಥಳದಲ್ಲಿ ಅನುಸರಿಸಲ್ಪಡುವ ರೀತಿಗಳು ಇನ್ನೊಂದು ಸ್ಥಳದವರಿಗೆ ಸಂಪೂರ್ಣವಾಗಿ ಸರಿಹೋಗುವುದಿಲ್ಲ. ಬ್ರಿಟಿಷ್ ಇಂಡಿಯಾದಲ್ಲಿರತಕ್ಕ ರಾಜಕೀಯ ಸಂಸ್ಥೆಗಳ ನಿಸ್ತೇಜವಾದ ಅನುಕರಣಮಾಡುವುದು, ಕಾಂಗ್ರೆಸ್ಸಿನ ಶಾಖೆಗಳನ್ನು ಸ್ಥಾಪಿಸುವುದು, ಹರತಾಳವನ್ನು ಮಾಡುವುದು, ವೀರಪುರುಷರ ಜಯಂತಿಯನ್ನು ಮಾಡುವುದು, ವಿವೇಕಿಗಳ ಪರಿಹಾಸ್ಯಕ್ಕೆ ತಾನಾಗಿ ಗುರಿಯಾಗುವುದಕ್ಕಾಗಿ ಅಥವಾ ಮನಃಪೂರ್ವಕವಾಗಿ ಜನರನ್ನು ಮೋಸಪಡಿಸಿ ಅವರಿಗೆ ಮನೋವ್ಯಥೆಯನ್ನುಂಟುಮಾಡುವುದಕ್ಕಾಗಿ" ಎಂದು ಹೇಳಿ ಶ್ರೀಮನ್ಮಹಾರಾಜರವರ ಆಳ್ವಿಕೆಯನ್ನು ಬಹಳವಾಗಿ ಪ್ರಶಂಸಿಸುತ್ತ "ಮೈಸೂರು ಮಾದರಿ ಸಂಸ್ಥಾನವೆಂದು ಭಾವಿಸಲ್ಪಟ್ಟಿರುವುದು ಯುಕ್ತವಾಗಿದೆ ಮತ್ತು ಅದರ ಪ್ರಭುಗಳ ಕೀರ್ತಿಯೂ ಪ್ರಜೆಗಳ ಸ್ಥಿರಬುದ್ಧಿಯೂ ಪ್ರಪಂಚದ ಎಲ್ಲ ಜನಾಂಗಗಳ ದೇಶದಲ್ಲೂ ಇತರ ಖಂಡಗಳಲ್ಲೂ ಕೇಂದ್ರಸ್ಥಾನವನ್ನು ಹೊಂದಿರುತ್ತವೆ. ಇಂತಹವರಲ್ಲಿ ಕೆಲ ದ್ರೋಹಿಗಳು ತಮ್ಮ ಅಸೂಯೆಯಿಂದಲೂ ಅಲ್ಪಬುದ್ಧಿಯಿಂದಲೂ ನಿಮ್ಮ ಸಂಸ್ಥಾನದ ಖ್ಯಾತಿಯನ್ನು ಕೆಡಿಸಲು ಪ್ರಯತ್ನಿಸಿ ಕೆಲ ಪತ್ರಿಕೆಗಳಿಗೆ ಲಂಚವನ್ನು ಕೊಟ್ಟು ತನ್ಮೂಲಕ ನಿಮ್ಮ ಸಂಸ್ಥಾನದ ಮತ್ತು ಅದರ ಆಡಳಿತದ ವಿಷಯವಾಗಿ ಅತ್ಯಂತ ಅಧಮವಾದ ಮತ್ತು ಹೇಯವಾದ ಸುಳ್ಳು ಸಂಗತಿಗಳನ್ನು ಮನಸ್ವೀ ಹರಡುತ್ತಿರುವುದು ಮಹಾ ವ್ಯಸನಕರವಾಗಿದೆ. ಕೆಲರು ಅಧಿಕಾರಿಗಳ ಮುಂದೆ ಬಹಳ ವಯ್ಯಾರದಿಂದಲೂ, ಮುಗುಳುನಗೆಯಿಂದಲೂ ಆಪ್ತರಂತೆ ನಟಿಸುತ್ತಿದ್ದು ಒಳಗೊಳಗೇ ಅವರಿಗೆ ವಿರೋಧವಾಗಿ ಸುಳ್ಳುಸಂಗತಿಗಳನ್ನು ಪತ್ರಿಕೆಯಲ್ಲಿ ತಮ್ಮ ಹೆಸರನ್ನು ಕೊಡದೆ ಬರೆಯುತ್ತ ಹುರುಳಿಲ್ಲದ ಆಂದೋಳನವನ್ನು ಮಾಡುತ್ತಿರುವವರು ಬೈಲಿಗೆಳೆಯಲ್ಪಡಬೇಕು" ಎಂದು ಸೂಚಿಸಿರುತ್ತಾರೆ. ಅಲ್ಲದೆ ಹಿಂದು ಮಹಮ್ಮದೀಯರ ಐಕಮತ್ಯವು ಅತ್ಯಾವಶ್ಯಕವೆಂದೂ ಹಿಂದೆ ನಡೆದುಹೋದ ಸಂಗತಿಯನ್ನು ಮರೆತುಬಿಡಬೇಕೆಂದೂ ಬಹಳ ಆವೇಶದಿಂದ ಹೇಳಿ, ಅತಿ ಸುಲಭವಾಗಿ ಮೋಸಹೋಗುವ ಸ್ವಭಾವದ ಜನರಿಗೆ ಅಯುಕ್ತವಾದ ಪರಿಹಾರೋಪಾಯವನ್ನು ಹೇಳಿಕೊಡುತ್ತಿರುವುದನ್ನು ಖಂಡಿಸಿರುತ್ತಾರೆ. ಕಡೆಯಲ್ಲಿ ಜನರು ಒಂದು ದಿನದ ಮಟ್ಟಿಗೆ ಸಂತೋಷವನ್ನುಂಟುಮಾಡುವ ಪ್ರಯತ್ನಗಳಲ್ಲಿ ಜಿಗುಪ್ಸೆಯನ್ನು ಹೊಂದಿ, ಅತ್ಯಾಸಕ್ತಿಯಿಂದಲೂ ಸ್ಥಿರಬುದ್ಧಿಯಿಂದಲೂ ಕೆಲಸಮಾಡುವುದನ್ನು ಮುಖ್ಯಾಧಾರವಾಗಿಟ್ಟುಕೊಂಡು ಕೈಕೊಳ್ಳಲ್ಪಟ್ಟಿರುವ ನಮ್ಮ ಪ್ರಜಾಧಿಪತ್ಯ ಸಾಧನ ಪ್ರಯತ್ನಗಳಲ್ಲಿ ವಿಶ್ವಾಸವುಳ್ಳವರಾಗುವುದರಲ್ಲಿ ಸಂಶಯವಿಲ್ಲವೆಂದೂ, ಜನರನ್ನು ಜಾಗ್ರತೆಗೊಳಿಸಿ ಸ್ವದೇಶಸ್ವಾತಂತ್ರ್ಯತೆಯಲ್ಲಿ ಆಸಕ್ತಿಯುಳ್ಳವರನ್ನಾಗಿ ಮಾಡುವುದಕ್ಕೆ ಎಚ್ಚರಿಕೆಯಿಂದಲೂ, ಸಾಹಸದಿಂದಲೂ ಕೆಲಸಮಾಡಲು ಸಂಯೋಜನಾಶಕ್ತಿಯೂ, ದೃಷ್ಟಿಯೂ ತಾಳ್ಮೆಯೂ ಅತ್ಯಾವಶ್ಯಕವೆಂದು ಒತ್ತಿ ಹೇಳಿರುತ್ತಾರೆ. ಮ|| ರಾಮಸ್ವಾಮಿ ಮೊದಲಿಯಾರರು ಮೈಸೂರಿಗೆ ಉತ್ಕೃಷ್ಟ ಮಾರ್ಗವನ್ನು ತೋರಿಸಿಕೊಟ್ಟಿರುವುದಕ್ಕಾಗಿ ಅವರು ಈ ಸಂಸ್ಥಾನದ ಪ್ರಜೆಗಳ ಚಿರಕೃತಜ್ಞತೆಗೆ ಪಾತ್ರರಾಗಿರುವರು. ನಮ್ಮ ಮೈಸೂರಿನಲ್ಲಿ ಬ್ರಾಹ್ಮಣೇತರರ ಪ್ರಯತ್ನವು ಅಭಿವೃದ್ಧಿಯನ್ನು ಹೊಂದಿ ತನ್ಮೂಲಕ ನಮ್ಮ ಸಂಸ್ಥಾನಕ್ಕೆಲ್ಲ ಮಹಾ ಪ್ರಯೋಜನವಾಗಲೆಂದು ನಾವು ಆಶಿಸುತ್ತೇವೆ.

ಶ್ರೀಮನ್ಮಹಾರಾಜರವರ ವಿಶೇಷ ದೈವಭಕ್ತಿ.

ಕಳೆದ ವರ್ಷ ಶ್ರೀಮನ್ಮಹಾರಾಜರವರು ಕೆಲ ಬಂಧುಗಳೊಡನೆಯೂ, ಸಂದರ್ಶಕರುಗಳೊಡನೆಯೂ ಕೊಯಮತ್ತೂರು ಡಿಸ್ಟ್ರಿಕ್ಟು ಕೊಳ್ಳೇಗಾಲ ತಾಲ್ಲೂಕಿಗೆ ಸೇರಿದ ಶ್ರೀ ಮಹಾದೇಶ್ವರ ಬೆಟ್ಟಕ್ಕೆ ದಿಗ್ವಿಜಯಮಾಡಿ, ಆ ಮಹಾಕ್ಷೇತ್ರದ ಪಾವಿತ್ರ್ಯವನ್ನು ಕಣ್ಣಾರ ಪರಾಮರ್ಶಿಸಿ ಸಂತುಷ್ಟರಾಗಿ ಆಗಾಗ್ಗೆ ಸಮಯವರಿತು ಅಲ್ಲಿಗೆ ಬಿಜಯಮಾಡಿ ಕೆಲ ದಿವಸ ನಿಂತು ಮಹಾಸ್ವಾಮಿಯ ಸೇವೆಯನ್ನು ಮಾಡಿ ಬರಲನುಕೂಲಿಸುವಂತೆ ಒಂದು ಕುಟೀರವನ್ನು ಕಟ್ಟಿಸಲೇರ್ಪಡಿಸಿದುದಲ್ಲದೆ, ತಮ್ಮ ತಾತಂದಿರಾದ ಕೃ|| ಮುಮ್ಮಡಿ ಶ್ರೀ ಕೃಷ್ಣರಾಜೇಂದ್ರ ಒಡೆಯರವರು ಶ್ರೀ ಮಹಾದೇಶ್ವರಸ್ವಾಮಿಯ ಸೇವಾರ್ಥವಾಗಿ ಒಪ್ಪಿಸಿದ್ದ ಭಂಗಾರದ ಕೊಳಗ, ರುದ್ರಾಕ್ಷಿ ಮಂಟಪ ಮತ್ತೆ ಕೆಲ ಆಭರಣಗಳು ಜೀರ್ಣವಾಗಿದ್ದುದರಿಂದ ಅವನ್ನು ಹೊಸದಾಗಿ ಮಾಡಿಸಿ ಒಪ್ಪಿಸಲು ಕರುಣಿಸಿಕೊಂಡಿದ್ದರು. ಅವುಗಳಲ್ಲಿ ರುದ್ರಾಕ್ಷಿ ಮಂಟಪವು ಮೊದಲೇ ರಚಿಸಲ್ಪಟ್ಟು ಕಳುಹಿಸಲ್ಪಟ್ಟಿತು. ಈಗ ಭಂಗಾರದ ಕೊಳಗವು ನೂತನವಾಗಿ ವಜ್ರ ರತ್ನಗಳ ಕೆತ್ತನೆಯ ಕೆಲಸಗಳಿಂದ ಮಾಡಿಸಲ್ಪಟ್ಟು [illegible] ದಿವಸ ಮೋಟಾರು ಲಾರಿಯ ಮೂಲಕ ಬಾಳ್ಳೆಬಿರುದುಗಳು ಛತ್ರಿ ಚಾಮರಗಳು ಹರಿಕಾರ ಗುಂಕಾರರುಗಳು [illegible] ಇತ್ಯಾದಿ ರಾಜಮರ್ಯಾದೆಯ ಸಲಕರಣೆಗಳಿಂದ ಶ್ರೀಮಹಾದೇಶ್ವರ ಬೆಟ್ಟಕ್ಕೆ ಕೊಂಡೊಯ್ಯಲ್ಪಟ್ಟು ಈ ದೀಪಾವಳಿ ಹಬ್ಬದ ದಿವಸ ನಡೆದ ಜಾತ್ರೆಯಲ್ಲಿ ಈ ಕೊಳಗವು ವಿಧ್ಯುಕ್ತವಾಗಿ ಶ್ರೀ ಸ್ವಾಮಿಗೆ ಧರಿಸಲ್ಪಟ್ಟಿತು. ಶ್ರೀ [illegible] ಬಂದು ಸೇರಿದ್ದರು. [illegible] ಈ ಕೊಳಗವು ಬಹು ಭಂಗಾರದ ತಗಡಿನಿಂದ [illegible] ಸುಂದರವಾಗಿಯೂ ಮಾಡಲ್ಪಟ್ಟು ಹಣೆಯಲ್ಲಿ ಶ್ರೀ ಪುಂಡ್ರ ಭಸ್ಮಕ್ಕೆ ಬದಲಾಗಿ ವಜ್ರಗಳೂ ಅದರ ಮಧ್ಯೆ ಗಂಧಕ್ಕೆ ಬದಲು ಹೆಚ್ಚಿನ ಗಾತ್ರದ ಕೆಂಪೂ ಅದರ ಸುತ್ತಲೂ ವಜ್ರಗಳೂ, ಶಿರದಲ್ಲಿ ಚಿನ್ನದ ಗಂಗೆಯೂ ಬೆಳ್ಳಿಯ ಚಂದ್ರನೂ ಕರ್ಣಕುಂಡಲಗಳಿಗೆ ವಜ್ರದ ಮಣಿಗಳೂ, ಒಡಲನ್ನು ಸುತ್ತಿಕೊಂಡಿರುವ ಸರ್ಪಕ್ಕೆ ವಜ್ರಕೆಂಪುಗಳೂ ಕೊಳಗದ ನೆತ್ತಿಯ ಮೇಲೆ ಒಂದಿರುವ ಸರ್ಪದ ಐದು ಹೆಡೆಗಳಿಗೂ ವಜ್ರ ಕೆಂಪುಗಳೂ, ನಾಲಿಗೆಗಳಿಗೆ ವಜ್ರದ ಸರಗಳೂ ಕೆತ್ತಲ್ಪಟ್ಟು ಬಹಳ ರಮಣೀಯವಾಗಿಯೂ ಅತ್ಯಲಂಕೃತವಾಗಿಯೂ ಮಾಡಲ್ಪಟ್ಟಿರುತ್ತದೆ. ಈ ಕೊಳಗದ ಕೆಳಭಾಗದಲ್ಲಿ 1538ನೇ ಧಾತು ಸಂವತ್ಸರದಲ್ಲಿ ಅಂದರೆ 119 ವರ್ಷಗಳ ಕೆಳಗೆ ಶ್ರೀಮುಮ್ಮಡಿ ಕೃಷ್ಣರಾಜ ಒಡೆಯರವರಿಂದ ದೇವರಿಗೆ ಒಪ್ಪಿಸಲ್ಪಟ್ಟದ್ದ ವಿಷಯವೂ ಈಗ ಆಳುವ ಶ್ರೀನಾಲ್ವಡಿ ಶ್ರೀ ಕೃಷ್ಣರಾಜ ಒಡೆಯರವರಿಂದ ಪುನರುದ್ಧರಿಸಲ್ಪಟ್ಟು ಅರ್ಪಿಸಲ್ಪಟ್ಟಿರುವ ವಿಚಾರವೂ ಬರೆಯಲ್ಪಟ್ಟಿವೆ. ಈ ಕೊಳಗವು ಜನರ ಪ್ರದರ್ಶನಕ್ಕಾಗಿ ಅರಮನೆಯ ಆಫೀಸ್ ಕಟ್ಟಡದಲ್ಲಿರುವ ಖಜಾನೆಯೊಳಗೆ ಇಡಲ್ಪಟ್ಟಿದ್ದುದರಿಂದ ಜನರು ತಂಡೋಪತಂಡವಾಗಿ ಬಂದು ನೋಡಿ ಆನಂದಪಟ್ಟು ಮಹಾಸ್ವಾಮಿಯವರ ಪರಮ ದೈವಭಕ್ತಿಯನ್ನು ಕೊಂಡಾಡುತ್ತಿರುವರು. ಶ್ರೀಮಹಾದೇಶ್ವರ ಬೆಟ್ಟದ ಮೇಲೆ ಶ್ರೀಮನ್ಮಹಾರಾಜರವರ ಭಕ್ತಿವಿಶೇಷದಿಂದ ಅಭಿವೃದ್ಧಿಪೂರ್ವಕವಾಗಿ ನಡೆಯುವ ಶ್ರೀ ಸ್ವಾಮಿಯ ಜಾತ್ರೆಯನ್ನು ನೋಡಲು ಯಾತ್ರಿಕರ ಸಮೂಹವು ಅಧಿಕಪ್ರಮಾಣವಾಗಿ ಸೇರುವುದೆಂದು ನಿರೀಕ್ಷಿಸಲ್ಪಟ್ಟಿದೆ.

ಒಳದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರವರ ಸ್ವಾರಿಯು ಇಷ್ಟರಲ್ಲೇ ಕೋಲಾರಕ್ಕೆ ಚಿತ್ತೈಸುವುದಾಗಿ ಕೇಳುತ್ತೇವೆ.

ಲೋವರ್ ಸೆಕೆಂಡರೀ ಪರೀಕ್ಷೆಗೆ ಹೋಗತಕ್ಕ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರುಗಳು ತಮ್ಮ ಅಭ್ಯರ್ಥನಾ ಪತ್ರಿಕೆಯೊಡನೆ (ಅಪ್ಲಿಕೇಷನ್ನಿನೊಡನೆ) ಜತೆ ಸಿಡುಬನ್ನು ಹಾಕಿಸಿಕೊಂಡಿರುವ ಬಗ್ಗೆ ಸರ್ಟಿಫಿಕೇಟನ್ನು ಕಳುಹಿಸುವಂತೆ ನಿರ್ಬಂಧಪಡಿಸಬೇಕಾಗಿ ಸರ್ಕಾರದ ಅಪ್ಪಣೆಯಾಗಿರುತ್ತದೆ.

ರಾಜಧಾನಿಯಲ್ಲಿ ಮಳೆಯಿಲ್ಲದಿರುವುದರಿಂದಲೂ, ಪರಸ್ಥಳದ ಜನರು ಹೆಚ್ಚಾಗಿ ಬಂದಿದ್ದುದರಿಂದ ಧೂಳಿಗೆಯು ಬಹಳವಾಗಿರುವುದರಿಂದಲೂ ವಾತಾವರಣವು ಕೆಟ್ಟು ಜನರಿಗೆ ಗಂಟಲು, ತಲೆ, ಮೈಕೈ ನೋವೂ, ಕೆಮ್ಮು ಜ್ವರವೂ ವ್ಯಾಪ್ತವಾಗಿರುವುದನ್ನು ನೋಡಿದರೆ ಇನ್‌ಫ್ಲೂಯೆಂಜಾ ರೋಗವು ಬಹಳ ಸೌಮ್ಯರೀತಿಯಲ್ಲಿ ಪ್ರಾರಂಭವಾಗಿರುವಂತೆ ತೋರುತ್ತದೆ. ಆದುದರಿಂದ ರಾಜಧಾನಿಯ ಆರೋಗ್ಯಶಾಖೆಯವರು ಈಗಲಾದರೂ ತಾತ್ಸಾರ ಮಾಡದೆ ಈ ರೋಗವು ಪ್ರಬಲಿಸದಂತೆ ತಕ್ಕೇರ್ಪಾಟನ್ನು ಮಾಡುವರೆಂದು ನಿರೀಕ್ಷಿಸುತ್ತೇವೆ.

*ಕಳೆದ ತಾ|| 17 ನೇ ಗುರುವಾರ ಸಾಯಂಕಾಲ ರಾಜಧಾನಿಯ ಮಹಾರಾಜ*ರವರ ಕಾಲೇಜಿನ ಜನ್ಮದಿನೋತ್ಸವವು ದಿವಾನ್ ಮಿ|| ಮಿರ್ಜಾಯಿಸ್ಮಾಯಿಲ್‌ರವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಜರುಗಿತು. ಈ ಮಹೋತ್ಸವದಲ್ಲಿ ದಿವಾನರು ಅಧ್ಯಕ್ಷತೆಯನ್ನು ವಹಿಸಿದ್ದರೆಂದು ಮುಖ್ಯರ ಹಿಡಿದಿದ್ದ ಕೆಲ ಲಾಯರುಗಳು, ವಿನಾ ಉಳಿದ ವಿದ್ಯಾರ್ಥಿಗಳೂ, ಅಧಿಕಾರಿಗಳೂ ದೊಡ್ಡ ಮನುಷ್ಯರುಗಳೂ ಬಹಳವಾಗಿ ಬಂದಿದ್ದರು. ಮುಖ್ಯರಿಗಳು ಈ ಉತ್ಸವಕ್ಕೆ ಬಾರದೆ ನಿಂತುಬಿಟ್ಟುದರಿಂದ ಅವರ ಸಂಕುಚಿತಭಾವವೂ ಅಸೂಯೆಯೂ ವ್ಯಕ್ತಪಟ್ಟಿತಲ್ಲದೆ ಕಾರ್ಯಸಾಧ್ಯ ನಿಷ್ಫಲವಾದ ಪ್ರಯತ್ನ ಅವರುಗಳು ಮುಂದಾದರೂ ಎಚ್ಚೆತ್ತುಕೊಳ್ಳುವರೇ?

1929-30 ನೇ ವರ್ಷದ ಸಂಸ್ಥಾನದ ಆಯವ್ಯಯ ಪಟ್ಟಿಯಲ್ಲಿ ವಿದ್ಯಾಭ್ಯಾಸಕ್ಕಾಗಿ ಗೊತ್ತುಮಾಡಲ್ಪಟ್ಟಿರುವ ಹಣದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸಾಭಿವೃದ್ಧಿ ಕಾರ್ಯಗಳಿಗೆ ಉಪಯೋಗಿಸಲು ಜಾಸ್ತಿಯಾಗಿ ಕೊಡಲ್ಪಟ್ಟಿರುವ 60,000 ರೂ ಗಳಲ್ಲಿ 30,135 ರೂ ಗಳ ವಾರ್ಷಿಕ ವೆಚ್ಚದಿಂದ 135 ಸ್ಕೂಲುಗಳನ್ನು ಹೊಸದಾಗಿ ಸ್ಥಾಪಿಸಲು 6180 ರೂ ಗಳ ವಾರ್ಷಿಕ ವೆಚ್ಚದಿಂದ 61 ಏಡೆಡ್ ಸ್ಕೂಲುಗಳನ್ನು ಸರ್ಕಾರೀ ಸ್ಕೂಲುಗಳನ್ನಾಗಿ ಮಾರ್ಪಡಿಸಲು ಮತ್ತು 3600 ರೂ ಗಳ ವಾರ್ಷಿಕ ವೆಚ್ಚದಿಂದ ಈಗಿರುವ ಪ್ರಾಥಮಿಕ ಪಾಠಶಾಲೆಗಳಿಗಾಗಿ 10 ಜನರನ್ನು ಹೊಸದಾಗಿ ನಿಯಮಿಸಲು ವಿದ್ಯಾಇಲಾಖೆಯ ಡೈರೆಕ್ಟರವರಿಗೆ ಪ್ರಭುತ್ವದವರ ಅನುಮೋದನವು ದೊರೆತಿರುತ್ತದೆ.

ಕೈ|| ದಳವಾಯಿ ದೇವರಾಜ ಅರಸಿನವರ ಪತ್ನಿಯವರು ಕೆಲ ಕಾಲದಿಂದಲೂ ಅಸ್ವಸ್ಥರಾಗಿದ್ದು ಕಳೆದ ಮಂಗಳವಾರ ರಾಜಧಾನಿಯ ಲಕ್ಷ್ಮೀಪುರದಲ್ಲಿಯ ವೆಸ್ಟ್ ಕೋರ್ಟ್ ಎಂಬ ಬಂಗಲೆಯಲ್ಲಿ ವಿಧಿವಶರಾದರೆಂದು ತಿಳಿಸಲು ವಿಷಾದವಾಗುತ್ತದೆ. ಇವರಿಗೆ ಅವಸಾನಕಾಲದಲ್ಲಿ 71-72 ವರ್ಷ ವಯಸ್ಸಾಗಿದ್ದಿತು. ಇವರು ತಮ್ಮ ಪತಿಯವರಂತೆ ದೈವಭಕ್ತಿ ಧರ್ಮಪರಾಯಣರಾಗಿದ್ದು ಅನೇಕ ಬಡ ಕುಟುಂಬಗಳಿಗೆ ಜೀವನಾಧಾರರಾಗಿದ್ದರು. ಇವರ ಅಂತ್ಯಕ್ರಿಯಾದಿಗಳು ಸಕಲ ರಾಜಮರ್ಯಾದೆಯೊಡನೆ ನೆರವೇರಿಸಲ್ಪಟ್ಟಿತು. ದುಃಖವಿಯೋಗದುಃಖಕ್ಕೆ ಭಾಜನರಾದ ಮ|| ಮುದ್ದರಾಜ ಅರಸಿನವರಿಗೂ ಅವರ ಸಹೋದರ ಸಹೋದರಿಯರಿಗೂ ಮನಃಪೂರ್ವಕ ಸಮಾಧಾನವೂ ಮೃತರ ಆತ್ಮಕ್ಕೆ ನಿರಂತರ ಶಾಂತಿಯೂ ದೊರೆಯಲೆಂದು ಕೋರುತ್ತೇವೆ.

ಬರುವ ಡಿಸೆಂಬರ್ ತಿಂಗಳ ಕ್ರಿಸ್‌ಮಸ್ ಹಬ್ಬದಲ್ಲಿ ಬೆಂಗಳೂರು ಕಬ್ಬನ್ ಪಾರ್ಕಿನೊಳಗೆ ವಿನೋದೋತ್ಸವವೂ ತತ್ಸಂಬಂಧವಾಗಿ ವಸ್ತುಪ್ರದರ್ಶನವೂ ನಡೆಯುವಂತೆ ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡಿನವರು ಏರ್ಪಡಿಸಿ ಆಗಲೇ ಆಂದೋಳನವನ್ನು ಮಾಡಿರುವುದಾಗಿ ತಿಳಿಯುತ್ತೇವೆ. ಈ ಕ್ರಿಸ್ಮಸ್ ಹಬ್ಬದ ವೇಳೆಯಲ್ಲಿ ಮದ್ರಾಸು, ಬೊಂಬಾಯಿ ಮೊದಲಾದ ದೊಡ್ಡ ಪಟ್ಟಣಗಳಲ್ಲಿ ವಿನೋದೋತ್ಸವಗಳು ಪ್ರತಿವರ್ಷವೂ ನಡೆಯುವುದು ವಾಡಿಕೆಯಾಗಿದೆ. ಅವರಂತೆ ಬೆಂಗಳೂರಿನಲ್ಲೂ ನಡೆದ "ಆರ್ಟ್ ಟೂರ್ನಮೆಂಟ್"ನಿಂದ ಜನರು ವಿನೋದದಿಂದ ಕಾಲಹರಣಮಾಡಲೂ, ಪ್ರೇಕ್ಷಕರ ಸಂದಣಿಯಿಂದ ವ್ಯಾಪಾರವು ವಿಶೇಷವಾಗಿ ನಡೆಯಲೂ ಅವಕಾಶವಾಗುತ್ತದೆ. ಈಗ್ಗೆ 3 ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ನಡೆದ ಇದೇ ವಿಧವಾದ ವಿನೋದೋತ್ಸವದಲ್ಲಿ [illegible] ಪದಾರ್ಥಗಳು ಅಗ್ನಿಗಾಹುತಿಯಾಗಿ ಅವನ ಅನುಗ್ರಹದಿಂದ [illegible] ಅಧಿಕ ನಷ್ಟವಾಯಿತು.

ಕಳೆದ ಬುಧವಾರ ರಾತ್ರಿ 10 ಗಂಟೆಯೊಳಗೆ ಶ್ರೀಮನ್ಮಹಾರಾಜರವರು ಪರಿವಾರದೊಡನೆ [illegible] ಬೆಂಗಳೂರಿನ [illegible] ಶೃಂಗೇರಿ ಮಠಕ್ಕೆ [illegible] ಶೃಂಗೇರಿ ಮಠದ ಈಗಿನ ಶ್ರೀಗಳವರಿಗೆ ಆರೋಗ್ಯವಿಲ್ಲದಿರುವ [illegible] ನ ಬಂದಿದ್ದ ಅಧಿಕಾರಿಯವರು [illegible] ನೂತನವಾಗಿ ಏರ್ಪಡಿಸಿದ [illegible] ಬುದ್ಧಿ [illegible] ಅದನ್ನು [illegible] ಇನ್ನೂ ಹೊರಡಲಿಲ್ಲ.

ಈ ಸ್ಟಾರ್ ಪತ್ರಿಕೆಯು ಬೇರೊಂದು ಭಾಗದಲ್ಲಿ [illegible] ಎಂಬ ಶೀರ್ಷಿಕೆಯಿಂದ ಬರೆಯಲ್ಪಟ್ಟಿರುವ ಲೇಖನದಲ್ಲಿ, ರಾಜಕೀಯ ಚಳುವಳಿಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸಕೂಡದೆಂದು ಹೇಳುವುದು ಬುದ್ಧಿಭ್ರಮಣೆ ಎಂದು ಪ್ರಜಾಪ್ರತಿನಿಧಿ ಮತ್ತು ನ್ಯಾಯವಿಧಾಯಕ ಸಭೆಗಳ ಮೆಂಬರಾದ ಮ|| ವಿ. ವೆಂಕಟಪ್ಪನವರು ಯುವಕರ ಸಮ್ಮೇಳನದಲ್ಲಿ ಹೇಳಿರುವುದಾಗಿ ಬರೆಯಲ್ಪಟ್ಟಿದೆ. ಆಂಧ್ರವಿಶ್ವವಿದ್ಯಾಲಯದ ವೈಸ್ ಛಾನ್ಸಲರಾದ ಮ|| ಸಿ. ಆರ್. ರೆಡ್ಡಿ, ಎಂ.ಎ. ರವರು ಒರಿಸ್ಸಾ ವಿದ್ಯಾರ್ಥಿಗಳ 14 ನೇ ವಾರ್ಷಿಕ ಸಭಾಧ್ಯಕ್ಷತೆಯನ್ನು ವಹಿಸಿ ಭಾಷಣಮಾಡುವಾಗ—"ವಿದ್ಯಾರ್ಥಿಗಳು ರಾಜಕೀಯ ವಿಷಯಗಳಲ್ಲಿ ಭಾಗ ತೆಗೆದುಕೊಳ್ಳುವುದನ್ನು ಬಿಟ್ಟುಬಿಡಬೇಕು" ಎಂದು ಹೇಳಿರುವುದರಿಂದ ಮ|| ವೆಂಕಟಪ್ಪನವರ ಅಭಿಪ್ರಾಯದಂತೆ ಮ|| ರೆಡ್ಡಿಯವರಿಗೆ ಬುದ್ಧಿಭ್ರಮಣೆ ಎಂದು ಭಾವಿಸಬೇಕಾಗುತ್ತದೆ. ಮ|| ಸಿ. ಆರ್. ರೆಡ್ಡಿಯವರಂತಹ ಮಹಾಪಂಡಿತರೂ ರಾಜನೀತಿಜ್ಞರೂ ಅವರೇ ಬುದ್ಧಿಭ್ರಾಂತರಾಗುವ ಪಕ್ಷದಲ್ಲಿ ಉಳಿದವರು ಬುದ್ಧಿಭ್ರಾಂತರೆಂದು ಆಕೊಳ್ಳುವುದರಲ್ಲಿ ಆಶ್ಚರ್ಯವೇನು?

ಬರುವ ಪ್ರಜಾಪ್ರತಿನಿಧಿಸಭಾ ಸದಸ್ಯರ ಚುನಾವಣೆಗೆ ಅಭ್ಯರ್ಥಿಗಳಾಗಿ ನಿಲ್ಲತಕ್ಕವರು 125 ರೂಪಾಯಿಗಳನ್ನೂ, ನ್ಯಾಯವಿಧಾಯಕಸಭಾ ಸದಸ್ಯರುಗಳ ಚುನಾವಣೆಗೆ ನಿಲ್ಲತಕ್ಕವರು 250 ರೂಪಾಯಿಗಳನ್ನೂ ಠೇವಣಿಯಾಗಿ ಸರ್ಕಾರಕ್ಕೆ ಕಟ್ಟಬೇಕೆಂದೂ, ಗೊತ್ತುಮಾಡಲ್ಪಟ್ಟ ಕನಿಷ್ಠ ಸಂಖ್ಯೆಗಿಂತ ಕಡಮೆಯಾಗಿ ಓಟುಗಳನ್ನು ಪಡೆದಲ್ಲಿ ಆ ಠೇವಣಿಯ ಹಣವು ಸರ್ಕಾರಕ್ಕೆ ಜಪ್ತಿಯಾಗಿ ತೆಗೆದುಕೊಳ್ಳಲ್ಪಡುವುದೆಂದೂ ವಿಧಾಯಕವಾಗಿ ನಿರ್ಬಂಧ ಮಾಡುವುದಾಗಿ ಕೇಳುತ್ತೇವೆ. ಕೆಲವರು ತಾವು ಉತ್ತೀರ್ಣರಾಗುವುದಿಲ್ಲವೆಂದು ಖಂಡಿತವಾಗಿ ತಿಳಿದಿದ್ದರೂ ಪುರಾಕೆಯಿಂದಲೋ, ಪರಪ್ರೇರಣೆಯಿಂದಲೋ, ಇನ್ನೊಬ್ಬರಿಗೆ ಅಡ್ಡಮಾಡಬೇಕೆಂಬ ದುರ್ಬುದ್ಧಿಯಿಂದಲೋ ಉಮೇದುವಾರರಾಗಿ ನಿಲ್ಲುತ್ತಿದ್ದವರಿಗೆ ಮೇಲ್ಕಂಡ ನಿರ್ಬಂಧವು ಕಲ್ಪಿಸಲ್ಪಟ್ಟಲ್ಲಿ ಅವಕಾಶ ತಪ್ಪಿಹೋಗುವುದು. ಆದುದರಿಂದ ಅಂತಹ ನಿರ್ಬಂಧವು ಅವರಿಗೆ ಕಲ್ಪಿಸಲ್ಪಡದಿದ್ದಲ್ಲಿ, ಈಗಲಾದರೂ ತಡಮಾಡದೆ ಕಲ್ಪಿಸಲ್ಪಡತಕ್ಕದ್ದು. ಇದರಂತೆಯೇ ಡಿಸ್ಟ್ರಿಕ್ಟ್ ಬೋರ್ಡು ಮತ್ತು ಮ್ಯುನಿಸಿಪಲ್ ಕೌನ್ಸಿಲ್ ಸದಸ್ಯರುಗಳ ಚುನಾವಣೆಯಲ್ಲೂ ಠೇವಣಿಯ ಹಣವನ್ನು ಕಟ್ಟುವಂತೆ ನಿರ್ಬಂಧಪಡಿಸುವುದೂ ಅತ್ಯಾವಶ್ಯಕವು.

ಪ್ರತಿ ವರ್ಷವೂ ವಿಜಯದಶಮಿಯುತ್ಸವವಾದ ಮೇಲೆ ನಡೆಯುವ ಶ್ರೀಮನ್ಮಹಾರಾಜರವರ ದರ್ಬಾರಿನಲ್ಲಿ ಸಂಸ್ಥಾನದ ಅಧಿಕಾರಿಗಳಿಗೂ, ಧರ್ಮಕಾರ್ಯಕರ್ತರುಗಳಿಗೂ ಪ್ರಶಸ್ತಿಗಳೂ, ಸುವರ್ಣ ಪದಕಗಳೂ ಕೊಡಲ್ಪಡುವ ಪದ್ಧತಿಯಂತೆ ಕಳೆದ ತಾ|| 1 ನೇ ಸೋಮವಾರ ರಾತ್ರಿ ನಡೆದ ದರ್ಬಾರಿನಲ್ಲಿ ಮ|| ಗಳಾದ ರಿಟೈರ್ಡ್ ಕೌನ್ಸಿಲರ್ ಕೆ. ಆರ್. ಶ್ರೀನಿವಾಸಯ್ಯಂಗಾರರಿಗೆ ರಾಜಸಭಾಭೂಷಣ, ರೆವಿನ್ಯೂ ಕಮಿಷನರಾದ ಸಿ. ಜೆ. ಡಿಸೋಜರವರಿಗೆ ರಾಜಕಾರ್ಯಪ್ರವೀಣ, ಫೈನಾನ್ಷಿಯಲ್ ಸೆಕ್ರೆಟರಿಯವರಾದ ಬಿ. ಶ್ರೀನಿವಾಸಯ್ಯಂಗಾರ್‌ರವರಿಗೆ ರಾಜಸೇವಾಸಕ್ತ, ಚೀಫ್ ಇಂಜನಿಯರುಗಳಾದ [illegible] ರವರಿಗೂ, ಕೆ. ಆರ್. ಶೇಷಾಚಾರ್ಯರಿಗೂ ರಾಜಸೇವಾಸಕ್ತ, ರಿಟೈರ್ಡ್ ಸೀನಿಯರ್ ಸರ್ಜನರಾದ ಡಾಕ್ಟರ್ ಉಸ್ಮಾನ್‌ರವರಿಗೆ [illegible], ಪಂಡಿತ ಅಯ್ಯಾ [illegible] ಶಾಸ್ತ್ರಿಯವರಿಗೆ [illegible], [illegible] ವೇದರತ್ನಂ, [illegible] ಭಾಗವತರಿಗೆ ಗಾಯಕಶಿಖಾಮಣಿ, ಮತ್ತು ಚಿಕ್ಕಮಗಳೂರಿನ ಬಿ. ಎಲ್. ನಾಗಪ್ಪಶೆಟ್ಟರಿಗೆ ಧರ್ಮಪ್ರವರ್ತಕ, ಶ್ರೀಮತಿ [illegible] ನವರಿಗೆ ಧರ್ಮಪರಾಯಣೆ ಎಂಬ ಪ್ರಶಸ್ತಿಗಳೂ, ಪರಹಿತಕಾರ್ಯಗಳನ್ನು ಮಾಡಿದ ಕೆಲವರಿಗೆ ಭಂಗಾರದ ಪದಕಗಳೂ ಮಹಾಪ್ರಭುಗಳಿಂದ ಅನುಗ್ರಹಿಸಲ್ಪಟ್ಟುವು. ಈ ಬಹುಮಾನಿತರೆಲ್ಲರನ್ನೂ ನಾವು ಅಭಿನಂದಿಸಿ ಅವರುಗಳು ಚಿರಕಾಲ ಅದನ್ನು ಅನುಭವಿಸಲೆಂದು ಕೋರುತ್ತೇವೆ.

ತ್ರೈವಾರ್ಷಿಕ ಚುನಾವಣೆಯ ಕಾರ್ಯಕ್ರಮ.

ಈಗ ನಡೆಯುತ್ತಿರುವ ಮೈಸೂರು ಪ್ರಜಾಪ್ರತಿನಿಧಿ ಮತ್ತು ನ್ಯಾಯವಿಧಾಯಕಸಭೆಗಳ ತ್ರೈವಾರ್ಷಿಕ ಕಾಲಾವಧಿಯು ಬರುವ 1930 ನೇ ಜುಲೈ ತಿಂಗಳಲ್ಲಿ ಪೂರೈಸುವುದರಿಂದ ಅವುಗಳು ಪುನಃ ವಿಧಿವತ್ತಾಗಿ ರಚಿಸಲ್ಪಟ್ಟು ಅವುಗಳ ಸದಸ್ಯರುಗಳ ಚುನಾವಣೆಯು 1930 ನೇ ಮಾರ್ಚಿ ತಾ|| 8 ನೆಯ ಶನಿವಾರ ಈ ಕೆಳಗೆ ಕಂಡ ಕ್ರಮವನ್ನನುಸರಿಸಿ ನಡೆಯತಕ್ಕದ್ದೆಂದು ಪ್ರಭುತ್ವದವರ ಅಪ್ಪಣೆಯಾಗಿರುತ್ತದೆ:—

1. 1929 ನೇ ಡಿಸೆಂಬರ್ ತಾ|| 5 ನೇ ಗುರುವಾರ ಚುನಾವಣೆದಾರರ ಹೆಸರಿನ ಪಟ್ಟಿ ಪ್ರಕಟಿಸಲ್ಪಡತಕ್ಕದ್ದು.

2. ಇದೇ ಡಿಸೆಂಬರ್ ತಾ|| 26 ನೇ ಗುರುವಾರ ಓಟರ ಹೆಸರು ಪಟ್ಟಿಯಲ್ಲಿ ಇನ್ನಿತರರು ಆಕ್ಷೇಪವಿದ್ದಲ್ಲಿ ಅರ್ಜಿ ದಾಖಲು ಮಾಡಿಕೊಳ್ಳತಕ್ಕದ್ದು.

3. ತಾ|| 1930 ನೇ ಜನವರಿ ತಾ|| 4 ನೆಯ ಶನಿವಾರ ಆಕ್ಷೇಪ ಅರ್ಜಿಗಳು ಇತ್ಯರ್ಥವಾಗತಕ್ಕದ್ದು.

4. ಇದೇ ಜನವರಿ ತಾ|| 11 ನೇ ಶನಿವಾರ ಅರ್ಜಿಗಳ ಇತ್ಯರ್ಥದ ಮೇಲೆ ಅಪೀಲ್ ಇದ್ದಲ್ಲಿ ದಾಖಲು ಮಾಡಿಕೊಳ್ಳತಕ್ಕದ್ದು.

5. ಜನವರಿ ತಾ|| 18 ನೇ ಶನಿವಾರ ಅಪೀಲುಗಳು ಇತ್ಯರ್ಥವಾಗತಕ್ಕದ್ದು.

6. ಜನವರಿ ತಾ|| 23 ನೇ ಗುರುವಾರ ಬದಲಾವಣೆಯಾದ ಲಿಸ್ಟು ಪ್ರಕಟವಾಗತಕ್ಕದ್ದು.

7. ಫೆಬ್ರವರಿ ತಾ|| 6 ನೇ ಗುರುವಾರ ಚುನಾವಣೆಗೆ ನಿಲ್ಲುವವರು ಅರ್ಜಿ ಹಾಕಿಕೊಳ್ಳತಕ್ಕದ್ದು.

8. ಫೆಬ್ರವರಿ ತಾ|| 13 ನೇ ಗುರುವಾರ ಉಮೇದುವಾರರ ಹೆಸರುಗಳು ಮೈಸೂರು ಗೆಜೆಟ್ಟಿನಲ್ಲಿ ಪ್ರಕಟವಾಗತಕ್ಕದ್ದು.

9. ಮಾರ್ಚಿ ತಾ|| 8 ನೇ ಶನಿವಾರ ಪ್ರಜಾಪ್ರತಿನಿಧಿ ಮತ್ತು ನ್ಯಾಯವಿಧಾಯಕ ಸಭೆಗಳ ಸದಸ್ಯರ ಚುನಾವಣೆ ನಡೆಯತಕ್ಕದ್ದು.

10. ಮಾರ್ಚಿ ತಾ|| 12 ನೇ ಬುಧವಾರ ಚುನಾವಣೆಯ ಫಲಿತಾಂಶವು ಸರ್ಕಾರಕ್ಕೆ ತಿಳಿಸಲ್ಪಡತಕ್ಕದ್ದು.

11. ಮಾರ್ಚಿ ತಾ|| 20 ನೇ ಗುರುವಾರದೊಳಗೆ ಚುನಾವಣೆಯ ಫಲಿತಾಂಶವು ಪ್ರಕಟಿಸಲ್ಪಡತಕ್ಕದ್ದು.

ಹೊಸಪೇಟೆ ಡಿ|| ಮುಂ|| ಕೋರ್ಟಿನ

O S 1064/28.

ವಾದಿ ಪ್ರತಿವಾದಿ

ಪಮ್ಮಿಗೆ ಸಂಕಪ್ಪ Vs ಪಟ್ಟಣಶೆಟ್ಟಿ ಶೇಷಪ್ಪನು ದೊಡ್ಡ ತಿಮ್ಮಪ್ಪ

ಪ್ರತಿವಾದಿಗೆ ಎಕ್ಸಪಾರ್ಟಿ ಸಮನ್ಸ್ ಕಟ್ಟಿಸಿದ್ದಾಗ್ಯೂ ಜಾರಿ ಆಗದಿರುವುದರಿಂದ ಈಗ 1-11-29 ತೇದಿ ವಾಯಿದೆ ಇರುತ್ತದೆ ಆಗ ಹಾಜರಾಗಲು ತಪ್ಪಿದಲ್ಲಿ ಯೆಕ್ಸಪಾರ್ಟಿ ಮಾಡುತ್ತಾರೆ ಎಂದು ತಿಳಿಸಿರುತ್ತೇನೆ.

M RANGANATHACHAR,
1st Grade Pleader,
Hospet, Bellary Dt.

ಗೃಹಕೃತ್ಯದ ನೋಟೀಸು

(೭—೨)

ನಂಜನಗೂಡು ತಾಲ್ಲೂಕು ಬಿಳಿಗೆರೆ ಹೋಬಳಿ ಸುತ್ತೂರು ಗ್ರಾಮದಲ್ಲಿರುವ ಮಹಂತದೇವರ ಶಿಷ್ಯನಾದ ಮಹಂತಪ್ಪ ಮೈನರ್ ಗಾರ್ಡಿಯನ್ ತಾಯಿ ಪುಟ್ಟಮಾದಮ್ಮನಾದ ನಾನು ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ—ನನ್ನ ಗಂಡ ಪುಟ್ಟಯ್ಯನೆಂಬವರಿಗೆ ಬುದ್ಧಿ ಸ್ಥಿಮಿತವಿರುವುದಿಲ್ಲ ದುಷ್ಟಜನಗಳ ಪ್ರೇರಣೆಯಿಂದ ಇವರು ದುರ್ವ್ಯಯ ವಗೈರೆ ಕೆಲಸಗಳನ್ನು ಮಾಡುತ್ತಾ ಇರುತ್ತಾರೆ ಆದ್ದರಿಂದ ನನ್ನ ಪಿತ್ರಾರ್ಜಿತ ಬಾಬ್ತು ಚರಸ್ಥಿರ ಆಸ್ತಿಗಳಿಗೂ ನಾನೇ ಬಾಧ್ಯಸ್ಥಳಾಗಿರುತ್ತೇನೆ ಈ ಬಾಬ್ತು ಸ್ವತ್ತುಗಳನ್ನು ಮೋಸದಿಂದ ಯಾರಾದರೂ ಮೇಲ್ಕಂಡ ನನ್ನ ಗಂಡ ಪುಟ್ಟಯ್ಯನವರಿಂದ ಆಧಾರ ಭೋಗ್ಯ ವಗೈರೆ ಕ್ರಯಾಧೀನವಾದ ಕೆಲಸಗಳನ್ನು ಮಾಡಿದ್ದೇ ಆದರೆ ಅದು ಊರ್ಜಿತವಾಗತಕ್ಕದಲ್ಲ ಯಾರಾದರೂ ಈ ಕೆಲಸಗಳನ್ನು ಮಾಡಿಸಿಕೊಂಡರೆ ಅವರುಗಳಿಗೆ ತಗಲುವ ನಷ್ಟಕ್ಕೆ ನಾನು ಜವಾಬ್ದಾರಳಲ್ಲ ಎಂದು ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸಿರುತ್ತೇನೆ

ಈ ಗುರ್ತು ಮಹಂತಪ್ಪ ಮೈನರ್ ಗಾರ್ಡಿಯನ್ ತಾಯಿ ಪುಟ್ಟಮಾದಮ್ಮನ ಎಡಗೈ ಹೆಬ್ಬೆಟ್ಟಿನ ಗುರ್ತಿನ ರುಜು

1929 ನೇ ಅಕ್ಟೋಬರ್ ತಾ|| 10 ನೆಯ ಗುರುವಾರ ರಾಜಧಾನಿಯಲ್ಲಿ ಜರುಗಿದ ಮೈಸೂರು ಪ್ರಥಮ ಬ್ರಾಹ್ಮಣೇತರ ಮಹಾಸಭಾಧ್ಯಕ್ಷರಾದ ಮ|| ರಾಮಸ್ವಾಮಿ ಮೊದಲಿಯಾರ್‌ರವರು ಮಾಡಿದ ಭಾಷಣ.

ಚೇರ್ಮನ್ನರೇ, ಸಹೋದರಪ್ರತಿನಿಧಿಗಳೇ, ಮಹಿಳೆಯರೇ ಮತ್ತು ಮಹನೀಯರೇ

ಈ ಮಹಾಸಭಾಧ್ಯಕ್ಷತೆಯನ್ನು ವಹಿಸಲು ನನ್ನನ್ನು ಆಹ್ವಾನಿಸಿ ಗೌರವಿಸಿದುದಕ್ಕಾಗಿ ತಮ್ಮಗಳನ್ನೂ, ಸ್ವಾಗತಮಂಡಳಿಯ ಸದಸ್ಯರನ್ನೂ ವಂದಿಸುತ್ತೇನೆ ಈ ಮಹಾಸಭೆಯಲ್ಲಿ ನಡೆಯಬೇಕಾಗಿರುವ ಭಾಷೆಯ ಪರಿಚಯವು ನನಗಿಲ್ಲದಿರುವುದರಿಂದ, ಮೈಸೂರು ಸಂಸ್ಥಾನದ ಪ್ರಥಮ ಬ್ರಾಹ್ಮಣೇತರ ಮಹಾಸಭೆಯಂತಹ ಘನಸಭಾಚಾಲನದ ಭಾರವನ್ನೂ ಉತ್ತರವಾದಿತ್ವವನ್ನೂ ವಹಿಸಲಾಗುವುದಿಲ್ಲವೆಂದು ಸಂತೋಷದಿಂದಲೂ ಗೌರವದಿಂದಲೂ ನಿರಾಕರಿಸಬೇಕೆಂದು ತೋರಿತು ಈ ಮಹಾಸಭಾಧ್ಯಕ್ಷತೆಯನ್ನು ವಹಿಸುವವರಿಗೆ ಸಭೆಯ ಕಾರ್ಯಕಲಾಪಗಳನ್ನು ಸಮರ್ಪಕವಾಗಿ ನಡೆಯಿಸಲು ತಕ್ಕ ಶಕ್ತಿ ತಾಳ್ಮೆ ದೂರದೃಷ್ಟಿ, ರಾಜನೀತಿಸ್ಥೈರ್ಯ ಈ ಗುಣಗಳೆಲ್ಲ ವಿಶೇಷವಾಗಿರಬೇಕಾಗಿರುವುದರಿಂದ ಈ ಅಧ್ಯಕ್ಷಸ್ಥಾನವನ್ನಲಂಕರಿಸಲು ವಯೋವೃದ್ಧರೂ ಜ್ಞಾನವೃದ್ಧರೂ ಆದವರು ತಕ್ಕವರೆಂಬುದನ್ನು ನಾನು ಚೆನ್ನಾಗಿ ಬಲ್ಲೆನು ಆದರೆ ಘನವಾದ ಈ ಉದ್ದೇಶದಲ್ಲಿ ನಿಮ್ಮ ಮತ್ತು ನನ್ನ ಮನೋಭಿಪ್ರಾಯವೊಂದೇ ಆಗಿರುವುದರಿಂದ ವಿಶ್ವಾಸವಿಟ್ಟು ಈ ಸಂದರ್ಭದಲ್ಲಿ ಘನವಾದ ಮರ್ಯಾದೆಯನ್ನೂ ಅಸಾಧಾರಣವಾದ ಉತ್ತರವಾದಿತ್ವವನ್ನೂ ವಹಿಸಿಕೊಳ್ಳಬೇಕಾಗಿದೆ

ಪರಕೀಯರಿಂದಾಗುವ ಪ್ರಯೋಜನ

ಮಹಿಳೆಯರೆ ಮತ್ತು ಮಹನೀಯರೆ ಈಗಿನ ವಿಷಮಪರಿಸ್ಥಿತಿಯಲ್ಲಿ ನಿಮ್ಮ ಮಹಾಸಭಾಧ್ಯಕ್ಷತೆಯನ್ನು ವಹಿಸಬೇಕೆಂಬ ನಿಮ್ಮ ಆಹ್ವಾನವನ್ನು ಅಂಗೀಕರಿಸಲು ಧೈರ್ಯೋತ್ಸಾಹ ಹುಟ್ಟುವಂತಹ ವಿಷಯವೊಂದು ನನಗೆ ಹೊಳೆದಿರುತ್ತದೆ ನಿಮ್ಮ ಸಂಸ್ಥಾನದ ಜನರ ಸ್ಥಿತಿಯ ಪರಿಚಯವು ನನಗಷ್ಟಾಗಿಲ್ಲವೆ ವ್ಯಕ್ತಿಗಳ ಮತ್ತು ಸಂಸ್ಥೆಗಳ ವಿಚಾರದಲ್ಲಿ ನನಗೆ ಅಭಿಮಾನ ದುರಭಿಮಾನಗಳೇನೂ ಇಲ್ಲ ಮೈಸೂರಿನ ರಾಜಕೀಯ ವಿಚಾರದಲ್ಲಿ ಪಕ್ಷಪಾತಗಳು ಹುಟ್ಟಿರುವುದೇ ನನಗೆ ಗೊತ್ತಿಲ್ಲ ಮೈಸೂರ ಸಂಸ್ಥಾನಕ್ಕೂ ಅದರ ಪ್ರಜೆಗಳಿಗೂ ಕಟ್ಟಕಡೆಯಲ್ಲಿ ಶುಭವಾಗುತ್ತದೆಂಬ ಪೂರ್ಣನಂಬಿಕೆಯಿಂದಲೂ, ವಿಶೇಷಾಭಿಮಾನದಿಂದಲೂ, ಅಗಾಧವಾದ ಸುಖದ ಭೂಮಿಯಿಂದಲೂ ನಿರಂತರವಾದ ಕುತೂಹಲದಿಂದಲೂ ಸಂಸ್ಥಾನದ ಸ್ಥಿತಿಗತಿಯನ್ನು ದೂರದಿಂದ ನೋಡುತ್ತಿರುವ ಹೊರಗಿನವರಿಗೆ ಆಶ್ಚರ್ಯವಾಗಿ ತೋರುವ ಮತ್ತು ನೀವೆಲ್ಲರೂ ಇಲ್ಲಿ ಕೂಡಿ ಚರ್ಚಿಸಬೇಕೆಂದಿರುವ ವಿಷಯಗಳನ್ನು ಕುರಿತು ಅಸ್ವಾರ್ಥ ಬುದ್ಧಿಯಿಂದ ನನ್ನ ಅಭಿಪ್ರಾಯವನ್ನು ತಿಳಿಸಲು ಇಲ್ಲಿನ ಪರಿಸ್ಥಿತಿಯ ಅಪರಿಚಯವು ಅನುಕೂಲಸಾಧನವಾಗಿರುತ್ತದೆ

ಶ್ರೀ|| ಒಡೆಯರ್ಯ್ಯನವರು

ಮೈಸೂರು ಪ್ರಜೆಗಳ ತತ್ಪ್ರಾಪಿ ಬ್ರಾಹ್ಮಣೇತರರ ಆಂದೋಳನವು ಕಳೆದ 20 ವರ್ಷಗಳಿಂದಲೂ ಹೇಗೆ ಬೆಳೆದು ವೃದ್ಧಿಯನ್ನು ಹೊಂದಿರುತ್ತದೆಂಬುದನ್ನು ಪರೀಕ್ಷಿಸುತ್ತಿದ್ದೇನೆ ಅವರ ಅದೃಷ್ಟದ ಬದಲಾವಣೆಯಾಗುತ್ತಿರುವುದನ್ನು ಒಂದುವೇಳೆ ಸಂತೋಷದಿಂದಲೂ ಮತ್ತೊಂದುವೇಳೆ ವ್ಯಸನದಿಂದಲೂ ನೋಡುತ್ತಿದ್ದೇನೆ ನ್ಯಾಯವಾಗಿಯೂ ಜಾತಿಸಂಬಂಧವಾದ ಧರ್ಮಕ್ಕಾಗಿಯೂ ನೀವು ಹೋರಾಡುವುದರಲ್ಲಿ ನಾನು ಸಹಕಾರ ಉಳ್ಳವನಾಗಿರುತ್ತೇನೆ ಮತ್ತು ನಿಮಗೆ ಲಭ್ಯವಾಗಿರುವ ಕಿಂಚಿತ್ ಕಾರ್ಯಸಿದ್ಧಿಯಲ್ಲಿ ಸಂತೋಷವನ್ನೂ ವಿಶೇಷವಾದ ಕಾರ್ಯಪರಾಭವದಲ್ಲಿ ವ್ಯಸನವನ್ನೂ ಅನುಭವಿಸುತ್ತೇನೆ ಕೇವಲ ಪ್ರೇಮಾನುಕೂಲವಾದ ಮಾತ್ರಕ್ಕೆ ಪ್ರಪಂಚವೆಲ್ಲರೂ ಒಂದಾಗುವಾಗ್ಗೆ ಮೈಸೂರಿನ ಬ್ರಾಹ್ಮಣೇತರರಿಗೂ ಮದ್ರಾಸಿನಿವಾಸಿ ಬ್ರಾಹ್ಮಣೇತರರಿಗೂ ದೈವಬಲವು ವಿಶೇಷವಾಗಿರುವುದರಿಂದ ಪರಸ್ಪರ ಸಂಬಂಧವು ಹೆಚ್ಚಾಗುವುದಲ್ಲದೆ ಆಲೋಚನೆಯಲ್ಲೂ, ಉದ್ದೇಶದಲ್ಲೂ, ಕಾರ್ಯದಲ್ಲೂ ಉಭಯರೂ ಏಕೀಭವಿಸುವಂತೆ ಮಾಡುವುದು ನಿಮ್ಮಿಂದ ಪರಿಹರಿಸಲ್ಪಡಬೇಕಾಗಿರುವ ವಿಷಯಗಳನ್ನು ಕುರಿತು ಈ ಮಹಾಸಭೆಯಲ್ಲಿ ಚರ್ಚಿಸತಕ್ಕವೇ ನನ್ನಗೆ ಇನ್ನು ಒಟ್ಟುಗೂಡಿಸತಕ್ಕ ವಿಚಾರವಾಗಿರುತ್ತದೆ ಅದುಕಾರಣ ನಮ್ಮ ಗೃಹಕೃತ್ಯಕ್ಕೆ ಸಂಬಂಧಪಟ್ಟ ಸಮಸ್ಯೆಯನ್ನು ಪೂರ್ತಿಗೊಳಿಸುವಲ್ಲಿ ತಮಗೆ ಸಹಾಯ ಮಾಡುವುದಕ್ಕಾಗಿ ಸಂಪೂರ್ಣ ಅಪರಿಚಿತನಾಗಿರದೆ ಸಹೋದರನಾಗಿ ಬಂದಿರುತ್ತೇನೆ ಮೈಸೂರಿನಲ್ಲೂ ಮದ್ರಾಸಿನಲ್ಲೂ ಬ್ರಾಹ್ಮಣೇತರರು ತಮ್ಮ ಕುಂದುಕೊರತೆಗಳನ್ನು ಬಹಿರಂಗವಾಗಿ ವ್ಯಕ್ತಗೊಳಿಸಿ ನಿವಾರಿಸಿಕೊಳ್ಳಲು ಈಗ್ಗೆ ಹತ್ತು ವರ್ಷಗಳಿಂದ ಪ್ರಥಮತಃ ಮಾಡಿದ ಗಾಢಶ್ರಮಕ್ಕೆ ಈ ಪ್ರಯತ್ನದಲ್ಲಿ ಈ ಮಹಾಸಭಾಧ್ಯಕ್ಷತೆಯನ್ನು ವಹಿಸುವ ಸಂದರ್ಭದಲ್ಲಿ [illegible] ಬ್ರಾಹ್ಮಣೇತರ [illegible] ಪ್ರಯತ್ನ ಕಾರಣವಾಗಿರುತ್ತದೆ [illegible] ಪ್ರಾಂತದ ಬ್ರಾಹ್ಮಣೇತರರು [illegible] ಪ್ರಥಮತಃ [illegible] ಜನರ ಮೇಲಿನ [illegible] ಅವರು ಬಹಳ ಕಾಲದ ವಿಷಯಗಳನ್ನು ಪ್ರಕಟಿಸಿ [illegible] ಸರ್ ಪಿ ತ್ಯಾಗರಾಯ ಶೆಟ್ಟರು [illegible] ವರಿಗೆ ನಾನು ನನ್ನ [illegible] ಸಲ್ಲಿಸುವೆನು [illegible] ಡಾಕ್ಟರ್ ಟಿ ಎಂ ನಾಯರ್‌ರವರು ಮತ್ತು ಸರ್ ತ್ಯಾಗರಾಯ ಶೆಟ್ಟಿಯವರು ಮೊದಲಾದ ಬ್ರಾಹ್ಮಣೇತರ ನಾಯಕರ ಪೈಕಿ ನಮ್ಮ ಒಡೆಯರು ನಿರ್ಮಲರೂ ನಿಸ್ವಾರ್ಥರೂ ಆಗಿದ್ದರು ಒಬ್ಬರಿಗಿದ್ದ ನಿರ್ಭೀತ ಮನೋಧರ್ಮ, ಇನ್ನೊಬ್ಬರಿಗಿದ್ದ ಘನತೆ, ಮನೋರಂಜಕತೆ, ಸರಳತೆ ಸಭ್ಯತೆಗಳೂ ಒಬ್ಬರಲ್ಲೇ ಸಮಾವೇಶವಾಗಿದ್ದವು ಇವರ ವಿಷಾದಕರವಾದ ಅಕಾಲಮರಣದಿಂದ ಮೈಸೂರಿನ ಮತ್ತು ಮದ್ರಾಸಿನ ಬ್ರಾಹ್ಮಣೇತರಗಳು ತಮ್ಮ ವಿಶ್ವಾಸಾರ್ಹನಾದ ನಾಯಕನನ್ನು, ಕಾರ್ಯಸತ್ತನನ್ನೂ ನಮ್ಮೆಲ್ಲರ ನಿಜವಾದ ಸಖನನ್ನೂ ಕಳೆದುಕೊಂಡಂತಾಯಿತು. ನಮ್ಮಗಳಿಗೋಸ್ಕರ ಆತ್ಮಾರ್ಪಣ ಮಾಡಿದ ಆ ಸುಸಂಸ್ಕೃತ ನಾಯಕನ ಸಂಸ್ಮರಣೆಯನ್ನು ಮದ್ರಾಸಿನ ಬ್ರಾಹ್ಮಣೇತರರ ಪರವಾಗಿ ನಿಮ್ಮೊಡನೆ ಸೇರಿ ಪೂಜ್ಯಭಕ್ತಿಯಿಂದ ಮಾಡಲಪೇಕ್ಷಿಸುತ್ತೇನೆ

ಗತಿಸಿದ ಪಾನಗಲ್ ರಾಜರು

ಕಳೆದ ಅರವತ್ತಕ್ಕೆ ಮೇಲ್ಪಟ್ಟು ದಕ್ಷಿಣ ಇಂಡಿಯಾದ ಜನರ ರಾಜಕೀಯ ಮತ್ತು ಸಾಮಾಜಿಕ ವಿಚಾರಗಳಲ್ಲಿ ಪ್ರಧಾನಪಾತ್ರವನ್ನು ವಹಿಸಿದ್ದವರನ್ನು ಕಳೆದುಕೊಂಡು ಇದೇ ಮೊದಲನೆಯ ಸಲ ನಮ್ಮ ಮುಖವನ್ನು ಪ್ರದರ್ಶಿಸುವುದಾಗಿದೆ ಅವರಲ್ಲಿ ಪಾನಗಲ್ ರಾಜರವರೊಬ್ಬರಾಗಿರುತ್ತಾರೆ ಪ್ರಮುಖ ರಾಜನೀತಿ ಕುಶಲರಲ್ಲೊಬ್ಬರೂ ಜನ್ಮತಃ ಪ್ರಜಾನಾಯಕರೂ ಸತ್ಯಕ್ಕಾಗಿಯೂ ಧರ್ಮಕ್ಕಾಗಿಯೂ ಕಾದಾಡುವವರಲ್ಲಿ ಪ್ರಮುಖರೂ ಅತ್ಯಂತ ಗುಣಾಢ್ಯರೂ ಅರಿತಿರುವ ಕಾರ್ಯನಿರ್ವಾಹಕರೂ ಆದವರ ನಿಧನದಿಂದ ಮದ್ರಾಸು, ಮೈಸೂರು ಬೊಂಬಾಯಿ ಮತ್ತು ಮಧ್ಯಪ್ರಾಂತಗಳು ಇವುಗಳ ಬ್ರಾಹ್ಮಣೇತರರುಗಳಿಗೆ ಮಹಾನಷ್ಟ ಸಂಭವಿಸಿತೆಂದು ಅರಿಯಲು ನನ್ನ ಮನಸ್ಸಿಗೆ ಅತ್ಯಂತ ಖೇದವಾಗುತ್ತದೆ ಮೈಸೂರ ಸಂಸ್ಥಾನದ ಸಾರ್ವಜನಿಕ ಮತ್ತು ರಾಜಕೀಯ ಕಾರ್ಯನಿರ್ವಾಹದಲ್ಲಿ ಸಮಯೋಚಿತವಾದ ಸಲಹೆ ಬುದ್ಧಿ ಅಪೇಕ್ಷಿಸಿದವರಿಗೆ ಅಮೋಘವಾದ ಬುದ್ಧಿವಾದವನ್ನು ಪಾನಗಲ್ ರಾಜರಂತೆ ಕೊಡುತ್ತಿದ್ದವರೂ ಮೈಸೂರಿನ ರಾಜಕೀಯವಿಚಾರವನ್ನು ಬಹಳವಾಗಿ ಗಮನಿಸುತ್ತಿದ್ದವರೂ ಬೇರೊಬ್ಬರಿಲ್ಲವೆಂದು ಅವರ ರಾಜಕೀಯ ಕಾರ್ಯವನ್ನೆಲ್ಲ ಬಲ್ಲವನಾದ ಮತ್ತು ಅವರ ರಾಜಕೀಯ ಮನೋಭಾವವನ್ನು ವಿಶೇಷವಾಗಿ ಅನುಸರಿಸಿರುವವನಾದ ನಾನೂ ರಾಜರ ನಿಧನದಿಂದ ಮೈಸೂರಿನವರಾದ ನೀವೂ ವ್ಯಸನಪಡಲು ಕಾರಣವಿರುತ್ತದೆಂದು ಖಂಡಿತವಾಗಿ ಹೇಳುತ್ತೇನೆ ಮೈಸೂರಿನ ಬ್ರಾಹ್ಮಣೇತರರ ಸ್ಥಿತಿ ಇಂಡಿಯಾದ ಪ್ರತಿ ಬ್ರಾಹ್ಮಣೇತರ ಪಕ್ಷಕ್ಕೆ ಮುಖ್ಯಾಂಗವೆಂದು ಪಾನಗಲ್ ರಾಜರು ತಿಳಿದಿದ್ದರು ಅವರು ಈಗ ಬದುಕಿದ್ದರೆ ಈ ಅಸಾಧಾರಣವಾದ ಮಹಾಸಭಾಧ್ಯಕ್ಷತೆಯನ್ನು ವಹಿಸಲು ತಕ್ಕವರಾಗಿದ್ದರೆಂದು ನೆನಸಿಕೊಂಡರೆ ವ್ಯಸನವಾಗುತ್ತದೆ ನಮ್ಮನ್ನು ಸತ್ಕ್ರಮ ಮಾರ್ಗದಲ್ಲಿ ನಡಸುವುದರಲ್ಲೂ ಘನೋದ್ದೇಶದಿಂದಲೂ ಉದಾತ್ತಧ್ಯೇಯದಿಂದಲೂ ಕೂಡಿರುವಂತೆ ಪ್ರೇರೇಪಿಸುವುದರಲ್ಲೂ ಅವರ ಜನ್ಮವು ಶಾಶ್ವತವಾದ ಜ್ಞಾನಜ್ಯೋತಿಯಾಗಿರುವುದು ಮತ್ತು ಅದೃಶ್ಯವಾದ ಅವರಾತ್ಮವು ಈ ದಿವಸ ನಮ್ಮ ಮಧ್ಯದಲ್ಲಿದ್ದು ನಮ್ಮ ಕಾರ್ಯಕಲಾಪಗಳಲ್ಲಿ ಸಹಾಯ್ಯಾಕರಿಸುವುದೆಂಬುದರಲ್ಲಿ ನನಗೆ ಲೇಶಮಾತ್ರ ಸಂಶಯವಿಲ್ಲ ಅವರ ಜನ್ಮಾದರ್ಶದಿಂದ ನಾವು ಮಾಡಬೇಕಾಗಿರುವ ಕಾರ್ಯನಿರ್ವಾಹಕ್ಕೆ ತಕ್ಕ ಸಾಮರ್ಥ್ಯವನ್ನೂ ಧೈರ್ಯವನ್ನೂ ಹೊಂದಿ ಅವರ ಪಥವನ್ನು ಹಿಡಿದು ನಡೆಯುವುದಕ್ಕಿಂತಲೂ ಉತ್ತಮವಾಗಿರುವ ಮತ್ತು ಯಾವಾಗಲೂ ನಮ್ಮ ಸ್ಮೃತಿಪಥದಲ್ಲಿ ಅಚ್ಚಳಿಯದಿರುವ ಬೇರೊಂದು ಸ್ಮಾರಕವನ್ನು ಮಾಡಲಾಗದು

ಪ್ರಯತ್ನವು ಧರ್ಮವಾದುದು

ನನ್ನ ಸಹೋದರರಾದ ಮೈಸೂರು ನಗರವಾಸಿಗಳೇ ಬ್ರಾಹ್ಮಣೇತರರ ಪ್ರಯತ್ನವೆಂದರೇನೆಂಬ ದನ್ನು ಈ ದಿವಸ ಇಲ್ಲಿ ವಿವರಿಸಬೇಕೆಂದು ಯಾರೂ ಅಪೇಕ್ಷಿಸುವುದಿಲ್ಲವಾಗಿ ನೆನೆಸುತ್ತೇನೆ ಈ ಪ್ರಯತ್ನದ ಆರಂಭದಲ್ಲಿ ಎಷ್ಟೇ ಅನುಮಾನವಿದ್ದಾಗ್ಯೂ ಇದರ ಉದ್ದೇಶ ಮತ್ತು ಧ್ಯೇಯಗಳ ವಿಚಾರವಾಗಿ ಎಷ್ಟೇ ತಪ್ಪಭಿಪ್ರಾಯವಿದ್ದಾಗ್ಯೂ ಅಸಾರ್ಥಕ್ಕೆ ಕಾರಣವಾಗಿ ಈಡಾಗಿದ್ದಾಗ್ಯೂ ಈವರೆಗೆ ಅಸ್ತಿತ್ವದಿಂದಿರುವುದರಿಂದಲೂ ದಕ್ಷಿಣ ಇಂಡಿಯಾದಲ್ಲಿ ಕೇವಲ ಮದ್ರಾಸು ಪ್ರಾಂತಗಳ ಮತ್ತು ದೇಶೀಯ ಸಂಸ್ಥಾನದ ಪ್ರಜೆಗಳ [illegible] ಸಮಾನ [illegible] ಇಂಡಿಯಾದ ಜನರಲ್ಲಿ [illegible] ಅವರ ಮುಖ್ಯತತ್ವವಾಗಿರುತ್ತದೆ [illegible] ಈ ನ್ಯಾಯ [illegible] ಅನ್ಯಾಯವಾಗದೆ ಪ್ರತಿಯೊಬ್ಬನಿಗೂ ನ್ಯಾಯದೊರಕಬೇಕು ಎಂಬ ಪ್ರಜಾಧಿಪತ್ಯದ [illegible] ಒಂದೇ ಆಗಿರುತ್ತವೆ [illegible] ನಮ್ಮ ಪ್ರಯತ್ನದ [illegible] ಸಾಧ್ಯವಿದ [illegible] ಆರೂ ಅಂಜ ಕಾರ್ಯವಿಮುಖರಾಗುವುದಿಲ್ಲವೆಂದ ನಾನ ನಂಬಿದ್ದೇನೆ

ಶಾಂತಿ ಮತ್ತು ಪ್ರೀತಿ

ನನ್ನ ಸಹೋದರ ಬ್ರಾಹ್ಮಣೇತರರ ವರ್ಗಗಳಲ್ಲಿ ಪರಸ್ಪರ ದ್ವೇಷಾಸೂಯೆಗಳನ್ನು ಹುಟ್ಟಿಸಬೇಕೆಂಬ ಉದ್ದೇಶದಿಂದ ನಾನು ಇಲ್ಲಿಗೆ ಬಂದಿಲ್ಲ ಮೈಸೂರಿನವರ ಸಾಮಾಜಿಕ ಪದ್ಧತಿಯನ್ನು ವಿಚ್ಛೇದಿಸಲು ಬಿಡಪ್ರಯೋಗಿಸತಕ್ಕವನಾಗಿಲ್ಲ ಪರಸ್ಪರ ಉಚ್ಚನೀಚಭಾವವನ್ನು ಯೋಗಲಾಡಿಸಿ ಸಮಾಧಾನಪಡಿಸುವುದಕ್ಕಲ್ಲದೆ ಅದನ್ನು ಪ್ರಚೋದಿಸಿ ಮನೋವ್ಯಗ್ರತೆಯನ್ನುಂಟುಮಾಡಬೇಕೆಂಬುದು ನನ್ನ ಅಭಿಪ್ರಾಯವಲ್ಲವು ಶತ್ರುಭಾವದ ನಿಂಗರ ಕಾರ್ಯಸಿದ್ಧಿಯ ಮೇಲಿನ ಹಗೆಯನ್ನು ತೀರಿಸಿಕೊಳ್ಳುವ ಉದ್ದೇಶದಿಂದ ಇಲ್ಲಿರುವ ಪ್ರತಿನಿಧಿಗಳಲ್ಲಿ ನನ್ನಂತೆಯೇ ಅಭಿಪ್ರಾಯಪಡದಿರುವವರೊಬ್ಬರೂ ಇಲ್ಲವೆಂದು ಮನಃಪೂರ್ವಕವಾಗಿ ಧೈರ್ಯದಿಂದ ಹೇಳಬಹುದು ಒಂದೇ ಸಮನಾದ ಆಸ್ತಿಯುಳ್ಳ ಎರಡು ಪಂಗಡಗಳ ಜನರು ಒಟ್ಟುಗೂಡಿ ಸೌಹಾರ್ದದಿಂದ ನಡೆಯಲು ಸಾಧ್ಯವಲ್ಲದೆ, ಭೋಗಲಾಲಸನಾದ ಧನಿಕನೂ ಹೊಟ್ಟೆಗಿಲ್ಲದೆ ನರಳುವ ಬಡವನೂ ಸಮಾನಭಾವದಿಂದ ವರ್ತಿಸುವುದು ಅಸಂಭವವು ಮತ್ತು ಅದರಿಂದ ಮುಂದೆ ತೊಂದರೆಯೂ ಕೆಡುಕೂ ಸಂಭವಿಸುವುದು ನಿಮ್ಮ ಸಂಸ್ಥಾನದಲ್ಲಿ ಬ್ರಾಹ್ಮಣ ಬ್ರಾಹ್ಮಣೇತರರಗಳು ಯಾವ ವೈಮನಸ್ಯವೂ ಇಲ್ಲದೆ ಏಕೀಭವಿಸಿರುವುದರಿಂದ ಹೊರಗಿನವರ ಮಧ್ಯಸ್ಥಿಕೆಯೇನೂ ಅವಶ್ಯಕವಿಲ್ಲವೆಂದು ಈ ದಿವಸ ಯಾರಾದರೂ ಸೂಚಿಸಿದಲ್ಲಿ ಅದಕ್ಕಿಂತ ಮೇಲಿನ ಸುದ್ದಿ ನನಗೇನೂ ಆಗಲಾರದು

ಬ್ರಾಹ್ಮಣೇತರರು ತಮ್ಮ ಸ್ಥಿತಿಯನ್ನು ತಿಳಿದುಕೊಳ್ಳುವವರೆಗೂ, ಅವರು ಸುಮನಸ್ಸಿನಿಂದಲೂ ಶಾಂತಿಯಿಂದ ತೃಪ್ತಿಪಟ್ಟುಕೊಂಡಿರುವ ಸ್ಥಿತಿಯು ಬರುವವರೆಗೂ ಇಂಥ ಮಹಾಸಭೆ ಕೇವಲ ಅವಶ್ಯಕವೆಂದು [illegible] ಈ ದೇಶದಲ್ಲಿ ಬ್ರಾಹ್ಮಣೇತರ ಪ್ರಯತ್ನವು [illegible] ಕಾರ್ಯದ [illegible] ಕಾರ್ಯಸಾಧನೆಯ ವಿಚಾರದಲ್ಲಿ [illegible] ಮೈಸೂರು [illegible] ಸರ್ವತೋಮುಖವಾದ [illegible] ಪ್ರಗತಿಪರವಾದ [illegible] ನಾನು ಸಹಾನುಭೂತಿ [illegible] ಭಾರತದ ಮಾನವ [illegible] ಜೀವನ [illegible] ಮೈಸೂರು [illegible] ಬ್ರಾಹ್ಮಣೇತರರು ಉನ್ನತಿಯನ್ನು ಹೊಂದಬೇಕೆಂಬುದು [illegible] ಪ್ರಾಣವಾಯುವಿನಂತಿರುವ ಸ್ವಾತಂತ್ರ್ಯದ [illegible] ಅದು ಸಾಮಾಜಿಕ ಬಾಲ್ಯಾವಸ್ಥೆಯಲ್ಲಿರುವಲ್ಲಿ ಮಾನವ ಜೀವನಕ್ಕೆ ಶಾಸ್ತ್ರವನ್ನೋದಿರುವ ಯಾವ ವಿದ್ಯಾರ್ಥಿಯೂ ನಿರಾಕರಿಸುವಂತಿಲ್ಲ ಇಂತಹ ಮಹಾಸಭೆಗಳನ್ನು ನಡೆಯಿಸುವುದರಿಂದ, ಆತ್ಮಗೌರವವನ್ನೂ ಸಮಾನತ್ವವನ್ನೂ ಬ್ರಾಹ್ಮಣೇತರರಿಗೆ ಬೋಧಿಸುವುದರಿಂದ, ಸಂಸ್ಥಾನದ ಬಹಿರಂಗ ಕಾರ್ಯಗಳಲ್ಲಿ ಅವರು ವಹಿಸಬೇಕಾದ ಸ್ಥಾನವನ್ನು ಅರಿತುಕೊಳ್ಳುವಂತೆ ಮಾಡುವುದರಿಂದ ಎತ್ತೊಂದುಗಾರತನದಿಂದಾಗುವ ಅನ್ಯಾಯವನ್ನೂ ಜನರ ಸಾಮಾಜಿಕ ಮತ್ತು ರಾಜಕೀಯ ವಿಚಾರದಲ್ಲಿ ಉತ್ತಮಸ್ಥಾನವನ್ನು ಪ್ರಬಲ ಪಂಗಡದವರು ಆಕ್ರಮಿಸಿಕೊಳ್ಳುವುದರಿಂದ ಇತರ ಪಂಗಡಗಳಿಗಾಗುವ ನಷ್ಟವನ್ನು ಕುರಿತು ಎಚ್ಚರಿಸುವುದರಿಂದ ಪ್ರಜಾಧಿಪತ್ಯತತ್ವವನ್ನು ನಾವು ಪಾಲಿಸಿದಂತಾಗ ವುದಲ್ಲದೆ, ದೇಶದಲ್ಲಿ ಬೆಳೆಯುತ್ತಿರುವ ಅರಿಷ್ಟಗಳನ್ನು ತೊಡೆದು ನಿರ್ಮೂಲಿಸದಿರುವುದರಿಂದಾಗುವ ಅನರ್ಥವನ್ನು ತಪ್ಪಿಸಿದಂತಾಗುವುದು ಯಾವ ಜಾತಿ ಮತ ಶಾಖೆಯವರೂ ಇಲ್ಲದೆ ಪ್ರಕಟಿಸಲ್ಪಟ್ಟ ನಮ್ಮ ತತ್ವಪ್ರತಿಪಾದ್ಯಗಳಿಂದ ಪುರಸ್ಕರಿಸುತ್ತಿದ್ದೇನಲ್ಲದೆ ಯಾರನ್ನೂ ದ್ವೇಷಾಸೂಯೆಗಳಿಂದ ತಿರಸ್ಕರಿಸುತ್ತಿಲ್ಲ ನಮ್ಮ ಸನ್ಮಾನ್ಯ ರಾದ ಶ್ರೀ|| ಸರ್ ಪಿ ತ್ಯಾಗರಾಯ ಶೆಟ್ಟರು 1920 ರಲ್ಲಿ ಹುಬ್ಬಳ್ಳಿ ಬ್ರಾಹ್ಮಣೇತರ ಮಹಾಸಭಾಧ್ಯಕ್ಷತೆಯನ್ನು ವಹಿಸಿದ್ದಾಗ್ಗೆ "ಕೆಲಸ ಮಾಡುವವನಿಗೂ ಅದರಿಂದ ಪ್ರಯೋಜನವನ್ನು ಹೊಂದುವವನಿಗೂ ಕಷ್ಟದಾಯಕವಾದ ಯಾವದ್ವಾರತ ಪ್ರಯೋಜನಾರ್ಥವಾಗಿ ಸೇವೆಮಾಡುವುದು ನಾವು ಗರ್ವದಿಂದ ಮಾಡತಕ್ಕ ಕೆಲಸವಾಗಿದೆ ಎಂದಿಗೆ ಅಂತಹ ದಿನವು ತನ್ನ ಪೂರ್ಣಪ್ರಭೆಯಿಂದ ಬೆಳಗುವುದೋ, ಎಂದಿಗೆ ಪ್ರಜಾಧಿಪತ್ಯದ ತರಂಗವು ಪ್ರತಿಯೊಂದು ದಡವನ್ನು ಸೇರುವುದೋ ಎಂದಿಗೆ ಈ ಜನೋತ್ಸಾಹವು ಪ್ರತಿಯೊಬ್ಬನ ಮನಸ್ಸಿನಲ್ಲಿ ಹುಟ್ಟುವುದೋ, ಎಂದಿಗೆ ನಮ್ಮ ಶರೀರದ ಪ್ರತಿಯೊಂದು ನರವೂ ಪ್ರಜಾಧಿಪತ್ಯ ಪ್ರಯತ್ನದಲ್ಲಿ ಸಾನುಭೂತಿಯಿಂದ ಕೂಡಿ ಹೊಯಿದಾಡುವುದೋ ಅಂದಿಗೆ ಈ ಘನವಾದ ಪುನರುಜ್ಜೀವನ ಪ್ರಯತ್ನದ ಸಾಫಲ್ಯಕ್ಕೆ ಜನತೆಯ ಮತ್ತು ಗುರುವರ್ಗದ ಪ್ರತಿಯೊಬ್ಬನಲ್ಲಿ ಅಪಾರವಾದ ಪ್ರೀತಿಯಿರುವುದೇ ಮುಖ್ಯವಾದ ಜೀವಾಳವೆಂದು ನಮ್ಮ ಬ್ರಾಹ್ಮಣಮಿತ್ರರುಗಳು ಅರಿತುಕೊಳ್ಳುವರು" ಎಂದು ಹೇಳಿರುವರು ಆ ನನ್ನ ತ್ಯಾಗಿ ನಾಯಕನ ಜ್ಞಾನದೃಷ್ಟಿಯಿಂದ ಕಂಡು ಹಿಡಿದ ದಿವ್ಯಪ್ರಭೆಯು ಬೆಳಗಲು ಮತ್ತು ನಾವು ಆ ನೂತನ ಪ್ರಭೆಯನ್ನು ಅನುಸರಿಸಿ ನಡೆಯಲು ಉಪಕ್ರಮಿಸಿರುವುದು ಈ ಮಹಾಸಭಾಧ್ಯಕ್ಷತೆಯನ್ನು ವಹಿಸಿರುವ ಈ ವೇಳೆಯಲ್ಲಿ ನನಗೆ ಹೊಳೆಯದೇ ಇರುವುದಿಲ್ಲ

ನಮ್ಮ ಕರ್ತವ್ಯ

ಬ್ರಾಹ್ಮಣೇತರರ ಪ್ರಯತ್ನದಿಂದ ಆಗಿರುವ ಪ್ರಯೋಜನವೇನು ಅಥವಾ ಆಗುವ ಪ್ರಯೋಜನವಾದರೂ ಏನು ಎಂದು ಆಗಾಗ್ಗೆ ಪ್ರಶ್ನಿಸಲ್ಪಡುತ್ತಿರುವೆನು ಮತ್ತು ಈಗಲೊ ದೊಡ್ಡ ಮಹಾಸಭೆಯು ಕೂಡಿದ್ದೂ ಆಯಿತು ಚದರಿದ್ದೂ ಆಯಿತು ಬ್ರಾಹ್ಮಣರ ವಿರುದ್ಧವಾಗಿ ಕೆಲ ಮನೋವಿಕಾರಗಳನ್ನು ಉತ್ಪಾದಿಸುವುದು ವಿನಾ ಮತ್ತು ಬ್ರಾಹ್ಮಣೇತರರಮೇಲೆ ಅವರಿಗಿರುವ ಅಧಿಕಾರ ವಿಚಾರವಾಗಿ ಗೊಣಗುಟ್ಟುವುದರ ವಿನಾ ವಾಸ್ತವ್ಯವಾದ ಕೆಲಸವೇನೂ ನಡೆದಿರುವುದಿಲ್ಲವಲ್ಲದೆ ಕಾರ್ಯಕಾರಿಯಾದ ಸಲಹೆ ಕೊಡಲ್ಪಟ್ಟಿರುವುದಿಲ್ಲ" ಎಂದು ನಿಂದಕನು ಒಂದೇಸಮನಾಗಿ ಪ್ರಚುರಪಡಿಸುವನು ನಿಂದಕನೇನಾದರೂ ಸಾಧಾರಣ ಮೊಂಡನಾಗಿಯೂ ಅಪೂರ್ವಬುದ್ಧಿಯುಳ್ಳವನಾಗಿಯೂ ಇದ್ದಲ್ಲಿ ಅವಿವೇಕರಾದ ಅಥವಾ ಅಸೂಯಾಪರರಾದ ಬ್ರಾಹ್ಮಣೇತರರು ಏನೇ ಹೇಳಿದರೂ ಮೇಧಾವಿಯಾದ ಬ್ರಾಹ್ಮಣನ ಪಾರಮ್ಯವು ನಡೆದೇ ನಡೆಯುವುದು ರಾಜಕೀಯ ವಿಚಾರಗಳಲ್ಲೂ ರಾಜ್ಯಾಧಿಕಾರದಲ್ಲೂ ಅವನು ಪಡೆದಿರುವ ಸ್ಥಾನವು ಶಾಶ್ವತವಾದುದು ಮತ್ತು ವಂಶಪಾರಂಪರ್ಯವಾಗಿ ಅನುಭವಿಸಿಕೊಂಡು ಬಂದಂತಹುದು ಎಂದು ಗರ್ವೋಕ್ತಿಯಿಂದ ಹೇಳುವನು ಮಿತ್ರರುಗಳೇ, ಹೀಗೆ ಹೇಳುವುದನ್ನು ನಾನು ಅನೇಕವೇಳೆ ಕೇಳಿರುವೆನಲ್ಲದೆ ಕೆಲವೇಳೆ ನನ್ನ ಪಂಗಡದವರೇ ಹೇಳುವುದನ್ನು ಸಹ ಕೇಳಿರುತ್ತೇನಾದುದರಿಂದ ಮ [illegible] ಹೇಳುವುದರಿಂದ ನನಗೇನೂ ಅಸಮಾಧಾನವಾಗುವುದಿಲ್ಲ, ಆದರೆ [illegible] ವರ್ಷಗಳ ಸ್ವಾನುಭವದಿಂದ ಬರುವ ಮಾತುಗಳನ್ನಾಡುವ [illegible] ಸೋಡಿ ತಣಿಕರಪಟ್ಟು ಮುಗುಳುನಗೆಯಿಂದ ನಗಬೇಕಾಗಿದೆ

ನಮ್ಮ ನೀತಿ

ನಾನ ಈವರೆಗೆ ಮಾಡಿರುವ ಕೆಲಸಗಳಿಂದ ಜನಾಂಗದ ಸಂಪೂರ್ಣ ಬಾಲ್ಯಕಳೆಯಲ್ಲಿ ನೂತನ ಪ್ರಭೆಯುಂಟಾಗಿರುವುದರಿಂದಲೂ, ನಾಲಕ್ಕಾರ್ಯದ [illegible] ವ್ಯಕ್ತಾವಸವಾಗಿರುವುದರಿಂದಲೂ ಬ್ರಾಹ್ಮಣೇತರರ ಪ್ರಯತ್ನವು ಸಾರ್ಥಕವೆನಿಸಿಕೊಂಡಿರುತ್ತದೆ ಕ್ರಮವಾಗಿ ಅಭಿವೃದ್ಧಿಯನ್ನು ಹೊಂದುವುದು ಜವಾಬ್ದಾರಿ ಸರ್ಕಾರವನ್ನು ಹೊಂದುವ ವಿಚಾರದಲ್ಲಿ ಮನೋವಿಕಾಸವಾಗುವುದು ಹೆಚ್ಚು ಸ್ವಾತಂತ್ರ್ಯವನ್ನು ಪಡೆಯುವ ನಮ್ಮ ಎಲ್ಲ ಪ್ರಯತ್ನಗಳಲ್ಲೂ ಜನತೆಯನ್ನು ನಮ್ಮ ಜೊತೆ ಸೇರಿಸಿಕೊಳ್ಳುವುದು, ಯಾರಿಗೂ ಅನ್ಯಾಯವಾಗದೆ ಎಲ್ಲರಿಗೂ ಒಂದೇ ವಿಧವಾದ ಸದುಪಯೋಗಾನುಕೂಲಗಳನ್ನೊದಗಿಸುವುದು—ಈ ಮೂಲತತ್ವಗಳು ಪರೀಕ್ಷಾಸಾಧನಗಳಾಗಿರುತ್ತವೆ ಮತ್ತು ಇದರ ಅನುವರ್ತಿಗಳ ಸಂಖ್ಯೆಯು ದಿನದಿನಕ್ಕೆ ಹೆಚ್ಚುತ್ತಲೇ ಇದೆ ನಮ್ಮ ತತ್ವವೆಂಬ ಲೋಹವು ವಿಚಾರವೆಂಬ ಪ್ರಾವಕದಲ್ಲಿ ಕಾಸಿಸಲ್ಪಟ್ಟು ಪರೀಕ್ಷಿಸಲ್ಪಟ್ಟಿದ್ದರಲ್ಲಿ ನಿಜವಾದ ಲೋಹವೆಂದು ವ್ಯಕ್ತಪಟ್ಟಿರುತ್ತದೆ ದಕ್ಷಿಣ ಇಂಡಿಯಾದ ಕಳೆದ 15 ವರ್ಷಗಳ ಚರಿತ್ರೆಯನ್ನು ನೋಡಿದರೆ ಇಲ್ಲಿಯೇ, ಇಲ್ಲಿಯೇ ಇಲ್ಲಿಯೇ ನಮ್ಮ ಧರ್ಮವು ಪರೀಕ್ಷಿಸಲ್ಪಟ್ಟು ಈವರೆಗೆ ನಡೆದಿರುವ ಕಾರ್ಯಗಳಿಂದ ಅದು ಸತ್ಯವಾದುದೆಂದು ಸಿದ್ಧಾಂತಗೊಳಿಸಲ್ಪಟ್ಟಿರುವುದಾಗಿ ಹೇಳಬಹುದು ನಾವು ಜನರ ಭರವಸೆಯನ್ನು ಅಪೇಕ್ಷಿಸುವಾಗ್ಗೆ ಹಿಂದೆ ಯಾವ ಕಾರ್ಯವನ್ನು ಸಾಧಿಸಿದೆ ಮುಂದೆ ಯಾಗಿ ಮಾಡುತ್ತೇವೆ, ಹೀಗೆ ಮಾಡುತ್ತೇವೆಂದು ಆಶ್ಚರ್ಯಕರ ಆಶೋತ್ತರಗಳನ್ನು ಹುಟ್ಟಿಸಿ ಬಡಿಸ್ಯೆಯಿಂದ ನಾವು ಬರುವುದಿಲ್ಲ ನಮ್ಮ ಶಿಕ್ಷಾರ್ಹತೆಯೂ ನಮ್ಮ ನಡವಳಿಕೆಯಲ್ಲೇ ಇರುವುದು ನಾವು ಯಾವ ಕಾರ್ಯಸಾಧನೆ ಮಾಡಿರುವೆವೆಂಬುದು ಅದರಿಂದಲೇ ವ್ಯಕ್ತವಾಗುತ್ತದೆ. ವಿದ್ಯಾಬುದ್ಧಿಯಿಲ್ಲದೆ ಎಷ್ಟೇ ಹಿಂದುಳಿದಿದ್ದ ಪ್ರತಿಯೊಂದು ಕೋಮೂ ತನಗೆ ತಕ್ಕ ಸ್ಥಾನವನ್ನು ಪಡೆಯುವಂತೆ ನಾವು ಮಾಡಿರುತ್ತೇವೆ ಜನತೆಯ ಅಭಿಪ್ರಾಯದಂತೆ ಸಂಸ್ಥೆಗಳು ನಡೆಯುವಹಾಗೆ ಪ್ರಯತ್ನಿಸುತ್ತಿದ್ದೇವೆ ಕಷ್ಟಜೀವಿಗಳನ್ನೂ ನಿಮ್ನವರ್ಗದವರನ್ನೂ ಉದ್ಧರಿಸಲು ಎತ್ನಿಸಿದ್ದೇವೆ. ನಾವು ನ್ಯಾಯವಾಗಿಯೂ ಸ್ವಾಭಾವಿಕವಾಗಿಯೂ ಕೊಡಬೇಕಾದ ತಂದಾಯದ ವಿನಾ ಯಾತು ಅಧಿಕಾರವನ್ನೂ, ಪುನಃ ಭೂಮಿಯನ್ನೂ ಯಾವುದೋ ಒಂದು ಪ್ರಾಚೀನ ಕಾಲದಲ್ಲಿ ಮೂಢಭಕ್ತಿಯ ರಾಜನಿಂದ ಪಡೆದಿರುವುದರ ಆಧಾರದಮೇಲೆ ಒಂದುವರ್ಗದವರು ಮಾತ್ರ ಯಾವವಿಧವಾದ ತೆರಿಗೆಯ ಭಾರವನ್ನು ವಹಿಸಿಕೊಳ್ಳ

[illegible] ಪ್ರಯತ್ನಿಸುತ್ತಿದ್ದೇವೆ

(ನಂಬಿಕಾರಿ [illegible])

ಮೈಸೂರು ಬ್ರಾಹ್ಮಣೇತರ ಮಹಾಸಭೆಯಲ್ಲಿ ಆದ ನಿರ್ಧಾರಗಳು.

1 ಮೈಸೂರು ಸಂಸ್ಥಾನದ ಪ್ರಥಮ ಬ್ರಾಹ್ಮಣೇತರ ಮಹಾಸಭೆಯು ಶ್ರೀಮನ್ಮಹಾರಾಜರವರಲ್ಲಿ ತನಗಿರುವ ಅಚಲವಾದ ರಾಜಭಕ್ತಿಯನ್ನೂ, ಶ್ರೀಮನ್ಮಹಾರಾಜರವರು ಪ್ರಜೆಗಳ ವಿಷಯದಲ್ಲಿ ತೋರಿಸುತ್ತಿರುವ ಅವಿರಳವಾದ ಎಚ್ಚರಿಕೆಗೋಸ್ಕರ ಕೃತಜ್ಞತೆಯನ್ನೂ ಪ್ರಕಟಿಸುತ್ತದೆ

2 ದಿವಂಗತರಾದ ಶ್ರೀಯುತ [illegible] ಸರ್ ಕೆ ಪಿ [illegible] ಸರ್ [illegible], ಎಂ ಸುಬ್ಬಯ್ಯ, ಎಸ್ ಪಿ ಜವರಯ್ಯ [illegible] ಶಾಸ್ತ್ರಿಗಳ ಮುಖ್ಯವೀರರುಗಳು ಇವರೇ ಮೊದಲಾದ ಬ್ರಾಹ್ಮಣೇತರ ಮುಖಂಡರ ಮ[illegible] ಈ ಸಭೆಯು [illegible]

[illegible]

ಜವಾಬ್ದಾರಿ ಸರ್ಕಾರ

3 [illegible]

4 [illegible]

5 [illegible]

6 [illegible]

7 [illegible]

8 [illegible]

ಬ್ರಾಹ್ಮಣೇತರರೂ ಸರ್ಕಾರಿ ಅಧಿಕಾರಗಳೂ

9 (ಎ) [illegible]

(ಬಿ) [illegible]

(ಸಿ) [illegible]

(ಡಿ) [illegible]

ವಿದ್ಯಾಶಾಖೆಯ ಸುಧಾರಣೆ

10. [illegible]

[illegible]

ಕೋಮುವಾರು ಮನಸ್ತಾಪ

11 [illegible]

ದಾವಣಗೆರೆಯ ಡೆಂಡದ ಕರಿಗೆ

1. [illegible]

ಭಾರತನಾಟಕ ಚರಿತ್ರೆ

ಪೂರ್ವಕವಿಗಳು ಬರೆದಿರುವ ನಾಟಕಗಳೆಷ್ಟು ಮತ್ತು ಅವುಗಳನ್ನು ಎತಕ್ಕಾಗಿ ಬರೆದಿರುವರು ?

[illegible]

ಪೂರ್ವಕಾಲದಲ್ಲಿ ನಡೆದ ಚರಿತ್ರಾಂಶಗಳು ನಮ್ಮ ತಿಳಿವಳಿಕೆಗೆ ಬರದೇ ಹೋಗಿರುವುದರಿಂದ ವಿಷಯಗಳ ಸಿದ್ಧಾಂತವು ಹೀಗೆಯೇ ಸರಿ ಎಂದು ನಿರ್ಧರಿಸಿ ಹೇಳುವುದಕ್ಕೆ ಅವಕಾಶವಿಲ್ಲದಿರುವುದರಿಂದ ಕೆಲವು ವಿಷಯಗಳ ಸಿದ್ಧಾಂತಗಳನ್ನು ಮಾತ್ರ ಊಹೆಯಿಂದ ತಿಳಿದುಕೊಳ್ಳಬೇಕಾಗಿದೆ [illegible] ಊಹಾಶಕ್ತಿಯೇ [illegible] ಬರುವಂತಾಯಿತು ನಮಗೆ ಸಂಬಂಧಪಟ್ಟ ವಿಷಯಗಳನ್ನು ನಾವು ತಿಳಿದುಕೊಳ್ಳಬೇಕಾಗಿದ್ದರೆ [illegible] ನಮ್ಮ ಸಂಗತಿಗಳನ್ನು ಹೀಗೆ [illegible] ಬರೆದಿರುವ ಕೆಲವು ಅಂಶಗಳ ಆಧಾರಗಳಮೇಲೆಯೇ ನಾವು ತಿಳಿದುಕೊಳ್ಳಬೇಕಾಗಿರುವ [illegible] ಬಂದಿರುವಂತಾಯಿತಲ್ಲಾ ಎಂದು [illegible] ಇಂತಹ ವಿಷಯಗಳನ್ನೂ [illegible] ಪೂರ್ವಾಪರಾಲೋಚನೆಯಿಂದ ಕ್ರಮವಾಗಿ ಕೆಲವು ವಿಷಯಗಳನ್ನು ಸೂಚಿಸುವೆನು

ಆರ್ಯಾವರ್ತದಲ್ಲಿ ಹಿಂದೆ ಜೀವಿಸಿದ್ದ ಅನೇಕ ಕವಿಗಳು ತಮ್ಮ [illegible] ಮತ್ತು [illegible] ಜ್ಞಾನವನ್ನು ತೋರಿಸುವ [illegible] ಪುಸ್ತಕ ರೂಪದಲ್ಲಿ ಬರೆದಿಟ್ಟರು ಈಗ ನಮ್ಮ ದೃಷ್ಟಿಪಥಕ್ಕೆ ಬೀಳುತ್ತಿರುವ ನಾಟಕ ಗ್ರಂಥಗಳಾದರೋ ಸ್ವಲ್ಪವಾಗಿರು[illegible]

[illegible]

ಹೇಳುವುದಕ್ಕೆ [illegible] ಪ್ರಯೋಜನಾರ್ಥವಾಗಿಯೋ ನಾಟಕವು ಪ್ರದರ್ಶನಕ್ಕಾಗಿಯೋ ಬರೆಯಲ್ಪಟ್ಟಿತೆಂದು ಹೇಳುವಲ್ಲಿ ಯಾವ ಸಂಶಯವೂ ಇರುವುದಿಲ್ಲವೆಂದು ನಾಟಕರು ಮೊದಲು ಜ್ಞಾಪಕದಲ್ಲಿಡಬೇಕಾಗುವುದು

(ಮುಂದುವರಿಯುವುದು)

ಪತ್ರವ್ಯವಹಾರ

ಪತ್ರವ್ಯವಹಾರದ ಲೇಖಕರುಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ

ಸನ್ 1935ನೇ ಇಸವಿ ಅಕ್ಟೋಬರ್ ತಿಂಗಳು 1[illegible]ನೇ ತೇದಿಯಲ್ಲಿ ಬಳ್ಳಾರಿಯಲ್ಲಿರುವ ಹೀರದ ಸೂಗಮ್ಮನವರ ಛತ್ರದಲ್ಲಿ ವೀರಶೈವ ಮಹಾಜನ ಸಂಘದ ಕಾರ್ಯನಿರ್ವಾಹಕ ಕಮಿಟಿಯವರಿಂದ ಸಾಗಿದ ನಿರ್ಣಯಗಳು

(1) [illegible] ಬ್ರಿಟಿಷ್ ಪ್ರಾಂತ್ಯದಲ್ಲಿ [illegible]

[illegible]

(2) [illegible]

ಶ್ರೀ ವಿ ಪಿ [illegible], ಬಳ್ಳಾರಿ

[illegible] ಮರೆತವರು

[illegible]

[illegible]

ವೀರಶೈವರು ಮತ್ತು ದೇವಾಲಯಗಳು.

[illegible]

ಹಾಗೂ, ವೀರಶೈವರಿಗೂ, ದೇವಸ್ಥಾನಗಳಿಗೂ ಇರುವ ಸಂಬಂಧವೆಷ್ಟೆಂಬು ದನ್ನು ಪ್ರಕಟಿಸುವ ಸಲುವಾಗಿ ಕೆಳಗಿನ ಪ್ರಶ್ನೆಗಳನ್ನು ಕೇಳಿ ಈ ಕೆಳಗಿನ ಸಂದೇಹಗಳನ್ನು ದೂರ ಮಾಡಬೇಕೆಂದು ಕೇಳುತ್ತೇನೆ.

ಪ್ರಶ್ನೆಗಳು

1 ದೇವಸ್ಥಾನಗಳ [illegible] ಕೆಲವರು ವೀರಶೈವರೇ ಪೂಜಿಸುತ್ತಿರುವರು [illegible] ಸರಿಯಾಗಿ ನಡೆಯುತ್ತಿರುವುದು ವೀರಶೈವ ಧರ್ಮಕ್ಕೆ ಸರಿಯಾಗಿದೆಯೆ ?

2 ವಿಶೇಷವಾಗಿ ಇಷ್ಟಲಿಂಗಾಂಕಿತರಾದವರು ದೇವರ ಪೂಜೆಯನ್ನು ನಿಷೇಧಿಸುವ ವೀರಶೈವರ ಧರ್ಮದ ತತ್ವವೇನೆಂದು ?

3 ಲಿಂಗಾಂಕಿತರ ದೇವರ ಪೂಜೆಯು ನಿಷೇಧವೆಂದು ಕೆಲವರು ಹೇಳುತ್ತಿರುವ ದೇವರುಗಳಿಗೆ ಬಿಲ್ವಪತ್ರೆಯನ್ನು ಮಾಡಿಯೂ ನೋಡುತ್ತಾ ಇರುವರು. ಕೆಲವರು ವೀರಭದ್ರ, ನಂದಿ, ಮೊದಲಾದವರು ಶಿವಶೈವರ ಗಣಾಧಿಪರುಗಳಾದುದರಿಂದ ಅವರನ್ನು ಪೂಜಿಸುವುದು ನಿಷೇಧವಲ್ಲವೆಂದು ಮನೆಯಲ್ಲಿಟ್ಟು ಪೂಜಿಸುವರು ಇದರ ಪರಿಷ್ಕಾರವೇನು ?

4 ಕೆಲವರಿಗೆ ಅನೇಕ ದೇವಾಲಯಗಳ ದೇವರುಗಳು ಮನೆ ದೇವರಾಗಿರುವುವು ಆದರು ಆ ದೇವರುಗಳಿಗೆ ನಡೆದುಕೊಳ್ಳಬೇಕೆ ಅಥವಾ ಬಿಟ್ಟುಬಿಡಬೇಕೆ ?

5 ಇತರ ದೇವರುಗಳನ್ನು ಪೂಜಿಸಬಹುದಾದರೆ, ಮನೆಯಲ್ಲಿ ದೇವರುಗಳನ್ನು ಪೂಜಿಸಿದಂತೆ ಗುಡಿಗಳಲ್ಲಿಯೂ ವೀರಶೈವರಲ್ಲದೂ (ಭಕ್ತ ಮಾಹೇಶ್ವರರು) ಪೂಜಿಸುವ ವೃತ್ತಿಯನ್ನು ಮಾಡಬಹುದೆ ?

6 ಮಾಹೇಶ್ವರರಲ್ಲಿ ಮರದವರು ಅರ್ಚಕ ವೃತ್ತಿಯನ್ನು ಮಾಡಬಾರದು ಆದರೆ ಮಾರಪತ್ತಿ, ಗಣಾಚಾರಿ ಮೊದಲಾದವರು ಮಾಡಬಹುದು ಎಂದು ಕೆಲವರು ಹೇಳುವರು ಇದರ ತತ್ವವೇನು ? ಅರ್ಚಕವೃತ್ತಿಯು ಕೀಳಾಗಿದ್ದರೆ ?

7 ಸ್ಮಾರ್ತರಸ್ತೈಷ್ಣವಾದಿ ಬ್ರಾಹ್ಮಣರು ಕೃಷಿ ವಾಣಿಜ್ಯಾದಿ ವೃತ್ತಿಗಳು ಬ್ರಾಹ್ಮಣರಿಗೆ ನಿಷೇಧವೆಂದು ಹೇಳುವರು ಆದರೆ ಅರ್ಚಕ ವೃತ್ತಿಯು ಕೀಳಾದುದಲ್ಲವೆಂದು ವೈದಿಕಬ್ರಾಹ್ಮಣರೇ ಅರ್ಚಕರಾಗುತ್ತಿರುವರು ವೀರಶೈವರು ಕೃಷಿ ವಾಣಿಜ್ಯಾದಿ ಯಾವ ವೃತ್ತಿಗಳನ್ನೂ ನಿಷೇಧಿಸುವುದಿಲ್ಲ ಆದರೆ, ಅರ್ಚಕ ವೃತ್ತಿಯನ್ನು ಮಾತ್ರ ಕೀಳೆಂದು ತಿಳಿಯಬಹುದೆ ?

8 ಕೀಳಾಗಿದ್ದರೆ ವೈದಿಕ ಪಂಡಿತರಾದ ಮರದವರೂ ಅರ್ಚಕ ವೃತ್ತಿಯನ್ನು ಮಾಡಬಹುದೊ ?

9, ಮಠದವರಿಗೆ ಮಾತ್ರ ಅರ್ಚಕವೃತ್ತಿಯು ಕೀಳಾಗಿದ್ದರೆ ಇತರ ಮಾಹೇಶ್ವರರಿಗೂ, ಭಕ್ತರಿಗೂ ಕೀಳಾಗದಿರುವುದೇನು ?

10 ಇತರ ವಾಣಿಜ್ಯಾದಿ ವೃತ್ತಿಗಳಂತೆ ಅರ್ಚಕ ವೃತ್ತಿಯೂ ಕೀಳಾಗಲಾರದೆಂದರೆ ಯೋಗ್ಯರಾದ ವೈದಿಕ ಪಂಡಿತರು ಈ ವೃತ್ತಿಯನ್ನು ಕೈಕೊಂಡರೆ ಭೂಷಣವಲ್ಲವೆ ?

11 ಇಷ್ಟಲಿಂಗಾಂಕಿತರಾದ ಇತರ ದೇವರ ಅರ್ಚಕವೃತ್ತಿಯು ಮರದವರಿಗೇ ಅಲ್ಲದೆ ಸರ್ವ ವೀರಶೈವರಿಗೂ ನಿಷೇಧವೆಂದರೆ ವೀರಶೈವರ ಅಧಿಕಾರದಲ್ಲಿರುವ ಗುಡಿಗಳ ಆಸ್ತಿಯನ್ನು ಇತರ ಸಮಾಜಾಭಿವೃದ್ಧಿಯ ಫಂಡನ್ನಾಗಿ ಮಾಡಿ ಸ್ಥಾಪಿತಮೂರ್ತಿಗಳಿಗೆ ಶರಣು ಹಾಕಿ, ಇಷ್ಟಲಿಂಗ ಪೂಜಾದಿಗಳಿಂದಲೇ ಕೃತಕೃತ್ಯರಾಗುವುದು ಸಮಾಜಕ್ಕೂ ಧರ್ಮಕ್ಕೂ ಭೂಷಣವಲ್ಲವೆ ?

ವಿಜ್ಞಪ್ತಿ —ವೀರಶೈವರ ದೇವಸ್ಥಾನಗಳಲ್ಲಿ ವಿದ್ಯಾಗಂಧವಿಲ್ಲದವರು ವಿಧ್ಯುಕ್ತವಾಗಿ ಪೂಜಿಸದಿರುವುದನ್ನೂ ವಿದ್ವಾಂಸರು ಅರ್ಚಕರಾಗಲು ಒಪ್ಪದಿರುವುದನ್ನೂ ನೋಡಿ ದೇವಾಲಯಗಳನ್ನು ಈ ಅಸ್ತವ್ಯಸ್ತತೆಯಲ್ಲಿಟ್ಟು ನಾವು ಪಾಪಭಾಗಿಗಳಾಗುವುದಿಲ್ಲವೆ ? ಎಂಬ ಧರ್ಮಸಂಶಯದಿಂದ ಮೇಗಣ ಪ್ರಶ್ನೆಗಳನ್ನು ಮಾಡಿರುವೆನಲ್ಲದೆ ಮತ್ತಾವ ಉದ್ದೇಶದಿಂದಲೂ ಅಲ್ಲ. ಶೀಘ್ರವಾಗಿ ಪೀಠಾಚಾರ್ಯರುಗಳಾಗಲಿ ವೀರಶೈವ ಪಂಡಿತರಾಗಲಿ ಸದುತ್ತರವನ್ನು ಪ್ರಕಟಿಸಿ ಧರ್ಮಸಂಶಯವನ್ನು ದೂರಮಾಡುವರೆಂದು ನಂಬಿರುವೆನು

ಓರ್ವ ದೇವಸ್ಥಾನದ ಧರ್ಮಕರ್ತ

ನೈಜಾಂದೇಶದ ವೀರಶೈವರ ಅಭ್ಯುದಯ

ವರ್ತಮಾನಪತ್ರಗಳಲ್ಲಿಯ "ಯಾದಗಿರಿಯು ಧನ್ಯಳಾದಳು" ಎಂಬ ಶಿರೋಲೇಖದ ಕೆಳಗಿನ ವಿಷಯವನ್ನು ನೋಡಿದರೆ ನೈಜಾಂದೇಶದ ವೀರಶೈವರ ಅಭ್ಯುದಯಕ್ಕೆ ಆರಂಭವಾಗಿದೆ ಎಂದು ಹೇಳಲು ಉತ್ಸಾಹವುಂಟಾಗುತ್ತದೆ ಈ ಪ್ರಾಂತದಲ್ಲಿ ವೀರಶೈವರ ಏಳ್ಗೆಯ ಬಗ್ಗೆ ಫಂಡುಗಳೂ, ಸಂಸ್ಥೆಗಳೂ ಇಲ್ಲವೆಂದು ಯೋಚಿಸುತ್ತಿರುವಾಗ ಒಂದೊಂದಾಗಿ ಫಂಡುಗಳೂ, ಸಂಸ್ಥೆಗಳೂ ಉದಯಿಸುತ್ತಿರುವುದನ್ನೂ ಹಾಗೆ ಉದಯಿಸಿದವುಗಳು ಇದ್ದಷ್ಟರಲ್ಲಿ ಸರಿಯಾಗಿ ಕೆಲಸ ನಡಿಸುವುದನ್ನೂ ಅವಲೋಕಿಸಿದರೆ ಅಲ್ಪಪ್ರಮಾಣದಿಂದಾದರೂ ಚೆಂತೆಯಿಲ್ಲ ವೀರಶೈವರ ಅಭ್ಯುದಯವಾಗುತ್ತಿರುವದೆಂದು ಧೈರ್ಯವಾಗಿ ಹೇಳಬಹುದು ನೈಜಾಂ ಇಲಾಖೆಯಲ್ಲಿ ಧನನಿಧಿ (ಫಂಡು) ಗಳ ನಾಮನಿರ್ದೇಶವೇ ಇಲ್ಲದಿದ್ದಾಗ ಗುರುಮಠಕಲ್ಲು ಶ್ರೀಗಳವರು ಪ್ರಥಮತಃ ತಮ್ಮ ಮಠದಲ್ಲಿ ಜರುಗಿಸಿದ ಧರ್ಮೋದ್ಧಾರಿಣೀ ಸಭೆಯಲ್ಲಿ "ಶ್ರೀ ಶಾಂತವೀರ ವಿದ್ಯಾವರ್ಧಕ ಫಂಡು" ಎಂಬ ಹೆಸರಿನಿಂದ ಚಿಕ್ಕ ಫಂಡೊಂದನ್ನು ತೆರೆದಿರುವರು ಆ ಫಂಡು 11 ವರ್ಷಗಳವರೆಗೆ ಬೆಳೆಯುವ ಇಷ್ಟಷ್ಟೇ ಉಳಿಯಿತು ಇದನ್ನರಿತು ಶ್ರೀಗಳವರು ಈ ಫಂಡಿಗೆ ತಮ್ಮ ಹೆಸರಿನ ಮೂಲಕ ಬೆಳೆಯದೆ ಉಳಿದಿದೆ ಏನೋ ಎಂಬ ಸಂಶಯದಿಂದ ಫಂಡಿನ ಆದಿಯಲ್ಲಿರುವ "ಶ್ರೀ ಶಾಂತವೀರ" ಎಂಬ ಹೆಸರನ್ನು ತೆಗೆದುಬಿಟ್ಟು "ಶ್ರೀ ನೈಜಾಂ ವೀರಶೈವ ವಿದ್ಯಾವರ್ಧಕ ಫಂಡು" ಎಂಬ ಹೆಸರನ್ನಿಡುವದು ಸರಿಯಾದುದೆಂದು ಫಂಡಿನ ವಾರ್ಷಿಕ ಸಭೆಯಲ್ಲಿ ಸೂಚಿಸಿ ಅದರಂತೆಯೇ ಹೆಸರನ್ನಿರಿಸಿರುವರು ಸದ್ಯಕ್ಕೆ ಈ ಫಂಡಿಗೆ "ನೈಜಾಂ ವೀರಶೈವ ವಿದ್ಯಾವರ್ಧಕಫಂಡು" ಎಂಬ ಹೆಸರೇ ಪ್ರಸಿದ್ಧವಾಗಿರುತ್ತದೆ ಇದರಿಂದ ಶ್ರೀಗಳವರ ಅಸಾಧಾರಣ ತ್ಯಾಗವು ವ್ಯಕ್ತವಾಯಿತಾದರೂ ಫಂಡು ವೃದ್ಧಿಸ್ಥಿತಿಯಲ್ಲಿಲ್ಲ ಆದರೂ ಇದ್ದಷ್ಟರ ಉತ್ಪನ್ನದಲ್ಲಿ ಬಡ ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ಪು ಕೊಡುವ ಏರ್ಪಾಟು ನಡೆದಿರುತ್ತದೆ ಈ ಫಂಡು ಸದ್ಯಕ್ಕೆ ಯಾದಗಿರಿಯಲ್ಲೇ ಇರುತ್ತದೆ ಇದರ ಅಭಿವೃದ್ಧಿಗಾಗಿ ನೈಜಾಂ ವೀರಶೈವ ಮುಂದಾಳುಗಳು ಪ್ರಯತ್ನಿಸಬೇಕಾದುದು ಅತ್ಯವಶ್ಯವಾದುದಾಗಿದೆ ಈ ಅವಧಿಯಲ್ಲಿ ಯಾದಗಿರಿಯ ಶ್ರೀ|| ಧರ್ಮವೀರ ಶಂಕರಪ್ಪನವರು ಉದಾರಬುದ್ಧಿಯಿಂದ 1½ ಲಕ್ಷ ರೂ ಗಳನ್ನಿತ್ತು ಈ ಪಟ್ಟಣದ ಉತ್ಸಾಹದಿಂದ "ಶ್ರೀ ಶಂಕರ ಸಂಸ್ಕೃತಪಾಠಶಾಲೆಯು" ಎಂಬ ಹೆಸರಿನ ಕಾಲೇಜೊಂದನ್ನು ಸ್ಥಾಪಿಸಿರುತ್ತಾರೆ ಅದರ ಅಮೃತೋಪಮಾನವಾದ ಫಲವು ಈಗಾಗಲೇ ಕೇವಲ ನೈಜಾಂದೇಶದ ವೀರಶೈವರಿಗಷ್ಟೇ ಅಲ್ಲದೆ ಸಕಲ ಪ್ರಾಂತದ ವೀರಶೈವರಿಗೂ ದೊರೆಯುತ್ತಲಿರುತ್ತದೆ ಧರ್ಮಕರ್ತರ ಸಂಕಲ್ಪಾನುಸಾರವಾಗಿ ಕಾಲೇಜಿನ ಚಾಲಕರೂ ಅಧ್ಯಾಪಕರೂ ಯೋಗ್ಯ ಹಾಗೂ ಪಂಡಿತರು ದೊರೆತದ್ದಾರೆ, ಅಂತೇ ಕಾಲೇಜು ಅತ್ಯುತ್ತಮವಾಗಿ ನಡೆದಿರುತ್ತದೆ ಇಷ್ಟರಲ್ಲಿ ಅದೇ ಯಾದಗಿರಿಯಲ್ಲಿ 'ಲಿಂಗೇರಿ' ಯವರೆಂಬ ಪ್ರಸಿದ್ಧ ಶ್ರೀಮಂತರು ಒಂದು ಲಕ್ಷ ರೂಪಾಯಿಗಳನ್ನು ವೀರಶೈವರ ಹಿತಕ್ಕಾಗಿ ಅರ್ಪಿಸಲು ಒಪ್ಪಿಕೊಂಡಿರುವರು ಇದರಿಂದ ಯಾದಗಿರಿಯು ಧನ್ಯನಗರವಾಗಿ ಪರಿಣಮಿಸಿತು, ನೈಜಾಂ ದೇಶದ ಧಾರ್ಮಿಕರ ಕೀರ್ತಿಯು ದಿಕ್ಕುಗಳನ್ನು ವ್ಯಾಪಿಸುವಂತಾಯಿತು ವೀರಶೈವರ ಅಭ್ಯುದಯವು ಪ್ರಾರಂಭವಾಯಿತೆಂದು ಹೇಳಬಹುದು ಇಲ್ಲಿ ಏಕೆ ಎಂದರೆ ಇದೊಂದು ಅನಿರೀಕ್ಷಿತ ಸಂದರ್ಭ— "ಶ್ರೀ ಕೈಲಾಸದ ಬಾಗಿಲು ತೆರೆಯಿತು" ಎಂಬಂತಾಯಿತು ಇಲ್ಲಿ ಪರಿಚಯವೂ ಎಂದಿಗೂ ಮರೆಯದಂತಹುದು — [illegible] ಶ್ರೀ ಗುರುಮಠಕಲ್ಲು [illegible] ಯೋಗ್ಯರಾದ [illegible] ದಿಕ್ಕುಗಳಲ್ಲಿ [illegible] ಉದಾರ ದಾನಿಗಳಾದ [illegible] ಶಿವಶರಣರೆ [illegible] ಮಹಾನುಭಾವರು [illegible] ಜೀವನದ (ಬಿಲ್ಲ) ವರು ಪ್ರಕಾಶ [illegible] ಧರ್ಮಕ್ಕೆ [illegible] ಯಾತನೆಯಿಂದ—ಈ ನೈಜಾಂ ದೇಶದಲ್ಲಿ ಇರುವರೆಗೆ [illegible] ಶ್ರೀ [illegible] ದ ಸ್ವಾಮಿಗಳ [illegible] ದೇಶಹಿತಚಿಂತಕರಾದ ಜನರಿರಬೇಕು [illegible] ಆದರೆ ಸಂಯೋಜನಾಶಕ್ತಿಯುಳ್ಳ ಮಹನೀಯರ ಕೊರತೆಯೊಂದಿತ್ತು ಆ ಕೊರತೆಯು ಶ್ರೀಮನ್ನಿರಂಜನ ಜಗದ್ಗುರು ಚಿತ್ರಕಲ್ಲು ದುರ್ಗದ ಶ್ರೀ ಮುರಿಘರಾಜೇಂದ್ರ ಮಹಾಸ್ವಾಮಿಗಳವರ ಕೃಪಾಪೋಷಿತರಾದ ಶ್ರೀ ಶಾಂತವೀರದೇಶಿಕವರೇಣ್ಯರು ಗುರುಮಠಕಲ್ಲು ಮಠಕ್ಕೆ ಅಧ್ಯಕ್ಷರಾಗಿ ಬಂದನಂತರ ಆ ಕೊರತೆಯು ದೂರವಾಯಿತು ಇದು ಅತಿಶಯೋಕ್ತಿಯೆಂದಾಗಲಿ ಸ್ತುತಿವಚನವೆಂದಾಗಲಿ ಯಾರೂ ತಿಳಿದ ಬಾರದು ನಿಶ್ಚಯವಾಗಿ ಈ ಮಹಾತ್ಮರು ಗುರುಮಠಕಲ್ಲು ಮಠಕ್ಕೆ ಅಧ್ಯಕ್ಷರಾಗಿ ಬಂದನಂತರವೇ ಈ ವಿಧವಾದ ಮಹಾಕಾರ್ಯಗಳಾರಂಭವಾದವು. "ನೈಜಾಂ ವೀರಶೈವ ವಿದ್ಯಾವರ್ಧಕ ಫಂಡು", "ಶ್ರೀ ಶಂಕರ ಸಂಸ್ಕೃತ ಕಾಲೇಜು" "ಲಿಂಗೇರಿಯವರ ಫಂಡು" (ಇದರ ಹೆಸರು ಕಾರ್ಯರೂಪದಲ್ಲಿ ಬಂದನಂತರ ಸ್ಪಷ್ಟವಾಗುತ್ತದೆ) ಈ ತ್ರಿವಿಧ ಮಹಾಕಾರ್ಯಗಳಿಗೂ ಶ್ರೀ ಶಾಂತವೀರಸ್ವಾಮಿಗಳವರೇ ಚೇತನಾಸ್ವರೂಪರಾಗಿರುತ್ತಾರೆ ಅಲ್ಲದೆ ಬೀದರ ಜಿಲ್ಲೆಗೆ ಸೇರಿದ ರಂಜೇರಿ ಎಂಬ ಗ್ರಾಮದ ಪ್ರಸಿದ್ಧ ಶ್ರೀಮಂತ ಪಟೇಲರವರಿಂದ ೭೦ ಸಹಸ್ರ ರೂಪಾಯಿ ವೀರಶೈವರ ವಿದ್ಯಾಭಿವೃದ್ಧಿಗಾಗಿಯೇ ವಾಗ್ದಾನಮಾಡಿಸಿದ್ದು ಆ ಕಾರ್ಯಾರಂಭವಾದರೂ ಇಷ್ಟರಲ್ಲಿಯೇ ಆಗುವದರಲ್ಲಿದೆ ಶ್ರೀಗಳವರು ಚಿಕ್ಕವಯಸ್ಸಿನವರಾದರೂ ಇವರು ಮಾಡುವ ಕಾರ್ಯಗಳು ಘನಕ್ಕೆ ಘನವಾಗಿದ್ದು ನೈಜಾಂ ದೇಶದ ವೀರಶೈವರ ಅಭ್ಯುದಯಕ್ಕೇ ಕಾರಣವಾಗಿವೆ ದೇಶದ ಅಭ್ಯುದಯಕ್ಕಾಗಿಯೇ ಶರೀರವನ್ನು ಸವೆಸುವ ಶ್ರೀಗಳವರಿಗೆ ಶ್ರೀ ಶಂಕರನು ದೀರ್ಘಾಯುರಾರೋಗ್ಯಾದಿಗಳನ್ನು ದಯಪಾಲಿಸುವಂತಾಗಲಿ ಶ್ರೀಮಂತ ಲಿಂಗೇರಿಯವರು ಅರ್ಪಿಸಿದ ಹಣದಿಂದ ಬೇಗನೆ ವೀರಶೈವರಿಗೆ "ಔದ್ಯೋಗಿಕ" ಶಿಕ್ಷಣ ಸಿಕ್ಕುವಂತಾಗಿ ತನ್ಮೂಲಕ ದೇಶದ ಅಭ್ಯುದಯಕ್ಕಾಸ್ಪದವಾಗುವಂತಾಗಲಿ

ವೀರಶೈವಾಭ್ಯುದಯಾರ್ಥಿ ಮಹಾಗಾಂವ್

ರಾಯಚೂರು ಪ್ರಾಂತದ ರಾಜಕೀಯ ಅನಾಥ ವಿದ್ಯಾರ್ಥಿಗಳಿಗೆ ಒಂದು ಶುಭಸೂಚನೆ

ಶ್ರೀ ಜಗದ್ಗುರು ಶ್ರೀ ಹಿಮವತ್ಕೇದಾರ ಸಿಂಹಾಸನಾಧಿಪತಿಗಳು ನಮ್ಮ ಪ್ರಾಂತದಲ್ಲಿ ಆಗಮಿಸಿದ್ದು ಸುಮಾರು ಎರಡು ವರುಷಗಳಾಗುತ್ತಬಂತು ಆಂದರೆ ಕೆಲವು ದಿವಸ ಶ್ರೀಗಳವರ ಅಡ್ಡಪಲ್ಲಕ್ಕಿಯ ಉತ್ಸವಗಳ ಬರವಾಗಿ ವ್ಯಾಜ್ಯ ನಡೆದು ಆದರಲ್ಲಿ ಎಷ್ಟೋ ಹಣ ವ್ಯಯವಾಯಿತು ಅಂದರೂ ಅಡ್ಡಿಯಿಲ್ಲ, ಉತ್ಸವ ಮಾಡಬೇಕೆಂದು ನಮ್ಮ ಸರಕಾರದವರ ಕಡೆಯಿಂದ ಅಪ್ಪಣೆ ದೊರೆಯಿತು ಅನಂತರ ಯಾವ ತರಹದ ತೊಂದರೆಗಳಿಲ್ಲದೆ ಸರಿಯಾಗಿ ಸರಕೀಟು ನಡೆಯುತ್ತಿತ್ತು ನಾವು ಇದೇ ಸಮಯವೆಂದು ತಿಳಿದು ಅನಾಥ ರಾಜಕೀಯ ವಿದ್ಯಾರ್ಥಿಗಳ ವಿಷಯವಾಗಿ ಹಣವನ್ನು ಕೂಡಿಸಬೇಕೆಂಬ ಕಾಂಕ್ಷೆಯಿಂದ ಶಿವಸಾರ ಮುಕ್ಕಾಮಿನಲ್ಲಿಗೆ ಇಲ್ಲಿಯ ಕೆಲವು ವೀರಶೈವ ಪ್ರಮುಖರ ಅಭಿಪ್ರಾಯದ ಪ್ರಕಾರ ನಾನು ಶ್ರೀಯುತ ವಕೀಲ ಬಸವಲಿಂಗಯ್ಯನವರು ಶ್ರೀಯುತ ವಕೀಲ ಅಮರಪ್ಪನವರು ಹಾಗು ಶ್ರೀಯುತ ವಕೀಲ ಸಿದ್ಧಲಿಂಗಪ್ಪನವರು ಹೋಗಿ ಯಾವತ್ತು ಸಮಾಚಾರವನ್ನು ಶ್ರೀ ಸಿಂಹಾಸನದ ಸರ್ವಾಧಿಕಾರಿಗಳಿಗೆ ತಿಳಿಸಿದೆವು ಆದಕ್ಕೆ ಅವರು ಬಂದ ಹಣದಲ್ಲಿ ಅರ್ಧಭಾಗದ ಪ್ರಕಾರ ಕೊಡಲು ಒಪ್ಪಿಕೊಂಡು ಅಪ್ಪಣೆಯ ವಿಷಯವಾಗಿ ಸಾಕ್ಷಾತ್ ಮಹಾ ಶ್ರೀಗಳವರ ಸನ್ನಿಧಿಗೆ ಒಂದು ಲೇಖನವನ್ನು ಬರೆದ ಕೊಂಡರು ಆದೇಪ್ರಕಾರ ನಾವು ಸಹ ಸಾಕ್ಷಾತ್ ಮಹಾ ಶ್ರೀಗಳವರ ಸನ್ನಿಧಿಗೆ ಒಂದು ಲೇಖನವನ್ನು ಬರೆದ ಕೊಂಡೆವು ವಿದ್ಯಾಭಿಮಾನಿಗಳಾದ ದಯಾನಿಧಿಗಳು ನಮ್ಮ ಲೇಖಗಳನ್ನು ನೋಡಿ ಮಹಾ ಸಂತೋಷಪಟ್ಟು ಶ್ರೀ ಸರ್ವಾಧಿಕಾರಿಗಳಿಗೆ ವಾಗ್ದಾನಮಾಡಿದ ಪ್ರಕಾರ ಅವಶ್ಯ ಹಣವು ಕೊಡಬೇಕೆಂದು ಅಪ್ಪಣೆಕೊಟ್ಟರು ಆದರೆ ವಿದ್ಯಾರ್ಥಿಗಳ ದುರ್ದೈವವೋ ಈ ವಿಷಯ ಕೇಳಲಿಕ್ಕೆ ಯೋಗ್ಯ ಮುಹೂರ್ತದ ವಿಶೇಷವೋ ತಿಳಿಯದು ಸರ್ವಾಧಿಕಾರಿಗಳನ್ನು ಹಣದ ವಿಷಯವಾಗಿ ವಿಚಾರಿಸಿದಾಗಲೆಲ್ಲ ಏನಾದರೊಂದು ನೆಪಹೇಳಿ ಉಪಶಾಂತಮಾಡುತ್ತಿದ್ದರು ಅಷ್ಟರೊಳಗೆ ಸಾಕ್ಷಾತ್ ಮಹಾ ಶ್ರೀಗಳವರು ನಮ್ಮ ಪ್ರಾಂತಕ್ಕೆ ದಯಮಾಡಿದರು ಇವರ ಬಡವಿದ್ಯಾರ್ಥಿಗಳ ಸುದೈವವೇ ಸರಿ ಸಾಕ್ಷಾತ್ ಶ್ರೀ ಮಹಾಸ್ವಾಮಿಗಳವರ ಶಿವಿರವು ಕಲ್ಲೂರಿನಲ್ಲಿದ್ದಾಗ್ಗೆ ನಾನು ಮತ್ತು ಶ್ರೀಯುತ ವಕೀಲ ಬಸವಲಿಂಗಯ್ಯನವರು ಹೋಗಿ ಯಾವತ್ತು ಸಮಾಚಾರವನ್ನು ಶ್ರೀಗಳವರ ಸನ್ನಿಧಿಯಲ್ಲಿ ಅರಿಕೆಮಾಡಿಕೊಂಡಿದ್ದಲ್ಲದೆ ಬಂದ ಹಣದಲ್ಲಿ ಎಂಟಾಣೆಭಾಗದ ಪ್ರಕಾರ ಕೊಟ್ಟು ಫಂಡ ಕೂಡಿಸಬೇಕೆಂದು ಮತ್ತೊಂದು ಅರ್ಜಿಯ ನ್ನರ್ಪಿಸಿದೆವು ಅದಕ್ಕೆ ಶ್ರೀಗಳವರು ಬಂದ ಹಣದಲ್ಲಿ ಎಲ್ಲಾ ಆರಭಾಗ [illegible] ಕೊಡತಕ್ಕದ್ದೆಂದು ಒಪ್ಪಿಕೊಂಡು ಅದೇ ಅರ್ಜಿಯಮೇಲೆ ಸ್ವಂತ ಒಕ್ಕಣವನ್ನು ಬರೆದು ಹಣವನ್ನು ಕೊಡುವ ವಿಷಯವಾಗಿ ಸರ್ವಾಧಿಕಾರಿಗಳಿಗೆ ಅಪ್ಪಣೆ ನೀಡಿ ಸ್ವಸ್ಥಾನಕ್ಕೆ ತೆರಳಿದರು ಇಷ್ಟಾದಾಗ್ಯೂ ಸರ್ವಾಧಿಕಾರಿಗಳು ಈ ವಿಷಯದ ಕಡೆ ಸಂಪೂರ್ಣ ಅಲಕ್ಷ್ಯ ಮಾಡಿದರು ಆದಕ್ಕಾಗಿ ಬಡವಿದ್ಯಾರ್ಥಿಗಳು ಸರ್ವಾಧಿಕಾರಿಗಳಮೇಲೆ ಸಿಟ್ಟು ಸರಸ್ಸು ಮಾಡುತ್ತ "ಕಾಲಿಗೆ ಬಿದ್ದರೂ ಅಷ್ಟರೊಳಗಾಗಿ ಸಾಕ್ಷಾತ್ ಮಹಾಸ್ವಾಮಿಗಳು ಸರ್ವಾಧಿಕಾರಿಗಳನ್ನು ಸಂಸ್ಥಾನದಿಂದ ತೆಗೆದುಬಿಟ್ಟರು (ಇವರನ್ನು ಅಧಿಕಾರದಿಂದ ತೆಗೆದದ್ದು ಬಡವಿದ್ಯಾರ್ಥಿಗಳ ಸಿಟ್ಟು ಸುರಿದ ಕಾರಣವಾದಂತೆ ತೋರುತ್ತದೆ) ಈಗ ಶ್ರೀಯುತ ಸಿದ್ಧಲಿಂಗಯ್ಯನವರನ್ನು (ಉರುಫ ಗುರು ೨) ಆ|| ಮುಖ್ತಾರದಾರರನ್ನಾಗಿ ನೇಮಿಸಿದ್ದಾರೆ ಇವರು ಫಂಡಿನ ವಿಷಯವಾಗಿ ಸಾಕ್ಷಾತ್ ಶ್ರೀಗಳವರು ವಚನಕೊಟ್ಟ ಪ್ರಕಾರ ನಡಿಸುತ್ತಾರೆಂದು ನನಗು ವತ್ತು ಇತರ ಪ್ರಮುಖರಿಗು ಸಹ ಪೂರ್ಣ ನಂಬಿಗೆ ಇದೆ ಏಕೆಂದರೆ ಈ ವಿಷಯವಾಗಿ ಮೊದಲನೇ ಅಭಿಪ್ರಾಯ ಇವರದಾಗಿತ್ತು ವಿದ್ಯಾಭಿಮಾನಿಗಳಾದ ಮೇಲ್ಪಾಂಕ್ತರು ಏಕಮನಸ್ಸಿನಿಂದ ಕಾರ್ಯಕ್ರಮಗಳನ್ನು ಮಾಡುತ್ತಿರುವರು ಇವರ ವಾ ಪಟ್ಟಾಧಿಕಾರ ಸಂದರ್ಭ—ನಮ್ಮ ಪ್ರಾಂತದ ಅನಾಥ ರಾಜಕೀಯ ವಿದ್ಯಾರ್ಥಿಗಳಿಗೆ ಒಂದು ಯೋಗ್ಯವಾದ ಫಂಡನ್ನು ಕೂಡಿಸಬೇಕೆಂದು ಸಂಕಲ್ಪದಲ್ಲಿ ಸೇರಿಕೊಂಡಿದ್ದಾರೆ ಸದ್ಯಕ್ಕೆ ಇವರಿಗೆ ಯಾವತರದ ಪೇಚವೂ ಇಲ್ಲ ಅಂದಬಳಿಕ ಇವರ ಕರವಾಗಿ ಎಷ್ಟು ಬರಕೊಂಡರೂ ತೀರದು ಶ್ರೀ ಪರಮಾತ್ಮನು ಇವರಿಗೆ ಕಲ್ಯಾಣಮಾಡುವದಲ್ಲದೆ ಇಂಥ ಸತ್ಕಾರ್ಯಗಳನ್ನೇ ಮಾಡುವ ದಕ್ಷ ಮನಸ್ಸೀಯಲೆಂದು ನಾನು ದಯಾನಿಧಿಯಾದ ಪರಮಾತ್ಮನನ್ನು ಮತ್ತು ಸಾಕ್ಷಾತ್ ಮಹಾ ಶ್ರೀಗಳವರನ್ನೂ ಪ್ರಾರ್ಥಿಸುವೆನು ಸಂಸ್ಥಾನದವರು ಮಸ್ಕಿ ಮುಕ್ಕಾಮಿನಲ್ಲಿದ್ದಾಗ್ಗೆ ಅಂದರೆ ತಾ|| 12 ನೇ ಜುಲೈ ದಿವಸ, ನಾನು ಸ್ವತಃ ಶ್ರೀಮಂತ ಸರ್ಕಾರ ಅವರ ಶಿಬಿರದಲ್ಲಿ ಹೋಗಿ ಬಂದ ಹಣದಲ್ಲಿ [illegible] ಬಸವಲಿಂಗ ದೇವರ ನಿರ್ಧಾರದಿಂದ ಆಗಬೇಕೆಂದು [illegible] ನಮಗೆ ನಂಬಿಗೆ [illegible] ಕೊಡುವದು [illegible] ಅಡಿ ಶ್ರೀಗಳವರ ಹೆಸರಿನಿಂದ ಒಂದು ಫಂಡನ್ನು ತೆರೆದು ಸ್ಥಾಪಿಸಿರುತ್ತಾರೆ. [illegible] ಶ್ರೀಗಳು ಮೊದಲ ವಿಷಯದಲ್ಲಿ ದಯವಿಟ್ಟು ಸಂಸ್ಥಾನದಲ್ಲಿದ್ದು ಕಾರ್ಯಕ್ರಮದ ಪ್ರಾಯಶ್ಚಿತ್ತ ಬರುವದೆಂದು ಭಾವಿಸಿ ಹೊರಟರು. ಆದರೆ ನಮ್ಮ ಪ್ರಮುಖರು ಸಹ ಸ್ಥಾನ ಹೋಗಿದ್ದಾಗ್ಗೆ ನೆಲಸಿರುವ ಅನಾಥ ವಿದ್ಯಾರ್ಥಿಗಳ ಬಗ್ಗೆ ಆಸ್ಥೆಯಿಂದ ಹಸ್ತಾಂತರಿಸುವ ಕೆಲಸ ಎಲ್ಲಿ ಪ್ರಮುಖರು ಸಂಸ್ಥಾನದ ಕಾರ್ಯಕರ್ತರು ಮತ್ತು ಇತರ ಜನರು ಹಣವನ್ನು ಸರಿಯಾಗಿ ಬಳಸಬೇಕೆಂದು ಸೂಚನೆಯನ್ನು ಮಾಡಿರುವರು. ಬಡವಿದ್ಯಾರ್ಥಿಗಳ ಬಗ್ಗೆ ಸ್ವಾಮಿಗಳವರು ಕರುಣೆಯಿಂದ ಆಶೀರ್ವಾದವನ್ನೂ ಕೊಟ್ಟು ಕಾರ್ಯನಿರ್ವಾಹಕರಾದ ಶ್ರೀ ಸಿದ್ಧಲಿಂಗಯ್ಯನವರು ಮುಂತಾದ ಸ್ವಾಮಿಗಳಿಂದ ಒಳ್ಳೆಯ ಬುದ್ಧಿಯನ್ನು ಕೊಡುವವರೆಂದು ಭಾವಿಸಲಾಗಿದೆ. ಶ್ರೀ ಶಾಸ್ತ್ರಿಗಳವರಿಗೆ ದೀರ್ಘಾಯುಸ್ಸು ಕೊಡಲೆಂದು ನಾನು ಶ್ರೀ ಪರಮಾತ್ಮನನ್ನು ಪ್ರಾರ್ಥಿಸುವೆನು, ದಯಾನಿಧಿಗಳಾದ ಸಾಕ್ಷಾತ್ ಶ್ರೀಗಳವರು ಸದರಿ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ಹಣವನ್ನು ಕೊಡಿಸಿ ಯೋಗ್ಯವಾದ ಫಂಡನ್ನು ಏರ್ಪಾಟುಮಾಡುತ್ತಾರೆಂದು ವಾಗ್ದಾನಮಾಡಿದ ವಿಷಯವನ್ನು ಮೇಲೆ ಬರೆದುಕೊಂಡಿದ್ದೇನೆ ಅಲ್ಲದೆ ಸಾಕ್ಷಾತ್ ಶ್ರೀಗಳವರು ಅನೇಕ ಸ್ಥಳಗಳಲ್ಲಿ ಅನಾಥ ವಿದ್ಯಾರ್ಥಿಗಳ ಸಲುವಾಗಿ ಫಂಡುಗಳನ್ನು ಏರ್ಪಾಟು ಮಾಡಿದ್ದು ಸರ್ವರಿಗೂ ವಿದಿತವಿರುವದು ಕಾರಣ ನಮ್ಮ ಪ್ರಾಂತದ ವೀರಶೈವ ಪ್ರಮುಖರಿಗೆ ನಾ ಪ್ರಾರ್ಥನೆ ಮಾಡಿಕೊಳ್ಳುವದೇನಂದರೆ, ಶ್ರೀಗಳವರಿಗೆ ಬೆನ್ನಾಗಿ ಸಹಾಯವಾಗಿ ಧರ್ಮಕಾರ್ಯದಲ್ಲಿ ಭಾಗಿಗಳಾಗಿ ಅನಾಥ ರಾಜಕೀಯ ವಿದ್ಯಾರ್ಥಿಗಳ ತೊಂದರೆಯನ್ನು ದೂರಮಾಡಿದಲ್ಲಿ ನಿಜವಾಗಿ ಮಹೋಪಕಾರವನ್ನು ಮಾಡಿದಂತಾಗುವುದು ಸದರಿ ವಿದ್ಯಾರ್ಥಿಗಳು ಇರುವದಕ್ಕಾಗಿ ಶ್ರೀಯುತ ರಸಪ್ಪುರ ಮುನಿಯಪ್ಪನವರು ಇಲ್ಲಿ ಒಂದು ಬೋರ್ಡಿಂಗನ್ನು ಕಟ್ಟಿಸಿರುವರು ಕಾರಣ ಇವರಿಗೆ ಯಾವಾಗಲೂ ಇಂಥ ಧರ್ಮಕಾರ್ಯಗಳನ್ನು ಮಾಡುವುದಕ್ಕಾಗಿ ಮನಸ್ಸೀಯಲೆಂದು ಶ್ರೀ ಪರಮಾತ್ಮನನ್ನು ಪ್ರಾರ್ಥಿಸುವೆನು

ಬೇಖಾಸ ಎಚ್ ವಿರೂಪಾಕ್ಷಗೌಡ, ವಕೀಲ,
ಸೆಕ್ರೆಟರಿ ವೀರಶೈವ ಅನಾಥ ರಾಜಕೀಯವಿದ್ಯಾರ್ಥಿಗಳ ಬೋರ್ಡಿಂಗ್,
ರಾಯಚೂರು

ಡಾಕ್ಟರ್ ಜೀ. ಬೀ. ಯವರ

ಸುಗಂಧ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ —ಪೀನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು ಶ್ಲೇಷ್ಮದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ಎಲ್ಲಾ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ ಮೂರು ಬಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾಗದು

ಬುಡ್ಡಿ ಒಂದಕ್ಕೆ ಕ್ರಯ ರೂ ೦—೪—೦ ವಿ ಪಿ ೦—೮—೦
ಡಜನ್ ಗಳಿಗೆ ಕ್ರಯ ರೂ ೨—೮—೦ ವಿ ಪಿ ಚಾರ್ಜು ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ

ಏಜೆಂಟ್ಸ ಗುರುಬಸವ ಅಂಡ್ ಕಂಪನಿಲಿಮಿಟೆಡ್,
11| ಪೋ. ಬಾ ೫೧೦, ಮದರಾಸು.

೧೯೪೦ನೆಯ ಇಸವಿ ಅಕ್ಟೋಬರ್ ತಾ|| ೨೬ ರಿಂದ ೧೯೪೦ನೆಯ ಇಸವಿ ನವಂಬರ್ ೧ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೬೨ನೆಯ ವಿಕ್ರಮನಾಮಸಂವತ್ಸರದ ಆಶ್ವೀಜ ಬಹುಳ ನವಮಿಯಿಂದ ಆಶ್ವೀಜ ಬಹುಳ ಅಮಾವಾಸ್ಯೆವರೆಗಿನ ಪಂಚಾಂಗ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತುಲಾ ಮಾಸ
26	ಶನಿ	ನವ	43 20	ಆಶ್ಲೇ	53 20	10
27	[1] ಭಾನು	ದಶ	38 3	ಮಘ	49 10	11
28	[2] ಸೋಮ	ಏಕಾ	33 2೦	ಪುಬ್ಬ	47 0	12
29	[3] ಮಂಗಳ	ದ್ವಾದ	29 46	ಉತ್ತ	45-10	13
30	[4] ಬುಧ	ತ್ರಯೋ	26 10	ಹಸ್ತ	44 15	14
31	ಗುರು	ಚತು	25-0	ಚಿತ್ತ	4೩ 2೦	15
1	[6] ಶುಕ್ರ	ಅಮಾ	24-16	ಸ್ವಾತಿ	45 30	16

(1) ಮಳೆನಕ್ಷತ್ರ ಸ್ವಾತಿ ೨ ನೆಯ ಪಾದ (2) ಸರ್ವೈಕಾದಶಿ (3) ಪ್ರದೋಷ (4) ಮಳೆನಕ್ಷತ್ರ ಸ್ವಾತಿ ೪ ನೆಯ ಪಾದ, ನರಕಚತುರ್ದಶಿ ಪ್ರಯುಕ್ತ ತೈಲಾಭ್ಯಂಗ ಹಬ್ಬ (5) ಕೇದಾರೇಶ್ವರವ್ರತಂ, ದೀಪಾವಳಿ, ಫಸಲಿ ಸಂವತ್ಸರಾದಿ, ಧನಲಕ್ಷ್ಮೀಪೂಜಾ (6) ಬಲೀಂದ್ರಪೂಜಾ

ಮೈಸೂರು ವೈ ದಿವಾಕರಪ್ಪನವರಿಂದ ಕ್ರಾಫ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REG NO M 174

ಮೈಸೂರ್ ಸ್ಟಾರ್

ಪ್ರತಿ ಶನಿವಾರ ಪ್ರಕಟಿಸಲ್ಪಡುವದು

[ಸ್ಥಳದವರಿಗೆ ವಾರ್ಷಿಕ ಚಂದಾ ೧-೧೦-೦]　　[ಪರಸ್ಥಳದವರಿಗೆ ೨-೮-೦]　　[ಮೈಟ್ರಿಗೆ ೩-೮-೦]

ಸಂಪುಟ ೪೨]　　ಮೈಸೂರು ಸ್ಟಾರ್ ಸೆ ೧೯೨೭ ನೆಯ ಇಸವಿ ನವಂಬರ್ ತಾರೀಖು ೨ ನೆಯ ಶನಿವಾರ　　[ಸಂಚಿಕೆ ೪೪

INSURE IN THE MYSORE STATE LIFE INSURANCE, PUBLIC BRANCH

Life Insurance is admittedly the best form of investemnt and the greatest safeguard against the old age and death

The best, safest, cheapest, most profitable and most convenient place for insuance is the Branch of the Mysore State Life Insurance

Policies are issued from Rs 100 to Rs 10,000 and copies of rules and forms of application can be had from all Government Treasuries, Economing Superintendents, Helpers and the Insurance Office, Public Office Buildings, Bangalore

Sd/ S SHAMANNA,
Secretary,
[50—3]　Insurance Committee

ವೀರಶೈವಮತಗ್ರಂಥಗಳು.

ಶಿವಾಧಿಕ್ಯಶಿಖಾಮಣಿಃ.

ಪ್ರತಿ ೧ ಕ್ಕೆ ಬೆಲೆ ೧-೦-೦

ಇದು ಚೋಳದೇಶದಲ್ಲಿ ಶ್ರೀಮದ್ವೇದಾಂತಾಚಾರ್ಯರನ್ನೂ, ವೈಷ್ಣವ ಮತಸ್ಥನಾದ ವಿಜಯೀಂದ್ರತೀರ್ಥರನ್ನೂ ನಡೆದ ಪ್ರಶ್ನೋತ್ತರರೂಪವಾಗಿದೆ ಇದರಲ್ಲಿ ಶಿವೋತ್ಕರ್ಷ, ಲಿಂಗಧಾರಣ, ಅನ್ಯಾವರಣ ಊರ್ಧ್ವಪುಂಡ್ರಖಂಡನ, ವಿಷ್ಣುವತಾರಸಂಹಾರ ಶಂಖ ಚಕ್ರ ಮುದ್ರಾಧಾರಣ ನಿಷೇಧ ಪ್ರದೋಷಕಾಲದಲ್ಲಿ ವಿಷ್ಣುದರ್ಶನಧಿಕ್ಕಾರವೇ ಮೊದಲಾದ ಅಸಾಧಾರಣಗಳಾದ ನೂರು ವಿಷಯಗಳು ಸಪ್ರಮಾಣವಾಗಿ ಬೋಧಿಸಲ್ಪಟ್ಟಿವೆ ಈ ಗ್ರಂಥಕ್ಕೆ ಸರ್ವರಿಗೂ ತಿಳಿಯುವಂತೆ ಸುಲಭಶೈಲಿಯಿಂದ ಕನ್ನಡ ಟೀಕೆಯನ್ನು ಬರೆದಿದ್ದೇವೆ ಇದನ್ನು ವೀರಶೈವರು ಅವಶ್ಯವಾಗಿ ನೋಡಬೇಕಾಗಿದೆ

ನ್ಯಾಯಶತಕಂ —ಇದರ ಪ್ರತಿಯೊಂದು ಶ್ಲೋಕದಲ್ಲೂ ಲೋಕೋಕ್ತಿಗೋಸ್ಕರ, ಕಾಕತಾಳ ಮೊದಲಿಂದ ಒಂದೊಂದು ನ್ಯಾಯವನ್ನು ದೃಷ್ಟಾಂತಿಸಿ, ವಿದ್ವಜ್ಜನರಿಗೆ ಆನಂದವನ್ನುಂಟುಮಾಡ ವಂತೆ ಶಿವಾಧಿಕ್ಯವು ವರ್ಣಿಸಲ್ಪಟ್ಟಿದೆ ಪಾರಾಯಣಕ್ಕೆ ಅತ್ಯುತ್ತಮವಾಗಿದೆ ಬೆಲೆ ೦ ೨ ೦

ವಿ ಪಿ ಖರ್ಚ ಪ್ರತ್ಯೇಕ

ಶ್ರೀ ಸೋಮಶೇಖರಸ್ವಾಮಿಗಳು,

[12—9]　ಸನುಷ್ಯನಾಯಕರ ಬಸವಾಜಿ ಗಾರ್ಡನ್, ಮೈಸೂರು

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರು



ಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ —ಪಿನಸಿ ಒಂಟಿತಲೆನೋವು, ತಲೆಯಲ್ಲಿನ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಪೆಟ್ಟಿದ್ದ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನು ಹೆಚ್ಚು ಮಾಡುತ್ತದೆ ಮೂರು ಬಟ್ಟು

ನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಟಿಕೆಯನ್ನು ಬೆರೆಸಿದರೆ ಎಲ್ಲವೂ ಪರಿಮಳವಾಗುವುದು ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ [illegible] ಉಪಯೋಗಿಸುತ್ತಾರೆ ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾಗದು

ಬುಡ್ಡಿ ಒಂದಕ್ಕೆ ಕ್ರಯ ರೂ ೦—೯—೦, ವಿ, ಪಿ ೦—೪—೦ ಡಜನ್ ೧ಕ್ಕೆ ಕ್ರಯ ರೂ ೬—೮—೦ ವಿ. ಪಿ. ಚಾರ್ಜು ೮ ಆಣೆ, ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ

ವಿಳಾಸ—ಗುರುಬಸವ ಅಂಡ್ ಕಂಪನಿಲಿಮಿಟೆಡ್,

[30—42]　ಪೋ. ಬಾ. ೫೧೦, ಮದರಾಸು.

೧೯೨೮ ನೇ ಇಸವಿಯ ಶಿದ್ದಪ್ಪಾಸ್ ಮಾಡಲ್ ಮೈಸೂರು ಕ್ಯಾಲೆಂಡರುಗಳು.

1 ಅನೇಕ ವಿಷಯಗಳನ್ನೊಳಗೊಂಡು ಚಾಮುಂಡೇಶ್ವರಿ ಮತ್ತು ಮಹಾವಿಷ್ಣುಲೀಲಾ ಮೊದಲಾದ ದೇವರ ಪಿಕ್ಚರ್‌ಗಳು 17 ನ್ನು ಇಟ್ಟು ಅಂದವಾಗಿ ತಯಾರಿಸಿದ ದೊಡ್ಡ ಸೈಜಿನ ಸಚಿತ್ರ ಷೀಟು ಕ್ಯಾಲೆಂಡರ್　50 ಕ್ಕೆ 1—2—0　100 ಕ್ಕೆ 2—0—0,

2 $3\frac{1}{4}$" × $4\frac{1}{4}$" ಸೈಜಿನ ಪಾಕೆಟ್ ಕ್ಯಾಲೆಂಡರು　25 ಕ್ಕೆ 1—3—0　100 ಕ್ಕೆ 4—12—0,

3 $2\frac{1}{2}$" × $3\frac{1}{2}$" ಸೈಜಿನ ಇಂಗ್ಲೀಷ್ ಪಾಕೆಟ್ ಕ್ಯಾಲೆಂಡರ್　12 ಕ್ಕೆ 0—14—0　25 ಕ್ಕೆ 1—11—0

4 ಅನೇಕ ಬಣ್ಣಗಳಿಂದ ರವಿವರ್ಮ ಪ್ರೆಸ್ಸಿನಲ್ಲಿ ಅಂದವಾಗಿ ಪ್ರಿಂಟಾದ 10" × 14" ಸೈಜಿನಲ್ಲಿ ಈಶ್ವರ ಪಾರ್ವತಿ ಗಣಪತಿ ನಂದೀಶ್ವರರಿರುವ ಪಿಕ್ಚರು ಕ್ಯಾಲೆಂಡರು　1 ಕ್ಕೆ 0—3—0　12 ಕ್ಕೆ 1—2—0,

5 18" × 22" ಸೈಜಿನಲ್ಲಿ ದಪ್ಪ ಅಕ್ಷರಗಳಿಂದ ಪ್ರಿಂಟಾಗಿರುವ ತಿಂಗಳಿಗೆ 1 ಷೀಟಿನಂತೆ ಹರಿದುಬಿಡುವ ಆಫೀಸ್ ಕ್ಯಾಲೆಂಡರ್　1 ಕ್ಕೆ 0—4—0　12 ಕ್ಕೆ 2—4—0,

0—8—0 ಆಣೆ ರವಾನಿಸಿದವರಿಗೆ ಮೇಲ್ಕಂಡ 5 ನಮೂನೆ ಕ್ಯಾಲೆಂಡರನ್ನು ಮಾದರಿಗಾಗಿ ಫ್ರೀ ಪಾರ್ಸಲ್ ಮೂಲಕ ರವಾನಿಸಲಾಗುತ್ತೆ. ಮೇಲ್ಕಂಡ ದರದಂತೆ ನಿಮಗೆ ಬೇಕಾಗುವ ಕ್ಯಾಲೆಂಡರುಗಳಿಗೆ ಆಗುವ ಪೂರಾ ಹಣವನ್ನು ರವಾನಿಸಿದಲ್ಲಿ ಪೋಸ್ಟಲ್ ಪಾರ್ಸಲ್ ದ್ವಾರ ನಿಮ್ಮ ವಿಳಾಸಕ್ಕೆ ಫ್ರೀಯಾಗಿ ರವಾನಿಸಲಾಗುತ್ತೆ ವಿ ಪಿ ಮೂಲಕ ಕ್ಯಾಲೆಂಡರಗಳನ್ನು ರವಾನಿಸ ಬೇಕಾದರೆ ಪೋಸ್ಟೇಜು ಮುಂತಾದ್ದು ಕೊಡಬೇಕಾಗುತ್ತೆ ವಿ ಪಿ ಮೂಲಕ ರವಾನಿಸಲು ಒಟ್ಟರ್ಧ ಆರ್ಡರುಗಳಿಗೆ [illegible]

ಕ್ಯಾಲೆಂಡರುಗಳು ಮುಗಿದನಂತರ ಬರತಕ್ಕ ವಿ ಪಿ ಆರ್ಡರುಗಳನ್ನು ಹಿಂದೆ ಕಳುಹಿಸದಂತೆ ವಾಪಸ್ ಮಾಡಲಾಗುತ್ತೆ

ಮನಿಯಾರ್ಡರ್ ರವಾನಿಸುವ ವಿಳಾಸ —ಎಂ ಎಸ್ ಸಿದ್ದಪ್ಪ ಅಂಡ್ ಬ್ರದರ್ಸ್,

[30—41]　ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

೧೦೦೦ ರೂಪಾಯಿ ಇನಾಮು

ಮಿರಜಿಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್. ಕಾಪಸೆ, ಇವರ

ಅಲ್ಪವ್ಯಯಕ್ಕಾಗಿ ಕ್ಷೀಣವಾಗ ಒಡಿರಿ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ (ಸ್ಟಾರ್ ರಿಜ) ವಜ್ರಾಂಗಸುಂದರಪಾಕ.

ಧೀಕರಿಸಿದರೆ ಕ್ಷೀಣತೆ ಕಾಯ್ದು ಕೊಳ್ಳುವರು

ಈ ಪಾಕಸೇವನೆಯಿಂದ ಎಲ್ಲ ಧಾತುವಿನ ವಿಕಾರಗಳು ಧಾತುಕ್ಷೀಣದಲ್ಲಿಯು ಉಷ್ಣತೆ, ಮುಷ್ಟಿಮೈಥುನದಿಂದುಂಟಾದ ಇಂದ್ರಿಯ ಶಿಥಿಲತ್ವ, ಸದ್ಯಂತಸಕ್ತ ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ವೀರ್ಯವು ತೆಳುವಾಗುವದರಿಂದುಂಟಾದ ರೋಗದ ಮೂಲಕ [illegible] ನಡೆಸೋದು ಸೊಂಟನೋವು ಎದೆನೋವು ಹಾರ್ಟ ಸಿಂಡಿಕ ಜೀರ್ಣಜ್ವರ ಮೂಲವ್ಯಾಧಿ ಮುಖರೋಗ ಹಳೇಜಿವರ ಮತ್ತು ಗರ್ಮಿ ರಸಾಯನ ಸೇವನೆಯಿಂದಾದ ದುಷ್ಪರಿಣಾಮಗಳು ಯಾವದೇ ತರದ ಜ್ವರದಿಂದ ಎದ್ದ ಮೇಲೆ ಆದ ಕ್ಷೀಣತೆ ಮುಂದುದಿನ ಅಶಕ್ತತೆ ಉರಿಮೂತ್ರ ಕೈಕಾಲು ಉರಿಯೋಣ, ಎಲ್ಲ ಪಿತ್ತವಿಕಾರಗಳು ನಿದ್ರೆಯು ಬಾರದ ಇರೋಣ, ಸ್ತ್ರೀಯರಿಗೆ ಸಂತತಿ ನಷ್ಟವಾಗೋಣ ಮೋಲಿಂಡವೇಳೆ ಗರ್ಭಪಾತವು ಎಲ್ಲ ಬಗ್ಗೆಯ ಕೆಮ್ಮು ಗರ್ಭಾಶಯ ವಿಕಾರದಿಂದ ಸಂತತಿ ಆಗದೆ ಇರೋಣ, ಮುಂತಾದ ವೃದ್ಧ ಸ್ತ್ರೀಪುರುಷರ ಸರ್ವರೋಗಗಳು ಹೋಗಿ ಏಕೆ ಹಸಿವೆಯು ಆಗುತ್ತದೆ ಶರೀರಕ್ಕೆ ಸಾಧವಾಗಿ ಧಾತುವೃದ್ಧಿಯಾಗಿ ವೀರ್ಯ ಘಟ್ಟಿ ಆಗುವದಲ್ಲದೆ ಪುರುಷತ್ವವು ಹೆಚ್ಚುತ್ತದೆ ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಹಾಯಕ ಆಗುತ್ತದೆ ಈ ಪ್ರಕಾರ ಕಾಯುವ ಧಾತುಪೌಷ್ಟಿಕ [illegible] ಈ ಯೋಗ್ಯತೆಯವರೆಗೆ ಯಾರೂ ಮಾಡಿಲ್ಲ [illegible] ಜನ್ಮಗಳ ಹೆಸರು ಕಡಿಮೆ ನಮೂದ ಮಾಡಿರುತ್ತದೆ [illegible] ಈ ಜನಸುಗಳಲ್ಲಿ ಧಾತುಪೌಷ್ಟಿಕ [illegible] ಸಿದ್ಧಮಾಡಿ ಕೊಟ್ಟವರಿಗೆ ೧೦೦೦ ರೂಪಾಯಿ ಇನಾಮು ಕೊಡುವೆವು ಮುಂಜಾನೆಗೆ ೨ ತೊಲೆಯು ೧ ವೇಳೆ ರಾತ್ರಿ ಭೋಜನಾನಂತರ ೨ ತೊಲೆಯು ಒಂದು ಪಡಿಯನ್ನು ತಿಂದು ಅದರಮೇಲೆ ಸ್ವಲ್ಪ [illegible] ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ, ಸ್ತ್ರೀಮಕ್ಕಳಿಗೆ ೨೧ ದಿವಸ ಸಾಕಾಗುವಷ್ಟು ಈ ಪಾಕದ ೪೪ ತೊಲೆ ಡಬ್ಬಿಗೆ ೫। ರೂ ೩ ಡಬ್ಬಿಗೆ ೧೪। ರೂ, ೬ ಡಬ್ಬಿಗೆ ೨೭ ರೂ, ವ್ಹಿ ಪಿ ಖರ್ಚು ಬೇರೆ ೩ ಡಬ್ಬಿಗಳನ್ನು ತಕ್ಕೊಂಡರೆ ಪೋಸ್ಟೇಜು ಬರುವುದು

ಕೇವಲ ಸ್ವಪ್ನಾವಸ್ಥೆ —ಈ ವಿಕಾರಕ್ಕೆ ೬ ದಿವಸಗಳಲ್ಲಿ ಗುಣ ೨೧ ದಿವಸ ಸಾಕಾಗುವಷ್ಟು ಸೀಸೆ ೧ ಕ್ಕೆ ೩ ರೂಪಾಯಿಗಳು.

ಪ್ರಮೇಹ (ಪರಮಾ)—ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ ೨೪ ತಾಸುಗಳಲ್ಲಿ ಗುಣ ೫ ದಿವಸ ಸಾಕಾಗುವಷ್ಟು ಸೀಸೆ ೧ ಕ್ಕೆ ೪ ರೂಪಾಯಿಗಳು

ಪಿನಸಿ—ಮೂಗಿನೊಳಗಿನ ಗಂಟಾಳಿ ಹುಣ್ಣು ರಕ್ತ ಕೀವು, ಹುಣ್ಣು, ದುರ್ಗಂಧ, ಕ್ರಿಮಿ, ನಾಶಿಕಾದಿರೋಗ ವಸ್ತಿಸೋಣ ಇವೇ ಎಲ್ಲ ವಿಕಾರಗಳಿಗೆ ೭ ದಿವಸಗಳಲ್ಲಿ ಗುಣ ೨೧ ದಿವಸ ಸಾಕಾಗುವಷ್ಟು ಸೀಸೆ ೧ಕ್ಕೆ ಅಂಚೆವೆಚ್ಚ ಸೇರಿ ೩ ರೂಪಾಯಿಗಳು ಪೂರ್ಣಗುಣವಾಗಬೇಕಾದರೆ ೨ ಸೀಸೆಗಳು

[30—13]　ಪತ್ತೆ :—ಮಾಲಕ ವೈದ್ಯ ವ್ಹಿ ಎಸ್ ಕಾಪಸೆ. ಮು. ಪೋ. ಮಿರಜ,

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ	(ವಿ ಪಿ ಸೇರಿ)		ಕ್ರಯ	(ವಿ ಪಿ ಸೇರಿ)
ವೀರಶೈವ ಶಿವಪೂಜಾವಿಧಿಃ	೦—೧೨—೦	೧—೨—೦	ವೃಷಭಶತಕ	೦—೪—೦	೦—೯—೦
ಷಟ್ಸ್ಥಲ ವೀರಶೈವ ವಿವಾಹವಿಧಿಃ	೦—೮—೦	೦—೧೪—೦	ಗುರುಶಂಕರಶೇಖರಶತಕ	೦—೧—೦	೦—೬—೦
ಷಟ್ಸ್ಥಲ ವಿವಿಧ	೦—೪—೦	೦—೯—೦	ಬಸವೇಶ್ವರಚರಿತ	೦—೮—೦	೦—೧೩—೦
ಬಸವೇಶ್ವರಚರಿತ್ರೆ	೦—೫—೦	೦—೧೦—೦	ಷಟ್ಸ್ಥಲ ಕಲ್ಯಾಣ ಬಸವ ಮಂಜರಿ	೦—೮—೦	೦—೧೩—೦
ಪಂಚಾಂಗ	೦—೪—೦	೦—೯—೦	ಷಟ್ಸ್ಥಲ ಶತಕತ್ರಯ	೧—೦—೦	೧—೬—೦

ಮೈಸೂರು ಸ್ಟಾರ್ ಚಂದಾದಾರರಿಗೆ ಸೂಚನೆ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ ೨-೮-೦, ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ ೩-೮-೦, ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ　ಮ್ಯಾನೇಜರ್,

FOR SALE—Upstair house No 899, Manantody Road, New Lakshmipuram, Mysore. Apply S P. NANJAPPA

ಮೈಸೂರು ಸ್ಟಾರ್.

[illegible]

ANTICS IN DESPAIR.

The Non-Brahmin Conference seems to have upset the balance of all monopolist critics, both local and outside, and they are giving vent to their spleen in a really earnest though not honest manner. The very fact that the Conference has aroused the ire of these monopolists is a sure indication of the supreme success of the Conference. They found that the delegates represented every part of the Mysore State and every non-Brahmin community, big and small in the State. Practically all the leading non-Brahmin members of the Legislative Council and the Representative Assembly took part in the Conference. In fact the non Brahmin members of the two Houses who were not present at the Conference were only exceptions And with all that the *Swarajya* correspondent wants to enjoy the pleasure himself and give his monopolist friends the pleasure of thinking that the Conference was got up by a few communalists, that it did not represent the people and that leading non Brahmins kept out of it, and the Conference was a huge farce We are not in the least surprised at this characterisation, for we have never expected anything better from such monopolist sources Why? Have we not seen the Mysore State Congress session held at Bangalore some months back described by this very source as a great national gathering, when it comprised of no other than a few disgruntled agitators of Bangalore City and a number of mill-hands on strike and students who were to meet at the Youth League to be held a day or two after the Congress? To *Swarajya* the non-Brahmin leaders are Mr B L Byanna and Mr Subrama Shetty—leaders with no non-Brahmin followers We forget the market contractor, Mr Sanjeevappa, another non-Brahmin who was pitch forked into the place of the Chairman of the Reception Committee of this blooming Congress. Did not this very chairman receive encomiums at the hands of *Swarajya* and its correspondent, the gentleman who on the morning after the Bangalore disturbance woke up to find himself initiated by all the agitating priestly heirarchy of Bangalore into politics and became in less than a few hours a full fledged politician, fit enough in a few months to be the Chairman of the Reception Committee of this great Congress. Verily in the eyes of *Swarajya* Mr Sanjeevappa is a worthy chairman but not Rao Sahib H Chennayya, who having grown grey in both Public Service and public life and has to his record an unexceptional life of honest work, selfless service comes forward to give the benefit of his experience and wisdom as Chairman of the Reception Committee of the N B. Conference Instead of vaguely criticising Rao Saheb's speech, the correspondant who fills columns of matter could have pointed out one single statement in the address to which he could take exception When every known non-Brahmin leader of the State was there at the Conference the correspondant wants to characterise it as a huge farce. We have never had any misgiving about the capacity of Swarajya to misrepresent matters. In fact, so far as Mysore is concerned it has done nothing else since the Bangalore disturbance. Fortunately for the public life of our country very few attach any regard to the opinions of this journal. To get the accredited representatives of over 97 per cent of the people of the State together for conferring on important and vital matters affecting the interests of the State is a farce, but to get hold of unemployed mill-hands and young students to listen to the orations of immature agitators under the presidency of an extinct volcano like Mr M Venkatakrishnayya is a great achievement according to *Swarajya* This is the way of going about to gain Swarajya Little wonder that Swarajya in the true sense is still far off with so much insincerety and chicanery abroad The correspondant has gone about characterising the various non-Brahmin leaders in his own wicked style, trying to set one leader against another, an art in which monopolist critics are unequalled. But the N. B leaders know well enough these low and machiavelian tactics and we are sure they will not fall a prey to them. We do not know who gave this correspondent the precious information that some of the N B. leaders of standing were led into acceptance of certain propositions by the cleverness of the President Mr A Ramaswamy Moodaliar. He is paying, however a very poor compliment to those leaders if they could be taken in so easily But the fact is that there was no such thing of anybody being taken in and that everything was discussed threadbare and unanimous decisions were arrived at This happy result was too much for those monopolist friends who were eagerly awaiting a split and who in the exercise of their unique privilege had prophesied an assured break down in the deliberations. Why not therefore give some peace and statisfaction to the damned soul by setting up one leader against another and by crying down the grand success of the conference They wanted to mislead the world outside into a false belief that there was something grievously wrong in the State Well, the Non-Brahmin Conference came and blew up this ignominous and mischievous attempt The mischief mongers are sore over their plight The world will not take long to find out the truth and that especially in these days The grain can be separated from chaff much sooner in these days of scientific advancement. There is, besides, always a fight between the good and the evil We are by no means sanguine that the trouble is at an end, that the malevolent forces will retire and that all will be smooth sailing The fight is bound to continue But of one thing we are sure, the ultimate triumph of truth and justice and righteousness The Non Brahmin Conference stands for all that is fair, just and righteous and no amount of cheap cant and indecent vilification will affect the onward progress of the non-Brahmin ideals Such a game will only recoil a hundred fold on the decrier and lead them down words May the divine light illumine the hearts of these traducers and give them better understanding and better manners

ಆಶಾಭಂಗರಾದ ಕುಚೇಷ್ಟೆಗಾರರು.

ಬ್ರಾಹ್ಮಣೇತರ ಮಹಾಸಭೆಯು ಜಯಪ್ರದವಾಗಿ ನಡೆದುದರಿಂದ ಸ್ಥಳ ಪರಸ್ಥಳಗಳ ಎತ್ತೊಂಡಗಾರ ನಿಂದಕರ ಬುದ್ಧಿ ಸ್ಖಲಿತವಾಗಿ ಇವರು ತಮ್ಮ ಕೋಪಾಗ್ನಿಯನ್ನು ನ್ಯಾಯಪೂರ್ವಕವಾಗಲ್ಲದೆ ಮನಃಪೂರ್ವಕವಾಗಿ ಕಾರುತ್ತಿರುವರು ಮಹಾಸಭೆಯು ಅತ್ಯಂತ ಜಯಪ್ರದವಾಗಿ ನಡೆದಿರುವುದೆಂಬುದಕ್ಕೆ ಅದು ಎತ್ತೊಂಡಗಾರರಿಗೆ ಕೋಪೋದ್ರೇಕವನ್ನು ಮಾಡಿರುವುದೇ ತಕ್ಕ ನಿದರ್ಶನವಾಗಿದೆ. ಸಂಸ್ಥಾನದ ಪ್ರತಿಯೊಂದು ಭಾಗದಿಂದಲೂ ಬ್ರಾಹ್ಮಣೇತರರ ಪ್ರತಿಯೊಂದು ಚಿಕ್ಕ ದೊಡ್ಡ ಪಂಗಡದ ಪ್ರತಿನಿಧಿಗಳು ಮಹಾಸಭೆಗೆ ಬಂದಿದ್ದರೆಂಬುದನ್ನು ಅವರು ಬಲ್ಲರು ಪ್ರಾಯಿಕವಾಗಿ ನ್ಯಾಯವಿಧಾಯಕ ಮತ್ತು ಪ್ರಜಾಪ್ರತಿನಿಧಿಸಭೆಗಳ ಬ್ರಾಹ್ಮಣೇತರ ಸದಸ್ಯರುಗಳಲ್ಲಿ ಬಹು ಸ್ವಲ್ಪ ಜನರು ಮಾತ್ರ ಮಹಾಸಭೆಗೆ ಬಂದಿರಲಿಲ್ಲವೇ ಹೊರತು ಉಳಿದವರೆಲ್ಲರೂ ಬಂದು ಅದರ ಕಾರ್ಯಕಲಾಪಗಳಲ್ಲಿ ಭಾಗಿಗಳಾಗಿದ್ದರು ನಿಜಾಂಶವು ಹೀಗಿದ್ದರೂ, ಮಹಾಸಭೆಯು ಕೆಲ ಜಾತಿಪಕ್ಷಪಾತಿಗಳಿಂದೇರ್ಪಡಿಸಲ್ಪಟ್ಟಿದ್ದಿತೆಂದೂ, ಪ್ರಜಾಪ್ರಮುಖರು ಬಂದಿರಲಿಲ್ಲವೆಂದೂ, ಗಣ್ಯರಾದ ಬ್ರಾಹ್ಮಣೇತರ ಮುಖಂಡರ ಪ್ರವೇಶಕ್ಕೆ ಅವಕಾಶಕೊಡಲ್ಪಟ್ಟಿರಲಿಲ್ಲವೆಂದೂ, ಈ ಕಾರಣದಿಂದ ಮಹಾಸಭೆಯು ದೊಡ್ಡ ಪ್ರಹಸನವಾಗಿದ್ದಿತೆಂದೂ ಮದ್ರಾಸಿನ ಆಂಗ್ಲಭಾಷೆಯ ಸ್ವರಾಜ್ಯಪತ್ರಿಕೆಯ ಸುದ್ದಿಗಾರನು ಬರೆದು ಆತ್ಮಸಂತೋಷಪಡುತ್ತಿರುವುದಲ್ಲದೆ ತನ್ನ ಎತ್ತೊಂಡಗಾರ ಸ್ನೇಹಿತರುಗಳನ್ನು ಸಂತೋಷಪಡಿಸುತ್ತಿರುವನು. ಇಂತಹ ಎತ್ತೊಂಡಗಾರರಿಂದ ಇದಕ್ಕಿಂತಲೂ ಉತ್ತಮವಾದ್ದನ್ನು ನಾವೆಂದೂ ಅಪೇಕ್ಷಿಸಿರಲಿಲ್ಲವಾದುದರಿಂದ, ಈ ಸುದ್ದಿಗಾರನ ವರ್ಣನೆಯಿಂದ ನಾವು ಕಿಂಚಿತ್ತಾದರೂ ಆಶ್ಚರ್ಯಪಡಲಿಲ್ಲ. ಏತಕ್ಕೆ? ಕೆಲ ತಿಂಗಳುಗಳ ಹಿಂದೆ ಬೆಂಗಳೂರಿನಲ್ಲಿ ನಡೆದ ಮೈಸೂರು ಸಂಸ್ಥಾನದ ಕಾಂಗ್ರೆಸ್ಸಿನ ಅಧಿವೇಶನವು, ಬೆಂಗಳೂರು ಪಟ್ಟಣದ ಕೆಲ ಅತೃಪ್ತ ಆಂದೋಳನಕಾರರು, ಕೆಲಸಕ್ಕೆ ಹೋಗದೆ ಮುಷ್ಕರ ಹೂಡಿದ್ದ ಮಿಲ್ಲಿನ ಕೂಲಿಕಾರರು ಮತ್ತು ಆ ಸಭೆ ನಡೆದ ಒಂದೆರಡು ದಿವಸಗಳ ಮೇಲೆ ನಡೆದ ಯುವಕ ಮಹಾಸಭೆಗಾಗಿ ಬಂದಿದ್ದ ವಿದ್ಯಾರ್ಥಿಗಳು ಮಾತ್ರ ಸೇರಿದ್ದರಾದರೂ ಆ ಕಾಂಗ್ರೆಸ್ಸು ಸಾರ್ವಜನಿಕಸಭೆಯಾಗಿ ನೆರವೇರಿತೆಂದು ಇದೇ ಸ್ವರಾಜ್ಯಪತ್ರಿಕೆಯ ಸುದ್ದಿಗಾರನು ವರ್ಣಿಸಿರುವುದನ್ನು ನಾವು ನೋಡಿಲ್ಲವೆ? ಈ ಸ್ವರಾಜ್ಯ ಪತ್ರಿಕೆಯು ಮ|| ಗಳಾದ ಬಿ. ಎಲ್ ಬಯ್ಯಣ್ಣರವರನ್ನೂ, ಸುಬ್ರಾಮಶೆಟ್ಟರನ್ನೂ ಬ್ರಾಹ್ಮಣೇತರ ಮುಖಂಡರನ್ನಾಗಿ ಭಾವಿಸಿರುತ್ತದೆ ಆ ಬ್ರಾಹ್ಮಣೇತರ ಮುಖಂಡರಿಗಾದರೂ ಒಬ್ಬ ಬ್ರಾಹ್ಮಣೇತರನಾದರೂ ಅನುಯಾಯಿ ಇಲ್ಲವು ಕಾಂಗ್ರೆಸ್ಸಿನ ಸ್ವಾಗತಸಂಘಾಧ್ಯಕ್ಷರಾಗಿ ಮಾಡಲ್ಪಟ್ಟಿದ್ದ ಬ್ರಾಹ್ಮಣೇತರರಾದ ಮಾರ್ಕೆಟ್ ಕಂಟ್ರಾಕ್ಟರ್ ಮ|| ಸಂಜೀವಪ್ಪನವರನ್ನು ಮರೆತುಬಿಟ್ಟೆವು. ಬೆಂಗಳೂರು ಗಲಭೆ ನಡೆದ ಮಾರನೆಯ ಬೆಳಿಗ್ಗೆ ಮೇಧಾವಿಗಳಾದ ಆಂದೋಳನಕಾರರಿಂದ ರಾಜಕೀಯವಾತಾವರಣಕ್ಕೆಳೆಯಲ್ಪಟ್ಟು ಕೆಲ ಗಂಟೆಗಳಲ್ಲಿಯೇ ಕಾಂಗ್ರೆಸ್ಸಿನ ಸ್ವಾಗತಸಂಘಾಧ್ಯಕ್ಷರಾಗಿ ಮಾಡಲ್ಪಟ್ಟ ಈ ದೊಡ್ಡಮನುಷ್ಯರನ್ನು ಸ್ವರಾಜ್ಯ ಪತ್ರಿಕೆಯೂ ಅದರ ಸುದ್ದಿಗಾರನೂ ಹೊಗಳಿ ಅಟ್ಟಕೇರಿಸಿರುವರು. ಈ ಸ್ವರಾಜ್ಯಪತ್ರಿಕೆಯ ಭಾವನೆಯಲ್ಲಿ ಮ|| ಸಂಜೀವಪ್ಪನವರು ಮಹಾಸಭೆಯ ಅಧ್ಯಕ್ಷರಾಗಿರಲು ಅರ್ಹರಾಗಿರುತ್ತಾರಲ್ಲದೆ ಸರ್ಕಾರಿ ಉದ್ಯೋಗವನ್ನೂ, ಪ್ರಜಾಸೇವೆಯನ್ನೂ ನಿಸ್ಪೃಹತೆಯಿಂದಲೂ, ಸ್ವಾರ್ಥತ್ಯಾಗ ಬುದ್ಧಿಯಿಂದಲೂ ಮಾಡಿ, ವಯೋವೃದ್ಧರೂ, ಜ್ಞಾನವೃದ್ಧರೂ ಆಗಿರುವ ರಾವ್ ಸಾಹೇಬ್ ಎಚ್ ಚನ್ನಯ್ಯನವರು ಮಾತ್ರ ಬ್ರಾಹ್ಮಣೇತರಮಹಾಸಭೆಯ ಸ್ವಾಗತಸಂಘಾಧ್ಯಕ್ಷರಾಗಿದ್ದು ತಮ್ಮ ಲೋಕಾನುಭವವನ್ನೂ, ವಿವೇಕವನ್ನೂ ತಿಳಿಸಲು ಅರ್ಹರಾಗಿಲ್ಲವು ಸ್ವರಾಜ್ಯದ ಸುದ್ದಿಗಾರನು ರಾವ್ ಸಾಹೇಬರ ಭಾಷಣವನ್ನು ಗೊತ್ತುಗುರಿಯಿಲ್ಲದೆ ಖಂಡಿಸಿ ಬರೆದು ಪತ್ರಿಕೆಯನ್ನು ತುಂಬಿಸುತ್ತಿರುವುದರ ಬದಲು ಇಂತಹ ವಿಷಯವು ಆಕ್ಷೇಪಕರವಾಗಿರುತ್ತದೆಂದು ನಿರ್ದಿಷ್ಟವಾಗಿ ಅರಿಯುವುದುತ್ತಮವು. ಸಂಸ್ಥಾನದ ಪ್ರಖ್ಯಾತ ಬ್ರಾಹ್ಮಣೇತರ ಮುಖಂಡರೆಲ್ಲರೂ ಮಹಾಸಭೆಯಲ್ಲಿದ್ದರಾದರೂ ಅದೊಂದು ದೊಡ್ಡ ಪ್ರಹಸನವೆಂದು ಆ ಸುದ್ದಿಗಾರನು ವರ್ಣಿಸಿರುತ್ತಾನೆ ನಿಜಸ್ಥಿತಿಯನ್ನು ಮರೆಮಾಚಿ ತಿಳಿಸುವುದರಲ್ಲಿ ಸ್ವರಾಜ್ಯ ಪತ್ರಿಕೆಗೆ ಬಹಳ ಸಾಮರ್ಥ್ಯವಿರುತ್ತದೆಂದ ನಾವು ಯಾವಾಗಲೂ ಸಂಶಯಗ್ರಸ್ತರಾಗಿ ಹೇಳಿರುವುದಿಲ್ಲ ಬೆಂಗಳೂರು ಗಲಭೆಯು ನಡೆದಾರಭ್ಯ ಇದು ಮೈಸೂರಿನ ವಿಚಾರವನ್ನು ವಿಪರ್ಯಾಸವಾಗಿ ತಿಳಿಸುವುದರ ವಿನಾ ಮತ್ತೇನನ್ನೂ ಮಾಡಿರುವುದಿಲ್ಲ. ಆದರೆ ಅದೃಷ್ಟವಶಾತ್ ನಮ್ಮ ದೇಶದವರಾರೂ ಈ ಪತ್ರಿಕೆಯ ಅಭಿಪ್ರಾಯವನ್ನು ಗೌರವಿಸುತ್ತಿಲ್ಲ ಸ್ವರಾಜ್ಯಪತ್ರಿಕೆಯ ಅಭಿಪ್ರಾಯದಂತೆ ಸಂಸ್ಥಾನದ ಅಭಿವೃದ್ಧಿಗೆ ಸಾಧಕವಾದ ಮುಖ್ಯವಿಚಾರಗಳನ್ನು ಪರ್ಯಾಲೋಚಿಸುವುದಕ್ಕಾಗಿ ದೇಶದ ಒಟ್ಟು ಪ್ರಜಾಸಂಖ್ಯೆಯಲ್ಲಿ ಶೇಕಡ 97 ರಷ್ಟು ಜನರ ಪ್ರತಿನಿಧಿಗಳನ್ನು ಒಟ್ಟುಮಾಡಿಕೊಂಡು ಸಭೆಯನ್ನು ನಡಸುವುದು ದೊಡ್ಡ ಪ್ರಹಸನವಾಗಿಯೂ, ತಣ್ಣಗಾದ ಜ್ವಾಲಾಮುಖಿಯಂತಿರುವ ಮ|| ವೆಂಕಟಕೃಷ್ಣಯ್ಯನವರಂತಹವರ ಅಧ್ಯಕ್ಷತೆಯಲ್ಲಿ ಇನ್ನೂ ನುರಿಯದ ಆಂದೋಳನಕಾರರ ಭಾಷಣವನ್ನು ಕೇಳಲು ಉದ್ಯೋಗವಿಲ್ಲದ ಮಿಲ್ಲಿನ ಕೂಲಿಕಾರರನ್ನೂ, ಚಿಕ್ಕ ವಿದ್ಯಾರ್ಥಿಗಳನ್ನೂ ಕೂಡಿಹಾಕುವ ಸಭೆಯು ಮಾತ್ರ ದೊಡ್ಡ ಸಾರ್ವಜನಿಕ ಸಭೆಯಾಗಿಯೂ ಪರಿಗಣಿಸಲ್ಪಡಬೇಕಾಯಿತು. ಸ್ವರಾಜ್ಯಸಂಪಾದನಾ ಪ್ರಯತ್ನವಾದರೂ ಇದೇ ರೀತಿಯಾಗಿದೆ ಹೊರಗಡೆ ಇಷ್ಟೊಂದು ಕಪಟವನ್ನೂ ತಂತ್ರವನ್ನೂ ಮಾಡುತ್ತಿರುವಾಗ್ಗೆ ನಿಜವಾದ ಸ್ವರಾಜ್ಯಪ್ರಾಪ್ತಿಯು ಬಹಳ ದೂರವಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ ಬ್ರಾಹ್ಮಣೇತರ ಮುಖಂಡರುಗಳಲ್ಲಿ ಒಬ್ಬರಮೇಲೊಬ್ಬರನ್ನೆತ್ತಿಕಟ್ಟಲು ಸ್ವರಾಜ್ಯ ಪತ್ರಿಕೆಯ ಸುದ್ದಿಗಾರನು ತನ್ನ ಕುತ್ಸಿತಮಾರ್ಗದಲ್ಲಿ ಅವರುಗಳನ್ನು ರೇಗಿಸಿ ಬರೆಯುತ್ತಿರುವನು ಈ ವಿಚಾರದಲ್ಲಿ ಎತ್ತೊಂಡಗಾರರಿಗೆ ಮತ್ತಾರೂ ಸರಿದೂಗಲಾರರು. ಆದರೆ ಈ ನೀಚ ಕಪಟತಂತ್ರವನ್ನು ಬ್ರಾಹ್ಮಣೇತರ ಮುಖಂಡರು ಚೆನ್ನಾಗಿ ತಿಳಿದಿರುವುದರಿಂದ ಅವರು ಇವರ ಬಲೆಗೆಂದಿಗೂ ಬೀಳುವುದಿಲ್ಲವೆಂದು ನಾವು ಖಂಡಿತವಾಗಿ ತಿಳಿದಿರುತ್ತೇವೆ ಪ್ರೆಸಿಡೆಂಟರಾದ ಮ|| ಎ. ರಾಮಸ್ವಾಮಿ ಮೊದಲಿಯಾರ್ ರವರು ತಮ್ಮ ಬುದ್ಧಿಚಾತುರ್ಯದಿಂದ ಕೆಲ ವಿಚಾರಗಳನ್ನು ಗಣ್ಯರಾದ ಕೆಲ ಬ್ರಾಹ್ಮಣೇತರ ಮುಖಂಡರು ಒಪ್ಪಿಕೊಳ್ಳುವಂತೆ ಮಾಡಿದರೆಂದು ಈ ಸುದ್ದಿಗಾರನು ಬರೆದಿರುತ್ತಾನೆ ಇದನ್ನು ಆತನಿಗೆ ಹೇಳಿದವರಾರೋ ತಿಳಿಯದು. ಆ ಮುಖಂಡರನ್ನು ಅಷ್ಟು ಸುಲಭವಾಗಿ ವಶಮಾಡಿಕೊಳ್ಳುವುದೆಂದರೆ ಅವರನ್ನು ಆ ಸುದ್ದಿಗಾರನು ಬಹು ಸಾಮಾನ್ಯರನ್ನಾಗಿ ಮಾಡಿದಂತಾಯಿತು ಆದರೆ, ಯಾರೂ ದಾಕ್ಷಿಣ್ಯಕ್ಕೆ ಬದ್ಧರಾಗಿ ಮಾಡಲ್ಪಡದೆ ಪ್ರತಿಯೊಂದು ವಿಷಯವೂ ಕೂಲಂಕಷವಾಗಿ ಚರ್ಚಿಸಲ್ಪಟ್ಟು ಏಕವಾಕ್ಯತೆಯಿಂದ ನಿರ್ಧರಿಸಲ್ಪಟ್ಟಿತು. ಮಹಾಸಭೆಯು ಇಷ್ಟು ಸುರಕ್ಷಿತವಾಗಿ ನಡೆದುದು, ಸಭಿಕರಲ್ಲಿ ಭಿನ್ನಾಭಿಪ್ರಾಯವಾಗುತ್ತದೆಂದು ಬಹಳ ಕುತೂಹಲದಿಂದ ನಿರೀಕ್ಷಿಸಿಕೊಂಡಿದ್ದ ಮತ್ತು ತಾವು ಬಹುಕಾಲದಿಂದ ಅನುಭವಿಸು

ತ್ತಿರುವ ಅನಾದರಣೀಯವಾದ ನ್ಯೂನತೆ ಪ್ರಭಾವದಿಂದ ಬ್ರಾಹ್ಮಣ್ಯಕ್ಕೆ ಒದಗುತ್ತಿರುವುದೆಂದು ಭಾವಿಸಿಕೊಂಡು ಕೆಲವು ಜನ್ಮ ಸಿದ್ಧರಾದ ಬ್ರಾಹ್ಮಣರು ಹಿಂದಿನ ಕಾಲದ ರೀತಿ ಯಿಂದಲೇ, ಇನ್ನು ಮುಂದೆಯೂ ನಡೆಯಬೇಕೆಂದು ಹಿಂದಿನದನ್ನು ಬಿಟ್ಟುಕೊಡದೆ ತಮ್ಮ ಪೂರ್ವಿಕರಾದ ಆತ್ರೆ ಯರ ಶ್ರೇಷ್ಠತೆಯನ್ನು ರಕ್ಷಿಸಿಕೊಳ್ಳಲು ಇವರು ಸ್ವ ಸ್ಥಾನದ ಪರಿಸ್ಥಿತಿಯು ಅತ್ಯಂತ ಶೋಚನೀಯವಾಗುತ್ತ ದೆಂದು ಹೋರಾಡಲು ತಕ್ಕ ಏರ್ಪಾಡುಗಳನ್ನು ಮಾಡಲು ಪ್ರಯತ್ನಿಸಿದ್ದರು ಆದರೆ ಸುದೈವದಿಂದ ಬ್ರಾಹ್ಮಣೇತರ ಮಹಾ ಸಭೆಯು ನಡೆದು ಆ ಅವಮಾನಕರವಾದ ಕೆಟ್ಟಗೋಡೆಗಳನ್ನೂ ಆದ ಪ್ರಯತ್ನವನ್ನು ಹಾರಿಸಿಬಿಟ್ಟಿತು ಈಗ ಆ ಕೆಟ್ಟಗೋಡೆಗಳು ತಮ್ಮ ದುರವಸ್ಥೆಯಿಂದ ವಿಕಲ್ಪಗೊಂಡಿದ್ದಾರೆ ಈ ಕಾಲದಲ್ಲಿ ನಿಜ ಸ್ಥಿತಿಯನ್ನು ಕಂಡುಹಿಡಿಯಲು ಬಹಳ ಕಾಲ ಬೇಕಾಗಿಲ್ಲ ಅಂದರೆ ಅದು ತತ್ಕ್ಷಣವೇ ಗೊತ್ತಾಗುತ್ತದೆ ಈಗಿನ ಶಾಸ್ತ್ರಶೋಧನ ಸಾಧನಾಭಿವೃದ್ಧಿಯಿಂದ ದಾಸ್ಯವು ಹುಟ್ಟಿಸಿದ ಒಡಕುಬೇಗ ಬೇರ್ಪಡಿಸಲು ಸಾಧ್ಯವು ಇದಲ್ಲದೆ ಯಾವಾಗಲೂ ಒಳ್ಳೆ ಯದಕ್ಕೂ ಕೆಟ್ಟದಕ್ಕೂ ಹೋರಾಟವಿದ್ದೇ ಇರುತ್ತದೆ ಈಗಿನ ತೊಂದರೆಯೂ ಕೊನೆಗೊಂಡು ಮತ್ಸರಿಗಳು ವಿಮುಖರಾಗಿ ಎಲ್ಲವೂ ಶಾಂತವಾಗಿ ನಡೆಯುವುದೆಂಬ ಭರವಸೆಯು ಮಾತ್ರ ನಮಗಿಲ್ಲವು ಹೋರಾಟವು ನಡೆಯುವುದಾದರೂ, ಕಡೆ ಯಲ್ಲಿ ಸತ್ಯಕ್ಕೂ ಧರ್ಮಕ್ಕೂ ಜಯವೇ ಆಗಿಯೇ ತೀರುತ್ತದೆಂದು ನಾವು ದೃಢವಾಗಿ ನಂಬಿರುತ್ತೇವೆ ಬ್ರಾಹ್ಮಣೇತರ ಮಹಾಸಭೆಯು ನ್ಯಾಯ, ಧರ್ಮ, ಸತ್ಯಸ್ಥಾಪನೆಗಾಗಿಯೇ ಏರ್ಪಟ್ಟಿರುವು ದರಿಂದ, ಬ್ರಾಹ್ಮಣೇತರರ ಧ್ಯೇಯಸಾಧನ ಪ್ರಯತ್ನವು ಮುಂದುವರಿಯುವುದಲ್ಲದೆ ಅದನ್ನು ಯಾವ ದುರಾಕ್ಷೇಪ ವೂ, ಅವಾಚ್ಯನಿಂದೆಯೂ ತಡೆದು ನಿಲ್ಲಿಸಲಾರವು ಇಂತಹ ಪ್ರಯತ್ನದಿಂದ ನಿಂದಕರಿಗ ನೂರುಪಾಲು ಕೆಡಕಾಗುವುದಲ್ಲದೆ ಕ್ಷೀಣಗತಿಯುಂಟಾಗುವುದು ಆದುದರಿಂದ ಆ ದಿವ್ಯ ಪ್ರಭೆ ಯು ನಿಂದಕರ ಹೃದಯದಲ್ಲಿ ಬೆಳಗಿ ಅವುಗ ಸದ್ಬುದ್ಧಿಯ ನ್ನೂ, ಸನ್ನಡತೆಯನ್ನೂ ಕೊಡಲೆಂದು ಕೋರುತ್ತೇವೆ

ಒಳದೇಶದ ವೃತ್ತಾಂತಗಳು.

ರಾಜಧಾನಿಯ ಶ್ರೀಮತಿ ಆಲಮ್ಮನವರು ಸತ್ರ ಮೊದಲಾದ ಧರ್ಮ ಕಾರ್ಯಗಳನ್ನು ಮಾಡಿ “ ಧರ್ಮಪರಾಯಣೆ ” ಎಂಬ ಪ್ರಶಸ್ತಿಯನ್ನು ಶ್ರೀಮನ್ಮಹಾರಾಜರವರಿಂದ ಪಡೆದಿರುವುದರ ಸಂತೋಷಸೂಚನಾರ್ಥವಾಗಿ ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲರುಗಳು ಈ ಧರ್ಮಪರಾಯಣೆ ಯವರಿಗೆ ಅಭಿನಂದನ ಪತ್ರವನ್ನೊಪ್ಪಿಸುವ ಪರ್ಯಾಲೋಚನೆಯಲ್ಲಿರ ವರೆಂದು ಕೇಳುತ್ತೇವೆ ಸ್ತ್ರೀಯರಲ್ಲಿ ಇಂತಹ ಧರ್ಮಕಾರ್ಯವನ್ನು ಮಾಡಿ ಅಪೂರ್ವವಾದ ಪ್ರಶಸ್ತಿಯನ್ನು ಪಡೆದಿರುವವರನ್ನು ಸನ್ಮಾನಿಸುವುದುಚಿತವಾಗಿದೆ

ರಾಜಧಾನಿಯ ವರ್ತಕರುಗಳಲ್ಲಿ ಗಣ್ಯರಾಗಿಯೂ ಅಕ್ಕಿ ಮತ್ತು ಎಣ್ಣೆ ಮಿಲ್ಲುಗಳ ಯಜಮಾನರಾಗಿಯೂ ಮ್ಯುನಿಸಿಪಲ್ ಕೌನ್ಸಿಲರಾಗಿಯೂ ಇರುವ ಮ॥ ಎಂ ಸಿ. ಚೆನ್ನಯ್ಯನವರೂ ಇವರ ಸಹೋದರರುಗಳೂ ತಮ್ಮ ತಂದೆಯವರಾದ ಶ್ರೀ॥ ಚಿಕ್ಕವೀರಣ್ಣನವರ ಸ್ಮಾರಕವಾಗಿ 2೦,000 ರೂ ಗಳ ವೆಚ್ಚದಿಂದ ರಾಜಧಾನಿಯಲ್ಲಿ ಧರ್ಮಸತ್ರವನ್ನು ಕಟ್ಟಿಸಲು ಸಂಕಲ್ಪಿಸಿರುವರೆಂದು ಕೇಳಿ ನಾವು ಸಂತೋಷಿಸುತ್ತೇವಲ್ಲದೆ ಧರ್ಮಕಾರ್ಯ ಸಕ್ತರಾದ ಈ ಸಹೋದರರುಗಳನ್ನು ನಾವು ಅಭಿನಂದಿಸಿ ಅವರ ಸಂಕಲ್ಪವು ಶೀಘ್ರದಲ್ಲೇ ಕಾರ್ಯರೂಪವಾಗಲೆಂದು ಕೋರುತ್ತೇವೆ

ಕಳೆದ ಮಂಗಳವಾರ ರಾಜಧಾನಿಯಲ್ಲಿ 1½ ಅಂಗುಲ ಮಳೆಯಾಗಿ ಅಂದಿನಿಂದ ಇಲ್ಲೂ ಇತರ ಕಡೆಯಲ್ಲೂ ಮಳೆಯಾಗುತ್ತಿದೆ ಇದರಿಂದ ನಿಂತಿರುವ ರಾಗಿ ಮೊದಲಾದ ಪೈರುಗಳಿಗೆ ಅನುಕೂಲವಾಯಿತಲ್ಲದೆ ರಾಜಧಾನಿಯಲ್ಲಿ ಪರಸ್ಥಳದ ಜನಸಂದಣಿಯಿಂದುಂಟಾಗಿದ್ದ ಹೊಲಸೆಯು ನಿವಾರಣೆಯಾಗಿ ವಾತಾವರಣವು ಪರಿಶುದ್ಧವಾಗಲು ಅವಕಾಶವಾಯಿತು ಪ್ಲೇಗ್ ಮರಣಗಳಾಗುತ್ತಿವೆಯಾದರೂ ಮ್ಯುನಿಸಿಪಲ್ ಹೆಲ್ತ್ ಆಫೀಸರು ಮಾತ್ರ ಇದನ್ನು ಪ್ರಕಟಿಸಗೆ ಮತ್ತು ಅದರ ನಿವಾರಣೋಪಾಯವನ್ನು ಕೈಕೊಳ್ಳದೆ ಇರುವುದು ಮಾತ್ರ ಶೋಚನೀಯವಾಗಿದೆ

ಶ್ರೀ ಶೃಂಗೇರಿ ಸ್ವಾಮಿಗಳವರು ಕಳೆದ ದಸರಾ ಮಹೋತ್ಸವ ಕಾಲದಲ್ಲಿ ಹಾಸನದ ಡಿ॥ ಬೋರ್ಡ್ ಪ್ರೆಸಿಡೆಂಟರಾದ ದಿವಾನ್ ಬಹದ್ದೂರ್ ಎಂ ಎಸ್ ನಂಜುಂಡಯ್ಯನವರ ಗುರುಭಕ್ತಿಗೆ ಮೆಚ್ಚಿ ಅವರಿಗೆ “ ಗುರುಭಕ್ತತಿಲಕ ” ಎಂಬ ಪ್ರಶಸ್ತಿಯನ್ನು ಅಮೋಘವಾದ ಶಾಲು, ಮಕುಟ, ರುದ್ರಾಕ್ಷಿ ಸರ ಮತ್ತು ಭಂಗಾರದ ಪದಕಗಳೊಡನೆ ಆಶೀರ್ವದಿಂದರೆಂದು ಕೇಳಿ ಸಂತೋಷಿ ಸುತ್ತೇವಲ್ಲದೆ ದಿವಾನ್ ಬಹದ್ದೂರ್ ನಂಜುಂಡಯ್ಯನವರನ್ನು ಅಭಿನಂದಿಸಿ ಇತೋಪ್ಯತಿಶಯವಾದ ಗುರುಸೇವೆ ರಾಜಸೇವೆ ಮತ್ತು ಪ್ರಜಾಸೇವೆ ಮಾಡಿ ವಿಶೇಷ ಸನ್ಮಾನಗಳನ್ನು ಪಡೆಯುವವರಾಗಬೇಕೆಂದು ಕೋರುತ್ತೇವೆ.

ರಾಜಧಾನಿಯಲ್ಲಿ ಪ್ರಸಿದ್ಧ ಕಂಟ್ರಾಕ್ಟರಾಗಿರುವ ಮ॥ ಬಿ ಮುನಿ ವೆಂಕಟಪ್ಪನವರು ಕೃಷ್ಣಾಜಮ್ಮಣ್ಣಿಯವರ ಕ್ಷಯರೋಗದ ಆಸ್ಪತ್ರೆಯಲ್ಲಿ 60 ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ವೆಚ್ಚ ಮಾಡಿ ಒಂದು ವಿಶಾಲವಾದ ವಾರ್ಡನ್ನು ತಮ್ಮ ತಂದೆಯವರ ಸ್ಮಾರಕವಾಗಿ ಕಟ್ಟಿಸಿರುವರಲ್ಲದೆ ತಮ್ಮ ಕುಲದ ತಿಗಳರ ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ ರಾಜಧಾನಿಯಲ್ಲಿ ಒಂದು ನಿಲಯವನ್ನು ಕಟ್ಟಿಸಿಕೊಡಲು ವಾಗ್ದಾನ ಮಾಡಿರುತ್ತಾರೆಂದು ಕೇಳಿ ಇವರನ್ನೂ ಇವರ ಸಹೋದರರನ್ನೂ ಅಭಿನಂದಿಸಿ ಉದ್ದಿಷ್ಟ ಕಾರ್ಯವನ್ನು ಜಾಗ್ರತೆ ನೆರವೇರಿಸಿ ಮಹಾಪ್ರಭುಗಳ ಅನುಗ್ರಹಕ್ಕೂ ಪ್ರಜೆಗಳ ವಂದನೆಗೂ ಪಾತ್ರರಾಗಲೆಂದು ಆಶಿಸುತ್ತೇವೆ

ಕಳೆದ ತಾ॥ 26ನೇ ಶನಿವಾರ ಸಾಯಂಕಾಲ ರಾಜಧಾನಿಯ ಫುಟ್ ಬಾಲ್ ಅಸೋಸಿಯೇಷನ್ನಿನ ಆಟದ ಬೈಲಿನಲ್ಲಿ ಶ್ರೀಮನ್ಮಹಾರಾಜರವರ ಸಿಲ್ವರ್ ಜೂಬಿಲಿ ಫುಟ್‌ಬಾಲ್ ಟೋರ್ನಮೆಂಟ್ ಫೈನಲ್ ಪಂದ್ಯವು ಛಾಲೆಂಜ್ ಯೂನಿಯನ್ನಿನವರಿಗೂ ಮುಸ್ಲಿಂ ಟೀಮಿಗೂ ಬಹಳ ಸ್ಪರ್ಧೆ ಯಿಂದ ನಡೆದು ಛಾಲೆಂಜ್ ಯೂನಿಯನ್ನಿನವರು ಜಯಶೀಲರಾದರು ಈ ಪಂದ್ಯವನ್ನು ನೋಡಲು ವಿದ್ಯಾರ್ಥಿಗಳೂ ಆಟಗಾರರೂ ಅಲ್ಲದೆ ಇತರರೂ ಸೇರಿ ಸುಮಾರು 8-10 ಸಾವಿರದ ವರೆಗೆ ನೆರೆದಿದ್ದರು ಒಂದು ಮಹಮ್ಮದೀಯರ ಇಷ್ಟೊಂದು ಜನರು ಕೂಡಿದ್ದಾಗ್ಯೂ ಯಾವ ಗದ್ದ ಲವೂ ಅಸ್ತವ್ಯಸ್ತವಿಲ್ಲದಂತೆ ಪೊಲೀಸಿನವರು ಏರ್ಪಾಡು ಮಾಡಿದ್ದುದು ಶ್ಲಾಘ್ಯ ವಾಗಿರುತ್ತದೆ. ಈ ವೇಳೆ ದಸರಾ ಮಹೋತ್ಸವದ ಸಲುವಾಗಿ ರಾಜಧಾನಿಯಲ್ಲಿ ಅಭೂತ

ಪೂರ್ವವಾದ ಜನಸಂದಣಿಯಿದ್ದಿತಾದರೂ ಕಳೆದ 33 ವರ್ಷಗಳಿಂದಲೂ ಅತ್ಯಂತ ಸುಭದ್ರವಾಗಿ ಪ್ರಜೆಗಳಿಂದ ದೊರೆತ ಸಹಾಯದಿಂದ ಅರಮನೆಯ ಮತ್ತು ನಿಯಾಮಕರ ಮಹೋತ್ಸವಗಳು ಯಾವ ತೊಂದರೆಯೂ ಇಲ್ಲದೆ ನಡೆದವು ಇದಕ್ಕೆ ಪೊಲೀಸು ಅಧಿಕಾರಿಗಳಿಗೆ ಶ್ಲಾಘನೀಯವಾಗಿರುತ್ತದೆ

ಇದೇ ತಿಂಗಳು ಶಿವರಾತ್ರಿ ರಾಜಧಾನಿಯ ಬಗ್ಗೆ ದೊಡ್ಡ ಮಾರ್ಕೆಟ್ ವಿಕ್ಟೋರಿಯಾ ಸಭಾಭವನದಲ್ಲಿ ನಡೆದ ನಿಕೋಲಸ್ ಎಂಬುವರನ್ನು ಶ್ರೀಮನ್ಮಹಾರಾಜರವರು ವರಿಸಿ ನವಾಬ್ ವಿಸಿಯಾ ಹ್ಯಾಟ್ಸ್ 4½ ಗಂಟೆಗೆ ರೈಲುಬಂಡಿಯಲ್ಲಿ ದಿವಾನರು ಮತ್ತು ಕೆಲವರೊಡನೆ ಬೆಂಗಳೂರಿಗೆ ಪ್ರಯಾಣ ಮಾಡಿ ಆ ರಾತ್ರಿ ಅಲ್ಲಿದ್ದು ಮರುದಿನ ಬೆಳಿಗ್ಗೆ ದಿವಾನರ ಸಮೇತ ಕೋಲಾರಕ್ಕೆ ಚಿತ್ತೈಸಿದರು ಅಲ್ಲಿ ನೂತನವಾಗಿ ಕಟ್ಟಲ್ಪಡಬೇಕಾಗಿರುವ ಡಿಸ್ಟ್ರಿಕ್ಟ್ ಬೋರ್ಡಾಫೀಸು ಕಟ್ಟಡದ ಶಂಕುಸ್ಥಾಪನೋತ್ಸವವನ್ನು ನೆರವೇರಿಸಿ ಪಬ್ಲಿಕ್ ಹಾಲಿನಲ್ಲಿ ಆ ಊರಿನ ಮ್ಯುನಿಸಿಪಲ್ ಕೌನ್ಸಿಲಿನವರೊಪ್ಪಿಸಿದ ವಿಜ್ಞಾಪನಾ ಪತ್ರವನ್ನು ಸ್ವೀಕರಿಸಿ ಅದಕ್ಕೆ ಸಮುಚಿತವನ್ನಿತ್ತು ಬಿಡಾರಕ್ಕೆ ತೆರಳಿದರು ಮತ್ತು ಅದೇ ಸಾಯಂಕಾಲ 5 30 ಗಂಟೆಯಲ್ಲಿ ಆ ಊರಿಗೆ ಹೊಸದಾಗಿ ಕೊಡಲ್ಪಟ್ಟಿರುವ ವಿದ್ಯುದ್ದೀಪಗಳ ಆರಂಭೋತ್ಸವವನ್ನು ತಮ್ಮ ಸ್ವಂತ ಹಸ್ತದಿಂದ ಆರಂಭಿಸಿ ಆ ಊರಿನ ಆಬಾಲವೃದ್ಧರಾದಿಯಾಗಿ ಸಮಸ್ತ ಜನರಿಗೂ ಪರಮಾನಂದವನ್ನೂ ಆಶ್ಚರ್ಯವನ್ನೂ ಉಂಟುಮಾಡಿ ಮಹಾಸ್ವಾಮಿಯವರ ಕೈವಾಡಿಕೆಯನ್ನು ಹಾಡಿಹರಸುವಂತೆ ಮಾಡಿದರು ಮಹಾಸ್ವಾಮಿಯವರು ಈ ಸಮಾರಂಭಗಳನ್ನು ಪೂರೈಸಿಕೊಂಡು ಅದೇ ಸಾಯಂಕಾಲ 7 ಗಂಟೆಗೆ ದಿವಾನರೊಡನೆ ಅಲ್ಲಿಂದ ಹೊರಟು ಬೆಂಗಳೂರಿಗೆ ಬಂದು ಅಲ್ಲಿ ದಿವಾನರನ್ನು ಬಿಟ್ಟು ರೈಲು ಮಾರ್ಗವಾಗಿ ರಾಜಧಾನಿಗೆ ಚಿತ್ತೈಸಿದರು ಮಹಾಪ್ರಭುಗಳ ಸತ್ಕಾರಕ್ಕಾಗಿ ಕೋಲಾರದ ಟೌನ್ ಮ್ಯುನಿಸಿಪಲ್ ಕೌನ್ಸಿಲಿನವರ ಮಾಡಿದ್ದ ಏರ್ಪಾಟು ಬಹಳ ಸಮರ್ಪಕವಾಗಿಯೂ ಶ್ಲಾಘ್ಯವಾಗಿಯೂ ಇದ್ದಿತೆಂದು ಕೇಳುತ್ತೇವೆ

ಕಳೆದ ಅಕ್ಟೋಬರ್ ತಾ ೩೦ ಸಾಯಂಕಾಲ 4 ಗಂಟೆಯಲ್ಲಿ ಮ॥ ಗಳಾದ ಹುಜೂರು ಸೆಕ್ರೆಟರಿ ಟಿ ತಂಬುಚೆಟ್ಟಿರು ಎಚ್ ಲಿಂಗರಾಜ ಅರಸಿನವರು ಶ್ರೀಕಂಠೇಶ್ವರ ಅಯ್ಯರ್‌ರವರು ವಿ ಸುಬ್ರಹ್ಮಣ್ಯ ಅಯ್ಯರ್ ರವರು ಮತ್ತು ಕೆಲವರೊಡನೆ ಶ್ರೀಮನ್ಮಹಾರಾಜರವರು ಹೆಚ್ಚು ಕಟ್ಟಳೆಯ ರೈಲುಬಂಡಿಯಲ್ಲಿ ಹಾಸನ ಅರಸೀಕೆರೆ ಮಾರ್ಗವಾಗಿ ಕಡೂರಿಗೆ ದಯಮಾಡಿಸಿ, ಅಲ್ಲಿಗೆ ಬೆಂಗಳೂರು ಮಾರ್ಗವಾಗಿ ಬಂದಿದ್ದ ದಿವಾನ್ ಸಾಹೇಬರವರ ಸಮೇತ ಮೋಟಾರು ಬಂಡಿಗಳಲ್ಲಿ ಕುಳಿತು ದಾರಿಯುದ್ದಕ್ಕೂ ಗ್ರಾಮಗಳ ಬಳಿ ಚಪ್ಪರಗಳನ್ನು ಹಾಕಿಕೊಂಡು ನಿರೀಕ್ಷಿಸಿಕೊಂಡಿದ್ದ ಜನರಿಗೆ ದರ್ಶನವನ್ನಿತ್ತು ಅವರೊಪ್ಪಿಸಿದ ಫಲಪುಷ್ಪಗಳನ್ನು ಸ್ವೀಕರಿಸಿ ತಮ್ಮ ಸಂತೋಷವನ್ನು ಪ್ರದರ್ಶಿಸುತ್ತ ಶೃಂಗೇರಿ ಮಠದ ಬಳಿ ನಿರ್ಮಿಸಲ್ಪಟ್ಟಿದ್ದ ಚಪ್ಪರದಲ್ಲಿ ಮಠದ ಏಜೆಂಟರಿಂದಲೂ ಮಠಸ್ಥ ರಿಂದಲೂ ಸುಸ್ವಾಗತಿಸಲ್ಪಟ್ಟು ವೈದಿಕರುಗಳಿಂದ ಪೂರ್ಣ ಕುಂಭ ವನ್ನೊಪ್ಪಿಸಿಕೊಂಡು ಮಠದ ಭಂಗಾರದ ಪಾಲಕಿಯಲ್ಲಿ ಕುಳಿತು ಮಠದ ವಾದ್ಯಗಳೊಡನೆ ಊರಲ್ಲಿ ಉತ್ಸವಗೊಂಡು ಮಠವನ್ನು ತಲುಪಿದರು ಶ್ರೀ ಶಾರದಾ ಪೀಠದಬಳಿ ನಿರೀಕ್ಷಿಸಿಕೊಂಡಿದ್ದ ಶ್ರೀ ಜಗದ್ಗುರುಗಳು ಶ್ರೀಮನ್ಮಹಾರಾಜರವರನ್ನು ಸ್ವಸ್ತಿವಾಚನದಿಂದ ಸುಸ್ವಾಗತಿಸಿದ ಮೇಲೆ ಪರಸ್ಪರ ಕುಶಲಪ್ರಶ್ನೆಗಳು ನಡೆದ ಮಹಾಪ್ರಭುಗಳು ಶ್ರೀಗಳವರ ಪಾದ ಪೂಜೆಯನ್ನು ಮಾಡಿ 1000 ರೂ ಗಳ ಕಾಣಿಕೆಯನ್ನೊಪ್ಪಿಸಿ ಮಠದೊಳಗೆ ಚಂದ್ರಮೌಳೀಶ್ವರ ತೊಟ್ಟಿಯಲ್ಲಿ ಏರ್ಪಡಿಸಿದ್ದ ಬಿಡಾರಕ್ಕೆ ತೆರಳಿ ಸ್ನಾನ ದೇವತಾರ್ಚನೆ ಭೋಜನಾದಿಗಳನ್ನು ತೀರಿಸಿಕೊಂಡು ವಿಶ್ರಮಿಸಿಕೊಳ್ಳುವವರಾದರು ಮಹಾಸ್ವಾಮಿಯವರು ಶುಕ್ರವಾರ ಬ್ರಾಹ್ಮಣಸಂತರ್ಪಣೆಯನ್ನೂ ಶನಿವಾರ 15 ಸಾವಿರ ಜನಗಳಿಗೆ ಅನ್ನ ದಾನವನ್ನೂ ಮಾಡಿಸಿದರು ಆ ದಿವಸ ಬೆಳಿಗ್ಗೆ ದಿವಾನರು ಹುಜೂರು ಸೆಕ್ರೆಟರಿಯವರು ಮತ್ತು ಮ ಶ್ರೀಕಂಠೇಶ್ವರ ಅಯ್ಯರ್‌ರವರು ಇವರು ಗಳ ಸಮೇತವಾಗಿ ಮೋಟಾರು ಬಂಡಿಗಳಲ್ಲಿ ಕಿಗ್ಗಕ್ಕೆ ದಯಮಾಡಿಸಿ ಋಷ್ಯಶೃಂಗ ದೇವಸ್ಥಾನವನ್ನು ಪರಾಮರ್ಶಿಸಿಕೊಂಡು ಶೃಂಗೇರಿಗೆ ಹಿಂದಿರುಗಿ ಬಂದು ಆ ದಿನ ಸಾಯಂಕಾಲ ಪಾದಚಾರಿಗಳಾಗಿ ಶ್ರೀ ವಾರ ದಾಮ್ಮನವರ ದೇವಾಲಯಕ್ಕೆ ಚಿತ್ತೈಸಿ ಅಲ್ಲಿಗೆ ದಯಮಾಡಿಸಿದ್ದ ಶ್ರೀಗಳವರ ಊಟದ ಅವರ ದೇಹಾರೋಗ್ಯದ ವಿಚಾರವಾಗಿಯೂ ಮಠದ ಆಡಳಿತದ ವಿಚಾರವಾಗಿಯೂ ಸಂಭಾಷಿಸಿ ತಮ್ಮ ಬಿಡಾರಕ್ಕೆ ದಯಮಾಡಿಸಿದರು ಅದೇ ರಾತ್ರಿ ತೆಪ್ಪೋತ್ಸವ ನಡೆಯಿತು ಊರಿನವರಲ್ಲದೆ ಮಹಾಪ್ರಭುಗಳ ದರ್ಶನಕ್ಕಾಗಿ ಗ್ರಾಮಾಂತರಗಳಿಂದ ಬಂದಿದ್ದ ಸಾವಿರಾರು ಜನರು ಉತ್ಸವ ವನ್ನು ನೋಡಿ ಆನಂದಭರಿತರಾದರು ಭಾನುವಾರ ಬೆಳಿಗ್ಗೆ ಮಹಾಪ್ರಭುಗಳು ಫಲಾಹಾರವನ್ನು ತೀರಿಸಿಕೊಂಡು ಶ್ರೀಗಳವರ ಅಪ್ಪಣೆಯನ್ನೂ ಆಶೀರ್ವಾದವನ್ನೂ ಪಡೆದು ಬಾಳೆಹೊನ್ನೂರು ವ್ಯವಸಾಯ ಕ್ಷೇತ್ರಕ್ಕೆ ಇಲಾಖೆಯ ಡೈರೆಕ್ಟರ ಅಹ್ವಾನದ ಮೇರೆ ದಯ ಮಾಡಿಸಿ ಅಲ್ಲಿಯ ಕಾರ್ಯಗಳನ್ನು ಪರಾಮರ್ಶಿಸಿಕೊಂಡು ಭೋಜನಮಾಡಿ ಮಧ್ಯಾಹ್ನ ಚಿಕ್ಕಮಗಳೂರಿಗೆ ಪ್ರಯಾಣಮಾಡಿ ಅಲ್ಲಿಂದ ಸಕಲೇಶಪುರದ ಮಾರ್ಗವಾಗಿ ಹಾಸನಕ್ಕೆ ಬಂದ ಸ್ಪೆಷಲ್ ರೈಲುಬಂಡಿಯನ್ನು ಹತ್ತಿ ದಿವಾನರ ಸಮೇತ ರಾಜಧಾನಿಯನ್ನು ಸೋಮವಾರ ಬೆಳಿಗ್ಗೆ ಸುರಕ್ಷಿತವಾಗಿ ತಲುಪಿದರು ಶ್ರೀ ಶೃಂಗೇರಿ ಜಗದ್ಗುರುಗಳ ಉತ್ತರಾಧಿಕಾರಕ್ಕೆ ವಟು ಚುನಾವಣೆ ನಡೆಯಲು ಕೆಲ ಕಾಲ ತಡವಾದಲ್ಲಿ ಏನಾದರೂ ಶ್ರೀಗಳವರ ದೇಹಾರೋಗ್ಯಸ್ಥಿತಿಯು ಅನುಕೂಲವಾಗಿರುವುದರಿಂದ ಆ ವಿಚಾರವು ಮಹಾಪ್ರಭುಗಳ ಸಮ್ಮುಖದಲ್ಲಿ ಪ್ರಸ್ತಾಪಿಸಲ್ಪಡಲಿಲ್ಲವಾಗಿ ತಿಳಿಯಬಂದಿದೆ

ವರ್ತಮಾನಸಂಗ್ರಹ

ಜರ್ಮನಿಯ ಕೆಲವರು ಸಂಶೋಧಕರು ಹಿಮಾಲಯ ಪರ್ವತದಲ್ಲಿ ೨೦ ಸಾವಿರ ಅಡಿಗಳಷ್ಟು ಮೇಲೇರಿ ಹಿಂದೆ ಬಂದಿರುವರು

ಬೆರಗಾವಿನೆಲೆಗೆ ದಂಡಿಸಲ್ಪಡಲಿಲ್ಲ ದೇವಿಗೆ ಬಲಿಯನ್ನು ಕೊಡುವಾಗ ಕೋಣಗಳನ್ನು ತುಂಡು ಮಾಡಿ ಅವಕ್ಕೆ ನಿಮಿಸಲಾರದ ವೇದನೆಯನ್ನು ಕೊಡುವುದನ್ನು ತಪ್ಪಿಸಿ ಒಂದೇ ಏಟಿಗೆ ಕೊಲ್ಲಬೇಕೆಂದು ಅಲ್ಲಿಯ ಕಲೆಕ್ಟರವರ ಆಜ್ಞೆ ಆಗಿದೆಯಂತೆ !

ಸಿಂಗಾಪುರಿಯ ಸಭಾಸದರಲ್ಲಿ 19 ಮಂದಿ ಕುಂಗಭದ್ರಾ ನದಿಯನ್ನು ದಾಟುವಾಗ ದೋಣಿ ಮುಳುಗಿ ಎಲ್ಲರೂ ನೀರುಪಾಲಾಗಿ ಅವರಲ್ಲಿ ಒಬ್ಬ ಹುಡುಗನು ಮಾತ್ರ ಒಂದು ಮರದ ದಿಮ್ಮಿಯನ್ನು ಹಿಡಿದುಕೊಂಡು ದಡ ವನ್ನು ಸೇರಿದನಂತೆ

ಬಾಗಲಕೋಟೆಯಲ್ಲಿ ಪ್ಲೇಗಿನ ಉಪದ್ರವವು ಅಧಿಕವಾಗಿರುವುದರಿಂದ ಜನರೆಲ್ಲಾ ಊರುಬಿಟ್ಟು ಓಡಿಹೋಗುವ ಹಂಚಿಕೆಯೋ ಟೀಸೆಂದು ಅಲ್ಲಿಯ ಡಿಪ್ಯುಟಿಯವರು ಇಲ್ಲಿಯ ಮ್ಯುನಿಸಿಪಾಲಿಟಿಗೆ ಮಿ॥ ವೀರಭದ್ರ ಗೌಡ ಸಂಗಪ್ಪನವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು

ಲಂಡನ್ನಿನಲ್ಲಿ “ ವಚನಗ್ರಾಹಿ ” ಎಂಬುದೊಂದು ಯಂತ್ರವನ್ನು ತಯಾರಿಸಿದ್ದಾರೆ, ಇದರ ಇದಿರಿಗೆ ಯಾರು ಮಾತಾಡಿದರೂ ಬರೆದುಕೊಳ್ಳುವುದು

ಮಾಡಿದರೆ ಅದೇ ಮಾತನ್ನು ಪುನಃ ಹೇಳ ಬಲ್ಲದು ! ಈ ಯಂತ್ರದಲ್ಲಿರುವ ಒಂದು ತಟ್ಟೆಯನ್ನು ಗ್ರಾಮಫೋನಿಗೆ ಹಾಕಿದರೆ ಅದರಲ್ಲಿಯೂ ಮಾತ ನಾಡುವುದು

ಅಮೆರಿಕಾದಲ್ಲಿ ಒಂದು ಮುದ್ರಾಯಂತ್ರವು 64 ಘಂಟೆಗಳಲ್ಲಿ ಪತ್ರಿಕೆಯ 96,000 ಪ್ರತಿಗಳನ್ನು ಒಳ್ಳೆ ಛಂದದಲ್ಲಿ ಸಿದ್ಧಪಡಿಸಿ ಮಡಿಚಿ ಕೊಡುತ್ತದೆ ಒಂದೊಂದು ಪತ್ರಿಕೆಯು ಇಪ್ಪತ್ತನಾಲ್ಕು ಎಲೆಗಳುಳ್ಳ ಕಾಗದ (ರೋಲ್) ಗಳನ್ನು ಒಂದೇಸಲಕ್ಕೆ ಮುದ್ರಿಸುತ್ತದೆ. ಇದಕ್ಕಿಂತ ದೊಡ್ಡ ಮುದ್ರಾಯಂತ್ರವು ಪ್ರಪಂಚದಲ್ಲಿಲ್ಲ

ಮೈನ್‌ಹೆಡ್ ಎಂಬ ದೇಶದಲ್ಲಿ ಅತಿಸುಂದರಿಯಾದವಳಿಗೆ ಆ ದೇಶದ ರಾಣಿಯ ಪದವಿಯು ದೊರಕುವುದೆಂದು ಪ್ರಕಟವಾಗಿದ್ದಿತು ಅದನ್ನು ನೋಡಿ ಸಾವಿರಾರು ಜನರು ತಮ್ಮ ಭಾವಚಿತ್ರಗಳನ್ನು ಕಳುಹಿಸಿದ್ದರು. ಕಡೆಗೆ ಆ ಚಿತ್ರಗಳನ್ನು ನೋಡುವುದಕ್ಕೆ ಬಂದಿದ್ದವರೆಲ್ಲರೂ ಚೆನ್ನಾಗಿರುವ ಚಿತ್ರಕ್ಕೆ ಓಟುಕೊಡಬೇಕೆಂದು ಗೊತ್ತುಮಾಡಲು ಅದರಲ್ಲಿ ಬಹು ಸುಂದರವಾದ ಒಂದು ಚಿತ್ರಕ್ಕೆ ಹೆಚ್ಚು ಮತಗಳು ದೊರೆತು ಆ ಸುಂದರಿಗೆ ಪಟ್ಟಾಭಿಷೇಕ ಕಳುಹಿಸಲಾಯಿತು ಮರುದಿನ ದಿವಸ ಒಬ್ಬ ಹುಡುಗನು ಬಂದು “ ಅದು ನನ್ನ ಚಿತ್ರ ನಾನು ಹೆಣ್ಣು ವೇಷವನ್ನು ಧರಿಸಿ ಫೋಟೋತೆಗೆಯಿಸಿ ಕಳು ಹಿಸಿದ್ದೆನು ” ಎಂದು ಹೇಳಿ ನಕ್ಕನಂತೆ !

ಲಾಹೋರಿನ ರಾಜಕೀಯ ಬಂಧಿಗಳ ವಿಚಾರಣೆಯು ನಡೆದಾಗ ಒಂದು ವಿನೋದಸಂಘಟನೆಯಾಯಿತು ಜಯಗೋಪಾಲ ಎಂಬವನು ಮಾಫಿ ಸಾಕ್ಷಿ ಯನ್ನು ಕೊಡುತ್ತಿದ್ದನು ಅವನು ಮಾತಾಡುತ್ತಿದ್ದಾಗ ಬಂದಿಗಳು ಅವ ನನ್ನು ನಿಂದಿಸಿದರು ಒಬ್ಬನು ಪಾದರಕ್ಷೆಯನ್ನು ತೆಗೆದು ಅವನ ಮುಖಕ್ಕೆ ಎಸೆದನು ಕೋರ್ಟಿನಲ್ಲಿ ಗಲಭೆಯಾಯಿತು “ ಪಾದರಕ್ಷೆಯನ್ನು ಬಿಸಾಡಿ ದವನು ನಾನು, ಪ್ರೇಮದಿಕ್ಕನು ! ” ಎಂದು ಬಂದಿಗಳ ಪೈಕಿ ಒಬ್ಬನು ಹೇಳಿದನು ಅವನು ತನ್ನ ಹೇಳಿಕೆಯನ್ನು ಹೀಗೆ ಕೊಟ್ಟಿದ್ದಾನೆ — ಜಯಗೋಪಾಲನು ಸಾಕ್ಷಿ ಕೊಡುವಾಗ ಹಾಸ್ಯಸ್ಪದ ರೀತಿಯಲ್ಲಿ ಮೀಸೆ ಕೊನೆಯನ್ನು ತಿರುಗಿಸುತ್ತಿದ್ದನು. ನನಗೆ ಸಿಟ್ಟುಬಂದಿತು, ಹೋದನ್ನು ಬಿಸಾಡಿದೆ !

ಅಮೇರಿಕೆಯಲ್ಲಿ ಇತ್ತೀಚೆಗೆ ಒಂದು ಹೊಸವಾದ ಶೋಧವಾಗಿದೆ. ಕ್ಷೌರಮಾಡ ವಾಗ ಕತ್ತರಿಯು ಕತ್ತಿಯು ಬಹಳ ತೊಂದರೆಯನ್ನು ಮಾಡ ತ್ತದೆಂಬುದಾಗಿ ಕ್ಷೌರಕ್ಕೆ ಕತ್ತರಿಯನ್ನು ಉಪಯೋಗಿಸುವ ಬದಲಿಗೆ ಸಣ್ಣದಾದೊಂದು ಯಂತ್ರವನ್ನು ಉಪಯೋಗಿಸ ಬಹುದು ಈ ಯಂತ್ರವು ವಿದ್ಯುಚ್ಛಕ್ತಿಯ ಸಹಾಯದಿಂದ ಚಲಿಸುತ್ತದೆ ಮತ್ತು ಕೂದಲುಗಳನ್ನು ಕುಂದಿಸಿ ಮಾಡುವಾಗ ನೋವುಮಾಡದೆ, ಹೆಚ್ಚು ಶಬ್ದಮಾಡದೆ, ಬಹಳ ಅನು ಕೂಲವಾಗಿರುತ್ತದೆ ಇದರ ವಿಶೇಷವಾದೊಂದು ಗುಣವೇನೆಂದರೆ, ತುಂಡಾದ ಕೂದಲುಗಳನ್ನು ಮೈಮೇಲೆ ಬೀಳಿಸುವುದೇ ಇಲ್ಲ ಯಂತ್ರವು ತುಂಡು ಮಾಡಿದಂತೆಯೇ ಕೂದಲು ಒಂದು ಪೆಟ್ಟಿಗೆಗೆ ಬಿಸಾಡಿಬಿಡುತ್ತದೆ. ಇದ ರಿಂದ ಯಾವ ಸಮಯದಲ್ಲಿಯೂ ಕ್ಷೌರಮಾಡಿಕೊಳ್ಳಬಹುದು ಸ್ನಾನಮಾಡುವ ಅವಶ್ಯವೇ ಇಲ್ಲ

ಹಿಮಾಲಯದಂತಹ ಎತ್ತರವಾದ ಪರ್ವತಶಿಖರಗಳಲ್ಲಿ ಸಜೀವವಾದ ವಸ್ತುಗಳೇ ಬದುಕಿರುವುದಿಲ್ಲವೆಂದು ಇದುವರೆಗಿನ ಶೋಧಕರ ಮತವಿತ್ತು. ಆದರೆ ಇತ್ತೀಚೆಗೆ ಜರ್ಮನಿಯ ಕೆಲಮಂದಿ ಪರ್ವತ ಪರೀಕ್ಷಕರು ಹಿಮಾಲಯದ ಅತ್ಯುನ್ನತವಾದ ಶಿಖರದಲ್ಲಿಯೂ ಒಂದು ಜಾತಿಯ ಕಾಡು ಮನುಷ್ಯರು ವಾಸಿಸುವರೆಂದು ಕಂಡುಹಿಡಿದಿರುವರು ಶೋಧಕರು ಪರ್ವತಗಳನ್ನು ಹತ್ತುತ್ತಾ ಹೋಗುವಾಗ ಒಂದು ಕಡೆಯಿಂದ ಹೇಂಟೆಗಳ ಕೂಗು ಕೇಳಿಸಿತಂತೆ ಅದನ್ನು ತಿಳಿಯುವ ಕುತೂಹಲದಿಂದ ಮುಂದೆ ನೇರಿ ಹತ್ತಿದರು, ಹತ್ತುವಾಗ ಸ್ವಲ್ಪ ದೂರದಲ್ಲಿಯೇ ಹಿಮದಂತೆ ಬೆಳ್ಳಗಿದ್ದ ಕೆಲಮಂದಿ ಮನುಷ್ಯರು ಕೂತುಕೊಂಡು ಸಂಭಾಷಣೆಮಾಡುವುದನ್ನು ಕಂಡರು ಅವರ ಮಾತು ಹೇಂಟೆಗಳ ಕೂಗಿಗಿಂತ ಹೆಚ್ಚು ವಿಕಾರವಾಗಿಲ್ಲವಂತೆ ಅವರು ಮನುಷ್ಯರನ್ನು ಕಂಡೊಡನೆಯೇ ಓಡಿಹೋದರಂತೆ

ಡಾ ಬೆಸೆಂಟರೂ ಸರ್ ಚಿಮನ್‌ಲಾಲ್ ಸೆಟಲ್ವಾಡರೂ ಇಂಗ್ಲೆಂಡಿಗೆ ಹೋಗಿದ್ದು ಈಗ ಹಿಂತಿರುಗಿರುವರು. ಇಂಗ್ಲೆಂಡಿನಲ್ಲಿ ಇವರು ಅನೇಕ ರಾಜಕೀಯ ಧುರೀಣರನ್ನು ಕಂಡಿರುವರು ಭಾರತ ಮಂತ್ರಿಗಳೊಡನೆ ಮಾತಾಡಿರುವರು ಇವರ ಅಭಿಪ್ರಾಯದಂತೆ ವೈಸರಾಯ್ ಲಾರ್ಡ್ ಇರ್ವಿನ್ನರು ಸದ್ಯದಲ್ಲಿ ಒಂದು ಪ್ರಕಟನೆಯನ್ನು ಮಾಡುವರು ಅದರಲ್ಲಿ ಹಿಂದು ದೇಶಕ್ಕೆ ಸಾಮಂತ ಸ್ವರಾಜ್ಯವನ್ನು ಕೊಡುವ ವಿಷಯಕರ ವಾದ ಜನವರಿಯಲ್ಲಿ ಸೈಮನ್ ಸಮಿತಿಯವರ ವರದಿಯು ಪ್ರಾಂತ್ಯಗಳೊಂ ಟಿಗೆ ಒಪ್ಪಿಸಲ್ಪಟ್ಟ ಅನಂತರ ಹಿಂದು ದೇಶದ ಪ್ರಮುಖ ಧುರೀಣರನ್ನು ಮಂತ್ರಾಲೋಚನೆಗೆ ಕರೆದು ಅವರೊಡನೆ ಮಾತಾಡಿ ಹಿಂದು ದೇಶದ ಮುಂದಿನ ರಾಜ್ಯಸೂತ್ರಗಳನ್ನು ಕುರಿತು ಆಲೋಚಿಸ ಬರಂತೆ ಬೆಸೆಂಟರೂ ಸೆಟಲ್ವಾಡರೂ ಈ ವಿಷಯದಲ್ಲಿ ಹೆಚ್ಚು ವಿಶ್ವಾಸವನ್ನು ತೋರಿಸುತ್ತಾರೆ ಹಿಂದಿನ ಭಾರತ ಮಂತ್ರಿಗಳಾದ ಲಾರ್ಡ್ ಬರ್ಕನ್‌ಹೆಡ್ಡರು ಕಾಲಾವಕಾಶವನ್ನು ಗಡಿಸಿ ಹಾಕಿ ಸೈಮನ್ ಸಮಿತಿಯವರು ಇಂಗ್ಲೆಂಡಿನ ಸರ್ವ ಪಕ್ಷಗಳವರಿಂದಲೂ ಮಾನ್ಯತೆ ಪಡೆದವರು ಅವರು ವರದಿಯನ್ನು ಪ್ರಸಿದ್ಧಪಡಿಸುವ ಮುಂಚೆ ಸರ್ಕಾರವು ಹಿಂದು ದೇಶದ ಸಾಮಂತ ರಾಜ್ಯದ ವಿಷಯವಾಗಿ ಪ್ರಕಟನೆ ಕೊಟ್ಟರೆ ಅದು ಸಮಿತಿಯವರಿಗೊಂದು ಅವಮಾನವೇ ಸರಿ ಎಂದು ಅವರ ಅಭಿಪ್ರಾಯ

ಸಸ್ಯವರ್ಗಗಳಿಗೂ ಕಷ್ಟಸುಖಗಳ ತಿಳುವಳಿಕೆಯುಂಟೆಂದು ಕಂಡು ಹಿಡಿದು ಜಗದ್ವಿಖ್ಯಾತರಾಗಿರುವ ಜಗದೀಶಚಂದ್ರಬೋಸ್‌ರವರು ಹಿಮಾಲಯ ಪರ್ವತ ಪ್ರಾಂತ್ಯದಲ್ಲಿನ ಕೆಲವು ವನಸ್ಪತಿಗಳ ಗುಣದೋಷಗಳನ್ನು ವಿಮರ್ಶೆ ಮಾಡುತ್ತ ಇದ್ದಾಗ, ಅವುಗಳಲ್ಲೊಂದು ಕಳೆದುಹೋದ ಪ್ರಾಣವನ್ನು ಕೂಡ ಬರಮಾಡಿ ಕೊಡಬಲ್ಲುದೆಂದು ಕಂಡು ಬಂದಿರುವುದಂತೆ ! ನ್ಯಾಯವಾದ್ದು ಇತರ ಸಸ್ಯಗಳು ಆ ವನಸ್ಪತಿಯ ಉಪಯೋಗದಿಂದ ಪ್ರಾಣ ಪಡೆದುಕೊಂಡಿರುವುವಂತೆ ! ಅಲ್ಲಿಂದ ಬೋಸರವರು ಒಂದು ಕಳ್ಳಿಗೆ ವಿಷಹಾಕಿ ಕೊಂದು ಅನಂತರ ಸಾಕ ಪಿಡುಗಾರಿಯು ಮೂಲಕ ಆ ವನಸ್ಪತಿಯ ರಸವನ್ನು ಮೃತಸಸ್ಯದ ಶರೀರಕ್ಕೆ ಸೇರಿಸಿದ ಕೂಡಲೆ ಅದು ಬದುಕಿಕೊಂಡು ಮೊದಲಿಗಿಂತಲೂ ಹೆಚ್ಚಿನ ಚಲನೆಯಿಂದ ಬೆಳೆಯಿತೆಂದು ಹೇಳುತ್ತಾರಂತೆ ‘ ಮುಂದಿನ ದಿನಗಳಲ್ಲಿ ಡೆಮಸ್ ಇಕ್ಕಾಕ್ಕ ಕ್ಟೂಟನ ಪಾರ್ಲಿಮೆಂಟಿನ ಸಂದರ್ಭದಲ್ಲಿ ಸರ್ ಜಗದೀಶಚಂದ್ರಬೋಸರು ಭಾಷಣ ಮಾಡುವಾಗ ಈ ವನಸ್ಪತಿಯ ವಿಚಾರವಾಗಿ ಹೆಚ್ಚಿನ ಸಂಗತಿಗಳನ್ನು ತಿಳಿಸುತ್ತಾರೆ.

ಬಾಲ್ಯವಿವಾಹ ನಿರೋಧಕ ಶಾಸನ.

ಹರಿವಿಲಾಸಶಾರದಾರವರು ಬಾಲ್ಯವಿವಾಹ ನಿರೋಧಕ ಶಾಸನದ ಬಿಲ್ಲನ್ನು ಸ್ಥಾಪಿಸಿದಾಗ ಸಾಮ್ರಾಜ್ಯಶಾಸನ ಸಭೆಯವರೊಪ್ಪಿಸಿದ್ದರು, ಅದರ ಸ್ವಾರ್ಥ ಕವಾಗ ಸಾಮಾಜಿಕ ಹಿತವಿಚಾರವನ್ನು ತಿಳಿದು ವಿರೋಧಿಸುವುದಕ್ಕಾಗಿ ಗೋರಕ್ಷಣೆಸಲ್ಪಟ್ಟಿದ್ದ ಸಂಘದವರು ಭಾರತದೇಶದ ಭಾಷಾ ವಾರ್ತೆಗಳಲ್ಲಿ ಸಂಚ

ರಿಸಿ ಸಾಮಾಜಿಕ ಸಂಸ್ಥೆಗಳ ಮತ್ತು ಸ್ತ್ರೀಯರ ಈ ಅಭಿಪ್ರಾಯವನ್ನು ತಿಳಿಯತಕ್ಕೊಂದು ಸೂಕ್ಷ್ಮವಾದ ವಿಚಾರವಾದುದರಿಂದ ಶಾಸನ ಸಭೆಗೆ ಸರ್ಕಾರವು ಕೊಟ್ಟ ಬೆಲೆ ... ನಡೆದ ... ಶಾಸನವಾಗುವ ಮುನ್ನ ... ಈ ಬಿಲ್ಲಿನ ... ತಿರುಗಿ ಕಳುಹಿಸಲ್ಪಟ್ಟಿತು ... ಅಲ್ಲಿ ಈ ಬಿಲ್ಲು ಕೆಲವು ಮಾರ್ಪಾಟುಗಳೊಡನೆ ... ಆಗಬೇಕಾದ ... ಸಭೆಯವರು ... ಈ ಶಾಸನವು ... ಮಾಡಬೇಕೆಂದು ... ಶಾಸನವು ... ಬಳಿಕ ... ಶ್ರೀ ಮಹಾರಾಜರವರ ಅಂಗೀಕಾರವನ್ನು ಪಡೆದು ಈಗ ಶಾಸನವಾಗಿ ಜಾರಿಗೆ ಬರುವುದು.

ಶಾಸನವಿಧಾನ

(1) ಈ ಶಾಸನವು 1920 ನೇ ಸಂವತ್ಸರದ ಬಾಲ್ಯವಿವಾಹನಿಷೇಧದ ಬಿಲ್ಲೆಂದು ಕರೆಯಲ್ಪಡುವುದು. ಈ ಬಿಲ್ಲು ಬ್ರಿಟಿಷ್ ಇಂಡ್ಯಾ, ಬ್ರಿಟಿಷ್ ಬೆಲೂಚಿಸ್ತಾನ, ಸೆಂಟ್ರಲ್ ಪರಗಣ ಇವುಗಳಿಗೆ ಅನ್ವಯಿಸುವುದು. ಈ ಬಿಲ್ಲು 1930 ನೇ ಏಪ್ರಿಲ್ ತಾ|| 30 ರಿಂದ ಆಚರಣೆಗೆ ಬರುತ್ತದೆ.

(2) ಈ ಬಿಲ್ಲಿನಲ್ಲಿ ಬಾಲಕನೆಂದರೆ 18 ವರ್ಷವಯಸ್ಸಿನೊಳಗಿರುವವನೆಂದೂ, ಬಾಲಿಕಾ ಎಂದರೆ 14 ವರ್ಷವಯಸ್ಸಿನೊಳಗಾಗಿರುವವಳೆಂದೂ ಅರ್ಥವು. ಬಾಲ್ಯವಿವಾಹವೆಂದರೆ ಬಾಲಿಕೆಗಾಗಲಿ ಬಾಲಿಕನಿಗಾಗಲಿ ಮೇಲೆ ಹೇಳಿದ ವಯಸ್ಸು ಆಗದ ಮುಂಚೆ ನಡೆಯುವ ವಿವಾಹವೆಂದರ್ಥ. ಮೈನರ್ ಎಂದರೆ 18 ವರ್ಷವಯಸ್ಸಿನೊಳಗಿರುವ ಬಾಲಬಾಲಿಕೆ ಎಂದರ್ಥ.

(3) 18 ವರ್ಷದ ಮೇಲೆ 21 ವರ್ಷದೊಳಗೆ ಇರುವ ಯಾವ ಮನುಷ್ಯನಾಗಲಿ ಬಾಲ್ಯವಿವಾಹ ಮಾಡಿಕೊಂಡಲ್ಲಿ ಅವನಿಗೆ 1 ತಿಂಗಳ ಸಾಧಾರಣ ಕಾರಾಗೃಹವಾಸಶಿಕ್ಷೆಯಾಗಲಿ, 1000 ರೂಪಾಯಿವರೆಗೆ ದಂಡವಾಗಲಿ, ಈ ಎರಡು ಶಿಕ್ಷೆಗಳು ಒಟ್ಟಿಗಾಗಲಿ ವಿಧಿಸಲ್ಪಡುವುವು.

(4) 21 ವರ್ಷದ ಮೇಲಿರುವ ಯಾವ ಮನುಷ್ಯನಾಗಲಿ ಬಾಲ್ಯವಿವಾಹ ಮಾಡಿಕೊಂಡಲ್ಲಿ ಅವನಿಗೆ 1 ತಿಂಗಳ ಸಾಧಾರಣ ಕಾರಾಗೃಹವಾಸಶಿಕ್ಷೆಯಾಗಲಿ, 1000 ರೂಪಾಯಿವರೆಗೆ ದಂಡವಾಗಲಿ ಈ ಎರಡು ಶಿಕ್ಷೆ ಒಟ್ಟಿಗಾಗಲಿ ವಿಧಿಸಲ್ಪಡುವುವು.

(5) ಯಾರಾದರೂ ಬಾಲ್ಯವಿವಾಹವನ್ನು ಮಾಡಿಸಿದಲ್ಲಿ ಮತ್ತು ಮಾಡಿದಲ್ಲಿ ಅವರಿಗೆ 1 ತಿಂಗಳ ಸಾಧಾರಣಕಾರಾಗೃಹವಾಸಶಿಕ್ಷೆಯಾಗಲಿ, 1000 ರೂಪಾಯಿವರೆಗೆ ದಂಡವಾಗಲಿ ಈ ಎರಡು ಶಿಕ್ಷೆಗಳು ಒಟ್ಟಿಗಾಗಲಿ ವಿಧಿಸಲ್ಪಡುವುವು. ಈ ಆಪಾದಿತರು ಜರುಗಿಸಿದ ವಿವಾಹವು ಬಾಲ್ಯವಿವಾಹವಲ್ಲವೆಂದು ನಿರೂಪಿಸಿದರೆ ಶಿಕ್ಷಾರ್ಹರಾಗುವುದಿಲ್ಲ.

(6) ಯಾವ ಮೈನರಾದರೂ ಬಾಲ್ಯವಿವಾಹ ಮಾಡಿಕೊಳ್ಳುವುದಾದಲ್ಲಿ ಆ ಮೈನರು ಯಾರ ವಶದಲ್ಲಿರುತ್ತಾನೋ ಅಂತಹ ತಂದೆತಾಯಿಗಳೂ ಪೋಷಕರುಗಳೂ ಆ ವಿವಾಹವು ಜರುಗದಂತೆ ಆತಂಕಪಡಿಸಬೇಕು. ಅವರು ಹಾಗೆ ತಡೆಯದೆ ಹೋದಲ್ಲಿ ವಿವಾಹ ನಡೆಯಲು ಪ್ರೋತ್ಸಾಹಿಸಿದವರಾಗುವರು. ಈ ಶಾಸನಕ್ಕೆ ವಿರೋಧವಾಗಿ ನಡೆದವರಿಗೆ 1 ತಿಂಗಳ ಸಾಧಾರಣ ಕಾರಾಗೃಹವಾಸ ಶಿಕ್ಷೆಯಾಗಲಿ, 1000 ರೂ ವರೆಗೆ ದಂಡವಾಗಲಿ, ಈ ಎರಡು ಶಿಕ್ಷೆಗಳು ಒಟ್ಟಿಗಾಗಲಿ ವಿಧಿಸಲ್ಪಡುವುವು. ಸ್ತ್ರೀಯರಿಗೆ ಮಾತ್ರ ಕಾರಾಗೃಹವಾಸ ಶಿಕ್ಷೆ ವಿಧಿಸಲ್ಪಡುವುದಿಲ್ಲ.

(7) ಈ ಶಾಸನದ ಪ್ರಕಾರ ವಿಚಾರಿಸಲ್ಪಡುವ ವಿವಾದವನ್ನು ಪ್ರೆಸಿಡೆನ್ಸಿ ಮೆಜಿಸ್ಟ್ರೇಟರೂ, ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರೂ ವಿಚಾರಿಸಲಿಕ್ಕೆ ಮಾತ್ರ ಅವರುಗಳಿಗೆ ಹಕ್ಕಿರುವುದು.

(8) ಈ ಶಾಸನದ ಪ್ರಕಾರ ಅಪರಾಧವು ನಡೆದ 1 ವರ್ಷದೊಳಗೆ ಈ ಅಪರಾಧ ನಡೆದ ಸಂಗತಿಯನ್ನು ಕೋರ್ಟಿನವರಿಗೆ ತಿಳಿಸಿದ ಮೊದಲು ಕೋರ್ಟಿನವರು ತಾವಾಗಿ ವಿಚಾರಿಸತಕ್ಕದ್ದು.

(9) ಈ ಶಾಸನದ ಪ್ರಕಾರ ನಡೆಯುವ ಅಪರಾಧವನ್ನು ವಿಚಾರಿಸಲು ಹಕ್ಕಿರುವ ಕೋರ್ಟು ಕ್ರಿಮಿನಲ್ ಪ್ರೊಸೀಜರು ಕೋಡು (1891) ಸೆಕ್ಷನ್ 203 ನ್ನನುಸರಿಸಿ ಆ ಕೇಸನ್ನು ತಾವೇ ನಡಿಸಬಹುದು ಅಥವಾ ಯಾವ ಫಸ್ಟ್‌ಕ್ಲಾಸ್ ಮೆಜಿಸ್ಟ್ರೇಟು ನಡಿಸುವಂತೆಯೂ ಆಜ್ಞಾಪಿಸಬಹುದು.

(10) ಫಿರ್ಯಾದನ್ನು ವಿಚಾರಣೆ ಮಾಡಿದಮೇಲೆ ಯಾವಾಗಲಾದರೂ ಅಪರಾಧಿಗೆ ಸಮನ್ಸು ಕಳುಹಲ್ಪಡುವುದಕ್ಕೆ ಮೊದಲೇ ಕೋರ್ಟಿನವರು ಫಿರ್ಯಾದಿಯಿಂದ 100 ರೂ ಗಳನ್ನಾಗಲಿ ಅದಕ್ಕೆ ತಕ್ಕ ಜಾಮೀನು ಪತ್ರವನ್ನಾಗಲಿ ತೆಗೆದುಕೊಂಡು ಫಿರ್ಯಾದನ್ನು ವಜಾ ಮಾಡಬಹುದು.

1920 ನೇ ಅಕ್ಟೋಬರ್ ತಾ|| 10 ನೆಯ ಗುರುವಾರ ರಾಜಧಾನಿಯಲ್ಲಿ ಜರುಗಿದ ಮೈಸೂರು ಪ್ರಥಮ ಬ್ರಾಹ್ಮಣೇತರ ಮಹಾಸಭಾಧ್ಯಕ್ಷರಾದ ಮ|| ರಾಮಸ್ವಾಮಿ ಮೊದಲಿಯಾರ್‌ರವರು ಮಾಡಿದ ಭಾಷಣ

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಗ್ರಾಮ ಪುನರ್ನಿರ್ಮಾಣ

ಎಲ್ಲಕ್ಕಿಂತಲೂ ಅತಿಶಯವಾಗಿ ಬಹುಕಾಲ ಯಾರ ಹೆಸರಿನಿಂದ ಅನೇಕ ಉಪಯುಕ್ತಕಾರ್ಯಗಳು ಮಾಡಲ್ಪಟ್ಟಿವೆಯೋ ಮತ್ತು ಯಾರ ಪ್ರಯೋಜನಕ್ಕಾಗಿ ಇತ್ತೀಚಿನವರೆಗೆ ಏನೂ ಮಾಡಲ್ಪಟ್ಟಿರಲಿಲ್ಲವೋ ಅಂತಹ ತಿರಸ್ಕೃತ ಗ್ರಾಮಸ್ಥರ ಕಡೆಗೆ ಲಕ್ಷ್ಯವಿಡುವಂತೆ ನಾವು ಪ್ರಯತ್ನಿಸುತ್ತೇವೆ. ಹಳ್ಳಿಗಳ ಕಡೆ ಗಮನಿಸಿ, ಹಿಂದಿನ ಶತಮಾನದಲ್ಲಿ ನಡೆದಿರುವ ಅಭಿವೃದ್ಧಿಗೂ ಕಳೆದ ದಶಮಾನದಲ್ಲಿ ನಮ್ಮ ಸಂಸ್ಥಾನದೊಳಗೆ ಕಳೆದ ಐದು ವರ್ಷಗಳಲ್ಲಿ ನಡೆದಿರುವ ಅಭಿವೃದ್ಧಿಗೂ ಹೋಲಿಸಿ ನೋಡಿದರೆ ಶಿಕ್ಷೆ ವಿದ್ಯಾಭ್ಯಾಸ ಗ್ರಾಮಸ್ಥನಿಗಿಲ್ಲ, ವೈದ್ಯಸಹಾಯ ಇಲ್ಲದೆ ರೋಗದಿಂದಲೂ ಬಡತನದಿಂದಲೂ, ದುಃಖದಿಂದಲೂ ನರಳುತ್ತಿರುವ ಸ್ಥಿತಿಯನ್ನು ಅವನು ಶಿಕ್ಷಾರ್ಜಿತವಾಗಿ ಅನುಭವಿಸಿಕೊಂಡು ಬರುತ್ತಿರುವುದೂ, ದೂರ ದೂರದಲ್ಲಿರುವ ಗ್ರಾಮಗಳೊಳಗೆ ಗುಡಿಸಲುಗಳಲ್ಲಿ ವಾಸಮಾಡುತ್ತಿರುವವರು ತೆರುತ್ತಿರುವ ಹಣದಿಂದ ಪಟ್ಟಣಗಳು ಗರ್ವಕಾರಣವಾಗಿ ಅಭಿವೃದ್ಧಿಯಾಗುತ್ತಿರುವುದೂ ಗೋಚರವಾಗುತ್ತವೆ. ಉಲ್ಲಾಸದಿಂದಲೂ, ಭರವಸೆಯಿಂದಲೂ ಆಶೆಯಿಂದಲೂ ಕೂಡಿದ ಇಂದಿನ ರೈತರ ದೃಗ್ಗೋಚರದಿಂದ ನೋಡಿದಲ್ಲಿ ಬ್ರಾಹ್ಮಣೇತರರ ಚಳುವಳಿ ಪ್ರಯತ್ನವು ಫಲವಾಗುವುದೆಂದು ನೀವೇ ಅರಿತುಕೊಳ್ಳಿರಿ. ಬಹಳ ಕಾಲಾನಂತರ ತನ್ನ ಉಪೇಕ್ಷಿತ ಸ್ಥಿತಿಯನ್ನು ನಿವಾರಿಸುವ ಬೀರಪುರುಷನು ಬಂದಿರುವನೆಂದೂ ಮುಂದೆ ತನಗೆ ಶುಭೋದಯವಾಗುತ್ತದೆಂದೂ ಗ್ರಾಮಸ್ಥನಾದ ಬ್ರಾಹ್ಮಣೇತರ ರೈತನು ಭಾವಿಸಿಕೊಂಡಿರುವನು. ಅವನ ದುರವಸ್ಥೆಯನ್ನು ಹೋಗಲಾಡಿಸುವುದು, ಹಳ್ಳಿಗಳಲ್ಲಿ ವಿದ್ಯಾಬುದ್ಧಿಗೆ ಅವಕಾಶವನ್ನು ಕಲ್ಪಿಸುವುದು, ರೈತನು ಸ್ವೀಗು ಮೊದಲಾದ ಅಂಟುರೋಗಗಳಿಗೆ ತುತ್ತಾಗುವುದನ್ನು ತಪ್ಪಿಸುವುದು, ಅವನು ಮಿತವ್ಯಯದಿಂದ ಹಣವನ್ನು ಗಳಿಸುವಂತೆ ಪ್ರೋತ್ಸಾಹಿಸುವುದು—ಇವೆಲ್ಲವೂ ಗ್ರಾಮ ಹಿತಚಿಂತಕರೆಲ್ಲರ ಉದ್ದೇಶವು ಆಗಬೇಕಾಗಿದೆ, ಈ ಕೆಲಸವನ್ನು ಅವರ ಮಧ್ಯದಲ್ಲಿ ಹುಟ್ಟಿ ವಾಸಿಸುತ್ತ, ಸ್ವಭಾವಸಿದ್ಧವಾಗಿ ಅವರ ಮುಖಂಡರಾಗಿರುವ ನಮ್ಮಗಳಿಗಿಂತ ಮತ್ತಾರೂ ವಿಶೇಷ ಶ್ರದ್ಧೆಯಿಂದಲೂ ಸಹಾನುಭೂತಿಯಿಂದಲೂ ಮಾಡಲಾರರು.

ಸರ್ಕಾರಿ ಉದ್ಯೋಗ

ಸಂಸ್ಥಾನದ ಪ್ರಸಕ್ತ ಜನಗಣತಿಯಲ್ಲಿ ಉನ್ನತ ಸ್ಥಾನಗಳನ್ನು ಪಡೆದಿರುವ ... ಬ್ರಾಹ್ಮಣೇತರರು ಹೊಂದಿರುವ ಸ್ಥಾನಗಳು ... ಅವರ ಜನಸಂಖ್ಯೆಗೆ ... ಹೋಲಿಸಿದರೆ ... ಸರ್ಕಾರಿ ಉದ್ಯೋಗಗಳ ... ನಮ್ಮ ... ಸರ್ಕಾರಿಯುದ್ಯೋಗಗಳನ್ನು ಸಂಪಾದಿಸುವ ನಮ್ಮ ಪ್ರಯತ್ನವನ್ನು ಸಂಕುಚಿತ ಮತ್ತು ನಮ್ಮ ಸ್ವಾರ್ಥವನ್ನು ... ಅನ್ನವನ್ನು ... ಹೋರಾಡುವಂತೆ ... ಉತ್ಸಾಹಗಳನ್ನು ... ಇಲ್ಲದ ಬ್ರಾಹ್ಮಣೇತರರು ಸರ್ಕಾರಿಯುದ್ಯೋಗ ಸಂಪಾದನೆಗಾಗಿ ಬಹಳ ಆಸಕ್ತಿಯಿಂದ ಹೋರಾಡುತ್ತಿರುವರೆಂದು ಇಲ್ಲಿನ ... ಹೊರಗಡೆ ಇರುವ ಅವರ ಬಂಧುಗಳೂ ಹೇಳುತ್ತಿರುವುದನ್ನು ನೀವು ಪದೇ ಪದೇ ಕೇಳುತ್ತಿರಬಹುದು. ಒಕ್ಕಲಿಗರ ಗುಂಪಿನವರು ಎಂತಹ ರಾಜಕೀಯ ಮಾರ್ಗವನ್ನು ಅನುಸರಿಸಿರುವವರಾಗಿರಲಿ ಮತ್ತು ಎಂತಹ ಧ್ಯೇಯವುಳ್ಳವರೆಂದು ನಟಿಸುತ್ತಿರುವವರಾಗಿರಲಿ ಅನೇಕ ಉಪನ್ಯಾಸ ವೇದಿಕೆಗಳ ಮೇಲೆ ನಿಂತು ಬ್ರಾಹ್ಮಣೇತರರ ಆಕಾಂಕ್ಷೆಗಳಿಗೆ ವಿರೋಧವಾಗಿ ಉಪನ್ಯಾಸಮಾಡುತ್ತಿರುವರು ಮತ್ತು ಈ ಕೋರಿಕೆಗಳು ಪರಮನಾನ್ಯಾಯವಾದುದೆಂದು ಬೊಬ್ಬೆಹೊಡೆದು, ತಮಗೆ ವಿಶೇಷ ಧಕ್ಕೆ ಬರುವ ಪ್ರಯತ್ನ ಪಕ್ಷಾಂತರ ಪೀಟಿಕೆಯಿಂದ ತಮ್ಮನ್ನು ಕಾಪಾಡುವುದು ಅತ್ಯಾವಶ್ಯಕವೆಂದು ಒಳಗಿನ ವಿಷಯವನ್ನು ತಿಳಿಯದವರು ನಂಬುವಹಾಗೆ ಮಾಡುತ್ತಿದ್ದಾರೆ. ಬಹಳ ತೊಂದರೆಯನ್ನು ಅನುಭವಿಸುತ್ತಿದ್ದೇವೆಂದು ಕೂಗುವುದರಿಂದ ಅವರಿಗೆ ಬಹಳಮಟ್ಟಿಗೆ ಉಪಕಾರವಾಗಿರುತ್ತದೆ. ಇದು ಈಗ ಅವರು ಹೊಂದುತ್ತಲಿರುವ ಅನುಕೂಲಗಳನ್ನೆಲ್ಲ ಉಳಿಸಿಕೊಳ್ಳಲು ಮತ್ತು ಪ್ರತಿಯೊಂದು ಸಂದರ್ಭದಲ್ಲೂ ಇನ್ನೂ ಹೆಚ್ಚು ಪ್ರಯೋಜನವನ್ನು ಬಹಳ ಧೈರ್ಯದಿಂದಲೂ, ಸ್ಥೈರ್ಯದಿಂದಲೂ ಕೇಳಲೂ ಬಹುಮಟ್ಟಿಗೆ ಸಹಾಯಕವಾಗಿರುತ್ತದೆ. ಇದರಿಂದ ಪ್ರಭುತ್ವದವರಿಗೆ ಅನುಮಾನವೂ ಅಂಜಿಕೆಯೂ ಉಂಟಾಗಿ ತಮ್ಮ ಘನವಾದ ನೀತಿಯನ್ನೂ ವಾಗ್ದಾನವನ್ನೂ ಒಳಗೊಂಡಿರುವ ಆಜ್ಞಾಪತ್ರಿಕೆಗಳನ್ನು ಚಿಂದಿಯ ಕಾಗದದಂತೆ ಗಣಿಸುವಹಾಗೆ ಆಗಿರುತ್ತದೆ.

ಮಿಲ್ಲರ್ ಕಮಿಟಿಯ ರಿಪೋರ್ಟಿನಲ್ಲಿ ಹೇಳಿರುವಂತೆ ಕಾರ್ಯಕ್ರಮವು ನಿರ್ವಂಚನೆಯಿಂದ ನಡೆಸಲ್ಪಡುತ್ತದೆಯೇ ಎಂದು ನಾನು ಪ್ರಶ್ನಿಸಬೇಕಾಗಿದೆ. ಇಂದಿನವರೆಗೂ ಬ್ರಾಹ್ಮಣೇತರರು ಸರ್ಕಾರಿಯುದ್ಯೋಗದಲ್ಲಿ ತಮಗೆ ನ್ಯಾಯವಾದಷ್ಟು ಸ್ಥಾನಗಳು ದೊರೆಯಬೇಕೆಂದು ಪ್ರಾರ್ಥಿಸುತ್ತಿರುವುದು ಅರಣ್ಯರೋದನವಾಗಿರುತ್ತದಲ್ಲದೆ ನಿನ್ನ ... ಸಾಧಿಸುವ ಶಕ್ತಿಯೂ ಸಂಕಲ್ಪವೂ ಇನ್ನಿಲ್ಲದಿರುವುದನ್ನು ನೋಡಿದರೆ ನೀವಾಗಿ ಮಾಯಾವಾದಿಗಳಾಗಿರಬೇಕೆಂದು ತೋರುತ್ತದೆ. ... ಅವರ ಸಂತತಿಗೆ ಪಾತ್ರರಾಗಿದ್ದ ಅನುಯಾಯಿಗಳಿಗೆ ಆಶ್ಚರ್ಯವಾಗಿರುವುದೇನು? ಅವರಿಂದ ಜ್ಞಾನಾರ್ಜನೆಯನ್ನು ಮಾಡಿರುವವರು ಎಂತಹ ಗಾಢ ... ರಾಗಿರುವರು. ಕ್ರಮದಿಂದ ಸಂಕಟಪಡುತ್ತಿರುವ ಈ ದೇಶದ ... ಕಷ್ಟನಿವಾರಣೆ ಮಾಡಬೇಕಾದ ತಮ್ಮ ಪವಿತ್ರಕರ್ತವ್ಯವನ್ನು ಮರೆಯುವ ಹಾಗೆ ಯಾವ ಮಹಾಶಕ್ತಿಯು ಅವರ ಸ್ನೇಹಿತರುಗಳಿಗೂ ಅನುಯಾಯಿಗಳಿಗೂ ಮಂಕನ್ನು ಹಿಡಿಸಿರುತ್ತದೆ! ಆತ್ಮತ್ಯಾಗಬುದ್ಧಿಯನ್ನೂ ಕಾರ್ಯನಿರ್ವಾಹಕ್ರಮವನ್ನೂ ಕಲಿತುಕೊಂಡಿರುವರೆ? ವಂಶಪಾರಂಪರ್ಯವಾಗಿ ಉದ್ಯೋಗಾದಿ ಪ್ರಯೋಜನಗಳನ್ನು ಅನುಭವಿಸುತ್ತಿರುವವರ ಲೋಪದೋಷಗಳನ್ನೂ ಒಂದು ದಿವಸದ ಬಾಳಿನ ಮತ್ತು ಬಡವನ ಅಧಿಕಾರಯುಕ್ತರಾದವರ ನಿಷ್ಫಲವಾದ ವಾಕ್ಯಾಡಂಬರಗಳನ್ನೂ ಬಹಳ ಶಾಂತಿಯಿಂದಲೂ ಸ್ಥೈರ್ಯದಿಂದಲೂ ಸಹಿಸಿಕೊಂಡು ಮೈಸೂರಿನ ಒಕ್ಕಲಿಗರ ವಿಚಾರದಲ್ಲಿ ಜಾತಿ ವೈಮನಸ್ಯವೆಂಬ ಒಂಟಾನೆಗಿಡವನ್ನು ಬೆಳಸಲು ಪ್ರಯತ್ನಿಸುತ್ತಿದ್ದಾರೆಂದು ನಿಂದಿಸಿದ ಹೊಗಳಿಕೆಯಿಂದ ತಲೆತಿರುಗಿ ಹೋಗಿದ್ದ ಮುಖ್ಯರಾಜಾಧಿಕಾರಿಯು ಮಾಡಿದ ನಿಂದನೆಯನ್ನು ಹಸನ್ಮುಖದಿಂದ ಸ್ವೀಕರಿಸಿಕೊಂಡು ಯಾರ ಬೆಂಬಲವೂ ಇಲ್ಲದೆ ಚಾಕೊಬ್ಬರೇ ಹೋರಾಡುತ್ತಿದ್ದ ಮತ್ತು ತಮ್ಮ ಆಸ್ಪಾರ್ಥ ಕಾರ್ಯಸಾಧನ ಪ್ರಯತ್ನಕ್ಕೆ ಅಧಿಕಾರವೂ ಸಂಪತ್ತೂ ಪ್ರತಿಬಂಧಕವಾಗಿರುವುದರಿಂದ ತಮ್ಮ ಭುಜಶಕ್ತಿ ಕುಗ್ಗಿತೆಂದು ತಿಳಿದ ಕೊಂಡಿದ್ದ ಆ ಮಹಾಸ್ವಾರ್ಥತ್ಯಾಗಿಯ ... ಸ್ವಾರ್ಥತ್ಯಾಗಬುದ್ಧಿಯನ್ನೂ ಕಾರ್ಯನಿರ್ವಾಹಕ್ರಮವನ್ನೂ ಕಲಿತಿರುವರೇ? ಓ! ಶ್ರೀ ಚಾಮುಂಡೇಶ್ವರೀ ನಿನ್ನ ಕೃಪಾಪಾತ್ರವಾದ ಈ ದೇಶದಲ್ಲಿ ಆ ಮಹಾಪುರುಷನ ಹೆಸರು ಸಾರ್ವತ್ರಿಕ ನೆನಪಿನಲ್ಲಿರುವಂತೆ ಮಾಡಲ್ಪಡದಿರುವುದು ಮತ್ತು ಅವನ ಉದ್ದೇಶ ಕಾರ್ಯಸಾಧನ ಪ್ರಯತ್ನವನ್ನು ಅವನ ಅನುಯಾಯಿಗಳು ಧೈರ್ಯದಿಂದಲೂ ಸ್ವಾರ್ಥತ್ಯಾಗಬುದ್ಧಿಯಿಂದಲೂ ಮಾಡದಿರುವುದು ಅತ್ಯಂತ ಶೋಚನೀಯವಾಗಿರುವುದರಿಂದ ಅವರುಗಳಿಗೆ ಆ ಸದ್ಬುದ್ಧಿಯನ್ನು ಅನುಗ್ರಹಿಸು ಜನನೀ.

ಮೊಬಲಾರ್ಗ

ಸಂಸ್ಥಾನದ ಸರ್ಕಾರಿಯುದ್ಯೋಗದಲ್ಲಿ ತಕ್ಕಷ್ಟು ಸ್ಥಾನಗಳನ್ನು ಪಡೆಯುವುದು ನಮ್ಮ ಜನ್ಮಸಿದ್ಧವಾದ ಹಕ್ಕೆಂದು ಬ್ರಾಹ್ಮಣೇತರರಾದ ನಾವು ಹೋರಾಡುತ್ತಿರುವುದೇತಕ್ಕೆಂಬ ಪ್ರಶ್ನೆಯನ್ನು ಪರಿಶೀಲಿಸೋಣ. ... ಐಶ್ವರ್ಯವನ್ನೂ ಇಂದ್ರನ ವೈಭವವನ್ನೂ ಖ್ಯಾತಿಯನ್ನೂ ನಾವು ಪಡೆಯಬಹುದೆಂದು ಸಾಧಿಸುತ್ತೇವೆಂದೋ? ಅಧಿಕಾರದಿಂದಲೂ ಆದರ ಆದಾಯದಿಂದಲೂ ನಮ್ಮ ದೇಶವನ್ನು ... ನಾವು ಭಾವಿಸಿರುತ್ತೇವೆಂದೋ? ಇತರ ಜೀವನ ಮಾರ್ಗಗಳಲ್ಲಿ ಮೇಲ್ಮೆಯನ್ನು ಹೊಂದುವ ಅಭಿರುಚಿಯಾಗಲಿ ಸಾಮರ್ಥ್ಯವಾಗಲಿ ನಮಗಿಲ್ಲವೆಂದೋ? ಈ ಪ್ರಶ್ನೆಗಳಿಗೆಲ್ಲ ನಮ್ಮ ಹಿಂದಿನ ಮತ್ತು ಈಗಿನ ಇತಿಹಾಸವೇ ತಕ್ಕ ಉತ್ತರವನ್ನು ಖಂಡಿತವಾಗಿ ಕೊಡಬಲ್ಲುದು. ನಮ್ಮ ಕೆಲ ಜನರಿಗೆ ದೊರಕಿರುವ ಉದ್ಯೋಗದಿಂದ ನಮ್ಮ ದೊಡ್ಡ ಪಂಗಡದವರ ಆವಶ್ಯಕತೆಗಳು ತೀರುವುವೆಂದು ಯಾರೂ ಖಂಡಿತವಾಗಿ ಭಾವಿಸುವುದಿಲ್ಲ. ಆದರೆ ಯಾವುದನ್ನು ನಾವು ದುರದೃಷ್ಟದಿಂದ ಹಿಂದೆ ಉಪೇಕ್ಷಿಸಿ ಬಿಟ್ಟಿದ್ದೆವೋ ಅಂತಹ ವಿಚಾರವನ್ನು ನಾವು ಈಗ ಉಪೇಕ್ಷಿಸಲಾಗುವುದಿಲ್ಲ. ತಾವೇ ಶ್ರೇಷ್ಠವರ್ಗದವರೆಂದೂ, ಭೂಮಿಯ ಸರ್ವಸ್ವವೂ ಇತರ ಮನುಷ್ಯಜೀವಿಗಳೆಲ್ಲರೂ ಎಷ್ಟು ವಿದ್ಯಾವಂತರಾಗಿಯೂ, ಗುಣಾಢ್ಯರಾಗಿಯೂ ಉನ್ನತಸ್ಥಾನಾಪನ್ನರಾಗಿಯೂ, ಐಶ್ವರ್ಯವಂತರಾಗಿಯೂ ಸಮಾಜದಲ್ಲಿ ಗಣ್ಯರಾಗಿಯೂ ಇದ್ದಾಗ್ಯೂ ತಮ್ಮಲ್ಲಿ ಪೂಜ್ಯಬುದ್ಧಿಯಿಂದ ಕೆಳಗಾಗಿ ನಡೆದುಕೊಳ್ಳಬೇಕೆಂದು ಭಾವಿಸಿಕೊಂಡಿರುವವರು ನಿಮ್ಮ ಅಧಿಕಾರಿಗಳಾಗಿರುವುದರಿಂದ ನಿಮಗೆ ಯಾವ ಪ್ರಯೋಜನವಾಗುತ್ತದೆಂಬುದನ್ನು ನೀವು ಊಹಿಸಿನೋಡಿ. ಸಂಸ್ಥಾನದ ರೈತರುಗಳಲ್ಲಿ ಮತ್ತು ಭೂಸ್ವಾಮಿಗಳಲ್ಲಿ ಬಹುಭಾಗದವರಾಗಿರುವ ನಿಮ್ಮ ಗ್ರಾಮಕ್ಕೆ ಸೇವಕನಾಗಿಯೂ ರೈತನಿಗಿರುವ ಇಷ್ಟಾನಿಷ್ಟ ಮತ್ತು ಶ್ರಮಗಳನ್ನೆಲ್ಲ ಚೆನ್ನಾಗಿ ಅರಿತವನಾಗಿಯೂ ಇರುವವನು ಕೇವಲ ಸಂಬಂಧದಿಂದ ನಿಮಗಿರತಕ್ಕ ತೊಂದರೆಗಳನ್ನು ಸಹಾನುಭೂತಿಯಿಂದಲೂ ವಿವೇಕದಿಂದಲೂ ಪರಿಹರಿಸಿಕೊಡಬಲ್ಲನಲ್ಲದೆ, ಅಂಗಮೈಗಳ ಭಯವಿಲ್ಲದವನೂ, ಸರ್ಕಾರದ ಪ್ರತಿನಿಧಿಯೆಂದು ವಿಲಕ್ಷಣ ಮರ್ಗದಿಂದ ಪ್ರತೀತಿಗೆ ಬಂದಿರುವವನೂ ಪಂಚಾಯಿತಿಯೊಡನೆ ... ಈಗ ಕೈಹಿಡಿಯುತ್ತಿರುವ ಸರ್ಕಾರಿಯುದ್ಯೋಗವು ನೂರಾರು ವರ್ಷಗಳಿಂದ ಹೆಚ್ಚು ಸಲ್ಲಬೇಕಾಗಿದ್ದು ನಿಮ್ಮ ವರ್ಗದ ಒಂದೊಂದು ಜನರಿಗಾದರೂ ಉಪಕಾರಾರ್ಥ ಮಾಡಲಾರ ದಂಬುದನ್ನು ನೀವು ಒಪ್ಪಿ ನಮ್ಮ ದೇಶದ ಸರ್ಕಾರಿಯುದ್ಯೋಗಗಳಿಂದ ಬ್ರಾಹ್ಮಣೇತರರು ಒಂದೇ ಪಂಗಡದವರ ಸ್ವಾಯತ್ತ ವಾಗಿಲ್ಲದೆ ... ಜಾತಿ ಸಂಘಗಳಾಗಿ ಬದಲಾಯಿಸಿ ಈಗ ನೀವು ನಡಸಿಕೊಂಡರೆ ... ಅವಕಾಶವನ್ನು ಕೊಡುವಂತೆ ವಿಶೇಷವಾಗಿ ಕೇಳಬೇಕಾಗುವುದು ... ನಿಮ್ಮ ಕೋರಿಕೆಯಲ್ಲಿ ಏನು ತಪ್ಪಿದೆ?

ಒಬ್ಬ ಒಕ್ಕಲಿಗ ವಿದ್ಯಾರ್ಥಿಯು ವಿದ್ಯಾಭ್ಯಾಸವನ್ನು ಮುಗಿಸಿ ... ಯುವಕನ ಸ್ಥಿತಿಯನ್ನು ಯೋಚಿಸಿ ... ಅವನಿಗೆ ಸರ್ಕಾರಿಯುದ್ಯೋಗವು ದೊರಕದಿದ್ದಲ್ಲಿ ಅವನ ಪಂಗಡಕ್ಕೆ ಮನಸ್ಸಿನ ಚಿಂತೆ ... ಅವನ ತನ್ನ ಊರಿನವರ ಅಪಹಾಸ್ಯಕ್ಕೂ ಅವಹೇಳನಕ್ಕೂ, ವಿರೋಧಿಗಳ ಸಂತೋಷಕ್ಕೂ, ತೃಪ್ತಿಗೂ ಆಕರನಾಗುವನು. ಇಂತಹ ಸಂದರ್ಭದಲ್ಲಿ ಒಬ್ಬನ ಪ್ರಯೋಜನಮಾತ್ರಕ್ಕಲ್ಲದೆ, ಒಟ್ಟು ಪಂಗಡಕ್ಕೇ ಉತ್ತೇಜನಕರವಾಗಿ ಅಂದರೆ ಉಳಿದ ಯುವಕರು ಪ್ರೌಢವಿದ್ಯಾಭ್ಯಾಸ ಮಾಡುವಂತೆಯೂ, ಬಹಳ ಎಚ್ಚರಿಕೆಯಿಂದ ಬೆಳಸಿದ ಚಿಕ್ಕ ಸಸಿಗಳು ಕಮರಿಹೋಗುವುದಕ್ಕೆ ಮೊದಲೇ ಒಕ್ಕಲಿಗರ ಆಸನೆಯ ಪ್ರಾಬಲ್ಯವೆಂಬ ಬೆಳೆಯ ಕೊಯಿಲಿಗೆ ಒಂದು ಸನ್ನಾಹವಾಗುವುದಕ್ಕಾಗಿ ಬ್ರಾಹ್ಮಣೇತರರಾದ ನೀವು ಒಗ್ಗಟ್ಟಿನಿಂದ ಪ್ರೋತ್ಸಾಹಿಸಬೇಕೆಂದು ಕೇಳಿಕೊಳ್ಳುವುದರಲ್ಲಿ ಹಾನಿಯಾಗಲಿ, ಸ್ವದೇಶಾಹಿತವಾಗಲಿ ಉಂಟೆ? ಇದು ಜಾತಿಸಂಬಂಧವಾದ ಹೋರಾಟವೆಂದೂ ಇಂತಹ ಪ್ರಯತ್ನಗಳಿಂದ ಅಪಮಾನಕರವೆಂದೂ ನೀವು ಭಾವಿಸಿರುವಿರಾ? ಇಂಥಾ ಪ್ರಯತ್ನದಿಂದ ಜಾತಿವೈಮನಸ್ಯ ಹುಟ್ಟುತ್ತದೆಂಬ ಹುರುಳಿಲ್ಲದ ಮತ್ತು ಪೊಳ್ಳಾದ ಕೂಗು ನಮ್ಮ ಕಿವಿಗೆ ಬಿದ್ದರೂ, ನೀವು ಅವರ ವಶವಾಗುವಂತೆಯೂ ನಿಮ್ಮ ಮುಖಂಡರು ಇತರರಲ್ಲಿ ಕಡಿಮೆಯಾಗಿರುವುದನ್ನು ಅನುಭವಿಸಲು ಒಕ್ಕಲಿಗರ ಯುವಕರುಗಳಿಂದ ಯೋಗ್ಯತಾಪತ್ರಿಕೆಗಳನ್ನು ಪಡೆಯುವುದಕ್ಕಾಗಿ ಅವರೊಡನೆ ಸೇರಿ ಕೂಗುವಂತೆಯೂ ಮಾಡಬಹುದೇ? ಇಂತಹ ಆತ್ಮೋದ್ಧಾರ ಪ್ರಯತ್ನಗಳು ಜಾತಿದ್ವೇಷವನ್ನು ಹುಟ್ಟಿಸುವುದೆಂದು ದೂಷಿಸಲ್ಪಡುವುದಾದರೆ, ಇಂತಹ ಕಾರ್ಯಶಕ್ತಿಯು ದೇಶಾಭಿವೃದ್ಧಿಕರವಲ್ಲವೆಂದು ಧಿಕ್ಕರಿಸುವುದಾದರೆ, ವೈರಿಗಳನ್ನೂ, ನಿಂದೆಯನ್ನೂ ಧಿಕ್ಕಾರವನ್ನೂ, ತಿರಸ್ಕಾರವನ್ನೂ, ಕ್ಷುದ್ರವನ್ನೂ ಲಕ್ಷಿಸದೆ ನಾನು ಜಾತ್ಯಭಿಮಾನಿಯೆಂದು ಬಹಳ ಗರ್ವದಿಂದ ಕರೆದುಕೊಳ್ಳುತ್ತ, ಆ ಧ್ಯೇಯವನ್ನು ಅನುಸರಿಸಲು ನನ್ನ ಕೈಲಾದ ಶಕ್ತಿಯನ್ನೆಲ್ಲ ಪ್ರಯೋಗಿಸುವೆನು. ಸರ್ಕಾರಿಯುದ್ಯೋಗವನ್ನು ಸರ್ವಸಮರ್ಪಕವಾಗಿ ಹಂಚಬೇಕೆಂದು ಹೇಳಿದ ಮಾತ್ರಕ್ಕೇ ತಮ್ಮ ತಲೆ ಗುಣ್ಣೆಯನ್ನು ಮೇಲಕ್ಕೆ ಮಾಡಿಕೊಂಡು ರಂಪಾ ಹೂಡುವ ಈ ಜನರು ತಾನೇ ಸರ್ಕಾರಿಯುದ್ಯೋಗವನ್ನು ಉಪೇಕ್ಷಿಸಿರುವವರು? ಯಾರು ಕೆಲಸಕ್ಕೆ ನೇಮಿಸಲ್ಪಟ್ಟರೂ ಅವರು ಉಪೇಕ್ಷಿಯಿಂದಿರುವುದು ಸಹಜವೆ ಮತ್ತು ತಾವು ಕಚ್ಚಿಕೊಳ್ಳುವಂತೆ ನಿಜವಾಗಿಯೂ ಸ್ವಾರ್ಥರಹಿತರಾದ ಮಹಾದೇಶಾಭಿಮಾನಿಗಳಾಗಿರುವರೆ? ಹಾಗಿದ್ದಲ್ಲಿ, ಸರ್ಕಾರಿಯುದ್ಯೋಗವು ಇತರರಿಗೆ ದೊರೆಯದಂತೆ ಎಲ್ಲರೂ ಒಗ್ಗಟ್ಟಾಗಿ ಕಂದಕವನ್ನು ತೋಡಿ ಕೋಟೆಯನ್ನು ಕಾಯುವಂತೆ ಸರ್ಕಾರಿಯುದ್ಯೋಗಗಳನ್ನು ತಮ್ಮ ಶಕ್ತಿಸಾಹಸವನ್ನೆಲ್ಲ ವೆಚ್ಚಮಾಡಿ ಮೊದಲಿಗಿಂತಲೂ ಅಧಿಕವಾಗಿ ಕಾದುಕೊಂಡಿರುವುದೇತಕ್ಕೆ? ಕೆಲ ವರ್ಷಗಳ ಹಿಂದೆ ನಮ್ಮ ಒಕ್ಕಲಿಗರ ಸ್ನೇಹಿತರುಗಳು ಮೈಸೂರಿನ ಉದ್ಯೋಗವು ಮೈಸೂರಿನವರಿಗೇ ಕೊಡಲ್ಪಡಬೇಕೆಂದು ಬೊಬ್ಬೆಯಿಡುತ್ತಿದ್ದುದೂ, ಇದರಿಂದ ಆ ಉದ್ಯೋಗಗಳು ಮೈಸೂರಿನವರ ವಿನಾ ಅನ್ಯರಿಗೆ ದೊರೆಯದಂತಾದುದೂ ನಿಮಗೆ ತಿಳಿದೇ ಇದೆ. ಕಾರ್ಯನಿರ್ವಾಹಕಶಕ್ತಿಯಿರಬೇಕೆಂಬುದಕ್ಕಾಗಿಯೇ ಅವರು ಆ ರೀತಿ ಕೂಗುತ್ತಿದ್ದುದು? ಏತಕ್ಕಾಗಿ ಈ ಆಪತ್ತು ... ಅವರ ಇಷ್ಟಕ್ಕೆ ಕೂಡದವರನ್ನೂ ಅವರ ಪಂಗಡದವರು ಹೊರಗಿನವರನ್ನು ಉದ್ಯೋಗದಿಂದೋಡಿಸಿಬಿಟ್ಟು ಅವರ ಸ್ಥಾನದಲ್ಲಿ ಸೇರುವವರೆಗೂ ಕಾರ್ಯನಿರ್ವಾಹಕಶಕ್ತಿಯ ಆವಶ್ಯಕತೆಯು ವಿಚಾರವಾಗಿಯೇ ಆಗಲಿ ಕೆಲಸ ಸಮರ್ಪಕವಾಗಿ ನಡೆಯದಿರುವ ವಿಚಾರವಾಗಿಯೇ ಆಗಲಿ ದೇಶಹಿತ ಚಿಂತನೆಯಿಲ್ಲದಿರುವ ವಿಚಾರವಾಗಿಯೇ ಆಗಲಿ ಯಾವ ದೂರೂ ಕೇಳಬರುತ್ತಿರಲಿಲ್ಲ. ಆಗ ಎಲ್ಲವೂ ಸುಖವಾಗಿಯೂ ವೈಭವಯುಕ್ತವಾಗಿಯೂ ಇದ್ದಿತು. ಆದರೆ ಯಾವಾಗ ಬ್ರಾಹ್ಮಣೇತರರು ಕೊಂಚ ತಲೆಯೆತ್ತಿ ಸರ್ಕಾರದಲ್ಲಿ ಉದ್ಯೋಗದ ವಿಚಾರವಾಗಿ ಜಗಳಾಡುತ್ತ ಅದನ್ನು ಹೊಂದಿ ಹಿಗ್ಗುವವರಾದರೋ ಭಂಗಾರದಂತಹ ಕಾಲ ಈಗ ಕೊನೆಗಂಡಿತು, ಇನ್ನು ಮುಂದೆ ವಾಗ್ದಾನದ ... ಮನಸ್ಸಾಪ ... ವಾಗಲಿಕ್ಕಾಗಿರುವುದೆಂದು ... ಭವಿಷ್ಯವನ್ನು ಹೇಳತೊಡಗಿದರು. ನಿಮ್ಮ ಹಕ್ಕನ್ನು ಗಳಿಸುವಂತೆ ... ನಿಮ್ಮ ಪ್ರಯತ್ನವು ಕುಟಿಲ ... ಚರಿತ್ರೆಯ ... ಬಹಳ ಹಳೇ ಕಥೆ ಮತ್ತು ಮನು ಅನೇಕ ವಿಧದಲ್ಲಿ ಸಾರ್ಥಕಪಡಿಸು. ನೀವು ನೊಗವನ್ನು ಹೊರುವವರಾಗಿಯೂ, ನೀರನ್ನು ಸೇದುವವರಾಗಿಯೂ ಇರುವಿರಿ. ರಿಗೆಯ ಹೆಚ್ಚು ಭಾಗವನ್ನು ತೆರತಕ್ಕ ... ತಿರೋಭಾವವಾಗಿರುವ ಸಾಮ್ರಾಜ್ಯದಳಿತದ ವೆಚ್ಚದ ಭಾರವನ್ನು ನೀವು ವಹಿಸುತ್ತೀರಿ. ದೇಶದ ಐಶ್ವರ್ಯವನ್ನು ಅಭಿವೃದ್ಧಿಗೊಳಿಸಿ ತನ್ಮೂಲಕ ಮುಗ್ಧರಾದ ಕೋಟಿ ಒಕ್ಕಲಿಗರ ಕುಟುಂಬಗಳಿಗೆ ನಿರಾಯಾಸವಾದ ಜೀವನವನ್ನು ಕಲ್ಪಿಸಿಕೊಡುವ ಪ್ರಯತ್ನಗಳಿಗೆ ನಮ್ಮ ಮಾನಸಿಕ ಮತ್ತು ಆರ್ಥಿಕ ಸಹಾಯವನ್ನು ಮಾಡುತ್ತೇವೆ. ನಮಗೆ ದೊರೆತಿರುವ ಅನಾಧಾರಣ ಸ್ವಾತಂತ್ರ್ಯದ ಫಲವಾಗಿದೆ. ಈ ಸ್ವಾತಂತ್ರ್ಯವೆಲ್ಲವೂ ನಮಗೆಂದು ತೋರ್ಪಡಿಸಿಕೊಳ್ಳೋಣ. ಆದರೆ ನಮಗಿರುವ ಈ ಸ್ವಾತಂತ್ರ್ಯದ ಪರಮಿತಿಯನ್ನು ವಿನಾ ಇತರರನ್ನು ಬರಗೊಡದೆ ಒಕ್ಕಲಿಗರು ಏಕಾಂತವಾಗಿ ವಾಸಿಸುತ್ತಿರುವ ಮಲೆಯ ಭೂಮಿಯಲ್ಲಿ ಒಂದು ಭಾಗವನ್ನು ಅಪೇಕ್ಷಿಸಿ ಎಲ್ಲಿ ನಮ್ಮ ತಕ್ಕ ಸ್ಥಳವಾವುದು ಮತ್ತು ನಮ್ಮ ಪರಿಮಿತಿಯನ್ನು ಎಂಬುದನ್ನು ತಿಳಿಸಿಕೊಡಲು ತಕ್ಕ ಕಾಲವಾಗಿದೆ ಎಂದು ಹೇಳ ಬಹುದು. ಒಕ್ಕಲಿಗರ ಆತ್ಮತೃಪ್ತಿಕರವಾದ ಗುಪ್ತಾಲೋಚನೆಯ ವಿಧಾನವಾಗಿದೆ.

ಪರಿಹಾರ

ಆದರೆ ಮೈಸೂರು ದೇಶದ ಈಗಿನ ಪರಿಸ್ಥಿತಿಯು ಪರಿಹಾರವೇನಾಯಿತಿಲ್ಲವೇ ಎಂದು ನಾನೇ ಪ್ರಶ್ನಿಸಬೇಕಾದ ಸಂಸ್ಥಾನದ ನ್ಯಾಯ, ರೆವಿನ್ಯೂ, ಪೋಲೀಸು, ವಿದ್ಯಾಭ್ಯಾಸವೇ ಮೊದಲಾದ ಯಾವ ಶಾಖೆಯಲ್ಲಿ ನೋಡಿದರೂ ಒಕ್ಕಲಿಗರೇ ಹೆಚ್ಚಾಗಿ ಉದ್ಯೋಗದಲ್ಲಿರುವುದೂ, 1919 ರಿಂದ ತಮ್ಮ ಸ್ಥಾನವನ್ನು ಕೇವಲ ಉಳಿಸಿಕೊಳ್ಳುವ ಮೊದಲಿಗಿಂತಲೂ ಅತಿಶಯ ಸುರಕ್ಷಿತರಿಂದ ಕಾಪಾಡಿಕೊಂಡಿರುವುದೂ ಗೋಚರವಾಗುತ್ತವೆ. ಒಕ್ಕಲಿಗರನ್ನು ಸರ್ಕಾರಿಯುದ್ಯೋಗದಿಂದ ಓಡಿಸಲ್ಪಡಬೇಕೆಂದಾಗಲಿ, ಅವರ ತಕ್ಕವರನ್ನು ತೆಗೆದು ಬೇರೆಯವರನ್ನು ನೇಮಿಸಬೇಕೆಂದಾಗಲಿ ನಾವೆಂದೂ ಬೋಧಿಸಿರುವುದಿಲ್ಲ. ಸಮಸ್ತರೂ ಭಿನ್ನಾಭಿಪ್ರಾಯವಿಲ್ಲದೆ ಪಂಗಡಗಳಿಗೆಲ್ಲ ದೊರಕಬೇಕೆಂಬುದೇ ನಮ್ಮ ನಿರಂತರವಾದ ಕೋರಿಕೆಯಾಗಿದೆ. ನಮ್ಮ ಕಾರ್ಯಕ್ರಮದಲ್ಲಿ ಬ್ರಾಹ್ಮಣೇತರರಿಗೆ ಮಾತ್ರವಲ್ಲದೆ ಒಕ್ಕಲಿಗರಿಗೆ ಸಹ ಒಂದು ಸ್ಥಾನವು ಗೊತ್ತುಮಾಡಲ್ಪಟ್ಟಿದೆ. ಈ ಧ್ಯೇಯದಿಂದಲೇ ನಾವು ಒಟ್ಟಾಗಿ ನಿಂತಿರುವುದು. ಸರ್ಕಾರಿಯುದ್ಯೋಗವನ್ನು ಯಾವುದೊಂದು ಪಂಗಡದವರಾಗಲಿ ಕೊಳ್ಳುವವರಾಗಲಿ ಗುತ್ತಿಗೆ ಹಿಡಿದು ಅನುಭವಿಸತಕ್ಕದ್ದಲ್ಲ. ಇಷ್ಟೇ ಅಲ್ಲದೆ ನ್ಯಾಯಸಮ್ಮತವಾಗಿ ಕೊಡಲ್ಪಡುವುದರ ವಿನಾ ಯಾರೂ ಹಕ್ಕಿನ ಆಧಾರದಮೇಲೆ ಪಡೆಯತಕ್ಕದ್ದಲ್ಲ. ಸರ್ಕಾರಿಯುದ್ಯೋಗವನ್ನು ಕೇಳುವಾಗ್ಗೆ ಸಹಾಯಮಾಡಲು ಧರ್ಮಾಸನರಾಗಲಿ, ಅಧಿಕಾರಿಗಳ ಬೆಂಬಲವಾಗಲಿ ಇಲ್ಲದಿರುವ ಕೆಲ ಅರ್ಹರಾದವರಿಗೆ ಉದ್ಯೋಗವನ್ನು ಕೊಡಬೇಕೆಂದು

[illegible]

ಅಸಾಧಾರಣ ಸ್ಥಿತಿ

[illegible]

ಭಾರತನಾಟಕ ಚರಿತ್ರೆ

2 ಭಾರತೀಯರಲ್ಲಿ ನಾಟಕವೆನ್ನುವುದು ಇದ್ದಿತೆ? ಅಥವಾ ಪರದೇಶೀಯರಿಂದ ನೋಡಿ ಕಲಿತರೆ?

(ಮ|| ಅನವಟ್ಟಿ ರಾಮರಾಯರಿಂದ)

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

[illegible]

... ನಮ್ಮ ಪೂರ್ವಿಕರು ಬರೆದಿಡಬೇಕೆಂಬ ಬುದ್ಧಿ [illegible] ನಮ್ಮ ವಿಷಯಗಳನ್ನು ಚೆನ್ನಾಗಿ ತಿಳಿಯಲು ಸಾಧ್ಯವಿಲ್ಲದೆ [illegible] ಎಂಬುದೊಂದೇ ಕೊರತೆಯಾಗಿರುವುದು.

(ಮುಂದುವರಿಯುವುದು)

ಪತ್ರವ್ಯವಹಾರ

ಪತ್ರವ್ಯವಹಾರಕರ ಅಭಿಪ್ರಾಯಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬುದನ್ನು ಓದುಗರು ತಿಳಿಯತಕ್ಕದ್ದು.—ಸಂಪಾದಕ

ಜಂಗಲಿನ [illegible] ಹೆಚ್ಚಿಗೆ ರಹದಾರಿಯನ್ನು ವಸೂಲ್ಮಾಡುವುದು

[illegible]

ಕೆ ಎಸ್ ಪುಟ್ಟಣ್ಣ ಆರ್ ಎ ಮೆಂಬರ್

ಆದಿಪಂಪ ಮಹಾಕವಿಯ ಸ್ಮಾರಕಾರ್ಥ ಪತ್ರ

[illegible]

ತಮ್ಮ ವಿಧೇಯರು
[illegible]
ವೀರಭದ್ರಪ್ಪ ಕೊಪ್ಪಳ, ಬಿ ಎ
[illegible]
[illegible] ಕಾರ್ಯದರ್ಶಿಗಳು

[illegible]

[illegible]

ಪ್ರತ್ಯಕ್ಷದರ್ಶಿ.

[illegible]

[illegible]

ಸ್ಕೂಲಿನ ವಿದ್ಯಾರ್ಥಿ.

ತುಮಕೂರು ತಾಲ್ಲೂಕು ಶ್ರೀ ಸಿದ್ಧಗಂಗಾಕ್ಷೇತ್ರದ ಸಂಸ್ಕೃತಪಾಠಶಾಲೆಯ ಫಲಿತಾಂಶ

[illegible] —(1) [illegible] —(1) [illegible] (2) [illegible]

[illegible] 1000 ರೂ, [illegible] 1000 ರೂ [illegible] 100 ರೂ, [illegible] 100 ರೂ [illegible]

ಮ್ಯಾನೇಜರ್,
ಸಂಸ್ಕೃತಪಾಠಶಾಲಾ.

ಗ್ರಾಮನಾಯಕರಿಗೂ ರಾಜ್ಯನಾಯಕರಿಗೂ ಭೇದವೇನು?

[illegible]

ಶ್ರೀಮದ್ದೇಶಿಕೇಂದ್ರ ವಿದ್ಯಾಲಯ, [illegible]

[illegible] 1918 [illegible] 50 [illegible] 1328 [illegible] 1000 [illegible]

ಶಾಲೆಯ ಉಪಕರಣಗಳ ಸಲುವಾಗಿ ಪ್ರಯೋಜನಕರವಾಗುವಂತ ಶ್ರೀ ಸ್ವಾಮಿ ಜೀಯವರ ಮೊಬಲಗನ್ನು ಸರ್ವ ಗಣಕ್ಕೂ ಬಂಧುಗಳು ಅನುಗ್ರಹಿಸಲ್ಲಿ ನಮ್ಮ ಸಮಾಜವು ಶ್ರೀಘ್ರದಲ್ಲಿ ಅಭಿವೃದ್ಧಿಯನ್ನು ಹೊಂದಲು ಸಂಶಯವಿಲ್ಲವೆಂಬುದಾಗಿ ನಂಬಿರುವ, ಓರ್ವ ಹಿತಾಕಾಂಕ್ಷಿ

ಸ್ಕೂಲ್ ಡೇ ಮಹೋತ್ಸವ

ಮೈಸೂರು ಡಿಸ್ಟ್ರಿಕ್ಟ್ ಕೃಷ್ಣರಾಜನಗರ ತಾಲ್ಲೂಕು ಚುಂಚನಕಟ್ಟೆ ಗ್ರಾಮದ ... ಶ್ರೀಮನ್ಮಹಾರಾಜರವರ ಹೆಸರಿನಿಂದ ... ಸ್ಕೂಲಿನ ... ಇಂದಿಗೆ 3 ವರ್ಷಗಳಾದವು. ಈ ಪ್ರಕಾರ ಈ ಸ್ಕೂಲಿನ ತೃತೀಯ ವಾರ್ಷಿಕೋತ್ಸವವು ೧೯೨೯ ನೇ ಇಸವಿ ಅಕ್ಟೋಬರ್ 20 ನೇ ಭಾನುವಾರ ವಿಜೃಂಭಣೆಯಿಂದ ನಡೆಯಿತು. ಸ್ಕೂಲ್ ಕಮಿಟಿ ಮೆಂಬರುಗಳೂ, ಪಂಚಾಯತಿ ಮೆಂಬರುಗಳೂ, ಗ್ರಾಮಸ್ಥರೂ ಸೇರಿ ಸ್ಕೂಲಿನ ಮುಂಭಾಗದಲ್ಲಿ ಹಸುರುವಾದ ಚಪ್ಪರವನ್ನು ಹಾಕಿಸಿ, ಸ್ಕೂಲನ್ನು ತಳಿರು ತೋರಣಗಳಿಂದಲೂ, ಪಟಗಳಿಂದಲೂ ಬಹು ರಮ್ಯವಾಗಿ ಅಲಂಕರಿಸಿದ್ದರು. ಅಕ್ಕಪಕ್ಕ ಗ್ರಾಮಗಳಿಂದ ಈ ಮಹೋತ್ಸವಕ್ಕೆ ನೂರಾರು ಮಂದಿ ಮೇಲೆ ಬಂದಿದ್ದರು ಶ್ರೀಮನ್ಮಹಾರಾಜರವರ ಚಿತ್ರಪಟವನ್ನು ಊರಿನ ರಾಜಬೀದಿಯಲ್ಲಿ ಗ್ರಾಮದ ಬೀದಿಯಲ್ಲಿ ಮೆರವಣಿಗೆ ಮಾಡಿ ಸ್ಕೂಲಿಗೆ ತಂದು ಇರಿಸಿ ಸ್ಕೂಲ್ ಕಮಿಟಿ ಮೆಂಬರ್ ಚಂದಪ್ಪನವರ ಅಧ್ಯಕ್ಷತೆಯಲ್ಲಿ ಮಧ್ಯಾಹ್ನ 4 ಗಂಟೆಗೆ ಸಭೆ ಸೇರಿತು. ಆ ಕಾಲದಲ್ಲಿ ಸ್ಕೂಲಿನ ಹೆಡ್ಮಾಸ್ಟರ್ ಎಂ. ಎಸ್. ಸುಬ್ಬಣ್ಣನವರು ವಿದ್ಯಾಭಿವೃದ್ಧಿಯ ವಿಚಾರವಾಗಿ ಗ್ರಾಮಸ್ಥರಿಗಿರುವ ತೊಂದರೆಗಳನ್ನೂ, ಸ್ಕೂಲ್ ಪ್ರಾರಂಭವಾದ ಲಾಗಾಯತು ಸ್ಕೂಲ್ ಅಭಿವೃದ್ಧಿಯ ವಿಚಾರವನ್ನೂ ಅ॥ ಮಾಸ್ಟರಾದ ಎಂ. ನರಸಿಂಹಯ್ಯನವರು ಗ್ರಾಮಾಭಿವೃದ್ಧಿಯ ವಿಷಯದಲ್ಲಿ ಗ್ರಾಮಸ್ಥರಿಗಿರುವ ಸಂತೋಷವನ್ನೂ, ಅವರು ಅನುಸರಿಸಬೇಕಾದ ವಿಚಾರವನ್ನೂ ಈ ಗ್ರಾಮದ ರಾ॥ ಮ॥ ರಾಮೇಗೌಡ್ರಯ್ಯನವರು, ಮಾಸ್ತರುಗಳು ಸ್ಕೂಲ್ ಕೆಲಸದಲ್ಲಿ ಮತ್ತು ವರ್ಷ ಪೂರ್ತಿ ಕೆಲಸವಾಡುತ್ತಿರುವುದೇ ನಮ್ಮ ಸ್ಕೂಲಿನ ಅಭಿವೃದ್ಧಿಗೆ ಕಾರಣವೆಂಬುದನ್ನೂ, ಸ್ಕೂಲ್ ಕಮಿಟಿ ಮೆಂಬರು ಲಿಂಗಪ್ಪನವರು ಮಾಸ್ತರುಗಳಿಗೆ ಗ್ರಾಮಸ್ಥರಲ್ಲಿಯೂ, ಗ್ರಾಮಸ್ಥರುಗಳಿಗೆ ಮಾಸ್ತರುಗಳಲ್ಲಿಯೂ ಇರುವ ಪ್ರೀತಿಯೇ ಸ್ಕೂಲಿನ ಅಭಿವೃದ್ಧಿಗೆ ಕಾರಣವೆಂಬ ಉಪನ್ಯಾಸಗಳನ್ನು ಮಾಡಿದ ಮೇಲೆ ಅಧ್ಯಕ್ಷರ ಭಾಷಣವಾಗಿ ನೆರೆದಿದ್ದ ಸಭಿಕರಿಗೂ, ಸ್ಕೂಲ್ ಬಾಲಕರುಗಳಿಗೂ ಕೊಬರಿ ಸಕ್ಕರೆ ಹೂ ತಾಂಬೂಲಗಳು ಹಂಚಲ್ಪಟ್ಟು ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯಾದನಂತರ ಮಂಗಳಾರತಿ ಮಾಡಿ ಸಭೆಯನ್ನು ಮುಗಿಸಲಾಯಿತು. ತಾ 21-10-29 ನೇ ಸೋಮವಾರ ಮಧ್ಯಾಹ್ನ 1 ಗಂಟೆ ಮೇಲೆ ಸ್ಕೂಲ್ ಕಮಿಟಿ ಮೆಂಬರುಗಳೂ ಪಂಚಾಯತಿ ಮೆಂಬರುಗಳೂ ಸೇರಿ ಸ್ಕೂಲ್ ಬಾಲಕರುಗಳಿಂದ ಆಕರ್ಷಣೀಯವಾದ ಆಟವಾಡಿಸಿ ಗೆದ್ದವರಿಗೆ ಬಹುಮಾನಗಳನ್ನು ಹಂಚಿದರು. ಈ ಕೆಲಸಗಳೆಲ್ಲಾ ಜರುಗಲು ನಮ್ಮ ಗ್ರಾಮದ ಸ್ಕೂಲ್ ಮಾಸ್ತರುಗಳೇ ಕಾರಣರಾದ್ದರಿಂದ ಭಗವಂತನು ಇವರುಗಳಿಗೆ ಆಯುರಾರೋಗ್ಯ ಐಶ್ವರ್ಯವನ್ನು ಕೊಟ್ಟು ಕಾಪಾಡಬೇಕೆಂದು ನನ್ನ ಪ್ರಾರ್ಥನೆ. ಸಿದ್ದಯ್ಯ ಉರುಫ್ ಮುದ್ದಯ್ಯ, ಗ್ರಾಮಾಧಿಪತಿ.

ಧರ್ಮಾರ್ಥ ಪ್ರಾದಮಿಕ ಪಾಠಶಾಲಾರಂಭೋತ್ಸವ

ನೊಣವಿನಕೆರೆ ಹೋಬಳಿ ... ಹಳ್ಳಿಯ ವೀರಶೈವ ಸಾಹುಕಾರ್ ಚಿಕ್ಕಕಿ ತೋಟಪ್ಪನವರು ತಮ್ಮ ತಂದೆ ಕೈ. ಚಿಕ್ಕಕಿ ಕರಿಬಸಪ್ಪನವರ ಸ್ಮಾರಕವಾಗಿ ಕಟ್ಟಿಸಿರುವ ಧರ್ಮಾರ್ಥ ಪ್ರಾಥಮಿಕ ಪಾಠಶಾಲೆಯ ಆರಂಭೋತ್ಸವವೂ ಅವರ ತಂದೆಯವರ ಭಾವಚಿತ್ರದ ಅನಾವರಣ ಸಮಾರಂಭವೂ ಇದೇ ತಾ॥ 10 ನೇ ಗುರುವಾರ ಸಾಯಂಕಾಲ ನೊಣವಿನಕೆರೆ ಸಂಸ್ಥಾನದ ಶ್ರೀಮಂತ ರಾಜಾಸಾಹೇಬರವರಿಂದ ಬಹಳ ವಿಜೃಂಭಣೆಯಾಗಿ ನೆರವೇರಿಸಲ್ಪಟ್ಟಿತು. ಶಾಲಾ ಕಟ್ಟಡದ ಮುಂಬಾಗದಲ್ಲಿ ಚಪ್ಪರ ಹಾಕಲ್ಪಟ್ಟು ಸುಂದರವಾಗಿ ಅಲಂಕರಿಸಲ್ಪಟ್ಟಿತ್ತು. 1 ತಿಂಗಳಿಂದ ವಿಳಂಬವಾಗಿದ್ದ ಮಳೆಯು ಒಂದೆರಡು ದಿವಸ ಮೊದಲು ಹೊಡೆದದ್ದರಿಂದ ಸಮಾರಂಭವು ಬಹಳ ಉತ್ಸಾಹದಿಂದ ಜರುಗಿತು. ಹಳ್ಳಗಳಲ್ಲಿ ನೀರು ತುಂಬಿ ಹರಿಯುತ್ತಿದ್ದು ಬಸ್ಸುಗಳ ಪ್ರಯಾಣಕ್ಕೆ ವಿಘ್ನವಾಗಿದ್ದರೂ ಬಳ್ಳಾರಿ ಗಡಿನಕೈರೆ ಪ್ರಾಂತಗಳಿಂದ ವಿದ್ವನ್ಮಣಿಗಳೂ ಸಂಸ್ಥಾನದ ದಿವಾನ್ ಸಾಹೇಬರೂ ಅಧಿಕಾರಿಗಳೂ ಆಗಮಿಸಿದ್ದರು. ನಿಯಮಿತವೇಳೆಗೆ ಆಗಮಿಸಿದ ಶ್ರೀಮಂತ ರಾಜಾಸಾಹೇಬರವರು ತಮ್ಮ ಬಂಧುಗಳೊಡನೆ ಆಗಮಿಸಿದ ಕೂಡಲೆ ಸಾಹುಕಾರ್ ಚಿಕ್ಕಕಿ ತೋಟಪ್ಪನವರು ಅವರನ್ನು ಸ್ವಾಗತಿಸಿ ಆ ಗ್ರಾಮದಲ್ಲಿ ಕಲ್ಪಿಸಿದ ಮೇಲೆ ಶಾಲೆಯ ವಿದ್ಯಾರ್ಥಿಗಳಿಂದ ಮನೋಹರವಾದ ದೇವರ ಪ್ರಾರ್ಥನೆ ನಡೆದ ತರುವಾಯ ಸಾಹುಕಾರ್ ತೋಟಪ್ಪನವರು ರಾಜಾ ಸಾಹೇಬರವರಿಗೆ ಇಂಗ್ಲಿಷ್ ಅಡ್ರೆಸ್ಸನ್ನು ಓದಿ ಕೊಟ್ಟರು. ಶ್ರೀಮಂತ ರಾಜಾಸಾಹೇಬರವರು ಪ್ರತ್ಯುತ್ತರ ಹೇಳುವಾಗ್ಗೆ ವಿದ್ಯಾಪ್ರಸಾರದ ಉತ್ತಮ ಕಾರ್ಯವನ್ನು ಕೈಕೊಂಡಿರುವ ತೋಟಪ್ಪನವರ ಪ್ರಶಂಸೆ ಮಾಡಿದರು. ಇವರ ಉದಾಹರಣೆಯನ್ನು ಇತರರು ಅನುಸರಿಸಬೇಕೆಂತಲೂ ಈ ಶಾಲೆಯಲ್ಲಿ ಉತ್ತೀರ್ಣರಾಗುವ ವಿದ್ಯಾರ್ಥಿಗಳ್ಳೂ ತೋಟಪ್ಪನವರನ್ನು ಸದಾ ಸ್ಮರಿಸತಕ್ಕದ್ದೆಂತಲೂ ಸಮಯೋಚಿತ ಭಾಷಣವನ್ನು ಮಾಡಿ ಶಾಲೆಯ ಬಾಗಿಲನ್ನು ತೆರೆದು ಚಿಕ್ಕಕಿ ಕರಿಬಸಪ್ಪನವರ ಭಾವಚಿತ್ರದ ಅನಾವರಣ ಮಾಡಿದರು. ತರುವಾಯ ಗಂಧ ಪುಷ್ಪ ತಾಂಬೂಲ ವಿನಿಯೋಗವಾದನಂತರ ಶಾಲೆಯ ಪಕ್ಕದಲ್ಲಿಯೇ ಇರುವ ವಿಶಾಲವಾದ ಮಾವಿನ ತೋಟದಲ್ಲಿ ಸ್ವಚ್ಛ ತಯಾರುಮಾಡಿರುವ ಟೆನ್ನಿಸ್ ಕೋರ್ಟಿನಲ್ಲಿಯೇ ಸರ್ವರ ಫೋಟೋ ತೆಗೆಯಲ್ಪಟ್ಟಿತು. ತೋಟಪ್ಪನವರಿಂದ ರಾಜಾಸಾಹೇಬರವರಿಗೂ ಸಭಿಕರಿಗೂ ವಂದನೆಯರ್ಪಿಸಲ್ಪಟ್ಟಮೇಲೆ ಹುಣ್ಣಿಮೆ ತೋಟದಲ್ಲಿ ಸರ್ವರಿಗೂ ಫಲಾಹಾರವಾಗಿ ರಾಜರವರ ಶ್ರೇಯಃಪ್ರಾರ್ಥನೆಯಿಂದ ಸಭೆಯು ವಿಸರ್ಜಿಸಲ್ಪಟ್ಟಿತು. ಈ ಶಾಲೆಯಲ್ಲಿ ಈಗಾಗಲೇ 108 ವಿದ್ಯಾರ್ಥಿಗಳೂ 3 ಮಂದಿ ಉಪಾಧ್ಯಾಯರೂ ಇರುವರು. ಶಾಲೆಯಲ್ಲಿ ಲೈಬ್ರರಿಯೂ ಇತರ ಉಪಕರಣಗಳಾಗಲೀ ಯಾವತ್ತು ನ್ಯೂನತೆ ನಡೆಯಲ್ಪಟ್ಟಿದೆ. ಸಾಹುಕಾರ್ ತೋಟಪ್ಪನವರ ವಿದ್ಯಾದಾನದ ಕಾರ್ಯವು ಯಶಸ್ವಿಯಾಗಲೆಂದು ಕೋರುವ, ಸ್ವ॥ ಮಾ॥ ಅಜ್ಜಯ್ಯ, ಉತ್ತಂಗಿ.

ಸಂಸ್ಕೃತ ಪಾಠಶಾಲೆಯ ಶಾರದಾ ಮಹೋತ್ಸವವೂ ಲಾಯಬ್ರರಿ ಸ್ಥಾಪನೆಯೂ

ಪ್ರತಿ ವರ್ಷದಂತೆ ಈ ವರ್ಷದಲ್ಲಾ ದೇವರ ಗುಲ್ಬರ್ಗಾ ಗದ್ದಿಗೆಯಲ್ಲಿ ರುವ ಸಂಸ್ಕೃತ ಪಾಠಶಾಲೆಯ ಶಾರದಾದೇವಿಯ ಮಹೋತ್ಸವವು ನಡೆಯಬೇಕೆಂದು ಇದೇ ಅಕ್ಟೋಬರ ಶುದ್ಧ ೬ ಮಂಗಳವಾರ ವಿದ್ಯಾರ್ಥಿಗಳು ತಳಿರು ತೋರಣ, ಮುತ್ತಿನತೋರಣ ಮತ್ತು ರಂಭಾಸ್ತಂಭ ಮೊದಲಾದವುಗಳಿಂದ ಮಠವನ್ನು ಅಲಂಕರಿಸುತ್ತಿದ್ದ ಸಮಯದಲ್ಲಿ ಶ್ರೀಮನ್ನಿರಂಜನ ನೀರಡಗುಂಬ ಹಿರೇಮಠ ಶ್ರೀಗಳವರು ಇಲ್ಲಿಗೆ ಆನಾಯಾಸವಾಗಿ ದಯಮಾಡಿಸಿದರು. ಆ ಕಾಲದಲ್ಲಿ ಪೂರ್ವಪುಣ್ಯದ ಫಲದಿಂದ ನಮ್ಮ ಸುಪುಣ್ಯವೆಂದು ತಿಳಿದು ಶ್ರೀಗಳವರನ್ನು ವಿಜಯದಶಮಿಯ ಪರ್ಯಂತ ವಾಸಿಸುವುದಕ್ಕೆ ಪ್ರಾರ್ಥಿಸಲಾಗಿ ಅವರು ಒಪ್ಪಿ ... ದಿವಸ ಸಾಯಂಕಾಲ 4½ ಗಂಟೆಗೆ ಆ ದಿವಸ ಶ್ರೀಗಳವರ ... ಮಠದ ಅಧ್ಯಾಪಕರಿಂದ ಉಪನ್ಯಾಸವಾಯಿತು ... ಪ್ರತಿನಿತ್ಯ ಶಾಸ್ತ್ರಾರ್ಥ ... ಶಾರದಾ ದೇವಿಯ ಪೂಜೆ ... ನೆರವೇರಿದ ಮೇಲೆ ... ವಿಧಿಪೂರ್ವಕವಾಗಿ ಆ ದಿವಸ ... ಮೊದಲು ನಡೆಯಿತು. ... ನೆರೆದಿದ್ದ ಸಭಿಕರಿಗೆ ... ಫಲಾಹಾರವನ್ನು ಕೊಡಲ್ಪಟ್ಟಿತು. ೨ ನೇ ದಿವಸ ತಿರುಮಲೆಯ ಶಾಸ್ತ್ರಿಗಳು ಶಿವನ ... ಭಕ್ತಿ, ಸಖ್ಯ, ಈ ವಿಷಯವಾಗಿ ... ಅನುಭಾವಿಗಳ ಚರಿತ್ರದಿಂದ ಜರುಗಿತು. ೩ ನೇ ದಿವಸ ಪಾಠಶಾಲಾಧ್ಯಾಪಕ ಶಿವಲಿಂಗಯ್ಯ ಶಾಸ್ತ್ರಿಗಳು ದೀಕ್ಷಾ ವಿಷಯವನ್ನು ಸಭಿಕರ ಮನಸ್ಸಿನ ಮೇಲೆ ಪರಿಣಾಮವಾಗುವಂತೆ ಭಾಷಣಮಾಡಿದರು. ೪ ನೇ ದಿವಸ ಸಕಲ ವಿದ್ಯಾರ್ಥಿಗಳ ವ್ಯಾಖ್ಯಾನಗಳಾದವು. ೫ ನೇ ದಿವಸ ಅಂದರೆ ದಸರಾ ದಿವಸ ಪಾಠಶಾಲಾಧ್ಯಾಪಕರಿಂದ ವಿಜಯದಶಮಿಯ ನಿರ್ಣಯ ಹೇಳಿದ ಮೇಲೆ ಶ್ರೀಮನ್ನಿರಂಜನ ಬಸವತೀರ್ಥ ಬಸವಲಿಂಗಪ್ಪ ಶ್ರೀಗಳವರು ಅದೇ ವಿಷಯವನ್ನು ವಿಸ್ತರಿಸಿ ಬೋಧಿಸಿದರು. ಅಲ್ಲಿಂದ ವೀರಪ್ಪಣ್ಣ ಕೊಂಡೆ ಇವರು ಈ ಸ್ಥಳದಲ್ಲಿ ಲಾಯಬ್ರರಿ ಸ್ಥಾಪಿಸುವುದಕ್ಕೆ ಶ್ರೀಮನ್ನಿರಂಜನ ಶಿವಮೂರ್ತಿ ಶ್ರೀಗಳವರು 300 ರೂಪಾಯಿಗಳ ಬೆಲೆಯುಳ್ಳ ಸಂಸ್ಕೃತ, ಕನ್ನಡ ಗ್ರಂಥಗಳನ್ನು ಕಳಿಸಿ ಇಟ್ಟದ್ದಾರೆ. ಆದರೆ ಇಷ್ಟಕ್ಕೇನೇ ಗ್ರಂಥಗಳು ತೀರಲಿಲ್ಲ, ಇನ್ನೂ ಅನೇಕ ಗ್ರಂಥಗಳಿರುವುವು. ಆದ್ದರಿಂದ ತಾವೆಲ್ಲರೂ ಧರ್ಮಗ್ರಂಥ ಮತ್ತು ವೃತ್ತಪತ್ರಿಕೆಗಳನ್ನು ತರಿಸುವುದಕ್ಕೆ ಸಹಾಯಕರಾಗಿ ಈ ದಿವಸ ಲಾಯಬ್ರರಿಯನ್ನು ಸ್ಥಾಪಿಸಿಯೇ ಕೃತಾರ್ಥರಾಗಬೇಕೆಂದು ಒಳ್ಳೇ ಕಳಕಳಿಯಿಂದ ಹೇಳಿದರು. ಆ ಕಾಲದಲ್ಲಿ ಈ ಲಾಯಬ್ರರಿಯ ವೃದ್ಧಿಗಾಗಿ ಶ್ರೀಮನ್ನಿರಂಜನ ನೀರಡಗುಂಬ ಶ್ರೀಗಳವರು ಪ್ರತಿ ವರ್ಷ 12 ರೂಪಾಯಿಗಳನ್ನು ಕೊಡುವೆವೆಂದು ಆಶೀರ್ವಾದ ಮಾಡಿದರು ಮತ್ತು ರಾಂಕನಮಲ್ಲಪ್ಪ ಮಿಟಾ ಗುರುಲಿಂಗಪ್ಪ ವೈರಾಗಿ, ಶಿವಪ್ಪ ಪಾಟೀಲ, ಗುಂಡಪ್ಪ ಬಂಡಿ, ರಡೀಸಪ್ಪ ಪ್ಯಾಸಾರಬಾದಿ ಶಿವರಾಚಪ್ಪ ಕೆಂಪಶೆಟ್ಟಿ, ಶಿದ್ದಪ್ಪ ಹುಂಡೇಕಾರ ಇವರೇ ಮೊದಲಾದ ಇನ್ನೂ ಅನೇಕ ಧರ್ಮಾಭಿಮಾನಿಗಳು ವೃತ್ತಪತ್ರಿಕೆ ಮೊದಲಾದವುಗಳನ್ನು ಕಳಿಸಲು ಸಿದ್ಧರಾದರು. ಕೂಡಲೇ ಆದೇ ಕಾಲದಲ್ಲಿ ಚೆರಲಿಂಗೇಶ್ವರ ಲಾಯಬ್ರರಿ ಎಂಬ ಹೆಸರಿನಿಂದ ಲಾಯಬ್ರರಿಯು ಸ್ಥಾಪಿಸಲ್ಪಟ್ಟಿತು. ಆನಂತರ ಸಭಾಪತಿಗಳು ಹಾಲಕೇರಿ ಇವರು ಲಾಯಬ್ರರಿಯು ವೃದ್ಧಿಗೆ ಬರಬೇಕಾದರೆ ಸರ್ವರೂ ಸಹಾಯಕರು ಮುಖ್ಯ ಕಾರಣವಾಗಿರುವುದು ಎಂದೂ ಈ ಮಹಾ ಶ್ರೀಗಳವರ ಪಾದಾರವಿಂದವು ಸದಾಕಾಲ ಇಂಥ ಬುದ್ಧಿಯನ್ನೇ ಕೊಟ್ಟು ರಕ್ಷಿಸಲೆಂದು ಅಭಿವಂದನವನ್ನು ಮನ್ನಿಸಿದಮೇಲೆ ಪ್ರಸಾದ ಹಾಗೂ ನೈವೇದ್ಯವನ್ನು ಅರ್ಪಿಸಿ ವೀರರ ವಿಸರ್ಜನಾನಂತರದಲ್ಲಿ ಶ್ರೀಗಳವರ ಆಶೀರ್ವಾದವನ್ನು ಹೊಂದಿ ಸಭೆಯು ಮುಕ್ತಾಯವಾಯಿತು. ಇತಿ ಶಂ.

ಲೇಖಕ ಒಬ್ಬ ವಿದ್ಯಾರ್ಥಿ

ಶ್ರೀ ಶಾರದಾಪೂಜೋತ್ಸವ, ಸೊಲ್ಲಾಪುರ

ಪ್ರತಿವರ್ಷದ ಪದ್ಧತಿಯಂತೆ ಅಕ್ಟೋಬರ ತಾ॥ ೬ ಬುಧವಾರ ಮೊದಲು ಗೊಂಡು ತಾ॥ ೧೦ ಶನಿವಾರದವರೆಗೂ ಶ್ರೀವಿದ್ಯೋದಯ ವೀರಶೈವ ವಾಚನ ಸಂಸ್ಥೆ ಪಾಠಶಾಲೆಯಲ್ಲಿ ವಿದ್ಯಾರ್ಥಿಗಳಿಂದ ನಿರಸ್ತಂತೆಯಿಂದಯವರ ಆವಾಹನೆ ಮೊದಲು ಮಾಡಿಕೊಂಡು ಪ್ರತಿದಿವಸವೂ ಬೆಳಗಿನಿಂದ ಸಾಯಂಕಾಲದವರೆಗೂ ಜಾಗರಗಳಲ್ಲಿ ವಿದ್ಯಾರ್ಥಿಗಳ ವೇದಘೋಷದಿಂದಲೂ ಮಂಗಳ ಸ್ತೋತ್ರಗಳಿಂದಲೂ ವಿದ್ವತ್ಪ್ರಸಾರವಾಗಿ ನೋಡುವವರಿಗೆ ಆನಂದಕರವಾಗಿ ಶ್ರೀ ಶಾರದಾದೇವಿಯವರ ಪೂಜೆಯು ನಡೆಯಲ್ಪಟ್ಟಿತು. ಅಕ್ಟೋಬರ ತಾ॥ ೨೦ ಶನಿವಾರ 6 ಘಂಟೆಗೆ ಶ್ರೀ ಸರಸ್ವತೀದೇವಿಯವರ ಸನ್ನಿಧಿಯಲ್ಲಿ ವಿದ್ಯಾರ್ಥಿಗಳ ಸಭೆಯು ವೇ. ಗುರುಸಿದ್ಧದೇವರ ಹಂಚಿನಾಳ ಬೃಹನ್ಮಠ ಇವರ ಅಧ್ಯಕ್ಷತೆಯಲ್ಲಿ ಕೂಡಿತು. ಸಭೆಗೆ ಅನೇಕ ನಾಗರಿಕ ಜನರು ಬಂದಿದ್ದರು. ವೇ. ಪಟ್ಟಾಧ್ಯಕ್ಷ ಗುರುಪಾದ ಸ್ವಾಮಿ ಮುಳ್ಳೂರ ಬೃಹನ್ಮಠ, ವೇ. ಪಟ್ಟಾಧ್ಯಕ್ಷ ಶೀಲವಂತ ಶಿವಾಚಾರ್ಯರು ಜಂಬಗಿ ಬೃಹನ್ಮಠ ವೇ. ಸಿದ್ಧರಾಮಯ್ಯ ದೇವರು ಇಂಡಿಯ ವೀರಶೈವ ಸೊಲ್ಲಾಪುರ ಈ ಎಲ್ಲವರು ವಿದ್ಯೆಯ ಮಹತ್ವದ ಕುರಿತು ಪಾರ್ಥನೆಗಳಿಗೆ ಕಾರಣರಾದ್ದರಿಂದ ಇವರು ಎಲ್ಲರೂ ವಿದ್ಯಾರ್ಥಿಯನ್ನು ಮಾಡಬೇಕೆಂದು ಭಾಷಣ ಮಾಡಿದರು. ಇದೇ ಪ್ರಸಂಗದಲ್ಲಿ ವೇ. ಅಪ್ಪಾ ಪ್ರಭು ದೇವರು, ಧರ್ಮಾಧಿಕಾರಿಗಳು ಇತ್ಯಾದಿ ವೇ. ನಿರಂಜನ ಜಂಗಮ ಹೊಸಕೆರೆ ಮ ತಿ ಅಭಿಪ್ರಾಯ ಪೂರ್ವಕವಾಗಿ ಭಾಷಣ ಮಾಡಿದರು. ಅನಂತರದಲ್ಲಿ ವೇ. ಗಣಾಧಿ ಬಸವರಾಜ ಶಾಸ್ತ್ರಿಯವರು ಮಠ ಶಂಕರವಂದೆ ... ಸರಸ್ವತೀದೇವಿಯವರ ಕೃಪೆಯಿಂದ ಈ ಶಿವಾನುಭವ ಗೀರ್ವಾಣ ವಿದ್ಯೆಯು ಸಮಸ್ತ ವಿದ್ವಜ್ಜನಗಳಿಗೆ ಮಾತೃಸ್ವರೂಪವಾದಂತೆ ... ಈ ಗೀರ್ವಾಣ ವಿದ್ಯೆಯು ಪೂರ್ವದಲ್ಲಿ ಬಹು ಪ್ರಚಾರದಲ್ಲಿ ಇತ್ತು. ಆದರೆ ಇತ್ತೀಚೆಗೆ ಕಾಲವೈಚಿತ್ರ್ಯದಿಂದ ಬಹಳ ಹೀನಸ್ಥಿತಿಯಲ್ಲಿ ಇದೆ. ಇದಕ್ಕೆ ನಮ್ಮ ಭಾರತದೇಶದ ಜನರ ಉದಾಸೀನತೆಯೇ ಕಾರಣವಾಗಿದೆ ಮತ್ತು ಮಹನೀಯರಾದ ವೀರಶೈವ ... ಗೀರ್ವಾಣವಿದ್ಯೆಯು ಮುಖ್ಯವಾಗಿ ಬೇಕಾಗಿದೆ ... ವೀರಶೈವರು ಗೀರ್ವಾಣವಿದ್ಯೆಯನ್ನು ಕಲಿಯಬೇಕೆಂದು ಸವಿಸ್ತರ ಮನಸ್ಸಿಗೆ ತಗಲುವಂತೆ ಸುಶ್ರಾವ್ಯವಾಗಿ ಭಾಷಣವನ್ನು ಮಾಡಿದ ಮೇಲೆ ವ್ಯಾಕರಣವಾದ ಗೀರ್ವಾಣ ವಿದ್ಯೆಯನ್ನು ವೀರಶೈವರ ತಮ್ಮಲ್ಲಿ ಅಭಿವೃದ್ಧಿಗೊಳಿಸಿದ ಶಿವಶರಣರಾದ ಶ್ರೀ ಸಕ್ಕರೆ ಕರಿಬಸಪ್ಪನವರು ಮೈಸೂರು ನಿವಾಸಿಗಳು, ರಾವಬಹದ್ದೂರ ಶ್ರೀಮಂತ ಮಲ್ಲಪ್ಪ ಬಸಪ್ಪ ವಾರದ ಸೊಲ್ಲಾಪುರ ಮಹಾತ್ಮರ ಮೊದಲಾದವರಿಗೆ ತನುಮನಧನಗಳನ್ನು ಸಮರ್ಪಿಸಿ ಗೀರ್ವಾಣ ವಿದ್ಯಾಭಿವೃದ್ಧಿಯನ್ನು ಗೊಳಿಸುತ್ತಿರುವ ಶ್ರೀಮಂತ ಚನ್ನಬಸಪ್ಪ ಮಲ್ಲಪ್ಪ ಉರ್ಫ ಬಾಬಾಸಾಹೇಬ ವಾರದ ಮತ್ತು ಶ್ರೀಮಂತ ನಾಗಪ್ಪ ಬಸಪ್ಪ ಹೂಗಾರ ಇವರುಗಳ ಕೀರ್ತಿಯನ್ನು ಕೊಂಡಾಡಿದರು. ಅನಂತರದಲ್ಲಿ ಅಧ್ಯಕ್ಷರಿಂದ ಗೀರ್ವಾಣವಿದ್ಯೆಯನ್ನು ಬೋಧಿಸುತ್ತಿರುವ ಗುರುವರ್ಯರಿಂದ ವೇ॥ ಶಂ॥ ಜಗದೀಶಶಾಸ್ತ್ರಿಗಳವರ ಶ್ರೇಯಃ ಪ್ರಾರ್ಥನೆಯನ್ನು ಅಭಿವಂದನೆಯ ಪೂರ್ವಕವಾಗಿ ಮಾಡಿದರು. ತರುವಾಯ ಸಭಾಧ್ಯಕ್ಷರು, ವೀರಶೈವರು ಧಾರ್ಮಿಕ ರಾಜಕೀಯ ವಿದ್ಯೆಗಳನ್ನು ಕಲಿತು ಧರ್ಮಪ್ರಸಾರದಲ್ಲಿ ಮತ್ತು ಮಹತ್ತರವಾದ ಉದ್ಯೋಗಗಳಲ್ಲಿ ಪ್ರವೃತ್ತರಾಗಬೇಕೆಂತಲೂ, ಮುಖ್ಯವಾಗಿ ವೀರಶೈವಮತಾಭಿವೃದ್ಧಿಗೆ ವಿದ್ಯೆಯೇ ಕಾರಣವಾದಂತಾದ್ದರಿಂದ ಭಾಷಣವನ್ನು ಮಾಡಿದ ಅನಂತರದಲ್ಲಿ ಸಕಲ ವಿದ್ಯಾರ್ಥಿಗಳವತಿಯಿಂದ ಶ್ರೀ ಶಾರದಾದೇವಿಯವರ ಮಂಗಲ ಸ್ತೋತ್ರಗಳಿಂದಲೂ ಜಯ ಜಯ ಸರಸ್ವತಿ ಜಯ ಜಯ ಭಾರತಿ ಎಂಬ ಧ್ವನಿಗಳಿಂದಲೂ ಸಭೆಯು ವಿಸರ್ಜಿಸಲ್ಪಟ್ಟಿತು. ಮರುದಿನದ ಪದ್ಧತಿ ಪ್ರಕಾರವಾಗಿ ಶ್ರೀ ಸರಸ್ವತೀ ದೇವಿಯವರನ್ನು ಪೂಜಿಸಿ ಸಮಸ್ತರನ್ನೂ ವಿದ್ಯಾವಂತರನ್ನಾಗಿ ಮಾಡಬೇಕೆಂದು ಶ್ರೀ ಸಂಸ್ಕೃತ ದೇವಿಯವರನ್ನು ಪ್ರಾರ್ಥಿಸಿ ಶ್ರೀ ಸರಸ್ವತೀದೇವಿಯವರ ಉತ್ಸಾಪನೆಯು ಮಾಡಲ್ಪಟ್ಟಿತು.

ವೇ॥ ಅಲ್ಲಮಪ್ರಭುದೇವರು ಭಿಕ್ಷಾವರ್ತಿಮಠ, ಅಕ್ಕಲಕೋಟ.

ಪ್ರಕಟನೆ.

ನಮ್ಮಲ್ಲಿ ಸಿನಿಮಾ ಫೋಟೋಗ್ರಫಿಗೆ ಸಂಬಂಧಪಟ್ಟ ಪ್ರಾತ ಕೆಂದೆರಿಯ ಪ್ರೊಜೆಕ್ಟರ್ ಲ್ಯಾಂಪ್ಸ್, ಆರ್ಕ್ ಲ್ಯಾಂಪ್ಸ್ ಡೈನಮೋ, ಎಲೆಕ್ಟ್ರಿಕಲ್ ಫಿಟಿಂಗ್ಸ್ ವಗೈರೆ ಎಲ್ಲಾ ಸಾಮಾನುಗಳೂ, ಕೆಲವು ಸಿನಿಮಾ ಪಿಲಂಗಳೂ ಸಹ ಮಾರಾಟಕ್ಕೆ ಸಿದ್ಧವಾಗಿವೆ. ಎಲ್ಲಾ ಸಾಮಾನುಗಳ ಪಟ್ಟಿ ತಯಾರಾಗಿರುವುದರಿಂದ ಈ ವಿಷಯದ ಪ್ರಕಟನೆ ಸಹಿತ ಬರುವ ಕಾಗದಗಳು ಜೊತೆ ಹಿನ್ನಿ ಸ್ಟ್ಯಾಂಪ್ ಇಟ್ಟು ಬರೆಯುವುದರಿಂದ ಈ ಸಮುದಾಯವನ್ನು ಕಳಿಸಿ ಕೊಡಲಾಗುವುದು.

Siddaradhya
Tirukappanavara mutt
Davangere

(12—3)

ಉತ್ತಮವೀರಶೈವ ಗ್ರಂಥಗಳು

	ಕ್ರಯ	(ವಿ. ಪಿ. ಸೇರಿ)
ವೀರಶೈವ ಸಿದ್ಧಾಂತಶಿಖಾಮಣಿ	೧—೧೨—೦	೨—೪—೦
ಪಂಡಿತಾರಾಧ್ಯಚರಿತ್ರೆ ೫ ಪ್ರಕರಣಗಳು ಸೇರಿದ ಪೂರ್ಣಗ್ರಂಥ	೫—೦—೦	೫—೧೨—೧
ಬಸವರಾಜವಿಜಯ	೧—೨—೦	೧—೮—೦
ಚನ್ನಬಸವೇಶವಿಜಯ	೧—೬—೦	೧—೧೨—೦
ರೇವಣಸಿದ್ಧೇಶ್ವರ ಪುರಾಣ	೦—೧೨—೦	೧—೦—೦

ಕ್ಯಾಟ್ಲಾಗ್ ತರಿಸಿ ನೋಡಿ

ಅ॥ ವಿದ್ವಾನ್ ಎನ್. ಆರ್. ಕರಿಬಸವಶಾಸ್ತ್ರಿ, ಅಂಡ್ ಸನ್ಸ್,

ಗ್ರಂಥಪ್ರಸಾರಕಮಂಡಲಿ, ಮೈಸೂರು

"ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತರ" ಆಯುರ್ವೇದೀಯ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರೀ ಮಾತ್ರೆಗಳು



ಈ ಮಾತ್ರೆಗಳನ್ನು ಪ್ರತಿದಿನವೂ ತಾಂಬೂಲದೊಡನೆಯಾಗಲಿ, ಹಾಗೆಯಾಗಲೀ ಉಪಯೋಗಿಸುತ್ತಿದ್ದರೆ ಆಹಾರ, ನೀರು ಗಾಳಿಗಳ ವ್ಯತ್ಯಾಸದಿಂದ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ ಮಕ್ಕಳ ಮೊದಲು ಎಲ್ಲಾ ವಯಸ್ಸಿನವರಿಗೂ, ಶೀತ, ನೆಗಡಿ, ಕೆಮ್ಮಲು, ಜ್ವರ, ಶೀತವಾತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ

300 ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣೆ.

ಎಲ್ಲಾ ಪ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ನಮ್ಮ ವಿಳಾಸವನ್ನೂ ಲೋಕಾಮಯಹರ ಕಸ್ತೂರೀ ಮಾತ್ರೆ ಎಂಬ ಹೆಸರನ್ನೂ ನೋಡಿ ಕೊಂಡುಕೊಳ್ಳಿರಿ

ವೈಶ್ವಾನರಾಸವ

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ)

ಮಂತ್ರಪ್ರಯೋಗವಾದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ, ಪುಂಖಾನುಪುಂಖ ಸೇವನೆಯಿಂದ ರೋಗವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1ಕ್ಕೆ ರೂ 1—0—0

ಲಕ್ಷ್ಮೀವಿಲಾಸರಸ.

(ಪ್ಲೇಗಿಗೆ)

ಹತ್ತಾರು ವರ್ಷಗಳಿಂದ ಪ್ರತಿವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ಕೊಡಲ್ಪಟ್ಟು ನಿಜವಾಗಿ ಗುಣಪಡಿಸಿರುತ್ತದೆ. ಪ್ಲೇಗಿಗೆ ಮಾತ್ರವಲ್ಲದೆ ಸನ್ನಿಪಾತ ಜ್ವರಗಳಿಗೂ, ಸನ್ನಿಪಾತಜ್ವರಗಳಿಗೂ ಅಮೃತವಾಗಿದೆ. ಸೀಸೆಯ ಬೆಲೆ 1ಕ್ಕೆ ರೂ 1—0—0

ಶ್ರೀಸಿವಾಸತೈಲ.

ಪ್ಲೇಗು ರೋಗಿಯ ಪ್ರತಿ ಸಂದುಗಳಿಗೂ, ಗೆಡ್ಡೆಗೂ ಹಚ್ಚುವುದಕ್ಕೆ ಸೀಸೆ 1ಕ್ಕೆ ರೂ 0—8—0

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತರ	ಶ್ರೀ ಸೀತಾರಾಘವವೈದ್ಯಶಾಲಾ,
ಬ್ರಾಂಚು ಆಫೀಸು,	ಶ್ರೀ ಸೀತಾರಾಘವವೈದ್ಯಶಾಲಾ,
ತಿಪ್ಪಪೇಟೆ ಬೆಂಗಳೂರು ಸಿಟಿ	ಹೆಡ್ಡಾಫೀಸು ಮೈಸೂರು

೧೯೨೯ನೇ ಇಸವಿ ನವೆಂಬರ್ ತಾ॥ ೨ ರಿಂದ ೧೯೨೯ ನೆಯ ಇಸವಿ ನವೆಂಬರ್ ತಾ॥ ೮ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೧ ನೆಯ ಶುಕ್ಲನಾಮಸಂವತ್ಸರದ ಕಾರ್ತಿಕ ಶುದ್ಧ ಪಾಡ್ಯಮಿಯಿಂದ ಕಾರ್ತಿಕ ಶುದ್ಧ ಸಪ್ತಮಿವರೆಗಿನ ಪಂಚಾಂಗ

ತಾ॥	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಶಾಂತ ಮಾಸ
2	¹ಶನಿ	ಪಾಡ್ಯ	25 0	ವಿಶಾ	48 15	17
3	ಭಾನು	ಬಿದಿ	27 16	ಅನೂ	52 2	18
4	³ಸೋಮ	ತದಿ	30 15	ಜ್ಯೇಷ್ಠ	57 0	19
5	ಮಂಗಳ	ಚವು	34-30	ಮೂಲ	60 0	20
6	⁴ಬುಧ	ಪಂಚ	39 22	ಮೂಲ	3 12	21
7	ಗುರು	ಷಷ್ಠಿ	44-30	ಪೂಷಾ	9 30	22
8	ಶುಕ್ರ	ಸಪ್ತ	50-0	ಉಷಾ	14-0	23

(1) ಬಲಿಪಾಡ್ಯಮಿ, ಕಾಮಧೇನುಪೂಜಾ, ಚಂದ್ರದರ್ಶನದಾನಂ, ಮ ನಕ್ಷತ್ರ ಸ್ವಾತಿ ೪ ನೆಯ ಪಾದ (2) ಕಾರ್ತಿಕಸೋಮವಾರಂ, (4) ಮಳೆನಕ್ಷತ್ರ ವಿಶಾಖ ೧ ನೆಯ ಪಾದ.

ಮೈಸೂರು ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪತ್ರಿಕೆ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REG. NO. M. 124

ಮೈಸೂರ್ ಸ್ಟಾರ್

ಪ್ರತಿ ಶನಿವಾರ ಪ್ರಕಟಿಸಲ್ಪಡುವದು.

[illegible]

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೩-೮-೦] [ಲೈಬ್ರರಿಗೆ ೫-೮-೦]

ಸಂಪುಟ ೪೨] ಮೈಸೂರು ಸ್ಟಾರ್ ಸನ್ ೧೯೨೯ ನೆಯ ಇಸವಿ ನವೆಂಬರ್ ತಾರೀಖು ೯ ನೆಯ ಶನಿವಾರ [ಸಂಚಿಕೆ ೪೫

INSURE IN THE MYSORE STATE LIFE INSURANCE, PUBLIC BRANCH.

Life Insurance is admittedly the best form of investemnt and the greatest safeguard against the old age and death.

The best, safest, cheapest, most profitable and most convenient place for insurance is the Branch of the Mysore State Life Insurance.

Policies are issued from Rs. 100 to Rs. 10,000 and copies of rules and forms of application can be had from all Government Treasuries, Economing Superintendents, Helpers and the Insurance Office, Public Office Buildings, Bangalore.

Sd/. S. SHAMANNA,
Secretary,
Insurance Committee.

[50—10]

ವೀರಶೈವಮತಗ್ರಂಥಗಳು.

ಶಿವಾಧಿಕ್ಯಶಿಖಾಮಣಿಃ.

ಪ್ರತಿ ೧ ಕ್ಕೆ ಬೆಲೆ ೧-೦-೦.

[illegible]

ನ್ಯಾಯಶತಕಂ—[illegible]

ಶ್ರೀ ಸೋಮಶೇಖರಸ್ವಾಮಿಗಳು,

[12—7]

ಡಾಕ್ಟರ್ ಜೀ. ಬೀ. ಯವರ

ಸುಗಂಧ ನಶ್ಯದ ಪುಡಿ

(Registered Trade Mark)

[illegible]

ವಿಳಾಸ—ಗುರುಬಸವ ಅಂಡ್ ಕಂಪನಿಲಿಮಿಟೆಡ್,

[50—49] ಪೋ. ಬಾ. ೧೧೧, ಮದರಾಸು.

೧೯೩೦ ನೇ ಇಸವಿಯ ಶಿದ್ದಪ್ಪಾಸ್ ಮಾಡಲ್ ಮೈಸೂರು ಕ್ಯಾಲೆಂಡರುಗಳು.

1. ಅನೇಕ ವಿಷಯಗಳಿಂದ ಪರಮೇಶ್ವರ ಮತ್ತು ಮಹಾವಿಷ್ಣು ಲೀಲಾ ಸಂಬಂಧದ ದೇವರ ಚಿತ್ರಗಳು 17 ನ್ನು ಇಟ್ಟು ಅಂದವಾಗಿ ತಯಾರಿಸಿದ ದೊಡ್ಡ ಸೈಜಿನ ಚಿತ್ರ ಶೀಟು ಕ್ಯಾಲೆಂಡರ್	60 ಕ್ಕೆ 1—2—0	100 ಕ್ಕೆ 2—0—0,
2. $3\frac{1}{2}'' \times 4\frac{1}{4}''$ ಸೈಜಿನ ಪಾಕೆಟ್ ಕ್ಯಾಲೆಂಡರು	25 ಕ್ಕೆ 1—3—0	100 ಕ್ಕೆ 4—12—0,
3. $6\frac{1}{2}'' \times 3\frac{1}{2}''$ ಸೈಜಿನ ಇಂಗ್ಲೀಷ್ ಪಾಕೆಟು ಕ್ಯಾಲೆಂಡರ್	12 ಕ್ಕೆ 0—14—0	25 ಕ್ಕೆ 1—11—0,
4. ಅನೇಕ ಬಣ್ಣಗಳಿಂದ ರವಿವರ್ಮ ಪ್ರೆಸ್ಸಿನಲ್ಲಿ ಅಂದವಾಗಿ ಪ್ರಿಂಟಾದ 10' × 14" ಸೈಜಿನಲ್ಲಿ ಈಶ್ವರ, ಪಾರ್ವತಿ, ಗಣಪತಿ ಸಂದರ್ಶನವುಳ್ಳ ಚಿತ್ರದ ಕ್ಯಾಲೆಂಡರು	1 ಕ್ಕೆ 0—3—0	12 ಕ್ಕೆ 1—2—0,
5. 18" × 22" ಸೈಜಿನಲ್ಲಿ ದಪ್ಪ ಅಕ್ಷರದಿಂದ ಪ್ರಿಂಟಾಗಿರುವ ತಿಂಗಳಿಗೆ 1 ಶೀಟಿನಂತೆ ಹರಿದುಬಿಡುವ ಆಫೀಸ್ ಕ್ಯಾಲೆಂಡರ್	1 ಕ್ಕೆ 0—4—0	12 ಕ್ಕೆ 2—4—0,

0—8—0 ಆಣೆ ರವಾನಿಸಿದವರಿಗೆ ಮೇಲ್ಕಂಡ ೫ ನಮೂನೆ ಕ್ಯಾಲೆಂಡರನ್ನು ಮಾದ್ರಿಗಾಗಿ ಫ್ರೀ ಪಾರ್ಸಲ್ ಮೂಲಕ ರವಾನಿಸಲಾಗುತ್ತೆ.

ಮೇಲ್ಕಂಡ ದರದಂತೆ ನಿಮಗೆ ಬೇಕಾಗುವ ಕ್ಯಾಲೆಂಡರುಗಳಿಗೆ ಆಗುವ ಪೂರಾ ಬೆಲೆಯನ್ನು ರವಾನಿಸಿದರೆ ಪೋಸ್ಟಲ್ ಪಾರ್ಸಲ್ ದ್ವಾರ ನಿಮ್ಮ ವಿಳಾಸಕ್ಕೆ ಫ್ರೀಯಾಗಿ ರವಾನಿಸಲಾಗುತ್ತೆ. ವಿ. ಪಿ. ಮೂಲಕ ಕ್ಯಾಲೆಂಡರುಗಳನ್ನು ರವಾನಿಸುವುದರಿಂದ ಪೋಸ್ಟೇಜು ದುಬಾರಿಯಾಗುತ್ತೆಯಾದ್ದರಿಂದ ವಿ. ಪಿ. ಮೂಲಕ ರವಾನಿಸಿರೆಂದು ಬರೆಯುವ ಆರ್ಡರುಗಳಿಗೆ ಖಂಡಿತವಾಗಿಯೂ ಕಳಿಸಿಕೊಡುವುದಿಲ್ಲ.

ಕ್ಯಾಲೆಂಡರುಗಳು ಮುಗಿದನಂತರ ಬರತಕ್ಕ ಮನಿಯಾರ್ಡರುಗಳನ್ನು ಹೋದ ವರುಷದಂತೆ ವಾಪಸ್ ಮಾಡಲಾಗುತ್ತೆ.

ಮನಿಯಾರ್ಡರ್ ರವಾನಿಸುವ ವಿಳಾಸ:—ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

[50—42]

೧೦೦೦ ರೂಪಾಯಿ ಇನಾಮು

ಮಿರಜಿಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್. ಕಾಪಸೆ, ಇವರ

ಅಲ್ಪವಯಸ್ಕರಿಗೆ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ (ರಿಜಿಸ್ಟರ್ಡ್) ವಜ್ರಾಂಗ ಸುಂದರಪಾಕ.

ಧಾರಣಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ.

[illegible]

ಕೇವಲ ಸ್ವಪ್ನಾವಸ್ಥೆ— [illegible]

ಪ್ರಮೇಹ (ಪರಮಾ)— [illegible]

ಮಿನಸಿ— [illegible]

ಪತ್ತೆ:—ಮಾಲಕ ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ.

[50—14]

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ. ಪಿ. ಸೇರಿ)		ಕ್ರಯ.	(ವಿ. ಪಿ. ಸೇರಿ)
[illegible]	[illegible]	[illegible]	[illegible]	[illegible]	[illegible]

ಮೈಸೂರು ಸ್ಟಾರ್ ಚಂದಾದಾರರಿಗೆ.

[illegible]

FOR SALE—Upstair house No 899, Maharatody Road, Lakshmipuram, Mysore Apply to R. P. NANJAPPA, *Chandraprasad, Mysore*

ಪ್ರಸಿದ್ಧ ಪತ್ರಿಕೆ.

ಸುಲ್ತಾನ್‌ಪೇಟೆಯಿಂದ ಸಮೀಪದಲ್ಲಿರುವ ಪ್ರಸಿದ್ಧವಾದ ಕಾಟನ್ ಮಿಲ್ 60000 ಅಡಿ ಮಳೆಗೆ ನಾಗಗಳನ್ನು ಗಾಡಿ ಪರಿಪಾಲನೆ ಸಾಗಿಸಲು ಇಷ್ಟವುಳ್ಳವರು ಟೆಂಡರುಗಳನ್ನು ಕಳುಹಿಸಿ ಕೊಡತಕ್ಕದ್ದು. ನಮ್ಮ ಆಫೀಸಿನಲ್ಲಿ ಕೆಲಸಮಾಡಲು ಒಬ್ಬ ಟೈಪಿಸ್ಟು ಬೇಕಾಗಿದೆ ಇಷ್ಟವುಳ್ಳವರು ಅಪ್ಲಿಕೇಷನ್ ಬರೆದುಕೊಳ್ಳುವುದು

ಮಾರಾಟಕ್ಕೆ ಸಿದ್ಧವಾಗಿದೆ.

ಸುಲ್ತಾನ್‌ಪೇಟೆ ಸಮೀಪದಲ್ಲಿ ಟಿ, ಕಾಫಿ, ಮೆಣಸು, ಕಿತ್ತಳೆ ತೋಟಗಳನ್ನು ಮಾಡುವ ಮತ್ತು ನಿಂಬೆ ಅಥವಾ ನೆಲಗಡಲೆಕಾಯಿಯನ್ನೂ ಬೆಳೆಯಲು ಅನುಕೂಲವಾದ ಜಮೀನು 50 ಎಕರೆಯಿಂದ 5,000 ಎಕರೆ ವರೆಗಿನ ಲಾಟುವಾರು ಕ್ರಯಕ್ಕೆ ದೊರೆಯುತ್ತದೆ

ಈ ಮೇಲ್ಕಂಡ ವಿಷಯಗಳಿಗೆಲ್ಲ ಈ ಕೆಳಗಿನ ವಿಳಾಸಕ್ಕೆ ಬರೆಯುವುದು.

ಇ. ಕೆ. ಪಾಲಿಯ, ಎಂ ಎ
ಇಸ್ಮಾಯಲ್ ಮನ್ಜಿಲ್,
ಗೌರ್ನಮೆಂಟ್ ಹೌಸ್ ಹತ್ತಿರ, ಮೈಸೂರು

ಮೈಸೂರು ಸ್ಟಾರ್.

೧೯೨೯ನೆಯ ಇಸವಿ ನವಂಬರ್ ತಾ|| ೭ನೆಯ ಶನಿವಾರ

MOMENTOUS PRONOUNCEMENT.

We cannot recollect anything in these modern years which has aroused so much of a real jubilation or captured the imagination of a whole people as the great pronouncement which His Excellency the Viceroy made at Delhi the other day about the future of India and the means of drafting a constitution. Lord Irwin's sympathy for Indian aspiration is something sublime and the way in which he has handled the Indian problem in these critical times will form a memorable chapter not only in Indian history but in the history of the world Though belonging to the conservative party he yet comes from the soil, he is not merely a politician but gentleman with broad sympathies for the peasantry and the masses. It is not the mercantile bargaining spirit that is usually ascribed to the British politician that has prevailed but the generous heart of a nobleman, with vision and sympathy combined with statesmanship Those who have followed the debates in the House of Lords will clearly see that it was due primarily to the pleading of H E the Viceroy and his correct interpretation of the situation in India that the clear announcement was made How far this pronouncement has been served its purpose can be guaged from the almost unanimous welcome it has received at the hands of the different political schools in India We cannot forget to congratulate the Labour Government on the bold stand they took up in the matter We have got our own doubts if a Conservative or a Liberal Government could have ever had the sympathy or the imagination to make so clear, unambiguous and courageous a statement It required a Labour Government to take the palm in this great task We need hardly emphasize the moral from the achievements of both the Viceroy and the Labour Government that the prime virtue for good Government is sympathy. To those of us in Mysore we take a personal pride and particular pleasure in the recollection that it is Lord Irwin who has made this pronouncement, for we have not had a greater friend of Mysore among the Imperial Satraps than Lord Irwin. We of the Indian States are more immediately concerned with that part of the pronouncement which relates to the inclusion of Indian States in the Round Table Conference and to the proposal to consider the inter-relationship between British India and Indian India. We are happy to note that the Simon Commission will deal with the problem of an All India polity inclusive of Indian States. We have no doubt that when the time for Conference does come the voice of the people of the States also will be heard We need not start with any presumption that the Princes are going to prove false to their own subjects We do not know whether it is too premature to suggest the way in which Mysore should put its case. But we would venture to suggest humbly that it would be in the fitness of things if so august and enlightened a Prince as His Highness the Yuvaraja gives the lead We hope that in British India all the leaders will co-operate and will not allow either cloudy heads or petty jealousies to mar the future of India. His Excellency the Viceroy is coming to our State on the 23rd instant We are sure that the reception which Mysore will give will be unique and fully expressive of the sincere and friendly feelings which the people have towards the great and popular Viceroy.

ಮಹತ್ವಪ್ರಕಟನೆಯು.

ಭರತಖಂಡದ ಭಾವಿ ಪರಿಸ್ಥಿತಿಯನ್ನೂ, ರಾಜಕೀಯ ಸುಧಾರಣಾರಚನಾಕ್ರಮವನ್ನೂ ಕುರಿತು ವೈಸ್‌ರಾಯರು ಕಳೆದವಾರ ದಿಲ್ಲಿಯಪಟ್ಟಣದಲ್ಲಿ ಹೊರಡಿಸಿರುವ ಪ್ರಕಟನೆಯು ಭಾರತೀಯರೆಲ್ಲರಿಗೂ ಪರಮಸಂತೋಷವನ್ನೂ ಅಭಿರುಚಿಯನ್ನೂ ಉಂಟುಮಾಡಿರುತ್ತದೆ ಇಂತಹ ಸರ್ವಜನಾಹ್ಲಾದಕರವಾದ ಪ್ರಕಟನೆಯು ಈಗಿನ ಕಾಲದಲ್ಲೀವರೆಗೆ ಮಾಡಲ್ಪಟ್ಟಿರುವುದು ನಮ್ಮ ಸ್ಮೃತಿಪಥದಲ್ಲಿಲ್ಲವು ಭಾರತೀಯರ ಆಶೋತ್ತರಗಳ ವಿಚಾರದಲ್ಲಿ ಲಾರ್ಡ್ ಇರ್ವಿನ್‌ರವರಿಗೆ ಪೂರ್ಣಾಭಿಮಾನವಿರುವುದಲ್ಲದೆ ಈ ವಿಷಮಸಮಯದಲ್ಲಿ ಭಾರತೀಯರ ಆಕಾಂಕ್ಷಾ ಸಮಸ್ಯೆಯನ್ನು ಪೂರ್ಣಗೊಳಿಸಲು ಇವರು ಅನುಸರಿಸಿರುವ ವಿಧಾನವು ಭಾರತಚರಿತ್ರೆಯಲ್ಲೇ ಅಲ್ಲದೆ ಪ್ರಪಂಚದ ಚರಿತ್ರೆಯಲ್ಲೇ ಸ್ಮರಣೀಯವಾಗಿರುವುದು ಇವರು ಬೇಸಾಯ ಕುಟುಂಬದಲ್ಲಿ ಜನಿಸಿ ಅನುದಾರ ಪಕ್ಷಕ್ಕೆ ಸೇರಿದವರಾದಾಗ್ಯೂ, ರಾಜನೀತಿಜ್ಞರು ಮಾತ್ರನಾಗಿರದೆ ಬೇಸಾಯಗಾರರಲ್ಲೂ ಜನತೆಯಲ್ಲೂ ಪೂರ್ಣ ಸಹಾನುಭೂತಿಯುಳ್ಳವರಾಗಿರುತ್ತಾರೆ ರಾಜನೀತಿ ಧುರೀಣತೆಗೆ ಘನವಂತನಿಗಿರಬೇಕಾದ ಉದಾರ ಮನಸ್ಸೂ, ದೂರದೃಷ್ಟಿಯೂ ಸಹಾನುಭೂತಿಯೂ ಅವಶ್ಯಕವಲ್ಲದೆ, ಬ್ರಿಟಿಷ್ ರಾಜನೀತಿಜ್ಞರು ವರ್ತಕ ದೃಷ್ಟಿಯುಳ್ಳವರೆಂದು ಪ್ರತೀತಿಗೊಂಡಿರುವವರ ಗುಣವು ಅವಶ್ಯಕವಿಲ್ಲವು ಈ ವಿಧವಾದ ಪ್ರಕಟನೆಯನ್ನು ಮಾಡಲು ಬ್ರಿಟಿಷ್ ಪಾರ್ಲಿಮೆಂಟಿನವರು ಸಮ್ಮತಿಸುವುದಕ್ಕೆ ವೈಸ್‌ರಾಯರು ಭರತಖಂಡದ ಯಥಾರ್ಥಸ್ಥಿತಿಯನ್ನು ತಿಳಿಸಿ ಭಾರತೀಯರ ಆಶೋತ್ತರಗಳನ್ನು ನೆರವೇರಿಸಿ ಕೊಡುವುದು ಧರ್ಮವೆಂದು ವಾದಿಸಿದುದೇ ಮುಖ್ಯಕಾರಣವೆಂಬುದು ಲಾರ್ಡುಗಳ ಸಭೆಯಲ್ಲಿ ನಡೆದ ಚರ್ಚೆಯನ್ನೋದಿದಲ್ಲಿ ಚೆನ್ನಾಗಿ ವ್ಯಕ್ತವಾಗುತ್ತದೆ ಈ ಪ್ರಕಟನೆಯು ಎಲ್ಲಾ ಪಕ್ಷಗಳ ಭಾರತೀಯ ಪ್ರಮುಖರಿಂದ ಸಂತೋಷಪೂರ್ವಕವಾಗಿ ಆದರಿಸಲ್ಪಟ್ಟಿರುವುದರಿಂದಲೇ ಅದರಿಂದ ಎಷ್ಟರಮಟ್ಟಿಗೆ ಪ್ರಯೋಜನವಾಗುತ್ತದೆಂಬುದನ್ನೂ ಹಿಸಬಹುದಾಗಿದೆ ಈ ವಿಚಾರದಲ್ಲಿ ಕಾರ್ಮಿಕ ಅಂದರೆ ಲೇಬರ್ ಪಕ್ಷ ಪ್ರಭುತ್ವದವರು ಅಭಿಮಾನದಿಂದ ಧೈರ್ಯತಾಳಿ ಪ್ರಕಟನೆಗೆ ಅವಕಾಶಕೊಟ್ಟುದಕ್ಕಾಗಿ ನಾವು ಅವರನ್ನು ಅಭಿನಂದಿಸದೆ ಇರಲಾರೆವು. ಇಷ್ಟು ಸ್ಪಷ್ಟವಾದ ಮತ್ತು ಧೈರ್ಯವಾದ ಪ್ರಕಟನೆಯನ್ನು ಉದಾರಾನುದಾರ ಪ್ರಭುತ್ವದವರು ಮಾಡುತ್ತಿದ್ದರೆಂಬುದರಲ್ಲಿ ನಮಗೆ ಸಂಶಯವಿದೆ ಈ ಮಹಾಕಾರ್ಯಸಾಧನೆಗೆ ಕಾರ್ಮಿಕ ಪಕ್ಷದ ಪ್ರಭುತ್ವದ ಸಹಾಯವು ಅವಶ್ಯಕವಾಯಿತು ಸಹಾನುಭೂತಿಯೇ ಶಿಷ್ಟ ಪ್ರಭುತ್ವದ ಮುಖ್ಯ ಲಕ್ಷಣವೆಂಬುದಕ್ಕೆ ವೈಸ್‌ರಾಯರ ಮತ್ತು ಕಾರ್ಮಿಕಪಕ್ಷದ ಪ್ರಭುತ್ವದವರ ಕಾರ್ಯಸಿದ್ಧಿಯೇ ನಿದರ್ಶನವಾಗಿರುತ್ತದೆಂದು ನಾವು ಒತ್ತಿ ಹೇಳಬೇಕಾದುದಿಲ್ಲವು. ಮೈಸೂರಿಗೆ ಈ ಪ್ರಕಟನೆಯನ್ನು ಹೊರಡಿಸಿರುವ ಲಾರ್ಡ್ ಇರ್ವಿನ್‌ರವರಿಗಿಂತಲೂ ಪ್ರೇಮಾಸ್ಪದರಾದವರು ಸಾಮ್ರಾಜ್ಯಾಧಿಕಾರಿಗಳಲ್ಲಿ ಮತ್ತೊಬ್ಬರಿಲ್ಲವೆಂದು ಮೈಸೂರಿನವರಾದ ನಾವು ಬಹಳ ಆನಂದದಿಂದಲೂ ಗರ್ವದಿಂದಲೂ ಹೇಳುವೆವು ಮುಂದಾಗಬೇಕಾಗಿರುವ ಸುಧಾರಣಾಕ್ರಮವನ್ನು ಕುರಿತು ಆಲೋಚಿಸುವುದಕ್ಕಾಗಿ ನಡೆಸಲ್ಪಡುವ ರೌಂಡ್‌ಟೇಬಲ್ ಕಾನ್ಫರೆನ್ಸಿನಲ್ಲಿ ದೇಶೀಯ ಸಂಸ್ಥಾನಗಳೂ ಭಾಗಿಗಳಾಗುವವೆಂದೂ, ಬ್ರಿಟಿಷ್ ಅಧಿಕಾರಕ್ಕೊಳಪಟ್ಟಿರುವ ಇಂಡ್ಯಾಕ್ಕೂ ಭಾರತೀಯ ರಾಜರ ಅಧಿಕಾರಕ್ಕೊಳಪಟ್ಟಿರುವ ಇಂಡ್ಯಾಕ್ಕೂ ಇರುವ ಪರಸ್ಪರ ಸಂಬಂಧ ವಿಚಾರವು ಪರ್ಯಾಲೋಚಿಸಲ್ಪಡುವುದೆಂದೂ ಪ್ರಕಟವಾಗಿರುವ ವಿಚಾರವು ದೇಶೀಯ ಸಂಸ್ಥಾನದವರಾದ ನಮಗೂ ಸಂಬಂಧಪಟ್ಟಿರುತ್ತದೆ. ದೇಶೀಯ ಸಂಸ್ಥಾನಗಳನ್ನು ಸೇರಿಸಿಕೊಂಡು ಯಾವ ದ್ವಾರಕ ರಾಜಕೀಯ ಸುವ್ಯವಸ್ಥೆಯನ್ನು ಸೈಮನ್ ಕಮಿಷನ್ನಿನವರು ಪರಿಶೀಲಿಸುತ್ತಿರುವರೆಂದು ಕೇಳಿ ಸಂತೋಷಿಸುತ್ತೇವೆ. ರೌಂಡ್‌ಟೇಬಲ್ ಕಾನ್ಫರೆನ್ಸು ಸಮಾವೇಶವಾದಾಗ ದೇಶೀಯ ಸಂಸ್ಥಾನಪ್ರಜೆಗಳ ಹೇಳಿಕೆಯೂ ಗಮನಕ್ಕೆ ತಾಲಿಸಲ್ಪಡುವುದರಲ್ಲಿ ಅನುಮಾನವಿಲ್ಲವೆಂದು ತೋರುತ್ತದೆ ದೇಶೀಯ ರಾಜರುಗಳು ತಮ್ಮ ಪ್ರಜೆಗಳ ಅಭಿಪ್ರಾಯಕ್ಕೆ ವಿರುದ್ಧವಾಗಿ ವರ್ತಿಸುವರೆಂದು ಊಹಿಸಲಾಗದು. ನಮ್ಮ ಮೈಸೂರು ಸಂಸ್ಥಾನವು ತನ್ನ ವಿಚಾರಗಳನ್ನು ಯಾವ ರೀತಿಯಲ್ಲಿ ನಿವೇದಿಸಬೇಕೆಂಬ ಸೂಚನೆಯು ಈಗ ಅಕಾಲಪ್ರಸ್ತಾಪವಾದರೂ, ನಮ್ಮ ಘನವಂತರಾದ ಮತ್ತು ಪ್ರತಿಭಾಶಾಲಿಗಳಾದ ಶ್ರೀಯುವರಾಜರವರು ನಮ್ಮ ಸಂಸ್ಥಾನದ ಪ್ರತಿನಿಧಿಗಳಾಗಿ ರೌಂಡ್‌ಟೇಬಲ್ ಕಾನ್ಫರೆನ್ಸಿಗೆ ದಯಮಾಡಿಸಿ ನಮ್ಮ ಪ್ರಜೆಗಳನ್ನೂ ಆಶೋತ್ತರಗಳನ್ನೂ ನಿವೇದಿಸುವುದುತ್ತಮವೆಂದು ಸೂಚಿಸುತ್ತೇವೆ. ಬ್ರಿಟಿಷ್ ಇಂಡ್ಯಾದ ಪ್ರಜಾಪ್ರಮುಖರು ಈ ಮಹಾಸಭೆಯಲ್ಲಿ ರೋಷಾವೇಶಗಳಿಂದ ಭಾರತಖಂಡದ ಭಾವಿ ಸುಪರಿಣಾಮಕ್ಕೆ ವಿಘಾತಕರುಂಟಾಗದಂತೆ ನೋಡಿಕೊಂಡು ಈ ಮಹಾಕಾರ್ಯಸಿದ್ಧಿಯಲ್ಲಿ ಸಹಕರಿಸುವರೆಂದು ನಿರೀಕ್ಷಿಸುತ್ತೇವೆ. ವೈಸ್‌ರಾಯರಾದ ಲಾರ್ಡ್ ಇರ್ವಿನ್‌ರವರು ಪತ್ನೀಸಮೇತರಾಗಿ ಈ ತಾ|| 23 ರಲ್ಲಿ ನಮ್ಮ ಸೀಮೆಗೆ ದಯಮಾಡಿಸಿದಾಗ್ಗೆ ಅವರ ಅಂತಸ್ತಿಗೂ ಘನತೆಗೂ ನಮ್ಮ ಸಂಸ್ಥಾನದ ಮತ್ತು ಶ್ರೀಮನ್ಮಹಾರಾಜರವರ ಕೀರ್ತಿಗೂ ತಕ್ಕಂತೆ ಅಸಾಧಾರಣವಾದ ಸತ್ಕಾರವು ನಡೆಸಲ್ಪಟ್ಟು ಆ ಮಹನೀಯರವರಲ್ಲಿ ಈ ದೇಶೀಯರಿಗಿರುವ ಅಕೃತ್ರಿಮವಾದ ಪ್ರೀತಿವಿಶ್ವಾಸಗಳೂ ಭಕ್ತಿಯೂ ಪ್ರದರ್ಶಿಸಲ್ಪಡುವುದರಲ್ಲಿ ಸಂದೇಹವಿಲ್ಲ.

ಒಳದೇಶದ ವೃತ್ತಾಂತಗಳು.

ಪಾಶ್ಚಾತ್ಯದೇಶ ಪರ್ಯಟನಕ್ಕಾಗಿ ಸಿದ್ಧರಾಗುತ್ತಿರುವ ನಮ್ಮ ಶ್ರೀಮದ್ಯುವರಾಜ ಕಂಠೀರವ ನರಸಿಂಹರಾಜ ಒಡೆಯರ್ ಬಹದ್ದೂರ್‌ರವರು, ಕಳೆದ ಮಂಗಳವಾರ ಸುರಕ್ಷಿತವಾಗಿ ರಾಜಧಾನಿಗೆ ದಯಮಾಡಿಸಿದರು.

ಆನೆಕಲ್ಲಾರ್ ಮ|| ಬಿ ಕೆ ಶ್ರೀನಿವಾಸಲು ನಾಯುಡುಯವರು ರಜದ ಮೇಲಿರುವುದರಿಂದ ಅವರು ಬರುವವರೆಗೆ ರೆವಿನ್ಯು ಪ್ರಬೇಷನರ್ ಮ|| ಕೆ ಮಹಮ್ಮದ್ ಅಹಮ್ಮದ್, ಬಿ ಎ , ಯವರು ಆಕ್ಟಿಂಗ್ ಅಮಲ್ದಾರರಾಗಿ ನಿಯಮಿಸಲ್ಪಟ್ಟಿರುವರು

ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರಾದ ಮ|| ಎಸ್ ಹಿರಿಯಣ್ಣಯ್ಯನವರು ಈ ತಾ|| 4 ರಿಂದ 21 ದಿನಗಳ ವರೆಗೆ ಪ್ರಿವಿಲೇಜ್ ರಜವನ್ನು ಪಡೆದುಕೊಂಡಿರುವುದರಿಂದ ಅವರ ಪರ್ಸನಲ್ ಅಸಿಸ್ಟೆಂಟರಾದ ಮ|| ಜಿ ಶಾಂತವೀರಪ್ಪನವರು ತಮ್ಮ ಕೆಲಸಗಳೊಡನೆ ಇ|| ಜ|| ರವರ ಕೆಲಸವನ್ನು ನೋಡತಕ್ಕದ್ದಾಗಿ ಸರ್ಕಾರದಪ್ಪಣೆಯಾಗಿರುತ್ತದೆ

ಕಳೆದ ರವಿವಾರ ಬೆಂಗಳೂರು ಪೇಟೆಯಲ್ಲಿರುವ ಸಿಗರೆಟ್ ಕಾರ್ಖಾನೆಯ ಆವಿಯ ಯಂತ್ರವೊಡೆದುಹೋಗಿ ಕೆಲಸಮಾಡುತ್ತಿದ್ದ ಇಬ್ಬರಿಗೆ ಕಾದನೀರು ಬಿದ್ದು ಅವರ ಮೈಕೈಗಳೆಲ್ಲ ಸುಟ್ಟುಹೋಗಿದ್ದಾಗಿ ಇತರರು ಕಟ್ಟ ಕೇಳಿ ಬಂದು ಅವರನ್ನು ಕೂಡಲೇ ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆ ಮಾಡಿಸಿದರು. ಅವರಲ್ಲೊಬ್ಬನು ಸತ್ತು ಇನ್ನೊಬ್ಬನು ಗುಣ ಹೊಂದುತ್ತಿರುವುದಾಗಿ ತಿಳಿದು ಬಂದಿದೆ

ರಾಜಧಾನಿಯ ಚಿಟ್ಟದ ಕಪ್ಪಲಿನಲ್ಲಿ ಸೇರಿಕೊಂಡು ಊರಿನೊಳಕ್ಕೆ ಆಗಾಗ್ಗೆ ಬಂದು ದನಕರುಗಳ ಮೇಲೆ ಬಿದ್ದು ಹಾವಳಿಯನ್ನು ಮಾಡುತ್ತಿದ್ದ ಒಂದು ಚಿರತೆಯನ್ನು ರಾಜಧಾನಿಯ ಮಿ|| ಡಬ್ಲ್ಯು. ಎಚ್. ತಿಮ್ಮೋಬಾಲ್ಡರವರ ಪತ್ನಿಯವರು ಬಹಳ ಧೈರ್ಯದಿಂದ ಪ್ರತಿಭಟಿಸಿ ನಿಂತು ಗುಂಡಿನಿಂದ ಹೊಡೆದು ಕೊಂದರು ಈಕೆಯವರು ಹಿಂದೆ ಅನೇಕ ವೇಳೆ ಕ್ರೂರ ಮೃಗಗಳನ್ನು ಧೈರ್ಯದಿಂದ ಬೇಟೆಯಾಡಿ ಕೊಂದಿರುತ್ತಾರೆ.

ತರೀಕೆರೆ ಸಬ್ ತಾ ಆಕ್ಟಿಂಗ್ ಡೆಪ್ಯುಟಿ ಅಮಲ್ದಾರ್ ಮಿ|| ಸಯದ್ ಗೌಸ್ ಮೊಹಿದ್ದೀನ್‌ರವರು ತಿಪಟೂರು ತಾ|| ಆಕ್ಟಿಂಗ್ ಅಮಲ್ದಾರರಾಗಿ ಮ ಕೆ ಆರ್ ಸೀತಾರಾಮಯ್ಯಂಗಾರ್ರು ಬರುವವರೆಗೆ ಅಥವಾ ಇನ್ನೊಂದಪ್ಪಣೆಯಾಗುವವರೆಗೆ ನಿಯಮಿಸಲ್ಪಟ್ಟಿರುವುದರಿಂದ ರೆವಿನ್ಯು ಪ್ರಬೇಷನರ್ ಮ ಜಿ ಎ ನಾರಾಯಣಶೆಟ್ಟಿ, ಬಿ. ಎ , ಎಲ್ ಎಲ್ ಬಿ , ಯವರು ತರೀಕೆರೆ ಸಬ್ ತಾ|| ಆಕ್ಟಿಂಗ್ ಡೆಪ್ಯುಟಿ ಅಮಲ್ದಾರರಾಗಿ ನಿಯಮಿಸಲ್ಪಟ್ಟಿರುತ್ತಾರೆ

ಕಳೆದವಾರ ರಾಜಧಾನಿಯ ಲಕ್ಷ್ಮೀಪುರದಲ್ಲಿರುವ ಶಿವಮೊಗ್ಗ ಡಿ|| ಡೆಪ್ಯುಟಿ ಕಮಿಷನರ್ ಮ|| ಎಂ ಎಚ್ ಬಾಲರಾಜ ಅರಸಿನವರ ಮನೆಯಲ್ಲಿ ಬಂಗಾರದ ಒಡ್ಯಾಣ ಮೊದಲಾದ ಆಭರಣಗಳು ಕಳುವಾದ ದಾಗಿ ವದಂತಿ ಇದೆ ಬಂಗಲೆಯ ದ್ವಾರದಲ್ಲಿ ಬಂದೂಕು ಹಿಡಿದಿರುವ ಸಿಪಾಯಿಗಳು ಮೊದಲಾದ ಸೇವಕರುಗಳ ಬಲವಾದ ಕಾವಲಿದ್ದಾಗ್ಯೂ ಕಳ್ಳತನವು ನಡೆದಿರುವಾಗ ಸಿಟಿಯಲ್ಲಿ ಕಾವಲಿಲ್ಲದ ಬಡವಾಯಿಗಳ ಮನೆಯಲ್ಲಿ ಕನ್ನಕಳುವು ನಡೆಯುವುದೇನೂ ಆಶ್ಚರ್ಯವಲ್ಲವು

ತೀರ್ಥಹಳ್ಳಿ ತಾ|| ಅಮಲ್ದಾರ್ ಮ|| ಕೆ. ಸುಬ್ಬರಾವ್ ನಾಯಕ್‌ರವರು 3 ತಿಂಗಳ ರಜವನ್ನು ತೆಗೆದುಕೊಂಡಿರುವುದರಿಂದ ಅವರು ಬರುವವರೆಗೆ ಆಲೂರು ಸಬ್ ತಾ|| ಡೆ|| ಅಮಲ್ದಾರ್ ಮ|| ಜೆ. ದುರ್ಗಪ್ಪ, ಬಿ ಎ , ಯವರು ಆಕ್ಟಿಂಗ್ ಅಮಲ್ದಾರರಾಗಿ ತೀರ್ಥಹಳ್ಳಿಗೆ ವರ್ಗಾಯಿಸಲ್ಪಟ್ಟಿರುತ್ತಾರೆ. ಅವರ ಸ್ಥಾನಕ್ಕೆ ಡೆಪ್ಯುಟಿ ಅಮಲ್ದಾರರಾಗಿ ನಿಯಮಿತರಾಗಿರುವ ಮ|| ಎಂ. ಪಾರ್ಥಸಾರಥಿ ನಾಯುಡುಯವರು ಆಲೂರು ಸಬ್ ತಾ|| ಗೆ ವರ್ಗಾಯಿಸಲ್ಪಟ್ಟಿರುತ್ತಾರೆ

ಚಿಕ್ಕಮಗಳೂರಿನ ಕಾಫಿಪ್ಲಾಂಟರ್ ಮತ್ತು ಸಾಹುಕಾರ್ ಎಂ. ಎಲ್. ನಾಗಪ್ಪಶೆಟ್ಟರು ಮಾಡಿರುವ ಧರ್ಮಕಾರ್ಯಕ್ಕಾಗಿ ಅವರಿಗೆ ಶ್ರೀಮನ್ಮಹಾರಾಜರವರಿಂದ "ಧರ್ಮಪ್ರವೀಣ" ಎಂಬ ಪ್ರಶಸ್ತಿಯು ದಯಪಾಲಿಸಲ್ಪಟ್ಟಿರುವುದರ ಸಂತೋಷಸೂಚನಾರ್ಥವಾಗಿ ಬೀರೂರಿನ ಆರ್ಯವೈಶ್ಯಮಂಡಲಿಯವರು ನಾಳೆಯ ದಿವಸ ಶಿವಮೊಗ್ಗ ಸಾಹುಕಾರ್ ಆಡಿಕೆಮಂಡಿ ಮ|| ಧೂಪದಾಳ್ ರುಕ್ಮಯ್ಯನವರ ಅಧ್ಯಕ್ಷತೆಯಲ್ಲಿ ಸಂತೋಷಕೂಟವನ್ನು ನಡೆಯಿಸಿ ಧರ್ಮಪ್ರವೀಣರನ್ನು ಸನ್ಮಾನಿಸುವವರಾಗಿರುವರು,

ರಾಜಧಾನಿಯಲ್ಲಿ ಈ ವಾರವೆಲ್ಲ ಮಳೆಯಿಲ್ಲದೆ ಬರೀ ಮೋಡಕಾದು ಹಿಡಿದಿದ್ದರೆ ಚಳಿಯೂ ಹೆಚ್ಚಾಗಿದೆ. ಚಳಿಗಳು ಸೀಯುವುದು ಇನ್ನೂ ತಪ್ಪಿಲ್ಲ ಮತ್ತು ಇನ್‌ಫ್ಲೂಯೆಂಜಾ ಕಡಮೆಯಾಗಿಲ್ಲ, ಕಳೆದ ತಾ|| 6 ನೇ ಬುಧವಾರ ಆರಂಭವಾದ ವಿಶಾಖ ಮಳೆಯು ರಾಜಧಾನಿಯಲ್ಲಿ ಆಗದಿದ್ದರೂ ಇತರ ಕಡೆ ಆಗಿರುವುದೆಂದೂ ಇದರಿಂದ ಬತ್ತದ ಮತ್ತು ಇತರ ಪೈರುಗಳಿಗೆ ಬಹಳ ಅನುಕೂಲವಾಯಿತೆಂದೂ ಕೇಳುತ್ತೇವೆ. ಈ ಮಳೆಯು ವಿಶೇಷವಾಗಿ ನಾಶವಾಗಿರುವುದರಿಂದ ಶಸ್ಯ ಕಾಲಾವಧಿಯೊಳಗಾಗಿ ಸಮೃದ್ಧವಾಗಿ ಬರುವುದು ಅವಶ್ಯಕವು.

ಶಿವಮೊಗ್ಗ ಟ್ರೈನಿಂಗ್ ಇನ್ಸ್ಪೆಕ್ಟರ್ ಶ್ರೀ ವನಸಾಲ ಸುಬ್ಬರಾಯರು, ಕಳೆದ ಅಕ್ಟೋಬರ್ ತಾ|| 21 ರಿಂದ ಪ್ರಿವಿಲೇಜ್ ರಜ ವನ್ನು 4 ತಿಂಗಳು 91 ದಿವಸಗಳ ಪ್ರಿವಿಲೇಜ್ ರಜವನ್ನು ಪಡೆದು ತಮ್ಮ ಪ್ರಯುಕ್ತ ಇವರು ಬರುವವರೆಗೆ ರಿಕವರಿ ಬೇಸಿಂಗ್ ನ ಅಸಿಸ್ಟೆಂಟ್ ಇನ್ಸ್ಪೆಕ್ಟರ್ ಆಗಿರುವ ಶ್ರೀ ಎ. ವಿ. ಸಬ್ಬಣ್ಣ ರವರು ಟ್ರೈನಿಂಗ್ ಇನ್ಸ್ಪೆಕ್ಟರ್ ಆಫೀಸರ್ ಆಗಿ ನೇಮಿಸಲ್ಪಟ್ಟಿದ್ದಾರೆ. ಶ್ರೀ ಬಿ. ಎನ್ ಸಬ್ಬರಾಯರು ಟ್ರೈನಿಂಗ್ ಆಫೀಸರಾಗಿ ವರ್ಗಾಯಿಸಲ್ಪಟ್ಟಿರುತ್ತಾರೆ.

ಕಳೆದ ಸೋಮವಾರ ಬೆಳಿಗ್ಗೆ ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲ್ ಮೀಟಿಂಗು ನಡೆದು ಶ್ರೀಮತಿ ಆಲಮ್ಮನವರ ಧರ್ಮಾಗಾರಕ್ಕೆ ಶ್ರೀಮನ್ಮಹಾರಾಜರವರು ಮೆಚ್ಚಿ ಅವರಿಗೆ ಧರ್ಮಪರಾಯಣೆ ಎಂಬ ಪ್ರಶಸ್ತಿಯನ್ನು ದಯಪಾಲಿಸುವುದರ ಸಂತೋಷಸೂಚನಾರ್ಥವಾಗಿ ಈ ಧರ್ಮಪರಾಯಣೆಯರಿಗೆ ಒಂದು ಸನ್ಮಾನಪತ್ರವನ್ನೊಪ್ಪಿಸಬೇಕೆಂದೂ, ಇದಕ್ಕಾಗಿ ವೆಚ್ಚ ಮಾಡಲು 200 ರೂ. ಗಳನ್ನು ವಿನಿಯೋಗಿಸಲ್ಪಡಬೇಕೆಂದೂ ತೀರ್ಮಾನಿಸಿದರು. ಸ್ತ್ರೀಯನ್ನು ಬಹಿರಂಗದಲ್ಲಿ ಬರಮಾಡಿಕೊಂಡು ಸನ್ಮಾನವನ್ನು ಮಾಡುವುದರ ಬದಲು ಕೌನ್ಸಿಲಿನವರು ತಮ್ಮ ಅಭಿನಂದನವನ್ನು ಲಿಖಿತವಾಗಿ ಅವರಿಗೆ ತಿಳಿಸಬೇಕಾಗಿದ್ದರೆ ಬಹಳ ಸಮಂಜಸವಾಗಿರುತ್ತಿದ್ದಿತು.

ಸೀನಿಯರ್ ಸರ್ಜನರುದ್ಯೋಗದಿಂದ ನಿವೃತ್ತರಾಗಿ ಬೆಂಗಳೂರು ದಂಡಿನಲ್ಲಿ ಸ್ವತಂತ್ರವಾಗಿ ವೈದ್ಯಚಿಕಿತ್ಸೆಯನ್ನು ಮಾಡುತ್ತಿರುವ ಡಾ|| ಸ್ಕೈಲ್ಯಾಗನ್‌ರವರು ಕಳೆದ ದಸರಾ ಮಹೋತ್ಸವ ಸಮಯದಲ್ಲಿ ಮೈಸೂರು ಬೋರ್ಡ್ ನವರ ಪ್ರೋತ್ಸಾಹದಿಂದ ರಾಜಧಾನಿಯ ಟೌನ್‌ಹಾಲಿನಲ್ಲಿ ನೂತನ ವೈದ್ಯಚಿಕಿತ್ಸೆಯಿಂದ ವಯಸ್ಸಾಗಿಸಿದ ಮನುಷ್ಯರುಗಳೂ ಪ್ರಾಣಿಗಳೂ ದೇಹದಾರ್ಢ್ಯವನ್ನೂ, ಯೌವನವನ್ನೂ, ತೇಜಸ್ಸನ್ನೂ ಹೊಂದುತ್ತಾರೆಂಬುದನ್ನು ಚಲನಚಿತ್ರಗಳ ಪ್ರದರ್ಶನದ ಮೂಲಕ ಉಪನ್ಯಾಸ ಮಾಡಿದರಲ್ಲದೆ ತಮ್ಮಿಂದ ಚಿಕಿತ್ಸೆಯನ್ನು ಹೊಂದಿ ಸುಖಸಂತೋಷದಿಂದ ಬಾಳುತ್ತಿರುವವರ ವಿಚಾರವನ್ನು ಸವಿಸ್ತಾರವಾಗಿ ತಿಳಿಸಿದರು. ಹರೀಡವರಾಗಲು ಕಾತರ ಪಡುವ ವೃದ್ಧರು ಡಾ|| ಸ್ಕೈಲ್ಯಾಗನ್‌ರವರು ಹೇಳುವ ಚಿಕಿತ್ಸೆಯನ್ನು ಮಾಡಿಸಿಕೊಂಡು ನವಯೌವನವನ್ನು ಪಡೆಯಬಹುದಲ್ಲವೆ !

ರಾಜಧಾನಿಯಲ್ಲಿ ಇನ್ನೊಂದು ಬಟ್ಟೆಯ ಕಾರ್ಖಾನೆಯನ್ನು ಸ್ಥಾಪಿಸುತ್ತೇವೆಂದು ವಿಜೃಂಭಿಸಿ ಅದರ ಕಟ್ಟಡಕ್ಕೆ ದಿವಾನರಿಂದ ಶಂಕುಸ್ಥಾಪನೆಯನ್ನು ಸಹ ಮಾಡಿಸಿ ಕಟ್ಟಡದ ಕೆಲಸವನ್ನು ನಿಲ್ಲಿಸಿಬಿಟ್ಟಿರುವ ಮುಲ್ಕಿ ಪಾಂಡ್ಯ ಎಂಬ 55-50 ವರ್ಷದ ದೊಡ್ಡ ಮನುಷ್ಯರು ಒಬ್ಬ ಶೂದ್ರ ಹುಡುಗಿಯನ್ನು ಬ್ರಾಹ್ಮಣ ಜಾತಿಯವಳೆಂದು ಹೇಳಿ ತಮಗೆ ಲಗ್ನಮಾಡಿಕೊಟ್ಟು ಮೋಸಪಡಿಸಿದರೆಂದು ಕೆಲವರ ಮೇಲೆ ಮೈಸೂರು ಸಿಟಿ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ಹೂಡಿರುವ ವಿವಾದದಲ್ಲಿ ಫಿರ್ಯಾದಿ ಪರ ಸಾಕ್ಷಿ ವಿಚಾರಣೆಯಲ್ಲಿ ಈ ಮದುವೆಯು ದತ್ತಾತ್ರೇಯದೇವಸ್ಥಾನದೊಳಗೆ ರಾತ್ರಿ 11 ಗಂಟೆಯಿಂದ 1 ಗಂಟೆಯವರೆಗೆ ನಡೆದಿತೆಂದು ಇಬ್ಬರು ನುಡಿದಿರುವರು. ಇವರ ಪಾಟೀಸವಾಲು ಈ ತಾ|| 10 ರಲ್ಲಿ ನಡೆಯುವುದು. ಈ ಮೊಕದ್ದಮೆ ಫಿರ್ಯಾದಿಯವರ 1 ನೇ ಸಾಕ್ಷಿ ರಂಗಯ್ಯನೆಂಬಾತನು ಫಿರ್ಯಾದಿ ಮುಲ್ಕಿಯವರು ತನಗೆ ನಂಬಿಗೆ ದ್ರೋಹಮಾಡಿದರೆಂದು ಅವರಮೇಲೆ ವಿವಾದವನ್ನು ಹೂಡಿರುತ್ತಾನೆ.

ಕಳೆದ ಅಕ್ಟೋಬರ್ ತಾ|| 24 ರಲ್ಲಿ ದಾವಣಗೆರೆಯ ಪುರವಾಸಿಗಳು ಅಲ್ಲಿಯ ಅಡ್ವೊಕೇಟ್ ಮ|| ಡಿ. ಎಚ್. ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದು ಆ ಊರಿಗೆ ಪ್ಯೂನಿಟಿವ್ ಪೊಲೀಸ್ ಎಂದರೆ ಶಿಕ್ಷಾರ್ಥವಾದ ಪೊಲೀಸಿನವರನ್ನು ನಿಯಮಿಸಿ ಅವರ ಸಂಬಳ ಸಾರಿಗೆಯನ್ನು ದಾವಣಗೆರೆಯ ನಿವಾಸಿಗಳು ತೆರುವಂತೆ ಮಾಡಿರುವುದರ ಅನ್ಯಾಯವನ್ನೂ ಅದರಿಂದ ತಮಗುಂಟಾಗಿರುವ ಮನೋವ್ಯಾಕುಲವನ್ನೂ ದಿವಾನರಿಗೂ, ಶ್ರೀಮನ್ಮಹಾರಾಜರವರಿಗೂ ವಿಜ್ಞಾಪನಾ ಪತ್ರಿಕೆಯ ಮೂಲಕವಾಗಿಯೂ, ದೊಡ್ಡ ಮನುಷ್ಯರಿಂದ ಕೂಡಿದ ರಾಯಭಾರದ ಮೂಲಕವಾಗಿಯೂ ಬಿನ್ನೈಸಿಕೊಂಡು ಅದನ್ನು ನಿವಾರಣೆ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳಬೇಕಾಗಿಯೂ ನಿರ್ಧರಿಸಿದರು. ಯಾರೋ ಕೆಲರು ಮಾಡಿದ ಅಪರಾಧಕ್ಕಾಗಿ ಊರಿನವರೆಲ್ಲರೂ ದಂಡವನ್ನು ತೆರುವುದು ಯುಕ್ತವಾಗಿ ತೋರುವುದಿಲ್ಲವಾದುದರಿಂದ ಅದನ್ನು ಅದಷ್ಟು ಜಾಗ್ರತೆಯಲ್ಲಿ ಪ್ರಭುತ್ವದವರು ತಪ್ಪಿಸಿ ಅಲ್ಲಿಯ ನಿವಾಸಿಗಳ ಕೃತಜ್ಞತೆಗೆ ಪಾತ್ರರಾಗುವರೆಂದು ನಿರೀಕ್ಷಿಸುತ್ತೇವೆ.

ವೈಸ್‌ರಾಯ್ ದಂಪತಿಗಳು ಇದೇ ತಾ|| 23 ರ ಬೆಳಿಗ್ಗೆ ರಾಜಧಾನಿಗೆ ದಯಮಾಡಿಸಿ ಕೆಲ ಗಂಟೆಗಳ ವರೆಗಿದ್ದು ಉಪಾಹಾರವನ್ನು ತೀರಿಸಿಕೊಂಡು ಕಾಕನಕೋಟೆಗೆ ಪ್ರಯಾಣಮಾಡಿ ಅಲ್ಲಿ 3-4 ದಿವಸಗಳ ವರೆಗಿದ್ದು ಕಾಡಾನೆಗಳನ್ನು ಖೆಡ್ಡಾವೊಳಕ್ಕೆ ಅಟ್ಟಿ ಅವುಗಳನ್ನು ಪಳಗಿದ ಆನೆಗಳ ಸಹಾಯದಿಂದ ಹಗ್ಗದಿಂದ ಬಿಗಿಯುವುದೇ ಮೊದಲಾದ ಸಾಹಸ ಪ್ರಯತ್ನವನ್ನು ಪರಾಮರ್ಶಿಸಿ ರಾಜಧಾನಿಗೆ ಹಿಂದಿರುಗಿ ಬಿಜಯಂಗೈಸಿ ಆ ರಾತ್ರಿ ಶ್ರೀಮನ್ಮಹಾರಾಜರವರು ಹೊಸ ಅರಮನೆಯಲ್ಲಿ ಮಾಡಿಸುವ ದಿವ್ಯವಾದ ಔತಣವನ್ನು ತೀರಿಸಿಕೊಂಡು ಬಾಲ್ ಎಂಬ ನರ್ತನವನ್ನು ನೋಡಿಕೊಂಡು ಮಾರನೆಯ ಬೆಳಿಗ್ಗೆ ಮದರಾಸಿಗೆ ಪ್ರಯಾಣ ಮಾಡುವರು. ಈ ಆನೆಯನ್ನು ಹಿಡಿಯುವ ಕ್ರಮವನ್ನು ಪರಾಮರ್ಶಿಸಲು ಕಾಶ್ಮೀರ ಪಟ್ಟದ ಯುವರಾಜರೂ, ಜೋಧಪುರದ ಮಹಾರಾಜರೂ ಆಹ್ವಾನಿಸಲ್ಪಟ್ಟಿರುವುದಾಗಿ ತಿಳಿಯಬರುತ್ತದೆ. ಇದರಂತೆಯೇ ಆಹ್ವಾನಿಸಲ್ಪಟ್ಟಿದ್ದ ಬೋಂಬಾಯಿನ ಶ್ರೀಮಂತರೂ ನಮ್ಮ ಶ್ರೀಮನ್ಮಹಾರಾಜರವರ ಪ್ರೀತಿಗೆ ಪಾತ್ರರಾದವರೂ ಆಗಿದ್ದ ಮ|| ಮಣಿರಾಜೀಭಾಯಿ ಕೋಲವಾಸರು 6-8 ದಿವಸಗಳ ಹಿಂದೆ ಪ್ರಾಣವಾಯು ಬಲಿತು ಸಿಂಹಹೋಗಿ ಮೃತರಾದರೆಂದು ತಿಳಿಯಲು ವಿಷಾದವಾಗುತ್ತದೆ.

ಶ್ರೀಮಹಾದೇಶ್ವರಸ್ವಾಮಿಯವರಿಗೆ ನಮ್ಮ ಶ್ರೀಮನ್ಮಹಾರಾಜರವರಿಂದ ಒಪ್ಪಿಸಲ್ಪಟ್ಟಿರುವ ರತ್ನಖಚಿತವಾದ ಬಂಗಾರದ ಕೊಳಗವು ಕಳೆದ ತಾ|| 4 ನೇ ಸೋಮವಾರ ಬೆಳಿಗ್ಗೆ ರಾಜಧಾನಿಯಿಂದ ಮೋಟಾರ್ ಲಾರಿಯಲ್ಲಿ ರಾಜಮರ್ಯಾದೆಯೊಡನೆ ಕೊಳ್ಳೇಗಾಲಕ್ಕೆ ಸಾಗಿಸಲ್ಪಟ್ಟಿತು. ಅಲ್ಲಿಯ ಜನರ ಪ್ರಾರ್ಥನೆಯಮೇರೆಗೆ ಪುಷ್ಪದ ಅಲಂಕಾರದ ರಥದಲ್ಲಿ ಕೊಳಗವು ಇರಿಸಲ್ಪಟ್ಟು ತಳಿರುತೋರಣಗಳಿಂದಲೂ ಧ್ವಜಪತಾಕೆಗಳಿಂದಲೂ ಸಾಲಂಕಾರಗಳಿಂದಲೂ ಅಲಂಕೃತವಾದ ಬೀದಿಗಳಲ್ಲಿ ರಾತ್ರಿ 3 ಗಂಟೆಯವರೆಗೆ ಉತ್ಸವಮಾಡಲ್ಪಟ್ಟು ಮಾರನೆಯ ದಿವಸ ಯಥಾಪ್ರಕಾರ ಪೆಟ್ಟಿಗೆಯಲ್ಲಿ ಭದ್ರಪಡಿಸಲ್ಪಟ್ಟು ಮೋಟಾರ್ ಲಾರಿಯಲ್ಲಿ ಬೆಟ್ಟಕ್ಕೆ ಸಾಗಿಸಲ್ಪಟ್ಟಿತು. ಕೊಳ್ಳೇಗಾಲದಲ್ಲಿ ನಡೆದ ಉತ್ಸವವನ್ನು ನೋಡಲು ನೆರೆಹೊರೆ ಗ್ರಾಮಗಳಿಂದ ಸಾವಿರಾರು ಜನರು ಬಂದು ಉತ್ಸವವನ್ನು ನೋಡಿ ಆನಂದಪರವಶರಾದರು. ಬೆಟ್ಟದ ಮೇಲೆ ದೀಪಾವಳಿ ಸೋಮವಾರ ಶ್ರೀ ಮಹಾದೇಶ್ವರಸ್ವಾಮಿಗೆ ವಿಧ್ಯುಕ್ತವಾಗಿ ಧರಿಸಲ್ಪಟ್ಟಿತು. ಈ ಅಪೂರ್ವ ದೃಶ್ಯವನ್ನು ನೋಡಲು ಈ ದೀಪಾವಳಿಯುತ್ಸವಕ್ಕೆ ಯಾವಾಗಲೂ ಬರುವುದಕ್ಕಿಂತ ಜಾಸ್ತಿಯಾಗಿ ಯಾತ್ರಿಕರು ಬಂದಿದ್ದರಲ್ಲದೆ ಈ ವೈಭವವನ್ನು ನೋಡಿ ದಿಗ್ಭ್ರಮೆಯಾಗಿ ಮಹಾದೇಶ್ವರಸ್ವಾಮಿಯ ಮಹಿಮೆಯನ್ನೂ ಶ್ರೀಮನ್ಮಹಾ-

ರಾಜರವರ ಭಕ್ತಿಶ್ರದ್ಧೆಯನ್ನೂ ಕೊಂಡಾಡುತ್ತ 3 ದಿವಸಗಳವರೆಗೆ ಬೆಟ್ಟದಲ್ಲಿ ತಂಗಿ ದೇವರ ಸೇವೆಯನ್ನು ಮಾಡಿದರು. ...ರು ಈ ಕೊಳಗವನ್ನು ಧರಿಸಿರುವ ಸ್ವಾಮಿಯ ದಿವ್ಯ ಮಂಗಳವಿಗ್ರಹವನ್ನು ಸಂದರ್ಶಿಸಿ ಶ್ರೀ ಸ್ವಾಮಿಗೆ ಧರಿಸುವವರೆಗೂ ತಾಳ್ಮೆಗೆಡದೆ ಕಾದುಕೊಂಡಿದ್ದು ಮೋಹಕವಾದ ಸ್ವಾಮಿಯ ದರ್ಶನವನ್ನು ಮಾಡಿ, ರಾತ್ರಿ ಕಳೆದ ಮೇಲೆ ಶ್ರೀ ಮಹಾದೇಶ್ವರ ಸ್ವಾಮಿಯವರ ರಥೋತ್ಸವವನ್ನು ನೋಡಿ ಕೃತಾರ್ಥರಾದರು. ಅನೇಕರು ಕಾಣಿಕೆಗಳನ್ನು ಒಪ್ಪಿಸಿ ಹರಕೆಗಳನ್ನು ತೀರಿಸಿದರು. ಸ್ವಾಮಿಯ ಸ್ವರೂಪವು ಭಕ್ತರಿಗೆ ಅತ್ಯಂತ ಮನೋಹರವಾಗಿದ್ದಿತು. ಇದಕ್ಕೆ ಕಾರಣರಾದ ಶ್ರೀ ಮಹಾದೇಶ್ವರ ಸ್ವಾಮಿಯ ಪ್ರಸಾದವನ್ನು ತೆಗೆದುಕೊಂಡು ಬಂದು ಕಳೆದ ಬುಧವಾರ ರಾಜಧಾನಿಯ ಅರಮನೆಯಲ್ಲಿ ಶ್ರೀಮನ್ಮಹಾರಾಜರವರಿಗೊಪ್ಪಿಸಿದರೆಂದು ತಿಳಿಯುತ್ತೇವೆ.

ವರ್ತಮಾನಸಂಗ್ರಹ.

ಒಡೆಸ್ಸಾ ನಗರದಲ್ಲಿ ಹೆಚ್ಚು ವಯಸ್ಸಿನ ಸ್ತ್ರೀಯರು ತಮಗಿಂತಲೂ ಕಡಮೆ ವಯಸ್ಸಿನ ಪುರುಷರನ್ನು ಲಗ್ನಮಾಡಿಕೊಳ್ಳುತ್ತಿರುವವರ ಸಂಖ್ಯೆಯು ಹೆಚ್ಚುತ್ತಿರುವುದೆಂದು ವಿವಾಹದ ರಿಜಿಸ್ಟರಿನ ಅಂಕಿ ಅಂಶದಿಂದ ಗೊತ್ತಾಗುತ್ತದೆ. ಪ್ರಸಕ್ತ ವರ್ಷ ವಿವಾಹವಾದವರೊಳಗೆ 41 ರಿಂದ 52 ವರ್ಷ ವಯಸ್ಸಿನವರಾಗಿರುವ 13 ಜನ ಸ್ತ್ರೀಯರು 20 ವರ್ಷ ವಯಸ್ಸಿನ ಯುವಕರನ್ನೂ, 41 ವರ್ಷ ವಯಸ್ಸಿನ ಇಬ್ಬರು ಸ್ತ್ರೀಯರು 20 ವರ್ಷದ ಯುವಕರನ್ನೂ, 39 ವರ್ಷ ವಯಸ್ಸಿನ ಒಬ್ಬ ಸ್ತ್ರೀಯು 17 ವರ್ಷ ವಯಸ್ಸಿನ ಒಬ್ಬ ಯುವಕನನ್ನೂ, 30 ವರ್ಷ ವಯಸ್ಸಿನ 21 ಸ್ತ್ರೀಯರು 22 ವರ್ಷ ವಯಸ್ಸಿನ ತರುಣರನ್ನು ಲಗ್ನ ಮಾಡಿಕೊಂಡಿರುವುದಾಗಿ ಗೊತ್ತಾಗುತ್ತದೆ.

ಪೂನಾ ಹತ್ತಿರದ ಒಂದು ಗ್ರಾಮದಲ್ಲಿ ಒಬ್ಬ ಮರಾಠಿ ಜಾತಿಯ ರೈತನು ತನ್ನ ಎತ್ತನ್ನು ಕೊಂದುಹಾಕಿದ ಹುಲಿಯನ್ನು ಕೊಂದುಹಾಕಬೇಕೆಂದು ಸಂಕಲ್ಪಿಸಿ ತನ್ನ ಹೊಲದ ಬೇಲಿಯ ಪೊದರಿನಲ್ಲಿ ಅಡಗಿಕೊಂಡು ನಿರೀಕ್ಷಿಸುತ್ತಿದ್ದನು. ತಂದ ಆಯುಧವಾಕಿಯಾಗಿ ಅದರ ಸಮೀಪಕ್ಕೆ ಹೋಗಿ ಮಲಗಿರುವ ಪ್ರಾಣಿಯನ್ನು ಕೊಲ್ಲುವುದು ಕ್ಷಾತ್ರಧರ್ಮವಲ್ಲವೆಂಬುದರಮೇಲೆ ಒಂದು ಕಲ್ಲನ್ನು ತೆಗೆದು ಅದರ ಮೇಲೆಸೆದು ಎಬ್ಬಿಸಿದನು. ಆ ಹುಲಿಯು ರೋಷಗೊಂಡು ಅವನ ಮೇಲೆ ಬಿದ್ದು ಕೋರೆಯಿಂದ ಬಾಗಿ ರೈತನ ತಲೆಗೆ ಅದರ ಪಂಜಾದೇಟು ಬಿದ್ದು ಕೊಂಚ ಗಾಯವಾಯಿತಾದರೂ ಅವನು ಧೈರ್ಯಗೆಡದೆ ತನ್ನ ಕೈಯಲ್ಲಿದ್ದ ಆಯುಧದಿಂದ ಅದನ್ನು ಹೊಡೆದು ಕೊಂದುಹಾಕಿದನು. ಆಸ್ಪತ್ರೆಯಲ್ಲಿ ತನ್ನ ಗಾಯಕ್ಕೆ ಚಿಕಿತ್ಸೆ ಹೊಂದುತ್ತಿರುವನು.

ಲಾಹೋರಿನಲ್ಲಿ 26 ವರ್ಷವಯಸ್ಸಿನ ಸ್ತ್ರೀಯೊಬ್ಬಳಿಗೆ ವಿವಾಹಿತಳಾಗಿ ಸುಮಾರು 9 ವರ್ಷಗಳಲ್ಲೆಲ್ಲಾ ಒಂದುಸಲ ಮಾತ್ರ ಗರ್ಭಿಣಿಯಾಗಿ ಆದೂ ಸಹ ವ್ಯರ್ಥವಾಗಿ ಹೋಯಿತು. ಮಕ್ಕಳನ್ನು ಪಡೆಯಬೇಕೆಂಬ ಕುತೂಹಲವು ಅವಳಿಗೆ ಹೆಚ್ಚಿ ಅನೇಕ ವಿಧವಾದ ಔಷಧಿ, ಮಂತ್ರ ಮತ್ತು ಮಾಟಗಳನ್ನೆಲ್ಲಾ ಮಾಡಿಸಿಕೊಂಡಳು. ಏನೂ ಪ್ರಯೋಜನವಿಲ್ಲದೆ ಹೋಯಿತು. ಕಡೆಗೆ ಯಾರೋ ದುರಾತ್ಮರ ಸೂಚನೆಯಂತೆ, ತನ್ನ ಮನೆಗೆ ಆಡಲು ಬಂದಿದ್ದ ನಾಲ್ಕುವರ್ಷದ ಹುಡುಗಿಯೊಂದನ್ನು ಚಂಡಿದೇವತೆಗೆ ಬಲಿಕೊಟ್ಟು ತಾನು ರಕ್ತದಿಂದ ಸ್ನಾನಮಾಡಿದಳು. ಈ ದುಷ್ಕೃತ್ಯವನ್ನು ಸಹಿಸಲಾರದೆ ಅವಳ ಪತಿಯು ಪೊಲೀಸಿಗೆ ಈ ವಿಚಾರವನ್ನೆಲ್ಲಾ ವಿವರವಾಗಿ ತಿಳಿಸಿದನು. ವಿಚಾರಣೆ ನಡೆದು ಜಲಂಧರದ ಸೆಷನ್ಸ್ ಜಡ್ಜಿಯವರು ಅವಳಿಗೆ ಮರಣದಂಡನೆಯನ್ನು ವಿಧಿಸಿದರು. ಆದರೆ ಲಾಹೋರ್ ಹೈಕೋರ್ಟಿನವರು ಅವಳಿಗೆ ಜೀವಾವಧಿ ಶಿಕ್ಷೆಯನ್ನು ನೇಮಿಸಿದರು.

ಅಂತ್ಯಜರು ಪೂನಾದಲ್ಲಿರುವ ಪಾರ್ವತಿದೇವಸ್ಥಾನವನ್ನು ಪ್ರವೇಶಿಸಲು ಕೆಲವು ದಿನಗಳಿಂದ ಸತ್ಯಾಗ್ರಹವನ್ನು ಆಚರಿಸುತ್ತಿರುವರಷ್ಟೆ. ಆ ವಿಚಾರವಾಗಿ ಬೊಂಬಾಯಿಯಿಂದ ದೇವಸ್ಥಾನದ ಧರ್ಮದರ್ಶಿಗಳಾದ ಸರ್ದಾರ್ ಮುಜುಂದಾರ್ ಮುಂತಾದ 6 ಜನರು ಈ ರೀತಿಯ ಹೇಳಿಕೆಯನ್ನು ಕೊಟ್ಟಿದ್ದಾರೆ— "ಪಾರ್ವತಿದೇವಸ್ಥಾನ ಪ್ರವೇಶದ ವಿಚಾರದಲ್ಲಿ ನಾವು ಈಗ ಯಾವ ವಿಧವಾದ ಬದಲಾವಣೆಯನ್ನು ಮಾಡಲಾರೆವು. ಶ್ರೀಗಳಾದ ಕೇಳ್ಕರ್, ಜಯಕರ್ ಮುಂತಾದ ಸುಧಾರಕರು ಅಂತ್ಯಜರಿಗೂ ಸಹ ಈ ದೇವಸ್ಥಾನವನ್ನು ಪ್ರವೇಶಿಸಲು ಅವಕಾಶಕೊಡಬೇಕೆಂದು ಹೇಳುತ್ತಿದ್ದಾರೆ. ಈಗಿರುವ ಸ್ಥಿತಿಯನ್ನು ಬದಲಾಯಿಸಬೇಡವೆಂದು ಸನಾತನಿಗಳು ಹೇಳುತ್ತಿದ್ದಾರೆ. ಈ ವಿಷಯದಲ್ಲಿ ಸಂಪೂರ್ಣವನ್ನೆಲ್ಲಾ ಯೋಚಿಸಿನೋಡಿ ನಾವು ಮೊದಲು ಹೇಳಿದಂತೆ ಅಸ್ಪೃಶ್ಯರನ್ನು ನಗರ ದೇವಸ್ಥಾನಕ್ಕೆ ಸೇರಿಸಕೂಡದೆಂದು ತೀರ್ಮಾನಿಸಿದ್ದೇವೆ." ಈ ವಿಚಾರವಾಗಿ ಸತ್ಯಾಗ್ರಹದ ಮುಖಂಡರು ಯಾವ ಹೇಳಿಕೆಯನ್ನೂ ಕೊಟ್ಟಿಲ್ಲ.

1929 ನೇ ಅಕ್ಟೋಬರ್ ತಾ|| 10 ನೆಯ ಗುರುವಾರ ರಾಜಧಾನಿಯಲ್ಲಿ ಜರುಗಿದ ಮೈಸೂರು ಪ್ರಥಮ ವ್ಯಾಪಾರೋದ್ಯೋಗಿಗಳ ಮಹಾಸಭಾಧ್ಯಕ್ಷರಾದ ಮ|| ರಾಮಸ್ವಾಮಿ ಮೊದಲಿಯಾರ್‌ರವರು ಮಾಡಿದ ಭಾಷಣ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಮಹೋಪಕಾರಿ ಪ್ರಭು.

ಚರಿತ್ರಪ್ರಸಿದ್ಧರಾದ ಧರ್ಮಪ್ರಭುಗಳ ಸ್ಮರಣೆಯನ್ನುಂಟುಮಾಡುವಂತಹ ಗುಣಸಂಪನ್ನರಾದ ರಾಜರ್ಷಿಗಳನ್ನು ಮಹಾಪ್ರಭುಗಳನ್ನಾಗಿ ಪಡೆದು ಮೈಸೂರಿನ ಅಸಾಧಾರಣವಾದ ಭಾಗ್ಯವಾಗಿರುತ್ತದೆ. ನಿಮ್ಮ ಮಹಾಪ್ರಭುಗಳಾದ ಶ್ರೀ ಕೃಷ್ಣರಾಜೇಂದ್ರ ಒಡೆಯರವರು ಮಹಾ ಧರ್ಮಪ್ರಭುಗಳೆಂಬ ಹೆಸರು ಎಲ್ಲೆಲ್ಲಿಯೂ ಮಾರ್ಮಲೆಯುವಂತೆ ಮಾಡಿರುವರಲ್ಲದೆ ನಾವು ಸಂಸ್ಥಾನದ ಪ್ರಥಮ ಸೇವಕನೆಂದು ಪ್ರಶಂಸಾಪೂರ್ವಕವಾಗಿ ತಿಳಿದು ನಿಜವಾದ ಜನಶಕ್ತಿಯಿಂದಲೂ, ಸ್ವಾತಂತ್ರ್ಯದಿಂದಲೂ ತಮ್ಮ ಪ್ರಜಾಶಕ್ತಿಯಿಂದಲೂ, ಸ್ವಯಂಶಕ್ತಿಯಿಂದಲೂ, ಉದಾರಬುದ್ಧಿಯಿಂದಲೂ ರಾಜ್ಯಭಾರವನ್ನು ಮಾಡುತ್ತ ಪ್ರಜಾಪ್ರೇಮವನ್ನು ಸಂಪಾದಿಸಿ ಮಹಾ ಧರ್ಮಪ್ರಭುವೆಂಬ ಹೆಸರು ಎಂದಿಗೂ ನಿಲ್ಲುವಂತೆ ಮಾಡಿರುತ್ತಾರೆ. ಭರತಖಂಡದ ಸಮಸ್ತ ಭಾಗಗಳಲ್ಲೂ ಸಂಚರಿಸಿ ಎಲ್ಲಾ ದೇಶೀಯ ಸಂಸ್ಥಾನಗಳನ್ನೂ, ಅವುಗಳ ರಾಜಧಾನಿಯನ್ನೂ, ರಾಜರುಗಳ ಆಡಳಿತವನ್ನೂ, ಅವರ ಕೀರ್ತಿ ಸ್ಮಾರಕಗಳನ್ನೂ ನೋಡಿಕೊಂಡು ಮೈಸೂರಿಗೆ ನಮ್ಮ ರಾಜರ ಬಳಿಗೆ ಬಂದು ಅದರ ಪಟ್ಟಣಗಳನ್ನೂ ಹಳ್ಳಿಗಳನ್ನೂ ನೋಡುವವರಿಗೆ ದೇಶೀಯ ಸಂಸ್ಥಾನಗಳೆಂಬ ಮಂಡಲದಲ್ಲಿ ಮೈಸೂರು ಪ್ರದೇಶವನ್ನು ಕಂಡೊಡನೆ ಆ ದೇಶದ ಹಳ್ಳಿಗಳ ಹೀನಸ್ಥಿತಿಯನ್ನು ನೋಡಿದ್ದ ಬಳಿಕ ಆಗುವ ಆನಂದಭಾವನೆಯು ನಿರಾಕರಿಸಲಾಗದು. ಮೈಸೂರು ದೇಶವು ಮಾದರಿ ಸಂಸ್ಥಾನವೆಂದು ಭಾವಿಸಲ್ಪಟ್ಟಿರುವುದು ಯುಕ್ತವಾಗಿರುತ್ತದೆ ಮತ್ತು ಅದರ ಪ್ರಭುಗಳ ಕೀರ್ತಿಯೂ, ಪ್ರಜೆಗಳ ಸ್ಥಿರಬುದ್ಧಿಯೂ ಪ್ರಪಂಚದ ಎಲ್ಲಾ ಜನಾಂಗ ದೇಶಗಳಲ್ಲೂ ಇತರ ಖಂಡಗಳಲ್ಲೂ ಕೇಂದ್ರಸ್ಥಾನವನ್ನು ಹೊಂದಿರುತ್ತವೆ.

ಸಿಂಹಾವಲೋಕನ

ಈಗ ಇಂಗ್ಲೆಂಡಿನಲ್ಲಿರುವ ಆ ಪ್ರಜಾ ಶ್ರೇಷ್ಠ ಮಹಾತ್ಮ ಗಾಂಧಿಯವರು ಮೊದಲು ಭಾಷ್ಯಭಾರವನ್ನು ನೋಡಿ ಸಂತುಷ್ಟರಾಗಿ "ರಾಮರಾಜ್ಯ" ಎಂಬ ನಾಮಧೇಯವನ್ನು ಮಾಡಿದ ಮೇಲೆ ಈಗಿನ ನಮ್ಮ ಶ್ರೀಮನ್ಮಹಾರಾಜರವರ ವೈಶಿಷ್ಟ್ಯವನ್ನು ನಮ್ಮ ಸಂಸ್ಥಾನದ ಕೀರ್ತಿಯನ್ನು ನೋಡಿ ಹೊಗಳಿದರು. ಕೆಲ ಪತ್ರಿಕೆಗಳು ಇದಕ್ಕೆ ವಿರೋಧವಾಗಿ ಹಲವಾರು ಆಕ್ಷೇಪಣೆಗಳನ್ನು ನಮ್ಮ ಸಂಸ್ಥಾನದ ಮತ್ತು ಅದರ ಕಾರ್ಯಭಾಗದ ವಿಚಾರವಾಗಿ ಆಕ್ಷೇಪಿಸಿ ಬರೆಯುತ್ತಿರುವುವು. ಆದ ಸಣ್ಣಪುಟ್ಟ ಸಂಗತಿಗಳನ್ನು ಕೆಲ ಪತ್ರಿಕೆಗಳಿಗೆ ಲಂಚವನ್ನು ಕೊಟ್ಟು ಪ್ರಕಟಿಸಿ ನಮ್ಮ ಸಂಸ್ಥಾನದ ಕೀರ್ತಿಯನ್ನು ಕೆಡಿಸಲು ಪ್ರಯತ್ನಿಸುತ್ತಿರುವುದು ಬಹಳ ವ್ಯಸನಕರವಾಗಿದೆ. ಕೆಲ ಮನೋಕರ್ಷಕವಾದ ಒಂದು ವರ್ಷಕಾಲದಲ್ಲಿ ಸಂಸ್ಥಾನದ ರಾಜಕೀಯ ಮತ್ತು ಸಾಮಾಜಿಕ ಆರ್ಥಿಕ ಕಲಾ ಪ್ರಗತಿ ವಿಚಾರವಾಗಿ ಎಂತಹ ದುರಭಿಪ್ರಾಯವನ್ನು ಹುಟ್ಟಿಸಿರುತ್ತದೆಂಬುದನ್ನು ನೋಡಿದರೆ ಯಾರಿಗೂ ಹೃದಯಸಂಚಲನವಾಗದಿರದು. ಮಿತ್ರರೇ, ಯಾರು ಸ್ವದೇಶದಲ್ಲಿ ಭಾಗವಹಿಸುವಂತಿರಲಿಲ್ಲವೋ ಯಾರು ಮಾತೃಭೂಮಿ ರಕ್ಷಣೆಗಾಗಿ ನಿಲ್ಲುವುದಿಲ್ಲವೋ ಅಂತಹವರನ್ನು ಸ್ವದೇಶಾಭಿಮಾನಿಯೆಂದು ಹೇಳಲಾಗದು. ಭಾರತದಲ್ಲಿ ಮೈಸೂರು ಕತ್ತಲೆಕೋಣೆಯೊಳಗಿನ ಕತ್ತಲೆಯಾಗಿರುವುದು ಅಂದರೆ ಅತ್ಯಂತ ಕತ್ತಲೆಯಾಗಿರುವುದೆಂದೂ ಸ್ವತಂತ್ರಮನುಷ್ಯನ ವಾಸಕ್ಕೆ ಆರೋಗ್ಯವಾದುದೆಂದೂ ಅಲ್ಲದ ದೊಡ್ಡ ತೆಗೆದುಕೊಂಡು ಲೇಖನಗಳನ್ನು ಬರೆಯುವಂತಹ ದೇಶ್ರೋಹಿಗಳು ಮೈಸೂರು ಪ್ರಜೆಗಳ ಪ್ರತಿನಿಧಿಗಳೆಂದು ಹೇಳುವುದಾದರೆ, ಒಬ್ಬ ಭೂಮಿಯ ವಿಚಾರದಲ್ಲಿ ನಾವು ಗರ್ವಪಡಬೇಕಾದುದನ್ನು ಅದಕ್ಕೆ ಹೊಂದಿಕೊಳ್ಳಲಾರದನ್ನು ಮೈಸೂರು ಪಟ್ಟಣಗಳ ಅತ್ಯಂತ ಸತ್ವಹೀನವಾಗಿದೆಯೆಂದು ಯಾರೇನಾದರೂ ಹೇಳುವರು. ಮೈಸೂರಿನವರನ್ನು ಇದು ಅನ್ಯಾಯವಾಗಿ ಪರೀಕ್ಷಿಸುವುದಕ್ಕಿಂತ ಚೆನ್ನಾಗಿ ನಾನು ಬಲ್ಲೆ. ಕೆಲವು ಅಧಿಕಾರಿಗಳ ಮುಂದೆ ಒಳ್ಳೆ ನಯನ್ಯಾಯದಿಂದಲೂ, ಮುಗುಳುನಗೆಯಿಂದಲೂ ಆಡುವಂತೆ ನಟಿಸುತ್ತ ಒಳಗೊಳಗೇ ಅವರುಗಳಿಗೆ ವಿರೋಧವಾಗಿ ಸುಳ್ಳುಸಂಗತಿಗಳನ್ನು ಪತ್ರಿಕೆಗಳಲ್ಲಿ ತಮ್ಮ ಹೆಸರನ್ನು ಕೊಡದೆ ಲೇಖನಗಳನ್ನು ಬರೆದು ಆಂದೋಳನಮಾಡುತ್ತಿರುವುದನ್ನು ಬೈಲಿಗೆಳೆಯಬೇಕೆಂದು ಈ ಮಹಾಸಭೆಯಲ್ಲಿ ವಿಶೇಷವಾಗಿ ನೆರೆದಿರುವ ನನ್ನ ಮಿತ್ರರಾದ ನಿಮ್ಮಗಳನ್ನು ಎಚ್ಚರಿಸುತ್ತೇನೆ.

ನಮ್ಮ ಸಂಕಷ್ಟಗಳು

ಈ ದೇಶದಲ್ಲಿ ಅಭಿವೃದ್ಧಿಗೆ ಅವಕಾಶವಿಲ್ಲವೆಂದೂ, ಪ್ರಭುತ್ವದವರು ಪರಿಹರಿಸತಕ್ಕ ಕುಂದುಕೊರತೆಗಳೇನೂ ಇಲ್ಲವೆಂದೂ, ಮಹಮ್ಮದೀಯರಾದ ಪ್ರಭುಗಳನ್ನು ಪ್ರಾರ್ಥಿಸಿಕೊಳ್ಳಬೇಕಾದುದೇನೂ ಇಲ್ಲವೆಂದೂ ನಾನು ಸೂಚಿಸುತ್ತೇನೆಂದು ಯಾರೂ ಭಾವಿಸಬಾರದು. ವಾಸ್ತವ್ಯವಾಗಿ ಅಂತಹ ಪ್ರಮೇಯವೇನೂ ಇಲ್ಲದಿದ್ದ ಪಕ್ಷದಲ್ಲಿ ಈ ಮಹಾಸಭೆಯನ್ನು ನಡೆಯಿಸಬೇಕಾದ ಆವಶ್ಯಕತೆಯೇ ಇರುತ್ತಿರಲಿಲ್ಲ. ಇನ್ನೂ ಪರಿಷ್ಕಾರವಾಗದಿರುವ ಕೆಲಸಮಸ್ಯೆಗಳ ವಿಚಾರವಾಗಿ ನಾನು ಪ್ರಸ್ತಾಪಿಸುತ್ತೇನೆ ಮತ್ತು ಈ ಮಹಾಸಭಾ ಪ್ರಾರ್ಥನೆಯು ಉಚಿತರೀತಿಯಲ್ಲಿ ಪರಿಗಣಿಸಲ್ಪಡುವುದೆಂದು ನಂಬುತ್ತೇನೆ. ಸುಧಾರಣೆಗಳಿಗಾಗಿಯೂ, ಕುಂದುಕೊರತೆಗಳ ನಿವಾರಣೆಗಾಗಿಯೂ, ಪ್ರಜೆಗಳ ಸ್ಥಾನ ನಿರ್ದೇಶಕ್ಕಾಗಿಯೂ ಚಳುವಳಿಯನ್ನು ನಡೆಸುವುದಕ್ಕೂ, ವ್ಯಕ್ತಿಗಳನ್ನೂ ಸಂಸ್ಥೆಗಳನ್ನೂ ದೂಷಿಸುವುದು, ದೊಡ್ಡ ಅಧಿಕಾರಿಗಳಮೇಲೆ ಹಗೆಯನ್ನು ತೀರಿಸಿಕೊಳ್ಳಲು ಕಾಲಕಾಲವನ್ನರಿತು ಮತ್ತು ತಕ್ಕ ಕಾರಣವಿಲ್ಲದ ಅಭಿಯೋಗವನ್ನು ಹೊರಿಸುವುದು, ಸಂಸ್ಥಾನದ ಕೀರ್ತಿಗೆ ಕುಂದಕವನ್ನುಂಟುಮಾಡಲು ಹೊರಗಡೆಯ ಪತ್ರಿಕೆಗಳಲ್ಲಿ ಸುಳ್ಳು ಸಂಗತಿಗಳನ್ನು ಮನಃಪೂರ್ವಕವಾಗಿ ಪ್ರಸಿದ್ಧಿಪಡಿಸುವುದು, ದುಷ್ಟಕಾರ್ಯಗಳಿಗಾಗಿ ಸಂಚನ್ನು ನಡೆಸುವುದು ಈ ಕಾರ್ಯಗಳನ್ನು ಮಾಡುವುದಕ್ಕೂ ಪರಸ್ಪರ ಸಂಬಂಧವೇ ಇಲ್ಲ. ಇಂತಹ ದುಷ್ಟಚಳುವಳಿಗಳನ್ನು ಈ ಮಹಾಸಭೆಯು ಬಲವತ್ತರವಾಗಿ ಖಂಡಿಸತಕ್ಕದ್ದೆಂದು ಉತ್ಸಾಹಪೂರ್ವಕವಾಗಿ ನಾನು ಅಪೇಕ್ಷಿಸುತ್ತೇನೆ.

ನಮ್ಮ ಗುರಿ

ಮೈಸೂರುಸಂಸ್ಥಾನದ ಪ್ರಜೆಗಳ ಗುರಿಯು ಏನಾಗಿರಬೇಕೆಂದೂ, ಅಂತಹ ಗುರಿಯನ್ನು ಕುರಿತು ಸಾಧಿಸಲು ನಾನು ಸಿದ್ಧನಾಗಿರುವೆನೇ ಎಂದೂ ಕೆಲರು ಪ್ರಶ್ನಿಸಬಹುದು. ಈ ಪ್ರಶ್ನೆಗೆ ಉತ್ತರವನ್ನು ಹೇಳಲು ನನಗೆ ದಿಕ್ಕುತೋಚದೆ ಅವರು ಬಹು ಬಾಹಾಸದಿಂದಿದ್ದಿರುವ ಬೋನಿಗೆ ನಾನು ಬೀಳುತ್ತೇನೆಂದು ಆ ಪ್ರಶ್ನೆಗಾರರು ತಿಳಿದಿದ್ದ ಪಕ್ಷದಲ್ಲಿ ಅದು ಅವರ ದೊಡ್ಡ ತಪ್ಪೇ ಸರಿ. ಈ ಪ್ರಶ್ನೆಗುತ್ತರವನ್ನು ಹೇಳಲು ಯಾರೂ ಬೇಡವೆನ್ನುವ ಶಕ್ತಿಸಬೇಕಾದದ್ದಿಲ್ಲ. ಇತರ ಜನರು ತಮ್ಮ ದೇಶಗಳಲ್ಲಿ ಹೊಂದಲು ಅಪೇಕ್ಷಿಸುವಂತಹ ಸ್ಥಾನವನ್ನು ಶ್ರೀಮನ್ಮಹಾರಾಜರವರ ಪ್ರಾತಃಸ್ಮರಣೀಯವಾದ ರಾಜ್ಯಭಾರದಲ್ಲಿ ಹೊಂದಬೇಕೆಂದು ಮೈಸೂರು ದೇಶೀಯನು ಅಪೇಕ್ಷಿಸುತ್ತಾನೆ ಮತ್ತು ಈ ಅಪೇಕ್ಷೆಯೇ ಅವನ ಗುರಿಯಾಗಿದೆ. ಈ ಗುರಿಯನ್ನು ಸಾಧಿಸುವ ವಿಚಾರದಲ್ಲಿ ಭಿನ್ನಾಭಿಪ್ರಾಯವು ಉಂಟಾಗುವುದಿಲ್ಲ, ಆದರೆ ಅದರ ಸಾಧನಕ್ರಮವು ಯಾವುದಿರಬೇಕು ಕೂಡಲೆ ಕಾರ್ಯಭಾಗವನ್ನು ನಡಿಸಬೇಕೆಂದು ವಾದಿಸುವ ವಿಚಾರದಲ್ಲಿ ಭೇದಗಳುಂಟಾಗುತ್ತವೆ. ಮೈಸೂರು ಸೀಮೆಯು ಅದರ ಬ್ರಿಟಿಷ್ ಇಂಡಿಯಾದ ಬ್ರಾಹ್ಮಣೇತರ ಪಕ್ಷದವರು ಸ್ಥಿರಬುದ್ಧಿಯುಳ್ಳವರೆಂದೂ, ಕಾಲಪರಿಮಿತಿಯ ಅನುಭವವುಳ್ಳವರೆಂದೂ, ಮುಖ್ಯವಾದ ಕಾರ್ಯವಿಲ್ಲದೆ ನಿಷ್ಪ್ರಯೋಜನವಾದುದನ್ನು ಅಂಗೀಕರಿಸುವವರಲ್ಲವೆಂದೂ ಪ್ರಖ್ಯಾತಿಗೊಂಡಿದ್ದಾರೆ. "ದೂರದ ದಾರಿ ಅವಶ್ಯವಿಲ್ಲದುದರಿಂದ ಒಂದು ಹೆಜ್ಜೆಯನ್ನು ಮುಂದಿಡುವ ನಾವು" ಮೊದಲನೆ ಯುದ್ಧದಲ್ಲಿ ಆಸಕ್ತರಾಗಿರುವುದೆಲ್ಲವೂ. ಪಾರ್ಲಿಮೆಂಟಿನಲ್ಲಿ ಆಸಕ್ತರಾಗಿರುವ ಬ್ರಾಹ್ಮಣೇತರರ ಗುರಿಯಲ್ಲವೆ? ಪ್ರಥಮತಃ ನಾವು ಕೈಕೊಳ್ಳಬೇಕಾದ ಕಾರ್ಯದಲ್ಲಿ ತಕ್ಕಷ್ಟು ಫಲಪ್ರದವಾಗಿರುವುದನ್ನು ನಾವು ಅನುಭವಿಸಬೇಕು ಮತ್ತು ಹೀಗೆ ಮಾಡುವುದರಿಂದ ಅನುಭವವನ್ನು ಹೊಂದಿ ಅದನ್ನು ಕಾರ್ಯರೂಪವಾಗಿ ಆಚರಿಸಲು ಆರಂಭಿಸುವವರಾಗುತ್ತೇವೆ.

ಹಿಂದು ಮಹಮ್ಮದೀಯರ ಸಂಬಂಧ

ಎಲ್ಲಾ ಜಾತಿಯ ಜನರೂ ಭ್ರಾತೃಭಾವದಿಂದ ಕೂಡಿರುವ ಈ ಮಹಾಸಭೆಯು ಮಹತ್ವವನ್ನು ಕುರಿತು ಪರ್ಯಾಲೋಚಿಸುವಾಗ್ಗೆ ಸಂಸ್ಥಾನದ ನಾನಾ ಭಾಗಗಳಲ್ಲಿ ಕೆಲ ತಿಂಗಳುಗಳೊಳಗೆ ಸಂಭವಿಸಿದ ಜಾತಿವೈಷಮ್ಯದ ಗಲಭೆಗಳನ್ನು ನೆನಸಿಕೊಂಡರೆ ಮನಸ್ಸಿಗೆ ಅತ್ಯಂತ ದುಃಖವಾಗುತ್ತದೆ. ಈ ಗಲಭೆಗಳು ಎರಡು ಜನಾಂಗಗಳಲ್ಲಿ ಅರು ಉತ್ಪನ್ನವಾದಿಗಳೆಂದು ಪರಿಶೀಲಿಸುವುದು ಕಷ್ಟಕರವು, ಆದಾಗ್ಯೂ ಆಗಿರುವುದು ಅವಶ್ಯ. ಬಹಳ ಪರಸ್ಪರ ಶಾಂತಿ ಸಹಾಯಭಾವನೆ ಸ್ನೇಹವಿಶ್ವಾಸಗಳನ್ನು ಹೆಚ್ಚಿಸಲು ತಕ್ಕ ಮಾರ್ಗಗಳನ್ನು ಕಂಡುಹಿಡಿಯುವುದು ಉತ್ತಮ. ಬ್ರಿಟಿಷ್ ಇಂಡಿಯಾವನ್ನು ಹಿಡಿದುಕೊಳ್ಳುತ್ತಿರುವ ಜಾತಿವೈಷಮ್ಯಗಳು ಭಾರತೀಯರ ಇಂಡಿಯಾದ (ದೇಶೀಯ ಸಂಸ್ಥಾನಗಳ) ಲ್ಲಿ ಬಹಳ ವಿರಳವಾಗಿರುವುದನ್ನು ನೋಡಿ ಬ್ರಿಟಿಷ್ ಇಂಡಿಯಾವಾಸಿಗಳಾದ ನಾವು ಹೆಮ್ಮೆಗೊಂಡಿರುತ್ತೇವೆ. ಇಂತಹ ವಿಷ್ಟಾಸಗಳು ಹತ್ತಿಗಳನ್ನು ಅಳಿಸಿ ಪ್ರಭುತ್ವದವರು ಪ್ರಾಂತದಲ್ಲಿ ಉದ್ಭವಿಸಿ ಸಿಡಿಸಿ ನೊಂದಿರುವ ಸಾಧಿಸಲ್ಪಡದೆ ಇದ್ದರೂ ಅನೇಕ ವೇಳೆ ನಾವು ಸಂಕೋಚಪಡದೆ ತೋರಿಸಿಕೊಟ್ಟಿದ್ದೇವೆ. ಇಂತಹ ಜಾತಿದ್ವೇಷವನ್ನು ಹುಟ್ಟಿಸಿ ಮೈಸೂರು ಸಂಸ್ಥಾನವನ್ನು ಮತ್ತು ಅದರ ಮೊತ್ತಪ್ರಭುಗಳ ಕೀರ್ತಿಗೆ ಕಳಂಕವನ್ನುಂಟುಮಾಡುವುದು ಅತ್ಯಂತ

ದನ್ನು ಳಿದರೆ ಉಭಯ ಪಂಗಡದವರು ಮನ್ನೋಚನಾಥ್ ಸಂಪುಟಿಸಿದ ಮನೋವೇಭವವಿಚಾರವನ್ನು ಸಂಪೂರ್ಣವಾಗಿ ನಡಸುವುದು, ಆಧಾಸ್ತ್ರ ನ ಪ್ರಾರ್ಥನೆಯವರಿಂದ ಪರಿಗಣಿಸಬೇಕೆಂದೂ ಈ ವಿಷಯ ದಲ್ಲಿ ಜನತೆಯ ನೇತಗಳು ಸಾಮೆಲ್ಲರೂ ಸೇರಿರುವ ಈ ಮಹಾಸಭೆಯಲ್ಲಿ ಹಿಂದು ನಾಯಕರು ಮುಖಂಡರುಗಳು ಉಭಯ ಪಂಗಡಗಳ ಇರತಕ್ಕ ಮನಸ್ತಾಪಗಳನ್ನು ಹೋಗಲಾಡಿಸಿ ಪರಸ್ಪರ ಶಾಂತಿಸಮಾಧಾನಗಳಿಂದಿರಿಸಲು ತಮ್ಮ ಕೈಲಾದ ಸಹಾಯವನ್ನು ಪಡುತ್ತೇವೆಂದೂ ಹಾಗು ಸಮಾಧಾನವಾಗಿ ಬೇಕೆಂದು ಪ್ರಾರ್ಥಿಸುತ್ತೇನೆ. ಅಲ್ಲದೆ ಈ ಪವಿತ್ರ ಕಾರ್ಯದಲ್ಲಿ ಸರ್ಕಾರ ಅಧಿಕಾರಿಗಳು ಸಹಾಯ ಮಾಡುವರೆಂದು ನಂಬುತ್ತೇನೆ ಸರ್ಕಾರದವರು ನ್ಯಾಯಬದ್ಧರಾಗಿ ಉಭಯರನ್ನೂ ಸಮಾನ ದೃಷ್ಟಿಯಿಂದ ನೋಡುತ್ತಿದ್ದರೆ ಹೊಂದಾಣಿಕೆ ಸೌಹಾರ್ದವನ್ನು ಹುಟ್ಟಿಸಲು ಸಾಧ್ಯವಲ್ಲವೆಂದೂ, ಇದರಿಂದ ಪರಸ್ಪರ ದ್ವೇಷಾಸೂಯೆಗಳು ಮತ್ತಷ್ಟು ಪ್ರಬಲಿಸಿ ಅನರ್ಥಕ್ಕೆ ಅವಕಾಶವಾಗುವುದೆಂಬುದು ಎಲ್ಲರಿಗೂ ಅನುಭವಸಿದ್ಧವಾಗಿರುತ್ತದೆ ಆದರೆ ಪ್ರಭುತ್ವದವರು ಯಾವಾಗಲೂ ಪಕ್ಷಪಾತಿಸುವವರಾಗಿರದೆ ನ್ಯಾಯಮಾರ್ಗವಲಂಬಿಗಳಾಗಿಯೂ ಉದಾರ ಮನಸ್ಕರಾಗಿಯೂ ಇರುತ್ತಾರೆ ಹಿಂದೆ ಹಿಂದಿನ ದುರ್ಘಟನೆಗಳನ್ನು ಉಳಿದ ಸಮಾಜದವರು ಮರೆತು ಏಕಭಾವದಿಂದಿರುವಂತೆ ಮಾಡುವ ಪ್ರಯತ್ನದಲ್ಲಿ ಪ್ರಭುತ್ವದವರು ಉದಾರಭಾವನನ್ನು ತೋರಿಸುವುದಕ್ಕಿಂತ ಉತ್ತಮವಾದ ಅವಕಾಶವು ಬೇರೊಂದಿಲ್ಲ. ಉಭಯ ಸಮಾಜದ ಮುಖಂಡರುಗಳಿಂದ ಭರವಸೆಯು ಕೊಡಲ್ಪಟ್ಟಲ್ಲಿ ಪ್ರಭುತ್ವದವರು ಮಾನವ ಪ್ರಾಣವೋಲಿನ ದಯೆಯಿಂದ ಶ್ರದ್ಧೆ ವಹಿಸಿ ಈ ಉಭಯ ಸಮಾಜದ ಪರಸ್ಪರ ಸೌಖ್ಯಸಾಧನ ಮಾರ್ಗದಲ್ಲಿ ಸಹಾಯ್ಯಕರಿಸುವರೆಂದು ನಿರೀಕ್ಷಿಸುತ್ತೇನೆ

ಉಪಸಂಹಾರ

ನಮ್ಮ ರಾಜಕೀಯ ಸಾಮಾಜಿಕ ವಿಚಾರವನ್ನ ಸವಿಸ್ತಾರವಾಗಿ ಬಲ್ಲ ಅಸ್ಪೃಶ್ಯೀಯನಾದ ನನಗೆ ತಿಳಿದಮಟ್ಟಿಗೆ ನಿಮ್ಮ ಕೆಲ ಪ್ರಬಲ ಸಮಸ್ಯೆಗಳನ್ನು ನಿಮ್ಮಲ್ಲಿ ನಿವೇದಿಸಿರುತ್ತೇನಲ್ಲದೆ ಅವುಗಳನ್ನು ಬಗೆಹರಿಸಲು ಈ ಸಭೆಯಲ್ಲಿ ನೆರೆದಿರುವ ಕೆಲ ಪ್ರೇತ್ಯರ ಊಟಿಗೆ ಸಹ ನಿಲುಕದಂತಹ ಮಾರ್ಗಗಳನ್ನು ಸೂಚಿಸಿರುತ್ತೇನೆ ನಮ್ಮ ಉದ್ದೇಶಸಾಧನಕ್ಕೆ ಅಡ್ಡವಾಗಿರುವ ಕೆಲ ತೊಂದರೆಗಳನ್ನು ತ್ವರೆಯಿಂದ ನಿವಾರಿಸುವುದರಲ್ಲಾಗಲಿ ಇದು ಸಾಧ್ಯವಲ್ಲವೆಂದು ಯಾವಾಗಲೂ ನಿರಾಶರಾಗಿರುವುದರಲ್ಲಾಗಲಿ ನನಗೆ ನಂಬಿಕೆಯಿಲ್ಲವು ಇಂದಿನ ಜನರ ಮನೋಭಾವವು ಎತ್ತ ನಡೆಗೆಳೆದರೆ ಅತ್ತ ಕಡೆಗೆ ಸುಲಭವಾಗಿ ತಿರುಗ ವ ಸ್ಥಿತಿಯಲ್ಲಿರುವಂತೆ ತೋರುತ್ತದೆ ಅಲ್ಲದೆ ಬಹು ಸರಾಗವಾಗಿ ಅಸ್ವಾದಿ ವೈದ್ಯರ ಔಷಧಿಯನ್ನು ಅಜ್ಞಾನರು ಬಹು ಸುಲಭವಾಗಿ ನಂಬುವಂತೆ ಒಂದುಬಗೆಯ ರಾಜಕೀಯ ವಿಚಾರಪರರ ಮತವನ್ನ ನಂಬುವುದು ಹೆಚ್ಚಾಗುತಿದೆ ಸ್ವರಾಜ್ಯ ವಿಚಾರಶೀಲರು ಆದ ನೀತಿಯ ಅನುಸರಣೆಯು ಈಗ ಅಗತ್ಯವಾಗಿದೆ ಹಿಂಜರಿಯದೆಯೂ ಬೆದರದೆಯೂ ಕೆಲಸಮಾಡುವ ವಿಧಾನವನ್ನು ಅನುಸರಿಸಬೇಕಾಗಿದೆ ಅನೇಕವೇಳೆ ದುರ್ದೈವವಶಾತ್ ನಮ್ಮಲ್ಲಿ ಅನೇಕರು ನಿರರ್ಥಕವಾದ ಕಾರ್ಯಸಾಧನೆಯಲ್ಲಿ ತಮ್ಮ ಕಾಲವನ್ನೂ ಶಕ್ತಿಯನ್ನೂ ಬುದ್ಧಿಯನ್ನೂ ವ್ಯಯಮಾಡುತ್ತಿದ್ದಾರೆ ಮತ್ತು ಕೆಲ ರಾಜಕೀಯ ಕಾರ್ಯಕರ್ತರು ಬಹಳ ನಿರಾಯಾಸದಿಂದ ಪ್ರಸಿದ್ಧಿಗೆ ಬರಬೇಕೆಂಬ ಆಕಾಂಕ್ಷೆಯಿಂದ ದೇಶಾಭ್ಯುದಯ ಸಾಧಕವಲ್ಲದ ಕೋರಿ ಅಡಗುವ ವತ್ತು ಉದ್ರೇಕಗೊಳಿಸುವ ಕಾರ್ಯಸಕ್ತರಾಗುವಂತೆ ಪ್ರೋತ್ಸಾಹಗೊಳಿಸುತ್ತಿರುವರು ಜನರು ನ್ಯಾಯಮಾರ್ಗವನ್ನು ಬಿಟ್ಟು ಕುಮಾರ್ಗಕ್ಕೆ ಬೀಳದಂತೆ ಎಚ್ಚರಿಕೆಯಿಂದ ನಾವು ನೋಡಿಕೊಳ್ಳಬೇಕಾಗಿದೆ ಮತ್ತು ರಾಜಕೀಯವಿಚಾರಗಳಲ್ಲಿ ಇಂತಹ ಮಾಯಾಜಾಲದ ಕೃತ್ಯಗಳನ್ನು ಅಡಗಿಸಲು ಬ್ರಾಹ್ಮಣೇತರರ ಚಳವಳಿಯು ಪ್ರಯತ್ನಪಟ್ಟರುವುದರಿಂದಲೇ ಅದರ ಉದ್ದೇಶವು ವಿಪರ್ಯಾಸಗೊಳಿಸಲ್ಪಡುತ್ತಿರುವುದು ಆದರೆ ಕಟ್ಟಕಡೆಯಲ್ಲಿ ಜನರು ಈ ರಾಜಕೀಯಾಭಿಮಾನಿಗಳಲ್ಲಿ ಹುರುಳಿಲ್ಲದಿರುವುದನ್ನು ತಿಳಿದು ಬೇಸರಗೊಂಡು ತಮ್ಮ ಈಗಿನ ಪರಿಸ್ಥಿತಿಯಿಂದ ಉತ್ತಮಗೊಳ್ಳುವುದರ ಬದಲು ಅಧೋಗತಿಗಿಳಿಯುತ್ತಿರುವುದನ್ನ ಅರಿತುಕೊಂಡು ಆತ್ಮಸಕ್ತಿಯಿಂದಲೂ, ಸ್ಥಿರಬುದ್ಧಿಯಿಂದಲೂ ಕೆಲಸಮಾಡುವುದನ್ನು ಮುಖ್ಯಾಧಾರವಾಗಿಟ್ಟು ಕೊಂಡು ಕೈಕೊಳ್ಳಲ್ಪಟ್ಟಿರುವ ನಮ್ಮ ಪ್ರಬಾಧಿಪತ್ಯಸಾಧನ ಪ್ರಯತ್ನಗಳಲ್ಲಿ ವಿಶ್ವಾಸವುಳ್ಳವರಾಗುವುದರಲ್ಲಿ ಸಂಶಯವಿಲ್ಲ

ವಿಜ್ಞಾಪನೆ

ಈ ಮಹಾಸಭೆಯಲ್ಲಿ ನೆರೆದಿರುವ ತರುಣ ಮಿತ್ರರುಗಳಿಗೆ ನನ್ನ ಕಡೆಯ ವಿಜ್ಞಾಪನೆಯೇನೆಂದರೆ—ತರುಣರು ಉತ್ಸಾಹಶೀಲರೆಂದೂ ಕಪಟವಿಲ್ಲದವರೆಂದೂ, ಮಧ್ಯಸ್ಥಿಕೆಯ ವಿಚಾರದಲ್ಲಿ ಸಂಶಯಗ್ರಸ್ತರೆಂದೂ ಉದ್ದಿಷ್ಟಕಾರ್ಯಸಾಧನವನ್ನು ಮಧ್ಯದಲ್ಲಿ ಬಿಡಲಿಷ್ಟಪಡತಕ್ಕವರಲ್ಲವೆಂದೂ ನಾನು ಬಲ್ಲೆನು ಬ್ರಾಹ್ಮಣೇತರ ಪ್ರಯತ್ನವು ಅದರ ವಿರೋಧಿಗಳು ಸಾಧಿಸುವಂತೆ ಯಾವುದಾದರೊಂದು ನಿರ್ದಿಷ್ಟ ಜಾತಿಯನ್ನು ದೂಷಿಸುವುದಕ್ಕಾಗಿ ಹುಟ್ಟಿದ್ದಲ್ಲ ಸರ್ಕಾರಿಯ ಉದ್ಯೋಗ ದೊರೆಯುತ್ತದೆಂಬ ಆಸೆಯಿಂದ ಜೀವಿಸಿರುವುದಾದರೆ ಅದರ ಉದ್ದೇಶವು ಈಗಿನವರ ವಿಚಾರಗಳಿಗನುಗುಣವಾಗಿಲ್ಲದಿದ್ದರೆ ಅದು ತರುಣರಿಗೆ ಮಾಡಿಕೊಳ್ಳುವ ಮರೆಯಲ್ಲೂ ನಿರರ್ಥಕವಾಗುವುದು ಆದರೆ ನಾವು ತಿಳಿದು ನೋಡಿರುವ ಮಟ್ಟಿಗೆ ಬ್ರಾಹ್ಮಣೇತರರ ಪ್ರಯತ್ನವು ಆರೀತಿಯಾಗಿಲ್ಲವು. ಸ್ಥೂಲದಲ್ಲೂ ವಚನದಲ್ಲೂ ಬ್ರಾಹ್ಮಣೇತರರ ಉದ್ದೇಶವು ತರುಣರ ಉದ್ದೇಶವೂ ಒಂದೇ ಆಗಿರುತ್ತವೆ ನಿಜವಾದ ಮತ್ತು ಫಲಪ್ರದವಾದ ಸ್ವಾತಂತ್ರ್ಯದ ಪರಿಮಿತಿಯನ್ನು ಹುಟ್ಟಿಸುವುದು ಎಲ್ಲ ಸಂಗಡದವರೂ ಪರಸ್ಪರ ಅವಿಶ್ವಾಸವಿಲ್ಲದೆ ಎಲ್ಲರೂ ಒಗ್ಗಟ್ಟಾಗಿ ಸೌಹಾರ್ದದಿಂದಿರುವುದು ಪ್ರತಿಯೊಬ್ಬ ಪುರುಷನೂ ಸ್ತ್ರೀಯೂ ಜೀವನಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ಅನುಭವಿಸಲವಕಾಶವಾಗುವಂತೆ ಸಮಾಜಪದ್ಧತಿಯ ರಚನೆಯನ್ನು ಬದಲಾಯಿಸಿ ನ್ಯಾಯವಾಗಿಯೂ ಕರಿತವಾಗಿಯೂ ಇರುವಂತೆ ರೂಪುಗೊಳಿಸಲ್ಪಡುವುದು ಇವೂ ಅದರ ಉದ್ದೇಶಗಳಾಗಿರುತ್ತವೆ ಇವು ತರುಣರ ಔತ್ಸುಕ್ಯವನ್ನು ಆಕರ್ಷಿಸತಕ್ಕವುಗಳಾಗಿಲ್ಲವೆ? ಬಹುಕಾಲದಿಂದಲೂ ಜನತೆಯು ಅನುಭವಿಸುತ್ತಿರುವ ದಾಸ್ಯತ್ವವನ್ನು ತಪ್ಪಿಸುವುದು ತಾವು ಕನಿಷ್ಠರೆಂಬ ಮಾಯಾಜಾಲದಿಂದ ನಿವೃತ್ತಿಗೊಳಿಸಲ್ಪಡುವುದು, ತಮ್ಮ ಈಗಿನ ಸ್ಥಿತಿಗಿಂತ ತಮ್ಮ ಶಾಶ್ವತವಾದ ಬಾಧ್ಯತೆಯು ಅತ್ಯುತ್ಕೃಷ್ಟವಾದುದೆಂಬ ತಿಳಿವಳಿಕೆಯನ್ನುಂಟುಮಾಡುವುದು ರಾಜಕೀಯ ವಿಚಾರದಲ್ಲಿ ತಮಗೆ ತಕ್ಕ ಸ್ಥಾನವನ್ನು ಹೊಂದುವ ಆಸೆಯನ್ನು ಹುಟ್ಟಿಸುವುದು ಈ ಕಾರ್ಯಗಳನ್ನು ತರುಣರು ವ್ಯಗ್ರರೂ ಕೈಕೊಳ್ಳತಕ್ಕ ಕಾರ್ಯವಾಗಿದೆ ಮತ್ತು ಕರ್ತವ್ಯಸಾಧನೆಗೆ ಶ್ರೇಷ್ಠತಮ ಗುಣಗಳಾದ ಸಂಯೋಜನಾಶಕ್ತಿಯೂ, ಉತ್ಸಾಹವೂ, ತಾಳ್ಮೆಯೂ ಇರತಕ್ಕುದು ಅತ್ಯಾವಶ್ಯಕವು, ಆದುದರಿಂದ ಈ ಮಹಾಸಭೆಯವರು ನಿಮ್ಮಗಳಿಗೆ ಅಂತಹ ಉತ್ಸಾಹವನ್ನೂ ಸಂಯೋಜನಾಶಕ್ತಿಯನ್ನೂ ಕಲ್ಪಿಸಿ, ಜನತೆಯನ್ನು ಜಾಗೃತಿಗೊಳಿಸಿ ಉತ್ಕೃಷ್ಟ ಪದವಿಗಳನ್ನಾಗಿ ಮಾಡುವ ಕಾರ್ಯವನ್ನು ಕೈಕೊಳ್ಳುವಂತೆ ಮಾಡಬೇಕೆಂದು ನಾನು ಆಶಿಸುತ್ತೇನೆ ಆಗ ಮೈಸೂರು ದೇಶೀಯ ಸಂಸ್ಥಾನಗಳಿಗೂ ಭರತಖಂಡದ ಇತರ ಪ್ರಾಂತಗಳಿಗೂ ಮಾತೃಕೆಯಾಗಿ ಶೋಭಿಸುವುದು ರಾಜಧಾನಿಯು ಸಮಾಜದ ಚಟ್ಟದ ಮೇಲೆ ನಿಂತಿ ಈ ನಗರದ ಮೇಲೂ ಅದರ ಪ್ರಭುಗಳ ಮತ್ತು ಪ್ರಜೆಗಳ ಮೇಲೂ ಕೃಪಾವೃಷ್ಟಿಯನ್ನು ಕರೆಯುತ್ತಿರುವ ಮತ್ತು ನಮ್ಮ ಸಂಸ್ಥಾನದ ಅಧಿಷ್ಠಾತ್ರಿಯಾದ ಶ್ರೀ ಚಾಮುಂಡೇಶ್ವರಿಯು, ದೇವರ, ಮಹಾರಾಜರವರ ಮತ್ತು ಸಂಸ್ಥಾನದ ಕೀರ್ತಿಗಾಗಿ ಪ್ರಯತ್ನಪಡುವ ಬುದ್ಧಿಯನ್ನು ನಾಮ ಕ್ಕನ್ನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ.

ವೀರನಾದ ನಾದಿರ್ ಖಾನ್

... ಸೇನಾಪತಿ ... ನಾದಿರ್‌ಖಾನನ ... ಸ್ಥಾಪಿತವಾದ ಅನೇಕ ಖಿದ್ ... ಬಗ್ಗೆ ... ಸ್ಥಳಗಳಲ್ಲಿ ... ವಿಷಯ ... ಸ್ವತಃ ಪ್ರಜೆಗಳ ... ಅವನೇ ಈಗ ... ಜನದ ... ಇದರ ಕೂಡ ಒಂದು ... ಸಂಭವ ... ಬಚ್ಚನನ್ನು ... ಪಾದಿರ್‌ಖಾನನು ... ಸೂತ್ರಧಾರಿಯು ನಾದಿರ್‌ಖಾನನೇ ಆಗಿದ್ದನು

ನಾದಿರ್‌ಖಾನನ ಶೌರ್ಯವು ಹೊರಬಿದ್ದುದು ಈ ಸಂದರ್ಭದಲ್ಲಿ ಮಾತ್ರವಲ್ಲ, ಹಿಂದೆಯೂ ಅನೇಕಸಲ, (ಉದಾಹರಣೆಗಾಗಿ ಇಂಗ್ಲೀಷರ ಮತ್ತು ಅಫಘಾನರ ಯುದ್ಧದಲ್ಲಿ) ಬಹಳ ಪೌರುಷದಿಂದ ಹೋರಾಡಿ ಅಫಘಾನಿನಲ್ಲಿ ಶಾಂತಿಸ್ಥಾಪನೆಯನ್ನು ಮಾಡಿದನು ಇದು ಅಫಘಾನಿಸ್ಥಾನದಲ್ಲೀಗ ಇವನು "ಥಾಲಿನ ವಿಜಯಿ" ಎಂದು ಪ್ರಸಿದ್ಧಿ ಹೊಂದಿರುವನು ಅವನ ಕೆಲವು ಮಹತ್ಕಾರ್ಯಗಳ ವಿಷಯವನ್ನು ಸ್ವಲ್ಪಮಟ್ಟಿಗೆ ಈ ಕೆಳಗೆ ಕೊಡುತ್ತೇವೆ —

ಅಮೀರ ಅಮಾನುಲ್ಲನ ತಂದೆಯಾದ ಹಬೀಬುಲ್ಲನ ಆಳಿಕೆಯಲ್ಲಿ ನಾದಿರ್‌ಖಾನನು ಮುಖ್ಯ ಸೇನಾಧಿಪತಿಯಾಗಿದ್ದನು ಹಬೀಬುಲ್ಲನು ಜಲಾಲಾಬಾದಿನಲ್ಲಿ ಕೊಲ್ಲಲ್ಪಟ್ಟ ಅನಂತರ ಅವನ ತಮ್ಮನಾದ ನಸರುಲ್ಲಾಖಾನನೆಂಬುವನು ನಾದಿರ್‌ಖಾನನ ಸಹಾಯದಿಂದ ಅಫಘಾನಿನ ಅಮೀರನಾದನು ಅನಂತರ ಸ್ವಲ್ಪ ಸಮಯದಲ್ಲಿಯೇ ಅಮಾನುಲ್ಲನು ಕಾಬೂಲಿನಲ್ಲಿ ಸಿಂಹಾಸನವನ್ನು ಹತ್ತಿದನು ಒಡನೆಯೇ ಅವನು ನಾದಿರ್‌ಖಾನನನ್ನು, ಆಗಿನ ಅಮೀರನೆನ್ನಿಸಿಕೊಂಡ ನಸರುಲ್ಲಾಖಾನನನ್ನೂ ಸೆರೆಹಿಡಿದು ತಂದನು ನಸರುಲ್ಲಾಖಾನನನ್ನು ಸೆರೆಯಲ್ಲಿಟ್ಟು ನಾದಿರ್‌ಖಾನನ ಸೇನಾಧಿಪತ್ಯವನ್ನು ಮಾತ್ರ ತೆಗೆದು ಒಂದು ಸಣ್ಣ ಸೈನಿಕರ ಗುಂಪಿನ ಯಜಮಾನನನ್ನಾಗಿ ಮಾಡಿದನು

ಕಳೆದ ಬ್ರಿಟಿಷರ ಮತ್ತು ಅಫಘಾನರ ಯುದ್ಧದಲ್ಲಿ ನಾದಿರ್‌ಖಾನನು ಬಹಳ ಚಾತುರ್ಯದಿಂದ ಅನಿರೀಕ್ಷಿತನಾಗಿ ಇಂಗ್ಲೀಷರ ದಳವನ್ನು ಯಾರಿಗೂ ತಿಳಿಯದಂತೆ ಮತ್ತು ಥಾಲ್ ಪ್ರದೇಶವನ್ನು ಆಕ್ರಮಿಸಿ ಕೈವಶಮಾಡಿಕೊಂಡನು ಪುನಃ ಶತ್ರುಸೇನೆಯು ಬೆನ್ನಟ್ಟಿ ಬಂದರೂ ಅವರನ್ನು ಸಂಪೂರ್ಣವಾಗಿ ಸೋಲಿಸಿ ಓಡಿಸಿಬಿಟ್ಟನು ಅನಂತರ ಇಂಗ್ಲೀಷರಿಗೂ ಅಫಘಾನರಿಗೂ ಆದ ಒಪ್ಪಂದದಲ್ಲಿ ಇಂಗ್ಲೀಷರಿಗೆ ಯುದ್ಧದಲ್ಲಿ ಸಹಾಯಮಾಡಿದ ಒಂದು ಸಣ್ಣ ಪ್ರಾಂತವು ಅಫಘಾನಿಗೆ ಕಪ್ಪ ಕೊಡಬೇಕೆಂದು ಮಾಡಿದುದೂ ನಾದಿರ್‌ಖಾನನ ಅಭಿಪ್ರಾಯದಿಂದಲೇ ಈಗ ಅಮಾನುಲ್ಲನು ಈತನ ಗುಣಗಳನ್ನು ತಿಳಿದು ಅವನನ್ನು ಪುನಃ ಸೇನಾಧಿಪತಿಯನ್ನಾಗಿ ಮಾಡಿದನು ಒಂದೆರಡು ವರ್ಷಗಳಲ್ಲಿಯೇ ಇವನು ಈ ಸೇನಾಧಿಪತ್ಯವನ್ನು ಬಿಡಬೇಕಾಯಿತು ಬಿಟ್ಟ ವೇಳೆ ಪ್ಯಾರಿಸ್ಸಿನಲ್ಲಿ ಅಫಘಾನಿಸ್ಥಾನದ ರಾಯಭಾರಿಯಾಗಿ ನೇಮಿಸಲ್ಪಟ್ಟನು ಕೆಲವು ವರ್ಷಗಳ ಅನಂತರ ಅವನು ಆ ಕೆಲಸವನ್ನೂ ಬಿಟ್ಟು ಫ್ರಾನ್ಸಿನಲ್ಲಿ ಕಟಸ್ಥನಾಗಿ ಸುಮ್ಮನೆ ವಾಸವಾಗಿದ್ದನು ಅನಂತರ ಅವನು ಪುನಃ ಅಫಘಾನಿಗೆ ಬಂದುದು ಕಳೆದ ದಂಗೆಯ ಕಡೆಯ ಭಾಗದಲ್ಲಿ ಮಾತ್ರ ಫ್ರಾನ್ಸಿನಿಂದ ಹೊರಡುವಾಗ ಹೀಗೆ ಹೇಳಿದ್ದಾನೆ. "ನನ್ನ ದೇಶದಲ್ಲಿ ಈಗ ನೆಮ್ಮದಿಯಿಲ್ಲದಾಗಿದೆ, ಅದನ್ನು ಬಂಧನದಿಂದ ಬಿಡಿಸಬೇಕು ಪ್ರಜೆಗಳ ಹಿತತಂತ್ರವಾದೊಂದು ಸರಕಾರವನ್ನು ಸ್ಥಾಪಿಸಬೇಕು ಇದಕ್ಕಾಗಿ ನಾನು ಅಲ್ಲಿಗೆ ಈಗ ಹೋಗಬೇಕಾಗಿದೆ" ಎಂದು ಅವನಿಗೆ ಅಫಘಾನಿಗೆ ಬಂದೊಡನೆಯೆ ಬಚ್ಚೆಸಕ್ಕನೊಡನೆ ಯುದ್ಧಮಾಡಬೇಕು ಅನೇಕ ಪ್ರಜೆಗಳ ರಕ್ತಪಾತಕ್ಕೆ ಕಾರಣನಾಗಬೇಕು ಎಂಬ ಉಕೊಮಲವಿದ್ದಿಲ್ಲ ಶಾಂತವಾಗಿಯೇ ಒಂದು ಯೋಗ್ಯವಾದ ಸರಕಾರವನ್ನು ಸ್ಥಾಪಿಸಬೇಕೆಂದಿತ್ತು ಅವನ ಹೃದಯವು ಎಷ್ಟು ಮೃದುವಾಗಿತ್ತೆಂದರೆ, ಬಚ್ಚನು ಅನ್ಯಾಯವಾಗಿ ಸಿಂಹಾಸನವನ್ನೇರಿ ಪ್ರಜೆಗಳನ್ನು ಪೀಡಿಸುತ್ತಿದ್ದನೆಂಬ ಸುದ್ದಿಯನ್ನು ಕೇಳಿದೊಡನೆಯೆ ಅವನಿಗೆ ಬರೆದುಬಂದ ಪತ್ರದಲ್ಲಿ ಅವನನ್ನು "ಪ್ರಿಯ ಸಹೋದರ!" ಎಂದು ಸಂಬೋಧಿಸಿರುವನು ಈ ಕಾಗದದಲ್ಲಿ ಅವನು ಬಚ್ಚೆಸಕ್ಕನು ಅಮಾನುಲ್ಲನಿಗೆ ಶರಣಾಗತನಾಗಬೇಕು ಎಂದು ಹೇಳಿದ್ದನು ಇದರಿಂದ ಬಚ್ಚನು ರೇಗಿ ನಾದಿರ್‌ಖಾನನನ್ನು ಹಿಡಿದು ತಂದವರಿಗೆ 40,000 ರೂಪಾಯಿಗಳ ಬಹುಮಾನವನ್ನು ಕೊಡುತ್ತೇನೆಂದು ಡಂಗುರ ಹೊಯಿಸಿದನು

ಕಾಬೂಲಿಗಿದಿರಾಗಿ ಸೈನ್ಯವನ್ನು ತೆಗೆದುಕೊಂಡುಹೋಗುವ ಮೊದಲೇ ನಾದಿರ್‌ಖಾನನು ಬಚ್ಚನಿಗೆ ಒಂದು ಕಾಗದವನ್ನು ಬರೆದಿದ್ದನು ಈ ಸಲ ಅವನು ಅಮಾನುಲ್ಲನಿಗೆ ಶರಣಾಗತನಾಗಬೇಕೆಂದು ಹೇಳಲಿಲ್ಲ "ನೀನು ಸಿಂಹಾಸನದಿಂದ ಇಳಿದುಬಿಡು, ಅನಂತರ ಪ್ರಜೆಗಳೇ ಅವರಿಷ್ಟವುಳ್ಳವನನ್ನು ಆರಿಸಿ ಹತ್ತಿಸಲಿ" ಎಂದು ಬರೆದಿದ್ದನು ಆದರೆ ಬಚ್ಚನು ಅದನ್ನು ತಿರಸ್ಕರಿಸಿದನು

ಯುದ್ಧಮಾಡಿಯಾದರೂ ಕಾಬೂಲನ್ನ ಜಯಿಸಿ ಬಚ್ಚನನ್ನು ಸಿಂಹಾಸನದಿಂದ ತಳ್ಳಬೇಕೆಂದೂ ಇದರ ಅನಂತರವೇ ಯೋಚಿಸಿದನು ಅವನೇನೂ ಬಲಾತ್ಕಾರದಿಂದ ಸೈನ್ಯವನ್ನು ಸಂಗ್ರಹಿಸಲಿಲ್ಲ "ನಮ್ಮ ಮಾತೃಭೂಮಿಯನ್ನು ಬಿಡಿಸಿಕೊಳ್ಳುವುದಕ್ಕೆ ಬನ್ನಿರಿ" ಎಂದ ಕೂಡಲೇ ತನ್ನ ಜನರೆಲ್ಲರೂ ಅವನನ್ನು ಹಿಂಬಾಲಿಸಿದರು ಧೀರರಾದ ತನ್ನ ಇಬ್ಬರು ಸಹೋದರರ ಸಹಾಯದಿಂದ ಯುದ್ಧವನ್ನು ಮಾಡಿ ಬಚ್ಚನನ್ನು ಓಡಿಸಿ ಈಗ ಸಿಂಹಾಸನವನ್ನು ತಾನೇ ಹತ್ತಿ ಪ್ರಜೆಗಳಲ್ಲಿ ಶಾಂತಿಸ್ಥಾಪನೆಗೆ ತಲೆ ಹಾಕಿಯನ್ನಿಟ್ಟನು

ರಾ ಬ

ಜಾನ್ ಡೇವಿಸನ್ ರಾಕ್‌ಫೆಲರ್ ಜೀವನವೃತ್ತಾಂತ

ಅಮೆರಿಕಾ ಖಂಡದ ನಾಯಕನೂ, ಅತುಲೈಶ್ವರ್ಯ ಸಂಪನ್ನನೂ ಮಹಾದಾನಿಯೂ ಆದ ಜೆ. ಡಿ ರಾಕ್‌ಫೆಲರನ 90 ನೇ ವರ್ಷದ ವರ್ಧಂತ್ಯುತ್ಸವವು ನ್ಯೂಯಾರ್ಕ್ ಪಟ್ಟಣದಲ್ಲಿ ಯಾವ ಆಡಂಬರವೂ ಇಲ್ಲದೆ ಜರಗಿತು. ವಿಶ್ವವಿಖ್ಯಾತ ವೈರುಷರಾದ ಎಡಿಸನ್, ವಾನ್ ಹಿಂಡೆನ್‌ಬರ್ಗ್ ಎಂಬವರು 82 ವರ್ಷ, ಜಾರ್ಜ್ ಬೆರ್ನಾಡ್ ಷಾ ಎಂಬ ಪ್ರಸಿದ್ಧ ಗ್ರಂಥಕರ್ತನು 73 ವರ್ಷ, ಕ್ಲೆಮೆನ್ಷೋ ಎಂಬಾತನು 87 ವರ್ಷ ವಯಸ್ಸಿನವರು ಮಾತ್ರದವರಾಗಿರುತ್ತಾರೆ ಇವರೆಲ್ಲರಿಗಿಂತಲೂ ನಮ್ಮ ಕಥಾನಾಯಕನಾದ ರಾಕ್‌ಫೆಲ್ಲರು ಹೆಚ್ಚಿನ ವಯಸ್ಸಿನವನಾಗಿ ಒಳ್ಳೆ ಪಟುತ್ವದಿಂದ ಜಗತ್ಪ್ರಖ್ಯಾತನಾಗಿರುವುದು ದೊಡ್ಡ ಆಶ್ಚರ್ಯವೇ ಸರಿ, ರಾಕ್‌ಫೆಲರು ನೂರು ವರ್ಷದವರೆಗೆ ಸುಖವಾಗಿ ಬದುಕಿರುವನೆಂದು ಆತನ ಕುಟುಂಬ ವೈದ್ಯನು ನಿರ್ಧರವಾಗಿ ಹೇಳುತ್ತಿರುವನು, ಕಾಲವು ಹೆಚ್ಚಿದಂತೆಲ್ಲ ಈ ಒಳ್ಳೆ ಪ್ರಕೃತಿಗೆ ಬಾಲ್ಯವತಿ ಬರುವಂತಿದೆ ರಾಕ್‌ಫೆಲ್ಲರು ಪಟುಬೋಧವು ಹೇಗಿದೆ ಎಂಬುದನ್ನು ಅರಿಯೆನು; ಐಶ್ವರ್ಯವೂ, ಜಿನವರ್ಚಡಾಮಣಿ, ಹೊಸ ಪ್ರಕೃತಿಗಳಿಗೆ ಅಶಕ್ತರಾದವನಲ್ಲ ವೃಥಾ ಒಂದು ಕಾಸನ್ನಾಗಲಿ ವ್ಯಯಿಸ ವಸ್ತುಗಳ ಕೆಡಿಸುವ ಸ್ವಭಾವವು ಆತನಲ್ಲಿ ಆಬಾಲವೃದ್ಧರೊಲ್ಲ ಒಳ್ಳೆ ... ದೃಷ್ಟಾಂತ ... ವೇದಿನ ... ಕ್ಷಣ ... ಮಂದಿ ... ಆತನ ಕೂಡ ಸಂಭಾಷಣೆ ... ಹತ್ತಿರ ... ಹೇಳುತ್ತಾರೆ. ... ಆತನು ಸ್ಕೊ, ಷ್ಯ ... ಈತನ ತಲೆ ಒಳ್ಳೆ ... ಮುಖವು ಸುಕ್ಕುಗಟ್ಟಿರುವುದು, ಹಲ್ಲು ಕೂದಲು ಉದುರಿಹೋಗಿರುವುವು, ಗಂಟಲು ಗದ್ದೆ ಮುಚ್ಚಿ ಹೋಗಿದೆ, ದೇಹವು ಕಳಾಹೀನವಾಗಿಯೂ, ಎತ್ತರವಾಗಿಯೂ ಇದ್ದು ಬಗ್ಗಿ ನಡೆಯುವವನು. ಈತನ ಶರೀರದ ತೂಕವು 100 ಪೌಂಡು ಮಾತ್ರವಿರುವುದು, ಅಜೀರ್ಣ ರೋಗದಿಂದ ಬಾಧೆಪಡುತ್ತಿರುವನು. ಬಂಗಾರದ ಬೊಟ್ಟು ನವನೆಂದು ಆತನನ್ನು ಕರೆಯುವರು ಬೆಳಗಿನ 7 ಗಂಟೆಗೆದ್ದು ಹಣ್ಣು ಹಂಪಲುಗಳನ್ನು ತಿಂದು 7½ ಗಂಟೆಗೆ ಶಿರಸ್ನಾನವಾಡಿ ಹಣ್ಣು ಕಾಳುಕಡಿಗಳನ್ನು ತಿಂದು ಅತ್ಯಂತ ಭಕ್ತಿಯಿಂದ ಹತ್ತು ನಿಮಿಷದವರೆಗೆ ಬೈಬಲ್ ಗ್ರಂಥಪಠನ ಮಾಡಿ ನ್ಯೂಯಾರ್ಕ್ ಟೈಂಸ್ ಪತ್ರಿಕೆಯಲ್ಲಿ ಮೊದಲಿನಿಂದಲೂ ಕಡೆಯವರೆಗೂ ಶೀರ್ಷಿಕೆಗಳನ್ನು ಮಾತ್ರ ನೋಡಿ ತನ್ನ ಸ್ವಂತ ಕಾಗದಗಳನ್ನು ಓದಿ ತರುವಾಯ ಒಂಬತ್ತುಗಂಟೆಯವರೆಗೆ ತನ್ನ ಕಾರ್ಯದರ್ಶಿಯೊಡನೆ ವ್ಯಾಪಾರದ ವಿಚಾರವಾಗಿ ಮಾತನಾಡಿಕೊಂಡು ಅನಂತರ ವಿಶ್ರಾಂತಿಗೆದುಕೊಳ್ಳುವನು 10 ಗಂಟೆಯಾಗುತ್ತಲೆ ಬೆಳಗಿನ ಉಡುಪನ್ನು ಬದಲಾಯಿಸಿ ಆಟಕ್ಕೆ ಬೇಕಾದ ಉಡುಪನ್ನು ಧರಿಸಿಕೊಂಡು ಗಾಲ್ಫ್ ಆಟವನ್ನು ಮೈಚಳಿಬಿಡುವ ವರೆಗೂ ಆಡುವ ಪದ್ಧತಿಯುಂಟು ಚೆಂಡನ್ನು ಹೊಡೆಯುವಾಗ್ಗೆ ಸಾಮಾನ್ಯವಾಗಿ ಗುರಿತಪ್ಪುವುದಿಲ್ಲ ಒಂದು ವರ್ಷದಲ್ಲಿ ಪರಿಶೀಲಿಸಿ ನೋಡಿದರೆ ಮೂರುನಾಲ್ಕುವೇಳೆ ಗುರಿತಪ್ಪಿ ಹೋಗಬಹುದು ಆಗ ಚೆಂಡನ್ನು ಕೈಯಿಂದ ಹೊಡೆದುಹಾಕಿಬಿಡುವನು. ಗೆದ್ದವೇಳೆಯಲ್ಲಿ ಮಕ್ಕಳಂತೆ ಸಂತೋಷಾತಿಶಯದಿಂದ ಕುಣಿದು ಕುಪ್ಪಳಿಸುವನಂತೆ! ಆಟ ಮುಗಿದೊಡನೆ ಮನೆಗೆಬಂದು ಮುಕ್ಕಾಲುಗಂಟೆಯವರೆಗೆ ವಿಶ್ರಮಿಸಿಕೊಂಡು ಒಂದು ಗಂಟೆಗೆ ಮಧ್ಯಾಹ್ನದ ಊಟಮಾಡುವನು 3½ ಗಂಟೆಯಾದೊಡನೆ ಮೊಮ್ಮಕ್ಕಳನ್ನೂ ಮಕ್ಕಳು ಮೊಮ್ಮಕ್ಕಳನ್ನೂ ಜತೆಗೆ ಕರೆದುಕೊಂಡು ಮೋಟಾರು ಬಂಡಿಯಲ್ಲಿ 45 ಮೈಲು ದೂರ ಬೇಂಟೆಗೆ ಹೋಗುವನು ಅಲ್ಲಿಂದ ತನ್ನ ಮನೆಗೆಬಂದು ನ್ಯೂಯಾರ್ಕಿನಲ್ಲಿ ಬ್ರಾಡ್ವೆಯಲ್ಲಿರುವ ಸ್ಟಾಂಡರ್ಡ್ ಎಣ್ಣೆ ಕಂಪೆನಿಯವರ ಪ್ರಧಾನ ಕಾರ್ಯಾಲಯದ ಮುಖ್ಯೋದ್ಯೋಗಿಗಳ ಸಂಗಡ ಟೆಲಿಫೋನ್ ಮೂಲಕ ವ್ಯಾಪಾರವಿಷಯವಾಗಿ ಪ್ರಸ್ತಾಪಿಸಿ ತಕ್ಕ ಸಲಹೆಯನ್ನು ಕೊಡುತ್ತಿರುವನು ರಾತ್ರಿ 7½ ಗಂಟೆಗೆ ಮನೆಯವರೆಲ್ಲರನ್ನೂ ತನ್ನ ಸುತ್ತಲೂ ಕುಳ್ಳಿರಿಸಿಕೊಂಡು ರಾತ್ರಿಯೂಟವನ್ನು ಮಾಡುತ್ತ ಮಧ್ಯಮಧ್ಯ ಚಿತ್ರವಿಚಿತ್ರವಾದ ಕಥೆಗಳನ್ನು ಹೇಳಿ ಹೊಟ್ಟೆಯಲಾಡುವಂತೆ ಅವರನ್ನು ನಗಿಸುತ್ತ 10 ಗಂಟೆಯವರೆಗೆ ಕಾಲಕಳೆಯುತ್ತಿರುವನು ಅನಂತರ ತನಗೆ ಬಹಳ ಪ್ರಿಯವಾದ ಮಾಮುರಿಕಾ ಎಂಬ ವಿಚಿತ್ರವಾದ ಆಟವನ್ನು ಆಡುತ್ತಿದ್ದು 11 ಗಂಟೆಗೆ ಶಯ್ಯಾಗೃಹಕ್ಕೆ ಹೋಗಿ ಹಾಯವಾಗಿ ಮಲಗಿಕೊಂಡ ನಿಮಿಷಮಾತ್ರದಲ್ಲಿ ಗುರಿಕೆ ಹೊಡೆಯುತ್ತ ನಿದ್ರೆ ಮಾಡುವನು

ಈತನ ಜೀವಿತ ಚರಿತ್ರೆಯು ಅದ್ಭುತವಾದುದು, ಅಪ್ರತಿಮಾನುವಾದುದೆಂದೇ ಹೇಳಬಹುದು ನ್ಯೂಯಾರ್ಕಿಗೆ ಸೇರಿದ ರಿಚ್‌ಫರ್ಡ್ ಎಂಬಲ್ಲಿ 1839 ನೇ ಜುಲೈ ತಾ॥ 8 ರಲ್ಲಿ ಜನಿಸಿದನು ಈತನ ತಂದೆಯು ಅಲೆಮಾರಿ ವೈದ್ಯದಿಂದ ಸಾಮಾನ್ಯಜೀವನಮಾಡುತ್ತಿದ್ದನು ಈ ರಾಕ್‌ಫೆಲರು ಚಿಕ್ಕತನದಿಂದಲೂ ತಂದೆಯಕೂಡ ತಾನು ಮಹದೈಶ್ವರ್ಯವಂತನಾಗುತ್ತೇನೆಂದು ಹೇಳುತ್ತಿದ್ದನಂತೆ! ಹದಿನಾರು ವರ್ಷ ವಯಸ್ಸು ತುಂಬಿದೊಡನೆಯೇ ಆತನು ಒಂದು ಗಡಂಗಿನಲ್ಲಿ ಗುಮಾಸ್ತನಾಗಿ ಮೊದಲು ಸೇರಿದನು ಆರೀತಿ ನಾಲ್ಕು ವರ್ಷ ಕಾಲವಿದ್ದು 3000 ರೂಪಾಯಿಯನ್ನು ಕೂಡಿಟ್ಟಿದ್ದನಂತೆ! ಇದರೊಡನೆ ತನ್ನ ತಂದೆಯಿಂದ 3000 ರೂ ಗಳನ್ನು ಸಾಲವಾಗಿ ತೆಗೆದುಕೊಂಡು ಈ 6000 ರೂ ಗಳಿಂದ ಒಂದು ಕಂಪೆನಿಯಲ್ಲಿ ಕೆಲ ಷೇರುಗಳನ್ನು ತೆಗೆದುಕೊಂಡ ವ್ಯಾಪಾರಮಾಡತೊಡಗಿದನು ಆತನಿಗೆ 23 ವರ್ಷ ವಯಸ್ಸಾಗುವ ಹೊತ್ತಿಗೆ ಯಾವ ಕಾರಣದಿಂದಲೂ ಯಾರಕೂಡಲೂ ಭಾಗಕ್ಕೆ ಸೇರದೆ ಸ್ವತಂತ್ರನಾಗಿ ವ್ಯಾಪಾರಮಾಡಲು ಸಂಕಲ್ಪಿಸಿ ಸೀಮೆಎಣ್ಣೆ ವ್ಯಾಪಾರವನ್ನು ಮಾಡಲು ಪ್ರಾರಂಭಿಸಿದನು. 40 ವರ್ಷ ವಯಸ್ಸಾಗುವಷ್ಟರಲ್ಲಿ ಅನೇಕ ಲಕ್ಷ ರೂಪಾಯಿಗಳನ್ನು ಸಂಪಾದಿಸಿ ಸ್ಟಾಂಡರ್ಡ್ ಆಯಿಲ್ ಕಂಪನಿಗೆ ಯಜಮಾನನಾಗಿ ಶೀಘ್ರದಲ್ಲಿ ಪ್ರಖ್ಯಾತಿಗೆಬಂದು ಹೊಸಪದ್ಧತಿಯಿಂದ ವ್ಯಾಪಾರವನ್ನು ನಡೆಸುತ್ತ ರಿಫೈನರೀಸ್ ಪೈಪ್‌ಲೈನ್ಸ್ ಮೊದಲಾಗಿ ಹೊಸ ವ್ಯಾಪಾರವನ್ನು ಮಾಡಿ ನಡೆಸುವವನಾದನು ಯುನೈಟೆಡ್ ಸ್ಟೇಟ್ಸಿನಲ್ಲಿ ನಡೆಯುವ ಕೆರೊಸಿನ್ ವ್ಯಾಪಾರವೆಲ್ಲವನ್ನೂ ತಾನೊಬ್ಬನೇ ವಶಪಡಿಸಿಕೊಳ್ಳಬೇಕೆಂಬ ಕುತೂಹಲವಿಷ್ಟನಾದನು ಇತರ ಕೆರೊಸಿನ್ ವ್ಯಾಪಾರಸ್ಥರು ಯಾವರೀತಿಯಲ್ಲೂ ಅಭಿವೃದ್ಧಿಯಾಗದಂತೆ ವ್ಯಾಪಾರವೆಲ್ಲವೂ ತನ್ನಧೀನವಾಗುವುದಕ್ಕಾಗಿ ನಾನಾ ದೇಶಗಳಲ್ಲಿರುವ ರೈಲ್ವೆ ಕಂಪೆನಿಗಳಲ್ಲಿ ತನ್ನ ಸರಕನ್ನು ಕಳುಹಿಸುವ ಸಂದರ್ಭದಲ್ಲಿ ಒಳ್ಳೊಳ್ಳೇ ಉಪಾಯಗಳನ್ನೂ ಸೌಕರ್ಯಗಳನ್ನೂ ವಸತಿಗಳನ್ನೂ ಕಲ್ಪಿಸಲು ತಕ್ಕ ನಿಬಂಧನೆಗಳನ್ನು ಮಾಡಲು ಏರ್ಪಡಿಸಿದನು. ಯಾವ ಅದೃಷ್ಟದಿಂದಲೋ ರೈಲ್ವೆ ಕಂಪೆನಿಗಳೆಲ್ಲವೂ ಸ್ಟಾಂಡರ್ಡ್ ಆಯಿಲ್ ಕಂಪನಿಗೇನೆ ಹೆಚ್ಚು ಸಹಾಯಮಾಡತೊಡಗಿದರು ಈ ಕಾರಣದಿಂದ ಉಳಿದ ಎಣ್ಣೆ ವ್ಯಾಪಾರಸ್ಥರು ಬಿದ್ದುಹೋಗುವ ಕಾಲ ಸಂಭವಿಸಿತು ಈತನಿಗೆ ಜತೆ ವ್ಯಾಪಾರಸ್ಥರೆಂದರೆ ತೃಣಪ್ರಾಯರಾಗಿದ್ದರು ಅವರನ್ನು ಹಿಂದಾಕಲೂ, ಅವರು ದಿವಾಳಿಯಾಗಲೂ ಎಷ್ಟು ತಂತ್ರಗಳು ಲೋಕದಲ್ಲಿರುವುವೋ ಅಷ್ಟು ತಂತ್ರಗಳನ್ನೂ ಅವಲಂಬಿಸುವನು. ದೊಡ್ಡ ದೊಡ್ಡ ಎಣ್ಣೆಯ ವರ್ತಕರು ಕೂಡ ಈತನಕೂಡ ಸ್ಪರ್ಧಿಸಲಾರದೆ ಕಡೆಗೆ ರಾಕ್‌ಫೆಲರು ಹೇಳಿದ ನಿಬಂಧನೆಗಳಿಗೆ ಬದ್ಧರಾಗಿ ತಮ್ಮ ವ್ಯಾಪಾರವನ್ನೂ, ಗಣಿ ಮೊದಲಾದುವನ್ನೂ ಆತನ ವಶಮಾಡಲು ಬರುವವರಾದರು, ರಾಕ್‌ಫೆಲರ್ ಎಂದರೆ ವ್ಯಾಪಾರಸ್ಥರಿಗೆ ಸ್ವಪ್ನದಲ್ಲಿ ಸಿಂಹವನ್ನು ಕಂಡಂತೆಯೇ ಕೆಲವರು ಈತನನ್ನು ವಿಷಸರ್ಪವನ್ನಾಗಿ ಬ್ರಹ್ಮರಾಕ್ಷಸನನ್ನಾಗಿ ಕಂಡು ಭಯಪಡುವವರಾದರು ಒಟ್ಟಿನಲ್ಲಿ ವ್ಯಾಪಾರವು ಪ್ರಾರಂಭವಾದಂದಿನಿಂದ 10 ವರ್ಷದೊಳಗೇನೇ ಯುನೈಟೆಡ್ ಸ್ಟೇಟ್ಸಿನಲ್ಲಿರುವ ಕೆರೊಸಿನ್ ವ್ಯಾಪಾರದಲ್ಲಿ 100 ಕ್ಕೆ 95 ರಷ್ಟು ತನ್ನ ಸ್ವಾಧೀನವಾಡಿಕೊಂಡನು 1887 ನೇ ವರ್ಷದಲ್ಲಿ ಅಮೇರಿಕೆಯ ಕೆರೊಸಿನ್ ವ್ಯಾಪಾರ ಪರಿಶ್ರಮವೆಲ್ಲವೂ ಒಟ್ಟು ರಾಕ್‌ಫೆಲರಿಗೆ ಸಂಬಂಧಪಟ್ಟ ಸ್ಟಾಂಡರ್ಡ್ ಆಯಿಲ್ ಕಂಪೆನಿಯಿಂದಲೇ ನಿರ್ವಹಿಸಲ್ಪಡುತ್ತಿತ್ತೆಂದರೆ ಆತನ ವ್ಯಾಪಾರ, ಕೌಶಲ್ಯವೂ, ಬುದ್ಧಿಚತುರತೆಯೂ ಎಷ್ಟರಮಟ್ಟಿನವೋ ಬೇರೆ ಬರೆಯಬೇಕಾದ ಅಗತ್ಯವಿಲ್ಲವು.

ಕೊಂಚಕಾಲಾನಂತರ ದೇಶಸ್ಥರಲ್ಲಿ ಕೆಲವರಿಗೆ ಈತನ ಮೇಲೆ ಅಸೂಯೆ, ದ್ವೇಷ, ಸ್ಪರ್ಧೆ ಹುಟ್ಟಿ ಪ್ರಬಲಗೊಂಡವು, ದೇಶದಲ್ಲಿ ಈತನ ವಿಚಾರವಾಗಿ ಕೊಂಚ ಆಂದೋಳನವಾಯಿತು. ಕೆಲ ಮಂದಿ ಅಭಿಯೋಗ ನಡೆಸಿದರು. 1907 ರಲ್ಲಿ ಈತನಮೇಲೆ ತರಲ್ಪಟ್ಟ ಒಂದು ವಿವಾದದ ಸಂದರ್ಭದಲ್ಲಿ ಕೆ. ಎಂ. ಲಾಂಡಿಸ್ ಎಂಬ ನ್ಯಾಯಾಧೀಶನು 870 ಲಕ್ಷ

ಈ ಸಂಗತಿಯನ್ನು ಬಿಡಿಸಿದನು. ಪ್ರಪಂಚದಲ್ಲಿ ಮಾನವ ಕೋಟಿಯಲ್ಲಿ ಈವರೆಗೆ ಇಷ್ಟು ಹಿರಿದಾದ ಆಸ್ತಿಯಂದತ್ತು ಗಳಿಸಲ್ಪಟ್ಟಿರಲಿಲ್ಲ. ಆರಂಭ ದಿಂದಲೂ ಕೋಟಿ ... ಸಂಪಾದಿಸುವನಿಗೆ ಆ ಸಂಸ್ಥೆಯು ಒಂದು ಲಕ್ಷ ವಿಲ್ಲವಾದುದರಿಂದ ಸಾಗರದ ಕೋಟಿ ಬಿಟ್ಟನು. 1911 ರಲ್ಲಿ ನ್ಯಾಯಸ್ಥಾನದವರು ನಡೆಸಿದ ಸಂದರ್ಭದಲ್ಲಿ ಇವರ ಎಷ್ಟು ವರ್ಷಗಳು ಪೂರ್ತಿ ಯಾಗಿ ಪ್ರತ್ಯೇಕವಾಗಿ ಆಗಲ ವ್ಯಾಪಾರಗಳ ಯಾವ ಆಕ್ಷೇಪಣೆಯಿಲ್ಲ ಸ್ಟ್ಯಾಂಡರ್ಡ್ ಆಯಿಲ್ ಕಂಪೆನಿಯವರು ವಾದಿಸಿದರೆಂದು ಸುಪ್ರೀಂ ಕೋರ್ಟಿನವರು ತೀರ್ಮಾನಿಸಿದರು. ಇದರ ಫಲವಾಗಿ ಈ ಕಂಪೆನಿಯವರಿಗೆ ಸ್ವಾಭಾವಿಕವಾದ ಇತರ ಸಂಸ್ಥೆಯವರೂ ಕಡಿಮೆಯಾಗುತ್ತಿದ್ದ ಸೌಕರ್ಯ ಸೌಲಭ್ಯಗಳನ್ನು ಸಂಪೂರ್ಣವಾಗಿ ಕಲ್ಪಿಸಬಿಟ್ಟರು. ಈ ಕಾರಣದಿಂದ ರಾಕ್‌ಫೆಲರು ಬಡವರಾಗುವನೆಂದು ಹಲವರು ಭ್ರಮಿಸಿದ್ದಾದರೂ ಇದು ವರೆಗೂ ಸ್ಟ್ಯಾಂಡರ್ಡ್ ಆಯಿಲ್ ಕಂಪೆನಿಯವರೇ ಯುನೈಟೆಡ್ ಸ್ಟೇಟ್ಸಿನ ಕಿರೊಸಿನ್ ವ್ಯಾಪಾರದಲ್ಲಿ ಮುಕ್ಕಾಲುಪಾಲು ಹೀನ ಭಾಗ ಬಹುದ್ರವ್ಯದಾಗಿ ನಡೆಸುತ್ತಿದ್ದಾರೆ. ಎಷ್ಟು ಪ್ರಖ್ಯಾತನಾದ ರಾಕ್‌ಫೆಲರ ವಿಚಾರವಾಗಿ ಅನೇಕ ಗ್ರಂಥಗಳು ಬರೆಯಲ್ಪಟ್ಟಿರುತ್ತವೆ. ಆತನಲ್ಲಿ ಒಂದು ದೊಡ್ಡ ವಿಶೇಷವಿದೆ, ಯಾರು ಯಾವ ವಿಧದಲ್ಲಿ ತನ್ನನ್ನು ಅಲ್ಲಗಳೆದರೂ, ನಿಂದಿಸಿದರೂ, ಖಂಡಿಸಿದರೂ ಮನಸ್ಸಿಗೆ ಹಚ್ಚಿಕೊಳ್ಳುವುದಿಲ್ಲ; ಪ್ರತಿಯಾಗಿ ಮಾತಾಡುವುದಿಲ್ಲ. ದೂಷಣ, ಭೂಷಣ, ತಿರಸ್ಕಾರಗಳು ಆತನಿಗೆ ಸ್ವಭಾವಗಳು. ರಾಕ್‌ಫೆಲರನು ಎಷ್ಟು ಧನವನ್ನಾರ್ಜಿಸಿರುವನೊ ಯಾರಿಗೆ ಗೊತ್ತು ಮತ್ತು ಯಾರೂಹಿಸಬಲ್ಲರು! ಈವರೆಗೆ ವಿನಿಯೋಗ ಮಾಡಿರುವುದು ಹೊರತಾಗಿ ಈಗ ಆತನಲ್ಲಿ ಕನಿಷ್ಠ ಪಕ್ಷ 30 ಕೋಟಿ ರೂಪಾಯಿ ಧನವಿರುವುದಾಗಿ ತಿಳಿಯಬರುತ್ತದೆ. ಪ್ರಪಂಚದಲ್ಲಿ ಈತನನ್ನು ಮೀರಿಸುವ ಧನಿಕನು ಮತ್ತಾರೂ ಇಲ್ಲವೆಂಬುದು ನಿರ್ವಿವಾದಾಂಶವಾಗಿದೆ. ಕ್ರಿಸ್ತನು ಜನ್ಮಿಸಿದಾರಭ್ಯ ಈವರೆಗೆ ಯಾರಾದರೂ ಒಂದು ಸೆಕೆಂಡಿಗೆ ಮೂರು ರೂಪಾಯಿಯಂತೆ ಸಂಪಾದಿಸಿದ್ದರೂ ರಾಕ್‌ಫೆಲರನು ಸಂಪಾದಿಸಿದ ಐಶ್ವರ್ಯಕ್ಕೆ ಸಾಟಿ ಯಾಗಲಾರದು. ಎಂದು ಸಾಧಾರಣ ನರರ ಹಗಲೂ ರಾತ್ರಿ ಶ್ರಮಪಟ್ಟು ಸೆಕೆಂಡಿಗೆ 3 ರೂಪಾಯಿಯಂತೆ ಸಂಪಾದಿಸಿದರೂ 30 ಕೋಟಿ ರೂಪಾಯಿ ಕೂಡುವುದಿಲ್ಲ. ರಾಕ್‌ಫೆಲರ್ ಮೊದಮೊದಲು ಬಡವ ಜಮೀನುದಾರನಾಗಿದ್ದನು. ಆದರೆ ಕಾಲಕ್ರಮೇಣ ಆತನಲ್ಲಿ ದಾಕ್ಷಿಣ್ಯ, ದಯಾಶೀಲತ್ವಾದಿ ಸದ್ಗುಣ ಸಂಪತ್ತುಗಳು ವ್ಯಾಪಿಸಿದವು. ಈತನು ಬ್ಯಾಪ್ಟಿಸ್ಟ್ ಕ್ರಿಸ್ತ ಮತವನ್ನು, ಬಾಲ್ಯದಲ್ಲಿ ಬೈಬಲಿನಲ್ಲಿ ಕೆಲ ಭಾಗವನ್ನು ಬೈಬಲಿಗೆ ಸಂಬಂಧಪಟ್ಟ ಕೆಲ ಪಾಠಗಳನ್ನು ಕಂಠಪಾಠ ಮಾಡಿದನು. ಅದನ್ನು ಈಗಲೂ ಮರೆತಿಲ್ಲ. ಈತನು ಸಂಪಾದಿಸಿದ ಅಪಾರವಾದ ಧನವನ್ನು ವಿನಿಯೋಗಿಸಲು ಶೋಚಿಸುತ್ತಿದ್ದ. ಲೋಕೋಪಯೋಗಿ ಕಾರ್ಯಗಳಲ್ಲಿ ಈವರೆಗೂ ವಿಶೇಷ ಧನವನ್ನು ಸಹಾಯ ಮಾಡಿರುವನು. 1911 ರಿಂದ ಈವರೆಗೆ 225 ಕೋಟಿ ರೂಪಾಯಿಗಳನ್ನು ಧರ್ಮಾರ್ಥವಾಗಿ ಕೊಟ್ಟಿರುತ್ತಾನೆ. ಮೊದ ಮೊದಲು ಕ್ರೈಸ್ತ ಸಂಘದವರೂ ಇತರ ಸಂಸ್ಥೆಯವರೂ ಈತನ ಧನವು ಪಾಪಿಷ್ಠನ ಧನವೆಂದೆಣಿಸಿ ಮುಟ್ಟುತ್ತಿರಲಿಲ್ಲ. ಆದರೆ ಧನಾಶೆಯಿಂದ ಕಾಲಕ್ರಮೇಣ ಅಭಿಪ್ರಾಯ ಬದಲಾಯಿಸಿ ಆತನ ಧನವೇ ಪರಮಪಾವನ ಧನವೆಂದೆಣಿಸಿ ಕಣ್ಣಿಗೊತ್ತಿಕೊಳ್ಳುತ್ತ ಬಂದರು. ಅಮೇರಿಕೆಯಲ್ಲಿ ಮದ್ಯಪಾನ ನಿಷೇಧ ಪ್ರಸಾರಾರ್ಥವಾಗಿ ವ್ಯಯವಾದ ದ್ರವ್ಯದಲ್ಲಿ ವಿಶೇಷ ಭಾಗವು ಈ ರಾಕ್‌ಫೆಲರು ಅನುಗ್ರಹಿಸಿದುದಾಗಿದ್ದಿತು. ಇದಕ್ಕಿಂತಲೂ ಉತ್ಕೃಷ್ಟವಾದ ಕಾರ್ಯವು ಮತ್ತಾವುದುಂಟು! ಅನೇಕ ಸಾವಿರಾರು ಸಂಸ್ಥೆಗಳಿಗೆ ಅನೇಕ ಕೋಟಿ ರೂಪಾಯಿಗಳು ಪ್ರತ್ಯಕ್ಷವಾಗಿ ಸಿಗಲ್ಪಡದಿದ್ದಲ್ಲಿ ಈ ಮಹಾ ಭಾಗ್ಯವಂತನು ಕೊಟ್ಟಿರುವನು. ಇಂತಹ ಮಹಾದಾತನು ಪ್ರಪಂಚದಲ್ಲಿ ಈವರೆಗಿಲ್ಲಾ ಹೊರಟಿಲ್ಲಾ.

1911 ನೇ ಇಸವಿಯಿಂದ ಈತನು ವ್ಯಾಪಾರಮಾಡುವುದನ್ನು ಬಿಟ್ಟನು. ಅಂದಿನಿಂದ ಈತನ ಮಗನಾದ ಜೂನಿಯರ್ ರಾಕ್ ಫೆಲ್ಲರೇ ವ್ಯಾಪಾರ ರಥವನ್ನು ನಡೆಸುತ್ತಿರುವನು. ವ್ಯಾಪಾರ ವಿಷಯದಲ್ಲಿ ಜೂನಿಯರ್ ರಾಕ್ ಫೆಲ್ಲರೇ ಅಧಿಪತಿಯೆಂದು ಹೆಸರು ಬಂದಿರುತ್ತದೆ. ಈ ಅಧಿನಾಯಕನಾದ ರಾಕ್ ಫೆಲ್ಲರ್ ಫೌಂಡೇಷನ್ ಎಂಬುದನ್ನು ಸ್ಥಾಪಿಸಿ ಪ್ರತಿಭಾಶಾಲಿಗಳಾದವರನ್ನು ಅದರ ಅಧ್ಯಕ್ಷರನ್ನಾಗಿ ಮಾಡಿ ಅದರ ಮೂಲಕ ನಾನಾ ದೇಶಗಳಲ್ಲಿರುವ ನಾನಾವಿಧ ಸಂಸ್ಥೆಗಳಿಗೆ ಅಪಾರವಾದ ಧನಸಹಾಯಮಾಡುತ್ತಿರುವನು. ಈತನು ವಿಶೇಷವಾಗಿ ಪ್ರಜಾರೋಗ್ಯಾಭಿವೃದ್ಧಿ ಮಾಡುವ ವಿಷಯದಿಂದ ವೈದ್ಯಶಾಸ್ತ್ರ ಪ್ರಾಬಲ್ಯಕ್ಕೆ ಧನಸಹಾಯ ಮಾಡುತ್ತಿರುವನು. ಚಿಕಾಗೊ ವಿಶ್ವವಿದ್ಯಾನಿಲಯದಲ್ಲಿ ಸಾಮಾಜಿಕ ಶಾಸ್ತ್ರೋಪಾಧ್ಯಾಯರಾಗಿದ್ದ ಡಾಕ್ಟರ್ ಜಾರ್ಜ್ ವಿನ್ಸೆಂಟ್ ಎಂಬ ಪ್ರತಿಭಾಶಾಲಿಯು ರಾಕ್ ಫೆಲ್ಲರ್ ಫೌಂಡೇಷನ್ನಿಗೆ ಅಧ್ಯಕ್ಷರಾಗಿದ್ದು ಸ್ವಾಮಿಕಾರ್ಯಧುರಂಧರರಾಗಿ ವಿಶೇಷ ಚಾತುರ್ಯದಿಂದ ವ್ಯವಹರಿಸುತ್ತಿರುವರು. 1923 ನೇ ಸಂವತ್ಸರದೊಂದರಲ್ಲಿಯೇ ಈ ರಾಕ್‌ಫೆಲ್ಲರ್ ಫೌಂಡೇಷನ್ನಿನ ಮೂಲಕ 6 ಕೋಟಿ 30 ಲಕ್ಷ ರೂಪಾಯಿಗಳು ಪ್ರಪಂಚದಲ್ಲಿರುವ ವಿವಿಧಸಂಸ್ಥೆಗಳಿಗೂ ವ್ಯವಸ್ಥೆಗಳಿಗೂ ವ್ಯಕ್ತಿಗಳಿಗೂ ಪ್ರಸಾದಿಸಲ್ಪಟ್ಟವು. ಈ ಹಣವೆಲ್ಲವೂ ಒಂದೆ ಹೇಳದ ಕಾರ್ಯಗಳಿಗೆ ವಿನಿಯೋಗಿಸಲ್ಪಟ್ಟವೆಂದು ಭಾವಿಸಬೇಕಾಗಿದೆ. ಯುನೈಟೆಡ್ ಸ್ಟೇಟ್ಸ್, ಫ್ರಾನ್ಸ್, ಇಟಲಿ, ಬೆಲ್ಜಿಯಂ, ಚೀನಾ, ಸಯಾಂ ಮೊದಲಾದ ದೇಶಗಳಲ್ಲಿ ವೈದ್ಯವಿದ್ಯಾಭ್ಯಾಸಮಾಡುವವರಿಗೂ, ಅನೇಕ ವೈದ್ಯಶಾಲೆಗಳ ಪೋಷಣೆಗೂ, ವೈದ್ಯಶಾಲೆಗಳ ಕಟ್ಟಡಗಳ ನಿರ್ಮಾಣಕ್ಕೂ ಸಹಕರಿಸಿದರೂ, ಬ್ರೆಜಿಲ್ ಚೀನಗಳಲ್ಲಿ ಹಳದೀಜ್ವರವೆಂದೆನಿಸುವ ಭಯಂಕರವಾದ ಮಹಾರೋಗವನ್ನು ಅಡಗಿಸಲು, ಆಫ್ರಿಕೆಯ ಪಶ್ಚಿಮ ತೀರಪ್ರಾಂತ್ಯದಲ್ಲಿ ಬಹಳವಾಗಿ ವ್ಯಾಪಿಸಿದ ಅನೇಕವಿಧ ರೋಗದಾವಾಗ್ನಿಗಳನ್ನು ನಿರ್ಮೂಲನಮಾಡಲು, 18 ದೇಶಗಳಲ್ಲೂ, ಯುನೈಟೆಡ್ ಸ್ಟೇಟ್ಸಿನಲ್ಲಿ ಆರು ರಾಷ್ಟ್ರಗಳಲ್ಲೂ ಪ್ರಬಲಿಸಿ ರತ್ತದ್ದ ಮಲೇರಿಯಾ ವ್ಯಾಧಿಯನ್ನು ಧ್ವಂಸಮಾಡಲು ದೇಶಸಿಸುವ ನದಿಯ ಪ್ರವಾಹದಿಂದ ನಷ್ಟಹೊಂದಿದ ಏಳು ರಾಷ್ಟ್ರಗಳಲ್ಲಿ ಆರೋಗ್ಯಾಭಿವೃದ್ಧಿಯನ್ನು ಪ್ರೋತ್ಸಾಹಿಸುವುದಕ್ಕೆ ಪರಟ್ಟ 85 ಸಂಸ್ಥೆಗಳ ಪೋಷಣೆಗಾಗಿಯೂ, ಒಂದು ವಿಧವಾದ ಕಟ್ಟಿ ಎಂಬುದನ್ನು ನಿರ್ಮೂಲಗೊಳಿಸಲು 21 ದೇಶಗಳ ಪ್ರಭುತ್ವದವರಿಗೆ 40 ದೇಶಗಳಲ್ಲಿ ವೈದ್ಯಕ್ಕೆ ಸಂಬಂಧಪಟ್ಟ 600 ಪಂಡಿತರುಗಳ ಸ್ಥಾನವನ್ನು ಕಲ್ಪಿಸಲು, ನಾನಾ ದೇಶಗಳಿಗೆ ಸಂಬಂಧಪಟ್ಟ 61 ವೈದ್ಯಕಾಲೇಜುಗಳಿಗೂ, ಪ್ರಯೋಗಶಾಲೆಗಳು, 127 ದಂಡಿಯಾಗಳಿಗೂ, ಯುನೈಟೆಡ್ ಸ್ಟೇಟ್ಸಿನಲ್ಲಿ ವೈದ್ಯಶಾಲಾ ಪರಿಸ್ಥಿತಿಯನ್ನು ಪರೀಕ್ಷಿಸುವ ದಕ್ಕೋಸ್ಕರ ಪ್ರಯತ್ನ ಮಾಡುವುದರ ಪರಿಣಾಮಕ್ಕಾಗಿ ಈ ರೀತಿಯಾಗಿ ಎಷ್ಟೋ ವಿಧದಿಂದ ಎಷ್ಟೋ ದೇಶದ ಪ್ರಭುತ್ವದವರಿಗೂ, ಎಷ್ಟೋ ವ್ಯಕ್ತಿಗಳಿಗೂ ಒಕ್ಕಣಿಸಿ ಕೊಟ್ಟಿದ್ದ ದ್ರವ್ಯವನ್ನು ಅನುಗ್ರಹಿಸಿರುವನು. ಒಂದು ವೈದ್ಯಶಾಸ್ತ್ರಕ್ಕಾಗಿಯೇ ವಿದ್ಯಾಭ್ಯಾಸಿಗಾಗಿಯೂ, ಶಾಸ್ತ್ರೀಯ ಪರಿಶೋಧನೆಗಾಗಿಯೂ, ಪ್ರಜಾರೋಗ್ಯ ಏರ್ಪಾಟಿಗಾಗಿಯೂ ಈ ಮಹನೀಯನ ಧನವು ಪರಿವರ್ತಿಸಲ್ಪಡುತ್ತಿರುವುದು. ಜಗತ್ತಿನಲ್ಲಿ ಇಂತಹ ದಾನಿಯು ರಾಕ್‌ಫೆಲ್ಲರನಂತೆ ಇನ್ನಾರು ಸಿಗುವರು. ಮಹಾದಾನಿಯು ಪ್ರಪಂಚದಲ್ಲಿ ಬೇರೊಬ್ಬನು ಇಲ್ಲವೆಂಬುದು ಸ್ಪಷ್ಟವು. ಎಡಿಸನ್, ಫೋರ್ಡ್, ರಾಕ್‌ಫೆಲರ್ ಎಂಬೀ ಮೂವರು ಅಮೇರಿಕೆಯವರೇ ಪ್ರಖ್ಯಾತಿಸುತ್ತಿರುವರು. ಇವರುಗಳ ಜೀವನ ಚರಿತ್ರೆಯು ಅಮೇರಿಕಾ ಖಂಡದ ಚರಿತ್ರೆಯಲ್ಲಿ ಅಲ್ಲದೆ ಪ್ರಪಂಚ ಚರಿತ್ರೆ ಗ್ರಂಥದಲ್ಲಿ ಮೇಲೆಯ ಸುವರ್ಣಾಕ್ಷರಗಳಲ್ಲಿ ಬರೆಯುವುದಕ್ಕೆ ಯೋಗ್ಯವಾಗಿದೆ. [illegible]

[illegible] ಸನಾತನ ಧರ್ಮಸಭೆ [illegible]

ಶ್ರೀ ಮೈಸೂರು [illegible] ಈ ಮಾಸದ [illegible] ಸಂತೋಷದಲ್ಲಿ ಈ ಸಭೆಯು [illegible] ನಡೆಸಿತು. [illegible] ಶ್ರೀ [illegible] ಅಧ್ಯಕ್ಷತೆಯಲ್ಲಿ ಒಂದು ಮಹಾ ಸಭೆಯು ಸೇರಿತ್ತು. ಪ್ರಮುಖರಾದ ಪುರಜನ ವಿದ್ವಾಂಸರುಗಳೂ, ರಾಜ ಸೇವಕರೂ, ಅಧಿಕಾರಿಗಳೂ, ಮುಂತಾದ 500 ಜನಗಳವರೆಗಿನ ಮಹಾಜನಗಳು ನೆರೆದಿದ್ದರು. ಶೃಂಗೇರಿಯಿಂದ ಬಂದಿರುವ ಆಯುರ್ವೇದ ವಿದ್ವಾನ್ ಬ್ರ ಶ್ರೀ ವೈದ್ಯರತ್ನಂ ಕೆ. ಶೇಷಶಾಸ್ತ್ರಿಗಳವರು ವೇದ್ಯಂದ ವಿವಾಹ ಶಾಸನದಿಂದ ಸನಾತನ ಧರ್ಮಕ್ಕೆ ಉಂಟಾಗುವ ತೊಂದರೆಗಳನ್ನು, ಸನಾತನ ಧರ್ಮಾಭಿಮಾನಿಗಳಿಗೆ ಉಂಟಾಗುವ ವ್ಯಥೆಯನ್ನು ಕುರಿತು ಶ್ರುತಿ ಸ್ಮೃತಿ ಆಯುರ್ವೇದ ಮುಂತಾದ್ದರ ಆಧಾರಗಳನ್ನು ಕೊಟ್ಟು ಉಪನ್ಯಾಸ ಮಾಡಿದರು.

ತರುವಾಯ ಸಭೆಯಿಂದ ಈ ಕೆಳಗೆ ಕಂಡ ಠರಾವುಗಳು ಸರ್ವ ಸಮ್ಮತಿಯಿಂದ ಮಾಡಲ್ಪಟ್ಟವು

ಠರಾವುಗಳು

1 ಭಗವಂತನು, ಭಾರತಭೂಮಿಯಲ್ಲಿ ಪ್ರಸ್ತುತ ಸನಾತನ ಧರ್ಮಕ್ಕೆ ಪ್ರಾಪ್ತವಾಗಿರುವ ಘೋರ ಸಂಕಟವನ್ನು ಪರಿಹರಿಸಿ ಮಾಡುವುದರ ಮೂಲಕ ಲೋಕಕಲ್ಯಾಣವನ್ನುಂಟುಮಾಡಲೆಂದು ಈ ಮಹಾಸಭೆಯವರು ಪ್ರಾರ್ಥಿಸುತ್ತಾರೆ

2 ಐರೋಪ್ಯರೆಯ ಮಹಾರಾಜ್ಞಿಯವರು ಮತ್ತು ಇದರ ಪ್ರಭುವರ್ಯರ ಸಹ ಸನಾತನಾರ್ಯರಿಗೆ ಹಾಟ್ಟಿನ ಪ್ರತಿಜ್ಞೆ [illegible] ಅನುಷ್ಠಾನ ಪ್ರಸ್ತುತ [illegible] ವಿರೋಧಿಸಿ ಮತ್ತು ತಾನಿದ್ದ [illegible] ವ್ಯಕ್ತಿ ಮಾತ್ರ [illegible] ಈ ಮಹಾಸಭೆಯವರು [illegible] ಸಂಕಟದ ಕಾರಣ ಮತ್ತು [illegible] ಈ ವಿವಾಹ ಶಾಸನವನ್ನು [illegible] ಅಧಿಕಾರವಿಂದ ರದ್ದು ಮಾಡಬೇಕೆಂದು ಪ್ರಾರ್ಥಿಸುತ್ತಾರೆ

3 ಶಾಸನ ಸಭೆಯ ರಚನೆಯಲ್ಲಿ ಮತ [illegible] ಸಂಬಂಧಪಟ್ಟ ಶಾಸನಗಳಿಗೆ ಅದಕ್ಕೆ ಸಂಬಂಧಪಟ್ಟ ಮತ್ತು [illegible] ಮತಗಳ ಮುಖಂಡರ ಪ್ರತಿನಿಧಿಗಳಿಂದ [illegible] ಜನಗಳಿಂದ [illegible] ಬಹು ಮತದಿಂದ ಅಂಗೀಕರಿಸಲ್ಪಡುವುದೇ [illegible] ಶಾಸನ ಸಭೆಗಳಿಗೆ ಅಧಿಕಾರವಿಲ್ಲವೆಂದೂ ಈಗ [illegible] ಇಂತಹ ಶಾಸನಗಳನ್ನು [illegible] ಪ್ರಾರ್ಥಿಸುತ್ತಾರೆ

4 1858 ನೇ ಇಸವಿಯಲ್ಲಿ ವಿಕ್ಟೋರಿಯಾ ಮಹಾರಾಜ್ಞಿಯವರಿಂದ ದಯಪಾಲಿಸಲ್ಪಟ್ಟಿರುವ ಪ್ರೊಕ್ಲಮೇಷನ್ ಪ್ರಕಾರ ಮತವಿಷಯದಲ್ಲಿ ತಾಟಸ್ಥ್ಯವನ್ನು ವಹಿಸುವಂತೆ ಇಂಡಿಯಾಸರ್ಕಾರದವರಿಗೆ ತಿಳಿಸಬೇಕೆಂದು ವಿನಯಪೂರ್ವಕವಾಗಿ ರಾಜಭಕ್ತಿಯಿಂದ ಶ್ರೀ ಸಾರ್ವಭೌಮರಲ್ಲಿಯೂ ಪಾರ್ಲಿಮೆಂಟ್ ಮಹಾಸಭೆಯವರಲ್ಲಿಯೂ ಈ ಸಭೆಯವರು ಪ್ರಾರ್ಥಿಸುತ್ತಾರೆ

5 ಶಾಸನ ಸಭೆಗಳಲ್ಲಿ ಸನಾತನ ಧರ್ಮದ ರಕ್ಷಣೆಗಾಗಿ ಪ್ರಯತ್ನಿಸಿ ಕೆಲಸ ಮಾಡಿದ ಶ್ರೀ ಎಂ ಕೆ ಆಚಾರ್ಯ ಮುಂತಾದ ಸದಸ್ಯರನ್ನು ಈ ಮಹಾಸಭೆಯವರು ಅಭಿನಂದಿಸುತ್ತಾರೆ

6 ರಾಜಕೀಯ ವಿಷಯಗಳಲ್ಲಿ ಎಷ್ಟು ವ್ಯಾತ್ಯಾಸಗಳಿರಬಹುದಾದರೂ ಕಾಂಗ್ರೆಸ್ ಪಕ್ಷದ ಮೆಂಬರುಗಳೂ ಹಿಂದೂ ಮತ್ತು ಮುಸಲ್ಮಾನ ಮಹಾಜನಾಭಿಪ್ರಾಯವನ್ನು ಪಡೆಯದೆ ಮತಾಸಂಬಂಧ ವಿಷಯದಲ್ಲಿ ಸರ್ಕಾರದ ಶಾಸನಗಳಿಗೆ ಬೆಂಬಲ ಕೊಡಬಾರದೆಂದು ಈ ಸಭೆಯವರು ಒತ್ತಾಯ ಪಡಿಸುತ್ತಾರೆ.

7 ಸನಾತನ ಧರ್ಮಾಭಿಮಾನಿಗಳಾದ ಭಾರತೀಯ ಸ್ತ್ರೀಯರ ಮಹಿಳಾ ಸಭೆಗೆ ಮೆಂಬರುಗಳಾಗಿ ಬಿಟ್ಟ ಕೊಡದೆ ವಿಶ್ವ ಸನಾತನ ಧರ್ಮ ವಿರೋಧವಾದ ಸಲಹೆಗಳನ್ನು ಕೊಡದೆ ಇರಬೇಕೆಂದು ಪ್ರಾರ್ಥನೆ. ಅವರ ಬಿಟ್ಟವರಿಗೆ ಮಾತ್ರ ಓಟುಗಳನ್ನು ಕೊಡಬೇಕೆಂದು ಈ ಮಹಾಸಭೆಯವರು ವಿನಯದಿಂದ ಪ್ರಾರ್ಥಿಸುತ್ತಾರೆ

8 ಈ ಠರಾವುಗಳಲ್ಲಿ ಕಂಡ ಸಂಬಂಧಪಟ್ಟವರಿಗೆ ಕಳುಹಿಸಲು "ಸನಾತನ ಧರ್ಮ ಸಂವರ್ಧಿನೀ ಸಭಾ" ಎಂಬ ಸಂಸ್ಥೆಯ ಕಾರ್ಯದರ್ಶಿಯವರಿಗೆ ಈ ಸಭೆಯು ಈ ಮಹಾಸಭೆಯವರು ಅಧಿಕಾರವಿತ್ತಿರುತ್ತಾರೆ

ಮೈಸೂರು, 31 10 1929

ಪೌರಾಣಿಕ ಎಲ್ ಜಿ ಶ್ರೀಕಂಠಶಾಸ್ತ್ರಿ,
ಗೌ॥ ಕಾರ್ಯದರ್ಶಿ,
ಸನಾತನ ಧರ್ಮಸಂವರ್ಧಿನೀ ಸಭಾ

ಭಾರತನಾಟಕ ಚರಿತ್ರೆ

1. ಮೃಚ್ಛಕಟಿಕ ನಾಟಕ
ಅಥವಾ
ಮಣ್ಣಿನ ಬಂಡಿ
[ಮ ಅನಂತಪದ್ಮನಾಭರಾಯರಿಂದ]

ಇದು ನಮ್ಮ ಸಂಸ್ಕೃತದಲ್ಲಿ ಅತ್ಯಂತ ಪ್ರಸಿದ್ಧಿ ಪಡೆದ ಪ್ರಾಚೀನವಾದ ನಾಟಕವಾಗಿರುತ್ತದೆ ಈ ನಾಟಕವನ್ನು ಬರೆದು ಸುಮಾರು 2000 ವರ್ಷಗಳಾಗಿರಬಹುದೆಂದು ಹೇಳಲಾಗುತ್ತದೆ. ಇದರಲ್ಲಿ 10 ಅಂಕಗಳುಂಟು. ಇದನ್ನು ಬರೆದ ಕವಿಯು ಶೂದ್ರಕ ಮಹಾರಾಜನು. ಆತನ ಈ ನಾಟಕಕ್ಕೆ [illegible] ದಿಯಲ್ಲಿ ಹೇಳಲ್ಪಟ್ಟಿದೆ.

ಈ ನಾಟಕವು, ನಾಟಕದಲ್ಲಿರುವ ದಶವಿಧಗಳಲ್ಲಿ ಒಂದು ಪ್ರಕರಣವಾಗಿರುವುದು. ಇದು ಇತರ ನಾಟಕಗಳಂತಲ್ಲ. ಇದರಲ್ಲಿ ಬರುವ ಕಥೆಯೂ ಸಾಮಾನ್ಯರ ಜೀವನಕ್ಕೆ ಸಂಬಂಧಿಸಿದ ಕಥೆಯಾಗಿದ್ದು ಆ ಕಾಲದಲ್ಲಿ ನಡೆಯುತ್ತಿದ್ದ ಜನಗಳ ವ್ಯವಹಾರಗಳನ್ನು ತೋರಿಸಿಕೊಡುತ್ತದೆ. ನಾಟಕದ ಕಥೆಯು ಬಹು ರಮ್ಯವಾದುದು. ಹೃದ್ಯವಾದ ಪದ್ಯಗಳಲ್ಲಿಯೂ ಗದ್ಯದಲ್ಲಿಯೂ ಪ್ರಾಕೃತ ಮತ್ತು ಸಂಸ್ಕೃತದಲ್ಲಿ ನಾಯಕನಾಯಿಕೆಯರ ಗುಣಗಳನ್ನು ಕುರಿತು ಹೇಳಿ ಕಥಾ ಸಂದರ್ಭಗಳನ್ನು ಚಿತ್ರಿಸಿ ಇರುವನು. ಇದರ ಅಲಂಕಾರಗಳು, ನಡತೆ, ಪದ್ಯಗಳು ಈ ಕಾಲದಲ್ಲಿಯೂ ಜನರಿಗೆ ಬಹು ಪ್ರಿಯವಾಗಿದೆ. ನಾಟಕ ಮಹಾರಾಜರು [illegible] ಸನಾತನ "ಶಕಾರನ" ಪಾತ್ರ ಇದೊಂದಿಗಳು ಎಷ್ಟು ಸ್ವಾರಸ್ಯ ಇದ್ದವುಗಳನ್ನು ತೋರಿಸುವುದಲ್ಲದೆ, ಮಾನವನು ಗುಣಾಢ್ಯನಾಗಿ, ಐಶ್ವರ್ಯವಂತನಾಗಿ, ಅಂತಹದ್ದಾಗಿ ಧನವನ್ನು ಕಳೆದು ಬಡವನಾದರೆ ಹೊಂದುವ ಕಷ್ಟಗಳು ಬಡತನದಲ್ಲಿಯೂ ಸತ್ಯವನ್ನು ಬಿಡದೆ ಕೊನೆಗೆ ಶ್ರೇಯಸ್ಸನ್ನು ಹೊಂದುವ [illegible]

ಗಳಲ್ಲಿ ಇದ [illegible] ಶ್ರೀಮಾನ್ ಬುದ್ಧ ಕಾಲದ [illegible] ವರ್ಣಿಸಿದ್ದಾನೆ [illegible] ಕಾಲದ ಸಾಮಾಜಿಕ ಸ್ಥಿತಿಗತಿಗಳನ್ನೂ [illegible] ಪ್ರಕರಣದಲ್ಲಿ [illegible] ಸ್ತ್ರೀಯರಿಗೆ [illegible] ನಾಟಕದಲ್ಲಿ ಪ್ರಾಮುಖ್ಯ [illegible] ವ್ಯಾಪಾರದಲ್ಲಿ ನಾಟ್ಯಶಾಸ್ತ್ರದ [illegible] ಎಂದರೆ ಬಡವನಾಗಿದ್ದವನನ್ನು ಬದಲಾಯಿಸಿ ಆ ಸ್ವಾಸ್ಥ್ಯಕ್ಕೆ ಮಹೋನ್ನತ [illegible] ಕಥೆಯಲ್ಲಿ [illegible] ಸಂದರ್ಭವನ್ನು [illegible] ಎಂದು ತಿಳಿಯಬೇಕು. ಇದೂ ಅಲ್ಲದೆ ಆ ಕಾಲದಲ್ಲಿದ್ದ ಜನರ ಜೀವನಗಳನ್ನು ಎಷ್ಟರಮಟ್ಟಿಗೆ ಇದು ತೋರುವುದೆಂಬುದನ್ನು ಚೆನ್ನಾಗಿ ಪ್ರತ್ಯಕ್ಷಪಡಿಸುವ ಪ್ರಕರಣವಾಗಿರುವುದೆಂದು ತಿಳಿಯಬೇಕು.

ಈ ನಾಟಕವು ಬಹು ರಸವತ್ತಾಗಿರುವ ನಾಟಕಗಳಿಂದ ಕೂಡಿರುವುದಲ್ಲದೆ, ನಾಟಕ ಸಂವಿಧಾನ, ನವರಸಗಳಿಂದಲೂ ಕೂಡಿರುವುದರಿಂದ ನೋಡುವವರಿಗೆ ಸಂತೋಷವನ್ನು, ವಿನೋದವನ್ನು, ಬುದ್ಧಿವಾದವೇ ಮೊದಲಾದುವುಗಳಿಂದ ಕೂಡಿ ಕೊಡುತ್ತಿರುವುದು. ಇಂತಹ ನಾಟಕವನ್ನು ನಮ್ಮ ಹಿಂದು ದೇಶದಲ್ಲಿ ಕನ್ನಡ ಭಾಷೆಯಲ್ಲಿ ನಾಟಕ ಸಂಘದವರು ಆಡುತ್ತಿರುವರಲ್ಲದೆ, ಪ್ರಾಮುಖ್ಯವಾಗಿ ನಮ್ಮ ಮೈಸೂರು ಸಂಸ್ಥಾನದಲ್ಲಿ ಹೆಸರುಗೊಂಡಿದ್ದು ಮಹಾರಾಜರಾಗಿದ್ದ ಶ್ರೀ ಚಾಮರಾಜೇಂದ್ರ ಒಡೆಯರವರ ಪ್ರೋತ್ಸಾಹದಿಂದ ಆಗ ಉತ್ಕೃಷ್ಟ ಸ್ಥಿತಿಯಲ್ಲಿದ್ದ "ಚಾಮರಾಜೇಂದ್ರ ಕರ್ಣಾಟಕ ನಾಟಕ" ಸಂಘದವರು ಅಭಿನಯಿಸಿ, ಗ್ರಂಥಕರ್ತನ ಉದ್ದೇಶವನ್ನು ಸಫಲಗೊಳಿಸಿದರು. ಈಗಲೂ ಮೈಸೂರಿನ ಸಂಘದವರು "ಕರ್ನಾಟಕ ಕರ್ನಾಟಕ ನಾಟಕ ಸಂಘ" ಎಂಬ ಹೆಸರಿನಿಂದ ಆಡುತ್ತಿರುವರು. ಮುಖ್ಯವಾಗಿ ನಾಟಕವು ಸೀತಾದಿ ಅಲ್ಲಗೆ ಬರಲು ಸಾಧಕವಾದ ವಾಗ್ದೇವಿಯಾಗಿರುವುದು, ಇದಕ್ಕೆ ಮಹಾರಾಜರು ಉದಾರವಾದ ಸಹಾಯ ಒದಗಿಸಿದರು ಕವಿಗಳಿಗೆ ಸಹಾಯ ದೊರೆಯುವ, ಸಂಘಕ್ಕೆ ಪ್ರೋತ್ಸಾಹವು ಇಲ್ಲದೆ ಕೈಯೋ ಹೋಯಿತು. ನಾಟಕಗಳಿರದೆಲ್ಲ, ನಾಟಕ ಸಂಘದವರ ನೀತಿ, ಪಡೆದವರೆಲ್ಲರು ಕೆಟ್ಟು ದರ್ಶಕರಿಗೆ ಚಾರಿತ್ರ್ಯವಾಗುತ್ತಿದ್ದುದನ್ನು ಕುರಿತು ಬರೆಯಲು ಸ್ಥಳವಿಲ್ಲವಲ್ಲ.

ಮೇಲ್ಕಂಡ ನಾಟಕವನ್ನು ಜರ್ಮನ್ ಪಟ್ಟಣದಲ್ಲಿಯೂ, ನ್ಯೂಯಾರ್ಕ್ ... ಕಲ್ಕತ್ತದಲ್ಲಿಯೂ ಇಂಗ್ಲೀಷಿನವರು ತಮ್ಮ ಭಾಷೆಯಲ್ಲಿ ಆಡಿದರೆಂದು "Literary History of India" ಎಂಬ ಗ್ರಂಥದಿಂದ ತಿಳಿದು ಬರುತ್ತದೆ. ಇಂತಹ ನಾಟಕವನ್ನು ನೋಡಿದ ಜನರೆಲ್ಲರೂ ಅದರ ರಸಾಸ್ವಾದನ ಪಡೆದ ಸಂದರ್ಭವನ್ನು ಆಡುವ ಕಾಲದಲ್ಲಿ 7-8 ವೇಳೆ ಗಳವರೆಗೂ ಪುನಃ ಪುನಃ ನೋಡಬೇಕೆಂದು ಬಯಸಿಕೊಳ್ಳುತ್ತಿದ್ದರೆಂದು ತಿಳಿವಳಿಕೆ ಇದೆ. ಇಂತಹ ನಾಟಕದಂತೆ ಇರುವುದಿಗೂ ಯಾವುದೂ ಬರ ಲಿಲ್ಲ ಎಂಬುದೊಂದೇ ಕೊರತೆಯುಂಟಾಗಿದೆ

ಈ ನಾಟಕವನ್ನು ಬರೆದ ಗ್ರಂಥಕರ್ತನಾದ ಶೂದ್ರಕ ಮಹಾರಾಜನು ಕವಿ ಎಂದು ಪ್ರಸಿದ್ಧನಾಗಿದ್ದನಲ್ಲದೆ ಋಗ್ವೇದ, ಸಾಮವೇದ, ಇವು ಗಳಲ್ಲಿ ಚೆನ್ನಾಗಿ ಪಾಂಡಿತ್ಯವನ್ನು ಸಂಪಾದಿಸಿದ್ದನು ಮತ್ತು ಆನೆಯನ್ನು ಪಳಗಿಸಿ, ಹತೋಟಿಯಲ್ಲಿ ತಂದುಕೊಳ್ಳುವ ವಿದ್ಯೆಯನ್ನು ಚೆನ್ನಾಗಿ ಬಲ್ಲವನಾಗಿದ್ದನೆಂದು ತಿಳಿದುಬರುವುದು. ಈತನು ನೋಡುವುದಕ್ಕೆ ಲಕ್ಷಣವಾದ ಸ್ವರೂಪನಾಗಿ ಯುದ್ಧದಲ್ಲಿ ಸಮರ್ಥನೆನಿಸಿ, ರಣರಂಗದಲ್ಲಿ ನಿಂತು ಯುದ್ಧ ಮಾಡಬೇಕೆಂಬ ಸ್ಪೃಹೆಯುಳ್ಳವನಾಗಿದ್ದನೆಂದೂ ತಿಳಿದುಬರುವುದು. ಈತನು ಅಶ್ವಮೇಧಯಾಗವನ್ನು ಮಾಡಿ, ತನ್ನ ಮಗನಿಗೆ ರಾಜ್ಯಭಾರವನ್ನು ಕೊಟ್ಟು 100 ವರುಷಗಳವರೆಗೂ ಜೀವಿಸಿದ್ದು ಕೊನೆಗೆ ಚಿತಿಯನ್ನೇರ್ಪಡಿಸಿ ಅದರಲ್ಲಿ ಬಿದ್ದು ಪ್ರಾಣತ್ಯಾಗವನ್ನು ಮಾಡಿಕೊಂಡನೆಂದು ತಿಳಿದುಬರುವುದು. ಆ ಕಾಲದಲ್ಲಿ ಈ ರೀತಿ ಪ್ರಾಣ ಬಿಡುವುದು ಯೋಗ್ಯನೆಂದು ಭಾವಿಸಿದಂತೆ ಮಾಡಿದನೆಂದು ತಿಳಿಯಬರುವುದು.

ಪತ್ರವ್ಯವಹಾರ.

☞ ಪತ್ರವ್ಯವಹಾರಗಳ ಲೇಖಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು —ಸಂಪಾದಕ.

ಶ್ರೀ ರಾಮಕೃಷ್ಣಾಶ್ರಮ ಮೈಸೂರು.

ಕಳೆದ ವರ್ಷದಂತೆಯೇ ಈ ವರ್ಷವೂ ಶ್ರೀರಾಮಕೃಷ್ಣಯುವಕ ಸಂಘದವರು ತಾ 2 11 29 ನೆಯ ಶನಿವಾರ ರಾತ್ರಿ ಒಕ್ಕಲಿಗರ ಬೋರ್ಡಿಂಗಿನಲ್ಲಿ ಆಶ್ರಮದ ಸಹಾಯಾರ್ಥ ನಾಟಕವನ್ನಾಡಿದರು. ಶ್ರೀಕಂಠಶಾಸ್ತ್ರಿಗಳವರ ತಂದೆಯವರು ಪಂಡಿತರಾದ ಸುಬ್ಬಾಶಾಸ್ತ್ರಿಗಳವರಿಂದ ವಿರಚಿತವಾದ "ಮೃಚ್ಛಕಟಿಕ" ವೆಂಬ ನಾಟಕವನ್ನು ಅಭಿನಯಿಸಿ ಬಂದ ಹುಟ್ಟುವಳಿಯನ್ನು ಶ್ರೀರಾಮಕೃಷ್ಣಾಶ್ರಮದ ಕಟ್ಟಡದ ಫಂಡಿಗೆ ಕೊಟ್ಟರು. ಇತರ ಕಂಪನಿಗಳವರು ಅಭಿನಯಿಸಿದರು ಪಡೆದಿರುವ ಈ ನಾಟಕವನ್ನು ಮೇಲೊಟ್ಟರು ಅತಿ ಚೆನ್ನಾಗಿದ್ದೆಂದು ಹೊಗಳಿಕೊಳ್ಳುವುದು ಬಹು ಕಷ್ಟ. ಆದರೆ ಈ ಯುವಕ ಸಂಘದವರು ವಿದ್ಯಾರ್ಥಿಗಳಾಗಿಯೂ, ಉಪಾಧ್ಯಾಯರುಗಳಾಗಿಯೂ ಇದ್ದುಕೊಂಡು ಈ ಅಪ್ರತಿಮವಾದ ನಾಟಕವನ್ನು, ನಾಟಕವಾಡುವುದನ್ನೇ ತಮ್ಮ ಕಸುಬನ್ನಾಗಿಟ್ಟುಕೊಂಡಿರುವ ಕಂಪೆನಿಯವರಿಗಿಂತ ಬಹಳ ಚೆನ್ನಾಗಿ ಅಭಿನಯಿಸಿದುದು ತುಂಬಾ ಪ್ರಶಂಸನೀಯವಾದ ವಿಚಾರವಾಗಿದೆ.

ಈ ನಾಟಕದಲ್ಲಿನ ಶಕಾರ, ವಸಂತಸೇನೆ, ಮೈತ್ರೇಯ, ಚಾರುದತ್ತ, ರದನಿಕೆ, ಶರ್ವಿಲಕ, ಮದನಿಕೆ, ರದನಿಕೆ, ವಿಟ, ಬೌದ್ಧಸನ್ಯಾಸಿ, ಚೇಟರು, ಚಟ್ಟ ಮತ್ತು ಅಪ್ಪಳ ಈ ಪಾತ್ರಗಳನ್ನು ವಹಿಸಿದ್ದವರ ಅಭಿನಯಗಳು ಬಹಳ ಮನೋಹರವಾಗಿದ್ದುವು. ಹೆಚ್ಚೇಕೆ, ಕಥಾನಾಯಕ ನಾಯಕಿಯರು ಮೊದಲ್ಗೊಂಡು ಸ್ಯಾಯಾಸ್ಥಾನದ ಜವಾನನ ವರೆಗೂ ಎಲ್ಲಾ ಪಾತ್ರಗಳೂ ಚೆನ್ನಾಗಿಯೇ ಇದ್ದುವು ಮತ್ತು ಈ ಸಂಘದವರಿಗೆ ಶ್ರೀ ಚಾಮುಂಡೇಶ್ವರೀ ಕಂಪೆನಿಯವರು ತಮ್ಮ ಕೈಲಾದ ಸಹಾಯವನ್ನು ಮಾಡಿ ಈ ಧರ್ಮಕಾರ್ಯದಲ್ಲಿ ಭಾಗಿಗಳಾದರು ತುಂಬಾ ಸಂತೋಷಕರವಾಗಿದೆ. ಈ ಸಂಘದವರಿಗೆ ದೇವರು ಈ ವಿಧವಾದ ಧರ್ಮಬುದ್ಧಿಯನ್ನು ಸ್ಥಿರವಾಗಿ ಕೊಟ್ಟಿರಲೆಂದು ನಾವು ಶ್ರೀರಾಮಕೃಷ್ಣ ಪರಮಹಂಸರನ್ನು ಪ್ರಾರ್ಥಿಸುತ್ತೇವೆ. ಓರ್ವ ಪ್ರತ್ಯಕ್ಷದರ್ಶಿ.

ವಿಧಿಪ್ರಾಜ್ಞರಾರು ಅವರ ಧರ್ಮವೇನು?

ವೇದವು ಸನಾತನದಿಂದ ಅನಾಚಾರವಾಗಿರುವುದನ್ನು "ವೇದ ಮೂರ್ತಿ" ಎಂಬ ಪದವು ವ್ಯಕ್ತಗೊಳಿಸುತ್ತದೆ. ಇಂತಹ ಘನವಾದ ಪದವನ್ನು ಪೊಂದಿರುವ ಬ್ರಾಹ್ಮಣ ಮಹನೀಯರಲ್ಲಿ ಅಂಗುಷ್ಠದಿಂದ ನೆತ್ತಿಯ ವರೆಗೂ, ಹಗಲು ಹೊತ್ತು ಹಗಲು ಬಟ್ಟೆ ಹೆಚ್ಚಿಕೊಂಡು ಹುಡುಗರು ದಂಡ, ಬ್ರಹ್ಮಚಾರಿ ಗುರುಕುಲವನ್ನು ಇಲ್ಲದ ಭಾವನೆಯಾದ ಹಿರಿಯರಂತಿರುವ ಬಾಯನ್ನು [illegible] ಸಂಬಂಧವನ್ನುಂಟುಮಾಡಿಕೊಳ್ಳುವುದು.

ಬ್ರಾಹ್ಮಣನೆಂದರೇನು? ಬ್ರಾಹ್ಮಣ ಲಕ್ಷಣಗಳು ಯಾವುವು? ಬ್ರಾಹ್ಮಣತ್ವಕ್ಕೆ ಜೀವನಕ್ಕೆ? ಅಂತಹ ತೇಜಸ್ಸನ್ನು ಹೊಂದಿರುವ ಬ್ರಾಹ್ಮಣ

ನನ್ನ ಗುಣಗಳನ್ನು ಏನು ಹೇಳಲಿ? ಇವುಗಳೊಂದೂ ನನಗೆ ಇಲ್ಲವು ಆದರೆ ಒಬ್ಬ ಮಹಾತ್ಮರನ್ನು ಕೇಳಿದ್ದಕ್ಕೆ ಅವರು ಹೇಳಿದ್ದು. [illegible] ಬಾಹ್ಯೇಂದ್ರಿಯನಿಗ್ರಹ, ತಪಸ್ಸು, ಶುಚಿತ್ವ, ಶಾಂತಿ, ಕ್ಷಾಂತಿ, ಆರ್ಜವ, ಗುರುಸೇವನವು, [illegible] ವಿದ್ಯಾ, ಶ್ರದ್ಧಾ, ಆಸ್ತಿಕ್ಯ, ಸತ್ಯ, ಇತ್ಯಾದಿ ಗುಣಗಳಿಂದ ಶೋಭಿಸುವರು ಬ್ರಾಹ್ಮಣರೆಂದು ಹೇಳಿ ಶಾಸ್ತ್ರಾಧಾರ ಕೊಟ್ಟಿದ್ದಾರೆ [illegible] (ಸೇವನ್ನಾಸುರ ಶೋಧಿಸಬಹುದು)

ಶಮೋದಮಸ್ತಪಃ ಶೌಚಂ ಕ್ಷಾಂತಿರಾರ್ಜವಮೇವ ಚ ।
ಜ್ಞಾನಂ ವಿಜ್ಞಾನಮಾಸ್ತಿಕ್ಯಂ ಬ್ರಹ್ಮಕರ್ಮ ಸ್ವಭಾವಜಂ ॥

ನಾನು ಈ ರೀತಿಯಾದ ಬ್ರಾಹ್ಮಣ ಗುಣಗಳನ್ನು ಹೊಂದಿಯೂ ಇಲ್ಲ, ಹೊಂದಿದವರನ್ನು ನೋಡಿಯೂ ಇಲ್ಲ. "ಶಾಸ್ತ್ರ ಪರರನ್ನು ನಂಬ" ಎಂಬ ನಾಣ್ಣುಡಿಯಂತೆ ಬ್ರಾಹ್ಮಣತ್ವದ ನಡತೆಯೇ ಇಲ್ಲದ ನನಗೆ ಬ್ರಹ್ಮ ತೇಜಸ್ಸಿನಿಂದ ಪ್ರಕಾಶಮಾನರಾದ ಬ್ರಾಹ್ಮಣರನ್ನು ತಿಳಿಯುವ ಯೋಗ್ಯತೆಯು ತಾನೇ ಹೇಗೆ ಬಂದೀತು? ಅಗಾಧವಾದ ಬ್ರಹ್ಮಪದವಿಯನ್ನೇ ಸಸದೆ ಮಾಡುವ, ಬ್ರಾಹ್ಮಣನೆಂಬ ಹೆಸರನ್ನು ಬ್ರಾಹ್ಮಣ ಕರ್ಮದಂತೆ ನಡೆಯದೆ ಬರಿಯ ಸುಳ್ಳು ನಟನೆ ನಡೆಯುತ್ತ ನಾಟಕಾದಿಗಳಲ್ಲಿ ಅಭಿನಯಿಸುವ ಬ್ರಾಹ್ಮಣ ಪಾತ್ರದಂತೆ ನಡೆಯುವುದರಿಂದಲೇ ಹೇಳಿಸಿಕೊಳ್ಳುವುದಕ್ಕೆ ನನ್ನ ಮನಸ್ಸು ಒಪ್ಪುವುದಿಲ್ಲ. ನನ್ನಲ್ಲಿ ಬ್ರಾಹ್ಮಣತ್ವದ ಚಿಹ್ನೆಗಳು ಯಾವುವೂ ಇಲ್ಲ. [illegible] ಕೆಲಸಗಳನ್ನು ಮಾಡುತ್ತಾ, ವಿಷಯಾಸಕ್ತನಾಗಿ ಸೇವಾವೃತ್ತಿಯಲ್ಲಿ ಜೀವನಮಾಡುತ್ತಿದ್ದೇನೆ. ನನ್ನ ಸೇವಾವೃತ್ತಿಯೇ ನನ್ನ ತಮೋಗುಣಪ್ರಧಾನವಾದ ಶೂದ್ರತ್ವವನ್ನು ತಿಳಿಸುತ್ತದೆ. ಸತ್ವಗುಣಪ್ರಧಾನರಾದ ಬ್ರಾಹ್ಮಣರ ಪಾದಸೇವಕನಾಗಿ [illegible] ದಲೇ ನನ್ನ ಜಾತಿ ತಿಳಿಯಬಹುದಾಗಿದೆ. ನಾನು [illegible] ನುಡಿಯುವುದೂ, ನಡೆಯಂತೆ ನಡೆಯುವುದೂ ನನ್ನ ಧರ್ಮ. ನನ್ನ ಮನಸ್ಸು ಒಗ್ಗಿದ ಕಡೆ ಆಚಾರಾದಿ ವ್ಯವಹಾರಗಳನ್ನು ನಡೆಸತಕ್ಕವನು. ಡಂಭಾಚಾರದಿಂದಲೂ, ರಕ್ಕಭಕ್ತಿಯಿಂದಲೂ, ಪ್ರಯೋಜನವಿಲ್ಲವೆಂಬುದೇ ನನ್ನ ದೃಢವಾದ ನಂಬಿಕೆಯಾಗಿದೆ. ನಾನು ಯಾರೆಂಬುದೇ ನನಗೆ ಗೊತ್ತಿಲ್ಲ. ಇಂಥಾ ನನಗೆ ಬ್ರಹ್ಮಜ್ಞಾನ, ಬ್ರಾಹ್ಮಣತ್ವದ ನಡತೆ ಇವು ಹೇಗೆ ತಿಳಿದೀತು? ಸುಳ್ಳು ನಟನೆಯಿಂದ ನಡೆಯುತ್ತಾ ಬ್ರಾಹ್ಮಣನೆಂದು ಕರೆಸಿಕೊಳ್ಳುವುದು ನನಗೆ ಇಷ್ಟವಿಲ್ಲ. ನನಗೆ ಶಕ್ತಿಭಕ್ತಿ, ಡಂಭಾಚಾರ, ಇವುಗಳನ್ನು ಮಾಡಬಾರದೆಂದು ತಿಳಿಸಿಕೊಟ್ಟ ಶ್ರೀ ಹುಬ್ಬಳ್ಳಿ ಆರೂಢ ಸ್ವಾಮಿಗಳವರ ದರ್ಶನ, ಸಾಧನೆ, ಇವುಗಳಿಂದ ಬಂದುದಾಗಿದೆ. [illegible] ದಿಂದಲೂ ಧರ್ಮದಿಂದಲೂ, ವ್ಯವಹಾರ ಮಾಡುತ್ತಾ ಹೊಟ್ಟೆ ಹೊರೆಯುವುದು ನನಗೆ ಇಷ್ಟವಿಲ್ಲ. ಇದೇ ನನ್ನ ನಿಜಸ್ಥಿತಿ.

ಇದನ್ನೆಲ್ಲಾ ಆಲೋಚಿಸಿ ಬ್ರಾಹ್ಮಣ ಮಹಾಶಯರು ಬ್ರಾಹ್ಮಣನೆಂದರೇನು? ಇವನ ಧರ್ಮ ಯಾವುದು? ಇದರಂತೆ ಎಲ್ಲರೂ ನಡೆಯುತ್ತಾರೆಯೇ? ತಾವು ನಡೆಯುತ್ತೇವೆಂಬ ನಂಬಿಕೆ ತಮಗಿರುವುದು ಉಂಟೇ ಎಂಬುದನ್ನು ತಿಳಿದುಕೊಂಡು, ನಾನು ಒಬ್ಬನು ನಾನಲ್ಲ, ನಡೆಯದವನಾಗಿದ್ದರೆ ನನ್ನನ್ನು ಬ್ರಾಹ್ಮಣನೆಂದು [illegible] ಬೇಡುವುದಾಗಿ ಪ್ರಾರ್ಥನೆ.

T. NANJUNDIAH,
Headmaster

ವೀರಶೈವರು ಗಮನಿಸತಕ್ಕದ್ದು

ವೀರಶೈವ ಗುರುಸ್ಥಲ ಮತ್ತು ವಿರಕ್ತ ಪಂಚಾಚಾರ್ಯರಾದಿಗಳು ಸ್ವಾಭಿಮಾನ, ಸ್ವಾರ್ಥಸಾಧನೆಗಳನ್ನು ಹಿಂದಿಟ್ಟು ವೀರಶೈವ ಸಮಾಜದ ಉನ್ನತಿಯ ಬಗ್ಗೆ ಹಗಲಿರುಳು ಸಾಧಿಸಬೇಕಾದುದು ಅವರ ಕರ್ತವ್ಯವಾಗಿದೆ. [illegible] ಹೀಗೆ ನಡೆಯುವವರಿಗೇನೇ ಧರ್ಮಗುರುಗಳೆಂದೂ, ಶಿವಸ್ವರೂಪಿಗಳೆಂದೂ ಹೇಳಬೇಕಲ್ಲವೆ? ಇಂಥ ಧರ್ಮಗುರುಗಳು ಈ ಕಾಲಕ್ಕೆ ಅಪರೂಪ. ಕವಿತಾಳ ಕಲ್ಲುಮಠದ ಶ್ರೀ ಶಿವಾನುಭವ ಚರವರ್ಯ ಶ್ರೀ ಬಸವಲಿಂಗಸ್ವಾಮಿಗಳವರು ಆ ಸ್ವಾರ್ಥತ್ಯಾಗಿಗಳೂ, ಏಕಾಂತ ದಾಸೋಹಭಕ್ತಿಪರರೂ ಎಂಬ ಸಂಗತಿಯು ಇವರ ದರ್ಶನವನ್ನು ಪಡೆದವರಿಗೇ ಗೊತ್ತಾಗುವುದು. ಇಂಥ [illegible] ಸಮಾಜಪ್ರೇಮಿಗಳು [illegible] ಬೇಕಾಗಿದೆ. ಆದರೆ ಇನ್ನೂ ಇವರ ಇಷ್ಟದಂತೆ ಸಮಾಜಸೇವೆಗೆ ಸಹಾಯಕರಾದ ಜನರು ಕಡಿಮೆಯೆಂದು ಹೇಳಬಹುದು! ಎಲ್ಲಿಂದರೆ [illegible] ಬೀಳ ಬೇಕಾಗಿದೆಯೆ?

ಸದರಿ ಬಸವಲಿಂಗಸ್ವಾಮಿಗಳು ವಿದ್ಯಾವಂತರಾಗಿ ಇನ್ನೂ ಸಣ್ಣ ವಯಸ್ಸು. ಅಂದರೆ ಮೂವತ್ತು ವರ್ಷದೊಳಗಿದ್ದಾಗ ಮಠಕ್ಕೆ ಹೋಗಿ [illegible] ಪೀಠದ ಭಕ್ತರ [illegible] ಭಾವಿಸಿಕೊಂಡು ಸುಂದರ ತಮ್ಮ ಮಠಕ್ಕೆ ಆಗಮಿಸಿದ ಭಕ್ತಾದಿಗಳಿಗೆ [illegible] ಮನಃಪೂರ್ವಕವಾಗಿ [illegible] ಕವಿತಾಳ ಮಠದಲ್ಲಿ ಐದು ವರ್ಷಗಳಿಂದ ಸ್ವಾಮಿಗಳ [illegible] ಅನಂತ ಗ್ರಾಮಗಳ ಭಕ್ತರು [illegible] ಶಿವಾನುಭವ ಉಪನ್ಯಾಸಗಳನ್ನು [illegible] ೭ ೮ ವರ್ಷಗಳಿಂದಲೂ ಸತತಕ್ಕೆ [illegible] ನೋಡಿದರೆ ಈ ಮಹಾತ್ಮರ [illegible] ಎಂದು ತಿಳಿಯಬೇಕಾಗುತ್ತದೆ!

ಪದ್ಧತಿಯಂತೆ ಇದೇ ಕಾರ್ತಿಕ ಬ॥ ೧೦ ಯಲ್ಲಿ ಶ್ರೀ ಶಿವಸ್ವಾಮಿಗಳ [illegible] ವಿಶೇಷ ಉತ್ಸವ [illegible] ಅಂದರೆ 1920 ನೇ ನವಂಬರು ತಾ॥ 26 ರಿಂದ 27 ರ ವರೆಗೂ ಭಕ್ತಿಸಹಿತದಿಂದ [illegible] ಕೀರ್ತನೆಗಳು, [illegible] ಉಪನ್ಯಾಸ [illegible] ಶಿವಾನುಭವ ಗೋಷ್ಠಿಗಳು [illegible] ಭಕ್ತರು ತಮ್ಮ ವಿದ್ಯಾ, ಜ್ಞಾನ, [illegible] ಬೇಕಾಗಿದೆ. ಬರಲು ಇಚ್ಛೆಯುಳ್ಳವರು ನವಂಬರು ತಾ॥ 10 ರೊಳಗಾಗಿ [illegible] ಅವರಿಗೆ ಉಪಯೋಗ್ಯ ಸಂಭಾವನೆಯು ಕೊಡಲ್ಪಡುತ್ತದೆ.

ದೇಶದಿಂದ ಬಂದವರು ಮಾಡಲ್ಪಟ್ಟ [illegible] ಪೂರ್ವ [illegible] ಸಿದ್ಧ [illegible] ಹೀಗೆ [illegible] ಬ್ರಾಹ್ಮಣರಾದರೆ [illegible] ಪಂಚಾಕ್ಷರಿ ಜಪಿಸುವ ವಿಷ್ಣು ಹನುಮಂತ [illegible] ಇವರ ಕಂಠದಲ್ಲಿ [illegible]

ಧರ್ಮಸ್ಥಾಪಿಸಿದ ಶ್ರೀ ಶಿವಪುರಾಣವಾಕ್ಯ

"[illegible] ಕೈಲಾಸನಿವಾಸಂ [illegible] ॥
[illegible]"

ಇದರಲ್ಲಿ, ಭೂತನಾಥಾದಿಗಳ ಹಿಡಿಯಂ ಹಿಡಿಕರಾದವರೇ ಸ್ತ್ರೀ ಪುರುಷರು ಬಾಲಾಬಾಲಿಕೆಯರೂ ತಮ್ಮ ತಮ್ಮ ಕಷ್ಟನಿವಾರಣೆಗಾಗಿ ಯಾವ ನೋವನ್ನು ಸಹಿಸಿದ್ದು ಮಾಂತ್ರಿಕರನ್ನು ಹೊಂದಿ ಅವರ ಮಾರ್ಗಮಾರ್ಗಾದಿಗಳನ್ನು ಕಾದು ಅವರು ಮಂತ್ರಿಸಿಕೊಟ್ಟ ಬೂದಿಯನ್ನು ತಮ್ಮ ಸರ್ವಾಂಗಕ್ಕೆ ಲೇಪಿಸಿಕೊಂಡು ತಮಗೊದಗಿದ ಕಷ್ಟಗಳಿಂದ ಮುಕ್ತರಾಗುವರು ಎಂತಹ ಅಂಶ ಸಾರಾದ [illegible] ಆನಾದಿಕಾಲದಿಂದ ಮಾಯಾಪಿಶಾಚಿ [illegible] ಇವುಗಳ ಬಾಧೆಗೆ [illegible] ಮೇಲಿಂದ ಮೇಲೆ ಹುಟ್ಟಿ ಸಾಯುವವರಿಗೆ [illegible] ಇಂಥಾ [illegible] ಬೀದಿಯ [illegible] ದಕ್ಷಿಣೆಗೆ [illegible] ಪರಿಹಾರವಾಗದಿದ್ದರೆ ಆ [illegible] ಪರಮಾಂತ್ರಿಕರಾದ ಶ್ರೀಮದ್ ರಾಜಗುರು ಚರಣಕಮಲಗಳಲ್ಲಿ [illegible] ಹೋಗಿ [illegible] ಆತನಿಂದ [illegible] ಸ್ತ್ರೀಯರು ಅವರಿಂದ ಪಡೆದುಕೊಂಡ ಭಸಿತವನ್ನು ವಿಧಿವಿಧಾನೋಕ್ತ ಕ್ರಮದಿಂದ ಧರಿಸಿ ಪ್ರತಿದಿನ ಶತಕದ ಭಕ್ತಿಯಿಂದ [illegible] ಅವರೆಂದರೆ ನಾವು ಬೇಕಾದ [illegible] ಭದ್ರ ಮಾಯಾಸ್ವರೂಪವು ತೊಲಗಿ ನಾವು ನಿತ್ಯರಾಗುವೆವು, ಅಂದರೆ ಜನನ ಮರಣ (ಹುಟ್ಟುಸಾವು) ಗಳಿಗೆ ಹೊರತಾಗುವೆವು. ತೋರುವುದಾಕರವಾದ ಶ್ರೀರುದ್ರನ [illegible] ಇದೇ ಅಭಿಪ್ರಾಯವನ್ನು

"ಶ್ರೀಗುರುಪದಾಬ್ಜ ರೇಣುಭೂಷಿತರೊಳನ್ನಾ ।
ವಾಗಿಲೆದಿದೆ [illegible] ॥
ನೀಗಿ ಜನನಾದಿ [illegible] ।
[illegible] ॥"

ಎಂದು ವಿವರಿಸಿ [illegible] ಇದಾದರೂ ನಾತ್ರ [illegible] ಸಂಸ್ಕಾರ [illegible] ಪಂಚಬ್ರಹ್ಮಮಂತ್ರಗಳಿಂದ ಯಥಾವಿಧಿ ಭಸಿತವನ್ನು ತಯಾರಿಸಿಕೊಂಡು ಆದಕ್ಕೆ [illegible] ಪ್ರತಿಷ್ಠಾನಿರ್ವಾಹಗಳಿಗಾಗಿ ಪುನಃ ಅದನ್ನು ಧ್ಯಾನಾತ್ಮಕಯೋಗಕ್ರಿಯೆಗಳಿಂದ [illegible] ಗಳ ಚರಣಗಳ ಮಹತ್ತರಗಳಿಂದ [illegible] ಪ್ರಣವಗಳನ್ನು ಸಂಬಂಧಗೊಳಿಸಿ ಅದನ್ನು ದಿನ ದಿನದಲ್ಲಿ [illegible] ಹೋಗುವುದು, ಇದು ಕೇವಲ ಶಿವನ ಸ್ವಸ್ವರೂಪವೇ ಆಗಿರುವುದು ಅಂತಯೇ ಶ್ರೀಮದ್ [illegible] ಶಿವಾಚಾರ್ಯರು

"ಶಿವನ ವೈರಿಗಳು ತಾನಾದ ಭಸಿತವನು"
"ಭಸಿತ [illegible]"

ಎಂದಂದಿರುವರು. ಈ ಮೇಲಿನ ಅರ್ಥವನ್ನೇ ಬೃಹಜ್ಜಾಬಾಲೋಪನಿಷದರು

"ಅಗ್ನೀರಿತ್ಯಾದಿ ಯದ್ಭಸ್ಮ [illegible] ।
[illegible]
ಯೋಗಿನ ಯುಕ್ತಾ [illegible] ।
ಕಾಲೇನಾಪ್ತ [illegible] ।
[illegible] ॥
[illegible]"

ಇಂತೆಂದ ಮುಕ್ತ ಕಂಠದಿಂದ ಹೊಗಳುತ್ತಿರುವುದು. ಯೋಗ ಗ್ರಂಥದಲ್ಲೂ ಕೂಡ [illegible] ಇನ್ನು ನಾನಾ [illegible] ಮುನ್ನಾಗಿ ನಾನಾ ರಕ್ಷಣೆಗಳಿಗೆ [illegible] ಭಸಿತವನ್ನು [illegible] ಶಿವಲಿಂಗ [illegible] ಮಂತ್ರಮೂಲಸ್ಥಾನ [illegible] ಕ್ರಿಯಾಸಾರವಿದೆ [illegible] "ಇನ್ನೂ" "ಶಿವ" [illegible] ಎಂಬುದರ [illegible] ಸಮಾಚಾರ ಹೊಂದುವ ಮಹಿಮೆ ಮತ್ತು ಸಂಪ್ರದಾಯದಿಂದ ಸುಪ್ರಸಿದ್ಧವಾದ ಸನಾತನ ಶಾಸ್ತ್ರಗಳಲ್ಲಿಯೇ ಎಂದಿನಂತೆ ಮೆಲ್ಲಮೆಲ್ಲನೆ ಹೆಚ್ಚುತ್ತಿದೆ [illegible] ಈ ಬರಹವನ್ನು ಮುಗಿಸುವೆನು.

"ಭದ್ರಂಭೂಯಾತ್"
ಓವರ ಸನಾತನ ಧರ್ಮಾಭಿಮಾನಿ

ಜಾಹೀರ ನೋಟೀಸು.

ಶ್ರೀಮದ್ ನಿರಂಜನಜಗದ್ಗುರು ಮುರುಘೇಂದ್ರ ಶಿವಾನಂದಸ್ವಾಮಿಗಳು, ಗುರುಮುರಾಂತಸ್ವಾಮಿಗಳು [illegible] ಸಂಸ್ಥಾನ ಪುಣ್ಯಾಶ್ರಮ ಅಧ್ಯಾಪಕ ಅವರ ಕಡೆಯಿಂದ—

ಪುಣ್ಯಾಶ್ರಮ ಜನಗಳಿಗೆ ತಿಳಿಸುವುದೇನೆಂದರೆ—ಶ್ರೀಮದ್ ಪುಣ್ಯಾಶ್ರಮ [illegible] ಬೇಸರು [illegible] ಬೆಳಗಾಂವ ಜಿಲ್ಲಾ ಹೊನ್ನೂರು [illegible] ಕರೆಸಿ ಆಶ್ರಮದಲ್ಲಿ ಶಿಕ್ಷಕರಾಗಿ [illegible] ಪೂರ್ವಕ ಅನೇಕ [illegible] 'ಶಿಕ್ಷಣ' ಅಧಿಕಾರ [illegible] ಸಂಸ್ಥಾನದ [illegible] ಯೋಗ್ಯ [illegible] ಅವರ ಹೆಸರು ಬರೆಯದ [illegible] ಇದರಿಂದ ಸಂಸ್ಥಾನದ [illegible] ತಿಳಿಯಬೇಕು. ಮುರುಘಾಸಂಸ್ಥಾನ ಅಧ್ಯಾಪಕರು [illegible] ತಾರೀಖು 8 10-1920 ನೇ ಇಸವಿ.

ಪ್ರಕಟಣೆ.

[illegible] ಶ್ರೀ ಸಿದ್ಧಾರಾಧ್ಯ [illegible] ತಿರುಕಪ್ಪನವರ ಮಠ [illegible] ದಾವಣಗೆರೆ [illegible]

Siddaradhya
Tirukappanavara mutt
Davangere

(12—13)

ಉತ್ತಮ ವೀರಶೈವ ಗ್ರಂಥಗಳು

	ಕ್ರಯ	(ವಿ ಪಿ ಸೇರಿ)
ವೀರಶೈವ ಸಿದ್ಧಾಂತಶಿಖಾಮಣಿ	೧—೨—೦	೨—೪—೦
ಪಂಚಾಚಾರ್ಯೋದಯಂ ೩ ಪ್ರಕರಣ		
ಜಗದ್ಗುರು ಸಿದ್ಧಾಂತಪೂರ್ಣಗ್ರಂಥ	೫—೦—೦	೫—೨—೦
ಬಸವರಾಜವಿಜಯ	೧—೨—೦	೧—೪—೦
ಚೆನ್ನಬಸವೇಶವಿಜಯ	೧—೬—೦	೧—೧೦—೦
ರೇವಣಸಿದ್ಧೇಶ್ವರ ಪುರಾಣ	೧—೦—೦	೧—೨—೦

ಕ್ಯಾಟ್ಲಾಗ್ ತರಿಸಿ ನೋಡಿ

ಆ॥ ವಿದ್ವಾನ್. ಎಚ್ ಆರ್ ಕರಿಬಸವಶಾಸ್ತ್ರಿ, ಅಂಡ್ ಸನ್ಸ್.

7 ಗ್ರಂಥಪ್ರಸಾರಕಮಂಡಲಿ, ಮೈಸೂರು

"ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತರ" ಆಯುರ್ವೇದೀಯ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರೀ ಮಾತ್ರೆಗಳು.



ಈ ಮಾತ್ರೆಗಳನ್ನು ಪ್ರತಿದಿನವೂ ತಾಂಬೂಲದೊಡನೆಯಾಗಲಿ, ಹಾಗೆಯಾಗಲೀ ಉಪಯೋಗಿಸುತ್ತ ಬರೆ ಆಹಾರ, ನೀರು ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮತ್ತು ಕೆಮ್ಮು ಮೊದಲು ಮೊದಲು ಯಿಂದ ವಯಸ್ಸಿನವರಿಗೆ, ಶೀತ, ನೆಗಡಿ, ಕೆಮ್ಮು, ಜ್ವರ, ಶೀತಪಾತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ.

100 ಮಾತ್ರೆಗಳುಳ್ಳ ಸೀಸೆ 1ಕ್ಕೆ 4 ಆಣೆ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ ನಮ್ಮ ಲೋಕಾಮಯಹರ ಕಸ್ತೂರೀ ಮಾತ್ರೆ ಎಂಬ ಹೆಸರನ್ನು ನೋಡಿ ಕೊಂಡುಕೊಳ್ಳಿರಿ.

ವೈಶ್ವಾನರಾಸವ

(ಕಾಲರಾ ವಾಂತಿಭೇದಿಗೆ ಸಿದ್ಧೌಷಧ)

ಮೂತ್ರವು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ, ವಾಂತಿಯಾಗಲಿ ಕೊಟ್ಟ ಮೊದಲನೇಸಲದಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1ಕ್ಕೆ ರೂ 1—8—0

ಲಕ್ಷ್ಮೀವಿಲಾಸರಸ

(ಪ್ಲೇಗಿಗೆ)

ಹತ್ತಾರು ವರ್ಷಗಳಿಂದ ಪ್ರತಿವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ನೆಂಬುವುದಾಗಿ ಗುಣಪಡಿಸಿರುತ್ತದೆ. ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ. ಗುಳಿಗೆಯ ಚಿಕ್ಕ ಬೆಲೆ 1ಕ್ಕೆ ರೂ 1—0—0

ಶ್ರೀನಿವಾಸತೈಲ.

ಪ್ಲೇಗು ರೋಗಿಯ ಪ್ರತಿ ಸಂಧುಗಳಿಗೂ, ಗೆಡ್ಡೆಗೂ ಹಚ್ಚುವ ಔಷಧ ಸೀಸೆ 1ಕ್ಕೆ ರೂ 0—8—0 • ಭಿಷಗ್ರತ್ನ

ಶ್ರೀ ಲಕ್ಷ್ಮೀನಾರಾಯಣವೈದ್ಯಶಾಲಾ, ಪಾಳ್ಯದ ವೆಂಕಟಾಚಲಪಂಡಿತರ
ಬ್ರಾಂಚಾಫೀಸು ಶ್ರೀ ಲಕ್ಷ್ಮೀನಾರಾಯಣವೈದ್ಯಶಾಲಾ,
ಚಿಕ್ಕಪೇಟೆ, ಬೆಂಗಳೂರು ಸಿಟಿ ಹೆಡ್ಡಾಫೀಸು ಮೈಸೂರು

೧೯೨೦ನೆಯ ಇಸವಿ ನವಂಬರ್ ತಾ॥ ೯ ರಿಂದ ೧೯೨೦ ನೆಯ ಇಸವಿ ನವಂಬರ್ ತಾ॥ ೧೫ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೨ನೆಯ ರೌದ್ರಿನಾಮಸಂವತ್ಸರದ ಕಾರ್ತಿಕ ಶುದ್ಧ ಅಷ್ಟಮಿಯಿಂದ ಕಾರ್ತಿಕ ಶುದ್ಧ ತ್ರಯೋದಶಿವರೆಗಿನ ಪಂಚಾಂಗ

ತಾ॥	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತುಲಾ ಮಾಸ
9	1ಶನಿ	ಅಷ್ಟ	51 10	ಶ್ರವ	22.10	24
10	ಭಾನು	ನವ	60 0	ಧನಿ	28 30	25
11	2ಸೋಮ	ನವ	0 50	ಶತ	31 30	26
12	3ಮಂಗಳ	ದಶ	1 50	ಪೂಭಾ	35 50	27
13	ಬುಧ	ಏಕಾ	3-12	ಉಭಾ	38 22	28
14	ಗುರು	ದ್ವಾದ	3-50	ರೇವ	39 50	29
15	4ಶುಕ್ರ	ತ್ರಯೋ	3 18	ಅಶ್ವಿ	39 50	30

(1) ಮಣಿಕೆಶ್ವರ್ಗ ವಿಶಾಖ ತದಿಯ ವಾದ, (2) ಕಾರ್ತಿಕಸೋಮ, ವಾರ (3) ಮಣಿಕೆಶ್ವರ್ಗ ವಿಶಾಖ ೪ನೆಯ ವಾದ (4) ಮಣಿಕೆಶ್ವರ್ಗ ವಿಶಾಖ ೪ ನೆಯ ವಾದ, ವೈಕುಂಠ ದಶಿ.

ಮೈಸೂರು, ವೈ. ವರದಾಚಾರ್ಯನವರಿಂದ ಶ್ರೀ ವಿಜಯಲಕ್ಷ್ಮೀ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REG. NO. M 124

ಮೈಸೂರ್ ಸ್ಟಾರ್

ಪ್ರತಿ ಶನಿವಾರ ಪ್ರಕಟಿಸಲ್ಪಡುವದು.

[illegible]

[ಸ್ಥಳದವರಿಗೆ ವಾರ್ಷಿಕ ಚಂದಾ ೧-೧೦-೦] [ಪರಸ್ಥಳದವರಿಗೆ ೩-೮-೦] [ವಿದೇಶಗಳಿಗೆ ೫-೮-೦]

ಸಂಪುಟ ೪೨] ಮೈಸೂರು ಸ್ಟಾರ್ ಸನ್ ೧೯೨೯ ನೆಯ ಇಸವಿ ನವಂಬರ್ ತಾರೀಖು ೧೬ ನೆಯ ಶನಿವಾರ [ಸಂಚಿಕೆ ೪೬

NOTICE.

Sealed tenders are invited in the prescribed form, for the supply of 34,000 teakwood Metre Gauge Rectangular Track sleepers required for 1929-30.

The Schedule containing the Tender form, conditions of contract, specifications, etc., regarding supply of these can be had from the undersigned on presentation of a receipt for Rs. 3 paid to the Auditor, Mysore Railway, Mysore, which sum is not refundable under any circumstances.

The supply of sleepers is required to commence in February 1930 and be completed by 15th June 1930. More expeditious deliveries would be preferred.

The last date of receiving tenders is 4 p.m. on Monday, the 25th November 1929.

K. SRINIVASA IYENGAR,
Engineer in Chief
Mysore Railways

[50—11]

ಉತ್ತಮವೀರಶೈವ ಗ್ರಂಥಗಳು

	ಕ್ರಯ	ವಿ. ಪಿ. ಸೇರಿ
ವೀರಶೈವ ಸಿದ್ಧಾಂತಶಿಖಾಮಣಿ	೧—೧೨—೦	೨ ೪ ೦
ಪಂಡಿತಾರಾಧ್ಯ ಚರಿತಂ ೫ ಪ್ರಕರ ಣಗಳು ಸೇರಿದ ಪೂರ್ಣಗ್ರಂಥ	೫— ೦ —೦	೫ ೧— —೦
ಬಸವರಾಜವಿಜಯ	೧— ೨ —೦	೧ ೮
ಚನ್ನಬಸವೇಶವಿಜಯ	೧— ೬ ೦	೧ ೧೨ ೦
ರೇವಣಸಿದ್ಧೇಶ್ವರ ಪುರಾಣ	೧—೧೨—೦	೧ ೦ ೦

ಕ್ಯಾಟಲಾಗ್ ತರಿಸಿ ನೋಡಿ

ಪಿ॥ ವಿದ್ವಾನ್. ಎಚ್. ಆರ್. ಕರಿಬಸವಶಾಸ್ತ್ರಿ, ಅಂಡ್ ಸನ್ಸ್

8 ಗ್ರಂಥಪ್ರಸಾರಕಮಂಡಲಿ, ಮೈಸೂರು.

ವೀರಶೈವಮತಗ್ರಂಥಗಳು

ಶಿವಾಧಿಕ್ಯಶಿಖಾಮಣಿಃ.

ಪ್ರತಿ ೧ ಕ್ಕೆ ಬೆಲೆ ೧-೦-೦

ಇದು ಬೇಲೂರಿನಲ್ಲಿ ಶ್ರೀಮದ್ರೇಣುಕಾಚಾರ್ಯರಿಗೂ, ವೈಷ್ಣವ ಮತಸ್ಥರಾದ ವಿಜಯೀಂದ್ರತೀರ್ಥರಿಗೂ ನಡೆದ ಪ್ರಶ್ನೋತ್ತರರೂಪವಾಗಿದೆ. ಇದರಲ್ಲಿ ಶಿವೋತ್ಕರ್ಷ, ಲಿಂಗಧಾರಣ, ಅಷ್ಟಾವರಣ, ಊರ್ಧ್ವಪುಂಡ್ರಶಿರಸ್ಸ, ವಿಷ್ಣುವಕಾರಸಂಹಾರ, ಸಂಖ ಚಕ್ರ ಮುದ್ರಾಧಾರಣ ನಿಷೇಧ, ಪ್ರದೋಷಕಾಲದಲ್ಲಿ ವಿಷ್ಣುದರ್ಶನಧಿಕ್ಕಾರವೇ ಮೊದಲಾದ ಅಸಾಧಾರಣಗಳಾದ ನೂರು ವಿಷಯಗಳು ಪ್ರಮಾಣವಾಗಿ ಬೋಧಿಸಲ್ಪಟ್ಟವೆ. ಈ ಗ್ರಂಥಕ್ಕೆ ಸರ್ವರಿಗೂ ತಿಳಿಯುವಂತೆ ಸುಲಭಶೈಲಿಯಿಂದ ಕನ್ನಡ ಟೀಕೆಯನ್ನು ಬರೆದಿದ್ದೇವೆ. ಇದನ್ನು ವೀರಶೈವರು ಅವಶ್ಯವಾಗಿ ನೋಡಬೇಕಾಗಿದೆ.

ನ್ಯಾಯಶತಕಂ — ಇದರ ಪ್ರತಿಯೊಂದು ಶ್ಲೋಕದಲ್ಲೂ ಲೋಕೋಕ್ತಿಗಳೆಂಬ, ಲಾಕಿಕಗಳ ಮೊದಲಾಗಿ ಒಂದೊಂದು ನ್ಯಾಯವನ್ನು ದಾಹರಿಸಿ, ವಿದ್ವಜ್ಜನರಿಗೆ ಆನಂದವನ್ನುಂಟುಮಾಡುವಂತೆ ಶಿವಾಧಿಕ್ಯವು ವರ್ಣಿಸಲ್ಪಟ್ಟಿದೆ. ಪಾರಾಯಣಕ್ಕೆ ಅತ್ಯುತ್ತಮವಾಗಿದೆ. ಬೆಲೆ ೦ ೨ ೦

ವಿ. ಪಿ. ಖರ್ಚು ಪ್ರತ್ಯೇಕ,

ಶ್ರೀ ಸೋಮಶೇಖರಸ್ವಾಮಿಗಳು,

[50—9] ನಮಶ್ಶಿವಾಯಮಠ, ಬಸವನಗುಡಿ, ಮೈಸೂರು.

೧೯೩೦ ನೇ ಇಸವಿಯ ಶಿದ್ದಪ್ಪಾಸ್ ಮಾಡಲ್ ಮೈಸೂರು ಕ್ಯಾಲೆಂಡರುಗಳು.

1 ಅನೇಕ ವಿಧವಾದ ಬಣ್ಣಗಳಿಂದ ... ದೇವರ ಪಿಕ್ಚರ್‌ಗಳು 17 ನ್ನು ಇಟ್ಟು ಅಂದವಾಗಿ ತಯಾರಿಸಿದ ದೊಡ್ಡ ಸೈಜಿನ ... ಕ್ಯಾಲೆಂಡರ್	61 ಕ್ಕೆ 1 2 0	100 ಕ್ಕೆ 2— 0—0
2 ... × ... ಸೈಜಿನ ಪ್ಯಾಕೆಟ್ ಕ್ಯಾಲೆಂಡರು	25 ಕ್ಕೆ 1 3 0	100 ಕ್ಕೆ 4—12—0,
3 ... × ... ಸೈಜಿನ ಇಂಗ್ಲೀಷ್ ... ಕ್ಯಾಲೆಂಡರ್	12 ಕ್ಕೆ 1—14 0	25 ಕ್ಕೆ 1—11—0,
4 ಅನೇಕ ಬಣ್ಣಗಳಿಂದ ... ಪ್ರಿಂಟ್ ಮಾಡಿ 16 × 11 ಸೈಜಿನಲ್ಲಿ ... ಪಿಕ್ಚರು ಕ್ಯಾಲೆಂಡರು	1 ಕ್ಕೆ 0 — 3 0	14 ಕ್ಕೆ 1— 2—0,
5 18 × 22 ಸೈಜಿನಲ್ಲಿ ... ಪ್ರಿಂಟಾಗಿರುವ ... 1 ಶೀಟಿನಂತೆ ... ಕ್ಯಾಲೆಂಡರ್	1 ಕ್ಕೆ — 4 0	12 ಕ್ಕೆ 2— 4—0,

[illegible]

ಕ್ಯಾಲೆಂಡರುಗಳು ... [illegible]

ಮನಿಯಾರ್ಡರ್ ರವಾನಿಸುವ ವಿಳಾಸ —ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್,

[50—13] ಹಾರ್ಡ್‌ವೇರ್ ವ್ಯಾಪಾರಿಗಳು, ಮೈಸೂರು

೧೦೦೦ ರೂಪಾಯಿ ಇನಾಮು

ಮಿರಜಿಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್. ಕಾಪಸೆ, ಇವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ವಜ್ರಾಂಗ ಸುಂದರಪಾಕ. (ಸ್ಟಾರ್ ರಿಜಿ)

ಅಲ್ಪವಯಸ್ಸಿನಲ್ಲಿ ಕ್ಷೀಣವಾದಾಗ ಬೇಡಿರಿ

ಘಾಸಿಗೊಂಡರೆ ಕ್ಷೀಣಿತ ಕಾಯಿಲೆ ಕೊಳ್ಳಿರಿ

[illegible]

ಕೇವಲ ಸ್ವಪ್ನಾವಸ್ಥೆ — [illegible] ರೂಪಾಯಿಗಳು

ಪ್ರಮೇಹ (ಪರಮಾ) — [illegible]

ಮಿಸಿಸಿ — [illegible]

[50—1] ಪತ್ತೆ : ಮಾಲಿಕ ವೈದ್ಯ ವ್ಹಿ. ಎಸ್. ಕಾಪಸೆ. ಮು. ಪೋ. ಮಿರಜಿ,

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ	(ವಿ. ಪಿ. ಸೇರಿ)		ಕ್ರಯ.	(ವಿ. ಪಿ. ಸೇರಿ)
ವೀರಶೈವ ಶಿವಪೂಜಾವಿಧಿ	೦—೧೨—೦	೧— ೨—೦	ವ್ರತಪದ್ಧತಿ	೦— ೯—೦	೦— ೯—೦
ಸಟೀಕ ವೀರಶೈವ ವಿವಾಹವಿಧಿ	೦— ೮—೦	೦—೧೨—೦	ಗುರುಪಂಚಾಶೀತಿ	೦— ೧—೦	೦— ೩—೦
ಷಟ್‌ಸ್ಥಲವಿದ್ಯಾ	೦— ೪—೦	೦— ೯—೦	ಅನುಭವಸೂತ್ರ	೦— ೯—೦	೦—೧೩—೦
ಚಾರುಶೀಲೆಚರಿತ್ರೆ	೦— ೫—೦	೦—೧೦—೦	ಸಟೀಕ ... ಮಂಜರಿ	೦— ೮—೦	೦—೧೩—೦
ಶಿವದೀಕ್ಷಾ	೦— ೪—೦	೦— ೯—೦	ಸಟೀಕ ಶತಕತ್ರಯ	೧— ೦—೦	೧— ೬—೦

ಮೈಸೂರು ಸ್ಟಾರ್ ಚಂದಾನಿಬಂಧನೆ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೩-೮-೦, ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦, ಮಿಡಿ ಮೂಲಕವಾದರೆ ... [illegible] ಚಂದಾದಾರರುಗಳು ಮನಿಯಾರ್ಡರ್ ಮಾಡುವಾಗ್ಗೆ ಕೂಪನ್ ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ರಾಪರ್ ಮೇಲಿನ ತಮ್ಮ ವಿಳಾಸದ ಪಕ್ಕ ಹಾಕಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹೀಗೆ ಬರೆಯದ ಒಂದ ಕಾಗದ ... ಮ್ಯಾನೇಜರ್,

FOR SALE.—House No. 899, Manantody Road, Lakshmipuram. Apply FOOTTANANJAPPA, *Chandraprasada, Lakshmipuram, Mysore.*

ಮೈಸೂರು ಸ್ಟಾರ್.

ಸನ್ ೧೯೨೮ನೆಯ ಇಸವಿ ನವಂಬರ್ ೧೭ ನೆಯ ಶನಿವಾರ.

THE FUTURE OF THE ENGINEERING DEPARTMENT.

Rumour is rife that Rajasevasakta Bhore, Cheif Engineer is to retire at the end of this calendar year. If it is true the Mysore State will not only lose a highly conscientious, able and experienced engineer but will usher in (unless suitable measures are taken) an unbroken regime of monopolist heads for many many years to come in the Department. Comparisons may often be undesirable but we cannot deny that so far as our own Service is concerned it will be a very long time before the Public Works can find an equally capable head. There is always such a lot of talk about efficiency and especially in Engineering and equally about sympathy for the aspirations of the backward classes. The public of Mysore is anxiously waiting to see whether Government will look to efficiency or mere seniority, whether it will recognise the claims of the backward communities or perpetuate monopolies. To our mind there seem to be only two courses open for Government to follow in the present circumstances. We emphasize the term present circumstances for more reasons than one. The evils of monopoly apart, there is the big scheme of Theppogowdanahally project of water supply to Bangalore. Mr. Bhore has worked hard at it for some years and there is not another engineer in the State who is fully conversant with the varied problems of the scheme as Mr. Bhore. It would be only in the fitness of things if he is given an additional term of a year or two to complete or at least to lay the foundations of the project. Mr. Bhore, besides, has plenty of life in him still and hardly looks superannuated. If it is impossible for Government to continue Mr. Bhore in office the next best is to get an efficient engineer who has specialised in water works and who does not belong to the monopolist class. If the Government is only earnest and if it means well by the State then it will do the one or the other instead of introducing mediocre monopolists as heads of departments. Mysore has kept up a high standard up till now and let not anything be done which will sacrifice the standard. We wait and see.

MR. A. RAMASWAMY MUDALIAR.

We heartily congratulate Mr. A. Ramaswamy Mudaliar, on his second election as President of the Madras City Corporation and that by a thumping majority. The Swarajists and some other monopolists played there the same dirty game as their co-religionists are doing here to set up a non-Brahmin against Mr. R. Mudaliar, but thanks to the strength and solidarity of justicite non-Brahmins this game of the opponents failed miserbly. We should congratulate the corporation as well as the city on the choice of its President who would be a pride to any country who could own such a person. We wish him all success in the comming year.

ಇಂಜನಿಯರ್ ಶಾಖಾಧಿಪತಿತ್ವ.

ನಮ್ಮ ಸಂಸ್ಥಾನದ ಚೀಫ್ ಇಂಜನೀಯರಾದ ರಾಜಸೇವಾಸಕ್ತ ಬಾರ್ ಭೋರ್‌ರವರು ಬರುವ ಡಿಸೆಂಬರ್ ತಿಂಗಳ ಅಂತ್ಯದಲ್ಲಿ ಉದ್ಯೋಗದಿಂದ ನಿವೃತ್ತರಾಗುವರೆಂದು ಪ್ರಬಲವಾದ ವದಂತಿಯಿದೆ. ಇದು ನಿಶ್ಚಯವಾಗಿದ್ದಲ್ಲಿ ಬಹಳ ಪ್ರಾಮಾಣಿಕರೂ, ಶಾಸ್ತ್ರಾನುಭವಿಗಳೂ ಆದ ಇಂಜನಿಯರ ಸಹಾಯವು ನಮ್ಮ ಸಂಸ್ಥಾನಕ್ಕೆ ತಪ್ಪಿಹೋಗುವುದಲ್ಲದೆ (ತಕ್ಕ ಕ್ರಮಗಳನ್ನು ...) [illegible]

ಶಾಖೆಯು ಮಾಪ್ಲಿಸ್ಟರುಗಳ ಶಾಖಾಧಿಪತ್ಯಕ್ಕೆ ಈ ಶಾಖೆಯು ಮುಂದೆ ಅನೇಕ ವರ್ಷಗಳ ಕಾಲ ... [illegible] ... ಮಿ|| ಭೋರ್‌ರಂತಹ ಸಮರ್ಥರು ಈ ಶಾಖೆಯಲ್ಲಿ ಸಿಗಲ್ಲವೆಂದೇ ಹೇಳಬೇಕಾಗಿದೆ. ಸರ್ಕಾರಿಯುದ್ಯೋಗಕ್ಕೆ ಅದರಲ್ಲಿಯೂ ಇಂಜನಿಯರುದ್ಯೋಗಕ್ಕೆ ... [illegible] ... ನಮ್ಮ ಪ್ರಭುತ್ವದವರು ಚೀಫ್ ಇಂಜನಿಯರನ್ನು ನಿಯಮಿಸುವಲ್ಲಿ ಕಾರ್ಯನಿರ್ವಾಹಶಕ್ತಿಯನ್ನು ಗಮನಿಸುವರೋ, ಈಗಿರುವ ಉದ್ಯೋಗಿಗಳ ಬರೀ ಹಿರಿತನವನ್ನು ನೋಡುವರೋ, ಹಿಂದುಳಿದವರ ಹಕ್ಕನ್ನು ಪರಿಗಣಿಸುವರೋ, ಉದ್ಯೋಗದ ಗುತ್ತಿಗೆಯ ಪದ್ಧತಿಯನ್ನು ಸ್ಥಿರಗೊಳಿಸುವರೋ ಎಂಬುದನ್ನು ಪರೀಕ್ಷಿಸಲು ಪ್ರಜೆಗಳು ಬಹಳ ಕುತೂಹಲರಾಗಿರುತ್ತಾರೆ. ಪ್ರಕೃತ ಸಂದರ್ಭದಲ್ಲಿ ಪ್ರಭುತ್ವದವರು ಅನುಸರಿಸಲು ಎರಡು ಮಾರ್ಗಗಳು ಮಾತ್ರ ಇರುವುದಾಗಿ ನಮಗೆ ತೋರುತ್ತದೆ. ಹೀಗೆ ಪ್ರಕೃತ ಸಂದರ್ಭದಲ್ಲಿ ಎಂದು ನಾವು ಒತ್ತಿ ಹೇಳುವುದು ಕೆಲ ಕಾರಣಗಳಿಗಾಗಿ. ಈ ಸರ್ಕಾರಿಯುದ್ಯೋಗದ ಗುತ್ತಿಗೆಯುಂಡಾಗುವ ಕೆಡಕಿನ ವಿಚಾರವಲ್ಲದೆ ... [illegible] ... ತೆಪ್ಪಗೊಡನಹಳ್ಳಿಯ ಜಲಾಶಯ ನಿರ್ಮಾಣ ವಿಚಾರವು ಬಹಳ ಪ್ರಾಮುಖ್ಯವಾಗಿದೆ. ಈ ಜಲಾಶಯ ನಿರ್ಮಾಣ ವಿಚಾರದಲ್ಲಿ ಮಿ|| ಭೋರ್‌ರವರು ಆದಿಯಿಂದಲೂ ಬಹಳ ಪರಿಶ್ರಮವನ್ನು ವಹಿಸಿ ಅದನ್ನು ಒಂದು ಕಾರ್ಯರೂಪಕ್ಕೆ ತಂದಿರುತ್ತಾರಾದುದರಿಂದ, ಆ ಕಾರ್ಯನಿರ್ವಾಹದಲ್ಲಿ ಅವರಿಗಿಂತಲೂ ಅನುಭವಸ್ಥರೂ, ಶಕ್ತರೂ ನಮ್ಮ ಇಂಜನಿಯರು ಶಾಖೆಯಲ್ಲಿ ಬೇರೊಬ್ಬರಿಲ್ಲವು. ಆದುಕಾರಣ ಈ ಮಹಾಕಾರ್ಯವನ್ನು ನಿರ್ವಹಿಸಲು ಇನ್ನೊಂದೆರಡು ವರ್ಷಗಳವರೆಗಾದರೂ, ಅದು ಸಾಧ್ಯವಿಲ್ಲದಿದ್ದಲ್ಲಿ ಜಲಾಶಯದ ತಳಹದಿಯನ್ನಾದರೂ ಹಾಕುವವರೆಗಾದರೂ ಮಿ|| ಭೋರ್‌ರವರ ಉದ್ಯೋಗದವಧಿಯನ್ನು ಹೆಚ್ಚಿಸುವುದು ಸೂಕ್ತವಾಗಿದೆ. ಇದಲ್ಲದೆ ಅವರು ಇನ್ನೂ ವೃದ್ಧಕಾಯರಾಗಿರುವುದುಂಡ ವಯಸ್ಸುಗಳ ... [illegible] ... ನಮ್ಮ ಸಂಸ್ಥಾನವು ಒಳ್ಳೆ ದರ್ಜೆಯನ್ನು ಉಳಿಸಿಕೊಂಡು ಬಂದಿರುತ್ತದೆ. ಈ ಸಂದರ್ಭದಲ್ಲಿ ಅದಕ್ಕೆ ಚ್ಯುತಿಯುಂಟಾಗುವುದಿಲ್ಲವೆಂದು ನಂಬಿ ನಿರೀಕ್ಷಿಸುತ್ತೇವೆ.

ಮಿ|| ರಾಮಸ್ವಾಮಿ ಮೊದಲಿಯಾರರ ಅಭಿನಂದನ

ಮದ್ರಾಸಿನ ಮ್ಯುನಿಸಿಪಲ್ ಕಾರ್ಪೊರೇಷನ್ ಪ್ರೆಸಿಡೆಂಟರಾದ ಮಿ|| ಎ. ರಾಮಸ್ವಾಮಿ ಮೊದಲಿಯಾರ್‌ರವರ ಒಂದು ವರ್ಷದ ಅವಧಿಯು ... ತಾ|| 12 ರಲ್ಲಿ ... [illegible]

ಆಯುರ್ವೇದ ...

[illegible]

ಒಳದೇಶದ ವೃತ್ತಾಂತಗಳು.

ಬರುವ ಡಿಸೆಂಬರ್ ತಾ|| 10 ರಲ್ಲಿ ಬೆಂಗಳೂರು ದಂಡಿಗೆ ಆಕಾಶ ಯಾನವು ಬಂದು ತಾ|| 15 ರ ವರೆಗೆ ಅಲ್ಲಿದ್ದು ಅನಂತರ ಮುಂದಕ್ಕೆ ಪ್ರಯಾಣಮಾಡುವುದಾಗಿ ತಿಳಿದುಬಂದಿದೆ.

ಕಳೆದ ಮಂಗಳವಾರ ದಿ|| ಶುಕ್ರವಾರ ರಾಜಧಾನಿಯಲ್ಲಿ ಕೊಂಚ ಜಡಿಮಳೆಯಾಯಿತು. ... ಕೆಮ್ಮು ಜ್ವರ ... [illegible]

ಬೆಂಗಳೂರು ಅಡ್ವೊಕೇಟ್ ಮಿ|| ... [illegible] ... ಮುಂದಿನ ವಿಚಾರಣೆಯು ಈ ತಾ|| 21 ರಲ್ಲಿ ನಡೆಯುವುದು.

[illegible]

ಬೆಂಗಳೂರು ಸಿಟಿ ಪೋಲೀಸು ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮಿ|| ... [illegible] ... ದಂಡವು 20 ರೂ. ... [illegible]

[illegible]

ಈ ವರ್ತಕ್ಕೆ ಸೇರಿಸಲ್ಪಡುವವೆಂದೂ, ಕೆಲವು ಸಂತೋಷಪಡುತ್ತೇವಲ್ಲದೆ ಇವರ ಪ್ರತಿಷ್ಠೆಗಳು [illegible] ಮಹಾರಾಜರ ಮನ್ನಣೆಗೆ ಪಾತ್ರರಾದ ವರ ಮೂಲಕವನ್ನು [illegible] ಪ್ರತಿಯೊಬ್ಬರ [illegible] ಈ ವರನ್ನು ಅಭಿನಂದಿಸುತ್ತ [illegible] ಪ್ರತಿಷ್ಠೆಯನ್ನು ಹೊಂದಿ ಪ್ರಶಸ್ತಿಯನ್ನು ಪಡೆದು [illegible] ಬರುವವರಾಗಲೆಂದೂ ಹಾರೈಸುತ್ತೇವೆ.

ಶ್ರೀಮನ್ಮಹಾರಾಜರವರ ಉತ್ಸವಗಳಿಗಾಗಿ ರಾಜಧಾನಿಗೆ ಬರತಕ್ಕ ಮೈಸೂರಿನವರು, ಮಹಾರಾಜರುಗಳು ಮೊದಲಾದ ಘನವಂತರು ಇಳಿದುಕೊಳ್ಳುವ ದಕ್ಕಾಗಿ ರಾಜಧಾನಿಯ ಲಲಿತಾದ್ರಿಯ ಪಾಲಹಳ್ಳಿ ಬಂಗಲೆಗೂ ಮಧ್ಯೆ ಕಟ್ಟಲ್ಪಟ್ಟಿರುವ ಅರಮನೆಗೆ ಸಮಾನವಾದ ಕಟ್ಟಡಕ್ಕೆ « ಲಲಿತಮಹಲ್ » ಎಂಬ ನಾಮಕರಣ ಮಾಡಲ್ಪಟ್ಟು, ಅನೇಕರಿಗೆ ಮನೋಹರವೂ ಆದ ವಿದ್ಯುದ್ದೀಪಗಳಿಂದಲೂ [illegible] ವಿಧವಾದ ಪದಾರ್ಥಗಳಿಂದಲೂ [illegible] ರಾಗಮಾಲಿಕೆಯ ಗಿಡಗಳಿಂದಲೂ ಬಹಳ ಸಡಗರದಿಂದಲೂ, ಎಲ್ಲರ ಕಣ್ಣಿಗೂ [illegible] ಸರ್ ಸಿ [illegible] ಮೇಲ್ವಿಚಾರಣೆಯಿಂದಲೂ ಸಿದ್ಧಮಾಡಲ್ಪಡುತ್ತಿದೆ. ಈ ಕಾರ್ಯವೆಲ್ಲವೂ ಪೂರ್ತಿಯಾಗಲ್ಪಟ್ಟರೆ ಲಲಿತಮಹಲ್ಲು ಒಳ್ಳೇ ಪ್ರೇಕ್ಷಣೀಯ ಮಂದಿರವಾಗುವುದರಲ್ಲಿ ಅಭ್ಯಂತರವಿಲ್ಲವು.

ವೀರಕೇಸರಿಯ ಸಂಪಾದಕರಾಗಿದ್ದ ವಿ. ಸೀತಾರಾಮಶಾಸ್ತ್ರಿಗಳಿಗೂ ನವಜೀವನದ ಸಂಪಾದಕರಾಗಿದ್ದ ಅಶ್ವತ್ಥನಾರಾಯಣರಾಯರಿಗೂ ರಾಜದ್ರೋಹಾಪರಾಧಕ್ಕಾಗಿ ಬೆಂಗಳೂರು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟಿನಿಂದ 6 ತಿಂಗಳ ಕಾರಾಗೃಹವಾಸದಶಿಕ್ಷೆ ಮತ್ತು 500 ರೂ. ಅಪರಾಧದಂಡ ವಿಧಿಸಲ್ಪಟ್ಟಿದ್ದುದರಮೇಲೆ ಅವರುಗಳು ಚೀಫ್ ಕೋರ್ಟಿಗೆ ಅಪೀಲು ಸಲ್ಲಿಸಿಕೊಂಡಿರಲಾಗಿ ಎರಡನೆಯ ಜಡ್ಜಿಯವರಾದ ಮ|| ಡಿ ಕೆ ರಾಮರಾಯರು ಮತ್ತು ಮೂರನೆಯ ಜಡ್ಜಿಯವರಾದ ಮ|| ಜ. ಶ್ರೀನಿವಾಸಯ್ಯಂಗಾರರವರು ವಿವಾದವನ್ನು ಚೆನ್ನಾಗಿ ವಿಮರ್ಶಿಸಿ ಉಭಯ ಪಕ್ಷಗಳ ವಕೀಲರ ವಾದವನ್ನು ಕೇಳಿ ಶಾಸ್ತ್ರಿಗಳಿಗೆ ವಿಧಿಸಲ್ಪಟ್ಟಿರುವ ಶಿಕ್ಷೆಯನ್ನು ಸ್ಥಿರಗೊಳಿಸಿ ರಾಯರ ಕಾರಾಗೃಹವಾಸ ಶಿಕ್ಷೆಯನ್ನು 3 ತಿಂಗಳಿಗಿಳಿಸಿ ಅಪರಾಧದಂಡವನ್ನು ಮನ್ನಿಸಿಬಿಟ್ಟರು. ಅಶ್ವತ್ಥನಾರಾಯಣರಾಯರು ಅಪೀಲು ವಿಚಾರಣೆಯಲ್ಲೇ 3 ತಿಂಗಳ ಕಾರಾಗೃಹವಾಸವನ್ನು ಮಾಡಿದ್ದುದರಿಂದ ಅವರು ಬಂಧವಿಮೋಚನೆಗೊಂಡು ಮನೆಗೆ ಬಂದರು.

ಅರಮನೆಯ ಸಮೀಪ ಆಂದರೆ ದಸರಾ ಮಹೋತ್ಸವದಲ್ಲಿ ದರ್ಬಾರು ನಡೆಯುವ ಸಭಾಂಗಣವು ಹೊಡೆದು ಹಾಕಲ್ಪಟ್ಟು ಹೊಸದಾಗಿ ಕಟ್ಟಲ್ಪಡಲು ಕೆಲ ನಾಟ್ಯಗಳ ಮರದಲ್ಲಿ ಮಾಡಲ್ಪಟ್ಟು ಶ್ರೀಮನ್ಮಹಾರಾಜರವರಿಗೆ ಕೋರಿಸಲ್ಪಡುತ್ತಿರುವುದಾಗಿಯೂ, ಅನೇಕ್ಸನ್ನದ ಮಾದರಿಯಂತೆ ಹೊಸದಾಗಿ ಕಟ್ಟಲ್ಪಡುವುದಾಗಿಯೂ ಹಿಂದೆಯೇ ತಿಳಿಸಿರುತ್ತೇವಷ್ಟೆ. ಆದರಂತೆ ಒಂದು ನಾಟ್ಯವು ಶ್ರೀಮನ್ಮಹಾರಾಜರವರಿಗೊಪ್ಪಿತವಾಗಿರುವ ಪ್ರಯುಕ್ತ ಮೈಸೂರು ರಾಜಧಾನಿಗೆ ದಯಮಾಡಿಸಿ ಹಿಂದಿರುಗಿ ಪ್ರಯಾಣ ಮಾಡಿದ ಮೇಲೆ ಸಭೆಯ ಹೊಡೆದುಹಾಕಲ್ಪಟ್ಟು ನೂತನ ಕಟ್ಟಡಕ್ಕೆ ಆರಂಭಿಸಲ್ಪಡುವುದೆಂದೂ, ಅದು ಸಿದ್ಧವಾಗಲು ಒಂದು ವರ್ಷ ಕಾಲಾವಧಿಯು ಬೇಕಾಗುವುದರಿಂದ ಮುಂದಿನ ದಸರಾ ದರ್ಬಾರು ಜಗನ್ಮೋಹನ ಪ್ಯಾಲೇಸಿನ ಸಭಾಂಗಣದಲ್ಲಿ ನಡೆಯುವುದೆಂದೂ ಕೇಳುತ್ತೇವೆ. ಇಂಜಿನಿಯರುಗಳು ಶ್ರೀಮನ್ಮಹಾರಾಜರವರ ಅನುಗ್ರಹಕ್ಕೆ ಪಾತ್ರರಾಗಿ ಪ್ರಶಸ್ತಿ ಬಹುಮಾನಗಳನ್ನು ಪಡೆಯಲು ಒಳ್ಳೇ ಅವಕಾಶ ದೊರಕಿತು.

ಇದೇ ತಾ|| 23 ನೇ ಶನಿವಾರ ಬೆಳಗಿನ 9 ರಿಂದ 9-30 ಗಂಟೆಯ ವರೆಗೆ ಮೈಸೂರಿನ ಸ್ಟಾರಿಯ ರಾಜಧಾನಿಯಿಂದ ಕಾರಾಪುರಕ್ಕೆ ಹೋಗುವವರೆಗೂ, ತಾ|| 27 ನೇ ಬುಧವಾರ ಮಧ್ಯಾಹ್ನ 1-30 ರಿಂದ 2 ಗಂಟೆಯ ವರೆಗೆ ಮೈಸೂರಿನ ಸ್ಟಾರಿಯು ಕಾರಾಪುರದಿಂದ ರಾಜಧಾನಿಗೆ ಬರುವವರೆಗೂ ಮೈಸೂರು-ನಂಜನಗೂಡು ರೋಡಿನಲ್ಲಿ ರಾಜಧಾನಿಯಿಂದ ಸಂಸ್ಥಾನದ ಎಲ್ಲೆಯವರೆಗೂ ಯಾವ ಬಂಡಿಗಳು ತಿರುಗಾಡಕೂಡದೆಂದೂ, ಇದೇ ನವೆಂಬರ್ ತಾ|| 28 ನೇ ಗುರುವಾರ ಬೆಳಗಿನ 8 ರಿಂದ 8-30 ಗಂಟೆಯ ವರೆಗೆ ಮೈಸೂರು ಮಡಿಕೇರಿ ರೋಡಿನಲ್ಲಿ ರಾಜಧಾನಿಯಿಂದ ಫ್ರೇಜರಪೇಟೆ ಮಾರ್ಗವಾಗಿ ಸಂಸ್ಥಾನದ ಎಲ್ಲೆಯವರೆಗೂ ಮೈಸೂರಿನವರು ಪ್ರಯಾಣ ಮಾಡುವವರೆಗೆ ಯಾವವಿಧವಾದ ಬಂಡಿಗಳು ಬಿಡಲ್ಪಡುವುದಿಲ್ಲವೆಂದೂ ಈ ಮಧ್ಯೆ ಕಾಲುನಡಿಗೆ ಪ್ರಯಾಣ [illegible] ಪೋಲೀಸು ಅಧಿಕಾರಿಗಳು ಮೇಲ್ಕಂಡ ವೇಳೆಗಳಲ್ಲಿ ಆ ಕಾಲದಲ್ಲಿ ಬಂಡಿಗಳನ್ನು ಬಿಡುವುದಿಲ್ಲವೆಂದೂ ಮೈಸೂರು ಡಿ|| ಕಮೀಷನರ್ ಡಿ|| ಮೆಜಿಸ್ಟ್ರೇಟರು ಪ್ರಕಟಿಸಿರುತ್ತಾರೆ.

ಕಳೆದವಾರ ಅರಮನೆಯ ಸಿಪಾಯಿ ಕೆಲಸದಲ್ಲಿದ್ದ ಮಲ್ಲಿಕಾರ್ಜುನನೆಂಬುವನು ಇಬ್ಬರು ಮೂವರು ಸ್ನೇಹಿತರೊಡನೆ ರಾಜಧಾನಿಯ ಹುಣ್ಸೂರಪಟ್ಟೆ ಕೆರೆಗೆ ಹೋಗಿ ಬಟ್ಟೆಗಳನ್ನೊಗೆದು ಈಜುತ್ತಿರುವಾಗ್ಗೆ ಆಳವಾದ ಪ್ರದೇಶದಲ್ಲಿ ಸೇರುತ್ತಾ ನೀರಿನೊಳಗೆ ಮುಳುಗಿದನು. ಆತನೊಡನೆ ಸಂಗಡಿಗರಾಗಿದ್ದ [illegible] ಹೊರಕ್ಕೆ ಎಳೆದುಕೊಂಡುಬಂದು ಉಪಚರಿಸಿದರಾದರೂ ಬದುಕದೆ ಸತ್ತುಹೋದನು. ಇದೇ ರಾಜಧಾನಿಯ ಸಂತೆಪೇಟೆಯಲ್ಲಿ ಮೋಟಾರಿನ [illegible] ಹಿಂಭಾಗದಲ್ಲಿರುವ ಹಸುವಿನ ಯಂತ್ರಾಲಯದಲ್ಲಿ [illegible] ಗಾಡಿಯವನು ಏನೋ ಕೆಲಸಮಾಡುತ್ತಿದ್ದಾಗ್ಗೆ ಆಬ್ಬರದ ಬಾಂಡದಲ್ಲಿ ಗಾಡಿಯನ್ನು ತುಂಬಿಕೊಂಡು ಕೊಡುತ್ತಿದ್ದ ಹುಡುಗನು ಕೆಳಗೆ ಬೀಳಲು ಆಗ ಆ ಗಾಡಿಯವನು ಬೆಂಕಿಯಲ್ಲಿಂದ ಬಿದ್ದು [illegible] ಪೆಟ್ಟಾಗಿ ಆಸ್ಪತ್ರೆಗೆ ಸಾಗಿಸಿ [illegible] ಆತನ ಪ್ರಾಣವು ಹೋಗಿದ್ದಿತು.

ರಾಜಧಾನಿಯಲ್ಲಿ ಪ್ರಸಿದ್ಧ ಹಾರ್ಮೋನಿಯಂ ವ್ಯಾಪಾರಿಗಳಾಗಿರುವ ಮೆ|| ಎಂ. ಎಸ್. ಸಿದ್ದಪ್ಪ ಆಂಡ್ ಬ್ರದರ್ಸ್ ರವರು [illegible] ಶ್ರೀಮನ್ಮಹಾರಾಜರ ವಿಶ್ವರೂಪದ ಶಿವಪಟ [illegible] ಅನೇಕ [illegible] 1930 ನೆಯ ವರ್ಷದ ಒಂದು ಪಾಲಿಯ ಕ್ಯಾಲಂಡರನ್ನು, ಕಾಂಗ್ರೆಸ್ [illegible] ಇಂಗ್ಲಿಷ್ ಮತ್ತು ಕನ್ನಡ ಪಾಕೆಟ್ ಕ್ಯಾಲಂಡರುಗಳನ್ನೂ [illegible] ಹೊಸರು [illegible] ತಂಗಳಿಗೊಂದು [illegible] ನೂತನವಾಗಿ ಮುದ್ರಿಸಿರುವರು. [illegible] ಕ್ಯಾಲಂಡರನ್ನು [illegible] ಕಾಣಬಹುದು. [illegible] ಈ ಕ್ಯಾಲಂಡರುಗಳಿಗೆ ಬೆಲೆ [illegible] 8 ಆ. ಬೆಲೆಯು [illegible] ಕ್ಯಾಲಂಡರುಗಳನ್ನು ಉಚಿತವಾಗಿ ಕಳುಹಿಸಿಕೊಡುವವರಾಗಿರುತ್ತಾರೆ. [illegible] ಪ್ರಕಟನೆಯೇ [illegible] ಎಂ. ಎಸ್. ಸಿದ್ದಪ್ಪ [illegible] ಅನುಸರಿಸಿ [illegible] ಆಗಿರುತ್ತದೆ.

ಸ್ವದೇಶದ ವೃತ್ತಾಂತಗಳು

ಬಾಬೂ ರಾಜೇಂದ್ರಪ್ರಸಾದರವರ [illegible] ಆಫ್ ಇಂಡಿಯಾ [illegible] ಭರತಖಂಡಕ್ಕೆ ಬಂದು ಒಂದು ಸೇವೆಯನ್ನು [illegible] ಸಿರುವರಂತೆ.

ಇದೇ ನವೆಂಬರ್ ತಾ|| 30 ರಲ್ಲಿ ಮದ್ರಾಸಿನೊಳಗೆ ಜರುಗುವ ಅಖಿಲಭಾರತ ಸನಾತನ ವೈದಿಕ ವಿದ್ವತ್ ಪರಿಷತ್ತಿನ ಅಧ್ಯಕ್ಷತೆಯನ್ನು ಪಂಡಿತ ಶಾಸ್ತ್ರಿಗಳು [illegible] ವಹಿಸುವರು. ಈ ಸಭೆಯು ಮೂರು ದಿನಗಳವರೆಗೆ ನಡೆಯುವುದು.

ಪಂಜಾಬಿನ ಜೈಲುಗಳ ವಿಚಾರದ [illegible] ಜೈಲುಗಳೊಳಗೆ ಕೆಲವು ಸುಧಾರಣೆಗಳನ್ನು ಮಾಡಬೇಕೆಂದು [illegible] ರಾಜಕೀಯ ಕೈದಿಗಳಿಗೆ ಜೈಲುಗಳೊಳಗೆ ಕೆಲವು ಸೌಕರ್ಯಗಳನ್ನು ಕೊಡಬೇಕೆಂದು ನಿರ್ಧರಿಸಿದೆ. ರಾಜಕೀಯ ಕೈದಿಗಳಿಗಾಗಿ ಒಂದು ಹೊಸ ಜೈಲನ್ನು ಸ್ಥಾಪಿಸಬೇಕೆಂದು ವರದಿಯು ಹೇಳುತ್ತದೆ.

ಕಾಶೀಂಬಜಾರು ಮಹಾರಾಜರವರಾದ ಸರ್ ಮಣೀಂದ್ರಚಂದ್ರನಂದಿಯವರು ಇದೇ ತಿಂಗಳವಾರ ಬೆಂಗಾಲಿನ ಕಲ್ಕತ್ತಾದಲ್ಲಿ ವಿಧಿವಶರಾದರು. ಇವರಿಗೆ 71 ವರ್ಷವಯಸ್ಸಾಗಿದ್ದಿತು. ಈ ವೃದ್ಧ ಮಹಾರಾಜರು ಒಂಗಾಳದ ವಿದ್ಯಾಸಂಸ್ಥೆಗಳಿಗೆ ಹಿಂದುಳಿದ [illegible] ಕರ್ಮಗಳಿಗೂ ಧರ್ಮ ಮಾಡಿ ಕೀರ್ತಿವಂತರಾಗಿರುವರು.

ಸಿಂಧ್ ಹೈದರಾಬಾದಿನಲ್ಲಿ ಒಬ್ಬ ಹಿಂದು ಪ್ರಯಾಣಿಕನ ಜೇಬಿನಲ್ಲಿದ್ದ ಹಣವನ್ನು [illegible] ಒಂದು ಹಸುವು ಆ ಹಿಂದುವನ್ನು ಅಟ್ಟಿಕೊಂಡು ಹೋಗಲು ಅವನ ಕೆಳಗೆಬಿದ್ದು ಈ ಅನಾಹುತವು ಸಂಭವಿಸಿತಂತೆ. ಈ ವಿಷಯ [illegible] ಅವನ ಕೈಗಳೂ [illegible] ಆಸ್ಪತ್ರೆಗೆ ಸಾಗಿಸಲ್ಪಟ್ಟನು. ಅವನಕಡೆ ಇದ್ದ ಒಬ್ಬ ವಹನ [illegible] ಅಪಾಯಕ್ಕೆ ಸಿಕ್ಕದೆ ತಪ್ಪಿಸಿಕೊಂಡನಂತೆ.

ಈ ದಿವಸ ಸಾಯಂಕಾಲ ಅಲಹಾಬಾದಿನ [illegible] ಮಹಾತ್ಮ ಗಾಂಧಿಯವರು ಹೋಗುತ್ತಿರಾದುದರಿಂದ ಅವರ ಮತ್ತು ಆ ಪಟ್ಟಣದ [illegible] ವರ್ತಕರ ತಕ್ಕಂತೆ ಸ್ವಾಗತಿಸಿದರು. [illegible] 1500 ರೂಪಾಯಿಗಳ [illegible] ಪ್ರಯತ್ನ ಮಾಡಿರುವರ [illegible] ಮ್ಯುನಿಸಿಪಾಲಿಟಿಯ ಕೆಲಸಗಾರರು ಒಂದು ತಿಂಗಳ ಸಂಬಳವನ್ನು ಕೊಡಬೇಕೆಂದಿರುತ್ತಾರೆ. ಇಲ್ಲಿ ಮಹಾತ್ಮರು ಮೋತೀಲಾಲ್ ನೆಹರೂರವರ ಅತಿಥಿಗಳಾಗಿ ಆನಂದಭವನದಲ್ಲಿಳಿದುಕೊಳ್ಳುವರು. ಬರುವ ನೋಮವಾರ ಕಾಂಗ್ರೆಸ್ ಕಾರ್ಯಸಂಘದ ನಾವೇಶವು ಈ ಭವನದಲ್ಲೇ ಜರುಗುವುದು.

ಇಂದೂರಿನ ಮಹಾರಾಜ ಯಶವಂತರಾವ್ ಹೋಳ್ಕರ್ ರವರು ತಮ್ಮ ಕೊಡ ಹುಟ್ಟಿದ ವ ಮಹಾರಾಜ ರಾಜಕುಮಾರಿಯವರೊಡನೆ ಈಗ್ಗೆ 4 ವರ್ಷಗಳ ಕೆಳಗೆ ಇಂಗ್ಲೆಂಡಿಗೆ ಹೋಗಿ ವಿದ್ಯಾಭ್ಯಾಸಮಾಡುತ್ತಿದ್ದು ಇದೇ ತಾ|| 11 ರಲ್ಲಿ ಹಿಂದಿರುಗಿ [illegible] ಒಂದು ದೇವಿಯಲ್ಲಿ ತಮ್ಮ ತಾಯಿ ಮಹಾರಾಣಿ ಚಂದ್ರಾವತೀಯವರು ಪ್ರಧಾನಮಂತ್ರಿ ಮತ್ತು ಕೌನ್ಸಿಲ್ಲರ್ ಸರ್ ಹುಕುಂಚಂದ್ [illegible] ಇವರುಗಳಿಂದ ಸ್ವಾಗತಿಸಲ್ಪಟ್ಟು ಎಲ್ಲರೊಡನೆ ಸ್ಪೆಶಲ್ ಟ್ರೇನಿನಲ್ಲಿ ಇಂದೂರಿಗೆ ಪ್ರಯಾಣಮಾಡಿದರು. ಈ ಮಹಾರಾಜರಿಗೆ ಪ್ರಾಪ್ತವಯಸ್ಸು ಆಗುವುದರಿಂದ ಬರುವ 1930 ನೇ ಫೆಬ್ರವರಿ ತಿಂಗಳಿನಲ್ಲಿ ಪಟ್ಟಾಭಿಷೇಕವಾಗಿ ರಾಜ್ಯಾಧಿಕಾರ ಒಪ್ಪಿಸಲ್ಪಡುವುದು.

ಮುಂಬಾಯಿ ಹೈಕೋರ್ಟಿನಲ್ಲಿ ಮದುವೆಯ ವಿಮೋಚನೆ ಬಗ್ಗೆ ದಾವೆಯೊಂದು ನಡೆಯಿತು. ದರ್ಜಿ ಎಂಬವನೊಬ್ಬ [illegible] ಕರಾಚಿಯಲ್ಲಿದ್ದ. ಅವನಿಗೆ 1916 ರಲ್ಲಿ ಮದುವೆಯಾಯಿತು. ಒಂದೆರಡು ವರ್ಷದಲ್ಲಿ ಮಗುವಾಯಿತು. 1919 ರಲ್ಲಿ ಸೀಮೆಗೆ ಹೋದ. ಅಲ್ಲಿಂದ ಬರಲೇ ಇಲ್ಲ. [illegible] ಕಾರಣ ಇವಳು ಇನ್ನೊಬ್ಬನ ಕೈಹಿಡಿದಳು. ಮೊದಲ ಗಂಡನಿಗೂ ಆಕೆಗೂ ಬಗೆಯಾಗಿ ವಿವಾಹವನ್ನು ಮುರಿಯಬೇಕೆಂದಾಯಿತು. ಮೊದಲ ಗಂಡನು [illegible] ಪತಿ ಗಂಡನೆ. ಇನ್ನೂ ಜೀವಿಸುತ್ತಿದ್ದಾನೆ ಎಂದು ರುಜುವಾತುಪಡಿಸಿದನು. ಹಳೆಗಂಡನ ವಿವಾಹವೇ ಸರಿಯಾಯಿತು. ಆದರೂ ಈಗಲೂ ವಾಸಿಸುತ್ತಿರುವುದು ಹೊಸ ಅವನ ಕನ್ಯ ಜೊತೆ ಸಕ್ಕೆಲಿಂದ ಛಾಯೆ. ಇನ್ನೊಬ್ಬರನ್ನು ಮದುವೆಯಾಗಿದ್ದನು. ಅಂತೂ ಜೊತೆಗೆ ಬಿಟ್ಟಿದ್ದ ಸಿಕ್ಕಿತು.

ಮೊನ್ನೆ ದಿಲ್ಲಿಯಲ್ಲಿ ಮಹಾತ್ಮಗಾಂಧಿ, ಮಾಲವೀಯ, ನೆಹರು ಮೊದಲಾದ ಮುಖಂಡರು ಸೇರಿ ಸಭೆ ಜರುಗಿಸಿದರು. ವೈಸರಾಯರ ಪ್ರಕಟನೆಗೆ ಯಾವ ಉತ್ತರ ಕೊಡಬೇಕೆಂಬುದನ್ನು ಚರ್ಚಿಸಿ ಕೊನೆಗೆ ಈ ಕೆಳಗಿನ ನಾಲ್ಕು ಶರತ್ತುಗಳಿಗೆ ಸರಕಾರವು ಒಪ್ಪಿದರೆ ವೈಸರಾಯರ ಪ್ರಕಟನೆಯನ್ನು ಒಪ್ಪಬಹುದಾಗಿ ನಿರ್ಧರಿಸಿದರು:— 1 ಎಲ್ಲಾ ರಾಜಕೀಯ ಕೈದಿಗಳನ್ನು ಬಿಡಬೇಕು. 2 ಸರಕಾರವು ಹಿಂದೀಯರಲ್ಲಿ ಜೆಟ್ಟಿನ ವಿಶ್ವಾಸವನ್ನಿಡಬೇಕು. 3 ಮುಂದೆ ನಡೆಯುವ ಸಭೆಗೆ ಹಿಂದೀಯರ ಪ್ರತಿನಿಧಿಗಳಾಗಿ ಕಾಂಗ್ರೆಸ್ಸಿನ ಪ್ರತಿನಿಧಿಗಳನ್ನೇ ಹೆಚ್ಚು ಸಂಖ್ಯೆಯಿಂದ ಆರಿಸಬೇಕು. 4 ಸರಕಾರದವರು ಉದಾರಧೋರಣೆಯನ್ನವಲಂಬಿಸಿ ಈಗಲೇ [illegible] ನಡೆಸಬೇಕು. ಇದಕ್ಕೆ ಸಾಮಾನ್ಯವಾಗಿ ಎಲ್ಲಾ ಹಿಂದೀ ಧುರೀಣರೂ ಸಹಿಹಾಕಿರುವರು. ಸುಭಾಷಚಂದ್ರಬೋಸ್ ಮೊದಲಾದ ಕೆಲವರು ಮಾತ್ರ ಹಾಕಲಿಲ್ಲ. ದೇಶದಲ್ಲಿ ಅಧಿವೇಶನ ಸ್ವರಾಜ್ಯವ ತತ್ವಗಳನ್ನು ಪ್ರಚಾರಮಾಡುವುದಕ್ಕೆ [illegible] ಲಿಬರಲ್ ಅಧ್ಯಕ್ಷತೆಯಲ್ಲಿ ಒಂದು ಸಂಘವು ಸ್ಥಾಪಿಸಲ್ಪಟ್ಟಿದೆ. ಈ ಸಂಘದ [illegible] ದೇಶದಲ್ಲೆಲ್ಲಾ ಸಂಚಾರಮಾಡಿ ಪ್ರಚಾರದ ಮೂಲಕ ಜನರ ಮತವನ್ನು ಸಿದ್ಧಗೊಳಿಸುವರು.

ಲಾಹೋರ್ ಪಟ್ಟಣದಲ್ಲಿ ಬರುವ ಡಿಸೆಂಬರು ತಿಂಗಳ ಕಡೆಯಲ್ಲಿ ಜರುಗುವ ಭಾರತ ಕಾಂಗ್ರೆಸ್ಸಿನ ಮಹಾಸಭೆಗೆ ದೇಶದೇಶಗಳಿಂದ 2 ಲಕ್ಷ ಜನರು ಬರುತ್ತಾರೆ. ಅಷ್ಟು ಜನರು ಕುಡಿಯುವ ನೀರಿಗೂ, ದೀಪಕ್ಕೂ, ಅವರ ಇಳಿವಿಕೆಗೂ [illegible] ಸಾಕಷ್ಟು ಏರ್ಪಾಟನ್ನು ಮಾಡುವುದಕ್ಕೆ ಇವರ ಮೇಲ್ವಿಚಾರಣೆಗೆ ಸ್ವಾಗತ ಸಮಿತಿಯವರು [illegible] ಅಗ್ನಿ ಪ್ರಮಾದವಾದರೆ [illegible] ಇಂಜಿನ್ನುಗಳನ್ನು ಕೊಡಿಸಬೇಕೆಂದೂ [illegible] ಜನಗಳಿಗಾಗಿ ಬರುವ ಸಮಯದಲ್ಲಿ ಹಿಂಡುಗಳನ್ನು ತಡೆಯುವುದಕ್ಕೆ [illegible] ಸಂಭವಕ್ಕೆ [illegible] ಲಾಹೋರಿನ [illegible] ಪಾಲಿಟಿಯವರಿಗೆ [illegible] ಮ್ಯುನಿಸಿಪಾಲಿಟಿಯವರು [illegible] ಗಳನ್ನು [illegible] ಅವರ [illegible] ಕೇಳಿದ್ದರು. ಆದರೆ ಆ ಬಾಯಿಯು [illegible] ಮ್ಯುನಿಸಿಪಾಲ್ [illegible] ಒಂದು ದೊಡ್ಡ ಸಂಖ್ಯೆಯನ್ನಾಗಿ ಭಾವಿಸಿ [illegible] ಏರ್ಪಾಟುಗಳನ್ನು ಕಾಂಗ್ರೆಸ್ಸಿನವರೇ ಮಾಡಿಕೊಳ್ಳಬೇಕು. ಮ್ಯುನಿಸಿಪಾಲಿಟಿಯ [illegible] ಕಾರ್ಯಗಳನ್ನು [illegible] ಅವರ ಪರವಾಗಿ ಸಭೆಯವರು ಬೆಂಬಲಿಸಬೇಕು, ಪ್ರದರ್ಶನದ ಏರ್ಪಾಟುಗಳಿಗೆ ಸಂಬಂಧವನ್ನು ಇಡುವ ಇದರ ವಿಚಾರವನ್ನು ಕೌನ್ಸಿಲಿನವರೇ ನಿರ್ಧರಿಸಬೇಕೆಂದು ಆದರೆ ಆ ನಿರ್ಧಾರ [illegible]

ಜನಗಳು ಸ್ವಾಭಿಮಾನದಿಂದ [illegible] ಸ್ವತಃ ಜನರು ಕೇಳುವುದಾದರೆ ಅವರು ಬರುವರು ಕೇಳುವಂತೆ ಏರ್ಪಾಟುಗಳನ್ನು ಮಾಡಿಕೊಡುವ ಕರ್ತವ್ಯವಿಲ್ಲವೆಂದು ಇವರು ತಿಳಿಸಿದರು. ಆದರೆ ಇವರ ಈ ತೀರ್ಮಾನಕ್ಕೆ [illegible] ಉತ್ತರ [illegible] ಕೊಟ್ಟು ಬಹುಮಂದಿಯು [illegible] ಹೇಳುತ್ತಾರೆ.

ಮೈಸೂರು ರಾಜ್ಯದಿಂದ ಇಂಗ್ಲೆಂಡಿಗೆ ಹೋಗಿದ್ದ ರಾಜರ್ಷಿಯವರ ಬಾಲ್ಯವಿವಾಹ ನಿಷೇಧ ಬಿಲ್ಲನ್ನು ವಿಚಾರಿಸುವ ಬಗ್ಗೆ ನಾಡಿನವರಲ್ಲಿ 1500 ಜನರು ವೈದಿಕರು ಬ್ರಾಹ್ಮಣರು ಬಂದು ಸಭೆಗೂಡಿದರು. ಈ ಮಹಾಸಭೆಯಲ್ಲಿ ಮಲಬಾರು ಮತ್ತು ತಿರುಚಿ ಡಿಸ್ಟ್ರಿಕ್ಟುಗಳಿಂದ 15000 ಕ್ಕೆ ಮೇಲ್ಪಟ್ಟ ಬ್ರಾಹ್ಮಣರು ಬಂದು ನೆರೆದಿದ್ದರು. ಬ್ರಾಹ್ಮಣ ಧರ್ಮಕ್ಕೆ ಹಾನಿಯುಂಟಾಗದ ತನ್ನವಿರುದ್ಧವಾಗಿ ಈ ಮಹಾಸಭೆಯ ಜನವು ನಡೆಸಲ್ಪಡಬೇಕಾದ್ದಾಗಿದೆ. ಆ ದಿವಸ ಸಂಕಲ್ಪವನ್ನು ಮಾಡಿದನಂತರ ಮಹಾಸಭೆಗೆ ಕಲ್ಕತ್ತಾ ವಿಶ್ವವಿದ್ಯಾನಿಲಯದ ಮಹಾಮಹೋಪಾಧ್ಯಾಯ ಅನಂತಕೃಷ್ಣಶಾಸ್ತ್ರಿಗಳು ಮೊದಲಾದ ಪಂಡಿತರುಗಳು, ವೈದಿಕ ಧರ್ಮಾಭಿಮಾನಿಗಳು ಸನಾತನಧರ್ಮ ವಿಚಾರವಾಗಿ ಭಾಷಣ ಮಾಡಿ ಈ ವಿಷಯದಲ್ಲಿ ಜನರಭಿಪ್ರಾಯಕ್ಕೆ ವಿರೋಧವಾಗಿ ವರ್ತಿಸುವುದು ಶಿಷ್ಟಕ್ರಿಯೆಯಲ್ಲ. ಸರ್ಕಾರದವರು ಹಾಗೆ ಮಾಡುವುದು ಮತಧರ್ಮಕ್ಕೆ ಪ್ರತಿಕೂಲವಾದ ಹಸ್ತಕ್ಷೇಪಕ್ಕೆ ವಿರುದ್ಧ ವಾದುದರಿಂದ ಶಾರದಾ ಬಿಲ್ಲು ಆಕ್ಟಿನ ಮೇಲೆ ತಕ್ಕ ಪ್ರತಿಭಟನೆ ಮಾಡಬೇಕೆಂದು ಮೇಲೆ ತಿಳಿಸಿದ ಸನಾತನ ಧರ್ಮಾಭಿಮಾನಿಗಳಿಗೆ ಅನ್ಯಾಯಕರವಾದುದರಿಂದ ವೈಸರಾಯರಿಗೆ ವಿಜ್ಞಾಪಿಸಿಕೊಳ್ಳಬೇಕೆಂದೂ, ಹಾಗೆ ಅವರು ವಿಜ್ಞಾಪನವು ನಿರರ್ಥಕವಾಗುವುದಾದರೆ ಶಾಸನೋಲ್ಲಂಘನವನ್ನು ಮಾಡಬೇಕೆಂದೂ ಬೋಧಿಸಿದರು. ಇದರಂತೆಯೇ ಸನಾತನ ಧರ್ಮಾಭಿಮಾನಿಗಳಾದ ಬ್ರಾಹ್ಮಣ ಸ್ತ್ರೀಯರು 1500 ರ ವರೆಗೂ ಶ್ರೀಮತಿ ಗಾಂಧಿಯವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಶಾರದಾ ಬಿಲ್ಲನ್ನು ಹಿಂತೆಗೆದುಕೊಳ್ಳದಿದ್ದರೆ ಶಾಸನೋಲ್ಲಂಘನವನ್ನು ಮಾಡಬೇಕೆಂದು ನಿರ್ಧರಿಸಿದರು. ಉತ್ತರದೇಶದ ಸನಾತನರೂ ಕೂಡ ಮಹಾಸಭೆಯನ್ನು ನಡೆಯಿಸಿ, ಹಿಂದೆ ಸಹಗಮನ ನಿರೋಧದ ಬಗೆಗೆ ಒಂದು ಶಾಸನವು ಮಾಡಲ್ಪಟ್ಟಿತು, ಈಗ ಬಾಲ್ಯವಿವಾಹ ನಿರೋಧಕ್ಕಾಗಿ ಒಂದು ಶಾಸನವು ಮಾಡಲ್ಪಟ್ಟಿದೆ. ಆದರೆ ಸಹಗಮನವು ಶಾಸ್ತ್ರೋಕ್ತವಲ್ಲವಾದುದರಿಂದ ಅದರ ನಿರೋಧದಿಂದ ಧರ್ಮಕ್ಕೆ ಚ್ಯುತಿ ಬರುವುದಿಲ್ಲವೆಂದೂ, ಬಾಲ್ಯವಿವಾಹವು ಶಾಸ್ತ್ರಸಮ್ಮತವಾದುದರಿಂದ ಅದರ ನಿರೋಧವು ಶಾಸ್ತ್ರವಿರುದ್ಧವೆಂದೂ, ಇದರಂತೆಯೇ ಪಂಚಮರು ದೇವಾಲಯಗಳಿಗೆ ಪ್ರವೇಶಿಸುವುದು ಆಗಮವಿರುದ್ಧವೆಂದೂ, ದೇವಾಲಯವು ಅಪವಿತ್ರವಾಗುವುದೆಂದೂ ಭಾಷಣಮಾಡಿದರು. ಈ ಸನಾತನಧರ್ಮವಿರುದ್ಧ ಕಾರ್ಯಗಳಲ್ಲಿ ಪ್ರಭುತ್ವದವರು ಕೈಹಾಕುವುದು ರಾಜಧರ್ಮವಿರುದ್ಧವೆಂದು ವೈಸರಾಯರಲ್ಲಿ ವಿಜ್ಞಾಪಿಸಬೇಕಾಗಿ ತೀರ್ಮಾನಿಸಿದರು.

ವಿದೇಶದ ವೃತ್ತಾಂತಗಳು.

ಕಳೆದ ತಾ|| 13 ರಲ್ಲಿ ಇಂಗ್ಲೆಂಡಿನ ಪ್ರಧಾನಮಂತ್ರಿ ಸರ್ ರಾಮ್ಸೆ ಮೆಕ್ ಡೊನಾಲ್ಡರು [illegible] ಕಾಹಿಲೆಯಿಂದ ಹೊರಬಿದ್ದರೆಂದು [illegible] ಬಾಗಿಲ್ಲದಿಂದ ಪತ್ರವಿಕಟವಾಗಿದೆ.

ಜರ್ಮನಿಯಲ್ಲಿ ಡಾಕ್ಟರೊಬ್ಬನು ಹೊಸ ಶೋಧನವನ್ನು ಮಾಡಿರುವನಂತೆ. ಪ್ರಾಣಿಗಳ ಬಿಂದುವಿನ್ನು ಹೆಚ್ಚು ಸಬಹುದು, ಕಡಿಮೆ ಮಾಡಬಹುದು! ಇದೇ ಇದರ ಪರಿಣಾಮ. ಮುದ್ದುಗಳಲ್ಲಿ ಒಂದು ನಾಡಿ ಇದೆಯಂತೆ. ಅದರ ಮೂಲಕ ಆಹಾರದ ಉಪಯೋಗವನ್ನು ಹೆಚ್ಚು ಕಡಿಮೆ ಮಾಡಲು ಒಡೆಯುದಂತೆ. ದೇಹದಲ್ಲಿದ್ದ ಬೊಜ್ಜು [illegible] ದೇಹವನ್ನು ಪಡೆಯಬೇಕೆಂದರೆ ಆ ನಾಡಿಯನ್ನು ಪರಿಶೋಧಿಸಬೇಕು. ಹಾಗಲ್ಲದೆ, ಅಸ್ಥಿಪಂಜರಗಳಂತಿರುವ ದೇಹಗಳನ್ನು ಕೊಬ್ಬಿಸಬೇಕೆಂದರೆ ಅದೂ ಸುಲಭ. ಆ ನಾಡಿಯಿಂದ ಹಾಗೂ ಮಾಡಬಹುದು. ಇದರಿಂದ ಮಾಂಸ ಪಿಂಡಗಳಂತಿರುವ ಜೀವಿಗಳಿಗೆ ಸ್ವಲ್ಪ ಉಪಕಾರವಿದ್ದಂತೆ ಬರುತ್ತಿದ್ದರೂ ಅವಕಾಶ ಸಿಕ್ಕುವುದು.

ಕೈರೊದಲ್ಲಿ 130 ವರ್ಷದ ಮುದುಕನೊಬ್ಬನು ಈಗಲೂ ವಾಸಿಸುತ್ತಿದ್ದಾನೆ. ಇವನ ಹೆಸರು ಲಿ ಚಿಂಗ್ ಯಾನ್ ಎಂದು ಇವನ್ನು ಪ್ರಾಯವಾದವರ ಇವನು ಸಾಮಾನ್ಯ ವೃದ್ಧರಂತಿಲ್ಲ. ಅವರಿಗಿಂತ ದೃಢಕಾಯನಾಗಿದ್ದಾನೆ. ಅಲ್ಲದೆ ಏರಾಸೆಯು ಇನ್ನೂ ತಪ್ಪಲಿಲ್ಲ. 60 ವರ್ಷದ ತರುಣಿಯನ್ನು 24 ನೆಯ ಹೆಂಡತಿಯನ್ನಾಗಿ ಮದುವೆಯಾಗಿದ್ದಾನೆ. 130 ವರ್ಷಗಳ ಹಿಂದಿನ ಐತಿಹಾಸಿಕ ವಿಷಯಗಳನ್ನವನು ನಮನೋಹರವಾಗಿ ಬಣ್ಣಿಸುತ್ತಾನೆ. ಅಕಸ್ಮಾತ್ ಇಂಥವ ದೀರ್ಘಾಯು ದೊರೆಯುವುದಕ್ಕೆ ಒಂದು ಕಾರಣವನ್ನು ಹೇಳುತ್ತಾನೆ. ಮುಂಚೆ ಇವನು ಮೂಲಿಕೆಗಳನ್ನು ಮಾರುತ್ತಿದ್ದನಂತೆ. ಇವನಿಗೆ ಪರ್ವತ ಪ್ರದೇಶಗಳಲ್ಲಿ ಸಂಜೀವನೌಷಧಿ ದೊರೆಯಿತು. ಅದನ್ನು ಸೇವಿಸಿದನು. ಈಗಾಗಿ ಮರಣವೇಕೆಂದೂ ಬಂದುದನ್ನು ಇವನು ನಿರೀಕ್ಷಿಸುವಂತಿಲ್ಲ. ವೃದ್ಧಾಪ್ಯವೆಂದರೆ ಗಮನಿಸಿ ನಗುತ್ತಾನೆ.

ಅಫ್ಘಾನಿಸ್ಥಾನದ ವಾರ್ತೆ

ಅಫ್ಘಾನಿಸ್ಥಾನದ ನವಾಬರಿಗೆ ಬಂದ ಪ್ರಯಾಣಿಕರಿಂದ ಈ ಕೆಳಗಿನ ವಾರ್ತೆ [illegible] ಕಾಬೂಲಿನ [illegible] ನಾದಿರಖಾನರು ನಡೆಯ [illegible] ಮೊದಲ [illegible] ಈ ಮುಂದಿನ ಹೇಳುವ ವಿಷಯಗಳಿಗೆ ಸಂಬಂಧಿಸಿದವೆಂದು ಪ್ರಜೆಗಳಿಗೆ ತಿಳಿಸಿರುತ್ತಾನೆ. (1) ಬಚ್ಚಾ ಕಾಬೂಲ್ ರಾಜಪ್ರತಿನಿಧಿ ಬಾಚ್ಚಾ ಸಾಕಾವ ಪಕ್ಷವನ್ನು ವಹಿಸಿ ಸೋತವರಿಗೆ ಕ್ಷಮಾಪಣೆ ನೀಡಲಾಗಿದೆ. (2) ಹಿಂದೆ ಅಮಾನುಲ್ಲಾ ಪಕ್ಷವನ್ನು ವಹಿಸಿ ಅವರಲ್ಲಿ ಅಭಿಮಾನವುಳ್ಳವರಾಗಿರುವವರೆಲ್ಲರೂ ರಾಜದ್ರೋಹವನ್ನು ಮಾಡಿದರೆಂದು ಎಣಿಸುವ [illegible] ಪ್ರಕಟನೆ ಪತ್ರಿಕೆಯು ಹೊರಡಿಸಲ್ಪಟ್ಟಿದೆ. (3) [illegible] ಕೊಡಬಾರದೆಂದೂ [illegible] ಅವರ [illegible] ಸಿಕೊಂಡು ಕರೆಯ ಆಜ್ಞೆ ಮಾಡಲ್ಪಟ್ಟಿದೆ. (4) [illegible] ಬಂಧು ರಾಜ ನಿಂದ [illegible] ಪ್ರಮಾಣ [illegible] ಬಚ್ಚಾ ಸಾಕಾವ ಸ್ವಾಧೀನತೆಯ ಕಾಬೂಲ್ ಆಳ್ವಿಕೆಯ [illegible] ನಾದಿರಖಾನರು [illegible] ಸರ್ಕಾರದ ಅಧಿಕಾರವನ್ನು ಭದ್ರಪಡಿಸಲು [illegible] ರುತ್ತಾರೆ. ಈ ಪ್ರಕಟನೆಗಳಿಗೂ ಗಜನೀಯಲ್ಲಿರುವ ಸರ್ಕಾರದ ಆಜ್ಞೆಯನ್ನು [illegible] ಸರ್ಕಾರಿ [illegible] ನಾದಿರಖಾನರು ಹೊಸ ಸೇನೆಯನ್ನೇರ್ಪಡಿಸಿ ಅವಕ್ಕೆ ಜನರನ್ನು ಸೇರಿಸುತ್ತಿದ್ದಾರಲ್ಲದೆ ಹಿಂದೆ ಅಮಾನುಲ್ಲಾರವರ ಸೇನೆಯಲ್ಲಿದ್ದ ಅನೇಕ ಮಂದಿ ಸಿಪಾಯಿಗಳನ್ನು ತಮ್ಮ ಸೇನೆಗೆ ಸೇರಿಸಿಕೊಳ್ಳುತ್ತಿರುವರು. ಪೂರ್ವ ಮತ್ತು ದಕ್ಷಿಣ ಪ್ರಾಂತಗಳ ಜನರು ಪ್ರತಿನಿಧಿಗಳು ಕಳೆದವಾರ ಬಂದು ರಾಜಭಕ್ತಿ ಪ್ರಮಾಣವನ್ನು ನಾದಿರ್ ಖಾನರಿಗೆ ಸಲ್ಲಿಸಿದರು. [illegible] ಅಮಾನುಲ್ಲರವರ [illegible] ವಹಿಸಬೇಕೆಂದು [illegible] ತಮ್ಮ ಹೆಸರನ್ನು [illegible] ವರು. ವಿಜಯದಿಂದ ರಾಜಭಕ್ತಿ ಪ್ರಮಾಣವನ್ನು ನೀಡುತ್ತಿದ್ದಾರೆ.

ಭಾರತದೇಶದ ಸಮಸ್ಯೆ.

ಕಾಮನ್ಸ್ ಸಭೆಯಲ್ಲಿ ಚರ್ಚೆ

ಭಾರತದೇಶದ ಸಮಸ್ಯೆಯನ್ನು ಕುರಿತು ಕಾಮನ್ಸ್ ಸಭೆಯಲ್ಲಿ ಚರ್ಚೆ ನಡೆಯುತ್ತಲಿರುವಾಗ ಪ್ರೇಕ್ಷಕರು ಕುತೂಹಲದಿಂದ ನೆರೆದಿದ್ದರು. ಭಾರತದೇಶದ ಸಮಸ್ಯೆಯ ಮೇಲೆ ಪ್ರೋಗ್ರೆಸಿವ್ಸ್ ನಡೆಸಿದ ... ಸ್ವರಾಜ್ಯ ಕಮಿಷನ್ನಿನವರು ಈಗಿನ ಆಲೋಚನೆ ಅವರು ಅಂಗೀಕರಿಸಿದ್ದು ಭಾರತದೇಶಕ್ಕೆ ಅಧಿನಿವೇಶನ ಸ್ವಾತಂತ್ರ್ಯ ವಿಷಯವಾಗಿ ಒಂದು ಸ್ವರಾಜ್ಯ ... ಪ್ರತಿಪಕ್ಷದವರು ... ಈ ಪ್ರಕಟನೆಗೆ ಬಾಲ್ಡ್ವಿನ್ ರವರು ಶಾಸನ ಅಂಗೀಕರಿಸಬೇಕೆಂದು ಪ್ರಭುತ್ವದವರು ಅಕ್ಟೋಬರ್ ತಾ॥ ೩೦ ರಲ್ಲಿ ಬಾಲ್ಡ್ವಿನ್ ರವರನ್ನು ಕೇಳಿದರೆಂದೂ ಬಾಲ್ಡ್ವಿನ್ ರವರು ಅದಕ್ಕೊಪ್ಪಿದರೆಂದೂ ಬಾಲ್ಡ್ವಿನ್ ರವರು ಪ್ರಶ್ನೆ ಮಾಡಿದರು ಈ ಪ್ರಕಾರವಾಗಿ ಉಪನ್ಯಾಸಮಾಡಿದರು.

ಬಾಲ್ಡ್ವಿನ್ ರವರುಪನ್ಯಾಸ

ಭಾರತದೇಶ ಸಂಬಂಧವಾಗಿ ಈಗ ಯಾವ ಕ್ಲಿಷ್ಟಪರಿಸ್ಥಿತಿಯೂ ಏರ್ಪಡುವಂತಿಲ್ಲ. ರೌಂಡ್‌ಟೇಬಲ್ ಕಾನ್ಫರೆನ್ಸು ಏರ್ಪಾಡನ್ನು ಕುರಿತು ಮತ್ತು ಆ ಸಭೆಯಲ್ಲಿ ಚರ್ಚಿಸಲ್ಪಡುವ ವಿಷಯವನ್ನು ಕುರಿತು ಮಾತ್ರವೇ ನಾನು ತಿಳಿಸಬೇಕೆನ್ನುತ್ತೇನೆ. ಚರಿತ್ರೆ ಕಾಲಕ್ಕೆ ಮೊದಲು ಮಧ್ಯ ಏಷ್ಯಾದಲ್ಲಿ ಒಂದು ಸುಪ್ರಸಿದ್ಧವಾದ ಜಾತಿಯವರು ವಾಸಿಸುತ್ತಿದ್ದರು. ಅವರು ಆರ್ಯರ ಜಾತಿಯೆಂದು ಕರೆಯಲ್ಪಡುತ್ತಿದ್ದರು. ಈ ಜಾತಿಯಲ್ಲೊಂದು ಭಾಗದವರು ಪಶ್ಚಿಮದೇಶಕ್ಕೆ ಹೋಗಿ ಗ್ರೀಸ್, ಇಟಲಿ, ರೋಮು ಮೊದಲಾದ ಸಾಮ್ರಾಜ್ಯಗಳನ್ನು ಸ್ಥಾಪಿಸಿ ಯೂರೋಪು ಖಂಡವನ್ನು ಆಕ್ರಮಿಸಿದರು. ಯೂರೋಪಿಯನ್ ಮುಖ್ಯ ಜಾತಿಯ ಪ್ರಜೆಗಳ ರಕ್ತನಾಳದಲ್ಲಿ ಆರ್ಯರ ರಕ್ತವೇ ಪ್ರವಹಿಸುತ್ತಿರುವುದು. ಈ ಭಾಗದಲ್ಲಿ ಆರ್ಯರ ಭಾಷೆಯು ಯೂರೋಪು, ಅಮೇರಿಕೆ ಇವುಗಳ ಹೊರತಾಗಿ ಖಂಡಗಳಿಗೂ ವ್ಯಾಪಿಸಿತು. ಆರ್ಯರ ಇನ್ನೊಂದು ಭಾಗದವರು ದಕ್ಷಿಣಕ್ಕೆ ಹೊರಟರು. ಹಿಮವತ್ಪರ್ವತವನ್ನು ದಾಟಿ ಪಂಜಾಬಿಗೆ ಹೋಗಿ ಇವರು ಭಾರತದೇಶದಲ್ಲಿ ವಾಸಿಸುವವರಾದರು. ಪೂರ್ವದಲ್ಲಿ ಬಹಳ ಕಾಲದ ಹಿಂದೆ ಆಂಗ್ಲೇಯರ, ರಾಜಪುತ್ರರ ಬ್ರಾಹ್ಮಣರ ಪೂರ್ವಿಕರು ಒಟ್ಟಿಗೆ ರಕ್ತಸಂಬಂಧದಿಂದ ... ಸಹಾಯಕರಾಗಿದ್ದರು. ಅನೇಕ ಶತಮಾನಗಳಿಂದೀಚೆಗೆ ಪುನಃ ಈ ಮಹಾ ಸಮಸ್ಯೆಯನ್ನು ಬಗೆಹರಿಸುವ ವಿಷಯದಲ್ಲಿ ದೇವರ ದಯೆಯಿಂದ ಈ ಎರಡು ಭಾಗದ ಆರ್ಯಸಂತತಿಯವರು ಒಟ್ಟಿಗೆ ಸೇರಿ ಯೋಚಿಸಲು ಅನುಕೂಲವಾಗಿರುತ್ತದೆ.

ಎರಡು ನೀತಿವಾಕ್ಯಗಳು

ಪಶ್ಚಿಮದಿಕ್ಕಿಗೆ ಹೋದ ಆರ್ಯಸಂತತಿಯವರು ರಾಜಕೀಯ ವಿಷಯದಲ್ಲಿ ಹೊಂದಬೇಕಾದ ಅಭಿವೃದ್ಧಿಯನ್ನು ಅಂಕುರಿಸಿದರು. ಪ್ರಕೃತ ಆಕ್ಸ್‌ಫರ್ಡ್ ದೇಶಕ್ಕೂ ಅಂದರೆ ಭಾರತದೇಶಕ್ಕೆ ಹೊರಟು ಬಂದ ಆರ್ಯರು ಕರ್ತವ್ಯಕರ್ಮಕ್ಕೂ ಯೋಗಾಭ್ಯಾಸಕ್ಕೂ ಸಾಧಕವಾದ ಆಚಾರಗಳಲ್ಲಿ ಅಭಿವೃದ್ಧಿಯನ್ನು ಹೊಂದಿದರು. ಈ ಭೇದವನ್ನು ತೋರಿಸುವುದಕ್ಕಾಗಿ ನಾನು ಎರಡು ನೀತಿವಾಕ್ಯಗಳನ್ನು ಉದಹರಿಸುತ್ತೇನೆ. ಅದರಲ್ಲೊಂದು ಹಿಂದೂ ನೀತಿವಾಕ್ಯವು: "ಜೀವನವು ಒಂದು ಗ್ರಾಮದಿಂದ ಇನ್ನೊಂದು ಗ್ರಾಮಕ್ಕೆ ಪ್ರಯಾಣಮಾಡುವುದಲ್ಲದೆ ಬೇರೆ ಒಂದುಕಡೆ ನಿಲ್ಲುವುದಿಲ್ಲ" ಎರಡನೆಯದೇನೆಂದರೆ—ನಾವು ವ್ಯವಹಾರದಲ್ಲಿ ಪ್ರಯೋಗಿಸುತ್ತಿರುವ ನೀತಿವಾಕ್ಯವು: "ಇತರರು ತನ್ನ ಕಾರ್ಯವನ್ನು ಅನುಸರಿಸಿ ನಡೆದುಕೊಳ್ಳಲು ಅವಕಾಶವನ್ನು ಕಲ್ಪಿಸಬೇಕು" ಎಂಬ ವಾಕ್ಯವು. ಈ ಎರಡನೆಯ ವಾಕ್ಯವನ್ನು ಗಾಂಧಿಯವರು ಮೊದಲನೆಯ ವಾಕ್ಯವನ್ನು ಬ್ರಾಹ್ಮಣ ... ರವರು ಪ್ರತಿನಿಧಿಸುವುದು ಕಷ್ಟತರವಾಯಿತು. ಭಾರತದೇಶವು ಮುಂದೆ ನಮ್ಮ ಜಾತಿಯೊಂದಿಗೆ ಶಿಕ್ಷಾಸ್ಥಾನವಾಗಿದ್ದಿತು. ಭಾರತದೇಶವಾಸಿಗಳು ಸ್ವಾತಂತ್ರ್ಯ ಸಾವಿರ ವರ್ಷಗಳಿಗೆ ಹಿಂದಿನಿಂದಲೂ ನಡೆಯುತ್ತಿದ್ದುದು. ಆದ್ದರಿಂದ ಆ ಕಾರಣದಿಂದಲೇ ಭಾರತೀಯರ ಜೀವನದಲ್ಲಿ ವಿಶಾಲವಾದ ನಡವಳಿಕೆ ಉಂಟಾಯಿತು. ನಾವು ರಾಜಕೀಯ ವಿಷಯದಲ್ಲೇ ಮುಖ್ಯವಾಗಿ ಪ್ರವೃತ್ತರಾಗುವುದು ಭಾರತೀಯರು ಆ ರೀತಿ ಮಾಡಲಿಲ್ಲ. ಈ ರಾಜಕೀಯ ಪರಿಶೋಧನೆಯು 1917 ರ ಪ್ರಕಟನೆಯಿಂದಮಾತ್ರವಾಗಿರುತ್ತದೆ. ನಮಗೆ ಪ್ರಜಾಪ್ರಭುತ್ವ ವಿಧಾನವನ್ನು ಸ್ಥಾಪಿಸಬೇಕೆ ಎಂಬ ವಿಷಯವನ್ನು ನಮ್ಮ ಪೂರ್ವಿಕರು ಒಂದು ಶತಮಾನದಲ್ಲಿ ಯೋಚಿಸಬೇಕಾಗಿದ್ದಿತು. ಅವರು ಹಾಗೆ ಯೋಚಿಸಿ ಏರ್ಪಡಿಸಿದ್ದು ಇದರಿಂದಲೇ ನಮ್ಮ ನಾಗರಿಕ ನಡವಳಿಕೆಯಾಗಿಲ್ಲವು. ನಾವು ಪ್ರಜಾಪ್ರಭುತ್ವವನ್ನು ಪರಿಪೂರ್ಣವಾಗಿ ಬೆಳೆಸಿಯಾಗಿಲ್ಲವೆಂದು ಯಾರೂ ಇನ್ನೂ ಹೇಳಲಾರರು. ನಮ್ಮ ಜಾತೀಯ ಶಕ್ತಿಸಾಮರ್ಥ್ಯಗಳು ಸಕ್ಕಸವಾಗಿ ವಿನಿಯೋಗಿಸಲ್ಪಡುತ್ತವೆಯೋ ಇಲ್ಲವೋ ಎಂಬುದನ್ನು ಕಾಲವೇ ನಿರ್ಣಯಿಸಬಲ್ಲುದು.

ಬ್ರಿಟಿಷ್‌ನವರು ಶಾಂತಿಯನ್ನು ಸ್ಥಾಪಿಸಿದರು

ಬ್ರಿಟಿಷರ ಪರಿಪಾಲನವು ಭಾರತದೇಶದಲ್ಲಿ ಸ್ಥಾಪಿಸಲ್ಪಡುವುದಕ್ಕೆ ಮೊದಲು ಆ ದೇಶದಲ್ಲಿ ಅಂತಃಕಲಹವಿದ್ದಿತು. ಬ್ರಿಟಿಷರು ಆ ದೇಶದಲ್ಲಿ ಶಾಂತಿಯನ್ನೂ ನ್ಯಾಯವನ್ನೂ ಸ್ಥಾಪಿಸಿದರು. ಈ ವಿಷಯದಲ್ಲಿ ನಾವು ಎಷ್ಟು ಕಷ್ಟಪಟ್ಟೆವೆಂಬುದನ್ನು ಹೇಳಬೇಕಾದುದಿಲ್ಲವು. ಈ ಕಷ್ಟಗಳಿಗೆ ಭಾರತದೇಶದಲ್ಲಿ ಅನೇಕ ಜಾತಿಗಳೂ ಮತಗಳೂ ಇರುವುದೂ ಅವುಗಳ ಮಧ್ಯೆ ಪರಸ್ಪರ ಕಲಹ ಹುಟ್ಟುತ್ತಿರುವುದೂ ಕಾರಣವಾಗಿರುತ್ತವೆ. ಆ ದೇಶದಲ್ಲಿ ಶಾಂತಿಯನ್ನೂ, ನ್ಯಾಯವನ್ನೂ ನ್ಯಾಯಸಮ್ಮತವಾದ ಪರಿಪಾಲನವನ್ನೂ ಸ್ಥಾಪಿಸುವ ಬಾಧ್ಯತೆ ನಮ್ಮದಾಗಿರುತ್ತದೆ. ಬಾಧ್ಯತೆ ಇಲ್ಲದ ವಿಮರ್ಶನವನ್ನೂ, ಜ್ಞಾನವಿಲ್ಲದ ಸಹಾಯವನ್ನೂ ಭಾರತ ದೇಶಕ್ಕೆ ಕೊಟ್ಟರೆ ವಿಶೇಷ ಕಷ್ಟ ಸಂಭವಿಸುವುದು. ಈ ದೇಶಕ್ಕೂ ಭಾರತ ದೇಶಕ್ಕೂ ಮಧ್ಯೆ ಸಹಕಾರ ಭಾವವನ್ನು ಹುಟ್ಟಿಸಲು ಪ್ರಯತ್ನಿಸುವವರು ಭಾರತದೇಶ ಚರಿತ್ರೆಯನ್ನು ಚೆನ್ನಾಗಿ ಓದಬೇಕು. ಸಹಾನುಭೂತಿಯಿಂದ ಕೂಡಿದ ಸಹಾಯವು ಒಳ್ಳೆಯದೇ. ವಿನಾ ಅನುಭವವಿಲ್ಲದ ಜ್ಞಾನದಿಂದ ಹುಟ್ಟಿದ ಸಹಾನುಭೂತಿಯು ಉಪಯೋಗಕಾರಿಯಲ್ಲವು.

ಬಾಧ್ಯತಾಯುಕ್ತ ಪ್ರಭುತ್ವ ವಾಗ್ದಾನ

1917ನೇ ವರ್ಷದ ಪ್ರಕಟನೆಯಲ್ಲಿ ನಾವು ಭಾರತ ದೇಶಕ್ಕೆ ಬಾಧ್ಯತಾಯುಕ್ತ ಪ್ರಭುತ್ವ ವಾಗ್ದಾನವನ್ನು ಮಾಡಿದೆವು. ಅಂತಹ ವಾಗ್ದಾನವನ್ನು ನಾವು ಮನಃಪೂರ್ವಕವಾಗಿ ಮಾಡಿದೆವೇ ಇಲ್ಲವೇ? ಆ ವಾಗ್ದಾನವನ್ನು ಭಂಗಮಾಡಿಸಕೂಡದೆಂದು ನಮ್ಮ ದೇಶದಲ್ಲಿರುವ ಸರ್ವಪಕ್ಷದವರೂ ಅಂಗೀಕರಿಸಿಯೇ ಇರುತ್ತಾರೆ. ಈ ವಿಷಯವಾಗಿ ನಾವು ಯಾವ ರೀತಿ ಪ್ರಸ್ತುತದಲ್ಲಿ ನಡೆದುಕೊಳ್ಳಬೇಕೆಂಬುದನ್ನು ಸೂಚಿಸುವ ಭಾರವು ಸೈಮನ್ ಕಮಿಷನ್ನಿನವರ ಮೇಲೆ ಹೊತ್ತಿರುತ್ತದೆ. ಸೈಮನ್ ಕಮಿಷನ್ನಿನವರು ಬಹಳ ಶ್ರಮಪಟ್ಟಿರುತ್ತಾರೆ. ಅವರಿಗೆ ನಾವು ಕೃತಜ್ಞತಾಪೂರ್ವಕವಾಗಿ ಸಹಕರಿಸಿದ್ದರೆ ಅವರ ಶ್ರಮವೆಲ್ಲವೂ ಸಾರ್ಥಕವಾಗುವುದು. ಅವರೂ ಬಹಳ ಚಿಂತಿಸುತ್ತಿದ್ದಾರೆ. ಅವರ ವಿಷಯವಾಗಿ ಯಾವ ಸಂದೇಹವೂ ಇಲ್ಲ. ಈ ಸಭೆಯಲ್ಲಿ ಈ ವಿಷಯ ಯಾರೂ ಆಡುವುದಿಲ್ಲವೆಂದು ನಾನು ನಂಬುತ್ತೇನೆ. ಆ ಕಮಿಷನ್ನಿನವರಿಗೆ ಪಾರ್ಲಿಮೆಂಟಿನವರ ಸಹಾಯ ಸಿಕ್ಕುವುದು. ಅವರು ಎಂತಹ ಸಲಹೆಯನ್ನು ಕೊಡುತ್ತಾರೆಂಬುದನ್ನು ಈಗ ಯಾರೂ ಹೇಳಲಾರರು. ಅವರು

ಕೊಡುವ ಸಲಹೆಯನ್ನು ಆಕ್ಷೇಪಿಸತಕ್ಕ ಹಕ್ಕು ಈ ಎರಡು ಸಭೆಗಳವರಿಗೂ ಇರುತ್ತದೆ. 1917 ರ ಪ್ರಕಟನೆ ಮತ್ತು ಮಾಂಟೆಗ್ಯು-ಚೆಮ್ಸ್‌ಫರ್ಡ್ ಸಂಸ್ಕರಣದಿಂದ ಉಂಟಾದ ಬಾಧ್ಯತಾಯುಕ್ತ ಪ್ರಭುತ್ವ ಭಾರತದಲ್ಲಿ ಸ್ಥಾಪಿತವಾಗುವುದು ಬ್ರಿಟಿಷ್ ಪಾರ್ಲಿಮೆಂಟಿನ ಇಚ್ಛೆಯಾಗಿದೆ. ಆ ಕಾಲದಲ್ಲಿ ಭಾರತೀಯರ ಅಭಿಪ್ರಾಯಗಳನ್ನು ಚೆನ್ನಾಗಿ ತಿಳಿದುಕೊಂಡು ನಿರ್ಧರಿಸಬೇಕೆಂಬುದು ನಮ್ಮ ಅಭಿಪ್ರಾಯ.

ಅಧಿನಿವೇಶ ಸ್ವಾತಂತ್ರ್ಯ ಪ್ರಶ್ನೆ

ಸ್ವತಂತ್ರ ಅಧಿನಿವೇಶ ಸ್ವಾತಂತ್ರ್ಯ ಕಲ್ಪಿಸುವುದೋ ಬೇಡವೋ ಎಂಬುದನ್ನು ಆಲೋಚಿಸುವವರು ನ್ಯಾಯವಾದಿಗಳೇ ಆಗಬೇಕು. ಭಾರತದೇಶದಲ್ಲಿ ಸ್ಥಾಪಿಸಲಾಗುವ ಅಧಿನಿವೇಶ ಸ್ವಾತಂತ್ರ್ಯಕ್ಕೆ ಸೇರಿರುವ ಇತರ ಅಧಿನಿವೇಶ ಸ್ವಾತಂತ್ರ್ಯದೇಶಗಳಿಗೆ ಸರಿಸಮಾನವಾದ ಸ್ಥಿತಿಯು ಭಾರತ ದೇಶವು ಕೂಡ ಹೊಂದುವುದೆಂದು ಹೇಳಲು ಯಾವ ಸಂದೇಹವೂ ಇಲ್ಲವು. ಯಾವರೀತಿಯಲ್ಲಾಗಲಿ ಯಾವಾಗ ಬಾಧ್ಯತಾಯುತ ಪ್ರಭುತ್ವವು ಸ್ಥಾಪಿಸಲ್ಪಡುವುದೆಂಬುದನ್ನು ಯಾರೂ ಹೇಳಲಾರರು. ಈ ವಿಷಯವು ಬ್ರಿಟಿಷ್ ಪ್ರಜೆಯ ಒಪ್ಪಿಗೆಯ ಮೇಲೆ ಆಧಾರಪಟ್ಟಿರುತ್ತದೆ. ಈ ಸಮಸ್ಯೆಯನ್ನು ಪರಿಷ್ಕರಿಸುವುದರಲ್ಲಿ ತೊಡಗಿರುವವರ ಸಹಾನುಭೂತಿಯನ್ನು ತೋರಿಸಿದ ಇಂಗ್ಲೆಂಡಿನವರು ಈ ಮಹಾಸಮಸ್ಯೆಯನ್ನು ಪರಿಷ್ಕರಿಸುವಲ್ಲಿ ನಾವು ಒಂದು ಮಹತ್ವವಾದ ಆದರ್ಶವನ್ನಿಟ್ಟುಕೊಂಡಿರುತ್ತೇವೆ. ನಾವು ವಿಶ್ವಾಸದಿಂದ ಕೆಲಸಮಾಡಬೇಕಾಗಿದೆ ಎಂದು ಹೇಳಿ ಭಾಷಣವನ್ನು ಮುಗಿಸಿದರು.

ಲಾಯಿಡ್ ಜಾರ್ಜ್‌ರವರ ಆಕ್ಷೇಪ

ಲಾಯಿಡ್ ಜಾರ್ಜ್ ಅವರು ಈ ಪ್ರಕಾರವಾಗಿ ಭಾಷಣ ಮಾಡಿದರು:—ಸೈಮನ್ ಕಮಿಷನ್ನಿನವರು ಸಂಪೂರ್ಣ ವಿಷಯವನ್ನು ಆಲೋಚಿಸಿ ನಮ್ಮ ಕಕ್ಷಿಯವರಿಗೆ ಒಪ್ಪಿಸುವರು. ಅವರ ನಿವೇದನೆಯು (ರಿಪೋರ್ಟು) ಪ್ರಕಟವಾಗುವುದಕ್ಕೆ ಪೂರ್ವವೇ ರಾಜಪ್ರತಿನಿಧಿ (ವೈಸ್‌ರಾಯರು) ಪ್ರಕಟಿಸಿದ್ದನ್ನು ಯಾರಿಗೂ ಹಿಡಿಸುವುದಿಲ್ಲ. ಆ ಪ್ರಕಟನೆಯಲ್ಲಿ ಕೆಲವು ವಾಕ್ಯಗಳಿಗೆ ಭಾರತದೇಶಕ್ಕೆ ಅಧಿನಿವೇಶ ಸ್ವಾತಂತ್ರ್ಯವು ಕೊಡಲ್ಪಡುವುದೆಂದು ಕೆಲವರು ಅರ್ಥಮಾಡುತ್ತಿರುವರು. ಸೈಮನ್ ರಿಪೋರ್ಟು ಪ್ರಕಟವಾಗುವುದಕ್ಕೆ ಮೊದಲು ಈ ಪ್ರಕಟನೆ ಮಾಡಿದುದು ಅಸಂದರ್ಭವಾಗಿರುತ್ತದೆ. ಈ ಪ್ರಕಟನೆಯಿಂದ ನಮ್ಮ ಜಾತಿಯಲ್ಲಿ ಭೇದವು ಹುಟ್ಟಿತು. ಪಾರ್ಲಿಮೆಂಟಿನಿಂದ ನಿಯಮಿಸಲ್ಪಟ್ಟ ಸೈಮನ್ ಕಮಿಷನ್ನಿಗೆ ಪ್ರತಿಕೂಲವಾಗಿ ಭಾರತದೇಶ ಕಾರ್ಯದರ್ಶಿಯಿಂದಲೂ, ವೈಸ್‌ರಾಯರಿಂದಲೂ ಅತಿಕ್ರಮ ಅಧಿಕಾರವು ಈ ವಿಷಯದಲ್ಲಿರುವುದು. ವೈಸ್‌ರಾಯರ ಪ್ರಕಟನೆಯ ಮೇಲೆ ಭಾರತ ನಾಯಕರು ಮಾಡಿದ ವಾಕ್ಯಾರ್ಥದ ಸರಿಯಲ್ಲವೆಂದಾಗಲಿ ಅವರು ಅಪಾರ್ಥವನ್ನು ಮಾಡಿದರೆಂದಾಗಲಿ ಭಾರತ ದೇಶದ ಕಾರ್ಯದರ್ಶಿ (ಸೆಕ್ರೆಟರಿ ಆಫ್ ಸ್ಟೇಟ್) ಯವರು ಸ್ಪಷ್ಟವಾಗಿ ಪ್ರಕಟಿಸಿರುವರೇ? ಹಾಗೆ ಮಾಡದಿದ್ದಲ್ಲಿ ಅಂತಹ ಅಭಿಪ್ರಾಯಗಳು ಪ್ರಕಟವಾಗುವುದನ್ನು ತಪ್ಪಿಸಲು ಪರಿಸ್ಥಿತಿಯುಂಟಾಗಿ ಪುನಃ ರೌಂಡ್ ಟೇಬಲ್ ಸಭೆಯ ಏರ್ಪಾಡಾಗಿ ಏರ್ಪಡಿಸಲ್ಪಡುವುದು. ಆದರಿಂದ ಭಾರತದೇಶಕ್ಕೂ ಈ ದೇಶಕ್ಕೂ ಮಧ್ಯೆ ಮತ್ತಷ್ಟು ಕಷ್ಟ ಪರಿಸ್ಥಿತಿಯುಂಟಾಗುವುದು. ಆದುದರಿಂದ ಚಕ್ರವರ್ತಿಯವರಿಂದ ಹೊರಡಿಸಲ್ಪಟ್ಟ ಪ್ರಕಟನೆಯಲ್ಲಿ ಕಂಡ ವಾಗ್ದಾನದ ಆಶೆ ಮಾತ್ರ ಈ ಆಧಾರವಾಗಿಟ್ಟುಕೊಂಡಿರುತ್ತದೆಯೆಂದು ವೆಡ್ಜ್‌ವುಡ್ ಬೆನ್‌ರವರು ಸ್ಪಷ್ಟವಾಗಿ ತಿಳಿಸಬೇಕೆಂದು ನಾನು ಕೋರುತ್ತೇನೆ.

ವೆಡ್ಜ್‌ವುಡ್ ಬೆನ್‌ರವರ ಉತ್ತರ

ನಾನು ನನ್ನ ಬಾಧ್ಯತೆಯನ್ನು ಸಂಪೂರ್ಣವಾಗಿ ಅರಿತುಕೊಂಡೇ ಈ ಪ್ರಶ್ನೆಗೆ ಉತ್ತರವನ್ನು ಕೊಡುತ್ತೇನೆ. ಲಾಯಿಡ್ ಜಾರ್ಜ್ ರವರು ವೈಸ್‌ರಾಯರ ಪ್ರಕಟನೆಯನ್ನು ಕುರಿತು ಈಗ ಮಾಡಿದ ಆಕ್ಷೇಪವು ಬಹಳ ಹಾನಿಯನ್ನುಂಟುಮಾಡುವುದೆಂದು ಅತ್ಯಂತ ಶೋಚನೀಯವಾಗಿರುತ್ತದೆಂದು ಮಾತ್ರ ನಾನು ಹೇಳುವೆನು. ಪಾರ್ಲಿಮೆಂಟು ಸದಸ್ಯರಲ್ಲಿ ಬಹಳ ಸ್ವಲ್ಪ ಸಂಖ್ಯಾತ ಸದಸ್ಯರು ಮಾತ್ರವೇ ಲಾಯಿಡ್ ಜಾರ್ಜ್‌ರವರೊಡನೆ ಈ ವಿಷಯದಲ್ಲಿ ಏಕೀಭವಿಸುತ್ತಾರೆಂದು ನಾನು ಭಾರತೀಯ ಪ್ರಜೆಗಳಿಗೆ ತಿಳಿಸತಕ್ಕವನಾಗಿದ್ದೇನೆ.

ವೈಸ್‌ರಾಯರ ಪ್ರಶಂಸೆ

ಕಲಹಕ್ಕೆ ಕಾರಣವಾದ ಎರಡು ವಿಷಯಗಳನ್ನು ಕುರಿತೇ ಈ ದಿವಸ ಇಲ್ಲಿ ಚರ್ಚಿಸಲ್ಪಡುವುದೆಂದು ನಾನು ಎಣಿಸಿದ್ದೆನು. ಅವರಲ್ಲಿ ಮೊದಲನೆಯದು ವೈಸ್‌ರಾಯರ ಸ್ಥಾನವನ್ನು ಅವರ ಹೊರಡಿಸಿದ ಪ್ರಕಟನೆಯನ್ನು. ವೈಸ್‌ರಾಯರನ್ನು ನಾನು ಬಹಳ ಪ್ರಶಂಸಿಸುತ್ತೇನೆ ... ಕೆಲವರು ಅಭಿಪ್ರಾಯಪಡುವಂತೆ ಭಾರತದೇಶದ ವ್ಯವಹಾರದಲ್ಲಿ ಆಗಾಗ ಉಂಟಾಗುವ ಕಷ್ಟಗಳನ್ನು ನಾನು ಯೋಚಿಸಿ ಆಲೋಚಿಸುವೆನು. ಈಗ ನಿಂತ ವಿಷಯದಲ್ಲಿ ಭಾರತೀಯರ ಅಭಿಪ್ರಾಯವನ್ನು ... ಈ ವಿಷಯದಲ್ಲಿ ವೈಸ್‌ರಾಯರು ತಮ್ಮ ಗೌರವವನ್ನು ಭಾರತದೇಶದಲ್ಲಿ ಗೌರವಸ್ಥಾನವನ್ನು ಪಡೆಯುತ್ತಿರುವರು. ಭಾರತೀಯರ ಪ್ರೀತಿಯನ್ನು ಅವರ ಪಾತ್ರರಾಗುತ್ತಿದ್ದಾರೆ. ಅಂತಹ ಗೌರವವು ಪ್ರೀತಿಗಳ ಮೇಲೆಯೇ ನಮ್ಮ ಸಾಮ್ರಾಜ್ಯಕ್ಕೆ ಮುಖ್ಯ ಆಧಾರವಾಗಿರುತ್ತವೆ.

ವೈಸ್‌ರಾಯರ ಪ್ರಕಟನೆಯಲ್ಲಿ ಕಂಡ ವಿಷಯಗಳನ್ನು ಲಾಯಿಡ್ ಜಾರ್ಜ್ ರವರಾಗಲಿ ಬಾಲ್ಡ್ವಿನ್ ರವರಾಗಲಿ ಖಂಡಿಸಿಲ್ಲವು. ಅವರ ಖಂಡನೆಯು ಮುಖ್ಯವಾಗಿ ಆ ಪ್ರಕಟನೆಯ ಕಾಲ ಮಾಡಿದ ರೀತಿಯ ವ್ಯಾಖ್ಯಾನಕ್ಕೆ ಮಾತ್ರ ಸಂಬಂಧಪಟ್ಟಿರುತ್ತದೆ.

ಸೈಮನ್ ಕಮಿಷನ್ನಿನವರ ಗೌರವ

ಇನ್ನು ಎರಡನೆಯ ವಿಷಯವೇನೆಂದರೆ ಸೈಮನ್ ಕಮಿಷನ್ನಿನವರು ಎಂತಹ ಕ್ರಮವನ್ನು ವಹಿಸಿ ಈ ಕಾರ್ಯವನ್ನು ನಿರ್ವಹಿಸಲು ಕೈಕೊಂಡಿರುವರೆಂಬುದು. ಈ ಸಭೆಯಲ್ಲಿರುವ ಪ್ರತಿ ಸದಸ್ಯರೂ ಚೆನ್ನಾಗಿ ತಿಳಿದಿರುವ ವಿಷಯವಾಗಿದೆ. ಅವರನ್ನು ಅಭಿನಂದಿಸುವಲ್ಲಿ ನಾನು ಬಾಲ್ಡ್ವಿನ್ ರವರೊಡನೆ ಏಕೀಭವಿಸುತ್ತೇನೆ. ಅವರು ತಮ್ಮ ಕಾರ್ಯವನ್ನು ಚೆನ್ನಾಗಿ ಮಾಡುತ್ತಾರೆಂದು ನಾನು ನಂಬುತ್ತೇನೆ. ಈ ಎರಡು ವಿಷಯಗಳೂ ಈ ಸಭೆಯಲ್ಲಿ ಚರ್ಚಿಸಲ್ಪಡುವವೆಂದು ನಾನು ತಿಳಿದಿದ್ದೆನು.

ಬಾಲ್ಡ್ವಿನ್ ರವರ ಮಹಾಪರಾಧವು

ಈಗಿನ ಪ್ರಭುತ್ವದವರು ಅನುಸರಿಸುತ್ತಿರುವ ಪದ್ಧತಿಯನ್ನು ಬಾಲ್ಡ್ವಿನ್ ರವರು ಯಾವಾಗಲೂ ಅಂಗೀಕರಿಸಿದ್ದುದರಿಂದ ವೈಸ್‌ರಾಜರ ಪ್ರಕಟನೆಯನ್ನು ಅಂಗೀಕರಿಸಬೇಕೆಂದು ಕೋರಲ್ಪಟ್ಟರು. ಅವರು ವೈಸ್‌ರಾಯರ ಪ್ರಕಟನೆಗೆ ತಮ್ಮ ಸ್ವಂತ ಅಂಗೀಕಾರವನ್ನು ತಿಳಿಸಿದರು. ಇದೇ ಇವರು ಮಾಡಿದ ಮಹಾಪರಾಧವು. ಬಾಲ್ಡ್ವಿನ್ ರವರು ಈ ಪ್ರಕಟನೆಯನ್ನು ಅಂಗೀಕರಿಸುವುದಕ್ಕೆ ಮೊದಲು ಈ ಪ್ರಕಟನೆಯನ್ನು ಬರ್ಕೆನ್‌ಹೆಡ್ ಪಕ್ಷದವರನ್ನೂ, ಸೈಮನ್ ಕಮಿಷನ್ನಿನವರನ್ನೂ ಅಂಗೀಕರಿಸಬೇಕೆಂಬ ಪತ್ರವನ್ನು ಕೇಳಿದರು. ಆದರೆ ಆ ಪತ್ರವು ಅವರಿಗೆ ತಲುಪಲಿಲ್ಲವೆ? ಲಾರ್ಡ್ ರೀಡಿಂಗ್ ರವರು ಈ ಪ್ರಕಟನೆಯನ್ನು ಹೊರಡಿಸಲು ತಕ್ಕ ಕಾರಣಗಳಿಲ್ಲವೆಂದು ಹೇಳಿ ಇದನ್ನು ಪ್ರತಿಭಟಿಸುತ್ತಿರುವರು. ಈ ಪ್ರಕಟನೆಯ ವಿಚಾರದಲ್ಲಿ ಸೈಮನ್ ಕಮಿಷನ್ನಿನವರಿಗೆ ಯಾವ ಸಂಬಂಧವೂ ಇಲ್ಲ. ಪಾರ್ಲಿಮೆಂಟಿನವರೂ ಕೂಡ ಇದನ್ನು ಒಪ್ಪಲಿಲ್ಲ. ಲಾರ್ಡ್ ರೀಡಿಂಗ್‌ರವರೂ, ಸೈಮನ್ ಕಮಿಷನ್ನಿನವರೂ ಕೂಡ

ಆಕ್ಷೇಪಣೆಯನ್ನು ಈ ವಿಚಾರದಿಂದ ಈ ಪ್ರಶ್ನೆಯನ್ನು ಈ ವಿಷಯದಲ್ಲಿ ... ಈ ಪ್ರಕಟನೆಯನ್ನು ... ಇದು ಚಕ್ರವರ್ತಿಯವರ ಪ್ರಕಟನೆಗೆ ... ಈ ಸಭೆಯಲ್ಲಿ ... ಈ ಪ್ರಕಟನೆಯನ್ನು ಹೊರಡಿಸುವುದಕ್ಕೆ ಮೊದಲು ... ಈ ಪ್ರಶ್ನೆಯ ವಿಷಯದಲ್ಲಿ ... ಈ ಪ್ರಕಟನೆಯನ್ನು ನಾವು ... ಇದರ ಮೇಲೆ ಪಕ್ಷದವರ ಅಭಿಪ್ರಾಯವನ್ನು ಅನುಸರಿಸಲು ... ಈಗಿನ ಪಕ್ಷದವರು ... ಈ ಪ್ರಶ್ನೆಗೆ ನಮಗೆ ಸಂಬಂಧವಿಲ್ಲ ... ಸಕ್ಷದವರೂ ಸಮ್ಮತಿಸಿದ್ದರಿಂದ ... ಸೈಮನ್ ಕಮಿಷನ್ನಿನವರು ನಮ್ಮ ಭಾಷ್ಯಾರ್ಥ ಕೊಡದೆ ಸಂಬಂಧಪಟ್ಟ ಕ್ಷೇತ್ರದಲ್ಲಿ ... ಪ್ರಭುತ್ವದವರು ... ಆ ವರೆಗೆ ನಿರ್ದಿಷ್ಟವಾದ ಪ್ರಕಟನೆಯನ್ನು ಹೊರಡಿಸಿದರು. ಇದರಿಂದ ಪ್ರಭುತ್ವದವರು ಮಾಡಿದ ಬದಲಾವಣೆಯೇನೂ ಇಲ್ಲವು. ಬದಲಾವಣೆಯಿಲ್ಲವೆಂದು ಸಮರ್ಥಿಸುವುದೇ ನನ್ನ ಮುಖ್ಯೋದ್ದೇಶವಾಗಿರುತ್ತದೆ.

ಇರ್ವಿನ್ ರವರನ್ನು ಪ್ರಶಂಸಿಸುವುದು

ವಿಶೇಷ ರೀತಿ ನಡವಳಿಕೆಯಿಂದ ವೈಸ್‌ರಾಯರು ನನಗೆ ಸಹಾಯ ಕೊಟ್ಟಿದ್ದುದೇ ಮೊದಲನೆಯ ಕಾರಣವು. ನಾನು ಈ ವಿಷಯವನ್ನು ಅನುಮಾನವಿಲ್ಲದ ರೀತಿಯಲ್ಲಿ ತಿಳಿಸಲಾಶಿಸುವೆನು. ವೈಸ್‌ರಾಯರು ಕಾರ್ಯನಿಮಿತ್ತ ಇಂಗ್ಲೆಂಡಿಗೆ ಬಂದರು. ಪುನಃ ಭಾರತದೇಶಕ್ಕೆ ತೆರಳುವ ಮೊದಲು ಅವರಿಂದಲೇ ನಾನು ವೈಸ್‌ರಾಯರನ್ನು ವಿಶೇಷವಾಗಿ ಪ್ರಕಟಿಸಲು ಕೋರಿದೆನು. ಹೀಗೆ ಹೇಳುವುದರ ಬಾಧ್ಯತೆಯೆಲ್ಲವೂ ವೈಸ್‌ರಾಯರ ಮೇಲೆ ಹೊರಿಸಲ್ಪಡುವುದಿಲ್ಲ. ಅವರು ಸಹಾಯವನ್ನು ಕೊಟ್ಟರು. ಆದರೆ ಅದನ್ನು ಪ್ರಕಟಿಸಲು ನಮಗೆ ಸಂಪೂರ್ಣ ಸ್ವಾತಂತ್ರ್ಯವಿರುತ್ತದೆ. ಆ ಸಹಾಯವು ನಮಗೆ ಅನುಕೂಲವಾಗಿರುವುದರಿಂದಲೇ ನಾವು ಅದನ್ನು ತಿರಸ್ಕರಿಸಲಿಲ್ಲವು. ಈ ಪ್ರಕಟನೆಯನ್ನು ಹೊರಡಿಸಬೇಕೆಂದು ಸಲಹೆಯನ್ನು ಕೊಟ್ಟರು. ಅವರು ಇದರಮೇಲೇನೂ ಮಾಡಿದಿರಲು ಮಾಂಟೆಗ್ಯುರವರ ಪದ್ಧತಿಯನ್ನು ಆ ರೀತಿ ಬ್ರಿಟಿಷ್ ದೇಶದಲ್ಲಿ ರಾಜಕೀಯ ಪಕ್ಷಗಳ ಸರ್ವಸಮ್ಮತವಾಗಿ ಭಾರತೀಯರಿಗೆ ಸಂತಸವುಂಟಾಗಿದೆಯೆಂದು ಅವರು ಹೇಳಿದರು. ಈ ರೀತಿಯಾಗಿ ಕೆಲ ವರ್ಷಗಳಿಂದಲೂ ಪ್ರಕಟನೆ ಬೇಕಾಗಿದ್ದುದು ಹುಟ್ಟಿರುವುದೆಂತ ವಿಷಯದಲ್ಲಿ ಸಂಭವವು ಯಾರಿಗಾದರೂ ಇರುವುದೇ? ಬ್ರಿಟಿಷ್ ಪ್ರಜೆಯು ಬದಲಾಯಿಸುತ್ತಿದೆ. ಅವರ ಮಾತಿನ ಸರಣಿಯು ಬೇರೊಂದು ವಿಧವಾಗಿದೆ. ಅವರಿಗೆ ನಮ್ಮ ಮೇಲೆ ಸಹಾನುಭೂತಿಯಿಲ್ಲವು. ಮಾಂಟೆಗ್ಯುರವರ ಕಾಲದಲ್ಲಿದ್ದ ಔದಾರ್ಯವು ಈಗ ಕಡಿಮೆಯಾಗಿದೆ ಎಂದು ಭಾರತ ಮುಖಂಡರೆಲ್ಲರೂ ಸ್ಪಷ್ಟವಾಗಿ ನಿರಂತರದಲ್ಲೂ ಹೇಳುತ್ತಲೇ ಇರುವರು. ಆದರೆ ಈ ಸಂಶಯವನ್ನು ಹೋಗಲಾಡಿಸಲು ಈಗಿನ ವಿಧಾನವನ್ನು ತಿಳಿಸುವ ಒಂದು ಪ್ರಕಟನೆಯನ್ನು ಮುಖ್ಯವಾಗಿ ಮಾಡಬೇಕೆಂದು ವೈಸ್‌ರಾಯರು ಹೇಳಿದರು. ಇದು ಯಾವ ಒಳಿತು ಕಾರಣವಾದುದರಿಂದ ನಾವು ಈ ರೀತಿ ಮಾಡಿದೆವು. ಸೈಮನ್ ಸಂಘದವರು ನಿವೇದಿಕೆಯನ್ನು ಕೊಡುವರೆ ಪ್ರಕಟಿಸುವವರಾಗಿರುವರು. ಆ ನಿವೇದನೆಯು ನಿರಾತಂಕವಾಗಿ ಸ್ವೀಕರಿಸಲ್ಪಡಲಿಕ್ಕೆ ಭಾರತದೇಶದಲ್ಲಿ ಶಾಂತಿಯು ನೆಲಸಬೇಕು, ಭಾರತೀಯರಲ್ಲಿ ಸದ್ಭಾವವು ತಲೆದೋರಬೇಕು. ಈಗ ನಾವು ಇಂತಹ ಪ್ರಕಟನೆಯನ್ನು ಮಾಡಿ ಅವರ ಸಂಶಯವನ್ನು ಹೋಗಲಾಡಿಸದರೆ ಅಂತಹ ಶಾಂತಿಸದ್ಭಾವಗಳು ಅಲ್ಲಿ ನೆಲಸುವವು ಎಂದು ಅವರು ಹೇಳಿದರು. ಎರಡನೆಯ ಕಾರಣವು ಮುಖ್ಯವಾಗಿ ಭಾರತೀಯರು ಬ್ರಿಟಿಷ್ ಪ್ರಭುತ್ವಕ್ಕೆ ಸಹಾಯ ಮಾಡುವ ವಿಚಾರದಲ್ಲೂ ಮಾಂಟೆಗ್ಯು ವಿಧಾನವನ್ನು ಕಾರ್ಯಗತಿಗಾಗಿಸುವುದರಲ್ಲಿ ನಮಗೆ ಸಹಾಯಮಾಡುವ ವಿಚಾರದಲ್ಲೂ ಮುಖಂಡರ ಸಂಶಯವನ್ನು ಹೋಗಲಾಡಿಸಲಿಕ್ಕಾಗಿಯೇ ಈ ಪ್ರಕಟನೆಯು ಈಗ ಮಾಡಲ್ಪಟ್ಟದಾಗಿದೆ.

ಈ ಪ್ರಕಟನೆಯ ಪ್ರಯೋಜನವಿದು:— ಹೀಗೆ ಮಾಡಲು ವೈಸ್‌ರಾಯರು ಬ್ರಿಟಿಷ್ ಮಂತ್ರಿವರ್ಗಕ್ಕೆ ಹೇಳಿದ ಕಾರಣಗಳಿವು. ಈ ಕಾರಣಗಳು ಸಮರ್ಪಕವಾಗಿಯೂ ಒಳ್ಳೆಯವಾಗಿಯೂ ನಮಗೆ ತೋರಿದುದರಿಂದಲೇ ನಾವು ಅವರ ಸಲಹೆಯನ್ನು ಅಂಗೀಕರಿಸಿ ಈ ಪ್ರಕಟನೆಗೊಪ್ಪಿಕೊಂಡೆವು.

ಲಾರ್ಡ್ ಸೆಲ್‌ಬರ್ನ್‌ರವರನ್ನು ಗಮನಿಸಬೇಕು. ಇದರಿಂದ ನಮ್ಮ ಸಂಕಲ್ಪವು ಸ್ಪಷ್ಟವಾದೀತೆ ಎಂಬ ಪ್ರಶ್ನೆ ಹುಟ್ಟುವುದು ಹಾಗೆ ಕೇಳುವುದು ಸಹಜವೇ. ಭಾರತದೇಶದಲ್ಲಿರುವ ರಾಜಕೀಯ ಪರಿಸ್ಥಿತಿಯನ್ನು ಕುರಿತು ನಾನು ಈಗ ಹೇಳುವುದಿಲ್ಲ. ಅದು ಬರುಬರುತ ಮತ್ತಷ್ಟು ಅಭ್ಯಾಸವನ್ನು ಅಪೇಕ್ಷಿಸುತ್ತದೆ. ಈ ವಿಷಯವನ್ನು ದೃಢಪಡಿಸಲು ನಾನು ಹೆಚ್ಚು ಪ್ರಮಾಣ ತೋರಿಸುವೆನು. ಮಾರ್ಚಿ ತಾ॥ 19 ರಲ್ಲಿ ಪ್ರಕಟವಾದ ಲಂಡನ್ ಟೈಮ್ಸ್ ಪತ್ರಿಕೆಯಲ್ಲಿ ಬರೆಯಲ್ಪಟ್ಟಿರುವ ಈ ವಿಷಯಕವಾದ ಲೇಖನವನ್ನು ಓದಿ ನೋಡಿ. ಈಗ ಭಾರತದೇಶದಲ್ಲಿರುವ ರಾಜಕೀಯ ಸ್ಥಿತಿಯನ್ನು ಸರಿಯಾಗಿ ವಿವರಿಸಲು ವಿಶೇಷ ಪತ್ರಿಕಾ ವರದಿಗಾರರು ಒಂದು ಲೇಖನವನ್ನು ಆ ಪತ್ರಿಕೆಯಲ್ಲಿ ಬರೆದಿರುವರು. ಅದು ಬಹಳ ಸಂಕೀರ್ಣವಾಗಿದೆ. ನಾನು ಇಂಡಿಯಾ ಮಂತ್ರಿಯಾಗಿ ವ್ಯವಹರಿಸುವುದರಲ್ಲಿ ಅನೇಕ ವಿಷಯಗಳು ನನಗೆ ತಿಳಿಯಬರುತ್ತವೆ. ಅಲ್ಲಿ ರಾಜಕೀಯ ಅಶಾಂತಿಯು ಬಲವಾಗಿ ಹೆಚ್ಚುತ್ತಿದೆ. ಅದು ಅಂತಹ ದೊಡ್ಡ ವಿಷಯವೇನೂ ಅಲ್ಲ. ಆದರಿಂದ ನಮಗೇನೂ ತೊಂದರೆಯಾಗಿಲ್ಲವು. ಈ ದೊಡ್ಡವರದವರಾಗಲಿ ಮಹಾತ್ಮ ಗಾಂಧಿಯವರಾಗಲಿ ಅದನ್ನು ಅಲಗಿಸಲಾರರು. ಮುಖ್ಯ ವಿಷಯವೇನೆಂದರೆ ಬಾಧ್ಯತೆಯಿರುವ ಮುಖಂಡರಾರೂ ಈ ಅಶಾಂತಿಯನ್ನು ದಮನವನ್ನು ನಿರೋಧಿಸಲು ಪ್ರಯತ್ನಿಸುವುದೇ ಇದು ನಮಗೆ ಬಹಳ ಆಂದೋಲನಕಾರವಾದ ವಿಷಯವು. ಭಾರತೀಯರು ಯಾವರೀತಿ ಆಲೋಚಿಸುತ್ತಿರುವರೆಂದು ಈ ಸಭ್ಯರು ನನ್ನ ಕೇಳುವರೇನು? ಈ ಸಂದರ್ಭದಲ್ಲಿ ಎಷ್ಟೋ ಪ್ರಶ್ನೆಗಳನ್ನು ಯಾಕೆಂದರೆ ಈ ಸಭೆಯವರ ವಿಶ್ವಾಸಕ್ಕೆ ಪಾತ್ರರಾದ ಒಬ್ಬರಿದ್ದರು. ಅವರು ಹೇಳಿದ ವಿಷಯಗಳನ್ನು ಮಾತ್ರವೇ ನಾನು ತಿಳಿಸುವೆನು. ವೈಸ್‌ರಾಯರು ಪ್ರಕಟನೆಯನ್ನು ಹೊರಡಿಸಿದ ಮರುದಿವಸವೇ ಭಾರತದೇಶದಲ್ಲಿರುವ ರೂಟರ ಕಂಪೆನಿಯವರಿಂದ ಬಂದ ತಂತಿವಾರ್ತೆಯಲ್ಲಿ "ನಾವು ನಿರೀಕ್ಷಿಸಿದುದಕ್ಕಿಂತಲೂ ಹೆಚ್ಚು ರೀತಿ ವೈಸ್‌ರಾಯರ ಪ್ರಕಟನೆಯನ್ನು ಅನುಮೋದಿಸಿರುತ್ತಾರೆ. ಈ ಪ್ರಕಟನೆಯಿಂದ ಭಾರತೀಯರಲ್ಲಿ ಪ್ರತಿಕೂಲ ಭಾವವು ತೊಲಗಿ ಒಂದೇಸಾರಿಗೆ ವಿಶ್ವಾಸವು ಹುಟ್ಟಿರುವುದು. ಸಾಮ್ರಾಜ್ಯ ಸರಕಾರಗಳಲ್ಲಿ ಎಲ್ಲರ ವಿಶ್ವಾಸ ಏರ್ಪಡುತ್ತಿದೆ. ಆದರಿಂದ ಕಾಂಗ್ರೆಸ್ಸಿನ ವಿರುದ್ಧ ಈ ವರೆಗೆ ಪ್ರತಿಕೂಲವಾಗಿದ್ದ ಸಂಪೂರ್ಣ ಸ್ವಾತಂತ್ರ್ಯವಾದಕ್ಕೆ ತಿದ್ದುಪಡಿ ವಿರುದ್ಧ ಏರ್ಪಟ್ಟಿರುತ್ತದೆ" ಎಂದು ತಿಳಿಸಲ್ಪಟ್ಟಿದೆ.

ಔದಾರ್ಯದಿಂದ ಕೂಡಿದ ಸೂಚನೆ

"ಇಂಡಿಯಾ ಪ್ರಭುತ್ವದವರು ಔದಾರ್ಯದಿಂದ ಕೂಡಿದ ಸೂಚನೆಯನ್ನು ಮಾಡಿರುವರು" ಎಂದು ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯು ಬರೆದಿರುತ್ತದೆ. ಇದೇ ಸ್ವರಾಜ್ಯ ಪಕ್ಷದ ಪತ್ರಿಕೆಯಾದ "ಲೀಡರ್" "ಇರ್ವಿನ್ ರವರ ಪ್ರಕಟನೆಯು ಭಾರತ ರಾಜಕೀಯ ರಂಗವನ್ನು ಬದಲಾಯಿಸಿರುತ್ತದೆ. ಇಂತಹ ಸ್ಥಿತಿಯಲ್ಲಿ ಇವನ್ನು ಕುರಿತು ಬ್ರಿಟಿಷ್ ದೇಶದಲ್ಲಿ ಲಿಬರಲ್ ಪಕ್ಷದವರು ಅತ್ಯಧಿಕ ಮಾನಸಿಕ ಬದಲಾವಣೆ ಕಾರಣವು ಭಾರತ ದೇಶದಲ್ಲಿ ಭಾರತೀಯರೀಗ ಪ್ರಶ್ನಾರ್ಥಕವಾಗಿ ಗೊತ್ತಾಗದಿರಬಹುದು" ಎಂದು ಅಭಿಪ್ರಾಯಪಟ್ಟಿದೆ. ಇರ್ವಿನ್ ಪತ್ರಿಕೆಯು ಪ್ರಕಟಿಸುವುದನ್ನು ಇದನ್ನು ಇರ್ವಿನ್ ರವರು ಬರೆದ ಲೇಖನವಲ್ಲವು. ಬಿಡಿದು ಲೇಖಕರು ಬರೆದುದಾಗಿದೆ. ಇರ್ವಿನ್ ಪತ್ರಿಕೆಯು

ಆಡಳಿತ ಸ್ವಾತಂತ್ರ್ಯವು [illegible] ಈ ಪ್ರಕಾರವಾಗಿ ಪ್ರಕಟವಾದ [illegible] ... [illegible] ತಾನೇ ಬರಿಸಿಕೊಂಡು ಹೋದ [illegible] ... [illegible] ಈ ತಂತಿವಾರ್ತೆಯು ಇತರ ಪತ್ರಿಕೆಗಳಲ್ಲಿ ಕೂಡ ಪ್ರಕಟಿಸಲ್ಪಟ್ಟಿರುವುದು.

ಈ ಪ್ರಕಟನೆಯನ್ನು ಮಾಡಬೇಕೆಂದು ಕೆಲರು ಹೇಳಿದರಾದುದರಿಂದ ನಾನು ಮಾಡಿದೆನು. ಇದೆಯೇ ಮನೋಭಾವವು. ಇದೆಯೇ ನಾವು ಹುಟ್ಟಿಸಿದ ದಾರುಣವಾದ ಪ್ರತಿಬಂಧಕವು. ಈಗ ನೀವು ಪರಿಹರಿಸಬೇಕಾಗಿರುವ ಹಾನಿಯು ಇದೆಯೇ. ಕೆಲಸವೇನೋ ಜಗಿಹೋಗಿದೆ. ಅದರ ಫಲವು ಸ್ಪಷ್ಟವಾಗಿ ಕಂಡುಬರುತ್ತದೆ. ನಮ್ಮ ಸದ್ಭಾವವನ್ನು ಅವರು ಚೆನ್ನಾಗಿ ಅರಿಯದಿರುವುದೇ ಇದರ ಫಲವಾಗಿದೆ. ಇದು ಅನುಕೂಲವಾದ ಫಲವೆಂದು ಹಾಲೀವಿರುವ ಸಭ್ಯರುಗಳಲ್ಲಿ ಅನೇಕಮಂದಿ ಅಂಗೀಕರಿಸಿರುತ್ತಾರೆ. ಈಗ ಹೊಸದಾಗಿ ಏನಾದರೂ ಅಗತ್ಯವೇ ಎಂದು ಈ ಸಭ್ಯರು ಕೇಳಿದರು.

ಉಪೋದ್ಘಾತವನ್ನು ಕುರಿತ ಪ್ರಶ್ನೆಗೆ ನಾನು ಬಹಳ [illegible] ಪ್ರತ್ಯುತ್ತರವನ್ನು ಕೊಟ್ಟಿರುತ್ತೇನೆ. ಪದ್ಧತಿ ಎಂಬ ಶಬ್ದಕ್ಕೆ ಅನೇಕಾರ್ಥವನ್ನು ಹೇಳಬಹುದು. ಆ ದೃಷ್ಟಿಯಿಂದ ನೋಡಿದರೆ ಬದಲಾವಣೆಯಾಗಿರುತ್ತದೆ. ನೂತನ ಭಾವವು ಹುಟ್ಟಿರುವುದೆಂದು ನಾನು ಹೇಳುವೆನು.

ಲಾರ್ಡ್ ಬರಿಯುವರ ಸಂದೇಶ

ವರ್ಕ್ಷಸು [illegible] ಸಂದೇಶವನ್ನು ಪರಿಹಾಸಮಾಡಿ ಬಹಳ ಮಂದಿ ಸಭ್ಯರು ವ್ಯಂಗವಾಗಿ ಮಾತನಾಡಿದರು. ಅವರಲ್ಲಿ ಯಾರೂ ಆ ಸಂದೇಶವನ್ನು ಪೂರ್ತಿಯಾಗಿ ಓದಿಲ್ಲವೆಂಬ ಸಂಶಯವು ನನಗುಂಟಾಗಿದೆ. [illegible] ನಿಪುಣರಾದ ಬರ್ಕನ್‌ಹೆಡ್‌ರವರ ಆ ಸಂದೇಶವನ್ನು ಕುರಿತು ಒಂದು ಪರಿಹಾಸೋಕ್ತಿಯನ್ನು ಹೇಳಿದರು. [illegible] ಪಕ್ಷಗಳು ನ್ಯಾಯಸ್ಥಾನದಂತೆ ನಿಜವು. ಅದಕ್ಕೆ ಯಾವ ಸಂದೇಹವೂ ಇಲ್ಲ. ಆದರೆ ಅವರು ಪ್ರೇಮವನ್ನು ಕುರಿತು ಮಾತನಾಡಿದಾಗ ಬ್ರಿಟಿಷ್‌ರವರ ಪದ್ಧತಿಗೆ ಅದೇ ಕೀಲೆಂದು ಹೇಳಿದರು. ಬ್ರಿಟಿಷ್ ಕಾಮನ್‌ವೆಲ್ತಿನಲ್ಲಿ ಭಾರತೀಯರಿಗಿರುವ ಸ್ಥಾನವನ್ನು ಭಾರತೀಯರು ಸ್ಪಷ್ಟವಾಗಿ ಗ್ರಹಿಸುವಂತೆ ಮಾಡಲು ಈಗ ಪ್ರಯತ್ನ ಮಾಡಲ್ಪಟ್ಟಿದೆ. ಇತರ [illegible] ವರೊಡನೆ ಭಾರತೀಯರು ಕೂಡ ಸಮಾನರೇ ಎಂದು ಈಗ ವಾಗ್ದಾನ ಮಾಡಲ್ಪಡುವುದು. ನೆನ್ನೆ ಪ್ರಕಟವಾದ ಟೈಂಸ್ ಪತ್ರಿಕೆಯಲ್ಲಿ ಬರೆಯಲ್ಪಟ್ಟಿರುವ ಸರ್ ಸ್ಟಾನ್ಲೀ [illegible]ರವರ ಲೇಖವು ಇದಿರಿಗಿರುವ ನನ್ನ ಮಿತ್ರರು [illegible] ದಾಗಿಯೂ ಓದಿರುವರೆ? ಭಾರತದೇಶ ವಿಷಯದಲ್ಲಿ ಅವರು ನನ್ನ ಹಾಗೆ ಅಪರಿಚಿತರಲ್ಲ. ಭಾರತದೇಶ ವಿಚಾರವಾಗಿ ಲಾರ್ಡ್ ರೀಡಿಂಗ್‌ರವರಿಗುಂಟಾಗಿರುವ ಅನುಭವವು ಮತ್ತಾರಿಗೂ ಇಲ್ಲವು. ಪ್ರಪಂಚದಲ್ಲಿ ಎಲ್ಲಾ ದೇಶಗಳಿಗೆ ಸಮಾನವಾದ ಸ್ಥಾನವು ಭಾರತೀಯರಿಗೂ ಕೂಡ ಇರಬೇಕೆಂಬ ಭಾವವೇ ಈಗ ಭಾರತದೇಶದಲ್ಲಿ ಪ್ರಬಲವಾಗಿರುತ್ತದೆ. ಅಂತಹ ಗೌರವಸ್ಥಾನವನ್ನು ಅವರಿಗೆ ನಾವು ಯಾವಾಗ ಕಲ್ಪಿಸಿಕೊಡುವುದಿಲ್ಲವೋ ಆಗ ಅವರು ನಮ್ಮ ಸಾಮ್ರಾಜ್ಯವನ್ನು ತ್ಯಜಿಸಿಬಿಡುವುದು ನಿಶ್ಚಯವೆಂದು ಆ ಲೇಖದಲ್ಲಿ ಹೇಳಲ್ಪಟ್ಟಿದೆ.

ಬರ್ಕನ್‌ಹೆಡ್‌ರವರ ಧೋರಣೆ

ಮೊದಲು ಬದಲಾವಣೆಯಾದ ಭಾಗವು ವ್ಯಾಖ್ಯಾನವಾಗಲು ಬರ್ಕನ್‌ಹೆಡ್‌ರವರ ಧೋರಣೆಯನ್ನು ನಾನು ಪೂರ್ತಿಯಾಗಿ ತೋರಿಸಿದೆನು. ಬ್ರಿಟನ್‌ದೇಶದಲ್ಲಿ ಯಾರು ಯಾವ ಅಧಿಕಾರದಲ್ಲಿರುತ್ತಾರೆಂಬುದು ಭಾರತೀಯರಿಗೆ ಸರಿಯಾಗಿ ತಿಳಿಯದಾದುದರಿಂದ ನಾನು ಈಗ ಹೇಳುವ ಮಾತುಗಳನ್ನು ಭಾರತೀಯರು ಆಲಿಸುವರೆಂಬ ನಂಬಿಕೆಯಿಂದ ನಾನೀವಿಷಯವನ್ನು ಸ್ಪಷ್ಟಪಡಿಸುತ್ತೇನೆ. ಈಗ ಬ್ರಿಟನ್‌ದೇಶದ ಪ್ರಭುತ್ವದಲ್ಲಿ ಬರ್ಕನ್‌ಹೆಡ್‌ರವರಿಗೆ ಯಾವ ಅಧಿಕಾರವೂ ಇಲ್ಲ. ಬ್ರಿಟಿಷ್ ರಾಜಕೀಯ ಸಂಬಂಧವನ್ನು ಪೂರ್ತಿಯಾಗಿ ಬಿಟ್ಟುಬಿಡಬೇಕೆಂದು ಬರ್ಕನ್‌ಹೆಡ್‌ರವರು ಇಚ್ಛಿಸಿರುವುದಾಗಿ ಕೂಡ ನನಗೆ ತಿಳಿದಿರುತ್ತದೆ. ಅಲ್ಲದೆ ವಾಣಿಜ್ಯವಿಚಾರದಲ್ಲಿ ಕೆಲಸಮಾಡಲಿಚ್ಛಿಸಿರುವುದಾಗಿ ಕೇಳಿರುತ್ತೇನೆ.

ಮೊದಲ ಬದಲಾವಣೆಯು ಭಾವದಲ್ಲಿ ಉಂಟಾಗಿರುತ್ತದೆ. ಎರಡನೇ ಬದಲಾವಣೆಯು ಪದ್ಧತಿಯಲ್ಲಿ ಉಂಟಾಗಿದೆ. ಇದು ಮತ್ತಷ್ಟು ಮುಖ್ಯವಾದುದು. ಏಕೆಂದರೆ, ಭಾರತೀಯರಿಗೆ ಮುಖ್ಯವಾದುದು ಇದೆಯೇ. ನಾವು ಮಾಡಬೇಕೆಂದಿರುವ ಸಂಯುಕ್ತ ಸಮಾವೇಶವೇ ಈ ಮುಖ್ಯ ವಿಷಯವಾಗಿದೆ. ನಾವು ಏರ್ಪಡಿಸಿದ ಸೈಮನ್ ಸಂಘವೇ ಇದು. ಬಹಳ ಕಷ್ಟದ ಸ್ಥಿತಿಯಲ್ಲಿ ನಮಗೆ ಸಹಾಯಮಾಡಲು ಬಂದ ಸರ್ ಶಂಕರನಾಯರವರು ಮೊದಲಾದ ಸೆಂಟ್ರಲ್ ಕಮಿಟಿ ಸಭ್ಯರು ಸಿದ್ಧಪಡಿಸಿದ ನಿವೇದಿಕೆಯನ್ನು ಕೂಡ ನಾವು ನಿರೀಕ್ಷಿಸುತ್ತಿದ್ದೇವೆ. ಆ ನಿವೇದಿಕೆಗೆ ಬಹಳ ಪ್ರಾಮುಖ್ಯತೆ ಇರುವುದೆಂದು ನಂಬುತ್ತೇನೆ. ಶಂಕರನಾಯರವರು ಮೊದಲಾದವರು ಪ್ರಬಲಾಭಿಪ್ರಾಯವು ತಮಗೆ ಬಹಳ ಪ್ರತಿಕೂಲವಾಗಿದ್ದರೂ ಅವರ ಮುಖ್ಯ ಸ್ನೇಹಿತರಲ್ಲೂ ಅನೇಕಮಂದಿ ವಿರುದ್ಧವಾಗಿದ್ದರೂ ಸಾಹಸಪಟ್ಟು ಸೈಮನ್ ಸಂಘಕ್ಕೆ ಅನುಕೂಲವಾಗಿ ಶಕ್ತಿವಂಚನೆಯಿಲ್ಲದೆ ಕೆಲಸಮಾಡಿರುವರು. ಈ ಪ್ರಕಟನೆಯನ್ನು ಕುರಿತು ನಾನು ಸೆಂಟ್ರಲ್ ಕಮಿಟಿಯವರಿಗೆ ಹೇಳಲು ನನ್ನ ನಿವೇದಿಕೆಯನ್ನು ಪೂರೈಸಿಕೊಳಿಸಿದಮೇಲೆ ಎರಡು ದೇಶದವರಿಗೂ ಅಧಿಕವಾದ ಸಮಾಧಾನಭಾವ ಹುಟ್ಟುವಂತೆ ಮಾಡಲು ತಮ್ಮ ಸರ್ವಶಕ್ತಿಯನ್ನೂ ವಿನಿಯೋಗಿಸುತ್ತೇವೆಂದು ಅವರು ಹೇಳಿದರು. ಅದಕ್ಕಾಗಿ ನಾನು ಅವರಿಗೆ ಕೃತಜ್ಞನಾಗಿರುವೆನು. ಈ ಸಭೆಯೇ ಈಗ ಭಾರತೀಯರಿಗೆ ಮುಖ್ಯತಮವಾಗಿರುತ್ತದೆ.

ರೌಂಡ್‌ಟೇಬಲ್ ಕಾನ್‌ಫರೆನ್ಸು

ಈ ಸಭೆಯನ್ನು ಕುರಿತು ಈ ಸಭ್ಯರು ನನ್ನನ್ನು ಪ್ರಶ್ನಿಸಿದರು. ಇದು ಬಹಳ ಮುಖ್ಯ ವಿಷಯವಾದುದರಿಂದ ನಾನು ಬಹಳ ಎಚ್ಚರಿಕೆಯಿಂದ ಮಾತನಾಡಬೇಕಾಗಿದೆ. ಭಾರತದೇಶದಲ್ಲಿರುವ ವಿವಿಧ ಪಕ್ಷಗಳ ಪ್ರತಿನಿಧಿಗಳು ತಮ್ಮ ಭಾವವನ್ನೂ, ತಮ್ಮ ಪದ್ಧತಿಯನ್ನೂ ಕುರಿತು ಘೋಷಿಸುವುದಕ್ಕೂ, ನಮಗೆ ಅದರ ವಿಧಾನದಲ್ಲಿ ನಂಬಿಕೆಯನ್ನು ಹುಟ್ಟಿಸಲು ಹೇಳಬೇಕಾಗಿರುವ ಸಹೇತುಕವಾದ ಕಾರಣಗಳನ್ನು ತಿಳಿಸುವುದಕ್ಕೂ ಅವರಿಗೆ ಈಗ ಅವಕಾಶ ಕೊಡಲ್ಪಡುವುದು. ಇದರಿಂದ ಅವರು ಸ್ವಯಮಾಗಿ ತಮ್ಮ ಭಾವಗಳನ್ನು ನಮಗೆ ತಿಳಿಸಲು ಅವಕಾಶವಾಗುತ್ತದೆ. ಮಂತ್ರಿವರ್ಗದವರು ಅಸ್ವಾದರೂ ನಿರ್ಧಾರವು ಮಾಡಿದ ಮೇಲೆ ಕಣ್ಣೊರೆಸುವುದಕ್ಕಾಗಿ ಈ ಸಭೆಯು ಜರುಗಿಸಲ್ಪಡುವುದಿಲ್ಲ. ಮುಂದಾಗಿಯೇ ಬಹಳ ವ್ಯವಧಾನವಿರುವಾಗ ಮಂತ್ರಿವರ್ಗದವರು ಯಾವ ನಿರ್ಧಾರವನ್ನೂ ಮಾಡುವುದಕ್ಕೆ ಮೊದಲೇ ಈ ಸಭೆ ಜರುಗುವುದಿಲ್ಲ. ಆದುಕಾರಣ ಆ ಸಭೆಯಲ್ಲಿ ಭಾರತೀಯರು ಹೇಳುವುದನ್ನೆಲ್ಲ ಮಂತ್ರಿವರ್ಗದವರು ನಿರ್ಮಲ ಮನಸ್ಸಿನಿಂದ ಆಲಿಸುವರು. ವೈಸ್‌ರಾಯರ ಪ್ರಕಟನೆಯಲ್ಲಿ ಈ ವಿಷಯವು ಪ್ರಸಿದ್ಧಪಡಿಸಲ್ಪಟ್ಟಿರುವುದು.

[illegible] ಸೈಮನ್ ಸಂಘದವರು ಭಾರತಕ್ಕೆ [illegible] ಪ್ರಚಾರದಲ್ಲಿ [illegible] ಈ ಸಭೆಗೆ [illegible] ಬಂಧಕ [illegible] ವಿಷಯಗಳನ್ನೂ ಪ್ರಕಟಿಸಿ [illegible] ಬ್ರಿಟಿಷ್ ಸರಕಾರದ [illegible] ... ಈ ಮಾರ್ಗದಿಂದ [illegible] ಪಾರ್ಲಮೆಂಟ್ ಸಭೆಯವರಿಗೆ [illegible].

ಈ ಪ್ರಕಟನೆಯನ್ನು [illegible] ನಾನು ಹೇಳಿದ ವಾಕ್ಯಗಳನ್ನೇ ಇನ್ನೊಂದು ಸಾರಿ ಹೇಳುತ್ತೇನೆ. ಆ ಪದಗಳಿಗೆ [illegible] ಅಲ್ಪಾರ್ಥವಾಗಲಿ ಎಷ್ಟು ಮಾತ್ರಕ್ಕೂ ಇಲ್ಲವೆ [illegible] ಭಾರತದೇಶದ ನಾನಾ ಪಕ್ಷಗಳ ಪ್ರತಿನಿಧಿಗಳೂ ಸಂಸ್ಥಾನಾಧೀಶರ ಪ್ರತಿನಿಧಿಗಳೂ ಈ ಸಭೆಗೆ ಸಂಪೂರ್ಣವಾಗಿ ಆಹ್ವಾನಿಸಲ್ಪಡುವರು. ಇದರಿಂದ ಭಾರತದೇಶದಲ್ಲಿ ಅನುಕೂಲಪರಿಸ್ಥಿತಿ [illegible] ಎಂದು ನಾನು ಹೇಳಿರುವುದು ಸತ್ಯವು.

[illegible] ಸಂಘರ್ಷಣವು

ನಾನು ಒಂದು ಪ್ರಶ್ನೆಯನ್ನು ಮಾತ್ರ ಕೇಳಿದೆನು. ನಾನು ಬಹಳ ಪ್ರಶ್ನೆಗಳನ್ನು ಕೇಳಿದ ಹಾಗೆ ಇಂಡಿಯಾ ಮಂತ್ರಿಗಳು ನುಡಿಯುವರು. ಈ ಪ್ರಕಟನೆಗೆ ಭಾರತೀಯ ನಾಯಕರು [illegible] ಎಂದು ಲಾಯಿಡ್ ಜಾರ್ಜ್‌ರವರು ಕೇಳಿದರು.

ಈ ಪ್ರಶ್ನೆಗೆ ನಾನು ಸ್ಪಷ್ಟವಾಗಿ ಪ್ರತ್ಯುತ್ತರವನ್ನು ಕೊಟ್ಟಿದ್ದರೂ ವೈಸ್‌ರಾಯರ ಪ್ರಕಟನೆಯಲ್ಲಿರುವ [illegible] ವಿಷಯವೆಂದು ನಾನು ಹೇಳಿರುತ್ತೇನೆ. ತೊಂದರೆಯನ್ನುಂಟುಮಾಡಲು ಅದೇ ಪ್ರಶ್ನೆಯನ್ನು ನಾ [illegible] ಈ ಸಭ್ಯರ [illegible].

ಈ ಸಂಸ್ಥೆಯವರು ಈ ವಾಗ್ದಾನವನ್ನು ಹಿಂದೆ ನಾನು [illegible] ಈಗ ಇಂಡಿಯಾ ಮಂತ್ರಿಯ ಹೇಳುವುದು ಸರಿಯಲ್ಲ. [illegible] ಅರಿತುಕೊಳ್ಳುವುದಿಲ್ಲ [illegible] ತೊಂದರೆಯನ್ನು ತಪ್ಪಿಸುವುದಕ್ಕಾಗಿ ನಾನು ಈ ಪ್ರಶ್ನೆಯನ್ನು ಕೇಳಿದೆನು. ಈ ಪ್ರಕಟನೆಗೆ [illegible] ಮಾಡುತ್ತಿರುವ ಅನ್ಯಾಯವು [illegible] ಮುಂದೆ ಬಹಳ [illegible] ಸಂಭವಿಸುತ್ತದೆ. [illegible] ವ್ಯಾಖ್ಯಾನವನ್ನು [illegible] ಎಂದು ನಾನು ಕೇಳಿದೆನು. [illegible] ಭಾರತೀಯ ಮುಖಂಡರುಗಳಲ್ಲಿ ಒಂದು ಪ್ರಕಟನೆಯನ್ನು ಮಾಡಿರುತ್ತಾರೆ. [illegible] ಈ ವಾಗ್ದಾನ [illegible] ಕೇಳಿದೆನು. ಈ ವಿಷಯವು ಈ ಸಭೆಯಲ್ಲಿ [illegible] ನನಗೆ ತಿಳಿಯುವುದಕ್ಕೆ ಮೊದಲೇ ಸಂಶಯ ನಿವಾರಣೆ ಮಾಡಿಕೊಳ್ಳಲಿಚ್ಛಿಸಿದೆನು ಎಂದು ಲಾಯಿಡ್ ಜಾರ್ಜ್‌ರವರು ಹೇಳಿದರು.

[illegible] ಲಾಯಿಡ್ ಜಾರ್ಜ್‌ರವರು ಈ ಪ್ರಶ್ನೆಯನ್ನು ಕೇಳುತ್ತಾರೆಂದು ನಾನು [illegible] ಅದಕ್ಕಾಗಿ ಅವರು ನನ್ನನ್ನು ಕ್ಷಮಿಸಬೇಕೆಂದು ಬೇಡುತ್ತೇನೆ. ವೈಸ್‌ರಾಯರ ಪ್ರಕಟನೆಯನ್ನು [illegible] ಓದಿರುವಿರಿ. ಅದಕ್ಕೇನು ಅರ್ಥವಾಗುವುದೋ ಅದೇ ಅರ್ಥವು ಎಂದು ವೆಡ್ಜ್‌ವುಡ್‌ಬೆನ್‌ರವರು ನುಡಿದರು.

ಈ ಪ್ರಕಟನೆಗೆ ಪ್ರತ್ಯುತ್ತರವಾಗಿ [illegible] ಪ್ರಕಟನೆ ಮಾಡಿದ ಭಾರತೀಯ ಮುಖಂಡರುಗಳಲ್ಲಿ ಬಹಳ ಸಮರ್ಥರಲ್ಲದೆ ಅನೇಕರಿದ್ದಾರೆ. ವೈಸ್‌ರಾಯರ ಪ್ರಕಟನೆಯ ಅರ್ಥವನ್ನು ಗ್ರಹಿಸಿದವರು ಈ ಪ್ರಕಟನೆಗೆ ನಾವು ಮಾಡುವ ಅರ್ಥವು ಸರಿಯೇ ಎಂದು ಅವರೇ ಕೇಳುತ್ತಾರೆ. ಅದರಲ್ಲಿ ಸಂದಿಗ್ಧವಿಲ್ಲದಿರುವುದರಿಂದ ಅವರು ಹೀಗೆ ಕೇಳುವರು. ಅವರು ಮಾಡಿದ ಅರ್ಥದಲ್ಲಿ ಮುಖ್ಯವಾದುದೊಂದಿದೆ ಎಂದು ಲಾಯಿಡ್ ಜಾರ್ಜ್‌ರವರು ನುಡಿದರು.

ವೈಸ್‌ರಾಯರ ಪ್ರಕಟನೆಯು ಬಹಳ ಎಚ್ಚರಿಕೆಯಿಂದ [illegible] ಪ್ರಕಟವಾಗಿ [illegible] ಈಗ ಹೊಸದಾಗಿ [illegible] ಎಂದು ವೆಡ್ಜ್‌ವುಡ್‌ಬೆನ್‌ರವರು ತಿಳಿಸಿದರು.

ಲಾರ್ಡ್ ಪಾಸ್‌ಫೀಲ್ಡ್‌ರವರ ಹೇಳಿಕೆಯು [illegible] ಎಂದು ಸರ್ ಡಬ್ಲ್ಯು. ಜಾಯಿನ್‌ಸನ್‌ಹಿಕ್ಸ್‌ರವರು ಇಂಡಿಯಾ ಮಂತ್ರಿಯನ್ನು ಕೇಳಿದರು.

ನಾನು ಇದಕ್ಕಿಂತಲೂ [illegible] ಹೇಳಬೇಕಾದ ವಿಷಯ ಬೇರೆ ಕೆಲವಿವೆ. ಆದರೆ ಅವುಗಳಿಂದ ಪ್ರಯೋಜನವೇನೂ ಇಲ್ಲವೆಂದು ನನಗೆ ತೋರಿಲ್ಲವು. ದೊರೆತನದವರ ಈ ಪ್ರಕಟನೆಯನ್ನು ಮಾಡುತ್ತಿರುವ ಕಾರಣವನ್ನು [illegible] ಭಾವಿಸ್ಥಿಯು ಬಹಳ ವಿಷಮವಾಗಿರುತ್ತದೆ. ಮಾರ್ಗದಲ್ಲಿ ಬಹಳ ನಿರೋಧಗಳುಂಟಾಗುವುವು.

ಇಂತಹ ನಿರೋಧಕರವಾದ ವಿಷಯವನ್ನು ಅಂಗೀಕರಿಸುವಾಗ ಭಾರತ ಸ್ವಪರಿಪಾಲನೆಗೆ ವಿಪ್ಲವ [illegible] ಈಗ ನಡೆಯುತ್ತಿರುವ [illegible] ದರಿಂದ ಸಾಮ್ರಾಜ್ಯದ [illegible] ವಾಗಿ [illegible] ಎಂದು ಬಹಳ ಮಂದಿ ನಂಬುತ್ತಾರೆ ಎಂದು ಇಂಡಿಯಾ ಮಂತ್ರಿಯು ನುಡಿದರು.

ಸರ್ ಜಾನ್ ಸೈಮನ್‌ರವರ ಪ್ರಕಟನೆ.

ಸಂಘಸಭ್ಯರೆಲ್ಲರೂ ಒಪ್ಪಿರುವರು

ಸೈಮನ್ ಸಂಘವು ನಿಯಮಿಸಲ್ಪಟ್ಟಾಗ ನಮ್ಮಲ್ಲಿ ಒಬ್ಬ [illegible] ಜರುಗಿತು. ಪಾರ್ಲಮೆಂಟಿನವರು [illegible] ನಿವೇದಿಕೆಯನ್ನು ಪ್ರಕಟಿಸುವವರೆಗೂ ಸಂಘಸಭ್ಯರುಗಳಲ್ಲಿ ಯಾರೂ ಭಾರತದೇಶ ವಿಷಯಕವಾದ [illegible] ಚರ್ಚೆಯಲ್ಲಿ ಭಾಗಿಗಳಾಗಬಾರದು [illegible] ಒಂದು ನಿಯಮವನ್ನು ಮಾಡಿದೆವು. ಆ ನಿಯಮವನ್ನು ಭದ್ರವಾಗಿ ಅನುಸರಿಸುತ್ತಿದ್ದೇವೆ. ಆದುದರಿಂದ ಈ ಸಭೆಯಲ್ಲಿ ಈಗ ನಾನು ಯಾವ ಮಾತನ್ನೂ ಆಡಕೂಡದೆಂದೇ ತಿಳಿದಿರುವೆನು. ಆದರೆ, ಈಗ ನನ್ನ ಸ್ಥಾನಕ್ಕೆ ಸಮಾನವಾದ ಸಭೆಯಾದದ್ದರಿಂದ ಸಂಘಸಭ್ಯರ ಪರವಾಗಿ ಕೆಲ ಮುಖ್ಯ ವಿಷಯಗಳನ್ನು ತಿಳಿಸಬೇಕೆಂದು ನನ್ನ ಮಿತ್ರರು ಅಂಗೀಕರಿಸಿದುದರಿಂದ ನಾನು ಈಗ ಮಾತನಾಡಲಿಚ್ಛಿಸುವೆನು. ಅವನ್ನು [illegible] ಯಾವ ಚರ್ಚೆಯೂ ಹುಟ್ಟುವುದಿಲ್ಲವೆಂದು ನಂಬುತ್ತೇನೆ. ಈ ಸಭೆಯಲ್ಲಿ ಸಂಘಕ್ಕೆ ಪ್ರತ್ಯೇಕ [illegible] ಏರ್ಪಡಿಸಲ್ಪಟ್ಟಿಲ್ಲ. ಸೈಮನ್ ಸಂಘ ಸಭ್ಯರಾದ ನಾವೆಲ್ಲರೂ ಅಲ್ಲದೆ [illegible] ನಮ್ಮಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲವು. ನಮ್ಮ ಸಂಘವನ್ನು [illegible] ನಮ್ಮ ಸಂಘಸಭ್ಯರ ಅನುಮತಿಯ [illegible] ಮಾತನಾಡುತ್ತೇನೆ. ಆದರೆ ಇದು ಭಿನ್ನತೆಯಿಲ್ಲವು. ನಮ್ಮ ಸಂಘದವರು ಮೊದಲು [illegible] ಭಾರತದೇಶದಲ್ಲಿ ಪ್ರತಿಭಟನೆಯುಂಟು [illegible] ಯುದ್ಧವು [illegible] ಹಿಂದೆ ಭಾರತದೇಶದಲ್ಲಿ [illegible] ಸ್ಥಿತಿ [illegible] ಹೊರಟ [illegible] ಎಂದು ಸ್ವತಂತ್ರ ಸಂಬಂಧವಾದ ಪ್ರಶ್ನೆಗಳು ನಿರ್ಧರಿಸಲ್ಪಡುವುದೆಂದು [illegible] ಈ ವಿಷಯನ್ನು ತಿಳಿದು ಪಾರ್ಲಮೆಂಟಿನವರೆಲ್ಲರೂ ವಿಶೇಷವಾಗಿ ಕೆಲಸಮಾಡುವುದು ಕ್ರಿಯಾಕಾರವು ಭಾರತದೇಶದಲ್ಲಿ ಹುಟ್ಟಿರುವ ಅವಿಶ್ವಾಸವನ್ನೂ ವಿಪರೀತಭಾವನೆಯನ್ನೂ ಹೋಗಿಸುವುದು ನಮ್ಮೆಲ್ಲರ ಮುಖ್ಯ ಕರ್ತವ್ಯವಾಗಿದೆ.

ಆದರೆ ಭಿನ್ನಾರ್ಥಕಲ್ಪನೆಗೆ ಅವಕಾಶವಿತ್ತಿರುವ ವೈಸ್‌ರಾಯರು ತಮ್ಮ ಪ್ರಕಟನೆ ಮಾಡುವುದರಲ್ಲಿ ಸೈಮನ್ ಸಂಘದವರ ಸಲಹೆಯನ್ನು ಬ್ರಿಟನ್ ಪ್ರಭುತ್ವದವರು ಆಗ ಸರಿಸಲಿಲ್ಲವೆಂದು ಹೋದವಾರ ಭಾರತ ಮಂತ್ರಿ [illegible] ವಿಷಯದಲ್ಲಿ ಸತ್ಯವು ಲೇಶಮಾತ್ರವಿಲ್ಲ. ಸೈಮನ್ ಸಂಘದವರು ತಾತ್ಕಾಲಿಕವಾಗಿ ಒಂದು ಸಂಕ್ಷಿಪ್ತ ನಿವೇದಿಕೆಯನ್ನು ಪ್ರಕಟಿಸಿದರು — ಎಂಬ [illegible] ಈ ವಿಷಯವನ್ನು ಭಾರತೀಯರು ಚೆನ್ನಾಗಿ ಗ್ರಹಿಸುವರೆಂದು [illegible] ನಡೆದ ಸಂಗತಿಯನ್ನು ಪ್ರತಿಪಕ್ಷ ನಾಯಕರು ಈ ಸಭೆಯಲ್ಲಿ ತಿಳಿಸಿರುವರು. ಈಗ ಈ ಪ್ರಭುತ್ವದವರು ಈ ಪ್ರಕಟನೆಯನ್ನು ಮಾಡುವರೆಂದು ನನಗೆ ತಿಳಿಯುತ್ತಲೇ ಆ ಪ್ರಕಟನೆಗೆ ಯಾವ ಸಂಬಂಧವೂ ಇರಕೂಡದೆಂದು ನಮ್ಮ ಸಂಘದವರು [illegible] ಈ ಸಂಗತಿಯು [illegible] ಇಂಡಿಯಾ ಮಂತ್ರಿಗಳಿಗೆ ತಿಳಿಸಿರುತ್ತೇನೆ. ಈ ವಿಷಯದಲ್ಲಿ ನಮ್ಮ ಬಾಧ್ಯತೆಯು ಮುಗಿದಿಲ್ಲ. ನಿವೇದಿಕೆಯು ಪೂರ್ತಿಯಾದ ಮೇಲೆ ಪ್ರಕಟಿಸುವುದು ನಮ್ಮ ಕರ್ತವ್ಯವಾಗಿದೆ.

11.30 ನೇ ವರ್ಷಾರಂಭದಲ್ಲಿ ಸೈಮನ್ ಸಂಘದ ನಿವೇದಿಕೆಯು ಪ್ರಕಟಿಸಲ್ಪಡುವುದು.

ನಮ್ಮ ಸಂಘದ [illegible] ಅಧಿಕಾರಿಗಳಿಗೆ ಸೂಚನೆ [illegible] ಸಂದರ್ಭದಲ್ಲಿ [illegible] ನಿವೇದಿಕೆಯು ಪ್ರಕಟಿಸಲ್ಪಡುವುದು. ನಮ್ಮ ಸಂಘವನ್ನು [illegible] ಕುರಿತು ಈ ಸಭೆಯಲ್ಲೂ ಪ್ರಭುಗಳ (ಲಾರ್ಡ್ಸ್) ಸಭೆಯಲ್ಲೂ ಭಾರತದೇಶದಲ್ಲೂ ಪ್ರಕಟನೆಗಳು ಎರಡು ವರ್ಷಗಳಾಗಿರುವುವು. ಆ ದೇಶದಲ್ಲಿ ಎಲ್ಲಾ ಪಕ್ಷದವರ ಅನುಮೋದನೆಯಿಂದ ನಮ್ಮ ಸಂಘವೇರ್ಪಟ್ಟಿರುತ್ತದೆ. ನಮ್ಮ ಸಂಘವು ಎರಡು ಪಾರ್ಲಮೆಂಟುಗಳನ್ನೂ ರಾಜಾಜ್ಞೆಯನ್ನೂ ಪಡೆದಿರುತ್ತದೆ ಎಂದು ಸೈಮನ್‌ರವರು ಹೇಳಿದರು.

ಹೀಗೆ ಹೇಳುವುದರಿಂದ ಸೈಮನ್ ಸಂಘವು ಪಾರ್ಲಮೆಂಟಿಗಿಂತ ಭಿನ್ನವಾದುದೆಂದು ನಮ್ಮಭಿಪ್ರಾಯವೇ ಎಂದು [illegible]ರವರು ಕೇಳಿದರು.

[illegible] ಪ್ರಸಂಗದಲ್ಲಿ [illegible] ಹೀಗೆ ಹೇಳಲಿಲ್ಲ. [illegible] ನಮ್ಮ ಸಂಘವು ಪಾರ್ಲಮೆಂಟ್ ಒಳ್ಳಿನ ಪ್ರಕಾರ [illegible] ಒಂದು ಪ್ರತ್ಯೇಕ ಕಾರ್ಯಕ್ಕಾಗಿ ಏರ್ಪಟ್ಟಿರುತ್ತದೆ. ಆ ಕಾರ್ಯವನ್ನು [illegible] ತಗ್ಗಿಸುವುದಕ್ಕಾಗಲಿ ಯಾವ [illegible] ಪ್ರಯತ್ನಿಸಲಿಲ್ಲ. ಮುಂದೆಯೂ ಪ್ರಯತ್ನಿಸುವುದಿಲ್ಲ. ನಮ್ಮ ನಿವೇದಿಕೆಯಲ್ಲಿ ಭಾರತದೇಶದಲ್ಲಿರುವ ಸಂಸ್ಥಾನಗಳಿಗೂ ಬ್ರಿಟಿಷ್ ಇಂಡಿಯಾಕ್ಕೂ ಇರುವ ಸಂಬಂಧವನ್ನು ಕುರಿತು ಬರೆಯುವಲ್ಲಿ ಸಂಸ್ಥಾನಗಳ ಪ್ರತಿನಿಧಿಗಳನ್ನೂ ಬ್ರಿಟಿಷ್ ಇಂಡಿಯಾ ಪ್ರತಿನಿಧಿಗಳನ್ನೂ ಆಹ್ವಾನಿಸಬೇಕೆಂದು ಸೂಚಿಸಿಕೊಂಡಿದೆ. [illegible] ನಮ್ಮ ವಿಚಾರಣೆಯ [illegible] ನಾನು [illegible] ಆ ಅವಕಾಶವನ್ನು ಈ ಸಭೆಯಲ್ಲಿ ಯಾರೂ ಹುಡುಕಿರಲಾರರು ಎಂದು ಪ್ರಧಾನ ಮಂತ್ರಿಯವರು ತಿಳಿದೇ ಇರುತ್ತಾರೆ. ಆದರೆ ಆ ಪತ್ರವನ್ನು [illegible] ನಾನು ಬರೆದ ಲೇಖದಲ್ಲಿ ಪ್ರಧಾನಮಂತ್ರಿಯವರಿಗೆ ಈ ಸೂಚನೆಯನ್ನು ಕೊಟ್ಟಿರುತ್ತೇನೆ. ಆ ಸೂಚನೆಯನ್ನು ಈಗ ಪ್ರಭುತ್ವದವರೂ [illegible] ಪ್ರತಿಕೂಲಪಕ್ಷದವರೂ ಭಾರತೀಯರಲ್ಲಿ ಹೆಚ್ಚು ಮಂದಿಗಳೂ ಅನುಮೋದಿಸುತ್ತಾರೆಂದು ಕೇಳಿ ನಾನು ಬಹಳವಾಗಿ ಸಂತೋಷಿಸುತ್ತೇನೆ. [illegible] ನಾವು ಮೊದಲನೇಸಾರಿ ಭಾರತದೇಶಕ್ಕೆ ಹೋಗಿದ್ದಾಗ [illegible] ಆದರಲ್ಲಿ ಒಂದು ಮುಖ್ಯ ವಾಕ್ಯವಿದ್ದಿತು. [illegible] ಭಾರತದೇಶದಲ್ಲಿ ಬಹಳ [illegible] ಆಗಿರುತ್ತದೆ.

ಸೈಮನ್ ಸಂಘವು ಬ್ರಿಟಿಷ್ ಪ್ರಭುತ್ವದವರಿಂದಲೂ ನಾವರ ಪ್ರಭುತ್ವದವರಿಂದಲೂ [illegible] ರಾಜಾಜ್ಞೆಯಿಂದ ಈ ಸಂಘವು [illegible] ಸ್ವತಂತ್ರವೂ ನಿರ್ಬಂಧರಹಿತವೂ ಆದ ಸಂಘವೆಂದು ಹೇಳುವುದು ಅನಾವಶ್ಯಕವು.

ಪ್ರಭುತ್ವದವರು ಈಗೇನು ಮಾಡಬೇಕೆಂದರೂ ಈ ವಿಷಯದಲ್ಲಿ ನಮ್ಮ ಸಂಘಕ್ಕೆ [illegible] ಇಲ್ಲದಿರುವುದು ಉಚಿತವೆಂದು [illegible] ಇಂಡಿಯಾ ಮಂತ್ರಿಗಳಿಗೆ ಬರೆದ ಲೇಖವು ಸರಿಯಾದುದೆಂದು ಪರಿವಾರದವರೆಲ್ಲರೂ ಅನುಮೋದಿಸುತ್ತಾರೆಂದು ನಾನು ನಂಬುತ್ತೇನೆ.

ಪಾರ್ಲಮೆಂಟಿನವರ ಅನುಮೋದನೆಯಿಂದಲೇ ಏರ್ಪಟ್ಟಿತು

ಈ ವಿಷಯದಲ್ಲಿ ಸೈಮನ್ ಸಂಘದವರೊಡನೆ ಆಲೋಚಿಸಬೇಕಾಗಿದ್ದಿತೆಂದು ಇಲ್ಲಿ ಕೆಲರು ಅಭಿಪ್ರಾಯಪಟ್ಟಿದ್ದರು. ಈ ವಿಷಯದಲ್ಲಿ ನಮ್ಮ ನಿಷ್ಪಕ್ಷವಾಗಿ ಯಾರೂ ತೀವ್ರವಾಗಿ ವಾದಿಸಲಿಲ್ಲ. ಈ ಆಕ್ಷೇಪಣೆಗೆ ಸಮಾಧಾನವನ್ನು ಇದರ ಹೇಳಬೇಕಾದ ಅವಶ್ಯಕತೆಯಿಲ್ಲ. ಸೈಮನ್ ಸಂಘ ಸಭ್ಯರೆಲ್ಲ ನಾನಾ ಪಕ್ಷಗಳ ಪಾರ್ಲಮೆಂಟಿನ ಸಭ್ಯರೇ ಆಗಿರುವರು. ಒಂದು ಮುಖ್ಯವಾದ ಕೆಲಸವನ್ನು ಮಾಡಲು ನಮ್ಮ ಸಂಘವನ್ನು ನಿಯಮಿಸಿದರು. ಅದನ್ನು ನೆರವೇರಿಸಲು ನಾವು ಸಮ್ಮತಿಸಿ ಒಪ್ಪಿಕೊಂಡೆವು. ಆದರೆ ಈ ವಿಷಯವಾಗಿ ಪಾರ್ಲಮೆಂಟಿನ ಸಭೆಯಲ್ಲಿ ಚರ್ಚೆ ನಡೆಯುವುದು ಸೂಚನೆಯು. ನಮ್ಮ ನಿವೇದನವನ್ನು ನಾವು ಪೂರ್ತಿ ಮಾಡಲು ನೀವು ಅವಕಾಶವನ್ನು ಕೊಡಬೇಕು.

[illegible] ಮುಗಿಸಲು ಈ ಎರಡು ವರ್ಷಗಳ [illegible] ವಲ್ಲವೆಂದು [illegible] ಹೇಳಲಿಲ್ಲ. ಈ ಎರಡು ವರ್ಷಗಳಿಂದಲೂ ಪಾರ್ಲಮೆಂಟಿನವರು [illegible] ಆಲೋಚನೆಯಲ್ಲಿ ಸಹಾಯಮಾಡಿರುತ್ತಾರೆ. ಈ ದಿವಸ ಈ ಸಭೆಯಲ್ಲಿ ಎಲ್ಲಾ ಪಕ್ಷದವರೂ ನಮ್ಮ ಸಂಘದ ವಿಚಾರವಾಗಿ ತಿಳಿಸಿದ ಸದ್ಭಾವನೆಗೆ ನಾನು [illegible] ಕೃತಜ್ಞನಾಗಿರುತ್ತೇನೆ. ನಾವು ಭಾರತದೇಶಕ್ಕೆ ಬ್ರಿಟಿಷ್‌ದೇಶಕ್ಕೆ ಹಿತವಾದ ಸೇವೆಯನ್ನು ಮಾಡಲು ನಾವು ನಿಷ್ಪಕ್ಷಪಾತವಾಗಿ [illegible] ಭಾರತೀಯರಿಗೆ ಕೂಡ ತಿಳಿದೇ ಇರುತ್ತದೆ. ನಮ್ಮ ಸಂಘಕ್ಕೆ [illegible] ಯಾವ ಉದ್ದೇಶವೂ ಇಲ್ಲ.

ನಾವು ವಿಲಾಯಿತಿಗೆ ಹಿಂತಿರುಗಿದ ಮೇಲೆ ಈಗ ಪ್ರಧಾನಮಂತ್ರಿಗಳವರ [illegible] ಪಾರ್ಲಮೆಂಟಿನಲ್ಲಿ [illegible] ನಮ್ಮ ಸಂಘದ [illegible] ನಿಯಮಿಸಲ್ಪಟ್ಟ ಸಂಘವೆಂಬ ವಿಷಯವು ಭಾರತೀಯ [illegible] ಭಾರತ ಪ್ರಭುತ್ವದ [illegible] ಈ ದಿವಸ ಜರುಗಿದ ಚರ್ಚೆಯ [illegible]

ನಮ್ಮ ಉದ್ದೇಶ್ಯ ಮತ್ತು ಕಲ ಸಿದ್ಧಾಂತಗಳನ್ನು ಉತ್ತಮ ನಿಶ್ಚಯವಾಗಿಯೂ ನಮ್ಮ ಗ್ರಂಥಗಳನ್ನು ಲೋಕಮಾನ್ಯಗಳು ಹಾಗೆಯೇ ಶ್ರೇಷ್ಠಯುವಾಗಿ ಕೈಕೊಂಡು ಶ್ರಮಿಸಿ ಸಾಧಿಸಬೇಕು.

ಪ್ರಚಾರವನ್ನು ಪ್ರಶಂಸಿಸಿ ಸಮರ್ಥಿಸಿರುವುದು

ನಾನು ಸ್ವಯಮ್‌ಸೇವಕನಾಗಿ ಒಬ್ಬ ಕೈಲಾಸನಾಗಿರ ಶ್ರೀ ೧೬ ನೇ ನಾವ ಪಲ್ಲಿಸುವ ಹಲವು ಕಡೆ ಮುಖ್ಯರೆನ್ನಿಸಿದ ಶ್ರೀಗಳವರ ಸ್ಥಾನ ಶಿಕ್ಷಣ ಸಮಾಜದ ಸ್ಥಾನಕ್ಕೆ ಬೋಧಿಸಿ ನಾವು ಹೇಳಬಹುದು. ಈ ಕ್ಷೇತ್ರದ ಜನರು ನಾವು ತೀರ್ಮಾನಿಸಿ ಮುಖ್ಯ ಕಾರ್ಯದ ನೆರವಿನಿಂದ ಸ್ಥಾನ ಸ್ವೀಕರಿಸಿ ಹೊಂದಿರುವುದು ನಿತ್ಯ ಕ್ರಿಯೆಗೆ ನಡೆಸಿದರು. ಒಳ್ಳೇ ಬಗೆಯ ಆಚಾರಕ್ಕೆ ಅನುಕೂಲವಾಗುವ ಪ್ರತಿಷ್ಠೆಯನ್ನು ನಡೆಸುತ್ತಿರುವ ನಿರ್ಧಾರದಿಂದ ನಾವು ಈ ನಿಶ್ಚಯದ ಪ್ರಕಾರ ಕಾರ್ಯಮಾಡಿದೆವು. ಆದುದರಿಂದ ಈ ಸ್ಥಿತಿಯಲ್ಲಿ ಇಂಡಿ ಪ್ರಭುತ್ವದವರು ತಮ್ಮ ಕರ್ತವ್ಯವನ್ನು ಸರಿಯಾಗಿ ನೆರವೇರಿಸಲು ಈ ಸಭೆಯವರು ಸರಿಯಾಗಿ ಆಲೋಚನೆಯನ್ನು ಕಲ್ಪಿಸಿಕೊಡಬೇಕೆಂದು ಪ್ರಧಾನಮಂತ್ರಿಗಳು ಹೇಳಿದರು.

ಬಿಸ್ವಾಸ್‌ಹೆಡ್‌ರವರು ತಮ್ಮ ತೀರ್ಮಾನವನ್ನು ಉಪಸಂಹರಿಸಿಕೊಂಡರು ಈ ಸಭೆಗೆ ರೀಡಿಂಗ್‌ರವರೂ ಬಿಸ್ವಾಸ್‌ರವರೂ ಬಂದಿದ್ದರು.

ಪತ್ರವ್ಯವಹಾರ

ಪತ್ರವ್ಯವಹಾರಕರ ಲೇಖಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ

ಕಲ್ಕುಣಿಯ ದುರವಸ್ಥೆ

ನುಗ್ಗಹಳ್ಳಿ ತಾಲ್ಲೂಕು ಕಲ್ಕುಣಿ ಗ್ರಾಮವು ಸುಮಾರು ೩೦೦ ಮನೆಗಳನ್ನೂ 2000 ಜನಸಂಖ್ಯೆಯನ್ನೂ ಉಳ್ಳದ್ದಾಗಿದ್ದರೂ ಮಹಾ ಅನಾರೋಗ್ಯವಾದ ಸ್ಥಳದಲ್ಲಿರುವುದರಿಂದ ಜನರು ರೋಗಾದಿಗಳಿಂದ ಸದಾ ಕಷ್ಟಪಡುತ್ತಾರೆ. ಈ ದುರವಸ್ಥೆಯನ್ನು ತಪ್ಪಿಸಲಾಗದೆ ಗ್ರಾಮವಾಸಿಗಳು ಆರೋಗ್ಯವಾದ ಪ್ರದೇಶದಲ್ಲಿ ಮನೆ ಕಟ್ಟಿಕೊಳ್ಳಲು ಸ್ಥಳವನ್ನು ಕೊಡಬೇಕೆಂದು 1913 ರಲ್ಲಿ ನುಗ್ಗಹಳ್ಳಿ ತಾಲ್ಲೂಕು ಅಮಲ್ದಾರರಿಗೆ ವ ಬೀಗೊ ಪಂಚ್ ಬಾಬಾಯವರಲ್ಲಿ ಹೇಳಿಕೊಂಡು 205 ಮತ್ತು 206 ನೇ ನಂಬರ ಜಮೀನಿನಲ್ಲಿ ಮನೆ ಕಟ್ಟಿಕೊಳ್ಳಲು ಸ್ಥಳವನ್ನು ಕೊಂಡುಕೊಳ್ಳುವುದಕ್ಕಾಗಿ ಹುಜೂರು ಜಮಾಬಂದಿ ವೇಳೆಯಲ್ಲಿ 115 ರೂಪಾಯಿ ಗಳನ್ನು ಡಿಪಾಜಿಟ್ಟು ಕಟ್ಟಿದರು. ಅದರ ಮೇಲೆ ಯಾವ ಕಾರ್ಯಭಾಗವೂ ನಡೆಯದಿದ್ದುದನ್ನು ನೋಡಿ 1922 ರಲ್ಲಿ ತಾಲ್ಲೂಕು ಅಮಲ್ದಾರರಿಗೆ ಅರ್ಜಿ ಬರೆದುಕೊಳ್ಳಲಾಗಿ ಈ ಸಂಬಂಧವಾದ ರಿಕಾರ್ಡು ಡಿಸ್ಟ್ರಿಕ್ಟ್ ಆಫೀಸಿಗೆ ಹೋಗಿರುವುದು ವಾಪಸ್ ಬಂದಿಲ್ಲವೆಂದು ಇಂಡಾರ್ಸು ಮಾಡಿರು. ಅದರಮೇಲೆ ಗ್ರಾಮಸ್ಥರು ಹಟಸ್ಥರಾಗಿದ್ದು 1928 ನೇ ನವಂಬರಿನಲ್ಲಿ ದಿವಾನ್ ಸಾಹೇಬರು ಈ ಗ್ರಾಮಕ್ಕೆ ದಯಮಾಡಿಸಿದ್ದಾಗ ಅವರಿಗೊಂದು ಸದ ವಿಜ್ಞಾಪನಾ ಪತ್ರಿಕೆಯಲ್ಲಿ ಈ ವಿಷಯವನ್ನೆಲ್ಲಾ ತಿಳಿಸಿಕೊಂಡಿರಲಾಗಿ ದಿವಾನ್ ಸಾಹೇಬರು ಖುದ್ದು ಸ್ಥಳದ ದುರವಸ್ಥೆಯನ್ನು ನೋಡಿ ಎನರು ಇಂಥಾ ಅನಾರೋಗ್ಯ ಸ್ಥಳದಲ್ಲಿ ಇನ್ನೂ ಸಾಮದ ಹೇಗೆ ಇರುತ್ತಿದ್ದಾರೆಂದು ವ್ಯಸನಪಟ್ಟು ಕೂಡಲೆ ಮನೆ ಕಟ್ಟಲು ಜಮೀನನ್ನು ಕೊಡಿಸಬೇಕೆಂದು ಸಂಗಡ ಬಂದಿದ್ದ ಡೆಪ್ಯುಟಿ ಕಮಿಷನರ್ ಮಿ॥ ರಾಮನಾಥ್‌ರವರಿಗೆ ಹೇಳಿದರು. ಅವರು ಕೂಡಲೇ ಏರ್ಪಡಿಸುತ್ತೇನೆಂದು ಹೇಳಿ 2-3 ತಿಂಗಳಾದರೂ ಏನನ್ನೂ ಮಾಡದೆ ಅವರ ಬದಲಿಗೆ ಬಂದ ಮಿ॥ ಅನಂತರಾಮಯ್ಯರವರಿಗೆ ತಮ್ಮ ದುರವಸ್ಥೆಯನ್ನು ಕುರಿತು ಅರ್ಜಿ ಬರೆದುಕೊಳ್ಳಲು ಅವರು ಕೂಡಲೆ ಬಂದು ಖುದ್ದು ಸ್ಥಳವನ್ನು ನೋಡಿ ದಿವಾನ್ ಸಾಹೇಬರು ಅಪ್ಪಣೆಕೊಡಿಸಿದಂತೆಯೇ ಈ ಜನರು ಇಂಥಾ ಕೊಚ್ಚೆ ಸ್ಥಳದಲ್ಲಿ ಹ್ಯಾಗೆ ಜೀವಿಸಿದ್ದಾರೆಂದು ಹೇಳಿ ಬಹಳ ಕನಿಕರಪಟ್ಟು ಕೂಡಲೆ ನೆರವೇರಿಸಿಕೊಡುತ್ತೇನೆಂದು ಅಪ್ಪಣೆಕೊಡಿಸಿದ್ದಲ್ಲದೆ ಈ ಸಂಬಂಧವಾಗಿ ರಿಕಾರ್ಡ್ಸ್ ಹೊಸದಾಗಿ ಮಾಡಿಕೊಳ್ಳಬೇಕೆಂದು ಆ ಬಗ್ಗೆ ತಹಶೀಲ್ದಾರರಿಗೆ ಹೇಳಿದರು. ಆ ಪ್ರಕಾರ ಅವರು ಹೇಳಿದ ದಯಮಾಡಿ ಸಿದರು. ಆದರಂತೆಯೇ ಈಗಿರುವ ಅಮಲ್ದಾರರು ಸ್ಥಳಕ್ಕೆ ಬಂದು ಖುದ್ದು ಆದಾಯಾಧಿಕಾರ 1000 ರೂಪಾಯಿಗಳನ್ನು 1 ವಾರದಲ್ಲಿ ಡಿಪಾಜಿಟ್ ಕಟ್ಟಬೇಕೆಂದು ಹುಕುಂ ಮಾಡಿದ್ದರಿಂದ 11-7-1929 ರಲ್ಲಿ ಹಣವನ್ನು ತಾಲ್ಲೂಕಿಗೆ ಕಟ್ಟಿ ರಸೀತಿಯನ್ನು ಪಡೆದಿರುತ್ತಾರೆ. ಮುನ್ಸಿಫ್ ಸಂಬಂಧ ಜಮೀನನ್ನು ಕೊಂಡುಕೊಳ್ಳುವ ವಿಚಾರದಲ್ಲಿ ಗ್ರಾಮವಾಸಿಯಾದ ಯವರ ಅನುಮತಿಯನ್ನು ಕೇಳಿ ಅವರೊಪ್ಪಿಗೆಯನ್ನು ಕೊಟ್ಟಿರುವರಾದರೂ ಯಾವ ಪ್ರಯತ್ನ ನಡೆಯದಿರುವುದನ್ನು ನೋಡಿ ಡೆ. ಕಮಿಷನರಿಗೆ 2-3 ಅರ್ಜಿಗಳನ್ನು ಬರೆದುಕೊಂಡಿರುವರು. ಇಷ್ಟಾದರೂ ಈವರೆಗೆ ಜಮೀನನ್ನು ಕೊಂಡುಕೊಡುವ ಪ್ರಯತ್ನ ಮಾಡದಿರುವುದನ್ನು ನೋಡಿದರೆ ಈ ಗ್ರಾಮದವರ ದುರದೃಷ್ಟವೆಂದೂ ದೇವರು ವರ ಕೊಟ್ಟರೂ ಪೂಜಾರಿ ಕೊಡ ಎಂಬ ಗಾದೆಯಂತೆ ದಿವಾನ್‌ಸಾಹೇಬರ ಮತ್ತು ಡೆ. ಕಮಿಷನರ್ ಸಾಹೇಬರ ಅಪ್ಪಣೆಗಳು ಪರಿಣಮಿಸಿ ಗ್ರಾಮದವರ ನೆರವಿಯು ಆಶಾರಹಿತವಾಗಿ ಪರಿಣಮಿಸಿರುತ್ತದೆಂದೂ ಬರೆಯಲು ವ್ಯಸನವಾಗುತ್ತದೆ. ಈ ಗ್ರಾಮದ ಜನರ ಅನಾರೋಗ್ಯಸ್ಥಿತಿಯನ್ನು ಲಕ್ಷ್ಯಕ್ಕೆ ತಂದು ಸರಕಾರದವರು ಈಗಿನ ಡೆಪ್ಯುಟಿ ಕಮಿಷನರು ಈ ಬಗ್ಗೆ ಗಮನಕೊಟ್ಟು ತಮ್ಮ ವಾಗ್ದಾನವನ್ನು ನೆರವೇರಿಸಿ ಗ್ರಾಮಸ್ಥರ ಕೃತಜ್ಞತೆಗೆ ಪಾತ್ರರಾಗುವರೆಂದು ನಂಬುತ್ತೇನೆ.

ಗ್ರಾಮವಾಸಿ

ವಿಜ್ಞಾಪನಾಪತ್ರಿಕಾದಾನ

ಕಳೆದ ತಿಂಗಳಲ್ಲಿ ಚಿಟ್ಟಲ್‌ದುರ್ಗ ತಾಲ್ಲೂಕು ಮುದಿಗುಂಡದಲ್ಲಿ ನಾವು ಪಾಲಿಸುವ ಮಂದಿರದ ಪ್ರತಿಷ್ಠೋತ್ಸವವೂ, ಬಾಲಿಕಾಪಾಠಶಾಲಾಸಂಬಂಧ ಕಟ್ಟಡವೂ ಚಿಟ್ಟಲ್‌ದುರ್ಗ ತಾಲ್ಲೂಕು ಬೋರ್ಡು ಪ್ರೆಸಿಡೆಂಟರಾದ ಮಿ॥ ಜಿ. ಪಿ. ಗುಲ್ಬರ್ಗರವರಿಂದ ನಡೆಸಲ್ಪಟ್ಟಾಗ್ಗೆ ಆ ಗ್ರಾಮವಾಸಿಗಳು ಈ ಕೆಳಗೆ ಕಂಡ ವಿಜ್ಞಾಪನಾ ಪತ್ರಿಕೆಯನ್ನು ಮಿ॥ ಜಿ. ಪಿ. ಯವರಿಗೆ ಅರ್ಪಿಸಿ ತಮ್ಮ ಕೃತಜ್ಞತೆಯನ್ನು ಪ್ರದರ್ಶಿಸಿದರು. ಈ ಮಹೋತ್ಸವಕ್ಕೆ ತಾಲ್ಲೂಕಿನ ಮುಖ್ಯಾಧಿಕಾರಿಗಳೂ, ದೊಡ್ಡ ಮನುಷ್ಯರುಗಳೂ ಆಹ್ವಾನಿಸಲ್ಪಟ್ಟಿದ್ದು ಉಪಹಾರಾದಿಗಳಿಂದ ಸತ್ಕರಿಸಲ್ಪಟ್ಟರು. ಬಾಲಿಕಾ ಪಾಠಶಾಲೆಯ ಉಪಯೋಗಕ್ಕಾಗಿಯೇ ಮಿ॥ ಸರಾಫ್ ಚಂದ್ರಶೇಖರದೇವರು ಕಟ್ಟಿಸಿರುವ ಶಾಲಾಭವನವನ್ನು ಮಂದಿರಕ್ಕೆ ತಾಲ್ಲೂಕು ಬೋರ್ಡಿನವರಿಂದ ಆಕ್ಷೇಪವಾದ ಪ್ರತಿಫಲವನ್ನು ಪಡೆಯುವುದು ಸಹ ತಮ್ಮ ಧರ್ಮಕಾರ್ಯಕ್ಕೆ ಪ್ರತಿಬಂಧಕವಾಗಿರುವುದರಿಂದ ಅದನ್ನು ಕೇಳದೇ ಇಟ್ಟಿದೆ ಉಚಿತವಾಗಿ ವಹಿಸಿಕೊಡುವುದು ಯುಕ್ತವಾಗಿರುತ್ತದಲ್ಲದೆ ತಮ್ಮ ಧರ್ಮಕಾರ್ಯಸಫಲವಾಗುತ್ತದೆಂದು ಈ ಮೂಲಕ ಅವರಿಗೆ ನಾನು ಸೂಚಿಸಿದ ಇದರಲ್ಲಿ ದೇವರು ಮತ್ತು ಈ ಸೂಚನೆಯನ್ನು ಅವರು ಸಾರ್ಥಕಪಡಿಸುವರೆಂದು ಬಲವಾಗಿ ನಂಬಿರುವೆನು.

ಸ್ಥಳದ ವಿದ್ಯಾಭಿಮಾನಿ.

ಚಿಟ್ಟಲ್‌ದುರ್ಗ ತಾಲ್ಲೂಕು ಬೋರ್ಡು ಪ್ರೆಸಿಡೆಂಟರಾದ ಮಿ॥ ಜಿ. ಪಿ. ಗುಲ್ಬರ್ಗರವರ ಸನ್ನಿಧಿಯಲ್ಲಿ ಕೊಪ್ಪ ಗ್ರಾಮವಾಸಿ ಮುದಿಗುಂಡದ ಮಹಾಜನಗಳ ಪರವಾಗಿ ಅರ್ಪಿಸುವ ಕೃತಜ್ಞತಾಪೂರ್ವಕವಾದ ವಿಜ್ಞಾಪನಾ ಪತ್ರಿಕೆಯನ್ನು ಸಮರ್ಪಿಸುತ್ತೇವೆ.

ಮಾನ್ಯರೇ,

ಈ ದಿವಸ ಈ ಸಭೆಯಲ್ಲಿ ನೆರೆದಿರುವ ಇತರ ಅಧಿಕಾರಿಗಳು ಮತ್ತು ಗ್ರಾಮ ಮುಖಂಡರ ಸಮಕ್ಷಮದಲ್ಲಿ ತಮಗೆ ನಮ್ಮ ಗ್ರಾಮದ ಪರವಾಗಿ ಸ್ವಾಗತವನ್ನು ಬಯಸುತ್ತೇವೆ.

ನಮ್ಮ ಈ ಮುದಿಗುಂಡವೆಂಬ ಗ್ರಾಮವು ಚಿಟ್ಟಲ್‌ದುರ್ಗದ ಮುಖ್ಯ ಗ್ರಾಮಗಳಲ್ಲಿ ಒಂದಾಗಿಯೂ ಸುಮಾರು 3000 ಜನ ಸಂಖ್ಯೆಯುಳ್ಳದ್ದಾಗಿಯೂ ಇದೆ. ಈ ಗ್ರಾಮಕ್ಕೆ ಒಂದು ಬಾಲಿಕಾ ಪಾಠಶಾಲೆಯನ್ನು ಏರ್ಪಡಿಸಬೇಕೆಂದು ಬಹಳ ದಿವಸಗಳಿಂದಲೂ ನಮ್ಮಗಳೆಲ್ಲರ ಅಪೇಕ್ಷೆಯಾಗಿದ್ದಿತು. ಅದಕ್ಕಾಗಿ ಕೆಲವು ಪ್ರಯತ್ನಪಡುತ್ತಾ ಬಂದೆವು. ಆದು ಈಗ ಸಭಾಧ್ಯಕ್ಷರಾಗಿರುವ, ನಮ್ಮಗಳ ಪ್ರಿಯಮಿತ್ರರೂ, ಜನಾನುರಾಗಿಗಳೂ, ತಾಲ್ಲೂಕು ಬೋರ್ಡು ಪ್ರೆಸಿಡೆಂಟರೂ ಆದ ತಮ್ಮ ಮತ್ತು ಧನ ಶಾಲಿಗಳಾದ ಬೋರ್ಡು ಮೆಂಬರುಗಳ ಅಕ್ಕರೆಯಿಂದ, 11-9-1929 ನೇ ತಾರೀಖಿನಲ್ಲಿ ಇಲ್ಲಿಗೆ ಬಾಲಿಕಾ ಪಾಠಶಾಲೆಯೊಂದನ್ನು ಮಂಜೂರು ಮಾಡಿ ಕೊಟ್ಟಿರುವುದಕ್ಕಾಗಿ ತಮಗೂ, ಧನ ಶಾಲಿಗಳು ಬೋರ್ಡು ಮೆಂಬರುಗಳಿಗೂ ವಿಶ್ವಾಸ ಪೂರ್ವಕವಾಗಿ ಧನ್ಯವಾದಗಳನ್ನು ಅರ್ಪಿಸುತ್ತೇವೆ.

ತಾವು ಇಲ್ಲಿಗೆ ದಯಮಾಡಿಸಿದ ಕಾಲಕ್ಕೆ ತಾವು ಸಾಧಾರಣವಾಗಿ 15-20 ವರ್ಷಗಳಿಂದಲೂ ಸಾರ್ವಜನಿಕ ಪ್ರಯೋಜನವಾದ ತಾಲ್ಲೂಕು ಬೋರ್ಡು ಡಿಸ್ಟ್ರಿಕ್ಟ್ ಬೋರ್ಡು ಮೆಂಬರಾಗಿಯೂ, ಮ್ಯೂನಿಸಿಪಲ್ ಬೋರ್ಡು, ದೇವಸ್ಥಾನಗಳ ಅಭಿವೃದ್ಧಿ ಕಮಿಟಿಗಳ ಪ್ರೆಸಿಡೆಂಟರಾಗಿಯೂ, ಪ್ರಿಯರೆಂದು ಸಂಭಾವಿತರಲ್ಲಿಯೂ ಸಹಾಯಕರಾಗಿಯೂ ಇದ್ದುಕೊಂಡು ಮಾಡಿದ ತಕ್ಕ ಮತ್ತು ಮಾಡುತ್ತಲಿರುವ ಉಪಕಾರಗಳನ್ನು ನಾವೆಲ್ಲರೂ ಅರಿತವರಾಗಿರುತ್ತೇವೆ. ತಾವು ನಿಸ್ಪೃಹರೂ ಜನಾನುರಾಗಿಗಳೂ, ವಿದ್ಯಾಭಿಮಾನಿಗಳೂ ಆಗಿರುವುದರಿಂದ ತಮ್ಮನ್ನು ಎರಡನೇ ಅವೃತ್ತಿ ತಾಲ್ಲೂಕು ಬೋರ್ಡ್ ಪ್ರೆಸಿಡೆಂಟರಾಗಿ ಪ್ರಜೆಗಳು ಚುನಾಯಿಸಿಕೊಂಡಿರುವುದೇ ನಿದರ್ಶನವಾಗಿದೆ.

ಇವುಗಳಲ್ಲದೆ ಬಹು ಕಾಲದಿಂದಲೂ ಈ ತಾಲ್ಲೂಕಿಗೆ ಹೈಸ್ಕೂಲು ಇಲ್ಲದೆ ಬಾಲಕರ ಪ್ರೌಢ ವಿದ್ಯಾಭ್ಯಾಸಕ್ಕೆ ಅಡಚಣೆ ಇದ್ದುದನ್ನು ತಾವು ಕಂಡು ಸರ್ಕಾರಕ್ಕೆ ಅರಿಕೆ ಮಾಡಿದ ಸಂಗತಿ ಸರ್ವರಿಗೂ ತಿಳಿದಿರುವ ಸಂಗತಿ. ಮೇಲ್ಕಂಡ ಸರ್ಕಾರದ ಉನ್ನತ ಅಧಿಕಾರಿಗಳನ್ನು ಕಂಡು ಹೇಳಿದ ಚಟುವಟಿಕೆಯಿಂದ ಈ ಸ್ಥಳಗಳಲ್ಲಿ ಹೋಗಿ ಹೈಸ್ಕೂಲು ಏರ್ಪಡಿಸಬೇಕೆಂದು ಸಲಹೆ ಮಾಡಿದರ ಫಲವನ್ನು ನಾವುಗಳು ಪ್ರತಿನಿತ್ಯವೂ ಅನುಭವಿಸುತ್ತಿದ್ದೇವೆ. ಅದನ್ನು ನಾವೂ ನಮ್ಮ ಮುಂದಿನ ಪೀಳಿಗೆಯವರೂ ಎಂದಿಗೂ ಮರೆಯುವಂತಿಲ್ಲ. ಚಿಟ್ಟಲ್‌ದುರ್ಗದಲ್ಲಿ ಹೈಸ್ಕೂಲು ಸ್ಥಾಪಿತವಾಗುವುದಕ್ಕೆ ಮುಂಚೆ ಈ ತಾಲ್ಲೂಕಿನಲ್ಲಿ ವಿದ್ಯಾವಂತರು ಬಹಳ ಅಪರೂಪ. ಆದರೀಗ ಕೆಲವರು ಎಂ. ಎ., ಬಿ. ಎ., ಬಿ. ಎಲ್., ಮುಂತಾದ ಪಟ್ಟಗಳನ್ನು ಪಡೆದಿರುವುದು ಮತ್ತು ಆ ತರಗತಿಗಳಲ್ಲಿ ವ್ಯಾಸಂಗವಾದರೆ ಇರುವುದು ನಮ್ಮಗಳೆಲ್ಲರಿಗೂ ಆನಂದವು. ನಮ್ಮ ತಾಲ್ಲೂಕಿಗೆ ಗೌರವವೂ ಉಂಟುಮಾಡಿರುವ ತಮ್ಮ ಚಿಕ್ಕಂದಿನಿಂದಲೂ ಶ್ರಮ ಸಹಿಸಿ ಮತ್ತು ದ್ರವ್ಯ ಸಹಾಯಮಾಡಿದ ನವರು ಬಹಳ ವಿದ್ಯಾಭಿಮಾನಿಗಳಾಗಿದ್ದರು. ಅವರ ಕಾಲದಲ್ಲಿಯೂ ಹೈಸ್ಕೂಲನ್ನು ಮುಚ್ಚಿಸಬೇಕೆಂದು ಆದರೂ ಪ್ರಯತ್ನಪಡುತ್ತಿದ್ದುದನ್ನು ತಾವು ನಿಲ್ಲಿಸಿದಿರಿ. ಅದೇ ಮೇಲ್ಪಂಕ್ತಿಯನ್ನು ಅನುಸರಿಸಿ ತಾವು ಕಷ್ಟಪಟ್ಟು ವಿದ್ಯಾಭಿಮಾನವನ್ನು ವಹಿಸಿರುವುದರಿಂದ ಸರ್ವರಿಗೂ ಹಿತಕರವಾಗಿರುವುದೆಂದು ಭಾವಿಸುತ್ತೇವೆ.

ತಮ್ಮ ತಾಲ್ಲೂಕು ಬೋರ್ಡು ಪ್ರೆಸಿಡೆಂಟ್ ಅಧಿಕಾರಾವಧಿಯಲ್ಲಿಯೇ ಹೊಸದಾಗಿ ಪ್ರಾರಂಭ ಮಾಡಿದ ಬಾಲಿಕಾ ಪಾಠಶಾಲೆಗಳ ಸ್ಥಾಪನೆಯಿಂದ ಹೆಣ್ಣು ಮಕ್ಕಳ ಅಭಿವೃದ್ಧಿ ಮಾಡಿದ್ದೀರಿ. ಕೆಲವರು ಪ್ರೌಢ ವಿದ್ಯಾವಂತರಾಗಲು ತಕ್ಕ ಉತ್ತೇಜನವನ್ನು ಕೊಟ್ಟು ನಮ್ಮಗಳೆಲ್ಲಾ ಸುಗಮವಾದ ಮಾರ್ಗವನ್ನು ತೋರಿಸಿ ಬಹಳ ಕೀರ್ತಿವಂತರಾದಿರಿ. ಆ ಬಟನೆಯನ್ನು ಸಹಿತ ಅಲ್ಲದೆ ಪಟ್ಟವಿಧರು ಮತ್ತು ಅಂಗಡಿ ಪಾಠಶಾಲೆಗಳನ್ನು ನಡೆಸಿ ವಿದ್ಯಾಭಿಮಾನವನ್ನು ತೋರಿದಿರಿ. ಅದಲ್ಲದೆ ಜನೋಪಕಾರಕ್ಕಾಗಿ ರಸ್ತೆಗಳು, ಬಾವಿಗಳು, ಕೆರೆಗಳು ಮುಂತಾದ ಕೆಲಸಗಳನ್ನು ಗ್ರಾಮಗಳಲ್ಲಿ ಮಾಡಿಸಿ ಮತ್ತು ಪ್ರತಿಯೊಂದು ಗ್ರಾಮಕ್ಕೂ ಒಂದು ಪಾಠಶಾಲೆಯಂತೆ ಗ್ರಾಮಗಳಲ್ಲಿ ಶಾಲೆಗಳನ್ನು ಸ್ಥಾಪಿಸಿ ಹೆಚ್ಚು ವಿದ್ಯಾಪ್ರಚಾರ ಮಾಡಿರುವುದು ಪ್ರಸಿದ್ಧವು. ಗ್ರಾಮಗಳಲ್ಲಿ ನೀರಿನ ಅನುಕೂಲ ಮತ್ತು ಚಿಕಿತ್ಸಾಲಯ ಮುಂತಾದ ಕೆಲಸಗಳನ್ನು ಮಾಡಿಸಿ ನಮ್ಮಗಳಿಗೆ ಉಪಕಾರ ಮಾಡಿರುವಿರಿ. ಈ ಪ್ರಾರಂಭದ ದಿವಸ ಈ ಮುದಿಗುಂಡ ಗ್ರಾಮದ ಬಾಲಿಕಾ ಪಾಠಶಾಲೆಗೆ ಸ್ವಂತ ಕಟ್ಟಡವನ್ನು ಕಟ್ಟಿಸಿದ ಮಿ॥ ಸರಾಫ್ ಚಂದ್ರಶೇಖರದೇವರವರ ಉದಾರ ಬುದ್ಧಿಯನ್ನು ತಾವು ಪ್ರಶಂಸಿಸಬೇಕೆಂದು ಕೇಳಿಕೊಳ್ಳುತ್ತೇವೆ. ಬಾಲಿಕಾಪಾಠಶಾಲೆಯ ಪ್ರಾರಂಭೋತ್ಸವವನ್ನು ತಮ್ಮ ಅಮೃತ ಹಸ್ತದಿಂದ ನೆರವೇರಿಸಿಕೊಡಬೇಕೆಂದು ಅತ್ಯಂತ ನಮ್ರತೆಯಿಂದ ಪ್ರಾರ್ಥಿಸಿಕೊಳ್ಳುತ್ತೇವೆ. ತಾವು ದಯಮಾಡಿ ಬಂದು, ಪ್ರೀತಿ ವಿಶ್ವಾಸದಿಂದ ನಮ್ಮ ಪ್ರಾರ್ಥನೆಯನ್ನು ಅಂಗೀಕರಿಸಿ ತಮ್ಮ ಅಮೃತಹಸ್ತದಿಂದ ಕಾರ್ಯಗಳನ್ನೆಲ್ಲಾ ಬಿಟ್ಟು ಈ ಪ್ರಾರಂಭ ಮಹೋತ್ಸವಕ್ಕೆ ದಯಮಾಡಿಸಿದ್ದಕ್ಕಾಗಿ ತಮಗೆ ನಮ್ಮ ವಂದನೆಗಳನ್ನು ಅರ್ಪಿಸುತ್ತೇವೆ ಸ್ವಾಮಿ.

ಇತಿ ಮುದಿಗುಂಡದ ಮಹಾಜನಗಳ ಪರವಾಗಿ
ಸರಾಫ್ ಚಂದ್ರಶೇಖರದೇವರು

ಪ್ರಕಟನೆ.

ನಮ್ಮಲ್ಲಿ ಸಿನೋಮಾಕ್ಕೆ ಸಂಬಂಧಪಟ್ಟ ಪ್ಯಾಕ್ ಕಂಪೆನಿಯ ಪ್ರೊಜೆಕ್ಟರ್ ಮಿಷನ್, ಆರ್ಕ್‌ಲ್ಯಾಂಪ್, ಡೈನಮೋ, ಎಲೆಕ್ಟ್ರಿಕಲ್ ಫಿಟ್ಟಿಂಗ್ಸು ವಗೈರೆ ಎಲ್ಲಾ ಸಾಮಾನುಗಳೂ, ಕೆಲವು ಆಯಿಲ್ ಇಂಜಿನ್‌ಗಳೂ ಸಹ ಮಾರಾಟಕ್ಕೆ ದೊರೆಯುತ್ತವೆ. ಎಲ್ಲಾ ಸಾಮಾನುಗಳ ಸೆಟ್ಟು ತಯಾರು ಇರುವುದರಿಂದ ಈ ದಿವಸವೇ ಸಿನೋಮಾ ನಡೆಸಬಹುದು. ಈ ಸಾಮಾನುಗಳು ನೋಡಿ ತಿಳಿಯತಕ್ಕವರಲ್ಲಿ ಸಿಗಬೇಕೆಂದು ಬಯಸುವವರು ಈ ಸಮಯವನ್ನು ಕಳೆಯದೆ ಕೊಳ್ಳಬಾರದಾಗಿ ಕೋರಿಕೆ.

Siddaradhya
Tirukappanavara mutt
Davangere.

[12—11]

ಗಾಕ್ಟರ್ ಹೇ. ಬೀ. ಲಪವೆರ

ಸುಗಂಧ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಾಂಚಮಂಡಲ ಪ್ರಸಿದ್ಧ ಸಂಗತಿಯ ಸುಗಂಧಗಳು ಬೆರಸಿ ಮಾಡಲ್ಪಟ್ಟದ್ದು.

ನೆಗಡಿ, ಯೋಗಶ್ಯಾಸಪ್ರಸಕ್ತವು ಕಟ್ಟಿದ ನಾಲು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು, ಯಾವುವೆಂದರೆ—ಶಿರಶೂಲೆ, ತಲೆನೋವು, ತಲೆಯಲ್ಲಿನ ರೋಗಗಳು, ನೆಗಡಿ ರೋಗಗಳಲ್ಲಿ ಕುಂದು ಗಡ ಸರ್ವ ವ್ಯಾಧಿಗಳು, ಇವು ದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವುದಲ್ಲದೆ ಕಣ್ಣಿಗೆ ತಂಪು ಕೊಟ್ಟು ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನು ಹೆಚ್ಚು ಮಾಡುತ್ತದೆ ಮೂರು ಬೆಟ್ಟ ನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಮುಖರು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗಾಗಿ ಪುಸ್ತಕ ಕಳುಹಿಸಲಾಗುತ್ತದೆ.

ಬುಡ್ಡಿ ಒಂದಕ್ಕೆ ಕ್ರಯ ರೂ ೦—೪—೦ ವಿ. ಪಿ. ೦—೪—೦
ಡಜನ್ ಇಕ್ಕೆ ಕ್ರಯ ರೂ ೨—೬—೦ ವಿ. ಪಿ. ಚಾರ್ಜು ಅಧಿಕ.
ದಯವಿಟ್ಟು ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯ ವಂತೆ ಬರೆಯಿರಿ

ವಿಳಾಸ:— ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[60—11] ಪೋ. ಬಾ. ೫೧೦, ಮದರಾಸು

“ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತರ”

ಆಯುರ್ವೇದೀಯ ಸಿದ್ಧೌಷಧಗಳು.

ಲೋಕಾಮಯಪರ ಕಸ್ತೂರೀ ಮಾತ್ರೆಗಳು



ಈ ಮಾತ್ರೆಗಳನ್ನು ಪ್ರತಿದಿನವೂ ತಾಂಬೂಲದೊಡನೆಯಾಗಲಿ, ಹಾಗೆಯಾಗಲೀ ಉಪಯೋಗಿಸುತ್ತ ಹಿತ ಆಹಾರ, ನೀರು ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ. ಮಕ್ಕಳ ಮೊದಲು ಮುದುಕರವರೆಗೂ, ಕೆಮ್ಮು, ನೆಗಡಿ, ಕೆಮ್ಮಲು, ಜ್ವರ, ಶೀತವಾತಜ್ವರ, ಬಹುಪ್ರಮೇಹ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ

300 ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣೆ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ನಮ್ಮ ಔಷಧವನ್ನು ಲೋಕಾಮಯಹರ ಕಸ್ತೂರೀ ಮಾತ್ರೆ ಎಂಬ ಹೆಸರನ್ನು ನೋಡಿ ಕೊಂಡುಕೊಳ್ಳಿರಿ.

ವೈಶ್ವಾನರಾಸವ

(ಕಾಲರಾ ವಾಂತಿಭೇದಿಗೆ ಸಿದ್ಧೌಷಧ)

ಮಲಪ್ರವೃತ್ತಿ ಹೆಚ್ಚಾಗಿ ಹೊಟ್ಟೆಯುಬ್ಬರಿಸುವುದಾಗಲಿ, ಪುಂಟಾಗಿ ಹೊಟ್ಟೆ ನೋವಾಗುವುದಾಗಲಿ ರೋಗವನ್ನು ಸ್ವಾಧೀನಕ್ಕೆ ತರುತ್ತದೆ ಸೀಸೆ 1ಕ್ಕೆ ರೂ 1—0—0

ಲಕ್ಷ್ಮೀವಿಲಾಸರಸ

(ಪ್ಲೇಗಿಗೆ)

ಕೆಲವು ವರ್ಷಗಳಿಂದ ಪ್ರತಿವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ನಿಂಬುವುದಾಗಿ ಗುಣಪಡಿಸುತ್ತದೆ ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ. ಸೀಸೆಯ ಬೆಲೆ 1ಕ್ಕೆ ರೂ 1—0—0

ಶ್ರೀನಿವಾಸತೈಲ

ಪ್ಲೇಗ್ ರೋಗಿಯ ಸ್ತ್ರೀ ಸಂಧುಗಳಿಗೂ, ಗಡ್ಡೆಗೂ ತಕ್ಕುದಾದ ಔಷಧ ಸೀಸೆ 1ಕ್ಕೆ ರೂ 0—8—0

ಶ್ರೀ ಆರೋಗ್ಯಾಶ್ರಮವೈದ್ಯಶಾಲಾ ಬ್ರಾಂಚಾಫೀಸು
ಚಿಕ್ಕಪೇಟೆ ಬೆಂಗಳೂರು ಸಿಟಿ

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತರು
ಶ್ರೀ ಆರೋಗ್ಯಾಶ್ರಮವೈದ್ಯಶಾಲಾ,
ಹೆಡ್ಡಾಫೀಸು ಮೈಸೂರು

೧೯೨೯ ನೆಯ ಇಸವಿ ನವಂಬರ್ ತಾ॥ ೧೬ ರಿಂದ ೧೯೨೯ ನೆಯ ಇಸವಿ ನವಂಬರ್ ತಾ॥ ೨೩ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೧ ನೆಯ ಶುಕ್ಲನಾಮಸಂವತ್ಸರದ ಕಾರ್ತಿಕ ಶುದ್ಧ ಚತುರ್ದಶಿಯಿಂದ ಕಾರ್ತಿಕ ಬಹುಳ ಷಷ್ಠಿವರೆಗಿನ ಪಂಚಾಂಗ

ತಾ॥	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ವೃತ್ತಿಕಮ
16	[1] ಶನಿ	ಚ ಊ	1 38-60-20	ಭರ	39 5	1
17	ಭಾನು	ಪಾಡ್ಯ	53 20	ಕೃತ್ತಿ	36 20	2
18	[2] ಸೋಮ	ಬಿದಿ	48 40	ರೋಹಿ	33 0	3
19	[3] ಮಂಗಳ	ತದಿ	43-2	ಮೃಗ	29 40	4
20	ಬುಧ	ಚೌತಿ	37-20	ಆರ್ದ್ರಾ	25-25	5
21	ಗುರು	ಪಂಚ	31 0	ಪುನ	21 20	6
22	[4] ಶುಕ್ರ	ಷಷ್ಠಿ	24-20	ಪುಷ್ಯ	16 2	7

(1) ವ್ಯಾಸಪೂರ್ಣಿಮಾ, ಶಿವದೀಪ (2) ಕಾರ್ತಿಕಸೋಮವಾರ ನಂಜನಗೂಡಿನಲ್ಲಿ ಶ್ರೀಕಂಠೇಶ್ವರ ರಥ (3) ಮಳೆನಕ್ಷತ್ರ ಅನುರಾಧ ೧ ನೆಯ ಪಾದ (4) ಮಳೆನಕ್ಷತ್ರ ಅನುರಾಧ ೨ ನೆಯ ಪಾದ.

ಮೈಸೂರು: ವೈ. ರಾಮಸ್ವಾಮಯ್ಯನವರಿಂದ ಕ್ರಾಸ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಮೈಸೂರ್ ಸ್ಟಾರ್

REG. NO. M. 138

ಪ್ರತಿ ಶನಿವಾರ ಪ್ರಕಟಿಸಲ್ಪಡುವದು.

[illegible]

[ಸ್ಥಳದವರಿಗೆ ವಾರ್ಷಿಕಚಂದಾ ೧-೧೧-೦] [ಪರಸ್ಥಳದವರಿಗೆ ೨-೮-೦] [ವೈದ್ಯರಿಗೆ ೩-೮-೦]

ಸಂಪುಟ ೪೨] ಮೈಸೂರು ಸ್ಟಾರ್ ಸನ್ ೧೯೨೯ ನೆಯ ಇಸವಿ ಡಿಶಂಬರ್ ತಾರೀಖು ೨೧ ನೆಯ ಶನಿವಾರ [ಸಂಚಿಕೆ ೫೧

ಅಮೃತಮಹಲ್ ಇಲಾಖಾ

ಹರಾಜ್ ಇಸ್ತಿಹಾರ್

[50—16] [3—1]

ಮೊಕ್ಕಾಂ ಬೆಂಗಳೂರು, ತಾರೀಖು ೧೩ ನೇ ಡಿಶಂಬರು ೧೯೨೯

ಅಮೃತಮಹಲ್ ಇಲಾಖಾ ದನಗಳ ಸಾಲಿಯಾನಾ ಹರಾಜು ಈ ಕೆಳಗೆ ನಮೂದಿಸಿರ 1 ನೆ ಕಲಂನಲ್ಲಿ ಬರೆದಿರುವ ತಾರೀಖುಗಳಲ್ಲಿ ಮಧ್ಯಾಹ್ನ ಎರಡು ಘಂಟೆಯಿಂದ ಆರು ಘಂಟೆಯವರಿವಿಗೂ ಸಕಲ ಜನರಿಗೂ ಅನುಕೂಲವಾಗ ತಕ್ಕಂತೆ ನಡಿಸಲ್ಪಡುತ್ತೆ

ಸಂಖ್ಯೆ	ಹರಾಜು ಸ್ಥಳ	ತಾರೀಖು	ಇತರ ವಿಷಯಗಳು
1	ಹೊಳಲ್ಕೆರೆ	13 ಮತ್ತು 14 ನೇ ಜನವರಿ 1930	ಸವಾಸದ ಡಿಸ್ಟ್ರಿಕ್ಟ್ ಹೊಳಲ್ಕೆರೆ ಚಿತ್ರದುರ್ಗದಿಂದ 7 ಮೈಲಿ ದೂರ
2	ಬಿಯ್ಯನಹಳ್ಳಿ ಕಾವಲು	23 ನೇ ಜನವರಿ 1930	ಚಿತ್ರದುರ್ಗ ದಾವಣಗೆರೆ ರಸ್ತೆ

1 ಅಮೃತಮಹಲ್ ಹರಾಜು ... [illegible]

2. ಸೂಪರಿಂಟೆಂಡೆಂಟರವರಿಗೆ ... [illegible]

3 ಹರಾಜಿನಲ್ಲಿ ಸವಾಲ್ ಕೊಟ್ಟನಂತರ ... [illegible]

ಬಿ ಲಕ್ಷ್ಮಿಪತಿ,

ಸೂಪರಿಂಟೆಂಡೆಂಟ್.

೧೦೦೦ ರೂಪಾಯಿ ಇನಾಮು

ವಿರಾಜಪೇಟೆಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ ಪಿ. ಎಸ್. ಕಾವಸೆ, ಇವರ

ಅಲ್ಪವಯಸ್ಸಿಗೆ ಕ್ಷೀಣರಾಗಬೇಡಿ | ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ (ಸ್ಟರಿಜ) ವಜ್ರಾಂಗ ಸುಂದರಪಾಕ. | ಧರಿಸಿದರೆ ಕ್ಷೀಣಶಕ್ತಿ ಕಾಯ್ದುಕೊಳ್ಳಿರಿ

ಈ ಪಾಕಸೇವನೆಯಿಂದ ಎಲ್ಲ ಧಾತುಜನ್ಯ ವಿಕಾರಗಳು ... [illegible] ... ೧೦೦೦ ರೂಪಾಯಿ ಇನಾಮು ಕೊಡುವೆವು ... [illegible]

ಕೇವಲ ಸ್ವಪ್ನಾವಸ್ಥೆ — ಈ ವಿಕಾರಕ್ಕೆ ... ದಿವಸಗಳಲ್ಲಿ ಗುಣ. ... ದಿವಸ ಸಾಕಾಗುವಷ್ಟು ಸೀಸೆ ೧ ಕ್ಕೆ ... ರೂಪಾಯಿಗಳು.

ಪ್ರಮೇಹ (ಪರಮಾ) — ... [illegible] ... ಸಾಕಾಗುವಷ್ಟು ಸೀಸೆ ೧ ಕ್ಕೆ ... ರೂಪಾಯಿಗಳು.

ಪೀನಸ — ಮೂಗಿನೊಳಗಿನ ... [illegible] ... ರೂಪಾಯಿಗಳು.

[50—20] ಸತ್ವ :— ಮಾಲಕ ವೈದ್ಯ ಪಿ. ಎಸ್. ಕಾವಸೆ ಮು. ಪೋ. ವಿರಾಜಪೇಟೆ.

OFFICE OF THE AGRICULTURAL ENGINEER, BANGALORE.

Notification No Roc 1884–H C. 887 of 28–29.

A "Federal" lorry of 2 ton capacity with 4 cylinder engine in running condition with the chassis mounted on solid tyres will be sold by public auction at 9 a m on 7-1 1930 by Messrs Whitney Coates in their yard For other details, vide Mysore Gazette dated 19 12-1929

Sd H. V KRISHNAYYA,

[2—1] *For Director of Agriculture.*

ದಾಂಪತ್ಯರಹಸ್ಯ

ನೂರಾರು ವರ್ಷಗಳ ಹಿಂದೆ ಈ ಪುಸ್ತಕವು ಫ್ರೆಂಚ್, ಇಂಗ್ಲಿಷ್, ಹಿಂದುಸ್ತಾನಿ ಭಾಷೆಗಳಲ್ಲಿ ಬಹು ಗುಪ್ತವಾಗಿತ್ತು ನಾವು ಬಹು ಪ್ರಯಾಸದಿಂದ ಈ ಪುಸ್ತಕವನ್ನು ಸಂಪಾದಿಸಿ ಎಲ್ಲರಿಗೂ ತಿಳಿಯುವ ಹಾಗೆ

ತಮ್ಮ ... ಚಿತ್ರಪಟಗಳ ಸಹಿತ ಮುದ್ರಿಸಿರುತ್ತೇವೆ ಈ ಪುಸ್ತಕದಲ್ಲಿ ಸ್ತ್ರೀಪುರುಷರಿಗೆ ಬೇಕಾದ ಎಲ್ಲಾ ವಿಷಯಗಳೂ, ಸ್ತ್ರೀ ಪುರುಷರ ಜಾತಿಯ ಲಕ್ಷಣಗಳೂ, ಸ್ತ್ರೀಯರ ಅನೇಕ ವಿಷಯಗಳೂ ... ಗರ್ಭಧಾರಣೆ, ಸಂಭೋಗದ ಕಾಲ, ... ಇವಕ್ಕೆ ತಕ್ಕ ಚಿಕಿತ್ಸೆ ... ವಿಷಯಗಳು ಚಿತ್ರಪಟಗಳ ಸಹಿತ ಕೊಡಿವೆ

ಕ್ರಯ ಪುಸ್ತಕ 1 ಕ್ಕೆ ರೂ 1—0—0.

ವಿಳಾಸ ಸಿಟಿ ಮಾರ್ಟ್, 168 ಚೈನಾ ಬಜಾರ್, ಮದರಾಸು.

THE CITY MART,

[12—6] 168, China Bazaar, Madras.

ಮೂಸವರುಷದ ... ಕ್ರಯವನ್ನು ಬಹಳ ಕಡಮೆ ಮಾಡಿದೆ

ಅಸಲು ಕ್ರಯ 18—8—0 ಒಂದು ವಾರದವರಿವಿಗೆ 8—12—0.

ಫಿಡೋ ಲೀವರ್ ವಾಚ್‌ಗಳು.

ಈ ಗಡಿಯಾರಗಳು ಬಹು ಪ್ರಖ್ಯಾತಿಯಾದ ಫಿಡೋ ಲೀವರ್ ಮೂವ್‌ಮೆಂಟ್‌ಗಳಿಂದ (ಸ್ವಿಸ್ ಮೇಡ್) ತಯಾರಿಸಲ್ಪಟ್ಟವು. ... [illegible] ... 5 ವರುಷ ಗ್ಯಾರಂಟಿ ಕೊಡುವೆವು 1 ಕೈಗಡಿಯಾರ ... ವಾಚ್, 1 ಪಾಕೆಟ್ ವಾಚ್, 1 ಟೇಬಲ್ ಟೈಂಪೀಸ್ 3 ಸೇರಿ 8—12—0 ಮಾತ್ರ. ಈ ಕ್ರಯಕ್ಕೆ ಒಂದು ವಾರದವರಿವಿಗೆ ಮಾತ್ರ ಸಿಕ್ಕುವದು.

ವಿಳಾಸ — ಎಂ. ಲಿಯೋ ಅಂಡ್ ಕೊ,

168 ಚೈನಾ ಬಜಾರ್, ಮದರಾಸು.

M. LEO & Co,

[12—5] 168, China Bazaar, Madras

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ	(ವಿ ಪಿ ಸೇರಿ)
[illegible]	೦—೧೨—೦	೧—೨—೦
[illegible]	೦—೮—೦	೦—೧೩—೦
[illegible]	೦—೪—೦	೦—೯—೦
[illegible]	೦—೫—೦	೦—೧೦—೦
[illegible]	೦—೪—೦	೦—೯—೦
[illegible]	೦—೪—೦	೦—೯—೦
[illegible]	೦—೧—೦	೦—೬—೦
[illegible]	೦—೮—೦	೦—೧೩—೦
[illegible]	೦—೮—೦	೦—೧೩—೦
[illegible]	೧—೦—೦	೧—೬—೦

ಮೈಸೂರು ಸ್ಟಾರ್

೧೯೨೯ನೇ ಇಸವಿ ಡಿಸೆಂಬರ್ ತಾ|| ೨೧ನೆಯ ಶನಿವಾರ

BHADRA-AHUTI OR BHADRAVATI.

The ways of Government, it is so often said, are mysterious even as the ways of Providence. This, of course, applies to the ordinary mortals, for there are seers and sages who could read the mysteries of Providence and we have no doubt that the mysteries of our Government are intelligible to some at least of the men in the State, if not the poor ordinary folk. Such, in fact, is the feeling of the ordinary man, when he sees that two of the best non-Brahmin officers appointed to work at Bhadravati, and that a very short time ago are transferred from there. Mr. J. B. Mallaradhya, a young and intelligent officer who had gained good experience of Works and knew all about the sales section and Mr Veeraraj Urs, experienced in financial matters, conscientious in the discharge of his duties and specially posted to look after the financial side of the Works very lately are both to quit the Works. This in spite of the loud complaint against the Brahminisation of the works and the clamour of non-Brahmins for removing the existing monopoly. We know under what terrible disadvantages the few non Brahmin officials who are there have to work and for a matter of that, even some Brahmins under a General Manager who is at once bumptious overbearing, incapable of tact, impatient of criticism and irresponsive to suggestions. We would fain refrain from stating anything about his physical constitution were it not for the fact that it is desirable in the interest of the Works that the General Manager should round the various sections once a day or at least thrice in a week, which judging from the General Manager's proportions has been almost impossible. We do not know what strange facination our Government should have for this individual who has been kept on there for ever so long. The only justification would have been the increasing prosperity of the works, but unfortunately actualities do not point that way. But that is the way of Government and if the poor, ordinary mortals dare question, they will be silenced by the statement that they do not understand or in case they display some understanding by the statement that it relates to trade secrets. Let alone the poor, ordinary tax-payer understanding the situation of the Works. We hope the Government have at least understood and understood correctly the state of the Works. If the public exhibit their own doubts and ask for the appointment of an expert committee they are told that time is not ripe for it. We are almost certain that unless some radical changes are made in the management things will not improve. The monopoly there must go. The various sectional officers should be meted out justice, and given freedom to work. The right men should be given the right places. The accounts and audit section of the Works should be independent and not tied to the apron strings of the General Manager. We have referred to the vigilence Government have exercised in other concerns with which they were directly or indirectly interested and with what sad consequences. Shall we not expect that Government will not grow less vigilent, or display less strength in handling these big concerns. It is a great pity that this treatment should have been meted out to the non Brahmin officers so soon after Mr. M. N. Krishna Rao took charge of the Works. Let us hope that wisdom does not dawn too late.

ಭದ್ರಾ ಆಹುತಿ—ಭದ್ರಾವತಿ.

ಸರ್ಕಾರದ ವ್ಯವಹಾರವು ಹೇಗೆ ಗೂಢವಾಗಿರುವುದೋ ಹಾಗೆ ಪ್ರಭುತ್ವದವರ ವ್ಯಾಪಾರವೂ ಗೂಢವಾಗಿರುವುದೆಂದು ಪದೆ ಪದೆ ಹೇಳಲ್ಪಡುತ್ತಿದೆ. ಇಂತಹ ಗೂಢವಿಚಾರವನ್ನು ಸಾಮಾನ್ಯ ಮನುಷ್ಯರು ತಿಳಿಯಲಾರರಾದರೂ, ಕಾಲಜ್ಞಾನಿಗಳೂ ಮಹರ್ಷಿಗಳೂ ಬಹಳ ಸುಲಭವಾಗಿ ಅರಿತುಕೊಳ್ಳುವಂತೆ, ನಮ್ಮ ಪ್ರಭುತ್ವದವರ ರಹಸ್ಯವ್ಯಾಪಾರವು ನಮ್ಮ ಸೀಮೆಯ ಬಡಪಾಯಿಗಳಿಗೆ ಗೊತ್ತಾಗದಿದ್ದರೂ ಕೆಲ ವಿವೇಕಿಗಳಿಗಾದರೂ ಗೊತ್ತಾಗುವುದರಲ್ಲಿ ಸಂದೇಹವಿಲ್ಲ. ಭದ್ರಾವತಿ ಕಬ್ಬಿಣದ ಕಾರ್ಖಾನೆಯದಲ್ಲಿ ಕೆಲಸಮಾಡಲು ನಿಯಮಿಸಲ್ಪಟ್ಟಿದ್ದ ಇಬ್ಬರು ಸಮರ್ಥ ಬ್ರಾಹ್ಮಣೇತರ ಅಧಿಕಾರಿಗಳು ಕೊಂಚಕಾಲದ ಹಿಂದೆ ಬೇರೆಕಡೆಗೆ ವರ್ಗಾಯಿಸಲ್ಪಟ್ಟಿರುವುದನ್ನು ನೋಡಿ ಸಾಮಾನ್ಯ ಮನುಷ್ಯನು ವಾಸ್ತವ್ಯವಾಗಿಯೂ ಮೇಲೆ ಹೇಳಲ್ಪಟ್ಟಿರುವ ರೀತಿಯಲ್ಲಿ ಭಾವಿಸದೆ ಇರುವುದಿಲ್ಲ. ಇನ್ನೂ ಚಿಕ್ಕವಯಸ್ಸಿನವರೂ ಪ್ರತಿಭಾಶಾಲಿಗಳೂ ಆದ ಮ|| ಜೆ. ಬಿ. ಮಲ್ಲಾರಾಧ್ಯರು ಅಲ್ಲಿನ ವ್ಯಾಪಾರಕ್ಕೆ ಸಂಬಂಧಪಟ್ಟ ವಿಷಯಗಳನ್ನೆಲ್ಲ ಚನ್ನಾಗಿ ಅರಿತುಕೊಂಡು ಅನುಭವಶಾಲಿಗಳಾಗಿದ್ದರು. ಆರ್ಥಿಕವಿಚಾರದಲ್ಲಿ ಒಳ್ಳೇ ಅನುಭವಸ್ಥರೂ, ತಮ್ಮ ಕೆಲಸವನ್ನು ನಿಸ್ಪೃಹತೆಯಿಂದಲೂ ದಕ್ಷತೆಯಿಂದಲೂ ಮಾಡುವವರೂ ಆದ ಮ|| ಎಂ. ವೀರರಾಜ ಅರಸಿನವರು ಈ ಕಾರ್ಖಾನೆಯದ ಆರ್ಥಿಕವಿಚಾರವನ್ನು ನೋಡಿಕೊಳ್ಳಲು ನಿಯಮಿಸಲ್ಪಟ್ಟಿದ್ದರು. ಈ ಭದ್ರಾವತಿಯ ಕಾರ್ಖಾನೆಯದ ಉದ್ಯೋಗಗಳೆಲ್ಲವೂ ಬ್ರಾಹ್ಮಣರ ಪಾಲಾಗಿರುವುದರಿಂದ ಇದನ್ನು ತಪ್ಪಿಸಬೇಕೆಂದು ಬ್ರಾಹ್ಮಣೇತರರು ಒಂದೇಸಮನಾಗಿ ಕೂಗಿಕೊಳ್ಳುತ್ತಿದ್ದರೂ ಸ್ವಲ್ಪಕಾಲ ಇದ್ದ ಇಬ್ಬರು ಬ್ರಾಹ್ಮಣೇತರ ಅಧಿಕಾರಿಗಳು ಅಲ್ಲಿಂದ ಬೇರೆಕಡೆಗೆ ವರ್ಗಾಯಿಸಲ್ಪಟ್ಟಿರುವುದು ಸಖೇದಾಶ್ಚರ್ಯವಾಗಿರುತ್ತದೆ. ಅಲ್ಲಿಯ ಕೆಲಸಗಳಲ್ಲಿ ಬಹಳ ಅಲ್ಪಸಂಖ್ಯಾಕರಾಗಿರುವ ಬ್ರಾಹ್ಮಣೇತರ ಉದ್ಯೋಗಸ್ಥರು ಒಕೆ ಕೆಲ ಬ್ರಾಹ್ಮಣ ಉದ್ಯೋಗಸ್ಥರು ಕೂಡ ಕಲಹಪ್ರಿಯರೂ, ಗರ್ವಿಷ್ಠರೂ, ಚಾತುರ್ಯವಿಹೀನರೂ, ಟೀಕೆಯನ್ನು ಸಹಿಸದವರೂ, ಸೂಚನೆಗಳನ್ನು ಲಾಲಿಸದವರೂ ಆದ ಜನರಲ್ ಮ್ಯಾನೇಜರವರ ಕೈಕೆಳಗೆ ಬಹಳ ಕಿರುಕುಳವನ್ನನುಭವಿಸುತ್ತಿರುವರು. ಜನರಲ್ ಮ್ಯಾನೇಜರವರು ದಿನಕ್ಕೊಂದಾವೃತ್ತಿ ತಪ್ಪಿದಲ್ಲಿ ವಾರಕ್ಕೆ ಮೂರಾವೃತ್ತಿ ಆದರೂ ಕಾರ್ಖಾನೆಯವನ್ನೆಲ್ಲಾ ಪಾದಚಾರಿಯಾಗಿ ಸುತ್ತಿ ನೋಡಬೇಕಾಗಿರುವುದು ಅತ್ಯಾವಶ್ಯಕವು. ಆದರೆ ಈಗಿನ ಮ್ಯಾನೇಜರ ದೇಹಸ್ಥಿತಿಯಲ್ಲಿ ಹಾಗೆ ಸುತ್ತಲು ಸಾಧ್ಯವಿಲ್ಲವೆಂದು ಹೇಳಲು ವಿಷಾದವಾಗುತ್ತದೆ. ಇಂತಹವರನ್ನು ಪ್ರಭುತ್ವದವರು ಬಹುಕಾಲದಿಂದಲೂ ಅಲ್ಲಿರಿಸಿರುವುದಕ್ಕೆ ವಿಶೇಷ ಕಾರಣವೇನಿರುವುದೋ ನಾವರಿಯೆವು. ವ್ಯಾಪಾರ ಕಾರ್ಖಾನೆಯವು ಅಭಿವೃದ್ಧಿಯಲ್ಲಿರುವುದೆಂಬ ಭಾವನೆಯಿಂದರಬಹುದು. ಆದರೆ ಅದರ ಸ್ಥಿತಿಯು ಇದಕ್ಕೆ ವ್ಯತಿರಿಕ್ತವಾಗಿರುತ್ತದೆ. ಹೀಗಿದ್ದಾಗ್ಯೂ ಪ್ರಭುತ್ವದವರು ಮಾತ್ರ, ಈ ಕಾರ್ಖಾನೆಯವು ಲಾಭದಾಯಕವಾಗಿಲ್ಲವೆಂದು ಯಾವ ಬಡಪಾಯಿಗಳಾದರೂ ಹೇಳಿದರೆ, ಈ ವಿಚಾರವು ನಿಮಗೆ ತಿಳಿಯುವುದಿಲ್ಲ, ಏನಾದರೂ ತಿಳಿದವರು ಕೇಳಿದರೆ ಇದು ವ್ಯಾಪಾರಕ್ಕೆ ಸಂಬಂಧಪಟ್ಟ ರಹಸ್ಯವೆಂದಾಗಲಿ ಉತ್ತರವನ್ನು ಕೊಟ್ಟು ಬಾಯಿಮುಚ್ಚಿಸುವರು. ಸಾಮಾನ್ಯ ಜನರು ಕಂದಾಯದಾರನು ತಾನೇ ಅಲ್ಲಿಯ ಕೆಲಸದ ಸ್ಥಿತಿಯನ್ನು ಹೇಗಾದರೆ ತಿಳಿದುಕೊಳ್ಳಬಲ್ಲನು. ಸರ್ಕಾರದವರು ಮಾತ್ರ ಕಾರ್ಖಾನೆಯ ನಿಜಸ್ಥಿತಿಯನ್ನು ಚನ್ನಾಗಿ ಅರಿತುಕೊಂಡಿದ್ದಾರೆ ಎಂದು ನಾವು ಆಶಿಸುತ್ತೇವೆ. ಪ್ರಜೆಗಳು ತಮ್ಮ ಸಂಶಯವನ್ನು ತಿಳಿಸಿ ಅನುಭವಶಾಲಿಗಳಾದವರನ್ನು ಕಂಡು ಹಿಡಿಯಲು ನಿಪುಣರಾದವರ ಕಮಿಟಿಯನ್ನು ನಿಯಮಿಸಬೇಕೆಂದು ಅಪೇಕ್ಷಿಸಿದಲ್ಲಿ, ಅದಕ್ಕೆ ಕಾಲವಿನ್ನೂ ಪಕ್ವವಾಗಿಲ್ಲವೆಂದು ಪ್ರಭುತ್ವದವರು ಉತ್ತರಕೊಡುವರು. ಆ ಕಾರ್ಖಾನೆಯದ ವ್ಯವಹಾರಾಧಿಕಾರಿಗಳು ಬದಲಾವಣೆಯಾದ ಹೊರತು ಅಲ್ಲಿಯ ಪರಿಸ್ಥಿತಿಯು ನೆಟ್ಟಗಾಗುವುದಿಲ್ಲವೆಂದು ನಾವೀಗ ನಿರ್ಧಾರವಾಗಿ ಹೇಳಬಲ್ಲೆವು. ಒಂದೇ ವರ್ಗದವರು ಅಲ್ಲಿಯ ಉದ್ಯೋಗಗಳ ಗುತ್ತಿಗೆ ಹಿಡಿದಿರುವುದು ತಪ್ಪಬೇಕು. ಬೇರೆಬೇರೆ ಕೆಲಸಗಳ ಅಧಿಕಾರಿಗಳು ಒಂದೇವಿಧವಾಗಿ ಪರಿಗಣಿಸಲ್ಪಟ್ಟು ಅವರುಗಳು ಸ್ವತಂತ್ರಿಸಿ ಕೆಲಸಮಾಡಲು ಅವಕಾಶವು ಕೊಡಲ್ಪಡಬೇಕು. ಆಯಾ ಕೆಲಸಗಾರರಿಗೆ ಆಯಾ ಕೆಲಸಗಳೇ ಕೊಡಲ್ಪಡಬೇಕು. ಕೆಲಸಗಳ ಲೆಖ್ಖವೂ, ಅದರ ಪರಿಶೋಧನೆಯೂ ಸ್ವತಂತ್ರವಾಗಿರಬೇಕಲ್ಲದೆ ಜನರಲ್ ಮ್ಯಾನೇಜರವರಿಗೆ ವಹಿಸಲ್ಪಡಕೂಡದು. ಪ್ರತ್ಯಕ್ಷವಾಗಿಯೊ, ಪರೋಕ್ಷವಾಗಿಯೊ ತಮಗೆ ಸಂಬಂಧಪಟ್ಟ ಕಾರ್ಖಾನೆಯಗಳ ವಿಚಾರದಲ್ಲಿ ಪ್ರಭುತ್ವದವರು ತಕ್ಕ ಎಚ್ಚರಿಕೆಯನ್ನು ತೆಗೆದುಕೊಳ್ಳದೆ ಇರುವುದರಿಂದ ಎಷ್ಟರಮಟ್ಟಿನ ದುಷ್ಪರಿಣಾಮವಾಗಿರುತ್ತದೆಂಬುದನ್ನು ಕುರಿತು ನಾವು ಪ್ರಸ್ತಾಪಿಸಿಯೇ ಇರುತ್ತೇವೆ. ಭದ್ರಾವತಿ ಕಾರ್ಖಾನೆಯದಂತಹ ಅಗಾಧವಾದ ಕಲ್ಯಕಲಾಪಗಳಲ್ಲಿ ಪ್ರಭುತ್ವದವರು ಇತ್ಯಾದರ ಹಿರೀತಿ ಅನಾಸಕ್ತಿಯನ್ನಾಗಲಿ ಅಶಕ್ತಿಯನ್ನಾಗಲಿ ತೋರಿಸುವುದಿಲ್ಲವೆಂದೂಹಿಸುವೆವು. ಈ ಕಾರ್ಖಾನೆಯದ ಮೇಲ್ವಿಚಾರಣೆಯನ್ನು ಪ್ರಥಮ ಸಚಿವರರಾದ ಮ|| ಎಂ. ಎನ್. ಕೃಷ್ಣರಾಯರು ವಹಿಸಿಕೊಂಡ ತರುವಾಯಲ್ಲೇ ಬ್ರಾಹ್ಮಣೇತರಾಧಿಕಾರಿಗಳ ಉಚ್ಚಾಟನೆಯಾದುದು ಬಹಳ ವ್ಯಸನಕರವು. ಇನ್ನಾದರೂ ಜಾಗ್ರತೆಯಲ್ಲಿ ಜ್ಞಾನೋದಯವಾಗುವುದೆಂದು ನಿರೀಕ್ಷಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ಪ್ರತಿಯೊಂದು ಜಿಲ್ಲಾ ಬೋರ್ಡಿನಲ್ಲಿರಬೇಕಾದ ಪ್ರಜಾ ಚುನಾವಣೆಗೆ ಸೇರಿದ ಮೆಂಬರುಗಳ ಸಂಖ್ಯೆಯು ೩ ರಿಂದ ೦ ಕ್ಕೆ ಹೆಚ್ಚಿಸಲ್ಪಟ್ಟಿದೆ.

ಹಾಸನ ಡಿ|| ಡೆಪ್ಯುಟಿ ಕಮೀಷನರಾದ ಮಿ|| ಎಸ್. ಅಬ್ದುಲ್‌ವಾಜಿದ್, ಬಿ.ಎ., ಯವರು 2 ನೆಯ ತರಗತಿಯಲ್ಲಿ ಸ್ಥಿರಗೊಳಿಸಲ್ಪಟ್ಟಿರುತ್ತಾರೆ.

ಚೀಫ್ ಕೋರ್ಟಿನ ಚೀಫ್ ಜಡ್ಜಿಯವರಾದ ಮ|| ಸಿ. ಎಸ್. ದೊರೆಸ್ವಾಮಯ್ಯರ್‌ರವರು ರಾಜಧಾನಿಗೆ ದಯಮಾಡಿಸಿ ಸಿವಿಲ್ ಮತ್ತು ಕ್ರಿಮಿನಲ್ ಕೋರ್ಟುಗಳ ಆಫೀಸನ್ನು ಪರಾಮರ್ಶಿಸಿ ದಯಮಾಡಿಸಿದರು.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟರಾಗಿ ಮ|| ಸುಬ್ರಾಮಶೆಟ್ಟರು ಆರಿಸಲ್ಪಟ್ಟಿರುವುದನ್ನು ಪ್ರಭುತ್ವದವರು ಅಂಗೀಕರಿಸಿ, ಮ|| ಸಿ. ಮಾದಯ್ಯನವರೇ ಮುಂದೂ ಮ್ಯುನಿಸಿಪಲ್ ಕಮೀಷನರಾಗಿರತಕ್ಕದೆಂದು ಅಪ್ಪಣೆಮಾಡಿರುತ್ತಾರೆ.

ಮೈಸೂರು, ತುಮಕೂರು, ಕಡೂರು, ಶಿವಮೊಗ್ಗ ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟು ಬೋರ್ಡುಗಳು ಹೊಸದಾಗೇರ್ಪಟ್ಟ ಮೇಲೆ ಅವುಗಳ ಮೆಂಬರುಗಳು ತಮ್ಮ ವೈಸ್‌ಪ್ರೆಸಿಡೆಂಟರನ್ನು ಅಧ್ಯಕ್ಷರನ್ನಾಗಿ ಆರಿಸಿಕೊಳ್ಳುವ ಅಧಿಕಾರವನ್ನು ಕೊಟ್ಟಿರುವುದಾಗಿ ಸರ್ಕಾರದ ಪ್ರಕಟಣೆಯಾಗಿದೆ.

ಇದೇ ತಾ|| 18 ನೆಯ ಬುಧವಾರ ಲಾಹೋರಿನಲ್ಲಿ ಡಾ|| ಠಾಗೂರರವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಗಿ ನಡೆಯುತ್ತಿರುವ ಅಖಿಲಭಾರತ ದಾರ್ಶನಿಕ (ತತ್ವವಿಚಾರ) ಮಹಾಸಭೆಗೆ ಮೈಸೂರು ಮಹಾರಾಜರ ಕಾಲೇಜಿನ ಪ್ರೊಫೆಸರ್ ಜೆ. ವಾಡಿಯಾ, ಎಂ.ಎ., ಬಾರ್-ಅಟ್-ಲಾ ಯವರೂ, ಮ|| ಜಿ. ಹನುಮಂತರಾಯರೂ ಹೋಗಿರುತ್ತಾರೆ.

ನಂಜನಗೂಡು ಸಬ್ ಡಿವಿಜನ್ ಆಫೀಸರಾಗಿದ್ದ ಅಸಿಸ್ಟೆಂಟ್ ಕಮೀಷನರ್ ಮ|| ಎಂ. ಎಸ್. ರಾಮಚಂದ್ರರಾಯರು ಗಂಧದೆಣ್ಣೆಯ ಕಾರ್ಖಾನೆಯಗಳ ಡೈರೆಕ್ಟರಾಗಿದ್ದ ಮ|| ವೈ. ನರಸಿಂಗರಾಯರು ಮತ್ತು ಮ|| ಎಂ. ಸದಾಶಿವರಾಯರು ಇವರುಗಳ ಉದ್ಯೋಗದವಧಿಯು ಪೂರೈಸಿಲ್ಲವಾದರೂ ಒಬ್ಬರ ನಂತರವಾಗಿ ನಿವೃತ್ತಿಗೊಳಿಸಲ್ಪಡುವರೆಂಬ ಪ್ರವಾದವಿದೆ.

ಮೈಸೂರು ಸೀಮೆಯಲ್ಲಿ ನಿರ್ಮಿತವಾಗುವ ಗಂಧದೆಣ್ಣೆ, ಸಾಬೂನು, ಕಲಾಕೌಶಲ್ಯ ಪದಾರ್ಥಗಳು, ರೇಷ್ಮೆ ಗಂಧದಕಡ್ಡಿ ಮೊದಲಾದ ಪದಾರ್ಥಗಳ ಅಪೇಕ್ಷೆಯು ಪೂರ್ವದೇಶಗಳಲ್ಲೂ ದಕ್ಷಿಣ ಆಫ್ರಿಕೆಯಲ್ಲೂ ವಿಶೇಷವಾಗಿರುವುದರಿಂದ, ಇವುಗಳನ್ನು ವಿಕ್ರಯಿಸಲು ಜಾಂಜಿಬಾರಿನಲ್ಲಿರುವ ಮ|| ಬಿಹಾರಿಲಾಲ್ ಅನಂತಜೀಯವರನ್ನು ಏಜಂಟರನ್ನಾಗಿ ನಮ್ಮ ಪ್ರಭುತ್ವದವರು ಗೊತ್ತುಮಾಡಿರುತ್ತಾರೆ.

ಪೋಲೀಸು ಇನ್ಸ್‌ಪೆಕ್ಟರ್ ಜನರಲ್‌ರವರಾದ ಮ|| ಎಸ್. ಲಕ್ಷ್ಮಯ್ಯನವರಿಗೆ ಬರುವ ಜನವರಿ ತಾ|| ೨೦ ರ ವರೆಗೆ ಪ್ರಿವಿಲೇಜ್ ರಜವು ಕೊಡಲ್ಪಟ್ಟಿರುವುದರಿಂದ ಬೆಂಗಳೂರು ಡಿ|| ಡೆಪ್ಯುಟಿಕಮೀಷನರಾದ ಮ|| ಎಸ್. ಬಾಬ್‌ಶಿರಾಜ್‌ರವರು ಆಕ್ಟಿಂಗ್ ಪೋಲೀಸ ಇನ್ಸ್‌ಪೆಕ್ಟರ್ ಜನರಲ್‌ರವರಾಗಿಯೂ, ಸೀನಿಯರ್ ಅಸಿಸ್ಟೆಂಟ್ ಕಮೀಷನರ್ ಮ|| ಬಿ. ನಾರಾಯಣಸ್ವಾಮಿನಾಯುಡುಗಾರು ಆಕ್ಟಿಂಗ್ ಬೆಂಗಳೂರು ಡಿ|| ಡೆ|| ಕಮೀಷನರಾಗಿಯೂ ಡಿ|| ಮ್ಯಾಜಿಸ್ಟ್ರೇಟರಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ.

ದೊಡ್ಡ ಪಟ್ಟಣಗಳಲ್ಲಿ ವರ್ತಕರುಗಳು ತಮ್ಮದಾಗೊಂದು ಧನನಿಧಿ ಅಂದರೆ ಬ್ಯಾಂಕನ್ನು ಸ್ಥಾಪಿಸಿಕೊಂಡು ತನ್ಮೂಲಕ ವ್ಯಾಪಾರವನ್ನು ಅಭಿವೃದ್ಧಿಗೊಳಿಸಿ ಆದಾಯವನ್ನು ಹೊಂದುತ್ತಿರುವಂತೆ ರಾಜಧಾನಿಯಲ್ಲೂ ಒಂದು ವರ್ತಕರ ಬ್ಯಾಂಕನ್ನೇ ರ್ಪಡಿಸಬೇಕೆಂದು ಇಲ್ಲಿಯ ಕೆಲ ದೊಡ್ಡ ವರ್ತಕರುಗಳು ಯೋಚಿಸಿ ತತ್ಸಂಬಂಧವಾಗಿ ಒಂದು ಪ್ರಕಟನ ಪತ್ರಿಕೆಯನ್ನು ಹೊರಡಿಸುವವರಾಗಿರುತ್ತಾರೆ. ಈ ಪ್ರಯತ್ನವು ಆತ್ಯಾವಶ್ಯಕವೂ, ಶೃಂಗಾರ ನಗರವೆಂದು ಪ್ರಖ್ಯಾತವಾಗಿರುವ ರಾಜಧಾನಿಯ ವರ್ತಕರಿಗೆ ಭೂಷಣವೂ ಆಗಿರುವುದರಿಂದ ಎಲ್ಲ ವರ್ತಕರುಗಳೂ ಇತರ ಉಪಪನ್ನರೂ ಷೇರುದಾರರಾಗಿ ಬ್ಯಾಂಕು ಸ್ಥಾಪನವಾಗುವಂತೆ ಮಾಡುವರೆಂದು ನಿರೀಕ್ಷಿಸುತ್ತೇವೆ.

ರಾಜಧಾನಿಯ ದೊಡ್ಡಪೇಟೆ ಮಾರ್ಗದ ಇಕ್ಕೆಲದಲ್ಲಿ ವಿದ್ಯುದ್ದೀಪಸ್ತಂಭಗಳು ನೆಡಲ್ಪಟ್ಟಿರುವುವಲ್ಲದೆ ಈಗ ಅವುಗಳ ಮಧ್ಯೆ ಎತ್ತರವಾದ ಕಬ್ಬಿಣದ ಕಂಭಗಳು ಇವರು ಬದಿಗಾಗಿ ನೆಡಲ್ಪಟ್ಟು ಮುಕ್ಕೋಣದ ಕಂಬಿಗಳು ಕಟ್ಟಲ್ಪಟ್ಟಿವೆ. ಇವುಗಳಿಗೆ ವಿದ್ಯುದ್ದೀಪಗಳ ಮಾಲೆಯೊ, ಬಹಳ ಪ್ರಕಾಶಮಾನವಾದ ದೀಪಗಳೂ ತೂಗಿಹಾಕಲ್ಪಡುವುವೆಂದು ತೋರುತ್ತದೆ. ಈ ರೀತಿ ವೈದ್ಯುತ ಶಾಖೆಯವರು ವೆಚ್ಚಮಾಡುತ್ತಿರುವುದನ್ನು ನೋಡಿದರೆ, ಅವರಿಗೆ ಆದಾಯವು ಮಿತಿಮೀರಿ ಉತ್ಪನ್ನವಾಗುತ್ತಿರುವುದೆಂದು ತೋರುವುದು. ಅಂತಹ ಆದಾಯವನ್ನು ಅನಾವಶ್ಯಕವಾದ ದೀಪಾಲಂಕಾರಕ್ಕಾಗಿ ಮಿತಿಮೀರಿ ವಿನಿಯೋಗಿಸದೆ ಬಹಳವಾಗಿ ಹೆಚ್ಚಿರುವ ದೀಪದ ಕಂದಾಯವನ್ನು ತಗ್ಗಿಸಿ ಜನೋಪಕಾರವನ್ನು ಮಾಡಿ ಅವರ ವಂದನೆಗೆ ಪಾತ್ರರಾಗಲೆಂದು ಕೋರುತ್ತೇವೆ.

ಅಲ್ಲದೆ ಮೈಸೂರು ಸಂಸ್ಥಾನದ [illegible] ಕ್ಕಾಗಿ [illegible] ರಚಿಸಲ್ಪಟ್ಟ ಕಮಿಟಿಯು [illegible] ಮಂತ್ರಿಗಳಾದ ಮ|| [illegible] ಅಧ್ಯಕ್ಷತೆಯಲ್ಲಿ ಏರ್ಪಡಿಸಲ್ಪಟ್ಟು (1) ಸರ್ ಚಾರ್ಲ್ಸ್ ಟಾಡ್‌ಹಂಟರ್‌ರವರು (2) ಸರ್ ಕೆ. ಪಿ. ಪುಟ್ಟಣ್ಣಶೆಟ್ಟರು (3) ವಾಣಿಜ್ಯ ವ್ಯಾಪಾರಿ ಶಾಖೆಯ ಡೈರೆಕ್ಟರ್‌ರವರು (4) ವಿದ್ಯಾಭ್ಯಾಸದ ಡೈರೆಕ್ಟರು (5) ಡಿ. ಪಿ. ಡಬ್ಲ್ಯು ಚೀಫ್ ಇಂಜನಿಯರು (6) ವ್ಯವಸಾಯದ ಡೈರೆಕ್ಟರು (7) ವಿದ್ಯುಚ್ಛಕ್ತಿಯ ಚೀಫ್ ಇಂಜನಿಯರು (8) ಅಭಿವೃದ್ಧಿ ಶಾಖೆಯ ಸೆಕ್ರೆಟರಿಯವರು (9) ಬೆಂಗಳೂರು ಉಣ್ಣೆ, ಹತ್ತಿ, ರೇಷ್ಮೆ ಮಿಲ್ಲಿನ ಮ|| ಬ್ಯಾಟಲರ್‌ರವರು (10) ಪ್ರೊಫೆಸರ್ ಕ್ವಾಟರ್‌ಮನ್ ಸ್ಮಿತ್‌ರವರು (11) ಮ|| ಬಿ. ಕೆ. ಗರುಡಾಚಾರ್ಯರು (12) ಮ|| ಎ. ರಾಮಲಿಂಗಂರವರು ಇವರುಗಳು ಸದಸ್ಯರುಗಳಾಗಿ ನಿಯಮಿಸಲ್ಪಟ್ಟಿರುತ್ತಾರೆ.

(1) ಸಂಸ್ಥಾನದ ಪ್ರಜೆಗಳು ಸ್ವಂತ ವೆಚ್ಚದಿಂದ ಪಾಠಶಾಲಾ ಕಟ್ಟಡವನ್ನು ಸರ್ಕಾರದವರು ಗೊತ್ತುಮಾಡಿದ ವಿಧಾನದಲ್ಲಿ ಕಟ್ಟಿಸಲ್ಪಡುವಂತೆ ಪ್ರೋತ್ಸಾಹಿಸಲ್ಪಡಬೇಕೆಂದೂ, ಹಾಗೆ ಕಟ್ಟಿಸಿದ ಮನೆಗೆ ಅವರ ಹೆಸರಿಡಲ್ಪಡಬೇಕೆಂದೂ (2) ಗ್ರಾಮಸ್ಥರು ಚಂದಾಹಣವನ್ನೆತ್ತಿ ತಮ್ಮ ಗ್ರಾಮಗಳಲ್ಲಿ ಸ್ಕೂಲುಮನೆಗಳನ್ನು ಕಟ್ಟಿಸುವಂತೆ ಪ್ರೋತ್ಸಾಹಿಸಲ್ಪಡಬೇಕೆಂದೂ, 100 ರೂ ಗ ಳಿಗೆ ಕಡಮೆಯಿಲ್ಲದ ಚಂದಾ ಕೊಡುವವರ ಹೆಸರುಗಳು ಕಲ್ಲಿನಮೇಲೆ ಕೆತ್ತಿಸಲ್ಪಟ್ಟು ಕಟ್ಟಡಕ್ಕೆ ಸೇರಿಸಲ್ಪಡಬೇಕೆಂದೂ (3) ಯಾರು ಮನೆಯನ್ನು ಕಟ್ಟಿ ನ್ಯಾಯವಾದ ಬಾಡಿಗೆಗೆ ಕೊಡುವಂತೆಯೂ ಆ ಬಾಡಿಗೆ ಹಣವನ್ನು ಗ್ರಾಮಪಂಚಾಯತರು ಚಂದಾಹಣದಿಂದಾಗಲಿ ತಮ್ಮ ಹಣದಿಂದಾಗಲಿ ಕೊಡುವಂತೆಯೂ ಪ್ರೋತ್ಸಾಹಿಸಬೇಕೆಂದೂ (4) ಮುಜರಾಯಿಗೆ ಸಂಬಂಧಪಟ್ಟ ಹಣವನ್ನು ಕಡಮೆ ಬಡ್ಡಿಯಿಂದ ಸ್ಕೂಲು ಕಟ್ಟಡಕ್ಕೆ ಉಪಯೋಗಿಸುವಂತೆ ಮತ್ತು ಸಹಕಾರಸಂಘದವರು ತಮ್ಮ ಆದಾಯದ ಹಣದಲ್ಲಿ ಶೇಕಡ 2 ರಂತೆ ಧರ್ಮಕ್ಕಾಗಿ ತೆಗೆದು ಅದನ್ನು ಪ್ರಾಥಮಿಕ ಪಾಠಶಾಲಾ ಕಟ್ಟಡಗಳಿಗುಪಯೋಗಿಸುವಂತೆ ಮಾಡಬೇಕೆಂದೂ ವಿದ್ಯಾಭ್ಯಾಸದ ಬೋರ್ಡಿನವರು ಸಲಹೆಯನ್ನು ಸೂಚಿಸಿದ್ದುದರಮೇಲೆ ಪ್ರಭುತ್ವದವರು ಕಡೆಯ ಎರಡು ಸಲಹೆಗಳು ಸಾಧುವಲ್ಲವೆಂದು ಹೇಳಿ ಉಳಿದವುಗಳನ್ನು ಅನುಮೋದಿಸಿರುತ್ತಾರೆ.

ಅಸಿಸ್ಟೆಂಟ್ ಕಮಿಷನರುಗಳಾದ ಮೆಸರ್ಸ್ [illegible] ಮಾಧವರಾಯರು ಸಾಗರ ಸಬ್‌ಡಿವಿಜನ್ನಿನಿಂದ ಕಂಟ್ರೋಲ್ ಆಫೀಸಿಗೂ, ಕೆ. ಶ್ರೀನಿವಾಸರಾಯರು ಸರ್ವೆಶಾಖೆಯಿಂದ ಸಾಗರ ಸಬ್ ಡಿವಿಜನ್ನಿಗೂ, ರಜದ ಮೇಲಿರುವ ಸಯ್ಯದ್ ಅಬ್ದುಲ್ ಖಾಲಿಕ್‌ರವರು ಸರ್ವೆ ಶಾಖೆಗೂ, ಎಂ. ವೀರರಾಜ ಅರಸಿನವರು ಭದ್ರಾವತಿಯ ಕಬ್ಬಿಣದ ಕಾರ್ಖಾನೆಯಿಂದ ಚಿತ್ರದುರ್ಗದ ಸಬ್ ಡಿವಿಜನ್ನಿಗೂ, ಬಿ. ಬಿ. ಮಲ್ಲರಾಧ್ಯರು ಭದ್ರಾವತಿ ಕಬ್ಬಿಣದ ಕಾರ್ಖಾನೆಯಿಂದ ಕೋ ಆಪರೇಟಿವ್ ಸೊಸೈಟಿಗಳ ಅಸಿಸ್ಟೆಂಟ್ ರಿಜಿಸ್ಟ್ರಾರರಾಗಿ ಶಿವಮೊಗ್ಗೆಗೂ ಆರ್. ರಾಮಚಂದ್ರರಾವ್ ಘೋರ್ಪಡೆಯವರು ಕೋ ಆಪರೇಟಿವ್ ಸೊಸೈಟಿ ಅ|| ರಿಜಿಸ್ಟ್ರಾರ್ ಸ್ಥಾನದಿಂದ ಶಿವಮೊಗ್ಗ ಸಬ್ ಡಿವಿಜನ್ನಿಗೂ ಸಿ. ಕೃಷ್ಣರಾಯರು ಶಿವಮೊಗ್ಗ ಸಬ್ ಡಿವಿಜನ್ನಿನಿಂದ ಚಿತ್ರದುರ್ಗ ಡಿ|| ಟ್ರೆಜರಿಗೂ, ರಜದಮೇಲಿರುವ ಎಚ್. ಸುಬ್ಬರಾಯರು ಮೈಸೂರು ಡಿ|| ಟ್ರೆಜರಿಗೂ ರಜದಮೇಲಿರುವ ಕೆ. ಸುಬ್ಬರಾಯರು ಶಿವಮೊಗ್ಗ ಡಿ|| ಟ್ರೆಜರಿಗೂ ವರ್ಗಾಯಿಸಲ್ಪಟ್ಟಿರುವರಲ್ಲದೆ, ಚಿತ್ರದುರ್ಗ ಸಬ್ ಡಿವಿಜನ್ ಛಾರ್ಜಿನಲ್ಲಿದ್ದ ಮ|| ಎಂ. ಶಂಕರಪ್ಪನವರು, ಚಿತ್ರದುರ್ಗ, ಮೈಸೂರು ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟ್ ಟ್ರೆಜರಿ ಛಾರ್ಜಿನಲ್ಲಿದ್ದ ಮ|| [illegible] ಎಸ್. ಎ. ಶ್ರೀನಿವಾಸರಾಯರು, ಎ. ಸುಬ್ರಹ್ಮಣ್ಯಶಾಸ್ತ್ರಿಗಳು ಮತ್ತು ಬಿ. ಸಿದ್ಧರಾಜ ಅರಸಿನವರು ಅಮಲ್ದಾರರಾಗಿ ಹಿಂದಿರುಗಿಸಲ್ಪಟ್ಟಿರುತ್ತಾರೆ.

ವರ್ತಮಾನಸಂಗ್ರಹ.

ರಷ್ಯಾದೇಶದಲ್ಲಿ ಕ್ರಿಸ್‌ಮಸ್ ಹಬ್ಬವನ್ನು ಆಚರಿಸುವುದಕ್ಕೆ ಬಹಳ ಆತಂಕಗಳಿವೆ. ಸರಕಾರವು ಕ್ರಿಸ್‌ಮಸ್ ದಿನವನ್ನು ಆಚರಿಸುವುದಕ್ಕೆ ಹಲವು ನಿರ್ಬಂಧಗಳನ್ನು ಹೊರಿಸಿದೆ.

ವೈಸರಾಯರು ವಿಶೇಷ ರಾಜಕೀಯ ವಿಷಯಗಳನ್ನು ಕುರಿತು ಮಾತಾಡುವುದಕ್ಕಾಗಿ ಪಂಡಿತ ನೆಹರು, ಗಾಂಧಿಗಳನ್ನು ಆಮಂತ್ರಿಸಿರುವರು. ಈ ತಿಂಗಳ ಕಡೆಯ ತಾರೀಖಿಗೆ ದಿಲ್ಲಿಯಲ್ಲಿ ಮಾತುಕತೆ ನಡೆಯುವುದು.

ಇಂಗ್ಲೆಂಡಿನಲ್ಲಿ ಹಿಂದೂದೇಶದ ಚಿತ್ರಗಳ ಪ್ರದರ್ಶನವೊಂದು ನಡೆಯುತ್ತಿದ್ದು ಅದರಲ್ಲಿ ವಾಣಿಜ್ಯವಿದ್ಯಾ ಯುವಕನೂ ಮೈಸೂರಿನ ಪ್ರಸಿದ್ಧ ಸಂಗೀತಗಾರರಾಗಿದ್ದ ಕೆ|| ಶೇಷಣ್ಣನವರ ಚಿತ್ರವನ್ನು ಕ್ರಯಕ್ಕೆ ಪಡೆದುಕೊಂಡರಂತೆ.

[illegible] ಒಬ್ಬ [illegible] ಒಂದು [illegible] ಹಿಂದೆ 1083 [illegible] ರೂಪಾಯಿ [illegible] ಲಕ್ಷ [illegible] ಕೊಂಡರು [illegible] 80,000 ರೂಪಾಯಿಗಳಿಗೆ [illegible] ಓದಬೇಕಾದರೆ [illegible] ಹೇಳಬಹುದು.

[illegible] ನಮ್ಮನ್ನು [illegible] ಅಮಾನುಲ್ಲಾ [illegible] ಹೇಳದೆ ನಮ್ಮನ್ನು ಕೊಲೆಗಾರರ ವಶಕ್ಕೆ ಕೊಟ್ಟ ನಾದಿರಖಾನನು ದೇವದೂತನೇ ಸರಿ. ಅವನು ಬಾರದಿದ್ದರೆ ಅಫಘಾನಿಸ್ಥಾನದ ಅವಸ್ಥೆ ಏನಾಗುತ್ತಿತ್ತೋ ಅಲ್ಲನೇ ಬಲ್ಲ !

ಅಮೇರಿಕೆಯ ಸಿನಿಮಾ ಆಕ್ಟರಾದ ಜಾನ್ ವೈಸ್‌ಮುಲ್ಲರ್ ಎಂಬವನು "ದಿ ಕಿಂಗ್ ಆಫ್ ಜಂಗಲ್" ಎಂಬ ಆಟದಲ್ಲಿ ಪಾತ್ರವನ್ನು ವಹಿಸಿದ ದಕ್ಕಾಗಿ 1 ಕೋಟಿ ಡಾಲರುಗಳು ಸಂಬಳವಾಗಿ ಕೊಡಲ್ಪಟ್ಟುವಂತೆ ! ಎಂದರೆ ಒಂದು ವಾರಕ್ಕೆ ಸುಮಾರು 1,60,000 ರೂಪಾಯಿಗಳಾದುವು. ಇಷ್ಟು ಹೆಚ್ಚು ಹಣವು ಇದುವರೆಗೂ ಯಾರಿಗೂ ಸಂಬಳದ ರೂಪವಾಗಿ ದೊರೆತಿರಲಿಲ್ಲ !

ಸರ್ದಾರ ವಾಲಿಖಾನ (ಇವರೇ ಅಫಘಾನಿಸ್ಥಾನವನ್ನು ಗೆದ್ದವರು) ರಾಜಪ್ರತಿನಿಧಿಗಳಾಗಿ ಇಂಗ್ಲೆಂಡಿಗೆ ತೆರಳಿ ಬಂದ ಹಿಂದುಮುಂದಿನ ಸಂಗತಿ ಹೇಳಿದರು. [illegible] ಅಮಾನುಲ್ಲ [illegible] ರಾಜಕೀಯ ಧುರಂಧರರಲ್ಲ. ಅವನಿಗೆ [illegible] ಅಫಘಾನಿಸ್ಥಾನದಲ್ಲಿ ಇನ್ನೊಬ್ಬ [illegible] ಬರುವುದು. ಅವ ನಿಂದ ಸಾವಿರಪಾಲು [illegible] ಎಂದು ಹೇಳಿದ್ದಾರೆ. ತಾವೇ ರಾಜಪ್ರತಿನಿಧಿಗಳಾಗಬೇಕೆಂದು ಹೇಳಲಿಲ್ಲ !

ರಂಗೂನು [illegible] ಗಾಂಧಿ [illegible] ಈ ಮೊಕದ್ದಮೆಯಲ್ಲಿ ರೂ [illegible] ಸಾಕ್ಷ್ಯ ಕೊಡುವ ಪ್ರಸಂಗಬಂದಿದೆ. ಕಲ್ಕತ್ತೆಯ [illegible] ಕಾಂಗ್ರೆಸ್ಸು [illegible] ರಾಜದ್ರೋಹದ ಪ್ರಕರಣವು ನಡೆಯುತ್ತಿದೆ. ಇದರಲ್ಲಿ [illegible] ರವೀಂದ್ರನಾಥ ಠಾಗೋರರ ಸಾಕ್ಷಿ, ಸುಭಾಷಚಂದ್ರಬೋಸ್ ಮತ್ತು [illegible] ದಿಯವರು [illegible] ಪ್ರಕರಣದಲ್ಲಿ ಗಾಂಧಿ, ಪಂಡಿತ ಜವಹರಲಾಲ ನೆಹರುಗಳ ಸಾಕ್ಷಿ.

ಹಾಂಗ್ ಕಾಂಗ್ ನಗರದಿಂದ ಹೋಗುತ್ತಿದ್ದ ಬ್ರಿಟಿಷರ ಹಡಗೊಂದನ್ನು ಸಮುದ್ರಚೋರರು ಮುತ್ತಿ ಧ್ವಂಸಮಾಡಿದರು. [illegible] ಕಳ್ಳರು ಹಡಗನ್ನು ಮುತ್ತಿದರು. ಒಳಗಿದ್ದ ಕಾವಲಗಾರರು ಸಾಧ್ಯವಿದ್ದಷ್ಟು [illegible] ಕಳ್ಳರು ಹಡಗಿಗೆ ಬೆಂಕಿಯಿಟ್ಟರು. ಒಳಗಿದ್ದ ಜನರು ಸಣ್ಣ ಸಣ್ಣ ದೋಣಿಗಳಿಗೆ ಇಳಿದು ಹೋಗುವಾಗ ಕೆಲವು ಮುಳುಗಿಬಿಟ್ಟವು. ಜನರು ನೀರಪಾಲಾದರು. ಹಡಗಿಗೆ ಬೆಂಕಿಯಿಟ್ಟರು. ಅಷ್ಟರಲ್ಲಿ ಯುದ್ಧ ನಾವೆಯೊಂದು ಅಲ್ಲಿಗೆ ಬಂದ ಕಾರಣ ಹಡಗು ಸಂರಕ್ಷಿಸಲ್ಪಟ್ಟಿತು.

ಸರದಾರ ವಾಲಿಖಾನನು ಮುಂಬಯಿಗೆ ಬಂದಾಗ ಯುವಕಸಂಘದವರು ವಾಲಿಖಾನನ್ನು ಸನ್ಮಾನಿಸಿದರು. ಇವನು ಮಾತಾಡುವಾಗ ಹೀಗೆಂದನು—ಅಫಘಾನಿಸ್ಥಾನದಲ್ಲಿ [illegible] ಆದೇಶದಂತೆ ಆಡಳಿತದಲ್ಲಿ ಹಿಂದುಮೇಲಕ್ಕೆ [illegible] ಎಂಬ ತಪ್ಪು ತಿಳುವಳಿಕೆ ಜನರಲ್ಲಿದೆ. ಇದನ್ನು ಹಿಂದೀಯರು ಬಿಟ್ಟುಬಿಡಬೇಕು. ಹಿಂದುದೇಶದ ಒಂದು ಇಂಚು ನೆಲವನ್ನಾದರೂ ಆಕ್ರಮಿಸುವ ಆಸೆ ನಮಗಿಲ್ಲ. [illegible] ಸಾಧಿಸಬೇಕಾದರೆ ಅಕ್ಕಪಕ್ಕದವರೊಂದಿಗೆ ಸಂಘವು ಸ್ಥಾಪಿಸಲ್ಪಡಬೇಕು.

ಇದೇ ಡಿಸೆಂಬರ್ ತಾ 1 ನೇ ಬುಧವಾರ ಸಾಯಂಕಾಲ ಸಬರ್ಮತಿ ಯಾತ್ರೆಯಲ್ಲಿ ಮಹಾತ್ಮ ಗಾಂಧಿಯವರ ಮೊಮ್ಮಗಳು 18 ವರ್ಷ ವಯಸ್ಸಿನ [illegible] ಯವರಿಗೂ ಬಿಹಾರ ದೇಶದವರಾದ 24 ವರ್ಷವಯಸ್ಸಿನ ಶಂಕರಲಾಲ್ ಅಗರ್ ವಾಲಾಯವರಿಗೂ ವಿವಾಹವು ವಿಶೇಷ ವೆಚ್ಚವಿಲ್ಲದೆ [illegible] ಇಲ್ಲದೆ ಸರಳವಾಗಿ ನಡೆಯಿತು. ಪ್ರತ್ಯೇಕ ರಾಷ್ಟ್ರಗಳಿಗೆ ಸೇರಿದ ಬೇರೆ ಬೇರೆ ವೈಶ್ಯ ಕುಟುಂಬದವರು ಸಂಬಂಧ ಬೆಳಸಿದುದು ಇದೇ ಮೊದಲಂತೆ. ಬಂಧುಮಿತ್ರರು ಬಹು ಮಿತವಾಗಿ ಆಹ್ವಾನಿಸಲ್ಪಟ್ಟಿದ್ದರು.

ಅಮಾನ ಉಲ್ಲಾಖಾನರನ್ನು ಹೊಗಳುವ ದಿನಗಳು ಸಂದ ಹೋದುವು. ಈಗ ದೂರುವ ಕಾಲಬಂದಿದೆ. ಅವರಲ್ಲಿ ಕೋಟ್ಯಂತರ ರೂಪಾಯಿಗಳಿವೆ. ಬಂದ ಪತ್ರಿಕೆಗಳಲ್ಲಿ [illegible] ಅವರು [illegible] ಎಂದೂ ಕೆಲವು ಪತ್ರಿಕೆಗಳು ಬರೆಯುತ್ತಿವೆ. ಇದುವರೆಗೆ 'ಯಥಾ ರಾಜಾ ತಥಾ ಪ್ರಜಾ' [illegible] ತತ್ವದಿಂದ ನಡೆದವರು ಇಂದಿನ [illegible] ಎಂದು ಪತ್ರಿಕೆಯಲ್ಲಿ ಘೋಷಣೆ. ಅಮಾನುಲ್ಲರು ಅವರನ್ನು [illegible] ಯೋಚನೆಯಲ್ಲಿರುವರಂತೆ.

ಅಗಾಖಾನರ ವಿವಾಹವು ಕಳೆದ ತಿಂಗಳು ತಾರೀಖು [illegible] ದಲ್ಲಿ [illegible] ನಗರದಲ್ಲಿ ಜರುಗಿತು. [illegible] ಎಂಬ 34 ವರ್ಷದ ಸುಂದರಿಯೇ ಅವರ ಇಂದಿನ ವಧು. ಗಂಡನು ನೂತನ [illegible] ಸುಮಾರು 40 ಲಕ್ಷ ರೂಪಾಯಿಗಳನ್ನೇ ಕೊಟ್ಟಿರುವನು [illegible] ಅಗಾಖಾನರಿಗೆ ಅಮೂಲ್ಯವಾದ ಸ್ತ್ರೀರತ್ನವೆಂದು [illegible] ವಧುವು ಗಂಡನಿಗೆ ಕೆಲವು ಪುಸ್ತಕಗಳನ್ನು ಬಳುವಳಿಯಾಗಿ ಕೊಟ್ಟಳಂತೆ ! ಪುಸ್ತಕವನ್ನು ಕೊಟ್ಟದ್ದು ಏಕೆಂದು ಕೇಳಿದರೆ ನನ್ನ ಗಂಡನಿಗೆ ಓದುವುದರ ಹುಚ್ಚು ! ಎಂದು ಆ ಸುಂದರಿಯು ಹೇಳುತ್ತಾಳೆ.

[illegible] ಸಮಯದಲ್ಲಿ [illegible] ಗಂಗಾತೀರದಲ್ಲಿ ಜನವರಿ ತಾ|| 25 ರಿಂದ 30 ರ ವರೆಗೆ ಸನಾತನಧರ್ಮ [illegible] ಜರುಗಿಸಲು ಪಂಡಿತ ಮದನಮೋಹನ ಮಾಳವೀಯರು ಏರ್ಪಾಟು ಮಾಡುತ್ತಿದ್ದಾರೆ. ಭರತಖಂಡದ ಎಲ್ಲ ಪ್ರಾಂತಗಳಿಂದಲೂ ಪ್ರತಿನಿಧಿಗಳು ಆಹ್ವಾನಿಸಲ್ಪಡುವರು. ಆ ಸಮಯದಲ್ಲಿ ರುದ್ರಮಹಾಯಾಗವು ನಡೆಸಲ್ಪಡುವುದು. ವಿದ್ಯಾಂಸರು ಭಗವದ್ಗೀತೆಯನ್ನು 1001 ಸಾರಿ ಪಾರಾಯಣ ಮಾಡಬೇಕೆಂದು [illegible] ಯಲ್ಲಿ ಬರೆಯಲ್ಪಟ್ಟಿರುವ ಭಗವದ್ಗೀತೆಯು ಅಷ್ಟ [illegible] ಪ್ರತಿಯೊಂದು ಶ್ಲೋಕಕ್ಕೆ ನೂರು ಜನರು [illegible] 19 ರಿಂದ [illegible] ತನಕ [illegible] ನಡೆಯುವುವು.

ವಿಶಾಖಪಟ್ಟಣದಲ್ಲಿ 8 ವರ್ಷದ ಹುಡುಗನೊಬ್ಬನು ತನ್ನ ಅಜ್ಜಿಯೊಡನೆ ಬಿದಿರನ್ನು ಕಡಿದು ತರುವುದಕ್ಕಾಗಿ ಕಾಡಿಗೆ ಹೋಗಿದ್ದಾಗ ಒಂದು ಹುಲಿಯು ಬಂದು ಅವನ ಅಜ್ಜಿಯನ್ನು ಹಿಡಿದು ಎಳೆದೊಯ್ಯಲಾರಂಭಿಸಿತು. ಆ ಹುಡುಗನು ಇದನ್ನು ನೋಡಿ ಧೈರ್ಯದಿಂದ ಅಲ್ಲಿ ಬಿದ್ದಿದ್ದ ಕಲ್ಲುಗಳನ್ನು ತೆಗೆದು ನಾಯಿಯನ್ನು ಅಟ್ಟುವರೀತಿಯಲ್ಲಿ ಅದಕ್ಕೆ ಹೊಡೆದು ಓಡಿಸಿಬಿಟ್ಟನು. ಅಜ್ಜಿಗೆ ಗಾಯಗಳಾಗಲು ಆಕೆಯನ್ನು ಮನೆಗೆ ತಂದು ಉಪಚರಿಸಿದರೂ ಪಾಸಿಯಾಗದೆ ಆಕೆಯು ತೀರಿಹೋದಳು. ಆ ಹುಡುಗನ ಸಾಹಸಕ್ಕೆ ಮೆಚ್ಚಿ ವಿಶಾಖಪಟ್ಟಣದ ಅಧಿಕಾರಿಗಳು ಬಹುಮಾನವನ್ನು ಕೊಟ್ಟಿರುವರು. ಈ ಹುಡುಗನಿಗೆ ಸರ್ಕಾರದವರು ಸ್ಕೂಲಿನ ಶಿಕ್ಷಣವನ್ನು ಕೊಟ್ಟು ಸಹಾಯ ಮಾಡಬೇಕೆಂದು ದಿವಾನ್ ಬಹಾದರ್ [illegible] ಯವರು ಮದ್ರಾಸ್ ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಸೂಚಿಸಿರುವರು !

ಕಳೆದ ನವಂಬರ್ ತಾ|| 17 ರಲ್ಲಿ ಮದ್ರಾಸಿನೊಳಗೆ ಜರುಗಿದ ಧಾರ್ಮಿಕ ಮಹಾಸಭೆಯಲ್ಲಿ ವಿವಾಹಬಂಧವಿಮೋಚನೆಯಾಗಕೂಡದೆಂದು ಮಾಡಲ್ಪಟ್ಟ ತೀರ್ಮಾನವನ್ನು ಕುರಿತು ಗುಂಟೂರು ಮ್ಯುನಿಸಿಪಲ್ ಛೇರ್ಮನ್ನರಾದ ಮ|| ಎಂ. ವಿ. ಎಲ್. ನರಸಿಂಹರಾವ್‌ಯವರು ತಮ್ಮ ಅಭಿಪ್ರಾಯವನ್ನು ಕೊಡುವಾಗ್ಗೆ "ವಿವಾಹವು ಮುಖ್ಯವಾಗಿ ಒಂದು ಒಡಂಬಡಿಕೆಯಲ್ಲದೆ ಶಾಸ್ತ್ರದಲ್ಲಿ ವಿಧಿಸಲ್ಪಟ್ಟ ಕಾರ್ಯವಲ್ಲವು. ಒಂದು ಒಡಂಬಡಿಕೆಯು ಉಭಯರ ಇಷ್ಟಪ್ರಕಾರ ನಡೆಯತಕ್ಕದಾಗಿದೆ. ಆದುದರಿಂದ ವಿವಾಹಬಂಧವಿಮೋಚನೆಯಾಗುವುದು ಉಭಯರಿಗೂ ಶ್ರೇಯಸ್ಕರವೆಂದು ತೋರಿದಲ್ಲಿ ಆ ರೀತಿ ವಿಮೋಚನೆ ಮಾಡಿಕೊಳ್ಳಲು ಗಂಡಹೆಂಡಿರಿಬ್ಬರಿಗೂ ಹಕ್ಕುಂಟು. ಮತ್ತು ಉಭಯರಿಗೂ ಶ್ರೇಯೋದಾಯಕವಾಗಿರುವಂತೆ ವಿವಾಹವನ್ನು ರದ್ದುಮಾಡಬೇಕಾದ ಸಂದರ್ಭಗಳು ಪ್ರಪಂಚದಲ್ಲಿ ಅನೇಕ ಇವೆ. ಆದ್ದರಿಂದ ಇದಕ್ಕೆ ಸಂಬಂಧಪಟ್ಟ ತೀರ್ಮಾನವನ್ನು ಮಹಾಸಭೆಯಲ್ಲಿ ಪ್ರತಿಪಾದಿಸಿದವರನ್ನು ನಾನು ಅನುಮೋದಿಸುತ್ತೇನೆ" ಎಂದು ಹೇಳಿರುತ್ತಾರೆ.

'ಅಫಘಾನಿಸ್ಥಾನದ ಅರಸಾಗಿದ್ದ ಅಮಾನುಲ್ಲರು ಈಗ ಯಾವ ಸ್ಥಿತಿಯಲ್ಲಿ ಇರುವರು' ಎಂಬ ವಿಷಯದಲ್ಲಿ ಭಿನ್ನಭಿನ್ನವಾದ ಅಭಿಪ್ರಾಯಗಳಿವೆ. "ಅವರು ಅಫಘಾನಿಸ್ಥಾನದಿಂದ ಹೊರಟುಹೋಗುವಾಗ ತಮ್ಮ ಐಶ್ವರ್ಯವನ್ನೆಲ್ಲಾ ದೇಶಕ್ಕಾಗಿಟ್ಟು ತಾವು ದಾರಿ ಖರ್ಚಿಗೆ ಸಹ ಹಣವನ್ನು ತೆಗೆದುಕೊಳ್ಳದೆ ಹೊರಟುಹೋದರು, ಮತ್ತು ಹೋಗಿ ಅತಿ ಕಷ್ಟದಿಂದ ಜೀವಿಸುತ್ತಿರುವರು" ಎಂದು ಕೆಲವರು ಹೇಳುತ್ತಾರೆ. ಇನ್ನು ಕೆಲವರು "ಜೀವಮಾನಕ್ಕೆ ಬೇಕಾಗುವಷ್ಟು ಹಣ ತೆಗೆದುಕೊಂಡುಹೋಗಿರಬಹುದೆಂದು" ಅಭಿಪ್ರಾಯಪಡುತ್ತಾರೆ. ಹಲವರು "ಕೋಟಿ ಹಣವನ್ನು ಕೊಂಡುಹೋಗಿರುವರೆಂದೂ" ಹೇಳುತ್ತಾರೆ. ಇದರ ತಥ್ಯಾಂಶವು ಇದುವರೆಗೆ ತಿಳಿದಿಲ್ಲ. ಆದರೆ ಈಗ ಕೆಲವರು ಈ ರೀತಿಯ ಒಂದು ಅಭಿಪ್ರಾಯವನ್ನು ನಿಜವೆಂದು ನಂಬುವುದಕ್ಕೆ ಸರಿಯಾದ ಕಾರಣವಿದೆ ಎಂದು ಹೇಳುತ್ತಾರೆ. ಆ ಅಭಿಪ್ರಾಯವು ಈ ರೀತಿಯಾಗಿದೆ. "ಅಮಾನುಲ್ಲಾಖಾನರು ಈಗ ಸ್ಥಿತಿವಾಗಿಲ್ಲದಿದ್ದರೂ ತುಂಬಾ ಐಶ್ವರ್ಯವಂತರಾಗಿರುತ್ತಾರೆ. ಅವರಲ್ಲಿ ಈಗ 500 ಲಕ್ಷ ಡಾಲರುಗಳಷ್ಟು ಹಣ ಸಂಗ್ರಹವಿದೆ. ಕಳೆದ [illegible] ವರ್ಷ ಅವರು ಇಟಲಿಯ ಒಂದು ಬ್ಯಾಂಕಿನಲ್ಲಿ ಕೆಲವು ಕೋಟಿ ಡಾಲರುಗಳ [illegible] ಬಡ್ಡಿಗೆ ಕೊಟ್ಟಿದ್ದರು. ಈ ವರ್ಷ ಅದರ ಬಡ್ಡಿಯಿಂದ ಒಂದು ಕೋಟಿ ರೂಪಾಯಿಗಳನ್ನು ತೆಗೆದು ಇಟಲಿಯಲ್ಲಿ ತಮಗೆ ವಾಸವಾಗಿರುವುದಕ್ಕೋಸ್ಕರ ಮನೆಯನ್ನೂ ಸ್ವಲ್ಪ ನೆಲವನ್ನೂ ಕ್ರಯಕ್ಕೆ ಪಡೆದುಕೊಂಡರು. ಅವರು ಸೌರಿಯಾ ರಾಣಿಯವರೊಡನೆ ಯುರೋಪಿಗೆ ಹೋದಾಗ ರಾಣಿಯವರಿಗೆ ಆಭರಣಗಳು ಬೇಕಾಗಿದ್ದುವು. ಆಗ ಅಲ್ಲಿ ಸುಮಾರು 120 ಲಕ್ಷ ರೂಪಾಯಿಗಳಿಗೆ ಕಡಮೆಯಾಗದಷ್ಟು ಚಿನ್ನವನ್ನು ತೆಗೆದರು. ಮತ್ತೂ ಬೆಲೆಬಾಳುವ ಕೆಲವು ಕೋಟೆಗಳನ್ನು ಅಲ್ಲಿಯ ಬ್ಯಾಂಕುಗಳಲ್ಲಿಟ್ಟಿದ್ದರು. ಅನಂತರ ಪ್ರಜೆಗಳಲ್ಲಿ ಕ್ಷೋಭೆಯುಂಟಾಗಿದೆ ಎಂದು ತಿಳಿದೊಡನೆಯೇ ರಾಣಿಯ ಆಭರಣಗಳನ್ನು ಬ್ಯಾಂಕಿನಲ್ಲಿಟ್ಟರು ಮತ್ತು ಮುಂದಿನ ಸಂಭವವನ್ನು ಊಹಿಸಿ ಹಣವನ್ನು ಸಂಗ್ರಹ ಮಾಡುತ್ತಾ ಮುಂಜಾಗ್ರತೆಯನ್ನು ಮಾಡಿಕೊಂಡರು. ಅನಂತರ ರಾಜ್ಯವನ್ನು ಬಿಟ್ಟು ಹೋಗುವ ಮೊದಲೇ ತಮ್ಮ ಸಹೋದರ ಇನಾಯತುಲ್ಲರಿಗೆ ಒಪ್ಪಿಸಿಕೊಳ್ಳುವುದಕ್ಕೆ ಮುಂಬಯಿಯಲ್ಲಿ ಒಂದು ಮನೆಯನ್ನು ಕೊಂಡುಕೊಟ್ಟು ಹೇರಳ ಹಣವನ್ನು ಕೊಟ್ಟರು. ಅನಂತರ ಇಟಲಿಗೆ ಹೋಗಿ ಅಲ್ಲಿ ಈಗ ಸುಖವಾಗಿ ಇರುವರು. ಈಗ ಅವರು ವಾಸವಾಗಿರುವ ಮನೆಯು ಬಹಳ ದೊಡ್ಡದಾಗಿ ಅರಮನೆಗಿಂತಲೂ ಭವ್ಯವಾಗಿದೆ. ಅವರಲ್ಲಿ ಈಗ 600 ಲಕ್ಷ ಡಾಲರುಗಳಿವೆ."

ವಿವಾಹಮಹೋತ್ಸವದಲ್ಲಾದ ಸಂಭಾವನೆ.

[illegible] ತಾಲ್ಲೂಕಿನಲ್ಲಿರುವ [illegible] ರವರು ತಮ್ಮ [illegible] ರವರ ತಮ್ಮ [illegible] ಮೈಸೂರು [illegible] ನಲ್ಲಿರುವ [illegible] ರವರ ಮೊಮ್ಮಗಳಿಗೆ [illegible] ತಾ|| 18-12-29 ನೇ ಬುಧವಾರ ಬಹಳ ವಿಜೃಂಭಣೆಯಿಂದ ವಿವಾಹವನ್ನು ಜರುಗಿಸಿದರು. ಈ ಮಹೋತ್ಸವದಲ್ಲಿ [illegible] ಸಂಘಕ್ಕೆ [illegible] ರೂ ಮತ್ತು [illegible] 10 ರೂ ಒಟ್ಟು 14 ರೂ ಸಂಭಾವನೆಯು ಕೊಡಲ್ಪಟ್ಟಿದ್ದಕ್ಕಾಗಿ [illegible] ಇವರ [illegible] ಮತ್ತು [illegible] ಆಶೀರ್ವಾದಗಳು ತಿಳಿಸಲ್ಪಟ್ಟಿವೆ.

[illegible]
ಪ್ರೆಸಿಡೆಂಟ್,
[illegible]

[illegible]

ಮದ್ರಾಸ್ ಸೆಕೆಂಡ್ ಪ್ರೆಸಿಡೆನ್ಸಿ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ [illegible]

[illegible]

ಅಮೀರ್ ಅಮಾನುಲ್ಲಾ ಅಮೀರ್ ನಾದಿರ್‌ಖಾನ್ ಇವರ ವಂಶವೃಕ್ಷ

[illegible] ಪಯಿಂದಾಖಾನ [illegible]

ಇವನಿಗೆ 21 ಮಂದಿ ಮಕ್ಕಳು ಅವರಲ್ಲಿ ಕೆಳಗಿನವರು ಮೂವರು ಪ್ರಸಿದ್ಧರಾದರು

(1) [illegible] ಮಹಮದ್‌ಖಾನ್ (ಜ್ಯೇಷ್ಠ ಪುತ್ರ)

(1) ಜಕರಿಯಾಖಾನ್ (2) ಯಹಯಾಖಾನ್

(1) ಆಸಫ್‌ಖಾನ್ (2) ಮಹಮದ್ ಯೂಸುಫ್‌ಖಾನ್

(1) ಹಾವಲೀಖಾನ (2) ಅಮೀರ್ ನಾದಿರ್‌ಖಾನ್ (ಈಗಿರುವವರು) (3) ಹಾಷಿಂಖಾನ್ (4) ಷಾಹಮದ ಖಾನ್

(2) ಸುಲ್ತಾನ್ ಮಹಮ್ಮದ್‌ಖಾನ್

(3) ಅಮೀರ್ ದೋಸ್ತ್ ಮಹಮ್ಮದ್‌ಖಾನ್ (ಈತ 20ನೇ ಮಗ)

ಅಮೀರ್ ಅಬ್ದುರ್‌ರಹಿಮಾನ್‌ಖಾನ್

ಅಮೀರ್ ಹಬೀಬುಲ್ಲಾಖಾನ್

ಅಮೀರ್ ಅಮಾನುಲ್ಲಾಖಾನ್ (ಹಿಂದಿನ ಅಮೀರರು)

ಅಮೀರ್ ನಾದಿರ್ಖಾನರ ವಂಶವೃಕ್ಷ

ಹಿಂದೆ ಅಮೀರರಾಗಿದ್ದ ಅಮಾನುಲ್ಲಾಖಾನರೂ ಈಗ [illegible] ನಾದಿರ್ಖಾನರೂ ದುರಾನೀ ರಾಜಕುಟುಂಬಕ್ಕೆ ಸೇರಿದವರಾದುದರಿಂದ ವಂಶಾನುಕ್ರಮದಲ್ಲಿ ಬಾಂಧವರೂ ಆಗಿರುವರು.

[illegible] 21 ಮಂದಿ ಪುತ್ರರು. ಅವರಲ್ಲಿ (1) [illegible] (2) ಸುಲ್ತಾನ್ ಮಹಮ್ಮದ್‌ಖಾನ್ (3) ದೋಸ್ತ್ ಮಹಮದ್‌ಖಾನ್ ಎಂಬ ಮೂವರು ಬಹಳ ಪ್ರಸಿದ್ಧ ಪುರುಷರು. [illegible] ಅಮೀರ್ ಅಬ್ದುರ್‌ರಹಿಮಾನ್‌ಖಾನರು [illegible] ಅಮೀರ್ ಅಮಾನುಲ್ಲಾಖಾನರು ಅಬ್ದುರ್‌ರಹಿಮಾನ್‌ಖಾನರ ಮೊಮ್ಮಗ.

[illegible] ಜ್ಯೇಷ್ಠಪುತ್ರರಾದ [illegible] (1) ಜಕರಿಯಾಖಾನ್ (2) ಯಹಯಾಖಾನ್ ಎಂಬಿಬ್ಬರು ಮಕ್ಕಳಿದ್ದರು. ಇವರಲ್ಲಿ ಯಹಯಾಖಾನರಿಗೆ (1) ಆಸಫ್‌ಖಾನ್ (2) ಮಹಮದ್ ಯೂಸುಫ್‌ಖಾನ್ ಎಂಬಿಬ್ಬರು ಮಕ್ಕಳಿದ್ದರು. ಇವರಿಬ್ಬರಲ್ಲಿ ಮಹಮದ್ ಯೂಸುಫ್‌ಖಾನರಿಗೆ (1) ಹಾವಲೀಖಾನ್ (2) ನಾದಿರ್‌ಖಾನ್ (ಈಗಿನ ಅಮೀರರು) (3) ಹಾಷಿಂಖಾನ್ (4) ಷಾಮಹಮದ್‌ಖಾನ್ ಎಂಬ ನಾಲ್ವರು ಪುತ್ರರು.

ಅಮಾನುಲ್ಲಾಖಾನರಿಗೂ ನಾದಿರ್ಖಾನರಿಗೂ [illegible] ಮೂಲಪುರುಷರಾದುದರಿಂದ ಇವರಿಬ್ಬರೂ ಜ್ಞಾತಿಗಳೇ.

ಕಾಬೂಲು ಯುದ್ಧವು ಹೇಗೆ ನಡೆಯಿತು.

[illegible]

ಆ ಹಿಡಿದ ಪ್ರಾಂತದಲ್ಲಿ ದಂಗೆ

[illegible]

ಮ್ಯಾನೇಜರ್.

In the Court of the District Munsif, Hospet

O S 291—29

Plaintiff	Defendants
Sringeri Lakshmappa, Munsami Firm	Bukkranalli Basappa and Bharmappa of Hosakeri Jagalur Tk

NOTICE

That the above suit is posted for the appearance of the 1st defendant on 7 1 30 and if you fail to so appear either in person or by pleader the suit will be decreed exparte

13-12-29

P UDDANAIYA
Plff's Pleader

ಹೊಸಮಾದರಿ ಫ್ಲಷಿಂಗ್ ಲ್ಯಾಟರೀಗಳೂ, ಹೊಗೆಬಾರದ ಸ್ನಾನದ ಮತ್ತು ಅಡಿಗೆ ಮನೆ ಒಲೆಗಳು

ಇವುಗಳ ಉತ್ಕೃಷ್ಟತೆಗಾಗಿ 1929 ನೇ ಮೈಸೂರಿನ ದಸರಾ ವಸ್ತುಪ್ರದರ್ಶನದಲ್ಲಿ ಭಂಗಾರದ ಪದಕಗಳು ದೊರಕಿರುತ್ತವೆ ಸ್ನಾನದ ಮನೆಯ ಒಲೆಗೆ ಸೌದೆ ಖರ್ಚು ಅರ್ಧ ಕಡಿಮೆಯಾಗುತ್ತದೆ, ಬೆಲೆ ಬಹು ಸುಲಭ

ಇವುಗಳನ್ನು ನಾವು ಸರ್ವರಿಗೂ ಕಟ್ಟಿಕೊಡುತ್ತೇವೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ

ಪ್ರೊಪ್ರೈಟರ್,
ಬ್ರಿಟಿಷ್ ಪೇಟೆಂಟ್ಸ್ ಮತ್ತು ಇಂಜಿನಿಯರಿಂಗ್ ಕಂಪೆನಿ,
12-31 ದೇವರಾಜ ಮಾರ್ಕೆಟ್, ಮೈಸೂರು

ಮೈಸೂರು ಸ್ಟಾರ್ ಚಂದಾನಿರ್ಣಯ

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ ೩-೮-೦; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ ೬-೮-೦, ವಿ ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ ಹಳೆ ಚಂದಾದಾರರುಗಳು ಮನಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮನಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ

ಮ್ಯಾನೇಜರ್.

ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್
ಪ್ರೆಸಿಡೆಂಟರವರ ಆಫೀಸ್
ತಾ|| 6-12-29

ನೋಟೀಸು.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವುದು ಏನೆಂದರೆ—

ಸನ್ 1930 ನೇ ಇಸ್ವಿ ಮಾರ್ಚಿ ಮಾಹೆ 8 ನೇ ತಾರೀಖು ಶನಿವಾರದ ದಿವಸ ಸಿಟಿ ಮೈಸೂರಿನಲ್ಲಿ ನಡೆಯುವ ಎಲೆಕ್ಷನ್ನಿನಲ್ಲಿ ರಿಪ್ರೆಸೆಂಟೇಟಿವ್ ಅಸೆಂಬ್ಲಿ ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್ಲುಗಳಿಗೆ ಮೆಂಬರುಗಳಾಗಲು ಮತ್ತು ಓಟು ಕೊಡಲು, ಅರ್ಹತೆ ಉಳ್ಳ ಓಡ್ಡವ ಮನುಷ್ಯರುಗಳ ಲಿಸ್ಟನ್ನು ಇದೇ ಮಾಹೆ 6 ನೇ ತಾರೀಖು ಗುರುವಾರದ ಲಾಗಾಯಿತು ಮುಂದೆ ನಮೂದಿಸಿರುವ ಸ್ಥಳಗಳಲ್ಲಿ ಪ್ರಕಟಿಸಲಾಗಿರುತ್ತೆ ಸಕಲರೂ ಬಂದು ನೋಡಿಕೊಂಡು ಹೋಗಬಹುದು.

3

M RAMASWAMI,
For President

(1) ಮೈಸೂರು ಡೆಪ್ಯುಟಿಕಮೀಷನರವರ ಆಫೀಸು
(2) ,, ಎಗ್ಸಿಕ್ಯೂಟೀವ್ ಇಂಜಿನಿಯರ್, ಮೈಸೂರು ಡಿವಿಜನ್ ಮೈಸೂರು
(3) ಡಿಸ್ಟ್ರಿಕ್ಟ್ ಸೆಷನ್ಸ್ ಜಡ್ಜ್ ರವರ ಕೋರ್ಟು ಮೈಸೂರು
(4) ಫಸ್ಟ್ ಮುನಸೀಫರವರ ಕೋರ್ಟು
(5) ಸೆಕೆಂಡ್ ಮುನಸೀಫರವರ ,,
(6) ಸಬ್‌ಜಡ್ಜರವರ ,,
(7) ಆಡಿಟರ್ ಮೈಸೂರು ರೈಲ್ವೇಸ್, ಮೈಸೂರು
(8) ಏಜೆಂಟರು ,, ,,
(9) ರಿಜಿಸ್ಟ್ರಾರ್, ಮೈಸೂರು ಯೂನಿವರ್ಸಿಟಿ, ಮೈಸೂರು
(10) ಚೇರ್‌ಮನ್, ಸಿಟಿ ಇಂಪ್ರೂಮೆಂಟ್ ಟ್ರಸ್ಟ್ ಬೋರ್ಡ್ ,,
(11) ಜೇಲ್ ಆಫೀಸು ,,
(12) ಪ್ಯಾಲೇಸು ಆಫೀಸು ,,
(13) ಟೌನ್‌ಹಾಲ್ ,,
(14) ಅಠಾರಾ ಕಚೇರಿ ಆಫೀಸು ,,
(15) ಮುನಿಸಿಪಲ್ ಆಫೀಸು ,,
(16) ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟು ,,
(17) ಅ|| ಸೂಪರಿಂಟೆಂಡ್, ಆಫ್ ಪೋಲೀಸ್, ಮೈಸೂರು ಸಿಟಿ ,,
(18) ಎಕ್ಸಿಕ್ಯೂಟೀವ್ ಇಂಜಿನಿಯರ್ ಸ್ಪೆಷಲ್ ಡಿವಿಜನ್ ,,
(19) ಅಮಲ್‌ದಾರ್, ಮೈಸೂರು ತಾಲ್ಲೂಕು ,,
(20) ಪೋಸ್ಟ್ ಮಾಸ್ಟರ್, ಮೈಸೂರು ಸಿಟಿ ,,
(21) ಪಬ್ಲಿಕ್ ಲೈಬ್ರರಿ ,,
(22) ಮೈಸೂರು ಬ್ಯಾಂಕ್ ,,
(23) ಸಬ್‌ರಿಜಿಸ್ಟ್ರಾರವರ ಆಫೀಸು ,,
(24) ಮೈಸೂರು ಸಿಟಿ ಕೋ ಆಪರೇಟಿವ್ ಸೊಸೈಟಿ ಲಿಮಿಟೆಡ್ ,,
(25) ,, ಬ್ಯಾಂಕ್ ,,
(26) ಸೆಕ್ರೆಟರಿ, ಬಾರ್ ಅಸೋಸಿಯೇಷನ್ ,,
(27) [illegible] ,,
(28) ಎಲ್ಲಾ ಮೊಹಲ್ಲಾ ಆಸ್ಪತ್ರೆಗಳು ,,
(29) ಸಿಟಿ ರೈಲ್ವೆ ಸ್ಟೇಷನ್ ,,
(30) ಮರ್ಚೆಂಟ್ಸ್ ಅಸೋಸಿಯೇಷನ್ ,,
(31) ದೇವರಾಜ ಮಾರ್ಕೆಟ್ಟು ,,
(32) ಮಂಡಿಮಾರ್ಕೆಟ್ಟು ,,
(33) ವಾಣೀವಿಲಾಸ ಮಾರ್ಕೆಟ್ಟು ,,
(34) ಪ್ರೆಸ್ ರೂಮು ,,
(35) ಅಂಜುಮನ್ ಹಿಮಾಯತ್ ಇಸ್ಲಾಂ ,,

ವಿಧವೆಯರು.

1921 ನೇ ಜನಗಣತಿಯ ಪ್ರಕಾರ 5 ವರ್ಷದೊಳಗಿನ ಪ್ರತಿ ಹತ್ತು ಸಾವಿರ ಬಾಲೆಯರಲ್ಲಿ 7 ವಿಧವೆಯರೂ, 5 ರಿಂದ 10 ರೊಳಗಿನ ವಯಸ್ಸಿನ ಪ್ರತಿ ಹತ್ತು ಸಾವಿರ ಹುಡುಗಿಯರಲ್ಲಿ 35 ವಿಧವೆಯರೂ, 10 ರಿಂದ 15 ರೊಳಗಿನ ಪ್ರತಿ ಹತ್ತು ಸಾವಿರ ಬಾಲಿಕೆಯರಲ್ಲಿ 166 ವಿಧವೆಯರು, 15 ರಿಂದ 20 ರೊಳಗಿನ ಪ್ರತಿ ಹತ್ತು ಸಾವಿರ ಸ್ತ್ರೀಯರಲ್ಲಿ 414 ವಿಧವೆಯರು; 20-25 ರೊಳಗಿನ ಪ್ರತಿ 10 ಸಾವಿರ ಸ್ತ್ರೀಯರಲ್ಲಿ 716 ಮಂದಿ 25 ರಿಂದ 35 ರೊಳಗಿನ ಪ್ರತಿ 10 ಸಾವಿರ ಸ್ತ್ರೀಯರಲ್ಲಿ 1489 ಮಂದಿ 35 ರಿಂದ 45 ರೊಳಗಿನ ಪ್ರತಿ ಹತ್ತು ಸಾವಿರದಲ್ಲಿ 3-52 ಮಂದಿ, 45 ರಿಂದ 65 ರೊಳಗಿನ ಪ್ರತಿ ಹತ್ತು ಸಾವಿರದಲ್ಲಿ 6195 ಮಂದಿ 65 ಕ್ಕೆ ಮೇಲ್ಪಟ್ಟ ವಯಸ್ಸಿನಲ್ಲಿರುವ ಪ್ರತಿ ಹತ್ತು ಸಾವಿರದಲ್ಲಿ 8430 ಮಂದಿ ಈ ಪ್ರಕಾರ ಗಿಹಾ ವಿಧವೆಯರುಗಳಿರುವರೆಂದು ಗೊತ್ತಾಗುತ್ತದೆ

ನಮ್ಮನ್ನಾಳುವ ಆಂಗ್ಲೇಯರಲ್ಲಿ 20 ವರ್ಷ ವಯಸ್ಸಿನೊಳಗೆ ವೈಧವ್ಯ ದುಃಖವನ್ನನುಭವಿಸುವ ಸ್ತ್ರೀಯರು ಸ್ವಾಭಾವಿಕ ಇಲ್ಲವೆಂದಲೇ ಹೇಳಬಹುದಾಗಿದೆ, 20 ರಿಂದ 25 ರೊಳಗಿರುವ ಪ್ರತಿ ಹತ್ತು ಸಾವಿರ ಸ್ತ್ರೀಯರಲ್ಲಿ 15 ಮಂದಿ, 25 ರಿಂದ 35 ರೊಳಗಿರುವ ಪ್ರತಿ ಹತ್ತು ಸಾವಿರದಲ್ಲಿ 130 ಮಂದಿ, 35 ರಿಂದ 45 ರೊಳಗಿರುವ ಪ್ರತಿ ಹತ್ತು ಸಾವಿರದಲ್ಲಿ 505 ಮಂದಿ, 45 ರಿಂದ 65 ರೊಳಗಿರುವ ಪ್ರತಿ ಹತ್ತು ಸಾವಿರದಲ್ಲಿ 1907 ಮಂದಿ, 65 ಕ್ಕೆ ಮೇಲ್ಪಟ್ಟಿರುವ ಪ್ರತಿ ಹತ್ತು ಸಾವಿರದಲ್ಲಿ 5653 ಮಂದಿ ವಿಧವೆಯರುಗಳಿರುವರು

ಮೇಲೆ ಹೇಳಿರುವ ಪ್ರಕಾರ ಹೋಲಿಸಿ ನೋಡಿದರೆ ನಮ್ಮ ದೇಶದಲ್ಲಿ ವಿಧವೆಯರ ಸಂಖ್ಯೆಯು ಅಧಿಕವಾಗಿರುತ್ತದೆಂದೂ, ಇದಕ್ಕೆ ಬಾಲ್ಯ ವಿವಾಹವೂ, ವೃದ್ಧರಿಗೆ ಚಿಕ್ಕ ಹೆಣ್ಣು ಮಕ್ಕಳನ್ನು ಲಗ್ನಮಾಡುವುದೂ ಬಹಳ ಮಟ್ಟಿಗೆ ಕಾರಣವೆಂದು ತಿಳಿಯಬೇಕಾದ್ದಾಗಿದೆ

ಕ್ರೈಸ್ತರು

1921 ನೆಯ ಜನಗಣತಿಯ ಪ್ರಕಾರ ಭರತಖಂಡದಲ್ಲಿ ಒಟ್ಟು 47,53,174 ಮಂದಿ ಕ್ರೈಸ್ತರಿರುವರು ಅಂದರೆ ಒಟ್ಟು ಜನಸಂಖ್ಯೆಯಲ್ಲಿ 100 ಕ್ಕೆ 1.5 ಅಥವಾ 1000 ಕ್ಕೆ 15 ರಂತೆ ಕ್ರೈಸ್ತರಿರುವರು ಕ್ರೈಸ್ತರಲ್ಲಿ 1000 ಕ್ಕೆ 60 ರಂತೆ ವಿದ್ಯಾಸಾಧಿತರಕ್ಕೆ ಸೇರಿದ ಜನ ಇರುವರು ಕೊಚ್ಚಿ ಸಂಸ್ಥಾನಗಳಲ್ಲೇ ಇರುತ್ತಾರೆ ಮದ್ರಾಸಾಧಿಪತ್ಯದ ಪ್ರಜೆಗಳಲ್ಲೆಲ್ಲಾ 1000 ಕ್ಕೆ 32 ರಂತೆ ಕ್ರೈಸ್ತರಿರುವರು ತಿರುವಾಂಕೂರಿನಲ್ಲಿ 1000 ಕ್ಕೆ 270 ರಂತೆಯೂ, ಕೊಚ್ಚಿ ಸಂಸ್ಥಾನದಲ್ಲಿ 1000 ಕ್ಕೆ 200 ರಂತೆಯೂ ಕ್ರೈಸ್ತರಿರುತ್ತಾರೆ ಪ್ರತಿ ಹತ್ತು ವರ್ಷಗಳಲ್ಲಿ ಕ್ರೈಸ್ತ ಜನ ಸಂಖ್ಯೆಯು 100 ಕ್ಕೆ 30 ರಂತೆ ಅಭಿವೃದ್ಧಿಯಾಗುತ್ತಿರುವುದು ಮುಂಬಾಯಿ, ಬಿಹಾರು ಒರಿಸ್ಸಾ ಪ್ರಾಂತಗಳಲ್ಲಿ 3 ಲಕ್ಷ, ಬಂಗಾಳ, ಅಸ್ಸಾಂ ಪ್ರಾಂತಗಳಲ್ಲಿ 1½ ಲಕ್ಷ, ಬೊಂಬಾಯಿ ಬರ್ಮಾಗಳಲ್ಲಿ 2½ ಲಕ್ಷ ಕ್ರೈಸ್ತರಿರುತ್ತಾರೆ ಈ ಕ್ರೈಸ್ತರಲ್ಲಿ ಯೂರೋಪಿಯನರು 176 ಸಾವಿರ, ಆಂಗ್ಲೋ ಇಂಡಿಯನರು 113 ಸಾವಿರ ದೇಶೀಯ ಕ್ರೈಸ್ತರು 45 ಲಕ್ಷ ಜನರಿರುತ್ತಾರೆ. ದೇಶೀಯ ಕ್ರೈಸ್ತರು 100 ಕ್ಕೆ 93, ಯೂರೋಪಿಯನರು 4, ಆಂಗ್ಲೋ ಇಂಡಿಯನರು 3 ರಂತಿರುತ್ತಾರೆ. ಇದರಿಂದ ದಕ್ಷಿಣ ಹಿಂದುಸ್ಥಾನದಲ್ಲಿ ಅಸ್ಪೃಶ್ಯಾದಿ ದೋಷಗಳಿಂದ ಕ್ರೈಸ್ತಮತಾವಲಂಬನೆಯು ಹೆಚ್ಚಾಗಿರುತ್ತದೆಂದೂ, ಉತ್ತರ ಹಿಂದುಸ್ಥಾನದಲ್ಲಿ ಆ ದೋಷವು ಕಡಮೆಯಾಗಿರುವುದೆಂದೂ ಊಹಿಸಬಹುದಾಗಿದೆ

ಸ್ವೀಕಾರ

ಶ್ರೀ|| ವೀರಸಂಗಪ್ಪನವರ ಆಗ್ರಹಾರದೀಕ್ಷಾಸಂಭಾವನೆಯ ಬಗೆಗೆ ಈ ಕೆಳಗೆ ಕಂಡ ವಿವಾಹ ಮೊದಲಾದ ಶುಭಕಾರ್ಯಗಳಲ್ಲಿ ಇತರ ಸಂದರ್ಭಗಳಲ್ಲೂ ತೆಗೆದು ಕಳುಹಲ್ಪಟ್ಟ ಮೊಬಲಗನ್ನು ವಂದನಾಪೂರಸ್ಸರವಾಗಿ ಸ್ವೀಕರಿಸಿರುತ್ತೇವೆ—ಸಂ

(1) ನಂಜನಗೂಡು ಕಸಬಾ ಪೋಲೀಸ್ ದಫೇದಾರ್ ಮ|| ನಂಜಪ್ಪನವರ ಮಗನ ಚೂಡಾಕರ್ಮದಲ್ಲಿ ಮ|| ಫೋಟೋಗ್ರಾಫರ್ ಮಹಾದೇವಪ್ಪನವರ ಮೂಲಕ 1 ರೂ (2) ನೆಲಮಂಗಲದ ಮ|| ಯಲೆಪುಟ್ಟಯ್ಯನವರ ಮಗಳ ಲಗ್ನದಲ್ಲಿ ಟಿ ಟೋಯನವರಿಂದ ಮ|| ಜಿ ಚೆನ್ನಬಸಪ್ಪನವರ ಮೂಲಕ 1 ರೂಪಾಯಿ

ಪತ್ರವ್ಯವಹಾರ

ಪತ್ರವ್ಯವಹಾರದ ಲೇಖಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು ಸಂಪಾದಕ

ಸಂಸ್ಥಾನದ ಕೊರಚರ ಮೊದಲನೇ ಮಹಾಸಭೆ

1930 ನೇ ಏಪ್ರಿಲ್ ತಾ|| 12 ನೇ ಶನಿವಾರ ಮತ್ತು 13 ನೇ ಭಾನುವಾರ ಅರಸೀಕೆರೆಯಲ್ಲಿ ಮೇಲ್ಕಂಡ ಮಹಾಸಭೆಯು ಹಾಸನದ ಡಿಪ್ಯುಟೀ ಕಮಿಷನರ್ ಸಾಹೇಬರವರಾದ ಮಿ| ಎಸ್ ಅಬ್ದುಲ್ ವಾಜಿದ್, ಬಿ ಎ ಯವರ ಅಧ್ಯಕ್ಷತೆಯಲ್ಲಿ ನಡೆಸಲ್ಪಡುತ್ತದೆ ಈ ಸಭೆಯ ಜಯಪ್ರದವು ಎಲ್ಲಾ ಪೋಲೀಸು ಅಧಿಕಾರಿಗಳ ಕೈಯಲ್ಲಿರುತ್ತೆ ಸಮಸ್ತರೂ ಈ ನಮ್ಮ ಸಭೆಗೆ ಪ್ರೋತ್ಸಾಹಮಾಡಬೇಕೆಂದು ಬೇಡುತ್ತೇವೆ ಈ ಸಭೆಗೆ ಕೊರಚರೆಲ್ಲ ಬರಬಹುದು

ತಮ್ಮ ವಿಧೇಯ ಸೇವಕರ

ಕೊರಚರ ವೆಂಕಟಯ್ಯ, ಸೆಕ್ರೆಟರಿ,

ದಾ. ಮುನಿಯಪ್ಪ ಟ್ರೆಜರರ್

ಗೀತಾ ಜಯಂತಿ

ಶ್ರೀ ರಾಮಕೃಷ್ಣಯುವಕ ಸಂಘದವರು ಇದೇ ತಿಂಗಳು 12 ನೇ ತಾರೀಖು ಗುರುವಾರ ಬೆಳಗ್ಗೆ 8 ಘಂಟೆಗೆ ಶ್ರೀ ರಾಮಕೃಷ್ಣಾಶ್ರಮದಲ್ಲಿ "ಗೀತಾ ಜಯಂತಿ" ಯನ್ನು ಆಚರಿಸಿದರು ಪೂಜೆಯಾದನಂತರ ವೇದಮೂರ್ತಿ ಗಣಪತಿಶಾಸ್ತ್ರಿಗಳವರು ರಸಭರಿತವಾದ ಗೀತಾ ಉಪನ್ಯಾಸವನ್ನು ಮಾಡಿದರು ಮತ್ತು ಸ್ವಾಮಿಸಂಬುದ್ಧಾನಂದರವರು ಇದೇ ವಿಷಯದಲ್ಲಿ ವಿದ್ಯಾರ್ಥಿಗಳು ತಿಳಿಯಬೇಕಾದ ಅಂಶವನ್ನು ಹೇಳಿ ಅವರ ಮನಸ್ಸಂತೋಷಪಡಿಸಿದರು, ಮಂಗಳಾರತಿ ಪ್ರಸಾದವಿನಿಯೋಗಗಳಾದ ಮೇಲೆ ಸಂಘದ ಸದಸ್ಯರುಗಳಾದ ಮ|| ಶೇಷಪ್ಪನವರು ಮತ್ತು ಮ|| ನರಸಿಂಹಮೂರ್ತಿಯವರು ತಮ್ಮ ಅತಿ ಮಧುರವಾದ ಗಾಯನದಿಂದ ಸಭಿಕರ ಮನಸ್ಸಂತೋಷಪಡಿಸಿದರು.

ಜಿ. ಪಿ. ಸುಬ್ಬಸ್ವಾಮಿ,

ಗೌರವ ಕಾರ್ಯದರ್ಶಿ.

ಒಂದು ದುಃಖವಾರ್ತೆ.

ಇದೇ ತಾ|| 12 ರ ಗುರುವಾರ ಯಡತೊರೆ ತಾ|| ಕಾಮೇನಹಳ್ಳಿ ಸೋಮೂರಯ್ಯನವರ ಮಕ್ಕಳು ಕೆ ರಾಮಣ್ಣನವರು ಶಿವಾಧೀನರಾದರೆಂದು ತಿಳಿಸಲು ವಿಷಾದವಾಗುತ್ತದೆ. ಇವರು ಈ ಗ್ರಾಮದ ವೀರಶೈವಮಂಡಲಿಗೆ ಶ್ರೇಷ್ಠ ಪ್ರತಿನಿಧಿಯಾಗಿಯೂ ಶ್ರೀಮಂತರಾಗಿಯೂ ಇದ್ದರು. ಇವರ ಆತ್ಮಕ್ಕೆ ಶಾಂತಿ ದೊರೆಯಲಿ ಎಂದು ಪ್ರಾರ್ಥಿಸುತ್ತೇವೆ. ಇವರ ವಂಶಸ್ಥರಿಗೆ ಆ ದುಃಖವನ್ನು ಸಹಿಸುವ ಶಕ್ತಿಯನ್ನು ಭಗವಂತನು ಕರುಣಿಸಲೆಂದು ಕೋರುತ್ತೇವೆ. ತಮ್ಮ ಸೋದರಿಯರ ಕಾರ್ಯಗಳನ್ನು ಕಂಡು ಅವರನ್ನು ಅಭಿನಂದಿಸುವ ಅಸಂಖ್ಯಾತ ಸಹೋದರರು ಗ್ರಾಮದಲ್ಲಿ ಇದ್ದಾರೆ. ಇಂಥಾ ಮಹನೀಯರು ಕೈಲಾಸವಾಸಿಗಳಾದುದು ದುಃಖಕರವಾದ ವಿಷಯ ಎಂದು ಹೇಳಬೇಕಾಗಿದೆ.

ಬಿ ಸಿ ಆರಾಧ್ಯ

ರಥೋತ್ಸವ

ಮಧುಗಿರಿ ತಾಲ್ಲೂಕು ಬೋಡಿ ಶಿವನಗೆರೆಯಲ್ಲಿರುವ ಶ್ರೀಮದ್ವೀರಾಂಜನೇಯ ಸ್ವಾಮಿಯ ರಥೋತ್ಸವವು ಬರುವ ಮಾಘ ಬ ಹುಣ್ಣಿಮೆ ತಾ|| 17-2-1930ನೇ ಸೋಮವಾರ ನಡೆಯುವುದಲ್ಲದೆ ಗರುಡ, ಶೇಷ ಹುಲಿ ಹಸ ವ ದ್ವಾದಶನೋತ್ಸವಗಳೂ ನಡೆಯುತ್ತವೆ ಸಂದರ್ಭವಾಗಿ ತಾ 14 ರಿಂದಲೇ ಆ ಗ್ರಾಮದವರು ಕಲಿತಿರುವ ಬಸವೇಶ್ವರವಿಜಯ ಎಂಬ ನಾಟಕವೂ, ಹರಿಕಥೆ ಭಜನೆಗಳೂ ಇನ್ನೂ ಸ್ಪರ್ಧಾಭಿಮಾನ ಮೊದಲಾದ ವಿಷಯಗಳ ಮೇಲೆ ಉಪನ್ಯಾಸಗಳೂ ದಿನಗಳ ವರೆಗೂ ನಡೆಯಲು ಏರ್ಪಡಿಸಲ್ಪಟ್ಟಿದೆ ಈ ರಥೋತ್ಸವ ಕಾಲಕ್ಕೆ ನಾಟಕ ಜನರ ದಾಟಿವಾ ಮೊದಲಾದ ಆಟಗಾರರ ದವರ ವಿತರಣೆ ಪಾತ್ರ ಸಾಮಾನುಗಳ ಅಂಗಡಿಗಳೂ ವಿಶೇಷವಾಗಿ ಬರುತ್ತವೆ ಭಕ್ತಾದಿಗಳು ವಿಶೇಷವಾಗಿ ಸೇರುವುದರಿಂದ ಜಾತ್ರೆಯು ಬಹಳವಾಗಿ ನಡೆಯುವ ಸಂಭವವಿದೆ ಬರುವ ಜನರಿಗೆ ಉಳಿದುಕೊಳ್ಳಲು ಸ್ಥಳಗಳ ಅನುಕೂಲತೆಯೂ ಇದೆ ಇದರಿಂದ ವ್ಯಾಪಾರಿಗಳೂ ಆಟಗಾರರೂ ಸಕಾಲದಲ್ಲಿ ಬಂದು ವಿಶೇಷ ಲಾಭವನ್ನು ಹೊಂದಬೇಕೆಂದೂ ಯಾತ್ರಿಕರು ಸ್ವಾಮಿಯ ಸೇವೆಯಿಂದ ಕೃತಾರ್ಥರಾಗಬೇಕೆಂದೂ ಕೋರುವ

ಎಚ್ ಡಿ ಗುರುಲಿಂಗಪ್ಪ ಉರಫ್ ತೆಂಬರಪ್ಪ ಬಿ

ಗ್ರಾಮ ಪಂಚಾಯತಿ ಛೇರ್ಮನ್

ವೀರಶೈವ ವಿದ್ಯಾರ್ಥಿ ನಿಲಯ, ಸಕಲೇಶಪುರ.

ನಾನು ಕೆಲವು ದಿನಗಳಹಿಂದೆ ಹಾಸನ ಡಿಸ್ಟ್ರಿಕ್ಟ್ ಸಕಲೇಶಪುರಕ್ಕೆ ಹೋಗಿದ್ದೆನು ಅಲ್ಲಿ ನನ್ನ ಸ್ನೇಹಿತರೊಬ್ಬರು ಆ ಊರಿನ ವೀರಶೈವ ವಿದ್ಯಾರ್ಥಿನಿಲಯವನ್ನು ತೋರಿಸಿದರು ನಿಲಯದಲ್ಲಿ ಸುಮಾರು 130 ವಿದ್ಯಾರ್ಥಿಗಳೂ 6 ಮಂದಿ ಮಾಸ್ಟರರೂ ಇರುತ್ತಾರೆ ಹೆಡ್ಮಾಸ್ಟರು ವ ಟಿ ಜಿ ಲಿಂಗಪ್ಪನವರ ಒಳ್ಳೇ ಅನುಭವಿಗಳೂ ನಿಷ್ಕಪಟಿಗಳೂ ವಿಶೇಷ ಆಸಕ್ತಿಯಿಂದ ಕೆಲಸ ನಡೆಸುವವರೂ ಆಗಿರುತ್ತಾರೆ ಅದರಿಂದಲೇ ಸ್ಕೂಲು ದಿನೇ ದಿನೇ ಅಭಿವೃದ್ಧಿ ಸ್ಥಿತಿಗೆ ಬರುತ್ತಲಿದೆ ಇವರು ಮತ್ತು ಇನ್ನಿಬ್ಬರು ಮಾಸ್ಟರುಗಳು ಹುಡುಗರು ಆಟವಾಡುವಾಗ ಅವರೊಡನೆ ಸೇರುವರು ಇದರಿಂದ ವಿದ್ಯಾರ್ಥಿಗಳಿಗೆ ಆಟದಲ್ಲಿ ಅಭಿರುಚಿಹುಟ್ಟಿ ಅವರ ಅಂಗಸಾಧನೆಯು ಚೆನ್ನಾಗಿ ನಡೆಯಲಿಕ್ಕೆ ಅವಕಾಶವಾಗಿದೆ ಹಾಸ್ಟಲಿನಲ್ಲಿ 30 ವಿದ್ಯಾರ್ಥಿಗಳಿದ್ದಾರೆ ಶ್ರೀಮಂತರ ಮಕ್ಕಳು ತಿಂಗಳಿಗೆ 7 ರೂಪಾಯಿ ಕೊಡುವರು ಬಡವರನ್ನು ಉಚಿತವಾಗಿಯೇ ಸೇರಿಸಿಕೊಳ್ಳುವರು ವಿದ್ಯಾರ್ಥಿಗಳು ಬೆಳಗಿನ 6 ಘಂಟೆಗೆ ಎದ್ದು ಸ್ನಾನಾದಿಕೆಲಸಗಳನ್ನೆಲ್ಲಾ ತೀರಿಸಿಕೊಂಡು ಒಂದು ದೊಡ್ಡ ಕೊಠಡಿಯಲ್ಲಿ ಸೇರಿ ಪ್ರಾರ್ಥನೆಮಾಡುವರು 10 ಘಂಟೆಗೆ ಊಟವಾಗುವುದು ಮಧ್ಯಾಹ್ನ ಫಲಾಹಾರ ಪುನಃ ಸಾಯಂಕಾಲ 7 ಘಂಟೆಗೆ ಪ್ರಾರ್ಥನೆ 7-30 ಕ್ಕೆ ರಾತ್ರಿ ಊಟ 8 ರಿಂದ 10 ರ ವರೆಗೆ ಅಭ್ಯಾಸ ಹೀಗೆ ಅವರ ಕಾರ್ಯಕ್ರಮವಿರುವುದು ಅಡಿಗೆ ಪಾತ್ರೆಗಳು ಮತ್ತು ಪದಾರ್ಥಗಳು ನಿರ್ಮಲವಾಗಿರುತ್ತವೆ ಊಟದ ಬಟ್ಟಲು ಮತ್ತು ನೀರಿನ ಚೊಂಬುಗಳು ಸ್ವಚ್ಛವಿರುತ್ತವೆ ಅಡಿಗೆಯವರು ಪ್ರತಿನಿತ್ಯ ಸ್ನಾನಮಾಡಬೇಕಲ್ಲದೆ ಶುಭ್ರವಾದ ವಸ್ತ್ರಗಳನ್ನು ಧರಿಸಬೇಕೆಂಬ ಕಟ್ಟಳೆ ಇರುವುದರಿಂದ ಮಲಿನವಸ್ತ್ರಧಾರಿಗಳಿಂದ ಸ್ವಾಭಾವಿಕವಾಗಿ ವ್ಯಾಧಿಯುತ್ಪತ್ತಿಯಾಗುವ ಸಂಭವವಿಲ್ಲ ಅಡಿಗೆ ಮನೆಯಲ್ಲಿ ಪಾತ್ರೆಗಳನ್ನು ತೊಳೆಯುವ ಸ್ಥಳಗಳನ್ನಾಗಿ ಬೇರೆ ಬೇರೆ ನೀಡಿರುವರು ಈ ಹಾಸ್ಟಲಿನಲ್ಲಿ ಇಂಥಾವರು ಬೆಂಗಳೂರು ಬಾ ಹಾಸ್ಟಲು ಮೊದಲಾದವರ ವಿದ್ಯಾರ್ಥಿನಿಲಯದಲ್ಲಿ ಕೆಲವು ವರ್ಷಗಳ ಹಿಂದೆ ಇರುತ್ತಿದ್ದರು ಇದರಿಂದಲೇ ಅಲ್ಲಿ ಉಪಯೋಗಿಸುತ್ತಿದ್ದ ಅಲ್ಯುಮಿನಿಯಂ ಊಟದ ಬಟ್ಟಲುಗಳಲ್ಲಿ ಒಡೆದು ಹಾಳಾದ ಇದ್ದ ಬಟ್ಟಲು ವಿದ್ಯಾರ್ಥಿಗಳ ಹೊಟ್ಟೆಗೆ ಸೇರಿ ಎಷ್ಟೋ ರೋಗಗಳನ್ನು ಹುಟ್ಟಿಸುತ್ತಿತ್ತು ಅಲ್ಲದೆ ಅಲ್ಲಿ ಇನ್ನೂ ನಾನಾ ತರದ ಅನೇಕ ಅವ್ಯವಸ್ಥೆಗಳಿದ್ದವು ಈಗಲೂ ಕೆಲವು ನಿಲಯ ವಿದ್ಯಾರ್ಥಿಗಳಲ್ಲಿ ಈ ವಿಧವಾದ ನ್ಯೂನತೆಗಳು ಇಲ್ಲದೇ ಇಲ್ಲವೆಂದು ತಿಳಿಯಬರುತ್ತದೆ

S C Hiremath

ಶ್ರೀ ಕಾರ್ತಿಕ ಮಹೋತ್ಸವ

ಶಿವಮೊಗ್ಗ ಡಿ ಆನಂದಪುರ ಮುರುಘಾಮಠದ ಶ್ರೀಮನ್ನಿರಂಜನ ಜಗದ್ಗುರು ಪ್ರಭುಸ್ವಾಮಿಯವರು ಶ್ರೀ ಸಚ್ಚಿದಾನಂದ ಮಹಾಸ್ವಾಮಿಗಳವರ ಮಠದಲ್ಲಿ ಪದ್ಧತಿ ಪ್ರಕಾರ ಕಳೆದ ಕಾರ್ತೀಕ ಬ|| ೩೦ ಅಮಾವಾಸ್ಯೆ ಸೋಮವಾರ ಪ್ರಾತಃಕಾಲ ಶ್ರೀ ಕರ್ತೃ ಗದ್ದುಗೆಗೆ ಸಿದ್ಧಾರಾಮೇಶ್ವರ ರುದ್ರಾಭಿಷೇಕವೂ ಸಹಸ್ರನಾಮ ಬಿಲ್ವಾರ್ಚನೆಯೂ ದಾಸೋಹದವರುಗಳಿಂದ ಮಂಗಳವೂ ನಡೆದು ಜಂಗಮಾರಾಧನೆಯಿಂದ ಸರ್ವ ಭಕ್ತಾದಿಗಳು ತೃಪ್ತಿ ಹೊಂದಿದರು ಈ ಸಮಾರಂಭಕ್ಕೆ ಕೆಳದಿ ಸಂಸ್ಥಾನದ ಹಿರೇಮಠದ ಶ್ರೀ ಪಟ್ಟಾಧ್ಯಕ್ಷ ರೇವಣಸಿದ್ಧಸ್ವಾಮಿಗಳೂ, ಹೊಸ್ಮಠ ಶಾಖೆ ತುಂಕೂರಿನ ಚಂದ್ರಶೇಖರಸ್ವಾಮಿಗಳೂ ದಯಮಾಡಿಸಿದ್ದರು ಶಿವಮೊಗ್ಗ ನೀಲಕಂಠ ತಿರುಮಲಕೊಪ್ಪ, ಹೊಳೆಹೊನ್ನೂರ, ಚನ್ನಗಿರಿ ಸಾಗರ ನಗರ ಮತ್ತು ಮಠದ ಸುತ್ತಮುತ್ತಲ ಗ್ರಾಮದ ಪ್ರಮುಖ ಪುರುಷರುಗಳು ಆಗಮಿಸಿದ್ದರು ರಾತ್ರಿಯಲ್ಲಿ ಶ್ರೀ ಮಹಾಸ್ವಾಮಿಗಳವರು ಅನುಷ್ಠಾನ ತೀರಿಸಿಕೊಂಡು ಸಭಾ ಭಕ್ತರ ಭಜನಾಸಮೂಹ ನೆರೆಸಿ ಸಂಪ್ರದಾಯಪೂರ್ವಕವಾಗಿ ಪಾದಪೂಜೆಯನ್ನು ಮಾಡಿಸಿ ಶಿವಾನುಭವ ಗೋಷ್ಠಿಗಳೂ ವೀರಶೈವಧರ್ಮದ ಉಪದೇಶವೂ ಆದುವು ಕೆಳದಿ ಶ್ರೀ ಪಟ್ಟಾಧ್ಯಕ್ಷ ಮಹಾಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಮಠದ ಸಮಾರಾಧನೆಯೂ ಚನ್ನಬಸವಪುರದ ಶ್ರೀ ಮಹಾಸ್ವಾಮಿಗಳವರ ಸದ್ವಚನಗಳನ್ನು ರಂಜಿತವಾಗಿ ಸರ್ವರಿಗೂ ತಿಳಿಯುವಂತೆ ಭಾಷಣಮಾಡಿದರು ಶಿವಮೊಗ್ಗ ಅಡ್ವೊಕೇಟ್ ಮ|| ಶಿವಪ್ಪನವರು, ಮುರುಗಪ್ಪನವರು, ಸಾಗರ ತಾ|| ಹೊಸಕೋಟೆ ಮಹಾಂತಪ್ಪನವರು ಬಿ ಎ, ಎಲ್ ಎಲ್.ಬಿ, ಇವರೇ ಮೊದಲಾದ ವಿದ್ವಾಂಸರು ತಮ್ಮ ಸರಸವಾದ ವಾಣಿಯಿಂದ ವಿದ್ಯಾಭ್ಯಾಸದ ಪ್ರಯೋಜನ ಇತ್ಯಾದಿ ವಿಷಯಗಳ ಮೇಲೂ, ತಿರುಮಲಕೊಪ್ಪದ ಪಂಡಿತ ಕೆ. ಚನ್ನಮಲ್ಲಪ್ಪ ಮಾಸ್ತರವರು ಧರ್ಮಪ್ರಚಾರ ವಿಷಯದ ಮೇಲೂ ಶಾಸ್ತ್ರಾಧಾರದಿಂದ ಸರ್ವರಿಗೂ ತಿಳಿಯುವಂತೆ ಭಾಷಣಮಾಡಿದರು ಆನಂತರ ಮಹಾಮಂಗಳದೊಡನೆ ಮಹಾಸ್ವಾಮಿಗಳವರ ಆಶೀರ್ವಚನದೊಡನೆ ಸಭೆಯು ಮುಕ್ತಾಯವಾಯಿತು. ಬೆಳಗಿನ ಜಾವದಲ್ಲಿ ಮಠದ ಪರಂಪರಾ ಪದ್ಧತಿಯಂತೆ ಗದ್ದುಗೆಯ ದರ್ಶನವಾಯಿತು. ಬಂದ ಭಕ್ತಾದಿಗಳೆಲ್ಲರೂ ಶ್ರೀ ಮಹಾಸ್ವಾಮಿಗಳವರಿಂದ ಕರುಣಿಸಲ್ಪಟ್ಟ ಪ್ರಸಾದದ ಗಂಧಾಕ್ಷತೆಗಳನ್ನು ಸ್ವೀಕರಿಸಿ ಸಂತೋಷಗೊಂಡರು. ಶ್ರೀ ಸ್ವಾಮಿಯವರ ಅನುಗ್ರಹದಿಂದ ಶ್ರೀ ಕರ್ತೃ ಗದ್ದುಗೆಗೆ ಮಂಗಳಾರತಿಯು ನಡೆಯಿತು ಆನಂತರ ಶ್ರೀ ಮಹಾಸ್ವಾಮಿಗಳವರು ಸಿದ್ಧಾಂತಶಿಖಾಮಣಿ ಮೊದಲಾದ ಸರ್ವ ಭಕ್ತಾದಿಗಳಿಂದ ಕಪ್ಪ ಕಾಣಿಕೆಗಳನ್ನು ಒಪ್ಪಿಸಿಕೊಂಡು, ಅವರಿಗೆ ಫಲಾಶೀರ್ವಾದ ಮಾಡಿದ್ದಲ್ಲದೆ ಶರಣರ ಭಕ್ತಿಗೆ ಮೆಚ್ಚಿ ಭಜನಾಸಂಘದ ಮುಖ್ಯಸ್ಥರಾದ ಶೀಲವಂತಮಠದ ಮಹಲಿಂಗಯ್ಯನವರಿಗೆ ರುದ್ರಾಕ್ಷಿ ಕಂಠಮಾಲೆಯನ್ನೂ ಪ್ರಮುಖರ ಭಜನಾ ಸಂಘಕ್ಕೆ ಸುವರ್ಣ ಪದಕವನ್ನೂ ಶ್ರೀಯೋಭಿವೃದ್ಧಿಗೋಸ್ಕರ ಸ್ವಹಸ್ತದಿಂದ ಆಶೀರ್ವದಿಸಿದರು. ತರುವಾಯ ವೇದಮಂಗಳವಾಗಿ ನಮ್ಮನ್ನಾಳುವ ಶ್ರೀ ಹಾಜರ್ ಪ್ರಭುಗಳವರಿಗೂ ಶ್ರೀಮನ್ಮಹಾರಾಜ ಕೃಷ್ಣರಾಜಒಡೆಯರ್ ಬಹದ್ದೂರ್‌ರವರಿಗೂ ಯುವರಾಜರವರಿಗೂ ಎಲ್ಲಾ ರಾಜ ಒಡೆಯರವರುಗಳಿಗೂ ಶ್ರೇಯೋಭಿವೃದ್ಧಿ ಉಂಟಾಗಬೇಕೆಂದು ಶ್ರೀ ಸ್ವಾಮಿಯನ್ನು ಕುರಿತು ಪ್ರಾರ್ಥನೆ ಮಾಡಲ್ಪಟ್ಟು ಸಭೆಯು ವಿಸರ್ಜಿಸಲ್ಪಟ್ಟಿತು

ಉಲ್ಲಾಸಭಾಗಿ.

ಕೃಷ್ಣರಾಜೇಂದ್ರ ಮಿಲ್ಲಿನ ಷೇರುದಾರರ ಮೊರೆ.

